Licence No. 60.
Licensed to Post without Prepayment.

Reg. No. M. 150.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 6-0-0.

ಸಂಪುಟ ೩೧ | ತಾರೀಖು ೨-೧೦-೧೯೫೩ನೇ ಶುಕ್ರವಾರ | ಸಂಚಿಕೆ ೪೯

ವಿನೋದ-ಜೀವನದ ಬೆಳಕು.

ಮದ್ರಾಸ್ ಹೈಕೋರ್ಟಿನ ನ್ಯಾಯಮೂರ್ತಿ ಶ್ರೀ. ಎ. ಎಸ್. ಪಿ. ಅಯ್ಯರ್ ಇವರು ೨೭-೯ರಲ್ಲಿ ಮಡಿಕೇರಿ ಶಾಸನ ಸಭಾಂಗಣದಲ್ಲಿ 'ಹಾಸ್ಯರಸ' ಎಂಬ ವಿಚಾರದಲ್ಲಿ ಭಾಷಣ ಮಾಡಿದರು. ಅದರ ಸಾರಾಂಶ ವನ್ನು ವಾಚಕರಿಗಾಗಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

1953
October

ಜಗತ್ತಿನ ಪ್ರಾಣಿಗಳಲ್ಲಿ ಮನುಷ್ಯ ನೊಬ್ಬನಿಗೆ ಮಾತ್ರ ಪರಿಸ್ಥಿತಿಯನ್ನು ಮನಗಂಡು ಮಾಡಿ ನಗುವ ಇಚ್ಛೆ ಯನ್ನು ಕೊಡಲಾಗಿದೆ. ಇತರ ಪ್ರಾಣಿಗಳಲ್ಲಿ ಹುಲಿ, ನರಿ ಮತ್ತು ಕತ್ತೆ ಮೂರು ಮಾತ್ರ ನಗಬಲ್ಲವೇ ನೆ. ಮನುಷ್ಯನು ಪ್ರಾಣಿ ದೇವದೇವತೆಗಳ ಕಿರಿಯನೂ ಆತನಲ್ಲಿ ಎಲ್ಲ ಶಕ್ತಿಯೂ ಸಾ ದೆ. ಹಾಸ್ಯದ ಫಲವೆಂದರೆ ನ ಗುವಿನಲ್ಲಿ ಎರಡು ವಿಧ. ಬಿರಿನಗು, ಮುಗುಳ್ನಗು. ಬಿರಿನಗುವಿಗಿಂತ ಮು ಗುಳ್ನಗು ಹೆಚ್ಚು ಸುಂದರ. ಸ್ತ್ರೀ ಯರಲ್ಲಿಯ ಮುಗುಳ್ನಗು ಇನ್ನೂ ಸುಂದರ.

ನಗುವಿಗೆ ಹಲವು ಕಾರಣಗಳಿವೆ. ಮೈಸೂರು, ಮದ್ರಾಸು ಪ್ರಾಣಿ ಸಂಗ್ರಹಾಲಯಗಳನ್ನು ನೋಡಿದರೆ ಅತೀ ಮನುಷ್ಯ, ಅತೀ ಕುಳ್ಳ, ನಡೆಯ ಲಾರದ ಸೊಕ್ಕಿದವ, ಗಾಳಿಗೆ ಹಾರಿ ಹೋಗುವಷ್ಟು ತೆಳ್ಳಗಿನವ ಮೊದಲಾದವ ರನ್ನು ನೋಡಿದರೆ ನಗು ತನ್ನಿಂದ ತಾನೇ ಉಕ್ಕಿ ಬರುತ್ತದೆ. ಆಗ ಮದುವೆಯಾದ ನವ ದಂಪತಿಗಳು ಪರಸ್ಪರ ಮುತ್ತಿಡುವದನ್ನು ಕಂಡರೆ ತಂದೆ ತಾಯಿಯರು ನಗುತ್ತಾರೆ. ಈ ನಗುವು ಒಂದು ಮಾದರಿಯವು. ಇವು ಸ್ವೇಚ್ಛೆಯಿಂದ ತನ್ನಷ್ಟಕ್ಕೆ ತಾನೇ ಹೊರ ಹೊಮ್ಮಿ ಬರುವಂಥಾವು. ಒಂದು ಸ ನ್ನಿವೇಶ ತಡೆದು ನಗುವದು ಈ ಮಾದರಿಯಲ್ಲಿ ಹಾಸ್ಯವಿಲ್ಲ. ನಾವು ಎಲ್ಲರೂ ಯಾರ ದಾದರೂ ಭಾಷಣದ ವಿವರವನ್ನು ಓದು ತ್ತಿರುವಾಗ ಮಧ್ಯದಲ್ಲಿ 'ನಗು' 'ಹರ್ಷ ಚಪ್ಪಾ ಳೆ' ಎಂದು ಬ್ರಾಕೆಟಿನೊಳಗೆ ಬರೆದಿರುವದ ನ್ನು ಓದುತ್ತೇವೆ. ಚಿರಪುಂಜಿಯಲ್ಲಿ ಈ ದಿನ ೨೦ ಇಂಚು ಮಳೆಬಿತ್ತೆಂಬ ವರದಿ ಪತ್ರಿಕೆಯಲ್ಲಿದ್ದರೂ ಆ ಪತ್ರಿಕೆಯ ನ್ನು ಹಿಂಡಿದರೂ ಒಂದು ತೊಟ್ಟು ನೀರು ಬಾರದಂತೆ ಈ ಪತ್ರಿಕೆಯ 'ನಗು' ಚ ಪ್ಪಾಳೆ ಬೆರಣಾಗಿದೆ.

ನಗುವೆಂದರೆ ಆತ್ಮರಕ್ಷ ಣೆಯ ಧೈರ್ಯವೂ ... ನಗು ಹೊರಬೀಳುವದು. ಈ ನಗುವಿನಲ್ಲಿ ನಾನು ಬೀಳಲಿಲ್ಲವಲ್ಲಾ ಎಂಬ ಆತ್ಮತೃಪ್ತಿಯೇ ಹೊರಹೊಮ್ಮಿರುವ ದು ತೋರುತ್ತದೆ. ಮತ್ತೆ ಕೆಚ್ಚಿನ ನಗು ವೊಂದಿದೆ. ನನ್ನ ಗೆಳೆಯರೊಬ್ಬರಿದ್ದರು. ಅವರು ಪತ್ರಿಕೆಯಲ್ಲಿ ಯಾವಾಗಲೂ ಯಾ ರು ಸತ್ತರು ಎಂಬ ವಿಚಾರವನ್ನು ಮಾತ್ರ ಓದುತ್ತಿದ್ದರು. ಇನ್ನೊಬ್ಬರು ಸತ್ತಾಗ ತಾನು ಸಾಯಲಿಲ್ಲವೆಂಬ ತೃಪ್ತಿಯ ಭಾವ ನೆ ಅವರ ಈ ಪ್ರವೃತ್ತಿಗೆ ಕಾರಣವಾ ಗಿತ್ತೆನ್ನಬಹುದು.

ನಮ್ಮ ಸುತ್ತುಮುತ್ತಲಿನ ಜನರನ್ನು ಕಣ್ಣಿಟ್ಟು ಪರಿಶೀಲಿಸಿದರೆ ಹಲವರಿಗೆ ವಿವಿಧ ರೀತಿಯ ಪ್ರಾಣಿಗಳ ಸಂಬಂಧ ತೋರುತ್ತದೆ. ಕೆಲ ವರು ಆನೆ, ಸಿಂಹಗಳ ನೆನಪು ತಂದರೆ ಕೆಲ ವರು ನರಿ, ಹೆಗ್ಗಣಗಳ ನೆನಪು ತರುತ್ತಾ ರೆ. ರಾಜಗೋಪಾಲಾಚಾರಿಯವರನ್ನು ನೋಡಿದಾಗ ಗುಳ್ಳೆನರಿಯ ನೆನಪಾಗುತ್ತ ದೆ. ನಾಟುಕೋಟ ಚೆಟ್ಟಿಯಾರನ್ನು ನೋ ಡಿದರೆ ಹೆಗ್ಗಣಗಳ ನೆನಪಾಗುತ್ತದೆ. ಕೆಲ ವರು ಕಪಿಗಳ ನೆನಪನ್ನು ತರುತ್ತಾರೆ.

ಪಂಜಾಬಿನ ನ್ಯಾಯಾಧೀಶರಾಗಿದ್ದ ಸರ್ ಶಾದಿಲಾಲರು ಒಮ್ಮೆ ರೈಲಿನಲ್ಲಿ ಪ್ರ ಯಾಣ ಮಾಡುತ್ತಿದ್ದರು. ರೈಲಿನ ಒಂದ ನೆ ತರಗತಿಯಲ್ಲಿ ಆಗ ಪಂಚೆ ಶರ್ಟು ಹಾಕಿ ಕೊಂಡು ಪ್ರಯಾಣ ಮಾಡುವವರು ವಿರಳ. ಆದರೆ ನ್ಯಾಯಾಧೀಶರು ಪಂಚೆಯುಟ್ಟು ಕಾ ಲಿಗೆ ಜೋಡು ಹಾಕಿಕೊಂಡಿದ್ದರು. ಅದೇ ಡಬ್ಬಿಯಲ್ಲಿ ಯುರೋಪಿಯನೊಬ್ಬನಿದ್ದ ನು. ಆತನು ಶಾದಿಲಾಲರನ್ನುದ್ದೇಶಿಸಿ ಜೋಡನ್ನು ತನ್ನ ಮುಂದಿಡಕೂಡದೆಂದು ಹೇಳಿದನು. ಶಾದಿಲಾಲರು ಒಪ್ಪಲಿಲ್ಲ. ಶಾದಿಲಾಲರು ಕೆಲವು ಸಮಯದ ನಂತರ ಮುಖ ತೊಳೆಯಲು ಒಳಗೆ ಹೋಗಿದ್ದಾಗ ಆ ಯುರೋಪಿಯನನು ಅವರ ಜೋಡ ನ್ನು ಹೊರಗೆ ಬಿಸಾಡಿದನು. ಶಾದಿಲಾಲ ರು ಕೇಳಿದಾಗ ತನಗೆ ಗೊತ್ತಿಲ್ಲವೆಂದನು. ಕೆಲವು ಸಮಯದ ನಂತರ ಯುರೋಪಿ ಯನನು ಮೂತ್ರವಿಸರ್ಜನೆಗೆ ಹೋದಾಗ ಶಾದಿಲಾಲರು ಆತನ ಕೋಟನ್ನು ಹೊರಗೆ ಸೆದರು. ಆತನು ಬಂದು ಕೇಳಲಾಗಿ ಕೋಟು ಪಾದರಕ್ಷೆಯು ಹೋದ ಕಡೆ ಹೋಗಿದೆಯೆಂದರಂತೆ. ಇದು ಕಾರ್ಯ ತಃ ಮಾಡಿ ತೋರಿಸುವ ವಿನೋದ.

ಇಂಗ್ಲೆಂಡಿನಲ್ಲಿ ಒಂದು ಪತ್ರಿಕೆಯು ಒಂದು ಮುನ್ಸಿಪಲ್ ಸಮಿತಿಯವರನ್ನು ಟೀಕಿಸುತ್ತಾ ಸಮಿತಿಯಲ್ಲಿರುವ ಅರ್ಧ ಜ ನರು ಲಂಚಕೋರರೆಂದು ಬರೆಯಿತು. ಮು ನ್ಸಿಪಲ್ ಸಮಿತಿಯವರು ರೇಗಿಬಿದ್ದು ಸಂ ಪಾದಕರು ಅದಕ್ಕೆ ಪಶ್ಚಾತ್ತಾಪ ಸೂಚಿಸಿ ಪ್ರಕಟಿಸದಿದ್ದರೆ ಮೊಕದ್ದಮ್ಮೆ ಹೂಡುವ ದಾಗಿ ಗದರಿಸಿದರು. ಪತ್ರಿಕಾ ಸಂಪಾದ ರು ತಿದ್ದುಪಡಿ ಬರೆಯುತ್ತಾ ಸಮಿತಿಯ ಲ್ಲಿರುವ ಅರ್ಧ ಜನರು ಲಂಚಕೋರರಲ್ಲ ವೆಂದು ಬರೆದರು. ಇದು ಶಬ್ದಗಳಲ್ಲಿ ವ್ಯ ಕ್ತಪಡಿಸಬಹುದಾದ ವಿನೋದ.

ಒಬ್ಬ ಸಸ್ಯಾಹಾರಿ ಬ್ರಾಹ್ಮಣನಿದ್ದನು. ಆತನು ಮಾಂಸಾಹಾರ ಮಾಡುವವರೆಲ್ಲರೂ ದುಷ್ಟರೆಂದು ತಿಳಿದು ಅದೇ ರೀತಿ ವರ್ತಿ ಸುತ್ತಿದ್ದನು. ಶ್ರೀಕೃಷ್ಣನು ಆತನಿಗೆ ಪಾಠ ಕಲಿಸಬೇಕೆಂದು ಇಚ್ಛಿಸಿದನು. ಒಂದು ದಿನ ಬ್ರಾಹ್ಮಣನು ದಾರಿ ನಡೆಯುತ್ತಿದ್ದಾಗ ಮುಳ್ಳೊಂದು ಆತನ ಕಾಲಿಗೆ ಆಳವಾಗಿ ನೆ ಟ್ಟಿತು. ಬ್ರಾಹ್ಮಣನು ಅಲ್ಲೇ ಕುಳಿತು ಮುಳ್ಳನ್ನು ಎಳೆದಾಗ ಧಾರಾಕಾರವಾಗಿ ರಕ್ತವು ಹೊರಚಿಮ್ಮಿತು. ಕೃಷ್ಣನು ಅಲ್ಲಿ ಗೆ ಬಂದು ಬ್ರಾಹ್ಮಣನನ್ನು ಕುರಿತು ನೀ ನು ಸಸ್ಯಾಹಾರ ಉಪಯೋಗಿಸಿದರೂ ಸಸ್ಯ ಗಳಂತೆ ಬಿಳಿ ಹಾಲು ಯಾ ರಸದಿಂದ ಕೂ ಡಿರದೆ ಪ್ರಾಣಿಗಳ ರಕ್ತವನ್ನೇ ಶರೀರದಲ್ಲಿ ತುಂಬಿಕೊಂಡಿರುವುದು ನಿನ್ನ ಯೋಗ್ಯತೆಗೆ ಸರಿಯಲ್ಲವೆಂದು ಮೂದಲಿಸಿದನು. ಇದು ಭಾವನೆಯ ಹಾಸ್ಯವೆನಿಸುತ್ತದೆ.

... ಘರ್ಷಣೆ ಬಂತು. ... ಪರಸ್ಪರ ನು ದೊಡ್ಡವನು ತಾನು ದೊಡ್ಡವನೆಂದು ಸ್ಪರ್ಧೆ ತೋರಿಸುತ್ತಿದ್ದರು. ಇಂದ್ರನು ನಾ ನು ದೊಡ್ಡವನೆಂದರೆ ಕುಬೇರನು ತಾನು ದೊಡ್ಡವನೆನ್ನುತ್ತಿದ್ದನು. ಅವರಿಗೆ ಪಾಠ ಕಲಿಸಬೇಕೆಂದು ಇಚ್ಛಿಸಿ ರಾವಣನು ಅವ ರ ಮೇಲೆ ದಂಡೆತ್ತಿ ಬರುತ್ತಿರುವನೆಂದು ಕೃಷ್ಣನು ಸಾರಿದನು. ಆಗ ದಿಕ್ಪಾಲಕರು ಇಂದ್ರನು ಇಲ್ಲವೇ ಕುಬೇರನು ಇಲ್ಲವೆ ಯ ಮನು ಮುಂದಾಳಾಗಲಿ ಎಂದು ಜವಾಬ್ದಾ ರಿಕೆಯನ್ನು ಬೇರೊಬ್ಬರಿಗೆ ಹೇರಲು ಯತ್ನಿಸಿದರು. ಜ ವಾಬ್ದಾರಿಕೆ ಯಾರಿಗೂ ಬೇಡ. ಆದರೆ ಪ್ರತಿಷ್ಠೆ, ಗೌರವ ಬೇಕು. ಈ ವಿನೋದ ಧಾರ್ಮಿಕ ವಿನೋದವೆನ್ನಬಹುದು.

ಕೆಲವರು ತಾವೇ ದೊಡ್ಡವರು, ಶ್ರೀ ಮಂತರು ಎಂದು ಭಾವಿಸಿಕೊಳ್ಳುತ್ತಾರೆ. ಅಂಥಾವರಲ್ಲಿ ನಾನೂ ಒಬ್ಬ. ಇಂಗ್ಲೆಂಡಿನ ಲ್ಲಿ ನಾನಿದ್ದಾಗ ಒಬ್ಬಾಕೆಯ ಮನೆಯಲ್ಲಿ ಇರುತ್ತಿದ್ದೆ. ಆಕೆಯ ಪ್ರೀತಿ ತಾಯಿಯದ ಕ್ಕಿಂಥಾ ಹೆಚ್ಚೆನ್ನಬಹುದು. ತಿನ್ನಿಸಿದ ಷ್ಟು ಸಾಲದು. ಅವರ ಮನೆಯಲ್ಲಿ ಒಂ ದು ಗಡಿಯಾರವಿತ್ತು. ಆ ಗಡಿಯಾರ ಗಂಡ ನದು. ಅವರ ಪೆಟ್ಟಿಗೆ ತನ್ನದೆಂದು ಹೇಳು ತಿದ್ದಳವಳು. ಮಕ್ಕಳಲ್ಲಿಯೂ ಕೂಡ ಗಂಡನ ಮಕ್ಕಳು ಬೇರೆ ತನ್ನದು ಬೇರೆ ಎಂಬ ಭೇದವಿತ್ತು. ಹಿಂದೂದೇಶದಲ್ಲಿ ಹಾಗಿಲ್ಲ. ಗಂಡ ಬೇರೆ ಹೆಂಡತಿ ಬೇರೆ ಎಂ ಬಿಲ್ಲ. ಎಲ್ಲವೂ ಒಂದು ಎಂದು ನಾನು ಹೇಳಿದಾಗ ಆ 'ಒಂದು' ಯಾವುದು ಗಂಡ ನೋ ಹೆಂಗಸೋ ಎಂದು ಕೇಳಿದಳವಳು!

ಒಮ್ಮೆ ಎರಡು ಐರಿಶ್ ಜನರು ಅಮೆ ರಿಕಾಕ್ಕೆ ಹೋದರು. ಒಬ್ಬರು ಅಲ್ಲಿಯ ನ್ಯಾಯಾಧೀಶರಾದರು. ಮತ್ತೊಬ್ಬರು ಕೂಲಿ ಮಾಡಿ ಜೀವಿಸಬೇಕಾಯಿತು. ಒ ಮ್ಮೆ ನ್ಯಾಯಾಧೀಶನು ಆತನನ್ನು ಔತಣ ಕ್ಕೆ ಕರೆದನು. ಅಲ್ಲಿ ಮಾತಾಡುತ್ತಾ ಐ ರ್ಲೆಂಡಿನಲ್ಲಾಗಿದ್ದರೆ ನ್ಯಾಯಾಧೀಶನೊಬ್ಬ ನು ದಿನಕೂಲಿ ಮಾಡುವವನನ್ನು ಕರೆದು ಹೀಗೆ ಔತಣ ಕೊಡುವದು ಸಾಧ್ಯವಿತ್ತೇ ಎಂದು ಕೇಳಿದನು. ಅದಕ್ಕೆ ಮತ್ತೊಬ್ಬ ನು ಐರ್ಲೆಂಡಿನಲ್ಲಾಗಿದ್ದರೆ ನಿನ್ನಂಥವ ರು ನ್ಯಾಯಾಧೀಶರಾಗುತ್ತಿದ್ದರೇ ಎಂದು ಉ ತ್ತರವಿತ್ತನು. ಇದು ಲೌಕಿಕ ವಿನೋದ ವೆನ್ನಬಹುದು.

ಮಲಬಾರಿನಲ್ಲಿ ಒಂದು ಮಾತಿದೆ. ದೊಡ್ಡ ಮನುಷ್ಯನ ಗೌರವವು ಬಡ ಮನು ಷ್ಯನ ಕುಂಡೆಯಮೇಲಿದೆಯೆಂದು. ಬಡ ಮನುಷ್ಯನು ಕೆಲಸ ಮಾಡದೆ ಕುಳಿತು ಕೊಂಡರೆ ದೊಡ್ಡವನ ಬಾಯಿಗೆ ಕುಕ್ಕೆ ಯಾದೀತೆಂಬುದೇ ಇದರ ಮರ್ಮ. ಅಶ್ಲೀ ಲತೆಯ ಯಾ ಅಶ್ಲೀಲ ವಿನೋದವೂ ಇದೆ. ಧರ್ಮವೂ ಕೂಡ ಅಶ್ಲೀಲವಾಗಬಹುದು. ದಿಗಂಬರರಾಗಿ ತಿರುಗುವ ಜೈನ ಗುರುಗಳು ಸಮಾಜದ ದೃಷ್ಟಿಯಲ್ಲಿ ಅಶ್ಲೀಲರೆಂದು ತೋರಬಹುದು. ಒಮ್ಮೆ ಜೈನ ಸನ್ಯಾಸಿ ಯೊಬ್ಬರು ದಿಗಂಬರರಾಗಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಅಮೇರಿಕನನೊಬ್ಬನು ಅವರನ್ನು ಕಂಡು 'ಮನುಷ್ಯ, ಮನುಷ್ಯ, ಮನುಷ್ಯ' ಎಂದು ಕಿರುಚಿದರಂತೆ. ಈ ದಿ ಗಂಬರ ಸನ್ಯಾಸಿಗಳು ತುಂಬಾ ವಿದ್ವಾಂ ಸರಿರುತ್ತಾರೆ. ಇಂಗ್ಲಿಷ್ ಗೊತ್ತಿದ್ದ ಈ ಸನ್ಯಾಸಿಯು 'ಏನು, ಏನು, ಏನು' ... ಎಂದು ಕೇಳಿದರಂತೆ. ಅದಕ್ಕೆ ಆ ... ಹೇಳಿದಾಗ ಜೈನಗುರುವು ... ಗನ್ನು ತೋರಿಸುವವನ್ನು ನೀವು ಅಶ್ಲೀಲ ವೆಂದು ತಿಳಿಯುವದಿಲ್ಲ. ಕಾರಣವಿಷ್ಟೆ ನಿಮ್ಮ ಲ್ಲಿ ಸಂಸ್ಕೃತಿ ಇಲ್ಲ. ನಿಜನಾಗರಿಕರು ನೀವಾ ಗಿಲ್ಲ. ಈಗ ನಿಮಗೆ ಅಲ್ಪಸ್ವಲ್ಪ ನಾಗರಿಕ ತೆ ಬಂದಿದೆ. ಮೂಗು ಮುಖಗಳನ್ನು ನೋ

Licence No. 60.
Licensed to Post without Prepayment.

Reg. No. M. 1[..]0.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಖು ೨-೧-೧೯೩೭ನೇ ಶುಕ್ರವಾರ | ಸಂಚಿಕೆ ೨೯

ವಿನೋದ-ಜೀವನದ ಬೆಳಕು.

ಮದ್ರಾಸ್ ಹೈಕೋರ್ಟಿನ ನ್ಯಾಯಮೂರ್ತಿ ಶ್ರೀ. ಎ. ಎಸ್. ಪಿ ಐಯ್ಯರ್ ಇವರು ೩೦ ೧೨ರಲ್ಲಿ ಮಡಿಕೇರಿ ಶಾಸನ ಸಭಾಂಗಣದಲ್ಲಿ 'ಹಾಸ್ಯರಸ' ಎಂಬ ವಿಚಾರದಲ್ಲಿ ಭಾಷಣ ಮಾಡಿದರು ಅದರ ಸಾರಾಂಶವನ್ನು ವಾಚಕರಿಗಾಗಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಜಗತ್ತಿನ ಪ್ರಾಣಿಗಳಲ್ಲಿ ಮನುಷ್ಯನಿಗೊಬ್ಬನಿಗೆ ಮಾತ್ರ ಪರಿಸ್ಥಿತಿಗೆ ತಕ್ಕಂತೆ ವಿಮರ್ಶೆ ಮಾಡಿ ನಗುವ ಇಲ್ಲವೆ ಅಳುವ ಶಕ್ತಿ ಮೀಸಲಾಗಿದೆ. ಇತರ ಪ್ರಾಣಿಗಳಲ್ಲಿ ಮೊಸಳೆ, ನರಿ ಮತ್ತು ಕತ್ತೆ ಕಿರುಬ ಇವು ಮೂರು ಮಾತ್ರ ನಗಬಲ್ಲವೆಂದು ಗೊತ್ತಾಗಿದೆ. ಮನುಷ್ಯನು ಪ್ರಾಣಿಗಳ ಅಣ್ಣನೂ ದೇವದೇವತೆಗಳ ಕಿರಿಯನೂ ಆದ ಕಾರಣ ಆತನಲ್ಲಿ ಎಲ್ಲ ಶಕ್ತಿಯೂ ಸಮಾವೇಶವಾಗಿದೆ. ಹಾಸ್ಯದ ಫಲವೆಂದರೆ ನಗು. ನಗುವಿನಲ್ಲಿ ಎರಡು ವಿಧ. ಬಿರಿನಗು ಹಾಗೂ ಮುಗುಳ್ನಗು. ಬಿರಿನಗುವಿಗಿಂಥಾ ಮುಗುಳ್ನಗು ಹೆಚ್ಚು ಸುಂದರ. ಯುವತಿಯರಲ್ಲಿಯ ಮುಗುಳ್ನಗು ಇನ್ನೂ ಮನೋಹರ.

ನಗುವಿಗೆ ಹಲವು ಕಾರಣಗಳಿವೆ. ಮೈಸೂರು, ಮದ್ರಾಸು ಪ್ರಾಣಿಸಂಗ್ರಹಾಲಯಗಳನ್ನು ನೋಡಿದರೆ ಅತೀ ಎತ್ತರದ ಮನುಷ್ಯ, ಅತೀ ಕುಳ್ಳ, ನಡೆಯಲಾರದಂತೆ ಕೊಬ್ಬಿದವ, ಗಾಳಿಗೆ ಹಾರಿ ಹೋಗುವಷ್ಟು ತೆಳ್ಳಗಿನವ ಮೊದಲಾದವುಗಳನ್ನು ನೋಡಿದರೆ ನಗು ತನ್ನಿಂದ ತಾನೇ ಹೊರಚಿಮ್ಮುತ್ತದೆ. ಆಗ ಮದುವೆಯಾದ ನವ ದಂಪತಿಗಳು ಪರಸ್ಪರ ಮುತ್ತಿಡುವದನ್ನು ಕಂಡರೆ ತಂದೆ ತಾಯಿಯರು ನಗುತ್ತಾರೆ. ಈ ನಗುವು ಒಂದು ಮಾದರಿಯವು. ಇವು ಸ್ವೇಚ್ಛೆಯಿಂದ ತನ್ನಷ್ಟಕ್ಕೆ ತಾನೇ ಹೊರಹೊಮ್ಮಿ ಬರುವಂಥಾವು. ಒಂದು ನಿಮಿಷ ತಡೆದು ನಗುವದು ಈ ಮಾದರಿಯಲ್ಲಿ ಸಾಧ್ಯವಿಲ್ಲ. ನಾವು ಪತ್ರಿಕೆಗಳಲ್ಲಿ ಯಾರದಾದರೂ ಭಾಷಣದ ವಿವರವನ್ನು ಓದುತ್ತಿರುವಾಗ ಮಧ್ಯದಲ್ಲಿ 'ನಗು' 'ಕೈ ಚಪ್ಪಾಳೆ' ಎಂದು ಬ್ರಾಕೆಟಿನೊಳಗೆ ಬರೆದಿರುವದನ್ನು ಓದುತ್ತೇವೆ. ಚಿರಪುಂಜಿಯಲ್ಲಿ ಈ ದಿನ ೩೦ ಇಂಚು ಮಳೆಬಿತ್ತೆಂಬ ವರದಿ [illegible] ಪತ್ರಿಕೆಯಲ್ಲಿದ್ದರೂ ಆ ಪತ್ರಿಕೆಯನ್ನು ಹಿಂಡಿದರೂ [illegible] ತೊಟ್ಟು ನೀರು ಬಾರದಂತೆ ಈ ಪತ್ರಿಕೆಯ 'ನಗು' [illegible] ಚಪ್ಪಾಳೆಯೂ ಆಗಿದೆ.

[illegible] ನಗುವೆಂದರೆ ಆತ್ಮರಕ್ಷ[illegible] ಧೈರ್ಯವೂ ಅಂಜುಬುರುಕತನವೂ ಎರಡು ಅನೈಸರ್ಗಿಕವಾದವುಗಳು. ಧೈರ್ಯಶಾಲಿಯೆಂದು ಮುನ್ನುಗ್ಗುವವನಲ್ಲಿಯೂ ಭಾವೀ ಗಂಡಾಂತರದ ಭೀತಿ ಇದೆ. ಅಂಜುಬುರುಕನಾಗಿ ಓಡುವವನಲ್ಲಿಯೂ ನಾಳೆ ನೋಡಿಕೊಂಡೇನೆಂಬ ಆತ್ಮತೃಪ್ತಿ ಇದೆ. ಒಮ್ಮೆ ಮರಾಟ ಹಾಗೂ ರಾಜಪೂತ ಸೇನೆಗಳು ಜೊತೆಯಾಗಿ ಮೊಗಲರನ್ನು ಎದುರಿಸಿದವು. ಕೆಲವು ಸಮಯದ ನಂತರ ಮರಾಟ ಸೇನೆಯು ಪಲಾಯನ ಪ್ರಾರಂಭಿಸಿತು. ರಜಪೂತರು ಹೀಗೇಕೆಂದು ಕೇಳುವಾಗ 'ಇಂದು ತಲೆ ಉಳಿಸಿಕೊಂಡರೆ ನಾಳೆ ಪುನಃ ಯುದ್ಧ ಮಾಡಬಹುದೆಂದರಂತೆ!' ಅದೇ ರೀತಿ ದಕ್ಷಿಣ ಭಾರತದವರಾದ ನಾವು ಯಾವುದೇ ಸಂಕೋಚವಿಲ್ಲದೆ ಯುದ್ಧಗಳಲ್ಲಿ ಹಿಂದೋಡಿದ್ದೇವೆ. ಆದ್ದರಿಂದಲೇ ನಾವು ಚಿರವಾಗಿ ಉಳಿದು ನಮ್ಮ ಸಂಸ್ಕೃತಿ ಜಾಣ್ಮೆಗಳನ್ನು ಬೆಳಸಿದ್ದೇವೆ. ನಮ್ಮಲ್ಲಿ ಯಾರಾದರೂ ರಸ್ತೆಯಲ್ಲಿ ಜಾರಿ ಬಿದ್ದುಬಿಟ್ಟರೆ ಒಂದು ಸ್ಫೋಟನದಂತೆ ಸುತ್ತಲಿರುವವರ ಮುಖದಿಂದ ನಗು ಹೊರಬೀಳುವದು. ಈ ನಗುವಿನಲ್ಲಿ ನಾನು ಬೀಳಲಿಲ್ಲವಲ್ಲಾ ಎಂಬ ಆತ್ಮತೃಪ್ತಿಯೇ ಹೊರಹೊಮ್ಮಿರುವದು ತೋರುತ್ತದೆ. ಮತ್ತೆ ಕೆಟ್ಟಿನ ನಗು ಹೊಂದಿದ ನನ್ನ ಗೆಳೆಯರೊಬ್ಬರಿದ್ದರು. ಅವರು ಪತ್ರಿಕೆಯಲ್ಲಿ ಯಾವಾಗಲೂ ಯಾರು ಸತ್ತರು ಎಂಬ ವಿಚಾರವನ್ನು ಮಾತ್ರ ಓದುತ್ತಿದ್ದರು. ಇನ್ನೊಬ್ಬರು ಸತ್ತಾಗ ತಾನು ಸಾಯಲಿಲ್ಲವೆಂಬ ತೃಪ್ತಿಯ ಭಾವ[illegible] ಅವರ ಈ ಪ್ರವೃತ್ತಿಗೆ ಕಾರಣವಾಗಿತ್ತೆನ್ನಬಹುದು.

ನಮ್ಮ ಸುತ್ತುಮುತ್ತಲಿನ ಜನರನ್ನು ಕಣ್ಣಿಟ್ಟು ಪರಿಶೀಲಿಸಿದರೆ ಹಲವರಿಗೆ ವಿವಿಧ ರೀತಿಯ ಪ್ರಾಣಿಗಳ ಸಂಬಂಧ ತೋರುತ್ತದೆ. ಕೆಲವರು ಆನೆ, ಸಿಂಹಗಳ ನೆನಪು ತಂದರೆ ಕೆಲವರು ನರಿ, ಹೆಗ್ಗಣಗಳ ನೆನಪು ತರುತ್ತಾರೆ. ರಾಜಗೋಪಾಲಾಚಾರಿಯವರನ್ನು ನೋಡಿದಾಗ ಗುಳ್ಳೆನರಿಯ ನೆನಪಾಗುತ್ತದೆ. ನಾಟುಕೋಟಿ ಚೆಟ್ಟಿಯಾರನ್ನು ನೋಡಿದರೆ ಹೆಗ್ಗಣಗಳ ನೆನಪಾಗುತ್ತದೆ. ಕೆಲವರು ಕಪಿಗಳ ನೆನಪನ್ನು ತರುತ್ತಾರೆ.

ಪಂಜಾಬಿನ ನ್ಯಾಯಾಧೀಶರಾಗಿದ್ದ ಸರ್ ಶಾದಿಲಾಲರು ಒಮ್ಮೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದರು. ರೈಲಿನ ಒಂದನೆ ತರಗತಿಯಲ್ಲಿ ಆಗ ಪಂಚೆ ಶರ್ಟು ಹಾಕಿಕೊಂಡು ಪ್ರಯಾಣ ಮಾಡುವವರು ವಿರಳ. ಆದರೆ ನ್ಯಾಯಾಧೀಶರು ಪಂಚೆಯುಟ್ಟು ಕಾಲಿಗೆ ಜೋಡು ಹಾಕಿಕೊಂಡಿದ್ದರು. ಅದೇ ಡಬ್ಬಿಯಲ್ಲಿ ಯುರೋಪಿಯನೊಬ್ಬನಿದ್ದನು. ಆತನು ಶಾದಿಲಾಲರನ್ನುದ್ದೇಶಿಸಿ ಜೋಡನ್ನು ತನ್ನ ಮುಂದಿಡಕೂಡದೆಂದು ಹೇಳಿದನು. ಶಾದಿಲಾಲರು ಒಪ್ಪಲಿಲ್ಲ. ಶಾದಿಲಾಲರು ಕೆಲವು ಸಮಯದ ನಂತರ ಮುಖ ತೊಳೆಯಲು ಒಳಗೆ ಹೋಗಿದ್ದಾಗ ಆ ಯುರೋಪಿಯನನು ಅವರ ಜೋಡನ್ನು ಹೊರಗೆ ಬಿಸಾಡಿದನು. ಶಾದಿಲಾಲರು ಕೇಳಿದಾಗ ತನಗೆ ಗೊತ್ತಿಲ್ಲವೆಂದನು. ಕೆಲವು ಸಮಯದ ನಂತರ ಯುರೋಪಿಯನನು ಮೂತ್ರವಿಸರ್ಜನೆಗೆ ಹೋದಾಗ ಶಾದಿಲಾಲರು ಆತನ ಕೋಟನ್ನು ಹೊರಗೆಸೆದರು. ಆತನು ಬಂದು ಕೇಳಲಾಗಿ ಕೋಟು ಪಾದರಕ್ಷೆಯು ಹೋದ ಕಡೆ ಹೋಗಿದೆಯೆಂದರಂತೆ. ಇದು ಕಾರ್ಯತಃ ಮಾಡಿ ತೋರಿಸುವ ವಿನೋದ.

ಇಂಗ್ಲೆಂಡಿನಲ್ಲಿ ಒಂದು ಪತ್ರಿಕೆಯು ಒಂದು ಮುನ್ಸಿಪಲ್ ಸಮಿತಿಯವರನ್ನು ಟೀಕಿಸುತ್ತಾ ಸಮಿತಿಯಲ್ಲಿರುವ ಅರ್ಧ ಜನರು ಲಂಚಕೋರರೆಂದು ಬರೆಯಿತು. ಮುನ್ಸಿಪಲ್ ಸಮಿತಿಯವರು ರೇಗಿಬಿದ್ದು ಸಂಪಾದಕರು ಅದಕ್ಕೆ ಪಶ್ಚಾತ್ತಾಪ ಸೂಚಿಸಿ ಪ್ರಕಟಿಸದಿದ್ದರೆ ಮೊಕದ್ದಮೆ ಹೂಡುವದಾಗಿ ಗದರಿಸಿದರು. ಪತ್ರಿಕಾ ಸಂಪಾದಕನು ತಿದ್ದುಪಡಿ ಬರೆಯುತ್ತಾ ಸಮಿತಿಯಲ್ಲಿರುವ ಅರ್ಧ ಜನರು ಲಂಚಕೋರರಲ್ಲ ಎಂದು ಬರೆದರು. ಇದು ಶಬ್ದಗಳಲ್ಲಿ ವ್ಯಕ್ತಪಡಿಸಬಹುದಾದ ವಿನೋದ.

ಒಬ್ಬ ಸಸ್ಯಾಹಾರಿ ಬ್ರಾಹ್ಮಣನಿದ್ದನು. ಆತನು ಮಾಂಸಾಹಾರ ಮಾಡುವವರೆಲ್ಲರೂ ನಿಕೃಷ್ಟರೆಂದು ತಿಳಿದು ಅದೇ ರೀತಿ ವರ್ತಿಸುತ್ತಿದ್ದನು. ಶ್ರೀಕೃಷ್ಣನು ಆತನಿಗೆ ಪಾಠ ಕಲಿಸಬೇಕೆಂದು ಇಚ್ಛಿಸಿದನು. ಒಂದು ದಿನ ಬ್ರಾಹ್ಮಣನು ದಾರಿ ನಡೆಯುತಿದ್ದಾಗ ಮುಳ್ಳೊಂದು ಆತನ ಕಾಲಿಗೆ ಆಳವಾಗಿ ನೆಟ್ಟಿತು. ಬ್ರಾಹ್ಮಣನು ಅಲ್ಲೇ ಕುಳಿತು ಮುಳ್ಳನ್ನು ಎಳೆದಾಗ ಧಾರಾಕಾರವಾಗಿ ರಕ್ತವು ಹೊರಚಿಮ್ಮಿತು. ಕೃಷ್ಣನು ಅಲ್ಲಿಗೆ ಬಂದು ಬ್ರಾಹ್ಮಣನನ್ನು ಕುರಿತು ನೀನು ಸಸ್ಯಾಹಾರ ಉಪಯೋಗಿಸಿದರೂ ಸಸ್ಯಗಳಂತೆ ಬಿಳಿ ಹಾಲು ಯಾ ರಸದಿಂದ ಕೂಡಿರದೆ ಪ್ರಾಣಿಗಳ ರಕ್ತವನ್ನೇ ಶರೀರದಲ್ಲಿ ತುಂಬಿಕೊಂಡಿರುವುದು ನಿನ್ನ ಯೋಗ್ಯತೆಗೆ ಸರಿಯಲ್ಲವೆಂದು ಮೂದಲಿಸಿದನು. ಇದು ಭಾವನೆಯ ಹಾಸ್ಯವೆನಿಸುತ್ತದೆ.

[illegible] ಘರ್ಷಣೆ ಬಂತು. [illegible] ಪರಸ್ಪರನು ದೊಡ್ಡವನು ತಾನು ದೊಡ್ಡವನೆಂದು ಪೈಪೋಟಿಗಿಳಿದಿದ್ದರು. ಇಂದ್ರನು ನಾನು ದೊಡ್ಡವನೆಂದರೆ ಕುಬೇರನು ತಾನು ದೊಡ್ಡವನೆನ್ನುತ್ತಿದ್ದನು. ಅವರಿಗೆ ಪಾಠ ಕಲಿಸಬೇಕೆಂದು ಇಚ್ಛಿಸಿ ರಾವಣನು ಅವರ ಮೇಲೆ ದಂಡೆತ್ತಿ ಬರುತ್ತಿರುವನೆಂದು ಕೃಷ್ಣನು ಸಾರಿದನು. ಆಗ ದಿಕ್ಪಾಲಕರು ಇಂದ್ರನು ಇಲ್ಲವೇ ಕುಬೇರನು ಇಲ್ಲವೆ ಯಮನು ಮುಂದಾಳಾಗಲಿ ಎಂದು ಜವಾಬ್ದಾರಿಕೆಯನ್ನು ಬೇರೊಬ್ಬರಿಗೆ ಹೇರಲು ಪ್ರಯತ್ನಿಸಿದರು. ಜವಾಬ್ದಾರಿಕೆ ಯಾರಿಗೂ ಬೇಡ. ಆದರೆ ಪ್ರತಿಷ್ಠೆ, ಗೌರವ ಬೇಕು. ಈ ವಿನೋದ ಧಾರ್ಮಿಕ ವಿನೋದವೆನ್ನಬಹುದು.

ಕೆಲವರು ತಾವೇ ದೊಡ್ಡವರು, ತಿಳಿದವರು ಎಂದು ಭಾವಿಸಿಕೊಳ್ಳುತ್ತಾರೆ. ಅಂಥಾವರಲ್ಲಿ ನಾನೂ ಒಬ್ಬ. ಇಂಗ್ಲೆಂಡಿನಲ್ಲಿ ನಾನಿದ್ದಾಗ ಒಬ್ಬಾಕೆಯ ಮನೆಯಲ್ಲಿ ಇರುತಿದ್ದೆ. ಆಕೆಯ ಪ್ರೀತಿ ತಾಯಿಯದಕ್ಕಿಂಥಾ ಹೆಚ್ಚೆನ್ನಬಹುದು. ತಿನ್ನಿಸಿದಷ್ಟು ಸಾಲದು. ಅವರ ಮನೆಯಲ್ಲಿ ಒಂದು ಗಡಿಯಾರವಿತ್ತು. ಆ ಗಡಿಯಾರ ಗಂಡನದು. ಅವರ ಪೆಟ್ಟಿಗೆ ತನ್ನದೆಂದು ಹೇಳುತ್ತಿದ್ದಳವಳು. ಮಕ್ಕಳಲ್ಲಿಯೂ ಕೂಡ ಗಂಡನ ಮಕ್ಕಳು ಬೇರೆ ತನ್ನದು ಬೇರೆ ಎಂಬ ಬೇಧವಿತ್ತು. ಹಿಂದೂದೇಶದಲ್ಲಿ ಹಾಗಿಲ್ಲ. ಗಂಡ ಬೇರೆ ಹೆಂಡತಿ ಬೇರೆ ಎಂದಿಲ್ಲ. ಎಲ್ಲವೂ ಒಂದು ಎಂದು ನಾನು ಹೇಳಿದಾಗ ಆ 'ಒಂದು' ಯಾವುದು ಗಂಡನೋ ಹೆಂಗಸೋ ಎಂದು ಕೇಳಿದಳವಳು!

ಒಮ್ಮೆ ಎರಡು ಐರಿಶ್ ಜನರು ಅಮೆರಿಕಾಕ್ಕೆ ಹೋದರು. ಒಬ್ಬರು ಅಲ್ಲಿಯ ನ್ಯಾಯಾಧೀಶರಾದರು. ಮತ್ತೊಬ್ಬರು ಕೂಲಿ ಮಾಡಿ ಜೀವಿಸಬೇಕಾಯಿತು. ಒಮ್ಮೆ ನ್ಯಾಯಾಧೀಶನು ಆತನನ್ನು ಔತಣಕ್ಕೆ ಕರೆದನು. ಅಲ್ಲಿ ಮಾತಾಡುತ್ತಾ ಐರ್ಲೆಂಡಿನಲ್ಲಾಗಿದ್ದರೆ ನ್ಯಾಯಾಧೀಶನೊಬ್ಬನು ದಿನಕೂಲಿ ಮಾಡುವವನನ್ನು ಕರೆಸಿ ಹೀಗೆ ಔತಣ ಕೊಡುವದು ಸಾಧ್ಯವಿತ್ತೇ ಎಂದು ಕೇಳಿದನು. ಅದಕ್ಕೆ ಮತ್ತೊಬ್ಬನು ಐರ್ಲೆಂಡಿನಲ್ಲಾಗಿದ್ದರೆ ನಿನ್ನಂಥವರು ನ್ಯಾಯಾಧೀಶರಾಗುತಿದ್ದರೇ ಎಂದು ಉತ್ತರವಿತ್ತನು. ಇದು ಲೌಕಿಕ ವಿನೋದವೆನ್ನಬಹುದು.

ಮಲಬಾರಿನಲ್ಲಿ ಒಂದು ಮಾತಿದೆ. ದೊಡ್ಡ ಮನುಷ್ಯನ ಗೌರವವು ಬಡ ಮನುಷ್ಯನ ಕುಂಡೆಯಮೇಲಿದೆಯೆಂದು. ಬಡ ಮನುಷ್ಯನು ಕೆಲಸ ಮಾಡದೆ ಕುಳಿತುಕೊಂಡರೆ ದೊಡ್ಡವನ ಬಾಯಿಗೆ ಕುಕ್ಕೆಯಾದೀತೆಂಬುದೇ ಇದರ ಮರ್ಮ. ಅನೀತಿಯ ಯಾ ಅಶ್ಲೀಲ ವಿನೋದವೂ ಇದೆ. ಧರ್ಮವೂ ಕೂಡ ಅಶ್ಲೀಲವಾಗಬಹುದು. ದಿಗಂಬರರಾಗಿ ತಿರುಗುವ ಜೈನ ಗುರುಗಳು ಸಮಾಜದ ದೃಷ್ಟಿಯಲ್ಲಿ ಅಶ್ಲೀಲರೆಂದು ತೋರಬಹುದು. ಒಮ್ಮೆ ಜೈನ ಸನ್ಯಾಸಿಯೊಬ್ಬರು ದಿಗಂಬರರಾಗಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಅಮೇರಿಕನನೊಬ್ಬನು ಅವರನ್ನು ಕಂಡು 'ಮನುಷ್ಯ, ಮನುಷ್ಯ, ಮನುಷ್ಯ' ಎಂದು ಕಿರುಚಿದರಂತೆ. ಈ ದಿಗಂಬರ ಸನ್ಯಾಸಿಗಳು ತುಂಬಾ ವಿದ್ವಾಂಸರಿರುತ್ತಾರೆ. ಇಂಗ್ಲಿಷ್ ಗೊತ್ತಿದ್ದ ಈ ಸನ್ಯಾಸಿಯು 'ಏನು, ಏನು, ಏ[illegible]' [illegible] ಕೇಳಿದರಂತೆ. ಅದಕ್ಕೆ ಆ[illegible] ಹೇಳಿದಾಗ ಜೈನಗುರುವು [illegible] ಗನ್ನು ತೋರಿಸುವದನ್ನು ನೀವು ಅಶ್ಲೀಲವೆಂದು ತಿಳಿಯುವದಿಲ್ಲ. ಕಾರಣವಿಷ್ಟೆ ನಿಮ್ಮಲ್ಲಿ ಸಂಸ್ಕೃತಿ ಇಲ್ಲ. ನಿಜನಾಗರಿಕರು ನೀವಾಗಿಲ್ಲ. ಈಗ ನಿಮಗೆ ಅಲ್ಪಸ್ವಲ್ಪ ನಾಗರಿಕತೆ ಬಂದಿದೆ. ಮೂಗು ಮುಖಗಳನ್ನು ನೋ

॥ ಸೋವಿಯಟ್ ರಷ್ಯದ ಚಲನಚಿತ್ರ ಕಲೆ. ॥

ಅಶೋಕ್ ಕುಮಾರ್‌ರವರ ಅಭಿಪ್ರಾಯ.

"ನಾನು ರಾಜಕಾರಣಿಯಲ್ಲ. ನಾನಾ 'ಇಜಂ' ಗಳಿಗಿರುವ ಭೇದ ನನಗೆ ತಿಳಿಯದು. ನಾನು ಪ್ರೀತಿಸುವುದು ನನ್ನ ಕಲೆಯನ್ನು, ಅದೇ ನನ್ನ ಜೀವನ ಸಾಧನ. ಆದರೆ ಓರ್ವ ಕಲಾವಿದನಾಗಿ ನಾನು ಕಂಡ ರಷ್ಯ ಬಹಳ ಅಭಿವೃದ್ಧಿಗೊಂಡ ಮತ್ತು ಪ್ರಗತಿಪರ ರಾಷ್ಟ್ರವಾಗಿತ್ತು.

ಭಾರತ ಚಿತ್ರರಂಗದ ಹೆಸರಾಂತ ಕಲಾವಿದ ಅಶೋಕ ಕುಮಾರ್ ಇತ್ತೀಚೆಗೆ ಭಾರತೀಯ ಚಲಚಿತ್ರ ನಿಯೋಗದೊಡನೆ ರಷ್ಯಕ್ಕೆ ಭೇಟಿ ಕೊಟ್ಟಿದ್ದರಷ್ಟೆ. ತಮ್ಮ ಭೇಟಿ ಅನುಭವ ಕುರಿತು ಬೊಂಬಾಯಿಯ "ಕ್ರಾಸ್ ರೋಡ್ಸ್" ವಾರ ಪತ್ರಿಕೆ ಪರ ಬಂದಿದ್ದ ಶ್ರೀ ಡಿ. ಸಿ. ಜೋಶಿಯವರೊಂದಿಗೆ ಮಾತಾಡುತ್ತಾ ಹೇಳಿದಂತೆ ಅಭಿಪ್ರಾಯಪಟ್ಟರು.

"ರಷ್ಯದಲ್ಲಿರುವಂಥಾ ಕಲಾ ಪ್ರವೃತ್ತಿ ಮತ್ತು ಕಲಾ ಪ್ರಚಾರ ಇನ್ನಾವುದಾದರೂ ದೇಶದಲ್ಲಿದ್ದಲ್ಲಿ ನಾನು ಆ ದೇಶವನ್ನು ಪ್ರಶಂಸಿಸುವೆ. ಇನ್ನಾವುದಾದರೂ ದೇಶದಲ್ಲಿ ಅದಕ್ಕೂ ಹೆಚ್ಚಿಗೆ ಪ್ರಗತಿ ಸಾಧಿತವಾಗಿದ್ದರೆ ಆ ದೇಶವನ್ನು ಇನ್ನೂ ಹೆಚ್ಚಿಗೆ ಪ್ರಶಂಸಿಸುವೆ" ಎಂದೂ ಶ್ರೀ ಅಶೋಕ್ ಕುಮಾರರು ನುಡಿದರು.

ತಮ್ಮ ಅಭಿಪ್ರಾಯಗಳನ್ನು ಯಾವಾಗಲೂ ಕಕ್ಕೆಯಿಂದ ಮತ್ತು ಕರಾರುವಾಕ್ಕಾಗಿ ವರದಿ ಮಾಡಬೇಕೆಂದೂ ಅವರು ಇಚ್ಛಿಸಿದರು. ಲಂಡನಿನಲ್ಲೂ ಮತ್ತು ಭಾರತದಲ್ಲೂ ಕೆಲ ಕೆಲ ಪತ್ರಿಕೆಗಳಲ್ಲಿ ತಮ್ಮ ಭಾವನೆಗಳನ್ನು ಅಪಾರ್ಥಕರವಾಗಿ ಪ್ರಕಟಿಸಲಾಗಿತ್ತೆಂದರು.

ಅಶೋಕ್ ಕುಮಾರ್ ವ್ಯಕ್ತಪಡಿಸಿದ ಮುಖ್ಯ ಅಭಿಪ್ರಾಯಗಳಿಂತಿವೆ—

"ನನ್ನ ರಷ್ಯ ಪ್ರವಾಸ ಸ್ವಾರಸ್ಯಕರ ಅನುಭವಗಳಿಂದ ತುಂಬಿತ್ತು" ಎಂದು ತಿಳಿಸಿದವರು, "'ಉಕ್ಕಿನ ತೆರೆ' ಹಿಂದೆ ಜೀವನ ಅಭದ್ರವೆಂದು ನಾನು ಸದಾ ಯೋಚಿಸುತ್ತಿದ್ದೆ. ಆದರೆ ನನ್ನ ರಷ್ಯ ಪ್ರವಾಸ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿದೆ' ಎಂದರು.

ಮಾಸ್ಕೋದಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಅಶೋಕ್ ಕುಮಾರರನ್ನು ಸೋವಿಯಟ್ ಚಿತ್ರಗಳ ಬಗ್ಗೆ ಅಭಿಪ್ರಾಯ ಕೇಳಲಾಯಿತು. ಅಶೋಕ್ ಸೋವಿಯಟ್ ಚಿತ್ರಗಳ ಅಭಿವೃದ್ಧಿಗೆ ಹಲವು ಸಲಹೆಗಳನ್ನಿತ್ತರು.

"ಆದರೆ ಆ ವರೆಗೆ ನಾನು ರಷ್ಯನ್ ಚಿತ್ರವೊಂದನ್ನೂ ನೋಡಿರಲಿಲ್ಲ. ಆದ್ದರಿಂದ ಏನನ್ನೂ ಹೇಳಲು ಆಗಲಿಲ್ಲ. ಅದರಿಂದಾಗಿ, ನಂತರ ಎರಡೇ ಗಂಟೆಗಳ ಅವಧಿಯಲ್ಲಿ ನನಗಾಗಿ ಒಂದು ವಿಶೇಷ ಚಿತ್ರಪ್ರದರ್ಶನವನ್ನೇರ್ಪಡಿಸಲಾಯಿತು. 'ಫಾಲ್ ಆಫ್ ಬರ್ಲಿನ್' ಎಂಬ ಚಿತ್ರ ಪ್ರದರ್ಶಿಸಲಾಯಿತು. ನಾನಿದುವರೆಗೆ ನೋಡಿರುವ ವೈಭವ ಪೂರ್ಣ ಚಿತ್ರ ಅದು! ಚಿತ್ರ ನೋಡಿದಾಗ ಅದರ ತಾಂತ್ರಿಕ ವಿಷಯಗಳ ಬಗ್ಗೆ ನನ್ನ ಆಸಕ್ತಿ ನಿರುಪಯುಕ್ತವಾಯಿತು. ಒಂದೆರಡು ರೀಲುಗಳನ್ನು ನೋಡುತ್ತಲೇ ಚಿತ್ರದ ಕತೆಯಲ್ಲಿ ತಲ್ಲೀನನಾಗಿಬಿಟ್ಟೆ."

ಅದೇ ರಾತ್ರಿ ಅಶೋಕ್ ಮತ್ತು ನಿಯೋಗದ ಇತರರು 'ರೆಡ್ ಪಾಪ್ಪಿ' ಎಂಬ ಬ್ಯಾಲೆಟ್ ನೃತ್ಯ ನೋಡಲು ಹೋದರು. ರಷ್ಯದ ಹೆಸರಾಂತ ಬ್ಯಾಲೆರಿನಾ ಆದ ಉಲ್ಯನೋವಾ ಎಂಬಾಕೆಯನ್ನು ಅಶೋಕ್ ಸಂಧಿಸಿದರು. ರಷ್ಯನ್ ಕಲಾವಿದರ ವರ್ಣ ಚಿತ್ರಗಳಿಂದ ತಾನು ಉತ್ತೇಜನ ಪಡೆದುದಾಗಿ ಆಕೆ ನನಗೆ ಹೇಳಿದರು. ಕುತೂಹಲದಿಂದ ನಾನು ಆ ಕಲಾಕೃತಿಗಳನ್ನು ನೋಡಲು ಹೋದೆ. ಈ ಆರ್ಟ್ ಗ್ಯಾಲರಿಗೆ ನಾನು ಭೇಟಿ ಕೊಟ್ಟ ಸಂಬಂಧ ಕೆಲವು ಲಂಡನ್ ಪತ್ರಿಕೆಗಳು ತಪ್ಪಾಗಿ ವರದಿಮಾಡಿದ್ದುವು. ಲೆನಿನ್ ಮತ್ತು ಸ್ಟಾಲಿನ್ ಚಿತ್ರಗಳ ಹೊರತು ಇನ್ನೇನನ್ನೂ ಕಾಣಲಿಲ್ಲವೆಂದು ನಾನು ಹೇಳಿದುದಾಗಿ ಆ ಪತ್ರಿಕೆಗಳು ನುಡಿದಿದ್ದುವು.

"ಟ್ರೆಟ್ಯಕೋವ್ ಆರ್ಟ್ ಗ್ಯಾಲರಿಗೆ ನನ್ನ ಭೇಟಿಯೇ ಒಂದು ವೈಶಿಷ್ಟ್ಯವಾಗಿತ್ತು. ಲೆನಿನ್, ಸ್ಟಾಲಿನ್ ಮತ್ತಿತರ ಕ್ರಾಂತಿಕಾರಿಗಳನ್ನು ಚಿತ್ರಿಸದಿರುವ ಯಾವ ಕಲಾಕೃತಿಗಳನ್ನೂ ರಷ್ಯನ್ನರು ಮುಚ್ಚಿಟ್ಟುಕೊಂಡಿಲ್ಲ. ಅಲ್ಲದೆ ಈ ಗ್ಯಾಲರಿಯಲ್ಲಿ ನಾನು ಒಂದು ಸಾವಿರ ವರ್ಷಗಳ ಪುರಾತನ ಕೃತಿಗಳನ್ನು ನೋಡಿದೆ. ಈ ಕಲಾಕೃತಿಗಳನ್ನು ಸಾವಿರಾರು ಜನ ರಷ್ಯನರು ಸಂದರ್ಶಿಸುತ್ತಾರೆ. ಇಂಗ್ಲೀಷ್, ಫ್ರೆಂಚ್ ಅಥವಾ ಇಟಾಲಿಯನ್ ಆರ್ಟ್ ಗ್ಯಾಲರಿಗಳಲ್ಲಿಯ ಸ್ವೇಚ್ಛಾ ಪ್ರವರ್ತಿಗಳಿಲ್ಲದೆ ಇಲ್ಲಿನ ವಾತಾವರಣ ಗಂಭೀರವಾಗಿಯೂ, ಶೈಕ್ಷಣಿಕ ಆಸಕ್ತಿಯಿಂದ ಕೂಡಿದ್ದೂ ಆಗಿತ್ತು!"

ಈ ಆರ್ಟ್ ಗ್ಯಾಲರಿಯ ಕ್ಯೂರೇಟರ್ ಒಬ್ಬ ಮಹಿಳೆಯಾಗಿದ್ದಳು. ಗ್ಯಾಲರಿಯಲ್ಲಿ ೩೦೦೦ ವರ್ಣ ಚಿತ್ರಗಳಿವೆ. ಈ ಕ್ಯೂರೇಟರ್ ಹುದ್ದೆಗೆ ಹೆಂಗಸಿರುವುದನ್ನು ನೋಡಿದರೆ ಒಮ್ಮೆ ವಿಮೋಚಿತರಾದರೆ ಹೆಂಗಸರು ಎಂಥಾ ಸಾಮಾಜಿಕ ಔನ್ನತ್ಯಕ್ಕೇರಬಹುದೆಂಬುದು ವ್ಯಕ್ತಪಡುವುದೆಂದು ಅಶೋಕ್ ಭಾವಿಸಿದರು.

ಭಾರತೀಯ ನಿಯೋಗ ಈ ಗ್ಯಾಲರಿಗೆ ಭೇಟಿ ಕೊಟ್ಟಿದ್ದ ದಿನ ೩ ಸಾವಿರ ಮಂದಿ ರಷ್ಯನರು ಗ್ಯಾಲರಿಯನ್ನು ಸಂದರ್ಶಿಸಿದರು. ಇದರಿಂದ ತಮ್ಮ ಪ್ರಾಚೀನ ಕಲಾವಿದರಲ್ಲಿ ಅಲ್ಲಿನ ಜನರಿಗಿರುವ ಗೌರವ ವ್ಯಕ್ತಪಡುವುದು.

ರಷ್ಯನರೊಂದು ಕಿರು ಚಿತ್ರ ಪ್ರದರ್ಶನದಲ್ಲಿ ಅಮೆರಿಕನ್ ಚಿತ್ರಗಳ ಕುರಿತಾದ ವಿಡಂಬನೆಯನ್ನೂ, ಹಾಲಿವುಡ್‌ನಲ್ಲಿ ಅನೈತಿಕತೆಗಳನ್ನೂ ನಿರೂಪಿಸಲ್ಪಟ್ಟಿರುವುದನ್ನು ನೋಡಿದರೆ ಅಮೆರಿಕದಲ್ಲಿ ಕಲೆ ಹೇಗೆ ಅಧಃಪತನಕ್ಕೊಳಗಾಗಿದೆ ಎಂಬುದನ್ನರಿಯಬಹುದೆಂದೂ ಅಶೋಕ್ ಅಭಿಪ್ರಾಯ ಪಟ್ಟರು. ಯೂರೋಪಿನ ಇನ್ನಾವ ಭಾಗದಲ್ಲೂ ಅವರು ಇಂಥಾ ಕಿರು ಚಿತ್ರಪ್ರದರ್ಶನ ಕಂಡಿರಲಿಲ್ಲ.

'ಇನ್ನೊಂದು ವಿಷಯ.... ರಷ್ಯದಲ್ಲಿಲ್ಲೂ ನನಗೆ ಭಾಷಾ ತೊಡಕು ಉಂಟಾಗಲಿಲ್ಲ. ನನ್ನ ಸಹಾಯಕ್ಕಾಗಿ ಬಂಗಾಳೀ ಬಲ್ಲ ಒಬ್ಬ ದುಭಾಷಿಯನ್ನು, ಇಂಗ್ಲೀಷ್ ಮತ್ತು ಹಿಂದಿ ಬಲ್ಲ ಇನ್ನೊಬ್ಬನನ್ನೂ ಕೊಟ್ಟಿದ್ದರು. ಇವರಿಬ್ಬರೂ ಪ್ರಾಚ್ಯ ಶಿಕ್ಷಣ ಶಾಲೆಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು.

"ನಮ್ಮ ದೇಶದ ಭಾಷೆಗಳು ಮತ್ತು ಸಂಪ್ರದಾಯಗಳನ್ನು ರಷ್ಯನರು ಗೌರವಿಸುವುದನ್ನು ನಾನು ಕಂಡೆ. ಇಲ್ಲಿನ ಭಾರತದ ರಾಯಭಾರ ಕಚೇರಿಯಲ್ಲಿ ದೊಡ್ಡ ಹಿಂದೀ ಅಕ್ಷರಗಳಲ್ಲಿ 'ಭಾರತೀಯ ದೂತವಾಸ' ಎಂದು ಕೆತ್ತಿರುವುದನ್ನು ನೋಡಿದೆ.

"ನಾವು ಹೋದ ಸಮಯದಲ್ಲಿ ಅಲ್ಲಿದ್ದ ಭಾರತೀಯ ರಾಯಭಾರಿ ಡಾ. ರಾಧಾಕೃಷ್ಣನರು ಅತ್ಯಂತ ಗೌರವಾನ್ವಿತ ರಾಜಕಾರಿಣಿ ಎನಿಸಿದ್ದರು. ಅವರ ಕಾರು ಹಾದು ಹೋದಾಗಲೆಲ್ಲಾ ರಷ್ಯನರು ಅವರನ್ನು ಗೌರವ ಪ್ರೀತಿಗಳಿಂದ ವಂದಿಸುತ್ತಿದ್ದರು.

"ನಮ್ಮ ಸಂಸ್ಕೃತಿಯನ್ನು ರಷ್ಯನರು ಹೇಗೆ ಗೌರವಿಸುವರೆಂಬ ಬಗ್ಗೆ ಒಂದು ಪ್ರಕರಣ ಹೇಳಬಯಸುವೆ. ಒಂದು ದಿನ ನಾನು ಮಾಸ್ಕೋ ರೇಡಿಯೋದಲ್ಲಿ ಬ್ರಾಡ್‌ಕಾಸ್ಟ ಮಾಡುತ್ತಿದ್ದೆ. ಪದ್ಧತಿಯಂತೆ ಇಂಗ್ಲೀಷಿನಲ್ಲಿ ಮಾತಾಡಿದೆ. ಆದರೆ ನನ್ನ ಮಾತು ಮುಗಿದೊಡನೆ ಹಿಂದಿನಿಂದ ಯಾರೋ 'ಏಬರ್ ಏಕ್ಟುಕ್ ಬಂಗಾಳೀಂ ಕೇಚು ಬಾಲೂಂ' (ಬಂಗಾಳಿಯಲ್ಲಿ ಕೆಲ ಮಾತುಗಳನ್ನಾಡಿ) ಅಂದರು! ಹಿಂದಿರುಗಿ ನೋಡಿದಾಗ ರಷ್ಯನೊಬ್ಬನು ನನ್ನನ್ನು ಹಾಗೆ ಬಲವಂತ ಮಾಡಿದ್ದ! ಮಾಸ್ಕೋದಲ್ಲಿ ರಷ್ಯನನೊಬ್ಬ ಬಂಗಾಳಿ ಮಾತಾಡೋದು!.... ಅಲ್ಲದೆ ಇಂಥಾ ಆಶ್ಚರ್ಯಕಾರಿ ಇದೊಂದೇ ಆಗಿರಲಿಲ್ಲ"

"ಸೋವಿಯಟ್ ರಷ್ಯದಲ್ಲಿ ಸಿನಿಮಾ ಕಲೆ ನಮ್ಮಲ್ಲಿನಂತಲ್ಲ. ಹೊಟ್ಟೆ ಹೊರೆಯಲಾಗಿ ಅಲ್ಲಿ ಚಿತ್ರ ತಯಾರಿಕೆಯಲ್ಲಿ ಸ್ಪರ್ಧೆಯಿಲ್ಲ. ಇನ್ನೊಂದು ಚಿತ್ರವನ್ನು ಮೀರಿಸಬೇಕೆಂದಲ್ಲ ಅಲ್ಲಿ ಚಿತ್ರಗಳನ್ನು ಮಾಡುವುದು. ಕಲಾ ಉದ್ದೇಶದಿಂದ ಜನರಿಗೆ ಶಿಕ್ಷಣ ಮತ್ತು ಮನರಂಜನೆ ಒದಗಿಸಲು ಅಲ್ಲಿ ಚಿತ್ರಗಳನ್ನು ತಯಾರಿಸುತ್ತಾರೆ.

"ಅಲ್ಲಿ ಚಿತ್ರೋದ್ಯಮದಲ್ಲಿರುವವರಿಗೆ ಹೇಗೆ ಹಣ ದೊರೆಯುವುದೆಂಬುದು ನನಗೆ ಗೊತ್ತಿರಲಿಲ್ಲ. ಕೆಲಸದ ವಿಭಾಗ ಗಣಿಸದೆ, ಕೆಲಸದ ಸ್ವಭಾವ ಪ್ರಮಾಣಗಳಿಗನುಸಾರವಾಗಿ ಹಣ ಕೊಡಲಾಗುತ್ತಿದೆ. ಉದಾಹರಣೆಗೆ 'ಫಾಲ್ ಆಫ್ ಬರ್ಲಿನ್' ಚಿತ್ರದ ನಾಯಕನಿಗೆ ತಿಂಗಳಿಗೆ ೧೫ ಸಾವಿರ ರೂಬೆಲ್ ದೊರಕುವುದು. ತನ್ನ ಕೆಲಸದಲ್ಲಾತ ಸ್ಟಾಲಿನ್ ಬಹುಮಾನ ಗಳಿಸಿರುವುದರಿಂದಲೇ ಆತನಿಗಷ್ಟು ಹಣ. ಸ್ಟಾಲಿನ್ ಅಥವಾ ಲೆನಿನ್ ಬಹುಮಾನ ಗಳಿಸಿದವರು ಯಾರಾದರೂ— ಅವರು ನಟರೋ, ಡೈರೆಕ್ಟರೋ, ಡಿಸೈನರೋ ಯಾರಾದರೂ ಸರಿ, ಅವರಿಗೆ ಅತೀ ಹೆಚ್ಚು ಹಣ ದೊರೆಯುತ್ತದೆ.

"ರಷ್ಯನ್ ಸಿನಿಮಾ ಕಲಾರಂಗದಲ್ಲಿ ಇನ್ನೊಂದು ಮುಖ್ಯ ವಿಷಯವೆಂದರೆ ಕಲಾವಿದರನ್ನು ಆರಿಸಿಕೊಳ್ಳುವ ಬಗ್ಗೆ ಅಲ್ಲಿ ನಾಟಕ ಕಲೆಯ ಸಂಸ್ಥೆಯೊಂದಿದೆ. ಅಲ್ಲಿ ಆರು ವರುಷಗಳ ಶಿಕ್ಷಣ ಕೋರ್ಸುಗಳಿವೆ. ವಿದ್ಯಾರ್ಥಿಗಳಿಗೆ ವೇದಾಂತ, ಮನಶಾಸ್ತ್ರ, ಚಿತ್ರತಾಂತ್ರಿಕತೆ, ವರ್ಣ ಚಿತ್ರಣ, ವಾಸ್ತು ಶಿಲ್ಪ— ಇವೆಲ್ಲದರಲ್ಲೂ ಶಿಕ್ಷಣ ಕೊಡಲಾಗುತ್ತೆ. ಶಿಕ್ಷಣಕ್ಕೆ ಉಮೇದುವಾರರನ್ನು ವಿಶೇಷ ಸಮಿತಿಯೊಂದು ಆರಿಸುವುದು. ಸಾವಿರಾರು ಮಂದಿ ಅರ್ಜಿ ಹಾಕಿಕೊಳ್ಳುವರು. ಆದರೆ ಸ್ಪರ್ಧಾ ಪರೀಕ್ಷೆಗಳ ಮೂಲಕ ೨೦೦ ಮಂದಿಗಳನ್ನು ಮಾತ್ರ ಆರಿಸಲಾಗುವುದು. ಅರ್ಜಿದಾರರು ತಂತಮ್ಮ ಶಾಲೆಗಳ ಮುಖ್ಯಸ್ಥರಿಂದ ಆರಿಸಲ್ಪಟ್ಟಿರಬೇಕು.

"ನಾನು ಈ ಶಿಕ್ಷಣ ಅಕಾಡೆಮಿಗೆ ಭೇಟಿ ಕೊಟ್ಟ ದಿನ ಓರ್ವ ಭಾವೀ ಡೈರೆಕ್ಟರನ ಟೆಸ್ಟ್ ನಡೆಯುತ್ತಿತ್ತು. ಆ ಯುವಕ ಆರು ವರ್ಷದ ಕೋರ್ಸು ಮುಗಿಸಿ ಟೆಸ್ಟಿನಲ್ಲಿ ಪಾಸಾದರೆ ಡೈರೆಕ್ಟರ್ ಸರ್ಟಿಫಿಕೇಟ್ ಪಡೆಯುತ್ತಿದ್ದ. ಶೈಕ್ಷಣಿಕ ಮತ್ತು ಪ್ರಾಯೋಗಿಕ ತರಬೇತಿಯ ಜೊತೆಗೆ ಅವನಿಗೆ ಸರ್ವ ಸೌಲಭ್ಯ ದೊರೆತಿತ್ತು. ಆ ದಿನ ಆತನೇ ರಾಜನಾಗಿದ್ದ! ಅತ್ಯುತ್ತಮ ಕ್ಯಾಮರಾಮನ್, ಅತ್ಯುತ್ತಮ ನಟ, ದೇಶದಲ್ಲಿನ ಎಲ್ಲಾ ಅತ್ಯುತ್ತಮ ಅವಕಾಶಗಳನ್ನು ಆತ ತಾನೇ ನಿರೂಪಿಸಿಕೊಂಡಿದ್ದ. ಎರಡು ರೀಲುಗಳ ಚಿತ್ರವೊಂದನ್ನು ತಯಾರಿಸಲು ಕೇಳಬಹುದಾಗಿತ್ತು!

"ಆ ದಿನ ಅಲ್ಲಿ ರಷ್ಯದಲ್ಲೆಲ್ಲಾ ಹೆಸರುವಾಸಿಯಾದಂಥಾ ನಟನೊಬ್ಬ ಮೇಕಪ್ ಮಾಡಿಕೊಂಡು ನಿಂತಿದ್ದುದು ನೋಡಿ ನನಗೆ ಆಶ್ಚರ್ಯವಾಯಿತು. ನೀನೇನು ಮಾ

ದುವನ್ನು ನೂರು ನಾಗರಿಕತೆ ಇದೆ. ಉಳಿದ ದೇಶದ ಭಾಗಗಳನ್ನು ನೋಡಿದರೆ ಮನೋವಿಕಾರಕ್ಕೆಡೆ ಕೊಡದಂಥಾ ಸಂಸ್ಕೃತಿ, ನಾಗರಿಕತೆ ನಿಮಗೆ ಬಂದಿಲ್ಲ. ಆದರೆ ನಮ್ಮ ದೇಹದ ಅಂಗಗಳೆಲ್ಲವೂ ಹಿಡಿತದಲ್ಲಿರುವುದರಿಂದ ಯಾವ ವಿಕಾರಕ್ಕೂ ಎಡೆಯಿಲ್ಲ' ಎಂದು ಹೇಳಿದನು. ಇದು ಅಶ್ಲೀಲ ವಿನೋದವೆನಿಸುತ್ತದೆ.

ವಿನೋದದ ಗುರಿಯು ಮಾನವನನ್ನು ಉಲ್ಲಸಿತನಾಗಿಸುವುದು. ಮುಖವು ಸದಾ ನಗುಮಲ್ಲಿಗೆಯಿಂದ ಅಲಂಕೃತವಾಗಿರುವಂತೆ ಮಾಡುವುದು. ವಿನೋದ ಶೀಲನು ಆರೋಗ್ಯವಂತನಾಗಿರುತ್ತಾನೆ. ಅಂಥಾತನ ಶರೀರ ಸೌಂದರ್ಯ ಬೆಳೆಯುತ್ತದೆ. ಆದ್ದರಿಂದ ಪ್ರತಿಯೊಬ್ಬನೂ ವಿನೋದಗಾರನಾಗಬೇಕು. ವಿನೋದಗಾರನಿಂದಾಗ ಕಪಟವೃತ್ತಿಯು, ಇನ್ನೊಬ್ಬರಿಗೆ ಕಲಂಕ ಬಗೆಯುವ, ಆತ್ಮಸಂತಪ್ತನೆಯು, ಇಲ್ಲವೇ ಅಶ್ಲೀಲ ವಿನೋದವನ್ನು ಅಭ್ಯಾಸ ಮಾಡದಿರಿ. ಬದಲು ಮುಗ್ಧ ವಿನೋದವು ಪ್ರತಿಯೊಬ್ಬರ ಆಸ್ತಿಯಾಗಲಿ.

—

ಹುತ್ತಿರುವಿಯೆಂದು ನಾನು ಆತನನ್ನು ಕೇಳಿದಾಗ ತಮಾಷೆಯಾಗಿ ಆತ, ನಾನು ಮೇಲೆ ತಿಳಿಸಿದ ತರುಣನತ್ತ ಕೈ ತೋರಿಸಿ 'ನಮ್ಮ ತರುಣನ ಆಜ್ಞೆಯ ಮೇರೆ ನಾನು ಬಂದಿದ್ದೇನೆ' ಅಂದ!

"ಈ ಶಾಲೆಯ ಆಡಳಿತ ಸಮಿತಿಯಲ್ಲಿ ಒಂಬತ್ತು ಜನ ಸದಸ್ಯರಿರುತ್ತಾರೆ. ಪುಡೊವ್ ಕಿನ್, ಚೆರ್ಕಸೋವ್ ಮೊದಲಾದಂಥವರಿದ್ದಾರೆ. ಅದರಲ್ಲಿ ವಿದ್ಯಾರ್ಥಿ ತನ್ನ ವ್ಯಾಸಂಗದ ಕಾಲದಲ್ಲಿ ತಿಂಗಳಿಗೆ ೩೦೦ ರೂಬೆಲ್ ವೇತನ ಪಡೆಯುತ್ತಾನೆ. ಒಮ್ಮೆ ಅತ ಪ್ರಥಮ ಫೈನಲ್ ಪರೀಕ್ಷೆಯಲ್ಲಿ ವಿಫಲನಾದರೆ ಮತ್ತೆ ಮತ್ತೆ ಅವನಿಗೆ ಅವಕಾಶ ಕೊಡಲಾಗುತ್ತೆ. ಆದರೆ ವೃತ್ತಿಗೆ ಸುತರಾಂ ತಕ್ಕವರಲ್ಲದಂತವರನ್ನು ಆರಿಸುವುದೇ ಇಲ್ಲವೆನ್ನಿ.

"ನಿಶ್ಚಿತ ಸಂಖ್ಯೆಗಿಂತ ಹೆಚ್ಚಿಗೆ ವಿದ್ಯಾರ್ಥಿಗಳನ್ನಾರಿಸಿದರೆ, ಆ ಹೆಚ್ಚಿನವರಿಗೆ ಮುಂದಿಗೆ ವೇತನಗಳನ್ನೇನೋ ಕೊಟ್ಟು ಅವರು ಓದುತ್ತಿರುವ ಸ್ಕೂಲು ಕಾಲೇಜುಗಳಲ್ಲಿ ವ್ಯಾಸಂಗ ಮುಂದುವರಿಯುವಂತೆ ಹೇಳಲಾಗುತ್ತೆ.

"ಇಲ್ಲೂ ಉದ್ಯೋಗದ ಪ್ರಶ್ನೆ ಅರ್ಹತೆ ಮೇಲೆ ಹತೋಟಿಗೊಳಪಟ್ಟಿದೆಯೇ ವಿನಾ ಇನ್ನಾವ ಬಗೆಯಲ್ಲೂ ಅಲ್ಲ. ರಷ್ಯದಲ್ಲಿ ಅರ್ಹತೆಯೇ (ಮೆರಿಟ್) ಜೀವನದ ಆಧಾರಾಂಶ. ಅರ್ಹತೆ ಇರುವ ಯಾವನಾದರೂ ಮುಂದುವರಿಯಬಲ್ಲ. ರಷ್ಯನ್ ಜೀವನದ ಎಲ್ಲಾ ವಿಭಾಗಗಳಲ್ಲೂ ದುಡಿಮೆ ಮತ್ತು ಅರ್ಹತೆ ಎರಡು ಮೂಲಾಧಾರಗಳು.

"ಈ ಚಿತ್ರೋದ್ಯಮ ಎಕಾಡೆಮಿಯ ಎಲ್ಲಾ ಶಾಖೆಗಳಲ್ಲೂ ಅತ್ಯುತ್ತಮ ಸಲಕರಣೆಗಳು ಸ್ಥಿತಿಗತಿಗಳು ಇದ್ದುದನ್ನು ನಾವು ಕಂಡೆವು. ಡಿಸೈನಿಂಗಿಗೆ ರಷ್ಯನರು ಅತೀವ ಎಚ್ಚರಿಕೆ ವಹಿಸುತ್ತಾರೆ. ಒಂದು ಚಿತ್ರ ಹೊರಗೆಡವುವಂತ ಯಾವೊಂದು ಅವಧಿ, ಜೀವನ ಮಾದರಿಗಳಲ್ಲೂ ಅತ್ಯುತ್ತಮ ವಾಸ್ತವಿಕತೆ ಎಂತು ತಂಬಬೇಕೆಂಬ ಬಗ್ಗೆ ರಷ್ಯನ್ ಚಿತ್ರೋದ್ಯಮದ ಅತ್ಯಂತ ಪ್ರಯತ್ನ ನಡೆಯುವುದು. ಈ ಪ್ರಯತ್ನದಲ್ಲಿ ಡಿಸೈನಿಂಗ್ ತುಂಬಾ ಮುಖ್ಯವೆಂದು ಪರಿಗಣಿಸಲ್ಪಟ್ಟಿದೆ. ಈ ಶಾಲೆಯಲ್ಲಿ ಒಂದು ಕೊಠಡಿಯಿಂದ ಇನ್ನೊಂದಕ್ಕೆ ಹೋಗುತ್ತಿದ್ದಂತೆ, ಸೋವಿಯಟ್ ಸಿನಿಮಾ ಕಲೆಯ ಪ್ರಕೃತಿಯನ್ನು ಹೆಜ್ಜೆ ಹೆಜ್ಜೆಗಳಲ್ಲಿ ಕಾಣಬಹುದು.

"ಚಿತ್ರ ನಿರ್ಮಾಣದ ಪದ್ಧತಿಯಂತೂ ಅಸಾಮಾನ್ಯವಾದುದು. ಚಿತ್ರದ 'ಸ್ಕ್ರಿಪ್ಟ್' ಸಿದ್ಧವಾದೊಡನೇ ಅದನ್ನು ಸರಕಾರದ ಸಿನೆಮಾ ಇಲಾಖೆಗೆ ಒಪ್ಪಿಸಲಾಗುವದು. ಆ ಇಲಾಖೆ ಅದನ್ನು ಪರಿಶೀಲಿಸಿ ಅಗತ್ಯವಾದ ಸಲಹೆಗಳನ್ನೂ ಕೊಡುವುದು. ಈ 'ಸ್ಕ್ರಿಪ್ಟ್' ಸಿದ್ಧತೆಯಾಗುವುದೂ ಕೂಡ ಪೂರ್ತ ಕಲಾ ದೃಷ್ಟಿಯಿಂದಲೇ ವಿನಾ ವಾಣಿಜ್ಯ ದೃಷ್ಟಿಯಿಂದಲ್ಲ. ಈ "ಸ್ಕ್ರಿಪ್ಟ್" ಅಂತಿಮವಾಗಿ ಸಿದ್ಧವಾಯಿತೆಂದರೆ, ಆ ಮೇಲೆ ಅದರ ಷೂಟಿಂಗ್ ಸರಕಾರದ ಸಿನಿಮಾಟೋಗ್ರಾಫ್ ಇಲಾಖೆಯ ವೆಚ್ಚದಲ್ಲಿ ನಡೆಯುವುದು.

ಒಮ್ಮೆ ಅಶೋಕ್ ಮಾರ್ಗದರ್ಶಕರೇ ಇಲ್ಲದೆ ಪ್ರಯಾಣ ಮಾಡಲು ನಿರ್ಧರಿಸಿದರು "ನಾನು ಒಬ್ಬನೇ ಹೋಗುವೆ" ಎಂದು ಹೇಳಿ ಒಂದು ಬಸ್ಸು ಹತ್ತಿದರು. ಒಂದು ಪರ್ ಚಿತ್ರ ಸ್ಟುಡಿಯೋಗೆ ಭೇಟಿ ಕೊಟ್ಟು ಹಿಂತಿರುಗುತ್ತಿದ್ದಾಗ ನಡೆದ ಪ್ರಸಂಗವಿದು. ಬಸ್ಸು ಚಲಿಸಹತ್ತಿದಂತೆ ಅಶೋಕ್ ಮತ್ತು ಇತರ ಪ್ರಯಾಣಿಕರು ಪರಸ್ಪರ ಆಕರ್ಷಿತರಾಗಲಾರಂಭಿಸಿದರು. ಇದು ಅಸಂಭವವೇನಲ್ಲವೆನ್ನಿ. ಅಶೋಕ್ ಒಂದು ಬಗೆಯ ಹಾರ್ದಿಕ ತುಂಟತನದ ರೂಪ ಭಾವನೆಯಿಂದ ತುಂಬಿರುತ್ತಾರೆ. ಅದೇ ಅವರ ರಜತ ಪರದೆಯ ಪ್ರಸಿದ್ಧಿಯ ರಹಸ್ಯ ಕೂಡಾ! ಮರುಗಳಿಗೆಯಲ್ಲೇ ಬಸ್ಸಿನಲ್ಲಿ ಅನೇಕರು 'ಭಾರತೀಯ ಕಲಾವಿದ' ಎಂದು ಗಟ್ಟಿಯಾಗಿ ಕೂಗುತ್ತಿದ್ದುದು ಕೇಳಿಸಿತವರಿಗೆ. ಒಬ್ಬ ಸಹಪ್ರಯಾಣಿಕನಂತೂ ಗಟ್ಟಿಯಾಗಿ "ಭಾರತೀಯ ನಿಯೋಗದ ಪ್ರತಿನಿಧಿ" ಎಂದು ಅರಚಿದ. ಇಡೀ ಬಸ್ಸಿನಲ್ಲಿ ಕೋಲಾಹಲ. ಹಲವರು ಅಶೋಕ್‌ನತ್ತ ಧಾವಿಸಿಬಂದರು. ಕೆಲವರು ಆತನನ್ನು ಮುದ್ದಿಸಿದರು. ಇನ್ನು ಕೆಲವರು ಆದರದಿಂದ ಹಿಡಿದು ಜಗ್ಗಾಡಿದರು. ಕೆಲವರು ಏನೋ ಹೇಳಲಾರಂಭಿಸಿದರು....

ಒಬ್ಬ ಹೆಂಗಸಂತೂ ಉತ್ಸಾಹದ ಪರಮಾವಧಿ ಮುಟ್ಟಿ ಒಂದೇ ಸಮ ಕಿರಿಚಿಕೊಳ್ಳಲಾರಂಭಿಸಿದ್ದಳು. ಅಶೋಕ್ ದಿಗ್ಭ್ರಾಂತನಾಗಿದ್ದುದು ಕಂಡು ಆಕೆ, ಹತ್ತಿರವಿದ್ದಾತನೊಬ್ಬನಿಂದ ಪತ್ರಿಕೆಯೊಂದನ್ನು ಅಶೋಕ್ ಮುಖಕ್ಕೆ ಹಿಡಿದು 'ಪುಡೋವಿನ್, ಚೆರ್ಕಸೊವ್' ಎಂದು ಕೂಗಲಾರಂಭಿಸಿದಳು. ಆಗಲೇ ಅಶೋಕ್‌ಗೆ ತಿಳಿದುದು. "ಭಾರತಕ್ಕೆ ಭೇಟಿ ಕೊಟ್ಟಿದ್ದ ರಷ್ಯನ್ ನಿಯೋಗದವರು ರಷ್ಯದ ಪತ್ರಿಕೆಗಳಲ್ಲಿ ಭಾರತದ ಬಗ್ಗೆ ಬರೆದಿದ್ದನ್ನೆಲ್ಲಾ ಅವಳು ಓದಿದುದಾಗಿ ತಿಳಿಸುತ್ತಿದ್ದಳೆಂದು!

ಇನ್ನೊಮ್ಮೆ ಭಾರತೀಯ ಚಿತ್ರ ನಿಯೋಗದವರು ಆಗ ರಷ್ಯದಲ್ಲಿ ಪ್ರವಾಸ ಮಾಡುತ್ತಿದ್ದ ಚೀಣೀ ನಿಯೋಗದ ಗೌರವಾರ್ಥ ಏರ್ಪಡಿಸಿದ್ದ ಪ್ರದರ್ಶನವೊಂದಕ್ಕೆ ಹೋಗಿದ್ದರು. ರಷ್ಯದ ಅತ್ಯುನ್ನತ ಅಡಳಿತಾಧಿಕಾರಿಗಳನೇಕ ಮಂದಿ ಅದಕ್ಕೆ ಬಂದಿದ್ದರು. ಭಾರತೀಯ ನಿಯೋಗ ಆ ಸ್ಥಳಕ್ಕಾಗಮಿಸಿ ಆ ಆಗಮನ ಪ್ರಕಟವಾಗುತ್ತಲೇ ಸಭಾ ಭವನದಲ್ಲಿದ್ದ ಸರ್ವರೂ ಚಪ್ಪಾಳೆ ತಟ್ಟಿ ಹತ್ತು ನಿಮಿಷಗಳ ಕಾಲ ಒಂದೇ ಸಮ ಹರ್ಷಧ್ವನಿಗೈದರು.

'ಭಾರತೀಯರನ್ನಷ್ಟೇ ಅಲ್ಲ, ಅವರು ಪ್ರೀತಿಸುವುದು. ಎಲ್ಲಾ ಜನರನ್ನೂ ಅವರುಗಳು ಒಂದೇ ರೀತಿ ... ಣುತ್ತಾರೆ. ಅದರಲ್ಲೂ ... ರು ಮತ್ತು ಅಧಃಪತರಾ... ನ್ನು ಕಂಡರೆ ಹೆಚ್ಚು ಗೌರವ ರಷ್ಯನ್ನರಿಗೆ.'

ಪಾಲ್ ರೋಬ್ಸನ್ನನ ಹೆಸರನ್ನು ಉಚ್ಚರಿಸಿದಾಗ ಸಾರ್ವಜನಿಕ ಸಭೆಯೊಂದರಲ್ಲಿ ಭಾರೀ ಹರ್ಷಧ್ವನಿ, ಕಿವಿ ಕಿವುಡಾಗುವ ಚಪ್ಪಾಳೆಯಾಯಿತಂತೆ!

—ಚೇತನಾ.

Notice

Sealed tenders will be received at the Civil Surgeon's Office, Mercara, upto 11 A. M., on Friday the 16th January 1953, for the supply of contract of all articles of diet, etc., required separately, for the use of the in-patients of Mercara (2) Virajpet (3) Somwarpet and (4) Tithimathi hospitals, from 1st April 1953 to 31st March 1954 (both days inclusive).

For further particulars apply to the Medical Officer-in-charge of the hospital concerned.

T. B. MEDAPPA,
Civil Surgeon. Coorg.

ನೋಟೀಸು.

ಮಡಿಕೇರಿ (೨) ವೀರಾಜಪೇಟೆ (೩) ಸೋಮವಾರಪೇಟೆ ಮತ್ತು (೪) ತಿತಿಮತಿ ಆಸ್ಪತ್ರೆಗಳ ಕಾಯಿಲಸ್ಥರ ಉಪಯೋಗಕ್ಕಾಗಿ ತಾ. ೧-೪-೫೩ರಿಂದ ೩೧-೩-೫೪ರ ವರೆಗೆ (ಆ ಎರಡು ದಿನಗಳೂ ಸೇರಿ) ಆಹಾರ ಮುಂತಾದ ಪದಾರ್ಥಗಳನ್ನು ಪ್ರತ್ಯೇಕ ಪ್ರತ್ಯೇಕ ಸರಬರಾಯಿಯನ್ನು ಕಂಟ್ರಾಕ್ಟು ಮೂಲಕ ಮಾಡಲು ಇಚ್ಛಿಸುವವರ ಟೆಂಡರುಗಳನ್ನು ತಾ. ೧೬-೧-೫೩ನೇ ಶುಕ್ರವಾರ ಬೆಳಿಗ್ಗೆ ೧೧ ಗಂಟೆಯ ವರೆಗೆ ಮಡಿಕೇರಿ ಸಿವಿಲ್ ಸರ್ಜನರ ಆಫೀಸಿನಲ್ಲಿ ಹೊಂದಿಕೊಳ್ಳಲಾಗುವುದು.

ಹೆಚ್ಚಿನ ಮಾಹಿತಿಗಳಿಗೆ ಆಯಾಯ ಆಸ್ಪತ್ರೆಯ ವೈದ್ಯಾಧಿಕಾರಿಗಳಲ್ಲಿ ವಿಚಾರಿಸಿಕೊಳ್ಳಬೇಕು.

ಟಿ. ಬಿ. ಮೇದಪ್ಪ,
ಸಿವಿಲ್ ಸರ್ಜನ್, ಕೊಡಗು.

ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆ ಪಂಪ್ ಹೌಸ್ ವೈಶ್ಯ ದೇವಸ್ಥಾನದ ಪಕ್ಕದಲ್ಲಿ ಇದ್ದು ವಿದ್ಯುತ್ ದೀಪ, ಬಾವಿ ನೀರಿನ ಸಂಪೂರ್ಣ ಸೌಕರ್ಯದಿಂದ ಸಜ್ಜಿತವಾದ ಮಹಡಿ ಮನೆಯೂ ಹೊಸೂರು ಗ್ರಾಮದಲ್ಲಿರುವ ಕಂಜರು ಮಾನಿ ೧೪೬೦ ಒಟ್ಟು ನೀರಾವರಿ ಭೂಮಿಯೂ ಮಾರಾಟಕ್ಕಿದೆ. ಖರೀದಿದಾರರು ಒಟ್ಟಾಗಿಯಾಗಲೀ, ಬೇರೆ ಬೇರೆಯಾಗಲೀ ಕೊಂಡುಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರದಾಗಲೀ ಖುದ್ದು ವಿಚಾರಿಸಿಯಾಗಲೀ ತಿಳಿದುಕೊಳ್ಳಬಹುದು.

ವಿ. ಎನ್. ನಾರಾಯಣಶೆಟ್ಟಿ,
ಶ್ರೀ ಗಾಯತ್ರಿ ಹಾಲ್,
೨೩೭ ಫಸ್ಟ್ ಮೇಯಿನ್ ರೋಡ್,
ಶೇಷಾದ್ರಿ ಪುರಂ,
4-4 ಬೆಂಗಳೂರು ೩.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾದ ಏಜೆಂಟರು. (1921ರಲ್ಲಿ ಸ್ಥಾಪಿತವಾದುದು)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	ರೂ.	2,09,000
ಕ್ಷೇಮನಿಧಿ	ರೂ.	63,000
ಇತರ ನಿಧಿಗಳು	ರೂ.	17,000
ಠೇವಣಿ	ರೂ.	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1-1-53ರಿಂದ)	"	1-8-0
ನಿರಖು (Fixed) 3ರಿಂದ 11 ತಿಂಗಳ ಅವಧಿಗೆ	"	1-8-0
1 ವರುಷ	"	2-0-0
2 ವರುಷ	"	2-8-0
3 ವರುಷ	"	3-0-0
5 ವರುಷ	"	3-12-0
10 ವರ್ಷ	"	4-0-0

ಬ್ಯಾಂಕಿನ ಎಲ್ಲಾ ತರದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಜಿಲ್ಲಾ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಬೆಳ್ಳಿ ಒಡವೆ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೈಟ್, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ ಬೋರ್ಡು ಡೈರೆಕ್ಟ್ರ.

ಕೊಡಗು

ತಾ. ೨-೧-೧೯೫೩ನೇ ಶುಕ್ರವಾರ

೧೯೫೨.

ಭಾರತದಲ್ಲಿ -

೧೯೫೨ ಮುಗಿದು ೧೯೫೩ಕ್ಕೆ ಕಾಲಿಕ್ಕಿರುವೆವು. ೧೯೫೩ ಸರ್ವರಿಗೂ ಶುಭದಾಯಕವೂ, ಸರ್ವ ಎಡೆ ಶಾಂತಿ ಸ್ಥಾಪಕವೂ ಆಗಲೀ ಎಂಬ ಬಯಕೆ ನಮಗಿರುವಂತೆಯೇ ಸರ್ವರಿಗೂ ಇದೆ. ವರ್ಷ ಹೊಸದಾದರೂ ಈ ಬಯಕೆ ಹೊಸದಲ್ಲ. ಯಾವುದೇ ಬಯಕೆಯಿಂದ ಯಾವ ವರ್ಷ ಪ್ರಾರಂಭವಾದರೂ ದಿನದಲ್ಲಿ ಹಗಲು ರಾತ್ರಿಗಳಿರುವಂತೆ, ತಿಂಗಳಲ್ಲಿ ಕೃಷ್ಣಪಕ್ಷ, ಶುಕ್ಲಪಕ್ಷಗಳಿರುವಂತೆ ವರ್ಷದಲ್ಲಿ ಋತುಭೇದಗಳಿರುವಂತೆ, ಜೀವನದಲ್ಲಿ ಅದು ವ್ಯಕ್ತಿಯ ಜೀವನವೇ ಇರಲಿ ಯಾ ಜನಾಂಗದ ಇಲ್ಲವೇ ರಾಷ್ಟ್ರದ ಜೀವನವೇ ಇರಲೀ ಕಷ್ಟ ಸುಖಗಳು ಕತ್ತಲು ಬೆಳಕುಗಳು ಪ್ರತಿ ವರ್ಷದಲ್ಲಿ ಏಕೆ ಪ್ರತಿ ದಿನದಲ್ಲಿ ತೋರಿಬರುವುದು ಸ್ವಾಭಾವಿಕ. ಈ ದೃಷ್ಟಿಯಿಂದ ಪ್ರತಿ ವರ್ಷವು ಮತ್ತೊಂದಕ್ಕಿಂತಾ ಹಿತಕರವೆನ್ನುವುದು ಸಮಂಜಸವಲ್ಲದಿದ್ದರೂ ಕಳೆದ ವರ್ಷಕ್ಕಿಂತಾ ಮುಂಬರುವ ವರ್ಷವು ಸುಖಮಯವಾದೀತೆಂದು ಇಚ್ಛಿಸುವುದು ಸ್ವಾಭಾವಿಕವಾದುದು.

ರಾಷ್ಟ್ರದ ಹಾಗೂ ಜಗತ್ತಿನ ೧೯೫೨ನೇ ವರ್ಷದ ಚರಿತ್ರೆಯ ಪುಸ್ತಕದ ಪುಟಗಳಲ್ಲಿ ವರ್ಣರಂಜಿತ ವಿಚಾರಗಳು ಕೆಲವಿದ್ದರೆ ಕಲಂಕಿತ ತಪ್ಪು ಘಟನೆಗಳೂ ಇವೆ. ೧೯೫೨ನೇ ಪ್ರಾರಂಭದಲ್ಲಿ ದೇಶದ ಅತ್ಯಂತ್ಯಕ್ಕೂ ಸಾರ್ವತ್ರಿಕ ಚುನಾವಣೆ ನಡೆದು ದೇಶದಲ್ಲಿ ನಿಜವಾದ ಜನ ಪ್ರತಿನಿಧಿ ಹಾಗೂ ಪ್ರಜಾರಾಜ್ಯ ಸ್ಥಾಪಿತವಾಯಿತು. ಪ್ರೌಢಮತದಾನ ಪದ್ಧತಿಯ ಮಹಾ ಪರೀಕ್ಷೆಯು ಭಾರತದಲ್ಲಿ ಎಲ್ಲರೂ ಮೆಚ್ಚುವ ರೀತಿ ನಡೆಯಿತು. ಕೇಂದ್ರದಲ್ಲಿ ರಾಜೇಂದ್ರ ಪ್ರಸಾದರು ಅಧ್ಯಕ್ಷರಾಗಿಯೂ ಜವಾಹರರು ಮುಖ್ಯ ಮಂತ್ರಿಯಾಗಿಯೂ ಆರಿಸಲ್ಪಟ್ಟರು. ಪೆಪ್ಸು, ಮಣಿಪುರ ಮೊದಲಾದೆಡೆ ಕಾಂಗ್ರೆಸಿಗೆ ಅಪಜಯವಾದರೂ ದೇಶದ ಆಡಳಿತ ಜವಾಬ್ದಾರಿ ಕಾಂಗ್ರೆಸಿನ ಕೈಯಲ್ಲೇ ಉಳಿಯಿತು. ಆದರೂ ಕೂಡ ಚುನಾವಣೆಯು ದೇಶದಲ್ಲಿ ಸಮುತ್ತಾವಾದಿಗಳು ಬೆಳೆಯುತ್ತಿರುವರೆಂಬುದನ್ನು ಎತ್ತಿತೋರಿಸಿತು.

ಕಾಂಗ್ರೆಸ್ ಸರಕಾರವು ಪಂಚವಾರ್ಷಿಕ ಯೋಜನೆಯನ್ನು ಜನತೆಯ ಮುಂದೆ ಈ ವರ್ಷವೇ ಇಟ್ಟಿತು. ಸಾಮೂಹಿಕ ವಿಕಾಸ ಯೋಜನೆಯೂ ಉದ್ಘಾಟಿಸಲ್ಪಟ್ಟಿತು. ಹೊರಗಿನ ರಾಷ್ಟ್ರಗಳ ಪ್ರಾಮುಖ್ಯವಾಗಿ ಅಮೇರಿಕದ ಆರ್ಥಿಕ ಸಹಾಯವೂ ದಿನದಿಂದ ದಿನಕ್ಕೆ [illegible] ಕಾರ್ಖಾನೆ, ಎಣ್ಣೆಗಳ ಕಾರ್ಖಾನೆ ನೀರಾವರಿ ಯೋಜನೆ ಮೊದಲಾದ ಕಾರ್ಯಗಳು ಕೈಕೊಳ್ಳಲ್ಪಟ್ಟವು. ಎಷ್ಟೇ ಪ್ರಯತ್ನಿಸಿದರೂ ಕಾಶ್ಮೀರ ಸಮಸ್ಯೆ ಬಗೆಹರಿಯಲಿಲ್ಲ. ಇತ್ತೀಚೆಗಾಗಿ ಪಾಕಿಸ್ತಾನದ ಪ್ರಚಾರವು ಯುದ್ಧಮುಖ ದೃಷ್ಟಿಯಿಂದ ಸಾಗಿದೆ.

ಸಿಂಹಳ, ಆಫ್ರಿಕಾದಲ್ಲಿರುವ ಭಾರತೀಯರ ಸ್ಥಿತಿ ಹಿಂದಿನದಕ್ಕಿಂತಾ ಕಷ್ಟಕ್ಕೀಡಾಗಿದೆ. ದೇಶದ ಉತ್ಪನ್ನಗಳಲ್ಲೂ ಕೂಡ ಸುಭಿಕ್ಷೆಯು ಚಿಹ್ನೆ ತೋರುತ್ತಿಲ್ಲ. ಮಳೆ, ಬಿಸುಗಾಳಿ, ಒಂದೆಡೆಯಾದರೆ ಮಳೆಯ ಅಭಾವ, ಆಹಾರದ ಕೊರತೆ ಇನ್ನೊಂದೆಡೆ. ಹೀಗಾಗಿ ಬಡಕೈತನ ಹಾಗೂ ಮಜೂರರ ಜೀವನ ಮಟ್ಟ ಯಾವ ದೃಷ್ಟಿಯಿಂದಲೂ ಏರಲಿಲ್ಲ.

ಅಂತರಾಷ್ಟ್ರೀಯ ರಂಗದಲ್ಲಿ:-

ಬ್ರಿಟನ್ನಿನಲ್ಲಿ ಜಾರ್ಜರು ನಿಧನರಾಗಿ ಎಲಿಜಬೆತರು ರಾಣಿಯಾಗಿರಬಹುದು. ಅಟ್ಲೀ ಸರಕಾರ ಬದಲಾಗಿ ಚರ್ಚಿಲ್ ಸರಕಾರ ಬಂದಿರಬಹುದು. ಆದರೂ ಆ ರಾಷ್ಟ್ರದ ವಿದೇಶ ನೀತಿ ಹಿಂದಿನಂತೆಯೇ ಸಾಗಿಬಂದಿದೆ. ಅದೇ ರೀತಿ ಅಮೇರಿಕದಲ್ಲಿ ಟ್ರೂಮನರ ಬದಲು ಐಸೆನ್‌ಹೋವರರ ಆಯ್ಕೆಯಾದರೂ ರಾಷ್ಟ್ರದ ನೀತಿ ಹಿಂದಿನದೇ ಆಗಿದೆ. ಸಂಯುಕ್ತ ರಾಷ್ಟ್ರ ಸಭೆಯಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ. ರಷ್ಯಾ ಮತ್ತದಕ್ಕೆ ಸೇರಿದ ರಾಷ್ಟ್ರಗಳೊಂದೆಡೆಯಾದರೆ ಅಮೇರಿಕಾ ಮತ್ತದರ ಗೆಳೆಯರು ಬೇರೊಂದೆಡೆಯಾಗಿ ಜಗತ್ತು ಇಬ್ಭಾಗವಾಗಿದೆ. ಜಗತ್ತಿನ ನಭೋಮಂಡಲದಲ್ಲಿ ಯುದ್ಧ ಮೋಡಗಳು ಹೆಚ್ಚಾಗತೊಡಗಿವೆ. ಕೊರಿಯ ಯುದ್ಧದಲ್ಲಿ ಭಾರತವು ಸಂಧಾನ ನಡೆಸಿ ನಿಷ್ಫಲವಾದರೂ ಭಾರತದ ಸ್ಥಾನ ಅಂತರಾಷ್ಟ್ರೀಯ ರಂಗದಲ್ಲಿ ಮೇಲೇರಿದೆ. ಬಲಾಢ್ಯ ರಾಷ್ಟ್ರಗಳು ತಮ್ಮ ಹಿಡಿತದೊಳಗಿನ ಇತರ ರಾಷ್ಟ್ರಗಳನ್ನು ಹಾಗೆಯೇ ಇಡಲು ಯತ್ನಿಸುತ್ತಿದ್ದರೂ ಸ್ವಾತಂತ್ರ್ಯ ದಾಹವು ಎಲ್ಲೆಡೆ ಪ್ರಖರವಾಗಿ ಹಬ್ಬಿ ಅನೇಕ ರಾಷ್ಟ್ರಗಳ ಮುಷ್ಟಿ ಅನಿವಾರ್ಯವಾಗಿ ಸಡಿಲುಗೊಳ್ಳಬೇಕಾಗಿ ಬಂದಿದೆ. ಕೆನಿಯಾದ "ಮಾವ್ ಮಾವ್" ಚಳವಳ, ಟ್ಯುನಿಸಿಯಾ, ಮೊರಕ್ಕೋಗಳ ಆಂದೋಲನಗಳು ಭವಿಷ್ಯದ ಮಹಾ ಪ್ರಶ್ನಾರ್ಥಕ ಚಿಹ್ನೆಗಳಾಗಿ ನಿಂತಿವೆ. ಇಂದು ಇಡೀ ಆಫ್ರಿಕಾ ಖಂಡವೇ ಉರಿದಂತೆ ತೋರುತ್ತಿದೆ. ಮತ್ತೆ ಬರ್ಮಾ, ಮಲಯಾಗಳಲ್ಲಿ ಕಮ್ಯೂನಿಸ್ಟರ ಪ್ರಭಾವ ಕಡಿಮೆಯಾದಂತೆ ತೋರುತ್ತಿದ್ದರೂ ಗಲಭೆ ನಿಂತಿಲ್ಲ. ಇಂಡೋಚೀನಾದಲ್ಲಿ ವೀಟ್‌ಮಿನ್ ಪಕ್ಷ ಬಲಗೊಳ್ಳುತ್ತಿದೆ. ಈ ರೀತಿ ಪೂರ್ವ ಏಷ್ಯಾದಲ್ಲೂ ಗೊಂದಲ, ಆಂದೋಲನಗಳು ತಡೆಯಿಲ್ಲದೆ ಸಾಗಿವೆ.

ಕೊಡಗಿನಲ್ಲಿ:-

ಈ ವರ್ಷ ಮಂತ್ರಿ ಮಂಡಲ ರಚಿತವಾಗಿ ಕೊಡಗು ಪ್ರಜಾ ಜವಾಬ್ದಾರಿ ಸರಕಾರವನ್ನು ಪಡೆದು ಕಾರ್ಯ ನಡೆಸುತ್ತಿದೆ. ಇದು ಇನ್ನೂ ಪ್ರಥಮ ವರ್ಷವಾದ ಕಾರಣ ಹೆಚ್ಚೇನೂ ಮಂತ್ರಿಮಂಡಲದ ಕೆಲಸದ ವಿಚಾರ ಹೇಳಲು ಸಾಧ್ಯವಿಲ್ಲದಿದ್ದರೂ ಮಂತ್ರಿಮಂಡಳಕ್ಕೆ ಎಲ್ಲೆಡೆಯಿಂದಲೂ ಸಾಕಷ್ಟು ಸಹಕಾರ ಜನತೆಯಿಂದ ದೊರೆಯುತ್ತಿದೆ. ಸಾಮೂಹಿಕ ವಿಕಾಸ ಯೋಜನೆಯು ಪ್ರಾರಂಭವಾಗಿ ಮೂರು ತಿಂಗಳುಗಳಾದರೂ, ಜನತೆಯು ಹೃತ್ಪೂರ್ವಕವಾಗಿ ಇದನ್ನು ಸ್ವಾಗತಿಸಿ ತಮ್ಮ ಪಾಲಿನ ಕೆಲಸ ಮಾಡುತ್ತಿದ್ದರೂ ಸರಕಾರದ ಕಡೆಯಿಂದ ಆಗಬೇಕಿದ್ದಷ್ಟು ಕೆಲಸ ಆಗಿರುವ [illegible] ಈ ವರ್ಷ ಕೆಲಸದ ವಿವರ, ಪರಿಶೀಲನೆಗಳಲ್ಲೇ ಸಮಯ ಕಳೆದುಹೋಗಿರಬಹುದಾದರೂ ಹೊಸ ವರ್ಷದಲ್ಲಿ ಬೀತರಿ, ಕೊಟ್ಟಮುಡಿ ಸೇತುವೆ ಕೆಲಸ, ಕಾಲೇಜ್ ಬೋರ್ಡಿಂಗ್ ಕೆಲಸ, ಕೊಡಗಿಗೆ ವಿದ್ಯುಕ್ಷಕ್ತಿ, ಬರಪೊಳೆ ಯೋಜನೆಯ ಪರಿಶೀಲನೆ ಮೊದಲಾದುವುಗಳನ್ನು ತ್ವರೆಯಿಂದ ಕೈಗೊಳ್ಳಬೇಕಾಗಿದೆ.

ಸಾಳೆಬೆಳೆಗಳ ಮಟ್ಟಿಗೆ ೧೯೫೨ ಕೊಡಗಿಗೆ ಆಶಿಷ್ಟ ವರ್ಷವಾಯಿತು. ಬೆಳೆ ಬರುವಮಟ್ಟಿಗೆ ಕಡಿಮೆಯಾಗದಿದ್ದರೂ ಕಾಫಿ, ಕಿತ್ತಳೆ, ಮೆಣಸು ಮೊದಲಾದುವೂ ಕೂಡ ಹುಲುಸಾಗಿಲ್ಲ. ಜೊತೆಗೆ ಏಲಕ್ಕಿ, ಕಾಫಿಗಳ ಬೆಲೆ ಇಳಿಯತೊಡಗಿದೆ.

ಕೊಡಗಿನಲ್ಲಿ ಚುನಾವಣೆಯ ಕಾಲಕ್ಕೆ ದೇಶದ ಉತ್ಪನ್ನಗಳಿಗೆ ಹಬ್ಬಿದ್ದ ಕೋಮುವಾರು ಭಾವನೆ, ವ್ಯಕ್ತಿದೂಷಣೆ, ಅಪಪ್ರಚಾರಗಳು ಇತ್ತೀಚೆಗೆ ಕಡಿಮೆಯಾಗುತ್ತಿದ್ದರೂ ಕೆಲವೆಡೆ ವಾರ್ಷಿಕಪಕ್ಷ ಸಾಧನೆಯ ಹೀನ ಸುಳಿ ತೋರುತ್ತಿದೆ. ನವ ವರ್ಷದಲ್ಲಿ ಎಲ್ಲರಲ್ಲೂ ಸಾಮರಸ್ಯ ಹೆಚ್ಚಿ ಕೊಡಗಿನವರೆಲ್ಲರೂ ಅಣ್ಣ ತಮ್ಮ, ಅಕ್ಕ ತಂಗಿಯರಂತೆ ಸೌಹಾರ್ದತೆಯಿಂದ ಬದುಕುವಂತಾಗಲಿ. ದೇಶದಲ್ಲಿ ಶಾಂತಿ, ಸಂಪತ್ತುಗಳು ಹೆಚ್ಚಲಿ. ಎಲ್ಲರ ಜೀವನಮಟ್ಟವೂ ಮೇಲೇರಲಿ. ನವ ವರ್ಷವು ಸರ್ವರಿಗೂ ಸುಖಮಯವಾಗಲೀ ಎಂಬುದೇ ನಮ್ಮ ಕಾಂಕ್ಷೆ.

ವರ್ತಮಾನ

ಮೂಲಶಿಕ್ಷಣ ಶಾಲೆಗಳ ನಿಯಮಾವಳಿಗನುಸರಿಸಿ ವಿರಾಜಪೇಟೆಯಲ್ಲಿರುವ ಸರಕಾರಿ ಮೂಲಶಿಕ್ಷಣ ಶಾಲೆಯ ಮಂತ್ರಿಮಂಡಲಕ್ಕೆ ಈ ಶಾಲಾ ಬೋಧಕರಾದ ಶ್ರೀ ಎಸ್. ಎಸ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಶ್ರೀ ಎ. ಎ. ಸುಬ್ಬಯ್ಯನವರನ್ನು ಮುಖ್ಯ ಮಂತ್ರಿಯವರನ್ನಾಗಿಯೂ, ಶ್ರೀ ಹೆಚ್. ಎಸ್. ನಂಜಪ್ಪಯ್ಯನವರನ್ನು ಸ್ಪೀಕರರನ್ನಾಗಿಯೂ, ಶ್ರೀ ಕೆ. ಕೆ. ಮಾದಪ್ಪನವರನ್ನು ಸಾಂಸ್ಕೃತಿಕ ಮಂತ್ರಿಯವರನ್ನಾಗಿಯೂ, ಶ್ರೀ ಎಂ. ಕೆ. ಬೋರ್ ಲಿಂಗಪ್ಪನವರನ್ನು ವ್ಯವಸಾಯ ಮಂತ್ರಿಯವರನ್ನಾಗಿಯೂ ಆರಿಸಲಾಗಿದೆ.

ಗಣಗೂರು, ಸೋಮವಾರಪೇಟೆ ಮತ್ತು ಶಾಂತಳ್ಳಿ ವಯಸ್ಕ ವಿದ್ಯಾರ್ಥಿಗಳಿಗೆ 'ಯೋಗ್ಯತಾ ಪತ್ರ ವಿನಿಯೋಗ' ಸಮಾರಂಭವನ್ನು ೪-೧-೫೩ನೇ ತಾರೀಕಿಗೆ ಮುಖ್ಯ ಮಂತ್ರಿಗಳು ನೆರವೇರಿಸುವರೆಂದು ಆಹ್ವಾನ ಪತ್ರಿಕೆಗಳನ್ನು ಹಂಚಲಾಗಿತ್ತು. ಕಾರಣಾಂತರದಿಂದ ಆ ಸಮಾರಂಭವನ್ನು ಮುಂದರಿಸಲಾಗಿದೆ.

ಕೊಡಗಿಗೆ ವಿದ್ಯುಕ್ಷಕ್ತಿ ಸರಬರಾಯಿ ಮಾಡುವ ವಿಚಾರ ಮಾತುಕತೆ ನಡೆಸಲು ಕೊಡಗಿನ ಮಂತ್ರಿಪ್ರಮುಖರು ತಾ. ೪ರಲ್ಲಿ ಬೆಂಗಳೂರಿಗೆ ಹೋಗುವರು.

ತಾ. ೭ರಲ್ಲಿ ನಡೆಯುವ ಆಹಾರ ಮಂತ್ರಿಗಳ ಸಮ್ಮೇಳನಕ್ಕಾಗಿ ಮುಖ್ಯ ಮಂತ್ರಿಯವರು ತಾ. ೫ರಲ್ಲಿ ಡೆಲ್ಲಿಗೆ ಹೋಗಲಿರುವರು.

ಮೈಸೂರಿನ ಚೀಫ್ ಇಂಜಿನಿಯರಾಗಿ ನಿವೃತ್ತಿಹೊಂದಿದ ಶ್ರೀ. ನರಸಿಂಹಯ್ಯನವರು ಬರಪೊಳೆ ವಿದ್ಯುಕ್ಷಕ್ತಿ ಯೋಜನೆಯ ಸಾಧ್ಯತೆಯನ್ನೂ, ವಿವರಗಳನ್ನೂ ಪರಿಶೀಲಿಸಲು ಒಪ್ಪಿ ಗೌರವಾರ್ಥ ಕೆಲಸ ಮಾಡುವರೆಂದು ತಿಳಿಯಬಂದಿದೆ.

ಮಡಿಕೇರಿ ಬೆಂಚುಕೋರ್ಟಿನ ಅಧ್ಯಕ್ಷರಾಗಿ ಶ್ರೀ. ಮನೆಯಪಂಡ ಬೆಳ್ಯಪ್ಪನವರನ್ನು ನೇಮಿಸಲಾಗಿದೆ.

ಸಾಣ್ಣೀರಿ ಗ್ರಾಮದ ಶ್ರೀ. ಮೂಳೆರ ಮಂದಣ್ಣನವರನ್ನು ಕೊಂದ ಕೇಸಿನ ಸಂಬಂಧದಲ್ಲಿ ಆಗ ಕೊಡಗಿನ ಸೆಷನ್ಸ್ ಜಡ್ಜರಾಗಿದ್ದ ಶ್ರೀ. ಐ. ಸಿ. ಸುಬ್ಬಯ್ಯನವರು ಶ್ರೀಗಳಾದ ಮೂಳೆರ ಪೊನ್ನಪ್ಪ, ಕುಂಜಾರ ಚಿಣ್ಣಪ್ಪ ಮತ್ತು ಮೂಚೆಟ್ಟಿರ ಉತ್ತಪ್ಪನವರುಗಳಿಗೆ ವಿಧಿಸಿದ ಫಾಸಿ ಶಿಕ್ಷೆಯನ್ನು ಹೈಕೋರ್ಟು, ಮತ್ತು ಸುಪ್ರೀಂ ಕೋರ್ಟುಗಳು ಎತ್ತಿ ಹಿಡಿದು ನಂತರ ಅವರು ಒಕ್ಕೂಟದ ಪ್ರೆಸಿಡೆಂಟರಿಗೆ ಮಾಡಿಕೊಂಡ ಕ್ಷಮಾ ಅರ್ಜಿಯೂ ತಿರಸ್ಕರಿಸಲ್ಪಟ್ಟ ಕಾರಣ ಅವರು ತಾ. ೧೦-೧-೫೩ ರಲ್ಲಿ ಫಾಸಿಗೆ ಕೊಡಲ್ಪಡುವರು. ಇದೇ ಮೊಕದ್ದಮೆಯಲ್ಲಿ ಮಲೆಯಾಳಿ ಕೇಶವ ಎಂಬವರಿಗೆ ಜಿಲ್ಲಾ ಜಡ್ಜರು ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಮದ್ರಾಸು ಹೈಕೋರ್ಟಿನವರು ಏಳು ವರ್ಷ ಕಠಿಣ ಸಜೆಗೆ ಇಳಿಸಿರುವರು.

ಸೋಮವಾರಪೇಟೆ ಆಲೂರು ಗ್ರಾಮದ ಜಂಗಮರ ಸಂಗಯ್ಯನವರು ಏಕರೆಗೆ ೧೨,೧೫೦ ಪೌಂಡುಗಳಷ್ಟು ಕಳೆದ ವರ್ಷ ಬತ್ತ ಬೆಳೆಸಿ ಕೊಡಗಿನಲ್ಲಿ ಒಂದನೆಯವರಾಗಿ ಬಂದು ತಾ. [illegible] ಕಾಟ್ಜೂರವರು ಕೊಡಗಿಗೆ ಬಂದಿದ್ದಾಗ ಅವರಿಗೆ ನೂರು ೧೯೭೦ ರೂಪಾಯಿಗಳ ಬಹುಮಾನ ಕೊಡಲ್ಪಟ್ಟಿತು. ಈಗ ಅವರು ಇಡೀ ಹಿಂದೂ ದೇಶದಲ್ಲಿ ಪ್ರಥಮರೆಂದೂ ಪರಿಗಣಿಸಲ್ಪಟ್ಟು ಅಖಿಲ ಭಾರತ ಬಹುಮಾನವಾದ ರೂ ೫೦೦೦ — ಅವರಿಗೆ ದೊರೆಯಲಿದೆ. ಡೆಲ್ಲಿಯಲ್ಲಿ ತಾ. ೬ರಲ್ಲಿ ಒಕ್ಕೂಟದ ಪ್ರೆಸಿಡೆಂಟರು ಇಂಡಿಯಾ ಸರಕಾರದ ಖರ್ಚಿನಿಂದ ಅವರನ್ನು ಕರೆಸಿಕೊಂಡು ಬಹುಮಾನ ಕೊಡುವರು. ಸಂಗಯ್ಯನವರು ಡೆಲ್ಲಿಗೆ ಹೋಗಿರುವರು.

ನಂಜರಾಯ ಪಟ್ಣ ಗ್ರಾಮದಲ್ಲಿ ದನ ಕರುಗಳಿಗೆ ತೊಂದರೆ ಕೊಡುತ್ತಿದ್ದ ಸುಮಾರು ೪ ಅಡಿ ಎತ್ತರ ೧೧ ಅಡಿ ಉದ್ದದ ಹೆಬ್ಬುಲಿಯೊಂದನ್ನು ತಾ. ೨೭ರಲ್ಲಿ ಶ್ರೀ ಕೋದಂಡ ಸೋಮಯ್ಯನವರು ಗುಂಡಿಕ್ಕಿ ಕೊಂದರು.

ಕೊಡಗಿನ ಕೋರ್ಟುಗಳ ಪರಿಶೀಲನೆಗಾಗಿ ಬಂದಿದ್ದ ಮದ್ರಾಸ್ ಹೈಕೋರ್ಟಿನ ಜಡ್ಜರಾದ ಶ್ರೀ ಎ. ಎಸ್. ಪಿ. ಐಯ್ಯರ್‌ರವರಿಗೆ ವೀರಾಜಪೇಟೆಯ ಪುರಸಭೆಯವರು ತಾ. ೨೭ರಲ್ಲಿ ಸ್ವಾಗತಪತ್ರ ಸಮರ್ಪಿಸಿದರು. ಶ್ರೀಯುತರು ಭಗವದ್ಗೀತೆಯ ವಿಚಾರದಲ್ಲಿ ಬೋಧಪ್ರದ ಭಾಷಣಮಾಡಿದರು.

ಮಾರಾಟಕ್ಕಿದೆ

ಮಡಿಕೇರಿಯಿಂದ ಮೂರು ಮೈಲಿ ಅಂತರದಲ್ಲಿ ಮಂಗಳೂರು ರಸ್ತೆ ಬಾಜಿನಲ್ಲಿ 200 ಬಟ್ಟಿ ನೀರಾವರಿ ಭೂಮಿಯೂ ಇದಕ್ಕೆ ಸೇರಿದ 18 ಏಕ್ರೆ ಜಾಗವೂ ಮತ್ತು ಒಂದು ದೊಡ್ಡ ಕುಟುಂಬಕ್ಕೆ ವಾಸಕ್ಕೆ ಯೋಗ್ಯವಾದ ಹೆಂಚು ಹಾಕಿದ ಅಚ್ಚುಕಟ್ಟಾದ ಸುಂದರವಾದ ಮನೆಯೂ ಮಾರಾಟಕ್ಕಿದೆ.

ಭೂಮಿಯು ನಡುಬೈಲಿನಲ್ಲಿದ್ದು ನೂರು ಬಟ್ಟಿಯು ಒಂದೇ ಗದ್ದೆಯಾಗಿದ್ದು ಎಲ್ಲವೂ ಒಂದೇ ಬ್ಲಾಕ್‌ನಲ್ಲಿವೆ. ಪ್ರತಿ ವರ್ಷವೂ ಸರಾಸರಿ 12 ಗಾಡಿ ಬತ್ತ ಉತ್ಪತ್ತಿಯಾಗುತ್ತಿದೆ. ಇದಕ್ಕೆ ಸೇರಿದ ಜಾಗವು ಫಲವತ್ತಾದ ಕಾಡುಗಳಿಂದ ಆವೃತವಾಗಿ ಏಲಕ್ಕಿ, ಕಾಫಿ, ಕಿತ್ತಳೆ, ಬಾಳೆ ಮೊದಲಾದ ಯಾವುದೇ ತರದ ವ್ಯವಸಾಯಕ್ಕೆ ಯೋಗ್ಯವಾಗಿರುವದು. ಖರೀದಿದಾರರು ತಪಶೀಲ್ ವಿವರಗಳನ್ನು ಈ ಕೆಳಗಿನ ವಿಳಾಸದಾರರಿಂದ ತಿಳಿದುಕೊಳ್ಳಬಹುದು.

ಪಟ್ಟಮಾಡ ಮುತ್ತಣ್ಣ,
2-1 ಕಾಟಕೇರಿ, ಮಡಿಕೇರಿ.

ನಂದನೆ.

ಶಿವಾಧೀನ

ನಾದ

CALENDAR 1953 ಕೊಡಗು ಕೇಲಿ ೧೯

ದಿನಗಳು	ಜನವರಿ	ಫೆಬ್ರವರಿ	ಮಾರ್ಚ್	ಏಪ್ರಿಲ್	ಮೇ	ಜೂನ್	ಜುಲೈ	ಆಗೋಸ್ತು	ಸೆಪ್ಟೆಂಬರ್	ಅಕ್ಟೋಬರ್	ನವೆಂಬರ್	ಡಿಸೆಂಬರ್
ಆದಿತ್ಯ	...	1	1	...	..	...	...	...	...	...	1	...
ಸೋಮ.	...	2	2	...	...	1	...	...	...	...	2	...
ಮಂಗಳ.	...	3	3	...	...	2	...	...	1	...	3	1
ಬುಧ.	...	4	4	1	..	3	1	...	2	...	4	2
ಗುರು.	1 ಜ. ಹೊಸ ವರ್ಷಾರಂಭ	5	5	2	..	4	2	...	3 ಜ. ಕೈಲ್ ಮುಹೂರ್ತ	1	5	3
ಶುಕ್ರ.	2	6	6	3 ಜ. ಗುಡ್ ಫ್ರೈಡೆ	1	5	3	...	4	2 ಜ. ಗಾಂಧಿ ಜಯಂತಿ	6 ● ಜ. ದೀಪಾವಳಿ	4
ಶನಿ.	3	7	7	4	2	6	4	1	5	3	7	5
ಆದಿತ್ಯ.	4	8	8	5	3	7	5	2	6	4	8	6 ●
ಸೋಮ.	5	9	9	6	4	8	6	3	7	5	9	7
ಮಂಗಳ.	6	10	10	7	5	9	7	4	8 ●	6	10	8
ಬುಧ.	7	11 ಸಂಕ್ರಮ್ಣ	11	8	6	10	8	5	9	7 ● ಜ. ಮಹಾಲಯ ಅಮವಾಸ್ಯೆ	11	9
ಗುರು.	8	12 ಜ. ಮಹಾ ಶಿವರಾತ್ರಿ	12	9	7	11 ●	9	6	10	8	12	10
ಶುಕ್ರ.	9	13	13 ಸಂಕ್ರಮ್ಣ	10	8	12	10	7	11	9	13	11
ಶನಿ.	10	14 ●	14	11	9	13 ಜ. ರಮ್ಜಾನ್	11 ●	8	12 ಜ. ವಿನಾಯಕ ಚೌತಿ	10	14	12 ಜ. ಸುಬ್ರಹ್ಮಣ್ಯ ಷಷ್ಠಿ
ಆದಿತ್ಯ.	11	15	15 ●	12	10	14 ಸಂಕ್ರಮ್ಣ	12	9 ●	13	11	15	13
ಸೋಮ.	12	16	16 ಜ. ಯುಗಾದಿ	13 ● ಸಂಕ್ರಮಣ	11	15	13	10	14	12	16 ಸಂಕ್ರಮ್ಣ	14
ಮಂಗಳ.	13 ಜ. ಮಕರ ಸಂಕ್ರಮಣ	17	17	14 ಜ. ಸೌರ ಯುಗಾದಿ	12	16	14	11	15	13	17	15 ಸಂಕ್ರಮ್ಣ
ಬುಧ.	14	18	18	15	13 ●	17	15	12	16 ಸಂಕ್ರಮ್ಣ	14	18	16
ಗುರು.	15 ●	19	19	16	14 ಸಂಕ್ರಮಣ	18	16 ಸಂಕ್ರಮ್ಣ	13	17	15 ಜ. ದಸರಾ	19	17
ಶುಕ್ರ.	16	20	20	17	15	19	17	14	18	16 } ಜ. ಕಾವೇರಿ ಸಂಕ್ರಮಣ	20 ಜ. ಮಿಲಾದಿ ನಬಿ	18
ಶನಿ.	17	21	21	18	16	20	18	15 ಜ. ಸ್ವಾತಂತ್ರ್ಯ ದಿನ	19 ಜ. ಮೊಹರಂ	17 }	21 } ○ ಜ. ಹುತ್ತರಿ	19
ಆದಿತ್ಯ.	18	22	22	19	17	21	19	16 ಸಂಕ್ರಮ್ಣ	20	18	22 }	20 ○
ಸೋಮ.	19	23	23	20	18	22	20	17	21	19	23 }	21
ಮಂಗಳ.	20	24	24	21	19	23	21	18	22	20	24	22
ಬುಧ.	21	25	25	22	20	24	22	19	23 ○	21	25	23
ಗುರು.	22	26	26	23	21	25	23	20	24	22 ○	26	24
ಶುಕ್ರ.	23	27	27	24	22	26	24	21 ಜ. ಒಕ್ರಿದ್	25	23	27	25 ಜ. ಕ್ರಿಸ್ಮಸ್
ಶನಿ.	[illegible]	28 ○ ಹೋಳಿ ಹಬ್ಬ	28	25	23	27 ○	25	22	26	24	28	26
ಆದಿತ್ಯ.		...	29	[illegible]			[illegible]	[illegible]	[illegible]	25	29	27
ಸೋಮ.	[illegible] ರಿಪಬ್ಲಿಕ್ ದಿನ	...	30 ○	27	25	29		25	[illegible]	[illegible]	30	28
ಮಂಗಳ.	2'	...	31	28	26	30 ಬ್ಯಾಂಕ್ ರಜಾ	28	26			...	
ಬುಧ.	28	...	...	29 ○	27	...	29	27	30	28	...	
ಗುರು.	29	...	...	30	28 ○	...	30	28	...	29	...	31 ಬ್ಯಾಂಕಿನ ರಜೆ
ಶುಕ್ರ.	30	...	...	...	29	...	31	29	...	30	...	...
ಶನಿ.	31	...	...	...	30	...	...	30	...	31	...	...
ಆದಿತ್ಯ	...		...	...	31	...	...	31 ಜ. ಸ್ವಾಮಿ ಜನಾಷ್ಟಮಿ	...	....	...	...

ಓದುಗರ ಓಲೆಗಳು

ಹರಿಜನ ಸಭೆ.

ತಾ. ೨೦-೧೨-೩೨ ರಲ್ಲಿ ಉತ್ತರ ಕೊಡಗು ಹೊರಮಲೆನಾಡಿನ ಹರಿಜನ ಮತ್ತಿತರರ ಸಭೆಯು ಶ್ರೀ. ಪಿ. ಕೆ. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಅಂಗೀಕರಿಸಿದ ನಿರ್ಣಯಗಳು.

(೧) ಹೊರಮಲೆನಾಡಿನ ಹರಿಜನರು ಕುಡಿಯುವ ನೀರಿನ ಬಾವಿಯನ್ನು ದುರಸ್ತಿ ಪಡಿಸಿಕೊಡಬೇಕೆಂದು ಒತ್ತಾಯಿಸಬೇಕು. ಎಂಬ ಹರಿಜನರ ಬೈರನವರ ಠರಾವು ಸರ್ವಾನುಮತದಿಂದ ಪಾಸಾಯಿತು.

(೨) ಬಿದ್ದಿಕಾಡು ಹರಿಜನರು ವಾಸ ಮಾಡುವ ಸ್ಥಳವು ಬೇರೆಯವರ ಸ್ಥಳವಾದ್ದರಿಂದ ಅಲ್ಲಿಯ ಸಾಧಾರಣ ೪ ಎಕ್ರೆ ಜಾಗವನ್ನು ಸರಕಾರದವರು ವಶಪಡಿಸಿಕೊಂಡು ಅಲ್ಲಿಯ ಹರಿಜನರಿಗೆ ಹಂಚಿಕೊಡಲು ಸರಕಾರವನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು.

(೩) ಕಳತಳೆನಿಡುಗಣೆ ಗ್ರಾಮದಲ್ಲಿ ಒಡುಮಂದಿ ಅವಿದ್ಯಾವಂತರಿರುವುದರಿಂದ ಅಲ್ಲಿಗೊಂದು ಹಗಲು ಶಾಲೆಯನ್ನು ತೆರೆಯುವಂತೆ ಜಿಲ್ಲಾ ವಿದ್ಯಾಧಿಕಾರಿಯನ್ನು ಕೇಳಿಕೊಳ್ಳುವಂತೆ ತೀರ್ಮಾನಿಸಲಾಯಿತು. ಅಧ್ಯಕ್ಷರ ಭಾಷಣದಿಂದ ಸಭೆ ಮುಕ್ತಾಯವಾಯಿತು.

ಹರಿಜನ ಸಣ್ಣಯ್ಯ.

ಯಾರನ್ನು ಮೋಸಗೊಳಿಸುವಿಕೆ ?

ಕಳೆದ ವಾರ ನಾನು ಶನಿವಾರಸಂತೆ ಸೋಬಳ್ಳಿ ಕಡೆ ಪ್ರಯಾಣ ಹೋಗಿ, ನಿಷ್ತದ ಹತ್ತಿರ ಕಾರಿನ ಚಕ್ರವು ಒಡೆದು ಹೋದುದರ ಸಲುವಾಗಿ, ಹೆಚ್ಚು ಸಮಯ ಅಲ್ಲಿಯೇ ನಿಲ್ಲಬೇಕಾಗಿ ಬಂತು. ಆ ಸಮಯವನ್ನು ಹೇಗೆ ಕಳೆಯುವುದೆಂದು ಯೋಚಿಸಿದಲ್ಲಿ, ಕೆಲವು ಸಮಯಕ್ಕೆ ಹಿಂದೆ ಕೊಡಗು ಗಜೆಟಿನಲ್ಲಿ ಕೊಡಗು ಲೇಂಡ್ ಡೆವಲಪ್ ಮೆಂಟ್ ಬೋರ್ಡಿನ ಓರ್ವ ಸದಸ್ಯರಾಗಿ ನಿಷ್ತ ಗ್ರಾಮದವರೊಬ್ಬರ ಹೆಸರನ್ನು ಓದಿದ ಯೋಚನೆಯು ಬಂದುದರಿಂದ, ಆ ವ್ಯಕ್ತಿಯ ಪರಿಚಯ ಮಾಡಿಕೊಳ್ಳಬೇಕೆಂದು ಆ ಗ್ರಾಮದ ಕಡೆಗೆ ಹೋದೆನು. ಗ್ರಾಮದ ಒಬ್ಬಿಬ್ಬ ಜನರನ್ನು ವಿಚಾರಿಸಿದೆನು.

ಆದರೆ ಆಶ್ಚರ್ಯದ ವಿಚಾರ. ಗ್ರಾಮದಲ್ಲಿ ಆ ಹೆಸರಿನ ವ್ಯಕ್ತಿಯು ಇಲ್ಲವೆಂದು ಒಬ್ಬಿಬ್ಬರು ಹೇಳಿದರು. ನನ್ನ ಕುತೂಹಲವು ಹೆಚ್ಚಿತು. ಒಂದೋ, ಆ ಹೆಸರಿನ ವ್ಯಕ್ತಿಯು ಸರಕಾರವನ್ನು ಯಾವುದೋ ವಿಷಯದಲ್ಲಿ ಮೋಸಗೊಳಿಸಲು ತನ್ನ ಬಿಳಾಸ ಕೊಟ್ಟಿದ್ದಾನೆಂದು ತೋರಿತು. ಇಲ್ಲದಿದ್ದರೆ ಇಲ್ಲದ ವ್ಯಕ್ತಿಯ ಹೆಸರು ಗಜೆಟಿನಲ್ಲಿ ಪ್ರಕಟವಾಗಲು ಕಾರಣವಿಲ್ಲ. ಹೆಚ್ಚು ಜನರನ್ನು ವಿಚಾರಿಸಿದೆನು. ಅದರಿಂದ ಕೆಳಗಿನ ಸಂಗತಿಯು ತಿಳಿಯಬಂತು.

ಆ ಹೆಸರಿನ ವ್ಯಕ್ತಿಯು ಕಳೆದ ೫೦ ವರ್ಷಗಳಿಗಿಂತಲೂ ಹೆಚ್ಚಾಗಿ ಕೊಡಗಿನಲ್ಲಿ ವಾಸವಾಗಿಲ್ಲ. ಅವರು ಮೈಸೂರು ಸರಕಾರದ ಹುದ್ದೆಯಲ್ಲಿದ್ದು, ಮೈಸೂರಿನಲ್ಲಿಯೇ ವಾಸವಾಗಿದ್ದಾರೆ. ಈಗ ನಾಲ್ಕೈದು ವರ್ಷಗಳಿಂದ ವರ್ಷಕ್ಕೆ ಒಂದೆರಡು ಸಲ ಕೊಡಗಿಗೆ ನೆಂಟರಂತೆ ಬಂದು, ಅವರ ತಂದೆಯಿಂದ ಸಿಕ್ಕಿದ ಚಿಕ್ಕದಾದ ಜಮೀನಿನ ಉತ್ಪತ್ತಿಯನ್ನು ತೆಗೆದುಕೊಂಡು ಹೋಗಲು ಮಾತ್ರ ಬರುತ್ತಾರೆ. ಅವರು ಈಗ ಸಾಮೂಹಿಕ ವಿಕಾಸ ಯೋಜನೆಯ ಓರ್ವ ಸದಸ್ಯರಾಗಿಯೂ ಕೂಡ ಇರುವರೆಂದು ತಿಳಿಯಬಂತು. ಇವೆಲ್ಲವನ್ನು ಕೇಳುವಾಗ ಈ ವ್ಯಕ್ತಿಯ ವಿಷಯ ಹೆಚ್ಚು ತಿಳಿಯಬೇಕೆಂಬ ಕುತೂಹಲವು ಏರಿತು.

ಕೊಡಗಿಗೆ ವರ್ಷಕ್ಕೆ ಒಮ್ಮೆ ಮಾತ್ರ ಬಂದು ಹೋಗುವ ಓರ್ವ ವ್ಯಕ್ತಿಯು ಕೊಡಗಿನಲ್ಲಿ ಮುಖ್ಯ ಮುಖ್ಯ ಸಂಸ್ಥೆಗಳಲ್ಲಿ ಸದಸ್ಯರಾಗಿರಬೇಕಾದರೆ, ಅವರು ಮೈಸೂರು ಸೀಮೆಯಲ್ಲಿ ಹೆಚ್ಚಿನ ಕೀರ್ತಿವಂತರಾಗಿರಬೇಕೆಂಬ ಊಹನೆಯು ನನಗೆ ಹುಟ್ಟಿ ಅದರ ವಿಷಯ ತಿಳಿಯಲಿಚ್ಛಿಸಿದೆನು. ನನಗೆ ತಿಳಿದ ಕೆಲವು ಕೊಡಗಿನ ಹಿರಿಯರ ಮುಖಾಂತರ, ಇವರು ಮೈಸೂರು ಸೀಮೆಯಲ್ಲಿ ಹೆಚ್ಚಿನ ಕೀರ್ತಿ ಸಂಪಾದಿಸಿದವರೆಂದು ಕಂಡುಬರಲಿಲ್ಲ; ಯಾ ಅಲ್ಲಿಯ ಮುಖ್ಯ ಕಮಿಟಿಗಳಲ್ಲಿ ಸದಸ್ಯರಾಗಿರುವುದಾಗಲಿ ಕಂಡು ಬರಲಿಲ್ಲ. ಅವರು ಮೈಸೂರು ಸರಕಾರದ ಒಂದು ಹುದ್ದೆಯಲ್ಲಿದ್ದು, ಆ ಕಾಲದಲ್ಲಿ ಹುದ್ದೆಯಿಂದ ನಿವೃತ್ತರಾದವರೋ, ನಿವೃತ್ತರಾಗಿಸಲ್ಪಟ್ಟವರೋ ಎಂಬುದಾಗಿ ತಿಳಿದೆನು.

ಇವೆಲ್ಲವನ್ನು ಕೇಳಿ ನನ್ನ ಮನಸ್ಸಿನಲ್ಲಿ ಏನೇನೋ ಯೋಚನೆಗಳು ಬರಲಾರಂಭಿಸಿದವು. ಕೊಡಗು ದೇಶದ ಜನರಿಗೂ, ಕೊಡಗು ದೇಶಕ್ಕೂ ಹಿತಕ್ಕೋಸ್ಕರವಾಗಿ ಸ್ಥಾಪಿಸಲ್ಪಟ್ಟಿರುವ ಲಕ್ಷಗಟ್ಟಲೆ ಹಣ ವ್ಯಯವಾಗುವ ಪ್ರಾಮುಖ್ಯ ಯೋಜನೆಗಳಿಗೆ ಸದಸ್ಯರಾಗಿ ಕೊಡಗಿನಲ್ಲಿ ಒಬ್ಬ ಓಟರು ಕೂಡ ಆಗದ, ಕೊಡಗು ದೇಶದ ಜನರಿಗೆ ಯಾವ ವಿಧದಲ್ಲಿಯೂ ಜವಾಬ್ದಾರನಾಗಿಯೂ ಇದೆ ಇಲ್ಲದ ಓರ್ವ ವ್ಯಕ್ತಿಯನ್ನು ನೇಮಕ ಮಾಡಿರುವುದು ಶೋಚನೀಯ. ಕೊಡಗಿನಲ್ಲಿ, ದೇಶದ ಸೇವೆಗಾಗಿ ದುಡಿದ ಎಲ್ಲಾ ವಿಧಗಳಲ್ಲಿಯೂ ಅರ್ಹರಾದ ಎಷ್ಟು, ಇಲ್ಲಿಯ ದೇಶದ ಮತ್ತು ಜನರ ಸ್ಥಿತಿಗತಿಗಳನ್ನು ಅರಿತಿರುವ, ದೇಶಾಭಿಮಾನಿಗಳು ಎಷ್ಟು ಇದ್ದಾಗ್ಯೂ ... ಅನ್ಯ ಸ್ಥಾನಿಗಳಿಗೆ ಸರಕಾರದವರು ಒಂದು ಉನ್ನತ ... ...

ಪೇಚಿಯ...

ಶ್ರೀಮಂಗಲ ಹೈಸ್ಕೂಲ್.

ತಾ. ೨೨-೧೧-೩೨ ರಲ್ಲಿ ಶ್ರೀಮಂಗಲ ನಾಡಿಗೊಂದು ಹೈಸ್ಕೂಲ್ ಬೇಕೆಂದೂ, ಈ ಬಗ್ಗೆ ತಕ್ಕ ಏರ್ಪಾಡು ಕೈಗೊಳ್ಳುವುದಕ್ಕಾಗಿ ಶ್ರೀಮಂಗಲದಲ್ಲಿ ಒಂದು ಮಹಾಸಭೆ ಸೇರಲಾಗಿತ್ತು. ಅಧ್ಯಕ್ಷತೆಯನ್ನು ಶ್ರೀ. ಕೊಡಂದೇರ ಯಂ. ಕಾರ್ಯಪ್ಪನವರು ವಹಿಸಿದ್ದರು. ಸದರಿ ಹೈಸ್ಕೂಲ್ ಸ್ಥಾಪನೆಯ ವಿಷಯದಲ್ಲಿ ಶ್ರೀಮಂಗಲದಲ್ಲಿ ಕಟ್ಟಡ ಮಾಡುವದಾಗಿ ಮೊದಲೇ ತೀರ್ಮಾನವಾಗಿದ್ದರೂ ಸಹ ಹಂಗಾಮಿ ಕಟ್ಟಡ ಶ್ರೀಮಂಗಲದಲ್ಲಿ ಕಟ್ಟುವದಾಗಿಯೂ ಕೆಲವು ಮಹನೀಯರು ಪೊನ್ನಂಪೇಟೆಯಲ್ಲಿ ಕಟ್ಟುವದಾಗಿಯೂ ದೀರ್ಘ ಚರ್ಚೆ ನಡೆದು ಯಾವ ತೀರ್ಮಾನವೂ ಆಗದೆ ಹಿಂದಿನಿಂದ ಕಮಿಟಿ ಮೀಟಿಂಗಿನಲ್ಲಿ ತೀರ್ಮಾನಿಸಿಕೊಳ್ಳುವಂತೆ ನಿಶ್ಚಯಿಸಿಕೊಂಡುದಾಗಿ ತಿಳಿಯುತ್ತೇನೆ. ಅನಂತರ ತಾ. ೧೩-೧೨-೩೨ ರಲ್ಲಿ ಶ್ರೀಮಂಗಲದಲ್ಲಿ ನಡೆಸಿದ ಕಮಿಟಿ ಮೀಟಿಂಗಿನಲ್ಲಿ ಈ ವರ್ಷ ಹಂಗಾಮಿ ಕಟ್ಟಡ (ಶೆಡ್ಡು)ವನ್ನು ಪೊನ್ನಂಪೇಟೆಯಲ್ಲಿ ಮಾಡುವಂತೆಯೂ ತೀರ್ಮಾನಿಸಿ, ಅಲ್ಲಿ ಶೆಡ್ಡು ಕಟ್ಟಲು ರೂ. ೨೦೦ ಫಂಡಿನಿಂದ ಮಂಜೂರ್ಮಾಡಿಕೊಂಡಿರುವದಾಗಿ ತಿಳಿಯುತ್ತೇನೆ. ಈಗ ಹಂಗಾಮಿಯಾಗಿ ಸ್ಥಾಪಿಸಲ್ಪಡುವ ಹೈಸ್ಕೂಲಿಗೆ ಕಡೇ ಗ್ರಾಮಗಳಾದ ಬಾಡಗ, ಕುಮಟೂರು, ಕುರ್ಚಿ, ಕುಟ್ಟ, ಮಂಚಳ್ಳಿ ಮತ್ತು ಕೈಲ ಗ್ರಾಮಗಳಿಂದ ಬರುವ ವಿದ್ಯಾರ್ಥಿಗಳಿಗೆ ತೊಂದ್ರೆಯಲ್ಲವೇ? ಇಂಥಾ ತೊಂದರೆ ಪರಿಹಾರಕ್ಕಾಗಿ ಬೇರೆ ಮಾರ್ಗದ ಹೈಸ್ಕೂಲ್‌ಗಳನ್ನು ಹೆಚ್ಚಿನ ವೆಚ್ಚದಿಂದ ಆಶ್ರಯಿಸಬೇಕಾಗುತ್ತೆ. ಅದ ರಿಂದ ಇತ್ತ ಮೇಲ್ಕಂಡ ತೀರ್ಮಾನ ದೂರದ ಗ್ರಾಮದ ಮಕ್ಕಳ ಪೋಷಕರಿಗೆ ಯುಕ್ತ ತೋರುವದಿಲ್ಲ. ಇದು ಪೂರಾ ವಿಷಾದಕರ. ಮಹಾಸಭೆಯಲ್ಲಿ ತೀರ್ಮಾನವಾಗದ ಒಂದು ವಿಷಯವನ್ನು ಕಮಿಟಿ ಮೀಟಿಂಗಿನಲ್ಲಿ ತೀರ್ಮಾನ ಮಾಡಿರುವುದು ನಾಡಿನ ಜನರಿಗೆ ಎಷ್ಟು ಸಮಂಜಸವಾಗಿರಬಹುದು. ಇಂಥಾ ಮುಖ್ಯ ವಿಷಯವನ್ನು ಮಹಾಸಭೆಯಲ್ಲಿ ತೀರ್ಮಾನ ಮಾಡದೆ ಕಮಿಟಿ ಮೀಟಿಂಗಿನಲ್ಲಿ ತೀರ್ಮಾನಿಸಿಕೊಳ್ಳುವುದು ನ್ಯಾಯವೇ? ಇದು ಸರಿಯೆಂದೆನಿಸಿದಲ್ಲಿ ಮಹಾಸಭೆ ಸೇರಿಸುವುದರಿಂದ ಏನು ಪ್ರಯೋಜನ ?

ಆದ್ದರಿಂದ ಹೈಸ್ಕೂಲ್ ಕಮಿಟಿಯವರು ಇನ್ನೊಮ್ಮೆ ಮಹಾಸಭೆ ಸೇರಿಸಿ, ಯುಕ್ತವಾದ ತೀರ್ಮಾನ ಹೊಂದದಿದ್ದಲ್ಲಿ ಮೇಲಿನ ಗ್ರಾಮದ ಜನರಿಂದ ಯಾವ ತರದ ಚಂದಾಯೂ ಇನ್ನಿತರ ಸಹಾಯವು ದೊರೆಕಲಾರದೆಂದು ಈ ಮೂಲಕ ವ್ಯಕ್ತಪಡಿಸುತ್ತೇನೆ.

ನಾಡಿನವ.

ಏಲಕ್ಕಿ ಮಲೆ ಹಿಡುವಳಿದಾರರ ಸಭೆ.

ತಾ. ೨೩-೧೨-೩೨ ರಲ್ಲು ತಾವೂರು ... ಏಲಕ್ಕಿ ಮಲೆ ಹಿಡುವಳಿದಾರರ ಮಾಯಂ. ದೇವಯ್ಯನವರ ... ಶ್ರೀ. ಕೆ. ... ದೆಯಲಾಗಿ ಈ ಕೆಳಗಿನ ಠರಾವುಗಳು ಸರ್ವಾನುಮತದಿಂದ ಪಾಸಾದವು.

(೧) ಕಂದಾಯ ವಿಧಿಸುವ ರೀತಿಯನ್ನು ನಾಲ್ಕು ತರಗತಿಗಳನ್ನಾಗಿ ಮಾಡಬೇಕು. ಮಳೆ ಬಿದ್ದಿರುವ ದಿಕ್ಕು, ಅವುಗಳ ಫಲವತ್ತು ದಾರಿಯ ಸೌಕರ್ಯಗಳೆಗನುಸಾರವಾಗಿ ಮಲೆಗಳನ್ನು ತರಗತಿಗಳಾಗಿ ವಿಂಗಡಿಸಿ ಕಂದಾಯ ನಿಶ್ಚಯಿಸಬೇಕು.

(೨) ೧೬ ಸೆಂಟಿನ ವರೆಗಿನ ತೋಟಗಳನ್ನು ಮಾಡುವಂತೆಯೂ, ತೋಟದಿಂದ ತೋಟಕ್ಕೆ ೩೦ ಅಡಿ ಖಾಲಿ ಬಿಡುವಂತೆಯೂ ಆಗಬೇಕು.

(೩) ಮಾಮೂಲಿನಂತೆ ಮಲೆಗಳಲ್ಲಿ ಸೌದೆ ಮತ್ತು ಏಲಕ್ಕಿ ಒಣಗಿಸಲು ಬೇಕಾದ ಮರಗಳನ್ನು ಕಡಿಯಲು ಅನುಮತಿ ಕೊಡಬೇಕು.

(೪) ಮಲೆಗಳಲ್ಲಿ ದೇಹರಕ್ಷಣೆ ಮತ್ತು ಫಸಲು ರಕ್ಷಣೆಗೆ ಕೋವಿ ಇಟ್ಟುಕೊಳ್ಳುವಂತೆ ಅನುಮತಿ ಕೊಡಬೇಕು.

(೫) ಮಲೆಗಳಲ್ಲಿ ಬಿಡಾರ ಕಟ್ಟಲು ಮತ್ತು ಯಾಲಕ್ಕಿ ಕೊಯ್ಯಲು ಬೇಕಾದ ಕುಕ್ಕೆಗಳನ್ನು ಮಾಡಲು ಬೇಕಾದ ಮರ, ಬೆತ್ತ, ವಾಟೆ ಮತ್ತು ದಬೆಗಳನ್ನು ಮುಫತ್ತಾಗಿ ಕೊಡಬೇಕು.

(೬) ಕಂದಾಯ ೧ನೇ ತರಗತಿಗೆ ರೂ. ೪-೨ನೇ ತರಗತಿಗೆ ರೂ. ೩/- ೩ನೇ ತರಗತಿಗೆ ರೂ. ೨-ಮತ್ತು ೪ನೇ ತರಗತಿಗೆ ರೂ. ೧/- ವಿಧಿಸಬೇಕು.

(೭) ನಮ್ಮ ಕೇಳಿಕೆಗಳನ್ನು ತೀರ್ಮಾನಿಸುವ ವರೆಗೆ ಈ ವರ್ಷದ ಕಂದಾಯ ವಸೂಲು ಮಾಡಲು ಸ್ವಲ್ಪ ಸಮಯವನ್ನು ಕೊಡಬೇಕು.

(೮) ಈ ವಿಷಯಗಳನ್ನು ಮಂತ್ರಿಗಳಲ್ಲಿ ಮಾತಾಡಲು (೧) ಶ್ರೀ. ಕೆ. ಗೋಪಾಲಕೃಷ್ಣ ಭಟ್ಟರು (೨) ಶ್ರೀ. ಶ್ರೀನಿವಾಸಯ್ಯ, (೩) ಸಂಗಾಪ ಸುಬ್ರಹ್ಮಣ್ಯ ಮಸ್ತು ನಾಲ್ವನೆಯದಾಗಿ ಸ್ಥಳೀಯ ಎಸೆಂಬ್ಲಿ ಮೆಂಬರರು ಹೋಗಬೇಕು.

ಕೆ. ಎಂ. ದೇವಯ್ಯ
ಅಧ್ಯಕ್ಷ.

ವಿನಂತಿ

ಅಖಿಲ ಕೊಡವ ವಿದ್ಯಾನಿಧಿಯಿಂದ ಹಣ ಸಹಾಯ ಪಡೆದು ಈಗ ಯೋಗ್ಯ ಸಂಪಾದನೆ ಮಾಡುತ್ತಿರುವವರು ಹಲವರಿದ್ದಾರೆ. ಇವರಲ್ಲಿ ಕೆಲವರು ತಾವು ಖರಾರು ಬರೆದು ಹೊಂದಿಕೊಂಡ ಸಾಲವನ್ನು ಮರುಪಾವತಿ ಮಾಡದೆ ನಿಧಿಯ ಸುಮಾರು ಮೂವತ್ತಾರು ಸಾವಿರ ರೂಪಾಯಿಗಳು ವಸೂಲಿಗೆ ಉಳಿದಿದೆ. ಸಂಸ್ಥೆಯು ಮಾಡಿದ ಈ ಸಹಾಯವನ್ನು ಮರೆತು, ಎಷ್ಟೇ ಕೇಳಿದರೂ ಇದನ್ನು ಪಾವತಿಸದಿರುವದು ತುಂಬಾ ವಿಷಾದಕರ. ದೇಶದ ಬೇರೆ ಬೇರೆ ಕಡೆಗಳಲ್ಲಿ ಈ ಸಂಸ್ಥೆಯ ಮೀಟಿಂಗು ನಡೆವಾಗ ಇಂಥಾ ಸಾಲಗಾರರ ಹೆಸರುಗಳನ್ನು ಸ್ಥಳೀಯ ಪತ್ರಿಕೆಗಳಲ್ಲಿ ಆಗಾಗ ಪ್ರಕಟಿಸಬೇಕೆಂದು ಜನರು ಕೇಳಿಕೊಂಡಿದ್ದಾರೆ. ಇಂಥಾವ್ರು ... ಮೇಲಿರುವ ಸಾಲಗಳನ್ನು ಇಂದು ಉದ್ಯೋಗದಲ್ಲಿದ್ದು ಸಂಪಾದಿಸುತ್ತಿರುವ ಮಹನೀಯರು ... ಕೊಟ್ಟು ಜನರ ಪ್ರೀತಿಗೆ ಪಾತ್ರರಾಗಬೇಕೆಂದು ... ತ್ತೇನೆ.

6-6 ಕಾರ್ಯದರ್ಶಿ,
ಅಖಿಲ ಕೊಡವ ವಿದ್ಯಾನಿಧಿ

—೨೨೦—

ಆಡಳಿತವೂ – ಪಾರ್ಟಿಗಳೂ.

ಲೇ:–"A. C."

"ನನ್ನ ಠರಾವನ್ನು ಓಟಿಗೆ ಹಾಕಬೇಕು" ಎಂ. ಎಲ್. ಎ. ಚೆನ್ನಯ್ಯನವರು ಒತ್ತಿ ಹೇಳಿದರು. ಮಂತ್ರಿಗಳೂ ಇತರ ಕಾಂಗ್ರೆಸ್ ಸದಸ್ಯರು ಅತ್ತಿತ್ತ ನೋಡತೊಡಗಿದರು. ನಿರೀಕ್ಷಕರು ಕಾಂಗ್ರೆಸ್ ಪಕ್ಷವು ಯಾವ ರೀತಿ ತಮ್ಮದೇ ಒಬ್ಬ ಸದಸ್ಯನ ಠರಾವಿಗೆ ಓಟುಮಾಡುವುದು; ಅದು ತನ್ನ ಸರಕಾರವನ್ನು ಎತ್ತಿಹಿಡಿಯುವುದೋ ಯಾ ಸಹ ಸದಸ್ಯನ ಅಭಿಪ್ರಾಯವನ್ನು ಒಪ್ಪುವುದೋ ಎಂದು ಕುತೂಹಲರಾಗಿದ್ದರು. "ಓಟಿಗೆ ಹಾಕಬೇಕೆನ್ನುವಿರಾ? ಯಾ ವಾಪಾಸು ತೆಗೆದುಕೊಳ್ಳಬೇಕೆನ್ನುವಿರಾ?" ಅಧ್ಯಕ್ಷರು ಪ್ರಶ್ನಿಸಿದರು. ತನ್ನ ಪಕ್ಷದವರ ಗಾಬರಿ, ಮಂತ್ರಿಗಳ ಕಾತರ ಇವುಗಳ ನಡುವೆ ಚೆನ್ನಯ್ಯನವರು ತನ್ನ ಸ್ವಂತ ಅಭಿಪ್ರಾಯವನ್ನು ಮೂಲೆಗೊತ್ತಿ "ಠರಾವನ್ನು ವಾಪಾಸು ತೆಗೆದುಕೊಳ್ಳುತ್ತೇನೆ" ಎನ್ನಬೇಕಾಯಿತು.

ಠರಾವಿನ ವಿಚಾರ ಯಾವುದೇ ಇರಲಿ. ಪಾರ್ಟಿ ಪಕ್ಷಗಳೆಂದು ಆರಿಸಿ ಬರುವವರು ಸ್ವಂತ ಅಭಿಪ್ರಾಯ ಕೊಡಲಾರರು. ಕೇವಲ ಪಕ್ಷದ ಅಭಿಪ್ರಾಯವನ್ನು ಒಪ್ಪಿ ನಡೆಯಬೇಕೆನ್ನುವುದಕ್ಕೆ ಇದೊಂದು ನಿದರ್ಶನವೆನ್ನಬಹುದು. ಇಂಥಾ ಪಕ್ಷಗಳು ಕೂಡ ಪಕ್ಷದ ಮುಂದಾಳುವಿನ ಕೈಗೊಂಬೆಯಾಗುವ ದಾರಿ ಹೀಗೆ. ಬಹುಮತ ಪಕ್ಷದವರಲ್ಲಿ ಕೆಲವರು ಮಂತ್ರಿಗಳಾಗಿದ್ದರೆ ಮಂತ್ರಿಗಳ ಅಭಿಪ್ರಾಯಕ್ಕೆ ವಿರುದ್ಧ ಪಕ್ಷವು ವರ್ತಿಸದಂಥಾ ಪರಿಸ್ಥಿತಿ ಕೆಲವೆಡೆ ಕಂಡುಬರುತ್ತಿದೆ. ಕ್ರಮಶಃ ಮಂತ್ರಿಗಳೇ ಸರ್ವಶಕ್ತಿಶಾಲಿಗಳಾಗಿ ಪ್ರಜಾಪ್ರಭುತ್ವವು ಸೋಗಿನ ವೇಶವಾಗಿ ಸರ್ವಾಧಿಕಾರದಲ್ಲಿ ಪರ್ಯವಸಾನಗೊಳ್ಳುತ್ತದೆ.

ನಿಜವಾಗಿಯೂ ಮಂತ್ರಿಗಳು ಶಾಸನ ಸಭೆಯ ಸದಸ್ಯರಿಗೆ ಜವಾಬ್ದಾರರೇ ವಿನಾ ಬೇರೆ ಯಾರಿಗೂ ಅಲ್ಲ. ಶಾಸನ ಸಭಾ ಸದಸ್ಯರು ದೇಶದ ಮತದಾರರಿಗೆ ಜವಾಬ್ದಾರರು. ಹಾಗಿರುವಾಗ ಮಂತ್ರಿಗಳಾಗಿ ಆರಿಸಲ್ಪಟ್ಟವರು ಮಂತ್ರಿಗಳಾಗಿರುವ ವರೆಗೆ ಪಕ್ಷಾತೀತರಾಗಿರಬೇಕು. ಶಾಸನ ಸಭೆಯ ಸರ್ವ ಸದಸ್ಯರನ್ನೂ ಸಮಾನರಾಗಿ ಕಾಣಬೇಕು. ತಮ್ಮ ಪಕ್ಷದ ಸದಸ್ಯರಿಗೆ ಉತ್ತರವೀಯುವಾಗ ನಯಭಯದಿಂದ ಮಾತಾಡುವುದೂ, ಬೇರೆಯವರು ಮಾತಾಡುವಾಗ ಸಿಡಿಗಟ್ಟುವುದೂ ಜವಾಬ್ದಾರಿ ಹೊತ್ತವರ ಅಯೋಗ್ಯತೆಯನ್ನು ವ್ಯಕ್ತಮಾಡುತ್ತದೆ.

ಮಂತ್ರಿಗಳನ್ನು ಆಗಾಗ್ಗೆ ಟೀಕಿಸಿ ಸರಿದಾರಿಯಲ್ಲಿ ನಡೆಸಲು ಶಕ್ತವಾದ ಅಧಿಕಾರ ವಹಿಸದ ಇತರರು ಕೊಡಗಿನಲ್ಲಿ ಮಾತ್ರವಲ್ಲ ಇತರ ಪ್ರಾಂತ್ಯಗಳ[illegible] ಜವಾಹರ್ ದೇಶದ ಮುಖ್ಯಮಂತ್ರಿಯಾದರೆ ಅವರಿಗೆ ಸಲಹೆಕೊಡುವವರಾರು? ಈ ವಿಚಾರವಾಗಿ ಅಧಿಕಾರ [illegible] ಅಧಿಕಾರದಲ್ಲಿರದವರಿಗೂ [illegible] ನಡೆಯುತ್ತದೆ. ಬೊಂಬಾಯಿಯಲ್ಲಿ ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಎಸ್. ಕೆ. ಪಾಟೀಲ್ ಮತ್ತೆ ಅಧಿಕಾರದಲ್ಲಿರುವ ಮುರಾರಜಿಯವರೊಳಗಿನ ಘರ್ಷಣೆ ಓದುಗರಿಗೆ ತಿಳಿಯದ್ದಲ್ಲ. ಮಂತ್ರಿಗಳನ್ನು ಕಾಂಗ್ರೆಸ್ ಸಂಸ್ಥೆ ಆರಿಸಿರುವುದರಿಂದ ಆ ಸಂಸ್ಥೆಯ ನಿರ್ದೇಶನದಂತೆ ನಡೆಯಬೇಕೆನ್ನುವ ವಾದವನ್ನು ಒಪ್ಪಿದರೆ ಸರಕಾರಕ್ಕೂ ಕಾಂಗ್ರೆಸಿಗೂ ಭೇದವಿಲ್ಲವೆಂದಂತಾಗುತ್ತದೆ. ಇದರಿಂದಾಗಿ ಬಹುಮತ ಪಕ್ಷವು ತನ್ನ ಅಭಿಪ್ರಾಯದಂತೆ ಉಗಿಬಂಡಿಯಂತೆ ಎದುರಿರುವುದನ್ನೆಲ್ಲಾ ನೆಲಸಮಗೊಳಿಸಿ ಯಾವ ವಿರೋಧವನ್ನು ಲೆಕ್ಕಿಸದಂತಾಗುತ್ತದೆ.

ಮಹಾತ್ಮಾಗಾಂಧಿಯವರಿದ್ದ ವರೆಗೆ ಅವರ ನೈತಿಕ ಪ್ರಭಾವವು ಕಾಂಗ್ರೆಸಿನ ಮೇಲಿತ್ತು. ಅವರು ಕಾಂಗ್ರೆಸಿನ ನಾಲ್ಕಾಣೆ ಸದಸ್ಯರಲ್ಲದಿದ್ದರೂ ಮಂತ್ರಿಮಂಡಲವಿರಲಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಇರಲಿ ಅವುಗಳ ಮೇಲೆ ಹಿಡಿತವಿದ್ದು ಅವರೂ ಕೂಡ ಗಾಂಧೀಜಿಯವರ ಅಭಿಪ್ರಾಯಕ್ಕೆ ತಲೆಬಾಗಿ ನಡೆಯುತ್ತಿದ್ದರು. ಆದರೆ ಈಗ ಅಂಥಾ ಹೊರಗಿನ ಶಕ್ತಿ ಇಲ್ಲದ ಕಾರಣವೂ ಕಾಂಗ್ರೆಸ್ ಪ್ರೆಸಿಡೆಂಟರೇ ಅಧಿಕಾರ ಪೀಠದಲ್ಲಿ ಕುಳಿತು ಕಾಂಗ್ರೆಸಿನಲ್ಲಿದ್ದ ಗಣ್ಯರೆಲ್ಲಾ ಅಧಿಕಾರದ ಗದ್ದುಗೆ ಏರಿ ಕೂತಿರುವುದರಿಂದಲೂ ಅವರನ್ನು ಪ್ರಶ್ನಿಸುವ ಶಕ್ತಿ ಹೊರಗಿಲ್ಲದಾಗಿ ಅಧಿಕಾರ ಶಾಹಿತ್ವವು ಅವಿಚ್ಛಿನ್ನವಾಗಿ ಸಾಗತೊಡಗಿದೆ. ಆಡಳಿತದ ಜವಾಬ್ದಾರಿ ಹೊತ್ತವರಲ್ಲಿ ಆಡಳಿತ ನಿರಂಕುಶತೆ ಹೆಚ್ಚತೊಡಗಿ ಕಾಂಗ್ರೆಸಿನಲ್ಲಿ ಅವರು ಸರ್ವಾಧಿಕಾರಿಗಳಾಗುತ್ತಿದ್ದು ಅವರ ವಾಣಿ ಅವರ ಆಶಯಕ್ಕೆ ಬೆಂಬಲ ಕೊಡುವುದೇ ದೊರಗಿರುವ ಕಾಂಗ್ರೆಸಿಗರ ಕರ್ತವ್ಯವಾಗತೊಡಗಿದೆ. ಪರಿಣಾಮವಾಗಿ ಕಾಂಗ್ರೆಸ್ ಸಂಸ್ಥೆ ಹಾಗೂ ಸರಕಾರಿ ಇಲಾಖೆಗಳೊಳಗೆ ಭೇದವು ಕಡಿಮೆಯಾಗತೊಡಗಿದೆ. ಗ್ರಾಮದ ಜನರ ಅರ್ಜಿ ಹಾಲು ಹವಾಲುಗಳಿಗೆ ಶಿಫಾರಸ್ಸು ಬರೆದು ಯಾ ಮಂತ್ರಿಗಳೊಡನೆ ಮಾತಾಡಿ ಕಾರ್ಯ ಸಾಧಿಸಿ ಕೊಡುವ ಕೆಲಸವೇ ಇಂದು ಕಾಂಗ್ರೆಸಿನ ವಿಧಾಯಕ ಕಾರ್ಯಕ್ರಮವಾಗಿದೆ. ಎಡ್ ಹಾಕ್ ಸಮಿತಿಗಳು ಪ್ರತೀ ಗ್ರಾಮಕ್ಕೊಂದಿರಬಹುದಾದರೂ ಅವರ ಕೆಲಸವು ಇಂದು ಮಂತ್ರಿಗಳ ಏಜಂಟ್ ಕೆಲಸವಲ್ಲದೆ ಬೇರಿಲ್ಲ. ಈ ರೀತಿಯಾಗಿ ಜನತೆಗೆಲ್ಲಾ ಜವಾಬ್ದಾರಿಯಾಗಿರಬೇಕಾದ ಮಂತ್ರಿಗಳು ಪಕ್ಷದ ಮಾರ್ಗದಲ್ಲೇ ಪಕ್ಷದ ಜನರ ಮೂಲಕ ತಮ್ಮನ[illegible] ಕೊಟ್ಟವರು ಎಂಬ ಚಿಕ್ಕ ದೃಷ್ಟಿಯಿಂದ ಕೆಲಸ[illegible]ಹೋಲಗೇ ಪ್ರಾರಂಭಿಸತೊಡಗಿದೆ.

೧೯೪೦ರ ವರೆಗಿದ್ದ ರಷ್ಯದ ಕಮ್ಯೂನಿಷ್ಟ್ ಪಕ್ಷವನ್ನು ಇದಕ್ಕೆ ಒಂದು ವಿಧದಿಂದ ಹೋಲಿಸಬಹುದಾಗಿದೆ. ಅಂದಿನ ವರೆಗೆ ರಷ್ಯಾದ ಕಮ್ಯೂನಿಸ್ಟ್ ಪಕ್ಷವನ್ನು ರಷ್ಯಾದಲ್ಲಿ ಯಾರೂ ಟೀಕಿಸುವ ಇಲ್ಲವೇ ವಿರೋಧಿಸುವ ಆಸ್ಪದವಿರಲಿಲ್ಲ. ಯಾರೂ ಯಾವ ಕೆಲಸ ಮಾಡಬೇಕಾದರೂ ಪಾರ್ಟಿಯ ಸೆಕ್ರೆಟರಿಯಾದ ಸ್ಟಾಲಿನರ ಅಭಿಪ್ರಾಯದಂತೆ ಮಾಡಬೇಕಿತ್ತು. ಸ್ಟಾಲಿನರೇ ಆಗ ಸರ್ವಾಧಿಕಾರಿ. ಪಕ್ಷವು ಅವರ ಕೈಯೊಳಗಿನ ಗೊಂಬೆಯಂತಿತ್ತು. ಅದೇ ರೀತಿ ಇಂದು ಅಧಿಕಾರ ಕ್ಷೇತ್ರದಲ್ಲಿ ಕಾಂಗ್ರೆಸಿನ ಕಥೆಯೂ ಆಗಿದೆ. ಅಧಿಕಾರದಲ್ಲಿರುವ ಮಂತ್ರಿಗಳಿಗೆ ವಿರುದ್ಧ ಸಂಸ್ಥೆಯ ಬೇರೆಯವರು ವರ್ತಿಸಲಾರರು. ಅವರ ಬಯಕೆಯೇ ಸರ್ವ ಕಾಂಗ್ರೆಸಿಗರ ಬಯಕೆ ಎಂಬಂತಾಗಿದೆ

ಇಂಥಾ ಒಂದು ಪಕ್ಷಕ್ಕೆ ದೇಶದ ಶಾಸನ ಸಭೆಯಲ್ಲಿ ಬಹುಮತವಿದ್ದು ವಿರೋಧ ಪಕ್ಷದ ಮೆಂಬರುಗಳು ಯಾವುದೋ ಕಾರಣದಿಂದ ಬಾಯಿಗೆ ಬೀಗ ಹಾಕಿಕೊಂಡಿದ್ದರೆ ಅಂಥಾ ದೇಶದ ದುರ್ಭಾಗ್ಯವನ್ನು ಅಕ್ಷರಗಳಿಂದ ವರ್ಣಿಸುವದು ಸಾಧ್ಯವಿಲ್ಲ.

The essence of Democracy is a recognisd opposition In the absense of such an opposition the organisational wing of the party must do the duty of self-criticism and-self purification ಎಂದು ಹೇಳಿದಂತೆ ಪ್ರಜಾಪ್ರಭುತ್ವದ ಜೀವಾಳವೇ ವಿರೋಧ ಪಕ್ಷದ ಇರುವಿಕೆ. ಅಂಥಾ ವಿರೋಧ ಪಕ್ಷಗಳಿಲ್ಲದಲ್ಲಿ ಅಧಿಕಾರ ವಹಿಸಿದ ಪಕ್ಷದ ರಚನಾತ್ಮಕ ಸಂಸ್ಥಾ ವಿಭಾಗವು ಟೀಕೆ ಮತ್ತು ಆತ್ಮ ಪರಿಶುದ್ಧತೆಯ ಕರ್ತವ್ಯವನ್ನು ಮಾಡಬೇಕು.

ಕೊಡಗಿನಲ್ಲಿ ವಿರೋಧ ಪಕ್ಷವೂ ಇಲ್ಲ. ಮತ್ತೆ ಕಾಂಗ್ರೆಸಿನ ಒಳಗಿರುವ ಅಧಿಕಾರದಲ್ಲಿರದ ಕೆಲಸಗಾರರು ತಮ್ಮ ಮಂತ್ರಿಮಂಡಳವನ್ನು ಟೀಕಿಸುವ ಸ್ಥಿತಿಯಲ್ಲೂ ಇಲ್ಲ. ಪರಿಣಾಮವಾಗಿ ಎಸೆಂಬ್ಲಿಯ ಠರಾವುಗಳಿಗೆಲ್ಲಾ ಮಂತ್ರಿಯವರ ಉತ್ತರವೇ ಪರಿಹಾರವಾಗಿ ಠರಾವುಗಳೆಲ್ಲವೂ ಹಿಂತೆಗೆಯಲ್ಪಡುವಂತಾಗಿವೆ.

ಹಿಂದೆ ಬ್ರಿಟಿಷರ ಕಾಲದಲ್ಲಿದ್ದ ಕೌನ್ಸಿಲು ಸಭೆಯನ್ನು 'ನಕಲಿ' ಕೌನ್ಸಿಲೆಂದು ಕರೆಯುವದು ರೂಢಿಯಾಗಿತ್ತು. ಆದರೆ ಇಂದು ಪ್ರಜಾ ಜವಾಬ್ದಾರಿ ಕೌನ್ಸಿಲು ಇದೆಯೆಂದು ಕೊಚ್ಚಿಕೊಳ್ಳಬಹುದಾದರೂ ಒಂದು ವಿಧದಿಂದ ಇದೂ ಒಂದು ನಕಲಿಯಾಗಿಯೇ ಪರಿಣಮಿಸಿದೆ. Though Communalism and dirty party tricks were criticised in the election feild we can't be sure that the spirit is dead. There is [illegible] what the succeeded captains are doing to-day is perhaps the greatest trumiph of communalism and reactionary forces. ಚುನಾವಣಾ ರಂಗದಲ್ಲಿ ಜಾತೀಯತೆ ಮತ್ತು ಪಕ್ಷರಾಜಕೀಯಗಳನ್ನು ಟೀಕೆ ಮಾಡಿದರೂ ಅದರ ಚೇತನ ಉಡುಗಿದಂತೆ ತೋರುವದಿಲ್ಲ. ಜಯ ಪಡೆದ ಇಂದಿನ ಕಪ್ತಾನರು ಮಾಡುತ್ತಿರುವ ಕೆಲಸದಿಂದ ಆ ಕೋಮುವಾರು ಭಾವನೆ ಮತ್ತು ಪ್ರತಿಗಾಮಿ ಶಕ್ತಿಗಳಿಗೆ ದೊಡ್ಡ ಜಯ ದೊರೆತಿದೆಯೆಂದು ಹೇಳಬಹುದಾಗಿದೆ.

Sale of Fishery in Honnammanakere.
Somwarpet, by

Public Auction.

The fishery in Honnammanakere, 4 miles on the Somwarpet-Saniwarasanthe Road will be sold by public auction on Saturday the 24th January 1953 at 11 30 a. m by the undersigned or his representative, on the following conditions, at the office of the Agricultural Demonstrator. Somwarpet.

1. Intending bidders should deposit a sum of Rs. 25/- with the undersigned or his representative prior to the commencement of the auction sale.

2 The highest bidder should be in a position to deposit the full bid amount as soon as the auction is over.

3. The lessee should make his own arrangements for fishing in the said tank and the tank should be handed back to the Government after one month of the approval of the auction sale.

4. The final acceptance of the auction sale is subject to the approval of the Agricultural Officer.

5. Further particulars, if any, may be got from the office of the undersigned at Mercara

B. S. VARADARAJAN.
Agricultural Officer.

ಜನವರಿ ಒಂದರಿಂದ ಅನಿಯಮಿತ ಅವಧಿಯ ವರೆಗೆ ಮತ್ತೆ ಸಂಪು ಹೂಡಬೇಕೆಂದು ಮುಂಬಯಿ ಮೋಟರ ಒಡೆಯರು ನಿರ್ಣಯಿಸಿದ್ದಾರೆ ಇದರಿಂದ ೧೭ ಸಾವಿರ ಮೋಟಾರುಗಳು ಬಂದಾಗುವವು. ಸಾರಿಗೆಯ ರಾಷ್ಟ್ರೀಕರಣ ಮಾಡುವದರಿಂದ ಆಗುವ ಸಾ–ದುಷ್ಪರಿಣಾಮಗಳ ಬಗ್ಗೆ ಸರಕಾರದವರು ಸಮಿತಿಯನ್ನು ನೇಮಿಸಬೇಕೆಂದು ಸಂಪು ಹೂಡುವದಾಗಿ ನಿರ್ಧರಿಸಲಾಗಿದೆ.

ಮೋಟಾರ ಸಾರಿಗೆಯ ರಾಷ್ಟ್ರೀಕರಣ ಸಂಬಂಧದಲ್ಲಿ ಸರಕಾರದ ಧೋರಣೆಯಲ್ಲಿ ಯಾವ ಬದಲಾವಣೆಯೂ ಇಲ್ಲ. ಮೋಟರಗಳ ಸಂಪಿನಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಲಾಗುವದೆಂದು ಮುಂಬಾಗಿ ಉಪಮಂತ್ರಿ ಶ್ರೀ. ಬಾಬುಭಾಯಿ ಪಟೇಲರು ಹೇಳಿದರು.

Licence No. 60,
Licenced to Post without Prepayment.

Reg. No. M. 1000.
'KODAGU' MERCARA, (Coorg).

ಕೊಡಗು

ಸಂಪಾದಕರು—ಬಿ. ಡಿ. ಬೆಳ್ಳಿಯಪ್ಪನವರು] [ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧ | ತಾರೀಕು ೯-೧-೧೯೫೩ನೇ ಶುಕ್ರವಾರ | ಸಂಚಿಕೆ ೨೦

ಈ ಆಜ್ಞೆ ಹಿಂತೆಗೆಯಬೇಕು.

ದೇಶದಲ್ಲಿ ಆಹಾರ ಪದಾರ್ಥಗಳ ನಿಯಂತ್ರಣವು ಜಾರಿಗೆ ಬಂದ ನಂತರ ಬಡ ವ್ಯೈತಾಪಿ ಜನರಿಗೆ ಉಂಟಾದ ತೊಂದರೆ ಒಂದೆರಡಲ್ಲ. ರೇಶನ್ ಕಾರ್ಡಿನ ಉದ್ಭವವಾದ ಮೇಲೆಯೂ ತೊಂದರೆ ಹಲವಾರು ಇದ್ದವು. ತೆಗೆದು ಉಣ್ಣುವ ಜನರಿಗೆ ಒಂದು ಸ್ಥಳದಲ್ಲಿ ಅಕ್ಕಿ ದೊರೆಯುವದೆಂಬ ಭರವಸೆ ದೊರೆತರೂ ತೊಂದರೆ ಇದ್ದೇ ಇತ್ತು. ರೇಶನ್ ಅಂಗಡಿಗಳಲ್ಲಿ ಅಕ್ಕಿಯ ಕೊರತೆ ಇದ್ದು ಅಕ್ಕಿ ದೊರೆಯದ ಉದಾಹರಣೆಗಳೂ ಇದ್ದವು. ಹೀಗೆ ಅಕ್ಕಿ ದೊರೆಯದಾಗಲು ಬತ್ತವನ್ನು ಬೆಳೆಸಿದ ರೈತರು ತಮ್ಮೊಳಗೇ ಕಪ್ಪುಸಂತೆ ವ್ಯಾಪಾರ ತೊಡಗಿರುವದು ಕಾರಣವಿರಬೇಕೆಂದು ಸರಕಾರವು ಆಲೋಚಿಸಿ ಗ್ರಾಮದಿಂದ ಗ್ರಾಮಕ್ಕೆ ಅಕ್ಕಿ ಬತ್ತ ಸಾಗಿಸಕೂಡದು. ವಿಶೇಷ ಅನುಮತಿ ಪಡೆದೇ ಸಾಗಿಸಬೇಕೆಂದು ವಿಧಿಸಿತು. ಇದರಿಂದ ಜನತೆಗಾದ ತೊಂದರೆ ಒಂದೆರಡಲ್ಲ. ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಇದು ಒಂದು ಪ್ರಶ್ನೆಯಾಗಿ ನಿಂತು ಚುನಾವಣೆಗೆ ನಿಂತವರೆಲ್ಲರೂ ತಮ್ಮನ್ನು ಆರಿಸಿದರೆ ಈ ನಿರ್ಬಂಧವನ್ನು ತೆಗೆದು ಹಾಕಿಸುವೆವೆಂದು ಭರವಸೆ ಇತ್ತಿದ್ದರು. ಈ ನಿಯಮದಿಂದ ಮಿಲ್ಲಿನಲ್ಲಿ ರೈತನು ಅಕ್ಕಿ ಮಾಡಿಸಲು ಕೂಡ ಇನ್ಸ್‌ಪೆಕ್ಟರರ ಇಲ್ಲವೇ ಸಂಬಂಧಿಸಿದ ಅಧಿಕಾರಿಯಿಂದ ಪರ್ಮಿಟು ಪಡೆಯಬೇಕಿತ್ತು. ಪೇಟೆಯಲ್ಲಿರುವ ಅಧಿಕಾರಿಯನ್ನು ಹತ್ತು ಹನ್ನೆರಡು ಮೈಲು ದೂರದಲ್ಲಿರುವ ರೈತನು ಕಂಡು ಪರ್ಮಿಟು ಪಡೆಯುವದು ಬಹು ತೊಂದರೆಯಾಗಿತ್ತು. ಮೇಲಾಗಿ ಶ್ರಮಜೀವಿಗಳು ಬೇರೆ ಗ್ರಾಮದಲ್ಲಿ ಕೆಲಸ ಮಾಡಿ ತಮ್ಮ ಸಂಪಾದನೆಯಾದ ಅಕ್ಕಿ ಬತ್ತವನ್ನು ತಮ್ಮ ಗ್ರಾಮಕ್ಕೆ ತರುವದೂ, ಬೇರೆ ಗ್ರಾಮದಲ್ಲಿ ಕೊಪ್ಪಲು ಮನೆ ತೋಟಗಳಿರುವವರು ಪಡುತ್ತಿದ್ದ ತೊಂದರೆಯೂ ಒಂದೆರಡಲ್ಲ.

ಆದ್ದರಿಂದ ಈ ನಿಯಮದ ಆನಾಹುತವನ್ನು ಸಹಿಸಲಾರದೆ ಇಡೀ ದೇಶಕ್ಕೆ ದೇಶವೇ ಇದರ ವಿರೋಧ ಅಭಿಪ್ರಾಯ ವ್ಯಕ್ತಪಡಿಸಿತು. ಚುನಾವಣೆಗೆ ನಿಂತ ಉಮೇದ್ವಾರರೂ ಭರವಸೆ ಇತ್ತು ಓಟು ಪಡೆದರು. ಚುನಾವಣೆ ಕಳೆದು ಕೊಡಗಿನಲ್ಲಿ ಮಂತ್ರಿ ಮಂಡಳದ ರಚನೆಯಾದ ಕೆಲವು ದಿನಗಳ ನಂತರ ಅಂದರೆ ತಾ. ೧೯-೬-೫೨ರಲ್ಲಿ ಚೀಫ್ ಕಮಿಷನರು ಹೊರಡಿಸಿದ ಜಾಹೀರುನಾಮೆಯ ಪ್ರಕಾರ ಈ ಆಂತರಿಕ ಆಹಾರ ಸಾಗಿಸುವಿಕೆಯ ತೊಂದರೆಯನ್ನು ನಿವಾರಿಸಿ ಕೊಡಗಿನ ಗಡಿ ಗ್ರಾಮಗಳನ್ನು ಬಿಟ್ಟು ಒಳಗಿನ ಗ್ರಾಮಗಳಲ್ಲಿ ಅರ್ಧ ಗಾಡಿ ಬತ್ತ ಯಾ ೩೦೦ ಸೇರು ಅಕ್ಕಿಯನ್ನು ಯಾವ ನಿರ್ಬಂಧವಿಲ್ಲದೆ ಅತ್ತಿಂದಿತ್ತ ಸಾಗಿಸಬಹುದೆಂದು ಸಾರಲಾಯಿತು. ಇದರಿಂದ ಕೊಡಗಿನ ವ್ಯೈತಾಪಿ ಜನರಿಗೂ, ಮಜೂರರಿಗೂ ವಿಪರೀತ ಹಿತವಾಯಿತು. ಈ ಆರು ತಿಂಗಳುಗಳ ವರೆಗೆ ಆಹಾರದ ಪದಾರ್ಥಗಳ ತೊಡರಿಲ್ಲದೆ ಸರ್ವವೂ ನಡೆದು ಬರುತಿತ್ತು. ರೇಶನ್ ಅಂಗಡಿಗಳಲ್ಲೂ, ಪೇಟೆಯಲ್ಲೂ ಅಕ್ಕಿ ದೊರೆಯುವಂತಾಗಿ ಪರಿಸ್ಥಿತಿ ಸುಧಾರಿಸಿತ್ತು! ನೆರೆ ರಾಜ್ಯವಾದ ಮೈಸೂರಿಗೂ ತಾವು ಒಪ್ಪಿದಕ್ಕಿಂಥಾ ಹೆಚ್ಚು ಬತ್ತವನ್ನು ಕೊಡಲು ಸರಕಾರಕ್ಕೆ ಸಾಧ್ಯವಾಯಿತು.

ಆದರೆ ಇತ್ತಲಾಗಿ ಅಂದರೆ ತಾರೀಕು ೨೭-೧೨-೫೨ರಲ್ಲಿ ಚೀಫ್ ಕಮಿಷನರು ಹೊರಡಿಸಿದ ಜಾಹೀರ್‌ನಾಮೆಯಲ್ಲಿ ಆಹಾರ ಪದಾರ್ಥಗಳ ಆಂತರಿಕ ಸಾಗಾಟಕ್ಕ ನಿರ್ಬಂಧ ಹಾಕಿ ಹಿಂದಿನಂತೆಯೇ ಮಿಲ್ ಇನ್ಸ್‌ಪೆಕ್ಟರು, ರೇಶನಿಂಗ್ ಇನ್ಸ್‌ಪೆಕ್ಟರು ಯಾ ಪಾರುಪತ್ಯಗಾರರಿಂದ ಪರ್ಮಿಟ್ ಪಡೆದು ಗ್ರಾಮದಿಂದ ಗ್ರಾಮಕ್ಕೆ ಸಾಗಿಸಬೇಕೇ ವಿನಾ ಪರ್ಮಿಟಿಲ್ಲದೆ ಕೂಡದೆಂದು ವಿಧಿಸಲಾಗಿದೆ. ಈ ಆಜ್ಞೆಯು ಈಗ ಜಾರಿಯಲ್ಲಿದೆ. ಆದ್ದರಿಂದ ಯಥಾವಿಧಿ ಇಂದು ನೆರೆ ಗ್ರಾಮದಲ್ಲಿ ಕೆಲಸ ಮಾಡಿ ತನ್ನ ದಿನಕೂಲಿ ನಾಲ್ಕು ಸೇರು ಬತ್ತವನ್ನು ತನ್ನ ಗ್ರಾಮಕ್ಕೆ ತರುವ ಮಜೂರನು ಅಂದು ಶಿಕ್ಷಾರ್ಹನು. ಅಕ್ಕಿ ಮಾಡಿಸಲಿಕ್ಕಾಗಿ ತನ್ನ ಗ್ರಾಮದಿಂದ ಒಂದು ಬುಟ್ಟಿ ಬತ್ತ ಮಿಲ್ಲಿಗೆ ತರುವವನು ಶಿಕ್ಷಾರ್ಹನು. ಈಗ ಬೆಳೆಬಂದ ಈ ಸಮಯದಲ್ಲಿ ಈ ಆಜ್ಞೆಯು ಇನ್ನೂ ಹೋದರೆಗೆ ಕಾರಣವಾಗಿದೆ. ರೈತನು ತನ್ನ ಬತ್ತವನ್ನು ತನ್ನ ಗಾಡಿಯಲ್ಲಿ ತಂದು ಮಿಲ್ಲಿಗೆ ಸರಕಾರದಿಂದ ನಿಗದಿಯಾದ ಧಾರಣೆಗೆ ಮಾರಾಟ ಮಾಡಬೇಕಾದರೂ ಸರಕಾರದ ಪರ್ಮಿಟಿಲ್ಲದೆ ಸಾಧ್ಯವಾಗದು. ರೈತನಿಗೆ ವಿಪರೀತ ತೊಂದರೆ ಇರುವ ಈ ಸಮಯದಲ್ಲಿ ಪರ್ಮಿಟಗಾಗಿ ಪಾರುಪತ್ತೆಗಾರರ ಯಾ ಇನ್ಸ್‌ಪೆಕ್ಟರುಗಳ ಹಿಂದೆ ಓಡಾಡುವುದು ಸುಲಭದ ಕೆಲಸವಲ್ಲ. ಈ ಅಧಿಕಾರಿಗಳ ದರ್ಶನಕ್ಕೆ ರೈತನನ್ನು ಪುನಹ ಈ ಆಜ್ಞೆ ಆಹುತಿಮಾಡಿದೆ. ಈ ಮೊದಲು ಒಂದು ಪರ್ಮಿಟಗಾಗಿ ಐದು ಮೈಲು ದೂರದ ಪೇಟೆಗೆ ನಾಲ್ಕುಬಾರಿ ನಡೆಯಬೇಕಾದ ಪರಿಸ್ಥಿತಿ ಇದನ್ನು ಬರೆಯುತ್ತಿರುವ ನನಗೆ ಬಂದಿದೆ. ಅನುಭವದಿಂದ ಸರಕಾರದ ಆಜ್ಞೆ ರೈತನ ಹಿತದೃಷ್ಟಿಯಿಂದ ಅಲ್ಲವೆಂದು ಹೇಳುತ್ತಿರುವದಾಗಿದೆ.

ನಮ್ಮ ಪ್ರತಿನಿಧಿಗಳನ್ನುವ ಶಾಸನ ಸಭಾ ಸದಸ್ಯರಿದ್ದಾರೆ. ನಮ್ಮ ಹಿತಕ್ಕೆಂದಿರುವ ಮಂತ್ರಿಗಳಿದ್ದಾರೆ. ಇವರಿದ್ದೂ ಈ ರೀತಿಯ ಒಂದು ನಿಯಮ ಪುನಹ ಜಾರಿಗೆ ಬಂದದ್ದು ತುಂಬಾ ವಿಷಾದಕರ. ಹೊರಗಿನ ದೇಶದವರು ಕೊಡಗಿನವರಿಗಿಂಥಾ ತೊಂದರೆಯಲ್ಲಿದ್ದಾರೆ; ಅವರಿಗೆ ಸಹಾಯ ಮಾಡಬೇಕು. ಆದ್ದರಿಂದ ಅದನ್ನು ಉಳಿಸಿ ಅವರಿಗೆ ಕಳುಹಿಸಬೇಕೆಂಬ ತತ್ವವನ್ನು ಕೊಡಗಿನ ರೈತರಾದ ನಾವೂ ಒಪ್ಪುತ್ತೇವೆ. ಈ ತತ್ವವನ್ನು ಒಪ್ಪಿ ತಮ್ಮಲ್ಲಿನ್ನ ಉಳಿದುದರಿಯನ್ನೆಲ್ಲಾ ನಿರ್ಧಾರಿತವಾಗಿ ಕೊಟ್ಟಿದ್ದರಿಂದಲೇ ಕಳೆದ ವರ್ಷ ಸರಕಾರವು ಅಂದಾಜು ಮಾಡಿದ್ದಕ್ಕಿಂತಲೂ ಹೆಚ್ಚು ಅಕ್ಕಿಯನ್ನು ಮೈಸೂರಿಗೆ ಕಳುಹಿಸುವುದು ಸಾಧ್ಯವಾಯಿತು. ನಿಯಂತ್ರಣಗಳು ಯಾವಾಗಲೂ ಜನತೆಗೆ ತೊಂದರೆ ಅಲ್ಲದೆ ಜನರಲ್ಲಿ ಗಾಬರಿ ಹುಟ್ಟಿಸಿ ಬೇಕಿರುವುದಕ್ಕಿಂತಲೂ ಹೆಚ್ಚು ಶೇಖರಿಸುವಂತೆ ಪ್ರೇರಿಸುತ್ತವೆ. ಅಲ್ಲದ ಅಧಿಕಾರಿಗಳ ಕಿರುಕುಳಕ್ಕೂ ಕಪ್ಪು ವರ್ತನೆಗಳಿಗೂ ಅನುಮಾಡುತ್ತವೆ. ಆದ್ದರಿಂದ ಈ ಆಜ್ಞೆಯನ್ನು ಶೀಘ್ರವಾಗಿ ಹಿಂತೆಗೆದು ಕೊಳ್ಳಬೇಕಾದುದು ಧರ್ಮ. ಚುನಾವಣೆ ಕಾಲಕ್ಕೆ ಇಂಥಾ ನಿರ್ಬಂಧಗಳ ವಿರುದ್ಧ ಬೊಬ್ಬೆಹಾಕಿದ ಜನ ಪ್ರತಿನಿಧಿಗಳೂ ಮಂತ್ರಿ ಮಂಡಳವೂ ಈಗ ತಾವೇ ಈ ನಿರ್ಬಂಧ ಹೇರಲು ಕಾರಣವೇನೆಂದು ಉತ್ತರ ಕೊಡಬೇಕಿದೆ. ಕಾಂಗ್ರೆಸಿನ ಚುನಾವಣಾ ಘೋಷಣೆಯಲ್ಲಿ ಮತದಾರರಿಗೆ ಬರೆದು ಕೊಟ್ಟು ಈಗ ಅದಕ್ಕೆ ವಿರುದ್ಧ ವರ್ತಿಸಲು ಇರುವ ವಿಶೇಷ ಕಾರಣವನ್ನು ಜನತೆಯ ಮುಂದಿಡಬೇಕಿದೆ.

"ರೈತ"

ಮಾರಾಟಕ್ಕಿದೆ.

ಮಡಿಕೇರಿಯಿಂದ ಮೂರು ಮೈಲಿ ಅಂತರದಲ್ಲಿ ಮಂಗಳೂರು ರಸ್ತೆ ಬಾಜಿನಲ್ಲಿ 200 ಬಟ್ಟಿ ನೀರಾವರಿ ಭೂಮಿಯೂ ಇದಕ್ಕೆ ಸೇರಿದ 18 ಎಕ್ರೆ ಜಾಗವೂ ಮತ್ತು ಒಂದು ದೊಡ್ಡ ಕುಟುಂಬಕ್ಕೆ ವಾಸಕ್ಕೆ ಯೋಗ್ಯವಾದ ಹಂಚು ಹಾಕಿದ ಅಚ್ಚುಕಟ್ಟಾದ ಸುಂದರವಾದ ಮನೆಯೂ ಮಾರಾಟಕ್ಕಿದೆ.

ಭೂಮಿಯು ನಡುಮೈಲಿನಲ್ಲಿದ್ದು ನೂರು ಬಟ್ಟಿಯು ಒಂದೇ ಗದ್ದೆಯಾಗಿದ್ದು ಎಲ್ಲವೂ ಒಂದೇ ಬ್ಲಾಕ್‌ನಲ್ಲಿವೆ. ಪ್ರತಿ ವರ್ಷವೂ ಸರಾಸರಿ 12 ಗಾಡಿ ಬತ್ತ ಉತ್ಪತ್ತಿಯಾಗುತ್ತದೆ. ಇದಕ್ಕೆ ಸೇರಿದ ಜಾಗವು ದಟ್ಟವಾದ ಕಾಡುಗಳಿಂದ ಆವೃತವಾಗಿ ಯಾಲಕ್ಕಿ, ಕಾಫಿ, ಕಿತ್ತಳೆ, ಬಾಳೆ ಮೊದಲಾದ ಯಾವುದೇ ತರದ ವ್ಯವಸಾಯಕ್ಕೆ ಯೋಗ್ಯವಾಗಿರುವದು. ಖಾಯುಸ್ ದಾರರು ತಪಶೀಲ್ ವಿವರಗಳನ್ನು ಈ ಕೆಳಗಿನ ವಿಳಾಸದಾರರಿಂದ ತಿಳಿದುಕೊಳ್ಳಬಹುದು.

ಚೆಪ್ಪುಂಡ ಮುದ್ದಪ್ಪ,
2-2 ಕಾಟಕೇರಿ, ಮಡಿಕೇರಿ.

ಕೃತಜ್ಞತಾ ವಂದನೆ.

ತಾ. 18-11-52ರಲ್ಲು ಶಿವಾಧೀನರಾದ ನನ್ನ ಪತಿ ಹಾಗೂ ಪೂವಣ್ಣನಾದ ನನ್ನ ತಂದೆ ಪೊನ್ನಪ್ಪನವರ ವಿಯೋಗ ಕಾಲದಲ್ಲಿ ಪ್ರತ್ಯಕ್ಷ ಬಂದೂ ಸಂತಾಪ ಸೂಚನೆ ಬರೆದೂ ನಮ್ಮ ದುಃಖದಲ್ಲಿ ಭಾಗಿಗಳಾದ ನಮ್ಮ ಬಂಧು ಬಳಗದವರಿಗೂ ಇಷ್ಟಮಿತ್ರರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಬರೆದು ವಂದಿಸುವುದು ಅಸಾಧ್ಯವಾದ ಕಾರಣ ಅವರೆಲ್ಲರಿಗೂ ನನ್ನ ಮತ್ತು ಮಕ್ಕಳ ಹೃತ್ಪೂರ್ವಕ ಕೃತಜ್ಞತೆಗಳನ್ನು ಈ ಮೂಲಕ ಅರ್ಪಿಸುತ್ತೇನೆ.

ನಾಯಂಡ ಸುಬ್ಬವ್ವ,
ನಾಯಂಡ ಪೂವಣ್ಣ,
ವೀರಾಜಪೇಟೆ.

Acknowledgment.

I Sincerely thank all my relatives [illegible] and wellwishers who wrote to me and personally called on me in my great bereavment and regret my inability to acknowledge inidvidually.

Mrs. Kombiranda T. MUTHANNA.
MERCARA.

For Sale.

Buick car 28 h. p in good condition European owned and drivan throughout. Open to any reasonable offer.

GUNN.
Pollibetta.
S. Coorg

ಮರಾಠಿಯ ಪ್ರಸಿದ್ಧ ಗ್ರಂಥಕರ್ತರೂ ಪ್ರಕಾಶಕರೂ ಆಗಿರುವ ಶ್ರೀ. ವಿ. ಎಸ್. ಖಾಂಡೇಕರ ಇವರು ಭೂದಾನ ಯಜ್ಞಕ್ಕಾಗಿ ಸಾವಂತವಾಡಿಯಲ್ಲಿಯ ತನ್ನ ೩೨ ಎಕರೆ ಭೂಮಿಯನ್ನು ದಾನ ಕೊಟ್ಟಿರುತ್ತಾರೆ. ಅಣ್ಣಾಸಾಹೇಬ ಸಹಸ್ರಬುದ್ಧೆಯವರು ಈಗ ಭೂಮಿ ಸಂಗ್ರಹಕ್ಕಾಗಿ ಮಹಾರಾಷ್ಟ್ರದಲ್ಲಿ ಸಂಚರಿಸುತ್ತಿದ್ದು ಈ ವರೆಗೆ ೨೭೫ ಎಕರೆ ಭೂಮಿಯನ್ನು ಸಂಗ್ರಹಿಸಿರುವರು. ಮಹಾರಾಷ್ಟ್ರದಲ್ಲಿ ಒಟ್ಟು ೧ ಲಕ್ಷ ಎಕರೆ ಭೂಮಿಯನ್ನು ಸಂಪಾದಿಸಬೇಕೆಂದು ನಿರ್ಧರಿಸಲಾಗಿದೆ.

ಗುಜರಾತಿ ಸಾಹಿತ್ಯ ಸಮ್ಮೇಳನವು ನ್ಯಾಯಮೂರ್ತಿ ದಿವೇಟಿಯಾ ಇವರ ಅಧ್ಯಕ್ಷತೆಯಲ್ಲಿ ಸೂರತದಲ್ಲಿ ಕಳೆದ ವಾರ ಸೇರಿ ಗುಜರಾತಿ ಇಲ್ಲವೆ ತಜ್ಜನ್ಯ ಭಾಷೆಗಳ ಎಲ್ಲ ಪ್ರದೇಶಗಳನ್ನೊಳಗೊಂಡ ಗುಜರಾಥವನ್ನು ಪ್ರತ್ಯೇಕ ಪ್ರಾಂತ್ಯವನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುವ ಗೊತ್ತುವಳಿ ಸ್ವೀಕರಿಸಲಾಯಿತು.

ವಿಶ್ವಸಂಸ್ಥೆಯ ದೌರ್ಬಲ್ಯ ಪ್ರದರ್ಶನ

ತ್ರಿರಾಷ್ಟ್ರಗಳ ಹಿತದ ಮುಂದೆ ನ್ಯಾಯನೀತಿಗಳಿಗೆ ಬೆಲೆ ಇಲ್ಲ.

ವಿಶ್ವಸಂಸ್ಥೆಯ ಭವಿತವ್ಯವೂ ಹಿಂದಿನ ರಾಷ್ಟ್ರಸಂಘದಂತಾಗುವುದು.

ಮೊದಲನೇ ಮಹಾಯುದ್ಧವು ಸಮಾಪ್ತಿಯಾದ ಮೇಲೆ ಪ್ರಪಂಚದಲ್ಲಿ ಮತ್ತೊಂದು ಮಹಾಯುದ್ಧವಾಗಬಾರದು. ಎಲ್ಲ ರಾಷ್ಟ್ರಗಳು ಪರಸ್ಪರ ಸಖ್ಯದಿಂದಿರಬೇಕು. ವಾದಗ್ರಸ್ತ ಪ್ರಶ್ನೆ ಉದ್ಭೂತವಾದರೆ ವಿಚಾರ ವಿನಿಮಯದಿಂದ ಅದನ್ನು ಬಗೆಹರಿಸಬೇಕು. ಎಂಬ ಉದಾತ್ತ ಧ್ಯೇಯವನ್ನಿಟ್ಟುಕೊಂಡು ಆಗಿನ ಅಮೇರಿಕೆಯ ಅಧ್ಯಕ್ಷರಾದ ವುಡ್ರೋ ವಿಲ್ಸನ್ ಇವರ ಪ್ರಯತ್ನದಿಂದ ರಾಷ್ಟ್ರಸಂಘವೆಂಬುದು ಅಸ್ತಿತ್ವದಲ್ಲಿ ಬಂತು. ಆ ಸಂಸ್ಥೆಯಲ್ಲಿ ನಡೆಯುತಿದ್ದ ಕಾರ್ಯಕಲಾಪಗಳಲ್ಲಿ ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಗಳು ಅಗ್ರಸ್ಥಾನ ವಹಿಸುತಿದ್ದವು. ಅವರಲ್ಲಿಯೂ ಬ್ರಿಟಿಷರ ವರ್ಚಸ್ಸು ವಿಶೇಷವಾಗಿತ್ತು. ಹೀಗಾಗುವದು ಅನೇಕ ರಾಷ್ಟ್ರಗಳಿಗೆ ಸರಿಬರಲಿಲ್ಲ. ಪ್ರತಿಯೊಂದು ವಿಷಯವನ್ನೂ ತಮ್ಮ ಹಿತಸಂಬಂಧದ ಒರೆಗೆ ಹಚ್ಚಿನೋಡಿ ಬ್ರಿಟನ್, ಫ್ರಾನ್ಸುಗಳು ನಿರ್ಣಯಕ್ಕೆ ಬರುತಿದ್ದವು. ಈ ತ್ರಿರಾಷ್ಟ್ರಗಳ ಉಪದ್ವ್ಯಾಪವು ಹಾಗೇ ಮುಂದುವರಿದುದರಿಂದ ಈ ಸಂಸ್ಥೆ ಹುಟ್ಟಿದ ೫-೬ ವರ್ಷಗಳಲ್ಲಿಯೇ ರಾಷ್ಟ್ರಸಂಘದಲ್ಲಿ ಒಡಕು ತೋರಿಬರಹತ್ತಿತು. ಕೊನೆಗೆ ಒಂದೊಂದೇ ರಾಷ್ಟ್ರವು ಹೊರಬೀಳಹತ್ತಿತು ಹೀಗಾಗಿ ಆ ಸಂಸ್ಥೆಯು ಇತಿಶ್ರೀಯಾಯಿತು.

ಈಗ ದ್ವಿತೀಯ ಮಹಾಯುದ್ಧಾನಂತರವೂ ಅಂತಹದೇ ಮತ್ತೊಂದು ಪ್ರಯತ್ನವು ನಡೆಯಿತು. ಜನ್ಮಸಿದ್ಧ ಹಕ್ಕು, ವ್ಯಕ್ತಿಸ್ವಾತಂತ್ರ್ಯ, ಸಮಾನತೆ ಇವೇ ಮೊದಲಾದ ದೊಡ್ಡ ದೊಡ್ಡ ತತ್ವಘೋಷಣೆಗಳ ಗಲಾಟೆಯಲ್ಲಿಯೂ ಅಟ್ಲಾಂಟಿಕ್ ಚಾರ್ಟರದ ಬೆಳಕಿನಲ್ಲಿಯೂ ವಿಶ್ವಸಂಸ್ಥೆ ಜನ್ಮತಾಳಿತು. ಉದ್ಬುದ್ಧ ತತ್ವಗಳನ್ನೇನೋ ಈ ಸಂಸ್ಥೆಯ ಶಾಂತಿ ಪಾಲಕರು ಪ್ರಪಂಚಕ್ಕೆ ಸಾರಿದರು. ಆದರೆ ಈ ಸಂಸ್ಥೆಯಲ್ಲಿಯ "ಪಂಚಮಹಾರಾಷ್ಟ್ರ"ಗಳೆಂದು ಜಂಭ ಕೊಚ್ಚಿಕೊಳ್ಳುವ, ಅಮೇರಿಕ, ಬ್ರಿಟನ್, ಫ್ರಾನ್ಸ್, ಚೀನ (ದೇಶಭ್ರಷ್ಟನಾದ ರಾಷ್ಟ್ರೀಯ ಚೀನ, ಮತ್ತೆ! ಚೀನ ಪ್ರಜಾರಾಜ್ಯವಲ್ಲ), ರಷ್ಯಾ ಇವೇ ಕೂಡಿಕೊಂಡು ಈ ಹೊಸ ಸಂಸ್ಥೆಯ ಹೆಸರನ್ನಳಿಸುವಂತೆ ತಮ್ಮ ಚಟುವಟಿಕೆಗಳನ್ನು ನಡೆಸಿವೆ. ತಮ್ಮ ಅಸ್ತಿತ್ವ, ತಮ್ಮ ವಸಾಹತುಗಳು, ತಮ್ಮ ಹಿತಸಂಬಂಧ ಇವು ಬಂದರೆ, ಈ ರಾಷ್ಟ್ರಗಳೆಲ್ಲಾ ಒಂದಾಗಿ ನ್ಯಾಯ-ನೀತಿ-ತತ್ವಗಳನ್ನು ಬದಿಗಿರಿಸಿ ತಮ್ಮ ಹಿತ ಸಾಧಿಸಿಕೊಳ್ಳುತ್ತಿವೆ. ಇವುಗಳಿಗೆ ಅಡ್ಡ ಬರುವವರು ಯಾರೇ ಇದ್ದರೂ ಅವರ ಬೇಡಿಕೆ ಎಷ್ಟೇ ನ್ಯಾಯವಾದುದಿದ್ದರೂ ಅದನ್ನು ಮೂಲೆಗೊತ್ತುತ್ತಿರುವದನ್ನು ಈ ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಆಗಾಗ ನಡೆಯುವ ಕಾರ್ಯಕಲಾಪಗಳಿಂದ ಅರಿತುಕೊಳ್ಳಬಹುದು.

ಮೊನ್ನೆ ನ್ಯೂಯಾರ್ಕದಲ್ಲಿ ನಡೆದ ಏಳನೇ ವರ್ಷದ ಮೊದಲನೇ ಅಧಿವೇಶನವಂತೂ ಈ ಸಂಸ್ಥೆಯ ಒಳಗುಟ್ಟನ್ನು ಬಹಿರಂಗಕ್ಕೆತರುವಂತಾಯಿತು. ಈ ಅಧಿವೇಶನದಲ್ಲಿ, ಇಂದು ಪ್ರಪಂಚದ ಎಲ್ಲಾ ರಾಷ್ಟ್ರಗಳ ತಲೆತುಂಬ ಹಚ್ಚಿದ ಮಹತ್ವದ ಪ್ರಶ್ನೆಗಳು ಮುಂದೆ ಬಂದಿದ್ದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ:—

೧. ಕೊರಿಯಾ ಯುದ್ಧ ಸಮಾಪ್ತಿ, ೨ ದಕ್ಷಿಣ ಆಫ್ರಿಕೆಯ ವರ್ಣದ್ವೇಷ ಕಾಯಿದೆಯ ವಿರುದ್ಧ ದೂರು, ೩. ಟ್ಯೂನಿಸಿಯಾ-ಮೊರೋಕ್ಕೋಗಳ ಸ್ವಾತಂತ್ರ್ಯಕ್ಕಾಗಿ ಮನವಿ, ೪. ಕಾಶ್ಮೀರದ ಬಗ್ಗೆ ಪಾಕಿಸ್ತಾನದ ವಿರುದ್ಧ ಭಾರತ ಸರಕಾರವು ನಾಲ್ಕು ವರ್ಷಗಳ ಹಿಂದೆ ಸಲ್ಲಿಸಿರುವ ದೂರು, ಇವಾಗಿದ್ದವು.

ಈ ಪ್ರಶ್ನೆಗಳ ಬಗ್ಗೆ ಸಾಕಷ್ಟು ಚರ್ಚೆಯಾಯಿತೇನೋ ನಿಜ. ಆದರೆ ಇವುಗಳಲ್ಲಿ ಮೊದಲಿನ ಪ್ರಶ್ನೆ ಅಮೇರಿಕೆ ಮತ್ತು ರಷ್ಯಗಳಿಗೆ ಸಂಬಂಧಿಸಿದ್ದು. ಎರಡನೆಯದು ಫ್ರಾನ್ಸನ್ನು ನಡೆಸಿರುವ ಸುಲಿಗೆಯನ್ನು ತಡೆಯುವಂತಿತ್ತು. ಅಂದ ಮೇಲೆ ಇವೆಲ್ಲವುಗಳ ಬಗ್ಗೆ ಎಷ್ಟೇ ಚರ್ಚೆಯಾದರೂ ಈ ರಾಷ್ಟ್ರಗಳ ಪ್ರಭಾವವು ವಿಶ್ವಸಂಸ್ಥೆಯ ಮೇಲೆ ವಿಶೇಷವಾಗಿರುವದರಿಂದ ಈ ರಾಷ್ಟ್ರಗಳ ಒತ್ತೆಯಲ್ಲಿರುವ ಇತರ ಅನೇಕ ರಾಷ್ಟ್ರಗಳು ಇವು ಹೇಳಿದಂತೆ ಕುಣಿದವು. ಅದರ ಪರಿಣಾಮವೆಂದರೆ, ವಿಶ್ವಸಂಸ್ಥೆಯಂಥ ಜಾಗತಿಕ ಮಹಾ ಸಂಸ್ಥೆಯ ಕಣ್ಣೆದುರು ಟ್ಯೂನಿಸಿಯಾ, ಮೊರೋಕ್ಕೋ, ದಕ್ಷಿಣ ಆಫ್ರಿಕೆ, ಪೂರ್ವ ಆಫ್ರಿಕಾಗಳಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ವಸಾಹತುಗಾರರು ಅಲ್ಲಿಯ ಮೂಲ ನಿವಾಸಿಗಳನ್ನು ಹಿಂಡಿ ಹಿಪ್ಪೆ ಮಾಡುತ್ತಿರುವರಾದರೂ, ಅಟ್ಲಾಂಟಿಕ್ ಚಾರ್ಟರ್, ಶೋಷಣಾರಹಿತ ಸಮಾಜ, ಸಮಾನತೆ ಮೊದಲಾದ ಉದ್ಬುದ್ಧ ಮಾತುಗಳನ್ನಾಡುತ್ತಿರುವ ಈ ವಿಶ್ವಸಂಸ್ಥೆಯು ಅತ್ತ ಕಣ್ಣೆತ್ತಿ ಸಹ ನೋಡದೆ ಬ್ರಿಟಿಷರನ್ನೂ ಫ್ರೆಂಚರನ್ನೂ ತಮ್ಮ ಕೈಯಲ್ಲಿ ಸಿಕ್ಕಿರುವ ವಸಾಹತುಗಳನ್ನು ಸುಲಿಯಲು ಬಿಟ್ಟುಬಿಡುತ್ತಿದೆ.

ಕಾಶ್ಮೀರ ಪ್ರಕರಣವೋ? ವಿಶ್ವಸಂಸ್ಥೆಯಲ್ಲಿ ಅದಕ್ಕೆ ನ್ಯಾಯ ನೀತಿಗಳ ತಳಹದಿಯನ್ನೇ ಕೊಟ್ಟಿರದೆ ಬ್ರಿಟನ್ ಮತ್ತು ಅಮೇರಿಕಗಳ ಸಾಮ್ರಾಜ್ಯ ರಕ್ಷಣೆಯ ದೃಷ್ಟಿಯಿಂದ ಹೇಗೆ ಮಾಡಿದರೆ ತಮಗನುಕೂಲವಾದೀತು? ಎಂದು ಯೋಚಿಸಿ ಭಾರತಕ್ಕೆ ಅನ್ಯಾಯವಾದರೂ ಪರವಿಲ್ಲ, ಪಾಕಿಸ್ತಾನವನ್ನು ಎತ್ತಿ ಹಿಡಿಯಬೇಕೆಂದು, ಪಾಕಿಸ್ತಾನವು ಕಾಶ್ಮೀರದ ಮೇಲೆ ದಾಳಿ, ಸುಲಿಗೆ, ಅತ್ಯಾಚಾರಗಳನ್ನು ಮಾಡಿದ್ದರೂ ಅದಕ್ಕೆ ಭಾರತದ ಸಮಾನ ಸ್ಥಾನವನ್ನೇ ಕೊಡಲಾಗಿದೆ. ಅಂದ ಮೇಲೆ ಈ ಅನ್ಯಾಯ ಹೇಗೆ ಬಗೆಹರಿದೀತು?

ಈ ರೀತಿಯಲ್ಲಿ ಸಾಗಿರುವ ವಿಶ್ವಸಂಸ್ಥೆಯು ಹೀಗೇ ಹಲಕೆಲವು ದಿನ ಜೀವ ಹಿಡಿದುಕೊಂಡು ಉಳಿಯಬಹುದು. ಅನಂತರ ಇದೊಂದು ಅಮೇರಿಕೆಯ ವಿದೇಶವಿಭಾಗವನ್ನಾದರೂ ರೂಪಾಂತರ ಹೊಂದಬಹುದು ಇಲ್ಲವೆ ಸಂಪೂರ್ಣವಾಗಿ ಅಂತರ್ಧಾನವನ್ನಾದರೂ ಹೊಂದಬಹುದು. ನ್ಯಾಯ ನೀತಿಗಳ ತಳಹದಿಯೇ ಇಲ್ಲದ ಸಂಸ್ಥೆ ಬಹು ಕಾಲ ಹೇಗೆ ಬಾಳೀತು?

ಟ್ಯೂನಿಸಿಯಾದಲ್ಲಿ

ತಾವು ಸಿದ್ಧಪಡಿಸಿದ ಯೋಜನೆಗೆ ಟ್ಯೂನಿಸಿಯಾದ ಬೇಯು ಅಂಕಿತ ಮುದ್ರೆ ಹಾಕದಿದ್ದರೆ ಅವನನ್ನು ಪದಚ್ಯುತ ಮಾಡಬೇಕೆಂದು ಫ್ರೆಂಚ ಸರಕಾರವು ನಿರ್ಧರಿಸಿ ಆ ಪ್ರಕಾರ ಅವನಿಗೆ ಹೆದರಿಕೆಯನ್ನು ಹಾಕಿದ್ದರಿಂದ ಬೇಯು ಈಗ ಫ್ರೆಂಚರು ಸಿದ್ಧಪಡಿಸಿರುವ ಸುಧಾರಣಾ ಯೋಜನೆಗಳಲ್ಲಿಯ ಕೆಲವು ಸೂಚನೆಗಳಿಗೆ ತನ್ನ ಅಂಕಿತ ಮುದ್ರೆ ಹಾಕಿದ್ದಾನೆ.

ಆದರೆ ಟ್ಯೂನಿಸಿಯಾದ ಜನತೆಯ ಆಂದೋಲನ ಮಾತ್ರ ದಿನದಿನಕ್ಕೆ ಉಗ್ರವಾಗುತ್ತ ನಡೆದಿದೆ. ಫ್ರೆಂಚರ ದಬ್ಬಾಳಿಕೆಯಿಂದ ಪ್ರಕ್ಷುಬ್ಧವಾದ ಜನಸಮುದಾಯವು ವಿದ್ಯುಜ್ಜನಕಗಳನ್ನು ಉಧ್ವಸ್ತಗೊಳಿಸುತ್ತ ಸಾಗಿದ್ದು ದಿನವಾಗ್ಗೆಯಂತೆ ಫ್ರೆಂಚರ ವಿರುದ್ಧವಿರುವ ವಿರೋಧವು ಆಫ್ರಿಕಾಖಂಡದ ಪ್ಲೆಯೂ ಅರಬ ಪ್ರದೇಶಗಳಲ್ಲಿಯೂ ಹರಡುತ್ತ ಸಾಗಿದೆ.

ಫ್ರೆಂಚ್ ಮಂತ್ರಿಮಂಡಳದ ರಾಜಿನಾಮೆ:

ಫ್ರಾನ್ಸವು ತನ್ನ ವಸಾಹತುಗಳನ್ನು ಉಳಿಸಿಕೊಳ್ಳಲು ಇಷ್ಟೆಲ್ಲ ಕ್ರೂರ ದಬ್ಬಾಳಿಕೆ ನಡೆಸಿ ತನ್ನ ಬಲಪ್ರದರ್ಶನ ಮಾಡುತ್ತಿರುವದಾದರೂ ಅದರ ಯಾವದೇ ಮಂತ್ರಿಮಂಡಳವು ೬ ತಿಂಗಳು ಕೂಡ ಕಾಲೂರಿ ನಿಲ್ಲದಂತಾಗಿದೆ. ಎರಡು ವರ್ಷಗಳಲ್ಲಿ ೧೬ ಸಾರಿ ಬದಲಾಗಿ ೧೭ನೇ ಮಂತ್ರಿಮಂಡಳವು ಪಾರ್ಲಿಮೆಂಟಿನಲ್ಲಿ ತನ್ನ ಬೆಂಬಲ ಕಳೆದುಕೊಂಡಿದ್ದರಿಂದ ರಾಜಿನಾಮೆ ಕೊಟ್ಟು ಹೊರಬೀಳಬೇಕಾಯಿತು. ಮುಖ್ಯಮಂತ್ರಿ ಪಿನೇ ಇವರು ರಾಜಿನಾಮೆ ಕೊಟ್ಟು ೮ ದಿನಗಳ ಮೇಲಾಗಿದ್ದರೂ ಇನ್ನೂ ಹೊಸ ಮಂತ್ರಿಮಂಡಳದ ರಚನೆ ಮಾಡುವದು ಯಾರಿಗೂ ಶಕ್ಯವಾಗಲಿಲ್ಲ. ಇದೀಗ ಡಿಗಾಲ ಪಕ್ಷದ ಮುಖಂಡರೊಬ್ಬರು ಮಂತ್ರಿಮಂಡಳ ರಚಿಸುವ ಸಾಹಸಕ್ಕೆ ಕೈಹಾಕಿದ್ದಾರೆ. ಹೀಗಿದೆ ಫ್ರಾನ್ಸದ ಆಂತರಿಕ ಪರಿಸ್ಥಿತಿ!

ಸ್ಟಾಲಿನ್ ಮತ್ತು ಕೊರಿಯಾ ಯುದ್ಧ ಸಮಾಪ್ತಿ.

ಸ್ಟಾಲಿನ್‌ರು ಮೊನ್ನೆ ನ್ಯೂಯಾರ್ಕ್ ಟಾಯಿಮ್ಸ್‌ದ ವಿಶೇಷ ಸುದ್ದಿಗಾರನಿಗಿತ್ತ ಸಂದರ್ಶನದಲ್ಲಿ, ಅಮೇರಿಕದ ನವನಿಯೋಜಿತ ಅಧ್ಯಕ್ಷರಾದ ಐಸೆನ್ ಹೋವರರೊಡನೆ ಮಾತುಕತೆಯಾಡಿದರೆ ಕೊರಿಯಾ ಶಾಂತಿಯೂ ಸ್ಥಾಪಿಸಬಹುದು. ಮತ್ತು ಅಮೇರಿಕ-ರಷ್ಯಾ ಇವೆರಡೂ ಸ್ನೇಹದಿಂದ ಇರಬಹುದೆಂದು ಹೇಳಿದ್ದರು. ಇದೊಂದು ಸೋಗಲಾಡಿತನವೆಂದು ಅಮೇರಿಕೆಯ ನವನಿಯೋಜಿತ ವಿದೇಶ ಮಂತ್ರಿಗಳಾದ ಮಿ. ಫಾಸ್ಟರ್ ಡಲೆಸ್‌ರು ಹೇಳಿದ್ದಾರೆ. ಇದಕ್ಕೆ ಉತ್ತರ ರೂಪದಲ್ಲಿ ಎಂಬಂತೆ ಚೀನದ ಮುಖ್ಯ ಮಂತ್ರಿ ಚೌ ಎನ್ ಲಾಯ್ ಇವರು ಕೊರಿಯಾದಲ್ಲಿ ಶಾಂತಿ ಸ್ಥಾಪನೆಯಾಗಬೇಕಾದರೆ ಚೀನ ರಷ್ಯಗಳು ಮುಂದೆ ಮಾಡಿರುವ ಕರಾರುಗಳ ಮೇಲೆ ಮಾತ್ರ ಸಾಧ್ಯ. ಬಂದೊಮ್ಮೆ ಅಮೇರಿಕೆಯು ಕೊರಿಯಾ ಯುದ್ಧವನ್ನು ಪ್ರಾರಂಭಿಸಿದರೆ ಮೂರನೇ ಮಹಾಯುದ್ಧ ಅನಿವಾರ್ಯ" ಎಂದು ಹೇಳಿದ್ದಾರೆ. ಹೀಗಾಗಿ ಈ ಘರ್ಷಣೆ ದಿನೇ ದಿನೇ ಉಗ್ರವಾಗುತ್ತಲೇ ಸಾಗಿದೆ.

ಇತ್ತ ಫಾರ್ಮೋಸಾದಲ್ಲಿ ಚಿಯಾಂಗ್ ಕೈಶೇಕರಿಗೆ ಅಮೇರಿಕೆಯು ಹೆಚ್ಚುಹೆಚ್ಚು ನೆರವನ್ನೀಯುತ್ತಿರುವದೂ ಕೊರಿಯಾ ರಂಗದಲ್ಲಿ ಯುದ್ಧದ ಪ್ರಖರತೆಯನ್ನು ಅಮೇರಿಕೆಯು ಹೆಚ್ಚಿಸಿದಾಗ ಚೀನದ ಮೂಲಭೂಮಿಯ ಮೇಲೆ ಚಿಯಾಂಗರ ದಳಗಳು ದಾಳಿ ಮಾಡುವ ಸಿದ್ಧತೆಯಲ್ಲಿವೆಯೆಂದೂ ಒಂದು ಸುದ್ದಿ ಹರಡಿದೆ.

ಕೊರಿಯಾ ರಣರಂಗದಲ್ಲಿ ಮಾತ್ರ ಚಿಕ್ಕ ಪುಟ್ಟ ಕಾಳಗಗಳು ಹಾಗೇ ನಡೆದಿವೆ. ಆದರೆ ಐಸೆನ್ ಹೋವರರು ಅಧಿಕಾರ ಸೂತ್ರ ವಹಿಸಿದ ಮೇಲೆ ಕೊರಿಯಾ ಯುದ್ಧವು ನಿರ್ಣಾಯಕ ಘಟ್ಟಕ್ಕೆ ಬರಬಹುದಾಗಿದೆ.

ಜೈ ಹಿಂದ್

The New Guardian of India Life Insurance Co., Ltd.

— HEAD OFFICE

Post Box No.- 149 Esplanade, MADRAS—1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT.

The New Gaurdian of India Life Insurance Co., Ltd. for COORG. Virajpet.

12-1 OR

To The Head Office, MADRAS.

॥ ಗಾಂಧೀವಾದವೇ ಜಗತ್ತಿನ ಶಾಂತಿಗೆ ಮಾರ್ಗ. ॥

ಮೌಲಾನ ಅಬುಲ್ ಕಲಂ ಆಜ಼ಾದರ ಭಾಷಣ.

ಹೊಸ ಡಿಲ್ಲಿಯಲ್ಲಿ ತಾ ೩ರಲ್ಲಿ ನಡೆದ ರಾಷ್ಟ್ರೀಯ ಸಂಪತ್ತು ಮತ್ತು ಶಾಸ್ತ್ರೀಯ ಪರಿಶೋಧನಾ ಸಮ್ಮೇಳನದಲ್ಲಿ ಭಾಷಣ ಮಾಡುತ್ತ ಕೇಂದ್ರ ಸರಕಾರದ ವಿದ್ಯಾಮಂತ್ರಿಗಳಾದ ಮೌಲಾನಾ ಅಬುಲ್ ಕಲಂ ಆಜ಼ಾದರವರು ಮಾಡಿದ ಬೋಧಪ್ರದ ಭಾಷಣದ ಸಾರಾಂಶವಿದು

ಗಾಂಧೀಜಿಯವರ ಅಭಿಪ್ರಾಯಗಳ ಪರಿಶೀಲನೆಗಾಗಿ ಒಂದು ಸಮ್ಮೇಳನ ಸೇರುವ ಅಗತ್ಯವಿಲ್ಲದಿದ್ದರೂ, ಇಂದು ಜಗತ್ತಿನಲ್ಲಿ ಹಬ್ಬಿರುವ ಅಶಾಂತಿ, ಯುದ್ಧ ಕಾರ್ಮೋಡ ಹಾಗೂ ಮಾನವನ ಮನಸ್ಸಿನಲ್ಲಿರುವ ಯುದ್ಧಭಯದ ದೃಷ್ಟಿಯಿಂದ ಗಾಂಧೀಜಿಯವರ ತತ್ವಗಳ ಪರಿಶೀಲನೆ ಮಾಡಿ ಅನುಸರಿಸುವದು ಅತ್ಯಗತ್ಯವಾಗಿದೆ. ೧೯೫೧ರಲ್ಲಿ ಸಂಯುಕ್ತರಾಷ್ಟ್ರಸಂಘದ ವಿದ್ಯಾ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಪ್ರಥಮ ಸಭೆ ನಡೆದಾಗ ಗಾಂಧೀಜಿಯವರ ತತ್ವಗಳ ಪರಿಶೀಲನೆಯನ್ನು ಜಗತ್ ಶಾಂತಿಗಾಗಿ ಅವುಗಳನ್ನು ಸಪ್ರಯೋಗಿಸಬಹುದಾದ ಮಾರ್ಗ ತಿಳಿಯುವ ವಿಧಾನವನ್ನು ಆಲೋಚಿಸಲಾಯಿತು. ಇಂದು ಮಹಾತ್ಮಾಗಾಂಧಿಯವರ ಅಭಿಪ್ರಾಯಗಳು ಇಡೀ ಜಗತ್ತಿನ ಮುಂದಿದ್ದು ಆಧುನಿಕ ಮಾನವನ ಬೌದ್ಧಿಕ ಪರಂಪರೆಯಾಗಿ ಉಳಿದಿದೆ.

ಗಾಂಧೀಜಿಯವರ ತತ್ವಗಳನ್ನು ಜಾರಿಗೆ ತಂದು ಜಗತ್ ಶಾಂತಿ ಸ್ಥಾಪಿಸುವ ಕೆಲಸ ಸುಲಭವಲ್ಲ. ಹಿಂದಿನ ಕಾಲದಲ್ಲಿ ಯುದ್ಧಗಳು, ಅಶಾಂತಿಗಳು ನಡೆದು ಹೋಗುತ್ತಿದ್ದುವು. ಅವು ಕೇವಲ ಸ್ಥಳೀಯ ಸ್ವರೂಪದ ಪ್ರಾದೇಶಿಕ ಘಟನೆಗಳಾಗಿದ್ದವು. ಉದಾಹರಣೆಗೆ ಹಿಂದಿನ ಕಾಲದಲ್ಲಿ ಯುದ್ಧವು ಪ್ರಾರಂಭವಾಗಬೇಕಿದ್ದರೆ ಒಂದು ಜನಾಂಗವು ಮತ್ತೊಂದರ ಮೇಲೆ ಯುದ್ಧ ಹೂಡಿ ಅದನ್ನು ಪಡೆಯುತ್ತಿತ್ತು. ಒಂದು ದೇಶದಲ್ಲಿ ಆಹಾರ ಕಡಿಮೆಯಾಗಿದ್ದರೆ ಆಹಾರ ಇರುವ ದೇಶದ ಮೇಲೆ ಯುದ್ಧ ಹೂಡಿ ಆಹಾರ ದೋಚಿಕೊಳ್ಳುವುದು ಅಂದಿನ ಪದ್ಧತಿಯಾಗಿತ್ತು. ಆದರೆ ಇಂದು ವಿಜ್ಞಾನದ ಬಲದಿಂದಾಗಿ ಮಾನವನ ಈ ಪ್ರಾಥಮಿಕ ಅವಶ್ಯಕತೆಗಳನ್ನು ಯುದ್ಧ ಮಾಡದೆ ಒದಗಿಸಿಕೊಳ್ಳುವ ಸಾಧ್ಯತೆ ಇದೆ. ಪ್ರಕೃತಿಯ ಅನೇಕ ಗೂಢ ವಿಚಾರಗಳು ಮಾನವನ ಕರಗತವಾಗಿದ್ದು ಅವನು ಪರಸ್ಪರ ಹೊಂದಿಕೊಂಡು ಸಮೃದ್ಧಿಯಿಂದ ಬದುಕುವುದು ಸಾಧ್ಯವಿದೆ. ಆದರೆ ಈ ಜ್ಞಾನಸೌಹಾರ್ದತೆ ಇಂದು ನಮಗಿಲ್ಲದಾಗಿದೆ. ವಿಜ್ಞಾನವು ಮಾನವನ ಹಿತಕ್ಕಿರುವ ಬದಲು ವಿನಾಶಕ್ಕಾಗಿದೆ. ಪರಮಾಣು ಶಕ್ತಿಯನ್ನು ಕಂಡು ಹಿಡಿದಿದ್ದರೂ ಮಾನವನ ನಾಶದ ಕಾರ್ಯಕ್ಕೆ ಅದು ವಿನಿಯೋಗವಾಗಿದೆ. ವಯರ್‌ಲೆಸ್, ಟೆಲಿವಿಜನ್‌ಗಳ ಅನುಕೂಲತೆಯು, ಅವುಗಳಿಂದಾದ ಉಪಕಾರ, ಆವಿಷ್ಕಾರಗಳು ಯುದ್ಧಕ್ಕೆ ಉಪಯೋಗವಾಗುತ್ತಿವೆ. ಕ್ರಿಮಿಕೀಟಗಳ ಜ್ಞಾನವು ವಿಷ ಶಕ್ತಿಯ ಬಾಂಬುಗಳಿಗೆ ಅನುಮಾಡಿದೆ. ಆದ್ದರಿಂದ ಮಾನವನು ತನ್ನ ಜ್ಞಾನವನ್ನು ಕೇವಲ ತನ್ನೊಬ್ಬನ ಹಿತಕ್ಕಾಗಿ ಬಳಸದೆ ಇತರರ ಹಿತಕ್ಕೂ ಉಪಯೋಗಿಸುತ್ತಿರುವ ಕಾರಣ ಜಗತ್ತು ಅಶಾಂತಿಯ ಬೀಡಾಗಿದೆ.

ಈ ಶತಮಾನದ ಪೂರ್ವಾರ್ಧದಲ್ಲಿ ನಡೆದ ಯುದ್ಧ, ಶಾಂತಿಯ ಪ್ರಯತ್ನವು ಜೊತೆ ಜೊತೆಯಲ್ಲಿ ಸಾಗುತ್ತಿವೆ. ಇಂದು ಯುದ್ಧವೆಂದರೆ ಹಿಂದಿನಂತಲ್ಲ. ಒಂದೊಂದು ರಾಷ್ಟ್ರಕ್ಕೆ ಸಂಬಂಧಿಸುವ ಬದಲು ಜಗತ್ತಿಗೆ ಸಂಬಂಧಿಸುತ್ತದೆ. ಜಗತ್ತಿನ ಪ್ರಥಮ ಯುದ್ಧ ನಡೆಯಿತು. ಪ್ರಧಾನವಾಗಿ ಜರ್ಮನಿ, ರಷ್ಯಾಗಳ ನಡುವೆ ಅದು ಪ್ರಾರಂಭವಾದರೂ ಕ್ರಮೇಣ ಫ್ರಾನ್ಸ್, ಬ್ರಿಟನ್ ಮೊದಲಾದುವು ಸೇರಿ ಜಗತ್ತಿನ ಯುದ್ಧವಾಗಿ ಜರ್ಮನಿಯು ಸೋತಿತು. ಜಯ ಪಡೆದ ರಾಷ್ಟ್ರಗಳು ಇನ್ನು ಜಗತ್ತಿನಲ್ಲಿ ಶಾಂತಿ ಇನ್ನೂ ಶಾಂತಿಗೆ ಮಾರಕವಾಗಿದೆ. ಜರ್ಮನಿಯು ಹಿಟ್ಲರನನ್ನೇ ಇಂದು ಜಯ ಗಳಿಸಿದ ರಾಷ್ಟ್ರಗಳ ಮುಂದಾಳುಗಳು ಯುದ್ಧಕ್ಕೆ ಕಾರಣರು. ಗೋರಿಂಗ್, ರಿಬನ್ ಟ್ರಾಪ್, ಹಿಟ್ಲರ್ ಮೊದಲಾದವರು ಮಾನವತೆಯ ವಿರುದ್ಧ ಅಮಾನುಷ ಕೃತ್ಯ ನಡೆಸಿದರು ಎಂದು ಅವರನ್ನು ಶಿಕ್ಷಿಸುವ ಹಕ್ಕು ಯಾರಿಗೆ? ಪ್ರತೀಕಾರ ಬುದ್ಧಿಯಿಂದ ಶತ್ರುಗಳನ್ನು ಶಿಕ್ಷಿಸಬೇಕೆಂದು ಅವರ ಕೃತ್ಯವನ್ನು ಕೀಳಾಗಿ ನಿರ್ಣಯಿಸಿ ತೀರ್ಪು ನೀಡಿದವರು ಅವರ ಕಳ್ಳಿನಿಂದ ಶಿಕ್ಷೆ ವಿಧಿಸಬೇಕೆಂದಾಗ ಎಲ್ಲಿಯೂ ಸ್ವಂತಿಕೆಯ ಯುದ್ಧದಲ್ಲಿ ಗೆದ್ದವರ ಕೈಗಳೇ ನ್ಯಾಯವಾಗಿದ್ದವು.

ಜಪಾನಿನ ಹಿರೋಷಿಮಾ, ನಾಗಸಾಕಿಗಳ ಮೇಲೆ ಅಣುಬಾಂಬು ಹಾಕಿದಾಗ ನಿರಾಶ್ರಿತರಾಯನ್ನು ನಿರ್ಧರಿಸಿದ ವರ್ಸೇಲ್ಸ್ ಒಪ್ಪಂದ ಮಾಡಿದಾಗಲೂ ಅದರ ಶರತ್ತು ಪ್ರಕಾರ ಜರ್ಮನಿಯು ದಂಡ ಕಟ್ಟಬೇಕಾಯಿತು. ಜರ್ಮನಿಗೆ ಹಿಟ್ಲರನಂತಹ ನಾಯಕನು ಹುಟ್ಟುವುದು ಯುದ್ಧದಂತೆಯೇ ನಿಶ್ಚಯ. ಯುದ್ಧವು ನಾಗರಿಕ ಸಮಾಜದ ನಾಶದ ಪ್ರತಿಕಾರದ್ದು ತೋರುತ್ತದೆ. ಪ್ರಥಮ ಯುದ್ಧದಲ್ಲೂ ಜರ್ಮನಿಯು ನಾಶವಾಗಿ ಹಿಟ್ಲರನ ಪತನವಾಯಿತು. ಜಗತ್ತಿಗೆ ಶಾಂತಿಯನ್ನು ತರುವ ರಾಷ್ಟ್ರಸಂಘ ಸಭೆ ನಿರ್ಮಾಣವಾಯಿತು. ಸಂಯುಕ್ತ ರಾಷ್ಟ್ರ ಸಂಘ.

ಪ್ರಥಮ ಜಗತ್ತಿನ ಯುದ್ಧದಲ್ಲಿ ಜರ್ಮನಿಯು ಸೋತ ಬಳಿಕ ಯುದ್ಧ ನಷ್ಟ ಪರಿಹಾರ ದಂಡ ಮತ್ತಿತರ ಶಿಕ್ಷೆಗಳು ಹೇಗೆ ವರ್ಸೇಲ್ಸ್ ಒಪ್ಪಂದವನ್ನು ನಿರ್ಧರಿಸಿದವಾಗಿ ಮಾಡಿದವೋ ಅದೇ ರೀತಿ ದ್ವಿತೀಯ ಯುದ್ಧದ ನಂತರ ನ್ಯೂರೆಂಬರ್ಗ್ ವಿಚಾರಣೆ ಹಾಗೂ ಜರ್ಮನಿಯ ಮುಂದಾಳುಗಳ ಜನರ ಕೇಸ್, ದಂಗನು ನಡೆಸಿ ಮೇಲೆ ಬಾಂಬು ಹಾಕಿತೆಂದು ಆರೋಪಿಸಲಾಯಿತು. ಅದರೆ ಮಿತ್ರರಾಷ್ಟ್ರಗಳು ಜರ್ಮನಿಯ ನಗರಗಳ ಮೇಲೆ ಬಾಂಬಿನ ಮಳೆಯನ್ನು ಹಾಕದಿಲ್ಲವೆ? ಹಿರೋಷಿಮಾ ನಾಗಸಾಕಿಯವರು ಯುದ್ಧಕ್ಕೆ ಕಾರಣರೇನು? ಅವರ ಮೇಲೆ ಪರಮಾಣು ಬಾಂಬನ್ನು ಹಾಕಿ ಮಾನವ ನಾಶ ಮಾಡಿದವರು ಶಿಕ್ಷಾರ್ಹರಲ್ಲವೆ? ಪ್ರಥಮ ಯುದ್ಧವು ದ್ವಿತೀಯ ಯುದ್ಧಕ್ಕೆ ತಳಹದಿಯನ್ನು ಹಾಕಿತು. ದ್ವಿತೀಯ ಯುದ್ಧವು ಮೂರನೆ ಯುದ್ಧಕ್ಕೆ ಕಾರಣವಾಗುತ್ತಿದೆ. ಈ ಮಾರ್ಗವಾಗಿ ಮಾನವಗಣ ಎಷ್ಟು ಕಾಲ ಎಲ್ಲಿಗೆ ಮುಟ್ಟಬಹುದು?

ಇಂದಿನ ಪರಿಸ್ಥಿತಿಯಲ್ಲಿ ಜಗತ್ತಿಗೆ ಮಾರ್ಗದರ್ಶನಕ್ಕಾಗಿ ಸಂಯುಕ್ತರಾಷ್ಟ್ರ ಸಂಘ ಇರುವುದಾಗಿದೆ ಆದರೆ ಅದು ತನ್ನ ಕರ್ತವ್ಯವನ್ನು ಸರಿಯಾಗಿ ಮಾಡಲಾರದಾಗಿದೆ. ಆದರೆ ಒಳ್ಳೆಯ ಮಾನವತೆಗೆ ಆಶಾಜ್ಯೋತಿಯಾಗಿ ಸಂಯುಕ್ತರಾಷ್ಟ್ರ ಸಂಘವೇ ಇರುವುದಾಗಿದೆ. ಸಂಯುಕ್ತರಾಷ್ಟ್ರ ಸಂಘದ ಸದಸ್ಯರು ಆ ಸಂಘದ ತೀರ್ಮಾನಗಳಿಗೆ ತಲೆಬಾಗಿ ವರ್ತಿಸದಿದ್ದರೆ ಮತ್ತು ರಾಷ್ಟ್ರ ಸಂಘವು ನಿರ್ಧರಿಸಿದ ನಿರ್ಣಯಗಳನ್ನು ಮೀರಿ ನಡೆದರೆ ಆ ಸಂಘದಿಂದ ಪ್ರಯೋಜನವಾಗಲಾರದು.

ನ್ಯಾಯವನ್ನು ಪರಿಶೀಲಿಸಿ ತಿಳಿದು ಅದರಂತೆ ವರ್ತಿಸುವುದೇ ಗಾಂಧೀಜಿಯವರ ಮತ. ಗಾಂಧೀಜಿಯವರ ಅಭಿಪ್ರಾಯದಲ್ಲಿ ಸತ್ಯ ಮತ್ತು ನ್ಯಾಯಗಳು ಮಾತ್ರವಲ್ಲ ಅವುಗಳನ್ನು ಸಾಧಿಸುವ ಮಾರ್ಗವೂ ಸತ್ಯ ಮತ್ತು ನ್ಯಾಯದಿಂದ ಕೂಡಿರಬೇಕು. ಆದ್ದರಿಂದ ಇಂದಿನ ಜಗತ್ತಿಗೆ ಶಾಂತಿ ಸವ್ಯವಸ್ಥೆ ಬೇಕಿದ್ದರೆ ಗಾಂಧೀಜಿಯವರ ತತ್ವವನ್ನು ಅನುಸರಿಸದೆ ಬೇರೆ ಮಾರ್ಗವಿಲ್ಲ. ಹಿಂಸೆ ಮತ್ತು ದ್ವೇಷಗಳು ಯಾವ ಪ್ರಶ್ನೆಯನ್ನು ಬಗೆಹರಿಸಲಾರವು. ದ್ವೇಷಕ್ಕೆ ಪ್ರತೀಕಾರ ಮಾಡಿದರೆ ಆ ದ್ವೇಷ ಬೆಳೆಯುವುದೇ ನಿಜವಾದ ಪರಿಣಾಮವಾದೀತು. ಜಗತ್ತಿನ ಚರಿತ್ರೆಯು ಗಾಂಧೀಜಿಯವರ ತತ್ವಗಳ ಬಗೆಗೆ ಸಾಕ್ಷಿಯನ್ನು ಕೊಡುತ್ತದೆ. ನಿಜವಾಗಿಯೂ ಗಾಂಧೀಜಿಯವರ ತತ್ವಗಳು ಜಗತ್ತಿಗೆ ಹೊಸವಾದುವಲ್ಲ. ಅವರ ಅವುಗಳನ್ನು ಆಚರಣೆಯಲ್ಲಿ ತಂದು ಮಾನವೀಯತೆ ಮಂದಿರದ ಕಾಲದ ಸಮಸ್ಯೆಗಳಲ್ಲಿ ಅನ್ವಯಿಸಿದವರು. ಪ್ರತಿಯೊಂದರಲ್ಲೂ ಕೇವಲ ತಾತ್ವಿಕವಾಗಿ ಮಾತ್ರವಲ್ಲ, ಕಾರ್ಯರೂಪದಲ್ಲಿಯೂ ಅಹಿಂಸೆಯ ಸಾಧ್ಯತೆಯನ್ನು ತೋರಿಸಿದವರು. ಅವರ ಜೀವನವೇ ಅಹಿಂಸೆಯ ಪ್ರಯೋಗವಾಗಿತ್ತು. ಭಾರತ ಸ್ವತಂತ್ರವಾದುದು ಜಗತ್ತಿನ ಸ್ವಾತಂತ್ರ್ಯ ಮಾರ್ಗವನ್ನು ತೋರಿ ಜಗತ್ತಿನ ಶಾಂತಿ ಭಾವನೆಗೆ ಹೊಸ ದೃಷ್ಟಿಯನ್ನು ಕೊಟ್ಟಿದೆ.

ಅನೇಕ ಯುದ್ಧಗಳಿಂದ ಶಾಂತಿ ಸ್ಥಾಪನೆಯಾಗದು. ಗಾಂಧೀಜಿಗೆ ಮೊದಲೇ ಅನೇಕ ಮಹಾತ್ಮರು ಶಾಂತಿಗಾಗಿ ಬೇರೆ ಬೇರೆ ಮಾರ್ಗ ಅನುಸರಿಸಬೇಕೆಂದು ತಿಳಿಸಿದ್ದರು. ಗಾಂಧೀಜಿಯವರು ಅಹಿಂಸೆಯನ್ನು ಯಾವುದೇ ಶಸ್ತ್ರಗಳ ನೆರವಿಲ್ಲದೆ ಪ್ರೀತಿಯಿಂದ ಎದುರಿಸುವ ಮಾರ್ಗವನ್ನು ಮಾನವಗಣದ ಮುಂದಿಟ್ಟರು. ಮಾನವಗಣವು ಅದನ್ನು ಉಪಯೋಗಿಸಿದರೆ ಜಗತ್ತಿನಲ್ಲಿ ಶಾಂತಿ, ಸಮೃದ್ಧಿಗಳು ಸ್ಥಾಪಿತವಾಗಬೇಕಾದರೆ ಈ ಮಾರ್ಗ ವಿನಾ ಬೇರಿಲ್ಲ.

೧೯೨೦ರಿಂದ ಹಿಡಿದು ತಮ್ಮ ಜೀವನದಾಂತ್ಯದ ವರೆಗೆ ಗಾಂಧೀಜಿಯವರ ಜೊತೆಯಲ್ಲಿ ಕೆಲಸ ಮಾಡುವ ಸೌಭಾಗ್ಯವು ನನ್ನದಾಗಿತ್ತು. ಅಹಿಂಸೆಯ ಬಗ್ಗೆ ಅವರಿಗಿದ್ದ ಆತ್ಮವಿಶ್ವಾಸವು ಅಚಲವಾಗಿತ್ತು. ಅಹಿಂಸೆಯೇ ಅವರಿಗೆ ಸತ್ಯ ನಿತ್ಯ ವಸ್ತುವಾಗಿತ್ತು. ಎರಡು ಘಟನೆಗಳು ನನ್ನ ನೆನಪಿಗೆ ಬರುತ್ತವೆ. ದ್ವಿತೀಯ ಮಹಾ ಯುದ್ಧ ಪ್ರಾರಂಭವಾದಾಗ ಅವರ ಹೃದಯವು ದುಃಖಭಾರದಿಂದ ಪರಿತಪಿಸುತ್ತಿತ್ತು. ಬ್ರಿಟನ್

(ಐದನೇ ಪುಟ ನೋಡಿ)



ಕೊಡಗು

ತಾ ೯-೧-೧೯೫೩ನೇ ಶುಕ್ರವಾರ

ಬತ್ತದ ಬೆಲೆ ಮತ್ತು ಸಾಗಿಸುವಿಕೆ.

ಈ ವರ್ಷ ಬತ್ತದ ಬೆಲೆಯು ಕಳೆದ ವರ್ಷಕ್ಕಿಂತಾ ರೂಪಾಯಿ ಅರಷ್ಟು ಹೆಚ್ಚಿದೆಯೆನ್ನಬಹುದು. ೧೫ ಬಳ್ಳಿಯ ಅಥವಾ ೧೨೦೦ ಸೇರಿನ ಒಂದು ಗಾಡಿ ಜೀರಿಗೆ ಸಣ್ಣಬತ್ತಕ್ಕೆ ರೂ. ೩೭೨/-, ಕೊಯಮುತ್ತೂರು ಸಣ್ಣಬತ್ತ ರೂ. ೨೯೯/-, ಬಿಳಿಯ ಕೆಂಬತ್ತಿ ಮತ್ತು ಮುಳ್ಳು ಬತ್ತಕ್ಕೆ ರೂ. ೨೧೦/-, ದೊಡ್ಡ ವಸ್ತ್ರ ಕರ್ಗ ಬತ್ತಕ್ಕೆ ರೂ. ೨೦೨/- ಕ್ರಯ ನಿಶ್ಚಯವಾಗಿದೆ. ಈ ಬೆಲೆಯು ರೈತನ ಕಣದಲ್ಲಿ ದೊರೆಯತಕ್ಕದ್ದಾಗಿದೆ. ರೈತನ ಕಣ ಎಲ್ಲಿಯೇ ಇರಲಿ, ಬತ್ತ ಕೊಂಡುಕೊಳ್ಳುವವರು ಈ ಬೆಲೆಯನ್ನು ಅವನಿಗೆ ಕೊಡಲೇಬೇಕು. ಕೆಲವು ಜನ ವ್ಯಾಪಾರಸ್ಥರು ನಿಮ್ಮ ಕಣಕ್ಕೆ ಪೇಟೆಯಿಂದ ಎಳೆಂಟು ಮೈಲು ದೂರವಿದೆಯೆಂದು ಅದರ ಬಾಡಿಗೆ ವಜಾ ಮಾಡಿಕೊಳ್ಳುತ್ತಿರುವರೆಂಬ ದೂರು ನಮಗೆ ಬಂದಿದೆ. ಯಾರೂ ಆ ರೀತಿ ರೈತನಿಗೆ ಮೋಸ ಮಾಡಲಿಕ್ಕೆ ಕೂಡದು. ಏಕೆಂದರೆ ರೈತನ ಕಣದಿಂದ ಪ್ರತಿ ಮೂರು ಮೈಲು ದೂರದಲ್ಲಿ ರಸ್ತೆ ಪಕ್ಕಗಳಲ್ಲಿ ಬತ್ತ ಸಂಗ್ರಹ ಕೇಂದ್ರಗಳನ್ನು ಸರಕಾರವು ನಿಶ್ಚೈಸಿದೆ. ಆ ಕೇಂದ್ರಗಳಿಗೆ ಬತ್ತ ಸಾಗಿಸುವ ಖರ್ಚನ್ನು ಮೈಲಿಗೆ ೦-೧೨-೦ ಪ್ರಕಾರ ರೂ. ೪-೧೪-೦ರ ಮಿತಿಗೊಳಪಟ್ಟು ಸರಕಾರವು ಪ್ರೊಕ್ಯೂರ್‌ಮೆಂಟ್ ಚಾರ್ಜೆಂದು ನಿಶ್ಚಯಿಸಿದೆ. ಅಲ್ಲದೆ ರೂ. ೫-೮-೦ಯನ್ನು ಗಾಡಿಗೆ ಸಬ್ ಏಜಂಟರ ಕಮಿಷನೆಂದು ಪ್ರತ್ಯೇಕ ಇಡಲಾಗಿದೆ. ಸರಕಾರವು ನಿಶ್ಚಯಿಸಿರುವ ಬತ್ತ ಕೇಂದ್ರಗಳಿಗೆ ರೈತನು ತನ್ನ ಬತ್ತವನ್ನು ತಾನೇ ಸಾಗಿಸಿ ತಂದು ಕೊಟ್ಟರೆ ಆತನಿಗೆ ಅದರ ಬತ್ತದ ಕ್ರಯದ ಜೊತೆಗೆ ರೂ. ೪-೧೪-೦ ಪ್ರೊಕ್ಯೂರ್‌ಮೆಂಟ್ ಚಾರ್ಜು ರೂ. ೫-೮-೦ ಕಮಿಷನೂ ಹೀಗೆ ರೂ. ೧೦-೬-೦ ಹೆಚ್ಚಿಗೆ ದೊರೆಯಬೇಕು. ಕೊಡಗಿನಿಂದ ಹೊರಗೆ ಕಳುಹಿಸುವ ಪ್ರತಿ ಒಂದು ಗಾಡಿ ಬತ್ತಕ್ಕೆ ರೂಪಾಯಿ ೨-೧೨-೦ ಬೇರೆ ಕಮಿಷನ್ ಇದೆ. ಇದು ಮಿಲ್ ಮಾಲೀಕರಿಗೂ, ಬೇರೆ ಚೀಫ್ ಏಜಂಟರಿಗೂ ದೊರೆಯುವದು. ಅದ್ದರಿಂದ ಯಾವ ರೈತರಾದರೂ ಕೂಡ ಏಜಂಟರ ಮಾತಿಗೆ ಮರುಳಾಗಿ ತಮ್ಮ ಕಷ್ಟಾರ್ಜಿತ ಬತ್ತದ ಬೆಲೆಯಲ್ಲಿ ನಷ್ಟ ಹೊಂದದಿರಲಿ.

ಮತ್ತೆ ಈ ವರ್ಷದ ಬತ್ತದ ಬೆಲೆಯ ವಿಚಾರ ಒಂದೆರಡು ಮಾತು ಬರೆಯಬೇಕು. ಬತ್ತದ ಬೆಲೆಯನ್ನು ಬಿಳಿಯ ಬತ್ತಕ್ಕೆ ಗಾಡಿಗೆ ರೂ. ೩೫೫/-ನಿಶ್ಚಯಿಸಬೇಕೆಂದು ನಾವು ಬರೆದಿದ್ದೆವು. ಕೊಡಗು ಸರಕಾರವು ಯೋಗ್ಯ ಅಂಕೆಸಂಕೆಗಳನ್ನು ಕೊಟ್ಟು ಪ್ರಯತ್ನಿಸಿದ್ದರೆ ಇಷ್ಟು ಬೆಲೆ ದೊರೆಯುವದು ಅಸಂಭವವಾಗಿರಲಿಲ್ಲ. ಮೈಸೂರಿನಲ್ಲಿಯೂ, ಮದ್ರಾಸಿನಲ್ಲಿಯೂ ಇದಕ್ಕಿಂತಾ ಸ್ವಲ್ಪ ಹೆಚ್ಚಿನ ಬೆಲೆಯೇ ಇದೆಯೆನ್ನಬಹುದು. ಹಾಗಿರುವಾಗ ಕೊಡಗಿನ ರೈತನಿಗೂ ಆ ಬೆಲೆ ದೊರೆಯಬೇಕಿದ್ದದ್ದು ನ್ಯಾಯವಿತ್ತು. ಮೇಲಾಗಿ ಈ ವರ್ಷ ಕೊಡಗಿನ ಬತ್ತದ ಬೆಳೆಯು ಬಹು ಕಡಿಮೆಯಾಗಿದೆ. ಕೊಡಗಿನ ಬಹಳ ಜನ ರೈತರಿಗೆ ಮಾರಾಟಮಾಡಲು ಬತ್ತವೇ ದೊರೆಯುವ ಪರಿಸ್ಥಿತಿ ಇರಬಹುದು. ಮಾರಾಟಕ್ಕಿರುವ ಕಿಂಚಿತ್ ಬತ್ತಕ್ಕಾದರೂ ಹೆಚ್ಚಿನ ಬೆಲೆ ಇದ್ದಿದ್ದರೆ ಸ್ವಲ್ಪ ಸಹಾಯದೊರೆತಂತಾಗುತ್ತಿತ್ತು.

ಇದರ ಜೊತೆಗೆ ಈಗ ಗ್ರಾಮದಿಂದ ಗ್ರಾಮಕ್ಕೆ ಅಕ್ಕಿ ಬತ್ತ ಸಾಗಿಸಕೂಡದೆಂಬ ನಿರ್ಬಂಧವನ್ನು ಪುನಹ ಹೇರಲಾಗಿದೆ. ಹಾಗೆ ಸಾಗಿಸಲು ವಿಶೇಷ ಪರ್ಮಿಟುಗಳನ್ನು ಸರಕಾರಿ ಅಧಿಕಾರಿಗಳಿಂದ ಪಡೆಯಬೇಕಾಗಿದೆ. ಎಲ್ಲೆಡೆಯಲ್ಲಿಯೂ ದಿನ ಕಳೆದಂತೆ ನಿಯಂತ್ರಣಗಳ ಹಿಡಿತವನ್ನು ಸಡಿಲುಮಾಡುತ್ತಿರುವಾಗ, ಕೇಂದ್ರ ಸರಕಾರವು ಕೂಡ ಕ್ರಮಶಃ ನಿಯಂತ್ರಣಗಳನ್ನು ಸಡಿಲುಗೊಳಿಸುವದೇ ತನ್ನ ನೀತಿಯೆಂದು ಸಾರಿ ಹೇಳುತ್ತಿರುವಾಗ ಕೊಡಗಿನಲ್ಲಿ ಸಡಿಲುಗೊಳಿಸಿದ್ದ ನಿಯಂತ್ರಣವನ್ನು ಬಿಗಿ ಮಾಡಿದ್ದು ಸರಿಯಲ್ಲ. ಇದರಿಂದ ಜನರ ಯಾರಿಗೂ ಹಿತವಿಲ್ಲ. ಕೆಲವು ಮಿಲ್ ಮಾಲೀಕರಿಗೆ ಇದರಿಂದ ಸಹಾಯವಾಗಬಹುದೇನೋ! ಹೇಗೂ ಇದು ಅನುಚಿತವಾದ ಖಾನೂನಾಗಿದೆ. ಇದನ್ನು ಸರಕಾರವು ಹಿಂತೆಗೆಯುವದು ಜನ ಹಿತದೃಷ್ಟಿಯಿಂದ ಅತ್ಯಾವಶ್ಯಕವಾಗಿದೆ.

ವರ್ತಮಾನ.

ಕೊಡಗಿನೊಳಗೆ ಅಕ್ಕಿ ಬತ್ತವನ್ನು ಗ್ರಾಮದಿಂದ ಗ್ರಾಮಕ್ಕೆ ಸಾಗಿಸಬಹುದೆಂದಿದ್ದ ಅನುಕೂಲತೆಯನ್ನು ರದ್ದು ಮಾಡಿ ಹಾಗೆ ಸಾಗಿಸಬೇಕಾದರೆ ರೇಷನಿಂಗ್ ಇನ್ಸ್‌ಪೆಕ್ಟರು, ಪಾರುಪತ್ತೆಗಾರರು ಇಲ್ಲವೇ ಮಿಲ್ ಇನ್ಸ್‌ಪೆಕ್ಟರಿಂದ ಪರ್ಮಿಟು ಪಡೆದೇ ತೀರಬೇಕೆಂದು ತಮ್ಮ ತಾ. ೨೭ರ ಹುಕುಮಿನಲ್ಲಿ ಚೀಫ್ ಕಮಿಷನರು ಪ್ರಕಟಿಸಿರುವರು.

ಎಕರೆಗೆ ೧೨,೧೫೦ ಪೌಂಡು ಬತ್ತ ಬೆಳೆಸಿ ಅಖಿಲ ಭಾರತ ಬಹುಮಾನವನ್ನು ಪಡೆದ ಶ್ರೀ ಜೆ. ಸಿ. ಸಂಗಯ್ಯನವರ. ತಾ. ೭ರಲ್ಲಿ ಮುಖ್ಯ ಮಂತ್ರಿ ಜವಾಹರಲಾಲ್ ನೆಹರೂರವರಿಂದ ಡೆಲ್ಲಿಯಲ್ಲಿ ಬಹುಮಾನವನ್ನು ಪಡೆದರು. ಆ ಕಾಲಕ್ಕೆ ಅವರಿಗೆ 'ಕೃಷಿ ಪಂಡಿತ' ಎಂಬ ಬಿರುದನ್ನು ಕೊಡಲಾಯಿತು. ಸಂಗಯ್ಯನವರು ಸ್ಥಾಪಿಸಿದ ಈ ದಾಖಲೆಯು ಜಗತ್ತಿಗೇ ಒಂದನೆಯದೆಂದು ಗೊತ್ತಾಗಿದೆ. ಜಗತ್ತಿನ ಯಾವ ರಾಷ್ಟ್ರದಲ್ಲೂ, ಯಾರೂ ಇಷ್ಟು ಹೆಚ್ಚು ಬತ್ತ ಬೆಳೆಸಿಲ್ಲವೆನ್ನಲಾಗಿದೆ.

ಕೊಡ್ಲಿಪೇಟೆ ನೋಟಿಫೈಡ್ ಏರಿಯಾದ ಆಶ್ರಯದಲ್ಲಿ ಜನವರಿ ೩೦ರಿಂದ ಫೆಬ್ರವರಿ ೭ರ ವರೆಗೆ ಜಾನುವಾರುಗಳ ಜಾತ್ರೆಯೂ, ತರಕಾರಿ, ಹಂಣು ಹಂಪಲು, ಕಸೂತಿ, ಮತ್ತು ಕೋಳಿಗಳ ಪ್ರದರ್ಶನವೂ ನಡೆಯುವದು.

ಕೊಡಗು ಸರಕಾರಿ ಕಾಲೇಜಿನ ಚರಿತ್ರೆ ಗ್ರೂಪಿನ ವಿದ್ಯಾರ್ಥಿಗಳು ತಾ. ೨೪ರಿಂದ ೨೭ರ ವರೆಗೆ ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಮೊದಲಾದೆಡೆ ಪ್ರವಾಸ ಮಾಡಿ ಬಂದರು.

ಕೊಡಗರಹಳ್ಳಿ ಗ್ರಾಮಸ್ಥರು ಶ್ರೀ ಬಿ. ಟಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಈ ತಾ. ೩ರಲ್ಲಿ ಸೇರಿ ರಾಮಮಂದಿರವನ್ನು ತೆರೆದಿರುವರು. ತಾ. ೫ರಿಂದ ವಯಸ್ಕ ಶಿಕ್ಷಣ ಶಾಲೆಯೊಂದನ್ನೂ ತೆರೆದಿರುವರು. ರಾಮಮಂದಿರದಲ್ಲಿ ಪ್ರತಿ ಶನಿವಾರ ಭಜನೆ ಕೀರ್ತನೆಗಳ ಏರ್ಪಾಡು ಮಾಡಲಾಗಿದೆ.

ತಾ. ೨೫-೧೨-೫೨ರಲ್ಲಿ ಅಮ್ಮತ್ತಿ ಬಿಳುಗುಂದ ಗ್ರಾಮದಲ್ಲಿ ವಯಸ್ಕರ ಶಿಕ್ಷಣ ಶಾಲೆಯು ಜ. ಹಬಿಬುಲ್ಲಾ ಖಾನ್ ಪೊಸ್ಸಿಯವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು.

ಶಿವರಾತ್ರಿಯ ಸಂದರ್ಭದಲ್ಲಿ ಶ್ರೀಮಂಗಲದ ಟಿ ಶೆಟ್ಟಿಗೇರಿ ಗ್ರಾಮದಲ್ಲಿರುವ ಸಿದ್ಧಾಶ್ರಮದಲ್ಲಿ ಶ್ರೀ ನಿರ್ಗುಣಾನಂದ ಸ್ವಾಮಿಯವರು ಅನ್ನಸಂತರ್ಪಣೆ, ಪೂಜೆ, ಪ್ರಾರ್ಥನೆಗಳ ಏರ್ಪಾಡು ಮಾಡುವರೆಂದು ತಿಳಿಸುತ್ತಾರೆ.

ಮೈಸೂರು ಡಿಸ್ಟ್ರಿಕ್ಟು ಕೃಷ್ಣರಾಜನಗರ ತಾಲ್ಲೂಕು ಹಂಪಾಪುರ ಗ್ರಾಮದಲ್ಲಿಯೂ ಮತ್ತು ಇದರ ಸುತ್ತುಮುತ್ತಲೂ ಇರುವ ಗ್ರಾಮಗಳಲ್ಲೂ ಕಾಲರಾ ರೋಗವಿರುವುದೆಂದು ಅಧಿಕೃತವಾಗಿ ತಿಳಿದು ಬಂದಿರುವದು. ಈ ಜಾಯಿಲೆಯು ಬತ್ತದ ಬೆಳೆಯನ್ನು ಕೊಯ್ಯಲು ಬಂದಿರತಕ್ಕ ಆಳುಗಳಿಂದ ಉಂಟಾಗಿದೆಯೆಂದು ತಿಳಿದು ಬರುವುದು. ಆದ್ದರಿಂದ ಈ ಪ್ರದೇಶಕ್ಕೆ ಹೋಗತಕ್ಕವರು, ಕಾಲರಾ ರೋಗವನ್ನು ತಡೆಗಟ್ಟತಕ್ಕ ಇನಾಕ್ಯುಲೇಷನ್ ಮಾಡಿಸಿಕೊಂಡನಂತರವೇ ಹೋಗಬೇಕೆಂದು ಕೊಡಗಿನ ಹೆಲ್ತ್ ಆಫೀಸರು ತಿಳಿಸುತ್ತಾರೆ.

ಕೊಡಗಿನ ಹೈಸ್ಕೂಲುಗಳ ನೇಶನಲ್ ಕೆಡೆಟ್ ಕೋರ್ ಕ್ಯಾಂಪು ಈ ವರ್ಷ ಮೈಸೂರಿನ ಇಬ್ಬಳೂರು ಎಂಬಲ್ಲಿ ನಡೆಯಿತು. ಸುಮಾರು ೩೫೦ ಕೇಡೆಟ್ಟುಗಳು ಭಾಗವಹಿಸಿದ್ದರು. ಕಡೇ ದಿನದ ಕೂಟದಂದು ಮೈಸೂರಿನ ನ್ಯಾಯಾಧೀಶರಾದ ಶ್ರೀ ಪಾಲೇಕಂಡ ಮೇದಪ್ಪನವರು ಹಿತವಾದಗಳನ್ನು ಹೇಳಿ ಸ್ಪರ್ಧೆಗಳಲ್ಲಿ ಬಹುಮಾನಿತರಾದವರಿಗೆ ಬಹುಮಾನಗಳನ್ನು ಕೊಟ್ಟರು.

ಕೊಡಗಿನ ರಿಸರ್ವ್ ಫಾರೆಸ್ಟುಗಳಲ್ಲಿ ಜಾನುವಾರುಗಳನ್ನು ಮೇಯಿಸಲು ಆಡು ಕುರಿಗಳಿಗೆ ಎರಡಾಣೆ, ದನಗಳಿಗೆ ನಾಲ್ಕಾಣೆ, ಎಮ್ಮೆ ಕೋಣಗಳಿಗೆ ಆರಾಣೆಯಂತೆ ಚಾರ್ಜು ಮಾಡುವರೆಂದು ತಿಳಿದು ಬಂದಿದೆ.

ಮಡಿಕೇರಿ ಪುರಸಭೆಯ ಪ್ರೆಸಿಡೆಂಟರಾಗಿದ್ದ ಈಗ ಕೊಡಗಿನ ಮಂತ್ರಿಗಳಾಗಿರುವ ಶ್ರೀ ಮಲ್ಲಪ್ಪನವರ ಭಾವಚಿತ್ರ ಅನಾವರಣವನ್ನು ಮಡಿಕೇರಿ ಪುರಸಭೆಯ ಕಛೇರಿಯಲ್ಲಿ ತಾ. ೨ರಲ್ಲಿ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರು ಮಾಡಿದರು.

ಬರುವ ಸ್ಕೂಲ್ ಫೈನಲ್ ಪರೀಕ್ಷೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ೯೬ ವಿದ್ಯಾರ್ಥಿಗಳಲ್ಲಿ ೮೧ ಜನರನ್ನೂ, ಪೊನ್ನಂಪೇಟೆ ಹೈಸ್ಕೂಲಿನ ೭೭ ರಲ್ಲಿ ೬೧ ಜನರನ್ನೂ, ಸಾಮೋಕ್ಲನ ೭೮ ವಿದ್ಯಾರ್ಥಿಗಳಲ್ಲಿ ೫೮ ಜನರನ್ನೂ ಆರಿಸಿರುವರು.

ಮೈಸೂರು ರಾಜಪ್ರಮುಖರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರವರು ದಕ್ಷಿಣ ಕನ್ನಡದ ತಮ್ಮ ಪ್ರವಾಸಕ್ಕೆ ಮಡಿಕೇರಿಗಾಗಿ ಹೋಗುವಾಗ ಅಂದರೆ ತಾರೀಕು ೩-೧-೧೯೫೩ರಲ್ಲಿ ಮಡಿಕೇರಿ ಪುರಸಭೆಯ ಅಧ್ಯಕ್ಷರು ಜಿಲ್ಲಾ ಮೇಜಿಸ್ಟ್ರೇಟ್ ಮೊದಲಾದವರು ಅವರನ್ನು ಸ್ವಾಗತಿಸಿದರು. ಮಂತ್ರಿಗಳು ಏರ್ಪಡಿಸಿದ್ದ ಉಪಹಾರವನ್ನು ಗೆಸ್ಟ್ ಕ್ವಾರ್ಟರ್ಸಿನಲ್ಲಿ ಸ್ವೀಕರಿಸಿ ಹೋದರು. ತಮ್ಮ ಪ್ರವಾಸವನ್ನು ಮುಗಿಸಿ ಹಿಂತಿರುಗುವಾಗಲೂ ಅವರನ್ನು ಎದುರುಗೊಳ್ಳಲಾಯಿತು. ಚೀಫ್ ಕಮಿಷನರಲ್ಲಿ ಫಲಹಾರ ಮುಗಿಸಿ ಅದೇ ದಿನ ಅಂದರೆ ತಾ. ೫ರಲ್ಲಿ ಅವರು ಹಿಂತೆರಳಿದರು.

ವಾಡಿಕೆಯಂತೆ ನಡೆಯತಕ್ಕ ಚುಂಚನಕಟ್ಟೆಯ ಜಾತ್ರೆಯು (ಮೈಸೂರು ಸೀಮೆಯಲ್ಲಿ) ಈ ವರ್ಷ ನಡೆಯುವದಿಲ್ಲ. ಇದಕ್ಕೆ ಕಾರಣ ಚುಂಚನಕಟ್ಟೆ ಮತ್ತು ಇದರ ಸಮೀಪದ ಗ್ರಾಮಗಳಲ್ಲಿ ಕಾಲರಾ ರೋಗವು ತೋರಿ ಬಂದಿರುವುದು. ಈ ಪ್ರದೇಶಕ್ಕೆ ಹೋಗಲು ಮೈಸೂರು ಸರಕಾರದ ನಿರ್ಬಂಧವಿರುವುದು. ಆದ್ದರಿಂದ ಈ ಪ್ರದೇಶಕ್ಕೆ ಕೊಡಗಿನ ಜನರು ಹೋಗಕೂಡದೆಂದು ತಿಳಿಸಲ್ಪಡುತ್ತದೆ.

ಕೊಡಗು ಶಾಸನ ಸಭೆಯ ಅಧ್ಯಕ್ಷರಾದ ಶ್ರೀ. ಬಿದ್ದಂಡ ಕುಶಾಲಪ್ಪನವರು ಮಡಿಕೇರಿ ಮಹದೇವಪೇಟೆಯಲ್ಲಿ ಸುಮಾರು ರೂ. ೭೦೦೦ ಖರ್ಚಿನಿಂದ ಒಂದು ಆಸ್ಪತ್ರೆಯನ್ನು ಧರ್ಮಾರ್ಥ ಕಟ್ಟಲು ಒಪ್ಪಿರುವರೆಂದು ತಿಳಿದುಬಂದಿದೆ.

ಜನವರಿ ತಾರೀಕು ೧೫ರ ಬದಲು ತಾ. ೧೪ ಮಕರ ಸಂಕ್ರಮಣಕ್ಕಾಗಿ ರಜಾ ದಿನವೆಂದು ಸರಕಾರ ಪ್ರಕಟಿಸಿದೆ.

ಕಳೆದ ಅಕ್ಟೋಬರ್ ತಿಂಗಳಲ್ಲಿ ನಡೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಶ್ರೀಗಳಾದ ಎಂ. ಎಂ. ಪೊನ್ನಪ್ಪ, ಎಂ. ಎ. ಹಸನಬ್ಬ, ಪಿ. ಕೆ. ಪೂವಯ್ಯ ಮತ್ತು ಎ. ಸಿ. ಮುತ್ತಮ್ಮ ಇವರು ತೇರ್ಗಡೆಯಾಗಿರುವರು.

ವಾಡಿಕೆಯಂತೆ ಈ ವರ್ಷವೂ ಶ್ರೀ ಸಿ. ಸಿ. ನಾಣೈಯ್ಯನವರ ಬಟ್ಲಿ ಹಾಕಿ ಪಂದ್ಯಾಟವು ಮಡಿಕೇರಿ ಹೈಸ್ಕೂಲಿನ ಆಶ್ರಯದಲ್ಲಿ ನಡೆಸಲ್ಪಡುವುದರಿಂದ ಈ ಪಂದ್ಯಾಟಗಳಿಗೆ ಸೇರಬಿಚ್ಛಿಸುವ ಟೀಮಿನವರು ತಮ್ಮ ೧೫ ಆಟಗಾರರ ಹೆಸರುಗಳೊಂದಿಗೆ ಪ್ರವೇಶ ಧನ ರೂ. ೮ನ್ನು ಸದರಿ ಶಾಲೆಯ ಹೆಡ್ಮಾಸ್ಟರವರಿಗೆ ಇದೇ ಮಾಹೆ ೧೬ನೇ ತಾರೀಕು ಮಧ್ಯಾಹ್ನದೊಳಗೆ ತಲಪುವಬೇಕಾಗಿ ಕೋರಿಕೆ. ಅದೇ ತಾರೀಕು ಮಧ್ಯಾಹ್ನ ಒಂದು ಗಂಟೆಗೆ ಟೈಸು ಡ್ರಾ ಮಾಡಿ ಪಂದ್ಯಾಟಗಳನ್ನು ಇದೇ ಮಾಹೆ ೨೦ರಲ್ಲಿ ಆರಂಭಿಸಬೇಕೆಂದು ತೀರ್ಮಾನಿಸಿದೆ.

ಕೇಂದ್ರ ಸರಕಾರದ ಉಪಗೃಹಸಚಿವರಾದ ಶ್ರೀ. ಬಿ. ದಾತಾರರವರು ತಾ. ೯ರ ಬೆಳಿಗೆ ಮಡಿಕೇರಿಗೆ ಬರುವರು. ಬೆಳಿಗೆ ೯-೩೦ ಗಂಟೆಗೆ ಕೌನ್ಸಿಲು ಸಭಾಂಗಣದಲ್ಲಿ ಸಾರ್ವಜನಿಕ ಬಿನ್ನವತ್ತಳೆಯುಕೊಡಲ್ಪಡುವದು. ಎರಡು ದಿನ ಕೊಡಗಿನ ವಿವಿಧ ಭಾಗಗಳನ್ನು ಸಂಚರಿಸಿ ತಾ. ೧೧ರಲ್ಲಿ ಹಿಂತೆರಳುವರು.

ಪೋಷಕ, ನಾಯಕ ಹಾಗೂ ಅಧ್ಯಾಪಕರ ಜವಾಬ್ದಾರಿ.

ಮಂಗಳೂರು ಸರಕಾರಿ ಕಾಲೇಜಿನ ಷಷ್ಠ್ಯಬ್ದೋತ್ಸವದ ಅಧ್ಯಕ್ಷಸ್ಥಾನ ವಹಿಸಿ ಭಾರತ ಸೇನಾಪತಿ ಜನರಲ್ ಕಾರ್ಯಪ್ಪನವರು ಮಾಡಿದ ಭಾಷಣದ ಸಾರಾಂಶ.

ಮೊದಲನೆಯದಾಗಿ ತನಗೆ ಯುವಕರೊಡನೆ ಬೆರೆತು ಮಾತನಾಡುವುದೆಂದರೆ ಬಹಳ ಆನಂದವೆಂದು ಹೇಳಿ ಜ. ಕಾರ್ಯಪ್ಪನವರು ಯುವಕರ ಮೇಲಿರುವ ಹೊಣೆಯನ್ನು ವಿವರಿಸಿದರು.

'ದೇಶದ ಸಂಪತ್ತೆಂದರೆ ಇಂದಿನ ಯುವಕರು. ಅವರೇ ನಾಳಿನ ಜನಾಂಗ. ಈಗ ಸ್ವಸ್ತಿವಚನದಲ್ಲಿ ಹೇಳಿದಂತೆ ನಿಮ್ಮಲ್ಲಿ ನಾಳೆ ಕೆಲವರು ಸೇನಾನಿಗಳು, ಮಂತ್ರಿಗಳು ಅಥವಾ ವಿವಿಧ ಕ್ಷೇತ್ರಗಳಲ್ಲಿನ ತಜ್ಞರಾಗಬಹುದು. ಆದುದರಿಂದ ನವಸಂವತ್ಸರಕ್ಕೆ ನಮ್ಮ ಕನಸಿನ ಭಾರತದ ನಿರ್ಮಾಣ ಮಾಡುವ ಜವಾಬ್ದಾರಿ ನಿಮ್ಮಲ್ಲಿದೆ.

'ಇಂದಿನ ಯುವಕರಲ್ಲಿ ಶಿಸ್ತಿನ ವಿಷಯದಲ್ಲಿ ಅಪವಾದವನ್ನು ನಾವು ಕೇಳುತ್ತೇವೆ. ಆದರೆ ನಾನು ಯುವಕರನ್ನು ದೂರುವುದಿಲ್ಲ. ಹಲವು ಕಾರಣಗಳಿಗಾಗಿ ಮುಷ್ಕರ ಇತ್ಯಾದಿ ಹೂಡುವ ಕೆಲವು ವಿದ್ಯಾರ್ಥಿಗಳಿದ್ದಾರೆ. ಆದರೆ ಇಂತಹ ಮುಷ್ಕರಗಳಿಂದೇನೂ ಜಗತ್ತಿನ ಪ್ರಗತಿಯಾಗುವುದಿಲ್ಲ.

'ಯುವಕರಿಂದ ಉಂಟಾಗುವ ಎಲ್ಲ ತೊಂದರೆಗಳಿಗೆ ನಾನು ಮೂವರನ್ನು ಹೊಣೆಗಾರರನ್ನಾಗಿ ಮಾಡುತ್ತೇನೆ. ಒಂದನೇ ತಂದೆ ತಾಯಿಗಳು, ಎರಡನೆ ಅಧ್ಯಾಪಕರು ಮತ್ತು ಮೂರನೇ ದೇಶದ ನಾಯಕರು. ತಂದೆ ತಾಯಿಗಳು ಮಕ್ಕಳ ಬೆಳವಣಿಗೆಗೆ ಸಾಕಷ್ಟು ಗಮನಕೊಡಬೇಕು. ಸ್ತ್ರೀಯರು ನಿಜವಾದ ರಾಷ್ಟ್ರ ನಿರ್ಮಾಣಕರೆಂದು ನನ್ನ ಮತ. ಅವರು ಉತ್ತಮ ಪತ್ನಿ ಮತ್ತು ಉತ್ತಮ ಮಾತೆಯರಾಗಬೇಕು. ಮಕ್ಕಳನ್ನು ಅವರು ಸರಿಯಾದ ರೀತಿಯಲ್ಲಿ ಬೆಳೆಸಬೇಕು. ಇಂದಿನ ಪರಿಸ್ಥಿತಿ ತೃಪ್ತಿಕರವಾಗಿಲ್ಲ. ಆದರೆ ಇಂದಿನ ಯುವಕ ಯುವತಿಯರು ವಿದ್ಯಾಭ್ಯಾಸವನ್ನು ಪಡೆದು ನಿಜವಾದ ಮಾತೆಯರಾಗಿ ಮಕ್ಕಳ ಬೆಳವಣಿಗೆಯನ್ನೂ ರಾಷ್ಟ್ರ ನಿರ್ಮಾಣ ಕಾರ್ಯವನ್ನೂ ಸಾಧಿಸಬೇಕು. ಮೂರನೆಯದಾಗಿ ದೇಶದ ನಾಯಕರು, ಯುವಕರಿಗೆ ಹೊಣೆಗಾರರು. ಇಂದು ಎಲ್ಲಾ ಮುಖಂಡರು ತತ್ವ, ಸಂಸ್ಕೃತಿ, ಧರ್ಮ ಎಂದು ಮಾತನಾಡುತ್ತಾರೆ. ಆದರೆ ಅವರ ಕಾರ್ಯದಲ್ಲಿ ಯಾವುದೂ ಇರುವುದಿಲ್ಲ. ಈ ರೀತಿ ಬಾಯಿಯಲ್ಲಿ ಒಂದು ಕಾರ್ಯದಲ್ಲಿ ಒಂದು ಮಾಡಿದರೆ ಯುವಕರು ಸಹ ಹಾಗೆಯೇ ಅನುಸರಿಸುವ ತರವನ್ನು ದೂರುವುದೆಂತು? ಮೊದಲು ಮುಖಂಡರು ಯುವಕರಿಗೆ ಸರಿಯಾದ ಮಾರ್ಗದರ್ಶನ ಮಾಡಲಿ ಎಂದರು.

ಕಾಲೇಜಿನ ವಿಷಯ ಮಾತನಾಡುತ್ತ 'ಇಂದಿನ ಯುವಕ ಯುವತಿಯರು ಕಾಲೇಜಿನ ಸಮಯದ ಆಟೋಟಗಳಲ್ಲಿರುವುದಕ್ಕಿಂತಲೂ ಸಿನೆಮಾ ಇತ್ಯಾದಿ ಆಕರ್ಷಣಗಳ ಕಡೆ ಮನಸ್ಸಿಡಲು ಕಾರಣ. ವಿದ್ಯಾ ಖಾತೆಯ ಅಧಿಕಾರಿಗಳು ಪ್ರತಿ ಕಾಲೇಜಿನಲ್ಲಿ ಆಟಗಳಿಗೆ ಸರಿಯಾದ ವ್ಯವಸ್ಥೆ ಇದೆಯೇ ಎಂದು ನೋಡಬೇಕು. ಪ್ರಿನ್ಸಿಪಾಲ್ ಮತ್ತು ಪ್ರಾಧ್ಯಾಪಕರು ವಿದ್ಯಾರ್ಥಿಗಳೊಡನೆ ಆಟದಲ್ಲಿ ಭಾಗವಹಿಸಬೇಕು. ಸಮಾಜ ಕಾರ್ಯ, ಶಿಬಿರಗಳು ಸಂಚಾರ ಇತ್ಯಾದಿಗಳನ್ನು ನಡೆಸಬೇಕು. ನಿಜವಾಗಿ ವಿದ್ಯಾರ್ಥಿಗಳಲ್ಲಿ ದೋಷವಿಲ್ಲ. ನಾವು ಅವರನ್ನು ಸರಿಯಾದ ದಾರಿ ತೋರಿಸಿ ಮುನ್ನಡೆಯುವಂತೆ ಮಾಡಬೇಕು.

ನಿಮ್ಮ ಶಿಕ್ಷಣ ಆದೊಡನೆ ಸರಕಾರಿ ಕೆಲಸಕ್ಕಾಗಿ ಕಾತುರಪಡದಿರಿ. ನಿಮ್ಮ ಸ್ವಂತ ಪ್ರತಿಭೆಯಿಂದ ನಿಮ್ಮ ನಿಮ್ಮ ಕಾಲಿನ ಮೇಲೆ ನೀವು ನಿಲ್ಲಲು ಪ್ರಯತ್ನಿಸಿರಿ. ನಿಮ್ಮ ಯೋಗ್ಯತೆಯೇ ನಿಮ್ಮ ಜೀವನಕ್ಕೆ ಆಧಾರವಾಗಿರಲಿ. ಅಂದೇ ಭಾರತವು ಜಗತ್ತಿನ ಶ್ರೇಷ್ಠ ರಾಷ್ಟ್ರವಾಗಬಲ್ಲುದು.

ಮಿಲಿಟರಿಯ ಶಿಕ್ಷಣವನ್ನು ಯುವಕ ಯುವತಿಯರಿಗೆ ಕಡ್ಡಾಯವಾಗಿಯೂ ಅದನ್ನು ಕೊಡಬೇಕು. ಆ ಶಿಕ್ಷಣವು ನಿಜವಾಗಿಯೂ ಒಬ್ಬನನ್ನು ನಮ್ರನನ್ನಾಗಿ, ಸ್ವಾವಲಂಬಿ, ಚುರುಕು, ವಿಧೇಯ, ಸೇವಾಪರ, ಸಾಮೂಹಿಕ ವಿಚಾರವುಳ್ಳ ತ್ಯಾಗಿಯನ್ನಾಗಿ ಮಾಡಿ ಅವನನ್ನು ಉತ್ಕೃಷ್ಟ ನಾಗರಿಕನನ್ನಾಗಿ ಮಾರ್ಪಡಿಸುತ್ತದೆ. ಪ್ರತಿಯೊಂದು ಶಾಲಾ ಕಾಲೇಜುಗಳಲ್ಲಿ ಎನ್. ಸಿ. ಸಿ. ಸ್ಥಾಪಿತವಾಗಬೇಕು. ಯುವಕ ಯುವತಿಯರು ಅದರಲ್ಲಿ ತರಬೇತು ಹೊಂದಬೇಕು.

ಎಲ್ಲರೂ ಜಗತ್ತಿನ ನಾಗರಿಕರಾಗಿರಿ, ಕೇವಲ ಶಾಂತಿ, ಶಾಂತಿ ಎನ್ನದೆ ಶಾಂತಿಗಾಗಿ ದುಡಿಯಿರಿ. ಮಕ್ಕಳಸಂಕುಚಿತ ಭಾವನೆಯನ್ನು ನಾಶಗೊಳಿಸಿ ಅವರು ನಮ್ಮ ದೇಶದ ಅಲ್ಲ, ಇಡೀ ಜಗತ್ತಿನ ನಾಗರಿಕರು, ಜನಸೇವೆಯೇ ಜೀವನದ ಗುರಿ ಎಂದವರಿಗೆ ಕಲಿಸಿರಿ.

ನಮ್ಮ ದೇಶವು ಬಹಳ ವಿಸ್ತಾರವುಳ್ಳದ್ದು. ನಮ್ಮಲ್ಲಿಯೂ ಕಲೆ, ಸಂಸ್ಕೃತಿ, ತತ್ವಜ್ಞಾನ ಪ್ರಕೃತಿಸೌಂದರ್ಯ ಎಲ್ಲವೂ ಇದೆ. ಅದನ್ನು ತಿಳಿಯಲು ನಮ್ಮ ದೇಶದ ಸಂಚಾರವನ್ನು ಎಲ್ಲರನ್ನೂ ತಿಳಿದು ಅದರ ಬಗ್ಗೆ ಗೌರವಪಡಬೇಕು. ನಮ್ಮ ದೇಶದ ತತ್ವಗಳಿಗೆ ವಿಧೇಯರಾಗಿರಿ. ಪರಕೀಯರ ತತ್ವಗಳಿಗೆ ವಿಧೇಯರಾಗುವುದನ್ನು ಬಿಟ್ಟುಬಿಡಿರಿ. ನಾನು ಇಡೀ ಜಗತ್ತಿನ ಜನರನ್ನೇ ಪ್ರೀತಿಸುತ್ತೇನೆ. ಆದರೆ ನನ್ನ ದೇಶದವರನ್ನು ಇನ್ನೂ ಹೆಚ್ಚು ಪ್ರೀತಿಸುತ್ತೇನೆ. ನಮ್ಮ ದೇಶದ ತತ್ವಗಳಿಗೆ ಪ್ರಾಮಾಣಿಕರಾಗಿರಿ. ಆಗ ಖಂಡಿತವಾಗಿಯೂ ನಮ್ಮ ದೇಶವು ಇಡೀ ವಿಶ್ವಕ್ಕೆ ಮಾರ್ಗದರ್ಶನಮಾಡುವದು.

ಎನ್. ಪಿ. ಪೂವಯ್ಯ

ಮಹಾತ್ಮಾ ಗಾಂಧಿಯವರ ನಿರ್ವಾಣ ದಿನ ಮತ್ತು ಸರ್ವೋದಯ ಪಕ್ಷದ ಆಚರಣೆ.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ನಿರ್ವಾಣದ ಐದನೇ ವಾರ್ಷಿಕ ದಿನವು ತಾ. ೩೦–೧–೫೩ಕ್ಕೆ ಬೀಳುತ್ತದೆ. ಅವರ ನಿಧನದ ಪುಣ್ಯ ತಿಥಿಯನ್ನು ತಾ. ೩೦–೧–೫೩ರಿಂದ ತಾ. ೧೨–೨–೫೩ರ ತನಕದ 'ಸರ್ವೋದಯ ಪಕ್ಷ'ವನ್ನು ದೇಶದಲ್ಲೆಲ್ಲಾ ಹೇಗೆ ಆಚರಿಸಬೇಕೆಂಬುದನ್ನು ಸರ್ವ ಸೇವಾ ಸಂಘದವರು ಈ ಕೆಳಗಿನ ರೀತಿಯಲ್ಲಿ ಸೂಚಿಸುತ್ತಾರೆ. ಸರ್ವ ಸೇವಾ ಸಂಘದ ಠರಾವು ಹೀಗಿದೆ :

"ಗಾಂಧೀಜಿಯವರ ನಿಧನದ ದಿನಾರಭ್ಯ ಅವರ ರಕ್ಷಾವಿಸರ್ಜನೆಯ ದಿನದ ತನಕ ಜನವರಿ ೩೦ರಿಂದ ಫೆಬ್ರವರಿ ೧೨ರ ವರೆಗೆ ಪಕ್ಷವು 'ಸರ್ವೋದಯ ಪಕ್ಷ'ವೆಂದು ಪ್ರತಿ ವರ್ಷವೂ ಆಚರಿಸಲ್ಪಡುತ್ತದೆ. ಗತ ವರ್ಷದಲ್ಲಿ ಸರ್ವೋದಯದ ಯಾತ್ರೆಯನ್ನು ಮಾಡಿ ಒಂದು ನಿಶ್ಚಿತ ಕಾರ್ಯಕ್ರಮವನ್ನು ನೂರಾರು 'ಟೋಲಿ'ಗಳು ದೇಶದಲ್ಲೆಲ್ಲಾ ಪೂರೈಸಿದ್ದವು. ಅದೇ ರೀತಿಯಲ್ಲಿ ಮುಂದಿನ ಸರ್ವೋದಯ ಪಕ್ಷವನ್ನು ಹೆಚ್ಚು ಹೆಚ್ಚಿನ ಸಂಖ್ಯೆಯಲ್ಲಿ ಅಂಥಾ 'ಟೋಲಿ' –ಗುಂಪುಗಳು- ಪ್ರವಾಸ, ಸ್ವಚ್ಛತೆ, ಸೂತ್ರ ಯಜ್ಞ, ಸಾಮೂಹಿಕ ಪ್ರಾರ್ಥನೆ, ಇತ್ಯಾದಿಗಳಿಂದಲೂ, ಅವುಗಳೊಡನೆ ಭೂದಾನ ಯಜ್ಞ, ಕೇಂದ್ರಿತ ಉದ್ಯೋಗಗಳ ಬಹಿಷ್ಕಾರ, ಸರ್ವೋದಯ ಸಾಹಿತ್ಯ ಪ್ರಚಾರ ಕಾರ್ಯಗಳನ್ನೂ ಕೈಕೊಂಡು ಆಚರಿಸಬೇಕೆಂದು ಎಲ್ಲ ಸರ್ವೋದಯ ಸೇವಕರು ಮತ್ತು ಸರ್ವೋದಯ ವಿಚಾರಗಳನ್ನೂ ಒಪ್ಪಿಕೊಳ್ಳುವ ಸಹೋದರ ಸಹೋದರಿಯರಲ್ಲಿ ಈ ಸಂಘದ ವಿನಂತಿಯಿದೆ"

ಉಪರ್ಯುಕ್ತ ಕಾರ್ಯಕ್ರಮವನ್ನು ಪೂರೈಸುವುದಕ್ಕಾಗಿ ಕಾರ್ಯಕರ್ತರ ಚಿಕ್ಕ ಟೋಲಿ–ಜತೆಗಳು ಹಳ್ಳಿಗಳ ಸರ್ವೋದಯ ಯಾತ್ರೆಯನ್ನು ನಡೆಸಬೇಕೆಂದು ನಿಶ್ಚಯಿಸಲಾಗಿದೆ. ಅಂಥಾ ಜತೆಗಳಲ್ಲಿ ಭಾಗವಹಿಸಲಪೇಕ್ಷಿಸುವವರು ತಾ. ೧೫ರೊಳಗಾಗಿ ತಮ್ಮ ಸಿದ್ಧತೆಯನ್ನು ಈ ಕಚೇರಿಗೆ ತಿಳಿಸಿದ್ದಲ್ಲಿ ಯಥಾಕ್ರಮವಾಗಿ ಮುಂದಿನ ಕಾರ್ಯಕ್ರಮವು ನಿಶ್ಚಯಿಸಲಾದೀತು.

ಅ. ಭಾ. ಚರಖಾ ಸಂಘ–ಕತಾಯಿ
ಮಂಡಲ ದ. ಕ. ಮತ್ತು ಕೊಡಗು
ಶಾಖೆ, ಮಂಗಳೂರು ೧.

ಮಲಯದ ಹಿಂದೀಯರ ಉದಾರ ಸಹಾಯ.

ಮಲಯದ ಹಿಂದೀಯರು ಮದ್ರಾಸಿನ ಬಿರುಗಾಳಿ ಪೀಡಿತರಿಗೆ ಧನ ಸಹಾಯ ಮಾಡಬೇಕೆಂದು ಮಲಯದ ಹಿಂದೀಯರು ತಮ್ಮ ಬಂಧುಗಳಿಗೆ ಹೇಳುತ್ತಿದ್ದಾರೆ. ಹೊಸ ವರ್ಷದ ಕಾಣಿಕೆಯಾಗಿ ಹಣವು ಸಂಗ್ರಹವಾಗುತ್ತಿದೆ. ಎಲ್ಲಾ ವರ್ಗದವರು ಇದಕ್ಕೆ ಧನ ಸಹಾಯ ಮಾಡುತ್ತಿದ್ದಾರೆ. ಒಂದು ವಾರದಲ್ಲಿ ೩೦,೦೦೦ ರೂ. ಗಳನ್ನು ಸಂಗ್ರಹಿಸಿ ಕಳುಹಿಸುವ ಆಲೋಚನೆ ಮಾಡಿದ್ದಲ್ಲದೆ ಅದೇ ರೀತಿ ಮುಂದಕ್ಕೂ ಕಳುಹಿಸುವ ಆಲೋಚನೆ ಮಾಡಿದ್ದಾರೆಂದು ತಿಳಿದುಬಂದಿದೆ.

ಭಾರತದ ವೈಜ್ಞಾನಿಕ ಪ್ರಗತಿ.

ಪ್ರಾಚೀನ ವಸ್ತುಗಳ ಅಧ್ಯಯನಕ್ಕಾಗಿ ಲಕ್ನೋದಲ್ಲಿ ಕಟ್ಟಿದ ಪೇಲ್ ಬೆಟನಿಯ ಕೇಂದ್ರದ ಹೊಸ ಕಟ್ಟೋಣವನ್ನು ಉದ್ಘಾಟಿಸುತ್ತಾ, ಭಾರತವು ಜಗತ್ತಿನ ವೈಜ್ಞಾನಿಕ ಚಿತ್ರಪಟದಲ್ಲಿ ನಿಧಾನವಾಗಿ ತನ್ನ ಸ್ಥಾನ ಪಡೆಯುತ್ತಿರುವುದು, ಎಂದು ಪ್ರಧಾನಿ ನೆಹರೂಗಳು ಹೇಳಿದರು. ಈ ಕೇಂದ್ರವನ್ನು ಸ್ಥಾಪಿಸಿದ ದಿ. ಡಾ. ಬೀರಬಲ್ ಸಹಾನಿಯವರಿಗೆ ನೆಹರೂಗಳು ಗೌರವವನ್ನು ಸಲ್ಲಿಸಿದರು. ಪ್ರಾಚೀನ ಅವಶೇಷಗಳ ಅಧ್ಯಯನದಿಂದ ಸಂಕುಚಿತತೆಯು ನಷ್ಟವಾಗುವುದೆಂದು ನೆಹರೂಗಳು ಹೇಳಿದರು. ಉತ್ತರ ಪ್ರದೇಶದ ಗವರ್ನರರಾದ ಶ್ರೀ. ಕೆ. ಎಂ. ಮುನ್ಶಿಯವರು ಪ್ರಾರಂಭದಲ್ಲಿ ಮಾತಾಡುತ್ತಾ, ಇಂತಹ ಕೇಂದ್ರವು ವಿಶ್ವದಲ್ಲಿಯೇ ಒಂದಾಗಿರುವುದೆಂದರು.

ಮಾರಾಟಕ್ಕಿದೆ.

ಮಡಿಕೇರಿ ಮಹದೇವಪೇಟೆ ಬೀದಿಯಲ್ಲಿ ಮಾರ್ಕೆಟಿನ ಸಮೀಪದಲ್ಲಿ ದೊಡ್ಡದಾದ ಕೊಟ್ಟಿಗೆ, ಮಂಚಾ ಹಿತ್ತಲು ಜಾಗೆ ಮತ್ತು ನೀರಿನ ಅನುಕೂಲತೆ ಇರುವ ಮಹಡಿ ಮನೆಯು ಮಾರಾಟಕ್ಕಿದೆ. ಖರೀದಾರರು ಹೆಚ್ಚಿನ ವಿವರಗಳನ್ನು ಈ ಕೆಳಗಿನ ವಿಳಾಸದಾರರಿಂದ ತಿಳಿಯಬಹುದು.

ಮೋಳೇರಿರ ಮಾದ

(ಮೂರನೇ ಪುಟದಿಂದ)

ನ ಮೇಲೆ ಜಾಂಬುಗಾಳಿ ನಡೆದಾಗ ಅವರು ಬ್ರಿಟನಿಗೂ, ಹಿಟ್ಲರನಿಗೂ ಮೌನದ ಗಣದ ಅಪೀಲು ಮಾಡಿದ್ದರು. ಅಹಿಂಸೆಯಿಂದ ಹಿಟ್ಲರನನ್ನು ಎದುರಿಸಿರೆಂದು ಬ್ರಿಟನಿಗೆ ಉಪದೇಶವಿತ್ತರು.

ಎರಡನೆಯ ಪ್ರಸಂಗವೆಂದರೆ ಭಾರತವು ಯುದ್ಧದಲ್ಲಿ ಸಹಭಾಗಿಯಾದರೆ ಬ್ರಿಟನು ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂಬ ಭರವಸೆ. ಅಂಥಾ ಸ್ವಾತಂತ್ರ್ಯಕ್ಕೆ ತಾನು ಪಾಲುಗಾರನಲ್ಲವೆಂದು ಗಾಂಧೀಜಿ ಸ್ಪಷ್ಟವಾಗಿ ನುಡಿದಿದ್ದರು. ಹಿಂಸೆಗೆ ಬೆಂಬಲವಿತ್ತು ಆ ಮೂಲಕ ಬರುವ ಸ್ವಾತಂತ್ರ್ಯ ತನಗೆ ಬೇಕಿಲ್ಲವೆಂದರು. ಹಾಗಿತ್ತು ಅವರ ಅಹಿಂಸೆಯ ನಂಬಿಕೆ.

ನಮ್ಮ ಸಮ್ಮೇಳನವು **ಈ** ಅಹಿಂಸೆಯ ವಿಚಾರವಾಗಿ ಪರಿಶೀಲನೆ ನಡೆಸುವದಲ್ಲ. ಶಾಂತಿಗಾಗಿ ಸತ್ಪಥದ ಪ್ರಚಾರಕ್ಕಾಗಿ ಅಲ್ಪ ಸ್ವಲ್ಪ ಹಿಂದೆ ಬೇಕಾಗಬಹುದಾದರೂ **ಇಂದಿನ ಪ್ರಪಂಚದಲ್ಲಿ ಮಹಾತ್ಮಾಗಾಂಧಿಯವರ ತತ್ವಗಳ ಸ್ಥಾನವೇನು, ಅವುಗಳನ್ನು ಯಾವ ರೀತಿಯಲ್ಲಿ ಜಾರಿಗೆ ತಂದು ಜನತೆಗೆ ಶಾಂತಿಯನ್ನು ಒದಗಿಸಬಹುದು, ಎಂಬುದೇ ಈ ಸಮ್ಮೇಳನದ ಗುರಿಯಾಗಿದೆ.**

ದೇಶಸೇವೆಗಾಗಿ ಕಲಿಯಿರಿ.

ಭಾರತದ ಪ್ರಾಚೀನ ಕಾಲೇಜುಗಳಲ್ಲೊಂದಾದ ಉಜ್ಜಯಿನಿ ಮಾಧವಕಾಲೇಜಿನ ವಜ್ರಮಹೋತ್ಸವದ ಸಮಾರಂಭದಲ್ಲಿ ಕಾಶೀ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಆಚಾರ್ಯ ನರೇಂದ್ರದೇವರು ಭಾಷಣ ಮಾಡುತ್ತಿದ್ದರು.

ಹಲವು ರಸ್ತೆಗಳು ಒಂದೆಡೆ ಕೂಡುವ ಸ್ಥಳದಲ್ಲಿ ಇಂದು ಜಗತ್ತಿನ ರಾಷ್ಟ್ರಗಳು ನಿಂತಿವೆ. ವ್ಯಕ್ತಿಯ ಮಹತ್ವವು ಕಡಿಮೆಯಾಗುತ್ತಿದ್ದು ರಾಷ್ಟ್ರದ ಮಹತ್ವವು ಹೆಚ್ಚುತ್ತಿದೆ. ಬೇರೆ ಬೇರೆ ರಾಷ್ಟ್ರಗಳ ತತ್ವಗಳು, ಮತಗಳು, ಒಂದಕ್ಕೊಂದು ವಿರುದ್ಧವಾಗಿ ಬರುತ್ತಿದ್ದು ವಿನಾಶಕಾರಿ ಯುದ್ಧದತ್ತ ಜಗತ್ತು ಸಾಗುತ್ತಿದೆ. ಯುದ್ಧವು ಶಾಂತಿ ಸಮೃದ್ಧಿಯನ್ನೇ ನಾಶಮಾಡಲಿರುವುದು.

ಸಮಯವು ಬದಲಾಗುತ್ತಿದೆ ನಮ್ಮ ವಿಚಾರಗಳೂ ಆವಶ್ಯಕತೆಗಳೂ ರಭಸದಿಂದ ಬದಲಾಗುತ್ತಿವೆ. ಈ ಬದಲಾದ ಕಾಲವನ್ನನುಸರಿಸಿ ನಮ್ಮ ವಿದ್ಯಾಭ್ಯಾಸ ಕ್ರಮವೂ ಬದಲಾಗಬೇಕಾಗಿದೆ.

ಉದ್ಯೋಗವನ್ನು ಗಳಿಸುವ ದೃಷ್ಟಿಯಿಂದ ಪದವಿಯನ್ನು ಪಡೆಯುವುದು, ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾಗುವುದು ಕಠಿಣವಲ್ಲ. ಜೀವನದ ಕಠಿಣ ಪರೀಕ್ಷೆಗಳನ್ನು ಎದುರಿಸಲು ವಿದ್ಯಾರ್ಥಿಗಳು ಸಿದ್ಧರಾಗಬೇಕು. ಜೀವನದಲ್ಲಿ ಯಶಸ್ಸು ಪಡೆಯುವ ಉದ್ದೇಶದಿಂದ ವಿದ್ಯಾರ್ಜನೆಮಾಡಬೇಕು.

ನಿರುದ್ಯೋಗದಿಂದಾಗಿ ಹಲವು ವಿದ್ಯಾವಂತ ಪದವೀಧರರು ಜಿಗುಪ್ಸೆಯಿಂದಿರುವ ತನಕ ಭಾರತವು ಪ್ರಗತಿ ಹೊಂದಲಾರದು. ಸ್ವಾತಂತ್ರ್ಯವನ್ನು ನಾವು ಸಾಧನವಾಗಿ ಪಡೆದೆವು. ನವಭಾರತವನ್ನು ಕಟ್ಟುವ ಕಡೆಗೆ ಗಮನಕೊಡದೆ ನಾವು ಆಂತರಿಕ ಜಗಳಗಳಲ್ಲಿ ತೊಡಗಿರುವೆವು. ರಾಷ್ಟ್ರೀಯ ಭಾವನೆಗಳನ್ನು ತೊಡೆದು ಹಾಕಿ ವಿಶ್ವಭ್ರಾತೃತ್ವವನ್ನು ಬೆಳೆಸುವ ಬದಲು ಪ್ರಾಂತೀಯತೆಯ ಕಡೆ ನಮ್ಮ ಮನಸ್ಸನ್ನು ಹೊರಳಿಸುತ್ತಿರುವೆವು.

ಆಧುನಿಕ ಯುವಕರೇ, ನಿರಾಶೆಯನ್ನು ಬಿಟ್ಟು ಸಮಯದ ಕರೆಗೆ ಓ ಕೊಡಿರಿ. ಜನತೆಯನ್ನು ನಿದ್ರೆಯಿಂದ ಎಚ್ಚರಿಸಿ ಸಮಾನ ಸಂದರ್ಭ ಮತ್ತು ಸುಖಸಂತೋಷವನ್ನು ಜನರು ಪಡೆಯುವಂತೆ ನವಭಾರತವನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗಿರಿ.

ದೇಶದ ಸಾಮಾಜಿಕ ಮತ್ತು ಆರ್ಥಿಕ ರಚನೆಯಲ್ಲಿ ಹೊಸ ದೃಷ್ಟಿಕೋಣವನ್ನು ನಿರ್ಮಿಸಲು ನಾವು ಭಾರತದ ಹಿಂದಿನ ಸಂಸ್ಕೃತಿಯನ್ನು ಆಳವಾಗಿ ತಿಳಿಯುವುದು ಅಗತ್ಯ.

ಅಧ್ಯಾಪಕರೂ ರಾಜಕೀಯ ಧುರೀಣರೂ ಜನತೆಗೆ ಸರಿಯಾದ ಮಾರ್ಗದರ್ಶನ ಮಾಡುವ ಕಾರ್ಯದಲ್ಲಿ, ಪ್ರಮುಖ ಪಾತ್ರವನ್ನು ವಹಿಸಬಹುದು. ಭಾರತ ಸರಕಾರವು ವ್ಯಕ್ತಿಗಳ ಬೆಳವಣಿಗೆಯನ್ನು ದುರ್ಲಕ್ಷಿಸಬಾರದು, [illegible] ಹೇಳಿದರು.

ಗಂಡಸರು ನರ್ಸ್ ಆಗ ಕೂಡದು.

ಗಂಡಸರು ನರ್ಸ್ ಕೆಲಸವನ್ನು ಮಾಡಬಾರದೆಂದು ಮದ್ರಾಸಿನ ಗವರ್ನರ್ ಶ್ರೀ ಶ್ರೀಪ್ರಕಾಶರು ಹೇಳಿದರು. ಗಂಡಸು ನರ್ಸುಗಳ ತಲೆಯ ಪೋಷಾಕಿಗಿಂತ ಸ್ತ್ರೀ ನರ್ಸರ ಪೋಷಾಕು ನೋಡಲು ಸೊಗಸಾಗಿರುತ್ತದೆ.

ಗವರ್ನರರು ಸ್ತ್ರೀ ನರ್ಸುಗಳಿಗೆ ಅವರ ಕಾರ್ಯದಕ್ಷತೆಗಾಗಿ ಬಹುಮಾನಗಳನ್ನು ಹಂಚುತ್ತಾ, ಗಂಡಸರು ನರ್ಸ್ ಕೆಲಸಕ್ಕೆ ಹೋದರೆ ಅವರು ಸ್ತ್ರೀಯರ ಆಕ್ರಮಣವನ್ನು ಎದುರಿಸುವಷ್ಟು ಶಕ್ತಿಶಾಲಿಗಳಾಗಿರಬೇಕು. ಯಾಕೆಂದರೆ ಈ ಉದ್ಯೋಗವು ಹೆಚ್ಚಾಗಿ ಸ್ತ್ರೀಯರಿಗೇ ಮೀಸಲಾಗಿರುತ್ತದೆ.

ನಂತರ ನರ್ಸುಗಳನ್ನುದ್ದೇಶಿಸುತ್ತಾ, ಅವರು ತಮ್ಮ ಈ ಉದ್ಯೋಗವನ್ನು ಕೇವಲ ಜೀವನದ ದೃಷ್ಟಿಯಿಂದ ನೋಡದೆ, ಸಾರ್ವಜನಿಕ ಸೇವೆಯ ದೃಷ್ಟಿಯಿಂದ ನೋಡಬೇಕು. ಮದ್ರಾಸು ಪ್ರಾಂತದ ೧೩ ನರ್ಸು ತರಬೇತಿ ಕೇಂದ್ರಗಳಿಂದ ೭೦೦ ನರ್ಸುಗಳಿಗೆ ತರಬೇತಿ ದೊರಕುತ್ತಿದೆ ಎಂದು ಹೇಳಿದರು.

—

ಕೊಡಗಿನ ವಿದ್ಯಾರ್ಥಿವೇತನಗಳು.

ಕೊಡಗು ಸರಕಾರವು ಈ ಕೆಳಗಿನ ವಿದ್ಯಾರ್ಥಿ ವೇತನಗಳನ್ನು ಕೊಡಲು ಏರ್ಪಡಿಸಿ ಈ ಮೊದಲಿನ ನಿಯಮಗಳನ್ನು ರದ್ದು ಮಾಡಿ ಹೊಸ ನಿಯಮಗಳನ್ನು ಪ್ರಕಟಿಸಿದೆ.

ಶಾಲಾ ವಿದ್ಯಾರ್ಥಿಗಳಲ್ಲಿ.

(೧) ಶೆಡ್ಯೂಲ್ಡ್ ಕಾಸ್ಟ್—

ನಾಲ್ಕನೇ ಫಾರಂನಿಂದ ಆರನೇ ಫಾರಂನಲ್ಲಿ ಓದುತ್ತಿರುವವರಿಗೆ ತಿಂಗಳಿಗೆ ರೂ. ೫ ರ ೮ ವೇತನಗಳೂ, ಮೂರನೇ ತರಗತಿಯಲ್ಲಿರುವವರಿಗೆ ರೂ. ೪ರ ಮೂರು ವೇತನಗಳೂ, ಎರಡನೇ ತರಗತಿಯಲ್ಲಿರುವವರಿಗೆ ರೂ. ३ ಮೌಲ್ಯದ ಮೂರು, ವೇತನಗಳೂ, ಒಂದನೇ ತರಗತಿಯಲ್ಲಿರುವವರಿಗೆ ರೂ. ३ ಮೌಲ್ಯದ ಮೂರು ವೇತನಗಳು.

(೨) ಶೆಡ್ಯೂಲ್ಡ್ ಟ್ರೈಬ್—

ಒಂದರಿಂದ ಐದನೇ ತರಗತಿಯ ವರೆಗಿನ ವಿದ್ಯಾರ್ಥಿಗಳಿಗೆ ರೂ. ३ ಮೌಲ್ಯದ ೧೩ ವೇತನಗಳು, ಎಂಟನೆಯ ತರಗತಿಯವರಿಗೆ ರೂ. ೩ ಮೌಲ್ಯದ ೪ ವೇತನಗಳು:

(೩) ಈ ಮೇಲ್ಕಂಡ ಎರಡು ಗುಂಪಿಗೆ ಸೇರದ ಇತರ ಹುಡುಗಿಯರಲ್ಲಿ ಆರನೇ ತರಗತಿಯಿಂದ ಆರನೇ ಫಾರಂ ವರೆಗೆ ರೂ. ೬ ಮೌಲ್ಯದ ೨೦ ವೇತನಗಳು. ಹುಡುಗರಿಗೆ ರೂ. ೬ ಮೌಲ್ಯದ ೫೪ ವೇತನಗಳು.

ಕಾಲೇಜು ವಿದ್ಯಾರ್ಥಿಗಳಲ್ಲಿ.

ಇಂಟರ್ ಮೀಡಿಯೇಟ್ ತರಗತಿಯಲ್ಲಿ ಓದುವವರಿಗೆ ರೂ. ೧೫ ರ ೯ ವೇತನಗಳು, ಬಿ. ಎ., ಬಿ. ಎಸ್‌ಸಿ, ಆನರ್ಸ್, ಎಂ. ಎ. ಮತ್ತು ಎಂ. ಎಸ್. ಸಿ. ತರಗತಿಗಳಲ್ಲಿ ಓದುವವರಿಗೆ ರೂ. ೨೦/-ರ ೯ ವೇತನಗಳು,- ಮೆಡಿಕಲ್ ಕಾಲೇಜಿನಲ್ಲಿ ಓದುವವರಿಗೆ ರೂ. ೩೦/-ರ ೮, ಇಂಜಿನಿಯರಿಂಗ್ ಕಾಲೇಜಿನಲ್ಲಿ ರೂ. ೩೦-ರ ೮ ಮತ್ತು ವೆಟರಿನರಿ ಕಾಲೇಜಿನಲ್ಲಿ ಓದುವವರಿಗೆ ರೂ. ೩೦-ರ ೩, ಎಗ್ರಿಕಲ್ಚರಲ್ ಕಾಲೇಜಿನಲ್ಲಿ ಓದುವವರಿಗೆ ರೂ. ೨೫-ರ ೪ ವೇತನಗಳು, ಶಿಲ್ಪಕಲಾ ಶಾಲೆಗಳಲ್ಲಿ ಓದುವವರಿಗೆ ರೂ. ೧೫-ರ ಎರಡು ಜೂನಿಯರ್, ರೂ. ೨೫-ರ ಎರಡು ಸೀನಿಯರ್ ವೇತನಗಳು, ಮೈಸೂರಿನ ಕುರುಡ ಮತ್ತು ಕಿವುಡ ಶಾಲೆಯಲ್ಲಿ ಓದುವ ಕೊಡಗಿನವರಿಗೆ ರೂ. ೧೫-ರ ಎರಡು ವೇತನಗಳು ಸರಕಾರದಿಂದ ಅಂಗೀಕೃತವಾದ ಸಂಸ್ಥೆಯಲ್ಲಿ ಇಂಡಿಯನ್ ಮೆಡಿಸಿನ್ ಅಭ್ಯಾಸ ಮಾಡುವವರಿಗೆ ರೂ. ೨೦,-ರ ಒಂದು ವೇತನ ಹೀಗೆ ಕೊಡಲ್ಪಡುವುವು.

ಔದ್ಯೋಗಿಕ ಮತ್ತು ಶಿಲ್ಪ ಕಲಾವೇತನಗಳನ್ನು ಪಡೆದವರು ತಾವು ಉತ್ತೀರ್ಣರಾದ ಆರು ತಿಂಗಳೊಳಗೆ ಸರಕಾರವು ಕೆಲಸ ಕೊಡದಿದ್ದರೆ ಬೇರೆಡೆ ಕೆಲಸಕ್ಕೆ ಹೋಗಬಹುದು. ಕೆಲಸ ಕೊಟ್ಟರೆ ಹತ್ತು ವರ್ಷ ಈ ಸರಕಾರದಡಿಯಲ್ಲಿ ಕೆಲಸ ಮಾಡುವ ಶರತಿಗೆ ಒಪ್ಪಬೇಕು. ವೇತನ ಕೊಡುವ ನಿಯಮಾವಳಿಗಳೂ ಪ್ರಕಟವಾಗಿವೆ.

—

॥ ಕೊಡಗಿಗೆ ವಿದ್ಯುಚ್ಛಕ್ತಿ ॥

ಮೈಸೂರಿನಿಂದ ಕೊಡಗಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವ ವಿಚಾರದ ಮಾತುಕತೆಗಾಗಿ ಕೊಡಗಿನ ಮಂತ್ರಿದ್ವಯರೂ, ಕೊಡಗು ಸರಕಾರದ ಚೀಫ್ ಸೆಕ್ರೆಟರಿ ಶ್ರೀ. ನರಸಿಂಹ ಮೂರ್ತಿಯವರೂ ಹೋಗಿದ್ದರು. ತಾರೀಕು ೫ರಲ್ಲಿ ಬೆಂಗಳೂರಿನಲ್ಲಿ ಈ ವಿಚಾರ ಮಾತುಕತೆ ನಡೆಯಿತು. ಮೈಸೂರಿನ ಮುಖ್ಯ ಮಂತ್ರಿ ಶ್ರೀ. ಕೆ. ಹನುಮಂತಯ್ಯ, ಕೈಗಾರಿಕಾ ಮಂತ್ರಿ ಶ್ರೀ. ಟಿ. ಸಿದ್ಧಲಿಂಗಯ್ಯ, ಮೈಸೂರು ಸರಕಾರದ ಚೀಫ್ ಸೆಕ್ರೆಟರಿ ಶ್ರೀ. ಪುಟ್ಟಸ್ವಾಮಿ, ಕೈಗಾರಿಕಾ ಡೈರೆಕ್ಟರು ಶ್ರೀ. ಗಣಪತಿ ಐಯ್ಯರ್, ಲಾ ಸೆಕ್ರೆಟರಿ ಶ್ರೀ. ಸದಾಶಿವಯ್ಯ, ಎಡ್ವೊಕೇಟ್ ಜನರಲ್ ಶ್ರೀ. ಸೋಮನಾಥ ಐಯ್ಯರ್ ಮೊದಲಾದವರು ಹಾಜರಿದ್ದರು.

ಈ ಮಾತುಕತೆಯ ಫಲಿತಾಂಶವಾಗಿ ದಿನಕ್ಕೆ ೧೦೦೦ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಕೊಡಗಿಗೆ ಸರಬರಾಯಿಮಾಡುವ ಪಂಚವಾರ್ಷಿಕ ಒಪ್ಪಂದವಾಗಿದೆ. ಪ್ರಥಮ ಹೆಜ್ಜೆಯಾಗಿ ೩೦೦ ಕಿಲೋವಾಟ್‌ಗಳನ್ನು ಕೊಡಲಾಗುವದೆಂದೂ ಕ್ರಮೇಣ ಇದನ್ನು ೧೦೦೦ ಕಿಲೋವಾಟ್‌ಗೆ ಏರಿಸಲಾಗುವುದೆಂದೂ ತಿಳಿದುಬಂದಿದೆ.

ಕೃಷ್ಣರಾಜಸಾಗರದಿಂದ ಕೊಡಗಿನ ಗಡಿಯ ವರೆಗೆ ಅಂದರೆ ಪೆರಿಯಾಪಟ್ಣದ ವರೆಗೆ ಲೈನುಗಳನ್ನು ಹಾಕುವ ಕೆಲಸವು ಈ ಒಪ್ಪಂದಕ್ಕೆ ಸಹಿ ಹಾಕಿದೊಡನೆಯೇ ಪ್ರಾರಂಭವಾಗುವದೆಂದೂ ಇದರ ಖರ್ಚು ೨೦ ಲಕ್ಷ ರೂಪಾಯಿಗಳನ್ನು ಕೊಡಗು ಸರಕಾರವು ಮೈಸೂರು ಸರಕಾರಕ್ಕೆ ಸಾಲವಾಗಿ ಕೊಡುವದಾಗಿಯೂ ಇದರಲ್ಲಿ ಅರ್ಧ ಹಣಕ್ಕೆ ಬಡ್ಡಿ ಕೊಡುವಂತೆಯೂ ಉಳಿದ ಅರ್ಧಕ್ಕೆ ಬಡ್ಡಿ ಮಾಫಿ ಬಿಡುವಂತೆಯೂ ತೀರ್ಮಾನವಾಗಿರುವದಾಗಿ ತಿಳಿದುಬಂದಿದೆ. ಮತ್ತೆ ಕೊಡಗಿನ ಒಳಗೆ ಲೈನುಗಳನ್ನು ಹಾಕುವ ಕೆಲಸವನ್ನೂ ಮೈಸೂರು ಸರಕಾರವೇ ಮಾಡುವದೆಂದೂ ಇದಕ್ಕೆ ಕೊಡಗು ಸರಕಾರವು ಪ್ರತ್ಯೇಕ ೧೫ ಲಕ್ಷ ರೂ. ಕೊಡಬೇಕಾಗುವುದೆಂದೂ ಗೊತ್ತಾಗಿದೆ. ಐದು ವರ್ಷಗಳ ನಂತರ ಈ ಒಪ್ಪಂದವನ್ನು ಮುಂದರಿಸುವ ಯಾ ಅಂತ್ಯಗೊಳಿಸುವ ಹಕ್ಕು ಈ ಸರಕಾರಗಳಲ್ಲೇ ಇದೆ.

ಮೈಸೂರಿನಿಂದ ಕೊಡಗಿಗೆ ವಿದ್ಯುಚ್ಛಕ್ತಿ ತರುವ ವಿಚಾರದಲ್ಲಿ ಇದು ಕಡೆ ನಿರ್ಣಯವೆಂದೂ, ಈ ವಿಚಾರದಲ್ಲಿ ಇನ್ನು ಮಾತುಕತೆಗಳು ನಡೆಯುವದಿಲ್ಲವೆಂದೂ. ಮುಂದಿನ ೩೦ ತಿಂಗಳುಗಳೊಳಗೆ ಕೊಡಗಿಗೆ ವಿದ್ಯುಚ್ಛಕ್ತಿ ಸರಬರಾಯಿ ಆಗುವದೆಂದೂ ಗೊತ್ತಾಗಿದೆ.

—

ಡಾ. ಕಿಚಲೂರವರಿಗೆ ಸ್ಟಾಲಿನ್ ಬಹುಮಾನ

ಪ್ರಸಿದ್ಧ ಕಾಂಗ್ರೆಸ್ ಕೆಲಸಗಾರರಾಗಿದ್ದು ಈಗ ಅಖಿಲ ಭಾರತ ಶಾಂತಿ ಸಮಿತಿಯ ಅಧ್ಯಕ್ಷರಾಗಿರುವ ಡಾ ಸಯೊಫುದ್ದೀನ್ ಕಿಚಲೂರವರಿಗೆ ಶಾಂತಿಗಾಗಿ ಕೊಡಲ್ಪಡುವ ಅಂತರಾಷ್ಟ್ರೀಯ ಸ್ಟಾಲಿನ್ ಬಹುಮಾನವನ್ನು ಕೊಡಲಾಗಿದೆ. ಡಾ. ಕಿಚಲೂರವರು ರಷ್ಯಾಕ್ಕೆ ಹೋಗಿ ತಾ. ೫ರಲ್ಲಿ ಮಾಸ್ಕೋ ನಗರದಲ್ಲಿ ಅದನ್ನು ಹೊಂದಿಕೊಂಡರು. ಪಧವಿದಾನ ಸಮಾರಂಭಕ್ಕೆ ಭಾರತದ ರಾಯಭಾರಿ ಕೆ. ಪಿ. ಎಸ್. ಮೆನನರೂ, ಮೇಡಮ್ ಸನ್‌ಯತ್ ಸೆನ್, ಚೀನಾದ ಶಾಂತಿ ಸಮಿತಿಯವರೂ ಹಾಜರಿದ್ದರು.ಬಹುಮಾನದ ಮೌಲ್ಯ ಪೂರ್ತಿ ರೂ. ೧,೦೦,೦೦೦ ರೂಬಿಲ್‌ಗಳು ಯಾ ರೂ. ೧,೨೫,೦೦೦ ಗಳನ್ನು ಡಾ. ಕಿಚಲೂರವರು ಸಂಪೂರ್ಣವಾಗಿ ಅಖಿಳ ಭಾರತ ಶಾಂತಿ ಸಮಿತಿಗೆ ಕೊಟ್ಟಿರುವರು.

—

TUTORIAL COLLEGE.

ST. MICHAEL'S BUILDING, MERCARA, COORG.

S. S. L. C. March Session begins on 12th January.

MADRAS MATRICULATION class also Commences on 21st January.

No previous qualifications necessary for Matric. But should complete 20 years by 1953.

Classes to suit the Convenience of employed men.

For details please contact the Principal.

PRINCIPAL.

ತಂಬಾಕು ಸೇವನೆಯ ಚಟ.

ಆಸ್ಪತ್ರೆಗಳಿಗೆ ವ್ಯಯಿಸುವ ಎಂಟು ಪಾಲುಗಳಷ್ಟು ನಮ್ಮ ಹೊಗೆಸೊಪ್ಪಿನ ವೆಚ್ಚ !

ಕನ್ನಡದ ಉದೀಯಮಾನಕವಿ ಶ್ರೀ ಗೋಪಾಲಕೃಷ್ಣ ಅಡಿಗರು "ಸಿಗರೇಟಿನ ಹೊಗೆ ವರ್ತುಳ ವರ್ತುಳ...." ಎಂದು ಸುಂದರವಾಗಿ ಧೂಮಲೀಲೆಯನ್ನು ವರ್ಣಿಸಿರುವರು. ಧೂಮ್ರಪಾನವು ನಮ್ಮಲ್ಲಿ ಅತ್ಯಂತ ಜನಪ್ರಿಯವಾದೊಂದು ಚಟ. ಅದರಿಂದ ಆರೋಗ್ಯ ಕೆಡುವುದೆಂದು ಹೇಳುವ ಡಾಕ್ಟರ ಜನರೇ ಸಿಗರೇಟಿನ ನಿಸ್ಸೀಮ ಭಕ್ತರು! ಎಂದ ಮೇಲೆ ಬಡಜನ ಬೀಡಿಗಳ ತುಂಡೊಂದನ್ನು ತುಟಿಗಳ ನಡುವಿಟ್ಟರೆ ಅಥವಾ ನಶ್ಯವನ್ನು ಬ್ರಹ್ಮರಂಧ್ರಕ್ಕೇರಿಸಿ, ಆನಂದ ಪರವಶರಾದರೆ ಅದು ತಪ್ಪೆನ್ನುವ ನೈತಿಕ ಬಲ ನಮ್ಮಲ್ಲಿ ಯಾರಿಗೂ ಇಲ್ಲ. ತಂಬಾಕು ಸೇವನೆಯ ಚಟ ನಮಗೆ ಪಾಶ್ಚಾತ್ಯರಿಂದ ಬಂದದ್ದು. ಈಗ ಕೂಡ ಅಮೇರಿಕದ ವರ್ಜೀನಿಯಾ ತಂಬಾಕು ಜಗತ್ಪ್ರಸಿದ್ಧ ವಸ್ತುವೆನಿಸಿದೆ. 'ರೀಡರ್ಸ್ ಡೈಜೆಸ್ಟ್' ಪತ್ರಿಕೆಯ ಹೇಳಿಕೆಯನುಸಾರ ಅಮೇರಿಕದ ೧೮ ಕೋಟಿ ಜನರಲ್ಲಿ ಪ್ರತಿಯೊಬ್ಬರೂ ದಿನಕ್ಕೆ ೧೫ ಸಿಗರೇಟು ಸೇದಿ ಬಿಸಾಡುವರು! ಸೂತ್ರಪಟ್ಟ ವರ್ಷ ವರ್ಷವೂ ಸಿಗರೇಟು ಭಕ್ತರ ಸಂಖ್ಯೆ ಎಂಟು ಲಕ್ಷದಷ್ಟು ಹೆಚ್ಚುತ್ತಲೇ ಹೋಗುತ್ತದೆ. ಮೂವರು ಗಂಡಸರಲ್ಲಿ ಇಬ್ಬರು, ಐದು ಹೆಂಗಸರಲ್ಲಿ ಇಬ್ಬರು, ಮತ್ತು ಹದಿನಾಲ್ಕು ವರ್ಷದ ಪ್ರತೀ ಐದು ಹುಡುಗರಲ್ಲಿ ಒಬ್ಬ ಸಿಗರೇಟು ಸೇದುವರು. ಅಮೇರಿಕನ್ನರು ಸಿಗರೇಟಿಗಾಗಿ ವರ್ಷಕ್ಕೆ ನಾಲ್ಕು ಲಕ್ಷ ಕೋಟಿ ಡಾಲರು ವೆಚ್ಚ ಮಾಡುವರು. ನಮ್ಮಲ್ಲಿ ಕೂಡ ಈ ಪ್ರಮಾಣ ಕಡಿಮೆಯೇನಿಲ್ಲ. ಪೇಟೆ ಪಟ್ಟಣಗಳಲ್ಲಿರುವ ಪ್ರತೀ ಹತ್ತು ಗಂಡಸರಲ್ಲಿ ಆರು ಮಂದಿ ಒಂದಿಲ್ಲೊಂದು ರೀತಿಯಿಂದ ಹೊಗೆಸೊಪ್ಪನ್ನು ಸೇವಿಸುತ್ತಾರೆ. ಆ ಆರು ಮಂದಿಯಲ್ಲೂ ನಾಲ್ಕು ಮಂದಿ ಸಿಗರೇಟಿನ ಆರಾಧಕರು. ಕಳೆದ ವರ್ಷ ೩೫ ಲಕ್ಷ ಭಾರತೀಯರು ಒಂದೂವರೆ ಕೋಟಿ ಸಿಗರೇಟನ್ನು ಭಸ್ಮಮಾಡಿದರು ಎಂದರೆ ಪ್ರತೀ ದಿನಕ್ಕೆ ಎಂಟು ಸಿಗರೇಟು ಸೇದಿದಂತಾಯಿತು. ಮಹಾ ಯುದ್ಧಕ್ಕೆ ಮುಂಚೆ ಕೇವಲ ಅರುವತ್ತು ಲಕ್ಷ ಸಿಗರೇಟು ಸೇದುತ್ತಿದ್ದರೆ, ಎಂದರೆ ದಿನಕ್ಕೆ ಮೂರರಷ್ಟಾಯಿತು.

ನಮ್ಮ ಹೊಗೆಸೊಪ್ಪಿನ ವೆಚ್ಚ

ನಮಗೆ ಸಿಗರೇಟು ಇತ್ಯಾದಿಗಾಗಿ ಹೊಗೆಸೊಪ್ಪು ಸೇವನೆಯ ಚಟ ಪ್ರಬಲ ಅಂಟಿಕೊಂಡಿದ್ದು ಮಹಾ ಯುದ್ಧದ ಪರಿಣಾಮವಾಗಿಯೇ ಎನ್ನಬಹುದು. ಪೇಟೆ ಪಟ್ಟಣಗಳಲ್ಲಿಯೇ ವರ್ಷಂಪ್ರತಿ ೧೬,೦೦೦ ತರುಣರು ಸಿಗರೇಟಿನ ವ್ಯಸನಕ್ಕೆ ಬಲಿಬೀಳುವರು. ಈಚೆಗೆ ಹಳ್ಳಿಯ ಮೂಲೆ ಮೂಲೆಗೂ ತಂಬಾಕು ಸೇವನೆಯ ಚಟ ವ್ಯಾಪಕವಾಗಿ ಹಬ್ಬುತ್ತಾ ಬರುತ್ತಿದೆ ಎಂಬ ಸಂಗತಿ ಸ್ಪಷ್ಟವಿದೆ. ಮಹಾ ಯುದ್ಧದಿಂದ ಮನೆಗೆ ಮರಳಿದ ಸೈನಿಕರೇ ಮುಂತಾದವರಿಂದ ಹಳ್ಳಿಹಳ್ಳಿಗಳಲ್ಲಿ ಸಿಗರೇಟಿನ ಪ್ರಚಾರ ನಿರಾಯಾಸವಾಗಿ ಕೈಗೂಡಿತು. ಈಗ ಹಳ್ಳಿಯವರಿಗೆ ಅತ್ಯಾಧುನಿಕವಾದ ಯಾವ ವಸ್ತುವೂ ಅಪರಿಚಿತವೆಂಬಂತಿಲ್ಲ. ಅಷ್ಟು ಸುಧಾರಿಸಿದ ವಾತಾವರಣ ಉಂಟಾಗಿದೆ. ಹಾಗೆಂದು ಭಾರತೀಯ ಮಹಿಳೆಯರು ಹೊಗೆ ಸೇವನೆಯ ಚಟಕ್ಕೆ ಇನ್ನೂ ಬಲಿಬೀಳದಿರುವುದು ಗಮನಾರ್ಹ ಸಂಗತಿ. ಆದರೂ ಉಚ್ಚ ವಿದ್ಯಾಭ್ಯಾಸದ ಪ್ರಭಾವವೋ ಎಂಬಂತೆ ಅವರಲ್ಲೂ ಕೆಲವರು ಸಿಗರೇಟನ್ನು ತುಟಿಗೇರಿಸಲು ಕಲಿತಿರುವರು. ಹಾಗೆಂದು ತುಂಬಿದ ರಸ್ತೆಯಲ್ಲಿ ಸಿಗರೇಟಿನ ಜೊತೆ ಹೊಗೆ ಬಿಡುತ್ತಾ ಹೋಗುವುದು ನಮ್ಮ ಹಿರಿಯರ ದೃಷ್ಟಿಗೆ ಇನ್ನೂ ಬೆರಗುಗಾರಿಕೆಯ ವಿಷಯವಾಗಿ ಉಳಿದಿದೆ.

ನಮ್ಮ ಹೊಗೆಸೊಪ್ಪು ಸೇವಕರು ವರ್ಷಂಪ್ರತಿ ೪೦ ಕೋಟಿ ರೂಪಾಯಿ ಅದಕ್ಕಾಗಿ ವ್ಯಯಿಸುವರು. ಇಷ್ಟು ಹಣವನ್ನು ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ವ್ಯಯಿಸುವುದಿಲ್ಲ. ನಮ್ಮಲ್ಲಿರುವ ಎಲ್ಲ ಆಸ್ಪತ್ರೆಗಳನ್ನು ನಡೆಸುವ ಖರ್ಚು ವೆಚ್ಚ ನೋಡುವ ರಾಜ್ಯದ ಎಂಟು ಪಾಲನ್ನು ಕೇವಲ ಮೂಗು ಬಾಯಿಗಳಿಂದ ಹೊಗೆ ಬಿಡುವ ಆನಂದದ ಲೀಲೆಗಾಗಿ ವ್ಯಯವಾಗುತ್ತಿದೆ! ಸರಕಾರಕ್ಕೆ ಆಯಾತ, ಅಬಕಾರಿ ಮತ್ತಿತರ ಸುಂಕ ತೆರಿಗೆಗಳಿಂದ ೧೦ ಕೋಟಿ ರೂಪಾಯಿ ವರಮಾನವಿದೆ. ಸಿಗರೇಟು ವಿಲಾಸ ವಸ್ತುವೆಂದು ಗ್ರಹಿಸಲ್ಪಟ್ಟಿರುವುದರಿಂದ, ಅದರ ಮೇಲೆ ಭಾರವಾದ ಕರವನ್ನು ಹೇರಿರುವರು.

ರಾಷ್ಟ್ರೀಯ ಸ್ವೈರಿಣ,

ಪೋರ್ಚುಗೀಸರು ನಮಗೆ ೧೬೦೮ ರಲ್ಲಿ ಹೊಗೆಸೊಪ್ಪನ್ನು ಕಾಣಿಕೆಯಾಗಿ ಕೊಟ್ಟರು. ಅಂದಿನಿಂದ ಹೊಗೆಸೊಪ್ಪನ್ನು ಹೆಚ್ಚಾಗಿ ಬೆಳೆಯುವ ಕೆಲಸವು ನಡೆದಿದೆ. ಮುಖ್ಯವಾಗಿ ಎರಡು ನಮೂನೆಯ ಹೊಗೆಸೊಪ್ಪಿನ ಜಾತಿಯನ್ನು ಬೆಳೆಯುತ್ತಾರೆ. ಈಚೆಗಿನ ವರೆಗೆ ಜಗತ್ತಿನ ಹೊಗೆಸೊಪ್ಪಿನ ಉತ್ಪಾದನೆಯಲ್ಲಿ ಕಾಲಂಶ ಭಾರತದ ಪಾಲಾಗಿತ್ತು. ಆದರೆ ಈಗ ವಿಭಜನೆಯ ಬಳಿಕ ಅರ್ಧವನ್ನು ಉತ್ಪಾದನೆ ಕಡಿಮೆಯಾಯಿತು. ಆದರೂ ೧೯೫೦ರಲ್ಲಿ ನಾವು ೩೦ ಕೋಟಿ ರಾತಲು ಹೊಗೆಸೊಪ್ಪನ್ನು ಬೆಳೆದೆವೆಂಬುದು ಹೆಮ್ಮೆ. ಹೊಗೆಸೊಪ್ಪನ್ನು ಉತ್ಪಾದಿಸುವ ಜಗತ್ತಿನ ರಾಷ್ಟ್ರಗಳಲ್ಲಿ ಭಾರತಕ್ಕೆ ಈಗ ಮೂರನೆಯ ಸ್ಥಾನವಿದೆ. ನಮ್ಮ ಹೊಗೆಸೊಪ್ಪಿನ ಉತ್ಪಾದನೆಯಲ್ಲಿ ನೂರಕ್ಕೆ ಎಂಬತ್ತರಷ್ಟನ್ನು ನಾವೇ ಉಪಯೋಗಿಸಿ ಕೊಳ್ಳುತ್ತೇವೆ. ಸಾಮಾನ್ಯವಾಗಿ ಬೆಲೆಗಳ ಮಟ್ಟ ಇನ್ನೂ ಏರಿದ್ದರೂ ಹೊಗೆಸೊಪ್ಪಿನ ಬಳಕೆಯೇನೂ ಕಡಿಮೆಯಾಗಿಲ್ಲ. ಎಲ್ಲದರೊಡನೆ ಅದು ಇನ್ನೂ ಹೆಚ್ಚುತ್ತಿದೆ.

ನಮ್ಮ ಇನ್ನೊಂದು ವೈಶಿಷ್ಟ್ಯವೆಂದರೆ ಬೇರಾವ ರಾಷ್ಟ್ರದಲ್ಲಿಯೂ ಇರದಷ್ಟು ವೈವಿಧ್ಯ ನಮ್ಮ ಹೊಗೆಸೊಪ್ಪಿನ ಬಳಕೆಯಲ್ಲಿದೆ! ಸಿಗರೇಟು ಸೇವನೆಯು ಎಷ್ಟೆಂದರೂ ವಿದೇಶೀ ವಿಲಾಸವೆಂದು ಹಳ್ಳಿಗಳ ಅವಹೇಳನೆಗೆ ಗುರಿಯಾಗಿದೆ. ನಮ್ಮ ಹಳ್ಳಿಗರಿಗೆ ಹುಕ್ಕಾ ಅಥವಾ ಗುಡುಗುಡಿ ತುಂಬ ಮೆಚ್ಚುಗೆಯದಾಗಿದೆ. ಹಳೆಯ ದಿನಗಳಲ್ಲಿ ಹುಕ್ಕಾದಂಥಾ ಧೂಮ್ರಪಾನದ ಸಲಕರಣೆ ಶ್ರೀಮಂತಿಕೆಯ ದ್ಯೋತಕವೆಂದು ಮನ್ನಿಸಲ್ಪಡುತ್ತಿತ್ತು. ಆ ಹುಕ್ಕಾದ ಅಂದಚಂದ ಹೆಚ್ಚಿದಂತೆ ಶ್ರೀಮಂತಿಕೆಯ ಗಾಂಭೀರ್ಯಕ್ಕೂ ಕಳೆ ಬರುತ್ತಿತ್ತು. ಈಗ ಕೂಡ ಹುಕ್ಕಾ ಅಥವಾ ಗುಡುಗುಡಿ ಹಳ್ಳಿಯ ಜನರಲ್ಲಿ ಸಾಮಾಜಿಕ ವೈಶಿಷ್ಟ್ಯದಿಂದ ಕೂಡಿದೆ. ಹಳ್ಳಿಯ ಹತ್ತು ಸಮಸ್ತರು ಒಟ್ಟಿಗೆ ಕಲೆತು, ಒಂದೇ ಹುಕ್ಕಾ ಸುತ್ತ ಕುಳಿತು, ಅದನ್ನು ಒಬ್ಬೊಬ್ಬರೇ ಸೇದುವುದೊಂದು ಪರಿಪಾಠ. ಸಾಮಾಜಿಕ ತಪ್ಪು ಮಾಡುಗಳನ್ನು ಪ್ರತಿಭಟಿಸಿ ನಡೆದ ಅಪರಾಧಿಗೆ ಹಳ್ಳಿಯ ಪಂಚರು ವಿಧಿಸುವ ಶಿಕ್ಷೆಯೆಂದರೆ ಈ ಸಾಮೂಹಿಕ ಹುಕ್ಕಾದಲ್ಲಿ ಪಾಲು ಇಲ್ಲವೆಂದು ಹೇಳುವುದು. ಆಧುನಿಕ ಯಾವ ಸಭೆ ಸಮಾರಂಭಗಳಲ್ಲಿಯೂ ಈ ಅಪರಾಧಿಗೆ ಸ್ಥಾನ ಮಾನಗಳು ಸಿಗುವಂತಿಲ್ಲ!

ಬಡವನ ಬಂಧು—ಬೀಡಿ

ಬೀಡಿ, ಸಿಗಾರು, ಚಿರೂಟುಗಳೂ ನಮ್ಮಲ್ಲಿ ಬಳಕೆಯಲ್ಲಿವೆ. ಬೀಡಿ ಸಾಮಾನ್ಯ ಜನರ ಸ್ನೇಹಿತ. ಮಧ್ಯ ಭಾರತದಲ್ಲಿ ಕಾಡುಗಳಲ್ಲಿ ಧಾರಾಳವಾಗಿ ಬೆಳೆಯುವ ಒಂದು ಜಾತಿಯ ಮರದ ಎಲೆಯಿಂದ ಬೀಡಿ ಕಟ್ಟುತ್ತಾರೆ. ಕುಶಲರಾದ ಕೆಲಸಗಾರರು ಲಕ್ಷಗಟ್ಟಲೆ ಬೀಡಿಯನ್ನು ಪ್ರತಿನಿತ್ಯ ಕಟ್ಟುವರು. ಸಾಮಾನ್ಯವಾಗಿ ಬೀಡಿ ಕಟ್ಟುವುದು ಮನೆ ಕೈಗಾರಿಕೆಯಾಗಿ ಪರಿಣಮಿಸಿದೆ.

ಭಾರತದ ಕಾರ್ಖಾನೆಗಳು ೨೨ ಲಕ್ಷ ಕೋಟಿ ಸಿಗರೇಟು ತಯಾರಿಸುತ್ತವೆ. ಮುಂಬಯಿ ಕಲ್ಕತ್ತಾದಂಥಾ ನಗರಗಳಲ್ಲಿ ನೆಲಸಿದವುಗಳ ಒಡೆತನ ಬ್ರಿಟಿಶ ಕಂಪೆನಿಗಳಿಗೆ ಸೇರಿದೆ. ನಮ್ಮ ವ್ಯಾಪಾರದಲ್ಲಿ ಮುಖ್ಯಾಂಶವನ್ನು ಈ ವಿದೇಶಿ ಕಂಪೆನಿಗಳೇ ನಡೆಸುತ್ತವೆ. ಈಚೆಗೆ ಕಾಣಿಸಿಕೊಂಡಿರುವ ಭಾರತೀಯ ಕಂಪೆನಿಗಳ ತಯಾರಿಕೆ ವಿದೇಶದ ವಸ್ತುಗಳಷ್ಟು ಜನಪ್ರಿಯತೆಯನ್ನು ಪಡೆದಿಲ್ಲವಾಗಿ ಅವುಗಳೊಡನೆ ಸ್ಪರ್ಧಿಸುವುದು ಕಷ್ಟಸಾಧ್ಯವೆನಿಸಿದೆ.

ನಮ್ಮ ಹೊಗೆಸೊಪ್ಪು ಉತ್ಕೃಷ್ಟತರದ್ದಾಗಿಲ್ಲದಿರುವುದರಿಂದ, ಸಿಗರೇಟು ತಯಾರಕರು ವರ್ಜೀನಿಯಾದ ಸುಪ್ರಸಿದ್ಧ ತಂಬಾಕನ್ನು ಆಯಾತ ಮಾಡುತ್ತಾರೆ. ಈ ಪ್ರಮಾಣ ೭೫ ಲಕ್ಷ ರಾತಲಿನಷ್ಟಿದೆ. ಈಗಾಗ ನಮ್ಮ ಸಿಗರೇಟು ಮುಂತಾದುವುಗಳು ವಿದೇಶಗಳಿಗೆ ನಿರ್ಯಾತವಾಗುವುದೂ ಉಂಟು. ಭಾರತದ ಸಿಗಾರುಗಳಿಗೆ ಬೇಡಿಕೆ ತುಂಬಾ ಹೆಚ್ಚುತ್ತಿದೆಯಂತೆ.

ಎಲ್ಲರಿಗೂ ಗೊತ್ತಿರುವಂತೆ ನಮ್ಮಲ್ಲಿ ಐವತ್ತರ ಡಬ್ಬಿಯಲ್ಲೂ ಹತ್ತರ ಪಾಕೆಟುಗಳಲ್ಲೂ ಸಿಗರೇಟು ತುಂಬುತ್ತಾರೆ. ಉತ್ತಮ, ಮಧ್ಯಮ ಹಾಗೂ ಸಾಮಾನ್ಯ ತರಗತಿಯ ಸಿಗರೇಟುಗಳಿವೆ. ಸಾಮಾನ್ಯ ಸರಕಾರಿ ಅಧಿಕಾರಿಯೊಬ್ಬನು ತಿಂಗಳಿಗೆ ರೂ. ೫೦ ಸಿಗರೇಟಿಗಾಗಿ ವ್ಯಯಿಸಿದರೂ ಶ್ರೀಮಂತರು ೧೫೦ ರೂಪಾಯಿಯಷ್ಟು ಸಿಗರೇಟು ಕೊಂಡು ಸೇದಿಯಾರು! ಆದರೆ ಕೇವಲ ೫೦ ಸಿಗರೇಟುಗಳು ನಾಮಸ್ಯ ತರಗತಿಗೇರಿದ್ದು—ನಮ್ಮ ಜನರ ಮನೋಭಾವವೊಂದನ್ನು ಪ್ರದರ್ಶಿಸುವಷ್ಟೇ ಅದರ ಕಾರ್ಯಭಾರ.

‹ನವಯುಗ›

[illegible]

'ಕೊಡಗು' ಪತ್ರಿಕೆಯ ಏಜೆಂಟರು ಶ್ರೀ ಬೋಳಿಂದ ದೇವಪ್ಪನವರು.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್ :— ವೀರಾಜಪೇಟೆ.

ಶಾಖೆ:— ಸುಬ್ಬಯ್ಯ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕಾಣಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ನಳಿಗೆಯ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲ ಮತ್ತು ಕ್ಯಾಪುಗಳು.
4. 9″×4′ ಮತ್ತು 8″×4″ ಕಬ್ಬಿಣದ ತೊಲೆಗಳು (Girders).
5. 8′×3′×24 (Gage) ಕಬ್ಬಿಣದ ತಗಡುಗಳು.
6. $1\frac{1}{2}$″ × $\frac{5}{16}$″ ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.)

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್ [illegible])

॥ ವಾರ್ತೆಗಳು. ॥

ಮುಂಬಯಿ ಪ್ರಾಂತಿಬಂಧ ಪೋಲೀಸರು ಸುಮಾರು ನಾಲ್ಕುವರೆ ಮೈಲುಗಳವರೆಗೆ ಬೆನ್ನಟ್ಟಿ ಮದ್ಯ ತುಂಬಿದ ಕಾರೊಂದನ್ನು ಹಿಡಿದರು. ಆ ಕಾರಿನಲ್ಲಿದ್ದ ೩೨ ಗ್ಯಾಲನ್ ಮದ್ಯವನ್ನು ಪೋಲೀಸರು ವಶಪಡಿಸಿಕೊಂಡು ಅದರಲ್ಲಿದ್ದ ಇಬ್ಬರನ್ನು ಬಂಧಿಸಿದರು. ಓಡಿ ಹೋಗುವಾಗ ರಸ್ತೆ ಮಗ್ಗಲಿನ ಕಾಲ್ನಡಿಗೆ ರಸ್ತೆಗೆ ಕಾರು ಹಾಯಿತೆಂದೂ ಅದರಲ್ಲಿದ್ದ ಇಬ್ಬರು ತತ್ಪರಿಣಾಮವಾಗಿ ಗಾಯಗೊಂಡರೆಂದೂ ಪೋಲೀಸರು ಹೇಳಿದರು.

ರಾಜಧಾನಿಯಲ್ಲಿ ಇದೇ ಜನವರಿಯ ೧೪ಕ್ಕೆ ಹೊಂದಿ ಸ್ವತಂತ್ರ ಮುಖ್ಯ ಸೇನಾಪತಿಯಾದ ಕಾರ್ಯಪ್ಪನವರನ್ನು ಬೀಳ್ಕೊಡಲು ವೈಭವಯುಕ್ತ ಪೆರೇಡ್ ನಡೆಯಲಿದ್ದು ಎರಡು ಸಾವಿರ ಸೈನಿಕರು ಅದರಲ್ಲಿ ಭಾಗವಹಿಸಲಿರುವರು. ಹೊಸ ಮುಖ್ಯ ಸೇನಾಪತಿಗಳ ಸ್ವಾಗತಕ್ಕೆ ೧೫ನೆಯ ದಿನಾಂಕ ಇದೇ ರೀತಿ ಮತ್ತೊಂದು ವೈಭವಯುಕ್ತ ಪೆರೇಡು ನಡೆಯುವದು.

ಉತ್ತರ ಪ್ರದೇಶದ ಅತಿ ದೊಡ್ಡ ಜಮೀನ್ದಾರಿಯಾದ ಜಯಪುರ ರಾಜರ ಜಮೀನುಗಳನ್ನು ಓರಿಸಾ ಜಮೀನ್ದಾರಿ ನಿರ್ಮೂಲನ ಕಾಯದೆಯನ್ವಯ ಓರಿಸಾ ಸರಕಾರವು ವಶಪಡಿಸಿಕೊಂಡಿದೆ.

ಜಮ್ಮೂ ಪ್ರಾಂತದ ಬಂದರಬನ್ನಿ ಎಂಬಲ್ಲಿ ಸೇರಿದ ಎರಡು ಸಾವಿರ ಆಕ್ರಮ ಜನಸಮ್ಮರ್ದವನ್ನು ಚದುರಿಸಲು ಪೋಲೀಸರು ಗುಂಡು ಹಾರಿಸಿದ್ದರಿಂದ ಇಬ್ಬರು ಸತ್ತು ಒಬ್ಬನು ಗಂಭೀರಸ್ವರೂಪದ ಗಾಯಗೊಂಡನೆಂದು ಸರಕಾರದ ಪ್ರಕಟನೆ ಹೊರಬಿದೆ.

ಮಧ್ಯ ಪ್ರದೇಶದ ರಾಜ್ಯವನ್ನು ೪೫೭ ಅಭಿವೃದ್ಧಿ ಬ್ಲಾಕಗಳಲ್ಲಿ ವಿಭಜಿಸಲಾಗಿದ್ದು ಪ್ರತಿಯೊಂದು ಬ್ಲಾಕಿನಲ್ಲಿ ಒಕ್ಕಲತನದ ಅಭಿವೃದ್ಧಿಯನ್ನು ಸಾಧಿಸಲು ಪಂಚವಾರ್ಷಿಕ ಯೋಜನೆಯಲ್ಲಿ ಸೂಚಿಸಿದಂತೆ ಕಾರ್ಯಕ್ರಮವಾಗುವದು ಎಂದು ಮಧ್ಯಪ್ರದೇಶದ ಮುಖ್ಯ ಮಂತ್ರಿ ಪಂಡಿತ ರವಿಶಂಕರ ಶುಕ್ಲರು ಪತ್ರಿಕಾ ಪ್ರತಿನಿಧಿಗಿತ್ತ ಸಂದರ್ಶನದಲ್ಲಿ ಹೇಳಿದರು.

ಶಿಕ್ಷಣ ಕಾರ್ಯದಲ್ಲಿ ನಿರತರಾದವರು ತೀರ ಹೀನವಾದ ಆರ್ಥಿಕ ಸ್ಥಿತಿಯಲ್ಲಿ ಇದ್ದರೆ ಎಂಥ ಶಿಕ್ಷಣಪದ್ಧತಿಯನ್ನು ಜಾರಿಯಲ್ಲಿ ತಂದರೂ ಅದು ಯಶಸ್ವಿಯಾಗದು ಎಂದು ಸುಪ್ರಸಿದ್ಧ ಶಿಕ್ಷಣಜ್ಞರಾದ ಡಾ. ಅಮರನಾಥ ಝಾ ಇವರು ನಾಗಪುರದಲ್ಲಿ ಅ. ಭಾ. ಶಿಕ್ಷಣ ಪರಿಷತ್ತಿನ ಅಂಗವಾಗಿ ಏರ್ಪಡಿಸಿದ ಮಾಧ್ಯಮಿಕ ಶಿಕ್ಷಣ ಪ್ರಯೋಗದ ಪ್ರಭಾವಳಿಯ ಚರ್ಚಾಕೂಟದಲ್ಲಿ ಭಾಷಣ ಮಾಡುತ್ತ ಹೇಳಿದರು.

ಈಗ ಚಲನದಲ್ಲಿ ಇರುವ ತಿರುವಾಂಕೂರು ನಾಣ್ಯ ಚಲನವನ್ನು ೧೯೫೩ ನೇ ಏಪ್ರಿಲ್ ಒಂದರಿಂದ ರದ್ದುಗೊಳಿಸಲಾಗುವದೆಂದು ತಿರುವಾಂಕೂರದಲ್ಲಿಯು ಭಾರತದ ನಾಣ್ಯಗಳೇ ಅಧಿಕ ನಾಣ್ಯಗಳೆಂದು ಅಂದಿನಿಂದ ಅವುಗಳನ್ನು ಮಾತ್ರ ವ್ಯವಹಾರದಲ್ಲಿ ಬಳಸತಕ್ಕದೆಂದೂ ಸರಕಾರೀ ಪ್ರಕಟನೆ ಹೊರಬಿದೆ.

ಹೈದರಾಬಾದದ ಎಂಟು ತೆಲಗು ಜಿಲ್ಲೆಗಳನ್ನು ಆಂಧ್ರ ರಾಜ್ಯದಲ್ಲಿ ಸೇರಿಸಬೇಕು ಮತ್ತು ಕಾಶ್ಮೀರ-ಜಮ್ಮು ಸಂಸ್ಥಾನವನ್ನು ಪೂರ್ಣವಾಗಿ ವಿಲೀನಗೊಳಿಸಬೇಕೆಂಬದಾಗಿ ಹಿಂದೂ ಮಹಾಸಭೆಯು ಭೋಪಾಲ ಅಧಿವೇಶನದಲ್ಲಿ ಗೊತ್ತುವಳಿಯನ್ನು ಅಂಗೀಕರಿಸಿದೆ.

ಬೊಂಬಾಯಿ ಪ್ರಾಂತದ ಕ್ಷಾಮಪೀಡಿತ ಪ್ರದೇಶಗಳಲ್ಲಿ—ಮುಖ್ಯವಾಗಿ ಮಹಾರಾಷ್ಟ್ರದಲ್ಲಿ—ನಿಮ್ನವರ್ಗದವರು ವಿಪರೀತ ತೊಂದರೆಗೊಳಗಾಗಿದ್ದಾರೆ—ಎಂದು ಪಾರ್ಲಿಮೆಂಟಿನ ಸದಸ್ಯರೂ ಅಖಿಲ ಭಾರತ ನಿಮ್ನವರ್ಗ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿಯೂ ಆದ ಶ್ರೀ. ಪಿ. ಎನ್. ರಾಜಭೋಜ್‌ರವರು ತಿಳಿಸಿದ್ದಾರೆ.

ಜಾಲಿಯನ್‌ವಾಲಾಬಾಗ್ ದುರಂತ ಪ್ರಕರಣ ನಡೆದ ಪ್ರದೇಶದಲ್ಲಿ ೪೦,೦೦೦ ರೂಗಳ ವೆಚ್ಚದಲ್ಲಿ ಒಂದು ಸ್ಮಾರಕವನ್ನು ರಚಿಸುವ ಏರ್ಪಾಡು ನಡೆಯುತ್ತಿದೆ. ಸ್ಮಾರಕ ರಚನೆಗೆ ತಯಾರಿಸಿರುವ 'ಪ್ಲಾನ್'ಗೆ ಈ ಟ್ರಸ್ಟಿನವರು ತಮ್ಮ ಸಮ್ಮತಿ ನೀಡಿದ್ದಾರೆ. ಸುಪ್ರಸಿದ್ಧ ಫ್ರೆಂಚ್ ಶಿಲ್ಪಿ ವಿ. ಎಲ್. ಇ. ಕಾರ್ಬೂಸಿಯರ್ ಎಂಬುವರು ಪ್ಲಾನ್ ರಚಿಸಿದರು. ಅವರು ೧೯೫೩ ಇಸವಿ ಮಾರ್ಚಿ ತಿಂಗಳಲ್ಲಿ ಅಮೃತಸರಕ್ಕೆ ಆಗಮಿಸುವರೆಂದು ತಿಳಿದುಬಂದಿದೆ.

ರಾಷ್ಟ್ರದ ನಾನಾ ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದ ಸಮಾಜ ಸುಧಾರಕರ, ಅಧಿಕಾರಿಗಳ ಸಭೆಯು ಕೆಲವು ದಿನಗಳ ಹಿಂದೆ ಮದ್ರಾಸಿನಲ್ಲಿ ನಡೆಯಿತು. ಅದರಲ್ಲಿ 'ತಪ್ಪು ತಿದ್ದುವ ರಾಷ್ಟ್ರೀಯ ಕಾಂಗ್ರೆಸ್' ಎಂಬ ಸಂಸ್ಥೆ ಸ್ಥಾಪಿಸಬೇಕೆಂಬ ನಿರ್ಧಾರವನ್ನು ಕೈಗೊಳ್ಳಲಾಯಿತು. ಇಷ್ಟರಲ್ಲೇ ಇದರ ಕೆಲವು ಸದಸ್ಯರು ಬೊಂಬಾಯಿ ಅಥವಾ ಮದ್ರಾಸಿನಲ್ಲಿ ಸಭೆ ಸೇರಿ ಸಂಘಸ್ಥಾಪನೆಗೆ ಪ್ರಥಮ ಭಾವೀ ಸಿದ್ಧತೆ ನಡೆಸಲಿದ್ದಾರೆ. ಆ ಸಭೆಗೆ ಮದರಾಸು ಸರಕಾರದ ನ್ಯಾಯಾಂಗ ಸಚಿವರಾದ ಶ್ರೀ ಕೃಷ್ಣಕುಟ್ಟಿನಾಯರ್ ಅಧ್ಯಕ್ಷತೆ ವಹಿಸುವರು.

ಕ್ಷೌರಿಕ ವೃತ್ತಿಯೂ ಒಂದು ಕಲೆ. ರಸ್ತೆಯಲ್ಲಿ ತಿರುಗುವ ಎಲ್ಲರೂ ಮಾಡುವ ಕಾರ್ಯವಲ್ಲ; ಅದಕ್ಕೆ ಸಾಕಷ್ಟು ಕೈ ಕುಶಲತೆ ಬೇಕು. ಆರೋಗ್ಯ ನಿಯಮಾವಳಿ ಅನುಸರಿಸದಿದ್ದವರು ಜನತೆಯಲ್ಲಿ [illegible]ಯರೋಗ ಮುಂತಾದವನ್ನು ತರುವರು ಎಂಬುದಾಗಿ ಪಾಟ್ನಾದಲ್ಲಿ ಸೇರಿದ ನಾಯಿಂದರ ಸಭೆಯಲ್ಲಿ ಮಾತನಾಡುತ್ತಾ ಶ್ರೀ ಬಸಂತ ಠಾಕೂರ್ ಅವರು ತಿಳಿಸಿದ್ದಾರೆ. ಪರ ದೇಶಗಳಲ್ಲಿರುವಂತೆ ಇಲ್ಲಿಯೂ ಶಾಲೆಗಳಲ್ಲಿ ಇಷ್ಟವುಳ್ಳ ವಿದ್ಯಾರ್ಥಿಗಳಿಗೆ ಈ ಕಲೆ ಕಲಿಸಬೇಕೆಂದವರು ಹೇಳಿದ್ದಾರೆ.

ಹಿಂದಿನ ಕಾಲದಿಂದಲೂ ಮದ್ರಾಸ್ ನಗರ ತಮಿಳು ನಾಡಿನ ಭಾಗವಾಗಿರುವುದರಿಂದ ಭಾಷಾವಾರು ವಿಭಜನೆಯಾದರೆ ಅದು ತಮಿಳುನಾಡಿನ ಭಾಗವಾಗಿರಬೇಕೆಂಬ ನಿರ್ಣಯವನ್ನು ಮಧುರಾ ಜಿಲ್ಲಾ ಬೋರ್ಡ್ ಸಭೆಯಲ್ಲಿ ಮಾಡಲಾಯಿತು. ತಾತ್ಕಾಲಿಕವಾಗಿ ಮದ್ರಾಸ್ ನಗರವನ್ನು ಇನ್ನೊಂದು ಪ್ರಾಂತದ ರಾಜಧಾನಿ ಮಾಡಬೇಕೆಂಬ ಸಲಹೆಯನ್ನು ಅದು ಖಂಡಿಸಿತು.

ಭಾರತದ ಸ್ವಾತಂತ್ರ್ಯ ಚಳವಳಿಯ ಇತಿಹಾಸ.

ಭಾರತದ ಸ್ವಾತಂತ್ರ್ಯ ಚಳವಳದ ಇತಿಹಾಸವೊಂದನ್ನು ಸಿದ್ಧಗೊಳಿಸುವ ಬಗ್ಗೆ ಭಾರತ ಸರಕಾರವು ಸಂಪಾದಕರ ಸಮಿತಿಯೊಂದನ್ನು ನೇಮಿಸಿದೆ. ಪಾರ್ಲಿಮೆಂಟ್ ಸದಸ್ಯರಾದ ಡಾ. ಸಯ್ಯದ್ ಮಹಮ್ಮದರು ಈ ಸಮಿತಿಯ ಅಧ್ಯಕ್ಷರಾಗಿರುವರು. ಈ ಸಮಿತಿಯ ಮೊದಲನೆ ಸಭೆಯು ತಾ. ೬ರಲ್ಲಿ ಜರುಗಿತು. ಮೌಲಾನಾ ಅಬುಲ್ ಕಲಂ ಆಜಾದರು ಭಾಷಣ ಮಾಡುತ್ತಾ, ನೀವು ರಾಷ್ಟ್ರೀಯ ಮಹತ್ವವಿರುವ ಒಂದು ಕಾರ್ಯವನ್ನು ಕೈಕೊಂಡಿದ್ದೀರಿ. ಭಾರತದ ಸ್ವಾತಂತ್ರ್ಯದ ಹೋರಾಟದ ವಿಷಯಗಳು ಅಸಾಮಾನ್ಯವಾದವುಗಳು. ವಿಶೇಷವಾಗಿ ನಾವು ಅಹಿಂಸಾ ತತ್ವದ ಮೂಲಕವೇ ಸ್ವಾತಂತ್ರ್ಯ ಪಡೆದಿದ್ದೇವೆ. ಭಾರತದ ಸ್ವಾತಂತ್ರ್ಯ ಹೋರಾಟದ ಕಥೆಯನ್ನು ಅದನ್ನು ನಿಷ್ಪಕ್ಷಪಾತವಾಗಿ ಸಂಗ್ರಹಿಸಬೇಕಾದುದು ಈ ಸಮಿತಿಯ ಕರ್ತವ್ಯವಾಗಿದೆ ಎಂದು ಹೇಳಿದರು.

ಆಂಧ್ರ ಪ್ರಾಂತ ನಿರ್ಮಾಣ.

ಆಂಧ್ರ ಪ್ರಾಂತ ನಿರ್ಮಾಣದ ಬಗ್ಗೆ, ಪರಿಶೀಲನೆ ನಡೆಸಿ ಯಾವ ಯಾವ ಭಾಗಗಳು ಆ ಪ್ರಾಂತಕ್ಕೆ ಸೇರಬೇಕೆಂಬ ಬಗ್ಗೆಯೂ, ಅದರ ಆರ್ಥಿಕ ಸ್ಥಿತಿ ಮತ್ತಿತರ ಅವಶ್ಯಕ ವಿಚಾರಗಳ ಬಗ್ಗೆಯೂ ವರದಿ ಮಾಡಲು ರಾಜಸ್ಥಾನ ಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಕೆ. ಎನ್. ವಾಂಛೂ ಅವರನ್ನು ಕೇಂದ್ರ ಸರಕಾರವು ನೇಮಿಸಿದೆ. ಅವರು ಈಗಾಗಲೇ ಕಾರ್ಯ ಕೈಗೊಂಡಿರುವರು. ಜನವರಿ ೩೧ರೊಳಗೆ ಅವರು ಕೇಂದ್ರ ಸರಕಾರಕ್ಕೆ ತಮ್ಮ ವರದಿಯನ್ನು ಒಪ್ಪಿಸಬೇಕಿದೆ.

ಇಂಡಸ್ಟ್ರೀಯಲ್ ಫೈನಾನ್ಸ್ ಕಾರ್ಪೊರೇಶನ್.

ಭಾರತ ಸರಕಾರದವರು ಮೇಲಿನ ಸಂಸ್ಥೆಯ ಕಾರ್ಯಭಾರವನ್ನು ಹೇಗೆ ನಡೆಸುತ್ತಿದೆ ಎಂಬುದನ್ನು ವಿಚಾರಿಸಿ ವರದಿ ಮಾಡುವುದಕ್ಕೆ ಶ್ರೀಮತಿ ಸುಚೇತಾ ಕೃಪಲಾನಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದಾರೆ. ಶ್ರೀಗಳಾದ ಪಿ. ಬಿ. ಗಾಂಧಿ, ಶ್ರೀ ನಾರಾಯಣ ಮೆಹತಾ, ಪಿ. ಎ. ನಾಯಬ್ವಾಲಾ, ಆರ್ ಸೂರ್ಯನಾರಾಯಣರಾವ್ ಮತ್ತು ಜಿ. ಬಾಸು ಇವರುಗಳು ಸಮಿತಿಯ ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ.

Edited Printed and Published by P. I. BELLIAPPA at 'KODAGU' Press, Merc for Kodagu Ltd.,

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00 000
ವಸೂಲಾದ ಶೇರು ಮೊಬಲಗು	..	2,09,000
ಕ್ಷೇಮನಿಧಿ	..	63,000
ಇತರ ನಿಧಿಗಳು	..	17,000
ಠೇವಣಾತಿ	..	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕದ (Current Deposits)	ರೂ. 0-8-0
ಸೇವಿಂಗ್ಸ್ (ತಾ. 1—1—1953 ರಿಂದ)	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	1-8-0
1 ವರುಷ	2-0-0
2 ವರುಷ	2-8-0
3 ವರುಷ	3-0-0
5 ವರುಷ	3-1[illegible]
10 ವರುಷ	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲ್ಪಡುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾನ್ಜಿ.

Licence No. 60.
Licenced to Post without Prepayment.

ಸಂಪ. ೭೦. ಟ. ೧೫೦೦.
'KODAGU' MERCARA, (Coorg).

ಕೊಡಗು

ವಾರ್ಷಿಕ ಚಂದಾ ... ರೂ. 5-0-0.

ಸಂಪುಟ ೩೧ | ತಾರೀಕು ... | ಸಂ ...

ಈ ತಾರೀಕು ೧೫ರಂದು ನಿವೃತ್ತರಾದ

॥ ಭಾರತ ಸೇನಾನಿ ಜನರಲ್ ಕಾರ್ಯಪ್ಪನವರು ॥

ಲೇ: ಶ್ರೀ ... ಕಲಾ

ಮೂವತ್ತನಾಲ್ಕು ವರ್ಷಗಳ ಹಿಂದೆ ಕೊಡಗಿನ ಒಬ್ಬ ತರುಣನು ದಕ್ಷಿಣ ಭಾರತದ ದುಮಾಲನ್ನು ಹಾಕಿಕೊಂಡು ಸಾಧಾರಣ ಉಡುಪಿನೊಡಗೂಡಿ ಸಿಮ್ಲಾದಲ್ಲಿ ನಡೆದ ಸೈನಿಕ ಸಿಲೆಕ್ಷನ್ ಬೋರ್ಡಿನ ಮುಂದೆ ಪರೀಕ್ಷಿಸಲ್ಪಡಲು ನಿಂತಿದ್ದನು. ತನ್ನ ಸರ್ತಿಯನ್ನು ನಿರೀಕ್ಷಿಸುತ್ತಾ ಹೊರಗೆ ನಿಂತಿದ್ದಾಗ ಅದೇ ಸಿಲೆಕ್ಷನಿಗಾಗಿ ಬಂದಿದ್ದ ಇನ್ನೊಬ್ಬ ಉಮೇದುವಾರನು ಆತನನ್ನು ನೆಟ್ಟ ದೃಷ್ಟಿಯಿಂದ ಪರೀಕ್ಷಿಸಿ ಆತನ ಉಡುಪು, ಮುಂಡಾಸುಗಳನ್ನು ನೋಡಿ "ನೀನು ಖಂಡಿತವಾಗಿಯೂ ಆರಿಸಲ್ಪಡಲಾರೆ" ಎಂದನಂತೆ. ಹೀಗೆ ಹೇಳಿದ ಉಮೇದುವಾರನು ಪಾಶ್ಚಿಮಾತ್ಯ ಉಡುಪು ಹಾಕಿ, ಟೈಕಟ್ಟಿ ಶುದ್ಧ ಯೂರೋಪಿಯನಂತಿದ್ದನು. ಆ ರೀತಿಯ ಉಡುಪೇ ಆತನಿಗೆ ಜಯ ದೊರಕಿಸಬಹುದೆಂದು ಆತನ ನಂಬಿಕೆಯಾಗಿತ್ತು.

ಆದರೆ ಅದೃಷ್ಟ ಹಾಗಿರಲಿಲ್ಲ. ಮುಂಡಾಸು ಹಾಕಿದ ಯುವಕನು ಆರಿಸಲ್ಪಟ್ಟನು. ೮೬ ವರ್ಷಗಳ ಹಿಂದೆ ಅವರಿಬ್ಬರೂ ಮತ್ತೆ ಮಧುರಾದಲ್ಲಿ ಪುನಹ ಸಂಧಿಸಿದರು. ಅಂದು ಯೂರೋಪಿಯನ್ ಪೋಷಾಕಿನಲ್ಲಿ ಆಯ್ಕೆಗೆ ಬಂದಿದ್ದ ವ್ಯಕ್ತಿಯು ಕೇಪ್ಟನ್ ದಿಗ್ವಾ ಸಿಂಗರಾಗಿದ್ದರು. ಅಂದಿನ ಮುಂಡಾಸು ಧಾರಿ ವ್ಯಕ್ತಿಯು ಜನರಲ್ ಕಾರ್ಯಪ್ಪನವರಾಗಿದ್ದರು. ಮಧುರಾದಲ್ಲಿ ಸಂಧಿಸಿದಾಗ ದಿಗ್ವಾ ಸಿಂಗರು ಹಿಂದಿನ ಆ ಕಥೆಯನ್ನು ತನ್ನ ನಾಯಕ ಕಾರ್ಯಪ್ಪನವರೊಡನೆ ನೆನಸಿಕೊಂಡರು!

ಅದೃಷ್ಟ ದೇವಿಯು ಜನರಲ್ ಕಾರ್ಯಪ್ಪನವರನ್ನು ಬಹಳ ದಿನಂದಲೂ ಕೈಹಿಡಿದು ಮುಂದೆ ಮುಂದೆ ನಡೆಸಿದ್ದಾಳೆ. ೧೯೫೩ರ ಹೊಸ ವರ್ಷದಲ್ಲಿ ಅವರು ತಮ್ಮ ಅತ್ಯುಚ್ಚ ಪದವಿಯಿಂದ ನಿವೃತ್ತರಾದರೂ ಅವರು ಇನ್ನೂ ಜವಾಬ್ದಾರಿಯುತ ಅಧಿಕಾರವನ್ನು ಸ್ವೀಕರಿಸಿ ದೇಶಕ್ಕಾಗಿ ದುಡಿಯುವ ಸುಯೋಗ ಅವರಿಗಿದೆಯೆನ್ನಬಹುದು. ಗಡಿ ನಾಡುಗಳಾದ ಅಸ್ಸಾಮ್ ಯಾ ಪೂರ್ವ ಪಂಜಾಬುಗಳ ಗವರ್ನರರಾಗಿ ಅವರು ಕೀರ್ತಿಶಾಲಿಗಳಾಗಬಹುದು.

ಕಾರ್ಯಪ್ಪನವರಿಗೆ ಈಗ ೫೩ ವಯಸ್ಸು. ಆದರೆ ಅವರ ಶರೀರ ದಾರ್ಢ್ಯ, ಚುರುಕುತನ, ಕೆಲಸ ಮಾಡುವ ಹುಮ್ಮಸು ಇನ್ನೂ ಸೈನ್ಯ ತರಬೇತಿನಲ್ಲಿರುವ ಕೆಡೇಟಿನಂತೆಯೇ ಇವೆ. ಅವರ ಜ್ಞಾನ, ಅನುಭವ ದುಡಿಯುವ ಚೇತನಗಳನ್ನು ದೇಶದ ಹಿತಕ್ಕೆ ಇನ್ನೂ ಉಪಯೋಗಿಸಿಕೊಳ್ಳುವುದು ಜಾಣತನವಾಗುವುದು.

ಭಾರತದ ಸೇನಾನಾಯಕರಾದ ಕಾರ್ಯಪ್ಪನವರು ಪರಂಪರಾಗತವಾಗಿ ಭಾರತ ಸೇನೆಯಲ್ಲಿ ಬಂದ ದಕ್ಷತೆ, ಶಿಸ್ತುಗಳನ್ನು ಬೆಳೆಸಿದರು. ಹಿಂದೂದೇಶದ ಸೈನ್ಯದಲ್ಲಿ ಐಕ್ಯತೆಯನ್ನು ತಂದು ಪ್ರಾಂತೀಯವಾದ ಕೋಮುವಾರು ಭಾವನೆ; ಜಾತಿಮತ ದ್ವೇಷಗಳನ್ನು ನಿರ್ನಾಮ ಮಾಡಿ ಅಖಂಡ ಭಾರತ ಸೇನೆಯನ್ನು ಕಟ್ಟಿದರು. ತಮ್ಮ ಮಾತು, ಕೃತಿಗಳೆಲ್ಲವುಗಳಲ್ಲಿಯೂ ಇದಕ್ಕಾಗಿ ದುಡಿದರು. ಇಂದು ನಿಜವಾಗಿಯೂ ಭಾರತ ಸೈನ್ಯವು ರಾಷ್ಟ್ರಸೇನೆಯೆಂದು ಪರಿಗಣಿಸಲ್ಪಡುವಂತಾಗಿದೆ. ಸೈನಿಕರಿಗೆ ಆಗಾಗ್ಯೆ ಉಪದೇಶವಿತ್ತು ತಮ್ಮ ಸ್ವೇಚ್ಛಾವರ್ತನೆಯನ್ನು ಕಡಿಮೆ ಮಾಡಿ ತಾವು ದೇಶದ ಸೇವಕರು ಎಂಬ ಪಾಠವನ್ನು ಕಲಿಸಿದರು. ಕಾರ್ಯಪ್ಪನವರು ಕೃತಿಯಲ್ಲಿ ವಿಶ್ವಾಸವಿರುವವರು.

ಒಮ್ಮೆ ಅವರು ಕಲ್ಕತ್ತಾದಿಂದ ಸುಮಾರು ೧೦೦ ಮೈಲು ದೂರದಲ್ಲಿರುವ ಸೈನ್ಯದ ಮಿಲಿಟರಿ ಕೇಂದ್ರಕ್ಕೆ ಹೋಗುತ್ತಿರುವಾಗ ದಾರಿಯಲ್ಲಿ ಹಸಿವಾಗಿ ಬಳಲುತ್ತಿದ್ದರೂ ಕೂಲಿ ಕೆಲಸ ನಡೆಯುವ ಬತ್ತದ ಗದ್ದೆಗಳನ್ನು ಕಂಡರು. ಅವರು ತಮ್ಮ ಸೇನಾ ಅಧಿಕಾರಿಗಳನ್ನು ಕರೆದು ಸೈನಿಕರನ್ನು ಬಿಟ್ಟು ಮುಷತ್ತಾಗಿ ಅಲ್ಲಿಯ ಹಳ್ಳಿಗರ ಬೆಳೆ ಕುಯಿದು ಕೊಡಲು ಆಜ್ಞಾಪಿಸಿದರು. ಮತ್ತೊಮ್ಮೆ ಪಠಾನ್‌ಕೋಟೆಗೆ ಹೋದಾಗ ಆ ಪಟ್ಟಣದ ಕೊಳಕು ರಸ್ತೆ, ದುರ್ವಾಸನೆಯ ಚರಂಡಿಗಳನ್ನು ಕಂಡು ತಮ್ಮ 'ಜವಾನ'ರಿಗೆ ಆಜ್ಞಾಪಿಸಿದರು. ನಗರವು ಕೆಲವು ಸಮಯದಲ್ಲಿ ಹೊಸರೂಪವನ್ನು ತಳೆಯಿತು. ಒಂದು ಗ್ರಾಮದಲ್ಲಿ ಶಾಲೆಯೇ ಇಲ್ಲವೆಂಬುದನ್ನು ತಿಳಿದು ಆ ಗ್ರಾಮದ ಪಕ್ಕದ ತಮ್ಮ ಮಿಲಿಟರಿ ಕೇಂದ್ರದ ಕೆಲವರನ್ನು ಆಜ್ಞಾಪಿಸಿ ಆ ಗ್ರಾಮದ ಮಕ್ಕಳಿಗೆ ಓದು ಬರಹ ಕಲಿಸಲು ಏರ್ಪಡಿಸಿದ್ದರು.

ಅವರ ಮಾರ್ಗದರ್ಶನ ಮತ್ತು ಪ್ರಚೋದನೆಯಿಂದ ಭಾರತ ಸೇನೆಯು ಜನತೆಯ ಹಿತಕಾರಕ ಯೋಜನೆಗಳಾದ ವನಮಹೋತ್ಸವ, ಹೆಚ್ಚು ಬೆಳೆ ಬೆಳೆಯುವ ಮೊದಲಾದ ಕಾರ್ಯಗಳನ್ನು ಕೈಗೊಂಡಿತು. ರಾಯಲಸೀಮೆಯ ಬರಗಾಲ ಪೀಡಿತರಿಗೆ ಅಮೂಲ್ಯ ಸಹಾಯಮಾಡಿತು.

ಜನರಲ್ ಕಾರ್ಯಪ್ಪನವರ ಸಮ್ಮಾನ ಸೈನಿಕರ ಪ್ರೀತಿ ಆದರಗಳಿಗೆ ತುಂಬಾ ಪಾತ್ರರಾದವರು. ಅದು ಕಾಶ್ಮೀರದ ಗಡಿಯಾಗಿರಲೀ ಯಾ ಜೇಲ್ ಯೂಪ್ರದೇಶ ಮೂಲೆಯಾಗಿದ್ದರೂ ಸೈನಿಕರು, ಗ್ರಾಮದ ಜನರು ಕಾರ್ಯಪ್ಪನವರನ್ನು ಪ್ರೀತಿ ವಾತ್ಸಲ್ಯದಿಂದ ಸ್ವಾಗತಿಸುತ್ತಾರೆ. ಪ್ರತೀ ಕ್ಷೇತ್ರದಲ್ಲಿ ಸೈನಿಕರಿಗೆ ನಾಲ್ಕು ಧೈರ್ಯದ ಮಾತು ಹೇಳಿ ಅವರನ್ನು ಹಸನ್ಮುಖಿರಾಗಿರಿಸುತ್ತಾರೆ. ಅವರ ಜೇಬಿಗೆ ಬಿಡುವಿಲ್ಲ. ಒಂದೆಡೆ ಗ್ರಾಮದ ಬಡ ಮಕ್ಕಳಿಗೆ ಸಿಹಿ ತಿಂಡಿ ಹಂಚುತ್ತಿರುತ್ತಾರಾದರೆ ಮತ್ತೊಂದೆಡೆ ಗೂರ್ಖಾ ಸಿಪಾಯಿಗಳ ಹಿತಚಿಂತನೆ ಮಾಡುತ್ತಿರುತ್ತಾರೆ.

ಜನರಿಗೆ ತಮ್ಮ ಸರ್ವಸ್ವದ ನಿಷ್ಠೆಯ... ತುಂಬಾ ಇದೆ. ಏನೇ ಎದರು ಒಂದೂ ತಮ್ಮ ಶಿಸ್ತು, ಸರ್ವೋಚ್ಚ ದಕ್ಷತೆಗಳಿಗೆ ಹೊಂದದ ತಂದುಕೊಳ್ಳಲಾರರು. ಅವರ ನಗುಮೊಗ ಸೈನಿಕರನ್ನು, ನಾಯಕರನ್ನು ಒಂದುಗೂಡಿ ಏಕೀಕೃತರಾಗಿ ದುಡಿಯುವಂತೆ ಮಾಡುತ್ತದೆ. ಅವನು ಮೇಜರ್ ಜನರಲ್ ಇರಲೀ ಯಾ ಸಾಧಾರಣ ಸಿಪಾಯಿಯೇ ಇರಲಿ ಎಲ್ಲರನ್ನು ಕಾರ್ಯಪ್ಪನವರು ಸಮಭಾವದಿಂದ ನೋಡುತ್ತಾರೆ. 'ನನಗೆ ಕೃತಿಯ ಬಿಚ್ಚಿದ ಮಾತಿನಲ್ಲಿ ವಿಶ್ವಾಸ. ಜನರ ಮೇಲೆ ವಿಶ್ವಾಸವಿಟ್ಟು ವರ್ತಿಸುವುದೇ ಯೋಗ್ಯ ಮಾರ್ಗ' ಎಂದು ಅವರು ಹೇಳುತ್ತಾರೆ. ಇಷ್ಟು ಜನಪ್ರಿಯರಾದ ಕಾರ್ಯಪ್ಪನವರು ಅಧಿಕಾರ ಶಾಹಿಗಳ ಜೊತೆಯಲ್ಲಿ ಸುಸೂತ್ರವಾಗಿ ಹೊಂದಿಕೊಂಡು ಹೋಗುವುದು ಅಸಾಧ್ಯವಾಯಿತು. ಸೆಕ್ರೆಟರಿಯೇಟಿನಲ್ಲಿರುವ ಅಧಿಕಾರ ಶಾಹಿಗಳೊಡನೆ ಮತ್ತು ಕೆಲವು ರಾಷ್ಟ್ರೀಯ ಮುಂದಾಳುಗಳೊಡನೆ ಘರ್ಷಣೆ ಇದ್ದೇ ಇತ್ತು. ಅಧಿಕೃತ ವರದಿಗಳ ಪ್ರಕಾರ ಜನರಲರು ಈ ಹಿನ್ನಲೆಯ ಹೋರಾಟಕ್ಕಾಗಿ ತಮ್ಮ ಅಮೂಲ್ಯ ಸಮಯದ ಬಹುಭಾಗವನ್ನು ವ್ಯಯಿಸಬೇಕಾಗಿ ಬರುತಿತ್ತಂತೆ!

ಜನರಲ್ ಕಾರ್ಯಪ್ಪನವರು ಮಾತುಗಾರರು. ತಮಗೆ ಸಂಬಂಧವಿರುವ ಮತ್ತು ಇಲ್ಲದ ವಿಚಾರಗಳಲ್ಲೂ ಉದ್ದ ಮಾತಾ

ಜ. ಕಾರ್ಯಪ್ಪನವರು ಕೊಡಗಿನ ಹೆಸರಾಂತ ಗನ್ನಾಳಿಯ ಹಿನ್ನೆಲೆಯಲ್ಲಿ

ಭಾರತದ ಚಿಕಿತ್ಸಾ ರಂಗದಲ್ಲಿ

ಲೇ: ಡಾ|| ಅಪ್ಪಣ್ಣನವರು

ಡಿಸೆಂಬರ ತಿಂಗಳೆಂದರೆ ಸಮ್ಮೇಳನಗಳ ಸುಗ್ಗಿಯ ಸಮಯ. ಒಂದೆಡೆ ಸಾಹಿತ್ಯದ ವಿಷಯ. ಇನ್ನೊಂದೆಡೆ ಶಿಕ್ಷಣದ ವಿಷಯ. ಮಗುದೊಂದೆಡೆ ಕುಟುಂಬ ನಿಯಂತ್ರಣದ ವಿಷಯ. ಮತ್ತೊನ್ನೊಂದೆಡೆ ಕಾನೂನು ಕಟ್ಟಳೆಗಳ ವಿಷಯ ಹೀಗೆ ಪರಿಷತ್ತುಗಳ ಹಬ್ಬವೇ ಹಬ್ಬ. ಹಿನ್ನಿನ ಸಿಹಿಕಹಿ ಅನುಭವದ ತಪ್ಪು ಒಪ್ಪುಗಳ ವಿಮರ್ಶೆಯನ್ನನುಸರಿಸಿ ಹೊಸ ವರ್ಷದಲ್ಲಿ ತುಳಿಯಲಿಕ್ಕಿರುವ ಮಾರ್ಗ ನಿರೂಪಣೆಯೇ ಈ ಕೂಗಾಟಗಳ ಉದ್ದೇಶ.

ಒತ್ತಟ್ಟಿಗೆ ಪಾಶ್ಚಾತ್ಯ ವೈದ್ಯ ಸಮ್ಮೇಳನ ಜರಗಿದೆ. ಕೆಲವೆಡೆ ಚಿಕಿತ್ಸಾ ವಿಭಾಗದ ವಿವಿಧ ಅಂಗದಲ್ಲಿನ ತಜ್ಞರ ಪರಿಷತ್ತು ಜರಗಿದೆ. ಈ ಪರಿಷತ್ತುಗಳ ತಲೆತಿನ್ನುವ ಪ್ರಶ್ನೆಯೆಂದರೆ ನಮ್ಮ ದೇಶದಲ್ಲಿ ರೋಗವನ್ನು ತಡೆಗಟ್ಟುವುದೆಂತು? ಪರಿಹಾರ ಕ್ರಮವೆಂತು? ಇದಕ್ಕೆ ಉತ್ತರವಾಗಿ ಎಲ್ಲಾ ಪರಿಷತ್ತುಗಳ ಮತಸಾರವು ಅಖಿಲ ಭಾರತ ಮೆಡಿಕಲ್ ಪರಿಷತ್ತಿನ (All India Madical Council) ಅಧ್ಯಕ್ಷರಾದ ಡಾ. ಮುಳಿಯವರ ಅಭಿಮತದಲ್ಲಿ ಬಿಂಬೀಕರಿಸಲ್ಪಟ್ಟಿದೆ. ಅವರ ಸೂಚನೆಯೆಂದರೆ ಸರಕಾರವು ಆರೋಗ್ಯ ರಕ್ಷಣೆ ವೈದ್ಯಕ ಪರಿಹಾರ ಮತ್ತು ಶಿಕ್ಷಣ ಇವುಗಳ ಬಗೆಗೆ ಒಂದು ಯೋಜನೆಯನ್ನು ತಯಾರಿಸ ತಕ್ಕದ್ದು. ಈ ಯೋಜನೆಯನ್ನು ಕೇಂದ್ರ, ಪ್ರಾಂತದ ಆರೋಗ್ಯ ಮಂತ್ರಿಗಳು ಅಖಿಲ ಭಾರತ ಮೆಡಿಕಲ್ ಕೌನ್ಸಿಲ್ (All India Madical Council)ನ ಪ್ರತಿನಿಧಿಗಳು, ಹಿಂದೀ ವೈದ್ಯಕೀಯ ಸಂಘದ ಪ್ರತಿನಿಧಿಗಳು (All India Madical Association) ಒಂದೆಡೆ ಸೇರಿ ರೂಪಿಸತಕ್ಕದ್ದು. ಇದನ್ನು ಎಲ್ಲಾ ಪ್ರಾಂತದ ಸರಕಾರಗಳೂ ಬಳಕೆಯಲ್ಲಿ ತರತಕ್ಕದ್ದು.

ಈ ಪರಿಷತ್ತುಗಳಲ್ಲಿ ನೆರೆದ ಡಾಕ್ಟರ್ ಬಂಧುಗಳು ತಾವು ಪ್ರಾಚೀನ ಭಾರತದ ಉಜ್ವಲ ಪರಂಪರೆಯ ಉತ್ತರಾಧಿಕಾರಿಗಳೆಂಬುದನ್ನು ಮರೆತಂತೆ ಕಾಣುತ್ತದೆ. ಭಾರತವು ವಿಶ್ವರಾಷ್ಟ್ರಗಳಂತಲ್ಲ. ಇದು ಅತೀ ಪ್ರಾಚೀನವಾದುದು. ಜಗತ್ತಿನ ಅತ್ಯನ್ನೇ ರಕ್ಷಿಸಬಲ್ಲ ತನ್ನದೇ ಆದ ಸಂಸ್ಕೃತಿಯುಳ್ಳದ್ದು. ಸಂಗೀತ, ಸಾಹಿತ್ಯ ಕಲೆಗಳಲ್ಲಿ ಹೆಮ್ಮೆಯಿಂದ ನನ್ನದೇ ಆದ ವೈಶಿಷ್ಟ್ಯಯುಕ್ತವಾದ ಕಾಣಿಕೆಯನ್ನು ಜಗತ್ತಿಗೆ ಅರ್ಪಿಸಬಲ್ಲುದೆಂತೋ ಅಂತೆಯೇ ಚಿಕಿತ್ಸಾ ರಂಗದಲ್ಲೂ ವೈಶಿಷ್ಟ್ಯಯುತ ಕಾಣಿಕೆಯನ್ನು ಅರ್ಪಿಸಬಲ್ಲುದು. ಇದೀಗ ಆಯುರ್ವೇದ ಚಿಕಿತ್ಸಾ ಪದ್ಧತಿ ಅಂದಿನಿಂದ ಇಂದಿನ ವರೆಗೆ ಅಳಿಯದೆ ಉಳಿದಿದೆ. ಧೀಷ್ಮನಂತೆ ಹಳೆಯ ದೇಹದಲ್ಲಿ ಸನೆಯದ ಸತ್ವ ತುಂಬಿದೆ. ಭಾರತ ಮತ್ತು ಸಂಸ್ಕೃತಿಯಲ್ಲಿ ಇದೊಂದು. ಭೂಗರ್ಭದಲ್ಲಿನ ಧಾರುಗಳಂತೆ ಹರಿದು ಹೋಗುವ ನದೀ ಪ್ರವಾಹದಂತೆ ಡಾ. ರಾಧಾಕೃಷ್ಣನವರು ತನ್ನದೇ ಆದ ರೀತಿಯಲ್ಲಿ ಆಯುರ್ವೇದವನ್ನು "It is more a science of Health than a science of disease" ಚಿಕಿತ್ಸಾ ಶಾಸ್ತ್ರಕ್ಕಿಂತಲೂ ಹೆಚ್ಚು ಆಯುರಾರೋಗ್ಯ ಸಂರಕ್ಷಣ ಶಾಸ್ತ್ರವೆಂದು ಬಣ್ಣಿಸಿ ಇದರ ವೈಶಿಷ್ಟ್ಯವನ್ನು ಎತ್ತಿತೋರಿಸಿದ್ದಾರೆ.

ಇವರ ಮತ ಆರೋಗ್ಯ ತುಂಬಿ ತಿರಾಯು ಆಗಿರಬೇಕೆಂಬುದು. ಶರೀರದ ಬೆಳವಣಿಗೆಯು ಆತ್ಮ ವಿಕಾಸಕ್ಕೆ ಸಹಕಾರಿಯಾಗಿರಬೇಕು. ಇದ್ದರ ತನಕ ಎಷ್ಟೋ ಕಮಿಟಿಗಳನ್ನು ಕೇಂದ್ರ, ಪ್ರಾಂತ್ಯ ಸರಕಾರಗಳು ನಿರ್ಮಿಸಿವೆ. ಛೋರ್ ಸಮಿತಿಯಂಥಾ ರೂಪಾಯಿಗೆ ಹದಿನಾರಾಣೆ ಕೇವಲ ಪಾಶ್ಚಾತ್ಯ ವೈದ್ಯ ಶಾಸ್ತ್ರದ ಪಕ್ಷಪಾತ ಇದ್ದ ಸಮಿತಿಯಲ್ಲದೆ ಮತ್ತಿನ್ನಾವ ಸಮಿತಿಯೂ ಆಯುರ್ವೇದವನ್ನು ತಿರಸ್ಕರಿಸಿಲ್ಲ. ವಸ್ತುಸ್ಥಿತಿ ಹೀಗಿರುವಾಗ ಇವತ್ತಿನ ಪರಿಷತ್ತುಗಳ ಸಲಹೆಗಳಲ್ಲಿ ಆಯುರ್ವೇದಕ್ಕೆ ಸ್ಥಾನವನ್ನು ಕೊಡಲು ಮರೆತಿರುವುದು ತುಂಬಾ ವಿಷಾದಕರ.

ಆದರೆ ನಮ್ಮನ್ನು ಆಳುವ ವರ್ಗ ಈ ಪರಿಷತ್ತುಗಳಲ್ಲಿ ವಿಜ್ಞಾನದ ಹೆಸರಲ್ಲಿ ಎಷ್ಟು ಕಾಣುವ ಪಾಶ್ಚಾತ್ಯ ಪದ್ಧತಿಯ ಅಂಧಾನುಕರಣೆಗೆ ಬಲಿಬೀಳದೆ ನಮ್ಮ ಪರಂಪರೆಗೆ ಸಹಜವಾದ ಸಮಸ್ಯೆಯ ಘೋರಣೆಯನ್ನು ವಹಿಸಬೇಕು. ಜಗತ್ತಿನಲ್ಲಿ ಧರ್ಮ ಶಾಸ್ತ್ರವು ಕೇವಲ ನೆರಗನ್ನು ಹಿಡಿದುಕೊಂಡು ಹೋಗುವ ಎಳೆ ಹಸುಳೆಗಳಂತಲ್ಲ. ವಿಜ್ಞಾನದ ಗಳಿಕೆಯನ್ನು ಬಳಸುವಲ್ಲಿ ಹಿರಿತನದ ಅನುಭವ ಸಂಪತ್ತನ್ನು ಪ್ರಧಾನವಾಗಿಸದಿರೋಣ. ಕೊಳ್ಳೋಣ, ಕೊಡೋಣ. ಇನ್ನಾದರೂ ಆ ಮಾತು ಈ ಮಾತುಗಳಿಗೆ ಕಿವಿಕೊಡದೆ ಮದ್ರಾಸಿನ ಚೋಪ್ರಾ ಉಸ್ಮಾನ್ ಸಮಿತಿ, ಕೇಂದ್ರದ ಕರ್ನಲ್ ಚೋಪ್ರಾ ಸಮಿತಿಗಳ ವರದಿಗಳಲ್ಲಿ ವರಳು ತೋರಿಸಿದ ಸಮಸ್ಯೆಯ ದಾರಿಯಲ್ಲಿ ಸಾಗೋಣ. ಈ ನೀತಿ ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುತ್ತದೆ. ಅಂದರೇನೇ ಜಗತ್ತಿನಲ್ಲಿ ಭಾರತವು ಸಾಟಿ ಇಲ್ಲದ ರಾಷ್ಟ್ರವಾದೀತು. ಆ ರಾಷ್ಟ್ರವನ್ನು ಕಟ್ಟಿದ ಹೆಮ್ಮೆ ನಮ್ಮದಿರಲಿ

"ಜೈ ಹಿಂದ್"

ಶ್ರೀ ಕೆ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವಿರಾಜಪೇಟೆ.

ಮಂತ್ರಾಲೆ. ಒಮ್ಮೆ ಡಾ. ರಾಮಮನೋಹರ ಲೋಹಿಯರವರು ಇವರು ರಾಜಕೀಯ ಮಾತಾಡುವವನ್ನು ಖಂಡಿಸಿ ಟೀಕಿಸಿದ್ದರು. ಆಗಾಗ್ಗೆ ಕಾರ್ಯಪ್ಪನವರು ರಾಜಕೀಯ ವಿಚಾರ ಮಾತಾಡುತ್ತಿದ್ದರೂ ನಮ್ಮ ಸೈನಿಕರು ಯಾವುದೇ ರಾಜಕೀಯ ಪಕ್ಷದ ಕೈಗೊಂಬೆಯಾಗದೆ ಅಂದಿನ ಸರಕಾರದ ಆಜ್ಞೆಯಂತೆ ವರ್ತಿಸಬೇಕೆಂದು ಸ್ಪಷ್ಟಪಡಿಸಿದ್ದರು.

ದೇಶದ ಉದ್ದಗಲಕ್ಕೆ ಹಬ್ಬಿರುವ ಮಾಜಿ ಸೈನಿಕರ ನಿವೇಶನ, ಉದ್ಯಮ ಮತ್ತು ಪುನರ್ವಸತಿಗಳಿಗೆ ಕಾರ್ಯಪ್ಪನವರ ಪ್ರೋತ್ಸಾಹವು ಮುಖ್ಯ ಕಾರಣವೆನ್ನಬಹುದು. ನಿವೃತ್ತನಾದ ಮೇಲೆ ನಿವೃತ್ತ ಸಿಪಾಯಿಗಳ ಹಿರಕಾಗಿಯೇ ದುಡಿಯುವೆನು ಎಂದು ಕಾರ್ಯಪ್ಪನವರು ಹೇಳುತ್ತಿದ್ದರೆ ಅದು ಹೋಗಿನ ಮಾತಲ್ಲ. ಅವರ ಪ್ರಶ್ನೆಯೇ ತನ್ನ ಪ್ರಶ್ನೆಯೆಂದು ಅವರು ತಿಳಿದಿದ್ದಾರೆ.

ಕಾರ್ಯಪ್ಪನವರು ಮಹಾಯೋಧರಾದರೂ ಶಾಂತಿಯ ಮನುಷ್ಯರು. ಅವರು ನಿವೃತ್ತಿಯಾಗುವರಾದರೂ ಭಾರತ ಸೈನ್ಯವನ್ನು ಭದ್ರ ತಳಹದಿಯಲ್ಲಿ ನಿಲ್ಲಿಸಿದ ಕೀರ್ತಿ ಅವರದು. ಅವರ ಚೇತನ ಸ್ಫೂರ್ತಿಗಳು ದೇಶದ ಹಿತಕ್ಕಾಗಿ ಇನ್ನೂ ಉಪಯೋಗವಾಗುವಂತೆ ಏರ್ಪಡಿಸುವದು ಕೇಂದ್ರ ಸರಕಾರದ ಕರ್ತವ್ಯವಾಗಿದೆ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10.00 000
ವಸೂಲಾದ ಶೇರು ಹೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು ...	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1-–1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	..	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದರ್ನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಸೇರಿದ ಕೊಳ್ಳಲಾಗುವುದು. ಹೆಚ್ಚಿನ ವರ್ತಮಾನವನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ
ಪ್ರೆಸಿಡೆಂಟ್ & ಖಜಾಂಚಿ.

OFFICE OF THE PROVINCIAL TRANSPORT AUTHORITY, COORG, MERCARA.

Dated, the 7th January. 1953.

NOTIFICATION

The Provincial Transport Authority, Coorg, at its meeting held on 3rd January, 52, has declared that a bus line from Mercara to Hassan via Somwarpet, Banavara, Saniwarsanthe, Kodlipet, Kerodi, Kenchammana hoskote, Kundoor and Aloor is essential. Those who wish to run a bus service along this route may apply subject to the conditions noted below:-

Every application should be accompained by a treasury challan for having credited Rs 10/- (Ten) only under 'XII.Miscellaneous' and should be stamped with a court fee stamp of annas twelve

The amount of Rs. 10/- paid will not be refunded under any circumstances. The successful applicant should put a bus within two months from the date of issue of order by the Provincial Transport Authority.

The applications should reach the office of the Secretary Provincial Transport Authority, Coorg, Mercara by 31st January, 1953.

SRINIVASA RAO,
Secretary, Provincial Transport Authority, Coorg.

ಶ್ರೀ ಬಿ. ಎನ್. ದಾತಾರವರು ಮಡಿಕೇರಿಯಲ್ಲಿ

ಕೇಂದ್ರ ಸರಕಾರದ ಗೃಹ ಇಲಾಖೆಯ ಉಪಮಂತ್ರಿಗಳಾದ ಶ್ರೀ ಬಳವಂತರಾವ್ ನಾಗೇಶ್ ದಾತಾರ್ ಇವರು ತಾ. ೯ ರ ಬೆಳಿಗ್ಗೆ ಮಡಿಕೇರಿಗೆ ಬಂದರು. ಅವರನ್ನು ಕೊಡಗಿನ ಮಂತ್ರಿ, ಸ್ಪೀಕರು ಮತ್ತಿತರರೂ ಮಡಿಕೇರಿ ಪುರಸಭೆಯವರೂ ಸ್ವಾಗತಿಸಿ ಕೊಡಗು ಶಾಸನ ಸಭಾಂಗಣದಲ್ಲಿ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು. ಮಡಿಕೇರಿ ಪುರಸಭೆಯ ಅಧ್ಯಕ್ಷರಾದ ಜನಾಬ್ ಪಿ. ಮೊಹಿದಿನ್‌ರವರು ಬಿನ್ನವತ್ತಳೆಯನ್ನು ಓದಿದರು. ಬಿನ್ನವತ್ತಳೆಯಲ್ಲಿ ಶ್ರೀ ದಾತಾರ್‌ರವರು ಕಳೆದ ೩೦ ವರ್ಷಗಳಿಂದ ಕಾಂಗ್ರೆಸಿನಲ್ಲಿ ಮಾಡಿದ ಸೇವೆ ಬೆಳಗಾಮಿನ ಲಾ ಕಾಲೇಜಿನಲ್ಲಿ ಉಪಕುಲಪತಿಗಳಾಗಿ ದುಡಿದುದನ್ನೂ ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗೆ ಸೇವೆಸಲ್ಲಿಸಿದುದನ್ನೂ ಸ್ಮರಿಸಲಾಗಿತ್ತು. ಕೇಂದ್ರ ಜನತಾ ಸಭೆಯ ಸದಸ್ಯರಾದ ಎರಡೇ ತಿಂಗಳಲ್ಲಿ ಅವರನ್ನು ಡಿಪ್ಯೂಟಿ ಮಂತ್ರಿಗಳಾಗಿ ಮಾಡಿದ್ದು ಅವರ ಸೇವೆಗೆ ತಕ್ಕ ಪುರಸ್ಕಾರವೆನ್ನಲಾಗಿತ್ತು. ಮಡಿಕೇರಿ ಪುರಸಭೆಯ ವಿಚಾರವಾಗಿ ಹೇಳುತ್ತಾ ಮಾಜಿ ಅಧ್ಯಕ್ಷರಾಗಿದ್ದ ಶ್ರೀ ಕೆ. ಮಲ್ಲಪ್ಪನವರ ಸೇವೆಯನ್ನೂ ಶ್ರೀ. ಕ. ಚೇಂದಿಯವರ ಆಡಳಿತ ದಕ್ಷತೆಯನ್ನೂ ಪ್ರಶಂಸಿಸಲಾಯಿತು. ಕೊಡಗು ಸರಕಾರವು ಆರ್ಥಿಕ ಸಹಾಯವನ್ನು ಕೊಡಲಾರದೆಂದೂ ಆದ್ದರಿಂದ ಕೇಂದ್ರ ಸರಕಾರವು ಧನಸಹಾಯ ಮಾಡುವಂತೆಯೂ ಮತ್ತು ಮೈಸೂರಿನಿಂದ ವಿದ್ಯುಚ್ಛಕ್ತಿ ದೊರೆಯುವಂತೆಯೂ ತಮ್ಮ ಪ್ರಭಾವವನ್ನು ಉಪಯೋಗಿಸಬೇಕೆಂದೂ ಕೇಳಲಾಗಿತ್ತು.

ಉಪಮಂತ್ರಿಗಳು ಈ ಬಿನ್ನವತ್ತಳೆಗೆ ಉತ್ತರವೀಯುತ್ತಾ ರಾವನೇ ವ್ಯಕ್ತಿಯು ದೇಶದ ಆಡಳಿತ ಜವಾಬ್ದಾರಿಯನ್ನು ಹೊರುವ ಮೊದಲು ಜಿಲ್ಲಾಬೋರ್ಡು ಯಾ ಮುನ್ಸಿಪಾಲಿಟಿಗಳ ಸದಸ್ಯನಾಗಿ ಅನುಭವ ಗಳಿಸಬೇಕಾಗಿದೆ. ದಿವಂಗತ ಸರ್ದಾರ್ ಪಟೇಲರು ಅಹಮದಾಬಾದ್ ಪುರಸಭೆಯ ಅಧ್ಯಕ್ಷರಾಗಿ ಅತುಳ ಸೇವೆ ಮಾಡಿ ಅಂದಿನ ಪ್ರತಿಗಾಮಿ ಬ್ರಿಟೀಷ ಸರಕಾರದ ಹೊಗಳಿಕೆಯನ್ನು ಪಡೆದಿದ್ದರು. ಆ ಅನುಭವದಿಂದಲೇ ಅವರು ಮುಂದೆ ಭರತಖಂಡದ ಗೃಹ ಮಂತ್ರಿಗಳಾದಾಗ ದಕ್ಷ ಆಡಳಿತ ನಡೆಸಿ ಆದರ್ಶ ಆಡಳಿತಗಾರರೆನಿಸಿದರು. ಕಾಳಿದಾಸನ ರಘುವಂಶದಲ್ಲಿ ರಾಜನನ್ನು ದೇಶದ ಜನತೆಯ ತಂದೆಯೆಂದು ಕರೆಯಲಾಗಿದೆ. ಅದೇ ರೀತಿ ಇಂದು ಪುರಸಭೆಯ ಆಡಳಿತ ಜವಾಬ್ದಾರಿ ಹೊತ್ತವರು ಪುರಜನರ ತಂದೆ ತಾಯಿಗಳಂತೆ. ಅವರು ಪುರಜನರ ಹಿತಾಕಾಂಕ್ಷೆಗಳನ್ನು ಬಯಸಿ ಸೇವೆಸಲ್ಲಿಸಬೇಕು.

ಗೃಹ ಮಂತ್ರಿಗಳಾದ ಕಾಟ್ಜೂರವರು ಬಂದಿದ್ದಾಗ ಮಡಿಕೇರಿಯನ್ನು ನೋಡಿ ಬಹು ಸಂತೋಷ ಪಟ್ಟುಕೊಂಡು ಹೋದರೆಂದು ಚೀಫ್ ಕಮೀಷನರು ನನಗೆ ಹೇಳಿದರು. ಆದರೆ ಅವರಿಗೆ ತೋರಿಸಿದ ಸುಂದರ ಭಾಗಗಳನ್ನು ನೋಡಲು ನಾನು ಬಯಸುವುದಿಲ್ಲ. ಮಹಾತ್ಮಾ ಗಾಂಧಿಯವರು ದುಂಡುಮೇಜಿನ ಪರಿಷತ್ತಿಗೆ ಲಂಡನ್ನಿಗೆ ಹೋಗಿದ್ದಾಗ ಅತೀ ಭವ್ಯವಾದ ವೆಸ್ಟ್ ಎಂಡ್ ಭಾಗದಲ್ಲಿ ಇಳಿದುಕೊಳ್ಳದೆ ಬಡ ಜನರ ಗುಂಪಿರುವ ಈಸ್ಟ್ ಎಂಡಿನಲ್ಲಿ ಇಳಿದುಕೊಂಡರು. ಅದರಂತೆ ಮಡಿಕೇರಿಯ ಬಡಜನರಿರುವ ಭಾಗವನ್ನು ನಾನು ನೋಡಲಿಚ್ಛಿಸುವೆನು.

ನಾವು ಮಂತ್ರಿಗಳಿರಲಿ, ರಾಜಕಾರಣಿಗಳಿರಲಿ, ಆಡಳಿತ ನಡೆಸುವ ಸರಕಾರಿ ಅಧಿಕಾರಿಗಳಿರಲಿ ನಾವೆಲ್ಲರೂ ಒಂದು ಕುಟುಂಬದಂತೆ. ಸಾಮಾಜಿಕ ಕೆಲಸಗಾರರು ನಾವು. ಪ್ರತಿಯೊಬ್ಬನೂ ತನ್ನಪಾಲಿನ ಕೆಲಸವನ್ನು ಮಾಡಬೇಕು. ಈ ದೃಷ್ಟಿಯಿಂದ ಒಕ್ಕೂಟದ ಪ್ರೆಸಿಡೆಂಟರೂ, ಪ್ರಧಾನಿ ನೆಹರೂರವರೂ ಜನತೆಯ ಸೇವಕರು. ಇಂದು ನಮ್ಮ ಯಜಮಾನರೆಂದರೆ ೧೭ ಕೋಟಿ ಸಂಖ್ಯೆಯಲ್ಲಿರುವ ಮತದಾರರು.

ಸ್ವಾತಂತ್ರ್ಯವು ನಮಗೆ ದೊರೆತಂದಿನಿಂದ ವಿಧಾಯಕ ಕಾರ್ಯಕ್ರಮದ ಅವಶ್ಯಕತೆ ತುಂಬಾ ಹೆಚ್ಚಿದೆ. ವಿಧಾಯಕ ಕಾರ್ಯಕ್ರಮಗಳ ಕರ್ತೃ ರಾಷ್ಟ್ರಪಿತನು ಇಂದಿಲ್ಲದಿದ್ದರೂ ನಾವು ಏನು ಮಾಡುತ್ತಿರುವೆವೆಂಬುದನ್ನು ಸ್ವರ್ಗದಿಂದ ನಿರೀಕ್ಷಿಸುತ್ತಿರಬಹುದು. ಆ ಮಹಾತ್ಮರ ದೈವತ್ವವನ್ನು ನಾವು ಪಡೆಯಬೇಕು. ಆ ದೈವತ್ವವು ಮಂದಿರ, ಮಸೀದಿಗಳಲ್ಲಾಗಲೀ, ಚರ್ಚು ಗುರುದ್ವಾರಗಳಲ್ಲಾಗಲೀ ಇಲ್ಲ. ಅದು ಬಡಜನರೆನಿಸಿದ ದರಿದ್ರ ನಾರಾಯಣರ ಹೃದಯದಲ್ಲಿದೆ. ಅದನ್ನರಿತು ವರ್ತಿಸಬೇಕು ಎಂದರು.

ನಂತರ ಅವರಿಗೆ ಕೊಡಗಿನ ಬಾರ್ ಎಸೋಸಿಯೇಶನಿನವರು ಚಹಕೂಟವನ್ನು ಏರ್ಪಡಿಸಿ ಸತ್ಕರಿಸಿದರು. ಮಂತ್ರಿಗಳು ಕೂಡಿಗೆ ವ್ಯವಸಾಯ ಕೇಂದ್ರವನ್ನು ಸಂದರ್ಶಿಸಿ ಸೋಮವಾರಪೇಟೆಯಲ್ಲಿ ಸಾರ್ವಜನಿಕ ಭಾಷಣ ಮಾಡಿ ಶನಿವಾರಸಂತೆಯಲ್ಲಿ ಏರ್ಪಡಿಸಿದ್ದ ಚಹಾಕೂಟವನ್ನು ಸ್ವೀಕರಿಸಿ ಮಡಿಕೇರಿಗೆ ಬಂದರು. ಮಡಿಕೇರಿಯಲ್ಲಿ ಅವರಿಗೆ ಔತಣವು ಏರ್ಪಾಡಾಗಿತ್ತು.

ತಾ. ೧೦ರಲ್ಲಿ ಕಾಲೇಜು ಹೊಸ ಕಟ್ಟಡವನ್ನು ನೋಡಿ ಕಾಲೇಜು ವಿದ್ಯಾರ್ಥಿಗಳಿಗೆ ಒಂದು ಭಾಷಣವಿತ್ತರು. ನಂತರ ವಿರಾಜಪೇಟೆಯಲ್ಲಿ ಸಾರ್ವಜನಿಕ ಭಾಷಣ ಮಾಡಿದರು. ಪೊನ್ನಂಪೇಟೆ ನೆಹರು ಕಾಲನಿಯನ್ನು ಸಂದರ್ಶಿಸಿ ಪೊನ್ನಂಪೇಟೆಯಲ್ಲಿ ಸಾರ್ವಜನಿಕ ಭಾಷಣ ಮಾಡಿದರು. ಶ್ರೀ ರಾಮಕೃಷ್ಣಾಶ್ರಮದಲ್ಲೂ ಒಂದು ವ್ಯಾಖ್ಯಾನ ಕೊಟ್ಟರು. ಪೊನ್ನಂಪೇಟೆಯಲ್ಲಿ ಚಹಾ ಸ್ವೀಕರಿಸಿ ಮಡಿಕೇರಿಗೆ ಬಂದರು. ಮಡಿಕೇರಿ ಶಾಸನ ಸಭಾಂಗಣದಲ್ಲಿ ಮತ್ತೆ ಔತಣ ಏರ್ಪಡಿಸಲಾಗಿತ್ತು.

ಗಾಂಧಿ ತತ್ವದಲ್ಲಿ ಜಪಾನಿನ ಆಸಕ್ತಿ.

ಗಾಂಧೀಜಿಯ ತತ್ವದಲ್ಲಿ ಜಪಾನು ವಿಶೇಷ ಆಸಕ್ತಿ ಹೊಂದಿದೆಯೆಂದು ಗಾಂಧೀ ವಿಚಾರ ಚರ್ಚಾಗೋಷ್ಠಿಯಲ್ಲಿ ಜಪಾನಿನ ನಿಯೋಗಿ ಪ್ರೊ| ಯುಸು ಕ ಟ್ಸುರುಮಿ ತಿಳಿಸಿದರು.

'ಇನ್ನೊಂದು ಯುದ್ಧವನ್ನು ತಡೆಗಟ್ಟುವುದು ಹೇಗೆ? ಯುದ್ಧದಿಂದ ಹುಟ್ಟಿಕೊಳ್ಳುವ ಅಂತರ ರಾಷ್ಟ್ರೀಯ ಕಷ್ಟಗಳನ್ನು ನಿವಾರಿಸುವುದು ಹೇಗೆ? ಮತ್ತು ಪುರಾತನ ಧಾರ್ಮಿಕ ಆದರ್ಶಗಳನ್ನು ನಾಶ ಮಾಡಿದರೆ ಅದರಿಂದ ಖಾಲಿಯಾಗುವ ಸ್ಥಾನವನ್ನು ಭರ್ತಿಮಾಡುವುದು ಹೇಗೆ? ಈ ಮೂರು ಪ್ರಶ್ನೆಗಳಿಗೆ ಗಾಂಧೀ ತತ್ವದಿಂದ ಉತ್ತರ ಬಯಸಿದೆ' ಯೆಂದು ಅವರು ಹೇಳಿದರು.

ನೋಟೀಸು.

ನನ್ನ ಪತಿ ಶ್ರೀ ಡಿ. ಎಸ್. ಸಂಣಶಾಂತಮಲ್ಲಪ್ಪನವರು, ಈ ಕೆಳಗೆ ನಮೂದಿಸಿರುವ ಪಿತ್ರಾರ್ಜಿತ ಸೊತ್ತುಗಳನ್ನು ಮಾರಾಟ ಮಾಡುವರಾಗಿ ನನಗೆ ತಿಳಿದು ಬಂದಿದೆ. ಈಗ ಆ ಸೊತ್ತುಗಳು ಅವರ ಹೆಸರಿನಲ್ಲೇ ಜಮಾಬಂದಿ ನಡೆದು ಬಂದಿರುವದಾದರೂ, ಹಿರಿಯರು ಗಳಿಸಿದ ಆಸ್ತಿಗಳಾದ ಕಾರಣ, ಅವು ನನ್ನ ಮೈನರ್ ಮಗನಾದ ಡಿ. ಎಸ್. ಸದಾಶಿವನಿಗೇ ಹಕ್ಕಾಗಬೇಕೇ ವಿನಹ, ಅವರಿಗೆ ಮಾರಾಟ ಮಾಡುವುದಕ್ಕೆ ಯಾವ ಹಕ್ಕು ಯಾ ಅಧಿಕಾರವಿರುವುದಿಲ್ಲ. ಆಸ್ತಿಗಳ ಪೂರ್ತಿ ವಿವರಗಳು:—

1. ಸೋಮವಾರಪೇಟೆ ನಾಡು ಕಿಬ್ಬೆಟ್ಟ ಗ್ರಾಮ ಸರ್ವೆ ನಂ. 70 2ರ 0·20, 44ರ 0·86, 43ರ 1·34, 73ರ 0·86 ಜುಮ್ಲಾ 3·80 ಎಕ್ರೆ ಭೂಮಿ.

2. ಸದ್ರಿ ಕಿಬ್ಬೆಟ್ಟ ಗ್ರಾಮ ಸರ್ವೆ ನಂ. 74 1ರ 0·31, 76ರ 0·47, 75ರ 1·73, 74 2ರ 0·40 ಜುಮ್ಲಾ 2·91 ಎಕ್ರೆ, ಕಾಫಿ ತೋಟ. (3) ಸದ್ರಿ ಸೋಮವಾರಪೇಟೆ ನಾಡು ಬೇಳೂರು ಗ್ರಾಮದ ಸರ್ವೆ ನಂ. 2/2ರ 26·06 ಏಕ್ರದ ಪೈಕಿ 12 ಎಕ್ರೆ ಕಾಫಿ ತೋಟ. (4) ಮತ್ತು ಸೋಮವಾರಪೇಟೆ ನೋಟಿಫೈಡ್ ಏರ್ಯದ ಸರ್ವೆ ನಂ. 7ರ 0·02, 7/1ರ 0·04, ವಾಸದ ಮನೆ, ಸರ್ವೆ ನಂ. 8ರ 0·02, 8/1ರ 0·06 ವಾಸದ ಮನೆ. ಇವುಗಳನ್ನು ಯಾರಾದರೂ ನನಗೆ ತಿಳಿಯದಂತೆ ನನ್ನ ಮೈನರ್ ಮಗನಿಗೆ ಮೋಸ ಮಾಡಲು, ಸದ್ರಿ ಸೊತ್ತುಗಳನ್ನು ನನ್ನ ಪತಿಯಿಂದ ಕ್ರಯಕ್ಕಾಗಲಿ, ಗಿರ್ವಿ ಭೋಗ್ಯಕ್ಕಾಗಲೀ ಯಾ ಗೇಣಿಗಾಗಲೀ ಪಡಕೊಂಡಲ್ಲಿ, ಅವರುಗಳಿಗೆ ಸಿಂಧುವಾಗತಕ್ಕದ್ದಲ್ಲ. ಆ ಬಗ್ಗೆ ನಾನು ತಕರಾರು ಮಾಡುವುದು ಖಂಡಿತ. ಅದರಿಂದ ನನಗುಂಟಾಗುವ ನಷ್ಟ ಕಷ್ಟ ಕೋರ್ಟು ಖರ್ಚುಗಳಿಗೆ ಅವರೇ ಹೊಣೆಗಾರರಾಗಬೇಕು. ಮತ್ತು ಅವರ ನಷ್ಟ ಕಷ್ಟಗಳಿಗೆ ನಾನು ಜವಾಬ್ದಾರಳಲ್ಲವೆಂಬ ಸಂಗತಿಯನ್ನು ಖಚಿತವಾಗಿಯೂ, ದೃಢವಾಗಿಯೂ ಈ ನೋಟೀಸು ಮೂಲಕ ಸಮಸ್ತ ಜನರಿಗೂ ಪತಿ ಶ್ರೀ ಡಿ. ಎಸ್. ಸಂಣಶಾಂತಮಲ್ಲಪ್ಪನವರಿಗೂ ತಿಳಿಸಿರುತ್ತೇನೆ. ಇದರ ಯಥಾ ನಕಲನ್ನು ಕೋರ್ಟಿಗೂ ದಾಖಲೆ ಬಗ್ಗೆ ಕಳಿಸಿರುತ್ತೇನೆ.

ಅಲ್ಲದೆ ನನ್ನ ಭಾವನ ಹೆಂಡತಿ ದೊಡ್ಡ ಸಣ್ಣಮ್ಮನವರು ನನ್ನ ಪತಿಯಿಂದ ಕೆಲ ವರ್ಷಗಳ ಹಿಂದೆ ನನಗೆ ತಿಳಿವಳಿಕೆ ಇಲ್ಲದಿರುವಾಗ ಕೆಲವು ಪಿತ್ರಾರ್ಜಿತ ಆಸ್ತಿಗಳನ್ನು ಸಾಲ ತೀರಿಸಲಿಕ್ಕೆಂದು ಕ್ರಯಕ್ಕೆ ಪಡೆದಿರುತ್ತಾರೆ. ಇದು ಅವರಿಗೆ ಹಕ್ಕಾಗುವುದಿಲ್ಲ. ಹಿರಿಯರ ಆಸ್ತಿಯಾದ್ದರಿಂದ ಅವು ನಹ ನನ್ನ ಮಗನಿಗೇ ಹಕ್ಕಾಗತಕ್ಕದ್ದಾಗಿದೆ. ಆದ್ದರಿಂದ ಶ್ರೀಮತಿ ಡಿ. ಸಣ್ಣಮ್ಮನವರು ನಹ ಸದರಿ ಆಸ್ತಿಗಳನ್ನು ಬೇರೆ ಯಾರಿಗೂ ಮಾರಾಟ, ಗಿರ್ವಿ, ಭೋಗ್ಯ, ಗೇಣಿ ವಗೈರೆ ಪರಾಧೀನ ಮಾಡಲು ಹಕ್ಕಿಲ್ಲವೆಂದು ಈ ನೋಟೀಸು ಮೂಲಕ ಶ್ರೀ. ಡಿ. ಸಣ್ಣಮ್ಮನವರಿಗೂ ಸಹ ತಿಳಿಯಪಡಿಸಿರುತ್ತೇನೆ.

ಡಿ ಎಸ್ ಸಾವಿತ್ರಮ್ಮ,
(ಮೈನರ್ ಮಗ ಡಿ. ಎಸ್. ಸದಾಶಿವನ ಪರವಾಗಿ)
ನಂ. 391—ದೊಡ್ಡಬೀದಿ,
ಸೋಮವಾರಪೇಟೆ ಪೋಸ್ಟ್.

ಕಣ್ಣೀರು ಸುರಿಸುವ ವಿಗ್ರಹ

ನಬರಮತಿಗೆ ಸಮೀಪವಿರುವ ರಾಮನಗರದ ಜೈನ ದೇವಾಲಯದಲ್ಲಿ ಇತ್ತೀಚೆಗೆ ಜರುಗಿದ ವಿಗ್ರಹ ಪ್ರತಿಷ್ಠಾ ಸಮಾರಂಭದಲ್ಲಿ, ಅಸ್ಪೃಶ್ಯತಿಳಿದು ವಿಗ್ರಹವು ಕಣ್ಣೀರ ಸುರಿಸುವ ಅದ್ಭುತವು ತೋರಿಬಂತು. ಸಮಾರಂಭದ ಸ್ವಲ್ಪ ಮೊದಲು, ಪೂರ್ಣವಾದ ನಿಮಿಷಗಳ ಕಾಲ, ವಿಗ್ರಹದ ಗಲ್ಲಗಳ ಮೇಲೆ ಕಣ್ಣೀರು ತೊಟ್ಟಿಕ್ಕಿತ್ತು. ಸಮಾರಂಭವನ್ನು ನೋಡಲು ನೆರೆದ ಸಾಧಾರಣ ೨೫ ಸಾವಿರ ಭಕ್ತರು, ವಿಗ್ರಹವು "ಅಳುವ" ದೃಶ್ಯವನ್ನು ಗಂಭೀರ ಭಾವದಿಂದ ನೋಡಿದರು. (ಇಂಥ ಘಟನೆಯೊಂದು ಕೆಲಕಾಲದ ಹಿಂದೆ ದಿಲ್ಲಿಯಲ್ಲಿ ನಡೆದಿದೆ.)

ಹತಾಶನಾದ ತಂದೆ.

ಕಾನ್ಪುರದಲ್ಲಿ ಒಬ್ಬ ತಂದೆಯು ತನ್ನ ೨೦ ವರ್ಷದ ಮಗನ ವಿರುದ್ಧ, ಪೋಲೀಸರಲ್ಲಿ ಫಿರ್ಯಾದು ದಾಖಲ್ಮಾಡಿ ಅವನನ್ನು ದಸ್ತಗಿರಿ ಮಾಡಿಸಿದ್ದಾನೆ. ತನ್ನ ಮಗನ ನಡತೆಯನ್ನು ತಿದ್ದುವ ಕೆಲಸದಲ್ಲಿ ತಾನು ವಿಫಲನಾದುದರಿಂದ ಈ ರೀತಿ ಮಾಡಬೇಕಾಯಿತೆಂದು ತಂದೆ ಮಂಗಲಸಿಂಘನು ವಿವರಿಸಿದನು. ಮಗನು (ಜೀತಸಿಂಘ್) ಹಣವನ್ನು ಕದ್ದು ಜೂಜಾಟದಲ್ಲಿ ವ್ಯರ್ಥ ಮಾಡುತಿದ್ದಾನೆ. ಈ ಚಟವನ್ನು ಬಿಡಲಾರದಷ್ಟಕ್ಕೆ ಆ ಚಟ ಹತ್ತಿದೆ. ಇಷ್ಟರ ತನಕ ಎಲ್ಲ ಬೋಧನೆಯೂ ಬೆದರಿಕೆಗಳೂ ನಿಷ್ಫಲವಾಗಿವೆ. ಮಂಗಲಸಿಂಘನು ಪೋಲೀಸರ ಸಹಾಯವನ್ನು ಕೇಳಿಕೊಂಡು ತನ್ನ ಮಗನನ್ನು, ಆತನು ರಸ್ತೆಯ ಬದಿಯಲ್ಲಿ ಜೂಜಾಡುತ್ತಿರುವಾಗಲೇ ದಸ್ತಗಿರಿ ಮಾಡಿಸಿದನು. ಹುಡುಗನು ಈಗ ಪೋಲೀಸು-ಬಂಧನಗೃಹದಲ್ಲಿದ್ದಾನೆ.

ಕೊಡಗು

ತಾ ೧೬-೧-೧೯೫೩ನೇ ಶುಕ್ರವಾರ

ಮಹಾ ಸೈನಿಕ.

ಜನರಲ್ ಕಾರ್ಯಪ್ಪನವರು ಹಿಂದೂ ದೇಶದ ಸೈನ್ಯಪಡೆಯಲ್ಲಿ ೩೩ ವರ್ಷಗಳ ಸೇವೆಯನ್ನು ಸಲ್ಲಿಸಿ ತಾ. ೧೪ರ ಮಧ್ಯಾಹ್ನದ ಮೇಲೆ ನಿವೃತ್ತರಾದರು. ಜಗತ್ತಿನಲ್ಲಿ ಜನಸಂಖ್ಯೆಯಲ್ಲಿ ದ್ವಿತಿಯಸ್ಥಾನ ಪಡೆದಿರುವ ಒಂದು ರಾಷ್ಟ್ರದ ಬೃಹತ್ ಸೈನ್ಯದ ಮುಖ್ಯ ಸೇನಾನಿಯಾಗಿದ್ದವರೂ ಅವನು ಸೈನಿಕನಿರಲೀ, ಸಾರ್ವಜನಿಕನಿರಲೀ ಪ್ರತೀ ಒಬ್ಬನಿಗೂ ಪ್ರಿಯರೆನಿಸಿದವರೂ ಅಧಿಕಾರದಿಂದ ನಿವೃತ್ತಿ ಹೊಂದುವುದು ವ್ಯಸನವನ್ನುಂಟುಮಾಡಿದರೂ ಕಾರ್ಯಪ್ಪನವರು ತಮ್ಮ ಕೆಲಸ ಕಾರ್ಯಗಳಿಗಾಗಿ ಎಂದೂ ಹೆಮ್ಮೆ ಪಟ್ಟುಕೊಳ್ಳಬಹುದು. ಅವರ ಅಧಿಕಾರಕ್ಕೆ ಜೀವದಾನ ದೊರೆಯುವುದೆಂಬ ವಾರ್ತೆ ಹಬ್ಬಿದ್ದಾಗ "ಮುಂಬರುವ ಕಿರಿಯರಿಗೆ ಸ್ಥಳ ತೆರವು ಮಾಡುವುದು ಕರ್ತವ್ಯ" ವೆಂದು ಅವರು ಹೇಳಿದ ವಿಚಾರವು ಅವರ ವಿಶಾಲತೆಯನ್ನು ತೋರಿಸುತ್ತದೆ. ಕಾರ್ಯಪ್ಪನವರು ತನ್ನ ಈ ವಿಶಾಲತೆ ಪ್ರೀತಿ ಸೌಹಾರ್ದಗಳಿಂದಾಗಿಯೇ ಸರ್ವರಿಗೂ ಬೇಕಾದವರಾಗಿದ್ದಾರೆ. ಅವರ ನಿವೃತ್ತಿಯ ಕಾಲಕ್ಕೆ ನಡೆದ ಮಹಾ ಸೇನಾ ಪರೇಡು, ಸೈನಿಕರು ವ್ಯಕ್ತಪಡಿಸಿದ ಅನುರಾಗ ಅವರ ಜನ ಪ್ರಿಯತೆಗೆ ದ್ಯೋತಕಗಳಾಗಿವೆ.

ಜನರಲ್ ಕಾರ್ಯಪ್ಪನವರ ಜೀವನದ ವಿಚಾರ ಕೊಡಗಿನವರಿಗೆ ತಿಳಿಯದ್ದಲ್ಲ. ಹಿಂದೀ ಸೈನ್ಯದಲ್ಲಿ ಪ್ರತಿಯೊಂದು ಪ್ರಾಮುಖ್ಯ ಸ್ಥಾನದಲ್ಲೂ ಕೆಲಸ ಮಾಡಿ ಕಡೆಗೆ ಸೇನಾನಿ ಪದದ ಪ್ರಥಮ ಭಾರತೀಯರಿವರು. ಅವರು ಸ್ವತಂತ್ರ ಭಾರತದ ಪ್ರಥಮ ಸೇನಾನಿಯಾಗಿ ಆದರ್ಶ ರೀತಿ ಸೇವೆಸಲ್ಲಿಸಿದರು.

ಇಂದು ಹಿಂದೂದೇಶದ ಸೇನೆಯು ಜನಾನುರಾಗಿಯಾಗಿದ್ದರೆ ಅದು ಕಾರ್ಯಪ್ಪನವರ ಅಚಲ ಪ್ರಯತ್ನದ ಫಲದಿಂದ. ಸೈನಿಕರೆಂದರೆ ಕ್ರೂರಿಗಳು, ನಿರ್ದಾಕ್ಷಿಣ್ಯರು ಎಂದಿದ್ದ ಭಾವನೆ ಜನತೆಯಲ್ಲಿ ಬದಲಾಗಿ ಅವರು ಸಹೋದರರು, ದೇಶದ ಹಿತಕಾಂಕ್ಷಿಗಳು ಎಂದಾಗಿದ್ದರೆ ಅದು ಕಾರ್ಯಪ್ಪನವರು ಸೈನಿಕರಿಗೆ ಹಾಕಿಕೊಟ್ಟ ಮಾರ್ಗದರ್ಶನದಿಂದ. ಭಾರತ ಸೈನ್ಯವು ನಾಗರಿಕ ಜನರ ಕಷ್ಟ, ದುಃಖಗಳಲ್ಲಿ ಭಾಗಿಯಾಗಿ, ಆಗಾಗ್ಯೆ ನೆರವೀಯುತ್ತಿದ್ದುದು ಅವರನ್ನು ಜನತೆ ಪ್ರೀತಿಸುವಂತೆ ಮಾಡಿದೆ. ಇದಲ್ಲದೆ, ಭಾರತೀಯ ಸೈನ್ಯದಲ್ಲಿದ್ದ ಭೇದಭಾವ, ಕೋಮುವಾರು ವಿಷಬೀಜ, ಪ್ರಾಂತೀಯ ತೊಡರುಗಳನ್ನು ತೆಗೆದು ಹಾಕಿ ಎಲ್ಲರೂ ಭಾರತೀಯಯೋಧರೆಂಬ ಭಾವನೆಯನ್ನು ತಂದು ರಾಷ್ಟ್ರೀಯ ಸೇನೆಯನ್ನು ಏಕೀಕರಿಸಿದವರು ಕಾರ್ಯಪ್ಪನವರು. ಸೈನ್ಯದಲ್ಲಿ ಶಿಸ್ತು, ದಕ್ಷತೆ, ಕಾರ್ಯಕುಶಲತೆ, ದೇಶಭಕ್ತಿಗಳನ್ನು ಹೆಚ್ಚಿಸಿ ಸ್ವತಂತ್ರ ದೇಶದ ಯೋಗ್ಯ ಯೋಧರನ್ನಾಗಿ ನವ್ಯ ಸೈನ್ಯವನ್ನು ಮಾರ್ಪಡಿಸಿದ ಕೀರ್ತಿ ಕಾರ್ಯಪ್ಪನವರದು.

ಕೊಡಗಿನ ಮಟ್ಟಿಗೆ ಹೇಳುವದಾದರೆ ಹೇಳಲು ಹೆಸರಿಲ್ಲದಂತೆ, ಯಾರಿಗೂ ಪರಿಚಯವಿಲ್ಲದಂತೆ ಜೀವಿಸುತಿದ್ದ ಕೊಡಗನ್ನು ಪ್ರಪಂಚದ ಎದುರು ನಿಲ್ಲಿಸಿದ ಕೀರ್ತಿ ಕಾರ್ಯಪ್ಪನವರದು. ಕಾರ್ಯಪ್ಪನವರಿಂದಾಗಿ ಕೊಡಗಿನ ಹೆಸರು ಪ್ರತಿ ಭಾರತೀಯನಿಗೆ ಪರಿಚಯವಾಗಿ ಕೊಡಗಿನ ಸೊಬಗು, ಸೌಂದರ್ಯ, ಜೀವನ ವೈಶಿಷ್ಟ್ಯಗಳು ಹೊರದೇಶದವರಿಗೆ ಅರಿವಾದವು.

ಕಾರ್ಯಪ್ಪನವರು ಕೇವಲ ಹೋರಯೋಧನು ಮಾತ್ರವಲ್ಲ. ಜನತೆಯ ಹಿತಚಿಂತನೆಯಲ್ಲಿ ತುಂಬಾ ಕಾತುರವನ್ನು ತೋರಿಸುತಿದ್ದವರು ಅವರು, ನಿಜವಾಗಿ ಜನ ಹಿತಸಾಧಕರು. ತಮ್ಮ ಸೈನಿಕರ ಮೂಲಕವೂ, ವ್ಯಕ್ತಿಗತವಾಗಿಯೂ, ಬಡ ಜನರಿಗೆ ಅವರು ನೆರವಾಗಿ ಹಲವರ ಕಷ್ಟದ ಭಾರವನ್ನು ಹಗುರಗೊಳಿಸಿದ್ದಾರೆ. ಪ್ರತಿ ಕಡೆ ಅವರು ಸಾರ್ವಜನಿಕರಿಗೆ ತಮ್ಮ ಜವಾಬ್ದಾರಿಯರಿತು ದೇಶದ ಹಿತ ಸಾಧಿಸುವ ಬೋಧನೆ ಕೊಟ್ಟಿದ್ದಾರೆ. ಜನರಲ್‌ರವರು ಇಂದಿನ ತರುಣ ಪೀಳಿಗೆಯ ಹೃದಯವನ್ನೇ ಅಪಹರಿಸಿದ್ದಾರೆಂದರೆ ಅತ್ಯುಕ್ತಿಯಾಗಲಾರದು. ಕಾರ್ಯಪ್ಪನವರ ವರ್ಚಸ್ಸಿನಿಂದಾಗಿ ಸೈನಿಕ ಜೀವನವು ಇಂದು ಆಕರ್ಷಕ ಜೀವನವೆನಿಸಿದೆ. ಕಾರ್ಯಪ್ಪನವರು ಭರತ ಖಂಡದ ವೀರ ಯೋಧರು ಮಾತ್ರವಲ್ಲ; ಭಾರತ ಜನನಿಯ ಸತ್ಪುತ್ರನೂ ಹೌದು.

ಕಾರ್ಯಪ್ಪನವರಿಗೆ ಈಗ ೫೩ ವರ್ಷ ಪ್ರಾಯ. ಅವರಲ್ಲಿ ಇನ್ನೂ ಹುರುಪು, ಹುಮ್ಮಸ್ಸುಗಳಿವೆ. ಮಿಡಿಯುವ ಚೇತನವಿದೆ. ಸೈನಿಕ ಜೀವನದ ಕಠಿಣ ಕೆಲಸದಿಂದ ಅವರು ನಿವೃತ್ತರಾಗುವುದು ಉಚಿತವಾದರೂ ಅವರ ವಿಶಾಲ ಅನುಭವ, ಆತ್ಮೀಕ ದಕ್ಷತೆ, ಕಾರ್ಯಕುಶಲತೆಗಳನ್ನು ಭರತ ಖಂಡದ ಶಾಶ್ವತ ಹಿತಕ್ಕಾಗಿ ಇನ್ನೂ ಉಪಯೋಗಿಸಿಕೊಳ್ಳಬೇಕಾದುದು ಅವಶ್ಯವಿದೆ. ಅವರನ್ನು ಪೂರ್ವ ಪಂಜಾಬಿನ ಯಾ ಅಸಾಮ್ ಪ್ರಾಂತದ ರಾಜ್ಯಪಾಲರಾಗಿ ನೇಮಿಸುವ ವರ್ತಮಾನಗಳು ಈ ಮೊದಲು ಪ್ರಚಲಿತವಾಗಿದ್ದವು. ಆದರೆ ಈಗ ಆ ವಿಚಾರ ಕೇಳಿ ಬರುತ್ತಿಲ್ಲ. ಕೇಂದ್ರ ಸರಕಾರವು ಪ್ರಿಯತರ ಅನುಭವ, ಕಾರ್ಯತತ್ಪರತೆಗಳನ್ನು ಇನ್ನೂ ಉಪಯೋಗಿಸಿಕೊಳ್ಳುವದು ತೀರಾ ಅವಶ್ಯ.

ಹಿಂದೂದೇಶದ ಸೇನೆಯನ್ನು ಭದ್ರತಳಹದಿಯಲ್ಲಿ ನಿಲ್ಲಿಸಿ, ಪ್ರಪಂಚದ ಇತರ ರಾಷ್ಟ್ರಗಳ ಸೇನೆಗಳೊಡನೆ ಸಮತೂಕದಲ್ಲಿ ನಿಲ್ಲಬಲ್ಲ ಸ್ಥಿತಿಗೆ ತಂದು ಕಾರ್ಯಪ್ಪನವರು ನಿವೃತ್ತರಾಗಿದ್ದಾರೆ. ಅವರನ್ನು ತುಂಬು ಹೃದಯದಿಂದ ಬೀಳ್ಕೊಡುವೆವಾದರೂ ಅದೇ ಭರವಸೆಯ ಹೃದಯದಿಂದ ಅವರ ಬದಲು ಮುಖ್ಯ ಸೇನಾನಿಯಾಗಿರುವ ರಾಜೇಂದ್ರಸಿಂಹಜೀಯವರನ್ನು ಸ್ವಾಗತಿಸುವೆವು. ರಾಜೇಂದ್ರಸಿಂಹಜೀಯವರಲ್ಲಿ ಕಾರ್ಯಪ್ಪನವರ ಹೆಸರಿನಲ್ಲಿದ್ದ ಪ್ರಭೆ, ಶೋಭೆಗಳಿಲ್ಲದಿದ್ದರೂ ಪ್ರತ್ಯಕ್ಷ ರಣರಂಗದಲ್ಲಿ ಅರಿತುನುರಿತ ಯೋಧರಿವರು. ಅವರ ದಕ್ಷತೆ, ಪ್ರತಾಪ ಮತ್ತು ಸೇವೆಯು ಕಾರ್ಯಪ್ಪನವರ ಸೇವೆಯಷ್ಟೇ ಇದೆ. ಆದ್ದರಿಂದ ಭಾರತ ದೇಶದ ಸೇನೆಯು ರಾಜೇಂದ್ರಸಿಂಹಜೀಯವರ ನೇತೃತ್ವದಲ್ಲಿ ಇನ್ನೂ ಹೊಸ ಶಕ್ತಿ ಮತ್ತು ಶೋಭೆಯಿಂದ ಬೆಳೆದು ಬೆಳಗುವದೆಂದು ನಂಬಬಹುದಾಗಿದೆ.

ವರ್ತಮಾನ.

ತಾ. ೨ ರಲ್ಲಿ ಫ್ರೇಜರ್‌ಪೇಟೆ ಬೈಚನಹಳ್ಳಿಯಲ್ಲಿ ಎರಡನೇ ಪಂಗಡದ ರಾತ್ರಿ ಶಾಲೆ ತೆರೆಯಲ್ಪಟ್ಟಿದೆ. ೫ ರಲ್ಲಿ ಕೋತೂರಿನಲ್ಲಿ ಶ್ರೀ. ಕೊಡಂದೆರ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ವಯಸ್ಕರ ಶಿಕ್ಷಣ ಶಾಲೆ ತೆರೆಯಲ್ಪಟ್ಟಿತ್ತು.

ಕಳೆದ ಅಕ್ಟೋಬರ್ ತಿಂಗಳಲ್ಲಿ ನಡೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಶ್ರೀಗಳಾದ ಪಿ. ಕೆ. ರಾಮಚಂದ್ರ, ಎಚ್. ಪಿ. ಪ್ರತಾಪಸಿಂಹ, ಎ. ಎ. ಸುಬ್ಬಯ್ಯ ಇವರುಗಳು ತೇರ್ಗಡೆಯಾಗಿರುವರು.

ಕೊಡಗಿನ ಶ್ರೀ. ಸುಬೋಧಾನಂದ (ಕಾಳಪ್ಪಯ್ಯ)ನವರು ಕಾಶಿಯಲ್ಲಿ ಕಟ್ಟಿಸಿರುವ ಅಗಸ್ತ್ಯಮಂದಿರದ ವಾರ್ಷಿಕೋತ್ಸವವು ತಾ, ೨೯-೧-೫೩ ರಲ್ಲಿ ನಡೆಯುವದೆಂದು ತಿಳಿಸುತ್ತಾರೆ

ತಾರೀಕು ೧೪ ರಲ್ಲಿ ನಿವೃತ್ತರಾದ ಜನರಲ್ ಕೆ. ಎಂ. ಕಾರ್ಯಪ್ಪನವರನ್ನು ಬೀಳ್ಕೊಡಲಿಕ್ಕಾಗಿ ಡೆಲ್ಲಿಯಲ್ಲಿ ಈ ಹಿಂದೆ ಎಂದೂ ನಡೆಯದ ಬೃಹತ್ ಸೇನಾಪರೇಡು ನಡೆಯಿತು. ಸೈನ್ಯದವರು ಅವರಿಗೆ ಒಂದಡಿ ಎತ್ತರದ ಬೆಳ್ಳಿಯ ಯೋಧನ ಪ್ರತಿಮೆಯೊಂದನ್ನು ಬಹುಮಾನವಾಗಿ ಕೊಟ್ಟರು. ಅವರ ಸತ್ಕಾರ ಕೂಟಕ್ಕೆ ಪಂಡಿತ ನೆಹರೂ ಮೊದಲಾದವರು ಆಗಮಿಸಿದ್ದರು. ಜನರಲ್ ಕಾರ್ಯಪ್ಪನವರು ತಾ. ೧೭ರಲ್ಲಿ ಮಡಿಕೇರಿಗೆ ಬರಲಿರುವರೆಂದು ಗೊತ್ತಾಗಿದೆ

ಜಪಾನಿನಲ್ಲಿ ಅನುಸರಿಸುತ್ತಿರುವ ಬತ್ತದ ವ್ಯವಸಾಯ ಕ್ರಮವನ್ನು ಕೊಡಗಿನಲ್ಲಿ ಜಾರಿಗೆ ತರುವರೆ ಕೊಡಗಿನಲ್ಲಿ ಒಂದು ಕೇಂದ್ರವನ್ನು ಸ್ಥಾಪಿಸಲು ಕೇಂದ್ರ ಸರಕಾರವು ನಿಶ್ಚಯಿಸಿರುವದರಿಂದ ಕೇಂದ್ರ ಸರಕಾರದ ಆಹಾರ ಶಾಖೆಯ ಉಪಮಂತ್ರಿಗಳಾದ ಶ್ರೀ. ಎಂ. ಕೃಷ್ಣಪ್ಪನವರು ಬರುವ ವಾರ ಕೊಡಗಿಗೆ ಬರಲಿರುವರು.

ಶ್ರೀ. ಮಾಳೇರ ಮಂದಣ್ಣನವರನ್ನು ಕೊಲೆ ಮಾಡಿದರೆಂಬ ಆಪಾದನೆಯ ಮೇಲೆ ಫಾಶಿ ಶಿಕ್ಷೆ ವಿಧಿಸಲ್ಪಟ್ಟಿದ್ದ ಶ್ರೀಗಳಾದ ಮಾಳೇರ ಪೊನ್ನಪ್ಪ, ಮಾಚೆಟ್ಟಿರ ಉತ್ತಪ್ಪ ಮತ್ತು ಕುಂಜಾರ ಚಿಣ್ಣಪ್ಪ ಇವರನ್ನು ತಾ, ೧೦ ರ ಬೆಳಿಗೆ ೫ ಗಂಟೆಗೆ ಮಡಿಕೇರಿ ಜೈಲಿನಲ್ಲಿ ಫಾಶಿಗೆ ಏರಿಸಿದರು.

ಫ್ರೇಜರ್‌ಪೇಟೆಗೆ ಸಮೀಪದಲ್ಲಿರತಕ್ಕ ಮೈಸೂರು ಸೀಮೆಯ ದೊಡ್ಡ ನೇರಳೆ ಮತ್ತು ಅದರ ಸುತ್ತಮುತ್ತಲು ಇರುವ ಗ್ರಾಮಗಳಲ್ಲಿ ಕಾಲರ ರೋಗವು ಇರುವದೆಂದು ಮೈಸೂರು ಸರಕಾರದವರು ತಿಳಿಸಿರುವರು. ಆದ್ದರಿಂದ ಕೊಡಗಿನ ಪ್ರಜೆಗಳು ಈ ಪ್ರದೇಶಕ್ಕೆ ವ್ಯಾಪಾರಕೋಸ್ಕರವಾಗಲೀ ಇಲ್ಲವೇ ಇತರ ಕಾರಣಗಳಿಂದಾಗಲೀ ಪ್ರಯಾಣ ಮಾಡತಕ್ಕವರು ಹೆಬ್ಬಾಲೆಯ ಅಥವಾ ಫ್ರೇಜರ್‌ಪೇಟೆಯ ಆಸ್ಪತ್ರೆಯಲ್ಲಿ ಕಾಲರದ ವನ್ನು ತಡೆಗಟ್ಟತಕ್ಕ ಇನಾಕ್ಯುಲೇಶನ್ ತೆಗೆದುಕೊಂಡ ನಂತರವೇ ಹೋಗಬೇಕು.

ಧನಲಕ್ಷ್ಮಿ.

ಅನ್ನ ನೀರು ಮುಟ್ಟದೆ ಜೀವಿಸುತ್ತಿರುವ ಸುಂಟಿಕೊಪ್ಪದ ಧನಲಕ್ಷ್ಮಿಯನ್ನು ಪರೀಕ್ಷಿಸಿ ಆಕೆಯ ನಿರಶನ ಜೀವನದ ಮರ್ಮವನ್ನರಿಯಲು ಆಕೆಯನ್ನು ಬೆಂಗಳೂರು ಆಸ್ಪತ್ರೆಗೆ ಕಳುಹಿಸುವಂತೆ ಪ್ರೇರೇಪಿಸಬೇಕೆಂದು ಕೇಂದ್ರ ಸರಕಾರದಿಂದ ಕೊಡಗಿನ ಸರಕಾರಕ್ಕೆ ಸೂಚನೆ ಬಂದಿದೆಯೆಂದು ತಿಳಿದುಬಂದಿದೆ. ಆದರೆ ಧನಲಕ್ಷ್ಮಿಯ ತಂದೆಯವರು ಇದಕ್ಕೆ ಒಪ್ಪಿಲ್ಲವೆಂದೂ, ಮಂತ್ರಿಗಳೂ ಇತರರೂ ಅವರನ್ನು ಒಪ್ಪಿಸುವ ಪ್ರಯತ್ನದಲ್ಲಿರುವರೆಂದೂ ತಿಳಿಯಬಂದಿದೆ.

ಮಡಿಕೇರಿ ಆಸ್ಪತ್ರೆಯಿಂದ ತಾ. ೨೧-೧೧-೫೨ ರಲ್ಲಿ ಆಕೆ ಸುಂಟಿಕೊಪ್ಪಕ್ಕೆ ಹೋದನಂತರ ತಾ. ೨೨ ಮತ್ತು ೨೩ರಲ್ಲಿ ಒಂದೊಂದು ಕಪ್ಪು ಕಾಫಿ ಕುಡಿದಿರುವಳಂತೆ. ಆದರೆ ಅದನ್ನು ಆಕೆ ವಾಂತಿ ಮಾಡಿದಳು. ತಾ. ೬-೧-೫೩ರಲ್ಲಿ ಕೊಡಗಿನ ಸಿವಿಲ್ ಸರ್ಜನರು ಬಂದು ಆಕೆಯನ್ನು ಪರೀಕ್ಷಿಸಿದಾಗ ಆಕೆಯ ಭಾರ ೯೯ ಪೌಂಡುಗಳಿದ್ದವು. ಆಕೆ ತಾ. ೨೪ರಲ್ಲಿ ಮೈಸೂರಿನಲ್ಲಿರುವ ತನ್ನ ಅಕ್ಕನಲ್ಲಿಗೆ ಹೋಗಿರುವಳು. ಧನಲಕ್ಷ್ಮಿಯು ಎಂದಿನಂತೆ ಮನೆ ಕೆಲಸ ಮಾಡುತ್ತಾಳೆ. ಮಡಿಕೇರಿಯಿಂದ ಹೋದನಂತರ ಕ್ರಮಕ್ಕೆ ಸರಿಯಾಗಿ ಮುಟ್ಟು ಆಗುತ್ತಿಲ್ಲವೆಂದು ತಿಳಿದುಬಂದಿದೆ

ಬೆಂಗಳೂರಿನಲ್ಲೊಬ್ಬ 'ಧನಲಕ್ಷ್ಮಿ' ಇದ್ದಾರೆ!

ಅವರು ಆರು ಮಕ್ಕಳ ತಾಯಿ.

ಅನ್ನಾಹಾರಗಳಿಲ್ಲದೆ ಕೊನೆಗೆ ವಿಶೇಷ ಪಾನೀಯಗಳನ್ನೂ ಸೇವಿಸದೆ ಬರೇ ನೀರನ್ನೇ ಕುಡಿದುಕೊಂಡು ಜೀವಿಸುತ್ತಿರುವ 'ಧನಲಕ್ಷ್ಮಿ' ಬೆಂಗಳೂರಿನಲ್ಲೂ ಇದ್ದಾರೆ. ಆದರೆ ಆಕೆ ಆರು ಮಕ್ಕಳ ತಾಯಿ. ಆರು ವರ್ಷಗಳಿಂದ ಆಕೆ ಯಾವ ಆಹಾರವೂ ಇಲ್ಲದೆ ಬರೇ ನೀರು ಕುಡಿದುಕೊಂಡೇ ಇಡೀ ಸಂಸಾರದ ಕಾರ್ಯ ನಿರ್ವಹಣೆಯನ್ನೆಲ್ಲಾ ನಡೆಸುತ್ತಿದ್ದಾರೆ.

ವಿಶ್ವೇಶ್ವರಪುರದ ಡಯಾಗನಲ್ ರಸ್ತೆಯಲ್ಲಿ ವಾಸಿಸುತ್ತಿರುವ ಇವರ ಹೆಸರು ಶ್ರೀಮತಿ ನಾಗಲಕ್ಷ್ಮಮ್ಮ. ಅವರಿಗೀಗ ೪೫ ವರ್ಷ ವಯಸ್ಸು. ಬೆಂಗಳೂರಿನ ಪ್ರಖ್ಯಾತ ಸಿಮೆಂಟ್ ವ್ಯಾಪಾರಿಗಳಾದ ಶ್ರೀ. ಬಿ. ಸಿ. ನಾರಾಯಣಸ್ವಾಮಿ ಅಂಡ್ ಕಂಪೆನಿಯ ಮಾಲೀಕರಾದ ಶ್ರೀ ಕೆ. ಆರ್. ಶ್ರೀನಿವಾಸರಾವ್‌ರವರ ಪತ್ನಿಯವರು. ಶ್ರೀಮತಿಯವರು ಮುಂಜಾನೆಯೇ ಎದ್ದು ಗೃಹಕೃತ್ಯದ ಕೆಲಸಗಳನ್ನೆಲ್ಲಾ ತಾನೇ ನಡೆಸುತ್ತಾರೆ. ಅವರಿಗೆ ಯಾವ ಆಹಾರವನ್ನೂ ತಿನ್ನುವ ಪಕ್ಕಾಗುವುದಿಲ್ಲ. ಏನನ್ನೂ ತಿಂದರೂ ತಕ್ಷಣ ವಾಂತಿಯಾಗುವುದು. ಕೊನೆಗೆ ಕಾಫಿ ಟೀ, ಹಾಲು ಮುಂತಾದ ದ್ರವ ಪದಾರ್ಥಗಳನ್ನು ತೆಗೆದುಕೊಂಡರೂ ವಾಂತಿ ಆಗುವದು. ಈ ವಯಸ್ಸಿನಲ್ಲೂ ಆಕೆ ಪೂರ್ಣ ಆರೋಗ್ಯವಂತರಾಗಿದ್ದು ಆದರ್ಶ ಗೃಹಿಣಿಯ ಜೀವನ ನಡೆಸುತ್ತಿದ್ದಾರೆ.

ಓದುಗರ ಓಲೆಗಳು

ತಿಳಿಗೇಡಿ ಲೆಕ್ಕ.

ಕೊಡಗಿನ ಶ್ರೀ ಸಂಗಯ್ಯನವರು ಇಡೀ ಹಿಂದೂದೇಶಕ್ಕೆ ಏಕೆ ಇಡೀ ಜಗತ್ತಿಗೇ ಆದರ್ಶವಾದ ರೈತರೆನಿಸಿದ್ದಾರೆ. ಅವರಿಗೆ ಸುಮಾರು ೧೧ ಸಾವಿರ ರೂಪಾಯಿಗಳ ವರೆಗೆ ಬಹುಮಾನವೂ, "ಕೃಷಿ ಪಂಡಿತ"ನೆಂಬ ಬಿರುದೂ ದೊರೆತಿವೆ. ನಮ್ಮಂಥಾ ಒಬ್ಬ ಬಡ ರೈತನಿಗೆ ಈ ಸಹಾಯ ಪುರಸ್ಕಾರಗಳು ದೊರೆತುದು ನಮಗೆಲ್ಲರಿಗೂ ಹೆಮ್ಮೆ. ಆದರೆ ಈ ಬೆಳೆಯ ಲೆಕ್ಕವನ್ನು ಕೊಟ್ಟ ಇಲಾಖೆಯವರು ಅಬದ್ಧ ಲೆಕ್ಕ ಕೊಟ್ಟಿಲ್ಲವೇ ಎಂಬುದು ನನ್ನ ಪ್ರಶ್ನೆ. ಇಲಾಖೆಯವರು ಉತ್ತರಿಸಬೇಕು. ಕಳೆದ ಸಾರಿ ಕೊಡಗಿನ ಬಹುಮಾನವನ್ನು ಸಂಗಯ್ಯನವರಿಗೆ ಕಾಟ್ಜೂರವರು ಕೊಡುವಾಗ ಸಂಗಯ್ಯನವರ ವ್ಯವಸಾಯ ಮತ್ತು ಲೆಕ್ಕಗಳನ್ನು ಕೊಡಬೇಕೆಂದು ನಾನು ಬರೆದಿದ್ದೆನು. ವ್ಯವಸಾಯ ಇಲಾಖೆಯವರು ಕೊಟ್ಟಿನ್ನಿಲ್ಲ. ಈಗಲಾದರೂ ಅವರು ಬಾಯಿ ಬಿಡುವರೇ?

ಸಂಗಯ್ಯನವರಿಗೆ ಕೊಟ್ಟ ಬಹುಮಾನ ದುಡ್ಡು ಯಾವ ವ್ಯಕ್ತಿಯದ್ದಲ್ಲ. ಇಡೀ ದೇಶದ ಜನತೆಯ ಹಣವದು. ಹಾಗಿರುವಾಗ ದೇಶದ ಜನರಿಗೆ ಈ ವ್ಯವಸಾಯದ ಕ್ರಮ, ಲೆಕ್ಕಗಳ ತಿಳಿಯಾಗಬೇಕಾದುದು ಕರ್ತವ್ಯ. ಸಂಗಯ್ಯನವರು ೧½ ಸೆಂಟು ಜಾಗದಲ್ಲಿ ೧೫೦ ಪೌಂಡು ಬತ್ತ ತೆಗೆದರೆಂದು ಅವರಿಗೆ ಇಂದು ಗೌರವವಾಗಿದೆ. ೧೫೦ ಪೌಂಡು ಎಂದರೆ ಸರಕಾರಿ ಲೆಕ್ಕಪ್ರಕಾರ ೧೦೦ ಸೇರು ಬತ್ತ. ೧½ ಸೆಂಟಿನಲ್ಲಿ ೧೦೦ ಸೇರು ಬತ್ತವೆಂದರೆ ಒಂದು ಎಕರೆಗೆ ಅಂದರೆ ೩೩ ಬಟ್ಟಿ ಭೂಮಿಗೆ ೧೬೫೫ ಬಟ್ಟಿ ಬತ್ತವಾಯಿತು. ಅಂದರೆ ನೂರು ಬಟ್ಟಿ ಭೂಮಿಗೆ ೫೦೫೦ ಬಟ್ಟಿ ಬತ್ತವಾಗುವುದು. ಸಂಗಯ್ಯನವರು ಈ ರೀತಿ ನೂರು ಬಟ್ಟಿ ಭೂಮಿಗೆ ೫೦ ಗಾಡಿ ಬತ್ತ ಬೆಳೆದಿದ್ದರೆ ಜಗತ್ತಿಗೇ ಇದು ಹಿರಿದಾದ ವಿಷಯವೆನ್ನಲಡ್ಡಿಯಿಲ್ಲ. ಆದರೆ ಸಂಗಯ್ಯನವರಿಗೆ ಎರಡು ಎಕರೆ ಭೂಮಿ ಇದೆಯೆಂದು ತಿಳಿದಿರುವೆನು. ಈ ಎರಡು ಎಕರೆಯಲ್ಲಿ ಮೇಲಿನ ಲೆಕ್ಕದಂತೆ ಅವರು ಕಡಿಮೆ ಪದಿನೈದು ಗಾಡಿ ಬತ್ತ ಬೆಳೆಸಬೇಕಲ್ಲವೇ? ಕಳೆದ ವರ್ಷ ಸಂಗಯ್ಯನವರು ಮಾರಿದ ಬತ್ತವೆಷ್ಟು? ಈ ವರ್ಷ ಅವರು ಬೆಳೆದುದೆಷ್ಟು? ಈ ಲೆಕ್ಕದಂತಾದರೆ ಒಂದು ಎಕರೆ ಭೂಮಿಯು ಎಂಥಾ ಕುಟುಂಬವನ್ನು ಸಾಕಬಹುದಲ್ಲವೇ? ಒಂದು ಎಕರೆಗೆ ಎಂಟು ಗಾಡಿ ಬತ್ತವೆಂದರೆ ಮತ್ತೆ ಯಾವ ಕುಟುಂಬ ಎಂಟು ಗಾಡಿಗಳಿಗಿಂಥಾ ಹೆಚ್ಚು ಬತ್ತ ಉಪಯೋಗಿಸುತ್ತದೆ.

ಇದರಿಂದ ಸ್ಪಷ್ಟವಾಗುವದೆಂದರೆ ಇಲಾಖೆಯವರು ನಿಜವಾಗಿಯೂ ತಿಳಿಗೇಡಿತನದ ಲೆಕ್ಕ ಕೊಟ್ಟಿರುವದು ಮಾತ್ರವಲ್ಲ; ಇದರಿಂದಾಗಿ ಕೊಡಗು ಸರಕಾರವನ್ನೂ, ಕೇಂದ್ರ ಸರಕಾರವನ್ನೂ, ದೇಶದ, ಇತರ ಅನೇಕ ಪ್ರಾಮಾಣಿಕ ರೈತರನ್ನೂ ಮೋಸ ಮಾಡಿದಂತಾಗಿದೆ. ಜೊತೆಗೆ ಈ ವರ್ಷದ ಕ್ರಾಪ್ ಕಾಂಪಿಟೇಶನ್ ಲೆಕ್ಕದಲ್ಲಿ ಸಂಗಯ್ಯನವರನ್ನು ಮೀರಿಸುವ ಅನೇಕರು ದೊರೆತಿರುವರಂತೆ. ಹಾತೂರಿನಲ್ಲಿ ಒಬ್ಬರು ೧೫೦೦೦ ಪೌಂಡು ಬೆಳೆಸಿರುವರಂತೆ! ಸಂಗಯ್ಯನವರ ೧೨ ಸಾವಿರವೆಲ್ಲಿ? ಇವರ ೧೫ ಸಾವಿರವೆಲ್ಲಿ? ಅಂದರೆ ನೂರು ಬಟ್ಟಿ ಭೂಮಿಗೆ ಸುಮಾರು ೪೫೦ ಬಟ್ಟಿ ಯಾ ೩೦ ಗಾಡಿ ಬತ್ತ ಬೆಳೆದಂತಾಯಿತು

ಬಹುಮಾನದ ಬಯಕೆಯಿಂದ ಏನೋ ಅಬದ್ಧವಾಗುತ್ತಿದೆಯೆಂದು ಇದರಿಂದ ವೇದ್ಯವಾಗುತ್ತಿದೆ. ಸಂಗಯ್ಯನವರ ವ್ಯವಸಾಯ ಕ್ರಮವನ್ನು ಓದಿದ ಮೇಲೆ ಅವರಿಗಿಂತಲೂ ಉತ್ತಮ ರೀತಿಯ ವ್ಯವಸಾಯವನ್ನು ನಾನು ಮಾಡುತ್ತಿರುವೆನೆಂಬುದು ನನಗೆ ಮನವರಿಕೆಯಾಗಿದೆ. ನಾನು ಎಷ್ಟೇ ಪ್ರಯತ್ನ ಪಟ್ಟರೂ ಸರಾಸರಿ ನೂರಕ್ಕೆ ನೂರು ತೆಗೆಯಲಾದಾಗಿಲ್ಲ. ಕೊಡಗು ವ್ಯವಸಾಯ ಇಲಾಖೆಯವರು ಈ ವಿಚಾರ ವಿವರವಾಗಿ ಬರೆಯಬೇಕು. ಇಲ್ಲದಿದ್ದರೆ ಇಲಾಖೆಯ ಮೇಲೆ ಸುಳ್ಳು ಲೆಕ್ಕದ ಆರೋಪ ಬೀಳದಿರದು.

—ದೇವಯ್ಯ.

ಇದಾವ ಪದ್ಧತಿ ?

ಕೇಂದ್ರದಿಂದ ಮಂತ್ರಿಗಳೋ ಬೇರೆ ಪ್ರಮುಖರೋ ಬರುವಾಗ ಪತ್ರವರ್ತಕರನ್ನು ಹೀನಾಯಿಸುವ ಆ ಹಿಂದಿನ ಪದ್ಧತಿ ಇಂದೂ ನಡೆದು ಬರುತ್ತಿದೆ. ಅದರೆ ಪತ್ರವರ್ತಕರಿಗೂ ಒಂದು ಅರ್ಹತೆ ಬೇಡವೇ? ಪತ್ರವರ್ತಕರು ಅಧಿಕಾರವನ್ನು, ತಪ್ಪಾದರೆ ಅದನ್ನು ಟೀಕಿಸಬೇಡವೇ? ಒಂದು ಉದಾಹರಣೆ ಕೊಡುವದಾದರೆ ಮೊನ್ನೆ ಕೇಂದ್ರ ಸರಕಾರದ ಉಪ ಗೃಹಮಂತ್ರಿ ದಾತಾರ್‌ರವರು ಬಂದಿದ್ದರು. ಅವರಿಗೆ ಪತ್ರವರ್ತಕರನ್ನು ಪರಿಚಯ ಪುರಸಭೆಯವರು ಕೊಟ್ಟರು. ಅದರಲ್ಲಿ ಅತಿಥಿಗಳ ಸೇವೆ, ಕಾರ್ಯಕುಶಲತೆ, ವ್ಯಕ್ತಿತ್ವಗಳನ್ನು ಹೊಗಳಿದ್ದು, ಮತ್ತೆ ಅವರಿಂದ ತಮಗೆ ಬೇಕಾದ ಸಹಾಯವನ್ನು ಕೋರಿದ್ದು ಸಮರ್ಪಕವಾದರೂ ಶ್ರೀ ಮಲ್ಲಪ್ಪನವರು ಬಹು ದೊಡ್ಡವರು, ಅವರಿಗೆ ನಾವು ಆಭಾರಿಗಳು, ನಮ್ಮ ಜನಾನುರಾಗಿ ಚೀಫ್ ಕಮಿಷನರು ದೇಶದ ಸರಕಾರವನ್ನು ಬಹು ಒಳ್ಳೆದಾಗಿ ನಡೆಸುತ್ತಿದ್ದಾರೆ. ಈ ಹೊಗಳಿಕೆಯ ಸಿಂಗಾರ ಏಕೆ? ಕಳೆದ ಸಾಲ ಗೃಹಮಂತ್ರಿ ಕಾಟ್ಜೂರವರು ಬಂದಿದ್ದಾಗ ಪ್ರತಿ ಪತ್ರವರ್ತಕರಲ್ಲೂ ಇದೇ ತುಂಬಿದ್ದಲ್ಲದೆ ಪಕ್ಕ ಚೀಫ್ ಕಮಿಷನರು ಇಲ್ಲೇ ಇನ್ನೂ ಹಲವು ವರ್ಷ ಇರುವಂತೆ ಮಾಡಬೇಕೆಂದು ಕೇಳಲಾಗಿತ್ತು. ಇಲ್ಲಿಯ ಚೀಫ್ ಕಮಿಷನರ ಆಡಳಿತ ಹೇಗಿದೆಯೆಂದು ಅವರ ಮೇಲಧಿಕಾರಿಗಳಿಗೆ ಗೊತ್ತಿಲ್ಲವೇ? ಹಾಗಿರುವಾಗ ಈ ಶಿಫಾರಸ್ಸು ಏಕೆ?

—ಪುರನಿವಾಸಿ.

ಜಪಾನಿನಲ್ಲಿ ಬತ್ತದ ವ್ಯವಸಾಯ ಕ್ರಮ.

ಕೇಂದ್ರ ಸರಕಾರವು ಜಪಾನಿನಲ್ಲಿ ಬತ್ತದ ವ್ಯವಸಾಯದ ಬಗ್ಗೆ ಅನುಸರಿಸುತ್ತಿರುವ ಕ್ರಮಗಳನ್ನು ಹಿಂದೂದೇಶದಲ್ಲಿಯೂ ಅನುಸರಿಸುವಂತೆ ದೇಶದ ಕೆಲವು ಭಾಗಗಳಲ್ಲಿ ಅಂಥಾ ವ್ಯವಸಾಯ ಕೇಂದ್ರಗಳನ್ನು ತೆರೆಯಲು ನಿರ್ಧರಿಸಿದೆ. ಈ ಯೋಜನೆ ಪ್ರಕಾರ ಕೊಡಗಿನಲ್ಲಿ ಒಂದು ಕೇಂದ್ರವು ತೆರೆಯಲ್ಪಡಲಿದೆ. ಆದ್ದರಿಂದ ಜಪಾನಿನ ವ್ಯವಸಾಯ ಕ್ರಮದ ರೂಪರೇಷೆಯನ್ನು ನಮ್ಮ ವಾಚಕರಿಗಾಗಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಸಂ.

ಕುಯಿಲು ಕೆಲಸ ಮುಗಿದೊಡನೆಯೇ ಬೀಜ ಹಾಕಲಿರುವ ಆಗೆ ಗದ್ದೆಗಳನ್ನು ಎರಡು ಸಾಲು ಉತ್ತು ಬಿಡುವರು. ಕುಯಿಲು ಆದಾಗ ಭೂಮಿ ಹದ ಇರುವುದರಿಂದ ಉಳುವುದು ಸುಲಭವಾಗುತ್ತದೆ. ಹದವಿಲ್ಲದಿದ್ದರೆ ಆಗೆ ಗದ್ದೆಯನ್ನು ಅಗೆದು ಹುಡಿ ಮಾಡಲಾಗುತ್ತದೆ. ಸಾಧಾರಣವಾಗಿ ನಾಲ್ಕು ಇಂಚು ಆಳಕ್ಕೆ ಉಳಲಾಗುತ್ತದೆ. ನಂತರ ಅವಕ್ಕೆ ಎಕರೆಗೆ ೪೦ ಗಾಡಿಯಂತೆ ದನದ ಗೊಬ್ಬರ ಹಾಕಲಾಗುವುದು. ಇದನ್ನು ಮುಚ್ಚಿದೊಡನೆ ಸರಿಯಾಗಿ ಮಿಶ್ರಮಾಡಲಾಗುವುದು. ನಂತರ ಸಾಧಾರಣ ನಾಲ್ಕು ಅಡಿ ಅಗಲ ಪಾತಿಯನ್ನು ಮಾಡಲಾಗುವುದು. ಪಾತಿಗಳ ಮಧ್ಯೆ ಒಂದಡಿಯಷ್ಟು ಸ್ಥಳ ಬಿಟ್ಟು ಆ ಮಣ್ಣನ್ನು ಪಾತಿಗೆ ಹಾಕಿ ಪಾತಿಯನ್ನು ಸುಮಾರು ಮೂರು ಇಂಚು ಎತ್ತರಿಸಲಾಗುವುದು. ಈ ಪಾತಿಯ ಮೇಲೆ ಒಂದು ಇಂಚಿನ ಎಂಟನೇ ಒಂದಂಶದಷ್ಟು ಪರಿಮಾಣದಲ್ಲಿ ಕಾಂಪೋಸ್ಟ್ ಗೊಬ್ಬರವನ್ನು ಹರಡಲಾಗುವುದು. ಹೀಗೆ ಹರಡುವುದರಿಂದ ಪೈರಿನ ಬೇರುಗಳು ಆಳಕ್ಕೆ ಇಳಿಯದೆ ಮೇಲೆಯೇ ಇದ್ದು ಕೀಳಲು ಅನುಕೂಲವಾಗುತ್ತದೆ. ಕಾಂಪೋಸ್ಟ್ ಗೊಬ್ಬರದ ಮೇಲೆ ಬೂದಿಯನ್ನು ಮಂದವಾಗಿ ಚೆಲ್ಲಲಾಗುವುದು. ಬೂದಿಯು ಪೈರಿನ ಉತ್ತಮ ಬೆಳವಣಿಗೆಗೆ ತುಂಬಾ ಸಹಕಾರಿ. ಬೀಜವನ್ನು ಈ ಪಾತಿಗಳಲ್ಲಿ ಚೆಲ್ಲುವಾಗಲೂ ಬೀಜದ ಜೊತೆಗೆ ಒಂದಕ್ಕೆ ಎರಡರಂತೆ ಗೊಬ್ಬರ ಮಿಶ್ರ ಮಾಡಿ ಚೆಲ್ಲುವರು.

ಜಪಾನಿನಲ್ಲಿ ಎಕರೆಗೆ ಐದಾರು ಪೌಂಡು ಯಾ ನಾಲ್ಕು ಸೇರು ಬೀಜ ಸಾಕಾಗುತ್ತದೆ. ಒಂದು ಎಕರೆಯ ನಲವತ್ತನೇ ಒಂದು ಭಾಗದ ಸ್ಥಳದಲ್ಲಿ ಹಾಕಿದ ಪೈರು ಒಂದು ಎಕರೆಗೆ ಸಾಕಾಗುತ್ತದೆ. ಬೀಜ ಹಾಕಿದ ಮೇಲೆ ತೆಳ್ಳಗಿನ ಮಣ್ಣಿನಿಂದ ಬೀಜವನ್ನು ಮುಚ್ಚುತ್ತಾರೆ. ಜಪಾನಿನಲ್ಲಿ ಬೀಜದ ಬಗ್ಗೆ ತುಂಬಾ ಜಾಗರೂಕತೆ ವಹಿಸುತ್ತಾರೆ. ಪರಿಶೋಧಿಸಿದ ಬೀಜವನ್ನು ಒಂದು ಹಂಡೆ ಉಪ್ಪು ಮಿಶ್ರಿತ ನೀರಿನಲ್ಲಿ ಹಾಕಿ ತಳಕ್ಕೆ ಇಳಿದ ಬತ್ತವನ್ನೇ ಬೀಜಕ್ಕಾಗಿ ಉಪಯೋಗಿಸುವರು. ಹೀಗೆ ಆರಿಸಿದ ಬತ್ತವನ್ನು ಏಳರಿಂದ ಹದಿನಾಲ್ಕು ದಿನ ನೀರಿನಲ್ಲಿ ಅದ್ದಿ ನಂತರ ಬೀಜ ಹಾಕಲಾಗುವುದು. ಸಾಧಾರಣವಾಗಿ ಮೊಳಕೆ ಬಂದ ಬೀಜದಿಂದ ಬಂದ ಪೈರು ಒಂದೇ ರೀತಿಯಲ್ಲಿ ವೃಥವಾಗಿ ಬೆಳೆಯುವದೆಂದು ನಂಬಲಾಗಿದೆ.

ಇದರಲ್ಲಿ ಕಳೆ ಬಂದರೆ ಆ ಕಳೆ ತೆಗೆದು ಮತ್ತೊಮ್ಮೆ ಸ್ವಲ್ಪ ಗೊಬ್ಬರ ಹಾಕಬೇಕು. ಪೈರು ಚೆನ್ನಾಗಿಲ್ಲದಿದ್ದರೆ ಪುನಹ ಗೊಬ್ಬರ ಹಾಕಬಹುದಾಗಿದೆ.

ಇಷ್ಟರಲ್ಲಿ ನಾಟಿ ನೆಡಲಿರುವ ಭೂಮಿಯನ್ನು ಹದವು ಮಾಡಬೇಕು. ತೆವರಿಯನ್ನು ಭದ್ರಗೊಳಿಸಬೇಕು. ತೆವರಿ ಸರಿಯಾಗಿಲ್ಲದಿದ್ದರೆ ಒಳ್ಳೆ ಬೆಳೆಯಾಗದು- ಅಲ್ಲದೆ ಏಡಿ, ಹೆಗ್ಗಣ, ಇಲಿಗಳು ಸೇರಿ ಬೆಳೆಗೆ ನಷ್ಟ ತರಲೂಬಹುದು. ಪೈರು ಕೀಳುವಾಗ ಸಿಕ್ಕಾಬಟ್ಟೆ ಕಿತ್ತು ನೆಡಬಾರದು. ಪೈರಿಗೆ ಹೆಚ್ಚು ಹಾನಿಯಾಗದಂತೆ ಕಿತ್ತು ನೆಡಬೇಕು.

ಜಪಾನಿನಲ್ಲಿ ಹೆಚ್ಚಾಗಿ ಗದ್ದೆಗಳಿಗೆ ಹಸುರು ಗೊಬ್ಬರ ಉಪಯೋಗಿಸುತ್ತಾರೆ. ಬತ್ತದ ಗದ್ದೆಯಲ್ಲಿ ಇವರು ಸೋಯಬೀನ್ ಬೆಳೆಸುತ್ತಾರೆ. ಇದನ್ನು ಕತ್ತರಿಸಿ ಎರಡು ಮೂರು ದಿನ ಒಣಗಿದ ನಂತರ ಮುಚ್ಚಿದೊಡನೆ ಉತ್ತು ಮಿಶ್ರಮಾಡುತ್ತಾರೆ. ಒಂದು ಎಕರೆ ಭೂಮಿಗೆ ೪ ರಿಂದ ೭ ಟನ್ನಿನ ವರೆಗೆ ಹಸುರು ಗೊಬ್ಬರ ಉಪಯೋಗಿಸಲಾಗುತ್ತದೆ. ನಾಟಿಗೆ ಸುಮಾರು ಮೂರು ತಿಂಗಳಿಗೆ ಮೊದಲು ಹಸುರು ಗೊಬ್ಬರವನ್ನು ಮುಚ್ಚಿದೊಡನೆ ಮಿಶ್ರಮಾಡಬೇಕು.

ನಾಟಿ ನೆಡುವ ಮೊದಲು ಪ್ರತೀ ಹತ್ತು ಇಂಚು ದೂರದಲ್ಲಿ ಗುರ್ತು ಮಾಡಿದ ಹಗ್ಗವನ್ನು ಕಟ್ಟಿ ನಾಟಿ ನೆಡುವರು. ಇದರಿಂದ ಸಾಲಾಗಿ ನೆಡುವುದು ಸಾಧ್ಯವಾಗುವುದು. ಸಾಲಾಗಿ ನೆಡುವುದರಿಂದ ತುಂಬಾ ಪ್ರಯೋಜನವಿದೆ. ರೈತನು ಗದ್ದೆಯೊಳಗೆ ಓಡಾಡಲು ಮತ್ತು ಬೆಳೆಯ ಬಗ್ಗೆ ಎಚ್ಚರಿಕೆ ವಹಿಸಲು ಅನುಕೂಲವಾಗುವುದು. ಎಂಟರಿಂದ ಹನ್ನೆರಡು ಇಂಚು ದೂರ, ಮತ್ತು ನಾಲ್ಕರಿಂದ ಎಂಟು ಇಂಚು ಅಗಲಕ್ಕೆ ನಾಟಿ ನೆಡುತ್ತಾರೆ.

ಜಪಾನಿನಲ್ಲಿ ನಾಟಿ ಕೆಲಸವು ಧಾರ್ಮಿಕ ಕ್ರಿಯೆಯಂತೆ ಪವಿತ್ರವೆಂದು ಪರಿಗಣಿಸಲ್ಪಡುವದು. ಪ್ರಾರಂಭದ ನಾಟಿಯ ದಿನ ಮನೆಯಾಕೆ ಹೊಸ ಬಟ್ಟೆ ಧರಿಸುವಳು. ಶಾಲೆಗಳು ಮುಚ್ಚಲ್ಪಡುವವು. ಜಪಾನಿನ ಪ್ರತಿಯೊಬ್ಬ ಬಾಲಕ ಬಾಲಿಕೆಯರಲ್ಲೂ ಕೂಡ ವ್ಯವಸಾಯವು ಓದುವದಕ್ಕಿಂಥಾ ಪ್ರಾಮುಖ್ಯವೆಂಬ ಭಾವನೆ ಬರುವಂತೆ ಪ್ರವರ್ತಿಸಿದೆ. ಅಲ್ಲಿ ನಾಟಿಯನ್ನು ಸಮ್ಮಿಲಿಯಂತೆಯೇ ನೆಡುತ್ತಾರೆ. ಒಂದೊಂದು ಸಾಲಿನಲ್ಲಿ, ಐದಾರು ಗೆಣೆಗಳಿರುತ್ತವೆ. ಹೆಚ್ಚು ದಪ್ಪ ನಾಟಿ ಹಾಕುವದಿಲ್ಲ. ಅವರು ಒಂದು ಎಕರೆಗೆ ಹಾಕುವ ಗೊಬ್ಬರವಷ್ಟು

ಕೊಡಗಿನ ಸಾಮೂಹಿಕ ವಿಕಾಸ ಯೋಜನೆ

ಈ ವರೆಗಿನ ಕಾರ್ಯಕಲಾಪದ ಒಂದು ಅವಲೋಕನ.

ಉತ್ತರ ಕೊಡಗಿನ ನೂರು ಗ್ರಾಮಗಳಿಗೆ ಸಂಬಂಧಿಸಿ ಕಳೆದ ಅಕ್ಟೋಬರ್ ತಾ. ೨ ರಂದು ಜಾರಿಗೆ ಬಂದಿರುವ ಸಾಮೂಹಿಕ ವಿಕಾಸ ಯೋಜನೆಯ ಕಾರ್ಯಕಲಾಪಗಳ ಒಂದು ಸ್ಥೂಲ ಪರಿಚಯವನ್ನು ನಮ್ಮ ವಾಚಕರಿಗಾಗಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಆಡಳಿತ ಮಂಡಳಿ

ಈ ಯೋಜನೆಯ ಕೇಂದ್ರ ಸಮಿತಿಯಲ್ಲಿ ಚೀಫ್ ಕಮಿಷನರು (ಅಧ್ಯಕ್ಷ) ಮುಖ್ಯ ಮಂತ್ರಿಗಳು (ಉಪಾಧ್ಯಕ್ಷ) ಗೃಹ ಮಂತ್ರಿ, ಎನ್. ಸೋಮಣ್ಣ, ಕೊಡಗು ಸರಕಾರದ ಚೀಫ್ ಸಕ್ರೆಟರಿ ಮತ್ತು ಡಿ. ಕಮಿಷನರು (ಡೆವಲಪ್‌ಮೆಂಟ್ ಕಮಿಷನರು) ಸದಸ್ಯರಾಗಿರುವರು.

ಯೋಜನೆಯ ಕಾರ್ಯಕಾರಿ ಮಂಡಳಿಯಲ್ಲಿ ಡೆವಲಪ್‌ಮೆಂಟ್ ಕಮಿಷನರು (ಅಧ್ಯಕ್ಷ) ಫೈನಾನ್ಸ್ ಸೆಕ್ರೆಟರಿ, ಫಾರೆಸ್ಟ್ ಕನ್‌ಸರ್ವೇಟರ್, ಎಗ್ರಿಕಲ್ಚರಲ್ ಇಂಜಿನಿಯರ್, ಎಗ್ರಿಕಲ್ಚರಲ್ ಆಫೀಸರು, ಆರೋಗ್ಯಾಧಿಕಾರಿ, ವಿದ್ಯಾಧಿಕಾರಿ, ಸಿವಿಲ್ ಸರ್ಜನ್, ಚೀಫ್ ವೆಟರ್ನರಿ ಆಫೀಸರು, ಸಹಕಾರ ಸಂಘಗಳ ರಿಜಿಸ್ಟ್ರಾರು ಮತ್ತು ಶ್ರೀಗಳಾದ ಜಿ. ಎಂ. ಮಂಜುನಾಥಯ್ಯ, ಪಿ. ಕೆ. ಚಿನ್ನಯ್ಯ, ಪಿ. ಟಿ. ಲಕ್ಷ್ಮ, ಸಿ. ಕೆ. ಕಾಳಪ್ಪ, ಜಿ. ಲಿಂಗರಾಜಯ್ಯ, ಎಚ್. ಟಿ. ಮುತ್ತಣ್ಣ, ಎನ್. ವೆಂಕಟಸುಬ್ಬಯ್ಯ, ಎಸ್. ಜಿ. ಅಹಮ್ಮದ್, ಪಿ. ಎಂ. ನಾಣಯ್ಯ, ಕೆ. ಟಿ. ಹನುಮಂತರಾಜಯ್ಯ ಮತ್ತು ಎನ್. ಕೆ. ಗಣಪಯ್ಯ ಇವರುಗಳು ಸದಸ್ಯರಾಗಿರುವರು.

ಅಧಿಕಾರಿ ವರ್ಗ ಮತ್ತು ಕೆಲಸಗಾರರು.

ಶ್ರೀಗಳಾದ ನಡಿಕೇರಿಯಂಡ ಮಂದಣ್ಣನವರು, ಎಗ್ರಿಕಲ್ಚರಲ್ ಅಧಿಕಾರಿಗಳಾಗಿರುವರು. ಶ್ರೀಗಳಾದ ಎಚ್. ಸಿ. ಬಸವಲಿಂಗಯ್ಯನವರು ವ್ಯವಸಾಯ ಮೇಲ್ವಿಚಾರಕರಾಗಿರುವರು. ಮತ್ತೆ ೧೧ ಗ್ರಾಮ ಕೆಲಸಗಾರರ ನೇಮಕವಾಗಿದೆ. ಪುನಹ ನಾಲ್ಕು ಜನ ಗ್ರಾಮ ಕೆಲಸಗಾರರನ್ನು ನೇಮಿಸಲಿದ್ದಾರೆ. ಆರೋಗ್ಯ ವಿಚಾರದಲ್ಲಿ ಹೆಚ್ಚಿನ ತರಬೇತಿಗೆ ಒಬ್ಬ ಮಹಿಳೆಯನ್ನು ದೆಲ್ಲಿಗೆ ತರಬೇತಿಗೆ ಕಳುಹಿಸಲಾಗಿದೆ. ಸಾಮಾಜಿಕ ವಿದ್ಯಾ ಅಧಿಕಾರಿಯೊಬ್ಬರನ್ನು ಶೀಘ್ರ ನೇಮಿಸಲಾಗುವದು. ಇವರು ಸಾಮೂಹಿಕ ವಿಕಾಸ ಯೋಜನೆಯ ಜೊತೆಗೆ ಕೊಡಗಿನ ವಯಸ್ಕರ ಶಿಕ್ಷಣ ಇಲಾಖೆಯ ಜವಾಬ್ದಾರಿಯನ್ನು ಹೊರುವರು.

ಗ್ರಾಮ ಅಂತಸ್ಥಿನ ಕೆಲಸಗಾರರನ್ನು ಮೈಸೂರಿನ ಮಂಡ್ಯಾದಲ್ಲಿ ತರಬೇತು ಮಾಡುವ ತೀರ್ಮಾನವಾಗಿದ್ದರೂ ದೇಶದೊಳಗೇ ಇಂಥಾ ತರಬೇತನ್ನು ಏರ್ಪಡಿಸುವದು ಹಿತಕರವೆಂದೂ ಇಲ್ಲಿಯ ಪರಿಸ್ಥಿತಿಗಳನ್ನು ಅರಿಯಲು ಅನುಕೂಲವೆಂದೂ ಗಣಿಸಿ ಈ ಕೆಲಸಗಾರರೆಲ್ಲರೂ ಕೂಡಿಗೆ ಫಾರ್ಮಿನಲ್ಲಿ ವ್ಯವಸಾಯ, ಕೋಳಿ ಸಾಕುವದು, ಡೈರಿ ಮೊದಲಾದ ತರಬೇತು ಮೊದಲು ಪಡೆಯಬೇಕೆಂದು ಏರ್ಪಡಿಸಲಾಗಿದೆ.

ಯೋಜನೆಯ ಖರ್ಚು.

ಈ ಯೋಜನೆಗೆ ಮೂರು ವರ್ಷಗಳಿಗಾಗಿ ೨೯,೬೦,೦೦೦ ರೂಪಾಯಿ ವೆಚ್ಚವಾಗುವದು. ಇದರಲ್ಲಿ ಕೇಂದ್ರದಿಂದ ಸಾಲವಾಗಿ ದೊರೆಯುವ ೯,೮೪,೦೦೦ನ್ನು ಸೇರಿಸಿ ಕೇಂದ್ರದಿಂದ ಒಟ್ಟು ೧೫,೧೨,೦೦೦ ಹಣ ದೊರೆಯುವದು. ಕೊಡಗು ಸರಕಾರವು ೬,೪೮,೦೦೦ ವೆಚ್ಚ ಮಾಡುವದು. ಕೇಂದ್ರ ಸರಕಾರವು ಈಗಿನ ಖರ್ಚಿಗಾಗಿ ರೂ. ೫೦,೦೦೦ ಮಂಜೂರು ಮಾಡಿದೆ. ಇದರಲ್ಲಿ ಈ ವರೆಗೆ ಎರಡು ಜೀಪುಗಳ ಬೆಲೆ ರೂ. ೨೮,೦೦೦ ಸೇರಿ ಒಟ್ಟು ೩೧,೪೬೧–೧೫–೬ ಪೈ ಖರ್ಚಾಗಿದೆ.

ಪರಿಶೀಲಿಸಲ್ಪಡುತ್ತಿರುವ ಕೆಲಸಗಳು

(೧) ಶಾಂತವೇರಿಯಲ್ಲಿ ಗೌಡಳ್ಳಿ ಹೊಳೆಗೆ ಕಟ್ಟೆ ಕಟ್ಟಿ ಅದರ ನೀರನ್ನು ಶನಿವಾರಸಂತೆಯ ವರೆಗೆ ತಂದು ವ್ಯವಸಾಯಕ್ಕೆ ನೀರು ಒದಗಿಸುವ ಮತ್ತು ಶನಿವಾರಸಂತೆ ಪಟ್ಟಣಕ್ಕೆ ಕುಡಿಯಲು ನೀರು ಒದಗಿಸುವ ಕೆಲಸದ ಪರಿಶೀಲನೆಯಾಗಿದೆ. ಇದರಿಂದ ೫೦೦ ಎಕರೆ ಭೂಮಿಗೆ ನೀರು ದೊರೆಯುವದೆಂದು ಅಂದಾಜು ಮಾಡಲಾಗಿದೆ. ಕಟ್ಟೆಯ ಕೆಲಸ ನಡೆಯುತ್ತಿದೆ.

(೨) ಹೊಲಗುಂದದಲ್ಲಿ ಕಾಗೆಹಳ್ಳ ಕಟ್ಟಿಗಿರುವ ಸಹಿಸ್ಯಗಳನ್ನು ಜಮಾಯಿಸಿ ಕಟ್ಟೆಯ ಅಸ್ತಿಭಾರ ಹಾಕಲಾಗಿದೆ. ಇದರಿಂದ ಉಪಯೋಗ ಪಡೆಯುವವರು ಕಾಲುವೆ ಮಾಡಿಕೊಳ್ಳಲು ಒಪ್ಪಿದ್ದಾರೆ. ಕಾಗೆಹಳ್ಳ ಹೊಳೆಯ ನೀರನ್ನು ಮಳೆಗಾಲದಲ್ಲಿ ಹತ್ತಿರವಿರುವ ಆರು ಕೆರೆಗಳಿಗೆ ಹರಿಯುವಂತೆ ಮಾಡಿ ವ್ಯವಸಾಯಕ್ಕೆ ಅನುಮಾಡುವದು ಈ ಕೆಲಸದ ಗುರಿಯಾಗಿದೆ.

(೩) ಶಿರಂಗಾಲದಲ್ಲಿರುವ ಸೋತೆಹಳ್ಳ ಕೆರೆಯ ರಿಪೇರಿ ಕೆಲಸ ನಡೆಯುತ್ತಿದೆ.

(೪) ಕಟ್ಟಪುರದ ಇಪ್ಪಗಳಲೆ ಕಾಲುವೆಯನ್ನು ಪರಿಶೀಲಿಸಲಾಗಿದೆ.

(೫) ಅದಿತನೂರು ಗ್ರಾಮದ ಹೊಳೆಯ ಕಟ್ಟೆಯ ಸ್ಥಳ ನಿಶ್ಚಯಿಸಿ ಕಟ್ಟಲಿರುವ ಸಾಹಿತ್ಯ ಸಂಗ್ರಹಿಸಲಾಗುತ್ತಿದೆ. ಇದರಿಂದ ೬೦ ಎಕರೆ ಭೂಮಿಗೆ ನೀರಾಗುವದು ಪೆಚ್ಚಾಗಿ ಇಲ್ಲಿರುವ ಕರುಬರ ಭೂಮಿಗೆ ಅನುಕೂಲವಾಗುವದು.

(೬) ಕಿಷ್ಟಟ್ಟ ಕಾಲುವೆಯು ಸೋರುತ್ತಿರುವದರಿಂದ ರೂ. ೫೦೦ ಖರ್ಚಿನಿಂದ ಹೊಸ ಏರ್ಪಾಡು ಮಾಡಲಾಗುತ್ತಿದೆ.

(೭) ಬೂರುಗುತ್ತಿಯ ಕಟ್ಟೆ ಮತ್ತು ಅದರ ಕಾಲುವೆಯ ವಿಚಾರ ಪರಿಶೀಲನೆ ನಡೆಯುತ್ತಿದೆ. ಕೆಲಕೊಡ್ಲಿ ಮೂದ್ರವಳ್ಳಿ ಕಾಲುವೆಗಳಿಗೆ ರಿಪೇರಿ ಆಗುತ್ತಿದೆ.

(೮) ಬೆಂಬಳೂರು, ನೇಪಾ, ನಿಲುವಾಗಿಲು, ಚಿಕ್ಕ ಭಂಡಾರ, ಕೇತನಹಳ್ಳಿ, ಹೆಬ್ಬಾಲೆ, ನಿಡ್ತ, ಗೆಜ್ಜೆಹಣಕೋಡು, ಕೂಗೂರು, ಕುಂದಳ್ಳಿ, ಎಡೂರು, ಅರಸಿನಕೆರೆ, ಸಂಪಿಗೆದಾಳು ಕೆರೆಗಳ ಪರಿಶೀಲನೆ ನಡೆದು ತಗಲುವ ಖರ್ಚು ಮಂಜೂರಾಗಿದೆ.

(೯) ಮಾದಾಪುರ-ಸೂರ್ಲಬಿ ರಸ್ತೆಯಲ್ಲಿ ಮೋರಿ, ಸೇತುವೆಗಳಿಗಾಗಿ ಸಾಮಾನು ಸಂಗ್ರಹಿಸಲಾಗಿದೆ. ಗ್ರಾಮಾಂತರಗಳಲ್ಲಿ ಒಟ್ಟು ೫೫ ಬಾವಿ ತೆಗೆಯಲು ಮಂಜೂರ್ಮಾಡಲಾಗಿದೆ. ೧೨ ಕೇಂದ್ರಗಳಲ್ಲಿ ಕಮ್ಯೂನಿಟಿ ಸೆಂಟರ್ ತೆರೆಯಲಾಗಿದೆ. ಇವುಗಳಿಗೆ ರೇಡಿಯೋ ಮತ್ತು ವಾಚನಾಲಯಗಳನ್ನು ಒದಗಿಸಿ ಕೊಡಲಾಗುವದು. ಇನ್ನು ಮೂರು ಕೇಂದ್ರಗಳು ಶೀಘ್ರ ತೆರೆಯಲ್ಪಡುವವು.

(೧೦) ಈ ವರೆಗೆ ೧೨೦ ಮೈಲು ರಸ್ತೆ ರಿಪೇರಿ ಮಾಡಲಾಗಿದೆ. ೩೫ ಮೈಲು ಹೊಸ ರಸ್ತೆ ತೆರೆಯಲಾಗಿದೆ.

(೧೧) ಮಾದಾಪುರ–ಸೂರ್ಲಬಿ— ಸೋಮವಾರಪೇಟೆ ರಸ್ತೆ, ಶನಿವಾರಸಂತೆ—ಹೆಬ್ಬುಲುಸ ರಸ್ತೆ, ಕೊಡ್ಲಿಪೇಟೆ ಕೇತೆರಸ್ತೆ, ಕೂಡಿಗೆ ರಸ್ತೆ, ತಾಕೇರಿ ತಳ್ತರೆಶೆಟ್ಟಳ್ಳಿ–ಹನಗಾಲು ರಸ್ತೆ, ತಳ್ತರೆಶೆಟ್ಟಳ್ಳಿ–ಅಬಿಮಠ–ಎಡೂರು ರಸ್ತೆಗಳನ್ನು ಅಭಿವೃದ್ಧಿಪಡಿಸಲು ನಿಶ್ಚಯಿಸಲಾಗಿದೆ.

ಇತರ ವಿಷಯಗಳು.

ಒಂದು ಖಾದಿ ತಯಾರಿ ಕೇಂದ್ರವನ್ನೂ, ಎರಡು ಜೇನು ಸಾಕುವ ಕೇಂದ್ರಗಳನ್ನೂ, ಒಂದೊಂದು ಕೋಳಿಸಾಕುವ ಮತ್ತು ಕುರಿ ಸಾಕುವ ಕೇಂದ್ರಗಳನ್ನು ತೆರೆಯುವ ಏರ್ಪಾಡಾಗಿದೆ. ಮಾದಾಪುರ, ಶನಿವಾರಸಂತೆ, ಸುಂಟಿಕೊಪ್ಪ ಸಂತೆಗಳನ್ನು ಅಭಿವೃದ್ಧಿಪಡಿಸಲಾಗುವದು. ದುಂಡಳ್ಳಿಯಲ್ಲಿ ಸಹಕಾರ ತಳಹದಿಯಲ್ಲಿ ಏಲಕ್ಕಿ ವ್ಯವಸಾಯ ಕೈಕೊಳ್ಳಲಾಗಿದೆ. ೨೨ ಪ್ರಾಥಮಿಕ ಮತ್ತು ೩ ಹೈಯರ್ ಎಲಿಮೆಂಟರಿ ಮತ್ತು ಒಂದು ಹೈಸ್ಕೂಲಿನಲ್ಲಿ ಮೂಲ ಶಿಕ್ಷಣ ಕ್ರಮವನ್ನು ಜಾರಿಗೆ ತರಲಾಗುವದು. ಕೆರಗನಹಳ್ಳಿ ಗ್ರಾಮದಲ್ಲಿ ಮನೆಕಟ್ಟುವ ಸಮಿತಿಯೊಂದನ್ನು ಏರ್ಪಡಿಸಿ ಅಲ್ಲಿ ೪೦ ಮಾದರಿ ಮನೆಗಳನ್ನು ಕಟ್ಟುವ ವ್ಯವಸ್ಥೆ ಮಾಡಲಾಗಿದೆ.

ಧನಿಕರ ಸಹಾಯ

ಒಂದು ಆಸ್ಪತ್ರೆಗಾಗಿ ಶ್ರೀ. ಕೆ. ಎಸ್ ಶ್ರೀನಿವಾಸನ್‌ರವರು ರೂ. ೪೦,೦೦೦/– ಜಾನುವಾರು ಆಸ್ಪತ್ರೆಗಾಗಿ ಶ್ರೀ. ಎನ್. ಎಸ್. ಮಂಜುನಾಥಮೂರ್ತಿಯವರು ರೂ. ೫೦೦೦/–ಒಂದು ಶಾಲೆಗಾಗಿ ಶ್ರೀ. ಜಿ. ಎಂ. ಮಂಜುನಾಥಯ್ಯನವರು ರೂ ೫೦೦೦/–ಕಮ್ಯೂನಿಟಿ ಕೇಂದ್ರಕ್ಕಾಗಿ ಶ್ರೀ ಎನ್. ಕೃಷ್ಣಪ್ಪ ಸಹೋದರರು ರೂ. ೨೫೦೦/–ಒಂದು ಶಾಲೆಗಾಗಿ ಶ್ರೀ. ಎಚ್. ಸಿ. ಕಾಳಿಂಗಪ್ಪನವರು ರೂ. ೫೦೦೦/–ಬೆರಿಗೆ ಆಸ್ಪತ್ರೆಗಾಗಿ ಶ್ರೀ ಸಿ. ಎಸ್. ಐರನ್‌ರವರು ರೂ.೫೦೦೦/–ಒಂದು ಶಾಲೆಗಾಗಿ ಶ್ರೀ. ಐವರ್ ಬುಲ್ಲರ್‌ರವರು ರೂ. ೧೦೦೦೦ ಜಾನುವಾರು ಆಸ್ಪತ್ರೆಗಾಗಿ ಶ್ರೀರಂಗಸ್ವಾಮಿ ಶೆಟ್ಟಿಯವರು ರೂ. ೭೦೦೦/–ಬೆಲೆಯ ಜಾಗ, ಶ್ರೀ. ಜಿ. ಕೆ. ಗೋಪಾಲ ಸಹೋದರರು ೧೦೦೦/- ಬೆಲೆಯ ಜಾಗ, ಒಂದು ಶಾಲೆಗಾಗಿ ಶ್ರೀ. ಸ್ಮಾರ್ಟ್‌ರವರು ರೂ. ೧೦೦೦೦/–ಒಂದು ಜಾನುವಾರು ಆಸ್ಪತ್ರೆಗಾಗಿಯೂ, ಒಂದು ಕಮ್ಯೂನಿಟಿ ಕೇಂದ್ರಕ್ಕಾಗಿಯೂ ಸುಂಟಿಕೊಪ್ಪ ನಾಡಿನ ಜನರು ರೂ. ೪೫೦೦ ಕೊಡಲೊಪ್ಪಿ ಈ ಸಾರ್ವಜನಿಕ ಸಹಾಯವು ಈಗಾಗಲೇ ರೂ ೧,೧೦,೦೦೦/–ಕ್ಕೆ ತಲುಪಿದೆ.

ಸಾರ್ವಜನಿಕರ ಬೆಂಬಲ.

ಪ್ರತಿ ಗ್ರಾಮದಲ್ಲೂ ಸಮಿತಿಗಳನ್ನು ನೇಮಿಸಿದ್ದು ಗ್ರಾಮದ ಕಾರ್ಯಕಲಾಪಗಳ ಜವಾಬ್ದಾರಿಯು ಅವರದಾಗಿದೆ. ಅವರ ಸೂಚನೆಯಂತೆ ಕೆಲಸಗಳನ್ನು ಮಾಡಲಾಗುತ್ತಿದೆ. ಸಾರ್ವಜನಿಕರ ಬೆಂಬಲವು ಚೆನ್ನಾಗಿ ದೊರೆಯುತ್ತಿದೆ. ಈ ವರೆಗಿನ ತಮ್ಮ ಜೀವನವನ್ನೂ, ದನಕರು ಸಂಪತ್ತನ್ನೂ ಅಭಿವೃದ್ಧಿಗೊಳಿಸಿಕೊಳ್ಳಬಹುದೆಂದು ಜನರು ನಂಬತೊಡಗಿದ್ದಾರೆ. ಸರಕಾರವೆಂದರೆ ತಾವೇ ಎಂಬ ಭಾವನೆಯೂ, ತಮ್ಮಿಂದ ಸಾಧ್ಯವಾಗದ ಕಷ್ಟದ ಕೆಲಸಗಳಿಗೆ ಮಾತ್ರ ಸರಕಾರದ ಸಹಾಯ ಅವಶ್ಯವೆಂಬುದೂ ಅವರಿಗೆ ಮನವರಿಕೆಯಾಗಿದೆ.

೩೦ರಿಂದ ೯೦ ಪೌಂಡುಗಳಷ್ಟು ನೈಟ್ರೋಜನ್, ೩೦ರಿಂದ ೯೦ ಪೌಂಡುಗಳಷ್ಟು ಫಾಸ್‌ಫರಸ್, ೬೦ರಿಂದ ೬೦ರಷ್ಟು ಪೊಟಾಶ್ ಇರುವಂತೆ ಎಚ್ಚರಿಕೆ ತೆಗೆದುಕೊಳ್ಳುತ್ತಾರೆ. ಇವರಲ್ಲಿ ಅರ್ಧವನ್ನು ಮಣ್ಣನ್ನು ಹದ ಮಾಡುವಾಗ ಬಾಕಿ ಉಳಿದರ್ಧವನ್ನು ನಂತರ ಹಾಕುತ್ತಾರೆ.

ಬತ್ತದ ಬೆಳೆಗೆ ನೀರು ಒದಗಿಸುವ ಯೋಜನೆಯು ಜಪಾನಿನಲ್ಲಿ ಬಹು ಮುಂದುವರಿದಿದೆ. ವರ್ಷದ ಇಡೀ ಭಾಗದಲ್ಲಿ ಮಳೆ ಬಿದ್ದರೂ ಜಪಾನಿನ ಶೇಕಡ ೯೦ರಷ್ಟು ಗದ್ದೆಗಳಿಗೆ ನೀರಾವರಿ ಯೋಜನೆಯನ್ನು ಮಾಡಿಕೊಂಡಿರುವರು. ಬೆಳೆ ಕದಿರು ದಾಟಿದ ನಂತರ ಬಿದ್ದ ನೀರಿನಲ್ಲಿ ಕೊಳೆತು ಒಳಗಾಗದಂತೆ ಜಪಾನಿನಲ್ಲಿ ಎರಡನೆ ಎತ್ತರದ ಕಾಲುವೆಗಳನ್ನು ನಿಲ್ಲು ಬೆಳೆ ಸಲಿಕ್ಕೆ ಒದ್ದ ನೀರಿನಲ್ಲಿ ನಷ್ಟವಾಗದಂತೆ ಹಗ್ಗ ಒಟ್ಟು ವ್ಯವಸ್ಥೆ ಮಾಡುತ್ತಾರೆ. ಈ ವಿಧಾನದಿಂದ ತುಂಬಾ ಲಾಭವಿದೆಯೆಂದು ತಿಳಿದು ಬಂದಿದೆ.

For Purchase.

A Property below Rs. 10,000, near to any Bus route, with in 3 miles of a R. C. Church, (between 15 to 50 Acres including wet and dry) in Coorg.

For further particulars write to:—

C. G. XAVIER.
C/o Kuttichen Mampilly,
Gonicopal P. O
S Coorg.

ಚರ್ಚಿಲ್ಲರ ಅಮೇರಿಕೆಯ ಯಾತ್ರೆ.

(ಜೈಹಿಂದ್ ಪತ್ರಿಕೆಯಿಂದ)

ಅಂತರ್ರಾಷ್ಟ್ರೀಯ ಕ್ಷೇತ್ರದಲ್ಲಿ ಎಲ್ಲರ **ಲಕ್ಷ್ಯವನ್ನು** ಸೆಳೆದ ಈ ವಾರದ ಘಟನೆ ಎಂದರೆ ಬ್ರಿಟನ್ನಿನ ಮುಖ್ಯ ಮಂತ್ರಿ ಚರ್ಚಿಲ್ಲರ ಅಮೇರಿಕೆ ಯಾತ್ರೆ. ಅಧ್ಯಕ್ಷ ಟ್ರೂಮನ್ನರು ಅಧಿಕಾರದಲ್ಲಿದ್ದಾಗ ಅನುಸರಿಸುತ್ತ ಬಂದ ವಿದೇಶ ಧೋರಣೆಯಲ್ಲಿ ಅವರ ಉತ್ತರಾಧಿಕಾರಿಯಾದ ರಿಪಬ್ಲಿಕನ್ ಪಕ್ಷದ ಜನರಲ್ ಐಸೆನ್ ಹೋವರರು ಮೂಲಭೂತವಾದ ಬದಲಾವಣೆ ಮಾಡಬಹುದೆ? ಎಂಬುದೇ ಯೂರೋಪದ ರಾಷ್ಟ್ರಗಳಿಗೆ ಒಡೆಯಲಾರದ ಒಗಟಾಗಿದೆ.

ಯೂರೋಪದ ರಾಷ್ಟ್ರಗಳಲ್ಲಿ ಯುದ್ಧೋತ್ತರ ಕಾಲದಲ್ಲಿ ಔದ್ಯೋಗಿಕ ಅಭಿವೃದ್ಧಿ ಸಾಧಿಸಲು ಆರ್ಥಿಕ ಸಹಾಯ ನೀಡುವ ಧೋರಣೆಯನ್ನು ಅಮೇರಿಕೆಯು ಮಾರ್ಶಲ್‌ರ ಸಲಹೆಯಂತೆ ಒಪ್ಪಿಕೊಂಡು ಅಪಾರವಾದ ಧನ ಸಹಾಯ ನೀಡಿತು.

ಆರ್ಥಿಕ ಬಾಂಧವ್ಯದ ಜೊತೆಗೆ ಪರಸ್ಪರ ಸೈನ್ಯ ಸಹಾಯದ ವಿಚಾರವನ್ನು ಒಪ್ಪಿಕೊಂಡು ಅಟ್ಲಾಂಟಿಕ್ ಒಪ್ಪಂದ, ಯುರೋಪ ಸಂರಕ್ಷಕ ಸೈನ್ಯಸಿದ್ಧತೆ, ಮೊದಲಾದ ಕೆಲವೊಂದು ಕ್ರಮಗಳನ್ನು ಕೈಕೊಂಡದ್ದು ತಿಳಿದ ವಿಷಯ. ಡೆಮೊಕ್ರೆಟಿಕ್ ಪಕ್ಷದವರು ಯುರೋಪದಲ್ಲಿ ಆರ್ಥಿಕ ದುಸ್ಥಿತಿ ತಲೆದೋರಿದರೆ ಕಮ್ಯೂನಿಜಂದ ಪ್ರಸಾರಕ್ಕೆ ಅವಕಾಶ ಕೊಟ್ಟಂತಾಗುವದೆಂಬ ಭಾವನೆಯಿಂದ ಮಾರ್ಶಲ್ ಸಹಾಯ ಯೋಜನೆಯನ್ನು ಮಾಡಿ, ಅಷ್ಟರಿಂದಲೇ ಸಮಾಧಾನ ಹೊಂದದೆ ಪಶ್ಚಿಮ ಯೂರೋಪದಲ್ಲಿ ರಶಿಯಾವು ದಂಡಯಾತ್ರೆ ಕೈಕೊಂಡರೆ ಅದನ್ನು ಎದುರಿಸಿ ರಶಿಯವನ್ನು ಮಣ್ಣುಮುಕ್ಕಿಸುವ ಸೈನ್ಯಬಲವನ್ನು ನಿರ್ಮಾಣ ಮಾಡಲು ಅಟ್ಲಾಂಟಿಕ್ ಒಪ್ಪಂದದ ವಿಚಾರಕ್ಕೆ ಮೂರ್ತಸ್ವರೂಪವನ್ನು ಕೊಡಲಾಯಿತು. ಅಮೇರಿಕೆಯ ಧನ ಸಹಾಯ, ಶಸ್ತ್ರಾಸ್ತ್ರ ಸಹಾಯ, ಸೈನ್ಯ ಬಲದ ನೆರವು ತಮಗಿರುವದರಿಂದ ರಶಿಯವು ದಾಳಿ ಮಾಡಿದರೆ ಅದನ್ನು ಎದುರಿಸುತ್ತೇವೆಂಬ ಆತ್ಮವಿಶ್ವಾಸವು [illegible] ಧೈರ್ಯವು ಪಶ್ಚಿಮ ಯೂರೋಪ ರಾಷ್ಟ್ರಗಳಲ್ಲಿ ಅಮೇರಿಕೆಯ ಯುರೋಪ ಧೋರಣೆಯಿಂದ ಉಂಟಾಗಿದ್ದರೆ ಆಶ್ಚರ್ಯವಲ್ಲ.

ರಿಪಬ್ಲಿಕನ್ ಪಕ್ಷದ ಧೋರಣೆ.

ಚುನಾವಣೆಯಲ್ಲಿ ಡೆಮೊಕ್ರೆಟಿಕ್ ಪಕ್ಷವು ಸೋತು ರಿಪಬ್ಲಿಕನ್ ಪಕ್ಷವು ಅಮೇರಿಕೆಯ ಆಡಳಿತದ ಸೂತ್ರಗಳನ್ನು ವಹಿಸಿಕೊಳ್ಳುವ ಪರಿಸ್ಥಿತಿ ಉಂಟಾಗಲು ಯೂರೋಪದ ರಾಷ್ಟ್ರಗಳಲ್ಲಿ ಚಿಂತೆಯುಂಟಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಚುನಾವಣೆಯ ಕಾಲದಲ್ಲಿ ರಿಪಬ್ಲಿಕನ್ ಪಕ್ಷದ ಧುರೀಣರು ವಿಶೇಷತಃ ಅಧ್ಯಕ್ಷ ಪದಕ್ಕೆ ಆರಿಸಿ ಬಂದ ಐಸೆನ್ ಹೋವರರು ಅಮೇರಿಕೆಯ ಜನತೆಗೆ ಕರಭಾರ ಕಡಿಮೆ ಮಾಡುವ, ಹಾಗು ಸಂರಕ್ಷಣಾ ಖಾತೆಯ ವೆಚ್ಚವನ್ನು ತಗ್ಗಿಸುವ ಭರವಸೆ ಕೊಟ್ಟದ್ದೇ ಆಗಿದೆ. ಅಮೇರಿಕೆಯು ತನ್ನನ್ನೇ ನಂಬಿ ಕುಳಿತ **ಯುರೋಪಿಯನ್** ರಾಷ್ಟ್ರಗಳಿಗೆ **ಎಂದಿನಂತೆ ಆರ್ಥಿಕ ಸಹಾಯ**, ಶಸ್ತ್ರಾಸ್ತ್ರ ಸಾಮಗ್ರಿ, ಸೈನ್ಯಬಲದ ಸಹಾಯ ನೀಡುವದಾದರೆ ಅಮೇರಿಕೆಯು ಜನತೆಯ ಮೇಲಿನ ಕರಭಾರ ಇಳಿಸುವದಾಗಲೀ ಸಂರಕ್ಷಣ ಖಾತೆಯ ವೆಚ್ಚವನ್ನು ತಗ್ಗಿಸುವದಾಗಲೀ ಅಶಕ್ಯ. ಇದು ರಿಪಬ್ಲಿಕನ್ ಪಕ್ಷದವರಿಗೂ ಗೊತ್ತು. ಅಂತೆಯೇ ಅವರು ಯುರೋಪಿಯನ್ ರಾಷ್ಟ್ರಗಳು ಕಮ್ಯೂನಿಜಮನ್ನು ಯಶಸ್ವಿಯಾಗಿ ಎದುರಿಸುವ ಬಗ್ಗೆ ಬಲಸಂವರ್ಧನೆಯನ್ನು ಅಮೇರಿಕೆಯ ನೆಚ್ಚಿದಿಂದ ಪಡೆಯದೆ ಸ್ವಪ್ರಯತ್ನದಿಂದ ನಡೆಯಲಿ: ಒಂದು ವೇಳೆ ಪಶ್ಚಿಮ ಯೂರೋಪದ ರಾಷ್ಟ್ರಗಳು ಕಮ್ಯೂನಿಜಮನ್ನು ಎದುರಿಸಲು ಮಾಡಬೇಕಾದ ತ್ಯಾಗ ಬಲಿದಾನಗಳಿಗೆ ಸಿದ್ಧವಿಲ್ಲದಿದ್ದರೆ ಅವುಗಳ ಭವಿತವ್ಯಕ್ಕಾಗಿ ಅಮೇರಿಕೆಯು ಪ್ಯಾಸಿಫಿಕ್‌ದಲ್ಲಿ ರಶಿಯದ ಸರ್ಜನ್ನು ತಪ್ಪಿ ಅಮೇರಿಕೆಗೆ ಗಂಡಾಂತರ ಪರಿಸ್ಥಿತಿ ತಲೆದೋರದಂತೆ ನೋಡಿಕೊಳ್ಳಲು ಜಪಾನ್, ಫ್ರೋರ್ಮೋಸಾ, ಫಿಲಿಪೈನ್, ನ್ಯೂಝೀಲಂಡ್ ಹಾಗೆ [illegible] ಸಂರಕ್ಷಣ ವ್ಯೂಹದ [illegible] ಕೊಳ್ಳಲು ಹೆಚ್ಚಿನ ಗಮನ ಕೊಡುವದು ಯೋಗ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರು. ಇದರಿಂದ ಬ್ರಿಟನ್ನು ನೊಂದುಕೊಂಡು ಪಶ್ಚಿಮದ ಕೆಲ ರಾಷ್ಟ್ರಗಳಿಗೆ ಜನರಲ್ ಐಸೆನ್ ಹೋವರರು, ಅಧ್ಯಕ್ಷ ಟ್ರೂಮನ್ನರು ಅನುಸರಿಸುತ್ತ ಬಂದ ಧೋರಣೆಯನ್ನೇ ಪಶ್ಚಿಮ ಯೂರೋಪದ ರಾಷ್ಟ್ರಗಳ ಬಗ್ಗೆ ಅನುಸರಿಸುವಂತೆ ಮಾಡಲು ಬಲವಾದ [illegible] ನಡೆಸಿದೆ. ಬ್ರಿಟಿಷ ಮುಖ್ಯ ಮಂತ್ರಿ ಚರ್ಚಿಲ್ಲರು ಈ ಕಾರ್ಯಸಾಧಿಸಲು ಅಮೇರಿಕೆಯ ಯಾತ್ರೆಯನ್ನು ಕೈಕೊಂಡಿರುವಂತೆ ತೋರುವದು.

ಶ್ವೇತಮಂದಿರ ಭವನದಿಂದ ಇಳಿಯುವ ವೇಳೆ ಚರ್ಚಿಲ್ಲರು ಪತ್ರಿಕಾ ಪ್ರತಿನಿಧಿಗಳಿಗಿತ್ತ ಸಂದರ್ಶನದಲ್ಲಿ ಜಾಗತಿಕ ಕ್ಷೇತ್ರದ ಕೇಂದ್ರವು ಕೊರಿಯದಲ್ಲಿರದೆ ಯುರೋಪದಲ್ಲಿದೆ ಎಂದು ಸ್ಪಷ್ಟವಾಗಿ ಹೇಳಿದ್ದು ಲಕ್ಷ್ಯಕ್ಕೆ ತರತಕ್ಕದ್ದಾಗಿದೆ. [illegible] ಮುಖ್ಯ ಮಂತ್ರಿ ಕೊರಿಯದ [illegible] ಘಟನಾವಳಿ [illegible] ಹೊಸ ದಿಕ್ಕಿನಲ್ಲಿ ಪ್ರವಹಿಸತೊಡಗಿದ [illegible] ಮಾಡಿದರೆ ಅಮೇರಿಕೆಯು ಯುರೋಪದತ್ತ ದುರ್ಲಕ್ಷ್ಯ ಮಾಡಿದರೆ ಜಾಗತಿಕ ಪರಿಸ್ಥಿತಿ ಹದಗೆಟ್ಟು ಅತಿ ಕಠಿಣ ಪರಿಣಾಮಗಳನ್ನು ಅನುಭವಿಸಬೇಕಾಗುವದೆಂಬ ಮಾತನ್ನು ಅಮೇರಿಕೆಯು ಮೇಲೆ ಬಿಂಬಿಸಲು ಬ್ರಿಟಿಷ ಮುತ್ಸದ್ದಿಗಳು ಪ್ರಯತ್ನ ನಡೆಸಿದ್ದು ಸ್ಪಷ್ಟವಾಗುವದು.

ಕೊರಿಯಾ ಯುದ್ಧ.

ಕೊರಿಯಾ ಯುದ್ಧವು ಕ್ರಿಸ್‌ಮಸ್ ಮುಗಿದು ಹೊಸ ವರ್ಷದಲ್ಲಿ ಕಾಲಿಟ್ಟಂದಿನಿಂದ ದಿನ ದಿನಕ್ಕೆ ಹೆಚ್ಚು ಉಗ್ರವಾಗುತ್ತ ನಡೆಯುವ ಲಕ್ಷಣಗಳು ಕಂಡು ಬರುತ್ತಿವೆ. ಅಮೇರಿಕೆಯ ಚುನಾಯಿತ ಅಧ್ಯಕ್ಷ **ಐಸೆನ್‌ಹೋವರರು ಚುನಾವಣೆ ಕಾಲ**ದಲ್ಲಿ ಜನತೆಗೆ ಕೊಟ್ಟ ವಚನ ಪೂರೈಸಲು ಕೊರಿಯಾ ರಣರಂಗಕ್ಕೆ ಭೇಟಿಯನ್ನಿತ್ತು ಬಂದರು. ಆದರೆ ಅವರು ಹೇಳಿದಂತೆ ಅಮೇರಿಕೆಯ ಸೈನಿಕರು ಕೊರಿಯಾ ರಣರಂಗದಿಂದ ಮರಳಿ ಬರುವಂತೆ ಮಾಡುವದು ಸಾಧ್ಯವಾಗಿಲ್ಲ. ಕೊರಿಯಾ ಯುದ್ಧವಿರಾಮ ಮಾತುಕತೆಗಳು ಪುನಃ ಪ್ರಾರಂಭವಾಗುವ ಲಕ್ಷಣಗಳಂತೂ ಇಲ್ಲ. ಸಂ. ರಾ. ಸಂಘದಲ್ಲಿ ಕೊರಿಯಾ ಯುದ್ಧ ವಿರಾಮ ಸಾಧಿಸಲು ಭಾರತವು ಮಂಡಿಸಿದ ಸೂಚನೆಯು ಪ್ರಚಂಡ ಬಹುಮತದಿಂದ ಸ್ವೀಕೃತವಾದರೂ ಕೆಂಪುಚೀನ, ಉತ್ತರ ಕೊರಿಯಗಳು ಅದನ್ನು ಮನ್ನಿಸಲು ನಿರಾಕರಿಸಿವೆ. ಆದುದರಿಂದ ಯುದ್ಧ ವಿರಾಮ ಸಾಧಿಸುವ ದಾರಿಯು ಸದ್ಯಕ್ಕೆ ಮುಚ್ಚಿದಂತಾಗಿದೆ. ಚಳಿಗಾಲವು ಮುಕ್ತಾಯಕ್ಕೆ ಬಂದಂತೆ ಕೊರಿಯದಲ್ಲಿ ಯುದ್ಧದ ಕಾವು ಹೆಚ್ಚುವ ಲಕ್ಷಣಗಳಿವೆ. ರಶಿಯಾದ ಸೇನಾಪತಿಯು ಕೊರಿಯಾ ರಣರಂಗಕ್ಕೆ ಸಂದರ್ಶನವಿತ್ತ [illegible]ದಿಂದ ಇದಕ್ಕೆ ಪುಷ್ಟಿ ದೊರೆಯುತ್ತಿದೆ. ಸಂಧಾನದಿಂದ ಯುದ್ಧ ವಿರಾಮ ಅಸಾಧ್ಯವಾದಾಗ ರಣರಂಗದಲ್ಲಿ ವಿಜಯ ಶ್ರೀಯನ್ನು ಒಲಿಸಿಕೊಳ್ಳಲು ಹೋರಾಡುವ ಹೊಂದೇ ದಾರಿ ಉಳಿಯುವದು. ಆದರೆ [illegible] ಐಸೆನ್ ಹೋವರರಿಗೆ ಜನರಲ್ ಮ್ಯಾಕಾರ್ಥರರು ಕೊರಿಯಾ ಯುದ್ಧವನ್ನು ಕೊನೆಗಾಣಿಸುವ ತಮ್ಮ ಯೋಜನೆಯನ್ನು ತಿಳಿಸಿ ಹೇಳಿದರೆಂದು ವರದಿ ಪ್ರಸಿದ್ಧವಾಗಿದೆ. ಅಮೇರಿಕೆಯ ರಿಪಬ್ಲಿಕನ್ ಪಕ್ಷದ ಆಡಳಿತದಲ್ಲಿ ವಿದೇಶ ಮಂತ್ರಿ ಪದಕ್ಕೆ ನೇಮಕ ಹೊಂದಲಿರುವ ಡಲೇಸರು ಅತಿ ಪ್ರಾಚ್ಯದ ಸಮಸ್ಯೆ ಬಿಡಿಸುವ ವಿಷಯದಲ್ಲಿ ಸಂಧಾನಕ್ಕಿಂತ ಶಸ್ತ್ರ ಪ್ರಯೋಗ ಅಗತ್ಯ ಎಂಬ ಅಭಿಪ್ರಾಯದವರಿರುವರು. ಅವರು ಜಪಾನಿನ ಶಾಂತಿ ಒಪ್ಪಂದದ ಕರಡು ಸಿದ್ಧಪಡಿಸುವಾಗ ಜಪಾನದಲ್ಲಿ ಅಮೇರಿಕೆಯ ವಿಶಿಷ್ಟ [illegible] ಉಳಿಯುವಂತೆ ಜಪಾನವು ಅಮೇರಿಕೆಯೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂಬ ಕರಾರು ಹಾಕಿದ್ದರಿಂದ ಇದು ಸುವ್ಯಕ್ತವಾಗುವದು. ಜನರಲ್ ಮ್ಯಾಕಾರ್ಥರರ ಕೊರಿಯಾ ಯುದ್ಧ ಮುಕ್ತಾಯಗೊಳಿಸುವ ಯೋಜನೆ ಎಂದರೆ [illegible] ಚೀನೀ [illegible] ಸೈನ್ಯ [illegible] ಹಾಗೂ ಯುದ್ಧ ಕಾರ್ಖಾನೆಗಳ ಮೇಲೆ ವಿಮಾನ ದಾಳಿ ಮಾಡಿ ರಶ್ಯ ಬಲವನ್ನು ನಾಶಪಡಿಸಿ ಕೊರಿಯಾ ಯುದ್ಧವನ್ನು ಗೆಲ್ಲುವದೇ ಆಗಿರಬಹುದೆಂ ಮೆ, ಅವರ ಸೇನಾಪತಿ ಪದಚ್ಯುತಿ ಹೊಂದುವ ಮೊದಲು ವ್ಯಕ್ತಪಡಿಸಿದ ಅಭಿಪ್ರಾಯ ನೋಡಿದರೆ ಹೇಳಬಹುದು. ದಕ್ಷಿಣ ಕೊರಿಯದ ಅಧ್ಯಕ್ಷ ಡಾ. ಸಿಂಗ್‌ಮನ್ ರ್ಹೀ ಇವರು ಇತ್ತೀಚೆಗೆ ಜಪಾನಕ್ಕೆ ಭೆಟ್ಟಿ ಕೊಟ್ಟು ಅಲ್ಲಿ ಜಪಾನಿ ಮುಖ್ಯ ಮಂತ್ರಿಯು ಕೊಟ್ಟ ಸಹಾಯದ ಭರವಸೆ, ಇವುಗಳನ್ನು ನೋಡಿದರೆ ಕೊರಿಯ [illegible] ಮಂಚೂರಿಯದ ವರೆಗೆ ವ್ಯಾಪಿಸುವದೆಂದು ನಿರೀಕ್ಷಿಸಬಹುದಾಗಿದೆ. ಫಾರ್ಮೋಸಾ ಬೆಟ್ಟಗಡ್ಡೆಯಲ್ಲಿರುವ ಚಿಯಾಂಗ ಕೈಶೇಕರ ಸೈನ್ಯವೂ ಅಮೇರಿಕನ್ ಮಿಲಿಟರಿ ತಜ್ಞರ ನೇತೃತ್ವದಲ್ಲಿ ತರಬೇತಿ ಹೊಂದುತ್ತಿರುವ ವರದಿಗಳೂ ಇವೆ. ಇವನ್ನೆಲ್ಲ ನೋಡಿದರೆ ಅತಿ ಪ್ರಾಚ್ಯದಲ್ಲಿ ಕೊರಿಯ ಯುದ್ಧವು ಸಂಧಾನದಿಂದ ಮುಗಿಯುವ ಲಕ್ಷಣಗಳು [illegible] ಅದು ಕೊರಿಯದಿಂದ ಮಂಚೂರಿಯದ ವರೆಗೆ, ವ್ಯಾಪಿಸುವ ಲಕ್ಷಣಗಳು ಎದ್ದು ಕಾಣುತ್ತಿವೆ.

ಇಂಡೋಚೀನದಲ್ಲಿ ವಿಯಟ್‌ಮಿನ್ನರನ್ನು ಸದೆಬಡಿದು ಇಂಡೋಚೀನದಲ್ಲಿ ಫ್ರೆಂಚ ಸಾಮ್ರಾಜ್ಯದ ಹಿತವನ್ನು ಬಲಪಡಿಸಲು ಉತ್ತರ ಅಟ್ಲಾಂಟಿಕ್ ಒಪ್ಪಂದ [illegible] ಸಂಸ್ಥೆಯು ಫ್ರಾನ್ಸಿಗೆ ನೈತಿಕ ಬೆಂಬಲವನ್ನಲ್ಲದೆ ವಿಸ್ತೃತ ಸಹಾಯವನ್ನು ನೀಡಲು ಒಪ್ಪಿಕೊಂಡಿದೆ. ಈ ಬಗೆಯ [illegible] ಅಟ್ಲಾಂಟಿಕ್ ಒಪ್ಪಂದ [illegible] ಹಾಗಾಗಿರುವದು [illegible] ಭಾಗದಲ್ಲಿ ಗಮನಾರ್ಹವಾಗಿದೆ. ಇದನ್ನು ನೋಡಿದರೆ ಕೆಂಪು ಚೀನದ ಉತ್ತರದಲ್ಲಿ ಮಂಚೂರಿಯದ ಮೇಲೆ ಕೊರಿಯಾ ರಣರಂಗದಿಂದ ಅಮೇರಿಕೆಯು ವಿಮಾನಗಳ ದಾಳಿ ಪ್ರಾರಂಭಿಸಿದ ಕೂಡಲೆ ಫಾರ್ಮೋಸಾದಿಂದ ಚಿಯಾಂಗರ ಸೈನ್ಯವು ಚೀನಾ ಪ್ರವೇಶ ಕರಾವಳಿಯ ಮೇಲೆ ದಾಳಿ ಮಾಡುವ ಹಾಗೂ ಅದೇ ಕಾಲಕ್ಕೆ ಇಂಡೋಚೀನದಿಂದ ವಿಯಟ್‌ಮಿನ್ನರನ್ನು ಸದೆಬಡಿದು ಅವರಿಗೆ ಚೀನವು ಸಹಾಯ ನೀಡುವದನ್ನು ತಪ್ಪಿಸಲು ದಕ್ಷಿಣ ಚೀನದ ಮೇಲೆ ಇಂಡೋಚೀನದಿಂದ ದಾಳಿ ನಡೆಸುವ ಒಟ್ಟು ಮೂರು ದಿಕ್ಕುಗಳಿಂದ ಚೀನವನ್ನು ಮುತ್ತಿ ಅದನ್ನು ಹಣ್ಣು ಮಾಡುವ ಯೋಜನೆಯು ಜನರಲ್ ಮ್ಯಾಕಾರ್ಥರರ ಕೊರಿಯಾ ಯುದ್ಧವನ್ನೇ ಕೊನೆಗಾಣಿಸುವ ಯೋಜನೆಯಾಗಿರಲು ಸಾಕು. ಈ ತರದ ಯೋಜನೆಯಿಂದ ಯುದ್ಧವನ್ನು ಅತಿ ಪ್ರಾಚ್ಯದಲ್ಲಿ

The New Guardian of India Life Insurance Co., Ltd.,

HEAD OFFICE

Post Box No. 142 Esplanade, MADRAS 1.

Wanted Licensed Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT,

The New Gaurdian of India Life Insurance Co., Ltd.

for COORG. Virajpet.

OR

To The Head Office, MADRAS.

12–1

ವ್ಯಾಪಕ ಪ್ರಮಾಣದಲ್ಲಿ ನಡೆಸಲು ಪಶ್ಚಿಮ ರಾಷ್ಟ್ರಗಳ ವಿಶೇಷವಾಗಿ ಅಮೇರಿಕನ್ ಸೈನ್ಯ ಬಲವು ಪೂರ್ವ ರಂಗದಲ್ಲಿ ತೊಡಗುವದು. ಇದು ಪಶ್ಚಿಮ ಯುರೋಪದ ರಾಷ್ಟ್ರಗಳ ಮೇಲೆ ದಾಳಿ ಮಾಡಲು ರಶಿಯಕ್ಕೆ ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಿಕೊಡುವಂಥದಾಗಿದೆ. ಅತಿಪ್ರಾಚ್ಯ ಯುದ್ಧ ಕ್ಷೇತ್ರವು ಕೊರಿಯದ ಮಟ್ಟಿಗೆ ಮರ್ಯಾದಿತವಾಗಿ ಉಳಿದರೆ ಪಶ್ಚಿಮ ಯುರೋಪ ರಾಷ್ಟ್ರಗಳು ಯುರೋಪ ಸಂರಕ್ಷಣೆಗೆ ಸಮರ್ಥವಾದ ಬಲವನ್ನು ಕಾಪಾಡಿಕೊಳ್ಳುವವು. ರಶಿಯಾವು ಪಶ್ಚಿಮ ಯುರೋಪದ ರಾಷ್ಟ್ರಗಳ ಮೇಲೆ ಏರಿ ಹೋಗಲು ಪ್ರಯತ್ನಿಸಿದ್ದೇ ಆದರೆ ಅದರ ದಾಳಿಯನ್ನು ಪ. ಯುರೋಪ ರಾಷ್ಟ್ರಗಳು ಎದುರಿಸಿ ಹಿಂದೂಡಬಲ್ಲವು. ಆದರೆ ಅತಿ ಪ್ರಾಚ್ಯದಲ್ಲಿ ಯುದ್ಧ ಕ್ಷೇತ್ರವು ವಿಸ್ತಾರವಾದರೆ ಅಮೇರಿಕೆಯ ಸೈನ್ಯಸಾಮಗ್ರಿ, ಸೈನ್ಯಬಲ, ವಿಮಾನಬಲ, ಎಲ್ಲವೂ ಅತಿ ಪ್ರಾಚ್ಯ ರಣರಂಗದಲ್ಲಿ ತೊಡಗುವವು. ಅಂಥ ಪರಿಸ್ಥಿತಿಯಲ್ಲಿ ಪಶ್ಚಿಮ ಯುರೋಪದ ಸಂರಕ್ಷಣೆಯನ್ನು ಅಮೇರಿಕೆಯು ದುರ್ಲಕ್ಷ ಮಾಡದೇ ಗತ್ಯಂತರ ಉಳಿಯದು. ಹೀಗಾಗಿ ಯುರೋಪದಲ್ಲಿ ರಶಿಯದ ಸಾಮ್ರಾಜ್ಯವನ್ನು ಯಶಸ್ವಿಯಾಗಿ ಎದುರಿಸುವದು ಅಸಾಧ್ಯವಾಗುವ ಪರಿಸ್ಥಿತಿ ತಲೆದೋರಬಹುದು. ಪಶ್ಚಿಮ ಯುರೋಪವನ್ನು ದುರ್ಲಕ್ಷಿಸುತ್ತ ಅತಿ ಪ್ರಾಚ್ಯದತ್ತ ಇರುವ ರಿಪಬ್ಲಿಕನ್ ಪಕ್ಷದ ಧುರೀಣರ ಲಕ್ಷ್ಯವನ್ನು ಯುರೋಪದತ್ತ ಹೊರಳಿಸಲು ಪ್ರಯತ್ನ ನಡೆದಿದೆ. ಚರ್ಚಿಲ್ಲರು ಅಸಾಮಾನ್ಯ ಮುತ್ಸದ್ದಿಗಳಾಗಿರುವದರಿಂದ ಅವರು ರಿಪಬ್ಲಿಕನ್ ಪಕ್ಷದ ಯುರೋಪ ಮತ್ತು ಅತಿ ಪ್ರಾಚ್ಯಗಳ ಧೋರಣೆಯನ್ನು ಪುನರ್ವಿಮರ್ಶೆ ಮಾಡಲು ಹಚ್ಚುವಷ್ಟು ವರ್ಚಸ್ವಿಗಳೂ ಆಗಿರುವರು. ಚರ್ಚಿಲ್ ಐಸೆನ್‌ಹೋವರರ ಭೇಟಿಯ ಪರಿಣಾಮವಾಗಿ ರಿಪಬ್ಲಿಕನ್ ಪಕ್ಷದ ಆಡಳಿತದ ವಿದೇಶ ಧೋರಣದಲ್ಲಿ ಮೂಲಭೂತ ಬದಲಾವಣೆಯಾಗಬಹುದೆ? ಬದಲಾವಣೆಯಾದರೆ ಕೊರಿಯಾ ಸಮಸ್ಯೆಯನ್ನು ಬಿಡಿಸಲು ಸಂಧಾನದ ಹೊಸ ಪ್ರಯತ್ನ ನಡೆಯಬಹುದು. ಚರ್ಚಿಲ್ಲರ ಅಮೇರಿಕೆಯ ಯಾತ್ರೆಯು ಜಗತ್ತಿನ ಎಲ್ಲ ರಾಷ್ಟ್ರಗಳ ಲಕ್ಷ್ಯವನ್ನು ವೇಧಿಸಿದೆ. ಅಮೇರಿಕೆಯಲ್ಲಿ ಮಾಡಲಿರುವ ಕಾರ್ಯದ ಯಶಾಪಯಶಗಳ ಮೇಲೆ ಅತಿಪ್ರಾಚ್ಯ ಮತ್ತು ಯುರೋಪಗಳಲ್ಲಿಯ ಶಾಂತಿಯು ಅವಲಂಬಿಸಿರುವದರಿಂದ ಅವರು ಅಮೇರಿಕೆಗೆ ಹೋದದ್ದಕ್ಕೆ ವಿಶೇಷ ಮಹತ್ವವಿದೆ.

ವಾರ್ತೆ.

ಮದ್ರಾಸ್ ನಗರವು ತಮಿಳು ನಾಡಿನ ಆಂತರಿಕ ಹಾಗೂ ಅವಿಭಾಜ್ಯ ಭಾಗವಿರುವುದರಿಂದ ಭಾವೀ ಆಂಧ್ರ ರಾಜ್ಯದ ರಾಜಧಾನಿಯನ್ನು ತಾತ್ಕಾಲಿಕವಾಗಿಯಾದರೂ ಮದ್ರಾಸಿನಲ್ಲಿ ಸ್ಥಾಪಿಸುವದನ್ನು ವಿರೋಧಿಸುವ ಗೊತ್ತುವಳಿಯನ್ನು ಮದ್ರಾಸ ಕಾರ್ಪೋರೇಶನ್ನಿನವರು ಸ್ವೀಕರಿಸಿದ್ದಾರೆ.

ಪಾಕಿಸ್ಥಾನ ಸರಕಾರವನ್ನು ಬುಡಮೇಲು ಮಾಡಲು ಪ್ರಯತ್ನಿಸಿದರೆಂದು ಮೇ. ಜನರಲ್ ಅಕ್ಬರ್‌ಖಾನ್ ಮೊದಲಾದವರ ಮೇಲೆ ಹೂಡಲಾದ ರಾವಳಪಿಂಡಿ ಒಳಸಂಚಿನ ಖಟ್ಲೆಯೆಂದು ದಸರಾದ ಖಟ್ಲೆಯಲ್ಲಿ ಆರೋಪಿಗಳಾಗಿದ್ದ ೧೫ ಜನರಲ್ಲಿ ೧೪ ಜನರಿಗೆ ೧೨ ವರ್ಷದ ಕರಿ ನೀರಿನ ಶಿಕ್ಷೆ ವಿಧಿಸಲ್ಪಟ್ಟಿದೆ.

ಮುಂಬಾಯಿ ರಾಜ್ಯದಲ್ಲಿಯ ಬರಗಾಲ ಸಂತ್ರಪ್ತ ಭಾಗಗಳ ಜನರ ಕಷ್ಟ ನಿವಾರಣೆಗಾಗಿ ಧನ-ಧಾನ್ಯ ಇತ್ಯಾದಿ ಶೇಖರಿಸಲು ರಾಜ್ಯಪಾಲ ಶ್ರೀ. ಬಾಜಪೇಯರ ಅಧ್ಯಕ್ಷತೆಯಲ್ಲಿ ಕೇಂದ್ರ ಬರಗಾಲ ಪರಿಹಾರ ಸಮಿತಿ ರಚಿಸಲ್ಪಟ್ಟಿದೆ.

ಮುಂಬಾಯಿ ಸರಕಾರವು ಈ ಮೊದಲೇ ಬರಗಾಲ ಪ್ರದೇಶವೆಂದು ಸಾರಿದ ಹಳ್ಳಿಗಳಲ್ಲದೆ ಇನ್ನೂ ೧೦೩೨ ಹಳ್ಳಿಗಳಲ್ಲಿ ಬರಗಾಲ ಪರಿಸ್ಥಿತಿಯಿದೆಯೆಂದು ಇದೇ ಎರಡನೇ ದಿನಾಂಕ ಸಾರಿದೆ.

ಜಪಾನದ ಪದ್ಧತಿಯನ್ನವಲಂಬಿಸಿದ ಭತ್ತ ಬಿತ್ತುವ ಹೊಸ ಪದ್ಧತಿಯನ್ನು ಜನಪ್ರಿಯ ಮಾಡುವ ಯೋಜನೆಗಳು ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ ಸಂಚಾಲಕರ ಸಭೆಯಲ್ಲಿ ಸ್ವೀಕರಿಸಲ್ಪಟ್ಟಿವೆ.

ದಳಿತ ವರ್ಗ, ಗುಡ್ಡಗಾಡು ಜನರು ಮತ್ತು ಇತರ ಹಿಂದುಳಿದ ವರ್ಗದವರಿಗೆ ಶಿಷ್ಯವೇತನ ಕೊಡುವ ಯೋಜನೆಯನ್ವಯ ಸುಮಾರು ೫,೦೦೦ ಶಿಷ್ಯವೇತನಗಳನ್ನು ಮಂಜೂರು ಮಾಡಿರುವದಾಗಿ ಕೇಂದ್ರ ಸರಕಾರ ಪ್ರಕಟಿಸಿದೆ.

ಅಂತರಾಷ್ಟ್ರೀಯ ಗಣಿತ ಸಂಘದ ಬಗ್ಗೆ ಹಿಂದೂಸ್ಥಾನ ಸರಕಾರದವರು ಹಿಂದೂಸ್ಥಾನದಲ್ಲಿ ಗಣಿತ ರಾಷ್ಟ್ರೀಯ ಸಮಿತಿಯೊಂದನ್ನು ರಚಿಸಿದ್ದಾರೆ.

ಭಾರತದಲ್ಲಿಯ ಎಲ್ಲ ವಿಮಾನ ಸಾರಿಗೆ ಕಂಪನಿಗಳನ್ನು ಇದೇ ಏಪ್ರಿಲ್ ೧ನೇ ತಾರೀಖಿನೊಳಗಾಗಿ ಸರಕಾರವು ವಶಪಡಿಸಿಕೊಳ್ಳುವದೆಂದು ತಿಳಿಯಬಂದಿದೆ.

ಹೈದರಾಬಾದಿನಲ್ಲಿ ಸೇರುವ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾವಾರ ಪ್ರಾಂತ ರಚನೆಯ ವಿಚಾರದಲ್ಲಿ ಯಾವುದೇ ನಿರ್ಧಾರದ ನಿರ್ಣಯವನ್ನು ಕೈಕೊಳ್ಳಬಾರದೆಂದು ಸರಕಾರಕ್ಕೆ ಶಿಫಾರಸ್ಸು ಮಾಡುವ ಗೊತ್ತುವಳಿ ತರುವದಾಗಿ ಅ. ಭಾ. ಕಾಂ. ಸಮಿತಿ ಸದಸ್ಯರಾದ ಶ್ರೀ. ಪಾರ್ಥಸಾರಥಿಯವರು ನೋಟೀಸು ಕೊಟ್ಟಿದ್ದಾರೆ.

ಬೆಂಗಳೂರಿನ ಹಿಂದುಸ್ಥಾನ ವಿಮಾನ ಕಾರಖಾನೆಯಲ್ಲಿ ಸಿದ್ಧಪಡಿಸಲಾದ ಹಿಂದುಸ್ಥಾನ್ ಟ್ರೇನರ್ ಎಂಬ ಮೊದಲನೆ ವಿಮಾನಕ್ಕೆ ಕೇಂದ್ರ ಸರಕಾರದ ಸಂಪರ್ಕ ಖಾತೆ ಮಂತ್ರಿಗಳಾದ ಶ್ರೀ. ಜಗಜೀವನರಾಮರು ೩-೧-೧೯೫೩ರಲ್ಲಿ ಸರ್ಟಿಫಿಕೇಟನ್ನು ದಯಪಾಲಿಸಿದರು.

ಆ ಕೂಡಲೇ ಸರಾಫನು ಆ ಮನುಷ್ಯನನ್ನು ಪೋಲೀಸರ ವಶಕ್ಕೆ ಕೊಟ್ಟನು. ಪೋಲೀಸರು ಅವನನ್ನು ಹತ್ತಿರದ ದವಾಖಾನೆಗೆ ಒಯ್ದು ಭೇದಿ ಔಷಧ ಕೊಟ್ಟು ಆ ಉಂಗುರವನ್ನು ವಶಪಡಿಸಿಕೊಂಡರು ಆ ಬಳಿಕ ಆ ಕಳ್ಳನನ್ನು ಬಿಟ್ಟಿಗೆ ಗುರಿಮಾಡುವ ಕಾರ್ಯವನ್ನು ಮುಂದರಿಸುವ ಹವಣಿಕೆಯಲ್ಲಿ ಅವರು ತೊಡಗಿದರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

COMING SOON!!

AT

Cauvery Mahal MERCARA.

Gone With The Wind

(TECHNICOLOR)

The greatest Motion picture of all time.

— STARRING —

Clark Gable · Vivien Leigh · Leslie Howard · Olivia de Havilland · Etc.,

Timings : Daily 5-30 P. M. and 9-30 P. M.

Matinee Show on SATURDAY at 2 P. M.

AND

Morning Show on SUNDAY at 10 A. M.

Rates : Rs. 4,-, 2/-, 1/-, and 0-5-0

ಬೇಗನೆ ಬರುತ್ತದೆ!!

ಕಾವೇರಿ ಮಹಲ್ ಮಡಿಕೇರಿ

ಗಾನ್ ವಿದ್ ದಿ ವಿಂಡ್

(ಟೆಕ್ನಿಕಲರ್ ವರ್ಣರಂಜಿತ ಚಿತ್ರ)

● ಕ್ಲಾರ್ಕ್ ಗೇಬ್ಲ್ ● ಒಲಿವಿಯಾ ಡಿ ಹೆವಿಲಂಡ್ ●

ಖ್ಯಾತರಾದ ನಟ ನಟಿಯರು ಅಭಿನಯಿಸಿರುವ ಅತ್ಯುತ್ತಮ ವರ್ಣರಂಜಿತ ಚಿತ್ರರತ್ನ

ಸಮಯ — ಸಾಯಂಕಾಲ 5-30 ಮತ್ತು 9-30

ಶನಿವಾರ ಮ್ಯಾಟಿನಿ ಶೋ 2 ಘಂಟೆಗೆ

ಆದಿತ್ಯವಾರ ಮಾರ್ನಿಂಗ್ ಶೋ 10 ಘಂಟೆಗೆ

ದರಗಳು. ರೂ. 4 —, ರೂ. 2, —, ರೂ. 1/- ಮತ್ತು 0-5-0

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಷನ್ ಲಿಮಿಟೆಡ್.,

ಹೆಡ್ ಆಫೀಸ್:—ವೀರರಾಜಪೇಟೆ.

ಶಾಖೆ:—ನ್ಯೂ ಜುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ಸದ್ಯಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಹೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
4. 9″×4″ ಮತ್ತು 8″×4″ ಕಬ್ಬಿಣದ ತೊಲೆಗಳು (Girders).
5. 8′×3′×24′ (Gage) ಕಬ್ಬಿಣದ ತಗಡುಗಳು.
6. $1\frac{3}{4}'' \times \frac{5}{16}''$ ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ (ಗೌ. ಕಾರ್ಯದರ್ಶಿ)

ಪಿ. ಬಿ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited, Printed and Published by P. I. Belliappa
'Kodagu' Press, Mercara, for Kodagu Ltd.

Licence No. 50.
Licenced to Post without Prepayment.

Regd. No. M. 1000.
'KODAGU' MERCARA, (Coorg).

ಕೊಡಗು

ಸಂಪಾದಕರು—ಟಿ. ಬಿ. ಬಸಪ್ಪನವರು | ವಾರ್ಷಿಕ ಚಂದಾ ರೂ. 5-0-0.

ಸಂಪುಟ ೩೧	ತಾರೀಕು ೩೦-೧-೧೯೫೩ನೇ ಶುಕ್ರವಾರ	ಸಂಚಿಕೆ ೬

“ಅತುಳ ವಿಶ್ವಾಸದಿಂದ ದೇಶಕ್ಕಾಗಿ ದುಡಿಯಿರಿ”

ಪಂಡಿತ ನೆಹರೂರವರ ಕರೆ.

೫೮ನೇ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಭಾಷಣ.

ಹೈದರಾಬಾದಿನ ನಾನಲ್ ನಗರದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸಿನ ೫೮ನೇ ಬಹಿರಂಗ ಅಧಿವೇಶನದ ಅಧ್ಯಕ್ಷಸ್ಥಾನದಿಂದ ಪಂಡಿತ ಜವಾಹರಲಾಲರವರು ಮಾಡಿದ ಭಾಷಣದ ಕೆಲವು ಪ್ರಾಮುಖ್ಯ ವಿಚಾರಗಳನ್ನು ಇಲ್ಲಿ ಕೊಡಲಾಗಿದೆ

ಧೃಢಭಾವನೆಯಿಂದ ಮುನ್ನಡೆಯಿರಿ

ಭಾರತವಿಂದು ನಮ್ಮನ್ನು ಒಳಗೊಂಡ ಪ್ರಜಾರಾಜ್ಯವಾಗಿ ಕಟ್ಟುವ ಮಹಾ ಕಾರ್ಯದಲ್ಲಿ ಪ್ರತಿಯೊಬ್ಬನೂ ಧೃಡಭಾವಧಾರಿಯಾಗಿ ದುಡಿಯಬೇಕು. ಭಾರತ ದೇಶದ ಭವ್ಯ ಭವಿಷ್ಯವನ್ನು ನಿರ್ಮಿಸುವ ಭಾಗ್ಯ ಭಾರತೀಯರಾದ ನಮ್ಮ ಕೈಯಲ್ಲಿದೆ. ಆ ಉಜ್ವಲ ಭವಿಷ್ಯದಲ್ಲಿ ವಿಶ್ವಾಸವಿಟ್ಟು ಸತ್‌ಹೃದಯದಿಂದ, ಎಚ್ಚರಿಕೆಯಿಂದ, ಮುಂದಾಲೋಚನೆಯಿಂದ, ವ್ಯವಸ್ಥಿತ ರೀತಿಯಿಂದ ಶ್ರಮಿಸಬೇಕು

ನಾವೆ ನಮ್ಮ ಸಂಗಡಿಗರ ದೃಷ್ಟಿಯಿಂದ ಕೆಲಸ ಮಾಡಬಾರದು

ಪಂಚವಾರ್ಷಿಕ ಯೋಜನೆ

ದೇಶದ [illegible]ಪಡಿಸಲ್ಪಟ್ಟಿರುವ ಪಂಚವಾರ್ಷಿಕ ಯೋಜನೆಯು ಇಂದಿನ ತುರಿತದ ಅವಶ್ಯಕತೆಯಾಗಿದೆ. ಈ ಯೋಜನೆಯ ಸಫಲತೆಗಾಗಿ ನಮ್ಮ ಸರ್ವ ಶಕ್ತಿ ಪ್ರಯತ್ನಗಳನ್ನು ವಿನಿಯೋಗಿಸಬೇಕು. ಈ ಯೋಜನೆಯು ಸಫಲಗೊಂಡುದೇ ಆದರೆ ಮುಂದೆ ಧೃತಗತಿಯಿಂದ ಹೆಚ್ಚಿನ ಕಾರ್ಯ ಮಾಡುವ ಚೇತನ ದೊರೆತು ಭಾರತವು ಪ್ರಗತಿಪಥದಲ್ಲಿ ಮುನ್ನಡೆಯಲನುವಾಗುವದು. ಭಾರತದ ಸರ್ವ ಬಡತನ ಮೊದಲಾದವುಗಳ ನಿವಾರಣೆಯ ಪ್ರಯತ್ನದಲ್ಲಿ ಈ ಪಂಚವಾರ್ಷಿಕ ಯೋಜನೆಯು ಪ್ರಥಮ ಹೆಜ್ಜೆಯಾಗಿದೆ

ಅಂತರಿಕ ಕೊಳೆಯು ನಿವಾರಣೆ.

ಕಾಂಗ್ರೆಸ್ ಸಂಸ್ಥೆಯೊಳಗಿರುವ ಕೊಳೆಯು ವಿಸರ್ಜನೆಯಾಗದಿದ್ದರೆ ಸಂಸ್ಥೆಯು ಬೆಳೆದು ಬಾಳಲಾರದು. ಈ ಕೊಳೆಯು ಕಾಂಗ್ರೆಸಿನ ಜಯದಿಂದ ಇನ್ನೂ ಹೆಚ್ಚಾಗಿದೆ. ಈ ದುಷ್ಟ ಶಕ್ತಿಗಳು ಇನ್ನೂ ಬೆಳೆದು ಕಾಂಗ್ರೆಸನ್ನು ನಿರ್ಬಲಗೊಳಿಸದಂತೆ ನಾವು ಜಾಗರೂಕರಾಗಿರಬೇಕು. ಕಾಂಗ್ರೆಸಿನಂಥಾ ವಿಶಾಲ ಸಂಸ್ಥೆಯು ಸಂಕೀರ್ಣ

ಸರ್ವರ ಸಹಕಾರ ಬೇಕು

ನಮ್ಮ ಪ್ರತಿಯೊಂದು ಕಾರ್ಯವೂ ಭಾರತದೇಶದ ಹಿತದೃಷ್ಟಿಯ ಗುರಿಯಿಂದ ನಡೆಯಲಿ. ಪ್ರಾಂತೀಯ ಜಾತೀಯವಾದಗಳ ಗೋಡೆಯನ್ನು ಮೀರಿ ದೃಷ್ಟಿಯು ವಿಶಾಲವಾಗಲಿ. ಇಂದು ನಮ್ಮ ಮುಂದಿನ ಕರ್ತವ್ಯವೇನೆಂಬುದರ ದೂಸರಿಕೆ ಆಗಿದೆ. ದಾರಿಯೇನೋ ಮುಂದೆ ಸ್ಪಷ್ಟವಾಗಿ ತೋರುತ್ತಿದೆ. ಪರೆ ಆ ದಾರಿ ನಡೆಯುವದು ಸುಲಭದ ಕೆಲಸವಲ್ಲ. ಆದರೆ ಭಾರತೀಯರಾದ ನಮ್ಮ ಈ ವರೆಗಿನ ಜೀವನವೂ ಸಂಪತ್ತಿಗೆಯ ಸುಖಜೀವನವೇನಲ್ಲ. ಅಂದಿನ ಹೋರಾಟ ಕಾಲದ ಆ ನಿಸ್ವಾರ್ಥತ್ಯಾಗ ಜೀವನದ ಚೇತನವನ್ನು ತಂದುಕೊಂಡು ಸ್ವಾರ್ಥಸಂಕೀರ್ಣತೆಗಳನ್ನು ಬಿಟ್ಟು ಜಯಾಪಜಯ, ಕಷ್ಟ ಸುಖಗಳ ಏರುತಗ್ಗುಗಳನ್ನು ಗಮನಿಸದ ಮುನ್ನಡೆಯಬೇಕು. ಈ ರೀತಿ ತ್ಯಾಗ ಬುದ್ಧಿಯಿಂದ ಎಲ್ಲರೂ ಸಹಕರಿಸಿ ನಡೆದರೆ ಮಾತ್ರ ಬಲವಾದ ಪ್ರಜಾರಾಜ್ಯವನ್ನು ಕಟ್ಟಲು ಸಮರ್ಥರಾಗುವೆವು

ಭಾಷಾವಾರು ಪ್ರಾಂತದ ಕೂಗು

ದೇಶದ ಶಕ್ತಿ ಚೇತನಗಳು ಈ ಭಾಷಾವಾರು ಪ್ರಾಂತರಚನೆಯ ಆಂದೋಲನದಲ್ಲಿ ವ್ಯಯವಾಗಕೂಡದು. ದೇಶದ ಮುಂದಿರುವ ಪ್ರಚಂಡ ಆರ್ಥಿಕ ಪುನರ್ರಚನೆಯ ಕೆಲಸಕ್ಕೆ ಸರ್ವರೂ ಒಂದುಗೂಡಿ ದುಡಿಯಬೇಕಲ್ಲದೆ ಭಾಷಾವಾರು ಪ್ರಾಂತರಚನೆ ಇಂದು ಪ್ರಾಮುಖ್ಯವಲ್ಲ. ಭಾಷಾವಾರು ಪ್ರಾಂತರಚನೆಯ ಗೊಂದಲದಲ್ಲಿ ಸಿಕ್ಕಿಕೊಂಡದ್ದೇ ಆದರೆ ನಮ್ಮ ಪಂಚವಾರ್ಷಿಕ ಯೋಜನೆಯ ಗತಿ ಏನಾಗಬೇಕು? ಆದ್ದರಿಂದ ಆಂಧ್ರ ಪ್ರಾಂತ ರಚನೆಯಾದ ನಂತರ ಅದು ಹೇಗೆ ಭದ್ರ ನೆಲೆಯಲ್ಲಿ ನಿಂತೀತು ಎಂಬುವನ್ನು ತಿಳಿದುಕೊಂಡು ಇತರ ಪ್ರಾಂತಗಳ ಕಡೆ ಗಮನವಿಡಬೇಕು

ಮಹನೀಯರಲ್ಲಿ ವಿನಂತಿ.

ಕೊಡಗಿನ ಮುಜರಾಯಿ ಇಲಾಖೆಗೆ ಸೇರಿದ ದೇವಸ್ಥಾನಗಳ ಆಡಳಿತ ಖರ್ಚನ್ನು ರಾಜರ ಕಾಲದಲ್ಲಿ ಸರಕಾರದ ಖಜಾನೆಯಿಂದಲೇ ಕೊಟ್ಟು ನಡಿಸಲಾಗುತ್ತಿತ್ತು. ಆದ್ದರಿಂದ ಆ ದೇವಸ್ಥಾನಗಳಿಗೆ ಇತರ ದೇವಸ್ಥಾನಗಳಿಗಿರುವಂತೆ ಪ್ರತ್ಯೇಕ ಭೂಮಿ, ತೋಟ ಮೊದಲಾದ ಸ್ಥಿರ ಆಸ್ತಿಗಳನ್ನಿಡಲಿಲ್ಲ. ರಾಜರ ಕಾಲದಲ್ಲಿ ಕೊಡುತ್ತಿದ್ದ ಧನ ಸಹಾಯದ ಅರ್ಧ ಕೂಡ ಈಗ ದೊರೆಯುತ್ತಿಲ್ಲ. ಈಗ ದೊರೆಯುತ್ತಿರುವ ಕಿಂಚಿತ್ ಹಣದಿಂದ ಈ ದೇವಸ್ಥಾನಗಳ ಪೂಜೆ, ಮೇಲ್ವಿಚಾರಣೆ, ರಿಪೇರಿ ವಗೈರೆ ಕೆಲಸಗಳನ್ನು ನಿರ್ವಹಿಸುವದು ಮುಜರಾಯಿ ಇಲಾಖೆಗೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅನೇಕ ದೇವಸ್ಥಾನಗಳು ಸರಿಯಾದ ಸ್ಥಿತಿಯಲ್ಲಿ ಇಲ್ಲದಿದ್ದರೂ ಮುಜರಾಯಿ ಇಲಾಖೆಗೆ ಏನೂ ಮಾಡುವದು ಸಾಧ್ಯವಾಗಿಲ್ಲ. ಈ ವಿಚಾರಕ್ಕೆ ಹೆಚ್ಚಿನ ಸಹಾಯ ಕೊಡಬೇಕೆಂದು ಸರಕಾರದೊಡನೆ ಹೋರಾಡಿ ಹೆಚ್ಚಿನ ಪ್ರಯೋಜನವಾಗಿಲ್ಲ. ಈಗ ಪೂಜೆಗೆ ಬೇಕಿರುವ ಸಾಹಿತ್ಯಗಳ ಬಲೆ ವಿಪರೀತ ಏರಿರುವುದರಿಂದ ತಸ್ತೀಕ್ ಪ್ರಕಾರ ಸರಕಾರದಿಂದ ದೊರೆಯುವ ಹಣವು ದೈನಂದಿನ ಖರ್ಚಿಗೂ ಸಾಲದಾಗಿದೆ. ಮೇಲಾಗಿ ಈಗಿನ ರಾಜ್ಯಭಾರದಿಂದಂತ ಸರಕಾರದಿಂದ ಇಂಥಾ ದೇವಸ್ಥಾನಗಳಿಗೆ ಸಹಾಯ ದೊರೆಯುವ ಸಾಧ್ಯತೆ ಕಡಿಮೆ. ಆದ್ದರಿಂದ ಈ ದೇವಸ್ಥಾನಗಳ ಜವಾಬ್ದಾರಿಯನ್ನು ಜನರೇ ಹೊರಬೇಕಾಗುವುದು

ಮೇಲಾಗಿ ತಲಕಾವೇರಿಯ ಅಗಸ್ತ್ಯೇಶ್ವರ ದೇವಸ್ಥಾನದ ಸುತ್ತು ಗುಡಿ ಕಟ್ಟಡ ಬೀಳುವ ಸ್ಥಿತಿಗೆ ಬಂದಿದೆ [illegible] ಲಿಂಗಗಳು ಒಡೆದಿರುವುದರಿಂದ ಆ ಲಿಂಗಗಳನ್ನು ಆಗಾಗ ತೆಗೆದು ಶುಚಿ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಇದು ಶಾಸ್ತ್ರಕ್ಕೆ ವಿರುದ್ಧವಾದುದೆಂದು ತಂತ್ರಿಗಳ ಅಭಿಪ್ರಾಯವಾಗಿದ್ದು ಇದಕ್ಕೆ ಅಷ್ಟಬಂಧ ಹಾಕಬೇಕೆಂದಿದ್ದಾರೆ. ನೀಲೇಶ್ವರ ತಂತ್ರಿಗಳು ಇದನ್ನು ಕಡಿಮೆ ಖರ್ಚಿನಲ್ಲಿ ಮಾಡಿ ಕೊಡಲು ಒಪ್ಪಿದ್ದಾರೆ. ಪ್ರತಿಯೊಂದಕ್ಕೆ ಸುಮಾರು ೧೨೦೦ ರೂ ಗಳು ಬೇಕಾಗುವದೆಂದು ಅಂದಾಜು ಮಾಡಲಾಗಿದೆ. ದೇಶದ ಪುಣ್ಯಾತ್ಮರು ಯಾರಾದರೂ ಮುಂದೆ ಬಂದು ಈ ಕೆಲಸವನ್ನು ಮಾಡಿಸಬಹುದು

ಅಲ್ಲದೆ ದೇವಸ್ಥಾನಗಳ ಕಟ್ಟಡ ರಿಪೇರಿ, ಮತ್ತಿತರ ಖರ್ಚಿಗಾಗಿ ಹಣ ಬೇಕಿದೆ. ಕೊಡಗು ದೇಶದ ಜನರು ಈ ವರೆಗೆ ಹಲವು ಬಾರಿ ಕೈಯೆತ್ತಿ [illegible] ಸಹಾಯ ಮಾಡಿದ್ದಾರೆ. ಪುಣ್ಯಮಾತೆಯಾದ ಶ್ರೀ ಕಾವೇರಿಯ ಹೆಸರಿನಿಂದ ಈ ಅಪೀಲನ್ನು ಸಾರ್ವಜನಿಕರ ಮುಂದಿಡಲಾಗಿದೆ. ದೇಶದ ಪ್ರತಿ ಮನೆಯೂ ತಮ್ಮ ಶಕ್ತ್ಯನುಸಾರ ಒಂದೆರಡು ರೂಪಾಯಿಗಳನ್ನಾಗಲೀ, ಸಾಧ್ಯವಾದಷ್ಟು ಭತ್ತವನ್ನಾಗಲೀ ಆಯಾಯ ಗ್ರಾಮದ ಸಂಘಗಳ ಮೂಲಕ ಕೊಟ್ಟು, ಸಂಘಗಳಲ್ಲಿರುವ ಮುಜರಾಯಿ ಇಲಾಖಾ ರಶೀತಿಗಳನ್ನು ಪಡಕೊಂಡರೆ ದೇವತಾ ಕಾರ್ಯದಲ್ಲಿ ನೆರವಿತ್ತಂತಾಗುವುದು. ನೇರವಾಗಿ ಹಣ ಕಳುಹಿಸಲಿಚ್ಛಿಸುವವರು ಪ್ರೆಸಿಡೆಂಟ್, ಮುಜರಾಯಿ ಇಲಾಖೆ, ಮಡಿಕೇರಿ ಈ ಅಡ್ರೆಸಿಗೂ ಹಣ ಕಳುಹಿಸಿ ರಶೀತಿ ಪಡೆಯಬಹುದು. ದವಸದಾನ್ಯ ಶೇಖರಿಸುವವರು ಅಧಿಕಾರ ಪಡೆದು ಕಮಿಟಿಯ ಮೂಲಕ ದ್ರವ್ಯ ಯಾ ಭತ್ತ ಶೇಖರಿಸಬಹುದು. ಈಗಾಗಲೇ ಕುಂಜಿಲ್ಲದ(?) ಮಿಸೆಸ್ ಕುಶಾಲಪ್ಪನವರು ರೂ ೫೦೦ ಕಳುಹಿಸಿಕೊಟ್ಟಿರುವರು. ಅವರಂತೆಯೇ ಇತರರೂ ಉದಾರಳ ಮನಸ್ಸಿನಿಂದ ಸಹಾಯ ಮಾಡಬೇಕಾಗಿ ಕೇಳಿಕೊಳ್ಳುವುದಾಗಿದೆ.

ಸಾರ್ವಜನಿಕರ ಬೆಂಬಲವಿಲ್ಲದೆ ಯೋಗ್ಯ ರೀತಿ ದೇವಸ್ಥಾನಗಳ ಕೆಲಸಗಳನ್ನು ಮುಂವರಿಸುವದು ಕಷ್ಟವಾಗಿದೆ. ಕೊಡಗಿನ ಗೃಹ ದೇವತೆಯೂ, ದಕ್ಷಿಣ ಭಾರತದ ಗಂಗೆಯೂ ಆಗಿರುವ ಪವಿತ್ರ ಕಾವೇರಿ ಮಾತೆಯಲ್ಲಿ ವಿಶ್ವಾಸ, ಭಕ್ತಿ ಇರಿಸಿ ಪ್ರತಿಯೊಬ್ಬನೂ ತನ್ನ ಶಕ್ತ್ಯನುಸಾರ ಸಹಾಯ ಮಾಡಬೇಕಾಗಿದೆ. ಹಾಗೆ ಕೊಟ್ಟ ಪ್ರತಿ ಒಂದು ಕಾಸೂ ಕೂಡ ದೇವಸ್ಥಾನಗಳ ಹಿತಕ್ಕಾಗಿಯೇ ಖರ್ಚಾಗುವದೆಂಬ ಭರವಸ ಕೊಡುವೆವು. ಪ್ರತಿ ವರ್ಷ ಲೆಕ್ಕ ಪರಿಶೋಧನೆ ಮಾಡಿ ಕೊಡಗು ಸರಕಾರದ ಗಜೆಟ್ಟಿನಲ್ಲಿ ಪ್ರಕಟಿಸಲಾಗುತ್ತಿದೆ. ಧನ ಸಹಾಯ ಯಾ ಭತ್ತ ಕೊಡುವ ಯಾರೂ ಕೂಡ ಮುಜರಾಯಿ ಇಲಾಖೆಯ ಅಧಿಕೃತ ರಶೀತಿ ಇಲ್ಲದೆ ಕೊಡಕೂಡದಾಗಿ ಎಚ್ಚರಿಸಲಾಗಿದೆ. ದೇಶದ ಮಹನೀಯರು ಈ ಪುಣ್ಯ ಕಾರ್ಯಕ್ಕಾಗಿ ಹೃತ್ಪೂರ್ವಕ ಬೆಂಬಲ ಕೊಡುವರೆಂದು ನಿರೀಕ್ಷಿಸಲಾಗಿದೆ.

ಮಡಿಕೇರಿ,
ತಾ ೩೦-೧-೫೩

ಪಾಂಡಂಡ ಎ. ಚಂಗಪ್ಪ,
ಪ್ರೆಸಿಡೆಂಟ್,
ಕೊಡಗು ಮುಜರಾಯಿ ಇಲಾಖೆ

ವಿನಾ ಆ ವರೆಗೆ ಭಾಷಾವಾರು ಪ್ರಾಂತರಚನೆಯ ಕೂಗು ನಿಲ್ಲಬೇಕು.

ಭಾರತದ ವಿದೇಶ ನೀತಿ

ಜಗತ್ತಿನ ಎಲ್ಲ ರಾಷ್ಟ್ರಗಳೊಡನೆ ಪ್ರೇಮ, ಪ್ರೀತಿ, ಸೌಹಾರ್ದತೆಯಿಂದಿರುವದೇ ನಮ್ಮ ವಿದೇಶ ನೀತಿಯಾಗಿದೆ. ಇಂದು ಜಗತ್ತಿನ ಇತರ ರಾಷ್ಟ್ರಗಳೊಳಗಿರುವ ನಮ್ಮ ಸಂಬಂಧವು ಚೆನ್ನಾಗಿದೆ. ಇದಕ್ಕೆ ವಿರುದ್ಧವಾಗಿರುವ ಒಂದೇ ದೇಶವೆಂದರೆ ನಮ್ಮ ನೆರೆ ರಾಜ್ಯವಾದ ಪಾಕಿಸ್ತಾನ. ಪಾಕಿಸ್ತಾನವು ಕೋಮುವಾರು ಭಾವನೆಯ ಬೀಜವಾಗಿದೆ. ಅದರೊಡನೆ ನಮಗಿರುವ ಕಾಶ್ಮೀರ ಪ್ರಶ್ನೆ, ನಿರಾಶ್ರಿತರ ಆಸ್ತಿ ಮೊದಲಾದ ವಿಚಾರದಲ್ಲಿ ತೃಪ್ತಿಕರವಾದ ವ್ಯವಹಾರ ನಡೆಯುತ್ತಿಲ್ಲ. ಆದರೆ ಭಾರತವು ಚಿಕ್ಕ ದೃಷ್ಟಿಯಿಂದ ಎಂದೂ ವರ್ತಿಸಬಾರದು. ಪಾಕಿಸ್ತಾನದ ಕೋಮುವಾರು ನೀತಿಯನ್ನು ನಾವು ಅನುಸರಿಸುವದು ಸಾಧ್ಯವಿಲ್ಲ. ನಮ್ಮ ನೀತಿಯು ನಿಧಾನವೆಂದು ತೋರಬಹುದು. ಶೀಘ್ರ ಫಲಕಾರಿಯಾಗಿರಬಾರದು. ಆದರೆ ಅದರಂತೆ ಅಹಿತವಾಗಿ ಗಡಿಬಿಡಿಯಿಂದ ವರ್ತಿಸುವದು ಭಾರತದಂಥಾ ದೇಶಕ್ಕೆ ಸಲ್ಲದು.

ಸಾಧಿಸಿದ ಸಾಧನೆಗಳು

ಕಳೆದ ಐದು ವರ್ಷಗಳ ಆಳಿಕೆಯಲ್ಲಿ ಕಾಂಗ್ರೆಸ್ ಸರಕಾರವು ಯೋಗ್ಯ ಕೆಲಸ ಮಾಡಿದೆ. ದೇಶದ ಮಹಾ ಸಮಸ್ಯೆಗಳನ್ನು ಬಗೆಹರಿಸುವದು ಸಾಧ್ಯವಾಗಿಲ್ಲವಾದರೂ ಭಾರತವು ಗೌರವಪೂರ್ಣವಾದ, ಭದ್ರವೂ ಆದ ಒಂದು ಸ್ಥಾನವನ್ನು ಜಗತ್ತಿನ ರಾಷ್ಟ್ರಗಳ ಮಧ್ಯೆ ರಚಿಸಿಕೊಂಡಿದೆ. ತನ್ನ ಜವಾಬ್ದಾರಿಕೆಗೆ ತಕ್ಕಂತೆ ವರ್ತಿಸಿ ಗೌರವಕ್ಕೆ ಪಾತ್ರವಾಗಿದೆ.

ಆರ್ಥಿಕ ರಂಗದಲ್ಲಿ ಮತ್ತು ಪ್ರಜಾರಾಜ್ಯವನ್ನು ಕಟ್ಟುವ ಕಾರ್ಯದಲ್ಲಿ ಅನೇಕ ಕ್ಷೇತ್ರಗಳಲ್ಲಿ ನಿರೀಕ್ಷಿಸಿದಷ್ಟು ಕಾರ್ಯವಾಗಿಲ್ಲದೆ ಯೋಜಿಸಿದ ಕಾರ್ಯಗಳನ್ನೆಲ್ಲಾ ಕೈಗೊಳ್ಳುವದೂ ಸಾಧ್ಯವಾಗಿಲ್ಲ. ಆದರೂ ನಮ್ಮ ಈ ವರೆಗಿನ ಕೆಲಸ ಕಾರ್ಯಗಳು ಪ್ರಶಂಸನೀಯವಾದುದೆಂದು ಹೇಳಿಕೊಳ್ಳುವದರಲ್ಲಿ ಉತ್ಪ್ರೇಕ್ಷೆ ಇಲ್ಲ. ಇತರ ರಾಷ್ಟ್ರಗಳ ಕಾರ್ಯಕಲಾಪಗಳೊಡನೆ ತುಲನೆ ಮಾಡಿದರೆ ಭಾರತದ ಸರಕಾರವು ತನ್ನ ಕರ್ತವ್ಯವನ್ನು ಯೋಗ್ಯ ರೀತಿ ಮಾಡಿ ಮುಗಿಸಿಲ್ಲವೆನ್ನಲಡ್ಡಿ ಇಲ್ಲ.

ಸಾಮೂಹಿಕ ವಿಕಾಸ ಕೇಂದ್ರಗಳು

ದೇಶದ ಉದ್ದಗಲಕ್ಕೂ ಸ್ಥಾಪಿಸಿರುವ ಮತ್ತು ಪ್ರತಿ ವರ್ಷ ಕ್ರಮಶಃ ಸ್ಥಾಪಿಸಲಿರುವ ಸಾಮೂಹಿಕ ವಿಕಾಸ ಕೇಂದ್ರಗಳ ಮೂಲಕ ದೇಶದ ಉತ್ಪತ್ತಿಯನ್ನು ಹೆಚ್ಚಿಸುವ ಕೆಲಸ ನಡೆದಿದೆ. ಸಾಮೂಹಿಕ ಜೀವನವು ಸರ್ವ ಕ್ಷೇತ್ರಗಳಲ್ಲೂ ವಿಕಾಸಗೊಂಡು ಮುಂದರಿಯಬೇಕೆಂಬುದೇ ಈ ಯೋಜನೆಯ ಗುರಿಯಾಗಿದೆ. ಹೊಸ ಭರತಖಂಡವನ್ನು ರಚಿಸಲಿರುವ ಈ ಯೋಜನೆಗೆ ಸರ್ವರ ಬೆಂಬಲಬೇಕು. ಇಂದಿನ ಜಗತ್ತಿನಲ್ಲಿ ಯಾವ ಕ್ಷಣದಲ್ಲಿ ಏನಾಗುತ್ತದೆಂದು ಹೇಳಲು ಬರುವದಿಲ್ಲ. ಅದ್ದರಿಂದ ನಮ್ಮ ಜೀವನ, ಶಕ್ತಿಗಳ ಮೇಲೆ ನಾವು ನಿಲ್ಲದ ವಿನಾ ನಮಗೆ ಪ್ರಗತಿ, ಶಾಂತಿಗಳಿಲ್ಲ.

ದೂರದ ಪೂರ್ವ ಪ್ರದೇಶಗಳು.

ಯುದ್ಧದ ಮಾತು ಪ್ರತಿ ದಿನ ಕೇಳಿ ಬರುತ್ತಿದೆ. ನಿಜವಾಗಿಯೂ ಪ್ರಪಂಚದ ಹಲವು ಭಾಗಗಳಲ್ಲಿ ಯುದ್ಧ ನಡೆಯುತ್ತಲೇ ಇದೆ. ಕೊರಿಯಾ, ಇಂಡೋಚೀನಾ ಮೊದಲಾಡೆಡೆ ಮಾನವನ ರಕ್ತ ಚೆಲ್ಲಲ್ಪಡುತ್ತಿದೆ. ಆದರೆ ಭಾರತವು ಶಾಂತಿಗಾಗಿ ಅಚಲ ಹೋರಾಡುತ್ತಿರುವ ದೇಶ. ನಮ್ಮ ಪಾಲಿನ ಕರ್ತವ್ಯವನ್ನು ನಾವು ಮಾಡಲು ಸದಾ ಸಿದ್ಧರಿರುವೆವು. ಆದರೆ ದೂರ ಪೂರ್ವದಲ್ಲಿ ನಡೆಯುತ್ತಿರುವ ಘಟನೆಗಳು ನಿಜವಾಗಿಯೂ ದುಃಖದಾಯಕವಾಗಿವೆ. ಇನ್ನೊಬ್ಬರನ್ನು ಹಿಡಿತದಲ್ಲಿಡುವ ಪ್ರವೃತ್ತಿಯು ಇನ್ನೂ ಹಲವು ರಾಷ್ಟ್ರಗಳಲ್ಲಿದೆ.

ಸ್ವತಂತ್ರವಾಗಿ ಬೆಳೆದು ಎದ್ದು ನಿಂತಿರುವ ಅಖಂಡ ಚೀನಾದ ಕಾರಣದಿಂದಾಗಿ ದೂರ ಪ್ರಾಚ್ಯದ ರಾಜಕೀಯ ಕ್ಷೇತ್ರದ ಬಲ, ಭಾರಗಳು ಬದಲಾಗಿವೆ. ಹೊಸ ಚೀನಾವು ಮಹಾಶಕ್ತಿಯಾಗಿ ಮುನ್ನಡೆಯುತ್ತಿದ್ದರೂ ಆ ಶಕ್ತಿಯನ್ನರಿಯದೆ ವರ್ತಿಸುತ್ತಿರುವ ಸಂಯುಕ್ತ ರಾಷ್ಟ್ರ ಸಂಸ್ಥೆಯ ವರ್ತನೆಯಿಂದಾಗಿ ಪರಿಸ್ಥಿತಿ ಇನ್ನೂ ಹಾಳಾಗಿದೆ. ಕೊರಿಯಾ ಯುದ್ಧ ನಿಸ್ಪತ್ತಿಯ ಬಗ್ಗೆ ಭಾರತವು ತಂದ ಠರಾವನ್ನು ನಿಷ್ಪ್ರಯೋಜಕಗೊಳಿಸಲಾಯಿತು. ಭಾರತವು ಪ್ರಾಮಾಣಿಕವಾಗಿ ಶಾಂತಿಗಾಗಿ ಪ್ರಯತ್ನಿಸಿತು. ನಮ್ಮ ಪ್ರಯತ್ನ ನಿಷ್ಫಲವಾದರೂ ಮುಂದೆಯಾದರೂ ಹಿತವಾದೀತು.

ಯಾವ ದೇಶ ಯಾ ಜನಾಂಗವಿರಲಿ ರಾಜಕೀಯ ನೀತಿ, ಆರ್ಥಿಕ ಶಕ್ತಿಗಳ ಪ್ರಭಾವದಿಂದ ನುಸುಳಬಾರದು. ಜಗತ್ತಿನಲ್ಲಿ ಶಾಂತಿ ಬೇಕಿದ್ದರೆ ಇತರರು ಬಾಳುವ ಹಕ್ಕನ್ನು ಲಕ್ಷಿಸಿದರೆ ಮಾತ್ರ ಸಾಧ್ಯವಾಗುವದು.

ಸಮಾಪ್ತಿ.

ನೆಹರೂರವರು ತಮ್ಮ ಭಾಷಣದಲ್ಲಿ ದಕ್ಷಿಣಾಫ್ರಿಕದ ಗಾಂಧಿಯವರು ಜೈಲಿನಲ್ಲಿರುವ ವಿಚಾರವನ್ನೆತ್ತಿ ದೇಶದ ಬಿಡುಗಡೆಗಾಗಿ ಅಹೋರಾತ್ರಿ ದುಡಿದು ದೇಶಕ್ಕೆ ಸ್ವಾತಂತ್ರ್ಯ ಒದಗಿಸಲು ಬಹು ರೀತಿಯಿಂದ ಕಾರಣರಾದ ಈ ಮಹಾಮುಂದಾಳುವು ದೇಶವು ಸ್ವತಂತ್ರವಾದಾಗ ಜೈಲಿನಲ್ಲಿ ಕೊಳೆಯ ಬೇಕಾಗಬಂದುದು ದುಃಖಕರವೆಂದರು. ದೇಶದ ಜನತೆಯ ಸಹಕಾರವನ್ನು ಅಪೇಕ್ಷಿಸುತ್ತಾ ನೆಹರೂರವರು ದೊರೆತ ಸ್ವಾತಂತ್ರ್ಯವನ್ನು ಉಳಿಸಿ ಬೆಳೆಸಲು ನಿಷ್ಠೆಯ ಪ್ರಯತ್ನ ಅವಶ್ಯವೆಂದರು. ನೆಹರೂರವರು ತಮ್ಮ ಅಧ್ಯಕ್ಷ ಭಾಷಣವನ್ನು ಮುಗಿಸಲು ಒಂದು ಮುಕ್ಕಾಲು ಗಂಟೆ ಸಮಯ ತೆಗೆದುಕೊಂಡರು.

———

ಭಾರತದ ಅಂತರಿಕ ರಾಜಕಾರಣವೇ ನೇ ಇರಲಿ ಅಂತರಾಷ್ಟ್ರೀಯ ರಂಗದಲ್ಲಿ ಭಾರತವು ಅನುಸರಿಸುತ್ತಿರುವ ವಿದೇಶ ಧೋರಣವು ಆದರಣೀಯವಾಗಿದೆ ಎಂದುದಾ. ರಾಧಾಕೃಷ್ಣನ್‌ರು ಹೈದರಾಬಾದಿನ ಸಿಕಂದರಾಬಾದ ನಗರ ಸಭೆಯವರಿತ್ತ ಮಾನಪತ್ರಕ್ಕೆ ಉತ್ತರ ಕೊಡುತ್ತ ಹೇಳಿದರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,00,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಖಾಲ್ತಿ ಠೇವಣಾತಿ ಲೆಕ್ಕದ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ಗಾರ್ಡಿಯನ್ ಮತ್ತು ನವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಈಜಿಪ್ಟಿನ ಸೈನ್ಯದ ೨೫ ಅಧಿಕಾರಿಗಳ ದಸ್ತಗಿರಿ

ಈಜಿಪ್ಟಿನ ಪ್ರಧಾನ ಮಂತ್ರಿ ಜ| ನಗೀಬರನ್ನು ಪದಚ್ಯುತಗೊಳಿಸಲು ೨೫ ಪ್ರಮುಖ ಈಜಿಪ್ಶಿಯನ್ ಸೈನ್ಯಾಧಿಕಾರಿಗಳು ಮಾಡಿದ ಒಳಸಂಚೊಂದು ಪತ್ತೆ ಮಾಡಲ್ಪಟ್ಟು ಅವರೆಲ್ಲರನ್ನೂ ಬುಧವಾರ ದಸ್ತಗಿರಿ ಮಾಡಲಾಗಿದೆಯೆಂದೂ ಇದರ ಪರಿಣಾಮವಾಗಿ ಮೂರು ವರ್ಷಗಳ ಕಾಲ ಎಲ್ಲಾ ರಾಜಕೀಯ ಪಕ್ಷಗಳನ್ನೂ ಜ| ನಗೀಬರು ರದ್ದುಗೊಳಿಸಿದಾರೆಂದೂ ಈಜಿಪ್ಟ್ ಜನತೆಗೆ ತಿಳಿಸಲಾಯಿತು.

ರಾಷ್ಟ್ರೀಯ ನಿರ್ದೇಶನ ಮಂತ್ರಿ ಮಿ| ಫುವಾದ್ ಗಲಾಲ್‌ರವರು ಜ| ನಗೀಬ್‌ರ ಆಜ್ಞೆಗಳನ್ನು ವಿವರಿಸಿದರು. "ಯಾರೇ ಆಗಲಿ ನಮ್ಮ ಆದರ್ಶಗಳು ಮತ್ತು ಧನೋದ್ದೇಶಗಳಿಗೆ ಅಡ್ಡಿಯಾಗಿ ಬಂದಲ್ಲಿ ಅವರ ಮೇಲೆಲ್ಲಾ ತೀವ್ರ ಕಾರ್ಯಕ್ರಮ ಕೈಕೊಳ್ಳಲಾಗುವುದು" ಎಂಬುದಾಗಿ ಅವರು ಘೋಷಿಸಿದರು. ಸಿಡೂರಿಯನ್ನು ಸಂಪೂರ್ಣವಾಗಿ ಮುರಿದುಹಾಕಲಾಗಿದೆಯೆಂದರು. ಪ್ರಜಾಪ್ರಭುತ್ವವು ನಿಜವಾಗಿ ನೆಲೆಸಿ ಬೆಳೆಯಲು ಮೂರು ವರ್ಷಗಳ ಮಧ್ಯವರ್ತಿ ಕಾಲವನ್ನು ನಿಗದಿ ಮಾಡಿರುವುದಾಗಿಯೂ ಘೋಷಿಸಿದರು. ರಾಜಕೀಯ ಪಕ್ಷಗಳ ನಿಧಿಗಳನ್ನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳುವುದಾಗಿಯೂ ತಿಳಿಸಿದರು.

೭ ದಿನದ ಉಪವಾಸ

"ಕರ್ನಾಟಕ ಪ್ರಾಂತದ ನಿರ್ಮಾಣವೂ ಆಂಧ್ರ ಪ್ರಾಂತ ರಚನೆ ಜೊತೆಯಲ್ಲಿಯೇ ಆಗಬೇಕು. ಹೀಗೆ ಮಾಡುವುದೇ ಸೂಕ್ತವೂ ಯುಕ್ತವೂ ಆಗಿದೆ. ಇತ್ತೀಚಿನ ಪರಿಸ್ಥಿತಿ ನೋಡಿದರೆ ಕರ್ನಾಟಕ ಪ್ರಾಂತ ರಚನೆ ದೂರವಾಗುತ್ತಿದೆ. ಕರ್ನಾಟಕ ಪ್ರಾಂತ ನಿರ್ಮಾಣದ ಜರೂರಾತಿ ಬಗ್ಗೆ ಸರ್ಕಾರದ ಮತ್ತು ಸಾರ್ವಜನಿಕರ ಗಮನವನ್ನು ಸೆಳೆಯಲು ನಾನು ಏಳು ದಿವಸದ ಉಪವಾಸ ಮಾಡುತ್ತೇನೆ" ಎಂಬುದಾಗಿ ನಿರ್ಧರಿಸಿ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಟಿ. ಆರ್. ನೆಸ್ವಿಯವರು ಉಪವಾಸವನ್ನು ಮಾಡುತ್ತಿದ್ದಾರೆ.

ಕರ್ನಾಟಕಕ್ಕೆ ಮೈಸೂರು ಒಪ್ಪಿಲ್ಲ

"ಮೈಸೂರು ಸಂಸ್ಥಾನವು ಹೃತ್ಪೂರ್ವಕವಾಗಿ ಕರ್ನಾಟಕ ಪ್ರಾಂತರಚನೆಗೆ ಅನುಮೋದಕವಾಗಿದೆಯೆಂಬುದಾಗಿ ಹೇಳುವದು ವಿಚಿತ್ರ" ಎಂಬುದಾಗಿ ಪಂಡಿತ ನೆಹರೂ ಭಾಷಾವಾರು ಪ್ರಾಂತಗಳ ನಿರ್ಣಯದ ಚರ್ಚೆಯಲ್ಲಿ ಮಧ್ಯೆ ಮಾತನಾಡುತ್ತಾ ಸ್ವಲ್ಪ ಬಿರುಸಿನಿಂದಲೇ ಹೇಳಿದರು.

"ಕರ್ನಾಟಕ ಪ್ರಾಂತರಚನೆಗೆ ಮೈಸೂರು ರಾಜ್ಯ ಸಭೆ ಒಪ್ಪುತ್ತಿಲ್ಲವಾದ್ದರಿಂದ ನನಗೆ ತುಂಬಾ ಇಕ್ಕಟ್ಟಿಗೆ ಸಿಕ್ಕಿದಂತಾಗಿದೆ. ಮೈಸೂರಿನ ಜನರು ಮೇಲಿಂದ ಮೇಲೆ ನನಗೆ ಕಾಗದಗಳಿಂದ ಮತ್ತು ತಂತಿಗಳ ಮೂಲಕ ತಾವು ಕರ್ನಾಟಕ ರಚನೆಗೆ ವಿರೋಧವಾಗಿರುವುದಾಗಿ ಒತ್ತಿ ತಿಳಿಸಿದ್ದಾರೆ. ಅವರೀಗ ಮನಸ್ಸು ಬದಲಾಯಿಸಿರಬಹುದು. ಆದರೂ ಕೂಡ ಹೃತ್ಪೂರ್ವಕವಾಗಿ ಕರ್ನಾಟಕ ರಚನೆಗೆ ಒಪ್ಪಿದ್ದಾರೆಂಬುದು ಮಾತ್ರ ನಿಜವಾಗಿಯೂ ತಪ್ಪು" ಎಂಬುದಾಗಿ ನೆಹರೂ ನುಡಿದರು.

* ಜನವರಿ ಇಪ್ಪತ್ತಾರು *

ರಾಜಕೀಯ ಸ್ವಾತಂತ್ರ್ಯದಿಂದ— —ಆರ್ಥಿಕ ಸ್ವಾತಂತ್ರ್ಯದೆಡೆಗೆ

[ಲೇ:—'ಪ್ರೇಮಯೋಗಿ']

ಭರತಖಂಡವು ಹಲವಾರು ವರ್ಷಗಳ ಹೋರಾಟದ ನಂತರ ಬ್ರಿಟಿಷರ ಹಿಡಿತದಿಂದ ೧೯೪೭ನೇ ಆಗಸ್ಟ್ ೧೫ರಂದು ಬಿಡುಗಡೆಗೊಂಡಿತು. ಈ ಬಿಡುಗಡೆಯಿಂದ ಎಲ್ಲರಿಗೂ ಹರ್ಷವೆನಿಸಿತು. ಇಡೀ ಭರತಖಂಡದ ಉದ್ದಗಲಕ್ಕೂ ಹಬ್ಬ ಆಚರಿಸಲ್ಪಟ್ಟಿತು. ದೊಡ್ಡವರು ತೃಪ್ತಿಯಿಂದ ಸಂತೋಷಗೊಂಡರೆ ಇಲ್ಲದವರು ನಾಳೆ ನಮಗೂ ಸುಖವಾಗುವದೆಂದು ಸಂತೋಷಪಟ್ಟರು. ಆಗ ಎಲ್ಲರೊಡನೆ ಮಿಳಿತರಾಗಿ ಆನಂದ ಪಡದಿದ್ದ ಒಬ್ಬ ವ್ಯಕ್ತಿಯೆಂದರೆ ಭಾರತಕ್ಕೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟ ಬಾಪೂಜಿಯವರು. ಆಗಸ್ಟ್ ತಾರೀಖು ೧೫ರಲ್ಲಿ ಡೆಲ್ಲಿಯಲ್ಲಿ ಸ್ವಾತಂತ್ರ್ಯದ ಉತ್ಸವ ಜರಗಿದಾಗ, ಪಂಡಿತ ನೆಹರೂರವರು ಡೆಲ್ಲಿಯ ಕೆಂಪುಕೋಟೆಯ ಮೇಲೆ ಭಾರತೀಯ ಧ್ವಜವನ್ನು ಹಾರಿಸಿ ತೋಪುಗುಂಡುಗಳ ಸನ್ಮಾನವನ್ನು ಮಾಡುತ್ತಿದ್ದಾಗ ೭೮ ವರ್ಷಗಳ ಇಳಿವಯಸ್ಸಿನ ರಾಷ್ಟ್ರಪಿತನು ಬಂಗಾಳದ ನವಖಾಲಿಯಲ್ಲಿ ಪ್ರತಿ ಮನೆ ಮನೆಗೆ ಪಾದಚಾರಿಯಾಗಿ ನಡೆದು ಐಕ್ಯತೆ, ಸಹೋದರತೆ, ಪ್ರೀತಿ, ವಿಶ್ವಾಸಗಳ ಸಂದೇಶವನ್ನು ಕೊಡುತ್ತಾ

ಮಂದಿರ್ ಮಸ್ಜಿದ್ ತೇರೇ ಧಾಮ್
ಸಬ್‌ಕೋ ಸನ್ಮತಿ ದೇ ಭಗವಾನ್

ಎಂದು ಉಪದೇಶಿಸುತ್ತಿದ್ದರು. ಭಾರತದ ಸ್ವಾತಂತ್ರ್ಯಕ್ಕಾಗಿ ತನ್ನ ಸರ್ವಸ್ವವನ್ನು ತ್ಯಾಗಮಾಡಿ, ಶರೀರವನ್ನು ದೇಶದ ಸೇವೆಯಲ್ಲಿಯೇ ತೇಯ್ದು ವಿನಿಯೋಗಿಸಿದ ಈ ಯುಗಪುರುಷನಿಗೆ ಭಾರತದ ಸ್ವಾತಂತ್ರ್ಯದಿಂದ ಸಂತೋಷವಾಗಲಿಲ್ಲವೆಂದಲ್ಲ. ಆದರೆ ಭಾರತೀಯ ಜನತೆಯ ಸ್ವಭಾವ, ನೀತಿಗಳನ್ನು ತಿಳಿದಿದ್ದ ಬಾಪುವು ಭವಿಷ್ಯದ ಕಲ್ಪನೆಯನ್ನು ಮಾಡಿಕೊಂಡು ಅದಕ್ಕಾಗಿ ಜನರಿಗೆ ಬೋಧನೆ ಕೊಡುತ್ತಿದ್ದರು. ಸ್ವಾತಂತ್ರ್ಯವೆಂಬುದು ಆನಂದದ, ಸುಖದ ಕಲ್ಪನೆಯ ವಸ್ತುವಾಗಿರಲಿಲ್ಲ. ಸ್ವಾತಂತ್ರ್ಯವೆಂದರೆ ಹೆಚ್ಚಿನ ಜವಾಬ್ದಾರಿ, ಹೆಚ್ಚಿನ ದುಡಿಮೆಯೆಂಬುದು ಅವರಿಗೆ ಗೊತ್ತಿತ್ತು. ಬಂದ ಸ್ವಾತಂತ್ರ್ಯಕ್ಕೆ ಸರಿಯಾದ ಘನತೆಯನ್ನು ತೋರಿ ಅದನ್ನು ಭಾರತೀಯರೆಲ್ಲರ ಹಿತಕ್ಕಾಗಿ ಉಪಯೋಗಿಸುವ ಯೋಗ್ಯತೆಯನ್ನು ಪಡೆದುಕೊಳ್ಳಬೇಕೆಂಬುದೇ ಅವರ ಕಾಂಕ್ಷೆಯಾಗಿತ್ತು.

ಆದರೆ ಸ್ವತಂತ್ರ ದೇಶವು ಮಹಾತ್ಮರನ್ನು ಬಹು ದಿನ ಬದುಕಲು ಬಿಡಲಿಲ್ಲ. ಸ್ವಾತಂತ್ರ್ಯ ದೊರೆತ ಐದು ತಿಂಗಳಲ್ಲಿ ರಾಷ್ಟ್ರಪಿತ ಮಹಾತ್ಮರನ್ನು ಕೋಮುವಾದದ ಪಿಶಾಚಭೂತಕ್ಕೆ ಆಹುತಿ ಕೊಡಲಾಯಿತು. ರಾಷ್ಟ್ರಪಿತನ ಕಲ್ಪನೆಯಂತೆಯೇ ಭರತಖಂಡವು ತನ್ನ ಜವಾಬ್ದಾರಿಕೆಗೆ ತಕ್ಕಂತೆ ವರ್ತಿಸದೆ ಹೋಯಿತು. ಪರಿಣಾಮವಾಗಿ ಎಲ್ಲೆಡೆಯಲ್ಲಿಯೂ ಅಸತ್ಯ ವರ್ತನೆ, ಲಂಚಗುಳಿತನ, ವೈಷಮ್ಯ, ಸ್ವಾರ್ಥ, ಕೈಪೋಟಿ, ಲಾಭಬಡುಕತನ ತಲೆದೋರಿ ಭಾರತಕ್ಕೆ ಸ್ವಾತಂತ್ರ್ಯ ದೊರೆತು ೫ ವರ್ಷಗಳಾಗಿದ್ದರೂ ಬಡ ರೈತ ಮತ್ತು ಮಜೂರರ ಜೀವನದಲ್ಲಿ ಹೆಚ್ಚು ಬೆಳಕೇನು ಬೀರಲಿಲ್ಲ.

೧೯೪೭ರಲ್ಲಿ ಸ್ವತಂತ್ರವಾದ ಭರತಖಂಡವು ಪ್ರಜಾರಾಜ್ಯವಾಗಿ ಪರಿಣಮಿಸಲು ೨॥ ವರ್ಷ ತೆಗೆದುಕೊಂಡು ೧೯೫೦ನೇ ಜನವರಿ ೨೬ರಂದು ಪ್ರಜಾರಾಜ್ಯವೆನಿಸಿತು. ಆ ವರೆಗಿದ್ದ ಗವರ್ನರ್ ಜನರಲ್ ರಾಜಾಜಿಯವರು ಆ ದಿನ ಪ್ರೆಸಿಡೆಂಟರಾದ ಶ್ರೀ. ರಾಜೇಂದ್ರ ಪ್ರಸಾದರಿಗೆ ಅಧಿಕಾರವನ್ನು ಕೊಟ್ಟರು. ಅಂದಿನಿಂದ ಇಂದಿನವರೆಗೂ ರಾಜೇಂದ್ರ ಪ್ರಸಾದರೇ ಅಧ್ಯಕ್ಷರಾಗಿದ್ದಾರೆ. ಪಂಡಿತ ನೆಹರೂರವರೇ ಮುಖ್ಯ ಮಂತ್ರಿಗಳಾಗಿದ್ದಾರೆ.

ಭರತ ಖಂಡಕ್ಕೆ ಮಾತ್ರ ಎರಡು ರಾಷ್ಟ್ರೀಯ ದಿನಗಳು ಇವೆ. ಆಗಸ್ಟ್ ೧೫ ಒಂದು. ಜನವರಿ ೨೬ ಮತ್ತೊಂದು. ಜಗತ್ತಿನ ಬೇರೆ ಯಾವ ರಾಷ್ಟ್ರದಲ್ಲೂ ಈ ರೀತಿ ಎರಡು ದಿನಗಳ ರಾಷ್ಟ್ರೀಯ ಉತ್ಸವದ ಏರ್ಪಾಡಿಲ್ಲ. ಈ ಎರಡು ದಿನಗಳೂ ಮಹತ್ವದ ದಿನಗಳಾದರೂ ಯಾವುದಾದರೊಂದನ್ನು ಮಾತ್ರ ರಾಷ್ಟ್ರೀಯ ಹಬ್ಬದ ದಿನವಾಗಿ ಇಡುವುದೊಳಿತು. ಜನವರಿ ೨೬ನೇ ತಾರೀಕೇ ಇದಕ್ಕೆ ಸೂಕ್ತವೆನ್ನಬಹುದು. ಏಕೆಂದರೆ ಹಿಂದೂದೇಶವು ಸ್ವತಂತ್ರ ರಾಷ್ಟ್ರವಾಗಬೇಕೆಂದು ಪ್ರಥಮ ನಿರ್ಣಯವು ರವಿ ನದೀ ತೀರದಲ್ಲಿ ೧೯೩೦ನೇ ಜನವರಿ ೨೬ನೇ ತಾರೀಕಿನ ಸುಪ್ರಭಾತಕ್ಕೆ ಆದುದಾಗಿದೆ. ಅಂದಿನಿಂದ ಜನವರಿ ೨೬ ಮಹಾ ಕ್ರಾಂತಿಯ ದಿನವೆನಿಸಿ ಬ್ರಿಟಿಷರಿದ್ದಾಗ ಲಾಠಿ, ಗುಂಡುಗಳ, ಜೈಲು ದಸ್ತಗಿರಿಗಳ ಮಧ್ಯ ಈ ಹಬ್ಬ ನಡೆಯುತ್ತಾ ಬಂದು ೧೯೪೭ರಿಂದ ನಿರ್ಬಾಧಕವಾಗಿ ರಾಷ್ಟ್ರದ ಹಬ್ಬದ ದಿನವಾಗಿ ಆಚರಿಸಲ್ಪಡುತ್ತಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದು ಐದೂವರೆ ವರ್ಷಗಳಾಗಿದ್ದರೂ ಕೂಡ ರಾಜಕೀಯ ಕ್ಷೇತ್ರದಲ್ಲಿ ಚುನಾವಣೆ, ಓಟು ಮೊದಲಾದುವೆಂದು ಗಡಿಬಿಡಿ ತೋರಿದರೂ ಕೂಡ ಸ್ವಾತಂತ್ರ್ಯದ ಸುಖದ ಕಲ್ಪನೆ ನಮ್ಮ ದಿನನಿತ್ಯದ ಜೀವನದಲ್ಲಿ ತೋರಿಬರುತ್ತಿಲ್ಲ. ನಮ್ಮ ಆರ್ಥಿಕ ಜೀವನದಲ್ಲಾಗಲೀ, ಶೈಕ್ಷಣಿಕ ಕ್ಷೇತ್ರದಲ್ಲಾಗಲೀ ಬದಲಾವಣೆ ತೋರಿಬರುತ್ತಿಲ್ಲ.

ಗಾಂಧೀಜಿಯವರು ಹೇಳಿದ ಹಾಗೆ ಸ್ವಾತಂತ್ರ್ಯವು ನಮಗೆ ಸುಲಭವಾಗಿಯೆ ಬಂತು. ಸ್ವರ್ಗೀಯ ಪ್ರಯತ್ನದ ಫಲರೂಪವಾಗಿ ಬೆಳೆದು ಪಕ್ವವಾಗಿ ಬರದೆ ಶಸ್ತ್ರಚಿಕಿತ್ಸೆಯ ಪರಿಣಾಮವಾಗಿ ಬಲಾತ್ಕಾರ ರೂಪದಲ್ಲಿ ಬಂತು. ಸ್ವಾತಂತ್ರ್ಯದ ಜೊತೆಯಲ್ಲಿಯೇ ಅಂತಃಕಲಹ ಮೊದಲಾದ ರೋಗಗಳೂ ಬಂದವು. ಅಧಿಕಾರದ ದುರಿಚ್ಛೆ, ಲಾಭದ ಕಲ್ಪನೆಯೂ ಪ್ರಸಾರವಾದವು. ಹಲವಾರು ವರ್ಷಗಳ ವರೆಗೆ ಕತ್ತಲೆ ಕೋಣೆಯಲ್ಲಿದ್ದು ಪೃಥ್ವಿಯನ್ನು ಕಾಣದಿದ್ದ ಜನರ ಗುಂಪು ಒಮ್ಮೊಮ್ಮೆಗೆ ಬೆಳಕಿಗೆ ಬಂದಾಗ ದಿಕ್ಕು ಕಾಣದವರಾಗಿ ಸಿಕ್ಕಿದ ಮಾರ್ಗ ಹಿಡಿದು ನಡೆಯುವಂತೆ, ಸಿಕ್ಕಿದ್ದನ್ನು ದೋಚಲು ಯತ್ನಿಸುವಂತೆ ಪರಕೀಯರಿಂದ ಬಿಡುಗಡೆ ಹೊಂದಿದ ನಮ್ಮ ಕತೆಯಾಯಿತು. ಇದರಿಂದಾಗಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿದ್ದ ಐಕ್ಯತೆ, ಸ್ನೇಹ, ಸಹೋದರತೆಗಳು ಮಾಯವಾಗಿ, ಪರಸ್ಪರ ಕಚ್ಚಾಟವೇ ಸರ್ವಸ್ವವಾಯಿತು.

ಕಾರ್ಮುಗಿಲ ಕತ್ತಲೆ
ಜನಮನವು ಭಾರದಲಿ
ಸಾಗುತ್ತಿದೆ ಮಿನುಗುವ ತಾರೆಗಳ ನೋಡಿ
ದಿನಕರನ ಉದಯವನು
ಕಾತರದಿ ನಲಿಬಯಸಿ
ತವಕದಲಿ ನಡೆಯುತ್ತಿದೆ--
ಎಲ್ಲಿಗದು? ಏತಕದು?

ಸ್ವಾತಂತ್ರ್ಯದೊರೆತು ಐದು ವರ್ಷಗಳಾದರೂ ಎಲ್ಲಿಗದು? ಏತಕದು? ಎಂಬ ಪ್ರಶ್ನೆಯೇ ಬಗೆಹರಿದಿಲ್ಲ. ಸ್ವಾತಂತ್ರ್ಯ ದೊರೆತರೆ ಸಾಕು ಮತ್ತೆ ಎಲ್ಲವೂ ಸರಿಹೋಗುವದು ಎಂದು ಒಮ್ಮೆ ನಂಬಲಾಗಿತ್ತು. ಆದರೆ ಸ್ವಾತಂತ್ರ್ಯ ದೊರೆತರೂ ಗುರಿಮುಟ್ಟಲಿಲ್ಲ. ಬದಲು ಸುಖಶಾಂತಿಗಳ ದೂರದಾರಿಯು ಪ್ರಾರಂಭವಾದುದು ಎಂಬಂತಾಗಿದೆ. ಸ್ವಾತಂತ್ರ್ಯ ಬಂದೂ ಕತ್ತಲೆ ಹೋಗಲಿಲ್ಲ. ರಾಜಕೀಯಾಕಾಶದಲ್ಲಿ ಕೇವಲ ನಕ್ಷತ್ರಗಳೇ ತೋರುತ್ತಿದ್ದು, ಅವುಗಳ ಬೆಳಕಿನಿಂದಲೇ ಇಂದು ಮುನ್ನಡೆಯಬೇಕಾಗಿದೆ. ಸುತ್ತಲೂ ಶುಭ್ರ ಬೆಳಕೀವ ಸೂರ್ಯನ ಉದಯಕ್ಕಾಗಿ ಜನ ಕಾತರಿಸಿ ನೋಡುತ್ತಿದೆ. ಪಂಡಿತ ನೆಹರೂರವರು ಮೊನ್ನೆ ತಮ್ಮ ಕಾಂಗ್ರೆಸ್ ಅಧ್ಯಕ್ಷ ಭಾಷಣದಲ್ಲಿ ಹೇಳಿದಂತೆ ದಾರಿಯೇನೋ ಮುಬ್ಬಾಗಿ ತೋರುತ್ತಿದ್ದರೂ ಪ್ರಯಾಣವು ಅಪಾಯ ರಹಿತವಾದುದೇನಲ್ಲ.

ಇಂದಿನ ವರೆಗೆ ನಿರಾಶ್ರಿತರ ಬಿರುಗಾಳಿಯಲ್ಲಿ, ರಾಜಕೀಯ ಘರ್ಷಣೆಯಲ್ಲಿ, ಆರ್ಥಿಕ ಆಣೆಕಲ್ಲುಗಳ ಅಡಚಣೆಯಲ್ಲಿ, ಜಾತೀಯ ಮತ್ತಿತರ ಮಬ್ಬಿನಲ್ಲಿ, ಅಧಿಕಾರದ ಕುರುಡುತನದಲ್ಲಿ ಭಾರತ ರಾಷ್ಟ್ರನೌಕೆಯು ನಾಶವಾಗದೆ ಉಳಿದು ನಾವು ಜೀವ ಹಿಡಿದು ಬದುಕಿದ್ದರೆ ಅದು ನಮ್ಮ ಪ್ರಯತ್ನಕ್ಕಿಂತಾ ಮಿಗಿಲಾಗಿ ಯಾವುದೋ ಸುಕೃತದ ಕಾರಣದಿಂದ ಎನ್ನಬೇಕಾಗಿದೆ. ಎಲ್ಲರಿಗೆ ಮಾರ್ಗದರ್ಶಕರಾಗಿದ್ದ ಗಾಂಧೀಜಿಯವರ ನಂತರ ಎಲ್ಲವೂ ಕತ್ತಲು ಅಸ್ತವ್ಯಸ್ತ. ಅವರ ರಾಜಕೀಯ ಉತ್ತರಾಧಿಕಾರಿಯಾಗಿ ನೆಹರೂರವರು ಇದ್ದಾರೆ ನಿಜ. ಆದರೆ ಭಾರತದ ಮುಖ್ಯ ಮಂತ್ರಿಪದದ ಬಿಳಿಕೊಡೆಯ ನೆಳಲಿನಲ್ಲಿ ಆ ರಾಜಕೀಯ ಉತ್ತರಾಧಿಕಾರಿ ನೆಹರೂರವರ ತೇಜವು ಮರೆಯಾಗಿದೆ. ಇಂದಿನ ಪ್ರಧಾನರಾದ ನೆಹರೂರವರು, ಹಿಂದಿನ ರಾಜಕೀಯ ಧುರೀಣ ನೆಹರೂ ಅಲ್ಲ. ದೇಶದ ಸರ್ವಸ್ವವೆನಿಸಿದ್ದ ಕಾಂಗ್ರೆಸ್ ಸಂಸ್ಥೆಯೂ ತನ್ನ ಶುಭ್ರತೆಯನ್ನು ಕಳಕೊಂಡಿದೆ. ಸರಕಾರಿ ಆಡಳಿತ ಯಂತ್ರವೂ ಸಡಿಲವಾಗಿದೆ. ಕಾಂಗ್ರೆಸಿನಲ್ಲಿ ಅಧಿಕಾರಕ್ಕಾಗಿ ಹೊಂಚುಹಾಕುತ್ತಿರುವ ಜನ ತುಂಬಿದ್ದರೆ, ಆಡಳಿತದಲ್ಲಿ ಲಾಭಕ್ಕಾಗಿ ಬಲೆ ಒಡ್ಡಿ ಕೂಡುವವರು ಹೆಚ್ಚಾಗಿದ್ದಾರೆ. ಆದ್ದರಿಂದ ಜನವರಿ ೨೬ರಂದು ದೇಶದಾದ್ಯಂತ ಉತ್ಸವ ನಡೆಸುವಾಗ ೨೩ ವರ್ಷಗಳ ಹಿಂದೆ ರವಿ ನದೀ ತೀರದಲ್ಲಿ ಯಾವ ಉತ್ಸಾಹ ಬಯಕೆ, ಹುರುಪುಗಳಿಂದ ಈ ದಿನವನ್ನಾಚರಿಸಲಾಯಿತೆಂದು ನೆನೆದರೆ ಅಂದಿನ ಆ ಬಯಕೆ, ಉತ್ಸಾಹಗಳನ್ನು ಅಪಹಾಸ್ಯಗೊಳಿಸಿದಂತಾಗುವದು.

ದೇಶಕ್ಕೆ ರಾಜಕೀಯ ಸ್ವಾತಂತ್ರ್ಯ ದೊರೆಯಿತೇನೋ ಹೌದು. ಆದರೆ ರಾಜಕೀಯ ಸ್ವಾತಂತ್ರ್ಯದಿಂದ ದೇಶದೊಳಗಿನ ಬಡ ಜನರ ದುಃಖನಿವಾರಣೆಯಾಗದು. ಜಗತ್ತಿನ ರಾಷ್ಟ್ರಗಳ ಸಾಲಿನಲ್ಲಿ ಭಾರತವು ತಾನೂ ಸ್ವತಂತ್ರದೇಶವೆಂದು ನಿಂತರೆ ಸಾಲದು. ದೇಶದೊಳಗಿನ ಜನತೆಗೆ ಆರ್ಥಿಕ ಸ್ವಾತಂತ್ರ್ಯಬೇಕು. ಜನತೆಯ ಹೊಟ್ಟೆಯ ಕೂಗಿನ ಉಪಶಮನವಾಗಬೇಕು. ಆದ್ದರಿಂದ ಸ್ವಾತಂತ್ರ್ಯ ಸಂಗ್ರಾಮದ ಪ್ರತಿಫಲವಾಗಿ ರಾಜಕೀಯ ಸ್ವಾತಂತ್ರ್ಯ ದೊರೆತಿದೆ. ಈ ರಾಜಕೀಯ ಸ್ವಾತಂತ್ರ್ಯ ಚಿರವಾಗಿ ಉಳಿಯಬೇಕಾದರೆ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಬೇಕು. ಯಾವ ನಿಷ್ಠೆ ಮತ್ತು ಬಲಿದಾನಗಳಿಂದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಡಲಾಯಿತೋ ಅದೇ ನಿಷ್ಠೆ ಮತ್ತು ತ್ಯಾಗದಿಂದ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಆದ್ದರಿಂದ ಪ್ರತಿಯೊಬ್ಬ ದೇಶೀಯನು ತನ್ನ ಪಾಲಿನ ಕರ್ತವ್ಯವನ್ನು ಅರಿಯಬೇಕು. ವ್ಯವಸಾಯಗಾರನು ತಾನು ದೇಶದ ನಿರ್ಮಾಣಕರ್ತನೆಂದು ತಿಳಿದು ಸಾಧ್ಯವಾದಷ್ಟು ಹೆಚ್ಚಿಗೆ ಬೆಳೆಸಬೇಕು. ಮಜೂರನು ದುಡಿಯಬೇಕು. ಅಧಿಕಾರಿಯು ತನ್ನ ವೇತನಕ್ಕೆ ಸರಿಯಾದರೂ ದೇಶದ ಹಿತ ಸಾಧಿಸಬೇಕು. ಈ ರೀತಿ ಪ್ರತಿಯೊಬ್ಬರೂ ತಮ್ಮ ಕರ್ತವ್ಯಗಳನ್ನು ಆಸ್ಥೆಯಿಂದ ನಿರ್ವಹಿಸಿದರೆ ಕವಿದಿರುವ ನಿರಾಶೆಯ ತಿಮಿರದಲ್ಲಿ ಬೆಳಕು ಬೀಳುವ ಆಸ್ಪದವಾಗುವದು. ತಾರೀಕು ೨೬ರಂದು ಅಂಥಾ ನಿರ್ಧಾರ ಮಾಡುವವರೆಷ್ಟು?

ಭಾರತವು ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಿದ್ದರೂ ನಾವಿನ್ನೂ ಕಲೆ ಸಂಸ್ಕೃತಿ ಹಾಗೂ ಆರ್ಥಿಕ ರಂಗಗಳಲ್ಲಿ ಅದನ್ನು ಸಂಪಾದಿಸಿಲ್ಲ ಎಂದು ಡಾ. ರಾಧಾಕೃಷ್ಣನರು ಹೈದರಾಬಾದದಲ್ಲಿ ಹೇಳಿದರು.

ಕೊಡಗು

ತಾ. ೨೨-೧-೧೯೫೩ನೇ ಶುಕ್ರವಾರ

ಜನವರಿ ೨೬.

೧೯೫೦ ನೇ ಜನವರಿ ೨೬ ರಂದು ನಮ್ಮ ಹಿಂದೂದೇಶವು ಪ್ರಜಾರಾಜ್ಯವೆನಿಸಿತು. ಭಾರತವು ಪ್ರಜಾರಾಜ್ಯವಾಗಿ ಮೂರು ವರ್ಷಗಳು ತುಂಬಿ ಬರುವ ಜನವರಿ ೨೬ ರಂದು ನಾಲ್ಕನೇ ವರ್ಷಕ್ಕೆ ಕಾಲಿಕ್ಕಲಿರುವೆವು. ೧೯೫೦ ನೇ ಜನವರಿ ೨೬ ರಲ್ಲಿ ಭಾರತವು ಪ್ರಜಾರಾಜ್ಯವೆಂದು ಸಾರಲ್ಪಟ್ಟರೂ ನಿಜವಾಗಿಯೂ ಅದು ಪ್ರಜಾರಾಜ್ಯವಾಗಿರಲಿಲ್ಲ. ಪ್ರಜಾಜನರ ಅಭಿಮತದಿಂದ ಆರಿಸಿ ಬಂದ ಸರಕಾರವು ಆಗ ಆಡಳಿತ ನಡೆಸುತ್ತಿರಲಿಲ್ಲ. ಆದ್ದರಿಂದ ೧೯೫೨ ನೇ ಜನವರಿ ೨೬ ರ ನಂತರವೇ ಭಾರತವು ನಿಜವಾಗಿಯೂ ಪ್ರಜಾರಾಜ್ಯವಾಯಿತೆಂದು ಹೇಳಬಹುದು. ಕಳೆದ ವರ್ಷದ ಜನವರಿ ತಿಂಗಳಲ್ಲಿ ದೇಶದ ಉದ್ದಗಲಕ್ಕೂ ಚುನಾವಣೆಗಳು ನಡೆದು ಕಾಂಗ್ರೆಸು ಜನತೆಯು ಒಪ್ಪಿಗೆಯಿಂದ ಅಧಿಕಾರ ಸ್ವೀಕರಿಸಿತು. ಈ ಅಧಿಕಾರಗ್ರಹಣಮಾಡಿ ಒಂದು ವರ್ಷವಾಯಿತು. ಜನತೆಯಿಂದಲೇ ಆರಿಸಲ್ಪಟ್ಟ ಜನ ಪ್ರತಿನಿಧಿಗಳು ದೇಶವನ್ನು ಆಳುತ್ತಿದ್ದಾರೆ. ಈ ವರ್ಷದಲ್ಲಿ ಈ ಜನ ಪ್ರತಿನಿಧಿಗಳ ಆಳಿಕೆಯಲ್ಲಿ ಯಾವ ಚಮತ್ಕಾರಿಕ ಹೊನ್ನಿನ ಹೊಳೆಯೂ ಬಡವನ ಗುಡಿಸಲಿನ ಮುಂದೆ ಹರಿಯದಿದ್ದರೂ ಅಧಿಕಾರ ವಹಿಸಿದ ಕಾಂಗ್ರೆಸ್ಸು ಜನತೆಯ ಹಿತಕ್ಕಾಗಿ ಪ್ರಯತ್ನಮಾಡುತ್ತಿದೆಯೆಂಬುದು ಸ್ಪಷ್ಟವಾಗಿದೆ. ಕಾಂಗ್ರೆಸಿನೊಳಗೂ, ಅಧಿಕಾರ ವಹಿಸಿದವರಲ್ಲಿಯೂ, ಸ್ವಾರ್ಥಿಗಳೂ, ಅಧಿಕಾರಪ್ರಿಯರೂ, ದೇಶದ ಹಿತಕಂಟಕರೂ ಇಲ್ಲವೆಂದಲ್ಲ. ಅಂಥವರು ಯಾವ ಸಂಸ್ಥೆಯಲ್ಲೂ, ಯಾವ ಕಾಲದಲ್ಲೂ ಇದ್ದೇ ಇರುತ್ತಾರೆ. ಆದರೆ ಈ ಕಾರಣಕ್ಕಾಗಿ ಇಡೀ ಸಂಸ್ಥೆಯನ್ನು ಹಾಳೆನ್ನುವದು ಸರಿಯಲ್ಲ. ಪಂಡಿತ ಜವಾಹರರ ನೇತೃತ್ವದಲ್ಲಿ ಕಾಂಗ್ರೆಸು ಜನಹಿತಕ್ಕಾಗಿ ಯತ್ನಿಸುತ್ತಿದೆ. ಅದು ಸಾಕಷ್ಟು ಪ್ರಗತಿಯಿಂದ ನಡೆಯುತ್ತಿಲ್ಲದಿರಬಹುದು. ಅಲ್ಲಿ ಇಲ್ಲಿ ಸಂಕೀರ್ಣತೆಯು ಆಸ್ಪದಕ ಹಾಕಿ ನೋಡುತ್ತಿರಬಹುದು. ಮಾಡಿದ ಪ್ರಯತ್ನದಲ್ಲಿ ಸಫಲತೆಯನ್ನು ಪಡೆಯದಿರಬಹುದು. ಆದರೆ ಸಂಸ್ಥೆಯ ಗುರಿ ಮಾತ್ರ ಜನಹಿತವೆಂಬುದನ್ನು ಅಲ್ಲಗಳೆಯಲಾಗುವದಿಲ್ಲ. ರೇಶನ್ ಅಂಗಡಿಯ ಅಕ್ಕಿಯಲ್ಲಿ ಕಲ್ಲುಗಳು ಹೆಚ್ಚಿವೆಯೆಂದು ಅಂಗಡಿಯಲ್ಲಿ ಕಲ್ಲು ಮಾರುತ್ತಿರುವರೆಂಬುದು ಹೇಗೆ ಸರಿಯಾಗದೋ ಅದೇ ರೀತಿ ಕಾಂಗ್ರೆಸ್ ಸಂಸ್ಥೆಯೇ ಹಾಳೆನ್ನುವದು ಸರಿಯಾಗದು.

ಮನುಷ್ಯನು ಎಷ್ಟೇ ತತ್ವಗಳನ್ನು ಹೇಳಿಕೊಳ್ಳಲಿ, ಎಷ್ಟೇ ಇತರರಿಗೆ ಬೋಧನೆ ಮಾಡಲಿ, ತನ್ನ ಹಿತದ ದೃಷ್ಟಿ ಪ್ರತಿಯೊಬ್ಬನಿಗಿದೆಯೆಂಬುದನ್ನು ಎಲ್ಲರೂ ಒಪ್ಪಲೇಬೇಕು. ನೆರೆಕರೆಯವರನ್ನು ಒಬ್ಬನು ಪ್ರೀತಿಸಬಹುದು. ಆದರೆ ತನ್ನ ಕುಟುಂಬದ ಪ್ರೀತಿಯು ನೆರೆಕರೆಯವರ ಮೇಲಿನ ಪ್ರೀತಿಗಿಂತಾ ಹೆಚ್ಚಿಗಿರುವುದು ಸ್ವಾಭಾವಿಕ. ಈ ಮಾನವನ ಮೂಲಗುಣದಂತೆ ಅಧಿಕಾರಕ್ಕೇರಿದವರು ತನ್ನವರು, ತನ್ನವರೆಂದು, ವರ್ತಿಸುವುದು ಮಾನವ ಸ್ವಭಾವದ ಪರಿಧಿಯೊಳಗೇ ಅಡಗುತ್ತದೆ. ಅಧಿಕಾರದ ಸ್ಥಾನವು ನ್ಯಾಯಾಧೀಶನ ಸ್ಥಾನವೆಂದೇ ಎಂದು ಹೇಳಿದರೂ ಆ ಸ್ಥಾನದಲ್ಲಿ ಕೂರುವವನು ಮನುಷ್ಯನೆಂಬುದನ್ನು ನಾವು ಗಮನಿಸಬೇಕು. ಆದ್ದರಿಂದ ಅಲ್ಲಲ್ಲಿ ಕಿರುಕುಳ ಹಾನಿಗಳಾಗುತ್ತವೆ. ಇಂಥಾದ್ದನ್ನು ತಿದ್ದಿಕೊಂಡು ಮಾನವನು ಮೇಲೇರಲು ಯತ್ನಿಸಬೇಕು. ಆದಕ್ಕೆ ಇಂಥಾ ರಾಷ್ಟ್ರದ ಹಬ್ಬದ ದಿನಗಳು ಸಹಾಯಕವಾಗುವವು. ಇಂಥಾ ದಿನಗಳಲ್ಲಿ ದೇಶದ ಅಧಿಕಾರ ಹೊತ್ತವರು ಅಂತರ್ ನಿರೀಕ್ಷೆ ಮಾಡಿಕೊಂಡು ಮುಂದಿನ ಹಿತಕಾರ್ಯಕ್ಕೆ ಪ್ರತಿಜ್ಞಾ ಬದ್ಧರಾಗುವುದು ಎಷ್ಟು ಅಗತ್ಯವೋ ಅಷ್ಟೇ ದೇಶದ ನಾಗರಿಕರು ಕೂಡ ತಮ್ಮ ಆತ್ಮನಿರೀಕ್ಷೆ ಮಾಡಿಕೊಂಡು ತಮ್ಮನ್ನು ತಾವು ಮೇಲೆತ್ತಿ ಪ್ರಜಾರಾಜ್ಯದ ಯೋಗ್ಯ ಪ್ರಜೆಗಳಾಗಿ ಮಾರ್ಪಡಿಸಿಕೊಳ್ಳಬೇಕು.

ಮಾನವನು ತನ್ನನ್ನು ತಾನು ತಿದ್ದಿ ಮುನ್ನಡೆಸದಿದ್ದರೆ ಯಾವ 'ಇಸಂ' ರಾಜ್ಯವಾಳುತ್ತಿದ್ದರೂ ಪ್ರಯೋಜನವಿಲ್ಲ. ಗಾಂಧೀಜಿಯವರ ವಿಮಲ ತತ್ವಗಳನ್ನೇ ನಂಬಿದ ವಿನೋಬಾರಂತವರು ರಾಜ್ಯಭಾರ ಮಾಡುತ್ತಿದ್ದರೂ ಪ್ರಜೆಗಳಾದ ನಾವು ಅಸತ್ಯವ್ರತರೂ, ಲಂಚ ರುಷುವತ್ತುಗಳಿಗೆ ತಲೆಬಾಗುವವರೂ, ಆದರೆ ಗಾಂಧೀ ತತ್ವವು ಅಧಿಕಾರಕ್ಕೇರಿ ಪ್ರಯೋಜನವೇನಾಯಿತು? ಆದ್ದರಿಂದ ಜನವರಿ ೨೬ರ ಈ ಪುಣ್ಯ ದಿನದಂದು ನಮ್ಮನ್ನು ನಾವು ತಿದ್ದಿಕೊಂಡು ಯೋಗ್ಯ ಪ್ರಜೆಗಳಾಗುವ ನಿರ್ಧಾರ ಮಾಡಿಕೊಂಡರೆ ಈ ದಿನದ ಹಬ್ಬವನ್ನು ಯೋಗ್ಯರೀತಿ ಆಚರಿಸಿದಂತಾಗುವದು.

ವರ್ತಮಾನ.

ಸ್ಪೆಶಲ್ ಮ್ಯಾಜಿಸ್ಟ್ರೇಟರಾಗಿದ್ದ ಶ್ರೀ ಕುಪ್ಪಂಡ ತಮ್ಮಯ್ಯನವರನ್ನು ನಿವೃತ್ತರಾದ ಶ್ರೀ ಪುಟ್ಟಿಮಾಡ ನಾಣೈಯ್ಯನವರ ಬದಲು ವೀರಾಜಪೇಟೆಗೆ ಮುನ್ಸಿಫರಾಗಿ ತಾ. ೧೯-೧-೫೩ರಿಂದ ನೇಮಿಸಲಾಗಿದೆ.

ಆದಿದ್ರಾವಿಡ, ಆದಿಕರ್ನಾಟಕ, ಆದಿಯ, ಬಲಿಗ್ಗ, ಹೊಲೆಯ, ಮಾದಿಗ, ಮೋಚಿ, ಮುಂಡಾಳ, ಸಂಜಮ, ಪರೆಯ, ಸಮಗಾರ, ಕೊರಮ, ಕುಡಿಯ, ಮರಾಟಿ, ಕುರುಬ, ಮೇದ, ಮತ್ತು ಎರವರ ಪ್ರೈಮರ್ ಎಲಿಮೆಂಟರಿ ಮತ್ತು ಹೈಸ್ಕೂಲುಗಳಲ್ಲಿ ಓದುತ್ತಿರುವ ಮಕ್ಕಳಿಗೆ ಫೀಜು ಮಾಫಿ ಮಾಡಲ್ಪಟ್ಟಿದೆ.

ಕೊಡಗಿನಲ್ಲಿ ವಿದ್ಯಾರ್ಥಿವೇತನ ಮತ್ತು ಫೀಜು ಮಾಫಿ ಕೊಡುವಾಗ ವರ್ಷಕ್ಕೆ ರೂ. ೩೦೦೦/= ಕ್ಕೆ ಹೆಚ್ಚು ಆದಾಯವಿರುವವರ ಮಕ್ಕಳಿಗೆ ಕೊಡಕೂಡದೆಂದೂ ಕೊಡಗಿನ ನಿವಾಸಿಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದೂ ೧೯೫೩-೫೪ರಲ್ಲಿ ಹೊಸತಾಗಿ ಕೊಡುವವರಿಗೂ ಹಳೆಯದನ್ನು ಮುಂದರಿಸುವವರಿಗೂ ಇದು ಅನ್ವಯಿಸುವುದೆಂದೂ ತಿಳಿದುಬಂದಿದೆ.

ಮಡಿಕೇರಿಯ ಕಾರೋನೇಶನ್ ಗಾರ್ಡನ್‌ನಲ್ಲಿ ಕಟ್ಟುತ್ತಿರುವ ಟೌನ್ ಹಾಲಿನ ಕಟ್ಟಡದ ಅಸ್ತಿಭಾರವನ್ನು ಚೀಫ್ ಕಮಿಷನರು ತಾ. ೧೮-೧-೫೩ರಲ್ಲಿ ಹಾಕಿದರು. ಕೊಡಗಿನ ಮಂತ್ರಿದ್ವಯರೂ ಹಾಜರಿದ್ದರು ಟೌನ್ ಹಾಲಿನ ಖರ್ಚು ರೂ. ೧,೪೦,೦೦೦ ವೆಂದು ಅಂದಾಜು ಮಾಡಲಾಗಿದೆ.

ತಾ. ೧೪ ರಲ್ಲಿ ನಿವೃತ್ತರಾದ ಜ॥ ಕಾರ್ಯಪ್ಪನವರು ತಾ. ೧೮ರಲ್ಲಿ ಮಡಿಕೇರಿಗೆ ಬಂದರು. ಅವರನ್ನು ಕೊಡಗಿನ ಚೀಫ್ ಕಮಿಷನರು, ಮಂತ್ರಿಗಳು ಮತ್ತಿತರರು ಬೋರ್ ಸರ್ಕಲಿನಲ್ಲಿ ಎದುರುಗೊಂಡು ಸ್ವಾಗತಿಸಿದರು. ಜ॥ ಕಾರ್ಯಪ್ಪನವರು ತಮ್ಮ 'ರೋಶನಾರ' ಬಂಗ್ಲೆಯಲ್ಲಿರುವರು. ತಮ್ಮ ನಿವೃತ್ತಿಯ ಸಮಯದಲ್ಲಿ ಭಾರತ ಸೇನೆಗೆ ಸಂಬಂಧಿಸಿದ ಒಂದು ಪುಸ್ತಕವನ್ನು ಬರೆಯಲಿರುವರೆಂದು ಗೊತ್ತಾಗಿದೆ.

ಚೀಫ್ ಕಮಿಷನರು ತಾ. ೨೦ರಲ್ಲಿ ನಾಗರಹೊಳೆಗೆ ಹೋಗಿರುವರು. ಅಲ್ಲಿ ೨೩ರ ವರೆಗಿದ್ದು ೨೪ರಲ್ಲಿ ಮಡಿಕೇರಿಗೆ ಬರುವರು.

ಕೊಡಗು ಸಹಕಾರಿ ಪರಿಶೀಲನಾ ಸಮಿತಿಯ ಅಧ್ಯಕ್ಷರಾದ ಶ್ರೀ ಮೆಕ್ರಿಯವರು ಸಮಿತಿ ಸದಸ್ಯರೊಡಗೂಡಿ ಕೊಡಗು ಸಹಕಾರಿ ಬ್ಯಾಂಕು, ಜೇನುಮೇಣ ಸಂಘ ಮತ್ತಿತರ ಸಂಸ್ಥೆಗಳನ್ನೂ, ಕೆಲವು ಸಾರ್ವಜನಿಕರನ್ನೂ ಭೇಟಿಮಾಡಿ ಸಲಹೆ ಪಡೆದರು. ತಾ. ೨೦ರಲ್ಲಿ ಮಂತ್ರಿಗಳು ಅವರಿಗೆ ಒಂದು ಔತಣ ಏರ್ಪಡಿಸಿದ್ದರು.

ಬರಪೊಳೆ ವಿದ್ಯುಚ್ಛಕ್ತಿ ಯೋಜನೆಯ ಪರಿಶೀಲನೆಯನ್ನು ಮುಖತಃ ವಹಿಸಲು ಒಪ್ಪಿರುವ ಮೈಸೂರಿನ ನಿವೃತ್ತ ಇಂಜಿನಿಯರಾದ ಶ್ರೀ ನರಸಿಂಹಯ್ಯನವರು ತಾ. ೧೬ರಲ್ಲಿ ಸಾರತಪ್ಪುವನ್ನು ಸಂದರ್ಶಿಸಿ ಹಿಂತಿರುಗಿರುವರು. ತಾ. ೭ರಲ್ಲಿ ಅವರು ಹೊಸದ ಬೆಂಗಳೂರಿನ ಟಾಟಾ ಇನ್ಸ್ಟಿಟ್ಯೂಟಿನ ಶ್ರೀ ಧಕ್ಕರ್‌ರವರೊಂದಿಗೆ ಬರಲಿರುವರು.

ಸೋಮವಾರಪೇಟೆ ಕೂವರ್ ಕೊಲ್ಲಿ ತೋಟದ ರೈಟರರಾಗಿದ್ದ ಸೇತುರಾಮಿ ಗ್ರಾಮದ ಕುಂಡಚೀರ ಮಾದಪ್ಪನವರು ಕಾರಣಾಂತರದಿಂದ ಗುಂಡು ಹಾಕಿಕೊಂಡು ಸತ್ತರೆಂದು ವರ್ತಮಾನ.

ಪ್ರಜಾರಾಜ್ಯ ದಿನವಾದ ಜನವರಿ ೨೬ರಲ್ಲಿ ಎಂದಿನಂತೆ ಮಡಿಕೇರಿ ಕೋಟೆಯಲ್ಲಿ ಧ್ವಜಾರೋಹಣ, ಪೋಲೀಸರ ಮಾರ್ಚ್‌ಪಾಸ್ಟ್ ನಡೆಯುವುದು

ಮಹಾತ್ಮ ಬಾಪೂಜಿಯ ಪುಣ್ಯದಿನ ತಾ ೩೦ರಂದು ಕೋಟೆಯ ಎದುರುಗಡೆ ಗಾಂಧೀಜಿಯವರ ಅವಶೇಷವನ್ನು ಸಾರ್ವಜನಿಕರ ಭಕ್ತಿ ಪ್ರದರ್ಶನಕ್ಕಿಟ್ಟು ಆ ದಿನ ಸೂತ್ರಯಜ್ಞ, ಭಜನೆ, ಪ್ರಾರ್ಥನೆಗಳನ್ನು ನಡೆಸುವ ಏರ್ಪಾಡು ಮಾಡುವರೆಂದು ತಿಳಿದು ಬಂದಿದೆ.

ತಾ. ೧೪-೧ ೫೩ನೇ ರಾತ್ರಿ ೯ ಗಂಟೆಗೆ ಶ್ರೀಮಾನ್ ಜಿ. ಯಂ. ಲಿಂಗರಾಜಯ್ಯ ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಹೆಬ್ಬಾಲೆಯಲ್ಲೂ ತಾ. ೧೫ನೇ ಸೋಮವಾರ ಶ್ರೀ ಎಂ. ಕೆ. ಕೃಷ್ಣೋಜಿಯವರ ಅಧ್ಯಕ್ಷತೆಯಲ್ಲಿ ಆತ್ತೂರು ನೆಲ್ಲೂರು ಕಂಬಿಬಾಣೆಯ ಶ್ರೀರಾಮಮಂದಿರದಲ್ಲೂ ವಯಸ್ಕರ ಶಿಕ್ಷಣದ ಶಾಲೆ ತೆರೆಯಲ್ಪಟ್ಟವು.

ಅಮ್ಮತ್ತಿ ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಂದ ೧೯೫೧ ನೇ ಇಸವಿಯಲ್ಲಿ ಸ್ಥಾಪಿತವಾದ ನೇತಾಜಿ ಕಪ್ಪಿನ ಹಾಕಿ ಪಂದ್ಯಾಟವು ಫೆಬ್ರವರಿ ತಾ ೨ರಲ್ಲಿ ಅಮ್ಮತ್ತಿ ಶಾಲಾ ಮೈದಾನದಲ್ಲಿ ಪ್ರಾರಂಭವಾಗುವುದಾಗಿಯೂ ಸ್ಪರ್ಧಿಸುವ ಮಾಧ್ಯಮಿಕ ಶಾಲೆಗಳು ರೂ. ೪ = ಗ್ರ್ಯಾಂಡ್ ಫೀಸು ಕೊಟ್ಟು ಆಡಬಹುದಾಗಿಯೂ ಟೈಸ್ ಇದೇ ಜನವರಿ ತಾ. ೩೦ರಲ್ಲು ತೆಗೆಯುವುದಾಗಿಯೂ ಸದರಿ ಶಾಲೆಯವರು ತಿಳಿಸುತ್ತಾರೆ.

ತಾ. ೧೫-೧-೧೯೫೩ರಲ್ಲಿ ವೀರಾಜಪೇಟೆಯ ಸರಕಾರಿ ಮೂಲ ಶಿಕ್ಷಣ ಶಾಲೆಯ ಇಬ್ಬರು ಉಪಾಧ್ಯಾಯರುಗಳು ಮತ್ತು ೪೦ ತರಬೇತು ಅಧ್ಯಾಪಕರುಗಳು ಕೂಡಿಗೆಗೆ ಪ್ರವಾಸ ಹೋಗಿ ಅಲ್ಲಿಯ ಎಗ್ರಿಕಲ್ಚರಲ್ ಫಾರಂ, ದನಗಳಿಗೆ ಕೃತಕ ಗರ್ಭದಾನ ಕೊಡುವ ಪ್ರಯೋಗ ಶಾಲೆ, ಮತ್ತು ಕುಶಾಲನಗರ ಕಾಫಿ ವರ್ಕ್ಸ್ ಇವುಗಳನ್ನು ಸಂದರ್ಶಿಸಿದರು. ತಾ. ೧೭ರಲ್ಲಿ ಹೆಬ್ಬಾಲೆಯಲ್ಲಿ ಗ್ರಾಮ ಸೇವೆಯ ಕೆಲಸವನ್ನು ಕೈಗೊಂಡರು. ಈ ಪ್ರವಾಸಕಾಲದಲ್ಲಿ ಸ್ಥಳೀಯ ಅಸೆಂಬ್ಲಿ ಮೆಂಬರಾದ ಶ್ರೀ ಜಿ. ಎಂ ಲಿಂಗರಾಜಯ್ಯನವರು ಮಧ್ಯಾಹ್ನದ ಊಟೋಪಚಾರವನ್ನೂ, ಕೂಡಿಗೆ ಕೃಷ್ಣಾಪ್ರಭುವವರು ಉಪಹಾರವನ್ನೂ ಏರ್ಪಡಿಸಿ ಸತ್ಕರಿಸಿದರು. ಕಣಿವೆ ದೇವಸ್ಥಾನ ಕಮಿಟಿಯವರು ಮತ್ತು ಶಾಲೆಯ ಮುಖ್ಯೋಪಾಧ್ಯಾಯರು ಆವಶ್ಯಕ ಸಲಕರಣೆಗಳನ್ನು ಒದಗಿಸಿ ಸಹಕರಿಸಿದರು.

'ಫ್ಲಾಗ್ ಡೇ' ಫಂಡಿನಿಂದ (೧) ಯುದ್ಧದಲ್ಲಿ ಮರಣವನ್ನು ಹೊಂದಿದ ಮಾಜಿ ಸೈನಿಕರ ಅನಾಥ ಮಕ್ಕಳಿಗೆ ಸ್ಕಾಲರ್ ಶಿಪ್ (೨) ಕ್ಷಯದಂತಹ ಹಾನಿಕಾರಕ ರೋಗದಿಂದ ನರಳುತ್ತಿರುವ ಅತೀ ಬಡವರಾದ ಮಾಜಿ ಸೈನಿಕರಿಗೆ ಮತ್ತು ಅವರ ಸ್ವಂತ ಸಂಸಾರಗಳಿಗೆ, ಮತ್ತು (೩) ಬಹು ವೃದ್ಧರಾಗಿ ತಮ್ಮ ಸಂಸಾರದಲ್ಲಿ ಸಂಪಾದಿಸುವಂತಹವರು ಯಾರೂ ಇಲ್ಲದಂತಹ ಮಾಜಿ ಸೈನಿಕರಿಗೆ ಧನ ಸಹಾಯವು ಕೊಡಲ್ಪಡುವದು. ಇದಕ್ಕೆ ಸಂಬಂಧಿಸಿದ ಹೆಚ್ಚಿನ ವಿಷಯಗಳನ್ನು ಮತ್ತು ನಿಶ್ಚಿತ ಅರ್ಜಿ ಫಾರಂಗಳನ್ನು 'ಸೆಕ್ರೆಟರಿ, ಡಿ. ಎಸ್. ಎಸ್. ಅಂಡ್. ಎ. ಬೋರ್ಡ್, ಮಡಿಕೇರಿ' ಇವರಿಂದ ಮುದ್ದಾಗಿ ಪಡೆಕೊಳ್ಳಬಹುದು.

Showing from 22 1 53 for 4 days.
AT
CAUVERY MAHAL MERCARA
GONE WITH THE WIND (TECHNICOLOR)
Timing 5-30 P. M. & 9-30 P. M.
SATURDAY :- Matinee Show at 2 P. M
SUNDAY :- Morning Show at 10 A. M.
RATES : Rs. 4/-, 2/-, 1/- and As. 0-5-0
Coming Soon
Mehboob's 'AAN'

ಓದುಗರ ಓಲೆಗಳು.

ಇದು ಅಧಿಕಾರಿಗಳ ಗಮನಕ್ಕೆ ಬರಲಿಲ್ಲವೇ?

ಇತ್ತೀಚೆಗೆ ಮದ್ಯಪಾನ ನಿಯಂತ್ರಣ ಚಳವಳಿಯು ದೇಶದಾದ್ಯಂತ ಬರೇ ಬಾಯಿ ಮಾತಿನ ಚಳವಳಿಯಾದದ್ದು ಬಹು ವಿಷಾದಕರ. ಜನರನ್ನು ಬಹು ಕಠಿಣವಾದ ಬೆಲೆಯಿಂದ ಹಿಂಸಿಸುತ್ತಿರುವುದು ಯಾವತ್ತೂ ಶೋಚನೀಯವಾದ ಪರಿಸ್ಥಿತಿಯಾಗಿದೆ. ಈಗ ಭಾಗಮಂಡಲ ನಾಡಿನಲ್ಲಿ ಮದ್ಯ (ಹೆಂಡ) ಕ್ಕೆ ಸಾಧಾರಣವಾಗಿ ಸೇರಿಗೆ ೩ ಆಣೆ ಎಂಬ ಬೆಲೆಯು ಸಾಮಾನ್ಯವಾಗಿ ಸೇರಿಗೆ ೬ ೭ ಆಣೆ ವರೆಗೆ ಏರುತ್ತಿದ್ದು ೮ ಆಣೆ ವರೆಗೆ ತಲುಪುತ್ತಿದೆ. ಚೆಟ್ಟಳ್ಳಿಯಲ್ಲಿ ಸೇರಿಗೆ ೩ ಆಣೆ ಮಾತ್ರ ವಿಕ್ರಯಿಸುತ್ತಾರೆ ಎಂಬ ವಿಷಯವನ್ನು ಹೇಳದೆ ಗಮನಕ್ಕೆ ತೆಗೆದುಕೊಳ್ಳದೆ ಇಲ್ಲಿನ ಮದ್ಯ ವ್ಯಾಪಾರ ಮಾಡುವರು ಸೇರಿಗೆ ೬ ಆಣೆಯಿಂದ ೮ ಆಣೆ ವರೆಗೆ ತೆಗೆಯುವುದು, ಜನತೆಯನ್ನು ಬಹು ತೊಂದರೆಗೆ ಒಳಗೆ ಮಾಡಿದೆ. ಸಂಬಂಧಿಸಿದ ಅಧಿಕಾರಿಗಳು ಸ್ವಲ್ಪ ಈ ಕಡೆ ಗಮನ ಕೊಡುವರೇ?

— ದೇವ ಕುಮಾರ.

ಕಾಂಗ್ರೆಸ್ ಅಧ್ಯಕ್ಷರ ಭಾಷಣದಿಂದ.

Some of our old Comrades have left us and formed other groups and parties. Some who left us have come back to us and they have been welcomed. We bear no ill will to those who might have left our ranks owing to differences of principle or of Conviction. If their aim is to serve the causes which are dear to us we shall always willingly cooperate with them and if they choose to come back to the Congress they will always be welcome. Only those whose objects or methods are completely alien to those of the Congress can find no place in this organisation.

NEHRU.

ನಮ್ಮ ಕೆಲವು ಹಳೇ ಸ್ನೇಹಿತರು ನಮ್ಮನ್ನು ಬಿಟ್ಟು ಬೇರೆ ಗುಂಪು ಮತ್ತು ಪಕ್ಷಗಳನ್ನು ರಚಿಸಿದ್ದಾರೆ. ನಮ್ಮನ್ನು ಬಿಟ್ಟು ಹೋದ ಕೆಲವರು ಹಿಂದಕ್ಕೆ ಬಂದಿದ್ದಾರೆ. ಅವರು ಸ್ವಾಗತಿಸಲ್ಪಟ್ಟಿದ್ದಾರೆ. ತಮ್ಮ ಸಿದ್ಧಾಂತ ಹಾಗೂ ತತ್ವಗಳ ವ್ಯತ್ಯಾಸದ ಕಾರಣದಿಂದ ನಮ್ಮನ್ನು ಬಿಟ್ಟು ಹೋಗಿರುವವರ ಬಗ್ಗೆ ನಮಗೆ ದುರ್ಭಾವನೆಯಾಗಲೀ ಕೆಟ್ಟ ಭಾವನೆಯಾಗಲೀ ಇಲ್ಲ. ನಮಗೆ ಪ್ರಿಯವೆನಿಸುವ ಕಾರಣಗಳ ಸೇವೆಯೇ ಅವರ ಗುರಿಯಾದರೆ ಅವರೊಡನೆ ನಾವು ಸ್ವಇಚ್ಛೆಯಿಂದ ಸಹಕರಿಸುವೆವು. ಅವರು ಮರಳಿ ಕಾಂಗ್ರೆಸ್ಸಿಗೆ ಬರಬೇಕೆನ್ನುವುದಾದರೆ ಅವರು ಸದಾ ಸ್ವಾಗತಾರ್ಹರು. ಕಾಂಗ್ರೆಸಿನ ಗುರಿ, ಕಾರ್ಯ ವಿಧಾನಗಳಿಗೆ ಪೂರ್ಣ ವಿರೋಧವಿರುವವರು ಮಾತ್ರ ಈ ಸಂಸ್ಥೆಯಲ್ಲಿ ಸ್ಥಳ ಪಡೆಯಲಾರರು.

—ಜವಾಹರಲಾಲ್ ನೆಹರು.

ಪತಿ ಭಕ್ತಿ.

ಫ್ರೇಜರ್‌ಪೇಟೆಯ ಆಗ್ನೇಯದಲ್ಲಿ ಹೊನ್ನೂರು ಎಂಬ ಗ್ರಾಮವಿದೆ. ಇದರ ಸಮೀಪದಲ್ಲೇ ಬೆಟ್ಟದ ಮೇಲೆ ರಂಗಸ್ವಾಮಿಯ ಹಳೆಯ ದೇವಸ್ಥಾನ ಒಂದಿದೆ. ತಾ. ೩-೧-೫೩ರಿಂದ ೧೭-೧-೫೩ರ ವರೆಗೆ ಈ ದೇವಸ್ಥಾನದಲ್ಲಿ ಫ್ರೇಜರ್‌ಪೇಟೆಯ ನಾಯಿಂದರ ಚಿನ್ನಮ್ಮ ಎಂಬುವವರು ಆಹಾರವಿಲ್ಲದೆ ದೇವರ ಪ್ರಾರ್ಥನೆ ಮಾಡುತ್ತಾ ತಪಸ್ಸು ಮಾಡಿದರು. ಈಕೆಯ ತಪಸ್ಸಿಗೆ ಕಾರಣವೆಂದರೆ ತನ್ನ ಪತಿಯ ಕಾಯಿಲೆ. ಆತನು ಆಸ್ಪತ್ರೆಯಲ್ಲಿ ಮಲಗಿದ ಸಮಯದಲ್ಲಿ ತನ್ನ ಮಗುವನ್ನು ಕಳೆದುಕೊಂಡ ಈಕೆ ದೇವಸ್ಥಾನದಲ್ಲಿ ಈ ಉಗ್ರ ತಪಸ್ಸು ಕೈಕೊಂಡದ್ದಾಗಿದೆ. ಇದನ್ನು ತಿಳಿದ ಪತಿಯು ತಾ. ೧೭ರಲ್ಲಿ ಆಸ್ಪತ್ರೆಯಿಂದ ಹೋಗಿ ಆಕೆಯನ್ನು ಗೌರವಪೂರ್ವಕ ಕರೆತಂದಿರುವನು. ಆತನ ಕಾಯಿಲೆ ಗುಣಮುಖವಾಗಿದೆಯೆಂದೂ, ಆಕೆಯ ಭಕ್ತಿ ಪುರಸ್ಸರ ಪ್ರಾರ್ಥನೆಯೇ ಅದಕ್ಕೆ ಕಾರಣವೆಂದೂ ಹಲವರು ಆಕೆಯನ್ನು ನೋಡಲು ಹೋಗುತ್ತಿರುವರೆಂದೂ ವರ್ತಮಾನ ಬಂದಿದೆ. ಆಧುನಿಕ ಸಾವಿತ್ರಿ ಎನ್ನೋಣವೇ?

ಕೊಡಗಿನಲ್ಲಿ ಹರಿಜನ ಮತ್ತು ದಲಿತ ವರ್ಗದವರ ಉದ್ಧಾರ ಹೇಗಾಗಬೇಕು.

ಸ್ವಂತ ಮನೆ ಮತ್ತು ಭೂಮಿ ಇಲ್ಲದ ಎಲ್ಲಾ ಹರಿಜನರನ್ನೂ ದಲಿತ ವರ್ಗದವರನ್ನೂ ಕೊಡಗಿನ ಆಯಾ ನಾಡುಗಳಲ್ಲಿ ಪ್ರತ್ಯೇಕ ಜನವಸತಿ ಕಾಲೋನಿಗಳನ್ನಾಗಿ ಮಾಡಬೇಕು. ಹೀಗೆ ಮಾಡುವುದರಿಂದ ಅವರ ಸ್ಥಿತಿಗತಿಗಳನ್ನು ತಿಳಿಯಲೂ, ವಿದ್ಯಾ ಪ್ರಚಾರ ಮತ್ತು ಆರೋಗ್ಯದ ಕಡೆ ಗಮನಕೊಡಲೂ ಅನುಕೂಲವಾಗುತ್ತದೆ. ಇದು ಪ್ರಥಮದ ಕೆಲಸ. ನಂತರ ಸೈಟಿನಿಂದ ಭೂಮಿ ಕರೆ ಪ್ರದೇಶಗಳಲ್ಲಿ ವ್ಯವಸಾಯಕ್ಕೆ ಜಾಗ ಕೊಟ್ಟು ಸರಕಾರ ಮೂಲದಲ್ಲಿ ವ್ಯವಸಾಯ ಮಾಡಿಸಬೇಕು.

ಕೊಡಗಿನಲ್ಲಿರುವ ಪ್ರತಿಯೊಬ್ಬ ತೋಟ ಮಾಲಿಕರೂ, ಭೂಮಾಲಿಕರೂ ಮತ್ತು ಸಣ್ಣ ಹಿಡುವಳಿದಾರರೂ ಸಹ ದಲಿತ ವರ್ಗದ ಮಜದೂರರ ಮಕ್ಕಳ ಪೋಷಣೆ, ಮಕ್ಕಳನ್ನು ಶಾಲೆಗೆ ಕಳುಹಿಸುವುದು ಸಮಸ್ಯೆಗೆ ದಿನಕ್ಕೆ ! ಗಂಟೆಯಾದರೂ, ಅಕ್ಷರ ಅಭ್ಯಾಸ ಮತ್ತು ರಾಜಕೀಯ ವಿಷಯದಲ್ಲಿ ಬೋಧನೆ ಕೊಡುತ್ತಾ ಬಂದರೆ ಕೆಲವೇ ವರ್ಷಗಳಲ್ಲಿ ಹರಿಜನೋದ್ಧಾರವಾಗುವದರಲ್ಲಿ ಸಂಶಯವಿಲ್ಲ.

ದಿವಾನ್ ಸೀಟಿಗಳ ಆರು ಮಂದಿ ಅಭ್ಯರ್ಥಿಗಳು ತಮ್ಮ ಪಂಗಡಗಳ ಸಂಬಂಧ ತರಾಸ್ತುಗಳನ್ನು ಅಸೆಂಬ್ಲಿಯಲ್ಲಿ ತಂದು, ಅನುಮೋದಿಸಿ ಮೂರಾವಿದರೂ ಎಲ್ಲಾ ಕಾಲುಬಾರುಗಳನ್ನು ಸರಕಾರದ ಮೇಲೆ ಹೊರಿಸಿದರೆ ಹರಿಜನೋದ್ಧಾರವಾಗಲಾರದು. ಇದಕ್ಕಾಗಿ ಎಲ್ಲಾ ಉಮೇದ್ವಾರರು ಸೊಂಟಕಟ್ಟಿ ರಂಗಕ್ಕಿಳಿಯಬೇಕು. ವಿಷಯಗಳನ್ನು ಸಾರ್ವಜನಿಕರಲ್ಲಿ ತಿಳಿಯದ ನಮ್ಮ ಉಮೇದ್ವಾರರಿಗೆ ತಕ್ಕ ಸಲಹೆಗಳನ್ನೂ ತಿಳುವಳಿಕೆ ಇಲ್ಲದ ಜನರಿಗೆ ಬೋಧನೆಗಳನ್ನು ಮಾಡಬೇಕು. ಮುಖ್ಯವಾಗಿ ಪ್ರತಿಯೊಬ್ಬ ವಿದ್ಯಾವಂತನೂ, ವಿದ್ಯಾ-ರುಚಿಕ್ಕ ಮತ್ತು ಸಮುಚ್ಚಯ ಇದನ್ನು ಕುರಿತು ಯೋಚನೆ ಕೊಡುತ್ತಿರಬೇಕು. ಮಕ್ಕಳನ್ನೆಲ್ಲಾ ಶಾಲೆಗೆ ತಪ್ಪದೆ ಕಳುಹಿಸಬೇಕು. ಸಾಧ್ಯವಿರುವ ಕಡೆಗಳಲ್ಲೆಲ್ಲಾ ಜನರ ಸಹಕಾರದಿಂದ ರಾತ್ರಿ ಸಮಯದ ಶಾಲೆಗಳನ್ನು ತೆರೆದು ವಿದ್ಯೆ ಕಲಿಸಬೇಕು.

ಶ್ರೀ. ಪಿ. ಎಸ್. ದಾತ್ತಾರ್ ಕೇಂದ್ರ ಸರಕಾರದ ಉಪ ಮಂತ್ರಿಯವರು ತಾ. ೧೦-೧-೫೩ ರಲ್ಲಿ ಸಾಯಂಕಾಲ ಮಿನ್ನರ್ ಆದ ಮೇಲೆ ಹೇಳಿದಂತೆ, ಹರಿಜನೋದ್ಧಾರವೇ ಗಾಂಧೀಜಿಯವರ ಮುಖ್ಯ ತತ್ವ. ಅದನ್ನು ಮರೆಯಬಾರದು. ಇದಕ್ಕಾಗಿ ಹತ್ತು ವರ್ಷಗಳ ಸಮಯ ಕಡಲಾಗಿದೆ. ಕೆಲವು ವರ್ಷಗಳು ಈಗಾಗಲೇ ಕಳೆದುಹೋದವು. ಇನ್ನುಳಿದ ವರ್ಷಗಳಲ್ಲಿ ಹರಿಜನೋದ್ಧಾರ ಕಾರ್ಯದಲ್ಲಿ ಎಲ್ಲಾ ಕೆಲಸ ಕಾರ್ಯಗಳು ನಡೆಯದು, 'ಹರಿಜನರೆಂಬ' ನಾಮವೇ ಇರಕೂಡದು. ಇದಕ್ಕಾಗಿ ಮದ್ಯ ಸರಕಾರವು ಪ್ರಾಂತೀಯ ಸರಕಾರಗಳಿಗೆ ಸಾಕಷ್ಟು ಸಹಾಯವನ್ನು ನೀಡಲು ನಿರ್ಧರಿಸಿದೆ. ಆದುದರಿಂದ ಈ ವಿಷಯದಲ್ಲಿ ಹೆಚ್ಚಿನ ಗಮನ ಕೊಡಬೇಕೆಂದರು. ಆದುದರಿಂದ ಸರಕಾರದವರು, ಹಾಗು ಸಂಘದವರು, ವಿದ್ಯಾವಂತರೂ, ತೋಟ ಮತ್ತು ಭೂಮಾಲೀಕರೂ ಅಲ್ಲದೆ ಸಣ್ಣ ಹಿಡುವಳಿದಾರರೂ ಸಹ ಹರಿಜನ ಮತ್ತು ದಲಿತ ವರ್ಗದವರ ಉದ್ಧಾರಕ್ಕಾಗಿ ಬೇಕಾದ ಸಹಾಯ ಮತ್ತು ಸಲಹೆಗಳನ್ನು ಕೊಟ್ಟು ಉದ್ಧರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಜಿ. ಸುಬ್ಬಯ್ಯ ಎಂ. ಎಲ್. ಎ.

ಪ್ರಕಟಣೆ.

ಶ್ರೀ ಸೋಮೇಶ್ವರ ಜಾತ್ರೆ

ಸೋಮವಾರಪೇಟೆ ಜಾತ್ರೆಯು ಊರಿನ ಅಂಚಿನಲ್ಲಿರುವ ದೇವಸ್ಥಾನದ ಬಾಗೆಯಲ್ಲಿ ತಾ. ೮-೨-೧೯೫೩ರಿಂದ 16-2-1953ರ ವರೆಗೆ ನಡೆಯುವುದು. ದನಗಳಿಗೆ ನೀರಿನ ಮತ್ತು ಮೇವಿನ ಪೂರೈಕೆಗಾಗಿ ತೃಪ್ತಿಕರವಾದ ಏರ್ಪಾಡು ಮಾಡಲಾಗಿದೆ. ಇತರ ಪ್ರದರ್ಶನಗಳು, ವಿವಿಧ ಮನರಂಜನೆಯ ಕಾರ್ಯಕ್ರಮಗಳೂ ಜರಗುವವು. ಸಾರ್ವಜನಿಕರೂ, ವರ್ತಕರೂ ಸಹಕರಿಸಿ ಭಾಗವಹಿಸಿ ತಕ್ಕ ಪ್ರಯೋಜನವನ್ನು ಹೊಂದಿಕೊಳ್ಳಬೇಕೆಂಬುದಾಗಿ ಅಪೇಕ್ಷಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಸೆಕ್ರೆಟರಿ, ಸೋಮೇಶ್ವರ ದೇವಸ್ಥಾನ ಕಮಿಟಿ, ಸೋಮವಾರಪೇಟೆ ಇವರಿಂದ ಪಡೆಯಬಹುದು.

ಕೆ. ಚಂದ್ರಶೇಖರಯ್ಯ, ಬಿ. ಸಿದ್ದಣ್ಣ,
ಸೆಕ್ರೆಟರಿ. ಪ್ರೆಸಿಡೆಂಟ್.
16-1-1653.

THE VIJAYA BANK, LIMITED, MERCARA.

Head Office :- Kadri Road, MANGALORE.

Office Hours.

All our constituents are hereby informed of the change of our working hours with effect from 1-2-1953 as follows:-

ON WEEK DAYS from 10 A. M. to 2 P. M.
ON SATURDAYS ONLY from 10 A. M. to 12 Noon.

M. S. ALVA,
AGENT.

Coorg Forest Department.

TIMBER SALE.

About 1,50,000 cft of Teak, Rosewood, Honne, Nandi (Venteak) and other hardwoods will be sold by auction at the Coorg Timber Depot, Hunsur, on Friday the 6th February 1953 at at 10 A. M.

For conditions of the sale etc. apply to the Conservator of Forests, Coorg, Mercara.

ಉದ್ಯೋಗದಿಂದ ಲಕ್ಷ್ಮಿ.

ನಮ್ಮ ದೇಶ ಮಹಾನ್ ದೇಶವಾಗಬೇಕು. ಯಾವ ಆಧಾರದ ಮೇಲೆ ಆಗಬೇಕು? ಹೊಲದ ಆಧಾರದಿಂದಲ್ಲ, ಉದ್ಯೋಗದಿಂದ. ಹಣವಂತರಾಗಲು ಕೈಗಾರಿಕೆಯೇ ಆಧಾರ. ಬದುಕಿರಲು ಭೂಮಿ ಆಧಾರ. ಭೂಮಿಯ ಆಧಾರದಿಂದ ನಾವೆಲ್ಲರು ಬದುಕಿರಬಹುದು. ಏಳಿಗೆಯಾಗಲು ಕೈಗಾರಿಕೆಯೇ ಆಧಾರ. ಹಿಂದೂಸ್ತಾನದಲ್ಲಿ ಎಲ್ಲರಿಗೂ ಹೊಲ ಸಿಕ್ಕರೆ ಎ ಲ್ಲ ರೂ ಸು ಖ ವಾ ಗಿ ರ ಬ ಹು ದು ಎಂದು ಜನ ತಿಳಿದಿದ್ದಾರೆ. ಇದು ತಪ್ಪು. ಹೊಲದ ಹಂಚಿಕೆಯೇನೋ ಅಗತ್ಯವಾಗಿ ಆಗಬೇಕು. ಆದರೆ ಅಷ್ಟರಿಂದಲೇ ದೇಶ ಸುಖವಾಗದು. ಯಾವ ದೇಶದಲ್ಲಿ ಕೈಗಾರಿಕೆ ಇಲ್ಲವೋ ಅಲ್ಲಿ ಲಕ್ಷ್ಮಿ ಇಲ್ಲ. ನೀವು ಹತ್ತಿ ಬೆಳೆಯುತ್ತೀರಿ. ಬಟ್ಟೆ ಮಾಡುವುದಿಲ್ಲ. ಬಟ್ಟೆ ಹೊರಗಿನಿಂದ ಕೊಂಡು ತರುತ್ತೀರಿ. ಕಡಲೇ ಕಾಯಿ ಬೆಳೆಯುತ್ತೀರಿ. ಎಣ್ಣೆ ಮಾಡುವುದಿಲ್ಲ. ಎಣ್ಣೆ ಕೊಳ್ಳುತ್ತೀರಿ. ಹೀಗೆ ಕಚ್ಚಾಮಾಲು ಎಲ್ಲವನ್ನೂ ಮಾರಿ ಪಕ್ಕಾಮಾಲನ್ನು ಕೊಂಡರೆ ನೀವು ಎಂದಿಗೂ ಹಣವಂತರಾಗುವದಿಲ್ಲ ಇಷ್ಟು ಜನ ಕೂತಿದ್ದೀರಿ. ಎಲ್ಲರಿಗೂ ಬಟ್ಟೆಬೇಕು. ಎಲ್ಲರ ಮೇಲೂ ಬಟ್ಟೆ ಇದೆ. ಹೊರಗಿನಿಂದ ಎಲ್ಲರೂ ಕೊಂಡು ತಂದಿದ್ದೀರಿ. ಬಟ್ಟೆಯನ್ನು ಕಳ್ಳಸಂತೆಯಲ್ಲಿ ಮಾರುತ್ತಾರೆ ಎಂದು ದೂರುತ್ತೀರಿ. ನಿಮ್ಮ ನೇಕಾರರು ಹೊರಗಿನಿಂದ ನೂಲು ತರುತ್ತಾರೆ. ಬಟ್ಟೆ ನೇದು ಹೊರಗೆ ಕಳುಹಿಸುತ್ತಾರೆ. ತಮಗೆ ನೂಲು ಸಾಲದು ಎನ್ನುತ್ತಾರೆ. ನಿಮ್ಮ ಹಳ್ಳಿಯಲ್ಲಿ ನೂಲಿನ ಹೊಳೆ ಹರಿಯುತ್ತಿತ್ತು. ಈಗ ಅದು ಬತ್ತಿದೆ. ಆದ್ದರಿಂದ ನೇಕಾರರು ಹೊರಗಿನಿಂದ ನೂಲು ತರುತ್ತಾರೆ. ನೀವು ಇಷ್ಟೇ ನೂತು ನೆಯ್ದರೆ, ಇತರ ಕೈಗಾರಿಕೆ ಮಾಡಿದರೆ ಸುಖಿಗಳಾದೀರಿ. ಹೊಲವನ್ನು ಹಂಚಿದ ಮಾತ್ರಕ್ಕೆ ಸುಖಬಾರದು.

ನಿಜವಾಗಿ ನಾವು ಬಡವರ ಏಳಿಗೆಯನ್ನು ಬಯಸಿದರೆ ಅವರಿಗೆ ಕೈಗಾರಿಕೆ ಕಲಿಸುವುದು ನಮ್ಮ ಕೆಲಸ. ಇದನ್ನು ಕಮ್ಯೂನಿಸ್ಟರೂ ಮಾಡುತ್ತಿಲ್ಲ. ಆದರೆ ಬಡವರ ಹಿತವನ್ನು ಬಯಸುತ್ತೇವೆ ಎನ್ನುತ್ತಾರೆ. ಅದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಬಡವರ ಚಿಂತೆ ಮಾಡಿದವರು ಗಾಂಧೀಜೀ. ಬಡವರಿಗಾಗಿ ಚರಕಾ ಸಂಘ, ಗೋಸೇವಾ ಸಂಘ, ಗ್ರಾಮೋದ್ಯೋಗ ಸಂಘಗಳನ್ನು ಅವರು ನಿರ್ಮಿಸಿದರು. ಆದರೆ ಜನ ಲಾಲಿಸರು. ನೂಲು ತೆಗೆಯರು, ಕೈಗಾರಿಕೆ ಮಾಡರು. ಕೂತುಕೂತೇ ಸುಖಬೇಕು ಎಂಬ ಆಸೆ ಬಿಡರು.

—ಆಚಾರ್ಯ ಶ್ರೀ ವಿನೋಬಾಜಿ.

ಕರಾಚಿಯ ಗಲಭೆ.

ಪಾಕಿಸ್ತಾನದ ರಾಜಧಾನಿಯಲ್ಲಿ ಇತ್ತೀಚೆಗೆ ಪುಂಡಾಟಿಕೆಯ ಕೃತ್ಯಗಳು ನಡೆದು, ಗೋಳಿಬಾರು ನಡೆಸುವಲ್ಲಿಯ ತನಕ ಪರಿಸ್ಥಿತಿಯು ಪ್ರಕ್ಷುಬ್ಧವಾಯಿತು ಇತರ ಹಲವು ಕಡೆಗಳಲ್ಲಿ ಇಂತಾ ಪುಂಡಾಟಿಕೆಯ ಕೃತ್ಯಗಳಿಗೆ ಕಾರಣವಾಗುವಂತಹ ಕಮ್ಯೂನಿಸ್ಟ್ ಪ್ರೇರಣೆಯ ಕೈವಾಡ ಕರಾಚಿಯಲ್ಲೂ ನಡೆದಿದೆಯೆಂದು ಕೇಳಿಬರುತ್ತಿದೆ. ಜನರ ಮನಸ್ಸಿನ ಶಾಂತಿಯನ್ನು ಕೆಡಿಸಿ ಉದ್ರೇಕಕ್ಕೆ ಹಚ್ಚಿದರೆ ಆಡಳಿತಯಂತ್ರ ತಾನಾಗಿ ಕೆಟ್ಟುಹೋಗದಿರಲಾರದೆಂದು ಕಮ್ಯೂನಿಸ್ಟರೇ ಈ ದಂಗೆಯನ್ನು ಪ್ರೇರೇಪಿಸಿದುದೆಂದು ಕರಾಚಿಯ ಮುಖ್ಯ ಕಮಿಷನರರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ಗಲಭೆಯಲ್ಲಿ ೧೧ ಮಂದಿ ಮಡಿದಿರುವರೆಂದು ಅಧಿಕೃತವಾಗಿ ತಿಳಿದುಬಂದಿದೆ. ವಿದ್ಯಾರ್ಥಿಗಳನ್ನು ಹುರಿದುಂಬಿಸಿ ತಮ್ಮ ಕಾರ್ಯ ಕೈಗೂಡಿಸಬಹುದೆಂಬ ಹಂಚಿಕೆಯಿಂದ ಕಮ್ಯೂನಿಸ್ಟರು ಈ ಪ್ರಕರಣ ಹೂಡಿದ್ದರು. ಒಂದಕ್ಕಿಂತ ಹೆಚ್ಚು ರಾಜಕೀಯ ಪಕ್ಷಗಳು ಗಲಭೆಯ ಸದುಪಯೋಗ ಪಡೆಯುವ ಯತ್ನ ಮಾಡಿದ್ದುವೆಂದೂ ಕಮಿಷನರರು ತಿಳಿಸಿರುತ್ತಾರೆ. ಯಾವುದೇ ಪರರಾಷ್ಟ್ರ ರಾಯಭಾರಿಗಳ ಕೈವಾಡವು ಇದರಲ್ಲಿತ್ತೇ ಎಂಬ ಪ್ರಶ್ನೆಗೆ ಮಾತ್ರ ನಿರ್ದಿಷ್ಟವಾದ ಉತ್ತರ ದೊರೆಯುತ್ತಿಲ್ಲ.

ಹ ರಾ ಜು.

ನಂ.	ಟೋಲ್ ಗೇಟ್ ಮತ್ತು ಮಾರ್ಕೆಟ್‌ಗಳ ಹೆಸರು.	ಹರಾಜಿನ ತಾರೀಕು.	ಹರಾಜಿನ ಸ್ಥಳ.
1	ಮಡಿಕೇರಿ ಮಾರ್ಕೆಟ್	2–2–1953	ಮಡಿಕೇರಿ
2	ಸಿದ್ದಾಪುರ ಮಾರ್ಕೆಟ್	8–2–1953	ಸಿದ್ದಾಪುರ.
3	ಅಮ್ಮತ್ತಿ ಮಾರ್ಕೆಟ್	8–2–1953	ಸಿದ್ದಾಪುರ.
4	ಆನೆಚೌಕೂರು ಟೋಲ್ ಗೇಟ್	28–1–1953	ವೀರಾಜಪೇಟೆ
5	ಕುಟ್ಟ ಟೋಲ್ ಗೇಟ್	3–2–1953	ಕುಟ್ಟ
6	ಸಿದ್ಧೇಶ್ವರ ಗದ್ದಿಗೆ ಟೋಲ್ ಗೇಟ್	28–1–1953	ವೀರಾಜಪೇಟೆ
7	ಮಾಕೂಟ ಟೋಲ್ ಗೇಟ್	28–1–1953	ವೀರಾಜಪೇಟೆ
8	ಮೂರ್ನಾಡು ಮಾರ್ಕೆಟ್	30–1–1953	ಮಡಿಕೇರಿ
9	ಕೊಯನಾಡ್ ಮಾರ್ಕೆಟ್	”	”
10	ಚೆಟ್ಟಳ್ಳಿ ಮಾರ್ಕೆಟ್	”	”
11	ಸಂಪಾಜೆ ಟೋಲ್ ಗೇಟ್	”	”
12	ಫ್ರೇಜರ್‌ಪೇಟೆ ಟೋಲ್ ಗೇಟ್	”	”
13	ಶಿರಂಗಾಲ ಟೋಲ್ ಗೇಟ್	”	”
14	ಶನಿವಾರಸಂತೆ ಮಾರ್ಕೆಟ್	31–1–1953	ಶನಿವಾರಸಂತೆ
15	ಎಡೆಹಳ್ಳಿ ಟೋಲ್ ಗೇಟ್	31–1–1953	”
16	ಹೆಬ್ಬಾಲೆ ಟೋಲ್ ಗೇಟ್	”	”
17	ನಿಲವಾಗಿಲು ಟೋಲ್ ಗೇಟ್	”	”
18	ಸುಂಟಿಕೊಪ್ಪ ಮಾರ್ಕೆಟ್	1–2–1953	ಸುಂಟಿಕೊಪ್ಪ
19	ಜಂಬೂರು ಮಾರ್ಕೆಟ್	”	”
20	ರಾಮಪುರ ಮಾರ್ಕೆಟ್	4–2–1953	ರಾಮಪುರ

ಐ. ಸಿ. ಸುಬ್ಬಯ್ಯ,

ಎಕ್ಸ್ ಅಫಿಷಿಯೊ ಪ್ರೆಸಿಡೆಂಟ್, ಕೊಡಗು ಜಿಲ್ಲಾ ಬೋರ್ಡು.

ಆಫ್ರಿಕೆಯ ಸ್ವಾತಂತ್ರ್ಯ ಚಳವಳಿ

ವರ್ಣದ್ವೇಷವನ್ನು ಆಫ್ರಿಕೆಯಲ್ಲಿ ಬಿತ್ತಿದ ಯೂರೋಪಿಯನರ ಮೂಲಕ ಅಲ್ಲಿಯ ಕರಿಜನಾಂಗವು ಜೀವದ ಹಂಗು ತೊರೆದು ಹೋರಾಡುತ್ತಿದೆ. ಮೊದ ಮೊದಲು ಅವರು ತ್ಯಾಗ ಹಾನಿಗಳಿಗೆ ತಡೆಯಲಿಕ್ಕಿಲ್ಲವೆಂದು ತಿಳಿದುಕೊಂಡಿದ್ದರು. ಮತ್ತು ಬಲಾಢ್ಯರಾದ ಯೂರೋಪಿಯನ್ನರೆದುರು ತಮ್ಮ ಆಟವು ನಡೆಯಲಿಕ್ಕಿಲ್ಲವೆಂದು ಭಾವಿಸಿದ್ದರು.

ಆದರೆ ಅವರಲ್ಲಿ ಈಗ ಬಂದ ಶಕ್ತಿಯು ಅವರನ್ನೇ ಆಶ್ಚರ್ಯಗೊಳಿಸುತ್ತಿದೆ. ಕಷ್ಟಗಳಾದಂತೆ ಅವರ ಹೋರಾಟದ ಹುಮ್ಮಸು ಬೆಳೆಯುತ್ತಿದೆ. ಮುಂದೆ ಇಟ್ಟ ಹೆಜ್ಜೆಯನ್ನು ಹಿಂದೆ ತೆಗೆಯ ಕೂಡದೆಂದು ಅವರು ಈಗ ನಿಶ್ಚಯಿಸಿದ್ದಾರೆ.

ಈ ಹೋರಾಟದಲ್ಲಿ ಅಲ್ಲಿಯ ಕರಿಜನರಿಗೆ ಆದ ಹಾನಿಯೇನೂ ಕಡಿಮೆಯಿಲ್ಲ. ಆದರೂ ಅವರು ತಮ್ಮ ಜೀವನವು ಇತರರಂತೆ ಸೂರ್ಯಾಡು ಹೊಂದಬೇಕು ಇಲ್ಲವೆ ಮಡಿಯಬೇಕು ಎಂದು ಟೊಂಕ ಕಟ್ಟಿದ್ದಾರೆ.

ಆಫ್ರಿಕೆಯಲ್ಲಿ ಕೆನಿಯಾಯೆಂಬ ಒಂದು ಭಾಗವಿದ್ದು ಅಲ್ಲಿ ಕಿಕಯುಯೆಂಬ ಹೆಸರಿನ ಒಂದು ಜನಾಂಗವಿದೆ. ಅವರಲ್ಲಿ 'ಮಾವ್ ಮಾವ್' ಎಂಬ ಸಂಘವು ನಿರ್ಮಾಣವಾಗಿದ್ದು ಅದು ಕೇವಲ ಬಿಳಿಯರನ್ನು ಮತ್ತು ಅವರ ಆಸ್ತಿಯನ್ನು ನಾಶಗೊಳಿಸುವುದನ್ನೇ ಧ್ಯೇಯವಾಗಿ ಇಟ್ಟುಕೊಂಡಿದೆ. ಈಗಾಗಲೇ ಅನೇಕ ಬಿಳಿಯರು ಮತ್ತು ಅವರ ಆಸ್ತಿಪಾಸ್ತಿ ನಿರ್ನಾಮರಾಗಿದ್ದಾರೆ. ಬಿಳಿಯರಿಗೆ ಸಹಾಯಮಾಡುವ ಕರಿಜನರನ್ನೂ ಕೂಡ ಈ ಮಾವ್ ಮಾವ್ ಜನರು ಬಿಡುವುದಿಲ್ಲ.

ಇವರನ್ನು ಹಿಡಿತದಲ್ಲಿ ಇರಲು ಬ್ರಿಟಿಷ್ ಸೈನ್ಯವು ಅಲ್ಲಿಗೆ ಹೋಗಿದೆ. ಆ ಸೈನಿಕರು ಕರಿಜನರ ಬೇಟೆಯನ್ನು ಆಡುತ್ತಿದ್ದಾರೆ.

ಮಾವ್ ಮಾವ್ ಜನರೂ ಶಸ್ತ್ರಸಜ್ಜಿತರಿದ್ದಾರೆ. ಅವರು ಗುಪ್ತ ರೀತಿಯಿಂದ ತಮ್ಮ ಕಾರ್ಯನಾಗಿಸುತ್ತಾರೆ. ಸೈನಿಕರ ಮೂಲಕ ಒದಗುವ ಸಾವಿನ ಹೆದರಿಕೆಯು ಅವರಿಗೆ ಇಲ್ಲದಾಗಿದೆ. ಬರುಬರುತ್ತಾ ಅವರ ಚಟುವಟಿಕೆಯು ಹೆಚ್ಚಾಗುತ್ತಿವೆಯೇ ಹೊರತು ಕಡಿಮೆಯಾಗುತ್ತಿಲ್ಲ.

ಇದರಿಂದ ಅಲ್ಲಿಯ ಯೂರೋಪಿಯನರು ಈ ಪ್ರತಿಭಟನೆಯನ್ನು ನಿಲ್ಲಿಸುವ ಬೇರೆ ಮಾರ್ಗವನ್ನು ಹುಡುಕುತ್ತಿದ್ದಾರೆ. ಶಸ್ತ್ರಾಸ್ತ್ರಗಳ ಉಪಯೋಗದಿಂದ ಆ ಕಾರ್ಯ ಸಾಧಿಸುವುದಿಲ್ಲವೆಂಬ ಮಾತನ್ನು ಅವರು ಮನಗಾಣುತ್ತಿದ್ದಾರೆ. ಅಲ್ಲಿಯ ಯೂರೋಪಿಯನ್ನರಲ್ಲಿಯೂ ಈ ವಿಷಯದಲ್ಲಿ ಎರಡು ಪಕ್ಷಗಳಿವೆಯಂತೆ. ಕೇವಲ ಬೆದರಿಕೆ ಮತ್ತು ಶಾಸನದಿಂದ ಕರಿಜನರನ್ನು ಹಿಂಕೆಗೆ ತರಬೇಕೆಂದು ಅವರಲ್ಲಿಯ ಒಂದು ಪಕ್ಷವು ಅನ್ನುತ್ತದೆ. ಇನ್ನೊಂದು, ಆಡಳಿತ ಸ್ವರೂಪವನ್ನೇ ತಿದ್ದಿ, ಅದರಲ್ಲಿ ಕರಿಜನರಿಗೆ ಪ್ರವೇಶ ಕೊಟ್ಟು ಅದರಿಂದ ಶಾಂತಿಸಾಧನೆಗೆ ಸಹಕಾರ ಹೊಂದಬೇಕು ಎನ್ನುತ್ತಿದೆ.

ಕೆನಿಯಾದಲ್ಲಿ ಈಗ ರಾಜ್ಯಾಡಳಿತದ ಬಿಗುವೇ ತಪ್ಪಿಹೋಗಿದೆ. ಯಾರಿಗೆ ಯಾವ ವೇಳೆಗೆ ಏನಾದೀತು ಎಂಬುದರ ಬಗ್ಗೆ ನಿಯಮವೇ ಇಲ್ಲದಾಗಿದೆ.

"ಜೈ ಹಿಂದ್"

ಮಂತ್ರಿ ಕಿದ್ವಾಯಿ ಮತ್ತು ಶಿಸ್ತು.

ಕೇಂದ್ರ ಆಹಾರ ಮಂತ್ರಿ ಶ್ರೀ ಕಿದ್ವಾಯಿ ಅವರು ಕಳೆದ ಕ್ರಿಸ್ಮಸ್ ಹಬ್ಬದ ದಿನ ತನ್ನನ್ನು ಶಿಸ್ತಿನ ವಿಷಯದಲ್ಲಿ ಮಾತನಾಡಲು ಕೇಳಿದಾಗ, ತಾನು ಪೇಚಿನಲ್ಲಿ ಸಿಲುಕಿದೆನೆಂದು ಹೇಳಿದರು.

"ನಾನು ಶಿಸ್ತನ್ನು ಹಲವು ಬಾರಿ ಉಲ್ಲಂಘಿಸಿರುತ್ತೇನೆ. ಈಗ ಶಿಸ್ತಿನ ವಿಷಯದಲ್ಲಿ ಮಾತನಾಡಿದರೆ ಜನರು ನನ್ನನ್ನು ಹಾಸ್ಯಮಾಡುವರು." ಎಂದು ನಾಚುತ್ತ ಸತ್ಯವನ್ನರುಹಿದರು.

ಶ್ರೀ ಕಿದ್ವಾಯಿ ಅವರು ಪಶ್ಚಿಮ ಬಂಗಾಲದ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಿದ್ದಾಗ, ಅವರು ಬೇರೆ ಇತರ ವಿಷಯಗಳ ಜೊತೆಗೆ ಶಿಸ್ತಿನ ವಿಷಯದಲ್ಲಿಯೂ ಮಾತನಾಡಬೇಕೆಂದು ಅವರನ್ನು ಕೇಳಿಕೊಳ್ಳಲಾಗಿತ್ತು.

ಭಾರತದ ಸೊತ್ತಾಗಿರುವ ವಿದ್ಯಾರ್ಥಿಗಳ ಏಳ್ಗೆಯಾಗುವಂತೆ ನೋಡಬೇಕಲ್ಲದೆ ಅವರ ಶೋಷಣೆಯಾಗಗೊಡಬಾರದು. ವಿದ್ಯಾರ್ಥಿಗಳಿಗೆ ಅಗತ್ಯವಿದ್ದಾಗ ಮಾತ್ರ ಶಿಕ್ಷೆಕೊಡಬೇಕೆಂದು ಮಾನ್ಯ ಮಂತ್ರಿ ಶ್ರೀ ಗುಲಝಾರಿಲಾಲ ನಂದಾ ಇವರು ಬನಾರಸದಲ್ಲಿ ರಾಷ್ಟ್ರೀಯ ವಿದ್ಯಾರ್ಥಿ ಸಂಘದ ಪ್ರಥಮ ವಾರ್ಷಿಕಾಧಿವೇಶನದಲ್ಲಿ ಭಾಷಣ ಮಾಡುತ್ತ ಹೇಳಿದರು.

॥ ಚರ್ಚಿಲ್-ಐಸೆನ್ ಹೋವರ್ ಭೇಟಿ ॥

ಪಾಕಿಸ್ತಾನ ವಿದೇಶ ಧೋರಣೆಯಲ್ಲಿ ಬಾಹ್ಯ ಶಕ್ತಿಗಳ ವರ್ಚಸ್ಸು

ಎಲ್ಲರಿಗೂ ತಿಳಿದಿರುವಂತೆ ಭಾರತವು ಇಷ್ಟರ ವರೆಗೆ ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ತಟಸ್ಥ ಧೋರಣವನ್ನು ವಹಿಸಿಕೊಂಡು ಬಂದಿದೆ. ಪೌರ್ವಾತ್ಯ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ನಡುವಿನ ಘರ್ಷಣೆಯನ್ನು ಕಡಿಮೆ ಮಾಡುವುದಕ್ಕೆ ಅದು ಶಕ್ಯವಿದ್ದಷ್ಟು ದೀರ್ಘ ಪ್ರಮಾಣದಲ್ಲಿ ತನ್ನ ವರ್ಚಸ್ಸನ್ನು ಉಪಯೋಗಿಸಿದ. ಮೂರನೆಯ ಮಹಾಯುದ್ಧವಾಗಬಾರದೆಂದು ಭಾರತವು ಕಳಕಳಿಯಿಂದ ಪ್ರಯತ್ನಿಸುತ್ತಿದೆ. ಇಷ್ಟರ ವರೆಗೆ ಭಾರತದ ವಿದೇಶ ನೀತಿಗೆ ಪೂರ್ವದ ಕೆಲವು ರಾಷ್ಟ್ರಗಳ ಧೋರಣೆಯು ಹೊಂದಿಕೊಂಡಿತ್ತು. ಮುಖ್ಯವಾಗಿ ಪಾಕಿಸ್ತಾನದ ವಿದೇಶ ನೀತಿಗೂ ಮಹತ್ವದ ವ್ಯತ್ಯಾಸವಿದ್ದುದು ಕಂಡು ಬಂದಿಲ್ಲ. ಭಾರತ ಪಾಕಿಸ್ತಾನಗಳೊಳಗಿನ ವಿವಾದಗಳು ಏನೇ ಇದ್ದರೂ ವಿಶಾಲವಾದ ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಇವೆರಡೂ ಪೌರ್ವಾತ್ಯ ರಾಷ್ಟ್ರಗಳು ಒಟ್ಟುಗೂಡಿ ಕೆಲಸ ಮಾಡಿದ್ದಕ್ಕೆ ಅನೇಕ ಉದಾಹರಣೆಗಳಿವೆ. ಭಾರತಕ್ಕೆ ಇತರ ಯಾವುದೇ ರಾಷ್ಟ್ರಕ್ಕಿಂತಲೂ ಪಾಕಿಸ್ತಾನದ ಸ್ನೇಹ ಮತ್ತು ಸಹಕಾರ ಹೊಂದಿಕೊಂಡು ಹೋಗುವುದು ಹೆಚ್ಚು ಇಷ್ಟವಾಗಿದೆ. ಆದರೆ ಈಗಷ್ಟೆ ಪತ್ರಿಕೆಗಳಲ್ಲಿ ಬರುತ್ತಿರುವ ಒಂದು ಮಹತ್ವದ ಸುದ್ದಿಯನ್ನು ವಿಮರ್ಶಿಸಿದರೆ ಭಾರತಕ್ಕೆ ನೆರೆಯಲ್ಲಿಯೇ ಗಂಡಾಂತರ ನಿರ್ಮಾಣವಾಗುತ್ತಿದೆಯೆಂಬ ಸಂದೇಹ ಮೂಡುತ್ತದೆ.

ಆಂಗ್ಲೋ ಅಮೇರಿಕನ್ನರ ಹಸ್ತಕ್ಷೇಪ

ಈ ವರದಿಯಂತೆ, ಮಧ್ಯಪೂರ್ವ ಸಂರಕ್ಷಣಾ ಯೋಜನೆಗೆ ಪಾಕಿಸ್ತಾನವನ್ನು ಸೇರಿಸಿಕೊಳ್ಳುವ ಪ್ರಯತ್ನ ಮತ್ತು ಸಿದ್ಧತೆಗಳೂ ಆಂಗ್ಲೋ ಅಮೇರಿಕನ್ ಪಕ್ಷದಿಂದ ನಡೆಸಲಾಗುತ್ತಿದೆ. ಮಧ್ಯಪೂರ್ವ ಸಂರಕ್ಷಣಾ ಯೋಜನೆಯು ಕಲ್ಪನೆ ಬೇರೆ ಹೊಸ ತಲ್ಲಣವಾದರೂ ಪಾಕಿಸ್ತಾನಕ್ಕೆ ಅದರಲ್ಲಿ ಸ್ಥಾನಕೊಡುವ ಸಂಗತಿ ಸ್ವಲ್ಪ ಹೊಸದು. ಈ ಸಂದರ್ಭದಲ್ಲಿ ಏನೇನು ನಡೆಯುತ್ತಿದೆ ಎಂಬುದರ ಬಗ್ಗೆ ಅಧಿಕೃತವಾದ ಯಾವ ವೃತ್ತಾಂತವನ್ನೂ ತಿಳಿದುಕೊಳ್ಳುವುದು ಸಾಧ್ಯವಾಗಿಲ್ಲ. ಕೇವಲ ಊಹೆ ಹಾಗೂ ಸಂದೇಹಗಳ ಮೇಲಿಂದಲೇ ಪಾಕಿಸ್ತಾನ ತನ್ನ ಧೋರಣೆಯಲ್ಲಿ ಹೀಗೆ ಬದಲು ಮಾಡುತ್ತಿದೆಯೆಂದು ಹೇಳಬೇಕಷ್ಟೆ. ಹೀಗಿದ್ದರೂ ಪತ್ರಿಕೆಗಳ ವರದಿಯನ್ನು ಬ್ರಿಟನ್ನಾಗಲೀ, ಅಮೇರಿಕನ್ನಾಗಲೀ, ಪಾಕಿಸ್ತಾನವಾಗಲೀ ನಿರಾಕರಿಸಿಲ್ಲವಾದುದರಿಂದ ಅವುಗಳ ಸತ್ಯಾಂಶದ ಬಗ್ಗೆ ಶಂಕಿಸುವುದಕ್ಕೆ ಆಸ್ಪದವು ಇದಿಲ್ಲ. ಮಧ್ಯಪೂರ್ವದ ಇರಾಣ, ಈಜಿಪ್ತ ಮುಂತಾದ ರಾಷ್ಟ್ರಗಳಲ್ಲಿ ತೇಜೋವಧೆಯನ್ನು ಹೊಂದುತ್ತಿರುವ ಬ್ರಿಟನ್ನೂ ಅದರ ಆಪ್ತಸ್ನೇಹಿತ ಅಮೇರಿಕಾವೂ ಮರಳಿ ತಮ್ಮ ವರ್ಚಸ್ಸನ್ನು ಬೆಳಸಿಕೊಳ್ಳುವ ಹೊಂಚಿನಿಂದ ಪಾಕಿಸ್ತಾನದ ಮನವೊಲಿಸುತ್ತಿರುವರೆಂಬುದು ಸ್ಪಷ್ಟವಿದೆ. ಪಾಕಿಸ್ತಾನದಲ್ಲಿ ಸೈನಿಕ ಠಾಣ್ಯವನ್ನು ಅಮೇರಿಕ ನಿರ್ಮಿಸಲಿದೆ. ಸುಸಜ್ಜಿತ ಪಡೆಗಳೂ ಪಾಕಿಸ್ತಾನದಲ್ಲಿ ನೆಲಸುವುವು. ಸಂರಕ್ಷಣೆಯ ನೆವದಲ್ಲಿ ಸುವ್ಯವಸ್ಥಿತವಾದ ಯುದ್ಧ ಸಿದ್ಧತೆಗಳೂ ನೆರೆನಾಡಿನಲ್ಲಿ ಗುಟ್ಟಾಗಿ ಭಾರತ ಸುಮ್ಮನಿರುವುದು ಶಕ್ಯವಲ್ಲ. ಈ ಚಿಂತೆ ನಮ್ಮ ಧುರೀಣರನ್ನು ಇದೀಗ ಬಹಳ ಹೆಚ್ಚು ಕಾಡುತ್ತಿದೆಯಂತೆ.

ಆಮಿಷದ ಜಾಲ

ಆಂಗ್ಲೋ ಅಮೇರಿಕನ ಮಿತ್ರರು ಕಾಶ್ಮೀರ ವಿಷಯದಲ್ಲಿ ಪಾಕಿಸ್ತಾನದ ಪಕ್ಷವನ್ನೇ ವಹಿಸಿ, ಭಾರತಕ್ಕೆ ಅನ್ಯಾಯ ಮಾಡುತ್ತ ಬಂದದ್ದರ ಮೇಲಿಂದಲೇ ಭಾರತ ಪಕ್ಷ ಮತ್ತು ನ್ಯಾಯದ ಧ್ಯೇಯವನ್ನಿಟ್ಟುಕೊಂಡು ನಾಗರಿಕ ಕಲಿಯುಗದಲ್ಲಿ ಜನಗಳೊಳಗಾಗುವುದು ಹೆಚ್ಚು ಎಂದು ನಾವು ಹೇಳುವಂತಿಲ್ಲ. ಪಾಕಿಸ್ತಾನ ಮುಸ್ಲಿಂ ದೇಶ ತೆಗೆಯುವ ಸ್ವಾತಂತ್ರ್ಯವನ್ನು ಹರಣ ಮಾಡಿಕೊಂಡಿಲ್ಲವೇನೋ ಎಂಬಂತಿದೆ. ...ನ್ನು ನವರು ವ್ಯಕ್ತ



ಬ್ರಿಟಿಷ್ ಪ್ರಧಾನಿ ಮಿ. ಚರ್ಚಿಲ್ಲರು.

ಪಡಿಸ ಪ್ರಧಾನರಾಗಿ ಭಾರತದಂಥ ವಿಶಾಲ ರಾಷ್ಟ್ರವನ್ನು ಒಳಗೆ ಬಗೆಯ ಆಮಿಷಗಳನ್ನು ತೋರಿ ತಮ್ಮ ಕಡೆಗೆ ಸೆಳೆಯುವಂತೆ ಮಾಡಲು ಸಾಧ್ಯವಿಲ್ಲೆಂಬುದು ಆಂಗ್ಲೋ ಅಮೇರಿಕನರಿಗೆ ಈಗಾಗಲೇ ಚೆನ್ನಾಗಿ ತಿಳಿದಿದೆ. ಬಾಕಿಯುಳಿದ ಪಾಕಿಸ್ತಾನ ತನ್ನ ನೆಲೆಯಲ್ಲಿ ಸ್ವಾತಂತ್ರ್ಯಗಳ ಆಸೆಯನ್ನು ... ನೋಡುವ ಕಣ್ಣು ಕಡೆಗೆ ಅದರ ದೃಷ್ಟಿಯಿಂದ ನೋಡುತ್ತಿರುವುದನ್ನು ಇವರು ಗಮನಿಸಿರುವರು. ಇರಾಣ, ಪಶ್ಚಿಮ ಏಶಿಯ ದೇಶಗಳನ್ನು ಪಾಕಿಸ್ತಾನಕ್ಕೆ ತೋರಿಸಿಕೊಟ್ಟು ತಮ್ಮ ಜಾಲದಲ್ಲಿ ಕೆಡವಿಕೊಳ್ಳಲು ಈ ರೀತಿ ಹೊಂಚು ಹಾಕುತ್ತಿರುವರೆಂಬುದು ನಿಸ್ಸಂದಿಗ್ಧವಾಗಿದೆ. ಇರಾಣದ ಎಣ್ಣೆ ಪ್ರಸಂಗದಲ್ಲಿ ಅಮೇರಿಕ ನಾನಾ ರೀತಿ ಹಿಂದೆ ಕೊಡುವೆನೆಂದಿದ್ದ ಧನ ಸಹಾಯದ ಮೊತ್ತವನ್ನೇ ಬದಲು ಒದೆಂಬ ಸ್ಥಿತಿ ಎಂಬ ವಾರ್ತೆ ಇದೆ. ಹಾಗೆಯೇ ಈಜಿಪ್ತದ ನಗೀಬರ ಸರಕಾರವು ಸೈನ್ಯದ ಅವಶ್ಯಕತೆ ಉಪಯೋಗದ ಬಗ್ಗೆ ಬ್ರಿಟನ್ನೊಡನೆ ಒಪ್ಪಂದ ಮಾಡಿಕೊಂಡಿದ್ದು, ಇದು ಸುಡಾನಿನ ವಿಷಯದಲ್ಲಿಷ್ಟು ಮಧ್ಯಸ್ಥದ ಮತ ಭೇದವನ್ನು ಕೆಲವಷ್ಟಕ್ಕೆ ನಿವಾರಿಸಲು ಕಾರಣವಾಗಿದೆ ಎಂದೂ ಸುದ್ದಿ ಬಂದಿದೆ.

ಈಜಿಪ್ತದಲ್ಲಿ ಹೊಸ ಪಕ್ಷ

ಹಾಗೆಂದು ಇಷ್ಟರ ಮೇಲಿಂದ ಬ್ರಿಟನು ತನ್ನ ಗೌರವವನ್ನು ಮರಳಿ ಸಂಪಾದಿಸಿದೆಯೆಂದೇನೂ ತಿಳಿಯುವಂತಿಲ್ಲ. ಈಜಿಪ್ತದಲ್ಲಿ ಬ್ರಿಟನಿನ ಬಗ್ಗೆ ಮೊದಲಿದ್ದ ತಿರಸ್ಕಾರ ಈಗ ಇನ್ನೂ ಹೆಚ್ಚಿದೆಯೇ ಹೊರತು ಅದರ ಭಾವನೆ ಮಾಸಿಲ್ಲ. ಸುಯೇಜ್ ಕಾಲುವೆಯಿಂದ ಬ್ರಿಟೀಷರನ್ನು ಓಡಿಸುವುದೇ ಈಜಿಪ್ತದ ಈಗಿನ ಮಹಾಧ್ಯೇಯವೆಂದು ಹೋರಾಟಗಾರ ವ್ಯಕ್ತಿಗಳು ಹೇಳುತ್ತಿರುವರು. ಮತ್ತು ಈ ಧ್ಯೇಯೋದ್ದೇಶವು ಪೂರ್ತಿಸದ ಹೊರತು ಜನಾಂಗಗಳು ಸಮಾಧಾನ ಹೊಂದುವುದಿಲ್ಲೆಂದೂ ಗೊತ್ತಾಗಿದೆ. ನಗೀಬರು ರಾಜ್ಯಾಂಗ ಘಟನೆಯನ್ನು ಹೊಸದಾಗಿ ಇಷ್ಟರಲ್ಲಿಯೇ ನಿರ್ಮಾಣ ಮಾಡಲಿರುವರು. ಈಜಿಪ್ತದ ರಾಜಕೀಯ ಪಕ್ಷಗಳಿಗೆ ಪ್ರಬಲ ಪ್ರತಿಸ್ಪರ್ಧಿಯಾಗಿ ನೆಗೀಬರೇ ಒಂದು ಪಕ್ಷವನ್ನು ಕಟ್ಟಿಕೊಂಡಿರುವುದು. ಈಜಿಪ್ತಿನ ಜನತೆಯಲ್ಲಿ ಇನ್ನೂ ಜನಪ್ರಿಯರಾಗಿರುವ ವಾಫ್ಡ್ ಪಕ್ಷವನ್ನೇ ಈ ಹೊಸ ಪಕ್ಷ ಅಪ್ಪಳಿಸಲಿರುವಂತಿದೆ.

ಬ್ರಿಟನು-ಅಮೇರಿಕಾ ಸಂಬಂಧ

ಕಳೆದ ವಾರ ಚರ್ಚಿಲರೂ, ಐಸೆನ್ ಹೋವರರೂ ಭೇಟಿಯಾದರು. ಅವರೊಳಗೆ ನಡೆದ ಮಾತುಕತೆಗಳ ವಿವರ ತಿಳಿದಿಲ್ಲವಾದರೂ ಬ್ರಿಟನು, ಅಮೇರಿಕಗಳ ಭಾವೀ ಸಂಬಂಧ ಹೊಸತಾಗಿ ರೂಪುಗೊಳ್ಳಬೇಕಿರುವ ಈ ಸಮಯೋಚಿತ ಸಂದರ್ಭದಲ್ಲಿ ಚರ್ಚಿಲರು ಸ್ವಾಭಾವಿಕವಾಗಿ ಐಸೆನ್ ಹೋವರರ ಭೇಟಿ ಪಡೆದು ವರ್ಚಸ್ಸನ್ನು ಬೀರಿರಬಹುದು. ನೋಡಲಿಕ್ಕೆ ಆಂಗ್ಲೋ ಅಮೇರಿಕನ್ನರು ಒಂದೇ ಬಗೆಯಂತೆ ಕಂಡರೂ ನಿಜವಾಗಿ ಅವರೊಳಗೆ ತುಂಬಾ ಅಂತರವಿದೆ. ಮಹತ್ವದ ವಿಷಯಗಳಲ್ಲಿಯೇ ಈ ವ್ಯತ್ಯಾಸ ಎದ್ದು ತೋರುತ್ತದೆ. ಬ್ರಿಟನು ಕಮ್ಯುನಿಸ್ಟ ರಾಷ್ಟ್ರ ಚೀನವನ್ನು ಮನ್ನಿಸಿದೆ. ಅಮೇರಿಕಾ ಚಿಯಾಂಗ್ ಕೈ ಶೇಕರನ್ನು ಬೆಂಬಲಿಸುತ್ತಿದೆ. ಭಾರತದ ಕೊರಿಯಾ ಗೊತ್ತುವಳಿಗೆ ಬ್ರಿಟನಿನ ಬೆಂಬಲ ದೊರೆತಷ್ಟು ಅಮೇರಿಕದ ಸಹಾನುಭೂತಿ ದೊರೆತಿಲ್ಲ. ಯೂರೋಪ್ಯ ಸಂರಕ್ಷಣೆಯ ಯೋಜನೆಯಲ್ಲೂ ಬ್ರಿಟನು ಅಮೇರಿಕಗಳ ಸಂಬಂಧ ಸಮನಾಗಿಲ್ಲ. ಇದಕ್ಕೆಲ್ಲ ಕಳಶವಿಟ್ಟಂತೆ ಆರ್ಥಿಕ ಕ್ಷೇತ್ರದಲ್ಲೂ ಬ್ರಿಟನು ಅಮೇರಿಕೆಗಳೊಳಗೆ ಸೌಹಾರ್ದವಿಲ್ಲ. ಬನ್ನದ ಬೆಲೆ, ಡಾಲರು ವಿನಿಮಯ ಮುಂತಾದ ಸಂಗತಿಗಳಲ್ಲಿ ಅಮೇರಿಕದ ಧೋರಣೆ ಬ್ರಿಟನದ ಹಿತಕ್ಕೆ ಪ್ರತಿಕೂಲವಿದೆ. ಚರ್ಚಿಲರು ಅನೌಪಚಾರಿಕವಾಗಿ ನಡೆಸಿದ ಚರ್ಚೆಯಲ್ಲಿ ಈ ಎಲ್ಲಾ ಮುಖ್ಯ ಸಂಗತಿಗಳ ಬಗ್ಗೆ ವಿಚಾರ ವಿನಿಮಯವನ್ನು ನಡೆಸಿರಬೇಕೆಂಬುದೇ ನಿಶ್ಚಯ.

ಕಮ್ಯುನಿಸ್ಟರ ಗಾಢ ವೈರಿ

ಅಮೇರಿಕಾಧ್ಯಕ್ಷ ಟ್ರೂಮನರು ಕಾಂಗ್ರೆಸಿಗೆ ತನ್ನ ಕೊನೆಯ ಸಂದೇಶವನ್ನು ನೀಡುತ್ತಾ ಹಿಂದುಳಿದ ರಾಷ್ಟ್ರಗಳಿಗೆ ಪ್ರತಿಯೊಂದು ರೀತಿಯಿಂದ ನೆರವಾಗುವುದರಲ್ಲಿಯೇ ಅಮೇರಿಕದ ಹಿತವಿದೆಯೆಂದು ಒತ್ತಾಸೆಯಿಂದ ನುಡಿದಿರುವರು. ಕಮ್ಯೂನಿಸಂ ವಿರುದ್ಧ ನಾಗರಿಕ ಹಾಗೂ ಮಿಲಿಟರಿ ಎರಡೂ ಕ್ಷೇತ್ರಗಳಲ್ಲಿ ಸೆಣಸಬೇಕೆಂದು ಟ್ರೂಮನ್ನರ ಅಭಿಪ್ರಾಯ. ಅವರು ಈಗ ತಾನೆ ಸಿದ್ಧಪಡಿಸದ ಬಜೆಟ್ಟಿನಲ್ಲಿ ಯುದ್ಧಸಿದ್ಧತೆ ಮತ್ತು ಆರ್ಥಿಕ ಸಹಾಯಗಳಿಗಾಗಿ ವಿನಿಯೋಗವಾಗಬೇಕೆಂದಿರುವ ಮೊತ್ತದ ಪ್ರಮಾಣ ೮೭%. ಅವರ ಮೇಲೆ ರಶಿಯಾದ ಸ್ಟಾಲಿನ್ನರಿಗೆ ಕೂಡ ಟ್ರೂಮನ್ನರು ಎಚ್ಚರಿಕೆಯನ್ನು ಕೊಟ್ಟು, ತಮ್ಮ ಜಲಜನಕ ಬಾಂಬಿನಿಂದ ರಶಿಯಾವನ್ನು ನಾಶಗೆಡಿಸಿ ಬಿಡಬಹುದೆಂದು ಭಯವನ್ನು ಕೊಟ್ಟಿರುವರು. ರಿಪಬ್ಲಿಕನ್ ಪಕ್ಷವು ಕಮ್ಯೂನಿಸ್ಟರ ಬದ್ಧ ವೈರಿಯಾಗಿರುವುದರಿಂದ ಟ್ರೂಮನರು ರೂಪಿಸಿರುವ ಬಜೆಟ್ ಆಯವ್ಯಯ ಹೆಚ್ಚು ಬದಲಾವಣೆ ಹೊಂದಲಾರದು.

ಸಿಂಹಳದ ವಾಮ ಮಾರ್ಗ

ಭಾರತದ ದಕ್ಷಿಣ ತುದಿಯ ದ್ವೀಪ ಸಿಂಹಳವು. ಅಲ್ಲಿ ಬಂದು ನೆಲೆಸಿರುವ ಭಾರತೀಯರೇ ಮೂಲನಿವಾಸಿಗಳ ಬಗೆ ಅನುಸರಿಸುತ್ತಿರುವ ಧೋರಣೆ ತುಂಬಾ ಖಂಡನೆಗೆ ಗುರಿಯಾಗಿದೆ. ನಾಗರಿಕರ ಮೂಲಭೂತ ಹಕ್ಕುಗಳಾದ ಮತಾಧಿಕಾರದ ಪ್ರಶ್ನೆಯಲ್ಲಿ ಅದು ಸಾಕಷ್ಟು ಕಠಿಣವಾಗಿ ವರ್ತಿಸಿದೆ. ಈಗ ಸಿಂಹಳಕ್ಕೆ ವಲಸೆ ಹೋಗಿರುವ ಭಾರತೀಯರ ನಿವಾಸಿಗಳಿಗೆ ನಾಗರಿಕ ಹಕ್ಕನ್ನು ಕೊಡುವ ಬದಲು ಅವರನ್ನು ಹೊರಗಟ್ಟಲು ಹೊಂಚು ಹಾಕುವ ನೀತಿಯನ್ನು ಕೈಗೊಂಡಿರುವುದು. ಗಳಿಗೆ ನವಂಬರ್ ೧ನೇ ತಾರೀಖಿಗೆ ಹಿಂದೆ ಸಿಂಹಳದ ನಾಗರಿಕರಾಗದ ಜನಗಳೇ ದೇಶವನ್ನು ತೊರೆಯಬೇಕೆಂದು ಸರಕಾರ ಕಾನೂನು ಹೊರಡಿಸಿದೆ. ಕೇವಲ ಕಾರಣವನ್ನು ನೀಡುವುದರಲ್ಲಿ ಈ ರೀತಿ ಕ್ರೂರ ನೀತಿಯನ್ನು ಅನುಸರಿಸುವುದರಿಂದ ಸಹಸ್ರಾರು ಭಾರತೀಯರಿಗೆ ಹೆಚ್ಚು ಹೊರೆಯು ಬೀಳುವ ಕಷ್ಟವಾಗುತ್ತಿದೆ. ಪರಿಣಾಮವಾಗಿ ಅವರು ಸಿಂಹಳವನ್ನು ಬಿಟ್ಟು ಭಾರತಕ್ಕೆ ಹಿಂತಿರುಗಬೇಕಾಗುತ್ತದೆ. ಈ ರೀತಿ ಸಿಂಹಳದ ಸರಕಾರವು ನೆರೆಕೊಟ್ಟು ಅವರನ್ನು ಹೊರದೂಡಿಸುವ ಬುದ್ಧಿಯನ್ನು ತೋರಿಸಿದೆ. ಈ ನೀತಿ ಸಿಂಹಳ ಗಣರಾಜ್ಯವಾದರೂ ಸರಿ ಸಿಂಹಳ ಭಾರತ ಸಂಬಂಧದಲ್ಲಿ ಯಾವ ಅಭಿಪ್ರಾಯ ಬೀಳುವುದಿಲ್ಲ ನಿಶ್ಚಯ.

"ನವಯುಗ"

ಮೊಬಾಟ್ಟಿಷ್ಟಿದೆ.

ಮಡಿಕೇರಿ ಮಹದೇವಪೇಟೆ ಬೀದಿಯಲ್ಲಿ ಮಾರ್ಕೆಟಿನ ಸಮೀಪದಲ್ಲಿ ದೊಡ್ಡದಾದ ಕೊಟ್ಟಿಗೆ, ತುಂಬಾ ಹಿತ್ತಲು ಜಾಗ ಮತ್ತು ನೀರಿನ ಅನುಕೂಲತೆ ಇರುವ ಮಹಡಿ ಮನೆಯು ಮಾರಾಟಕ್ಕಿದೆ. ಖಾಯಿಸ್‌ದಾರರು ಹೆಚ್ಚಿನ ವಿವರಗಳನ್ನು ಈ ಕೆಳಗಿನ ವಿಳಾಸದಿಂದ ತಿಳಿಯಬಹುದು.

ಮೋಕೇರಿರ ಸೋಮಣ್ಣ,
ಟೇಲರು,
ಮಹದೇವಪೇಟೆ, ಮಡಿಕೇರಿ.

ಕರ್ನಾಟಕ ಪ್ರಾಂತರಚನೆಗೆ ಶ್ರೀ ಹೆಚ್. ಸಿ. ದಾಸಪ್ಪ ನವರ ವಿರೋಧ

ಕಾಂಗ್ರೆಸ್ ಅಧಿವೇಶನದ ವಿಷಯ ನಿಯಾಮಕ ಸಮಿತಿಯ ಸಭೆಯಲ್ಲಿ ಮೈಸೂರಿನ ಇಬ್ಬರು ನಾಯಕರು ಪರಸ್ಪರ ವ್ಯತಿರಿಕ್ತ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಮುಖ್ಯ ಮಂತ್ರಿ ಕೆ. ಹನುಮಂತಯ್ಯನವರು "ಕರ್ನಾಟಕ ಪ್ರಾಂತರಚನೆಗೆ ಇನ್ನು ವಿಳಂಬ ಮಾಡಬಾರದು ಯಾವುದಾದರೂ ರೀತಿಯಲ್ಲಿ ಬೇಗ ಬಗೆಹರಿಸಬೇಕು" ಎಂದು ವಾದಿಸಿದರೆ, ಶ್ರೀ ಹೆಚ್. ಸಿ. ದಾಸಪ್ಪನವರು ಮೈಸೂರಿನ ಜನತೆಯೆಲ್ಲಾ ಕರ್ನಾಟಕ ರಚನೆಗೆ ವಿರೋಧವಾಗಿದೆಯೆಂದರು. ಇತ್ತೀಚೆಗೆ ತಾನೇ ಮೈಸೂರು ಎಸೆಂಬ್ಲಿಯ ೫೫ ಮಂದಿ ಸದಸ್ಯರು ಕರ್ನಾಟಕ ಪ್ರಾಂತಕ್ಕೆ ತಮ್ಮ ವಿರೋಧವಿರುವುದಾಗಿ ಪ್ರಧಾನ ಮಂತ್ರಿಗಳಿಗೆ ಮನವಿ ಒಪ್ಪಿಸಿರುವುದನ್ನೂ ಶ್ರೀ ದಾಸಪ್ಪನವರು ಉಲ್ಲೇಖಿಸಿದರು. ಕಾಂಗ್ರೆಸ್ ಹೈಕಮಾಂಡು ಮುಂದಿಟ್ಟಿರುವ ನಿರ್ಣಯವನ್ನು ತಾವು ಸಂಪೂರ್ಣವಾಗಿ ಅನುಮೋದಿಸುವುದಾಗಿ ಶ್ರೀ ದಾಸಪ್ಪನವರು ಹೇಳಿದರು.

ವಾಂಚೂರವರು ಮದ್ರಾಸಿನಲ್ಲಿ

ಆಂಧ್ರ ಪ್ರಾಂತ ನಿರ್ಮಾಣದ ಕುರಿತು ವಿಚಾರ ನಡೆಸಲು ನೇಮಕ ಹೊಂದಿದ ನ್ಯಾಯಮೂರ್ತಿ ವಾಂಚೂರವರು ಕಳೆದ ವಾರ ಮದ್ರಾಸಿಗೆ ಬಂದಿದ್ದು ಇಷ್ಟರಲ್ಲೇ ತಮ್ಮ ಕಾರ್ಯವನ್ನು ಪ್ರಾರಂಭಿಸಿದ್ದಾರೆ. ಮೊದಲು ಗವರ್ನರ್ ಶ್ರೀಪ್ರಕಾಶ ಹಾಗೂ ಮುಖ್ಯ ಮಂತ್ರಿ ರಾಜಾಜಿಯವರನ್ನು ಕಂಡು ವಿಚಾರ ವಿನಿಮಯ ನಡೆಸಿದ ಬಳಿಕ ಮದ್ರಾಸ್ ಮಂತ್ರಿ ಮಂಡಳದ ಮಂತ್ರಿಗಳನ್ನು ಬೇರೆ ಬೇರೆಯಾಗಿ ಕಂಡು ಆಂಧ್ರ ಪ್ರಾಂತ ನಿರ್ಮಾಣ ಪ್ರಶ್ನೆಯಲ್ಲಿ ಅವರ ವೈಯಕ್ತಿಕ ಅಭಿಪ್ರಾಯಗಳೇನೆಂಬುದನ್ನು ವಿಚಾರಿಸಿದರು.

ಮಂತ್ರಿಗಳ ಸರದಿ ಮುಗಿದ ಬಳಿಕ ಆಂಧ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಕಲಾವೆಂಕಟರಾಯರು ವಾಂಚೂರವರನ್ನು ಭೇಟಿಯಾಗಿ ಆಂಧ್ರದಲ್ಲಿ ಅವರು ಸಂಚರಿಸಲಿರುವ ವೇಳೆಯ ಕುರಿತು ಚರ್ಚಿಸಿದರು. ಮರುದಿನ ಆಂಧ್ರಪ್ರಾಂತ ಕ್ರಿಯಾ ಸಮಿತಿಯ ಅಧ್ಯಕ್ಷರಾದ ಶ್ರೀ ಟಿ. ಪ್ರಕಾಶಂರವರು ವಾಂಚೂರವರನ್ನು ಕಂಡು, ತಮ್ಮ ಸಮಿತಿಯು ರಚಿಸಿದ ನೂರು ಪುಟಗಳ ಸುದೀರ್ಘ ಹೇಳಿಕೆಯನ್ನು ಒಪ್ಪಿಸಿದರಲ್ಲದೆ ೧|| ಗಂಟೆಗಳ ಕಾಲ ವಿವರಿಸಿದರು. ಅದೇ ದಿನ ಸಂಜೆ ಕಮ್ಯೂನಿಸ್ಟ್ ಪಕ್ಷದ ಹೇಳಿಕೆಯನ್ನು ಶ್ರೀಗಳಾದ ನಾಗಿರೆಡ್ಡಿ, ರಾಜೇಶ್ವರರಾವ್, ವೆಂಕಟೇಶ್ವರಲು ಮುಂತಾದವರು ವಾಂಚೂರವರಿಗೆ ಒಪ್ಪಿಸಿದರು.

ತಮಿಳುನಾಡು ಕಾಂಗ್ರೆಸ್ ಸಮಿತಿಯ ಹೇಳಿಕೆಯನ್ನು ತಾ. ೧೧ರಂದು ವಾಂಚೂರವರಿಗೆ ಒಪ್ಪಿಸಲಾಯಿತು. ನೂತನ ಆಂಧ್ರ ಪ್ರಾಂತದಲ್ಲೇ ಆಂಧ್ರದ ರಾಜಧಾನಿಯಿರಬೇಕಲ್ಲದೆ, ತಾತ್ಕಾಲಿಕವಾಗಿಯಾದರೂ ಮದ್ರಾಸು ನಗರದಲ್ಲಿರಬಾರದು; ಮದ್ರಾಸ್ ನಗರವನ್ನು ಚೀಫ್ ಕಮಿಷನರ ಪ್ರಾಂತವಾಗಿ ಆರಿಸಬೇಕೆಂಬ ಆಂಧ್ರರ ಸೂಚನೆಗೆ ವಿರೋಧ ಇತ್ಯಾದಿ ವಿಷಯಗಳು ತಮಿಳುನಾಡು ಪ್ರದೇಶ ಕಾಂಗ್ರೆಸ್ ಸಮಿತಿಯ ಹೇಳಿಕೆಯಲ್ಲಿದ್ದಿತೆಂದು ಊಹಿಸಲಾಗಿದೆ. ಕಮ್ಯೂನಿಸ್ಟರು ತಮ್ಮ ಹೇಳಿಕೆಯಲ್ಲಿ ಮದರಾಸು ನಗರದಲ್ಲೇ ಆಂಧ್ರದ ತಾತ್ಕಾಲಿಕ ರಾಜಧಾನಿಯನ್ನು ರಚಿಸುವ ಅಥವಾ ಆ ನಗರವನ್ನು ಚೀಫ್ ಕಮಿಷನರ ಪ್ರಾಂತವಾಗಿ ರಚಿಸುವ ಸೂಚನೆಗಳೇನೂ ಇರಲಿಲ್ಲವೆಂದೂ, ವಿಜಯವಾಡವೇ ನೂತನ ಆಂಧ್ರದ ರಾಜಧಾನಿಯಾಗಬೇಕೆಂಬ ಸೂಚನೆ ಇದ್ದಿತೆಂದೂ ತಿಳಿದು ಬರುತ್ತದೆ.

ಕನ್ನಡಿಗರ ನಿಲುವು

ತಾ. ೧೩ರಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪ, ಕಾರ್ಯದರ್ಶಿ ಶ್ರೀ ಜಿ. ಪಿ. ಹಳ್ಳಿಕೇರಿ, ಶ್ರೀ ಟಿ. ಸುಬ್ರಹ್ಮಣ್ಯಂ ಮತ್ತು ಕರ್ನಾಟಕ ಏಕೀಕರಣ ಸಂಘದ ಕಾರ್ಯದರ್ಶಿಗಳಾದ ಶ್ರೀ ಶಿವಮೂರ್ತಿ ಶಾಸ್ತ್ರಿಗಳವರು ವಾಂಚೂರವರನ್ನು ಕಂಡು ಕನ್ನಡಿಗರ ನಿಲುವನ್ನು ವಿವರಿಸಿದರು. ಮುಖ್ಯವಾಗಿ ಬಳ್ಳಾರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಕನ್ನಡಿಗರ ಆ ನಿಲುವೇನೆಂಬುದನ್ನು ನ್ಯಾಯಮೂರ್ತಿ ವಾಂಚೂರವರ ಮುಂದಿಟ್ಟಿವು ಎಂದು ಶ್ರೀ ನಿಜಲಿಂಗಪ್ಪನವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ಗಡಿ ನಿರ್ಣಯ ಸಮಿತಿಯು ಕೊನೆಯ ನಿರ್ಣಯವನ್ನು ಪ್ರಕಟಿಸುವ ತನಕ ಇಡೀ ಬಳ್ಳಾರಿ ಜಿಲ್ಲೆಯು ಆಂಧ್ರಕ್ಕೆ ಸೇರದೆ ಮದ್ರಾಸ್ ಪ್ರಾಂತದಲ್ಲೇ ಉಳಿಯಬೇಕು; ಗಡಿ ಸಮಿತಿಯನ್ನು ಆದಷ್ಟು ಬೇಗನೆ ರಚಿಸಿ, ಈ ವಿವಾದಗಳೆಲ್ಲ ಒಮ್ಮೆ ಕೊನೆಗೊಳ್ಳುವಂತಾಗಬೇಕು; ಆ ಸಮಿತಿಯ ತೀರ್ಪನ್ನು ನಾವಂತೂ ಸ್ವೀಕರಿಸಲು ಸಿದ್ಧರಿರುವೆವು; ತುಂಗಭದ್ರ ಅಣೆಕಟ್ಟು ಇರುವ ಪ್ರದೇಶವು ಆಂಧ್ರವನ್ನುಳಿದ ಮದ್ರಾಸಿನಲ್ಲೇ ಇರಬೇಕು. ಅಥವಾ ಈ ಅಣೆಕಟ್ಟಿನ ಆಡಳಿತೆಗಾಗಿ ಕೇಂದ್ರದ ನಿಯಂತ್ರಣಕ್ಕೊಳಪಡುವ ಕಾರ್ಪೋರೇಶನನ್ನು ಸ್ಥಾಪಿಸಿದರೂ ಆಗಬಹುದು ಮದಕಶಿರ ತಾಲ್ಲೂಕಿನಲ್ಲಿ ಸೇ. ೬೬ ಮಂದಿ ಕನ್ನಡಿಗರಿರುವದರಿಂದ ಈ ತಾಲ್ಲೂಕನ್ನು ಮೈಸೂರಿಗೆ ಸೇರಿಸಬೇಕು ಎಂದು ಮುಂತಾದ ಕೋರಿಕೆಗಳನ್ನು ವಾಂಚೂರವರ ಮುಂದಿಟ್ಟುದಾಗಿ ಶ್ರೀ ನಿಜಲಿಂಗಪ್ಪನವರು ತಿಳಿಸಿದ್ದಾರೆ.

ಪಾಕಿಸ್ಥಾನ ಮತ್ತು ಮಧ್ಯಪೂರ್ವ ರಕ್ಷಣಾ ವ್ಯೂಹ

ಮಧ್ಯಪೂರ್ವದ ರಕ್ಷಣಾ ವಲಯದಲ್ಲಿ ಪಾಕಿಸ್ತಾನವು ಅಗ್ರ ಸ್ಥಾನ ಪಡೆಯುವುದೆಂಬ ವಿಚಾರಗಳು ಅಲ್ಲಿಯ ಪತ್ರಿಕೆಗಳಲ್ಲಿ ಪ್ರಕಟಿತವಾಗುತ್ತಿರುವುದು ನಿರಾಧಾರವಾದುದಲ್ಲ ಎಂದು ಈಗ ನಂಬಲಿದೆಯಿದೆ. ಮಧ್ಯಪೂರ್ವದ ಈಜಿಪ್ಟ್ ಹಾಗೂ ಪರ್ಶಿಯಾಗಳಲ್ಲಿ ತಮ್ಮ ಪ್ರಭಾವವನ್ನು ಕಳೆದುಕೊಳ್ಳುತ್ತಿರುವ ಆಂಗ್ಲೋ-ಅಮೇರಿಕನರಿಗೆ ಮಧ್ಯಪೂರ್ವದಲ್ಲಿ ತಮ್ಮ ವರ್ಚಸನ್ನು ಸ್ಥಿರೀಕರಿಸುವದಕ್ಕಾಗಿ ಒಂದು ನೆಲೆ ಬೇಕಾಗಿದೆ.

ಪಾಕಿಸ್ತಾನದ ಮನಸನ್ನು ಈ ಬಗ್ಗೆ ಒಲಿಸಿಕೊಳ್ಳುವ ಯತ್ನ ನಡೆಯುತ್ತಿದೆಯಂತೆ. ಪಾಕಿಸ್ತಾನದಲ್ಲೊಂದು ವಿಮಾನ ರಾಣಿಯನ್ನು ಅಮೇರಿಕವು ನಿರ್ಮಿಸುವದಲ್ಲದೆ ಆಧುನಿಕ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತವಾದ ಸೇನೆಯನ್ನು ಇಲ್ಲಿ ನೆಲೆಸಲಾಗುವುದೆಂದು ಪ್ರಕಟಿತವಾಗಿದೆ. ಪಾಕಿಸ್ತಾನದ ಪತ್ರಿಕೆಗಳಲ್ಲಿ ಪ್ರಕಟವಾದ ಈ ವಾರ್ತೆಗಳನ್ನು ಪಾಕಿಸ್ತಾನವಾಗಲಿ, ಬ್ರಿಟನ್ ಅಥವಾ ಅಮೇರಿಕವಾಗಲಿ ನಿರಸನಗೊಳಿಸದಿರುವದರಿಂದ ಈ ವಾರ್ತೆಗಳಲ್ಲಿ ಸತ್ಯಾಂಶವಿದೆಯೆಂದು ಊಹಿಸಬೇಕಾಗಿದೆ. ಸ್ವತಂತ್ರವಾದ ವಿದೇಶ ವ್ಯವಹಾರ ನೀತಿಯನ್ನನುಸರಿಸುತ್ತಿರುವ ಭಾರತದ ಗಡಿಯಾಚೆ ಆಂಗ್ಲೋ-ಅಮೇರಿಕನ್ ಗುಂಪಿಗೆ ಸೇರಿದ ಅಥವಾ ಸೇರುವ ಪಾಕಿಸ್ತಾನದ ಅಸ್ತಿತ್ವವನ್ನು ಅಲಕ್ಷಿಸುವಂತಿಲ್ಲ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಸೂಚಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಕೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟೆಗಳು. ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
4. 9"×4" ಮತ್ತು 8"×4" ಕಬ್ಬಿಣದ ತೊಲೆಗಳು (Girders).
5. 8'×3'×24' (Gage) ಕಬ್ಬಿಣದ ತಗಡುಗಳು.
6. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

The New Guardian of India Life Insurance Co., Ltd.,

— HEAD OFFICE —

Post Box No.—142 Esplanade, MADRAS—1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to—

THE CHIEF AGENT.

The New Gaurdian of India Life Insurance Co., Ltd. for COORG. Virajpet.

12—3 OR

To The Head Office, MADRAS.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗುಳಿಗಳು ಬಿದ್ದಿದ್ದು ಹಿಂದಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ, ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರು, ಮೇಹವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "**ಮನ್ಮಥ ಚಿಂತಾಮಣಿ ಲೇಹ**" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವುದು ಅಲ್ಲದೆ ಆರೋಗ್ಯಭಾಗ್ಯವನ್ನು ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು. 4—1

೧ ಪೌಂಡಿಗೆ ರೂ. ೫-೦-೦

ಮಲಿಯಾಳ ಮೆಡಿಕಲ್ ಹಾಲ್, ತಿರುವನಂತಪುರಂ— (TRIVANDRUM)

Edited Printed and Published by P. I. BELLIAPPA at 'KODAGU' Press, Mercara for Kodagu Ltd.,

ಕೊಡಗು

ವಾರ್ಷಿಕ ಚಂದಾ ರೂ. ೪—೮—೦

[ಸಂಪುಟ ೨೧. ಸಂಚಿಕೆ ೨೨]

ಶುಕ್ರವಾರ

೩೦—೧—೧೯೫೩

KODAGU KANNADA WEEKLY MERCARA

ವಾರದ ಕಥೆ

ಸ್ವಾತಂತ್ರ್ಯ

ಸದ್ಯ ಪ್ರಕಟವಾಗಲಿರುವ ಶ್ರೀ ಬಿ. ಡಿ. ಗಣಪತಿಯವರ "ತ ಂತುರು" ಎಂಬ ಕಥಾ ಸಂಕಲನದಿಂದ

ತ್ರಿವತ್ತು ವರ್ಷಗಳ ವರೆಗೆ ಅಹೋರಾತ್ರಿ ನಡೆದ ಸ್ವಾತಂತ್ರ್ಯ ಸಂಗ್ರಾಮವು ಕೊನೆಗೊಂಡು, ದೇಶವು ಸ್ವತಂತ್ರವಾಗಿತ್ತು. ಸ್ವತಂತ್ರ ದೇಶದ ಪ್ರಜೆಗಳಲ್ಲಿ ಹೊಸ ಉತ್ಸಾಹ, ಹುರುಪುಗಳು ತುಂಬಿದ್ದವು. ಒಂದು ರೀತಿಯ ಹುಮ್ಮಸ್ಸು ಪ್ರತಿಯೊಬ್ಬನಲ್ಲಿಯೂ ತೋರಿ ಬರುತಿತ್ತು. ಅನವರೆಗೆ ತಾವು ಪಟ್ಟ ಕಷ್ಟನಷ್ಟಗಳು, ನೋವು ಹಾಗೂ ಅಂಬ ರುವ ಸುಖದ ಒನ ಪ್ರತಿಯೊಬ್ಬನಲ್ಲಿತ್ತು. ಈ ಭವಿಷ್ಯದ ಭವ್ಯ ಕಲ್ಪನೆಗಳನ್ನು ಕಟ್ಟಿಕೊಂಡು ಎಲ್ಲರೂ ಆನಂದಿತರಾಗಿದ್ದರು.

ಸ್ವಾತಂತ್ರ್ಯದ ಉದಯದ ನಂತರ ಜನತೆಯ ಕೈಗೆ ಬಂದ ಆಡಳಿತ ಅಧಿಕಾರದ ನ್ನು ತಮ್ಮಲ್ಲಿ ಯೋಗ್ಯರಿಂದ ತೋರಿದವರಿಗೆ ಜನತೆ ಕೊಟ್ಟಿತ್ತು. ಪ್ರತಿಯೊಬ್ಬನೂ ಈ ಆಡಳಿತದಲ್ಲಿ ಭಾಗವಹಿಸಿ ಯೋಗ್ಯ ಪ್ರತಿನಿಧಿಗಳನ್ನು ಆರಿಸುವದರಲ್ಲಿ ತನ್ನ ಪಾಲಿನ ಕರ್ತವ್ಯವನ್ನು ಮಾಡಿದ್ದನು. ಯೋಗ್ಯರೆಂಬುವವರಿಗೆ ಅಧಿಕಾರ ಸೂತ್ರವನ್ನು ಒಪ್ಪಿಸಿಕೊಟ್ಟದ್ದರಿಂದ ತಮ್ಮ ಎಲ್ಲವೂ ಆದರ್ಶವಾಗಿ ನಡೆಯುವುದೆಂದೂ ತಮ್ಮ ಸ್ಥಿತಿಯು ಉತ್ತಮಗೊಳ್ಳುವುದೆಂದೂ ಜನತೆ ಭಾವಿಸಿತ್ತು. ಆದರೆ ಆ ಆಸೆ ಕೈಗೂಡಲಿಲ್ಲ. ಅಧಿಕಾರಕ್ಕೇರಿದವರಿಗೆ ತಮ್ಮ ಅಧಿಕಾರ ಕಲವೇ ದಿನಗಳ ವರೆಗೆ ಎಂಬುದು ತಿಳಿದಿತ್ತು. ಅದ್ದರಿಂದ ಜನಸೇವೆ, ತ್ಯಾಗ ಬುದ್ಧಿಯು, ಬದಲು ಸ್ವಾರ್ಥತೆ, ಸಂಗ್ರಹ ಬುದ್ಧಿ ತಲೆದೋರ ತೊಡಗಿತು. ಒಂಚ ವಸ್ತುವಸ್ತುಗಳು ಹಪ್ಪವು. ಪ್ಪಾ ವಾರಸ್ಥರು ಲಾಭ ಬಡಕರ, ಕಾಳಸಂತೆ ಯವರಾದರೆ ಅಧಿಕಾರಿಗಳು ಪಂಕ್ತಿಗೆ ಸೇರಲು ಕೈನೀಡುವವರಾದರು. ಇದನ್ನು ನಿಲ್ಲಿಸಲು ಸರಕಾರದ ವಿವಿಧ ಯೋಜನೆಗಳು, ಹೋರಾಟವು ಯಾವುದೇ ರೀತಿಯ ಒಂದು ರುಚುವದನ್ನು ಗ-ನಗೀ, ಕಷ್ಟನೂ ರಾಟ ಲಾಭ ಬಡಕರದವಾಗಲೇ ಕಠಿಣ ಶಿಕ್ಷೆಗೆ ಕಾರಣವಾಗುತದೆಂದು ಸಾರಲಾಯಿತು. ಈ ಶಾಸನದ ಜಾರಿ ಬ ದು ನಾಲ್ಕು ತಿಂಗಳುಗಳಾಗಿದ್ದವು.

ನನಗೆ ಸ್ವಂತ ಕೆಲಸದ ನಿಮಿತ್ತ ಆಗಾಗ್ಗೆ ನಗರಕ್ಕೆ ಹೋಗುವ ಸಂದರ್ಭ ಒದಗುತಿತ್ತು. ನಗರಕ್ಕೆ ಹೋದಾಗಲೆಲ್ಲ ನಾನು ಅಲ್ಲಿಯ ಹೋಟೆಲುಗಳೊಂದರಲ್ಲಿ ನಾನು ಉಳಿಯುವದು ವಾಡಿಕೆಯಾಗಿತ್ತು. ಸುಂದರ ನಗರಕ್ಕೆ ಅನುರೂಪವಾದ ಹಲವು ಸುಂದರ ಹೋಟೆಲುಗಳಿದ್ದವು. ನಾನು ಉಳಿಯುತ್ತಿದ್ದ ಆ ಹೋಟೆಲಿನ ಪ್ರತಿಯೊಂದು ಕೋಣೆಗೂ ಒಬ್ಬೊಬ್ಬ ಆಳು ಇರುವದು ಸಂಪ್ರದಾಯವಾಗಿತ್ತು. ಆ ಆಳುಗಳು ನಮಗ ಬೇಕಾದ ಎಲ್ಲ ಕೆಲಸಗಳನ್ನು ಮಾಡಿಕೊಡುತ್ತಿದ್ದರು. ಹೀಗೆ ನಾಲ್ಕಾರು ದಿನ ಅಲ್ಲಿ ಉಳಿದು ಹಿಂತಿರುಗ ವಾಗ ನೋಕರರಿಗೆ ಬಕ್ಷೀಸು ಕೊಡುವದು ಪ್ರತಿಯೊಬ್ಬನ ರೂಢಿಯಾಗಿತ್ತು. ಕೊಡದಿದ್ದರೆ ಬಾಯಿ ಬಿಟ್ಟು ಅವರು ಕೇಳುತ್ತಿದ್ದರು. ಇಷ್ಟೇ ಕೊಡಬೇಕೆಂದು ಬಲತ್ಕಾರ ಮಾಡುತ್ತಿದ್ದರೂ ಇದ್ದರು. ಪ್ರಯಾಣಿಕರು ಅದೊಂದು ಅನಿವಾರ್ಯ ತೆರಿಗೆಯೆಂದು ಅದನ್ನು ಗಣಿಸುತ್ತಿದ್ದರು.

ನಾನು ಆ ಬಾರಿ ನಗರಕ್ಕೆ ಹೋದಾಗ ಒಂಚರು ಸುಮಾರು ನಿಷೇಧಿಸ ವಾದದು ಶಾಸನದ ಜಾರಿಯಲ್ಲಿ ಒಂದು ನಾಲ್ಕು ತಿಂಗಳು ಗಳಾಗಿದ್ದವು. ಅಂದ ನಾನು ಉಳಿಯುತ್ತಿದ್ದ ಹೋಟೆಲಿನಲ್ಲಿಯೇ ಇಳಿದೆನು. ರಂ ನು ನಂಬರು ಒಂದರಲ್ಲಿ ಈ ಮೊದಲು ಇದ್ದ ಸೇವಕನೇ ಇದ್ದನು. ಆಗಾಗ್ಗೆ ನಾನು ಅಲ್ಲಿಗೆ ಹೋಗುತ್ತಿದ್ದುದರಿಂದ ಆತನ ಸ್ವ ಪರಿಚಯವನ್ನು ಸಾಕಷ್ಟಿತ್ತು. ಆ ಸಲ ಹೋಟೆಲಿನಲ್ಲಿ ದೊರೆತ ಅನುಭವಕ್ಕಾಗಿಯೇ ಇದನ್ನು ಬರಯುತ್ತಿರುವೆನು.

ಒಂದನೇ ನಂಬರು ಕೋಣೆಯ ಸೇವಕನ ಹೆಸರು ಕೃಷ್ಣ. ಆತನಿಗೆ ಸುಮಾರು ೩೦ ವರ್ಷ ಪ್ರಾಯವಿರಬಹುದು. ಸವಿಯಾಗಿ ಮಡಿದು, ತಿಂದುದನ್ನು ಮೈಗೆ ಹಿಡಿಸಿ ಕೊಂಡ ಶರೀರ. ಹೋಟೆಲಿನ ಮೇನೇಜರನು ಆತನನ್ನು ಕರೆದು ಹೇಳಿದೊಡನೆಯೇ ನನ್ನನ್ನು ನೋಡಿ ನಮಸ್ಕರಿಸಿದನು. ಕೋಣೆಯ ಬೀಗ ತೆಗೆದು ಎಲ್ಲಾ ವಸ್ತುಗಳನ್ನು ಸರಿಪಡಿಸಿ ಹಾಸಿಗೆಯಲ್ಲಿ ಹೊಸ ಸೀರೆಟ್ಟು ನನ್ನ ಆಜ್ಞೆಗಾಗಿ ಬಾಗಿಲ ಬಳಿ ನಿಂತಿದ್ದನು. ನಾನು ಸಾಮಾನುಗಳನ್ನೆಲ್ಲಾ ಒಮ್ಮೆ ಸುಮ್ಮನೆ ತುಂಬಾ ಸೆಕೆಯಾಗಿದ್ದ ಕಾರಣ ಕೋಟನ್ನು ಬಿಚ್ಚಿ, ಕುಡಿಯಲು ಒಂದು ಕಪ್ಪು ಹಾಲು ಬೇಕೆಂದು ಹೇಳಿ ಆರಾಮ ಕುರ್ಚಿಯಲ್ಲಿ ಕುಳಿತೆನು.

ಕೃಷ್ಣನು ಹಾಲು ತಂದು ಮೇಜಿನ ಮೇಲಿಟ್ಟನು. ನಾನು ಮತ್ತೆ ಆತನ ಕ್ಷೇಮ ಸಮಾಚಾರವನ್ನು ವಿಚಾರಿಸಿದೆನು. ಈ ಹಿಂದೆ ಹಲವು ಬಾರಿ ನಾನು ಆತನನ್ನು ಕಂಡಂತೆ ಏನು ಆಗಿರಲಿಲ್ಲ. ಆತನ ಮುಖದಲ್ಲಿ ಪ್ರಶಾಂತಿಯೂ, ಸ್ವಭಾವದಲ್ಲಿ ವಿನೋದವೂ ಇರುವಂತೆ ತೋರುತ್ತಿತ್ತು. ಆದರೂ ತನ್ನ ಕೆಲಸವನ್ನು ಎಂದಿನಂತ ಮಾಡುತ್ತಿದ್ದನು. ಕೃಷ್ಣನು ತನ್ನ ಇತ್ತೀಚಿನ ಜೀವನವನ್ನು ವಿವರಿಸುತ್ತಾ, ತಾನು ಮೂರು ತಿಂಗಳ ಹಿಂದೆ ಮದುವೆಯಾಗಿರುವನೆಂದೂ, ಆರಳ್, ದಿನಗಳಿಂದ ಹೆಂಡತಿಗೆ ವಿಪರೀತ ಕಾಯಿಲೆಯಾಗಿ ಆಸ್ಪತ್ರೆಯಲ್ಲಿರ ವರಾಗಿಯೂ ಹೇಳಿದನು. ಆ ತನು ತನ್ನ ಕೆಲಸದಿಂದ ಸಂಪಾದಿಸಿದ್ದ ಅಲ್ಪ ಸ್ವಲ್ಪ ಹಣವೆಲ್ಲವೂ ಮದುವೆಯ ಖರ್ಚಿಗಾಗಿ ವ್ಯಯವಾಗಿತ್ತು. ಈಗ ದೊರೆಯುತ್ತಿದ್ದ ವೇತನವು ದಿನ ನಿತ್ಯದ ಖರ್ಚಿಗೆ ಸಾಕಾಗುತ್ತಿರಲಿಲ್ಲ. ಕಾಯಿಲೆಯಲ್ಲಿ ಅವಳಿಗೆ ಬೇಕಾದ ವಸ್ತು, ಔಷಧಗಳನ್ನು ಒದಗಿಸಿಕೊಡುವದು ಆತನಿಗೆ ಸಾಧ್ಯವಿರಲಿಲ್ಲ. ಬೆಳಗಿನಿಂದ ಸಾಯಂಕಾಲ ಹತ್ತು ಗಂಟೆಯ ವರೆಗೆ ಹೋಟೆಲಿನಲ್ಲೇ ಇರಬೇಕಾದ ಪ್ರಯುಕ್ತ ಆಕೆಯ ಶುಶ್ರೂಷೆಯನ್ನು ಮಾಡುವದೂ ಅಸಾಧ್ಯವಾಗಿತ್ತು. ಆತನು ಇದನ್ನೆಲ್ಲಾ ವಿವರವಾಗಿ ಹೇಳಿದಾಗ ಆತನ ಕಂಠ ಗದ್ಗದಿತವಾಗಿತ್ತು. ಕಣ್ಣಲ್ಲಿ ನೀರು ತುಂಬಿತ್ತು.

ಒಂದು ದಿನ ರಾತ್ರಿ ಆ ನಗರದ ಪ್ರಸಿದ್ಧ ನಾಟಕ ನೋಡಿದ ಕೂಡಲೆ ಹತ್ತು ಗಂಟೆಯ ಹೊತ್ತಿನ ಲ್ಲಿ ಹೋಟೆಲಿಗೆ ಬಂದೆನು. ... ಕೃಷ್ಣನು ಬಂದು ನನ್ನ ಕೋಣೆಯಲ್ಲಿ ನನಗಾಗಿ ... ನಾನು ... ಕುರ್ಚಿಯಲ್ಲಿ ಕುಳಿತಿದ್ದ ನನ್ನ ಸಾಮಾನುಗಳೆಲ್ಲವೂ ಸಿದ್ಧವಾಗಿ ಹೊರಗಿಡಲ್ಪಟ್ಟಿದ್ದವು. ನಾನು ಕೃಷ್ಣನನ್ನು ಕರೆದು ಈ ಒಂದು ಅನೇಕ ಸಂದರ್ಭಗಳಲ್ಲಿ ನನಗೆ ... ಮಾಡಿದ ... ಸೇವೆಗಾಗಿ ... ಕೊಡಲು ... ನನ್ನ ಸ್ನೇಹಿತ ... ನಾನು ... ಮತ್ತು ... ಆತನ ಹೆಂಡತಿಯ ಚಿಕಿತ್ಸೆ, ಕಷ್ಟ ಜೀವನವನ್ನು ನನಪು ... ನನಗೆ ...

ಕರುಳ ಸಾಲ್ಕು ರೂಪಾಯಿಗಳನ್ನು ಕೊಡ ಹೋದೆ. ... ಕೃಷ್ಣನು ... ಅಂದಿನ ವರ್ತನೆಯೇ ಅಪೂರ್ವವಾಯಿತು. ಆತನು ... ರೂಪಾಯಿಗಳನ್ನು ... ನಿರಾಕರಿಸಿದನು. ... ಆತನ ... ಹಣ ... ಕಾರಣ ... ನಾನು ... ಕೊಡಲು ಮತ್ತೆ ... ಆತನು ... ಕೊಡಲು ... ಪ್ರಯೋಜನವಾಗಲಿಲ್ಲ. ... ಬಕ್ಷೀಸು ತೆಗೆದುಕೊಳ್ಳಬಾರದೆಂದು ... ಕಾಯಿದೆಯೆಂದು, ನನಗೆ ತಿಳಿದಿತ್ತು. ಆದರೆ ಈ ಕೋಣೆಯಲ್ಲಿ ನಾನು ಮತ್ತು ... ಇಬ್ಬರೇ ಇದ್ದೆವು. ಆತನು ತೆಗೆದುಕೊಂಡಿದ್ದರೆ ಯಾರಿಗೂ ಗೊತ್ತಾಗುತ್ತಿರಲಿಲ್ಲ. ಆದರೂ ಆತನು ಅದನ್ನು ಸ್ವೀಕರಿಸಲಿಲ್ಲ.

ಆತನಲ್ಲಿ ಪೂರ್ಣ ಪರಿವರ್ತನೆ ಯಾ ... ನನಗ ಕಂಡು ಬಂದಿತು. ಬಕ್ಷೀಸು ತೆಗೆದುಕೊಳ್ಳುವದು ನೌಕರನಿಗೆ ಏನ ... ವೆಂಬ ಭಾವನೆ ಆತನಲ್ಲಿರುವಂತೆ ತೋರುತ್ತು. ಹೋಟೆಲಿನಲ್ಲಿ ಬಂದವರಿಗೆ ಸಹಾಯ ಮಾಡಲೆಂದು ಮಾಲೀಕರು ವೇತನಕೊಟ್ಟು ತಮ್ಮನ್ನಿಟ್ಟಿರುವಾಗ ಪ್ರಯಾಣಿಕರಿಂದ ಭಕ್ಷೀಸು ಪಡೆಯುವದು ಹೀಯವಾದುದೆಂಬ ಭಾವನೆ ಆತನಲ್ಲಿರುವಂತೆ ತೋರಿತು. ದೇಶದ ಪ್ರಜೆಯಾದ ಆತನು ಹೊಸದಾಗಿ

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ. 1921]

(ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ	10 00 000
ವಸೂಲಾದ ಶೇರು ಮೊಬಲಗು		2 09 000
ಕ್ಷೇಮನಿಧಿ		63 000
ಇತರ ನಿಧಿಗಳು		17 000
ಠೇವಣಾತಿ		8 96 000

ವಿವಿಧ ಠೇವಣಾತಿಯ ಬಡ್ಡಿಯ ದರಗಳು—

ಚಾಲ್ತಿ ಠೇವಣಾತಿ ಖಾತೆ (Current Deposits) ರೂ	0-8-0
ಸೇವಿಂಗ್ಸ್ (ತಾ 1—1 1953 ರಿಂದ)	1-8-0
ನಿಗದಿ (Fixed) 3 ರಿಂದ 11 ತಿಂಗಳ ಅವಧಿಗೆ	1-8-0
1 ವರುಷ	2-0-0
2 ವರುಷ	2-8-0
3 ವರುಷ	3-0-0
5 ವರುಷ	3-12-0
10 ವರುಷ	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದ ಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಟ್ರಸ್ಟಿ ಪಾರ್ಡನ್ ಚೆಕ್ ಯ ಡ್ರಾಫ್ಟಗಳ ಡಿಸ್ಕೌಂಟು ಮಾಡಲ್ಪಡುವುದು. ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ವರ್ತಮಾನವನ್ನು ಆಫೀಸಿನಿಂದ ತಿಳಿಯಬಹುದು.

ಎಂ. ಎಸ. ಸೋಮಯ್ಯ, ಗೌ. ಕಾರ್ಯದರ್ಶಿ

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಬಂದಿರುವ ಸ್ವಾರಸ್ಯಕ್ಕೆ ಅನುಗುಣವಾಗಿ ಪರಿವರ್ತನೆ ಹೊಂದಿದ್ದು ನನಗೆ ಕಂಡು ಆಶ್ಚರ್ಯವಾಯಿತು.

'ಬಕ್ಷೀಸು ತೆಗೆದುಕೊಳ್ಳದಿದ್ದರೆ ನಿನಗೆ ಹೋಟೆಲಿನ ಕೆಲಸದ ಸಂಬಳದಲ್ಲಿ ಸಾಕಾಗುವದು?' ಎಂದು ನಾನು ಕೇಳಿದೆ. ಅದಕ್ಕೆ ಕೃಷ್ಣನು 'ಇಂದಿನ ನನ್ನ ಜೀವನದಲ್ಲಿ ಹಣದ ತೊಂದರೆ ಇರಲಿಲ್ಲ. ನನ್ನಲ್ಲಿ ಪ್ರತಿಯೊಬ್ಬರೂ ತಿಂಗಳಿಗೆ ಸರಾಸರಿ ಐವತ್ತು ರೂಪಾಯಿಗಳನ್ನು ಬಕ್ಷೀಸಿನಿಂದಲೇ ಸಂಪಾದಿಸುತ್ತಿದ್ದೆ. ಆದರೆ ಇಂದಿನ ಪರಿಸ್ಥಿತಿ ಹಾಗಿಲ್ಲ. ನಮ್ಮ ದೇಶದಲ್ಲಿ ನಮ್ಮದೇ ಸರಕಾರವಿದೆ. ಹೋಟೆಲ್ ನೌಕರರು ಬಕ್ಷೀಸುಗಳನ್ನು ತೆಗೆದುಕೊಳ್ಳಬಾರದೆಂದು ಅದು ಕಾನೂನು ಮಾಡಿದೆ. ಆ ಕಾನೂನು ನನಗೆ ಎಷ್ಟು [illegible]. ಆದರೆ ನಾನೀಗ [illegible] ಬಕ್ಷೀಸು ತೆಗೆದುಕೊಳ್ಳಬಾರದು [illegible]. ಇದರಿಂದ ನನ್ನ ಜೀವನದಲ್ಲಿ ಹಣದ ಮಟ್ಟಿಗೆ ತೊಂದರೆ ಇದ್ದರೂ ಸ್ವತಂತ್ರ ದೇಶದ ಯೋಗ್ಯ ಪ್ರಜೆಗಳೆಂಬ ಹೆಮ್ಮೆಗೆ ಆನಂದವಿದೆ. ನನಗೆ ಇಂದು ದುಡ್ಡಿನ ಆವಶ್ಯಕತೆ ತುಂಬಾ ಇದೆ. ಆದರೆ ನೀವು ಬಕ್ಷೀಸಿಗಾಗಿ ಹತ್ತು ರೂಪಾಯಿಗಳನ್ನು ಕೊಡುವದನ್ನು ಸ್ವೀಕರಿಸಲಾರೆ. ಬದಲು ಹತ್ತು ರೂಪಾಯಿ ಕೂಡಿಸಿ ಇಪ್ಪತ್ತು ರೂಪಾಯಿ ಸಾಲ ಕೊಡಿ. ಇನ್ನೊಮ್ಮೆ ಬಂದಾಗ ಅದನ್ನು ತಿರುಗಿ ಕೊಡುವೆನು' ಎಂದು ಹೇಳಿದನು.

ಆತನ ಮಾತನ್ನು ಕೇಳಿ ಮರುಮಾತಿಲ್ಲದೆ ಇಪ್ಪತ್ತು ರೂಪಾಯಿಗಳನ್ನು ಕೊಟ್ಟು ಹೊತ್ತಾದ ಕಾರಣ ಕ್ಯಾಬಿಗೆ ಬೇಗ ಹೊರಟೆನು. ಕೃಷ್ಣನ ಬಗೆಗೆ ಎಷ್ಟೇ ವಿಶ್ವಾಸ ತೋರಿಬಂದರೂ, ಆತನ ಪರಿವರ್ತನೆಯು ಪರಿಚಯ ಸ್ಪಷ್ಟ ತೋರುತ್ತಿದ್ದರೂ ಆತನು ಕಪಟ ವೇಷದಾತ ನನ್ನಿಂದ ಇಪ್ಪತ್ತು ರೂಪಾಯಿಗಳನ್ನು ಹಾರಿಸಿಬಿಟ್ಟನೆಂದು ನನ್ನ ಅಂತರಾಳದ ಒಳದನಿಯೊಂದು ಹೇಳುತಿತ್ತು.

ನಾನು ಪುನಃ ಆ ಹೋಟಲಿಗೆ ಹೋದಾಗ ಎರಡು ತಿಂಗಳುಗಳು ಕಳೆದಿದ್ದವು. ರೂಮ್ ನಂ ೩೨ ರಲ್ಲಿ ಬೇರೆ ಯಾರೋ ಇಳಿದುಕೊಂಡಿದ್ದ ಕಾರಣ ಬೇರೆ ರೂಮ್ ಮಾಡಿಕೊಂಡೆ. ಸಾಯಂಕಾಲ ಊಟ ಮಾಡಿ ಹಾಗೆಯೇ ಕೋಣೆಯೊಳಗೆ ಪತ್ರಿಕೆ ಓದುತ್ತ ಕುಳಿತಿದ್ದೆ. ಕೃಷ್ಣನು ಬಂದು ನಮಸ್ಕರಿಸಿ, ಇಪ್ಪತ್ತು ರೂಪಾಯಿಗಳನ್ನು ಹಿಂದಿರಿಸಿ, 'ತುಂಬಾ ಉಪಕಾರವಾಯಿತು' ಎಂದನು. ನಾನು ಮೂಗ್ಧನಾದೆ!

ಅಖಿಲ ಭಾರತ ಕಾಂಗ್ರೆಸಿನ ಘಟನೆಯನ್ನು ಸೂಕ್ಷ್ಮರೀತಿ ತಿದ್ದುವ ದೃಷ್ಟಿಯಿಂದ ಅ. ಭಾ. ಕಾಂಗ್ರೆಸ್ ಕಮಿಟಿ ಸದಸ್ಯರಿಗೂ ಪ್ರಾದೇಶಿಕ ಕಾಂಗ್ರೆಸ್ ಕಮಿಟಿ ಸದಸ್ಯರಿಗೂ ಸರಕ್ಯೂಲರನ್ನು ಕಳುಹಿಸಿ ಅವರ ಸಲಹೆಗಳನ್ನು ಕೇಳದೆಯಾಗಿ ತಿಳಿದುಬಂದಿದೆ.

ರಾಷ್ಟ್ರದ ಪುನರ್ರಚನೆಯು ಶ್ರದ್ಧಾಪೂರ್ವಕವಾಗಿ ನಡೆಯಲಿ

ಪ್ರಜಾ ದಿನದಂದು

— ರಾಷ್ಟ್ರಾಧ್ಯಕ್ಷರ ಸಂದೇಶ —

ರಾಷ್ಟ್ರಾಧ್ಯಕ್ಷರಾದ ರಾಜೇಂದ್ರ ಪ್ರಸಾದರು ನಾಳೆ ಪ್ರಜಾದಿನದಂದು ಭಾರತೀಯರಿಗೆ ಹೊಸ ಸಂದೇಶವನ್ನು ಕೊಡುತ್ತಾ ಹೀಗೆ ಹೇಳಿದರು.

ಭಾರತದ ವಿಭಾಗೀಕರಣದಿಂದ ಉಂಟಾದ ತೊಂದರೆ, ಗೊಂದಲ, ಸಮಸ್ಯೆಗಳ ಸಂಕಟವು ನಿವಾರಣೆಯಾಗಿದೆ. ಇನ್ನು ಮುಂದೆ ರಾಷ್ಟ್ರೀಯ ಪುನರ್ರಚನಾ ಮತ್ತು ಪುನರುಜ್ಜೀವನದ ಕಾರ್ಯ ಸರ್ವರಿಂದ ನಡೆಯಬೇಕು. ಇದರ ಸಂಕೇತವಾಗಿಯೇ ಪಂಚವಾರ್ಷಿಕ ಯೋಜನೆಯು ಜನತೆಯ ಮುಂದಿಡಲ್ಪಟ್ಟಿದೆ. ದೇಶದ ನಾಗರಿಕರು ಅಂತರಿಕ ಧೈರ್ಯವನ್ನು ದೃಷ್ಟಿಕೋನಗಳನ್ನು ಬಿಟ್ಟು ರಾಷ್ಟ್ರದ ಹಿತಚಿಂತನೆಯು ಉದಾತ್ತ ಗುರಿಯನ್ನಿಟ್ಟು ದೇಶಕ್ಕಾಗಿ ಐಕ್ಯತೆಯಿಂದ ದುಡಿಯಬೇಕು.

ಪಂಚವಾರ್ಷಿಕ ಯೋಜನೆಯಲ್ಲಿ ಸೂಚಿತವಾಗಿರುವ ಗುರಿಯು ಕೆಲವರಿಗೆ ಬಹು ಕಡಿಮೆಯೆಂದು ತೋರಬಹುದು. ಈ ಯೋಜನೆಯು ವಿಚಾರದಲ್ಲಿ ಕೆಲವರಿಗೆ ಅಸಮಾಧಾನವಿರಬಹುದು. ಅದರ ಕಾರ್ಯವಿಧಾನದಲ್ಲಿ ಅಸಮಂಜಸ ಇರುವವರಿರಬಹುದು. ಆದರೆ ಪ್ರಜಾರಾಜ್ಯದಲ್ಲಿ ಆ ರೀತಿಯ ಅಭಿಪ್ರಾಯ ವ್ಯತ್ಯಾಸವಿರುವದು ಸ್ವಾಭಾವಿಕ. ಈ ಭಿನ್ನಾಭಿಪ್ರಾಯಗಳ ಕಾರಣದಿಂದ ಈ ಯೋಜನೆಗೆ ಬೆಂಬಲ ಕೊಡಬಾರದೆಂದು ಪರಿಗಣಿಸುವದು ತಪ್ಪಾದೀತು. ಏಕೆಂದರೆ ಹಿಂದೂದೇಶದ ಬಹುಮತದ ಜನರು ಒಪ್ಪಿದ ವಿಚಾರಕ್ಕೆ ಸಹಕಾರವನ್ನು ಉಳಿದವರು ಕೊಡಬೇಕಾದುದು ಪ್ರಜಾಪ್ರಭುತ್ವದ ನೀತಿಯಾಗಿದೆ.

ನಾವು ಯಾವ ರೀತಿ ಐಕ್ಯರಾಗಿ ಒಗ್ಗಟ್ಟಿನಿಂದ ದುಡಿಯುವೆವೆಂಬುದರ ಮೇಲೆ ನಮ್ಮ ಭವಿಷ್ಯದ ಭಾಗ್ಯಭರವಸೆಗಳು ನಿಂತಿವೆ. ಮಾನವತೆಯ ಹಾಗೂ ಭರತಖಂಡದ ಸರ್ವತೋಮುಖ ಹಿತದೃಷ್ಟಿಯಿಂದ ನಾವೆಲ್ಲ ಒಂದಾಗಿ ಶ್ರಮಿಸಬೇಕು. ಅದ್ದರಿಂದ ಈ ಪ್ರಜಾಪ್ರಭುತ್ವ ದಿನದಂದು ಪ್ರತಿಯೊಬ್ಬನು ಈ ಗುರಿಗೆ ದುಡಿಯುವ ಪ್ರತಿಜ್ಞಾಬದ್ಧನಾಗಬೇಕು.

THE VIJAYA BANK, LIMITED.
MERCARA.
Head Office :— **Kadri Road, MANGALORE.**
Office Hours.

All our constituents are hereby informed of the change of our working hours with effect from 1-2-1953 as follows:-

ON WEEK DAYS from 10 A. M. to 2 P. M.
ON SATURDAYS ONLY from 10 A. M. to 12 Noon.

M. S. ALVA,
AGENT.

ವಾರ್ತೆ.

ಲೇಡಿ ಮೌಂಟ್‌ಬೆಟನ್‌ರವರು ಅಸ್ವಸ್ಥರಿರುವರೆಂದೂ ಅದ್ದರಿಂದ ಆರೋಗ್ಯಸುಧಾರಣೆಗಾಗಿ ಹಿಂದೂದೇಶಕ್ಕೆ ಬಂದು ಕೆಲವು ದಿನ ಇಲ್ಲಿರುವರೆಂದು ಪ್ರಕಟವಾಗಿದೆ.

'ಕ' ವರ್ಗದ ಸಂಸ್ಥಾನಗಳ ಮುಖ್ಯಮಂತ್ರಿಗಳ ಸಭೆಯು ಫೆಬ್ರವರಿ ತಾರೀಕು ೧೩ರಲ್ಲಿ ಅಜಮೀರಿನಲ್ಲಿ ನಡೆಯುವದೆಂದೂ ಅಜಮೀರಿನ ಮುಖ್ಯ ಮಂತ್ರಿ ಶ್ರೀ. ಹರಿಬಾಬು ಉಪಾಧ್ಯಾಯರು ಎಲ್ಲಾ ಮಂತ್ರಿಗಳಿಗೂ ಆಹ್ವಾನವಿತ್ತಿರುವರೆಂದೂ ತಿಳಿದು ಬಂದಿದೆ. ಈ ಸಭೆಯು ಮಡಿಕೇರಿಯಲ್ಲಿ ನಡೆಯುವದೆಂದು ಹಿಂದೊಮ್ಮೆ ಪ್ರಕಟವಾಗಿತ್ತು.

ಮದ್ರಾಸ್ ಸರಕಾರವು ಕಡಿಮೆ ಖರ್ಚಿನಲ್ಲಿ ಗ್ರಾಮದ ಬಡ ಜನರಿಗೆ ಮನೆ ಕಟ್ಟಿ ಕೊಡುವ ಯೋಜನೆಯೊಂದನ್ನು ಒಪ್ಪಿರುವದು. ತಿರುವಂತಾಡು ಗ್ರಾಮದಲ್ಲಿ ಸುಧಾರಕರೊಬ್ಬರು ಹರಿಜನರಿಗೆ ೧೦೦ ಮನೆಗಳನ್ನು ಕಡಿಮೆ ದರದಲ್ಲಿ ಅಂದರೆ ಮನೆಗೆ ೨೫೦ ರಂತೆ ಕಟ್ಟಿಸಿ ಕೊಡುವ ಕೆಲಸಕ್ಕೆ ಕೊಂಡಿದ್ದು ಸರಕಾರವು ಇದಕ್ಕೆ ಧನ ಸಹಾಯ ಮಾಡಿದೆ. ಇದು ಜಯಪ್ರದವಾದರೆ ಬೇರೆ ಎಡೆಗಳಲ್ಲೂ ಈ ಯೋಜನೆಯನ್ನು ಜಾರಿಯಲ್ಲಿ ತರುವರಂತೆ.

ಕೋಯಿಕೋಡಿನಲ್ಲಿ ನಡೆದ ಐಕ್ಯ ಕೇರಳ ಸಮಿತಿಯ ಸಭೆಯಲ್ಲಿ ಕೇರಳ ಪ್ರಾಂತದ ವಿಚಾರ ಪರಿಶೀಲನೆ ನಡೆದು ಶೀಘ್ರವಾಗಿ ಐಕ್ಯ ಕೇರಳದ ರಚನೆಗಾಗಿ ಪ್ರಚಾರ ಕಾರ್ಯ ಕೈಕೊಳ್ಳುವ ತೀರ್ಮಾನ ಮಾಡಿದೆ.

ಆಂಧ್ರ ಪ್ರಾಂತವು ಬರುವ ಜೂನ್ ತಿಂಗಳೊಳಗೆ ರಚಿಸಲ್ಪಡಬಹುದೆಂದು ವರ್ತಮಾನವಿದೆ. ನ್ಯಾಯಮೂರ್ತಿ ವಾಂಚೂರವರ ಪರಿಶೀಲನೆ ಇನ್ನೂ ಮುಗಿದಿಲ್ಲ. ಅವರೇ ಈ ರೀತಿ ಅಭಿಪ್ರಾಯಪಟ್ಟಿದ್ದಾಗಿ ವರದಿಯಾಗಿದೆ.

ಹಿಂದೂದೇಶವನ್ನು ಸೈನಿಕ ರಾಜ್ಯವಾಗಿ ಮಾಡುವ ಅಭಿಪ್ರಾಯ ತನಗಿಲ್ಲದಿದ್ದರೂ ದೇಶದ ಪ್ರತಿಯೊಬ್ಬರು ಕೂಡ ಸೈನಿಕನ ಕೆಲವು ಗುಣಗಳನ್ನು ಪಡೆದಿರುವದು ಹಿತವೆಂದು ನೆಹರೂರವರು ಒಂದು ಭಾಷಣದಲ್ಲಿ ಹೇಳಿದರು. ಜಗತ್ತಿನಲ್ಲಿ ಮೂರು ವಿಧದ ಜನರಿರುವರೆಂದೂ ಒಂದನೆಯವರು ಇನ್ನೊಬ್ಬರ ಅನುಭವದಿಂದ ತಮ್ಮನ್ನು ತಿದ್ದಿಕೊಳ್ಳುವರೆಂದೂ, ಎರಡನೆಯವರು ತಮ್ಮ ಅನುಭವದಿಂದ ತಮ್ಮನ್ನು ತಿದ್ದಿಕೊಳ್ಳುವರೆಂದೂ ಮೂರನೆಯ ತಿಳಿಗೇಡಿಗಳು ಯಾವ ಅನುಭವದಿಂದಲೂ ಪ್ರಯೋಜನ ಹೊಂದರೆಂದೂ ಹೇಳಿದರು.

ರಷ್ಯಾವು ಕೂಡ ಒಂದು ಚಕ್ರಾಧಿಪತ್ಯ ಅದೂ ಸಾಮ್ರಾಜ್ಯವಾದಿ ತತ್ವಕ್ಕೆ ಬಲಿಬಿದ್ದಿದೆ. ಅವರ ತತ್ವಗಳು ೨೦೦ ವರ್ಷಗಳ ಹಿಂದಿವೆ. ಏಶಿಯಾದಲ್ಲಿ ಪ್ರಜಾಪ್ರಭುತ್ವದ ಮುಂದಾಳ್ತನವನ್ನು ಪಾಕಿಸ್ತಾನ, ಹಿಂದೂದೇಶ ಮತ್ತು ಬರ್ಮಾಗಳು ಕೈಕೊಳ್ಳಬೇಕೆಂದು ಬ್ರಿಟನಿನ ಮಾಜಿ ಪ್ರಧಾನ ಮಂತ್ರಿ ಅಟ್ಲಿಯವರು ಒಂದು ಭಾಷಣದಲ್ಲಿ ಹೇಳಿದರು.

ನ ಗು ಮ ಲ್ಲಿ ಗೆ

ಆ ನಾಟಕ ಬರೆದವರಾರೆಂಬ ಬಗ್ಗೆ ಗಂಡ ಹೆಂಡತಿಯರಲ್ಲಿ ತೀವ್ರ ವಾಗ್ವಾದ ನಡೆದಿತ್ತು. ಅದನ್ನು ಬರೆದವನು ಶೇಕ್ಸ್‌ಪಿಯರನೆಂದು ಹೆಂಡತಿಯು ವಾದಿಸಿದರೆ ಅದನ್ನು ಬರೆದವನು ಬೇಕನನೆಂದು ಗಂಡನು ಕಂಠೋಕ್ತವಾಗಿ ಹೇಳುತ್ತಿದ್ದನು.

'ನಾನು ಸ್ವರ್ಗಕ್ಕೆ ಹೋದಾಗ ಆ ಕಥೆಯನ್ನು ಯಾರು ಬರೆದುದೆಂದು ಶೇಕ್ಸ್‌ಪಿಯರನನ್ನು ಕೇಳುವೆನು' ಎಂದು ಹೆಂಡತಿ ನುಡಿದಳು.

'ಆತನು ಸ್ವರ್ಗದಲ್ಲಿಲ್ಲದಿದ್ದರೆ?' ಗಂಡನು ಕೇಳಿದನು.

"ಹಾಗಾದರೆ ನರಕದಲ್ಲಿ ನೀವು ವಿಚಾರಿಸಿರಿ!" ಎಂದಳವಳು.

• * •

ಚಿಕ್ಕಪ್ಪ–ನೀನು ದೊಡ್ಡವನಾದಾಗ ಏನಾಗಬೇಕೆಂದಿರುವೆ ರಾಮೂ?

ರಾಮು–ನಾನೊಬ್ಬ ದಾನಶೀಲನಾಗಬೇಕೆಂದಿದ್ದೇನೆ. ಈ ಜನರಲ್ಲಿ ಬೇಕಾದಷ್ಟು ಹಣವಿರುವಂತೆ ತೋರುತ್ತದೆ.

• * •

ಪ್ರಖ್ಯಾತ ಗ್ರಂಥಕರ್ತರೊಬ್ಬರು ರೈಲಿನಲ್ಲಿ ಪ್ರಯಾಣಮಾಡುತ್ತಿದ್ದರು. ಅದೇ ಕೋಣೆಯಲ್ಲಿ ಇಬ್ಬರು ಹೆಂಗಸರಿದ್ದರು, ಪುಸ್ತಕಗಳಲ್ಲಿ ಪ್ರಕಟವಾಗಿದ್ದ ಆತನ ಭಾವಚಿತ್ರದಿಂದ ಗ್ರಂಥಕರ್ತನನ್ನು ಗುರ್ತಿಸಿ ಇಬ್ಬರೂ ಆತನನ್ನು ಹೊಗಳಲಿಕ್ಕೆ ಪ್ರಾರಂಭಿಸಿದರು. ಅವರ ಮಾತಿಗೆ ಅಂತ್ಯವಿರಲಿಲ್ಲ. ಗ್ರಂಥಕರ್ತನಿಗೆ ಸಾಕಾಯಿತು. ರೈಲು ಒಂದು ಸುರಂಗಮಾರ್ಗವಾಗಿ ಹೋಗತೊಡಗಿತು. ಆ ಕತ್ತಲೆಯಲ್ಲಿ ಗ್ರಂಥಕರ್ತನು ಸ್ಪಷ್ಟ ಶಬ್ದ ಬರುವಂತೆ ತನ್ನ ಅಂಗೈಗೆ ಮುತ್ತಿಟ್ಟನು. ಸುರಂಗದಿಂದ ರೈಲು ಹೊರಬಂದೊಡನೆ ಮೇಲೆ ಇಬ್ಬರು ಹೆಂಗಸರೂ ಒಬ್ಬರನ್ನೊಬ್ಬರು ತಿರಸ್ಕಾರದಿಂದ ಮಾತಿಲ್ಲದೆ ನೋಡತೊಡಗಿದರು. ಅವರನ್ನುದ್ದೇಶಿಸಿ ಗ್ರಂಥಕರ್ತನು, 'ಓ ಮಹಿಳೆಯರೆ, ನನ್ನ ಜೀವನದ ಒಂದು ದುಃಖಪ್ರದ ವಿಚಾರವೆಂದರೆ ನಿಮ್ಮಲ್ಲಿ ಯಾರು ನನಗೆ ಮುತ್ತು ಕೊಟ್ಟವರೆಂದು ನನಗೆ ತಿಳಿಯದುದು' ಎಂದನು. ಮಹಿಳೆಯರು ಮೌನರಾದರು.

• * •

ಗಂಗು–ದಿನ ಕಳೆದಂತೆ ನಾನು ಚಿಕ್ಕ ಹುಡುಗಿಯಾಗಿಯೇ ತೋರುವೆನೆಂದು ಜನರು ಹೇಳುತ್ತಾರೆ.

ಸೀತಾ–ಹೌದು ಕಳೆದ ವರ್ಷ ನಿನಗೆ ವಯಸ್ಸು ೩೦ ಆಗಿತ್ತು. ಆದರೆ ಈಗ ೨೫!

• • •

ಯುವಕ–ರಾಜಕೀಯದಲ್ಲಿ ವಿಶ್ವಾಸಘಾತಕತನವೆಂದರೇನು?

ಧುರೀಣ–ನಮ್ಮ ಪಕ್ಷವನ್ನು ಬಿಟ್ಟು ವಿರೋಧ ಪಕ್ಷವನ್ನು ಸೇರುವದು.

ಯುವಕ–ಹಾಗಾದರೆ ಬೇರೆ ಪಕ್ಷವನ್ನು ಬಿಟ್ಟು ನಮ್ಮ ಪಕ್ಷಕ್ಕೆ ಬಂದರೆ?

ಧುರೀಣ–ಅದು ರಾಜಕೀಯ ಮತಾಂತರ!

* * *

ಕಾಲೇಜಿನಲ್ಲಿ ಓದಿ ಪದವೀಧರಳಾದ ಯುವತಿಯು ಮನೆಗೆ ಹಿಂತಿರುಗಿದ್ದಳು. ಆಕೆಯ ನೆಂಟರಿಷ್ಟರು ಆಕೆಯ ಗೌರವಕ್ಕಾಗಿ ಔತಣ ಏರ್ಪಡಿಸಿದ್ದರು. ಯುವತಿಯು ಅವರ ಮುಂದೆ ತನ್ನ ಸಿಲ್ಕಿನ ವಿವಿಧ ಬಣ್ಣದ ಸೀರೆಗಳನ್ನು ತೋರಿಸುತ್ತಾ ಈ ಸೀರೆಗಳೆಲ್ಲವೂ ಚಿಕ್ಕ ಹುಳುವೊಂದರಿಂದ ಬಂದಿವೆಯೆಂದು ತಿಳಿದಿದೆಯೇ? ಎಂದು ಆಶ್ಚರ್ಯದೃಷ್ಟಿಯಿಂದ ಕೇಳಿದಳು. ಇದನ್ನು ನೋಡುತ್ತಾ ಒಂದೆಡೆ ನಿಂತಿದ್ದ ಆಕೆಯ ತಂದೆಯು, 'ದಿನಕ್ಕೆ ೨೪ ಗಂಟೆ ದುಡಿಯುವ ಆ ಹುಳುವೇ ನಾನು!' ಎಂದನು.

* * *

ಪುರಸಭೆಯ ಚುನಾವಣೆಗೆ ನಿಂತಿದ್ದ ಉಮೇದುವಾರನು ತನ್ನ ಮತದಾರನೊಬ್ಬನಲ್ಲಿಗೆ ಹೋಗಿ 'ನಿಮ್ಮ ವೋಟಿನ ಮೇಲೆ ನಾನು ಭರವಸೆ ಇಡಬಹುದಲ್ಲವೇ?" ಎಂದು ಕೇಳಿದನು.

'ಅಯ್ಯೋ ನಿಮ್ಮ ಎದುರು ನಿಂತವರಿಗೆ ನಾನು ಮಾತು ಕೊಟ್ಟಿರುವೆನಲ್ಲಾ?' ವೋಟರನೆಂದನು.

"ರಾಜಕೀಯದಲ್ಲಿ ಮಾತಿಗೂ ಕೃತಿಗೂ ಪರಸ್ಪರ ವಿರೋಧ' ಉಮೇದುವಾರನೆಂದನು.

"ಹಾಗಾದರೆ ನಾನು ನಿಮಗೆ ಮಾತು ಕೊಡುತ್ತೇನೆ'. ವೋಟರನೆಂದನು.

• • *

ತಾಯಿಯು ಪ್ರೀತಿಯಿಂದ ತನ್ನ ಮಗುವನ್ನು ಎತ್ತಿಕೊಂಡು ತಲೆ ಕೂದಲನ್ನು ನೇವರಿಸಿ 'ಮುದ್ದೂ, ತಾಯಿಗೆ ಒಂದು ಮುತ್ತನ್ನು ಕೊಟ್ಟರೆ ಒಂದು ರೂಪಾಯಿ ದೊರೆಯುವದು' ಎಂದಳು.

ಮಗು– ಅದು ಆಗದು, ಒಂದು ಡೋಸ್ ಔಷಧಿ ಕುಡಿಯಲು ಐದು ರೂಪಾಯಿ ನನಗೆ ದೊರೆಯುತ್ತದಲ್ಲ!

* * *

ಮನೆಯೊಡೆಯ ದಯೆಯನ್ನು ಕೆರಳಿಸಬೇಕೆಂದು ನೆನೆಸಿ ಭಿಕ್ಷುಕನೊಬ್ಬನು ನೆಲದಲ್ಲಿಯ ಹುಲ್ಲನ್ನು ಗಬಗಬನೆ ತಿನ್ನತೊಡಗಿದನು. ಮನೆಯೊಡೆಯು ಹೊರಗೆ ಬಂದು 'ನೀನೇನು ಮಾಡುತ್ತಿರುವೆ' ಎಂದು ಕೇಳಿದಳು.

'ಹೊಟ್ಟೆಗೆ ಅನ್ನವಿಲ್ಲದೆ ಆರೇಳು ದಿನವಾಯಿತು. ಹುಲ್ಲು ತಿನ್ನುತ್ತಿರುವೆನು' ಭಿಕ್ಷುಕನೆಂದನು.

'ಇಲ್ಲಿಯ ಹುಲ್ಲು ಮುಗಿದ ಮೇಲೆ ಮನೆಯ ಹಿಂದುಗಡೆ ಹೋಗು. ಅಲ್ಲಿ ಇನ್ನೂ ಉದ್ದದ ಹುಲ್ಲು ಇದೆ' ಮನೆಯೊಡತಿ ನುಡಿದಳು.

ದೃಷ್ಟಿ ವಿಶಾಲವಾಗಿಟ್ಟು ದ್ವೇಷವನ್ನು ವರ್ಜಿಸಿರಿ

ಪಂಡಿತ ನೆಹರೂರವರ ಕರೆ.

ಭಾರತದ ಮಹಾ ಪ್ರಧಾನಿ ಪಂಡಿತ ನೆಹರೂರವರು ಜಗತ್ತಿನ ಯುವಕವೃಂದವನ್ನುದ್ದೇಶಿಸಿ ಸಂಕೀರ್ಣತೆಯನ್ನು ದೂರಮಾಡಿ, ದ್ವೇಷಾಸೂಯೆಗಳನ್ನು ತ್ಯಜಿಸಿ ಹೊಸ ಜಗತ್ತನ್ನು ಕಟ್ಟುವ ಮಹಾಕಾರ್ಯಕ್ಕೆ ತಯಾರಾಗಬೇಕೆಂದು ನುಡಿದರು. ನಾಕಿಸ್ತಾನದ ಕರಾಚಿಯಲ್ಲಿ ಸೇರಿದ ಯುವಕ ಸಮ್ಮೇಳನದ ಕೋರಿಕೆಯಂತೆ ನೆಹರೂರವರು ಈ ಸಂದೇಶವನ್ನು ಕೊಟ್ಟರು. ಹೊಸ ಜಗತ್ತನ್ನು ನಿರ್ಮಾಣ ಮಾಡಲು ನಾವು ಅರ್ಹರಾದುದಾದರೆ ಈಗಿರುವ ಹಳೆಯ ದೃಷ್ಟಿ, ಭಾವನೆಗಳನ್ನು ಮಾರ್ಪಡಿಸಿ ಈ ಜಗತ್ತನ್ನು ಹೆಚ್ಚು ವಾಸಯೋಗ್ಯವೂ, ಸುಂದರವೂ ಆಗಿಮಾಡಬೇಕು ಎಂದು ಅವರು ಹೇಳಿದರು.

ಮುಂದರಿಯುತ್ತಾ 'ನಾವು ವಿದ್ಯೆ, ಸಂಸ್ಕೃತಿ, ಕಲೆ ಮೊದಲಾದ ಶಬ್ದಗಳನ್ನು ಉಪಯೋಗಿಸುವೆವು. ಆದರೆ ಈ ಶಬ್ದಗಳ ನಿಜ ಅರ್ಥವನ್ನು ನಮ್ಮಲ್ಲಿ ಎಷ್ಟು ಜನರು ಬಲ್ಲೆವು? ಈ ಪ್ರತಿಯೊಂದು ಶಬ್ದವೂ ಕೂಡ ನಮ್ಮ ದೃಷ್ಟಿಯನ್ನು ವಿಶಾಲಗೊಳಿಸಿ, ನಮ್ಮ ಸಂಕೀರ್ಣತೆಯನು ತೊಲಗಿಸಿ ಜಗತ್ತಿನ ವಿಶಾಲತೆಯನ್ನರಿತು, ಮಾನವರನ್ನು ಮಾನವರಂತೆ ನೋಡುವ ಅರ್ಥದಿಂದ ಕೂಡಿದೆ. ನಿಜವಾದ ಸಂಸ್ಕೃತಿ, ಕಲೆಗಳೆಂದರೆ ಅವು ಸಾರ್ವತ್ರಿಕವಾದವುಗಳು. ಅವುಗಳಿಗೆ ದೇಶ ಕಾಲಗಳ ಬೇಧವಿಲ್ಲ. ಭಾಷೆ ಮಾತುಗಳ ಕಟ್ಟಳೆ ಇಲ್ಲ.

ಅಳೆಯಲಾರದ ಪ್ರಗತಿಯ ಹೆಜ್ಜೆಗಳನ್ನಿಟ್ಟು ಜಗತ್ತು ಮುಂದರಿಯುತ್ತಿದ್ದರೂ ಜಗತ್ತು ದಿನೇ ದಿನೇ ಕಾಳಗದಕಣವಾಗಿ ಪರಸ್ಪರ ಅಸಹನೆ ದ್ವೇಷಗಳು ಹೆಚ್ಚುತೊಡಗಿವೆ. ಇದು ಸಂಸ್ಕೃತಿಯ ವಿಪರ್ಯಾಸ. ಇಂಥಾ ಚಿಕ್ಕದೃಷ್ಟಿಯನ್ನು ಕಲಿಸುವ ವಿದ್ಯೆಯು ವಿದ್ಯೆಯೆನಿಸಲಾರದು. ಆದ್ದರಿಂದ ಪ್ರತಿದೇಶದ ಯುವಕರು ಈ ಸಂಕೀರ್ಣತೆ ಅವಿಶ್ವಾಸ, ದ್ವೇಷ, ಭಯಗಳ ಹಿಡಿತದಿಂದ ಪಾರಾಗಿ ವಿಶಾಲ ದೃಷ್ಟಿಯನ್ನು ಪಡೆದು ನವೀನ ಜಗತ್ತಿನ ನಿರ್ಮಾಣಕ್ಕೆ ಸಿದ್ಧರಾಗಬೇಕು' ಎಂದರು.

The New Guardian of India Life Insurance co., Ltd.,

— HEAD OFFICE —

Post Box No.- 142 Esplanade, MADRAS—1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT.

The New Gaurdian cf India Life Insurance Co., Ltd.
for COORG. Virajpet.

12–1

OR

To The Head Cffice, **MADRAS.**

ಶ್ರೀ ಬಿ. ಎಸ್. ಗೋವಿಂದರಾಜು, 'ಕೊಡಗು' ಪತ್ರಿಕೆ, ಮಡಿಕೇರಿ.

ಶ್ರೀ ಕೆ. ಎಸ್. ... , "ಕೊಡಗು" ಪತ್ರಿಕೆ, ...

ಭಾವೀ ನಾಗರಿಕರ ತರಬೇತಿ

ರಾಷ್ಟ್ರೀಯ ವಿದ್ಯಾರ್ಥಿ ಪಡೆಯು (ಎನ್. ಸಿ. ಸಿ.) ಅಮೂಲ್ಯ ಸೇವೆ.

ರಾಷ್ಟ್ರದ ಭವಿಷ್ಯ ಯುವಕರನ್ನು ಅವಲಂಬಿಸಿದೆ. ತರುಣ ವರ್ಗವು ಸರಿಯಾಗಿದ್ದರೆ ದೇಶದ ಪ್ರಗತಿ ಸುರಕ್ಷಿತ. ಆದ್ದರಿಂದ ಮುಂದೆ ಜೀವನದಲ್ಲಿ ದೇಶದ ಯೋಗ್ಯ ನಾಗರಿಕರಾಗಿ ಬಾಳುವಂತೆ ಅವರಿಗೆ ಮೊದಲೇ ತರಬೇತು ದೊರೆಯಬೇಕು. ಮುಂದೆ ದೇಶ ಸೇವೆಯಲ್ಲಿ ಎಂಥ ಪಾತ್ರ ವಹಿಸಲಿಕ್ಕೂ ಅನುಕೂಲವಾಗುವಂತೆ ಅವರಿಗೆ ನೈತಿಕ, ಮಾನಸಿಕ ಮತ್ತು ಶಾರೀರಿಕ ತರಬೇತು ಕೊಡುವುದು ಮುಖ್ಯ ಉದ್ದೇಶವಾಗಿರಬೇಕು. ಅದನ್ನು ಪ್ರಾರಂಭಿಸಲು ಶಾಲೆ ಕಾಲೇಜುಗಳೇ ಯೋಗ್ಯ ಸ್ಥಾನ. ಯಾಕೆಂದರೆ ಸಮಾಜದ ನವನೀತದಂಥ ಉತ್ತಮ ಬಾಲಕರು ಅಲ್ಲೇ ನಮಗೆ ಸಿಗುವರು. ಅವರೇ ದೇಶದ ಭಾವೀ ನಿರ್ಮಾಪಕರು.

ಈ ಕಾರ್ಯಕ್ಕಾಗಿ ದುಡಿಯುತ್ತಿರುವ "ನ್ಯಾಶನಲ್ ಕೇಡೆಟ್ ಕೋರ್" (ಎನ್. ಸಿ. ಸಿ.) ಅಥವಾ ರಾಷ್ಟ್ರೀಯ ವಿದ್ಯಾರ್ಥಿ ಪಡೆ ಒಂದು. ಇದು ಮಾಡುತ್ತಿರುವ ಸೇವೆಯ ಪೂರ್ಣ ಪರಿಣಾಮ ವ್ಯಕ್ತವಾಗಲು ಕೆಲ ವರ್ಷ ಕಾಲ ಬೇಕಾದೀತೇನೋ. ಈಗ ನಾಲ್ಕು ವರ್ಷಗಳಿಂದ ರಾಷ್ಟ್ರೀಯ ವಿದ್ಯಾರ್ಥಿ ಪಡೆಯಲ್ಲಿ ಶಿಕ್ಷಣ ಹೊಂದಿದ ಮತ್ತು ಈಗ್ಗೆ ಹೊಂದುತ್ತಿರುವ ತರುಣರು ಜೀವನದ ಬೇರೆ ಬೇರೆ ರಂಗದಲ್ಲಿ ಸ್ಥಾನಾಪನ್ನರಾಗದ ತರಬೇತಿಯಲ್ಲಿ ಅವರು ಸಂಪಾದಿಸಿಕೊಂಡ ಗುಣಗಳು ಪ್ರಯೋಜನಕ್ಕೆ ಬಂದು ಇಡೀ ರಾಷ್ಟ್ರ ಜೀವನದ ಮೇಲೆ ಪರಿಣಾಮ ಮಾಡುವವು. ರಾಷ್ಟ್ರೀಯ ವಿದ್ಯಾರ್ಥಿ ಪಡೆ ಯಾವ ವಿಶಿಷ್ಟ ವೃತ್ತಿ ಅಥವಾ ವ್ಯವಸಾಯಕ್ಕೆ ತರಬೇತಿ ಕೊಡುವದಿಲ್ಲ; ಅದು ಭವಿಷ್ಯತ್ತಿಗಾಗಿ ಸದೃಢವಾದ ತಳಹದಿಯನ್ನಷ್ಟೇ ಹಾಕುವುದು. ಇದೇ ಅದರ ವೈಶಿಷ್ಟ್ಯ.

ರಾ. ವಿ. ಪಡೆ ೧೯೪೮ರಲ್ಲಿ ಸ್ಥಾಪಿತವಾಯಿತು. ಕೆಲಕಾಲದಲ್ಲೇ ಅದು ರಾಷ್ಟ್ರದ ಚಿತ್ತವನ್ನು ಆಕರ್ಷಿಸಿತು. ಅದರ ಧ್ಯೇಯಗಳು ಮನವರಿಕೆಯಾದ ಮೇಲೆ ಶಾಲೆ ಕಾಲೇಜುಗಳಲ್ಲಿ ಅದಕ್ಕೆ ಸ್ವಯಂಸೇವಕರ ಕೊರತೆಯಾಗಿಲ್ಲ. ಹಣದ ಕೊರತೆ ಇಲ್ಲದಿದ್ದರೆ ಅದು ಈಗಿಂತಲೂ ಎಷ್ಟೋ ಬೆಳೆಯಬಹುದಿತ್ತು. ಆದರೂ ಅದು ರಭಸದಿಂದಲೇ ಪ್ರಗತಿ ಹೊಂದಿದೆ. ಡೆಹರಾಡೂನಿನ ರಾಷ್ಟ್ರೀಯ ಸಂರಕ್ಷಣ ಬಲದ ಮೂರೂ ಅಂಗಗಳಿಗೆ ಅಧಿಕಾರಿಗಳಾಗಲು ಸೈನಿಕ ಶಿಕ್ಷಣ ಹೊಂದುತ್ತಿರುವವರಲ್ಲಿ ಬಹಳ ಜನರು ರಾ. ವಿ. ಪಡೆಯಲ್ಲಿ ತರಬೇತಾದವರೇ ಇದ್ದಾರೆ.

ನಾಗರಿಕತ್ವದ ತರಬೇತಿಯೇ ಧ್ಯೇಯ.

ಆದರೂ ರಾಷ್ಟ್ರೀಯ ವಿದ್ಯಾರ್ಥಿ ಪಡೆಯ ಉದ್ದೇಶ ಯುವಕ ಯುವತಿಯರನ್ನು ಸೈನಿಕರಾಗಿ ಮಾಡುವುದಲ್ಲ. ಮೊದಲನೆಯದಾಗಿ, ಚಾರಿತ್ರ್ಯಬಲ, ಬಂಧುಭಾವ, ಸೇವಾಭಾವ ಮತ್ತು ಮುಂದಾಳ್ತನದ ಯೋಗ್ಯತೆಗಳನ್ನು ಬೆಳಸುವುದು; ಎರಡನೆಯದಾಗಿ ರಾಷ್ಟ್ರೀಯ ಆಪತ್ಕಾಲದಲ್ಲಿ ಸಶಸ್ತ್ರಬಲಗಳನ್ನು ರಭಸದಿಂದ ವಿಸ್ತರಿಸಲು ಅನುಕೂಲವಾಗುವಂತೆ ತರಬೇತಿ ಹೊಂದಿದ ಜನರ ಒಂದು ಕಾದಿಟ್ಟ ನಿಧಿಯನ್ನು ತಯಾರಿಸಿಡುವುದು ಇವೇ ರಾ. ವಿ. ಪಡೆಯ ಗುರಿಗಳು. ಈ ಪ್ರಕಾರ ಶಾಲೆ ಕಾಲೇಜುಗಳಲ್ಲಿ ದೊರೆಯುವ ಶಿಕ್ಷಣದ ಸಂಗಡ ಸೈನಿಕ ತರಬೇತಿಯನ್ನೂ ಕೊಟ್ಟು ರಾ. ವಿ. ಪಡೆಯು ಅವರ ಶಿಕ್ಷಣಕ್ಕೆ ಮಹತ್ವದ ಪೂರಕ ಶಕ್ತಿಯನ್ನು ಕೊಡುವುದೆಂದೂ ಸ್ಪಷ್ಟವಾಗುವುದು.

ರಾಷ್ಟ್ರೀಯ ವಿದ್ಯಾರ್ಥಿ ಪಡೆಯಲ್ಲಿ ಹಿರಿಯ ದಳ, ಕಿರಿಯದಳ ಮತ್ತು ಸ್ತ್ರೀದಳವೆಂದು ಮೂರು ಶಾಖೆಗಳಿವೆ. ಹಿರಿಯ ಮತ್ತು ಕಿರಿಯ ದಳಗಳಲ್ಲಿ ಭೂಸೇನೆ, ನಾವಿಕಬಲ ಮತ್ತು ವಿಮಾನಬಲವೆಂದು ಮೂರು ವಿಭಾಗಗಳು. ದೇಶದ ನಾನಾ ಕಾಲೇಜು ವಿಶ್ವವಿದ್ಯಾಲಯಗಳಲ್ಲಿ ಸೇರಿ ವಿದ್ಯಾರ್ಥಿ ಪಡೆಯ ಹಿರಿಯ ದಳದಲ್ಲಿ ೨೫,೦೦೦ ಸೈನಿಕ ವಿದ್ಯಾರ್ಥಿಗಳೂ ೮೦೦ ಅಧಿಕಾರಿಗಳೂ ಸದ್ಯಕ್ಕೆ ಇದ್ದಾರೆ. ಕಳೆದ ವರ್ಷ ನೌಕಾ ವಿಭಾಗ ಪ್ರಾರಂಭವಾಗಿದ್ದು ಅದರಲ್ಲಿ ೨ ಹಿರಿಯ ಮತ್ತು ೨೬ ಕಿರಿಯ ದಳ ಘಟಕಗಳಿವೆ.

ಕಿರಿಯ ದಳದ ಘಟಕಗಳು ಹೆಚ್ಚಾಗಿ ಹೈಸ್ಕೂಲು ಮತ್ತು ಪಬ್ಲಿಕ್ ಸ್ಕೂಲುಗಳಲ್ಲಿ ಸಂಗ್ರಹಿಸಲ್ಪಟ್ಟಿವೆ. ಸದ್ಯಕ್ಕೆ ಕಿರಿದಳದ ಸಂಖ್ಯಾಬಲ ೧,೫೨೦ ಅಧಿಕಾರಿಗಳು ಮತ್ತು ೫೩,೦೦೦ ಸೈನಿಕ ವಿದ್ಯಾರ್ಥಿಗಳು.

ಸ್ತ್ರೀ ದಳ.

ಸ್ತ್ರೀ ದಳದ ಉದ್ದೇಶವು ಹುಡುಗಿಯರಲ್ಲಿ ವ್ಯಕ್ತಿತ್ವ ವಿಕಾಸ, ಹೆಚ್ಚು ಸ್ವಾವಲಂಬನೆ, ದೈಹಿಕ ಶಕ್ತಿ ಸಂಪಾದನೆಗಳನ್ನುಂಟು ಮಾಡಿ ಅವಶ್ಯಸಂಗದಲ್ಲಿ, ಸಾಮಾನ್ಯವಾಗಿ ಗಂಡಸರು ಮಾಡುವ ಕೆಲ ಕರ್ತವ್ಯಗಳನ್ನು ವಹಿಸಿಕೊಳ್ಳಲು ಸ್ತ್ರೀಯರಲ್ಲಿ ಸಾಮರ್ಥ್ಯವುಂಟುಮಾಡುವುದಾಗಿದೆ. ಈಗ ಸ್ತ್ರೀದಳದಲ್ಲಿ ಹೆಚ್ಚು ಘಟಕಗಳಿಲ್ಲ. ಆದರೆ ಅದು ಅತ್ಯಂತ ಜನಪ್ರಿಯವಾಗುತ್ತಿದ್ದು ಬೇಗನೆ ಅದರ ಸಂಖ್ಯೆ ಬೆಳೆಯುವ ನಿರೀಕ್ಷೆ ಇದೆ. ಸದ್ಯಕ್ಕೆ ಅದರಲ್ಲಿ ೧೭ ಅಧಿಕಾರಿಗಳೂ ೫೨೦ ವಿದ್ಯಾರ್ಥಿನಿಯರೂ ಇದ್ದಾರೆ.

ಶಿಸ್ತು, ಮುಂದಾಳ್ತನದ ಯೋಗ್ಯತೆ, ಚಾರಿತ್ರ್ಯ ಸಂಪತ್ತಿ, ಸಾಮೂಹಿಕ ಜೀವನ ಇವುಗಳನ್ನು ಬೆಳೆಸುವುದಕ್ಕೆ ರಾ. ವಿ. ಪಡೆಯಲ್ಲಿ ಮಹತ್ವ ಕೊಡಲಾಗಿದೆ. ದೇಹಸೌಷ್ಠವ ಹೆಚ್ಚಿಸುವ ಉದ್ದೇಶದಿಂದ ಆಟಪಾಟಗಳ ವ್ಯವಸ್ಥೆಯಿದೆ. ಶಿಬಿರಗಳಲ್ಲಿ ಸಾಮೂಹಿಕ ಜೀವನದ ತರಬೇತಿಯಾಗುವುದು. ಅಲ್ಲಿ ಧರ್ಮ, ಜಾತಿ, ಮತಗಳ ಭೇದ ಮಾಯವಾಗಿ ಹೋಗುತ್ತಿದೆ.

ರಾ. ವಿ. ಪಡೆಗೆ ಹೆಚ್ಚು ಜನಸಂಪರ್ಕ ದೊರಕಿಸಲು ಪ್ರತಿ ವರ್ಷ ಜನವರಿ ೨೭ಕ್ಕೆ ರಾ. ವಿ. ಪಡೆ ದಿನಾಚರಣೆ ನಡೆಸುವ ನಿರ್ಧಾರ ಮಾಡಲಾಗಿದೆ. ಪ್ರಜಾರಾಜ್ಯ ದಿನದ ಪರೇಡುಗಳಲ್ಲಿ ಭಾಗವಹಿಸಲು ಬೇರೆ ಬೇರೆ ರಾಜ್ಯಗಳಿಂದ ರಾ. ವಿ. ಪಡೆಯ ಪಥಕಗಳು ಬರುತ್ತವೆ.

ವಿವಿಧ ಅಂತರಾಷ್ಟ್ರೀಯ ಸಮ್ಮೇಲನಗಳಲ್ಲಿಯೂ ಬರಗಾಲ, ಮಿಡತೆ ಹಾವಳಿಯಂಥ ರಾಷ್ಟ್ರೀಯ ವಿಪತ್ತುಗಳಲ್ಲಿಯೂ ಅಮೂಲ್ಯ ಸೇವೆಸಲ್ಲಿಸಿ ರಾ. ವಿ. ಪಡೆಗಳು ಆಗಲೇ ತಮ್ಮ ಇರವನ್ನು ಸಾರ್ಥಕ ಪಡಿಸಿಕೊಂಡಿವೆ. ವಾರ್ಷಿಕ ಶಿಬಿರೋತ್ಸವಕಾಲದಲ್ಲಿ ರಾ. ವಿ. ಪಡೆಯವರು ಸ್ವಯಂ ಪ್ರೇರಣೆಯಿಂದ ನೆರೆಹಳ್ಳಿಗಳಿಗೆ ಹೋಗಿ ರಸ್ತೆಗಳ ರಚನೆ, ಆರೋಗ್ಯ ಸಂರಕ್ಷಣೆಯೇ ಮೊದಲಾದ ಗ್ರಾಮಸೇವಾ ಕಾರ್ಯಗಳಲ್ಲಿ ನೆರವಾಗಿದ್ದಾರೆ. ಗೌಹಟ್ಟಿಯ ಸಮೀಪ ಒಂದು ಕಡೆ ೩೦೬ ವಿದ್ಯಾರ್ಥಿಗಳು ಒಂದು ಮೈಲು ಉದ್ದ ರಸ್ತೆಯನ್ನು ರಚಿಸಿ ಅಲ್ಲಿನ ಜನರ ಕೃತಜ್ಞತೆಗೆ ಪಾತ್ರರಾದರು.

ಅಂತೂ ರಾಷ್ಟ್ರೀಯ ವಿದ್ಯಾರ್ಥಿ ಪಡೆಯು ಅಮೂಲ್ಯ ರಾಷ್ಟ್ರೀಯ ಸಂಸ್ಥೆಯಾಗಿದೆ. ದೇಶದ ಉಜ್ವಲ ಭವಿತವ್ಯವನ್ನು ಕಟ್ಟುವ ಈ ಉಪಕ್ರಮದ ಯಶಸ್ಸು ಯುವಕರ ಪರೋಪಕಾರ ಬುದ್ಧಿ ಮತ್ತು ಸಾರ್ವಜನಿಕ ಸಹಕಾರ ಇವನ್ನವಲಂಬಿಸಿವೆ. ಈ ವರೆಗಂತೂ ಅದರ ಬಗ್ಗೆ ದೇಶದ ಯುವಕರು ತುಂಬ ಉತ್ಸಾಹವನ್ನು ತೋರ್ಪಡಿಸಿದ್ದಾರೆ. "ಕ. ವಿ."

ಎನ್. ಸಿ. ಸಿ. ದಿನಾಚರಣೆ

ಅಖಿಲ ಭಾರತ ಎನ್. ಸಿ. ಸಿ. ದಿನಾಚರಣೆಯು ತಾ. ೨೭ ರಲ್ಲಿ ಕೊಡಗಿನಲ್ಲಿಯೂ ಆಚರಿಸಲ್ಪಟ್ಟಿತು. ಮಡಿಕೇರಿಯಲ್ಲಿ ಅಪರಾಹ್ನ ಮೂರು ಗಂಟೆಗೆ ಧ್ವಜಾರೋಹಣವು ಚೀಫ್ ಕಮಿಷನರಿಂದ ನಡೆಯಿತು. ನಿವೃತ್ತ ಸೇನಾನಿ ಜನರಲ್ ಕಾರ್ಯಪ್ಪನವರೂ ಬಂದಿದ್ದರು. ಎನ್. ಸಿ. ಸಿ. ವಂದನೆಯನ್ನು ಸ್ವೀಕರಿಸಿದ ನಂತರ ಕವಾಯತು ನಡೆಯಿತು. ಕವಾಯತು ನಿಜವಾಗಿಯೂ ಆಕರ್ಷಣೀಯವಿತ್ತು. ನಂತರ ಶಾರೀರಿಕ ವ್ಯಾಯಾಮ ಪ್ರದರ್ಶನ ಮಾಡಲಾಯಿತು. ಗುರಿಗೆ ಗುಂಡು ಹೊಡೆಯುವ ಸ್ಪರ್ಧೆಯಲ್ಲಿ ಕೇಡೆಟ್ ಎಂ. ಎಂ. ಮುತ್ತಣ್ಣನವರು ಐದು ಗುಂಡುಗಳಲ್ಲಿ ಐದನ್ನೂ ಸರಿಯಾಗಿ ಹೊಡೆದು ಎಲ್ಲರನ್ನೂ ಆಶ್ಚರ್ಯಗೊಳಿಸಿದರು. ನಂತರ ಆಟೋಟಗಳ ಸ್ಪರ್ಧೆ ನಡೆಯಿತು. ಸ್ಪರ್ಧೆಯ ಜಯಶೀಲರಾದವರಿಗೆ ಬಹುಮಾನವೂ ಕೊಡಲಾಯಿತು.

ನಂತರ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ. ಪಟ್ಟನಾಥ ಪೂವಯ್ಯನವರು ಅಧ್ಯಕ್ಷರನ್ನು ವಂದಿಸಿ ಎನ್. ಸಿ. ಸಿ. ಯ ವಿಚಾರ ಒಂದೆರಡು ಮಾತಾಡಿದರು. ಶ್ರೀ. ಕೆ. ಎ. ಸೋಮಣ್ಣನವರು ಎನ್. ಸಿ. ಸಿ. ಯ ಕಾರ್ಯಕಲಾಪಗಳನ್ನೂ, ಅವರು ಮಾಡಿದ ಸಾಮಾಜಿಕ ಸೇವೆಯನ್ನೂ ಜನರಲ್ ಕಾರ್ಯಪ್ಪನವರು ಕಳೆದ ಸಾರೆ ಸಂದರ್ಶಿಸಿ ಇಡೀ ಹಿಂದೂಸ್ಥಾನದಲ್ಲೇ ಉತ್ತಮವಾದ ಒಂದು ದಳ ಇದೆಂದು ವ್ಯಕ್ತಮಾಡಿದ ಅಭಿಪ್ರಾಯವನ್ನೂ ಹೇಳಿದಲ್ಲದೆ ಕಳೆದ ವರ್ಷ ಅಖಿಲ ಕೊಡಗು ಕಪ್ಪನ್ನು ಗೆದ್ದಿರುವದಲ್ಲದೆ ಈ ವರ್ಷವೂ ಅದನ್ನು ಉಳಿಸಿಕೊಂಡಿರುವದಾಗಿಯೂ ಹೇಳಿದರು.

ಅಧ್ಯಕ್ಷರಾದ ಶ್ರೀ ಬೇಡಿಯವರು ಎನ್. ಸಿ. ಸಿ. ದಳದ ಅಂದಿನ ಕಾರ್ಯ ಕಲಾಪಗಳ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿ ಎನ್. ಸಿ. ಸಿ. ತರಬೇತಿನ ಮೂಲಗುರಿ ಸೈನಿಕರನ್ನು ಯುದ್ಧಕ್ಕಾಗಿ ತಯಾರಿಸುವದಲ್ಲವೆಂದೂ ಪ್ರತಿಯೊಬ್ಬನಲ್ಲೂ, ಶಿಸ್ತು, ಸಂಘಟನೆ, ಮುಂದಾಳುತನ ಮೊದಲಾದ ಗುಣಗಳನ್ನು ಹೆಚ್ಚಿಸಿ ಯೋಗ್ಯನಾಗರಿಕರನ್ನಾಗಿ ಮಾಡುವದೇ ಗುರಿಯೆಂದೂ ಹೇಳಿದರು.

ಎನ್. ಸಿ. ಸಿ. ದಿನಾಚರಣೆಯು ನಾಪೋಕ್ಲು ಹೈಸ್ಕೂಲಿನಲ್ಲಿ ಕೊಡಗು ಸರಕಾರದ ಚೀಫ್ ಸೆಕ್ರೆಟರಿ ಶ್ರೀ. ಸಿ. ನರಸಿಂಹಮೂರ್ತಿಯವರ ಅಧ್ಯಕ್ಷತೆಯಲ್ಲೂ, ಪೊನ್ನಂಪೇಟೆ ಹೈಸ್ಕೂಲಿನಲ್ಲಿ ಕೊಡಗಿನ ಮುಖ್ಯ ಮಂತ್ರಿ ಶ್ರೀ. ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲೂ, ನಡೆಯಿತು.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನೀವು ಬಲ್ಲಿರಾ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ದಾಕ್ಲೆ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕೋರ್ಪೊರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕೋರ್ಪೊರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು —

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED

ಉತದ

ಜ್ಞಾನ ದೀಪ.

(೧)

ಹತ್ತಿಯನ್ನು ತುಂಬಿಸಿ ಇಟ್ಟಲ್ಲಿ ಹೆಚ್ಚೆಂದರೆ ಹಾಸಿಗೆಯಾದೀತು. ಹತ್ತಿಯನ್ನು ನೂತು ನೇದು ಅರಿವೆ ಮಾಡಬಲ್ಲೆಯಾದರೆ ಎಲ್ಲಾ ಉಪಯೋಗಕ್ಕೂ ಬಂದೀತು. ಅನುಭವವೂ ಹಾಗೆಯೆ! ಕೇವಲ ಜಮಾಯಿಸಿಟ್ಟುಕೊಂಡಲ್ಲಿ ಹೆಚ್ಚೆಂದರೆ ಜ್ಞಾನಿ ಎನ್ನಿಸಿಕೊಳ್ಳುವೆ. ಆಲೋಚಿಸಿ ಉಪಯೋಗಿಸಿಕೊಳ್ಳಬಲ್ಲೆಯಾದರೆ ಸರ್ವ ಕಾರ್ಯಗಳನ್ನೂ ಸಾಧಿಸಬಲ್ಲೆ.

(೨)

ಹಾಲನ್ನು ಉಣ್ಣಲು ಗಿಳಿ ಇರಬಹುದಾದರೂ ಪಿಂಡಾನ್ನವಿಡುವಾಗ ಕಾಗೆಯೇ ಬರಬೇಕು. ಸಂಭ್ರಮದ ವೇಳೆಯಲ್ಲಿ "ಸಂಭಾವಿತ" ರನ್ನೇ ಕರೆದರೂ ಸಂಕಟಕಾಲದಲ್ಲಿ ಶ್ರಮಜೀವಿಯೇ ಬೇಕು.

(೩)

ರಾಷ್ಟ್ರಧ್ವಜವೇ ಆದರೂ ವಂದನೆ ಪಡೆಯಬೇಕಾದರೆ ಸ್ತಂಭಕ್ಕಾರೋಹಿಸಲ್ಪಡಬೇಕು. ಮಡಚಿಟ್ಟರೆ ಖಾಲಿ ವಸ್ತ್ರವಷ್ಟೇ ಮಾನ. ಸ್ವತಹ ಯೋಗ್ಯತೆ ಉಳ್ಳವನಾದರೂ ಗೌರವಿಸಲ್ಪಡಬೇಕಾದರೆ ಯೋಗ್ಯ ಸ್ಥಾನಕ್ಕೇರಿ ಕೂತಿರಬೇಕು. ಮೇಲೇರದೆ ಮೂಲೆಯಲ್ಲಿದ್ದರೆ ಸಾಮಾನ್ಯನಷ್ಟೇ ಮಾನ, ಸತ್ಕಾರ!

—ನುಡಿಮುತ್ತು.

ಕೊಡಗು

ತಾರೀಕು ೩೦ ಜನವರಿ ೧೯೫೩ನೇ ಶುಕ್ರವಾರ

ಗಾಂಧೀಜಿ ಇಲ್ಲದ ಐದು ವರ್ಷಗಳು.

ಇಂದಿಗೆ ಐದು ವರ್ಷಗಳ ಹಿಂದಿನ ಇದೇ ಶುಕ್ರವಾರ ಬಿರ್ಲಾ ಭವನದ ಆವರಣದಲ್ಲಿ ಕೊಲೆಗಡುಕನ ರಿವಾಲ್ವರಿನಿಂದ ಸಿಡಿದ ನಾಲ್ಕು ಗುಂಡುಗಳು ಆಗ ತಾನೇ ಸ್ವಾತಂತ್ರ್ಯ ಪಡೆದ ಭಾರತದ ಏಕೆ? ಇಡೀ ಮಾನವಕೋಟಿಯ ಕಿರೀಟಪ್ರಾಯ ಜೀವದೀಪವೊಂದನ್ನು ನಂದಿಸಿತು. ನಂತರ ನಡೆಸಿದ ಮಹಾ ಕತ್ತಲೆಯಲ್ಲಿ ಶಿಕ್ಷೆಪ್ಪ ಜನರು ಎದೆ ಬಡಿದು ರೋದಿಸಿದರು. ಮಹಾತ್ಮರ ಕಳೇಬರವನ್ನು ಅಗ್ನಿಗಾಹುತಿ ಮಾಡಿ ರಾಜಘಾಟಿನಲ್ಲಿ ಸಮಾಧಿ ಕಟ್ಟಲಾಯಿತು. ಅಲ್ಲಿಗೆ ಪಾರ್ಥಿವ ಶರೀರಧಾರಿ ಗಾಂಧಿಯ ಕಥೆ ಮುಗಿಯಿತು. ವಿದೇಶದಿಂದ ಭಾರತಕ್ಕೆ ಬರುವ ಯಾತ್ರಿಕರು ಯಾ ಅಧಿಕಾರಿ ವರ್ಗದವರು ರಾಜಘಾಟನ್ನು ಸಂದರ್ಶಿಸಿ ಹೂ ಅರ್ಪಿಸುವ ಪದ್ಧತಿಯಾಗಿ, ಆ ವಿಚಾರ ಪತ್ರಿಕೆಗಳಲ್ಲಿನ ವಾರ್ತೆಯಲ್ಲದೆ ಗಾಂಧೀಜಿಯವರ ನೆನಪು ಭಾರತೀಯರಾದ ನಮ್ಮಲ್ಲಿ ಉಳಿದಂತೆ ತೋರುವುದಿಲ್ಲ. ಕೇವಲ ಐದು ವರ್ಷಗಳಲ್ಲಿ ದೇಶದ ಮಹಾನ ಸರ್ವೋತ್ತಮನನ್ನು ಮರೆಯುವಷ್ಟು ಸಾರ್ವಜನಿಕ ಮನಸ್ಸು ಕರ್ಮಠವಾಗಿದೆ.

ಗಾಂಧೀಜಿಯವರು ಕ್ರಮಶಃ ಮರೆಯಲ್ಪಡುತ್ತಿದ್ದರೆ ಮತ್ತೆ ಗಾಂಧೀವಾದದ ಸ್ಥಿತಿ ಏನಾಗಿದೆ? ನಿಜ, ಗಾಂಧೀವಾದವೊಂದಿಲ್ಲವೆಂದು ಗಾಂಧೀಜಿಯವರು ನೂರಾರು ಸಾರಿ ಹೇಳುತ್ತಿದ್ದರು. ಆ ರೀತಿಯ ಒಂದು ವಾದವು ಇಲ್ಲದಿರಬಹುದಾದರೂ ಗಾಂಧೀಜಿಯವರು ಕಾರ್ಯತಃ ಆಚರಿಸಿ ತೋರಿಸಿದ ತತ್ವಗಳು ಸ್ವತಹ ದುಡಿದು ತೋರಿಸಿದ ಆದರ್ಶಗಳು, ಅವರು ಎತ್ತಿ ತೋರಿಸಿದ ಸತ್ಯ, ನೀತಿ, ಅಹಿಂಸೆ, ತ್ಯಾಗ, ಬಲಿದಾನ, ಪರಹಿತ ಬುದ್ಧಿ, ಮಾನವತೆಯ ಅಖಂಡ ದೃಷ್ಟಿ ಇವೆಲ್ಲ ಸೂರ್ಯ ಚಂದ್ರರಿರುವ ವರೆಗೆ ಬಾಳುವಂತವು. ಅವುಗಳಿಗೆ ಚ್ಯುತಿ ಇಲ್ಲ. ಇಂಥಾ ಚ್ಯುತಿ ರಹಿತ ವಿಮಲ ತತ್ವಗಳನ್ನು ಭಾರತೀಯರಾದ ನಾವು ಎಷ್ಟರ ಮಟ್ಟಿಗೆ ಅನುಸರಿಸಿ ಗಾಂಧೀಜಿಯವರ ದಿವ್ಯ ಬೆಳಕಿನಿಂದ ಬೆಳಗಿದ ಭಾರತದ ಕೀರ್ತಿಗೆ ಶೋಭೆ ತರುತ್ತಿದ್ದೇವೆಂಬುದನ್ನು ಪರಿಶೀಲಿಸಿದರೆ ದುಃಖವಾಗುತ್ತದೆ.

ಭಾರತಕ್ಕೆ ಮಹಾ ಸೇನೆಯ ಅಗತ್ಯವಿಲ್ಲವೆಂದು ಗಾಂಧೀಜಿ ನುಡಿದರು. ಗಾಂಧೀಜಿಯವರು ಸತ್ತ ಮರುದಿನವೇ ಅವರ ಶವವನ್ನು ಮಿಲಿಟರಿ ಟ್ರಕ್ಕಿನಲ್ಲಿರಿಸಿ, ಮಿಲಿಟರಿ ಪಡೆ, ತೋಪುಗುಂಡುಗಳ ಗೌರವವಿತ್ತು ಅವಮಾನಿಸಿದೆವು. ಅಂದಿನಿಂದ ಇಂದಿನ ವರೆಗೆ ಪಾಶ್ಚಿಮಾತ್ಯರ ಹೆಜ್ಜೆಯನ್ನೇ ಹಿಡಿದು ಸೈನ್ಯವನ್ನು ವಿಸ್ತರಿಸುತ್ತಿರುವೆವು. ಇಂದು ಹಿಂದೂದೇಶದ ಆದಾಯದ ಬಹು ಭಾಗವು ಸೈನಿಕ ಶಿಕ್ಷಣಕ್ಕಾಗಿ ವ್ಯಯವಾಗುತ್ತಿದೆ. ಹಿಂದೂದೇಶದ ವಿಭಜನೆಗೆ ಅವರು ವಿರೋಧಿಸಿದರು. ನಾವು ಕೇಳಲಿಲ್ಲ. ಕಾಶ್ಮೀರ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಭೆಯ ಮುಂದಿಡಬೇಕೆಂದು ಎಚ್ಚರಿಸಿದರು. ನಾವು ಕೇಳಲಿಲ್ಲ. ವಿಧಾಯಕ ಕಾರ್ಯಕ್ರಮವನ್ನು ಪ್ರತಿಯೊಬ್ಬರೂ ಕೈಕೊಳ್ಳಬೇಕೆಂದರು. ನಾವು ಅಧಿಕಾರ ರಾಜಕೀ[illegible]ಯಾರಂಭಿಸಿದೆವು. ಸರಳ ಜೀವನದ ಆದರ್ಶವನ್ನು ಮುಂದಾಳುಗಳು, ಸಿ[illegible] ಕೆಂದರು. ಅತ್ತಿಂದ ಮಾಸಿಕ ವೇತನವು ರೂ. ೫೦೦/-ಕ್ಕಿ[illegible]ದರು. ಆದರೆ ಅಧಿಕಾರ ದೊರೆತೊಡನೆಯೇ ಸಾವಿರಗಟ್ಟಲೆ ವೇತನ ಏರ್ಪಡಿಸಿಕೊಂಡೆವು; ಅರಮನೆಗಳಲ್ಲಿ ವಾಸಿಸತೊಡಗಿದೆವು. ಕೈನೂಲಿನ ಖಾದಿ ಉಡಬೇಕು; ಸ್ವದೇಶೀ ವಸ್ತುಗಳನ್ನು ಉಪಯೋಗಿಸಬೇಕೆಂದು ಸ್ವತಹ ಮಾಡಿ ತೋರಿಸಿದರು. ಇಂದು ನಮಗೆ ಖಾದಿ ಬೇಕಿಲ್ಲ. ನೂಲು ನೂಲಬೇಕಿಲ್ಲ. ಸ್ವದೇಶೀ ತತ್ವದ ಆವಶ್ಯಕತೆಯಿಲ್ಲ. ನೆಹರೂರವರು ಪರದೇಶೀ ಸಾಮಾನು ಉಪಯೋಗಿಸೆನೆಂಬುದು ಇಂದು ನಮಗೆ ವಿಶೇಷ ವರ್ತಮಾನವಾಗಿದೆ! ವಿಕೇಂದ್ರೀಕೃತ ಗ್ರಾಮೋದ್ಯೋಗ ಜಾರಿಯಲ್ಲಿ ಬರಬೇಕು. ನಗರಗಳ ಬೆಳವಣಿಗೆ ಕಡಿಮೆಯಾಗಿ ಆರ್ಥಿಕ ಬಲ ಗ್ರಾಮಾಂತರಗಳಲ್ಲಿ ಉಳಿಯುವಂತಾಗಬೇಕು ಎಂದು ಹೇಳಿದರು. ಅದಕ್ಕಾಗಿ ಒಂದು ಆದರ್ಶ ಯೋಜನೆಯನ್ನೂ ತಯಾರಿಸಿದರು. ಆದರೆ ಅದು ಅವರೊಂದಿಗೆ ಸಮಾಧಿಯನ್ನು ಪಡೆಯಿತು. ಬಂಡವಳ ರಾಷ್ಟ್ರ ಅಮೇರಿಕಾದ ಗ್ರಾಮಗಳಂತೆ ಹಿಂದೂದೇಶದ ಗ್ರಾಮಗಳನ್ನು ರಚಿಸುವ ಯತ್ನ ನಡೆಯುತ್ತಿದೆ ಗ್ರಾಮಗಳಿಗೆ ಟ್ರಾಕ್ಟರುಗಳು, ಪಂಪುಗಳು, ಬರತೊಡಗಿವೆ. ಗಾಂಧೀಜಿಯವರು ವಿರೋಧಿಸಿದ ಯಂತ್ರ ಜೀವನವನ್ನೇ ಆದರ್ಶವಾಗಿ ಎತ್ತಿಕೊಳ್ಳಲಾಗುತ್ತಿದೆ.

ಇಂಥಾ ನೂರಾರು ಉದಾಹರಣೆಗಳನ್ನು ಕೊಡಬಹುದು. ಗಾಂಧೀಜಿಯವರು ಯಾವ ತತ್ವಸಿದ್ಧಾಂತಗಳನ್ನು ಸಾರಿದರೋ ಯಾವ ಆದರ್ಶವನ್ನು ಭಾರತೀಯರಿಗೆ ಹಾಕಿಕೊಟ್ಟರೋ ಅವೆಲ್ಲ ಮೂಲೆಪಾಲಾಗಿವೆ. ಪ್ರತಿ ಮಂತ್ರಿ, ಪ್ರತಿ ಮುಂದಾಳೂ ಕೂಡ ಗಾಂಧೀಜಿಯವರ ಹೆಸರನ್ನು ಮಾತುಮಾತಿಗೆ ಎತ್ತಿದರೂ ಕೃತಿಯಲ್ಲಿ ವಿಪರೀತವೇ ಜರುಗುತ್ತಿದೆ. ಗಾಂಧೀಜಿಯವರು ನುಡಿದ ಸತ್ಯ, ಅಹಿಂಸೆ, ದಯೆ, ನೀತಿ, ತ್ಯಾಗಗಳೆಲ್ಲಿ? ಇಂದಿನ ಲಂಚಗುಳಿತನ, ಕಳ್ಳವ್ಯಾಪಾರ, ಲಾಭ ಬಡಕತನ, ಅಧಿಕಾರ ದರ್ಪ, ಆಡಂಬರಗಳೆಲ್ಲಿ? ಎಲ್ಲಿದೆ ಭಾರತದಲ್ಲಿ ಗಾಂಧೀವಾದ? ಗಾಂಧೀಜಿಯವರ ನಮ್ರ ಶಿಷ್ಯ ಆಚಾರ್ಯ ವಿನೋಭಾ, ಖಂಡಿತವಾದಿ ಕುಮಾರಪ್ಪ, ಮೊದಲಾದ ಕೆಲವು ಕರ್ಮಯೋಗಿಗಳನ್ನು ಬಿಟ್ಟು ಗಾಂಧೀಜಿಯ ನಿಜ ಅನುಯಾಯಿಗಳು ಯಾರಿದ್ದಾರೆ?

ಅಹಿಂಸೆಯ ಮೂರ್ತಿ ಸ್ವರೂಪ ಗಾಂಧೀಜಿಯ ಹೆಸರಿನಲ್ಲೇ ಅವರ್ಣನೀಯವಾದ ಹಿಂಸೆ ನಡೆಯುತ್ತಿದೆ. ಯುದ್ಧ, ಘರ್ಷಣೆಗಳಲ್ಲಿ ವಿಶ್ವಾಸವಿರಿಸಿದ ಸೈನಿಕ ತರಬೇತಿ ಮೊದಲಾದ ಹಿಂಸಾ ಕಾರ್ಯದ ಮಾತಿರಲಿ. ಪ್ರತಿ ಹೆಜ್ಜೆ ಹೆಜ್ಜೆಯಲ್ಲಿಯೂ ಭಾರತೀಯರಾದ ನಾವು ಹಿಂಸಾಮಾರ್ಗವನ್ನನುಸರಿಸಿದ್ದೇವೆ. ಅಧಿಕಾರದ ದುರುಪಯೋಗ, ಅಸತ್ಯ ವರ್ತನೆ ಸುಳ್ಳು, ಭರವಸೆ, ತೋರಿಕೆಯ ಆಡಂಬರ ಹಾಗೂ ಗೌರವ, ಇವೆಲ್ಲ ಹಿಂಸೆಯ ಪರಿಧಿಯೊಳಗೆ ಸೇರುತ್ತವೆ. ಒಂದು ದೃಷ್ಟಿಯಿಂದ ಮಹಾತ್ಮರು ಕೊಲೆಗಡುಕನ ಗುಂಡಿಗೆ ಆಹುತಿಯಾಗಿ ಅಮರರಾದುದೇ ಹಿತವೆನ್ನಬೇಕಾಗಿದೆ. ಏಕೆಂದರೆ, "If India walks on the path of violence and I have surviv d, I would not care to live in India" ಹಿಂದೂದೇಶವು ಹಿಂಸಾಪಥದಲ್ಲಿ ನಡೆಯುತ್ತಿದ್ದು ನಾನು ಬದುಕಿರುವುದಾದರೆ ನಿಜವಾಗಿ ಅಂಥಾ ಭಾರತದಲ್ಲಿ ಬದುಕುವುದು ನನಗೆ ಅಗತ್ಯವಿಲ್ಲವೆಂದು ಅವರೇ ಹೇಳಿದ್ದಾರೆ.

ಒಂದರ ನಂತರ ಒಂದು ಜನವರಿ ೩೦ರ ಪುಣ್ಯ ದಿನ ಬಂದಂತೆಯೇ ನಾವು ಗಾಂಧೀಜಿಯಿಂದ ದೂರ ಸರಿಯುತ್ತಿರುವೆವು. ಗಾಂಧೀಜಿಯವರು ಹೇಳಿದ ಸರ್ವರ ಹಿತ, ಭೇದರಹಿತ ಸಮಾಜದ ರಚನೆಗೆ ಕಾಂಗ್ರೆಸ್ ಸರಕಾರ ಎಲ್ಲಿ ಪ್ರಯತ್ನಿಸುತ್ತಿದೆ? ಜನತೆಯ ಒಡನಾಡಿ ಜನನಾಯಕರಾಗಿ ಅಧಿಕಾರಕ್ಕೆ ಬಂದವರು, ಜನರಿಂದ ದೂರವಾಗಿ ಅರಮನೆಗಳಲ್ಲಿ ಕೂತು, ಆರ್ಥಿಕ ಗೋಡೆಯೊಳಗೇರಿ ಸಾಮಾನ್ಯ ಜನರಿಂದ ಪ್ರತ್ಯೇಕ ವರ್ಗವಾಗಿ ಕಾದು, ವಿಮಾನಗಳಲ್ಲಿ ಸುತ್ತತೊಡಗಿದರೆ ವರ್ಗರಹಿತ ಸಮಾಜ ರಚನೆಯಾಗುವುದು ಹೇಗೆ? ಆದ್ದರಿಂದ ಇಂದಿನ ನಿಷ್ಕ್ರಿಯ, ತೋರಿಕೆಯ ಬಾಹ್ಯಾಡಂಬರದ ಆದರ್ಶದ ಬದಲು ನಮ್ರತಾಪೂರ್ವ ಜಾರಿಯಲ್ಲಿ ಬರುವಂತೆ ಸರ್ವರೂ ಯತ್ನಿಸಬೇಕು. ಗಾಂಧೀಜಿಯವರ ಮಾತಿನಲ್ಲೇ ಹೇಳುವುದಾದರೆ "If Communism came without violence it would be welcome. For then no property would be held by any body except on behalf of the people and for the people" ಸಮತಾವಾದವು ಹಿಂಸೆಯ ಮಾರ್ಗವನ್ನು ಬಿಟ್ಟು ಬರುವುದಾದರೆ ಅದಕ್ಕೆ ಸುಸ್ವಾಗತವಿದೆ. ಆಗ ಜನತೆಯ ಪರವಾಗಿ, ಜನತೆಗೋಸ್ಕರವಾಗಿ ಅಲ್ಲದೆ ಬೇರೆ ಯಾರಲ್ಲಿಯೂ ಆಸ್ತಿ ಉಳಿಯಲಾರದು. ವರ್ಗ ಭೇದಕ್ಕೆ ಪ್ರಾಮುಖ್ಯ ಕಾರಣ ಆರ್ಥಿಕ ಅಸಮಾನತೆ. ಇದನ್ನು ತೊಡೆದು ಹಾಕುವುದೇ ಸಮತಾವಾದದ ಗುರಿ. ಆದರೆ ಇದು ಸರ್ವೋದಯದ ಕೊರಳು ಕತ್ತರಿಸುವ ಹಿಂಸಾಮಾರ್ಗದಿಂದಲ್ಲ; ಬದಲು ವಿನೋಬಾರವರು ಅನುಸರಿಸುತ್ತಿರುವ ಹೃದಯ ಪರಿವರ್ತನೆಯ ಮಾರ್ಗದಿಂದ. ಅವರ ಭೂದಾನ ಚಳವಳವು ಕ್ರಮಶಃ ಬೆಳೆಯುತ್ತಿದೆ; ಈ ವರೆಗೆ ೫ ಲಕ್ಷ ಎಕರೆಗಳಿಗೂ ಮಿಕ್ಕಿ ಭೂಮಿಯ ವಿತರಣೆಯಾಗಿದೆ. ಇದೇ ರೀತಿ ಜನವರಿ ೨೬ರಿಂದ ಅವರು ಭೂಮಿಯ ಮಾತ್ರವಲ್ಲ ಸಂಪತ್ತಿನ ವಿತರಣೆಯ ಚಳವಳವನ್ನೂ ಪ್ರಾರಂಭಿಸಿದ್ದಾರೆ. ಈ ನಿಜ ಗಾಂಧಿ ಅನುಯಾಯಿಗಳಿಗೆ ಬೆಂಬಲ ಕೊಡುವುದು ಸರ್ವರ ಕರ್ತವ್ಯ. ಅದು ಸರಕಾರವಿರಲಿ, ವ್ಯಕ್ತಿಗಳೇ ಇರಲಿ, ಮಹಾತ್ಮರ ಈ ಪುಣ್ಯದಿನದಂದು ಇಂಥಾ ಒಂದು ನಿರ್ಧಾರವನ್ನು ಪ್ರತಿಯೊಬ್ಬನೂ ಮಾಡಿ ಅದರಂತೆ ವಿನೋಬಾರ ಪ್ರಯತ್ನಕ್ಕೆ ಬೆಂಬಲ ಕೊಡುವುದಾದರೆ ನಾವು 'ಬಾಪು' ವನ್ನು ಭಾರತದಲ್ಲಿ ಪಡೆದುದಕ್ಕೆ ಸಾರ್ಥಕವಾಗುವುದು.

ಬಿ. ಡಿ. ಗಣಪತಿ.

ವರ್ತಮಾನ.

ಮಡಿಕೇರಿನಾಡು ಇಬ್ನಿವಳನಾಡಿ ಗ್ರಾಮದ ಶ್ರೀ ಪೊನ್ನಚೆಟ್ಟೀರ ಉತ್ತಯ್ಯನವರು ತಾ. ೨೨ರಲ್ಲಿ ಗ್ರಾಮಸ್ಥರ ದನಕರುಗಳಿಗೆ ತೊಂದರೆ ಕೊಡುತ್ತಿದ್ದ ಒಂದು ಹುಲಿಯನ್ನು ಗುಂಡಿಕ್ಕಿ ಕೊಂದಿರುವರು.

ತಾ ೩೦ರಲ್ಲಿ ಮಹಾತ್ಮರ ನಿರ್ವಾಣ ದಿನಾಚರಣೆಯ ಸಂಬಂಧ ಮಡಿಕೇರಿ ವೇದಾಂತ ಮಂದಿರದಲ್ಲಿ ಸಾಯಂಕಾಲ ೬. ೩೦ ಗಂಟೆಗೆ ಗಾಂಧೀಜಿಯವರ ವಿಚಾರವಾಗಿ ಶ್ರೀ ವಿ. ಎಸ್ ರಾಮಕೃಷ್ಣರವರು ಭಾಷಣ ಮಾಡುವರು.

ಇಂಡಿಯಾ ರೆಡ್ ಕ್ರಾಸಿನ ಕೊಡಗು ಶಾಖೆಯ ಸಹಾಯಾರ್ಥ ಫೆಬ್ರುವರಿ ತಾ ೧೫ರಲ್ಲಿ ಲಾಟರಿ ಟಿಕೇಟುಗಳನ್ನು ಸಿವಿಲ್ ಸರ್ಜನರು ಮತ್ತು ಶಾಖೆಯ ಕಾರ್ಯದರ್ಶಿಗಳು ಸೇರಿ ತೆಗೆಯಬೇಕೆಂದು ನಿಶ್ಚಯವಾಗಿದೆ

ಕೊಡಗು ಜೇನುಮೇಣ ಸಹಕಾರ ಸಂಘದ ವಾರ್ಷಿಕ ಮಹಾ ಸಭೆಯು ತಾ. ೨೮ರಲ್ಲಿ ಬೆಳಿಗ್ಗೆ ೧೦. ೩೦ ಗಂಟೆಗೆ ನಿವೃತ್ತ ಇ. ಇ. ಯವರಾದ ಶ್ರೀ ಎಸ್. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸಂಘದ ಕಟ್ಟಡದಲ್ಲಿ ನಡೆಯುವುದು.

ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಪ್ರಾಯ ೧೫ವರ್ಷ ತುಂಬಿರಬೇಕೆಂಬ ನಿಯಮವನ್ನು ... ೫ ಅಡಿ ೮ ಇಂಚು ಮತ್ತು ಭಾರ ೧೩೦ ಪೌಂಡು ಇರುವ ತರುಣರು ಮಿಲಿಟರಿಯಲ್ಲಿ ಕ್ಲಾರ್ಕ್ ಕೆಲಸಕ್ಕೆ ಬೇಕಾಗಿದ್ದಾರೆ. ಮಾಜಿ ಸಿಪಾಯಿಗಳು ಪ್ರಾಯ ... ವರೆಗೆ ಇದ್ದು ಮೆಟ್ರಿಕ್ಯುಲೇಷನ್ ಅಥವಾ ಥರ್ಡ್ ಫಾರಂ ಓದಿದವರೂ ಮಿಲಿಟರಿಗೆ ಬೇಕಾಗಿರುವರು. ಹೆಚ್ಚಿನ ವಿಷಯವನ್ನು ಮಡಿಕೇರಿ ಎಂಪ್ಲಾಯ್‌ಮೆಂಟ್ ಆಫೀಸಿನಿಂದ ಫೆಬ್ರುವರಿ ... ತಾರೀಕಿನೊಳಗಾಗಿ ತಿಳಿದುಕೊಳ್ಳಬಹುದು.

ಸುಂಟಿಕೊಪ್ಪ ಗ್ರಾಮದ ಶ್ರೀ ತೀತಿರ ಬೆಳ್ಯಪ್ಪನವರ ಪತ್ನಿ ಪೂವಮ್ಮನವರು ತಮ್ಮ ಪತಿಯ ಜ್ಞಾಪಕಾರ್ಥವಾಗಿ ಮಡಿಕೇರಿ ಎಲಿಮೆಂಟರಿ ಶಾಲೆಯ ಆವರಣದಲ್ಲಿ ಒಂದು ಬಾವಿ ತೋಡಿಸಿ ಕೊಡಲು ಸಾಗಣ್ಣನ ... ಕೆಲಸ ಪ್ರಾರಂಭಿಸಿರುವರು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕೋತ್ಸವದ ಸಂಬಂಧ ಆಟೋಟಗಳ ಸ್ಪರ್ಧೆಯು ತಾ. ೧೬—೨ರಲ್ಲಿ ಅಪರಾಹ್ನ ೨ ಗಂಟೆಗೆ ಮ್ಯಾನ್ಸ್ ಕಾಂಪೌಂಡಿನಲ್ಲಿ ನಡೆಯುವುದು.

ಬೃಂದಾವನದಲ್ಲಿರುವ ಗೋವರ್ಧನ ಸ್ವಾಮಿಯು ಮಹಾ ಮಸ್ತಕಾಭಿಷೇಕವು ಫೆಬ್ರುವರಿ ೧೮ರಿಂದ ನಡೆಯುವದರಿಂದ ಅದಕ್ಕೆ ಹೋಗುವವರು ಶಾಂತಿವೀಧಿ ಕಾಯಲೆಯ ಇನಾಕ್ಯುಲೇಶನ್ ಮಾಡಿಸಿಕೊಂಡು ಹೋಗಬೇಕೆಂದೂ ಕೊಡಗು ಆರೋಗ್ಯ ಇಲಾಖೆಯವರು ಇದನ್ನು ಮುಫತ್ತಾ ಮಾಡಿಕೊಡುವರೆಂದೂ ತಿಳಿಸುತ್ತಾರೆ.

ಗಾಂಧೀಜಿಯವರ ನಿರ್ವಾಣ ದಿನವಾದ ಇಂದು ಕೊಡಗು ಸರಕಾರದ ಖಜಾನೆಯಲ್ಲಿ ಇಟ್ಟಿರುವ ಅವರ ಚಿತಾಭಸ್ಮವನ್ನು ಸಾರ್ವಜನಿಕರ ದರ್ಶನಕ್ಕಾಗಿ ಕೋಟೆಯ ಎದುರುಗಡೆ ಇಡಲಾಗಿತ್ತು. ಇದೇ ದಿನ ಸೂತ್ರ ಯಜ್ಞ ಮತ್ತು ರಾಮಧೂನ್ ಏರ್ಪಾಡು ಮಾಡಿದ್ದಲ್ಲದೆ, ಖುರಾನ್, ಬೈಬಲ್ ಮತ್ತು ಭಗವದ್ಗೀತಾ ಪಠಣ ನಡೆಯಿತು.

ಈ ತಿಂಗಳು ೨೩ನೇ ಶನಿವಾರ ಮಡಿಕೇರಿ ಸರಕಾರಿ ಕಾಲೇಜಿನ ಗಣಿತ ಮತ್ತು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಮೈಸೂರು, ಮಂಡ್ಯ ಮತ್ತಿತರ ಸ್ಥಳಗಳನ್ನು ಸಂದರ್ಶಿಸಿ ೨೬ನೇ ಮಂಗಳವಾರ ಹಿಂತಿರುಗಿದರು.

ಸೋಮವಾರಪೇಟೆ ಬ್ಯಾಡ್‌ಮಿಂಟನ್ ಕ್ಲಬ್ಬಿನ ಆಶ್ರಯದಲ್ಲಿ ಫೆಬ್ರುವರಿ ೧೪ರಿಂದ ೫ ಜನರ ಮತ್ತು ಇಬ್ಬರ ಬ್ಯಾಡ್‌ಮಿಂಟನ್ನ್ ಪಂದ್ಯಾಟವು ನಡೆಯುವುದು. ಸದ್ರಿ ಪಂದ್ಯಾಟದಲ್ಲಿ ಭಾಗವಹಿಸುವವರು ದಯವಿಟ್ಟು ಫೆಬ್ರುವರಿ ೮ಕ್ಕೆ ಮೊದಲಾಗಿ ಬರೆಯಬೇಕಾಗಿದೆ.

॥ ದುರ್ಬೀನು ನೋಟ ॥

[ದುರ್ಬೀನನ್ನು ಕೆಳಗಿರಿಸಿ ಬಹು ದಿನಗಳಾದವು. ಅನೇಕರು ಏಕೆ, ಏನಾಯಿತು? ಸರಕಾರವೇನಾದರೂ ನಿರ್ಬಂಧಿಸಿದೆಯೇ ಎಂಬೀ ಹಲವು ಪ್ರಶ್ನೆಗಳನ್ನು ಕೇಳುತ್ತಿದ್ದರು. ಅಂಥ ಪರಿಸ್ಥಿತಿ ಏನೂ ಬಂದಿರಲಿಲ್ಲ. ಈಗ ಬಹು ಜನರ ಅಪೇಕ್ಷೆಯಂತೆ ದುರ್ಬೀನನ್ನು ಕೆಗೆತ್ತಿಕೊಂಡು ನೋಡುವ ಯತ್ನ ಮಾಡಲಾಗುವದು. ಆದರೆ ಈ ಹಿಂದಿನ ತೆರೆದ ದುರ್ಬೀನು ಒಂದೇ ನೋಡುವದಲ್ಲ. ಆನಕ್ಕೆ ಇರ ನವರೆಲ್ಲರೂ ತಮ್ಮ ತಮ್ಮ ದುರ್ಬೀನಿನಲ್ಲಿ ನೋಡಿ ತಮ್ಮ ಅನುಭವಗಳನ್ನು ಬರೆಯಬೇಕು. ಸಮಗ್ರ ಸಮಾಜವನ್ನು ಒಂದು ದುರ್ಬೀನಿನಿಂದ ಒಬ್ಬನು ನೋಡ ... ಮತ್ತು ಪರದೆ ಎಲ್ಲರೂ ನೋಡಿ ಈ ಭಾಗದಲ್ಲಿ ಹಲವರ ಅಭಿಪ್ರಾಯಗಳು ಪ್ರಕಟವಾಗುವ ಏಡೆ ಮಾಡಬೇಕಾಗಿದೆ. ದುರ್ಬೀನಿನ ಗುರಿಯು ಯಾರ ಮುಖಕ್ಕೆ ಕಪ್ಪು ಹಾಕುವದಲ್ಲ. ಇಲ್ಲವೇ ಅಲ್ಲಸಲ್ಲದ್ದನ್ನು ಬಯಲಿಗೆಳೆಯುವದಲ್ಲ. ಸಮಾಜದ ವ್ಯಕ್ತಿಗಳಾಗಿರುವ ನಾವೆಲ್ಲರೂ ಪರಸ್ಪರ ಕಾರ್ಯಕಲಾಪಗಳನ್ನು ನೋಡಿಕೊಂಡು, ವಿಧಾಯಕವಾದ ಟೀಕೆಗಳನ್ನು ಮಾಡಿಕೊಂಡು, ಅನುಭವದಿಂದ ಅರಿತು ಬೆಳೆಯುವದು. ಅದರಿಂದ ಇಲ್ಲಿ ವ್ಯಕ್ತಿಗಳಿಗೆ ಮಹತ್ವವಿಲ್ಲ. ... ಕಾರ್ಯಕಲಾಪ, ನೀತಿ ... ಗೌರವ. ಇಲ್ಲಿ ಸಮಾಜದ ಕಪ್ಪುಕಲೆಗಳನ್ನು ಮಾತ್ರ ಎತ್ತಿ ತೋರಿಸುವದು ... ಆದರ್ಶಗಳನ್ನು ಪ್ರಕಟಿಸಲಾಗುವದು. ಅದರಿಂದ ನಿಮ್ಮ ಸಹಕಾರವನ್ನು ಈ ಕಾರ್ಯದಲ್ಲಿ ಅಪೇಕ್ಷಿಸುವೆ.

ದುರ್ಬೀನು.]

ನಮ್ಮ ನಾಡಿನ ಆಡಳಿತ ... ಕಪ್ಪದ ... ಹುಚ್ಚನಾಗಿ ... ಇಂದು ಅಧಿಕಾರದಲ್ಲಿರುವ ಗಾಂಧೀಜಿ ... ನವರಾಗಿ ವರ್ತಿಸುತ್ತಿದ್ದಾರೆ! ಗೆರೆಯ ... ಇಂದು ಒಂದೇ ಆಗಿದೆ? ಎಂದೊಬ್ಬರು ನಮ್ಮನ್ನು ಆಗ್ರಹದಿಂದ ಕೇಳಿದರು. ಹೌದು, ನಿಜವಾದ ಗಾಂಧಿವಾದಕ್ಕೆ ತೃಪ್ತಿ ಇಲ್ಲ. ಆದರೆ ಗಾಂಧಿ ಟೋಪಿ ಹಾಕಿಕೊಂಡವರ ಅಂತರಾತ್ಮಗಳೂ ಕಳೆದು; ಹೀಗೆ ಹೊತ್ತುಕೊಂಡವರ ಅತಿರೇಕವಾದಿಯಾಗಲಾರ!

ಮೋಹಿನಿಯನ್ನು ಸಂತೈಸಿಗೊಳಿಸಲು ಏನು ಬೇಕಾದರೂ ನಡೆಸಲು ಹಿಂಜರಿಯದುದು ಹಲವರ ಹುಟ್ಟು ಬುದ್ಧಿ. ಮೋಹಿನಿಯು ಅಪೇಕ್ಷೆಯಂತೆ ಕೆಲಗಿನವರೊಬ್ಬರು ಕಷ್ಟಪಟ್ಟು ಸಾವಿರಾರು ತಂದರೆ ಧರ್ಮಕ್ಕೆ ದಾನವನ್ನಿತ್ತವರು ಎದೆ ಮುಂದೆ ಮಾಡಿ ತಾನು ಸಂಭಾವಿತನೆಂದು ತೋರಿಸಿಕೊಂಡರಂತೆ. ಮುಂಡಾಸು ಸುತ್ತಿದ ತಲೆಯೊಳಗೂ ಮುಟ್ಟಾಳ ಯೋಜನೆ ನಡೆಯುವದಿದೆ. ಗಜೆಟೆಡ್ ಉದ್ಯೋಗಿಯಾದರೂ ಸೇವಕನಾಗುವದಿದೆ!

ಸಿಂಹವು ಕಾಡಿನಲ್ಲಿ ತಿರುಗುವಾಗ ಅದರೊಡನೆ ನರಿಗಳು ಹಿಂಡಾಗಿ ಸುತ್ತುವದಿದೆಯಂತೆ. ಕಾರಣವಿಷ್ಟೆ. ಸಿಂಹಕ್ಕೆ ದೊರೆತ ಆಹಾರ ಜಾಸ್ತಿ ತನಗೂ ದೊರೆಯದೆಂದು. ಅದರಂತೆ ದೊಡ್ಡ ಅಧಿಕಾರಿಗಳೊಡನೆ ಅನಧಿಕಾರಿಗಳೂ ಸುತ್ತುವದುಂಟು. ಇವರು ರಾಜ್ಯಪ್ರಮುಖರೇ ಇರಲಿ, ರಾಜ್ಯಪಾಲರೇ ಇರಲಿ, ಆರು ನಗರ ಸುತ್ತು ... ಇರಲಿ, ... ಸ್ಕೂಲ ... ಇರಲಿ, ಪ್ಯಾ ಕಾರಲಿನ ಕೆಲವರ ಕೆಲಸಗಳಿಗೆ ತಪ್ಪಿಲ್ಲ!

ಜಾತ್ರೆಯು ಪುನರಾವರ್ತನೆ ನಡೆಯುತ್ತಲಿದೆ. ... ಕಂಡುಕೊಂಡಿತು ... ಇದನ್ನು ಪುರಾಣದ ಪುನರಾವರ್ತನೆ ಮಾಡುವ ... ಕಲಿಯುಗದ ... ಈಗ ಆಗಿದೆ. ... ಲಂಕೆಗೆ ... ಲಂಕೆಗೆ ... ರಾಕ್ಷಸ ... ಆಯೋಧ್ಯೆ ... ಅಂದಿನವರು ... ಅನ್ಯರಾಗಿದ್ದಾರೆ. ಅಂದಿನವರು ... ಇಂದಿನವರು ... !

ನಾಪೋಕ್ಲು ನಾಡು ಜನತೆಯ ಸತ್ಕಾರ

ತಾರೀಕು ೨೦ರಲ್ಲಿ ನಾಪೋಕ್ಲು ನಾಡಿನ ಜನರು ಕೊಡಗಿನ ಮಂತ್ರಿಗಳನ್ನೂ, ಸ್ಪೀಕರ್, ಪಾರ್ಲಿಮೆಂಟ್ ಮೆಂಬರು ಮತ್ತು ಡಿ ಸ್ಪೀಕರ್ ಇವರುಗಳನ್ನೂ ಕರೆಸಿಕೊಂಡು ನಾಪೋಕ್ಲಿನಲ್ಲಿ ಕೊಡಗಿನ ಚೀಫ್ ಕಮಿಷನರ್ ದಯಾಸಿಂಗ್ ಬೇಡಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಅವರಿಗೆ ನಾಡಿನ ಪರ ಬಿನ್ನವತ್ತಳೆಗಳನ್ನು ಅರ್ಪಿಸಿದರು. ಸ್ವಾಗತ ಅಧ್ಯಕ್ಷರಾದ ಶ್ರೀ ಪಟ್ಟಮಾಡ ಅಪ್ಪಯ್ಯನವರು ಸ್ವಾಗತ ಭಾಷಣ ಮಾಡಿದರು. ವಿಧಾನ ಸಭೆಯ ಈ ನಾಡಿನ ಸದಸ್ಯರಾದ ಶ್ರೀ ಎ. ಸಿ. ತಿಮ್ಮಯ್ಯನವರು ಅತಿಥಿಗಳನ್ನು ಸ್ವಾಗತಿಸಿ ನಾಡಿನ ಹಿತದ ಬಗ್ಗೆ ಹೆಚ್ಚು ನಿಗ ವಹಿಸಬೇಕೆಂದು ಕೇಳಿಕೊಂಡರು. ಮುಖ್ಯ ಮಂತ್ರಿ ಪೂಣಚ್ಚನವರು ಮಾತಾಡುತ್ತಾ ಪಕ್ಷಪಾತವಿಲ್ಲದೆ ಸರ್ವರ ಹಿತದೃಷ್ಟಿಯಿಂದ ಆಡಳಿತ ನಡೆಸುವದೇ ತಮ್ಮ ಗುರಿಯೆಂದರು. ಗೃಹ ಮಂತ್ರಿ ಮಲ್ಲಪ್ಪನವರು ಸರ್ವರೂ ಸರಕಾರದ ಕೆಲಸಕಾರ್ಯಗಳಲ್ಲಿ ಬೆಂಬಲ ಕೊಡಬೇಕೆಂದರು. ಪಾರ್ಲಿಮೆಂಟ್ ಸದಸ್ಯ ಶ್ರೀ ಸೋಮಣ್ಣನವರು ಬತ್ತದ ಕ್ರಯ ಹೆಚ್ಚಿಸಲು, ಪಂಚವಾರ್ಷಿಕ ಯೋಜನೆಗೆ ಒಂದು ಕೋಟಿ ದ್ರವ್ಯ ಸಹಾಯ ಪಡೆಯಲು, ವಿದ್ಯುಚ್ಛಕ್ತಿ ಮೊದಲಾದ ವಿಚಾರಗಳಲ್ಲಿ ತಾನು ಮಾಡಿದ ಪ್ರಯತ್ನಗಳನ್ನು ಹೇಳಿದರು. ಸಭೆಯು ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಸೆಕೆಂಡರಿ ವಿದ್ಯಾ ಪರಿಶೀಲನಾ ಸಮಿತಿ.

ಮದ್ರಾಸು ವಿಶ್ವವಿದ್ಯಾಲಯದವರು ಸೆಕೆಂಡರಿ ವಿದ್ಯೆಯನ್ನು ಹೊಸ ಕಾಲಕ್ಕೆ ತಕ್ಕಂತೆ ಯಾವ ರೀತಿ ಪರಿವರ್ತಿಸಬಹುದೆಂಬ ಬಗ್ಗೆ ಪರಿಶೀಲಿಸಿ ವರದಿ ಮಾಡಲು ನೇಮಿಸಿರುವ ಸಮಿತಿಯು ಮುಂದೆ ಕೊಡಗಿನ ಪರವಾಗಿ ಶಾಸನ ಸಭೆಯ ಅಧ್ಯಕ್ಷರಾದ ಶ್ರೀ. ಬಿ. ಎಸ್. ಕುಶಾಲಪ್ಪ, ಕಾಲೇಜ್ ಪ್ರಿನ್ಸಿಪಲರಾದ ಶ್ರೀ. ... ಮತ್ತು ವಿದ್ಯಾಧಿಕಾರಿಗಳಾದ ಶ್ರೀ ಗಣೇಶ ರಾವ್ ಇವರುಗಳು ತಮ್ಮ ಅಭಿಪ್ರಾಯಗಳನ್ನು ಕಳೆದ ವಾರ ಮೈಸೂರಿನಲ್ಲಿ ... ರು. ಪರಿಶೀಲನಾ ಸಮಿತಿಯು ... ರಾದ ಡಾ. ಲಕ್ಷ್ಮಣ ಸ್ವಾಮಿ ... ಯಾರ್ ಮೊದಲಾದವರು ಇದ್ದರು.

ಕೊಡಗಿನಿಂದ ಹೋದ ಪ್ರತಿನಿಧಿ ಸಾಧಾರಣವಾಗಿ ಒಂದೇ ಅಭಿಪ್ರಾಯವನ್ನು ಕೊಟ್ಟಿರುವರು. ಸೆಕೆಂಡರಿ ವಿದ್ಯೆಯು ಈಗಿನಂತೆ ಕೇವಲ ವೃತ್ತಿಕ್ ವಿದ್ಯೆಯಾಗಿರದೆ ವೃತ್ತಿ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕೆಂದೂ ಸೆಕೆಂಡರಿ ವಿದ್ಯಾಭ್ಯಾಸದ ಕಾಲದಲ್ಲಿ ಪ್ರತಿಯೊಬ್ಬನಿಗೂ ವಿದ್ಯಾಯ ... ವೃತ್ತಿ ಶಿಕ್ಷಣ ಕೊಡಲ್ಪಡಬೇಕೆಂದೂ, ಕೊಡಗಿನಲ್ಲಿ ವ್ಯವಸಾಯ, ಮರಕೆಲಸ, ... ಕೆಲಸ ಮೊದಲಾದವನ್ನು ವೃತ್ತಿ ಶಿಕ್ಷಣವಾಗಿ ಇಡಬಹುದೆಂದೂ ಸೆಕೆಂಡರಿ ವಿದ್ಯಾಭ್ಯಾಸ ಮುಗಿದ ವಿದ್ಯಾರ್ಥಿಯು ತನ್ನ ಮುಂದಿನ ಜೀವನಕ್ಕಾಗಿ ಅರ್ಜಿ ಹಿಡಿದು ಆಫೀಸುಗಳನ್ನು ತಿರುಗುವ ಬದಲು ಯಾವುದಾದರೊಂದು ವೃತ್ತಿಯನ್ನು ಅನುಸರಿಸುವಂತಾಗಬೇಕೆಂದೂ ಕಾಲೇಜು ಮೊದಲಾದ ಹೆಚ್ಚಿನ ವ್ಯಾಸಂಗ ಮಾಡುವವರು ಸೆಕೆಂಡರಿ ವಿದ್ಯಾಭ್ಯಾಸದ ಕಡೇ ವರ್ಷ ತಮಗಿಷ್ಟ ಇರುವ ವಿಷಯಗಳನ್ನು ಉದಾಹರಣೆಗೆ ರಸಾಯನ ಶಾಸ್ತ್ರ, ಇಂಗ್ಲಿಷ್, ಪ್ರಕೃತಿಶಾಸ್ತ್ರ, ಮೊದಲಾದುವನ್ನು ತೆಗೆದುಕೊಂಡು ಅವುಗಳಲ್ಲಿ ಮುಂದಿನ ಕಾಲೇಜ್ ವ್ಯಾಸಂಗವುಳ್ಳ ಏರ್ಪಾಡು ಮಾಡಬೇಕೆಂದೂ ಅಭಿಪ್ರಾಯಕೊಟ್ಟಿರುವರು.

For Sale.

A Ford V. 8, 1947 Model 32 horse power Motor Car is for Sale. The Car is in very good condition. Intending purchasers may please contact:-

M. K. Kareem Baig,
Cloth Merchant,
Somwarpet.

2-1

ಶ್ರೀ ಬಿ. ಡಿ. ಗಣಪತಿಯವರ ಹೊಸ ಪುಸ್ತಕ =

ಮಾನವ - ಒಂದು ವಿಮರ್ಶೆ.

ವಿಮರ್ಶಿಸಿದವರು - ಶ್ರೀ ಸಿ. ಎಂ. ರಾಮರಾವ್ ಇವರು,
ನಿವೃತ್ತ ವಿದ್ಯಾಧಿಕಾರಿ, ಕೊಡಗು.

ಇದೊಂದು ಮಾನವ ಜೀವನದ ಪ್ರಗತಿಯನ್ನು ವಿಷಯೀಕರಿಸಿಕೊಂಡಿರುವ ಚಿಕ್ಕ ಗ್ರಂಥ. ಬರೇ ೧೪೪ ಪುಟಗಳಿವೆ. ಮುದ್ರಣವು ಅಂದವಾಗಿದೆ. ಸಾಮಾನ್ಯ ಓದುಗರಿಗೆ ತಿಳಿವಂತೆ ಸುಲಭ ಶೈಲಿಯಲ್ಲಿ ಬರೆದು ಮನಸ್ಸನ್ನು ಆಕರ್ಷಿಸುವಂತಿದೆ.

ಗ್ರಂಥಕರ್ತರು ಮೊದಲನೆಯ ಅಧ್ಯಾಯದಲ್ಲಿ ಮಾನವನ ಬಾಹ್ಯ ಜಗತ್ತಿನ ಜ್ಞಾನವು ವಿಕಾಸಗೊಂಡಿದ್ದರೂ ಅದೇ ಪ್ರಮಾಣದಲ್ಲಿ ಆತನ ಜೀವನ ವಿಜ್ಞಾನವು ಆತನ ನೈತಿಕ ಬಲವು ಮುಂದರಿದು ಸಾಕಷ್ಟು ಪ್ರಗತಿಯನ್ನು ...ದಿಲ್ಲವೆಂದು ಅನೇಕ ಪ್ರಮಾಣಗಳಿಂದ ...ಆತನಿಗೆ ನೈತಿಕ ಮತ್ತು ಆಂತರೀಕ ...ವು ಅತ್ಯವಶ್ಯವೆಂಬುದನ್ನು ಚೆನ್ನಾಗಿ ...ಸಿದ್ದಾರೆ. ಮಾನವನ ಈಗಿನ ಪರಿಸ್ಥಿತಿಯು ಬಹಳ ಶೋಚನೀಯವಾಗಿದೆ ...ದೂ ಅದರಿಂದ ಪಾರಾಗ ಬೇಕಾದರೆ ತನ್ನನ್ನು ತಾನೇ ಅರಿಯುವ ಆತ್ಮಶೋಧನೆಗೆ ಇಳಿಯುವುದೊಂದೇ ದಾರಿಯೆಂದೂ ತೋರಿಸಿಕೊಟ್ಟಿದ್ದಾರೆ.

ಎರಡನೇ ಅಧ್ಯಾಯದಲ್ಲಿ ಸಾಮಾನ್ಯ ಮನುಷ್ಯನು ತಿಳಿದುಕೊಂಡಿರುವಂತೆ ಮಾನವನು ಪ್ರಪಂಚದ ವಾತಾವರಣದಲ್ಲಿ ತನ್ನ ದೈವತ್ವವನ್ನು ಕಳೆದುಕೊಂಡು ಅಧಃಪತನ ಹೊಂದಿದ ದೇವತೆಯಲ್ಲವೆಂದೂ ಅದರ ಬದಲು ಮೇಲಂತಸ್ತಿಗೇರಿದ ಪ್ರಾಣಿಯೆಂದೂ ಶಾಸ್ತ್ರೀಯ ದೃಷ್ಟಿಯಿಂದ ವಿಚಾರಮಾಡಿದ್ದಾರೆ.

ಮೂರನೇ ಅಧ್ಯಾಯದಲ್ಲಿ ಮನುಷ್ಯನು ಯಾವ ರೀತಿಯಲ್ಲಿ ಸಹಕಾರ ಮತ್ತು ಸಾಂಘಿಕ ಜೀವನವನ್ನು ಕಲ್ಪಿಸಿಕೊಂಡನೆಂದೂ ಮನುಷ್ಯರಲ್ಲಿ ಉಂಟಾದ ಪರಸ್ಪರ ಸಂಬಂಧವು ಹೇಗೆ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ವಿಭಜನೆಗೆ ಎಡೆಕೊಟ್ಟು ಸಮಾಜದ ರಚನೆಯಾಯಿತೆಂದೂ ತೋರಿಸಿಕೊಟ್ಟಿದ್ದಾರೆ. ಅಲ್ಲದೆ ಈ ರೀತಿಯ ವಿಭಜನೆಯಿಂದ ಕ್ರಮೇಣವಾಗಿ ಮಾನವರಲ್ಲಿ ಘರ್ಷಣೆಯುಂಟಾಗುವುದಕ್ಕೆ ಆಸ್ಪದವಾಯಿತೆಂದೂ ವಿವರಿಸಿದ್ದಾರೆ.

ನಾಲ್ಕನೇ ಅಧ್ಯಾಯದಲ್ಲಿ ಮಾನವನ ಬದುಕಾಟದ ಮಹತ್ವವು ಹೇಗೆ ತನ್ನ ದೇಶದ ವಾತಾವರಣ, ಕುಟುಂಬದ ಪ್ರಭಾವ, ಆಹಾರ ವ್ಯತ್ಯಾಸ ಇವೇ ಮೊದಲಾದುವುಗಳಿಂದ ಪರಿವರ್ತನೆಯನ್ನು ಹೊಂದಿತೆಂದೂ ಅದರಿಂದಾಗಿ ಹೇಗೆ ಅನೇಕ ಅನರ್ಥಗಳಿಗೆ ಮಾನವನು ಗುರಿಯಾದನೆಂದೂ ಅದ್ದರಿಂದ ತನ್ನ ವಿದ್ಯೆಯ ಮತ್ತು ನಾಗರಿಕತೆಯ ಗುರಿ ಹೇಗೆ ಸಾರ್ವತ್ರಿಕ ಉನ್ನತಿಯಾಗಿರ ಬೇಕೆಂದೂ ಚಿತ್ರಿಸಿದ್ದಾರೆ.

ಐದನೆ ಅಧ್ಯಾಯದಲ್ಲಿ ಮಾನವನಿಗೆ ಯಾವ ರೀತಿಯ ಧರ್ಮ ಮತ್ತು ದೇವರ ಕಲ್ಪನೆ ಉಂಟಾಯಿತೆಂದೂ ಈ ಕಲ್ಪನೆಯಿಂದಾಗಿ ಹೇಗೆ ನಾನಾ ಮತಗಳುಂಟಾದುವೆಂದೂ ಅವುಗಳೊಳಗಿನ ಪರಸ್ಪರ ಘರ್ಷಣೆಯಿಂದಾದ ಅನಾಹುತವನ್ನೂ ಸತ್ಯಾನ್ವೇಷಕರು ಮೇಲೆದ್ದು ಜ್ಞಾನದೀಪವನ್ನು ಆಗಾಗ್ಗೆ ಬೆಳಗಿಸಿದ್ದರೂ ಯೋಗ್ಯ ಫಲ ದೊರೆಯದಿರುವುದರ ಕಾರಣವನ್ನೂ ಶೋಧಿಸಿದ್ದಾರೆ.

ರಾಜಕೀಯ ವಿಚಾರದಲ್ಲೂ ಸಹ ಕೆಲವು ಮಹಾಪುರುಷರ ಉದಯದ ಫಲವಾಗಿ ಅನೇಕ ಅರಸರ ಸರಕಾರಗಳು ನಾಶಗೊಂಡು ಪ್ರಜಾಪ್ರಭುತ್ವವೇ ನೆಲೆಗೊಂಡ ರೀತಿಯೂ ಸಹ ಕ್ರಮಬದ್ಧವಾಗಿ ವಿವರಿಸಲ್ಪಟ್ಟಿದೆ.

ಮನುಷ್ಯನ ನಾಗರಿಕತೆ, ವಿಜ್ಞಾನ, ಸ್ವಾತಂತ್ರ್ಯ, ರಾಜಕೀಯ ಮೊದಲಾದುವುಗಳ ಅಭಿವೃದ್ಧಿಯಾಗಿದ್ದರೂ ಅವನ ಅಂತಸ್ತು ಮೇಲೇರದೆ ಆತನ ಜೀವನದಲ್ಲಿ ಶಾಂತಿ ಸುಖಗಳು ನೆಲೆ ನಿಲ್ಲದೆ ಮಾನವನ ಪಶುಬುದ್ಧಿಯು ಹೇಗೆ ದೈವೀಗುಣವನ್ನು ಕೆಳಗೊತ್ತಿ ಬೆಳೆದಿದೆಯೆಂದೂ ವಿಸ್ತರಿಸಲ್ಪಟ್ಟಿದೆ.

ಆರನೆಯ ಅಧ್ಯಾಯವು ಮಾನವನ ಪಶುಬುದ್ಧಿಯು ಹೋಗದೆ ಯಾವ ಸರಕಾರ ಪದ್ಧತಿ ಜಾರಿಯಲ್ಲಿ ಬಂದರೂ ವ್ಯಕ್ತಿಗಳು ನೀತಿವಂತರಾಗದಿದ್ದರೆ ಯಾವ ರೀತಿ ಪ್ರಯೋಜನವಾಗದೆಂದೂ ಆದ್ದರಿಂದ ಸಮಾಜ ಸುಧಾರಣೆಯ ಪೂರ್ವ ಹೆಜ್ಜೆಯೆಂದರೆ ವ್ಯಕ್ತಿಯ ಸುಧಾರಣೆಯೆಂದೂ ಸಮತಾವಾದವು ಈ ಮಾರ್ಗದಲ್ಲಿ ತಪ್ಪಿದೆಯೆಂದೂ, ಶಾಂತಿಗಾಗಿ ನಡೆಯುತ್ತಿರುವ ಮಾನವನ ಅನ್ವೇಷಣೆಯು ಜಯಪ್ರದವಾಗಬೇಕಾದರೆ ಆತನ ದೃಷ್ಟಿಯನ್ನು ಅಂತರ್ಮುಖವಾಗಿ ಮಾಡಿ ಹೃದಯದ ವಿಶಾಲತೆಯನ್ನೂ ಮಾನವನತೆಯ ಏಕತೆಯನ್ನೂ ಅರಿಯಬೇಕೆಂದೂ ವ್ಯಕ್ತಪಡಿಸುವ ವಿಚಾರಗಳನ್ನು ಒಳಗೊಂಡಿದೆ.

ಏಳನೇ ಅಧ್ಯಾಯವು ಜಗತ್ತಿನ ಇಂದಿನ ಗೊಂದಲದಲ್ಲಿ ಶಾಂತಿ ಸಿಗಬೇಕಾದರೆ ಮನುಷ್ಯನು ಈ ವರೆಗೆ ಅನುಸರಿಸಿದ ದ್ವೇಷ, ಸಂಕೀರ್ಣತೆ, ಹಿಂಸೆ, ಯುದ್ಧಗಳ ದಾರಿಯನ್ನು ಬದಲು ಮಾಡಿ ಹೊಸ ದೃಷ್ಟಿಯನ್ನು ತಂದುಕೊಂಡು ದೇಶಕಾಲಾತೀತವಾದ ಅಖಂಡ ಪ್ರೀತಿಯಿಂದ ಮನುಷ್ಯನು ಮನುಷ್ಯರನ್ನು ಮನುಷ್ಯರಂತೆ ನೋಡಬೇಕೆಂದೂ ಹೀಗೆ ಮಾಡಿದರೇನೆ ಮಾನವನ ಉತ್ಕರ್ಷವಾಗಬಹುದೆಂದೂ, ಮನುಷ್ಯನ ಪ್ರಾಣಿ ಬುದ್ಧಿಯು ಹಾಗೂ ಪಶುಪ್ರವೃತ್ತಿಯು ಹೋಗಿ ಅವನು ದೇವತಾ ಮನುಷ್ಯನಾಗುವ ಮಾರ್ಗ ಇದೆಂದೂ ಮೊದಲಾದ ಅನೇಕ ತತ್ವಗಳನ್ನೊಳಗೊಂಡಿದೆ.

ಇಂಥಾ ಅತೀ ಮಾನವರ ರಚನೆಯ ಆವಶ್ಯಕತೆಯನ್ನು ತಿಳಿಸಿ ಅದಕ್ಕಾಗಿ ಇಂದಿನಿಂದಲೇ ದುಡಿದು ಶಾಂತಿ ಸುಖಗಳನ್ನು ಬೆಳಸಿ ಹೃದಯ ವಿಕಾಸವನ್ನು ಹೊಂದಿಸುವ ಪ್ರಯತ್ನಕ್ಕೆ ಕೈಹಚ್ಚಿ ಬಹುಮಟ್ಟಿಗೆ ಈ ಗ್ರಂಥಕರ್ತರು ಕೃತಕೃತ್ಯರಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ನಿಧನ.

ಭಾರತದ ಶ್ರೇಷ್ಠ ಅರ್ಥ ಶಾಸ್ತ್ರಜ್ಞರೂ, ಮೈಸೂರಾಯರ ಕಾರ್ಯಕಾರಿ ಮಂಡಳದಲ್ಲಿ ಆರೋಗ್ಯ ಶಿಕ್ಷಣ ಮಂತ್ರಿಗಳೂ ಆಗಿದ್ದ ಶ್ರೀ ನಲಿನಿರಂಜನ ಸರಕಾರರು ತಾ. ೨೫ರಲ್ಲಿ ತಮ್ಮ ೭೦ನೇ ವಯಸ್ಸಿನಲ್ಲಿ ನಿಧನ ಹೊಂದಿದರು.

ಪ್ರಜಾರಾಜ್ಯ ದಿನಾಚರಣೆ.

ಪ್ರಜಾರಾಜ್ಯದ ನಾಲ್ಕನೇ ದಿನಾಚರಣೆಯು ತಾ. ೨೬ ರಲ್ಲಿ ಭಾರತದ ಇತರ ಎಡೆಗಳಲ್ಲಿ ನಡೆವಂತೆ ಕೊಡಗಿನಲ್ಲಿಯೂ ನಡೆಯಿತು. ಮಡಿಕೇರಿಯಲ್ಲಿ ಬೆಳಿಗ್ಗೆ ೧೧ ಗಂಟೆಗೆ ಮೇನ್ಸ್‌ಕಾಂಪೌಂಡ್ ಮೈದಾನದಲ್ಲಿ ಧ್ವಜಾರೋಹಣವನ್ನು ಕೊಡಗಿನ ಚೀಫ್ ಕಮಿಷನರಾದ ಲೆ. ಕ. ಬೇಡಿಯವರು ಮಾಡಿದರು. ಕೊಡಗಿನ ಪೋಲೀಸ್ ಮತ್ತು ವಿವಿಧ ಹೈಸ್ಕೂಲುಗಳಿಂದ ಬಂದಿದ್ದ ಎನ್. ಸಿ. ಸಿ. ದಳದವರ ಮಾರ್ಚ್ ಪಾಸ್ಟ್ ಮನೋರಂಜಕವಾಗಿತ್ತು. ಕೊಡಗಿನ ಮಂತ್ರಿಗಳಿಬ್ಬರೂ, ಸ್ಪೀಕರರೂ ಇತರ ಹಲವು ಮಹನೀಯರೂ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು. ಮಧ್ಯಾಹ್ನ ಆಟೋಟಗಳ ಸ್ಪರ್ಧೆ ಏರ್ಪಾಡಾಗಿತ್ತು. ಸಾಯಂಕಾಲ ಕೋಟೆಯ ಆವರಣದಲ್ಲಿ ಬಹುಮಾನ ವಿತರಣೆಯು ನಡೆಯಿತು. ಕೋಟೆಯು ವಿದ್ಯುದ್ದೀಪಗಳಿಂದ ಸಜ್ಜಿತವಾಗಿತ್ತು. ಬೊಳಕಾಟ, ಸುಗ್ಗಿ ಕುಣಿತ, ಕೋಲಾಟ ಮೊದಲಾದ ವಿನೋದಗಳ ಏರ್ಪಾಡು ಮಾಡಲಾಗಿತ್ತು. ನಿವೃತ್ತ ನೇನಾನಾಯಕರಾದ ಜನರಲ್ ಕಾರ್ಯಪ್ಪನವರೂ ಹಾಜರಿದ್ದರು.

ವೀರಾಜಪೇಟೆಯಲ್ಲಿ ಪ್ರಜಾರಾಜ್ಯ ದಿನಾಚರಣೆಯ ಸಂಬಂಧ ಧ್ವಜಾರೋಹಣವು ಕೊಡಗು ಸರಕಾರದ ಚೀಫ್ ಸೆಕ್ರೆಟರಿಗಳಾದ ಶ್ರೀ. ಸಿ. ನರಸಿಂಹಮೂರ್ತಿಯವರಿಂದ ನಡೆಯಿತು. ನಂತರ ಪೇಟೆಯ ಪ್ರಾಮುಖ್ಯ ಬೀದಿಗಳಲ್ಲಿ ಮೆರವಣಿಗೆ ತೆಗೆಯಲಾಯಿತು.

ಫ್ರೇಜರ್‌ಪೇಟೆಯಲ್ಲಿ ಮೆರವಣಿಗೆಯ ನಂತರ ಶ್ರೀ. ಬಿ. ಟಿ. ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನೆರೆಯಿತು. ಶ್ರೀಗಳಾದ ಕಾರ್ಯಪ್ಪ, ಮೊದಲಾದವರು ಭಾಷಣ ಮಾಡಿದರು. ನಂತರ ಎಲ್ಲರಿಗೂ ಸಿಹಿತಿಂಡಿ ಹಂಚಲಾಯಿತು.

ಶಾಕೋಟು ಸರಂಬಿನಲ್ಲಿ ಶ್ರೀ. ಎಮ್. ಎಸ್. ಐಯ್ಯಣ್ಣನವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಯಿತು.

ಪ್ರಜಾರಾಜ್ಯ ದಿನಾಚರಣೆಯು ಪೊನ್ನಂಪೇಟೆಯಲ್ಲಿ ಶ್ರೀ ಕೆ. ಸಿ. ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಎಂ. ಎ. ಚಂಗಪ್ಪ, ಎ. ಕೃಷ್ಣಮೂರ್ತಿ, ಟಿ. ಎಸ್. ನಾರಾಯಣರಾವ್ ಮೊದಲಾದವರು ಭಾಷಣ ಮಾಡಿದರು.

ವೀರಾಜಪೇಟೆ ಔದ್ಯೋಗಿಕ ತರಬೇತು ಕೇಂದ್ರದವರು ಶ್ರೀ ಟಿ. ಸುಬ್ರಮಣ್ಯಂರವರ ಅಧ್ಯಕ್ಷತೆಯಲ್ಲಿ ಪ್ರಜಾದಿನೋತ್ಸವವನ್ನು ನಡೆಸಿದರು. ವೀರಾಜಪೇಟೆ ಪುರಸಭೆಯ ಅಧ್ಯಕ್ಷರಾದ ಶ್ರೀ ಎಸ್. ಎಸ್. ರಾಮಮೂರ್ತಿಯವರು ಧ್ವಜಾರೋಹಣ ಮಾಡಿ ಆ ದಿನದ ಮಹತ್ವದ ಕುರಿತು ಭಾಷಣ ಮಾಡಿದರು.

ಭಾರತವು ೧೯೫೨-೫೩ ರಲ್ಲಿ ವಿದೇಶಗಳಿಗೆ ೨೭ ಕೋಟಿ ೮೬ ಲಕ್ಷ ರೂಪಾಯಿಗಳಷ್ಟು ಚರ್ಮ ಮತ್ತು ಚರ್ಮದ ಸಾಮಾನುಗಳನ್ನು ರಫ್ತು ಮಾಡಿತು.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೇಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :— ವೀರಾಜಪೇಟೆ.

ಶಾಖೆ :— ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ಇವುಗಳಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಹೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು
4. 9"×4" ಮತ್ತು 8"×4" ಕಬ್ಬಿಣದ ತೊಲೆಗಳು (Girders).
5. 8'×3'×24' (Gage) ಕಬ್ಬಿಣದ ತಗಡುಗಳು.
6. 1¾" × 5/16" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ (ಗೌ. ಕಾರ್ಯದರ್ಶಿ) ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಮಹಾಪುರುಷರ ವಿಫಲ ಮನೋರಥಗಳು

ಕರ್ನಾಟಕ ಬಾಳ್ವಿಗೆ ಮಧುರ ಸ್ವಪ್ನದ ಅಮೃತ ಸೇಚನ

ಸರ್ವಾನಂದಭರಿತವಾದ ಸ್ವರ್ಗದಲ್ಲೂ ನಾನು ಖಿನ್ನನಿರುವುದನ್ನು ಭಗವಂತನು ನೋಡಿ ತುಂಬ ಸ್ನೇಹಾರ್ದ್ರ ಭಾವದಿಂದ ನನ್ನನ್ನು ಕೇಳಿದ– "ನೀನಿಷ್ಟು ಉದಾಸೀನನೇಕಿದ್ದೀಯೊ? ಸ್ವರ್ಗದಲ್ಲಿ ನಿನಗೇನು ಕಡಮೆ ಎನಿಸಿತು?"

"ನಿಜ ಪ್ರಭೂ. ನಾನೊಂದು ಅಮೂಲ್ಯ ನಿಧಿಯನ್ನು ಭೂಮಿಯಲ್ಲಿಯೇ ಬಿಟ್ಟು ಬಂದಿರುವೆ. ಅದರ ಮುಂದೆ ಸ್ವರ್ಗದ ಅನಂತ ಸುಖವೂ ಸಪ್ಪೆದಿಸ್ಸುವಾಗದು."

"ಏನದು ಆ ನಿನ್ನ ನಿಧಿ?" ಎಂದು ವಿಧಾತ ಬಹಳ ಆತುರದಿಂದ ಕೇಳಿದ.

"ಏಕಾಂತದಲ್ಲಿ ಕಂಡ ಕೆಲವು ವಿಫಲ ಸ್ವಪ್ನಗಳು" ಎಂದು ನಾನುತ್ತರಿಸಿದೆ.

—ಜಬರಾನಿನ ಗಾಂಧಿ ನಾಗೆಂಟೀ.

'ದೇವರೇ ನಾನೊಬ್ಬ ನೈಮಾನಿಕನಿರುತ್ತಿದ್ದರೆ! ವಿಮಾನದಿಂದ ತೊಡಗಿ ಇಂದಿನ ವರೆಗೆ ಆದದ್ದೆಲ್ಲಾ ಎಲ್ಲ ಸಂಶೋಧನೆಗಳಲ್ಲೂ ನನ್ನ ಅಭಿರುಚಿ ಇದ್ದೇ ಇತ್ತು. ನಾನಿನ್ನೂ ವಿದ್ಯಾರ್ಥಿಯಾಗಿದ್ದಾಗ, ೧೯೦೬ ರಷ್ಟು ಪೂರ್ವದಲ್ಲಿಯೇ ವಾಯು ಸಂಚಾರದ ಕುರಿತೊಂದು ಪ್ರಬಂಧ ಬರೆದಿದ್ದೆ. ಈ ಕಾಲದಲ್ಲಿಯೇ ರಾಯಿಟ್ ಸಹೋದರು ಇಂಗ್ಲಿಷ್ ಕದಲ್ಕಾಲುವೆಯನ್ನು ವಿಮಾನದಲ್ಲಿ ದಾಟಲೆತ್ನಿಸಿದ್ದರು. ಅವರ ಸಾಹಸದಿಂದ ನಾನು ತುಂಬ ಪ್ರಭಾವಿತನಾಗಿದ್ದೆ.

'ನಾನಾಗ ನನ್ನ ತಂದೆಯವರಿಗೊಂದು ಪತ್ರ ಬರೆದದ್ದು ನನಗೆ ಇನ್ನೂ ನೆನಪಿದೆ. ನಾನಾಗ ಇಂಗ್ಲೆಂಡಿನಲ್ಲಿ ಮತ್ತು ತಂದೆಯವರು ಭಾರತದಲ್ಲಿ ಇದ್ದರು. ಆ ಪತ್ರದಲ್ಲಿ ನಾನು ಅವನ್ನು ವೇಗನೇ ಭಾರತಕ್ಕೆ ವಿಮಾನ ಮೂಲಕ ಬರುವೆನೆಂದಿದ್ದೆ.

ಸರ್ವ ಪ್ರಥಮವಾಗಿ ಜೆಪ್ಲಿನ್ ಬರ್ಲಿನ್ ನಗರದ ಮೇಲೆ ಸುತ್ತಾಡಿದಾಗ ನಾನೂ ಅಗ ಅಲ್ಲಿದ್ದೆ. ಆಗಿನ ಎಲ್ಲ ಘಟನೆಯೂ ನನ್ನ ಸ್ಮರಣೆಯಲ್ಲಿದೆ ಮತ್ತದನ್ನು ನೆನವಾಗಲೆಲ್ಲ ಅಯ್ಯೋ, ನಾನು ನೈಮಾನಿಕನಿರುತ್ತಿದ್ದರೆ ಎಂದೆನಿಸುತ್ತದೆ. ಜೀವನದ ಇಂದಿನ ಗತಿ ಮತ್ತಿದರ ಜೊತೆಯಲ್ಲಿ ನನ್ನ ಮನಸ್ಸು ಕುಂದುವಾಗಲೆಲ್ಲ ನಾನು ಒಡನೆಯೇ ನೌಕೆ ಮಾಡುವೆ. ಮೇಲೆ ನಂಜಲದಲ್ಲಿ ಹಣಿಸಿ ಹಾರುತ್ತೇನೆ. ಜೀವನ ಮರಣದ ಸೀಮಾರೇಖೆಯಾದ ನಭೋಮಂಡಲದಲ್ಲಿ ನಾನು ಎಷ್ಟು ಬಿದ್ದೇಳುವಾಗ್ಯ, ಹಿರ್ವ ಕವಿಯು ಹಾಡಿದ ಆ ಗೀತವನ್ನು ಗುಣುಗುಣಿಸುತ್ತಾ ಮೌನವನ್ನು ಮುರಿಯುತ್ತೇನೆ.

'ಕಾಶ್ಮೀರದ ಹಿಮಾಚ್ಛಾದಿತ ಶೃಂಗಗಳ ಕಡೆಗೂ ನನ್ನ ಒಲವು ಬಹಳ. ಆ ಶಿಖರಗಳನ್ನು ಆರೋಹಿಸುವ ವಿಚಾರ ನಾನೆಷ್ಟು ಸಲ ಮಾಡಿರುವೆನೋ ತಿಳಿಯದು! ಎಲ್ಲ ಕೆಲಸವನ್ನೂ ಬಿಟ್ಟು ಪ್ರಕೃತಿಯ ಆ ಉದಾತ್ತ ಸರ್ಗಡೆಡೆಗೆ ಓಡಿ ಹೋಗಲು ನನ್ನ ಮನಸ್ಸು ಹೇಳುತ್ತದೆ. ಆದರೆ ನನ್ನ ಆನಂದಮಯ ಸುಖಸ್ವಪ್ನವು ಎಂದಿಗೂ ಪೂರ್ಣವಾಗಲೊಲ್ಲದು.

'ರಾಜಕೀಯ ಮತ್ತು ದೇಶದ ಶಾಸನ ಕಾರ್ಯ ನಿರ್ವಹಿಸುವಲ್ಲಿ ನನ್ನ ಕೈಕಾಲುಗಳು ವೃದ್ಧವಾಗುತ್ತಾ ಬರುತ್ತಿವೆ. ನನಗೆ ನೂರಾರು ಕೆಲಸಗಳನ್ನು ಮಾಡಬೇಕಾಗುತ್ತದೆ. ಅನೇಕ ಕಡೆ ಓಡಾಡಬೇಕಾಗುತ್ತದೆ. ಆದರೆ ನನಗಾವುದು ಇಷ್ಟವೋ ಅದಕ್ಕೆ ತೀರಾ ಭಿನ್ನವಾಗಿ ಇವೆಲ್ಲ ಇವೆ.

'ಈಗ ನಾನು ನೋಡುತ್ತಿರುವದೇನನ್ನು? ಒಂದೆಡೆ ನನ್ನ ಸುಖ ಸ್ವಪ್ನವಿದೆ. ಇನ್ನೊಂದೆಡೆ ಗಡಿಯಾರದ ಮುಳ್ಳುಗಳು ನಿಲ್ಲದೆ ಚಲಿಸುತ್ತಿವೆ. ಯೌವನವು ಸಂದು ಹೋಗಿದೆ. ವೃದ್ಧಾಪ್ಯದಲ್ಲಿ ಹೆಜ್ಜೆ ಇಟ್ಟಿದ್ದೇನೆ. ಎಂತಲೇ, ನನ್ನ ಕೈಲಾಸ ಹಾಗೂ ಮಾನಸ ಸರೋವರಗಳ ದರ್ಶನದ ಮಧುರ ಕಲ್ಪನೆಗೊಂದು ಮೂರ್ತಸ್ವರೂಪವನ್ನು ಕೊಡಲಾಗದಂತೆ ವೃದ್ಧಾಪ್ಯವು ನನ್ನ ರಕ್ತವನ್ನು ತಣಿಸಿ, ಹೆಪ್ಪುಗಟ್ಟಿಸುವದೇ ಎಂದು ಭಯವಾಗುತ್ತಿದೆ.

ಅಪ್ಪಟ್ಟ ಆಕಾಂಕ್ಷೆ ಮತ್ತು ಸದ್ಭಾವನೆಯಿಂದ ಉತ್ಸುಕವಾದ ಪಂಡಿತಜಿಯವರ ಕೊನೆಯ ಮೇಲಿನ ಸಾಲುಗಳು ಯಾರದೆಂದು ನೀವು ಊಹಿಸಿದ್ದೀರಾ? ಭಾರತದ ಸ್ವಾತಂತ್ರ್ಯ ಜನನಾಯಕ ನೆಹ್ರೂರವರದು! ಈ ವಾಕ್ಯಗಳನ್ನು ಓದಿದಂತೆಲ್ಲ ಕರ್ಮಕ್ಷೇತ್ರದಲ್ಲಿ ನಿರಂತರ ಶ್ರಮಿಸುವ ರಾಜನೀತಿಜ್ಞರೆ ಹೊರತಾಗಿ ತೀರ ಭಿನ್ನವಾದ ವ್ಯಕ್ತಿತ್ವವನ್ನು ಬಾಲ್ಯದಿಂದಲೂ ಪೋಷಿಸಿಕೊಂಡು ನೆಹರೂ ಬಂದಿರುವರಲ್ಲಾ ಎಂದೆನಿಸುತ್ತದೆ. ನಿಜ ಹೇಳಬೇಕಾದರೆ ನೆಹರೂಜಿಯು ಈಗಿನ ದುಸ್ಸ ಹಾಗೂ ಕರ್ಮಠ ವ್ಯಕ್ತಿತ್ವದ ಸುಂದರಪ್ರಾಕಾರವೊಳಗೆ ಈ ಭಾವ ಮಾಧುರ್ಯದಿಂದ ಓತಪ್ರೋತವಾದ ಕವಿತೆಯ, ರೂಪದಲ್ಲಿ ಈ ಸಾಲುಗಳು ಇವೆ. ನೆಹರೂಗೆ ಇದ್ದ ಅವನ್ನು ಉತ್ಸಾಹವನ್ನೂ ಅಗಾಧ ಶಕ್ತಿಯನ್ನೂ ನೀಡುತ್ತವೆ.

ಮನುಷ್ಯನ ಅಂತರಂಗದಲ್ಲಿ ಶಕ್ತಿಕ್ಷಪ್ತಿಯ ಅವಿಕಸಿತ ವ್ಯಕ್ತಿತ್ವವು ನಿಜವಾಗಿ ಜೀವನದಲ್ಲಿನ ಕೊರತೆಗಳ ನಿವಾರಣೆಗಾಗಿ ಪ್ರಕೃತಿದತ್ತವಾದ ಸಂಜೀವಿನಿಯಾಗಿದೆ. ಅಪರಿಮಿತ ಶಕ್ತಿಕ್ಷಮತೆಗಳಿಂದ ತುಂಬಿಕೊಂಡು ಜನ್ಮವೆತ್ತಿದ ಎಲ್ಲ ಮಹಾ ಪುರುಷರ ಜೀವನವೂ ಇದಕ್ಕೆ ಸಾಕ್ಷಿಯಾಗಿದೆ.

ವಿಶ್ವಕವಿ ರವೀಂದ್ರನಾಥ ಠಾಕೂರರ ಒಂದು ಮಧುರ ಸ್ವಪ್ನವನ್ನು ನೋಡಬಹುದು. ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ವಿರಾಮವನ್ನು ಕಳೆಯಲೆಂದು ಅವರು ಉತ್ತರ ಪ್ರದೇಶಕ್ಕೆ ಬಂದರು. ಅವರು ಬೋಳಕೊಂಡಲ್ಲಿಗೆ ಕಲ್ಕತ್ತೆಯಿಂದ ಪೇಶಾವರದ ವರೆಗೆ ಸಾಗುವ 'ಗ್ರೇಟ್ ಟ್ರಂಕ್ ರೋಡ್' ಬಹಳ ಸಮೀಪವಿತ್ತು. ಅದರಲ್ಲಿ ಎತ್ತು - ಒಂಟೆ, ಆನೆ, ಕುದುರೆ ಇನ್ನೂ ಅನೇಕ ವಾಹನಗಳು ಓಡಾಡುತ್ತಿದ್ದವು. ಈ ಮಾರ್ಗವು ಇತಿಹಾಸದ ಎಷ್ಟು ಏರುತಗ್ಗುಗಳನ್ನು ನೋಡಿದೆಯೊ! ರವೀಂದ್ರರ ಬಾಲ್ಯದ ನಿಸ್ಸಂಕೋಚ ಮನಸ್ಸಿನಲ್ಲಿ ಅನೇಕ ಸ್ವಪ್ನಗಳು ಇದನ್ನು ಕಂಡು ಉದ್ಭವಿಸಿದುವು. ಎತ್ತಿನಗಾಡಿಯಲ್ಲಿ ಕುಳಿತು ಗಾಜೀ ಪುರದಿಂದ ಪೇಶಾವರಕ್ಕೆ ಪ್ರಯಾಣಿಸಬೇಕೆಂದವರು ಹಗಲುಗನಸು ಕಟ್ಟಿದ್ದರು ಆದರೇನು? ಈ ಸಂಗತಿ ಅವರ ತಂದೆಗೆ ತಿಳಿದೊಡನೆ ತಡ ಒಡನೆಯೇ ಮನೆಗೆ ರವೀಂದ್ರರನ್ನು ಬರಮಾಡಿ ಕೊಂಡರು. ದೊರೆತ ಅನುಮತಿಯೂ ಪೂರ್ಣವಾಗಲಿಲ್ಲ. ಮುಂದೆ ವಿಶ್ವಕವಿಯಾಗಿ ಖ್ಯಾತಿವೆತ್ತ ಈ ಮಹಾ ಮೇಧಾವಿ ಭಾರತದ ಜನಗಣ ಮನದ ಗಾಯಕನಾಗಿ ಹಾಡಿದಾಗ ರವೀಂದ್ರರ ಸುಸ್ವಪ್ನ ಪಿರಾಟ್ ಸ್ವರೂಪದ ದರ್ಶನವಾಯಿತಲ್ಲ.

ಬರ್ನಾರ್ಡ್ ಶಾ ಅವರ ಹೆಸರನ್ನು ಕೇಳದವರಾರಿದ್ದಾರೆ? ಅವರು ಖ್ಯಾತನಾಮರಾದ ಸಾಹಿತ್ಯಕಾರರು. ಆದರೆ ಪ್ರಾರಂಭಿಕ ಜೀವನದಲ್ಲಿ ಅವರಿಗೆ ಸಾಹಿತ್ಯದ ಕಲ್ಪನೆಯೇ ಹೊಳೆದಿರಲಿಲ್ಲ. ಅವರ ನಿಜವಾದ ಬಯಕೆಗೂ ಕೊನೆಗೆ ಅವರ ಕೊರಳಿಗೆ ಗಂಟುಬಿದ್ದ ಕೀರ್ತಿಗೂ ಯಾವ ಬಗೆಯ ಸಮಾನತೆಯೂ ಇರಲಿಲ್ಲ. ಅವರಿಗೆ ತಾನೊಬ್ಬ ಹಾಡ್ರಿಯಾಗಿ ಬಾಳಬೇಕೆಂಬ ಹಂಬಲವಿತ್ತು. ಅವರಿಗೆ ಚಿತ್ರಣದ ಜ್ಞಾನವೂ ಈ ಉದ್ದೇಶದಿಂದಲೇ ಕೊಟ್ಟಿದ್ದರು. ಈ ಪ್ರಿಯ ಪ್ರವರ್ತನಾಯುದಲ್ಲಿ ನಿಷ್ಣಾತನಾಗಬೇಕೆಂದು ಬಯಸಿ ಅನೇಕಷ್ಟು "ಸರ್ಮನ್"ಗಳನ್ನು ಬರೆದರೋ ಲೆಕ್ಕವಿಲ್ಲ. ಅವುಗಳನ್ನೆಲ್ಲಾ ತುಂಬ ಆಸ್ಥೆಯಿಂದ ಬಾಯಿಪಾಠ ಮಾಡುತ್ತಿದ್ದರು. ಆದರೆ ಇಷ್ಟು ಅರ್ಹತೆಯನ್ನು ಹೊಂದಿದ್ದರೂ ಅವರಿಗೆ ಪಾದ್ರಿ ಪದವಿಯು ದೊರೆಯಲಿಲ್ಲ. ಅವರು ತೀರಾ ನಿರಾಶೆಯಿಂದ ಅಚ್ಚಿನ ಕರಡನ್ನು (ಪ್ರೂಫ್) ತಿದ್ದುವ ಕೆಲಸಕ್ಕೆ ಕೈ ಇಕ್ಕಿದರು. ಇಲ್ಲಿಂದಲೇ ಅವರಲ್ಲಿ ಸುಪ್ತವಾಗಿದ್ದ ಸಾಹಿತ್ಯಶಕ್ತಿ ಜಾಗೃತಗೊಂಡು ಪ್ರತಿಭೆಯನ್ನು ಬೀರಿತು.

ಲೋಕಮಾನ್ಯ ತಿಲಕರೊಡನೆ ಸ್ವರಾಜ್ಯ ದೊರೆತ ಮೇಲೆ ನೀವೇನು ಮಾಡುವಿರೆಂದು ಕೇಳಿದಾಗ, ಯಾವುದಾದರೊಂದು ಕಾಲೇಜಿನಲ್ಲಿ ಗಣಿತದ ಪ್ರಾಧ್ಯಾಪಕನಾಗಿ ಶಾಂತ ಜೀವನ ಕಳೆಯುವೆನೆಂದು ಉತ್ತರ ಬಂತು.

ವಿಶ್ವವಿಖ್ಯಾತ ತತ್ವಜ್ಞಾನಿಯಾದ, ಪೊಸ್ಪೆತಾನೇ ತನ್ನ ಹದಿನೇ ವಯಸ್ಸಿನಲ್ಲಿ ನಾಲ್ವನೇ ನಾಯಕನೆಯಾದ, ಬರ್ಕಿಂಘಾರ ಸಲ್ಲಲಿಗೆ ಕಮಿಷನ್ ಏಜಂಟರಾಗಬೇಕೆಂಬ ಅಭಿಲಾಷೆ ಇತ್ತು. ತನ್ನ ಜೀವನ ಆರಂಭದ ದಿನಗಳಲ್ಲಿ ಕೆಲಸವನ್ನು ಅವರು ಆ ಕೆಲಸವನ್ನೂ ನಿರ್ವಹಿಸಿದರು.

ವಿಧಿಯ ವಿಡಂಬನೆಯನ್ನು ನಮ್ಮಲ್ಲು ಪರಾಷ್ಟ್ರಪತಿ ಸರ್ವಪಳ್ಳಿ ರಾಧಾಕೃಷ್ಣನರ ಜೀವನದಲ್ಲಿಯೂ ನೋಡಬಲ್ಲೆವು. ಇಂದಿಗೆ ಐವತ್ತು ವರ್ಷಗಳ ಹಿಂದೆ ರಾಧಾಕೃಷ್ಣನ್ನರು ಜೀವನರಂಗದಲ್ಲಿ ಟಿಕೇಟ್ ಕಲೆಕ್ಟರನ ರೂಪದಲ್ಲಿ ತಾನೂ ಪ್ರವೇಶಿಸುವೆನೆಂದು ಸುಖಸ್ವಪ್ನವನ್ನು ನೋಡುತ್ತಿದ್ದರು. ಒಂದು ವೇಳೆ ಈ ಕೆಲಸ ಕೈಗೆ ಸಿಗದಿದ್ದರೆ ಪೋಲೀಸ್ ಇನ್ಸ್‌ಪೆಕ್ಟರನಾಗಿ ಬಿಳಿ ಕುದುರೆಯ ಮೇಲೆ ಕುಳಿತು ಗಸ್ತಿ ತಿರುಗುವೆನೆಂದು ಕೊಂಡಿದ್ದರು. ಆದರೆ ಅವರ ಮನೋರಥಗಳೆರಡೂ ವಿಫಲಗೊಂಡವು. ಟಿಕೆಟ್ ಕಲೆಕ್ಟರ್ ಅಥವಾ ಪೋಲೀಸ್ ಇನ್ಸ್‌ಪೆಕ್ಟರ್ ಆಗುವ ಬದಲು ತಾನು ದಾರ್ಶನಿಕ ಜೀವನವನ್ನು ಹೊಂದುವುದಕ್ಕೆ ರಾಧಾಕೃಷ್ಣನರಿಗೇ ಆಶ್ಚರ್ಯವಾಗಿರಬಹುದು. ರೈಲ್ವೇಯಲ್ಲಿ ಏನಾದರೊಂದು ಕೆಲಸ ಹಿಡಿಯಬೇಕೆಂಬ ಕಲ್ಪನೆ ರಾಧಾಕೃಷ್ಣನರಿಗೆ ಮಾತ್ರವಲ್ಲ, ಇನ್ನೂ ಅನೇಕರಿಗಿತ್ತು. ರಶಿಯಾದ ಭಾಗ್ಯವಿಧಾತನೆನಿಸಿದ ಲೆನಿನ್, ನವೀನದ ಸರ್ವಾಧಿಕಾರಿ ಮಾವೋತ್ಸೆತುಂಗ್ ರಾಷ್ಟ್ರೀಯ ಚೀನದ ಚಿಯಾಂಗ್ ಕೈ ಶೇಕ್ ಈ ಮೂವರೂ ರೈಲ್ವೆ ಗಾರ್ಡ ಆಗಬೇಕೆಂದು ಬಯಸಿದ್ದರು. ನಮ್ಮ ಭಾರತ ಸರಕಾರದಲ್ಲಿ ರೈಲ್ವೆ ಮಂತ್ರಿಯಾಗಿರುವ ಶ್ರೀ ಲಾಲ ಬಹದ್ದೂರ ಶಾಸ್ತ್ರಿಗಳಿಗೂ ಬಾಲ್ಯದಲ್ಲಿ ರೈಲ್ವೆ ಗಾರ್ಡನಾಗಿ ರೈಲನ್ನು ನಡೆಸುವ ಅಧಿಕಾರಿಯಾಗಬೇಕೆಂಬ ಆಸೆ ಇತ್ತು. ಈಗ ರೈಲ್ವೆ ಗಾರ್ಡ ಅಲ್ಲವಾದರೂ, ರೈಲ್ವೆ ಮಂತ್ರಿಯಾಗಿ ಎಲ್ಲ ರೈಲುಗಳ ಮೇಲೆ ಅಧಿಕಾರ ನಡೆಸುತ್ತಾರಲ್ಲ.

ಸಂಸತ್ತಿನ ಅಧ್ಯಕ್ಷ ಶ್ರೀ ಮಾವಲಂಕರರೂ ಮನೋರಂಜಕ ಸಂಗತಿಯನ್ನು ತಿಳಿಸುತ್ತಾರೆ. ಅವರ ತಂದೆ ಮುನ್ಸೀಫರಾಗಿದ್ದರು. ಅಜ್ಜ, ಮುತ್ತಜ್ಜ ಎಲ್ಲರೂ ಸರಕಾರೀ ನೌಕರರಾಗಿದ್ದರು. ಆದರೆ ಇವರ ಮನಸ್ಸಿನಲ್ಲಿ ಸರಕಾರೀ ನೌಕರಿಯ ವಿಚಾರವೇ ಬರಲೊಲ್ಲದು. ಸ್ವತಂತ್ರವಾದ ವೃತ್ತಿಯನ್ನು ಕೈಗೊಳ್ಳಬೇಕೆಂದು ಇವರ ಸಂಕಲ್ಪವಾಗಿತ್ತು. ದೀನ ಪೀಡಿತರನ್ನು ನೋಡಿ ಮನಸ್ಸಿಗೆ ಅಸಹ್ಯ ವೇದನೆಯಾಗುತಿತ್ತು. ಅವರಿಗೆ ನೆರವಾಗಿ ಸೇವೆ ಮಾಡ

Radios For Sale.

6 Valves RESHA & 5 Valves H. G. E. C. dry battery all wave sets having beautiful wodden cabinets: Prices including aerial and battery Rs. 380/- and Rs. 330/- net. These are gauranteed for free service and replacements of parts for one year.

PIONEER RADIO CO.,
Narasimharaja Road,
Bangalore City.

ಬೇಕೆಂಬ ಪ್ರಬಲ ಕಾಂಕ್ಷೆ ಮನದಲ್ಲಿ ಉದಯಿಸಿತು. ಆದರೇನು? ಇನ್ನೂ ೧೬ ವರ್ಷ ವಯಸ್ಸಿನವರಿದ್ದಾಗಲೇ ಅವರ ತಂದೆ ಮರಣಹೊಂದರು. ಅಹಮ್ಮದಾಬಾದನ್ನು ಬಿಟ್ಟು ಹೊರಗೆ ಹೋಗಲಾರದವರಾಗಿ ಮಾವಲಂಕರರು ವಕೀಲರಾದರು! ಈ ವಕೀಲ ಜೀವನದಲ್ಲಿ ಏನೆಲ್ಲ ಕಂಡರೋ ಆ ಬಳಿಕ ಇನ್ನುಳಿದ ಜೀವಮಾನವನ್ನು ಸನ್ಯಾಸಿಯಂತೆ ಕಳೆಯುವ ಹಂಬಲ ಅವರಿಗೆ!

ಮೇಲೆ ಹೇಳಿದವುಗಳು ಕನಸೋ, ಹಗಲುಗನಸೋ ಏನೇ ಇರಲಿ ಈ ಸ್ವಪ್ನಗಳು ನಮ್ಮ ಅಮೂಲ್ಯ ನಿಧಿಯೆಂಬಲ್ಲಿ ಪ್ರತಿ ಮಾತಿರದು. ಈ ನಿಧಿಯಿಂದ ನಾವೆಷ್ಟು ತೆಗೆದುಕೊಂಡು ಉಪಯೋಗಿಸಿದರೂ ಅದು ಕಡಿಮೆಯಾಗದು. ಜರ್ಮನಿಯ ಮಹಾಕವಿ ಗಾಯಟೆ ಹೇಳುವಂತೆ "ನಾವು ಯಥಾರ್ಥದಿಂದಾಗಿಯಲ್ಲ ಸ್ವಪ್ನದಿಂದಲೇ ಜೀವನ ನಡೆಸುತ್ತೇವೆ. ಸ್ವಪ್ನ ಜ್ಯೋತಿ ಒಮ್ಮೆ ನೊಂದಿ ಹೋದರೆ ಸಾಕು—ನಾವೂ ಜಡಸ್ವರೂಪರಾಗುತ್ತೇವೆ."

ಇಂಥ ಕನಸುಗಳ ಗರ್ಭದಲ್ಲಿಯೇ ನಮ್ಮ ಉತ್ಕರ್ಷದ ಅಮೃತ ಕುಂಡ ಮುಚ್ಚಿಡಲ್ಪಟ್ಟಿದೆಯೆಂದರೆ ಹೆಚ್ಚು ತಪ್ಪಾಗಲಿಕ್ಕಿಲ್ಲ. ನಮ್ಮ ಆಶೆ, ಮಹತ್ವಾಕಾಂಕ್ಷೆ ಉತ್ಸಾಹ, ಸ್ಫೂರ್ತಿ, ಅಭಿರುಚಿ, ಮೆಚ್ಚುಗೆ ಎಲ್ಲವನ್ನೂ ಈ ಅಮೃತ ಕುಂಡದಲ್ಲಿ ಶೇಕರಿಸಿಡುತ್ತೇವೆ. ಇದರಲ್ಲಿ ಪ್ರಾಣರಸವಿದೆ. ಕರ್ಮದ ಸಂಯೋಗದಿಂದ ಈ ಪ್ರಾಣರಸ ಇನ್ನಷ್ಟು ಸ್ವಾದಿಷ್ಟವೆನಿಸುತ್ತದೆ. ಶಂಕರಾಚಾರ್ಯರು ಹೇಳುವಂತೆ 'ಕರ್ಮ ಜಡವಾಗಿದೆ; ಸ್ವಪ್ನವೇ ಚೇತನ.'

'ನವಯುಗ'

———

ವಾರ್ತೆಗಳು

ಕರಾಚಿಯಲ್ಲಿ ವಿದ್ಯಾಸಂಸ್ಥೆಗಳೆಲ್ಲ ಮುಚ್ಚಲ್ಪಟ್ಟಿವೆಂದೆನ್ನಬಹುದು. ಕಾಲೇಜು, ಹೈಸ್ಕೂಲುಗಳ ಸುಮಾರು ೩೦,೦೦೦ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆ. ಈ ತಿಂಗಳ ಆದಿಯಲ್ಲಿ ನಡೆದ ಗಲಭೆಗಳಲ್ಲಿ ದಸ್ತಗಿರಿಯಾದ ನಿರಪರಾಧಿಗಳನ್ನು ಬಿಡಬೇಕೆಂಬುದೇ ಅವರ ಮುಷ್ಕರಕ್ಕೆ ಕಾರಣ.

ಚೈನಾವು ಬ್ರಿಟನಿನ ದ್ವಂದ್ವನೀತಿಯನ್ನು ಟೀಕಿಸುತ್ತಾ ಒಂದೆಡೆ ಅದು ಚೀನಾದ ಬೆಂಬಲಿಗನಂತೆ ತೋರಿಸಿಕೊಂಡು ಮತ್ತೊಂದೆಡೆ ಚಿಯಾಂಗ ಕೈಶೆಕರ ಬೆನ್ನತಟ್ಟುತ್ತಿದೆ ಎಂದು ಹೇಳಿದೆ.

ಚುನಾವಣೆಯಲ್ಲಿ ಉಮೇದುವಾರ ಪತ್ರವನ್ನು ರಿಟರ್ನಿಂಗ್ ಆಫೀಸರು ತಿರಸ್ಕರಿಸಿದ್ದರೆ ಚುನಾವಣೆಗೆ ಮೊದಲೇ ಆ ವಿಚಾರ ಅಪೀಲು ಮಾಡುವ ಅನುವಾಗುವಂತೆ ಚುನಾವಣಾ ಕಾನೂನನ್ನು ತಿದ್ದುವ ಸೂಚನೆಗಳಾಗಿವೆ.

ಮಾಮೂಲಿನಂತೆ ಪ್ರಾಂತದ ರಾಜ್ಯಪಾಲ (ಗವರ್ನರ್)ರ ಮತ್ತು ರಾಜಪ್ರಮುಖರ ಸಮ್ಮೇಳನವು ಫೆಬ್ರುವರಿ ತಾ. ೪ ಮತ್ತು ೫ ರಲ್ಲಿ ಡೆಲ್ಲಿಯಲ್ಲಿ ನಡೆಯುವದು. ಪ್ರೆಸಿಡೆಂಟ್ ರಾಜೇಂದ್ರ ಪ್ರಸಾದರು ಅಧ್ಯಕ್ಷತೆ ವಹಿಸುವರು

ಕೊರಿಯಾ ಸಮಸ್ಯೆ ನಿವಾರಣೆಗೆ

ಭಾರತವು ಪುನಃ ಯತ್ನಿಸುವದು

ಸಂಯುಕ್ತ ರಾಷ್ಟ್ರ ಸಂಘದ ಕಳೆದ ಸಭೆಯಲ್ಲಿ ಕೊರಿಯಾದ ಸಮಸ್ಯೆಯನ್ನು ಪರಿಹರಿಸಿ ಶಾಂತಿಗಾಗಿ ಯತ್ನಿಸಿದ ಭಾರತದ ಪ್ರತಿನಿಧಿ ಶ್ರೀ ವಿ. ಕೆ. ಕೃಷ್ಣ ಮೆನನ್‌ರವರು ತಾ. ೨೪ರಲ್ಲಿ ಬೊಂಬಾಯಿಯಲ್ಲಿ ಮಾತಾಡುತ್ತಾ ಕೊರಿಯಾದ ಸಮಸ್ಯೆಯನ್ನು ಬಗೆಹರಿಲು ತಾನು ಪುನಃ ಪ್ರಯತ್ನಿಸುವದಾಗಿಯೂ ಮುಂದಿನ ಫೆಬ್ರುವರಿ ತಿಂಗಳಲ್ಲಿ ನಡೆಯುವ ಸಂಯುಕ್ತ ರಾಷ್ಟ್ರದ ಅಧಿವೇಶನದಲ್ಲಿ ತಾನು ಪ್ರಸ್ತಾಪ ಮಾಡುವದಾಗಿಯೂ ಹೇಳಿದರು. ಕೊರಿಯಾದಲ್ಲಿ ಯುದ್ಧ ಮಾಡುತ್ತಿರುವ ಎರಡು ಪಕ್ಷಗಳಲ್ಲಿ ಯಾವುದಾದರೊಂದು ಮಾನವ ಹಿತ ದೃಷ್ಟಿಯಿಂದ ಹಠ ಸಾಧನೆಯನ್ನು ಬಿಟ್ಟು ಕೆಳಗಿಳಿಯದಿದ್ದರೆ ಕೊರಿಯಾ ಯುದ್ಧವು ಜಗತ್ತಿನ ಮಹಾಯುದ್ಧವಾಗಿ ಪರಿಣಮಿಸದಿರದು ಎಂದು ಅವರು ಹೇಳಿದರು.

ಕೊರಿಯಾ ಯುದ್ಧದಲ್ಲಿ ಈ ವರೆಗೆ ಕಡಮೆ ೨೦ ಲಕ್ಷ ಸೈನಿಕರು ಮತ್ತು ನಾಗರೀಕರು ಮೃತರಾಗಿದ್ದಾರೆ. ಸಂಯುಕ್ತ ಅಮೇರಿಕಾದೇಶವೆಯೇ ಯುದ್ಧವನ್ನು ಮುಂದೆ ಸಾಗಿಸಲು ಚೈನವು ಸಿದ್ಧವಾಗಿರದಿಂದಿದೆ. ಚೈನಾಕ್ಕೆ ದೊಡ್ಡದಾದ ನೆಲ ಸೈನ್ಯವೂ, ಶಕ್ತಿಯುತ ರಿಜರ್ವ್ ಸೇನೆಯೂ ಇದೆಯೆಂದು ಅವರು ಹೇಳಿದರು.

ಕೊರಿಯಾ ಯುದ್ಧ ಮುಂದರಿವುದೆಂದರೆ ಜಗತ್ತಿನ ಹಿತ ದೃಷ್ಟಿಯಿಂದ ಗಂಡಾಂತರಕಾರಿಯಾದುದು. ಹಿಂದೂದೇಶವು ಜಗತ್ತಿನ ಹಿತದೃಷ್ಟಿಯಿಂದ ಮತ್ತೊಮ್ಮೆ ಸಂಧಾನಕ್ಕೆ ಅಡಚಲಿಯತ್ನ ಮಾಡುವದು. ಭಾರತವು ಸ್ವತಂತ್ರ ದೇಶವಾಗಿದ್ದು ಅಂತರಾಷ್ಟ್ರೀಯ ವಿಚಾರಗಳಲ್ಲಿ ತನ್ನ ಸ್ವಂತ ಅಭಿಪ್ರಾಯವುಳ್ಳದಾದ ಕಾರಣ ಸಂಧಾನಕ್ಕೆ ಯತ್ನಿಸುವ ಯೋಗ್ಯತೆ ಮತ್ತು ಸಾಧ್ಯತೆ ಅದೊಂದಕ್ಕೆ ಮಾತ್ರವಿದೆ. ಎರಡು ಮಹಾ ಶಕ್ತಿಗಳೂ ಭಯಂಕರ ಯುದ್ಧದಲ್ಲಿ ತೊಡಗಿರುವಾಗ ಸಂಧಾನ ನಡೆಸುವ ರಾಷ್ಟ್ರವು ಬಹು ಎಚ್ಚರಿಕೆಯಿಂದ ವರ್ತಿಸಬೇಕಾಗುತ್ತದೆ ಎಂದು ಹೇಳಿದರು.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಹಿಂದೂದೇಶವು ಪ್ರಥಮ ಠರಾವನ್ನು ತಂದಿತು. ಹಿಂದೂದೇಶವು ಚೀನಾದ ಅಭಿಪ್ರಾಯವನ್ನು ಅದಕ್ಕೆ ಮೊದಲೇ ಪಡೆದಿತ್ತು. ಆದರೆ ರಷ್ಯಾವು ಚೀನಾದ ಅಭಿಪ್ರಾಯವೇನೆಂದು ಕೇಳಿದಾಗ ಖಾಸಗಿಯಾಗಿ ಪಡೆದ ಅಭಿಪ್ರಾಯವನ್ನು ಹೇಳುವದು ಭಾರತದ ಪ್ರತಿನಿಧಿಗಳಿಗೆ ಸಾಧ್ಯವಾಗಲಿಲ್ಲ. ಸಮಯಕ್ಕೆ ಮೊದಲೇ ಭಾರತದ ಠರಾವನ್ನು ಅಮೇರಿಕಾ ಪತ್ರಿಕೆಗಳು ಪ್ರಕಟಿಸಿದುದರಿಂದ ಸಂಧಾನಕ್ಕೆ ತೊಂದರೆಯಾಯಿತೆಂದು ಮೆನನರು ಹೇಳಿದರು. ಮೆನನರು ಲಂಡನಿಗೆ ತಾ. ೨೪ರಲ್ಲಿ ತೆರಳಿದರು.

———

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗುಳಿಗಳು ಬಿದ್ದಿದ್ದು ಹಿಂದಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ, ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರು, ಮೇಹವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "**ಮುಸ್ತಫ ಚಿಂತಾಮಣಿ ಲೇಹ**" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವುದು ಅಲ್ಲದೆ ಆರೋಗ್ಯಭಾಗ್ಯವನ್ನು ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು. 4–2

೧ ಪೌಂಡಿಗೆ ರೂ. ೫–೦–೦

ಮುಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ– (TRIVANDRUM)

ಶ್ರೀ ಕೆ. ಸಿ ಪೀತಾಂಬರರವರು,
"ಕೊಡಗು" ಏಜೆಂಟರು,
ಕೊಡ್ಲಿಪೇಟೆ.

ಶ್ರೀ ಪಿ ರಂಗಯ್ಯನವರು
'ಕೊಡಗು' ಏಜೆಂಟರು,
ಪೊನ್ನಂಪೇಟೆ.

ವಾರ್ತೆ

ಬ್ರಿಟಿಷ್ ರಾಣಿಯು ಕಿರೀಟ ಧಾರಣೋತ್ಸವ ದಿನ ಹತ್ತಿರ ಸಮೀಪಿಸುತ್ತಿದ್ದಂತೆಲ್ಲಾ ಲಂಡನ್ನಿನಲ್ಲಿ, ಕಿರೀಟಧಾರಣಾ ಮೆರವಣಿಗೆಯ ಮಾರ್ಗದಲ್ಲಿ ಜಾಹೀರಾತಿಗೆ ಅವಕಾಶವಿರುವ ಜಾಗಗಳನ್ನೆಲ್ಲಾ ಜಾಹೀರಾತುದಾರರು ಬುಕ್ ಮಾಡಿದ್ದಾರೆ. ಒಂದು ವೆಸ್ಟ್ ಎಂಡ್ ಕ್ಲಬ್ ತನ್ನ ಕಿಟಕಿಯನ್ನು ೨೨,೦೦೦ ಪೌಂಡ್‌ಗಳಿಗೆ ಮಾರಿದೆ.

ಇಪ್ಪತ್ತಾರು ವಯಸ್ಸಿನ ಶ್ರೀ. ರಾಮಪ್ರೀತ್ನ ಚೌಧುರಿಯೆಂಬಾತ ಬಿಜಾಪುರ ಎಂಬ ಹಳ್ಳಿಗೆ ತನ್ನ ತಂಗಿಗೆ ಮದುವೆ ಗೊತ್ತುಮಾಡಲು ವರದಕ್ಷಿಣೆ ಹಣದೊಂದಿಗೆ ಹೋಗಿದ್ದಾಗ, ಹೃದಯಸ್ತಂಭನದಿಂದಾಗಿ ಮರಣ ಹೊಂದಿರುತ್ತಾನೆ. ತಂಗಿಯ ಮದುವೆ ಗೊತ್ತಾಗಿತ್ತೆಂದೂ ಆದರೆ ಅಂದು ವರದಕ್ಷಿಣೆ ವಿಪರೀತ ಕೇಳಿದ್ದರಿಂದ ಈತನಿಗೆ ನಿರಾಶೆಯುಂಟಾಗಿ ಈ ರೀತಿ ಮರಣ ಹೊಂದಿದನೆಂದೂ ತಿಳಿದುಬಂದಿದೆ.

ಮದ್ರಾಸ್ ಸರಕಾರವು ಸದ್ಯದಲ್ಲಿ ಅಕ್ಕಿ ಮಾರಾಟ ದರವನ್ನು ಮದ್ರಾಸ್ ಸೇರು ಒಂದಕ್ಕೆ ೧೪ ಆಣೆಯೆಂದು ನಿರ್ಧರಿಸಲಿದೆ. ಪೇಟೆಯಲ್ಲಿ ಅಕ್ಕಿ ಮಾರಾಟ ಸೇರಿಗೆ ೧೪ ಆಣೆಯಿಂದ ೧–೪–೦ ರೂ. ವರೆಗೂ ಇದೆ. ಫೇರ್ ಪ್ರೈಸ್ ಶಾಪುಗಳಲ್ಲಿ ಪೂಲ್ ಆಧಾರದ ಮೇಲೆ ಸೇರಿಗೆ ೧೪ ಆಣೆಯಂತೆ ಮಾರಾಟ ಮಾಡಲಾಗುವುದು.

ಪಾಟ್ನಾದ ಬಳಿಯಿರುವ ಒಂದು ಹಳ್ಳಿಯಲ್ಲಿ ಕೋತಿಯೊಂದು ನಾಯಿಮರಿಯನ್ನು ಸಾಕುತ್ತಿದೆ. ಕೋತಿಯ ಮೊಲೆಹಾಲು ಕುಡಿದು ನಾಯಿ ಬೆಳೆಯುತ್ತಿದೆ.

೧೯೫೨–೫೩ನೇ ಸಾಲಿನ ಮೊದಲಿನ ಒಂಭತ್ತು ತಿಂಗಳಿಗೆ ಭಾರತ ಸರಕಾರಕ್ಕೆ ವರಮಾನ ತೆರಿಗೆಯಿಂದ ೧೦೯ ಕೋಟಿ ರೂ.ಗಳು ಬಂದಿವೆ. ಹೋದ ವರ್ಷ ಇದೇ ಅವಧಿಗೆ ೧೦೪ ಕೋಟಿ ೭ ಲಕ್ಷ ರೂ. ಗಳು ಬಂದಿದ್ದವು.

೧೫ ಪೌಂಡ್ ಭಾರತೀಯ ಸಿಹಿ ತಿಂಡಿಗಳುಳ್ಳ ಪಾರ್ಸಲ್ ಒಂದನ್ನು ಮುಂಗೆಳವಾರ ಬೊಂಬಾಯಿಯಿಂದ ಪ್ಯಾರಿಸ್‌ಗೆ ಕಳುಹಿಸಲಾಯಿತು. ಇದನ್ನು ರಿಪಬ್ಲಿಕ್ ದಿನದಂದು ಪ್ಯಾರಿಸಿನ ಭಾರತ ರಾಯಭಾರ ಕಚೇರಿಯಲ್ಲಿ ನಡೆಯುವ ಸತ್ಕಾರ ಸಮಾರಂಭದಲ್ಲಿ ಉಪಯೋಗಿಸಲಾಗುವುದು. ಇದನ್ನು ಕೇಂದ್ರ ಸರಕಾರ ಫ್ರಾನ್ಸಿನಲ್ಲಿ ಭಾರತದ ರಾಯಭಾರಿಯಾಗಿರುವ ಸರ್ದಾರ್ ಹೆಚ್. ಎಸ್. ಮಲ್ಲಿಕ್‌ರಿಗೆ ಕಳಿಸಿದೆ.

ಸಂಸಾರ ಯೋಜನೆಯು ಜನ ಸಂಖ್ಯೆ ಏರಿಕೆಯ ವೇಗವನ್ನು ಕಮ್ಮಿ ಮಾಡುವುದೆಂದು ಭಾವಿಸುವುದು ಕೇವಲ "ಭ್ರಾಂತಿ" ಎಂಬುದಾಗಿ ಬ್ರಿಟನಿನಲ್ಲಿ ಭಾರತದ ಹೈಕಮಿಷನರಾಗಿದ್ದ ಶ್ರೀ ವಿ. ಕೆ. ಕೃಷ್ಣ ಮೆನನ್ ನುಡಿದರು. ಸಂತಾನ ನಿರೋಧ ವಿಧಾನ ಮುಖ್ಯವಾಗಿ ಚಿಕ್ಕ ವಯಸ್ಸಿನಲ್ಲೇ ತಾಯ್ತನ, ಕಡಿಮೆ ಆರ್ಥಿಕಮಟ್ಟ, ಗೃಹಭಾವ ಮೊದಲಾದ ಸಾಮಾಜಿಕ ದೋಷಗಳನ್ನು ಹೊಡೆಯಲು ಉಪಯುಕ್ತವೇ ವಿನಾ ಜನಸಂಖ್ಯೆ ಹತೋಟಿಗಾಗಲ್ಲ ಎಂಬುದಾಗಿಯೂ ಅವರು ನುಡಿದರು.

ಅಮರ ಜೀವಿ-ಭಾರತದ "ಬಾಪು"

ಆ ಕಣ್ಣೀರ ಕಡಲು.

'ರೋಧಿಸು ಭಾರತವೇ, ನಿನ್ನ ಹೃದಯ ಬಿರಿಯುವ ವರೆಗೆ ರೋಧಿಸು' ಎಂಬುದೇ ಅಂದಿನ ವಿಕ್ಷಿಪ್ತ ಜನತೆಯ ಮನೋಭಾವವಾಗಿತ್ತು. ೧೯೪೬ ರಲ್ಲಿ ಮುಸ್ಲಿಂ ಲೀಗು ಒಂದು ದಿನ ಹರತಾಳವನ್ನು ಕಲ್ಕತ್ತಾದಲ್ಲಿ ಆಚರಿಸಿತು. ಆ ನಂತರ ಮಾನವನ ಕೊಲೆ ಪ್ರಾರಂಭವಾದುದು. ಹಿಂದೂಗಳ ಕೊಲೆ ಕಲ್ಕತ್ತಾದಿಂದ ನವಖಾಲಿಗೆ ಪಸರಿಸಿತು. ಇದರ ಪ್ರತಿಧ್ವನಿಯಾಗಿ ಬೀಹಾರಿನಲ್ಲಿ ಮುಸ್ಲಿಮರ ಕೊಲೆ ನಡೆಯಿತು. ಈ ಭೀಕರ ಹತ್ಯಾಕಾಂಡವೇ ಭಾರತದ ವಿಭಾಗೀಕರಣಕ್ಕೆ ಕಾರಣವಾಯಿತು. ಹಿಂದೂ ಮುಸ್ಲಿಮರೊಳಗಿದ್ದ ದ್ವೇಷ, ಅಸೂಯೆ, ಘರ್ಷಣೆಗಳು ಸಕ್ರೀಯ ರೂಪತಾಳಿ ಪರಸ್ಪರ ಕೊಲೆಯಲ್ಲಿ ಪರಿಣಮಿಸಿತು.

ಮಾನವತೆಯ ಸೌಹಾರ್ದತೆಯನ್ನು ಎತ್ತಿಹಿಡಿದು, ಅಣ್ಣ ತಮ್ಮಂದಿರ ಪ್ರೀತಿಯನ್ನು ಬೋಧಿಸಿ ಭಾರತದ ವಿಭಜನೆಗೆ ವಿರೋಧಿಸಿದ ಮಹಾತ್ಮರ ಪ್ರಯತ್ನವು ಸುವರ್ಣಾಕ್ಷರಗಳಿಂದ ಬರೆಯಲ್ಪಡಬೇಕು. ಮಾನವನ ಮೇಲೆ ಅವರಿಗಿದ್ದ ವಿಶ್ವಾಸ ಅಚಲವಾದುದು. ಇಕ್ಕಡೆಯ ಧುರೀಣರೂ, ಬ್ರಿಟಿಷರ ಕುಮ್ಮಕ್ಕಿನಿಂದ ಒಪ್ಪಿ ಭಾರತವನ್ನು ವಿಭಾಗ ಮಾಡಿದರು. ಇದರ ಪರಿಣಾಮವಾಗಿ ೧೯೪೭ ರಲ್ಲಿ ಸ್ವಾತಂತ್ರ್ಯ ದೊರೆತರೂ ಅದರಿಂದ ಹಿಗ್ಗದೆ, ಹೃದಯ ಭಾರದಿಂದ ತನ್ನ ವಿಪುಲ ಕೆಲಸದಲ್ಲಿ ಆ ದೇವಪುರುಷನು ತೊಡಗಿದ್ದನು. ಮಾನವನ ಹೃದಯದ ಪವಿತ್ರತೆಯಲ್ಲಿ ವಿಶ್ವಾಸವಿರಿಸಿ ಈ ಎರಡೂ ಕೋಮುಗಳನ್ನು ಒಂದುಗೂಡಿಸಬಹುದೆಂದು ಪ್ರಯತ್ನಿಸಿದರು. ಪಂಜಾಬಿನಲ್ಲಿ ಘೋರ ನರಹತ್ಯೆ ನಡೆದಾಗ ಅವರ ಹೃದಯಕ್ಕಾದ ಆಘಾತವು ಅವರ ಆಗಿನ ಮಾತು, ವರ್ತನೆಗಳಿಂದ ಪ್ರತಿಬಿಂಬಿತವಾಗಿತ್ತು. ನಂತರ ದೆಹಲಿಯಲ್ಲಿ ಕೊಲೆ ಪ್ರಾರಂಭವಾಯಿತು. ಇದಕ್ಕೆ ಮೊದಲು ಕಲ್ಕತ್ತಾದಲ್ಲಿ ಕೊಲೆ ನಡೆದಾಗ ಆ ಕೊಲ್ಲು ಕೊಲೆಯ ಮಹಾಗೊಂದಲದಲ್ಲಿ ಆತ್ಮ ಪಾವಿತ್ರ್ಯದ ಉಪವಾಸ ಕೈಕೊಂಡು ಪರಿಸ್ಥಿತಿಯನ್ನು ಸುಧಾರಿಸಿದರು. ಎರಡು ಕಡೆ ಒಪ್ಪಿ ತಮ್ಮ ದ್ವೇಷಕೃತ್ಯವನ್ನು ನಿಲ್ಲಿಸುವ ಭರವಸೆ ಇತ್ತರು. ದೆಹಲಿಯಲ್ಲಿ ಮತ್ತೆ ಮಹಾತ್ಮರು ಉಪವಾಸ ಕೈಕೊಂಡರು. ದೇಶದ ಜನತೆಯ ಕೋಮುವಾರು ಕುರುಡುತನಕ್ಕಾಗಿ ಆತ್ಮತ್ಯಾಗದ ಮಾರ್ಗಹಿಡಿದರು. ದೆಹಲಿಯಲ್ಲಿ ಜನತೆಗೆ ಜ್ಞಾನೋದಯವಾಯಿತು. ಕಣ್ತೆರೆದು ಸಹೋದರ ಸಹೋದರಿಯರನ್ನು ಗುರ್ತಿಸತೊಡಗಿದರು. ಮಹಾತ್ಮರು ಜನತೆಯ ಹಿತಕ್ಕಾಗಿ, ತನ್ನ ಸೋದರ ಸೋದರಿಯರ ಉತ್ಕರ್ಷಕ್ಕಾಗಿ ಪ್ರಾರ್ಥನಾ ಸಭೆಗಳನ್ನು ನೆರೆಸಿ ದೇವರಲ್ಲಿ ಅನನ್ಯ ಪ್ರಾರ್ಥನೆ ಪ್ರಾರಂಭಿಸಿದರು. ವಿಚಿತ್ರವಾದ ಸ್ವಾರ್ಥ ಭಾವನೆ, ದ್ವೇಷ, ಈರ್ಷೆಗಳಿಂದ ಕುರುಡರಾದ ತನ್ನ ದೇಶವಾಸಿಗಳಿಗೆ ಸದ್ಬುದ್ಧಿಯನ್ನು ನೀಡೆಂದು ಬೇಡಿದರು. ಆದರೆ ರಾಜಕೀಯ, ಕೋಮುವಾರು ಕುರುಡುತನ ಸಾಮಾನ್ಯ ಕತ್ತಲೆ ಏನಲ್ಲ. ಪ್ರಾರ್ಥನಾ ಸಭೆಯಲ್ಲಿ ಮಹಾತ್ಮರ ಕೊಲೆಗೆ ಪ್ರಥಮ ಯತ್ನ ನಡೆಯಿತು. ಮದನಲಾಲನೆಂಬವನು ಸಭೆಯಲ್ಲಿ ಬಾಂಬೊಂದನ್ನು ಎಸೆದನು. ಆದರೆ ಇದರಿಂದ ಯಾರಿಗೂ ಹಾನಿಯಾಗಲಿಲ್ಲ. ಆದರೆ ಈ ಕಥೆ ಪುನರಾವರ್ತಿಸಲ್ಪಟ್ಟಿತು. ಜಗತ್ತಿನ ಚರಿತ್ರೆಯಲ್ಲಿ ಏಸುಕ್ರಿಸ್ತನನ್ನು ಶಿಲುಬೆಗೇರಿಸಿದ ಆ ಚಿರಂತನ ಶುಕ್ರವಾರದಂತೆ ೧೯೪೮ ನೇ ಜನವರಿ ೩೦ ನೇ ಶುಕ್ರವಾರ ಅನುರಣವಾಯಿತು. ಆ ದಿನ ಸಾಯಂಕಾಲದ ಪ್ರಾರ್ಥನಾ ಸಮಯದಲ್ಲಿ ಮಹಾರಾಷ್ಟ್ರದ ನಾಥೂರಾಮ್ ಗೋಡ್ಸೆ ಎಂಬವನು ಮಹಾತ್ಮರಿಗೆ ಗುಂಡಿಕ್ಕಿ ಕೊಂದನು. ಕ್ರಿಸ್ತನು 'ಓ ತಂದೆಯೇ ಅವರನ್ನು ಕ್ಷಮಿಸು. ಅವರೇನು ಮಾಡುತ್ತಿರುವರೆಂಬುದನ್ನು ಅವರು ತಿಳಿಯರು' ಎಂದು ತನ್ನ ಕೊಲೆಗಡುಕರ ಬಗ್ಗೆ ಕ್ಷಮೆ ಕೇಳಿದಂತೆ ಮಹಾತ್ಮಗಾಂಧಿಯವರು ತಮ್ಮ ಹೃದಯದಲ್ಲಿ ಗುಂಡನ್ನು ಧರಿಸಿ 'ಹೇರಾಮ್' ಎಂದು ಪ್ರಾರ್ಥಿಸಿ ನಗುಮುಖದಿಂದ ಪರಂಧಾಮವನ್ನೈದಿದರು. ಇಡೀ ಜಗತ್ತು ಕಂಬನಿಯ ಶರಧಿಯಲ್ಲಿ ಮುಳುಗಿತು.

ಒಂದು ಸ್ಮರಣೆ

ಲೇ:— ವಿ.ಡಿ. ಗಣಪತಿ

ಮಹಾರಾಷ್ಟ್ರದ ಮಗುವಿನ ಮಹಾಪಾಪ.

ದೇಶದ ಏಳಿಗೆಗಾಗಿ ಅತುಲ ತ್ಯಾಗ ಮಾಡಿದ ಮಹಾರಾಷ್ಟ್ರವೇ ನಿನ್ನ ಮಗನೊಬ್ಬನ ಈ ಕ್ರೂರಕೃತ್ಯಕ್ಕಾಗಿ ಸೂರ್ಯಚಂದ್ರರಿರುವಲ್ಲಿಯ ವರೆಗೆ ಕಂಬನಿ ನಿನಗೆ ತಪ್ಪಿದ್ದಲ್ಲ. ನಿಜ, ನಿನ್ನ ಪುತ್ರರತ್ನರನೇಕರು ನಿನಗೂ, ಭಾರತಕ್ಕೂ ಗೌರವ ತಂದಿದ್ದಾರೆ. ಅನೇಕರು ಪರದೇಶೀಯರನ್ನು ಸ್ವದೇಶದ ಹಿತಕ್ಕಾಗಿ ಕೊಲೆ ಮಾಡಿದ್ದಾರೆ. ಮೂವತ್ತೈದು ವರ್ಷಗಳ ಹಿಂದೆ ಪೂನಾ ಮತ್ತು ನಾಸಿಕ ಜಿಲ್ಲಾ ಮೆಜಿಸ್ಟ್ರೇಟರುಗಳ ಕೊಲೆಯನ್ನು ಮಾಡಿದ ಕೈ ನಿನ್ನದು, ನಂತರ ನಿನ್ನ ಉಜ್ವಲ ಪುತ್ರ ಲೋಕಮಾನ್ಯ ತಿಲಕರು 'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕೆಂದು ಸಾರಿ ಜನತೆಯಲ್ಲಿ ಜಾಗೃತಿ ತಂದಿದರು. ರಾಷ್ಟ್ರದ ಕಾರಣಕ್ಕಾಗಿ ರಂಗೂನಿನ ಜೈಲಿನಲ್ಲಿ ಆ ಉಜ್ವಲ ಪುತ್ರ ತಿಲಕರು ಕೊಳೆಯುತ್ತಿದ್ದಾಗ ರಾಷ್ಟ್ರೀಯ ಚಳವಳಿಕ್ಕಾಗಿ ಜೈಲು ಸೇರಿದವರು ಅತಿ ವಿರಳ. ನಂತರ ಬಂದ ನಿನ್ನ ಮತ್ತೋರ್ವ ಸುಪುತ್ರ ಗೋಪಾಲಕೃಷ್ಣ ಗೋಖಲೆಯವರು ಕೀರ್ತಿ ತಂದರು. ನಂತರ ನಡೆದ ಅಸಹಕಾರ, ಕಾನೂನು ಉಲ್ಲಂಘನ ಸತ್ಯಾಗ್ರಹಗಳಲ್ಲಿ ಮಹಾರಾಷ್ಟ್ರವು ಅವರ್ಣಾಗಿ ದುಡಿಯಿತು. ೧೯೪೨ ರ ಮಹಾ ಸಂಗ್ರಾಮದಲ್ಲಿ ಅದ್ವಿತೀಯರಾದ ಜಯಪ್ರಕಾಶ ನಾರಾಯಣ, ರಾಮಮನೋಹರ ಲೋಹಿಯಾ, ಅಚ್ಯುತ ಪಟವರ್ಧನ ಮೊದಲಾದವರನ್ನು ಕೊಟ್ಟ ಮಹರಾಷ್ಟ್ರವು ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಅಸಾಮಾನ್ಯ ಶೌರ್ಯ ತೋರಿಸಿದೆ. ಆದರೆ ಮಗುವಿನಂಥಾ ಮಹಾತ್ಮರನ್ನು, ಶತ್ರುವನ್ನೂ ಕೂಡ ನೋಯಿಸದ ಹೂವಿನಂಥಾ ಹೃದಯದ ಯುಗ ಮಾನವೋತ್ತಮನನ್ನು ಕೊಲೆ ಮಾಡಿದ ಕಳಂಕವು ಮಹರಾಷ್ಟ್ರದ ಮುಖವನ್ನು ಮಲಿನಗೊಳಿಸಿದೆ. ಓ ಗಾಡ್ಸೆ, ತನ್ನ ಸ್ವಾಮಿಯ ಕೈಗೆ ಮುತ್ತಿಡುವಂತೆ ನಟಿಸಿ ಕೊಲೆ ಮಾಡಿದ ಆ ಜುದಾಸನಂತೆ ಪೂಜ್ಯ ಮಹಾತ್ಮರಿಗೆ ಶಿರಬಾಗಿ ಕೊಲೆ ಮಾಡಿದೆಯಾ? ಓ ಮಹರಾಷ್ಟ್ರವೇ ರೋಧಿಸು. ಸೂರ್ಯಚಂದ್ರರಿರುವ ವರೆಗೆ ಇಂಥಾ ಮಗುವನ್ನು ಹೆತ್ತುದಕ್ಕಾಗಿ ರೋಧಿಸು.

ಬ್ರಿಟಿಷ್ ಶಕ್ತಿಯ ಹ್ರಾಸ.

ಈ ರೀತಿಯಲ್ಲಿ ಈ ಯುಗದ ಮಹಾಪುರುಷನನ್ನು ಕೊಲೆ ಮಾಡಿ ಹಿಂದೂದೇಶದ ನಾಲ್ಕು ದಿಕ್ಕುಗಳಲ್ಲಿ ಅವರ ಚಿತಾಭಸ್ಮವನ್ನು ಚೆಲ್ಲಲಾಯಿತು. ಅವರಿಗೆ ಗದ್ದಿಗೆ ಸಮಾಧಿಗಾನವನ್ನೂ ಬೇಕಿರಲಿಲ್ಲ. ಒಂದು ಕಾಲದ ವರೆಗೆ ಇಡೀ ಜಗತ್ತೇ ಕಂಬನಿಗರೆಯಿತು. [illegible] ಮಗುವಾಗಲೀ, ಶತ್ರು ಮಿತ್ರುಗಳಾಗಲೀ ಸರ್ವರೂ ಬಾಪುವಿಗಾಗಿ ರೋಧಿಸಿದರು. ನಮ್ಮ ಈ ಯುಗದ ಜನತೆಗೆ ತಿಲಕಪ್ರಾಯರಾಗಿದ್ದ, ಭಾರತ ಉದ್ಯಾನದ ಅಪೂರ್ವ ಕುಸುಮವಾಗಿದ್ದ ಇವರ ಹಿತ, ಪ್ರೀತಿಯ ಪ್ರಭಾವ ಜಗತ್ತಿನ ಜನತೆಯ ಮೇಲೆ ಹಾಗಿತ್ತು. ಯುಗಯುಗಗಳಿಗೊಮ್ಮೆ ಇಂಥಾ ಯುಗಪುರುಷರ ಅವತಾರ. ಇಂಥಾ ಈ ಪುಣ್ಯಾತ್ಮರ ಶತಮಾನದಲ್ಲಿ ಯುಗದೇವ ಬಾಪುವಿನ ಸಮಕಾಲೀನರಾಗಿ ಬದುಕಿದ ಭಾಗ್ಯ ನಮ್ಮದು. ಅವರೊಡನೆ ಬದುಕಿ ಅವರ ಚಳವಳಿ, ಹೋರಾಟಗಳನ್ನು ನೋಡಿ, ಅವರ ತತ್ವಸಿದ್ಧಾಂತಗಳಿಗೆ ಸಾಕ್ಷಿದಾರರಾಗಿರುವ ಭಾರತೀಯರಾದ ನಾವು ಭಾಗ್ಯವಂತರು!

ಇಳೆಯಲ್ಲಿನ ಆ ವ್ಯಕ್ತಿಯು ನಮ್ಮ ಪ್ರಕಟಾವಳಿಯಿಂದ ಒಂದು ಹಿಡಿ ಉಪ್ಪನ್ನು ತೆಗೆದು ಬ್ರಿಟಿಷರ ವಿರುದ್ಧ ನಿಂತಾಗ ಕೇವಲ ೨೦ ವರ್ಷಗಳಲ್ಲಿ ಬ್ರಿಟಿಷರು ಪದಚ್ಯುತರಾಗುವರೆಂದು ಯಾರೂ ನೆನೆಸಿರಲಿಲ್ಲ. ೧೯೪೨ ನೇ ಆಗಸ್ಟ್ ೮ನೇ ಶನಿವಾರದ ರಾತ್ರಿ ಅವರು ಮಾಡಿದ ಆ ಚಾರಿತ್ರಾರ್ಹ ಭಾಷಣ, ಆ ಮೂಲಕ ಬೊಂಬಾಯಿಯ ಗವಾಳಿಯ ಮೈದಾನದಲ್ಲಿ ಪ್ರಾರಂಭಿಸಿದ ಕ್ವಿಟ್ ಇಂಡಿಯಾ ಚಳವಳದ ಕಾಲಕ್ಕೆ ಯಾರೂ ಕೂಡ ಕೇವಲ ಐದೇ ವರ್ಷಗಳಲ್ಲಿ ಭಾರತವು ಸ್ವತಂತ್ರವಾಗುವದೆಂದು ಭಾವಿಸಿರಲಿಲ್ಲ. ಬ್ರಿಟಿಷರು ಭಾರತವನ್ನು ವಿಭಾಗಿಸಿ ಅಪಾರ ಹಾನಿ ಮಾಡಿದರಾದರೂ ತಮ್ಮ ಒಡೆದು ಆಳುವ ಪದ್ಧತಿಯನ್ನು ಹಿಡಿದು ಭಾರತದಲ್ಲಿ ನಿಲ್ಲುವದು ಅವರಿಗೆ ಅಸಾಧ್ಯವಾಯಿತು.

ಜಾಲಿಯನ್ ವಾಲಾ ಕೊಲೆಯ ಹಿನ್ನೆಲೆ ಮತ್ತು ಮುನ್ನೆಲೆ

ಈ ಸನ್ಯಾಸಿ-ರಾಜಕಾರಿಣಿಯ ಜೀವನವು ಸರ್ವಗ್ರಾಹಿಯಾದುದು. ಪ್ರಥಮತಃ ಆತನು ತನ್ನ ಶಕ್ತಿಯನ್ನು ಆಫ್ರಿಕಾದಲ್ಲಿ ಪ್ರಯೋಗಿಸಿ ಎಂಥಾ ಅಪಮಾನದ ಎದುರೂ ಕೂಡ ಹಿಂಸೆಯನ್ನು ಅನುಸರಿಸದೆ ಅಹಿಂಸೆಯಿಂದ ಮುಂದೆ ಸಾಗುವ ನಿರ್ಧಾರ ಮಾಡಿದರು. ಕ್ರಿಸ್ತರ "ಒಂದು ಕೆನ್ನೆಗೆ ಹೊಡೆದವನಿಗೆ ಮತ್ತೊಂದು ಕೆನ್ನೆಯನ್ನು ತೋರಿಸು" ಎಂಬ ತತ್ವವನ್ನು ಕಾರ್ಯರೂಪದಲ್ಲಿ ರಾಜಕೀಯದಲ್ಲಿ ಉಪಯೋಗಿಸಿ ಇಡೀ ಜಗತ್ತಿಗೇ ಹೊಸ ಮಾರ್ಗ ತೋರಿಸಿದರು. ಭಾರತಕ್ಕೆ ಹಿಂತಿರುಗಿದಾಗ ಭಾರತದ ರಾಜಕೀಯ ರಂಗದಲ್ಲಿ ಫಿರೋಜಶಹಾ, ಗೋಖಲೆ, ದಿನ್ಶಾವಾಛಾ, ಲೋಕಮಾನ್ಯ ತಿಲಕ, ಅನಿಬೆಸೆಂಟ್ ಮೊದಲಾದ ಮುಂದಾಳುಗಳಿದ್ದರು. ಮಹಾತ್ಮರು ತಮ್ಮ ಪಥವನ್ನು ಹಿಡಿದು ಸಾಗಿದರು. ರಾಷ್ಟ್ರ ಮುಂದಾಳುಗಳು ಕ್ರಮಶಃ ಈ ಕರ್ಮಯೋಗಿಗೆ ಸ್ಥಳ ತೆರವು ಮಾಡಬೇಕಾಯಿತು. ಮಹಾತ್ಮರು ಸಾರ್ವತ್ರಿಕ, ಸಾರ್ವದೇಶಿಕ ಹಾಗೂ ಸರ್ವಕಾಲೀನ ತೇಜಸ್ವಿಯೆನಿಸುವಂತವರು. ಆದರೆ ತನ್ನ ಅಚಲ ವಿಶ್ವಾಸದಿಂದ ೧೨೫ ವರ್ಷಗಳ ಕಾಲ ಬದುಕುವೆನೆಂದಿದ್ದ ಈ ದೇವಮಾನವನನ್ನು ಕೊಲೆಗಡುಕನ ಕೈ ಅಕಾಲ ಮೃತ್ಯುವಿಗೆ ಗುರಿ ಮಾಡಿತು.

ಆದರೆ ಚಿರಂತನವಾದ ಆ ವ್ಯಕ್ತಿಗೆ ಮರಣವೆಲ್ಲಿ? ಜೀವಂತ ಇದ್ದಾಗ ಭಾರತೀಯರ ಘೋರ ಸ್ಥಿತಿಯನ್ನು ನೋಡಿ, ಚಳವಳಿ ಪ್ರಾರಂಭಿಸಿ, ಜಾಲಿಯನ್‌ವಾಲಾ ಕೊಲೆಯನ್ನು ನೋಡಿ, ರೌಲೆಟ್ ಕಾಯಿದೆಗಳನ್ನು ವಿರೋಧಿಸಿ, ಸರ್ವ ಗಂಡಾಂತರಗಳಲ್ಲೂ ವಿಕ್ರಮವಂತ ಯೋಗ್ಯ ಪಥವನ್ನು ತೋರಿ ಮುನ್ನಡೆಸಿದ ಮಹಾತ್ಮನು ಕೊಲೆಗಡುಕನಿಗಾಹುತಿಯಾದವನೇನೋ ನಿಜ. ಆದರೆ ಅವರ ಕೃತಿಗೆ ಮರಣವೆಲ್ಲಿ?

೧೮೫೭ ರ ಮಹಾ ಕ್ರಾಂತಿಯ ಕಾಲಕ್ಕೆ ಸಹಸ್ರಾರು ಭಾರತೀಯರ ಕೊಲೆ ನಡೆಯಿತು. ಆ ಕೊಲೆಯ ನೆನಪು ಭಾರತೀ

ಯರ ಆತ್ಮದಲ್ಲಿ ಬೇರೂರಿ ನಿಂತಿತು. ಮಹಾತ್ಮರು ರಾಜಕೀಯಾಕಾಶದಲ್ಲಿ ಉದಯಿಸಿದಾಗ ಈ ಸುಪ್ತ ಚೇತನವು ೧೯೨೦-೨೧, ೩೦-೩೨, ೪೦-೪೧, ೪೨-೪೪ ರಲ್ಲಿ ಚೇತನಗೊಂಡಿತು. ಒಮ್ಮೆ ಚೇತನಗೊಂಡ ಆ ಶಕ್ತಿಗೆ ಮತ್ತೆ ವಿಶ್ರಾಂತಿ ಇಲ್ಲದಾಯಿತು. ರಕ್ತರಹಿತ ಕ್ರಾಂತಿಯ ಮೂಲಕ ಭಾರತವು ಬಿಡುಗಡೆಗೊಂಡಿತು.

೧೫೦ ದಿನಗಳ ಸ್ವಾತಂತ್ರ್ಯ

ಮಹಾತ್ಮರು ಯಾವುದೇ ಶಾಸನ ಸಭೆಯ ಸದಸ್ಯರಾಗಲಿಲ್ಲ. ಯಾವುದೇ ಲಾಭದ ಅಧಿಕಾರ ಸ್ವೀಕರಿಸಲಿಲ್ಲ. ಹಳ್ಳಿಯಲ್ಲಿ ಗುಡಿಸಲುಗಳಲ್ಲಿ ಜೀವಿಸಿದರು. ಸ್ವಾತಂತ್ರ್ಯ ಬಂದ ಮೇಲೂ ರಾಜ್ಯಘಟನಾ ಸಭೆಯ ಸದಸ್ಯರಾಗಲಿಲ್ಲ! ಅವರು ಕಾರ್ಯ ಕರ್ಮದ ಮೇಲೆ ವಿಶ್ವಾಸವಿದ್ದ ಕರ್ಮಯೋಗಿಗಳು. ಅವರು ಬೋಧಕರಲ್ಲ, ಸಾಧಕರು. ಅವರಿಗೆ ಆ ಧರ್ಮ ಈ ಮತವೆಂಬಿಲ್ಲ. ಸತ್ಯವೆಂದು ತೋರಿದುದೇ ಅವರ ವೇದಾಂತ. ಆದ್ದರಿಂದ ಅವರು ಎಲ್ಲಾ ಮತಗಳ ಸಾರದ ಪ್ರತೀಕವಾಗಿದ್ದರು. ಸರ್ವ ಧರ್ಮದ ಸಮಷ್ಟಿಯಾಚಾರ್ಯರಾಗಿ ಇಡೀ ಮಾನವ ಗಣವನ್ನೇ ಏಕದೃಷ್ಟಿಯಿಂದ ನೋಡುತಿದ್ದ ಅವರನ್ನು ಸ್ವಾತಂತ್ರ್ಯ ದೊರೆತ ನೂರೈವತ್ತು ದಿನಗಳಲ್ಲೇ ಕೊಲೆ ಮಾಡಲಾಯಿತು. ಹಗೆಗಳೆಂತಿದ್ದ ಬ್ರಿಟಿಷರ ಆಳ್ವಿಕೆಯಲ್ಲಿ ಸುರಕ್ಷಿತವಿದ್ದ ಜೀವವು ಸ್ವತಂತ್ರ ಭಾರತದಲ್ಲಿ ಗಂಡಾಂತರಕ್ಕೆ ಗುರಿಯಾಯಿತು. ಅಹಿಂಸೆಯ ಪ್ರತೀಕವಾಗಿ ಪ್ರಾಣಿಪಕ್ಷಿಗಳಿಗೂ ನೋವು ಉಂಟು ಮಾಡಲು ಹಿಂಜರಿಯುತ್ತಿದ್ದ ವ್ಯಕ್ತಿಯನ್ನು ಗುಂಡಿಗೆ ಆಹುತಿ ಕೊಡಲಾಯಿತು.

ಹಳ್ಳಿಗಳ ಜೀವತಂತು

ನಮ್ಮ ರಾಷ್ಟ್ರಪಿತನ ಅಂತಿಮವಾಯಿತು. ನಮ್ಮ ರಾಷ್ಟ್ರದ ಪುನರ್ನಿರ್ಮಾಣಕರ್ತೃವೂ ಹಳ್ಳಿಗಳ ಜೀವತಂತುವೂ ಆಗಿದ್ದಾತನನ್ನು ಸಮಾಪ್ತಿಗೊಳಿಸಿದೆವು. ಧನಿಕರ ಆಡಂಬರ, ಬಡವರ ಬಡಾಯಿಗಳನ್ನು ಖಂಡಿಸಿ ಸತ್ಯಸರಳ ಜೀವನದ ಪಾಠ ಹೇಳಿದ ವಿಧಾತನು ಮರೆಯಾದನು. ಮಹಾತ್ಮರಿಗೆ ಹಳ್ಳಿಗಳೇ ಭಾರತದ ಜೀವನಾಡಿ. ಆದ್ದರಿಂದ ಯಾವ ಜನ ಸುಧಾರಕನಿರಲಿ, ರಾಜಕಾರಣಿ ಇರಲಿ ಹಳ್ಳಿಗಳ ಸೇವೆ ಮಾಡಿದರೆ ನಿಜವಾದ ಸೇವೆಯೆಂಬ ಪರಿಸ್ಥಿತಿಯನ್ನು ತರಲಾಯಿತು. ಹಿಂದಿನ ಆರ್ಷೇಯ ಸರಳ ಹಾಗೂ ಸುಖಮಯ ಹಳ್ಳೀ ಜೀವನದ ಕಲ್ಪನೆ ಎಲ್ಲರ ಮನೋಭಿತ್ತಿಯಲ್ಲಿ ಹೊಳೆಯಿತು. ಭರತಖಂಡವೆಂದರೆ ಹಿಂದೂದೇಶದ ಏಳು ಲಕ್ಷ ಹಳ್ಳಿಗಳೆಂಬ ಅರಿವಾಯಿತು. ಆಧುನಿಕ ನಾಗರಿಕತೆಯ ಮೆರುಗಿನಲ್ಲಿ ನಗರವೇ ಸ್ವರ್ಗವೆನ್ನುವವರಿಗೆ ಹೊಸ ಮಾರ್ಗ ತೋರಲಾಯಿತು ಭಾರತದ ಕಣ್ಣು, ಕಿವಿ, ಹೃದಯಗಳೆಂತಿರುವ ಹಳ್ಳಿಗಳಲ್ಲಿ ಜೀವಸ್ಫುರಣವಾಯಿತು. ಅಂತರ್ ಏಷ್ಯಾ ಪರಿಷತ್ತಿಗೆ ಬಂದಿದ್ದ ವಿವಿಧ ರಾಷ್ಟ್ರಗಳ ಪ್ರತಿನಿಧಿಗಳಿಗೆ ಹಳ್ಳಿಗಳಲ್ಲಿ ಭಾರತವನ್ನು ನೋಡಿರೆಂದು ಅವರು ಸಂದೇಶವಿತ್ತರು. ೧೯೩೪ರ ಬೊಂಬಾಯಿ ಕಾಂಗ್ರೆಸ್ ಅಧಿವೇಶನದಲ್ಲಿ ಹಳ್ಳಿಯ ಚಿತ್ರವನ್ನು ಮುಂದಾಳುಗಳ ಮುಂದಿರಿಸಿ ಕಾಂಗ್ರೆಸ್ ಹಳ್ಳಿಗಳೊಳಗೆ ಪ್ರವೇಶಿಸುವಂತೆ ಮಾಡಿದವರು ಗಾಂಧೀಜಿ. ಖಾದಿ, ಚರಖಾಗಳು ರಾಷ್ಟ್ರೀಯ ಸಂಕೇತಗಳಾದವು. ಆರ್ಥಿಕ ಸ್ವರಾಜ್ಯದ ಅಡಿಪಾಯವನ್ನು ಆ ಮೂಲಕ ಗಾಂಧೀಜಿಯವರು ಹಾಕಿದರು.

ಸ್ತ್ರೀಜನ ಸಂಪ್ರೇರಕ

ತಮ್ಮ ತಮ್ಮ ಮನೆಗಳಲ್ಲಿದ್ದುಕೊಂಡು ಹೊರಗಿನ ಪ್ರಪಂಚದ ಅರಿವೇ ಇಲ್ಲದಿದ್ದ ಭಾರತೀಯ ಮಹಿಳಾ ವರ್ಗವನ್ನು ಪ್ರೇರೇಪಿಸಿ, ರಾಜಕೀಯ ರಂಗಕ್ಕಿಳಿಸಿ, ಅಪೂರ್ವ ಬಲಿದಾನ ಕೊಡಲು ಸಿದ್ಧಗೊಳಿಸಿದವರು ಮಹಾತ್ಮರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಲಾಠಿ ಗುಂಡುಗಳನ್ನು ಎದುರಿಸಿ ಕೆಚ್ಚೆದೆಯಿಂದ ಭಾರತೀಯ ಮಹಿಳೆಯರು ಹೋರಾಡಿದ್ದರೆ ಅದು ಮಹಾತ್ಮರ ಪ್ರೋತ್ಸಾಹದಿಂದ. ಸ್ತ್ರೀ ಜನಾಂಗವು ಎಚ್ಚೆತ್ತು ಇಂದು ಮುಂದಡಿ ಇಡುವಂತೆ ಪ್ರೇರೇಪಿಸಿದವರವರು. ೧೯೩೦, ೩೨, ೪೧, ೪೨ರ ಚಳವಳಗಳಲ್ಲಿ ಸಹಸ್ರಾರು ವೀರರಮಣಿಯರು ದೇಶಕ್ಕಾಗಿ ತ್ಯಾಗ ಬಲಿದಾನ ಮಾಡಿದರು. ಸ್ತ್ರೀಸಂಪ್ರೇರಕರಾಗಿ, ಭಾರತ ರಮಣಿಯರ ಉತ್ಕರ್ಷದ ಬಲಗೈಯಾಗಿದ್ದ ಮಹಾತ್ಮರು ಕೊಲೆಗಡುಕನ ಗುಂಡಿಗೆರವಾಗಬೇಕಾಯಿತು.

ಅಹಿಂಸೆ ಮತ್ತು ಒಂದೇ ಜಗತ್ತು

ಮಹಾತ್ಮರ ದೃಷ್ಟಿ ಸಮಗ್ರವಾದುದು. ಜಗತ್ತೇ ಅವರಿಗೆ ಒಂದು ಕುಟುಂಬದಂತೆ ಮಾನವ ಗಣ ಮಾತ್ರವಲ್ಲ; ಪ್ರಾಣಿ ಪಕ್ಷಿ ಸಂಕುಲವೂ ಕೂಡ ಏಕ ಚಿತ್‌ಶಕ್ತಿಯ ಅಣುಗಳು ಅವರಿಗೆ. ಅವರು ತೋಳ್ಬಲದ ಪಥದವರಲ್ಲ. ಹೃದಯಪರಿವರ್ತನೆಯ ಮಾರ್ಗದವರು ಅವರ ಆಯುಧ ಮದ್ದು ಗುಂಡುಗಳಲ್ಲ, ಪ್ರೇಮಪ್ರೀತಿಗಳು. ಜಾತಿ ಮತಗಳ ಮೇರೆಯನ್ನು ಮೀರಿದ ಅಖಂಡ ಜಗತ್ತಿನ ತತ್ವವನ್ನು ಸಾರುತಿದ್ದುದು ಮಾತ್ರವಲ್ಲ; ಸ್ವತಹ ಆಚರಿಸಿದವರು. ಭಾರತೀಯರಿಗೆ ವಿರುದ್ಧರೆನಿಸಿದ ಬ್ರಿಟಿಷ್ ಎಡ್ಮಿರಲನ ಮಗಳು ಮೀರಾಬಾಯಿಯವರು ಅವರ ದತ್ತು ಮಗಳಂತೆ. ಗ್ರೀಕ್ ದೇಶದ ಹೆಂಗಸೊಬ್ಬಳು ಅವರ ಅನುಯಾಯಿಯಾಗಿದ್ದರು. ಜಪಾನಿ ಭಿಕ್ಕುಕನೊಬ್ಬರು ಅವರ ಪರಿವಾರದವರಾದರೆ ಹರಿಜನ ಬಾಲಿಕೆಯೊಬ್ಬಳು ಅವರ 'ಮಗು'ವಾಗಿದ್ದಳು' ಗಾಂಧೀಜಿಯ ಜೀವನ ಕ್ರಿಸ್ತನ ಉಪದೇಶದಂತೆ. ಅಂಥಾ ಮಹಾ ಪುರುಷನು ಕಣ್ಮರೆಯಾಗಿ ಐದು ವರ್ಷಗಳು ತುಂಬಿದವು. ಅಂದು ಅವರು ಕಣ್ಮರೆಯಾದಾಗ ಕಣ್ಣೀರು ಸುರಿಸಿ, ಆತನ ತತ್ವಗಳಂತೆ ನಡೆದು ಭಾರತಕ್ಕೆ ಕೀರ್ತಿ ತರುವೆವೆಂದು ಪ್ರತಿಜ್ಞೆ ಮಾಡಿದ ನಾವು ಅದನ್ನೆಲ್ಲವನ್ನು ಮರೆತು ನಮ್ಮ ಸ್ವಾರ್ಥತೆ, ಸಂಕೀರ್ಣತೆ, ದ್ವೇಷ, ಅಸೂಯೆಗಳಲ್ಲಿಯೇ ನಿರತರಾಗಿರುವೆವು. ಪ್ರತಿ ವರ್ಷ ಜನವರಿ ೩೦ನೇ ತಾರೀಕು ನಮ್ಮನ್ನು ಎಚ್ಚರಿಸಿದರೂ ನಮ್ಮ ಹೀನ ಸು[illegible] ಬಿಟ್ಟಿರುವದಿಲ್ಲ.

ಜಗತ್ತಿಗೆ ಶಾಂತಿ ದೊರೆಯಬೇಕಾದರೆ ಯುದ್ಧಗಳ ಅನಾಹುತದಿಂದ ಜಗತ್ತು ಉಳಿದು ಬಾಳಬೇಕಾದರೆ ಅದು ಗಾಂಧೀಜಿಯವರು ತೋರಿಸಿದ ಪಥದಿಂದಲೇ ಸಾಧ್ಯವೆಂಬುದು ಎಲ್ಲರಿಗೂ ತಿಳಿದಿದೆ. ಮೊನ್ನೆ ದೆಹಲಿಯಲ್ಲಿ ನಡೆದ ಗಾಂಧಿ ಸೆಮಿನಾರ್‌ನಲ್ಲಿಯೂ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಲ್ಪಟ್ಟಿತು. ಆದರೆ ನಮ್ಮ ಬಾಯಲ್ಲಿ ಹೊರಡುವ ಮಾತು ಗಾಂಧಿ ಕ್ರಿಸ್ತ ಮೊದಲಾದವರದಾದರೂ ಕೈ ಮಾತ್ರ ಹಿಟ್ಲರ್ ಮುಸೋಲಿನಿಗಳದೇ ಇದೆ. ಆದ್ದರಿಂದಾಗಿ ಜಗತ್ತಿಗೆ ಶಾಂತಿ ಇಲ್ಲ; ಸುಖವಿಲ್ಲ. ಭಾರತೀಯರಾದ ನಾವಾದರೂ ಯುಗಪುರುಷ ಬಾಪೂವಿನ ಅಮೂಲ ತತ್ವಗಳನ್ನು ನಮ್ಮ ಆಚರಣೆಯಲ್ಲಿ ತಂದು ಭಾರತದ ಹಿರಿಮೆಯನ್ನು ಹೆಚ್ಚಿಸಿ, ಜಗತ್ತಿನ ಶಾಂತಿ ರಕ್ಷಣೆಯ ಕಾರ್ಯವನ್ನು ಭಾರತವು ಯಶಸ್ವಿಯಾಗಿ ಮಾಡುವಂತೆಸಗುವೆವೇ?

॥ ಮಧು ಪರ್ಕ ॥

ಗಾಂಧೀಜಿಯವರು ಆರೋಗ್ಯ ಸುಧಾರಣೆಗೆಂದು ಮೈಸೂರಿನ ನಂದಿಬೆಟ್ಟದಲ್ಲಿದ್ದಾಗ ಒಂದು ಕುಟುಂಬದ ತಾಯಿ ಮಕ್ಕಳೆಲ್ಲರೂ ಅವರನ್ನು ನೋಡಲು ಬಂದಿದ್ದರು. ಹಿರಿಯ ಮಗಳು ಬೆಂಗಳೂರಿನಲ್ಲಿ ಬಿ. ಎ., ಓದುತ್ತಿದ್ದಳು. ಆಕೆಯ ವಿನಾ ಉಳಿದವರೆಲ್ಲ ಖಾದಿ ಉಟ್ಟಿದ್ದರು.

ಆಕೆಯನ್ನು ಗಾಂಧೀಜಿ ಕೇಳಿದರು: ಬಿ ಎ. ಆದ ಮೇಲೆ ಏನು ಮಾಡುವೆ? ಕುರ್ಚಿಯ ಮೇಲೆ ಕೂತುಕೊಳ್ಳುವದು ತಾನೆ." ಆಕೆ ಉತ್ತರಿಸಲಿಲ್ಲ. ಮತ್ತೆ ಕೇಳಿದರು : "ಏನು ಮಾಡುತ್ತಿ ?"

"ಮನೆಯಲ್ಲಿಯೇ ಇರುತ್ತೇನೆ"

"ಸರಿ, ಮನೆಯಲ್ಲಿ ಇದ್ದು ಏನು ಮಾಡುತ್ತಿ ? ಓದುತ್ತಾ ಇರುವದೋ ?"

" ನನಗೆ ನೂಲು ಮಾಡಲು ಗೊತ್ತಿದೆ. ನೂಲು ಮಾಡುತ್ತೇನೆ"

ಗಾಂಧೀಜಿ ಮಾತಿಗೆ ಬೆರಗಾಗುವ ಪ್ರಾಣಿಯಲ್ಲ. "ನೂತರೇನಾಯಿತು ? ಓದುವುದೇಕೆ ಎಂಬುದನ್ನು ಅರಿತುಕೊಳ್ಳಬೇಡವೆ ?" ಎಂದು ಕೇಳಿದರು.

ಪಾಪ, ಆ ಹುಡುಗಿಗೇನೂ ತೋಚಲಿಲ್ಲ. ಏನು ಹೇಳಬೇಕೆಂದು ತೋರದೆ ಪುನಃ ಅದೇ ಮಾತನ್ನು ಹೇಳಿದಳು. ಅದರೆ ತೋರಮಾಣಿಕವೆಂದು ಹಿಡಿದುದು ಭೂರಿಕೆಂಡವಾಯಿತು.

ಗಾಂಧೀಜಿ ಕೇಳಿದರು "ಹಾಗಾದರೆ ಖಾದಿ ಉಟ್ಟಿಲ್ಲವೇಕೆ ?"

"ಇದೂ ಸ್ವದೇಶಿ ಮಹಾತ್ಮಾಜಿ. ಬೆಂಗಳೂರಲ್ಲೇ ಆದದು. ಮೈಸೂರು ರೇಶ್ಮೆ."

"ಹೇಗೆ ಒಪ್ಪುವದು ? ನಾಡಿನ ತುಂಬ ಕೃತ್ರಿಮ ರೇಶ್ಮೆ ತುಂಬಿದೆ. ಅದಿರಲಿ. ನೀನು ಪ್ರೌಢ ಶಿಕ್ಷಣ ಪಡೆಯುತ್ತಿದ್ದಿಯೇ. ನಿನ್ನ ಅಕ್ಕ ತಂಗಿಯರನ್ನೇ ಜನ ಬಡತನದಲ್ಲಿ ನರಳುತ್ತಿರುವರಲ್ಲ. ನಿನ್ನ ಹಾಗೆ ಅವರೇನು ಶ್ರೀಮಂತರೆ? ನಿನ್ನನ್ನು ನೋಡಿ ಹಾಗೆಯೇ ತಾವೂ ಮಾಡುವ ವಿದ್ಯಾವಿಹೀನರಲ್ಲವೇ ? ಅವರಿಗೆಲ್ಲ ನೀನು ಮೇಲು ಪಂಕ್ತಿಯಾಗಬೇಡವೇ ? ನೀನೇ ಖಾದಿ ಉಡದಿದ್ದರೆ ಹೇಗಮ್ಮ ?"

"ಹಾಗೇ ಆಗಲಿ ಮಹಾತ್ಮಾಜಿ. ಈ ಬಟ್ಟೆಗಳೆಲ್ಲ ಹರಿದು ಹೋದ ಮೇಲೆ ಖಾದಿಯನ್ನೇ ಉಡುತ್ತೇನೆ"

ಗಾಂಧೀಜಿ ಗಟ್ಟಿಯಾಗಿ ನಕ್ಕರು. "ನಿನ್ನ ಮನೆಯಲ್ಲಿ ೫೦ ಸಾರಾಯಿ ಕುಪ್ಪಿಗಳಿವೆ ಎನ್ನೋಣ. ಕುಡಿಯುವದನ್ನು ಬಿಡು ಎಂದು ಹೇಳಿದರೆ, ಸ್ವಲ್ಪ ತಾಳಿ, ಮನೆಯಲ್ಲಿರುವ ೫೦ ಕುಪ್ಪಿಗಳನ್ನೂ ಕುಡಿದ ಮೇಲೆ ಸಾರಾಯಿ ಬಿಡುತ್ತೇನೆ ಎಂದು ಹೇಳುತ್ತೀಯೊ ?" ಎಂದರು. ಪಾಪ! ಆ ಹುಡುಗಿಯ ಕಣ್ಣಲ್ಲಿ ಅಶ್ರು ತುಂಬಿತ್ತು.

ಮನೆ ಮಾರಾಟಕ್ಕಿದೆ.

ವೀರಾಜಪೇಟೆ ಹೈಸ್ಕೂಲು ಸಮೀಪ ಜೋಯಿಕೇರಿಗೆ ಹೋಗುವ ರಸ್ತೆ ಬಾಜು. ವಾಸಕ್ಕೆ ಯೋಗ್ಯವಾದ ಹೊಸ ಮನೆ. ಕಲ್ಲುಕಟ್ಟಿದ ಬಾವಿ, ದನದ ಕೊಟ್ಟಿಗೆ, ಬಚ್ಚಲು ಮನೆ, ಅಂದಾಜು ಒಂದು ಎಕರೆ ಹಿತ್ತಲು, (ಇವುಗಳಿಗೆ ತಂತಿ ಹಾಕಿ, ಕಾಫಿ, ಬಾಳೆ ಹಾಕಿದೆ.) ಅಂದಾಜು ಬೆಲೆ ೨೦,೦೦೦ ರೂ ಸಮೀಪ. ಹೆಚ್ಚಿನ ವಿವರಗಳಿಗೆ ಈ ಕೆಳಗಿನವರುಗಳಿಗೆ ಬರೆದು ತಿಳಿದುಕೊಳ್ಳಬಹುದು.

ಮಿಸೆಸ್ ಪಟ್ಟಡ ಚೀಯಣ್ಣ,
C/o. ಪಿ. ಎ. ಬೆಳ್ಯಪ್ಪ,
ಮುನ್ಸೀಫ್ ಕೋರ್ಟ್,
ವೀರಾಜಪೇಟೆ.

Edited Printed and Published by P. I. BELLIAPPA at 'KODAGU' Press, Mercara for Kodagu Ltd.,

ಕೊಡಗು

॥ ಮಧು ಪರ್ಕ ॥

ಗಾಂಧೀಜಿಗೆ ಮಕ್ಕಳನ್ನು ಕಂಡರೆ ತುಂಬಾ ಪ್ರೀತಿ. ಲಂಡನ್ನಿನಲ್ಲಿ ದುಂಡು ಮೇಜು ಪರಿಷತ್ತಿಗೆಂದು ಅವರು ಹೋಗಿದ್ದಾಗ ಬೆಳಿಗ್ಗೆ ಗಾಳಿ ಸವಾರಿಗೆ ಅವರು ಹೊರಟಿದ್ದರೆ ಸಣ್ಣಹುಡುಗಿಯರು ಹುಡುಗರೆಲ್ಲಾ ಒಂದು ಬೀದಿಯಲ್ಲಿ ಕುಣಿಯುತ್ತಿದ್ದರು. ಗಾಂಧೀಜಿ ಅವರ ಕಡೆ ಒಂದು ಸಲ ಮುಗುಳುನಗೆ ನಕ್ಕರೆ ಸಾಕು ಅವರಿಗೆ ಸ್ವರ್ಗವೇ ಸಿಕ್ಕಿದಂತೆ!

ಒಂದು ದಿನ ಶಾಲೆಯೊಂದರ ಮಕ್ಕಳೆಲ್ಲಾ ಸೇರಿ ಗಾಂಧೀಜಿ ಒಂದು ಸಭೆ ಸೇರಿಸಿದರು. ಮಕ್ಕಳೆಲ್ಲ ಗಾಂಧೀಜಿಯ ಸುತ್ತ ನೆರೆದರು. ಆ ಹೊತ್ತು ಈ ಮಾತು ಆದ ಗಾಂಧೀಜಿ ಹುಡುಗರನ್ನು ಕೇಳಿದರು—'ಒಬ್ಬ ಹುಡುಗ ನಿನಗೊಂದು ಏಟು ಕೊಟ್ಟರೆ ನೀನೇನು ಮಾಡುತ್ತೀ ?'

ಹುಡುಗರು ಹೇಳುವುದನ್ನು ಸುಲಭವಾಗಿಯೇ ಊಹಿಸಬಹುದಾಗಿದೆ. ಒಂದಕ್ಕೆರಡು. ಅದೇ ತಾನೆ ಜಗತ್ತಿನ ರೀತಿ 'ಆ ಮೇಲೇನು' ಮುಂದೇನಾಗುತ್ತದೆ. ಗೊತ್ತೇ ಇದೆ. ಹೊಡೆದಾಟ, ಹುಚ್ಚು ಸಿಟ್ಟು!

ಗಾಂಧೀಜಿ ಮೆಲ್ಲಗೆ ಕೇಳಿದರು. 'ಇದನ್ನು ಬಿಟ್ಟು ಬೇರೆ ಮಾರ್ಗವಿಲ್ಲವೇ?' ಅದಕ್ಕೆ ಹುಡುಗಿಯಂತೆ ಹಲವು ಉತ್ತರ ಬಂದವು. ಒಂದು ಗಂಟೆಯಲ್ಲಿ ಶಾಂತಿ ಸಹನೆಯೊಂದು ಅಲ್ಲಿ ಕಂಡು ಬಂತು!

ಅದಾದ ಮೂರು ನಾಲ್ಕು ದಿನಗಳಲ್ಲೇ ಒಬ್ಬ ಗೃಹಸ್ಥ ಭೇಟಿದ ಗಾಂಧೀಜಿಗೆ— 'ನಿಮ್ಮ ಸಂಗಡ ಜಗಳವಾಡಬೇಕೆಂದು ಬಂದಿದ್ದೇನೆ ನಾನು'

ಗಾಂಧೀಜಿಗೆ ಟೀಕೆ, ನಗ ಎಂದರೆ ಬಲು ಪ್ರೀತಿ. ನಗುತ್ತಾ ಆ ಗೃಹಸ್ಥನ ಕಡೆ ತಿರುಗಿ 'ಅದೇನು, ಅಂಥಾ ಸಮಾಚಾರ ?' ಎಂದರು.

"ನೋಡಿ ಈ ದಿನ ಬೆಳಿಗ್ಗೆ ನನ್ನ ಮಗಳು, ಇನ್ನೂ ನಾಲ್ಕು ವರ್ಷದವಳು ನನ್ನ ಹತ್ತಿರ ಬಂದು ಬಲವಾಗಿ ನನ್ನ ತಲೆಗೊಂದು ಏಟು ಕೊಟ್ಟು, ನಗೆ ಮುಖದಿಂದ ನಿಂತು, 'ಇಲ್ಲಿ ನೋಡು ಅಪ್ಪಾ, ನೀನು ತಿರುಗಿ ಹೊಡೆಯಬಾರದು ನನ್ನನ್ನು. ಮೊನ್ನೆ ಗಾಂಧೀ ಹೇಳಿದ್ದಾರೆ, ಹಾಗೆ ಮಾಡಬಾರದು ಎಂದು' ಎಂದಳು"

ಆ ತಂದೆ ಆ ದಿನದ ಮಕ್ಕಳ ಕೂಟಕ್ಕೆ ಬಂದಿದ್ದ. ಗಾಂಧೀಜಿಯೂ ಆ ಗೃಹಸ್ಥನೂ ಇಬ್ಬರೂ ನಕ್ಕರು.

ವಾರ್ಷಿಕ ಚಂದಾ ರೂ. ೪—೦—೦

[ಸಂಪುಟ ೩೧. ಸಂಚಿಕೆ ೩೪.]

ಶುಕ್ರವಾರ

೬--೨--೧೯೫೩

KODAGU KANNADA WEEKLY MERCARA

ವಾರದ ಕಥೆ

ಪಾಪಿ

— ಲೇಖಕರು —
ಬಿ. ಡಿ. ಗಣಪತಿ

ಆತನು ದುಷ್ಕರಲ್ಲಿ ದುಷ್ಟನೆನಿಸಿದ್ದನು. ಆತನು ಮಾಡದ ಪಾಪಕೃತ್ಯವಿರಲಿಲ್ಲ. ಸರ್ವರೂ ಆತನನ್ನು ಪಾಪಿಷ್ಟನೆನ್ನುತ್ತಿದ್ದರು. ಆಗ ಆತನಿಗೆ ಎಪ್ಪತ್ತು ವರ್ಷ ವಯಸ್ಸಾಗಿತ್ತು. ಆ ವರೆಗೆ ಜೀವನದಲ್ಲಿ ಆತನು ಮಾಡಿದ ಕೃತ್ಯಗಳಿಂದ ಯಾರಿಗೂ ಬೇಡದವನಾಗಿದ್ದನು. ಎಪ್ಪತ್ತನೇ ಇಳಿವಯಸ್ಸಿನಲ್ಲಿ ಆತನಿಗೆ ಕಾಯಿಲೆ ಹಿಡಿಯಿತು. ಕ್ರಮೇಣ ಅದು ಜೋರಾಗಿ ಆತನು ಉಳಿಯುವ ಪರಿಸ್ಥಿತಿ ಇರಲಿಲ್ಲ. ಅಂದಿನದು ಕಡೇ ದಿನ. ಆತನ ಪ್ರಾಣ ಪಾರ್ಥಿವ ಶರೀರವನ್ನು ಬಿಡುವ ಕಾಲಕ್ಕೆ ಆತನು ಕಣ್ಣೀರು ತುಂಬಿ ಅಳತೊಡಗಿದನು. ತನ್ನ ಹಿಂದಿನ ಕೃತ್ಯಗಳನ್ನೆಲ್ಲಾ ನೆನೆಸಿ ಪಶ್ಚಾತ್ತಾಪಕ್ಕೆ ತೊಡಗಿದನು. 'ಪ್ರಭು, ನನ್ನನ್ನು ಕ್ಷಮಿಸು. ಹಿಂದೆ ಅಜಾಮಿಳನನ್ನು ರಕ್ಷಿಸಿದಂತೆ, ವಾಲ್ಮೀಕಿಯನ್ನು ಉದ್ಧರಿಸಿದಂತೆ ನನ್ನನ್ನು ಕ್ಷಮಿಸಿ ಉದ್ಧರಿಸು' ಎಂದು ಹೇಳುತ್ತಾ ಪ್ರಾಣಬಿಟ್ಟನು.

ದೇವರ ಮೇಲೆ ವಿಶ್ವಾಸ, ಭರವಸೆಗಳಿಂದ ತುಂಬಿದ ಆ ಪಾಪಿಯ ಜೀವವು ದೇವರು ತನ್ನನ್ನು ಕ್ಷಮಿಸುವನೆಂಬ ಭರವಸೆಯಿಂದ ಸ್ವರ್ಗದ ಕಡೆಗೆ ಪ್ರಯಾಣಮಾಡಿತು. ಸ್ವರ್ಗದ ಬಾಗಿಲು ಮುಚ್ಚಲ್ಪಟ್ಟಿತ್ತು. ಪಾಪಿಯು ಬಾಗಿಲು ತಟ್ಟಿದನು. ತನ್ನನ್ನು ಸ್ವರ್ಗದೊಳಗೆ ಸೇರಿಸಿಕೊಳ್ಳಬೇಕೆಂದು ಪ್ರಾರ್ಥಿಸಿದನು.

'ಹೊರಗಿನಿಂದ ಬಾಗಿಲು ತಟ್ಟುವವನಾರು? ಸ್ವರ್ಗದ ಒಳ ಬರಲು ಆತನು ಯಾವ ಸತ್ಕಾರ್ಯಗಳನ್ನು ಮಾಡಿದ್ದಾನೆ. ಆತನು ಎಂಥಾ ಮನುಷ್ಯನು. ಒಳಗಿನಿಂದ ಸ್ಪಷ್ಟ ಧ್ವನಿಯೊಂದು ಪಾಪಿಯನ್ನು ಕೇಳಿತು.

ಪಾಪಿಯು ತನ್ನ ಜೀವಮಾನದಲ್ಲಿ ಮಾಡಿದ ಕೆಲಸಗಳನ್ನೆಲ್ಲಾ ಆಲೋಚಿಸಿದನು. ಒಂದೇ ಒಂದು ಒಳ್ಳೇ ಕೆಲಸ ಆತನು ಮಾಡಿರಲಿಲ್ಲ. ಉಪಾಯವಿಲ್ಲದೆ 'ನಾನು ನನ್ನ ಜೀವಮಾನದಲ್ಲಿ ಯಾವುದೇ ಸತ್ಕಾರ್ಯ ಮಾಡಿದವನಲ್ಲ' ಎಂಬ ಸತ್ಯವನ್ನು ನುಡಿದನು.

'ಪಾಪಿಗಳಿಗೆ ಸ್ವರ್ಗದಲ್ಲಿ ಸ್ಥಳವಿಲ್ಲ ಆದ್ದರಿಂದ ಬಾಗಿಲು ತೆರೆಯಲಾರದು. ಇಲ್ಲಿಂದ ತೊಲಗು' ಒಳಗಿನ ಧ್ವನಿಯು ಹೇಳಿತು.

ಪಾಪಿಯು ದುಃಖಭರಿತ ಧ್ವನಿಯಿಂದ ಹೇಳಿದನು. 'ಹೇ ಪ್ರಭೂ, ನನಗೆ ನಿನ್ನ ಧ್ವನಿಯು ಕೇಳುತ್ತಿದೆ. ಆದರೆ ನಿನ್ನ ಮುಖಕಮಲವನ್ನು ನೋಡಲಾರೆ. ನಿನ್ನ ಹೆಸರೂ ಕೂಡ ನನಗೆ ತಿಳಿಯದು.'

'ನಾನು ಜಗತ್ಪಿತನಾದ ಪರಮೇಶ್ವರನು' ಒಳಗಿನ ಧ್ವನಿ ನುಡಿಯಿತು.

"ಹೇ ಪರಮೇಶ್ವರಾ, ನನ್ನ ಮೇಲೆ ಕೃಪೆ ಇಡು. ಮಾನವನ ನಿರ್ಬಲತೆಯನ್ನು ತಿಳಿದು ದೇವರ ದಯೆಯನ್ನು ತೋರು. ನಾಸ್ತಿಕನಂಥಾ ದೇವದ್ರೋಹಿಯೇ ಪ್ರಪಂಚದ ಹಿಡಿತದಲ್ಲಿ ಸಿಲುಕಿ ನಿನ್ನನ್ನು ಯೋಚಿಸದೆ ತನ್ನ ಪತ್ನಿ ಪುತ್ರರಲ್ಲಿ ಮಗ್ನನಾಗಿ ವೈಷಯಿಕ ವಿಚಾರ ನಿನಗೆ ತಿಳಿದಿದೆ. ಪ್ರಪಂಚದಲ್ಲಿ ಅನ್ನ ಹುಟ್ಟಿಸಿಕೊಳ್ಳುವ, ಹೊಟ್ಟೆಗೆ ಬಟ್ಟೆ ಒದಗಿಸಿಕೊಳ್ಳುವ ಪ್ರಯೋಜನದಲ್ಲಿ ಶರೀರವೆಲ್ಲಾ ಕಣ್ಣಾಗಿ, ರಕ್ತ ಬೆವರೆಲ್ಲಾ ನೀರಾಗಿ, ಮನವೆಲ್ಲಾ ಅದರಲ್ಲೇ ಮಗ್ನವಾಗಿ ಇರಬೇಕಾದ ಕಾರಣ ನಿನ್ನ ಧ್ಯಾನ ಮಾಡುವದು ಸಾಧ್ಯವಿಲ್ಲದಾಯಿತು. ಬೆಳಗ್ಗಿನ ಜಾವದಲ್ಲಿ ಕೋಳಿ ಕೂಗಿದಾಗ ಗದ್ದೆಗೆ ದನಗಳನ್ನು ಹೊಡೆದು ಕೊಂಡು ಹೋಗುವ ಅವಸರದಲ್ಲಿ ನಿನ್ನ ಧ್ಯಾನ ಮರೆತುಹೋಗುತ್ತಿದೆ. ನಂತರ ಪ್ರಾರಂಭವಾಗುವ ಇಡೀ ದಿನದ ಕೆಲಸದಲ್ಲಿ ವಿರಾಮವೇ ದೊರೆಯದು ನಿನ್ನನ್ನು ನೆನೆಯುವ ಅವಸರವೇ ದೊರೆಯದು. ರಾತ್ರಿ ಬಂದು ಕೈಕಾಲು ತೊಳೆದು ಊಟ ಮಾಡಿದಾಕ್ಷಣ ನೋವು ಸುಣ್ಣಾದ ಶರೀರಕ್ಕೆ ನಿದ್ರೆ ಆವರಿಸುವದು. ಆದ್ದರಿಂದ ಹೇ ಪ್ರಭೂ, ನಿನ್ನನ್ನು ಯೋಚಿಸಿ ನನ್ನ ಜೀವನ ನಡೆಸದ್ದಕ್ಕೆ ಕ್ಷಮಿಸು" ಎಂದು ಪಾಪಿಯು ನುಡಿದನು.

ಒಳಗಿನ ಧ್ವನಿಯು ಮಾತಾಡದೆ ಮೌನವಾಗಿತ್ತು.

ಪಾಪಿಯು ಸ್ವಲ್ಪ ಹೊತ್ತು ಸುಮ್ಮನಿದ್ದು ಪುನಹ ಬಾಗಿಲು ತಟ್ಟತೊಡಗಿದನು. ಬಾಗಿಲು ತೆರೆದು ಸ್ವರ್ಗದ ದರ್ಶನಕ್ಕೆ ಬಿಡಬೇಕೆಂದು ಕೂಗಿದನು.

ಒಳಗಿನಿಂದ ಮತ್ತೊಂದು ಧ್ವನಿ ಕೇಳಿಬಂತು. "ಬಾಗಿಲು ತಟ್ಟುವವರಾರು; ಭೂಮಿಯಲ್ಲಿ ಆತನು ಯಾವ ರೀತಿಯ ಜೀವನ ನಡೆಸಿದ್ದಾನೆ?"

ಪಾಪಿಯು ತನ್ನ ವೃತ್ತಾಂತವನ್ನೆಲ್ಲಾ ವಿವರಿಸಿ ತಾನು ಭೂಮಿಯಲ್ಲಿ ಒಂದೇ ಒಳ್ಳೆ ಕೆಲಸ ಮಾಡಿಲ್ಲವೆಂದು ನುಡಿದನು.

"ಹಾಗಾದರೆ ಇಲ್ಲಿಂದ ತೊಲಗು. ಪಾಪಿಗಳು ಸ್ವರ್ಗದಲ್ಲಿ ನಮ್ಮೊಡನೆ ಜೀವಿಸಲಾರರು" ಎಂದು ಒಳಗಿನ ಧ್ವನಿ ನುಡಿಯಿತು.

ಪಾಪಿಯು ಕೇಳಿದನು 'ಹೇ ದೇವಾ, ನನಗೆ ನಿನ್ನ ಧ್ವನಿ ಕೇಳುತ್ತಿದೆ. ಆದರೆ ನಿನ್ನನ್ನು ಕಾಣುವದಿಲ್ಲ. ನಿನ್ನ ಹೆಸರೂ ಕೂಡ ನನಗೆ ತಿಳಿಯದ."

"ನಾನು ವಿಷ್ಣುವು, ಸರ್ವ ಜಗದ್ರಕ್ಷಕ" ಒಳಗಿನ ಧ್ವನಿ ನುಡಿಯಿತು.

ಪಾಪಿಯು ನಿರಾಶನಾಗಲಿಲ್ಲ. ಸ್ವರ್ಗದ ಬಾಗಿಲನ್ನು ಬಿಟ್ಟು ತೆರಳಲಿಲ್ಲ. ಆತನು ಅನನ್ಯತೆಯಿಂದ ಹೇಳತೊಡಗಿದನು. 'ಹೇ ವಿಷ್ಣು, ಪರಮಾತ್ಮಾ, ಈತನ ಮೇಲೆ ಕೃಪೆ ಇಡು. ಮಾನವನ ನಿರ್ಬಲತೆಯನ್ನು ಅರಿ. ದೈವೀ ವಿಶಾಲತೆಯಿಂದ ನನ್ನನ್ನು ಕ್ಷಮಿಸು. ನಿನಗೆ ಸರ್ವಸ್ವವಿದೆ. ಎಲ್ಲರೂ ನಿನ್ನನ್ನು ಹೊಗಳುವರು, ಪ್ರಾರ್ಥಿಸುವರು. ನಿನಗೆ ರಾಜ್ಯವಿದೆ, ಸಂಪತ್ತಿದೆ, ಗೌರವ, ಪತ್ನಿ, ಪುತ್ರ ಎಲ್ಲರೂ ಇದ್ದಾರೆ. ಆದರೆ ಒಬ್ಬ ಪತ್ನಿಯಿಂದ ನೀನು ತೃಪ್ತನಾಗಲಿಲ್ಲ. ಸಾವಿರಾರು ಜನರನ್ನು ಇಟ್ಟುಕೊಂಡೆ! ನಿನಗೆ ವಿರುದ್ಧ ಹೆಸರಿಸಿದವರನ್ನು ರಾಜ್ಯದೇ ಸಂಕೋಚವಿಲ್ಲದೆ ಕೊಂದೆ. ಅವರನ್ನು ಪಾಪಿಗಳೆಂದೂ ಲೋಕಕಂಟಕರೆಂದೂ ಕರೆದೆ. ಸರ್ವಸುಖ ಸಂಪನ್ನತೆ ನಿನಗಿದ್ದರೂ ಬಡವರನ್ನು ಸುಲಿಯುವದನ್ನು ನೀನೂ ಬಿಡಲಿಲ್ಲ. ನಾನೂ ಕೂಡ ನನ್ನ ಇಹ ಜೀವನದಲ್ಲಿ ಹಾಗೆಯೇ ಮಾಡಿದವನ. ನೀನು ಹದಿನ್ನಾರೂ ನನ್ನ ಪಾಪ ಕೃತ್ಯಗಳಿಗಾಗಿ ನಾನು ಪಶ್ಚಾತ್ತಾಪ ಪಡುತ್ತಿರುವೆನು. ಆದರೆ ನೀನು ಸ್ವರ್ಗದಲ್ಲಿ ಸಾರ್ವಭೌಮನಾಗಿರುವುದೂ. ನನಗೆ ಸ್ವರ್ಗಕ್ಕೆ ಪ್ರವೇಶವೇ ದೊರೆಯದಿರುವುದೂ ಅನ್ಯಾಯ. ಆದ್ದರಿಂದ ಆಲೋಚಿಸು. ನನ್ನನ್ನು ಹೊರಗೆ ನಿಲ್ಲಿಸಲು ಏನೇನ ಕಾರಣಗಳಿವೆ?"

ಒಳಗಿನ ಧ್ವನಿಯು ಮಾತಿಲ್ಲದೆ ಮೌನವಾಯಿತು.

ಸ್ವಲ್ಪ ಹೊತ್ತು ನಿಂತು ಪಾಪಿಯು ಪುನಹ ಬಾಗಿಲು ತಟ್ಟತೊಡಗಿದನು. ತನಗೂ ಸ್ವರ್ಗದ ಪ್ರವೇಶ ದೊರೆಯಬೇಕೆಂದು ಕೂಗತೊಡಗಿದನು. ಒಳಗಿನಿಂದ ಮತ್ತೊಂದು ಧ್ವನಿಯು ಕೇಳಬಂತು.

"ಬಾಗಿಲು ತಟ್ಟುವವರಾರು? ಭೂಲೋಕದಲ್ಲಿ ಆತನು ಹೇಗೆ ಬದುಕಿರುವನು. ಸ್ವರ್ಗಕ್ಕೆ ಪ್ರವೇಶಿಸಲು ಆತನಿಗಿರುವ ಯೋಗ್ಯತೆ ಏನು?"

ಪಾಪಿಯು ಮೂರನೆ ಬಾರಿ ಪುನಹ ಹೇಳಿದನು. "ನಾನು ಯಾವುದೇ ಒಳ್ಳೆ ಕೆಲಸ ಮಾಡಿದವನಲ್ಲ. ಪ್ರಪಂಚದ ಜೀವನವನ್ನು ನಾನು ಇಚ್ಛಿಸಿ ಇಲ್ಲಿಗೆ ಹೋದವನೂ ಅಲ್ಲ. ಭೂಮಿಗೆ ನನ್ನನ್ನು ಕಳುಹಿಸಿದ ಜವಾಬ್ದಾರಿಯೂ ಕೂಡ ಭಗವಂತ ನಿನ್ನದೇ ನಿನ್ನದೇ ಆಗಿದೆ. ಅಲ್ಲಿ ಕಷ್ಟದ ಜೀವನ ನನಗೆ ಕೊಟ್ಟು ಇಲ್ಲದ ಸುಖ ಮೋಹ ಮೊದಲಾದುವನ್ನು ಕೂಡ ಮಾಡುವಂತೆ ಪ್ರೇರೇಪಿಸಿದವನೂ ನೀನೇ. ನನಗೆ ಯಾವುದೇ ಒಳ್ಳೆಯ ಕೆಲಸ ಮಾಡಲು ಮನಸು ಕೊಡದವನು ನೀನೇ ಆಗಿರುವೆ."

"ಒಳ್ಳೆಯ ಯಾವುದೇ ಕೆಲಸವನ್ನು ನೀನು ಮಾಡಿದ ದಾಕ್ಲೆ ಇಲ್ಲದ ಕಾರಣ ನೀನು ಸ್ವರ್ಗಕ್ಕೆ ಬರಲಾರೆ. ಆದ್ದರಿಂದ ತೊಲಗು. ಸ್ವರ್ಗವು ನಿನಗಲ್ಲ." ಒಳಗಿನ ಧ್ವನಿಯು ಹೇಳಿತು.

ಪಾಪಿಯು ಹೇಳಿದನು. "ಹೇ ದೀನನಾಥ, ನನಗೆ ನಿನ್ನ ಧ್ವನಿಯು ಕೇಳಿಸುತ್ತಿದೆ. ಆದರೆ ನಿನ್ನನ್ನು ನೋಡಲಾರೆ ನಿನ್ನ ಹೆಸರೂ ಕೂಡ ನನಗೆ ತಿಳಿಯುವದಿಲ್ಲ."

"ನಾನೇ ಬ್ರಹ್ಮನು. ಸರ್ವಸೃಷ್ಟಿಸ್ಥಿತಿ, ಲಯಗಳಿಗೆ ಕಾರಣ ಕರ್ತನು." ಎಂದು ಒಳಗಿನ ಧ್ವನಿ ಹೇಳಿತು.

ಪಾಪಿಯು ಸಂತೋಷದಿಂದ ಹೇಳತೊಡಗಿದನು "ನನ್ನನ್ನು ನಿಜವಾಗಿಯೂ ನೀನು ಸ್ವರ್ಗದೊಳಗೆ ಬಿಡಲೇಬೇಕು. ವಿಷ್ಣುವಿಗಿಂತಲೂ ಪರಮೇಶ್ವರನಿಗೂ, ವಿಷ್ಣುವಿಗೂ ಮಾನವನ ನಿರ್ಬಲತೆ ಗೊತ್ತಿದೆ. ಅವರೂ ಕೂಡ ಮಾನವರಂತೆಯೇ ತಪ್ಪು ಒಪ್ಪುಗಳನ್ನು ಮಾಡಿದ್ದಾರೆ. ದೇವರ ವಿಶಾಲತೆಯೂ ಕ್ಷಮಾಗುಣವೂ ಅವರಿಗಿದೆ. ನೀನೂ ಕೂಡ ನನ್ನನ್ನು ವಿರೋಧಿಸಲಾರೆ. ಏಕೆಂದರೆ ನಿನ್ನ ಪ್ರೀತಿಗೆ ಅನ್ಯವಿಲ್ಲ. ಹೇ ಬ್ರಹ್ಮದೇವಾ! ನೀನೇ ಅಲ್ಲವೇ ಪ್ರೇಮವೇ ದೇವರೆಂದು ಸಾರಿದವನು? ಪರಸ್ಪರ ಪ್ರೀತಿ, ಪ್ರೇಮದಿಂದ ಜೀವಿಸಲಾರದವನು ದೇವರನ್ನು ಪ್ರೀತಿಸಲಾರ! ಪ್ರತ್ಯಕ್ಷ ಕಣ್ಣಿಗೆ ಕಾಣುವ ಸಹೋದರರನ್ನು ಪ್ರೀತಿಸಿ ಕ್ಷಮಿಸದವನು ದೇವರನ್ನು ಪ್ರೀತಿಸಲಾರನೆಂದು ನೀನೇ ಅಲ್ಲವೇ ಘೋಷಿಸಿದವನು? ಹಾಗಾದರೆ ನಿನ್ನವನಾದ, ನಿನ್ನ ಆಜ್ಞೆಯಂತೆ ಅಸ್ತಿತ್ವ ದೊರಕಿದವನಾದ, ಆದುದರಿಂದಲೇ ನೀನಂತೆ ನಿನ್ನ ಇಚ್ಛೆ, ಅನಿಚ್ಛೆಗಳನ್ನನುಸರಿಸಿ ಪಾಪ, ಪುಣ್ಯಗಳಲ್ಲಿ ತೊಳಲಾಡುವ ನನ್ನನ್ನು ಪ್ರೇಮಿಸದಿರಲು ನಿನಗೆ ಹೇಗೆ ಸಾಧ್ಯ? ನನ್ನನ್ನು ಸ್ವರ್ಗದ ಬಾಗಿಲಿಂದ ಹೊರದಬ್ಬಲು ತೊಡಗಿರುವ ನಿನ್ನ ವರ್ತನೆಯಲ್ಲಿ ನ್ಯಾಯವೆಲ್ಲಿದೆ? ಒಂದೋ ನೀನು ಸಾರಿದ ಪ್ರೇಮದ ತತ್ವವನ್ನು ಅಲ್ಲವೆಂದು ಹೇಳಬೇಕು ಇಲ್ಲವೇ ನನ್ನನ್ನು ಪ್ರೀತಿಯಿಂದ ಅಪ್ಪಿ, ನಿನ್ನವನೆಂದು ಕರೆದು ಸ್ವರ್ಗದೊಳಗೆ ಬಿಡಬೇಕು. ನನ್ನನ್ನು ದೂರಮಾಡಲು ಯಾರಿಗೂ ಹಕ್ಕಿರಲಾರದು. ಬ್ರಹ್ಮ, ವಿಷ್ಣು, ಮಹೇಶ್ವರರು ಬೇಕಾದ ಕೃತ್ಯಗಳನ್ನೆಸಗಿ, ಸುಖ ಸಂಪತ್ತಿನಿಂದ ಮೆರೆದು, ಸರ್ವರಕ್ಷಕರೂ, ಸರ್ವಾಂತರ್ಯಾಮಿಗಳೂ, ಸ್ವಯಂಭುಗಳೆನಿಸಿ ಅವರು ಸ್ವರ್ಗದಲ್ಲಿ ಜೀವಿಸಬಲ್ಲರಾದರೆ ಅವರದೇ ಒಂದು ಕೃತಿಯಾದ, ಅವರ ಇಚ್ಛೆ ಅನಿಚ್ಛೆಗಳಂತೆ ಕುಣಿಯುತ್ತಿರುವವರದೇ ಒಂದು ಅಂಶವಾದ ನಾನು ಸ್ವರ್ಗದೊಳಗೆ ಏಕೆ ಪ್ರವೇಶಿಸಬಾರದು? ಅಲ್ಲಿ ಏಕೆ ಜೀವಿಸಬಾರದು?"

ಒಳಗಿನಿಂದ ಮಾತು ಕೇಳಿಸಲಿಲ್ಲ. ಸ್ವರ್ಗದ ಬಾಗಿಲುಗಳು ತೆರೆದವು. ಬ್ರಹ್ಮನು ಆದರದಿಂದ ಪಾಪಿಯನ್ನಪ್ಪಿಕೊಂಡನು. ಪಾಪಿಯು ಸ್ವರ್ಗದಲ್ಲಿ ಜೀವಿಸತೊಡಗಿದನು.

(ಟಾಲ್‌ಸ್ಟಾಯಿಯವರ ಕಥೆಯೊಂದರ ಆಧಾರದಿಂದ)

Radios For Sale.

6 Valves RESHA & 5 Valves H. G. E. C. dry battery all wave sets having beautiful wodden cabinets: Prices including acreal and battery Rs. 360/- and Rs. 330/- net. These are guaranteed for free service and replacements of parts for one year.

PIONEER RADIO CO.,
Narasimharaja Road,
Bangalore City.

ಕೇಂದ್ರ ಸರಕಾರದ ಆಹಾರ ಮತ್ತು ವ್ಯವಸಾಯ ಇಲಾಖೆಯ ಉಪ ಮಂತ್ರಿ

ಶ್ರೀ ಎಂ. ವಿ. ಕೃಷ್ಣಪ್ಪನವರು

ಕೇಂದ್ರ ಸರಕಾರದ ಆಹಾರ ಮತ್ತು ವ್ಯವಸಾಯ ಇಲಾಖೆಯ ಉಪಮಂತ್ರಿ ಶ್ರೀ. ಎಂ. ವಿ. ಕೃಷ್ಣಪ್ಪನವರು ತಾರೀಖು ೩೧ ರಲ್ಲಿ ಕೊಡಗಿಗೆ ಬಂದರು. ಆ ದಿನ ದಕ್ಷಿಣ ಕೊಡಗಿನ ಕೆಲವು ಭಾಗಗಳನ್ನು ಸಂದರ್ಶಿಸಿ ಮಡಿಕೇರಿಗೆ ಬಂದರು. ಮಡಿಕೇರಿಯಲ್ಲಿ ಜನತಾ ಸಭೆಯ ಸದಸ್ಯರಾದ ಶ್ರೀ. ಎನ್. ಸೋಮಣ್ಣನವರು ಅವರಿಗೆ ಒಂದು ಚಹಾಕೂಟವನ್ನು ಏರ್ಪಡಿಸಿದ್ದರು. ರಾತ್ರಿ ಚೀಫ್ ಕಮಿಷನರಲ್ಲಿ ಔತಣದ ಏರ್ಪಾಡಿತ್ತು. ತಾರೀಖು ೧ರ ಬೆಳಿಗ್ಗೆ ಅವರು ಕಾಲೇಜು ಕಟ್ಟಡವನ್ನು ಸಂದರ್ಶಿಸಿ ಕಾಲೇಜು ವಿದ್ಯಾರ್ಥಿಗಳನ್ನುದ್ದೇಶಿಸಿ ಒಂದು ಭಾಷಣ ಮಾಡಿದರು. ನಂತರ ೧೧-೩೦ ಗಂಟೆಗೆ ಕೊಡಗು ಶಾಸನ ಸಭಾಂಗಣದಲ್ಲಿ ಕೊಡಗಿನ ಕೇಂದ್ರ ಆಹಾರ ಸಲಹಾ ಬೋರ್ಡಿನ ಉದ್ಘಾಟನೆಯನ್ನು ಮಾಡಿದರು. ಆ ಸಮಯದಲ್ಲಿ ಅವರು ಮಾಡಿದ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಭಾಷಣಕ್ಕೆ ಮೊದಲು ಮುಖ್ಯ ಮಂತ್ರಿಗಳಾದ ಶ್ರೀ. ಸಿ. ಎಂ. ಪೂಣಚ್ಚನವರು ಕೃಷ್ಣಪ್ಪನವರ ಪರಿಚಯವನ್ನು ಮಾಡಿದರು. ಕೊಡಗಿನ ಆಹಾರ ಸಲಹಾ ಸಮಿತಿಯು ೧೯೫೭ರ ಕೊಡಗು ಶಾಸನ ಸಭೆಯ ಠರಾವಿನನ್ವಯ ರೂಪುಗೊಂಡು ಕೆಲಸ ಮಾಡುತ್ತಿತ್ತೆಂದೂ, ನಂತರ ಶ್ರೀ. ಕೃಷ್ಣಮಾಚಾರಿ ಸಮಿತಿಯವರ ಸಲಹೆಯಂತೆ ವ್ಯವಸಾಯ ಸಲಹಾ ಬೋರ್ಡಾಗಿ ಮಾರ್ಪಡಿಸಲಾಯಿತೆಂದೂ ಅದನ್ನು ಉದ್ಘಾಟಿಸಲು ಇಂದು ಕೇಂದ್ರದ ಆಹಾರ ಇಲಾಖೆಯ ಉಪ ಮಂತ್ರಿಗಳು ದೊರೆತುದು ಹಿತವಾಯಿತೆಂದೂ ಹೇಳಿದರು.

ಉಪ ಮಂತ್ರಿಗಳು ತಮ್ಮ ಭಾಷಣವನ್ನು ಪ್ರಾರಂಭಿಸಿ ಹೀಗೆಂದರು—ಕೊಡಗು ಮೈಸೂರಿಗೆ ಅನ್ನ ಕೊಡುತ್ತಿರುವ ದೇಶ. ಈ ದೇಶದ ಹಲವು ಭಾಗಗಳನ್ನು ಸುತ್ತಿದೆನು. ಇದು ಉಳುವರಿ ಪ್ರಾಂತ. ಇದು ಚಿಕ್ಕ ದೇಶವಾಗಿರುವದರಿಂದ ಅಂಕೆಸಂಖ್ಯೆಗಳನ್ನು ಸಂಗ್ರಹಿಸಿ ಯೋಗ್ಯ ವಿಧಾನದಿಂದ ಮುಂದರಿದು ಇದನ್ನು ಆದರ್ಶ ರಾಜ್ಯವಾಗಿ ಮಾಡಬಹುದು. ಇದೇ ಬಯಕೆ ಕೇಂದ್ರ ಸರಕಾರಕ್ಕೂ ಇದೆ. ಕೊಡಗನ್ನು ಒಂದು ಪರಿಶೋಧನಾ ಕೇಂದ್ರದಂತೆ ಮಾಡಬಹುದು. ಜಪಾನಿನಲ್ಲಿ ಅನುಸರಿಸುತ್ತಿರುವ ವ್ಯವಸಾಯಕ್ರಮಗಳನ್ನು ಇಲ್ಲಿ ಜಾರಿಗೆ ತರುವದು ಸುಲಭ ಸಾಧ್ಯವಿದೆ. ಅದೇ ತತ್ವದಂತೆ ಕೊಡಗಿನಲ್ಲಿ ಒಂದು ಕೇಂದ್ರ ತೆರೆಯಲ್ಪಡುವದು. ಕೊಡಗಿನ ವ್ಯವಸಾಯಗಾರರಿಗೆ ಯೋಗ್ಯ ಮಳೆ, ಮತ್ತು ಗೊಬ್ಬರದ ಅನುಕೂಲತೆ ಇದೆ. ಕೊಡಗಿನ ಕಾಡುಗಳಲ್ಲಿ ಬೇಕಾದಷ್ಟು ಸೊಪ್ಪು ಗೊಬ್ಬರ ಸಂಗ್ರಹಿಸುವ ಸಾಧ್ಯತೆ ಇದೆ. ಹೊರಗಿನ ಪ್ರಾಂತಗಳಲ್ಲಿ ಹಾಗಿಲ್ಲ. ಅವರು ಕೃತಕ ಗೊಬ್ಬರಗಳನ್ನು ನಂಬಿ ನಿಲ್ಲಬೇಕಾಗಿದೆ. ಪ್ರತಿ ವರ್ಷ ಗೊಬ್ಬರಕ್ಕಾಗಿ ಹಿಂದೂದೇಶದಿಂದ ಹೊರದೇಶಗಳಿಗೆ ೩೦ರಿಂದ ೪೦ ಕೋಟಿ ರೂಪಾಯಿ ಹೋಗುತ್ತಿದೆ. ಇದನ್ನು ತಪ್ಪಿಸಲಿಕ್ಕಾಗಿ ಇಂಡಿಯಾ ಸರಕಾರವು ಸಿಂಧ್ರಿ ಕಾರಖಾನೆಯನ್ನು ತೆರೆದಿದೆ. ಈ ಕಾರ್ಖಾನೆಯಲ್ಲಿ ದಿನಕ್ಕೆ ೮೦೦ ಟನ್ನುಗಳಷ್ಟು ಗೊಬ್ಬರ ತಯಾರಾಗುತ್ತದೆ. ಇದು ೧೦೦೦ ಟನ್ನುಗಳಿಗೆ ತಲಪಿದರೆ ಭಾರತಕ್ಕೆ ಬೇಕಾಗುವ ಗೊಬ್ಬರವನ್ನು ಭಾರತದಲ್ಲೇ ತಯಾರಿಸಿದಂತಾಗುವದು.

ನನಗೆ ವಿದ್ಯಾಭ್ಯಾಸವನ್ನೇ ಕೊಡಬಾರದೆಂದು ನನ್ನ ತಂದೆಯ ಅಭಿಪ್ರಾಯವಿತ್ತು. ನನ್ನ ಸಹೋದರರಿಬ್ಬರೂ ವಿದ್ಯಾವಂತರಾಗಿ ಪೇಟೆಗಳಲ್ಲಿ ವಾಸಿಸ ಹತ್ತಿದ ಕಾರಣ ಮನೆಯಲ್ಲಿ ವ್ಯವಸಾಯಕ್ಕೆ ಯಾರೂ ಇಲ್ಲದೆ ತಂದೆಯವರು ಶರೀರದಲ್ಲಿ ಚೆನ್ನಾಗಿದ್ದ ನನ್ನನ್ನು ವ್ಯವಸಾಯಕ್ಕಾಗಿ ಮನೆಯಲ್ಲೇ ಇರಿಸುವದು ನಿಶ್ಚಯಿಸಿದ್ದರು. ನನ್ನ ಹದಿಮೂರನೇ ವಯಸ್ಸಿನ ವರೆಗೆ ನಾನು ಮನೆಯಲ್ಲೇ ವ್ಯವಸಾಯ ಮಾಡಿಕೊಂಡಿದ್ದೆ. ನಂತರ ಹೇಗೋ ನನ್ನ ವಿದ್ಯಾಭ್ಯಾಸ ಮುಂದರಿಯಿತು. ನನ್ನ ತಂದೆಯವರು ಹೇಳುತ್ತಿದ್ದಂತೆ ಇಂದಿನ ವಿದ್ಯೆ ಕಲಿತವರು ಯೋಗ್ಯ ವ್ಯವಸಾಯಗಾರರಾಗುವದಿಲ್ಲ. ಇಂದಿನ ಬೆವರಿಳಿಸಿ ದುಡಿಯುವವರು ಯೋಗ್ಯ ವಿದ್ಯಾವಂತರೆನಿಸಿ ಆ ರೀತಿಯ ಜೀವನ ನಡೆಸುವದು ಸಾಧ್ಯವಿಲ್ಲ.

ನಾನು ಈಗ ದೆಹಲಿಯಲ್ಲಿ ಇರುವ ಕಾ[illegible] ಸ ಪ್ರದೇಶ [illegible] ಭಾರತದ ಆಹಾರ ಸ್ಥಿತಿಯ ಪರಿಚಯ ಆಗಿದೆ. ಭಾರತವು ಆಹಾರ ಪದಾರ್ಥಗಳ ಮಟ್ಟಿಗೆ ಸ್ವಯಂಪೂರ್ಣವಾಗಿಲ್ಲ. ವರ್ಷಕ್ಕೆ ನಾಲ್ಕು ಕೋಟಿ ಪಲ್ಲ ಅಂದರೆ ಸುಮಾರು ೪೦ ಲಕ್ಷ ಟನ್ ಆಹಾರದ ಕೊರತೆ ಬೀಳುತ್ತದೆ. ಇದನ್ನು ಈಗ ಹೊರ ದೇಶಗಳಿಂದ ನಾವು ತರಿಸಿಕೊಳ್ಳುತ್ತಿದ್ದೇವೆ. ಇದಕ್ಕಾಗಿ ಸುಮಾರು ೨೦೪ ಕೋಟಿ ರೂಪಾಯಿಗಳ ವೆಚ್ಚವನ್ನು ಇಂಡಿಯಾ ಸರಕಾರ ಮಾಡುತ್ತಿದೆ. ನಮ್ಮ ಆಹಾರಕ್ಕಾಗಿ ಹೊರಗಿನವರನ್ನು ನಂಬಿ ಕೂರುವುದು ಸರಿಯಲ್ಲ.

ಭಾರತದ ವಿಭಜನೆಯಾದ ನಂತರ ಫಲವತ್ತಾದ ಪ್ರಾಂತಗಳು ಪಾಕಿಸ್ಥಾನಕ್ಕೆ ಸೇರಿದ್ದರಿಂದಲೂ, ಸುಮಾರು ೮೦ ಲಕ್ಷದಷ್ಟು ನಿರಾಶ್ರಿತರು ಭಾರತದಲ್ಲಿ ಬಂದು ಅವರ ಆಹಾರ, ವಸತಿಯ ಪ್ರಶ್ನೆ ನಮ್ಮ ಮುಂದೆ ನಿಂತುದರಿಂದಲೂ ಅಲ್ಲದೆ ಯುದ್ಧದಲ್ಲಿ ಬರ್ಮದ ವ್ಯವಸಾಯ ಹಾಳಾಗಿ ಅದರಿಂದ ಬರುತ್ತಿದ್ದ ಆಹಾರ ಕಡಿಮೆಯಾದುದರಿಂದಲೂ ಹಿಂದೂದೇಶದ ಆಹಾರ ಪರಿಸ್ಥಿತಿ ತುಂಬಾ ಬಿಕ್ಕಟ್ಟಿಗೆ ಬಂತು. ಈ ಕೊರತೆಯನ್ನು ತುಂಬಿ ಭಾರತವನ್ನು ಸಸ್ಯಶ್ಯಾಮಲವಾದ ರಾಷ್ಟ್ರವಾಗಿ ಮಾಡುವ ಉದ್ದೇಶದಿಂದ ಪಂಚವಾರ್ಷಿಕ ಯೋಜನೆಯನ್ನು ಮಾಡಲಾಗಿದೆ. ಈ ಯೋಜನೆಗಾಗಿರುವ ೨೦೬೯ ಕೋಟಿ ರೂಪಾಯಿಗಳಲ್ಲಿ ಸುಮಾರು ೯೦೦ ಕೋಟಿ ರೂಪಾಯಿಗಳು ವ್ಯವಸಾಯ ಅಭಿವೃದ್ಧಿಗಾಗಿಯೇ ವಿನಿಯೋಗವಾಗುವುದು. ಈ ೯೦೦ ಕೋಟಿಯಲ್ಲಿ ಸುಮಾರು ೫೦೦ ಕೋಟಿ ರೂಪಾಯಿಗಳು ಅಣೆಕಟ್ಟು, ನೀರಾವರಿ ಯೋಜನೆಗಳಿಗಾಗಿ ಖರ್ಚಾಗುವುದು. ಈ ಪಂಚವಾರ್ಷಿಕ ಯೋಜನೆಯ ಪ್ರಕಾರ ೮೦ ಲಕ್ಷ ಎಕರೆಗಳಷ್ಟು ಹೊಸ ವ್ಯವಸಾಯವನ್ನು ಮಾಡಲಾಗುವುದು. ಇದರಿಂದ ೭೦ ಲಕ್ಷ ಟನ್ ಆಹಾರ ಪದಾರ್ಥ ಹೆಚ್ಚು ಬೆಳೆಯುವದು. ಪಂಚವಾರ್ಷಿಕ ಯೋಜನೆಯಲ್ಲಿ ಕೇವಲ ಕೃಷಿ ಕ್ಷೇತ್ರವನ್ನೇ ವಿಸ್ತಾರಗೊಳಿಸುವುದೇ ಅಲ್ಲ; ಈಗ ಬೆಳೆಯುತ್ತಿರುವ ಭಾಗದಿಂದ ಹೆಚ್ಚು ಬೆಳೆ ತೆಗೆಯುವ ಯೋಜನೆಯೂ ಸಮಾವೇಶವಾಗಿದೆ. ಕೊಡಗಿನಲ್ಲಿ ಸುಮಾರು ೯೦೦೦೦ ಎಕರೆ ವ್ಯವಸಾಯವಾಗುತ್ತಿದೆಯೆಂದು ತಿಳಿದೆನು. ಪ್ರತೀ ಎಕರೆಗೆ ಒಂದು ಪಲ್ಲದಂತೆ ಹೆಚ್ಚು ಬೆಳೆಸಿದರೆ ಮೈಸೂರಿಗೆ ಇಂದು ಕೊಡುತ್ತಿರುವ ೯೦೦೦/ ಟನ್ನು ಅಕ್ಕಿಯ ಜೊತೆಗೆ ಮತ್ತೆ ೯೦೦೦/ ಕೊಡಬಹುದು. ಆಗ ನಿಮ್ಮನ್ನು ಮೈಸೂರಿಗೆ ಕರೆಸಿಕೊಂಡು 'ಅನ್ನದಾತ' ರೆಂಬ ಬಿರುದು ಕೊಡಿಸುತ್ತೇನೆ.

ಆದ್ದರಿಂದ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಿ ಭಾರತವು ಸಂಪೂರ್ಣ ಮಾರ್ಪಾಡು ಹೊಂದುವದು. ಆದರೆ ಇದು ಕೇವಲ ಹಣದಿಂದ ಆಗುವ ಕೆಲಸವಲ್ಲ. ಜನತೆಯ ಸಹಕಾರವಿಲ್ಲದೆ ಈ ಯೋಜನೆ ಸಫಲವಾಗದು. ಆದ್ದರಿಂದ ಎಲ್ಲರೂ ಆಹಾರದ ಮಟ್ಟಿಗೆ ರಾಜಕೀಯ ಬಣ್ಣ, ಭೇದಗಳನ್ನು ಬಿಟ್ಟು ಸಹಕರಿಸಬೇಕು. ಕೊಡಗಿನಲ್ಲಿ ಈ ಯೋಜನೆಯ ಸಾಫಲ್ಯತೆಗೆ ಸಹಕಾರ ಚಳವಳವನ್ನು ಯಶಸ್ವಿಯಾಗಿ ಉಪಯೋಗಿಸಬಹುದಾಗಿದೆ.

ಅನೇಕರು ಪಂಚವಾರ್ಷಿಕ ಯೋಜನೆಯನ್ನು ಟೀಕಿಸುವದನ್ನು ನಾನು ಕೇಳಿದ್ದೇನೆ. ಇಂದು ರಷ್ಯಾವು ಮುಂದರಿದಿದ್ದರೆ ಇಂಥಾ ಏಳೆಂಟು ಯೋಜನೆಗಳು ಕಾರ್ಯಗತವಾದನಂತರವೇ ಆಗಿದೆ. ಆದ್ದರಿಂದ ಇಂದು ಆ ವಾದ ಒಳ್ಳೆಯದು, ಈ ವಾದ ಕೆಟ್ಟದು ಎಂಬುದು ಬೇಡ. ಸಮತಾವಾದದವರು ಹೇಳುವಂತೆ ಸಮಾನವಾಗಿ ಹಂಚಿಕೊಡಲು ಭಾರತದಲ್ಲಿ ಬಡತನ ಮತ್ತು ತೊಂದರೆಗಳಲ್ಲದೆ ಮತ್ತೇನಿದೆ? ಆದ್ದರಿಂದ ಪ್ರಥಮತಃ ದೇಶದ ಸಂಪತ್ತನ್ನು ಹೆಚ್ಚಿಸಲು ಎಲ್ಲರೂ ಯತ್ನಿಸಬೇಕು".

ಮಂತ್ರಿಗಳು ಮಧ್ಯಾಹ್ನದ ನಂತರ ಕೊಡಗಿನ ವ್ಯವಸಾಯ ಪರಿಶೋಧನಾ ಕೇಂದ್ರವನ್ನು ಸಂದರ್ಶಿಸಿ ಮೈಸೂರಿಗೆ ಹಿಂತೆರಳಿದರು.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10.00.000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-6-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ವರ್ತಮಾನವನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾನ್ಚಿ.

॥ ಗಾಂಧೀಜೀಯವರು ನನ್ನನ್ನು ಆಕರ್ಷಿಸಿದರು ॥

ಲೇ: ಶ್ರೀ ಜೆ. ಸಿ. ಕುಮಾರಪ್ಪ

ಹಿಂದಿನವರ್ಷ ರಾಷ್ಟ್ರಪಿತರಾದ ಮಹಾತ್ಮ ಗಾಂಧಿಯವರು ದಿವಂಗತರಾಗಿ ಐದು ವರ್ಷಗಳಾದವು. ಅವರು ಓರ್ವ ಹುತಾತ್ಮರಾಗಿ ಮಡಿದರು. ಪ್ರಾರ್ಥನೆಗೆ ಹೋಗುತ್ತಿದ್ದಾಗ ಅವರ ಪ್ರಾಣವನ್ನು ಓರ್ವ ಕೊಲೆಗಡುಕನ ಗುಂಡು ಅಪಹರಿಸಿತು. 'ರಾಮ' ಎಂದು ಅವರು ಕೊನೆಯದಾಗಿ ಉಚ್ಚರಿಸಿದರು. ಈ ದುಃಖದ ಮತ್ತು ಶಾಂತಿದೂತನ ಅಗಲುವಿಕೆಯ ಸುದ್ದಿಯನ್ನು ಕೇಳಿ ಇಡೀ ಜಗತ್ತು ದಿಗ್ಭ್ರಾಂತವಾಯಿತು. ಗಾಂಧೀಜಿಯವರು ಅಹಿಂಸೆ ಮತ್ತು ಮಾನವೀ ಭ್ರಾತೃಪ್ರೇಮಗಳ ಮೂರ್ತಿಯಾಗಿದ್ದರು. ಅವರ ಮರಣದ ನಂತರ ಜಗತ್ತಿನಲ್ಲಿಯ ಪರಿಸ್ಥಿತಿಯಲ್ಲಿ ಬಹಳಷ್ಟು ಸ್ಥಿತ್ಯಂತರವಾಗಿದೆ. ಮತ್ತೊಂದು ಭಯಾನಕ ಯುದ್ಧದ ಮೋಡಗಳು ಕವಿಯುತ್ತಲಿವೆ. ಗಾಂಧೀಜಿಯವರು ಈಗ ಇದ್ದರೆ ಎಷ್ಟು ಸಹಾಯ ಮಾಡಬಹುದಾಗಿತ್ತು! ಈ ದೃಷ್ಟಿಯಿಂದ ಅವರು ಇಲ್ಲದಿರುವ ಸಂಗತಿಯು ನಮಗೆ ಹೆಚ್ಚು ವ್ಯಸನವನ್ನು ಕೊಡುತ್ತದೆ. ನಾನು ಅವರನ್ನು ಮೊದಲು ಕಂಡದ್ದು ಹೇಗೆ ಎಂಬ ವಿಷಯವನ್ನು ಇಲ್ಲಿ ಹೇಳಿದರೆ ಅವರ ವಿಷಯದಲ್ಲಿ ನಾನು, ಈ ಪುಣ್ಯಸ್ಮರಣೆಯ ಪ್ರಸಂಗದಲ್ಲಿ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿದಂತಾಗುವುದೆಂದು ಭಾವಿಸುತ್ತೇನೆ.

೧೯೨೯ರಲ್ಲಿ ಆಗ ನಾನು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಿಂದ ತಿರುಗಿ ಬಂದಿದ್ದೆ. ಅಲ್ಲಿ ನಾನು ಸಾರ್ವಜನಿಕ ಅರ್ಥಶಾಸ್ತ್ರದ ಬಗ್ಗೆ ಅಭ್ಯಾಸ ಮಾಡಿದ್ದೆ. ಬ್ರಿಟಿಷರು ಕರಭಾರದ ಮೂಲಕ ಭಾರತವನ್ನು ಹೇಗೆ ಸುಲಿಯುತ್ತಿದ್ದಾರೆ ಎಂಬ ಒಂದು ನಿಬಂಧವನ್ನು ಬರೆದಿದ್ದೆ. ಅದನ್ನು ಪ್ರಸಿದ್ಧಪಡಿಸಬೇಕಾಗಿತ್ತು. ಈ ವಿಷಯದಲ್ಲಿ ಗಾಂಧೀಜಿಯವರು ಆಸ್ಥೆವಹಿಸಬಹುದೆಂದೂ ಅವರ ಹಸ್ತಪ್ರತಿಯನ್ನು ಮೊದಲು ಅವರಿಗೆ ತೋರಿಸಬೇಕೆಂದೂ ಕೆಲವರು ಸೂಚಿಸಿದರು. ಅದಕ್ಕೂ ಮೊದಲು ನಾನು ಗಾಂಧೀಜೀಯವರ ಹೆಸರನ್ನು ಕೇಳಿದ್ದೆ. ನನ್ನ ವಿಚಾರಗಳ ಸಂಬಂಧದಲ್ಲಿ ಅವರ ಬಗ್ಗೆ ನನಗೆ ಅಷ್ಟು ಆಸ್ಥೆ ಇರಲಿಲ್ಲ. ನನಗೆ ಸೂಚಿಸಿದವರು ಗಾಂಧೀಜೀಯವರನ್ನು ಈ ಬಗ್ಗೆ ನಾನು ಕಾಣಬೇಕೆಂದು ಬಹಳ ಒತ್ತಾಯಪಡಿಸಿದರು. ಗಾಂಧೀಜೀಯವರು ಆ ಕಾಲದಲ್ಲಿ ತಮ್ಮ ದಕ್ಷಿಣ ಹಿಂದುಸ್ಥಾನದ ಪ್ರವಾಸ ಮುಗಿಸಿಕೊಂಡು ಮುಂಬಯಿ ಮಾರ್ಗವಾಗಿ ಮರಳಿ ಹೋಗುವವರಿದ್ದರು. ಅವರ ಆಗಿನ ಮುಂಬಯಿಯ ನಿವಾಸಸ್ಥಾನವಾದ ಮಣಿಭವನಕ್ಕೆ ಹೋಗಿ ನೋಡಬೇಕೆಂದು ನನಗೆ ಹೇಳಿದರು. ನಾನು ಆ ಮನೆಯ ಅಟ್ಟದ ಪಾವಟಿಗೆಗಳನ್ನು ನನ್ನ ಯುರೋಪಿಯನ್ ಪೋಷಾಕಿನಲ್ಲಿ ಹತ್ತಿ ಬಾಗಿಲ ಹತ್ತಿರ ನಿಂತಿದ್ದವನನ್ನು ನಾನು ಗಾಂಧೀಜೀಯವರನ್ನು ನೋಡಬಹುದೇ? ಎಂದು ಕೇಳಿದೆ.

ಆ ಮನುಷ್ಯ ಧೋತರ, ಸ್ವೆಟರ ಹಾಕಿಕೊಂಡಿದ್ದ. ಅವನು ಓರ್ವ ಸೇವಕನು ಆಗಿರಬೇಕೆಂದು ನನಗೆ ಕಾಣಿಸಿತು. ಗಾಂಧೀಜೀಯವರು ಒಂದು ಕಾರ್ಯಮಂಡಲದ ಸಭೆಯಲ್ಲಿ ತೊಡಗಿದ್ದಾರೆಂದೂ ಆಗ ಅವರು ನನ್ನನ್ನು ಕಾಣಲು ಸಾಧ್ಯವಾಗಲಿಕ್ಕಿಲ್ಲವೆಂದೂ ಅವನು ನನಗೆ ಹೇಳಿದ. ಅವನು ಚಲೋ ಇಂಗ್ಲೀಷ ಮಾತಾಡುತ್ತಿದ್ದ. ಅವನ ಕಡೆಗೆ ನನ್ನ ಹಸ್ತಪ್ರತಿಯನ್ನು ಕೊಡಲು ಅಡ್ಡಿ ಇಲ್ಲ ಎಂದು ನನಗೆ ಎನಿಸಿತು.



ಅಷ್ಟರಿಂದ ಅವಶ್ಯಕ ಸ್ಥಳಗಳಲ್ಲಿ ಗುರುತು ಮಾಡಿದ ನನ್ನ ಹಸ್ತಪ್ರತಿಯನ್ನು 'ಗಾಂಧೀಜೀಯವರ ಕಡೆಗೆ ಕೊಡಿರಿ' ಎಂದು ಹೇಳಿ ಆ ಮನುಷ್ಯನ ಕಡೆಗೆ ಕೊಟ್ಟೆ. ಈ ಮನುಷ್ಯ ಗಾಂಧೀಜೀಯವರ ಕಾರ್ಯದರ್ಶಿ ಶ್ರೀ. ಪ್ಯಾರೇಲಾಲ ಎಂಬುದು ಆ ಮೇಲೆ ನನಗೆ ಗೊತ್ತಾಯಿತು. ಆ ಬಳಿಕ ಕೆಲವು ವೇಳೆಯ ನಂತರ ಶ್ರೀ. ಪ್ಯಾರೇಲಾಲರು ನನಗೆ ಟೆಲಿಫೋನ್ ಮಾಡಿ 'ಗಾಂಧೀಜೀಯವರು ನಿಮ್ಮ ಹಸ್ತಪ್ರತಿಯನ್ನು ಓದಿ ನೋಡಿದ ನಂತರ ನಿಮ್ಮನ್ನು ಕಾಣಬಯಸುತ್ತಾರೆ. ನೀವು ಅಹಮ್ಮದಾಬಾದ್ ಸಾಬರಮತಿ ಆಶ್ರಮದಲ್ಲಿ ೯-೫-೧೯೨೯ ನೇ ದಿವಸ ಮಧ್ಯಾಹ್ನ ೨½ ಗಂಟೆಗೆ ಅವರನ್ನು ಕಾಣಬೇಕು' ಎಂದು ತಿಳಿಸಿದರು. ಆ ಹೊತ್ತಿಗೆ ನಾನು ಆ ಸ್ಥಳಕ್ಕೆ ಹೋದೆ. ಆದರೆ ಅಲ್ಲಿಯ ಅತಿಥಿ ಗೃಹದಲ್ಲಿ ನಾನೊಬ್ಬನೇ ಇದ್ದುದನ್ನು ಕಂಡು ಆಶ್ಚರ್ಯಗೊಂಡೆ. ಅಲ್ಲಿ ಒಂದು ಮಂಚದ ಹೊರತು ಏನೂ ಇದ್ದಿಲ್ಲ. ಅಲ್ಲಿಯ ವಾತಾವರಣವನ್ನು ಕಂಡು, ಆದಷ್ಟು ಬೇಗನೆ ಅಲ್ಲಿಂದ ಹೊರಡಬೇಕೆಂದು ನನಗೆನಿಸಿತು. ನನ್ನ ಭೇಟಿಯ ವೇಳೆಯ ದಾರಿ ಕಾಯುತ್ತ ಹೇಗೋ ಹೊತ್ತು ನೂಕಿದೆ. ಗಾಂಧೀಜಿಯವರು ಇರುವ ಸ್ಥಳವನ್ನು ನಾನು ಕೇಳಿ ತಿಳಿದುಕೊಂಡೆ. ಕೈಯಲ್ಲಿ ಒಂದು ಕೋಲು ಮತ್ತು ಮತ್ತೊಂದರಲ್ಲಿ ನನ್ನ ಆ ಹಸ್ತಲಿಖಿತ ಪ್ರತಿ ಹಿಡಿದುಕೊಂಡು ಮಧ್ಯಾಹ್ನ ೨ ಗಂಟೆಯ ಸಮಯದಲ್ಲಿ ಸಾಬರಮತಿ ನದಿಯ ದಂಡೆಯ ಮೇಲೆ ಓಡಾಡಿದೆ. ಗೊತ್ತಾದ ಹೊತ್ತಿಗೆ ಗಾಂಧೀಜೀಯವರ ಮನೆಗೆ ಹೋದೆ.

ದಾರಿಯಲ್ಲಿ ಒಬ್ಬ ಮುದುಕ ವ್ಯಕ್ತಿಯು ಒಂದು ಗಿಡದ ಅಡಿಯಲ್ಲಿ, ಸ್ವಚ್ಛವಾಗಿ ಸಾರಿಸಿದ ಸ್ಥಳದಲ್ಲಿ ನೂಲುತ್ತಾ ಕುಳಿತಿದ್ದ. ಇನ್ನೂ ನಾನು ಗಾಂಧೀಜಿಯವರ ಕಡೆಗೆ ಹೋಗಬೇಕಾದ ವೇಳೆಗೆ ೧೦ ನಿಮಿಷ ಇದ್ದುದರಿಂದ, ಅದೇ ಹೊಸದಾಗಿ ಕಣ್ಣಿಗೆ ಬಿದ್ದ ಆ ರಾಟಿ, ನೂಲುವುದನ್ನು ನೋಡುತ್ತಾ ಹಾಗೆಯೇ ನನ್ನ ಕೋಲಿನ ಮೇಲೆ ಅವಲಂಬಿಸಿ ನಿಂತುಕೊಂಡೆ. ಮುಂದೆ ಐದು ನಿಮಿಷಗಳ ತರುವಾಯ ಆ ವೃದ್ಧ ವ್ಯಕ್ತಿ ಹಸನ್ಮುಖದಿಂದ ಹಲ್ಲಿಲ್ಲದ ಬಾಯೊಡನೆ "ನೀವು ಕುಮಾರಪ್ಪನವರೇ?" ಎಂದು ನನಗೆ ಕೇಳಿತು. ಅದರಿಂದ ಅದೇ ವ್ಯಕ್ತಿ ಮಹಾತ್ಮಾ ಗಾಂಧಿ ಆಗಿರಬೇಕೆಂದು ನನಗೆ ಸಂಶಯ ಬಂದಿತು. ನಾನು ಅವರನ್ನು ಕೇಳಿಯೇ ಬಿಟ್ಟೆ. 'ಹೌದು' ಎಂಬ ಉತ್ತರ ಬಂದದ್ದರಿಂದ ನಾನು ನನ್ನ ಅರಿವೆಗಳ ಪರಿವೆಯಿಲ್ಲದೆ, ಆ ನೆಲದ ಮೇಲೆ ಕುಳಿತೆ. ಕಾಲು ಚಾಚದೆ ನಾನು ಕುಳಿತುದನ್ನು ಕಂಡು ಆಶ್ರಮದೊಳಗಿನಿಂದ ಒಬ್ಬರು ಒಂದು ಕುರ್ಚಿ ತಂದರು. ಆಗ ಗಾಂಧೀಜೀ "ಕುಳಿತುಕೊಳ್ಳಿರಿ, ಆ ಕುರ್ಚಿಯ ಮೇಲೆ ಅನುಕೂಲವಾಗಿ" ಎಂದರು. "ನೀವು ಕೆಳಗೆ ಕುಳಿತಿರುವಾಗ ನನಗೆ ಕುರ್ಚಿ ಬೇಡ" ಎಂದು ನಾನೆಂದೆ.

ನನ್ನ ನಿಬಂಧವು ಚೆನ್ನಾಗಿದೆಯೆಂದೂ ಅದನ್ನು 'ಯಂಗ್ ಇಂಡಿಯಾ' ದಲ್ಲಿ ಭಾಗ ಭಾಗವಾಗಿ ಪ್ರಸಿದ್ಧನಲು ಇಚ್ಛಿಸುತ್ತಿರುವುದಾಗಿಯೂ ಮಹಾತ್ಮಾರವರು ಹೇಳಿದರು. ಮತ್ತು ತಮ್ಮ ದೃಷ್ಟಿಯಿಂದಲೇ ನಾನು ಅರ್ಥಶಾಸ್ತ್ರದ ಕಡೆಗೆ ನೋಡುತ್ತಿದ್ದುದರಿಂದ ಗುಜರಾತ ಪ್ರಾಂತದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಅಂಕಸಂಖ್ಯೆಗಳನ್ನು ಕಂಡುಹಿಡಿಯುವ ಕಾರ್ಯವನ್ನು ಮಾಡಬಹುದೇ, ಎಂದು ಕೇಳಿದರು. ನನಗೆ ಭಾಷೆಯದೇ ತೊಂದರೆಯಿದೆ ಎಂದೆ. ಆದರೆ ಗುಜರಾತ ಪೀಠದ ಅರ್ಥಶಾಸ್ತ್ರ ವಿಭಾಗದ ಪ್ರೊಫೆಸರರನ್ನು ಮತ್ತು ವಿದ್ಯಾರ್ಥಿಗಳನ್ನು ನನ್ನ ಸಹಾಯಕ್ಕೆ ಕೊಡುವುದಕ್ಕೆ ತಾವು ವಿದ್ಯಾಪೀಠದ ಪ್ರಿನ್ಸಿಪಾಲರಿಗೆ ಹೇಳುತ್ತೇವೆಂದು ಹೇಳಿದರಲ್ಲದೆ, ಆ ಕುರ್ಚಿಯನ್ನು ತಂದವರೇ ಪ್ರಿನ್ಸಿಪಲರಾದ ಕಾಕಾ ಕಾಲೇಲಕರ ಆಗಿದ್ದರೆಂದೂ ನನಗೆ ಹೇಳಿದರು.

ಮಧ್ಯಾಹ್ನದಲ್ಲಿ ನಾನು ಗುಜರಾತ ವಿದ್ಯಾಪೀಠಕ್ಕೆ ಹೋಗಿ ಕಾಕಾ ಕಾಲೇಲಕರರನ್ನು ಕಂಡೆ. ನನ್ನ ಪೋಷಾಕು ಮತ್ತು ಗುಜರಾತಿ ಭಾಷೆಯ ಜ್ಞಾನದ ಅಭಾವ ಇವುಗಳನ್ನು ಕಂಡು, ಗಾಂಧೀಜೀಯವರು ಹೇಳಿದ ಕಾರ್ಯಕ್ಕೆ ನಾನು ಅಸಮರ್ಥನೆಂದು ಬಗೆದು ಅವರು ನನಗೆ ಉತ್ತೇಜನ ಕೊಡಲಿಲ್ಲ.

ನಾನು ಅದರಿಂದ ನಿರಾಶನಾಗಿ, ಗಾಂಧೀಜಿಯವರನ್ನು ಮತ್ತೊಮ್ಮೆ ಕಾಣದೆ ಮುಂಬಯಿಗೆ ಬಂದೆ ಮತ್ತು ಅಲ್ಲಿಂದ ಗಾಂಧೀಜಿಯವರಿಗೆ "ನಾನು ತಾವು ಹೇಳಿದ ಕಾರ್ಯಕ್ಕೆ ಉಪಯೋಗ ಬೀಳಬಹುದೆಂದು ಕಾಕಾ ಕಾಲೇಲಕರರಿಗೆ ಎನಿಸಲಿಲ್ಲ. ಮತ್ತೇನಾದರೂ ಕೆಲಸವಿದ್ದರೆ ನಾನು ಮಾಡಲು ಸಿದ್ಧನಿದ್ದೇನೆ" ಎಂದು ಪತ್ರ ಬರೆದೆ. ಮರು ಟಪಾಲಿಗೇ ಕಾಕಾ ಕಾಲೇಲಕರರಿಂದ ನನಗೆ ಪತ್ರ ಬಂತು. ಅದರಲ್ಲಿ ಅವರು "ಗಾಂಧೀಜಿಯವರು ಹೇಳಿದ ಕೆಲಸ ಮಾಡಲು ನೀವು ಕೂಡಲೇ ಬರುವ ಕೃಪೆಮಾಡಬೇಕು" ಎಂದು ಬರೆದಿದ್ದರು. ನನಗೆ ಹಾಗೆ ನಿರುತ್ತೇಜನಮಾಡಿಸಿದುದಕ್ಕಾಗಿ ಗಾಂಧೀಜಿಯವರು ಕಾಲೇಲಕರರೊಡನೆ ಸಿಟ್ಟು ಮಾಡಿರಬೇಕೆಂದು ತಿಳಿದುಕೊಂಡೆ.

ಕೆಲವು ವರ್ಷಗಳ ನಂತರ, ಮನುಷ್ಯ ಪರೀಕ್ಷೆಯ ಬಗ್ಗೆ ಗಾಂಧೀಜಿಯವರು ಮಾತಾಡುತ್ತಿದ್ದಾಗ್ಗೆ "ಮೊದಲಿನ ಭೇಟಿಯ ಕಾಲಕ್ಕೆ ಕಾಕಾ ಕಾಲೇಲಕರರು ನಿಮ್ಮನ್ನು ಹಿಡಿಯಲು ಅಸಮರ್ಥರಾದರು ಎಂಬುದು ನಿಮಗೆ ನೆನಪಿರಬಹುದು. ಆದರೆ ನಿಮ್ಮನ್ನು ಕಂಡಕ್ಷಣವೇ ಇಲ್ಲಿ ಒಬ್ಬ ಯೋಗ್ಯ ತರುಣನಿದ್ದಾನೆ ಇವನನ್ನು ಬಿಡಬಾರದು ಎಂದು ಕೊಂಡೆ. ಆ ಮೇಲಿನ ಸಂಗತಿಗಳು ನಿಮ್ಮನ್ನು ಹಿಡಿದುದರ ಸಾರ್ಥಕ್ಯವನ್ನು ತೋರಿಸಿವೆ" ಎಂದು ಹೇಳಿದರು.

ನಾನು ಗುಜರಾತದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಸಂಶೋಧನೆ ನಡೆಸಿದಾಗ ದಂಡೀ ಯಾತ್ರೆಯ ಸಂಬಂಧವಾಗಿ ಗಾಂಧೀಜಿಯವರು ಸೆರೆಹಿಡಿಯಲ್ಪಟ್ಟರು. ಗಾಂಧೀಜೀ ಮತ್ತು ಮಹಾದೇವ ದೇಸಾಯಿ ಇವರು ಇಲ್ಲದಿರುವಾಗ ನಾನು ಗಾಂಧೀಜಿಯವರ 'ಯಂಗ್ ಇಂಡಿಯಾ' ಪತ್ರದ ಸಂಪಾದಕತ್ವವನ್ನು ವಹಿಸಬೇಕೆಂದು ಕರೆ ನನಗೆ ಬಂದಿತು. ಆ ಪತ್ರದಲ್ಲಿಯ ನನ್ನ ಲೇಖನಗಳ ಬಗ್ಗೆ ನಾನೂ ಕಾರಾಗೃಹ ಸೇರಬೇಕಾಯಿತು.

ನಾನು ಮುಂಬಯಿಯಲ್ಲಿ ಆ ಮೊದಲು ಲೆಕ್ಕ ಪರಿಶೋಧನೆಯ ಕಾರ್ಯ ಮಾಡುತ್ತಿದ್ದೆ. ಯುರೋಪಿಯನ್ ಮತ್ತು ಪಾರ್ಸಿ ಕಂಪೆನಿಗಳು ನನಗೆ ತಮ್ಮ ಲೆಕ್ಕಗಳನ್ನು ಆ ಸಂಬಂಧವಾಗಿ ಕೊಡುತ್ತಿದ್ದವು. ಆದರೆ ಈ ಮೇರೆಗೆ ನಾನು ಗಾಂಧೀಜಿಯವರ ಬೆನ್ನು ಹತ್ತಿದ್ದು ಅವರಿಗೆ ಸೇರಲಿಲ್ಲ. ಅದ್ದರಿಂದ ಮುಂದೆ ನಾನು ಗಾಂಧೀಜಿಯವರಲ್ಲಿಯೇ ಉಳಿದು ಬಿಟ್ಟೆ.

ಜೈ ಹಿಂದ್.

ಮಹಾತ್ಮಾಗಾಂಧೀಜೀಯವರ ಪುಣ್ಯದಿನವಾದ ತಾ. ೩೦ ರಿಂದ ಪ್ರಾರಂಭವಾಗುವ ಭೂದಾನಯಜ್ಞ ಪಕ್ಷದ ಸಲುವಾಗಿ ಬಿಹಾರಿನ ೧೯ ಮಂದಿ ನ್ಯಾಯ ವಿಧಾಯಕ ಸಭಾ ಸದಸ್ಯರು ೧೬೫೫ ಎಕ್ರೆ ಜಮೀನನ್ನು ದಾನವಾಗಿ ಕೊಟ್ಟರು.

॥ ದುರ್ಬೀನು ನೋಟ ॥

ಸಂದರ್ಭಕ್ಕೆ ತಕ್ಕಂತೆ ಕೋಟು ಬದಲಿಸಿ ಅಧಿಕಾರಕ್ಕೆ ಬಂದವರೊಬ್ಬರು ಜನರು ಚಿಕ್ಕಂದಿನಿಂದ ಇಟ್ಟ ಗುರಿ, ಅಟಸಿದ ಪರನುಗೆ ತಲುಪಿರುವವರಾಗಿಯೂ, ಇನ್ನೂ ದೊಡ್ಡ ಗುರಿ ಇಟ್ಟಿದ್ದರೆ ಅಲ್ಲಿಗೂ ಏರಬಹುದಿತ್ತೆಂದೂ ಹೇಳಿದರಂತೆ. ಬಿಳಿ ಎಷ್ಟೇ ಬೆಳದಿದ್ದರೂ ಅದು ಬಾಗುತ್ತದೆ. ಸರಕ್ತ ಸಜ್ಜನನೂ ವಿನಯಶೀಲನಿರುತ್ತಾನೆ ಆದರೆ ಓಳ್ಳ ಬಿದಿರು, ಹಾರುಕಿಲ್ಲದ ಒಣಗಿದ ಬಾಗುವಂತಿಲ್ಲ!

* * *

ಯೋಗ್ಯತೆ ಇಲ್ಲದಿದ್ದರೂ ಅದೃಷ್ಟದಿಂದ ಮೇಲೇರಿದವರಿಗೆ ಸರಸವಲ್ಲೂ ವಿರಸ ತೋರುವದಿದೆ. ಅಭಿಪ್ರಾಯಕ್ಕೆ ಹೆದರುವ ಅಳ್ಳೆದೆಯವರು ಸರ್ವಾಧಿಕಾರಿಗಳಾದರೆ ತಮಾಷೆಯ ವರ್ತನೆಗೂ ಶಿಕ್ಷೆ ವಿಧಿಸುವದಿದೆ. ಅದರಂತೆ ತಮಾಷೆಯ ಸಭೆಯೊಂದರಲ್ಲಾದ ತಮಾಷೆಯ ನಿರ್ಣಯಕ್ಕಾಗಿ ಒಳಗಿಂದೊಳಗೆ ಎಚ್ಚರಿಕೆ ಕೊಡಲಾಗುತ್ತಿದೆಯಂತೆ! ಅದೂ ಹೇಗೆ? ದನಕ್ಕೆ ಕಾಯಿಲೆ ಬಂದರೆ ಕೊಟ್ಟಿಗೆಗೆ ಬರೆ ಹಾಕಿದಂತೆ! ಮಾಡಿದವರಾರೊ? ಎಚ್ಚರಿಕೆ ಗಡಿಕೆಗಳು ಬೇರೆಯವರಿಗೆ!

* * *

"ಕಾಂಗ್ರೆಸು ಅಧಿಕಾರಕ್ಕೆ ಬಂದ ಮೇಲೆ ಕೆಲವು ಜನರು ಸರಕಾರವೇ ತಮ್ಮದೆಂದು ವರ್ತಿಸುತಿದ್ದಾರೆ. ಉಳಿದವರು ಸರಕಾರಕ್ಕೆ ಸಂಬಂಧಿಸದವರೇಬಂತೆ ಮಾತಾಡುತ್ತಾರೆ. ಏನು ಹೇಳುವದು?" ಎಂದು ಒಬ್ಬರು ಕೇಳಿದ್ದಾರೆ!

ಕೆಲವರೇ ಹಾಗಿರುವದು ಸುಕೃತ. ಹಲವರು ನಮ್ಮ ಹಾಗೆಯೇ ಇದ್ದಾರೆ! ಅದ್ದರಿಂದ ಪಾತ್ರಾ ಪಾತ್ರ ತಿಳಿದು ವರ್ತಿಸುವದೊಳಿತು. ಕೊಳಲೂದಿದಾಗ ಸ್ವರ ಹೊರಟಿತೆಂದು ಕೋಲಿಗೂ ಕಚ್ಚಿದರಾಗದು. ಮಧುರ ಸ್ವಭಾವಿಗಳನ್ನು ಮಾತಾಡಿಸಿದೆವೆಂದು ಮದಾಂಧರೊಡನೆಯೂ ಸಲುಗೆ ಏಕೆ?

* * *

"ಕೆಳಗಿನ ಅಧಿಕಾರಿಯು ತನ್ನ ಕೈಕೆಳಗಿನವರನ್ನು ತನ್ನ ಮನೆ ಯಾ ಖಾಸಗಿ ಕೆಲಸಕ್ಕೆ ಉಪಯೋಗಿಸಿಕೊಂಡರೆ ತಪ್ಪೆನ್ನಲಾಗುತ್ತದೆ. ಆದರೆ ಈ ವಿಚಾರ ತೀರ್ಪು ಕೊಡಬೇಕಾದವನೇ ತನ್ನಾಧೀನವಿರುವ ಅಧಿಕಾರಿಗಳನ್ನು ಮನೆ ಕೆಲಸಕ್ಕೆ ಉಪಯೋಗಿಸಿದರೆ ಅದು ತಪ್ಪಲ್ಲವೇ?"

ಹೌದು, ಆದರೇನು ಮಾಡುವದು? ಬಾಯೊಳಿದವನಿಗೆ ಗುಟುಕು ತೀರ್ಥ ಸಾಕಾಗದು. ಅದರಂತೆ ಸ್ವಾರ್ಥದ ಬಯಕೆಯವರಿಗೆ ಸರ್ವವೂ ತನಗೇ ಬೇಕು! ಮನೆಗುಡಿಸಿದಾಕ್ಷಣ ಪ್ರೀಯ ಕೊಳೆ ಹೋಗಬಾರದಲ್ಲವೇ?

* * *

ಕೊಡಗಿನ ಸಾಮೂಹಿಕ ವಿಕಾಸ ಯೋಜನೆಗೆ ಹಲ ಜನರು ಹಣವಿತ್ತು ಈ ಬಗೆಗೆ ಸುಮಾರು ಒಂದು ಲಕ್ಷ ರೂಪಾಯಿ ಕೂಡಿದ್ದು ಪ್ರಶಂಸನೀಯವೆಂದೊಬ್ಬರು ಬರೆದಿದ್ದಾರೆ. ಈ ವಿಚಾರ 'ಆಲೋಚನೆ ಮಾಡುವಾಗ ನನಗೆ ಮಳೆಯ ಯೋಚನೆ ಬರುತ್ತದೆ. ನೀರು ಬಿಸಿಲಿನ ಶಾಖಕ್ಕೆ ಆವಿಯರೂಪದಿಂದ ಆಕಾಶಕ್ಕೇರಿದುದು ಯಾರಿಗೂ ಕಾಣುವದಿಲ್ಲ. ಆದರೆ ಅದು ಮಳೆಯಾಗಿ ಬೀಳುವದು ಎಲ್ಲರಿಗೂ ತೋರುತ್ತದೆ. ಅದರಂತೆ ಶ್ರೀಮಂತರು ಬಡ ಜನರನ್ನು ದಂಡಿಸಿ ದುಡಿಸಿ ಹಣ ಸಂಗ್ರಹಿಸುವದು ಯಾರಿಗೂ ತೋರದಿದ್ದರೂ, ಅವರ ದಾನ ಧರ್ಮ ಜಗತ್ತಿಗೇ ತಿಳಿಯುತ್ತದೆ.

* * *

ಮಿಲ್ ಬಟ್ಟೆ ಧರಿಸಿ ಕಾಂಗ್ರೆಸ್ ಅಧಿವೇಶನಕ್ಕೆ ಹೋದ ಕಾಂಗ್ರೆಸ್ ಡೆಲಿಗೇಟರನ್ನು ಹೊರದಬ್ಬಲಾಯಿತಂತೆ. ಆಸುಪಾಸಿನಲ್ಲಿ ಬಿದ್ದ ಹಣ್ಣನ್ನು ಹೆಕ್ಕಿಕೊಂಡರೂ ಅಂಗಡಿಯ ಹಣ್ಣಿಗೆ ಬೆಲೆ ಕೊಡಲೇಬೇಕು. ಅದರಂತೆ ಹಾದಿಹೋಕರನ್ನು ಬಿಟ್ಟು ಕೆಲಸಕ್ಕೋ, ಚುನಾವಣೆ ಕಾರ್ಯಕ್ಕೋ ಕಾಂಗ್ರೆಸ್ ಎಂದು ಸೇರಿಸಿಕೊಂಡರೂ ಮಂಗಳ ಪೂಜೆಗೆ ಪೂಜಾರಿಗಳೇ ಬರಬೇಕು!

* * *

ವಾರ್ತೆ

ಉತ್ತರ ಪ್ರದೇಶದ ಗವರ್ನರರಾದ ಶ್ರೀ ಕೆ. ಎಂ. ಮುನ್ಷಿಯವರು ಮೊನ್ನೆ ಮಾತನಾಡುತ್ತಾ ಮಹಾ ಭಾರತ ಸಣ್ಣ ಕಥೆಗಳ ಬಹುಮಾನ ಸ್ಪರ್ಧೆಯೊಂದನ್ನು ಭಾರತೀಯ ವಿದ್ಯಾಪೀಠವು ಸದ್ಯದಲ್ಲಿಯೇ ಪ್ರಾರಂಭಿಸುವುದು. ಈ ಕಥೆಗಳನ್ನು ಆಧುನಿಕ ತಂತ್ರ ಮತ್ತು ರೀತಿಗಳಲ್ಲಿ ಅತೀ ಚೆನ್ನಾಗಿ ಬರೆದವರಿಗೆ ಬಹುಮಾನ ಕೊಡಲಾಗುವುದು. ಆದರೆ ಕಥೆಗಳ ಮೂಲ ವಸ್ತುವಿಗೆ ಯಾವ ರೀತಿಯಲ್ಲೂ ಕುಂದುಂಟಾಗಬಾರದು. ಮತ್ತು ಆ ಕಥೆಗಳನ್ನು ಸಂಗ್ರಹಿಸಿ ಮಹಾ ಭಾರತದ ಆಧುನಿಕ ಆವೃತ್ತಿಯನ್ನು ಇಂಗ್ಲೀಷ್ ಅಥವಾ ಭಾರತದ ಯಾವುದೇ ಭಾಷೆಯಲ್ಲಿ ಪ್ರಕಟಿಸುವಂತಿರಬೇಕು ಎಂದು ಹೇಳಿದರು.

ಮುಂಬಯಿಯ ರಾಜ್ಯಪಾಲರಾದ ಶ್ರೀ ಗಿರಿಜಾ ಶಂಕರ ಬಾಜಪೇಯರು ಕಾಶ್ಮೀರ ಮಾತುಕತೆಗಳಲ್ಲಿ ಭಾಗವಹಿಸಲು ತೆರಳಿದರಿಂದ ಅವರ ಬದಲು ತಾತ್ಕಾಲಿಕ ರಾಜ್ಯಪಾಲರಾಗಿ ನೇಮಿಸಲ್ಪಟ್ಟಿರುವ ಮಧ್ಯ ಪ್ರದೇಶದ ಹಿಂದಿನ ರಾಜ್ಯಪಾಲರಾದ ಶ್ರೀ ಮಂಗಲದಾಸ ಪಕ್ವಾಸರು ರಾಜ್ಯಪಾಲರಾಗಿ ಪ್ರಮಾಣ ವಚನವನ್ನು ಸ್ವೀಕರಿಸಿದರು

ಭಾರತದ ಆಹಾರ ಕೊರತೆಯನ್ನು ಕೃತಕ ಆಹಾರ ವಸ್ತುಗಳಿಂದ ತುಂಬಿಕೊಳ್ಳಲು ಭಾರತವು ನಡೆಸಿರುವ ಪ್ರಯತ್ನಕ್ಕೆ ಯಶಸ್ಸು ದೊರೆತಿದೆಯೆಂದು ತಿಳಿಯುತ್ತದೆ. ಸೇರಿಗೆ ಹತ್ತು ಆಣೆಗಳಿಗಿಂತಲೂ ಕಡಿಮೆ ಬೆಲೆ ಬೀಳುವ ಕೃತಕ ಮಾವಿರನ್ನು ತಯಾರಿಸುವಲ್ಲಿ ಕೇಂದ್ರ ಆಹಾರ ಮತ್ತು ತಾಂತ್ರಿಕ ಸಂಶೋಧನಾ ಮಂಡಳಿವು ಯಶಸ್ವಿಯಾಗಿದೆ. ಇದರಂತೆ ನಿಜ ಹಾಲಿನಷ್ಟೇ ಸತ್ವವುಳ್ಳ ಕೃತಕ ಹಾಲನ್ನು ಕೂಡ ತಯಾರಿಸುವ ಉಪಾಯ ಕಂಡುಹಿಡಿಯಲ್ಪಟ್ಟಿದ್ದು ಈ ಕೃತಕ ಹಾಲಿನ ಬೆಲೆ ಸೇರಿಗೆ ೩ ಅಥವಾ ೪ ಆಣೆಗಿಂತ ಹೆಚ್ಚಾಗಲಾಗದು ಎಂದು ತಿಳಿಯುತ್ತದೆ.

ಭಾರತ ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಇದೇ ತಿಂಗಳ ೨೪ನೆಯ ದಿನಾಂಕ ತಿರುಪತಿಗೆ ಬರುವರೆಂದು ತಿಳಿಯುತ್ತದೆ. ಅವರು ತಿರುಪತಿಗೆ ಬಂದಾಗ ತಿರುಮಲಯಿ ಗುಡ್ಡವನ್ನು ಸಂದರ್ಶಿಸುವರು.

ಈಗಾಗಲೇ ಪಂಜಾಬದ ಮುಖ್ಯ ಮಂತ್ರಿಗಳನ್ನೊಳಗೊಂಡು ಎಲ್ಲಾ ಮಂತ್ರಿಗಳು ತಮ್ಮ ೧೫೦೦ ರೂ. ಸಂಬಳದಲ್ಲಿ ನೂರಕ್ಕೆ ೧೦ರಷ್ಟು ಕಡಿತ ಮಾಡಿಕೊಂಡಿದ್ದು ಬರುವ ಆರ್ಥಿಕ ವರ್ಷದ ಪ್ರಾರಂಭದಿಂದ ಸಂಬಳದಲ್ಲಿ ಇನ್ನಷ್ಟು ಕಡಿತ ಮಾಡಿಕೊಳ್ಳಲು ಒಪ್ಪಿರುವರೆಂದು ತಿಳಿಯುತ್ತದೆ. ಪಂಜಾಬ ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಅಧ್ಯಕ್ಷರು ಸಹ ತಮ್ಮ ಸಂಬಳದಲ್ಲಿ ಕಡಿತ ಮಾಡಿಕೊಳ್ಳುವರು.

ಬಂಜರು ಭೂಮಿಯನ್ನು ಸಾಗುವಳಿಗೆ ತರುವ ಮತ್ತು ವಸಾಹತುಗಳನ್ನು ನಿರ್ಮಿಸುವ ಸರಕಾರದ ಪ್ರಯತ್ನದಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ೩೩೦೦ ಎಕರೆ ಭೂಮಿ ಸಾಗುವಳಿಯಾಗಿದ್ದು ಅಲ್ಲಿ ವರ್ಷಕ್ಕೆ ೩೦೦೦ ಚೀಲ ಭತ್ತ ಬೆಳೆಯುತ್ತಿದೆಯೆಂದು ಮುಂಬಯಿ ಸರಕಾರದ ಪ್ರಕಟಣೆಯೊಂದರಲ್ಲಿ ಹೇಳಲಾಗಿದೆ.

ಪಾಕಿಸ್ತಾನದಲ್ಲಿ ಉಂಟಾಗಿರುವ ಆಹಾರಭಾವವನ್ನು ನೀಗಿಸಲು ಕರಾಚಿ ಮತ್ತು ಸಿಂಧ ಸರಕಾರಗಳು ಕೆಲ ಕ್ರಮಗಳನ್ನು ಕೈಕೊಂಡಿವೆ. ಯಾರೂ ೨೫ಕ್ಕಿಂತ ಹೆಚ್ಚು ಜನರಿಗೆ ಊಟ ಹಾಕಲಾಗದೆಂದೂ ಒಂದು ಊಟದಲ್ಲಿ ಮೂರಕ್ಕಿಂತ ಹೆಚ್ಚು ಭಕ್ಷ್ಯಗಳನ್ನು ಬಡಿಸಲಾಗದೆಂದೂ ಆಜ್ಞೆ ಹೊರಟಿದೆ. ಪಂಜಾಬ ಸರಕಾರವು ಈ ರೀತಿಯ ಕ್ರಮವನ್ನು ಈ ಮೊದಲೇ ತೆಗೆದು ಕೊಂಡಿದೆ. ಉಳಿದ ಭಾಗಗಳಲ್ಲೂ ಈ ಕ್ರಮ ಬೇಗನೆ ಕೈಕೊಳ್ಳಲ್ಪಡಲಿದೆಯೆಂದು ತಿಳಿಯುತ್ತದೆ.

ತಾ. ೧ರಲ್ಲಿ ಸೇರಿದ ಹೈದ್ರಾಬಾದ ಪ್ರದೇಶ ಕಾಂಗ್ರೆಸ ಕಾರ್ಯಸಮಿತಿಯು ನೋನಿನಾಬಾದದ ಶ್ರೀ ಲಕ್ಷ್ಮಣರಾವ ಕಾಳೆಗಾಂವಕರರು ಸದಾ ಖಾದಿ ತೊಡುವವರಲ್ಲವಾದುದರಿಂದ ಅವರ ಪ್ರತಿನಿಧಿತ್ವ ಮತ್ತು ಸಕ್ರಿಯ ಸದಸ್ಯತ್ವವನ್ನು ರದ್ದುಗೊಳಿಸಲು ನಿರ್ಧರಿಸಿತು. ನಾಸಿಕ ನಗರದಲ್ಲಿ ಅ. ಭಾ. ಕಾಂಗ್ರೆಸಿನ ಬಹಿರಂಗ ಅಧಿವೇಶನ ಕೂಡಿದಾಗ ಖಾದಿ ಧರಿಸದ್ದರಿಂದ ಪ್ರತಿನಿಧಿ ಸ್ಥಾನದಿಂದ ಎದ್ದು ಹೋಗಬೇಕೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಮನ್ನಾರು ವಿಧಿಸಿದ್ದ ಮೂವರಲ್ಲಿ ಶ್ರೀ ಲಕ್ಷ್ಮಣರಾವರೂ ಒಬ್ಬರಾಗಿದ್ದರು.

ತಪ್ಪೆ ನೋಟೀಸು.

ತಾ. ೨-೧-೫೩ರಲ್ಲು ಮತ್ತು ತಾ. ೯-೧-೫೩ರಲ್ಲು ಕೊಡಗು ಪತ್ರಿಕೆಯಲ್ಲಿ ಕಾಟಕೇರಿ ಗ್ರಾಮದ ಚಿಮ್ಮಂಡ ಮುದ್ದಪ್ಪನವರು ೨೦೦ ಬಟ್ಟಿ ಭೂಮಿ ಮತ್ತು ೧೮ ಎಕರೆ ಜಾಗವನ್ನು ಮಾರಾಟ ಮಾಡುವದಾಗಿ ಪ್ರಕಟಿಸಿದುದನ್ನು ನಾನು ನೋಡಿದೆನು. ಆ ಸೊತ್ತುಗಳಿಗೆ ಬೇರೆ ಹಕ್ಕುದಾರರು ಇರುವುದರಿಂದ ಈ ಮೇಲ್ಕಂಡ ಸೊತ್ತನ್ನು ಯಾರಾದರೂ ಕ್ರಯಕ್ಕೆ ಪಡಕೊಂಡಲ್ಲಿ ಅದರಿಂದುಂಟಾಗುವ ನಷ್ಟ ಕಷ್ಟಗಳಿಗೆ ಅವರನೇ ಗುರಿಯಾಗತಕ್ಕದೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

ಅಪ್ಪಚ್ಚೀರ ಮಾದಪ್ಪ,
೩-೩-೫೩ ಚೇರವನಾಡು.

THE VIJAYA BANK, LIMITED, MERCARA.

Head Office :- Kadri Road, MANGALORE.

Office Hours.

All our constituents are hereby informed of the change of our working hours with effect from 1-2-1953 as follows:-

ON WEEK DAYS from 10 A M to 2 P. M.
ON SATURDAYS ONLY from 10 A. M. to 12 Noon.

M. S. ALVA,
AGENT.

For Sale.

A Ford V. 8, 1947 Model 32 horse power Motor Car is for Sale. The Car is in very good condition. Intending purchasers may please contact:-

M. K. Kareem Baig,
Cloth Merchant,
2-2 *Somwarpet.*

ಕೊಡಗು

ತಾರೀಕು ೬ ಫೆಬ್ರವರಿ ೧೯೫೩ನೇ ಶುಕ್ರವಾರ

ಕ್ಷಯ ರೋಗ ನಿಯಂತ್ರಣ.

ಮೈಸೂರಿನಲ್ಲಿ ತಾರೀಕು ೨ರಲ್ಲಿ ನಡೆದ ಅಖಿಲ ಭಾರತ ಕ್ಷಯರೋಗ ನಿವಾರಣಾ ಕೆಲಸಗಾರರ ಹತ್ತನೇ ಸಮ್ಮೇಳನದ ಉದ್ಘಾಟನಾ ಭಾಷಣವನ್ನು ಕೇಂದ್ರ ಸರಕಾರದ ಆರೋಗ್ಯ ಮಂತ್ರಿಗಳಾದ ಶ್ರೀಮತಿ ಅಮೃತಕೌರ್‌ರವರು ಮಾಡುತ್ತಾ ಸರ್ವರೂ ಈ ಮಹಾ ರೋಗದ ವಿಚಾರದಲ್ಲಿ ತಮ್ಮ ತಮ್ಮ ಪಾಲಿನ ಕರ್ತವ್ಯವನ್ನು ಮಾಡಬೇಕೆಂದು ಅಪೀಲು ಮಾಡಿದರು. ಈ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಕಲ್ಕತ್ತಾದ ಶ್ರೀ ಬಿ. ಜಿ. ಲಾಲ್‌ರವರು ವಹಿಸಬೇಕೆಂದು ನಿಶ್ಚಯವಾಗಿದ್ದರೂ ಅವರು ಫ್ರಾನ್ಸಿಗೆ ಹೋಗಿರುವ ಕಾರಣ ಅವರ ಬದಲು ಡಾ. ಕೆ. ಎಲ್. ವಿಗ್‌ರವರು ಅಧ್ಯಕ್ಷತೆ ವಹಿಸಿದ್ದರು.

ಹಿಂದೂದೇಶದಲ್ಲಿ ಮಲೇರಿಯಾದ ನಂತರ ಜನಜೀವನಕ್ಕೆ ಗಂಡಾಂತರಕಾರಿಯಾದ ಮಹಾ ರೋಗವೆಂದರೆ ಕ್ಷಯರೋಗ. ವರ್ಷಕ್ಕೆ ಐದು ಲಕ್ಷಕ್ಕೂ ಮಿಕ್ಕಿ ಜನರು ಈ ರೋಗದಿಂದ ಸಾಯುತ್ತಾರೆ. ಪ್ರತಿ ವರ್ಷ ೨೦ ಲಕ್ಷಕ್ಕೂ ಹೆಚ್ಚಿಗೆ ಜನರಿಗೆ ಈ ರೋಗ ಅಂಟುತ್ತದೆ. ಈ ಮಹಾ ರೋಗದ ನಿವಾರಣೆಗೆ ಸರ್ವ ದಿಕ್ಕಿನಿಂದಲೂ, ಕೃತ್ಯಪೂರ್ವಕವಾದ ಕೆಲಸ ನಡೆಯಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹಿಂದೂದೇಶದಲ್ಲಿ ಈ ಕಾಯಿಲೆ ಬಾರದಂತೆ ತಡೆಯುವ ವಿಚಾರವಿರಲಿ. ಬಂದವರಿಗೆ ತಕ್ಕ ಚಿಕಿತ್ಸೆ ಕೊಡುವ ಏರ್ಪಾಡು ಸಮರ್ಪಕವಾಗಿಲ್ಲ. ೧೯೪೭ರಲ್ಲಿ ಹಿಂದೂದೇಶದಲ್ಲಿ ಕ್ಷಯ ರೋಗಿಗಳಿಗಾಗಿ ಕೇವಲ ೫ ಸಾವಿರ ಹಾಸಿಗೆಗಳಿದ್ದರೂ ಈಗ ಅದು ೧೩ ಸಾವಿರಕ್ಕೇರಿದೆ. ಇದು ತೃಪ್ತಿಕರವೆನ್ನಬಹುದಾದರೂ ಎಲ್ಲಿಗೂ ಸಾಲದು. ರಾಜಕುಮಾರಿ ಅಮೃತಕೌರ್‌ರವರ ಭರವಸೆಯಂತೆ ೧೯೫೬ರ ಅಂತ್ಯದಲ್ಲಿ ಇದನ್ನು ೫೦,೦೦೦ ಏರಿಸಲಾಗುವದಂತೆ.

ಕ್ಷಯರೋಗ ನಿವಾರಣೆಯನ್ನು ಸರಕಾರವೇ ಯಶಸ್ವಿಯಾಗಿ ಮಾಡಲಾರದು. ಇದಕ್ಕೆ ಸಾರ್ವಜನಿಕರ ಬೆಂಬಲ ಅತ್ಯಾವಶ್ಯ. ಈ ವರೆಗೆ ನಡೆದ ಸೀಲ್ ಮಾರಾಟದಲ್ಲಿ ಜನತೆ ಯೋಗ್ಯ ರೀತಿ ಸಹಕರಿಸಿದೆ. ಸೀಲ್ ಮಾರಾಟದಲ್ಲಿ ಈ ವರೆಗೆ ೨೫ ಲಕ್ಷ ರೂಪಾಯಿಗಳು ಸಂಗ್ರಹವಾಗಿವೆ. ಆದರೆ ಇದೇ ಸಾಲದು. ಧನವಿರುವವರು ಉದಾರ ದಾನ ಮಾಡಬೇಕು. ಈ ರೋಗದಿಂದಾಗಿ ಅನೇಕ ಅಮೂಲ್ಯ ಜೀವಗಳು ಹಾನಿಯಾಗುತ್ತಿವೆ. ಹೆಚ್ಚಾಗಿ ಈ ಕಾಯಿಲೆಯು ಮಕ್ಕಳಿಗೂ, ಹರೆಯದವರಿಗೂ ಬರುತ್ತಿರುವದರಿಂದ ಇದರಿಂದಾಗುವ ನಷ್ಟ ಇನ್ನೂ ಹೆಚ್ಚಾಗಿದೆ. ಸರಕಾರಕ್ಕೆ ಈ ರೋಗದಿಂದಾಗುವ ಹಾನಿಯು ಅರಿವಿದ್ದರೂ ಈ ಮಹಾ ಜವಾಬ್ದಾರಿಯನ್ನು ಹೊತ್ತು ಅದಕ್ಕೆ ತಕ್ಕ ವ್ಯವಸ್ಥೆಯನ್ನು ಅದು ಮಾಡಲಾರದು. ಏಕೆಂದರೆ ದೇಶದ ಮುಂದೆ ಇದಕ್ಕಿಂತ ತುರಿತವಾದ ಅನೇಕ ಸಮಸ್ಯೆಗಳಿವೆ. ಅವುಗಳಿಗೆ ಸರಕಾರವು ಗಮನ ಕೊಟ್ಟು ಬೇಕಾದ ಧನ ಖರ್ಚುಮಾಡಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರ ಬೆಂಬಲದ ಆವಶ್ಯಕತೆಯಾಗಿದೆ.

ಸಮ್ಮೇಳನದಲ್ಲಿ ಸೂಚಿಸಿದ ಪ್ರಾಮುಖ್ಯವಾದ ವಿಚಾರವೊಂದನ್ನು ಇಲ್ಲಿ ಉಲ್ಲೇಖಿಸಬೇಕಾಗಿದೆ. ಈ ರೋಗ ಚಿಕಿತ್ಸೆಗಾಗಿ ಐದಾರು ಲಕ್ಷ ರೂಪಾಯಿಗಳ ಆಸ್ಪತ್ರೆ ಕಟ್ಟುವುದರ ಬದಲು ಕಡಿಮೆ ಖರ್ಚಿನ ಆಸ್ಪತ್ರೆ ಕಟ್ಟುವದೊಳಿತು. ಇದರಿಂದ ಆಸ್ಪತ್ರೆಗಳ ಸಂಖ್ಯೆಯನ್ನೂ, ರೋಗ ಪೀಡಿತರ ಸೇವೆಯನ್ನೂ ಹೆಚ್ಚಿಸಬಹುದಾಗಿದೆ. ಕಟ್ಟಡಕ್ಕಾಗಿ ಲಕ್ಷಾಂತರ ವ್ಯಯಮಾಡುವುದು ಸರಿಯಲ್ಲ.

ಕೊಡಗಿನಲ್ಲಿ ಕ್ಷಯರೋಗವು ದಿನ ಕಳೆದಂತೆ ಹೆಚ್ಚುತ್ತಿದೆಯೆಂಬುದು ಆಸ್ಪತ್ರೆಗಳ ಅಂಕೆಸಂಖ್ಯೆಯಿಂದ ಗೊತ್ತಾಗುತ್ತದೆ. ಮಡಿಕೇರಿಯಲ್ಲಿ ತಾತ್ಕಾಲಿಕವಾಗಿ ಒಂದು ಕ್ಷಯರೋಗ ವಾರ್ಡು ಕಟ್ಟಿ ಕೆಲವು ಜನರಿಗೆ ಚಿಕಿತ್ಸೆ ಕೊಡುವ ಏರ್ಪಾಡು ಮಾಡಿದ್ದರೂ ಕೊಡಗಿನ ಬೇಡಿಕೆಯನ್ನು ಇದು ಪೂರೈಸುತ್ತಿಲ್ಲ. ಒಂದೆರಡು ವರ್ಷಗಳ ಹಿಂದೆ ಮಡಿಕೇರಿಯ ಹತ್ತಿರದಲ್ಲಿ ಒಂದು ಆಸ್ಪತ್ರೆ ತೆರೆಯುವರೆಂಬ ವಾರ್ತೆ ದಟ್ಟವಾಗಿ ಹಬ್ಬಿತ್ತು. ಅದಕ್ಕಾಗಿ ಸ್ಥಳ ನೋಡಿ ಕಾಡು ಕಡಿಯಲಾಗಿತ್ತು. ಆದರೆ ಇತ್ತಲಾಗಿ ಆ ವರ್ತಮಾನವೇ ಇಲ್ಲ. ಕಡಿದ ಕಾಡು ಪುನಹ ಬೆಳೆಯತೊಡಗಿದೆ. ಕೊಡಗಿನಲ್ಲಿ ಒಂದು ಕ್ಷಯರೋಗ ಆಸ್ಪತ್ರೆಯ ಬಗ್ಗೆ ಎರಡಭಿಪ್ರಾಯಗಳಿಲ್ಲ. ಆದರೆ ಕೊಡಗಿನ ಪಂಚವಾರ್ಷಿಕ ಯೋಜನೆಯಲ್ಲಿ ಈ ಬಗೆಗೆ ಹಣವಿರಿಸಿದಂತೆ ತೋರುವದಿಲ್ಲ. ಇದು ಬಹು ತುರಿತದ ವಿಚಾರವಾಗಿದೆ. ಆದ್ದರಿಂದ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿಯೇ ಕ್ಷಯರೋಗ ಆಸ್ಪತ್ರೆಯೊಂದು ಕಟ್ಟಲ್ಪಡುವ ಏರ್ಪಾಡು ಮಾಡಬೇಕು. ಹಿಂದಿನ ಅಂದಾಜಿನಂತೆ ಇದಕ್ಕೆ ಮೂರು ನಾಲ್ಕು ಲಕ್ಷ ವೆಚ್ಚ ಮಾಡದೆ ಜಗತ್ತಿನ ಆರೋಗ್ಯ ಸಂಸ್ಥೆಯ ತಜ್ಞರು ಕೊಟ್ಟಿರುವ ಅಭಿಪ್ರಾಯದಂತೆ ಒಂದು ಲಕ್ಷ ರೂಪಾಯಿಗಳ ಪರಿಮಿತಿಯಲ್ಲಿ ೬೦ ಯಾ ೭೦ ಕಾಯಿಲಸ್ಥರಿಗೆ ಬೇಕಾಗುವ ಆಸ್ಪತ್ರೆ ಕಟ್ಟುವದು ಸೂಕ್ತವಾಗಿದೆ. ಈ ವಿಚಾರವನ್ನು ಸರಕಾರವು ಗಮನಕ್ಕೆ ತೆಗೆದುಕೊಂಡು ಕಾರ್ಯಪ್ರಾರಂಭಿಸುವರಾಗಿ ಆಶಿಸಲಾಗಿದೆ.

ಯುದ್ಧ ಕಾರ್ಮೋಡಗಳು.

ಚೀನಾದಲ್ಲಿ ಕಮ್ಯೂನಿಸ್ಟ್ ದಳಗಳು ಜಯವನ್ನು ಪಡೆದು ಚಿಯಾಂಗ್ ಕೈಶೇಕರ ಸೇನೆಯು ಚೀನಾವನ್ನು ಬಿಟ್ಟು ಫಾರ್ಮೋಸಾ ದ್ವೀಪವನ್ನು ಸೇರಿದಾಗ ಅಮೇರಿಕಾವು ತನ್ನ ನೌಕಾ ಪಡೆಯೊಂದನ್ನು ಅಲ್ಲಿಗೆ ಕಳುಹಿಸಿ ಕಮ್ಯೂನಿಸ್ಟ್ ಚೀನಾದ ದಳಗಳು ಫಾರ್ಮೋಸಾದ ಮೇಲೇರಿ ಬರದಂತೆ ತಡೆಯಿತು. ಈ ವರೆಗೆ ಪರಿಸ್ಥಿತಿ ಹಾಗೆಯೇ ಇದ್ದರೂ ಫಾರ್ಮೋಸಾದಲ್ಲಿರುವ ಚಿಯಾಂಗರ ಸೇನೆಗಳಿಗೆ ಅಮೇರಿಕಾದಿಂದ ಸಾಕಷ್ಟು ಸಹಾಯ ಕೊಡಲ್ಪಡುತ್ತಿದೆ. ಅಮೇರಿಕದ ಮಿಲಿಯವರ ಅಭಿಪ್ರಾಯದಂತೆ ಅಲ್ಲಿರುವ ಸುಮಾರು ೬೦೦೦೦ ಸೈನಿಕರಲ್ಲಿ ೨೦೦೦೦ ಜನರಿಗೆ ಯೋಗ್ಯ ತರಬೇತು ಕೊಡಲ್ಪಟ್ಟಿದೆ. ಚಿಯಾಂಗ್ ಕೈಶೇಕರೂ ಕೂಡ ಕಮ್ಯೂನಿಸ್ಟ್ ಚೀನಾದ ಮೇಲೆ ಯುದ್ಧ ಪ್ರಾರಂಭಿಸಿ ಕಳೆದು ಹೋದುದನ್ನು ಪುನಹ ವಶಪಡಿಸಿಕೊಳ್ಳಬೇಕೆಂಬ ಕಾಂಕ್ಷೆಯಲ್ಲಿದ್ದಾರೆ. ಈಗ ಅಮೇರಿಕಾವು ತನ್ನ ನೌಕಾದಳವನ್ನು ಈ ಎರಡು ಸೇನೆಗಳ ಮಧ್ಯದಿಂದ ಹಿಂತೆಗೆದಿರುವ ಪ್ರಯುಕ್ತ ಪುನಹ ಇಲ್ಲಿ ಯುದ್ಧ ಪ್ರಾರಂಭವಾಗುವ ಸಂಭವವಿದೆ.

ಅಮೇರಿಕಾದ ನೂತನ ಪ್ರೆಸಿಡೆಂಟರಾದ ಐಸೆನ್‌ಹೋವರ್‌ರವರು ತಮ್ಮ ನೌಕಾ ಸೇನೆಯನ್ನು ಹಿಂತೆಗೆಯಲು ನಿರ್ಧರಿಸಲು ಕಾರಣ ಇಲ್ಲದೆ ಇಲ್ಲ. ಕಮ್ಯೂನಿಸ್ಟ್ ಚೀನಾದ ವಿರುದ್ಧ ಬಲಯುತವಾದ ರಂಗವೊಂದನ್ನು ಪೂರ್ವ ಏಷ್ಯಾದಲ್ಲಿ ರಚಿಸಲು ಅಮೇರಿಕವು ಹಿಂದಿನಿಂದಲೇ ಯತ್ನಿಸುತ್ತಿದೆ. ಇತ್ತಿತ್ತಲಾಗಿ ಕೊರಿಯಾ ಯುದ್ಧರಂಗದಲ್ಲಿ ಕಮ್ಯೂನಿಸ್ಟರ ಕೈ ಮೇಲಾಗುತ್ತಿರುವದರಿಂದ ಅವರ ದೃಷ್ಟಿಯನ್ನೂ, ಶಕ್ತಿಯನ್ನೂ ಬೇರೆಡೆ ತಿರುಗಿಸುವ ಯತ್ನವನ್ನು ಅಮೇರಿಕಾ ಮಾಡುತ್ತಿದೆ. ಫಾರ್ಮೋಸಾದಲ್ಲಿದ್ದ ನೌಕಾ ಸೇನೆಯನ್ನು ಹಿಂತೆಗೆದ ಕಾರಣ ಚಿಯಾಂಗರ ದಳಗಳು ಚೀನಾದ ಮೇಲೆ ಧಾಳಿ ಪ್ರಾರಂಭಿಸಬಹುದು. ಇದರಿಂದ ಚೀನೀಯರು ಕೊರಿಯಾದ ಕಡೆಯಿಂದ ದೃಷ್ಟಿ ಅತ್ತ ಹೊರಳಿಸಬೇಕಾಗಿ ಬರುವದು. ಅಲ್ಲದೆ ಇಂಡೋಚೀನಾದಲ್ಲೂ ಕೂಡ ಅಮೇರಿಕವು ಫ್ರೆಂಚ್ ಸೇನೆಗಳಿಗೆ ಬೆಂಬಲಕೊಟ್ಟು ಬಲಪಡಿಸುವ ದೃಷ್ಟಿಯಲ್ಲಿರುವದರಿಂದ ಚೈನಾವು ಈಗ ಅಲ್ಲಿ ವೀಟ್‌ನಾಮ್ ದಳಗಳಿಗೆ ಕೊಡುತ್ತಿರುವ ಸಹಾಯವನ್ನು ಕಡಿಮೆ ಮಾಡಬೇಕಾಗುವದು. ಈ ರೀತಿಯಲ್ಲಿ ಚೈನಾದ ಪ್ರಭಾವವನ್ನು ಕಡಿಮೆ ಮಾಡಲು ಅಮೇರಿಕಾವು ಯತ್ನಿಸುತ್ತಿದೆ. ಫಾರ್ಮೋಸಾದಿಂದ ತನ್ನ ನೌಕಾ ಪಡೆಯನ್ನು ಹಿಂತೆಗೆದ ಕಾರಣ ಈ ದೃಷ್ಟಿಯಿಂದಾಗಿದೆ.

ಈ ನಿರ್ಣಯದಿಂದ ಜನರಲ್ ಮೆಕಾರ್ಥರರಿಗೆ ಸಂತೋಷವಾಗಿದೆ. ಕೊರಿಯಾ ಯುದ್ಧಪ್ರಕರಣದಲ್ಲಿ ಚೈನಾದ ಮಂಚೂರಿಯಾದ ಮೇಲೆ ಧಾಳಿ ಪ್ರಾರಂಭಿಸಬೇಕು ಇಲ್ಲದಿದ್ದರೆ ಕೊರಿಯಾ ಯುದ್ಧವನ್ನು ಗೆಲ್ಲಲಿಕ್ಕಾಗುವದಿಲ್ಲವೆಂದು ಅವರು ಅಭಿಪ್ರಾಯಪಟ್ಟ ಕಾರಣವೇ ಅಂದು ಟ್ರೂಮನರು ಅವರನ್ನು ಕೆಲಸದಿಂದ ನಿವೃತ್ತಿಗೊಳಿಸಿದರು. ಆದರೆ ಅದೇ ಅಭಿಪ್ರಾಯವನ್ನು ಐಸೆನ್‌ಹೋವರರು ಎತ್ತಿ ಹಿಡಿದಿರುವದರಿಂದ ಮೆಕಾರ್ಥರರಿಗೆ ಆನಂದವಾಗಿದೆ. ಅವರು ಐಸೆನ್ ಹೋವರರ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ಆದರೆ ಚೀನಾವನ್ನು ಸಂಯುಕ್ತರಾಷ್ಟ್ರ ಸಂಘಕ್ಕೆ ಸದಸ್ಯನಾಗಿ ತೆಗೆದುಕೊಳ್ಳಬೇಕೆಂದು ಭಾರತದಂತೆಯೇ ಅಭಿಪ್ರಾಯಪಟ್ಟ ಬ್ರಿಟನಿಗೆ ಅಮೇರಿಕಾದ ನೀತಿಯಿಂದ ತೃಪ್ತಿಯಾಗಿಲ್ಲ.

ಇಂದಿನ ಚೀನಾದ ಮತ್ತು ಅಲ್ಲಿಯ ಇತರ ಪರಿಸ್ಥಿತಿಗಳನ್ನು ಪರಿಶೀಲಿಸಿದರೆ ಚೀನಾಕ್ಕೆ ಹೆಚ್ಚಿನ ಗಂಡಾಂತರ ಬರುವಂತೆ ತೋರುವುದಿಲ್ಲ. ಚೈನೀಯರ ಸೈನ್ಯ ಪಡೆಯು ಮಿಲಿಯಾಂತರ ಶಕ್ತಿಯುಳ್ಳದ್ದಾಗಿದೆ. ಅಮೇರಿಕಾದ ರಿಪಬ್ಲಿಕನ್ ಪಕ್ಷದ ಮುಂದಾಳು ಥಾಮಸ್ ಡಿವಿಯವರು ಹೇಳುವಂತೆ ಫಾರ್ಮೋಸಾದಲ್ಲಿಯ ಚಿಯಾಂಗರ ಸೈನ್ಯವೇನು ಸುಸಜ್ಜಿತವಾಗಿಲ್ಲ. ಅದರಲ್ಲಿ ಅಧಿಕಾರಿಗಳೇ ಹೆಚ್ಚಾಗಿ (೧೬೦೦ ಜನರಲ್‌ಗಳಿದ್ದಾರಂತೆ) ಅವರವರೊಳಗೆ ಘರ್ಷಣೆ ನಡೆಯುತಿದ್ದ ಸೇನೆಯಲ್ಲಿ ಬೇಕಾದ ಶಿಸ್ತಿಲ್ಲವೆಂದು ಹೇಳಿದ್ದಾರೆ. ಈ ಸೇನೆಯು ಚೀನಾದ ಮೇಲೆ ಧಾಳಿ ಪ್ರಾರಂಭಿಸಿದರೂ ಹೆಚ್ಚಿನ ಪರಿಣಾಮಕಾರಿಯಾಗಲಾರದೆಂದು ಅವರ ಅಭಿಮತವಾಗಿದೆ. ಅವರ ಅಭಿಪ್ರಾಯದಂತೆ ಅಮೇರಿಕಾದ ರಕ್ಷಣಾ ವ್ಯೂಹದಲ್ಲಿ ಫಾರ್ಮೋಸಾ ದ್ವೀಪವು ಪ್ರಾಮುಖ್ಯವಾದುದು. ಅದನ್ನು ಅವರ ಹತೋಟಿಯಲ್ಲಿಡುವದು ಅತ್ಯಾವಶ್ಯವಾಗಿದೆ. ಆದ್ದರಿಂದ ಐಸೆನ್ ಹೋವರರ ಆಜ್ಞೆಯಂತೆ ಅಮೇರಿಕಾ ನೌಕಾದಳವನ್ನು ಹಿಂತೆಗೆದುದರ ಪರಿಣಾಮವಾಗಿ ಚಿಯಾಂಗರ ಸೇನೆಗೂ, ಚೀನೀ ಕಮ್ಯೂನಿಸ್ಟ್ ಪಡೆಗೂ ಘರ್ಷಣೆ ಪ್ರಾರಂಭವಾಗಿ ಚೀನೀಯರು ಫಾರ್ಮೋಸಾದ ಮೇಲೇರಿ ಬಂದರೆ ಅದನ್ನು ತನ್ನ ರಕ್ಷಣಾ ವ್ಯೂಹವೆಂದು ಪರಿಗಣಿಸಿರುವ ಅಮೇರಿಕಾವು ಅವರನ್ನು ಎದುರಿಸಬೇಬೇಕಾಗುವದು. ಇದು ಮಹಾಯುದ್ಧಕ್ಕೆ ಆಸ್ಪದ ಕೊಡದಿರದು. ಆದ್ದರಿಂದ ಪೂರ್ವ ದಿಗಂತದಲ್ಲಿ ಬಹು ಮಟ್ಟಿಗೆ ಯುದ್ಧದ ಕಾರ್ಮೋಡಗಳು ಹೆಚ್ಚುತ್ತಿವೆ.

ಪೂಜ್ಯ ಗಾಂಧೀಜಿಯವರ ಪುಣ್ಯ ದಿನ ಅಂದರೆ ತಾ. ೩೦—೧—೫೪ ನೇ ಶುಕ್ರವಾರದಿಂದ ತಾ. ೧೨—೨—೫೪ರ ವರೆಗೆ ಸರ್ವೋದಯ ಪಕ್ಷವನ್ನು ಆಚರಿಸಲು ವೀರಾಜಪೇಟೆಯ ಶ್ರೀ. ಕಾವೇರಿ ಆಶ್ರಮದವರು ನಿಶ್ಚಯಿಸಿದ್ದಾರೆ. ಪ್ರತಿ ದಿನ ಸಾಯಂಕಾಲ ೭ ಗಂಟೆಯಿಂದ ಪ್ರಾರ್ಥನೆ, ಭಜನೆ, ಗೀತಾ, ಕುರಾನ್, ಬೈಬಲ್ ಪಠನೆ, ಭಾಷಣಗಳ ಏರ್ಪಾಡು ಮಾಡಿರುವರು.

ಬೆಸಗೂರು ಶಾಲಾ ಆಶ್ರಯದಲ್ಲಿ ಶ್ರೀ ಪಾರುವಂಗಡ ಅಚ್ಚಯ್ಯ ಮತ್ತು ಅಪ್ಪಯ್ಯನವರು ಇಟ್ಟಿರುವ ಹಾಕಿ ಕಪ್ಪಿನ ಕಡೇ ಆಟವು ತಾ ೨೩ ರಲ್ಲಿ ಬೆಸಗೂರು ಮತ್ತು ಟಿ. ಶೆಟ್ಟಿಗೇರಿ ಶಾಲೆಗಳ ಟೀಮುಗಳೊಳಗೆ ನಡೆದು ಟಿ. ಶೆಟ್ಟಿಗೇರಿ ಶಾಲೆಯು ಜಯಪಡೆಯಿತು. ಶ್ರೀ. ಕಲಿಯಂಡ ಚಿಣ್ಣಪ್ಪನವರು ಜಯಶೀಲರಾದವರಿಗೆ ಬಹುಮಾನ ಕೊಟ್ಟರು.

ಶ್ರೀ. ಕಡೇಮಾಡ ಬೆಳ್ಯಪ್ಪನವರು ಟಿ. ಶೆಟ್ಟಿಗೇರಿ ಶಾಲೆಯಲ್ಲಿಟ್ಟ ಹಾಕಿ ಕಪ್ಪಿನ ಕಡೇ ಆಟವು ತಾ. ೨೭ ರಲ್ಲಿ ಟಿ. ಶೆಟ್ಟಿಗೇರಿ ಮತ್ತು ಹಾತೂರು ಶಾಲೆಗಳ ಟೀಮುಗಳಿಗೆ ನಡೆದು ಹಾತೂರು ಶಾಲೆಯು ಕಪ್ಪನ್ನು ಗೆದ್ದಿತು.

ವೀರಾಜಪೇಟೆ ಹೈಸ್ಕೂಲಿನ ಎನ್. ಸಿ. ಸಿ. ದಿನಾಚರಣೆಯು ಕೊಡಗಿನ ಗೃಹ ಮಂತ್ರಿ ಶ್ರೀ. ಕೆ. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಾ. ೬—೨—೫೪ ರಿಂದ ಶಾರೀಕು ೧೨—೨—೫೪ ರ ವರೆಗೆ ವಿರಂಗಾಲ ಉಮಾಮಹೇಶ್ವರ ದೇವಸ್ಥಾನದಲ್ಲಿ ಪಯಸ್ಸಾದ ವಿದ್ಯಾರ್ಥಿಗಳು ಮತ್ತು ಇತರರು ಸೇರಿ 'ಶಿವ ಸಪ್ತಾಹ' ಮತ್ತು 'ಅಖಂಡ ಭಜನೆ'ಯನ್ನು ನಡೆಸುವ ಏರ್ಪಾಡು ಮಾಡಿರುವರಲ್ಲದೆ ತಾ. ೧೩ ರಲ್ಲಿ 'ದಾಸೋಹ'ವನ್ನೂ ಸಹ ಏರ್ಪಡಿಸಿರುವರು.

ತಾ. ೧—೨—೫೪ರಿಂದ ೧೫—೨—೫೪ ರ ವರೆಗೆ ಉಳಿತಾಯ ಪ್ರಚಾರದ ಪಕ್ಷವನ್ನು ಆಚರಿಸುವ ಏರ್ಪಾಡನ್ನು ಸ್ಥಳೀಯ ಸರಕಾರವು ಮಾಡಿದೆ. ಸಣ್ಣ ಉಳಿತಾಯ ಯೋಜನೆಯನ್ನು ಪ್ರಚಾರ ಮಾಡಲು ಮತ್ತು ಆ ಮೂಲಕ ಕೊಡಗಿನ ಪಂಚವಾರ್ಷಿಕ ಯೋಜನೆಗೆ ಧನ ಸಂಗ್ರಹಿಸಲು ಏರ್ಪಾಡು ಮಾಡಿರುವರಾಗಿ ತಿಳಿದುಬಂದಿದೆ.

ವೀರಾಜಪೇಟೆ ಆಸ್ಪತ್ರೆಗೆ ವಿದ್ಯುದ್ದೀಪಗಳನ್ನು ಇಡುವ ಬಗ್ಗೆ ಕನ್ಸಾಲಿಡೇಟೆಡ್ ಕಂಪೆನಿಯ ಮೇನೇಜಿಂಗ್ ಡೈರೆಕ್ಟರಾದ ಮಿ. ಬುಲ್‌ರವರು ರೂ. ೩೫೦೦ ಮುಫತ್ತಾಗಿ ಕೊಡಲು ಒಪ್ಪಿರುವರೆಂದು ತಿಳಿಯಬರುತ್ತದೆ.

ಸಿದ್ಧಾಪುರದ ಬಳಿ ಇರುವ ರಾಯಗೋಡ್ ಕಾಫಿತೋಟದ ಮಾಲೀಕರಾಗಿದ್ದ ಶ್ರೀ. ಏರ್ಡ್ಲರವರು ಕಳೆದ ಮಾರ್ಚ್ ತಿಂಗಳಲ್ಲಿ ಇಂಗ್ಲೆಂಡಿನಲ್ಲಿ ದಿವಾಧೀನರಾದಾಗ್ಯೂ ಮಾಡಿದ ತನ್ನ ವಿಲ್‌ನಲ್ಲಿ ಮಡಿಕೇರಿ ಆಸ್ಪತ್ರೆಯ ಸ್ಪೆಷಲ್ ವಾರ್ಡುಗಳನ್ನು ಬದಲಾವಣೆ ಮತ್ತು ಹೆಚ್ಚಿನ ವ್ಯವಸ್ಥೆಗೊಳಿಸುವ ಬಗ್ಗೆ ೬೦೦೦೦ ರೂಪಾಯಿಗಳನ್ನು ಇ

ವರ್ತಮಾನ.

ಲ್ಲಿಯ ವೈದ್ಯಕೀಯ ಅಧಿಕಾರಿಗಳ ಅಭಿಪ್ರಾಯದಂತೆ ಖರ್ಚು ಮಾಡಲು ಮುಫತ್ತಾಗಿ ಇಟ್ಟಿರುವರೆಂದೂ ಆ ವಿಲ್ಲನ್ನು ಜಾರಿಗೆ ತರಲು ಅಧಿಕಾರ ಹೊಂದಿರುವ ಲಂಡನಿನಲ್ಲಿರುವ ಇಂಡಿಯಾ ನೇಶನಲ್ ಬ್ಯಾಂಕಿನವರು ಕೊಡಗಿನ ಸಿವಿಲ್ ಸರ್ಜನರಿಗೆ ಈ ವಿಚಾರ ಪತ್ರ ಬರೆದಿರುವರೆಂದೂ ಗೊತ್ತಾಗಿದೆ.

ಕಳೆದ ವರ್ಷ ಜನವರಿ ತಿಂಗಳಲ್ಲಿ ಗೋಣಿಕೊಪ್ಪಲಿನಲ್ಲಿ ಚುನಾವಣಾ ಸಂಬಂಧ ನಡೆದ ಮೀಟಿಂಗಿನಲ್ಲಿ ದೊಂಬಿ ನಡೆಸಿದರೆಂಬ ಆಪಾದನೆಯ ಮೇಲೆ ಪ್ರತ್ಯೇಕ ಪಕ್ಷದ ೩೯ ಕೆಲಸಗಾರರ ಮೇಲೆ ಪೋಲೀಸಿನವರು ಹೂಡಿರುವ ಕೇಸಿನ ವಿಚಾರವು ಮದ್ರಾಸು ಹೈಕೋರ್ಟಿನಿಂದ ಮಂಗಳೂರಿಗೆ ವರ್ಗಾಯಿಸಲ್ಪಟ್ಟಿದ್ದನ್ನು ಕಳೆದ ತಾ. ೨೩ ರಲ್ಲಿ ಮಂಗಳೂರಿನ ಎಡಿಶನಲ್ ಫಸ್ಟ್‌ಕ್ಲಾಸ್ ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಅಪರಾಧಿಗಳ ಹಾಜರಾತಿಯನ್ನು ತೆಗೆದು ಸಾಕ್ಷಿಗಳ ವಿಚಾರಕ್ಕೆ ಮಾರ್ಚಿ ತಾ. ೩ಕ್ಕೆ ಇಡಲಾಗಿದೆಯೆಂದು ತಿಳಿಯಬರುತ್ತದೆ.

ವೂ ಕಳೆದ ವರ್ಷದ ಬಜೆಟ್ ಅಧಿವೇಶನದಲ್ಲಿ ಚೀಫ್ ಕಮಿಷನರ ಪ್ರಾರಂಭ ಭಾಷಣ ಮತ್ತು ಮುಖ್ಯ ಮಂತ್ರಿಗಳ ಬಜೆಟ್ ಭಾಷಣ ಕೊಡಗಿನ ಸರಕಾರದ ಇತರ ಕಾರ್ಯಕಲಾಪಗಳ ವಾರ್ತೆಗಳಿವೆ

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಶಾಲಾ ಸಮಾಜದ ಕೊನೆಯ ಭಾಷಣವನ್ನು ಕೊಡಗು ಸರಕಾರದ ಪ್ರಧಾನ ಸೆಕ್ರೆಟರಿಯವರಾದ ಶ್ರೀ ನರಸಿಂಹ ಮೂರ್ತಿಯವರು ತಾ. ೨೮ನೇ ಗುರುವಾರ ಮಾಡಿದರು. ವಿದ್ಯಾರ್ಥಿಗಳು ಪಾಠಪ್ರವಚನಗಳನ್ನು ಕೇಂದ್ರೀಕೃತ ಮನಸ್ಸಿನಿಂದ ಅಭ್ಯಾಸ ಮಾಡಬೇಕೆಂದೂ, ಧರ್ಮಮಾರ್ಗಾವಲಂಬಿಗಳಾಗಬೇಕೆಂದೂ ಬೋಧಿಸಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಿ. ಎ. ಪೂವಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಾರ್ಷಿಕೋತ್ಸವವು ಸರಕಾರಿ ಕಾಲೇಜ್ ಸಭಾಂಗಣದಲ್ಲಿ ತಾ. ೮—೨—೫೪ ನೇ ಭಾನುವಾರ ... ಲೀಸರು ತನಿಖೆ ಮಾಡುತ್ತಿರುವರೆಂದು ತಿಳಿಯುತ್ತೇವೆ.

ಈ ತಾರೀಕು ೨೭ ನೇ ಶನಿವಾರ ದಿನ ಶ್ರೀ. ಪಾಡಿಸುಬ್ರಹ್ಮಣ್ಯ (ಇಗ್ಗುತಪ್ಪದೇವರ ಕಲಾಡ್ಚ) ಹಬ್ಬವು ನಡೆಯುವದು.

ಮೈಸೂರಿನಲ್ಲಿ ನಡೆದ ಅಖಿಲಭಾರತ ಕ್ಷಯರೋಗ ಕೆಲಸಗಾರರ ಸಮ್ಮೇಳನಕ್ಕೆ ಬಂದಿದ್ದ ಅ. ಭಾ. ಕ್ಷಯರೋಗ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಬಿ. ಎಂ. ಕಾರ್ಯಪ್ಪನವರು ಈ ತಾ. ೫ ರಲ್ಲಿ ಕೊಡಗಿಗೆ ಬಂದು ಇಲ್ಲಿ ಕೆಲವು ದಿನಗಳಿರುವರೆಂದು ತಿಳಿಯುತ್ತೇವೆ.

ಸರಕಾರಿ ಉದ್ಯೋಗದಿಂದ ನಿವೃತ್ತರಾಗಿದ್ದ ಶ್ರೀ. ಕೋಳೆರ ಕುಟ್ಟಪ್ಪನವರನ್ನು ಕೊಡಗು ಪ್ಲಾಂಟರುಗಳ ಸಂಘದ ಕಾರ್ಯದರ್ಶಿಯಾಗಿ ಕಳೆದ ತಿಂಗಳಿಂದ ನೇಮಿಸಿರುವರು.

ಟ್ರೆಜರಿ ಆಫೀಸರಾಗಿ ನಿವೃತ್ತರಾಗಿದ್ದ ಶ್ರೀ. ಕಂಬ್ರತಂಡ ಪೊನ್ನಪ್ಪನವರನ್ನು ಬಾಳೆಹೊನ್ನೂರು ಕಾಫಿ ಸಂಶೋಧನಾ ಕೇಂದ್ರದ ಸೆಕ್ರೆಟರಿಯಾಗಿ ನೇಮಕ ಮಾಡುವರೆಂದು ಅಧಿಕೃತವಾಗಿ ತಿಳಿದುಬಂದಿದೆ

ಅಖಿಲ ಕೊಡಗು ಪಶು ಮತ್ತು ಕೋಳಿಗಳ ಪ್ರದರ್ಶನವು ಈ ವರ್ಷ ಪೊನ್ನಂಪೇಟೆಯ ಕೂಡಿಗೆ ವ್ಯವಸಾಯ ಕೇಂದ್ರದಲ್ಲಿ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳು ೨೮ರಲ್ಲಿ ನಡೆಯುವುದಾಗಿ ತಿಳಿದುಬಂದಿದೆ.

ಕೊಡಗು ಗ್ರಹ ಕೈಗಾರಿಕಾ ಸಮಿತಿಯವರು ಜೇನು ವ್ಯವಸಾಯಗಾರರಿಗಾಗಿ ಒಂದು ತರಬೇತಿನ ಕ್ಲಾಸನ್ನು ಭಾಗಮಂಡಲದಲ್ಲಿ ಸದ್ಯದಲ್ಲೇ ತೆರೆಯುವರೆಂದು ವರ್ತಮಾನ.

ಗೃಹ ಮಂತ್ರಿ ಶ್ರೀ ಕೆ. ಮಲ್ಲಪ್ಪನವರು ಹೈದರಾಬಾದಿನಲ್ಲಿ ನಡೆದ ಭಾರತದ ಆರೋಗ್ಯ ಮಂತ್ರಿಗಳ ಸಮ್ಮೇಳನಕ್ಕೆ ಹೋಗಿ ತಾ ೭ರಲ್ಲಿ ಹಿಂತಿರುಗಿರುವರು.

ಇಂಡಿಯಾ ಸರಕಾರದವರು ಒಂದು ಮರ ಕತ್ತರಿಸುವ ಯಂತ್ರೋಪಕರಣವನ್ನು ಕೊಡಗು ಸರಕಾರಕ್ಕೆ ಕೊಡಲು ನಿಶ್ಚಯಿಸಿರುವರೆಂದು ತಿಳಿದು ಬಂದಿದೆ.

ಮಹಾತ್ಮಾಗಾಂಧೀಜಿಯವರ ನಿರ್ವಾಣ ದಿನೋತ್ಸವವು ಗೋಣಿಕೊಪ್ಪಲಿನಲ್ಲಿ ಶ್ರೀ ಸಿ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಗಾಂಧೀಜಿಯವರ ಗುಣ ಕಥನವನ್ನು ಶ್ರೀ ಬಿ. ನಾರಾಯಣಾಚಾರ್ಯರು ಮಾಡಿದರು.

ಬಾಡಗರ ಕೇರಿಯಲ್ಲಿ ಶ್ರೀ ಕೇಕಿರ ಕಂಠಯ್ಯನವರ ಅಧ್ಯಕ್ಷತೆಯಲ್ಲಿ ಗಾಂಧಿ ನಿರ್ವಾಣ ದಿನವನ್ನಾಚರಿಸಲಾಯಿತು.

ರಾಯಲ್ ಸೀಮ ಬರಗಾಲ ಪೀಡಿತರ ನೆರವಿಗೆ ಕೊಡಗಿನಲ್ಲಿ ೧೨,೯೦೦ ರೂ. ಜಮೆಯಾಗಿ ಮದ್ರಾಸ್ ಮುಖ್ಯ ಮಂತ್ರಿಗಳ ಅಭಿಪ್ರಾಯದಂತೆ ರಾಯಲ್ ಸೀಮೆಗೆ ಒಂದು ವೇಗನ್ ಅಕ್ಕಿ ರೂ ೧೦,೬೬೮ ರ ಕ್ರಯಕ್ಕೆ ಕಳುಹಿಸಿ ಉಳಿದ ಹಣವನ್ನು ಕೊಡಗಿನ ರೆಡ್‌ಕ್ರಾಸ್ ಸಂಘಕ್ಕೆ ಕೊಡಲಾಗಿದೆಯೆಂದು ತಿಳಿದುಬಂದಿದೆ.

ಜ್ಞಾನ ದೀಪ.

(೧)

ಇಳಿತದ ವೇಳೆಗೆ ಇಳಿದು ದಾಟಿದ ಹೊಳೆಯಾದರೂ ಭರತದ ವೇಳೆಯಲ್ಲಿ ದೋಣಿಯೇ ಬೇಕು. ದಾರಿದ್ರ್ಯವಿದ್ದಾಗ ಗದರಿಸಿ ಕೆಲಸವಾಗುತ್ತಿದ್ದರೆ ಅಧಿಕಾರಿಯೂ ಧನಾಢ್ಯನಾದಾಗ ಗೌರವಿಸಿಯೇ ಕೂಡಿಕೊಳ್ಳಬೇಕಾಗುತ್ತದೆ.

(೨)

ಊರಿಗೆ ಊರೇ ಕಂಬನಿ ಸುರಿಸಿಕೊಂಡರೂ, ಅದರಿಂದ ಮಳೆ ಸುರಿದಂತಾಗದು ಇದ್ದವರೆಲ್ಲಾ ಕೇವಲ ಸಹಾನುಭೂತಿಯನ್ನಷ್ಟೇ ಪ್ರದರ್ಶಿಸಿದರೆ ಅಷ್ಟರಿಂದ ಸಹಾಯ ಮಾಡಿದಂತಾಗದು.

(೩)

ಪ್ರೀತಿಯನ್ನು ನಗುತ್ತಾ ಸಮಾಪಿಸುವುದರಲ್ಲೇನು ವಿಶೇಷ? ಸಾವು ಸಮೀಪಿಸಿದಾಗಲೂ ನಗುತ್ತಾ ಇದಿರಿಸಬಲ್ಲನಾದರೆ ಆತ ವೀರ. ಗೌರವಿಸಲ್ಪಟ್ಟಾಗ ಪ್ರಸನ್ನನಾಗುವುದರಲ್ಲೇನು ಮಹಾ? ನಿಂದಿಸಿ, ಛಳಿಸಲ್ಪಡುವಾಗಲೂ ಮನೋದಾರ್ಢ್ಯತೆ ಕೆಡದಿದ್ದರೆ ಆತನು ಯೋಧ.

– ನುಡಿಮುತ್ತು

ಕುಕ್ಲೂರು ಗ್ರಾಮದ ಶ್ರೀ. ಕುಟ್ಟಂಡ ಬೆಳ್ಯಪ್ಪನವರು ತನ್ನ ೮೬ನೇ ವಯಸ್ಸಿನಲ್ಲಿ ತಾ. ೩೧ ರಲ್ಲೂ ಕಾವಾಡಿ ಗ್ರಾಮದ ಶ್ರೀ. ಕಾವಾಡಿಚಂಡ ಮೇದಪ್ಪನವರು ತಮ್ಮ ೭೯ನೇ ವಯಸ್ಸಿನಲ್ಲಿ ತಾ.೩೧ರಲ್ಲೂ ದಿವಾಧೀನರಾದರು.

ಕೊಡಗು ಸರಕಾರದ ವಾರ್ತಾ ಇಲಾಖೆಯವರು ಈ ಜನವರಿಯಿಂದ ಕೊಡಗು ವಾರ್ತಾ ಸಂಗ್ರಹವೆಂಬ ಸರಕಾರಿ ಪ್ರಕಟಣೆಯನ್ನು ಪ್ರಾರಂಭಿಸಿದ್ದಾರೆ. ಈ ಪ್ರಥಮ ಸಂಚಿಕೆಯಲ್ಲಿ ಕೊಡಗು ವಿಧಾನ ಸಭೆಯನ್ನು ಉದ್ಘಾಟಿಸಿದ ಕೇಂದ್ರದ ಗೃಹಮಂತ್ರಿ ಖಾಟ್ಜೂರವರ ಉದ್ಘಾಟನಾ ಭಾಷಣ

ಸುವಾರ ೩—೩೦ ಗಂಟೆಗೆ ಕೊಡಗು ದೇಶದ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಜರಗುವುದು. ವಿವಿಧ ವಿನೋದಾವಳಿಗಳೂ ಇರುವುವು.

ಕೊಡಗಿನಲ್ಲಿ ಡಿಸೆಂಬರ್ ತಿಂಗಳಲ್ಲಿ ೩೨೯ ಜನನಗಳೂ ೧೬೪ ಮರಣಗಳೂ ಸಂಭವಿಸಿದವೆಂದು ಪ್ರಕಟವಾಗಿದೆ.

ಕೆಲವು ದಿವಸಗಳ ಹಿಂದೆ ಮೈಸೂರಿನವರೊಬ್ಬರು ವೀರಾಜಪೇಟೆ ಟೌನ್ ಬ್ಯಾಂಕಿನಿಂದ ಕೆಲವು ಚೆಕ್ಕು ಫಾರಂಗಳನ್ನು ಅಪಹರಿಸಿಕೊಂಡು ಪ್ರೆಸಿಡೆಂಟರ ಸಹಿಯನ್ನು ಫೋರ್ಜರಿ ಮಾಡಿ ಮೈಸೂರು ಬ್ಯಾಂಕುಗಳಿಂದ ಸುಮಾರು ೩೦೦೦ ರೂಪಾಯಿಗಳನ್ನು ಪಡೆದುಕೊಂಡರೆಂಬ ಕೇಸನ್ನು ಪೊ

ತಾರೀಕು ೨೭ ರಲ್ಲಿ ಸೋಮವಾರಪೇಟೆ ಹೈಸ್ಕೂಲಿನ ಎನ್. ಸಿ. ಸಿ. ದಳದ ದಿನಾಚರಣೆಯು ಕೊಡಗು ಶಾಸನ ಸಭೆಯ ಅಧ್ಯಕ್ಷರಾದ ಶ್ರೀ. ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ತಾರೀಕು ೩೦ ರಲ್ಲಿ ವಾಲ್ನೂರು ತ್ಯಾಗತ್ತೂರು ಗ್ರಾಮಸ್ಥರು ವಾಲ್ನೂರು ಶಾಲೆಯಲ್ಲಿ ಶ್ರೀ. ಎ. ಬಿ. ಈರಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಗಾಂಧೀನಿರ್ವಾಣ ದಿನವನ್ನಾಚರಿಸಿದರು. ಶ್ರೀಗಳಾದ ಕೆ. ಟಿ. ನಂಬೀಶನ್, ಬಿ. ಸಿ. ಉತ್ತಯ್ಯ ಇವರುಗಳು ಗಾಂಧೀಜಿಯ ವಿಚಾರ ಭಾಷಣ ಮಾಡಿದರು.

ಕಳೆದ ಜುಲೈಯಲ್ಲಿ ಕೊಡಗಿನಲ್ಲಿ ನಡೆಸಿದ ವನಮಹೋತ್ಸವದ ಸಮಯದಲ್ಲಿ ಸುಮಾರು ೧೦,೦೦೦ ಸಸಿಗಳನ್ನು ನಡಲಾಯಿತೆಂದು ಪ್ರಕಟವಾಗಿದೆ.

ಈ ವರೆಗೆ ಕೊಡಗು ಫಾರೆಸ್ಟ್ ಇಲಾಖೆಯಿಂದ ಈ ವರ್ಷ ೧೮ ಲಕ್ಷ ರೂಪಾಯಿ ಬೆಲೆಗೆ ೪ ಲಕ್ಷ ಘನ ಅಡಿ ಮರವನ್ನು, ರೂ. ೫ ಕಾಲು ಲಕ್ಷಕ್ಕೆ ೧೯೦ ಟನ್ ಗಂಧವನ್ನೂ ರೂ. ೩೬,೯೦೦ ಕ್ಕೆ ೯ ಆನೆಗಳನ್ನೂ, ರೂ. ೨೫,೦೦೦ ಕ್ಕೆ ಒಂದು ಕೂಪವನ್ನೂ ಕೊಡಲಾಗಿದೆಯೆಂದು ಪ್ರಕಟಿಸಿದ್ದಾರೆ.

ಕೊಡಗಿನಲ್ಲಿ ದನಗಳಿಗೆ ಕೃತಕಗರ್ಭದಾನ ಮಾಡುವ ಪ್ರಯೋಗವನ್ನು ಜಾರಿಯಲ್ಲಿ ತಂದು ಈ ವರೆಗೆ ಒಟ್ಟು ೨೬ ಟೆಸ್ಟ್ ಟ್ಯೂಬ್ ಕರುಗಳ ಜನನವಾಗಿದೆಯೆಂದು ಗೊತ್ತಾಗಿದೆ.

ಕೊಡಗು ವ್ಯವಸಾಯ ಇಲಾಖೆಯು ೨೩ ಹೊಸ ಕೆರೆಗಳನ್ನು ಕಟ್ಟಿ ಆ ಮೂಲಕ ೧೭೦ ಎಕರೆ ಜಮೀನು ಸಾಗುವಳಿಗೆ ಬಂದು ೪೩ ಟನ್ ಬತ್ತ ಹೆಚ್ಚು ಬರುವಂತಾಗಿದೆಯೆಂದೂ ವಾಣಿಪತ್ರೆಯಲ್ಲು ಕಟ್ಟಿ ಕಾಲುವೆಗಳಿಂದಾಗಿ ಮತ್ತೆ ೪೮ ಟನ್ ಬತ್ತ ಬೆಳೆಯುವಂತಾಗಿದೆಯೆಂದೂ ಈ ವರ್ಷ ಈ ವರೆಗೆ ಆಹಾರ ಪದಾರ್ಥ ಬೆಳೆಸಲಿಕ್ಕಾಗಿ ರೈತರಿಗೆ ೧೮೩ ಟನ್ ಮಿಶ್ರ ಗೊಬ್ಬರ ೧೧೦ ಟನ್ ಮೂಳೆ ಗೊಬ್ಬರ, ೫೪೦ ಟನ್ ಕಡಲೇಕಾಯಿ ಹಿಂಡಿ, ೮ ಟನ್ ಅಮೋನಿಯಂ ಸಲ್ಫೇಟ್ ಹಂಚಲಾಗಿದೆಯೆಂದೂ, ಇದರಿಂದ ೯೨೩ ಟನ್ ಹೆಚ್ಚು ಬತ್ತ ಬೆಳೆ ಆಗಬಹುದೆಂದೂ, ರೈತರು ಈ ವರೆಗೆ ೬೦ ಟನ್ ಸೆಗಣಿ ಗೊಬ್ಬರ ತಯಾರಿಸಿರುವರೆಂದೂ, ೮೫೬೫ ಎಕರೆಯಲ್ಲಿ ಕೊ

The New Guardian of India Life Insurance co., Ltd.,

— HEAD OFFICE —

Post Box No.—142 Esplanade, MADRAS—1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT.

The New Guardian of India Life Insurance Co., Ltd. for COORG. Virajpet.

12-5 OR

To The Head Office, MADRAS.

ಹುಚ್ಚರ ಹಟ್ಟಿ

= ನಮ್ ಬದುಕು =

ತಂದೆಯೋ ಸ್ವಾರ್ಥಾಭಿಲಾಷೆಯು, ತಾಯಿಯೋ ಕೈಯಾಸೆಯು. ದುರಭಿಮಾನವೆ ಮನೆಯ ಒಡತಿಯು, ರೋಗು ಜೀವನ ತಂಗಿಯು. ಹಿರಿಯ ಮಗ ವಾಚಾಳಿತನ, ಸೌಹಾರ್ದ ರೋಗೇ ಸೋದರ. ಉರುಟು ವಾದಿಯು ಹೊರಲು ಇರಲಿಕೆ, ಆಧುನಿಕ ರಾಜಾಗರ. ಕಷ್ಟ ಬಂತೆಯ ಜನರು ಗೆಳೆಯರು, ಧನಿಕ ಜನರೇ ಗುರುಗಳು. ದೇಶನಾ ಕಟ್ಟಳೆಗೆ ಸಿಲುಕದ ವಸ್ತು ನಿಕರದ ಭೋಜನ. ಇಂಥ ಬಳಗದ ಜೀವಿಗೇತರ ಭಯವು ಭಾರತ ಸಜ್ಜನ?

—ದೇವದತ್ತ.

ಪ್ರಜಾ ದಿನಾಚರಣೆ.

ಹಾತೂರು.

ಶ್ರೀ ಎಚ್. ಬಿ. ಚಂಗ್ಯಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನೆರೆಯಿತು. ಶಾಲಾ ಅಧ್ಯಾಪಕರೂ, ವಿಧ್ಯಾರ್ಥಿಗಳೂ ಹಾಜರಿದ್ದರು. ಆಟೋಟಗಳ ಸ್ಪರ್ಧೆ, ಗಾಯನ ಸ್ಪರ್ಧೆಗಳಿದ್ದುವು.

ಶೊರಿನೂರು.

ಶ್ರೀ ಕೆಂಚೇಗೌಡರ ಅಧ್ಯಕ್ಷತೆಯಲ್ಲಿ ಸಭೆನೇರಲಾಗಿತ್ತು. ಆಟೋಟಗಳ ಸ್ಪರ್ಧೆ ಭಾಷಣಗಳ ಏರ್ಪಾಡಿತ್ತು. ವಯಸ್ಕರ ಶಾಲೆಯ ವಿದ್ಯಾರ್ಥಿಗಳು ನಾಟಕವನ್ನಭಿನಯಿಸಿದರು.

ನಾಪೋಕ್ಲು

ಇಲ್ಲಿಯ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಡಿ. ಎನ್. ದೇವಯ್ಯನವರಿಂದ ಧ್ವಜಾರೋಹಣ ನಡೆದ ನಂತರ ಶ್ರೀ ಎಸ್. ಎಸ್. ನಾರಾಯಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಶ್ರೀಗಳಾದ ಕೆ. ಬಿ. ಐಯ್ಯಪ್ಪ, ಎಂ. ಆರ್. ಪರಮೇಶ್ವರ, ಎ. ಎಂ ಸೋಮಪ್ಪ, ಬಿ. ಪಿ. ಮಾಚಯ್ಯ ಮೊದಲಾದವರು ಭಾಷಣ ಮಾಡಿದರು.

ಜೋಯಿಕೇರಿ.

ಇಲ್ಲಿಯ ಶಾಲೆಯಲ್ಲಿ ಶ್ರೀ ಕೆ. ವೆಂಕಟರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚಲಾಯಿತು.

ಮೂರ್ನಾಡು.

ಶ್ರೀ ಚೌರಿರ ಮಂದಣ್ಣನವರು ಧ್ವಜಾರೋಹಣ ಮಾಡಿದರು. ಆಟೋಟಗಳ ಸ್ಪರ್ಧೆಯ ನಂತರ ಶ್ರೀ ಕೋರನ ದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀಗಳಾದ ಬಿದ್ದಂಡ ಮುತ್ತಣ್ಣ, ಚೌರಿರ ಮಂದಣ್ಣ, ಬಿ. ಮಂದ್ದಯ್ಯ, ಎಂ. ಕೆ. ಕಾರ್ಯಪ್ಪ, ಮಿಸ್, ಬಿ ಯು. ಮುತ್ತಮ್ಮ ಮೊದಲಾದವರು ಭಾಷಣ ಮಾಡಿದರು. ವಿದ್ಯಾರ್ಥಿಗಳಿಗೆ ಸಿಹಿ ತಿಂಡಿ ಹಂಚಲಾಯಿತು.

ಗೋಣಿಕೊಪ್ಪ

ದಕ್ಷಿಣ ಕೊಡಗಿನ ಶಾಲಾ ಡಿ. ಇನ್ಸ್‌ಪೆಕ್ಟರ್ ಶ್ರೀ ಸೂರ್ಯನಾರಾಯಣರವರು ಧ್ವಜಾರೋಹಣ ಮಾಡಿದ ನಂತರ ಶ್ರೀ ಸಿ. ಪಿ. ಮಾಚಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ ಸೂರ್ಯನಾರಾಯಣರವರು ಸ್ವಾರಸ್ಯವಾಗಿ ಭಾಷಣ ಮಾಡಿದರು.

ಬಾಳುಗೋಡು

ಶ್ರೀ ಕೆ. ಕೆ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶಾಲೆಯ ವಿದ್ಯಾರ್ಥಿಗಳೂ, ಅಧ್ಯಾಪಕರೂ, ಗ್ರಾಮದ ಜನರೂ ನೆರೆದಿದ್ದರು. ಮೆರವಣಿಗೆ ತಿಂಡಿ ತೀರ್ಥದ ಏರ್ಪಾಡಿತ್ತು.

ಭದ್ರಗೊಳ

ನೆಲ್ಲಿಕಾಡಿನ ಶಾಲೆಯಲ್ಲಿ ಶ್ರೀ. ಎಂ. ಎಸ್. ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ದಲಿತ ವರ್ಗದ ಶಾಲಾ ಬಾಲಕರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಸೂರ್ಯನಲ್ಲಿ ಜೀವಜಂತುಗಳು?

ಸೂರ್ಯನಲ್ಲಿ ಜೀವಜಂತುಗಳು ಸುರಗಿದ ಸಂಪತ್ತು ಇಲ್ಲವೆಂದು ತೋರಿಸಿದವರಿಗೆ ೨೦೦೦ ಪೌಂಡುಗಳ ಬಹುಮಾನ ಕೊಡುವೆನೆಂದು ಜರ್ಮನಿಯ ಡಾ. ಗಾಡ್ ಫ್ರೆಡ್ ಬ್ಯೂರೆನ್ ಎಂಬವರು ಸಾರಿದ್ದರು. ಡಾ. ಹಿಲೆನ್‌ಬರ್ಗ್ ಎಂಬವರಿಂದ ಕೂಡಿದ ಸಮಿತಿಯೊಂದು ಬಹುಮಾನ ಕೊಡುವ ಆಯ್ಕೆಯನ್ನು ಮಾಡಿದರೂ ಗಾಡ್‌ಫ್ರೆಡ್ ರವರು ಬಹುಮಾನ ಕೊಡದ್ದರಿಂದ ಬಹುಮಾನಕ್ಕೆ ವಿವಾದನ್ನು ಹೂಡಲ್ಪಟ್ಟಿತ್ತು ಜರ್ಮನಿಯ ಖಗೋಳ ಶಾಸ್ತ್ರ ಸಂಘದವರು ಗಾಡ್ ಫ್ರೆಡನ ಮೇಲೆ ದಾವೆ ಹೂಡಿರುವರು ಗಾಡ್‌ಫ್ರೆಡ್‌ರವರು ಸೂರ್ಯನ ಮಧ್ಯಪ್ರದೇಶದಲ್ಲಿ ಬಿಸಿ ಹೆಚ್ಚಿಲ್ಲವೆಂದೂ, ಜೀವಜಂತುಗಳು ಅಲ್ಲಿರುವವೆಂಬುದಕ್ಕೆ ತನ್ನಲ್ಲಿ ಸಾಕಷ್ಟು ಆಧಾರಗಳಿವೆಯೆಂದೂ ಆದ್ದರಿಂದ ಬಹುಮಾನ ಕೊಡಲಾಗುವದಿಲ್ಲವೆಂದೂ ವಾದಿಸುತ್ತಿದ್ದಾರೆ.

ಭಿಕ್ಷುಕಿಯ ಸೇವೆ

ಜನವರಿ ತಾ. ೩೦ ರಂದು ಗಾಂಧೀಜಿಯವರ ನಿರ್ವಾಣ ದಿನದ ಸ್ಮರಣೆಗಾಗಿ ಪಿಲ್ಲೂರಿನ ಎಂ. ಸುಂದರಿ ಎಂಬ ೫೦ ವರ್ಷದ ಭಿಕ್ಷುಕಿಯೊಬ್ಬಳು ೧೮೦ ಜನ ನಿರಾಶ್ರಿತರಿಗೆ ತನ್ನ ಕೈಯಿಂದ ಅನ್ನ ಸಂತರ್ಪಣೆ ಮಾಡಿದಳು. ತನ್ನ ಈ ಮನೋಭಿಲಾಷೆಯನ್ನು ನಡೆಸಲು ಕಳೆದ ನಾಲ್ಕು ವರ್ಷಗಳಿಂದ ಪ್ರಯತ್ನ ಪಟ್ಟು ತನ್ನ ಭಿಕ್ಷಾ ಜೀವನದಿಂದ ೮೦ ರೂಪಾಯಿಗಳನ್ನು ಆಕೆ ಉಳಿಸಿದ್ದಳು. ಮಹಾತ್ಮಾ ಗಾಂಧಿಯವರ ಕೊಲೆಯ ವರ್ತಮಾನ ಕೇಳಿ ಭಿಕ್ಷುಕಿಯಾದ ಆಕೆಗೆ ಸಹಿಸಲಾಗಲಿಲ್ಲವಂತೆ. ಆಕೆಗೆ ಅದರಿಂದ ಬುದ್ಧಿ ವಿಕಲ್ಪವಾಗಿ ಕೇಜ್‌ಪುರದ ಚಿಕಿತ್ಸಾ ಆಸ್ಪತ್ರೆಯಲ್ಲಿ ೧೯೪೯ರ ವರೆಗೆ ಇದ್ದಳಂತೆ. ನಂತರ ಬಿಡುಗಡೆಯಾಗಿ ಆಕೆ ತನ್ನ ಜೀವನದ ವರನು ಆಕೆಗಾಗಿ ಭಿಕ್ಷೆಯಿಂದ ತನಗೆ ದೊರೆತುದರಿಂದ ರೂ. ೮೦ ಉಳಿಸಿದ್ದಳು.

ಕೃತಜ್ಞತಾ ವಂದನೆ

ಡಿಸೆಂಬರ್ ತಾ. ೧೫ರಲ್ಲಿ ಬೆಂಗಳೂರಿನಲ್ಲಿ ಜೀಪ್ ಅಪಘಾತಕ್ಕೆ ಎರವಾಗಿ ದಿವಾಧೀನನಾದ ನನ್ನ ಪುತ್ರ ಸುಬ್ಬಯ್ಯನ ನಿಧನದಿಂದ ನನಗೂ ನನ್ನ ಮಕ್ಕಳಿಗೂ ಉಂಟಾದ ಆಘಾತ ದುಃಖದ ಕಾಲಕ್ಕೆ ಖುದ್ದಾಗಿ ಬಂದೂ, ಪತ್ರ ಮುಖೇನವೂ ಸಂತಾಪ ಸೂಚನೆಯನ್ನು ಮಾಡಿ ನನ್ನ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರಿಗೆ ಪ್ರತ್ಯೇಕ ಬರೆದು ನನ್ನ ಕೃತಜ್ಞತೆಯನ್ನರ್ಪಿಸುವುದು ಅಸಾಧ್ಯವಾದ ಕಾರಣ ಈ ಮೂಲಕ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಯನ್ನರ್ಪಿಸುತ್ತೇನೆ.

ಅಜ್ಜಾಮಾಡ ಮಿಸೆಸ್ ಕಾರ್ಯಪ್ಪ,
ಬೀರುಗ, ಶ್ರೀಮಂಗಲ.

ಓದುಗರ ಓಲೆಗಳು

ಇಲಾಖೆಯವರೇಕೆ ಬಾಯಿ ಬಿಡಬಾರದು ?

ಶ್ರೀ ಸಂಗಯ್ಯನವರು ಬೆಳೆಸಿದ ಬೆಳೆಯ ಲೆಕ್ಕ ಸರಿಯಿಲ್ಲವೆಂದೂ, ಸರಿಯಿದ್ದರೆ ಇಲಾಖೆಯವರು ಸ್ಪಷ್ಟವಾಗಿ ಅದರ ವಿವರಗಳನ್ನು ಕೊಟ್ಟು ಬರೆಯಬೇಕೆಂದೂ ನಾನು ಈ ಹಿಂದೆ ಬರೆದ ಲೇಖನಕ್ಕೆ ಇಲಾಖೆಯವರು ಯಾವುದೇ ಉತ್ತರ ಕೊಡಲಿಲ್ಲ. ಬದಲು ಮುಂದಿನ ವರ್ಷದ ಕಾಂಪಿಟಿಶನ್‌ನಲ್ಲಿ ಬಹುಮಾನ ದೊರೆಯುವದೆಂಬ ಭರವಸೆ ಇರುವವರೊಬ್ಬರು ನನಗೆ ಉತ್ತರವಾಗಿ ಒಂದು ಲೇಖನ ಬರೆದುದನ್ನು ಬೇರೆ ಪತ್ರಿಕೆಯಲ್ಲಿ ಓದಿದೆನು. ಹತ್ತಿಲಿನ ಒಂದು ಕಾಫಿ ಗಿಡದಲ್ಲಿ ಒಂದು ಬಟ್ಟಿ ಕಾಫಿಯಾದರೆ ಒಂದು ಎಕರೆ ತೋಟದಲ್ಲಿರಬಹುದಾದ ೧೦೦೦ ಗಿಡಗಳಲ್ಲಿ ೧೦೦೦ ಬಟ್ಟಿ ಕಾಫಿಯಾಯಿತೆನ್ನುವದು ಮುಖ್ಯಾಂಶವು. ಅದೇ ರೀತಿ ನಮ್ಮ ಕ್ರಾಪ್ ಕಾಂಪಿಟಿಶನ್ ಲೆಕ್ಕವೂ ಆಗಿದೆ. ಹಾಡೂರಿನವರೊಬ್ಬರು ಈ ವರ್ಷ ಸಂಗಯ್ಯನವರ ರೀತಿಯನ್ನು ಮಾಡಿದ ೩೩ ಅಡಿ ಉದ್ದ ೧೯ ಅಡಿ ಅಗಲದ ಸ್ಥಳದಲ್ಲಿ ೧೫೦ ಪೌಂಡು ಬತ್ತ ಬೆಳೆದಿರುವರಂತೆ. ಅಂದರೆ ಎಕರೆಗೆ ೧೦,೬೪೦ ಪೌಂಡು ಅಂದರೆ ಸುಮಾರು ೩ ಬತ್ತಕ್ಕೂ ಹೆಚ್ಚು ಎಂದಾಯಿತು. ಆದರೆ ಇಲಾಖೆಯವರು ಹೋಗಿ ಸೇರಿಸಿದ ಸಾಡೂರು ಕೈತರ ಭೂಮಿಯನ್ನು ಪರಿಶೀಲಿಸಿರುವರಂತೆ. ಅವರು ಸ್ಪರ್ಧೆಗೆ ತಮ್ಮ ಒಂದೂವರೆ ಎಕರೆಯ ಗದ್ದೆಯಲ್ಲಿ ೩೩ ಅಡಿ ಉದ್ದ ೧೯ ಅಡಿ ಅಗಲದ ಭಾಗವನ್ನು ತೋರಿಸಿದ್ದರೆಂದೂ ಆ ಒಂದೂವರೆ ಎಕರೆಯ ಬೆಳೆಯನ್ನು ಪ್ರತ್ಯೇಕ ಮಾಡಿಯಾಗಿಟ್ಟು ಇಲಾಖೆಯವರು ಮುಟ್ಟು ಒಕ್ಕಲು ಮಾಡಿಸಿ ನೋಡಿದರೆಂದು ತಿಳಿದು ಬಂದಿದೆ; ೧೯ ಸೆಂಟಿಗೆ ೧೫೦ ಪೌಂಡು ಪ್ರಕಾರ ೫೦ ಬಟ್ಟಿ ಭೂಮಿಯಲ್ಲಿ ಸುಮಾರು ೧೬೦ ಬಟ್ಟಿ ಬತ್ತ ಆಗಬೇಕಿತ್ತು. ಆದರೆ ಒಕ್ಕಲು ಮಾಡಿ ನೋಡುವಾಗ ಕೇವಲ ೭೨ ಬಟ್ಟಿ ಆಯಿತೆಂದು ತಿಳಿದು ಬಂದಿದೆ. ಹಾಗಾದರೆ ಈ ಲೆಕ್ಕ ಕಾಫಿ ಗಿಡದ ಮೇಲಿನ ಲೆಕ್ಕದಂತೆ ಆಗಲಿಲ್ಲವೇ?

ಎಕರೆಗೆ ಎಷ್ಟಾಗಿದೆಯೆಂತೆ ಬೆಳೆಸಿದ ಶ್ರೀ ಸಂಗಯ್ಯನವರು ಕಳೆದ ವರ್ಷ ತಮ್ಮ ಎರಡು ಎಕರೆ ಭೂಮಿಯಲ್ಲಿ ಎಷ್ಟು ಗಾಡಿ ಬತ್ತ ಪಡೆದಿರುವರೆಂದು ನಾನು ನನ್ನ ಕಳೆದ ಲೇಖನದಲ್ಲಿ ಕೇಳಿದ್ದೆ. ಈ ವರ್ಷ ಶ್ರೀ ಸಂಗಯ್ಯನವರು ಅದೇ ಭೂಮಿಯಲ್ಲಿ ಎಷ್ಟು ಬೆಳೆ ತೆಗೆದಿರುವರು? ಈ ವರ್ಷ ಕಡಿಮೆಯಾಗಲು ಕಾರಣವೇನು? ಅಧಿಕೃತವಾಗಿ ಜನತೆಯ ಅವಗಾಹನೆಗೆ ಈ ವಿಚಾರಗಳನ್ನು, ಆತನ ವ್ಯವಸಾಯ ಕ್ರಮವನ್ನೂ ಪ್ರಕಟಿಸಬಾರದೇಕೆ? ಸಂಗಯ್ಯನವರು ಮಾಡಿದ ರೀತಿಯಲ್ಲಿ ಅದೇ ಪರಿಮಾಣದಲ್ಲಿ ಗೊಬ್ಬರ ಹಾಕಿ, ನೀರಿನ ವ್ಯವಸ್ಥೆ ಮಾಡಿದರೆ ಆ ರೀತಿಯಲ್ಲಿ ಬೆಳೆ ಬರುವುದೇ? ಇಲಾಖೆಯವರ ಮೌನದಿಂದಾಗಿ ಹಲವು ರೈತರಿಗೆ ಈ ವಿಚಾರದಲ್ಲಿ ಸಂಶಯವಾಗತೊಡಗಿದೆ. ಇನ್ನಾದರೂ ಅವರು ಈ ಸಂಶಯ ನಿವಾರಣೆ ಮಾಡುವರೇ?

—ವೀರಯ್ಯ.

ಕ್ರಾಪ್ ಕಾಂಪಿಟಿಷನ್ ನೋಟಗಳು !

ಕ್ರಾಪ್ ಕಾಂಪಿಟಿಶನ್ ಹೊರಪ್ರಾಂತಗಳಲ್ಲಿ ಯಾವ ರೀತಿಯಿಂದ ನಡೆಯುತ್ತಿದೆಯೋ ನನಗೆ ತಿಳಿದಿಲ್ಲ. ಆದರೆ ಕೊಡಗಿನಲ್ಲಿ ಅದು ಯೋಗ್ಯ ವ್ಯವಸಾಯಗಾರರನ್ನು ಹೆಕ್ಕಿ ಅಂಥವರಿಗೆ ಬಹುಮಾನ ಕೊಡುವದರಲ್ಲಿ ಯಶಸ್ವಿಯಾಗಿಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಸ್ಪರ್ಧೆಗೆ ಇಳಿದ ಪರಿಮಿತ ಭೂಮಿಯ ಬೆಳೆಯನ್ನು ಇಲಾಖೆಯವರು ನಿಂತು ಅಳೆಸಿ ಬತ್ತವನ್ನು ಅಳೆಯುವದಿಲ್ಲ. ರೈತರು ತಾವಾಗಿ ಹೇಳಿದ ಲೆಕ್ಕ ಬರೆದುಕೊಂಡ ನಿದರ್ಶನಗಳಿವೆ. ನನಗೆ ಕ್ರಾಪ್ ಕಾಂಪಿಟಿಶನ್‌ನಲ್ಲಿ ಬಹುಮಾನ ದೊರೆತಿಲ್ಲವಾದರೂ ನನ್ನ ಗದ್ದೆಯ ಬೆಳೆಯ ಲೆಕ್ಕವನ್ನು ಯಾವ ಅಧಿಕಾರಿಯೂ ಪರೀಕ್ಷಿಸಲಿಲ್ಲ. ನಾನು ಹೇಳಿದ ಲೆಕ್ಕವನ್ನು ಬರೆದುಕೊಂಡರು. ಕೆಲವರೆ ಹೆಚ್ಚು ಲೆಕ್ಕ ಬರೆಯಿಸಿಕೊಟ್ಟಾಗಿ ಕೈ ಬೆಟ್ಟಗೆ ಮಾಡುವ ಮನುಷ್ಯ ನಡೆದಿದೆಯೆಂಬ ವರ್ತಮಾನ ಗ್ರಾಮಗಳಲ್ಲಿದೆ. ಇದು ನಿಜವೋ, ಸುಳ್ಳೋ ನನಗರಿಯದು. ಆದರೆ ಇದರಲ್ಲಿ ಮೋಸ ಮಾಡುವದು ಸಾಧ್ಯ ಎಂಬುದಕ್ಕೆ ಈ ಕೆಳಗಿನ ನಿದರ್ಶನ ಕೊಡಬಹುದು. ಸ್ಪರ್ಧೆಗೆ ಬೆಳೆ ಹಿಡಿಯುವ ೩೩ ಅಡಿ ಅಗಲ ೧೯ ಅಡಿ ಅಗಲದ ಸ್ಥಳದಲ್ಲಿ ೧ ಇಂಚಿಗೆ ಒಂದು ಸಾಲಿನಂತೆ ಹಾಕಿದರೆ ಒಟ್ಟು ೯೬೦ ಸುಲಿಗಳು ಬರಬೇಕು. ಆದರೆ ಸ್ಪರ್ಧೆಗೆ ಇಟ್ಟ ಸ್ಥಳದಲ್ಲಿ ಇಷ್ಟು ಸುಲಿಗಳೇ ಇರುವದೇನು? ಹತ್ತಿರ ನಾಟಿ ನಟ್ಟರೆ ಬತ್ತ ಹೆಚ್ಚಾಗುವದಿಲ್ಲವೆಂಬುದು ಎಲ್ಲರಿಗೂ ಗೊತ್ತು. ಆದರೆ ಕಡಿದು ನಾಟಿ ಬತ್ತ ಕಾಯುವಾಗುವ ಸಮಯದಲ್ಲಿ ಸುಲಿಗಳನ್ನು ಎಳೆದು ತಂದು ಕ್ರಮ ಪ್ರಕಾರ ಸ್ಪರ್ಧೆಗೆ ಕೊಡಲಿರುವ ಸ್ಥಳದಲ್ಲಿ ಮತ್ತೆ ಮತ್ತೆ ನೆಟ್ಟು ೯೬೦ ಸುಲಿಗಳ ಬದಲು ೧೫೦೦ ಸುಲಿ ಮಾಡುವ ಸಾಧ್ಯತೆ ಇದೆ. ಗದ್ದೆಯಲ್ಲಿ ನೀರಿರುವದರಿಂದ ಇದು ನಂತರ ಗೊತ್ತಾಗಲಾರದು. ಅಲ್ಲದೆ ಇಲಾಖೆಯವರು ಖುದ್ದು ಪರಿಶೀಲಿಸದ ಕಾರಣ ಕುಯ್ಯುವಾಗಲೂ ಹೆಚ್ಚು ಸೇರಿಸಿಬಿಡುವ ಸಾಧ್ಯತೆ ಇದೆ. ಆದ್ದರಿಂದ ಇಲಾಖೆಯವರು ಖುದ್ದು ಪರಿಶೀಲಿಸಲು ಶಕ್ತರಾಗುವ ವರೆಗೆ ಮೋಸಕ್ಕೆ ಇಲ್ಲಿ ಎಡೆ ಇದೆ.

—ಶ್ವೇತ.

ಈ ಲೆಕ್ಕ ಸರಿಯಲ್ಲ

೧೧ ಸೆಂಟಿನ ಜಾಗದಲ್ಲಿ ಇಷ್ಟು ಬತ್ತ ವಾಯಿತೆಂದು ಎಕರೆಗೆ ಇಷ್ಟು ಆಗುತ್ತದೆಯೆಂಬ ಲೆಕ್ಕ ಹಾಕುವದು ಖಂಡಿತಾ ಸರಿಯಲ್ಲ. ಸಂಗಯ್ಯನವರು ಒಂದೂಕಾಲು ಸೆಂಟಿನಲ್ಲಿ ೧೫೩ ಪೌಂಡು ಬೆಳೆಸಿದ್ದಾರೆಂದು ಅವರು ಒಂದು ಎಕರೆಯಲ್ಲಿ ೧೨,೧೫೦ ಪೌಂಡು ಬೆಳೆಸಿರುವರೆಂಬುದು ಸರಿಯಲ್ಲ. ಏಕೆಂದರೆ ಒಂದು ಸಾಲಿನಲ್ಲಿ ೪೦ ಕದಿರುಗಳಿದ್ದು ಅರ್ಧ ಸೇರು ಬತ್ತವಾಗಬಹುದು. ಆ ಲೆಕ್ಕದಲ್ಲಿ ಸುಮಾರು ೭೨ ಸಾವಿರ ಸಾಲುಗಳಿರುವ ಒಂದು ಎಕರೆಯಲ್ಲಿ ೩೬ ಸಾವಿರ ಸೇರು ಯಾ ೯೦೦ ಬಟ್ಟಿ ಬತ್ತವಾಗುವದೆಂದು ಲೆಕ್ಕ ಹಾಕುವುದು ಅವಿವೇಕವಾಗುವದು. ನಮ್ಮ ತೋಟವಾರನೇಟಿಯಲ್ಲಿ ಒಂದು ಕಡಿಯಲ್ಲಿ ೫೦೦ಕ್ಕೂ ಹೆಚ್ಚಿಗೆ ಬತ್ತದ ಕಾಳುಗಳಿದ್ದುದು ದೊರೆತಿದೆ. ಈ ಲೆಕ್ಕ ಪ್ರಕಾರ ಒಂದು ಎಕರೆಯಲ್ಲಿ ೫೦೦ ಬಟ್ಟಿಗೂ ಹೆಚ್ಚಿಗೆ ಬೆಳೆಯಾಗುವದೆಂದು ಲೆಕ್ಕ ಹಾಕಿದರೆ ಅದಕ್ಕೆ ಅರ್ಥವಿದ್ದೀತೇ? ಆದ್ದರಿಂದ ಈಗಿನ ರೀತಿಯ ಈ ಸ್ಪರ್ಧೆಯು ನಿಜವಾಗಿಯೂ ಸರಿಯಲ್ಲ.

ಆರ್ಥಿಕ ದೃಷ್ಟಿಯಿಂದ ಒಂದು ಕುಟುಂಬವನ್ನು ನಿಯಮವಾಗಿ ನಡೆಸಬಲ್ಲಷ್ಟು ಭೂಮಿಯನ್ನು ಸ್ಪರ್ಧೆಗೆ ಇಟ್ಟು ಅದರಲ್ಲಿ ಆಗುವ ಸರಾಸರಿ ಬತ್ತದ ಲೆಕ್ಕದ ಮೇಲೆ ಬಹುಮಾನ ಕೊಡುವದು ಹೆಚ್ಚು ಸೂಕ್ತವೂ, ಹೆಚ್ಚು ಬೆಳೆಯುವವರಿಗೆ ಪ್ರೋತ್ಸಾಹಕಾರಕವೂ ಆಗುವದೆಂದು ನನ್ನ ಅಭಿಪ್ರಾಯ. ಏನಿಲ್ಲೆಂದರೂ ಸ್ಪರ್ಧೆಗೆ ಒಂದು ಎಕರೆ ಸ್ಥಳವನ್ನಾದರೂ ಕೊಡಗಿನಂಥಾ ಸ್ಥಳದಲ್ಲಿ ಏರ್ಪಡಿಸುವದು ಹಿತಕರ. ಈ ರೀತಿಯಲ್ಲದೆ ಈಗ ಅನುಸರಿಸುತ್ತಿರುವ ಪದ್ಧತಿಯಿಂದ ನಿಜವಾದ ರೈತರಿಗೆ ಜಿಗುಪ್ಸೆಯೂ, ನಿರಾಶೆಯೂ ಆಗಲು ಆಸ್ಪದವಿದೆ.

‘ಕೃಷಿಜೀವಿ’

ನನ್ನ ತಿಳಿಗೇಡಿತನದ ಭಾವನೆ.

ತಾ. ೧೬-೧-೫೩ರ ಸಂಚಿಕೆಯಲ್ಲಿ ಓದುಗರ ಓಲೆಯಲ್ಲಿ “ತಿಳಿಗೇಡಿ ಲೆಕ್ಕ” ವನ್ನು ಓದಿ ನನಗೆ ಒಂದು ತರದ ಆಶ್ಚರ್ಯ ಉಂಟಾಯಿತು. ಇದೇ ತಿಳಿಗೇಡಿ ತನದ ಭಾವನೆಯು ನನಗೂ ಸಹ ಎರಡು ವರ್ಷದ ಹಿಂದೆ ಎಂದರೆ ನೇಲಮಿನ ಪೆಲ್ಲಯ್ಯ ಗೌಂಡರ್‌ರವರು ನೂರು ಬಟ್ಟಿ ಭೂಮಿಗೆ ಮೂನ್ನೂರು ಬಟ್ಟಿ ಬತ್ತ ಬೆಳೆಸಿದರು ಎಂಬುದನ್ನು ತಿಳಿದಂದಿನಿಂದ ಇತ್ತು. ನಾನೂ ಸಹ ಈಗಿನ ಪ್ರಪಂಚದ ಜ್ಞಾನದ (Scientific knowledge) ಮಟ್ಟಿಗೆ ಒಂದು ಬಾವಿಯಲ್ಲಿರುವ ಕಪ್ಪೆಯ ಹಾಗೆ ಅವಿವೇಕಿಯಾಗಿದ್ದೆನು. ಅದು ಅಲ್ಲದೆ ಕಳೆದ ವರ್ಷ ನಮ್ಮ ಕೊಡಗಿನಲ್ಲಿಯೇ ಸಂಗಯ್ಯನವರು ನೂರಕ್ಕೆ ಮುನ್ನೂರು ಬಟ್ಟಿಯ ಮೇಲೆ ಬತ್ತ ಬೆಳೆಸಿದರು ಎಂಬುದನ್ನು ಕೇಳಿ ನನಗೆ ಆಶ್ಚರ್ಯವಾಗಿತ್ತು. ಅಲ್ಲಿಂದ ನಾನು ವ್ಯವಸಾಯ ಇಲಾಖೆಯ ಸಿಬ್ಬಂದಿಗಳನ್ನು ಆಗಾಗ ಸಂದರ್ಶಿಸಿ ಇದರ ವಿಷಯ ತರ್ಕಿಸುತ್ತಿದ್ದುದರಿಂದ ಕೆಲವು ಅನುಭವ ಬಂತು. ಏನೆಂದರೆ “ಬೀಜದ ಮಣ್ಣನ್ನೂ, ಹವಾಗುಣವನ್ನೂ, ಸ್ಥಳವನ್ನೂ ಮತ್ತು ವ್ಯವಸಾಯಗಾರನ ಸ್ಥಿತಿಯನ್ನೂ ಹೊಂದಿಕೊಂಡಿರುತ್ತದೆ” ಎಂದು. ಹೇಗೂ ವ್ಯವಸಾಯ ಇಲಾಖೆಯವರ ಉಪದೇಶದ ಮೇರೆ ಹೆಚ್ಚು ಹುರುಪು ನನ್ನಲ್ಲಿ ಉಂಟಾಗಿ ನಾನೂ ಬೆಳೆಗಳ ಸ್ಪರ್ಧೆಗೆ ಒಬ್ಬ ಮೆಂಬರನಾದೆ. ಬೆಳೆಸಿದ್ದೂ ಆಯಿತು. ಕುಯಿದೂ ಆಯಿತು. ಅದರ ಅಳತೆ ಪ್ರಕಾರ ಕಮಿಟಿಗಳು ೩೩ ಅಡಿ ಉದ್ದ ೧೯ ಅಡಿ ಅಗಲದ ಪ್ಲಾಟಿನಲ್ಲಿ ೯೯ ಸೇರು ಬತ್ತವನ್ನು ೭ ಜನರ ಮುಂದೆ ಅಳೆದೂ ಆಯಿತು. ಇದರ ವರ್ತಮಾನವನ್ನೂ ವ್ಯವಸಾಯ ಇಲಾಖೆಯವರ ಜೊತೆಯಲ್ಲಿ ಕೇಳುವಾಗ “ನೀವು ಒಂದು ಎಕರೆಗೆ ೯೯ ಬಟ್ಟಿ ಬತ್ತ ಬೆಳೆದಂತಾಯಿತು.” ಎಂದೂ ಇಲಾಖೆಯವರು ಕೂಗಿ ನೋಡಿದಲ್ಲಿ ೯೯ ಸೇರು ಬತ್ತವು ೧೫೨.೫೫ ಪೌಂಡು ತೂಗಿತು. ಈ ಪ್ರಕಾರ ಒಂದು ಎಕರೆಗೆ ೧೦೫೩ ಬಟ್ಟಿ ಬತ್ತ ಬೆಳೆದಂತಾಯಿತು ಎಂದು ಇಲಾಖೆಯವರು ಹೇಳಿದರು. ನನಗೆ ಆಶ್ಚರ್ಯವಾಯಿತು. ಇದು ಹೇಗೆ ಎಂದು ಇಲಾಖೆಯವರನ್ನು ಪ್ರಶ್ನಿಸಿದೆನು. ಅವರ ಉತ್ತರ ಹೀಗೆ. ‘ನೀವು ಒಂದೊಂದರ ಮನೆ ಹಿತ್ತಿಲಿನಲ್ಲಿ ಒಂದೊಂದು ಕಾಫಿ ಗಿಡವು ೨-೩ ಬುರಲ್ ಕಾಫಿ ಕೊಡುವುದನ್ನು ಕಂಡಿರಬಹುದು. ಅದನ್ನು ನಾವು ಎಕರೆಗೆ ಲೆಕ್ಕ ಹಾಕಿದರೆ ಸಾವಿರಾರು ಟನ್ ಕಾಫಿ ಬೆಳೆದಂತಾಗುವದು” ಎಂದರು. ನನಗೆ ಅವರ ಮಾತು ಕೇಳಿ “ಅದಂತಾಯಿತು” ಎಂದ ಮಾತು ಅರ್ಥವಾಯಿತು. ಆದರೆ ೧೯ ಸೆಂಟಿನಲ್ಲಿ ೧೫೨.೫೫ ಪೌಂಡು ಸಿಕ್ಕಿದುದರಿಂದ ಒಂದು ಎಕರೆಗೆ ೧೦೫೩ ಬಟ್ಟಿ ಬತ್ತ ಬೆಳೆದಂತಾಯಿತು ಎಂದು ಅಂದ ಮಾತ್ರಕ್ಕೆ ಒಂದು ಎಕರೆಯಲ್ಲಿ ೧೦೫೩ ಬಟ್ಟಿ ಬತ್ತ ಸಿಕ್ಕಿಯೇ ತೀರಬೇಕು ಎಂಬ ಭಾವನೆಯಲ್ಲ.

ಎಂ. ಎಂ. ಪೊನ್ನಪ್ಪ

[illegible]

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನೀವು ಬಲ್ಲಿರಾ ?

ಪರ್ಸಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಒಳ್ಳೆಯ ಸಾಕ್ಷಿ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೇ. ಇದು ನಮ್ಮ ಜೀವನದ ಪ್ರಧಾನ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, “ಕಾರ್ಪೊರೇಶನ್ ಬ್ಯಾಂಕಿ”ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು “ಕಾರ್ಪೊರೇಶನ್” ಎಂಬ ಹೆಸರು ಮನೆ ಮಾತಾಗಬೇಕೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — ೨

ಮಡಿಕೇರಿ, ವೀರಾಜಪೇಟೆ. ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED

ಪ್ರಜಾಪ್ರಭುತ್ವ ದಿನಾಚರಣೆ

ಗರ್ವಾಲೆ.

ತಾ ೨೬ ರ ಬೆಳಿಗೆ ಗರ್ವಾಲೆ, ಶಿರಂಗಳ್ಳಿ, ಮತ್ತು ಕಿರುದಲೆ ಗ್ರಾಮಸ್ಥರು ತಮ್ಮ ವರವರ ಮನೆ, ಹಟ್ಟಿ, ಬಾವಿಗಳನ್ನು ಶುಚಿಗೊಳಿಸಿ ೯ ಗಂಟೆಗೆ ಗರ್ವಾಲೆ ಶಾಲೆಯ ಬಳಿ ವಿದ್ಯಾರ್ಥಿಗಳೊಡನೆ ಸೇರಿ ಪ್ರಾರ್ಥನೆ ನಡೆಸಿದರು. ನಂತರ ಶ್ರೀ. ಐ. ಕೆ. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆದು ಮನೆ ಶುಚಿಯಾಗಿಟ್ಟವರಿಗೂ, ಆಟೋಟಗಳಲ್ಲಿ ಗೆದ್ದವರಿಗೂ ಬಹುಮಾನ ಹಂಚಲಾಯಿತು. ಬಾಪೂಜಿಯವರ ನಿಧನಕ್ಕಾಗಿ ಒಂದು ನಿಮಿಷ ಮೌನ ಆಚರಿಸಿ ನಂತರ ಶ್ರೀಗಳಾದ ಐ. ಕೆ. ತಿಮ್ಮಯ್ಯ, ಗಂಗಾಧರ ಭಟ್ಟ ಮೊದಲಾದವರು ಭಾಷಣ ಮಾಡಿದರು.

ಶಿರಂಗಾಲ.

ಇಲ್ಲಿಯ ವಯಸ್ಕ ವಿದ್ಯಾರ್ಥಿಗಳೂ, ಅಧ್ಯಾಪಕರೂ, ಗ್ರಾಮಸ್ಥರೂ ಸೇರಿ ಗ್ರಾಮ ಶುಚಿತ್ವ ಕೆಲಸ ಮಾಡಿ ೧೧ ಗಂಟೆಯ ವರೆಗೆ ರಸ್ತೆ ರಿಪೇರಿ, ಶ್ರಮದಾನ ಇತ್ಯಾದಿ ನಿರ್ಮೂಲ ಕೆಲಸ ಮಾಡಲಾಯಿತು. ಆಟೋಟಗಳ ಸ್ಪರ್ಧೆಯ ನಂತರ ಶ್ರೀ. ಬಿ. ದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಬಿ. ಶೆಟ್ಟಿಗೇರಿ.

ಬಿ. ಶೆಟ್ಟಿಗೇರಿ ಶಾಲೆಯಲ್ಲಿ ಧ್ವಜಾರೋಹಣ, ಒಡ್ಡೋಲಗ ಸಹಿತ ಮೆರವಣಿಗೆ ನಡೆಯಿತು. ನಂತರ ಶ್ರೀ. ಕೆ. ಜಿ. ಪೂವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಶ್ರೀಗಳಾದ ಕೆ. ಎಂ. ಗೌರಮ್ಮ, ಕೆ. ಎಂ. ಪೂವಮ್ಮ, ಸಿ. ಪಿ. ತಿಮ್ಮಯ್ಯ, ಪಿ. ಟಿ. ಪಾಲಿ, ಬಿ. ಕೆ. ಅರ್ಜುನ ಎ. ಜಿ. ಬೆಳ್ಯಪ್ಪ, ಪಿ. ಎಸ್. ಭೀಮಯ್ಯ ಮೊದಲಾದವರು ಭಾಷಣ ಮಾಡಿದರು. ನಂತರ ಶ್ರೀ. ಗೋಪಾಲಕೃಷ್ಣ ಇವರ ಹರಿಕಥೆಯು ಏರ್ಪಾಡೂ ಇತ್ತು.

ಕಂಬಿಬಾಣೆ.

ಇಲ್ಲಿ ಈ ದಿನಾಚರಣೆಯು ಶ್ರೀ. ಸಿ. ಬಿ. ಕಾಳಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದೇ ದಿನ ಶ್ರೀ. ಪಿ. ಕೆ. ಶಾಂತಪ್ಪನವರನ್ನು ಉಪಾಧ್ಯಾಯರನ್ನಾಗಿ ನೇಮಿಸಿ ಒಂದು ಶಾಲೆ ತೆರೆಯಲಾಯಿತು. ಶ್ರೀಗಳಾದ ಕೋರನ ಉತ್ತಯ್ಯ, ಡಿ. ತಿಮ್ಮಪ್ಪ, ಡಿ ಎಂ. ಕೃಷ್ಣೋಜಿ ಸಿ. ಎಂ, ವೆಂಕಪ್ಪ, ವೊದಮೇಸ್ತ್ರಿ, ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರಾದ ಶ್ರೀ. ಸಿ. ಬಿ. ಕಾಳಯ್ಯನವರು ಒಂದು ಶ್ರೀ. ರಾಮ ಮಂಟಪವನ್ನು ಕಟ್ಟಿಸಿಕೊಡಲು ಒಪ್ಪಿದರು.

ಮಾದಾಪುರ.

ಈ ಭಾಗದ ಎಂ. ಎಲ್. ಎ. ಆದ ಶ್ರೀ. ಜಿ. ಎಂ. ಮಂಜುನಾಥಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನೆರೆಯಿತು. ಆಟೋಟಗಳ ಸ್ಪರ್ಧೆ, ದೇವಸ್ಥಾನದಲ್ಲಿ ಪೂಜೆಯ ಏರ್ಪಾಡಿತ್ತು. ಅಧ್ಯಕ್ಷರು ವಿವರವಾಗಿ ಸರಕಾರದ ಕಾರ್ಯಕ್ರಮಗಳನ್ನು ಹೇಳಿದರು. ವಿದ್ಯಾರ್ಥಿಗಳು ಸ್ವತಹ ಗುದ್ದಲಿ, ಬುಟ್ಟಿ ತೆಗೆದುಕೊಂಡು ಶಾಲಾ ಆಟದ ಮೈದಾನದ ಕೆಲಸ ಮಾಡಿದರು. ಸಭೆಯಲ್ಲಿ ಶ್ರೀಗಳಾದ ಎನ್. ಕೆ ಗಣಪಯ್ಯ, ಎಂ. ಎನ್. ಗಣಪತಿ, ಎಂ. ಸಿ. ಪೊನ್ನಪ್ಪ, ಕೆ ಎಂ. ಸೋಮಯ್ಯ ಮೊದಲಾದವರು ಭಾಷಣ ಮಾಡಿದರು. ರಾತ್ರೆ ಬಾಲಚಮೂ ದಳದವರ ಶಿಬಿರಾಗ್ನಿ ಪ್ರದರ್ಶನವಿತ್ತು.

ಸುಂಟಿಕೊಪ್ಪ

ಪ್ರಜಾಪ್ರಭುತ್ವ ದಿನಾಚರಣೆಯನ್ನು ಸುಂಟಿಕೊಪ್ಪ ಹೈಯರ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಮತ್ತು ಸಾರ್ವಜನಿಕರೂ ಸೇರಿ ಶ್ರೀಮಾನ್ ಜಿ ಯಂ. ಮಂಜುನಾಥಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಿದರು.

ಕೊಡಗರಹಳ್ಳಿ.

ಪ್ರಜಾಪ್ರಭುತ್ವದ ದಿನಾಚರಣೆಯನ್ನು ಕೊಡಗರಹಳ್ಳಿ ಶಾಲೆಯ ವಿದ್ಯಾರ್ಥಿಗಳೂ ಮತ್ತು ಗ್ರಾಮಸ್ಥರೂ ಸೇರಿ ಬಹಳ ವೈಭವದಿಂದ ಶ್ರೀಮಾನ್ ಮುಂಡಂಡ ಪೂವಪ್ಪನವರ ಅಧ್ಯಕ್ಷತೆಯಲ್ಲಿ ಆಚರಿಸಿದರು.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖಪಡೆಯಿರಿ!!!

ನಿಮ್ಮ ಪೋಲ್ಕೆಗಾಗಿ ಲಕ್ಷ್ಮಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗುಳಿಗಳು ಬಿದ್ದಿದ್ದು ಹಿಂದಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ, ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರು, ಮೇಹವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ನಿ. ಸ್ಪೆಷಲ್ ಟಾನಿಕ್ ಲೇಹ" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವುದು ಅಲ್ಲದೆ ಆರೋಗ್ಯಭಾಗ್ಯವನ್ನು ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು. 4—2

೧ ಪೌಂಡಿಗೆ ರೂ. ೫—೦—೦

ಮುಲಿಯಾಳ ಮೆಡಿಕಲ್ ಹಾಲ್, ತಿರುವನಂತಪುರಂ— (TRIVANDRUM)

॥ ವಾರ್ತೆಗಳು. ॥

ವಿಶ್ವದ ಅಭಿಪ್ರಾಯಕ್ಕೆ ತಲೆಬಾಗದಂತಹ ಪ್ರಬಲವಾದ ಸರಕಾರ ದಕ್ಷಿಣ ಆಫ್ರಿಕಕ್ಕೆ ಬೇಕೆಂದು ದಕ್ಷಿಣ ಆಫ್ರಿಕದ ಮುಖ್ಯ ಮಂತ್ರಿ ಡಾ. ಮಲಾನರು ಸರ್ಕಾರದ ಮೇಲಿನ ಅವಿಶ್ವಾಸ ನಿರ್ಣಯಕ್ಕೆ ಉತ್ತರ ಕೊಡುತ್ತಾ ತಿಳಿಸಿದರು. ವರ್ಣಬೇಧ ಕಾನೂನು ವಿರುದ್ಧ ಚಳುವಳಿಯನ್ನು ಹತೋಟಿಯಲ್ಲಿಡಲು ತಮ್ಮ ಸರ್ಕಾರ ಶಕ್ತವಾಗಿದೆಯೆಂದೂ ಅವರು ತಿಳಿಸಿದರು

ಒಂದು ವರ್ಷದಲ್ಲಿ ಕೊರಿಯಾದಲ್ಲಿ ಸಂಯುಕ್ತ ರಾಷ್ಟ್ರಗಳ ೫೦೦ ವಿಮಾನಗಳು ನಾಶಮಾಡಲ್ಪಟ್ಟಿವೆಯೆಂದು ಪೆಕಿಂಗ್ ಆಕಾಶವಾಣಿಯು ಸಾರಿದೆ. ಗತವಾರದಲ್ಲಿ ಹದಿನೈದು ಅಮೇರಿಕದ ವಿಮಾನಗಳು ಉರುಳಿಸಲ್ಪಟ್ಟಿದ್ದುವೆಂದೂ, ೨೧ ವಿಮಾನಗಳು ವಿಮಾನ ವಿಧ್ವಂಸಕ ಫಿರಂಗಿಗಳಿಂದ ಜಖಂಗೊಳಿಸಲ್ಪಟ್ಟಿದ್ದುವೆಂದೂ ಹೇಳಿದ್ದಲ್ಲದೆ, ಕಮ್ಯೂನಿಸ್ಟರ ಫಿರಂಗಿಗಳು ೫೦೦ ಮಂದಿ ಸಂಯುಕ್ತ ರಾಷ್ಟ್ರಗಳು ಸೈನಿಕರನ್ನು ಕೊಂದಿರುವುದಾಗಿಯೂ ತಿಳಿಸಿದೆ.

ಪೆಪ್ಸು ಪ್ರಾಂತದ ಸಿವಿಲ್ ಸಪ್ಲೈ ಇಲಾಖಾ ಮಂತ್ರಿಗಳಾದ ಶ್ರೀ. ಚೌದ್ರಿ ಅತ್ತರ್ ಸಿಂಗ್ ಅವರ ಎಸೆಂಬ್ಲಿಯ ಸ್ಥಾನವನ್ನು ಚುನಾವಣಾ ನ್ಯಾಯ ಮಂಡಲಿದವರು ರದ್ದುಗೊಳಿಸಿದ್ದಲ್ಲದೆ ಅವರು ಇನ್ನು ಆರು ವರ್ಷಗಳ ವರೆಗೆ ಚುನಾವಣೆಗೆ ನಿಲ್ಲಕೂಡದೆಂದೂ ಪ್ರತಿಬಂಧ ಹಾಕಿದ್ದಾರೆ. ಇವರು ಕಳೆದ ಚುನಾವಣೆಯಲ್ಲಿ ಬಾದ್ರಸನ್ಕಾಲಿ ಮತದಾರರ ಕ್ಷೇತ್ರದಿಂದ ಸ್ವತಂತ್ರ ಉಮೇದ್ವಾರರಾಗಿ ಆರಿಸಲ್ಪಟ್ಟವರು.

ಮಧ್ಯಪ್ರದೇಶದ ೮ ಜಿಲ್ಲೆಗಳ ಸುಮಾರು ೧೫,೫೦,೦೦೦ ಜನರಿಗೆ, ಬೆಳೆ ನಾಶಹೊಂದಿದ ಕಾರಣ ಆಹಾರದ ಹಾಗೂ ನೀರಿನ ಅಭಾವ ತಲೆದೋರಿದೆ ಎಂದು ಅಧಿಕೃತವಾಗಿ ತಿಳಿದುಬಂದಿದೆ. ಈ ೯ ಜಿಲ್ಲೆಗಳಲ್ಲಿ ಬುಲ್ಡಾನಾ ಮತ್ತು ನಿಮಾರ್ ಜಿಲ್ಲೆಗಳಲ್ಲಿಯ ಪರಿಸ್ಥಿತಿಯು ಭಯಂಕರವಾಗಿದೆ. ಈ ಸ್ಥಿತಿಯಲ್ಲಿ ಜನರಿಗೆ ಸಹಾಯ ಮಾಡಲು ಪ್ರಾಂತೀಯ ಸರಕಾರವು ಭೂಕಂದಾಯವನ್ನು ತೆಗೆದು ಹಾಕಿರುವದು. ಅಲ್ಲಲ್ಲಿ ಕೆರೆ ಬಾವಿಗಳನ್ನು ತೋಡಿಸುತ್ತಿರುವುದು. ಇದಲ್ಲದೆ ರೂ. ೨೪ ಲಕ್ಷ ಸಹಾಯಕ್ಕಾಗಿ ಒದಗಿಸಿರುವುದು. ಜನರಿಗೆ ತಕಾವಿ ಸಾಲ ಕೊಡುತ್ತಿರುವುದು. ಇದಕ್ಕಾಗಿ ಪ್ರಾಂತೀಯ ಸರಕಾರವು ಕೇಂದ್ರದೊಡನೆ ರೂ. ೫೦ ಲಕ್ಷ ಸಹಾಯ ಕೇಳಿರುವುದು.

ಸ್ತ್ರೀಯರೊಳಗೆ ಕೂಡ ಒಂದು ಚಿಕ್ಕ ಉಪಾಯವನ್ನೇರ್ಪಡಿಸಬೇಕೆಂದು ಭಾರತ ಸರಕಾರವು ಅಖಿಲ ಭಾರತ ಸ್ತ್ರೀ ಸಮ್ಮೇಲನದ ಅಧ್ಯಕ್ಷೆ ಶ್ರೀಮತಿ ಹನ್ನಾಸೇನ್‌ರವರೊಡನೆ ಕೇಳಿದಾಗ ಅವರು ಒಪ್ಪಿರುವರು. ಮಾರ್ಚ್ ೧೫ ರಿಂದ ೨೧ ರ ತನಕ ಸ್ತ್ರೀಯರ ಉಪಾಯದ ವಿಶೇಷ ವಾರವನ್ನೇರ್ಪಡಿಸಲಿರುವರು. ಈ ವಿಶೇಷ ವಾರವನ್ನು ದೇಶದ ೧೫ ನಗರಗಳಾದ ಡೆಲ್ಲಿ, ಕಲ್ಕತ್ತಾ, ಮುಂಬಯಿ, ಮದ್ರಾಸ್ ಮೊದಲಾದ ಕಡೆಗಳಲ್ಲಿ ಆಚರಿಸಲಾಗುವುದು.

ಮಧ್ಯಪ್ರದೇಶದ ಒಬ್ಬ ರೈತನು ಒಂದು ಎಕ್ರೆಗೆ ೧೨,೭೧೫ ರಾತ್ತಲು ಭತ್ತವನ್ನು ಬೆಳೆಸಿರುವನು. ಇದು ಮಧ್ಯಪ್ರದೇಶದಲ್ಲಿ ಅತಿ ಹೆಚ್ಚು ಉತ್ಪತ್ತಿಯಾಗಿರಬಹುದೆಂದು ಅಧಿಕೃತವಾಗಿ ತಿಳಿದುಬಂದಿದೆ. ಪ್ರಾಂತೀಯ ಸರಕಾರವು ಈ ರೈತನು ಬೆಳೆ ಸ್ಪರ್ಧೆ ಯೋಜನೆಯಲ್ಲಿ ಸೇರಿರುವನೋ ಎಂದು ವಿಚಾರಿಸಲಿರುವುದು. ಅಲ್ಲದೆ ಆ ರೈತನು ಬೆಳೆಯನ್ನು ಬೆಳೆಯಿಸಲು ಕೈಕೊಂಡ ರೀತಿಯನ್ನೂ ವಿಚಾರಿಸಲಿರುವುದು.

ಹಿಂದೆ ಪಂಜಾಬಿನಲ್ಲಿ ಮ್ಯಾಜಿಸ್ಟ್ರೇಟರಾಗಿದ್ದವರೆಂದು ಹೇಳಲಾದ ೬೦ ವರ್ಷ ಪ್ರಾಯದ ಕರ್ತಾರಸಿಂಗ್ ರಾಮಸ್ಟುಧಾರ್ ಎಂಬವರಿಗೆ ಸ್ಮೃತಿಭ್ರಮಣೆಯುಂಟಾಗಿ ಕೋರ್ಟಿನಲ್ಲಿ ನ್ಯಾಯಾಧೀಶರನ್ನು ಬೈದು ಒಬ್ಬ ಸಿಪಾಯಿಯ ಕೈಯನ್ನು ಕಚ್ಚಿ ಹತ್ತಿರದಲ್ಲಿದ್ದ ಪೋಲೀಸ್ ಆಫೀಸರರ ಕುತ್ತಿಗೆಯ ಟೈಯನ್ನು ಬಲವಾಗಿ ಬಿಗಿದು ಅವರಿಗೆ ಶ್ವಾಸ ಬಿಡಲು ಕಷ್ಟವಾಗುವಂತೆ ಮಾಡಿದರು. ಹಿಂದಿನಿಂದ ಆ ಟೈಯನ್ನು ತುಂಡು ಮಾಡಿ ಆಫೀಸರರನ್ನು ರಕ್ಷಿಸಲಾಯಿತು.

ಕೊಡಗನ್ನು ಪ್ರವಾಸಿ ಕೇಂದ್ರವಾಗಿ ಮಾಡಲು ಯೋಜನೆ

ಕೊಡಗು ಪ್ರಾಂತವನ್ನು ಆಕರ್ಷಣೀಯ ಪ್ರವಾಸಿ ಕೇಂದ್ರವನ್ನಾಗಿ ಮಾಡಲು ಏನೇನು ಕ್ರಮ ಕೈಗೊಳ್ಳಬೇಕೆಂಬ ಬಗ್ಗೆ ಕೊಡಗಿನ ಮುಖ್ಯ ಮಂತ್ರಿ ಮತ್ತು ಗೃಹ ಮಂತ್ರಿಗಳು ಮತ್ತು ಚೀಫ್ ಕಮೀಷನರೊಂದಿಗೆ ಮೈಸೂರು ಸರ್ಕಾರದ ಪ್ರಿನ್ಸಿಪಲ್ ಇನ್‌ಫರ್ಮೇಷನ್ ಆಫೀಸರ್ ಶ್ರೀ ಬಿ. ಎನ್. ಸತ್ಯನ್‌ರವರು ಸಮಾಲೋಚನೆಗಳನ್ನು ನಡೆಸಿಕೊಂಡು ತಾ. ೩ರಲ್ಲಿ ಬೆಂಗಳೂರಿಗೆ ಹಿಂತಿರುಗಿದರು.

ಕೊಡಗು ಸರಕಾರವೂ ಭಾರತ ಸರಕಾರವೂ ಈ ಕಾರ್ಯವನ್ನು ತ್ವರಿತವಾಗಿ ನಡೆಸಲು ಆಸಕ್ತವಾಗಿವೆ. ಶ್ರೀ ಸತ್ಯನ್‌ರವರು ಈ ದಿಸೆಯಲ್ಲಿ ನಾನಾ ಉಪಯುಕ್ತ ಸಲಹೆಗಳನ್ನು ಕೊಟ್ಟುದಲ್ಲದೆ ಒಂದು ಯೋಜನೆಯನ್ನೂ ಇಲ್ಲಿನ ಸರಕಾರದ ಮುಂದಿಟ್ಟು ಹೋಗಿದ್ದಾರೆಂದು ಗೊತ್ತಾಗಿದೆ. ಮಡಿಕೇರಿಯಲ್ಲಿ ಪ್ರವಾಸಿ ಕೇಂದ್ರ ಸ್ಥಾಪಿಸಲೂ ಯೋಚಿಸಲಾಗಿದೆ. ಅದಕ್ಕೆ ತಕ್ಕ ಉತ್ತಮ ದರ್ಜೆಯ ಹೋಟೆಲು, ವಸತಿ ಸೌಲಭ್ಯಗಳು ಮತ್ತು ಪ್ರವಾಸಕ್ಕೆ ಅನುಕೂಲಗಳು ಮುಂತಾದವನ್ನೆಲ್ಲಾ ಏರ್ಪಡಿಸಲೂ ಯೋಜನೆಗಳು ನಡೆದಿವೆ.

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರರಾಜಪೇಟೆ.

ಕಮ್ಯೂನಿಝಮ್ - ಅಲ್ಲ - ಅಮೇರಿಕಾನಿಝಮ್?

ಅಮೇರಿಕದ ಚತುರ್ಥಾಂಶ ಯೋಜನೆಯ ಅಂಗವಾಗಿ ಭಾರತ–ಅಮೇರಿಕಗಳೊಳಗೆ ಒಂದು ತಾಂತ್ರಿಕ ಒಪ್ಪಂದವಾಗಿದೆ. ಅದರ ಒಳಿತಿಗಿಂತ ಕೆಡುಕೇ ಅಧಿಕವೆಂದು ಕಟುವಾಗಿ ಟೀಕಿಸಿದ ರಾಷ್ಟ್ರೀಯರು ಇರುವರು. ಏಕೆಂದರೆ ಸಹಾಯದ ಸೋಗಿನಲ್ಲಿ ರಾಷ್ಟ್ರ ರಾಷ್ಟ್ರಗಳು ದಾಸ್ಯವನ್ನು ಸ್ವೀಕರಿಸಿ ಬಾಳಿದ ನಿದರ್ಶನಗಳಿವೆ. ಆದ್ದರಿಂದ ಅಮೇರಿಕದ ಸಹಾಯ ಪಡೆದುದರಿಂದ "ಅಮೇರಿಕನೈಸ್ಡ್ ಇಂಡಿಯ" ವಾಗದಂತೆ ಎಚ್ಚರದಿಂದಿರುವುದು ಭಾರತಕ್ಕೆ ಅಗತ್ಯ.

ಶ್ರೀ. ಪೈಕಾಡಿ ವೆಂಕಟಕೃಷ್ಣರಾಯರು

"ನಮ್ಮನ್ನು ಎದುರಿಸುತ್ತಿರುವ ಮಹಾ ಸಮಸ್ಯೆಯ ಮೂಲ, ಅದನ್ನು ಬಗೆಹರಿಸುವ ಮಾರ್ಗ, ಅದಕ್ಕೆ ಸಮನಾದ ಉತ್ತರ, ಭಾರತದ ಗ್ರಾಮಾಂತರಗಳಲ್ಲಿವೆ. ಕಮ್ಯೂನಿಝಮನ್ನು ತಡೆಗಟ್ಟಲು ಟ್ಯಾಂಕುಗಳು, ಬಾಂಬುಗಳು, ಪ್ರಯೋಜನವಾಗಲಾರವು ಎಂಬುದು ನಮ್ಮ ಅನುಭವದಿಂದ ತಿಳಿದುಬಂದಿದೆ. ಚೀನಾದಲ್ಲಿ ಕಮ್ಯೂನಿಝಂ ಬೆಳೆದು ಬಂದದ್ದು ಗ್ರಾಮಗಳ ಮಟ್ಟದಲ್ಲಿ. ಭಾರತದಲ್ಲಿ ಅದೇ ಮಟ್ಟದಲ್ಲಿ ಅದನ್ನು ಹೋಡೆದಾಡಬೇಕು. ಸ್ವತಂತ್ರನಾದ ಭಾರತೀಯನಿಗೆ ಅವಶ್ಯವಾದ ಸೌಲಭ್ಯ ಒದಗಿಸಿಕೊಟ್ಟು ಅವನು ಕಮ್ಯೂನಿಝಂ ಬಳಿಗೆ ಬೀಳದಂತೆ ತಡೆಯಬೇಕು. ಮುಂದಿನ ಐದು ವರ್ಷಗಳ ಕಾಲ ನಮ್ಮ ಪರೀಕ್ಷೆಯ ಕಾಲ. ಇಂಡಿಯಾದಲ್ಲಿ ಪ್ರಜಾಪ್ರಭುತ್ವ ಸರಕಾರ ಏರ್ಪಡದಿದ್ದರೆ ಕಮ್ಯೂನಿಸ್ಟರ ನಿರಂಕುಶ ಪ್ರಭುತ್ವ ಸ್ಥಾಪಿತವಾಗುವುದು ನಿಶ್ಚಯ. ಚೀನದಲ್ಲಿ ಬೆಳೆದು ಬಂದಂತೆ ಭಾರತವೂ ಬೆಳೆದು ಬಂದರೆ ಗಂಡಾಂತರ ತಪ್ಪಿದ್ದು." ಈ ಮಾತು ಲೇಖಕನದಲ್ಲ. ಭಾರತದಲ್ಲಿನ ಅಮೇರಿಕದ ರಾಯಭಾರಿಯಾಗಿದ್ದ ಚೆಸ್ಟರ್ ಬೌಲ್ಸರದು.

ಅಮೇರಿಕಾ ಸಂಯುಕ್ತ ಸಂಸ್ಥಾನದ ಮಾಜಿ ಅಧ್ಯಕ್ಷ ಹ್ಯಾರಿ ಎಸ್. ಟ್ರೂಮನ್ನರು ಜನವರಿ ೧೯೪೯ರಲ್ಲಿ ಸ್ವತಂತ್ರ ಪ್ರಪಂಚವು ಎದುರಿಸುವ ಸಮಸ್ಯೆಗಳನ್ನೂ ಕಾರ್ಯಭಾರಗಳನ್ನೂ ಸ್ಪಷ್ಟಪಡಿಸಿದರು. ಅವರ ನಾಲ್ಕನೆಯ ಮುಖ್ಯ ಸೂಚನೆಯೂ ಆಗಿ 'ನಾವು ಒಂದು ದಿಟ್ಟತನದ ಹೊಸ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು.... ಶಾಂತಿ ಬಯಸುವ ಜನಾಂಗಗಳಿಗೆ ತಮ್ಮ ಜೀವನ ಮಟ್ಟವನ್ನು ಉತ್ತಮಗೊಳಿಸುವ ಆಕಾಂಕ್ಷೆಗಳನ್ನು ಈಡೇರಿಸಲು ಸಹಾಯವಾಗುವಂತೆ ನಮ್ಮಲ್ಲಿರುವ ತಾಂತ್ರಿಕ ಜ್ಞಾನಭಂಡಾರದ ಫಲವನ್ನು ಅವರಿಗೆ ಒದಗಿಸಿಕೊಡಬೇಕೆಂದು ನನಗೆ ತೋರುತ್ತದೆ' ಎಂದು ಹೇಳಿದರು. ಇದೇ ನಾಲ್ಕು ಅಂಶಗಳ ಯೋಜನೆ. ಈ ಯೋಜನೆಯ ಅಂಗವಾಗಿ ಭಾರತ ಮತ್ತು ಅಮೇರಿಕಾ ಸರಕಾರಗಳಿಗೆ ಒಂದು ತಾಂತ್ರಿಕ ಸಹಕಾರ ಒಪ್ಪಂದವಾಗಿದೆ. ಇದರಿಂದ ಭಾರತ ದೇಶಕ್ಕೆ ಆರ್ಥಿಕ ಮತ್ತು ತಾಂತ್ರಿಕ ಸಹಾಯ ದೊರಕುತ್ತಿದೆ.

ಈ ಯೋಜನೆಯ ಮೊದಲನೆಯ ಹಂತವಾಗಿ ಭಾರತ ದೇಶದಲ್ಲಿ ಐದು ಪ್ರದೇಶಗಳಲ್ಲಿ ಜನಪದ ಅಭಿವೃದ್ಧಿ ಕೇಂದ್ರಗಳನ್ನು ಏರ್ಪಡಿಸಲಾಗಿದೆ. ದಕ್ಷಿಣ ಕನ್ನಡಕ್ಕೂ ಒಂದು ಕೋಟಿ ಮೀಸಲಾಗಿಟ್ಟಿದೆ. ಕಾರ್ಕಳ, ಮಂಗಳೂರು ಅದರ ಕೇಂದ್ರವಾಗಿವೆ. ಈ ಕೇಂದ್ರಗಳಲ್ಲಿ ಜನರಿಗೆ ಸಂಯುಕ್ತ ಸಂಸ್ಥಾನದ ನಿಪುಣರ ಸಹಾಯ ಒದಗಿಸಿ ಕೊಡುವುದೇ ಈ ಯೋಜನೆಯ ಮುಖ್ಯ ಭಾಗ.

ಪಾಶ್ಚಾತ್ಯ ದೇಶೀಯರಿಗೆ ಭಾರತ ದೇಶ ಒಂದು ಅರ್ಥವಾಗದ ಸಮಸ್ಯೆಯಾಗಿದೆ. ಗಾಂಧೀಯವರ ಹೆಸರು ಕೇಳಿದ್ದಾರೆ. ಅದರೂ ನಟಿಸುತ್ತಾರೆ. ರಾಮಾಯಣದ ತಿರುಳು ಗೊತ್ತಿಲ್ಲದ ರಾಮನಾಮ ಪಠಣೆಯಂತೆ. ಗಾಂಧೀ ದೇವರೆನ್ನುತ್ತಾರೆ. ಹಿಮಾಲಯ ಪರ್ವತ, ಖೈಬರ್ ಕಣಿವೆ, ಹೀಗೆ ಹೆಸರುಗಳು ಕೇಳಿದಂತೆ ಮಹಾತ್ಮ ಗಾಂಧಿ ಹೆಸರು ಮಾತ್ರ ಗೊತ್ತು. ಅರ್ಥ ಮಾಡಿಕೊಂಡಿಲ್ಲ. ಚೆಸ್ಟರ್ ಬೌಲ್ಸರ ಪಜೀತಿಯೂ ಇದೇ.

ಇಂತಹ ಯೋಜನೆಗಳ ಕುರಿತು ಗಾಂಧಿ ಜನ ಏನು ಹೇಳುತ್ತಾರೆ, ಗೊತ್ತೆ? ಗ್ರಾಮೋದ್ಧಾರದ ಕುಮಾರಪ್ಪನವರ ಟೀಕೆ ಹೀಗಿದೆ.

"ಅಮೇರಿಕದ ಮತ್ತು ಭಾರತದೊಳಗೆ ಒಂದು ಒಪ್ಪಂದ ನಡೆದಿದೆ. ಈ ಒಪ್ಪಂದದಂತೆ ಭಾರತದ ಬೆಳವಣಿಗೆ ಕಾರ್ಯಗಳಿಗೆ ಅಮೇರಿಕ ಐವತ್ತು ಮಿಲಿಯ ಡಾಲರು ಕೊಡಲೊಪ್ಪಿದೆ ...ಬ್ರಿಟನು ಸಾಮ್ರಾಜ್ಯತತ್ವದಲ್ಲಿ ಪ್ರಾವೀಣ್ಯತೆ ಪಡೆದಿದ್ದರೆ, ಅಮೇರಿಕೆ ವ್ಯಾಪಾರ, ವ್ಯವಹಾರದಲ್ಲಿ ಕುಶಲತೆ ತೋರಿ ಆರ್ಥಿಕ ನಿರಂಕುಶಾಧಿಕಾರ ಬೀರುವಲ್ಲಿ ಜಾಣತನ ಪಡೆದಿದೆ. ಪರಿಣಾಮ ಎರಡೂ ಒಂದೇ. ಈ ರೀತಿಯ 'ಕಾರುಣ್ಯ ಗ್ರಾಮೋದ್ಧಾರ' ಗಳಿಂದ ನಾವು ದೂರ ಇರೋಣ. ಈ ಯೋಜನೆ ಗಂಡಾಂತರದಿಂದ ತಪ್ಪಿದೆ ಎಂದು ಹೇಳುವುದು ಕಷ್ಟ."

"ನಮ್ಮ ವ್ಯವಸಾಯ, ಯಂತ್ರಾಧೀನವಾದರೆ, ಟ್ರ್ಯಾಕ್ಟರ್ ಮಯವಾದರೆ, ನಮ್ಮ ಆತ್ಮ, ದೇಹ, ಶಕ್ತಿ ಎಲ್ಲವೂ ನಾವು ಅಮೇರಿಕಕ್ಕೆ ಅಡವು ಇಟ್ಟ ಯಂತ್ರವು ಯಂತ್ರವತ್ ಆಗಲು ಅಡ್ಡಿ ಇಲ್ಲ. ಜಪಾನಿನ ಉದಾಹರಣೆ ನೋಡಿ. ಜಪಾನು ಶರಣು ಬಂದಿತು ಆಟಂ ಬಾಂಬಿನ ಹೆದರಿಕೆಯಲ್ಲ. ಹಿರೋಶಿಮಾದ ಕ್ಷಮೆ ಕೇವಲ ನೆಪಕ್ಕೆ ಮಾತ್ರ." ಇದು ಕುಮಾರಪ್ಪನವರ ಎಚ್ಚರಿಕೆ.

ಕುಮಾರಪ್ಪ ಅಂದರೆ ಭಾರತ ಅಲ್ಲ. ಅವರು ಪ್ರತಿನಿಧಿಸುವುದು ಕೆಲವು ಉಗ್ರವಾದ ಗಾಂಧೀವಾದವನ್ನು ಎಂದು ಪ್ರಧಾನಿ ನೆಹರು ಚೆಸ್ಟರ್ ಬೌಲ್ಸರನ್ನು ಸಂತೈಸಬೇಕಾಯ್ತು. ಚೆಸ್ಟರ್ ಬೌಲ್ಸಿಗೆ ಸಮಾಧಾನವಾಯಿತು. ಭಾರತಕ್ಕೆ ತೃಪ್ತಿಯಾಯಿತೆ? ಹಾಗಾದರೆ ಅಮೇರಿಕೆಯ ಆಸೆ ಏನು? ಭಾರತದ ಬೆಳವಣಿಗೆಯ ಕಡೆ ಅಮೇರಿಕೆಯ ವಿಶ್ವಾಸವೆಷ್ಟು? ಭಾರತದ ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ, ಕೈಗಾರಿಕಾ ಸ್ವಾತಂತ್ರ್ಯ ಇವೆಲ್ಲ ಕಸಕೊಳ್ಳುವ ಹಂಚಿಕೆ ಅಮೇರಿಕದ್ದೇ? ವಿಚಾರ ಮಾಡಬೇಕು.

"ನೆಹರು ಸರಕಾರದ ಅಧೀನದಲ್ಲಿ ಭಾರತದ ಮತದಾರರು ಮುಂದಿನ ಚುನಾವಣೆಯ ಹೊತ್ತಿಗೆ (೧೯೫೭) ಒಳ್ಳೆ ಅನುಕೂಲ ಹೊಂದದಿದ್ದರೆ ಕಾಂಗ್ರೆಸು ಸಂಪೂರ್ಣ ಬಿದ್ದು ಹೋಗಿ ಕಮ್ಯೂನಿಝಂ ಪ್ರಬಲವಾಗುವುದು ನಿಶ್ಚಯ" ಎಂದರು ಅಮೇರಿಕದ ಪ್ರೇಕ್ಷಕರೊಬ್ಬರು. ಈ ರೀತಿಯ ಅನೇಕ ವರದಿಗಳು ವಾಷಿಂಗ್‌ಟನ್ನನ್ನು ತಲುಪಿವೆ. ಕಮ್ಯೂನಿಝಂ ಮಾತ್ರವಲ್ಲ, ಯಾವುದೇ ಉಗ್ರವಾದಿ ಪಕ್ಷವೂ ಗೆದ್ದು ಭಾರತದ ಅಧಿಕಾರ ವಹಿಸುವುದು ಅಮೇರಿಕಕ್ಕೆ ಇಷ್ಟವಿಲ್ಲ. ಕಾಂಗ್ರೆಸು ಪ್ರಬಲವಾಗಿರುವಷ್ಟು ದಿನ ಅಮೇರಿಕೆಯ ಹೇಳಿಕೆ ಭಾರತದಲ್ಲಿ ಜೇಯುತ್ತದೆಂದು ವಾಷಿಂಗ್‌ಟನ್ನಿನಲ್ಲಿನ ಅಭಿಪ್ರಾಯ.

ಅಚೇಸನ್ನರು ಹೇಳಿದರು "ನಮ್ಮ ಎಲ್ಲ ಪ್ರೇಕ್ಷಕರ ಅಭಿಪ್ರಾಯದಂತೆ ನೆಹರು ನಾಯಕತ್ವದಲ್ಲಿ ಭಾರತದ ಹೊಸ ಸರಕಾರ ಭಾರತದ ಆರ್ಥಿಕ ಮುಗ್ಗಟ್ಟನ್ನು ಎದುರಿಸದಿದ್ದಲ್ಲಿ ಮುಂದಿನ ಐದು ವರ್ಷಗಳಲ್ಲಿ ಯಾವುದೇ ಉಗ್ರಗಾಮಿ ಪಕ್ಷ ಅಥವಾ ಕಮ್ಯೂನಿಝಂ ಗೆಲ್ಲುವುದು ನಿಶ್ಚಯ"

ಹಾಗಾದರೂ ಏನಾಯಿತು? ಅಮೇರಿಕದ ಹಿತ ಯಾವಕಡೆ ಎಂದರೆ ಭಾರತದ ಕೋಟಿಗಟ್ಟಲೆ ಪ್ರಜಾ ಸಂಖ್ಯೆಯ ಮೇಲಿನ ಕರುಣೆಯೆ? ಭಾರತದ ಗ್ರಾಮಾಭಿವೃದ್ಧಿಯ ಕಡೆಯ ಹಿತವೆ? ಅಥವಾ ತಮ್ಮ ಪ್ರಭಾವ ಭಾರತದಲ್ಲಿ ಸುಲಭವಾಗಿ ಬೀರಲು ಕಾಂಗ್ರೆಸ್ಸನ್ನೇ ಅಧಿಕಾರದಲ್ಲಿ ಇರಿಸುವ ಪ್ರಯತ್ನವೆ?

ಇಲ್ಲಿ ಕೆಲವು ಪ್ರಶ್ನೆಗಳು ಉದ್ಭವವಾಗುತ್ತವೆ. ಈ ತನಕ ಈ ಅಮೇರಿಕೆಯ ತಾಂತ್ರಿಕರು, ಶಾಸ್ತ್ರಜ್ಞರು, ಪ್ರಾಜ್ಞರು, ಈ ದೇಶಕ್ಕೆ ಧನ ಸಹಾಯ ಎಲ್ಲ ಎಲ್ಲಿತ್ತು? ಭಾರತದ ಮೇಲಿನ ಈ ಮಮತೆ ಇಷ್ಟು ವರ್ಷಗಳು ಎಲ್ಲಿ ಅಡಗಿತ್ತು? ಈ ಎಲ್ಲ ಯೋಜನೆಗಳಲ್ಲಿ ಸಂಯುಕ್ತ ಸಂಸ್ಥಾನದ ನಿಪುಣರ ಹೊರತು ಮಿಕ್ಕವರಿಗೆ ಏಕೆ ಅವಕಾಶ ಇಲ್ಲ? ಭಾರತದ ಅಧಿಕಾರಿಗಳ ಹತೋಟಿ ಈ ಆಡಳಿತದಲ್ಲಿ ಏಕೆ ಇರಬಾರದು? ಐವತ್ತು ಮಿಲಿಯ ಡಾಲರಿನಲ್ಲಿ ಒಂದು ನೋಟು ಕೂಡ ಸಂಯುಕ್ತ ಸಂಸ್ಥಾನದ ಇಚ್ಛೆಗೆ ವಿರುದ್ಧವಾಗಿ ಏಕೆ ಖರ್ಚು ಮಾಡಬಾರದು? ಈ ಸಹಾಯವೂ ಕೂಡ ಪೂರ್ಣ ನಾಣ್ಯದ ರೂಪವಾಗಿಯೇ ಏಕೆ ಕೊಡಬಾರದು? ಅಮೇರಿಕದ ವಸ್ತುಗಳನ್ನು ಪಡೆಯಬೇಕೆ? ದಾನಿಗೆ ದಾನ ಪಡೆಯುವವ ಸಂಪೂರ್ಣ ಶರಣು ಹೋಗುವ ಈ ನೀತಿ ಭಾರತ ಒಪ್ಪಬೇಕೆ? ಈ ದಾನದ ಮರುಪಾವತಿಗೆ ಅಮೇರಿಕ ಸಂದರ್ಭ ಬಂದಾಗ ಇಚ್ಛಾನುಸಾರ ಕರಾರು ಹಾಕುವ ಸ್ವಾತಂತ್ರ್ಯ ಏಕೆ ಇಟ್ಟುಕೊಳ್ಳಬೇಕು? ಮುಂದೆ ಇದರ ಪರಿಣಾಮ ಭಾರತದ ಹಿತದೃಷ್ಟಿಯಿಂದ ಕೆಡುಕಾಗದೆ? ಅಥವಾ ಭಾರತದ ಮಾರುಕಟ್ಟೆ ಅಮೇರಿಕೆಯ ವಸ್ತುಗಳ ಮಾರಾಟದ ಮಳಿಗೆಯಾಗಿ ಭಾರತದ ಕಚ್ಚಾ ಮಾಲುಗಳ ಉಪಯೋಗವನ್ನು ಅಮೇರಿಕ ಇಚ್ಛಾನುಸಾರ ಪಡೆಯುವ ಹಂಚಿಕೆಯೆ? ನಮ್ಮ ಸರ್ವಸ್ವವನ್ನೂ ಅಮೇರಿಕೆಯ ಅಡವಿಟ್ಟು ನಮ್ಮ ಅದೃಷ್ಟ ಪರೀಕ್ಷಕರು ಅಮೇರಿಕನ್ನರಾದರೆ? ವಿಚಾರವಂತರು ಯೋಚಿಸಬೇಕು.

ಸಂಯುಕ್ತ ಅಮೇರಿಕವು ಜನರಲ್ ಫ್ರಾಂಕೋನಂತೆ, ಬಾವುದಾಯಿಯಂತೆ, ಚಿಯಾಂಗ್ ಕೈಶೇಕನಂತೆ ನಮ್ಮ ನೆಹರುಗಳನ್ನ ಬುಟ್ಟಿಯಲ್ಲಿ ಹಾಕಿಕೊಂಡೀತೆ? ಸಂದೇಹ. ನೆಹರು ವ್ಯಕ್ತಿತ್ವ ಅಷ್ಟು ಸುಲಭದಲ್ಲಿ ಸೋಲದು ಎಂದು ನಾವು ನಂಬಬಹುದು.

ಇನ್ನೂ ಒಂದು ಮಾತು ಮುಂದುವರಿದು ಹೋದರೆ ರಾಜಕೀಯ ಕ್ಷೇತ್ರದಲ್ಲಿ ಅಂತರ್ರಾಷ್ಟ್ರೀಯ ಸಮಸ್ಯೆಗಳಲ್ಲಿ ಭಾರತಕ್ಕೆ ಅಮೇರಿಕೆಯ ನೆರವು ಎಷ್ಟು ಸಿಕ್ಕಿದೆ? ಕೊರಿಯಾ ಯುದ್ಧದಲ್ಲಿ ಭದ್ರತಾ ಸಮಿತಿಯನ್ನು ತನಗೆ ಬೇಕಾದ ಹಾಗೆ ಉಪಯೋಗಿಸಿಕೊಂಡ ಅಮೇರಿಕಾ ಭಾರತದ ಕಾಶ್ಮೀರ ಸಮಸ್ಯೆ ಬಗೆಹರಿಸಲು ಈ ವಿಶ್ವಾಸ ತೋರಲಿಲ್ಲ. ಈಜಿಪ್ಟಿನ ಪ್ರಶ್ನೆ, ಇರಾನಿನ ಎಣ್ಣೆ ಸಮಸ್ಯೆ, ದಕ್ಷಿಣ ಆಫ್ರಿಕಾದ ವರ್ಣ ಪ್ರಶ್ನೆ, ಕಮ್ಯೂನಿಸ್ಟ್ ಚೀನಕ್ಕೆ ಭದ್ರತಾ ಸಮಿತಿಯಲ್ಲಿ ಸ್ಥಾನ ಒದಗಿಸುವ ಪ್ರಶ್ನೆ ಇವೆಲ್ಲ ಪ್ರಶ್ನೆಗಳಲ್ಲಿ ಅಮೇರಿಕ ತಳೆದ ಧೋರಣೆ ನೋಡಿದರೆ ಭಾರತದ ಬೆಳವಣಿಗೆ ವಿಚಾರದಲ್ಲಿ ಅಮೇರಿಕೆಯ ವಿಶ್ವಾಸ ಎಷ್ಟಿದೆ ಎಂಬುದು ಊಹಿಸಬಹುದು. ಈಗೀಗ ಭಾರತವೂ ಅಮೇರಿಕೆಯ ಕಣ್ಣಿನಿಂದ ಅಂತರ್ರಾಷ್ಟ್ರೀಯ ಸಮಸ್ಯೆಯನ್ನು ಪರಿಶೀಲಿಸುತ್ತಿದೆ. ಅಮೇರಿಕೆಗೆ ಹಿತವಾದದ್ದು ಭಾರತಕ್ಕೂ ಹಿತವಾಗಿದೆ. ಇನ್ನು ಅವರ ಅಗ್ಗದ ಗೋಧಿ ತಿಂದು, ಅವರ ಪುಕ್ಕಟೆ ಡಬ್ಬಿಯ ಹಾಲು ಕುಡಿದು ನಮ್ಮ ಬುದ್ಧಿ, ನಮ್ಮ ನೀತಿ, ನಮ್ಮ ವ್ಯಕ್ತಿತ್ವವೆಲ್ಲ ಅಮೇರಿಕೆಯ ಪ್ರತಿಛಾಯೆ ಆಗಲು ಅಡ್ಡಿ ಇಲ್ಲ. ಕಮ್ಯೂನಿಝಂ ತಡೆಗಟ್ಟಲು ಭಾರತ, ಅಮೇರಿಕಗಳು ಒಂದಾದರೂ ಅಮೇರಿಕ ಭಾರತವನ್ನು ಉಪಯೋಗಿಸಿಕೊಂಡರೂ ಅದರ ಪರಿಣಾಮ 'ಅಮೇರಿಕನೈಸ್ಡ್' ಭಾರತ ಆಗದಂತೆ ಎಚ್ಚರಿಕೆಯಿಂದಿರಬೇಕಾದುದು ಅವಶ್ಯ.

ಅಗ್ಗದ ಈ ಹಾಲು ಡಬ್ಬಿಗಳು, ಈ ಮಲೇರಿಯಾ ನಿರೋಧದ ಹೆಸರಲ್ಲಿ ಸಾವಿರಗಟ್ಟಲೆ ಔಷಧದ ಸೂಜಿಗಳು, ಪ್ಲಾಸ್ಟಿಕ್ ಬೊಂಬೆಗಳು, ಲಿಪ್‌ಸ್ಟಿಕ್, ಮುಂತಾದ

Licence No. 60.
Licenced to Post without Prepayment

Reg. No. M. 1550.
"KODAGU" MERCARA (Coorg)

೬—೨—೧೯೫೬

ಷೋಕಿ ಸಾಮಾನುಗಳು, ರಬ್ಬರ್ ಸಾಮಾಗ್ರಿಗಳು ಹೀಗೆ ಎಡೆಬಿಡದೆ ಅಮೇರಿಕದ ಸಾಮಾನುಗಳು, ಸಾಲದ ಹೆಸರಲ್ಲೂ ಸಹಾಯದ ನೆಪದಿಂದಲೂ, ಕಾರುಣ್ಯದ ಕೃಪೆಯಿಂದಲೂ, ದಾನದ ಔದಾರ್ಯದಿಂದಲೂ ಬಂದು ನಮ್ಮ ದೇಶ ತುಂಬಿ, ನಮ್ಮ ಕೈಯನ್ನು ಸೋಮಾರಿಯಾಗಿರಿಸಿ, ನಮ್ಮ ಜೇಬು ಖಾಲಿ ಮಾಡಿ, ಕೊನೆಗೆ ನಮ್ಮ ವ್ಯಕ್ತಿತ್ವವನ್ನು ಅಪಹರಿಸಿ, ಮತ್ತೊಮ್ಮೆ ನಮ್ಮನ್ನು ದಾಸರನ್ನಾಗಿ ಮಾಡಬಾರದು.

ಗಾಂಧೀಜಿ ಅಂದೇ ಹೇಳಿದರು. ಪರದೇಶದ ಕೋಟಿ ಡಾಲರುಗಳ ಸಹಾಯದ ಹಿಂದೆ ಅದರ ಗಂಡಾಂತರವೂ ಇದೆ ಎಂದು.

ಅದಕ್ಕೇ ಹೇಳಿದೆ ಕಮ್ಯುನಿಝಮ್ಮೆ? ಅಮೇರಿಕನಿಝಮ್ಮೆ? ಎಂದು. ನಮಗೆ ಯಾವ ಇಝಮ್ಮೂ ಬೇಡ-ಗಾಂಧೀಝಂ ಒಂದೇ ನಮ್ಮ ಮಂತ್ರ—ನಮಗೆ ಬೇಕು ಗಾಂಧಿಝಂ.

ಇತರ ರಾಷ್ಟ್ರಗಳ ಉದಾಹರಣೆ ನೋಡಿದರೂ ನಮಗೆ ಈ ಹೆದರಿಕೆ ತಪ್ಪಿಲ್ಲ ಎನಿಸುತ್ತದೆ. ಸಹಾಯದ ನೆಪದಲ್ಲಿ ರಾಷ್ಟ್ರ ರಾಷ್ಟ್ರಗಳು ದಾಸರಾಗಿ ಬಾಳಿದ ನಿದರ್ಶನಗಳು ಇತಿಹಾಸದಲ್ಲಿವೆ. ಚೀಣೀಯರಿಗೆ ಅಫೀಮು ದಾನವಾಗಿ ಕೊಟ್ಟ ಬ್ರಿಟಿಷರ ಚರಿತ್ರೆಯೇ ಸಾಕು ನಿದರ್ಶನಕ್ಕೆ. ಬುದ್ಧಿವಂತ ರಾಷ್ಟ್ರ—ವ್ಯವಹಾರ ಕುಶಲರು ಹೂಡುವ ತಂತ್ರವೇ ಹೀಗೆ. ಭಾರತ ಮಾತ್ರ ಪರಕೀಯರ ರಾಷ್ಟ್ರವಾಗಿ ಉಳಿಯಬಾರದು. ನಮಗೆ ಅಮೇರಿಕವೂ ಬೇಡ—ರಷ್ಯವೂ ಬೇಡ—ಭಾರತ ಭಾರತೀಯರಿಗೆ ಇರಲಿ. 'ನವಯುಗ'

ನಗುಮಲ್ಲಿಗೆ

ಎರಡು ಬೆಸ್ತರಲ್ಲಿ ತಮ್ಮೊಳಗೆ ಯಾರು ಲೆಕ್ಕದಲ್ಲಿ ಜಾಣರು ಎಂಬ ಬಗ್ಗೆ ಚರ್ಚೆ ನಡೆಯುತ್ತಿತ್ತು. ಇವರ ಚರ್ಚೆಯನ್ನು ನೋಡಿ ಮೀನು ಕೊಳ್ಳಲು ಬಂದವನೊಬ್ಬನು ಇಬ್ಬರಿಗೆ ಒಂದು ಲೆಕ್ಕ ಹಾಕಿದನು.

ಐನೂರು ಬಾಳೆಮೀನುಗಳನ್ನು ಹಿಡಿದು ಮೀನೊಂದಕ್ಕೆ ಎಂಟಾಣೆಯಂತೆ ಮಾರಿದರೆ ದೊರೆಯುವ ಹಣವೆಷ್ಟು?

ಎರಡು ಬೆಸ್ತರೂ ತಲೆತುರುಸಿಕೊಂಡು ಲೆಕ್ಕ ಹಾಕತೊಡಗಿದರು. ಇಬ್ಬರಿಗೂ ಉತ್ತರ ದೊರೆಯಲಿಲ್ಲ. ಕಡೆಗೆ ಒಬ್ಬರು ಕೇಳಿದರು. 'ಎಂಥಾ ಮೀನು?'

ಲೆಕ್ಕ ಹಾಕಿದವರು—ಬಾಳೆಮೀನು.

ಬೆಸ್ತ—ಅದಕ್ಕಾಗಿಯೇ ನನಗೆ ಲೆಕ್ಕ ತಿಳಿಯದ್ದು. ನಾನು ಯಾವಾಗಲೂ ಬರೆ ಮೀನು ಮಾರುವವನು!

* * *

ಎರಡು ಸಹೋದರರು ಜೊತೆಯಲ್ಲಿ ಮಲಗುತ್ತಿದ್ದರು. ಚಿಕ್ಕವನು ಬೆಳಗ್ಗೆ ತಾಯಿಯೊಡನೆ ರಾತ್ರಿ ತನಗೆ ಆದ ತೊಂದರೆಯನ್ನು ಹೇಳುತ್ತಾ 'ಅಣ್ಣನು ಹಾಸಿಗೆಯ ಅರ್ಧವನ್ನು ಆಕ್ರಮಿಸಿ ಬಿಡುತ್ತಾನೆ' ಎಂದನು.

'ಆತನಿಗೇಕೆ ಅರ್ಧ ದೊರೆಯಬಾರದು?' ತಾಯಿ ಕೇಳಿದಳು.

'ಆತನು ಯಾವಾಗಲೂ ಮಧ್ಯದ ಅರ್ಧಭಾಗ ತೆಗೆದುಬಿಟ್ಟು ನನಗೆ ಆ ಕಡೆ ಈ ಕಡೆ ಕಾಲು ಕಾಲು ಜಾಗ ಬಿಡುತ್ತಾನೆ,'

* * *

ಆಕೆ— ನಿನ್ನ ಗಂಡನು ನಿನ್ನನ್ನು ಅವಶ್ಯದ ವಸ್ತುವೆಂದು ಗಣಿಸುವನೋ ಯಾ ಆಡಂಬರದ ಸಾಮಗ್ರಿಯೆಂದೋ?

ಈಕೆ—ನಾನು ಆತನಿಗೆ ಅಡಿಗೆ ಮಾಡುತ್ತಿರುವೆನೋ ಯಾ ಹೊಸ ಸೀರೆ ಬೇಕೆಂದು ಕೇಳುತ್ತಿರುವೆನೋ ಎಂಬುದರ ಮೇಲೆ ಆ ಅಭಿಪ್ರಾಯ ನಿಂತಿದೆ.

ಇಬ್ಬರಲ್ಲಿ ದ್ವಂದ್ವಯುದ್ಧದ ನಿಶ್ಚಯವಾಗಿತ್ತು. ಇಬ್ಬರೂ ಕೈಯಲ್ಲಿ ಪಿಸ್ತೂಲು ಹಿಡಿದು ತಯಾರಾಗಿದ್ದರು. ಅವರಲ್ಲಿ ಒಬ್ಬರು ಇನ್ನೊಬ್ಬರಿಗಿಂಥಾ ಎರಡು ಪಾಲು ದಪ್ಪದವರಾಗಿದ್ದರು. ಅವರು ತಮ್ಮ ವಿರೋಧ ಸೂಚಿಸುತ್ತಾ 'ನನಗೆ ಗುಂಡು ಹೊಡೆಯುವಾಗ ನಿನಗೆ ನಾನು ಹೊಡೆಯುವ ದೂರಕ್ಕಿಂಥಾ ಎರಡರಷ್ಟು ಹೆಚ್ಚಿನ ದೂರದಲ್ಲಿ ನೀನು ನಿಲ್ಲಬೇಕು.' ಎಂದರು.

ಎರಡನೆಯವನು ಒಪ್ಪಲಿಲ್ಲ. ಕಡೆಗೆ ಎರಡನೆಯವನ ದಪ್ಪಕ್ಕೆ ಸರಿಯಾಗಿ ತನ್ನ ಶರೀರದ ಉದ್ದಕ್ಕೂ ಎರಡು ಬದಿಯಲ್ಲೂ ಸುಣ್ಣಗೆರೆ ಎಳೆದು ಗುಂಡು ಮಧ್ಯದ ಭಾಗಕ್ಕೆ ಮಾತ್ರ ತಗಲಬೇಕು. ಹೊರಗೆ ತಗಲಿದರೆ ಲೆಕ್ಕಕ್ಕಿಲ್ಲವೆಂದು ಮೊದಲನೆಯವನು ಹೇಳಿದನು.

* * *

ಅಧ್ಯಾಪಕ—ಕಮಲಾ, ಯಾವ ಪ್ರಾಣಿವರ್ಗಕ್ಕೆ ನೀನು ಸೇರಿದ್ದೀ?

ಕಮಲಾ—ತಂದೆಯವರು ಕತ್ತೆ ಎಂದು ಹೇಳುತ್ತಾರೆ. ತಾಯಿಯವರು ಬೆಕ್ಕು ಎನ್ನುತ್ತಾರೆ.

* * *

ತಂದೆ ಮತ್ತು ಮಗ ಇಬ್ಬರೂ ಬೇಟೆಗಾಗಿ ಕಾಡಿಗೆ ಹೋಗಿದ್ದರು. ಅದು ರಿಸರ್ವ್ ಫಾರೆಸ್ಟು. ಆದರೆ ಅವರಿಗೆ ಬೇಟೆಯೇ ಸಿಗಲಿಲ್ಲ. ಕಡೆಗೆ ಮಗನು ತಂದೆಗೆ ಒಂದು ಸೂಚನೆ ಇತ್ತನು. 'ಈ ಪ್ರಾಣಿಗಳು ನಾವು ಲೈಸೆನ್ಸ್ ಇಲ್ಲದೆ ಬೇಟೆಗೆ ಬಂದುದೆಂದು ಭಾವಿಸಿದಂತಿದೆ. ಅಪ್ಪಾ, ಲೈಸೆನ್ಸ್ ಪತ್ರವನ್ನು ಹೊರಗೆ ಕಾಣುವಂತೆ ಎದೆಗೆ ಹಚ್ಚಿಕೋ!'

* * *

ಸುಂದರಿಯೊಬ್ಬಳು ಅತಿವೇಗದಿಂದ ಕಾರು ನಡೆಸಿಕೊಂಡು ಹೋಗುತ್ತಿದ್ದಳು. ರಸ್ತೆಯಲ್ಲಿಯ ಪೋಲೀಸನು ಕಾರನ್ನು ನಿಲ್ಲಿಸಿ "ನಾನು ಏಕೆ ನಿಲ್ಲಿಸಿದೆನೆಂದು ನಿನಗೆ ತಿಳಿಯಿತೇ?" ಎಂದು ಕೇಳಿದನು.

ಯುವತಿ—" ಹೌದು, ನೀನು ಏಕಾಂಗಿಯಾಗಿ ಬೇಸರ ಬಂದಿರಬಹುದು".

* * *

ಆತನು ಜಗಜಟ್ಟಿ ಎನಿಸಿದ್ದ. ಯಾರೂ ಆತನಿಗೆಣೆ ಇರಲಿಲ್ಲ. ಒಂದು ದಿನ ಒಬ್ಬರು ಬಂದು ಆತನೊಡನೆ ಪಂಥ ಕಟ್ಟಿದರು. "ನಾನು ಈ ದೀಪ ಕಂಬದಿಂದ ಆ ದೀಪ ಕಂಬದ ವರೆಗೆ ತೆಗೆದುಕೊಂಡು ಹೋಗಿ ಇಟ್ಟ ವಸ್ತುವನ್ನು ನೀನು ಒಂದಕ್ಕೆ ಅದೇ ರೀತಿ ತರಲಾರೆ"

ಜಗಜಟ್ಟಿ ಆಲೋಚಿಸಿದನು. ಪಂಥ ಕಟ್ಟಿದವನೇನು ಬಲಶಾಲಿಯಲ್ಲ. ನೀಮೆಂಟಿ, ಕಲ್ಲೇ ಯಾವುದಿರಬಹುದು. ಏನಿದ್ದರೂ ಆತನು ಹೊತ್ತುದನ್ನು ತಾನು ಹೊರುವೆನೆಂದು ಪಂಥ ಕಟ್ಟಿದನು.

ಹೊಸ ಮನುಷ್ಯನು ಮಕ್ಕಳ ತಳ್ಳುಗಾಡಿಯನ್ನು ತಂದು ಜಟ್ಟಿಗೆ ಅದರೊಳಗೆ ಕೂರಲು ಹೇಳಿದನು. ಗಾಡಿಯನ್ನು ನೂಕಿ ತಂದನು. ಜಗಜಟ್ಟಿ ತನ್ನನ್ನೇ ಗಾಡಿಯಲ್ಲಿಟ್ಟು ತಾನೇ ನೂಕಲಾರದೆ ಪಂಥದಲ್ಲಿ ಸೋತನು.

* * *

ಗಂಡ—"ನಿನ್ನೆ ರಾತ್ರಿ ನಿದ್ರೆಯಲ್ಲಿ ನಾನು ಮಾತಾಡಿದೆನೆ? ಆಶ್ಚರ್ಯ, ನಾನು ನಿನ್ನ ತಾಯಿಯ ಸ್ವಪ್ನ ಕಂಡೆ!

ಹೆಂಡತಿ—ಅದರಲ್ಲಿ ಆಶ್ಚರ್ಯವೇನು?

ಗಂಡ—ನನಗೆ ಮಾತಾಡಲು ಅವಕಾಶ ಹೇಗೆ ಸಿಕ್ಕಿತೆಂಬುದು!

* * *

ಲಾಯರು—ಮನೆಯ ಆವರಣದಲ್ಲಿ ಏನು ಕಂಡೆ?

ಸಾಕ್ಷಿ—ಏನೂ ಇಲ್ಲ. ಶೇಕ್ಸ್‌ಪಿಯರ್ ಹೇಳಿದ ಹಾಗೆ ಎಲ್ಲವೂ ಮರುಭೂಮಿ ಸಮ್ಮಖ!

ಲಾಯರು—ಶೇಕ್ಸ್‌ಪಿಯರ್ ಏನು ಹೇಳಿದ್ದೇಬುದು ಇರಲಿ. ಈ ಕೇಸಿನ ವಿಚಾರ ಆತನಿಗೇನಾದರೂ ಗೊತ್ತಿದ್ದರೆ ಹೇಳು. ಆತನನ್ನು ಕರೆಸಬಹುದು!

* * *

ಬೇರೆಯವ— ಯೆಹೂದ್ಯರು ಅಷ್ಟು ಬುದ್ಧಿಶಾಲಿಗಳಾಗಲು ಕಾರಣವೇನು?

ಯೆಹೂದ್ಯ—ಅವರು ಒಂದು ರೀತಿಯ ಮೀನನ್ನು ತಿನ್ನುತ್ತಾರೆ. ಅದ್ದರಿಂದ ಅವರಿಗೆ ಮೆದುಳು ಹೆಚ್ಚು. ನಾನು ಆ ಮೀನು ಮಾರುತ್ತೇನೆ. ಒಂದು ಮೀನಿಗೆ ಹತ್ತು ರೂಪಾಯಿ.

ಬೇರೆಯವನು ಹತ್ತು ರೂಪಾಯಿ ಕೊಟ್ಟು ಮೀನನ್ನು ಪಡೆದು ಪಟ್ಟಿಗೆ ಒಡೆದು ಮೀನನ್ನು ತಿನ್ನತೊಡಗಿ ಓಹೋ, ಇದು ವಿಶೇಷವೇನಲ್ಲ. ಸಾಮಾನ್ಯವಾದ ಮತ್ತಿ ಮೀನು!

"ನೋಡು" ಯೆಹೂದ್ಯನೆಂದ "ಈಗಾಗಲೇ ನಿನಗೆ ಬುದ್ಧಿ ಬರತೊಡಗಿದೆ".

* * *

ಪತ್ರಿಕೆಯಲ್ಲಿ ಒಂದು ಜಾಹೀರಾತು ಹೀಗಿತ್ತು:

"....ರ ಕಾದಂಬರಿಯಲ್ಲಿಯ ಮೂಲ ಪಾತ್ರದ ಹಾಗಿರುವ ಯುವತಿಯು ಮಿಲಿಯಾಧಿಪತಿಯೊಬ್ಬನಿಗೆ ಪತ್ನಿಯಾಗಲು ಬೇಕು. ವ್ಯವಹಾರವೆಲ್ಲವನ್ನೂ ಗುಟ್ಟಿನಲ್ಲಿಡಲಾಗುವುದು"

ಎರಡು ದಿನಗಳಲ್ಲಿ ....ರ ಕಾದಂಬರಿಯೆಲ್ಲ ಮಾರಾಟವಾಗಿ ಹೋಗಿತ್ತು!

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನಂ. ಜುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಸೂಚಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ನಳಿಗೆಯ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
4. 9" x 4" ಮತ್ತು 8" x 4" ಕಬ್ಬಿಣದ ತೊಲೆಗಳು (Girders).
5. 8' x 3' x 24' (Gage) ಕಬ್ಬಿಣದ ತಗಡುಗಳು.
6. $1\frac{3}{4}$" x $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8 ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Edited Printed and Published by P. I. BELLIAPPA at 'KODAGU' Press, Mercara for Kodagu Ltd.,

ಕೊಡಗು

॥ ಮಧು ಪರ್ಕ ॥

[illegible]

[illegible]

[illegible]

KODAGU KANNADA WEEKLY **MERCARA**

ವಾರದ ಕಥೆ

ಪರಿವರ್ತನೆ

ಲೇ:— ಶ್ರೀ ಥಿಯೋಡರ್ ಕಿಂಗ್

'ನೀನು ಕೆಟ್ಟವನಲ್ಲ ಗುರುಚರಣಾ. ನೀನು ದಾರಿತಪ್ಪಿ ವರ್ತಿಸುತ್ತಿರುವೆ. ದೇವರಲ್ಲಿ ಸ್ವಲ್ಪ ವಿಶ್ವಾಸವಿರಿಸುವೆಯಾದರೆ ನಿನ್ನ ಜೀವನ ಸುಖಮಯವಾಗುವದು. ಏಕೆ ಪ್ರಯತ್ನಿಸಬಾರದು?' ಉಮಾಳು ಕಾತರದಿಂದ ನುಡಿದಳು.

ಗುರುಚರಣನು ಮಾತುಗಳನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಆತನು ಯುವಕ. ಬಲಶಾಲಿಯಾದ ಶರೀರ. ಆತನ ಕೈಯಲ್ಲಿ ಕತ್ತಿ ಇತ್ತು. ನಡುಪಟ್ಟಿಯಲ್ಲಿ ಕಠಾರಿ ತೂಗುತಿತ್ತು. ಜನರು ಆತನ ಹೆಸರು ಕೇಳಿದಾಗ ನಡುಗುತ್ತಿದ್ದರು. ಆತನು ದರೋಡೆಗಾರ. ಆತನ ವೃತ್ತಿಯು ಸುಲಿಗೆ. ಸುಲಿಗೆಗೆ ಆತಂಕಬಂದವರನ್ನು ಕತ್ತರಿಸಿ ಹಾಕಲು ಆತನು ಸ್ವಲ್ಪವೂ ಹಿಂಜರಿಯುತ್ತಿರಲಿಲ್ಲ. ಗ್ರಾಮ ಗ್ರಾಮಗಳನ್ನು ಆತನು ಲೂಟಿಮಾಡುತ್ತಿದ್ದನು. ಆತನ ಅನುಯಾಯಿಗಳು ನೂರಾರು ಜನರಿದ್ದರು. ಆತನು ಹಲ ಕೆಲವು ಗ್ರಾಮಗಳನ್ನೇ ವಶಪಡಿಸಿಕೊಂಡಿದ್ದನು.

ಉಮಾಳು ಬೋಕಾರ್ ಗ್ರಾಮದ ಪುರೋಹಿತರ ಮಗಳು. ಆಕೆಯ ತಂದೆಯು ದೈವಭಕ್ತನಾಗಿದ್ದನು. ಮಗಳೂ ಕೂಡ ಅದೇ ಪರಂಪರೆಯಲ್ಲಿ ಬೆಳೆದವಳು. ಆಕೆಯ ಸೌಂದರ್ಯವೂ, ವಯ, ಭಯ, ಗುಣಗಳೂ ಸರ್ವರಿಂದ ಹೊಗಳಲ್ಪಡುತ್ತಿದ್ದವು. ಪ್ರತಿಯೊಬ್ಬರೂ ಆಕೆಯನ್ನು ಹೊಸ ವ ಸಮಾಜದ ಆರಾಧ್ಯದೇವತೆಯೆಂದು ಬಗೆದಿದ್ದರು.

ಗುರುಚರಣನ ಸಂಗಡಿಗರು ಬೋಕಾರ ಗ್ರಾಮವನ್ನು ನುಗ್ಗಿ ಲೂಟಿಮಾಡಿದ್ದರು. ಹಲವು ಜನರ ಕೊಲೆ ನಡೆದಿತ್ತು. ಭಯಂಕರ ರಾಕ್ಷಸನಂತೆ ಕೊಲೆ ಪಾತಕದಲ್ಲಿ ಮಗ್ನನಾಗಿದ್ದ ಗುರುಚರಣನು ಗಕ್ಕನೆ ಗ್ರಾಮದ ಜನರ ಮಧ್ಯದಲ್ಲಿ ಉಮಾಳನ್ನು ಕಂಡು ಸ್ತಂಭಿತನಾದನು. ಆತನು ತನ್ನ ರಕ್ತಮಯ ಕಠಾರಿಯನ್ನು ನಿಕ್ಷೇಪಿಸಿ ಆಕೆಯ ಕಡೆಗೆ ಧಾವಿಸಿದನು. ಉಳಿದ ದರೋಡೆಕಾರರು ತಮ್ಮ ಕೆಲಸದಲ್ಲಿ ಮಗ್ನರಾಗಿದ್ದರು. ಆಜೀ ಗ್ರಾಮದ ಪತನವಾಯಿತು. ದರೋಡೆಗಾರರು ಕೊಳ್ಳೆಯೊಡನೆ ಹೊರಟು ಹೋದರು.

ಗುರುಚರಣನು ಉಮಾಳ ಸೌಂದರ್ಯದಲ್ಲಿ ಪರವಶನಾದನು. ಉಮಾಳೂ ಗಾಬರಿಯಿಂದ ವರ್ತಿಸಲಿಲ್ಲ. ಶಾಂತಿಯಿಂದ ಆತನನ್ನು ನಗುಮುಖದಿಂದ ಸ್ವಾಗತಿಸಿದಳು. ಕರ್ಕಶ ಹೃದಯದ ಗುರುಚರಣನು ಆಕೆಯ ಮೇಲೆ ಕೈಮಾಡದೆ ನಮ್ರನಾಗಿ ನಿಂತನು. ಅವರ ಪ್ರೇಮವು ಬೆಳೆಯತೊಡಗಿತು. ಗುರುಚರಣನು ಪ್ರತಿ ದಿನ ಆ ಗ್ರಾಮಕ್ಕೆ ಉಮಾಳ ಭೇಟಿಗಾಗಿ ಬರುತ್ತಿದ್ದನು. ಅವರು ಹಳ್ಳಿಯ ಹೊಳೆಯ ದಡದಲ್ಲಿ ಮರಗಳ ಛಾಯೆಯಲ್ಲಿ, ಸಂಧ್ಯಾಸೂರ್ಯನ ವರ್ಣರಂಜಿತ ಬೆಳಕಿನಲ್ಲಿ ಕುಳಿತು ಮಾತಾಡುವರು.

'ನೀನು ತಿಳಿಗೇಡಿತನದ ಮಾತಾಡುವೆ ಉಮಾ. ನನ್ನ ಹೃದಯವು ನಿನಗಾಗಿ ಕಾತರಿಸುತ್ತಿದೆ. ನನಗೆ ದೇವರ ಅಗತ್ಯವಿಲ್ಲ' ಗುರುಚರಣನೆಂದನು.

'ನೀನು ದೇವರ ಮೇಲೆ ವಿಶ್ವಾಸವಿಟ್ಟ ಸತ್ಯ, ನೀತಿ, ನಡತೆಯಲ್ಲಿ ಭರವಸ ಉಳ್ಳವನಾದರೆ ನನಗಾಗುವ ಆನಂದಕ್ಕೆ ಮೇರೆ ಇರುವದೇ?

'ದೇವರನ್ನು ನಂಬುವವನು ನಾನಲ್ಲ. ನನ್ನ ಜೀವನದಲ್ಲಿ ಆತನ ಅವಶ್ಯಕತೆಯೂ ಇಲ್ಲ. ತಿರುಳಿಲ್ಲದ ವಿಚಾರಗಳಲ್ಲಿ ಮಾತಾಡದಿರು. ನನಗೆ ನೀನೇ ಸಾಕು. ನನ್ನ ಮನಸ್ಸಿಗೆ ಸಂತೋಷವಿದ್ದಂತೆ ನಾನು ಮಾಡುವವನೇ ವಿನಾ ನೀನು ಹೇಳಿದ್ದಕ್ಕಾಗಿ ದೇವರ ವಿಶ್ವಾಸ ನನಗೆ ಬಾರದು. ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನು ವಿರೋಧಿಸಕೂಡದು'

'ನಾನೂ ನಿನ್ನನ್ನು ಪ್ರೀತಿಸುತ್ತೇನೆ ಗುರುಚರಣಾ. ನೀನು ನನಗೆ ತೊಂದರೆಗೆ ಅವಕಾಶ ಮಾಡಬಾರದು. ನಾವು ಮದುವೆಯಾದಾಗ ಒಂದೇ ಶರೀರ, ಒಂದೇ ಆತ್ಮ, ಒಂದೇ ಜೀವನದ ಏಕಮೂರ್ತಿಗಳಾಗುವೆವು. ಆದರೆ ನಿನ್ನ ಅಭಿಪ್ರಾಯವು ನನ್ನದಕ್ಕಿಂತಲೂ ಭಿನ್ನವಾದರೆ ಜೀವನದಲ್ಲಿ ತೊಡರಿಗೆ ಆಸ್ಪದವಾಗುವದು.'

'ನನಗೆ ಅರ್ಥವಾಗದು. ನನಗೆ ತಿಳಿದಂತೆ ನಾನು ಮಾಡುವೆನು. ದೇವರ ವಿಚಾರ ಬಿಡು. ನನ್ನ ಪ್ರೀತಿಯು ನಿನ್ನನ್ನು ಸುಖಿಯಾಗಿರಿಸುವದು.'

'ಆದರೆ ನೀನು ಗ್ರಾಮ ಗ್ರಾಮಗಳನ್ನು ಲೂಟಿಮಾಡಿ, ಮಾನವರನ್ನು ಕತ್ತರಿಸಿ ಹಾಕಿದರೆ ನನಗೆ ಶಾಂತಿ ಸುಖ ಹೇಗೆ? ನನಗೆ ನೋವು ಮಾಡದಿರು ಗುರುಚರಣಾ?'

"ನಾನು ಮಾಡುವದು ತಪ್ಪೆಂಬ ಉಪದೇಶ ನನಗೆ ಬೇಡ. ಅದೇ ನನ್ನ ಜೀವನ." ಗುರುಚರಣನು ಉಮಾಳನ್ನು ಬಿಗಿದಪ್ಪಿ ಮುದ್ದಿಸಿದನು. ದುಃಖ ಸಂತೋಷಗಳ ಸಮ್ಮಿಲನದಿಂದ ಉಮಾಳು ಮೂರ್ಛಿತಳಾದಳು.

• • •

ಅರಸ ಹರ್ಷವರ್ಧನನ ಹೆಸರನ್ನು ಯಾರು ಕೇಳಿಲ್ಲ? ತಕ್ಷಶಿಲೆಯಲ್ಲಿ ಆಗ ವಿಖ್ಯಾತ ವಿಶ್ವವಿದ್ಯಾಲಯವಿತ್ತು. ಆದರೆ ರಾಜಧಾನಿ ತಕ್ಷಶಿಲೆಯಿಂದ ಕನೋಜಿಗೆ ಹೋಗುವ ಸಾವಿರ ಮೈಲುಗಳ ದಾರಿ ಭಯಂಕರವಾದುದಿತ್ತು. ಈ ಪ್ರಯಾಣದಲ್ಲಿ ಗುರಿ ಮುಟ್ಟುವವರು ವಿರಳರು. ಅನೇಕರು ದಾರಿಯಲ್ಲಿಯ ದರೋಡೆಗಾರರಿಗೆ ಆಹುತಿಯಾದರೆ ಅನೇಕರು ಕಾಡಿನ ಹುಲಿ ಕರಡಿಗಳಿಗೆ ಆಹುತಿಯಾಗುತಿದ್ದರು. ಪ್ರಯಾಣಿಕನೊಬ್ಬನು ಆ ದಾರಿಗಾಗಿ ಹೊರಟಿದ್ದನು. ಆ ಪ್ರಯಾಣಿಕನಿಗೆ ಇದಾವುದರ ಗೊತ್ತೆ ಇರಲಿಲ್ಲ. ಆತನು ತನ್ನ ಕುದುರೆಯನ್ನೇರಿ ಸಾವಧಾನದಿಂದ ಸಾಗುತಿದ್ದನು. ತೆಳ್ಳಗಿನ ಶರೀರ, ಬಾಗಿದ ಮೂಗು, ಉದ್ದ ಕೈ, ಬಿಗುವಿಲ್ಲದ ಉಡುಪು, ಕಿವಿಟೊಪ್ಪಿ, ವಿದ್ಯಾಸನ್ನವಾದ ಮಂಗೋಲಿಯಾ ಮುಖ. ಆತನು ಚೀನೀ ಯಾತ್ರಿಕನಾಗಿದ್ದನು. ಆತನ ಮುಖದಲ್ಲಿ ಬೆವರು ಹನಿ ಹನಿಯಾಗಿ ತುಂಬಿತ್ತು. ಆತನಿಗೆ ಕನೋಜಿಗೆ ಮುಟ್ಟುವ ಒಂದು ಗುರಿಯು ವಿನಾ ಬೇರೆ ಯೋಚನೆ ಇರಲಿಲ್ಲ. ನದಿಗಳನ್ನು ದಾಟಿ, ಬೆಟ್ಟಗುಡ್ಡಗಳನ್ನು ಹತ್ತಿ ಕನೋಜಿನ ಅರಸನಾದ ಹರ್ಷವರ್ಧನನ್ನು ನೋಡಲು ಆತನು ಹೊರಟಿದ್ದನು.

ಈ ಪ್ರಯಾಣಿಕನ ವಾರ್ತೆ ಗುರುಚರಣನಿಗೆ ದೊರೆಯಿತು. ಆತನಲ್ಲಿ ಅಪಾರ ಹಣವಿರಬಹುದೆಂದು ಆತನು ನಂಬಿದನು. ಆತನನ್ನು ದಾರಿಯಲ್ಲಿ ಸುಲಿಗೆ ಮಾಡುವ ಏರ್ಪಾಡು ಮಾಡಿದನು. ಚೀನೀ ಯಾತ್ರಿಕನು ಬೋಕಾರ್ ಹಳ್ಳಿಯ ಮಾರ್ಗವಾಗಿ ಹೋಗುತಿದ್ದನು. ಗುರುಚರಣನು ತನ್ನ ಜನರೊಡನೆ ಆತನನ್ನು ದಾರಿಯಲ್ಲಿ ಎದುರ್ಗೊಂಡು ಸ್ವಾಗತಿಸಿದನು! ಆತನನ್ನು ಒಂದು ಮರದಡಿಗೆ ಕರೆದುಕೊಂಡು ಹೋಗಿ ಕ್ರಮಶಃ ಆತನ ಬಟ್ಟೆ ಬರೆ, ಗಂಟು ಮೂಟೆಗಳನ್ನು ಒಂದೊಂದಾಗಿ ವಶಪಡಿಸಿಕೊಂಡನು. ಚೀನೀ ಭಿಕ್ಷುವು ವಿರೋಧ ಮಾಡಲಿಲ್ಲ. ಆತನ ಬಟ್ಟೆ ಎಲ್ಲವನ್ನೂ ತೆಗೆದು ನಗ್ನಗೊಳಿಸಿದ್ದರೂ ಆತನು ನಾಚಲಿಲ್ಲ. ಆಶ್ಚರ್ಯದೃಷ್ಟಿಯಿಂದ ಗುರುಚರಣನನ್ನೇ ಆತನು ನೋಡುತಿದ್ದನು.

ಗುರುಚರಣ ಮತ್ತವನ ಜೊತೆಗಾರರು ಯಾತ್ರಿಕನ ಗಂಟು ಮೂಟೆಗಳನ್ನು ಶೋಧನೆ ಮಾಡತೊಡಗಿದರು. ಅದರಲ್ಲಿ ಯಾವ ಹೊನ್ನೂ ಇರಲಿಲ್ಲ. ಅವರಿಗೆ ಆಶ್ಚರ್ಯವಾಯಿತು.

"ಎಲ್ಲಿದೆ ನಿನ್ನ ಹಣ?" ಗುರುಚರಣನು ಹುಬ್ಬು ಗಂಟಿಕ್ಕಿ ಕೇಳಿದನು.

ಬುದ್ಧ ಭಿಕ್ಷುವು ತನ್ನ ಗಂಟಿನೊಳಗಿದ್ದ ಒಂದೆರಡು ಪುಸ್ತಕಗಳ ಕಡೆಗೆ ಕೈತೋರಿಸಿದನು. ಗುರುಚರಣನಿಗೆ ಓದು ಬರಹ ಬರುತ್ತಿರಲಿಲ್ಲ. ಅದರಿಂದ ಆತನಿಗೇನೂ ತಿಳಿಯಲಿಲ್ಲ. ಆತನು ಆಶ್ಚರ್ಯಚಕಿತನಾದನು.

'ನೀನು ತಿಳಿಗೇಡಿ; ಆ ಪುಸ್ತಕದಲ್ಲಿ ಹಣವೆಲ್ಲಿದೆ?" ಗುರುಚರಣನು ಕೇಳಿದನು.

"ನಾನೆಲ್ಲರೂ ತಿಳಿಗೇಡಿಗಳೇ. ಆ ಬುದ್ಧನೊಬ್ಬನು ಮಾತ್ರ ಜ್ಞಾನಿ" ಯಾತ್ರಿಕನೆಂದನು.

ನಿರಾಶನಾದ ಗುರುಚರಣನು ತನ್ನ ಜನರೊಡನೆ ಯಾತ್ರಿಕನ ಬಟ್ಟೆ, ಪುಸ್ತಕಗಳನ್ನು ಆತನಿಗೆ ಕೊಟ್ಟು ತನ್ನ ಗ್ರಾಮಕ್ಕೆ ಹಿಂತಿರುಗಿದನು.

• • •

ಆ ದಿನ ರಾತ್ರಿ ಉಮಾಳು ಗುರುಚರಣನಲ್ಲಿಗೆ ಒಬ್ಬ ಆಳನ್ನು ಕರೆಕಳುಹಿಸಿದ್ದಳು. ಅತಿ ಶೀಘ್ರವಾಗಿ ಆಕೆಯನ್ನು ಬಂದು ಕಾಣಬೇಕೆಂದು ಆಳು ತಿಳಿಸಿದ ಕಾರಣ ಗುರುಚರಣನು ಕುದುರೆಯನ್ನೇರಿ ಮಿಂಚಿನ ವೇಗದಿಂದ ಉಮಾಳ ಮನೆಗೆ ಬಂದನು.

ಉಮಾಳ ಮನೆಯಲ್ಲಿ ತಾನು ಸುಲಿಗೆ ಮಾಡಿದ ಯಾತ್ರಿಕನನ್ನು ಕಂಡು ಗುರು ಚರಣನಿಗೆ ಆಶ್ಚರ್ಯವಾಯಿತು.

"ಈತನು ಪುಣ್ಯ ಪುರುಷನು. ನಿನಗೆ ದೇವರಲ್ಲಿ ವಿಶ್ವಾಸವಿಲ್ಲದುದನ್ನು ನಾನು ಆತನೊಡನೆ ಹೇಳಿದೆ. ಆಗ ಆತನು ನೀನು ಆತನನ್ನು ಸುಲಿಗೆ ಮಾಡಿದುದನ್ನು ಹೇಳಿದರು. ನೀನು ಆತನಿಗೆ ಯಾವುದೇ ನೋವು ಮಾಡದೆ ಬಿಟ್ಟುದನ್ನು ಆತನು ಹೊಗಳಿ ನಿನ್ನನ್ನು ಕೊಂಡಾಡಿದರು" ಉಮಾಳು ಗುರುಚರಣನನ್ನು ನೋಡಿ ನುಡಿದಳು.

ಗುರುಚರಣನು ಯಾತ್ರಿಕನ ಹೃದಯ ವೈಶಾಲ್ಯತೆಯ ಎದುರು ಕರಗಿ ನೀರಾಗಿದ್ದನು. ಆತನ ಬಾಯಿಂದ ಮಾತುಗಳು ಹೊರಡುತ್ತಿರಲಿಲ್ಲ.

ಯಾತ್ರಿಕನ ಮುಖದಲ್ಲಿ ಅಪೂರ್ವ ತೇಜವಿತ್ತು. ಯಾತ್ರಿಕನ ಪಕ್ಕದಲ್ಲಿ ಕುಳಿತು ಆತನನ್ನೇ ಗುರುಚರಣನು ದಿಟ್ಟಿಸಿ ನೋಡುತ್ತಿದ್ದನು.

"ನಾನು ಈತನನ್ನು ಪ್ರೀತಿಸುತ್ತೇನೆ. ಆದರೆ ಆತನು ದರೋಡೆಕೋರ. ಆತನು ಈ ಜಗತ್ತೇ ತನಗಾಗಿದೆಯೆಂದು ಭಾವಿಸುತ್ತಾನೆ" ಯಾತ್ರಿಕನನ್ನುದ್ದೇಶಿಸಿ ಉಮಾಳು ಹೇಳಿದಳು.

"ಬಾಯಿ ಮುಚ್ಚು ಬಾಲೆಯೂ!" ಗುರುಚರಣನು ಗದರಿಸಿದನು. ಯಾತ್ರಿಕನು ಯುವಕ ಗುರುಚರಣನನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿದನು. ನಂತರ ಸಮಾಧಾನದಿಂದ ಕೇಳಿದನು. "ನೀನು ಮಾಡುವದು ಸರಿಯೆಂದು ನಿನ್ನಲ್ಲಿ ವಿಶ್ವಾಸವಿದೆಯೇ?"

"ನಾನು ನಾನೊಬ್ಬ ಮನುಷ್ಯನು. ನಾನು ಮಾಡುವದರಲ್ಲಿ ನನಗೆ ವಿಶ್ವಾಸವಿದೆ. ನಾನು ಮಾಡುವದೆಲ್ಲಾ ಸರಿ ಎಂಬುದರಲ್ಲಿ ಸಂಶಯವೇಯಿಲ್ಲ." ಗುರುಚರಣನೆಂದನು.

ಯಾತ್ರಿಕನು ಪ್ರಸನ್ನತೆಯಿಂದ ತಲೆ ಅಲ್ಲಾಡಿಸಿ ಹೇಳಿದನು. "ಮಾರ್ಗದರ್ಶಕರಿಲ್ಲದ ಮನುಷ್ಯನು ತಾನು ಮಾಡುವ ಕಾರ್ಯವನ್ನು ಸುಲಭವಾಗಿ ಅರಿಯಲಾರನು. ಮಾರ್ಗದರ್ಶಿಯೇ ಸರ್ವ ಕೆಲಸವೆಂದು ಆತನು ಭಾವಿಸುವದರಿಂದ ಆತನಿಗೆ ಹಿತಾಹಿತಗಳ ತಾರತಮ್ಯ ತಿಳಿಯದು. [illegible] ಕಳ್ಳನು ಕಳ್ಳತನವು ತನ್ನ ಕರ್ತವ್ಯವೆಂದು ತಿಳಿಯುತ್ತಾನೆ. ಇಹದ ಭೋಗವೇ ಜೀವನದ ಗುರಿಯೆಂದು ಸಾಮಾನ್ಯರು ಭಾವಿಸುತ್ತಾರೆ. ಆದರೂ ಆ ಜನರು ಕೆಟ್ಟವರೆಂದು ನಾವು ತೀರ್ಮಾನಿಸಬಾರದು. ಅವರು ತಪ್ಪು ದಾರಿ ತುಳಿಯುತ್ತಿದ್ದಾರೆ. ಅಷ್ಟೆ. ನಾವು ಸಹ

ಯಿಂದ ಜನರಿಗೆ ಒಳ್ಳೆಯ ದಾರಿ ತೋರಿಸ ಬೇಕು. ಜಗತ್ತನ್ನು ಇಷ್ಟ ಸಾಧನಗಳಿಂದ ರಚಿಸಿ ಸುಂದರಗೊಳಿಸಬೇಕೇ ವಿನಾ ಇದ್ದದ್ದು ಅಪೂರ್ಣವೆಂದು ದೂರುಗೆಡವುದಲ್ಲ. ಮನುಷ್ಯನು ಮನುಷ್ಯನೊಡನೆ ಹೋರಾಡುವವನಾದರೆ ತಾನು ತನ್ನ ಅಸ್ತ್ರದೊಡನೆ ಹಗೆತನ ಕಟ್ಟಿದಂತೆ! ಅದ್ದರಿಂದ ಮಾನವನು ಮಾನವನಿಗೆ ಸಹಾಯ ನೀಡಬೇಕು. ಆ ರೀತಿ ಜಗತ್ತನ್ನು ಕಟ್ಟಬೇಕು. ಆಗ ನೀನು ನಿಜವಾಗಿ ಜೀವಿಸತೊಡಗುವೆ. ಆದ್ದರಿಂದ ಸಾರ್ವತ್ರಿಕ ಹಿತದೃಷ್ಟಿಯಿಂದ ಜೀವಿಸಲು ಕಲಿಯಬೇಕು. ಆತನ ಸಾವಿಗೆ ನೋಡಿ, ಈತನ ಹತನಗೊಳಿಸಿ, ಮತ್ತೊಬ್ಬನ ನಿರ್ನಾಮದಿಂದ ಮೇಲೇರಲಾರೆ".

ಉಮಾ ಮತ್ತು ಗುರುಚರಣ ಇಬ್ಬರೂ ಯಾತ್ರಿಕನ ಮಾತುಗಳನ್ನು ಆಸಕ್ತಿಯಿಂದ ಕೇಳಿದರು. ಪಡುವಣದ ದೀಪವು ಜಾಜ್ವಲ್ಯವಾಗಿ ಎತ್ತರಕ್ಕೆ ಉರಿಯಿತು. ಉಮಾ ಗುರುಚರಣರ ಕೈಗಳು ಒಂದನ್ನೊಂದು ಗಟ್ಟಿಯಾಗಿ ಹಿಡಿದಿದ್ದವು. ಆನಂದದ ಲಹರಿ ಹೃದಯವನ್ನು ತಳಮಳಗೊಳಿಸಿತ್ತು. ಯಾತ್ರಿಕನು ಆದರ್ಶ ಜೀವನದ ವಿಚಾರ ಸ್ಪಷ್ಟ ಕಂಠದಿಂದ ಬೋಧಿಸುತ್ತಿದ್ದನು. ಬುದ್ಧನ ನೀತಿ ತತ್ವಗಳನ್ನು ನಿವೇದಿಸುತ್ತಿದ್ದನು. ಬೆಳಗಾಯಿತು!

'ನನಗೆ ಕನೋಜಿಗೆ ಶೀಘ್ರ ಹೋಗಬೇಕು. ನನಗೆ ಸಮಯವಿಲ್ಲ' ಎಂದು ಯಾತ್ರಿಕನು ಹೊರಟನು. ಗುರುಚರಣ ಮತ್ತು ಉಮಾ ಇಬ್ಬರೂ ಗ್ರಾಮದ ಗಡಿಯ ವರೆಗೆ ಆತನನ್ನು ಬೀಳ್ಕೊಟ್ಟು ಹಿಂತಿರುಗಿದರು. ಉಮಾಳು ಗುರುಚರಣನ ಮುಖವನ್ನು ದಾರಿಯಲ್ಲಿ ನೋಡಿದಳು. ಗುರುಚರಣನ ರಕ್ತರಂಜಿತ ಕಣ್ಣಿನಲ್ಲಿ ಅಪೂರ್ವವಾದ ಕಾಂತಿ ಪಸರಿಸಿತ್ತು.

'ಅಯ್ಯೋ, ಎಂಥಾ ಅಪೂರ್ವ ವ್ಯಕ್ತಿ! ಆತನ ಹೆಸರೇನು?' ಉಮಾ ಕೇಳಿದಳು.

'ನಾನೂ ಕೇಳಲಿಲ್ಲವಲ್ಲಾ! ಗುರುಚರಣನು ದ್ರುತಗತಿಯಿಂದ ಹಿಂತಿರುಗಿ ಓಡಿದನು. ಯಾತ್ರಿಕನನ್ನು ಸಂಧಿಸಿ 'ನೀವು ನಮಗೆ ಜೀವನದ ಹೊಸ ತತ್ವವನ್ನು ಹೇಳಿರುವಿರಿ. ದಯಮಾಡಿ ನಿಮ್ಮ ಹೆಸರನ್ನು ತಿಳಿಸಲಾರಿರಾ?' ಎಂದು ಕೇಳಿದನು.

ಯಾತ್ರಿಕನು ನಗುವಿನಿಂದ 'ಅದು ಪ್ರಾಮುಖ್ಯವೇ?' ಎಂದು ಕೇಳಿದನು.

ಕಡೆಗೆ ಗುರುಚರಣನ ಒತ್ತಾಯಕ್ಕಾಗಿ ಹೇಳಿದನು 'ಹುಯೂನ್ ತ್ಸಾಂಗ್.'

ವಯಸ್ಕರ (ಸಮಾಜ) ಶಿಕ್ಷಣ.

ಸಂಕ್ಷಿಪ್ತ ವರದಿ

ಎ. ಅಕ್ಷರಾಭ್ಯಾಸ ಮತ್ತು ಓದುವ ತರಗತಿಗಳು ೧೯೫೨ನೇ ಫೆಬ್ರವರಿಯಲ್ಲಿ ಕೊಡಗಿನಲ್ಲಿಯೂ ವಯಸ್ಕರ ಶಿಕ್ಷಣ ಯೋಜನೆಯನ್ನು ಜಾರಿಗೆ ತರಲಾಯಿತು. ೨೦ ಅಧ್ಯಾಪಕರಿಗೆ ಈ ಶಿಕ್ಷಣ ವಿಚಾರದಲ್ಲಿ ತರಬೇತು ಕೊಡಲಾಯಿತು. ೨೦ ವಯಸ್ಕರ ಶಿಕ್ಷಣ ಶಾಲೆಗಳನ್ನು ತೆರೆದಾಗ ಪ್ರಾರಂಭದಲ್ಲಿ ಒಟ್ಟು ೨೦ ಕೇಂದ್ರಗಳಲ್ಲಿ ೫೪೮ ಮಂದಿ ವಯಸ್ಕರು ತರಗತಿಗೆ ಸೇರಿದರು. ೩ ತಿಂಗಳ ನಂತರ ಅಕ್ಷರಾಭ್ಯಾಸ ಪರೀಕ್ಷೆಯಲ್ಲಿ ೩೩೦ ಮಂದಿ ಉತ್ತೀರ್ಣರಾದರು. ಅದಾದ ೩ ತಿಂಗಳ ನಂತರ ಓದುಗಾರಿಕೆ ಪರೀಕ್ಷೆಯಲ್ಲಿ ೨೨೦ ಮಂದಿಯಲ್ಲಿ ೨೬೪ ಮಂದಿ ತೇರ್ಗಡೆ ಹೊಂದಿರುವರು. ಹೀಗೆ ಅಕ್ಷರಸ್ಥರಾದವರಿಗೆ ಯೋಗ್ಯತಾ ಪತ್ರ ವಿನಿಯೋಗವಾಯಿತು.

ಬಿ. ಮನೋರಂಜನೆಯ ಕಾರ್ಯಕ್ರಮಗಳು—ಅಕ್ಷರಾಭ್ಯಾಸ ಮತ್ತು ಓದುವ ತರಗತಿಗಳ ಜೊತೆಗೆ ಎಲ್ಲಾ ಕೇಂದ್ರಗಳಲ್ಲಿಯೂ ಮನೋರಂಜನೆಯ ಕಾರ್ಯಕ್ರಮಗಳನ್ನು ಕೈಕೊಂಡಿದ್ದರು. ಸಂಗೀತ, ಜನಪದ ಹಾಡು, ಭಾರತ ವಾಚನ, ಹರಿಕಥೆ ಯಕ್ಷಗಾನ, ಇತ್ಯಾದಿಗಳನ್ನು ಏರ್ಪಡಿಸಿದ್ದರು. ಅನೇಕ ಮಹನೀಯರು ಈ ತರಗತಿಗಳಿಗೆ ಭೇಟಿ ಇತ್ತು ಭಾಷಣಗಳ ಮುಖಾಂತರ ವಯಸ್ಕ ವಿದ್ಯಾರ್ಥಿಗಳಿಗೆ ಬೋಧಿಸಿರುವರು. ಗ್ರಾಮಾಂತರಗಳಲ್ಲಿ ಜರುಗಿದ ರಾಷ್ಟ್ರೀಯ ಹಬ್ಬಗಳಲ್ಲಿಯೂ ಗ್ರಾಮ ಹಬ್ಬಗಳಲ್ಲಿಯೂ ಗ್ರಾಮಸ್ಥರೊಡನೆ ಸೇರಿ ಉತ್ಸವಗಳನ್ನು ವಿಜೃಂಭಣೆಯಿಂದ ನಡೆಸಿದರು. ಕೆಲವು ವಯಸ್ಕರ ಶಾಲೆಯವರು ಪರಸ್ಥಳಗಳಿಗೆ ಪ್ರವಾಸವನ್ನು ಕೈಕೊಂಡಿದ್ದರು.

ಪ್ರಜಾಪ್ರಭುತ್ವ ದಿನಾಚರಣೆಯಲ್ಲಿ ಶಾಂತಳ್ಳಿ ವಯಸ್ಕ ಶಾಲೆಯ ವಿದ್ಯಾರ್ಥಿಗಳು ಕೋಲಾಟವನ್ನೂ, ರಾಜಾ ಬಾಳಿಕರು ಮತ್ತು ಹೆಬ್ಬಳೂರು ವಯಸ್ಕ ವಿದ್ಯಾರ್ಥಿಗಳಿಂದ ಸುಗ್ಗಿಕುಣಿತವನ್ನೂ ಮಡಿಕೇರಿಯ ಅರಮನೆಯ ಮುಂದೆ ಪ್ರೇಕ್ಷಕರು ಮೆಚ್ಚುವಂತೆ ಪ್ರದರ್ಶಿಸಿದರು.

ಸಿ. ಗ್ರಾಮೋದ್ಧಾರ ಕೆಲಸಗಳು—ಸಾಂಸ್ಕೃತಿಕ ವಿಚಾರಗಳಿಗೆ ಸಂಬಂಧಪಟ್ಟ ವಿಷಯಗಳಲ್ಲದೆ ಗ್ರಾಮಗಳಲ್ಲಿ ಕೆಲವು ಕ್ರಿಯಾತ್ಮಕ ಕೆಲಸಗಳನ್ನೂ ಕೈಕೊಂಡಿದ್ದರು. ಗ್ರಾಮದಲ್ಲಿ ಗ್ರಾಮಸ್ಥರೊಡನೆ ಸೇರಿ, ರಸ್ತೆ, ಚರಂಡಿ, ಕೆರೆಗಳನ್ನು ದುರುಸ್ತು ಮಾಡುವುದು, ಲಂಟಾನ ಕಡಿಯುವುದು—ಮುಂತಾದ ಕೆಲಸಗಳನ್ನು ಮಾಡಿರುವರು. ಕೆಲವು ಕಡೆ ಮೆಚ್ಚಿಕೆಯ ಕಾರ್ಯಗಳನ್ನು ಮಾಡಿರುವರೆಂಬುದನ್ನು ತಿಳಿಸಲು ಸಂತೋಷಪಡುತ್ತೇವೆ.

ಕೆಲವು ಅನುಭವಗಳು—ವಯಸ್ಕರ ಶಿಕ್ಷಣ ಎಂದ ಕೂಡಲೆ ಪ್ರಾಯ ಹೋದವರಿಗೆ ಬರಹ ಕಲಿಸುವುದು- ಅಂಥಾ ಶಾಲೆಗಳಿಗೆ ಚಿಕ್ಕವರಿಗೆ ಎಡೆ ಇಲ್ಲ ಎಂಬ ಕಲ್ಪನೆ ಇರಬಹುದು. ಈ ಶಾಲೆಗಳಿಗೆ ೧೬ ವರ್ಷದಿಂದ ೪೫ರ ವರೆಗಿನ ವಯಸ್ಕರು ಸೇರಲು ಎಡೆ ಇದೆ. ಎಷ್ಟು ಮಕ್ಕಳು ಚಿಕ್ಕಂದಿನಲ್ಲಿ ಶಾಲೆಗೆ ಹೋಗುವ ಅವಕಾಶ ಸಿಕ್ಕದೆ ಈಗ ಕಲಿಯಬೇಕೆಂಬ ಹಂಬಲವಿರುವವರಿಗೆ ಹಗಲು ಶಾಲೆಗಳಿಗೆ ಹೋಗುವ ಅವಕಾಶ ದೊರೆಯುವುದಿಲ್ಲ. ಅಂಥಾ ೧೬ ವರ್ಷ ಪ್ರಾಯದಿಂದ ಹಿಡಿದು ೪೫ರ ವರೆಗಿನವರು ರಾತ್ರಿ ವೇಳೆ ೧ ಗಂಟೆಯ ಕಾಲ ೫ ತಿಂಗಳವರೆಗೆ ವಯಸ್ಕರ ಶಿಕ್ಷಣ ಶಾಲೆಗೆ ಹೋದಲ್ಲಿ ಓದು ಬರಹ ಕಲಿಯುವುದು ಸುಲಭ. ಅಂಥವರು ಕಲಿತದ್ದನ್ನು ಮರೆಯುವುದಿಲ್ಲ. ಕೊಡಗಿನ ಈ ಯೋಜನೆಯಲ್ಲಿ ಗ್ರಾಮ ಪುಸ್ತಕ ಭಂಡಾರಗಳನ್ನು ತೆರೆದಿರುತ್ತೇವೆ. ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿ, ಮುಂದೆ ಓದುವ ಅವಕಾಶ ದೊರೆಯದೆ ಅವರು ಅಕ್ಷರ ಮರೆಯುವ ಸಂಭವವಿರುತ್ತದೆ. ಅಂಥವರು ಕೂಡ ಕಲಿತ ವಿದ್ಯೆಯನ್ನು ಅಭಿವೃದ್ಧಿಪಡಿಸಿಕೊಳ್ಳಲು ಅವಕಾಶವಿದೆ. ಜನಸಂಖ್ಯೆ ತುಂಬಾ ಇರುವ ಕಡೆಯಲ್ಲಿಯೂ ಕೂಡ ಹಗಲು ಶಾಲೆಗಳಿಗೆ ಮಕ್ಕಳೇ ಇರುವುದಿಲ್ಲ. ಕಾರಣ ಹೆತ್ತವರಿಗೆ ವಿದ್ಯೆಯ ಅಭಿರುಚಿ ಇಲ್ಲ, ಅಂಥವರಿಗೆ ವಿದ್ಯಾಭಿರುಚಿ ಕಲ್ಪಿಸಿ ತಮ್ಮ ಮಕ್ಕಳಿಗೂ ವಿದ್ಯೆ ಕೊಡುವ ಆಸೆಯನ್ನು ಅವರಲ್ಲಿ ಉಂಟುಮಾಡಬಹುದು. ಈ ಯೋಜನೆಯು ಯಶಸ್ವಿಯಾಗಲು ಕಲಿಯಬೇಕೆಂಬುವವರು ಮುಂದೆ ಬರಬೇಕು. ಸಮಾಜದಲ್ಲಿ ಕಲಿತಿರುವವರು ಅಂಥವರಿಗೆ ಪ್ರೋತ್ಸಾಹವೀಯಬೇಕಾಗಿದೆ. ಇದು ವರೆಗೆ ಸಾರ್ವಜನಿಕರಿಂದ ಪ್ರೋತ್ಸಾಹ ದೊರೆಯುತ್ತಿರುವುದು, ಇನ್ನು ಮುಂದಕೂ ತುಂಬಾ ಪ್ರೋತ್ಸಾಹವೀಯಬೇಕಾಗಿ ಕೋರುತ್ತೇವೆ.

೧೯೫೩-೫೪ ರ ಸಾಲಿಗೆ ಕೊಡಗಿನಲ್ಲಿ

English Felt Hats

REMEMBER WEDDING SUITS!!

New Designs Of Wollen Suitings

VISIT:

PATTU BROTHERS,

OPP.— Town Hall MYSORE.

12-1

Government of Coorg Chief Secretariat

SUBJECT:- Supply of furniture to the Coorg Government Secretariat

Quotations are invited for the supply of following furniture for the Coorg Government Secretariat. The quotation should reach this office before 25th February, 1953. The supplier whose tender may be accepted should be able to supply the furniture by 20th March 1953. The furniture should be delivered at the verandah of the Coorg Government Secretariat.

LIST OF FURNITURE

	Length	Width	Hight
1. Writing tables 8 (Nandi) with 2 drawers	48"	33"	31"
2. File racks 18 (Nandi) File racks should have two compartments and at the top should have three shelves.	36"	15"	41"
3. Typists tables 4 (Nandi) (with one drawer on the left side)	48"	36"	28"
4. Stenographers valet 5 (Nandi)	16"	9½"	20"
5. Chairs with arms (rose wood) (Rattan Bottom & Wooden back)	5		
6. Chairs without arms (Nandi) Rattan Bottom and wooden back	2		
7. Hat racks (Rose wood)	2		

C. NARASIMHA MURTHY,

Chief Secretary to the Government of Coorg.

ಅಂತರ್ರಾಷ್ಟ್ರೀಯ ರಂಗದಲ್ಲಿ

ಚೀನಾದಲ್ಲಿ ಈ ಹಿಂದೆ ನಾಯಕರಾಗಿದ್ದ ಚಿಯಾಂಗ್ ಕೈಶೇಕರನ್ನು ಚೀನಾದಿಂದ ಚೀನೀ ಕಮ್ಯೂನಿಸ್ಟರು ಮಾವೋರವರ ಮುಂದಾಳ್ತನದಲ್ಲಿ ಹೊಡೆದಟ್ಟಿದ ಮೇಲೆ ಚಿಯಾಂಗರು ತಮ್ಮ ಅಳಿದುಳಿದ ಹಿಂಬಾಲಕರನ್ನು ಸೇರಿಕೊಂಡು ಫಾರ್ಮೊಸಾ ದ್ವೀಪಕ್ಕೆ ಹೋದರು. ಅಲ್ಲಿ ಅವರು ಚದರಿ ಹೋಗಿದ್ದ ತಮ್ಮ ಸೇನೆಯನ್ನು ಮತ್ತೆ ಸಂಗ್ರಹಿಸ ತೊಡಗಿದರು. ಅವರ ಈ ಪ್ರಯತ್ನಕ್ಕೆ ಅಮೇರಿಕಾವು ಬಹಳ ಸಹಾಯ ಕೊಟ್ಟಿದೆ. ಚಿಯಾಂಗರ ಸೈನ್ಯಕ್ಕೆ ಶಸ್ತ್ರಾಸ್ತ್ರಗಳನ್ನು ಸರಬರಾಯಿ ಮಾಡಲಾಗುತ್ತಿದೆ. ಈಗ ಚಿಯಾಂಗರ ಸೇನೆಗಳ ಸಂಖ್ಯೆ ೬೦,೦೦೦ ವಿದ್ದಿದ್ದು ಅವರು ಇವರ ಬಲದಿಂದ ಚೈನಾದ ಮೇಲೆ ಧಾಳಿ ನಡೆಸುವ ಪ್ರಯತ್ನದಲ್ಲಿದ್ದಾರೆ. ಇದಕ್ಕೆ ಅಮೇರಿಕಾವು ಬೆಂಬಲ ಕೊಡುತ್ತಿದೆ. ಅಲ್ಲದೆ ಇಂಡಿಯಾ, ಬ್ರಿಟನುಗಳೂ ಕೂಡ ಚೈನಾದ ಕಮ್ಯೂನಿಸ್ಟ್ ಸರಕಾರವನ್ನು ಒಪ್ಪಿ ಅಂಗೀಕರಿಸಿದ್ದರೂ ಅಮೇರಿಕಾವು ಒಪ್ಪದು ಪ್ರಸ್ತುತ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅದಕ್ಕೆ ಸ್ಥಳ ಕೊಡಲು ಅಮೇರಿಕಾವು ನಿರಾಕರಿಸುತ್ತಿದೆ. ಇನ್ನು ಸಂಯುಕ್ತರಾಷ್ಟ್ರ ಸಂಘದಲ್ಲಿ ಚಿಯಾಂಗರ ದೇಶರಹಿತ ಸರಕಾರದ ಪ್ರತಿನಿಧಿಯನ್ನೇ ಚೀನಾದ ಪ್ರತಿನಿಧಿಯೆಂದು ಪರಿಗಣಿಸಲಾಗುತ್ತಿದೆ. ಅಮೇರಿಕದ ಈ ವರ್ತನೆಯು ಅವರ ಮನೋಭಾವವನ್ನು ವ್ಯಕ್ತಪಡಿಸುತ್ತಿದೆ. ಚೀನಾವನ್ನು ಚಿಯಾಂಗರ ವಶಮಾಡಿ ಕೊಡುವ ಬಯಕೆ ಅವರಿಗಿದೆ.

ಇಷ್ಟೇ ಅಲ್ಲ ಅವರ ಗುರಿ. ಚೀನಾದಂತಹ ವಿಶಾಲ ರಾಜ್ಯದಲ್ಲಿ ಮಾವೋರವರ ಆಡಳಿತ ಏರ್ಪಟ್ಟು ದಿನದಿಂದ ದಿನಕ್ಕೆ ಅದು ಪ್ರಗತಿ ಪಥದಲ್ಲಿ ಮುಂದರಿಯುತ್ತಿರುವಾಗ ಮತ್ತೆ ಚಿಯಾಂಗರ ಆಡಳಿತಕ್ಕೆ ಚೀನಾವು ಎಂದಿಗೂ ಒಪ್ಪಲಾರದು. ಅಮೇರಿಕವು ಈ ಬಗ್ಗೆ ಪ್ರಯತ್ನ ಮಾಡುತ್ತಿದೆ. ಇತ್ತಲಾಗಿ ಅಮೇರಿಕದ ಅಧ್ಯಕ್ಷ ಐಸೆನ್‌ಹೋವರ್‌ರವರು ತಮ್ಮ ನೌಕಾದಳವನ್ನು ಹಿಂತೆಗೆದು ಕೊಂಡು ಚಿಯಾಂಗರು ಚೀನದ ಮೇಲೆ ಧಾಳಿಮಾಡಲು ಅನುಮಾಡಿ ಅಂತರಾಷ್ಟ್ರೀಯ ಬಿಕ್ಕಟ್ಟನ್ನು ತಂದಿದ್ದಾರೆ.

ಚಿಯಾಂಗರ ದಳಗಳು ಚೀನಾದ ಮೇಲೆ ಧಾಳಿ ಮಾಡಿದರೆ ಮಾವೋರವರ ಚೀನೀ ದಳಗಳು ಫಾರ್ಮೊಸಾದ ಮೇಲೆ ಪ್ರತಿಧಾಳಿ ಮಾಡದಿರವು. ಹಾಗೆ ಪ್ರತಿಧಾಳಿ ಮಾಡಿದರೆ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯನಾಗಿರುವ ಚಿಯಾಂಗರ ಅಂತರರಾಷ್ಟ್ರೀಯ ಚೀನಾದ ನೆರವಿಗೆ ಸಂಯುಕ್ತ ರಾಷ್ಟ್ರ ಸಂಘದ ಇತರ ರಾಷ್ಟ್ರಗಳು ಬರಬೇಕಾಗುವದು ಹಾಗೆ ಬಾರದಿದ್ದರೆ ಸಂಯುಕ್ತರಾಷ್ಟ್ರ ಸಂಘದ ನಿಯಮ ಮುರಿದಂತಾಗಿ ಅದರ ಅಸ್ತಿತ್ವಕ್ಕೇ ಗಂಡಾಂತರ ಬರಬಹುದು.

ಅಮೇರಿಕಾದ ರಾಜನೀತಿ.

ಅಮೇರಿಕಾದ ಅಧ್ಯಕ್ಷತನದ ಜವಾಬ್ದಾರಿಯನ್ನು ಐಸೆನ್‌ಹೋವರರು ವಹಿಸಿಕೊಂಡಿದ್ದಾರೆ. ಅವರು ಹೆಸರಾಂತ ಸೇನಾನಿಯೇ ವಿನಾ ಪ್ರಖ್ಯಾತ ರಾಜಕಾರಣಿಯಲ್ಲ. ಇನ್ನು ಮುಂದೆ ಅವರ ರಾಜಕಾರಣದ ವಿಚಕ್ಷಣತೆ ಜನತೆಗೆ ಗೊತ್ತಾಗಬೇಕು. ಅವರು ಅಧಿಕಾರ ಗ್ರಹಣ ಮಾಡಿದ ನಂತರ ಕೊಟ್ಟ ಹೇಳಿಕೆಯಲ್ಲಿ ಅವರ್‍ಟ ಕೊರಿಯಾ ಯುದ್ಧವನ್ನು ಕೊನೆಗಾಣಿಸುವ ಆಶ್ವಾಸನವನ್ನು ಕೊಟ್ಟಿದ್ದಾರೆ. ಅದರ ಈ ಯುದ್ಧ ಮುಗಿಯಬೇಕಾದರೆ ಎರಡು ದಾರಿಗಳಿವೆ. ಒಂದು ಸಂಯುಕ್ತ ರಾಷ್ಟ್ರಸಂಘವು ಕೊರಿಯಾದಿಂದ ತನ್ನ ಸೇನೆಗಳನ್ನು ಹಿಂದಕ್ಕೆ ಕರೆಸಿಕೊಳ್ಳುವದು. ಇಲ್ಲವೇ ಯುದ್ಧ ಮುಂದರಿಸಿ ಉತ್ತರ ಕೊರಿಯಾವನ್ನೂ ಅದರ ಬೆಂಬಲಕ್ಕಿರುವ ಚೀನಾವನ್ನೂ ಸೋಲಿಸುವದು. ಈ ಎರಡು ಮಾರ್ಗದಲ್ಲಿಯೂ ಗಂಡಾಂತರವಿದೆ.

ಕೊರಿಯಾದಿಂದ ಸಂಯುಕ್ತ ರಾಷ್ಟ್ರ ಸಂಘದ ಸೇನೆಗಳು ಹಿಂತೆಗೆದುಕೊಂಡರೆ ಯುದ್ಧವೇನೋ ನಿಲ್ಲಬಹುದಾದರೂ ಸಂಯುಕ್ತ ರಾಷ್ಟ್ರ ಸಂಘದ ಮುಖಕ್ಕೆ ಕಪ್ಪು ಬಿದ್ದಂತಾಗುವದು ಅದು ತನ್ನ ಕೊರಿಯಾ ನೀತಿಯಲ್ಲಿ ಅಪಜಯವನ್ನು ಆಲಿಂಗಿಸಿದಂತಾಗುವದು. ಇದರಿಂದ ಕಮ್ಯೂನಿಸ್ಟ್ ಚೀನಾ, ರಷ್ಯಾಗಳ ವರ್ಚಸ್ಸು ಹೆಚ್ಚಾಗಿ ಅವರ ಪ್ರಭಾವವು ಜಗತ್ತಿನಲ್ಲಿ ಹಬ್ಬದಿರದು.

ಎರಡನೇಯದಾದ ಯುದ್ಧ ಮಾರ್ಗದಲ್ಲಿ ಇನ್ನೂ ದೊಡ್ಡ ಗಂಡಾಂತರವಿದೆ. ಕೊರಿಯಾ ಯುದ್ಧವನ್ನು ಮುಂದರಿಸಿದರೆ ಉತ್ತರ ಕೊರಿಯಾದ ಬೆಂಬಲದಲ್ಲಿ ಚೈನಾವಿರುವದರಿಂದ ಅತೀ ಭಯಂಕರ ಯುದ್ಧವೇ ನಡೆಯಬೇಕಾಗುವದು. ಸೈನಿಕರಾದ ಐಸೆನ್‌ಹೋವರರು ಯಾವ ಮಾರ್ಗ ಅನುಸರಿಸುವರೆಂಬುದು ಮುಂದೆ ತಿಳಿಯಬೇಕಾಗಿದೆ.

ಪಾಕಿಸ್ತಾನದಲ್ಲಿ

ಅಮೇರಿಕಾ ಬ್ರಿಟನುಗಳ ಕೈ ಪಾಕಿಸ್ತಾನದಲ್ಲಿಯೂ ತೋರಿಬರುತ್ತಿದೆ. ಕಾಶ್ಮೀರ ಪ್ರಶ್ನೆಯ ಸಂಬಂಧದಲ್ಲಿ ಸಂಯುಕ್ತ ರಾಷ್ಟ್ರಸಂಘವು ಅರ್ಥಾತ್ ಬ್ರಿಟನ್, ಅಮೇರಿಕಾಗಳು ಯಾವ ರೀತಿ ಪಾಕಿಸ್ತಾನದ ಬೆನ್ನೆಲುಬಿನಲ್ಲಿ ನಿಂತು ಕೆಲಸ ಮಾಡುತ್ತಿವೆ ಯೆಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ ಇತ್ತಲಾಗಿ ಇದು ಹೆಚ್ಚು ಒಡೆದು ತೋರುತ್ತಿದೆ. ಈಜಿಪ್ತಿನಲ್ಲಿ ಜನರಲ್ ನೆಗೂಬ್‌ರವರು ತನ್ನ ಸೈನ್ಯ ಕ್ರಾಂತಿಯನ್ನು ನಡೆಸಿ ಸರ್ವಾಧಿಕಾರಿಯಂತೆ ಆಡಳಿತ ನಡೆಯುತ್ತಿದೆ. ಈಜಿಪ್ಟಿನ ರಾಜನೀತಿ ಇನ್ನೂ ಅನಿಶ್ಚಿತವಾಗಿರುವದು. ಪೂರ್ವ ಏಶ್ಯಾದಲ್ಲಿ ರಷ್ಯಾದ ಪ್ರಭಾವವನ್ನು ಎದುರಿಸಲು ಇಂಡೋಚೀನಾ, ಫಾರ್ಮೊಸಾ ಕೊರಿಯಾಗಳಲ್ಲಿ ಯುತ್ನಿಸಿದಂತೆ ಮಧ್ಯಪ್ರಾಚ್ಯದಲ್ಲಿ ಕಮ್ಯೂನಿಸ್ಟರ ಪ್ರಭಾವವನ್ನು ತಡೆಯಲು ಬ್ರಿಟನ್ ಅಮೇರಿಕಾಗಳ ಬೆಂಬಲದಿಂದ ಮಧ್ಯಪ್ರಾಚ್ಯ ಸಂರಕ್ಷಣಾ ಯೋಜನೆಯೊಂದರ ಏರ್ಪಾಡಾಗಿದೆ. ರಾಜಕೀಯ ಚದುರಂಗದಾಟದಲ್ಲಿ ಎತ್ತಿದ ಕೈಗಳಾದ ಅಮೇರಿಕಾ, ಬ್ರಿಟನುಗಳು ಈ ಯೋಜನೆಗೆ ಪಾಕಿಸ್ತಾನವನ್ನು ಸೇರಿಸಿಕೊಳ್ಳಲಿದ್ದಾರೆ. ಪಾಕಿಸ್ತಾನವು ಈ ವಿಚಾರದಲ್ಲಿ ಸ್ಪಷ್ಟವಾಗಿ ಏನೂ ಹೇಳದಿದ್ದರೂ ಅದು ಈ ವಿಚಾರದಲ್ಲಿ ಸಮ್ಮತಿಸಿದೆಯೆಂದು ಪ್ರತ್ಯೇಕ ಹೇಳುವ ಅಗತ್ಯವಿಲ್ಲ. ಇದರಿಂದ ಬ್ರಿಟನ್ ಅಮೇರಿಕಾಗಳಿಗೆ ಮಧ್ಯಪ್ರಾಚ್ಯ, ಏಶಿಯಾ, ಆಗ್ನೇಯ ಏಶ್ಯಾಗಳ ಮೇಲೆ ಕಾವಲಿಡಲು ಒಳ್ಳೇ ಆಯಕಟ್ಟಿನ ಸ್ಥಳ ದೊರೆತಂತಾಯಿತು. ಪಾಕಿಸ್ತಾನಕ್ಕೆ ಅಮೇರಿಕದ ಹಣದ ಅವಶ್ಯಕತೆ ಇದೆ. ಕಾಶ್ಮೀರ ಪ್ರಕರಣದ ಬಗ್ಗೆ ಅವರ ನೆರವು ಬೇಕಿದೆ.

ಈ ಸುದ್ದಿಯಿಂದ ಭಾರತಕ್ಕೆ ಸ್ವಲ್ಪ ಮಟ್ಟಿಗೆ ಉದ್ವಿಗ್ನತೆಯುಂಟಾಗಿದೆ. ಪಾಕಿಸ್ತಾನವು ಯಾವುದೇ ರೀತಿಯ ಸ್ವತಂತ್ರ ನಿರ್ಣಯ ಮಾಡಿಕೊಳ್ಳುವುದು ಅದಕ್ಕೆ ಕೂಡಿದುದಾದರೂ ಭಾರತದ ನೆರೆರಾಷ್ಟ್ರವಾದುದರಿಂದ ಆ ಮೋರಚೆಯಿಂದಾಗಿ ಭಾರತಕ್ಕೂ ಗಂಡಾಂತರ ಹುಟ್ಟುವುದರಿಂದ ಭಾರತವು ಉದ್ವಿಗ್ನಗೊಂಡಿರುವುದಾಗಿದೆ.

ಸರಕಾರವು ಹಿರಿಯ ವಯಸ್ಕರ ಶಿಕ್ಷಣ ಶಾಲೆ ತೆರೆಯುವ ಏರ್ಪಾಡು ಮಾಡಿರುವುದು. ಖಾಸಗಿಯಾಗಿ ನರಗುಂದ ಕಾಲೇಜಿನ ಸೇವಾ ಸಂಘದವರು ಒಂದು ವಯಸ್ಕರ ಶಿಕ್ಷಣ ಶಾಲೆಯನ್ನು, ಕಾಸ್ ಬೈಲಿನಲ್ಲಿ ಒಂದು ವಯಸ್ಕರ ಶಿಕ್ಷಣ ಶಾಲೆಯನ್ನೂ ನಡೆಸುತ್ತಿರುವರು. ಇವುಗಳ ಪ್ರೋತ್ಸಾಹಕ್ಕೆ ಕ್ರಮವಾಗಿ ಕಾಲೇಜಿನ ಪ್ರಿನ್ಸಿಪಾಲರೂ ಶ್ರೀ ನರಸ್ ಜಿ ಎಂ. ಮಂಜುನಾಥಯ್ಯ ಇವರೂ ಕಾರಣಕರ್ತರು. ಇವರುಗಳಿಗೆ ನಮ್ಮ ಅಭಿನಂದನೆಗಳು.

ನಗುಮಲ್ಲಿಗೆ

ಒಬ್ಬ ಕಮ್ಯೂನಿಸ್ಟ್- ಎಷ್ಟು ಸುಂದರವಾದ ಮತ್ತು ಆನಂದದಾಯಕ ದೃಶ್ಯ. ಅದಕ್ಕನುಗುಣವಾಗಿ ಆಹ್ಲಾದಕರವಾದ ತಂಗಾಳಿ!

ಮತ್ತೊಬ್ಬ ಕಮ್ಯೂನಿಸ್ಟ್- ಅದು ಸರಿ. ಆದರೆ ಬಂಡವಾಳದಾರರೂ ಸಹ ಇದನ್ನು ಅನುಭವಿಸುತ್ತಿರುವರಲ್ಲಾ!'

* * *

ಹೊಗೆ ಸೊಪ್ಪಿನ ಉಪಯೋಗದಿಂದ ಉಂಟಾಗುವ ಹಾನಿಯನ್ನು ಲೆಕ್ಚರರೊಬ್ಬರು ಕಾಲೇಜು ವಿದ್ಯಾರ್ಥಿಗಳಿಗೆ ಹೇಳುತ್ತಾ "ಅತೀ ಎಚ್ಚರಿಕೆ ಪರಿಶ್ರಮಗಳಿಂದ ಪರಿಶೀಲಿಸಿದ ವಿಜ್ಞಾನಿಗಳ ಅಭಿಪ್ರಾಯದಂತೆ ಮನುಷ್ಯನು ಸೇವಿಸುವ ಪ್ರತೀ ಚುಟ್ಟಾ ಅವನ ಆಯುಷ್ಯವನ್ನು ಮೂರು ದಿನದಂತೆ ಪ್ರತೀ ಸಿಗರೇಟು ಒಂದು ತಾಸಿನಂತೆ ಕಡಿಮೆ ಮಾಡುವುದು" ಎಂದರು.

"ಈ ಲೆಕ್ಕಗಳು ಸರಿಯೇ?" ವಿದ್ಯಾರ್ಥಿಯೊಬ್ಬನು ಪುನಃ ಕೇಳಿದ.

"ನಿಜವಾಗಿಯೂ ಸರಿ ವಿಜ್ಞಾನಿಗಳ ಪರಿಶೀಲನೆಯಲ್ಲಿ ತಪ್ಪಿಲ್ಲ"

"ಆ ಲೆಕ್ಕ ಪ್ರಕಾರ ನಾನು ಸತ್ತು ಇಂದಿಗೆ ೨೦೦ ವರ್ಷಗಳಾಗಬೇಕಿತ್ತು." ವಿದ್ಯಾರ್ಥಿಯೆಂದ!

* * *

ರಾಜಕೀಯದಲ್ಲಿ ಆಸಕ್ತಿಯಿರುವ ಹೆಂಡತಿ ಪ್ರತಿ ದಿನ ಸಭೆ ಮೀಟಿಂಗೆಂದು ಹೋಗುತ್ತಿದ್ದಳು. ಚುನಾವಣೆಯ ಸಮಯವಾದ್ದರಿಂದ ಆಕೆ ಬರುವಾಗ ರಾತ್ರಿ ಎಂಟು ಹತ್ತು ಗಂಟೆಗಳಾಗುತ್ತಿದ್ದವು. ಒಂದು ದಿನ ಆಕೆ ಹತ್ತು ಗಂಟೆಗೆ ಬಂದು ಆರಾಮ ಕುರ್ಚಿಯಲ್ಲಿ ಕೂತು "ಎಲ್ಲಾ ಯೋಜನೆಯಂತೆ ನಡೆಯುತ್ತಿದೆ. ಈ ಚುನಾವಣೆಯಲ್ಲಿ ಗುಡಿಸಿ ಸೇರಿಸಿದಂತೆ ಓಟುಗಳನ್ನೆಲ್ಲಾ ನಾವು ಪಡೆಯುವೆವು" ಎಂದಳು.

ಈಕೆಯ ರಾಜಕೀಯ ದಿಂದ ಸಾಕಾದ ಗಂಡನು ಹೇಳಿದನು "ಆ ಗುಡಿಸುವ ಕೆಲಸವನ್ನು ಅಡಿಗೆ ಮನೆಯಿಂದಲೇ ಏಕೆ ಪ್ರಾರಂಭಿಸಬಾರದು?"

* * *

ಅಮೇರಿಕನನೊಬ್ಬನು ತನ್ನ ದೇಶ ಎಷ್ಟು ದೊಡ್ಡದೆಂಬುದರ ಬಗ್ಗೆ ವಿವರಿಸುತ್ತಾ ಟೆಕ್ಸಾಸ್ ಪ್ರಾಂತದಲ್ಲಿ ರೈಲಿನಲ್ಲಿ ಹತ್ತು ೨೪ ಗಂಟೆ ಪ್ರಯಾಣ ಮಾಡಿದರೂ ಅದೇ ಪ್ರಾಂತದೊಳಗಲ್ಲದೆ ಅದನ್ನು ದಾಟಲು ಸಾಧ್ಯವಿಲ್ಲದಷ್ಟು ದೊಡ್ಡದಾಗಿದೆ ಎಂದನು.

ಅದನ್ನು ಕೇಳುತ್ತಿದ್ದ ಭಾರತೀಯರೊಬ್ಬರು ಹೇಳಿದರು "ಅದೇ ರೀತಿಯ ಬಸ್, ಟ್ರೈನುಗಳು ನಮ್ಮಲ್ಲಿಯೂ ಬೇಕಾದಷ್ಟಿವೆ."

* * *

ಕುಡುಕ:- ರಿರನ್ ಅಂಗಡಿಯಲ್ಲಿ ದೊರೆತ ಸರಾಯಿ ಕುಪ್ಪಿಯಲ್ಲಿ ಸಾರಾಯಿಯಿಲ್ಲ; ನಿಜವಾಗಿಯೂ ಸೀಮೆಎಣ್ಣೆ ತುಂಬಿತ್ತು.

ಮಿತ್ರ:- ಅದಕ್ಕೇನು, ಕೆಲವು ದಿನಗಳವರೆಗೆ ನೀನು ಬೀಡಿ, ಸಿಗರೇಟು ಸೇದದಿದ್ದರಾಯಿತು.

* * *

ಬೋಸ್ಟನಿನ ಬೀದಿಯಲ್ಲಿ ಒಂದು ನಾಯಿಯ ಸುತ್ತ ಮಕ್ಕಳೆಲ್ಲರೂ ಗುಂಪಾಗಿ ಸೇರಿದ್ದರು. ಅಲ್ಲಿಯ ಮಂತ್ರಿಯೊಬ್ಬರು ಇದನ್ನು ಕಂಡು "ಮಕ್ಕಳೇ, ನೀವೇನು ಮಾಡುತ್ತಿರುವಿರಿ?" ಎಂದು ಕೇಳಿದರು.

"ಯಾರು ಎಲ್ಲರಿಗಿಂತಲೂ ಸುಳ್ಳು ಹೇಳುವರೋ ಅವರಿಗೆ ಈ ನಾಯಿಯು ದೊರೆಯುವುದಂತೆ" ಎಂದು ಮಕ್ಕಳು ಹೇಳಿದರು.

"ನಾನು ನಿಮ್ಮಂತೆ ಮಕ್ಕಳಾಗಿರುವಾಗ ಒಂದೇ ಸುಳ್ಳನ್ನು ಆಡಿದವನಲ್ಲ" ಮಂತ್ರಿ ಹೇಳಿದರು.

(೯ನೇ ಪುಟ ನೋಡಿ)

॥ ದುರ್ಬೀನು ನೋಟ ॥

'ನೀವು ಪ್ರಯಾಣದಲ್ಲಿ ಟಿಕೆಟ್ ಇಲ್ಲದೆ ಸಾಗುವಿರಲ್ಲಾ ಟಿಕೆಟಿಯೇ ಸಾಗಬೇಕಲ್ಲವೇ! ಇದರಿಂದಾಗಿ ದೇಶದ ಕಷ್ಟಗಳನ್ನು ನೀವು ಗಳಿಸುವಿರಿ ನಿಮಗೆ ಬೇಡವಲ್ಲ' ಎಂದು ಬರೆದಿರುವರೆ.

ಹೊಟ್ಟೆಗೆ ಬೇಕಾದುವರು ಮುಂದೂರದಪಟ್ಟಣದಲ್ಲಿದ್ದ ಹೊಟ್ಟೆಯನ್ನು ಹೊರಿಸಲಿಲ್ಲ ಅವರಂತೆ ನಾವು ಒಂದು ಕಾರ್ಯದ ಕುರಿತು ... ಮಾಡದೆ ಆದ ಕಾರ್ಯ ಸಂಯೋಗ ನಡೆಯಲೆಂದಲ್ಲದ ಕಾರ್ಯವನ್ನು ಕಡಿಸಲಿಲ್ಲ

"ಮಂತ್ರಿಗಳು ನಿಮ್ಮ ಹಾಲುಪವಾಲು ಕೇಳಬೇಕೇ ನನ್ನ ಮೂಲಕ ಒಮ್ಮೆ ನೀವೇ ನೇರಾಗಿ ಹೋದರೆ ಕಾರ್ಯ ಸಾಧಿಸಬಹುದು ಎಂದು ಹೇಳಿದರು. ... ನೆಲ್ಲಿ ಮುಂದಾಳುಗಳಾದವರೆಲ್ಲರು ಹೀಗೆ ದರಂತೆ! ಒದಗಿ ಒಬ್ಬ ಗ್ರಾಮದ ಜನರ ಗೌರವಕ್ಕಾಗಿಯೇ ಅವರು ಅಂಸ ತ್ರಿಕೂ ರಂತೆ! ತಪ್ಪಿಲ್ಲ ಇರಲಿ ಆದರೆ ಸಂದರ್ಭಕ್ಕಾಗಿ ತೋರಿದ ಕೈ ಕಟ್ಟಿಕೊಂಡು ... ಬಹು ಬೇಗ ತತ್ತೆಯ ಹೋರಿದನ್ನು ... ದುರ್ಹೋದ ... ವೇ ರೀತಿ ಗೌರವಕ್ಕಾಗಿ ಪ್ರದರ್ಶಿಸುವ ... ಕಾರ್ಯಸಾಧ್ಯವಿಂದ ಆ ... ವಿಷಯ ತೆ ...

ಅವರು ಸ್ವಾರಸ್ಯ ಮಾಡಿಗಾರರು ಬೇರನ್ನು ನೋಯಿಸುವವನನ್ನು ... ಕೃತಿಯಲ್ಲಿ ಕರಾಳರು ... ಸಗು ನೋಡಿ ಮರ ... ಕತ್ತಲೆಗಳಲ್ಲಿ ... ಕೈ ಕೊ... ಹಿಂತಿರುಗಿ! ತಮಗಾಗಿ ಅವನೊಡನೆ ಹರಟೆಕೊಟ್ಟಿದ ವಿಜಾತನನ್ನು ಸಂದರ್ಭ ಬಂದಾಗ ಉಪಯೋಗಿಸದಿರರು ಇಂದಿನವರೂ ಇಬ್ಬರ ಅನುಭವ ನನಗಾಗಿದೆ ಅವರ ಗಳತನ, ಒದನಾಟ ಪಯೂನಕ, ತಗನೆ ನೇರಿದ ತತೆಯಿಂಬೂ ರಜ್ಜವಿರಿಲ್ಲವೇ? ತದನಂತರೇ ಮತ್ಸರ ಹುಮಗಿರುವ ಈ ಜನರ ಮನಸ್ಸನ್ನು ಚುಚ್ಚುತ್ತದೆ

* * *

'ಇದು ಸಾರ್ವಜನಿಕ ವಾಚನಾಲಯವಲ್ಲ! ನಿಮಗೆ ಪುಸ್ತಕ ಬೇಕಾದರೆ ಕೊಂಡು ಓದಿ' ಎಂದರು ಕಾರ್ಯದರ್ಶಿ ಸಭ್ಯನ ಬಂದು ನಿಂತಿರುವ ಯಾರೂ ಇರಲಿಲ್ಲ ಶ್ರೀ ವರನಿದ್ದನು ಪುಸ್ತಕ ಬೇಕಾದವನು ದ ... ಪುಸ್ತಕಗಳ ಕಟ್ಟು ಕಾರಿನ ಸೀಟನ್ನು ಅಲಂಕರಿಸಿತು. ಸದ್ಯನೆ ಕಾರು ಸಾಗಿತು ಕಾರಿರುವವನಿಗೊಂದು, ಬಡಜನರಿಗೊಂದು ಹೀಗೆ ಎರಡು ನಿಯಮವಿದೆ ಯೇ? ಗಾಲಿ ತಿರುಗಿ ಗಾಡಿ ಸಾಗುವುದು ನಿಯಮವಾದರೆ ಕಣ್ಣಾಲಿ ತಿರುಗಿಸಿ ನೂಕುಗಳಿಂದ ಬಾಳುವನವನ್ನಾರೆ!

* * *

ಪ್ರಜಾಸತ್ತಾತ್ಮಕ ಆಡಳಿತದಿಂದ ಜನತೆಗೆ ಅಭ್ಯುದಯ ಬಂತೆಂದು ಹಲವರು ನಾರಿ ಹೇಳುತ್ತಿದ್ದಾರೆ. ಆದರೆ ಬಡವನ ಹರಕು ಬಟ್ಟೆ ಬದಲಾಗಿಲ್ಲ. ಹಸಿದ ಹೊಟ್ಟೆಗೆ ತುತ್ತು ಹೆಚ್ಚಾಗಿಲ್ಲ ಏನನ್ನುವಿರಿ? ಎಂದೂ ಇರು ತಂದಿದ್ದಾರೆ

... ಕಣ್ಣ ... ಒಂದು ಗಾಂ ... ದ ಹಾಗೆ ... ಸಂಪೂರ್ಣ ... ಕೈ ಕೊ...

ರಾಜ್ಯದ ಧುರೀಣರೆಲ್ಲ ಮಾತೆತ್ತಿದರೇ! ಸೈಹರದಿಂದ ಹಿಡಿದು ನಮ್ಮ ಗ್ರಾಮದ ಎಡಗಾಣ ಸೂಪರ್ ಮಂತ್ರಿ ... ವರೆಗೆ ಎಲ್ಲರೂ ... ನಕ್ಕಿಲ್ಲ! ... ಕ್ಕೆ ಬೇಡವೇ? ಎಂದೊ ... ಒದಿದ್ದಾರೆ

ಕಾಲು ... ವನ್ನು ಹೋಗ ... ತಿ ... ಪ ... ದ ... ವರ್ಗ ... ಬಿದ್ದ ... ದ ... ಸನ್ನ್ಯಾಸ್ಯ ಒನ ...

ಸುಭಾಸ ಚಂದ್ರ ಬೋಸರನ್ನು ಕೊಲೆ ಮಾಡಿದರೇ?

ಗುಂಡಾ ... ಅಮೇರಿಕಾ ... ಗಳಿಂದ ಕೊಲ್ಲಲ್ಪಟ್ಟರೇ?

... ಜಪಾನಿನ ... ಕೀ ಹಿಡಿ ... ಸರೋವರ ... ಗ ಹೇಗ ...

ನೇತಾಜಿ ... ಮರಣದ ... ಕ್ಷಿಪ ... ರೂ ಮರ ... ನಡೆಯ ... ಪ್ರವಾರದ ... ರವಾದ ... ನೇತಾಜಿ ನ ಧನದ ಒತ ... ಭಸ್ಮವನ್ನು ... ದರಿಂದ ... ದ ಭಾರತ ಸರಕಾರದ ಯತ್ನವು, ನೇತಾಜಿಯವರೂ ಇದ್ದೂ ಬದುಕಿರ ... ಯತ್ನವೂ ನಿರಾಧಾರವಾಗಿದ್ದು ... ಜಿಯವರು ವಿಮಾನ ... ದಲ್ಲಿ ... ರಾದರೆಂದೂ, ಅವರ ಒತಾಭಸ್ಮವು ... ಕಿಯಾ ... ದಲ್ಲಿರುವದೆಂದೂ ... ಲ ಒಂದೆರಡು ಬುದ್ಧ ಸನ್ಯಾಸಿಗಳು, ಒಬ್ಬ ಜಪಾನೀ ಸೇನೆಯ ಕಪ್ತನನ ಮತ್ತು ಒಬ್ಬ ಭಾರತೀಯ ವಿಪ್ಲವಕಾರಿಯ ಮಾತುಗಳ ಆಧಾರದಿಂದಾಗಿದೆ

... ಸರಕಾರವು ... ಬ ವಿಚಾರ ... ಸರಿ ... ದರದ ಜನತೆ ... ದ್ದರೂ ಅಂಥಾ ... ಈ ವಿಷ್ಯ ... ರತ ಜನರು ... ದು ಆನೇಕ ... ಜಪಾನೀ ಒರಿ ... ಕೈಯಲ್ಲಿ ಸಡೆದ ಅನೇಕ ಕ್ರೂರ ಕೃತ್ಯಗಳನ್ನ ಒಡಗಿಸಿಡಲು ಮತ್ತು ಜನತೆಯ ಕಣ್ಕಟ್ಟಲು ಇಂಥಾ ಸವಿ ಕಥೆಯಿಂದ ಪ್ರಯೋಜನವಾಗಬಹುದೇ ವಿನಾ ಸತ್ಯಾಂಶ ಹೂರಬೀಳದು.

ಅಮೇರಿಕಾ ಮತ್ತು ಜಪಾನಿನ ಪತ್ರಿಕೆಗಳಲ್ಲಿ ಪ್ರಕಟವಾಗಿರುವಂತೆ ದ್ವಿತೀಯ ಮಹಾಯುದ್ಧ ... ವಿಚಾರಗಳ ... ಜನರಲ್ ... ರವರು ಗೂಢ ... ಅಮೇರಿಕಾ ಸರಕಾರಕ್ಕೂ ಕೂಡ ... ತೋರಿಸಲು ನಿರಾಕರಿಸಿರುವದನ್ನು ನೋಡಿದರೆ ಈ ಗೋಪ್ಯವಾದ ದಾಖಲೆಗಳಲ್ಲಿ ಸುಭಾಸಚಂದ್ರಬೋಸರ

ವಿಚಾರದಲ್ಲಿ ವಿವರಗಳಿರುವಂತೆ ತೋರುತ್ತದೆ ... ಲ್ಲಿ ಆಯಿತೆಂದು ಪ್ರ... ದ್ವೀಪದ ... ಅಪಘಾತ, ಅದ ... ಮರಣವೆಂಬುದು ... ಕಥೆಯೆನ್ನಬಹುದಾಗಿದೆ

ವಿವರಗಳನ್ನು ತಿಳಿದವರು ಹೇಳುವಂತೆ ಫಾರ್ಮೋಸಾದಲ್ಲಿ ಆ ರೀತಿಯ ವಿಮಾನ ಅಪಘಾತವಾದರೂ ಅದರಲ್ಲಿ ಜಪಾನಿನ ಪ್ರಾಣ ... ಜನರಲೊಬ್ಬರು ಮರಣ ಹೊಂದಿದ್ದು ನಿಜವಾದರೂ ಆ ವಿಮಾನದಲ್ಲಿ ನೇತಾಜಿ ಬೋಸರು ಇರಲಿಲ್ಲವೆಂದು ತಿಳಿದು ಬಂದಿದೆ ... ಯುದ್ಧ ವಿರಾಮದಲ್ಲಿದ್ದ ಟೋಕಿಯೋಕ್ಕೆ ಸುರಕ್ಷಿತ ... ಗೂಢ ... ಒಂದು ... ಶಕರ ... ಎರಡೆ ... ಕಾರಣ ...

... ಜಪಾನರನ್ನು ... ಕಾರ್ಯ ... ಸರ್ಕಾರ ... ಪ್ರಭಾವ ... ಗಿದೆ ... ಯಾದ

ಈ ... ವಿವರಗಳು ಜನರಲ್ ... ಕಾರ್ಯಾಲಯದಲ್ಲಿ ದ್ದವೆಂದೂ ... ಯನ್ನು ... ವಿವರಗ ... ಬೇಕೆಂದೂ, ಒಬ್ಬನೇ ತನ್ನ ... ಇಟ್ಟುಕೊಂಡಿದ್ದನೆಂದೂ ಊಹಿಸಲಾಗಿದೆ ... ಸರ್ವಾಧಿಕಾರಪ್ರತ್ಯಕ್ಷ ... ದ ನಂತರ ... ಕರ ... ಪ್ರಶ್ನೆ ... ಒಳ ವಾಗಿದೆ

ಜಪಾನಿನ ಯೋಶಿದಾ ಸರಕಾರವು ಈ ವಿಚಾರವನ್ನು ತಿಳಿದಿದೆ ... ಈ ವಾರ್ತೆಗಳು ಇಂಡಿಯಾದ ಜನತೆಗೂ ತಿಳಿದರೆ ಜಪಾನ್ ಮತ್ತು ಇಂಡಿಯಾ ಸಂಬಂಧದಲ್ಲಿ ಕಹಿ ಹೆಚ್ಚುವದೆಂದು ... ತವನ್ನು ... ಚ್ಚಲು ಈಗ ಜಪಾನಿನಿಂದ ನೇತಾಜಿಯವರ ಒತಾಭಸ್ಮವನ್ನು ಕಳುಹಿಸುವ ಪ್ರಚಾರವನ್ನು ಪ್ರಾರಂಭಿಸಿರುವದಾಗಿದೆ ಈ ... ಯಿಂದ ಭಾರತದ ವೀರ ಪುತ್ರನೂ, ದ್ವಿತಿಯ ಮಹಾಯುದ್ಧದ ಮಹಾಯೋದ್ಧನೂ, ಭಾರತದ ... ಕಾರಣಭೂತನೂ ಆದ ನೇತಾಜಿಯ ... ತಿಯ ಕಥೆಯನ್ನು ಮರೆಮಾಜಲು ಯತ್ನವಿಯುತ್ತಿದೆ!

ಜ್ಞಾನ ದೀಪ.

(೧)

ಮಾತಿನಿಂದ ಹೋದ ಮಾನ, ಮಸಣಕ್ಕೆ ಹೋದ ಹೆಣ, ಮನೆಯವನಿಗೆ ಕೊಟ್ಟ ಹಣ, ಮರಳಿ ಬರುವದಿಲ್ಲ.

(೨)

ಎಲೆಯೊಣಗಿದರೆ ಹೊಸತು ಚಿಗುರೀತು. ಬೇರೇ ಒಣಗಿದರೆ ಅಸಾಧ್ಯ. ಅಭಿಪ್ರಾಯ ತಪ್ಪಾದರೆ ತಿದ್ದುವುದು ಸಾಧ್ಯ. ಅಂತರ್ಯವೇ ಕೆಟ್ಟು ಹೋದರೆ?

(೩)

ಗಾಳ ಹಾಕಿದವ ಸಂಚು ನೋಡಿ ಕುಳಿತರಾಯಿತು, ಗಾಣ ತಿರುಗಿಸುವವ ದಿನ ದೂಡಿಸಿ ಮಡಿಯಬೇಕು. ಸಾಲಿನ ತಿನ್ನುವವ ಹೊಂಚುಹಾಕಿ ಕೊಂಡಿದ್ದರಾಯಿತು. ದುಡಿದುಣ್ಣುವವನಿಗೆ ಶ್ರಮ ತಪ್ಪಿದ್ದಲ್ಲ.

ಕೊಡಗು

ತಾರೀಕು ೧೩ ಫೆಬ್ರವರಿ ೧೯೫೩ನೇ ಶುಕ್ರವಾರ

ದಿವಂಗತರಾದ ಗೋಪಾಲಸ್ವಾಮಿ ಅಯ್ಯಂಗಾರ್

ಕೇಂದ್ರ ಸರಕಾರದ ಸಂರಕ್ಷಣಾ ಖಾತೆಯ ಮಂತ್ರಿಗಳಾಗಿದ್ದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರವರು ತಾ. ೧೦ರಲ್ಲಿ ಮದ್ರಾಸಿನಲ್ಲಿ ನಿಧನರಾದ ವಿಚಾರವು ಇಡೀ ಹಿಂದೂದೇಶವನ್ನು ದುಃಖಸಾಗರದಲ್ಲಿ ಮುಳುಗಿಸಿದೆ. ಎಪ್ಪತ್ತೊಂದು ವಯಸ್ಸಿನ ವೃದ್ಧರೊಬ್ಬರು ನಿಧನರಾಗುವದು ಹಿಂದೂದೇಶದಲ್ಲಿ ಹೆಚ್ಚಿನ ವ್ಯಸನಕ್ಕೆ ಕಾರಣವಾದ ಸಂಗತಿಯಲ್ಲವಿದ್ದರೂ, ಅವರು ಹಿಂದೂದೇಶದ ಪ್ರಗತಿ, ಮುನ್ನಡೆಗಳಿಗಾಗಿ ಹೊತ್ತಿದ್ದ ಜವಾಬ್ದಾರಿ, ಮಾಡುತ್ತಿದ್ದ ಕೆಲಸಗಳ ದೃಷ್ಟಿಯಿಂದ ತುಂಬಾ ವ್ಯಸನಕರವಾದುದು. ಪಂಡಿತ ನೆಹರೂರವರ ಮಾತಿನಲ್ಲೇ ಹೇಳುವದಾದರೆ ಕಷ್ಟದ ಪ್ರಸಂಗದಲ್ಲಿ ಅಯ್ಯಂಗಾರ್‌ರವರ ಸಲಹೆ ಸೂಚನೆಗಳು ಅಮೂಲ್ಯವಾಗಿದ್ದವು. ಇತ್ತೀಚೆಗಷ್ಟೇ ವೃದ್ಧಾಪ್ಯ ಮತ್ತು ಶಾರೀರಿಕ ಅಸ್ವಸ್ಥತೆಯ ಕಾರಣ ಗೋಪಾಲಸ್ವಾಮಿಯವರು ಎರಡು ಬಾರಿ ರಾಜಿನಾಮೆ ಕೊಟ್ಟಿದ್ದರೂ ನೆಹರೂರವರು ಅದನ್ನು ಸ್ವೀಕರಿಸಲಿಲ್ಲ. ಕೇಂದ್ರ ಸರಕಾರದ ಆಡಳಿತ ರಚನೆಯಲ್ಲಿ ಇವರ ನಿಧನದಿಂದ ಉಂಟಾದ ಕೊರತೆಯನ್ನು ತುಂಬುವದು ತೀರಾ ಪ್ರಯಾಸದ ಕೆಲಸ. ರಾಜಾಜಿಯವರು ಹೇಳಿದಂತೆ ಇವರ ನಿಧನದಿಂದ ಮಂತ್ರಿ ಮಂಡಳವೆಂಬ ಗೋಪುರದ ಮಹಾಸ್ತಂಭವೇ ಕಳಚಿ ಬಿದ್ದಂತಾಗಿದೆ.

ಸರಕಾರದ ಆಡಳಿತ ಅಧಿಕಾರಿಯಾಗಿ ದೀರ್ಘ ಕಾಲದ ವರೆಗೆ ಸಂಪಾದಿಸಿದ ಅನುಭವ, ನಂತರ ಕಾಶ್ಮೀರದ ಮುಖ್ಯ ಮಂತ್ರಿಯಾಗಿ ಪಡೆದ ಆಡಳಿತ ದಕ್ಷತೆ ಇವುಗಳ ಸಹಾಯದಿಂದ ಅವರು ಕೇಂದ್ರದಲ್ಲಿ ಹೊತ್ತ ಮಹಾ ಜವಾಬ್ದಾರಿಗಳನ್ನು ಸುಗಮವಾಗಿ ನಿರ್ವಹಿಸಲು ಶಕ್ತರಾದರು. ರೈಲ್ವೆ ಮತ್ತು ಟ್ರಾನ್ಸ್‌ಪೋರ್ಟ್ ಮಂತ್ರಿಯಾಗಿ ಅವರು ನಿರ್ಮಿಸಿದ ಝೋನಲ್ ಪದ್ಧತಿ, ಸಂಸ್ಥಾನಗಳ ಖಾತೆಯ ಮಂತ್ರಿಗಳಾಗಿ ಅವರು ರಾಜಮಹಾರಾಜರುಗಳಿಗೆ ಕಲಿಸಿದ ಪಾಠ, ಮತ್ತೆ ಸಂರಕ್ಷಣಾ ಖಾತೆಯಲ್ಲಿ ಹೊಸದಾಗಿ ನಿರ್ಮಿಸಿದ ವಿಮಾನ ದಳ ಇವೆಲ್ಲ ಅಯ್ಯಂಗಾರ್‌ರವರ ದಕ್ಷತೆಯನ್ನು ಎತ್ತಿ ಹೇಳುತ್ತವೆ

ಗೋಪಾಲ ಸ್ವಾಮಿಯವರು ಹಳೆಯ ಸಂಪ್ರದಾಯಕ್ಕೆ ಸೇರಿದ ಆಡಳಿತಗಾರರಾದರೂ ಆ ರೀತಿಯ ದರ್ಪ, ಅಧಿಕಾರ ಪ್ರಿಯತೆ ಅವರಲ್ಲಿರಲಿಲ್ಲ. ಅವರು ಹಿಂದೂದೇಶದ ರಾಜ್ಯಘಟನೆಯನ್ನು ರೂಪಿಸುವದರಲ್ಲಿ ಪ್ರಾಮುಖ್ಯ ಸದಸ್ಯರಾಗಿದ್ದರು. ಮೇಲಾಗಿ 'ಬಿ' ವರ್ಗದ ಸಂಸ್ಥಾನಗಳ ಘಟನೆಯನ್ನು ರೂಪಿಸುವದರಲ್ಲೂ, ಅದಕ್ಕೆ ಮೊದಲಿನ ಪಟ್ಟಾಭಿ ಎಡ್‌ಹಾಕ್ ಸಮಿತಿಯಲ್ಲಿಯೂ ಅವರಿದ್ದರು.

ಹಲಕೆಲವು ವಿಚಾರಗಳ ಸಂಬಂಧ ಅವರನ್ನು ಕಂಡು ಮನಗೊಂಡಿದ್ದ ಮತ್ತು ಅನುಭವದಿಂದ ಹೇಳುವದಾದರೆ ಶ್ರೀ ಗೋಪಾಲಸ್ವಾಮಿಯವರು ಇಳಿ ವಯಸ್ಸಿನಲ್ಲಿ ಅಧಿಕಾರ ಹೊತ್ತು ದುಡಿಯುತ್ತಿದ್ದುದು ಕೇವಲ ಜನಸೇವೆಗೋಸ್ಕರವಾಗಿ ಎಂದು ಹೇಳಬಹುದಿತ್ತು. ಆತನು ಮಂತ್ರಿಯೇ ಇರಲಿ, ಯಾ ಆಡಳಿತಗಾರನೇ ಇರಲಿ ಪ್ರಥಮ ಆತನು ಜನಸೇವಕನೆಂಬುದನ್ನು ಪೂರ್ಣವಾಗಿ ಅರಿತು ವರ್ತಿಸುತ್ತಿದ್ದವರಿವರು. ಇವರ ನಿಧನದಿಂದ ಕೊಡಗು ಕೇಂದ್ರ ಸರಕಾರದಲ್ಲಿದ್ದ ಹಿತಚಿಂತಕರನ್ನು ಕಳೆದುಕೊಂಡಿತು. ಕೊಡಗಿನ ಮಟ್ಟಿಗೆ ಸಹಾನುಭೂತಿ ಉಳ್ಳವರಾಗಿದ್ದರು.

ಅವರು ನಮ್ರ ಸ್ವಭಾವದವರಾಗಿದ್ದರು. ಅವರ ತಾಳ್ಮೆಗೆ ಮಿತಿ ಇರಲಿಲ್ಲ. ಎಂಥಾ ಜಟಿಲ ಪ್ರಶ್ನೆಯನ್ನೂ ತಾಳ್ಮೆಯಿಂದ ಪರಿಶೀಲಿಸಿ ಬಗೆಹರಿಸುವ ಸ್ವಭಾವ ಅವರದಾಗಿತ್ತು. ನ್ಯೂಯಾರ್ಕಿನಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಸಮಿತಿಯ ಮುಂದೆ ಕಾಶ್ಮೀರ ಪ್ರಶ್ನೆ ಬಂದಾಗ ಪಾಕಿಸ್ಥಾನದ ಜಫರುಲ್ಲಾಖಾನರು ಭಾರತದ ಮೇಲೆ ಇಲ್ಲದ ಅಸತ್ಯ ಅಪವಾದಗಳನ್ನು ಹೊರಿಸಿ ವಾದಿಸಿದಾಗ ಶಾಂತ ಸ್ವಭಾವದ ನಮ್ರ ಶ್ರೀ ಅಯ್ಯಂಗಾರ್‌ರವರು ಕೊಟ್ಟ ಉತ್ತರ, ತೋರಿಸಿದ ಸ್ನೇಹಭಾವ- ಇವು ಅವರ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತವೆ ಈ ದೃಷ್ಟಿಯಿಂದ ಇವರನ್ನು ಅಹಿಂಸೆಯಲ್ಲಿದ್ದ ಅನುಯಾಯಿ ಗಾಂಧಿಸಂಘದವನೆಂದು ಕರೆದರೂ ತಪ್ಪಾಗಲಾರದು.

ಸ್ವಾತಂತ್ರ್ಯ ಪಡೆದು ಬೆಳೆಯುತ್ತಿರುವ ಹಿಂದೂದೇಶದಲ್ಲಿ ಪ್ರಜಾಪ್ರಭುತ್ವವು ಊರ್ಜಿತಗೊಳ್ಳಲು ದೂರದೃಷ್ಟಿಯ, ಸೇವಾಭಾವನೆಯ ಮುಂದಾಳುಗಳ ಆವಶ್ಯಕತೆ ಇಂದು ತುಂಬಾ ಇದೆ. ಈ ದೃಷ್ಟಿಯಿಂದ ಅಯ್ಯಂಗಾರರು ಇನ್ನೂ ಕೆಲವು ಕಾಲ ಬದುಕಬೇಕಿತ್ತು. ಆದರೆ ನಶ್ವರವಾದ ಮಾನವ ಶರೀರದ ಅಸ್ತಿತ್ವಕ್ಕೆ ಒಂದು ಮಿತಿ ಇದೆ. ಆ ಮಿತಿಯನ್ನು ಮೀರಿ ಅದು ತಾಳಿಕೆ ಬಾರದು. ಆ ನಿಸರ್ಗ ನಿಯಮದಂತೆ ಗೋಪಾಲ ಸ್ವಾಮಿಯವರು ಪರಂಧಾಮವನ್ನೈದಿದ್ದಾರೆ. ಆದರೆ ಅವರು ಮಾಡಿದ ಕೆಲಸ, ಹಾಕಿ ಕೊಟ್ಟ ಆದರ್ಶಗಳು ನಮ್ಮ ಕಣ್ಣ ಮುಂದಿವೆ. ಅವುಗಳನ್ನು ನೋಡಿ ಕೃತಾರ್ಥರಾಗಿರಿಸಿ ದುಡಿಯುವದರಿಂದಲೇ ನಾವು ಭಾರತಕ್ಕಾದ ಹಾನಿಯನ್ನು ತುಂಬಬಲ್ಲೆವಲ್ಲದೆ ಕಂಬನಿ ಸುರಿಸಿ ಪ್ರಯೋಜನವಿಲ್ಲ.

ಹಿಂದೂದೇಶದ ಸರ್ವಜವಾಬ್ದಾರಿಯನ್ನು ಹೊತ್ತು, ಅನೇಕ ಎಡರುತೊಡರುಗಳು ಬಂದರೂ ಧೃತಿಗೆಡದೆ ಮುಂದೆ ಸಾಗುತ್ತಿರುವ ಪಂಡಿತ ನೆಹರೂರವರ ಜೀವನಯಾತ್ರೆಯಲ್ಲಿ ಅನೇಕ ವೀರಯೋಧರು ಗುರಿಮುಟ್ಟುವ ಮೊದಲೇ ಕಣ್ಮರೆಯಾಗುತ್ತಿರುವದು ಅವರ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸುತ್ತಿದೆ. ಭಗವಂತನು ಭರತ ಖಂಡದ ಈ ವೀರಯೋಧನಿಗೆ ದುಃಖಭಾರವನ್ನು ಸಹಿಸಿ ಮುನ್ನಡೆಯುವ ಶಕ್ತಿಯನ್ನು ಕೊಡಲಿ. ನಾವೆಲ್ಲರೂ ಸಹಕರಿಸಿ ಈ ನಾಯಕನ ಕೈಯನ್ನು ಬಲಗೊಳಿಸುವ ಬುದ್ಧಿಯನ್ನು ನಮಗೆ ದಯಪಾಲಿಸಲಿ. ತಮ್ಮ ಕರ್ತವ್ಯವನ್ನು ಎಲ್ಲರೂ ಹೊಗಳುವಂತೆ ನಿರ್ವಹಿಸಿ ನಿಧನರಾದ ಗೋಪಾಲಸ್ವಾಮಿ ಅಯ್ಯಂಗಾರ್‌ರವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

ವರ್ತಮಾನ.

ರೈಲ್ವೆಯಲ್ಲಿ ಟಿಕೆಟ್ ಕಲೆಕ್ಟರುಗಳ ಕೆಲಸವು ಖಾಲಿ ಇದೆ. ಎಸ್. ಎಸ್. ಎಲ್. ಸಿ. ಪಾಸಾಗಿ ಪ್ರಾಯ ೧೮ರಿಂದ ೨೫ರ ವರೆಗೆ ಇರುವ ನೀಳವು ಕುತೂಹಲವಿರುವ ಯುವಕರು ನಿಶ್ಚಿತ ಅಪ್ಲಿಕೇಶನ್‌ನಲ್ಲಿ ಅಪ್ಲಿಕೇಶನನ್ನು ಮಡಿಕೇರಿ ಎಂಪ್ಲಾಯ್‌ಮೆಂಟ್ ಆಫೀಸಿಗೆ ಈ ತಾ. ೨೫ರ ಒಳಗೆ ತಲುಪುವಂತೆ ಕಳುಹಿಸಬಹುದು.

ಪೊನ್ನಂಪೇಟೆ ಕೊಡವ ಸಮಾಜದ ವಾರ್ಷಿಕ ಮಹಾ ಸಭೆಯು ಶ್ರೀ ಕೆ. ಎ. ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಗಳಾದ ಕೆ. ಪಿ. ಚಂಗಪ್ಪ, (ಪ್ರೆಸಿಡೆಂಟ್) ಎಂ. ಡಬ್ಲ್ಯೂ ನಾಣಯ್ಯ, ಪಿ. ಕೆ. ಪೂಣಚ್ಚ, ಎಂ. ಯು. ಸೋಮಯ್ಯ, ಸಿ. ಬಿ. ಮಾದಯ್ಯ, ಬಿ ಕೆ. ಅಚ್ಚಯ್ಯ, ಪಿ. ಎಂ. ಪೊನ್ನಪ್ಪ, ಡಬ್ಲ್ಯೂ. ಎಂ. ಕರುಂಬಯ್ಯ, ಎಂ ಪಿ. ನಾಚಯ್ಯ, ಪಿ. ಬಿ. ನಂಜಪ್ಪ ಮತ್ತು ಕೆ. ಎ. ಕುಟ್ಟಪ್ಪ ಇವರುಗಳನ್ನು ೧೯೫೩ಕ್ಕೆ ಕಾರ್ಯಕಾರಿ ಮಂಡಳಿಯನ್ನಾಗಿ ಆರಿಸಲಾಯಿತು.

ಮೂರ್ನಾಡು ಮಾಧ್ಯಮಿಕ ಶಾಲೆಯ ಅಧ್ಯಾಪಕ ಹಾಗೂ ಸ್ಕೌಟ್ ಮತ್ತು ಗರ್ಲ್ ಗೈಡ್ಸ್‌ಗಳು ಕಾನಂಗಾಡು ಕಾಫಿ ತೋಟ ಮೌಂಟನ್ನು ನೋಡಿಕೊಂಡು ಅದೇ ಕಾಡು ಶಾಲಾ ಬಳಿ ಬಿದಿರಾಗ್ನಿ ಪ್ರದರ್ಶನ ಮಾಡಿದರು. ಸಾರ್ವಜನಿಕರು ಇವರನ್ನು ಸತ್ಕರಿಸಿದ್ದಲ್ಲದೆ ಬಾಲಕ ಬಾಲಕಿಯರಿಗೆ ಬಹುಮಾನಗಳನ್ನು ಕೊಟ್ಟರು.

ತಾ. ೯ರಲ್ಲಿ ಸೋಮವಾರಪೇಟೆ ಸಮುಸ್ಕೃತ ಶಾಲೆಯ ಪ್ರಾರಂಭೋತ್ಸವವನ್ನು ಶ್ರೀ ಎಂ. ಎ. ಕಾಳಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕಗಳನ್ನು ಹಂಚಿದರು.

ಅಮ್ಮತ್ತಿ ಮಾಧ್ಯಮಿಕ ಶಾಲಾ ವಿದ್ಯಾರ್ಥಿಯರು ೧೯೫೨ನೇ ಇಸವಿಯಲ್ಲಿ ಸ್ಥಾಪಿಸಿದ "ನೇತಾಜಿ ಹಾಕಿ ಕಪ್"ನ ಪಂದ್ಯಾಟವು ಫೆಬ್ರವರಿ ಒಂದನೇ ವಾರದಲ್ಲಿ ಅಮ್ಮತ್ತಿ ಶಾಲಾ ಮೈದಾನದಲ್ಲಿ ನಡೆದು ತಾ. ೯ರಂದು ಅಮ್ಮತ್ತಿ ಶಾಲಾ ಟೀಮಿನವರು ಮರಗೋಡು ಶಾಲೆಯ ಟೀಮಿನವರನ್ನು ಗೆದ್ದು, ಕಪ್ಪನ್ನು ಪಡೆದರು. ಆ ದಿವಸ ಗೆದ್ದ ಟೀಮಿನವರಿಗೆ ಕೊಡಗಿನ ಎಸೆಂಬ್ಲಿಯ ಅಧ್ಯಕ್ಷರಾದ ಶ್ರೀ ಬಿ. ಎಸ್. ಕುಶಾಲಪ್ಪನವರು ಕಪ್ಪನ್ನು ಕೊಟ್ಟಿದ್ದಲ್ಲದೆ ಮುಂದಿನ ವರ್ಷದಿಂದ ಹಾಕಿ ಪಂದ್ಯಾಟವನ್ನು ಮುಂದರಿಸಲು ಶ್ರೀ ಕುಶಾಲಪ್ಪನವರು ತಾನೂ ಒಂದು ಬೆಳ್ಳಿಯ ಬಟ್ಟಲನ್ನು ಕೊಡುವದಾಗಿ ಭರವಸೆಯನ್ನು ಕೊಟ್ಟಿರುವರು.

ಬರಪೊಳೆ ಯೋಜನೆಯ ಪರಿಶೀಲನೆಯನ್ನು ಮಾಡಬೇಕಾಗಿ ಮೈಸೂರಿನಿಂದ ಬಂದಿರುವ ಮೈಸೂರಿನ ನಿವೃತ್ತ ಇಂಜಿನಿಯರಾದ ಶ್ರೀ ನರಸಿಂಹಯ್ಯನವರೂ, ಬೆಂಗಳೂರು ಇಂಡಿಯನ್ ವಿಜ್ಞಾನ ಶಾಲೆಯ ನಿರ್ದೇಶಕರೊಬ್ಬರಾದ ಡಾ. ಭಟ್ನಾಗರ್‌ರವರೂ ತಾ. ೬ರಲ್ಲಿ ಕೊಡಗಿಗೆ ಬಂದು ಬರಪೊಳೆ ಜಲಪಾತವನ್ನು ನೋಡಿಕೊಂಡು ಹೋದರು.

ಕೊಡಗಿನ ಗಂಧದ ಮಾರಾಟದ ವಿಚಾರದಲ್ಲಿ ಇಲ್ಲಿಯ ಸರಕಾರದೊಡನೆ ಮಾತುಕತೆ ನಡೆಸಲು ಬಂದಿರುವ ಮೈಸೂರಿನ ಕೈಗಾರಿಕಾ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯನವರು ತಾ. ೧೧ರಲ್ಲಿ ಬರಪೊಳೆ ಜಲಪಾತವನ್ನು ನೋಡಿಕೊಂಡು ಬಂದರು.

ಮಡಿಕೇರಿ ವೇದಾಂತ ಮಂದಿರದಲ್ಲಿ ತಾರೀಕು ೧೫ರಿಂದ ೨೨ರ ವರೆಗೆ ಶ್ರೀ ರಾಮಕೃಷ್ಣ ಮತ್ತು ವಿವೇಕಾನಂದರ ಜನ್ಮೋತ್ಸವದ ಸಪ್ತಾಹವನ್ನು ಆಚರಿಸಲಾಗುವದು. ಪ್ರತಿ ದಿನ ಸಾಯಂಕಾಲ ಆರು ಮುಕ್ಕಾಲು ಗಂಟೆಗೆ ಕಾರ್ಯಕ್ರಮಗಳು ಆರಂಭವಾಗುವವು. ಭಜನೆ, ಭಾಷಣ ಮೊದಲಾದ ಕಾರ್ಯಕ್ರಮಗಳ ಏರ್ಪಾಡಿದೆ.

ಸೋಮವಾರಪೇಟೆ ಆಸ್ಪತ್ರೆಯಲ್ಲಿ ಮಕ್ಕಳಿಗಾಗಿ ಒಂದು ವಾರ್ಡ್ ಕಟ್ಟಿಸಲು ಸೋಮವಾರಪೇಟೆಯ ಪ್ಲಾಂಟರರೊಬ್ಬರಾದ ಶ್ರೀ ಡಿ. ವಾಸಪ್ಪನವರು ರೂ. ೫,೦೦೦ ಕೊಡಲೊಪ್ಪಿರುವರೆಂದು ತಿಳಿದು ಬಂದಿದೆ.

ನಿವೃತ್ತ ಭಾರತ ಸೇನಾನಿಗಳಾದ ಜನರಲ್ ಕಾರ್ಯಪ್ಪನವರು ತಾ. ೯ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿ ಕೂಟದ ಸಮಾರೋಪ ಭಾಷಣ ಮಾಡಿದರು. ಇವರ ಸತ್ಕಾರಕ್ಕಾಗಿ ಮಡಿಕೇರಿ ಕೊಡಗು ಸಮಾಜದವರು ಈ ದಿನ ರಾತ್ರೆ ಒಂದು ಔತಣ ಕೂಟವನ್ನು ಸಂಘಟಿಸಲು ಏರ್ಪಡಿಸಿರುವರು.

ಕನ್ನಡ ನಾಡಿನಲ್ಲಿ ಕೀರ್ತಿ ಪಡೆದ ಶ್ರೀ ಕೆ. ಹಿರಣ್ಣಯ್ಯನವರ ನಾಟಕ ಮಂಡಳಿಯವರು ಮಡಿಕೇರಿಯಲ್ಲಿ ಹಾಕಿರುವ ತಮ್ಮ ಶ್ರೀ ಥಿಯೇಟರಿನಲ್ಲಿ ತಾರೀಕು ೫ರಿಂದ ದೇವದಾಸಿ ಎಂಬ ನಾಟಕವನ್ನು ಆಡುತ್ತಿರುವರು. ಪ್ರಥಮ ದಿನ ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರು ಈ ನಾಟಕದ ವಿಚಾರವಾಗಿ ಪ್ರಶಂಸಿಸಿ ಮಾತಾಡಿದರಲ್ಲದೆ ನಾಟಕ ಕಂಪೆನಿಯವರಿಗೆ ಸಕಲ ಪ್ರೋತ್ಸಾಹ ದೊರೆಯಲೆಂದು ಆಶಿಸಿದರು.

ಭಾರತ ಸೇನಾನಿಯಾಗಿದ್ದು ನಿವೃತ್ತರಾಗಿ ತಮ್ಮ ಮಡಿಕೇರಿ ರೋಶನಾರಾ ಬಂಗ್ಲೆಯಲ್ಲಿರುವ ಜನರಲ್ ಕಾರ್ಯಪ್ಪನವರು ಸ್ವತಃ ಶಾರೀರಿಕ ಪರಿಶ್ರಮವನ್ನು ಕೈಕೊಂಡಿದ್ದಾರೆ. ತಮ್ಮ ಬಂಗ್ಲೆಯ ಆವರಣವನ್ನು ಸಮ್ಮಗೊಳಿಸುವ ಕೆಲಸವನ್ನು ಸ್ವತಃ ಅವರು ಮಾಡುತ್ತಿದ್ದಾರೆ. ತಾ. ೯ರಲ್ಲಿ ಅವರೂ ಮತ್ತವರ ಪುತ್ರ ೧೪ ವರ್ಷದ ನಂದ ಇವರಿಬ್ಬರೂ ಮರವೊಂದನ್ನು ಕಡಿದು ಹಾಕಿರುವರು. ನಿವೃತ್ತ ಸೇನಾನಾಯಕರ ಈ ರೀತಿಯ ಶಾರೀರಿಕ ಪರಿಶ್ರಮದ ಗೌರವವು ಆದರ್ಶವಾಗಿದೆ.

ಅಖಿಲ ಕೊಡಗು ೯ನೇ ಜಾನುವಾರುಗಳ ಮತ್ತು ನಾಲ್ಕನೇ ಕೋಳಿಗಳ ಪ್ರದರ್ಶನವು ತಾ. ೨೮ರಲ್ಲಿ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಕೂಡಿಗೆಯಲ್ಲಿ ನಡೆಯುವದು. ಮದರಾಸಿನ ನಿವೃತ್ತ ಜಾನುವಾರು ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಟಿ. ವಿನಾಯಕ ಮುದಲಿಯಾರ್‌ರವರು ಭಾಷಣ ಮಾಡುವರಲ್ಲದೆ ಜಾನುವಾರು ಅಭಿವೃದ್ಧಿಗೆ ಸಹಾಯಕವಾದ ಚಲನಚಿತ್ರ ಪ್ರದರ್ಶನದ ಏರ್ಪಾಡೂ ಇದೆ.

ಗೋಪಾಲಸ್ವಾಮಿ ಐಯ್ಯಂಗಾರರ ನಿಧನ.

ಕೇಂದ್ರ ಸರಕಾರದ ಸಂರಕ್ಷಣಾ ಇಲಾಖೆಯ ಮಂತ್ರಿಯವರಾದ ಶ್ರೀ. ಎನ್. ಜಿ. ಐಯ್ಯಂಗಾರ್‌ರವರು ತಾರೀಕು ಹತ್ತರ ಬೆಳಿಗ್ಗೆ ೩ ಗಂಟೆಗೆ ಮದ್ರಾಸ್ ಜನರಲ್ ಆಸ್ಪತ್ರೆಯಲ್ಲಿ ನಿಧನರಾದರು. ಕೆಲವು ದಿನಗಳಿಂದ ಕಾಯಿಲೆಯಲ್ಲಿ ಇದ್ದ ಇವರು ಮೂರು ದಿನಗಳ ಹಿಂದೆ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದರು. ಶ್ರೀ. ಐಯ್ಯಂಗಾರರು ಸಿರೋಸಿಸ್ ಕಾಯಿಲೆಯಿಂದ ಕಳೆದ ಎರಡು ತಿಂಗಳಿಂದ ನರಳುತ್ತಿದ್ದು ಗುಣಮುಖರಾಗಿದ್ದರು. ಪಂಡಿತ ನೆಹರೂರವರು ಮದ್ರಾಸಿಗೆ ಬಂದಿದ್ದಾಗ ಅವರನ್ನು ಕಂಡಾಗ ಐಯ್ಯಂಗಾರರು ಚೆನ್ನಾಗಿದ್ದು ಜನವರಿ ೨೦ರಲ್ಲಿ ಡೆಲ್ಲಿಗೆ ಪ್ರಯಾಣ ಬೆಳೆಸುವ ಏರ್ಪಾಡಿನಲ್ಲಿದ್ದರು. ಆದರೆ ಫೆಬ್ರವರಿ ಪ್ರಥಮ ವಾರದಲ್ಲಿ ಅವರಿಗೆ ಪುನಃ ಮೂಳೆಯೊಳಗೆ ಏನೋ ಕಾಯಿಲೆ ಪ್ರಾರಂಭವಾಗಿ ಕಳೆದ ಹತ್ತು ದಿನಗಳ ವರೆಗೆ ಹಾಸಿಗೆಯಲ್ಲಿ ಮಲಗಿದ್ದು ಕಡೆಗೆ ಆಸ್ಪತ್ರೆಯಲ್ಲಿ ನಿಧನರಾದರು. ಜಗತ್ತಿನ ಆರೋಗ್ಯ ಸಂಸ್ಥೆಯ ತಜ್ಞ ವೈದ್ಯರೂ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ.

ಶ್ರೀ. ಐಯ್ಯಂಗಾರ್‌ರವರು ತಮ್ಮ ಶಾರೀರಿಕ ಅಸ್ವಸ್ಥತೆಯ ಕಾರಣ ತಮ್ಮ ಮಂತ್ರಿಪದಕ್ಕೆ ಈ ಹಿಂದೆ ಎರಡು ಬಾರಿ ರಾಜೀನಾಮೆ ಕೊಟ್ಟಿದ್ದರು. ಪಂಡಿತ ನೆಹರೂರವರು ಅವರು ಶೀಘ್ರ ಗುಣಮುಖರಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಶಕ್ತರಾಗುವರೆಂಬ ನಂಬಿಕೆಯಿಂದ ಅವರ ರಾಜೀನಾಮೆಯನ್ನು ಸ್ವೀಕರಿಸಿರಲಿಲ್ಲ.

ಐಯ್ಯಂಗಾರ್‌ರವರ ದಹನಸಂಸ್ಕಾರವು ತಾರೀಕು ೧೦ ರಲ್ಲಿ ಹಿಂದೂ ಸಂಪ್ರದಾಯದಂತೆ ಮಿಲಿಟರಿ ಗೌರವದೊಡನೆ ನಡೆಯಿತು.

ಸಂಕ್ಷಿಪ್ತ ಜೀವನ.

೩೧ನೇ ಮಾರ್ಚ್ ತಾರೀಕು ೧೮೮೨ರಲ್ಲಿ ಐಯ್ಯಂಗಾರರು ಜನಿಸಿದರು. ಅವರು ತಮ್ಮ ವಿದ್ಯಾಭ್ಯಾಸವನ್ನು ಮದ್ರಾಸಿನ ಪ್ರೆಸಿಡೆನ್ಸಿ ಮತ್ತು ಲಾ ಕಾಲೇಜುಗಳಲ್ಲಿ ಮುಗಿಸಿ ಪಚ್ಚೆಯಪ್ಪಾ ಕಾಲೇಜಿನಲ್ಲಿ ಲೆಕ್ಚರರಾಗಿ ಸೇರಿದರು. ೧೯೦೫ರಲ್ಲಿ ಮದ್ರಾಸು ಸಿವಿಲ್ ಸರ್ವಿಸನ್ನು ಸೇರಿ ೧೯೧೯ರ ವರೆಗೆ ಡೆಪ್ಯುಟಿ ಕಲೆಕ್ಟರಾಗಿದ್ದರು. ೧೯೨೦ರಲ್ಲಿ ಕಲೆಕ್ಟರೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರೂ ಆದರು. ನಂತರ ಒಂದೊಂದು ಮೆಟ್ಟಿಲು ಮೇಲೇರಿ ಮದ್ರಾಸ್ ಪ್ರಾಂತದ ರೆವಿನ್ಯೂ ಬೋರ್ಡಿನ ಸದಸ್ಯರಾದರು. ೧೯೩೭ರಿಂದ ೧೯೪೩ರ ವರೆಗೆ ಅವರು ಕಾಶ್ಮೀರದ ಮುಖ್ಯ ಮಂತ್ರಿಗಳಾಗಿದ್ದರು. ಕಾಶ್ಮೀರದಿಂದ ನಿವೃತ್ತರಾದ ಮೇಲೆ ಅವರು ಹಿಂದೀ ಒಕ್ಕೂಟದ ಮೇಲ್ಮನೆಯ (ಕೌನ್ಸಿಲ್ ಆಫ್ ಸ್ಟೇಟ್) ಸದಸ್ಯರಾಗಿ ಆರಿಸಲ್ಪಟ್ಟರು.

ಆ ನಂತರ ಐಯ್ಯಂಗಾರ್‌ರವರು ದೇಶದ ರಾಜಕೀಯ ರಂಗದಲ್ಲಿ ಪ್ರಾಮುಖ್ಯ ಪಾತ್ರ ವಹಿಸತೊಡಗಿದರು. ಹಿಂದೀ ಸೇನೆಯ ರಾಷ್ಟ್ರೀಕರಣ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದರು. ೧೯೪೬ ರಲ್ಲಿ ಅವರು ಭಾರತ ರಾಜ್ಯಘಟನಾ ಸಭೆಗೆ ಆರಿಸಲ್ಪಟ್ಟು ಭಾರತ ರಾಜ್ಯಘಟನೆಯನ್ನು ರೂಪಿಸುವದರಲ್ಲಿ ಪ್ರಾಮುಖ್ಯ ಸದಸ್ಯರೊಬ್ಬರಾಗಿದ್ದರು. ೧೯೪೭ ಸಪ್ಟೆಂಬರ್ ೨೭ ರಲ್ಲಿ ಅವರನ್ನು ಕೇಂದ್ರ ಮಂತ್ರಿಮಂಡಳಕ್ಕೆ ತೆಗೆದುಕೊಳ್ಳಲಾಯಿತು. ೧೯೪೮ ರಲ್ಲಿ ಅವರು ನ್ಯೂಯಾರ್ಕಿನಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಸಮಿತಿಯ ಮುಂದೆ ಕಾಶ್ಮೀರ ಸಮಸ್ಯೆಯ ಚರ್ಚೆಗೆ ಭಾರತದ ನಿಯೋಗದ ಮುಖ್ಯಸ್ಥರಾಗಿ ಹೋಗಿದ್ದರು. ೧೯೪೮ ರಲ್ಲಿ ಅವರು ರೈಲ್ವೆ ಮತ್ತು ಸಾರಿಗೆ ಇಲಾಖೆಯ ಮಂತ್ರಿಗಳಾಗಿದ್ದರು. ನಂತರ ಅವರು ಸಂಸ್ಥಾನ ಶಾಖೆಯ ಮಂತ್ರಿಗಳೂ ಆಗಿದ್ದರು. ಕಳೆದ ಚುನಾವಣೆಯಾಗಿ ಹೊಸ ಮಂತ್ರಿಮಂಡಳದ ರಚನೆಯಾದಾಗ ಇವರು ಸಂರಕ್ಷಣಾ ಖಾತೆಯ ಮಂತ್ರಿಗಳಾಗಿ ನೇಮಿಸಲ್ಪಟ್ಟರು. ಅವರು ಸಾಯುವಾಗ ಅವರಿಗೆ ೭೦ ವರ್ಷ ಪ್ರಾಯವಾಗಿತ್ತು.

ದೇಶದ ಶ್ರದ್ಧಾಂಜಲಿ.

ಭಾರತ ಒಕ್ಕೂಟದ ಪ್ರೆಸಿಡೆಂಟರಾದ ಡಾ. ರಾಜೇಂದ್ರ ಪ್ರಸಾದರು ಐಯ್ಯಂಗಾರ್‌ರವರ ನಿಧನದ ಬಗ್ಗೆ ತಮ್ಮ ಸಂತಾಪವನ್ನು ಸೂಚಿಸುತ್ತಾ 'ಅವರು ದೇಶಕ್ಕಾಗಿ ತಮ್ಮ ಅಮೂಲ್ಯ ಜೀವನವನ್ನೇ ಕೊಟ್ಟರು. ಅವರ ನಿಧನದಿಂದ ದೇಶಕ್ಕೆ ಅಪಾರ ಹಾನಿಯಾಗಿದೆಯಲ್ಲದೆ ವ್ಯಕ್ತಿಗತವಾಗಿ ನನಗೆ ತುಂಬಲಾರದ ನಷ್ಟವಾಗಿದೆ' ಎಂದರು.

ಭಾರತದ ಪ್ರಧಾನ ಮಂತ್ರಿ ಪಂಡಿತ ನೆಹರೂರವರು 'ಕಳೆದ ಆರು ವರ್ಷಗಳಿಂದ ಯೋಗ್ಯ ಸಹೋದ್ಯೋಗಿಯಾಗಿದ್ದ ಐಯ್ಯಂಗಾರರ ನಿಧನದಿಂದ ಅಪಾರ ನಷ್ಟವಾಗಿದೆ. ಕಷ್ಟದ ಸಮಯದಲ್ಲಿ ಅವರ ಸಲಹೆಯು ಅಮೂಲ್ಯವಾಗಿತ್ತು. ರಾಷ್ಟ್ರಕ್ಕೆ ಅವರ ನಿಧನದಿಂದ ತುಂಬಲಾರದ ನಷ್ಟವಾಗಿದೆ.' ಎಂದಿರುವರು.

ಮದ್ರಾಸಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ತಮ್ಮ ಸಂತಾಪವನ್ನು ಸೂಚಿಸುತ್ತಾ, 'ಅವರ ಜೀವನವು ದೇಶಕ್ಕೆ ಅತ್ಯಮೂಲ್ಯವಾಗಿತ್ತು. ಅವರನ್ನು ಕಳಕೊಂಡೆವು. ದೇಶದ ಸರಕಾರವೆಂಬ ಕಟ್ಟಡದ ಮಹಾಕಂಬವೊಂದು ಬಿದ್ದಂತಾಯಿತು. ಈ ನಷ್ಟವು ಎಂದೆಂದಿಗೂ ತುಂಬಿ ಬರಲಾರದು.' ಎಂದಿರುವರು.

ದೇಶದ ಉನ್ನತ ನಗರಗಳಲ್ಲಿ ತಾ. ೧೦ರಲ್ಲಿ ಐಯ್ಯಂಗಾರರ ನಿಧನಕ್ಕಾಗಿ ರಜಾ ಕೊಡಲಾಗಿತ್ತು. ಪಾಠಶಾಲೆಗಳ ಹಲವನ್ನು ಮುಚ್ಚಲ್ಪಟ್ಟಿತ್ತು. ಎಲ್ಲೆಡೆಯೂ ಭಾರತ ರಾಷ್ಟ್ರಧ್ವಜವು ಅರ್ಧಕ್ಕೆ ಹಾರಿಸಲ್ಪಟ್ಟಿತು.

ಚೈನಾದ ಮೇಲೆ ಚಿಯಾಂಗರ ಧಾಳಿ?

ಕಮ್ಯೂನಿಸ್ಟ್ ಚೀನಾದ ಮತ್ತು ಫಾರ್ಮೋಸಾದಲ್ಲಿದ್ದ ಚಿಯಾಂಗರ ಸೇನೆಗಳ ಮಧ್ಯೆ ಇದ್ದ ಅಮೇರಿಕಾ ನೌಕಾದಳವನ್ನು ಅಮೇರಿಕಾದ ಅಧ್ಯಕ್ಷ ಐಸೆನ್ ಹೋವರ್‌ರವರು ಹಿಂತೆಗೆದುಕೊಂಡ ಪ್ರಯುಕ್ತ ಕಳೆದ ವಾರದ ಪತ್ರಿಕೆಯಲ್ಲಿ ನಾವು ಊಹಿಸಿದ್ದಂತೆ ಈ ಎರಡು ಸೇನೆಗಳಲ್ಲಿ ಘರ್ಷಣೆಗೆ ಅನುಕೂಲವಾಗಿದೆ. ಇತ್ತಲಾಗಿ ಬಂದಿರುವ ವಾರ್ತೆಗಳಂತೆ ಚಿಯಾಂಗ್ ಕೈಶೇಕರ ಸೇನೆಗಳು ಚೈನಾದ ಅಮೊಯಿ ಎಂಬಲ್ಲಿ ಬಂದಿಳಿದಿವೆಯೆಂದು ತಿಳಿಯಬಂದಿದೆ. ಇವರ ಜೊತೆಗೆ ಮಲಕ್ಕಾವಿನ ಹತ್ತಿರದ ಸಮುದ್ರದಲ್ಲಿ ಕಮ್ಯೂನಿಸ್ಟ್ ಗಸ್ತು ದಳದವರಿಗೂ ರಷ್ಯದ ಚೀನಾ ಸಮುದ್ರಗೊರಿಲ್ಲಾ ಪಡೆಯವರಿಗೂ ಘರ್ಷಣೆ ಪ್ರಾರಂಭವಾಗಿದೆಯಂತೆ. ಈ ಯುದ್ಧವನ್ನು ಟೆಲಿವಿಜನ್ ಮೂಲಕ ಮಕಾಸ್ಸೋದಿಂದ ನೋಡಿದರೆಂದೂ ಹೇಳಲಾಗಿದೆ. ಈ ಮಧ್ಯೆ ಅಮೇರಿಕಾವು ಫಾರ್ಮೋಸಾಕ್ಕೆ ಜೆಟ್ ವಿಮಾನ ದಳವೊಂದನ್ನು ಕಳುಹಿಸಿದೆಯಂತೆ.

ಚಿಯಾಂಗರು ಕಮ್ಯೂನಿಸ್ಟ್ ಚೀನಾದ ಮೇಲೆ ಪ್ರಾರಂಭಿಸಿರುವ ಈ ಧಾಳಿಯಿಂದ ಯಾವ ಪರಿಣಾಮವೇನೂ ಆಗದ ಸಂಭವ ತೋರಿಬರದಿದ್ದರೂ ಇದರಿಂದ ಕಮ್ಯೂನಿಸ್ಟ್ ಚೀನಾಕ್ಕೆ ಕಿರುಕುಳವಿದೆಯೆಂದು ಹೇಳಬಹುದು. ಹೇಗಾಗಿ ಚಿಯಾಂಗರ ಹಿನ್ನೆಲೆಯಲ್ಲಿ ಅಮೇರಿಕಾದ ಶಕ್ತಿ ಇರುವ ಪ್ರಯುಕ್ತ ಇದು ಕ್ರಮದಿಂ ಬಿಕ್ಕಟ್ಟನ್ನು ತಾರದಿರದು.

ನೊವ್ವದಾಗಿ ಡೆಲ್ಲಿಗೆ ಬಂದಿರುವ ಪ್ರಖ್ಯಾತ ಲೇಬರ್ ಪಕ್ಷದ ಪ್ರಸಿದ್ಧ ಮುಂದಾಳಾದ ಶ್ರೀ ಅನ್ಯೂರಿನ್ ಬೆವಾನ್‌ರವರು ಫಾರ್ಮೋಸಾದಿಂದ ಅಮೇರಿಕನ್ ನೌಕಾದಳವನ್ನು ಹಿಂತೆಗೆದ ನಿರ್ಣಯದ ವಿಚಾರ ಮಾತಾಡುತ್ತಾ ಇದು ಮಹಾ ಯುದ್ಧಕ್ಕೆ ಎಡೆ ಮಾಡಬಹುದೆಂದು ಹೇಳಿದ್ದಲ್ಲದೆ ಐಸೆನ್ ಹೋವರರ ನಿರ್ಣಯವು ನಿಜವಾಗಿಯೂ ತೀರ್ಮಾನಿತವಲ್ಲದೆ ಯುದ್ಧವನ್ನು ಆಹ್ವಾನಿಸುವಂತಾದ್ದು ಎಂದು ಹೇಳಿರುವರು.

Notice

It is hereby notified for general information that the following vehicles will be sold in public auction on Friday the 13th March '53 at 11 A. M. in front of the Office of the District Superintendent of Police, Coorg, Mercara. Successful bidders should pay the bid amount immediately after the sale. The sale is subject to the approval of the Government of Coorg.

One Police Jeep C. G. A. 573 and one Truck C. G. A. 734.

1. Jeep No C. G. A. 573 Tourer Type—1943 Model—Standard Willys Jeep—Four Cylinders—16 H. P.

2. One ton Truck No. C. G. A. 734—Dodge 1948 model—Six Cylinders—30 H. P.

M. D. Muthanna.
Dist. Supt. of Police, Coorg.

ಜ್ಞಾನ ದೀಪ.

(೧)

ಬಾಯಿಂದ ಹೋದ ಮಾನ, ಮಸಣಕ್ಕೆ ಹೋದ ಹೆಣ, ಸಾಲಗಾರನಿಗೆ ಕೊಟ್ಟ ಹಣ, ಮರಳಿ ಬರುವದಿಲ್ಲ.

(೨)

ಎಲೆಯೊಳಾಗಿದರೆ ಹೊರತು ಚಿಗುರೇಕು. ಬೇರೇ ಒಣಗಿದರೆ ಅಸಾಧ್ಯ. ಅಭಿಪ್ರಾಯ ತಪ್ಪಾದರೆ ತಿದ್ದುವುದು ಸಾಧ್ಯ. ಅಂತರ್ಯಾಮೀ ಕೆಟ್ಟ ಹೋದರೆ?

(೩)

ಗಾಳ ಹಾಕಿದವ ಸಂಚು ನೋಡಿ ಕೂತರಾಯಿತು, ಗಾಣ ತಿರುಗಿಸುವವ ದಿನ ರಳಿಸಿ ದುಡಿಯಬೇಕು. ಸುಲಿದು ತಿನ್ನುವವ ಹೊಂಚುಹಾಕಿ ಕೊಂಡಿದ್ದರಾಯಿತು. ದುಡಿದುಣ್ಣುವವನಿಗೆ ಶ್ರಮ ತಪ್ಪಿದ್ದಲ್ಲ.

ಕೊಡಗು

ತಾರೀಕು ೧೩ ಫೆಬ್ರವರಿ ೧೯೫೩ನೇ ಶುಕ್ರವಾರ

ದಿವಂಗತರಾದ ಗೋಪಾಲಸ್ವಾಮಿ ಅಯ್ಯಂಗಾರ್

ಕೇಂದ್ರ ಸರಕಾರದ ಸಂರಕ್ಷಣಾ ಖಾತೆಯ ಮಂತ್ರಿಗಳಾಗಿದ್ದ ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್‌ರವರು ತಾ. ೧೦ರಲ್ಲಿ ಮದ್ರಾಸಿನಲ್ಲಿ ನಿಧನರಾದ ವಿಚಾರವು ಇಡೀ ಹಿಂದೂದೇಶವನ್ನು ದುಃಖಸಾಗರದಲ್ಲಿ ಮುಳುಗಿಸಿದೆ. ಎಪ್ಪತ್ತೆರಡು ವಯಸ್ಸಿನ ವೃದ್ಧರೊಬ್ಬರು ನಿಧನರಾಗುವದು ಹಿಂದೂದೇಶದಲ್ಲಿ ಹೆಚ್ಚಿನ ವ್ಯಸನಕ್ಕೆ ಕಾರಣವಾದ ಸಂಗತಿಯಲ್ಲದಿದ್ದರೂ, ಅವರು ಹಿಂದೂದೇಶದ ಪ್ರಗತಿ, ಮುನ್ನಡೆಗಳಿಗಾಗಿ ಹೊತ್ತಿದ್ದ ಜವಾಬ್ದಾರಿ, ಮಾಡುತ್ತಿದ್ದ ಕೆಲಸಗಳ ದೃಷ್ಟಿಯಿಂದ ತುಂಬಾ ವ್ಯಸನಕರವಾದುದು. ಪಂಡಿತ ನೆಹರೂರವರ ನೀತಿನಿಷ್ಠೆ ಹೇಳುವದಾದರೆ ಕಷ್ಟದ ಪ್ರಸಂಗದಲ್ಲಿ ಐಯ್ಯಂಗಾರ್‌ರವರ ಸಲಹೆ ಸೂಚನೆಗಳು ಅಮೂಲ್ಯವಾಗಿದ್ದವು. ಅದ್ದರಿಂದಲೇ ವೃದ್ಧಾಪ್ಯ ಮತ್ತು ಶಾರೀರಿಕ ಅಸ್ವಸ್ಥತೆಯ ಕಾರಣ ಗೋಪಾಲಸ್ವಾಮಿಯವರು ಎರಡು ಬಾರಿ ರಾಜಿನಾಮೆ ಕೊಟ್ಟಿದ್ದರೂ ನೆಹರೂರವರು ಅದನ್ನು ಸ್ವೀಕರಿಸಲಿಲ್ಲ. ಕೇಂದ್ರ ಸರಕಾರದ ಆಡಳಿತ ರಚನೆಯಲ್ಲಿ ಇವರ ನಿಧನದಿಂದ ಉಂಟಾದ ಕೊರತೆಯನ್ನು ತುಂಬುವದು ತೀರಾ ಪ್ರಯಾಸದ ಕೆಲಸ. ರಾಜಾಜಿಯವರು ಹೇಳಿದಂತೆ ಇವರ ನಿಧನದಿಂದ ಮಂತ್ರಿ ಮಂಡಳಿಯೆಂಬ ಗೋಪುರದ ಮಹಾಸ್ತಂಭವೇ ಕಳಚಿ ಬಿದ್ದಂತಾಗಿದೆ.

ಸರಕಾರದ ಆಡಳಿತ ಅಧಿಕಾರಿಯಾಗಿ ದೀರ್ಘ ಕಾಲದ ವರೆಗೆ ಸಂಪಾದಿಸಿದ ಅನುಭವ, ನಂತರ ಕಾಶ್ಮೀರದ ಮುಖ್ಯ ಮಂತ್ರಿಯಾಗಿ ಪಡೆದ ಆಡಳಿತ ದಕ್ಷತೆ ಇವುಗಳ ಸಹಾಯದಿಂದ ಅವರು ಕೇಂದ್ರದಲ್ಲಿ ಹೊತ್ತ ಮಹಾ ಜವಾಬ್ದಾರಿಗಳನ್ನು ಸುಗಮವಾಗಿ ನಿರ್ವಹಿಸಲು ಶಕ್ತರಾದರು. ರೈಲ್ವೆ ಮತ್ತು ಟ್ರಾನ್ಸ್‌ಪೋರ್ಟ್ ಮಂತ್ರಿಯಾಗಿ ಅವರು ಏರ್ಪಡಿಸಿದ ಝೋನಲ್ ಪದ್ಧತಿ, ಸಂಸ್ಥಾನಗಳ ಖಾಯೆಯ ಮಂತ್ರಿಗಳಾಗಿ ಅವರು ರಾಜಮಹಾರಾಜರುಗಳಿಗೆ ಕಲಿಸಿದ ಪಾಠ, ಮತ್ತೆ ಸಂರಕ್ಷಣಾ ಖಾತೆಯಲ್ಲಿ ಹೊಸದಾಗಿ ಏರ್ಪಡಿಸಿದ ವಿಮಾನ ದಳ ಇವೆಲ್ಲ ಐಯ್ಯಂಗಾರ್‌ರವರ ದಕ್ಷತೆಯನ್ನು ಎತ್ತಿ ಹೇಳುತ್ತವೆ.

ಗೋಪಾಲಸ್ವಾಮಿಯವರು ಹಳೆಯ ಸಂಪ್ರದಾಯಕ್ಕೆ ಸೇರಿದ ಆಡಳಿತಗಾರರಾದರೂ ಆ ರೀತಿಯ ದರ್ಪ, ಅಧಿಕಾರ ಪ್ರಿಯತೆ ಅವರಲ್ಲಿರಲಿಲ್ಲ. ಅವರು ಹಿಂದೂದೇಶದ ರಾಜ್ಯಘಟನೆಯನ್ನು ರೂಪಿಸುವದರಲ್ಲಿ ಪ್ರಾಮುಖ್ಯ ಸದಸ್ಯರಾಗಿದ್ದರು. ಮೇಲಾಗಿ 'ಸಿ' ವರ್ಗದ ಸಂಸ್ಥಾನಗಳ ಘಟನೆಯನ್ನು ರೂಪಿಸುವದರಲ್ಲಿಯೂ, ಅದಕ್ಕೆ ಮೊದಲಿನ ಪಟ್ಟಾಭಿ ಎಡ್‌ಹಾಕ್ ಸಮಿತಿಯಲ್ಲಿಯೂ ಇವರಿದ್ದರು.

ಹಲಕೆಲವು ವಿಚಾರಗಳ ಸಂಬಂಧ ಅವರನ್ನು ಕಂಡು ಮಾತಾಡಿದ ಪರಿಚಯ ಮತ್ತು ಅನುಭವದಿಂದ ಹೇಳುವದಾದರೆ ಶ್ರೀ ಗೋಪಾಲಸ್ವಾಮಿಯವರು ತಮ್ಮ ಇಳಿ ವಯಸ್ಸಿನಲ್ಲಿ ಅಧಿಕಾರ ಹೊತ್ತು ದುಡಿಯುತ್ತಿದ್ದುದು ಕೇವಲ ಜನಸೇವೆಗೆಂದು ಸ್ಪಷ್ಟವಾಗಿ ಹೇಳಬಹುದಿತ್ತು. ಆತನು ಮಂತ್ರಿಯೇ ಇರಲಿ, ಯಾ ಆಡಳಿತಗಾರನೇ ಇರಲಿ ಪ್ರಥಮ ಆತನು ಜನಸೇವಕನೆಂಬುದನ್ನು ಪೂರ್ಣವಾಗಿ ಅರಿತು ಅದರಂತೆ ವರ್ತಿಸುತ್ತಿದ್ದವರಿವರು. ಇವರ ನಿಧನದಿಂದ ಕೊಡಗು ಕೇಂದ್ರ ಸರಕಾರದಲ್ಲಿದ್ದ ತನ್ನೊಬ್ಬ ಹಿತಚಿಂತಕರನ್ನು ಕಳೆದುಕೊಂಡಿತು. ಕೊಡಗಿನ ಮಟ್ಟಿಗೆ ಇವರು ತುಂಬಾ ಸಹಾನುಭೂತಿ ಉಳ್ಳವರಾಗಿದ್ದರು.

ಅವರು ಸನ್ಮಿತ್ರ ಸ್ವಭಾವದವರಾಗಿದ್ದರು. ಅವರ ತಾಳ್ಮೆಗೆ ಮಿತಿ ಇರಲಿಲ್ಲ. ಎಂಥಾ ಜಟಿಲ ಪ್ರಶ್ನೆಯನ್ನೂ ತಾಳ್ಮೆಯಿಂದ ಪರಿಶೀಲಿಸಿ ಬಗೆಹರಿಸುವ ಸ್ವಭಾವ ಅವರದಾಗಿತ್ತು. ನ್ಯೂಯಾರ್ಕಿನಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಸಮಿತಿಯ ಮುಂದೆ ಕಾಶ್ಮೀರ ಪ್ರಶ್ನೆ ಬಂದಾಗ ಪಾಕಿಸ್ತಾನದ ಜಫರುಲ್ಲಾಖಾನರು ಭಾರತದ ಮೇಲೆ ಇಲ್ಲದ ಅಸತ್ಯ ಅಪವಾದಗಳನ್ನು ಹೊರಿಸಿ ವಾದಿಸಿದಾಗ ಶಾಂತ ಸ್ವಭಾವದ, ಸತ್ಯ ಪ್ರಿಯ ಐಯ್ಯಂಗಾರ್‌ರವರು ಕೊಟ್ಟ ಉತ್ತರ, ತೋರಿಸಿದ ಸ್ನೇಹಭಾವ ಇವು ಅವರ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತವೆ. ಈ ದೃಷ್ಟಿಯಿಂದ ಇವರನ್ನು ಆದರ್ಶವುಳ್ಳವ ಅನುಸರಿಸುವ ಗಾಂಧಿಸಂಘದವರೆಂದು ಕರೆದರೂ ತಪ್ಪಾಗಲಾರದು.

ಸ್ವಾತಂತ್ರ್ಯ ಪಡೆದು ಬೆಳೆಯುತ್ತಿರುವ ಹಿಂದೂದೇಶದಲ್ಲಿ ಪ್ರಜಾಪ್ರಭುತ್ವವು ಬೇರೂರಿಕೊಳ್ಳಲು ದೂರದೃಷ್ಟಿಯು, ಸೇವಾಭಾವನೆಯು ಮುಂದಾಳುಗಳ ಅವಶ್ಯಕತೆ ಇಂದು ತುಂಬಾ ಇದೆ. ಈ ದೃಷ್ಟಿಯಿಂದ ಐಯ್ಯಂಗಾರರು ಇನ್ನೂ ಕೆಲವು ಕಾಲ ಬದುಕಬೇಕಿತ್ತು. ಆದರೆ ನಶ್ವರವಾದ ಮಾನವ ಶರೀರದ ಅಸ್ತಿತ್ವಕ್ಕೆ ಒಂದು ಮಿತಿ ಇದೆ. ಆ ಮಿತಿಯನ್ನು ಮೀರಿ ಅದು ತಾಳಿಕೆ ಬಾರದು. ಆ ನಿಸರ್ಗ ನಿಯಮದಂತೆ ಗೋಪಾಲಸ್ವಾಮಿಯವರು ಪರಂಧಾಮವನ್ನೈದಿದ್ದಾರೆ. ಆದರೆ ಅವರು ಮಾಡಿದ ಕೆಲಸ, ಹಾಕಿ ಕೊಟ್ಟ ಆದರ್ಶಗಳು ನಮ್ಮ ಕಣ್ಣು ಮುಂದಿವೆ. ಅವುಗಳನ್ನು ನೋಡಿ ಸ್ಫೂರ್ತಿಯನ್ನು ಪಡೆದು ಮುನ್ನಡೆಯುವದೆಂದಲೇ ನಾವು ಭಾರತಕ್ಕಾದ ಹಾನಿಯನ್ನು ತುಂಬ ಬಲ್ಲೆವಲ್ಲದೆ ಕಂಬನಿ ಸುರಿಸಿ ಪ್ರಯೋಜನವಿಲ್ಲ.

ಹಿಂದೂದೇಶದ ಸರ್ವಜನಾಭ್ಯುದಯವನ್ನು ಹೊತ್ತು ಅನೇಕ ಎಡರುತೊಡರುಗಳ ಬಂದರೂ ಧೃತಿಗೆಡದೆ ಮುಂದೆ ಸಾಗುತ್ತಿರುವ ಪಂಡಿತ ನೆಹರೂರವರ ಜೀವನಯಾತ್ರೆಯಲ್ಲಿ ಅನೇಕ ವೀರಯೋಧರು ಗುರಿಮುಟ್ಟುವ ಮೊದಲೇ ಕಣ್ಮರೆಯಾಗುತ್ತಿರುವದು ಅವರ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸುತ್ತಿದೆ. ಭಗವಂತನು ಭರತ ಖಂಡದ ಈ ವೀರಯೋಧನಿಗೆ ದುಃಖಭಾರವನ್ನು ಸಹಿಸಿ ಮುನ್ನಡೆಯುವ ಶಕ್ತಿಯನ್ನು ಕೊಡಲಿ. ನಾವೆಲ್ಲರೂ ಸಹಕರಿಸಿ ಈ ವೀರನಾಯಕನ ಕೈಯನ್ನು ಬಲಗೊಳಿಸುವ ಬುದ್ಧಿಯನ್ನು ನಮಗೆ ದಯಪಾಲಿಸಲಿ. ತಮ್ಮ ಕರ್ತವ್ಯವನ್ನು ಎಲ್ಲರೂ ಹೊಗಳುವಂತೆ ನಿರ್ವಹಿಸಿ ನಿಧನರಾದ ಗೋಪಾಲಸ್ವಾಮಿ ಐಯ್ಯಂಗಾರ್‌ರವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ.

ವರ್ತಮಾನ.

ರೈಲ್ವೆಯಲ್ಲಿ ಟಿಕೆಟ್ ಕಲೆಕ್ಟರುಗಳ ಕೆಲಸವು ಖಾಲಿ ಇದೆ. ಎಸ್. ಎಸ್. ಎಲ್. ಸಿ. ಪಾಸಾಗಿ ಪ್ರಾಯ ೧೮ರಿಂದ ೨೫ರ ವರೆಗೆ ಇರುವ ಸೇವಾ ಕುತೂಹಲ ಇರುವ ಯುವಕರು ನಿಶ್ಚಿತ ಅಪ್ಲಿಕೇಶನ್‌ನಲ್ಲಿ ಅಪ್ಲಿಕೇಶನನ್ನು ಮಡಿಕೇರಿ ಎಂಪ್ಲಾಯ್‌ಮೆಂಟ್ ಆಫೀಸಿಗೆ ಈ ತಾ. ೨೯ರ ಒಳಗೆ ತಲಪುವಂತೆ ಕಳುಹಿಸಬಹುದು.

ಪೊಂಬಾಯಿ ಕೊಡವ ಸಮಾಜದ ವಾರ್ಷಿಕ ಮಹಾ ಸಭೆಯು ಶ್ರೀ ಕೆ. ಎ. ಕುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀಯುತರಾದ ಕೆ. ಪಿ. ಚಂಗಪ್ಪ, (ಪ್ರೆಸಿಡೆಂಟ್) ಎಂ. ಡಬ್ಲ್ಯು. ನಾಣಯ್ಯ, ಬಿ. ಕೆ. ಪೂಣಚ್ಚ, ಎಂ. ಯು. ಸೋಮಯ್ಯ, ಸಿ. ಬಿ. ಪೂವಯ್ಯ, ಬಿ ಕೆ. ಅಚ್ಚಯ್ಯ, ಪಿ. ಎಂ. ಪೊನ್ನಪ್ಪ, ಡಬ್ಲ್ಯು. ಎಂ. ಕರುಂಬಯ್ಯ, ಎಂ ಪಿ. ನಾಚಪ್ಪ, ಬಿ. ಬಿ. ನಂಜಪ್ಪ ಮತ್ತು ಕೆ. ಎ. ಕುಟ್ಟಪ್ಪ ಇವರುಗಳನ್ನು ೧೯೫೩ಕ್ಕೆ ಕಾರ್ಯಕಾರಿ ಮಂಡಳಿಯನ್ನಾಗಿ ಆರಿಸಲಾಯಿತು.

ಮೂರ್ನಾಡು ಮಾಧ್ಯಮಿಕ ಶಾಲೆಯ ಅಧ್ಯಾಪಕರ ಹಾಗೂ ಸ್ಕೌಟ್ ಮತ್ತು ಗರ್ಲ್ ಗೈಡ್ಸ್‌ಗಳು ಕಾಸರಗೋಡು ಕಾಫಿ ವರ್ಕ್ಸ್ ಹೌಸನ್ನು ನೋಡಿಕೊಂಡು ಅದೆ ಕಾಡು ಶಾಲಾ ಬಳಿ ಶಿಬಿರಾಗ್ನಿ ಪ್ರದರ್ಶನ ಮಾಡಿದರು. ಸಾರ್ವಜನಿಕರು ಅವರನ್ನು ಸತ್ಕರಿಸಿದ್ದಲ್ಲದೆ ಬಾಲಕ ಬಾಲಕಿಯರಿಗೆ ಹಣ್ಣುಹಂಪಲು ಬಹುಮಾನಗಳನ್ನು ಕೊಟ್ಟರು.

ತಾ. ೯ರಲ್ಲಿ ಸೂರ್ಲಬ್ಬಿ ಮೂದಾಪುರ ವಿದ್ಯಾಪ್ರದ ಶಾಲೆಯು ಪ್ರಾರಂಭೋತ್ಸವವನ್ನು ಶ್ರೀ ಎಂ. ಎ. ಕಾಳಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಸ್ಲೇಟು ಪುಸ್ತಕಗಳನ್ನು ಹಂಚಿದರು.

ಅಮ್ಮತ್ತಿ ಮಾಧ್ಯಮಿಕ ಶಾಲಾ ವಿದ್ಯಾರ್ಥಿಯರು ೧೯೫೧ನೇ ಇಸವಿಯಲ್ಲಿ ಸ್ಥಾಪಿಸಿದ "ನೇತಾಜಿ ಹಾಕಿ ಕಪ್ಪಿ"ನ ಪಂದ್ಯಾಟವು ಫೆಬ್ರವರಿ ಒಂದನೇ ವಾರದಲ್ಲಿ ಅಮ್ಮತ್ತಿ ಶಾಲಾ ಮೈದಾನದಲ್ಲಿ ನಡೆದು ತಾ. ೯ರಂದು ಅಮ್ಮತ್ತಿ ಶಾಲಾ ಟೀಮಿನವರು ಮರಗೋಡು ಶಾಲೆಯ ಟೀಮಿನವರನ್ನು ಗೆದ್ದು ಕಪ್ಪನ್ನು ಪಡೆದರು. ಆ ದಿವಸ ಗೆದ್ದ ಟೀಮಿನವರಿಗೆ ಕೊಡಗಿನ ಎಸೆಂಬ್ಲಿಯ ಅಧ್ಯಕ್ಷರಾದ ಶ್ರೀ ಬಿ. ಯಸ್. ಕುಶಾಲಪ್ಪನವರು ಕಪ್ಪನ್ನು ಕೊಟ್ಟದ್ದಲ್ಲದೆ ಮುಂದಿನ ವರ್ಷದಿಂದ ಹಾಕಿ ಪಂದ್ಯಾಟವನ್ನು ಮುಂದರಿಸಲು ಶ್ರೀ ಕೆ. ಕಾಳಪ್ಪನವರು ತಾನೂ ಒಂದು ಬೆಳ್ಳಿಯ ಬಟ್ಟಲನ್ನು ಕೊಡುವದಾಗಿ ಭರವಸೆಯನ್ನು ಕೊಟ್ಟಿರುವರು.

ಬರಪೊಳೆ ಯೋಜನೆಯ ಪರಿಶೀಲನೆಯನ್ನು ಮುಖತಃ ಮಾಡುವುದಕ್ಕೆ ಬಂದಿರುವ ಮೈಸೂರಿನ ನಿವೃತ್ತ ಇಂಜಿನಿಯರಾದ ಶ್ರೀ ನರಸಿಂಹಯ್ಯನವರೂ, ಬೆಂಗಳೂರು ಇಂಡಿಯನ್ ವಿಜ್ಞಾನ ಶಾಲೆಯ ನಿರ್ದೇಶಕರೊಬ್ಬರಾದ ಡಾ. ಧರ್ಮರ್‌ರವರೂ ತಾ. ೬ರಲ್ಲಿ ಕೊಡಗಿಗೆ ಬಂದು ಬರಪೊಳೆ ಜಲಪಾತವನ್ನು ನೋಡಿಕೊಂಡು ಹೋದರು.

ಕೊಡಗಿನ ಗಂಧದ ಮರಾಟದ ವಿಚಾರದಲ್ಲಿ ಇಲ್ಲಿಯ ಸರಕಾರದೊಡನೆ ಮಾತುಕತೆ ನಡೆಸಲು ಬಂದಿರುವ ಮೈಸೂರಿನ ಕೈಗಾರಿಕಾ ಮಂತ್ರಿ ಶ್ರೀ ಟಿ. ಸಿದ್ದಲಿಂಗಯ್ಯನವರು ತಾ. ೧೧ರಲ್ಲಿ ಬರಪೊಳೆ ಜಲಪಾತವನ್ನು ನೋಡಿಕೊಂಡು ಬಂದರು.

ಮಡಿಕೇರಿ ವೇದಾಂತ ಮಂದಿರದಲ್ಲಿ ತಾರೀಕು ೧೫ರಿಂದ ೨೧ರ ವರೆಗೆ ಶ್ರೀ ರಾಮಕೃಷ್ಣ ಮತ್ತು ವಿವೇಕಾನಂದರ ಜಯಂತ್ಯುತ್ಸವದ ಸಪ್ತಾಹವನ್ನು ಆಚರಿಸಲಾಗುವದು. ಪ್ರತಿ ದಿನ ಸಾಯಂಕಾಲ ಆರುವರೆ ಗಂಟೆಗೆ ಕಾರ್ಯಕ್ರಮಗಳು ಆರಂಭವಾಗುವವು. ಪಾಠನ, ಭಾಷಣ ಮೊದಲಾದ ಕಾರ್ಯಕ್ರಮಗಳ ಏರ್ಪಾಡಿದೆ.

ಸೋಮವಾರಪೇಟೆ ಆಸ್ಪತ್ರೆಯಲ್ಲಿ ಮಕ್ಕಳಿಗಾಗಿ ಒಂದು ವಾರ್ಡು ಕಟ್ಟಿಸಲು ಸೋಮವಾರಪೇಟೆಯ ಪ್ಲಾಂಟರರೊಬ್ಬರಾದ ಶ್ರೀ ಬಿ. ದಾಸಪ್ಪನವರು ರೂ. ೫,೦೦೦ ಕೊಡಬೊಪ್ಪಿರುವರೆಂದು ತಿಳಿದು ಬಂದಿದೆ.

ನಿವೃತ್ತ ಭಾರತ ಸೇನಾಪತಿಗಳಾದ ಜನರಲ್ ಕಾರ್ಯಪ್ಪನವರು ತಾ. ೧೦ರಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿ ಕೂಟದ ಸಮಾರೋಪ ಭಾಷಣ ಮಾಡಿದರು. ಇವರ ಸತ್ಕಾರಕ್ಕಾಗಿ ಮಡಿಕೇರಿ ಕೊಡಗು ಸಮಾಜದವರು ಈ ದಿನ ರಾತ್ರಿ ಒಂದು ಔತಣ ಕೂಟವನ್ನು ಸಂಘದ ಕಟ್ಟಡದಲ್ಲಿ ಏರ್ಪಡಿಸಿರುವರು.

ಕನ್ನಡ ನಾಡಿನಲ್ಲಿ ಕೀರ್ತಿ ಪಡೆದ ಶ್ರೀ ಕೆ. ಹಿರಣ್ಣಯ್ಯನವರ ನಾಟಕ ಮಂಡಲಿಯವರು ಮಡಿಕೇರಿಯಲ್ಲಿ ಹಾಕಿರುವ ತಮ್ಮ ಶ್ರೀ ಛತ್ರಪತಿಯಲ್ಲಿ ತಾರೀಕು ೫ರಿಂದ ಪ್ರತಿ ರಾತ್ರಿ ಎಂಬಿ ನಾಟಕವನ್ನು ಅಭಿನಯಿಸುತ್ತಿರುವರು. ಪ್ರಥಮ ದಿನ ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರು ಈ ನಾಟಕದ ಸಿಚಾರವಾಗಿ ಪ್ರಶಂಸಿಸಿ ಮಾತಾಡಿದವರಲ್ಲದೆ ನಾಟಕ ಕಂಪೆನಿಯವರಿಗೆ ಸಕಲ ಪ್ರೋತ್ಸಾಹ ದೊರೆಯುವದೆಂದು ತಿಳಿಸಿದರು.

ಭಾರತ ಸೇನಾಪತಿಯಾಗಿದ್ದು ನಿವೃತ್ತರಾಗಿ ತಮ್ಮ ಮಡಿಕೇರಿ ರೋಶನಾರಾ ಬಂಗ್ಲೆಯಲ್ಲಿರುವ ಜನರಲ್ ಕಾರ್ಯಪ್ಪನವರು ಸ್ವಂತ ತೋಟದ ವರ್ತಮಾನವನ್ನು ಕೈಕೊಂಡಿದ್ದರೆ ತಮ್ಮ ಬಂಗ್ಲೆಯ ಆವರಣವನ್ನು ವಿಸ್ತಾರಗೊಳಿಸುವ ಕೆಲಸವನ್ನು ಸ್ವತಃ ಅವರು ನೋಡುತ್ತಿದ್ದಾರೆ. ತಾ. ೧೦ರಲ್ಲಿ ಅವರೂ ಮಣ್ಣಿನ ಪುಟ್ಟಿ ಹೊತ್ತು ಮಣ್ಣನ್ನು ತಂದು ಇರಿಸುತ್ತಿದ್ದರು. ದೊಡ್ಡ ಮರವೊಂದನ್ನು ಕಡಿದು ಹಾಕಿರುವರು. ನಿವೃತ್ತ ಸೇನಾನಾಯಕರ ಈ ರೀತಿಯ ದಾರ್ಢ್ಯ ಬಲವನ್ನು ನೋಡಿ ಗೌರವವು ಅಧಿಕವಾಗುತ್ತದೆ.

ಅಖಿಲ ಕೊಡಗು ರೈತ ಜಾನುವಾರುಗಳ ಮತ್ತು ನಾಟಿ ಕೋಳಿಗಳ ಪ್ರದರ್ಶನವು ತಾ. ೨೦ರಲ್ಲಿ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಮೂರ್ನಾಡಿನಲ್ಲಿ ನಡೆಯುವದು. ಮದರಾಸಿನ ನಿವೃತ್ತ ಜಾನುವಾರು ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಟಿ. ವಿನಾಯಕ ಮುದಲಿಯಾರ್‌ರವರು ಭಾಷಣ ಮಾಡುವವರಲ್ಲದೆ ಜಾನುವಾರು ಅಭಿವೃದ್ಧಿಗೆ ಸಹಾಯಕವಾದ ಚಲನಚಿತ್ರ ಪ್ರದರ್ಶನದ ಏರ್ಪಾಡೂ ಇದೆ.

ಗೋಪಾಲಸ್ವಾಮಿ ಐಯ್ಯಂಗಾರರ ನಿಧನ.

ಕೇಂದ್ರ ಸರಕಾರದ ಸಂರಕ್ಷಣಾ ಇಲಾಖೆಯ ಮಂತ್ರಿಯವರಾದ ಶ್ರೀ. ಎನ್. ಜಿ. ಐಯ್ಯಂಗಾರ್‌ರವರು ತಾರೀಕು ಹತ್ತರ ಬೆಳಿಗ್ಗೆ ೩ ಗಂಟೆಗೆ ಮದ್ರಾಸ್ ಜನರಲ್ ಆಸ್ಪತ್ರೆಯಲ್ಲಿ ನಿಧನರಾದರು. ಕೆಲವು ದಿನಗಳಿಂದ ಕಾಯಿಲೆಯಲ್ಲಿ ಇದ್ದ ಇವರು ಮೂರು ದಿನಗಳ ಹಿಂದೆ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದರು. ಶ್ರೀ. ಐಯ್ಯಂಗಾರರು ನ್ಯೂಮೋನಿಯಾ ಕಾಯಿಲೆಯಿಂದ ಕಳೆದ ಎರಡು ತಿಂಗಳಿಂದ ನರಳುತ್ತಿದ್ದು ಗುಣಮುಖರಾಗಿದ್ದರು. ಪಂಡಿತ ನೆಹರೂರವರು ಮದ್ರಾಸಿಗೆ ಬಂದಿದ್ದಾಗ ಅವರನ್ನು ಕಂಡಾಗ ಐಯ್ಯಂಗಾರರು ಚೆನ್ನಾಗಿದ್ದು ಜನವರಿ ಕೊನೆಯಲ್ಲಿ ದಿಲ್ಲಿಗೆ ಪ್ರಯಾಣ ಬೆಳೆಸುವ ವಿಚಾರದಲ್ಲಿದ್ದರು. ಆದರೆ ಫೆಬ್ರವರಿ ಪ್ರಥಮ ವಾರದಲ್ಲಿ ಅವರಿಗೆ ಪುನಃ ಮಾರಕ ರೋಗ ಪ್ರಾರಂಭವಾಗಿ ಕಳೆದ ಹತ್ತು ದಿನಗಳ ವರೆಗೆ ಹಾಸಿಗೆಯಲ್ಲೇ ಉಳಿಯಬೇಕಾದ ಸ್ಥಿತಿ ಬಂದು ಕಡೆಗೆ ಆಸ್ಪತ್ರೆಯಲ್ಲಿ ನಿಧನರಾದರು. ಜಗತ್ತಿನ ಆರೋಗ್ಯ ಶಾಸ್ತ್ರಜ್ಞರು ಚಿಕಿತ್ಸೆ ಮಾಡಿದರೂ ಪ್ರಯೋಜನವಾಗಲಿಲ್ಲ.

ಶ್ರೀ. ಐಯ್ಯಂಗಾರ್‌ರವರು ತಮ್ಮ ದೈಹಿಕ ಅಸ್ವಸ್ಥತೆಯ ಕಾರಣ ತಮ್ಮ ಮಂತ್ರಿಪದಕ್ಕೆ ಈ ಹಿಂದೆ ಎರಡು ಬಾರಿ ರಾಜಿನಾಮೆ ಕೊಟ್ಟಿದ್ದರು. ಪಂಡಿತ ನೆಹರೂರವರು ಅವರು ಶೀಘ್ರ ಗುಣಮುಖರಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸಲು ಶಕ್ತರಾಗುವರೆಂಬ ನಂಬಿಕೆಯಿಂದ ಅವರ ರಾಜಿನಾಮೆಯನ್ನು ಸ್ವೀಕರಿಸಿರಲಿಲ್ಲ.

ಐಯ್ಯಂಗಾರ್‌ರವರ ದಹನಸಂಸ್ಕಾರವು ತಾರೀಕು ೧೦ರಲ್ಲಿ ಹಿಂದೂ ಪದ್ಧತಿಯಂತೆ ಮಿಲಿಟರಿ ಗೌರವದೊಡನೆ ನಡೆಯಿತು.

ಸಂಕ್ಷಿಪ್ತ ಜೀವನ.

೧೮೮೨ನೇ ಮಾರ್ಚ್ ತಾರೀಕು ೩೧ರಲ್ಲಿ ಐಯ್ಯಂಗಾರರು ಜನಿಸಿದರು. ಅವರು ತಮ್ಮ ವಿದ್ಯಾಭ್ಯಾಸವನ್ನು ಮದ್ರಾಸಿನ ಪ್ರೆಸಿಡೆನ್ಸಿ ಮತ್ತು ಲಾ ಕಾಲೇಜುಗಳಲ್ಲಿ ಮುಗಿಸಿ ಪಚ್ಚೆಯಪ್ಪಾ ಕಾಲೇಜಿನಲ್ಲಿ ಪ್ರೊಫೆಸರರಾಗಿ ಸೇರಿದರು. ೧೯೦೫ರಲ್ಲಿ ಮದ್ರಾಸು ಸಿವಿಲ್ ಸರ್ವಿಸನ್ನು ಸೇರಿ ೧೯೧೯ರ ವರೆಗೆ ಡೆಪ್ಯುಟಿ ಕಲೆಕ್ಟರಾಗಿದ್ದರು. ೧೯೨೦ರಲ್ಲಿ ಕಲೆಕ್ಟರೂ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ ಆದರು. ನಂತರ ಒಂದೊಂದು ಮೆಟ್ಟಲಾಗಿ ಏರಿ ಮದ್ರಾಸ್ ಪ್ರಾಂತದ ರೆವಿನ್ಯೂ ಬೋರ್ಡಿನ ಸದಸ್ಯರಾದರು. ೧೯೩೭ರಿಂದ ೧೯೪೩ರ ವರೆಗೆ ಅವರು ಕಾಶ್ಮೀರದ ಮುಖ್ಯ ಮಂತ್ರಿಗಳಾಗಿದ್ದರು. ಕಾಶ್ಮೀರದಿಂದ ನಿವೃತ್ತರಾದ ಮೇಲೆ ಅವರು ಹಿಂದೀ ಒಕ್ಕೂಟದ ಮೇಲ್ಮನೆಯ (ಕೌನ್ಸಿಲ್ ಆಫ್ ಸ್ಟೇಟ್) ಸದಸ್ಯರಾಗಿ ಆರಿಸಲ್ಪಟ್ಟರು.

ಆ ನಂತರ ಐಯ್ಯಂಗಾರ್‌ರವರು ದೇಶದ ರಾಜಕೀಯ ರಂಗದಲ್ಲಿ ಪ್ರಾಮುಖ್ಯ ಪಾತ್ರ ವಹಿಸತೊಡಗಿದರು. ಹಿಂದೀ ಸೇನೆಯ ರಾಷ್ಟ್ರೀಕರಣ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದರು. ೧೯೪೬ರಲ್ಲಿ ಅವರು ಭಾರತ ರಾಜ್ಯಘಟನಾ ಸಭೆಗೆ ಆರಿಸಲ್ಪಟ್ಟು ಭಾರತ ರಾಜ್ಯಘಟನೆಯನ್ನು ರಚಿಸುವವರಲ್ಲಿ ಪ್ರಾಮುಖ್ಯ ಸದಸ್ಯರೊಬ್ಬರಾಗಿದ್ದರು. ೧೯೪೭ ಸಪ್ಟೆಂಬರ್ ೩ರಲ್ಲಿ ಅವರನ್ನು ಕೇಂದ್ರ ಮಂತ್ರಿಮಂಡಳಕ್ಕೆ ತೆಗೆದುಕೊಳ್ಳಲಾಯಿತು. ೧೯೪೮ರಲ್ಲಿ ಅವರು ನ್ಯೂಯಾರ್ಕ್‌ನಲ್ಲಿ ನಡೆದ ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಸಮಿತಿಯ ಮುಂದೆ ಕಾಶ್ಮೀರ ಸಮಸ್ಯೆಯ ಚರ್ಚೆಗೆ ಭಾರತದ ನಿಯೋಗದ ಮುಖ್ಯಸ್ಥರಾಗಿ ಹೋಗಿದ್ದರು. ೧೯೪೮ರಲ್ಲಿ ಅವರು ರೈಲ್ವೇ ಮತ್ತು ಸಾರಿಗೆ ಇಲಾಖೆಯ ಮಂತ್ರಿಗಳಾಗಿದ್ದರು. ನಂತರ ಅವರು ರಾಜ್ಯಗಳ ಖಾತೆಯ ಮಂತ್ರಿಗಳೂ ಆಗಿದ್ದರು. ಕಳೆದ ಚುನಾವಣೆಯಾಗಿ ಹೊಸ ಮಂತ್ರಿಮಂಡಲದ ರಚನೆಯಾದಾಗ ಇವರು ಸಂರಕ್ಷಣಾ ಖಾತೆಯ ಮಂತ್ರಿಗಳಾಗಿ ನೇಮಿಸಲ್ಪಟ್ಟರು. ಅವರು ನಿಧನರಾದಾಗ ಅವರಿಗೆ ೭೧ ವರ್ಷ ಪ್ರಾಯವಾಗಿತ್ತು.

ದೇಶದ ಕಂಬನಿ.

ಭಾರತ ಒಕ್ಕೂಟದ ಪ್ರೆಸಿಡೆಂಟರಾದ ಡಾ. ರಾಜೇಂದ್ರ ಪ್ರಸಾದರು ಐಯ್ಯಂಗಾರ್‌ರವರ ನಿಧನದ ಬಗ್ಗೆ ತಮ್ಮ ಸಂತಾಪವನ್ನು ಸೂಚಿಸುತ್ತಾ 'ಅವರು ದೇಶಕ್ಕಾಗಿ ತಮ್ಮ ಅಮೂಲ್ಯ ಜೀವನನ್ನೇ ಕೊಟ್ಟರು. ಅವರ ನಿಧನದಿಂದ ದೇಶಕ್ಕೆ ಅಪಾರ ಹಾನಿಯಾಗಿದೆಯಲ್ಲದೆ ವ್ಯಕ್ತಿಗತವಾಗಿ ನನಗೆ ತುಂಬಲಾರದ ನಷ್ಟವಾಗಿದೆ' ಎಂದರು.

ಭಾರತದ ಪ್ರಧಾನ ಮಂತ್ರಿ ಪಂಡಿತ ನೆಹರೂರವರು 'ಕಳೆದ ಆರು ವರ್ಷಗಳಿಂದ ಯೋಗ್ಯ ಸಹೋದ್ಯೋಗಿಯಾಗಿದ್ದ ಐಯ್ಯಂಗಾರರ ನಿಧನದಿಂದ ಅಪಾರ ನಷ್ಟವಾಗಿದೆ. ಕಷ್ಟದ ಸಮಯದಲ್ಲಿ ಅವರ ಸಲಹೆಯು ಅಮೂಲ್ಯವಾಗಿತ್ತು. ರಾಷ್ಟ್ರಕ್ಕೆ ಅವರ ನಿಧನದಿಂದ ತುಂಬಲಾರದ ನಷ್ಟವಾಗಿದೆ." ಎಂದಿರುವರು.

ಮದ್ರಾಸಿನ ಮುಖ್ಯ ಮಂತ್ರಿ ರಾಜಗೋಪಾಲಾಚಾರಿಯವರು ತಮ್ಮ ಸಂತಾಪವನ್ನು ಸೂಚಿಸುತ್ತಾ 'ಯಾರ ಜೀವನವು ದೇಶಕ್ಕೆ ಅತ್ಯಮೂಲ್ಯವಾಗಿತ್ತೋ ಅವರನ್ನು ಕಳಕೊಂಡೆವು. ದೇಶದ ಸರಕಾರದ ಕಟ್ಟಡದ ಮುಖ್ಯ ಕಂಬವೊಂದು ಬಿದ್ದಂತಾಯಿತು. ಈ ನಷ್ಟವು ಎಂದೆಂದಿಗೂ ತುಂಬಲಾರದು' ಎಂದಿರುವರು.

ದೇಶದ ಉದ್ದಗಲಕ್ಕೂ ತಾ. ೧೧ರಲ್ಲಿ ಐಯ್ಯಂಗಾರರ ನಿಧನಕ್ಕಾಗಿ ಶೋಕ ದಿನವಾಗಿತ್ತು. ಸರಕಾರಗಳು ಹಲವಡೆ ಆಚರಿಸಲ್ಪಟ್ಟವು. ಎಲ್ಲೆಡೆಯೂ ಭಾರತ ರಾಷ್ಟ್ರಧ್ವಜವು ಅರ್ಧಕ್ಕೆ ಹಾರಿಸಲ್ಪಟ್ಟಿತು.

ಚೈನಾದ ಮೇಲೆ ಚಿಯಾಂಗರ ಧಾಳಿ ?

ಕಮ್ಯೂನಿಸ್ಟ್ ಚೀನಾದ ಮತ್ತು ಫಾರ್ಮೋಸಾದಲ್ಲಿದ್ದ ಚಿಯಾಂಗರ ಸೇನೆಗಳ ಮಧ್ಯೆ ಇದ್ದ ಅಮೇರಿಕಾ ನೌಕಾದಳವನ್ನು ಅಮೇರಿಕಾದ ಅಧ್ಯಕ್ಷ ಐಸೆನ್ ಹೋವರ್‌ರವರು ಹಿಂತೆಗೆದುಕೊಂಡ ಪ್ರಯುಕ್ತ ಕಳೆದ ವಾರದ ಪತ್ರಿಕೆಯಲ್ಲಿ ನಾವು ಊಹಿಸಿದ್ದಂತೆ ಈ ಎರಡು ಸೇನೆಗಳಲ್ಲಿ ಘರ್ಷಣೆಗೆ ಅವಕಾಶವಾಗಿದೆ. ಇತ್ತಲಾಗಿ ಬಂದಿರುವ ವಾರ್ತೆಗಳಂತೆ ಚಿಯಾಂಗ್ ಕೈಶೇಕರ ಸೇನೆಗಳು ಚೈನಾದ ಅಮೋಯಿ ಎಂಬಲ್ಲಿ ಬಂದಿಳಿದಿವೆಯೆಂದು ತಿಳಿಯಬಂದಿದೆ. ಇವರ ಜೊತೆಗೆ ಮಕಾವೋದ ಹತ್ತಿರದ ಸಮುದ್ರದಲ್ಲಿ ಕಮ್ಯೂನಿಸ್ಟ್ ಗಸ್ತು ದಳದವರಿಗೂ ರಾಷ್ಟ್ರೀಯ ಚೀನಾ ಸಮುದ್ರಗೊರಿಲ್ಲಾ ಪಡೆಯವರಿಗೂ ಘರ್ಷಣೆ ಪ್ರಾರಂಭವಾಗಿದೆಯಂತೆ. ಈ ವರ್ತಮಾನವನ್ನು ಪೀಕಿಂಗ್ ರೇಡಿಯೋ ಮೂಲಕ ಮಕಾವೊದಿಂದ ವರದಿಯಾಗಿದೆ. ಈ ಮಧ್ಯೆ ಅಮೇರಿಕಾವು ಫಾರ್ಮೋಸಾಕ್ಕೆ ಜೆಟ್ ವಿಮಾನ ಪಡೆಯೊಂದನ್ನು ಕಳುಹಿಸಿದೆಯಂತೆ.

ಚಿಯಾಂಗರು ಕಮ್ಯೂನಿಸ್ಟ್ ಚೀನಾದ ಮೇಲೆ ಪ್ರಾರಂಭಿಸುವ ಈ ಧಾಳಿಯಿಂದ ಮಹತ್ತರ ಪರಿಣಾಮವೇನೂ ಆಗದೆ ಇದ್ದರೂ ಇದರಿಂದ ಕಮ್ಯೂನಿಸ್ಟ್ ಚೀನಾಕ್ಕೆ ಕಿರುಕುಳವಾದೀತೆಂದು ಹೇಳಲಾಗಿದೆ. ಮೇಲಾಗಿ ಚಿಯಾಂಗರ ಹಿಂದೆ ಅಮೇರಿಕಾದ ಶಕ್ತಿ ಇರುವ ಪ್ರಯುಕ್ತ ಇದು ಪ್ರಮುಖ ವಿಷಯವೆನ್ನಲು ಕಾರಣವಿದೆ.

ನೆನ್ನೆ ಬಂದ ವರದಿಗೆ ಬಂದಿರುವ ಯುನೈಟೆಡ್ ಪ್ರೆಸ್ ವರದಿಯಂತೆ ಚೀನಾದ ಶ್ರೀ ಚಿಯಾಂಗ್ ಕೈಶೇಕರು ಫಾರ್ಮೋಸಾದಿಂದ ಅಮೇರಿಕದ ನೌಕಾದಳವನ್ನು ಹಿಂತೆಗೆದ ನಿರ್ಧಾರದ ವಿಚಾರ ಮಾತನಾಡುತ್ತಾ ಇದು ಮಹಾ ಯುದ್ಧಕ್ಕೆ ಎಡೆ ಮಾಡಬಹುದೆಂದು, ದೇಶದ್ರೋಹಿ ರಷ್ಯನ್ ಸೋವಿಯತ್ ನಿರ್ಧಾರವು ನಿಜವಾಗಿಯೂ ಕೈಗೊಳ್ಳುವವರೇ ಯುದ್ಧವನ್ನು ಆಹ್ವಾನಿಸುವರೆಂದು ಹೇಳಿರುವರು.

Notice

It is hereby notified for general information that the following vehicles will be sold in public auction on Friday the 13th March '53 at 11 A. M. in front of the Office of the District Superintend nt of Police, Coorg, Mercara. Successful bidders should pay the bid amount immediately after the sale. The sale is subject to the approval of the Government of Coorg.

One Police Jeep C. G. A. 573 and one Truck C. G. A. 734.

1. Jeep No C. G. A. 573 Tourer Type—1943 Model—Standard Willys Jeep—Four Cylinders—16 H. P.

2. One ton Truck No. C. G. A. 734—Dodge 1943 model. Six Cylinders-30 H. P.

M. P. Muthanna.
Dist. Supt. of Police, Coorg.

≡ ಓದುಗರ ಓಲೆಗಳು ≡

ಎಡ್ ಹಾಕ್ ಸಮಿತಿ.

ಯಾವ ಕಾಂಗ್ರೆಸ್ ತತ್ವದ ಮೇಲೆ ಈ ಸಮಿತಿಗಳನ್ನು ರಚಿಸಿರುವರೋ ನನಗರಿಯದು. ಆದರೆ ದೇಶದ ಇತರ ಹಳ್ಳಿ ಗ್ರಾಮಗಳಲ್ಲಿರುವಂತೆ ನಮ್ಮಲ್ಲಿಯೂ ಒಂದು ಸಮಿತಿಇದೆ. ಈ ಸಮಿತಿಯಲ್ಲಿರುವವರು ನೆರೆಯವರಿಗೆ ಮಾರ್ಗದರ್ಶಕರಾಗಿರಬೇಡವೇ? ನಮ್ಮ ಸಮಿತಿಯ ವೈಸ್ ಪ್ರೆಸಿಡೆಂಟರು ಒಬ್ಬ ಸಮಿತಿ ಮೆಂಬರರ ಮೇಲೆ ಬೆಂಚ್ ಕೋರ್ಟ್ ಕೇಸು ನಡೆಸಿ ಕಡೆಗೆ ರಾಜಿಗೆ ಬಂದರು. ಮತ್ತೊಬ್ಬ ಕಮಿಟಿ ಮೆಂಬರರು ಇನ್ನೊಬ್ಬರ ಮೇಲೆ ಪೊಲೀಸು ಕೇಸ್ ಹೂಡಿದ್ದಾರೆ. ಈ ರೀತಿ ವೈರತ್ವದಿಂದ ಇವರೇ ವರ್ತಿಸಿದರೆ ನಾಡಿನ ಐಕ್ಯತೆ, ಶಾಂತಿ ಹೆಚ್ಚಾದೀತೇ?

ಎಡ್‌ಹಾಕ್ ಸಮಿತಿಯೆಂದರೆ ಸರಕಾರದವರೇ ನೇಮಿಸಿದ ಜನರೆಂದು ನಾನು ತಿಳಿದಿದ್ದೆ. ಆದರೆ ಇತ್ತಲಾಗಿ ಇವರು ಕಾಂಗ್ರೆಸಿನ ಅಧೀನದವರೆಂದು ತಿಳಿದುಬಂತು. ಎಡ್‌ಹಾಕ್ ಸಮಿತಿಯಲ್ಲಿರುವವರಾದರೂ ಖಾದಿ ಧರಿಸಬಾರದೇ? ಇವರ ಅಧಿಕಾರ ಸ್ವಲ್ಪ ಜೋರಾಗಿಯೇ ಇದೆ. ಕೊಡಗಿನಲ್ಲಿ ಕಾಂಗ್ರೆಸ್ ಸರಕಾರ ಆಳುತ್ತಿದ್ದರೆ ಆ ಸರಕಾರಕ್ಕೆ ಕಾಂಗ್ರೆಸಿಗರೂ, ಇತರರೂ ಬೆಂಬಲನೀಯಬೇಕಾದ್ದು ಕರ್ತವ್ಯ. ಆದರೆ ಕೆಲವು ಎಡ್‌ಹಾಕ್ ಸಮಿತಿಯ ಸದಸ್ಯರ ತಿಳಿಗೇಡಿವರ್ತನೆಯಿಂದ ಕಾಂಗ್ರೆಸ್ ಸಂಸ್ಥೆಯ [illegible]ಗೂ ಕಾಂಗ್ರೆಸ್ ಸರಕಾರದ ಕೀರ್ತಿಗೆ ಕಳಂಕವಿದೆಯೆಂದು ಹೇಳಬೇಕಾ[illegible]

ಕೆ. ಐ ಕಾಳಪ್ಪ.

ಈ ದುರವಸ್ಥೆಗೇನನ್ನುವದು?

ಮಡಿಕೇರಿಯಿಂದ ಆರು ಮೈಲು ದೂರದಲ್ಲಿ ನಮ್ಮ ಗ್ರಾಮ. ಮೂರು ವರ್ಷಗಳಿಗೆ ಹಿಂದೆ ಜನರಿಂದ ಧನ ಸಂಗ್ರಹಿಸಿ ಒಂದು ಶಾಲೆಯನ್ನು ಕಟ್ಟಿದೆವು. ಇದು ಪ್ರಾಥಮಿಕ ಶಾಲೆಯಾಗಿ ಪ್ರಗತಿ ಹೊಂದುತ್ತಿದೆ. ಶಾಲೆ ಕಟ್ಟುವಾಗ ಮುಖ್ಯೋಪಾಧ್ಯಾಯರಾಗಿದ್ದವರು ಸರಿಯಾದ ಕೆಲಸ ಮಾಡದೆ, ಹಣಕಾಸಿನ ಲೆಕ್ಕ ಸರಿಯಾಗಿಡದೆ ಶಾಲೆಯ ಅಭಿವೃದ್ಧಿಗೆ ಕೆಲಸ ಮಾಡಲಿಲ್ಲವೆಂದು ಅವರನ್ನು ವರ್ಗಾಯಿಸಲಾಯಿತು. ಈಗ ಅವರನ್ನೇ ಈ ಶಾಲೆಯ ಮುಖ್ಯೋಪಾಧ್ಯಾಯರಾಗಿ ಮಾಡುವ ವರ್ತಮಾನವು ಗ್ರಾಮಿಣ ಜನರಿಗೆ ತುಂಬಾ ವ್ಯಸನಕಾರಕವಾಗಿದೆ. ಹಾಗೆ ಮಾಡಕೂಡದೆಂದು ಗ್ರಾಮದ ಜನರು ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಬರೆದು ಕೊಂಡಿದ್ದರೂ, ಈ ಗ್ರಾಮದ ಬಹು ಜನರು ಜ. ಸಾರ್ವಣೆಯಲ್ಲಿ ಕಾಂಗ್ರೆಸ್ಸಿಗೆ ವಿರೋಧ ಮಾಡಿದರೆಂಬದಕ್ಕೆ ಪ್ರತೀಕಾರವಾಗಿ ನಾಡಿನ ಎಂ. ಎಲ್. ಎ. ಯಂಥವರು ಇದರಲ್ಲಿ ಕೈಹಾಕಿ ಅವರನ್ನೇ ಅಧ್ಯಾಪಕರಾಗಿ ತಂದು ಗ್ರಾಮಜನರಿಗೆ ಪಾಠಕಲಿಸುವ ಪ್ರಯತ್ನದಲ್ಲಿರುವರಂತೆ! ಇದು ಪ್ರಜಾಪ್ರಭುತ್ವವೇ?

ವಿದ್ಯಾಭಿಮಾನಿ.

ಯಾರು ಹೊಣೆ?

ನಮ್ಮ ಗ್ರಾಮದ ಹೊಳೆಗೆ ಒಂದು ಸೇತುವೆಗಾಗಿ ಸರಕಾರಕ್ಕೆ ವಿನಂತಿ ಮಾಡಿಕೊಂಡಿದ್ದು ಸರಕಾರ ಕಿವಿಕೊಡುವಂತಿತ್ತು. ಆದರೆ ನಮ್ಮ ಗ್ರಾಮದವರು ಕಾಂಗ್ರೆಸಿಗೆ ವಿರೋಧವಾಗಿ ನಿಂತಿರುವರೆಂಬ ಭಾವನೆ ಚುನಾಯಿಸಿ ಬಂದ ಮೆಂಬರರಿಗೂ, ಈಗಿರುವ ಏಡ್ ಹಾಕ್ ಸಮಿತಿಯವರಿಗೂ ಇರುವಂತಿದೆ. ಇವರು ಸೇತುವೆ ವಿಚಾರದಲ್ಲಿ ಕೈ ಹಾಕಿ ಆ ಹೊಳೆಗೆ ಪಕ್ಕಾ ಸೇತುವೆಯ ಅಗತ್ಯವಿಲ್ಲವೆಂದೂ ಹೊಳೆದಾಟಲು ಸಾಧಾರಣದ ಒಂದು ಸೇತುವೆ ಸಾಕೆಂದೂ ಅದನ್ನು ಇಂಥಾ ಸ್ಥಳದಲ್ಲೇ ಕಟ್ಟಬೇಕೆಂದೂ ಸೂಚಿಸಿದರು. ಗ್ರಾಮದ ಬಹು ಜನರು ತಮಗೆ ಉಪಯೋಗವಾಗುವ ಸ್ಥಳದಲ್ಲಿ ಆಗಬೇಕೆಂದು ವಾದಿಸಿದರು. ಸರಕಾರದವರು ತಮ್ಮ ಜನರ ಸೂಚನೆಯಂತೆ ಅವರು ನಿಶ್ಚಯಿಸಿದ ಸ್ಥಳದಲ್ಲಿ ಕೆಲಸ ಪ್ರಾರಂಭಿಸಿ ಇಂಜಿನಿಯರರ ಅಭಿಪ್ರಾಯದಂತೆ ಈಗ ಸ್ಥಳ ಬದಲಾಯಿಸಿ ಗ್ರಾಮದವರು ಕೇಳುವ ಕಡೆ ಕೆಲಸ ಪ್ರಾರಂಭಿಸಿದೆ. ಈ ಹಟನಾಥನೆಯಿಂದ ಸರಕಾರಕ್ಕೆ ಸುಮಾರು ೩೦೦ ರೂಪಾಯಿ ನಷ್ಟವಾಗಿದೆ! ಮುಂದಾಳುಗಳ ಜನವಿರೋಧಿನೀತಿಯಿಂದ ಆದ ಈ ನಷ್ಟಕ್ಕೆ ಯಾರು ಜವಾಬ್ದಾರರು?

ಗ್ರಾಮದವ.

ಪೂಜಾರಿಯ ತೃಪ್ತಿಯೇ ದೇವರ ತೃಪ್ತಿಯೇ?

ನಮ್ಮ ಶಾಲೆಯ ವಾರ್ಷಿಕೋತ್ಸವಕ್ಕೆ ಮುಖ್ಯ ಮಂತ್ರಿಯವರನ್ನು ಕರೆಸಬೇಕೆಂದು ನಿರ್ಧರಿಸಿ, ಅದರಂತೆ ಆಹ್ವಾನಪತ್ರವನ್ನು ಕಳುಹಿಸಲಾಯಿತು. ಆದರೆ ಉತ್ಸವಕ್ಕೆ ಒಂದೆರಡು ದಿನಕ್ಕೆ ಮೊದಲು ತಮಗೆ ಬರಲಾಗುವದಿಲ್ಲವೆಂಬ ಸಂಗತಿಯನ್ನು ಮಂತ್ರಿಯವರು ತಿಳಿಸಿದರು. ಅದ್ದರಿಂದ ವಾರ್ಷಿಕೋತ್ಸವವನ್ನು ಮುಂದರಿಸಿದೆವು. ಪ್ರತಿಸಹ ಮಂತ್ರಿಗಳನ್ನು ಅಧ್ಯಕ್ಷರಾಗಿ ತರುವ ಪ್ರಯತ್ನ ನಡೆಸಿದೆವು ಆದರೆ ಈ ವರೆಗೆ ಸಾಧ್ಯವಾಗಿರುವದಿಲ್ಲ. ಗ್ರಾಮದ ಜನರು ನಮ್ಮ ಮೂಲಕ ಕೇಳಿಕೊಂಡರೆ ಮಾತ್ರ ಅವರು ಬರುವರೆಂದು ನಮ್ಮ ನಾಡಿನ ಚುನಾಯಿತ ಸದಸ್ಯರೂ ಅವರಿಗೆ ಸಂಬಂಧಿಸಿದ ಇತರರೂ ಹೇಳುತ್ತಿದ್ದಾರೆ. ಆದರೆ 'ಪಾರ್ಟಿ ಪಕ್ಷಗಳ ಬೇಧವಿಲ್ಲದೆ ಸರ್ವರ ಹಿತಕ್ಕಾಗಿ ಆಡಳಿತ ನಡೆಸಲಾಗುವದು' ಎಂದು ಮಂತ್ರಿಗಳು ತಮ್ಮ ಪ್ರತಿ ಭಾಷಣದಲ್ಲಿ ಹೇಳುವದನ್ನು ನಾನು ಕೇಳಿದ್ದೇನೆ. ಆದರೆ ಈ ಒಳಮಂತ್ರಿಗಳು ಈ ರೀತಿ ವರ್ತಿಸುವದೇಕೆ? ನಮ್ಮ ದುರಾದೃಷ್ಟ. ದೇವರನ್ನು ಮೆಚ್ಚಿಸಿದರೂ ಸಾಲದು. ಪೂಜಾರಿಗಳನ್ನೂ ಮೆಚ್ಚಿಸಬೇಕು!

'ನಿರೀಕ್ಷಕ'

ಇದು ನಿಜವೇ?

ಕೊಡಗಿನ ಕಿತ್ತಳೆ ವ್ಯವಸಾಯ ಸಹಕಾರಿ ಸಂಘದ ಕಾರ್ಯಕಾರಿ ಮಂಡಳಿಯಲ್ಲಿ ಪ್ರಾಮುಖ್ಯರಾದವರೊಬ್ಬರು ಅಪೆಕ್ಸ್ ಬ್ಯಾಂಕಿನಿಂದ ದೊಡ್ಡ ಮೊತ್ತವನ್ನು ಸಂಘದಿಂದ ಫಸಲು ಭೋಗ್ಯ ಆಧಾರದ ಮೇಲೆ ಸಾಲವಾಗಿ ಪಡಕೊಂಡಿದ್ದಾರಂತೆ. ಅವರು ದೊಡ್ಡ ದೊಡ್ಡ ಹಣ್ಣುಗಳನ್ನು ತೋಟದಿಂದಲೇ ಸ್ವಂತ ವ್ಯಾಪಾರಿಗಳಿಗೆ ಬಿಕ್ರಿಮಾಡಿ ಸಣ್ಣ ಜಾತಿಯ ಹಣ್ಣುಗಳನ್ನು ಸ್ವಂತ ಲಾರಿಯಲ್ಲಿ ನೊನ್ನೈಟೆಯ ಮಂಡಿಗಳಿಗೆ ರವಾನಿಸುತ್ತಿದ್ದಾರಂತೆ. ತಮ್ಮ ತೋಟದಲ್ಲಿ ಹಣ್ಣು ಜಾಸ್ತಿ ಇದ್ದು ಪೆಟ್ರೋಲಿನ ಅಭಾವದಲ್ಲಿ ಲಾರಿ ಸಿಕ್ಕದೆ ಬಾಡಿಗೆ ಜಾಸ್ತಿ ಇದ್ದ ಕಾಲದಲ್ಲಿ ಇವರೆಲ್ಲರೂ ಸಂಘದ ಲಾರಿಗೆ ಹೊಡೆದಾಡುತ್ತಿದ್ದರಂತೆ! ಆದರೆ ಈಗ ಸಂಘದ ಲಾರಿಗಳಿಗೆ ಕೆಲಸವಿಲ್ಲದಾಗಿದೆ.

ಇನ್ನೊಬ್ಬ ಕಮಿಟಿ ಮೆಂಬರು ಸಂಘಕ್ಕೆ ಪಾಯದೆ ಮಾರಿದ ಬಾಕಿದಾರರಾಗಿದ್ದು ಸ್ವಂತ ವ್ಯಾಯದೆಯನ್ನು ಮರೆಸಿ ಪಡೆದು ತಮ್ಮ ತೋಟದ ಫಸಲನ್ನು ಸ್ವಂತ ವ್ಯಾಪಾರಿಗಳಿಗೆ ಬಿಕ್ರಿ ಮಾಡುತ್ತಾರಂತೆ. ವೈಖರಿ ವಿರೋಧವಾಗಿ ನಡೆಯುವವರನ್ನು ಉದ್ಧಾರಕ್ಕಾಗಿ ಕಮಿಟಿಯಲ್ಲಿಟ್ಟುಕೊಂಡರೋ ತಿಳಿಯದು. ಕೊಡಗಿನಲ್ಲಿ ಅರ್ಥನಿವಾಸಿಗಳಾಗಿದ್ದು ಪಾರ್ಟಿ ಪಂಗಡಗಳಲ್ಲಿ ಮುಂದಾಳುತನಕ್ಕೆ ಹೋರಾಡುವವರು ಈ ರೀತಿಯಲ್ಲಿ ಸ್ವಾರ್ಥ ಬೇಳೆ ಬೇಯಿಸುವ ಮರೆಯಲ್ಲಿ ಹೋರಾಡುತ್ತಿದ್ದಾರೆ! ಈ ರೀತಿಯಾಗಿ ಸಂಘದ ಹಿತಕ್ಕೆ ವಿರುದ್ಧವಾಗಿ ವರ್ತಿಸುವವರನ್ನು ಕಮಿಟಿಯಲ್ಲಿ ಇಡಬೇಕೇ?

ಸಂಘದ ಮೆಂಬರು

ಪ್ರಚಾರದ ಅಗತ್ಯತೆ.

ಸಾಮಾನ್ಯ ಜನತೆಯ ಶಿಕ್ಷಣಕ್ಕೆ ಚಲನ ಚಿತ್ರ ಪ್ರದರ್ಶನವು ಒಂದು ಮುಖ್ಯ ಸಾಧನವಾಗಿರುವುದು. ಅದರಂತೆ ದಕ್ಷಿಣ ಕೊಡಗಿನಲ್ಲಿ ಈಗಾಗಲೇ ತೆರೆದಿರುವ ಮೂವತ್ತು ವಯಸ್ಕರ ಶಿಕ್ಷಣ ಕೇಂದ್ರಗಳ ಸ್ಥೈಕಿ ತಾ. ೨೪-೧-೫೩ರಲ್ಲಿ ಪೈತಾಡಿಯಲ್ಲೂ, ೨೫-೧-೫೩ರಲ್ಲಿ ಹಾಲುಗುಂದದಲ್ಲೂ, ೨೬-೧-೫೩ರಲ್ಲಿ ಅರಮೇರಿಯಲ್ಲೂ, ೨೭-೧-೫೩ರಲ್ಲಿ ಪೊನ್ನಂಪೇಟೆಯಲ್ಲೂ, ೨೮-೧-೫೩ರಲ್ಲಿ ಬಿ ಶೆಟ್ಟಿಗೇರಿಯಲ್ಲೂ, ೨೯-೧-೫೩ರಲ್ಲಿ ನೆಲಜಿಯಲ್ಲೂ, ೩೦-೧-೫೩ರಲ್ಲಿ ಕಕ್ಕಬ್ಬೆಯಲ್ಲೂ, ಮತ್ತು ೩೧-೧-೫೩ರಲ್ಲಿ ವೀರಾಜಪೇಟೆಯಲ್ಲಿ ತರಬೇತು ಹೊಂದುತಿರುವ ಉಪಾಧ್ಯಾಯರಿಗೂ, ಚಲನ ಚಿತ್ರ ಪ್ರದರ್ಶನಗಳನ್ನು ಮಾಡಿ ವಯಸ್ಕರ ಶಿಕ್ಷಣದ ವಿಚಾರ ಸಾಕಷ್ಟು ಮಟ್ಟಿಗೆ ಪ್ರಚಾರ ಕಾರ್ಯವಾಯಿತೆಂದು ತಿಳಿದೆನು. ಇಂಥಾ ಪ್ರಚಾರದಿಂದ ಫಲವಿದೆ. ಬಿ. ಶೆಟ್ಟಿಗೇರಿಯಲ್ಲಿ ವಯಸ್ಕರ ಶಿಕ್ಷಣ ತರಗತಿಯನ್ನು ತೆರೆಯಲು ಅಲ್ಲಿಯ ವಿದ್ಯಾವಂತರು, ಉಪಾಧ್ಯಾಯರು ಎಷ್ಟೊಂದು ಪ್ರಯತ್ನ ಪಟ್ಟಿದ್ದರೂ ಅನಕ್ಷರಸ್ಥರಾದ ವಯಸ್ಕರು ಯಾರೂ ಮುಂದುಬಾರದಿದ್ದರು. ತಾ. ೨೮ರಲ್ಲು ಚಲಚಿತ್ರ ಪ್ರದರ್ಶನದ ದಿನ ಆದಷ್ಟು ಮಟ್ಟಿಗೆ ವಯಸ್ಕರ ಶಿಕ್ಷಣ ಯೋಜನೆಯ ಮಹತ್ವವನ್ನು ವಿವರಿಸಿದ ಮೇಲೆ ಪ್ರದರ್ಶನ ಮುಗಿದ ಕೂಡಲೇ ೩೫ ಜನರು ತಾವಾಗಿಯೇ ಮುಂದೆ ಬಂದು ಅಕ್ಷರಸ್ಥರಾಗಲು ಒಪ್ಪಿ, ಮಾರನೆ ದಿನದಿಂದಲೇ ೬ ವರೆಲ್ಲರೂ ತರಗತಿಗೆ ಹಾಜರಾಗುತ್ತಿರುವರು. ಇದರಿಂದ ವಯಸ್ಕರ ಶಿಕ್ಷಣ ಯೋಜನೆಯು ಫಲಕಾರಿಯಾಗಬೇಕಾದರೆ ಸಾಕಷ್ಟು ಪ್ರಚಾರ ಕಾರ್ಯವು ಅವಶ್ಯವಾಗಿರುವುದೆಂದು ತಿಳಿಯುತ್ತೆ.

"M"

'ಹೆಡ್ ನರ್ಸ್' ನೇಮಕದಲ್ಲಿ ಪರಮ ಅನ್ಯಾಯ.

ಇತ್ತೀಚೆಗೆ ವೀರಾಜಪೇಟೆ ಆಸ್ಪತ್ರೆಯಲ್ಲಿ ಖಾಲಿಯಾದ 'ಹೆಡ್‌ನರ್ಸ್' ಸ್ಥಾನಕ್ಕೆ ಬೇರೊಬ್ಬರ ನೇಮಕವಾಗಿದೆ. ಇವರನ್ನು ಯಾವ ಯೋಗ್ಯತೆಗನುಗುಣವಾಗಿ ಬಡತಿ ಕೊಟ್ಟು ಹೆಡ್ ನರ್ಸಾಗಿ ನೇಮಿಸಿ ವೀರಾಜಪೇಟೆಗೆ ಕಳುಹಿಸಿರುವರೆಂಬುದು ಯೋಚಿಸಿದರೂ ನಿಗೂಢದ ವಿಷಯವಾಗಿದೆ. ಇವರಿಗಿದ್ದರೆ ಎರಡು ಎರಡೂವರೆ ವರ್ಷದ ಅನುಭವವಿರಬಹುದು. ಮೂರು ವರ್ಷದಿಂದ ಆರು ವರ್ಷದ ವರೆಗೆ ಅನುಭವವಿರುವ ನಾಲ್ಕೈದು ನರ್ಸ್‌ಗಳು ಇದೇ ಆಸ್ಪತ್ರೆಯಲ್ಲಿದ್ದಾರೆ. ಇಲ್ಲಿರುವವರಿಗಿಂಥಾ ವಿಶೇಷ ವಿದ್ಯಾ ಯೋಗ್ಯತೆಯೂ ಇವರಿಗಿಲ್ಲ. ಹಾಗಾದರೆ ಯಾವ ಕಾರಣದಿಂದ ನೇಮಿಸಿದಾರೆ? ಇಲ್ಲಿರುವವರಿಗಿರುವ ಅನುಭವವೂ ಇಲ್ಲದ ಇವರಿಗಿಂತಲೂ ವಿಶೇಷ ವಿದ್ಯಾ ಯೋಗ್ಯತೆಯೂ ಇಲ್ಲದೆ ಇರುವವರಿಗೆ ಬಡತಿ ಕೊಟ್ಟು ಹೆಡ್ ನರ್ಸಾಗಿ ನೇಮಿಸಿ, ಅನುಭವಸ್ಥರಾಗಿರುವ ಮತ್ತು ಇವರಿಗಿಂತಲೂ ವಿದ್ಯಾಯೋಗ್ಯತೆ ಇರುವವರನ್ನು ಕಡೆಗಣಿಸಿ ಯಾವುದೊಂದೂ ಕಾರಣವಿಲ್ಲದೆ ಇವರ ಕೈ ಕೆಳಗೆ ಕೆಲಸ ಮಾಡಲು ವಿಧಿಸಿರುವುದು ಯಾವ ನ್ಯಾಯ? ಎಲ್ಲಿಯ ನೀತಿ? ಇದರ ಪರಿಣಾಮವೇನಾಗುವುದೆಂದು ಅಧಿಕಾರಿಗಳು ಯೋಚಿಸಿರುವರೇ? ಇದರಿಂದ ಅನುಭವಸ್ಥ ನರ್ಸುಗಳಲ್ಲಿ ಅತೃಪ್ತಿಯುಂಟಾಗಿ ಕೆಲಸ ಮಾಡಲು ಮನಸ್ಸಿಲ್ಲದಾಗುವುದಿಲ್ಲವೇ? ದಕ್ಷ ಕೆಲಸಗಾರರನ್ನು ಮೂಲೆ ಪಾಲು ಮಾಡಿದಂತಾಗುವುದಿಲ್ಲವೇ?

ಅಷ್ಟು ಮಾತ್ರವಲ್ಲ. ಇದರಿಂದ ಕಾಯಿಲಸ್ಥರಿಗೆ ಪೂರಾ ಹಾನಿ ಇದೆ. ಅಧಿಕಾರಿಗಳಿಗೆ ತೃಪ್ತಿಯೆನಿಸಿದರೂ ಬಡ ಜನತೆಗೆ ಇದರ ಭಯಂಕರ ಪರಿಣಾಮದ ಸುಂಟರು ಗಾಳಿ ಬೀಸದಿರದು. ಇದರಿಂದ ಹತಾಶರಾಗಿ ಗಂಡಾಂತರ ತಂದೊದಗಿಸಿಕೊಂಡಂತಾಗುವುದು. ಆಶೀ ಶೀಘ್ರವಾಗಿ ಸಂಬಂಧಪಟ್ಟ ಅಧಿಕಾರಿಗಳು ನ್ಯಾಯಾನ್ಯಾಯವನ್ನು ಪರಿಶೀಲಿಸಿ ತಕ್ಕ ಕ್ರಮ ಕೈಗೊಳ್ಳದಿದ್ದರೆ ಪರಿಸ್ಥಿತಿ ಪೂರಾ ಹದಗೆಡುವುದು. ಕೂಡಲೇ ಅನ್ಯಾಯದ ಪರಿಶೀಲನೆಯಾಗುವುದೆಂದು ನಂಬೋಣವೇ?

'ಸತ್ಯಕುಮಾರ್'

ಎಂಪ್ಲಾಯಿಮೆಂಟ್ ಸರ್ವಿಸ್ಸು ಮತ್ತು ಅದರ ಉಪಯೋಗವೂ

ಕೆಲಸಗಾರರ ಅವಶ್ಯಕತೆಯಿರುವ ಮಾಲೀಕರನ್ನೂ, ನೌಕರಿಯ ಅವಶ್ಯಕತೆಯಿರುವ ಕೆಲಸಗಾರರನ್ನೂ ಒಂದುಗೂಡಿಸಿ, ಆ ಮೂಲಕ ಮಾಲೀಕರಿಗೆ ಕೆಲಸಗಾರರನ್ನು ಮತ್ತು ಕೆಲಸಗಾರರಿಗೆ ತಕ್ಕ ನೌಕರಿಯನ್ನು ಅವಶ್ಯ ಶೀಘ್ರಗತಿಯಿಂದ ಒದಗಿಸಿ ಕೊಡುವುದೇ ಎಂಪ್ಲಾಯಿಮೆಂಟ್ ಸರ್ವಿಸಿನ ಧ್ಯೇಯ. ಈ ಕಾರ್ಯದಲ್ಲಿ ಕಳೆದ ಆರು ವರ್ಷಗಳಿಂದ ಎಂಪ್ಲಾಯಿಮೆಂಟ್ ಸರ್ವಿಸು ಸಾಧಿಸಿರುವ ಪ್ರಗತಿಯು ಗಮನಾರ್ಹವಾದುದು. 'ಮಾನವಶಕ್ತಿಯ ಬ್ಯಾಂಕ'ತಿರುವ ಈ ಸಂಸ್ಥೆಯು ದೇಶದ ಆರ್ಥಿಕ ಭದ್ರತೆ, ಮತ್ತು ಪ್ರಗತಿಯ ಜೀವನ ಪ್ರಮಾಣವನ್ನು ಗಳಿಸುವ ಸಲುವಾಗಿ, ಮೂರು ವಿಧದ ಕಾರ್ಯಕ್ರಮಗಳನ್ನು ಕೈಗೊಂಡಿದೆ.

ಮೊದಲನೆಯದಾಗಿ, ಈ ಸಂಸ್ಥೆಯು ಮಾನವಶಕ್ತಿಯು ಉಳಿದಿರುವ ಪ್ರದೇಶದಿಂದ ಅದರ ಕೊರತೆಯಿರುವಂಥ ಪ್ರದೇಶಗಳಿಗೆ ಶಕ್ತಿಯನ್ನು ಒದಗಿಸಿಕೊಡುತ್ತದೆ. ಎರಡನೆಯದಾಗಿ, ತಮಗೆ ಬೇಕಾದ ಕೆಲಸಗಾರರನ್ನು ಮಾಲೀಕರು ಶಾಸ್ತ್ರೀಯ ರೀತಿಯಲ್ಲಿ ಆರಿಸಲು ಒಡನೆ ಆಯ್ದುಕೊಳ್ಳಲು ಈ ಸಂಸ್ಥೆಯು ಏರ್ಪಡಿಸಿಕೊಡುತ್ತದೆ. ಮೂರನೆಯದಾಗಿ, ತನ್ನ ಟೆಕ್ನಿಕಲ್ ಮತ್ತು ಔದ್ಯೋಗಿಕ ತರಬೇತಿ ಯೋಜನೆಯ ಮೂಲಕ, ಈ ಸಂಸ್ಥೆಯು, ಪ್ರವೀಣರಾದ ಮತ್ತು ನುರಿತ ಕೆಲಸಗಾರರನ್ನು ನಮ್ಮ ದೇಶದ ಕಾರ್ಖಾನೆ ಮುಂತಾದವುಗಳಿಗೆ ಬೇಕಾದಷ್ಟು ಪ್ರಮಾಣದಲ್ಲಿ ಒದಗಿಸಿಕೊಡುತ್ತದೆ.

ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳ ಸಂಖ್ಯೆ–೧೩೧

ನಮ್ಮ ದೇಶದ ನಾನಾ ಭಾಗಗಳಲ್ಲಿ ಹರಡಿಕೊಂಡಂತಿರುವ, ಒಟ್ಟು ೧೩೧ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳನ್ನು ಈ ಎಂಪ್ಲಾಯಿಮೆಂಟ್ ಸರ್ವಿಸು ಒಳಗೊಂಡಿದೆ. ಆಡಳಿತಕ್ಕೆ ಅನುಕೂಲವಾಗುವ ರೀತಿಯಲ್ಲಿ ಈ ದೇಶವನ್ನು ೧೦ ವಿಭಾಗಗಳನ್ನಾಗಿ ಮಾಡಲಾಗಿದೆ. ಪ್ರತಿಯೊಂದು ವಿಭಾಗವು ಒಬ್ಬೊಬ್ಬ ರೀಜನಲ್ ಡೈರೆಕ್ಟರರ ಕೈಕೆಳಗಿದ್ದು, ಇವುಗಳೆಲ್ಲವುಗಳ ಮೇಲುಸ್ತುವಾರಿಯನ್ನು ನೋಡಿಕೊಂಡು, ತಕ್ಕ ಸಲಹೆಗಳನ್ನೀಯಲು ಒಬ್ಬ ಡೈರೆಕ್ಟರ್ ಜನರಲ್‌ರನ್ನು ನೇಮಿಸಲಾಗಿದೆ.

ಉದ್ಯೋಗಕ್ಕೆ ಅರ್ಜಿದಾರರನ್ನು ಕೊನೆಯದಾಗಿ ಆರಿಸುವ ಕಾರ್ಯವು ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳಿಂದ ಮಾಡಲ್ಪಡುವುದಿಲ್ಲ. ಆದಾಗ್ಯೂ ಉದ್ಯೋಗಗಳಿಗೆ ತಕ್ಕ ವಿದ್ಯೆ, ಅರ್ಹತೆಗಳನ್ನು ಪಡೆದಿರುವ ಅರ್ಜಿದಾರರನ್ನು ಸಾಧಾರಣ ಒಂದು ಜಾಗಕ್ಕೆ ಐದಾರು ಜನರಂತೆ ಆರಿಸಿ ಕಳುಹಿಸಿಕೊಡುವುದು ಮಾತ್ರ ಇವುಗಳ ಕೆಲಸ. ಕೊನೆಯ ಆಯ್ಕೆಯು ಮಾಲೀಕರಿಗೆ ಬಿಟ್ಟಿದ್ದು. ಈ ರೀತಿ ಸಾಧಾರಣ ೬೦,೦೦೦ ಅರ್ಜಿದಾರರನ್ನು ಪ್ರತಿ ತಿಂಗಳಲ್ಲಿಯೂ ಉದ್ಯೋಗಕ್ಕಾಗಿ ಮಾಲೀಕರುಗಳಿಗೆ ಕಳುಹಿಸಿಕೊಡಲಾಗುತ್ತದೆ.

ಈ ಸಂದರ್ಭದಲ್ಲಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳು ಒದಗಿಸಿದ ಕೆಲವು ಅಂಕಿಸಂಖ್ಯೆಗಳ ವಿವರಗಳನ್ನು ಕೆಳಗೆ ಕೊಡಲಾಗಿದೆ. ೧೯೪೫ರಲ್ಲಿ ಕೇವಲ ೭೦ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳಿದ್ದುವು. ಈಗ ೧೯೫೩ನೇ ನವಂಬರ್ ತಿಂಗಳಲ್ಲಿ ಅವುಗಳ ಸಂಖ್ಯೆಯು ೧೩೧ಕ್ಕೆ ಏರಿದೆ. ಅಲ್ಲದೆ ೧೯೪೬ರಲ್ಲಿ ಒಂದು ತಿಂಗಳಲ್ಲಿ ಸಾಧಾರಣ ೬೭,೦೦೦ ಜನರು ಉದ್ಯೋಗಕ್ಕಾಗಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳ ಉಪಯೋಗವನ್ನು ಮಾಡುತ್ತಿದ್ದರೆ ಇಂದಿಗೆ ಆ ಸಂಖ್ಯೆಯು ೧,೫೦,೦೦೦ಕ್ಕೆ ಏರಿದೆ. ಅದೇ ರೀತಿ ೧೯೪೬ರಲ್ಲಿ ಉದ್ಯೋಗ ದೊರಕಿಸಿಕೊಟ್ಟವರ ಸಂಖ್ಯೆಯು ೬,೦೦೦ ಇದ್ದದ್ದು ಈಗ ೨೦,೫೫೫ಕ್ಕೂ ಹೆಚ್ಚು. ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳನ್ನು ಉಪಯೋಗಿಸಿದ ಮಾಲೀಕರ ಸಂಖ್ಯೆಯು ೧,೯೦೦ ಇದ್ದದ್ದು ೫,೦೦೦ಕ್ಕೆ ಏರಿದೆ. ಯಾವ ರೀತಿಯಲ್ಲಿ ಸಾರ್ವಜನಿಕರ ಬೆಂಬಲ ಪ್ರೋತ್ಸಾಹಗಳು ದಿನೇ ದಿನೇ ಸಂಸ್ಥೆಗೆ ದೊರೆಯುತ್ತಿವೆಯೆಂಬುದಕ್ಕೆ ಇದು ನಿದರ್ಶನ.

ನಿರುದ್ಯೋಗ

ಇತ್ತೀಚೆಗೆ ಅಂದರೆ ೧೯೫೩ನೇ ಅಕ್ಟೋಬರ್ ತಿಂಗಳಲ್ಲಿ ನಡೆಸಿದಂತಹ ಒಂದು ಶೋಧನೆಯಿಂದ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳಲ್ಲಿ ನೌಕರಿಗಳಿಗಾಗಿ ಹೆಸರುಗಳನ್ನು ರಿಜಿಸ್ಟರು ಮಾಡಿಸಿರುವ ಒಟ್ಟು ೪,೯೩,೪೫೮ ನಿರುದ್ಯೋಗಿಗಳಲ್ಲಿ ೧೬,೦೫೫ ಗ್ರಾಜುಯೇಟ್‌ಗಳೂ, ೧೪,೦೫೫ ಇಂಟರ್‌ಮೀಡಿಯೇಟ್‌ಗಳೂ ಮತ್ತು ೯೭,೬೫೫ ಮೆಟ್ರಿಕ್ಯುಲೇಟ್‌ಗಳೂ ಇರುವರೆಂದೂ ತಿಳಿದು ಬಂದಿದೆ. ವಿದ್ಯಾವಂತ ನಿರುದ್ಯೋಗಿಗಳು ಹೆಚ್ಚು ಪ್ರಮಾಣದಲ್ಲಿ ಮುಖ್ಯವಾಗಿ—ಮದರಾಸು, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಬೊಂಬಾಯಿ ಮತ್ತು ದೆಹಲಿ ಪ್ರದೇಶಗಳಲ್ಲಿ. ಉತ್ತರ ಪ್ರದೇಶದಲ್ಲಿ ಅತಿ ಹೆಚ್ಚು ಗ್ರಾಜುಯೇಟ್ ಮತ್ತು ಇಂಟರ್‌ಮೀಡಿಯೇಟ್ ನಿರುದ್ಯೋಗಿಗಳಿದ್ದರೆ ಮದ್ರಾಸಿನಲ್ಲಿ ಅತಿ ಹೆಚ್ಚು ಮೆಟ್ರಿಕ್ಯುಲೇಟ್ ನಿರುದ್ಯೋಗಿಗಳಿದ್ದಾರೆ! ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳಲ್ಲಿ ರಿಜಿಸ್ಟರ್ ಮಾಡಿಸಿದ ಪ್ರತಿ ೩ ಜನರ ಪೈಕಿ ಒಬ್ಬ ಮೆಟ್ರಿಕ್ಯುಲೇಟರಂತಿದ್ದು, ಅವರ ಸ್ಥಿತಿ ಭಯಂಕರವಾಗಿದೆಯೆನ್ನಬಹುದು.

ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳ ಕರ್ತವ್ಯ

ಪಾಕಿಸ್ತಾನದಿಂದ ಸ್ಥಳಾಂತರ ಹೊಂದಿ ಬಂದ ನಿರಾಶ್ರಿತರಿಗೆ ಸಹಾಯ ಮಾಡುವುದು, ಅವರನ್ನು ನೆಲೆಗೊಳಿಸುವ ಕಾರ್ಯದಲ್ಲಿಯೂ ಸಹ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜುಗಳು ಅತಿ ಪ್ರಾಮುಖ್ಯವಾದ ಪಾತ್ರವನ್ನು ವಹಿಸಿವೆ. ಈ ವರೆಗೆ ಒಟ್ಟು ೧,೮೦,೦೦೦ ಜನರಿಗೆ ಕೆಲಸ ದೊರಕಿಸಿ ಕೊಟ್ಟಿವೆ. ಇಷ್ಟೇ ಅಲ್ಲ, ರಿಟ್ರೆಂಚ್ ಮಾಡಲ್ಪಟ್ಟ ಸರಕಾರಿ ನೌಕರರಿಗೆ, ಹಿಂದುಳಿದ ವರ್ಗದವರಿಗೂ ಮತ್ತು ಮಾಜಿ ಸೈನಿಕರಿಗೆ ತಕ್ಕ ಉದ್ಯೋಗವನ್ನು ದೊರಕಿಸಿ ಕೊಡಬೇಕಾದ ಮುಖ್ಯವಾದ ಜವಾಬ್ದಾರಿಯನ್ನು ಈ ಎಂಪ್ಲಾಯಿಮೆಂಟ್ ಸರ್ವಿಸ್ ಹೊತ್ತಿದೆ. ಇದರ ಒಂದು ಅಂಗವಾಗಿ ಅನೇಕ ಟೆಕ್ನಿಕಲ್ ಮತ್ತು ಔದ್ಯೋಗಿಕ ತರಬೇತು ಕೇಂದ್ರಗಳೂ ಅಲ್ಲಲ್ಲಿ ತೆರೆಯಲ್ಪಟ್ಟು ಪ್ರವೀಣರಾದ ಮತ್ತು ಕುಶಲರಾದ ಕೆಲಸಗಾರರನ್ನು ತರಬೇತುಗೊಳಿಸುತ್ತಿವೆ.

ಮಡಿಕೇರಿ ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್ ೧೯೫೩ರಲ್ಲಿ ಒಟ್ಟು ೧,೬೮೭ ಗಂಡಸರನ್ನೂ ಮತ್ತು ೧೯೩ ಹೆಂಗಸರನ್ನೂ ರಿಜಿಸ್ಟರ್ ಮಾಡಿ, ಅವರ ಪೈಕಿ ೫೦೫ ಗಂಡಸರಿಗೂ ಮತ್ತು ೯೦ ಹೆಂಗಸರಿಗೂ ಉದ್ಯೋಗಗಳನ್ನು ದೊರಕಿಸಿಕೊಡಲು ನೆರವಾಗಿದೆ. ಇದೀಗ ಡಿಸೆಂಬರ್ ತಿಂಗಳಂತ್ಯದಲ್ಲಿ ಸುಮಾರು ೭೮೦ ಜನರು ಉದ್ಯೋಗಗಳಿಗಾಗಿ ಕಾಯುತ್ತಿದ್ದಾರೆ.

ಇತ್ತೀಚೆಗೆ ಮಾಲೀಕರೂ ಮತ್ತು ಕೆಲಸಗಾರರೂ ಎಂಪ್ಲಾಯಿಮೆಂಟ್ ಸರ್ವಿಸಿನೊಡನೆ ಸಹಕರಿಸುತ್ತಿರುವ ರೀತಿಯು ಉತ್ಸಾಹದಾಯಕವಾಗಿದೆ.

ಅನುವಾದಕ– ಕೆ. ಸಿ. ಭೀಮಯ್ಯ,

೮ನೇ ಪುಟದಿಂದ

"ಹಾಗಾದರೆ ಪಂಥದಲ್ಲಿ ನೀವು ಗೆದ್ದಿರಿ. ಈ ನಾಯಿಯು ನಿಮಗೆ ಸೇರುತ್ತದೆ" [illegible].

* * *

ಆತ – ಎಲ್ಲಿಗೆ ಹೊರಟೆ ದೇವದಾಸಿ? ಕ್ಲಬ್? ಮನೆಯಲ್ಲಿ ದೇವರ ಪೂಜೆ ಮಾಡುವವಳು ಪ್ರದರ್ಶನಕ್ಕೆ ಹೋಗಬೇಕೆ? ಬಹುಶಃ ನಿನ್ನ ಹೊಸ ಸೀರೆಯ ಪ್ರದರ್ಶನಕ್ಕಿರಬಹುದು.

ಆಕೆ– ಅಲ್ಲ ನನ್ನ ಗಂಡನು ಎಷ್ಟು ಥಾರಾ? ಎಂದು ಜನರಿಗೆ ತೋರಿಸಲಿಕ್ಕೆ.

* * *

ಜಡ್ಜ್– ನೀನು ರಾಮುವನ್ನು ಹೊಡೆಯಲು ಕಾರಣವೇನು?

ರಂಭು– ಆತನು ನನ್ನನ್ನು ನೀರಾನೆ ಎಂದು ಕರೆದ.

ಜಡ್ಜ್– ಯಾವಾಗ ಕರೆದನು?

ರಂಭು– ಮೂರು ವರ್ಷಗಳ ಹಿಂದೆ

ಜಡ್ಜ್– ಮೂರು ವರ್ಷಗಳ ಹಿಂದೆ! ಹಾಗಾದರೆ ಇಷ್ಟು ದಿನ ಸುಮ್ಮನಿದ್ದುದು ಕಾರಣವೇನು?

ರಂಭು– ನಾನು ನೀರಾನೆಯನ್ನು ನೋಡಿರಲಿಲ್ಲ. ನಿನ್ನೆ ಬೆಳಿಗ್ಗೆ ನೋಡಿದೆ!

* * *

ಗರ್ಭಸ್ಥ ಶಿಶುವು ಗಂಡೋ ಹೆಣ್ಣೋ?

ಗರ್ಭದಲ್ಲಿರುವ ಶಿಶುವು ಗಂಡೋ ಹೆಣ್ಣೋ ಎಂದು ನಿರ್ಣಯಿಸುವ ವಿಧಾನವೊಂದು ಕೆನಡದ ಟೊರೊಂಟೋ ಸಂಸ್ಥೆಯಲ್ಲಿ ಪ್ರಯೋಗದಲ್ಲಿದೆ. ಈ ಪರೀಕ್ಷೆಗೆ, ಹಲ್ಲಿಯ ಒಂಭತ್ತು ಮುಂಚೆ ಗರ್ಭಿಣಿ ಸ್ತ್ರೀಯು ತನ್ನ ಬಾಯನ್ನು ಸ್ವಚ್ಛಗೊಳಿಸಿಕೊಂಡಿದ್ದರೆ, ಗರ್ಭಿಣಿಯು ಹಣ್ಣನ್ನು ಜಗಿಯುವರೆ 'ಫೆನಾಲ್' ಚೂರಿಂದನ್ನು ಗರ್ಭಿಣಿಯು ಜಗಿಯುತ್ತಾಳೆ. ಆ ಮೇಲೆ ಹೊರಬರುವ ಉಗುಳನ್ನು ಪ್ರತ್ಯೇಕ ರಾಸಾಯನಿಕ ಪರೀಕ್ಷೆಗೆ ಒಳಪಡಿಸುವರು. ಉಗುಳು ಹಸುರು ಬಣ್ಣವಾಗಿದ್ದರೆ ಹುಟ್ಟುವ ಶಿಶುವು ಗಂಡು; ಹಳದಿಯಾದರೆ ಹೆಣ್ಣು ಎಂದು ನಿರ್ಧರಿಸುವರು. ಈ ವರೆಗೆ ನಡೆದ ಪ್ರಯೋಗಗಳಲ್ಲಿ ಸೇಕಡ ೮೦ರಷ್ಟು ಹೇಳಿದ ನಿರ್ಧಾರವನ್ನು ಬಲಪಡಿಸಿದೆ.

The New Guardian of India Life Insurance Co., Ltd.,

HEAD OFFICE —

Post Box No. 142 Esplanade, MADRAS 1.

Wanted Licensed Agents and Special Agents on attractive commission terms in all important places in Coorg. Only capable and influential men who can produce good business need apply to

THE CHIEF AGENT.

The New Gaurdian of India Life Insurance Co., Ltd. for COORG. Virajpet.

12–3

OR

To The Head Office, MADRAS

TO LET

Shops & upstairs in the newly construc-ted building of the Bank at Mercara are available for rent.

For particulars, please contact:-

THE CANARA BANKING CORPORATION LTD.,
MERCARA.

4–1

ಯುದ್ಧ ಮುನ್ನಡೆಯಲಿ; ಅಮೆರಿಕನರಿಗೆ ಶಾಂತಿ ಬೇಕಿಲ್ಲ

ಅಮೇರಿಕದ ಭಾಗ್ಯವಿಧಾತನೆನಿಸಿದ ಮಾವೋ ತ್ಸೆತುಂಗ್‌ರವರು ಚೈನಾ ಜನತೆಯ ರಾಜಕೀಯ ಪರಿಶೀಲನಾ ಸಮ್ಮೇಳನದ ಪ್ರಥಮ ರಾಷ್ಟ್ರೀಯ ಸಮಿತಿಯ ನಾಲ್ಕನೇ ಅಧಿವೇಶನದಲ್ಲಿ ಮಾತಾಡುತ್ತಾ ಅಮೇರಿಕಾವನ್ನು ಬಹು ಕಟುವಾಗಿ ಟೀಕಿಸಿದರು. ಅವರ ಭಾಷಣದ ಸಾರಾಂಶ ಹೀಗಿದೆ.—

ಚೈನಾ ಜನತೆಯ ಮುಂದಿರುವ ಪ್ರಥಮ ಕರ್ತವ್ಯವೆಂದರೆ ಅಮೇರಿಕಾದ ಪಿರಾಟವನ್ನು ಎದುರಿಸಿ ಕೊರಿಯಾ ಯುದ್ಧದಲ್ಲಿ ಸಾಕಷ್ಟು ಸಹಾಯ ಕೊಡುವದು. ಅಮೇರಿಕವು ಚೀನಾ ಮತ್ತು ಕೊರಿಯಾ ಯುದ್ಧ ಕೈದಿಗಳನ್ನು ಹಿಡಿತದಲ್ಲಿಟ್ಟು ಯಾವುದೇ ಒಪ್ಪಂದಕ್ಕೆ ಒಪ್ಪದೆ ರಾಜಿ ಮಾತುಕತೆಗಳನ್ನು ಹಾಳುಗೆಡವಿ, ಕೊರಿಯಾ ಯುದ್ಧವನ್ನು ಬಲಪಡಿಸಲು ಒಳಗೊಳಗೆ ಏರ್ಪಾಡು ಮಾಡುತ್ತಿದೆ. ಚೀನಿಯರಿಗೆ ಯುದ್ಧ ಬೇಕಿಲ್ಲ. ಯುದ್ಧವನ್ನು ನಿಲ್ಲಿಸಿ ಉಳಿದ ಪ್ರಶ್ನೆಗಳನ್ನು ಹಿಂದಿನಿಂದ ಸಮಾಧಾನವಾಗಿ ನಿರ್ಣಯಿಸುವುದೇ ಅವರ ಆಸೆ. ಆದರೆ ಅಮೇರಿಕನರಿಗೆ ಇದು ಬೇಕಿಲ್ಲ. ಆದ್ದರಿಂದ ಗಂಡಾಂತರವನ್ನು ಎದುರಿಸಿ ಯುದ್ಧ ಮಾಡಿರಿ.

ರಾಷ್ಟ್ರೀಯ ಪುನರ್ರಚನಾ ಕಾರ್ಯದಲ್ಲಿ ನಾವು ರಷ್ಯಾದಿಂದ ಉತ್ತಮ ಪಾಠ ಕಲಿಯಬಹುದಾಗಿದೆ. ಇದಲ್ಲದೆ ನಮ್ಮೊಳಗಿರುವ ಬಂಡವಾಳದಾರರು ಮತ್ತು ಇತರರಿಂದ ಬರುವ ಗಂಡಾಂತರಕ್ಕೂ ನಾವು ತಯಾರಿರಬೇಕು. ದೇಶದ ಏಕ್ಯತೆ ಐಕ್ಯತೆಗಳನ್ನು ಒಳಗಿಂದೊಳಗೆ ಮುರಿಯಲು ಅನೇಕ ಒಳ ಸಂಘಗಳು, ಒಳ ಸಂಸ್ಥೆಗಳು ಪ್ರಯತ್ನಿಸುತ್ತಿವೆ. ಅವುಗಳ ಬಗ್ಗೆ ಎಚ್ಚರಿಕೆಯಿಂದ ವರ್ತಿಸಬೇಕು.

ಅಮೇರಿಕಾದ ಸಾಮ್ರಾಜ್ಯವಾದಿಗಳು ಎಷ್ಟು ವರ್ಷ ಯುದ್ಧ ಮಾಡಬೇಕೆಂದಿರುವರೋ ಅಷ್ಟು ವರ್ಷ ನಾವು ಯುದ್ಧ ಮಾಡಲು ತಯಾರಿರುವೆವು. ಅಮೇರಿಕನರು ತಮ್ಮ ಗಂಟು ಮೂಟೆ ಕಟ್ಟಿ ಹೊರಡುವವರೆಗೆ ಕೊರಿಯಾದ ಜನತೆಗೂ, ಚೀನೀ ಯೋಧರಿಗೂ ಜಯ ದೊರೆಯುವವರೆಗೆ ಯುದ್ಧ ಮುಂದರಿಸುವೆವು.'

॥ ಟ್ರೂಮನರ ಮನತೆ ॥

ಅಮೇರಿಕದ ಅಧ್ಯಕ್ಷತೆಯನ್ನು ಬಿಟ್ಟು ಇಂಡಿಪೆಂಡೆನ್ಸ್ (ಅಮೇರಿಕದ ಮಿಸ್ಸೂರಿಯಲ್ಲಿ ಒಂದು ಊರು) ನಲ್ಲಿರುವ ತಮ್ಮ ಮನೆಗೆ ಮರಳಿದ ನಂತರ ಹೇರಿ ಎಸ್. ಟ್ರೂಮನ್ನರು ವರ್ಷಕ್ಕೆ ಒಂದು ಲಕ್ಷ ಡಾಲರು ವೇತನದ ಹಲವು ಕೆಲಸಗಳನ್ನು ತಿರಸ್ಕರಿಸಿದರು. (ಒಂದು ಲಕ್ಷ ಡಾಲರು ಸಾಧಾರಣ ನಾಲ್ಕು ಲಕ್ಷ ಎಪ್ಪತ್ತೈದು ಸಾವಿರ ರೂಪಾಯಿಯಷ್ಟಾಗುತ್ತದೆ.)

ಒಂದು ವ್ಯಾಪಾರಿ ಸಂಸ್ಥೆಯು ಮಾಜಿ ಅಧ್ಯಕ್ಷರಿಗೆ ವರ್ಷಕ್ಕೆ ಒಂದು ಲಕ್ಷ ಡಾಲರುಗಳಂತೆ ಎಂಟು ವರ್ಷಗಳ ಒಪ್ಪಂದ ನೀಡಿತು. ಇನ್ನೊಂದು ಸಂಸ್ಥೆಯು ಇದಕ್ಕಿಂತಲೂ ಸ್ವಲ್ಪ ಹೆಚ್ಚಿನ ವೇತನದಲ್ಲಿ ಅವರ ಆ ಸಂಸ್ಥೆಯ ಮಾರಾಟದ ವ್ಯವಸ್ಥಾಪಕ (Sales Manager) ರಾಗಬೇಕೆಂದು ಇಚ್ಛಿಸಿತು.

ಆದರೆ ಟ್ರೂಮನರು, ತಾನು ಈಗಾಗಲೇ ಬಿಟ್ಟು ಬಂದ ದೊಡ್ಡ ಅಧಿಕಾರ ಸ್ಥಾನಕ್ಕೆ ಯಾವುದೇ ರೀತಿಯಲ್ಲಿ ಟೀಕೆ (ಕೆಟ್ಟ ಹೆಸರು) ಬರುವಂಥ ಯಾವುದೇ ಸ್ಥಾನದ ನೀಡಿಕೆಯನ್ನು ಸ್ವೀಕರಿಸಲಾರೆನೆಂದು ಸ್ಪಷ್ಟವಾಗಿ ಹೇಳಿದ್ದಾರೆ.

ಯಾವ ಕೆಲಸವಾದರೂ ಎರಡು ಮುಖ್ಯ ಆವಶ್ಯಕತೆಗಳನ್ನು ಪೂರೈಸಬೇಕು. ಅದು ಅವರ ಹುಟ್ಟು ಸಾಮರ್ಥ್ಯದ ಶ್ರೇಷ್ಠ ಉಪಯೋಗವನ್ನು ಮಾಡಬೇಕು ಮತ್ತು ಅವರು ತಮ್ಮ ಅಧ್ಯಕ್ಷತೆಯನ್ನು 'ನಗದು ಮಾಡಿದರು' (cashed in) ಎಂಬ ಟೀಕೆಗಳಿಗೆ ಎಡೆ ಅವಕಾಶ ಕೊಡಬಾರದು.

ಟ್ರೂಮನರಿಗೆ ಬಂದ ಬೇಡಿಕೆಗಳ ವಿಷಯವಾಗಿ ಅವರು "ನಾನು ಒಮ್ಮೆ ವಹಿಸಿದ್ದ ಅಧಿಕಾರ ಸ್ಥಾನದ ಸಲುವಾಗಿ ಮಾತ್ರ ಈ ಜನರಿಗೆ ಬೇಕಾಗಿದ್ದೇನೆ. ನನ್ನ ಹೆಸರನ್ನು ಖ್ಯಾತಿಯನ್ನು ಉಪಯೋಗಿಸುವುದು ಬೇಕಾಗಿದೆ. ನಾನು ಇದಕ್ಕೆಡೆ ಕೊಡಲಾರೆ" ಎಂದು ಹೇಳಿದರು.

ಟ್ರೂಮನ್ನರು ಹೇಳಿದರು "ಸದ್ಯದಲ್ಲಿಯೇ ನನಗೆ ೬೯ ವರ್ಷ ತುಂಬುವುದು. ವರ್ಷವೊಂದರ ಲಕ್ಷ ಡಾಲರಿನಂತೆ ಎಂಟು ವರ್ಷಗಳ ಒಪ್ಪಂದವು ಪರಿಣಾಮದಲ್ಲಿ ಜೀವಮಾನದ ಕೆಲಸವೇ ಸರಿ. ಅದಕ್ಕೆ ನಾನು ಅರ್ಹನಾಗಿದ್ದೇನೆಂದು ಎಣಿಸುವುದಿಲ್ಲ. ಯಾವ ಮನುಷ್ಯನೂ ಅರ್ಹನಾಗಿಲ್ಲ.

ಹುಚ್ಚರ ಪಟ್ಟಿ

ನೀನುಂಟೋ? ಮೂರು ಲೋಕವುಂಟು!!

ಎದ್ದೇಳು ಹಳ್ಳಿಗನೇ ಎದ್ದೇಳು ಕಣ್ತೆರೆದು
ನೂರೆಂಟು ಆಪತ್ತ ಕಟ್ಟಿಕೊಂಡೇಳು,
ಎದ್ದೇಳು ಹಳ್ಳಿಗನೇ ನಿನ್ನನೀ ನೋಡಿಕೋ,
ನೀನುಂಟು, ನಿನ್ನ ಕೈ ಗಟ್ಟಿ ಇದೆ ಏಳು.

ಮಂತ್ರಿಗಳು ಬಂದಿಹರು ಸುಖವೆಂದು ತಿಳಿಯದಿರು,
ಅದಕ್ಕಾಗಿ ಹೋರಾಟ ನಡೆಸಿದವರವರು.
ನಿನ್ನ ಹಿತವೆಂದವರು ನುಡಿಯುತ್ತಿದ್ದರು ಕೂಡ
ಅವರುಂಟು ಅವರಿಗೂ ಹೊಟ್ಟೆ ಸುತ್ತುಂಟು.

ಹೋರಾಟವೇ ರಾಟೆ ತನ್ನ ಹಿತ ಸುಖಕೆಂದು,
ದುಡಿದ ಎತ್ತಿರು ಎಡೆಬಿಡದೆ ಉಣಲಿಲ್ಲದವನೆ!
ಉಳಿದಿರುವ ನಾಲ್ಕೈದು ವರ್ಷಗಳೆ ಅವರಿಗಿದೆ,
ಅದಕ್ಕೆಂದೆ ಮನೆಮಾರು ನೋಡಿಕೊಳ್ಳಬೇಕು.

ಭಾಷಾವಾರು ಪ್ರಾಂತ ರಚನೆ ಅಪಾಯಕರ.

ಭಾರತೀಯ ತಳಹದಿಯ ಮೇಲೆ ದೇಶವನ್ನು ವಿಭಜಿಸಿ ಹೊಸ ರಾಜ್ಯಗಳನ್ನು ನಿರ್ಮಾಣ ಮಾಡುವ ಯೋಜನೆಯು ವಿನಾಶಕಾರಿಯಾದುದಾಗಿದೆಯೆಂದು ಉತ್ತರ ಪ್ರದೇಶದ ರಾಜ್ಯಪಾಲರಾದ ಶ್ರೀ ಕೆ. ಎಂ. ಮುನ್ಷಿಯವರು ಹೇಳಿದರು.

ಅಹಮದಾಬಾದಿನ ಇತಿಹಾಸ ಪ್ರಸಿದ್ಧ ಕಂಕಾರಿಯಾ ಸರೋವರದ ನೂರು ದಿನಗಳ ಉತ್ಸವದ ಉದ್ಘಾಟನೆ ಮಾಡುತ್ತಾ ಅವರು ಮೇಲಿನಂತೆ ಉದ್ಗರಿಸಿ ಇನ್ನೂ ಹೇಳಿದ್ದೇನೆಂದರೆ— "ಭಾಷಾವಾರವು ರಾಷ್ಟ್ರೀಯತೆಗೆ ವಿನಾಶಕಾರಿಯಾದುದು. ದೇಶದಲ್ಲಿಯ ಸದ್ಯದ ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆಯನ್ನು ಬದಲು ಮಾಡುವುದು ಗಂಡಾಂತರವಲ್ಲವಾದರೂ ಅಪಾಯಕಾರಿಯಾಗಿದೆ. ನನ್ನ ಮಾತು ನಡೆಯುತ್ತಿದ್ದರೆ ಅಂತರಾಷ್ಟ್ರೀಯ ಯುದ್ಧ ಭಯ ಕೊನೆಗಾಣುವವರೆಗ ಮತ್ತು ಎರಡು ಪಂಚವಾರ್ಷಿಕ ಯೋಜನೆಗಳು ಕೈಗೂಡುವವರೆಗ ಸದ್ಯದ ರಾಜಕೀಯ ಪರಿಸ್ಥಿತಿಯನ್ನು ಬದಲು ಮಾಡದೆ ಇಟ್ಟುಕೊಳ್ಳುವೆ. ಆಂಧ್ರವು ಪ್ರತ್ಯೇಕವಾಗುವುದಾದರೂ ಪ್ರತ್ಯೇಕ ಮಾಡುವ ವಿಧಾನವು ಸುಲಭವಾಗದು. ಅದು ಬಹು ಕೊರತೆಯ ರಾಜ್ಯವಾಗುವದು. ಈ ಕೊರತೆಯನ್ನು ಆದಾಗಲಿ, ಕೇಂದ್ರವಾಗಲಿ ಹೇಗೆ ತುಂಬಿ ಕೊಡುವುದು? ಇದರಿಂದ ರಾಷ್ಟ್ರದ ಪ್ರಗತಿಯು ಅವಲಂಬಿಸಿರುವ ಪಂಚವಾರ್ಷಿಕ ಯೋಜನೆಯ ಮೇಲೆ ಯಾವ ಪರಿಣಾಮವಾದೀತು. ಆಂಧ್ರವು ಪ್ರತ್ಯೇಕವಾದರೂ ಕ್ಷುದ್ರಬಾಧವನ್ನು ಒಡೆಯುವ ಅಂಜಿಕೆ ಇದ್ದೇ ಇದೆ. ಏಕೀಕೃತ ಕರ್ನಾಟಕ ಮತ್ತು ಸಂಯುಕ್ತ ಮಹಾರಾಷ್ಟ್ರಗಳ ಕನಸು ಕಾಣುವುದು ಸುಲಭ. ಆದರೆ ಭಾರತದ ಅರ್ಧಭಾಗವನ್ನು ಪುನಃ ಹಂಚಿ ಹಾಕುವ ಕಾರ್ಯ ಅಷ್ಟು ಸುಲಭವಲ್ಲ."

ಕಂಕಾರಿಯ ಸರೋವರವನ್ನು ೧೪೫೧ ರಲ್ಲಿ ಸುಲ್ತಾನ ಕುತುಬುದ್ದೀನನು ಕಟ್ಟಿಸಿದನು. ಇದರ ವಿಸ್ತಾರ ೩೯,೮೦೦ ಚದರ ಫೂಟು ಇದೆ.

ಕಾರ್ಯಪ್ಪನವರಿಗೆ ಸ್ಟಾಂಪುಗಳ ಮೂಲಕ ಪ್ರಶ್ನೆ

ಭಾರತದ ಮಾಜಿ ಕಮಾಂಡರ್-ಇನ್-ಚೀಫ್ ಶ್ರೀ ಕೆ. ಎಂ. ಕಾರ್ಯಪ್ಪನವರಿಗೆ ನಾಗಪುರದ ವಿದ್ಯಾರ್ಥಿಯೊಬ್ಬ ೧೯ ವಿವಿಧ ಬಣ್ಣಗಳ ಪೋಸ್ಟಲ್ ಸ್ಟಾಂಪುಗಳನ್ನು ಕಳುಹಿಸಿ ಅದರೊಂದಿಗೆ ಒಂದು ಪ್ರಶ್ನೆಯನ್ನು ಕೇಳಿದ್ದ. ಅದೇನೆಂದರೆ "ಈ ಸ್ಟಾಂಪು ಸಂಗ್ರಹದಲ್ಲಿ ಮೊದಲು ಇಂದೋರ್ ಸ್ಟಾಂಪನ್ನೂ ಕೊನೆಯಲ್ಲಿ ಕೆಂಪು ಕೋಟೆಯ (ದೆಹಲಿಯಲ್ಲಿದ) ಸ್ಟಾಂಪನ್ನೂ ಕಳುಹಿಸಿರುವುದಕ್ಕೆ ಕಾರಣ ಊಹಿಸಬಲ್ಲಿರಾ" ಎಂದು.

ಅದಕ್ಕೆ ಶ್ರೀ ಕಾರ್ಯಪ್ಪನವರು ಈ ಉತ್ತರವನ್ನು ಕಳುಹಿಸಿದ್ದಾರೆ. "ನನ್ನ ಅಧಿಕಾರ ಜೀವನ ಇಂದೋರಿನಿಂದ ಆರಂಭವಾಗಿ ದೆಹಲಿಯಲ್ಲಿ ಮುಕ್ತಾಯವಾಯಿತು."

ಫೆಬ್ರವರಿ ೨೪ರಂದು ಮತ್ತೆ ಸಮಾವೇಶಗೊಳ್ಳಲಿರುವ ಪ್ರಪಂಚ ಸಂಸ್ಥೆ ಜನರಲ್ ಅಸೆಂಬ್ಲಿ ಅಧಿವೇಶನಕ್ಕೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ ಮತ್ತು ಶ್ರೀ ವಿ. ಕೆ. ಕೃಷ್ಣಮೆನನ್‌ರೇ ಮತ್ತೆ ಭಾರತದ ನಿಯೋಗಿಗಳಾಗಿರುವ ಸಂಭವವಿದೆಯೆಂದು ತಿಳಿದ ವೃತ್ತಗಳಿಂದ ಗೊತ್ತಾಗಿದೆ.

ಆಂಧ್ರರಾಜ್ಯ ನಿರ್ಮಾಣದ ಪ್ರಯತ್ನ

ಸಾವಿರ ಶಿಷ್ಟಮಂಡಳಗಳು
ನಾಲ್ಕು ಸಾವಿರ ಮನವಿಗಳು

ಹಣಕಾಸಿನ ವಿಭಜನೆಯೇ ಗುರುತರ ಸಮಸ್ಯೆ

ನಾಲ್ಕು ವಾರಗಳ ವರೆಗೆ ಅವಿಶ್ರಾಂತವಾಗಿ ದೈಹಿಕ ಮತ್ತು ಬೌದ್ಧಿಕ ಶ್ರಮ ವಹಿಸಿ ದುಡಿದು ನ್ಯಾಯಮೂರ್ತಿ ವಾಂಚೂ ಅವರು ಡೆಲ್ಲಿಗೆ ಮರಳಿದ್ದಾರೆ. ಅವರೀಗ ಸಧ್ಯದಲ್ಲಿಯೇ ನಿರ್ಮಿಸಲ್ಪಡಲಿರುವ ಆಂಧ್ರರಾಜ್ಯಕ್ಕೆ ಸಂಬಂಧಿಸಿದ ಆರ್ಥಿಕ ಮತ್ತು ಇತರ ತೊಡಕು ತೊಂದರೆಗಳ ಬಗ್ಗೆ ವರದಿಯನ್ನು ಒಪ್ಪಿಸಿದ್ದಾರೆ. ಶ್ರೀ ರಾಜಗೋಪಾಲಾಚಾರಿ ಮತ್ತು ಶ್ರೀ ವಾಂಚೂ ಇವರ ಅಭಿಪ್ರಾಯದಂತೆ ಇನ್ನು ೩-೪ ತಿಂಗಳುಗಳಲ್ಲಿ ಆಂಧ್ರರಾಜ್ಯ ನಿರ್ಮಾಣವಾಗುವದು ನಿಶ್ಚಿತವಾದಂತಾಯಿತು.

ಮದ್ರಾಸ ರಾಜ್ಯದಲ್ಲಿ ಶ್ರೀ ವಾಂಚೂ ಅವರು ನಾಲ್ಕು ವಾರಗಳ ವರೆಗೆ ಸಂಚರಿಸಿ ಅಲ್ಲಿ ಅತ್ಯವಶ್ಯಕ ಕಾರ್ಯಮಾಡಿದ್ದಾರೆ. ಅಲ್ಲಿ ಅವರು ಒಂದು ಸಾವಿರದಷ್ಟು ಶಿಷ್ಟ ಮಂಡಳಗಳನ್ನೂ ಸಂಘ ಸಂಸ್ಥೆಗಳಿಂದ ಐದು ಸಾವಿರದಷ್ಟು ಮನವಿಗಳನ್ನೂ ಸ್ವೀಕರಿಸಿದರು. ಮದ್ರಾಸು ನಗರದಲ್ಲಿ ಅವರ ವಾಸ್ತವ್ಯವಿದ್ದಾಗ ಅವರು ಸದ್ಯ ಮನೆಯಿಂದಲೇ ಇದ್ದರು. ಆದರೆ ಆಂಧ್ರ ಜಿಲ್ಲೆಗಳ ಸಂಚಾರದಲ್ಲಿ ಮಾತ್ರ ಅವರಿಗೆ ಗಲಾಟೆಯ ನಿದರ್ಶನ ಪ್ರದರ್ಶನಗಳು ಗಂಟು ಬಿದ್ದವು. ಈ ನಿದರ್ಶನಗಳು ಹಲವೊಂದು ಸಾರೆ ಹಿಂಸಾಚಾರಗಳಲ್ಲಿ ಮಾರ್ಪಾಟು ಹೊಂದಿದವು. ಮದ್ರಾಸು ನಗರವೇ ಆಂಧ್ರ ರಾಜಧಾನಿಯಾಗಬೇಕು ಇಲ್ಲವೇ ಅದೊಂದು "ಕೇ" ವರ್ಗದ ರಾಜ್ಯವೆಂದು ಪರಿಗಣಿಸಲ್ಪಡಬೇಕು ಎಂಬುವದೆ ಸಮರ್ಥನ ಮತ್ತು ಆಂಧ್ರರಾಜ್ಯದ ಮುಖ್ಯ ಸ್ಥಳವೂ ವರಿಷ್ಠ ನ್ಯಾಯಾಲಯವೂ, ಆಂಧ್ರ ಪ್ರದೇಶದೊಳಗೇ ಉಳಿಯಬೇಕು, ಅದರಲ್ಲಿಯೂ ವಿಜಯವಾಡಾದಲ್ಲಿ ರಾಜ್ಯದ ಮುಖ್ಯ ಸ್ಥಳವೂ ರಾಯಲ ಸೀಮೆಯಲ್ಲಿ ವರಿಷ್ಠ ನ್ಯಾಯಾಲಯವೂ ಇರಬೇಕು ಮತ್ತು ಆಂಧ್ರ ರಾಜ್ಯ ನಿರ್ಮಾಣವು ತೆಲುಗರ ನೂತನ ವರ್ಷಾರಂಭದ ದಿನ ಅಂದರೆ ಇದೇ ತಾ. ೧೬ನೇ ಮಾರ್ಚ ದಿನ ಆಗಬೇಕೆನ್ನುವದೇ ಮೊದಲಾದ ಈ ಘೋಷಣೆಗಳು ನಡೆದವು. ಮೊದಲನೆಯ ಗುಂಪಿನಲ್ಲಿ ಬಹು ಜನರು ಆಂಧ್ರ ಕಾಂಗ್ರೆಸಿಗರೂ ಪ್ರಜಾ ಸಮಾಜವಾದೀ ಪಕ್ಷದವರೂ ಮತ್ತು ಅವರಿಗೆ ಅನುಕೂಲವಿದ್ದ ಇತರರೂ ಸೇರಿಕೊಂಡಿದ್ದರು. ಎರಡನೆಯ ಗುಂಪಿನಲ್ಲಿ ಕಮ್ಯೂನಿಸ್ಟರೂ ಅವರ ಪರಾನುವರ್ತಿಗಳೂ ಸೇರಿಕೊಂಡಿದ್ದರು. ಕಮ್ಯೂನಿಸ್ಟರಿಗೆ ವಿಜಯವಾಡ ಪಟ್ಟಣವು ಮುಖ್ಯ ಸ್ಥಳವಾಗುವುದು ಬೇಕಾಗಿದ್ದರೂ ಅನಂತಪುರದಲ್ಲಿ ವರಿಷ್ಠ ನ್ಯಾಯಾಲಯವು ಇರಬೇಕೆನ್ನುವ ಬಗ್ಗೆ ಅವರು ಮೌನ ತಾಳಿದ್ದರು. ಯಾಕೆಂದರೆ ಆ ಪ್ರಶ್ನೆ ಎತ್ತಿದರೆ ತಮಗೆ ಬೆಂಬಲ ಸಿಗಲಿಕ್ಕಿಲ್ಲವೆಂಬ ಭೀತಿ ಅವರಿಗಿತ್ತು. ಆದರೆ ಯಾವುದೇ ಕಾರಣದಿಂದ ತಾತ್ಕಾಲಿಕವಾಗಿ ಹೊಸ ಆಂಧ್ರ ರಾಜ್ಯದ ಮುಖ್ಯ ಸ್ಥಳವು ಮದ್ರಾಸು ನಗರವಿರಕೂಡದೆಂದು ಕಮ್ಯೂನಿಸ್ಟರೆಲ್ಲರ ಒಮ್ಮತದ ಅಭಿಪ್ರಾಯವಿತ್ತು. ಆಂಧ್ರರಲ್ಲಿಯೂ ಒಂದು ವಿಷಯದ ಬಗ್ಗೆ ಒಮ್ಮತವಿತ್ತು. ಮದ್ರಾಸ್ ನಗರದ ಮೇಲಿನ ತಮ್ಮ ಹಕ್ಕು ಬಿಡಲಿಕ್ಕೆ ಪರಿಹಾರ ಧನ ಕೊಡಲೇ ಬೇಕೆಂದು ಎಲ್ಲ ಆಂಧ್ರರ ಬೇಡಿಕೆಯಿತ್ತು. ಬರುವ ಇಪ್ಪತ್ತೈದು ವರ್ಷಗಳ ವರೆಗಾದರೂ ಮದ್ರಾಸಕ್ಕೆ ಎಲ್ಲ ಬಗೆಯ ಶಿಕ್ಷಣದ ಸೌಕರ್ಯವಿರಬೇಕೆಂದು ಅವರ ಅಭಿಪ್ರಾಯವಿತ್ತು.

ರಾಯಲ ಸೀಮೆಯವರು ಶ್ರೀ ವಾಂಚೂ ಅವರಿಗೆ ಸಲ್ಲಿಸಿದ ಮನವಿಗಳಲ್ಲಿ ಇದೇ ವರ್ಷದ ಎಪ್ರಿಲ್ ತಿಂಗಳೊಳಗೆ ಆಂಧ್ರವು ರಾಜ್ಯವಾಗಬೇಕು; ಶ್ರೀ ಬಾಗ ಇವರ ಕರಾರಿನಂತೆ ರಾಯಲಸೀಮೆಗೆ ಸಾಕಷ್ಟು ಸಂರಕ್ಷಣೆಗಳು ದೊರೆಯಬೇಕು; ಆಂಧ್ರದ ಮುಖ್ಯ ಸ್ಥಳವಾಗಲಿ ಕೊನೆಗೆ ವರಿಷ್ಠ ನ್ಯಾಯಾಲಯವಾಗಲಿ ರಾಯಲ ಸೀಮೆಯಲ್ಲಿರಬೇಕೆಂಬ ಬೇಡಿಕೆ ಇತ್ತು. ಬಳ್ಳಾರಿ ಜಿಲ್ಲೆಯ ಕೆಲವರು ಒಪ್ಪಿಸಿದ ಮನವಿಗಳಲ್ಲಿ ಬಳ್ಳಾರಿಯ ಮೂರು ತಾಲೂಕುಗಳನ್ನು ಆಂಧ್ರ ರಾಜ್ಯದಲ್ಲಿ ಸೇರಿಸಬೇಕೆಂದೂ ಇನ್ನುಳಿದ ಭಾಗವನ್ನು ಮದ್ರಾಸು ರಾಜ್ಯದಲ್ಲಿ ಸೇರಿಸಬೇಕೆಂದೂ ಕೇಳಿಕೊಳ್ಳಲಾಗಿತ್ತು. ಇಡೀ ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕಕ್ಕೆ ಜೋಡಿಸಬೇಕೆಂದೂ ಇನ್ನೊಂದು ವರ್ಗದವರ ಮನವಿಯಿತ್ತು. ಅನಂತಪುರವೇ ಆಂಧ್ರ ರಾಜ್ಯದ ಮುಖ್ಯ ಸ್ಥಳವಾಗಬೇಕೆಂದೂ ಆ ಜಿಲ್ಲೆಯ ಜನರು ಒಪ್ಪಿಸಿದ ಮನವಿಯಲ್ಲಿ ಕೇಳಿಕೊಳ್ಳಲಾಗಿತ್ತು.

ಆಂಧ್ರ ರಾಜ್ಯ ನಿರ್ಮಾಣದ ವಿಷಯದಲ್ಲಿ ಆರ್ಥಿಕ ವಿಚಾರವೇ ತಲೆಗೆಡಿಸುವಂತಹದಾಗಿದ್ದು ಎಲ್ಲ ಪಕ್ಷದವರೂ ಈಗ ಆ ವಿಷಯದಲ್ಲಿಯೇ ಮಗ್ನರಾಗಿದ್ದಾರೆ. ಆಂಧ್ರದ ರಾಜ್ಯ ಮತ್ತು ಮದ್ರಾಸ್ ರಾಜ್ಯಗಳ ನಡುವೆ ಜನಸಂಖ್ಯೆಯ ಪ್ರಮಾಣದ ಮೇಲೆ ನಿವೃತ್ತವೇತನ, ಔದ್ಯೋಗಿಕ ಕಾರ್ಖಾನೆ ಇವೇ ಮೊದಲಾದ ಆಸ್ತಿ ಮತ್ತು ಸಾಲಗಳ ಪಾಲು ಮಾಡಬೇಕೆಂದು ಕಮ್ಯೂನಿಸ್ಟರ ಅಂಬೋಣವಿದೆ. ಕಳೆದ ಐವತ್ತು ವರ್ಷಗಳಲ್ಲಿ ಆಂಧ್ರ ಪ್ರದೇಶದಲ್ಲಿ ವಿದ್ಯುತ್ತು ರಸ್ತೆಯಾಗಲಿ ನೀರಾವರಿ ಯೋಜನೆಗಳಾಗಲಿ ಕೈಕೊಳ್ಳಲಾಗಿಲ್ಲವೆಂದೂ ಕಮ್ಯೂನಿಸ್ಟ ಪಕ್ಷದ ಧುರೀಣರು ವಾಂಚೂ ಅವರಿಗೆ ಹೇಳಿದರು. ಮೇಲಿನಂತಾದರೆ ವಿಭಜನಾ ಸಮಿತಿಯು ಸೂಚಿಸಿದ್ದಕ್ಕಿಂತ ೪-೫ ಕೋಟಿ ರೂಪಾಯಿ ಹೆಚ್ಚು ಹಣ ಪಡೆಯುವಂತಾಗುವುದು. ಮದ್ರಾಸು ಸರಕಾರವು ಪ್ರಕಟಿಸಿದ ಅಂಕೆ ಸಂಖ್ಯೆಗಳೇ ಸರಿಯಲ್ಲವೆಂದು ಕಮ್ಯೂನಿಸ್ಟ ಶಿಷ್ಟಮಂಡಳದವರು ಪ್ರತಿಪಾದಿಸಿದರು. ಮುಂಗಡ ಪತ್ರಿಕೆಯಂತೆ ಮದ್ರಾಸ ರಾಜ್ಯದ ಆಯವ್ಯಯವು ಅನುಕ್ರಮವಾಗಿ ರೂ. ೫೭,೬೩,೭೫,೦೦೦ ಮತ್ತು ರೂ. ೧,೩೧,೧೬,೭೬೦೦೦ ಇರಬೇಕಾದದ್ದು ಸರಕಾರವು ಕೊಟ್ಟ ಅಂಕೆ ಸಂಖ್ಯೆಗಳಲ್ಲಿ ಆಯ ರೂ. ೬೧,೬೫,೬೫೦೦೦ ಮತ್ತು ವ್ಯಯ ರೂ. ೭೦,೯೭,೭೭೦೦೦ ಎಂದು ಹೇಳಲಾಗಿದೆ. ಎಪ್ರಿಲ್ ೧ರಿಂದ ೩೧ನೇ ಡಿಸೆಂಬರ್ ೧೯೫೨ರ ವರೆಗೆ ೧೭,೦೩,೩೭೦೦೦ ಯಿಂದ ಹೆಚ್ಚಿತೆಂದೂ ಆಸ್ತಿಯು ರೂ. ೩೩,೩೦,೭೬೦೦೦ ರಿಂದ ಕಡಿಮೆಯಾಯಿತೆಂದೂ ಅವರು ಹೇಳಿದರಂತೆ. ಅಂದರೆ ೯ ತಿಂಗಳುಗಳಲ್ಲಿ ರೂ. ೩೯,೩೯,೦೦,೦೦೦ ಗಳನ್ನು ವೆಚ್ಚ ಮಾಡಲಾಗಿದ್ದು ಅದರ ವಿವರಗಳನ್ನು ಪ್ರಕಟಿಸಿಲ್ಲವಂತೆ.

ಆಂಧ್ರರಾಜ್ಯ ನಿರ್ಮಾಣ ವಿಷಯದಲ್ಲಿ ಕಮ್ಯೂನಿಸ್ಟರು ಉಬ್ಬಿ ಹೋಗಿದ್ದಾರೆ. ಈ ಹೊಸ ರಾಜ್ಯದ ಆದಾಯದಲ್ಲಿ ಕೊರತೆಯುಂಟಾಗುವ ಭೀತಿಯೇ ಇಲ್ಲವೆಂದು ಅವರು ಹೇಳಿದ್ದಾರೆ. ಆದರೆ ಮದ್ರಾಸು ಸರಕಾರವೂ ಆಂಧ್ರ ಪ್ರದೇಶ ಕಾಂಗ್ರೆಸು ಸಮಿತಿಯೂ ಸಲ್ಲಿಸಿದ ಅಂಕೆ ಸಂಖ್ಯೆಗಳ ಮೇಲಿಂದ ನೋಡಿದರೆ ಈ ಹೊಸ ರಾಜ್ಯವು ಐದು ಕೋಟಿ ರೂಪಾಯಿಗಳ ಕೊರತೆಯಿಂದಲೇ ತನ್ನ ಹೊಸ ಅವತಾರವನ್ನು ಆರಂಭಿಸಬೇಕಾಗುವದು. ಮದ್ರಾಸು ರಾಜ್ಯದ ಅರ್ಥಮಂತ್ರಿಗಳಾದ ಶ್ರೀ ಸಿ. ಸುಬ್ರಹ್ಮಣ್ಯಂ ಇವರು ಅಂಕೆ ಸಂಖ್ಯೆಗಳ ಬಗ್ಗೆ ಮಾತಾಡುತ್ತಾ ಆಂಧ್ರದಲ್ಲಿ ಸ್ಥಿತಿ ಸುಸ್ಥಿರವಾಗುವದಕ್ಕಾಗಿ ತಾವು ಕೊರತೆಯನ್ನು ತೋರಿಸದೆ ಇದ್ದಕ್ಕಿದ್ದಂತೆ ಪರಿಸ್ಥಿತಿಯನ್ನು ನಿವೇದಿಸುವದಕ್ಕಾಗಿ ನಿಜವಾದ ಅಂಕೆ ಸಂಖ್ಯೆಗಳನ್ನು ಒದಗಿಸಲಾಗಿದೆಯೆಂದೂ ತಿಳಿಸಿದರು. ಮದ್ರಾಸು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಮತ್ತು ನೀರಾವರಿ ಯೋಜನೆಗಳು ಒಟ್ಟಾಗಿಯೇ ಮಾಡಲಾಗಿರುವದರಿಂದ ಆಂಧ್ರ ರಾಜ್ಯಕ್ಕೆ ಇಪ್ಪತ್ತು ಕೋಟಿ ರೂಪಾಯಿಗಳ ಪರಿಹಾರ ದೊರೆಯಬೇಕೆಂದು ಆಂಧ್ರರು ಕೇಳುತ್ತಿರುವದು ಸೋಜಿಗದ ಸಂಗತಿಯಾಗಿದೆ. ತಮಿಳು ನಾಡಿನವರಿಗೆ ಈ ಪರಿಹಾರದ ವಿಷಯ ಒಪ್ಪಿಗೆಯಾಗಿಲ್ಲ. ಆದಕಾರಣ ವಿಭಜಿತವಾಗುವ ರಾಜ್ಯಕ್ಕೆ ಇದೊಂದು ಅನ್ಯಾಯದ ಬೇಡಿಕೆಯೆಂದು ಅವರ ಅಭಿಪ್ರಾಯ. ಪರಿಹಾರದ ಈ ಬೇಡಿಕೆಯನ್ನು ಒಪ್ಪಿಕೊಂಡ ಪ್ರಮಾಣದಲ್ಲಿ ಆಂಧ್ರಕ್ಕೆ ಭಾಗಗಳನ್ನು ಕೂಡ ಕೊಡುವಂಥ ಕೃಷ್ಣಾ ಮತ್ತು ಗೋದಾವರಿ ಅಣೆಕಟ್ಟುಗಳಿಗಾಗಿ ವೆಚ್ಚ ಮಾಡಿದ ನಲವತ್ತೈದು ಕೋಟಿ ರೂಪಾಯಿಗಳನ್ನು ತಮಗೆ ಕೊಡಬೇಕೆಂದು ತಮಿಳರ ಬೇಡಿಕೆಯಿದೆ. ಟಿ. ಪ್ರಕಾಶಂ ಅವರ ಶಿಷ್ಯರಾದ ಶ್ರೀ ತೆನ್ನೇಟಿ ವಿಶ್ವನಾಥನ್ನರು ಮದ್ರಾಸು ಸರಕಾರವು ಹೊಸದಾಗಿ ರಚಿತವಾಗುವ ಆಂಧ್ರಕ್ಕೆ ಇನ್ನೂ ಹೆಚ್ಚಿನ ಕೊಡುಗೆಗಳನ್ನು ಕೊಡಬೇಕೆಂದು ಬೇಡುತ್ತಿದ್ದಾರೆ. ಮದ್ರಾಸು ನಗರದಲ್ಲಿ ಸರಕಾರಿ ಕಟ್ಟಡಗಳು ಇರುವುದರಿಂದ ಆಂಧ್ರಕ್ಕೆ ಅವುಗಳ ಬದಲು ಒಂದು ಕೋಟಿ ರೂಪಾಯಿ ಕೊಡಬೇಕೆನ್ನುವ ಮಾತನ್ನೊಳಗೊಂಡು ವಿಭಜನಾ ಸಮಿತಿಯು ಪಟ್ಟ ಅಭಿಪ್ರಾಯದಂತೆ ತಾವು ವರ್ತಿಸುವುದಾಗಿ ಶ್ರೀ ವಿಶ್ವನಾಥನ್ನರಿಗೆ ತಮಿಳರು ಉತ್ತರಿಸಿದ್ದಾರೆ. ಇನ್ನುಳಿದ ಮದ್ರಾಸು ರಾಜ್ಯದಲ್ಲಿ ಕರ್ನಾಟಕ ಮತ್ತು ಮಲಬಾರುಗಳಿಂದಲೂ ಆಡಳಿತಕ್ಕೆ ತೊಂದರೆ ಉದ್ಭವಿಸುವಂತೆ ತೋರುತ್ತದೆ. ಈ ವಿಷಯದಲ್ಲಿ ತಮಿಳು ನಾಡು ಕಾಂಗ್ರೆಸು ಸಮಿತಿಯು ಶ್ರೀ ವಾಂಚೂ ಅವರಿಗೆ ಒಪ್ಪಿಸಿದ ಮನವಿಯಲ್ಲಿ ಬಳ್ಳಾರಿ ಜಿಲ್ಲೆಯ ಎಲ್ಲಾ ಪ್ರದೇಶವೂ ಮದ್ರಾಸು ರಾಜ್ಯದಲ್ಲಿ ಸೇರಿಸಲ್ಪಡುವದೆಂಬ ತಿಳುವಳಿಕೆಯಿಂದ ತುಂಗಭದ್ರಾ ನೀರಾವರಿ ಯೋಜನೆಗೆ ತಗಲುವ ವೆಚ್ಚವನ್ನು ಎರಡು ರಾಜ್ಯಗಳೂ (ಆಂಧ್ರ ಮತ್ತು ಮದ್ರಾಸು) ಸಮನಾಗಿ ಹಂಚಬೇಕೆಂದೂ ವಿಭಜನಾ ಸಮಿತಿಯು ಗೊತ್ತುಪಡಿಸಿತ್ತು. ಆದರೆ ಈಗ ಈ ಯೋಜನೆಯಿಂದ ನೀರು ಹೊಂದುವ ಮೂರು ಲಕ್ಷ ಎಕರೆಯಲ್ಲಿ ಆಂಧ್ರದ ಭಾಗಕ್ಕೆ ಒಂದು ಲಕ್ಷ ಮೂವತ್ತು ಸಾವಿರ ಎಕರೆ ಭೂಮಿ ಹೋಗುವುದು. ಈ ಲೆಕ್ಕಕ್ಕನುಸಾರ ಆವರ್ತಕ್ಕೆ ಎರಡೂ ರಾಜ್ಯಗಳ ಪಾಲ್ಗಾರಿಕೆಯಲ್ಲಿ ಉಳಿದರೆ ಈ ವಿಷಯದಲ್ಲಿ ತಿಕ್ಕಾಟ ಉಂಟಾಗುವುದು ಅನಿವಾರ್ಯ. ಮತ್ತು ಹೈಡ್ರೋ ಎಲೆಕ್ಟ್ರಿಕ್ ಯೋಜನೆಯೂ ರಾಯಲ ಸೀಮೆಯಲ್ಲಿ ಹೋಗುವುದು. ಅದರಿಂದ ಕರ್ನಾಟಕ ಪ್ರದೇಶಕ್ಕೇನೂ ಪ್ರಯೋಜನವಾಗದೆ ಅದು ಕೇವಲ ಆಂಧ್ರ ರಾಜ್ಯಕ್ಕೆ ಮಾತ್ರ ಲಾಭದಾಯಕವಾಗುವದು. ಆದರೆ ಇತರ ಯೋಜನೆಗಳು ಇನ್ನೂ ಮುಗಿಯಬೇಕಾಗಿದೆ. ಆ ಬಗ್ಗೆ ಕಾವೇರಿಯ ಪವರ್ ಮತ್ತು ಮುಖ್ಯ ಯಂತ್ರಗಾರರ ಬಗ್ಗೆಯೂ ತಿಕ್ಕಾಟವೆದ್ದಿದೆ.

ನ್ಯಾಯ. ಮೂರ್ತಿ ವಾಂಚೂ ಇವರ ವರದಿಯಲ್ಲಿ ಈ ಹೊಸ ರಾಜ್ಯಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳೂ ಅಂಕೆ ಸಂಖ್ಯೆಗಳೂ ಬಂದಿರುವುದರಿಂದ ಇದೇ ತಿಂಗಳ ೧೦ರೊಳಗೆ ಅವರು ತಮ್ಮ ವರದಿಯನ್ನು ಸಿದ್ಧಪಡಿಸುವರು. ಈ ಹೊಸ ರಾಜ್ಯವು ಎಂದು ಅಸ್ತಿತ್ವದಲ್ಲಿ ಬರುವುದೆಂಬ ಬಗ್ಗೆ ಅವರು ಭವಿಷ್ಯ ನುಡಿಯದಿದ್ದರೂ ಜೂನ್ ತಿಂಗಳೊಳಗಾಗಿ ಆಂಧ್ರರಾಜ್ಯ ನಿರ್ಮಾಣವಾಗಬಹುದೆಂದು ಅವರ ನಿರೀಕ್ಷೆಯಿದೆ. ಶ್ರೀ ರಾಜಗೋಪಾಲಾಚಾರ್ಯರ ಅನುಮಾನವೂ ಹಾಗೇ ಇದೆ.

—ಜೈಹಿಂದ್.

Licence No. 60.
Licenced to Post without Prepayment

Reg. No. M. 1550.
"KODAGU" MERCARA (Coorg)
೧೨—೨—೧೯೫೩

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:— ಸಿಲ್ವರ್ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ಸಧ್ಯಕ್ಕೆ ಈ ಕೆಳಗೆ ಕೊಡಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಕೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟೆಗಳು. ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
4. 9"×4" ಮತ್ತು 8"×4" ಕಬ್ಬಿಣದ ತೊಲೆಗಳು (Girders).
5. 8'×3'×24' (Gage) ಕಬ್ಬಿಣದ ತಗಡುಗಳು.
6. 1¾" × 5/16" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಜಿ. ಬೆಳ್ಯಪ್ಪ, (ಪ್ರೆಸಿಡೆಂಟ್)

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದ ಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಅಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿ ಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಶ್ರೀ ಟಿ. ಎಸ್. ಗೋವಿಂದರಾಜು, 'ಕೊಡಗು' ಏಜೆಂಟರು, ವೀರಾಜಪೇಟೆ.

ಶ್ರೀ ಕೆ. ಯಂ. ಬೋಗಪ್ಪನವರು, "ಕೊಡಗು" ಏಜೆಂಟರು, ಸೋಮವಾರಪೇಟೆ.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖಪಡೆಯಿರಿ!!!

ನಿಮ್ಮ ಸಂತೋಷಕ್ಕಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದೇನಿದೆ? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಡಕಲಾಗಿ ಕ್ಷೀಣಿಸಿ ಮೂಳೆ (ಎಲುಬು) ಚರ್ಮಗ [illegible], [illegible] ಹೋಗಿ ಹೆ ದಿದ್ದರೂ, ಒಲಿ, ಚಟುವಟಿಕೆ, ಧೈರ್ಯ ಇವುಗಳು ಇಲ್ಲದೆ ಹೋದರೂ, ರಕ್ತವು, ಇಂದ್ರಿಯವೂ, ಪೂರ್ತಿಯಾಗಿ ನಿಂತು ಹೋಗಿದ್ದರು, ಮೂಹವ್ಯಾಧಿಗಳೇ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "[illegible]" ಸೇವನೆಯಿಂದ ಸಂಪೂರ್ಣ ಸುಖ ದೊರೆಯುವುದು ಅಲ್ಲದೆ ಆರೋಗ್ಯಭಾಗ್ಯವನ್ನು [illegible] ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು. 4-4

೧ ಪೌಂಡಿಗೆ ರೂ. ೫-೦-೦

ಮಲೆಯಾಳ ಮೆಡಿಕಲ್ ಹಾಲ್, ತಿರುವನಂತಪುರಂ- (TRIVANDRUM)

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ

ನೀವು ಬಲ್ಲಿರಾ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ಸಾಕ್ಷಿ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕಾರ್ಪೊರೇಶನ್ ಬ್ಯಾಂಕಿ"ನ ಪ್ರೀತಿ ಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕಾರ್ಪೊರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 3

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED

ಸೋಮವಾರಪೇಟೆ ನಾಡು ಸಹಕಾರ ಬ್ಯಾಂಕು ಲಿಮಿಟೆಡ್. ಸೋಮವಾರಪೇಟೆ

(ಉ. ಕೊಡಗು) ಸ್ಥಾಪನೆ 1949.

ಅಧಿಕೃತ ಪಾಲು ಬಂಡವಾಳ	ರೂ.	50,000
ವಸೂಲಾದ ಪಾಲು ಬಂಡವಾಳ	ರೂ.	26,000
ಬ್ಯಾಂಕಿನ ವಸೂಲಾದ ಧನ	ರೂ.	3,00,000

ಠೇವಣಾತಿಯ ಬಡ್ಡಿ ದರಗಳು

ಚಾಲ್ತಿ ಠೇವಣಾತಿಗಳಿಗೆ	ಶೇಕಡ ರೂ.	0-8-0
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳಿಗೆ	,,	2-0-0
ನಿರಖು ಠೇವಣಾತಿ 1 ವರ್ಷದ ಅವಧಿಗೆ	,,	2-0-0
2 ,, ,,	,,	2-8-0
3 ,, ,,	,,	3-0-0
4 ,, ,,	,,	3-8-0
5 ,, ,,	,,	4-0-0
3000ಕ್ಕೆ ಮೇಲ್ಪಟ್ಟ ಮೊಬಲಗಿಗೆ 5 ವರ್ಷದ ಅವಧಿಗೆ.		5-0-0

ಡಿ. ನಾರಾಯಣಶೆಟ್ಟಿ, ಪ್ರೆಸಿಡೆಂಟ್.

4-1

ಶ್ರೀ ಪಿ. ರಂಗಯ್ಯನವರು 'ಕೊಡಗು' ಏಜೆಂಟರು, ಪೊನ್ನಂಪೇಟೆ.

ಶ್ರೀ ಕೆ. ಪಿ. ಪೀತಾಂಬರರವರು, "ಕೊಡಗು" ಏಜೆಂಟರು, ಕೊಡ್ಲಿಪೇಟೆ.

Edited Printed and Published by P. I. BELLIAPPA at 'KODAGU' Press, Mercara for Kodagu Ltd.,

ಕೊಡಗು

ಪಾಠಿಯು ನಾಗರಿಕ.

KODAGU KANNADA WEEKLY MERCARA

ವಾರದ ಕಥೆ

ರೈತನೂ ಪಿಶಾಚಿಯೂ

ಅ—ಬಿ ಡಿ ಗಣಾಕಿ.

ಆ ಬಡ ರೈತನು ಬೆಳಿಗ್ಗೆ ಎತ್ತುಗಳನ್ನು ಹೊಡೆದುಕೊಂಡು ನೇಗಿಲನ್ನು ಹೆಗಲಿನಲ್ಲಿಟ್ಟು ಉಳಲಿಕ್ಕೆ ಗದ್ದೆಗೆ ಬಂದನು. ಬೆಳಗಿನ ನಾಷ್ಟಕ್ಕೆಂದು ಎರಡು ರೊಟ್ಟಿಗಳನ್ನೂ ಜೊತೆಯಲ್ಲಿ ತೆಗೆದುಕೊಂಡಿದ್ದನು. ಆತನು ತನ್ನ ಕೋಟನ್ನು ಬಿಚ್ಚಿ ರೊಟ್ಟಿಯ ಗಂಟನ್ನು ಅದರಲ್ಲಿ ಸುತ್ತಿ ಹತ್ತಿರದ ಮರದ ಕೊಂಬೆಯಲ್ಲಿ ಇರಿಸಿ ಉಳಲು ತೊಡಗಿದನು. ಬೆಳಿಗ್ಗೆ ಸುಮಾರು ಒಂಭತ್ತುಗಂಟೆಯಾಗಿತ್ತು. ರೈತನಿಗೆ ಆಯಾಸವಾಗಿತ್ತು. ಎತ್ತುಗಳು ಸೋತಿದ್ದವು. ಅದ್ದರಿಂದ ದನಗಳಿಗೆ ಸ್ವಲ್ಪ ಹುಲ್ಲು ಹಾಕಿ ತಾನು ಕೈ, ಮುಖ ತೊಳೆದುಕೊಂಡು ರೊಟ್ಟಿ ತಿನ್ನಲು ಮರದಡಿಗೆ ಬಂದು ಕೋಟನ್ನು ತೆಗೆದನು. ಆದರೆ ಆಶ್ಚರ್ಯದ ವಿಚಾರ! ಕೋಟಿನೊಳಗೆ ರೊಟ್ಟಿಯ ಗಂಟಿರಲಿಲ್ಲ. ರೈತನಿಗೆ ಆಶ್ಚರ್ಯವಾಯಿತು. ಯಾರೂ ಕೂಡ ಅಲ್ಲಿಗೆ ಬಂದಿರಲಿಲ್ಲ. ಇದ್ದಕ್ಕಿದ್ದಂತೆಯೇ ರೊಟ್ಟಿ ಮಾಯವಾಗಿತ್ತು.

ರೊಟ್ಟಿಯನ್ನು ಅಪಹರಿಸಿದ್ದು ಒಂದು ಚಿಕ್ಕ ದೆವ್ವವಾಗಿತ್ತು. ದೆವ್ವಗಳ ರಾಜನು ಈ ರೈತನನ್ನು ತನ್ನ ಹಿಡಿತದಲ್ಲಿಡಲು ಈ ಚಿಕ್ಕ ಪಿಶಾಚಿಯನ್ನು ಕಳುಹಿಸಿದ್ದನು. ಚಿಕ್ಕ ದೆವ್ವವು ಆತನ ರೊಟ್ಟಿಯನ್ನು ಅಪಹರಿಸಿ ಆತನನ್ನು ಸಿಟ್ಟಿಗೆಬ್ಬಿಸಿ, ದ್ವೇಷಗಳ ಮೂಲಕ ದೆವ್ವಗಳ ಅರಸನ ವಶಪಡಿಸಬೇಕಿತ್ತು. ಆದರೆ ರೈತನು ತನ್ನ ರೊಟ್ಟಿ ಕಾಣದಾದುದರಿಂದ ನಿರಾಶನಾದರೂ ಸಿಟ್ಟುಗೊಳ್ಳಲಿಲ್ಲ. 'ಆ ರೊಟ್ಟಿ ನನಗಿಂತಲೂ ಹಸಿದವನೊಬ್ಬನಿಗೆ ಉಪಯೋಗವಾಗಿರಬಹುದು. ಒಂದು ಹೊತ್ತು ಊಟವಿಲ್ಲದ್ದರಿಂದ ನಾನೇನು ಸತ್ತುಹೋಗುವುದಿಲ್ಲ. ಆ ರೊಟ್ಟಿ ಕಳೆದುಕೊಂಡವನು ಸಾವಿರ ವರ್ಷ ಬದುಕಲಿ' ಎಂದು ಆಶೀರ್ವದಿಸಿ ಹತ್ತಿರದ ತೋಡಿನಿಂದ ಸ್ವಚ್ಛನಾಗಿ ಹರಿಯುತ್ತಿದ್ದ ನೀರನ್ನು ಕುಡಿದು ತನ್ನ ಕೆಲಸವನ್ನು ಪುನಃ ಪ್ರಾರಂಭಿಸಿದನು.

ತನ್ನ ಪ್ರಯತ್ನದಲ್ಲಿ ನಿರಾಶನಾದ ಪಿಶಾಚಿಯು ತನ್ನ ಯಜಮಾನನಲ್ಲಿಗೆ ಬಂದು ಎಲ್ಲ ಕತೆಯನ್ನು ಹೇಳಿತು. "ರೈತನು ತನ್ನ ಬಲೆಗೆ ಬೀಳಲಿಲ್ಲ. ಬದಲು ನನ್ನನ್ನು ಹರಸಿ, ಚಿರಾಯುವಾಗೆಂದು ಆಶೀರ್ವದಿಸಿ ಕಳುಹಿಸಿದನು. ನನ್ನ ಉಪಾಯ ನಿಷ್ಫಲವಾಯಿತು" ಎಂದಿತು.

ಪಿಶಾಚಿಗಳ ಅರಸನು ಸಿಟ್ಟಿನಿಂದ ನುಡಿದನು. 'ಇಂದಿನಿಂದ ನಿನಗೆ ಮೂರು ವರ್ಷಗಳ ಅವಧಿ ಕೊಡುತ್ತಿರುವೆನು. ಈ ಅವಧಿಯೊಳಗೆ ಆ ರೈತನನ್ನು ನನ್ನ ಪ್ರಭಾವ ಕ್ಕೊಳಗಾಗುವಂತೆ ಮಾಡಿ ನನ್ನ ಹಿಡಿತದೊಳಗೆ ತಾರದಿದ್ದರೆ ನಿನ್ನನ್ನು ನಿರ್ನಾಮಗೊಳಿಸುವೆನು.'

ಸೇವಕ ಪಿಶಾಚಿಯು ಹೆದರಿ ನಡುಗಿತು. ತಾನು ಏನು ಮಾಡುವುದೆಂಬುದೇ ಅದಕ್ಕೆ ತೋಚದಾಯಿತು. ಕಡೆಗೆ ಆಲೋಚನೆ ಮಾಡಿ ಒಂದು ಉಪಾಯವನ್ನು ಕಂಡು ಹಿಡಿಯಿತು. ಆ ಪಿಶಾಚಿಯು ಒಬ್ಬ ಸೇವಕನ ವೇಷದಿಂದ ಆ ರೈತನಲ್ಲಿ ಬಂದು ಕೆಲಸಕ್ಕೆ ಸೇರಿತು. ರೈತನಿಗೆ ಆತನ ಪ್ರತಿ ಕೆಲಸಗಳಲ್ಲಿ ನೆರವಾಗತೊಡಗಿತು. ಆ ವರ್ಷ ವ್ಯವಸಾಯ ಮಾಡುವಾಗ ಎಲ್ಲಿ ಶಾಶ್ವತ ನೀರಿರುವದೋ ಅಲ್ಲಿ ಮಾತ್ರ ಭೂವ್ಯವಸಾಯ ಮಾಡಬೇಕೆಂಬ ಸಲಹೆಯನ್ನು ಕೊಟ್ಟಿತು. ರೈತನು ಸೇವಕನ ಸಲಹೆಯಂತೆಯೇ ಮಾಡಿದನು. ಆ ವರ್ಷ ಒಂದು ತೊಟ್ಟು ಮಳೆ ಹೊಡೆಯಲಿಲ್ಲ. ಎಲ್ಲ ರೈತರ ಗದ್ದೆಗಳು ಒಣಗಿ ಬರಗಾಲ ಪ್ರಾಪ್ತಿಯಾಯಿತು. ಆದರೆ ನಮ್ಮ ರೈತನು ನೀರಿರುವಲ್ಲಿ ಮಾತ್ರ ವ್ಯವಸಾಯ ಮಾಡಿದ್ದರಿಂದ ಆತನಿಗೆ ಒಳ್ಳೆ ಬೆಳೆ ದೊರೆಯಿತು. ತನ್ನ ಖರ್ಚಿಗೆ ಮಾತ್ರವಲ್ಲ, ಬಹು ಮಟ್ಟಿಗೆ ಉಳಿತಾಯವೂ ಆಯಿತು.

ಮಾರನೇ ವರ್ಷ ವ್ಯವಸಾಯವನ್ನು ಕೇವಲ ಕರೆ ಭೂಮಿಗಳಲ್ಲೇ ಮಾಡಬೇಕೆಂಬ ಸಲಹೆಯನ್ನು ಸೇವಕನು ಕೊಟ್ಟನು. ಹಾಗೆಯೇ ರೈತನು ಮಾಡಿದನು. ಆ ವರ್ಷ ವಿಪರೀತ ಮಳೆಯ ಕಾರಣ ಹೊಳೆ, ಮಳೆಗಳ ಅನಾಹುತದಿಂದ ಬೆಳೆಯೆಲ್ಲಾ ಕೊಳೆತು ನಾಶವಾಯಿತು. ಆದರೆ ನಮ್ಮ ರೈತನು ಕರೆ ಭೂಮಿಯಲ್ಲೇ ವ್ಯವಸಾಯ ಮಾಡಿದ ಕಾರಣ ಒಳ್ಳೆ ಬೆಳೆ ಬಂತು. ಆತನಲ್ಲಿ ವಿಪುಲ ಧಾನ್ಯ ಉಳಿಯಿತು. ಹೆಚ್ಚಿಗಿರುವ ಬತ್ತವನ್ನು ಮಾರಿಕೊಂಡು ರೈತನು ಧನವಂತನಾದನು. ಇನ್ನೂ ವಿಪುಲ ಧಾನ್ಯ ಆತನಿಗೆ ಉಳಿದಿತ್ತು.

ಸೇವಕ ಪಿಶಾಚಿಯು ಬತ್ತದ ಹೊಸ ಉಪಯೋಗವೊಂದನ್ನು ರೈತನಿಗೆ ತೋರಿಸಿಕೊಟ್ಟಿತು. ಬತ್ತವನ್ನು ನೀರಿನಲ್ಲಿ ಹಾಕಿ ಅದನ್ನು ಕೊಳ್ಳೆ ಹುಳಿಗೊಳಿಸಿ ಅದರಿಂದ ಸಾರಾಯಿ ಇಳಿಸುವ ವಿಧಾನವನ್ನು ತೋರಿಸಿಕೊಟ್ಟಿತು. ರೈತನಿಗೆ ಪರಮಾನಂದವಾಯಿತು. ಪ್ರತಿ ದಿನ ರೈತನು ಸಾರಾಯಿ ಕುಡಿಯ ತೊಡಗಿದನು. ಕುಡುಕರ ಸ್ವಭಾವದಂತೆ ತನ್ನ ಯೋಗ್ಯತೆಗೆ ಸರಿಸಮಾನರಾದವರನ್ನು ಕರೆದು ಪಾರ್ಟಿ ಮಾಡುವ ಸಂಪ್ರದಾಯ ಹೆಚ್ಚಿತು.

ಸೇವಕ ಪಿಶಾಚಿಯು ತನ್ನ ಕೆಲಸವಾಯಿತೆಂದು ರೈತನನ್ನು ಬಿಟ್ಟು ತನ್ನ ಯಜಮಾನನಾದ ದೆವ್ವಗಳ ಅರಸನಲ್ಲಿಗೆ ಹೋಯಿತು. ತಾನು ರೈತನನ್ನು ಪಿಶಾಚಿಯ ಹಿಡಿತಕ್ಕೆ ತರಲು ಪ್ರಥಮ ಪ್ರಯತ್ನದಲ್ಲಿ ವಿಫಲನಾಗಿದ್ದರೂ ಈಗ ಕೃತಕೃತ್ಯನಾಗಿರುವುದಾಗಿ ಹೇಳಿತು. ಖುದ್ದ ದೆವ್ವಗಳ ಅರಸನೇ ಜೊತೆಯಲ್ಲಿ ಬಂದು ರೈತನು ಯಾವ ರೀತಿ ತನ್ನ ವಶವರ್ತಿಯಾಗಿರುವನೆಂಬುದನ್ನು ನೋಡಬೇಕೆಂದು ಪ್ರಾರ್ಥಿಸಿತು.

ದೆವ್ವಗಳ ರಾಜನೂ, ಸೇವಕ ಪಿಶಾಚಿಯೂ ರೈತನ ಮನೆಗೆ ಬಂದು ಮರೆಯಲ್ಲಿ ನಿಂತು ಪರಿಸ್ಥಿತಿಯನ್ನು ಅವಲೋಕಿಸತೊಡಗಿದರು.

ರೈತನು ತನ್ನ ಗೆಳೆಯ ರೈತರನ್ನೆಲ್ಲಾ ಕರೆದು ದೊಡ್ಡ ಪಾರ್ಟಿಯೊಂದನ್ನು ಏರ್ಪಡಿಸಿದ್ದನು. ರೈತನ ಪತ್ನಿಯು ಅತಿಥಿಗಳಿಗೆ ಸಾರಾಯಿ ಸುರಿದು ಕೊಡುತ್ತಿದ್ದಳು. ಆಕೆ ಹಾಗೆ ಪ್ರತಿ ಗ್ಲಾಸುಗಳಿಗೂ ಸಾರಾಯಿ ಹುಯ್ಯುತ್ತಿರುವಾಗ ಕಾಲು ತತ್ತರಿಸಿ ಒಂದು ಗ್ಲಾಸಿನ ಸಾರಾಯಿ ಚೆಲ್ಲಿಹೋಯಿತು.

ರೈತನು ನೋಡಿ ಸಿಟ್ಟಿನಿಂದ ಕಿಡಿಕಿಡಿಯಾದನು. ತನ್ನ ಹೆಂಡತಿಯನ್ನು ಬೈದನು. "ಬಾವಿಯ ನೀರಿನಂತೆ ಈ ಅಮೂಲ್ಯ ವಸ್ತುವನ್ನು ಚೆಲ್ಲುತ್ತಿರುವೆ. ನಿನಗೆ ಕಣ್ಣು ಕಾಣದೇ?"

"ನೋಡಿರಿ. ತನ್ನ ಸರ್ವಸ್ವವಾಗಿದ್ದ ರೊಟ್ಟಿಯನ್ನು ಅಪಹರಿಸಿದಾಗ 'ಪಾಪ, ತೆಗೆದುಕೊಂಡವನು ನೂರು ವರ್ಷ ಬಾಳಲಿ' ಎಂದು ಹರಸಿದ ರೈತನು ಇಂದು ನಾಲ್ಕು ತೊಟ್ಟು ಸಾರಾಯಿ ಚೆಲ್ಲಿದುದಕ್ಕೆ ತನ್ನ ಪ್ರೀತಿಯ ಹೆಂಡತಿಯ ಮೇಲೆಯೇ ರೇಗತೊಡಗಿದ್ದಾನೆ. ನನ್ನ ಪ್ರಭಾವ ಹೇಗಿದೆ ನೋಡಿ" ಎಂದು ಸೇವಕ ಪಿಶಾಚಿಯು ತನ್ನ ಯಜಮಾನನೊಡನೆ ಹೇಳಿತು.

ಹೆಂಡತಿಯನ್ನು ಬೈದು ಹಂಗಿಸಿದ ರೈತನು ಅತಿಥಿಗಳಿಗೆ ತಾನೇ ಸಾರಾಯಿ ಹುಯಿದು ಕೊಡತೊಡಗಿದನು. ಆ ಸಮಯದಲ್ಲಿ ಬಡ ರೈತನೊಬ್ಬನು ಮನೆಗೆ ಬಂದನು. ಆತನು ಪಾರ್ಟಿಗೆ ಆಹ್ವಾನಿತನಾಗಿರಲಿಲ್ಲ. ಇವರ ಊಟ, ಕುಡಿತ ನೋಡಿ ಆತನಿಗೂ ಆಸೆಯಾಗಿತ್ತು. ಬಡತನದಲ್ಲಿ ಬಳಲುತ್ತಿದ್ದ ಆತನಿಗೆ ಇವೆಲ್ಲ ದೊರೆಯಬೇಕು. ಆತನು ಕಾತರ ದೃಷ್ಟಿಯಿಂದ ಇವರನ್ನೇ ನೋಡುತ್ತಿದ್ದನು. ರೈತನು ಆತನ ಮೇಲೆ ರೇಗಿದನು. "ನಿನ್ನನ್ನು ಕರೆಸಿದವರಾರು? ಇಲ್ಲಿಗೆ ಬರುವವರಿಗೆಲ್ಲಾ ಬಡಿಸಿ ಕುಡಿಸಲು ನಾನು ತಯಾರಿಲ್ಲ" ಎಂದು ಕಟುವಾಗಿ ಹೇಳಿದನು.

ಇವರಿಂದ ದೆವ್ವಗಳ ರಾಜನಿಗೆ ಆನಂದವಾಯಿತು. "ಕಥೆ ಮುಗಿದಿಲ್ಲ ನಿಂತು ನಿರೀಕ್ಷಿಸಿರಿ" ಎಂದು ಸೇವಕ ಪಿಶಾಚಿಯು ತನ್ನ ಯಜಮಾನನಿಗೆ ಹೇಳಿತು.

ಶ್ರೀಮಂತರಾದ ರೈತರು ಕುಡಿದರು. ಒಂದೊಂದು ಗ್ಲಾಸು ಮುಗಿದಾಗ ಪ್ರತಿಯೊಬ್ಬನೂ ನಯ, ಭಯದ ಮಾತಿಗಾರಂಭಿಸಿದರು. ದೆವ್ವಗಳ ರಾಜನು ಕೇಳಿದನು "ಇದೇನು ಸಾರಾಯಿಯು ಜನರನ್ನು ಗುಳ್ಳೆನರಿಗಳಂತೆ ಮಾಡುವದೇ? ಒಬ್ಬರಿಗೊಬ್ಬರು ನಯ ಭಯ ತೋರಿ ವಂಚಿಸಲು ಪ್ರೇರೇಪಿಸುವದೇ?"

"ಕೆಲವು ಸಮಯ ತಡೆದು ನಿರೀಕ್ಷಿಸಿರಿ. ಅವರು ಇನ್ನೊಂದು ಗ್ಲಾಸು ಕುಡಿಯಲಿ. ಈಗ ಅವರು ನರಿಗಳಂತಿದ್ದಾರೆ ನಿಜ. ಅವರು ಬಾಲ ಅಲ್ಲಾಡಿಸಿ ಅತ್ತಿತ್ತ ತಿರುಗುತ್ತಿರುವರು. ಆದರೆ ಅವರು ತೋಳಗಳಂತೆ ಹಲ್ಲು ಬಿಡುವ ಸಮಯ ಬರುವುದು" ಎಂದು ಸೇವಕ ಪಿಶಾಚಿ ನುಡಿಯಿತು.

ಎಲ್ಲರೂ ಮತ್ತೊಂದು ಡೋಸ್ ಕುಡಿದರು. ಅವರ ಸ್ವರ ಬಿಗುವಾಗತೊಡಗಿತು. ಒಬ್ಬರನ್ನೊಬ್ಬರು ಮೂದಲಿಸತೊಡಗಿದರು. ಒಬ್ಬರನ್ನೊಬ್ಬರು ಬಯ್ಯತೊಡಗಿದರು.

ಇದನ್ನು ನೋಡಿ ದೆವ್ವಗಳರಸನಿಗೆ ಅತ್ಯಾನಂದವಾಯಿತು.

"ಇನ್ನೂ ಮುಗಿಯಲಿಲ್ಲ. ಸ್ವಲ್ಪ ತಾಳಿ ನೋಡಿ. ಮೂರನೇ ಡೋಸ್ ತೆಗೆದುಕೊಂಡ ನಂತರ ಪರಿಸ್ಥಿತಿ ಏನಾಗುವದೆಂದು ನೋಡಿ" ಎಂದು ಸೇವಕ ಪಿಶಾಚಿಯು ನುಡಿಯಿತು.

ಮೂರನೇ ಡೋಸ್ ಮುಗಿಯಿತು. ಕೆಲವರ ಬಾಯಿಂದ ನೊರೆ ತೊದಲತೊಡಗಿತು. ಕೆಲವರ ಕಣ್ಣು ಮುಚ್ಚತೊಡಗಿತು. ಕೆಲವರು ಸಿಕ್ಕಾಬಟ್ಟೆ ವರ್ತಿಸತೊಡಗಿದರು. ಕೆಲವರು ಬೇಸಿಗೆ, ಮಣ್ಣು ಧೂಳುಗಳನ್ನು ಲೆಕ್ಕಿಸದೆ ಅಲ್ಲಲ್ಲೇ ಮಲಗತೊಡಗಿದರು. ನಮ್ಮ ರೈತನು ಅಂಗಳದ ಚರಂಡಿಯಲ್ಲಿ ಬಿದ್ದು ಏಳಲಾರದೆ ಇದ್ದ ಹೇಸಿಗೆಯಲ್ಲಿ ಹಂದಿಯಂತೆ ಹೊರಳಾಡಿದನು.

ದೆವ್ವಗಳ ಅರಸನಿಗೆ ಅತ್ಯಾನಂದವಾಯಿತು "ನೀನು ಪ್ರಥಮ ತರಗತಿಯ ಪಾನೀಯವನ್ನು ಕಂಡು ಹಿಡಿದೆ. ರೈತನ ರೊಟ್ಟಿಯನ್ನು ಕದ್ದು ಆತನನ್ನು ಜಯಿಸಲಾರದ ನೀನು ಆತನಿಗೆ ಈ ಪಾನೀಯವನ್ನು ಕೊಟ್ಟು ನಮ್ಮ ವಶಪಡಿಸಿದೆ. ಈ ಪಾನೀಯವನ್ನು ಹೇಗೆ ಮಾಡಿದೆ? ಪ್ರಥಮ ನೀನು ಇದಕ್ಕೆ ಗುಳ್ಳೆನರಿಯ ರಕ್ತ ಸೇರಿಸಿರಬೇಕು. ಆದ್ದರಿಂದಲೇ ಪ್ರಥಮ ಒಂದು ಡೋಸ್ ಕುಡಿದವನು ಕುತಂತ್ರದಿಂದ ವರ್ತಿಸುತ್ತಾರೆ. ನಂತರ ತೋಳನ ರಕ್ತ ಮಿಶ್ರ ಮಾಡಿರಬೇಕು. ಆದ್ದರಿಂದಲೇ ಎರಡನೆಯ ಡೋಸ್ ಕುಡಿದ ಮೇಲೆ ಅವರು ಭಯಂಕರರಾಗುತ್ತಾರೆ. ನಂತರ ಹಂದಿಯ ರಕ್ತ ಸೇರಿಸಿರಬೇಕು. ಅದಕ್ಕಾಗಿಯೇ ಮೂರನೇ ಡೋಸಿನ ನಂತರ ಕೊಳಕು ಕೊಚ್ಚೆಯಲ್ಲಿ ಅವರು ಹೊರಳಾಡುತ್ತಾರೆ."

ಸೇವಕ ಪಿಶಾಚಿಯು ಹೇಳಿತು. "ಇಲ್ಲ ಹಾಗೇನೂ ಮಾಡಲಿಲ್ಲ. ನಾನು ರೈತನಿಗೆ ವಿಪುಲ ಧಾನ್ಯ ದೊರೆಯುವಂತೆ ಮಾಡಿದೆ. ತನ್ನ ಬೇಡಿಕೆಗಿಂತಲೂ ಹೆಚ್ಚು ವಸ್ತು ಮನುಷ್ಯನಲ್ಲಿದ್ದರೆ ಆತನೇ ಒಂದಿಲ್ಲೊಂದು ವಿಧಾನ ಕಂಡು ಹಿಡಿದು ಅಪಾಯಕ್ಕೊಳಗಾಗುತ್ತಾನೆ. ಏಕೆಂದರೆ ಮಾನವನಲ್ಲಿ ಯಾವಾಗಲೂ ಪ್ರಾಣಿಗಳ ರಕ್ತ ಇದ್ದೇ ಇದೆ. ಆತನ ಪ್ರಾಣಬುದ್ಧಿ ಆತನು ಬಡವನಾಗಿರುವವರೆಗೆ ಆತನ ಹಿಡಿತದಲ್ಲಿರುತ್ತದೆ. ಅದರಿಂದಲೇ ಬಡವನಾಗಿದ್ದ ಹಸಿದ ರೈತನು ತನ್ನ ರೊಟ್ಟಿಯನ್ನು ಕದ್ದವನನ್ನು ಕೂಡ ದಯೆಯಿಂದ ಕಂಡು ಹರಸಿ ಆಶೀರ್ವದಿಸಿದನು. ಆದರೆ ಆತನಲ್ಲಿ ವಿಪುಲ ಧಾನ್ಯ ಸೇರಿ ಧನವಂತನಾಗಿ, ನಾನಾ ಸುಖಭೋಗಗಳನ್ನು ಅನುಭವಿಸುತ್ತಿದ್ದಾಗ ಆ ಸುಖಭೋಗದಲ್ಲಿ ಮಗ್ನನಾಗಿ ಸರ್ವವನ್ನು ಮರೆತನು. ಹಸಿದು ಮನೆಗೆ ಬಂದವನಿಗೂ ಅನ್ನ ಹಾಕಲು ನಿರಾಕರಿಸಿದನು. ನಾನು ಆತನಿಗೆ ಕುಡಿಯುವ ಒಂದು ಅಭ್ಯಾಸವನ್ನು ಕಲಿಸಿದೆ. ಆತನು ದೇವರ ವರಪ್ರಸಾದವಾದ ಧಾನ್ಯವನ್ನು ತನ್ನ ಸುಖದ ವಸ್ತುವಾದ ಮದ್ಯವನ್ನಾಗಿ ಮಾರ್ಪಡಿಸಿಕೊಂಡಾಗ ಆತನಲ್ಲಿ ಅಡಕವಾಗಿರುವ ಪ್ರಾ

ಅಂತರ್ರಾಷ್ಟ್ರೀಯ ಸ್ಥಿತಿಯ ಬಗ್ಗೆ ಪ್ರಸಾದರ ಕಳವಳ

ಜಂಟಿ ಸಭೆಯಲ್ಲಿ ಅಧ್ಯಕ್ಷರ ಭಾಷಣ.

ತಾ|| ೧೧ರಲ್ಲಿ ಕೇಂದ್ರದ ಜನತಾ ಸಭೆ ಮತ್ತು ಮೇಲ್ಮನೆಗಳ ಸನ್ನಿಕೃಷ್ಟ ಸಭೆಯಲ್ಲಿ ಭಾರತ ಒಕ್ಕೂಟದ ಅಧ್ಯಕ್ಷರಾದ ಡಾ. ರಾಜೇಂದ್ರಪ್ರಸಾದರವರು ಭಾಷಣ ಮಾಡುತ್ತಾ, ಅಂತರಾಷ್ಟ್ರೀಯ ರಂಗದಲ್ಲಿ ಆಗುತ್ತಿರುವ ಘಟನೆಗಳ ಬಗ್ಗೆ, ಗಾಬರಿಯನ್ನು ವ್ಯಕ್ತಪಡಿಸಿದರು. ಯುದ್ಧವನ್ನು ಮುಂದರಿಸುವ ಪ್ರವೃತ್ತಿಯು ಕಡಿಮೆಯಾಗಿ ಜಗತ್ತಿನಲ್ಲಿ ಶಾಂತಿ ಸಂಸ್ಥಾಪಿಸಲ್ಪಡಲೆಂದು ಆಶಿಸಿದರು. ಪ್ರೆಸಿಡೆಂಟರು ದೇಶದ ಸಮಸ್ಯೆಗಳನ್ನೂ, ಅಂತರಾಷ್ಟ್ರೀಯ ವಿಚಾರಗಳನ್ನೂ ಕುರಿತು ಭಾಷಣ ಮಾಡಿ ದಿವಂಗತ ಗೋಪಾಲಸ್ವಾಮಿ ಐಯ್ಯಂಗಾರರ ವಿಚಾರವಾಗಿಯೂ ಒಂದೆರಡು ಮಾತು ಹೇಳಿದರು. ಅಧ್ಯಕ್ಷರು ಪ್ರಥಮ ಹಿಂದಿಯಲ್ಲಿ ಭಾಷಣ ಮಾಡಿ ನಂತರ ಇಂಗ್ಲಿಷಿನಲ್ಲಿ ಮಾತಾಡಿದರು. ಅಧ್ಯಕ್ಷರ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಮುಂದಿರುವ ಜವಾಬ್ದಾರಿ.

ಒಂಭತ್ತು ತಿಂಗಳುಗಳಿಗೆ ಹಿಂದೆ ಪ್ರಜಾರಾಜ್ಯ ಭಾರತದ ಪ್ರಥಮ ಸಭೆಯಾದ ನಿಮ್ಮನ್ನು ಸ್ವಾಗತಿಸಿದ್ದೆನು. ಆ ನಂತರ ನೀವು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಅನೇಕ ಸಮಸ್ಯೆಗಳ ಜವಾಬ್ದಾರಿಯನ್ನು ಹೊರಬೇಕಾಯಿತು. ಇಂದು ಪುನಃ ನಾವಿಲ್ಲಿ ಸೇರುತ್ತಿರುವ ಈ ಸನ್ನಿವೇಶದಲ್ಲಿ ನಾವು ನಮ್ಮ ರಾಷ್ಟ್ರದ ಭವಿಷ್ಯದ ಕುರಿತು ಭರವಸೆ ವಿಶ್ವಾಸಗಳಿಂದ ಕೂಡಿರುವೆವು. ನಮ್ಮ ಜನತೆಯು ತನ್ನ ಕಾರ್ಯಕಲಾಪಗಳಿಂದ ಮುಂದುರಿಯುತ್ತಿರುವರು. ಕೈಗಾರಿಕೆ, ವ್ಯವಸಾಯ, ಪಂಚವಾರ್ಷಿಕ ಯೋಜನೆ, ಮೊದಲಾದ ದಿಶೆಗಳಲ್ಲಿ ಮುಂದಡಿ ಇಡುತ್ತಿರುವರು. ಆ ಮಾರ್ಗಕ್ಕಾಗಿ ಧೃತಿಯಿಂದ ಮುಂದೆಸಾಗಿ ಜನತೆಗೆ ಕೊಟ್ಟಿರುವ ಆಸೆಭರವಸೆಗಳನ್ನು ಈಡೇರಿಸಿಕೊಟ್ಟು ಕೃತಕೃತ್ಯರಾಗುವ ಜವಾಬ್ದಾರಿ ನಮ್ಮದಿದೆ. ಇದು ಸುಲಭದ ಕೆಲಸವಲ್ಲ. ಅನೇಕ ಹಳೆ ಮತ್ತು ಹೊಸ ಸಮಸ್ಯೆಗಳು ನಮ್ಮ ಮುಂದಿವೆ. ಅನೇಕ ವೇಳೆ ನಮ್ಮ ಶಕ್ತಿ ಪರಿಮಿತಿಗಳಿಗೆ ಮಿಗಿಲಾಗಿ ನಮ್ಮ ಬಯಕೆ ಆಶೆಗಳು ತೋರ್ಪಡುತ್ತಾವೆ.

ನಮ್ಮ ಮುಂದಾಳುಗಳ ಮತ್ತು ಕಾರ್ಯಕರ್ತರ ಆವಶ್ಯಕತೆ ಹೆಚ್ಚು ಬೇಕಿರು

ವ ಈ ಸಮಯದಲ್ಲಿ ನಮ್ಮ ಪ್ರಸಿದ್ಧ ರಾಜಕಾರಣಿಯೊಬ್ಬರನ್ನು ನಾವು ಕಳಕೊಂಡೆವು. ಶ್ರೀ. ಎನ್. ಗೋಪಾಲಸ್ವಾಮಿ ಅಯ್ಯಂಗಾರರು ತಮ್ಮ ದೇಶದ ಶಕ್ತಿಗೆ ಮಿಗಿಲಾಗಿ ದೇಶಸೇವೆ ಸಲ್ಲಿಸಿದರು. ಕಷ್ಟದ ಸಮಸ್ಯೆಗಳು ಎದುರು ಬಂದಾಗ ಅವರ ಸಲಹೆ, ಸೂಚನೆಗಳು ಅಮೂಲ್ಯವಿದ್ದವು.

ಶಾಂತಿಯ ಗುರಿ.

ನಮ್ಮ ದೇಶವನ್ನು ಮುನ್ನಡೆಸಿ ಸಂಪತ್ ಸಮೃದ್ಧಿಯ ಭಾರತವಾಗಿ ಕಟ್ಟಿ ಆ ಮೂಲಕ ಮಿಲಿಯಾಂತರ ಜನರ ಬಾಳಿನಲ್ಲಿ ಬೆಳಕನ್ನು ಕೆಡವಲು ದೇಶದೊಳಗೆ ನಮ್ಮ ಪ್ರಯತ್ನವನ್ನು ನಾವು ನಡೆಸುತ್ತಿರುವೆವು. ಆದರೆ ಅದೇ ಸಮಯದಲ್ಲಿ ಪ್ರಪಂಚದ ಆಗು ಹೋಗುಗಳ ವಿಚಾರ ನಮ್ಮ ಮುಂದಿದೆ. ಬಲಾತ್ಕಾರವಾಗಿ ಯಾರೂ ಕೂಡ ಈ ಪ್ರಶ್ನೆಗಳನ್ನು ನಮ್ಮ ಮೇಲೆ ಹೊರಿಸಲಾರರು. ನನ್ನ ಈ ಸರಕಾರಕ್ಕೆ ಹೊರಗಿನ ಸರಕಾರಗಳ ಆಡಳಿತದಲ್ಲಿ ಕೈಹಾಕುವ ಇಚ್ಛೆ ಇಲ್ಲ. ಆದರೆ ಭಾರತವು ಸ್ವತಂತ್ರಗೊಂಡ ನಂತರ ಅದಕ್ಕೆ ಬಂದಿರುವ ಜವಾಬ್ದಾರಿಯನ್ನು ನಿರ್ವಹಿಸಲು ಅದು ಎಂದೂ ಹಿಂದೆ ನಿಲ್ಲದು. ನಾವು ಶಾಂತಿಯ ಮಾರ್ಗವನ್ನು ಹಿಡಿದು ಮುನ್ನಡೆಯಲು ಯತ್ನಿಸಿದ್ದೇವೆ. ನಮ್ಮ ಈ ನೀತಿಯು ಈಗೀಗ ಜಗತ್ತಿಗೆ ಅರ್ಥವಾಗತೊಡಗಿದೆ. ಇಂದು ಹಿಂದೂದೇಶವು ಶಾಂತಿಗಾಗಿ ಪ್ರಯತ್ನಿಸುತ್ತಿರುವ ರಾಷ್ಟ್ರವೆಂಬ ವಿಚಾರ ಎಲ್ಲರಿಗೂ ತಿಳಿದಿದೆ. ಈ ದೃಷ್ಟಿಯಿಂದಲೇ ಕೊರಿಯಾ ಯುದ್ಧ ವಿರಾಮದ ಪ್ರಯತ್ನವನ್ನು ಭಾರತವು ಮಾಡಿತು. ಆದರೆ ಇದಕ್ಕೆ ಸಂಬಂಧಿಸಿದ ಕೆಲವು ದೊಡ್ಡ ರಾಷ್ಟ್ರಗಳು ನಮ್ಮ ಪ್ರಯತ್ನವನ್ನು ಒಪ್ಪಲಿಲ್ಲ. ಕೊರಿಯಾ ಯುದ್ಧ ಇಂದೂ ಮುಂದರಿಯುತ್ತಿದೆ. ಈ ಯುದ್ಧವು ಕೊರಿಯಾ ಜನತೆಯ ಸರ್ವನಾಶ ಮಾಡುತ್ತಿರುವದೇ ಇಲ್ಲ; ಇಡೀ ಜಗತ್ತಿನ ನೆಮ್ಮದಿಗೂ ಗಂಡಾಂತರಕಾರಿಯಾಗಿದೆ.

ಕೊರಿಯಾ ಕ್ಷೇತ್ರ

ಕೊರಿಯಾ ಕ್ಷೇತ್ರದಲ್ಲಿ ಯುದ್ಧ ಮುಂದರಿಯುವ ಮತ್ತು ಜರ್ಮನಿಯಲ್ಲಿ ಈ ವಿಚಾರಕ್ಕೆ ಸಮಾಧಾನ ಸಿಗದೇ ಇರುವ ದೆಸೆಗಳಿಂದ ಜಗತ್ತಿನ ಶಾಂತಿಪ್ರಿಯ ಜನರಿಗೆ ಗಾಬರಿಯಾಗುವಂತಾಗಿದೆ. ನಮ್ಮ ಸರಕಾರವು ಈ ವಿಚಾರಗಳನ್ನು ಹೆಚ್ಚಿನ ಆಸ್ಥೆಯಿಂದ ಪರಿಶೀಲಿಸಿದೆ. ಜಗತ್ತಿಗೇ ಹಾನಿ ಮಾಡುತ್ತಿರುವ ಇಂದಿನ ಯುದ್ಧವನ್ನು ವಿಸ್ತಾರಗೊಳಿಸಿ ಮುಂದರಿಸುವ ನೀತಿಯನ್ನು ಎದುರಿಸಿ ಮುಂದಿರುವ ಸಮಸ್ಯೆಗಳನ್ನು ಶಾಂತರೀತಿಯಿಂದ ತೀರ್ಮಾನಿಸಿಕೊಳ್ಳುವ ಪ್ರಯತ್ನ ನಡೆಯಬೇಕು. ಈ ಗುರಿಗಾಗಿ ನನ್ನ ಸರಕಾರವು ತನ್ನ ಪ್ರಯತ್ನವನ್ನು ಮುಂದರಿಸಿ ಎಲ್ಲಾ ರಾಷ್ಟ್ರಗಳೊಡನೆಯೂ ಸ್ನೇಹ, ಸೌಹಾರ್ದತೆಯನ್ನು ಹೊಂದಿಸಿಕೊಂಡು ಯಾವುದೇ ಯುದ್ಧ ಗುಂಪಿಗೆ ಸೇರದೆ ಶಾಂತಿಯ ಕಾರಣಕ್ಕಾಗಿ ಸತತ ದುಡಿಯುವದು. ಪ್ರಜಾಪ್ರಭುತ್ವ ತತ್ವದ ಮಾರ್ಗವೇ ಇದಾಗಿದೆ. ಪ್ರಜಾಪ್ರಭುತ್ವ ಉಳಿಯಬೇಕಾದರೆ ಶಾಂತಿಯ ವಾತಾವರಣವನ್ನು ಕಲ್ಪಿಸಲೇಬೇಕು.

ಮುಂದಿನ ಕೆಲವು ದಿನಗಳಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸಭೆ ನಡೆಯುವದು. ಜಗತ್ತಿನ ಮುಂದಿರುವ ಮಹಾ ಪ್ರಶ್ನೆಗಳನ್ನು ಆಗ ಚರ್ಚಿಸಲಾಗುವದು. ಜಗತ್ತಿನ ಮಹಾರಾಷ್ಟ್ರಗಳು ಪ್ರತಿನಿಧಿಗಳು ಸಂಯುಕ್ತ ರಾಷ್ಟ್ರ ಸಂಘದ ಉದ್ದೇಶದಲ್ಲಿ ಅಡಕವಾಗಿರುವ ಶಾಂತಿ, ಪ್ರಗತಿಗಳ ಗುರಿಗಾಗಿ ಪ್ರಯತ್ನಿಸುವರೆಂದು ನಾನು ಆಶಿಸುತ್ತೇನೆ.

ಜಾತೀಯ ದಬ್ಬಾಳಿಕೆ

ಆಫ್ರಿಕಾದಲ್ಲಿ ಪರಿಸ್ಥಿತಿ ಇನ್ನೂ ಹದಗೆಟ್ಟಿದೆ. ಜಾತೀಯ ದಬ್ಬಾಳಿಕೆಯ ತತ್ವವು ಅಲ್ಲಿ ಬಹಿರಂಗವಾಗಿ ಸಾರಲ್ಪಟ್ಟು ಕಾರ್ಯರೂಪದಲ್ಲಿ ಆಚರಿಸಲ್ಪಡುತ್ತಿದೆ. ಶಕ್ತಿಸಂಪನ್ನ ಸರಕಾರವೇ ಇದನ್ನು ಜಾರಿಯಲ್ಲಿ ತರಲು ಯತ್ನಿಸುತ್ತಿದೆ. ಸಂಯುಕ್ತ ರಾಷ್ಟ್ರ ಸಂಘವು ಈ ವಿಚಾರದಲ್ಲಿ ಸ್ಪಷ್ಟ ನಿರ್ಣಯವನ್ನು ಮಾಡಿದ್ದರೂ ಕೂಡ ಆ ನಿರ್ಣಯವನ್ನು ನಿರಾಕರಿಸಿ ಮಲನ್ ಸರಕಾರ ವರ್ತಿಸಿದೆ. ಈ ಜಾತೀಯ ಯಾ ವರ್ಣಕಲಹದ ವಿರುದ್ಧ ಪ್ರಾರಂಭವಾಗಿರುವ ಚಳವಳವನ್ನು ಮುರಿಯಲು ಹಲವು ರೀತಿಯ ಯತ್ನಗಳು ನಡೆದಿವೆ. ಪೂರ್ವ ಆಫ್ರಿಕಾದಲ್ಲೂ ಜಾತೀಯ ಕಲಹವಿದೆ. ಈ ಅನ್ಯಾಯಕರವಾದ ವರ್ಣತತ್ವಗಳನ್ನು ಕಡೆಗಣಿಸದಿದ್ದರೆ ಇದರಿಂದ ಗಂಡಾಂತರ ತಪ್ಪಿದಲ್ಲ.

ನೆರೆಯವರ ಸಂಬಂಧ.

ನಮ್ಮ ನೆರೆಯ ದೇಶಗಳೊಡನೆ ನಮ್ಮ ಸಂಬಂಧವು ಸ್ನೇಹಪೂರ್ವಕವಾಗಿ ಇದೆ. ಪೂರ್ವ ಮತ್ತು ಪಶ್ಚಿಮ ಏಷ್ಯಾದ ರಾಷ್ಟ್ರಗಳ ಬಾಂಧವ್ಯ ಚೆನ್ನಾಗಿದೆ. ದಿನ ಕಳೆದಂತೆ ನಮ್ಮೊಳಗೆ ಸಹಕಾರ ಸೌಹಾರ್ದತೆ ಹೆಚ್ಚುತ್ತಿದೆ. ಪಾಕಿಸ್ತಾನದೊಡನೆ ದುರ್ದೈವವಶಾತ್ ಸಂಬಂಧ ಚೆನ್ನಾಗಿಲ್ಲದಿದ್ದರೂ ಇತ್ತೀಚೆಗೆ ಈ ಸಂಬಂಧವು ಸ್ವಲ್ಪ ಉತ್ತಮವಾಗಿದೆ. ಈ ಎರಡು ರಾಜ್ಯಗಳ ಪ್ರತಿನಿಧಿಗಳೊಳಗೆ ಮಾತುಕತೆಗಳು ನಡೆದು ಇದರಿಂದ ಹೆಚ್ಚಿನ ಪರಿಣಾಮ ಆಗಬಹುದೆಂದು ಆಶಿಸುವೆನು. ಪಾಸ್‌ಪೋರ್ಟ್ ಪದ್ಧತಿಯನ್ನು ಜಾರಿಗೆ ತಂದು ಉಂಟಾದ ಗಲಭೆಯು ನಿವಾರಣೆಯಾಗುತ್ತಿದೆ. ಪೂರ್ವಬಂಗಾಳದ ಅಲ್ಪ ಸಂಖ್ಯಾಕರ ವಿಚಾರದ ಸಮಸ್ಯೆಗಳು ಶೀಘ್ರ ಪರಿಹಾರವಾಗುವದೆಂದು ನಂಬುತ್ತೇನೆ.

ಕಾಲುವೆ ನೀರಿನ ವಿಚಾರವನ್ನು ಎರಡು ರಾಷ್ಟ್ರಗಳ ತಜ್ಞರು ಪರಿಶೀಲಿಸುತ್ತಿದ್ದಾರೆ. ಇದಕ್ಕೆ ಅಂತರಾಷ್ಟ್ರೀಯ ಬ್ಯಾಂಕಿನವರು ಸಹಾಯನೀಡುತ್ತಿದ್ದಾರೆ. ಈ ನೀರಿನಲ್ಲಿ ಬಹು ಭಾಗ ನಿಷ್ಪ್ರಯೋಜಕವಾಗಿ ಸಮುದ್ರವನ್ನು ಸೇರುತ್ತದೆ. ಯೋಗ್ಯ ಪರಿಶೀಲನೆಯಿಂದ ಹೆಚ್ಚು ಲಾಭವನ್ನು ಇದರಿಂದ ಪಡೆಯುವದು ಬೇಕಿದೆ. ಹಾಗಾದರೆ ಇದರಿಂದ ಅನೇಕ ಜನರಿಗೆ ಅನುಕೂಲವಾಗುವದಲ್ಲದೆ ಹಲವರಿಗೆ ಅನ್ನಾಹಾರ ಒದಗುವದು. ಇಂಥಾ ವಿಚಾರಗಳನ್ನು ದ್ವೇಷದ ದೃಷ್ಟಿಯಿಂದ ಪರಿಶೀಲಿಸುವದು ಹಾನಿಕರ. ಯೋಗ್ಯ ರೀತಿಯ ಪರಿಶೀಲನೆ ನಡೆಸಿ ಇವುಗಳಿಂದ ಹೆಚ್ಚಿನ ಲಾಭವಾಗುವಂತಾಗಿ ಪಾಕಿಸ್ತಾನ ಮತ್ತು ಹಿಂದೂಸ್ಥಾನ ಎರಡರ ಪ್ರಜೆಗಳಿಗೂ ಹಿತವಾಗುವದೆಂದು ನಂಬಿರುವೆನು.

ಕಾಶ್ಮೀರ ಪ್ರಶ್ನೆ.

ಇಂಡಿಯಾ ಮತ್ತು ಪಾಕಿಸ್ತಾನದೊಳಗಿರುವ ಪ್ರಾಮುಖ್ಯ ಪ್ರಶ್ನೆಯೆಂದರೆ ಕಾಶ್ಮೀರ ಪ್ರಕರಣ. ಈ ಪ್ರಶ್ನೆಯನ್ನು, ನಮ್ಮ ಪ್ರತಿನಿಧಿಗಳು ಪುನಃ ಸಂಯುಕ್ತರಾಷ್ಟ್ರ ಸಂಘದ ಪ್ರತಿನಿಧಿಗಳೊಡನೆ ಚರ್ಚಿಸುತ್ತಿದ್ದಾರೆ. ಇಂಥಾ ಪ್ರಶ್ನೆಗಳನ್ನು ನಿಜವಾಗಿಯೂ ಆಯಾಯ ಭಾಗದ ಜನರ ಹಿತದ ದೃಷ್ಟಿಯಿಂದ ಪರಿಶೀಲಿಸಬೇಕು. ಇಂಡಿಯಾ ಮತ್ತು ಪಾಕಿಸ್ತಾನದೊಳಗಿನ ಪ್ರಶ್ನೆಯು ಯುದ್ಧ ಯಾ ಯುದ್ಧ ಬೆದರಿಕೆಯಿಂದ ಪರಿಹರಿಸಲ್ಪಡುವಂಥಾದ್ದಲ್ಲ. ನನ್ನ ಸರಕಾರವು ಎಂದೂ ಯುದ್ಧ ಪಥವನ್ನು ಅನುಸರಿಸಲಾರದೆಂದೂ ಸ್ವಾಂತ ಮುನ್ನುಗ್ಗುವ ವರೆಗೆ ಯುದ್ಧ ಕೈಕೊಳ್ಳದೆಂದೂ ಸ್ಪಷ್ಟಪಡಿಸಿದೆ. ಯುದ್ಧದ ಭಯ ತೊಲಗಿದರೆ ನಮ್ಮ ಮುಂದಿರುವ ಪ್ರಶ್ನೆಗಳನ್ನು ಬಗೆಹರಿಸುವದು ಪ್ರಯಾಸವಲ್ಲ.

ಜಮ್ಮು ಮತ್ತು ಕಾಶ್ಮೀರ ಸಂಸ್ಥಾನಗಳ ಆಂತರಿಕ ಆಡಳಿತದಲ್ಲಿ ನಾನಾ ರೀತಿಯ ಅಭಿವೃದ್ಧಿ ತೋರಿಬರುತ್ತಿದೆ. ಹಿಂದೂದೇಶದ ಮತ್ತು ಕಾಶ್ಮೀರದೊಳಗಿನ ಸಂಬಂಧದ ಬಗ್ಗೆ ನಮ್ಮ ರಾಜ್ಯಘಟನೆಯಲ್ಲಿ ಸ್ಪಷ್ಟವಾದ ಒಡಂಬಡಿಕೆ ಇದೆ. ಈ ಒಡಂಬಡಿಕೆಯ ಕೆಲವು ಅಂಶಗಳು ಜಾರಿಯಲ್ಲಿ ಬಂದಿವೆ. ದುರದೃಷ್ಟವಶಾತ್ ಜಮ್ಮು ಪ್ರಾಂತದಲ್ಲಿ ನಡೆಯುತ್ತಿರುವ ಚಳವಳದ ಗುರಿ ಹಿಂದೂದೇಶದೊಡನೆ ಹೆಚ್ಚಿನ ಐಕ್ಯತೆ ಬೇಕೆಂದಿರುವದಾದರೂ ಪರಿಣಾ

ತೋಳ, ಹಂದಿಗಳ ಸ್ವಭಾವವು ಹೊರತೋರಿತು. ಆತನು ಈ ಹುಡುಗತನವನ್ನು ಮುಂದರಿಸುವವನಾದರೆ ಆತನು ಪ್ರಾಣಿಯಾಗಿಯೇ ಉಳಿಯುವನಲ್ಲದೆ ನಿಮ್ಮ ಹಿಡಿತದಿಂದ ಎಂದೂ ಬಿಡುಗಡೆ ಹೊಂದಲಾರನು."

ಸೇವಕ ಪಿಶಾಚಿಯು ಮಾತುಗಳನ್ನು ಕೇಳಿ ಪಿಶಾಚಿ ರಾಜನಿಗೆ ಅತ್ಯಾನಂದವಾಯಿತು. ಆತನಿಗ ದೊಡ್ಡ ಉದ್ಯೋಗವನ್ನು ಕೊಟ್ಟು ಸನ್ಮಾನಿಸಿದನು.

(ಟಾಲ್‌ಸ್ಟಾಯ್ ರವರ ಕಥೆಯಿಂದ)

ಮು ವಿಪರೀತವಾಗಬಹುದು. ಆದ್ದರಿಂದ ಈ ಚಳವಳವನ್ನು ನಿಲ್ಲಿಸಿದರೆ ಒಳಿತಾಗಬಹುದು.

ಭಾಷಾವಾರು ಪ್ರಾಂತ.

ಈ ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆಯು ದೇಶದ ವಿವಿಧ ಭಾಗದ ಜನರನ್ನು ಅಶಾಂತರನ್ನಾಗಿ ಮಾಡಿದೆ. ಒಂದು ರಾಜ್ಯದ ನಿರ್ಮಾಣಕ್ಕೆ ಭಾಷೆ ಮತ್ತು ಸಂಸ್ಕೃತಿಗಳು ಪ್ರಾಮುಖ್ಯ ವಿಚಾರಗಳಾದರೂ ಈ ಭಾಗಗಳು ಹಿಂದೀ ಒಕ್ಕೂಟದೊಳಗಿನ ಆಡಳಿತ ಘಟಕಗಳಾಗಿರುವುದರಿಂದ ಬೇರೆ ವಿಚಾರಗಳ ಪರಿಶೀಲನೆಯೂ ಅಗತ್ಯವೆಂಬುದನ್ನು ಮನಸ್ಸಿನಲ್ಲಿಡಬೇಕು. ಎಲ್ಲದಕ್ಕೂ ಮಿಗಿಲಾಗಿ ಭಾರತದ ಐಕ್ಯತೆ, ರಾಷ್ಟ್ರೀಯ ಭದ್ರತೆಗಳನ್ನು ಲಕ್ಷಿಸಬೇಕು. ಆರ್ಥಿಕ ಮತ್ತು ಆಡಳಿತ ವ್ಯವಸ್ಥೆ, ಆರ್ಥಿಕ ಪ್ರಗತಿಯ ಸಾಧ್ಯತೆ ಮೊದಲಾದುವನ್ನು ಗಮನಿಸಬೇಕಾದುದು ಪ್ರಾಮುಖ್ಯ. ಈ ಎಲ್ಲಾ ವಿಚಾರಗಳನ್ನು ಮನಸ್ಸಿನಲ್ಲಿರಿಸಿ ದೇಶದ ವಿಭಾಗೀಕರಣ ಮಾಡಿ ಅದರಿಂದ ಜನತೆಯ ಸಾಂಸ್ಕೃತಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಯತ್ನಿಸಬೇಕಾಗಿದೆ. ಪ್ರತ್ಯೇಕ ಆಂಧ್ರ ಪ್ರಾಂತದ ರಚನೆಗೆ ನಮ್ಮ ಸರಕಾರವು ಉದ್ಯುಕ್ತವಾಗಿದೆಯೆಂಬುದನ್ನು ತಿಳಿದು ಸಂತೋಷವಾಯಿತು. ಈ ಹೊಸ ಸಂಸ್ಥಾನದ ಅಸ್ತಿತ್ವಕ್ಕೆ ಬಹು ಸಮಯ ಹಿಡಿಯಲಾರದು. ಈ ಪ್ರಾಂತದ ರಚನೆಗೆ ಸಂಬಂಧಿಸಿದವರೆಲ್ಲರ ಸಹಾಯ ನೆರವು ಅಗತ್ಯವಾಗಿದೆ.

ಕೇಂದ್ರ ಪ್ಲಾನಿಂಗ್ ಸಮಿತಿಯು ಪಂಚವಾರ್ಷಿಕ ಯೋಜನೆಯನ್ನು ತಯಾರಿಸಿ ತನ್ನ ಕಾರ್ಯದ ಪ್ರಥಮ ಹೆಜ್ಜೆಯನ್ನು ಮುಗಿಸಿದೆ. ಅತೀ ಪ್ರಾಮುಖ್ಯ ಮತ್ತು ಕಠಿಣ ಹೆಜ್ಜೆಯಾದ ಅದನ್ನು ಜಾರಿಗೆ ತರುವ ಭಾಗವು ನಮ್ಮ ಮುಂದಿದೆ. ಈ ಯೋಜನೆಯಂತೆ ದೇಶದಲ್ಲಿ ೫೫ ಸಾಮೂಹಿಕ ವಿಕಾಸ ಯೋಜನಾ ಕೇಂದ್ರಗಳು ಕೆಲಸ ಮಾಡುತ್ತಿರುವುದು ಸಂತೋಷಕರವಾಗಿದೆ. ಕೆಲವೇ ತಿಂಗಳುಗಳಲ್ಲಿ ನೂರಾರು ಮೈಲು ರಸ್ತೆಗಳಾಗಿವೆ. ಕೆರೆ, ಕಾಲುವೆಗಳು ರೂಪುಗೊಳ್ಳುತ್ತಿವೆ. ಜನತೆಯು ಪೂರ್ಣ ಸಹಕಾರದಿಂದ ಕಾರ್ಯಪ್ರವೃತ್ತವಾಗಿದೆ. ಇದು ಭವ್ಯ ಭವಿಷ್ಯದ ಶುಭ ಚಿಹ್ನೆ. ಏಕೆಂದರೆ ತಮ್ಮ ಭವಿಷ್ಯವನ್ನು ನಿರ್ಮಿಸಿಕೊಳ್ಳುವ ಶಕ್ತಿ ಮತ್ತು ಸಾಧ್ಯತೆ ಜನತೆಯನ್ನೇ ಕೂಡಿದೆ.

Coorg Forest Department.

TIMBER SALE.

About 1,50,000 cft of Teak, Rosewood, Honne. Nandi (Venteak) etc will be sold by auction at the Coorg Timber Depot, Husur, on Thursday the 5th March 1953 at 10. 30 A M.

For conditions of the sale etc. apply to the Conservator of Forests, Coorg, Mercara.

॥ ಮಧುಪರ್ಕ ॥

ಗಾಂಧೀಜಿಯವರ ದರ್ಶನಕ್ಕೆ ಬಂದವರಲ್ಲಿ ಹದಿನೇಳು ವರ್ಷದ ಚೆಲುವೆಯೊಬ್ಬಳು ನಿಂತಿದ್ದಳು. ಗಾಂಧೀಜಿ ಕೇಳಿದರು "ನೀನಾರು ?"

"ಒಬ್ಬ ಚಿಕ್ಕ ಹುಡುಗಿ" ಆಕೆಯ ಉತ್ತರ.

"ಚಿಕ್ಕ ಹುಡುಗಿಗೆ ಇಷ್ಟೆಲ್ಲ ಒಡವೆ ಏಕೆ ?" ಆಕೆಯ ಮೈಮೇಲಿನ ನಗಗಳನ್ನು ನೋಡಿ ಕೇಳಿದರು ಗಾಂಧೀಜಿ.

ಮೀನಾಕ್ಷಿ ಹೇಳಿದಳು—ನಾನು ಯಾವಾಗಲೂ ಚಿಕ್ಕ ಹುಡುಗಿಯಾಗಿಯೇ ಇರಬೇಕು. ಅದಕ್ಕೆ.

"ಹಾಗಿದ್ದರೆ ನೀನು ಒಡವೆ ತೊಡಲೇ ಬಾರದು. ಎಷ್ಟು ಜನ ನಿನಗಿಂಥಾ ಚಿಕ್ಕವರು ತಮ್ಮ ಒಡವೆಗಳನ್ನು ದಾನ ಮಾಡಲಿಲ್ಲ. ನೀನು ಹೀಗೆ ಒಡವೆ ತುಂಬಿಕೊಂಡರೆ ಏನು ಬಂತು?"

ಮೀನಾಕ್ಷಿಯ ಕಣ್ಣುಗಳು ಥಳಥಳಿಸಿದವು—"ನಾನೂ ನಿಮಗೆ ಒಡವೆ ಕೊಡುತ್ತೇನೆ" ಎಂದಳು.

"ನಿನ್ನ ತಂದೆ ತಾಯಿಯನ್ನು ಕೇಳು"

"ಅವರನ್ನು ಒಪ್ಪಿಸುವ ಭಾರ ನನ್ನದು" ಎಂದಳಾಕೆ.

"ದೇಶದ ಹುಡುಗಿಯರೆಲ್ಲ ಒಡವೆ ಬಿಟ್ಟು ಬಿಡಲಿ ಎಂದು ಹೇಳುತ್ತೇನೆ ನಾನು. ಈ ತ್ಯಾಗ ಹುಡುಗಿಯರಿಗೆ ಬಲು ಕಷ್ಟ, ನನಗೆ ಗೊತ್ತಿದೆ. ಅವರ ಲೋಕದಲ್ಲಿ ನಾನಾ ತರದ ಅಲಂಕಾರಗಳಿವೆ. ನನ್ನ ಮಟ್ಟಿಗೆ ಗುಣವಿದ್ದರೆ ಮಾತ್ರ ಅಲಂಕಾರ" ಗಾಂಧೀಜಿ ಹೇಳಿದರು.

"ನೀವು ಹೇಳಿದಂತೆಯೇ ಮಾಡುವೆನು" ಮೀನಾಕ್ಷಿ ಹೇಳಿದಳು.

"ಆದರೂ ಈ ರಾತ್ರಿ ಆಲೋಚನೆ ಮಾಡಿ ನೋಡು" ಗಾಂಧೀಜಿ ಹೇಳಿದರು.

ಮರುದಿನ ಬಂದಾಗ ಮೀನಾಕ್ಷಿಯ ಗುರುತೇ ಸಿಗುತ್ತಿರಲಿಲ್ಲ. ಆಕೆಯ ಮೈಮೇಲಿನ ಒಡವೆಗಳೆಲ್ಲ ಮಾಯವಾಗಿದ್ದವು. ಮಹದೇವ ದೇಸಾಯಿಗಳು ಕೇಳಿದರು. "ನಿನ್ನ ಒಡವೆಗಳೆಲ್ಲಿ ?"

"ಎಲ್ಲಾ ಕೊಟ್ಟುಬಿಟ್ಟೆ"

"ಗಾಂಧೀಜಿಗೆ ಕೊಟ್ಟೆಯಾ ?"

"ಅದು ಸಾಧ್ಯವಿರಲಿಲ್ಲ ನಮ್ಮ ತಂದೆಗೆ ತುಂಬಾ ಸಾಲ. ಆದ್ದರಿಂದ ಬೇರೆಯವರಿಗೆ ಕೊಡಲು ಸಾಧ್ಯವಿಲ್ಲ. ಆದರೆ ಮತ್ತೆಂದೂ ಒಡವೆ ತೊಡೆನೆಂದು ಸಂಕಲ್ಪ ಮಾಡಿದ್ದೇನೆ"

"ಇದಕ್ಕೆ ನಿನ್ನ ತಂದೆ ತಾಯಿ ಏನು ಹೇಳುತ್ತಾರೆ?"

"ತಂದೆಗೇನೋ ಸಮಾಧಾನವಿದೆ. ಆದರೆ ತಾಯಿಗೆ ಸಮಾಧಾನವಿಲ್ಲ"

ಮಧ್ಯಾಹ್ನ ಆ ಕುಟುಂಬವೆಲ್ಲಾ ಗಾಂಧೀಜಿಯ ಬಳಿಗೆ ಬಂದರು. ಮೀನಾಕ್ಷಿ ಗಾಂಧೀಜಿಗೆ ಒಂದು ಬಂಗಾರದ ಬಳೆ, ಸರಗಳನ್ನು ಕೊಟ್ಟಳು. ಗಾಂಧೀಜಿಗೆ ಆಕೆಯ ತಂದೆಯ ಸಾಲದ ಸುದ್ದಿ ಗೊತ್ತಿತ್ತು. "ನೀವು ಈ ಒಡವೆ ಕೊಡಬೇಡಿ. ಮೀನಾಕ್ಷಿ ಬಿಟ್ಟ ಒಡವೆಗಳಿಂದ ಸಾಲ ತೀರಿಸಿರಿ. ತಿರುಗಿ ಅವಳೆಂದಿಗೂ ಒಡವೆ ಕೇಳುವದಿಲ್ಲ" ಗಾಂಧೀಜಿ ಹೇಳಿದರು.

ಮೀನಾಕ್ಷಿಯ ಕೆನ್ನೆಯ ಮೇಲೆ ಮುತ್ತಿನ ಹನಿಗಳಂತೆ ಆನಂದದ ಬಾಷ್ಪ ಹರಿಯುತ್ತಿತ್ತು. ಕಂಠ ಬಿಗಿದು ಬಂದಿತ್ತು. ಜೀವನನೂತನ ವ್ರತವನ್ನೇ ಆಕೆ ತೊಟ್ಟಿದ್ದಳು.

"ನಿಮ್ಮ ಮಗಳು ಕೊಟ್ಟ ವ್ರತ ಮಹಾ ವ್ರತ ತಾಯಿ. ನೀವು ಅವಳನ್ನು ಹರಸಬಾರದೇ ?" ಗಾಂಧೀಜಿ ಮೀನಾಕ್ಷಿಯ ತಾಯಿಗೆ ಹೇಳಿದರು.

"ಮದುವೆಯೊಂದಿದೆಯಲ್ಲ. ಒಡವೆ ಇಲ್ಲದ ಹುಡುಗಿಯನ್ನು ಯಾರು ಮದುವೆಯಾಗುತ್ತಾರೆ ?"

ಸಮಾಧಾನ ಮಾಡುತ್ತಾ ಗಾಂಧೀಜಿ ಹೇಳಿದರು —"ಮದುವೆಯ ಚಿಂತೆ ನಿಮಗೇಕೆ ತಾಯಿ. ಒಂದಲ್ಲ; ಐವತ್ತು ವರರನ್ನು ನಾನು ತರುತ್ತೇನೆ ನಿಮಗೆ ಬೇಕಾದವರನ್ನು ಆರಿಸಬಹುದು".

ತಾಯಿ ಮೀನಾಕ್ಷಿಯನ್ನು ಹರಸಿದಳು. ಎಂಥಾ ಮನಕರಗುವ ನೋಟ. ಎಂಥಾ ದೃಢ ಸಂಕಲ್ಪ. ಅದಲ್ಲವೇ ಬಾಳಸವಿ. ಬದುಕಿನ ಭಾಗ್ಯ?

ಲೂಧಿಯಾನಾದಲ್ಲಿ ಭಾರತ ಸರಕಾರವು ಸೈಕಲ್ಲುಗಳ ಬಿಡಿ ಭಾಗಗಳನ್ನು ಸಿದ್ಧಮಾಡುವ ಕಾರಖಾನೆಯನ್ನು ಸ್ಥಾಪಿಸುವುದಿದ್ದು ಅದಕ್ಕಾಗಿ ೩೦ ಲಕ್ಷ ರೂಪಾಯಿ ಹಣದ ಸಹಾಯ ಮಾಡಿದೆ. ಅದು ಈ ವರ್ಷದ ಮಧ್ಯದಿಂದ ತನ್ನ ಕಾರ್ಯ ಪ್ರಾರಂಭಿಸುವುದೆಂದು ಹೇಳಿದ್ದಾರೆ.

ಆಹಾರದ ಕೊರತೆಯನ್ನು ನಿವಾರಿಸುವುದಕ್ಕಾಗಿ ಭಾರತ ಸರಕಾರವು ಕೃತಕ ಆಹಾರವನ್ನು ಸಿದ್ಧಮಾಡಲು ತಜ್ಞರಿಗೆ ಅವಕಾಶವಿತ್ತಿರುತ್ತದೆ. ಆ ತಜ್ಞರು ಈಗಾಗಲೇ ಹಾಲು ಮೊಸರು ಕೃತಕವಾಗಿ ಸಿದ್ಧಮಾಡುವ ರೀತಿಯನ್ನು ಕಂಡು ಹಿಡಿದಿದ್ದಾರಂತೆ.

ವಾರ್ತೆಗಳು

ಉತ್ತರ ಪ್ರದೇಶದ ಗವರ್ನರರಾದ ಶ್ರೀ. ಕೆ. ಎಮ್. ಮುನಶಿಯವರು ಕಾಶಿಯಲ್ಲಿ ಮಹಾಭಾರತವನ್ನು ಬರೆದ ಶ್ರೀ ವೇದವ್ಯಾಸರ ಸ್ಮಾರಕ ಅಡಿಗಲ್ಲನ್ನು ಇಡುವ ಸಮಾರಂಭವನ್ನು ಜರುಗಿಸಿದರು.

ಜೂನಿಯರ್ ರೆಡ್‌ಕ್ರಾಸ್ ಯೂನಿಯನ್ನಿನ ನೇತೃತ್ವದಲ್ಲಿ ಕೆಲಸ ಮಾಡುವ ಒಂದು 'ಮಕ್ಕಳ ಬ್ಯಾಂಕು' ಅಂಬಾಲದಲ್ಲಿ ಸ್ಥಾಪಿಸಲ್ಪಟ್ಟಿದೆ. ಚಿಕ್ಕ ಮಕ್ಕಳಲ್ಲಿ ಮಿತವ್ಯಯವನ್ನು ಕಲಿಸುವುದೇ ಅವರ ಉದ್ದೇಶವಾಗಿದೆ.

ಸಚಿತ್ರ ರೇಡಿಯೋ (ಟೆಲಿವಿಜನ್) ಪ್ರಯೋಗ ಮಂದಿರವನ್ನು ಡಿಲ್ಲಿಯಲ್ಲಿ ಪ್ರಾರಂಭಿಸಬೇಕೆಂದು ಭಾರತ ಕೇಂದ್ರ ಸರಕಾರವು ಆಲೋಚಿಸುತ್ತಿದೆ.

ಹೊಸ ಡಿಲ್ಲಿಯಲ್ಲಿ ಇರುವ ಸಂಸತ್ ಸಭೆ (ಪಾರ್ಲಿಮೆಂಟ್) ಯ ಕಟ್ಟಡದ ಧ್ವಜಸ್ತಂಭದ ಅಡಿಯಲ್ಲಿ ಒಂದು ಚಕ್ರವನ್ನು ಕೂಡಿಸಿದ್ದು, ಅಧಿವೇಶನ ನಡೆಯುವ ಕಾಲಕ್ಕೆ ಆ ಚಕ್ರವು ತಿರುಗುತ್ತಿರುವಂತೆ ಮಾಡುವ ವ್ಯವಸ್ಥೆ ಮಾಡಿದ್ದಾರೆ.

ಪಶ್ಚಿಮ ಬಂಗಾಲ ವಿಧಾನ ಸಭೆಯ ಕಟ್ಟಡದಲ್ಲಿ ಕಳೆದ ೩೦ ವರ್ಷಗಳಿಂದ ತೂಗ ಹಾಕಲ್ಪಟ್ಟಿದ್ದ ಇಂಗ್ಲೆಂಡದ ೫ನೇ ಜಾರ್ಜ ಮತ್ತು ೭ನೇ ಎಡ್ವರ್ಡರ ಚಿತ್ರಗಳನ್ನು ಅಲ್ಲಿಂದ ತೆಗೆದರು. ಇವುಗಳನ್ನು ಪ್ರತಿಯೊಂದಕ್ಕೆ ೧೦ ಸಾವಿರ ರೂ. ಕೊಟ್ಟು ಲಂಡನ್ನಿನಿಂದ ತಂದಿದ್ದರಂತೆ.

ವೈಜ್ಞಾನಿಕ ವಿಷಯಗಳನ್ನು ತಿಳಿದುಕೊಳ್ಳಲು ಏಷ್ಯನ್ನರು ತುಂಬಾ ಕುತೂಹಲಿಗಳಾಗಿರುವರು ಎನ್ನುವುದಕ್ಕೆ ನಿದರ್ಶನ, ಇತ್ತೀಚೆಗೆ ಟೆಲಿಸ್ಕೋಪಿನಲ್ಲಿ ಚಂದ್ರನನ್ನು ನೋಡಲು ಬ್ಯಾಂಕಾಕ್‌ನಲ್ಲಿ ಜನರು ಇಡೀ ರಾತ್ರಿಯ ವರೆಗೂ ಸಾಲಾಗಿ ನಿಂತುಕೊಂಡು ವೀಕ್ಷಿಸಿದರು.

ಅಮೇರಿಕದ ಮಿಚಿಗನ್ ಸ್ಟೇಟ್ ಕಾಲೇಜ್ ಪ್ರೆಸ್‌ನವರು ಭಾರತೀಯ ಲೇಖಕರಾದ ಶ್ರೀ ಆರ್. ಕೆ. ನಾರಾಯಣ್‌ರವರ ಪುಸ್ತಕಗಳನ್ನು ಪ್ರಕಟಿಸಲಿದ್ದಾರೆ. ಈ ಸ್ಟೇಟ್ ಕಾಲೇಜು ಪ್ರೆಸ್ಸಿನವರು ವಿದೇಶಿ ಗ್ರಂಥಕರ್ತರ ಕಾದಂಬರಿಯನ್ನು ಪ್ರಕಟಿಸುವುದು ಇದೇ ಮೊದಲು.

ಅಮೇರಿಕದ ಸುಪ್ರಿಂ ಕೋರ್ಟಿನ ನ್ಯಾಯಾಧೀಶರಾದ ಮಿ॥ ವಿಲಿಯಂ ಡೌಗ್ಲಾಸ್‌ರವರು ಸಿಡ್ನಿ ಹಿಲ್‌ಮನ್ ಬಹುಮಾನವಾದ ೧೦೦೦೦ ಡಾಲರುಗಳನ್ನು ಭಾರತದಲ್ಲಿ ಶ್ರಮಜೀವಿಗಳ ಅಭಿವೃದ್ಧಿಗಾಗಿ ಕಳುಹಿಸಿದ್ದಾರೆ. ಅತ್ಯುತ್ತಮವಾದ ಸಾರ್ವಜನಿಕ ಸೇವೆಗಾಗಿ ಪ್ರತಿ ವರ್ಷವೂ ಈ ಬಹುಮಾನವನ್ನು ಕೈಗಾರಿಕಾ ಸಂಸ್ಥೆಗಳ ಕಾಂಗ್ರೆಸು (ಸಿ ಐ ಓ) ಕೊಡುತ್ತದೆ. ಡೌಗ್ಲಾಸ್‌ರವರು ಈ ಹಣವನ್ನು ಭಾರತದ ಪ್ರಧಾನಿ ನೆಹರುರವರಿಗೆ ಕಳುಹಿಸಿಕೊಟ್ಟಿದ್ದಾರೆ.

ಪ್ಲಾನಿಂಗ್ ಕಮಿಶನ್ನಿನವರು ಭಾರತದ ಎಲ್ಲಾ ವಿದ್ಯಾಸಂಸ್ಥೆಗಳಿಗೆ ಒಂದು ಶಿಫಾರಸು ಕಳುಹಿಸಿ ಎಲ್ಲಾ ಪರೀಕ್ಷೆಗಳಿಗೂ ವಿದ್ಯಾರ್ಥಿಗಳು ಪ್ರೈವೇಟ್ ಆಗಿ ಕೂಡಲು ಅವಕಾಶ ಕೊಡಬೇಕೆಂದು ಸೂಚಿಸಿದ್ದಾರೆ.

ಬಿ. ಸಿ. ಜಿ. ವೇಕ್ಸಿನೇಶನ್ ಚಳವಳ.

ಕೊಡಗಿನಲ್ಲಿ ದಿನ ಕಳೆದಂತೆ ಕ್ಷಯ ರೋಗವು ಹೆಚ್ಚುತ್ತಿರುವದು ಕಂಡು ಬರುತ್ತಿರುವದರಿಂದ ಕೊಡಗಿನಲ್ಲಿ ಅದನ್ನು ತಡೆಗಟ್ಟುವ ಬಗ್ಗೆ ಬಿ. ಸಿ. ಜಿ. ದಾಕು ಹಾಕುವ ಕಾರ್ಯಕ್ರಮವನ್ನು ಕೊಡಗು ಸರಕಾರವು ಕೈಕೊಳ್ಳಲಿದೆ. ಈ ಕಾರ್ಯಕ್ರಮವು ಹಿಂದೂದೇಶದ ಇತರ ಕಡೆಗಳಲ್ಲಿ ಈಗಾಗಲೇ ನಡೆಯುತ್ತಿದ್ದು ಈ ವರೆಗೆ ಸುಮಾರು ೩,೮೭,೩೯,೧೧೨ ಜನರನ್ನು ಪರೀಕ್ಷಿಸಿ ದಾಕು ಹಾಕಲಾಗಿದೆ. ಈ ಮಹಾಕಾರ್ಯದ ಬಗ್ಗೆ ಹೆಚ್ಚು ಪ್ರಚಾರ ಮಾಡಲು ಮತ್ತು ಜನರಲ್ಲಿರಬಹುದಾದ ಸಂದೇಹವನ್ನು ನೀಗಿಸಲು ಈ ವರ್ಷ ಫೆಬ್ರವರಿ ೨೨ ನೇ ತಾರೀಖನ್ನು ಅಖಿಲ ಭಾರತ ಬಿ. ಸಿ. ಜಿ. ದಿನವೆಂದು ಆಚರಿಸಲಾಗುವದು. ಅದೇ ರೀತಿ ಕೊಡಗಿನಲ್ಲಿಯೂ ಕೂಡ ಆ ದಿನಾಚರಣೆ ನಡೆಯುವದು. ಹಿಂದೂದೇಶದಲ್ಲಿ ಕಳೆದ ನಾಲ್ಕುವರೆ ವರ್ಷಗಳಿಂದ ಈ ಚಳವಳವು ಜಯಪ್ರದವಾಗಿ ನಡೆದಿದ್ದರೂ ಈ ಬಗ್ಗೆ ಇನ್ನೂ ಹೆಚ್ಚಿನ ಪ್ರಚಾರ ಮತ್ತು ವಿಸ್ತೃತ ಕಾರ್ಯಗಳ ಆವಶ್ಯಕತೆ ಇದೆ. ಏಕೆಂದರೆ ಕ್ಷಯರೋಗವು ರೋಗಗಳಲ್ಲೆಲ್ಲಾ ಭಯಾನಕವಾದುದಾಗಿದೆ. ಇದನ್ನು ತಡೆಗಟ್ಟಲು ವಿಶ್ವಳ ಪ್ರಯತ್ನ ಬೇಕು.

ಬಿ. ಸಿ. ಜಿ. ಕಥೆ.

೧೮೮೨ರಲ್ಲಿ ಪ್ರೊ. ರಾಬರ್ಟ ಕೋಚ್‌ರವರು ಕ್ಷಯ ರೋಗಕ್ಕೆ ಕಾರಣವಾದ ಟ್ಯೂಬರ್ಕಲ್ ಬೆಸಿಲಸನ್ನು ಕಂಡು ಹಿಡಿದಂದಿನಿಂದ ಈ ರೋಗದಿಂದ ರಕ್ಷಣೆಗಾಗಿ ಯೋಗ್ಯ ಔಷಧಿಯನ್ನು ಕಂಡು ಹಿಡಿಯುವ ಪ್ರಯತ್ನವನ್ನು ವಿಜ್ಞಾನಿಗಳು ನಡೆಸುತ್ತಿದ್ದರು. ೧೯೦೮ರಲ್ಲಿ ಫ್ರಾನ್ಸಿನ ಎರಡು ವಿಜ್ಞಾನಿಗಳಾದ ಡಾ. ಆಲ್‌ಬರ್ಟ್‌ಕಾಲ್‌ಮೆಟ್ ಮತ್ತು ಡಾ. ಅಲ್ಫೋನ್ಸ್ ಗ್ವಾರಿನ್ ಇವರುಗಳು ಒಂದು ರೀತಿ ನಿರ್ಬಲ ಜೀವಿಯನ್ನು ಕಂಡು ಹಿಡಿದು ಅದನ್ನು ಪ್ರಾಣಿಗಳ ಮೇಲೆ ಪ್ರಯೋಗಿಸಿ ಅದು ಅಪಾಯಕಾರಿಯಲ್ಲವೆಂದು ಸಾರಿದರು. ಈ ಪ್ರಯೋಗವನ್ನು ಮುಂದರಿಸಿ ಕ್ಷಯರೋಗಕ್ಕೆ ವಿರುದ್ಧ ಇದನ್ನು ಮನುಷ್ಯರಿಗೆ ದಾಕು ಹಾಕುವದನ್ನು ಅವರು ಸಂಶೋಧಿಸಿದರು. ಈ ದಾಕು ಹಾಕುವ ಪದಾರ್ಥಕ್ಕೆ ಅವರಿಬ್ಬರ ಹೆಸರನ್ನೇ ಕೊಟ್ಟು ಬೆಸಿಲಸ್ ಕಾಲ್‌ಮೆಟ್ ಗ್ವಾರಿನ್ (Bacillus Calmette Guerin) ಅಥವ ಬಿ. ಸಿ. ಜಿ ಎಂದು ಕರೆಯಲಾಯಿತು.

೧೯೨೧ರಲ್ಲಿ ಫ್ರಾನ್ಸಿನಲ್ಲಿ ಇದನ್ನು ಮಕ್ಕಳಿಗೆ ಪ್ರಯೋಗಿಸಲಾಯಿತು. ೧೯೨೮ರ ಹೊತ್ತಿಗೆ ೧೧೬,೦೦೦ ಮಕ್ಕಳಿಗೆ ದಾಕು ಹಾಕಲಾಗಿತ್ತು. ಈ ದಾಕು ಹಾಕುವ ಚಳವಳಕ್ಕೆ ಸಾರ್ವಜನಿಕರಿಂದ ಆಗ ಹೆಚ್ಚಿನ ಬೆಂಬಲ ಸಹಕಾರಗಳಿಲ್ಲದಿದ್ದರೂ ಇದು ಕ್ರಮೇಣ ಸ್ವೀಡನ್, ನಾರ್ವೆ, ಡೆನ್ಮಾರ್ಕ್, ಬ್ರೆಝಿಲ್, ಪೋಲೇಂಡ್, ಸ್ಕ್ಯಾಂಡಿನೇವಿಯಾ ಮೊದಲಾದವೆ ಹಬ್ಬಿ ಇದರ ಮೇಲೆ ಹೆಚ್ಚಿನ ಶೋಧಗಳು ನಡೆದವು.

೧೯೩೫-೩೬ರಲ್ಲಿ ಅಮೇರಿಕಾದ ಹದಿನಾರು ಕೇಂದ್ರಗಳಲ್ಲಿ ಈ ಕೆಲಸವು ಕೈಗೊಳ್ಳಲ್ಪಟ್ಟು ಈ ದಾಕು ಹಾಕುವದರಿಂದ ಶೇಕಡ ೮೦ ರಷ್ಟು ಕ್ಷಯರೋಗದಿಂದ ರಕ್ಷಣೆ ದೊರೆಯುವದೆಂದು ತಿಳಿದುಬಂತು. ೧೯೩೯ ರಲ್ಲಿ ಯೂರೋಪಿನಲ್ಲಿ ದಾಕು ಹಾಕಿದ ಸುಮಾರು ೧೦೦೦ ಮಕ್ಕಳನ್ನು ಪರೀಕ್ಷಿಸಲಾಯಿತು. ಇಂಥಾ ಅನೇಕ ಪರೀಕ್ಷೆಗಳಿಂದ ಬಿ ಸಿ. ಜಿ. ದಾಕು ಹಾಕದ ಕಡೆ ಆರು ಜನರಿಗೆ ರೋಗ ತಗಲಿದರೆ ದಾಕು ಹಾಕಿದ ಕಡೆ ಕೇವಲ ಒಬ್ಬನಿಗೆ ಮಾತ್ರ ತಗಲುವಷ್ಟು ರೋಗ ಕಡಿಮೆಯಾಗುವದೆಂದು ಗೊತ್ತಾಯಿತು.

ದ್ವಿತೀಯ ಯುದ್ಧದ ನಂತರ ಹೆಚ್ಚಿದ ಕ್ಷಯರೋಗಿಗಳ ಸಂಖ್ಯೆಯಿಂದ ಗಾಬರಿಗೊಂಡ ವಿಜ್ಞಾನಿಗಳು ಬಿ ಸಿ. ಜಿಯ ಬಗ್ಗೆ ಹೆಚ್ಚಿನ ನಿಗವಿಡತೊಡಗಿದರು. ಡೆನ್ಮಾರ್ಕಿನ ರೆಡ್‌ಕ್ರಾಸ್ ಮತ್ತು ರಾಷ್ಟ್ರೀಯ ಆರೋಗ್ಯ ಸಂಸ್ಥೆಯವರು ಬಿ. ಸಿ. ಜಿ. ದಾಕು ಹಾಕುವ ಚಳವಳವನ್ನು ಪ್ರಾರಂಭ್ಯವಾಗಿ ಮಕ್ಕಳ ರಕ್ಷಣೆಗಾಗಿ ಯೂರೋಪಿನ ಕೆಲವು ಭಾಗಗಳಲ್ಲಿ ಕೈಕೊಂಡರು. ೧೯೪೭ ನೇ ನವೆಂಬರಿನಲ್ಲಿ ಯುನಿಸೆಫ್ ಯೂ ಈ ಚಳವಳವನ್ನು ಕೈಗೊಂಡಿತು.

ಇದರ ನಂತರ ಸಂಯುಕ್ತ ರಾಷ್ಟ್ರಸಂಘವು ಯೂರೋಪಿನಲ್ಲಿ ಈ ಕಾರ್ಯಕ್ಕಾಗಿ ಎರಡು ಮಿಲಿಯ ಡಾಲರುಗಳನ್ನು ಕೊಟ್ಟು ಡೆನ್ಮಾರ್ಕ್, ನಾರ್ವೆ, ಸ್ವೀಡನ್ ಮೊದಲಾದ ದೇಶಗಳ ಆರೋಗ್ಯ ಇಲಾಖೆಗಳ ಸಹಕಾರದಿಂದ ಅಂತರಾಷ್ಟ್ರೀಯ ಕ್ಷಯ ರೋಗ ಚಳವಳವನ್ನು ಪ್ರಾರಂಭಿಸಿತು. ನಂತರ ಜಗತ್ತಿನ ಆರೋಗ್ಯ ಸಂಸ್ಥೆಯವರೂ ಇದಕ್ಕೆ ಸೇರಿ ೧೯೫೧ರ ಅಂತ್ಯದ ವರೆಗೆ ಈ ಜಗತ್ ಸಂಸ್ಥೆಯು ಬಿ. ಸಿ. ಜಿ. ಕಾರ್ಯಕ್ಕಾಗಿ ೪,೬೦೦,೦೦೦ ಡಾಲರುಗಳನ್ನು ಖರ್ಚು ಮಾಡಿತು.

ಬಿ. ಸಿ. ಜಿ ಕಾರ್ಯವು ೫೧ ರಾಷ್ಟ್ರಗಳಲ್ಲಿ ನಡೆಯುತ್ತಿದ್ದು ೨೧ ರಾಷ್ಟ್ರಗಳು ಸಾರ್ವತ್ರಿಕ ಕಾರ್ಯಕ್ರಮ ಕೈಕೊಂಡಿವೆ.

ಪರಿಷ್ಕೃತ ಪರೀಕ್ಷೆಗಳಿಂದ ಬಿ. ಸಿ. ಜಿ. ದಾಕು ನಿರಪಾಯ ಕಾರಕವೆಂದು ತಿಳಿದುಬಂದಿದೆ. ಇದರಿಂದ ಶೇಕಡ ೬೦-೮೦ ರಷ್ಟು ಕ್ಷಯರೋಗವನ್ನು ಕಡಿಮೆ ಮಾಡಬಹುದೆಂದು ಗೊತ್ತಾಗಿದೆ. ಕ್ಷಯ ರೋಗದ ವಿಚಾರದ ಚಳವಳದಲ್ಲಿ ಬಿ. ಸಿ. ಜಿ. ದಾಕು ಹಾಕುವದು ಪ್ರಾಮುಖ್ಯವಾದುದು. ಈ ದಾಕನ್ನು ಕ್ಷಯರೋಗ ಪೀಡಿತರಲ್ಲದವರಿಗೆ ಮಾತ್ರ ಕೊಡಲಾಗುವದು ಏಕೆಂದರೆ ಇದು ಕ್ಷಯರೋಗ ಬಾರದಂತೆ ತಡೆಗಟ್ಟುವ ಔಷಧಿಯಾಗಿದೆ. ಒಂದು ಚಿಕ್ಕ ವೈದ್ಯಕೀಯ ಪರೀಕ್ಷೆಯಿಂದ ಒಬ್ಬನಿಗೆ ಕ್ಷಯ ಅಂಟಿದೆಯೋ ಇಲ್ಲವೇ ಎಂದು ಕಂಡುಹಿಡಿಯಬಹುದಾಗಿದೆ. ಆರು ವರ್ಷದ ಒಳಗಿನ ಮಕ್ಕಳು ಶೇಕಡ ೧೬-೨೦ ದ ೩೦ರ ವರೆಗೆ ಕ್ಷಯ ರೋಗದ ಕ್ರಿಮಿಗಳಿಂದ ಪೀಡಿತರಿರುತ್ತಾರೆ. ಆದರಿಂದ ೨೦ ವಯಸ್ಸಿನ ಒಳಗೇ ಬಿ. ಸಿ. ಜಿ ದಾಕು ಹಾಕಿಸಿಕೊಳ್ಳುವದು ಹಿತಕರವಾಗಿದೆ.

ಹಿಂದೂದೇಶದಲ್ಲಿ ಪ್ರಥಮ ಬಿ. ಸಿ. ಜಿ. ದಾಕು ಹಾಕುವ ಕೇಂದ್ರವನ್ನು ೧೯೪೮ ನೇ ಆಗಸ್ಟಿನಲ್ಲಿ ಮದನಪಳ್ಳಿಯಲ್ಲಿ ಕೇಂದ್ರ ಆರೋಗ್ಯ ಮಂತ್ರಿ ಅಮೃತಕೌರ್‌ರವರು ತೆರೆದರು. ಈ ಕೆಲಸವು ಕ್ರಮಶಃ ಇತರ ಭಾಗಗಳಿಗೂ ಹಬ್ಬಿ ಹದಿನಾರು ಸಂಸ್ಥಾನಗಳಲ್ಲಿ ಸಾರ್ವತ್ರಿಕ ದಾಕು ಹಾಕುವ ಕೆಲಸ ನಡೆಯುತ್ತಿದೆ. ಅಂತರಾಷ್ಟ್ರೀಯ ಸಂಸ್ಥೆಯು ಈ ವರೆಗೆ ಹಿಂದೂದೇಶದಲ್ಲಿ ಸುಮಾರು ೩,೬೦೦,೦೦೦ ರೂಪಾಯಿಗಳನ್ನು ಇದಕ್ಕಾಗಿ ವೆಚ್ಚಮಾಡಿದೆ. ಮುಂದಿನ ಏಳು ವರ್ಷಗಳಲ್ಲಿ ಇಡೀ ಹಿಂದೂದೇಶದಲ್ಲಿ ಈ ಕೆಲಸವನ್ನು ಮುಗಿಸುವ ಯೋಜನೆಯಾಗಿದೆ. ಅದ್ದರಿಂದ ಸಾರ್ವಜನಿಕರ ಸರ್ವ ಸಹಾಯ ಅಗತ್ಯವಿದೆ.

ಕೊಡಗಿನಲ್ಲಿ ಮಕ್ಕಳ ಹಿತರಕ್ಷಣಾ ಸಂಘ.

ಅಖಿಲ ಭಾರತ ಮಕ್ಕಳ ಹಿತರಕ್ಷಣಾ ಸಂಸ್ಥೆಯ ನಿರ್ದೇಶನದಂತೆ ಕೊಡಗಿನಲ್ಲಿ ಮಕ್ಕಳ ಹಿತರಕ್ಷಣೆಗಾಗಿ ಒಂದು ಸಮಿತಿಯು ಸ ರ ಕಾ ರ ದಿಂ ದ ನೇ ಮ ಕ ವಾಗಿದೆ. ಇವರು ಮಕ್ಕಳನ್ನು ಯೋಗ್ಯ ರೀತಿ ಪೋಷಿಸುವ ತರಬೇತಿ ಕೊಡುವ ಸಂಸ್ಥೆ ತೆರೆದು, ಮಕ್ಕಳಿಗೆ ಮತ್ತವರ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಕಲಿಸಿಕೊಡುವ ಮಕ್ಕಳ ಮನೆಗೆ ಒಂದು ರಾಷ್ಟ್ರೀಯ ಸ್ಥಾನವನ್ನು ನಿರೂಪಿಸಿ ಅದನ್ನು ಜಾರಿಗೆ ತರಲು ಪ್ರಯತ್ನಿಸಲಾಗುವದು.

ಈ ಸಂಸ್ಥೆಗೆ ಧನ ಸಂಗ್ರಹಿಸುವ ನಿಮಿತ್ತ ಏರ್ಪಾಡುಗಳಾಗುತ್ತಿವೆ. ರೂಪಾಯಿ ೨೦೦೦ ಕ್ಕೆ ಹೆಚ್ಚು ಕೊಡುವವರನ್ನು ಪೋಷಕರೆಂದೂ, ರೂ ೧೦೦೦ - ಕ್ಕೆ ಮೇಲೆ ಕೊಡುವವರನ್ನು ಉಪಪೋಷಕರೆಂದೂ, ರೂ. ೫೦೦ ಕ್ಕೆ ಹೆಚ್ಚು ಕೊಡುವವರನ್ನು ಜೀವಾವಧಿ ಸದಸ್ಯರೆಂದೂ, ವರ್ಷಕ್ಕೆ ರೂ ೧೨ - ಕೊಡುವವರನ್ನು ಸಾಮಾನ್ಯ ಸದಸ್ಯರೆಂದೂ ತೆಗೆದು ಕೊಳ್ಳಲಾಗುವದು. ವಿಶೇಷ ಸಾಮಾಜಿಕ ಸೇವೆ ಮಾಡಿದವರನ್ನು ಗೌರವ ಸದಸ್ಯರಾಗಿ ತೆಗೆದು ಕೊಳ್ಳುವ ಏರ್ಪಾಡೂ ಇದೆ.

ಪ್ರತ್ಯೇಕ ಪಕ್ಷದ ಮೀಟಿಂಗು

ಪ್ರತ್ಯೇಕ ಪಕ್ಷದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಈ ತಾ ೧೪ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು. ಕಮಿಟಿ ಮೆಂಬರುಗಳೊಂದಿಗೆ ಕೆಲವು ಎಸೆಂಬ್ಲಿ ಮೆಂಬರುಗಳೂ, ಗೋಣಿಕೊಪ್ಪಲು ಚುನಾವಣಾ ಕೇಸಿನಲ್ಲಿ ಆಪಾದಿತರೆಂದು ಕೇಳಲ್ಪಟ್ಟ ಹಲವರೂ ಹಾಜರಿದ್ದರು.

ಗೋಣಿಕೊಪ್ಪಲು ಕೇಸಿನ ವಿಚಾರದಲ್ಲಿ ದೀರ್ಘ ಚರ್ಚೆ ನಡೆದು ಈ ಕೇಸಿನ ಸಂಬಂಧ ಪೊಲೀಸಿನವರು ಆಪೋಪ ಹೊರಿಸಿರುವ ೩೯ ಜನರೂ ಪ್ರತ್ಯೇಕ ಪಕ್ಷದ ಕೆಲಸಗಾರರಾದುದರಿಂದ ಇವರ ಪರ ವಾದಿಸಲು ತಕ್ಕ ಏರ್ಪಾಡು ಮಾಡುವ ಬಗ್ಗೆ ಇಷ್ಟರ ವರೆಗೆ ಮಾಡಿದ ತೆಯೇ ಕೂಡಲೇ ಸಾಕಷ್ಟು ಹಣ ಸಂಗ್ರಹಿಸುವಂತೆ ತೀರ್ಮಾನಿಸಲಾಯಿತು

THE VIJAYA BANK, LIMITED,

ದಿ ವಿಜಯ ಬೇಂಕ್ ಲಿಮಿಟೆಡ, ಮಡಿಕೇರಿ.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಮೂಲ ಧನ	ರೂ.	20,00,000
ತೆತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ ೨೪ ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು. ರೂಪಾಯಿ ಹತ್ತು ಸಾವಿರ ವ ಮಿಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟ ನಡೆಸಲ್ಪಡುವುದು.

ಬಿ. ಮಂಜಯ್ಯ ಹೆಗ್ಡೆ,
ಎಡ್ವೊಕೇಟ್.
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.
(ಮತ್ತು ದ. ಕ. ಜಿಲ್ಲಾಬೋರ್ಡು ಅಧ್ಯಕ್ಷರು)

12-1

ಮಡಿಕೇರಿ ಆಫೀಸಿನ ಏಜೆಂಟ್:— **ಯಂ. ಎಸ್. ಆಳ್ವ.**

TO LET

Shops & upstairs in the newly constructed building of the Bank at Mercara are available for rent.

For particulars, please contact:-

THE CANARA BANKING CORPORATION LTD.,
MERCARA.

4-2

ಜ್ಞಾನ ದೀಪ.

(೧)

ಗುಡ್ಡದಷ್ಟು ಮಣ್ಣಿರುವುದಕ್ಕಿಂತ ಗುಲಗುಂಜಿ ತೂಕ ಹೊನ್ನಿರುವುದು ಲೇಸು. ಮಣಭಾರ ಬಡಾಯಿ ಇರುವುದಕ್ಕಿಂತ ಕಾಳು ತೂಕ ಕಾರ್ಯಸಾಧನೆ ಲೇಸು

(೨)

ಎಂಥಾ ಪರ್ವತದಲ್ಲಾದರೂ ಇಲಿ ಬಿಲ ಕೊರೆದೇ ವಾಸಿಸುತ್ತದೆ ಎಂಥಾ ಪತನ ಕಾರ್ಯದಲ್ಲಾದರೂ ಕುಹಕಿ ಬಿರುಕನ್ನೇ ಕಲ್ಪಿಸಿ ಜೀವಿಸುತ್ತಾನೆ

(೩)

ಕನ್ನಡಕವನ್ನು ಹುಟ್ಟು ಕುರುಡು ತಲೆಗೆ ಇಡುವುದಕ್ಕಿಂತಾ ಅವನ ಸ್ವಂತ ಗೂಡಿನಲ್ಲಿಡುವುದೇ ವಾಸಿ. ಹಿತ ವಚನಗಳನ್ನು ಅಹಂಕಾರಾ ಧನಿಗೆ ಹೇಳುವುದಕ್ಕಿಂತಾ ಮನಸ್ಸಿನಲ್ಲಿಟ್ಟುಕೊಳ್ಳುವುದೇ ವಾಸಿ

— —

ಕೊಡಗು

ತಾರೀಕು ೨೦ ಫೆಬ್ರವರಿ ೧೯೫೩ನೇ ಶುಕ್ರವಾರ

ಚಿಯಾಂಗರ ದಳಗಳು.

ಚೀನೀ ಕಮ್ಯೂನಿಸ್ಟ್ ದಳಗಳಿಂದ ಪರಾಜಿತರಾಗಿ ಫಾರ್ಮೋಸಾ ದ್ವೀಪಕ್ಕೆ ಹೋಗಿ ನೆಲಸಿದ ಚಿಯಾಂಗ್ ಕೈಶೇಕರು ಈಗ ಪುನಃ ಚೀನಾದ ಮೇಲೆ ಧಾಳಿ ಮಾಡುವ ಪ್ರಯತ್ನದಲ್ಲಿರುವರೆಂಬುದನ್ನು ವರದಿಗಳು ತಿಳಿಸುತ್ತಿವೆ. ಕೆಲವೆಡೆ ಚಿಯಾಂಗರ ದಳಗಳು, ಸರ್ಕಾರಿ ಸೇನೆಗಳಿಗೂ ಘರ್ಷಣೆ ಪ್ರಾರಂಭವಾಗಿದೆಯೆಂದೂ ಗೊತ್ತಾಗಿದೆ. ಅಮೇರಿಕಾದ ಅಧ್ಯಕ್ಷರಾದ ಐಸನ್ ಹೋವರ್‌ರವರು ಕೊರಿಯಾದ ಯುದ್ಧದ ಬಗೆಗೆ ಸಂಯುಕ್ತ ರಾಷ್ಟ್ರ ಸಂಸ್ಥೆಯ ನೇತೃತ್ವದಲ್ಲಿ ಬದ್ಧರಾಗಿರುವುದು ಎಲ್ಲರಿಗೂ ಗೊತ್ತಿದೆ. ಅವರು ಇಂದಿನಲೇ ಅಧ್ಯಕ್ಷ ಪದ ವಹಿಸಿದ ಕ್ಷಣದೇ ಕೊರಿಯಾ ಯುದ್ಧವನ್ನು ಬೇಗ ಸಮಾಪ್ತಿಗೊಳಿಸುವ ಹೇಳಿಕೆಯನ್ನು ಕೊಟ್ಟಿದ್ದರು. ಈ ನಿಟ್ಟಿನಲ್ಲಿ ಅವರು ಈಗ ವಿಸ್ತೃತ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಮಂಚೂರಿಯಾದಲ್ಲಿರುವ ಪಟ್ಟಣಗಳ ಮೇಲೆ ಬಾಂಬು ಹಾಕುವ, ರಾಷ್ಟ್ರೀಯ ದಳಗಳನ್ನು ಕೊರಿಯಾ ಯಾ ಚೀನಾದ ಮೇಲೆ ಬೀಳುವಂತೆ ಪ್ರೇರೇಪಿಸುವ ಮತ್ತು ಇಂಡೋ ಚೀನಾದಲ್ಲಿ ಸಾಮ್ಯವಾದಿ ಸೇನೆಗಳಿಗೆ ಹೆಚ್ಚು ಪ್ರತಿಭಟನೆ ಮಾಡುವಂತೆ ಮಾಡುವ ಮೊದಲಾದ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಈ ಕಾರ್ಯಕ್ರಮದಂತೆ ಅಮೇರಿಕಾದಿಂದ ತರಬೇತು ಪಡೆದು, ಅವರಿಂದ ಸಾಕಲ್ಪಟ್ಟ ಚಿಯಾಂಗರ ಸೇನೆಗಳು ಧಾಳಿಗೆ ಸಿದ್ಧವಾಗುತ್ತಿವೆ. ಈ ಸೇನೆಗಳ ಬಲಾಬಲ ಹೇಗಿದೆ? ಇವರ ಶಕ್ತಿ ಎಷ್ಟಿದೆ ಎಂಬುದನ್ನು ಪರಿಶೀಲಿಸುವದೊಳಿತು.

ಅಧಿಕೃತವಾಗಿ ತಿಳಿದು ಬಂದಿರುವ ಅಂಕಿಸಂಖ್ಯೆಗಳ ಮೇರೆ ಚಿಯಾಂಗರ ಕೈಕೆಳಗೆ ೫೫೦,೦೦೦ದಿಂದ ೬೦೦,೦೦೦ದ ವರೆಗೆ ಸೇನೆಗಳಿವೆಯಂತೆ. ಇವುಗಳಲ್ಲಿ ೪೦೦,೦೦೦ ನೆಲಸೈನ್ಯವೂ, ೮೦,೦೦೦ ಸರಬರಾಯಿ ದಳವೂ, ೪೦,೦೦೦ ನೌಕಾಪಡೆಯೂ, ೩೦,೦೦೦ ವಿಮಾನ ದಳವೆಂದೂ ಗೊತ್ತಾಗಿದೆ. ಅಧಿಕಾರಿ ಮತ್ತಿತರ ವರ್ಗವನ್ನು ತೆಗೆದರೆ ನೆಲಸೇನೆಯಲ್ಲಿ ಒಟ್ಟು ೩೦೦,೦೦೦ ಸೈನಿಕರಿರುವರೆಂದು ಲೆಕ್ಕಹಾಕಬಹುದು. ಚಿಯಾಂಗರು ತಮ್ಮ ಈ ಎಲ್ಲ ಸೇನೆಗಳನ್ನೂ ಒಮ್ಮೆಲೇ ಧಾಳಿಗೆ ಬಿಡಲು ಸಾಧ್ಯವಿಲ್ಲ. ಏಕೆಂದರೆ ಒಮ್ಮೆ ಯುದ್ಧ ಪ್ರಾರಂಭವಾದರೆ ಆಗ ನಷ್ಟ ಕಷ್ಟಗಳನ್ನು ಭರ್ತಿ ಮಾಡಲು ರಿಸರ್ವ್ ದಳ ಇರಲೇ ಬೇಕಾಗುತ್ತದೆ. ಅಂಥಾ ರಿಸರ್ವ್ ಸೈನ್ಯವನ್ನು ಕೂಡಿಸುವ ಶಕ್ತಿ ಫಾರ್ಮೋಸಾದಲ್ಲಿ ತೀರಾ ಪರಿಮಿತವಾದುದಾಗಿದೆ.

ಏಕೆಂದರೆ ಫಾರ್ಮೋಸಾದಲ್ಲಿಯ ಜನಸಂಖ್ಯೆಯೆಂದರೆ ೮,೨೦೦,೦೦೦. ಇವರಲ್ಲಿ ೧,೫೦೦,೦೦೦ ಜನರು ಚೀನಾದಿಂದ ಬಂದವರು. ಉಳಿದವರು ಅಲ್ಲಿಯ ಮೂಲ ನಿವಾಸಿಗಳಾದ ಟೈವಾನೀಸರು. ಸಂಯುಕ್ತ ಅಮೇರಿಕದ ಮೇಜರ್ ಜನರಲ್ ಡಬ್ಲ್ಯು ಸಿ ಚೇಸ್‌ರವರ ಮುಂದಾಳ್ತನದಲ್ಲಿ ಈ ಚೀನೀ ದಳಗಳಿಗೆ ತರಬೇತು ಕೊಡಲಾಗುತ್ತಿದೆ. ವರ್ಷಕ್ಕೆ ೩೦೦,೦೦೦,೦೦೦ ಡಾಲರುಗಳ ಯೋಜನೆಯ ಪ್ರಕಾರ ಫಾರ್ಮೋಸಾದ ಈ ಸೇನೆಗಳಿಗೆ ಹೊಸ ಆಯುಧ ಮತ್ತು ಸಲಕರಣೆಗಳನ್ನೂ, ಆರ್ಥಿಕ ಸಹಾಯವನ್ನೂ ಒದಗಿಸಿಕೊಡಲಾಗುತ್ತಿದೆ. ಆದರೂ ಕೂಡ ಚಿಯಾಂಗರ ದಳದಲ್ಲಿ ವಿಮಾನಗಳ ಸಂಖ್ಯೆ ಸಾಕಷ್ಟು ಇರುವದಿಲ್ಲ. ಈಗ ತಿಳಿದು ಬಂದಿರುವ ಲೆಕ್ಕ ಪ್ರಕಾರ ವಿಮಾನ ಪಡೆಯಲ್ಲಿ ಸುಮಾರು ೩೫೦ ವಿಮಾನಗಳಿರುವವೆಂದೂ, ನೌಕಾಪಡೆಯಲ್ಲಿ ೬೦ ಹಡಗಗಳಿರುವೆಂದೂ, ಅವುಗಳಲ್ಲಿ ಎಲ್ಲದಕ್ಕಿಂತಲೂ ದೊಡ್ಡ ಹಡಗು ೧೪೦೦ ಟನ್ನಿನ ವಿನಾಶಿಕೆಯಾಗಿದೆಯೆಂದೂ ಗೊತ್ತಾಗಿದೆ.

೪೦೦,೦೦೦ ದಷ್ಟಿರುವ ಕಾಲ್ಬಳದಲ್ಲಿ ಸುಮಾರು ೭೫,೦೦೦ ಜಾಯಂ ಸೇನೆಯು ಆಗ್ನೇಯ ಚೀನಾದ ೫೦೦ ಮೈಲು ಕರಾವಳಿಗೆದುರಾಗಿ ೩೫ ಕೇಂದ್ರಗಳಲ್ಲಿ ರಾಣಿ ಹಾಕಿದೆ. ಇವುಗಳಲ್ಲಿ ಸುಮಾರು ೨೦೦೦೦ ಗೊರಿಲ್ಲಾ ಪಡೆ ಇರಬಹುದೆಂದು ಅಂದಾಜು ಮಾಡಲಾಗಿದೆ. ೧೯೪೯ ರಿಂದಲೇ ಈ ರಾಷ್ಟ್ರೀಯ ದಳಗಳು ಕಮ್ಯೂನಿಸ್ಟ್ ಚೀನಾ ದಳಗಳ ವಿರುದ್ಧ ಗೊರಿಲಾ ಕದನ ಸಾಗಿಸುತ್ತಾ ಬಂದಿವೆ. ಹೇಗಿದ್ದರೂ ಕೂಡ ಫಾರ್ಮೋಸಾದಲ್ಲಿ ಚಿಯಾಂಗರೇ ರಾಜ್ಯಭಾರ ಮಾಡುತ್ತಿದ್ದರೂ ಸಹ ಯುದ್ಧ ಕಾಲಕ್ಕೆ ಅಮೇರಿಕದವರ ಬೆಂಬಲವಿಲ್ಲದೆ ಹೆಚ್ಚು ಕಾಲ ಕಾಳಗದಲ್ಲಿ ನಿಲ್ಲುವ ಸಾಧ್ಯತೆ ಅವರಿಗಿಲ್ಲ. ಅಮೇರಿಕನರು ಕೊಡಬಹುದಾದ ಈ ಸಹಾಯವು ಚಿಯಾಂಗರ ದಳಗಳು ಕೈಕೊಳ್ಳಬಹುದಾದ ಧಾಳಿಯ ಮೇಲೆ ನಿಂತಿದೆ. ಚೈನಾದ ಮೇಲೆ ಧಾಳಿಯನ್ನು ನೇರವಾಗಿ ಅವರು ಮಾಡುವದಾದರೆ ಅಮೇರಿಕದ ವಿಮಾನ ಹಾಗೂ ಇತರ ಸಹಾಯ ಬೇಕೇ ಬೇಕು.

ಆದರೆ ಚಿಯಾಂಗರ ಈ ಸೇನೆಗಳಿಗೆ ಎದುರಾಗಿ ಚೈನಾ ಕರಾವಳಿಯಲ್ಲಿ ಕಮ್ಯೂನಿಸ್ಟ್ ಚೀನದ ೩೦೦,೦೦೦ ದಿಂದ ೪೦೦,೦೦೦ ದಷ್ಟು ಸೇನೆ ಸಿದ್ಧವಾಗಿ ನಿಂತಿದೆ. ಇವರ ನೌಕಾದಳ ದೊಡ್ಡದಿಲ್ಲವಾದರೂ ವಿಮಾನದಳ ಬಹುಮಟ್ಟಿಗೆ ಬೆಳೆದಿದೆ. ಅವರಿಗೆ ಬೇಕಾಗುವಷ್ಟು ವಿಮಾನಗಳು ದಕ್ಷಿಣ ಚೀನಾದಲ್ಲಿ ಸಿದ್ಧವಿವೆಯೆಂದು ಗೊತ್ತಾಗಿದೆ. ಈ ರೀತಿಯಲ್ಲಿ ಚಿಯಾಂಗರ ಬಲವೂ ಚೀನ ಕಮ್ಯೂನಿಸ್ಟರ ಬಲವೂ ಇದೆ. ಅಮೇರಿಕವು ಹಿನ್ನೆಲೆಯಲ್ಲಿ ನಿಲ್ಲದಿದ್ದರೆ ಚಿಯಾಂಗರ ಪ್ರಯತ್ನದಿಂದ ಫಲ ದೊರಕಲಾರದು. ಅಮೇರಿಕಾ ಚಿಯಾಂಗರಿಗೆ ಸಹಾಯ ಮಾಡುವುದಾದರೆ ಅದು ಜಗತ್ತಿನ ಯುದ್ಧವಾಗಿ ಪರಿಣಮಿಸದಿರದು. ಕೊರಿಯಾ ಯುದ್ಧವನ್ನು ಮುಗಿಸಲು ಹೊರಟ ಐಸನ್ ಹೋವರರು ಜಗತ್ತಿನ ಮಹಾಯುದ್ಧವನ್ನು ಆಹ್ವಾನಿಸುವರೇ ಎಂಬುದನ್ನು ಮುಂದೆ ನೋಡಬೇಕಾಗಿದೆ.

ವರ್ತಮಾನ.

ದಿನಾಂಕ ೧೫ರಂದು ಕೊಡಗು ಪ್ರೆಸ್ಸಿನ ಹಜಾರದಲ್ಲಿ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿರುವ ಶ್ರೀ ಕೆ ಎಂ ಗಣಪತಿ ಭಟ್ಟರವರಿಗೆ ಒಂದು ಸ್ಪಾನರ್ ಸನ್ನು ಬಿದ್ದು ಸಿಕ್ಕಿದೆಯೆಂದೂ ಸಂಬಂಧ ಪಟ್ಟವರು ಸರಿಯಾದ ಪತ್ತೆಯನ್ನಿತ್ತು ಹೊಂದಿಕೊಳ್ಳಬಹುದಾಗಿಯೂ ತಿಳಿಸುತ್ತಾರೆ.

ತಾ ೧೬ರಲ್ಲಿ ಕಾಕೋಟುಪರಂಬಿನ ಮಂದೇಟಿರ ಮನೆ ಕಳಸ ಸಾದುನ ಪಾಲೆಯರ ಮನೆಗೆ ಎಲ್ಲರೂ ಕಳಸಕ್ಕೆ ಹೋಗಿದ್ದಾಗ ಬೆಂಕಿ ಬಿದ್ದು ಎಲ್ಲಾ ಸುಟ್ಟು ಹೋಗಿದೆಯೆಂದೂ ಯಾರೋ ದ್ವೇಷದಿಂದ ಹೀಗೆ ಮಾಡಿರುವುದಾಗಿಯೂ ಈ ಬಗ್ಗೆ ತನಿಖೆ ನಡೆಯುತ್ತಿರುವುದಾಗಿಯೂ ತಿಳಿದು ಬರುತ್ತದೆ.

ಸಾಮುದಾಯಿಕ ವಿಕಾಸ ಯೋಜನೆಯ ಎಕ್ಸಿಕ್ಯೂಟಿವ್ ಆಫೀಸರಾದ ಶ್ರೀ ನಡಿಕೇರಿಯಂಡ ಮಂದಣ್ಣನವರ [illegible] ತಾ ೧೯ರ ಸಾಯಂಕಾಲ ಮಡಿಕೇರಿ ಆಸ್ಪತ್ರೆಯಲ್ಲಿ ದೈವಾಧೀನರಾದರು.

ನಿವೃತ್ತರಾಗಿರುವ ಭಾರತ ಸೇನಾನಾಯಕರಾದ ಜನರಲ್ ಕಾರ್ಯಪ್ಪನವರಿಗೆ ಮಡಿಕೇರಿ ಕೊಡಗು ಸಮಾಜದವರು ಸಮಾಜದ ಕಟ್ಟಡದಲ್ಲಿ ತಾ ೧೬ರ ರಾತ್ರೆ ಒಂದು ಔತಣ ಕೂಟವನ್ನು ಏರ್ಪಡಿಸಿ ಸತ್ಕರಿಸಿದರು.

ತಾ ೧೫-೨-೫೩ರಲ್ಲಿ ಮಂಜರಾಬಾದು ತಾಲೋಕು ಎಸಳೂರು ಪೇಟೆಯ ಜಿಲ್ಲಾ ಬೋರ್ಡ್ ಪ್ರೌಢಶಾಲೆಯ ನೂತನ ಕಟ್ಟಡದ ಮತ್ತು ಕ್ವಾಟ್ರೆ ಹೊಳೆಗೆ ಜಿಲ್ಲಾ ಬೋರ್ಡ್ ಸೇತುವೆಯ ಪ್ರಾರಂಭೋತ್ಸವಗಳನ್ನು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಡೆಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ ಎಂ ಪೂಣಚ್ಚನವರು ವಹಿಸಿದ್ದರು. ಗೃಹ ಮಂತ್ರಿ ಮಲ್ಲಪ್ಪನವರೂ ಜೊತೆಗಿದ್ದರು.

ತಾ. ೨೮-೨-೫೩ರಲ್ಲಿ ಬೆಳಿಗ್ಗೆ ೯ ಗಂಟೆಯಿಂದ ಸಾಯಂಕಾಲ ೫ ಗಂಟೆಯ ವರಗೆ ಕೂಡಿಗೆ ವ್ಯವಸಾಯ ಕ್ಷೇತ್ರದಲ್ಲಿ ಜಾನುವಾರುಗಳ ಪ್ರದರ್ಶನ ನಡೆಯುವುದು. ಆ ಸಂದರ್ಭದಲ್ಲಿ ಕಿರ್ಲೋಸ್ಕರ್ ಬ್ರದರ್ಸ್, ವಾಲ್‌ಕಾರ್ಟ್ ಬ್ರದರ್ಸ್, ಹಣುನೂರ್ ಸನ್ಸ್, ಲಾರ್ ಸನ್ ಅಂಡ್ ಟೂಬ್ರೋ, ಸಿಂಪ್‌ಸೋ ವರ್ಕ್ಸ್ ಇವರೇ ಮೊದಲಾದ ಅನೇಕ ಕಂಪೆನಿಯವರು ತಮ್ಮ ತಮ್ಮ ಟ್ರ್ಯಾಕ್ಟರ್‌ಗಳು, ಪಂಪ್ ಸೆಟ್ಟುಗಳು, ಸ್ಪ್ರೇಯರುಗಳು, ಇತರ ವ್ಯವಸಾಯದ ಹತ್ಯಾರುಗಳು, ಗೊಬ್ಬರಗಳೇ ಮೊದಲಾದವುಗಳ ಉಪಯೋಗಗಳನ್ನು ಪ್ರದರ್ಶಿಸುವರು.

ಹೆಬ್ಬಾಲೆ ವಯಸ್ಕರ ಉಪಾಧ್ಯಾಯರೂ, ವಿದ್ಯಾರ್ಥಿಗಳೂ, ಮತ್ತು ಇನ್ನಿತರ ಜನರು ತಾ ೧೪-೨-೫೩ರಲ್ಲಿ ಊರಿನಲ್ಲೆಲ್ಲಾ ಭಜನ ಮೆರವಣಿಗೆಯನ್ನು ಮಾಡಿದರು. ನಂತರ ಶಾಲೆಗೆ ಬಂದು ಒಂದು ಸಭೆ ಸೇರಿತು. ಉಪಾಧ್ಯಾಯರು ವಯಸ್ಕರಿಗೆ ಸಂಬಂಧಪಟ್ಟ ವಿಚಾರದಲ್ಲಿ ಭಾಷಣ ಮಾಡಿದರು.

ಇದೇ ತಾ ೧೯ನೇ ಗುರುವಾರ ಮಡಿಕೇರಿ ಪ್ರೌಢಶಾಲೆಯ ಉತ್ಸವವು ಕೊಡಗು ಅಸಿಸ್ಟೆಂಟ್ ಕಮಿಷನರಾದ ಶ್ರೀ. ವಿ. ಸಿ. ಸುಬ್ರಹ್ಮಣ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಳಿಗ್ಗೆ ಆಟೋಟಗಳೂ ರಾತ್ರೆ ವಿವಿಧ ವಿನೋದಾವಳಿಗಳೂ ಇದ್ದುವು.

ದಿ ಕೂರ್ಗ್ ಎಸೋಸಿಯೇಷನ್ ಆಫ್ ಕಾಮರ್ಸ್ ವೀರಾಜಪೇಟೆ ಇದರ ವಾರ್ಷಿಕ ಮಹಾಸಭೆಯು ಇದೇ ಫೆಬ್ರವರಿ ತಾ. ೨೬ನೇ ಗುರುವಾರ ಪೂರ್ವಾಹ್ನ ೧೧ ಗಂಟೆಗೆ ವೀರಾಜಪೇಟೆ ಮುನ್ಸಿಪಲ್ ಹಾಲಿನಲ್ಲಿ ನಡೆಯುವುದು.

ಸೋಮವಾರಪೇಟೆ ಪ್ರೌಢ ಶಾಲೆಯ ೧೫೦ ವಿದ್ಯಾರ್ಥಿಗಳ ಹತ್ತು ಗುಂಪುಗಳು ಇದೇ ತಾ. ೭ನೇ ಶನಿವಾರ ೧೧ ಗಂಟೆಯಿಂದ ೧ ಗಂಟೆಯ ತನಕ ಪಟ್ಟಣದ ಬೀ

ಬಿಗಳ ಮತ್ತು ಮನೆಗಳ ಹಿಂಭಾಗದ ಶುದ್ಧೀಕರಣ ಕೆಲಸವನ್ನು ಮಾಡಿದರು. ಒಂದು ಸಂಗಡದವರು ಎಂದಿನಂತೆ ಆನೆ ಕೆರೆಯ ಶುದ್ಧೀಕರಣ ಕೆಲಸವನ್ನು ಮಾಡಿದರು.

ಬೆಂಗಳೂರಿನ ಅಸಿಸ್ಟೆಂಟ್ ರಿಕ್ರೂಟಿಂಗ್ ಆಫೀಸರರವರು ಮಾರ್ಚ್ ತಾ. ೭ ಮತ್ತು ೮ ರಲ್ಲಿ ಸೋಮವಾರಪೇಟೆಯಲ್ಲಿಯೂ, ೯ ಮತ್ತು ೧೦ ರಲ್ಲಿ ನಾಪೋಕ್ಲಿನಲ್ಲಿಯೂ, ೧೪ ಮತ್ತು ೧೫ ರಲ್ಲಿ ವೀರಾಜಪೇಟೆಯಲ್ಲಿಯೂ ಮತ್ತು ೧೭ ನಲ್ಲಿ ಮಡಿಕೇರಿಯಲ್ಲಿಯೂ ಮೊಕ್ಕಾಂ ಮಾಡುವರು. ಕಾಣಲಿಚ್ಛಿಸುವವರು ಅವರನ್ನು ಆಯಾ ಸ್ಥಳಗಳಲ್ಲಿ ಭೇಟಿಯಾಗಬಹುದು.

ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನಿನವರು ನಡೆಸಿದ ಇಂಡಿಯನ್ ಅಡ್ಮಿನಿಸ್ಟ್ರೇಟಿವ್ ಸರ್ವಿಸ್ (ಐ. ಎ. ಎಸ್) ಪರೀಕ್ಷೆಯಲ್ಲಿ ಶ್ರೀ. ಕೋದಂಡ ಗಣಪತಿಯವರ ಮಗ ಸೋಮಯ್ಯನವರು ತೇರ್ಗಡೆಯಾಗಿರುವರು. ಐ. ಎ. ಎಸ್‌ನಲ್ಲಿ ೫೩ ಖಾಲಿ ಸ್ಥಳಗಳಿರುವವೆಂದೂ ಶ್ರೀ. ಸೋಮಯ್ಯನವರು ೩೩ನೇ ಸ್ಥಾನ ಪಡೆದಿರುವರೆಂದೂ ಗೊತ್ತಾಗಿದೆ.

ಕೊಡಗು ಸರಕಾರಿ ಕಾಲೇಜಿನ ವಾರ್ಷಿಕೋತ್ಸವವು ತಾ. ೨೭ ರಲ್ಲಿ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವದು.

ಕೊಡಲಿಪೇಟೆಯಲ್ಲಿ ವಾಂತಿಭೇದಿ ರೋಗ ತಲೆದೋರಿದೆಯೆಂದೂ ಕಳೆದ ವಾರ ಮೂರು ಜನರಿಗೆ ಈ ರೋಗ ತಗಲಿ ಎರಡು ಜನರು ಮೃತರಾದರೆಂದೂ ತಿಳಿದು ಬಂದಿದೆ.

ತಾ. ೨೩-೨-೫೪ರಲ್ಲಿ ನಡೆದ ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯ ಕೊಡಗಿನ ಶಾಖೆಯ ತೀರ್ಮಾನದಂತೆ ತಾ. ೧೫ರಲ್ಲಿ ಮಡಿಕೇರಿ ಎಸೆಂಬ್ಲಿ ಹಾಲಿನಲ್ಲಿ ಕೊಡಗಿನ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಿವಿಲ್ ಸರ್ಜನರು ಹಾಕಿದ ಲಾಟರಿಯಲ್ಲಿ ಗೋಣಿಕೊಪ್ಪಲಿನ ಶ್ರೀ ಕೆ. ಎಂ. ಅಚ್ಚಯ್ಯನವರಿಗೆ ಪ್ರಥಮ ಬಹುಮಾನವಾದ ಒಂದು ಮೋಟಾರ್ ಕಾರನ್ನೂ, ಸುಂಟಿಕೊಪ್ಪದ ಶ್ರೀ ಜಿ. ಎಂ. ಪಂಜುನಾಥಯ್ಯನವರಿಗೆ ಒಂದು ಜೊತೆ ಮಂಚಗಳೂ ಬಹುಮಾನವಾಗಿ ದೊರೆತಿವೆ.

ಮೈಸೂರಿನ ಪೋಲೀಸ್ ಸರ್ವಿಸಿನಲ್ಲಿ ಸರ್ಕಲ್ ಇನ್ಸ್‌ಪೆಕ್ಟರಾಗಿರುವ ಶ್ರೀ ಚೊಟ್ಟೇರಿಯಂಡ ಅಪ್ಪಚ್ಚುನವರು ಬೇಟೆಗೆ ಹೋಗಿದ್ದಾಗ ಗಾಯಗೊಂಡ ಹುಲಿಯು ಕಚ್ಚಿ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು.

ದೆಹಲಿಯಲ್ಲಿರುವ ಈಜಿಪ್ಟಿನ ರಾಯಭಾರಿಯವರು ತಾ. ೧೯ರಲ್ಲಿ ಮಡಿಕೇರಿಗೆ ಬಂದಿದ್ದರು. ತಾ. ೧೯ರ ಸಾಯಂಕಾಲ ಜನರಲ್ ಕಾರ್ಯಪ್ಪನವರು ಅವರಿಗೆ ಒಂದು ಸತ್ಕಾರ ಕೂಟ ಏರ್ಪಡಿಸಿದ್ದರು.

ಎಡಿನ್‌ಬರೋ ನಾಡಿನವರು ಜನರಲ್ ಕೆ. ಎಂ. ಕಾರ್ಯಪ್ಪನವರಿಗೆ ಒಂದು ಬಿನ್ನವತ್ತಳೆ ಕೊಡಲು ಏರ್ಪಡಿಸಿರುವರೆಂದೂ ಅದನ್ನು ಸ್ವೀಕರಿಸಬೇಕೆಂದೂ, ಶ್ರೀ. ಕೆ. ಪಿ. ಕರುಂಬಯ್ಯನವರು ಜ. ಕಾರ್ಯಪ್ಪನವರಿಗೆ ಬರೆದ ಪತ್ರಕ್ಕೆ ಜವಾಬು ಕೊಡುತ್ತಾ ತಾನು ಒಬ್ಬ ಸಿಪಾಯಿಯಾಗಿ ದೇಶಕ್ಕೆ ತನ್ನ ಕರ್ತವ್ಯ ಮಾಡಿರುವೆನಲ್ಲದೆ ಮತ್ತೇನೂ ವಿಶೇಷವಿಲ್ಲ; ಮತ್ತು ಬಿನ್ನವತ್ತಳೆ ಸ್ವೀಕರಿಸಲು ಈಗ ಸಂದರ್ಭವೇನೂ ಕಾಣುವುದಿಲ್ಲವೆಂದೂ, ತನ್ನನ್ನು ಬಹುಮಾನಿಸಲು ಮಾಡುವ ಅಭಿಪ್ರಾಯಕ್ಕೆ ತುಂಬಾ ವಂದನೆಯೆಂದೂ, ಸಮಯ ದೊರೆತಾಗ ಜನರನ್ನು ಭೇಟಿ ಮಾಡುವೆನೆಂದೂ ಕಾರ್ಯಪ್ಪನವರು ಹೇಳಿರುವರೆಂದು ವರ್ತಮಾನ.

ಭಾರತದ ವಿದೇಶ ನೀತಿ

ಪಂಡಿತ ನೆಹರೂರವರ ಸ್ಪಷ್ಟೀಕರಣ.

ಕೇಂದ್ರದ ಪಾರ್ಲಿಮೆಂಟಿನಲ್ಲಿ ತಾ. ೧೮ ರಲ್ಲಿ ನಡೆದ ಅಧ್ಯಕ್ಷರ ಭಾಷಣದ ಮೇಲಿನ ಚರ್ಚೆಯ ಸಮಯದಲ್ಲಿ ಸದಸ್ಯರು ಭಾರತದ ವಿದೇಶ ನೀತಿಯ ಬಗ್ಗೆ ಮಾಡಿದ ಟೀಕೆಗಳಿಗೆ ಉತ್ತರವೀಯುತ್ತಾ ಪಂಡಿತ ಜವಾಹರರು ಹೀಗೆ ಹೇಳಿದರು. ಜಗತ್ತು ಈಗ ಇಬ್ಭಾಗವಾಗಿ ಒಂದು ಭಾಗವು ರಷ್ಯಾದ ಪ್ರಭಾವಕ್ಕೂ, ಮತ್ತೊಂದು ಅಮೇರಿಕದ ಪ್ರಭಾವಕ್ಕೂ ಒಳಗಾಗಿದೆ. ಈ ಎರಡು ಭಾಗಗಳೂ ಕೂಡ ಯುದ್ಧ ಮಾರ್ಗದಲ್ಲಿಯೇ ನಡೆಯುತ್ತಿರುವುದರಿಂದ ಜಗತ್ತಿಗೆ ಗಂಡಾಂತರ ತಪ್ಪಿದ್ದಲ್ಲ. ಆದ್ದರಿಂದ ಇವೆರಡರಿಂದ ಭಿನ್ನವಾದ ಮತ್ತೊಂದು ಗುಂಪು ಅಥವ ಭಾಗವನ್ನು ನಿರ್ಮಾಣ ಮಾಡಬೇಕೆಂದೂ ಆ ಬಗ್ಗೆ ಭಾರತವು ಕೆಲಸ ಮಾಡಬೇಕೆಂದೂ ಸೂಚಿಸಿದ್ದರು. ಆ ಸೂಚನೆಯಂತೆ ಯುದ್ಧಾಸಕ್ತವಾದ ಮತ್ತೊಂದು ಗುಂಪನ್ನು ರಚಿಸುವುದರಿಂದ ಪ್ರಯೋಜನವಿಲ್ಲ. ಆದರೆ ಇಂದು ಜಗತ್ತಿನಲ್ಲಿ ಯುದ್ಧವನ್ನು ವಿರೋಧಿಸುವ ಶಾಂತಿಪ್ರಿಯ ರಾಷ್ಟ್ರಗಳು ಹಲವಿವೆ. ಅವುಗಳನ್ನು ಏಕೀಕರಿಸಿ ಶಾಂತಿಗಾಗಿ ಹೋರಾಡುವ ರಾಷ್ಟ್ರಗಳ ಒಂದು ಗುಂಪನ್ನು ರಚಿಸುವ ಸಾಧ್ಯತೆಯಿದೆ. ಭಾರತದ ಮುಂದಿನ ಅಂತರ್ರಾಷ್ಟ್ರೀಯ ಕಾರ್ಯಕ್ರಮ ಇದಾಗಬಹುದು.

ಸೈನಿಕ ದೃಷ್ಟಿಯಿಂದ ದೊಡ್ಡ ರಾಷ್ಟ್ರಗಳೂ ಇಂದು ಒಪ್ಪಂದ ಮಾಡಿಕೊಂಡು ಒಗ್ಗಟ್ಟಾಗುವುದರಿಂದ ಪ್ರಯೋಜನವಿಲ್ಲ. ಏಕೆಂದರೆ ರಷ್ಯಾ, ಅಮೇರಿಕಾಗಳು ಎರಡು ಮಹಾರಾಕ್ಷಸರಂತೆ ಬೆಳೆದು ನಿಂತಿವೆ. ಅವರಿಂದ ಬೇರೆ ಯಾವುದೇ ರೀತಿಯ ಸೈನಿಕ ಸ್ವರೂಪದ ಒಪ್ಪಂದವೂ ಒಡಂಬಡಿಕೆಗಳಿಂದ ಪ್ರಯೋಜನವಿಲ್ಲ. ಈ ಮಹಾರಾಕ್ಷಸರ ಮುಂದೆ ದೊಡ್ಡ ಬಲಿಷ್ಠ ಸೈನ್ಯ ಕಾರ್ಯಾಚರಣೆಯೂ ಮುಂದೆ ಸಾಗಲಾರದು. ಆದ್ದರಿಂದ ಅವರಿಗೆ ಭಿನ್ನವಾಗಿ ಶಾಂತಿ ಸಾಧಕ ರಾಷ್ಟ್ರಗಳ ಗುಂಪನ್ನು ರಚಿಸಿದರೆ ಅದರಿಂದ ಹೆಚ್ಚಿನ ಫಲ ದೊರಕುವುದು. ಇದೇ ರೀತಿಯ ವಿದೇಶ ನೀತಿಯನ್ನು ಭಾರತವು ಅನುಸರಿಸುತ್ತಿರುವುದಾಗಿದೆ. ಸದ್ಯಕ್ಕೆ [illegible] ಘಂಟಾಘೋಷವಾಗಿ ಸಾರುವುದರಿಂದ ಪ್ರಯೋಜನವಿಲ್ಲ. ನಾವು ಕಾರ್ಯತಃ ಕೆಲಸ ಮಾಡಿ ತೋರಿಸುವುದರಲ್ಲಿಯೇ ಸರ್ವರ ಹಿತವಿದೆ.

ಈ ವರೆಗೆ ಭಾರತವು ಅನುಸರಿಸಿದ ವಿದೇಶನೀತಿಯು ಸಮರ್ಪಕವಾಗಿದೆ. ಜಗತ್ತಿನ ಯಾವ ರಾಷ್ಟ್ರವೂ ನಮಗೆ ವೈರಿಯಾಗಿಲ್ಲ. ಎಲ್ಲರೊಡನೆಯೂ ನಾವು ಪ್ರೀತಿಯಿಂದ ವ್ಯವಹರಿಸುತ್ತಿರುವೆವು. ಅನೇಕ ವೇಳೆ ಹಲ ಕೆಲವು ರಾಷ್ಟ್ರಗಳು ನಮ್ಮ ನೀತಿಯ ಬಗ್ಗೆ ಸಿಟ್ಟಾಗಿರಬಹುದು. ಆದರೆ ಸಿಟ್ಟು ಇಳಿದ ನಂತರ ನಾವು ಮಿತ್ರರಾಗಿಯೇ ಇದ್ದೇವೆ. ಭಾರತವು ಅಮೇರಿಕಾ ಬ್ರಿಟನುಗಳ ಪರವರ್ತಿಯಾಗಿ ವರ್ತಿಸುತ್ತದೆಯೆಂಬ ಸಾಮ್ಯವಾದಿಗಳ ಟೀಕೆಯೂ ಸಮರ್ಪಕವಾದುದಲ್ಲ. ಭಾರತವು ಸ್ವತಂತ್ರವಾದ ವಿದೇಶ ನೀತಿಯನ್ನು ಅನುಸರಿಸಬೇಕೆಂಬುದೇ ಭಾರತೀಯರ ಕಾಂಕ್ಷೆ ಎಂಬುದು ನನಗೆ ಗೊತ್ತಿದೆ. ಯಾವುದಾದರೊಂದು ರಾಷ್ಟ್ರದ ಬಣದೊಳಗೆ ಬೀಳುವದೆಂದರೆ ನಮ್ಮ ಸ್ವತಂತ್ರ ನಿರ್ಧಾರವನ್ನು ಬಲಿಕೊಟ್ಟಂತೆ. ನಾವದನ್ನು ನಮ್ಮ ಸ್ವಂತ ವಿದೇಶ ನೀತಿಯನ್ನು ಅನುಸರಿಸುತ್ತೇವೆಯೇ ವಿನಾ ಬೇರೆ ರಾಷ್ಟ್ರದ ಅಭಿಪ್ರಾಯದಂತೆಯೂ ವರ್ತಿಸುತ್ತಿಲ್ಲ. ಸ್ವಾಭಿಮಾನ ಇರುವ ಯಾವನೇ ವ್ಯಕ್ತಿಯು ತನ್ನ ರಾಷ್ಟ್ರವು ಇತರ ರಾಷ್ಟ್ರಗಳ ಹೇಳಿಕೆಯಂತೆ ವರ್ತಿಸಬೇಕೆಂಬುದನ್ನು ಒಪ್ಪಲಾರನು.

ಹೀಗೆನ್ನುವಾಗ ನಾವು ಇತರ ರಾಷ್ಟ್ರಗಳೊಡನೆ ಸಹಕರಿಸಬಾರದೆಂದರ್ಥವಲ್ಲ. ನಾವು ಪ್ರತಿ ವಿಚಾರವನ್ನೂ ಸ್ವತಂತ್ರವಾಗಿ ಪರಿಶೀಲಿಸಿ ಯೋಗ್ಯವೆಂದು ತೋರಿದಂತೆ ವರ್ತಿಸುವೆವು.

ಭಾರತದ ವಿದೇಶನೀತಿಯು ಇಂದು ನಿನ್ನೆಯದಲ್ಲ. ನಾವು ಸ್ವಾತಂತ್ರ್ಯ ಹೋರಾಟ ನಡೆಸಿದ್ದಾಗ ಹೊರ ದೃಷ್ಟಿ ಇತ್ತೀಚೆ ಬರೇ ಮುಂದಾಗಿ ನಮ್ಮ ನೀತಿ ಇಂದೂ ಮುಂದುವರಿಯುತ್ತಿದೆ. ಅದರಿಂದ ಇತರ ರಾಷ್ಟ್ರಗಳ ಸ್ವಾತಂತ್ರ್ಯ ಹಕ್ಕುಗಳ ಬಗ್ಗೆ ಗೌರವವನ್ನೂ, ವರ್ಣದ ಸಮಾನತೆಯ ಬಗ್ಗೆ, ಜಗತ್ತಿನ ಶಾಂತಿಗೂ ಪ್ರಯತ್ನಿಸುವದೇ ನಮ್ಮ ಗುರಿ. ಪ್ರತಿ ರಾಷ್ಟ್ರದ ವಿದೇಶನೀತಿಯು ಅದರದರ ಸೈನಿಕ, ಸ್ಥಿತಿ ಹಾಗೂ ಆರ್ಥಿಕ ಶಕ್ತಿಯನ್ನವಲಂಬಿಸಿದೆ. ಭಾರತಕ್ಕೆ ನಿಜವಾಗಿಯೂ ಸೈನಿಕ ಶಕ್ತಿ ಇಲ್ಲವೆಂಬುದು ಎಲ್ಲರಿಗೆ ತಿಳಿದಿದೆ. ಆದರೆ ಜಗತ್ತಿನಲ್ಲಿ ಗಂಡಾಂತರ ಆಗದಂತೆ ತಡೆಯುವ ಪ್ರಭಾವ ಇಷ್ಟು ನಮಗಿದೆ. ನಾಡಿನ ಏಳಿಗೆಯ ಪ್ರಗತಿಗೆ ಸಹಾಯಕವಾದ ಕೆಲಸ ಮಾಡುವ ಗುರಿ ಇದೆ. ಈ ವಿಚಾರದಲ್ಲಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಮಾಡಿ ಅದಕ್ಕಾಗಿ ನಮ್ಮ ಶಕ್ತಿಗೆ ಸರಿಯಾಗಿ ದುಡಿಯುವುದು ನಮ್ಮ ಕರ್ತವ್ಯ. ನಮಗೆ ಸಾಧ್ಯವಿಲ್ಲದ ತಪ್ಪನ್ನು ಹೇಳಿ ಆ ಬಗ್ಗೆ ಏನೂ ಕೆಲಸ ಮಾಡಲಾರದಿದ್ದರೆ ಅದರಿಂದ ನಾವು ಇತರ ರಾಷ್ಟ್ರಗಳ ನಗೆಗೀಡಾಗುವೆವು. ಈ ವರೆಗೆ ನಾವು ಅನುಸರಿಸಿದ ನೀತಿಯಿಂದ ಜಗತ್ತಿನ ಎಲ್ಲ ರಾಷ್ಟ್ರಗಳ ಗೌರವವನ್ನು ಗಳಿಸಿಕೊಂಡಿರುವೆವು.

ಇಂದು ಜಗತ್ತಿನ ಶಕ್ತಿಯುತ ರಾಷ್ಟ್ರಗಳೂ ಕೂಡ ಯುದ್ಧ ಭಯದಿಂದ ಮುಕ್ತವಾಗಿಲ್ಲ. ಈ ಅನೇಕ ಮಹಾ ರಾಷ್ಟ್ರಗಳಂತೆ ಭಾರತವು ಯುದ್ಧ ಭಯದಿಂದ ನಡುಗುತ್ತಿಲ್ಲ. ಪರಿಸ್ಥಿತಿಯನ್ನು ತಿಳಿದುಕೊಳ್ಳಲಾರದ ಮೌಢ್ಯತೆಯಿಂದ ಇದಾಗಿರಬಹುದೆಂದು ಕೆಲವರು ಹೇಳಬಹುದು. ಆದರೆ ಪರಿಸ್ಥಿತಿ ಹಾಗಲ್ಲ. ನಾವು ನಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುವೆವು. ಬೇರೆಯವರ ತಪ್ಪಿಗಾಗಿ ಅವರನ್ನು ಟೀಕಿಸುವದರಿಂದ ಪ್ರಯೋಜನವಿಲ್ಲ.

ಜ. ಕಾರ್ಯಪ್ಪನವರಿಗೆ ಸತ್ಕಾರ ಕೂಟ.

ತಾ. ೧೬ರಲ್ಲಿ ಮಡಿಕೇರಿ ಕೊಡಗು ಸಂಘದವರು ತಮ್ಮ ಹೊಸ ಕಟ್ಟಡದಲ್ಲಿ ಜನರಲ್ ಕಾರ್ಯಪ್ಪನವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿ ಔತಣವನ್ನೇರ್ಪಡಿಸಿದ್ದರು. ನೂರಾರು ಜನರು ಹಾಜರಿದ್ದರಲ್ಲದೆ ಆಹ್ವಾನಿತರಾದ ಕೆಲವು ಕೊಡಗೇತರರೂ ಹಾಜರಿದ್ದರು. ಸಂಘದ ಪ್ರೆಸಿಡೆಂಟರಾದ ಶ್ರೀ ಕೋದಂಡ ಬೆಳ್ಳಿಯಪ್ಪನವರು ಜನರಲ್ ಕಾರ್ಯಪ್ಪನವರು ಅಪ್ರತಿಮ ಯೋಧನಾಗಿ ಸಲ್ಲಿಸಿದ ಸೇವೆಯನ್ನೂ ಕೊಡಗಿಗೆ ತಂದ ಕೀರ್ತಿಯನ್ನೂ ಪ್ರಶಂಸಿಸಿದರು. ಜನರಲ್ ಕಾರ್ಯಪ್ಪನವರು ಉತ್ತರವೀಯುತ್ತಾ ತಾನು ದೇಶಕ್ಕೆ ಏನಾದರೂ ಹಿತ ಮಾಡಿದ್ದರೆ ಅದು ಒಬ್ಬ ಯೋಧನಾಗಿ ಮಾಡಬೇಕಾದ ಕರ್ತವ್ಯವನ್ನು ಮಾಡಿರುವುದಾಗಿಯೂ ಅದನ್ನು ಬೇರೆಯವರು ಮೆಚ್ಚುವುದಾದರೆ ಅದು ಆನಂದದ ವಿಚಾರವೆಂದೂ ಸೈನಿಕರ ಕರ್ತವ್ಯವು ಯುದ್ಧ ಮಾಡುವುದಾದರೂ ಬಿಕ್ಕಟ್ಟಿನ ಕಾಲದಲ್ಲಿ ದೇಶದ ಹಿತಗಳನ್ನು ಬೆಳೆಸುವುದು ನಮ್ಮ ಕರ್ತವ್ಯವೆಂದು ನನಗನಿಸಿ ಅದರಂತೆ ನಾವು ಕೆಲಸ ಮಾಡಿರುವೆವು ಎಂದು ಹೇಳಿದರು. ನಮಗೆ ಬಂದಿರುವ ಸ್ವಾತಂತ್ರ್ಯಕ್ಕಾಗಿ ಅನೇಕರು ಅಸಮಾನ ತ್ಯಾಗ ಮಾಡಿದ್ದಾರೆ. ಮಹಾತ್ಮಾ ಗಾಂಧಿಯವರೇ ಮೊದಲಾದವರು ಪಟ್ಟ ಕಷ್ಟಗಳಿಂದಲೂ, ಸೇನೆಯು ಸಲ್ಲಿಸಿದ ಸೇವೆಯಿಂದಲೂ ಸ್ವಾತಂತ್ರ್ಯ ಬಂತು. ಅದು ಇನ್ನೂ ಚಿಕ್ಕ ಶಿಶುವಾಗಿದೆ. ಅದನ್ನು ರಕ್ಷಿಸಿ ಬೆಳೆಸಲು ದೇಶದವರೆಲ್ಲರೂ ಒಗ್ಗಟ್ಟಾಗಿ ದುಡಿಯಬೇಕು. ಕೊಡಗು ಚಿಕ್ಕ ಪ್ರಾಂತವಾದರೂ ಇಲ್ಲಿಯ ಪ್ರಕೃತಿಯ ಅನುಕೂಲತೆಗಳು ಬೇಕಾದಷ್ಟಿವೆ. ಇದನ್ನು ಆದರ್ಶ ಪ್ರಾಂತವಾಗಿ ಮಾಡುವ ಅನುಕೂಲತೆಗಳಿವೆ. ಆದರೆ ಭಿನ್ನಾಭಿಪ್ರಾಯಗಳು ಚಿಕ್ಕ ಪ್ರದೇಶಗಳಲ್ಲಿ ಸುಲಭದಲ್ಲಿ ಹೆಚ್ಚುವ ಅವಕಾಶಗಳಿವೆ. ಅಧಿಕಾರದಲ್ಲಿರುವವರು ಜನತೆಯ ಸಂಪೂರ್ಣ ಸಹಕಾರವನ್ನು ಪಡೆದು ಮೊರೆಯಿಡುವ ಸ್ವಾತಂತ್ರ್ಯ ಸರಕಾರವನ್ನು ಜವಾಬ್ದಾರಿಯುತವಾಗಿ ನಡೆಸುವುದು ಅವರ ಕರ್ತವ್ಯವಾಗಿದೆ. ದೇಶದಲ್ಲಿ ವಿರೋಧ ಅಭಿಪ್ರಾಯ ವ್ಯಕ್ತಪಡಿಸುವವರನ್ನು ವಿರೋಧ ಪಕ್ಷವೆಂದು ಹುರಿದು ಹಾಕಲು ಯತ್ನಿಸಬಾರದು. ಪ್ರಜಾಪ್ರಭುತ್ವವು ಸರಿಯಾಗಿ ಕೆಲಸ ಮಾಡಬೇಕಾದರೆ ವಿರೋಧ ಪಕ್ಷ ಇರಲೇಬೇಕು. ಹೇಗೂ ಕೊಡಗಿನಲ್ಲಿ ಪ್ರಜಾಪ್ರಭುತ್ವವು ಸರಿಯಾಗಿ ನಡೆದು ಕೊಡಗು ಆದರ್ಶವಾಗಲೆಂದು ಹಾರೈಸುತ್ತೇನೆ ಎಂದು ಹೇಳಿದರು.

॥ ಓದುಗರ ಓಲೆಗಳು ॥

ಇರ್ಪು ಜಾತ್ರೆ.

ಇರ್ಪು ಜಾತ್ರೆಯಲ್ಲಿ ಹಗಲಿನಲ್ಲಿ ಬಾಯೊಣಗಿದವರಿಗೆ ಕುಡಿಯಲಿಕ್ಕೆ ಕಾಫಿ, ಟೀ ನ ಸ್ಯರಿ ಧಾರಾಳವಾಗಿ ಸಿಕ್ಕುತ್ತಿತ್ತು. ಆದರೆ ಹೊತ್ತು ಬಿದ್ದ ಮೇಲೆ ಬಾಯೊಣಗಿದವರಿಗೆ ಕೆಪ್ಪು ಸಂತೆಯಲ್ಲಿ ಹೆಂಡ ಮತ್ತು ಸಾರಾಯಿ ಆದಷ್ಟು ಮಂದಿಯರು ಬಿರುಸಾಗಿ ಮಾರುತಿದ್ದರು! ಆದಷ್ಟು ಜನರು ಕುಡಿದು ಗಂಡಸರು ಹೆಂಗಸರೆಂದು ತಿಳಿದುಕೊಳ್ಳಲಾರದೆ ವರ್ತಿಸಿ ಗಲಾಟೆ ಮಾಡುತ್ತಿದ್ದರು! ಕೆಲವರು ಗದ್ದೆಯ ತೆವರಿಯಲ್ಲಿ ತಲೆ ಕೆಳಗಾಗಿ ಬಿದ್ದು ಬಾಯಿ ಬಡಿಯುತಿದ್ದರು! ಕೆಲವರು ಮಿತ್ರರಾಗಿ ಅಳುತ್ತಿದ್ದರು! ಆದರೆ ಇವರನ್ನು ಹಿಡಿದು ಶಿಕ್ಷಿಸುವುದಾಗಲಿ ಯಾವದೊಂದು ಬಂದೋಬಸ್ತಾಗಲೀ ಅಲ್ಲಿ ಕಂಡುಬರಲಿಲ್ಲ. ಮೇಲಿನ ಸಂಗತಿಯು ನಿಜವಾದ ಪಕ್ಷದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಅಲ್ಲಿಗೆ ಹೋಗಿ ಮಾಡಿದ ಕೆಲಸ ಕಾರ್ಯಗಳೇನು?

'ಯಾತ್ರಿಕ.'

ಕಾಂಗ್ರೆಸು ಸಾರಾಯಿ ಕುಡಿಯಬೇಕೆನ್ನುವದೇ?

ಊರ ಕ್ಲಬ್ಬಿನಲ್ಲಿ ವಾರ್ಷಿಕೋತ್ಸವದ ಊಟ ಏರ್ಪಾಡಾಗಿತ್ತು. ಊಟಕ್ಕೆ ಸದಸ್ಯರೆಲ್ಲಾ ಚಂದಾ ಹಾಕಿದ್ದರು. ಆದರೆ ಸದಸ್ಯರ ಅನುಮತಿ ಇಲ್ಲದ ಊಟಕ್ಕೆ ಸಾರಾಯಿ ಹೂಡಿಸಲಾಗಿತ್ತು. ಆದ್ದರಿಂದ ಒಬ್ಬರು ಇದಕ್ಕೆ ಆಕ್ಷೇಪವೆತ್ತಿದರು. ಈ ಆಕ್ಷೇಪಕ್ಕೆ ಉತ್ತರವಾಗಿ ಕ್ಲಬ್ಬಿನ ಕಾರ್ಯಕಾರಿ ಮಂಡಳದ ಸದಸ್ಯರೂ ಈ ಕ್ಷೇತ್ರದ ಕಾಂಗ್ರೆಸ್ ಎಗ್ಸಿಕ್ಯುಟಿವ್ ಸಮಿತಿಯ ಪ್ರೆಸಿಡೆಂಟರೂ ಆದವರು ಹೇಳಿದ ಮಾತುಗಳಿವು—

"ಇಂದು ನಮ್ಮ ಕಾಂಗ್ರೆಸು ಸರಕಾರವು ಮದ್ಯಪಾನಕ್ಕೆ ಪ್ರೋತ್ಸಾಹ ಕೊಡುತ್ತಿದೆ. ಸರಕಾರ ಏರ್ಪಡಿಸಿದ್ದ ಊಟ, ಪಾರ್ಟಿಗಳಲ್ಲಿ ಮದ್ಯಗಳನ್ನು ಸೇರಿಸುತ್ತಾರೆ. ಆದ್ದರಿಂದ ನಾವು ಇಲ್ಲಿ ಸೇರಿಸಿದ್ದಕ್ಕೆ ಯಾರೂ ಆಕ್ಷೇಪಿಸಬೇಕಾಗಿಲ್ಲ. ಎಂದಿನ ವರೆಗೆ ನಮ್ಮ ಕಾಂಗ್ರೆಸು ಇದಕ್ಕೆ ಪ್ರೋತ್ಸಾಹಕರವಾಗಿ ವರ್ತಿಸುವದೋ ಅಂದಿನ ವರೆಗೆ ನಾವು ಬಹಿರಂಗವಾಗಿ ಕುಡಿಯಬಹುದು". ಎಂದು ಹೇಳಿ ಸಾರಾಯಿಯ ಸೇವನೆಯನ್ನು ತಾವೂ ಮಾಡಿದರು. ಕಾಂಗ್ರೆಸ್ ಪ್ರೆಸಿಡೆಂಟರು ಈ ರೀತಿ ಹೇಳಿದ ಮೇಲೆ ಎಲ್ಲರೂ ಅನುಸರಿಸಿದವರು.

ನನಗೆ ಆಶ್ಚರ್ಯವಾಯಿತು. ಮಹಾತ್ಮಾಗಾಂಧಿಯವರು, ನೆಹರೂ ಮೊದಲಾದವರು ಪಾನ ನಿಷೇಧ ಮಾಡಬೇಕೆಂದು ಹೇಳುತ್ತಿರುವಾಗ ಕಾಂಗ್ರೆಸ್ ಅಧಿಕಾರದ ರಾಜ್ಯಗಳಲ್ಲಿ ಹಲವು ಸರಕಾರಗಳು ಪಾನ ನಿಷೇಧವನ್ನು ಜಾರಿಗೆ ತಂದಿರುವಾಗ ಸಾರಾಯಿ ಕುಡಿಯಬೇಕೆಂದು ವಾದಿಸುತ್ತಿರುವ ನಮ್ಮೂರಿನ ಈ ಕಾಂಗ್ರೆಸಿಗರು ಯಾರ ಅನುಯಾಯಿಗಳು? ನಮ್ಮ ಪ್ರೆಸಿಡೆಂಟರು ಹೇಳುತ್ತಿರುವಂತೆ ಕೊಡಗಿನ ಕಾಂಗ್ರೆಸ್ ಸರಕಾರವು ಔತಣ, ಜಲಪಾನಗಳಲ್ಲಿ ಮದ್ಯಪಾನಕ್ಕೆ ಎಡೆಕೊಡುತ್ತಿದೆಯೇ? ಖಾದಿ ಉಡುವವರು ಕಾಂಗ್ರೆಸು ಎಂದು ತಿರುಗುವವರನ್ನು ನೋಡಿದ ನಮಗೆ ಸಾರಾಯಿ ಕುಡಿಯುವವನ್ನು ಕಾಂಗ್ರೆಸಿನ ನೀತಿಯೆಂದು ಹೇಳುವದು ಕೇಳುವಂತೆ ಆಯಿತೇ? ಸ್ವರ್ಗದಲ್ಲಿರುವ ಗಾಂಧೀಜಿಗೆ ಆತ್ಮಶಾಂತಿ ದೊರೆತಂತಾಗಿರಬಹುದು!

ಕ್ಲಬ್ ಮೆಂಬರು.

ಒಂದು ಪ್ರಶ್ನೆ.

"ಕೊಡಗು" ಪತ್ರಿಕೆಯನ್ನು ಆದಿಯಿಂದಲೂ ಓದುತ್ತಿರುವ ನನಗೆ ಒಂದು ವೈಶಿಷ್ಟ್ಯ ಕಂಡುಬಂದಿದೆ. ಇತರ ಯಾವ ಪತ್ರಿಕೆಯಲ್ಲೂ ಕಾಣದ ಒಂದು ವಿಚಾರ ತೋರುತ್ತದೆ. ಅದು ಕೊಡಗಿನ ಜನರ ವೈಶಿಷ್ಟ್ಯವಿರಬೇಕು. ಈ ವಿಚಾರದಲ್ಲಿ ಹೆಚ್ಚು ತಿಳಿದವರೂ, ಸೂಕ್ಷ್ಮ ನಿರೀಕ್ಷಕರೂ ತಮ್ಮ ಅಭಿಪ್ರಾಯಗಳನ್ನು ಕೊಡಬೇಕೆಂಬ ಆಸೆಯಿಂದ ಈ ಪತ್ರ ಬರೆಯುತ್ತಿರುವದಾಗಿದೆ.

ಕೊಡಗು ಪತ್ರಿಕೆಯ ವರ್ತಮಾನ ಸಂಗ್ರಹದಲ್ಲಿ ಆಗಾಗ್ಗೆ '........ಗ್ರಾಮದ.... ಇಂಥವರಲ್ಲಿ ಯಾರದೋ ದನ ಕೆಲವು ತಿಂಗಳಿಂದ ಸೇರಿಕೊಂಡಿದೆ. ವಾರೀಸುದಾರರು ತಕ್ಕ ರುಜುವಾತಿನಿಂದ ಹೊಡೆದುಕೊಂಡು ಹೋಗಬಹುದು' ಎಂಬ ವಾರ್ತೆಗಳನ್ನು ಓದುತ್ತೇವೆ. ಇದು ನಿಜವಾಗಿಯೂ ಪರಹಿತ ಬುದ್ಧಿಯ ಒಂದು ಚಿಹ್ನೆ. ಇದರಿಂದ ಅನೇಕರಿಗೆ ಲಾಭವಾಗುತ್ತದೆ. ಆದರೆ ಈ ರೀತಿಯಲ್ಲಿ ದನಗಳು ಕಾಣೆಯಾದ ವಾರ್ತೆ ಹೆಚ್ಚು ಪ್ರಕಟವಾಗುವದೇ ವಿನಾ ಚಿನ್ನದ ವಸ್ತುಗಳಾಗಲೀ, ಹಣವಾಗಲೀ ಬೇರೆ ಅಮೂಲ್ಯ ಸಾಮಾನುಗಳಾಗಲೀ ಬಿದ್ದು ಸಿಕ್ಕಿದ ವರ್ತಮಾನ ಪ್ರಕಟವಾಗುವದು ಕಡಿಮೆ!

ಇದನ್ನು ಆಲೋಚಿಸುವಾಗ ದನ ಕರುಗಳನ್ನು ಸುಲಭವಾಗಿ ತಮ್ಮದಾಗಿ ಮಾಡಿಕೊಳ್ಳುವದು ಕಠಿಣವಾದುದರಿಂದ ಜನತೆ ಹೀಗೆ ಮಾಡುತ್ತಿರಬೇಕೆಂದೆನಿಸುತ್ತದೆ. ಏಕೆಂದರೆ ಕೊಡಗಿನಲ್ಲಿ ಜಾನುವಾರುಗಳು ಕಾಣೆಯಾಗುವದಕ್ಕಿಂಥಾ ಹೆಚ್ಚು ಇತರ ಅಮೂಲ್ಯ ವಸ್ತುಗಳು ಹಾಳಾಗುವದೂ, ಕಾಣೆಯಾಗುವದೂ ಹೆಚ್ಚಿದೆಯೆನ್ನಬಹುದು. ಹಾಗಿರುವಾಗ ಅವುಗಳ ವಿಚಾರ ಪತ್ರಿಕೆಯಲ್ಲಿ ಪ್ರಕಟವಾಗುವದಿಲ್ಲ. ಜನರು ತಿಳಿಸುವದೂ ಇಲ್ಲ. ಬದಲು ಕಳೆಕೊಂಡವರು '....ಬಸ್ಸಿನಲ್ಲಿ ನನ್ನ ಒಂದು ಕುಪ್ಪಸ, ವಸ್ತ್ರ ಇರುವ ಇಲ್ಲವೇ ಕೆಲವು ನಗಗಳಿರುವ ಪೆಟ್ಟಿಗೆ ಕಾಣೆಯಾಗಿದೆ. ದೊರೆತವರು ಕೊಟ್ಟರೆ ರೂ. ೩೫/—ಬಹುಮಾನ' ವೆಂದು ಪ್ರಕಟಿಸಿದರೂ ಪ್ರಯೋಜನವಾಗುತ್ತಿಲ್ಲ. ಆದ್ದರಿಂದ ಅರಗಿಸಿಕೊಳ್ಳಲು ಸಾಧ್ಯವಿರುವದನ್ನು, ಬೇರೆಯವರ ಕಣ್ಣಿಗೆ ಗೋಚರವಾಗದುದನ್ನು ತನ್ನದಾಗಿ ಮಾಡಿಕೊಳ್ಳುವ ಪ್ರವೃತ್ತಿ ನಮ್ಮ ಸಮಾಜದಲ್ಲಿದೆಯೆಂದೂ, ಬೇರೆಯವರು ಕಂಡಾಗ ಇಲ್ಲವೇ ಯಾರಿಗೂ ತೋರದಂತೆ ಬಚ್ಚಿಡಲು ಸಾಧ್ಯವಾಗದಾಗ ಧರ್ಮಬುದ್ಧಿಯ ಪ್ರದರ್ಶನ ಆಗುತ್ತಿದೆಯೆಂದೂ ಹೇಳಿದರೆ ತಪ್ಪಾಗುವದೇ?

— ನಿರೀಕ್ಷಕ.

ಮೋದಿಯವರ ಸತ್ಕಾರ ನಿಧಿ.

ಡಾ. ಎಂ. ಸಿ. ಮೋದಿಯವರು ಕೊಡಗಿಗೆ ಬಂದು ತಮ್ಮ ಉಚಿತ ಚಿಕಿತ್ಸಾ ಕಾರ್ಯವನ್ನು ಕೈಕೊಂಡು ಅನೇಕ ಜನರಿಗೆ ಹಿತವನ್ನು ಮಾಡಿದರು. ಅವರ ಈ ಪುಣ್ಯ ಕಾರ್ಯವನ್ನು ಪ್ರಸಂಶಿಸಿ ಸತ್ಕರಿಸಲು ಅವರಿಗೊಂದು ನಿಧಿ ಸಂಗ್ರಹ ಮಾಡಿ ಅರ್ಪಿಸಲಾಯಿತು. ಮಡಿಕೇರಿ ಕೋಟೆಯ ಎದುರುಗಡೆಯಲ್ಲಿಯೇ ಸತ್ಕಾರ ಸಮಾರಂಭ ಏರ್ಪಟ್ಟಿತು. ಆ ದಿವಸ ಅವರಿಗೆ ಒಟ್ಟು ಮೂರು ಸಾವಿರ ರೂಪಾಯಿಗಳ ಥೈಲಿಯನ್ನು ಅರ್ಪಿಸಲಾಯಿತು. ಆದರೆ ನಂತರವೂ ಕೂಡ ಈ ನಿಧಿಗೆ ನಾಪೋಕ್ಲು ಬೇರೆ ಕಡೆಗಳಿಂದ ಹಣ ಸಂಗ್ರಹವಾದ ವಿಚಾರ ಪತ್ರಿಕೆಗಳಿಂದ ತಿಳಿದುಬಂತು. ಆದ್ದರಿಂದ ಈ ನಿಧಿ ಸಂಗ್ರಹಿಸಿದವರು ದಯವಿಟ್ಟು ಅದರ ಲೆಕ್ಕವನ್ನು ವಿವರವಾಗಿ ಸಾರ್ವಜನಿಕರ ಅವಗಾಹನೆಗೆ ಬಗ್ಗೆ ಪ್ರಕಟಿಸುವದು ಒಳಿತಾಗಿದೆ. ಇಲ್ಲದಿದ್ದರೆ ಹಲವರ ಮನಸ್ಸಿನಲ್ಲಿ ಈ ಬಗ್ಗೆ ಸಂಶಯಕ್ಕೆ ಎಡೆ ಬರುತ್ತೆ. ಅದ್ದರಿಂದ ಐದು ರೂಪಾಯಿಗಳಿಗೆ ಮೇಲ್ಪಟ್ಟು ಹಣ ಸಹಾಯ ಮಾಡಿದವರ ಹೆಸರುಗಳನ್ನೂ ಅದಕ್ಕೆ ಕಡಿಮೆಯಾಗಿ ಸಂಗ್ರಹವಾದ ಹಣದ ಮೊತ್ತವನ್ನೂ ಪ್ರಕಟಿಸಬೇಕಾಗಿ ನಿಧಿಯ ವ್ಯವಸ್ಥಾಪಕರನ್ನು ಕೇಳಿಕೊಳ್ಳುವದಾಗಿದೆ.

—ಚಂದಾ ತೆತ್ತವ.

ವಿದ್ಯಾರ್ಥಿ ವೇತನಗಳು.

ಕೊಡಗಿನ ಸರಕಾರಿ ಕಾಲೇಜಿನಲ್ಲಿ ಬಡತನದ ಹೊಡೆತದಿಂದ ತೊಂದರೆಗೊಳಗಾಗಿ ಪ್ರಾಣವನ್ನು ಮುಡಿಕೊಂಡು ಕಷ್ಟದಿಂದ ವಿದ್ಯಾಭ್ಯಾಸ ಮುಂದರಿಸುವ ವಿದ್ಯಾರ್ಥಿಗಳಿದ್ದಾರೆ. ರಜೆ ಇದ್ದಾಗ ಗ್ರಾಮ ಗ್ರಾಮಗಳಲ್ಲಿ ಅಲೆದಾಡಿ ಸಜ್ಜನರಿಂದ ಚಂದಾ ಎತ್ತಿ ವ್ಯಾಸಂಗ ಮಾಡುವವರಿದ್ದಾರೆ. ಇಂಥಾವರಿಗೆ ವಿದ್ಯಾರ್ಥಿ ವೇತನ ನಿಜವಾಗಿ ದೊರೆಯಬೇಕಲ್ಲದೆ ಅನುಕೂಲವಿರುವವರ ಮಕ್ಕಳಿಗಲ್ಲ. ಶಾಲಾ ಕಾಲೇಜುಗಳಲ್ಲಿ ಉಚ್ಚ ದರ್ಜೆಯಲ್ಲಿ ತೇರ್ಗಡೆಯಾದ ಬಾಲಕರಿಗೆ "ಮೆರಿಟ್" ವಿದ್ಯಾರ್ಥಿವೇತನಗಳಿದ್ದರೂ ಈ ವರ್ಷ ಈ ವರೆಗೆ ಯಾರಿಗೂ ಕೊಟ್ಟಿರುವಂತೆ ಕಂಡುಬರುವುದಿಲ್ಲ. ಮತ್ತೆ ಬಡ ವಿದ್ಯಾರ್ಥಿಗಳಿಗೆಂದಿರುವ ವಿದ್ಯಾರ್ಥಿ ವೇತನಗಳನ್ನು ವೇತನ ಸಮಿತಿಯವರು ತಮ್ಮ ಹಿತ ಸಂಬಂಧದ ಆಲೋಚನೆಯಂತೆ ಕೊಟ್ಟಿರುವದು ತೋರುತ್ತಿದೆ. ದೊಡ್ಡ ಅಧಿಕಾರಿಯೊಬ್ಬರ ಮಗುವು ಕಾಲೇಜಿನಲ್ಲಿ ಓದುತ್ತಿದ್ದು ಅವರ ಅನುಕೂಲತೆಗಾಗಿ ವಿದ್ಯಾರ್ಥಿ ವೇತನ ನಿಯಮವನ್ನು ಹೊಸದಾಗಿ ರಚಿಸಿ ಅವರಿಗೆ ವಿದ್ಯಾರ್ಥಿ ವೇತನ ಕೊಡುವ ಏರ್ಪಾಡಾಗಿದೆಯಂತೆ. ಇದು ನಿಜವಿದ್ದರೆ ಈ ವರ್ತನೆಗಳು ಖಂಡಿಸಲ್ಪಡಬೇಕು. ಸ್ಕಾಲರ್ ಶಿಪ್ಪಿಗಾಗಿ ಸಮಿತಿಯವರನ್ನು ಕಂಡು ಅಧಿಕಾರಿಗಳಿಗೆ ಕೈಮುಗಿದು ಸೋತ ನಾನು ಒಬ್ಬರಲ್ಲಿಗೆ ಹೋಗಿ ನನ್ನ ಕಷ್ಟಗಳನ್ನು ಹೇಳಿಕೊಂಡಾಗ ಆ ದೊಡ್ಡ ಅಧಿಕಾರಿಯು "ನೀನು ನಿನ್ನ ಕಷ್ಟವನ್ನು ಹಿಂದೆಯೇ ಹೇಳಬೇಕಿತ್ತು. ಈ ವರ್ಷ ಚೆನ್ನಾಗಿ ಓದಿ ಪಾಸಾದರೆ ಎಲ್ಲಾದರೂ ಏನಾದರೂ ಒಂದು ಕೆಲಸ ಕೊಡುವ ಆಲೋಚನೆಮಾಡಬಾಗುವುದು" ಎಂದು ಹೇಳಿದರು. ಇದಕ್ಕೇನೆನ್ನಬೇಕು?

ಸಮಿತಿಯವರು ಬಡ ವಿದ್ಯಾರ್ಥಿಗಳ ಪರಿಸ್ಥಿತಿಯನ್ನು ಸ್ವತಃ ಪರಿಶೀಲಿಸಿ ವಿದ್ಯಾರ್ಥಿ ವೇತನಗಳನ್ನು ಕೊಡದೆ ಅನ್ಯಾಯವಾಗುತ್ತಿರುವುದರಿಂದ ಅನೇಕ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಅರ್ಧದಲ್ಲಿ ನಿಲ್ಲಬೇಕಾಗುತ್ತದೆ

—ಒಬ್ಬ ಬಡ ವಿದ್ಯಾರ್ಥಿ.

Office of the District Supt. of Police
Coorg, Mercara. Dated 10-2-53.

Notice

It is hereby notified for general information that the following vehicles will be sold in public auction on Friday the 13th March '53 at 11 A. M. in front of the Office of the District Superintendent of Police, Coorg Mercara. Successful bidders should pay the bid amount immediately after the sale The sale is subject to the approval of the Government of Coorg.

One Police Jeep C. G. A. 573 and one Truck C. G. A. 734.

1. Jeep No. C. G. A. 573 Tourer Type-1943 Model-Standard Willys Jeep-Four Cylinders-16 H. P.

2. One ton Truck No. C. G. A. 734-Dodge 1948 model-Six Cylinders-30 H. P

M. P. Muthanna.
Dist. Supt. of Police. Coorg.

ಬ್ರಿಟನ್ನಿನಲ್ಲಿ ಈಚೆಗೆ ಪ್ರಾಪ್ತವಾದ ಭಾರಿ ಸಮುದ್ರ ಮಾರುತಗಳ ಮತ್ತು ಪ್ರವಾಹಗಳ ಹಾವಳಿಯಿಂದ ನೊಂದವರ ಬಗ್ಗೆ ಭಾರತದ ಪ್ರಧಾನಿ ಜವಾಹರ್‌ಲಾಲ್ ನೆಹರೂರವರು ಭಾರತದ ಸಹಾನುಭೂತಿ ಸಂದೇಶವನ್ನು ಕಳುಹಿಸಿದ್ದಕ್ಕಾಗಿ, ಬ್ರಿಟಿಷ್ ಪ್ರಧಾನಿ ಮಿ. ಚರ್ಚಿಲ್‌ರವರು ಬ್ರಿಟಿಷ್ ಮಂತ್ರಿಮಂಡಲದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ತಮ್ಮ ಉತ್ತರದಲ್ಲಿ ಸೂಚಿಸಿದ್ದಾರೆ.

ಕಳೆದ ವರ್ಷ ನೈರುತ್ಯ ಮಾರುತ ತಪ್ಪಿದುದರಿಂದಾಗಿ ಹೈದರಾಬಾದ್ ಪ್ರಾಂತ್ಯದ ಎಂಟು ಜಿಲ್ಲೆಗಳ ಹಲವು ಭಾಗಗಳಲ್ಲಿ ಕುಡಿಯುವ ನೀರಿಗೆ ಅಭಾವವಾಗಿದೆಯೆಂದು ಅಧಿಕೃತವಾಗಿ ತಿಳಿದುಬಂದಿದೆ.

ನಗುಮಲ್ಲಿಗೆ

ಮದ್ಯಪಾನ ಮಾಡಬಾರದೆಂದು ಭಾಷಣಕರ್ತರೊಬ್ಬರು ಹೇಳುತ್ತಿದ್ದರು. ಅವರ ಮುಂದೆ ಮೇಜಿನ ಮೇಲೆ ಒಂದು ಗ್ಲಾಸಿನಲ್ಲಿ ಸಾರಾಯಿಯೂ ಇನ್ನೊಂದರಲ್ಲಿ ನೀರೂ ಇಡಲ್ಪಟ್ಟಿತ್ತು. ನೀರಿರುವ ಗ್ಲಾಸಿನಲ್ಲಿ ಒಂದು ಚಿಕ್ಕ ಜೀವಂತ ಮೀನು ಇತ್ತು. ಭಾಷಣಕರ್ತರು ಮದ್ಯಪಾನದ ದುಷ್ಪರಿಣಾಮದ ಉದಾಹರಣೆ ತೋರಿಸಲು ಹೀಗೆಂದರು.

'ಮಹನೀಯರೇ, ನೀರಿನಲ್ಲಿ ಈ ಮೀನು ಸುಖವಾಗಿ ಜೀವಿಸುತ್ತಿದೆ. ಆದರೆ ಅದನ್ನು ಈ ಸಾರಾಯಿಯಲ್ಲಿ ಬಿಡುವೆನು. (ಮೀನು ಕ್ಷಣಾರ್ಧದಲ್ಲಿ ಹಾರಾಡಿ ಸತ್ತಿತು.) ನೋಡಿ ಸಾರಾಯಿಯ ದುಷ್ಪರಿಣಾಮ. ಸಾರಾಯಿಯು ಮಾನವನ ಜೀವ ತೆಗೆಯುವ ವಸ್ತು' ಎಂದರು.

ಭಾಷಣ ಮುಗಿದ ಮೇಲೆ ಹತ್ತಾರು ಜನರು ಭಾಷಣಕರ್ತರನ್ನು ಸುತ್ತುಗಟ್ಟಿ "ಅದು ಎಂಥಾ ಸಾರಾಯಿ. ನಮ್ಮ ಹೊಟ್ಟೆಯಲ್ಲಿ ಹುಳ ಹೆಚ್ಚಿದೆಯೆಂದು ಡಾಕ್ಟರು ಹೇಳುತ್ತಿದ್ದಾರೆ. ಅದನ್ನು ಉಪಯೋಗಿಸಿದರೆ ಹಿತವಾಗಬಹುದು" ಎಂದು ಕೇಳತೊಡಗಿದರು.

• • •

ಬಾಗಿಲಿಗೆ ಬಣ್ಣ ಬಳಿಯುತ್ತಿದ್ದವನೊಬ್ಬನನ್ನು ನೋಡುತ್ತಿದ್ದ ಹುಡುಗನು ಕೇಳಿದನು 'ನೀನು ಎಷ್ಟು ಕೋಟಿಂಗ್ ಕೊಡುವೆ?'

'ಎರಡು' ಪೇಂಟರನೆಂದ

'ನೀನು ಮತ್ತೊಂದು ಕೋಟಿಂಗ್ ಕೊಡುವದಾದರೆ ಅದು ಓವರ್ ಕೋಟಾಗುವದಲ್ಲವೇ?' ಹುಡುಗನು ಕೇಳಿದನು.

'ಇಲ್ಲ, ಅದು ವೇಸ್ಟ್ ಕೋಟಾಗುವದು' ಪೇಂಟರನೆಂದ.

• • •

ರಾಮು ಶಾಲೆಯಲ್ಲಿ ಬಹು ತುಂಟ ಹುಡುಗನಾಗಿದ್ದ. ಒಂದು ದಿನ ಅಧ್ಯಾಪಕರು ಆತನನ್ನು ಗದರಿಸಿ ಮೇಜಿನ ಹತ್ತಿರ ಕರೆದರು. ಇದರಲ್ಲಿ ಗಂಡಾಂತರವಿದೆಯೆಂದು ತಿಳಿದ ರಾಮುವು ಪುಸ್ತಕ ಒಂದನ್ನು ತನ್ನ ಸುರುವಾಲಿನ ಹಿಂಬದಿಗಾಗಿ ಒಳಗೆ ಸೇರಿಸಿಕೊಂಡನು

ಅಧ್ಯಾಪಕರು ಬೆತ್ತವನ್ನು ಸರಿಪಡಿಸುತ್ತಾ, 'ಈಗ ನಮ್ಮೊಳಗೆ ಒಂದು ಚಿಕ್ಕ ನಾಟಕವಾಗುವದು' ಎಂದರು.

'ಅದಕ್ಕಾಗಿ ಮೊದಲೇ ನನ್ನ ಸೀಟನ್ನು ಬುಕ್ ಮಾಡಿರುವೆನು' ರಾಮು ಎಂದನು.

• * *

ಮಗು— ಅಮ್ಮಾ, ನಾನೂ ಈಜಲಿಕ್ಕೆ ಕಲಿಯುತ್ತೇನಮ್ಮಾ

ತಾಯಿ— ಬೇಡ ಮಗೂ, ನೀರು ಬಹು ಆಳವಿದೆ.

ಮಗು— ಹಾಗಾದರೆ ತಂದೆ ಈಜುತ್ತಿದ್ದಾರೆ!

ತಾಯಿ— ಅವರು ಇನ್ಶೂರು ಮಾಡಿದ್ದಾರೆ ಮಗು.

• • •

ಕನ್ನಡಕ ವ್ಯಾಪಾರ ಮಾಡುವವನೊಬ್ಬನು ಹೇಗೆ ವ್ಯಾಪಾರ ಮಾಡಬೇಕೆಂಬುದನ್ನು ತನ್ನ ಮಗನಿಗೆ ಬೋಧಿಸುತ್ತಿದ್ದನು.

ಗಿರಾಕಿಗೆ ಕನ್ನಡಿ ಸರಿಮಾಡಿ ಕೊಟ್ಟ ನಂತರ ಗಿರಾಕಿಯು ಬೆಲೆ ಎಷ್ಟೆಂದು ಕೇಳಿದಾಗ "ಹತ್ತು ರೂಪಾಯಿ" ಎಂದು ಹೇಳು ಆತನು ಬೆಚ್ಚಿ ಬೀಳದಿದ್ದರೆ ಸಮಾಧಾನದಿಂದ "ಅದು ಕನ್ನಡಿಯ ಫ್ರೇಮಿಗೆ. ಕನ್ನಡಿಗೆ ಹತ್ತು ರೂಪಾಯಿ" ಎನ್ನು. ಆತನು ಮತ್ತೂ ಬೆಚ್ಚಿ ಬೀಳದಿದ್ದರೆ "ಪ್ರತೀ ಕನ್ನಡಿಗೆ" ಎಂದು ಸೇರಿಸು.

* * *

ಅಚ್ಚು ಕೂಟದ (ಪ್ರೆಸ್) ಸ್ವತಂತ್ರ ಅಧಿಕಾರದ ಉದಾಹರಣೆಗಾಗಿ ದೇಶೀಯ ಪತ್ರಿಕೆಯೊಂದರಿಂದ ಇದನ್ನು ಕೊಡಲಾಗಿದೆ.

"ವರ್ತಮಾನಗಳ ಹೆಚ್ಚಳದಿಂದ ಪತ್ರಿಕೆಯಲ್ಲಿ ಸ್ಥಳ ಸಂಕೋಚವಾದ್ದರಿಂದ ಅನೇಕ ಜನರ ಮರಣಗಳನ್ನು ಮುಂದಿನ ವಾರಕ್ಕೆ ಮುಂದರಿಸಿರುವೆವು"

* • •

ಮನೆಗೆ ಬಂದ ಅತಿಥಿಗೆ ಅತಿಥಿ ಕೋಣೆಯಲ್ಲಿ ಮಲಗುವ ಏರ್ಪಾಡು ಮಾಡಿ ಮನೆಯ ಸೇವಕನು "ನೀವು ಇಲ್ಲಿ ಮಲಗಿರಿ" ಎಂದನು.

ಕೋಣೆಯ ವಾತಾವರಣವನ್ನು ನೋಡಿ ಗಾಬರಿಗೊಂಡ ಅತಿಥಿಯು "ಈ ಕೋಣೆಯಲ್ಲಿ ಈ ಮೊದಲು ಏನಾದರು ಅಪಾಯ, ವಿಶೇಷಗಳಾಗಿವೆಯೇ?" ಎಂದು ಕೇಳಿದನು.

"ಕಳೆದ ಐವತ್ತು ವರ್ಷದಿಂದ ಏನೂ ಆಗಲಿಲ್ಲ." ಸೇವಕನೆಂದನು.

"ಐವತ್ತು ವರ್ಷದಲ್ಲಿ ಆದ ಘಟನೆ ಏನು?"

"ಈ ಕೋಣೆಯಲ್ಲಿ ರಾತ್ರಿಯನ್ನು ಕಳೆದ ಅತಿಥಿಯೊಬ್ಬನು ಮೂರನೆ ದಿನ ಬೆಳಿಗ್ಗೆ ಕಾಫಿ ಕುಡಿಯಲು ಬಂದನು!"

• • •

ಬಸ್ಸುಗಳ ದರವನ್ನು ಮೈಲಿಗೆ ಒಂದಾಣೆಯಿಂದ ಅರ್ಧಾಣೆಗೆ ಇಳಿಸಲಾಗುವದೆಂಬ ನಿರ್ಣಯವನ್ನು ವಿರೋಧಿಸಲು ಸಭೆಯೊಂದು ನೆರೆದಿತ್ತು. ಒಬ್ಬರು ಮಾತಾಡುತ್ತಾ ಹೇಳಿದರು. "ಈ ಸಭೆಯ ಗುರಿಯೇನೆಂದು ನನಗರ್ಥವಾಗುವದಿಲ್ಲ. ಬಸ್ಸಿನ ದರವನ್ನು ಕಡಿಮೆ ಮಾಡುವುದಕ್ಕೆ ನಾವೇಕೆ ವಿರೋಧಿಸಬೇಕೆಂದು ನನಗೆ ತಿಳಿಯದು."

ಮೀಟಿಂಗನ್ನು ಏರ್ಪಡಿಸಿದ ಮಹನಿಯರು ಹೇಳಿದರು. "ಮೊದಲು ಒಂದು ಮೈಲು ನಡೆದು ನಾವು ಒಂದಾಣೆ ಉಳಿಕೆ ಮಾಡುತ್ತಿದ್ದರೆ ಈಗ ಕೇವಲ ಅರ್ಧಾಣೆಯೇ ಉಳಿಕೆಯಾಗುವದು. ಇದು ಅನ್ಯಾಯ"

• • •

"ಬ್ರಿಟಿಷರ ನೌಕಾದಳವು ಪ್ರತೀ ಸಾರಿ ಜಯ ಪಡೆಯಲು ಕಾರಣವೇನು" ಫ್ರೆಂಚ್ ಸೈನಿಕನೊಬ್ಬನು ಕೇಳಿದ.

"ಅದು ಸುಲಭ. ಪ್ರತಿಸಾರಿಗೆ ಮುಂಚಿತವಾಗಿ ನಾವು ದೇವರ ಪ್ರಾರ್ಥನೆ ಮಾಡುತ್ತೇವೆ" ಬ್ರಿಟಿಷ್ ಸೈನಿಕನು ಹೇಳಿದ.

ನಾವೂ ಕೂಡ ಪ್ರಾರ್ಥಿಸುವೆವಲ್ಲ" ಫ್ರೆಂಚನು ಹೇಳಿದ.

"ಆದರೆ ನಾವು ಇಂಗ್ಲಿಷ್ ಭಾಷೆಯಲ್ಲಿ ಪ್ರಾರ್ಥಿಸುವದು" ಬ್ರಿಟಿಷನೆಂದನು.

• • •

ಹುಚ್ಚರ ಹಟ್ಟಿ

ದೀನ ಜನಕೆ ಯಾವ ಹಾದಿ?

ಹೊಟ್ಟೆಗಿಲ್ಲ ಬಟ್ಟೆಗೆಲ್ಲಿ?
ದೀನ ಜನಕೆ ಶಾಂತಿ ಎಲ್ಲಿ!

ದೀನ ಜನಕೆ ಯಾವ ಹಾದಿ
ಸುತ್ತು ಮುತ್ತಲೆಲ್ಲ ಬೀದಿ
ಕಣ್ಣಾರಳಿಸಿ ಕಕ್ಕವಿಕ್ಕಿ
ಬಾಯ್ ಬಿಡುತಿದೆ ಜೀವ ಹಕ್ಕಿ

ಆಳ ತಿಳಿಯದಾಳದಿಂದ
ಕುದಿದೆದ್ದಿದೆ ರಭಸದಿಂದ
ಘೋರ ಘೋರ ಘೋರವೆಂದು
ಮೊರೆ ಇಡುತಿದೆ ಒಡಲಿನಿಂದ

ಬಾಳ ಧ್ಯಾನದಿಂದ ಕಾದು
ಒಡಲ ಬೆಂಕಿಯಿಂದ ಸೀದು
ಉಗಿಯಾಗುತ ಊರ್ಧ್ವದಿಸೆಗೆ
ಹಬ್ಬುತಿದೆ ಬಾನ ಸೇರಿ

ಗುಡುಗು ಸಿಡಿಲಿನಿಂದ ಗುಡುಗಿ
ಮಿಂಚಲಾಡಿ ಮೋಡ ಉಡುಗಿ
ಹನಿಗರೆದಿತು ಧರೆ ಮೆರೆದಿತು
ಸರ್ವ ಸಮದ ನೀರ್ ಬೆರೆದಿತು.

ಕಾಂಗ್ರೆಸ್ ಕಾರ್ಯಕಾರಿ ಮಂಡಳಿ.

ಹೈದರಾಬಾದು ಕಾಂಗ್ರೆಸ್ ಅಧಿವೇಶನದಲ್ಲಿ ಆರನೆ ಬಾರಿಗೆ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಪಂಡಿತ ಜವಾಹರಲಾಲ್ ನೆಹರೂರವರು ತಮ್ಮ ಕಾರ್ಯಕಾರಿ ಮಂಡಳಿಯ ಹೆಸರನ್ನು ಪ್ರಕಟಿಸಿರುವರು. ೨೦ ಜನರಿರುವ ಈ ಸಮಿತಿಯ ಸದಸ್ಯರಲ್ಲಿ ೧೮ ಜನರ ಹೆಸರು ಪ್ರಕಟವಾಗಿದೆ. ಉಳಿದೆರಡು ಸ್ಥಳಗಳಿಗೆ ಇನ್ನೂ ನೇಮಕವಾಗಿಲ್ಲ. ಈಗ ನೇಮಕವಾಗಿರುವವರ ಹೆಸರುಗಳು ಹೀಗಿವೆ:

ಶ್ರೀ ಜವಾಹರ್‌ಲಾಲ್ ನೆಹರೂ, ಮೌಲಾನಾ ಆಜಾದ್, ರಾಜಗೋಪಾಲಾಚಾರಿ, ಪಂಡಿತ ಗೋವಿಂದ ವಲ್ಲಭ ಪಂತ್, ಜಗಜ್ಜೀವನರಾಮ್, ರಫಿ ಅಹಮ್ಮದ್ ಕಿದ್ವಾಯಿ, ನಭಾ ಕೃಷ್ಣ ಚೌಧರಿ, ಖಂಡೂಬಾಯಿ ದೇಸಾಯಿ, ಮೋಹನ್‌ಲಾಲ್ ಸಕ್ಸೇನಾ, ಎನ್. ಸಂಜೀವ ರೆಡ್ಡಿ, ಎ. ವಿ. ಕುಟ್ಟಿಮಾಲು ಅಮ್ಮ, ಕೆ. ಪಿ. ಮಾಧವನ್ ನಾಯರ್, ದೇವಕೀ ನಂದನ ನರೇನ್, ಮುರಾರಜಿ ದೇಸಾಯಿ, ಯು. ಶ್ರೀನಿವಾಸ ಮಲ್ಯ, ಬಲವಂತರಾಯ ಮೆಹತಾ, ಶ್ರೀಮನ್ನಾರಾಯಣ ಅಗರವಾಲ್ ಮತ್ತು ಗುರುಮುಖ್ ಸಿಂಗ್. ಮಾರ್ಚಿ ತಿಂಗಳ ೮ ಮತ್ತು ೯ರಲ್ಲಿ ಕಾರ್ಯಕಾರಿ ಮಂಡಳಿಯ ಪ್ರಥಮ ಸಭೆಯು ದಿಲ್ಲಿಯಲ್ಲಿ ನಡೆಯುವದು.

ಪ್ಲಾನಿಂಗ್ ಮಂತ್ರಿಗಳಿಗೆ ದೆಹಲಿ ಪ್ರದೇಶದ ವಿದ್ಯಾರ್ಥಿ ಕಾಂಗ್ರೆಸ್‌ನವರು ಒಂದು ಪತ್ರ ಬರೆದು "ವಿದ್ಯಾರ್ಥಿನಿಲಯ" ಕಟ್ಟಲಿರುವದಕ್ಕೆ ತಾವುಗಳು ಉಚಿತ ಕಾಮಗಾರಿ ಕಾರ್ಯ ಮಾಡಿಕೊಡಲಿರುವದಾಗಿಯೂ ಸಾಕಷ್ಟು ಮನೆ ಕಟ್ಟುವ ಸಾಮಾನು ಒದಗಿಸಿ ಕೊಡಬೇಕೆಂದೂ ತಿಳಿಸಿರುತ್ತಾರೆ. ವಿದ್ಯಾರ್ಥಿಗಳ ಈ ರೀತಿಯ ಸೇವೆಯಿಂದ ಮಿತವ್ಯಯ ಸಾಧನೆಯಾಗುವುದಲ್ಲದೆ ಕೂಲಿ ಕೆಲಸವೆಂಬ ತಾರತಮ್ಯ ಭಾವನೆಯು ಮಾಯವಾಗುವದೆಂದೂ ತಿಳಿಸಿರುತ್ತಾರೆ.

ವಾಂತಿ ಬೇಧಿ ರೋಗ

(ಆರೋಗ್ಯ ಇಲಾಖೆಯಿಂದ)

ಈ ರೋಗವು ಕಾಯಿಲಸ್ಥನ ಉಪಚಾರದಲ್ಲಿ ಉಪಯೋಗಿಸುವ ಪಾತ್ರೆಗಳ ಮುಖಾಂತರ ನಾವು ಕುಡಿಯುವ ನೀರು ಕೆಟ್ಟು ಹರಡುವುದು.

ಒಂದು ಗ್ರಾಮವು ಅಲ್ಲಿರತಕ್ಕ ನದಿಯನ್ನೇ ಕೆಡಿಸಬಹುದು. ಆ ನದಿಯು ಆ ಗ್ರಾಮದಿಂದ ಮುಂದೆ ಹೋಗುವಾಗ ಅದರ ಇಬ್ಬದಿಯಲ್ಲಿರತಕ್ಕ ಗ್ರಾಮಗಳಲ್ಲಿಯೂ ಕಾಯಿಲೆಯನ್ನು ಹರಡಬಹುದು.

ಸರಿಯಾದ ಕಟ್ಟಡವಿಲ್ಲದೆ ಇರತಕ್ಕ ಬಾವಿಯ ನೀರು ಸಹ ಕೆಡಬಹುದು, ಮತ್ತು ಸರಿಯಾದ ಬಾವಿಯಾದರೂ ರೋಗಿಯ ಮನೆಯಲ್ಲಿರತಕ್ಕ ಪಾತ್ರೆಗಳನ್ನು ಬಾವಿಯಲ್ಲಿ ಬಿಡುವುದರಿಂದ ನೀರು ಕೆಡುವುದು.

ಬಾವಿಯ ಸಮೀಪದಲ್ಲಿ ಖಾಯಿಲಸ್ಥರ ಒಸ್ತ್ರಗಳನ್ನು ಒಗೆಯಬಾರದು. ಬಾವಿಯಿಂದ ನೀರನ್ನು ತಗೆದುಕೊಳ್ಳುವಾಗ ಇದಕ್ಕಾಗಿ ಪ್ರತ್ಯೇಕವಾಗಿ ಹಗ್ಗಕ್ಕೆ ಕಟ್ಟಿದ ಪಾತ್ರೆಯಿಂದಲೇ ನೀರನ್ನು ತೆಗೆದುಕೊಳ್ಳಬೇಕು. ಬೇರೆ ಪಾತ್ರೆಯನ್ನು ಉಪಯೋಗಿಸಕೂಡದು.

ಬಾವಿಗೆ ಕಡಿಮೆ ಪಕ್ಷ ಒಂದು ನೂರು ಅಡಿ ದೂರದಲ್ಲಿ ಕಕ್ಕಸು ಇರಕೂಡದು.

ಬಾವಿಯ ಸುತ್ತುಮುತ್ತಲ ಗೋಡೆಯ ಮೇಲ ಭಾಗಕ್ಕೆ ಇಳಿಜಾರಾಗಿರಬೇಕು

ನೊಣಗಳು ರೋಗಿಯ ಮಲ ಮೂತ್ರಗಳ ಮೇಲೆ ಕೂತ ನಂತರ ಆಹಾರ ಪದಾರ್ಥಗಳ ಮೇಲೆ ಕೂರುವುದರಿಂದ ಹಾಲು, ಹಣ್ಣು ಇತ್ಯಾದಿಗಳ ಮೂಲಕ ಖಾಯಿಲೆಯು ಹರಡುವುದು ಯಾವಾಗಲೂ ಆಹಾರ ಪದಾರ್ಥಗಳನ್ನು ಮುಚ್ಚಿಡಬೇಕು. ಪೇಟೆಯಲ್ಲಿ ಮಾರತಕ್ಕ ಮಿಟಾಯಿಗಳನ್ನು ಸಾಧಾರಣವಾಗಿ ಮುಚ್ಚದೇ ಇಡುವುದರಿಂದ ಆ ಪದಾರ್ಥಗಳನ್ನು ತಿನ್ನಕೂಡದು

ವಾಂತಿಬೇಧಿ ಕಾಯಿಲಸ್ಥರ ಉಪಚಾರದಲ್ಲಿ ಉಪಯೋಗಿಸುವ ಪಾತ್ರೆಗಳನ್ನು ಕುದ್ದವಾದ ನೀರಿನಲ್ಲಿ ಶುಚಿ ಮಾಡದೇ ಇದ್ದ ಪಕ್ಷದಲ್ಲಿ ಅವನ್ನು ಉಪಯೋಗಿಸಬಾರದು.

ಆರೋಗ್ಯದ ನಿಯಮದ ಪ್ರಕಾರ ಶುದ್ಧಿಪಡಿಸಲ್ಪಡದ ಮತ್ತು ಕ್ಲೋರಿನ್ ಹಾಕದೇ ಇರತಕ್ಕ ನೀರು ದೊರಕದೇ ಇದ್ದ ಪಕ್ಷದಲ್ಲಿ ನೀರನ್ನು ಚೆನ್ನಾಗಿ ಕುದಿಸಿ ಕುಡಿಯಬೇಕು.

ಒಂದು ವೇಳೆ ವಾಂತಿಬೇಧಿ ರೋಗವು ತಲೆದೋರಿದಲ್ಲಿ ಏನು ಮಾಡಬೇಕೆಂದರೆ:—ಆ ಪ್ರದೇಶದಲ್ಲಿರತಕ್ಕ ಪ್ರತಿಯೊಂದು ಬಾವಿಯ ನೀರನ್ನು ಬ್ಲೀಚಿಂಗ್ ಪೌಡರ್ ಮುಖಾಂತರ ಶುದ್ಧಿ ಮಾಡಬೇಕು.

ಆರೋಗ್ಯದ ಇಲಾಖೆಯವರಿಗೆ ವಾಂತಿಬೇಧಿ ಕಾಯಿಲೆ ಇರುವುದೆಂದು ತಿಳಿಸಿದ ಕೂಡಲೇ ಅದಕ್ಕಿರುವ ಬಂದೋಬಸ್ತು ಮಾಡುವರು.

ಈ ಖಾಯಿಲೆಯ ವಿಷಯದಲ್ಲಿ ಮನುಷ್ಯನು ಅನುಸರಿಸಬೇಕಾದ ನಿಯಮಗಳು.

(೧) ಯಾವಾಗಲೂ ಕುದಿಸಿದ ನೀರನ್ನೇ ಉಪಯೋಗಿಸಬೇಕು.

(೨) ಕಾಲರ ಖಾಯಿಲೆಯನ್ನು ತಡೆಗಟ್ಟತಕ್ಕ ಇನಾಕ್ಯುಲೇಶನ್ ಮಾಡಿಸಿಕೊಳ್ಳಬೇಕು.

(೩) ಆಹಾರ ಪದಾರ್ಥಗಳ ಮೇಲೆ ನೊಣಗಳು ಕೂರದಂತೆ ನೋಡಿಕೊಳ್ಳಬೇಕು.

(೪) ಬಾವಿ, ಕೆರೆ, ನದಿ ಇವುಗಳ ಸಮೀಪದಲ್ಲಿ ಮಲ ಮೂತ್ರ ವಿಸರ್ಜನೆ ಮಾಡಕೂಡದು.

(೫) ಒಂದು ವೇಳೆ ಕಾಲರ ಖಾಯಿಲಸ್ಥರನ್ನು ಮುಟ್ಟಿದರೆ ಸಾಬೂನಿನಿಂದ ಶುದ್ಧವಾಗಿ ತೊಳೆದುಕೊಳ್ಳಬೇಕು.

(೬) ಶುದ್ಧವಾದ ಆಹಾರವನ್ನೇ ಉಪಯೋಗಿಸಬೇಕು.

(೭) ಚೆನ್ನಾಗಿ ಬೇಯದೆ ಇರತಕ್ಕ ಮತ್ತು ಪೂರ್ತಿ ಪಕ್ವವಾಗದೇ ಇರತಕ್ಕ ಪದಾರ್ಥಗಳನ್ನು ತಿನ್ನಕೂಡದು.

(೮) ಮನೆಯ ಮತ್ತು ಅದರ ಸುತ್ತುಮುತ್ತಲು ಇರತಕ್ಕ ಜಾಗವನ್ನು ಶುದ್ಧವಾಗಿಡಬೇಕು.

ಈಗಾಗಲೇ ಉತ್ತರ ಕೊಡಗಿನ ಕೊಡ್ಲಿಪೇಟೆಯಲ್ಲಿ ವಾಂತಿಬೇಧಿ ಕಾಯಿಲೆ ಸುರುವಾಗಿರುವುದರಿಂದ ಸಾರ್ವಜನಿಕರು ಮೇಲಿನ ನಿಯಮಗಳನ್ನು ಗಮನಿಸುವುದು ಆದ್ಯಕರ್ತವ್ಯವಾಗಿದೆ.

The New Guardian of India Life Insurance co., Ltd.,

— HEAD OFFICE —

Post Box No.—142 Esplanade, MADRAS—1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT.

The New Gaurdion of India Life Insurance Co.. Ltd. for COORG. Virajpet.

12-7 OR

To The Head Office, MADRAS.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್,

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯಃ ಉಡುಪಿ (ದ. ಭಾರತ

ನೀವು ಬಲ್ಲಿರಾ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ಸಾಕ್ಷಿ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕೋರ್ಪೋರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕೋರ್ಪೋರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 4

ಮಡಿಕೇರಿ, ವೀರರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ

THE CANARA BANKING CORPORATION LIMITED

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-2 **PATTU BROTHERS,**

OPP.— Town Hall, MYSORE.

ವಾರ್ತೆ.

ಕಾಂಗ್ರೆಸ್, ಪ್ರಜಾ—ಸೋಶಲಿಸ್ಟ್, ಕಮ್ಯೂನಿಸ್ಟ್ ಮತ್ತು ಜನಸಂಘ-ಈ ನಾಲ್ಕು ಪಕ್ಷಗಳು ಮಾತ್ರ ಅಖಿಲ ಭಾರತದ ನೆಲೆಯಲ್ಲಿ ರಾಷ್ಟ್ರದ ಪ್ರಮುಖ ಪಕ್ಷಗಳೆಂದು ಪರಿಗಣಿಸಲ್ಪಟ್ಟಿವೆ. ಮುಂದಿನ ಪಾರ್ಲಿಮೆಂಟ್ ಚುನಾವಣೆಯಲ್ಲಿ ಇವುಗಳಿಗೆ ಮಾತ್ರ ಪ್ರತ್ಯೇಕ ಸಂಕೇತವನ್ನು ಕೊಡಲಾಗುವುದು. ಗತಚುನಾವಣೆಯಲ್ಲಿ ಒಟ್ಟು ೧೫ ಪಕ್ಷಗಳಿಗೆ ಪ್ರತ್ಯೇಕ ಸಂಕೇತ ಕೊಡಲಾಗಿತ್ತು. ಆದರೆ ಅವುಗಳಲ್ಲಿ ಹೆಚ್ಚಿನವು ಒಟ್ಟು ಬಿದ್ದ ಓಟುಗಳಲ್ಲಿ ಶೇ. ೩ ರಷ್ಟನ್ನೂ ಗಳಿಸಿಕೊಳ್ಳದಿದ್ದುದರಿಂದ ಮೇಲಿನ ನಾಲ್ಕು ಪಕ್ಷಗಳು ಮಾತ್ರ ಅಖಿಲ ಭಾರತದ ನೆಲೆಯಲ್ಲಿ ಮಾನ್ಯತೆ ಪಡೆದಿವೆ.

ಹೈದರಾಬಾದ್ ವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷವನ್ನು ಬಲಗೊಳಿಸುವ ಕುರಿತು ಸಲಹೆಸಲು ಒಂದು ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯು ತನ್ನ ಇತರ ಸೂಚನೆಗಳೊಂದಿಗೆ ಮಂತ್ರಿಗಳ ಸಂಖ್ಯೆಯನ್ನು ೧೩ ರಿಂದ ೭ ಅಥವಾ ೮ ಕ್ಕೆ ಇಳಿಸಬೇಕೆಂದೂ ಸೂಚಿಸಿತ್ತು. ಇತ್ತೀಚೆಗೆ ಕಾಂಗ್ರೆಸ್ ಪಕ್ಷದ ಒಬ್ಬಿಬ್ಬರು ಪಕ್ಷತ್ಯಾಗವನ್ನೂ ಮಾಡಿದ್ದರು. ಕಳೆದ ಸಭೆ ಸೇರಿದಾಗ ಮುಖ್ಯಮಂತ್ರಿ ಶ್ರೀ. ಬಿ. ರಾಮಕೃಷ್ಣರಾಯರು ತಮ್ಮ ಮಂತ್ರಿಮಂಡಲದ ರಾಜಿನಾಮೆಯನ್ನು ಸಭೆಯ ಮುಂದಿಟ್ಟರು. ಆ ನಂತರ ತಾ. ೯ ರಲ್ಲಿ ಮತ್ತೊಮ್ಮೆ ಸೇರಿದ ಪಕ್ಷದ ಸಭೆಯಲ್ಲಿ ರಾಜಿನಾಮೆಯನ್ನು ಹಿಂತೆಗೆದುಕೊಳ್ಳುವಂತೆ ಸೂಚಿಸಿದುದಲ್ಲದೆ, ಮುಖ್ಯಮಂತ್ರಿಗಳಲ್ಲಿ ವಿಶ್ವಾಸ ಸೂಚಿಸುವ ನಿರ್ಣಯವೂ ಬಹುಮತದಿಂದ ಮಾನ್ಯವಾಯಿತು.

ಅಟ್ಲೀಯವರ ಮಂತ್ರಿಮಂಡಲದಲ್ಲಿ ಕೆಲ ಕಾಲ ಆರೋಗ್ಯಮಂತ್ರಿಗಳಾಗಿದ್ದು ಬ್ರಿಟನಿನ ರಾಷ್ಟ್ರೀಯ ಆರೋಗ್ಯ ಸೇವಾ ಶಾಸನದ ಪ್ರವರ್ತಕರಾಗಿದ್ದವರೂ, ಲೇಬರ್ ಪಕ್ಷದ ಉಗ್ರಗಾಮಿಗಳ ಮುಖಂಡರೂ ಆದ ಅನುರಿನ್ ಬೆವಾನರು ದೆಹಲಿಗೆ ಆಗಮಿಸಿದ್ದಾರೆ. ದೆಹಲಿಯ ಡಾಕ್ಟರರ ಸಭೆಯೊಂದರಲ್ಲಿ ಬೆವಾನರು ಮಾತನಾಡುತ್ತ, 'ವೈದ್ಯಕ ವೃತ್ತಿಯ ರಾಷ್ಟ್ರೀಕರಣ ಶಾಸನವನ್ನು ವಿರೋಧಿಸುವವರು ತಮ್ಮ ಆದೃಷ್ಟಕ್ಕೆ ವಿರೋಧವಾಗಿ ಹೋರಾಡುತ್ತಾರೆ' ಎಂದರು.

ತಾ. ೩೧—೧—೫೪ ಶನಿವಾರ ದಿವಸ, ಉತ್ತರ ಪ್ರದೇಶದ ಸುಲ್ತಾನಪುರದಿಂದ ಅಯೋಧ್ಯೆಯ ಎಂಬಲ್ಲಿಯ ವರೆಗಿನ ೯ ಮೈಲು ಉದ್ದ ಮಾರ್ಗವನ್ನು ಹತ್ತು ತಾಸುಗಳಲ್ಲಿ ಅಲ್ಲಿಯ ಜನರೇ ಸಿದ್ಧಮಾಡಿದರು. ಒಟ್ಟು ೧೫ ಸಾವಿರ ಜನರು ಅದರಲ್ಲಿ ತೊಡಗಿದ್ದರು. ಅವರಲ್ಲಿ ಸರಕಾರೀ ಅಧಿಕಾರಿಗಳೂ ಮತ್ತು ಶಾಲಾ ವಿದ್ಯಾರ್ಥಿಗಳೂ ಇದ್ದರು.

ದಕ್ಷಿಣ ಭಾರತದಲ್ಲಿ ಸಕ್ಕರೆ ಬೆಲೆ ಏರ ಹತ್ತಿದ್ದರಿಂದ ಅದನ್ನು ಹೊರಗೆ ಕಳಿಸುವುದನ್ನು ತಡೆಯುವ ಆಜ್ಞೆಯನ್ನು ಕೇಂದ್ರ ಸರಕಾರದವರು ತಾ. ೩೦—೧—೫೪ ನೇ ದಿನ ಹೊರಡಿಸಿದ್ದಾರೆ.

ಗೂಢವಾದ "ಮಾಸ್ಕೋ ಅಸ್ವಸ್ಥ!"

ಮೂಲ ಲೇಖಕ:— **ಶ್ರೀ ಎಸ್. ಕೆ. ದಾಸ್** (ಭಾರತ ಜ್ಯೋತಿಯಿಂದ)

ಜಗತ್ತಿನ ಕಮ್ಯೂನಿಸ್ಟ್ ಪಕ್ಷಗಳ ಕಾರ್ಯವೇ ಗೂಢವಾದುದು. ಅವರದು ಅತ್ಯಂತ ಸುಸಂಘಟಿತ ಪಕ್ಷವೆಂದು ಹೇಳಲಾಗುತ್ತಿದೆ. ಅವರೂ ಒಳಜಗಳಗಳು ಎಷ್ಟಿವೆ ಎಂದರೆ ಅವನ್ನು ನಂಬಲು ಸಹ ಕಷ್ಟವಾಗುವದು. ಪಕ್ಷದ ಅಧಿಕಾರಕ್ಕಾಗಿ ನಾಯಕರಲ್ಲಿ ಕಚ್ಚಾಟವು ತಪ್ಪಿದ್ದಿಲ್ಲ. ಆದ್ದರಿಂದಲೇ ಆಗಾಗ ಅವರ ನಾಯಕರು ಬದಲಾಗುತ್ತಿರುವುದು ಮಾತ್ರವಲ್ಲ ಮಾಜಿ ನಾಯಕರು ನಿರ್ನಾಮವಾಗುವದನ್ನೂ ನಾವು ಕಾಣುತ್ತೇವೆ.

ಭಾರತದ ಕಮ್ಯೂನಿಸ್ಟ್ ಪಕ್ಷವನ್ನೇ ತೆಗೆದುಕೊಳ್ಳೋಣ. ಸ್ವಾತಂತ್ರ್ಯ ಪ್ರಾಪ್ತಿಯ ತನಕ ಪಕ್ಷದ ಏಕಮೇವ ಮುಂದಾಳಾಗಿ ಶ್ರೀ ಪಿ. ಸಿ. ಜೋಶಿಯವರು ಅದರ ಸೂತ್ರಗಳನ್ನು ನಡೆಸುತ್ತಿದ್ದರು. ಭಾರತ ಸ್ವತಂತ್ರವಾದ ಮೇಲೆ ಸ್ವತಂತ್ರ ಭಾರತದ ಸರಕಾರದೊಂದಿಗೆ ಸಾಧ್ಯವಾದಷ್ಟು ಸಹಕರಿಸಿ ಶಾಂತ ರೀತಿಯಲ್ಲಿಯೇ 'ಮಜೂರರ ರಾಜ್ಯ' ಸ್ಥಾಪಿಸಬೇಕೆಂದು ಶ್ರೀ ಜೋಶಿಯವರು ಪ್ರತಿಪಾದಿಸಿದರು. ಆದರೆ, ಈ 'ನಿರ್ಬಲ' ನೀತಿಯು ಪಕ್ಷದ ಕೆಲವು 'ಯೋಧ'ರಿಗೆ ಸರಿಬೀಳಲಿಲ್ಲ. ಅತ್ತ ಚೀನಾದಲ್ಲಿ ಒಳಯುದ್ಧ ನಡೆಯುತ್ತಿದ್ದು, ಅಮೇರಿಕದ ಬೆಂಬಲವಿದ್ದ ಚಿಯಾಂಗ್ ಕೈಶೇಕರು ಸೋಲಿನ ಮೇಲೆ ಸೋಲನ್ನು ಹೊಂದುತ್ತಿರುವಾಗ ಇಲ್ಲಿಯೂ ಏಕೆ ಸಶಸ್ತ್ರವಾಗಿ ಏಳಬಾರದೆಂದು ಹಲವು ಧೀರೋದಾತ್ತರು ಸ್ವಾಭಾವಿಕವಾಗಿಯೇ ಆಲೋಚಿಸಿದರು. ಆಗಲೇ 'ತೆಲಂಗಾಣ' ಸಶಸ್ತ್ರ ಕ್ರಾಂತಿ ಹೂಡಿದ್ದು, ಬಂಗಾಳ ದಿನನಿತ್ಯವೂ ಕೊಲೆ ಸುಲಿಗೆಯನ್ನು ಕಾಣುತ್ತಿತ್ತು. ೧೯೪೮ರಲ್ಲಿ ಕಲ್ಕತ್ತದಲ್ಲಿ ಕಮ್ಯೂನಿಸ್ಟ್ ಕಾಂಗ್ರೆಸ್ ಸೇರಿತು. ಈ ಕಾಂಗ್ರೆಸ್ಸೇ ಜೋಶಿ ಪಂಗಡದ 'ಶಾಂತವಾದಿ'ಗಳಿಗೆ ಸಮಾಧಿಯಾಯಿತು. ಜೋಶಿ ತನ್ನ ಸ್ಥಾನದಿಂದ ಕೆಳಕ್ಕುರುಳಿಸಲ್ಪಟ್ಟರು. ಹಲವು ವರ್ಷ ಪಕ್ಷದ ಮುಂದಾಳ್ತನ ವಹಿಸಿದ ಜೋಶಿ ಇಂದೆಲ್ಲಿ?

ಜೋಶಿಯ ನಂತರ ಪಟ್ಟಕ್ಕೇರಿದವರು ಶ್ರೀ ಬಿ. ಟಿ. ರಣದಿವೆ. ಕೋಲಾಹಲವೇ ಇವರದ ಘೋಷಣೆ. ದೇಶದಾದ್ಯಂತ ಹಿಂಸಾಚಾರ ಹಬ್ಬಿತು. ಮುಷ್ಕರಗಳು ದಿನನಿತ್ಯದ ಮಾತಾದವು. ಈಗ ಕಮ್ಯೂನಿಸ್ಟರು ಎಷ್ಟೇ ಅಲ್ಲಗಳೆಯುತ್ತಿದ್ದರೂ ಅವರ ಕಾರಣಗಳಿಂದಲೇ ಜೈಲುಗಳು ತುಂಬಲಾರಂಭಿಸಿದವು. ಜೈಲುಗಳಲ್ಲಿ ದಂಗೆ ಗೋಳಿಬಾರು ಪ್ರಾರಂಭವಾಯಿತು. ಎಲ್ಲ ಜೈಲುಗಳಲ್ಲಿ ಒಮ್ಮೆಲೇ ದಂಗೆ ಏಳುವ ಯೋಜನೆ ಇತ್ತೆಂದು ಒಬ್ಬ ಅಖಿಲ ಭಾರತೀಯ ಕಮ್ಯೂನಿಸ್ಟರಿಂದ ನಾನು ತಿಳಿದಿದ್ದೇನೆ. ಆದರೆ ಇಂತಹ ರಕ್ತಪಾತದ ಘೋಷಣೆಯಿಂದ ಕಮ್ಯೂನಿಸ್ಟ್ ಪಕ್ಷ ರಭಸದಿಂದ ರಸಾತಳಕ್ಕೆ ಹೋಗಲಾರಂಭಿಸಿತು. ಅದರ ಸದಸ್ಯತನ ಕಡಿಮೆಯಾಯಿತು. ಜನತೆಗೆ ಅದರ ಬಗ್ಗೆ ತಿರಸ್ಕಾರ ಹುಟ್ಟಿತು. ಇದನ್ನು ನೋಡಿ ಶ್ರೀ ಎಸ್. ಎ. ಡಾಂಗೆಯಂತಹ ನಾಯಕರು ಕಣ್ತೆರೆದರು. ಜೈಲುಗಳಲ್ಲಿನ ದಂಗೆಯನ್ನು ಅವರು ವಿರೋಧಿಸಿದರು. ಸ್ಪಷ್ಟವಾಗಿ ಡಾಂಗೆ, ರಣದಿವೇ ಗುಂಪುಗಳಾದವು. ಸರಿ, ರಣದಿವೇಯ ಕಾಲವೂ ಬಂತು. ನೋಡುತ್ತಿದ್ದಂತೆ ರಣದಿವೆ ಹೇಳ ಹೆಸರಿಲ್ಲದಂತಾದರು.

ಈ ಮಧ್ಯೆ ಡಾಂಗೆ ಸ್ವಲ್ಪಕಾಲ ಭೂಗತ! ಮುರಾರ್ಜಿಯಂತಹರ ತೀಕ್ಷ್ಣ ದೃಷ್ಟಿಯೂ ಅವರನ್ನು ಹುಡುಕದಾಯಿತು. ಡಾಂಗೆ ರಷ್ಯಕ್ಕೆ ಹೋದರೆಂದು ಜನರಾಡಿಕೊಳ್ಳುತ್ತಾರೆ. ಈ ಊಹೆಯಲ್ಲಿ ಅಸತ್ಯವಿರಬಹುದೆಂದು ನನಗನಿಸುವುದಿಲ್ಲ. ಈ ಲೇಖನ ಕೊನೆಯ ತನಕ ಓದಿದರೆ ನಿಮಗೂ ಅನಿಸಲಿಕ್ಕಿಲ್ಲ.

ರಣದಿವೆಯ ನಂತರ ಆಂಧ್ರದ ಶ್ರೀ ರಾಜೇಶ್ವರರಾಯರ ಏಳ್ಗೆಯ ಕಾಲ ಬಂತು. ಆದರೆ ಅದು ಅತ್ಯಂತ ಅಲ್ಪ ಸಮಯ. ಕೆಲವೇ ತಿಂಗಳಲ್ಲಿ ಅವರೂ ಜೋಶಿ, ರಣದಿವೆಯವರ ಸಾಲನ್ನು ಸೇರಿದರು. ಚುನಾವಣೆ ಹತ್ತಿರ ಬಂದುದರಿಂದ ಆ ಕಡೆ ಗಮನಕೊಡುವ ಅವಶ್ಯವಿತ್ತು. ರಾಜೇಶ್ವರರಾಯರ ಸ್ಥಾನದಲ್ಲಿ ಇಂದು ಶ್ರೀ ಅಜಯ ಘೋಷರು ಇದ್ದಾರೆ. ಪಕ್ಷದ ನೇತೃತ್ವದಲ್ಲಿ ಇಷ್ಟೆಲ್ಲಾ ಬದಲಾವಣೆ ಆಗುತ್ತಿದ್ದರೂ ಕಾಂಗ್ರೆಸ್ ಸರಕಾರದ ವಿಷಯದಲ್ಲಿ ದ್ವೇಷ ಹುಟ್ಟಿಸುವ ಅವರ ಕಾರ್ಯವು ತಮ್ಮ ಪ್ರಬಲ ಪತ್ರಿಕೆಗಳ ಮುಖಾಂತರ ಸಾಗುತ್ತಲೇ ಇತ್ತು. ಚುನಾವಣಾ ಕಾಲದಲ್ಲಿ ಎಲ್ಲ ಪಕ್ಷಗಳೂ ಕಾಂಗ್ರೆಸಿನ ವಿಷಯ ಜನರಲ್ಲಿ ದ್ವೇಷ ಹುಟ್ಟಿಸಿದುವು. ಈ ರೀತಿ ಎಲ್ಲರೂ ಬಿತ್ತಿದ ಬೀಜದ ಫಲ ಮಾತ್ರ ಕಮ್ಯೂನಿಸ್ಟರಿಗೆ ದೊರಕಿತು. ಚುನಾವಣೆಯಲ್ಲಿ ತುಂಬ ಸಂಖ್ಯೆಯಲ್ಲಿ ಕಮ್ಯೂನಿಸ್ಟ್ ಉಮೇದ್ವಾರರು ಆರಿಸಿಬಂದರು. ಇದರಿಂದ ಇತರರಿಗಾದಷ್ಟೇ ಕಮ್ಯೂನಿಸ್ಟರಿಗೂ ಆಶ್ಚರ್ಯವಾಗದಿರಲಿಲ್ಲ.

ಚುನಾವಣೆಯಲ್ಲಿ ಬೇರೆ ಯಾವ ಪ್ರಾಂತಕ್ಕಿಂತಲೂ ಮದ್ರಾಸಿನಲ್ಲೇ ಹೆಚ್ಚು ಕಮ್ಯೂನಿಸ್ಟರು ಚುನಾಯಿತರಾದರು. ಲೋಕಸಭೆಯಲ್ಲೂ ಈ ಪ್ರಾಂತದ ಪ್ರತಿನಿಧಿಗಳೇ ಹೆಚ್ಚು ಆರಿಸಿ ಬಂದರು. ಸ್ವಾಭಾವಿಕವಾಗಿಯೇ ಲೋಕಸಭೆಯ ಕಮ್ಯೂನಿಸ್ಟ್ ಪಕ್ಷದ ನೇತೃತ್ವ ದಕ್ಷಿಣದ ಕಮ್ಯೂನಿಸ್ಟ್ ಮುಂದಾಳು ಶ್ರೀ ಎ. ಕೆ. ಗೋಪಾಲನರಿಗೆ ದೊರಕಿತು. ಅವರು ಆಗಲೇ ಸುಪ್ರೀಂ ಕೋರ್ಟಿನಲ್ಲಿ ತನ್ನ ಸ್ವಾತಂತ್ರ್ಯತೆಯ ವಿಷಯದ ಹೋರಾಡಿ ಗೆದ್ದು ಕೀರ್ತಿಗಳಿಸಿದ್ದರು.

ಚುನಾವಣೆಯಲ್ಲಿ ಅನಿರೀಕ್ಷಿತ ಕಮ್ಯೂನಿಸ್ಟರು ಗಳಿಸಿದ ಸ್ಥಾನವನ್ನು ರಕ್ಷಿಸುವುದು ಮಾತ್ರವಲ್ಲ ಅದನ್ನೇ ಆಧಾರವನ್ನಾಗಿಟ್ಟು ಅಧಿಕಾರಸ್ಥಾನಗಳಿಗೆ ಜಿಗಿಯುವ ಕನಸನ್ನು ಕಾಣಲು ಕಮ್ಯೂನಿಸ್ಟ್ ನಾಯಕರು ಹಿಂದೆ ಬೀಳಲಿಲ್ಲ. ತಿರುಕೊಚ್ಚಿ, ಮದ್ರಾಸುಗಳಲ್ಲಿ ಇದಕ್ಕೆ ಪ್ರಯತ್ನ ನಡೆಯಿತು. ಐಕ್ಯರಂಗವನ್ನು ಸ್ಥಾಪಿಸಿ ಮದ್ರಾಸಿನಲ್ಲಿ ಅಧಿಕಾರದ ಫಲ ಒಂದೇ ಗೇಣು ಇರುವ ತನಕ ಏರಿದರು. ಆದರೆ ಮೇಧಾವಿ ನೆಹರು ಅವರ ಆಸೆ ಮಣ್ಣುಗೂಡಿಸಿದರು. ಚಾಣಾಕ್ಷ ರಾಜಾಜಿ, ಜನರನ್ನು ತಮ್ಮೆಡೆ ಒಲಿಸಿದರು. ಸ್ವಲ್ಪ ಸಮಯದಲ್ಲೇ ಆ ಐಕ್ಯರಂಗ ಚೂರಾಯಿತು!

ಈ ಮಧ್ಯೆ ಗೋಪಾಲನರು ಪೆಕಿಂಗ್ ಶಾಂತಿ ಪರಿಷತ್ತಿಗೆ ಹೋದವರು ಅಲ್ಲಿಂದಲೇ ರಷ್ಯಕ್ಕೆ ದಾಟಿದರು. ಮಾಸ್ಕೋದಲ್ಲಿ ಸೋವಿಯಟ್ ಕಮ್ಯೂನಿಸ್ಟ್ ಕಾಂಗ್ರೆಸ್ ಸೇರಿತ್ತು. ದೇಶಗಳನ್ನು 'ಮುಕ್ತ'ಗೊಳಿಸುವ ಚಳವಳಿಗೆ ರಷ್ಯ ಪ್ರತ್ಯಕ್ಷ ಬೆಂಬಲ ಕೊಡುವುದಾಗಿ ಸ್ಟಾಲಿನ್ ಸಾರಿದರು. ಗೋಪಾಲನರು ಕೂಡ ಭಾರತ ಸರಕಾರವನ್ನು ದೂರಿ ಭಾಷಣಗಳನ್ನು ಕೊಟ್ಟರಂತೆ!

ಕಮ್ಯೂನಿಸ್ಟ್ ಸಮ್ಮೇಳನ ಕೊನೆಗೊಂಡಿತು. ದಿನಗಳುರುಳಿದವು. ತಿಂಗಳುಗಳೂ ಕಳೆದುವು. ಗೋಪಾಲನ್ ಮರಳಲಿಲ್ಲ. ಹಠಾತ್ತನೆ ಒಂದು ದಿನ ವಾರ್ತೆ ಬಂತು. ಅಸ್ವಸ್ಥದಿಂದ ಅವರ ಬರೋಣ ಮುಂದೆ ಬಿದ್ದಿದೆ. ಅಸ್ವಸ್ಥ ಎಂತಹದು? ಮೊತ್ತಮೊದಲು ಹೃದಯ ಪೀಡೆ ಪ್ರಾರಂಭವಾಗಿ ಕಡೆಗೆ ನ್ಯುಮೋನಿಯದಲ್ಲಿ ಪರಿವರ್ತಿತವಾಗಿ ಆ ಸುದ್ದಿ ಬರುವಾಗ ಎಪೆಂಡಿಸೈಟಿಸ್ ಆಪರೇಶನಿಗೆ ಸಿದ್ಧತೆ ನಡೆದಿತ್ತಂತೆ! ನಂಬಲು ಸ್ವಲ್ಪ ಕಷ್ಟ ಅಲ್ಲವೇ? ಆದರೆ 'ಮಾಸ್ಕೋ ಅಸ್ವಸ್ಥ'ದಿಂದ ಹಂಗೇರಿಯಾದ ಬೇಲಾಕುನ್, ಜರ್ಮನಿಯ ರೆಮ್ಮೆಲ್ ಮತ್ತು ನ್ಯೂಮನ್, ಮತ್ತು ಬಲ್ಗೇರಿಯದ ಡಿಮಿಟ್ರೋವ್ ಮುಂತಾದ ಅನೇಕರು ತಮ್ಮ ಜೀವನ ಯಾತ್ರೆ ಮುಗಿಸಿರುವರು. ಸ್ಟಾಲಿನರ ಇಚ್ಛೆಯ ವಿರುದ್ಧವಾದ ಯಾವುದಾದರೂ ವಿಚಾರ ಕಮ್ಯೂನಿಸ್ಟ್ ನಾಯಕನಲ್ಲಿ ಬಂತೆಂದಾದರೆ ಅವನನ್ನು ಮಾಸ್ಕೋಗೆ ಕರೆಸಿ (ಮಾಸ್ಕೋದ) ಅಸ್ವಸ್ಥದಿಂದ ಸತ್ತನೆಂದು ಸಾರುವುದು ಕಮ್ಯೂನಿಸ್ಟರ ನೀತಿಯ ಒಂದು 'ಭಯಾನಕ' ಕ್ರಮವಾಗಿದೆ. ಮಾಸ್ಕೋ ಔಷಧಿ(ಆಜ್ಞೆ)ಗೆ ಅವನು ಮಣಿದರೆ ಗುಣಮುಖ ಹೊಂದಿ ಬರುತ್ತಾನೆ. ಇಲ್ಲವಾದರೆ ಅಲ್ಲಿಂದಲೇ ಅವನಿಗೆ ಅವಸಾನ!

ಆದರೆ ಗೋಪಾಲನರ ವಿಷಯ ಹೀಗಿರಬಹುದೇ? ಅವರ ಚರಿತ್ರೆ ಕಾರ್ಯವು ಸ್ಟಾಲಿನರ ಆಗಾಗ ಬದಲಾಗುತ್ತಿರುವ ನೀತಿಗೆ ವಿರೋಧವಾಗಿದ್ದಿರಬಹುದು? ಕಳೆದ ನವೆಂಬರ ಏಳರಂದು 'ಕೋಮಿನ್‌ಫಾರ್ಮ್ ಜರ್ನಲ್' ಎಂಬ ಹೆಸರಿನ ಕಮ್ಯೂನಿಸ್ಟ್ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನವು ಈ ವಿಷಯ ಸ್ವಲ್ಪ ಬೆಳಕು ಬೀರಬಹುದು. ಭಾರತದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಜಯಘೋಷರು ಆ ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಗೋಪಾಲನರ ನೀತಿಯನ್ನು ಖಂಡಿಸುತ್ತಾ, ಅವರು ಹೀಗೆ ಬರೆದಿರುತ್ತಾರೆ. "ಇತರ ಪಕ್ಷಗಳ ಪ್ರತಿನಿಧಿಗಳಿಗೆ ನೇತೃತ್ವ ವಹಿಸಿಕೊಟ್ಟು ಎಲ್ಲ ಶಾಸನ ಸಭೆಗಳಲ್ಲಿ ಕಮ್ಯೂನಿಸ್ಟ್ ಪಕ್ಷವೇ ಒಂದು ಐಕ್ಯರಂಗವನ್ನು ಸ್ಥಾಪಿಸಲು ಶಕ್ತವಾಯಿತೆಂದಾದರೆ, ಈ ರೀತಿಯಲ್ಲಿ ಹೇಗಾದರೂ ನಾವು ಕೆಲವು 'ಪ್ರಭಾವಶಾಲಿ' ಕಾರ್ಯಗಳನ್ನು ಮಾಡಬಲ್ಲೆವಾದರೆ ಆಗ ನಮ್ಮ ಸಮಸ್ಯೆಯು ಬಗೆಹರಿಯುವುದು ಎಂದು ಕೆಲವರು ತಿಳಿಯುತ್ತಾರೆ. ಆದರೆ ಇಂತಹ ನೀತಿಯು ನಮ್ಮ ಪಕ್ಷವನ್ನೇ ವಿನಾಶದ ಕಡೆಗೆ ಒಯ್ಯುತ್ತಿದೆ ಎಂದು ಅವರು ತಿಳಿಯುವುದಿಲ್ಲ. ಇಂತಹ ವಿಚಾರಗಳನ್ನು ಎದುರಿಸಿ ನಿರ್ಮೂಲಗೊಳಿಸಬೇಕು. ತಮ್ಮ ಕಮ್ಯೂನಿಸ್ಟ್ ಪಕ್ಷದ ಕಾರ್ಯ ಮತ್ತು ಮಹತ್ವದ ಕುರಿತು ಸ್ಟಾಲಿನರು ಹೇಳುವುದನ್ನು ನಮ್ಮ ಪಕ್ಷವು ಅಕ್ಷರಶಃ ಪಾಲಿಸಬೇಕು. ರಷ್ಯದ ಕಮ್ಯೂನಿಸ್ಟ್ ಪಕ್ಷದ ಮತ್ತು ಮಾವೊತ್ಸೆಟುಂಗ್‌ರ ಶಾಸ್ತ್ರಗಳ ಆಧಾರದ ಮೇಲೆ ನಮ್ಮ ಕಾರ್ಯಕರ್ತರನ್ನು ತರಬೇತಿಗೊಳಿಸುವ ಕಾರ್ಯ ನಡೆಯಬೇಕಾಗಿದೆ."

ಸರಿ, ಈಗ ಗೋಪಾಲನರ 'ತಪ್ಪು' ಏನೆಂದು ನಾವು ತಿಳಿಯಬಹುದು. ಅವರು ಐಕ್ಯರಂಗವನ್ನು ಅಲ್ಲಲ್ಲಿ ಸ್ಥಾಪಿಸಿ ಅಜಯ ಘೋಷರ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ ಮಾಡಿದ್ದಾರೆ. ಬಹುಶಃ ಸ್ಟಾಲಿನರ ಅಭಿಪ್ರಾಯವನ್ನು ಘೋಷರು ಮುದ್ರಿಸಿದ್ದಾರಷ್ಟೆ. ಆದ್ದರಿಂದ ಗೋಪಾಲನರನ್ನು "ಸರಿ ದಾರಿಗೆ" ತರಲು ಮಾಸ್ಕೋಕ್ಕೆ ಕರೆಸಿರಬಹುದು. ಅವರು ಸುಲಭದಲ್ಲಿ ಸರಿ ದಾರಿಗೆ ಬರುವಂತೆ ತೋರುವದಿಲ್ಲ. ಇಲ್ಲವಾದರೆ ಇಷ್ಟರಲ್ಲೇ ಅವರು ಬರಬೇಕಿತ್ತು. ಈ ಮಾಸ್ಕೋ ಅಸ್ವಸ್ಥದಿಂದ ಗೋಪಾಲನರು ಗುಣವಾಗುವರೋ ಅಥವಾ ಡಿಮಿಟ್ರೋವ್, ನ್ಯೂಮನರ ದಾರಿ ಹಿಡಿಯುವರೋ ನೋಡಬೇಕಾಗಿದೆ.

ಗೋಪಾಲನ್ ಹೋದರೆ ಅವರ ಸ್ಥಾನಕ್ಕೆ ಯಾರು ಬರುವರೋ ನೋಡಬೇಕು. ಯಾರು ಬಂದರೇನು? ಒಂದು ದಿನ ಅವನು ಜೋಶಿ, ರಣದಿವೆಯವರ ಸಾಲಿಗೆ 'ಹುತಾತ್ಮ'ನಾಗಿ ಹೋಗುವುದು ನಿಶ್ಚಯ. ಹೀಗಿದೆ ತನ್ನ ಸ್ವಾರ್ಥ ಸಾಧಿಸಲು ಸಾಮ್ರಾಜ್ಯಶಾಹಿ ಬೆಳೆಸಲು ರಷ್ಯದ ನೀತಿ.

'ಕೌಶಿಕ' — ಪ್ರಭಾತ

ಶ್ರೀ ಕೆ. ಪಿ. ಪೀತಾಂಬರರವರು,
"ಕೊಡಗು" ಏಜೆಂಟರು,
ಕೊಡ್ಲಿಪೇಟೆ.

ಶ್ರೀ ಪಿ. ರಂಗಸ್ವಾಮಿಯವರು
'ಕೊಡಗು' ಏಜೆಂಟರು
ಪೊನ್ನಂಪೇಟೆ.

Licence No. 60.
Licensed to Post without Prepayment

Reg. No. M. 1550.
"KODAGU" MERCARA (Coorg)
೨೦—೨—೧೯೫೩

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್
ಫೆಡರೇಷನ್ ಲಿಮಿಟೆಡ್.

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ಸಪ್ಲೈ ಈ ಕೆಳಗೆ ಕೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಹೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
4. 9″×4″ ಮತ್ತು 8″×4″ ಕಬ್ಬಿಣದ ತೊಲೆಗಳು (Girders).
5. 8′×3′×24′ (Gage) ಕಬ್ಬಿಣದ ತಗಡುಗಳು.
6. $1\frac{3}{4}$″ × $\frac{5}{16}$″ ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ) — ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು ...	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. — ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ಶ್ರೀ ಟಿ. ಎಸ್. ಗೋವಿಂದರಾಜು,
"ಕೊಡಗು" ಏಜೆಂಟರು,
ವೀರಾಜಪೇಟೆ.

ಶ್ರೀ ಕೆ ಯಂ. ಬೋಗಪ್ಪಸಹರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

Government of Coorg Chief Secretariat

SUBJECT:—Supply of furniture to the Coorg Government Secretariat

Quotations are invited for the supply of following furniture for the Coorg Government Secretariat. The quotation should reach this office before 25th February, 1953. The supplier whose tender may be accepted should be able to supply the furniture by 20th March 1953. The furniture should be delivered at the verandah of the Coorg Government Secretariat.

LIST OF FURNITURE

	Length	Width	Hight
1. Writing tables 8 (Nandi) with 2 drawers	48″	33″	31″
2. File racks 18 (Nandi) File racks should have two compartments and at the top should have three shelves.	36″	15″	40″
3. Typists tables 4 (Nandi) (with one drawer on the left side)	48″	36″	28″
4. Stenographers valet 5 (Nandi)	16″	$9\frac{1}{2}$″	20″
5. Chairs with arms (rose wood) (Rattan Bottom & Wooden back)	5		
6. Chairs without arms (Nandi) Rattan Bottom and wooden back	2		
7. Hat racks (Rose wood)	2		

C. NARASIMHA MURTHY,
Chief Secretary to the Government of Coorg.

ಸೋಮವಾರಪೇಟೆ ನಾಡು ಸಹಕಾರ ಬ್ಯಾಂಕು
ಲಿಮಿಟೆಡ್. ಸೋಮವಾರಪೇಟೆ

(ಉ. ಕೊಡಗು) ಸ್ಥಾಪನೆ 1949.

ಅಧಿಕೃತ ಪಾಲು ಬಂಡವಾಳ	ರೂ.	50,000
ವಸೂಲಾದ ಪಾಲು ಬಂಡವಾಳ	ರೂ.	26,000
ಬ್ಯಾಂಕಿನ ವಸೂಲಾದ ಧನ	ರೂ.	3,00,000

ಠೇವಣಾತಿಯ ಬಡ್ಡಿ ದರಗಳು

ಚಾಲ್ತಿ ಠೇವಣಾತಿಗಳಿಗೆ	ಶೇಕಡ ರೂ.	0-8-0
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳಿಗೆ	,,	2-0-0
ನಿರಖು ಠೇವಣಾತಿ 1 ವರ್ಷದ ಅವಧಿಗೆ	,,	2-0-0
2 ,, ,,	,,	2-8-0
3 ,, ,,	,,	3-0-0
4 ,, ,,	,,	3-8-0
5 ,, ,,	,,	4-0-0
3000ಕ್ಕೆ ಮೇಲ್ಪಟ್ಟ ಮೊಬಲಗಿಗೆ 5 ವರ್ಷದ ಅವಧಿಗೆ.		5-0-0

ಡಿ. ನಾರಾಯಣಶೆಟ್ಟಿ,
ಪ್ರೆಸಿಡೆಂಟ್.

4-1

Edited Printed and Published by P. I. BELLIAPPA at 'KODAGU' Press, Mercara for Kodagu Ltd.,

ಕೊಡಗು

ನಾಳೆಯ "ವಿಜಯ ಲಕ್ಷ್ಮಿ"

KODAGU KANNADA WEEKLY MERCARA

ವಾರದ ಕಥೆ

ಜಹಾಂ[illegible]

ಲೇ: ಶ್ರೀ ಬಿ. ಡಿ. ಸುಬ್ಬಯ್ಯ

"ಅಂಥದೊಂದು ಸುಸ್ವಪ್ನ. ಅದೋ ನೋಡು. ದಿಗಂತದತ್ತ ಬಾಲರವಿಯು ಮೂಡುತ್ತಿದ್ದಾನೆ. ತನ್ನ ಹೊಂಬಣ್ಣದ ಕಿರಣದಿಂದ ಭೂದೇವಿಯನ್ನು ಸ್ವರ್ಣಾಲಂಕಾರ ಮಾಡಿದ್ದಾನೆ. ಇತ್ತ ಕಡೆ ನೋಡು. ಆ ಆಲದ ಮರದಲ್ಲಿ ಪಕ್ಷಿಗಳು ಮಧುರಗಾನ ಮಾಡುತ್ತಾ ತಮ್ಮ ತಮ್ಮ ಪ್ರೇಮಿ ಪ್ರೇಯಸಿಯರೊಡನೆ ಆಡುತ್ತಿವೆ. ಮಂಗಳ ಧ್ವನಿ ಮಾಡುತ್ತಾ ಹೂವಿಂದ ಹೂವಿಗೆ ಚುಂಬನಗೈಯುತ್ತಾ ರಸ ಹೀರುವ ಓಂಕಾರ ಧ್ವನಿ ಮಾಡುತ್ತಿರುವ ಭೃಂಗಗಳನ್ನು ನೋಡು. ಅದೋ ಆ ಕುಟೀರದಿಂದೊಬ್ಬ ಯುವಕನು ಹೊರಬರುತ್ತಿರುವನು. ಆತನ ಕೈಯಲ್ಲಿರುವ ಪುಷ್ಪಮಾಲೆಯೆಷ್ಟು ಸುಂದರವಾಗಿದೆ? ಆ ನದಿಯ ದಡದ ದೋಣಿಯನ್ನು ಏರಿ ಹೋಗುತ್ತಿರುವವನು. ಅತ್ತ ಕಡೆ ಸರಿ. ನಾವು ಅವನೆತ್ತ ಹೋಗುತ್ತಿರುವನೆಂಬುದನ್ನು ನೋಡೋಣ.

ಆಚೆಯ ದಡದ ತೋಪಿನಲ್ಲಿ ಅಸ್ಪಷ್ಟ ಕೊಳಲನಾದವು ಕೇಳುತ್ತಿದೆ. ಅಲ್ಲಿಗೆ ಈ ಯುವಕನು ಹೋಗುತ್ತಿರುವನೇ? ಅದೋ ಕೊಳಲ ಧ್ವನಿಯು ಸ್ಪಷ್ಟವಾಗುತ್ತಿದೆ. ಆ ವೃಕ್ಷದಡಿಯಲ್ಲಿ ಯಾವುದೋ ವ್ಯಕ್ತಿ ಕುಳಿತು ಮಧುರಗಾನ ಮಾಡುತ್ತಿದೆ. ಗಾನದಲ್ಲಿ ತಲ್ಲೀನವಾಗಿ ಬಾಹ್ಯ ಪ್ರಪಂಚದ ಆಗುಹೋಗುಗಳ ಗೊಡವೆಯಿಲ್ಲದಂತಿದೆ ಆ ಮುಖ ಕಾಂತಿ. ಸ್ವಲ್ಪ ತಾಳು ಅದು ಸ್ತ್ರೀ ಸ್ವರ ವೆನಿಸುತ್ತಿದೆ. ಆ ಸ್ತ್ರೀ ರೂಪ. ಆಹಾ! ಆಕೆಯ ರೂಪವನ್ನು ನೋಡು. ರಂಗೇರುತ್ತಿರುವ ಕೆಂದುಟಿಯ ಚೆಲುವನ್ನು ನೋಡು. ಗಾನಲೋಲನಾಗಿ ಅವರ ಮಧುವನ್ನು ಹೀರುವ ಹಾಗೆ ನಟಿಸುತ್ತಿರುವ ಆಕೆಯ ಮಧುರ ನಯನಗಳನ್ನು ನೋಡು. ಚಂದ್ರಕಾಂತಿಯ ನ್ನು ಸೂಸುವ ಆ ಕುಸುಮಗಳಲ್ಲಿ ಶಾರ್ಪಣದಂತೆ ಗುಂಗುರ ಗುಂಗುರಾಗಿ ಹರಡಿರುವ ಆಕೆಯ ಕೇಶರಾಶಿಯನ್ನು ನೋಡು.. ಕೊಳಲನ್ನು ಹಿಡಿದು ಮಧುರ ಸ್ವರವನ್ನು ಹೊರಡಿಸುತ್ತಿರುವ ಆಕೆಯ ಸುಕೋಮಲವಾದ ಕೈ ಬೆರಳುಗಳನ್ನು ಕಂಡೆಯಾ? ನಿಲ್ಲು ನಿಲ್ಲು. ಯುವಕನು ಆಕೆಯ ಮುಂಗಡೆ ನಿಂತಿರುವನು. ಆತನು ಗಾನದಿಂದ ಆನಂದಿತನಾಗಿದ್ದಾನೆ. ಆತನ ತೇಜಸ್ವಿ ಮುಖದಲ್ಲಿ ಹೊರಡುತ್ತಿರುವ ಮುಗುಳ್ನಗೆಯನ್ನು ನೋಡು. ಹೂಮಾಲೆಯನ್ನೇಕೆ ಆತನು ಮುಂದಕ್ಕೆ ಹಿಡಿದಿರುವನು? ಆವಳ ಕೊರಳಿಗೆ ಪ್ರೇಮ ಗಾನಕ್ಕೆ ಪ್ರತಿ ಗೌರವವನ್ನು ಹಾಕುತ್ತಿರುವನೇ? ತರುಣಿಯು ಆಕೆ ಗಾನವನ್ನು ನಿಲ್ಲಿಸಿ ಏನ್ನು ನೋಡಿದಳು? ಆಕೆಯ ನಿಲುವಿಕೆ, ಆಕೆಯುಟ್ಟ ಹಸಿರು ಸೀರೆ ಆಕೆಯ ಮುಖ ಮಂಡಲಕೆಷ್ಟು ಒಪ್ಪುತ್ತಿರುವುದು? ಆಕೆಗೆ ಮನದಲ್ಲಿ ಒಲವಿದ್ದರೂ, ಏನೋ ಮುಗುದ ವಿರುವಂತೆ ಕಾಣುವುದು. ಅಯ್ಯೋ! ಆ ಕಡೆ ನೋಡಿರಿ. ಯುವಕನು ಆಕೆಯ ಕಪೋಲಗಳಲ್ಲಿ ಕೈಯಿಟ್ಟು ನೇವರಿಸುತ್ತಿದ್ದಾನೆ. ಆಕೆಯು ಬೇಡವೆನ್ನಲಿಲ್ಲ. ಯುವಕನ ಏಕಾಂತ ಜೀವನವು ಕೊನೆಗೊಂಡಿತು. ಆಕೆ ನನಗೆ ಬೇಡವೆಂದಳು. ಆಕೆಯ ಮನದೇವಿ. ಈತನು ದೇವಿಯ ಪೂಜಾರಿಯಾದನು. ಇದು ನನ್ನ ಹಿಂದೆ ಕಳೆದು ಹೋದ ಸುಂದರ ಸ್ವಪ್ನ. ನೀನು ಈ ಸ್ವಪ್ನದ ಸಾರವನ್ನು ಊಹಿಸಿಕೊಂಡಿರ ಬಹುದಲ್ಲವೇ?" ಎಂದು ನಿಟ್ಟುಸಿರು ಬಿಡುತ್ತಾ ಗೆಳೆಯ ಸುಧಾಕರನು ಒಂದು ಸಿಗರೇಟನ್ನು ಹೊತ್ತಿಸಿದನು.

"ಟಿಕೇಟ್, ಟಿಕೇಟ್" ಎಂಬ ಶಬ್ದ ಕೇಳಿತು. ಪಕ್ಕದಲ್ಲಿದ್ದ ನೋಡಿದ ಕಥಾನಾಯಕನು ಬೆಚ್ಚಿಬಿದ್ದ. ಆತನ ಬೆದರಿಕೆಯಿಂದ ನಾನೂ ಗಾಬರಿಗೊಂಡೆ. ಟಿಕೇಟ್ ಕಲೆಕ್ಟರು ಪ್ರಯಾಣಿಕರ ಟಿಕೇಟನ್ನು ಪರೀಕ್ಷಿಸುತ್ತಿದ್ದನು. ರಾತ್ರಿ ಹನ್ನೆರಡು ಗಂಟೆಯ ಸಮಯ. ಶಾಂತಿಮಯ ರಾತ್ರಿ. ಎತ್ತಲೂ ಅಂಧಾಕಾರದ ಆವರಣ. ಆಕಾಶದಲ್ಲಿ ಮಿನುಗುತ್ತಿರುವ ತಾರೆಗಳ ಗುಚ್ಛ. ದಿಗಂತದಲ್ಲಿ ಆಗತಾನೆ ಉದಯಿಸಿದ ಅರ್ಧ ಚಂದ್ರಬಿಂಬ. ಈ ಶಾಂತತೆಯನ್ನು ಬೇಧಿಸಿಕೊಂಡು ಯಾವುದೋ ಗೊತ್ತುಗುರಿಯಿಲ್ಲದೆ, ರಭಸದಿಂದ ಚೀತ್ಕಾರ ಮಾಡುತ್ತಾ, ನಿದ್ರೆಯಿಂದ ಅರ್ಧ ಮತ್ತರಾದ ಪ್ರವಾಸಿಕರನ್ನು ಎತ್ತಲೋ ಸಾಗಿಸುವೆನೆಂದು ಹೊರಟ ರೈಲಿನ ಶಾಂತಿ ಭಂಗ. ಗಾಡಿಯಲ್ಲಿ ತನ್ನನ್ನೇ ತಾನು ಮರೆತು ನಿದ್ರೆ ಮಾಡುವ ಕೆಲವು ಪ್ರವಾಸಿಕರು. ಟಿಕೇಟು ಕಲೆಕ್ಟರರ ಕಣ್ಣಿಗೆ ಬೀಳದಂತೆ ಅಡಗಲು ಪ್ರಯತ್ನ ಪಡುತ್ತಿದ್ದ ಕೆಲವು ದಾಂಧಿಗರು. ಇವನ್ನೆಲ್ಲಾ ನೋಡುವುದು ನನಗೊಂದು ತಮಾಷೆಯಾಗಿತ್ತು. ಟಿಕೇಟ್ ಇಲ್ಲದವರಲ್ಲಿ ನಮ್ಮ ಕಥಾನಾಯಕರೊಬ್ಬರು. ಆಕಸ್ಮಿಕವಶಾತ್ ಟಿಕೇಟ್ ಕಲೆಕ್ಟರರ ಕಣ್ಣು ಈತನ ಮೇಲೆ ಹಾಯಲಿಲ್ಲ. ಈತನು ಹೊಗೆ ಸೇದುತ್ತಿದ್ದಂತೆಯೇ—"ನನ್ನಲ್ಲಿ ಟಿಕೇಟಿಲ್ಲ. ನೀನು ನನ್ನನ್ನು ಕಳ್ಳನೆಂದು ಹೇಳಬಹುದಲ್ಲವೇ?" ಎಂದನು. ನಾನಾತನ ಪ್ರಶ್ನೆಗೆ ಉತ್ತರವೀಯದೆ ಒಂದು ಸಿಗರೇಟನ್ನು ಮುಂದು ಮಾಡಿದೆನು.

"ಇಂದಿಗೆ ಒಂದು ವರ್ಷದ ಹಿಂದೆ. ಇದೇ ರೈಲಿನಲ್ಲಿ ಕುಳಿತಿದ್ದೆನು. ಇದೇ ವಾತಾವರಣ. ತುಂಬಿದ ಪ್ರಶಾಂತ ಚಂದ್ರಿಕೆಯ ಬೆಳಕಿನಲ್ಲಿ, ಮೌನ ಮರಗಳ ತೆರೆಗಳನ್ನು ಸೀಳಿಕೊಂಡು ರೈಲು ಮುಂದೋಡುತ್ತಿತ್ತು. ಅಂದು ನನ್ನ ಜೀವನದ ತಾರೆ ನನ್ನ ಜತೆಯಲ್ಲಿ ಕೂತಿತ್ತು. ಇಂದು ಅದೇ ಸ್ಥಳದಲ್ಲಿ ನಿನ್ನ ಜತೆಯಲ್ಲಿ ಕೂತಿರುವೆನು. ಅಂದಿನದು ಸುಂದರ ಸ್ವಪ್ನಗಳು. ಇಂದಿನದು ಅಸರ ಅನುಭವಗಳು. ಅವಳು ಬೆಸ್ತರವಳು. ನಾತ ಪೂಜಾರಿಯ ಒಬ್ಬನೇ ಮಗನು. ಪ್ರೇಮ ಪೂಜಾರಿಯಾದ ನನ್ನ ದೇವಿಯ ಸಾಕ್ಷಾತ್ಕಾರವನ್ನು ದೇವಪೂಜಾರಿಯಾದ ನನ್ನ ತಂದೆ ಸಹಿಸಲಿಲ್ಲ. ಆತನಿಗೆ ಪ್ರೇಮ ದೈವದ ಸಂಬಂಧವರಿತಿತ್ತು. ಆದರೆ ಸಮಾಜವು ಅದರ ಮಹತ್ವವನ್ನರಿಯಲಿಲ್ಲ. ಮಹತ್ವವನ್ನರಿಯುವ ಪ್ರಯತ್ನವನ್ನೂ ಸಹ ಮಾಡಲಿಲ್ಲ. ಬಂಧು ಬಳಗನೆಂದು ಹೇಳುತ್ತಿದ್ದವರು ಅವಹೇಳನ ಮಾಡತೊಡಗಿ ದೂರವಾದರು. ಆದರೆ ಸಂಪ್ರದಾಯಿ ಸಮಾಜದ ನಡತೆಯು ಅವಳ ಮನ ನೋಯಿಸಿರಬೇಕು.

ಪ್ರಾತಃಕಾಲದಲ್ಲಿ ಗಂಗೆಯಿಂದ ನೀರು ತರುವುದು ಅವಳ ದಿನಚರಿಯಾಗಿತ್ತು. ಅಂದು ಆಕೆಯು ಎಷ್ಟು ಹೊತ್ತಾದರೂ ಹಿಂತಿರುಗಲಿಲ್ಲ. ಎಲ್ಲಿ ಹುಡುಕಿದರೂ ಫಲಕಾರಿಯಾಗಲಿಲ್ಲ. ಎಲ್ಲಿ ಕೇಳಿದರೂ ಎಲ್ಲರೂ ಉತ್ತರ ಹೀನರು. ಮನಸ್ಸಿನಲ್ಲಿ ಅಧೀರಳಾದೆನೆನ್ನ, ಅಶಾಂತಿ ತೋರತೊಡಗಿತು. ಮೂಲೆ ಮೂಲೆಗಳಿಂದ ಕೋಣೆ ಕೋಣೆಯ ವರೆಗೆ ಹುಡುಕಿದೆನು. ನಿಷ್ಫಲವಾಯಿತು. ಸಾಯಂಕಾಲ ಬೆಸ್ತನೊಬ್ಬನು ಒಬ್ಬ ಸ್ತ್ರೀಯ ದೇಹವು ಗಂಗೆಯ ಪ್ರವಾಹದಲ್ಲಿ ತೇಲಿಹೋಗುತ್ತಿತ್ತೆಂದು ವರದಿ ತಂದನು. ನನಗೆ ಪ್ರಪಂಚವೇ ಶೂನ್ಯವೆನಿಸಿತು. ಪ್ರಪಂಚವೆಲ್ಲಿರುವವರೆ

ಪುಸ್ತಕ ವಿಮರ್ಶೆ

ಶ್ರೀ ಬಿ. ಡಿ. ಗಣಪತಿಯವರ

ಮಾನವ, ಪಂಚಾಮೃತ

ಮತ್ತು

ತುಂತುರು

—: ವಿಮರ್ಶಿಸಿದವರು :—

ಶ್ರೀ ಎಂ. ಆನಂದರಾವ್, ಎಂ. ಎ., ಬಿ. ಒ. ಎಲ್., ಎಲ್. ಟಿ.

(ಮಂಗಳೂರು ಗವರ್ನಮೆಂಟ್ ಆರ್ಟ್ಸ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರು)

ಶ್ರೀಯುತ ಬಿ. ಡಿ. ಗಣಪತಿಯವರ 'ತುಂತುರು' 'ಪಂಚಾಮೃತ' ಮತ್ತು 'ಮಾನವ' ಎಂಬುದಾಗಿ ನಾಮಾಂಕಿತವಾಗಿರುವ ಮೂರು ಕೃತಿಗಳನ್ನು ಓದಿ ನೋಡಿರುತ್ತೇನೆ

ಶ್ರೀಯುತರ ಕೃತಿಗಳನ್ನೋದುವಾಗ ತಟ್ಟನೆ ಗೋಚರಿಸುವ ಪ್ರಧಾನ ಗುಣಗಳೆಂದರೆ— (೧) ಉಚಿತ ಪದಪ್ರಯೋಗದಿಂದ ನಿಬಿಡವಾಗಿದ್ದು ಎಡೆತಡೆಗಳಿಲ್ಲದೆ ಧಾರಾಕಾರವಾಗಿ ಪ್ರವಹಿಸಿ ಓದುಗರಿಗೆ ಉತ್ಸಾಹವನ್ನುಂಟುಮಾಡುವಂತಹ ಅವರ ಶೈಲಿ. (೨) ಅಂತೆಯೇ ಪೂರ್ವಾಪರ ಚರ್ಚೆಸಲ್ಪಟ್ಟು ಉದಾತ್ತವಾಗಿರುವ ಭಾವನಾತರಂಗಗಳನ್ನೊಳಗೊಂಡ ಅವರ ವಿಚಾರವಾಹಿನಿ. (೩) ಭಾವನೆಯಲ್ಲಿಯಾಗಲೀ, ಭಾಷೆಯಲ್ಲಿಯಾಗಲೀ, ಯಾವ ವಿಧದ ಅಶ್ಲೀಲತೆ ದೋರದಿರುವಿಕೆ. (೪) ವಿಷಯ ಪ್ರತಿಪಾದನೆ ಮಾಡುವುದರಲ್ಲಿಯೂ, ಓದುಗರಿಗೆ ವಿಷಯಗಳೊಳಗಿನ ಕಸವನ್ನು ತೆಗೆದು ಕೇವಲ ರಸವನ್ನೇ ನೀಡುವುದರಲ್ಲಿಯೂ ಗ್ರಂಥಕರ್ತರಿಗಿರುವ ಅಗಾಧವಾದ ಪಾಂಡಿತ್ಯ.

'ಮಾನವ'—ಈ ಗ್ರಂಥದಲ್ಲಿ ಮಾನವನ ಉದಯ, ಅಭಿವೃದ್ಧಿ, ಅವನ ಜೀವನದ ಗುರಿ, ಇಂದಿನ 'ಇಸಂ'ಗಳ ವಿಫಲತೆ ಇತ್ಯಾದಿ ಹಲವಾರು ವಿಚಾರಾತ್ಮಕ ವಿಷಯಗಳನ್ನು ಚೆನ್ನಾಗಿ ಚರ್ಚಿಸಿ, ಮಾನವನ ಪುನರುತ್ಥಾನವು ಕೇವಲ ಆಧ್ಯಾತ್ಮಿಕ ಹಾಗೂ ನೈತಿಕ ತಳಹದಿಯ ಮೇಲೆ ಆಗಲು ಸಾಧ್ಯವೆಂದು ಸಾರಿದ್ದಾರೆ. ಜೀವನದ ವಿವಿಧ ರಂಗಗಳಲ್ಲಿ ದುಡಿಯುತ್ತಲಿರುವ ಪ್ರತಿ ಮಾನವನೂ ಅಗತ್ಯವಾಗಿ ಲಕ್ಷ್ಯಕೊಟ್ಟು ಓದಬೇಕಾದ ಕೃತಿಯಿದು. ಇದರ ತತ್ವಗಳನ್ನರಿತು ಆಚರಣೆಯಲ್ಲಿ ತಂದುಕೊಂಡರೆ ಮಾನವತ್ವವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುವದರಲ್ಲಿ ಸಂದೇಹವಿಲ್ಲ.

ಪಂಚಾಮೃತ—ಐದು ಪತ್ರಗಳನ್ನೊಳಗೊಂಡಿರುವ ಒಂದು ಉತ್ತಮ ಕೃತಿಯಿದು. ಕನ್ನಡ ಸಾಹಿತ್ಯದಲ್ಲಿ ಪತ್ರಗಳ ಮುಖಾಂತರ ಬೋಧಿಸುವಂಥಾ ಕೃತಿಗಳು ಅತಿ ವಿರಳ. ಶ್ರೀಯುತರು ಇದರಿಂದ ಈ ಕೊರತೆಯನ್ನು ಹೋಗಲಾಡಿಸಲು ಯತ್ನಿಸಿದ್ದಾರೆ. 'ದೇಶದ ಯುವಕನಿಗೆಂದೂ, 'ಪ್ರೇಮಿಗಳಿಗೆಂದೂ, 'ಪತಿಯಾದವನಿಗೆಂದೂ, 'ತಂದೆ ತಾಯಿಗಳಿಗೆಂದೂ, 'ನಾಗರಿಕನಿಗೆಂದೂ ವಿಂಗಡಿಸಿ ಬೇರೆ ಬೇರೆ ಪತ್ರಗಳನ್ನು ಬರೆದಿದ್ದರೂ, ಈ ಪ್ರತಿಯೊಂದು ಪತ್ರದಲ್ಲಿಯೂ ಎಲ್ಲರೂ ತಿಳಿಯಬೇಕಾದ ಅಂಶಗಳು ಹಲವಾರಿವೆ. ಸಿರಿಯ ಕಾವೆಟ್ಟಿದಂಥ ಸುಪ್ರಸಿದ್ಧ ಲೇಖಕರ ವಿಚಾರಸರಣಿಯನ್ನು ಸಂಗ್ರಹವಾಗಿ ಇದರಲ್ಲಿ ಕಾಣಬಹುದು. ಜೀವನವು ಸುಗಮವಾಗಬೇಕಾದರೆ 'ಪಂಚಾಮೃತ'ದ ಸವಿಯನ್ನು ಎಲ್ಲರೂ ನೋಡಲೇಬೇಕು.

ತುಂತುರು—ಇದರಲ್ಲಿ ಹನ್ನೆರಡು ಚಿಕ್ಕ ಕತೆಗಳಿವೆ. ಸತ್ಯ, ಧರ್ಮ, ಪ್ರೇಮಗಳನ್ನು ಚಿತ್ರಿಸಲು ಹೊರಟ ಕತೆಗಳಿವು. ಇವುಗಳಲ್ಲಿ ತುಂತುರು, ಸ್ವಾತಂತ್ರ್ಯ, 'ಜೋಸ್ನಸಾ,' 'ತಾಯಿ' ಎನ್ನುವ ಕತೆಗಳು ಹೃದಯಂಗಮವಾಗಿವೆ.

ಶ್ರೀಯುತರದು ಪಳಗಿದ ಕೈ; ಪಕ್ವವಾದ ಮನಸು. ಇಂಥವರ ಕೈಯಿಂದ 'ಪಂಚಾಮೃತ' 'ಮಾನವ'ಗಳಂತಹ ಹಲವಾರು ಕೃತಿಗಳು ಹೊರಬೀಳಲಿ. ಅವು ಕನ್ನಡಿಗರಿಗೆ ನೆರವಾಗಲೆಂದು ಹಾರೈಸುತ್ತೇನೆ.

ಲ್ಲರೂ ನನ್ನ ಕಡೆ ಬೆರಳು ಮಾಡಿ ಹುಚ್ಚನೆಂದು ನಗುತಿರುವಂತೆ ವೇದ್ಯವಾಗುತಿತ್ತು. ನಿಜವಾಗಿಯೂ ಪ್ರಪಂಚದ ಪಾಲಿಗೆ ನಾನು ಹುಚ್ಚನಾದೆನು. ದೇಶ ದೇಶಗಳನ್ನೆಲ್ಲಾ ಸುತ್ತಿದೆನು. ಜನರಹಿತ ಅರಣ್ಯದಲ್ಲಿ ಕಾಲಕಳೆದೆನು. ಆದರೆ ಮನಶಾಂತಿ ಇಲ್ಲ. ಅನ್ನ ಆಹಾರವನ್ನು ಬಿಟ್ಟು ಮನಸ್ಸಿನ ಅಶಾಂತಿಯನ್ನು ದೂರಗೊಳಿಸಲು, ದೇಹವನ್ನು ದಂಡಿಸಿದೆನು. ಅಶಾಂತಿಯು ಉಜ್ವಲವಾಗತೊಡಗಿತು. ಮನಶಾಂತಿಯಿಲ್ಲದಿದ್ದರೂ, ಉದರ ಶಾಂತಿಯು ಬೇಕೇಬೇಕಲ್ಲವೇ? ಇದಕ್ಕಾಗಿ ಉಚ್ಚವರ್ಗದ, ಉದ್ಯಮಿಗಳ, ಬಂಡವಾಳಗಾರರ ಬಾಗಿಲುಗಳಲ್ಲಿ ತಡವರಿಸಿದೆನು. ಆದರೆ ಬಾಗಿಲುಗಳು ನನ್ನನ್ನು ಸ್ವಾಗತ ಮಾಡಲಿಲ್ಲ!

ನಮ್ಮ ಈ ಪುಣ್ಯ ಭೂಮಿಯಲ್ಲಿ ಎಷ್ಟೋ ಮಹಾತ್ಮರು, ದೇವತಾ ಪುರುಷರು ಬೋಧಕರು, ವೀರರು, ಸಿದ್ಧಾಂತಿಗಳು ಹುಟ್ಟಿ ದೀನದರಿದ್ರರಿಗಾಗಿ ಜೀವನವನ್ನು ಸವೆದು ಶ್ರಮಿಸಿದ್ದಾರೆ. ನಮ್ಮ ಈ ನಾಡು ಪ್ರಪಂಚಕ್ಕೆ ಆದರ್ಶಪ್ರಾಯವಾಗಿ ವಿಶ್ವದ ಶಾಂತಿಗಾಗಿ ಶ್ರಮಿಸಿದ ವಿಶಾಲ ಹೃದಯಿಗಳ ತಾಯ್ನಾಡು. "To live is not to live for one's self alone, let us help one another, none of us should live for ourselves, we all live for humanity." ಎಂದು ಸೌಹಾರ್ದತೆಯನ್ನು ಬೋಧಿಸಿದ ಮಹಾತ್ಮ ಜನರ ಹಿಂಬಾಲಕರೆಂದು ಹೇಳಿಕೊಳ್ಳುವ ಇಂದಿನ ಮಾರ್ಜಾಲ ಸನ್ಯಾಸಿಗಳ ಎಡೆಯಲ್ಲಿ ನನ್ನಂತಹವನಿಗೆಲ್ಲಿ ಮನಶಾಂತಿ? ಧನಿಕರಿಗೆ ಹೃದಯವಿಲ್ಲ. ಅವರಿಗೆ ಹಸಿವನ್ನರಿಯುವ ಶಕ್ತಿಯಿಲ್ಲ. ಅವರಲ್ಲಿ ಮನುಷ್ಯತ್ವವಿರುವವರು ವಿರಳ. ನನ್ನ ಜೀವನವು ಅಶಾಂತಿ, ದುಃಖದ ಜ್ವಾಲೆಯಲ್ಲಿ ಭಸ್ಮವಾಗಿದೆ. ಆಶೆಯ ಕಿರಣವೊಂದೂ ಈ ಅಂಧಕಾರದಲ್ಲಿ ಕಾಣುವುದಿಲ್ಲ. ಹಸಿವು ಮನುಷ್ಯನ ಮನುಷ್ಯತ್ವವನ್ನು ಕೆಡಿಸುತ್ತದೆ. ಮನಸ್ಸಿಗೆ ಸ್ವಾತಂತ್ರ್ಯ. ಹಸಿವಿಗೆ ಶಾಂತಿ ಬೇಕಿದೆ!

"ಹುಟ್ಟಿಸಿದ ದೇವನು ಹುಲ್ಲು ಮೇಯಿಸ್ಯಾನೆ? ಎಂದಂತೆ ನೀನು ಸ್ವಲ್ಪ ದೇವರಲ್ಲಿ ಭಕ್ತಿಯಿಡು. ದೇವನು ನಿನ್ನ ಮನಸ್ಸಿಗೆ ಶಾಂತಿ ಮತ್ತು ಜೀವನೋಪಾಯದ ದಾರಿ ತೋರುವನು" ಎಂದೆ.

ಆತನು ಕಿಡಿ ಕಿಡಿಯಾದನು. "ನನ್ನ ಪಾಲಿಗೆ ದೇವರಿಲ್ಲ. ದೇವರಲ್ಲಿ ಪ್ರೇಮ ಭಕ್ತಿಯನ್ನು ಬೇಡಿ ಹತಾಶನಾದೆ. ಜೀವನದಲ್ಲಿ ನಿರಾಶೆ, ಅಶಾಂತಿ, ಅತೃಪ್ತಿಯನ್ನೇ ಆತನು ತುಂಬಿದ್ದಾನೆ. ಪರಲೋಕದ ದೇವರೂ ಈ ಲೋಕದ ಮನುಷ್ಯ ದೇವರೂ ಇಬ್ಬರೂ ನನ್ನನ್ನು ಕಡೆಗಣಿಸಿದ್ದಾರೆ. ಆದ್ದರಿಂದ ದೇವರಲ್ಲಿ ನನಗೆ ನಂಬಿಕೆಯಿಲ್ಲ. ಬಡವ ಬಲ್ಲಿದ, ಕುಂಟ ಕುರುಡ, ಬಲಿಷ್ಠ ದುರ್ಬಲ, ಒಡೆಯ ದಾಸ ಮುಂತಾದವುಗಳೆಂಬ ಭೇದವನ್ನು ಸೃಷ್ಟಿಸಿ ನಾನಾ ಗೋಳುಗಳಿಗೆ ಈಡುಮಾಡಿರುವ ಆ ದೇವರನ್ನು ನನ್ನ ದೇವರೆಂದು ಒಪ್ಪಿಕೊಳ್ಳಲಾರೆ. ಧರ್ಮ, ಸತ್ಯ, ನಿಸ್ವಾರ್ಥತೆ, ಪ್ರೇಮ, ಶಾಂತಿಗಳಿಗೆ ಯಾವ ದೇವನ ರಾಜ್ಯದಲ್ಲಿ ಎಡೆಯಿಲ್ಲವೋ ಅಂತಹ ದೇವರನ್ನು ನಾನು ವಂದಿಸಲಾರೆ" ಎಂದು ಮತ್ತೊಂದು ಸಿಗರೇಟನ್ನು ಹೊತ್ತಿಸಿದನು. ರೈಲು ನಿಂತಿತು. ದೂರದಲ್ಲಿ

"ಕ್ಯೆ ದಿಲ್ ಮುಜೇ ಐಸೀ
ಜಗಹ್ ಲೇ ಚಲ್
ಜಹಾಂ ಕೋಯಿ ನ ಹೋ!
ಅಪ್‍ನ ಪರಾಯ ಮೇರ್
ಬಾನಾ ಮೇರ್
ಬಾನ್ ಕೋಯಿ ನ ಹೋ"....

ಎಂಬ ಹಾಡು ದೂರದಲ್ಲಿ ಕೇಳಿಸುತಿತ್ತು.

"ತಾವು ತಮ್ಮ ಭವಿಷ್ಯವನ್ನು ಎಲ್ಲಿ ಕಳೆಯ ಬೇಕೆಂದಿರುವಿರಿ?" ಎಂದು ಕೇಳಿದೆನು.

"ಜಹಾಂ ಕೋಯಿ ನ ಹೋ" ಎಂದು ಆತನ ಉತ್ತರ ಬಂತು.

॥ ವಾರ್ತೆಗಳು. ॥

ಜನವರಿ ೧೩ ರಲ್ಲಿ ನ್ಯೂಯಾರ್ಕಿನಲ್ಲಿ ನಡೆದ ಅಂತರ್ರಾಷ್ಟ್ರೀಯ ಚಹಾ ಪ್ರಚಾರ ಒಕ್ಕೂಟಕ್ಕೆ ಭಾರತ ಸರಕಾರವು ತನ್ನ ಸಮ್ಮತಿಯನ್ನು ವಾಷಿಂಗ್‍ಟನ್ನಿಗೆ ತಿಳಿಸಿತು. ಅಮೇರಿಕದ ಟೀ ಎಸೋಸಿಯೇಶನಿನ ಪ್ರತಿನಿಧಿಗಳು ಮತ್ತು ಭಾರತ, ಸಿಲೋನ್ ಮತ್ತು ಇಂಡೋನೇಷ್ಯಗಳ ಸರಕಾರಗಳು ಮತ್ತು ಅಮೇರಿಕ ಟೀ ಎಸೋಸಿಯೇಶನ್ ಅಮೇರಿಕ ಚಹಾ ಮಂಡಲದ ಸದಸ್ಯರಾಗುವರು.

ಮೋರಿಸನ್ ಬಾರಿಯಿಂದ ಆಹಾರ ವಸ್ತುಗಳನ್ನು ಕೆಳಗೆ ಬಿಸಾಡಲು ಹೊರಟ ಸರ್ವಿಸ್ ವಿಮಾನವೊಂದು ಫೆಬ್ರವರಿ ತಾ. ೧೭ ರಿಂದ ಕಾಣೆಯಾಗಿದೆ. ಅದಕ್ಕೆ ಅಪಘಾತ ಸಂಭವಿಸಿತೆಂದು ಈಗ ಹೇಳಲಾಗಿದೆ. ವಿಮಾನವನ್ನು ಹುಡುಕುವವರು ಹೋದಾಗ ಅದೊಂದು ದಟ್ಟವಾದ ಕಾಡಿನಲ್ಲಿ ಬೆಟ್ಟಗಳ ತಪ್ಪಲಲ್ಲಿ ಬಿದ್ದುದನ್ನು ನೋಡಿದರು. ಮೂವರು ವೈಮಾನಿಕರೂ ಇತರ ಏಳು ಮಂದಿಯೂ ಮಡಿದಿರುವರಾಗಿ ಅಧಿಕೃತವಾಗಿ ತಿಳಿಯಬರುತ್ತದೆ.

ಸುಯೇಜ್ ಕಾಲುವೆ ಪ್ರದೇಶದಲ್ಲಿ ತಾ. ೧೯ ರಲ್ಲಿ ಒಂದು ಮಿಲಿಟರಿಯವರ ಸಭೆ ಸೇರಿತು. ಅದಕ್ಕೆ ಬ್ರಿಟಿಷ್ ಭೂಸೇನೆ ಮತ್ತು ವಿಮಾನ ಪಡೆಗಳ ಸೀನಿಯರ್ ಅಧಿಕಾರಿಗಳು ಬಂದಿದ್ದರು. ಮಧ್ಯಪ್ರಾಂತದಲ್ಲಿರುವ ಬ್ರಿಟಿಷ್ ಸೇನೆಗಳ ಭವಿಷ್ಯದ ಕುರಿತು ಧೋರಣೆಯನ್ನು ನಿರ್ಧರಿಸುವುದಕ್ಕೆ ಈ ಸೇನಾಧಿಕಾರಿಗಳ ಸಭೆಯನ್ನು ಜರಗಿಸಲಾಗಿದೆಯೆಂದು ಹೇಳಲಾಗಿದೆ. ಸುಯೇಜ್ ಕಾಲುವೆ ಪ್ರದೇಶದಿಂದ ಸೇನೆಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುವಾಗ ಬಹಳ ಗುಪ್ತವಾಗಿ ಸಾಗಿಸಬೇಕೆಂದು ನಿರ್ಧರಿಸಿದ್ದಾರೆಂದು ತಿಳಿದುಬರುತ್ತದೆ.

ಅ. ಭಾ. ಶಾಂತಿ ಸಮಿತಿಯ ಅಧ್ಯಕ್ಷರಾದ ಡಾ ಸೈಪುದ್ದೀನ್ ಕಿಚ್ಲೂರವರು ತಾ. ೧೯ ರಲ್ಲಿ ಲೆನಿನ್ ಗ್ರೇವಿಗೆ ಬಂದರೆಂದು ಟಾಸ್ ಸುದ್ದಿ ಸಂಸ್ಥೆಯ ವರದಿ ಮಾಡಿದೆ. ಶಾಂತಿಗಾಗಿರುವ ಹೋರಾಟದಲ್ಲಿ ಭಾರತೀಯರು ವಹಿಸಿದ ಕಾರ್ಯವನ್ನು ಸ್ವೀಕಾರ ಮಾಡಿದ್ದು ಗೌರವಾಸ್ಪದವಾದುದೆಂದು ತಾನು ಆ ಮುತ್ತಿನಾಗಿ ಅವರು ಸ್ಟ್ಯಾಲಿನ್ ಶಾಂತಿ ಬಹುಮಾನದ ಕುರಿತು ಹೇಳಿದರು. ರಷ್ಯವು ಯುದ್ಧವನ್ನು ಬಯಸುವುದಿಲ್ಲವೆಂದು ತನಗೆ ಖಚಿತವಾಗಿದೆಯೆಂದೂ ಅವರು ಹೇಳಿದರು.

ಅಖಿಲ ಭಾರತ ರಾಮರಾಜ್ಯ ಪರಿಷತ್ತಿನ ಪ್ರಥಮ ಅಧಿವೇಶನವು ಇಂದೋರಿನಲ್ಲಿ ಮಾರ್ಚ ಮೊದಲನೆಯ ವಾರದಲ್ಲಿ ಜರುಗಲಿದೆ. ಸಂಸ್ಥೆಯ ಸ್ಥಾಪಕರಾದ ಶ್ರೀ. ಕರಪಾತ್ರಿ ಮಹಾರಾಜರು ಈ ಅಧಿವೇಶನದಲ್ಲಿ ಭಾಗವಹಿಸುತ್ತಾರೆಂದು ತಿಳಿದುಬಂದಿದೆ.

ತಾ. ೧೮ ರಂದು ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ರೈಲ್ವೆ ಮುಂಗಡ ಪತ್ರವನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿದರು. ಮಂತ್ರಿಗಳು ರೈಲ್ವೆ ಅಭಿವೃದ್ಧಿ ಯೋಜನೆಗಳ ಕುರಿತು ಮಾತನಾಡುತ್ತ ಸೂಚಿಸಿದ ೧೩ ಹೊಸ ರೈಲ್ವೆ ಮಾರ್ಗ ರಚನಾ ಯೋಜನೆಗಳಲ್ಲಿ ಮಂಗಳೂರು-ಹಾಸನ ರೈಲ್ವೆ ಯೋಜನೆಯೂ ಒಂದಾಗಿದೆ. ೧೯೫೨-೫೩ ನೆಯ ವರ್ಷದಲ್ಲಿ ರೈಲ್ವೆಯ ನಿವ್ವಳ ಉಳಿಕೆಯು ೩೦.೫ ಕೋಟಿ ಎಂದು ಅಂದಾಜು ಮಾಡಲಾಗಿದ್ದರೂ, ಅದು ರೂ. ೧೫ ಕೋಟಿಗೆ ಇಳಿಯಬಹುದೆಂದು ಮಂತ್ರಿಗಳು ಪ್ರಕಟಿಸಿದ್ದಾರೆ. ೧೯೫೩-೫೪ ನೆಯ ವರ್ಷಕ್ಕೆ ೧ ಕೋಟಿ ೩೦ ಲಕ್ಷ ರೂಪಾಯಿಗಳಷ್ಟು ಉಳಿತಾಯವನ್ನು ನಿರೀಕ್ಷಿಸಲಾಗಿದೆ. ೧೯೫೩ ನೆಯ ಏಪ್ರಿಲ್ ತಾ. ೧ರಿಂದ ಒಂದನೆಯ ದರಗತಿಯನ್ನು ರದ್ದುಮಾಡಲಾಗುವುದು.

ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ದಕ್ಷಿಣದ ಪ್ರವಾಸವನ್ನು ಕೈಕೊಂಡಿದ್ದಾರೆ. ಮೊದಲು ವಿಶಾಖ ಪಟ್ಟಣದಲ್ಲಿ ಇದ್ದವರು ಅಲ್ಲಿಯ ನಗರ ಸಭೆ ಹಾಗೂ ಜಿಲ್ಲಾ ಬೋರ್ಡುಗಳಿತ್ತ ಮಾನ ಪತ್ರಗಳಿಗೆ ಉತ್ತರಕೊಡುತ್ತ, 'ಆಂಧ್ರರು ಪರಸ್ಪರ ದ್ವೇಷಭಾವನೆಗಳನ್ನು ಮರೆತು ಆಂಧ್ರ ಪ್ರಾಂತ ನಿರ್ಮಾಣವು ಸುಲಭ ಸಾಧ್ಯವಾಗುವಂತೆ ಸಹಕರಿಸಬೇಕು' ಎಂದರು.

ಬಿಹಾರಿನ ಪ್ರಾಂತೀಯ ಮೇಲ್ಮನೆಗೆ ಅಲ್ಲಿಯ ಅಸೆಂಬ್ಲಿಯ ಸಭಾಸದರಿಂದ ಚುನಾಯಿತರಾದ ೩೪ ಮಂದಿಯ ಚುನಾವಣೆಯು ಅಸಿಂಧು ಎಂದು ಅಲ್ಲಿಯ ಚುನಾವಣಾ ನ್ಯಾಯಮಂಡಲವು ಸಾರಿದೆ. ಹೀಗಾಗಿ ಬಿಹಾರಿನಲ್ಲಿಯೂ ಮದ್ರಾಸಿನಲ್ಲಿ ಸಂಭವಿಸಿದಂತೆ ಮೇಲ್ಮನೆಯ ೩೪ ಮಂದಿಯ ಸದಸ್ಯತನ ರದ್ದಾಗಿದೆ.

ನೇಪಾಳದ ಅರಸ ತ್ರಿಭುವನರು ನಾಮಕರಣದ ಮೂಲಕ ತಾತ್ಕಾಲಿಕ ವಿಧಾಯಕ ಸಭೆಯೊಂದನ್ನು ರಚಿಸಿಕೊಳ್ಳಲು ನಿರ್ಧರಿಸಿದ್ದಾರೆ. ಈ ಸಭೆಯು ಅತ್ಯಂತ ಪ್ರಾತಿನಿಧಿಕವಾಗಿರುವುದಾಗಿಯೂ ಪ್ರಕಟಿಸಿದ್ದಾರೆ. ಮುಂದಿನ ವರ್ಷ ಇಲ್ಲಿ ಸಾರ್ವತ್ರಿಕ ಚುನಾವಣೆ ನಡೆಯುವುದು. ಅಲ್ಲಿಯ ಕಾಂಗ್ರೆಸ್ ಪಕ್ಷದ ಮುಖ್ಯ ಮಂತ್ರಿಗಳಾಗಿದ್ದ ಕೊಯಿರಾಲಾ ಅವರು ಕಾಂಗ್ರೆಸ್ಸಿನಿಂದ ಹೊರ ನಡೆದು ಪ್ರತ್ಯೇಕ ರಾಜಕೀಯ ಪಕ್ಷವನ್ನು ಸಂಘಟಿಸಲು ನಿರ್ಧರಿಸಿದ್ದಾರೆ.

ಮೈಸೂರು ಸರಕಾರದ ಕೈಗಾರಿಕೆ ಶಾಖೆಯ ಮಂತ್ರಿಗಳಾದ ಶ್ರೀ. ಸಿದ್ದಲಿಂಗಯ್ಯನವರ ರಾಜೀನಾಮೆಯು ಮುಖ್ಯ ಮಂತ್ರಿ ಮತ್ತು ರಾಜಪ್ರಮುಖರಿಂದ ಸ್ವೀಕೃತವಾಗಿದೆ. 'ಮಂತ್ರಿಯಾಗಿ ದುಡಿಯುವುದಕ್ಕಿಂತ ಬೇರೆ ವಿಧದಲ್ಲಿ ಜನರ ಸೇವೆ ಮಾಡುವುದೇ ಹಿತಕರವೆಂದು ನನಗೀಗ ಕಂಡಿದೆ,' ಎಂದು ಶ್ರೀ. ಸಿದ್ದಲಿಂಗಯ್ಯನವರು ಪ್ರಕಟಿಸಿದ್ದಾರೆ.

ಆಹಾರ ಬೆಲೆಯನ್ನು ಏರಿಸಿದ ಮೈಸೂರು ಸರಕಾರದ ನಿರ್ಧಾರದ ವಿರೋಧವಾಗಿ ಮೈಸೂರಿನಲ್ಲಿ ಹೊಸ ರೀತಿಯ ನಿರಶನ ಸತ್ಯಾಗ್ರಹವೊಂದು ಪ್ರಾರಂಭವಾಗಿದೆ. ಸರದಿಯ ಮೇರೆಗೆ ಇಬ್ಬಿಬ್ಬರು ೭೨ ಗಂಟೆಗಳ ಕಾಲ ನಿರಶನ ವ್ರತ ಕೈಕೊಳ್ಳುವರು. ಮೊದಲಿನವರು ೭೨ ಗಂಟೆ ಉಪವಾಸ ಮಾಡಿದ ಬಳಿಕ ಮತ್ತಿಬ್ಬರು ಉಪವಾಸ ತೊಡಗುವರು.

'ಭಾಷಾವಾರು ಪ್ರಾಂತ ರಚನೆಯಲ್ಲಿ'

'ಭಾಷಾವಾರು ಪ್ರಾಂತ ರಚನೆಗೆ ದ್ವಿತೀಯ ಸ್ಥಾನ ನೀಡಬೇಕು. ಪ್ರಥಮ ಸ್ಥಾನ ಆರ್ಥಿಕ ಸಮಸ್ಯೆಗೆ ದೊರಕಬೇಕು' ಎಂದು ಸಂಸ್ಥಾನಗಳ ಇಲಾಖೆಯ ಮಾಜಿ ಸಕ್ರೆಟರಿ ಶ್ರೀ ವಿ. ಪಿ. ಮೆನನ್ ಹೇಳಿದ್ದಾರೆ. ಭಾಷಾವಾರು ಪ್ರಾಂತಗಳ ರಚನೆ ಬಗ್ಗೆ ಅವರು ಈ ರೀತಿ ತಿಳಿಸಿದ್ದಾರೆ:—

'ಭಾರತದಲ್ಲಿ ಭಾಷಾವಾರು ಪ್ರಾಂತ ರಚನೆಯು ಹೊಸ ಯೋಚನೆಯಲ್ಲ. ಕಡೆಯ ಪಕ್ಷ ಈ ವಿಷಯವು ಸುಮಾರು ೩೫ ವರ್ಷಗಳಿಂದ ಇದ್ದೇ ಇದೆ. ಅನೇಕ ನಿರ್ಣಯಗಳೂ ಉಪನಿರ್ಣಯಗಳೂ ಕೇಂದ್ರ ಶಾಸನ ಸಭೆಗಳಲ್ಲಿ ತರಲ್ಪಟ್ಟಿದ್ದವು. ಬ್ರಿಟಿಷರು ಭಾಷಾವಾರು ಪ್ರಾಂತ ರಚನೆಗೆ ವಿರೋಧಿಗಳಾಗಿದ್ದರು. ಸಿಂಧ್ ಪ್ರಾಂತವನ್ನು ಪ್ರತ್ಯೇಕವಾಗಿ ರಚಿಸಿದ್ದಕ್ಕೆ ಕಣ್ಣೊರಿಸುವಂತೆ ಇರಲೆಂದು ಒರಿಸ್ಸಾ ಪ್ರಾಂತವನ್ನು ರಚಿಸಿದರು.

'ನಮಗೆ ಸ್ವಾತಂತ್ರ್ಯ ಬಂದ ಮೇಲೆ ಈ ವಿಷಯವನ್ನು ಎಲ್ಲಾ ರೀತಿಗಳಿಂದಲೂ ಪರಿಶೀಲಿಸಿದೆವು. ಮತ್ತು ತ್ರಿಮೂರ್ತಿಗಳ ಸಮಿತಿಯು (ಜವಹರ್‌ಲಾಲ್, ವಲ್ಲಭಭಾಯಿ ಮತ್ತು ಪಟ್ಟಾಭಿ) ತನ್ನ ವರದಿಯಲ್ಲಿ ಈ ವಿಷಯವನ್ನು ಹತ್ತು ವರ್ಷಗಳ ನಂತರ ಬಗೆಹರಿಸಿಕೊಳ್ಳಬೇಕೆಂದು ತೀರ್ಮಾನಿಸಿತು. ಆದರೆ ಈ ಸಮಿತಿಯು ಆಂಧ್ರ ಪ್ರಾಂತರಚನೆಯ ಬಗ್ಗೆ ಮಾತ್ರ ವಿನಾಯಿತಿ ಕೊಟ್ಟಿತು. ಆಂಧ್ರ ಪ್ರಾಂತರಚನೆಯ ಪ್ರಶ್ನೆಯು ಶ್ರೀ ಪೊಟ್ಟಿ ಶ್ರೀರಾಮುಲುರವರ ನಿಧನದೊಂದಿಗೆ ಮುಂದಕ್ಕೆ ಬಂದಿತು. ಈ ಸಮಯದಲ್ಲಿ ಆಂಧ್ರ ಪ್ರಾಂತ ರಚನೆಯು ಆಂಧ್ರರಿಗೇ ಹಾನಿಕರವೆಂದು ನಾನು ಭಾವಿಸುತ್ತೇನೆ ಎಂದಿರುವರು.

ನಗು ಮಲ್ಲಿಗೆ

'ಹದಿನೈದು ದಿನಗಳಿಗೆ ಹಿಂದೆ ನನ್ನ ಪಾರ್ಶ್ವವಾಯು ಕಾಯಿಲೆಗೆ ಹಚ್ಚಲು ಪ್ಲಾಸ್ಟರೊಂದನ್ನು ನೀವು ಕೊಟ್ಟಿರಿ'

'ಹೌದು'

'ಈಗ ಆ ಪ್ಲಾಸ್ಟರನ್ನು ತೆಗೆಯಲು ಏನಾದರೊಂದನ್ನು ಕೊಡಿ!'

• • •

'ಕಳೆದ ರಾತ್ರಿ ದೇವರ ಕೃಪೆಯಿಂದ ನಾನು ಬದುಕಿಕೊಂಡೆನು'

'ಏನದು ಗಂಡಾಂತರ?'

'ಮಧ್ಯರಾತ್ರಿಯ ಸಮಯಕ್ಕೆ ನನಗೆ ಎಚ್ಚರಿಕೆಯಾಯಿತು. ಕಣ್ತೆರೆದು ನೋಡುವಾಗ ಕೋಣೆಯಲ್ಲಿ ಬೆಳ್ಳಗೆ ಏನೋ ನಿಂತಂತೆ ತೋರುತಿತ್ತು. ನಾನು ಕೋವಿಯನ್ನು ತೆಗೆದು ಗುಂಡು ಹಾರಿಸಿದೆ. ನಂತರ ದೀಪ ಹಚ್ಚಿ ನೋಡುವಾಗ ಅದು ನನ್ನ ಬಿಳಿ ಶರ್ಟಾಗಿತ್ತು.'

'ಅದರಲ್ಲಿ ನಿನ್ನ ಜೀವಕ್ಕೆ ಗಂಡಾಂತರವೇನಿತ್ತು'

'ಯೋಚನೆ ಮಾಡು. ನಾನು ನನ್ನ ಶರ್ಟ್ ತೆಗೆದಿಡಲು ಮರೆತು ಹೋಗಿದ್ದರೆ!'

• • •

ಸಿಗರೇಟು ತರಲಿಕ್ಕೆಂದು ತಂದೆಯು ತನ್ನ ಮಗನಿಗೆ ನಾಲ್ಕಾಣೆ ಕೊಟ್ಟು ಕಳುಹಿಸಿದನು. ಆ ಮಗನು ಬಾರದೇ ಇಪ್ಪತ್ತು ವರ್ಷಗಳು ಕಳೆದು ಹೋದವು. ಒಂದು ದಿನ ಮನೆಯ ಮುಂದುಗಡೆ ಬಂದು ಕಾರು ಬಂದು ನಿಂತಿತು. ಶ್ರೀಮಂತನೆಂದು ತೋರುವ ಒಬ್ಬ ಯುವಕನು ಇಳಿದು ಮನೆಯೊಳಗೆ ಬಂದನು.

'ಓ ತಂದೆ, ನಾನು ಬೊಂಬಾಯಿಗೆ ಹೋಗಿಬಿಟ್ಟೆ. ಬಹು ಕಷ್ಟಪಟ್ಟು ದುಡಿದೆ. ಈಗ ನಾನು ಕೋಟ್ಯಾಧೀಶ್ವರನಾಗಿರುವೆನು' ಎಂದನು.

'ಆಗಿರಬಹುದು. ಆದರೆ ನನಗೆ ಸಿಗರೇಟೆಲ್ಲಿ?' ತಂದೆ ಕೇಳಿದನು.

ಮಗನು ಜೇಬಿನಿಂದ ಒಂದು ಪೇಕೆಟ್ ತೆಗೆದು 'ಇಲ್ಲಿದೆ, ಆದರೆ ಇಂದು ಪೇಕೆಟಿಗೆ ಎಂಟಾಣೆಯಾಗಿದೆ' ಆದ್ದರಿಂದ ನೀನು ಹೆಚ್ಚಿಗೆ ನಾಲ್ಕಾಣೆ ಕೊಡು' ಎಂದನು.

* * *

ನಗರದ ಒಬ್ಬ ಹುಡುಗನು ದನ ಮೆಲುಕ ಹಾಕುವದನ್ನು ಆಸಕ್ತನಾಗಿ ನೋಡುತ್ತಾ ನಿಂತಿದ್ದನು.

'ಒಳ್ಳೇ ಹಸು. ಸುಂದರವಾಗಿದೆಯಲ್ಲವೇ?' ಎಂದು ರೈತನು ಕೇಳಿದನು.

'ಅದು ಸರಿ. ಈ ದನಕ್ಕೆ ಯಾವಾಗಲೂ 'ಚಿವಿಂಗ್ ಗಮ್' ಕೊಟ್ಟು ಸಾಕಲು ಹಣ ವೆಚ್ಚವಾದೀತು?' ಹುಡುಗನು ಕೇಳಿದನು.

* * *

ಲಾಯರು ತಲೆ ಅಲ್ಲಾಡಿಸಿ ಹೇಳಿದರು. "ನಿಮ್ಮ ಗಂಡನು ಇನ್ನೂರು ಸಾವಿರದ್ದು ಮ ಜೀವವಿಮೆಯಲ್ಲ ಅದು ಕೇವಲ ಪೆಂಕಿಯ ಅನಾಹುತಕ್ಕಾಗಿ ವಿಮೆ ಇಳಿಸಿದ್ದಾಗಿದೆ. ಆದ್ದರಿಂದ ನಿಮ್ಮ ಪತಿಯು ನಿಧನರಾದರೆಂದು ಕಂಪೆನಿಯಿಂದ ಅದನ್ನು ವಸೂಲ್ಮಾಡುವುದು ಸಾಧ್ಯವಿಲ್ಲ"

"ಅದಕ್ಕಾಗಿಯೇ ಅವರ ತನುವನ್ನು ನಾನು ಸುಡಿಸಿದ್ದಾಗಿದೆ" ಆಕೆ ಎಂದಳು.

• • •

ಶಾಲೆಯಲ್ಲಿ ಅಧ್ಯಾಪಕರು ಈ ಆಧುನಿಕ ವಿಜ್ಞಾನ ಮತ್ತು ಆವಿಷ್ಕಾರಗಳ ವಿಚಾರವಾಗಿ ವಿವರಿಸುತ್ತಿದ್ದರು. ತಾನು ಹೇಳಿದ್ದು ಮಕ್ಕಳಿಗೆ ಹಿಡಿಸಿಬಹುದೇ ಎಂದು ತಿಳಿಯಲು ಅವರು ಕೇಳಿದರು.

"ನಲುವತ್ತು ವರ್ಷಗಳಿಗೆ ಹಿಂದೆ ಇರದ ಆದರೆ ಇಂದು ಇರುವ ಪ್ರಾಮುಖ್ಯವಾದ ಸಾಧನ ಒಂದರ ಹೆಸರನ್ನು ಯಾರು ಹೇಳಬಲ್ಲಿರಿ?"

ಅತೀ ಚುರುಕಿನ ಹುಡುಗನೊಬ್ಬನು ನಾಚಿಕೆಯುವದನದಿಂದ ಹೇಳಿದನು. "ನಾನು ಸಾರ್!"

* * *

ಹೋಟೆಲಿಗೆ ಬಂದ ಗಿರಾಕಿಯು ಹೇಳಿದನು. "ಒಂದು ದೋಸೆ, ಒಂದು ಕಪ್ಪು ಕಾಫಿ, ಒಂದು ದಯಾಪೂರಿತ ಮಾತು"

ಹೋಟೆಲಿನ ಕೆಲಸಗಾತಿಯು ದೋಸೆ ಕಾಫಿಗಳನ್ನು ತಂದಿಟ್ಟಳು.

"ದಯಾಪೂರಿತ ಮಾತೆಲ್ಲಿ?" ಗಿರಾಕಿ ಕೇಳಿದನು.

ಆಕೆಯು ಹಸನ್ಮುಖದಿಂದ ಹೇಳಿದಳು. "ಆರೋಗ್ಯ ಉಳಿಸಿಕೊಳ್ಳಬೇಕಾದರೆ ಆ ದೋಸೆ ತಿನ್ನದಿರು"

* • *

"ನನಗೆ ಅರ್ಥವಾಗುವುದೇ ಇಲ್ಲ" ಕಾಲೇಜ್ ವಿದ್ಯಾರ್ಥಿಯು ಹೇಳಿದನು. "ನಾನು ತಲೆ ಕೆಳಗೆ ಮಾಡಿ ನಿಂತರೆ ತಲೆಗೆ ರಕ್ತ ಹರಿದು ರಕ್ತದ ಒತ್ತಡ ಗೊತ್ತಾಗುತ್ತದೆ. ಆದರೆ ಕಾಲಿನಲ್ಲಿ ನಿಂತಾಗ ರಕ್ತದ ಒತ್ತಡ ಕಾಲಿನಲ್ಲಿ ತೋರುವುದಿಲ್ಲ"

ಆತನ ಗೆಳೆಯನು ಹೇಳಿದನು "ಅದು ಸುಲಭ. ನಿನ್ನ ತಲೆಯೊಳಗೆ ಖಾಲಿ ಸ್ಥಳ ಇರುವಂತೆ ಕಾಲುಗಳಲ್ಲಿ ಇಲ್ಲ"

* * *

ಮೊದಲನೆಯ ಕಿವುಡ— ನೀವೇನು ಮಡಿಕೇರಿ ಪೇಟೆಗೆ ಹೊರಟಿರುವಿರೇನು?

ಎರಡನೆ ಕಿವುಡ— ಇಲ್ಲ, ಇಲ್ಲ, ನಾನು ಮಡಿಕೇರಿ ಪೇಟೆಗೆ ಹೊರಟಿದ್ದೇನೆ.

ಮೊದಲನೆಯ ಕಿವುಡ— ಓಹೋ, ನಾನು, ನೀವು ಮಡಿಕೇರಿ ಪೇಟೆಗೆ ಹೊರಟಿದ್ದೀರೆಂದು ಯೋಚಿಸಿದೆ.

• • •

॥ ಮಧುಪರ್ಕ ॥

ಒಂದು ಸಲ ಕೆಲವು ಹೆಂಗಸರು ಗಾಂಧೀಜಿಯನ್ನು ನೋಡಲು ಹೋಗಿದ್ದರು. ಅವರೆಲ್ಲರೂ ಹಣವಂತರ ಮನೆಯವರು. ನಾಲ್ಕು ನಗೆ ಮಾತು ನಡೆದ ನಂತರ ಅವರಲ್ಲಿ ಹಿರಿಯಳಾಗಿದ್ದವಳು ಮುಂದೆ ತಾನು ಖಾದಿಯನ್ನೇ ಉಡುವುದಾಗಿ ಮಾತುಕೊಟ್ಟಳು. ಗಾಂಧೀಜಿ ಕೇಳಿದರು, 'ನಿನಗೆ ಮದುವೆಯಾಗಿದೆಯೇನಮ್ಮಾ?'

"ಹೌದು, ಆಗಿದೆ"

"ನಿನ್ನ ಗಂಡ ಖಾದಿ ಹಾಕುತ್ತಾನೆಯೋ?"

"ಇಲ್ಲ" ಈ ಮಾತು ಹೇಳುವಾಗ ಆಕೆಗೆ ತುಂಬ ನಾಚಿಕೆ. ಕೆನ್ನೆ ಕೆಂಪೇರಿತ್ತು.

"ಹಾಗಾದರೆ ನಿನ್ನ ಗಂಡ ನಿನ್ನನ್ನು ಖಾದಿ ಹಾಕಲು ಬಿಡುತ್ತಾನೆಯೋ?"

"ಅವರು ಹೇಳಿದ ಹಾಗೆ ಮಾಡುತ್ತೇನೆ." ಗರತಿಯಾದ ಆಕೆ ಉತ್ತರಿಸಿದಳು.

ಹಾಗಾದರೆ ಖಾದಿ ಉಡುತ್ತೇನೆಂದು ನೀನು ಕೊಟ್ಟ ಮಾತಿನ ಗತಿ ಏನು?" ಗಾಂಧಿಜಿ ಕೇಳಿದರು.

ಆಕೆಗೆ ದಿಕ್ಕು ತೋರದಾಯಿತು. ಮತ್ತೆ ಬಾಪುವೇ ಹೇಳಿದರು. "ನಿನ್ನ ಗಂಡನನ್ನು ಒಪ್ಪಿಸಲಾರೆಯಾ ನೀನು?"

ಆಕೆ ಅಂಜುತ್ತಾ ಹೇಳಿದಳು "ಹೂಂ"

"ಒಂದು ವೇಳೆ ಆತನು ಖಾದಿ ತೊಡಬೇಡ ಎಂದರೆ ಆತನ ಮಾತನ್ನು ಮೀರುತ್ತೀಯೋ ಅಲ್ಲವೇ?" ಗಾಂಧೀಜಿ ಕೇಳಿದರು.

"ಆಕೆ ಉತ್ತರಿಸಲಿಲ್ಲ. ಮೌನವಾಗಿ ತಲೆ ತಗ್ಗಿಸಿದಳು.

ಗಾಂಧೀಜಿ ಹೇಳಿದರು, "ಸೀತಾದೇವಿಯು ಶ್ರೀರಾಮಚಂದ್ರನ ಮಾತು ಮೀರಿದ್ದಾಳೆ. ಗೊತ್ತೇ ನಿನಗೆ?"

ಆಕೆಗೆ ಅದು ಹೊಳೆಯಲಿಲ್ಲ. ಗಾಂಧೀಜಿ ಹೇಳಿದರು, "ಕೇಳು, ಕಾಡಿಗೆ ಬರಬೇಡವೆಂದು ಶ್ರೀರಾಮನು ಸೀತೆಗೆ ಹೇಳಿದಾಗ ಆಕೆ ಆತನ ಮಾತು ಕೇಳಿದಳೆ? ಇಲ್ಲ. ಆತನನ್ನು ಹಿಂಬಾಲಿಸುವದೇ ತನ್ನ ಧರ್ಮ ಎಂದು ಹಾಗೆ ಮಾಡಿದಳು. ಆಕೆಯಂತೆ ನೀನೂ ನಿನ್ನ ಗಂಡನನ್ನು ಪ್ರೀತಿಸು. ಆದರೆ ಆತನು ನಿನ್ನ ಧರ್ಮಕ್ಕೆ ಅಡ್ಡಿ ಬಂದರೆ ಮರ್ಯಾದೆಯಾಗಿ ಆತನ ಮಾತನ್ನು ಮೀರಬೇಕು"

ಆಕೆಯ ಕಣ್ಣುಗಳಲ್ಲಿ ಹೊಸ ತೇಜಸ್ಸು ತುಂಬಿತ್ತು. ಆಕೆ ಹೊಸ ಪಾಠ ಕಲಿತಳು!

TO LET

Shops & upstairs in the newly constructed building of the Bank at Mercara are available for rent.

For particulars, please contact:-

THE CANARA BANKING CORPORATION LTD.,
MERCARA.

4-3

THE VIJAYA BANK, LIMITED,
ದಿ ವಿಜಯ ಬೇಂಕ್ ಲಿಮಿಟೆಡ್, ಮಡಿಕೇರಿ.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಮೂಲ ಧನ	ರೂ.	20,00,000
ತೆತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು. ರೂಪಾಯಿ ಹತ್ತು ಸಾವಿರದ ಮೇಲ್ಪಟ್ಟ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟ ನಡೆಸಲ್ಪಡುವುದು.

ಬಿ. ಮಂಜಯ್ಯ ಹೆಗ್ಡೆ,
ಎಡ್ವೋಕೇಟ್.
ಬೇಂಕಿನ ಆಡಳಿತ ಸಮಿತಿ ಅಧ್ಯಕ್ಷರು.
(ಮತ್ತು ದ. ಕ. ಜಿಲ್ಲಾ ಬೋರ್ಡ್ ಅಧ್ಯಕ್ಷರು)

12-2

ಮಡಿಕೇರಿ ಆಫೀಸಿನ ಏಜೆಂಟ್ :— **ಯಂ. ಯಸ್. ಅಳ್ವ.**

ಸಾಮುದಾಯಕ ವಿಕಾಸ ಯೋಜನೆ

ಜನವರಿ ತಿಂಗಳಲ್ಲಿ ನಡೆದ ಕೆಲಸ.

ಸರಕಾರದ ವರದಿ

ಜನವರಿ ತಿಂಗಳಲ್ಲಿ ಸುಮಾರು ೩೨೫೫ ಜನರು ಕೊಡಗು ಸಾಮುದಾಯಕ ವಿಕಾಸ ಯೋಜನೆಯ ವಿವಿಧ ಭಾಗಗಳಲ್ಲಿ ಕೆಲಸ ಮಾಡಿರುವರು. ೧೬ ಮೈಲುಗಳಷ್ಟು ಹಳೆ ರಸ್ತೆಗಳನ್ನೂ ೯ ಫರ್ಲಾಂಗು ಹೊಸ ರಸ್ತೆಯನ್ನೂ ಮಾಡಲಾಗಿದೆ. ಸುಮಾರು ಮೂರು ಮೈಲುಗಳ ಉದ್ದದ ರಸ್ತೆ ಚರಂಡಿಯನ್ನೂ, ೪೭ ಹಳೇ ಬಾವಿಗಳನ್ನೂ ದುರಸ್ತಿಗೊಳಿಸಲಾಗಿದೆಯಲ್ಲದೆ ೩ ಹೊಸ ಬಾವಿಗಳನ್ನು ತೋಡಲಾಗಿದೆ. ಎರಡು ಹೊಸ ಬಾವಿಗಳ ಕೆಲಸ ನಡೆಯುತ್ತಿದೆ. ೫ ಕೆರೆಗಳ ದುರಸ್ತಿ ನಡೆದು ೧೪ ಕೆರೆಗಳ ಕೆಲಸ ನಡೆಯುತ್ತಿದೆ. ನಾಲ್ಕು ಸೇತುವೆಗಳನ್ನು ರಿಪೇರಿ ಮಾಡಲಾಗಿದೆ. ೯೭ ಭಜನೆ, ಸಂಗೀತ ಮತ್ತು ಕುಣಿತದ ಪಾರ್ಟಿಗಳನ್ನು ಏರ್ಪಡಿಸಲಾಗಿತ್ತು. ಮಾದಾಪುರ ಮತ್ತು ಸುಂಟಿಕೊಪ್ಪದಲ್ಲಿ ಎರಡು ಸಾಮಾಜಿಕ ಕೇಂದ್ರಗಳನ್ನು ತೆರೆಯಲಾಗಿದೆ. ವಿವಿಧ ಗ್ರಾಮಗಳಲ್ಲಿ ಆರು ವಯಸ್ಕರ ಶಿಕ್ಷಣ ಶಾಲೆಗಳನ್ನು ತೆರೆಯಲಾಗಿವೆ. ಒಂದು ದೇವಸ್ಥಾನ ಮತ್ತೊಂದು ಶಾಲಾ ಕಟ್ಟಡದ ರಿಪೇರಿ ಮಾಡಲಾಗಿದೆ. ೧೭ ಗ್ರಾಮ ಸಮಿತಿಗಳನ್ನು ಏರ್ಪಡಿಸಿ ಗ್ರಾಮ ಪಂಚಾಯ್ತಿನ ಕೆಲಸಗಾರರು ೯೮ ಸಭೆಗಳನ್ನು ನಡೆಸಿದ್ದಾರೆ. ಸುಮಾರು ೨೫೦ ಪಶುಗಳನ್ನು ವಿವಿಧ ಬೇನೆಗಳ ಪರೀಕ್ಷೆ ನಡೆಸಿ ರೋಗ ತಗಲಿದ ಕಡೆ ಯೋಗ್ಯ ಸಲಹೆ ಕೊಡಲಾಗಿದೆ. ಗೇಮೆಕ್ಸಿನ್ ಹಾಪರ್ ಸಪ್ರೇಯರ್ ನೊದಲಾದವುಗಳ ಸರಬರಾಯಿ ಮಾಡಲಾಗಿದೆ. ಒಂದು ಮಣ್ಣು ಪರೀಕ್ಷೆಯ ಮತ್ತು ನಾಲ್ಕು ರೋಗ ತಗಲಿದ ಪರೀಕ್ಷೆಯ ವಿಚಾರವನ್ನು ವಿವರ ಪರೀಕ್ಷೆಗಾಗಿ ಕಳುಹಿಸಿದೆ. ಸುಮಾರು ೮೮೦ ಸೇರು ಬತ್ತವನ್ನು ಬೀಜಕ್ಕಾಗಿ ಸಂಗ್ರಹಿಸಲಾಗಿದೆ. ೮೪ ಕಾಂಪೋಸ್ಟು ಗುಂಡಿಗಳನ್ನು ತೆಗೆಯಲಾಗಿದೆ. ೧೫ ದನಗಳಿಗೆ ಕೃತಕ ಗರ್ಭಧಾನದ ವ್ಯವಸ್ಥೆ ಮಾಡಲಾಗಿದೆ. ೩೮೫ ಕೋಳಿಗಳಿಗೆ ಇಂಜಕ್ಷನ್ ಕೊಡಿಸಲಾಗಿದೆ. ೩೨೩ ದನಗಳ ಕೊಟ್ಟಿಗೆಗಳನ್ನು ಸಂದರ್ಶಿಸಿ ಯೋಗ್ಯ ಸಲಹೆ ಕೊಡಲಾಗಿದೆ. ಜಾತಿ ಕೋಳಿಯ ಮೊಟ್ಟೆಗಳನ್ನು ಕೆಲವರಿಗೆ ಹಂಚಲಾಗಿದೆ. ಜೇನು ಸಾಕುವ ಕೇಂದ್ರಗಳಲ್ಲಿ ಕೆಲವನ್ನು ಸಂದರ್ಶಿಸಲಾಗಿದೆ. ಸೋಮವಾರಪೇಟೆ ಕೆರೆಯಲ್ಲಿ 'ಕಟ್ಲ' ಮೀನು ಸಾಕುವ ಏರ್ಪಾಡು ಮಾಡಲಾಗಿದೆ. ಇದರಲ್ಲಿರುವ ಮೀನನ್ನು ಹಿಡಿಯಲು ಚಕ್ಕಳದ ದೋಣಿಯ ವ್ಯವಸ್ಥೆ ಮಾಡಲಾಗಿದೆ. ೭೫ ಬತ್ತ ವ್ಯವಸಾಯ ಪರಿಶೋಧನಾ ಕೇಂದ್ರಗಳನ್ನು ಏರ್ಪಡಿಸಿ ಐದು ವಿಧದ ಬತ್ತದ ಬೆಳೆಯ ಪರೀಕ್ಷೆ ನಡೆಸಲಾಗುವುದು. ೧೫೫ ಕೇಂದ್ರಗಳಲ್ಲಿ ಜಪಾನಿನ ವ್ಯವಸಾಯ ಕ್ರಮವನ್ನು ಕೈಕೊಳ್ಳಲಾಗುವುದು. ಮರಗಳ ಮತ್ತು ಬೀಜಗಳ ರಕ್ಷಣೆಗೆ ಸುಮಾರು ರೂ. ೩೧೦೦|- ಬೆಲೆಯ ರಸಾಯನ ವಸ್ತುಗಳನ್ನು ತರಿಸಲಾಗಿದೆ. ೧೦ ಹತ್ತಿ ಬೆಳೆಸುವ ಕೇಂದ್ರಗಳನ್ನು ತೆರೆದು ಎರಡು ವಿಧದ ಹತ್ತಿಗಳನ್ನು ಬೆಳೆಸುವ ಪ್ರಯೋಗ ಮಾಡಲಾಗುವುದು. ಗೇರು ಬೀಜ ವ್ಯವಸಾಯಕ್ಕೆ ಪ್ರೋತ್ಸಾಹ ಕೊಡಲಾಗುತ್ತಿದೆ. ಈ ಯೋಜನೆಗೆ ಒಳಪಟ್ಟ ಪ್ರದೇಶದಲ್ಲಿ ಎರಡು ಜೇನು ಸಾಕುವ ಕೇಂದ್ರಗಳನ್ನು ತೆರೆಯಲು ಕೇಂದ್ರ ಸರಕಾರದ ಮಂಜೂರಾತಿ ಕೇಳಲಾಗಿದೆ.

ಸೋಮವಾರಪೇಟೆಯಲ್ಲಿ ಸಹಕಾರ ಹಾಲು ಸರಬರಾಯಿ ಸಹಕಾರ ಕೂಟ, ಶನಿವಾರಸಂತೆಯಲ್ಲಿ ಸಹಕಾರ ಹಂಚು ಮಾಡಾಟದ ಸಂಘ, ಬೆಂಬಳೂರು ಮತ್ತು ಊರುಗುತ್ತಿಯಲ್ಲಿ ಕೃಷಿ ತಯಾರಿಸುವ ಸಹಕಾರ ಸಂಘ, ಕಿರ್ಗೂರಿನಲ್ಲಿ ನೆಟ್ಟಿಂಗ ರಿ ಆದರ್ಶ ಕೇಂದ್ರ, ಮಾದಾಪುರ ಮತ್ತು ಶನಿವಾರಸಂತೆಯಲ್ಲಿ ಬಾವಿ ತಯಾರಿಸುವ ಕೇಂದ್ರಗಳನ್ನು ತೆರೆಯುವ ಕೆಲಸಗಳನ್ನು ಕೈಗೊಳ್ಳಲಾಗಿದೆ

ಮೂರುಕಟ್ಟೆಗಳನ್ನು ಕಟ್ಟುವ, ಆರು ಕಾಲುವೆಗಳನ್ನು ರಿಪೇರಿ ಮಾಡುವ ೧೩ ಕೆರೆ ರಿಪೇರಿ ಕೆಲಸ ನಡೆಯುತ್ತಿದೆ. ಮಾದಾಪುರ ಮೀನುಕೊಲ್ಲಿ ರಸ್ತೆಯಲ್ಲಿಯ ಸೇತುವೆ ಕೆಲಸ ನಡೆಯುತ್ತಿದೆ. ಒಟ್ಟು ೫೫ ಬಾವಿಗಳನ್ನು ಮಂಜೂರು ಮಾಡಲಾಗಿದೆ. ಈ ಬಾವಿಗಳನ್ನು ೫೫ ಗ್ರಾಮಗಳಲ್ಲಿ ತೆಗೆಯಲಾಗುವದು.

ಗ್ರಾಮ ಪಂಚಾಯ್ತಿನ ಕೆಲಸಗಾರರ ತರಬೇತನ್ನು ಒಂದು ತಿಂಗಳ ವರೆಗೆ ಕೊಡಗಿಗೆ ವ್ಯವಸಾಯ ಫಾರಂನಲ್ಲಿ ಏರ್ಪಡಿಸಿ ತರಬೇತು ಈ ತಿಂಗಳಲ್ಲಿ ಪ್ರಾರಂಭವಾಗುವುದು.

ದಿವಂಗತ ಉದಿಯಂಡ ಅಣ್ಣಯ್ಯನವರು.

ಕಳೆದ ಹನ್ನೆರಡು ವರ್ಷಗಳಿಂದಲೂ ಕೊಡಗು ಕಂಪೆನಿಯ ಅಧ್ಯಕ್ಷರಾಗಿದ್ದ ಶ್ರೀ ಉದಿಯಂಡ ಅಣ್ಣಯ್ಯನವರು ತಾರೀಕು ೨೨ರ ರಾತ್ರಿ ಹೃದಯ ಸ್ತಂಭನದಿಂದ ಸ್ವರ್ಗಸ್ಥರಾದರು. ಯಾವುದೇ ಕಾಯಿಲೆಯಿಂದ ನರಳದೆ ಕಡೇ ಉಸಿರಿನ ತನಕ ಇವರು ಆರೋಗ್ಯವಲ್ಲಿದ್ದರು. ಶ್ರೀಯುತರು ೨೯-೧-೧೮೮೩ ರಲ್ಲಿ ಜನಿಸಿದರು. ೧೯೩೪ ರ ವರೆಗೆ ಕಲೆರ್ ಕಾಫಿ ತೋಟದ ಮೇನೇಜರಾಗಿದ್ದು ಪೆನ್ಶನ್ ಪಡೆದು ನಿವೃತ್ತರಾದರು. ೧೯೩೫ ರಲ್ಲಿ ಆದಿ ಶ್ರೀ ಕಾವೇರಿ ಬಸ್ ಕಂಪೆನಿಯನ್ನು ಸ್ಥಾಪಿಸಲು ಇವರು ಮುಖ್ಯ ಕಾರಣಕರ್ತರು. ೧೯೩೭ರ ವರೆಗೆ ಸದರಿ ಕಂಪೆನಿಯ ಸೆಕ್ರೆಟರಿಗಳಾಗಿದ್ದರು. ಸಿ. ಪಿ. ಸಿ. ಕಂಪೆನಿಗೆ ಕಂಪೆನಿಯ ಮೇಲುಸ್ತುವಾರಿಯನ್ನು ವಹಿಸಿಕೊಟ್ಟ ನಂತರ ತನ್ನ ಅಂತಿಮದ ವರೆಗೆ ಕಂಪೆನಿಯ ಡೈರೆಕ್ಟರಾಗಿದ್ದರು. ೧೯೩೯ ರಲ್ಲಿ ಕೊಡಗು ಪತ್ರಿಕೆಯನ್ನು ತಮ್ಮ ವಶಪಡಿಸಿಕೊಳ್ಳುವ ಉದ್ದಿಶ್ಯ ಕೆಲವರು ಅದರ ಮೇಲೆ ಮೊಕದ್ದಮೆ ಹೂಡಿದ್ದ ಕಾಲದಲ್ಲಿ ಶ್ರೀಯುತರು ಕಂಪೆನಿಯ ಅಧ್ಯಕ್ಷರಾಗಿ ಧೈರ್ಯಗುಂದದೆ ಬಹು ಶ್ರಮದಿಂದ ಕಂಪೆನಿಯನ್ನು ಉಳಿಸಿ ಪತ್ರಿಕೆಯನ್ನು ಈಗಿನ ರೀತಿಯಲ್ಲಿ ಜನಸೇವೆ ಮಾಡುವಂತೆ ಸಹಾಯ ಮಾಡಿದರು. ಅಲ್ಲದೆ ೧೯೪೨ ರಲ್ಲಿ ಸಂಪಾದಕರು ಮತ್ತು ಉಪಸಂಪಾದಕರು ಜೈಲಿನಲ್ಲಿದ್ದಾಗ ಸರಕಾರವು ಪತ್ರಿಕೆಯ ಮೇಲೆ ಹೊರಿಸಿದ ನಿರ್ಬಂಧದ ಕಾಲಕ್ಕೆ ಅವರು ಧೃತಿಗೆಡದೆ, ಪತ್ರಿಕೆಯ ಗೌರವಕ್ಕೆ ಕುಂದು ಬಾರದಂತೆ ವರ್ತಿಸಿದರು. ಈ ರೀತಿ ಗೌರವ ನಿಃಸ್ವಾರ್ಥ ಕೆಲಸ ಮಾಡಿ ತಮ್ಮ ಸೇವೆಯನ್ನು ದೇಶಕ್ಕೆ ಸಲ್ಲಿಸಿದರು.

ಶ್ರೀಯುತರು ನಿಧನವಾಗುವಾಗ ೭೦ ವರ್ಷ ಪ್ರಾಯವಾಗಿತ್ತು. ಸಾಧು ಸ್ವಭಾವದವರೂ, ಸರಳ ವ್ಯಕ್ತಿಗಳೂ ಆಗಿದ್ದ ಇವರು ತನ್ನ ಕಡೆಯ ದಿನಗಳ ವರೆಗೂ ಉಪಯುಕ್ತ ಜೀವನ ನಡೆಸಿದರು. ಇವರ ಆತ್ಮಕ್ಕೆ ಭಗವಂತನು ಶಾಂತಿಯನ್ನೂ ದುಃಖಿತ ಕುಟುಂಬಕ್ಕೆ ದುಃಖ ಸಹನಾಶಕ್ತಿಯನ್ನೂ ಕೊಡಲೆಂದು ಪ್ರಾರ್ಥಿಸುವೆವು.

॥ ದುರ್ಬೀನು ನೋಟ ॥

ಕಪ್ಪುಸಂತೆಯಲ್ಲಿ ಸಿಮೆಂಟ್ ಮಾರಿದರೆಂದು ತಕ್ಸೀರಿಗೊಳಪಟ್ಟು ಜುಲ್ಮಾನೆ ತೆತ್ತವರೊಬ್ಬರು. ಜನಪ್ರತಿನಿಧಿಯಾಗುತ್ತಾರೆ. ಅವರ ಊರಲ್ಲಿ ದುಡ್ಡಿನ ಬಲವಿದೆ. ಅದ್ದರಿಂದಲೇ ಚುನಾವಣೆಯ ಕಾಲಕ್ಕೆ ತಾನು ಹಿಡಿದ ಪಕ್ಷದ ಉಮೇದುವಾರರನ್ನು ಗೆಲ್ಲಿಸುವರಾಗಿ ಹಾದ ಕಟ್ಟಿದ್ದರು. ಅದರಂತೆ ಅವರು ಗೆದ್ದರು. ಈಗ ವಿಶೇಷ ಗೌರವದ ಸಹಿಯ ತಿದ್ದಿದ್ದಾರೆ. ಹಣಕ್ಕೆ ಹಣೆ ಸಿಡಿತ ಹೇಗಿಲ್ಲವೋ ಹಾಗೆ ಹಣ ಜಯಕ್ಕೆ ನಾಚಿಕೆ ಎಂಬುದಿಲ್ಲ.

* * *

ಕಡಿಮೆ ಅಳತೆಯ ಸೇರಿನಲ್ಲಿ ಅಕ್ಕಿ ಮಾರಿದರೆಂದು ಇಬ್ಬರೊಡನೆಯವರು ಕೊಡಗಿನ ದಬಾಯಿಸಿದರೆ, ರಾತ್ರೋರಾತ್ರಿ ಎಷ್ಟೆಷ್ಟು ಮೈಲು ಪ್ರಯಾಣ ಮಾಡಿ ಮೇಲಧಿಕಾರಿಗಳ ಕಾಲು ಕಟ್ಟಿಕೊಂಡು ಹಿಂದೆ ಬಂದರು. ಜನ ಪ್ರತಿನಿಧಿ ಎಂ. ಎಲ್. ಎ ಯರ ಜೊತೆಯಲ್ಲಿ ಇದ್ದರಂತೆ. ಈಗ ಯಥಾಸ್ಥಿತಿ ವಿರೋಧಿಗಳಾಗುತ್ತಾ, ಎದೆ ಮುಂದೆ ಮಾಡಿ ಪೇಟೆಯಲ್ಲಿ ತಿರುಗುತ್ತಿದ್ದಾರೆ. 'ದುಡ್ಡು' ಹರಡಿಸಿ ಅಭಿಮಾನ ಕೇಳುವವರಿದ್ದಂತೆಯೋ 'ದುಡ್ಡು' ಚಲಾಯಿಸಿ ಕೆಲಸ ಮಾಡಿಕೊಳ್ಳುವವರಿದ್ದಾರೆ ನೀತಿ ಮತ್ತು ಸಹಕಾರದಿಂದ ಆಗುವ ಕೆಲಸಗಳು ದುಡ್ಡು ಮತ್ತು ಮುದುಕಿನಿಂದ ಆಗುತ್ತವೆ.

* * *

ಮೈಸೂರು ಮಂತ್ರಿಗಳೊಬ್ಬರು ತನ್ನ ತಮ್ಮನಿರುವ ಕಂಪೆನಿಗೆ ತಾವು ತಿಂಡಿಯ ಕಂಟ್ರಾಕ್ಟು ಕೊಟ್ಟರೆಂದು ಅವರನ್ನು ಮಂತ್ರಿಪದವಿಂದ ನಿವೃತ್ತಿಗೊಳಿಸಲಾಯಿತು. ಕೊಡಗಿನಲ್ಲಿ ಪ್ರಸಿಡೆಂಟರಾಗಿ ತಮ್ಮ ತಮ್ಮನಿಗೆ ಎಲ್ಲಾ ಕಂಟ್ರಾಕ್ಟು ಕೊಡುತ್ತಿರುವಾಗ ಇವರನ್ನು ಕೇಳುವವರಿಲ್ಲವೇ ? ಎಂದೊಬ್ಬರು ಪ್ರಶ್ನಿಸಿದ್ದಾರೆ.

ಹಣ ಬಡಕೊಂಡರೂ ಹೆಣ ಬರದೆಂಬುದಿನ್ನದೆ ಇದು ಮಾಡುವದೇ ? ಎಷ್ಟೇ ಬೇಕಿಸಿದರೂ ಹುಟ್ಟುಗುಣ ಬಿಟ್ಟು ಹೋಗುವದೇ ?

* * *

ಎಲ್ಲರ ತೋಟಗಳಲ್ಲಿ ಕಾಫಿ ಕುಯ್ಯುವ ಮಜೂರರಿಗೆ ಬುಟಲ್ ಕಾಫಿ ಕುಯ್ಯಲು ಒಂದು ರೂಪಾಯಿ ಮಜೂರಿ ಇದ್ದರೆ ನಮ್ಮ ಜನಹಿತ ಬಯಸುವ ದೀನ ಬಂಧು ಜನನಾಯಕರ ತೋಟದಲ್ಲಿ ಹನ್ನೆರಡಾಣೆಯಂತೆ ! ಮಜೂರರು ಇವರಲ್ಲಿಗೆ ಕೆಲಸಕ್ಕೆ ಬಾರದೆ ಮುಷ್ಕರ ಮಾಡಿದರೆ ಈ ಗಾಂಧಿಅನುಯಾಯಿಗಳು ಕಿಡಿಕಿಡಿಯಾದರಂತೆ! ಮೂಗು ಹಿಡಿದಿರುವರೆಂದ ಮಾತ್ರಕ್ಕೆ ಜನ ಮಾಡುವ ಪವಿತ್ರರೆಂದು ಭಾವಿಸಿರಾಯಿತೇ ? ರಾಜಕಾರಿಣಿಯೆಂದು ಮಾಡುವುದು ಮಾತಾಡುತ್ತಾರೆಂದು ಕೃತಿಯಲ್ಲೂ ಹೀಗೆ ನ್ನಲಾದೀತೆ ?

* * *

ಜನತೆಯು ಕಣ್ಣ ಬಲ್ಲವನೇ ಬಲ್ಲ. ಇಂದಿನ ಈ ವೇಳೆ ಬಂದ ಸನ್ನಿವೇಶ ಮಾತಿನ ತಾಪತ್ರೆ ವಿಪರೀತವಿದೆ. ವರ್ಷಕ್ಕೆ ಒಂದು ಜೊತೆ ಬಟ್ಟೆ ಮಾಡಿಸಿಕೊಳ್ಳುವುದೇ ಕಷ್ಟವಿರುವವರು ಹಲವರಿದ್ದಾರೆ. ಇಂಥಾವರಿಗೆ ಖಾರ್ಚ ಕಡಿಮೆ ಮಾಡಿ. ಆದಷ್ಟು ಉಳಿಸಿ ಎಂದು ಪ್ರಚಾರ ಮಾಡಲಾಗುತ್ತಿದೆ. ಇದು ತಲೆ ಬೋಳಿಸಿ ಮೇಲೆ ಹೊಮ್ಮಡಿಯಬೇಡ ಎಂದು ಆಜ್ಞೆ ಮಾಡಿದಂತೆ. ಅನುಕೂಲತೆ ಇಲ್ಲದವನಿಗೆ 'ಆಡಂಬರ ಬೇಡ'ವೆಂದು ಹೇಳುವದರಿಂದ ಏನು ಪ್ರಯೋಜನ ?

* * *

'ನಮ್ಮ ಕಾಂಗ್ರೆಸು ಸರಕಾರ ಮದ್ಯಪಾನ ಮಾಡಬೇಡವೆನ್ನುವದಿಲ್ಲ. ಅದ್ದರಿಂದಲೇ ಕೊಡಗಿಗೆ ಬಂದಿದ್ದ ಬಾಟಲಿಗಳನ್ನು ಎರಡಕ್ಕೆ ಹೆಚ್ಚಿಸಿದ್ದಾರೆ. ಆದ್ದರಿಂದ ಮದ್ಯಪಾನವು ಕಾಂಗ್ರೆಸಿನವರಿಗೆ ನಾಚಿಕೆಯ ವಿಚಾರವಲ್ಲವೆಂದು ಒಬ್ಬರು ಬಹಿರಂಗವಾಗಿ ಸ್ವಲ್ಪ ಸಂಕೋಚವಿಲ್ಲದೆ ಸಾರ್ವಜನಿಕರ ಗಂಟಲಲ್ಲಿ ಹೇಳಿದರು. ಗಡಿಗೆ ಬೆನ್ನಿಗೆ ಕಟ್ಟಿದವನು ಗುಡಿಸಲಿನಲ್ಲಿರುವಂತೆಯೋ ಗುಡಿಯೊಳಗೂ ಕೂಡ ಬಗ್ಗಿಯೇ ನಿಲ್ಲುತ್ತಾನೆ. ಅದರಂತೆ ಕುಡುಕ ಬುದ್ಧಿಯವನಿಗೆ ಕಾಂಗ್ರೆಸ್ ಆದರೇನು ಕ್ಲಬ್ ಆದರೇನು ?

* * *

ಹಳ್ಳಿ, ಹಳ್ಳಿಗಳಲ್ಲಿ ಹಲವಾರು ಜನರು ಮುಂದಾಳುಗಳಾಗಿದ್ದಾರೆ. ಕೆಲವರು ಎಡ್ ಹಾಕ್ ಸಮಿತಿಯೆಂದರೆ ಕೆಲವರು ಚುನಾವಣಾ ಕಂಭಗಳು. ಕೆಲವರು ಬಾರ್ ಪರ್ಮಿಟ್‌ದಾರರಂತಿದ್ದರೆ ಕೆಲವರು ಮಂತ್ರಿಗಳ ಮಿತ್ರರಾಗಿದ್ದಾರೆ. ಹೇಗೂ ಸರಕಾರದ ಗ್ರಾಮಗಳಲ್ಲೂ ಬೇರು ಬಿಟ್ಟಿದೆ. ಆದರೆ ಆನೆಯ ಕಾಲಿನಂತೆ, 'ಆನೆ ಕಾಲು' ರೋಗಹಿಡಿದ ಕಾಲೂ ತೋರುವದಾದರೂ ಒಂದಕ್ಕಿರುವ ಬಲ, ಉಪಯುಕ್ತತೆ ಇನ್ನೊಂದಕ್ಕಿರಲಾರದು. ಕಾಂಗ್ರೆಸು ಬಲಾಢ್ಯವಾದುದಾದರೂ ಈ 'ಆನೆಕಾಲು' ಕಾಂಗ್ರೆಸಿಗೆ ಹಿಡಿದ ಅವಕ್ಕೆ ರೋಗವಲ್ಲದೆ ಮತ್ತಿಲ್ಲ.

॥ ಓದುಗರ ಓಲೆಗಳು ॥

ಮರಳಿ ಯತ್ನವ ಮಾಡಿ.

ವೀರಾಜಪೇಟೆಯ 'ಹೆಡ್‌ನರ್ಸ್' ಸ್ಥಾನಕ್ಕೆ ಕೋಟು ಹಾಕುತ್ತಿದ್ದವರಿಗಿಂತ ಲೂ, ಕಡಿಮೆ ಸಂಬಳದ, ವಿದ್ಯಾಬಲ ಮತ್ತು ಅನುಭವವಿಲ್ಲದವರನ್ನು ನೇಮಿಸಿರುವುದು ಕುಂಡಿತ ಪ್ರಶ್ನೆಯ ಮಾತೆ. ಆದರೆ ಹಾಗಿದ್ದರೂ ಕೂಡ ಅಂತವರನ್ನೇ ನೇಮಿಸಬೇಕಾದರೆ ಒಂದು ಕಡೆಯಲ್ಲಿ ಮೋಸವೋ ಮತ್ತೊಂದು ಕಡೆಯಲ್ಲಿ ಸುಖವೋ ಇರಬೇಕು. ಆದರ ಇದಕ್ಕೆ ಗುರಿಕಟ್ಟಿ ನಿಂತವರು ಬೇರೆ ಯಾಕ ಪ್ರಯತ್ನ ಪಡಬಾರದು ?

ಸೈನ್ಯ ಇಲಾಖೆಯಲ್ಲಿ, ಪ್ರಾಯ ೨೧ ರಿಂದ ೩೫ ವರಗೆ ಇರುವ, ೩ರಿಂದ ೪ ವರ್ಷದ ವರೆಗೆ ಅನುಭವವಿರುವವರು ಬೇಕಾಗಿದ್ದಾರೆ ಒಳ್ಳೆಯ ಸಂಬಳ ಮತ್ತು 'ಲೆಫ್ಟಿನೆಂಟ್'ನಿಂದ 'ಕ್ಯಾಪ್ಟನ್' ವರೆಗೆ ಪದವಿಯೂ ಕೂಡ ಸಿಕ್ಕುತ್ತದೆ ಎಂದು ನಾನು ತಿಳಿದ ವಿಷಯ. ಆದ್ದರಿಂದ ಅತೃಪ್ತರಾದವರು ಯಾಕ ಹತ್ತಿರದ 'ರಿಕ್ರೂಟಿಂಗ್' ಆಫೀಸಿನಿಂದ ಕೂಲಂಕುಷವಾದ ವಿಷಯವನ್ನು ತಿಳಿದು ಪ್ರಯತ್ನ ಪಡಬಾರದು ?

ಡಿಸ್‌ಸೂಜಿ.

ದೇವರು ವರ ಕೊಟ್ಟರೂ ಪೂಜಾರಿ ಕೊಡ!

ತಾ ೨೩-೨-೫೪ ರಿಂದ ೧೬-೨-೫೪ರ ವರೆಗೆ ಸೋಮವಾರಪೇಟೆಯಲ್ಲಿ ಆಂಜನೇಯ ದೇವಾಲಯದ ಬಳಿ ಶ್ರೀ. ಸೋಮೇಶ್ವರ ಜಾತ್ರೆಯು ಬಹಳ ವಿಜೃಂಭಣೆಯಿಂದ ನಡೆಯಿತಷ್ಟೆ. ಪ್ರಾರಂಭದ ಪ್ರಥಮ ಜಾತ್ರೆ ಸಮಾರಂಭಕ್ಕೆ ದೇಶದ ಎಲ್ಲಾ ಮಹನೀಯರುಗಳ ಸಹಕಾರ, ಪ್ರೋತ್ಸಾಹಗಳನ್ನೀಯಬೇಕೆಂಬ ಕರೆಯಿದ್ದಿತು. ಆದುದರಿಂದ ದೇಶದ ಹಲವು ಮಹನೀಯರು ಸಾಕಷ್ಟು ಪ್ರೋತ್ಸಾಹವನ್ನಿತ್ತು ಶ್ರೀ. ಸೋಮೇಶ್ವರನ ಅನುಗ್ರಹಕ್ಕೆ ಪಾತ್ರರಾದುದು ಬಹಳ ಸಂತೋಷಕರ.

ಶ್ರೀ ಸೋಮೇಶ್ವರನು ನಿಪುಣರಾದ ಅರ್ಚಕರಿಂದ ಅಲಂಕಾರವಾಗಿ ಪೂಜಿಸಲ್ಪಟ್ಟಿದ್ದನು. ತನ್ನ ಪ್ರಥಮ ಜಾತ್ರಾ ಸಮಾರಂಭಕ್ಕೆ ಸರ್ವರನ್ನೂ ಆಹ್ವಾನಿಸುತ್ತಾ ಭಕ್ತರ ಬರುವಿಕೆಯನ್ನು ಇದಿರು ನೋಡುತ್ತಿದ್ದನು. ಭಕ್ತರನೇಕರು ತಂಡ ತಂಡವಾಗಿ ಧಾವಿಸುತ್ತಿರುವುದನ್ನು ನೋಡಿದ ಸೋಮೇಶ್ವರನ ಆನಂದಕ್ಕೆ ಮಿತಿಯಿಲ್ಲದಾಗಿದ್ದಿತು. ಆದರೆ ಅವನನ್ನು ಇನ್ನೊಂದು ಚಿಂತೆ ಪೀಡಿಸದೆ ಇದ್ದಿಲ್ಲ.

ಸೋಮೇಶ್ವರನ ದರ್ಶನವನ್ನು ಪಡೆಯಲು ಬರುತ್ತಿದ್ದ ಸವರ್ಣೀಯರನ್ನು ಮಾತ್ರ ಅರ್ಚಕರು ಸ್ವಾಗತಿಸಿ ದೇವರ ಸನ್ನಿಧಿಗೆ ಕರೆದೊಯ್ಯುತ್ತಿದ್ದರು. ಸವರ್ಣೀಯರಲ್ಲದ ಹರಿಜನ ಭಕ್ತರನೇಕರೂ ಉತ್ಸಾಹದಿಂದ ಪೂಜಾ ಸಾಮಾಗ್ರಿಗಳೊಡನೆ ತಂಡ ತಂಡವಾಗಿ ಬರುತ್ತಿದ್ದರು. ಸೋಮೇಶ್ವರನು ತನ್ನ ಗೃಹದ್ವಾರವನ್ನು ಸರ್ವ ಭಕ್ತರುಗಳಿಗಾಗಿ ತೆರೆದಿಟ್ಟಿದ್ದನು. ದೇವರು ವರ ಕೊಟ್ಟರೂ ಪೂಜಾರಿ ಕೊಡ! ಎಂಬ ನಾಣ್ಣುಡಿಯಂತೆ ನಮ್ಮ ವಯೋವೃದ್ಧ ಅರ್ಚಕರುಗಳು, 'ಹರಿಜನರಿಲ್ಲಿ ದೇವಾಲಯಕ್ಕೆ ಪ್ರವೇಶಿಸುವರೋ !' ಎಂದು ಶಂಕಿಸುತ್ತಿದ್ದರು. 'ಪಾದರಕ್ಷೆಗಳನ್ನು ದೇವಾಲಯದ ಅಂಗಣದಲ್ಲಿ ಕಳಚಿಟ್ಟು ಗರ್ಭಗುಡಿಯಲ್ಲಿ ಪ್ರಾರ್ಥನೆಮಾಡುತ್ತಿದ್ದಾಗ ಕಳಚಿಟ್ಟ ಪಾದರಕ್ಷೆಗಳನ್ನೇ ಹಂಬಲಿಸುತ್ತಿದ್ದ ಓರ್ವ ಭಕ್ತನ ನೆನಪು ಈ ಸಂದರ್ಭದಲ್ಲಿ ಉಂಟಾಗುತ್ತದೆ. ನಮ್ಮ ಅರ್ಚಕರು ಭಕ್ತರು ತಂದ ಹಣ್ಣು, ಕಾಯಿ, ದಕ್ಷಿಣೆ ಮೊದಲಾದುವುಗಳನ್ನು ದೇವರಿಗೆ ಭಕ್ತಿಯಿಂದ ಒಪ್ಪಿಸುವುದನ್ನು ಬಿಟ್ಟು ತಮ್ಮ ವಕ್ರದೃಷ್ಟಿಯನ್ನು ಹರಿಜನರ ಮೇಲೆ ಬೀರುತ್ತಿದ್ದರು. ಉತ್ಸಾಹದಿಂದ ಬರುತ್ತಿದ್ದ ಹರಿಜನರನ್ನು ದೂರದಿಂದಲೇ ಪತ್ತೆ ಹಚ್ಚಿ ಅಂಗಣದ ವರೆಗೆ ತಾವೇ ದಯಮಾಡಿಸಿ ಸೋಮೇಶ್ವರನೇ ತಾನೆಂಬಂತೆ ಹರಿಜನ ಭಕ್ತರನ್ನು ಹರಸಿ ಹಿಂದಕ್ಕಟ್ಟುತ್ತಿದ್ದರು. ಪಾಪ, ಹರಿಜನರು ನಿರಾಶರಾಗಿ ಹಿಂತಿರುಗುತ್ತಿದ್ದರು. ಇವೆಲ್ಲವನ್ನೂ ನೋಡಿದ ಸೋಮೇಶ್ವರನು ಸಂತುಷ್ಟನಾಗಿರುವನಲ್ಲವೇ ?

ನಾಗರೀಕತೆಯ ತುತ್ತತುದಿಗೇರಿದ ಇಂದಿನ ದಿನಗಳಲ್ಲೂ ಹರಿಜನ ಸಹೋದರರೂ ಹಾಗೂ ರಾಷ್ಟ್ರಪಿತ ಮಹಾತ್ಮಾಗಾಂಧೀಜಿಯವರ ಪರಮ ಮಿತ್ರರೂ ಆದ ಆ ಬಡಪಾಯಿಗಳಿಗೆ ದೇವರ ದರ್ಶನ ಪಡೆಯಲು ಸಾಧ್ಯವಿಲ್ಲವೆನ್ನುವುದಾದರೆ ಸಾಧ್ಯವಾಗುವುದಾದರೂ ಯಾವಾಗ ?

ಅಯ್ಯೋ ಅರ್ಚಕರೇ, ಈ ಹಿಂದೆಯೇ ಶ್ರೀ. ಅಂಜನೇಯ ದೇವಾಲಯದ ಬಾಗಿಲು ಹರಿಜನರಿಗೂ ತೆರೆಯಲಾಗಿದೆ ಎಂಬ ಸಂಗತಿಯು ನಿಮಗೆ ತಿಳಿದಿರುವುದಿಲ್ಲವೇ ? ಜಾತಿ ಭೇದವೆಂಬ ಭೂತದ ಆವೇಶ ನಿಮ್ಮಿಂದ ಇನ್ನೂ ತೊಲಗಲಿಲ್ಲವೇ ? ಸಂಕುಚಿತ ಮನೋಭಾವನೆಯಿರುವ ಇಂಥವರಿಂದ ಪೂಜಿಸಲ್ಪಟ್ಟ ಸೋಮೇಶ್ವರನು ಸಂತುಷ್ಟನಾಗುವುದಾದರೂ ಹೇಗೆ ? ಇನ್ನು ಮುಂದೆಯಾದರೂ ಇಂತಹ ಅನರ್ಥಕ್ಕೆ ಎಡೆಯಾಗದಂತೆ ನಿಗವಿಡುವಿರೇ ? ಸೋಮೇಶ್ವರಾ ! ಈ ಅರ್ಚಕರ ಅಜ್ಞಾನವನ್ನು ಹೋಗಲಾಡಿಸುವಲ್ಲಿ ನೆರವಾಗಲಾರೆಯೊ ?

ಪ್ರೇಕ್ಷಕ.

ಕಾಲೇಜು ಹಾಸ್ಟಲಿನಲ್ಲಿ ದಬ್ಬಾಳಿಕೆ.

ಪ್ರಪಂಚದಲ್ಲಿ ನ್ಯಾಯವಿರುವ ಕಡೆ ವಾದಿಸುವುದು ಖಂಡಿತವಾಗಿಯೂ ತಪ್ಪಲ್ಲವೆಂದು ಪ್ರತಿಯೊಬ್ಬ ವ್ಯಕ್ತಿಗೂ ತಿಳಿಯದ ವಿಷಯವಲ್ಲ. ಆದರೆ ಇಂದು ಪ್ರಪಂಚದಲ್ಲಿ ನಡೆಯುತ್ತಿರುವದು ಇದಕ್ಕೆ ತದ್ವಿರೋಧವಾಗಿ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಕಾಲೇಜು ಹಾಸ್ಟಲಿನ ಡೆಪ್ಯೂಟಿ ವಾರ್ಡನ್ ಇಂದು ಸರ್ವಾಧಿಕಾರಿಯಂತ ವರ್ತಿಸುತ್ತಿದ್ದಾರೆ. ಕಾಲೇಜು ಹಾಸ್ಟಲಿನಲ್ಲಿ ಹುಡುಗರದೇ ಎರಡು ಪಂಗಡಗಳನ್ನು ಮಾಡಿ ಹುಡುಗರೊಳಗೆ ವೈರತ್ವವನ್ನು ಬೆಳೆಸುತ್ತಿರುವರೆಂದು ಗೊತ್ತಾಗಿದೆ. ಒಂದು ಪಂಗಡ ಡೆಪ್ಯೂಟಿ ವಾರ್ಡನರ ಪಕ್ಷವೆಂದೂ ಇನ್ನೊಂದು ಪಂಗಡ ಬೇರೆಯೆಂದೂ ಅವರೇ ಮನಸಿನಲ್ಲಿ ಊಹೆ ಮಾಡಿಕೊಂಡಿರುವಂತಿದೆ.

ಮೊನ್ನೆ ತಾನೆ ಇಬ್ಬರು ಹುಡುಗರೊಳಗೆ ಜಗಳವಾಗಿ ಒಬ್ಬ ಹುಡುಗನದು ತಪ್ಪೆಂದು ಅವರೇ ಹೇಳಿ ತಪ್ಪು ಮಾಡಿದ ಹುಡುಗನಿಂದ 'ಪಾರ್ಡನ್' ತೆಗೆಸಿದರು ಇದು ಖಂಡಿತಾ ಆಗಬೇಕಾದ ವಿಷಯ, ಎಲ್ಲರೂ ಇದಕ್ಕೆ ಒಪ್ಪುತ್ತಾರೆ. ಆದರೆ ತನ್ನ ಪಕ್ಷವೆನ್ನುವವರ ಪೈಕಿ ಒಬ್ಬ ಹುಡುಗನು ಹಾಸ್ಟಲಿನ ಮಾನೀಟರರಿಗೆ ಅಲ್ಲಸಲ್ಲದ ಮಾತುಗಳನ್ನಾಡಿ ಅವರನ್ನು ಬೈದರೂ ಇದನ್ನು ಡೆಪ್ಯೂಟಿ ವಾರ್ಡನಿಗೆ ತಿಳಿಸಿ ಅವನಿಂದ 'ಪಾರ್ಡನ್' ತೆಗೆಸಬೇಕೆಂದೂ ಹೇಳಿದರೂ 'ಹುಡುಗನ ತಪ್ಪಿಲ್ಲ, ಖಂಡಿತಾ 'ಪಾರ್ಡನ್' ತೆಗೆಸುವುದಿಲ್ಲವೆಂದು ಹೇಳಿ ತಪ್ಪು ಮಾಡಿದ ಹುಡುಗನಿಗೆ 'ಪಾರ್ಡನ್' ತೆಗೆಯಬೇಡ ಅವರು ಏನು ಮಾಡುತ್ತಾರೆ ನೋಡುತ್ತೇನೆ. ನನ್ನ ಶಕ್ತಿ ಅವರ ಬಗೆ ಇದೆ' ಎಂದು ಹೇಳಿದರಂತೆ. ಮತ್ತೆ ಯಾರಾದರೂ ಈ ವಿಷಯ ಮಾತಾಡಿದ್ದೇ ಆದರೆ ಅವರನ್ನು ಪರೀಕ್ಷೆಗೆ ಕೂರಲು ಬಿಡುವುದಿಲ್ಲವೆಂದೂ, ಜೂನಿಯರ್ ಹುಡುಗರನ್ನು ಪಾಸುಮಾಡುವುದಿಲ್ಲವೆಂದೂ ನೋಟೀಸ್ ಬೋರ್ಡ್‌ನಲ್ಲಿ ಹಾಕಿ ಹುಡುಗರನ್ನು ಹೆದರಿಸಿದ್ದಾರಂತೆ ! ಇದು ನ್ಯಾಯವಾದ ವಿಷಯವೇ ? ಹುಡುಗರಲ್ಲಿ ವೈಮನಸಿಲ್ಲದ ಪ್ರೀತಿಯಿಂದಿರಲು ಸಹಾಯ ಮಾಡಬೇಕಾದ ಇವರು ಇಂದು ಈ ರೀತಿ ವರ್ತಿಸಿದರ ಹುಡುಗರ ಪಾಡೇನು ?

ನೊಂದ ತಂದೆ

ಕೊಡಗು ಸರಕಾರದಲ್ಲಿ ವಿನಂತಿ.

ಕೊಡಗಿನಲ್ಲಿ ಪ್ರಜಾಜವಾಬ್ದಾರಿ ಸರಕಾರವು ಜಾರಿಗೆ ಬಂದು ಒಂದು ವರ್ಷವಾಯಿತು ಚುನಾವಣೆಯು ಕಳೆದು ಅದಕ್ಕಿಂತಲೂ ಮೀರಿತು. ಆ ಚುನಾವಣೆಯ ಪ್ರಚಾರದಲ್ಲಿ, ಗೋಣಿಕೊಪ್ಪಲಿನಲ್ಲಿ ನಡೆದಿದ ಎಬಡವಾಗಿ ಹೇಳುವ ಒಂದು ದೊಂಬಿಯಲ್ಲಿ ಭಾಗಿಗಳಾಗಿದ್ದರೆಂಬ ಆಪಾದನೆಯ ಮೇಲೆ ೨೫ ಜನರ ಮೇಲೆ ಮಂಗಳೂರಿನಲ್ಲಿ ಮಾರ್ಚ ತಾರೀಕು ೩ರಿಂದ ಕ್ರಿಮಿನಲ್ ಮೊಕದ್ದಮೆಯು ನಡೆಯುವುದು

ಇಂಡಿಯಾದೇಶಕ್ಕೆ ಸ್ವಾತಂತ್ರ್ಯವು ದೊರಕಿ, ಪ್ರಜಾಜವಾಬ್ದಾರಿ ಸರಕಾರವು ಜಾರಿಗೆ ಬಂದ ಉತ್ಸಾಹದಲ್ಲಿ ಜನರು ಸಂತೋಷದಲ್ಲಿರುವಾಗ, ಕೊಡಗಿನ ಪ್ರಥಮ ಪ್ರಜೆಗಳ ಸರಕಾರದ ಮೊದಲನೆಯ ಬಹುಮಾನವು, ಪ್ರಜೆಗಳ ಒಂದು ಪಕ್ಷದ ಮೇಲೆ ಕ್ರಿಮಿನಲ್ ಮೊಕದ್ದಮೆ ಮುಂದರಿಸುವ ತೀರ್ಮಾನದಂತಿರುವದು ವ್ಯಸನಪಡಬೇಕಾದ್ದು. ಚುನಾವಣೆಯು ಮುಗಿಯಿತು. ಜನರು ಅವರ ಮತದಾನವನ್ನು ಮಾಡಿದ್ದಾರೆ. ಅದಕ್ಕನುಗುಣವಾಗಿಯೇ ಸರಕಾರವು ಜಾರಿಗೆ ಬಂದಿದೆ. ಚುನಾವಣೆಯಲ್ಲಿ ಅಪಜಯಹೊಂದಿದರೂ, ವಿರೋಧ ಪಕ್ಷದವರು ಸರಕಾರಕ್ಕೆ ಸಂಪೂರ್ಣ ಸಹಾನುಭೂತಿಯನ್ನು ವಾಗ್ದಾನಮಾಡಿರುತ್ತಾರೆ. ಕೊಡಗಿನ ಪ್ರಥಮ ಮಂತ್ರಿಮಂಡಲಿಯು ಅವರ ೫ ವರ್ಷಗಳ ಅವಧಿಯಲ್ಲಿ, ಅವರ ಶ್ರಮದ ಫಲಿತಾಂಶವಾಗಿ, ಅವರಿಗೆ ಕೀರ್ತಿಯನ್ನು ಸಂಪಾದಿಸಿಕೊಳ್ಳಲೆಂದು ಎಲ್ಲರೂ ಆಶಿಸುವವರಾಗಿದ್ದಾರೆ. There is a fund of good will developing for the first popular ministry in Coorg and it is upto the Govt to finish it. ಚುನಾವಣೆಯ ಕಿಂದೇರಿದ ಉತ್ಸಾಹವು ಇಂದಿಲ್ಲ. ಜನರು ಕಾರ್ಯನಾಪಕರಾಗಿ ದೇಶಸೇವೆಗೆ ನಿಂತಿದ್ದಾರ. ಸರಕಾರದ ಒಮ್ಮತವು ಎಸಂಬ್ಲಿ ಕೋಣೆಯಲ್ಲಿ ಅವರು ಬೀಳದಂತೆ ತಡೆಯಲು ಮಾತ್ರ ಸಹಾಯವಲ್ಲದೆ, ದೇಶದ ಉದ್ಯಮಗಳಿಗೂ ಕಾರ್ಯಸಾಧನೆಯಿಂದ ಸರಕಾರಕ್ಕೆ ಕೀರ್ತಿತರಲು ಸಾಧ್ಯವಿಲ್ಲ. ಇದಕ್ಕೆ ದೇಶದ ಉದ್ಯಮಗಳಿಗೂ ಉತ್ಸಾಹಭರಿತರಾದ ಪ್ರಜೆಗಳು ಬೇಕು. ಇದನ್ನು ತಡೆಯಲು ದೇಶದಲ್ಲಿ ಸಂಪೂರ್ಣ ಶಾಂತಿಯ, ಸಹಕಾರದ ವಾತಾವರಣವನ್ನು ಉಂಟುಮಾಡಿದಲ್ಲದೆ ಸರಕಾರಕ್ಕೆ ಪ್ರಯೋಜನವಲ್ಲದ, ನಷ್ಟವಲ್ಲ.

ಇಂತಹ ಮೊಕದ್ದಮೆಗಳು, ಇಂಡಿಯಾ ದೇಶದ ಬೇರೆ ಕಡೆ ನಡೆಯುವ ವರ್ತಮಾನ ಕೇಳುವುದಿಲ್ಲ. ಹೀಗಿರುವಾಗ, ಕೊಡಗಿನಲ್ಲೇಕೆ ಇಂತಹ ಚಿಕ್ಕ ಪ್ರಶ್ನೆಗಳನ್ನು ಬಿಡಿಸುತ್ತಿರಲು ಶಕ್ತಿ ಇರುವ ಯೋಗ್ಯ ಪುತ್ರರು, ಕೊಡಗು ಸರಕಾರದಲ್ಲಿಯೂ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯಲ್ಲಿಯೂ ಇಲ್ಲದಿರುವರೇನು ? ಮೊಕದ್ದಮೆಯ ತೀರ್ಪು ಏನೂ ಆಗಲಿ, ಇದರಿಂದ ಸರಕಾರಕ್ಕೆ ಅಪಕೀರ್ತಿಯಲ್ಲದೆ, ಕೀರ್ತಿ ಇಲ್ಲ !

ಗಾಂಧೀಜಿಯವರ ತತ್ವದ ಗುಣವಾಗಿ ನಡೆದು, ಮಡಿದು ಇಂಡಿಯಾ ದೇಶವನ್ನೇ ಒಂದು Welfare state ಆಗಿ ಮಾಡಬೇಕೆಂಬ ಮೂಲ ಗುರಿಯನ್ನು ಬಿಟ್ಟು, ಗಾಂಧಿಜಿಯವರ ಹೆಸರಿನಲ್ಲಿಯೇ ಇರುವ ಆಳುವ ಕಾಂಗ್ರೆಸು ಸರಕಾರವು, ಇಂತಹ ಕಿರಿಚಿತ್ ಪ್ರಶ್ನೆಗಳನ್ನು ಮೇಲೆಬಿಟ್ಟುಕೊಂಡು, ಸರಕಾರದ ಹಣವನ್ನೂ, ದೇಶದ ಜನರ ಹಣವನ್ನೂ, ಉತ್ಸಾಹವನ್ನೂ ವ್ಯಯಮಾಡಬಾರದಾಗಿ ಕೋರುವ,

ದೇಶದ ಪ್ರಜೆ

ಎಂ. ಎಂ. ಪೊನ್ನಪ್ಪನವರಿಗೆ ಒಂದು ಜವಾಬು

ನೀವು ತಾ. ೨೫-೧ ೫೪ರ 'ಜನ್ಮಭೂಮಿ' ಪತ್ರಿಕೆಯಲ್ಲಿ 'ನನ್ನ ತಿಳಿಗೇಡಿತನದ ಭಾವನೆ' ಎಂಬುದಾಗಿ ಒಂದು ಟಿಪ್ಪಣಿ ಬರೆದುದನ್ನು ಓದಿದೆನು. ಆದರೆ ಕೂಡಲೇ ಜವಾಬು ಬರೆಯಲು ಅಸಾಧ್ಯವಾಯಿತು. ನಿಮಗೆ ರಾತ್ರಿ ನಿದ್ರೆಯಲ್ಲಿ ಸ್ವಪ್ನ ಕಂಡದ್ದನ್ನು ಬರೆದಿರೋ ? ಯಾ ಯಾರಾದರೂ ಹೇಳಿದ್ದನ್ನು ಅದಕ್ಕೆ ತಲೆ ತೂಗಾಡಿಸಿ ರುಜು ಹಾಕಿ ಬರೆದದ್ದೋ ? ನಿಮ್ಮ ಅನುಭವವನ್ನು ಬರೆದದ್ದೇ ಆದರೆ ಅದರ ತಪಶೀಲನ್ನು ಏತಕ್ಕೆ ಸ್ಪಷ್ಟವಾಗಿ ಬರೆಯಲಿಲ್ಲ? ನನ್ನ ಸ್ನೇಹಿತರೊಬ್ಬರು ಬೆಳೆಸಿದ್ದನ್ನು ತಕ್ಕ ಆಧಾರದ ಪ್ರಕಾರ ಈ ಕೆಳಗೆ ಬರೆದಿರುವೆನು. ಸರಕಾರದವರೇ ಅವರ ಪತ್ರಿಕೆಯ

(ಕಡೆಯ ಪುಟಕ್ಕೆ ಸಾಗಿದೆ)

ಅಂತರ್ರಾಷ್ಟ್ರೀಯ ರಂಗ.

ಕೊರಿಯಾ ಯುದ್ಧ ವಿರಾಮದ ಪ್ರಶ್ನೆ.

ಸ್ಟಾಲಿನ್-ಮೆನನ್ ಭೇಟಿ.

ನ್ಯೂಯಾರ್ಕಿನಲ್ಲಿ ನಡೆಯುತ್ತಿರುವ ಸಂಯುಕ್ತರಾಷ್ಟ್ರ ಸಂಘದ ಸಮ್ಮೇಳನದಲ್ಲಿ ಭಾಗವಹಿಸಲು ಹಿಂದೂದೇಶದ ಪ್ರತಿನಿಧಿಗಳ ಮುಂದಾಳಾಗಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರನ್ನು ಆರಿಸಲಾಗಿದೆ. ಕಳೆದ ಸಮ್ಮೇಳನದಲ್ಲಿ ಕೊರಿಯಾ ಪ್ರಶ್ನೆಯ ಬಗ್ಗೆ ಸಂಧಾನದ ಠರಾವನ್ನು ತಂದು ಪ್ರಖ್ಯಾತ ಮೊದಿದ್ದ ಶ್ರೀ ವಿ. ಕೆ. ಕೃಷ್ಣಮೆನನರೂ ಭಾರತದ ಪ್ರತಿನಿಧಿಗಳಲ್ಲೊಬ್ಬರಾಗಿದ್ದಾರೆ

ತಾ. [illegible]ರಿಂದ ಪ್ರಾರಂಭವಾಗಿರುವ ಸಂಯುಕ್ತರಾಷ್ಟ್ರ ಸಂಘದ ಸಭೆಯಲ್ಲಿ ಕೊರಿಯಾದ ಪ್ರಶ್ನೆಯೇ ಪ್ರಾಮುಖ್ಯ ವಿಚಾರವಾಗಿ ಚರ್ಚಿಸಲ್ಪಡುವುದು. ೧೯೫೦ರಲ್ಲಿ ಈ ಸಭೆಯು ನಿರ್ಧರಿಸಿದಂತೆ ಮುಂದೆ ಚೀನಾಕ್ಕೆ ಕಳುಹಿಸಲ್ಪಡುವ ಯುದ್ಧ ಸಹಾಯಕ ಸಾಹಿತ್ಯಗಳ ಮೇಲೆ ಹೆಚ್ಚಿನ ಹಿಡಿತ ಹಾಕುವ ನಿರ್ಣಯವೂ ಈ ಸಭೆಯಲ್ಲಾಗಬಹುದು.

ಈ ಸಭೆಯಲ್ಲಿ ಹಿಂದೂದೇಶವು ತನ್ನ ಸಂಧಾನ ಪ್ರಯತ್ನವನ್ನು ಮುಂದರಿಸುವದೇ ಎಂಬುದು ಸ್ಪಷ್ಟವಾಗಿಲ್ಲ. ಕಳೆದ ಸಾರಿ ಭಾರತವು ತಂದ ಸಂಧಾನ ಪ್ರಯತ್ನದ ಠರಾವು ರಾಷ್ಟ್ರ ಸಂಘದಲ್ಲಿ ಬಹುಮತದಿಂದ ಅಂಗೀಕೃತವಾದರೂ ಕಮ್ಯೂನಿಸ್ಟ್ ರಾಷ್ಟ್ರಗಳು ಅದನ್ನು ಒಪ್ಪದ ಕಾರಣ ಅದರಿಂದ ಪ್ರಯೋಜನವಾಗಿರುವದಿಲ್ಲ. ಇದು ಒಪ್ಪಲ್ಪಟ್ಟಿದ್ದರೆ ಕೊರಿಯಾ ಯುದ್ಧ ಕೈದಿಗಳ ಪ್ರಶ್ನೆಯು ತೀರ್ಮಾನಕ್ಕೊ ಪಾನ್ ಮನ್ ಜೋಮ್‌ನಲ್ಲಿ ನಡೆಯುತ್ತಿದ್ದ ಸಂಧಾನ ಮಾತುಕತೆಗಳಿಗೂ ಅನುಕೂಲವಾಗುತ್ತಿತ್ತು.

ಈ ಮಧ್ಯೆ ರಷ್ಯಾದಲ್ಲಿ ಭಾರತದ ರಾಯಭಾರಿಯಾಗಿರುವ ಶ್ರೀ ಕೆ. ಪಿ. ಎಸ್. ಮೆನನ್‌ರು ಸ್ಟಾಲಿನರನ್ನು ಭೇಟಿಯಾಗಿದ್ದಾರೆ. ಈ ಭೇಟಿಯಲ್ಲಿ ಏನು ಚರ್ಚೆ ಸಲ್ಪಟ್ಟಿತೆಂಬುದು ವಿಷದವಾಗಿ ತಿಳಿದುಬಾರದಿದ್ದರೂ ಕೊರಿಯಾ ಪ್ರಕರಣವನ್ನು ಅವರು ಚರ್ಚಿಸಿರಬಹುದೆಂದು ಊಹಿಸಲಾಗಿದೆ. ರಷ್ಯಾವು ಈ ವಿಚಾರದಲ್ಲಿ ಯಾವ ಮಾರ್ಗವನ್ನು ಅನುಸರಿಸುವದೆಂಬುದು ತಿಳಿದು ಬಂದಿಲ್ಲ.

ಪೋಲೆಂಡಿನ ಸಂಧಾನ ಶರತು

ಕೆಲವು ತಿಂಗಳುಗಳಿಗೆ ಹಿಂದೆ ಸಂಯುಕ್ತರಾಷ್ಟ್ರದ [illegible] ಇಟ್ಟಿರುವ ಸಂಧಾನ ಶರತುಗಳು ರಾಷ್ಟ್ರ ಸಂಘದ ಕಾರ್ಯಕ್ರಮ ಪಟ್ಟಿಯಲ್ಲಿ ಇನ್ನೂ ಇವೆ. ಈ ಸಂಧಾನ [illegible] ಪ್ರಕಾರ ಸೈನ್ಯಬಲವನ್ನು [illegible] ಅಮೇರಿಕಾ [illegible] [illegible] ಪ್ರಯೋಗ [illegible] ನಂತರ [illegible] ಪ್ರಾಮುಖ್ಯ ರಾಷ್ಟ್ರಗಳ ಲ್ಲಿ ಶಾಂತಿಯ [illegible] ಮಾಡಿಕೊಳ್ಳುವುದು [illegible] ಈಗ [illegible] ಪ್ರಶ್ನೆಯ [illegible] [illegible] ಸಾಮ್ರಾಜ್ಯ [illegible] [illegible] ಕ್ರಮ [illegible] ಪಡೆಗಳ ಭದ್ರತಾ [illegible] ತಪ್ಪಬೇಕು [illegible] ವಿಚಾರ [illegible] ತಾನು ವಿ[illegible] [illegible] ದಾಗಿ [illegible].

ವಿಜಯಲಕ್ಷ್ಮಿ

ಭಾರತ ಪ್ರತಿನಿಧಿಗಳ [illegible] ವಿಜಯಲಕ್ಷ್ಮಿ [illegible] ಈ ಸಮ್ಮೇಳನಕ್ಕೆ ಲಂಡನ್ ಮಾರ್ಗವಾಗಿ ಹೊರಟಿರುವರು. ಈ ಸಾರಿಯ ಸಮ್ಮೇಳನವು ನ್ಯೂಯಾರ್ಕ್ ನಗರದಲ್ಲಿ ನಡೆಯುತ್ತಿದೆ. ಪತ್ರಿಕಾ ವರದಿಗಾರರಿಗೆ ಲಂಡನ್ನಿನಲ್ಲಿ ವಿಜಯಲಕ್ಷ್ಮಿ [illegible] ಒಂದು ಹೇಳಿಕೆಯನ್ನು ಕೊಡುತ್ತ ಕೊರಿಯಾದ ವಿಚಾರದ ಠರಾವು ಸಂಯುಕ್ತರಾಷ್ಟ್ರದಿಂದ ತಿರಸ್ಕರಿಸಲ್ಪಟ್ಟಿದ ಈ ಪ್ರಶ್ನೆಯನ್ನು ಬಗೆಹರಿಸಲು ಇತರ ಯಾವ ಮಾರ್ಗವನ್ನು ಅನುಸರಿಸಬಾಗುವದೆಂಬುದನ್ನು ಮುಂದೆ ನಿರೀಕ್ಷಿಸಬೇಕಿದೆ. ಸಂಯುಕ್ತರಾಷ್ಟ್ರ ಸಂಘದ ಇತರ ಪ್ರತಿನಿಧಿಗಳೊಡನೆ ಆ ವಿಚಾರ ನಾವು ವಿಮರ್ಶಿಸುವೆವು. ಹೀಗೆಯೇ ವರ್ತಿಸಬೇಕೆಂಬ ಬಗ್ಗೆ ನಮಗೆ ನಮ್ಮ ಸರಕಾರದಿಂದ ನಿಶ್ಚಿತ ಸೂಚನೆಗಳಿಲ್ಲ. ಹಿಂದೂದೇಶವು ಈ ಹಿಂದೆ ಪ್ರಯತ್ನಿಸಿದಂತೆ ನಿಶ್ಚಿತ ಯೋಜನೆಯನ್ನು ಈ ಸಾರೆ ರಾಷ್ಟ್ರ ಸಂಘದ ಮುಂದಿಡುವ ವಿಚಾರವೇನೂ ಮಾಡಿಲ್ಲ" ಎಂದು ಹೇಳಿದರು.

ಅಮೇರಿಕಾದ ಹೊಸ ಯೋಜನೆ.

ಅಮೇರಿಕಾದ ಪ್ರೆಸಿಡೆಂಟರಾದ ಐಸೆನ್ ಹೋವರ್ ಮತ್ತು ದೂರ ಪ್ರಾಚ್ಯ ಪ್ರದೇಶದ ಸಲಹೆಗಾರ ಫಾಸ್ಟರ್ ಡಲ್ಲೆಸರವರು ಸೇರಿ ಪೂರ್ವಭಾಗದಲ್ಲಿ ಹೊಸ ಸಂರಕ್ಷಣಾ ಮಂಡಲವೊಂದನ್ನು ಏರ್ಪಡಿಸುವ ಯತ್ನದಲ್ಲಿ[illegible] ಈ ಯೋಜನೆಯಂತೆ ದೇಶ ಕಳಕೊಂಡ ಚಿಯಾಂಗರವರನ್ನು ಪುನಃ ಚೀನವನ್ನು ವಶಪಡಿಸಿಕೊಳ್ಳಲು ಹುರಿದುಂಬಿಸಲಾಗುತ್ತಿದೆ. ಫಾರ್ಮೋಸಾದಲ್ಲಿರುವ ಈ ಅವೇರಿಕಾದ ಸ್ನೇಹಿತರು ಹೇಳಿಕೊಳ್ಳುವಂತೆ ಆತನ ೬,೦೦,೦೦೦ ಸೈನಿಕರು ಫೈನಾದಲ್ಲಿ ಇಳಿಯಲು ಸಮರ್ಥರಾದರೂ ಅಮೇರಿಕಾ ನೌಕಾಬಲದ ಬೆಂಬಲವಿಲ್ಲದೆ ಏನೂ ಮಾಡಲಾರರು. ಕಳೆದ ಚೀನಾ ಯುದ್ಧದಲ್ಲಿ ಮೂರು ವರ್ಷಗಳ ಹಿಂದೆ [illegible] ಚಿಯಾಂಗರ ಕೈಕೆಳಗೆ ೨೦,೦೦೦,೦೦೦ ಸೈನಿಕರಿದ್ದರು [illegible] ಡಿವಿಜನ್ ಸೇನೆಗಳಿಗೆ ಅಮೇರಿಕಾವು ಆಧುನಿಕ ಆಯುಧಗಳನ್ನು [illegible] ಅಮೇರಿಕದ ಯುದ್ಧ ಪ್ರೋತ್ಸಾಹಕರು ಕೂಡ ಮೂರು ತಿಂಗಳಲ್ಲಿ ಜಯ ಗಳಿಸಿ [illegible] ಭರವಸೆ ಕೊಟ್ಟಿದ್ದರು. ಆದರೆ ಕಮ್ಯೂನಿಸ್ಟ ಚೀನಾದ ಸೇನೆಗಳು ಮೂರು ವರ್ಷಗಳ ಒಳಗೆ ಚಿಯಾಂಗರನ್ನು ಅವರ ಸಹಾಯಕರನ್ನೂ ಹೊರಗೋಡಿಸಿದರು

ಗೊರಿಲ್ಲಾಗಳ ನಿರೀಕ್ಷೆ

ಚಿಯಾಂಗರ ೬ ಲಕ್ಷ ಸೇನೆಗಳು ಚೀನಾದೊಳಗೆ ಕಾಲಿಕ್ಕುತ್ತಲೇ ರಷ ಸಮತಾವಾದ ಚೀನೀ ಸರಕಾರದಿಂದ ಅಸಂತುಷ್ಟರಾದವರು, ಚಿಯಾಂಗರ ಜನರು ಕಾಯುತ್ತಿರುವ ಒಂದು [illegible] ಗೊರಿಲ್ಲಾ ಪಡೆಯು [illegible] ಕೂಡಿಕೊಳ್ಳುವರು [illegible] ಅವರ [illegible] ದ ಅಮೇರಿಕಾದವರು [illegible] ಆದರೆ ಚಿಯಾಂಗರ [illegible] ಫಾರ್ಮೋಸದ ಪಕ್ಷದ ಕಮ್ಯೂನಿಸ್ಟ ಗೊರಿಲ್ಲಾಗಳಿರುವರೆಂಬುದನ್ನು ಅವರು ಮರೆತಂತಿದೆ. ಚೀನಾದ ಸಾಮ್ಯವಾದೀ ಸರಕಾರದ ಹಿನ್ನೆಲೆಯಲ್ಲಿ ಅಲ್ಲಿಯ ಜನರ ಪ್ರೀತಿ ವಿಶ್ವಾಸಗಳಿರುವುದರಿಂದ ಯಾವ ಅಮೇರಿಕಾದ ಪ್ರಯತ್ನವೂ ಚಿಯಾಂಗರಿಗೆ ಪುನಹ ಸಿಂಹಾಸನ ಒದಗಿಸಿಕೊಡಲಾರದು

ರಷ್ಯಾ ಸುಮ್ಮನಿರುವುದೇ?

ಆತ್ಮಹತ್ಯ ಕಾರಕವಾದ ಚಿಯಾಂಗರ ಈ ಯತ್ನದಿಂದ ಅವರು ಒಮ್ಮೆಲೇ ಕಾದರೆ ಅಮೇರಿಕಾವು ರಣರಂಗಕ್ಕಿಳಿಯದೆ ಸಾಧ್ಯವಿಲ್ಲ. ಈಗಾಗಲೇ ಅಮೇರಿಕಾದ ಪಟ್ಟಿಗೆ ಪೂರ್ವ ಏಶಿಯಾದಲ್ಲಿ ಯಾವ ಜನಾನುರಾಗವೂ ಉಳಿದಿಲ್ಲ. ಅವರು ಚಿಯಾಂಗರ ನೆರವಿಂದ ಮತ್ತು ಕೊರಿಯಾ ಯುದ್ಧರಂಗದ ಮರೆಯಲ್ಲಿ ನಿಂತು ಚೀನಾದ ಮೇಲೆ [illegible] ಚಾಚಿದರೆ ರಾಜಕೀಯ ಜಗದ್ರಂಗದಲ್ಲಿ ಆಸಕ್ತಿಯಿಂದ ನಿರೀಕ್ಷಿಸುತ್ತಿರುವ ರಷ್ಯಾವು ಸುಮ್ಮನೆ ಕೈಕಟ್ಟಿ ಕೂರಲಾರದು. ಅದು ಚೈನಾದ ರಕ್ಷಣೆಗಾಗಿ ರಣರಂಗಕ್ಕೆ ಇಳಿಯಲೇ ಬೇಕಾಗುವುದು.

ನೆಹರೂ-ಬಿವಾನ್.

ಇಂಥಾ ಗಂಡಾಂತರದಿಂದ ಜಗತ್ತನು ರಕ್ಷಿಸುವ ಕಾರಣಕ್ಕಾಗಿಯೇ ಭಾರತದ ನೆಹರೂರವರು ಶಾಂತಿಪ್ರಿಯ ರಾಷ್ಟ್ರಗಳ ಮೂರನೇ ತಂಡವೊಂದನ್ನು ರಚಿಸಬೇಕೆಂದು ಹೇಳಿದರು. ಇವರ ಈ ಸೂಚನೆಗೆ ಉತ್ಸಾಹಿಯಾಗಿ ಬ್ರಿಟನಿನ ಲೇಬರ್ ಪಕ್ಷದ ಧುರೀಣರಾದ ವಿ|| ಅನ್ನೀರಿನ್ ಬಿವಾನ್‌ರ [illegible] ಅಭಿಪ್ರಾಯ ವ್ಯಕ್ತಮಾಡಿದ್ದಾರೆ [illegible] ಜಗತ್ತಿನ ಇಂದಿನ ಪರಿಸ್ಥಿತಿಯಲ್ಲಿ ಶಾಂತಿಯನ್ನು ಬಯಸುವ ಹೆಚ್ಚು ರಾಷ್ಟ್ರಗಳಿರುವ [illegible], ಅಮೇರಿಕ, ರಷ್ಯಾಗಳ [illegible] [illegible] [illegible] ಬೇಕೆಂದು ಹೇಳಿದರು [illegible] ಅಮೇರಿಕ [illegible] [illegible] ಜಗತ್ತಿನ [illegible] ಅಮೇರಿಕ [illegible] [illegible] ಶಾಂತಿ [illegible] ಮಾತು [illegible] ಒಂದು ರಾಷ್ಟ್ರಗಳು [illegible] ತನ್ನ [illegible] ಸ್ವಾತಂತ್ರ್ಯ [illegible] ಸುವ ಪರಿಸ್ಥಿತಿ ಈ ಯತ್ನದಲ್ಲಿದೆ.

ಶ್ರೀ. ಬಿ. ಶಿವರಾಯರಿಗೆ ಮಂತ್ರಿಪದ?

ಪ್ರಧಾನ ಮಂತ್ರಿಗಳು ಸಂರಕ್ಷಣ ಶಾಖೆಯನ್ನು ಇನ್ನು ಎರಡು ಮೂರು ತಿಂಗಳ ತಮ್ಮ ಕಡೆ ಇಟ್ಟುಕೊಳ್ಳುವೆಂದು ತಿಳಿಯುತ್ತದೆ. ಮಂತ್ರಿ ಮಂಡಲದಲ್ಲಿ ತೆರವಾದ ಸ್ಥಳಕ್ಕೆ ಶ್ರೀ ಬಿ ಶಿವರಾಯರ ನೇಮಕವಾಗುವದೆಂದು ತೋರುತ್ತದೆ. ಡಾ. ಬಿ ವಿ. ಕೇಸ್ಕರರನ್ನು ಕ್ಯಾಬಿನೆಟ್ ಮಂತ್ರಿಗಳ ದರ್ಜೆಗೆ ಒಯ್ಯಲಾಗುವುದು. ಸಂರಕ್ಷಣ ಶಾಖೆ ಬಹುಶಃ ಡಾ. ಕಟ್ಜು ಇವರ ಕಡೆಗೆ ಹೋಗುವದು. ಲಾಲಬಹಾದ್ದೂರ್ ಶಾಸ್ತ್ರಿ ಇವರು ಗೃಹಮಂತ್ರಿಗಳಾಗಿ, ರಫಿ ಅಹಮ್ಮದ ಕಿದ್ವಾಯಿ ಇವರು ರೈಲ್ವೆ ಮಂತ್ರಿಗಳಾಗುವರು. ಪಂಜಾಬದ ಗವರ್ನರ ಶ್ರೀ. ಚಂದುಲಾಲ ತ್ರಿವೇದಿಯವರು ಆಂಧ್ರ ಪ್ರಾಂತ ನಿರ್ಮಾಣವಾದ ನಂತರ ಅದರ ಗವರ್ನರರಾಗುವರು ಎಂದು ಸಕಾಳ ಸುದ್ದಿಗಾರರು ಬರೆಯುತ್ತಾರೆ.

ಜ್ಞಾನ ದೀಪ.

(೧)

ಮೊಗೆದು ಬಿಟ್ಟ ನೀರಿನಿಂದ ಪ್ರಳಯವಾಗಬಲ್ಲುದಾದರೆ ಕಲಿಸಿಕೊಟ್ಟ ಬುದ್ಧಿಯಿಂದ ಕ್ರಾಂತಿ ಏಳ ಬಲ್ಲುದು.

(೨)

ಅರಿವೆ ಅಂಗಿಯಾಗಬೇಕಾದರೆ ಕತ್ತರಿ ಪ್ರಯೋಗವಾಗಲೇಬೇಕು. ಮಂಕ ಮನುಷ್ಯನೆನಿಸಬೇಕಾದರೆ ಸಂಕಟಕ್ಕೆ ಸಿಕ್ಕಿ ಒದ್ದಾಡಲೇಬೇಕು.

(೩)

ಆಳುವವನಿರುವ ತಲೆಬಾಗದ ದರ್ಪವಿದ್ದರೂ ಆಳುವವನಿರುವ ಹೃದಯ ಕರಗುವ ದಯೆ ಇರಬೇಕು. ತಲೆಗೇರಿದವನನ್ನು ಬಡಿದಪ್ಪಳಿಸಿದರೂ ಕಾಲಿಗೆರಗಿದವನನ್ನು ಹಿಡಿದೆಬ್ಬಿಸಬೇಕು.

—ನುಡಿಮುತ್ತು.

ಕೊಡಗು

ತಾರೀಕು ೨೬ ಫೆಬ್ರವರಿ ೧೯೫೪ನೇ ಶುಕ್ರವಾರ

ಉಳುವರಿ ಬತ್ತ.

ಇಂಡಿಯಾ ಸರಕಾರವು ಆಹಾರ ಧಾನ್ಯಗಳ ವಿಷಯದಲ್ಲಿ ಕ್ರಮಾನುಗತವಾದ ವಿನಿಯಂತ್ರಣ ಪದ್ಧತಿಯನ್ನು ಅನುಸರಿಸುತ್ತಿದೆ. ಆ ನೀತಿಯಂತೆ ಇತ್ತಲಾಗಿ ಅವರು ಒಂದು ಆಜ್ಞೆಯನ್ನು ಹೊರಡಿಸಿ ಈ ವರೆಗೆ ಗ್ರಾಮದ ರೈತನು ತನ್ನ ಉಪಯೋಗಕ್ಕಾಗಿ ಕೇವಲ ೧೫ ಮಣದವರೆಗೆ ಮಾತ್ರ ಆಹಾರ ಧಾನ್ಯಗಳನ್ನು ಸ್ಟಾಕ್ ಇಟ್ಟುಕೊಳ್ಳಬಹುದೆಂದಿದ್ದ ತಮ್ಮ ಆಜ್ಞೆಯನ್ನು ಬದಲು ಮಾಡಿ ಈಗ ೧೦೦ ಮಣದ ವರೆಗೆ ಅಂದರೆ ಸುಮಾರು ೪½ ಗಾಡಿ ಬತ್ತದ ವರೆಗೆ ಇಟ್ಟುಕೊಳ್ಳಬಹುದೆಂದು ಏರ್ಪಡಿಸಿದೆ. ಚಿಕ್ಕ ವ್ಯವಸಾಯಗಾರರ ಹಿತದೃಷ್ಟಿಯಿಂದ ಕೇಂದ್ರ ಸರಕಾರದ ಈ ತೀರ್ಮಾನವು ಸ್ವಾಗತಾರ್ಹವಾಗಿದೆ. ಆದರೆ ಕೊಡಗಿನಲ್ಲಿ ಈ ಮೊದಲಿನಿಂದಲೇ ರೇಶನ್ ದರದ ಪ್ರಕಾರ ಅವರವರ ವರ್ಷದ ಖರ್ಚಿಗಿರುವ ಬತ್ತವನ್ನು ನಿಕ್ಷೇಪ ಇಟ್ಟುಕೊಳ್ಳುವ ಅವಕಾಶ ಇದೆ.

ಕಳೆದ ವರ್ಷ ಕೊಡಗಿನ ಉಳುವರಿ ಬತ್ತದಿಂದ ೬,೦೦೦ ಟನ್ ಅಕ್ಕಿಯನ್ನು ಮೈಸೂರಿಗೆ ಕೊಡಲು ಇಲ್ಲಿಯ ಸರಕಾರದವರು ಒಪ್ಪಿದ್ದರು. ಕೊಡಗಿನ ರೇಶನ್ ಅಂಗಡಿಗಳಿಗೆ ಸಾಕಾಗುವಷ್ಟು ಮತ್ತು ವರ್ಷಾಂತ್ಯದಲ್ಲಿ ಉಂಟಾಗುವ ಧಾನ್ಯದ ಕೊರತೆಯನ್ನು ನೀಗುವ ಬಗ್ಗೆ ಸಾಕಷ್ಟು ಬತ್ತದ ದಾಸ್ತಾನನ್ನು ಮಿಲ್ಲು ಮಾಲಿಕರಲ್ಲಿ ಇಡಲಾಗಿತ್ತು. ದೇಶದಲ್ಲಿ ಕಳೆದ ವರ್ಷ ಬತ್ತದ ಬೆಳೆ ಚೆನ್ನಾಗಿದ್ದುದರಿಂದ ಏಳು ಸಾವಿರ ಟನ್ ಅಕ್ಕಿಯನ್ನು ಮಾತ್ರವಲ್ಲ; ಅದರೊಂದಿಗೆ ೧½ ಸಾವಿರ ಟನ್ ಹೆಚ್ಚಿನ ಅಕ್ಕಿಯನ್ನೂ ಕೂಡ ಸರಾಗವಾಗಿ ಕೊಡುವುದು ಸಾಧ್ಯವಾಯಿತು. ಆದಕಾರಣ ಗ್ರಾಮಾಂತರಗಳಲ್ಲಿ ರೈತರು ಖರ್ಚಿಗಾಗಿ ಇಟ್ಟುಕೊಂಡ ಬತ್ತದ ಅಜಮಾಯಿಸಿಕೆಯನ್ನು ಮಾಡುವ ಆವಶ್ಯಕತೆ ಬೀಳಲಿಲ್ಲ. ಹಿಂದಿನ ವರ್ಷ ಸರಕಾರದವರು ಮೈಸೂರಿಗೆ ಕೊಡಲು ಒಪ್ಪಿದ ಅಕ್ಕಿಯನ್ನು ಕೊಡುವುದು ಕಷ್ಟಕರವಾಗಿ ಗ್ರಾಮಾಂತರ ಮನೆ ಮನೆಗಳಿಗೆ ರೇಶನ್ ಅಧಿಕಾರಿಗಳು ಹೋಗಿ ದಾಸ್ತಾನು ಇಟ್ಟಿದ್ದ ಬತ್ತವನ್ನು ಬಲತ್ಕಾರದಿಂದ ಹೊರ ತರಬೇಕಾಯಿತು. ಇದರಿಂದ ರೈತರಿಗೂ ತುಂಬಾ ತೊಂದರೆ ಉಂಟಾಗಿತ್ತು. ಆದರೆ ಕಳೆದ ವರ್ಷ ಈ ತೊಂದರೆ ಆಗಲಿಲ್ಲ.

ಈ ವರ್ಷ ವ್ಯವಸಾಯಕ್ಕೆ ಅಂತ್ಯದಲ್ಲಿ ಮಳೆಯು ಸರಿಯಾಗಿ ನಡೆಯದ್ದರಿಂದ ಬತ್ತವು ಸುಮಾರು ಶೇಕಡ ೨೦ರಷ್ಟು ಕಡಿಮೆಯಾಗುವದೆಂದು ಊಹಿಸಲಾಗಿತ್ತು. ಈ ಊಹನೆಯು ಈಗ ನಿಜವಾಗಿ ಪರಿಣಮಿಸಿದೆ. ಒಕ್ಕಲು ಕೆಲಸವು ಮುಗಿಯುತ್ತಾ ಬಂದಿದೆ. ಶೇಕಡ ೭೦ಕ್ಕಿಂತಾ ಹೆಚ್ಚಿನ ಜನರು ತಮಗೆ ಬತ್ತ ಕಡಿಮೆಯೆಂದೇ ಹೇಳುತ್ತಿದ್ದಾರೆ. ಈ ಹೇಳಿಕೆಯನ್ನು ಗಮನಿಸಿದರೆ ಸರಕಾರವು ಈ ವರ್ಷ ಮೈಸೂರಿಗೆ ಕೊಡಲು ಒಪ್ಪಿರುವ ಆರು ಸಾವಿರ ಟನ್ ಅಕ್ಕಿಯನ್ನು ಕೊಡುವುದು ಸುಲಭ ಸಾಧ್ಯವಾಗುವದೇ ಎಂಬ ಸಂಶಯ ಉಂಟಾಗಿದೆ. ಈಗಾಗಲೇ ಶೇಕಡ ೫೦ ಕ್ಕಿಂತಾ ಹೆಚ್ಚು ಬತ್ತದ ಮಾರಾಟವಾಗಿ ಹೋಗಿದೆ. ಮೈಸೂರಿಗೆ ಕೊಡಲೊಪ್ಪಿರುವುದರ ಶೇಕಡ ೫೦ರಷ್ಟು ಅಕ್ಕಿ ಮೈಸೂರಿಗೆ ಕಳುಹಿಸಲ್ಪಟ್ಟಿದೆಯೋ ಎಂಬುದು ತಿಳಿದುಬಂದಿಲ್ಲ. ಒಂದು ವೇಳೆ ಆರು ಸಾವಿರ ಟನ್ ಅಕ್ಕಿಯನ್ನು ಮೈಸೂರಿಗೆ ಕಳುಹಿಸುವುದು ಸುಲಭವಾಗದಿದ್ದರೆ ಹಿಂದಿನ ವರ್ಷ ಮಾಡಿದಂತೆ ರೈತರು ಖರ್ಚಿಗಿಟ್ಟುಕೊಂಡಿರುವ ದಾಸ್ತಾನು ಬತ್ತದ ಮೇಲೆ ಕೈ ಹಾಕುವಂತಾಗಬಾರದು. ಕಳೆದ ವರ್ಷದಂತೆ ಮತ್ತು ಇಂಡಿಯಾ ಸರಕಾರದ ಈಗಿನ ಆಜ್ಞೆಯಂತೆ ಗ್ರಾಮಾಂತರಗಳಲ್ಲಿರುವ ಚಿಕ್ಕ ರೈತರು ತಮ್ಮ ಖರ್ಚಿಗಿಟ್ಟಿರುವ ದಾಸ್ತಾನು ಬತ್ತವನ್ನು ಮುಟ್ಟದೆ ದೊರೆಯಬಹುದಾದ ಉಳುವರಿ ಬತ್ತದ ಅಕ್ಕಿಯನ್ನು ಮಾತ್ರ ಮೈಸೂರಿಗೆ ಕೊಡುವುದು ಉಚಿತವಾಗಿದೆ. ಇದರೊಂದಿಗೆ ಪ್ರತೀ ದಿನವೂ ಹೊರ ಪ್ರದೇಶಗಳಿಂದ ಮುಖ್ಯವಾಗಿ ಮಲಬಾರು ಮತ್ತು ತಮಿಳು ನಾಡುಗಳಿಂದ ಕೆಲಸ ಹುಡುಕಿಕೊಂಡು ಕೊಡಗಿಗೆ ಬರುತ್ತಿರುವವರ ಸಂಖ್ಯೆಯು ಹದ್ದು ಮೀರಿ ಹೆಚ್ಚುತ್ತಿದೆ ಇಂಥಾ ಜನ ಸಂಖ್ಯೆಯು ಕಳೆದ ವರ್ಷಕ್ಕಿಂಥಾ ಈ ವರ್ಷ ಈಗಾಗಲೇ ದೊಡ್ಡದಾಗಿದೆ. ಇವರ ಜೀವನಕ್ಕೆ ಬೇಕಾದ ಬತ್ತವನ್ನು ದಾಸ್ತಾನು ಇಡುವ ಏರ್ಪಾಡು ಆಗಲೇಬೇಕು. ಈ ಎಲ್ಲಾ ವಿಚಾರಗಳನ್ನು ಸಂಬಂಧಿಸಿದ ಅಧಿಕಾರಿಗಳು ಸಕಾಲದಲ್ಲಿ ಪರಿಶೀಲಿಸಿ ಬತ್ತ ಬೆಳೆಯುವ ರೈತನ ಜೀವನಕ್ಕೆ ವರ್ಷಾಂತ್ಯದಲ್ಲಿ ತೊಂದರೆ ಉಂಟಾಗದಂತೆ ನೋಡಿಕೊಳ್ಳುವರಾಗಿ ಆಶಿಸುತ್ತೇವೆ.

ವರ್ತಮಾನ.

ತಾ. ೧೯ರಲ್ಲಿ ಜೋಡುಪಾಲ ಗ್ರಾಮದ ಸುತ್ತು ಮುತ್ತಲಿನ ಜನರ ದನಕರುಗಳಿಗೆ ತೊಂದರೆ ಕೊಡುತ್ತಿದ್ದ ಒಂದು ಹೆಬ್ಬುಲಿಯನ್ನು ಶ್ರೀ ಅಂಜಪರವಂಡ ಮಾದಪ್ಪನವರು ಗುಂಡಿಕ್ಕಿ ಕೊಂದರು.

ಕಳೆದ ಡಿಸೆಂಬರ್ ತಿಂಗಳಲ್ಲಿ ನಡೆದ ಸೀನಿಯರ್ ಕೇಂಬ್ರಿಡ್ಜ್ ಪರೀಕ್ಷೆಯಲ್ಲಿ ಪೂರ್ವ ಆಫ್ರಿಕದಲ್ಲಿರುವ ಮಿಸ್ ಮಾಚಿಮಂಡ ಕುಶಾಲಪ್ಪ ಜಾನಕಿಯವರು ತೇರ್ಗಡೆಯಾಗಿರುವರು.

ಮಾರ್ಚ್ ತಾ. ೧೧ರಿಂದ ಮಿಸೆಸ್ ಕಂಬಿರಂಡ ತಿಮ್ಮಯ್ಯನವರ ಮೆಮೋರಿಯಲ್ ಬೇಡ್ಮಿಂಟನ್ ಆಟವು ಸಿದ್ದಾಪುರದಲ್ಲಿ ಪ್ರಾರಂಭವಾಗುವುದು. ಭಾಗವಹಿಸಲಿಚ್ಛಿಸುವವರು ತಾ. ೭ರೊಳಗೆ ಬರೆಕೊಳ್ಳಬೇಕಿದೆ.

ಮೈಸೂರು ನಗರದ ಕಾಲೇಜುಗಳಲ್ಲಿರುವ ಕೊಡಗಿನ ವಿದ್ಯಾರ್ಥಿಗಳು ತಮ್ಮ ವಾರ್ಷಿಕ ಸಾಮಾಜಿಕ ಕೂಟವನ್ನು ತಾ. ೭೨ರಲ್ಲಿ ಇತ್ತಲಾಗಿ ಐ. ಎ. ಎಸ್. ಪಾಸಾಗಿರುವ ಶ್ರೀ ಸಿ. ಜಿ. ಸೋಮಯ್ಯ ಇವರ ಅಧ್ಯಕ್ಷತೆಯಲ್ಲಿ ನಡೆಸಿದರು.

ಕ್ಷಯರೋಗವನ್ನು ತಡೆಗಟ್ಟಲು ಕೊಡಗಿನಲ್ಲಿ ಸಾರ್ವತ್ರಿಕ ಬಿ. ಸಿ. ಜಿ. ದಾಕು ಹಾಕುವ ಕಾರ್ಯಕ್ರಮವನ್ನು ಕೊಡಗು ಸರಕಾರವು ಕೈಕೊಳ್ಳಲಿದೆಯೆಂದೂ ಇದಕ್ಕೆ ಬೇಕಾದ ಸೀರಮನ್ನು ಮದರಾಸಿನ ಗಿಂಡಿ ಎಂಬಲ್ಲಿಂದ ತರಲಾಗುವದೆಂದೂ, ಯಾಂತ್ರಿಕ ಸಲಕರಣೆಗಳನ್ನು ಕೇಂದ್ರ ಸರಕಾರವು ಮುಫತ್ತಾಗಿ ಕೊಟ್ಟಿರುವದೆಂದೂ ತಿಳಿಯಬರುತ್ತದೆ.

ಅರಪಟ್ಟು ಗ್ರಾಮದ ಶ್ರೀ ಪಾಲಚಂಡ ಅಪ್ಪಯ್ಯನವರು ತಮ್ಮ ಮನೆಯಿಂದ ಹಾಲು ಮಾರಲು ತಾ. ೨೦ರಲ್ಲಿ ಹಗಲು ನಡೆಯುತ್ತಿದ್ದಾಗ ದಾರಿಯಲ್ಲಿ ಯಾರೋ ಕಾಡಿನೊಳಗಿಂದ ಗುಂಡಿಕ್ಕಿ ಕೊಂದು ಹಾಕಿರುವರು. ಈ ಸಂಬಂಧ ಐದು ಜನರ ದಸ್ತಗಿರಿಯಾಗಿದೆ. ಪೋಲೀಸು ತನಿಕೆ ನಡೆಯುತ್ತಿದೆ.

ತಾ. ೧೮ರಲ್ಲಿ ಡಿ. ಸಿ. ಮಾನನೀಯರಾದ ಶ್ರೀ ಐ. ಸಿ. ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಪೊನ್ನಂಪೇಟೆ ಫ್ರೆಯರ್ ಎಲಿಮೆಂಟರಿ ಶಾಲೆಯಲ್ಲಿ ಚಿಕ್ಕ ಉಳಿತಾಯದ ಯೋಜನೆಯ ಸಂಬಂಧ ಒಂದು ಸಭೆ ನಡೆಯಿತು. ಸುಮಾರು ರೂ. ೭೪೦೦/– ಸಂಗ್ರಹವಾಯಿತೆಂದು ತಿಳಿಯಬಂದಿದೆ.

ಅಮೇರಿಕಾ ಮತ್ತು ಹಿಂದೂದೇಶಗಳ ವ್ಯವಸಾಯ ಕ್ರಮದ ಮಾಹಿತಿಯನ್ನರಿತುಕೊಳ್ಳಲು ಎರಡು ರಾಜ್ಯಗಳೂ ತಮ್ಮಲ್ಲಿಯ ಯೋಗ್ಯ ಯುವಕರನ್ನು ಕಳುಹಿಸುವ ಯೋಜನೆಯಂತೆ ಹಿಂದೂದೇಶದಿಂದ ೧೫ ಜನರನ್ನು ಅಮೇರಿಕಕ್ಕೆ ಕಳುಹಿಸಲು ಇಂಡಿಯಾ ಸರಕಾರವು ನಿರ್ಧರಿಸಿದೆ. ಕೊಡಗು ಸರಕಾರವು ಇವರಲ್ಲಿಗೆ ಕೊಡಗಿನಿಂದ ಶ್ರೀ ಚೌಡ್ಲು ಕೆ. ಕಾಳಪ್ಪನವರ ಮತ್ತು ಶ್ರೀ ಕೋದಂಡ ಬೋಪಯ್ಯನವರ ಹೆಸರುಗಳನ್ನು ಶಿಫಾರಸ್ಸು ಮಾಡಿರುವದಾಗಿ ವರ್ತಮಾನ.

ಈ ವರ್ಷದ ಸೇಂದಿ ಮತ್ತು ಬೀರು ಅಂಗಡಿಗಳ ಹರಾಜಿನಲ್ಲಿ ಕಳೆದ ವರ್ಷಕ್ಕಿಂಥಾ ರೂ. ೪೭,೦೦೦/– ಹೆಚ್ಚಿಗೆ ದೊರೆತಿದೆಯಂತೆ.

ಬೆಟ್ಟಗೇರಿ ಗ್ರಾಮದ ಕೊಳುವಾಡನ ಸುಬ್ಬಯ್ಯ ಮತ್ತು ತಾರಿರ ಮುತ್ತಣ್ಣನವರೊಳಗೆ ತಾ. ೧೩ರಲ್ಲಿ ಹೊಡೆದಾಟವಾಗಿ ಮುತ್ತಣ್ಣನವರು ಜಖಂಗೊಂಡು ತಾ. ೧೬ರಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿ ಮೃತಪಟ್ಟರೆಂದು ತಿಳಿಯಬರುತ್ತದೆ. ಸುಬ್ಬಯ್ಯನವರ ದಸ್ತಗಿರಿಯಾಗಿ ಪೋಲೀಸು ತನಿಖೆ ನಡೆಯುತ್ತದೆ.

ಸ್ವಲ್ಪ ಅಸ್ವಸ್ಥರಾಗಿದ್ದು ಗುಣಹೊಂದಿದ್ದ ಶ್ರೀ. ಉದಿಯಂಡ ಅಣ್ಣಯ್ಯನವರು ತಾ. ೨೨ರ ರಾತ್ರೆ ಒಂಭತ್ತು ಗಂಟೆಯ ಸಮಯಕ್ಕೆ ಗ್ರಾಮಫೋನ್ ರಿಕಾರ್ಡು ಇಟ್ಟು ಕುರ್ಚಿಯಲ್ಲಿ ಕೂತುಕೊಂಡು ಕೇಳುತ್ತಿದ್ದವರು ತಟ್ಟನೆ ಹೃದಯಕ್ರಿಯೆ ನಿಂತು ಕೆಳಗೆ ಬಿದ್ದು ಶಿವಾಧೀನರಾದರು.

ಕೊಡಗು ಕಂಪೆನಿಯ ಅಧ್ಯಕ್ಷರಾಗಿದ್ದ ಇವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿಮಿತ್ತ ತಾ. ೨೩ರ ಮಧ್ಯಾಹ್ನದ ಮೇಲೆ ಕೊಡಗು ಕಂಪೆನಿಯ ಖಜೇರಿಯನ್ನು ಮುಚ್ಚಲಾಗಿತ್ತು.

ಐಮಂಗಲ ಗ್ರಾಮದ ಬೊಳ್ಳಚಂಡ ಪ್ರಾಯಕ್ಕೆ ಬಂದ ಹುಡುಗಿಯೊಬ್ಬಳು ತಾ. ೨೦ರ ಪ್ರಾತಃಕಾಲ ಸಮೀಪದ ತೋಡು ಕಟ್ಟೆಯಿಂದ ತರಕಾರಿ ತೋಟಕ್ಕೆ ನೀರು ಹಾಕುತ್ತಿದ್ದವಳು ಸುಮಾರು ೨ ಅಡಿ ಮಾತ್ರ ನೀರಿರುವಲ್ಲಿ ಬಿದ್ದು ನಿಧನಳಾದಳೆಂದು ತಿಳಿಯಬರುತ್ತದೆ.

ತಿದ್ದುಪಡಿ.

ರೆಡ್‌ಕ್ರಾಸ್ ಸಂಘದ ಕೊಡಗಿನ ಶಾಖೆಯ ಆಶ್ರಯದಲ್ಲಿ ನಡೆದ ಲಾಟ್ರಿಯನ್ನು ಸಿವಿಲ್ ಸರ್ಜನರ ಆಫೀಸಿನಲ್ಲಿ ತಾ. ೧೫ರಲ್ಲಿ ರೆಡ್‌ಕ್ರಾಸ್ ಸಂಘದ ಕಾರ್ಯದರ್ಶಿ ಡಾ. ಬೋಪಯ್ಯ ಮತ್ತು ಲೇಡಿ ಅ. ಸರ್ಜನ್ ಡಾ. ಚಂದ್ರಮಹದೇವನ್ ಇವರ ಹಾಜರಾತಿಯಲ್ಲಿ ಸಿವಿಲ್ ಸರ್ಜನರು ತೆಗೆದರೆಂದು ವಾಚಕರು ಓದಿಕೊಳ್ಳಬೇಕು. ಮುಖ್ಯ ಮಂತ್ರಿಗಳ ಸಮ್ಮುಖದಲ್ಲಿ ಮುನ್ಸಿಪ್ಲ್ ಹಾಲ್‌ನಲ್ಲಿ ತೆಗೆಯಲಾಯಿತೆಂದು ತಪ್ಪಾಗಿ ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. [ಸಂ.

॥ ಇಂದಿನ ವಿದ್ಯಾರ್ಥಿಗಳು ॥

ಗಾಂಧೀಜಿಯವರ ಜೀವನ ವಿಷಯಗಳನ್ನು ತಿಳಿದಿಲ್ಲ;— ವಿಜಯಾ ಮರ್ಚೆಂಟ್, ಮೆಹಬೂಬ್, ಸುರೈಯ್ಯ ಅವರನ್ನು ಚೆನ್ನಾಗಿ ತಿಳಿದಿದ್ದಾರೆ!

ವರಕವಿಗಳ ಕೃತಿಗಳ ಪರಿಚಯವಿಲ್ಲ—'ಲಾರಲಪ್ಪ' ಹಾಡುಗಳನ್ನು ಹೃದ್ಗತ ಮಾಡಿಕೊಂಡಿದ್ದಾರೆ.

ಉತ್ಸಾಹದ ಬದಲು ವಿನೋದ ಬಂದಿದೆ; ಸುಲಭ ಜೀವನ ಅವರ ಆದರ್ಶವಾಗಿದೆ;

ಲೇ: ಮ. ರಾಜೀವ ಬಿ. ಎ., ಬಿ. ಟಿ.

ವೀರ ವಿದ್ಯಾರ್ಥಿ ವರ್ಗ

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ವಿದ್ಯಾರ್ಥಿಗಳ ವೀರ ಹೋರಾಟದ ಕುರಿತು ಪ್ರಶಂಸಿಸುತ್ತಾ ಪಂಡಿತ ನೆಹರು "ಡಿಸ್ಕವರಿ ಆಫ್ ಇಂಡಿಯಾ" ದಲ್ಲಿ ವಿಶ್ವವಿದ್ಯಾಲಯಗಳ, ಶಾಲೆಗಳ ವಿದ್ಯಾರ್ಥಿಗಳು ನಲ್ವತ್ತೆರಡರ ನಾಡಿನಾದ್ಯಂತದ ಚಳುವಳಿಯಲ್ಲಿ ಚಾರಿತ್ರಿಕ ಭಾಗವಹಿಸಿರುವರು, ಎಂದು ಬರೆದಿರುವರು. ಭಾರತದ ಭವ್ಯ ಜನಾಂಗ ನಿರ್ಮಾಪಕರ ಕುರಿತು ಹಿಂದೊಮ್ಮೆ ಭಾಷಣ ಮಾಡುತ್ತಾ ಶ್ರೀಮತಿ ಸರೋಜಿನಿ ನಾಯ್ಡುರವರು, ವಿದ್ಯಾರ್ಥಿಗಳು ವಿಶಾಲವಾದ ಜೀವನ ಸರೋವರದಲ್ಲಿ ಮುಗುಳುಗಿರುವ ಸುಂದರಹಾಸ ಬೀರಿದ ಕಮಲಗಳಂತೆ ಅರಳುತ್ತಿರುವ ಮುಂದಿನ ಬುದ್ಧಿಜೀವಿಗಳು. ಭವ್ಯಭಾರತೀಯರಾಗಿ ಮುಂದಿನ ಸಮಾಜದಲ್ಲಿ ಅವರು ತಮ್ಮ ವಿಚಾರ ಸೌಂದರ್ಯ ಸುಗಂಧ ಬೀರುವ ಭಾವನಾಜೀವಿಗಳಾಗಬೇಕೆಂದೂ ಹೇಳಿಕೊಂಡರು. ನವಯುಗದ ನಸುಕಿನ ಕಾಲದಲ್ಲಿ ದೇಶದ ಅಭ್ಯುದಯಕ್ಕಾಗಿ ಅನವರತ ದುಡಿಯುವುದೇ ಅವರ ಜೀವನ ಕರ್ತವ್ಯವೆಂಬ ಕರೆಯನ್ನು ನೇತಾಜಿ ಸುಭಾಸರು ವಿದ್ಯಾರ್ಥಿ ವೃಂದಕ್ಕೆ ಕೊಟ್ಟಿದ್ದರು. ಮುಂದಿನ ಜನಾಂಗವಾದ ವಿದ್ಯಾರ್ಥಿ ವರ್ಗದ ಮೇಲೆ, ನಾಡಿನ ಅಭಿವೃದ್ಧಿಯ ಆಶೆಯನ್ನು ಮಹಾತ್ಮಾ ಗಾಂಧೀಜಿಯವರಿಟ್ಟಿದ್ದರು. ಅವರಿಂದಲ್ಲದೆ ಇನ್ನಾರಿಂದಲೂ ಭಾರತದಾದ್ಯಂತ ನವಚೇತನ ಉಕ್ಕಿಸಲು ಅಸಾಧ್ಯವೆನ್ನುತ್ತಿದ್ದರು. ಅದುದರಿಂದಲೇ ಹೇಮು ಕಲಾನಿ, ಹಿರೊಕ್, ಶಂಕರಪ್ಪಾ, ಜಾಫರ್ ಮುಂತಾದ ವಿದ್ಯಾರ್ಥಿ ಮುಂದಾಳುಗಳು ದೇಶದ ಸ್ವಾತಂತ್ರ್ಯಸಮರದಲ್ಲಿ ವೀರಸೇನಾನಿಗಳಾದರು. ವೀರಗುಣವರು, ಅಮರ ಆಗಸ್ಟ್ ಕ್ರಾಂತಿಯಲ್ಲಿ ಸರೆಮನೆ ಸೇರಿದರು, ಮಡಿದರು.... ಮಡಿದರು!

ಆದರೆ ಇಂದೇನು? ಇನ್ನೇನು?

ಅಂತಹ ಅನೇಕ ಮುಂದಾಳುಗಳ, ನಮ್ಮ ನಾಡಿನ ನಾಯಕರ ಅಪ್ರತಿಮ, ಅವಿಶ್ರಾಂತ ಸೇವೆಯ ಪ್ರತಿಫಲವಾಗಿ ದೇಶವು ಸ್ವಾತಂತ್ರ್ಯ ಪಡೆದಿದೆ. ಪಡೆದ ಸ್ವಾತಂತ್ರ್ಯ ಕೊಳೆಯಬಾರದು. ನಾಶವಾಗಬಾರದು. ಆ ಸ್ವಾತಂತ್ರ್ಯವನ್ನು ಉಳಿಸಬೇಕು. ಅಷ್ಟು ಮಾತ್ರವಲ್ಲದೆ ಬೆಳೆಸಬೇಕು. ಬೆಳಗಿಸಬೇಕು. ಆದರೆ ಇಂದೇನು ಉತ್ಸಾಹದ ಬದಲು ವಿನೋದ ಬಂದಿದೆ. ಸುಲಭ ಜೀವನ ಅವರ ಆದರ್ಶವಾಗಿದೆ. ಸುಲಭಗಣಿತ, ಸುಲಭ ರಸಾಯನ ಶಾಸ್ತ್ರ ಎಂಬುದು ಅವರ ಧ್ಯೇಯವಾಗಿದೆ. ಸಾಮಾಜಿಕ ಸಮಸ್ಯೆಗಳಿಗೆ ಅವರ ದೃಷ್ಟಿ ಹರಿಯುವುದಿಲ್ಲ. ಮನೋರಂಜನೆಗೆ, ವ್ಯಂಗ ವಿನೋದ, ಕ್ಷಣಿಕ ವಿಲಾಸಗಳಿಗೆ, ಮನಸ್ಸು ಸೋತಿದೆ, ಮಾರುಹೋಗಿದೆ. ಇದು ತೀರಾ ಶೋಚನೀಯ ಸ್ಥಿತಿ. ಎಲ್ಲಿಂದ ಎಲ್ಲಿಗೆ ಬಂದಿದೆ ಪರಿಸ್ಥಿತಿ! ಇಂದು ಮಹಾತ್ಮಾ ಗಾಂಧಿಯ ಜೀವನದ ವಿಷಯಗಳನ್ನು ತಿಳಿದ ವಿದ್ಯಾರ್ಥಿಗಳು ವಿರಳ. ಅವರ ಹೆಸರನ್ನು ಮಾತ್ರ ತಿಳಿದಿದ್ದಾರೆ ಅಷ್ಟೆ. ಆದರೆ ವಿಜಯಾ ಮರ್ಚೆಂಟ್, ಮೆಹಬೂಬ್, ಸೊಹರಾಬ್ ಮೋದಿಯ ಕುರಿತು ಚೆನ್ನಾಗಿ ತಿಳಿದಿದ್ದಾರೆ. ಸುರಯ್ಯಾಳ ಕುರಿತು ಬೇಕು ಬೇಕಾದನ್ನು, ಹಾಡಿದ ಹಾಡುಗಳ ಆಡಿದ ಚಿತ್ರಗಳ, ಮಾಡಿದ ಕಾರ್ಯಗಳ ವಿಷಯಗಳನ್ನೆಲ್ಲಾ ವಿವರ ವಿವರವಾಗಿ ವಿಚಾರಿಸಿ ತಿಳಿದಿದ್ದಾರೆ. ಪಂಡಿತ ನೆಹರುಗಳಿಗಿಂತ, ಪ್ರೇಮನಾಥ್, ನರ್ಗಿಸ್ ಕುರಿತು ಅವರು ಕೂಲಂಕುಷವಾಗಿ ಅರಿತಿದ್ದಾರೆ. ರಾಜೇಂದ್ರ ಪ್ರಸಾದ್, ಡಾ|| ರಾಧಾಕೃಷ್ಣನ್‌ನವರಿಗಿಂತ ರಾಜಕಪೂರ್ ಪೃಥ್ವಿರಾಜ್‌ರವರ ಕುರಿತು, ಬ್ರಾಡ್‌ಮೇನ್‌ರವರ ಕುರಿತು ಅರಿತಿದ್ದಾರೆ. ಉದಶಂಕರ್, ನಟರಾಜ್ ವರಿಯವರಿಗಿಂತ ಉಮ್ರಿಗರ್, ಫ್ಲಿನ್ ಮುಂತಾದವರ ಕುರಿತು ಅವರು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಒಟ್ಟಿನಲ್ಲಿ ಸಾಮಾಜಿಕ ಸಮಸ್ಯೆಯ ಕುರಿತು ವಿಚಾರವಾಗಲೀ ಕಾರ್ಯವಾಗಲೀ ಅವರ ಕೈಗಳಿಗೆ ಅಗದ, ಮನಸ್ಸಿಗೆ ಹೋಗದ ವಿಷಯವಾಗಿದೆ.

'ಲಾರಲಪ್ಪ'— ವ್ಯಂಗ್ಯ ಲಾರಲಪ್ಪ ಲಾವಣಿಗಳು ಬಾಯಿಪಾಠ ಮಾಡಿಕೊಳ್ಳುವ ಪದ್ಯಗಳಾಗಿವೆ! ಕಾಳಿದಾಸ, ಮಿಲ್ಟನ್ ವರ್ಡ್ಸ್‌ವರ್ತ್, ಟೆನಿಸನ್, ಕುಮಾರವ್ಯಾಸ, ಪುಶ್ಕಿನ್, ಪುರಂದರದಾಸ, ಟಾಗೂರ, ಗಾಲಿಬ್, ಇಕ್ಬಾಲರ ಹಾಡುಗಳನ್ನು ಹಾಡುವವರು ಯಾರು? ಅವರ ಹೆಸರನ್ನು ಕೇಳಿದವರೆಷ್ಟು?

ಇಂದು ಓದುವ ಪುಸ್ತಕಗಳೇನು? ಬರೀ ನಾಟಕ ಕಥೆಗಳನ್ನು, ಸಿನೇಮಾ ಕಥೆಗಳನ್ನು? ಪುನಃ ಪುನಃ ಓದುವುದು ಅಂತಹ ಪುಸ್ತಕಗಳನ್ನೇ! ಅದಲ್ಲದೆ ಇವೆಯಲ್ಲಾ ಪತ್ರಿಕೆಗಳು! ರೈಲ್ವೇ ಸ್ಟೇಷನಿನಲ್ಲಿ ಪುಸ್ತಕಾಲಯಗಳಲ್ಲಿ, ಬೀಡಾ ಅಂಗಡಿಗಳಲ್ಲಿ ಅಟ್ಟಿ ಅಟ್ಟಿಯಾಗಿರುವ ಪತ್ರಿಕೆ ದಾರಿ ಪುಸ್ತಕಗಳೇ ಇಂದಿನ ವಿದ್ಯಾರ್ಥಿವರ್ಗದ ಪ್ರೀತಿಯ ಪ್ರಪಂಚವಾಗಿದೆ. ಸಾಲ್ವಾಣೆಯ ಸಿನೇಮಾ ಕತೆಗಳೇ ಸರ್ವಸ್ವ. ವಿಶ್ವಸಾಹಿತಿಗಳ ಕುರಿತು, ಕಾಲೇಜು ವಿದ್ಯಾರ್ಥಿಗಳನ್ನು ಕೇಳಿದರೆ, ಉತ್ತರ ಸಿಗಲಾರದು. ಬಾಲ್ಜಾಕ್, ಹ್ಯೂಗೊ, ಗಯಟೆ, ವಾಲ್ಟರ್ ಸ್ಕಾಟ್, ಜಾರ್ಜ್ ಇಲಿಯಟ್, ಡಿಕನ್ಸ್‌ರವರ ಕಾದಂಬರಿಗಳನ್ನು ಓದಿದವರು ಕಡಿಮೆ. ಸ್ಟೀವನ್‌ಸನ್, ಮಾರ್ಕ್‌ಟ್ವೈನ್, ಟಾಲ್ಸ್ಟೊಯ್, ಥ್ಯಾಕರೆ, ಟಾಲ್‌ಸ್ಟಾಯಿ, ವೆಲ್ಸ್‌ರವರ ಉತ್ತಮ ಕಾದಂಬರಿಗಳನ್ನು ಓದಿದವರೇ ವಿರಳ. ವಿಶ್ವಸಾಹಿತಿಗಳಾದ ಸ್ಟೀನ್‌ಬೆಕ್, ಬ್ರೋಮ್, ಸಿಲೋನ್, ಅಪ್ಟನ್ ಸಿಂಕ್ಲೇರ್, ಲಿನ್‌ಯುಟಾಂಗ್‌ರವರ ಕುರಿತು ತಿಳಿದವರು ಕೇವಲ ಕೆಲವರು. ಎನು ವಿಚಿತ್ರ! ಚಾಸರ್, ಮಿಲ್ಟನ್, ಟೆನಿಸನ್, ಶೆಲ್ಲಿ, ಕಾಳಿದಾಸರ ಪದ್ಯಗಳನ್ನು ಓದುವವರ ಜಾತಿಯೇ ಬೇರೆ. ಇಂದು ಪದ್ಯವನ್ನು ಓದುವುದು ಪರೀಕ್ಷೆಗಾಗಿ ಮಾತ್ರ! ಆಸಕ್ತಿಯಿಂದ ಕಲಿಯುವುದು ನಾಟಕ ಮತ್ತು ಸಿನೇಮಾ ಹಾಡುಗಳನ್ನು ಮಾತ್ರ!!

ಮಾಡಬಹುದಾದ ಮಹತ್ಕಾರ್ಯಗಳು

ವಿದ್ಯಾರ್ಥಿವರ್ಗ ಅನೇಕ ಕಾರ್ಯಗಳನ್ನು ಮಾಡಿದೆ. ಮಾಡಲು ಸಾಧ್ಯವಿದೆ. ಬ್ರಿಟನಿನಲ್ಲಿ ಯುದ್ಧಕಾಲದಲ್ಲಿ ಅವರು ಮಾಡಿದ ಸೇವೆ ಅಪಾರವಾದುದು. ಅಂತೆಯೇ ಜಪಾನಿನ ವಿರುದ್ಧವಾದ ಹೋರಾಟದಲ್ಲಿ ಚೀನೀ ವಿದ್ಯಾರ್ಥಿಗಳು ಮಾಡಿದ ಕಾರ್ಯಗಳೂ ಅತಿ ಆಶ್ಚರ್ಯವಾದವು. ದ್ವಿತೀಯ ಮಹಾಯುದ್ಧದ ಬಳಿಕ ಯುಗೋಸ್ಲಾವಿಯಾದ ಹೈಡ್ರೊ ಎಲೆಕ್ಟ್ರಿಕ್ ಯೋಜನೆಯ ಕಾರ್ಯದಲ್ಲಿ ೬೨ ಸಾವಿರ ಯುವಕರು, ಮುಖ್ಯವಾಗಿ ವಿದ್ಯಾರ್ಥಿಗಳು ತಮ್ಮ ಬೇಸಿಗೆಯ ರಜಾ ದಿನಗಳಲ್ಲಿ ಸಹಾಯಕರಾಗಿ ದುಡಿದರು. ಇಂದು ಇಂಡಿಯದಲ್ಲಿ ಅಂತಹ ಅನೇಕ ಯೋಜನೆಗಳ ಕಾರ್ಯ ಪ್ರಾರಂಭವಾಗಿದೆ. ಹಣವಿದ್ದರೂ ತಾಂತ್ರಿಕ ಸಹಾಯ ಸಲಕರಣೆಯಿದ್ದರೂ, ಉತ್ಸಾಹಿ ಜನರು ಯೋಜನೆಯ ಯಶಸ್ಸಿಗೆ ಅತ್ಯಾವಶ್ಯಕ. ಇಂತಹ ಕಾರ್ಯಗಳ ಬಗ್ಗೆ, ಭಾರತದ ಯುವಜನರಲ್ಲಿ ಉತ್ಸಾಹವಿಲ್ಲ. ಉತ್ತೇಜಿತ ಸ್ಫೂರ್ತಿಯಿಲ್ಲ. ನವಭಾರತವನ್ನು ನವನಾಗರಿಕತೆಯನ್ನು ಹಣದಿಂದ, ಯೋಜನೆಗಳಿಂದ ಮಾತ್ರ ಕಟ್ಟಲಾರದು. ಮುಖ್ಯವಾಗಿ ಬೇಕಾದುದು ಬಂಡವಲ ಮಾತ್ರವಲ್ಲ ಉತ್ಸಾಹ, ನವಸ್ಫೂರ್ತಿ. ನಗರ ನೈರ್ಮಲ್ಯ ನೋಡುವುದು, ನೋಡುವಂತೆ ನಾಡಿನ ಜನರಲ್ಲಿ ನಾಗರಿಕ ಭಾವನೆಯನ್ನುಂಟು ಮಾಡುವುದು ವಿದ್ಯಾರ್ಥಿ ವರ್ಗದ ಕರ್ತವ್ಯವಿದೆ. ಇಲ್ಲಿ ಕಾರ್ಯಾಚರಣೆಯಂತೆಯೇ ಇತರರಿಗೆ ಅವರು ಮಾರ್ಗದರ್ಶಕರಾಗಬೇಕು. ಪ್ರಜಾಪ್ರಭುತ್ವವು ಸುಶಿಕ್ಷಿತ ವಿದ್ಯಾವಂತ ಜನರ ಮೇಲೆ ಹೊಂದಿದೆ. ಜನರು ಸುಸಂಸ್ಕೃತರೂ ವಿದ್ಯಾವಂತರೂ ಆಗುವಂತೆ ಮಾಡಲು ಸರಕಾರವು ಶಾಲೆಗಳನ್ನು ಶಿಕ್ಷಣ ಯೋಜನೆಗಳನ್ನು ಕೈಗೊಳ್ಳಬೇಕಾಗಿದೆ. ಆದರೆ, ವಿದ್ಯೆ ಪಡೆಯದೆ ಪ್ರಾಯ ಹೋದವರಿಗೆ, ಬೇಕಾದ ಸ್ವಲ್ಪ ಅಕ್ಷರಜ್ಞಾನವನ್ನೊದಗಿಸಲು ರಾತ್ರಿ ಶಾಲೆ, ವಯಸ್ಕರ ಶಿಕ್ಷಣ ಶಿಬಿರಗಳಲ್ಲಿ ದುಡಿದು, ತಮ್ಮ ಬಿಡುವಿನ ಸಮಯವನ್ನು ಸಮಾಜ ಸೇವೆಯಲ್ಲಿ ಕಳೆಯುವ ಕಾಲವು ಬಂದಿದೆ. ಸಮಾಜ ಸೇವೆಯು ಆಡಂಬರದ ಆಟವಾಗಬಹುದು. ಆದರೆ ಅದು ಕೆಲವರ ಆಡಂಬರದ ಆಟವಾಗುವುದಾದರೆ, ಅದಕ್ಕೆ ಇಂದಿನ ಯುವಜನಾಂಗವೇ ಕಾರಣ. ತಾವು ಕೆಲಸ ಮಾಡದೆ ಇತರರು ಕೆಲಸ ಮಾಡುವುದಿಲ್ಲವೆಂದು ಟೀಕಿಸುವ ಅಧಿಕಾರ ಯಾರಿಗೂ ಇಲ್ಲ. ಸಮಾಜಸೇವೆ ಒಂದು ಸಾಂಕೇತಿಕ ಕಾರ್ಯವಲ್ಲ. ಅದು ಸಾಕ್ಷಾತ್ ಸೇವೆ. ಅದೊಂದು ಯಥಾರ್ಥ ಯಜ್ಞ. ಕೆಲಸವೇ ಅದರ ಅಂತರಾತ್ಮ; ಅದರ ಚೈತನ್ಯ. ಶಿಕ್ಷಣ ಕೇಂದ್ರಗಳಲ್ಲಿ ದುಡಿಯುವಂತೆಯೇ, ಶಾಲೆಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿಯಿಂದ ಭಾಗವಹಿಸುವಂತೆಯೇ, ಸಮಾಜಕ್ಕೆ ಪ್ರಯೋಜನವಿರುವ ಅನೇಕ ಸಂಸ್ಥೆಗಳ ಕಾರ್ಯಕಲಾಪಗಳಲ್ಲಿಯೂ ಕೆಲಸ ಮಾಡಲು ಅವಕಾಶವಿದೆ. ಮಾರ್ಗಗಳನ್ನು ಮಾಡುವ, ರಸ್ತೆಗಳನ್ನು ದುರಸ್ತಿ ಪಡಿಸುವ ಕಾರ್ಯಗಳಲ್ಲಿ ಇಂದು ವಿದ್ಯಾರ್ಥಿಗಳು ಕೆಲಸಕ್ಕೆ ಕೆಲವು ಕಡೆ ಪ್ರಾರಂಭಿಸಿರುವರು. ಇದು ಸ್ಫೂರ್ತಿಯ ಆಶಾದಾಯಕ ಪ್ರಾರಂಭವೆನ್ನಬಹುದು. ಇಲ್ಲಿ ಮುಂದಿನ ನಿಜವಾದ ಸರ್ವೋದಯದ ನಸುಕಿನ ಪ್ರಾತಃಕಾಲವನ್ನು ಕಾಣಬಹುದು. ನವನಾಡೊಂದನ್ನು ನಿರ್ಮಿಸುತ್ತಿರುವ ಯೆಹೂದ್ಯರ ಇಸ್ರಾಯೆಲಿನಲ್ಲಿ ಹೊಲಗಳಲ್ಲಿ ದುಡಿಯುವ ದುಡಿಮೆಗಾರರಿಗೆ ವಿದ್ಯಾರ್ಥಿದಳಗಳು ಬಿಡುವಿನ ಸಮಯ ಅಕ್ಷರಾಭ್ಯಾಸ ಮಾಡುವರು. ಅಂತೆಯೇ ನಮ್ಮ ದೇಶದಲ್ಲೂ ಬಂದ ಸ್ವಾತಂತ್ರ್ಯ ಮಾತ್ರವಲ್ಲದೆ ಅಜ್ಞಾನದಿಂದಲೂ ಸ್ವಾತಂತ್ರ್ಯ ಪಡೆಯಬೇಕಾಗಿದೆ. ಈ ದಿಶೆಯಲ್ಲಿ, ದೇಶದ ಯುವಜನಾಂಗವು ಬಹಳವಾಗಿ ದುಡಿಯುವ ಆವಶ್ಯಕತೆಯಿದೆ. ದೊಡ್ಡದಾಗಿರುವ ಇಂಡಿಯಾದಂತಹ ದೇಶದಲ್ಲಿ ಈ ಆವಶ್ಯಕತೆ ಮತ್ತೂ ಜಗತ್ಯವಾಗಿದೆ.

ಸಮಾಜದ ಸೇವೆ.

ಮಾನವನು ಏಕಾಂತ ಜೀವಿಯಲ್ಲ. ಆತನು ಒಂಟಿಯಾಗಿ ಜೀವಿಸುವುದಿಲ್ಲ. ಜನಸಮೂಹದೊಂದಿಗೆ ಮಾನವನು ತನ್ನ ಆಶೆ, ಆಕಾಂಕ್ಷೆಗಳನ್ನು ಹೊಂದಿಸಿಕೊಂಡು ಪ್ರಕೃತಿಯ ಶಕ್ತಿಗಳೊಡನೆ ನಿತ್ಯನಿರಂತರವಾದ ಹೋರಾಟ ಮಾಡುತ್ತ ಬಂದಿರುತ್ತಾನೆ. ಸಮಾಜದ ಸಂಪತ್ತು, ಸಂಸ್ಕೃತಿ ಎಲ್ಲವೂ ಎಲ್ಲರಿಗೂ ಸೇರಿದ ಸೊತ್ತುಗಳಾಗಿವೆ. ಅವುಗಳ ಅಭಿವೃದ್ಧಿ ಶ್ರೇಷ್ಠತೆ ಮಾನವನ ಧ್ಯೇಯಗಳಾಗಿವೆ. ಆದುದರಿಂದಲೇ ಅರಿಸ್ಟಾಟಲನು "ಮಾನವನು ಸಮಾಜ ಜೀವಿ" ಎಂದಿರುವನು. ಸಮಾಜದ ಸೇವೆ— ಕೊನೆಯ ದೃಷ್ಟಿಯಲ್ಲಿ ಮಾನವನ ಸೇವೆಯೇ ಆಗಿದೆ. ಸಂಪತ್ತು ಅವನ ಜೀವನಾವಶ್ಯಗಳನ್ನು ಪೂರೈಸುವ ಸಾಧನವಾಗಿದೆ. ಸಂಸ್ಕೃತಿ ಅವನ ಮಾನಸಿಕ ಬೌದ್ಧಿಕ ಆವಶ್ಯಕತೆಗಳನ್ನೂ ಆಶೆಗಳನ್ನೂ ಪರಿಪೂರ್ಣಗೊಳಿಸುವ ರೂಪಿಸುವ ಸಾಧನವಾಗಿದೆ. ಸ್ವಾತಂತ್ರ್ಯವು ಇವುಗಳಂತೆಯೇ ಮಾನವನ ಭೌತಿಕ ಮತ್ತು ಬೌದ್ಧಿಕ ಆವಶ್ಯಕತೆಗಳ ಆವಿಷ್ಕಾರ, ಬೆಳವಣಿಗೆಗೆ ಮೂಲವಾಗಬೇಕಾದುದಾಗಿದೆ. ಸಮಾಜವನ್ನು ಸಂ

ಓದುಗರ ಓಲೆಗಳು.

(ಎಂಟನೇ ಪುಟದಿಂದ)

ಲ್ಲಿಯೂ ಕೂಡ ಪ್ರಕಟಿಸಿರುತ್ತಾರೆ. ಸ್ಪರ್ಧೆಗಾಗಿ ಆರಿಸಿದ ಗದ್ದೆಯನ್ನು ೧೭ ಸಲ ಉತ್ತಿರುತ್ತಾರೆ. ನಾಟಿಗೆ ಮೊದಲು ೧ ಎಕ್ರೆ ಗದ್ದೆಗೆ ೩೦ ಗಾಡಿ ಹಟ್ಟಿ ಗೊಬ್ಬರ, ೨ ಸಾವಿರ ರಾತ್ಲ ಸೊಪ್ಪಿನ ಸೊಪ್ಪು, ೨ ಸಾವಿರ ರಾತ್ಲ ಚಗಟೆ ಸಸಿ ಹಾಕಿ, ನಾಟಿ ನೆಡುವ ದಿವಸ ಆ ಗದ್ದೆಗೆ ಮುಕ್ಕಾಲು ಟನ್ ಬೂದಿ, ೨೪೦ ರಾತ್ಲ ನೆಲಗಡಲೆ ಹಿಂಡಿ, ೩೩೭ ರಾತ್ಲ ಸೂಪರ್ ಫೋಸ್ಫೇಟು ಹಾಕಿ ನೆಟ್ಟಿರುತ್ತಾರೆ. ನಾಟಿ ನೆಟ್ಟ ನಂತರ ಕಳೆ ತೆಗೆದು ಆ ನಂತರ ೩ ಮಣ ಅಮೋನಿಯಮ್ ಸಲ್ಫೇಟನ್ನು ಚೆಲ್ಲಿರುತ್ತಾರೆ. ಇವರ ಬೆಳೆ ಕಟಾವಿನ ದಿನ ಅವರ ಇಲಾಖೆ ಅಧಿಕಾರಿಗಳೂ, ಗ್ರಾಮದ ಶ್ಯಾನುಭೋಗರೂ ಸಹ ಹಾಜರಿದ್ದರಂತೆ. ಇವರ ಲೆಕ್ಕ ಪ್ರಕಾರ ಒಂದು ಎಕರೆಯಲ್ಲಿ ೭,೮೭೦ ರಾತ್ಲ ಬತ್ತ ಬೆಳೆಸಿರುತ್ತಾರೆ. ನೀವು ಒಂದು ಎಕ್ರೆಯಲ್ಲಿ ೧೨,೭೪೦ ಪೌಂಡು ಬೆಳೆಸಿರುತ್ತೀರಿ. ನೀವು ನಿಮ್ಮ ಬೆಳೆಯ ಫಸಲನ್ನು ಕಟಾವು ಮಾಡುತ್ತಿರುವಾಗ ಯಾವ್ಯಾವ ಇಲಾಖೆಯ ಅಧಿಕಾರಿಗಳು ಇದ್ದರು? ನಿಮ್ಮ ಬತ್ತವನ್ನು ಗಾಳಿಯಲ್ಲಿ ತೂರಿಸಿ ಜಳ್ಳು ತೆಗೆದು ಅಳೆದಿರುತ್ತೀರೋ? ಅಥವಾ ಹೆಕ್ಕಡೆ ಸಮೇತ ಅಳೆದಿರುತ್ತೀರೊ!

ಅಯ್ಯಾ ಪೊನ್ನಪ್ಪನವರೇ, ನೀವು ಇವನ್ನೆಲ್ಲಾ ಯಾತಕ್ಕೋಸ್ಕರ ಸ್ಪಷ್ಟವಾಗಿ ಬರೆದು ಪ್ರಕಟಿಸಿರುವುದಿಲ್ಲ. ಕಪ್ಪುಸಂತೆಯಲ್ಲಿ ಬತ್ತಕ್ಕೆ ಗಾಡಿ ಒಂದರ ರೂ ೩೦೦ ಕ್ರಯ ಸಿಕ್ಕಿದರೆ ಅವನ್ನು ಕೊಡಗಿನಲ್ಲಿ ಆರಂಭ ಮಾಡಿದ ಪ್ರತಿಯೊಬ್ಬ ರೈತನೂ ತನ್ನ ಆರಂಭದ ಕರ್ಚಿನ ಲೆಕ್ಕಕ್ಕೆ ಹೋಲಿಸಿ ಬರೆದಂತೆ ತೋರುತ್ತದೆ. ಈ ಲೇಖನದಲ್ಲಿ ನಿಮಗೆ ನಂಬಿಕೆಯಿಲ್ಲದಿದ್ದರೆ ನೀವು ತಿಳಿಸಿದ್ದೇ ಆದರೆ ಸರಕಾರವು ಪ್ರಕಟಿಸಿದ ಪತ್ರಿಕೆಯೊಂದನ್ನು ನಿಮಗೆ ಕಳುಹಿಸಿ ಕೊಡುತ್ತೇನೆ. ಇನ್ನಾದರೂ ಕನಸಿನ ಕರೆಗೆ ತಲೆ ತೂಗಾಡಿಸಿ ರುಜು ಹಾಕಬೇಡಿ.

—'ರಾಜು'

ಕೊಡಗು ಹೀಗಾಗಬಲ್ಲುದೆ?

ಸನ್ ಮೆರಿನೊ ಎಂಬ, ಬಹು ಚಿಕ್ಕದಾದ, ಬರೇ ಹತ್ತು ಸಾವಿರ ಪ್ರಜೆಗಳಿಂದ ಕೂಡಿದ, ಒಂದು ಸ್ವತಂತ್ರ ರಾಷ್ಟ್ರವು ಇಟಲಿಯ ಒಂದು ಬದಿಯಲ್ಲಿದೆ. ಇಲ್ಲಿ ಒಂದು ನೂರು ವರ್ಷಕ್ಕಿಂತಲೂ ಹೆಚ್ಚಿನ ಸಮಯದಿಂದ ಒಂದೂ ಕಳವು ನಡೆದಿರುವುದಿಲ್ಲ.

ಈ ದೇಶದಲ್ಲಿ, ಕೆಲವು ದಿವಸಗಳಿಗೆ ಹಿಂದೆ ಒಂದು ಜವಳಿ ಅಂಗಡಿಯನ್ನು ಮುರಿದು ಜವಳಿ ಕಳವು ಆಗಿದೆ. ದೇಶದಲ್ಲಿಯ ಇಡೀ ಪೋಲೀಸು ಇಲಾಖೆಯೂ ದೇಶದ ಪ್ರತಿಯೊಬ್ಬ ಪ್ರಜೆಯೂ ಈ ಕಳವು ಮಾಡಿದವನನ್ನು ಕಂಡು ಹಿಡಿಯಲು ಪ್ರಯತ್ನಪಡುತಿದ್ದಾರೆ. ಈ ಸೀಮೆಯಲ್ಲಿ ಮನೆಗೆ ಬೀಗ ಹಾಕುವುದು ವಾಡಿಕೆಯಲ್ಲ. ಇದಲ್ಲವೇ ಜಗತ್ತಿನ ಚಿಕ್ಕದಾದ ಸ್ವರ್ಗ! ಇದಲ್ಲವೇ ಸಂಪೂರ್ಣ ಸ್ವಾತಂತ್ರ್ಯದ ಪ್ರಜಾ ಸರಕಾರದ ಮಹತ್ವ!

ಕೊಡಗೂ ಕೂಡ ಇಂತಹದೊಂದು ದೇಶವಾಗಲು ಅಸಾಧ್ಯವೇ? ಇದರ ಸಾಧನೆಗೆ ಪ್ರಜೆಗಳು ಮಂತ್ರಿಗಳ ಮುಖ ನೋಡಬೇಕೇ ಯಾ ಮಂತ್ರಿಗಳು ಪ್ರಜೆಗಳ ಮುಖ ನೋಡಬೇಕೇ? ಖಂಡಿತವಾಗಿಯೂ ಮಂತ್ರಿಗಳು ಪ್ರಜೆಗಳ ಮುಖ ನೋಡಬೇಕಿದೆ. ಯಾತಕ್ಕೆಂದರೆ, ಇಂತಹದೊಂದು ಸ್ಥಿತಿಯು ಪ್ರಜೆಗಳ ಶ್ರಮದಿಂದ ಬರಬೇಕಿದೆ.

'ವಾಚಕ'

Office of the District Supt. of Police
Coorg, Mercara, Dated 10-2-53.

Notice

It is hereby notified f-o general information that tre following vehicles will oe sold in public auction bn Friday the 13th March 'he at 11 A. M. in front of the Office of the District Superintendent of Police, Coorg, Mercara. Successful bidders should pay the bid amount immediately after the sale. The sale is subject to the approval of the Government of Coorg.

One Police Jeep C. G. A. 573 and one Truck C. G. A. 734.

1. Jeep No C. G A. 573 Tourer Type–1943 Model–Standard Willys Jeep–Four Cylinders–16 H. P.

2. One ton Truck No. C. G. A. 734–Dodge 1948 model-Six Cylinders-30 H. P.

M. P. Muthanna.
Dist. Supt. of Police. Coorg

ಕೈಮಗ್ಗ ಬಟ್ಟೆ.

ಮದ್ರಾಸಿನ ಪ್ರಧಾನಿ ಶ್ರೀ ರಾಜಾಜಿಯವರೆಂದಂತೆ ಕೈಮಗ್ಗ ಬಟ್ಟೆಗಳ ಉಪಯೋಗವು ಗುಡಿಕೈಗಾರಿಕೆಗೆ ಪ್ರೋತ್ಸಾಹಕ ಮತ್ತು ವಿಕೇಂದ್ರೀಕರಣಕ್ಕೆ ಸಹಾಯಕ. ದೇಶದ ಉನ್ನತಿಯ ದೃಷ್ಟಿಯಿಂದ ನಾಗರಿಕನು ಈ ಕೈಗಾರಿಕೆಗೆ ಪ್ರೋತ್ಸಾಹವನ್ನೀಯುವುದು ಅಗತ್ಯ. ಸರಕಾರದ ಎಲ್ಲಾ ಇಲಾಖೆಯವರು ಕೈಮಗ್ಗ ವಸ್ತ್ರಗಳನ್ನು ಉಪಯೋಗ ಮಾಡುವುದುತ್ತಮ. ಪ್ರಾಮುಖ್ಯವಾಗಿ ಜೈಲು, ವಿದ್ಯಾ ಮತ್ತು ಆಸ್ಪತ್ರೆಗಳಿಗೆ ಬೇಕಾದ ಪೋಷಾಕುಗಳನ್ನು ಕೈಮಗ್ಗ ಬಟ್ಟೆಗಳಿಂದಲೇ ಮಾಡಬೇಕೆಂದು ಕೋರಿಕೆ.

—ನಾರಾಯಣ.

(ಹಿಂದಿನ ಪುಟದಿಂದ ಮುಂದುವರಿದುದು)

ವನ ಸರ್ವತೋಮುಖವಾದ, ಸರ್ವಾಂಗೀಯ ಬೆಳವಣಿಗೆ ಸಾಧ್ಯ. ಸಮಾಜದ ಚತುರ್ಗಾಲಿನೊಳಗೆ ಮಾತ್ರ ಮಾನವನ ಬೌದ್ಧಿಕ ಮತ್ತು ಭೌತಿಕ ಬೆಳವಣಿಗೆ ಆಗುವುದು. ಆವನ ವ್ಯಕ್ತಿ ವಿಕಾಸವಾಗುವುದು. ದೇಹ ಬೆಳೆದಂತೆ ಬುದ್ಧಿ ಬೆಳೆಯುವುದು... ಅವುಗಳ ಬೆಳವಣಿಗೆಗಾಗಿಯೇ ವ್ಯಕ್ತಿಯೂ ಅಂತೆಯೇ ಸಮಾಜವೂ ಬೆಳೆಯಲು, ಬೆಳವಣಿಗೆಯು ಅವಶ್ಯವಾದ ಅಂಗವಾಗಿ ಸೇವೆಯು ಅಗತ್ಯ. ಸೇವೆಯು ಒಬ್ಬನಿಗಾಗಿ ಅಲ್ಲ. ಒಬ್ಬನು ಒಬ್ಬನಿಗಾಗಿ ಸೇವೆ ಮಾಡುವುದಿಲ್ಲ. ಸೇವೆಯು ಇಡೀ ಸಮಾಜಕ್ಕಾಗಿ ಆಗಿರುತ್ತದೆ. ಸಮಾಜದ ಒಳಗಿರುವ ಜಾತಿ ಮತ ಭೇದಗಳನ್ನು ಮೀರಿ ಸೇವೆಯು ಮಾಡಲ್ಪಡುತ್ತದೆ. ಇಂತಹ ಸಮಾಜ ಸೇವೆಯಿಂದ ಸಮಾಜ ಬೆಳೆಯುವುದು, ಪ್ರಗತಿಯ ಪಥದಲ್ಲಿ ಮುಂದುವರಿಯುವುದು. ಸೇವೆಯನ್ನು ಎಲ್ಲರೂ ಒಂದೇ ರೂಪದಲ್ಲಿ ಮಾಡುವುದಿಲ್ಲ. ಗಾಂಧಿ, ವಿನೋಬಭಾವೆ ಜೀವನವೆಲ್ಲ ರಚನಾತ್ಮಕ ರಾಜಕೀಯ ಕಾರ್ಯಗಳ ಮೂಲಕ ಮಾಡಿದರೆ ರಾಜೇಂದ್ರ ಪ್ರಸಾದ್, ಡಾ. ರಾಧಾಕೃಷ್ಣನ್, ಜವಾಹರಲಾಲ್ ನೆಹರು, ಜಯಪ್ರಕಾಶ್ ನಾರಾಯಣ್, ಎನ್. ಎಂ. ಜೋಷಿ, ರಾಜಕಾರಣದ ರೂಪದಲ್ಲಿ ಮಾಡುತಿದ್ದಾರೆ. ರಾಜಾರಾವ್, ಆರ್. ಕೆ. ನಾರಾಯಣ್, ಇಕ್ಬಾಲ್ ಬರಹಗಳ ಮೂಲಕ ಮಾಡಿದರೆ, ಅದೇ ಸೇವೆಯನ್ನು ವಿದ್ಯಾರ್ಥಿಗಳು ಚಿಕ್ಕಪುಟ್ಟ ಕಾರ್ಯಗಳಿಂದ ಮಾಡಬಲ್ಲರು. ಎಲ್ಲಾ ಸೇವೆಗೂ—ನಿಸ್ವಾರ್ಥ, ನವಚೇತನಯುತವಾದ, ನಿತ್ಯಸ್ಫೂರ್ತಿವೆತ್ತ, ನಿಷ್ಕಾಮ ಸೇವೆ—ಸಮಾಜದ ಸ್ವಾಗತವಿದೆ. ಅದರಲ್ಲಿ ಶ್ರೇಯಸ್ಸಿದೆ, ಶ್ರೇಷ್ಠತೆಯಿದೆ.

'ಪ್ರಭಾತ'

ವಯಸ್ಕರ (ಸಾಮಾಜಿಕ) ಶಿಕ್ಷಣ

ವಿದ್ಯಾಮಂದಿರ.

ಎರಡು ತಿಂಗಳ ಅವಧಿಯಲ್ಲಿ ಅನಕ್ಷರಸ್ಥರು ಅಕ್ಷರಸ್ಥರಾದ ನಂತರ ಅವರಿಗೆ ಯೋಗ್ಯತಾ ಪತ್ರ ಕೊಡಲಾಗುವುದು. ಕಲಿತ ಅಕ್ಷರವನ್ನು ಮರೆಯದಂತೆ ವಯಸ್ಕರ ಶಿಕ್ಷಣ ಶಾಲೆಗಳ ಆಶ್ರಯದಲ್ಲಿ ವಿದ್ಯಾಮಂದಿರಗಳನ್ನು ತೆರೆಯಲಾಗಿದೆ. ಈ ಮಂದಿರಗಳಿಗೆ ಆಗ ತಾನೆ ಅಕ್ಷರಸ್ಥರಾದವರಿಗೆ ಅನುಕೂಲವಾಗುವಂತೆಯೂ ಅವರ ಅಭಿರುಚಿಗೆ ಹಿಡಿಸುವಂತೆಯೂ ಬರೆದಿರುವ ವಯಸ್ಕರ ಶಿಕ್ಷಣ ಮಾಲೆಗಳನ್ನು ಒದಗಿಸಿಕೊಡಲಾಗಿದೆ. ಇವುಗಳು ಸರಳ ಕನ್ನಡದಲ್ಲಿ ಬರೆಯಲ್ಪಟ್ಟಿವೆ. ಅಕ್ಷರಸ್ಥರಾದವರಿಗೆ ಇವುಗಳನ್ನು ಕೊಡಲಾಗುವುದು. ಬಿಡುವ ಸಮಯದಲ್ಲಿ ಅವರು ಓದುವಂತೆಯೂ ವಾರಕ್ಕೊಮ್ಮೆಯಾದರೂ ಅವರು ಒಟ್ಟು ಸೇರುವಂತೆಯೂ ಏರ್ಪಾಡು ಮಾಡಲಾಗಿದೆ. ಈ ಯೋಜನೆಯು ಅವರನ್ನು ಅಕ್ಷರಸ್ಥರನ್ನಾಗಿ ಮಾಡುವುದರ ಜೊತೆಗೆ ಕಲಿತ ವಿದ್ಯೆಯನ್ನು ಮರೆಯದಂತೆಯೂ, ಓದುವ ಅಭ್ಯಾಸವನ್ನು ಅಭಿರುಚಿಯನ್ನು ವಯಸ್ಕರಲ್ಲಿ ಹುಟ್ಟಿಸುವಂತೆಯೂ ಮಾಡುವುದಾಗಿದೆ. ವಿದ್ಯಾ ಮಂದಿರಗಳು ಸುವ್ಯವಸ್ಥಿತವಾಗಿ ನಡೆಯುವಂತೆ ಕಮಿಟಿಯನ್ನು ಮಾಡಲಾಗಿದೆ. ವಯಸ್ಕರ ಶಿಕ್ಷಣ ಶಾಲೆ ನಡೆಸುವ ಅಧ್ಯಾಪಕರು ಅವರ ಮೇಲ್ವಿಚಾರಕರಾಗಿರುತ್ತಾರೆ.

ಸ್ತ್ರೀ ತರಗತಿಗಳು.

ಈ ಸಾಲಿನಲ್ಲಿ ಅನಕ್ಷರಸ್ಥ ಸ್ತ್ರೀಯರಿಗಾಗಿ ನಾಲ್ಕಾರು ಶಾಲೆಗಳನ್ನು ತೆರೆಯುವ ಏರ್ಪಾಡು ಮಾಡಲಾಗಿದೆ. ತಾ. ೧೬ನೇ ಸೋಮವಾರ ಶ್ರೀ ಡಾ. ಎಂ. ಎ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ಸ್ತ್ರೀಯರ ತರಗತಿಯನ್ನು ಹೆಬ್ಬಾಲೆಯಲ್ಲಿ ತೆರೆಯಲಾಯಿತು. ಈ ಸಮಾರಂಭಕ್ಕೆ ಗ್ರಾಮದ ಹಲವು ಮಹಿಳೆಯರೂ, ಶಾಲಾಮುಖ್ಯೋಪಾಧ್ಯಾಯರೂ ಮತ್ತು ಅವರ ವೃಂದವೂ ಹಾಜರಿದ್ದರು. ಶ್ರೀ ಲಕ್ಷ್ಮೀಕಾಂತಯ್ಯನವರು ಶ್ರೀ ಪಿ. ಪಿ. ಕಾರ್ಯಪ್ಪನವರು ಸ್ತ್ರೀ ವಿದ್ಯಾಭ್ಯಾಸದ ಕುರಿತು ಭಾಷಣ ಮಾಡಿದರು. ಅಧ್ಯಕ್ಷರು ವಿಶದವಾಗಿ ಬೋಧಪ್ರದ ಭಾಷಣಮಾಡಿದರು.

—ವಯಸ್ಕರ ಶಿಕ್ಷಣ ಶಾಖೆ.

ಹುಚ್ಚರ ಹಟ್ಟಿ

ನಾನು.

"ಮುಂದಿನ ಜನ್ಮದಿ
ಮಂತ್ರಿಯ ಮಗಳಿಗೆ
ನಿನ್ನನು ಗಂಡನ
ಮಾಡುವೆನು"

ಎಂಬೊಂದೇ ವರ
ವಿಧಿಯನಗಿತ್ತರೆ
ಕೊರಳಿಗೆ ಟೈಯನು
ಬಿಗಿಯುವೆನು.

ಮೊದಲಲಿ ಮಂತ್ರಿಯ
ಮಕ್ಕಳ ಗಂಡನು
ದೊಡ್ಡಧಿಕಾರಿಯು
ಆಗುವೆನು.

ಮಂತ್ರಿಯು ಅಳಿಯನ
ದರ್ಶನ ಕೋರಿ
ನಿಶೆಯಲಿ ಲಕ್ಷ್ಮಿಯು
ಒಲಿಸುವೆನು.

ಮಗಡಿಯ ಮನೆಯಲಿ
ರೇಡಿಯೊ ಹಾಕುತಾ
ನಾಡಿನ ಜನರೊಡ
ಹಾಡುವೆನು.

ಭೂಪಾಲನ ಮನೆಯಲಿ
ಮದುವೆಯದಾದರೆ
ಉಡುಗೊರೆಗಳ ಮಳೆ
ಗರೆಯುವೆನು.

ಹಿಂದೂ ಧರ್ಮ; ಜಾಗತಿಕ ಶಾಂತಿ

ಲೇ:—ಶ್ರೀ. ಜಿ. ಸಿ. ಕುಮಾರಪ್ಪ

ಹಿಂದೂ ಧರ್ಮದ ತಳಹದಿಯ ಮೂಲಕ, ಗಾಂಧೀಜಿಯವರ ಸತ್ಯ ಅಹಿಂಸೆಗಳು ನಮ್ಮನ್ನು ಶಾಂತಿಯ ಕಡೆಗೆ ನಿಃಸಂಶಯವಾಗಿ ಒಯ್ಯಬಲ್ಲವು. ಆದ್ದರಿಂದ ಗಾಂಧೀಜಿಯವರ ದಾರಿಯ ಮಹತ್ವವನ್ನು ತಿಳಿದುಕೊಳ್ಳಬೇಕಾದರೆ ಈ ಪ್ರಾಚೀನ ತಳಹದಿಯ ಜ್ಞಾನವಾಗುವುದು ಅವಶ್ಯವಿದೆ.

ಹಿಂದೂ ಧರ್ಮದಲ್ಲಿ ಸತ್ಯವೇ ದೇವರೆಂದೂ, ಮನುಷ್ಯನ ಜೀವನದ ದಾರಿಯೇ ಧರ್ಮವೆಂದೂ ಹೇಳಲಾಗಿದೆ. ಜ್ಞಾನಿ ಮತ್ತು ಅಜ್ಞಾನಿ ಪ್ರಾಣಿಗಳಿಬ್ಬರಿಗೂ ಧರ್ಮವಿದೆ. ಮನುಷ್ಯನ ಧರ್ಮವೆಂದರೆ ತನ್ನನ್ನು ಶಾಂತಿರೂಪದಲ್ಲಿ ಪ್ರದರ್ಶಿಸುವುದು. ಧರ್ಮವೆಂದರೆ ವಿವಿಧ ಪಂಗಡಗಳು ಮಾಡಿಕೊಂಡ ಪದ್ಧತಿ ಅಥವಾ ಕರ್ತವ್ಯ ಎಂದು ಅರ್ಥ ಮಾಡುವುದು ಸರಿಯಲ್ಲ. ಈ ಪಟ್ಟಿಗಳು ಧರ್ಮದ ಕೆಲವು ಭಾಗವನ್ನು ಮಾತ್ರ ಸೂಚಿಸುತ್ತವೆ. ಹೂವನ್ನು ಒದಗಿಸುವುದು ಗುಲಾಬಿ ಗಿಡದ ಧರ್ಮ. ಸುವಾಸನೆಯನ್ನು ಒದಗಿಸುವುದು ಆ ಹೂವಿನ ಧರ್ಮ. ಮನುಷ್ಯನಿಗೆ ಶಾಂತಿಯು ಧರ್ಮ. ಅಶಾಂತಿಯು ಅಧರ್ಮ!

ಅರ್ವಾಚೀನ ತತ್ವಜ್ಞಾನವು ಮನುಷ್ಯನನ್ನು ಭೌತಿಕ ಪ್ರಾಣಿಯನ್ನಾಗಿ ಮಾಡಿದೆ. ಪದಾರ್ಥ ಉತ್ಪಾದನೆಯು ಅವನ ಧರ್ಮವಾಗಿದೆ. ಇದು ನೂತನ ಗುರಿಯು ಅಧಃಪತನ. ಪದಾರ್ಥ ಹುಟ್ಟಿಸುವುದು ನಿಜವಾಗಿ ನೋಡಿದರೆ ಯಂತ್ರದ ಕೆಲಸವಾಗಿದೆ. ಮನುಷ್ಯನ ಧರ್ಮವು ಅದಕ್ಕಿಂತ ಉಚ್ಚವಾಗಿದೆ. ವಸ್ತುಗಳ ವಿಪುಲತೆಯಲ್ಲಿ ಜೀವನದ ರಹಸ್ಯವಿಲ್ಲ. ಕೇವಲ ಅನ್ನದಿಂದ ಮತ್ತು ಕೃತ್ರಿಮ ರೀತಿಯಿಂದ ಮನುಷ್ಯನ ಅವಶ್ಯಕತೆಗಳಾಗಿ ಪರಿಣಮಿಸಿದ ವಸ್ತುಗಳಿಂದ ಮನುಷ್ಯನು ಬದುಕಲಾರನು. ಮನುಷ್ಯನು ಇಂದು ತನ್ನ ಧರ್ಮಕ್ಕೆ ವಿಮುಖನಾಗಿದ್ದಾನೆ. ಮತ್ತು ಅನಾವಶ್ಯದ ಕಲ್ಪನೆಗಳ ಮೂಲಕ ಮಾನವೀ ಕ್ಷೇತ್ರದಲ್ಲಿ ಅಶಾಂತಿಯನ್ನು ಹುಟ್ಟಿಸಿದ್ದಾನೆ. ಈ ಅಶಾಂತಿಗೆ ಮೂಲವಾದ ಕಲ್ಪನೆಗಳನ್ನು ಕಿತ್ತು ಹಾಕಿದರೆ ಆ ಧರ್ಮವು ತಲೆಎತ್ತುವುದು ಮತ್ತು ಆ ಧರ್ಮದಿಂದ ಮಾನವ ವರ್ಗಕ್ಕೆ ಶಾಂತಿಯು ಲಭಿಸಬಲ್ಲದು.

ಸಬಲರ ಧರ್ಮವು ದುರ್ಬಲರನ್ನು ರಕ್ಷಿಸುವುದಾಗಿದೆ. ಸಂಪನ್ನ ಅಮೇರಿಕೆಯು, ದುರ್ಬಲ ಕೊರಿಯಾದೊಡನೆ ಹೋರಾಡುವುದು ಅಧರ್ಮ. ಇದು ಪಶು ವರ್ಗದ ಧರ್ಮವಾಗಿದೆ. ರಾಷ್ಟ್ರ-ರಾಷ್ಟ್ರಗಳಲ್ಲಿ ಬಡಿದಾಟ ಹೆಚ್ಚಿನ ಮತ್ತು ಭೌತಿಕ ಸಂಪತ್ತಿನಲ್ಲಿ ಮನುಷ್ಯನನ್ನು ಮುಚ್ಚಿದ ಈ ವಿಷ ರೋಗವನ್ನು ನಾವು ಕಂಡು ಹಿಡಿಯುವುದು ಅವಶ್ಯವಿದೆ. ಭೌತಿಕ ಸಂಪತ್ತಿನ ಹುಚ್ಚಿಗೆ ಬಿದ್ದವರು ವಿನಾಶಕಾರೀ ಉಪಾಯಗಳನ್ನೇ ಹುಡುಕುವುದಕ್ಕೆ ಮನಸ್ಸು ಮಾಡುತ್ತಾರೆ. ಅಣುಬಾಂಬಿನ ರಚನೆಯು, ಶಾಂತ ವಿಚಾರಕ್ಕೆ ಅತಿರೇಕದ ಹುಚ್ಚು ಕಾರ್ಯವಾಗಿದೆ. ಹೈಡ್ರೋಜನ್ ಬಾಂಬ್ ಮತ್ತು ಕ್ರಿಮಿಬಾಂಬಿನ ಕಾರ್ಯದ ಬಗ್ಗೆ ಏನನ್ನೂ ಹೇಳುವದೂ ಅಸಾಧ್ಯವಾಗಿದೆ. ಈ ರೀತಿ ಮಾನವನು ತನ್ನ ಧರ್ಮದಿಂದ ಚ್ಯುತನಾಗಿ ಹಿಂಸಾಮಯ ಅರಣ್ಯದಲ್ಲಿ ಅಲೆಯುತಿದ್ದಾನೆ. ಆದ್ದರಿಂದ ಮಾನವನ ಉನ್ನತಿಯಾಗುವ ಮತ್ತು ವ್ಯಕ್ತಿತ್ವದ ಹೆಚ್ಚಿನ ಪ್ರದರ್ಶನವಾಗುವ ದಾರಿಯನ್ನು ಹುಡುಕುವುದು ಅವಶ್ಯವಾಗಿದೆ. ಇದಕ್ಕಾಗಿಯೇ ಗಾಂಧೀಜಿಯವರು ತಮ್ಮ ಜೀವನವನ್ನು ಸತ್ಯ ಅಹಿಂಸೆಗಳ ಶೋಧದಲ್ಲಿ ಸವೆಸಿದರು.

ಇಂದು ಮಾನವನು ಕಷ್ಟಪಡುತ್ತಿರುವುದು ಆತನ ಭೌತಿಕ ದೃಷ್ಟಿಯ ಮೂಲಕವಾಗಿ. ಗುರಿಯನ್ನು ಮರೆತು ನಿರರ್ಥಕವಾದ ವಸ್ತುಗಳಿಗಾಗಿ ನಾವು ಬಡಿದಾಡುತ್ತಿದ್ದೇವೆ.

ಧರ್ಮವು ಶಾಂತಿ ಪ್ರಸ್ತಾಪಕವಾಗಿರುವದರಿಂದ ಅಧರ್ಮದಿಂದ ಅಶಾಂತಿಯು ಹುಟ್ಟಲೇಬೇಕು. ಜಾಗತಿಕ ಬಡಿದಾಟಗಳು ಪರಸ್ಪರ ಅಸಂಬದ್ಧವಾಗಿಲ್ಲ. ವ್ಯಕ್ತಿಗಳ ಸಣ್ಣಪುಟ್ಟ ಕಾರ್ಯಗಳ ಸಾಮೂಹಿಕ ರೂಪಗಳಿಂದಲೇ ಈ ಹೋರಾಟಗಳು. ಯುದ್ಧಕ್ಕಾಗಿ ನಾವು ಮುಂದಾಳುಗಳನ್ನು ಜರಿದರೂ, ಅದರ ಮೂಲವು ವ್ಯಕ್ತಿಗಳ ಚಿಕ್ಕಪುಟ್ಟ ಕಾರ್ಯಗಳಿಗೆ ಹತ್ತುವುದು. ಉದಾಹರಣೆಗಾಗಿ, ಪಟ್ಟಣಗಳಲ್ಲಿ ಹಾಲು ಕೊಳ್ಳುವವರು, ಆ ಆಕಳು ಎಮ್ಮೆಗಳ ಕರುಗಳಿಗೆ ಅಥವಾ ಗೌಳಿಗರ ಮಕ್ಕಳಿಗೆ ಹಾಲು ಸಿಕ್ಕುವುದೇ ಎಂಬುದರ ಕಡೆಗೆ ಲಕ್ಷ್ಯಗೊಡುವುದಿಲ್ಲ. ಅಂದಮೇಲೆ ಈ ಹಾಲು ಹೆಚ್ಚಿನದಾಗಿ ನಮಗೆ ಬರುವುದಿಲ್ಲ. ಆ ಕರುಗಳ ಮತ್ತು ಮಕ್ಕಳ ಬಾಯಿ ಕಟ್ಟಿ ಹಾಕಿ ನಾವು ಕುಡಿಯುತ್ತೇವೆ. ಇಂತಹ ಅಧರ್ಮವು ಒಟ್ಟುಗೂಡಿ, ಜಾಗತಿಕ ಯುದ್ಧವನ್ನು ಹುಟ್ಟಿಸುತ್ತದೆ. ಆದ್ದರಿಂದ ಈ ಅಧರ್ಮ ನಿವಾರಣೆಯ ಉಪಾಯವು ಆಹಾರ ಪದಾರ್ಥಗಳನ್ನು ಸೇವಿಸುವವನ ಕೈಯಲ್ಲಿಯೇ ಇದೆ. ಆ ಉಪಾಯವೆಂದರೆ ಉತ್ಪತ್ತಿಯ ವಿಕೇಂದ್ರೀಕರಣ ಮತ್ತು ಸ್ವಾವಲಂಬನೆ. ಯುದ್ಧದ ಮೂಲವನ್ನು ಕಡಿದು ಹಾಕಲು ಗಾಂಧೀಜಿಯವರು ಈ ಉಪಾಯವನ್ನು ಸೂಚಿಸಿದರು.

ಇಂದು ವಸ್ತುಗಳು, ಒಂದು ಕ್ರಮಬದ್ಧ ರೀತಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಉತ್ಪನ್ನವಾಗಲ್ಪಡುತ್ತಿವೆ. ಇವುಗಳಿಗೆ ಬೇಕಾಗುವ ಮೂಲ ವಸ್ತುಗಳನ್ನು ದೂರದಿಂದ ತರಿಸುತ್ತಾರೆ. ಇದೆಲ್ಲವೂ ಅಧರ್ಮವು. ವಸ್ತುಗಳ ವಿತರಣೆಯಲ್ಲಿಯೂ ಕೂಡ ವಾಸ್ತವಿಕತೆಯಿಲ್ಲ. ಜನತೆಯ ಕೊರತೆಗಳನ್ನು ಲಕ್ಷಿಸದೆ, ಮಾರಾಟಗಾರರ ಅನುಕೂಲತೆಗಳಂತೆ ಅದನ್ನು ತಂದು ತುಂಬುತ್ತಾರೆ. ಇದರಿಂದ ಯುದ್ಧದ ಬೀಜಗಳು ಹುಟ್ಟುತ್ತಿವೆ. ಅಮೇರಿಕಾ-ರಷ್ಯಾಗಳು ಇಂದು ಈ ರೀತಿ ಹೊಡೆದಾಡುತ್ತಿರುವುದು ಈ ಆರ್ಥಿಕ ದೃಷ್ಟಿಗಾಗಿ. ಆದ್ದರಿಂದ ಯುದ್ಧವು ಇಂದು, ಮನುಷ್ಯನ ನಿತ್ಯದ ಮಾತಾಗಿ ಉಳಿದಿದೆ.

ಇದರಿಂದ ಪಾರಾಗುವುದಾದರೆ ಗಾಂಧೀಜಿಯವರು ಹೇಳಿದ ಉತ್ಪತ್ತಿಯ ವಿಕೇಂದ್ರೀಕರಣ ಮತ್ತು ಸ್ವಾವಲಂಬನೆಯ ಮಾರ್ಗವನ್ನು ಹಿಡಿಯುವುದು. ರಷ್ಯಾ ದೇಶವು ಸ್ವಾವಲಂಬನೆ ಮಾರ್ಗವನ್ನು ಅನುಸರಿಸಿದೆ. ಆದರೆ ಉತ್ಪಾದನಾ ಶಕ್ತಿಯನ್ನು ಕೇಂದ್ರೀಕರಿಸಿದೆ. ಈ ಕೇಂದ್ರೀಕರಣವು ಹೋರಾಟದ ಬೀಜವೇ ಆಗಿದೆ. ಅಮೇರಿಕೆಯ ಮಾರ್ಗವು ಮಾತ್ರ ಅಂತರಾಷ್ಟ್ರೀಯ ವಿತುಷ್ಟಿಯನ್ನು ಹುಟ್ಟಿಸುವಂಥದಾಗಿದೆ. ಅದು ಕೇವಲ ಸಾಂಪತ್ತಿಕ ದೃಷ್ಟಿಯಿಂದ ಕಾರ್ಯ ಮಾಡುತ್ತಿದೆ. ಇದಕ್ಕೆ ಅಡ್ಡಿ ತರುವ ಮಾರ್ಗವೆಂದರೆ ಗಾಂಧೀಜಿಯವರ ಅಸಹಕಾರದ ಪ್ರಯೋಗ ಮಾಡುವುದು. ಯಾರೇ ನಮ್ಮ ಮೇಲೆ ಅನ್ಯಾಯ ಮಾಡಲಿ. ಅವರೊಡನೆ ಅಸಹಕಾರ ಮತ್ತು ಸತ್ಯಾಗ್ರಹ ಮಾಡುವುದು.

ಈ ಮಾರ್ಗದಿಂದ ಪ್ರತಿಯೊಬ್ಬ ವ್ಯಕ್ತಿಯು ಕೂಡ ನ್ಯಾಯ ಮತ್ತು ಶಾಂತಿಗಳನ್ನು ದೊರಕಿಸಬಹುದಾಗಿದೆ. ಅವನು ಯಾವದೇ ಬಲಾಢ್ಯ ವ್ಯಕ್ತಿಯ ಬಗ್ಗೆ ಭಯಪಡಬೇಕಾದ ಅವಶ್ಯಕತೆಯಿಲ್ಲ. ಪ್ರತಿಯೊಬ್ಬನು ತನ್ನ ಪಾಲಿನ ಕರ್ತವ್ಯವನ್ನು ಈ ರೀತಿಯಲ್ಲಿ ಮಾಡಿದರೆ ಅದರಿಂದ ಸಾಮೂಹಿಕವಾಗಿ ಜಾಗತಿಕ ಶಾಂತಿಯನ್ನು ನಿರ್ಮಿಸಬಹುದು. ಆದರೆ ಈ ಕರ್ತವ್ಯವನ್ನು ಮಾಡಲು ಪ್ರತಿಯೊಬ್ಬ ಮಾನವನು ಸಿದ್ಧನಿರುವನೇ?

ಈ ದಾರಿಯಲ್ಲಿ ಜಾಗತಿಕ ಶಾಂತಿಯು ಸಿಗಬೇಕಾದರೆ ಎಲ್ಲ ಕಡೆಯ ಜನತೆಯು ಶೀಲ, ಸಂಘಟನೆಗಳ ಬಲದಿಂದ ಒಟ್ಟುಗೂಡಬೇಕು. ಅಂತಹ ಜನತೆಯಿಂದ ಕೂಡಿದ ರಾಷ್ಟ್ರಗಳು ಪರಸ್ಪರ ಸಹಕರಿಸಬೇಕು. ಎಲ್ಲೆಡೆಯ ಮಕ್ಕಳಿಗೆ ಈ ತರಹದ ದೃಷ್ಟಿಯನ್ನು ಕೊಡುವಂತಹ ಶಿಕ್ಷಣವು ದೊರೆಯಬೇಕು.

ಇಂತಹ ಮನೋವೃತ್ತಿಯುಳ್ಳ ಜನತೆಯು ಎಲ್ಲೆಡೆಗೂ ನಿರ್ಮಾಣವಾದರೆ, ಅದರಿಂದ ಕೂಡಿದ ಜಗತ್ತಿನಲ್ಲಿ, ಸಬಲರು ದುರ್ಬಲರನ್ನು ಹಿಂಡುವ ಕಾರ್ಯವು ವಿನಾಶವಾಗದೆ ಇರಲಾರದು. ಮತ್ತು ಅದರ ಪರಿಣಾಮವಾಗಿ, ಶಾಂತಿಯು ನೆಲೆಗೊಳ್ಳುವುದರಲ್ಲಿ ಮತ್ತು ಯುದ್ಧವು ಕಾಣದಾಗುವುದರಲ್ಲಿ ಸಂಶಯವಿಲ್ಲ.

ಜೈ ಹಿಂದ್ ಪತ್ರಿಕೆಯಿಂದ.

ಶ್ರೀ ಪಿ. ರಂಗಯ್ಯನವರು
'ಕೊಡಗು' ಏಜಂಟರು,
ಪೊನ್ನಂಪೇಟೆ.

Specialists in Tailoring! Prompt Service!
FOR English Felt Hats,
Wedding Suits, Ladies Over Coats
AND
Latest Designs in Wollen Suitings
— CALL ON —
25-3 PATTU BROTHERS,
OPP.— Town Hall, MYSORE.

The New Guardian of India Life Insurance Co., Ltd.
— HEAD OFFICE —
Post Box No.—142 Esplonade, MADRAS—1.
Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—
THE CHIEF AGENT.
The New Gaurdian of India Life Insurance Co., Ltd.
for COORG. Virajpet.
12-8 OR
To The Head Office, MADRAS.

Licence No. 60.
Licenced to Post without Prepayment

Reg. No. M. 1550.
"KODAGU" MERCARA (Coorg) ೨೭—೨—೧೯೫೩

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಹೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಲ್ಲು ಮತ್ತು ಕೇಪುಗಳು.
4. 9"×4" ಮತ್ತು 8"×4" ಕಬ್ಬಿಣದ ತೊಲೆಗಳು (Girders).
5. 8'×3'×24' (Gage) ಕಬ್ಬಿಣದ ತಗಡುಗಳು.
6. 1¾" × 5/16" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಕೇಂದ್ರದ ಆದಾಯಗಳಾದ ಅಬಕಾರಿ ಸುಂಕ, ಆದಾಯ ತೆರಿಗೆಗಳಿಂದ ಪ್ರಾಂತೀಯ ಸರಕಾರಗಳಿಗೆ ಗ್ರಾಂಟಿನ ರೂಪದಲ್ಲಿ ರೂ. ೭೬ ಕೋಟಿಯಷ್ಟನ್ನು ಕೊಡಲು ನಿರ್ಧರಿಸಿದೆ. ಈ ಗ್ರಾಂಟಿನ ಪ್ರತಿಯೊಂದು ಪ್ರಾಂತದ ಮಿತಿಯು ಎಷ್ಟಿರಬೇಕೆಂಬುದರ ಕುರಿತು ಸಲಹೆ ನೀಡಲು ರಚಿತವಾದ ಸಮಿತಿಯ ಸೂಚನೆಗಳನ್ನು ಕೇಂದ್ರ ಸರಕಾರವು ಮಾನಿಸಿದೆ. ಹಿಂದೆ, ಆಯಾ ಪ್ರಾಂತದಿಂದ ಕೇಂದ್ರ ಸರಕಾರವು ಎತ್ತುತ್ತಿದ್ದ ಈ ಕರಗಳ ಪ್ರಮಾಣದ ಮೇಲೆ ಈ ಉತ್ಪತ್ತಿಯನ್ನು ಪ್ರಾಂತಗಳಿಗೆ ಹಂಚಲಾಗುತ್ತಿತ್ತು. ಇನ್ನು ಜನ ಸಂಖ್ಯೆಯ ಪ್ರಮಾಣದ ಮೇಲಿನಿಂದ ಹಂಚಲಾಗುವುದು. ಹೊಸ ವಿಧಾನದಿಂದಾಗಿ, ಪ್ರಾಂತಗಳಿಗೆ ದೊರೆಯುವ ಅಂಶವು ಹಿಂದಿನದರಕ್ಕಿಂತ ರೂ. ೨೦ ಕೋಟಿಯಷ್ಟು ಹೆಚ್ಚುವುದು.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್,

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನೀವು ಬಲ್ಲಿರಾ?

ಸರ್ವಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ಸಾಕ್ಷಿ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕೋರ್ಪೋರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕೋರ್ಪೋರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಂಬಲ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 5

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ, ಶನಿವಾರಸಂತೆ, ಸೋಮವಾರಪೇಟೆ.

THE CANARA BANKING CORPORATION LIMITED

ಮುಳ್ಳು ತಂತಿ ದೊರೆಯುತ್ತದೆ.

ನಮ್ಮಲ್ಲಿ ತೋಟಗಾರರಿಗೆ ಬೇಕಾಗುವ ಮುಳ್ಳು ತಂತಿ (Barbed Wire) ಮತ್ತು ಇತರ ವಿಧವಾದ ಕಬ್ಬಿಣದ ಸಾಮಾನುಗಳು ಮತ್ತು ಎತ್ತಿನ ಲಾಳ, ಮೊಳೆಗಳು ಸುಲಭ ಬೆಲೆಗೆ ದೊರೆಯುತ್ತವೆ.

—: ವಿವರಗಳಿಗೆ ಬರೆಯಿರಿ :—

ದಿ ಬ್ರೌನ್ ಹಾರ್ಡ್‌ವೇರ್ ಸ್ಟೋರ್ಸ್,

296—ಅವೆನ್ಯೂ ರೋಡು, ಬೆಂಗಳೂರು—2.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟೆವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಛಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ಸ್ಥಿರಯ (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಸಲ್ಪಡಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಪಿ. ಅಪ್ಪಯ್ಯ. ಪ್ರೆಸಿಡೆಂಟ್ & ಖಜಾಂಚಿ.

ಸೋಮವಾರಪೇಟೆ ನಾಡು ಸಹಕಾರ ಬ್ಯಾಂಕು ಲಿಮಿಟೆಡ್, ಸೋಮವಾರಪೇಟೆ

(ಉ. ಕೊಡಗು) ಸ್ಥಾಪನ 1949

ಅಧಿಕೃತ ಪಾಲು ಬಂಡವಾಳ	ರೂ.	50,000
ವಸೂಲಾದ ಪಾಲು ಬಂಡವಾಳ	ರೂ.	26,000
ಬ್ಯಾಂಕಿನ ಮೂಲ ಧನ	ರೂ.	3,00,000

ಠೇವಣಾತಿಯ ಬಡ್ಡಿ ದರಗಳು

ಚಾಲ್ತಿ ಠೇವಣಾತಿಗಳಿಗೆ	ಶೇಕಡ ರೂ.	0-8-0
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳಿಗೆ	,,	2-0-0
ಸ್ಥಿರಯ ಠೇವಣಾತಿ 1 ವರ್ಷದ ಅವಧಿಗೆ	,,	2-0-0
2 ,, ,,	,,	2-8-0
3 ,, ,,	,,	3-0-0
4 ,, ,,	,,	3-8-0
5 ,, ,,	,,	4-0-0
3000ಕ್ಕೆ ಮೇಲ್ಪಟ್ಟ ಮೊಬಲಗಿಗೆ 5 ವರ್ಷದ ಅವಧಿಗೆ.		5-0-0

ಡಿ. ನಾರಾಯಣಶೆಟ್ಟಿ, ಪ್ರೆಸಿಡೆಂಟ್.

4-3

ಟಿ. ಎಸ್. ಗೋವಿಂದರಾಜು, 'ಕೊಡಗು' ಏಜೆಂಟರು, ವೀರಾಜಪೇಟೆ

ಶ್ರೀ ಕೆ. ಯಂ. ಬೋಗಪ್ಪನವರು, "ಕೊಡಗು" ಏಜೆಂಟರು, ಸೋಮವಾರಪೇಟೆ.

Edited Printed and Published by P. I. BELLIAPPA at 'Kodagu' Press, Mercara for Kodagu Ltd.,

ಕೊಡಗು

ಮರಿ ಹಿಟ್ಲರ್.

KODAGU KANNADA WEEKLY MERCARA

॥ ಜಪಾನಿನಲ್ಲಿ ಬತ್ತದ ವ್ಯವಸಾಯ ॥

ರೈತರಿಗೆ ಸಂಶೋಧನಾಲಯಗಳ ಪ್ರಯೋಗ ಫಲವನ್ನು ಮುಟ್ಟಿಸುವ ತಜ್ಞರ ಪ್ರಯತ್ನ

— ೧ —

ಜಪಾನು ದೇಶದ ಮಾರ್ಗದರ್ಶನವನ್ನು ಅನುಸರಿಸಿ ನಮ್ಮ ದೇಶದಲ್ಲಿ ಭತ್ತದ ವ್ಯವಸಾಯ ಪದ್ಧತಿಯಲ್ಲಿ ಸುಧಾರಣೆಯನ್ನುಂಟುಮಾಡಬೇಕೆಂದು ಈಗ ಕೇಂದ್ರ ಸರಕಾರವು ಪರ್ಯಾಲೋಚಿಸುತ್ತಿದೆ. ಆದುದರಿಂದ ಜಪಾನೀಯರ ಭತ್ತ ವ್ಯವಸಾಯ ಪದ್ಧತಿಯ ಕುರಿತು 'ಇಂಡಿಯನ್ ಫಾರ್ಮಿಂಗ್' ಎಂಬ ಪತ್ರಿಕೆಯಲ್ಲಿ ಶ್ರೀ. ಕೆ. ರಾಮಸ್ವಾಮಿ ಮತ್ತು ನೋತಿಕೆ. ಸಾಕಾನಿ ಎಂಬೀರ್ವರು ಈ ಕುರಿತು ಬರೆದ ಪ್ರಬಂಧ ಲೇಖನವು ಸಂಬಂಧಿಸಿದವರ ಗಮನವನ್ನು ಸೆಳೆದಿರುವುದು ಸ್ವಾಭಾವಿಕವಾಗಿದೆ. ಈ ಲೇಖನದಲ್ಲಿ ಹೇಳಿದಂತೆ ಜಪಾನಿನಲ್ಲಿ ಭತ್ತದ ವ್ಯವಸಾಯವೇ ಪ್ರಮುಖವಾಗಿದೆ. ಒಟ್ಟು ವ್ಯವಸಾಯಕ್ಕೆ ಉಪಯೋಗಿಸುವ ಭೂಮಿಯಲ್ಲಿ ಶೇಕಡ ೫೩ ರಷ್ಟು ಎಂದರೆ ೭೫ ಲಕ್ಷ ಎಕರೆ ಭೂಮಿಯನ್ನು ಭತ್ತ ಬೆಳೆಗೆ ಉಪಯೋಗಿಸುವರು. ಒಟ್ಟು ಅಕ್ಕಿಯ ಉತ್ಪಾದನೆಯು ೧೦೪ ಲಕ್ಷ ಟನ್ನುಗಳು. ಎಂದರೆ ಪ್ರತಿ ಎಕರೆಗೆ ೩೩೫೦ ರಾತಲು.

ಆರ್ಥಿಕ ಕ್ಷೇತ್ರದಲ್ಲಿ ಅಕ್ಕಿಗೆ ಇರುವ ಮಹತ್ವವನ್ನು ಮನಗಂಡು ಜಪಾನೀ ಸರಕಾರವು ಇದರ ಕಡೆಗೆ ಬಹಳ ಗಮನವನ್ನು ಕೊಡುತ್ತಾ ಬಂದಿದೆ. ಕಳೆದ ೬೦ ವರ್ಷಗಳಲ್ಲಿ ವ್ಯವಸಾಯ ಕ್ಷೇತ್ರವು ೩೫% ಹೆಚ್ಚಿಕೊಂಡಿದೆಯಲ್ಲದೆ ಉತ್ಪಾದನಾ ಪ್ರಮಾಣವು ಇದಕ್ಕೂ ಹೆಚ್ಚು ಎಂದರೆ ೭೦% ಹೆಚ್ಚಿಕೊಂಡಿದೆ.

ಪ್ರತಿ ಎಕರೆಗೆ ಸಿಗುವ ಉತ್ಪಾದನೆಯು ಹೆಚ್ಚಿರುವುದರಿಂದಲೇ ಜಪಾನಿಗೆ ತನ್ನ ೮೦೦ ಲಕ್ಷ ಜನರಿಗೆ ೧೫೫೦ ಲಕ್ಷ ಎಕರೆ ಭೂಮಿಯಲ್ಲಿ ಉತ್ಪಾದಿಸುವ ಧಾನ್ಯಗಳಿಂದಲೇ ಹೊಟ್ಟೆ ತುಂಬಿಸಲು ಸಾಧ್ಯವೆನಿಸಿದೆ.

— ೨ —

ಜಪಾನಿನಲ್ಲಿ ವ್ಯವಸಾಯಕ್ಕೆ ಒದಗಿಬರುವ ಭೂಮಿಯು ಸಾಮಾನ್ಯವಾಗಿ ನೀರಾವರಿ ಬಯಲುಗಳು, ಮತ್ತು ನದೀ ದಂಡೆಗಳಾಗಿವೆ. ಸಾಮಾನ್ಯವಾಗಿ ಇಲ್ಲಿಯ ಮಣ್ಣು ತೀರ ನಿಕೃಷ್ಟವಾದುದು. ಬಾಹ್ಯ ಮತ್ತು ಜ್ವಾಲಾಮುಖಿಯ ಪರಿಣಾಮವನ್ನು ಹೊಂದಿದ ಭೂಮಿಯು ಏನೇನೂ ಫಲವತ್ತಾಗಿರುವುದಿಲ್ಲ. ಆದುದರಿಂದ ಭೂಮಿಯ ಫಲವತ್ತತೆಯ ಕಾರಣದಿಂದ ಸಮೃದ್ಧಿಯಾದ ಬೆಳೆಯಾಗುತ್ತಿದೆ ಎನ್ನಲಾಗದು. ಅಧಿಕ ಉತ್ಪಾದನೆಯು ಸಾಧ್ಯವಾಗಲಿಕ್ಕೆ ಇಲ್ಲಿಯ ರೈತರು ವ್ಯವಸಾಯ ಪದ್ಧತಿಯಲ್ಲಿ ಸಂಶೋಧನೆಗಳನ್ನು ನಡೆಸಿ ಅವನ್ನು ಪ್ರತ್ಯಕ್ಷವಾಗಿ ಕಾರ್ಯರೂಪಕ್ಕೆ ತಂದುದೇ ಕಾರಣ.

ಸಂಶೋಧನೆಗಳ ಪ್ರಯೋಜನವನ್ನು ಸಂಪೂರ್ಣ ಹೊಂದುವುದಕ್ಕೆ ಜಪಾನೀಯರೆಲ್ಲರೂ ವಿದ್ಯಾವಂತರಾಗಿರುವುದು ಬಹಳ ಸಹಕಾರವನ್ನು ನೀಡಿದೆ. ಅಕ್ಷರಸ್ಥರ ಪ್ರಮಾಣವು ಬಹಳ ಹೆಚ್ಚಿರುವುದರಿಂದ ಸಂಶೋಧನೆಗಳ ಮಾಹಿತಿಯನ್ನು ಪಡೆಯುವ ಲವಲವಿಕೆಯೂ ಜಾಣ್ಮೆಯೂ ರೈತರಲ್ಲಿ ಕಂಡುಬರುತ್ತದೆ.

ಇಡೀ ದೇಶವನ್ನು ಪ್ರತಿಯೊಂದೂ ೫೦೦ ಚದರ ಮೈಲು ವಿಸ್ತೀರ್ಣವಿರುವ ೪೭ ಕೃಷಿವಲಯಗಳಾಗಿ ವಿಂಗಡಿಸಿರುವರು. ಪ್ರತಿಯೊಂದಕ್ಕೂ ಒಂದು ಕೇಂದ್ರ ಸಂಶೋಧನಾಲಯವಿದೆ, ಮತ್ತು ಇಲ್ಲಿ ಸುಮಾರು ೧೫೦ ತಂತ್ರಜ್ಞರು ಕೆಲಸದಲ್ಲಿರುವರು. ಎಂದರೆ ಪ್ರತಿಯೊಂದು ಹಳ್ಳಿಗೆ ಒಬ್ಬ ತಂತ್ರಜ್ಞನ ಸಹಾಯ ದೊರೆತಂತಾಯಿತು. ಪ್ರತಿ ಎರಡು ಮೂರು ಮೈಲು ಪ್ರದೇಶಕ್ಕೆ ಒಬ್ಬನಂತಿರುವ ಈ ತಂತ್ರಜ್ಞರು ರೈತರಿಗೆ ಸಂಶೋಧನಾಲಯಗಳಲ್ಲಿ ಆದ ಪ್ರಗತಿಯನ್ನು ವಿವರಿಸಿ ಹೇಳಿ, ಹೊಸ ಹೊಸ ಪದ್ಧತಿಯನ್ನು ಪ್ರಯೋಗಕ್ಕೆ ತರಲು ಪ್ರೋತ್ಸಾಹಿಸುತ್ತಾರೆ; ಅಲ್ಲದೆ ಸಮಯ ರೈತರು ತಮ್ಮ ವ್ಯವಸಾಯದಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಪರಿಚಯವನ್ನು ಇವರು ಸಂಶೋಧನಾಲಯಕ್ಕೆ ಮಾಡಿಕೊಡುತ್ತಾರೆ. ಹೀಗೆ ಪರಸ್ಪರ ನಿಕಟ ಸಂಪರ್ಕವನ್ನು ಇಟ್ಟುಕೊಂಡಿರುವ ಈ ತಜ್ಞರು ಒಂದೇ ಕೃಷಿದರ್ಶಿಗಳೆನಿಸುವರು, ಆಧಾರದವರಿಗಾಗಿ ಯೋಗ್ಯ ರೀತಿ ಹೊಂದಿದ ರೈತರು.

— ೩ —

ಇದಲ್ಲದೆ ಇಂಪೀರಿಯಲ್ ವಿಶ್ವವಿದ್ಯಾಲಯಗಳ ವ್ಯವಸಾಯ ಶಾಖೆಯು ಅಲ್ಲಲ್ಲಿ ಶಾಖೆಗಳನ್ನು ತೆರೆದು ವಿಶಿಷ್ಟ ಬೆಳೆಯ ಕುರಿತು ಹಾಗೂ ಸುಧಾರಿತ ಬೀಜಗಳ ಕುರಿತು ಸಂಶೋಧನೆಗಳನ್ನು ನಡೆಸುತ್ತವೆ. ಬೀಜಗಳನ್ನು ಸುಧಾರಿಸಿದ ಬಳಿಕ ಅವುಗಳನ್ನು ರೈತರಿಗೆ ನೀಡುವುದಕ್ಕಾಗಿ ಸಹಕಾರಿ ಸಂಘಗಳು ಇವೆ. ದೇಶದ ತುಂಬಾ ಅನೇಕಾನೇಕ ಸಂಶೋಧನಾಲಯಗಳು ಸ್ಥಾಪಿಸಿದ್ದು, ಇವುಗಳು ವ್ಯಾಪಕವಾದ ಚಟುವಟಿಕೆಯನ್ನು ನಡೆಸುತ್ತವೆ. ಮತ್ತು ಇತ್ತೀಚಿನ ಪ್ರಗತಿಯನ್ನು ರೈತರಿಗೆ ಮನದಟ್ಟು ಮಾಡಿಸುವುದಕ್ಕೆ ಕುಶಲ ತಂತ್ರಜ್ಞರು ಇರುವರು. ರೈತರೊಡನೆ ಈ ರೀತಿ ನೇರವಾದ ಸಂಬಂಧ ಇಟ್ಟುಕೊಂಡಿರುವುದರಿಂದ ಕೃಷಿಗೆ ಉತ್ತಮ ಪ್ರಯೋಜನ ದೊರೆತಿದೆ.

ಕೈಗಾರಿಕೆಯಲ್ಲಿ ಭರದಿಂದ ಉನ್ನತಿಯನ್ನು ಹೊಂದುತ್ತಿದ್ದರೂ ಇನ್ನೂ ಜಪಾನು ಕೃಷಿ ಪ್ರಧಾನವಾದ ದೇಶವೇ ಇದೆ. ೮೫% ಕುಟುಂಬಗಳು ಈಗಲೂ ಕೃಷಿಯನ್ನು ಅವಲಂಬಿಸಿರುವವು. ೫೫ ಲಕ್ಷ ರೈತ ಕುಟುಂಬ ೧೫೦ ಲಕ್ಷ ಎಕರೆ ಭೂಮಿಯನ್ನು ಸಾಗುವಳಿ ಮಾಡುತ್ತಿರುವುದು, ಎಂದರೆ **ಪ್ರತಿಯೊಂದೂ ಕುಟುಂಬಕ್ಕೆ ಎರಡೂವರೆ ಎಕರೆ ಭೂಮಿ ದೊರೆಯುತ್ತದೆ. ಭೂಮಿಯ ಕ್ಷೇತ್ರವು ಇಷ್ಟು ಸಣ್ಣದಿರುವುದರಿಂದ** ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಲಕ್ಷ್ಯಗೊಟ್ಟು ಕೃಷಿಯ ಬೆಳವಣಿಗೆಯನ್ನು ಪರಿಶೀಲಿಸುತ್ತಾನೆ. ನಿಜ ಹೇಳಬೇಕೆಂದರೆ ಕುಟುಂಬವು ತನ್ನ ಹೊಲವನ್ನು ತೋಟದಂತೆಯೇ ಪರಿಗಣಿಸಿ ಪ್ರತಿಯೊಂದು ಸಸಿಯ ಆರೈಕೆಯನ್ನೂ ಮನವಿಟ್ಟು ಮಾಡುತ್ತದೆ. ಜಪಾನು ಉತ್ತರ ಅಕ್ಷಾಂಶದಲ್ಲಿರುವುದರಿಂದ ಭತ್ತದ ವ್ಯವಸಾಯವು ಏಪ್ರಿಲಿನಿಂದ ಅಕ್ಟೋಬರ್ ವರೆಗೆ ನಡೆಯುತ್ತದೆ.

— ೪ —

ಬೆಳೆಗಳು ಕೈಗೆ ಬರುವ ಸರತಿಯ ನೋಟದಿಂದ ಜಪಾನನ್ನು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ತೀರ ದಕ್ಷಿಣದ ಪ್ರದೇಶಗಳಲ್ಲಿ ವರ್ಷಕ್ಕೆ ಒಂದರ ಹಿಂದೆ ಒಂದಾಗಿ ಎರಡು ಭತ್ತದ ಬೆಳೆಯಾಗುತ್ತದೆ. ನಡುವಣ ಜಪಾನಿನಲ್ಲಿ ದಕ್ಷಿಣಾರ್ಧವು ಒಂದು ಭತ್ತದ ಬೆಳೆಯನ್ನೂ ಇನ್ನೊಂದು ಒಣ ಬೆಳೆಯನ್ನೂ ಬೆಳೆಸಲಿಕ್ಕೆ ಅನುಕೂಲವಿದ್ದರೆ ಉತ್ತರಾರ್ಧವು ಕೇವಲ ಭತ್ತದ ಬೆಳೆಯೊಂದನ್ನು ಮಾತ್ರ ಬೆಳೆಯಲು ಯೋಗ್ಯವಾಗಿದೆ. ತೀರ ಉತ್ತರದಲ್ಲಿ ಉಷ್ಣತೆಯು ಕಡಿಮೆ ಇರುವುದರಿಂದ ಭತ್ತವನ್ನು ಬೆಳೆಯುವಂತಿಲ್ಲ.

ಶೇಕಡ ೬೦ ಭತ್ತದ ಗದ್ದೆಗಳನ್ನು ಚಳಿಗಾಲದಲ್ಲಿ ಹಾಗೆಯೇ ಬಿಡುತ್ತಾರೆ. ಒಂದರ ಹಿಂದೊಂದರಂತೆ ಎರಡು ಭತ್ತದ ಬೆಳೆಯನ್ನು ಪಡೆಯಲು ಅನುಕೂಲವಿರುವಲ್ಲಿ ರೈತರು ಬೇಗ ಕೊಯ್ಲಿಗೆ ಬರುವ ಬೀಜವನ್ನು ಮೊದಲಿಗೂ ತಡವಾಗಿ ಫಲಬರುವುದನ್ನು ಅನಂತರವೂ ಉಪಯೋಗಿಸುವರು. ಮಾರ್ಚ ತಿಂಗಳ ಅಖೈರಿಗೆ ಬೀಜವನ್ನು ನೇಜಿಯನ್ನು ನಾಟಿ ಬಿತ್ತುವರು. ಸುಮಾರು ತಿಂಗಳ ಬಳಿಕ ನೇಜಿಯನ್ನು ಕಿತ್ತು ತಂದು ಗದ್ದೆಗಳಲ್ಲಿ ನೆಡುವರು. ಆಗೋಸ್ತು ತಿಂಗಳಿಗೆ ಫಸಲು ಕೊಯ್ಲಿಗೆ ಸಿದ್ಧವಾಗುತ್ತದೆ. ಎರಡನೇ ಬೆಳೆಗೆ ನೇಜಿಯನ್ನು ಜುಲೈ ತಿಂಗಳಲ್ಲಿಯೇ ಬಿತ್ತಿರುವರು. ಮೊದಲನೆ ಬೆಳೆಯನ್ನು ಕೊಯ್ದೊಡನೆಯೇ ನೇಜಿಯನ್ನು ಅಗೆಯಿಂದ ಕಿತ್ತು ತಂದು ನೆಡುವರು. ಎರಡನೆ ಬೆಳೆಯು ಪ್ರಥಮ ಬೆಳೆಯ ೬೦-೭೦% ಉತ್ಪಾದನೆಯನ್ನು ಕೊಡುತ್ತದೆ. ಬೀಜಗಳನ್ನು ನೇಜಿಯ ಕಣಗಳಲ್ಲಿ ಬಿತ್ತಿ, ಚೆನ್ನಾಗಿ ನೀರುಣಿಸಿ, ಸಾಕಿದ ನಂತರ ಕಿತ್ತು ಕ್ಷೇತ್ರಯೋಗ್ಯವಾದಲ್ಲಿ ನೆಡುವ ಪದ್ಧತಿ ಶೇಕಡ ೯೯ ಬಳಕೆಯಲ್ಲಿದೆ. ಗದ್ದೆಯಲ್ಲಿಯೇ ಬೀಜ ಬಿತ್ತುವುದು ಬಹಳ ಕಡಿಮೆ.

— ೫ —

ಸುಧಾರಿತ ರೀತಿಯ ಬೀಜಗಳನ್ನು ಒದಗಿಸುವುದಕ್ಕೆ ಜಪಾನಿನಲ್ಲಿ ಬಹಳ ಮಹತ್ವವನ್ನು ಕೊಡುತ್ತಿರುವರು. **ಈಗೀಗ ವಿಶಿಷ್ಟ ವಾತಾವರಣ, ಹವಾಮಾನ, ಮತ್ತು ಪರಿಸ್ಥಿತಿಗಳಿಗೆ ಭತ್ತದ ಸಸಿಯು ನೀಡುವ ಪ್ರತಿಕ್ರಿಯೆಯ ಕುರಿತಾಗಿಯೂ** ಅಧಿಕ ಮಹತ್ವ ನೀಡುತ್ತಿರುವರು. ೧೮೯೩ರಷ್ಟು ಹಿಂದಿನಿಂದಲೇ ಜಪಾನಿನಲ್ಲಿ ಬೀಜವನ್ನು ಸುಧಾರಿಸುವ ಕ್ರಮ ಆರಂಭವಾಗಿತ್ತು. ಕೃಷಿ ಹಾಗೂ ಅರಣ್ಯ ಇಲಾಖೆಯು ಕೃಷಿಯಲ್ಲಿ ಪ್ರಯೋಗ ನಡೆಸುವ ಕೇಂದ್ರವನ್ನು ಟೋಕಿಯೋದಲ್ಲಿ ಆ ವರ್ಷ ಸ್ಥಾಪಿಸಿ, ಆರು ಶಾಖಾ ಕೇಂದ್ರಗಳನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ತೆರೆಯಿತು. ದೇಶದ ವಿವಿಧ ಮೂಲೆಗಳಿಂದ ಸುಮಾರು ನಾಲ್ಕು ಸಾವಿರ ಭತ್ತದ ಜಾತಿಗಳನ್ನು ಸಂಗ್ರಹಿಸಿ, ಈ ಕೇಂದ್ರದವರು ಪ್ರತಿಯೊಂದರ ಗುಣ ವಿಶೇಷಗಳನ್ನೂ ನೀಡುವ ಫಸಲಿನ ಪ್ರಮಾಣವನ್ನೂ ಸಾವಧಾನದಿಂದ ಪರೀಕ್ಷಿಸಿದರು. ಎಷ್ಟೋ ಉತ್ತಮ ಜಾತಿಯ ಬೀಜಗಳ ಗುಣವು ಬಹಿರಂಗಗೊಂಡು, ಅವುಗಳ ಬಳಕೆ ಹೆಚ್ಚಿಕೊಂಡಿತು. ೧೯೦೪ರ ಸುಮಾರಿಗೆ ೫೫೦ ಹೊಸ ನಮೂನೆಯ ಬೀಜಗಳನ್ನು ಜಪಾನು ಸಿದ್ಧಗೊಳಿಸಿ, ಹಳ್ಳಿ ಹಳ್ಳಿಯಲ್ಲೂ ಪ್ರಚಾರಮಾಡಿತು. ಮಿಶ್ರ ಪದ್ಧತಿಯಿಂದ ಹೊಸ ಬೀಜವನ್ನು ಸಿದ್ಧಗೊಳಿಸುವ ಪ್ರಯತ್ನ ೧೯೦೪ರಿಂದ ಜಾರಿಯಾಯಿತು. ಒಂದೇ ಸಸಿಯಲ್ಲಿ ಉತ್ತಮ ಬೆಳೆ ಕೊಡುವ ಗುಣ, ರೋಗಗಳನ್ನು ಪ್ರತಿಭಟಿಸಿ ಬದುಕಬಲ್ಲ ಶಕ್ತಿ, ಮುಂತಾದವುಗಳನ್ನು ಉಂಟುಮಾಡಲು ಮಿಶ್ರಪದ್ಧತಿ ನೆರವಾಗಿದೆ. ಈ ಪದ್ಧತಿಯಿಂದ ೧೯೩೫ರಷ್ಟು ಹೊತ್ತಿಗಾಗಲೇ ೫೦ ಹೊಸ ನಮೂನೆಯ ಬೀಜಗಳನ್ನು ಸಿದ್ಧಗೊಳಿಸಿದರು. ೧೯೪೭ರಿಂದ ಮಿಶ್ರ ಪದ್ಧತಿಯನ್ನೂ ಸುಧಾರಿತ ಬೀಜಗಳನ್ನು ಸಿದ್ಧಗೊಳಿಸುವ ಕ್ರಮವು ಸುಧಾರಣೆಗೊಂಡಿದೆ. ಇಡೀ ದೇಶಗಳಲ್ಲಿ ಭೂಗುಣ, ವಾತಾವರಣ, ಹವಾಮಾನ ಮುಂತಾದ ಪರಿಸ್ಥಿತಿಗೆ ಹೊಂದಿಕೊಂಡು ವಿಂಗಡಿಸಿ, ಅಲ್ಲಲ್ಲಿಯ ಪ್ರಾದೇಶಿಕ ಸ್ಥಿತಿಗತಿಯನ್ನು ಅನುಸರಿಸಿ, ಬೀಜಗಳನ್ನು ಸುಧಾರಿಸುವುದಕ್ಕೆ ಈಗ ಗಮನ ಕೊಡುತ್ತಿದ್ದಾರೆ.

— ೬ —

ಹೊಸ ಬೀಜಗಳ ಉಪಯುಕ್ತತೆಯನ್ನು ಪ್ರಯೋಗಗಳಿಂದ ಸಿದ್ಧಗೊಳಿಸಿದ ಬಳಿಕವೇ ರೈತರಲ್ಲಿ ಹಂಚುವರು. ಸುಧಾರಿತ ಬೀಜಗಳು ಈಗ ಎಷ್ಟು ಜನಪ್ರಿಯತೆಯನ್ನು ಗಳಿಸಿವೆಯೆಂದರೆ ೬೫% ವ್ಯವಸಾಯಕ್ಕೆ ಈ ಬೀಜಗಳನ್ನು ಉಪಯೋಗಿಸುತ್ತಿರುವರು. ಸಹಕಾರಿ ಸಂಘಗಳ ಮೂಲಕ ತಮಗೆ ಬೇಕಾಗುವ ಜಾತಿಯ ಬೀಜಗಳನ್ನು ಒದಗಿಸಿಕೊಳ್ಳಲಿಕ್ಕೆ ಜಪಾನೀ ರೈತರು ಸಮರ್ಥರಾಗಿರುವರು. ಬೀಜಗಳು ಗೋಟೆಯಾದ ಮೇಲೆ ಸಸಿಯಾಗುವಾಗ ಜಂತುಗಳಿಂದ ಬಾಧೆಯಾಗದಂತೆ ರಾಸಾಯನಿಕ ದ್ರವ್ಯಗಳಿಂದ ಅವುಗಳನ್ನು ಸಿದ್ಧಗೊಳಿಸುವುದು ವಾಡಿಕೆ. ನೇಜಿಯನ್ನು ಕಣದ ಬಹಳ ಭಾಗವೂ ಕಳೆಯಿಂದ ಸಿದ್ಧಗೊಳಿಸುವರು. ಪ್ರತಿಯೊಂದು ಸಸಿಯ ಆರೈಕೆಯನ್ನು ನೋಡುವುದರಲ್ಲಿ ಜಪಾನೀ ರೈತರು ಹಿಂದುಳಿಯುವುದಿಲ್ಲ. **ಎತ್ತರವಾಗಿ ಸಿದ್ಧಗೊಳಿಸಿದ ಸುಮಾರು ನಾಲ್ಕಡಿ ಅಗಲದ ನೇಜಿಯ ಕಣಗಳಲ್ಲಿ ಬೀಜಗಳನ್ನು ಬಿತ್ತಿ, ಚೆನ್ನಾಗಿ ಸಸಿಗಳ ಲಾಲನೆ ಪಾಲನೆಯನ್ನು ಮಾಡುವರು. ನೇಜಿಯ ಕಣದ**

ಕೊಡಗು ಸರಕಾರಿ ಕಾಲೇಜಿನ ವಾರ್ಷಿಕೋತ್ಸವ

ತಾರೀಕು ೨೭ರಲ್ಲಿ ಕೊಡಗು ಸರಕಾರಿ ಕಾಲೇಜಿನ ವಾರ್ಷಿಕೋತ್ಸವವು ಕೊಡಗಿನ ಚೀಫ್ ಕಮಿಷನರಾದ ದಯಾಸಿಂಗ್ ಬೇಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಲೇಜಿಗೆ ಶುಭಾಶಯವನ್ನು ಬಯಸಿ ಕೇಂದ್ರದ ಉಪಮಂತ್ರಿ ಬಿ. ಎಸ್. ದಾತಾರ್, ಹಿಂದಿನ ಚೀಫ್ ಕಮಿಷನರಾಗಿದ್ದ ಮೊಪಲಿಷೂರ್, ಹೈಕಮಿಷನರಾಗಿದ್ದ ಪರಾಂಜಪೆ ಮೊದಲಾದವರಿಂದ ಸಂದೇಶಗಳು ಬಂದಿದ್ದವು.

ಕಾಲೇಜಿನ ಪ್ರಿನ್ಸಿಪಲರಾದ ಶ್ರೀ ಕೆ. ಪಿ. ಅಚ್ಯುತನ್‌ಪಿಳ್ಳೆಯವರು ಕಾಲೇಜು ವರದಿಯನ್ನು ಓದುತ್ತಾ ಕಾಲೇಜು ಈ ವರೆಗೆ ಹೊರಡಿಸಿದ ಉತ್ತಮ ಪರೀಕ್ಷಾ ಫಲಿತಾಂಶ, ಆಟೋಟಗಳಲ್ಲಿ ವಿಶ್ವವಿದ್ಯಾಲಯದ ಹಾಕಿ ಕಪ್ಪನ್ನು ಗೆದ್ದು ಪಡೆದ ಕೀರ್ತಿ ಮೊದಲಾದುವನ್ನು ಹೇಳಿದರು. ಈ ಕಾಲೇಜನ್ನು ಆದರ್ಶ ಸಂಸ್ಥೆಯಾಗಿ ಮಾಡಲು ತಾವು ಕೈಕೊಂಡ ಹಲವು ವಿಚಾರಗಳನ್ನು ವಿವರಿಸುತ್ತಾ ಸಮಾಜ ಸೇವಾ ಸಂಸ್ಥೆಯ ಸ್ಥಾಪನೆಯಾಗಿ ಅದು ಮಾಡುತ್ತಿರುವ ಕೆಲಸವನ್ನೂ ಲಲಿತಾ ಕಲಾ ಸಂಘದ ಕಾರ್ಯಗಳನ್ನೂ ಹೇಳಿದರು.

ಭಾರತ ನೌಕಾದಳದ ಮುಖ್ಯಸ್ಥರಾಗಿದ್ದ ಎಡ್ಮಿರಲ್ ಸ್ಮೈಥಿ, ಜನರಲ್ ಕಾರ್ಯಪ್ಪ ಹಾಟ್ಟ್ರಾ, ದಾತಾರ್, ಕೃಷ್ಣಪ್ಪ ಮೊದಲಾದವರು ಕಾಲೇಜನ್ನು ಸಂದರ್ಶಿಸಿ ವಿದ್ಯಾರ್ಥಿಗಳಿಗೆ ಕೊಟ್ಟ ಬುದ್ಧಿವಾದವನ್ನೂ ಕಾಲೇಜನ್ನು ಕುರಿತು ಅವರ ಪ್ರಸಂಶೆಯನ್ನೂ ನೆನಪಿಗೆ ತಂದರು.

ಕಾಲೇಜು ಕಟ್ಟಡದ ಕೆಲಸವು ಮುಗಿಯುತ್ತಾ ಬಂದಿರುವದೆಂದೂ ಮುಂದಿನ ಕಾಲೇಜು ವರ್ಷದಿಂದ ಅಂದರೆ ಜುಲೈಯಿಂದ ಕಾಲೇಜನ್ನು ಹೊಸ ಕಟ್ಟಡಕ್ಕೆ ವರ್ಗಾಯಿಸಲಾಗುವದೆಂದೂ, ಬಿ. ಎಸ್‌ಸಿ ತರಗತಿಗಳನ್ನೂ ತೆರೆಯಲಾಗುವದೆಂದೂ ಹೇಳಿದರು. ಕಾಲೇಜಿನ ನಿವಾಸ ಗೃಹದಲ್ಲಿ ೫೦ ವಿದ್ಯಾರ್ಥಿಗಳಿರುವರೆಂದೂ ಮಾಸಿಕ ಊಟದ ಖರ್ಚು ರೂ. ೩೩|— ಮತ್ತು ಬಾಡಿಗೆ ರೂ. ೩|— ಹೀಗೆ ರೂ. ೩೬|—ರೊಳಗೆ ಖರ್ಚಾಗುವದೆಂದೂ ಹೇಳಿದರು.

ನಂತರ ವಿದ್ಯಾಮಂತ್ರಿ ಶ್ರೀ ಕೆ. ಮಲ್ಲಪ್ಪನವರು ಭಾಷಣ ಮಾಡುತ್ತಾ ವಿದ್ಯಾರ್ಥಿಗಳು ತಮ್ಮ ನೀತಿಯನ್ನು ಕಾಪಾಡಿಕೊಳ್ಳಬೇಕೆಂದರು. ನೀತಿ ಇಲ್ಲದ ಜನರು ಎಷ್ಟೇ ಸಂಪತ್ತು, ವಿದ್ಯಾವಂತರೆನಿಸಿದರೂ ಅಂಥಾವರು ಯೋಗ್ಯ ಜನಾಂಗವನ್ನು ಕಟ್ಟಲಾರರೆಂದು ಅವರು ಹೇಳಿದರು. ಜಪಾನು, ಬ್ರಿಟನುಗಳು ಕಳೆದ ಯುದ್ಧದಲ್ಲಿ ಅಪಾರ ನಷ್ಟಕ್ಕೊಳಗಾದರೂ ಕೂಡ ಧೈರ್ಯಗುಂದದೆ ಜಗತ್ತಿನ ಮಹಾರಾಷ್ಟ್ರಗಳ ಸಾಲಿನಲ್ಲಿರುವುದು ಅಲ್ಲಿಯ ಜನತೆಯ ನೀತಿ ನಡತೆಯ ಬಲದಿಂದಾಗಿದೆ. ಆದ್ದರಿಂದ ಈ ಕಾಲೇಜಿನ ಪ್ರತಿಯೊಬ್ಬ ವಿದ್ಯಾರ್ಥಿಯು ಒಳ್ಳೆಯ ಶೀಲವುಳ್ಳವನಾಗಬೇಕು. ಕಾಲೇಜಿನ ಮುಖ್ಯ ಗುರಿ ಹಾಗೂ ಮಾರ್ಗಸೂಚಕವಾಗಿ "ಶೀಲಂ ಸರ್ವಸ್ಯ ಭೂಷಣಂ" ಎಂಬ ವಾಕ್ಯವನ್ನಿಟ್ಟುಕೊಂಡಿರುವ ಈ ಕಾಲೇಜಿನ ವಿದ್ಯಾರ್ಥಿಗಳು ಆ ವಾಕ್ಯಕ್ಕೆ ಅನುಸಾರವಾಗಿ ನಡೆದು ಕಾಲೇಜಿನ ಕೀರ್ತಿಯನ್ನು ಬೆಳೆಸುವರೆಂದು ಆಶಿಸಿದರು.

ಕೊಡಗಿನ ಶಾಸನ ಸಭೆಯ ಅಧ್ಯಕ್ಷರಾದ ಶ್ರೀ ಬಿ. ಎಸ್. ಕುಶಾಲಪ್ಪನವರು ಕಾಲೇಜಿನ ಹಿತವನ್ನು ಬಯಸುತ್ತಾ ಹೀಗೆ ಹೇಳಿದರು. "ವಿದ್ಯಾರ್ಥಿಗಳು ಒಳದಾರಿಯಿಂದ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಈಗ ಪರೀಕ್ಷೆ ಹತ್ತಿರ ಬಂದಿರುವುದರಿಂದ ಅನೇಕರು ನಕಲು ತೆಗೆಯಲು ಬೇರಾವ ಏರ್ಪಾಡುಗಳಲ್ಲಿ ಮಗ್ನರಾಗಿರಬಹುದು. ಆದರೆ ಈ ರೀತಿಯ ವಿದ್ಯಾಭ್ಯಾಸವು ಯಾರನ್ನೂ ಕೈಹಿಡಿದು ಮುನ್ನಡೆಸದು. ವಿದ್ಯಾರ್ಥಿಗಳು ಹಿರಿಯರಿಗೆ ಗೌರವ ಕೊಡಲು ಕಲಿಯಬೇಕು. ಹಾಗಾದರೆ ಮಾತ್ರ ಅವರು ಗೌರವ ಸಂಪಾದಿಸುವರು. ಅನೇಕ ವಿದ್ಯಾರ್ಥಿಗಳು ಹಿರಿಯರನ್ನು ಉಪೇಕ್ಷೆಯಿಂದ ಕಾಣುತ್ತಾರೆ. ಇದು ಕೊಡಗಿನಲ್ಲಿ ಮಾತ್ರವಲ್ಲ; ಇಡೀ ಹಿಂದೂಸ್ಥಾನದಲ್ಲೇ ವಿದ್ಯಾರ್ಥಿ ವರ್ಗದಲ್ಲಿ ಹಬ್ಬಿರುವ ಅಹಿತ ವರ್ತನೆಯಾಗಿದೆ ಎಂದು ಹೇಳಿ ವಿದ್ಯಾರ್ಥಿ ವರ್ಗದ ಅಹಿತ ವರ್ತನೆಯ ಬಗ್ಗೆ ಶ್ರೀ ಕೆ ಎಂ. ಮುನ್ಷಿಯವರು ಹೇಳಿದ ಮಾತುಗಳನ್ನು ಉದ್ಧರಿಸಿದರು. ಮುಂದುವರಿಯುತ್ತಾ "ಈಗ ವಿದ್ಯಾರ್ಥಿಗಳೆಲ್ಲರೂ ಸಾಧಾರಣವಾಗಿ ಕಮ್ಯೂನಿಸ್ಟರಾಗಿದ್ದಾರೆ. ಇದು ನನ್ನ ಅನುಭವಕ್ಕೆ ಬಂದಿದೆ. ಮೊನ್ನೆ ನಡೆದ "ಮಾಕ್ ಪಾರ್ಲಿಮೆಂಟ್" ನಲ್ಲಿ ಸರಕಾರಿ ಪಕ್ಷವನ್ನು ಸೋಲಿಸಲು ಎಲ್ಲರೂ ಟೊಂಕ ಕಟ್ಟಿದ್ದುದ್ದನ್ನು ನನಗೆ ಕಂಡು ಬಂತು. ಕಮ್ಯೂನಿಸಂ ಪರಿಹಾರವಲ್ಲ. ರಷ್ಯಾದಲ್ಲಿ ಸರಕಾರದ ವಿರೋಧಾಭಿಪ್ರಾಯ ವ್ಯಕ್ತಮಾಡುವ ಅವಕಾಶವಿಲ್ಲ. ಹಿಂದೂಸ್ತಾನ ಹಾಗಲ್ಲ. ರಷ್ಯಾದಲ್ಲಿ "ಬ್ಲಿಟ್ಜ್" ಕಿಡಿ ಮೊದಲಾದಂಥಾ ಪತ್ರಿಕೆಗಳ ಮಾತಿರಲಿ. ಸಂಪಾದಕರು ಕೂಡ ಉಳಿಯಲಾರರು. ಯುವಕರು ಯಾವಾಗಲೂ ಸಾಹಸದ ಕಾರ್ಯ ಮಾಡಲು ಯತ್ನಿಸುತ್ತಾರೆ. ಬಿಸಿರಕ್ತದ ಅವರಿಗೆ ಅತಿರೇಕದ ವರ್ತನೆ ಒಪ್ಪುತ್ತದೆ. ಆದ್ದರಿಂದ ಅವರಿಗೆ "ಕಮ್ಯೂನಿಜಂ" ಒಗ್ಗುತ್ತದೆ. ಅವರೆ ಪರಿಶೀಲಿಸಬೇಕು. ವಿಚಾರ ಮಾಡಬೇಕು. ಆಳವಾದ ಅಭ್ಯಾಸ ಮಾಡಿ ಸಮಯ ಬಂದಾಗ ತಮ್ಮ ನಿರ್ಧಾರದಂತೆ ವರ್ತಿಸಬೇಕು" ಎಂದು ಹೇಳಿದರು.

ಕಾಲೇಜ್ ಯೂನಿಯನ್ ಸೆಕ್ರೆಟರಿ ಶ್ರೀ ಬಿ. ಎಂ. ನಂಜಪ್ಪನವರು ಉತ್ತರಿಸುತ್ತಾ ಕಾಲೇಜಿನ ಅನುರೂಪ ಪರಂಪರೆಗೆ ಕಳಂಕ ತರದಂತೆ ವಿದ್ಯಾರ್ಥಿಗಳು ವರ್ತಿಸುವರೆಂದರು.

ಶ್ರೀ ಬೇಡಿಯವರು ಪಾರಿತೋಷಕಗಳನ್ನು, ಆಟಕ್ಕೆ ಸಂಬಂಧಿಸಿದ ಸ್ಪರ್ಧೆಗಳಲ್ಲೂ ಜಯಶೀಲರಾದವರಿಗೆ ಬಹುಮಾನಗಳನ್ನು ಕೊಟ್ಟರು. ಕಾಲೇಜ್ ಕೂಟದ ಸಹ ಕಾರ್ಯದರ್ಶಿಗಳಾದ ಸಿ. ವಿ. ಬಿ. ಕೆ. ಶಿಶಾರ ಇವರು ಅತಿಥಿಗಳಿಗೆ ವಂದನೆಗಳನ್ನರ್ಪಿಸಿದರು. ನಂತರ ವಿನೋದಾವಳಿಗಳ ಪ್ರದರ್ಶನವಿತ್ತು. ಇಂಗ್ಲೀಷ್, ಕನ್ನಡ ಮತ್ತು ಹಿಂದಿ ನಾಟಕಗಳು ಅಭಿನಯಿಸಲ್ಪಟ್ಟವು. ಎಲ್ಲಾ ಅಭಿನಯಗಳೂ ಕಾಲೇಜಿನ ಕೀರ್ತಿಗೆ ತಕ್ಕುದಾಗಿದ್ದವು. ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರು ಅಭಿನಯದಲ್ಲಿ ಉತ್ತಮರೆನಿಸಿದವರಿಗೆ ಬಹುಮಾನಗಳನ್ನು ಕೊಟ್ಟರು. ಸಮಾರಂಭಕ್ಕೆ ಡಾ॥ ಕಾರ್ಯಪ್ಪನವರು ದಯ ಮಾಡಿಸಿದ್ದರು.

ನ್ನು ಸಸ್ಯಜನ್ಯ ಮತ್ತು ಧಾತುಜನ್ಯ ಗೊಬ್ಬರಗಳಿಂದ ಸಮೃದ್ಧವಾಗಿಡುವುದರಿಂದ ಸಸಿಯು ಚೆನ್ನಾಗಿ ಪುಷ್ಟವಾಗಿ ಬೆಳೆಯುತ್ತದೆ. ಕಳೆಯನ್ನು ಕೀಳುವ ಕೆಲಸವೂ ತುಳ ಹಿಡಿದರೆ ಅವನ್ನು ಕೈಯಿಂದ ತೆಗೆಯುವ ಕಾರ್ಯವೂ, ಸ್ಪ್ರೇ ಮುಖಾಂತರ ಕೀಟದ ಹಾವಳಿಯನ್ನು ತಡೆಯುವ ಕ್ರಮವೂ ರೈತನಿಂದ ನೆರವೇರುತ್ತದೆ. ಈ ಮಣ್ಣಿಗೆ ಸ್ವಲ್ಪವೂ ಉದಾಸೀನತೆಯನ್ನು ರೈತರು ತೋರಿಸುವುದಿಲ್ಲ. ಸಸಿಗಳಿಗೆ ಚೆನ್ನಾಗಿ ನೀರುಣಿಸುವ ಕೆಲಸ ಕೂಡ ನಡೆಯುತ್ತದೆ.

ಜಪಾನಿನಲ್ಲಿ ಹಿಡುವಳಿಯು ಬಹಳ ಕಿರಿದಾಗಿರುವುದರಿಂದ ಯಂತ್ರಗಳು ಉಪಯೋಗಿಸುವುದಿಲ್ಲವೆಂದರೂ ಸಲ್ಲುವುದು. ಪರಿಶ್ರಮಿಯಾದ ಜಪಾನೀ ಕೃಷಿಕ ತನ್ನ ಕುಟುಂಬದವರನ್ನು ಕೂಡಿಕೊಂಡು ತಂತ್ರಜ್ಞರು ವಿವರಿಸಿದ ಮೇರೆಗೆ ಕೃಷಿ ಪದ್ಧತಿಯನ್ನು ಜಾಗರೂಕತೆಯಿಂದ ಅನುಸರಿಸುವನು.

(ಸಶೇಷ)

ಪಾಕಿಸ್ಥಾನದ ಆಡಳಿತ ಹೊಲಸೆದ್ದು ಹೋಗಿದೆ.

"ಪಾಕಿಸ್ಥಾನ ಇನ್ನಾದರೂ ಭಾರತದ ಸ್ನೇಹ ಗಳಿಸಬೇಕು. ಸ್ನೇಹದ ದೃಷ್ಟಿಯಿಂದಲೇ ಇದು ಅಗತ್ಯ" ಎಂಬುದಾಗಿ ಪಾಕಿಸ್ಥಾನದಲ್ಲಿ ವಿರುದ್ಧ ಪಕ್ಷದ ನಾಯಕರಾದ ಮಿ. ಹೆಚ್. ಎಸ್. ಸುಹ್ರವರ್ದಿಯವರು ಪಾಕಿಸ್ಥಾನ ಸರಕಾರವನ್ನು ಒತ್ತಾಯ ಮಾಡಿದ್ದಾರೆ.

ಈ ರೀತಿ ಸುಹ್ರವರ್ದಿಯವರು ಮನ ಬಿಚ್ಚಿ ಮಾತನಾಡಿದ್ದು ಇದು ಪ್ರಥಮ ಬಾರಿ. ಪತ್ರಿಕಾ ಸಮ್ಮೇಳನವೊಂದನ್ನು ಕರೆದು ಭಾರತ—ಪಾಕಿಸ್ಥಾನ್ ಮೈತ್ರಿಯ ತುರ್ತಿನ ಬಗ್ಗೆ ಅವರು ಒತ್ತಿ ಹೇಳಿದರು.

'ಪಾಕಿಸ್ಥಾನದ ಈಗಿನ ಆಡಳಿತಗಾರರು ಪ್ರತಿಯೊಂದು ಕ್ಷೇತ್ರದಲ್ಲೂ ಅಪಯಶಸ್ವಿಗಳಾಗಿದ್ದಾರೆ. ಇಲ್ಲಿನ ಆಡಳಿತ ಹೊಲಸೆದ್ದು ಹೋಗಿದೆ. ಪಾಕಿಸ್ಥಾನಕ್ಕೂ ಭಾರತಕ್ಕೂ ಇರುವ ವಿವಾದಗಳನ್ನು ಉತ್ಪ್ರೇಕ್ಷಿಸಿ ಜನರ ಮನಸ್ಸಿನಲ್ಲಿ ಭಯೋತ್ಪಾದಕ ಹುಟ್ಟಿಸಿ ಸರಕಾರಕ್ಕೆ ಬೆಂಬಲ ದೊರಕಿಸಿಕೊಳ್ಳುವ ಹಳೆಯ ಕುತಂತ್ರವೇ ಮುಂದುವರಿಯುತ್ತಿದೆ' ಎಂಬುದಾಗಿ ಸುಹ್ರವರ್ದಿ ನುಡಿದರು.

'ಸೆಣಬಿನ ವ್ಯಾಪಾರವನ್ನೇ ಹಾಳುಮಾಡಿದ್ದಾರೆ. ಪಾಕಿಸ್ಥಾನ ಸರಕಾರದವರು ಭಾರತದ ಮೇಲೆ ಬೇಕೆಂತಲೇ ವಿಶೇಷ ತೆರಿಗೆ ಹಾಕಿ ಈ ವ್ಯಾಪಾರವನ್ನು ಮೂಲೆಗೆ ತಂದಿದ್ದಾರೆ. ಹೀಗಾಗಿ ಭಾರತ ತನ್ನದೇ ಸೆಣಬು ಬೆಳೆದುಕೊಂಡು ಸ್ವಾವಲಂಬಿಯಾಗಲು ಪ್ರಾರಂಭಿಸಿದೆ' ಎಂದೂ ಅವರು ನುಡಿದರು.

ಆಹಾರದ ವಿಷಯದಲ್ಲಿ ಹೇಳುವುದಾದರೆ ಪಾಕಿಸ್ಥಾನದ ಕ್ಷಾಮದ ದವಡೆಯಲ್ಲಿ ಸಿಕ್ಕಿದೆಯೆಂದೂ, ಸ್ವಂತಿಕೆ ಬೀಜದ ಧಾನ್ಯವನ್ನೂ ಕಾಲುವೆ ನೀರನ್ನೂ ಹಂಚುವಾಗ ಪಕ್ಷಪಾತ ಮತ್ತು ತಾರತಮ್ಯ ತೋರಿಸಲಾಗಿದೆಯೆಂದೂ, ಇದರಲ್ಲಿ ರಾಜಕೀಯ ಪಿತೂರಿ ಕೂಡಾ ನಡೆದಾಗಿದೆ ಎಂದೂ ಅವರು ನುಡಿದರು.

ಡ್ಯಾನಿಷ್ ಸ್ತ್ರೀಗೆ ಗಾಂಧೀಜಿ ಬರೆದ ಪತ್ರ

ಭಾರತೀಯ ಸರ್ಕಾರವೊಬ್ಬರ ಡ್ಯಾನಿಷ್ ಸ್ತ್ರೀಗೆ ಮಹಾತ್ಮಾ ಗಾಂಧೀಜಿಯವರು ಬರೆದಿದ್ದ ೨೦೦ ಪತ್ರಗಳ ಸಂಗ್ರಹವೊಂದನ್ನು ಕೋಪನ್ ಹೇಗನ್‌ನಲ್ಲಿರುವ ಡ್ಯಾನಿಷ್ ರಾಯಲ್ ಲೈಬ್ರರಿಗೆ ಕೊಡಲಾಗಿದೆ.

ಗಾಂಧೀಜಿಯವರ ಬರಹಗಳ ಅತಿ ಭಾರಿ ಪ್ರಮಾಣದ ಖಾಸಗಿ ಸಂಗ್ರಹ ಇದೆಂದು ಹೇಳಲಾಗಿದೆ. ಎಲ್ಲ ಪತ್ರಗಳೂ "ನನ್ನ ಪ್ರಿಯ ಮಗು" ಎಂದು ಶುರುವಾಗಿದ್ದು, ಕೊನೆಯಲ್ಲಿ "ಬಾಪು" ಎಂದು ಸಹಿ ಮಾಡಲ್ಪಟ್ಟಿವೆ.

ಈ ಡ್ಯಾನಿಷ್ ಮಹಿಳೆಯ ಹೆಸರು ಶ್ರೀಮತಿ ಎಸ್ತರ್ ಮೆನನ್. ಆಕೆ ೧೯೧೭ರಲ್ಲಿ ಭಾರತದಲ್ಲಿ ಮಿಷನರಿ ಕೆಲಸದ ಮೇಲಿದ್ದಾಗ ಗಾಂಧೀಜಿಯವರನ್ನು ಸಂಧಿಸಿದ್ದಳು. ಆ ಮೇಲೆ ಆಕೆ ಭಾರತೀಯ ಸ್ವಾತಂತ್ರ್ಯ ಸಾಧನೆಗಾಗಿ ಪ್ರತಿಜ್ಞಾಬದ್ಧಳಾಗಿದ್ದಳು.

ಆತ ಮಲಗಿದ್ದ ಹಾಸಿಗೆ ಯಾರೋ ಕದ್ದರು

ಚಿಲಿ ದೇಶದ ಸ್ಯಾಂಟಿಯಾಗೋ ಎಂಬಲ್ಲಿ ಡಾನ್ ಸೋಲಿಯೋ ಟಾಪಿಯೋ ಗಾಢ ನಿದ್ರೆಯಲ್ಲಿದ್ದ....ಆತ ಎಚ್ಚೆತ್ತು ನೋಡಿದಾಗ ಕಳ್ಳರು ತಾನು ಮಲಗಿದ್ದ ಹಾಸಿಗೆಯನ್ನೇ ಅಪಹರಿಸಿಕೊಂಡು ಹೋಗಿರುವುದು ಕಂಡು ಬಂದಿತು.

ಕಳ್ಳರು ತನ್ನನ್ನು ತನ್ನ ಮಲಗುವ ಕೊಠಡಿಯ ನೆಲದ ಮೇಲೆ ಮಲಗಿಸಿಬಿಟ್ಟು ಹೋಗಿದ್ದಾರೆಂದು ಟಾಪಿಯೋ ಪೋಲೀಸರಿಗೆ ದೂರು ಕೊಟ್ಟ.

ನಗುಮಲ್ಲಿಗೆ

"ಕ್ಷಮಿಸಿ, ಸ್ವಾಮಿ, ತಾವು ಇಲ್ಲಿ ಎಲ್ಲಿಯಾದರೂ ಪೋಲೀಸರನ್ನು ಕಾಣುವ ಸಂದರ್ಭ ಒದಗಿದೆಯೆ?"

"I am sorry, ಪೋಲೀಸರ ಕುರುಹು ಇಲ್ಲಿ ಎಲ್ಲಿಯೂ ಕಾಣಬೇ ಸಿಗಲಿಲ್ಲವಲ್ಲ!"

"ಹಾಗಾದರೆ ಒಳ್ಳೆದಾಯಿತು, ಬೇಗನೆ ನಿಮ್ಮ ರಿಸ್ಟ್‌ವಾಚ್, ಪರ್ಸ್‌ಗಳನ್ನು ಕೊಡಿ. ಬೇಗ ಚುರುಕು ಮಾಡಿ!"

• • •

ಉಪಾಧ್ಯಾಯ—(ಸರೋಜ ಜ್ಞಾನ ಪಾಠದಲ್ಲಿ) ನಿನ್ನ ಈ ಪ್ರಾಯದಲ್ಲಿ ಪಂಡಿತ ನೆಹರೂ ಅವರು ಕೇಂಬ್ರಿಡ್ಜ್‌ನಲ್ಲಿ ಓದುತ್ತಿದ್ದ ತಮ್ಮ ವಿದ್ಯಾಭ್ಯಾಸವನ್ನು ಕೊನೆಗೊಳಿಸಿ, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿರಬೇಕು. ನಿನಗೆ ಇನ್ನೂ ಎಸ್. ಎಸ್. ಎಲ್. ಸಿ. ಪಾಸ್ ಮಾಡಲಿಕ್ಕಾಗಲಿಲ್ಲ? ಎನ್ನ ತಮ್ಮ? ನಾಚಿಕೆಯಾಗುವುದಿಲ್ಲವೇನೊ?

ವಿದ್ಯಾರ್ಥಿ—ನಿಮ್ಮ ಈ ಪ್ರಾಯದಲ್ಲಿ ಅವರು ಎರಡು ಬಾರಿ ಸ್ವತಂತ್ರ ಭಾರತದ ಮುಖ್ಯ ಪ್ರಧಾನಿಯಾದುದನ್ನೂ ಆರನೇ ಬಾರಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುವದನ್ನೂ ನೀವೇತಕ್ಕೆ ಜ್ಞಾಪಿಸಬಾರದು ಸಾರ್?

• • •

ಉಪಾಧ್ಯಾಯ— "ಎರಡು ಸರ್ವನಾಮಗಳನ್ನು ಹೆಸರಿಸು."

ವಿದ್ಯಾರ್ಥಿ— "ಯಾರು? ನನ್ನ?"

* * *

ಈಕೆ— "ನೀನು ಈ ದಿನ ಬಹಳ ಸಂತೋಷದಿಂದಿರುವಂತೆ ಕಾಣುತ್ತೆ?"

ಆಕೆ— "ಆಹುದಹುದು, ನಿಜವನ್ನೇ ಹೇಳುವುದಾದರೆ, ನಮ್ಮವರು ನಿನ್ನೆ ರಾತ್ರಿ ಮಂಚದ ಮೇಲಿನಿಂದ ಕೆಳಕ್ಕೆ ಬಿದ್ದು ಕಾಲು ಮುರಿದು ಕೊಂಡಿದ್ದಾರೆ. ಹಾಗಾಗಿ ಒಂದು ತಿಂಗಳು ವಾಸಿಯಾಗುವ ತನಕ ಪ್ಪಾಸ್ಪತ್ರೆಯಲ್ಲಿ ಇರಬೇಕೆಂದು ನಿಶ್ಚೈಸಿದ್ದೇನೆ."

• • •

ಆಫೀಸರ ಪತ್ನಿ— "ಇದು ಕೇಶವರ್ಧಿನಿ ಸುಗಂಧ ಪೂರಿತ ತೈಲ, ಪ್ರಿಯರೆ?"

ಆಫೀಸರು— "ಅಹ! ನಿನಗೆ ಬಹಳ ಸೊಗಸಾಗಿದೆ ನನ್ನ ರಾಣಿ"

ಆಫೀಸರ ಪತ್ನಿ— "ಅಹುದು, ಅದಕ್ಕಾಗಿಯೇ ನೀವು ಇದನ್ನು ನಿಮ್ಮ ಆಫೀಸಿನ 'ಟೈಪಿಸ್ಟ್' ತರುಣಿಗೆ ಕೊಡುವುದೊಳ್ಳೆಯದೆಂದು ನಿಮಗಾಗಿ ತರಿಸಿದ್ದೇನೆ. ಅವಳ ಆ ಹಾಳು ತಲೆಗೂದಲು ನಿಮ್ಮ ಕೋಟಿನ ಕಾಲರ್‌ಗೆಲ್ಲಾ ಅಂಟಿಕೊಂಡಿರುತ್ತದೆ.

• • •

ಪ್ರೇಯಸಿ— 'ತಮ್ಮ ಚುಂಬನಾನುಗ್ರಹಕ್ಕೆ ಪಾತ್ರರಾದವರಲ್ಲಿ ನಿಜವಾಗಿಯೂ ಇಷ್ಟರತನಕ ನಾನೊಬ್ಬಳೇ ಅಲ್ಲವೆ?

ಪ್ರಣಯಿ— 'ನಿಜವಾಗಿಯೂ, ಆದರೆ ಅತ್ಯಂತ ಸುಂದರಿಯರ ಪೈಕಿ.

—ಎಸ್. ಬಿ. ಸಂಜಪ್ಪ.

• • •

ಚಿಕ್ಕ ಮಗುವೊಂದು ತನ್ನ ಬಟ್ಟೆಗಾಗಿ ಪೆಟ್ಟಿಗೆಯನ್ನು ಶೋಧಿಸುತ್ತಿದ್ದುದು ಆಶ್ಚರ್ಯದಿಂದ 'ಅಯ್ಯೋ ತಾತಾ, ತಾತಾ' ಎಂದು ಕೂಗಿತು.

ಹತ್ತಿರದಲ್ಲಿದ್ದ ತಾಯಿಯು 'ಏಕೆ ಹಾಗೆ ಕೂಗುತಿಯೋ?' ಎಂದು ಕೇಳಿದಳು.

'ಅಮ್ಮಾ, ತಾತನು ತನ್ನ ಕನ್ನಡಕ ತೆಗೆದುಕೊಳ್ಳದೆ ಸ್ವರ್ಗಕ್ಕೆ ಹೋಗಿದ್ದಾನೆ!'

• • •

ದೇವರು ಸರ್ವಾಂತರ್ಯಾಮಿ ಎಂಬುದರ ವಿಚಾರ ಭಾಷಣ ಮಾಡುತ್ತಾ ಬೋಧಕರೊಬ್ಬರು ಹೇಳಿದರು. 'ಪ್ರತಿ ಹುಲ್ಲು ಕಡಿಯಲ್ಲೂ ದೇವರ ಅಂಶವಿದೆ. ಅಪಾರವಾದ ಸಂದೇಶವಿದೆ.'

ಮಾರಣೆ ದಿನ ಈ ಬೋಧಕರು ತಮ್ಮ ಮನೆಯ ಮುಂದಿನ ಮೈದಾನದಲ್ಲಿ ಬೆಳೆದ ಹುಲ್ಲನ್ನು ಕತ್ತರಿಸುತ್ತಿದ್ದರು. ಬೋಧಕರ ಭಾಷಣವನ್ನು ಕೇಳಿದ ಒಬ್ಬರು ಕೇಳಿದರು. 'ದೇವರ ಸಂದೇಶ ತುಂಬಿದ ಹುಲ್ಲನ್ನು ಕತ್ತರಿಸಿ ಗಿಡ್ಡ ಮಾಡಲೇಕೆ?'

* * *

ಕಿವುಡುತನಕ್ಕೆ ಡಾಕ್ಟರಿಂದ ಚಿಕಿತ್ಸೆ ಪಡೆದವರೊಬ್ಬರು ಕೇಳಿದರು, 'ಡಾಕ್ಟರರೇ, ಚಾರ್ಜೆಷ್ಟು?'

'ಇಪ್ಪತ್ತು ರೂಪಾಯಿ' ಡಾಕ್ಟರರೆಂದರು.

'ಎಪ್ಪತ್ತು ರೂಪಾಯಿ?'

'ಅಲ್ಲ, ನೂರಿಪ್ಪತ್ತು ರೂಪಾಯಿ!' ಡಾಕ್ಟರರು ಗಟ್ಟಿಯಾಗಿ ಹೇಳಿದರು.

* * *

ಯುವಕನೊಬ್ಬನು ಯುವತಿಯೊಬ್ಬಳೊಡನೆ ಎರಡು ವರ್ಷಗಳಿಂದ ಗೆಳೆತನ ಬೆಳೆಸಿದ್ದರೂ ಆಕೆಯನ್ನು ಮದುವೆಯಾಗುವ ಅಭಿಪ್ರಾಯವನ್ನು ಸೂಚಿಸಿರಲಿಲ್ಲ.

ಒಂದು ದಿನ ಆತನು ಹೇಳಿದನು. 'ನಾನು ಒಂದು ವಿಚಿತ್ರ ಸ್ವಪ್ನ ಕಂಡೆ. ಅದರಲ್ಲಿ ನಾನು ನಿನ್ನನ್ನು ಮದುವೆಯಾಗುವದಾಗಿ ಹೇಳಿದಂತೆ ಭಾಸವಾಯಿತು. ಈ ಸ್ವಪ್ನದ ಅರ್ಥವೇನು?'

'ನೀನು ಎಚ್ಚರವಿರುವಾಗ ಇರುವದಕ್ಕಿಂಥಲೂ ನೀನು ನಿದ್ರಿಸಿದಾಗ ಹೆಚ್ಚು ಬುದ್ಧಿ ನಿನಗಿರುವದೆಂದರ್ಥ' ಹುಡುಗಿ ಅಂದಳು.

ಧರ್ಮ ರಹಸ್ಯ

—ಸ್ವಾಮಿ ನಾರಾಯಣಾನಂದ—

(೧) ಚಿರಂತನ ಸತ್ಯವೇ ಜೀವನದ ಜೀವಾಳ. ಸತ್ಯದಿಂದ ಹುಟ್ಟಿ, ಸತ್ಯದಲ್ಲಿ ಜೀವಿಸಿ, ಸತ್ಯದಲ್ಲಿ ಐಕ್ಯವಾಗುವ ಜಗತ್ತಿದು. ಆದ್ದರಿಂದ ಸತ್ಯವನಾಶ್ರಯಿಸು.

(೨) ಗತಕಾಲದ ಸತ್ಕಾರ್ಯಗಳನ್ನು ಮಾತ್ರ ಜ್ಞಾಪಿಸಿಕೊ. ಪಾಪ, ತಾಪಗಳನ್ನು ಪುನರಪಿ ಆಲೋಚಿಸದಿರು. ಸತ್ ಚಿಂತನೆಯು ಕತ್ತಲೆಯಲ್ಲಿ ಬೆಳಕಿನಂತೆ.

(೩) ನಿನ್ನ ನೈತಿಕ ಉನ್ನತಿಗೆ ಸಹಾಯಕವಾಗದ ಚರ್ಚೆಯಲ್ಲಿ ತಲೆ ಕೆಡಿಸಬೇಡ. ಅಯೋಗ್ಯ ಚರ್ಚೆಯಿಂದ ಗುರಿ ತಪ್ಪುವದು. ಮನವು ನಿರ್ಬಲಗೊಳ್ಳುವದು.

(೪) ನಿನ್ನನ್ನು ನೀನು ನಿಯಂತ್ರಿಸಿಕೊಳ್ಳುವಿಯಾದರೆ ಇತರರ ನಿಯಂತ್ರಣದಿಂದ ನೀನು ಬಿಡುಗಡೆಗೊಂಡಂತೆ. ತನ್ನ ಮನಸಿನ ಮಾಲಿಕನಾದವನು ಯಾರಿಗೂ ಶಿರಬಾಗ ಬೇಕಿಲ್ಲ.

(೫) ಸತ್ಯದ ಪಥದ ಪ್ರತಿ ಹೆಜ್ಜೆಯಲ್ಲಿಯೂ ನೂರಾರು ಜನರ ಜೀವನ ಅರ್ಪಿತವಾಗಿದೆ. ಆದ್ದರಿಂದ ಸತ್ಯವು ಒಂದು ದಿನದ ಪ್ರಯತ್ನದಿಂದ ಕರಗತವಾಗದು. ಅದು ಇಡೀ ಜೀವನದ ತಪಸ್ಸಿನಿಂದಲೇ ಸಾಧ್ಯ.

(೬) ಯಾವಾಗಲೂ ಒಳ್ಳೇದನ್ನು ಮಾಡಲು ಯತ್ನಿಸು. ಜನತೆಯನ್ನು ಮೆಚ್ಚಿಸುವುದು ಅಸಾಧ್ಯ. ನಿನ್ನ ಹೃದಯಕ್ಕೆ ಮೆಚ್ಚಿದುದನ್ನು ಮಾಡು. ನೀನು ನಿನ್ನನ್ನು ವಂಚಿಸದಿದ್ದರೆ ಜಗತ್ತು ನಿನ್ನನ್ನು ವಂಚಿಸಲಾರದು.

(೭) ಆಸೆ, ಸಿಟ್ಟು, ಕಾಮುಕತೆ ಇವು ನರಕದ ಹೆಬ್ಬಾಗಿಲುಗಳು. ಈ ದಾರಿಯಲ್ಲಿ ಕಾಲು ಜಾರಿ ಬೀಳುವವರೇ ಹೆಚ್ಚು. ಆದ್ದರಿಂದ ನಿನ್ನ ಹೆಜ್ಜೆ ಎಚ್ಚರವಾಗಿ ಇಡು. ಇವುಗಳ ಮಾರ್ಗ ಹಿಡಿದರೆ ನೀನು ಮೇಲೇಳಲಾರೆ.

(೮) ಪ್ರತಿಯೊಂದರಲ್ಲೂ ಸತ್ಯ ಸೌಂದರ್ಯವನ್ನು ನೋಡುವದೇ ಪ್ರೇಮ. ಈ ಸಾರ್ವತ್ರಿಕ ಮತ್ತು ಸಾರ್ವಭೌಮಿಕ ಪ್ರೇಮವು ಯಾವ ನರಕವನ್ನೂ ಸ್ವರ್ಗವಾಗಿ ಮಾಡುವುದು. ಕಾಮುಕತೆಯಿಂದ ಬಿಡುಗಡೆಗೊಂಡ ಪ್ರೇಮವೇ ಧಾರ್ಮಿಕ ಜ್ಯೋತಿ ಎನಿಸುವದು.

(೯) ಎಲ್ಲರೊಡನೆಯೂ ಬೆರೆಯದಿರು. ಇದರಿಂದ ಹಾನಿ ಇದೆ. ಆದ್ದರಿಂದ ಸಜ್ಜನರ ಸಂಘವನ್ನೇ ಮಾಡು. ಮಿತ್ರನಾದ ದುರ್ಜನನಿಗಿಂಥಾ ಶತ್ರುವಾದ ಸಜ್ಜನನೇ ಲೇಸು.

(೧೦) ಮಿದುಳು ಮತ್ತು ಹೃದಯ, ಜ್ಞಾನ ಮತ್ತು ವಿವೇಕ ಇವುಗಳೊಳಗೆ ತಿಕ್ಕಾಟವಾದರೆ ಯಾವಾಗಲೂ ಹೃದಯದ ಪಕ್ಷವನ್ನೇ ವಹಿಸು. ಏಕೆಂದರೆ ಆತ್ಮದ ಪ್ರಚೋದನೆಯೇ, ಹೃದಯದ ನುಡಿಯೇ ನಿನ್ನನ್ನು ಸತ್ಪಥದಲ್ಲಿ ನಡೆಸುವದಲ್ಲದೆ ಜ್ಞಾನ ಯಾ ಬುದ್ಧಿಯ ನಿರ್ದೇಶನವಲ್ಲ.

ಜಪಾನೀ ಯುವಕನೊಬ್ಬನ ಎದೆಯಲ್ಲಿ ಗರ್ಭಪಿಂಡ.

ಯೋಶಿ ನೊಬುನಿಕಾನೊ ಎಂಬ ಓಸಾಕದ ತರುಣ ಫ್ಯಾಕ್ಟರಿ ಕೆಲಸಗಾರನೊಬ್ಬನು ಡಾಕ್ಟರರ ಬಳಿಗೆ ನಡೆದನು. ಶಸ್ತ್ರಕ್ರಿಯೆ ನಡೆಸಿದಾಗ, ಆತನ ಶ್ವಾಸಕೋಶದಲ್ಲಿ ಸಜೀವ ಗರ್ಭಪಿಂಡವೊಂದು ಗೋಚರಿಸಿತು. ಮನುಷ್ಯಾಕಾರವನ್ನು ಪೂರ್ಣ ತಾಳಿರದ ಈ ಗರ್ಭ ಪಿಂಡವು ಮನುಷ್ಯನ ಮುಷ್ಟಿ ಗಾತ್ರವಿದ್ದಿತು. ಇದು ಯೋಶಿ ನೊಬುವಿನ ಅವಳಿ ಸಹೋದರಿಯ ಪಿಂಡವಾಗಿರಬಹುದೆಂದು ಊಹಿಸಲಾಗಿದೆ. ಆತ ಜನಿಸುವ ಮೊದಲು ಈ ಪಿಂಡವು ಅವನ ದೇಹದೊಳಗೆ ಸೇರಿರಬೇಕೆಂದೂ, ಆತ ಜನಿಸಿದ ಬಳಿಕ, ಅವನ ಮೂಲಕವೇ ಆಹಾರ ಪಡೆದು ಪೋಷಿತವಾಗಿರಬಹುದೆಂದೂ ಊಹಿಸಲಾಗಿದೆ. ತರುಣನು ವಯಸ್ಸಿಗೆ ಬಂದ ಬಳಿಕ, ಶ್ವಾಸಕೋಶದಲ್ಲಿ ಹುದುಗಿದ್ದ ಪಿಂಡವೂ ಬೆಳೆಯುತ್ತ ಸಾಗಿರಬೇಕು. ಗಂಡಸಿನ ಎದೆಯಲ್ಲಿ ಗರ್ಭಪಿಂಡ ಕಂಡುಬಂದುದು ಜಗತ್ತಿನ ಇತಿಹಾಸದಲ್ಲೇ ಇದು ಮೊದಲನೆಯ ಬಾರಿ—ಎನ್ನಲಾಗಿದೆ.

ಸೀತಾರಾಮರೆಡ್ಡಿಯವರ ಚುನಾವಣೆ ರದ್ದು.

ಕುಮಾರಸ್ವಾಮಿ ರಾಜರ ಮಂತ್ರಿ ಮಂಡಲದಲ್ಲಿ ರೆವಿನ್ಯೂ ಮಂತ್ರಿಗಳಾಗಿದ್ದ ಶ್ರೀ ಸೀತಾರಾಮ ರೆಡ್ಡಿಯವರು ಗತ ಚುನಾವಣೆಯಲ್ಲಿ ಗೆದ್ದ ಕೆಲವೇ ಮಂದಿ ಮಂತ್ರಿಗಳಲ್ಲಿ ಒಬ್ಬರಾಗಿದ್ದರಷ್ಟೆ. ಬಳ್ಳಾರಿ ಜಿಲ್ಲೆಯಿಂದ ಲೋಕಸಭೆಗೆ ಇವರು ಚುನಾಯಿಸಲ್ಪಟ್ಟಿದ್ದರು. ಆದರೆ ಅವರ ಇದಿರಾಳಿಗಳು ಚುನಾವಣಾ ನ್ಯಾಯಮಂಡಲದ ಮುಂದೆ ಹೂಡಿದ್ದ ವ್ಯವಹರಣೆಯಲ್ಲಿ, ನ್ಯಾಯಮಂಡಲವು ಇದಿರಾಳಿಗಳ ವಾದವನ್ನು ಒಪ್ಪಿ ಶ್ರೀ ರೆಡ್ಡಿಯವರ ಚುನಾವಣೆಯನ್ನು ರದ್ದುಗೊಳಿಸಿದೆ.

ತಾರಾಸಿಂಗರ ಬಂಧನ

ಪಂಜಾಬಿನ ಅಕಾಲಿ ದಳದ ಮುಂದಾಳು ಶ್ರೀ ತಾರಾಸಿಂಗರನ್ನು ತಾ. ೨೮ರಂದು ಬಂಧಿಸಲಾಯಿತು. ಸಾರ್ವಜನಿಕ ಸಭೆಗಳು ಜರುಗದಂತೆ, ದಾರಿ ಮೊದಲಾದ್ದಗಳನ್ನೇ ನಿಷ್ಣನ್ನು ಮುರಿದುದೇ ಅವರ ಮೇಲಿನ ಆಪಾದನೆ. ತಾರಾಸಿಂಗರ ಜೊತೆಗೆ ಅಕಾಲಿ ದಳದ ಬೇರೆ ಕೆಲವರನ್ನೂ ಬಂಧಿಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು.

ಲೇಖಕ:—'ವಿಚಿತ್ರ' ವಿತಡು.

ಸುಮಾರು ಮೂವತ್ತೈದು ವರ್ಷಗಳಷ್ಟು ಹಿಂದಿನ ಮಾತು. ಕನ್ನಡ ಸಾಹಿತ್ಯ ಸಂಸ್ಕೃತಿಗಳ ಪುರೋಭಿವೃದ್ಧಿಗಾಗಿ, ಆಗ 'ಕನ್ನಡ ಸಾಹಿತ್ಯ ಪರಿಷತ್ತು' ಸ್ಥಾಪಿಸಲ್ಪಟ್ಟಿತು. ಆಗಿನ ಕನ್ನಡ ಹಿರಿಯ ಸಾಹಿತಿಗಳ ಮತ್ತು ಕನ್ನಡದ ಬಗ್ಗೆ ವಿಶೇಷ ಆಸಕ್ತಿಯುಳ್ಳ ಕೆಲವು ಮಂದಿ ಮಹನೀಯರ ಪರಿಶ್ರಮ ಹಾಗೂ ನೆರವಿನಿಂದ, ಈ ಸಂಸ್ಥೆ ಅಖಿಲ ಕರ್ನಾಟಕದ ಒಂದು ಪ್ರತಿನಿಧಿಕ ಸಂಸ್ಥೆಯಾಗಿ ರೂಪುಗೊಂಡಿತು. ಇಂದಿಗೂ ಈ ಸಂಸ್ಥೆ ಅಸ್ತಿತ್ವದಲ್ಲಿದೆ. ಆದರೆ ದಿನದಿಂದ ದಿನಕ್ಕೆ ಅದು ಕ್ಷೀಣವಾಗುತ್ತಿದೆಯಲ್ಲದೆ, ಬೆಳವಣಿಗೆಯ ಹಾದಿಯಲ್ಲಿ ಒಂದಿಷ್ಟಾದರೂ ಮುಂದರಿದಿಲ್ಲ ಏಕೆ?

ಈ ಪರಿಷತ್ತು ಸ್ಥಾಪಿತವಾಗಿ ಇಷ್ಟು ವರ್ಷವಾದರೂ, ಅದು ಈ ವರೆಗೆ, ತನ್ನ ಘನತೆಗೆ ತಕ್ಕಂತೆ ಹೇಳುವಂತಹ ಯಾವುದೊಂದು ಕೆಲಸವನ್ನೂ ಮಾಡಿಲ್ಲ. ಸದ್ದು ಮಾಡುವಂತೆಯೂ ಇಲ್ಲ. ಈ ಪರಿಷತ್ತಿಗೆ ಸಾಕಷ್ಟು ಜನ ಬೆಂಬಲವೂ ಇಲ್ಲ. ಹೆಚ್ಚೇಕೆ ಇಂತಹದೊಂದು ಸಂಸ್ಥೆ ಇದೆಯೆಂಬುದೇ ಹೆಚ್ಚಿನ ಜನರಿಗೆ ಗೊತ್ತಿಲ್ಲ. ಎಂತಲೇ ಎರಡು ಕೋಟಿಗಿಂತಲೂ ಮಿಕ್ಕಿ ಕನ್ನಡಿಗರಿರುವ ಈ ನಾಡಿನ ಈ ಸಂಸ್ಥೆಯ ಸದಸ್ಯತನದ ಸಂಖ್ಯೆ ಇನ್ನೂ ಎರಡು ಮೂರು ಸಾವಿರಗಳಲ್ಲೇ ಅಡಗಿಕೊಂಡಿದೆ.

ಈ ಪರಿಷತ್ತು, ನಾಡಿಗೆ ಈ ವರೆಗೆ ಮಾಡುತ್ತಿರುವ ಒಂದೇ ಒಂದು ಉಪಕಾರವೆಂದರೆ, ವರ್ಷಕ್ಕೊಮ್ಮೆ, ನಡೆಸುವ ಸಮ್ಮೇಲನ. ನಾಡಿನ ಹಿರಿಯ ಸಾಹಿತಿಗಳ ಪ್ರಿಯರಾದವರೊಬ್ಬರು ಅಧ್ಯಕ್ಷರಾಗುತ್ತಾರೆ. ಸಭೆ, ಭಾಷಣ, ವಾಚನ, ಪ್ರವಚನ ಇತ್ಯಾದಿಗಳೆಲ್ಲ ವಿಜೃಂಭಣೆಯಿಂದ ಜರಗುತ್ತವೆ. ಸಾವಿರಾರು ಜನ ಕೂಡುತ್ತಾರೆ. ನೂರಾರು ಠರಾವುಗಳು ಪ್ರತಿ ವರ್ಷವೂ ಪಾಸಾಗುತ್ತವೆ. ಮೂರು ದಿನದ ಈ ವರ್ಷಾವಧಿ ಉತ್ಸವ ಕಳೆಯಿತೆಂದರೆ, ಮತ್ತೆ ಎಲ್ಲವೂ ಬರಿದೋ ಬರಿದು.

ಈ ಸಾಹಿತ್ಯಪರಿಷತ್ತಿಗೆ, ಕನ್ನಡದ ಕೇಂದ್ರಗಳಲ್ಲೆಲ್ಲ ಒಟ್ಟು ಹದಿನಾರು ಪ್ರಾದೇಶಿಕ ಸಮಿತಿಗಳಿವೆ. ಇವುಗಳಲ್ಲಿ ಕೆಲವೊಂದು, ಯಾವಾಗಲಾದರೊಮ್ಮೆ ಸಭೆ ಸೇರಿ, ಯಾವುದಾದರೊಂದು ಭಾಷಣವನ್ನಾದರೂ ಏರ್ಪಡಿಸುವುದಿದೆ. ಕೆಲವಂತೂ ವರ್ಷಕೊಮ್ಮೆ ಪ್ರಧಾನ ಕಚೇರಿಗೆ ಎರಡು ಸಾಲುಗಳ ವರದಿಯನ್ನೂ ಕಳಿಸದಾಯಿತು. ಅಷ್ಟೆ.

ಬೆಂಗಳೂರಲ್ಲಿ, ಈ ಸಂಸ್ಥೆಯ ಪ್ರಧಾನ ಕಚೇರಿ, ಶ್ರೀ. ಕೃಷ್ಣರಾಜ ಪರಿಷನ್ಮಂದಿರವೆಂಬ ಹೆಸರಿನ ಕಟ್ಟಡದಲ್ಲಿದೆ. ಪರಿಷತ್ತಿನದೇ ಆದ ಅಚ್ಚುಕೂಟವೂ ಇದೆ. 'ಪರಿಷತ್ಪತ್ರಿಕೆ' ಮತ್ತು 'ಕನ್ನಡನುಡಿ' ಎಂಬ ಎರಡು ಪತ್ರಿಕೆಗಳೂ ಪರಿಷತ್ತಿನಿಂದ ಹೊರಡುತ್ತಿವೆ. ಆದರೆ ಈ ಪರಿಷತ್ಪತ್ರಿಕೆ ಮಾತ್ರ ಈಗ ವರ್ಷವೆರಡು ಪ್ರಕಟವಾಗುವುದು ಮುಂದಿನ ವರ್ಷ. ಕನ್ನಡ ನುಡಿ ನೆಂದಲು ವಾರ ಪತ್ರಿಕೆಯಾಗಿತ್ತು, ಈ ವರ್ಷ ಪತ್ರಿಕೆ ಹೊರಡಿಸಲಾಯಿತು. ಈ ಪತ್ರಿಕೆಗಳನ್ನು ಓದುವ ಜನವೂ ಕಡಿಮೆ. ಎಲ್ಲೂ ಸಿಕ್ಕುವುದೂ ಇಲ್ಲ. ಗ್ರಂಥಾಲಯಗಳ ವಿಷಯ, ಹೆಚ್ಚು ಹೇಳಬೇಕಿಲ್ಲ. ಇಂದು ಇವುಗಳನ್ನೂ 'ಮಾಸಿಕ ವಾರ್ಷಿಕ ಪತ್ರಿಕೆಗಳೆನ್ನಬಹುದು.

ಪರಿಷತ್ತಿಗೂ ಇತರ ಸಂಸ್ಥೆಗಳಂತೆ, ಅಧ್ಯಕ್ಷರು—ಕಾರ್ಯದರ್ಶಿಗಳು—ಲೆಕ್ಕ ಪರಿಶೋಧಕರು ಕಾರ್ಯಕಾರಿ ಸಮಿತಿ ಎಲ್ಲವೂ ಇವೆ. ಸಮಿತಿ, ಎಂದಾದರೊಮ್ಮೆ ಎಲ್ಲಾದರೂ ಸಭೆ ಸೇರುತ್ತದೆ. ಸಭೆಗೆ ಗೈರುಹಾಜರಾಗುವ ಸದಸ್ಯರ ಸಂಖ್ಯೆಯೇ ಜಾಸ್ತಿ. ಅವರು ಅಲ್ಲಿ ಮಾಡುವ ಕೆಲಸವೂ ಅಷ್ಟೆ. ಏನು ಮಾಡಿದರೆನ್ನುವುದು ನಿಕ್ಕಿ ಸದಸ್ಯರಿಗೆ ತಿಳಿಯುವುದು ಕಡಿಮೆ.

ಮೈಸೂರು ಸರ್ಕಾರದವರು, ಈ ಪರಿಷತ್ತಿಗೆ, ವರ್ಷಕ್ಕೆ ಮೂರು ಸಾವಿರ ರೂಪಾಯಿ ಗ್ರ್ಯಾಂಟು ಕೊಡುತ್ತಾರೆ. ಸದಸ್ಯರೂ ಇತರರೂ ಅಲ್ಪ ಸ್ವಲ್ಪ ಕೊಡುತ್ತಾರೆ. ಅದೆಲ್ಲ ಖರ್ಚು ಆಗುತ್ತದೆ. ಆದರೆ ಜನತೆಗೆ ಇದರಿಂದಾಗುವ ಪ್ರಯೋಜನ ಮಾತ್ರ ಕಡಿಮೆ.

ಒಟ್ಟಿನ ಮೇಲೆ ಪರಿಷತ್ತು ಕೆಲವೇ ಮಂದಿ ಹಿರಿಯರೆನ್ನಿಸುವವರ ಒಂದು 'ಸೊತ್ತಾಗಿ' ಉಳಿದಿದೆ. ಕಾರ್ಯೋತ್ಸುಕರಾದ ಕಿರಿಯರಿಗೆ ಪರಿಷತ್ತಿನ ಮೇಲೆ ಎಳ್ಳಷ್ಟೂ ಅನಾದರ. ಯಾರಾದರೂ ಮುಂದೆ ಬಂದರೂ, ಅಲ್ಲಿ ಅವರಿಗೆ ಸ್ಥಾನ ಮಾನ ದೊರಕುವುದು ಅಪರೂಪ.

ಅಖಿಲ ಕರ್ನಾಟಕದ ಜನರ ಜೀವಜೀವಾಳದ ಏಕೀಕರಣ ಸಮಸ್ಯೆ. ಇದರ ಪಾಲಿಗೆ "ರಾಜಕೀಯ"ವಾಗಿ ಉಳಿದಿದೆ. ಸಾಹಿತ್ಯ ಪರಿಷತ್ತು ಸಾಹಿತ್ಯ ಸಂಸ್ಕೃತಿಗಳಿಗೆ ಮಾತ್ರ ಮೀಸಲಾದ್ದು. ರಾಜಕೀಯದಲ್ಲಿ ಅದರ ವ್ಯವಹಾರವಿಲ್ಲ ಎಂಬ ಮಾತನ್ನು ನಾವು ಈಗಾಗಲೇ ಕೇಳುತ್ತ ಬಂದಿದ್ದೇವೆ.

ಈಗ ಆಂಧ್ರ ಪ್ರಾಂತ್ಯ ರಚನೆಯಾಗುವುದರಲ್ಲಿದೆ. ಆಂಧ್ರರು ಬಳ್ಳಾರಿಯೇ ಮೊದಲಾದೆಡೆಗಳಲ್ಲಿ ಕನ್ನಡದ ಕೊಳ್ಳಿ ಕೊಡೆಯಲು ಹೊಂಚುಹಾಕುತ್ತಲೇ ಇದ್ದಾರೆ. ಆ ಕುರಿತು ಪರಿಷತ್ತಿನ ಅಧ್ಯಕ್ಷರು, ಪತ್ರಿಕೆಗಳಲ್ಲಿ ದೀರ್ಘವಾದೊಂದು ಪ್ರಕಟಣೆಯನ್ನು ಕೊಟ್ಟಿದ್ದಾರೆ. ಮೊರತು ಕ್ರಿಯಾತ್ಮಕವಾದ ಯಾವ ಕಾರ್ಯವನ್ನು ಈ ವರೆಗೆ ಮಾಡಿಲ್ಲ.

ಪರಿಷತ್ತು ತನ್ನ ಹೆಸರಿನಿಂದ, ಕನ್ನಡ ಕಾವ–ಜಾಣ ಪರೀಕ್ಷೆಗಳನ್ನು ಜರಗಿಸಿ, ವರ್ಷಕ್ಕೆ ನೂರಾರು ವಿದ್ಯಾರ್ಥಿಗಳಿಗೆ, ಪ್ರಶಸ್ತಿ ಪತ್ರವನ್ನು ಕೊಟ್ಟು ಕಳುಹಿಸುತ್ತದೆ. ಆದರೆ ಯಾವ ಸರಕಾರವೂ ಈ ಪ್ರಶಸ್ತಿಗೆ ಇದು ವರೆಗೆ ಮನ್ನಣೆ ಕೊಟ್ಟಿಲ್ಲ. ಪರಿಷತ್ತು ಇದಕ್ಕಾಗಿ ಪ್ರಯತ್ನಿಸಲೂ ಇಲ್ಲ ಎಂದು ಕೇಳುತ್ತಿದೆ. ಕನ್ನಡ ನಾಡಿನಲ್ಲೇ ಕನ್ನಡ ಭಾಷಾಭ್ಯಾಸಿಗಳಿಗೇ ಹೀಗಾದರೆ ಮತ್ತೇನಿದೆ?

ಅಂತೂ ಮೂರು ದಶಕಗಳ ಈ ದೀರ್ಘ ಅವಧಿಯಲ್ಲಿ ಪರಿಷತ್ತು ಸಾಹಿತ್ಯ ಸಂಸ್ಕೃತಿಗಳ ಮಟ್ಟಿಗಾದರೂ ಸಾಕಷ್ಟು ದುಡಿದಿಲ್ಲವೆಂಬುದು ಖಂಡಿತ.

ಕನ್ನಡ ಜನತೆ ಇನ್ನಾದರೂ ಎಚ್ಚತ್ತು, ಪರಿಷತ್ತಿನ ಶುದ್ಧೀಕರಣ ಕಾರ್ಯವನ್ನು ಕೈಗೊಂಡು, ಅದನ್ನು ಒಂದು ಬಲವಾದ ನಿಜವಾದ ಪ್ರಾತಿನಿಧಿಕ ಸಂಸ್ಥೆಯಾಗುವಂತೆ ಮಾಡಬೇಕು. ಈ ವರೆಗಿನ ಲೋಪದೋಷಗಳನ್ನೆಲ್ಲ ಗಣನೆಗೆ ತೆಗೆದುಕೊಂಡು, ಮುಂದಾದರೂ ಅದು ಒಂದು ಸಜೀವ ಸಂಸ್ಥೆಯಾಗಿ, ಬೆಳಗುವಂತೆ ಪ್ರಯತ್ನಿಸಬೇಕು. ಇಷ್ಟಾದರೆ ತನ್ನಿಂದ ತಾನೇ ನಮ್ಮ ಸಾಹಿತ್ಯ ಸಂಸ್ಕೃತಿಗಳ ಉದ್ಧಾರವಾದೀತು.

॥ ಓದುಗರ ಓಲೆಗಳು. ॥

ವಾಚಕರಲ್ಲಿ ವಿನಂತಿ.

ಪತ್ರಿಕೆಯ ಪುಟ ಸಂಖ್ಯೆ ಹೆಚ್ಚಾಗಿರುವುದರಿಂದ ಲೇಖಕರು ಪ್ರಕಟಣೆಗೆ ಕಳುಹಿಸುವ ಕಥೆ, ಕವನ, ವಿಮರ್ಶನ, ನಗುಮಲ್ಲಿಗೆ, ಮೊದಲಾದ ವಿಚಾರಗಳಿಗೆ ಪತ್ರಿಕೆಯಲ್ಲಿ ಹೆಚ್ಚಿನ ಆಸ್ಪದ ಕೊಡಲಾಗುವದು. ಓದುಗರ ಓಲೆ, ವರ್ತಮಾನ, ಪ್ರಮುಖರ ಭಾಷಣಗಳ ವರದಿ ಮೊದಲಾದುವಕ್ಕೂ, ನೀತಿಯ ನುಡಿಗಳಿಗೂ ಸ್ವಾಗತವಿದೆ. ವಾಚಕರು ಸಹಕರಿಸಿ ಪತ್ರಿಕೆಯನ್ನು ಇನ್ನೂ ಸುಂದರಗೊಳಿಸಲು ನೆರವೀಯುವರಾಗಿ ನಂಬಲಾಗಿದೆ.

—ಸಂಪಾದಕ.

ಬಸ್ಸು ಲಾರಿಗಳ ಅನಾಹುತ

ಇತ್ತೀಚೆಗೆ ಹಲವೆಡೆ ಟೌನು ಭಾಗಗಳಲ್ಲಿ ರಸ್ತೆಗಳನ್ನು ಅಗಲ ಮಾಡತೊಡಗಿದ್ದಾರೆ. ಉದಾಹರಣೆಗೆ ಮಡಿಕೇರಿಯಲ್ಲಿ ಟೌನುಭಾಗದ ರಸ್ತೆಯನ್ನು ೩೦ ಅಡಿ ಅಗಲ ಮಾಡಲಾಗಿದೆ. ಇದರಿಂದಾಗಿ ಲಾರಿ ಬಸ್ಸುಗಳ ಓಡಾಟದ ವೇಗ ಹೆಚ್ಚಾದಂತೆ ತೋರುತ್ತಿದೆ. ಟೌನು ಭಾಗಗಳಲ್ಲೂ ಕೂಡ ಬಸ್ಸುಗಳೂ ಪ್ರಮುಖ್ಯವಾಗಿ ಲಾರಿಗಳು ಮೂವತ್ತು ನಲುವತ್ತು ಮೈಲುಗಳ ವೇಗದಲ್ಲಿ ಓಡುತ್ತವೆ. ಇದರಿಂದಾಗಿ ಘೋರ ಅನಾಹುತ ಮಾತ್ರವಲ್ಲದೆ ರಸ್ತೆಯಲ್ಲಿ ತಿರುಗುವ ಜನರ ಜೀವನಕ್ಕೆ ಗಂಡಾಂತರವಿದೆ. ಈ ಬಗ್ಗೆ ಸ್ವಲ್ಪ ಎಚ್ಚರಿಕೆಯನ್ನು ಸಂಬಂಧಿಸಿದ ಅಧಿಕಾರಿಗಳು ತೆಗೆದುಕೊಳ್ಳಬೇಕಾಗಿದೆ.

ಸತ್ತಾರ್.

ಪೊನ್ನಂಪೇಟೆ ಕಾನೂರು ರಸ್ತೆ.

ಈ ರಸ್ತೆಯಲ್ಲಿ ಈ ವರ್ಷ ಸ್ವಲ್ಪ ಕೆಲಸ ನಡೆದಿದೆ. ಈ ಕೆಲಸದ ಪರಿಣಾಮವಾಗಿ ರಸ್ತೆಯಲ್ಲಿ ನಡೆಯುವುದು ಅಸಾಧ್ಯವಾಗಿದೆ. ಏಕೆಂದರೆ ರಸ್ತೆಯ ಎರಡು ಪಕ್ಕಗಳಲ್ಲಿಯೂ ಚರಂಡಿ ತೆಗೆದು ಮಣ್ಣನ್ನು ರಸ್ತೆಗೆ ಹಾಕಿದ್ದಾರೆ. ಅಂದರೆ ರಸ್ತೆಯ ಮೇಲೆ ಕಡಿಮೆ ಅರ್ಧ ಅಡಿಯಂತೆ ಮಣ್ಣು ಬಿದ್ದಿದೆ. ಮಳೆಗಾಲ ಕಳೆದ ನಂತರ ಡಿಸೆಂಬರ್ ತಿಂಗಳಲ್ಲಿ ಈ ರೀತಿ ಮಣ್ಣು ಹಾಕಿದ ಕಾರಣ ಆ ಮಣ್ಣು ಮಳೆಯಿಂದ ಗಟ್ಟಿಗೊಳ್ಳುವ ಆಸ್ಪದವಿಲ್ಲದಾಯಿತು. ನಂತರ ಬತ್ತದ ವಹಿವಾಟಿಗಾಗಿ ದಿನಕ್ಕೆ ಹತ್ತಾರು ಲಾರಿಗಳೂ, ಒಂದು ಬಸ್ಸು ಕೂನೂ ಈ ಮಾರ್ಗವಾಗಿ ಓಡಾಡ ತೊಡಗಿ ಆ ಮಣ್ಣೆಲ್ಲವೂ ಪುಡಿಯಾಗಿ ರಸ್ತೆಯಲ್ಲಿ ಅರ್ಧ ಅಡಿಗಿಂತ ಹೆಚ್ಚಾಗಿ ಹುಡಿ ಮಣ್ಣು ನಿಂತಿದೆ. ಈ ರಸ್ತೆಯಲ್ಲಿ ನಡೆಯುವದಿರಲಿ, ಸುತ್ತುಮುತ್ತಲಿನ ಕಾಡಿಗಾಗಿ ಕೂಡ ನಡೆಯಲಸಾಧ್ಯವಾಗಿದೆ. ಧೂಳು ಬಾರಿ ಎಡಬಲದ ಮರಗಳನ್ನೂ ಪ್ರದೇಶವನ್ನೂ ಹಾಳುಗೆಡಿಸಿದೆ. ಬಸ್ಸಿನಲ್ಲಿ ಈ ರಸ್ತೆಗಾಗಿ ತಿರುಗುವುದೂ ಪ್ರಯಾಸವೇ. ಯಾವಾಗೋ ಮಾಡಬೇಕಾದ ಕೆಲಸವನ್ನು ಯಾವಾಗೋ ಮಾಡುವುದರಿಂದ ಆಗುವ ಅನಾಹುತವಿದು. ಈ ರಸ್ತೆಗೆ ಬೇಗ ಕಲ್ಲುಹಾಕುವ ಏರ್ಪಾಡನ್ನು ಸರಕಾರ ಕೈಕೊಳ್ಳಬೇಕು. ಇದು ಅತೀ ಪ್ರಮುಖ್ಯವಾದ ರಸ್ತೆಯಾಗಿದ್ದು ತುಂಬಾ ಜನಸಂಖ್ಯೆ ಇರುವ ಗ್ರಾಮಗಳ ಮಧ್ಯೆ ಹಾದು ಹೋಗುತ್ತದೆ. ಅದ್ದರಿಂದ ಕಾನೂರು ಪೊಳೆಯವರೆಗಾದರೂ ಮಳೆಗಾಲದಲ್ಲಿ ಬಸ್ ಓಡಾಡುವಂತೆ ತುಂಬಾ ಹಾಳಾದ ಭಾಗಗಳ ದುರಸ್ತಿ ಕೆಲಸ ಶೀಘ್ರ ಕೈಕೊಳ್ಳಬೇಕಿದೆ.

ಗ್ರಾಮಸ್ಥ,

ಅಕ್ಕಿ ಗಿರಣಿ ಸಂಘದ ಸೆಕ್ರೆಟರಿ ಸಾಹೇಬರಿಗೆ

ನೀವು ಆಗಸ್ಟಿನಲ್ಲಿ ಸ್ಥಳೀಯ ಪತ್ರಿಕೆಯಲ್ಲಿ 'ಅಧಿಕ ಪ್ರಸಂಗ' ಎಂಬ ಶಿರೋನಾಮೆಯಲ್ಲಿ ಬರೆದ ಬಾತ್ಮಿಯಲ್ಲಿ ಅಕ್ಕಿ ಗಿರಣಿ ಮಾಲಿಕರು ಅಕ್ಕಿ ವ್ಯಾಪಾರದಲ್ಲಿ ಪ್ರತಿ ವರ್ಷ ಅದೆಷ್ಟೋ ಸಾವಿರ ರೂಪಾಯಿ ಗಂಟು ಕಳಕೊಂಡಿದ್ದಾರೆ ಎಂಬದಾಗಿ ಪ್ರಕಟಿಸಿದ್ದು ಸರಿಯಷ್ಟೇ! ಆದರೆ ಈ ವರ್ಷ ಅಕ್ಕಿ ಗಿರಣಿ ಮಾಲಿಕರೊಬ್ಬರು ಸೀಲು ಇಲ್ಲದ ನಾಡಿನ 'ಕೊಚ್ಚು' ಸೇರನ್ನು ಮಿಲ್ಲಿನಲ್ಲಿ ಅಳತೆಗೋಸ್ಕರ ಉಪಯೋಗಿಸುತಿದ್ದರು ಎಂಬದಾಗಿ ಎರಡು ಪತ್ರಿಕೆಯಲ್ಲಿ ಪ್ರಕಟಿಸಿದ್ದನ್ನು ಓದಿದೆನು. ಈ ಗಿರಣಿ ಮಾಲಿಕರು ನಿಮ್ಮ ಸಂಸ್ಥೆಯ ಮೆಂಬರರಾಗಿರಲೇ ಬೇಕಲ್ಲವೆ? ಈ ಕಳ್ಳ ಸೇರಿನವರೊಡನೆ ಅಧಿಕಾರಿಗಳನ್ನು ಕಂಡು ಕೇಸಿನ ಬೆನ್ನೆಲುಬು ಮುರಿಯಲು ಪ್ರಯತ್ನಿಸಲು ಸ್ಥಳೀಯ ಎಂ. ಎಲ್. ಎ. ಗಳೊಬ್ಬರು ಹೋಗಿದ್ದರಂತೆ. ಇವರು ಹಿಂಬಾಲಿಸಿದ್ದ ಪಕ್ಷದಲ್ಲಿ ವ್ಯಾಪಾರದಲ್ಲಿ ಇವರೂ ಪಾಲುದಾರರೊ? ಇಂತಹ ಕ್ಷುಲ್ಲಕ ಸಂಗತಿಗಳಿಗೆ ಇಳಿದ ಎಂ. ಎಲ್. ಎ. ಅವರು ಇತರ ವ್ಯಾಪಾರದ ಆದಾಯ ತೆರಿಗೆಯ ವಿಷಯದಲ್ಲಿ ಸಂ

(ಎಂಟನೇ ಪುಟಕ್ಕೆ ಸಾಗಿದೆ)

ಜ್ಞಾನ ದೀಪ.

(೧)

ಶಿಲುಬೆಗೇರುವಾಗ ಸಿಳ್ಳುಹಾಕಿದವರ ಕಥೆ ಕೇಳಿಬಂದಿಲ್ಲವಾದರೂ ಆತ್ಮನಾಶದ ಸಮಯದಲ್ಲೂ ವಿಲಾಸ ಜೀವನ ನಡೆಸುವವರಿದ್ದಾರೆ.

(೨)

ಸುಟ್ಟ ಮೇಲೆ ಕಟ್ಟಿಗೆಯಂತೆಯೇ ಚಂದನವೂ ಬೂದಿ. ಕೆಟ್ಟ ಮೇಲೆ ಅಧಮನಂತೆಯೇ ಆರ್ಯನೂ ಕೂಡ.

(೩)

ಬಾಕುಮೋಸದ ಪುಷ್ಟಿಗೊಂಡಂತೆ ತೋರಿದರೂ ಅಲ್ಲೇನು ಶಕ್ತಿ ಇರಲಾರದು. ಅನ್ಯಾಯದಿಂದ ಐಶ್ವರ್ಯವಂತನಾದರೂ ಅಲ್ಲೇನೂ ಆಧೃತಿ ಇರಲಾರದು.

—ನುಡಿಮುತ್ತು.

ಕೊಡಗು

ತಾರೀಕು ೬ ಮಾರ್ಚ್ ೧೯೫೩ನೇ ಶುಕ್ರವಾರ

ಜೈಲು ಸುಧಾರಣೆಗಳು.

ಹಿಂದೂದೇಶದಲ್ಲಿಯ ಜೈಲುಗಳ ಪರಿಸ್ಥಿತಿಯು ಸುಧಾರಿಸಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಇಂದು ಅಧಿಕಾರದಲ್ಲಿರುವ ಸರಕಾರದ ಬಹುಮಂದಿಯರು ಜೈಲು ಜೀವನದ ಸ್ವತಃ ಅನುಭವವನ್ನು ಪಡೆದವರೇ ಆಗಿದ್ದಾರೆ. ಜೈಲು ಸುಧಾರಣೆಯಾಗಬೇಕೆಂದು ಕೂಗು ಹಲವು ವರ್ಷಗಳಿಂದ ಕೇಳಿ ಬರುತ್ತಿದ್ದರೂ ಈ ಬಗ್ಗೆ ಸಾಕಷ್ಟು ಕೆಲಸವಾಗಲಿಲ್ಲ.

ಸಂಯುಕ್ತ ರಾಷ್ಟ್ರ ಸಂಘದ ತಾಂತ್ರಿಕ ಯೋಜನೆಯ ಮೇರೆ ಡಾಕ್ಟರ್ ವಾಲ್ಟರ್ ರೆಕ್‌ಲೆಸ್ ಎಂಬವರು ಭಾರತದಲ್ಲಿ ಕೆಲಸ ಮಾಡುತ್ತಿದ್ದಾರೆ. ಹಿಂದೂದೇಶದಲ್ಲಿರುವ ಜೈಲುಗಳ ಮತ್ತು ಅವುಗಳಲ್ಲಿರುವ ಕೈದಿಗಳ ಪರಿಶೀಲನೆಯನ್ನು ಮಾಡಿ ಆ ಬಗ್ಗೆ ಆಗಬೇಕಾದ ಸುಧಾರಣೆಗಳನ್ನು ಸೂಚಿಸಿ ರೆಕ್‌ಲೆಸ್‌ರವರು ಒಂದು ವರದಿ ಮಾಡಿದ್ದಾರೆ. ಈ ವರದಿಯು ಮಹತ್ವದಿದ್ದು ಜೈಲು ಸುಧಾರಣೆಯ ಬಗ್ಗೆ ಎಲ್ಲ ಸರಕಾರಗಳು ಗಮನವೀಯಬೇಕಾದಂತಿದೆ.

ಕೈದಿಗಳನ್ನು ಜೈಲಿನಲ್ಲಿ ಇಡುವ ಉದ್ದೇಶವು ಹಿಂದಿನ ಕಾಲದಲ್ಲಿ ಏನೇ ಇದ್ದಿರಬಹುದಾದರೂ ಇಂದು ಕೇವಲ ಕೈದಿಗಳ ನಡತೆ ನೀತಿಗಳನ್ನು ತಿದ್ದಿ ಯೋಗ್ಯರನ್ನಾಗಿ ಮಾಡುವದೇ ಎಂದು ಸ್ಪಷ್ಟವಾಗಿ ಹೇಳಬಹುದು. ಸಮಾಜದ ನೀತಿಗೆ, ಮಾನವ ಗಣದ ಹಾರ್ದಿಕ ಅಭಿವೃದ್ಧಿಗೆ ಆತಂಕರೆನಿಸಿದ ಜನರನ್ನು ಜೈಲಿನಲ್ಲಿಟ್ಟು ಅವರನ್ನು ಸುಧಾರಿಸಿ ಸಮಾಜದ ಯೋಗ್ಯ ಪ್ರಜೆಗಳಾಗಿ ಮಾಡುವದೇ ಜೈಲುಗಳ ಗುರಿ ಎನ್ನುವದರಲ್ಲಿ ಎರಡಭಿಪ್ರಾಯಗಳಿರಲಾರದು. ಮಾನವೀಯತಾ ಭಾವವು ಜಾಗೃತಿಗೊಂಡು ಬಿಡಿಬಿಡಿಯಾಗಿದ್ದ ದೃಷ್ಟಿಯು ಇಡಿಯಾಗುತ್ತಾ ಸರ್ವಾಂಗೀಣ ಉನ್ನತಿಯ ದಾರಿಯಲ್ಲಿ ನಡೆಯುತ್ತಿರುವ ಇಂದಿನ ಕಾಲದಲ್ಲಿ ಜೈಲುಗಳು ಕಾದುಭಾವನೆಯ ಮುಯ್ಯಿಗೆ ಮುಯ್ಯಿ ತೀರಿಸುವ ಶಿಕ್ಷಾ ಮನೆಗಳಾಗಿರದೆ ಮಾನವ ಪುನರ್ನಿರ್ಮಾಣದ ಸುಧಾರಣಾಲಯಗಳಾಗಬೇಕು. ಅಪರಾಧಿಗಳ ತಪ್ಪಿಗೆ ಉಗ್ರ ಶಿಕ್ಷೆ ವಿಧಿಸಿ ಪರಿಪರಿಯ ದಂಡನೆಯನ್ನು ಕೊಡುವ ಪದ್ಧತಿ ಇಂದಿನದಲ್ಲ. ಕಾರಾಗೃಹ ವಾಸದಲ್ಲಿ ಆತನು ನಾಗರಿಕನ ನೀತಿ ನಡತೆಗಳನ್ನು ಅರಿಯಬೇಕೆಂಬುದೇ ಜೈಲುಗಳ ಚರಮಧ್ಯೇಯವಾಗಿದೆ.

ಹೊರಗಿನ ದೇಶಗಳಲ್ಲಿ ಕಾರಾಗೃಹಗಳು ಶಿಕ್ಷೆಯ ಮನೆಗಳ ಬದಲು ಶಿಕ್ಷಣ ಕೇಂದ್ರಗಳಾಗಿವೆ. ಜೈಲಿನಲ್ಲಿ ವಿದ್ಯಾಭ್ಯಾಸ, ಆಟ ಓಟಗಳ ವ್ಯವಸ್ಥೆ, ವಾಚನಾಲಯ, ಸುಧಾರಿತ ಆಹಾರ ಮೊದಲಾದುವುಗಳ ಏರ್ಪಾಡಾಗಿವೆ. ಜೈಲಿನಲ್ಲಿರುವವರು ಆಗಾಗ್ಗೆ ತಮ್ಮ ಬಂಧು ಮಿತ್ರರಲ್ಲಿಗೆ ಬಂದು ಹೋಗುವ ವ್ಯವಸ್ಥೆಯೂ ಇದೆ. ಈ ರೀತಿಯಿಂದಾಗಿ ಶಿಕ್ಷೆಯ ಅವಧಿ ಮುಗಿಯುವದರೊಳಗೆ ಕೈದಿಯು ಪರಿವರ್ತನೆ ಹೊಂದಿ ಯೋಗ್ಯ ನಾಗರಿಕನಾಗುವನು.

ಹಿಂದೂದೇಶದಲ್ಲೂ ಕೂಡ ಈ ಮಾರ್ಗದಲ್ಲಿ ಅಲ್ಲಲ್ಲಿ ಅಲ್ಪ ಸ್ವಲ್ಪ ಪ್ರಯತ್ನಗಳಾಗುತ್ತಿವೆ. ಬೊಂಬಾಯಿ ಸರಕಾರದವರು ಕೈದಿಗಳು ತಮ್ಮ ಬಂಧು ಬಳಗವನ್ನು ನೋಡಿಕೊಂಡು ಬರಲು ಅವಕಾಶವಾಗುವಂತೆ ರಜೆ ಕೊಡುವ ಏರ್ಪಾಡು ಮಾಡಲಿರುವರು. ಕೆಲ ದಿನಗಳ ಹಿಂದೆ ತಿರುವಾಂಕೂರು, ಕೊಚ್ಚಿನ್‌ನಲ್ಲಿ ಕೈದಿಗಳನ್ನು ಒಂದು ಪ್ರದರ್ಶನವನ್ನು ನೋಡಲು ಬಿಟ್ಟಿದ್ದರು. ಈ ರೀತಿಯ ಏರ್ಪಾಡುಗಳು ನಿಜವಾಗಿಯೂ ಸ್ವಾಗತಾರ್ಹವಾದುವುಗಳು. ಆದರೆ ಇವು ಸಾಲವು. ಜೈಲಿನೊಳಗೆ ವಿದ್ಯೆ ಕಲಿಯುವ, ಉದ್ಯಮಗಳನ್ನು ಅಭ್ಯಾಸ ಮಾಡುವ ಅನುಕೂಲತೆಗಳು ಬೇಕು. ಜೈಲಿನಿಂದ ಬಿಡುಗಡೆಯಾದ ಕೈದಿಯು ಸ್ವತಂತ್ರ ಜೀವನ ನಡೆಸುವ ಚೇತನ ಪಡೆಯುವಂತಾಗಬೇಕು.

ರೆಕ್‌ಲೆಸ್‌ರವರು ಮಾಡಿದ ಸುಧಾರಣಾ ಸೂಚನೆಗಳು ಮಹತ್ವದ್ದಿವೆ. ಅವರ ಸೂಚನೆಯಂತೆ ಇಂಡಿಯನ್ ಪೀನಲ್ ಕೋಡು ಮತ್ತು ಜೈಲು ನಿಬಂಧನೆಗಳನ್ನು ಸಂಪೂರ್ಣ ಬದಲು ಮಾಡಬೇಕಿದೆ. ಈ ಬಗ್ಗೆ ಒಂದು ಸಮಿತಿಯನ್ನು ನೇಮಿಸುವುದು ಅತ್ಯಗತ್ಯವೆಂದು ಅವರು ಹೇಳಿರುವರು. ಇದು ನಿಜವಾಗಿಯೂ ಯೋಗ್ಯ ಸಲಹೆ ಆಗಿದೆ.

ಜೈಲಿಗೆ ಸೇರುವ ಕೈದಿಗಳೆಲ್ಲರೂ ಸುಧಾರಿಸಲಾರದಂಥಾ ಕೇಡಿಗಳಲ್ಲ. ಅನೇಕ ವೇಳೆ ನಿರಪರಾಧಿಗಳೂ ಜೈಲು ಸೇರುವದಿದೆ. ತಪ್ಪು ಮಾಡಿದವರಲ್ಲಿ ನೂರಕ್ಕೆ ೯೯ ರಷ್ಟು ಜನರು ಯೋಗ್ಯರೇ ಇದ್ದಾರೆ. ಅಂಥಾವರನ್ನು ಜೈಲೊಳಗೆ ಪಶುಗಳಂತೆ ಪರಿಗಣಿಸಿ ದಂಡಿಸುವದರಿಂದ ಹೆಚ್ಚಿನ ಕೈದಿಗಳು ತಯಾರಾಗುವರೇ ವಿನಾ ನಾಗರಿಕರಲ್ಲ. ಆದ್ದರಿಂದ ರೆಕ್‌ಲೆಸರ ಸೂಚನೆಗಳನ್ನು ಜಾರಿಯಲ್ಲಿ ತರಲು ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳು ಯತ್ನಿಸಬೇಕಾಗಿ ನಮ್ಮ ಆಗ್ರಹದ ವಿನಂತಿಯಾಗಿದೆ.

ವರ್ತಮಾನ.

ತಾರೀಕು ೨೮ ರಲ್ಲಿ ಕೂಡಿಗೆಯಲ್ಲಿ ನಡೆದ ಕೋಳಿ ಪ್ರದರ್ಶನದಲ್ಲಿ ಶ್ರೀ. ಯಾಲದಾಳು ಗಣಪತಿಯವರ ರೋಡ್ ಐಲೆಂಡ್ ಹುಂಜವು ಪ್ರಥಮ ಬಹುಮಾನ ಪಡೆದುದಲ್ಲದೆ ಮಿಸೆಸ್ ಬಿ. ಸಿದ್ದಣ್ಣ ಚಾಲೆಂಜ್ ಕಪ್ಪನ್ನೂ ಪಡೆಯಿತು.

ಜಂಬೂರು ಮಾಧ್ಯಮಿಕ ಶಾಲಾ ವಾರ್ಷಿಕೋತ್ಸವವು ತಾ. ೧೦ ರಲ್ಲಿ ಕೊಡಗು ಶಾಸನ ಸಭಾ ಅಧ್ಯಕ್ಷರಾದ ಶ್ರೀ. ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವದು.

ತಾರೀಕು ೧೮ ರಲ್ಲಿ ಸೋಮವಾರಪೇಟೆ ಮಹಿಳಾ ಸಹಕಾರ ಸಮಾಜ ಆಶ್ರಯದಲ್ಲಿ ಶ್ರೀ. ಸಿ. ಕೆ. ಕಾಳಪ್ಪನವರ ಅಧ್ಯಕ್ಷತೆಯಲ್ಲಿ ಸ್ತ್ರೀ ವಯಸ್ಕರ ರಾತ್ರಿ ಪಾಠಶಾಲೆಯೊಂದನ್ನು ತೆರೆಯಲಾಯಿತು. ಶಾಲೆಯಲ್ಲಿ ೨೦ ಜನ ಮಹಿಳೆಯರು ಅಕ್ಷರಾಭ್ಯಾಸ ಮಾಡುತ್ತಿರುವರು.

ಮರಗೋಡು ಗ್ರಾಮಸ್ಥರು ತಾರೀಕು ೩ ರಲ್ಲಿ ಅಭ್ಯತ್‌ಮಂಗಲದಲ್ಲಿ ಬೇಟೆಯಾಡುತ್ತಿದ್ದಾಗ್ಗೆ ಪಂಚನ ದೇವಯ್ಯ ಎಂಬವರು ಕಾಡುಕುರಿಯೊಂದಕ್ಕೆ ಹಾರಿಸಿದ ಗುಂಡು ಕಾಡುಕುರಿಯನ್ನು ಕೊಂದು ಬೇರೆಡೆ ನಿಂತಿದ್ದ ಪಂಚನ ಸೋಮಯ್ಯ ಎಂಬವರಿಗೆ ತಾಗಿ ಅವರು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು.

ತಾ. ೨೫ರಲ್ಲಿ ಶ್ರೀ ವರದರಾಜ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ವಯಸ್ಕ ಸ್ತ್ರೀಯರ ಶಿಕ್ಷಣ ಶಾಲೆಯೊಂದನ್ನು ಫ್ರೇಜರ್‌ಪೇಟೆಯಲ್ಲಿ ತೆರೆಯಲಾಯಿತು. ಶ್ರೀಗಳಾದ ವಸುಮತಿ, ಕೆ. ರಾಮರಾವ್, ಕೆ. ಎನ್ ಚಂದ್ರಶೇಖರ, ಮತ್ತು ಎಲ್. ಕೆ. ನಿಸಕಂಠ ಮೊದಲಾದವರು ಭಾಷಣ ಮಾಡಿದರು.

ಸಂಪಾಜೆ ಗ್ರಾಮದ ಶ್ರೀ. ಸಣ್ಣಯ್ಯ ಪಟೇಲರು ಕಳೆದ ನಲುವತ್ತು ವರ್ಷಗಳಿಂದ ಪಟೇಲರಾಗಿದ್ದು ಪಟೇಲಿಕೆಯಿಂದ ನಿವೃತ್ತರಾದ ಬಗ್ಗೆ ಅವರ ಉತ್ತಮ ಕೆಲಸವನ್ನು ಲೆಕ್ಕಿಸಿ ಅವರಿಗೆ ತಾ. ೨೮ ರಲ್ಲಿ ಚೀಫ್ ಕಮೀಷನರು ಚಿನ್ನದ ಸನದೊಂದನ್ನು ಗೌರವಾರ್ಥವಾಗಿ ಕೊಟ್ಟರು.

> ೧೯೫೦ ನೇ ಜನವರಿ ತಿಂಗಳಲ್ಲಿ ಗೋಣಿಕೊಪ್ಪಲಲ್ಲಿ ನಡೆದ ಚುನಾವಣಾ ಮೀಟಿಂಗಿನಲ್ಲಿ ಗಲಭೆ ಮಾಡಿದರೆಂಬ ಅಪಾದನೆಯ ಮೇರೆ ಪ್ರತ್ಯೇಕ ಪಕ್ಷದ ೨೯ ಜನರ ಮೇಲೆ ಹೂಡಲಾಗಿದ್ದ ಕೇಸಿನಿಂದಾಗಿ ದೇಶದಲ್ಲಿ ಮನಸ್ತಾಪಗಳು ಹೆಚ್ಚಿ ಐಕ್ಯತೆಗೆ ತೊಂದರೆ ಉಂಟಾಗುವದೆಂಬ ಸದುದ್ದೇಶದಿಂದ ದೇಶದ ಹಿತಚಿಂತಕರಾದ ಕೆಲವರು ಕೊಡಗಿನ ಮಂತ್ರಿ ಮಂಡಳವನ್ನು ಕಂಡು ಈ ವಿಚಾರ ಮಾತಾಡಿ ಸಂಧಾನ ನಡೆಸಿದ ಪ್ರಕಾರ ಅಪಾದಿತರೆಂದು ಕರೆಯಲ್ಪಟ್ಟಿದ್ದ ೨೯ ಜನರು ತಾವು ತಪ್ಪಿತಸ್ಥರಲ್ಲವೆಂದೂ, ಆದರೆ ದೇಶದ ಹಿತದೃಷ್ಟಿಯಿಂದ ಕೇಸನ್ನು ಹಿಂತೆಗೆದುಕೊಳ್ಳುವಂತೆ ಸರಕಾರದೊಂದಿಗೆ ಸಂಧಾನ ನಡೆಸಿದ ಮಹನೀಯರ ಅಭಿಮತದಂತೆ ಕೇಸನ್ನು ಹಿಂತೆಗೆದು ಕೊಡಬೇಕೆಂದು ಅಭಿಪ್ರಾಯಪಡುವದಾಗಿಯೂ ಬರೆದು ತಿಳಿಸಿದಂತೆ ಸರಕಾರವು ಕೇಸನ್ನು ಹಿಂತೆಗೆದುಕೊಂಡಿರುವದೆಂದು ತಿಳಿಯಬಂದಿದೆ. ಈ ಸಂಬಂಧದ ಪತ್ರವ್ಯವಹಾರವನ್ನು ಮುಂದಿನ ವಾರ ಪ್ರಕಟಿಸಲಾಗುವದು.

ಕೊಡಗು ಸರಕಾರದ ಈ ವರ್ಷದ ಬಡ್ಜೆಟ್ಟಿನ ವಿಚಾರ ಇಂಡಿಯಾ ಸರಕಾರದೊಡನೆ ಮಾತುಕತೆ ನಡೆಸಲು ಕೊಡಗಿನ ಮುಖ್ಯ ಮಂತ್ರಿಯವರು ತಾ. ೩ ರಲ್ಲಿ ಡೆಲ್ಲಿಗೆ ಹೋಗಿರುವರು. ಅವರ ಜೊತೆಯಲ್ಲಿ ಬರಪೊಳೆ ವಿದ್ಯುಚ್ಛಕ್ತಿ ಯೋಜನೆಯನ್ನು ಮುಕ್ತಾಯಗೊಳಿಸಲು ಒಪ್ಪಿದ ಮೈಸೂರಿನ ನಿವೃತ್ತ ಇಂಜಿನಿಯರಾದ ಶ್ರೀ. ಎಂ. ನರಸಿಂಹಯ್ಯನವರು ಕೊಡಗು ಸರಕಾರದ ಕೇಳಿಕೆ ಮೇರೆ ಡೆಲ್ಲಿಗೆ ಹೋಗಿರುವರು.

ತಾರೀಕು ೨೮ ರಲ್ಲಿ ಅತ್ತೂರು, ನಲ್ಲೂರು, ಹೊಸಕೋಟೆ ಗ್ರಾಮಸ್ಥರು ಜೊತೆಸೇರಿ ಕಂಬಿಬಾಣೆ ಶ್ರೀರಾಮಮಂದಿರದಲ್ಲಿ ಸತ್ಯನಾರಾಯಣ ಪೂಜೆಯೊಂದನ್ನು ಒಗ್ಗಟ್ಟಾಗಿ ಮಾಡಿಸಿ ಗ್ರಾಮದ ಮಹಿಳೆ ಮಹನಿಯರಿಗೆಲ್ಲಾ ಪ್ರಸಾದ ಹಂಚಿದರು.

ದಿವಂಗತ ಶ್ರೀ. ಸಿ. ಎನ್. ವೆಂಕಟಯ್ಯನವರ ಸ್ಮಾರಕ ಸಮಿತಿಯ ಸಭೆಯು ತಾ. ೨೭ ರಲ್ಲಿ ಮಡಿಕೇರಿಯಲ್ಲಿ ನಡೆದು ಅವರ ಹೆಸರಿನಲ್ಲಿ ಮಡಿಕೇರಿಯಲ್ಲಿ ಕಾಂಗ್ರೆಸ್ ಭವನ ಒಂದನ್ನು ಕಟ್ಟಲು ರೂ. ೨೦೦೦೦ ಸಂಗ್ರಹಿಸುವಂತೆ ನಿಶ್ಚಯಿಸಲಾಯಿತೆಂದೂ ಮೀಟಿಂಗಿನಲ್ಲಿ ಸುಮಾರು ೨೦೦೦ ರೂಪಾಯಿಗಳ ವಾಗ್ದಾನ ದೊರೆಯಿತೆಂದೂ ತಿಳಿಯಬರುತ್ತದೆ.

ಸೋಮವಾರಪೇಟೆಯಲ್ಲಿ ನಡೆಯುತ್ತಿರುವ ಪಾಂಡಂಡ ನಂಜಪ್ಪ ಮೆಮೋರಿಯಲ್ ಟೂರ್ನಮೆಂಟಿನ ಏಳು ಜನರ ಕಡೇ ಆಟವು ಮಡಿಕೇರಿ ಸ್ಪೋರ್ಟ್ಸ್ ಕ್ಲಬ್ ಮತ್ತು ಸೋಮವಾರಪೇಟೆ ಇನ್ನೇ ಸೋಮವಾರ ಸಾಯಂಕಾಲ ನಡೆ

ಯುವುದು. ಗೃಹ ಮಂತ್ರಿಗಳು ಬಹುಮಾನವನ್ನು ಹಂಚುವರು. ಈ ವರೆಗೆ ನಡೆದ ಇಷ್ಟರ ಆಟದಲ್ಲಿ ವೀರಾಜಪೇಟೆಯ ಆಜಾದ್ ಟೀಮಿನವರು ಗೆದ್ದಿರುವರು.

ಬರಪೊಳೆಯ ವಿದ್ಯುಚ್ಛಕ್ತಿ ಯೋಜನೆಯ ಬಗ್ಗೆ ಕೊಡಗು ಸರಕಾರಕ್ಕೆ ತಜ್ಞ ಸಲಹೆ ಕೊಡಲು ಬೆಂಗಳೂರು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸಯನ್ಸ್ ಸಂಸ್ಥೆಯ ಡೈರೆಕ್ಟರರಾದ ಪ್ರೊ. ಎಂ. ಎಸ್. ಥಾಕರ್, ಮೈಸೂರಿನ ನಿವೃತ್ತ ಮುಖ್ಯ ಇಂಜಿನಿಯರಾದ ಶ್ರೀ ಎಂ. ನರಸಿಂಹಯ್ಯ ಮತ್ತು ಬೆಂಗಳೂರು ಸಯನ್ಸ್ ಸಂಸ್ಥೆಯ ಹೈಡ್ರೋ ಇಲೆಕ್ಟ್ರಿಕ್ ಇಂಜಿನಿಯರಿಂಗ್ ಶಾಖೆಯ ಪ್ರೊಫೆಸರರಾದ ಎಸ್. ಎಸ್. ಗೋವಿಂದರಾವ್ (ಇವರು ಕಾರ್ಯದರ್ಶಿ) ಇವರಿಂದ ಕೂಡಿದ ಒಂದು ಬೋರ್ಡನ್ನು ನೇಮಿಸಲಾಗಿದೆ. ಇವರೆಲ್ಲರೂ ಮುಫತ್ತಾಗಿ ಕೆಲಸ ಮಾಡಲು ಒಪ್ಪಿರುವರೆಂದೂ ಕೆಲಸದ ನಿಮಿತ್ತ ಕೊಡಗಿಗೆ ಬಂದಾಗ ಇವರನ್ನು ಸರಕಾರದ ಅತಿಥಿಗಳೆಂದು ಪರಿಗಣಿಸಲಾಗುವುದೆಂದೂ ತಿಳಿದುಬಂದಿದೆ.

ಕಾರ್ಮಿಕ ಮಂತ್ರಿ ಮಂಡಳವು ನಡೆಸುತ್ತಿರುವ ಔದ್ಯೋಗಿಕ ಮತ್ತು ಟೆಕ್ನಿಕಲ್ ತರಬೇತು ಕೇಂದ್ರಗಳಲ್ಲಿ ತರಬೇತನ್ನು ಹೊಂದಲಿಚ್ಛಿಸುವ ಮಾಜಿ ಸೈನಿಕರಿಗೆ ತರಬೇತು ಮುಗಿಯುವ ವರೆಗೆ ತಿಂಗಳಿಗೆ ರೂ. ೩೫ ರಂತೆಯೂ, ಮತ್ತು ಇಂಡಸ್ಟ್ರಿಯಲ್ ಎಪ್ರೆಂಟಿಶಿಪ್ ತರಬೇತಿಗೆ ತಿಂಗಳಿಗೆ ರೂ. ೩೦ ರಂತೆಯೂ ಸ್ಟೈಫಂಡ್ ಕೊಡುವ ಅಭಿಪ್ರಾಯವಿದೆ. ಒಟ್ಟು ೩೬ ಟೆಕ್ನಿಕಲ್ ವಿಷಯಗಳಲ್ಲಿಯೂ ಮತ್ತು ೨೭ ಔದ್ಯೋಗಿಕ ವಿಷಯಗಳಲ್ಲಿಯೂ ತರಬೇತು ದೊರೆಯುವುದು. ಸೇರಲಿಚ್ಛಿಸುವವರು ಇದಕ್ಕೆ ಸಂಬಂಧಿಸಿದ ವಿಷಯಗಳನ್ನು "ಸೆಕ್ರೆಟರಿ ಡಿ. ಎಸ. ಎಸ್. ಅಂಡ್ ಎ. ಬೋರ್ಡ್ ಮಡಿಕೇರಿ" ಇವರ ಆಫೀಸಿನಿಂದ ತಿಳಿದುಕೊಂಡು ಈ ಮಾರ್ಚ್ ತಿಂಗಳ ಅಂತ್ಯದೊಳಗೆ ತಮ್ಮ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ತಾ. ೫ರಲ್ಲಿ ಶ್ರೀ ಕೆ. ಎಸ್. ವೀರಪ್ಪನವರ ಅಧ್ಯಕ್ಷತೆಯಲ್ಲಿ ಕಿತ್ತೂರು ಗ್ರಾಮದಲ್ಲಿ ಮಹಿಳಾ ಸಮಾಜ ತರಗತಿಯನ್ನು ತೆರೆಯಲಾಯಿತು.

ತಾ. ೧೩ರಲ್ಲಿ ಶ್ರೀ ಬಸಪ್ಪನವರ ಅಧ್ಯಕ್ಷತೆಯಲ್ಲಿ ಬಾಣಾವರದಲ್ಲೂ, ತಾ ೧೬ರಲ್ಲಿ ಸಂಪಾಜೆಯಲ್ಲಿ ಶ್ರೀ ಸಂಣಯ್ಯನವರ ಅಧ್ಯಕ್ಷತೆಯಲ್ಲಿ, ತಾ. ೨೦ರಲ್ಲಿ ಸಿಲುವಾಗಿಲಿನಲ್ಲಿ ಶ್ರೀ ಎಂ. ಎಸ್. ನಾರಾಯಣರಾವ್ ಇವರ ಅಧ್ಯಕ್ಷತೆಯಲ್ಲೂ ಸಮಾಜ ಶಿಕ್ಷಣ ಶಾಲೆಗಳು ತೆರೆಯಲ್ಪಟ್ಟವು.

ಕೊಡಗು ಶಾಸನ ಸಭೆಯ ಎಪ್ರಿಲ್ ವಿಭಾಗವು ತಾ. ೨೭ರಿಂದ ಪ್ರಾರಂಭವಾಗುವದೆಂದು ತಿಳಿದುಬಂದಿದೆ.

ಸಿದ್ದಾಪುರದ ಬ್ಯಾಡ್ ಮಿಂಟನ್ ಕ್ಲಬ್

ತಾ. ೧೫—೨—೫೪ರಲ್ಲಿ ಸಿದ್ದಾಪುರದ ಬ್ಯಾಡ್‌ಮಿಂಟನ್ ಕ್ಲಬ್ಬಿನ ಆಶ್ರಯದಲ್ಲಿ ಸುರ್ಜಿ ಕಪ್ ಪಂದ್ಯಾಟದ ಕೊನೆಯ ಆಟವು (ಫೈನಲ್) ಸಿದ್ದಾಪುರದ ಕ್ಲಬ್ಬಿನವರಿಗೂ ಮತ್ತು ಮಡಿಕೇರಿ ಫ್ರೋರ್ಟ್ ಕ್ಲಬ್ಬಿನವರಿಗೂ ಜರುಗಿತು. ಕೊಡಗಿನ ಎಸೆಂಬ್ಲಿಯ ಅಧ್ಯಕ್ಷರಾದ ಶ್ರೀಮಾನ್ ಬಿ. ಎಸ್. ಕುಶಾಲಪ್ಪನವರು ಅಂದಿನ ಸಮಾರಂಭಕ್ಕೆ ಅಧ್ಯಕ್ಷರಾಗಿದ್ದರು. ಬಹುಮಾನ ವಿತರಣೆಯನ್ನು ಶ್ರೀಮತಿ ಬಿ. ಎಸ್. ಕುಶಾಲಪ್ಪನವರು ಜರುಗಿಸಿದರು. ಆ ದಿನ ಆಟದಲ್ಲಿ ಮಡಿಕೇರಿ ಫ್ರೋರ್ಟ್ ಕ್ಲಬ್ಬಿನವರು ಜಯಶೀಲರಾಗಿ ಕಪ್ಪನ್ನು ಪಡೆದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕೊಡಗಿನಲ್ಲಿ ಇಂಥಾ ಪಂದ್ಯಾಟಗಳನ್ನು ಆಗಾಗ ಜರುಗಿಸಿ ಕ್ರೀಡಾ ರಂಗದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸುವಂತೆ ಕೇಳಿಕೊಂಡರು. ಸೆಕ್ರೆಟರಿಯವರಾದ ಶ್ರೀ ವಿ. ಆರ್. ಜನಾರ್ದನವರು ಅಧ್ಯಕ್ಷರಿಗೂ, ನೆರೆದ ಸಭಿಕರಿಗೂ ವಂದನೆಗಳನ್ನು ಅರ್ಪಿಸಿದರು. ಈ ಪಂದ್ಯಾಟವನ್ನು ಜರುಗಿಸಲು ಕಾರಣಭೂತರಾಗಿ ಉದಾರವಾಗಿ ಬೆಳ್ಳಿಯ ಬಟ್ಟಲುಗಳನ್ನು ಕೊಟ್ಟಂಥಾ ಶ್ರೀ ಸುರ್ಜಿ ದೊರೆಗಳಿಗೆ ಅನಂತ ವಂದನೆಯನ್ನು ಅರ್ಪಿಸಿದರು.

॥ ಮಧುಪರ್ಕ ॥

ಡೆಲ್ಲಿಯಲ್ಲಿ ನಡೆದ ಸಂಗತಿ. ಒಬ್ಬ ಹೆಂಗಸಿಗೆ ತೀರಾ ಕೊನೆಯ ಕಾಲ. ರೋಗಕ್ಕೆ ಸೋಲದೆ ಹೋರಾಡಿ ಆಕೆ ಬಳಲಿ ಹೋಗಿದ್ದಳು. ಈ ಲೋಕದ ಸಂಬಂಧ ಹರಿದಂತೆ ಆಗಿತ್ತು. ಶರೀರದಲ್ಲಿ ಬರೇ ಉಸಿರೊಂದು ಆಡುತ್ತಿತ್ತು. ಪರಲೋಕ ಸೋಪಾನವೆಂದು ರಾಮನಾಮ ಆಕೆಯ ಬಾಯಿಂದ ಹೊರಡುತ್ತಿತ್ತು. ಇಹವನ್ನು ಬಿಡುವಾಗ ಗಾಂಧೀಜಿಯನ್ನು ನೋಡಿ ಕಣ್ಣುಮುಚ್ಚಬೇಕೆಂದು ಆಕೆಯ ಅಭಿಲಾಷೆಯಾಗಿತ್ತು.

ಆದರೆ ಆಗ ಗಾಂಧೀಜಿ ಡೆಲ್ಲಿಯಲ್ಲಿರಲಿಲ್ಲ. ಆಕೆಯ ಸುತ್ತಲಿದ್ದವರು ಆಕೆಗೆ ನಿರಾಶೆಯಾದೀತೆಂದು "ದೇವರ ಇಚ್ಛೆಯಿದ್ದರೆ ಗಾಂಧೀಜಿಯ ದರ್ಶನವಾದೀತೆಂದು" ಧೈರ್ಯ ಹೇಳುತ್ತಿದ್ದರು. ಎರಡು ದಿನದಲ್ಲೇ ಕಾನ್‌ಪುರದಿಂದ ಅಲಹಬಾದಿಗೆ ಗಾಂಧೀಜಿ ಡೆಲ್ಲಿಯ ಮಾರ್ಗವಾಗಿ ಹೋಗುತ್ತಾರೆಂಬ ವರ್ತಮಾನ ಬಂತು. ಅವರು ಬರುವ ರೈಲು ಬೆಳಿಗ್ಗೆ ನಾಲ್ಕು ಗಂಟೆಗೆ ಡೆಲ್ಲಿಗೆ ಬರುತ್ತಿತ್ತು. ಡೆಲ್ಲಿಯಿಂದ ಆಕೆ ಇರುವ ಸ್ಥಳಕ್ಕೆ ೧೦ ಮೈಲು ದೂರವಿತ್ತು. ರೈಲು ಒಂದು ಗಂಟೆ ಡೆಲ್ಲಿಯಲ್ಲಿ ನಿಲ್ಲುತ್ತಿತ್ತು. ಈ ಅವಧಿಯಲ್ಲಿ ಡೆಲ್ಲಿಯ ಸಹಿಸಲಸಾಧ್ಯವಾದ ಚಳಿಯಲ್ಲಿ ಆಕೆಯನ್ನು ನೋಡಿ ಬರುವದು ಸಾಧ್ಯವಿರಲಿಲ್ಲ.

ಗಾಂಧೀಜಿ ಬೆಳಿಗ್ಗೆ ನಾಲ್ಕು ಗಂಟೆಗೆ ರೈಲಿನಿಂದಿಳಿದರು. ಶ್ರೀ ಘನಶ್ಯಾಮದಾಸ ಬಿರ್ಲಾರವರು ಅಂಜುತ್ತಾ ಕೇಳಿದರು. "ಈ ದಿನ ಇಲ್ಲಿ ನಿಲ್ಲಲು ಸಾಧ್ಯವಿಲ್ಲವೆ?" ಬಹಳ ಕಷ್ಟವೆಂದು ಗಾಂಧೀ ಹೇಳಿದರು. ಬಿರ್ಲಾರವರ ಮೋರೆ ಬಾಡಿತು.

"ನಾನೇಕೆ ನಿಲ್ಲಬೇಕು. ಏನು ಸಮಾಚಾರ" ಗಾಂಧಿ ಕೇಳಿದರು. ಘನಶ್ಯಾಮದಾಸರು ಇದ್ದ ಸಂಗತಿ ತಿಳಿಸಿದರು. "ಚಲೋ ಅಭಿ ಚಲೋ" ಎಂದರು ಗಾಂಧೀಜಿ.

"ಚಳಿ ಮಣ್ಣಿಗೆ ಕೊರೆಯುತ್ತಿದೆ. ಇಪ್ಪತ್ತು ಮೈಲು ಪ್ರಯಾಣ ಹೇಗೆ ಮಾಡಿಸಲಿ?" ಎಂದರು ಬಿರ್ಲಾ. ಗಾಂಧೀಜಿಗೆ ಕಾಲಹರಣ ಸರಿಕಾಣಲಿಲ್ಲ. "ಅದೆಲ್ಲ ಚಿಂತೆಯಿಂದ ಪ್ರಯೋಜನವಿಲ್ಲ. ಮೋಟಾರು ತನ್ನಿ" ಎಂದರು. ಗಾಳಿ ಚಳಿ ಎರಡೂ ಬಲವಾಗಿದ್ದವು. ಹೊತ್ತು ಇನ್ನೂ ಹುಟ್ಟಿರಲಿಲ್ಲ. ಸುತ್ತಲೂ ಶಾಂತಿ ತುಂಬಿತ್ತು.

ರೋಗಿ ಹೆಂಗಸು ರಾಮನಾಮ ಜಪ ಮಾಡುತ್ತಾ ಹಾಸಿಗೆಯಲ್ಲಿ ಬಿದ್ದಿದ್ದಳು. 'ಗಾಂಧೀಜಿ ಬಂದಿದ್ದಾರಮ್ಮಾ' ಎಂದರು ಬಿರ್ಲಾರವರು. ಆಕೆ ಮೊದಲು ನಂಬಲಿಲ್ಲ. ಎಲ್ಲಾದರೂ ಉಂಟೆ? ಮಾನವ ಜೀವದ ಬಯಕೆ ಎಷ್ಟೇ ದೊಡ್ಡದಿದ್ದರೂ ಹೀಗೆ ಸುಲಭವಾಗಿ ಕೈಗೂಡುವದುಂಟೆ? ಆಕೆ ಪ್ರಯತ್ನಪೂರ್ವಕವಾಗಿ ಎದ್ದು ಕೂಡಲು ಬಯಸಿದಳು. ಮೈಯಲ್ಲಿ ಪ್ರಾಣವೇ ಇರಲಿಲ್ಲ. ಕಣ್ಣಿನಿಂದ ಎರಡು ಹನಿಗಳು ಉದುರಿದವು. ತನ್ನ ಪ್ರಾರ್ಥನೆ ನೆರವೇರಿತೆಂದು ಆಕೆಗೆ ಬಲು ಹರುಷವಾಯಿತು. ಆಕೆಯ ಕಣ್ಣಿನಲ್ಲಿ ಆನಂದದ ಮಿಂಚು ಕಾಣುತಿತ್ತು.

ಹಿಂದಿರುಗಿ ಗಾಂಧೀಜಿ ಬರುವಾಗ ರೈಲು ಹೊರಟು ಹೋಗಿತ್ತು. ಮೋಟಾರಿನಲ್ಲೇ ಮುಂದಿನ ಸ್ಟೇಶನಿಗೆ ತಲಪಿಸಿ ಗಾಡಿ ಹಿಡಿದುದಾಯಿತು. ಗಾಂಧೀಜಿಗೆ ತುಂಬಾ ಆಯಾಸವಾಗಿತ್ತು. ಸಾವಿನ ಮಡಿಲಲ್ಲಿದ್ದ ಜೀವಕ್ಕೆ ಶಾಂತಿ ಸಮಾಧಾನ ದೊರೆಯಿತಲ್ಲ ಎಂಬ ಉತ್ಸಾಹದಲ್ಲಿ ಅದರ ಆಯಾಸವನ್ನು ಮರೆತಿದ್ದರು.

ಗಾಂಧೀದರ್ಶನದಿಂದ ಶಾಂತಿಯನ್ನು ಪಡೆದ ಆಕೆ ಸ್ವಲ್ಪ ಸಮಯದಲ್ಲೇ ಚಿರಶಾಂತಿಯನ್ನು ಪಡೆದಿದ್ದಳು.

ಅಖಿಲ ಕೊಡಗು ಜಾನುವಾರು ಪ್ರದರ್ಶನ.

ಈ ವರ್ಷ ಪ್ರದರ್ಶನವು ಕೊಡಗಿನ ವ್ಯವಸಾಯ ಪರಿಶೋಧನಾ ಕೇಂದ್ರದಲ್ಲಿ ನಡೆಯಿತು. ದನ, ಕೋಳಿ, ಹಣ್ಣು ಹಂಪಲುಗಳ ಪ್ರದರ್ಶನ ಚೆನ್ನಾಗಿ ಏರ್ಪಡಿಸಲ್ಪಟ್ಟಿತ್ತು. ಈ ವರ್ಷ ವ್ಯವಸಾಯಕ್ಕೆ ಅನುಕೂಲವಾದ ಟ್ರಾಕ್ಟರು, ಪಂಪು, ಮೊದಲಾದ ಯಂತ್ರಗಳ ಪ್ರದರ್ಶನವನ್ನು ಫರ್ಗೂಸನ್, ಕಿರ್ಲೋಸ್ಕರ್ ಮೊದಲಾದ ಕಂಪೆನಿಯವರೂ, ಗೊಬ್ಬರ ಇತ್ಯಾದಿಗಳ ಪ್ರದರ್ಶನವನ್ನು ಕಾಂಟಿನೆಂಟಲ್ ಪಾರ್ಸನ್ಸರೂ ಏರ್ಪಡಿಸಿದ್ದರು.

ಸಮ್ಮೇಳನದ ಅಧ್ಯಕ್ಷತೆಯನ್ನು ಚೀಫ್ ಕಮಿಷನರರಾದ ಬೇಡಿಯವರು ವಹಿಸಿದ್ದರು. ಮೇಡಂ ಬೇಡಿಯವರು ಬಹುಮಾನಿತರಾದವರಿಗೆ ಬಹುಮಾನ ಹಂಚಿದರು. ಮದ್ರಾಸಿನ ವೆಟರಿನರಿ ಅಧಿಕಾರಿಯಾಗಿದ್ದು ನಿವೃತ್ತರಾದ ಡಾ. ವಿನಾಯಕ ಮೊದಲಿಯಾರರು ಭಾಷಣ ಮಾಡುತ್ತಾ ಕೊಡಗಿನಂತೆ ಬೆಟ್ಟ ಗುಡ್ಡ ಪ್ರದೇಶವಾದ ಅಣ್ಣಾಮಲೆಯಲ್ಲಿ ಒಂದು ಜಾತಿಯ ದನಗಳು ಚೆನ್ನಾಗಿ ಬೆಳೆದು ಬಹು ಉಪಯೋಗಕರವೆಂದು ಕಂಡುಬಂದಿದೆ. ಆ ಜಾತಿಯ ದನಗಳನ್ನು ಕೊಡಗಿನಲ್ಲಿ ಸಾಕುವುದು ಲಾಭದಾಯಕವಾಗುವದೆಂದರು. ಅಧ್ಯಕ್ಷರೂ ಮಾತನಾಡುತ್ತಾ ಕೊಡಗೆಯು ಇಂಥಾ ಪ್ರದರ್ಶನಗಳಿಗೆ ಉತ್ತಮ ಸ್ಥಳವೆಂದೂ, ಪ್ರದರ್ಶನದ ಏರ್ಪಾಡು ಚೆನ್ನಾಗಿತ್ತೆಂದೂ ಹೇಳಿದರು.

ಮಾರಾಟಕ್ಕಿದೆ.

ಮಡಿಕೇರಿಯಲ್ಲಿ ಹೊಸ ಕಾಲೇಜು ಕಟ್ಟಡದ ಬಳಿ ಸಾಗುವಳಿಯಾಗುತ್ತಿರುವ ನನ್ನ ಸ್ವಯಾರ್ಜಿತ ಆಸ್ತಿಯಾದ 5 ಎಕ್ರೆ ನೀರಾವರಿ ಭೂಮಿ, ಇದಕ್ಕೆ ಸೇರಿದ 8 ಎಕ್ರೆ ಜಾಗ ಮತ್ತು ವಾಸಕ್ಕೆ ಯೋಗ್ಯವಾದ ಹಂಚು ಹಾಕಿದ ಮನೆ ಅಲ್ಲದೆ, ಇದೇ ಬ್ಲಾಕಿನಲ್ಲಿ ಪ್ರತ್ಯೇಕವಾಗಿ ನನ್ನ ಒಂದು ಎಕರೆ ಜಾಗ ಮತ್ತು ಹುಲ್ಲಿನ ಮನೆ ಸ್ಥಿರ ಮಾರಾಟಕ್ಕಿದೆ.

ಸ್ಥಳವು ಕಾನ್ವೆಂಟಿಗೂ ಮತ್ತು ಕಾಲೇಜಿಗೂ ಸಮೀಪವಾಗಿರುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದೆ. ಬಾಗದ ಕಿತ್ತಳೆ ಮತ್ತು ಕಾಫಿ ಬೆಳೆಸಲು ಉತ್ತಮವಾಗಿದೆ ಹಾಗೂ ದನಕರುಗಳನ್ನು ಸಾಕಲು ಯೋಗ್ಯವಾದ ಆವರಣವಾಗಿದೆ. ಖಾಯಿಸ್‌ದಾರರು ಉಭಯ ಆಸ್ತಿಗಳನ್ನು ಒಟ್ಟಾಗಿಯಾಗಲೀ, ಬೇರೆ ಬೇರೆಯಾಗಲೀ ಕೊಂಡುಕೊಳ್ಳುವ ಅನುವಿದೆ. ಹೆಚ್ಚಿನ ವಿವರಗಳನ್ನು ಖುದ್ದು ನೋಡಿಯಾಗಲೀ ಇಲ್ಲವೇ ಪತ್ರ ಮೂಲಕ ಕೆಳಗಿನ ವಿಳಾಸದಿಂದರಿಂದ ತಿಳಿದುಕೊಳ್ಳಬಹುದು.

ಎಸ್. ಎಂ. ಬೋಪಯ್ಯ,
ಮಾಸ್ಟರ್ ಟೈಲರ್,
3-1 ಚೌಕ್, ಮಡಿಕೇರಿ.

ಕೃತಜ್ಞತಾ ವಂದನೆ

ಜನವರಿ ತಾ. 21ರಲ್ಲಿ ಅಕಾಲ ಮರಣಕ್ಕೆ ತುತ್ತಾದ ನನ್ನ ಪುತ್ರನೂ ಹಾಗೂ ಜೂಬಿಯಾದ ನನ್ನ ಪತಿಯೂ ಆದ ಚೆಂಗಪ್ಪನವರ ವಿಯೋಗ ಕಾಲದಲ್ಲಿ ಖುದ್ದಾಗಿ ಬಂದು ಮತ್ತು ಪತ್ರ ಮುಖೇನ ನಮ್ಮ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರಿಗೆ ಪ್ರತ್ಯೇಕ ಪ್ರತ್ಯೇಕ ಬರೆದು ನಮ್ಮ ಕೃತಜ್ಞತೆಯನ್ನರ್ಪಿಸುವುದು ಅಸಾಧ್ಯವಾದ ಕಾರಣ ಅವರೆಲ್ಲರಿಗೆ ಈ ಮೂಲಕ ನಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸುತ್ತೇವೆ.

ಚೆಪ್ಪುಡೀರ ಮಿಸೆಸ್ ಬಿದ್ದಪ್ಪ,
ಚೆಪ್ಪುಡೀರ ಮಿಸೆಸ್ ಚೆಂಗಪ್ಪ.

ಓದುಗರ ಓಲೆಗಳು

ಬಂಧಪಟ್ಟ ಅಧಿಕಾರಿಯವರ ಕಣ್ಣಿಗೆ ಮಣ್ಣೆರಚಲು ಹಿಂಜರಿಯುವರೆ? ಇದು ಯಾವ ದೇಶಸೇವೆ? ಅಯ್ಯಾ, ಸೆಕ್ರೆಟರಿಯವರೇ, ಸೀಲು ಇಲ್ಲದ ಅಳತೆಯಲ್ಲಿ ಬತ್ತ ಮತ್ತು ಅಕ್ಕಿಯನ್ನು ಮಾರಿದ್ದು ನಿಜವಾಗಿದ್ದರೆ ಅವರೂ ಸಹ ಪ್ರಜಾ ಸರಕಾರದ ಒಬ್ಬ ಪ್ರಜೆಯೋ? ಅಂಥವರು ಗೋಣಿಕೊಪ್ಪಲಲ್ಲಿ ನಡೆಯುತ್ತಿರುವ "ಪರಾಶಕ್ತಿ" ಮತ್ತು "ವೇಲೆಕಾರನ್" ಚಿತ್ರಗಳನ್ನು ದಯವಿಟ್ಟು ಒಂದಾವರ್ತಿ ಕುಟುಂಬದೊಡನೆ ನೋಡಬೇಕೆಂದು ತಿಳಿಸುವಿರಾ?

—ಬಡ ರೈತ

ಕುಟ್ಟ ಮೋಟಾರ್ ಬಸ್

ಈ ಬಸ್ಸಿಗೆ ಮೆಯಿಲ್ ಪೆಟ್ಟಿಗೆ ಇಲ್ಲ. ಪೆಟ್ಟಿಗೆ ಇದ್ದರೆ ಬೀಗ ಇರುವುದಿಲ್ಲ. ಕಾಗದ ತೋರಿಸಿದರೆ ಸಂಬಂಧಪಟ್ಟವರು ಕೈಯಿಂದ ಕೇಳಿಕೊಂಡು ಕಿಸೆಗೆ ಹಾಕಿಕೊಳ್ಳುತ್ತಾರೆ. ಪೆಟ್ಟಿಗೆಗೆ ಹಾಕಬೇಕೆಂಬ ಹಟ ಹಿಡಿದು ಒಮ್ಮೆ ನೋಡುವಾಗ ಅದರೊಳಗೆ ಕೆಲವು ಹಸಿ ಮೀನು ಇತ್ತಂತೆ. ಕೊಟ್ಟ ಪತ್ರಗಳು ತಲಪದ ನಿದರ್ಶನಗಳು ಅದೆಷ್ಟೋ ಇವೆ. ಇದರಿಂದ ಕಾಗದದ ಸ್ಟಾಂಪುಗಳು ಮಾಯವಾಗಬಹುದು. ಇದೆಲ್ಲವನ್ನು ಲಕ್ಷಿಸಿ ನಿಜವಾದ ಪಕ್ಷ ಸಂಬಂಧಪಟ್ಟವರು ಬೇಗ ಇಡಬೇಕು.

'ಕೈ ಪೋಸ್ಟು.'

ಕೊಡಗು ಜಿಲ್ಲಾ ವಿದ್ಯಾಧಿಕಾರಿಗಳ ಅವಾಂತರವೇ ಯಾ ಅಧಿಕಾರ ದುರುಪಯೋಗವೇ?

ನಾನು ಒಬ್ಬ ವಿದ್ಯಾರ್ಜಿತ, ಸುಶಿಕ್ಷಿತ ಹುಡುಗಿಯ ತಂದೆ. ನಾನು ಸ್ಕೂಲ್ ಡಿಪಾರ್ಟ್‌ಮೆಂಟಿನಲ್ಲಿ ೩೦ ವರ್ಷ ಸರ್ವಿಸು ಮಾಡಿರುತ್ತೇನೆ. ನನ್ನ ಒಬ್ಬ ಮಗಳನ್ನು ಒಂದು ಶಾಲೆಯಲ್ಲಿ ಕೆಲಸ ಕಾಲಿ ಬಿದ್ದ ಸಂದರ್ಭ ನೋಡಿ ಜಿಲ್ಲಾ ವಿದ್ಯಾಧಿಕಾರಿಗಳಲ್ಲಿ ಈ ಸಂದರ್ಭವನ್ನು ಕುರಿತು ಮಾತಾಡಿದೆನು. ಅವರು ಬಹು ಸಭ್ಯತೆಯ ಮಾತಿನಂತೆ "ಖಾಲಿ ಇರುವ ಸ್ಥಳವನ್ನು ಹುಡುಗಿಯರಿಗೆ ಕೊಡುವದಿಲ್ಲ"ವೆಂದರು. ಆದರೆ ನನ್ನ ಮಗಳಿಗಿಂತಲೂ ಕಮ್ಮಿ ತರಗತಿಯ ಒಬ್ಬ ಹುಡುಗಿಗೇನೇ ಕೊಟ್ಟರು! ವಿದ್ಯಾಧಿಕಾರಿಗಳ ಸತ್ಯನಿಷ್ಠೆ ಹೇಗಿದೆ? ಇನ್ನೊಂದು ಸಂದರ್ಭದಲ್ಲಿ ನನ್ನ ಮಗಳೇ ಹೋಗಿ ಮಾತಾಡಿದಾಗ ಅರ್ಜಿ ಬರೆಯಿರಿ ಎಂದು ಬಹು ದೊಡ್ಡ ಬಾಯಿ ತುಂಬಾ ಮಾತಾಡಿದರು. ಆದರೆ ಸದ್ಯಕ್ಕೆ ಮೂರು ನಾಲ್ಕು ಅರ್ಜಿಗಳ ಪೈಕಿ ತನ್ನ ಮೊದಲಿನ ವ್ಯಕ್ತಿಯನ್ನೇ ಶಿಫಾರಸು ಮಾಡಿರುವರೆಂದು ವದಂತಿ. ಬಾಕಿ ಅರ್ಜಿಗಳನ್ನು ತಳ್ಳಿರುತ್ತಾರಾಗಿ ವರ್ತಮಾನ. ಇದರಲ್ಲಿ ಇರುವ ರಹಸ್ಯವೆಂದರೆ—ಹುಡುಗಿಯರಿಗೆ ಪದರ ಸ್ಥಳವನ್ನು ವಹಿಸಲಾಗಿತಲಿಲ್ಲವೆಂದು ಹೇಳಿ ತಮಗೆ ಬೇಕಾದವರು ಹುಡುಗಿಯಾದರೂ ತೊಂದರೆ ಇಲ್ಲವೆಂಬ ತತ್ವವನ್ನು ಸಾಧಿಸಿದರು. ಈಗಲೂ ಅನರುಕೆಯೇ ಬಡವರ ಗೋಳು ಕೇಳುವವರಿಲ್ಲ. ವಿದ್ಯಾಧಿಕಾರಿಗಳು ವಿದ್ಯೆಗೆ ಸಲ್ಲಿಸುವ ಗೌರವ ಇದೆಯೇ?

ಹೇಳಿದ ಮಾತಿಗೆ ಹೆಂಡತಿ ಬಿಡಬಾರದು

ಕಳೆದ ವಾರದ ಪತ್ರಿಕೆಯಲ್ಲಿ 'ಕಾಲೇಜು ಹಾಸ್ಟಲಿನಲ್ಲಿ ದಬ್ಬಾಳಿಕೆ' ಎಂಬ ಲೇಖನವನ್ನು ಓದಿ ಹಾಸ್ಟಲಿನ ವಿದ್ಯಾರ್ಥಿಗಳಾದ ನಮಗೆ ಬಹಳ ಆಶ್ಚರ್ಯವಾಯಿತು. ಎಷ್ಟು ಸಲ ಆ 'ನೊಂದ ತಂದೆ'ಯು ಹಾಸ್ಟಲಿಗೆ ಬಂದು ಅಲ್ಲಿಯ ಆಗು ಹೋಗುಗಳನ್ನು ಗಮನಿಸಿರುವರು ಎಂಬುದನ್ನು ತಿಳಿಯಲು ಬಹಳ ಉತ್ಸುಕರಾಗಿರುವೆವು. ಅವರು ಗಮನಿಸಿದ್ದರೂ ಸಹ ತನ್ನ ಮಗನೊಬ್ಬನೇ ಹಾಸ್ಟಲಿನಲ್ಲಿರುವನೆಂದು ಭಾವಿಸಿಕೊಂಡಂತಿದೆ. 'ನೊಣ ತಿಂದು ಕುಲ ಕೆಡಿಸಿಕೊಂಡ' ಎಂಬ ನಾಣ್ಣುಡಿಯ ಪ್ರಕಾರ ಆ ನೊಂದ ತಂದೆಯು ಈ 'ದೊಡ್ಡ ಜೋರಯ್ಯ' ಕೆಲಸವನ್ನು ವಹಿಸಿಕೊಂಡು ತನ್ನ ಗೌರವವನ್ನಲ್ಲದೆ ತನ್ನ ಮಗನ ಮರ್ಯಾದೆಯನ್ನೂ ಕಳೆದುಕೊಂಡ ಹಾಗಾಯಿತು. ಹಾಸ್ಟಲಿನಲ್ಲಿ ನಡೆದ ನಿಜ ಸಂಗತಿಯನ್ನೇನೂ ಅರಿತುಕೊಳ್ಳದೆ ಟೀಕಿಸುವುದು ಘನತೆಗೆ ತಕ್ಕುದಲ್ಲ. ಬೋರ್ಡಿಂಗಿನಲ್ಲಿ ಸರ್ವಾಧಿಕಾರವೂ ಇಲ್ಲ; ಯಾವ ದಬ್ಬಾಳಿಕೆಯೂ ಇಲ್ಲ. ಈ ಹಾಸ್ಟಲಿನ ಮೇಲೆ ಅಷ್ಟೊಂದು ಮಮತೆ ಇದ್ದ ಪಕ್ಷದಲ್ಲಿ ಅವರು ಹಾಸ್ಟಲಿನ ವಿದ್ಯಾರ್ಥಿಗಳಿಂದಲೇ ನಿಜವಾದ ಸಂಗತಿಗಳನ್ನು ಕೂಲಂಕುಶವಾಗಿ ತಿಳಿದುಕೊಳ್ಳಬಹುದು. ಡೆಪ್ಯುಟಿ ವಾರ್ಡನರು ನಿಜವಾಗಿ ಪಾರ್ಟಿ ಪಂಗಡಗಳನ್ನು ಕಟ್ಟಿಕೊಂಡು ವರ್ತಿಸುವವರಾಗಿದ್ದಿದ್ದರೆ ಮೂರು ವರ್ಷಗಳಿಂದ ತಮ್ಮ ಜವಾಬ್ದಾರಿಯನ್ನು ಸುಸೂತ್ರವಾಗಿ ನಡೆಸಲು ಶಕ್ತರಾಗುತ್ತಿರಲಿಲ್ಲ. ಒಂದು ವಿಷಯವನ್ನು ಕಣ್ಣಾರೆ ಕಂಡರೂ ಸಹ ಪರಾಂಬರಿಸಿ ನೋಡಬೇಕು. ಆ 'ನೊಂದ ತಂದೆ'ಯು 'ಹೇಳಿದ ಮಾತಿಗೆ ಹೆಂಡತಿ ಬಿಡುವ'ನಂತೆ ಯಾವನೋ ಏನೋ ಹೇಳಿದ ಮಾತ್ರಕ್ಕೆ ಏನೇನೋ ಬರೆದದ್ದು ಬಹು ವ್ಯಸನಕರವಾದ ಸಂಗತಿಯು. ಇನ್ನು ಮುಂದಕ್ಕಾದರೂ ಅವರು ಹಾಗೆ ಮಾಡಲಾರರು ಎಂದು ನಂಬುತ್ತೇವೆ.

—ನೊಂದ ವಿದ್ಯಾರ್ಥಿವೃಂದ.

ಕಾನ್ವೆಂಟಿನಲ್ಲಿ ವಿದ್ಯೆಯ ಕೊಲೆ

ಮಡಿಕೇರಿ ಕಾನ್ವೆಂಟಿನಲ್ಲಿ ನಡೆಯುವ ಕೆಲವು ಘಟನೆಗಳನ್ನು ಮಹಾಜನರ ಅವಗಾಹನೆಗೆ ತರುವುದು ಅವಶ್ಯ.

ಈ ವರ್ಷ ಸ್ಕೂಲ್ ಫೈನಲ್ ಪರೀಕ್ಷೆಗೆ ಕೂರಲು ಸೆಲೆಕ್ಷನ್ ಸಿಕ್ಕಿದಂತ ಮೂರು ಬಾಲಕಿಯರನ್ನು ಯಾವ ಕಾರಣವೂ ಇಲ್ಲದೆ ಪರೀಕ್ಷೆಗೆ ಕೂರಲು ಬಿಡಲಾಗುವುದಿಲ್ಲವೆಂದು ನಿರ್ಬಂಧ ಹಾಕಿ ಅವರನ್ನು ಕ್ಲಾಸಿಗೆ ಸಹ ಬರಕೂಡದೆಂದು ನಿರ್ಬಂಧಿಸಿರುತ್ತಾರೆ. ಈ ಬಗ್ಗೆ ಮಕ್ಕಳ ಪೋಷಕರು ಎಷ್ಟು ಬೇಡಿಕೊಂಡರೂ ನಿಷ್ಫಲವಾಗಿ ಕಡೆಗೆ ವಿದ್ಯಾಧಿಕಾರಿಗಳಿಗೆ ಅರ್ಜಿ ಬರೆಕೊಂಡ ಮೇಲೆ ಅವರು ವಿದ್ಯಾರ್ಥಿನಿಯರನ್ನು ಪರೀಕ್ಷೆಗೆ ಕೂರಲು ಯಾವ ಅಡ್ಡಿ ಮಾಡಕೂಡದೆಂದು ಹುಕುಂ ಮಾಡಿದರೂ ಸಹ ಬಾಲಕಿಯರನ್ನು ಶಾಲೆಗೆ ಸೇರಿಸದೆ ಇದ್ದಾರೆ. ವಿದ್ಯಾರ್ಥಿಗಳನ್ನೂ ವಿದ್ಯೆಯನ್ನೂ ಬಲಿ ಕೊಟ್ಟು ಅವರ ಶಾಲೆಯ ಫಲಿತಾಂಶದ ಮಟ್ಟವನ್ನು ಮೇಲೆತ್ತಿ ಹಿಡಿಯುವ ದುರಾಲೋಚನೆಯೇ ಇವರ ವರ್ತನೆಗೆ ಕಾರಣವೆಂದು ತಿಳಿಯಬೇಕಿದೆ. ಇಲ್ಲವಾದರೆ ಸೆಲೆಕ್ಷನ್ ಸಿಕ್ಕಿ ಪರೀಕ್ಷೆಗಿರುವ ಫೀಸು ಸಹ ಕಟ್ಟಿದ ವಿದ್ಯಾರ್ಥಿನಿಯರನ್ನು ಈ ತರದ ತೊಂದರೆಗೆ ಈಡು ಮಾಡಲು ಕಾರಣವೇನು? 'ವಿದ್ಯಾಧಿಕಾರಿಗಳಿಗೆ ನಮ್ಮ ಮೇಲೆ ಹುಕುಂ ಮಾಡಲು ಯಾವ ಹಕ್ಕಿದೆ' ಎಂಬದಾಗಿ ಅವರು ಕೇಳುತ್ತಾರಂತೆ! ಈ ಬಡ ವಿದ್ಯಾರ್ಥಿನಿಯರ ಪರ ಮಾತಾಡಿದವರ ಮಕ್ಕಳು ಅಲ್ಲಿ ಓದುತ್ತಿದ್ದರೆ ಅವರಿಗೆ ಸಹ ಸರಿಯಾದ ಪಾಠ ಕಲಿಸುತ್ತೇವೆಂದು ಪಣ ತೊಟ್ಟಿರುವರಂತೆ! ಮಾತು ಮಾತಿಗೆ ಏಸುಕ್ರಿಸ್ತನ ಹೆಸರೆತ್ತುವ ಸತ್ಯ ನ್ಯಾಯವನ್ನು ಮತ್ತು ಧರ್ಮವನ್ನು ಪರಿಪಾಲಿಸುವೆವೆನ್ನುವವರು ಸ್ವಾರ್ಥಕ್ಕಾಗಿ ಈ ರೀತಿ ವರ್ತಿಸುವದು ನ್ಯಾಯವೇ? ಸರಕಾರದವರು ಇವರ ವರ್ತನೆಯ ಕಡೆ ಸ್ವಲ್ಪ ಗಮನ ಕೊಡಬೇಕಾಗಿ ಪ್ರಾರ್ಥನೆ.

ವ.ಕ್ಕಳ ಹಿತೈಷಿ

ಗೃಹ ಮಂತ್ರಿಗಳಲ್ಲಿ ವಿನಂತಿ

ತಾ. ೨೧—೧—೪೯ರಲ್ಲಿ ಆಗಿನ ಚೀಫ್ ಕಮಿಷನರಾಗಿದ್ದ ನೊವಲಿಯೂರ್ ರವರು ಬೆಸಗೂರು ಗ್ರಾಮಕ್ಕೆ ಬಂದಿದ್ದಾಗ ನಮ್ಮ ಭೂಮಿಗೆ ನೀರು ಹಾಯಿಸಲು ಒಂದು ಕಲ್ಲಿನ ಕಟ್ಟೆಯನ್ನು ಮಾಡಿಸಿಕೊಡಬೇಕೆಂದು ಅರ್ಜಿ ಮಾಡಿಕೊಂಡೆವು. ಇಂದು ಮುಖ್ಯ ಮಂತ್ರಿಯಾಗಿರುವ ಶ್ರೀ ಸಿ. ಎಂ. ಪೂಣಚ್ಚನವರೂ ಹಾಜರಿದ್ದು ನಮ್ಮ ಪರ ಮಾತಾಡಿದ ಫಲಿತಾಂಶವಾಗಿ ಒಂದು ಕಟ್ಟೆ ಕಟ್ಟಿಸಿಕೊಡುವ ಭರವಸೆ ದೊರೆಯಿತು. ಸಂಬಂಧಿಸಿದ ಗ್ರಾಮದವರು ರೂ ೩೦೦೦/ ಸಂಗ್ರಹಿಸಿಕೊಡಬೇಕೆಂದೂ ಉಳಿದ ಖರ್ಚನ್ನು ಸರಕಾರ ನಿರ್ವಹಿಸಬೇಕೆಂದೂ ಒಪ್ಪಂದವಾಯಿತು. ಗ್ರಾಮಸ್ಥರಾದ ನಾವು ಹಣ ಸಂಗ್ರಹಿಸಿ ಸರಕಾರದ ಸೂಚನೆಯಂತೆ ಕಟ್ಟೆಗೆ ಬೇಕಾದ ಕಲ್ಲು ಸಂಗ್ರಹಿಸಿದೆವು. ಈ ಮಧ್ಯೆ ಸರಕಾರವೇ ಕಟ್ಟೆಯ ಸರ್ವ ಖರ್ಚನ್ನು ವಹಿಸಿಕೊಂಡು ಕಟ್ಟೆ ಕಟ್ಟಿಕೊಡುವದೆಂಬ ತಿಳುವಳಿಕೆಯನ್ನು ನಮ್ಮಲ್ಲಿಯ ಮುಂದಾಳೊಬ್ಬರಾದ ಶ್ರೀ ಕೆ. ಸಿ. ಕರುಂಬಯ್ಯನವರು ಕೊಟ್ಟರು. ಅದರಂತೆ ನಾವು ರೂ. ೨೦೭೫—೧೦—೬ ಖರ್ಚು ಮಾಡಿ ಸಂಗ್ರಹಿಸಿದ ಕಲ್ಲನ್ನು ಸರಕಾರವು ವಹಿಸಿಕೊಂಡು ನಮಗೆ ರೂ. ೯೫೫/ ಕೊಟ್ಟರು. ನಮಗೆ ಕಟ್ಟೆಯಾಗುವದೆಂಬ ಕಾಂಕ್ಷೆಯಿಂದ ನಾವು ಈ ಹಣವನ್ನು ತೆಗೆದುಕೊಂಡೆವು. ಅಂದರೆ ನಾವು ಖರ್ಚು ಮಾಡಿದ ರೂಪಾಯಿಯಲ್ಲಿ ೦—೬—೬ ಪೈ ಹಿಂದಕ್ಕೆ ದೊರೆತಂತಾಯಿತು. ಊಟಕ್ಕೆ ಅನ್ನವಿಲ್ಲದ ಗ್ರಾಮಸ್ಥರು ಈ ನಷ್ಟವನ್ನು ಮುಂದಿನ ಸವಿ ಕಲ್ಪನೆಯಿಂದ ಸಹಿಸಿಕೊಂಡರು. ೧೯೫೩ರಲ್ಲಿ ಈಗಿನ ಚೀಫ್ ಕಮಿಷನರೂ ಅ. ಕಮಿಷನರೂ, ಇಂಜನಿಯರರೂ ಸ್ಥಳ ನೋಡಿ ನಂತರ ಕಟ್ಟೆಯ ಕೆಲಸ ಪ್ರಾರಂಭವಾಯಿತು. ಕಟ್ಟೆಯ ಕೆಲಸ ನಡೆಯುತ್ತಿದ್ದಾಗ ಮುಖ್ಯ ಮಂತ್ರಿಗಳೂ, ಗೃಹಮಂತ್ರಿಗಳೂ, ಇಂಜನಿಯರೂ ದಯಮಾಡಿಸಿ ಕೂಡಲೇ ಕೆಲಸ ಪೂರೈಸುವದೆಂದೂ, ನಾಲೆಯ ಕೆಲಸವನ್ನೂ, ಆ ವರ್ಷವೇ ಪೂರೈಸಿಕೊಡಲಾಗುವದೆಂದೂ ಭರವಸೆ ಇತ್ತರು. ಆದರೆ ಕೆಲಸ ಮುಗಿಯಲಿಲ್ಲ. ಕಳೆದ ಮಳೆಗಾಲದಲ್ಲಿ ಅರ್ಧ ಮಾಡಿ ನಿಂತು ಹೋದ ಕೆಲಸ ಹಾಗೆಯೇ ಇದೆ. ಈ ಕೆಲಸ ಪ್ರಾರಂಭಿಸುವ ಚಿಹ್ನೆ ಕಂಡು ಬಾರದ್ದರಿಂದ ತಾ. ೧೪—೨—೫೩ರಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಸಿ. ಕರುಂಬಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಸಿ ತಾ. ೧೫ರಲ್ಲಿ ಅ. ಕಮಿಷನರಿಗೆ ಒಂದು ಅರ್ಜಿಯನ್ನು ಕೊಡಲಾಯಿತು. ಅ. ಕಮಿಷನರು ಮಾರನೆಯ ದಿನ ನಾಡಿನ ಎಂ. ಎಲ್. ಎ ಯವರೊಡನೆ ಬಂದು ಕಟ್ಟೆಯ ಕೆಲಸವನ್ನು ಬೇಗ ಪ್ರಾರಂಭಿಸುವುದಾಗಿ ಭರವಸೆ ಕೊಟ್ಟು ಹೋದರು. ಸಮಯ ಕಳೆದು ಹೋಗುತ್ತಿದೆ. ಮಳೆಗಾಲ ಹತ್ತಿರ ಬರುತ್ತಿದೆ. ಒಂದೆರಡು ಮಳೆ ಹೊಡೆದರೆ ಹೊಳೆಯ ನೀರು ಹೆಚ್ಚಾಗಿ ಕಟ್ಟೆಯ ಕೆಲಸ ಸಾಗಲಾರದು. ಅಲ್ಲದೆ ನಾಲೆಯ ಕೆಲಸವೂ ಸಾಧ್ಯವಾಗದು. ಆದ್ದರಿಂದ ಮಾನ್ಯ ಗೃಹ ಮಂತ್ರಿಯವರು ಅರ್ಧ ಮಾಡಿದ ಈ ಕೆಲಸವನ್ನು ಈ ವರ್ಷ ಮುಗಿಸಿಕೊಡಬೇಕು. ಕಳೆದ ವರ್ಷ ಕೊಟ್ಟ ಭರವಸೆಯಂತೆ ಕೆಲಸ ಮುಗಿದು ಹೋಗಿದ್ದರೆ ಈ ವರ್ಷ ಗ್ರಾಮದ ಜನರು ಬದುಕಿಕೊಳ್ಳುತ್ತಿದ್ದರು. ಇನ್ನಾದರೂ ಸರಕಾರವು ನಿಗವಹಿಸುವದೆಂದು ಭಾವಿಸುವೆವು.

ಗ್ರಾಮದ ನಲುವತ್ತು ಜನರು.

ಈ ವಿಳಂಬಕ್ಕೆ ಕಾರಣ ವೇನು?

ಕೆಲವು ವಾರಗಳ ಹಿಂದೆ ಸರಾಯಿ ಡಿಪೋಗಳ ಮಾಜಿ ಮುನ್ಸದ್ದಿಗಳ ಬಗ್ಗೆ ಸರಕಾರದ ಬೇಜವಾಬ್ದಾರಿಕೆಯ ವರ್ತನೆಯನ್ನು ಟೀಕಿಸಿ ಬರೆದಿದ್ದ ಒಂದು ವರ್ತಮಾನವನ್ನು ಓದಿದೆ. ತದನಂತರವಾದರೂ ಸರಕಾರವು ಎಚ್ಚೆತ್ತು ವರ್ತಿಸೀತು, ಎಂಬ ಭಾವನೆಯಿಂದ ಈ ವರೆಗೆ ಕಾದು ಕುಳಿತವನಾಯಿತು; ಇದರಿಂದ ದೊರೆತ ಫಲವೆಂದರೆ ನಿರ್ಗತಿಕನಿಗೆ ಅಧೋಗತಿಯೆಂಬಂತಾಯ್ತು.

ಸರಾಯಿ ಡಿಪೋಗಳಿಂದ ಕೆಲವು ಜನ ಮುನ್ಸದ್ದಿಗಳನ್ನು ಮಿಲಿಟರಿಯಿಂದ ಹಿಂತಿರುಗಿ ಬಂದವರಿಗೆ ಕೆಲಸ ಮಾಡಿಕೊಡುವ ಸಲುವಾಗಿ ಚೀಫ್ ಕಮಿಷನರವರ ಹುಕುಮಿನಿಂದ ನಿವೃತ್ತಗೊಳಿಸಲಾಯ್ತು. ಈ ಮುನ್ಸದ್ದಿಗಳು ತಾವು ಕೆಲಸಕ್ಕೆ ಸೇರುವಾಗ್ಗೆ ಸರಕಾರದಲ್ಲಿ ಭರವಸೆಯ ಭದ್ರತೆಗಾಗಿ ಇಟ್ಟಿದ್ದ ಒಂದೊಂದು ಸಾವಿರ ರೂಪಾಯಿಗಳ ಠೇವಣಾತಿಯನ್ನು ಸರಕಾರವು ಈ ವರೆಗೂ ಅವರಿಗೆ ಮರುಪಾವತಿ ಮಾಡಿರುವುದಿಲ್ಲ. ಮುನ್ಸದ್ದಿಗಳು ನಿವೃತ್ತಿಯೊಂದಿ ತಿಂಗಳು ಹನ್ನೊಂದಾಯ್ತು; ಆದರೂ ಕೇಳಿಕೆಯಂತೆ ಅನೇಕ ಅರ್ಜಿಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಪಿಸಿ ಬೇಡಿಕೊಂಡರೂ ಕೇಳುವವರಿಲ್ಲದಂತಾಯ್ತು. ಕೊಟ್ಟ ಹಣವನ್ನು ಅಂಗಲಾಚಿ ಬೇಡಿದರೂ ಕೊಡದೆ ಹನ್ನೊಂದು ತಿಂಗಳಿಂದ ತಡಮಾಡಿಕೊಂಡು ಬಂದಿರುವ ಸರಕಾರದ ವರ್ತನೆಯು ನ್ಯಾಯವೇ? ಈ ರೀತಿಯ ಅನಾವಶ್ಯ ವಿಳಂಬಗಳು ಅನ್ಯಾಯವಾಗಿ ಎಷ್ಟೊಂದು ಆಗುತ್ತಲಿರಬಹುದೆಂದು ಮಾನ್ಯ ಪ್ರಜೆಗಳೇ ಊಹಿಸಲಿ. ಅದಕ್ಕೆ ನ್ಯಾಯವಾಗಿ ಹೊಣೆಯಾರು?

ಪ್ರಜಾ ಸರಕಾರದಲ್ಲೂ ಈ ರೀತಿಯ ಅನಾವಶ್ಯ ಕಾಲವಿಳಂಬಗಳು ಯಾ ಬೇಜವಾಬ್ದಾರಿಯ ಕೆಲಸಗಳು ನಡೆಯುತ್ತಲಿದೆಯೆಂದ ಮೇಲೆ ಇದು ಪ್ರಜಾ ಸರಕಾರವೋ? ಯಾ ನಿರಂಕುಶಾಧಿಕಾರದ ದರ್ಬಾರವೋ? ಎಂಬುದನ್ನು ಜನತೆಯು ಊಹಿಸಿ ತಿಳಿಯಬೇಕಾಗಿದೆ.

ಜನಹಿತ ಸಾಧಕ ಪತ್ರಿಕೆಗಳಿಂದ ಸರಕಾರವು ಎಚ್ಚರಗೊಳ್ಳದಿದ್ದಲ್ಲಿ, ಇನ್ನಾರಿಂದ ಬುದ್ಧಿ ಕಲಿಯಬೇಕೋ ದೇವರೇ ಬಲ್ಲನು. ಇದು ನಮ್ಮ ದುರ್ಗತಿಯೇ ಸರಿ.

"ನೊಂದವ"

॥ ವಿ ಚಾ ರ ಮ ಥ ನ ॥

ಲೇ: "ನಿರಂಜನ"

ಶಿವಪೂಜೆಯಲ್ಲಿ ಕರಡಿ ಬಿಟ್ಟರು !

ಕೊಡಗು ಶಾಸನ ಸಭೆಯ ಅಧ್ಯಕ್ಷರಾದ ಶ್ರೀ. ಬಿ. ಎಸ್ ಕುಶಾಲಪ್ಪನವರು ಕಾಲೇಜಿನ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಷಣ ಮಾಡುತ್ತಾ 'ಕಾಲೇಜು ವಿದ್ಯಾರ್ಥಿಗಳೆಲ್ಲರೂ ಈಗ ಕಮ್ಯೂನಿಸ್ಟರಾಗಿದ್ದಾರೆ' ಎಂದರು. ಕಾಲೇಜು ಉತ್ಸವದ ಸಮಾರಂಭದಲ್ಲಿ ಅದರಲ್ಲೂ ಕಾಲೇಜಿನ ಹಿತ ಬಯಸಿ 'ಟೋಸ್ಟ್' ಸೂಚಿಸುವ ಭಾಷಣದಲ್ಲಿ ಕಮ್ಯೂನಿಸ್ಟರ ವಿಚಾರ ಬೇಕಿರಲಿಲ್ಲ. ಆದರೆ ಶಿವಪೂಜೆಯಲ್ಲಿ ಕರಡಿ ಬಿಡುವ ಸ್ವಭಾವ ಹಳೆ ಸಂಪ್ರದಾಯದ ಹಲವರಿಗಿದೆ. ಇರಲಿ. ಆದರೆ ಇವರು ಹೇಳಿದ ಮಾತಿನ ಸತ್ಯತೆಯನ್ನು ಪರಿಶೀಲಿಸಿದರೆ ಅವರ ಅಭಿಪ್ರಾಯವು, ಗಾಬರಿಯೂ ನಿರಾಧಾರವಾದುವೆಂದು ತೋರದಿರದು. ಕಾಲೇಜುಗಳ ವಿದ್ಯಾರ್ಥಿಗಳು ಎಲ್ಲರೂ ಕಮ್ಯೂನಿಸ್ಟರಾಗಿದ್ದಾರೆಂಬ ಇವರ ಮಾತು ಸತ್ಯತೆಳಹದಿಯಲ್ಲಿ ನಿಂತಿಲ್ಲ. ಕೊಡಗಿನ ಇನ್ನೂ ಶೈಶವದಲ್ಲಿರುವ ಕಾಲೇಜಿನ ವಿದ್ಯಾರ್ಥಿಗಳು ಕಮ್ಯೂನಿಸ್ಟರಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಕೆಂಪು ಬಟ್ಟೆ ಕಂಡರೆ ಬೆಚ್ಚಿಬೀಳುವ ಗೂಳಿಯಂತೆ ಯಾವುದಕ್ಕೋ ಯಾವುದೋ ಅಪಾರ್ಥ ಕಲ್ಪಿಸಿ ಈ ಧುರೀಣರು ಗಾಬರಿಗೊಂಡಿದ್ದಾರೆ! ಕಮ್ಯೂನಿಝುಂ ಇರಲೀ ಬೇರೆ ಯಾವುದೇ 'ಇಝುಂ' ಇರಲಿ ಪ್ರತಿಯೊಂದಕ್ಕೂ ಭಾರತದಲ್ಲಿ ಬಾಳುವ ಹಕ್ಕಿದೆಯೆಂದು ರಾಜ್ಯಘಟನೆಯು ಅನುಕೊಟ್ಟಿರುವಾಗ ಯಾರೊಬ್ಬರು ಕಮ್ಯೂನಿಸ್ಟರಾಗುವದಾಗಲೀ, ಬೇರೆ ತತ್ವಬೋಧಿಸುವದಾಗಲೀ ತಪ್ಪಲ್ಲವೆಂಬುದನ್ನು ಈ ಮೇಧಾವಿಗಳು ತಿಳಿದಿರಬೇಕಿತ್ತು.

ವಿದ್ಯಾರ್ಥಿಗಳಿಗೆ ಸಕ್ರೀಯ ರಾಜಕೀಯ ಯೋಗ್ಯವಲ್ಲವೆಂಬುವದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಕೊಡಗು ಕಾಲೇಜಿನ ವಿದ್ಯಾರ್ಥಿಗಳು ಕಮ್ಯೂನಿಸ್ಟರಾಗಿದ್ದಾರೆಂಬುವದಕ್ಕೆ ಅವರು ಕೊಟ್ಟ ಉದಾಹರಣೆಯೆಂದರೆ ಕೆಲವು ದಿನಗಳ ಹಿಂದೆ ನಡೆದ 'ಮಾಕ್ ಪಾರ್ಲಿಮೆಂಟಿನಲ್ಲಿ' ವಿದ್ಯಾರ್ಥಿಗಳು ಪಾರ್ಲಿಮೆಂಟಿನ ಸರಕಾರಿ ಪಕ್ಷಕ್ಕೆ ವಿರುದ್ಧ ಅಭಿಪ್ರಾಯ ವ್ಯಕ್ತ ಮಾಡಿದರೆಂಬುದು! ಇಂದಿನ ಪ್ರಪಂಚದಲ್ಲಿ, ಇಂದಿನ ರಾಜಕೀಯದಲ್ಲಿ ಸರ್ಜ ಸೂಟಿನವರು ಕಾಂಗ್ರೆಸ್ ಸಮಿತಿಯಲ್ಲಿ, ಸರಕಾರಿ ಉದ್ಯೋಗದಿಂದ ನಿನ್ನೆ ನಿವೃತ್ತರಾದವರು ಇಂದು ಮಂತ್ರಿ ಪದದಲ್ಲಿ ಕಂಡುಬರುತ್ತಿರುವಾಗ ವಿದ್ಯಾರ್ಜನೆಯೇ ಗುರಿಯಾಗಿರಬೇಕಾದ ಕಾಲೇಜ್ ವಿದ್ಯಾರ್ಥಿಗಳು ಕಮ್ಯುನಿಸ್ಟರೆಂದು ತೋರಿಬರುವವರಲ್ಲಿ ತಪ್ಪಿರಲಾರದೆನ್ನಬಹುದಾದರೂ ಪರಿಸ್ಥಿತಿ ಕೊಡಗಿನ ಕಾಲೇಜಿನ ಮಟ್ಟಿಗೆ ಹಾಗಿಲ್ಲ. 'ಮಾಕ್ ಪಾರ್ಲಿಮೆಂಟಿ'ನಲ್ಲಿ ತೋರಿ ಬಂದ ವಿರೋಧವನ್ನು ನಿಜವಾದುದೆಂದು ಭಾವಿಸಿದ ಈ ಶಾಸನ ಸಭಾಧ್ಯಕ್ಷರು ತಪ್ಪು ಬಗ್ಗಿದ್ದಾರೆ. ಶಾಲಾ ಚರ್ಚಾಕೂಟದಲ್ಲಿ ನಿರ್ಣಯವಾದ ಠರಾವು ಜಾರಿಯಲ್ಲಿ ಬರುವದೇ? ಶಾಲಾ ಚರ್ಚಾಕೂಟದಲ್ಲಿ ಸತ್ಯಕ್ಕಿಂಥಾ ಸುಳ್ಳೇ ಮೇಲೆಂದು ಠರಾವು ಪಾಸು ಮಾಡಿದರೆ ಅದರಿಂದ ಯಾರಾದರೂ ಗಾಬರಿಗೊಳ್ಳುವರೇ? ಅದೇ ರೀತಿಯ ಕಾಲೇಜ್ ಸಭೆಯಲ್ಲಿ ಸರಕಾರಿ ಪಕ್ಷದ ವಿರುದ್ಧ ಮತವಿತ್ತರೆಂದು ಕಾಲೇಜು ವಿದ್ಯಾರ್ಥಿಗಳು ಕಮ್ಯುನಿಸ್ಟರೆನ್ನುವದೇ? ಅರಸಿನ ಬಣ್ಣದ ಕನ್ನಡಕ ಹಾಕಿ ಬಿಟ್ಟ ಮೇಲೆ ತೋರುವದೆಲ್ಲ ಅರಸಿನ ಬಣ್ಣಾನೆ!

ಗರತಿ ಹೆಣ್ಣಿಗೆ ಬೆಂಗಾವಲೇಕೆ ?

ಬ್ರಿಟಿಷರ ಆಡಳಿತ ನಡೆಯುತಿದ್ದಾಗ ಜನರಲ್ಲಿ ಯಾರು ಏನು ಮಾಡುತ್ತಿದ್ದಾರೆ. ತಮ್ಮ ವಿರುದ್ಧ ಒಳಸಂಚು ಎಲ್ಲಿಯಾದರೂ ನಡೆಯುತ್ತಿದೆಯೋ ಎಂಬುದನ್ನರಿಯಲು ಸಿ. ಐ. ಡಿ. ಇಲಾಖೆಯೊಂದನ್ನು ಇಟ್ಟುಕೊಂಡು ಪ್ರತಿಯೊಬ್ಬ ರಾಜಕೀಯ ಕೆಲಸಗಾರನ ಚಟುವಟಿಕೆಗಳನ್ನು ನಿರೀಕ್ಷಿಸುತಿದ್ದರು. ಆ ನೀತಿಯನ್ನು ಆಗ ಟೀಕಿಸಿದವರು ಇಂದು ಆಡಳಿತದ ಜವಾಬ್ದಾರಿ ಹೊತ್ತು ಸಿಂಹಾಸನವೇರಿದ್ದಾರೆ. ಆದರೆ ಇವರು ಮಾಡುತ್ತಿರುವದೇನು? ಸಿ. ಐ. ಡಿ. ದಳದ ಬಡಾವಣೆ ಮಾಡಿ ನ್ಯಾಯತೀರ್ಪು ಕೊಡಬೇಕಾದ ಜಿಲ್ಲಾ ಮೇಜಿಸ್ಟ್ರೇಟರೇ ಅದರ ನಿರಂಕುಶಾಧಿಕಾರಿಯಾಗಿದ್ದಾರೆ. ಒಬ್ಬರ ಮನೆಯಲ್ಲಿ ಎರಡು ಮೂರು ದಿವಸಗಳಿಗೊಮ್ಮೆ ಪೋಲೀಸರು ಬಂದು ಅವರು ಎಲ್ಲಿ ಹೋಗಿದ್ದಾರೆಂಬುದನ್ನು ತಿಳಿದುಕೊಂಡು ಹೋಗುವದನ್ನು ಇಂದೂ ಕಾಣಬಹುದು. ಹತ್ತು ಜನರು ಕೂಡುವ ಸಾರ್ವಜನಿಕ ಸ್ಥಳಗಳಲ್ಲಿ, ಹೋಟೆಲು ಮೊದಲಾದೆಡೆಗಳಲ್ಲಿ ಸಮವಸ್ತ್ರರಹಿತ ಪೋಲೀಸರು ಗಸ್ತು ತಿರುಗುತ್ತಿರುವದರ ಅರ್ಥವೇನು? ಜನತಾ ಸರ್ಕಾರದಲ್ಲೂ ಸಿ. ಐ. ಡಿ. ಬೇಕೆ?

ಸರಕಾರವು ತಾನು ಆತ್ಮಪೂರ್ವಕವಾಗಿ ಕೆಲಸ ಮಾಡುತ್ತಿದ್ದರೆ ಈ ಬೇಹುಗಾರಿಕೆ ಏಕೆ? ಗರತಿಯಾದ ಹೆಂಗಸಿಗೆ ಬೆಂಗಾವಲಿಗೆ ಆಳನ್ನಿಡುವುದು ಯಾವ ರೀತಿ ಆಕೆಯ ಕೀರ್ತಿಗೆ ಕಳಂಕವೋ ಅದೇ ರೀತಿ ಜನರ ಸರ್ಕಾರವು ಜನತೆಯ ಮೇಲೆ ಗೂಢಾಚಾರರನ್ನಿಡುವದು. ಪ್ರಜಾಪ್ರಭುತ್ವಕ್ಕೆ ಕಲಂಕಪ್ರಾಯವಾದುದು. ಬೇಹುಗಾರರ ಸಹಾಯದಿಂದ ಆಡಳಿತ ನಡೆಸಲಿಚ್ಛಿಸುವ ಸರಕಾರಕ್ಕೆ ಜನತೆಯ ಮೇಲೆ ವಿಶ್ವಾಸವಿಲ್ಲವೆಂದಾಗುತ್ತದೆ. ಒಬ್ಬ ನಾಗರಿಕನ ಮೇಲೆ ಕಾವಲಿಟ್ಟು ಆತನ ಹಕ್ಕು ಬಾಧ್ಯತೆಗಳಿಗೆ ತೊಡರು ತರುವಂತೆ ವರ್ತಿಸುವ ನೀತಿಯನ್ನು ಭಾರತ ರಾಜ್ಯಘಟನೆಯು ಒಪ್ಪುವದೇ?

The New Guardian of India Life Insurance co., Ltd.,

— HEAD OFFICE —

Post Box No.—142 Esplanade, MADRAS—1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT.

The New Gaurdian of India Life Insurance Co., Ltd. for COORG. Virajpet.

12-9

OR

To The Head Office, MADRAS.

THE VIJAYA BANK. LIMITEC.

ದಿ ವಿಜಯ ಬೇಂಕ್ ಲಿಮಿಟೆಡ್, ಮಡಿಕೇರಿ.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಮೂಲ ಧನ	ರೂ.	20,00,′00
ತೆತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು. ರೂಪಾಯಿ ಹತ್ತು ಸಾವಿರದ ಮಿಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟ ನಡೆಸಲ್ಪಡುವುದು.

ಬಿ ಮಂಜಯ್ಯ ಹೆಗ್ಡೆ,

ಎಡ್ವೊಕೇಟ್.

ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.

12-3 (ಮತ್ತು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರು)

ಮಡಿಕೇರಿ ಆಫೀಸಿನ ಏಜೆಂಟ್ :— **ಯೆಮ್. ಯಸ್. ಅಣ್ಣ.**

ಮಾಡುವ ಕೆಲಸ ಬಿಟ್ಟು ಊರವರ ತಲೆ ಬೋಳಿಸಿದರೆ!

ಕಾಂಗ್ರೆಸಿನ ಬಲವಿದ್ದುದು ಅದರ ವಿಧಾಯಕ ಕಾರ್ಯಕ್ರಮದಲ್ಲಿ. ಇದನ್ನರಿತೇ ಮಹಾತ್ಮಾಗಾಂಧಿಯವರು ಒಂದಿಲ್ಲೊಂದು ವಿಧಾಯಕ ಕಾರ್ಯಕ್ರಮ ಮಾಡುವವರನ್ನೇ ಕಾಂಗ್ರೆಸಿನ ಕೆಲಸಗಾರರೆನ್ನುತ್ತಿದ್ದರು. ಅವರೇ ಕಾಂಗ್ರೆಸ್ ಸಮಿತಿಯಲ್ಲೂ ಸ್ಥಳ ಪಡೆಯಬೇಕೆಂದಿದ್ದರು. ಆದರೆ ಹಿಂದೂದೇಶವು ಸ್ವತಂತ್ರಗೊಂಡ ನಂತರ ವಿಧಾಯಕ ಕಾರ್ಯಕ್ರಮ ಹಿನ್ನೆಲೆಗೆ ಬಿದ್ದು ಅಧಿಕಾರ ರಾಜಕೀಯವು ಮೇಲ್ಮೆಯನ್ನು ಪಡೆಯಿತು. ಇಂದು ಕಾಂಗ್ರೆಸಿನಲ್ಲಿ ವಿಧಾಯಕ ಕಾರ್ಯಕ್ರಮವನ್ನು ಕೈಕೊಂಡು ದುಡಿಯುತ್ತಿರುವವರು ಕೈಬೆರಳಲ್ಲಿ ಎಣಿಸುವಷ್ಟು ಮಾತ್ರ. ಉಳಿದವರೆಲ್ಲ ಅಧಿಕಾರದ ಭೇಟೆಯಲ್ಲಿ ಮಗ್ನರಾಗಿದ್ದಾರೆ. ಅದೇ ರೀತಿ ಭೇಟೆ ನಡೆಸಿ ಕಾಂಗ್ರೆಸು ಅಧಿಕಾರಕ್ಕೇರಿದೆ. ಕೊಡಗಿನಲ್ಲೂ ಏರಿದೆ. ಆದರೆ ಇಂದು ಕೊಡಗು ಕಾಂಗ್ರೆಸು ಮಾಡುತ್ತಿರುವ ವಿಧಾಯಕ ಕಾರ್ಯಕ್ರಮವೇನು?

ಇಂದು ಕಾಂಗ್ರೆಸ್ ಎಡ್‌ಹಾಕ್ ಸಮಿತಿಗಳನ್ನು ಪ್ರತಿ ಗ್ರಾಮದಲ್ಲಿ ನೇಮಿಸಿದ್ದಾರೆ. ಅದರ ಸದಸ್ಯರಾಗಲು ಯೋಗ್ಯತೆ ದೇಶಕ್ಕಾಗಿ ಮಾಡಿದ ತ್ಯಾಗ, ಖಾದಿ ಪ್ರೇಮ, ವಿಧಾಯಕ ಕಾರ್ಯಕ್ರಮಗಳಲ್ಲ. ಬದಲು ಚುನಾವಣೆಯಲ್ಲಿ ಕಾಂಗ್ರೆಸಿನ ಪರ ಕೆಲಸ ಮಾಡಿದುದು! ಅದರಂತೆ ಈಗ ಎಲ್ಲರೂ ಎಡ್‌ಹಾಕ್ ಸಮಿತಿಯ ಸದಸ್ಯರೆ! ಒಂದೊಂದು ಸಮಿತಿಯಲ್ಲಿ ಸದಸ್ಯರ ಸಂಖ್ಯೆ ಇಪ್ಪತ್ತು ಮೂವತ್ತು!

ಈ ಎಡ್‌ಹಾಕ್ ಸಮಿತಿಯ ಬಹುಮತ ಸದಸ್ಯರಾಗಲೀ, ಮತ್ತೆ ಮೇಲಿನ ಪ್ರಚಾರಕರಾಗಲೀ ಮಾಡುವ ಕೆಲಸವೇನು? ಗ್ರಾಮದಲ್ಲಿ ಯಾರು ಏನು ಹೇಳಿದರು. ಯಾರು ಏನು ಮಾಡಿದರು? ಎಂಬುದರ ವರದಿಯನ್ನು ಅಧಿಕಾರ ಹೊತ್ತವರಿಗೆ ಮುಟ್ಟಿಸುವ ಬೇಹುಗಾರರ ಕೆಲಸ ಇದೇ ಇಂದಿನ ವಿಧಾಯಕ ಕಾರ್ಯಕ್ರಮವೇ? ಇದನ್ನು ಕಾಂಗ್ರೆಸೆನ್ನೋಣವೇ? ಕಾಂಗ್ರೆಸು ಮಾಡುವ ಕೆಲಸವನ್ನು ಬಿಟ್ಟು ಈ ಗುಪ್ತಾಚಾರ ಕೆಲಸವೇಕೆ ನಡೆಯಬೇಕು? ಇದೇ ಪ್ರಜಾಪ್ರಭುತ್ವವೇ?

ಬಳ್ಳಾರಿಯನ್ನು ಮೈಸೂರಿಗೆ ಸೇರಿಸಿರಿ.

ಪಾರ್ಲಿಮೆಂಟಿನ ೨೨ ಮಂದಿ ಕನ್ನಡ ಸಭಾಸದರು ಬಳ್ಳಾರಿ ಜಿಲ್ಲೆಯನ್ನೂ ಅನಂತಪುರ ಜಿಲ್ಲೆಯ ಮಡಕಶಿರ ತಾಲೂಕನ್ನೂ ಮೈಸೂರಿಗೆ ಸೇರಿಸಿಬಿಡಬೇಕೆಂದು ಪ್ರಧಾನಿ ನೆಹ್ರೂರವರಿಗೆ ಪತ್ರ ಬರೆದಿರುವರು.

ಶ್ರೀ ಪಿ. ಎಸ್. ಗೌಡ ದಶಾಬ...

'ಕೊಡಗು' ಏಜೆಂಟರು

ಸೋಮವಾರಪೇಟೆ.

ಅಂತರ್ರಾಷ್ಟ್ರೀಯ ರಂಗ.

ಕೊರಿಯಾ ಚರ್ಚೆಯಲ್ಲಿ ಭಾರತ ಭಾಗವಹಿಸದು.

ಕೊರಿಯಾ ರಣರಂಗ

ಕೊರಿಯಾ ರಣರಂಗದಲ್ಲಿ ಯುದ್ಧವು ಪ್ರಖರವಾದ ರೀತಿಯಿಂದ ನಡೆಯುತ್ತಿದೆ. ತಾರೀಕು ೨೫ರಲ್ಲಿ ಅಮೇರಿಕದ ೪೫ ಸಾವಿರ ಟನ್ ಭಾರದ ಯುದ್ಧ ಹಡಗು ಉತ್ತರ ಕೊರಿಯಾದ ಸುಮಾರು ೧೫ ಕೇಂದ್ರಗಳ ಮೇಲೆ ಗುಂಡಿನ ಮಳೆಗರೆದಿದೆ. ಇದರಿಂದಾಗಿ ಐದು ರೈಲ್ವೆ ಸೇತುವೆಗಳು ನಾಶವಾದುದಲ್ಲದೆ ಅನೇಕ ಕಟ್ಟಡಗಳೂ ಹುಡಿಯಾಗಿವೆ. ಅನೇಕ ರೈಲ್ವೆ ಲೈನುಗಳು ಉಪಯೋಗಕ್ಕೆ ಬಾರದಾಗಿವೆ. ಅಮೇರಿಕಾದ ವಿಮಾನಗಳೂ ಕಮ್ಯೂನಿಸ್ಟ್ ಠಾಣೆಗಳ ಮೇಲೆ ಬಾಂಬು ಹಾಕಿವೆ. ಇದರಿಂದಾಗಿ ೭೦ ವಾಹನಗಳೂ, ೬೦ ಕಟ್ಟಡಗಳೂ ನಾಶವಾದುವಂತೆ.

ಸಂಯುಕ್ತರಾಷ್ಟ್ರ ಸಂಘದ ಪ್ರಚಲಿತ ಸಭೆಯ ಕಾರ್ಯಕ್ರಮ ಪಟ್ಟಿಯಲ್ಲಿ ಕೊರಿಯಾ ಪ್ರಕರಣವನ್ನು ಮುಂದೆ ಇಡಲಾಗಿದೆ ಈ ವಿಚಾರವಾಗಿ ಅಮೇರಿಕಾದ ಪ್ರತಿನಿಧಿ ಕಾಬೆಟ್ ಲಾಡ್ಜ್ ಎಂಬವರು ಮಾತಾಡುತ್ತಾ ಹಿನ್ನೆಲೆಯಿಂದ ಕಮ್ಯೂನಿಸ್ಟರಿಗೆ ರಷ್ಯಾವು ಸಹಾಯ ಮಾಡದಿದ್ದ ಪಕ್ಷ ಈ ವರೆಗೆ ಕೊರಿಯಾ ಯುದ್ಧ ಮುಗಿದು ಹೋಗುತ್ತಿತ್ತು. ಆದ್ದರಿಂದ ಯುದ್ಧ ನಿಲ್ಲಿಸುವದು ರಷ್ಯಾದ ಕೈಯಲ್ಲಿದೆ. ಯಾವಾಗ ಬೇಕೋ ಆಗ ಯುದ್ಧವನ್ನು ನಿಲ್ಲಿಸಬಹುದು ಎಂದು ಹೇಳಿದರು.

ಸಂಧಾನ ನಡೆಸಬೇಕೆಂದು ಒತ್ತಾಯ.

ಕೊರಿಯಾ ಪ್ರಕರಣದಲ್ಲಿ ಮತ್ತೊಮ್ಮೆ ಭಾರತವು ಮಧ್ಯಸ್ಥಿಕೆ ವಹಿಸಿ ಸಂಧಾನ ಪ್ರಯತ್ನ ಮಾಡಬೇಕೆಂದು ಸಂಯುಕ್ತರಾಷ್ಟ್ರ ಸಂಘದ ವಿವಿಧ ಪ್ರತಿನಿಧಿಗಳು ಒತ್ತಾಯ ಮಾಡುತ್ತಿರುವದಾಗಿ ತಿಳಿದು ಬಂದಿದೆ. ಕಳೆದ ಸಂಧಾನ ಪ್ರಯತ್ನದ ಸಂಚಾಲಕರಾದ ಶ್ರೀ ಕೃಷ್ಣಮೆನನರು ಈ ವಿಚಾರವಾಗಿ ಮಾತಾಡುತ್ತಾ ಮತ್ತೊಮ್ಮೆ ಪ್ರಯತ್ನಿಸುವಂತೆ ಅನೇಕರು ತನ್ನನ್ನು ಕೇಳಿಕೊಂಡಿರುವದಾಗಿ ಹೇಳಿದರು. ಪಶ್ಚಿಮ ರಾಷ್ಟ್ರಗಳ ಮತ್ತು ಕಮ್ಯೂನಿಸ್ಟ್ ರಷ್ಯಾದೊಳಗಿರುವ ಮಹಾ ಅಂತರವನ್ನು ಸರಿಪಡಿಸುವ ಯತ್ನ ಮಾಡಬೇಕೆಂದು ಹಲವರು ಕೇಳಿಕೊಳ್ಳುತ್ತಿದ್ದರೂ ಭಾರತವು ಯಾವುದೇ ಸಂಧಾನ ಯೋಜನೆಯನ್ನು ನಿರ್ಣಯಿಸಿಲ್ಲವಾದ್ದರಿಂದ ಈಗ ಮಧ್ಯಸ್ಥಿಕೆ ವಹಿಸುವುದು ಸಾಧ್ಯವಿಲ್ಲವೆಂದೂ ಕೊರಿಯಾ ಚರ್ಚೆಯು ಸಂಯುಕ್ತರಾಷ್ಟ್ರ ಸಂಘದಲ್ಲಿ ಬಂದಾಗ ಭಾರತವು ಭಾಗವಹಿಸುವುದಿಲ್ಲವೆಂತಲೂ ಹೇಳಿರುವರು.

ಕೊರಿಯಾ ಪ್ರಶ್ನೆಯು ಸಭೆಯ ಮುಂದೆ ಬಂದಾಗ ಯಾವುದೇ ದೇಶದ ಪ್ರತಿನಿಧಿಯು ಆ ವಿಚಾರ ಮಾತಾಡಲು ಮುಂಬಾರದ ಕಾರಣವೂ ಮಾರಣೆ ದಿನ ರಷ್ಯಾದ ಪ್ರತಿನಿಧಿ ವಿಶಿನ್‌ಸ್ಕಿಯವು ಹಾಜರಿಲ್ಲದ್ದರಿಂದಲೂ ಚರ್ಚೆಯನ್ನು ಮುಂದೆ ಹಾಕಲಾಗಿದೆ.

ಅಮೇರಿಕದ ದಿಗ್ಬಂಧನೆಯ ಖಂಡನೆ.

ರಷ್ಯಾ, ಹಂಗೆರಿ ಮತ್ತು ಪೋಲೆಂಡಿನ ಪ್ರತಿನಿಧಿಗಳು ದೂರ ಪೂರ್ವದ ಮನಿಲಾದಲ್ಲಿ ಕೂಡಿರುವ 'ಈಕೆಫೆ' ಸಮ್ಮೇಳನದಲ್ಲಿ ಅಮೇರಿಕಾವು ಪೂರ್ವ ಏಷ್ಯಾದಲ್ಲಿ ಕೈಕೊಂಡಿರುವ ಆರ್ಥಿಕ ದಿಗ್ಬಂಧನದ ನೀತಿಯನ್ನು ಕಟುವಾಗಿ ಟೀಕಿಸಿದರು. ಪೂರ್ವ ಏಷ್ಯಾದ ರಾಷ್ಟ್ರಗಳಲ್ಲಿಯ ಯುದ್ಧ ಸಹಾಯಕ ವಸ್ತುಗಳನ್ನು ಅಮೇರಿಕವು ಬಹು ಬೆಲೆತೆತ್ತು ಸಂಗ್ರಹಿಸುತ್ತಿರುವದರಿಂದ ಆರ್ಥಿಕ ಅವ್ಯವಸ್ಥೆಯಾಗಿದೆಯೆಂದು ರಷ್ಯಾ ಪ್ರತಿನಿಧಿ ಕೆಮೆನ್ನಿಕೇಯವರು ಹೇಳಿದ್ದಾರೆ. ಅಮೇರಿಕಾದ ಆರ್ಥಿಕ ದಿಗ್ಬಂಧನದಿಂದ ಬ್ರಿಟನಿಗೂ ತಲೆ ಸಿಡಿತ ಪ್ರಾರಂಭವಾಗಿದೆಯೆಂದು ತಿಳಿದುಬಂದಿದೆ. ಹಾಂಕಾಂಗಿನಲ್ಲಿರುವ ಬ್ರಿಟಿಷ್ ವ್ಯಾಪಾರ ವಹಿವಾಟುಗಳಿಗೆ ಇದರಿಂದ ತೊಂದರೆಯಾಗಿದೆಯೆಂದೂ ಆದ್ದರಿಂದ ಅಮೇರಿಕದ ನೀತಿಯನ್ನು ಖಂಡಿಸಿರುವದಾಗಿಯೂ ವರದಿ ಬಂದಿದೆ.

ಚಿಯಾಂಗರ ಧಾಳಿ ಸಿದ್ಧತೆ.

ಫಾರ್ಮೋಸಾದ ಟೈಪೆಯಲ್ಲಿ ಮಾತಾಡುತ್ತಾ ಚಿಯಾಂಗ್ ಕೈಶೇಕರು ಚೀನಾದ ಮೇಲೆ ತಾವು ಕೈಕೊಳ್ಳಲಿರುವ ಧಾಳಿಯ ವಿಚಾರ ಈ ರೀತಿ ಹೇಳಿದ್ದಾರೆ. "ನಮ್ಮ ಧಾಳಿಯ ಸಮಯ ಹತ್ತಿರ ಬರುತ್ತಿದೆ. ಕಮ್ಯೂನಿಸ್ಟ್ ಮತ್ತು ರಷ್ಯಾ ವಿರೋಧದ ಸಿದ್ಧತೆಗಳನ್ನು ಮಾಡಿಕೊಳ್ಳಲು ಈ ವರ್ಷವು ಅತೀ ಪ್ರಾಮುಖ್ಯವಾದುದು. ನಾವು ನಮ್ಮ ಹಿಂದಿನ ಕೆಲಸ, ಇಂದಿನ ಶಕ್ತಿ, ಮುಂದಿರುವ ಜವಾಬ್ದಾರಿಗಳನ್ನು ನೆನೆದು ವರ್ತಿಸಬೇಕು. ನಮ್ಮ ಭವಿಷ್ಯ ಪ್ರಯತ್ನಕ್ಕಾಗಿ ಸರ್ವ ಸಿದ್ಧತೆ ಮಾಡಿಕೊಳ್ಳಬೇಕು. ನಮ್ಮ ಜನಶಕ್ತಿ, ಯಂತ್ರಶಕ್ತಿಗಳನ್ನು ಹೆಚ್ಚಿಸಿಕೊಂಡು ಕೈಬಿಟ್ಟ ಚೀನಾವನ್ನು ಪುನಹ ವಶಪಡಿಸಬೇಕು. ಶೀಘ್ರವಾಗಿ ಈ ಸಿದ್ಧತೆಗಳನ್ನು ಮುಗಿಸಬೇಕು. ಕಳೆದ ಮೂರು ವರ್ಷಗಳಿಂದಲೂ ಈ ಸಿದ್ಧತೆಯನ್ನು ನಾವು ಮಾಡುತ್ತಿದ್ದರೂ ಹೆಚ್ಚಾಗಿ ಫಾರ್ಮೋಸಾವನ್ನು ಭದ್ರಗೊಳಿಸುವ ಕೆಲಸವೇ ನಡೆದಿದೆ. ಈಗ ಧಾಳಿಯ ಬಗ್ಗೆ ವಿಶೇಷ ಕಾರ್ಯಕ್ರಮಗಳಾಗಬೇಕು. 1953ನೇ ವರ್ಷವು ಈ ದೃಷ್ಟಿಯಿಂದ ಬಹು ಪ್ರಾಮುಖ್ಯವಾದುದು."

ಬರ್ಮಾ ಗಡಿಯಲ್ಲಿ ಯುದ್ಧ

ಚೈನಾದ ರಾಷ್ಟ್ರೀಯ ಸೇನೆ ಅಂದರೆ ಚಿಯಾಂಗ್ ಶೈಕರ ದಳಗಳಿಗೂ, ಚೀನಾ ಕಮ್ಯೂನಿಸ್ಟ್ ದಳಗಳಿಗೂ ಯುದ್ಧ ಪ್ರಾರಂಭವಾಗಿದೆಯೆಂದು ವರದಿ ಬಂದಿದೆ. ಬರ್ಮಾದ ಎಂಟುನೂರು ಮೈಲುಗಳ ಉದ್ದದ ಬರ್ಮಾ ಮತ್ತು ಚೈನಾದ ಯುನಾನ್ ಪ್ರಾಂತ ಗಡಿಯಲ್ಲಿ ಈ ಕದನ ನಡೆಯುತ್ತಿರುದಾಗಿದೆ ಕಳೆದ ಒಂದು ತಿಂಗಳಿಂದಲೂ ಈ ಯುದ್ಧ ನಡೆಯುತ್ತಿದ್ದರೂ ಇದರ ವರ್ತಮಾನವನ್ನು ಜಗತ್ತಿಗೆ ತಿಳಿಸಿಲ್ಲವೆಂದು ವರದಿಯಾಗಿದೆ. ಬರ್ಮಾಗಡಿಯಲ್ಲಿ ಚಿಯಾಂಗರ ದಳಗಳು ಈ ಹಿಂದೆಯೇ ಡಾಕೆ ಹಾಕಿದ್ದವು. ಇತ್ತಲಾಗಿ ಅವರು ಧಾಳಿ ಪ್ರಾರಂಭಿಸಿರುವರು. ಯುನಾನ್ ಪ್ರಾಂತದಲ್ಲಿರಬಹುದಾದ ಕಮ್ಯೂನಿಸ್ಟ್ ವಿರೋಧ ಗೊರಿಲ್ಲಗಳೊಡನೆ ಸಂಪರ್ಕ ಬೆಳೆಸುವ ಯತ್ನವನ್ನು ಚಿಯಾಂಗರ ದಳಗಳು ಮಾಡುತ್ತಿವೆ. ಚಿಯಾಂಗ್ ಶೈಕರು ಚೀನಾದ ಮೇಲೆ ಧಾಳಿ ಪ್ರಾರಂಭಿಸುವೆನೆಂದು ಸಾರಿದ ನಂತರ ಬರ್ಮಾದಲ್ಲಿರುವ ರಾಷ್ಟ್ರೀಯ ಸೇನೆಗಳು ಜಾಗೃತಗೊಂಡು ತಕ್ಕ ಸಿದ್ಧತೆ ಮಾಡಿಕೊಂಡು ಈ ಕಾರ್ಯಾಚರಣೆ ಪ್ರಾರಂಭಿಸಿರುವವೆಂದು ತಿಳಿಯಬಂದಿದೆ.

ಇರಾನಿನಲ್ಲಿ ಗಡಿಬಿಡಿ.

ಇರಾನಿನಲ್ಲಿ ಅರಸರಿದ್ದಾರೆ. ಇರಾನಿನ ಎಣ್ಣೆಗಣಿಗಳ ವಿಚಾರದಲ್ಲಿ ಬ್ರಿಟನ್ ಮತ್ತು ಇರಾನಿನೊಳಗಾದ ಬಿಕ್ಕಟ್ಟಿನಲ್ಲಿ ಅಲ್ಲಿಯ ಮುಖ್ಯ ಮಂತ್ರಿ ಮುಸಾದಿಕರವರು ಕೆಚ್ಚೆದೆಯಿಂದ ವರ್ತಿಸಿ ಇರಾನಿನ ಜನತೆಗೆ ಹಿತವಾದಿದ್ದಲ್ಲದೆ ಜನಾನುರಾಗಕ್ಕೆ ಪಾತ್ರರಾದರು. ನಂತರ ಅವರು ತಂದ ವ್ಯವಸಾಯ ಸುಧಾರಣಾ ಮಸೂದೆಯೂ ಜನಪ್ರಿಯವೆನಿಸಿತು. ಈ ಕಾರ್ಯದಿಂದ ಬಹು ಜನರು ಅವರನ್ನು ಮೆಚ್ಚಿದರೂ ಕೆಲ ಜನರು ಅವರ ಶತ್ರುಗಳಾದರು. ಸಾಧಾರಣವಾಗಿ ಈ ಆಜ್ಞೆಗಳು ಬಂಡವಳದಾರರ ವಿರುದ್ಧವಿದ್ದುದರಿಂದ ಅವರು ಮುಸಾದಿಕರ ಪಕ್ಷಕ್ಕೆ ತೃಪ್ತಿಯಿಂದಿರಲಿಲ್ಲ. ಮುಸಾದಿಕರು ಜನಪ್ರಿಯರೆಂದು ತೋರಿದ್ದಾಗ ಇರಾನಿನ ಮಜ್ಲೀಸಿನ ಸ್ಪೀಕರರಾದ ಅಯತುಲ್ಲ ಕಶಾನಿಯವರು ಬೆಂಬಲಿಗರಾಗಿದ್ದರು. ಈಗ ಅವರ ಪ್ರೇರಣೆಯಿಂದ ಮುಸಾದಿಕರ ವಿರೋಧ ಪಕ್ಷ ಬಲವಾಗುತ್ತಿದೆ.

ಇದಕ್ಕೆ ಒಂದು ಕಾರಣವೂ ದೊರೆಯಿತು. ಇರಾನಿನ ಅರಸರಾದ ಷಾರವರಿಗೆ ಅವರ ತಂದೆಯಿಂದ ದೊರೆತ ಅಪಾರ ದ್ರವ್ಯವನ್ನು ಸ್ವಂತವಾಗಿ ಇಟ್ಟುಕೊಳ್ಳದೆ ಸರಕಾರಕ್ಕೆ ಬಿಡಬೇಕೆಂದು ಮುಸಾದಿಕರು ಅರಸರನ್ನು ಒತ್ತಾಯ ಪಡಿಸಿದ್ದರು. ಮೇಲಾಗಿ ಷಾರವರನ್ನು ಕೇವಲ ಘಟನಾತ್ಮಕ ಅರಸರನ್ನಾಗಿಟ್ಟು ದೇಶದ ಆಡಳಿತದ ಎಲ್ಲ ಅಧಿಕಾರವನ್ನು ಮುಸಾದಿಕರಿಗೆ ಪಾರ್ಲಿಮೆಂಟು ಕೊಟ್ಟಿತ್ತು. ಈ ನಿರ್ಬಂಧದಲ್ಲಿ ಅರಸನಾಗಿರುವುದಕ್ಕಿಂತ ತಾನು ರಾಜ್ಯತ್ಯಾಗ ಮಾಡುವದಾಗಿ ಷಾರು ನಿರ್ಧರಿಸಿ ಇರಾನಿನ ಪಾರ್ಲಿಮೆಂಟಿಗೆ ತಿಳಿಸಿದ್ದರು. ಆದರೆ ಮಜ್ಲೀಸಿನ ಶಿಷ್ಟಮಂಡಳವೊಂದು ಷಾರವರನ್ನು ಅರಮನೆಯಲ್ಲಿ ಸಂದರ್ಶಿಸಿ ಗುಪ್ತ ಅಧಿವೇಶನ ನಡೆಸಿತು. ಅದರ ನಂತರ ಷಾ ರಾಜ್ಯತ್ಯಾಗ ಮಾಡುವದನ್ನು ಜನತೆಯ ಆಶಯದಂತೆ ಮುಂದರಿಸಿರುವದಾಗಿ ಷಾ ತಿಳಿಸಿರುವರು. ಈ ನಿರ್ಧಾರದಿಂದ ಇರಾನಿನಲ್ಲಿ ಅಲ್ಲೋಲಕಲ್ಲೋಲವೆದ್ದಿದೆ. ಅರಸರ ಬೆಂಬಲಿಗರು ಒಂದೆಡೆ ಪ್ರದರ್ಶನ ತೊಡಗಿದ್ದರೆ ಮುಸಾದಿಕರ ಕಡೆಯವರು ಬೇರೆಡೆ ಪ್ರದರ್ಶನ ತೊಡಗಿದ್ದಾರೆ. ಮುಸಾದಿಕರು ತಮ್ಮ ಮೇಲೆ ಜನತೆಯ ವಿಶ್ವಾಸವಿದೆಯೇ ಎಂಬುದನ್ನು ತಿಳಿಯಲು ಜನಮತ ತೆಗೆಯಲು ಮುಂದೆ ಬಂದಿದ್ದಾರೆ. ಇರಾನಿನಲ್ಲಿ ಅಶಾಂತಿ ತುಂಬಿದೆ.

ಪೆಪ್ಸು ಮಂತ್ರಿಮಂಡಳ

ಕಾಂಗ್ರೆಸೇತರ ಮಂತ್ರಿಮಂಡಲವಿರುವ ಪೆಪ್ಸುವಿನಲ್ಲಿ ಮುಖ್ಯ ಮಂತ್ರಿ ಗ್ಯಾನ್ ಸಿಂಗ್ ರಾರೆವಾಲರ ಚುನಾವಣೆಯ ವಿರುದ್ಧವಾಗಿ ಚುನಾವಣಾ ನ್ಯಾಯ ಮಂಡಲಕ್ಕೆ ಮಾಡಲಾಗಿದ್ದ ಅರ್ಜಿಯನ್ನು ಎತ್ತಿ ಹಿಡಿದು, ರಾರೆವಾಲರ ಚುನಾವಣೆಯನ್ನು ರದ್ದುಗೊಳಿಸಲಾಗಿದೆ. ಅದೇ ಮಂತ್ರಿಮಂಡಲದ ಮತ್ತೊಬ್ಬ ಸದಸ್ಯರಾದ ಸರದಾರ್ ಬಿಯಾನ್ ಸಿಂಗ್‌ಗಿಲ್ ಅವರನ್ನು ಸ್ಥಾನಚ್ಯುತಗೊಳಿಸಲಾಗಿದೆ ಇಲ್ಲಿ ಆರು ಮಂದಿ ಸದಸ್ಯರ ಚುನಾವಣೆಯನ್ನು ಈ ಮೊದಲೇ ರದ್ದುಗೊಳಿಸಲಾಗಿದೆ. ಹೀಗಾಗಿ ಒಟ್ಟು ಎಂಟು ಸ್ಥಾನಗಳಿಗೆ ಹೊಸ ಚುನಾವಣೆ ನಡೆಯಬೇಕಾಗಿದೆ

ಇಲ್ಲಿ ಈಗ ಪಕ್ಷಗಳ ಬಲಾಬಲ ಹೀಗಿದೆ.—ಈಗ ಅಧಿಕಾರದಲ್ಲಿರುವ ಸಂಯುಕ್ತರಂಗ ೨೫, ಕಾಂಗ್ರೆಸ್ ೨೩, ಕಮ್ಯೂನಿಸ್ಟ್ ೨, ಸ್ವತಂತ್ರ ೨. ಇಲ್ಲಿಯ ವಿಧಾಯಕ ಸಭೆಯ ಸದಸ್ಯರ ಒಟ್ಟು ಸಂಖ್ಯೆ ೬೦. ಇನ್ನು ಎಂಟು ಸ್ಥಾನಗಳಿಗೆ ಮರು ಚುನಾವಣೆ ನಡೆಯಬೇಕಾಗಿದೆ.

ವಿಚಿತ್ರ ಶಿಶು.

ಸಾಲಿ ಗ್ರಾಮದ ಹೆರಿಗೆ ಆಸ್ಪತ್ರೆಯಲ್ಲಿ ಫೆ. ೨೫ ರಂದು ಚಿಕ್ಕ ಪ್ರಾಯದ ಮುಸ್ಲಿಂ ಮಹಿಳೆಯೊಬ್ಬಳು ವಿಚಿತ್ರ ಶಿಶುವೊಂದಕ್ಕೆ ಜನ್ಮವಿತ್ತಿದ್ದಾಳೆ. ಶಿಶುವು ತಾಯಿಯ ಗರ್ಭದಿಂದ ಹೊರಕ್ಕೆ ಬರುವಾಗಲೇ ಮೃತಪಟ್ಟಿತಂತೆ.

ಶಿಶುವಿಗೆ ಒಂದು ತಲೆಯಿದ್ದು ಎಡಗಡೆ ಭಾಗದಲ್ಲಿ ಒಂದು ಕಿವಿಯೂ, ಬಲಗಡೆ ೨ ಕಿವಿಗಳೂ, ೪ ಕೈಗಳೂ, ೪ ಕಾಲುಗಳೂ, ಒಂದು ಮೂಗು, ಎಡಗಡೆ ಭಾಗದಲ್ಲಿ ಒಂದೇ ಕಣ್ಣೂ, ಇವೆ. ಅದನ್ನು ನೋಡುವಾಗ ಅವಳಿ ಮಕ್ಕಳಂತೆ, ಒಂದು ಮತ್ತೊಂದರ ಮೇಲೆ ತಬ್ಬಿಕೊಂಡು ಮಲಗಿರುವಂತೆ ಕಾಣುತ್ತದೆ. ಈ ಸ್ಥಿತಿ ಒಂದು ಗಂಡೂ, ಮತ್ತೊಂದು ನಪುಂಸಕವೂ ಆಗಿರುತ್ತವೆ. ಈ ಪ್ರಾಂತದಲ್ಲೆಲ್ಲಾ ಇಂಥ ಶಿಶುವು ಜನಿಸಿರುವುದು ಇದೇ ಪ್ರಥಮ ಬಾರಿ. ಜನರು ಸಹಸ್ರಾರು ಸಂಖ್ಯೆಯಲ್ಲಿ ಸದರಿ ಮಗುವನ್ನು ನೋಡಿಕೊಂಡು ಬರುತ್ತಿದ್ದಾರೆ. ಮಗುವಿನ ತಾಯಿ ಆರೋಗ್ಯವಾಗಿದ್ದಾಳೆ.

ವಾರದ ಕಥೆ

ಅವಳಿ ಜವಳಿ

ನನ್ನ ಕುಟುಂಬದಲ್ಲಿ ಒಟ್ಟು ಐದು ಜನ. ಅಜ್ಜ, ತಾಯಿ, ನಾನು ಮತ್ತು ಇಬ್ಬರು ಅವಳಿ ಜವಳಿಗಳು. ಅಜ್ಜನು ತಾಯಿಯ ತಂದೆ. ನನ್ನ ತಂದೆಯು ಶಿವಾಧೀನರಾದ ಮೇಲೆ ಅಜ್ಜನು ನನ್ನ ಪೋಷಕನಾಗಿ ನನ್ನೊಡನೆ ಇರುತ್ತಿದ್ದನು. ಜಮೀನು, ಮನೆ, ತೋಟ ಹೀಗೆ ಹಲವಾರು ಜವಾಬ್ದಾರಿಗಳನ್ನು ನೋಡಿಕೊಳ್ಳುವುದರಲ್ಲಿ ತಾಯಿಗೆ ಸಹಾಯಕನಾಗಿದ್ದನು. ನಾನು ಇನ್ನೂ ಹೈಸ್ಕೂಲಿನಲ್ಲಿ ಓದುತ್ತಿದ್ದುದರಿಂದ ಈ ಜವಾಬ್ದಾರಿಗಳನ್ನು ಹೊರುವ ಸಮಯ ಬಂದಿರಲಿಲ್ಲ. ಅಜ್ಜನ ಆರೋಗ್ಯ ಚೆನ್ನಾಗಿರಲಿಲ್ಲ. ಹೃದಯವು ದುರ್ಬಲವೆಂದು ಡಾಕ್ಟರು ಹೇಳಿದ್ದರು. ಆಗಾಗ್ಗೆ ಅವರು ಔಷಧಿ ತೆಗೆದುಕೊಳ್ಳುತ್ತಿದ್ದರು. ಅವರು ವಿಭೂತಿ ಧರಿಸುತ್ತಿದ್ದರು. ಬೆಳಿಗ್ಗೆ ವಿಭೂತಿ ಹಾಕಲು ಕೂತರೆ ಪೂಜೆಯಿಂದ ಏಳಲು ಹನ್ನೆರಡು ಹೊಡೆದು ಹೋಗುತ್ತಿತ್ತು. ರಾತ್ರಿ ಆರು ಗಂಟೆಗೆ ಕೂತರೆ ಎಂಟು ಗಂಟೆಯಾಗುತ್ತಿತ್ತು. ಯಾವಾಗಲೂ ಸಾಯಂಕಾಲ ತನ್ನ ಉಣ್ಣೆಯ ಅಂಗ ವಸ್ತ್ರವನ್ನು ಕುತ್ತಿಗೆಗಾಗಿ ಸುತ್ತಿ ಗಾಳಿ ವಿಹಾರಕ್ಕೆ ಅವರು ಹೋಗುತ್ತಿದ್ದರು. ಎಣ್ಣೆ ಮಜ್ಜನದ ದಿನ ಮಾತ್ರ ಇದು ಬಾಕಿಯಾಗುತ್ತಿತ್ತು. ಅಜ್ಜನು ತಾಯಿಯೊಂದಿಗೆ ತನ್ನ ಕಾಯಿಲೆಯ ವಿಚಾರ ಗಂಟೆ ಗಂಟೆಗಳ ವರೆಗೆ ಮಾತಾಡುತ್ತಿದ್ದನು. ಅಜ್ಜನು ತುಂಬಾ ದಯೆ ಇರುವ ಮನುಷ್ಯ. ಕಷ್ಟದ ಕತೆಗಳನ್ನು ಕೇಳಿದಾಗ ಕಣ್ಣೀರಿಡುತ್ತಿದ್ದನು. ಆತನು ಒಂದು ಚೀಲದಲ್ಲಿ ತುಂಬಾ ಚಿಲ್ಲರೆ ಕಾಸುಗಳನ್ನಿಟ್ಟುಕೊಂಡಿದ್ದನು. ಭಿಕ್ಷುಕರು ಬಂದರೆ ಅವರ ಕಷ್ಟದ ಕತೆ ಕೇಳಿ ಒಂದೆರಡು ಕಾಸು ಕೊಡುವುದು ಆತನ ಸಂಪ್ರದಾಯವಾಗಿತ್ತು.

ನನ್ನ ತಾಯಿ ಒಳ್ಳೆ ಧೈರ್ಯವಿರುವ ಹೆಂಗಸು. ನನ್ನ ಗದ್ದೆ, ತೋಟಗಳ ಜವಾಬ್ದಾರಿ ಅವಳದೇ ಆಗಿತ್ತು. ಎಲ್ಲಾ ಕೆಲಸಗಳು ಯಂತ್ರದಂತೆ ಸಕಾಲದಲ್ಲಿ ಆಕೆಯ ಮೇಲ್ವಿಚಾರಣೆಯಲ್ಲಿ ಸರಿಯಾಗಿ ನಡೆಯುತ್ತಿದ್ದವು. ಯಾವುದೇ ರೀತಿಯ ದುರ್ವ್ಯಯಗಳಿಗೆ ಆಕೆ ಎಡೆ ಕೊಡುತ್ತಿರಲಿಲ್ಲ. ದಿನದ ಕಷ್ಟ ಜವಾಬ್ದಾರಿಯ ಮಧ್ಯೆ ಕಿರಿಮಕ್ಕಳಾದ ಅವಳಿ ಜವಳಿಗಳು ಆಕೆಗೆ ಆನಂದದ ವಸ್ತುಗಳು. ತಂದೆಯವರು ಅಕಾಲ ಮೃತ್ಯುವಿಗೊಳಗಾದ ದುಃಖದ ಆ ದಿನಗಳಲ್ಲಿ ಈ ಅವಳಿ ಜವಳಿಗಳೇ ಆಕೆಗೆ ದುಃಖ ಸಹಿಸುವ ಶಕ್ತಿಯನ್ನು ಕೊಟ್ಟವು. ಈ ಅವಳಿ ಮಕ್ಕಳೂ ಕೂಡ ತಾಯಿಯ ಆಸೆಗೆ ಸರಿಯಾಗಿ ವರ್ತಿಸುತ್ತಿದ್ದವು. ಅವು ಒಬ್ಬರೊಬ್ಬರೊಡನೆ ಜಗಳವಾಡುತ್ತಿರಲಿಲ್ಲ. ಇಬ್ಬರು ಮಕ್ಕಳೂ ಕೂಡ ಗೆಳೆಯರಂತೆ ವರ್ತಿಸುತ್ತಿದ್ದರು. ಇಬ್ಬರೂ ಜೊತೆ ಸೇರಿಯೇ ಪ್ರತಿ ಕೆಲಸ ಮಾಡುತ್ತಿದ್ದರು. ಮನೆಯಲ್ಲಿ ಬೇಕಾದುದನ್ನು ಕದಿಯುವದರಲ್ಲಿ, ಬೇರೆ ಯಾವುದೇ ಕಾರ್ಯವಿರಲಿ, ಒಬ್ಬನಿಲ್ಲದೆ ಮತ್ತೊಬ್ಬನು ಮಾಡುತ್ತಿರಲಿಲ್ಲ. ಇಬ್ಬರೂ ಚೆನ್ನಾಗಿ ಸೊಕ್ಕಿದ ಹುಡುಗರು. ಅವರ ಜೀರ್ಣ ಶಕ್ತಿಯನ್ನು ಕಂಡು ನನಗೇ ಆಶ್ಚರ್ಯವಾಗುತಿತ್ತು. ಎಷ್ಟು ತಿಂದರೂ ಅವರಿಗೆ ಹೊಟ್ಟೆನೋವಾಗಲೀ, ಕಾಯಿಲೆಯಾಗಲೀ ಬರುವಂತಿರಲಿಲ್ಲ. ಅಜ್ಜನು ಅವರಿಬ್ಬರನ್ನು ತಮಾಷೆ ಮಾಡುತಿದ್ದರು. ಇವರಿಬ್ಬರೂ ಚರಿತ್ರೆಯ ವಾತಾಪಿ ಮತ್ತು ಇಲ್ವಾಲರಂತೆ ಎಂದು ಅಜ್ಜನು ಹೇಳುತಿದ್ದನು. ಅವರ ಕಥೆ ಹೀಗಂತೆ. ವಾತಾಪಿಯು ತನ್ನ ಮಂತ್ರ ಶಕ್ತಿಯಿಂದ ಆಡಾಗಿ ವೇಷ ಬದಲಿಸಿಕೊಳ್ಳುತಿದ್ದನಂತೆ. ಮನೆಗೆ ಬಂದ ಅತಿಥಿಗಳು ಆಡನ್ನು ಕಡಿದು ಸಂತೋಷದ ಊಟ ಏರ್ಪಡಿಸಿ ಎಲ್ಲರೂ ಊಟ ಮಾಡಿದ ಮೇಲೆ ಇಲ್ವಾಲನು ವಾತಾಪಿಯ ಹೆಸರನ್ನು ಕರೆದರೆ ಎಲ್ಲರ ಹೊಟ್ಟೆಯನ್ನೂ ಒಡೆದುಕೊಂಡು ವಾತಾಪಿಯು ಹೊರಬರುತ್ತಿದ್ದನಂತೆ. ನಂತರ ಇವರಿಬ್ಬರು ಸೇರಿಕೊಂಡು ಸತ್ತು ಬಿದ್ದ ಅತಿಥಿಗಳನ್ನು ತಿನ್ನುತಿದ್ದರಂತೆ. ಅದರಂತೆ ಈ ಅವಳಿಜವಳಿಗಳ ಜೀರ್ಣಶಕ್ತಿ ಇತ್ತು!

ತಾಯಿಯು ಇವರ ಉಂಡಾಡಿತನದಿಂದ ಸಾಕಾಗಿ ಯಾರನ್ನಾದರೂ ಹೊಡೆದರೆ ಇಬ್ಬರೂ ಒಂದೇ ರೀತಿಯಲ್ಲಿ ಕೂಗಿಕೊಂಡು ಗಲಾಟೆ ಎಬ್ಬಿಸುತಿದ್ದರು. ನಂತರ ಇಬ್ಬರೂ ಬಂದು ತಾಯಿಯ ಕುತ್ತಿಗೆಯನ್ನು ತಬ್ಬಿ ಹಿಡಿದು ಅಳತೊಡಗುವರು. ತಾಯಿಯು ಮರುಕ್ಷಣ ಶಾಂತಳಾಗುವಳು. ಈ ರೀತಿ ಮಕ್ಕಳು ತಿಂದರೆ ಕ್ರಮೇಣ ಅವರಿಗೆ ಅಹಿತವಾಗುವದೆಂದು ನಿರ್ಧರಿಸಿ ನಿಶ್ಚಿತವಾದ ಪರಿಮಾಣದಲ್ಲಿ ತಿಂಡಿ ಕೊಡುವ ಏರ್ಪಾಡಾಯಿತು. ಅಜ್ಜನು ಅವರ ಜೊತೆಯಲ್ಲಿ ಪ್ರತಿ ದಿನ ಊಟಕ್ಕೆ ಕುಳಿತು, ಅವರೊಡನೆಯೇ ಮಲಗಿ ಅವರಿಗೆ ಬೇಕಾದ ಕತೆ ಹೇಳಿ ಕೊಡುತಿದ್ದನು. ಊಟವಾದ ಮೇಲೆ ಎರಡು ಮಕ್ಕಳೂ ಅಜ್ಜನ ಕೈ ಹಿಡಿದುಕೊಂಡು ಮಲಗುವ ಕೋಣೆಗೆ ಕರೆದುಕೊಂಡು ಹೋಗುತಿದ್ದರು. ಪ್ರಥಮವಾಗಿ ಕಳೆದ ರಾತ್ರಿಯ ಕತೆಯ ಮೇಲೆ ಒಂದೆರಡು ಟೀಕೆ ಟಿಪ್ಪಣಿಗಳಾದ ಮೇಲೆ ಅಜ್ಜನು ಕತೆ ಹೇಳಲು ಪ್ರಾರಂಭಿಸುತ್ತಿದ್ದನು.

ಅಜ್ಜನು ಪ್ರಾಮುಖ್ಯವಾಗಿ ಪುರಾಣಗಳಿಂದಲೇ ಎಲ್ಲಾ ಕತೆಗಳನ್ನೂ ಹೇಳುತ್ತಿದ್ದನು. ಇಬ್ಬರು ಅವಳಿ ಮಕ್ಕಳೂ ಕೂಡ ಆ ಕಥೆಗಳಿಂದ ಪ್ರಭಾವಿತರಾಗಿ ತಾವು ಲವಕುಶರೆಂದೂ, ಭೀಮಾರ್ಜುನರೆಂದೂ, ಪರಸ್ಪರ ಯುದ್ಧ, ಆಟಗಳನ್ನು ಆಡುತಿದ್ದರು. ಅನೇಕ ವೇಳೆ ಶತ್ರುಗಳನ್ನು ಕೊಂದು ಸಾಧು ಜನರ ಹಿತ ಸಾಧಿಸುವಂತೆ ವರ್ತಿಸುತಿದ್ದರು. ಅವರ ಮನಸ್ಸಿಗೆ ಬೇಕಾದ ಹಾಗೆ ಅವರು ಪುರಾಣಗಳನ್ನು ಮಾರ್ಪಡಿಸಿಕೊಳ್ಳುತಿದ್ದರು. ಅವರ ರಾಮಾಯಣದಲ್ಲಿ ರಾಮನು ವನವಾಸಕ್ಕೆ ಹೋಗುವ ಬದಲು ಕೈಕೆ ಹೋಗುವಳು. ರಾವಣನು ಜನರಿಗೆ ಕೊಡುತಿದ್ದ ಹಿಂಸೆಯನ್ನು ನಿವಾರಿಸಲು ರಾಮನು ಯುದ್ಧಕ್ಕೆ ಹೋಗುವನು. ಸೀತೆಯನ್ನು ಕದ್ದ ಪ್ರಸಂಗ ಅವರ ಪುರಾಣದಲ್ಲಿ ಬಾರದು. ಹೀಗೆ ಮಕ್ಕಳು ಆನಂದಿತರಾಗುತಿದ್ದರು.

ಒಂದು ದಿನ ಮಕ್ಕಳು ಧ್ರುವನ ಕತೆ ಹೇಳಬೇಕೆಂದು ಆಗ್ರಹಪಡಿಸಿದರು. ಧ್ರುವ ಮತ್ತು ಪ್ರಹ್ಲಾದರ ಕತೆ ಅವರಿಗೆ ಕೇಳಿದಷ್ಟು ಸಾಲದು. ಎರಡು ಕತೆಗಳೂ ಹಿರಿಯರ ಬಗ್ಗೆ ಕಿರಿಯರ ತಿರಸ್ಕಾರ ಸೂಚಿಸುವಂಥಾವಾದ್ದರಿಂದ ಅವರಿಗೆ ಇನ್ನಷ್ಟು ಆಕರ್ಷಣೀಯವಾಗಿತ್ತು. ಅಜ್ಜನು ಕಥೆ ಹೇಳತೊಡಗಿದನು. "ಒಬ್ಬ ರಾಜನಿದ್ದನು. ಆತನ ಹೆಸರು ಉತ್ತಾನಪಾದ. ಆತನಿಗೆ ಸುನೀತಿ ಮತ್ತು ಸುರುಚಿಯರೆಂಬ ಎರಡು ಹೆಂಡತಿಯರಿದ್ದರು." ಅಷ್ಟರಲ್ಲಿ ಒಬ್ಬ ಮಗುವು "ಆತನಿಗೆ ಎರಡು ಹೆಂಡತಿಯರೇಕೆ ?" ಎಂದು ಪ್ರಶ್ನಿಸಿತು.

"ಮುಟ್ಠಾಳ ರಾಜರು ಅನೇಕ ಹೆಂಡತಿಯರನ್ನು ಇಟ್ಟುಕೊಳ್ಳುತ್ತಿದ್ದರು." ಮತ್ತೊಬ್ಬನು ಉತ್ತರವಿತ್ತನು.

"ಸುಮ್ಮನಿರಿ. ಕತೆ ಕೇಳಿ. ಕಿರಿಯ ಹೆಂಡತಿಗೆ ಮಕ್ಕಳಿರಲಿಲ್ಲ. ಹಿರಿಯವಳಿಗೆ ಒಬ್ಬ ಮಗನಿದ್ದನು. ಆತನು ಒಳ್ಳೆ ಹುಡುಗನಾಗಿದ್ದನು. ಯಾವಾಗಲೂ ದೇವರನ್ನು ಪ್ರಾರ್ಥಿಸುತ್ತಿದ್ದನು. ದೇವರಿಗೆ ಆತನ ಮೇಲೆ ತುಂಬಾ ಪ್ರೀತಿ ಇತ್ತು. ಒಂದು ದಿನ ಧ್ರುವನಿಗೆ ತನ್ನ ತಂದೆಯ ತೊಡೆಯ ಮೇಲೆ ಕೂರಬೇಕೆಂದು ಆಸೆಯಾಯಿತು. ಆತನು ತಂದೆಯ ಹತ್ತಿರ ಹೋದನು. ಸುರುಚಿಗೆ ಇದು ತೃಪ್ತಿಯಾಗಲಿಲ್ಲ. ತನಗೆ ಮಕ್ಕಳಿಲ್ಲದ ಸಿಟ್ಟಿನಿಂದ ಕೂರಲು ಬಿಡಲಿಲ್ಲ." ಅಜ್ಜನು ಹೇಳಿದನು.

"ತಾಯಿಗೆ ನಾವಿಬ್ಬರು ಮಕ್ಕಳು. ಇಬ್ಬರೂ ಒಂದೊಂದು ತೊಡೆಯಲ್ಲಿ ಕೂತುಕೊಳ್ಳುವೆವು" ಕತೆ ಕೇಳುತ್ತಿದ್ದ ಮಕ್ಕಳೆಂದರು.

"ಆದರೆ ಕೇಳಿ. ಸುರುಚಿಗೆ ಸಿಟ್ಟು ಬಂತು."

"ನಾನು ಅಲ್ಲಿ ಇದ್ದಿದ್ದರೆ ಸುರುಚಿಗೆ ನಾಲ್ಕು ಏರಿಸಿಬಿಡುತ್ತಿದ್ದೆ" ಎಂದು ಒಂದು ಮಗುವು ಹೇಳಿ ತನ್ನ ಪಕ್ಕದಲ್ಲಿದ್ದ ತಲೆದಿಂಬಿಗೆ ಗುದ್ದತೊಡಗಿತು. ಅಜ್ಜನು ತುಂಬಾ ಹಾಸ್ಯ ಪ್ರಿಯನು.

"ಹೌದು, ಆದರೆ ನೀವಾರು ಅಲ್ಲಿರಲಿಲ್ಲ. ಆದ್ದರಿಂದ ಪಾಪದ ಧ್ರುವನೇನು ಮಾಡ್ಯಾನು. ಧ್ರುವನು ಅಳತೊಡಗಿದನು." ಎಂದು ಅಜ್ಜನು ಹೇಳಿದನು. ಮಕ್ಕಳಿಗೆ ತೃಪ್ತಿಯಾಗಲಿಲ್ಲ. "ಆಕೆಯ ಕೈಯನ್ನಾದರೂ ಕಚ್ಚಲಿಕ್ಕೇನಾಗಿತ್ತು?" ಎಂದು ಒಬ್ಬನು ಪ್ರಶ್ನಿಸಿದನು.

"ಆದರೆ ಧ್ರುವನು ಒಳ್ಳೆಯ ಹುಡುಗನಾದ್ದರಿಂದ ಹಾಗೆ ಮಾಡಲಿಲ್ಲ." ಅಜ್ಜನು ಕತೆ ಮುಂದರಿಸಿದನು.

'ನನಗೆ ಗೊತ್ತು. ಆತನು ತಾಯಿಯೆಡೆಗೆ ಹೋಗಿ ನಂತರ ಕಾಡಿಗೆ ತೆರಳಿ ತಪಸ್ಸು ಮಾಡಿ ನಂತರ ನಕ್ಷತ್ರವಾದನು. ಬದನೆಗಿಡವು ಬದನೆಯನ್ನೇ ಬಿಟ್ಟಿತು." ಎಂದು ಒಂದು ಮಗುವು ಕತೆಯನ್ನು ಮುಗಿಸಿತು. ಬದನೆಗಿಡವು ಬದನೆಯನ್ನೇ ಬಿಟ್ಟಿತು ಎಂಬುದು ಹಳ್ಳಿಗಳಲ್ಲಿ ಕತೆಯನ್ನು ಮುಕ್ತಾಯಗೊಳಿಸುವ ಒಂದು ನುಡಿ.

ಆದರೆ ಆಲೋಚನಾಮಗ್ನನಾಗಿದ್ದ ಮತ್ತೊಬ್ಬನು ಕೇಳತೊಡಗಿದನು. "ಅಜ್ಜಾ ಧ್ರುವನು ಕಾಡಿಗೆ ಹೋದನೆಂದು ಹೇಳಿದೆ. ರಾಮನೂ ಕಾಡಿಗೆ ಹೋದನು. ಪಾಂಡವರೂ ಕಾಡಿಗೆ ಹೋದರು. ಹೀಗೆ ಎಲ್ಲರೂ ಕಾಡಿಗೆ ಹೋಗುವದೇಕೆ ?"

'ನಿನಗೆ ಯಾರನ್ನಾದರೂ ಇಷ್ಟವಿಲ್ಲದಿದ್ದರೆ ಅಂಥಾವರನ್ನು ಕಾಡಿಗೆ ಕಳುಹಿಸುವದು ಸಂಪ್ರದಾಯ. ಅಲ್ಲಿ ಹುಲಿ, ಸಿಂಹ, ಕರಡಿಗಳು ಅವರನ್ನು ಒಮ್ಮೆಲೆ ಕೊಂದಿಕ್ಕುವವು.'

'ಆದರೆ ಧ್ರುವನು ಕೊಲ್ಲಲ್ಪಡಲಿಲ್ಲ' ಆತನು ಕೇವಲ ಚಿಕ್ಕ ಮಗುವಾಗಿದ್ದನು !'

ಆತನು ಒಳ್ಳೇ ಹುಡುಗನಾಗಿದ್ದುದಲ್ಲದೆ ಪವಿತ್ರನಾಗಿದ್ದನು'

'ಆತನು ಪವಿತ್ರನೆಂದು ಕಾಡು ಪ್ರಾಣಿಗಳಿಗೇನು ಗೊತ್ತು ?'

'ದೇವರು ಅವುಗಳಿಗೆ ಆ ಜ್ಞಾನ ಕೊಟ್ಟಿದ್ದಾನೆ.'

'ದೇವರು ಪ್ರಾಣಿಗಳೊಡನೆ ಮಾತಾಡುವನೇ? ಮನುಷ್ಯ ಬಾಯಿಯಾಕೆ? ಮತ್ತೊಬ್ಬನು ಪ್ರಶ್ನಿಸಿದನು.' 'ಹೇ, ತಲೆಹರಟೆಯಂತೆ ಮಾತಾಡಬೇಡ. ದೇವರು ಮನಸ್ಸು ಮಾಡಿದರೆ ಎಲ್ಲರೊಡನೆಯೂ ಕಲ್ಲು ಮರಗಳೊಡನೆಯೂ ಮಾತಾಡಬಲ್ಲನು. ಅಲ್ಲವೇ ಅಜ್ಜಾ ?' ಮತ್ತೊಬ್ಬ ಮಗುವು ಕೇಳಿದನು.

'ನಿಜವಾಗಿಯೂ. ಆತನು ಎಲ್ಲೆಲ್ಲಿಯೂ ಇದ್ದಾನೆ. ಎಲ್ಲವನ್ನೂ ತಿಳಿದಿದ್ದಾನೆ.

"ಆತನು ಹಾಗಾದರೆ ನೀನು ಹೇಳುವ ಕತೆಯನ್ನು ಕೇಳುತ್ತಿರುವನೇ?" ಉತ್ಸುಕವಾದ ಮಗುವು ಕೇಳಿತು.

"ಅದರ ವಿಷಯದಲ್ಲಿ ನನಗೆ ಸಂದೇಹವಿಲ್ಲ. ಏಕೆಂದರೆ ಆತನಿಲ್ಲದ ಸ್ಥಳವೇ ಇಲ್ಲ."

"ಪ್ರಹ್ಲಾದನೂ ಆತನ ತಂದೆಗೆ ಅದೇ ಮಾತನ್ನಲ್ಲವೆ ಹೇಳಿದ್ದು. ಆದರೆ ಆತನ ತಂದೆಯು ಕ್ರೂರಿಯಾದ್ದರಿಂದ ಅದನ್ನು ನಂಬಲಿಲ್ಲ. ಆತನು ಪ್ರಹ್ಲಾದನಿಗೆ ನಾನಾ ತೊಂದರೆಗಳನ್ನು ಕೊಟ್ಟನು. ಆದರೆ ದೇವರು ಆತನ ಕಡೆ ಇದ್ದ ಕಾರಣ ಆತನಿಗೇನೂ ಆಗಲಿಲ್ಲ. ಒಂದು ದಿನ ಆತನ ತಂದೆಯು ಉದ್ದ ಕೋರೆಯ ದೊಡ್ಡ ಆನೆಯೊಂದನ್ನು ಕಳುಹಿಸಿ ಪ್ರಹ್ಲಾದನನ್ನು ಅದರ ಕಾಲಿನಿಂದ ತುಳಿಸಲು ಯತ್ನಿಸಿದನು. ನೀನು ಕತೆ ಕೇಳುತ್ತಿರುವೆಯಾ ಅಜ್ಜಾ?" ಮಗುವು ಕೇಳಿತು.

"ಹೌದು ಕೇಳುತ್ತಿರುವೆನು. ಆನೆಯು ಪ್ರಹ್ಲಾದನನ್ನು ಕೊಲ್ಲಲಿಲ್ಲ"!

"ನಂತರ ಆತನ ತಂದೆಯು ನೀರಿನಲ್ಲಿ ಪ್ರಹ್ಲಾದನನ್ನು ಮುಳುಗಿಸಲು ಯತ್ನಿಸಿದನು. ಪ್ರಹ್ಲಾದನು ದೇವರ ಹೆಸರು ಹೇಳುತಿದ್ದುದರಿಂದ ಆತನಿಗೆ ಏನೂ ಆಗಲಿಲ್ಲ. ಕಡೆಗೆ ಪ್ರಹ್ಲಾದನ ತಂದೆಯು ಸಿಟ್ಟಿನಿಂದ ಆತನನ್ನು ಕರೆದು "ನಿನ್ನ ದೇವರೆಲ್ಲಿದ್ದಾನೆ?" ಎಂದು ಕೇಳಿದನು. "ಆತನು

ಎಲ್ಲೆಲ್ಲಿಯೂ ಇರುವನು" ಎಂದು ಪ್ರಹ್ಲಾದನು ಉತ್ತರಿಸಿದನು.

ಅಷ್ಟರಲ್ಲಿ ಕೇಳುತ್ತಿದ್ದ ಮಗುವು ಕೈಸನ್ನೆ ಮಾಡಿ ಅಜ್ಜನು ನಿದ್ರಿಸುತ್ತಿರುವನೆಂಬುದನ್ನು ತಿಳಿಸಿತು. ಅಜ್ಜನು ಶಾಂತರೀತಿಯಿಂದ ನಿದ್ರೆ ಹೋಗಿದ್ದನು.

ಎರಡು ಮಕ್ಕಳೂ ಮೆಲ್ಲಗೆ ಎದ್ದು ತಾಯಿ ಕುಳಿತಿದ್ದ ಕಡೆ ಹೋದವು. ತಾಯಿಯ ಕುತ್ತಿಗೆಗೆ ಬಿಗಿದಪ್ಪಿಕೊಂಡುವು.

"ರಾಮು, ರಾಮು ಇನ್ನೂ ನಿದ್ರೆ ಮಾಡಿಲ್ಲವೇ?" ತಾಯಿಯೆಂದಳು.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಕೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
4. 9"×4" ಮತ್ತು 8"×4" ಕಬ್ಬಿಣದ ತೊಲೆಗಳು (Girders).
5. 8'×3'×24' (Gage) ಕಬ್ಬಿಣದ ತಗಡುಗಳು.
6. 1¾" × 5/16" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೈ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು, (Special purchase permit) ಪಡೆಯಬೇಕು.

ಎಂ. ಎಸ್ ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10.00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಆಧಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಹುಂಡಿಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ. ಪ್ರೆಸಿಡೆಂಟ್ & ಖಜಾಂಚಿ.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್,

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ

ನೀವು ಬಲ್ಲಿರಾ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ಸಾಕ್ಷಿ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕೋರ್ಪೋರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕೋರ್ಪೋರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 6

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಪ ಶ್ರೀ ಸೋಮವಾರಪೇಟೆ.

THE CANARA BANKING CORPORATION LIMITED

ಸೋಮವಾರಪೇಟೆ ನಾಡು ಸಹಕಾರ ಬ್ಯಾಂಕು ಲಿಮಿಟೆಡ್. ಸೋಮವಾರಪೇಟೆ

(ಉ. ಕೊಡಗು) ಸ್ಥಾಪನೆ 1949.

ಅಧಿಕೃತ ಪಾಲು ಬಂಡವಾಳ	ರೂ.	50,000
ವಸೂಲಾದ ಪಾಲು ಬಂಡವಾಳ	ರೂ.	26,000
ಬ್ಯಾಂಕಿನ ಮೂಲ ಧನ	ರೂ.	3,00,000

ಠೇವಣಾತಿಯ ಬಡ್ಡಿ ದರಗಳು

ಚಾಲ್ತಿ ಠೇವಣಾತಿಗಳಿಗೆ	ಶೇಕಡ ರೂ.	0-8-0
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳಿಗೆ	,,	2-0-0
ನಿರಖು ಠೇವಣಾತಿ 1 ವರ್ಷದ ಅವಧಿಗೆ	,,	2-0-0
2 ,, ,,	,,	2-8-0
3 ,, ,,	,,	3-0-0
4 ,, ,,	,,	3-8-0
5 ,, ,,	,,	4-0-0
3000ಕ್ಕೆ ಮೇಲ್ಪಟ್ಟ ಮೊಬಲಗಿಗೆ 5 ವರ್ಷದ ಅವಧಿಗೆ.		5-0-0

ಡಿ. ನಾರಾಯಣಶೆಟ್ಟಿ, ಪ್ರೆಸಿಡೆಂಟ್.

4-4

Specialists in Tailoring! Prompt Service!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-4 **PATTU BROTHERS,**

Opp.— **Town Hall, MYSORE.**

TO LET

Shops & upstairs in the newly constructed building of the Bank at Mercara are available for rent.

For particulars, please contact:-

THE CANARA BANKING CORPORATION LTD.,
MERCARA.

4-4

Edited Printed and Published by P. I. BELLIAPPA at 'KODAGU' Press, Mercara for Kodagu Ltd.,

ಕೊಡಗು

೧೩-೩-೧೯೫೩

KODAGU KANNADA WEEKLY MERCARA

"ಎಲ್ಲೆಲ್ಲಿಯೂ ಇರುವನು" ಎಂದು ಪ್ರಹ್ಲಾದನು ಉತ್ತರಿಸಿದನು.

ಅಷ್ಟರಲ್ಲಿ ಕೇಳುತ್ತಿದ್ದ ಮಗುವು ಕೈಸನ್ನೆ ಮಾಡಿ ಅಜ್ಜನು ನಿದ್ರಿಸುತ್ತಿರುವವನ್ನು ಬುದನ್ನು ತಿಳಿಸಿತು. ಅಜ್ಜನು ಶಾಂತರೀತಿಯಿಂದ ನಿದ್ರೆ ಹೋಗಿದ್ದನು.

ಎರಡು ಮಕ್ಕಳೂ ಮೆಲ್ಲಗೆ ಎದ್ದು ತಾಯಿ ಕುಳಿತಿದ್ದ ಕಡೆ ಹೋದವು. ತಾಯಿಯ ಕುತ್ತಿಗೆಗೆ ಬಿಗಿದಪ್ಪಿಕೊಂಡುವು.

"ರಾಮು, ರಾಮು ಇನ್ನೂ ನಿದ್ರೆ ಮಾಡಿಲ್ಲವೇ?" ತಾಯಿಯೆಂದಳು.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕಾಣಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಹೋಳಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
4. 9″×4″ ಮತ್ತು 8″×4″ ಕಬ್ಬಿಣದ ತೊಲೆಗಳು (Girders).
5. 8′×3′×24′ (Gage) ಕಬ್ಬಿಣದ ತಗಡುಗಳು.
6. $1\frac{3}{4}$″ × $\frac{5}{16}$″ ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಆವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್ ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಬಿಲ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಸೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್ ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್,

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ

ನೀವು ಬಲ್ಲಿರಾ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ಸಾಕ್ಷಿ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕೋರ್ಪೊರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕೋರ್ಪೊರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 6

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ [illegible] ಸೋಮವಾರಪೇಟೆ.

THE CANARA BANKING CORPORATION LIMITED

ಸೋಮವಾರಪೇಟೆ ನಾಡು ಸಹಕಾರ ಬ್ಯಾಂಕು ಲಿಮಿಟೆಡ್. ಸೋಮವಾರಪೇಟೆ

(ಉ. ಕೊಡಗು) ಸ್ಥಾಪನೆ 1949.

ಅಧಿಕೃತ ಪಾಲು ಬಂಡವಾಳ	ರೂ.	50,000
ವಸೂಲಾದ ಪಾಲು ಬಂಡವಾಳ	ರೂ.	26,000
ಬ್ಯಾಂಕಿನ ಮೂಲ ಧನ	ರೂ.	3,00,000

ಠೇವಣಾತಿಯ ಬಡ್ಡಿ ದರಗಳು

ಚಾಲ್ತಿ ಠೇವಣಾತಿಗಳಿಗೆ	ಶೇಕಡ ರೂ.	0-8-0
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳಿಗೆ	,,	2-0-0
ನಿರಖು ಠೇವಣಾತಿ 1 ವರ್ಷದ ಅವಧಿಗೆ	,,	2-0-0
2 ,, ,,	,,	2-8-0
3 ,, ,,	,,	3-0-0
4 ,, ,,	,,	3-8-0
5 ,, ,,	,,	4-0-0
3000ಕ್ಕೆ ಮೇಲ್ಪಟ್ಟ ಮೊಬಲಗಿಗೆ 5 ವರ್ಷದ ಅವಧಿಗೆ.		5-0-0

ಡಿ. ನಾರಾಯಣಶೆಟ್ಟಿ,
ಪ್ರೆಸಿಡೆಂಟ್.

4-4

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-4 **PATTU BROTHERS,**

OPP.— **Town Hall, MYSORE.**

TO LET

Shops & upstairs in the newly constructed building of the Bank at Mercara are available for rent.

For particulars, please contact:-

THE CANARA BANKING CORPORATION LTD.
MERCARA.

4-4

Edited Printed and Published by P. I. BELLIAPPA at 'KODAGU' Press, Mercara for Kodagu Ltd.,

ಕೊಡಗು
೧೩-೩-೧೯೫೩
KODAGU
KANNADA
WEEKLY
MERCARA

ವಾರದ ಕಥೆ

॥ ಸತ್ಯ ಮಿಥ್ಯಗಳೆಡೆಯಲ್ಲಿ ॥

ಮುಹಮ್ಮದನು ಒಬ್ಬ ದೊಡ್ಡ ಶ್ರೀಮಂತ ವ್ಯಾಪಾರಿ. ಆತನ ಸಂಪತ್ತಿಗೆ ಮಿತಿ ಇರಲಿಲ್ಲ. ಬಸರಾದ ಎಲ್ಲಾ ವ್ಯಾಪಾರಿಗಳ ಸಂಪತ್ತನ್ನು ಒಟ್ಟುಗೂಡಿಸಿದರೂ ಅವನ್ನು ಮೀರಿಸುವಷ್ಟು ಧನ ಅವನ ಸ್ವಾಧೀನದಲ್ಲಿತ್ತು. ಆತನು ದಕ್ಷನಾಗಿದ್ದನು. ಫೈಲಾಳು ಆತನ ಪತ್ನಿ. ಆಕೆಯ ಸೌಂದರ್ಯ, ಗುಣ ನಡತೆಗಳು ಪ್ರತಿ ಸಮಯ ಮಾತಾಗಿದ್ದವು. ಈ ಜಗತ್ತಿನಲ್ಲಿ ಸುಖ, ಸೌಖ್ಯಕ್ಕೆ ಬೇಕಾದ ಎಲ್ಲಾ ವಸ್ತುಗಳು ಆತನಲ್ಲಿದ್ದವು. ಆದರೂ ಆತನಿಗೆ ಪ್ರತ್ಯಯೋಗಲೀಸ ಬಗೆಗೇ ಇದ್ದಂತೆ ತೋರುತ್ತಿರಲಿಲ್ಲ. ಆತನೊಡನೆ ವ್ಯವಹಾರ ಮಾಡುವವರಿಗೂ ಆತನಿಂದಾಗಿ ಸಮಾಧಾನವಿರಲಿಲ್ಲ. ಆತನು ತುಂಬಾ ಜಿಪುಣನೂ, ಜಗಳಗಂಟನೂ ಮೋಸ ವಿದ್ಯೆ ಕಲಿತವನೂ ಆಗಿದ್ದನು. ಆತನು ಬಹು ದೊಡ್ಡ ವ್ಯಾಪಾರಿಯಾಗಿ ವಿವಿಧ ದೇಶಗಳಲ್ಲಿ ಆತನ ವ್ಯಾಪಾರ ಹಬ್ಬಿತ್ತು. ಅಲ್ಲಿಂದ ಬಸರಾದ ಬ್ಯಾಂಕುಗಳೊಡನೆ ಆತನ ಸಂಬಂಧವಿತ್ತು. ವಿವಿಧ ದೇಶಗಳ ನಾಣ್ಯಗಳನ್ನು ಆತನ ಕೆಲಸದವರು ಬ್ಯಾಂಕಿನಲ್ಲಿ ವಿನಿಮಯ ಮಾಡಬೇಕಾಗುತ್ತಿತ್ತು.

ಬ್ಯಾಂಕಿನಲ್ಲಿ ದೊರೆಯುವ ಹೊಂದಿಕೆಯ ಪ್ರತಿ ನಾಣ್ಯವನ್ನು ಪರೀಕ್ಷಿಸಿ ನೋಡಿ ಹೊಂದಿಕೊಳ್ಳುವದು ಆತನ ಪದ್ಧತಿ. ಒಂದು ದಿವಸ ಸಾವಿರ ರೂಪಾಯಿಗಳಿರುವ ನಾಣ್ಯಗಳನ್ನು ಬ್ಯಾಂಕಿಗೆ ಕೊಟ್ಟರೆ ಅವರು ಕೊಡುವ ನಾಣ್ಯದ ಗಂಟನ್ನು ಬಿಚ್ಚಿ ಕುಳಿತು ಪ್ರತಿ ನಾಣ್ಯವನ್ನು ಪರೀಕ್ಷಿಸಿ, ಬಾಯಲ್ಲಿ ಕಚ್ಚಿ ನೋಡಿ ತೆಗೆದುಕೊಳ್ಳುವದು ಆತನ ಪದ್ಧತಿ. ಇದರಿಂದ ಬ್ಯಾಂಕಿನವರಿಗೆ ಸಮಯ ನಷ್ಟವಾಗುತ್ತಿದ್ದುದರಿಂದ ಬ್ಯಾಂಕಿನವರು ನ್ಯಾಯಗಾರರಿಗೆ ಬೇಕೆಂದು ಜಂಬಿಸುತ್ತಿದ್ದರು. ಈ ರೀತಿಯಾದ ಕಾರಣ ಬ್ಯಾಂಕಿನವರಿಗೆ ಬೇಸರವು ಬಂತು. ಹೀಗೇಕೆ ಮಾಡುವಿರೆಂದು ಒಂದು ದಿನ ಮುಹಮ್ಮದನನ್ನು ಕೇಳಲು ಮುಹಮ್ಮದನು ಹೇಳಿದನು. 'ಸತ್ಯ ಮತ್ತು ಮಿಥ್ಯಗಳ ನಡುವಣ ಅಂತರ ಕೇವಲ ನಾಲ್ಕು ಬೆರಳುಗಳು ಮಾತ್ರ. ನಿತ್ಯ ಜೀವನದಲ್ಲಿ ಹಣವು ಕಿವಿಯಿಂದ ಕೇಳಿದ್ದು ಸುಳ್ಳು ಕಣ್ಣಿಂದ ನೋಡಿ ಸತ್ಯವನ್ನು ಅರಿಯಬೇಕು. ಆದ್ದರಿಂದ ನಾನು ಪ್ರತಿ ನಾಣ್ಯವನ್ನೂ ಪರೀಕ್ಷಿಸಿ ತೆಗೆದುಕೊಳ್ಳುವೆನು" ಎಂದನು.

ಬ್ಯಾಂಕರ ಗುಂಪಿನಲ್ಲಿ ದಾವೂದನೆಂಬುವನೊಬ್ಬನಿದ್ದನು. ಆತನು ತನ್ನ ಗೆಳೆಯರೊಡನೆ ಹೇಳಿದನು. 'ಮುಹಮ್ಮದನು ಯಾರನ್ನೂ ನಂಬುವದಿಲ್ಲ. ಆತನು ಈ ರೀತಿ ವಿಶ್ವಾಸವಿಲ್ಲದ ಕಾರಣ ವ್ಯಾಪಾರ ವ್ಯವಹಾರದಲ್ಲಿ ಬಹು ತೊಂದರೆಯಾಗುತ್ತಿದೆ. ನಂಬಿಕೆ ಇಲ್ಲದೆ ಯಾವ ಕೆಲಸವೂ ಆಗಬಾರದು. ಆದ್ದರಿಂದ ಮುಹಮ್ಮದನಿಗೆ ಒಂದು ಪಾಠ ಕಲಿಸಬೇಕು" ಎಲ್ಲರೂ ಒಪ್ಪಿದರು.

ಮಾರನೆ ದಿನ ಮುಹಮ್ಮದನು ಬ್ಯಾಂಕಿಗೆ ಬಂದು ಹತ್ತು ಸಾವಿರ ಲಿರಾಗಳನ್ನು ಕೊಟ್ಟು ಅರೇಬಿಯಾದ ದಿನಾರುಗಳು ಬೇಕೆಂದನು. ದಾವೂದನು ಪ್ರತಿ ಚೀಲದಲ್ಲಿ ಹತ್ತು ಸಾವಿರ ನಾಣ್ಯಗಳಿರುವ ನಾಲ್ಕು ಚೀಲಗಳನ್ನು ಕೊಟ್ಟನು. ಮುಹಮ್ಮದನು ಲೆಕ್ಕ ಮಾಡಲು ಕುಳಿತನು. ಒಂದು ಗಂಟೆ ಕಳೆದರೂ ಒಂದು ಚೀಲ ಮುಗಿಸಿರಲಿಲ್ಲ. ದಾವೂದನು "ಏಕೆ ಈ ರೀತಿ ಸಮಯ ವ್ಯರ್ಥ ಮಾಡುವೆ? ಕಣ್ಣಾರೆ ನೋಡದ ನೀನು ಯಾರನ್ನೂ ನಂಬುವುದಿಲ್ಲವೆಂದು ಹೇಳುವೆ. ಆದರೆ ಒಂದು ವಿಚಾರವನ್ನು ನಂಬುತ್ತೀಯಾ?" ಎಂದನು. ಮುಹಮ್ಮದನು ಖಂಡಿತಾ ಇಲ್ಲವೆಂದನು. ಆಗ ದಾವೂದನು ಹೇಳತೊಡಗಿದನು. 'ನಿನ್ನ ಪತ್ನಿ ಫೈಲಾಳು ಈಗ ಮನೆಯಲ್ಲಿರುವಳು. ಆಕೆ ಈಗ ಏನು ಮಾಡುತ್ತಿರುವಳೋ ನಿನಗೆ ಗೊತ್ತು. ಆಕೆಯನ್ನು ಪತಿವ್ರತೆಯೆಂದು ನೀನು ನಂಬುವದು ಹೇಗೆ?"

ಇದನ್ನು ಕೇಳಿ ಮುಹಮ್ಮದನು ಕಿಡಿಕಿಡಿಯಾದನು. 'ನನ್ನ ಪತ್ನಿ ಫೈಲಾಳ ಪಾತಿವ್ರತ್ಯ ಜಗತ್ತಿಗೆ ಗೊತ್ತಾಗಿದೆ. ಆದರೂ ನಿಜ. ಈಗ ಆಕೆಯನ್ನು ನಾನು ಕಣ್ಣಾರೆ ಕಾಣುತ್ತಿಲ್ಲ. ಆಕೆಯು ನಿಜವಾಗಿಯೂ ಪತಿವ್ರತೆಯೋ ಅಲ್ಲವೋ ಎಂದು ಪರೀಕ್ಷಿಸುವದು ಹೇಗೆ? ನಾಣ್ಯಗಳಾದರೆ ಕಚ್ಚಿ ನೋಡಿ ತಿಳಿಯಬಹುದು, ಬಟ್ಟೆಯಾದರೆ ಹಾಕಿ ನೋಡಬಹುದು. ಆದರೆ ಹೆಂಗಸಿನ ಪಾತಿವ್ರತ್ಯವನ್ನು ತಿಳಿಯುವದು ಹೇಗೆ?" ಎಂದು ಕೇಳಿದನು.

"ನಾನು ಹೇಳಿದಂತೆ ಮಾಡು. ಈ ದಿನ ಆಕೆಗೆ ಒಂದು ಪತ್ರ ಬರೆದು ವ್ಯಾಪಾರದ ನಿಮಿತ್ತ ಊರಿಗೆ ಹೋಗುವುದರಿಂದ ನೀನು ಮನೆಗೆ ಬರಲಿಕ್ಕಾಗುವುದಿಲ್ಲವೆಂದು ತಿಳಿಸು. ನಂತರ ಹತ್ತಿರದ ಅಂಗಡಿಗೆ ಹೋಗಿ ನಿನ್ನ ವೇಷ ಬದಲಾಯಿಸಿ, ಗಡ್ಡ ಹಚ್ಚಿಕೊಂಡು ಬಾ. ನಂತರ ನಿನ್ನ ಹೆಂಡತಿಯ ಪಾತಿವ್ರತ್ಯ ಪರೀಕ್ಷೆಯ ಮಾರ್ಗ ಹೇಳಿ ಕೊಡುವೆನು"

ಮುಹಮ್ಮದನು ಹೋದ ಮೇಲೆ ದಾವೂದನು ತನ್ನ ಒಬ್ಬ ಆಳನ್ನು ಮುಹಮ್ಮದನ ಮನೆಗೆ ಕಳುಹಿಸಿ ಆತನ ಮನೆಗೆ ಒತ್ತಿಕೊಂಡಿದ್ದ ನಿಂಬೆ ಗಿಡದಿಂದ ಒಂದು ನಿಂಬೆಯನ್ನು ತರಿಸಿದನು. ನಂತರ ಹತ್ತಿರದ ಅಂಗಡಿಯಿಂದ ಕೆಲವು ದಿನಗಳ ಹಿಂದೆ ಫೈಲಾಳು ತನ್ನ ಒಳ ಅಂಗಿಗಾಗಿ ಕೊಂಡುಕೊಂಡ ರೇಷ್ಮೆ ಬಟ್ಟೆಯ ಚೂರೊಂದನ್ನು ತಂದನು. ಅದರೊಳಗೆ ಒಂದು ಸ್ಫಟಿಕದ ಚೂರೊಂದನ್ನು ಇಟ್ಟು ಬೆಕ್ಕಿನ ಮೀಸೆಯೊಂದನ್ನು ಸೇರಿಸಿ ಗಂಟು ಮಾಡಿ ಇಟ್ಟುಕೊಂಡನು.

ಮುಹಮ್ಮದನು ವೇಷ ಬದಲಾಯಿಸಿಕೊಂಡು ಬಂದನು. ಆತನ ಗುರ್ತೇ ಹತ್ತುವಂತಿರಲಿಲ್ಲ. ದಾವೂದನಿಗೆ ಆತನನ್ನು ನೋಡಿ ಆಶ್ಚರ್ಯವಾಯಿತು. ದಾವೂದನು ಹೇಳಿದನು 'ನೀನೀಗ ನಿನ್ನ ಪತ್ನಿಗೆ ಒಂದು ಪ್ರೇಮಸಂದೇಶವನ್ನು ಕಳುಹಿಸು."

ಮುಹಮ್ಮದನಿಗೆ ಅರ್ಥವಾಗಲಿಲ್ಲ. ದಾವೂದನು ಹೇಳಿದನು "ನೀನು ನಿಜವಾಗಿಯೂ ಹೊಸ ಪ್ರಾಣಿ. ನಿನಗಾಗಿ ನಾನೇ ಮಾಡುವೆನು. ಒಂದು ಗುಲಾಬಿ ಹೂ, ಒಂದು ಮಾತ್ರೆ, ಒಂದು ಕಪ್ಪು ಸಾರಾಯಿ, ಒಂದು ಬಿಳಿ ಸಿಲ್ಕ್ ಕೈವಸ್ತ್ರ ಇಷ್ಟು ತಾ" ಎಂದನು. ಅವು ದೊರಕಿದ ಮೇಲೆ ದಾವೂದನು ಹೇಳಿದನು, ಇದು ಪ್ರೇಮದ ಸಂದೇಶ. ಪ್ರೇಮಿಗಳಿಗೆ ಇದನ್ನು ಕಂಡೊಡನೆ ಅವರಿಗೆ ಅರ್ಥವಾಗುತ್ತದೆ. ನೀನು ಗುಲಾಬಿ ಹೂವಿನಂತೆ ಸುಂದರಿ ಎಂಬುದೂ ದೀಪದಿಂದ ಆಕರ್ಷಿತನಾದ ಪಾತೆಯಂತೆ ನಾನು ನಿನ್ನೆಡೆಗೆ ಆಕರ್ಷಿತನಾಗಿರುವೆನೆಂದೂ, ನಿನ್ನ ಶರೀರಕ್ಕೆ ಹೊಸ ಚೇತನ ಕೊಡುವಂತೆ ನನ್ನ ನೆನಪು ಚೇತನಕಾರಿಯಾಗಿದೆಯೆಂದೂ, ಅರ್ಥವಾಗುವದಲ್ಲದೆ ನಾನು ಪವಿತ್ರ ಯುವನಾಗಿ ನಿನ್ನನ್ನು ಪ್ರೇಮಿಸುವವನಾಗಿರುವೆನೆಂಬುದನ್ನೂ ಈ ಕರವಸ್ತ್ರ ತೋರಿಸುತ್ತದೆ" ಎಂದನು.

ನಂತರ ದಾವೂದನು ಈ ವಸ್ತುಗಳನ್ನು ಮುಚ್ಚಿ ತನ್ನ ಆಳಿಗೆ ಕಳಿಸಿದನು. ಮೂರು ಗಂಟೆಗೆ ಉತ್ತರ ಬರುವದೆಂದು ಹೇಳಿ ಒಳಗೆ ಹೋದನು. ಒಂದೆರಡು ಗಂಟೆ ಕಳೆದ ಮೇಲೆ ದಾವೂದನು ತಾನು ಮೊದಲು ಕಟ್ಟಿ ಇಟ್ಟಿದ್ದ ಗಂಟನ್ನು ತಂದು ಮುಹಮ್ಮದನ ಮುಂದಿಟ್ಟು "ನೋಡು ಉತ್ತರ ಬಂತು. ಈ ಪ್ರೇಮ ಸಂದೇಶವನ್ನು ತಿಳಿದು ಕೋ" ಎಂದನು. ಮುಹಮ್ಮದನಿಗೆ ತನ್ನ ತೋಟದ ನಿಂಬೆಹಣ್ಣು, ತನ್ನ ಪತ್ನಿಯ ಒಳ ಅಂಗಿಯ ಚೂರು ನೋಡಿ ಗಾಬರಿಯಾಯಿತು. ಆದರೆ ಆತನಿಗೆ ಅರ್ಥವಾಗಲಿಲ್ಲ. ದಾವೂದನು ಹೇಳಿದನು. "ನೋಡು ಇಲ್ಲಿ ಬೆಕ್ಕಿನ ಮೀಸೆಯಿದೆ. ಅದರರ್ಥವೆಂದರೆ ನೀನು ಬೆಕ್ಕಿನಂತೆ ಶಬ್ದ ಮಾಡದೆ ಬರಬೇಕು. ನಿಂಬೆಯ ಹಣ್ಣು ಮನೆಯ ಗೋಡೆಯ ಪಕ್ಕದ ಮರವನ್ನು ಸೂಚಿಸುತ್ತದೆ. ಆ ಮರದ ಸಹಾಯದಿಂದ ಮೇಲೇರಿ ನನ್ನ ಕಿಡಿಕಿಗಾಗಿ ಮನೆಯೊಳಗೆ ಬಾ ಎಂದು ಸೂಚಿಸುತ್ತದೆ. ಈ ಬಟ್ಟೆ ಆಕೆಯ ಒಳ ಅಂಗಿಯನ್ನು ಸೂಚಿಸುತ್ತದೆ. ಆ ಅಂಗಿಯನ್ನು ತೆಗೆದರೆ ಸ್ಫಟಿಕದಂತಾ ನನ್ನನ್ನು ಪಡೆಯುವೆ" ಎಂದು ಈ ಸಂದೇಶದ ಅರ್ಥ ಎಂದನು. ಮುಹಮ್ಮದನ ಸಿಟ್ಟು ತಡೆಯಲಸದಳವಾಯಿತು. "ಈಗ ಹೋಗಿ ಅವಳನ್ನು ಕತ್ತರಿಸಿ ಹಾಕುವೆನು' ಎಂದು ಹೊರಡಲುದ್ಯುಕ್ತನಾದನು. ಆಗ ದಾವೂದನು ಸಮಾಧಾನ ಮಾಡಿ, "ಆಕೆಯ ಸಂದೇಶದಂತೆ ಈ ರಾತ್ರಿ ನೀನು ಹೋಗು. ಆಕೆಯು ಸೂಚಿಸಿದಂತೆ ನಿಂಬೆ ಮರವೇರಿ ಆಕೆಯ ಕೋಣೆಗೆ ಹೋಗು. ಆಗ ಆಕೆಯ ಪಾತಿವ್ರತ್ಯ ಗೊತ್ತಾಗುವದು. ಏಕೆಂದರೆ ತನ್ನ ಮೇಲೆ ಕಣ್ಣಿಟ್ಟ ವ್ಯಕ್ತಿಗೆ ತಕ್ಕ ಪಾಠ ಕಲಿಸುವೆನೆಂದು ಆಕೆ ಈ ಸಂದೇಶ ಕಳಿಸಿರಲೂ ಸಾಕು. ಈ ಸಂದೇಶದಿಂದಲೇ ಆಕೆಯನ್ನು ಜಾರಿಣಿ ಎನ್ನುವುದು ನ್ಯಾಯವಾಗುದು ಎಂದನು.

ಆ ದಿನ ಮುಹಮ್ಮದನು ವೇಷ ಬದಲಾಯಿಸಿ ತನ್ನ ಮನೆಗೆ ಬಂದನು. ನಿಂಬೆ ಮರವನ್ನೇರಿ ಕಿಟಕಿಗಾಗಿ ನುಗ್ಗುವಾಗ ನಿಂಬೆ ಮರದ ಕೊಂಬೆ ಮುರಿದುಹೋಯಿತು. ಆತನು ಕಿಡಿಕಿಯ ಸರಳನ್ನು ಹಿಡಿದು ತೂಗಾಡಬೇಕಾಯಿತು. ಶಬ್ದವನ್ನು ಕೇಳಿದ ಫೈಲಾಳು ಎಲ್ಲ ಹೆಂಗಸರಂತೆ ಕಿರುಚಾಡಲಿಲ್ಲ. ಕಠಾರಿಯನ್ನು ಹಿಡಿದು ಕಿಡಿಕಿಯ ಹತ್ತಿರ ಬಂದಳು. ಕಿಡಿಕಿಯನ್ನು ಹಿಡಿದ ಕೈ ಕಾಣಿಸಿತು. ಆಕೆ ತನ್ನ ಕಠಾರಿ ಪ್ರಯೋಗಿಸಿದಳು. ಕಿಡಿಕಿಯನ್ನು ಹಿಡಿದಿದ್ದ ಮುಹಮ್ಮದನ ನಾಲ್ಕು ಬೆರಳುಗಳು ಕತ್ತರಿಸಿ ಆತನು ಕೆಳಗೆ ಬಿದ್ದನು. ಆಕೆಯು ತನ್ನ ಆಳುಗಳನ್ನು ಕರೆದು ಹೇಳಿದಳು. ಅವರು ಒಂದು ಮಶಾಲ್ತ್ಯವನ್ನು ಸರಿಯಾಗಿ ಬೆಳಗಿಸಿದರು. ಕಡೆಗೆ ತನ್ನ ಯಜಮಾನನೆಂಬುದು ಅವರಿಗೆ ತಿಳಿಯಿತು.

ಫೈಲಾಳು ಆತನ ಕೈಗೆ ಔಷಧಿ ಹಾಕಿ ಪಟ್ಟಿ ಕಟ್ಟುತ್ತಾ ಈ ರೀತಿ ಕಳ್ಳತನದಿಂದ ಬರಲು ಕಾರಣವೇನೆಂದು ಕೇಳಿದಳು. ಮುಹಮ್ಮದನು ಎಲ್ಲಾ ಕತೆಯನ್ನು ಹೇಳಿದನು. ಆಕೆಗೆ ತನ್ನ ಗಂಡನ ಸಂಶಯವನ್ನು ನೋಡಿ ವಿಪರೀತ ವ್ಯಸನವಾಯ್ತು.

ಮರುದಿನ ಮುಹಮ್ಮದನು ತನ್ನ ವ್ಯಾಪಾರದ ನಿಮಿತ್ತ ಬ್ಯಾಂಕಿಗೆ ಬಂದನು. ಮುಹಮ್ಮದನನ್ನು ತನ್ನ ಹಣಕ್ಕೆ ವಿನಿಮಯ

ದಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಲಿಮಿಟೆಡ್,
ಸ್ಥಾಪನೆ ೧೯೦೬] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ನೀವು ಬಲ್ಲಿರಾ?

ವರ್ಷದಿಂದ ವರ್ಷಕ್ಕೆ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಒಳ್ಳೇ ಸಾಕ್ಷಿ. ಈಗ ತಾನೇ ಸಂದುಹೋದ ದಶಕದಲ್ಲಿ ಅಂತೆಯೇ ಜನರು ನಮ್ಮ ಜೀವನದ ಪ್ರಧಾನ ಸೋಪಾನ, ನಮ್ಮ ಜೊತೆ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ "ಕಾರ್ಪೋರೇಶನ್ ಬ್ಯಾಂಕಿ"ನ ಪ್ರೀತಿ ಪೂರ್ವಕ ಸೇವೆಯನ್ನು ಸರ್ವರೂ ಪಡೆದು "ಕಾರ್ಪೋರೇಶನ್" ಬಳಗ ಹೆಚ್ಚುವ ಹಾಗಾಗಬೇಕೆಂಬುದೇ ನಮ್ಮ ಬಯಕೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 7

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED

ಹಲಿಪಟಿ

॥ ಧೂ ಮ ಪಾ ನ ॥

ಲೇ: ಶ್ರೀ ಬಿ. ಡಿ. ಸುಬ್ಬಯ್ಯ

ಮಾನವನನ್ನು ಸೃಷ್ಟಿಸುವಾಗ ದೇವರು ತನ್ನ ಪಡಿ ಅಚ್ಚಿನಿಂದ ಸೃಷ್ಟಿಸಿದನೆಂದು ಊ ಪ್ರತೀ ಮನುಷ್ಯನಿಗೂ ಒಂದೊಂದು ದುರ್ಬುದ್ಧಿಯನ್ನು ದಯಪಾಲಿಸಿರುವನು. ದುರ್ಬುದ್ಧಿಯಿಲ್ಲದ ನೂರಕ್ಕೆ ನೂರು ಒಳ್ಳೆಯ ಗುಣವಿರುವವರು ಲೋಕದಲ್ಲಿ ವಿರಳವೆನ್ನಬೇಕು. ಒಬ್ಬನಿಗೆ ಸುಳ್ಳು ಹೇಳುವ ಅಭ್ಯಾಸವಾದರೆ, ಮತ್ತೊಬ್ಬನಿಗೆ ಕದಿಯುವ ಆಸೆ. ಇನ್ನೊಬ್ಬನಿಗೆ ಕುಡುಕುತನವಿದ್ದರೆ, ಮತ್ತೊಬ್ಬನಿಗೆ ಜೂಜಿನ ಲಾಲಸೆ. ಹಲವರು ಮುಂದುಗಾರರಾದರೆ, ಕೆಲವರು ಜಿಪುಣರು. ಕಳ್ಳನೇ ಆಗಲೀ, ಧರ್ಮಿಯೇ ಆಗಲೀ ಯಾ ಕುಡುಕನೇ ಆಗಲಿ ಯೋಕೆ ಮಹಾತ್ಮನೇ ಆಗಲೀ ಆಧುನಿಕ ಯುಗದಲ್ಲಿ ಎಲ್ಲರೂ ಹೊಗೆಸೊಪ್ಪಿನ ಆರಾಧಕರೇ! ಆದರೆ ಈ ಆರಾಧಕರಲ್ಲಿ ಪರಸ್ಪರ ಸಹಕಾರವಿಲ್ಲ. ಒಬ್ಬನು ಹೊಗೆಸೊಪ್ಪನ್ನು ಮೆಲುಕಾಡಲು ಉಪಯೋಗಿಸಿದರೆ, ಮತ್ತೊಬ್ಬನು ಹೊಗೆಯ ರೂಪದಲ್ಲಿ ಸೇವಿಸುವನು. ಮುಗುದೊಬ್ಬನು ಮೂಗಿಗೇರಿಸುವನು. ಹೊಗೆ ಎಳೆಯುವವನಿಗೆ ಇವೆರಡು ಪಂಗಡದವರೂ ಕೀಳುನಮ್ಮವರು! ಧೂಮಪಾನ ಮಾಡುವವರಲ್ಲಿಯೂ ಸಹ ಒಳಗೊಳಗೆ ಅವರ ಅಂತಸ್ತಿನಂತೆ ವಿಂಗಡ ಪಂಗಡಗಳಿವೆ. ಅಂತೆಯೇ ಸಿಗರೇಟು ಬೀಡಿಗಳನ್ನೂ ಅವರವರ ಅಂತಸ್ತಿನಂತೆ ವಿಂಗಡಿಸಿದ್ದಾರೆ.

ಆಗ ತಾನೆ ಧೂಮಪಾನದ ಮೊದಲ ಮೆಟ್ಟಿಲೇರುತ್ತಿರುವ ವಿದ್ಯಾರ್ಥಿಗಳಿಗೆ 'ಬೇರ್ಸ್' ಮೊದಲಾದ ಚೀಪ್ ಸಿಗರೇಟುಗಳು ಮೀಸಲಾಗಿವೆ. ಗುಮಾಸ್ತನಿಂದ ಹಿಡಿದು ನೂರು ರೂಪಾಯಿಯೊಳಗೆ ತಲಬು ತೆಗೆದುಕೊಳ್ಳುವವರಿಗೆ 'ವಿಲ್ಸ್' ನಿಂದ ಕೆಳದರ್ಜೆಯ ಸಿಗರೇಟುಗಳು ಪ್ರಿಯವಾಗಿವೆ. ನೂರರಿಂದ ಮೇಲ್ಪಟ್ಟು ಅವರವರ ಅಂತಸ್ತು, ಅನುದಾನಿಯ ಪ್ರಕಾರ 'ಪ್ಲೆಯರ್ಸ್' 'ಸ್ಟೇಟ್ ಎಕ್ಸ್‌ಪ್ರೆಸ್' 'ಬ್ಲೇಕ್ ಅಂಡ್ ವೈಟ್' ಮೊದಲಾದುವುಗಳು ಅವರ ಹಕ್ಕಾಗಿದೆ. ಆದರೆ ಹಳ್ಳಿಯ ಗೌಡನಿಗೆ, ಕಾರ್ಖಾನೆಯ ಕಾರ್ಮಿಕನಿಗೆ, ಬೀದಿಯ ಶ್ರಮಜೀವಿಗಳಿಗೆ 'ಗಣೇಶ್', ಜಾಡಿ, 'ಫೇರ್' ಮತ್ತು 'ಪುತ್ತುಸೇಟ್' ಬೀಡಿಗಳು ಮೀಸಲಾಗಿವೆ. ಎಲ್ಲರೂ ಧೂಮಪಾನ ಆರಾಧಕರಾದರೂ ಅವರವರಲ್ಲಿ ದ್ವೇಷ, ಘರ್ಷಣೆಗಳಿವೆ. ತನ್ನದೇ ಮೇಲೆಂದು ಹೇಳುವ ಮೊಂಡುತನ್ವಾಯು ಇದೆ.

ಮೆಲುಕಾಡುವ ಪಂಗಡದವರನ್ನು ಪರೀಕ್ಷಿಸೋಣ. ಎಲೆ ಅಡಿಕೆ ಮಾರಿ ಕಸಿಗೆ, ಸೇರು ಇಳಿಸುವ ವೆಂಕಪ್ಪನಿಗೆ, ಕ್ಷೌರಿಕ ರಾಜುವಿಗೆ, ಬೀದಿಗುಡಿಸುವ ರಂಗನಂತವರಿಗೆ ಅಂಟಿಕೊಂಡಿದೆ. ಹೊಗೆಸೊಪ್ಪನ್ನು ಬಾಯ ಒಂದು ಮೂಲೆಯಲ್ಲಿರಿಸಿ ಜೊಲ್ಲು ತುಂಬಿದ್ದರೂ ಕೆಳತುಟಿಯನ್ನು ಮೇಲೆ ಮಾಡಿ ವ್ಯಂಗವಾಗಿ, ಜೊಲ್ಲು ಹೊರಬಾರದಂತೆ ಮಾತಾಡುವ ಚತುರರಿಗೆ ಮಾತ್ರ ಈ ಕಲೆ ಸಾಧ್ಯ!

ಮೂಗಿಗೇರಿಸುವ ಉದ್ದಾಮರಲ್ಲಿ ಕೆಳದರ್ಜೆಯವರು ಬಹಳ ಕಡಿಮೆ. ತಕ್ಕಮಟ್ಟಿಗೆ ಎಲ್ಲಾ ಮುಖ್ಯೋಪಾಧ್ಯಾಯರುಗಳು ಕನ್ನಡ, ಸಂಸ್ಕೃತ ಪಂಡಿತರು, ಸಂಗೀತ ಕಲಾಗಾರರು ಮತ್ತು 'ಪೀನಸಿ' ಮೂಗುರೋಗವಿರುವವರು ಇದನ್ನು ಪ್ರೀತಿಸುವರು. ಹೆಂಗಸರಲ್ಲಿ ಈ ಕಲೆ ಹಾಸು ಹೊಕ್ಕಿದೆ. ಈ ಮಹನೀಯರಲ್ಲಿರೂ ಮೂಗಿಗೇರಿಸುವುದು ಮೇಲೆಂದು ವಾದಿಸುವರು. ಮೂಗಿಗೇರಿಸುವುದರಿಂದ ಹಲ್ಲುಗಳು ಗಟ್ಟಿಯಾಗುವವೆಂದೂ, ದೇಹಕ್ಕೆ ಯಾವ ಕೆಡಕು ಬಾರದೆಂದೂ ಇವರವಾದ. ಧೂಮಪಾನದಿಂದ ಶ್ವಾಸಕೋಶಗಳು ಕ್ಷೀಣವಾಗುತ್ತವೆ. ಮೆಲುಕಾಡುವುದರಿಂದ ಹಲ್ಲು ಬಾಯಿಯೆಲ್ಲವೂ ಹಾಳಾಗುವವು, ನಮ್ಮ ಊಟದಿಂದ ಯಾವ ಕೆಡುಕು ಬಾರದೆಂದು ಇವರು ಸಾರುತ್ತಿದ್ದಾರೆ. ಮೂಗಿಗೇರಿಸುವ ರೀತಿಯನ್ನು ನೋಡಿದರೆ, ಧೂಮಪಾನ ಪಂಡಿತನೇ ಆಗಲಿ, ಯಾ ಜಗಿಯುವ ನಿಸ್ಸೀಮನೇ ಆಗಲಿ ಮನಸೋತು ಹೋಗುತ್ತಾನೆ. ಎಡದ ಕೈಯ ಹೆಬ್ಬೆಟ್ಟಿನ ಗುಂಡಿಯಲ್ಲಿ ನಸ್ಯವನ್ನು ತುಂಬಿ, ಎಲೆಯನ್ನು ... ಕೆಲವರು. ಒಳಗಿರುವ ತೋರು ಬೆರಳು ಮತ್ತು ಹೆಬ್ಬೆಟ್ಟಿನಿಂದ ನಸ್ಯವನ್ನು ತೆಗೆದು ಆಕಾಶದತ್ತ ಮುಖಮಾಡಿ ಸರಸರನೆ ಎಳೆದು, ಕಣ್ಣಿನಲ್ಲಿ ನೀರು ಸುರಿಸುವ ನಿಸ್ಸೀಮರು ಹಲವರು. ಎಡದ ಕೈಯಿಂದ ತೆಗೆದು ಮೂಗಿಗೇರಿಸಿ, ಆ...ಕ್ಷಿ ಎಂದು, ಚಿಟಿಕೆ ಹಾಕಿ ಎಲ್ಲಿ ಮೂಗಿನಿಂದ ನಸ್ಯ ಹೊರ ಹೋಗುವುದೋ ಎಂದು ಜೋರಾಗಿ ಕರವಸ್ತ್ರ ಹಿಡಿಯುವ ವಿಚಿತ್ರಗಳನ್ನು ನೋಡುವಾಗ ಎಂತಹವನಾಗಲೀ ಮನಸೋತು ಹೋಗುತ್ತಾನೆ.

ಪರೀಕ್ಷೆಯಲ್ಲಿ ತರಗತಿಯಿಂದ ತರಗತಿಗೆ ಪಾಸಾಗಿ ಕಡೆಗೆ ವಿದ್ಯಾವಂತನೆನಿಸುವಂತೆ, ಕೆಲವರು ಮೆಲುಕಾಡುವುದರಿಂದ ಹಿಡಿದು ಸಿಗರೇಟು ಬೀಡಿಗಳ ಬ್ರಾಂಡ್‌ಗಳನ್ನೆಲ್ಲಾ ಮುಗಿಸಿ, ವೃದ್ಧರಾದಾಗ ಬಾಳೆಲೆಯ ಬತ್ತಿಯಿಂದ ಪ್ರತ್ಯಕ್ಷವನ್ನು ನವರೂ ಇದ್ದಾರೆ. ಸಿಗರೇಟು ಬೀಡಿಗಳನ್ನು ಬಿಡಲು ಮೆಲುಕಾಡುವವನ್ನು ಅಭ್ಯಾಸ ಮಾಡಿ ಜಗಿಯುವವನ್ನು ಬಿಡಲು ನಸ್ಯ ಶ್ರೇಯಸ್ಕರವಾಗಿ ಕಡೆಗೆ ಮೂರು ಅಭ್ಯಾಸವನ್ನು ಇಟ್ಟುಕೊಂಡ ಪ್ರಗುಣಾಚಾರಿಗಳು ಹಲವರಿದ್ದಾರೆ. ಅಂತು, ಹೊಗೆಸೊಪ್ಪು ಮಾನವ ಜನಾಂಗದಲ್ಲಿ ಒಂದು ಆಂದೋಲನವನ್ನೇ ಎಬ್ಬಿಸಿಬಿಟ್ಟಿದೆ. ಹೊಗೆಸೊಪ್ಪನ್ನು ಕಂಡು ಹಿಡಿದ ಮಹಾನುಭಾವನು ಇದರಿಂದ ಇಷ್ಟು ದೊಡ್ಡ ಕ್ರಾಂತಿಯಾಗುವುದೆಂದು ಸ್ವಪ್ನದಲ್ಲಿಯೂ ಕಂಡಿರಲಿಕ್ಕಿಲ್ಲ.

ಎಲ್ಲಾ ವಸ್ತುಗಳಲ್ಲಿ ಗುಣ ಅವಗುಣಗಳಿರುವಂತೆ ಧೂಮಪಾನದಿಂದಲೂ ಆರಾಧಕನು ಕೆಲವು ಬಾರಿ ಲಾಭ ಪಡೆಯುತ್ತಾನೆ. ಇದರಿಂದ ನಷ್ಟವಿದ್ದರೂ, ಕೆಲವು ಬಾರಿ, ಆಗದ ಸಾಗದ ಕೆಲಸವನ್ನು ಕ್ಷಣದಲ್ಲಿ ಮಾಡುವನು. ಸಂಸ್ಕೃತಿಯ ಪರಮಾವಧಿಯಲ್ಲಿರುವ ... ಸಿಗರೇಟು ಬೀಡಿ ದಾನ ... ಒಂದು ನೋಟ್ಟಿದ್ದ ಸತ್ಕಾರವೆಂದು ಅರ್ಥವಾಗುತ್ತದೆ. ಒಂದು ಸಿಗರೇಟು ದಾನ ಮಾಡುವುದರಿಂದ ಯಾವ ಮಾನವನನ್ನೂ ಸಹ ಒಲಿಸಿಕೊಳ್ಳುವ ಸಾಧ್ಯತೆಯಿದೆ. ಅಪರಿಚಿತರೊಡನೆ ಪರಿಚಯ ಮಾಡಿ ಗೆಳೆತನ ಬೆಳೆಸಲು ಉಪಯೋಗಿಸುವ ಅಸ್ತ್ರವೆಂದರೆ ಅದು ಸಿಗರೇಟು. "ಸಿಗರೇಟ್ ಪ್ಲೀಸ್" ಎಂದ ಮಾತ್ರಕ್ಕೆ ಅಪರಿಚಿತನಾಗಲೀ ಯಾ ಯಾವ ಅಧಿಕಾರಿಯೇ ಆಗಲಿ ಸಿಗರೇಟಿನ ಅವಮರ್ಯಾದೆ ಮಾಡಬಾರದ ಬಾಯಿ ಬಿಡಲಾರರು. ಸಿಗರೇಟು ದಾನದಿಂದ ಆಗದ ಸಾಗದ ಕೆಲಸ ಬಹಳ ಅಪರೂಪ. ಉಪ್ಪುಕೊಟ್ಟ ಮನೆಗೆ ಉಪದ್ರ ಮಾಡುವರೆ, ಆದರ ಮಾತಲ್ಲವೆ?

ಯಾವುದೇ ಹೊಸ ಯೋಜನೆಗಳಾಗಲೀ ಯಾ ವಿಚಾರಗಳಾಗಲೀ ಅನಿರೀಕ್ಷಿತವಾಗಿ ವಿಜ್ಞಾನಿಯ ಕಣ್ಣಿಗೆ ಬಿದ್ದು ಪ್ರಾರಂಭಗೊಂಡು ಹೆಸರುಗಳಿಸುವಂತೆ ಹೊಗೆಸೊಪ್ಪಿನ ಕಥೆಯೂ ಕೂಡ. ಎಡಲ್ಬರ್ಟ್ ಎಂಬೊಬ್ಬ ನಾವಿಕನು ಅಮೇರಿಕದ ಒಂದು ಪ್ರದೇಶವನ್ನು ಬಿರುಗಾಳಿಯ ಅಪಘಾತದಿಂದ ಸೇರಿದನು. ರಾತ್ರಿ ಚಳಿಯ ದೆಸೆಯಿಂದ ಬೆಂಕಿ ಹಚ್ಚಿ ಕಾದ ಪಕ್ಕದಲ್ಲಿ ಕುಳಿತು ಕೈಗೆ ಸಿಕ್ಕಿದ ತರಗೆಲೆ ರೆಂಬೆಕೊಂಬೆಗಳನ್ನು ಬೆಂಕಿಗೆ ಹಾಕುತ್ತಿದ್ದನು. ಆ ದೆಲೆಗಳು ಹೊಗೆಸೊಪ್ಪಿನ ಗಿಡಗಳಾದುದರಿಂದ ಅದರ ಹೊಗೆಯು ಅವನಿಗೆ ಅನುಕೂಲವಾದಂತೆ, ಹೊಗೆಸೊಪ್ಪಿನ ಈ ಅನುಭವ ಅವನ ಜೀವಮಾನದಲ್ಲಿ ಮೊಟ್ಟಮೊದಲಾದುದರಿಂದ ಮತ್ತಾಗಿ ರಾತ್ರಿ ಇಡೀ ನಿದ್ರೆ ಮಾಡಿದನು. ಮರು ದಿನ ರಾತ್ರಿಯೂ ಅದೇ ಗಿಡದ ಹೊಗೆ ಕುಡಿದು ಮತ್ತಾಗಿ ಮಲಗಿದನು. ಇದರಿಂದ ಆನಂದಿತನಾಗಿ ಆ ಗಿಡದ ತರಗೆಲೆ ಬೀಜಗಳನ್ನು ಬಿಡದೆ, ತನ್ನ ದೇಶಕ್ಕೆ ತಂದನು. ಮೊದ ಮೊದಲು ಹೊಗೆಸೊಪ್ಪಿಗೆ ಬೆಂಕಿ ಹತ್ತಿಸಿ ಮೂಗಿನ ಹತ್ತಿರ ಹಿಡಿದು ಅದರ ಹೊಗೆ ಎಳೆದು ಆನಂದಪಡುತ್ತಿದ್ದರಂತೆ. ದಿನ ಕಳೆದಂತೆ ಸಿಗರೇಟು, ಬೀಡಿ, ಚುಟ್ಟಗಳ ಆವಿರ್ಭಾವವಾಯಿತೆನ್ನುತ್ತಾರೆ.

ಇಂದು ಉಚ್ಚ ಸಂಸ್ಕೃತಿ ಪಡೆದ ನಾವು ಅದರ ಸೇವಕರಾಗಿದ್ದೇವೆ. ಅದರ ಆದಿಯೊಳಗಾಗಿ ಸಿಗರೇಟು ಸೇವನೆಯೇ ನಾಗರಿಕತೆಯ ಲಕ್ಷಣವೆನ್ನುತ್ತೇವೆ. ದೀಪ ನಂದುವ ಮೊದಲು ಉಜ್ವಲ ಪ್ರಕಾಶಿಸಿ ಆರುವಂತೆ, ಮಾನವ ಸಂಸ್ಕೃತಿಯ ಅಧಃಪತನ ಹೆಚ್ಚು ದೂರದಲ್ಲಿಲ್ಲ ಎಂಬುದನ್ನು ನಮ್ಮ ಈ ಸಂಸ್ಕೃತಿಯ ಮೆಟ್ಟಿಲಲ್ಲಿ ಕಾಣುತ್ತಿದ್ದೇವೆ. 'ಹೇಳಿದಂತೆ ಮಾಡು' ನಾನು ಮಾಡಿದಂತೆ ಮಾಡಬೇಡ ವೆನ್ನುವ ಮೂರ್ಖಾಲ ಸನ್ಯಾಸಿಗಳ ಗುಂಪಿಗೆ ಸೇರಿದ ಶಿಷ್ಯನ ಬಹಿರಂಗ ವಾದದಿಂದ. ಸಿಗರೇಟು ಅಮಲಿನಲ್ಲಿಯೇ ಇದನ್ನು ಬರೆಯುತ್ತೇನೆ.

ಆದ್ದರಿಂದ ನಮ್ಮಯ ... ಈ ನಮ್ಮ ಯುಗ, ಇವರ ದೊರೆಯ ಮೇಲೇ ಸ್ವರ್ಗದ ಪರೆಗೆ ತಲುಪಲಿ. ಸರ್ವ ಮಾಲೆಗಳೂ ಈ ನಾಗರಿಕತೆಯ ಗುರುತಾಗಿರುವ ಸಿಗರೇಟಿನಿಂದ ಪಾವನಗೊಳ್ಳಲಿ.

॥ ಮ ಧು ಪ ರ್ಕ ॥

ದಕ್ಷಿಣ ಆಫ್ರಿಕಾದಲ್ಲಿ ಒಮ್ಮೆ ಸೆರೆಮನೆಯಿಂದ ಗಾಂಧೀಜಿ ಹೊರಬರುವ ಸಮಯಕ್ಕೆ ಅವರ ಗೆಳೆಯ ಪೋಲಕರ ಹೆಂಡತಿ ಮಿಲ್ಲೀ ಪೋಲಕ್ ಬಹಳ ಕೃಶವಾಗಿ ಹೋಗಿದ್ದರು. ಚಳವಳದ ಜವಾಬ್ದಾರಿ ಒಂದೆಡೆ. ಸಾಲದ್ದಕ್ಕೆ ಬಾಣಂತಿ. ರಾತ್ರಿ ನಿದ್ರೆ ಬಾರದೆ ಮೈ ಬಳಲಿ ಹೋಗಿತ್ತು. ಮಗುವಿಗೆ ಏಳೆಂಟು ತಿಂಗಳು. ಎದೆ ಹಾಲು ಬತ್ತಿದರೂ ಮಗು ಬಿಡಲೊಲ್ಲದು. ಆಕೆಗೆ ದಿಕ್ಕು ತೋರದಾಗಿತ್ತು.

ಗಾಂಧೀಜಿ ಕೇಳಿದರು,–ನಾಲ್ಕೆಂಟು ದಿನ ರಾತ್ರಿ ಆ ಮಗುವನ್ನು ಯಾರಾದರೂ ನೋಡಿಕೊಂಡರೆ ನೀನು ನಿದ್ರೆ ಮಾಡುವೆಯಲ್ಲವೇ ?

'ನಿದ್ರೆ ಬರಲೀ ಯಾ ಬಾರದಿರಲಿ ನನ್ನ ಅವಸ್ಥೆ ಮುಗಿದು ಹೋಗುವಂತಿದೆ' ಆಕೆ ಎಂದಳು.

'ಮಗುವನ್ನು ನನ್ನ ವಶಕ್ಕೆ ಕೊಡುವೆಯಾ ?' ಗಾಂಧೀಜಿ ಕೇಳಿದರು.

'ತೆಗೆದುಕೊಂಡು ನೀವೇನು ಮಾಡುವಿರಿ ?'

'ಮಗುವನ್ನು ಕೊಡು. ನಾನು ಮೊಲೆ ಹಾಲು ಬಿಡಿಸುತ್ತೇನೆ. ತಾಯಿಯನ್ನು ಬಿಟ್ಟು ದೂರ ಮಲಗುವಂತೆ ಮಗುವನ್ನು ರಮಿಸುತ್ತೇನೆ'

ಆಕೆ ಒಪ್ಪಿದಳು. ಆ ದಿನ ಏನೋ ಸಭೆ. ಗಾಂಧೀಜಿ ಬರುವಾಗ ರಾತ್ರಿ ೧೧ ಗಂಟೆಯಾಗಿತ್ತು. ಗಾಂಧೀಜಿಯವರು ಮಿಲ್ಲಿಯ ಕೋಣೆಗೆ ಹೋಗಿ ಮಗುವನ್ನೆತ್ತಿಕೊಂಡು ಬಂದು ತನ್ನ ಪಕ್ಕದಲ್ಲಿ ಮಲಗಿಸಿಕೊಂಡರು. ಮಗು ರಾತ್ರಿ ಕುಡಿಸಲು ನೀರಿರಲಿ ಎಂದು ಒಂದು ತಂಬಿಗೆ ನೀರು ಮತ್ತು ಲೋಟ ಇಟ್ಟುಕೊಂಡರು.

ಮಗು ರಾತ್ರಿ ಎಚ್ಚರಲೇ ಇಲ್ಲ. ಹಾಯಾಗಿ ನಿದ್ರೆ ಮಾಡಿತು. ಹೀಗೆ ೧೫ ದಿನಗಳು ನಡೆಯಿತು. ಬಾಣಂತಿಗೆ ನಿದ್ರೆ ಬರುವಂತಾಯಿತು. ಮಗುವೂ ಸ್ವಸ್ಥಗೊಂಡಿತ್ತು.

ಸಾಣ್ಯ ಪಡೆದು ಲೆಕ್ಕ ನೋಡದೆ ಜೇಬಿನಲ್ಲಿ ನೆಚ್ಚಿ ಹೊರಟನು. ಆತನ ಕೈಯ ಗಾಯನೇನೆಂದು ಕೇಳಿದರೆ ಆತನು ಯಾರಿಗೂ ಉತ್ತರ ಕೊಡಲಿಲ್ಲ. ಅಂದಿನಿಂದ "ನನ್ನ ಕಣ್ಣು ಮಿಥ್ಯಕಣ್ಣು ಇದರ ಅಂತರ ನಾಲ್ಕು ಬೆರಳು" ಎಂಬ ನಾಣ್ಣುಡಿ ಮಹಮ್ಮದನ ಪಾಲಿಗೆ ನಗ್ನ ಸತ್ಯವಾಯಿತು.

—ಅರಬಿ ಕಥೆಯೊಂದರ ಆಧಾರದಿಂದ

ನಗುಮಲ್ಲಿಗೆ

ರಘು–ಈ ಪುಸ್ತಕಗಳನ್ನು ಮಾರಾಟ ಮಾಡಲಾಗುವದಿಲ್ಲ. ಏನು ಮಾಡುವದು ಇನ್ನೂ ಒಂಬತ್ತು ಪುಸ್ತಕಗಳಿವೆ. ಪ್ರತಿಯೊಂದಕ್ಕೆ ಎರಡೆರಡು ರೂಪಾಯಿ.

ರಾಮು–ಅದಕ್ಕೇನು ಅದನ್ನು ಸರಿಯಾಗಿ ಪೇಕ್‌ಮಾಡಿ ಪ್ರತಿ ಪುಸ್ತಕಕ್ಕೆ ಮೂರು ರೂಪಾಯಿ ಬೆಲೆ ಹಾಕಿ ಆರು ಪುಸ್ತಕಗಳೆಂದು ಬಿಲ್ಲಿನಲ್ಲಿ ಬರೆದು ಕಳುಹಿಸು. ಪುಸ್ತಕ ವ್ಯಾಪಾರಿಯು ಒಂಭತ್ತು ಪುಸ್ತಕಗಳನ್ನು ನೋಡಿ ಲಾಭವಾಯಿತೆಂದು ಹಣ ಕಳುಹಿಸಿಬಿಡುವನು.

ಕೆಲವು ದಿನ ಕಳೆದ ಮೇಲೆ ರಘು–ರಾಮು, ಸರ್ವನಾಶವಾಯಿತು. ವ್ಯಾಪಾರಿಯು ಲೆಕ್ಕ ಹಾಕದೆ ಮೂರು ಪುಸ್ತಕಗಳನ್ನು ತೆಗೆದುಕೊಂಡು ತಾನು ಪುಸ್ತಕಕ್ಕೆ ಆರ್ಡರ್ ಮಾಡಿಲ್ಲನೆಂದು ಉಳಿದ ಆರನ್ನು ವಾಪಾಸು ಕಳುಹಿಸಿರುವನು!

*   *   *

ಮೋಟಾರಿನವನೊಬ್ಬನಿಗೆ ದಾರಿ ತಿಳಿಯದಾಯಿತು. ಹತ್ತಿರದಲ್ಲಿರುವ ಮುದುಕನೊಬ್ಬನನ್ನು ಕೇಳಿದನು. ಮುದುಕನು ದಾರಿತೋರಿಸುವೆನೆಂದು ಕಾರಿನಲ್ಲಿ ಕೂತುಕೊಂಡನು. ಸ್ವಲ್ಪ ದೂರ ಸಾಗಿದ ನಂತರ ಮುದುಕನು ಕಾರು ನಿಲ್ಲಿಸಲು ಹೇಳಿದನು. ನಂತರ ಕೆಳಗಿಳಿದು, 'ಇಲ್ಲಿಯ ವರೆಗೇ ನನಗೆ ದಾರಿ ತಿಳಿದಿರುವದಾಗಿದೆ. ಇದೇ ನನ್ನ ಮನೆಯ ಗೇಟು" ಎಂದನು.

*   *   *

ವಿಮಾ ಏಜಂಟ್–ನೀವು ಈಗ ಮದುವೆಯಾಗಿರುವಿರಿ. ಇನ್ನಾದರೂ ಒಂದು ಪಾಲಿಸಿ ತೆಗೆದುಕೊಳ್ಳಬಹುದಲ್ಲಾ?

ಗೃಹಸ್ಥ–ನನ್ನ ಹೆಂಡತಿಯು ನನ್ನ ಪ್ರಾಣಕ್ಕೆ ಅಪಾಯತರುವಂಥಾವಳೇನಲ್ಲವಲ್ಲಾ!

*   *   *

ತಾಯಿ:–ಎರಡು ಪೌಂಡು ದ್ರಾಕ್ಷೆಬೇಕೆಂದು ನಾನು ಮಗುವನ್ನು ನಿಮ್ಮ ಅಂಗಡಿಗೆ ಕಳುಹಿಸಿದ್ದೆ. ಆದರೆ ಕೇವಲ ಒಂದೇ ಪೌಂಡು ಇತ್ತಲ್ಲ. ನಿಮ್ಮ ಅಳತೆಯಲ್ಲಿ ಬಿಟ್ಟು ಹೋಗಿರಬಹುದೇ?

ಅಂಗಡಿಯವ–ನಮ್ಮ ಅಳತೆಯು ಸರಿಯಾಗಿದೆಯಮ್ಮಾ. ಆದರೆ ನಿಮ್ಮ ಮಗುವಿನ ಭಾರ ನೋಡಿದಿರಾ?

*   *   *

ಆಫೀಸಿನಲ್ಲಿ ಟೈಪಿಸ್ಟ ಕೆಲಸಕ್ಕಾಗಿ ಹುಡುಗಿಯರ "ಇಂಟರ್‌ವ್ಯೂ" ಆಗುತಿತ್ತು. ಮೇನೇಜರು ಕೇಳಿದರು. "ಎರಡಕ್ಕೆ ಎರಡು ಸೇರಿಸಿದರೆ ಎಷ್ಟು?"

ಒಂದನೆಯವಳು– ನಾಲ್ಕು

ಎರಡನೆಯವಳು–22 ಆಗಬಹುದು.

ಮೂರನೆಯವಳು–ನಾಲ್ಕೂ ಆಗಬಹುದು. ಇಪ್ಪತ್ತೆರಡೂ ಆಗಬಹುದು.

ಮೇನೇಜರನು ಈ ಮೂರು ಜನರ ಹೆಸರನ್ನೂ ವ್ಯವಸ್ಥಾಪಕರಿಗೆ ತಿಳಿಸಿ ಯಾರನ್ನು ಆರಿಸುವಿರಿ ಎಂದು ಕೇಳಿದನು.

ವ್ಯವಸ್ಥಾಪಕ–"ನೀಲಿ ಕಣ್ಣಿನ ಗುಂಗುರು ಕೂದಲಿನವಳಿರಲಿ!"

*   *   *

ಒಬ್ಬ–ಕಾರಿನ ಆಘಾತದಿಂದ ಪೆಟ್ಟು ಆತನಿಗೆ ಎಲ್ಲಿ ತಗಲಿತು?

ಇನ್ನೊಬ್ಬ–ನಾಭಿಯಲ್ಲಿ.

ಒಬ್ಬ–ಈ ಪ್ರದೇಶದಲ್ಲ ೨೦ ವರ್ಷದಿಂದ ಇರುವ ನನಗೆ ಆ ಸ್ಥಳದ ಹೆಸರು ಈ ವರೆಗೆ ಕೇಳಿ ಬಂದಿಲ್ಲವಲ್ಲ!

*   *   *

ವಿದ್ಯುತ್ತಿನಿಂದ ಬಟ್ಟೆ ಒಗೆಯುವ ಯಂತ್ರಗಳ ಮಾರಾಟದವನೊಬ್ಬನು ತನ್ನ ಅಂಗಡಿಯ ಮುಂದೆ ಈ ರೀತಿಯ ಬೋರ್ಡು ಹಾಕಿದ್ದನು "ನಿಮ್ಮ ಹೆಂಡತಿಯನ್ನು ಕೊಲ್ಲದಿರಿ. ನಮ್ಮ ಒಗೆಯುವ ಯಂತ್ರಗಳು ಆ ಹೀನ ಕೆಲಸವನ್ನು ಮಾಡಲಿ!"

*   *   *

ಗಂಡ–ಇದೆಂಥಾ ಸಾರು ಮಾಡಿರುವೆ! ಸ್ವಲ್ಪವೂ ರುಚಿ ಇಲ್ಲ. ಈ ವರೆಗೆ ಎಂದೂ ತಿಂದ ನೆನಪೂ ಇಲ್ಲ.

ಹೆಂಡತಿ– ತೋಟದ ಗುಲಾಬಿ ಹೂವನ್ನು ತಂದು ಅಡಿಗೆ ಮಾಡಿರುವೆನು!

ಗಂಡ–ಗುಲಾಬಿಯನ್ನು ಯಾರಾದರೂ ಸಾರು ಮಾಡುತ್ತಾರೆಯೇ?

ಹೆಂಡತಿ–ನಿನ್ನೆ ಸಾಯಂಕಾಲ ತೋಟದಲ್ಲಿ ತಿರುಗುವಾಗ "ಗುಲಾಬಿ ಎಷ್ಟು ಚೆನ್ನಾಗಿದೆ. ತಿಂದು ಬಿಡಲೋ ಎನಿಸುತ್ತದೆ" ಅಂದಿರಲ್ಲಾ!"

ಗೋಣಿಕೊಪ್ಪ ಕೇಸು ಹಿಂತೆಗೆಯಲ್ಪಟ್ಟಿತು.

ಕಳೆದ ಚುನಾವಣೆಯ ಸಮಯದಲ್ಲಿ ಅಂದರೆ ತಾ. ೧೩–೧–೫೨ ರಲ್ಲಿ ಗೋಣಿಕೊಪ್ಪಲಿನಲ್ಲಿ ಕಾಂಗ್ರೆಸಿಗರ ಚುನಾವಣಾ ಮೀಟಿಂಗು ಸುಲಲಿತವಾಗಿ ನಡೆಯಲಿಕ್ಕೆ ಅಡಚಣೆಪಡಿಸಿದರೆಂಬದಾಗಿ ಪ್ರತ್ಯೇಕ ಪಕ್ಷದ ಸುಮಾರು ಮೂವತ್ತು ಜನರ ಮೇಲೆ ಸರಕಾರದವರು ಇಂಡಿಯನ್ ಪಿನಲ್ ಕೋಡು ಸೆಕ್ಷನ್ ೧೪೭ರ ಮೇಲೆಯೂ, ರೆಪ್ರೆಸೆಂಟೇಶನ್ ಆಫ್ ಪೀಪುಲ್ಸ್ ಆಕ್ಟ ೧೯೫೧ ರ ಸೆಕ್ಷನ್ ೧೨೭ ರ ಮೇಲೆಯೂ ಕೇಸು ಹೂಡಿದ್ದರು.

ವೀರರಾಜಪೇಟೆ ಮುನ್ಸಿಫ್ ಮತ್ತು ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರ ವರ ಕೋರ್ಟಿನಲ್ಲಿ ಎರಡು ಮೂರು ಹೀಯರಿಂಗ್‌ಗಳು ನಡೆದವು. ತನ್ಮಧ್ಯೆ ಕೊಡಗು ಕೋರ್ಟುಗಳಲ್ಲಿ ಅಪರಾಧಿಗಳಿಗೆ ನ್ಯಾಯ ಸಿಕ್ಕುವುದಿಲ್ಲವೆಂದೂ, ಸದರಿ ಕೇಸನ್ನು ಕೊಡಗು ದೇಶದ ಹೊರಗಿನ ಕೋರ್ಟಿನಲ್ಲಿ ವಿಚಾರ ಮಾಡಿದರೆ ಮಾತ್ರ ನ್ಯಾಯ ದೊರಕುವುದೆಂದೂ ಆದ ಕಾರಣ ಅದನ್ನು ವರ್ಗಾಯಿಸತಕ್ಕದೆಂದೂ, ಅಪರಾಧಿಗಳು ಮದ್ರಾಸ್ ಹೈಕೋರ್ಟಿನಲ್ಲಿ ಅರ್ಜಿ ಬರೆದು, ವಾದವಿವಾದ ನಡೆದು ಅಪರಾಧಿಗಳ ಕೋರಿಕೆ ಮೇರೆ ಸದರಿ ಕೇಸನ್ನು ಮಂಗಳೂರಿನ ಎಡಿಷನಲ್ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರವರ ಕೋರ್ಟಿನಲ್ಲಿ ವಿಚಾರಣೆಗೆ ಮದ್ರಾಸ್ ಹೈಕೋರ್ಟು ತಾ. ೨೦–೧೦–೫೨ ರಲ್ಲಿ ವರ್ಗಮಾಡಿತು.

ತಾ. ೨೩–೧–೫೩ ರಲ್ಲಿ ಮಂಗಳೂರಿನಲ್ಲಿ ಒಂದು ಹೀಯರಿಂಗ್ ನಡೆಯಿತು. ಪುನಃ ತಾ. ೨–೩–೫೩ ರಿಂದ ತಾ. ೭–೩–೫೩ ರ ವರೆಗೆ ಕೇಸನ್ನು ಮಂಗಳೂರಿನಲ್ಲಿ ವಿಚಾರಣೆಗೆ ಇಡಲಾಗಿತ್ತು. ಈ ಮಧ್ಯೆ ದೇಶದ ಕೆಲವು ಹಿತಚಿಂತಕರಾದ ಮಹನೀಯರು ಸರ್ಕಾರವನ್ನೂ ಅಪರಾಧಿಗಳನ್ನೂ ಭೇಟಿಮಾಡಿ ಕೇಸನ್ನು ವಾಪಾಸು ತೆಗೆದುಕೊಳ್ಳುವುದು ದೇಶದ ಒಗ್ಗಟ್ಟಿಗೂ, ಸೌಹಾರ್ದತೆಗೂ, ಶಾಂತಿ ಸಂಸ್ಥಾಪನೆಗೂ ಬಹಳ ಹಿತಕರವೆಂದು ಕೇಳಿಕೊಂಡು, ಕೇಸನ್ನು ವಾಪಾಸು ತೆಗೆದುಕೊಳ್ಳುವುದಕ್ಕೆ ತಕ್ಕ ವಾತಾವರಣ ಮತ್ತು ಸನ್ನಿವೇಶವನ್ನು ಉಂಟುಮಾಡಿಸಿ ಅಪರಾಧಿಗಳಿಗೆ ತಕ್ಕ ಸಲಹೆಯನ್ನೂ ಸಹ ಕೊಟ್ಟರು. ಅಪರಾಧಿಗಳೆಂದು ತಕ್ಸೀರು ಹೇರಲ್ಪಟ್ಟವರು ತಾವು ನಿರಾಪರಾಧಿಗಳೆಂದೂ, ಆದರೆ ದೇಶದ ಹಿತದೃಷ್ಟಿಯಿಂದ ಚುನಾವಣೆ ಸಮಯದಲ್ಲಿ ನಡೆದ ಹಲವಾರು ವಿಷಯಗಳನ್ನು ಈಗ್ಯೆ ನೆನಪಿಗೆ ತರುವುದು ಹಾನಿಕರವೆಂದೂ ಆದಕಾರಣ ಕೇಸನ್ನು ದೇಶದ ಹಿತದೃಷ್ಟಿಯಿಂದಲೂ, ಸೌಹಾರ್ದತೆಗಾಗಿಯೂ ವಾಪಾಸು ತೆಗೆಯುವಂತೆ ಅರ್ಜಿಯೊಂದನ್ನು ಸರ್ಕಾರಕ್ಕೆ ಒಪ್ಪಿಸಿದ್ದರಿಂದ, ಸರಕಾರವು ಕೇಸನ್ನು ವಾಪಾಸು ತೆಗೆದುಕೊಳ್ಳುವಂತೆ ಹುಕುಂ ಮಾಡಿ ಕೇಸು ತಾ. ೨–೩–೫೩ ರಲ್ಲಿ ಮಂಗಳೂರು ಕೋರ್ಟಿನಿಂದ ವಾಪಾಸು ತೆಗೆಯಲ್ಪಟ್ಟಿತು.

ಕೆ. ಪಿ. ಕರುಂಬಯ್ಯ.

ಧರ್ಮ ರಹಸ್ಯ

—ಸ್ವಾಮಿ ನಾರಾಯಣಾನಂದ—

(೧) ಜೀವನದ ಕಷ್ಟ ನಿಷ್ಠುರಗಳೇ ಬಾಳಿಗೆ ಶೋಭೆಯನ್ನು ಕೊಡುವಂಥಾವು. ಆದ್ದರಿಂದ ಕಷ್ಟಗಳಿಗೆ ಅಂಜದಿರು. ಹೋರಾಡಿ ಗೆಲ್ಲುವದು ಜೀವನವಲ್ಲದೆ ಬಿರಬಾಗಿ ಬಳಲುವದಲ್ಲ.

(೨) "ಬೇಡ"ವೆಂದು ಹೇಳುವಷ್ಟು ನಿಷ್ಠೆ ಇಲ್ಲದವನು ಗೆಲ್ಲಲಾರ. "ಬೇಕು" ಎಂದು ಹೇಳುವವನು ಮೇಲೇರಲಾರ. "ಬೇಕು ಬೇಡ" ಗಳೆರಡರಲ್ಲೇ ಸ್ವರ್ಗ ನರಕಗಳಿವೆ!

(೩) ತಪ್ಪು ಕಂಡು ಹಿಡಿಯುವವರೂ, ಟೀಕಿಸುವವರೂ ಮುಸ್ಸಿ ಪಾತ್ರೆಗೆ ಮರಳು, ಬೂದಿಗಳಿದ್ದಂತೆ. ಅವುಗಳನ್ನು ಸರಿಯಾಗಿ ತಿಕ್ಕಿದರೆ ಪಾತ್ರೆ ಶುಭ್ರಗೊಳ್ಳುವಂತೆ ಟೀಕೆಯಿಂದ ಮನುಷ್ಯನು ಶುದ್ಧನಾಗುವನು.

(೪) ಹೃದಯವನ್ನು ಗೆಲ್ಲುವದೆಂದರೆ ಹೃದಯವನ್ನು ಕೊಡುವದು. ಎಲ್ಲವನ್ನು ಕೊಡು. ಎಲ್ಲವೂ ಪದತಳದಲ್ಲಿ ಬಂದು ಸೇರುವದು. ಪ್ರೇಮ ಮತ್ತು ತ್ಯಾಗಗಳಿಗೆ ಅಪಜಯವಿಲ್ಲ.

(೫) ನಗುಮುಖ ಸದಾರಾರಾಜಿಸುತ್ತಿರಲಿ. ವ್ಯಸನ, ಮೃತ್ಯುಗಳೆದುರೂ ಮುಖದಲ್ಲಿಯ ನಗುವು ಬಾಡದಿರಲಿ. ಹಸನ್ಮುಖತೆಯೇ ಜೀವನದ ಕಾರಂಜಿ.

(೬) ನಿನ್ನಲ್ಲಿಗೆ ಯಾರು ಬಂದರೂ ದೇವರ ಅಂಶವೆಂದು ಭಾವಿಸು. ನಿಕೃಷ್ಟನೆಂದು ಎಂದೂ ಯೋಚಿಸದಿರು. ಜೀವನವು ಏರುತಗ್ಗುಗಳಿಂದ ಕೂಡಿದ್ದು ಜೀವನ ಚಕ್ರದಲ್ಲಿ ಇಂದು ಮೇಲಿರುವವನು ನಾಳೆ ಕೆಳಗಿಳಿದು, ಕೆಳಗಿರುವವನು ಮೇಲೇರಬಹುದು.

(೭) ನೀನು ಭುಂಜಿಸುವ ಆಹಾರದ ಬಗ್ಗೆ ಎಚ್ಚರದಿಂದಿರು. ಮಾನವನ ಗುಣಕ್ಕೂ ಆತನು ಸೇವಿಸುವ ಆಹಾರಕ್ಕೂ ಸಂಬಂಧವಿದೆ. ಅಯೋಗ್ಯ ಆಹಾರವು ನಿನ್ನನ್ನು ಪಾಪಕ್ಕೆ ತಳ್ಳುವದು.

(೮) ನಿನ್ನ ಹೃದಯದಲ್ಲಿ ಎಲ್ಲವೂ ಸುಂದರವೂ, ಪವಿತ್ರವೂ ಆಗಿದ್ದರೆ ಹೊರಗಿನದೆಲ್ಲವೂ ಸುಂದರವೂ, ಪವಿತ್ರವೂ ಆಗಿ ತೋರುವದು. ಏಕೆಂದರೆ ಆತ್ಮದ ಕನ್ನಡಿ ಶುಭ್ರವಿದ್ದರೆ ಪ್ರಪಂಚವೇ ಸುಂದರವಾಗಿ ತೋರುವದು.

(೯) ಮನೋವಿಕಾರಗಳಿಗೆ ಮೇಲ್ಮೈ ಎಂದರೆ ಆತ್ಮದ ಕೊಲೆ ಮಾಡಿದಂತೆ. ಆದ್ದರಿಂದ ಸಂಯಮನದ ಕಡಿವಾಣ ಬಲವಾಗಿರಲಿ.

(೧೦) ದೈನ್ಯಭಾವ, ದಯೆ ಇವುಗಳು ಮನುಷ್ಯನನ್ನು ಮೇಲೆತ್ತುವವು. ಆಡಂಬರ, ಅನೀತಿಗಳು ಕೆಳಗಿಳಿಸುವವು. ಆದ್ದರಿಂದ ಮೇಲೇರುವದೇ ಜೀವನದ ಗುರಿಯಾಗಲಿ.

ಬಹಿರಂಗ ಹರಾಜು

ಹಾತೂರು ಹೈಸ್ಕೂಲಿನ ಸಮೀಪ ಪೈರೋಡಿನ ಬಾಜಿನಲ್ಲಿ, ಮೂರು ಕೋಣೆಗಳಿರುವ ಹಂಚಿನ ಮನೆಯನ್ನು ತಾರೀಕು 19–3–53ರ ಅಪರಾಹ್ನ 2 ಗಂಟೆಗೆ ಕಟ್ಟಡದ ಬಳಿ ಬಹಿರಂಗ ಹರಾಜು ಮಾಡಲ್ಪಡುತ್ತದೆ. ವಾಸಕ್ಕೂ ಮತ್ತು ನೀರಿನ ಅನುಕೂಲವೂ ಇರುತ್ತೆ. ಖಾಯಿಸ್‌ದಾರರು ಹೆಚ್ಚಿನ ವಿವರವನ್ನು ಹೈಸ್ಕೂಲಿನ ಪ್ರೆಸಿಡೆಂಟರಿಂದ ತಿಳಕೊಳ್ಳಬಹುದು.

ಹೆಚ್. ಬಿ. ಸಿದ್ದಯ್ಯ,

ಪ್ರೆಸಿಡೆಂಟರು.

॥ ದುರ್ಬೀನು ನೋಟ ॥

ಪುರಾಣದ ನಾರದರು ಸ್ವರ್ಗನರಕಗ ಳೆರಡಕ್ಕೂ ಸುತ್ತಿ ವಿಷಯ ತಿಳಿದುಕೊಂಡು ಭಗವಂತನಿಗೆ ವಿಶೇಷ ಸಮಾಚಾರಗಳನ್ನು ಹೇಳುತ್ತಿದ್ದರಂತೆ. ನಮ್ಮಲ್ಲಿಯ ಒಬ್ಬ ನಾರದರು ಕೊಡಗು ಮಲಬಾರುಗಳೆಂದು ತಿರುಗುವದು ವಿಶೇಷ ತಿಳಿಯುವ ದೃಷ್ಟಿ ಯಿಂದಲ್ಲವಾದರೂ ಕಪ್ಪು ಸಂತೆಯಲ್ಲಿ ಅ ಕ್ಕಿ ಸಾಗಿಸುವ ಪ್ರಯತ್ನದಿಂದ!

ಇವರು ಕಪ್ಪುಸಂತೆಯವರಾದರೂ ಆ ಳುವವರಿಗೆ ಫಿರ್ಯಾದು ಕೊಡುವ ನಾರದನ ಕೆಲಸದಲ್ಲಿ ಕಡಿಮೆ ಇಲ್ಲ. ಮೊನ್ನೆ ತೋ ಟದ ಕೆಲವು ಕೆಲಸಗಾರರ ಮುಂದಾಳ್ತನದ ಲ್ಲಿ........ರಲ್ಲಿಗೆ ಹೋಗಿ ತಮಗೆ ನಿಯಂ ತ್ರಿತ ಬೆಲೆಗೆ ಬತ್ತ ದೊರೆಯುತ್ತಿಲ್ಲವೆಂದೂ, ಕೈತಾಪಿ ಜನರು ಒಳಗೊಳಗೆ ಕಳ್ಳವ್ಯಾಪಾ ರ ಮಾಡುತ್ತಿರುವರೆಂದೂ ದೂರು ಕೊಡಿಸಿದ ರಂತೆ!........ರು 'ಕೈತರಿಗೆ ನಾಲ್ಕು ಕಾಸು ಬತ್ತದಿಂದ ದೊರೆಯುವದು. ನಿಯಂತ್ರಿತ ಬೆಲೆಯಲ್ಲಿ ಎಲ್ಲಾದರೂ ನಿಮಗೆ ದೊರೆತೇ ದೊರೆಯುತ್ತದೆ ಇಲ್ಲವೇ ರೇಶನ್ ಅಂಗ ಡಿ ಇದ್ದೇಯಲ್ಲಾ' ಎಂದರಂತೆ.

ಎಣ್ಣೇ ದೀಪದ ಬತ್ತಿಗೆ ಕೈಹಾಕಿದಂ ತೆ ವಿದ್ಯುತ್ ದೀಪದ ತಂತಿಗೆ ಕೈ ಹಾಕಬಾ ರದೆಂದು........ರಿಗೆ ತಿಳಿದಿರಬೇಕು. ನಾ ರದರ ಗರ್ವಭಂಗವಾದರೂ ಕೈತರ ಹಿತಭಂ ಗವಾಗಬಾರದೆಂಬುದು ನಿಜವಲ್ಲವೇ?

* * *

ನೆರೆಬರುವಾಗ ಬಾಣೆಯ ಮೇಲೂ ನೀರು ತುಂಬಿರುವಂತೆ ಕಾಂಗ್ರೆಸು ಚುನಾವ ಣೆಯಲ್ಲಿ ಗೆದ್ದು ಅಧಿಕಾರ ಸ್ವೀಕರಿಸಿದಾಗ ಯಾರು ಯಾರಿಗೊ ಅಧಿಕಾರ, ಅಹಂಕಾರ ಬಂತು. ಇಂಥಾ ಕಾಂಗ್ರೆಸಿನ ಕಂಬಗಳಲ್ಲಿ ಒಂದು ಕಂಬವು ಅಧಿಕಾರದೊಡನೆ ಸಂಪತ್ತ ನ್ನೂ ಗಳಿಸುವ ಹತ್ತಿರದ ದಾರಿ 'ಶಾರ್ಟ್ ಕಟ್' ಕೈಕೊಂಡದ್ದು ಗಮನಕ್ಕೆ ಬಂದು ಕಂ ಬವನ್ನು ಉರುಳಿಸಲಾಗಿದೆಯಂತೆ. ಮಿ ನಿದ್ದರೆ ಮಿಣ್ಣುಳ್ಳಿಯನ್ನು ಬಾಣೆಯಲ್ಲೂ ಕಾಣಬಹುದಾದಂತೆ ಮದ್ದಿನ ರಸವಿರುವು ದಾದರೆ ಕಾಂಗ್ರೆಸ್ ತತ್ವ ವಿರೋಧಿಗಳನ್ನು ಕಾಂಗ್ರೆಸಿನಲ್ಲಿ ಕಾಣಬಹುದು!

* * *

ಆಸೆಗೆ ಅಂತ್ಯವಿಲ್ಲ. ಅದರ ಆಳ ಪಾ ತಾಳ. ಮೇನೇಜರೊಬ್ಬರು ಮೇಲಧಿಕಾ ರಿಯ ವಿಶ್ವಾಸ ನಂಬಿಕೆಗಳನ್ನು ಉಪ ಯೋಗಿಸಿಕೊಂಡು ಹಗಲು ದರೋಡೆ ನಡೆ ಸಿ ಮೇಲಧಿಕಾರಿಯ ಕುತ್ತಿಗೆಗೆ ಕತ್ತಿ ತಂದಿ ರಿಸಿದರು. ಅಧಿಕಾರಿಯು ಜೈಲಿನಿಂದ ತ ಪ್ಪಿಸಿಕೊಳ್ಳುವದೇ ಸಾಕು ಬೇಕಾಯಿತು ಈಗ ಮೇನೇಜರರು ಸೆಕ್ರೆಟರಿಯಾದರು. ಮತ್ತೆ ಕೇಳಬೇಕೆ? ಇಟ್ಟದ್ದೆಲ್ಲವೂ ನಾ ಯು; ಮುಟ್ಟಿದ್ದೆಲ್ಲವೂ ಭಸ್ಮವೆಂಬಂತಾಗಿದೆ ಯಂತೆ! ನೀರಿಗೆ ರೋಗ ಇಲ್ಲ; ಗಾಳಿಗೆ ಆ ಕಾರವಿಲ್ಲ. ಬುದ್ಧಿಗೆ ಗತಿ ವೇಗಗಳಿಲ್ಲ. ಆದರಂತೆ ದುಡ್ಡಿಗೆ ಮಿತಿಯೆನವಿಲ್ಲ. ದೇ ವರ ಭಂಡಾರದ ಹಣವೇ ಇರಲಿ, ಸರಕಾ ರದ ಖಜಾನೆಯೇ ಇರಲಿ, ಬಿಲ್ಲು ಸಂದಿ ಯಂಗಡಿಯ ಪೆಟ್ಟಿಗೆ ಸೋರಿಕೆ ಆಗಲಿ ತನ್ನ ಜೇಬನ್ನು ಸೇರಿಸಿಕೊಂಬುದು ಗುರಿಯುಳ್ಳದೆ ಯಾವುದು ಯಾರಿಗೆ? ಎಂಬುದು ಪ್ರಶ್ನೆ.

"ಪ್ರೆ........ರು ಒಳ್ಳೇ ಸಮಾಜಸೇವೆ ಮಾಡುತ್ತಿದ್ದಾರೆ" ಎಂದು ಮೊದಲಾಗಿ ತಾ ನೇ ಬರದು ಜೇಡಿರೋಟ್ಟರ ಸಹಿಹಾಕಿ ಪತ್ರಿಕೆಗೆ ಪ್ರಕಟಣೆ ಬಗ್ಗೆ ಒಬ್ಬ ಅಧ್ಯಾ ಪಕರು ಕಳುಹಿಸಿದ್ದಾರೆ. ಅವರು ಜೋಟ್ಟ್ ಪೆಸರಿಸುವ ಆಚಾರಿಸುವಾಗ ಅವರಿಗೆ ಆ ಸಂಗತಿಯೇ ತಿಳಿಯದು! ಭೂತ ಕನ್ನಡಿ ಯಲ್ಲಿ ಮುಂದೆ ನಿಂತು ನೋಡಿದರೆ ನಮಗೆ ನಮ್ಮದೇ ಭೂತಾಕಾರ. ಅದರಂತೆ ಪ್ರಜಲಿತ ಹಬ್ಬಿರುವ ಸಮಾಜಸೇವೆಯ ಸೋಗಿನ ವಾ ತಾವರಣದಲ್ಲಿ ಒಬ್ಬರನ್ನೊಬ್ಬರು ಹೊಗಳು ವ ಆಸ್ಪದವಿಲ್ಲ. ನಮ್ಮನ್ನು ನಾವೇ ಹೊ ಗಳಿಕೊಳ್ಳಬೇಕ.!

* • *

'ಓದುಗರ ಓಲೆ'ಯಲ್ಲಿ ಅನೇಕ ಜನ ರು ತಮ್ಮ ದುಗುಡ, ದುಮ್ಮಾನ, ಬೇಕು ಬೇಡಿಕೆಗಳನ್ನು ಬರೆದು ಕೋಡರೂ ಸಂಬಂ ಧಿಸಿದವರಾಗಲೀ, ಸರಕಾರವಾಗಲೀ ಹೆಚ್ಚಿ ನ ಗಮನವಿಡುವಂತೆ ತೋರುವದಿಲ್ಲ. ಎ ದೊಬ್ಬರು ಬರೆದಿರುವರು.

ಕೇವಲ ಹೊಂಗುಟ್ಟುವವನಿಗೆ ಕಥೆ ಯಾದರೇನು, ವ್ಯಥೆಯಾದರೇನು? ಪ್ರೇಕ್ಷ ಕನಾಗಿ ನಿಂತು ನೋಡುವವನಿಗೆ ರಾಜಕ್ರೀ ಯವಾದರೇನು, ರಕ್ತದ ಓಕುಳಿಯಾದರೇ ನು? ಅದರಂತೆ ಐದು ವರ್ಷಗಳ ಅಧಿಕಾರ ಬಂತೆಂಬ ತೃಪ್ತರಿಗೆ ಯಾರು ಕೂಗಿದರೇನು? ಎಲ್ಲಿ ಅಳಿದರೇನು?

* * *

ಕುಂಬಳ ಕದ್ದರು ಎಂದಾಗ ಹೆಗಲು ಮುಟ್ಟಿನೋಡಿದ ಪ್ರಸಂಗದಂತೆ 'ಪ್ರೆಸಿಡೆಂಟ ರು ತಮ್ಮ ಸಹೋದರರಿಗೆ ಕಂಟ್ರಾಕ್ಟು ಕೊಡುತ್ತಿರುವರೆಂ'ದು ಕಳೆದ ವಾರದ ದು ರ್ಬೀನು ನೋಟದಲ್ಲಿದ್ದುದನ್ನು ಓದಿ ಪ್ರೆಸಿ ಡೆಂಟರೊಬ್ಬರು 'ನಾನು ನಿಜವಾಗಿಯೂ ಹಾಗೆ ಮಾಡಿಲ್ಲ. ಕಮಿಟಿ ಮೆಂಬರರಿಲ್ಲ ವೇ? ಅವರ ಒಪ್ಪಿಗೆಯಿಲ್ಲದೆ ಪ್ರೆಸಿಡೆಂಟರೇ ಮನಸು ಬಂದ ಹಾಗೆ ಮಾಡಲಾಗುವದೇ?', ಎಂದು ವಾದ ಪ್ರಾರಂಭಿಸಿದ್ದರು! ನಿದ್ದೆ ಬಿ ಡದ ಕಣ್ಣಿಗೆ ನೀರು ತಾಗಿಸಿದರೆ ಹಿತವಾ ಗುವಂತೆ ನೀಚತ್ವ ಬಿಡಲೊಲ್ಲದ ಬುದ್ಧಿಗೆ ನೀತಿ ಬೋಧಿಸಿದರಾಗುವದಿದೆಯೆಂದು ನಂ ಬೋಣವೇ?

• • •

ಅನೀತಿಯ ಜೀವನ ನಡೆಸಿ, ಅನೀತಿ ಯಿಂದಲೇ ಬದುಕಿ, ಅನೀತಿಯ ಮಹಾ ಕೃ ಪೆಯ ಮುದ್ರೆಯನ್ನು ತಮ್ಮ ಪ್ರತಿ ಅಂಗದ ಲ್ಲಿ ಅಚ್ಚೊತ್ತಿಸಿಕೊಂಡಿರುವವರೊಬ್ಬರು ಸ ಭಿಕರಿಗೆ-ಉಪದೇಶ ಕೊಡುತ್ತಿದ್ದರು. 'ಮ ನುಷ್ಯನಿಗೆ ಗುಣ ಬೇಕು. ಶೀಲ ಬೇಕು. ನೀವೆಲ್ಲರೂ ಶೀಲವಂತರಾಗಿರಿ' ಎಂದು.

ಬೀದಿ ಗುಡಿಸುವ ಕೆಲಸ ಮಾಡ್ತವನ ಲ್ಲಿ ಒಪ್ಪೊಪ್ಪಾಗಿ ಬೀದಿ ನುಡಿದು ಹೆಕ್ಕಿಕೊ ಳ್ಳುವ ಬುದ್ಧಿಯೂ ಇರುತ್ತದೆ. ವೇದಾ ತ ಬಾಳುವೆ ನಡೆಸುವವರಲ್ಲಿ ಪರೋಪದೇ ಶ ಬುದ್ಧಿ ಇರುವದೂ ಸ್ವಾಭಾವಿಕವೆ!

—

ಈ ವಾರ ಕೊಡಗಿನೊಳಗೆ

ನಿಲುವಾಗಿಲು ಗ್ರಾಮದಲ್ಲಿ ತೆರೆಯಲ್ಪಟ್ಟ ವಯಸ್ಕರ ಶಿಕ್ಷಣ ಶಾಲೆ

ಇದರ ಪ್ರಾರಂಭೋತ್ಸವವು ಪಲ್ಲಿಸ ಟ್ಟದ ಕಾಫಿ ಪ್ಲಾಂಟರು ಶ್ರೀ ನಾರಾಯಣ ರಾವ್ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೨೦ರಲ್ಲಿ ಜರುಗಿತು. ಚುನಾಯಿಸ ಲ್ಪಟ್ಟ ಶಾಲಾ ಮಂದಿರದ ಮುಂದೆ ಸುಂದ ರವಾದ ಹಸುರು ಚಪ್ಪರವೊಂ ದು ಒಪ್ಪುತ್ತಲಿತ್ತು. ಜಿಲ್ಲಾಭಂಡಾರದ ಶಾಲಾ ಹೆಡ್‌ಮಾಸ್ಟರ್‌ರವರಾದ ಜ. ಉ ಸ್ವಾಮ್‌ರವರ ಮತ್ತು ಗ್ರಾಮಸ್ಥರ ಪ್ರೋ ತ್ಸಾಹದಿಂದ ೩೬ ಮಂದಿ ವಯಸ್ಕ ವಿದ್ಯಾ ರ್ಥಿಗಳು ದಾಖಲಾದರು. ಸಭಾಕಾರ್ಯ ವು ರಾಷ್ಟ್ರಗೀತೆ ಮತ್ತು ದೇವರ ಪ್ರಾರ್ಥನೆ ಯೊಡನೆ ಉಪಕ್ರಮವಾಯಿತು. ಮಲ್ಲಿ ಪಟ್ಟಣದ ದಾಲಾ ಅಧ್ಯಾಪಕರೊಬ್ಬರ ಭಾ ರತವಾಚನವು ಸುಶ್ರಾವ್ಯವಾಗಿತ್ತು. ಶ್ರೀ ಗಳಾದ ಪಿ ಕೆ. ಚೆನ್ನಯ್ಯ ಎಂ. ಎಲ್. ಎ. ಮತ್ತು ಕೆ. ಎಸ್. ಕರಿಬಸಪ್ಪ ಇವರು ಗಳಿಂದ ಕ್ರಮವಾಗಿ 'ವಿದ್ಯೆಗೆ ಜಾತಿಬೇಧ ವಿಲ್ಲ. ಪ್ರಾಯದ ಪರಿಮಿತಿಯಿಲ್ಲ. ಸ್ತ್ರೀ ಪುರುಷರೆಂಬ ಬೇಧವಿಲ್ಲ. ಆದ್ದರಿಂದ ಆಬಾ ಲವೃದ್ಧ ಮತ್ತು ಸ್ತ್ರೀಯರಾದಿಯಾಗಿ ಸ ರ್ವರೂ ಸಾಧ್ಯವಾದಷ್ಟು ವಿದ್ಯಾ ಧನವ ನ್ನು ಸಂಪಾದಿಸಲೇಬೇಕು. ಗ್ರಾಮ್ಯಜೀ ವನದ ಶ್ರೇಷ್ಠತ್ವ, ಒಕ್ಕಟ್ಟು, ದುಡಿತ, ಪರ ಸ್ಪರ ಪ್ರೇಮ, ಸಹಕಾರಗಳಿಂದಾಗುವ ಕೆ ಲಸಗಳ ಮೇಲ್ಮೆ ಇತ್ಯಾದಿ ಅನೇಕ ಉಪ ಯುಕ್ತ ವಿಷಯಗಳನ್ನು ಬಹು ಸುರಸ ವಾಗಿ ವಿವರಿಸಿದರು. ಅಧ್ಯಕ್ಷರ ಸಮಾ ರೋಪ ಭಾಷಣ, ಮಂಗಳಗಾನ, ಅಲ್ಪಾ ಹಾರ ತಾಂಬೂಲ ವಿನಿಯೋಗದ ನಂತರ ಅಂದಿನ ಕಾರ್ಯಕಲಾಪವು ಮುಕ್ತಾಯವಾ ಯಿತು.

— ಪ್ರತ್ಯಕ್ಷದರ್ಶಿ.

—

ಪೊನ್ನಂಪೇಟೆ ಮಹಿಳಾ ಸಮಾಜ

ಈ ಸಮಾಜದ ಆಶ್ರಯದಲ್ಲಿ ಶಿಶುವಿ ಹಾರವೊಂದನ್ನು ತೆರೆಯಲಾಗಿದೆ. ತಾ. ೮ರಲ್ಲಿ ಇದನ್ನು ತೆರೆಯುವ ಸಮಾರಂಭವ ನ್ನು ಜಿಲ್ಲಾ ವಿದ್ಯಾಧಿಕಾರಿಗಳಾದ ಗಣೇಶ ರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಾಜದ ಪ್ರೆಸಿಡೆಂಟರಾದ ಚೆಪ್ಪುಡೀರ ಮಿಸೆಸ್ ಪೊನ್ನಪ್ಪನವರು ಸರ್ವರಿಗೂ ಸ್ವಾ ಗತವಿತ್ತು ಸಮಾಜದ ಕಾರ್ಯಕಲಾಪಗಳ ನ್ನು ವಿವರಿಸಿದರು. ಸಮಾಜದ ಕಾರ್ಯ ದರ್ಶಿ ಕೊಂಗಾಂಡ ಮಿಸೆಸ್ ಬಿದ್ದಪ್ಪನವ ರು ವಂದಿಸಿದರು. ಶ್ರೀಗಳಾದ ಪಿ. ಎಂ. ನಾಣಯ್ಯ ಮತ್ತು ಆ. ವಿ ದ್ಯಾಧಿಕಾರಿಗಳಾದ ಶ್ರೀ ಸೂರ್ಯನಾರಾ ಯಣರಾಯರು ಸಮಯೋಚಿತ ಭಾಷಣ ಮಾಡಿದರು.

— — —

ಕಾಟೇಜ್ ಕಪ್ ಹಾಕಿ

ಇಂಪೀರಿಯಲ್ ಬ್ಯಾಂಕಿನಲ್ಲಿರುವ ಶ್ರೀ ಕೊಡಂದೆರ ನಂಜಪ್ಪನವರು ಕೊಟ್ಟಿ ರುವ ಕಾಟೇಜ್ ಹಾಕಿ ಕಪ್ಪಿನ ಪಂದ್ಯಾಟ ವು ಕೊಡಗು ಎತ್ಲೆಟಿಕ್ ಎಸೋಸಿಯೇಶನಿ ನ ಆಶ್ರಯದಲ್ಲಿ ತಾ. ೨೧ರಿಂದ ಮಡಿಕೇರಿ ಮೇನ್ಸ್ ಕಾಂಪೌಂಡಿನಲ್ಲಿ ನಡೆಯಿತು. ಮಡಿಕೇರಿ ಹೈಸ್ಕೂಲಿನ ಎರಡು ಟೀಮುಗ ಳೂ, ಜಾಲಿ ಇಲವೆನ್, ಯಂಗ್‌ಸ್ಟರ್ಸ್ ಇಲವೆನ್, ವಾಂಡರರ್ಸ್ ಮೊದಲಾದ ಟೀಮುಗಳು ಆಟದಲ್ಲಿ ಭಾಗವಹಿಸಿದ್ದವು. ಕಡೇ ಆಟವು ಜಾಲಿ ಇಲವೆನ್ ಟೀಮಿನವ ರಿಗೂ, ಹೈಸ್ಕೂಲ್ ಫಸ್ಟ್ ಟೀಮಿನವರಿ ಗೂ ತಾ. ೭ರಲ್ಲಿ ನಡೆದು ಡ್ರಾ ಆಯಿತು ಮಾರನೆ ದಿನ ಟೈಗ್ಗೆ ಪುನಃ ಆಡಲಾಗಿ ಹೈಸ್ಕೂಲು ಟೀಮು ಎರಡು ಗೋಲುಗಳಿಂ ದ ಜಯ ಪಡೆಯಿತು. ಶ್ರೀ ಚೆಪ್ಪುರ ಎಂ. ಪೂಣಚ್ಚ ಮತ್ತು ಎಂ. ಎ. ಪೂವಣ್ಣನ ವರು ಗೋಲನ್ನು ಹೊಡೆದವರಾಗಿದ್ದಾರೆ. ಶ್ರೀ ಕೆ. ಜಿ. ಬೆಳ್ಯಪ್ಪನವರು ಗೆದ್ದವರಿಗೆ ಕಪ್ಪನ್ನು ಕೊಟ್ಟರು.

—

ಸಂತಾಪ ಸೂಚನಾ ಸಭೆ.

ಮಾರ್ಷಲ್ ಸ್ಟಾಲಿನರ ನಿಧನದ ಬ ಗ್ಗೆ ಸಂತಾಪ ಸೂಚನಾ ಸಭೆಯು ವಿರಾ ಜಪೇಟೆಯಲ್ಲಿ ತಾ. ೭ರಲ್ಲಿ ನಡೆಯಿತು. ಸ್ಥಳೀಕ ಕಮ್ಯುನಿಸ್ಟ್ ಪಾರ್ಟಿಯು ಕೋರಿ ಕೆ ಮೇರೆ ಸ್ಥಳೀಯ ಕಾಂಗ್ರೆಸ್ ಕಮಿಟಿಯ ವರೂ, ಮುನ್ಸಿಪಲ್ ಕೌನ್ಸಿಲರುಗಳೂ ಸಂ ತಾಪ ಸೂಚನೆಯಲ್ಲಿ ಸಹಕರಿಸಿದರು. ಒ ಬ್ಬಿಬ್ಬರನ್ನು ಬಿಟ್ಟು ಬಹುತೇಕ ಎಲ್ಲಾ ವ್ಯಾಪಾರಸ್ಥರೂ ತಮ್ಮ ಅಂಗಡಿಗಳನ್ನು ಮುಚ್ಚಿದ್ದರು. ಸಾಯಂಕಾಲ ೫-೩೦ ಗಂಟೆಗೆ ವಿಕ್ಟೋರಿಯಾ ಕ್ಲಬ್ಬಿನ ಎದುರು ಗಡೆ ಮೈದಾನದಲ್ಲಿ ಪುರ ಜನರ ಸಂತಾಪ ಸೂಚಕ ಸಭೆಯು ಮುನ್ಸಿಪಲ್ ಅಧ್ಯಕ್ಷ ರಾದ ಶ್ರೀ ರಾಮಮೂರ್ತಿಯವರ ಅಧ್ಯಕ್ಷ ತೆಯಲ್ಲಿ ಸೇರಿತ್ತು. "ರಾಜಕೀಯ ಅಭಿ ಪ್ರಾಯ ವ್ಯತ್ಯಾಸ ಏನೇ ಇದ್ದರೂ ಮಾ ರ್ಷಲ್ ಸ್ಟಾಲಿನರು ರಾಜಕಾರಣದಲ್ಲಿ ದೊಡ್ಡ ಒಬ್ಬ ಆಚಾರ್ಯ" ಎಂಬದಾಗಿ ಅಧ್ಯಕ್ಷರು ತಮ್ಮ ಆರಂಭ ಭಾಷಣದಲ್ಲಿ ಹೇಳಿದರು. ಅನಂತರ ಡಾಕ್ಟರ್ ಅಶ ಣ್ಣ, ಕಾಮ್ರೇಡ್ಸ್ ಸಿ. ಪಿ. ಪೊಣ್ಣಯ್ಯ ಮತ್ತು ಪಿ. ಸಿ. ಕರುಂಬಯ್ಯ ಇವರುಗಳು ಸ್ಟಾಲಿನರ ಜೀವನ ಚರಿತ್ರೆಯನ್ನು ಸಂಕ್ಷಿ ಪ್ತವಾಗಿ ವಿವರಿಸಿದರು. ಅಧ್ಯಕ್ಷರ ಕೋ ರಿಕೆ ಮೇರೆ ಸಭಿಕರೆಲ್ಲರೂ ಎರಡು ನಿಮಿಷ ಮೌನವನ್ನಾಚರಿಸಿ ದುಃಖ ಸೂಚಿಸಿದ್ದಲ್ಲ ದೆ, ವಿರಾಜಪೇಟೆಯ ಪುರಜನರ ಸಂತಾಪ ವನ್ನು ಸೋವಿಯಟ್ ರಾಯಭಾರಿ ಕಚೇ ರಿಗೆ ತಂತಿಮೂಲಕ ತಿಳಿಸುವ ಭಾರವನ್ನು ಅಧ್ಯಕ್ಷರಿಗೆ ಒಪ್ಪಿಸಿ ಸಭೆ ಬರಕಾಸ್ತಾ ಯಿತು.

— ಹಾಜರಿದ್ದವ.

—

ಕೊಡಗು

ತಾರೀಕು ೧೩ ಮಾರ್ಚ್ ೧೯೫೩ನೇ ಶುಕ್ರವಾರ

ಮಾರ್ಷಲ್ ಸ್ಟಾಲಿನ್.

ಮಹಾತ್ಮಾಗಾಂಧೀಯವರ ಮರಣದ ನಂತರ ಕಣ್ಮರೆಯಾದ ಪ್ರಖ್ಯಾತ ಅಂತರಾಷ್ಟ್ರೀಯ ವ್ಯಕ್ತಿಗಳಲ್ಲಿ ಸ್ಟಾಲಿನರು ಪ್ರಾಮುಖ್ಯರು. ಮಾನವನಿಂದ ಮಾನವಗಣಕ್ಕಾದ ಸೇವೆಯ ದೃಷ್ಟಿಯಿಂದ ಮಾನವನ ಯೋಗ್ಯತೆಯನ್ನು ಅಳೆದು ಗೌರವ ಸಲ್ಲಿಸುವುದಾದರೆ ಸ್ಟಾಲಿನರು ಸಾರ್ವಭೌಮಿಕವಾಗಿಯೂ, ಸರ್ವ ಕಾಲಗಳಿಗೂ ಗೌರವಾರ್ಹರು. ಒಬ್ಬ ವ್ಯಕ್ತಿ ತನ್ನ ನಿಶ್ಚಲ ಪ್ರಯತ್ನದಿಂದ ಜಗಜ್ಜನದ ಹಿತದೃಷ್ಟಿಯಿಂದ ಏನು ಸಾಧಿಸಬಹುದೆಂಬುದಕ್ಕೆ ಸ್ಟಾಲಿನರ ಜೀವನ ನಿದರ್ಶನ. ಯಾವುದೇ ಕಾಲದಲ್ಲಿ ಸಮಾಜದ ಯಾವುದೇ ಅಂತಸ್ತಿನಲ್ಲಿ ಜನಿಸಿದರೂ ಮಾನವನ ಹಿರಿಮೆ ಘನತೆಗಳು ಕುಲ ಸಮಾಜದ ಅಳತೆಕೋಲಿನ ಮೇಲೆ ನಿಂತಿಲ್ಲವೆಂದುದಕ್ಕೂ ಸ್ಟಾಲಿನರ ಜೀವನವು ಅಪ್ರತಿಮ ಉದಾಹರಣೆಯಾಗಿದೆ.

ಕಾರ್ಲ್ ಮಾರ್ಕ್ಸರ ಸನಾತನವಾದ ತತ್ವವನ್ನು ನೆಲೆನಿಲ್ಲಿಸಿದ ಕೀರ್ತಿ ಲೆನಿನರದಾದರೆ ನೆಲೆನಿಂತ ತತ್ವವು ಕಾರ್ಯಾಚರಣೆಯಲ್ಲಿ ಬಂದು ಇಂದು ಜಗತ್ತಿನ ಮಹಾಶಕ್ತಿಯಾದ ಕೀರ್ತಿ ಸ್ಟಾಲಿನರಿಗೆ ಬರಬೇಕು. ಲೆನಿನರ ನಂತರ ರಷ್ಯಾದ ಆಡಳಿತ ಜವಾಬ್ದಾರಿಯನ್ನು ವಹಿಸಿ ಬಡತನದ ಅಂಧಕಾರದಲ್ಲಿದ್ದ ರಷ್ಯಾವನ್ನು ಮೇಲೆತ್ತಿ ಜಗತ್ತಿನ ಅದ್ವಿತೀಯ ನಾಗರೀಕ ರಾಷ್ಟ್ರವಾಗಿ ಮಾಡಿದ ಹಿರಿಯ ಕೀರ್ತಿ ಸ್ಟಾಲಿನರಿಗೆ ಸೇರುತ್ತದೆ. ರಷ್ಯಾದ ಹದಿನೆಂಟು ಕೋಟಿ ಜನತೆಯ ಹಿತಸಾಧನೆಯೊಂದಿಗೆ ಪ್ರಪಂಚದ ಬಡಜನರಿಗೆ ಶ್ರಮಜೀವಿಗಳಿಗೆ ಒಂದು ನೆಲೆಯನ್ನು ತೋರಿಸಿ ಅವರ ಬಾಳಿಗೆ ಒಂದು ಅರ್ಥ, ಒಂದು ಬೆಲೆ ಬರುವಂತೆ ಮಾಡಿದ ಕೀರ್ತಿಯೂ ಅವರ ಪಾಲಿಗಿದೆ "Workers of the world unite, you have nothing else to lose but your chains" ಎಂದು ಲೆನಿನರು ಹೇಳಿದುದನ್ನು ಕಾರ್ಯತಃ ಆಚರಣೆಯಲ್ಲಿ ತಂದು ಇಂದು ಜಗತ್ತಿನ ಕಾರ್ಮಿಕರು ಶ್ರಮಜೀವಿಗಳು ಒಗ್ಗಟ್ಟಾಗಿ ತಮ್ಮ ಶೃಂಖಲೆಗಳನ್ನು ಸಡಿಲಿಸಿಕೊಂಡು ಮೇಲೇಳುತ್ತಿದ್ದರೆ ಅದಕ್ಕೆ ಕಾರಣ ಪುರುಷರು ಸ್ಟಾಲಿನರು. ಈ ದೃಷ್ಟಿಯಿಂದ ಸ್ಟಾಲಿನರನ್ನು ಈ ಯುಗದ ಮಹಾ ವ್ಯಕ್ತಿಗಳ ಪಂಕ್ತಿಯಲ್ಲಿ ಯಾವುದೇ ಸಂಶಯವಿಲ್ಲದೆ ಸೇರಿಸಬಹುದು.

ರಷ್ಯಾದ ಸ್ಟಾಲಿನರಿಗೂ ಭಾರತದ ಮಹಾತ್ಮಾ ಗಾಂಧಿಯವರಿಗೂ ತತ್ವತಃ ಮಹಾ ಅಂತರವಿದ್ದರೂ ಇಬ್ಬರ ಜೀವನದಲ್ಲೂ ಸಾಮಾನ್ಯವಾದ ಅನೇಕ ವಿಷಯಗಳನ್ನು ಎತ್ತಿ ಹೇಳಬಹುದು. ನವಭಾರತದ ನಿರ್ಮಾಣ ಕಾರ್ಯದಲ್ಲಿ ಮಹಾತ್ಮರ ಪಾತ್ರವು ಎಷ್ಟು ಪ್ರಾಮುಖ್ಯವೋ ಅದೇ ರೀತಿ ಸ್ಟಾಲಿನರ ಧ್ಯೇಯಯುತ ಪರಿಶ್ರಮವು ಆಧುನಿಕ ರಷ್ಯಾದ ನಿರ್ಮಾಣ ಕಾರ್ಯದಲ್ಲಿ ಪ್ರಾಮುಖ್ಯವಾದುದು. ಗಾಂಧೀಜಿಯವರಿಗೆ ದಕ್ಷಿಣ ಆಫ್ರಿಕಾದ ಹೊಲಸು ತಾರತಮ್ಯ ಜೀವನದ ವಾತಾವರಣವು ಅವರ ಎಳಸೇ ವಯಸ್ಸಿನಲ್ಲಿ ಮಾನವಗಣದ ಉನ್ನತ ಸೇವಾದೀಕ್ಷೆಯನ್ನು ಒದಗಿಸಿಕೊಟ್ಟಂತೆ ರಷ್ಯಾದ ಅಂದಿನ ಕೆಸರು ವಾತಾವರಣವು ಸ್ಟಾಲಿನರಿಗೆ ಸೇವಾದೀಕ್ಷೆಯನ್ನು ಕೊಟ್ಟಿತು. ಗಾಂಧೀಯವರು ಸತ್ಯಾಗ್ರಹ ಮಾಡಿ ಸೆರೆಮನೆ ಸೇರಿದಂತೆ ಸ್ಟಾಲಿನರು ಜಾರ್ಜಿಯಾದಲ್ಲಿ ಆಂದೋಲನ ನಡೆಸಿ ಸೆರೆಮನೆ ಸೇರಿದರು. ಗಾಂಧೀಜಿಯವರು ಆಫ್ರಿಕಾದಲ್ಲಿ "ಇಂಡಿಯನ್ ಒಪೀನಿಯನ್," ಭಾರತದಲ್ಲಿ "ಯಂಗ್ ಇಂಡಿಯಾ" "ಹರಿಜನ" ಪತ್ರಿಕೆಗಳನ್ನು ಪ್ರಾರಂಭಿಸಿದಂತೆ ಸ್ಟಾಲಿನರು "ಪ್ರವ್ಡಾ" ಪತ್ರಿಕೆ ಪ್ರಾರಂಭಿಸಿದರು. ತಮ್ಮ ಪತ್ರಿಕೆಗಳ ಮೂಲಕ ಬಡಜನರ, ದೀನದಲಿತರ ಹಿತಕ್ಕಾಗಿ ದುಡಿದಂತೆ ಸ್ಟಾಲಿನರು ತಮ್ಮ ಪತ್ರಿಕೆಯ ಮೂಲಕ "ಬೋಲ್ಶೆವಿಝಂ" ತತ್ವಕ್ಕಾಗಿ ಶ್ರಮಿಸಿದರು.

ಅಂತರಾಷ್ಟ್ರೀಯ ವೇದಿಕೆಯಲ್ಲಿ ರಷ್ಯಾವು ಇಂದು ಅತೀ ಪ್ರಧಾನ ಪಾತ್ರ ವಹಿಸುತ್ತಿದೆ, ಅವರ ಒಪ್ಪಿಗೆಯಿಲ್ಲದೆ ಯಾವ ನಿರ್ಣಯವಾಗುವದೂ ಸಾಧ್ಯವಿಲ್ಲ. ಏಕೆಂದರೆ ಅವರ ಬಲ ಇಂದು ರಷ್ಯಾ ರಾಷ್ಟ್ರದ ಒಳಗೆ ಮಾತ್ರ ಸೀಮಿತವಾಗಿಲ್ಲ. ಜಗತ್ತಿನ ಪ್ರತಿ ರಾಷ್ಟ್ರದಲ್ಲಿಯೂ ಸ್ಟಾಲಿನರ ಆರಾಧಕರೂ, ಅವರ ತತ್ವಗಳ ಅನುಯಾಯಿಗಳೂ ಇದ್ದಾರೆ. ಅವರು ವಿಶ್ವದಲ್ಲಿ ಉಂಟುಮಾಡಿರುವ ಈ ನವಚೈತನ್ಯವೇ ಇಂದು ರಷ್ಯಾದ ಹಿರಿಮೆಗೆ ಇರುವ ಕಾರಣ.

ಬಡ ಜನರ ಕಣ್ಣೀರೊರಸಿ, ದುಃಖಿತರ ದುಃಖಶಮನಮಾಡಿ, ಸರ್ವರಿಗೂ ಬಾಳುವ ಹಕ್ಕನ್ನು ಒದಗಿಸಿಕೊಡುವಲ್ಲಿ ರಷ್ಯಾದಷ್ಟು ಸಫಲತೆಯನ್ನು ಪಡೆದ ರಾಷ್ಟ್ರ ಬೇರೊಂದಿಲ್ಲ. ನಿರುದ್ಯೋಗದ ನಿರ್ಮೂಲ ಮಾಡಿ, ಆರ್ಥಿಕ ಅಸಮಾನತೆಯನ್ನು ತೆಗೆದು ಹಾಕಿ, ಅನಕ್ಷರತೆಯನ್ನು ಹೋಗಲಾಡಿಸಿ ರಾಷ್ಟ್ರದ ನಿರ್ಮಾಣ ಕಾರ್ಯದಲ್ಲೂ ರಾಷ್ಟ್ರದ ಶಾಸನದ ಎದುರೂ ಸರ್ವರೂ ಸಮಾನರೆಂಬುದನ್ನು ಕಾರ್ಯತಃ ದಾರಿಗೆ ತಂದಿರುವ ರಾಷ್ಟ್ರ ರಷ್ಯಾ. ಆ ಸಾಧನೆಯ ಕೀರ್ತಿ ಸ್ಟಾಲಿನರದು. ರಷ್ಯಾದಲ್ಲೂ ನ್ಯೂನತೆಗಳಿಲ್ಲವೆಂದಲ್ಲ. ಆದರೆ ಉಳಿದ ಭಾಗಗಳ ತುಲನೆಯಿಂದ ರಷ್ಯಾವು ಆದರ್ಶ ನಾಡೆಂದು ಹೇಳುವುದರಲ್ಲಿ ಅಭ್ಯಂತರವಿಲ್ಲ.

ಸ್ಟಾಲಿನರು ಸಾಯುವಾಗ ೭೩ ವರ್ಷ. ಸಾಯುವ ವಯಸ್ಸು ಇದೆನ್ನಬಹುದಾದರೂ ಅವರ ನಿಧನದಿಂದಾದ ನಷ್ಟವು ಎಂದೂ ತುಂಬಿಬರಲಾರದಂಥದು. ಯುದ್ಧ ಸಮಯದಲ್ಲಿ ವೀರಯೋಧರು ಹೇಗೋ ಅದೇ ರೀತಿ ಶಾಂತಿಪ್ರಿಯರೂ ಆಗಿದ್ದ ಸ್ಟಾಲಿನರಿಂದಾಗಿ ಜಗತ್ತಿನ ಶಾಂತಿಗೆ ಗಂಡಾಂತರ ಈ ವರೆಗೆ ಬರಲಿಲ್ಲವೆಂದು ಅನೇಕರು ಅಭಿಪ್ರಾಯಪಡುತ್ತಾರೆ. ಭಾರತದ ಮಹಾ ಪ್ರಧಾನಿ ನೆಹರೂರವರೂ, ಭಾರತ ಉಪಾಧ್ಯಕ್ಷ ಡಾ. ರಾಧಾಕೃಷ್ಣನ್‌ರವರೂ ಒಕ್ಕೊರಳಿನಿಂದ ಜಗತ್ತಿನ ಶಾಂತಿಯೇ ಸ್ಟಾಲಿನರ ಗುರಿಯಾಗಿತ್ತೆಂದು ಹೇಳಿರುವರು. ಆದ ಕಾರಣ ಸ್ಟಾಲಿನರ ನಿಧನದಿಂದ ಜಗತ್ ಶಾಂತಿಯ ದೂತರೊಬ್ಬರ ಕಣ್ಮರೆಯಾದಂತಾಯಿತು.

ರಷ್ಯಾದಲ್ಲಿ ಸ್ಟಾಲಿನರ ಬದಲು ಮೆಲಂಕೋವ್‌ರವರು ಅಧಿಕಾರಕ್ಕೆ ಬಂದಿದ್ದಾರೆ. ಅವರು ಸ್ಟಾಲಿನರು ಅನುಸರಿಸಿದ ನೀತಿಯನ್ನೇ ಮುಂದರಿಸುವರೆಂಬುದರಲ್ಲಿ ಸಂಶಯವಿಲ್ಲ. ಇವರ ನೇತೃತ್ವದಲ್ಲಿ ಜಗತ್ತಿನಲ್ಲಿ ಸೌಹಾರ್ದತೆ ಬೆಳೆಯಲೆಂಬುದು ಎಲ್ಲರ ಆಸೆ. ಬಡ ಜನರಿಗಾಗಿ ತೇದು ವಿನಿಯೋಗಿಸಿದ ಸ್ಟಾಲಿನರ ಜೀವಕ್ಕೆ ಮುಕ್ತಿಯೆಂಬುದೆಂದಿದ್ದರೆ ಅದು ದೊರೆಯಲೇಬೇಕು. ಅವರ ಆತ್ಮವು ಚಿರಂತನ ಶಾಂತಿಯನ್ನು ಪಡೆಯಲೆಂದು ನಮ್ಮ ಹಾರ್ದಿಕವಾದ ಹಾರೈಕೆಯಾಗಿದೆ.

ವರ್ತಮಾನ.

ಮಾರ್ಷಲ್ ಸ್ಟಾಲಿನ ನಿಧನದ ಬಗ್ಗೆ ತಮ್ಮ ಸಂತಾಪವನ್ನು ಕೊಡಗು ಕಮ್ಯುನಿಸ್ಟ್ ಪಾರ್ಟಿಯವರು ದೆಲ್ಲಿಯಲ್ಲಿರುವ ಸೋವಿಯಟ್ ರಾಯಭಾರಿ ಕಚೇರಿಗೆ ತಂತಿ ಮೂಲಕ ತಿಳಿಸಿರುವರು. ತಾ. ೮ರಲ್ಲಿ ಗೋಣಿಕೊಪ್ಪಲಿನಲ್ಲಿ ಒಂದು ಸಂತಾಪ ಸೂಚನಾ ಸಭೆ ನಡೆಯಿತು.

ತಾ. ೪ರಲ್ಲಿ ಸೋಮವಾರಪೇಟೆ ಮಹಿಳಾ ವಯಸ್ಕರ ಶಿಕ್ಷಣ ಶಾಲೆಯಲ್ಲಿ ವಿದ್ಯೆ ಕಲಿಯುತ್ತಿರುವವರಿಗೆ 'ವಯಸ್ಕರ ಶಿಕ್ಷಣ'ದ ವಿಚಾರ ಶ್ರೀ ಎಚ್. ಎಂ. ಚಂಗಪ್ಪನವರು ಒಂದು ಭಾಷಣ ಮಾಡಿದರು.

ತಾ. ೧೯ರಲ್ಲಿ ಸೋಮವಾರಪೇಟೆ ಆನೆಕೆರೆಯ ಹತ್ತಿರದಲ್ಲಿರುವ ಕೆರೆಗೆ ಸುಮಾರು ೬ ವರ್ಷದ ಮಗುವೊಂದು ಅಕಸ್ಮಾತ್ ಬಿದ್ದು ಮುಳುಗುತಿದ್ದುದನ್ನು ಶ್ರೀ ಬಿ. ಐ. ಚಂಗಪ್ಪ ಮತ್ತು ಶಿವಣ್ಣ ಇವರಿಬ್ಬರೂ ನೀರಿನಿಂದ ತೆಗೆದು ಪ್ರಥಮ ಚಿಕಿತ್ಸೆ ಕೊಟ್ಟು ಮಗುವನ್ನು ಉಳಿಸಿದರು.

ಕೊಡಗು ಟ್ರಾನ್ಸ್‌ಪೋರ್ಟ್ ಬೋರ್ಡಿನವರ ಕಳೆದ ಮೀಟಿಂಗಿನಲ್ಲಿ ಕೇಂಬುಕೊಲ್ಲಿ, ಕಾನೂರು, ಪೊನ್ನಂಪೇಟೆ, ವೀರಾಜಪೇಟೆ, ಮೂರ್ನಾಡು, ಮಡಿಕೇರಿಗೆ ಒಂದು ಬಸ್ ಲೈನ್ ಕೊಡಲು ನಿಶ್ಚಯಿಸಿರುವರೆಂದೂ ಲಾಯಸ್‌ದಾರರು ರೂ. ೫೦೦/- ಠೇವಣಾತಿಯೊಡನೆ ತಾರೀಕು ೨೫-೪-೫೩ರೊಳಗೆ ಅರ್ಜಿ ಬರಕೊಳ್ಳಬಹುದೆಂದೂ ತಿಳಿಸುತ್ತಾರೆ.

ಅವಲಕ್ಕಿಯನ್ನು ಸೇರಿಗೆ ೦-೪-೬ ಬದಲು ೦-೬-೦ ದರ ಮಾಡಿದ್ದಕ್ಕಾಗಿ ವೀರಾಜಪೇಟೆಯ ಮ. ಅಬ್ಬು ಎಂಬವರಿಗೆ ರೂ. ೨೫ ಜುಲ್ಮಾನೆಯನ್ನೂ, ರೂಪಾಯಿಗೆ ೨½ ಸೇರಿನ ಬದಲು ೧½ ಸೇರಿನಂತೆ ಅಕ್ಕಿ ಮಾರಿದುದಕ್ಕಾಗಿ ಮೊಯಿದು ಎಂಬವರಿಗೆ ರೂ. ೧೦೦ ಜುಲ್ಮಾನೆಯನ್ನೂ ವಿಧಿಸಲಾಗಿದೆ.

ಮಡಿಕೇರಿ ಟೋಲ್‌ಗೇಟಿನಲ್ಲಿರುವ ನಾಗಪ್ಪನವರ ಹೋಟೆಲಿನಲ್ಲಿ ಅನಧಿಕೃತ ಸಾರಾಯಿ ದೊರೆತ ಕಾರಣ ಅವರಿಗೆ ರೂ. ೫೫ ಜುಲ್ಮಾನೆ ವಿಧಿಸಲಾಗಿದೆ.

ವೀರಾಜಪೇಟೆ ಸಿವಿಲ್ ಆಸ್ಪತ್ರೆಯಲ್ಲಿ ಡಾಕ್ಟರಾಗಿರುವ ಶ್ರೀ ಮಂಜಪ್ಪನವರ ಪತ್ನಿಯವರು ತಾ ೮ರಲ್ಲಿ ಬಸ್ಸಿನಲ್ಲಿ ಮಡಿಕೇರಿಯಿಂದ ವೀರಾಜಪೇಟೆಗೆ ಹೋಗುತ್ತಿದ್ದಾಗ್ಗೆ ಅಕಸ್ಮಾತು ಬಸ್ಸಿನಿಂದ ಬಿದ್ದು ಕಾಲು ಮುರಿದು ಹೋಗಿ ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು.

ಮೈಸೂರಿನ ಅಧ್ಯಾಪಕ ತರಬೇತು ಕಾಲೇಜಿನಲ್ಲಿ ತರಬೇತು ಹೊಂದುತ್ತಿರುವ ಶ್ರೀ ಚಿಮ್ಮಣೀರ ಮುತ್ತಣ್ಣನವರು ತಾ ೫ರಲ್ಲಿ ನಡೆದ ಆಟೋಟಗಳಲ್ಲಿ ಹಲವು ಬಹುಮಾನಗಳನ್ನು ಪಡೆದಿರುವರು.

ತಾ. ೧೪ ಮತ್ತು ೧೫ರಲ್ಲಿ ನಡೆಯುವ ಕೊಡಗು ಜಿಲ್ಲಾ ಹಿಂದೀ ಪ್ರಚಾರ ಸಭೆಯ ಪಂಚಮ ವಾರ್ಷಿಕೋತ್ಸವದ ಸಂಬಂಧವಾಗಿ ತಾ. ೧೫ನೇ ಭಾನುವಾರ ಅಪರಾಹ್ನ ೪ ಗಂಟೆಗೆ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಪ್ರಮಾಣ ಪತ್ರ ಮತ್ತು ಬಹುಮಾನ ಹಂಚುವ ಸಮಾರಂಭವು ಸಭೆಯ ಅಧ್ಯಕ್ಷರಾದ ಹಾಗೂ ಮುಖ್ಯ ಮಂತ್ರಿಗಳಾದ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯುವದು. ಮೈಸೂರಿನ ಮಹಾರಾಜಾ ಕಾಲೇಜಿನ ಶ್ರೀ ನಾ. ನಾಗಪ್ಪನವರು ಭಾಷಣ ಮಾಡುವರು.

ಕೃತಜ್ಞತಾ ವಂದನೆ

ನನ್ನ ಮಗ ಶ್ರೀ. ಜಿ. ಎಂ. ಗೋಪಾಲಕೃಷ್ಣನ ಮದುವೆ ಸಂಬಂಧವಾಗಿ ತಾರೀಕು 7-3-53 ರಲ್ಲು ಹರದೂರು ತೋಟದ ನಮ್ಮ ಮನೆಯಲ್ಲಿ ನಡೆದ ವಧೂಗೃಹಪ್ರವೇಶ ಸಮಾರಂಭಕ್ಕೆ ದಯಮಾಡಿಸಿದ ಬಂಧು ಬಾಂಧವರಿಗೂ, ಇಷ್ಟಮಿತ್ರರಿಗೂ ಮತ್ತು ಈ ಸಂದರ್ಭದಲ್ಲಿ ಶುಭಾಶಯಗಳನ್ನೂ ಮತ್ತು ಉಡುಗೊರೆಗಳನ್ನೂ ಕಳುಹಿಸಿಕೊಟ್ಟ ಮತ್ತು ಇಲ್ಲಿಗೆ ಬಂದಿದ್ದಾಗ ಕೊಟ್ಟ ಮಹನೀಯರೆಲ್ಲರಿಗೂ ನನ್ನ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಅರ್ಪಿಸಲು ಅಸಾಧ್ಯವಾದ್ದರಿಂದ ಈ ಮೂಲಕ ಅರ್ಪಿಸುತ್ತೇನೆ.

ಶ್ರೀಮತಿ ಮತ್ತು ಶ್ರೀ. ಜಿ. ಎಂ.
ಮಂಜನಾಥಯ್ಯ,
ಪೊಂಟಿಕೊಪ್ಪ, ಕೊಡಗು.

॥ ಓದುಗರ ಓಲೆಗಳು ॥

ತೀರ್ಥ ಮಾರಾಟ!

ಮಡಿಕೇರಿ ಹೋಟೇಲಿನ ಬಳಿ ಬಾಳೆ ತೋಟದ ಹಿಂಭಾಗದಲ್ಲಿ ಒಂದು ಹುಲ್ಲು ಮನೆ ಗುಲ್ಲಿ ೬" ಉದ್ದದ ಒಂದು ಗ್ಲಾಸಿನಲ್ಲಿ ಒಂದಕ್ಕೆ ಮೂರಾಣೆಯಂತೆ ತೀರ್ಥ ಮಾರಾಟ ಮಾಡುತ್ತಾರೆ. ಕೇಳಿದರೆ 'ಇದು ಶ್ರೀಮಂಗಲದ ಶಾಪೆ ಬೇಕಾದರೆ ಕುಡಿಯಿರಿ' ಎಂಬುದಾಗಿ ಹೇಳುತ್ತಾರೆ. ಇದರಲ್ಲಿ ಅರ್ಧ ಗ್ಲಾಸು ಬರೇ ನೀರು! ನೀರಿನ ವಿಚಾರ ಮಾತಾಡಿದರೆ ನೀರು ಇಲ್ಲದ ಯಾವದೊಂದು ವಸ್ತುವೂ ತಯಾರಾಗುವದಿಲ್ಲವೆಂದೂ ನೀರೇ ಪ್ರಧಾನವೆಂದೂ ನುಡಿಯುತ್ತಾರೆ. ಸಂಬಂಧ ಪಟ್ಟವರು ಈ ಕಡೆ ನೋಡುವಿರೇ!

— ರಾಮು

ಕುಂಟ್ಯೆ ಸ್ಸಿನಿನ ಸಿ. ಪಿ. ಬಸ್ಸು

ಈ ಲೈನಿನಲ್ಲಿ ಸಿ. ಪಿ. ಸಿ. ಕಂಪೆನಿಯು ಒಂದು ಮುರುಕಲು ಬಸ್ಸು ಮನನ್ನು ಬಂದಂತೆ ಓಡಾಡುತ್ತದೆ. ಎಪ್ಸೊ ಎಂ. ಡಿ. ಎಸ್. ಎಂಬುದಾಗಿ ಓಡಿಸಿ ಅಲ್ಲಿ ಅದಕ್ಕೆ ಸ್ಥಳವಿಲ್ಲದೆ ಇಲ್ಲಿಗೆ ತಂದು ಬಣ್ಣ ಹೊಡೆದು ಸಿ. ಜಿ. ಎ. ಎಂಬುದಾಗಿ ಮಾಡಿ ಓಡಿಸಿ ಜನರ ತಿರುಗಾಟಕ್ಕೆ ತೊಂದರೆ ತರುತ್ತಿದ್ದಾರೆ. ಸಾಯಂಕಾಲ ಕಟ್ಟ ಬಸ್ಸು ಸರಿಯಾಗಿ ಬಂದು ತಲುಪುವುದಿಲ್ಲ. ಬರುವ ದಿನ ಅರ್ಧ ದಾರಿಯಿಂದ ಹಿಂದಕ್ಕೆ ಹೋಗುತ್ತದೆ. ದಾರಿಯಲ್ಲಿ ಕಾಯುವವರು ಬೇರಿನ್ನು ಹಿಂದಕ್ಕೆ ಹೋಗಬೇಕು. ಹೊತ್ತಾರೆ ಈ ಒಮ್ಮೆ ಕುಟ್ಟದಿಂದ ೭॥ ಗಂಟೆಗೆ ಹೊರಡುತ್ತಿತ್ತು. ಯಾರೋ ಒಬ್ಬರ ಮಾತಿನ ಗೌರವಕ್ಕಾಗಿ ಸಾಯಂಕಾಲ ೫ ಗಂಟೆಗೆ ಹಿಂತಿರುಗುವಂತೆ ಸಂಬಂಧ ಪಟ್ಟ ಅಧಿಕಾರಿಗಳು ಮಾಡಿಕೊಟ್ಟಿರುತ್ತಾರೆ. ಹೊತ್ತಾರೆ ೭॥ ಗಂಟೆಯ ಮೇಲೆ ಕುಟ್ಟದಿಂದ ಹೋಗುವವರಿಗೆ ಬಸ್ಸು ಇರುವದಿಲ್ಲ. ಈ ಕಂಪೆನಿಯವರಿಗೆ ಹೊತ್ತಾರೆ ೭॥ ಗಂಟೆಯ ಫೇಸು ಅವಶ್ಯವಿಲ್ಲದ ಪಕ್ಷದಲ್ಲಿ ಸೀಜನ್ ತೀರುವವರೆಗಾದರೂ ಬಸ್ಸು ತಯಾರಾಗಿರುವವರಿಗೆ ತಾತ್ಕಾಲಿಕ ಒಂದು ಲೈಸು ಕೊಟ್ಟ ಪಕ್ಷದಲ್ಲಿ ಜನರ ತೊಂದರೆ ಪರಿಹಾರವಾಗುತ್ತಿತ್ತು. ಅದಿಷ್ಟೆ ಜನರನ್ನು ಹೊತ್ತಾರೆ ಎರಡು ಬಸ್ಸಿನವರು ದಾರಿಯಲ್ಲಿ ಬಿಟ್ಟು ಹೋಗುತ್ತಿದ್ದಾರೆ. ಸಂಬಂಧ ಪಟ್ಟ ಅಧಿಕಾರಿಗಳು ಇದಕ್ಕೆ ಸ್ವಲ್ಪ ಗಮನ ಕೊಡುವರಾಗಿ ಆಶಿಸುತ್ತೇನೆ.

ಸ್ಥಳ ಸಿಕ್ಕದ ಪ್ಯಾಸೆಂಜರ್

ಇದಾವ ರೀತಿಯ ಕರ್ತವ್ಯ ದಕ್ಷತೆ

ನನಗೆ ದೇಹಕ್ಕೆ ಹೆಚ್ಚು ಸೌಖ್ಯವಿಲ್ಲದ್ದರಿಂದ ಚಿಕಿತ್ಸೆಗೆ ಸಂಬಂಧ ಪಟ್ಟ ಅಧಿಕಾರಿಗಳಲ್ಲಿಗೆ ಹೋಗಬೇಕಾಯಿತು. ಬೋರ್ಡು ನೋಡಲು 'ಔಟ್' ಎಂದಿತ್ತು. ಒಳಗೆ ನೋಡಲು ಅದೇ ವ್ಯಕ್ತಿಗಳು ಕುಳಿತ್ತಿದ್ದರು. ನನಗೆ ಆಶ್ಚರ್ಯವಾಯಿತು. ಯಾರೋ ಒಬ್ಬರು ಒಳಕ್ಕೆ ಅವರನ್ನು ಕಾಣಲು ಹೋದರು. ನಾನೂ ಅವರೊಂದಿಗೆ ಹೋದೆನು. ಅವರೆ ಅವರು ನನ್ನನ್ನು ನೋಡಿ "ತು ಯು ಸ್ಪೀಕ್ ಇನ್ ಇಂಗ್ಲಿಷ್?" ಎಂದು ಕೇಳಿದರು. ನಾನು 'ಎಸ್' ಎಂದು ಉತ್ತರಿಸಿದೆನು. ಒಡನೆ "ವಾಟೀಸ್ ಯುವರ್ ಆಕ್ಯುಪೇಶನ್" ಎಂದು ಪ್ರಶ್ನಿಸಲಾಯಿತು. ನನ್ನ ಉದ್ಯಮವನ್ನು ಹೇಳಲು 'ಪ್ರೈವೆಟ್, ಅನ್‌ಎಂಪ್ಲಾಯ್ಡ್' ಎಂದು ಹೇಳಿದೆನು. ನನಗಿಂತ ಮುಂಚೆ ಹೋದವರಿಗೆ ಏನೂ ಹೇಳಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ ಆಳು ಕಾಗದದ ತುಂಡುಗಳನ್ನು ತಂದಿಟ್ಟು ತಾವು ಬಂದ ಕೆಲಸವನ್ನು ಇದರಲ್ಲಿ ತಿಳಿಸಬೇಕೆಂದನು. ಅದರಂತೆಯೇ ತಿಳಿಸಿದೆನು. ಅಧಿಕಾರಿಗಳು ಬಂದು ಸ್ವಲ್ಪ ಹೊತ್ತು ಕಾದಿರಬೇಕೆಂದು ಹೇಳಿದರು. ಸಮಯವು ಗಂಟೆಗಳಾದರೂ ಅವರ ಸುಳಿವೇ ಇಲ್ಲ. ನಿರಾಶನಾದೆ. ಇದಾವ ರೀತಿಯ ಶಿಸ್ತು. ಜನರಿಗೊಂದು ಕಾನೂನಿದೆಯೇ? ಇನ್ನು ಮುಂದಕ್ಕಾದರೂ ಇವರು ತಾವು ಕಷ್ಟ ಪರಿಹಾರಕ್ಕಿರುವ ದಾಕ್ಟರರೆಂದು ವರ್ತಿಸುವರೇ?

—ಹಿತಚಿಂತಕ

ಸಾರಾಯಿ ಜಪ್ತಿ ಮಾಡುವುದಕ್ಕೊಂದು ನೀತಿಬೇಕು

ಮೊನ್ನೆ ಮೊನ್ನೆಯಷ್ಟೆ ವೀರಾಜಪೇಟೆಯಲ್ಲಿ ಅಬ್ಕಾರಿ ಇನ್ಸ್‌ಪೆಕ್ಟರವರು ಇದ್ದಕ್ಕಿದ್ದಂತೆಯೇ ಇಲ್ಲಿನ ಆಸ್ಪತ್ರೆಯಲ್ಲಿನ ಓವರ್‌ಸಿಯರ್ ಮನೆಯ ದಾಸ್ತಾನಕ್ಕೆ ನುಗ್ಗಿ ಸರಾಯಿ ಜಪ್ತಿ ಮಾಡಿದರು. ಬಹು ಜನರಿಗೆ ಇದೊಂದು ಆಶ್ಚರ್ಯದ ವಿಚಾರ. ಜಪ್ತಿಗೆ ಕಾರಣವೇನೆಂದು ತಿಳಿದಾಗ ಯಾರೋ ಆತನ ಮೇಲೆ ಕಳ್ಳ ಅರ್ಜಿಯನ್ನು ಬರೆದು ಹಾಕಿದ್ದರಂತೆ. ಆ ಇನ್ಸ್‌ಪೆಕ್ಟರರಿಗಾದರೂ ತಮ್ಮ ಅಧಿಕಾರ ದರ್ಪವನ್ನು ಅಲ್ಲೇ ತೋರಿಸಬೇಕೆಂದಿತ್ತೇನೋ, ಕಳ್ಳ ಅರ್ಜಿಯ ಕುರಿತು ಹಿಂದು ಮುಂದು ನೋಡದೆ ಅವಿವಾಹಿತ ಮಹಿಳೆಯ ವಾಸದ ಕೊಠಡಿ ನುಗ್ಗಿ ಜಪ್ತಿ ನಡೆಸಿಯೇ ಬಿಟ್ಟರು! ಸಿಕ್ಕಿದ್ದಾದರೂ ಏನು? ಏನೂ ಇಲ್ಲ. ಈ ರೀತಿಯ ಜಪ್ತಿಯಲ್ಲಿ ನ್ಯಾಯವಿದೆಯೆ? ಮಾನ ಮರ್ಯಾದೆಯನ್ನು ಕಾಪಾಡಿ ಕೊಳ್ಳಲು ಪ್ರತಿಯೊಬ್ಬರಿಗೂ ಆಸೆ. ಪ್ರಾಮುಖ್ಯವಾಗಿ ಸ್ತ್ರೀಯರಿಗೆ ಹೆಚ್ಚು. ಹೀಗಿರುವಾಗ ಯಾರೋ ಒಬ್ಬರು ಹೊಟ್ಟೆಕಿಚ್ಚಿನಿಂದಲೋ ದ್ವೇಷದಿಂದಲೋ ಬರೆದ ಕಳ್ಳ ಅರ್ಜಿಯನ್ನು ತೆಗೆದು ಕೊಂಡು ಹೀಗೆ ನರ್ತಿಸಬಹುದೇ? ಇನ್ನು ಮುಂದಕ್ಕಾದರೂ ಈ ರೀತಿಯ ಅನ್ಯಾಯವಾಗದಂತೆ ಸಂಬಂಧ ಪಟ್ಟ ಅಧಿಕಾರಿಗಳು ಜಾಗ್ರತೆ ವಹಿಸಬೇಕು. ಹಾಗೆ ಅವಶ್ಯವಾಗಿ ಜಪ್ತಿ ಮಾಡಬೇಕಾಗಿ ಬಂದರೆ ಜೊತೆಯಲ್ಲಿ ಪೋಲಿಸ್ ಹೆಂಗಸರನ್ನು ಕರೆದುಕೊಂಡು ಹೋಗಿ ಅವರಿಂದ ಜಪ್ತಿ ಮಾಡಿಸುವುದು ಹಿತವಲ್ಲವೇ?

—ಸತ್ಯಕುಮಾರ್

ಸಮಾಜ ಶಿಕ್ಷಣ ವಾರ್ಷಿಕೋತ್ಸವ

ಕೊಡಗ. ಸರಕಾರಿ ಕಾಲೇಜಿನ ಆಶ್ರಯದಲ್ಲಿ ಕೆಲಸ ನಡೆಸುತ್ತಿರುವ ಸಮಾಜ ಸೇವಾ ಶಿಬಿರದ ವಾರ್ಷಿಕ ಉತ್ಸವವು ತಾ|| ೧೫ರಲ್ಲಿ ಕೊಡಗಿನ ಗೃಹ ಮಂತ್ರಿ ಶ್ರೀ ಕೆ. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಕಾಲೇಜ್ ಆವರಣದಲ್ಲಿ ನಡೆಯಿತು.

ಸೇವಾಸಂಘದ ಪ್ರೆಸಿಡೆಂಟರಾದ ಪ್ರಿನ್ಸಿಪಲ್ ಶ್ರೀ ಕೆ. ಅಚ್ಯುತನ್ ಪಿಳ್ಳೆಯವರು ಮಂತ್ರಿಯವರನ್ನು ವಂದಿಸಿ ಸ್ವಾಗತಿಸಿದರು.

ಸೆಕ್ರೆಟರಿಯವರಾದ ಶ್ರೀ ಬಿ. ಜಿ. ಮುದ್ದಪ್ಪನವರು ಈ ಒಂದು ವರ್ಷದಲ್ಲಿ ಸಂಸ್ಥೆಯು ಮಾಡಿದ ಕೆಲಸದ ವರದಿಯನ್ನು ಮುಂದಿಟ್ಟು ಮಡಿಕೇರಿಯ ಹತ್ತಿರದ ಒಂದೆರಡು ಗ್ರಾಮಗಳಿಗೆ ತಾವು ಹೋಗಿ ಮಾಡಿದ ಕೆಲಸ, ಉತ್ತಮ ಜೀವನ ಮತ್ತು ಶುಚಿತ್ವದ ವಿಚಾರ ಕೊಟ್ಟ ಬೋಧನೆಗಳನ್ನು ಹೇಳಿದುದಲ್ಲದೆ ಕಾಲೇಜಿನ ಆವರಣದಲ್ಲಿ ತಾವು ಮಾಡಿದ ರಸ್ತೆ, ನಡೆಸುತ್ತಿರುವ ತರಕಾರಿ ತೋಟ, ನಾಟಕ ಮೊದಲಾದುವನ್ನು ಅಭಿನಯಿಸಿ ಸಂಗ್ರಹಿಸಿ ಬಡ ವಿದ್ಯಾರ್ಥಿಗಳಿಗೆ ರೂ. ೫೦ ರಂತೆ ಮಾಡಿದ ಧನಸಹಾಯ ನೀಡಲಾಗುವುದನ್ನು ಹೇಳಿದರು.

ಈ ಕೂಟದ ಆಶ್ರಯದಲ್ಲಿ ನಡೆಸಲ್ಪಡುತ್ತಿರುವ ವಯಸ್ಕರ ಶಿಕ್ಷಣ ಶಾಲೆಯ ವಿದ್ಯಾರ್ಥಿ ಅಧ್ಯಾಪಕ ಶ್ರೀ ಕೆ. ಎಸ್. ಗೋಪಾಲಕೃಷ್ಣರವರು ಆ ಬಗ್ಗೆ ವರದಿಯನ್ನು ಒಪ್ಪಿಸಿ ಸರಾಸರಿ ೨೦ ಪ್ರೌಢರು ವಿದ್ಯೆ ಕಲಿಯಲು ಬರುತ್ತಿರುವದಾಗಿಯೂ ಹರಿಜನಕೇರಿಯಲ್ಲಿ ತಾವು ಕೈಕೊಂಡ ಶುಚಿತ್ವ ಕೆಲಸದ ವಿಚಾರವಾಗಿಯೂ ಹೇಳಿದರು.

ಶಿಕ್ಷಣ ಶಾಲೆಯ ವಯಸ್ಕ ವಿದ್ಯಾರ್ಥಿ ಶ್ರೀ ಪೊನ್ನಪ್ಪನವರು ವಿದ್ಯೆ ಕಲಿಯಲು ಕಾಲೇಜು ಏರ್ಪಡಿಸಿದ ಈ ರಾತ್ರಿ ಶಾಲೆಗಾಗಿ ವಂದಿಸಿದರು.

ಪರೀಕ್ಷೆಯಲ್ಲಿ ತೇರ್ಗಡೆಯಾದವರಿಗೆ ಪ್ರಶಸ್ತಿ ಪತ್ರ ವಿತರಣೆಯನ್ನು ಮಂತ್ರಿಯವರು ಮಾಡಿದರು. ನಂತರ ಸಾಮಾಜಿಕ ಶಿಕ್ಷಣ ಶಾಖೆಯ ಉತ್ತರ ಕೊಡಗಿನ ಸಂಚಾಲಕರಾದ ಶ್ರೀ ಜಿ. ಬಿ. ಲಿಂಗಣ್ಣನವರು ವಯಸ್ಕರ ಶಿಕ್ಷಣದ ವಿಚಾರ ಮಾತಾಡಿದರು.

ಅಧ್ಯಕ್ಷರಾದ ಮಲ್ಲಪ್ಪನವರು ಮಾತಾಡುತ್ತಾ, ಈ ಕೂಟವು ಮಾಡಿದ ಉತ್ತಮ ಕೆಲಸವನ್ನು ಪ್ರಶಂಸಿಸಿದಲ್ಲದೆ ಪ್ರೌಢ ಮತದಾನ ಪದ್ಧತಿಯು ಜಾರಿಗೆ ಬಂದಿರುವ ಈ ಕಾಲದಲ್ಲಿ ಪ್ರತಿಯೊಬ್ಬ ಪ್ರಜೆಯೂ ವಿದ್ಯಾವಂತನಾಗಿರಬೇಕಾದುದು ಅಗತ್ಯವೆಂದೂ ಈ ದೃಷ್ಟಿಯಿಂದ ಸಾಮಾಜಿಕ ಶಿಕ್ಷಣದ ಪ್ರಗತಿಗಾಗಿ ಒಡನೆ ಸರಕಾರವು ಒಬ್ಬ ಅಧಿಕಾರಿಯನ್ನು ನೇಮಿಸಲಿರುವರೆಂದೂ, ಈಗ ಕೊಡಗಿನಲ್ಲಿ ತೆರೆಯಲ್ಪಟ್ಟಿರುವ ೫೦ ವಯಸ್ಕರ ಶಿಕ್ಷಣ ಶಾಲೆಗಳನ್ನು ಯೋಗ್ಯ ರೀತಿ ಕೆಲಸ ಮಾಡುವಂತೆಯೂ ಅವಶ್ಯವಿರುವೆಡೆ ಹೆಚ್ಚಿನ ಶಾಲೆ ತೆರೆಯುವಂತೆಯೂ ಏರ್ಪಡಿಸಲಾಗುವದೆಂದೂ ಈ ವಿಚಾರದಲ್ಲಿ ಸಾಮಾಜಿಕ ಕೆಲಸಗಾರರನ್ನು ತಯಾರುಗೊಳಿಸಲು ಜನತಾ ಕಾಲೇಜೊಂದನ್ನು ತೆರೆಯುವ ಆಲೋಚನೆ ಸರಕಾರಕ್ಕಿದೆಯೆಂದೂ, ದೇಶದ ಜನಪದ ಸಾಹಿತ್ಯವನ್ನು ಅಭಿವೃದ್ಧಿಗೊಳಿಸಿ, ನಾಟಕಶಾಲೆಗಳ ಪುನರುಜ್ಜೀವನಗೊಳಿಸಿ ಗ್ರಾಮಜೀವನದಲ್ಲಿ ಹೊಸ ಸ್ಫೂರ್ತಿ ಜೀವನಗಳು ಬರುವಂತೆ ಮಾಡಲಾಗುವದೆಂದೂ ಹೇಳಿದರು.

ನಂತರ ಹರಿಜನ ವಿದ್ಯಾರ್ಥಿಗಳಿಂದ ಕೋಲಾಟವೂ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದ ಚಲಚಿತ್ರ ಪ್ರದರ್ಶನವೂ ನಡೆಯಿತು.

ಸರಕಾರಿ ಏಜನ್ಸಿ ಮೂಲಕ ಖಾಸಗಿ ಟಿಂಬರ್ ಮಾರಾಟ

ಜನರು ತಮ್ಮ ಖಾಸಗಿ ಜಾಗದಿಂದ ಟಿಂಬರ್ ಮಾರಾಟ ಮಾಡುವದನ್ನು ಸರಕಾರವೇ ವಹಿಸಿಕೊಂಡು ಮರಗಳನ್ನು ಕಡಿಸಿ ಡ್ರೆಸ್ ಮಾಡಿ ಸರಕಾರಿ ಏಜನ್ಸಿ ಮೂಲಕ ಮಾರಾಟ ಮಾಡುವ ಏರ್ಪಾಡೊಂದು ನಡೆಯುತ್ತಿದೆ. ಕಳೆದ ಕೌನ್ಸಿಲು ಸಭೆಯಲ್ಲಿ ಶ್ರೀ. ಚೌರಿರ ಮಂದಣ್ಣನವರು ತಂದ ಒಂದು ಠರಾವಿನ ಪ್ರಕಾರ ಈ ಏರ್ಪಾಡಾಗಿದೆ. ಈ ಏರ್ಪಾಡಿನಂತೆ ಇದಕ್ಕೆ ಸಂಬಂಧಿಸಿ ಕೊಡಗು ಲೇಂಡ್ ರೆವಿನ್ಯೂ ರೆಗ್ಯುಲೇಶನಿನಲ್ಲಿ ತಕ್ಕ ಮಾರ್ಪಾಡು ಮಾಡುವ ಬಗ್ಗೆ ಕರಡು ನಿಬಂಧನೆಗಳನ್ನು ತಯಾರಿಸಿ ಜನರ ಅಭಿಪ್ರಾಯದ ಬಗ್ಗೆ ಸರಕಾರವು ಪ್ರಕಟಿಸಿದೆ. ಈ ಬಗ್ಗೆ ವಿರೋಧವಿರುವವರು ತಮ್ಮ ವಿರೋಧವನ್ನು ಒಂದು ತಿಂಗಳೊಳಗೆ ಸರಕಾರಕ್ಕೆ ಬರೆದು ತಿಳಿಸಬಹುದಾಗಿದೆ.

ಈಗ ತಯಾರಾಗಿರುವ ಕರಡು ನಿಯಮಗಳಂತೆ ತಮ್ಮ ಖಾಸಗಿ ಸ್ಥಳಗಳಿಂದ ಮರಮಾರಾಟ ಮಾಡುವವರು ಮೊದಲು ಕನ್‌ಸರ್ವೇಟರಿಗೆ ಅರ್ಜಿ ಬರೆದುಕೊಳ್ಳಬೇಕು. ಕಾಡು ಐದು ಎಕರೆಗಳಿಗೆ ಒಳಪಟ್ಟಿದ್ದರೆ ರೂ. ೧೦ ಹೆಚ್ಚಿದ್ದರೆ ರೂ. ೫೦ ದೇವಣಾತಿಯನ್ನು ಅರ್ಜಿಯ ಜೊತೆಯಲ್ಲಿ ಕಳುಹಿಸಬೇಕು. ಅರ್ಜಿಯನ್ನು ಅರ್ಜಿದಾರನು ಹಿಂತೆಗೆದುಕೊಂಡರೆ ಈ ಹಣವು ಸರಕಾರಕ್ಕೆ ಸೇರುವದು. ಅರ್ಜಿಯ ಜೊತೆಯಲ್ಲಿ ಕಾಡಿನ ವಿಸ್ತೀರ್ಣ ಸರ್ವೆ ನಂಬರು, ಸಂಬಂಧಿಸಿ ಕುಟುಂಬಸ್ಥರ ಒಪ್ಪಿಗೆ ಪತ್ರ ಮೊದಲಾದವಿರಬೇಕು. ಈ ಮಾಲೀಕನು ಜಾರಿಯಲ್ಲಿ ಬರುವ ಮೊದಲು ಮಾಡಿದ, ಕಾಡುಗಳಲ್ಲಿ ಸರಕಾರವು ಮಾರಾಟದ ಜವಾಬ್ದಾರಿಯನ್ನು ಒಪ್ಪಿಕೊಳ್ಳದು. ಅರ್ಜಿಗಳನ್ನು ತಿರಸ್ಕರಿಸುವ ಹಕ್ಕು ಕನ್‌ಸರ್ವೇಟರ ಕಡೆಗಿದೆ. ಏಜನ್ಸಿ ವಹಿಸಿಕೊಂಡ ನಂತರ ಜಾಗದ ಮಾಲೀಕರ ಬಗ್ಗೆ ತಕರಾರು ಬಂದರೆ ಅರ್ಜಿದಾರನೇ ಬಾಧ್ಯಸ್ಥನಾಗಿರತಕ್ಕದ್ದು. ಮರವನ್ನು ಸರಕಾರಿ ಏಜನ್ಸಿಯು ತನಗೆ ಯುಕ್ತ ಕಂಡ ರೀತಿ ವಿಕ್ರಯಿಸುವದು. ಕ್ರಯದ ಪಟ್ಟಿಗೆ ಕನ್‌ಸರ್ವೇಟರ ತೀರ್ಮಾನವೇ ಕಡೇದು. ಮರದ ವಹಿವಾಟು, ಮಾರಾಟಗಳನ್ನು ಎಷ್ಟು ತುರಿತದಿಂದ ಸಾಧ್ಯವೋ ಅಷ್ಟು ಶೀಘ್ರದಿಂದ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಕೈಕೊಳ್ಳುವದು. ಮರ ಕಡಿಯುವ, ಸಾಗಿಸುವ ಮತ್ತಿತರ ಖರ್ಚಿಲ್ಲದೆ ಮೇಲುಸ್ತುವಾರಿಗಾಗಿ ಶೇಕಡ ೪ ರಂತೆ ಸರಕಾರಿ ಏಜನ್ಸಿಯ ಖರ್ಚು ತೆಗೆದುಕೊಂಡು ಉಳಿದುದನ್ನು ಮಾಲೀಕನಿಗೆ ಕೊಡುವದು. ಈ ನಿಯಮಗಳಲ್ಲಿ ತೋರಿಸಿದ ವಿಚಾರಗಳಲ್ಲದೆ ಉಳಿದವುಗಳಲ್ಲಿ ಕನ್‌ಸರ್ವೇಟರಿಗೂ, ಮರಮಾರಾಟ ಮಾಡುವವರಿಗೂ ಬರುವ ತಕರಾರಿನಲ್ಲಿ ಸರಕಾರವು ಕೊಡುವ ತೀರ್ಮಾನವೇ ಕಡೇ ತೀರ್ಮಾನವಾಗುವದು.

ಅಂತರ್ರಾಷ್ಟ್ರೀಯ ರಂಗ.

ರಷ್ಯದ ಅಂತರ್ರಾಷ್ಟ್ರೀಯ ನೀತಿ

ಮಲೆಂಕೋವರ ಸ್ಪಷ್ಟೀಕರಣ.

ಮಾರ್ಷಲ್ ಸ್ಟಾಲಿನರ ನಿಧನದ ನಂತರ ರಷ್ಯಾದ ಮುಖ್ಯ ಮಂತ್ರಿಯಾಗಿ ನೇಮಿಸಲ್ಪಟ್ಟಿರುವ ಮೆಲೆಂಕೋವ್‌ರವರು ತಾರೀಕು ೯ ರಲ್ಲಿ ರಷ್ಯಾದ ರಾಜನೀತಿಯನ್ನು ವಿವರಿಸುತ್ತಾ ಹೀಗೆ ಹೇಳಿರುವರು: ನಮ್ಮ ವಿದೇಶ ನೀತಿಯು ಯಾವಾಗಲೂ ಶಾಂತಿ ಸಾಧಕವಾದುದು. ಪರಸ್ಪರ ನಂಬಿಕೆ, ವಿಶ್ವಾಸಗಳಿಂದ ಮುಂದೆ ಸಾಗುವದೇ ನಮ್ಮ ಗುರಿ. ಬಂಡವಳವಾದ ಮತ್ತು ಸಮತಾವಾದಗೊಳೊಳಗೆ ಸಹಕಾರ ಸೌಹಾರ್ದವನ್ನೇರ್ಪಡಿಸುವದೇ ನಮ್ಮ ಧ್ಯೇಯ" ಸ್ಟಾಲಿನರ ಶವವನ್ನು ಮಾಸ್ಕೋದ ಪ್ರದರ್ಶನಾಲಯದಲ್ಲಿ ಲೆನಿನರ ಪಕ್ಕದಲ್ಲಿ ವಸನ ಇಡಲಾಯಿತು. ಆ ಸಂದರ್ಭದಲ್ಲಿ ಮಾತಾಡುತ್ತಾ ಮೆಲೆಂಕೋವ್‌ರವರು "ಸ್ಟಾಲಿನರು ರಷ್ಯಾಕ್ಕೆ ಸ್ವಾತಂತ್ರ್ಯ ತಂದವರು. ಅವರು ದೂರದರ್ಶಿಗಳು ಬಡ ಜನರ ಬಿಡುಗಡೆಗಾಗಿ ಜೀವನವನ್ನು ಸವೆಸಿದವರು. ಮನುಷ್ಯನು ಮನುಷ್ಯನನ್ನು ಸುಲಿಗೆ ಮಾಡುವ ಪದ್ಧತಿಯನ್ನು ನಿಲ್ಲಿಸಿ ರಷ್ಯಾವನ್ನು ಆದರ್ಶರಾಷ್ಟ್ರವಾಗಿ ಮಾಡಿದವರವರು. ಸ್ಟಾಲಿನರ ಕೆಲಸ ಕಾರ್ಯಗಳು ಚಿರಂತನವಾಗಿ ಉಳಿಯುವಂಥಾವು. ಸ್ಟಾಲಿನರ ಹೆಸರು ಇಂದು ಮಾರ್ಕ್ಸ್, ಎಂಜಲ್ಸ್, ಲೆನಿನರ ಸಾಲಿನಲ್ಲಿ ನಿಂತಿದೆ. ನಮ್ಮ ಪಕ್ಷವು ಇವರು ಹೇಳಿದ, ಮಾಡಿ ತೋರಿಸಿದ ತತ್ವಗಳನ್ನು ಅನುಸರಿಸುವದು.

ತಮಗೆ ಶಾಂತಿ ಬೇಕೆಂದು ಹೊರಗೆ ಹೇಳಿಕೊಳ್ಳುತ್ತಾ ಒಳಗೆ ಯುದ್ಧ ಸಿದ್ಧತೆ ಮಾಡಿಕೊಂಡು ತನ್ನ ಪ್ರಜೆಗಳನ್ನು ಮೋಸಗೊಳಿಸುವ ಸರಕಾರಗಳಿಗೆ ಧಿಕ್ಕಾರವಿರಬೇಕು. ನಮ್ಮ ಗುರಿಯು ಜನತಾ ಸರಕಾರಗಳೊಡನೆ ಸೌಹಾರ್ದತೆಯಾಗಿದೆ. ಚೈನಾದ ಜನತೆಯೊಡನೆ ಸಹೋದರ ಭಾವವಾಗಿದೆ. ಜಗತ್ತಿನ ಶಾಂತಿಯೇ ನಮ್ಮ ವಿದೇಶ ನೀತಿಯ ಗುರಿ. ಯುದ್ಧ ಪ್ರಚೋದಕರನ್ನು ನಾವು ವಿರೋಧಿಸದಿರೆವು. ಜನಾಂಗ ಮತ್ತು ರಾಷ್ಟ್ರದ ಸೇವೆಯನ್ನು ಹೇಗೆ ಮಾಡಬೇಕೆಂಬುದನ್ನು ಸ್ಟಾಲಿನರು ನಮಗೆ ಕಲಿಸಿದ್ದಾರೆ. ನಮ್ಮ ರಾಷ್ಟ್ರಕ್ಕೆ ಯುದ್ಧ ಬೇಕಿಲ್ಲ. ಯಾರದೋ ಕೆಲವರ ಪ್ರತಿಷ್ಠೆಗಾಗಿ ಮಿಲಿಯಾಂತರ ಜನರ ಬಲಿದಾನಕ್ಕೆ ಆಸ್ಪದ ಕೊಡಲಾರೆವು.

ಸಮತಾವಾದವನ್ನು ಬೆಳಸಿ ಸರ್ವಗ್ರಾಹಿಯಾಗಿ ಮಾಡುವದರಲ್ಲೇ ಜಗತ್ತಿನ ಹಿತವಿದೆ. ಸ್ಟಾಲಿನರು ಇದಕ್ಕಾಗಿ ದುಡಿದರು. ಇದರ ಪ್ರಗತಿಯನ್ನು ಜಗತ್ತಿನ ಯಾವ ಶಕ್ತಿಯೂ ತಡೆಯಲಾರದು", ಎಂದು ಹೇಳಿದರು.

ಕೊರಿಯಾ ಯುದ್ಧ ಕೈದಿಗಳು.

ಯಾಂಜು ಎಂಬಲ್ಲಿ ಇರಿಸಿರುವ ಕೊರಿಯಾ ಯುದ್ಧ ಕೈದಿಗಳು ತಾ. ೮ ರಲ್ಲಿ ದಂಗೆ ಎದ್ದ ಕಾರಣ ಸಂಯುಕ್ತ ರಾಷ್ಟ್ರದ ಪತಿಯಿಂದ ಅವನ್ನು ಅಡಗಿಸಲು ಗುಂಡು ಹಾರಿಸಬೇಕಾಯಿತು. ಇದರಿಂದ ೨೩ ಉತ್ತರ ಕೊರಿಯನರು ಮೃತರಾಗಿ ೪೨ ಜನರಿಗೆ ಜಖಂ ಆಗಿದೆ. ಈ ದಂಗೆಯಲ್ಲಿ ಸುಮಾರು ೨೦೦೦ ಯುದ್ಧ ಕೈದಿಗಳು ಭಾಗವಹಿಸಿದ್ದರೆಂದೂ ಇವರು ಪಹರೆಯವರನ್ನು ಮುರಿದು ಬಿಡುಗಡೆ ಮಾಡಿಕೊಳ್ಳಲು ಯತ್ನಿಸಿದರೆಂದೂ ಹೇಳಲಾಗಿದೆ ಕಳೆದ ಮೂರು ದಿನಗಳಲ್ಲಿ ಇದು ಎರಡನೇ ಪ್ರಯತ್ನವಂತೆ. ಸಂಯುಕ್ತ ರಾಷ್ಟ್ರಸಂಘದ ಪಹರೆಯವರ ಮೇಲೆ ಕೈದಿಗಳು ಅನಿರೀಕ್ಷಿತವಾಗಿ ಕೈ ಮಾಡಿದರೆಂದೂ ಅವರನ್ನು ಹಿಡಿತಕ್ಕೆ ತರಲು ಸಂಯುಕ್ತ ರಾಷ್ಟ್ರ ಸಂಘದ ಸೈನ್ಯವನ್ನು ಉಪಯೋಗಿಸಬೇಕಾಯಿತೆಂದೂ ಹೇಳಲಾಗಿದೆ. ಸಂಯುಕ್ತ ರಾಷ್ಟ್ರ ಸಂಘದ ಈ ವರ್ತನೆಯನ್ನು ಕಮ್ಯೂನಿಸ್ಟ್ ಪ್ರತಿನಿಧಿಗಳು ಕಟುವಾಗಿ ಟೀಕಿಸಿದ್ದಾರೆ ಕೋಜೈ ಪೋಂಗನ್ ಮತ್ತು ಚೆಜೂ ಯುದ್ಧ ಕೈದಿ ಕೇಂದ್ರಗಳಲ್ಲೂ ನಿಷ್ಕಾರಣವಾಗಿ ಕಮ್ಯೂನಿಸ್ಟ್ ಕೈದಿಗಳ ಕೊಲೆ ನಡೆಯುತ್ತಿದೆಯೆಂದು ಅವರು ಹೇಳುತ್ತಿದ್ದಾರೆ.

ಯುದ್ಧ ಕ್ಷೇತ್ರ.

ಕೊರಿಯಾ ಮಧ್ಯ ಪ್ರಾಂತದಲ್ಲಿ ಉತ್ತರ ಕೊರಿಯಾದ ಸೇನೆಗಳು ತಾರೀಕು ೮ ರಲ್ಲಿ ಭೀಕರ ಧಾಳಿಯನ್ನು ಕೈಕೊಂಡವು. ಈ ಕಮ್ಯೂನಿಸ್ಟ್ ದಳಗಳು ಸಂಯುಕ್ತ ರಾಷ್ಟ್ರ ಸಂಘದ ಠಾಣೆಗಳ ಮೇಲೆ ೨೪ ಗಂಟೆಗಳಲ್ಲಿ ೧೮,೦೦೦ ಕ್ಕಿಂತಾ ಹೆಚ್ಚು ಗುಂಡು ಹಾರಿಸಿದವಂತೆ. ನಂತರ ಪುನಃ ಎರಡು ಗಂಟೆಗಳ ವರೆಗೆ ಇಕ್ಕಡೆಯವರಿಗೂ ಖಾಡಾಖಾಡಿ ಯುದ್ಧವಾಗಿ ಸಂಯುಕ್ತ ರಾಷ್ಟ್ರ ಸಂಘದ ಸೇನೆಗಳು ಕಮ್ಯೂನಿಸ್ಟ್ ಧಾಳಿಯನ್ನು ಹಿಂದೊತ್ತಲು ಶಕ್ತವಾದವೆಂದು ಸಂಯುಕ್ತ ರಾಷ್ಟ್ರ ಸಂಘದ ವರದಿಗಳು ಹೇಳುತ್ತಿವೆ. ಕೊರಿಯಾ ಗಡಿಯಲ್ಲಿ ಯುದ್ಧವು ಅವಿರತ ಸಾಗಿದೆ. ಇಕ್ಕಡೆಯವರಿಗೂ ಅಪಾರ ಜನ ನಷ್ಟವಾಗುತ್ತಿದೆ.

ಸಂಧಾನ ಮಾಡಬೇಕು.

ಈ ಪರಿಸ್ಥಿತಿಯನ್ನು ತಪ್ಪಿಸಲು ಮತ್ತೊಮ್ಮೆ ಸಂಧಾನ ಯತ್ನವನ್ನು ಭಾರತವು ಕೈಕೊಳ್ಳಬೇಕೆಂದು ಅನೇಕರು ಭಾರತದ ರಾಷ್ಟ್ರ ಸಂಘದ ಪ್ರತಿನಿಧಿಗಳನ್ನು ಕೇಳಿಕೊಳ್ಳುತ್ತಿದ್ದಾರೆ. ತಾರೀಕು ೭ ರಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಫ್ರೆಂಚ್ ಪ್ರತಿನಿಧಿ ಹೆನ್ರಿ ಹೋಪ್‌ನಾಟ್‌ರವರು ಅವರ ರಾಜಕೀಯ ಸಮಿತಿಯಲ್ಲಿ ಮಾತಾಡುತ್ತಾ ಹೀಗೆಂದರು. 'ನನ್ನ ಮಾತನ್ನು ಮುಗಿಸುವ ಮೊದಲು ಭಾರತದ ನನ್ನ ಗೆಳೆಯರು ಮತ್ತೊಮ್ಮೆ ಕೊರಿಯಾ ಸಂಧಾನದ ಯತ್ನವನ್ನು ಮಾಡಬೇಕೆಂದು ಕೇಳದಿರೆನು. ಕೆಲವು ದಿನಗಳ ಹಿಂದೆ ಜಗತ್ತಿನ ಶಾಂತಿಯ ದೃಷ್ಟಿಯಿಂದಲೂ, ಮಾನವಗಣದ ಹಿತದೃಷ್ಟಿಯಿಂದಲೂ ಅವರು ಕೈಕೊಂಡ ಪ್ರಯತ್ನವು ಸಾಕಷ್ಟು ಫಲಪ್ರದವಾಗದಿದ್ದರೂ ಅವರ ಪ್ರಯತ್ನವು ನಾಳೆ ಫಲಕೊಡಲಾರದೆಂದು ಹೇಳಲಾಗುವದಿಲ್ಲ. ಪಶ್ಚಿಮದಲ್ಲಿರುವ ನಮಗಿಂಥಾ ಹೆಚ್ಚಿಗೆ ರಷ್ಯಾವು ಹಿಂದೂದೇಶದ ಮಾತಿಗೆ ಬೆಲೆ ಕೊಡುತ್ತಿದೆ. ಆದ್ದರಿಂದ ಭಾರತ ಪ್ರತಿನಿಧಿಗಳು ಮತ್ತೊಂದು ಯತ್ನ ಮಾಡಬೇಕು.'

ಬರ್ಮಾ ಗಡಿಯಲ್ಲಿ.

ಬರ್ಮಾದಲ್ಲಿರುವ ಚೈನಾದ ರಾಷ್ಟ್ರೀಯ ಸೇನೆಗಳು ಚೀನಾದ ಕಡೆ ಧಾಳಿ ಪ್ರಾರಂಭಿಸಿರುವರೆಂದು ಕಳೆದ ವಾರ ವರದಿ ಮಾಡಲಾಗಿತ್ತು. ಬರ್ಮಾ ಗಡಿಯಲ್ಲಿರುವ ಕ್ಯೂಕೋಕ್ ಎಂಬ ಪ್ರದೇಶದ ಮೇಲೆ ಈ ರಾಷ್ಟ್ರೀಯ ಸೇನೆಗಳು ಧಾಳಿ ಪ್ರಾರಂಭಿಸಿರುವರು. ಬರ್ಮಾ ರಸ್ತೆಯ ಕಡೇ ಗಡಿಯಲ್ಲಿರುವ ಕ್ಯೂಕೊಕ್ ಮತ್ತು ಚೀನಾದ ಯುನಾನ್ ಪ್ರಾಂತಗಳನ್ನು ಒಂದುಗೂಡಿಸುವ ೪೦ ಅಡಿ ಅಗಲದ ಸೇತುವೆಯೊಂದು ಶ್ವೇಲಿ ನದಿಗೆ ಇದೆ. ಅದರಲ್ಲಿ ಬರ್ಮಾ ಮತ್ತು ಚೀನೀ ಕಮ್ಯೂನಿಸ್ಟ್ ಪಹರೆಯವರಿದ್ದಾರೆ. ಈಗ ಚೀನೀ ರಾಷ್ಟ್ರೀಯ ಸೇನೆಗಳು ಈ ಮಾರ್ಗವಾಗಿ ಮುಂದರಿಯುತ್ತಿರುವದರಿಂದ ಬರ್ಮಾ ಸೇನೆಗಳಿಗೂ ಇವಕ್ಕೂ ಘರ್ಷಣೆ ನಡೆಯುತ್ತಿರುವದಾಗಿದೆ. ರಾಷ್ಟ್ರೀಯ ಚೀನಾದ ಸೇನೆಗಳು ಈ ಸೇತುವೆಗೆ ತಲಪಿದರೆ ಮುಂದೆ ಚೀನೀ ಕಮ್ಯೂನಿಸ್ಟ್ ಪಡೆಗಳಿಗೂ ರಾಷ್ಟ್ರೀಯ ಚೀನಾ ಅಂದರೆ ಚಿಯಾಂಗ್ ಕೈಶೆಕರ ಪಡೆಗಳಿಗೂ ಯುದ್ಧ ಮರುಕ್ಷಣ ಪ್ರಾರಂಭವಾಗುವದು. ಕಮ್ಯೂನಿಸ್ಟ್ ಚೀನವು ಈ ಬರ್ಮಾ ಗಡಿಯಲ್ಲಿ ತಮ್ಮ ದೊಡ್ಡ ಸೇನೆಯನ್ನು ನಿಲ್ಲಿಸಿ ರಾಷ್ಟ್ರೀಯ ದಳಗಳ ಧಾಳಿಯ ನಿರೀಕ್ಷಣೆಯಲ್ಲಿದೆ.

ANNOUNCEMENT.

We have pleasure in informing the public that we have reopened our workshop and undertake minor repairs to vehicles. Servicing of Perkins Diesil Engines and weldings.

P. V. PAI & CO.
MERCARA

ಹುಚ್ಚರ ಹಟ್ಟಿ

ಜೋಕೆ!

ಮುಂದರಿದಿರುವರು ಕಾಲೇಜೊಳಗೆ
ಸೋದರ ಬಲು ಜೋಕೆ!
ಅಬಲೆಯರೆನ್ನುವ ಕಲ್ಪನೆ ಇದ್ದರೆ
ಸುಂದರ ನಿನಗೇಕೆ?

ಸೀರೆಯ ಸೆರಗನು ನೇವರಿಸಿ
ಹೊಂಚುತ ನೋಡುವರು
ಪುಸ್ತಕ ಕೇಳಲು ನೀಹೋಗೆ
ಏನೋ ನೆನೆಯುವರು

ನೆಟ್ಟಗೆ ಮುಖವನು ನೋಡುವರು
ಕುಲು ಕುಲು ನಗುವನು ಬೀರುವರು
ಸಿನೆಮಾ ಮೇಕಪ್ ಮಾಡಿಹರು
ಓದಲು ಇದೆ ಜೋಕೆ!

ಜಡಗಿನ ತುಲನೆ, ನಡಗೆರ ಚಲನೆ
ಬಡನಡುವಿನ ಬಳುಕಾಡುವ ರಚನೆ
ಸುಂದರ ಬಲು ಜೋಕೆ!

ಬರೆದವ— ರಾಜ್.

ಮಾರಾಟಕ್ಕಿದೆ.

ಶನಿವಾರಸಂತೆಯ ಎರಡು ಮೈಲು ದೂರದಲ್ಲಿ ಮಡಿಕೇರಿಗೆ ಬರುವ ರಸ್ತೆ ಪಕ್ಕದಲ್ಲಿರುವ ಎಂಟೂವರೆ ಎಕ್ರೆ ತರಿ ಭೂಮಿ, ಮೂರು ಎಕರೆ ಕಿತ್ತಳೆ ತೋಟ, (ಅಂದಾಜು ಸಾವಿರ ರೂಪಾಯಿ ಗುತ್ತಿಗೆಗೆ ಹೋಗುತ್ತಿ) ವಾಸದ ಮನೆ ಇವುಗಳು ಮಾರಾಟಕ್ಕಿವೆ. ಖಾಯಿಸ್‌ದಾರರು ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಶಕ್ತಿಗೆ ಬರೆದುಕೊಳ್ಳಬಹುದು.

ಎಂ. ಆರ್. ಬುಡನ್‌ಖಾನ್,
ಶನಿವಾರಸಂತೆ.

3—1

ಯುಗ ಪರಿವರ್ತಕ ಸ್ಟಾಲಿನರ ಮರಣ

"ಅಪ್ರತಿಮ ಯೋಧ, ನಿಶ್ಚಲ ಶಾಂತಿ ಸಾಧಕ"

ರಷ್ಯಾದ ನಿರ್ಮಾತೃವೂ, ಜಗತ್ತಿನ ಬಡ ಜನರ ಆಶಾ ತಾರಕೆಯೂ, ಪ್ರಪಂಚದ ಅಪ್ರತಿಮ ರಾಜಕಾರಿಣಿಯೂ ಆಗಿದ್ದ ಮಾರ್ಷಲ್ ಸ್ಟಾಲಿನರವರು ತಾ. ೫ನೇ ಗುರುವಾರ ರಾತ್ರಿ ೯.೫೦ ಗಂಟೆಗೆ ನಿಧನರಾದರು. ಸ್ಟಾಲಿನರು ಮಿದುಳಿನ ರಕ್ತಸ್ರಾವದಿಂದ ನಾಲ್ಕು ದಿನಗಳ ವರೆಗೆ ನರಳಿದರು. ರಷ್ಯಾದ ಒಂಭತ್ತು ಮಂದಿ ಚಾಣಾಕ್ಷರಾದ ಡಾಕ್ಟರರು ಅವರ ಬಳಿಯಲ್ಲಿದ್ದು ದಿವಾ ರಾತ್ರಿ ಎನ್ನದೆ ವಿವಿಧ ಔಷಧೋಪಚಾರ ಮಾಡಿದರೂ ಪ್ರಯೋಜನವಾಗಲಿಲ್ಲ. ಆಧುನಿಕ ರೀತಿಯ ಮಾತ್ರವಲ್ಲ, ಹಳೇ ಕ್ರಮವಾದ ಜಿಗಣೆಗಳಿಂದ ರಕ್ತ ಹೀರಿಸಿಯೂ ಅವರ ಒತ್ತಡವನ್ನು ಕಡಿಮೆ ಮಾಡಲು ಯತ್ನಿಸಲಾಗಿತ್ತು. ಅದಕೆ ಫಲ ದೊರೆಯಲಿಲ್ಲ. ಸಾಯುವಾಗ ಸ್ಟಾಲಿನರಿಗೆ ೭೩ ವಯಸ್ಸಾಗಿತ್ತು.

ಅಂತಿಮ ಶ್ರದ್ಧಾಂಜಲಿ.

ಅಂತ್ಯ ಸಂಸ್ಕಾರ ಸೋಮವಾರದಿನ ನಡೆಯಿತು. ಸಂತಾಪಕ್ಕಾಗಿ ನಾಲ್ಕು ದಿನಗಳ ಸೂತಕವನ್ನು ಆಚರಿಸಲಾಯಿತು. ಈ ಸಮಯದಲ್ಲಿ ಮನರಂಜನೆಯ ಎಲ್ಲ ಸ್ಥಳಗಳೂ ಮುಚ್ಚಿರಬೇಕೆಂದು ಮಾಸ್ಕೊ ನಗರದ ಸೋವಿಯಟ್ ಆಜ್ಞಾಪಿಸಿತ್ತು.

ಸ್ಟಾಲಿನರ ಶವಕ್ಕೆ ಎಲ್ಲಾ ಸರಕಾರಿ ಮತ್ತು ಕಮ್ಯೂನಿಸ್ಟ ಪಕ್ಷದ ನಾಯಕರು ಮಂತ್ರಿಗಳು, ಸೇನಾಧಿಕಾರಿಗಳು ತಮ್ಮ ಅಂತಿಮ ಗೌರವವನ್ನು ಸಲ್ಲಿಸಿದರು. ಸ್ಟಾಲಿನರ ಶವವನ್ನು ಲೆನಿನರ ಶವದ ಬಳಿ ಇಡಲಾಗುವುದು ಎಂದು ಮಾಸ್ಕೊ ರೇಡಿಯೋ ಸಾರಿದೆ.

ಸ್ಟಾಲಿನರ ಶವ ಪರೀಕ್ಷೆಯನ್ನು ಮಾಡಿದಾಗ ಅವರ ಚಿಕಿತ್ಸೆ ಮಾಡುತ್ತಿದ್ದ ಡಾಕ್ಟರರು ಅವರ ರೋಗವನ್ನು ಸರಿಯಾಗಿ ತಿಳಿದರೆಂದೂ ಯಾವ ಪ್ರಯತ್ನವೂ ಅವರ ಬದುಕಿಸಲು ಸಮರ್ಥವಾಗುತಿತ್ತಿಲ್ಲವೆಂದು ತಿಳಿದು ಬಂದಿದೆಯೆಂದೂ ಗೊತ್ತಾಗಿದೆ.

ಹತ್ತು ಮೈಲುದ್ದದ ಜನರ ಸಾಲು.

ಸ್ಟಾಲಿನರಿಗೆ ಅಂತ್ಯ ಶ್ರದ್ಧಾಂಜಲಿಯ ನ್ನರ್ಪಿಸಲು ಮಾಸ್ಕೋದ ಬೀದಿಗಳಲ್ಲಿ ೧೦ ಮೈಲುದ್ದ ಜನರು ಸಾಲುಕಟ್ಟಿ ನಿಂತಿದ್ದರು ಅವರು ಮೌನವಾಗಿ ಟ್ರೇಡ್ ಯೂನಿಯನ್ ಭವನದ ಕಡೆ ಸಾಗುತ್ತಿದ್ದರು. ಸ್ಟಾಲಿನರ ಶವ ಇಟ್ಟಿದ್ದ ಸಭಾ ಭವನದಲ್ಲಿ ಇಬ್ಬಿಬ್ಬರಾಗಿ ಬಂದು ಅಂತಿಮ ದರ್ಶನವನ್ನು ಮಾಡಿ ಹೋಗುತ್ತಿದ್ದರು. ಝಾರರ ಕಾಲದಿಂದಲೂ ರಷ್ಯನನ್ನು ಆಳುವವರ ಶವವನ್ನು ಕೊನೆಯ ಗಳಿಗೆಯ ತನಕ ತೆರೆದ ಪೆಟ್ಟಿಗೆಯಲ್ಲಿ ಇಡುವುದು ವಾಡಿಕೆಯಾಗಿದೆ. ಮೋಸ ನಡೆದಿರಬಹುದೆಂಬ ಸಂಶಯವನ್ನು ಹೋಗಲಾಡಿಸಲು ಈ ಕ್ರಮವನ್ನನುಸರಿಸಲಾಗುತ್ತಿದೆ.

ಸ್ಟಾಲಿನರ ಅಂತ್ಯಕಾಲದಲ್ಲಿ ಅವರ ಪತ್ನಿಯ ಪತ್ನಿ, ಮಗ ಮತ್ತು ಮಗಳು ಅವರ ಬಳಿಯಲ್ಲಿದ್ದರೆಂದು ತಿಳಿದು ಬರುತ್ತದೆ. ವಿದೇಶದ ಕಮ್ಯೂನಿಸ್ಟ ನಾಯಕರು ರಷ್ಯಕ್ಕೆ ಧಾವಿಸುತ್ತಿದ್ದಾರೆ.

ಸ್ಟಾಲಿನರ ಜೀವನ ಚರಿತೆ.

ಸ್ಟಾಲಿನರ ಪೂರ್ಣ ಹೆಸರು ಜೋಸೆಫ್ ವಿಸ್ಸಾರಿನೊವಿಚ್ ಜುಗುಶ್ವಿಲಿ ಸ್ಟಾಲಿನ್. ರಷ್ಯದ ಟಿಫ್ಲಿಸ್ ಬಳಿ, ಗೋರಿ ಎಂಬಲ್ಲಿ ಸ್ಟಾಲಿನರು ೧೮೭೯ರಲ್ಲಿ ಜನಿಸಿದರು. ತಂದೆ (ಜುಗುಶ್ವಿಲಿ) ಚರ್ಮಕಾರ; ತಾಯಿ (ಇಕಾಟೆರಿನಾ ಜೋರ್ಜಿವನಾ) ಕೃಷಿಕಳು.

ಸ್ಟಾಲಿನರು ಚಿಕ್ಕ ಪ್ರಾಯದಿಂದಲೂ ಕ್ರಾಂತಿಕಾರ ಮನೋವೃತ್ತಿಯವರು. ಅವರು ಟಿಫ್ಲಿಸದಲ್ಲಿ ಶಾಲೆಯಲ್ಲಿರುವಾಗ "ರಾಜಕೀಯ ದೃಷ್ಟಿಯಿಂದ ಅನಪೇಕ್ಷಿತ"ರೆಂದು ಹೊರದಳ್ಳಲ್ಪಟ್ಟರು. ಧರ್ಮಪರಾಯಣೆಯಾದ ತಾಯಿಯು ತನ್ನ ಮಗನು ಓರ್ವ ಧರ್ಮಗುರುವಾಗಬೇಕೆಂದು ಇಚ್ಛಿಸಿದ್ದರೂ ಸ್ಟಾಲಿನರು ಚಿಕ್ಕ ಪ್ರಾಯದಿಂದಲೇ ದೇಶದ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತ, ಹದಿನೈದನೇ ವರ್ಷ ಪ್ರಾಯದಲ್ಲೇ ಕ್ರಾಂತಿಕಾರಕ ಆಂದೋಲನದಲ್ಲಿ ಸೇರಿದರು. ಝಾರರ ವಿರುದ್ಧ ಹೋರಾಡುತ್ತ ಟ್ರಾನ್ಸ್ ಕಾಕೇಶಿಯದಲ್ಲಿ ಗುಪ್ತವಾಗಿದ್ದು ಚಟುವಟಿಕೆಗಳನ್ನು ನಡೆಸುತ್ತಿದ್ದ ಮಾರ್ಕ್ಸ್‌ವಾದಿಗಳನ್ನು ಸೇರಿದರು. ೧೮೯೮ ಮತ್ತು ೧೮೯೯ರಲ್ಲಿ ತಾವಿದ್ದ ಸೆಮಿನರಿಯಲ್ಲಿ ಮಾರ್ಕ್ಸ್‌ವಾದದ ಪ್ರಚಾರ ಮಾಡುತಿದ್ದರು. ಅವರ ಮೇಲೆ ಚರ್ಚೆ ನಡೆಸುತ್ತಿದ್ದರು. ೧೮೯೯ರಲ್ಲಿ (ಮೇ ತಾ. ೨೯) ಅವರನ್ನು ಅಲ್ಲಿಂದ ಹೊರಹಾಕಿದರು.

ಸ್ಟಾಲಿನರು ತಮ್ಮ ಚಟುವಟಿಕೆಗಳನ್ನು ಮುಂದೊತ್ತುತ್ತಿರುವುದನ್ನು ಕಂಡು, ಝಾರರ ಸರಕಾರವು, ಅವರನ್ನು ಬೇಟೆಯಾಡಿ ಹಿಡಿದು ಬಂಧಿಸಿ, ಸಂತರ ಗಡೀಪಾರು ಮಾಡಿದರು. ಹಲವು ವರ್ಷಗಳ ವರೆಗೆ ಪೋಲೀಸರ ಕಣ್ಣು ತಪ್ಪಿಸಿ ತಮ್ಮ ಕಾರ್ಯವನ್ನು ಮುಂದೊತ್ತುತಿದ್ದರು. ೧೯೦೩ರಿಂದ ಲೆನಿನರ ಪರಿಚಯವಾಯಿತು. ಅವರ ಸಖ್ಯ ಬೆಳೆದು, ಚಟುವಟಿಕೆಗಳೂ ಹೆಚ್ಚಿದವು.

ಪ್ರಾಗ್‌ದಲ್ಲಿ ೧೯೧೨ರಲ್ಲಿ ಸೇರಿದ ಪರಿಷತ್ತಿನಲ್ಲಿ, ರಷ್ಯದಲ್ಲಿ ಕೆಲಸ ಮಾಡುತ್ತಿದ್ದ ಕಮ್ಯೂನಿಸ್ಟ ಪಕ್ಷದ ಮಂಡಲದಲ್ಲಿ ಸ್ಟಾಲಿನರನ್ನು ಮೊಕೆಜೆಯ ಪ್ರಿಸನ್ನು ಸೇರಿಸಿದರು. ಆ ಕಾಲದಲ್ಲಿ ಸೈಬೀರಿಯಾದಲ್ಲಿದ್ದ ಸ್ಟಾಲಿನರು ಪೆಟ್ರೋಗ್ರಾಡಕ್ಕೆ ಧಾವಿಸಿ ಬಂದರು. ೧೯೧೨ನೇ ಏಪ್ರಿಲ್ ತಾ. ೨೨ರಂದು "ಪ್ರಾವ್ಡಾ" ("ಸತ್ಯ") ಪತ್ರಿಕೆಯ ಪ್ರಥಮ ಸಂಚಿಕೆಯನ್ನು ಹೊರಡಿಸಿದರು. ಆ ದಿನವೇ ಅವರ ವಸ್ತಗಿರಿಯಾಗಿ ಸೈಬೀರಿಯಕ್ಕೆ ಕಳಿಸಲ್ಪಟ್ಟರು. ಸ್ಟಾಲಿನರು ಅಲ್ಲಿಂದ ತಪ್ಪಿಸಿಕೊಂಡು, ಒಂದು ವರ್ಷದ ನಂತರ ಪುನಃ ದಸ್ತಗಿರಿ ಮಾಡಲ್ಪಟ್ಟರು; ನಾಲ್ಕು ವರ್ಷ ಕಾಲ ಕಾರಾಗೃಹದಲ್ಲಿದ್ದರು. ೧೯೧೭ರ ಲ್ಲಿ ರಷ್ಯವು ಪ್ರಥಮ ಜಾಗತಿಕ ಯುದ್ಧದಲ್ಲಿ ಸೋತು, ಕ್ರಾಂತಿಯುಂಟಾಯಿತು; ಆಗ ಸ್ಟಾಲಿನರ ಬಿಡುಗಡೆಯೂ ಆಯಿತು.

ಪೀಟರ್ಸ್‌ಬರ್ಗ್‌ದಲ್ಲಿ ಸ್ಟಾಲಿನರೂ ಲೆನಿನರೂ ಜೊತೆಗೂಡಿದರು. ಅಂದಿನಿಂದ ಸ್ಟಾಲಿನರು ಲೆನಿನರ ಬಲಗೈಯಂತಿದ್ದು ಆಧುನಿಕ ರಷ್ಯಾದ ನಿರ್ಮಾಣ ಕಾರ್ಯದಲ್ಲಿ ಮಹತ್ವದ ಭಾಗವಹಿಸಿದ್ದರು.

ರಷ್ಯದ ನೇತೃಗಳಾಗಿದ್ದ ಲೆನಿನರು ೧೯೨೪ರಲ್ಲಿ ಮರಣ ಹೊಂದಲು, ಸ್ಟಾಲಿನರು ಸರ್ವಾಧಿಕಾರಿಗಳಾಗಿ ಅಧಿಕಾರಾರೂಢರಾದರು. ಇವರು ಪೂರ್ಣ ಅಧಿಕಾರಕ್ಕೆ ಬಂದ ಕೆಲ ಕಾಲದಲ್ಲೇ ರಷ್ಯವು ಪಂಚವಾರ್ಷಿಕ ಯೋಜನೆಯನ್ನು ಕೈಕೊಂಡು ದೇಶದಲ್ಲಿ ಕೃಷಿ ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸಿತು.

ಸ್ಟಾಲಿನರಿಗೆ ಮೂವರು ಹೆಂಡಿರು. ಮೊದಲನೆಯವಳು ಕ್ಷಯರೋಗದಿಂದ ಮರಣಪಟ್ಟಿದ್ದಳು. ಸ್ಟಾಲಿನರ ಮಗ ಜೆಕೋಬನು ದ್ವಿತೀಯ ಜಾಗತಿಕ ಯುದ್ಧದಲ್ಲಿ ಸೇನಾನಿಯಾಗಿ ಹೋದವನು ಇನ್ನೂ ಹಿಂತಿರುಗಿ ಬಂದಿಲ್ಲ; ಅವನ ವಾರ್ತೆಯೂ ಇಲ್ಲ.

ರಷ್ಯದಲ್ಲಿನ ಪ್ರಗತಿಯು ಲೋಕದ ಲಕ್ಷ್ಯವನ್ನು ಸೆಳೆಯುತ್ತಿತ್ತು; ದ್ವಿತೀಯ ಜಾಗತಿಕ ಯುದ್ಧವು ಆರಂಭವಾದಾಗ, ರಷ್ಯವು ಯೂರೋಪಿನಲ್ಲಿ ಹಿಟ್ಲರನಿಗೆ ಮರಾಗಿ ಘೋರ ರಣದಲ್ಲಿ ತೊಡಗಿ, ಮಿಲಿಯಗಟ್ಲೆ ಜನರ ಬಲಿ ತೆತ್ತು—ಯುದ್ಧವನ್ನು ಗೆಲ್ಲುವುದರಲ್ಲಿ ಮಹತ್ವದ ಪಾತ್ರ ವಹಿಸಿತು. ಯುದ್ಧವು ಆರು ವರ್ಷಗಳಲ್ಲಿ ಜರ್ಮನಿಯ ಸೋಲಿನಲ್ಲಿ ಪರ್ಯವಸಾಯಿಯಾಗಲು ಬಹು ಮಟ್ಟಿಗೆ ರಷ್ಯವು ತನ್ನ ರಾಕ್ಷಸಾಕಾರದ ಶಕ್ತಿಯನ್ನುಪಯೋಗಿಸಿ, ಜರ್ಮನಿಯ ಬಲ ಕುಂದಿಸಿದುದೇ ಕಾರಣವೆಂದು ಎಲ್ಲರೂ ಒಪ್ಪುವರು.

ಜನತಾ ನಾಯಕರಾಗಿಯೂ, ಯುದ್ಧ ಪ್ರಭುಗಳಾಗಿಯೂ ಸ್ಟಾಲಿನರು ಸಲಿಸಿದ ಸೇವೆಯು ಅಪಾರವಾದುದು.

ರಾಜಕಾರಣದಲ್ಲಿ ಅವರಿಗೆ ಮೊಲೊಟೊವ್, ಮೆಲಂಕೊವ್ ಮೊದಲಾದವರು ನೆರವಾಗಿದ್ದರೂ ಸ್ಟಾಲಿನರು ಸ್ವತಃ ಅಪ್ರತಿಮ ರಾಜಕಾರಣಿಯಾಗಿದ್ದವರು. ತಮ್ಮ ದೇಶದಲ್ಲಿ ಐಕ್ಯ—ಶಾಂತಿಗಳನ್ನು ಸ್ಥಾಪಿಸುವಲ್ಲಿ ಇವರ ವ್ಯಕ್ತಿತ್ವವು ಅಸಾಧಾರಣ ಪಾತ್ರವಹಿಸಿದೆ. ಇವರು ಬಹು ಕುಶಾಗ್ರಮತಿಗಳಾಗಿದ್ದರು.

ದ್ವಿತೀಯ ಮಹಾಯುದ್ಧಾನಂತರ ಸ್ಟಾಲಿನರ ಪರ್ಣವನ್ನು ಲಕ್ಷಿಸಲು ಪಾಶ್ಚಿಮಾತ್ಯ ಶಕ್ತಿಗಳು ಸ್ಟಾಲಿನರ ಬಲವನ್ನು ತಿಳಿದಿದ್ದವು. ಯುದ್ಧಾನಂತರ ಸ್ಥಿತಿಯು ರೂಪಾಂತರ ಹೊಂದುತ್ತ, ರಷ್ಯದೊಡನೆ ಪಾಶ್ಚಿಮಾತ್ಯ ರಾಷ್ಟ್ರಗಳ ಸಂಬಂಧವು ಕೆಡುತ್ತಾ ಹೋಯಿತು. ಆದರೂ ಸ್ಟಾಲಿನರು ಇರುವವರು ಕಾಲ ಅವರು ಶಾಂತಿಯ ಯತ್ನವನ್ನು ಮುಂದೊತ್ತುತ

"ಬಾಸೆಲ್ ಮಿಶನ್" ಹಂಚುಗಳು

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:—

ಎಲ್ಲಾ ತಾಜಾ "ಬಾಸೆಲ್ ಮಿಶನ್" ಹಂಚುಗಳ ಮೇಲೆ ಇಂಗ್ಲಿಷ್ ಭಾಷೆಯಲ್ಲಿ

"ಬಾಸೆಲ್ ಮಿಶನ್ ಪೇಟೆಂಟ್ 1865"



ಎಂಬುದಾಗಿ ಪೂರ್ಣ ಶಬ್ದಗಳ ಮುದ್ರೆ ಇದೆ.

ಈ ರೀತಿ ಪೂರ್ಣ ಶಬ್ದಗಳಿಲ್ಲದ ಯಾವುದೇ ರಂಚು "ಬಾಸೆಲ್ ಮಿಶನ್" ಹಂಚು ಅಲ್ಲ ನಕಲಿ ಮಾಲುಗಳಿಗೆ ಮೋಸ ಹೋಗಬೇಡಿರಿ

ನಮ್ಮಿಂದ ಹಂಚು ಕೊಂಡು ಕೊಂಡಿರೆಂದರೆ ಇಂತಹ ತಪ್ಪು ಸಂಭವಿಸಲು ಅವಕಾಶವೇ ಇರಲಾರದು.

—: ಅಧಿಕೃತ ಏಜಂಟರು :—

ಪಿ. ವಿ. ಪೈ ಅಂಡ್ ಕೋ.,

ಕೊಡಗು ಮತ್ತು ಮೈಸೂರು ಸಂಸ್ಥಾನಗಳಿಗೆ

ಪ್ರಧಾನ ಕಚೇರಿ: ಮಂಗಳೂರು, ಶಾಖೆಗಳು: ಮಡಿಕೇರಿ & ವೀರಾಜಪೇಟೆ

ಕೆಂದು ಪಾಶ್ಚಿಮಾತ್ಯ ರಾಷ್ಟ್ರಗಳು ಅರಿತಿದ್ದರು.

ಮಾಲೆನ್‌ಕೋವ್ ರಷ್ಯದ ಹೊಸ ಪ್ರಧಾನಿ.

ಸ್ಟಾಲಿನರ ನಿಧನದ ೨೪ ಗಂಟೆಗಳೊಳಗೆ ಎಲ್ಲ ಹೊಸ ನೇಮಕಗಳನ್ನು ಮಾಸ್ಕೋ ರೇಡಿಯೋ ಘೋಷಿಸಿತು. ೫೧ ವರ್ಷ ಪ್ರಾಯದ ಜಾರ್ಜ್ ಮಲೆನ್‌ಕೋವ್‌ರವರು ರಷ್ಯದ ನೂತನ ಪ್ರಧಾನಿಯಾಗಿ ನೇಮಿಸಲ್ಪಟ್ಟಿದ್ದಾರೆ.

ನಿಕೊಲ್ಯಾ ಶ್ವೆರ್ನಿಕರ ಸ್ಥಾನದಲ್ಲಿ ಮಾರ್ಶಲ್ ಕ್ಲಿಮೆಂಟ ವೊರೊಶಿಲೊವ್ ಇವರು ರಷ್ಯದ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿರು. ಶ್ವೆರ್ನಿಕರನ್ನು ಸೋವಿಯಟ್ ಟ್ರೇಡ್ ಯೂನಿಯನ್‌ನ ಅಧ್ಯಕ್ಷರ ಸ್ಥಾನಕ್ಕೆ ಶಿಫಾರಸು ಮಾಡಲಾಗಿದೆ. ಆ ಸ್ಥಾನದಲ್ಲಿದ್ದ ವಾಸ್ಸಿಲಿ ಕುಝ್ನೆಟ್‌ಝೋವ್‌ರನ್ನು ನಿವೃತ್ತಗೊಳಿಸಲಾಗುವುದು.

ಆಂಡ್ರೇ ವಿಶಿನ್‌ಸ್ಕಿಯವರ ಸ್ಥಾನದಲ್ಲಿ ವ್ಯಾಚೆಸ್ಲಾವ್ ಮೊಲೊಟೊವರನ್ನು ವಿದೇಶಮಂತ್ರಿಯಾಗಿ ನೇಮಕಮಾಡಿರುವರು. ಲಾವ್ರೆಂಟ್ರಿ ಬೆರಿಯಾ ತಮ್ಮ ಮುಂಚಿನ ಸ್ಥಾನವಾದ ಪೋಲೀಸಖಾತೆಯ ಪ್ರಧಾನತ್ವಕ್ಕೆ ನೇಮಕ ಪಟ್ಟಿರುವರು.

ಬೆರಿಯಾ, ಮಲೆನ್‌ಕೋವ್, ನಿಕೊಲ್ಯಾ, ಬಲ್ಗನಿನ್ (ಯುದ್ಧ ಮಂತ್ರಿ) ಮತ್ತು ಸ್ಟಾಲಿನರ ಭಾವನೆಂಟ ಲಾಝರ್ ಕಾಗಾನೊವಿಚ್ ಇವರು ಉಪ ಪ್ರಧಾನರಾಗಿರುವರು.

ಸ್ಟಾಲಿನರ ಕಾಲದಲ್ಲಿ ಪ್ರೆಸಿಡಿಯಂನಲ್ಲಿ ೨೫ ಮಂದಿ ಇದ್ದರು. ಈಗ ಕೇವಲ ೧೦ ಮಂದಿ ಇರುವರು. ಈ ತನಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಶೇಷ ಪರಿಚಿತರಲ್ಲದ ಎನ್. ಪೆಗೋವ್‌ರನ್ನು ಸುಪ್ರೀಂ ಸೋವಿಯಟಿನ ಪ್ರಿಸೀಡಿಯಮ್ಮಿನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಆಂಡ್ರೆ ವಿಶಿನ್‌ಸ್ಕಿಯವರು ಯುಕ್ತ ರಾಷ್ಟ್ರ ಸಂಘದಲ್ಲಿ ರಷ್ಯದ ಸ್ಥಾಯಿ ಪ್ರತಿನಿಧಿಯಾಗಿ ಉಳಿಯುವರು. ಭದ್ರತೆ ಹಾಗೂ ಒಳಾಡಳಿತದ ಖಾತೆಯನ್ನು ಬೆರಿಯಾ ಕೈಕೆಳಗೆ ಒಂದುಗೂಡಿಸಲಾಗಿದೆ.

ಜಾರ್ಜ್ ಮೆಲಂಕೊವ್.

ಮೆಲಂಕೊವ್ ೫೧ ವರ್ಷ ಪ್ರಾಯದವರು; ರಷ್ಯದ ಉಪ ಪ್ರಧಾನರಾಗಿದ್ದು ಈಗ ಪ್ರಧಾನರಾಗಿರುವರು. ೧೯೪೧ರ ತನಕ ಇವರು ಜಗತ್ತಿನಲ್ಲಿ ಹೆಚ್ಚು ಮಂದಿಗೆ ಪರಿಚಿತರಾಗಿರಲಿಲ್ಲ. ೧೯೪೧ರ ೧೯೪೧ ರಲ್ಲಿ, ಅವರು, ಒಬ್ಬ ಟೀಕಾಕಾರರಾಗಿಯೂ ಭಾಷಣಕಾರರಾಗಿಯೂ ಆಕಸ್ಮಿಕವಾಗೆಂಬಂತೆ ಹೊರಬಂದರು. ಮೂವತ್ತೊಂಬತ್ತು ವಯಸ್ಸಿನ ಅವರನ್ನು ಆಗ ಸುಪ್ರೀಮ್ ಸೋವಿಯಟ್ಟಿಗೆ ನೇಮಕಮಾಡಲಾಯಿತು. ಇವರೊಬ್ಬ ಹೊಸ ಶಕ್ತಿಯೆಂದು ಗುರುತಿಸಲ್ಪಟ್ಟರು. ದ್ವಿತೀಯ ಮಹಾಯುದ್ಧ ಕಾಲದಲ್ಲಿ ಅವರು, ಸ್ಟಾಲಿನರ ಹಿಂದುಗಡೆಯೇ ಇದ್ದು, ರಷ್ಯದ ಟ್ಯಾಂಕ್ ಮತ್ತು ವಿಮಾನ ದಳ ತಯಾರಿಯಲ್ಲಿ ಪ್ರಾಮುಖ್ಯ ಪಾತ್ರವಹಿಸಿದರು. ರಷ್ಯದ ಕ್ರಾಂತಿ ಕಾಲದಲ್ಲಿ ಇವರು ಹದಿನಾರು ವರ್ಷದ ಯುವಕನಾಗಿದ್ದರೂ, ಕ್ರಾಂತಿಕಾರರೊಡನಿದ್ದು ಕಾದಾಡಿದ್ದರು. ೧೯೨೦ ರಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಸೇರಿ, ೧೯೩೯ ರಲ್ಲಿ ಆ ಪಕ್ಷದ ಕೇಂದ್ರದ ಸದಸ್ಯರಾದರು. ೧೯೪೬ ರಲ್ಲಿ ರಷ್ಯದ ಪೊಲಿಟ್‌ಬ್ಯುರೊ (ರಾಜಕೀಯ ಶಾಖೆ) ಸದಸ್ಯರಾದರು. ತರುಣ ಕಮ್ಯೂನಿಸ್ಟರಲ್ಲಿ ಇವರು ಅಪ್ರತಿಮರೆನಿಸಿದ್ದರು. ೧೯೫೨ ರಲ್ಲಿ (೫೦ ನೇ ಜನ್ಮದಿನೋತ್ಸವದಲ್ಲಿ) ಇವರಿಗೆ 'ಆರ್ಡರ್ ಆಫ್ ಲೆನಿನ್' ಪದವಿಯಿತ್ತು ಭೂಷಿಸಲಾಯಿತು. ೧೯೫೨ ರಲ್ಲಿ, ಇವರು, ಸೋವಿಯಟ್ ಕಮ್ಯೂನಿಸ್ಟ್ ಪಕ್ಷದ ವಾರ್ಷಿಕ ಘೋರಣೆ ಸಾರಲು ಚುನಾಯಿತರಾದರು. ಕಳೆದ ವರ್ಷ, ಇವರನ್ನು ರಷ್ಯದ ಕಮ್ಯೂನಿಸ್ಟ್ ಪಾರ್ಟಿ ಕಾಂಗ್ರೆಸಿನ ರಿಪೋರ್ಟಿಯರ್ ಆಗಿ ಆರಿಸಿದರು. ಆ ಸ್ಥಾನವನ್ನು ಆ ತನಕ ಸ್ಟಾಲಿನರೇ ಹೊಂದಿದ್ದರು. ಈ ಕಾರಣದಿಂದ, ಇವರೇ ಸ್ಟಾಲಿನರ ಉತ್ತರಾಧಿಕಾರಿಯಾಗಿರಬೇಕು ಎಂದು ಇಂದು ಅವರು ರಷ್ಯದ ಪ್ರಧಾನರಾಗಿ ಸ್ಟಾಲಿನರ ಸರ್ವಜವಾಬ್ದಾರಿಯ ಸ್ಥಾನ ಹೊತ್ತಿದ್ದಾರೆ. ಊಹಿಸಲಾಗಿತ್ತು. ಇವರು ಸ್ವಭಾವತ ಸಲ್ಪ ಬಿಗು. ತತ್ವವಿರೋಧಿ ಕೆಲಸ ಮಾಡುವವರಲ್ಲ. ತಮ್ಮ ಆಡಳಿತ ಧೋರಣೆಯನ್ನು ಅವರು ಶೀಘ್ರ ಸಾರಲಿದ್ದಾರೆ.

ದಿ ಓರಿಯಂಟ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

(ಸ್ಥಾಪನೆ 1871)

ಹಿಂದೂದೇಶದ ಅತೀ ಹಳೆಯ ವಿಮಾ ಕಂಪೆನಿಯು

ದುಡುಕಿರುವ ಹಾಗೂ ಸ್ವತಂತ್ರ ಜೀವನೋದ್ಯಮವನ್ನು ಕೈಕೊಳ್ಳಲಿಚ್ಛಿಸುವ ಯುವಕರಿಗೆ ಅಮೂಲ್ಯ ಅವಕಾಶ ಕಲ್ಪಿಸಿಕೊಡುವದು. ಬರೆಯಿರಿ.

೩. 1–1

ಬ್ರಾಂಚ್ ಸೆಕ್ರೆಟರಿ,
172–173, ನರಸಿಂಹರಾಜರೋಡ್,
ಪೋ. ಬಾ. ನಂ. 186 ಬೆಂಗಳೂರು–2

"BASEL MISSION" TILES

The public are hereby informed that all genuine "BASEL MISSION" roofing tiles bear the full wording

"BASEL MISSION
PATENT 1865"

Any tile which has not such complete wording is NOT a "*BASEL MISSION*" tile. Beware of imitations!

You cannot make any mistake if you buy from us.

D. V. PAI & CO.

Authorised Agents for Coorg and Mysore State.

Head Office: MANGALORE

Branches: MERCARA & VIRAJPET.

THE VIJAYA BANK, LIMITED.

ದಿ ವಿಜಯ ಬೇಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ : 1931] [ಪ್ರಧಾನ ಕಛೇರಿ : ಮಂಗಳೂರು.

ಮೂಲ ಧನ	ರೂ.	20,00,000
ತೆತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ಮ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು. ರೂಪಾಯಿ ಹತ್ತು ಸಾವಿರವ ಮಿಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟ ನಡೆಸಲ್ಪಡುವುದು.

ಬಿ. ಮಂಜಯ್ಯ ಹೆಗ್ಡೆ,
ಎಡ್ವೋಕೇಟ್.
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.
(ಮತ್ತು ದ. ಕ. ಜಿಲ್ಲಾ ಬೋರ್ಡ ಅಧ್ಯಕ್ಷರು)

12–4

ಮಡಿಕೇರಿ ಆಫೀಸಿನ ಏಜೆಂಟ್ :—ಯಮ್. ಯಸ್. ಅಳ್ವ.

ಮಾರಾಟಕ್ಕಿದೆ.

ಮಡಿಕೇರಿಯಲ್ಲಿ ಹೊಸ ಕಾಲೇಜು ಕಟ್ಟಡದ ಬಳಿ ಸಾಗುವಳಿಯಾಗುತ್ತಿರುವ ನನ್ನ ಸ್ವಯಾರ್ಜಿತ ಆಸ್ತಿಯಾದ, 5 ಏಕ್ರೆ ನೀರಾವರಿ ಭೂಮಿ, ಇದಕ್ಕೆ ಸೇರಿದ 8 ಏಕ್ರೆ ಜಾಗ ಮತ್ತು ವಾಸಕ್ಕೆ ಯೋಗ್ಯವಾದ ಹಂಚು ಹಾಕಿದ ಮನೆ ಅಲ್ಲದೆ, ಇದೇ ಬ್ಲಾಕಿನಲ್ಲಿ ಪ್ರತ್ಯೇಕವಾಗಿ ನನ್ನ ಒಂದು ಏಕರು ಜಾಗ ಮತ್ತು ಹುಲ್ಲಿನ ಮನೆ ಪಸ್ಗಿರಿ ಮಾರಾಟಕ್ಕಿವೆ.

ಸ್ಥಳವು ಕಾನ್ವೆಂಟಿಗೂ ಮತ್ತು ಕಾಲೇಜಿಗೂ ಸಮೀಪವಾಗಿರುವುದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದೆ. ಜಾಗವು ಕಿತ್ತಳೆ ಮತ್ತು ಕಾಫಿ ಬೆಳೆಸಲು ಉತ್ತಮವಾಗಿದೆ ಹಾಗೂ ದನಕರಗಳನ್ನು ಸಾಕಲು ಯೋಗ್ಯವಾದ ಆವರಣವಾಗಿದೆ. ಖಾಯಿಸ್‌ದಾರರು ಉಭಯ ಆಸ್ತಿಗಳನ್ನು ಒಟ್ಟಾಗಿಯಾಗಲೀ, ಬೇರೆ ಬೇರೆಯಾಗಲೀ ಕೊಂಡುಕೊಳ್ಳುವ ಅನುವಿದೆ. ಹೆಚ್ಚಿನ ವಿವರಗಳನ್ನು ಖುದ್ದು ನೋಡಿಯಾಗಲೀ ಇಲ್ಲವೇ ಪತ್ರ ಮೂಲಕ ಕೆಳಗಿನ ವಿಳಾಸದಾರರಿಂದ ತಿಳಿದುಕೊಳ್ಳಬಹುದು.

ಎನ್. ಎಂ. ಬೋಪಯ್ಯ,
ಮಾಸ್ಟರ್ ಟೈಲರ್,
3–2 ಚೌಕ್, ಮಡಿಕೇರಿ.

ಪ್ರಕಟಣೆ.

ಕೊಡಗು ಮುಜರಾಯಿ ಇಲಾಖೆಗೆ ಸೇರಿದ ನಂಜರಾಯಪಟ್ಣ ಏಳುಸಾವಿರಸೀಮೆ, ಸೋಮವಾರಪೇಟೆ ತಾಲೂಕುಗಳ ಪರ ಮೆಂಬರಾಗಿದ್ದ ಶ್ರೀ ಸಿ. ಎಸ್. ಕೃಷ್ಣರಾಯರವರ ಮೆಂಬರು ತನದ ಅವಧಿಯು ಪೂರೈಸಿ ಕಾಲಿ ಬಿದ್ದಿವೆ. ಸದ್ರಿ ತಾಲೋಕುಗಳ ಪರ ಮೆಂಬರಾಗಲು ಇರಾದೆ ಪಡುವವರು ಈ ಬಗ್ಗೆ ಅವರ ಅರ್ಜಿಯನ್ನು ತಾರೀಕು 9–4–53ರ ಒಳಗೆ ಇಲಾಖಾ ಪ್ರೆಸಿಡೆಂಟರವರ ಹೆಸರಿಗೆ ಬರೆದು ತಲಪುವಂತೆ ಕಳುಹಿಸತಕ್ಕದ್ದು. ವಾಯಿದೆ ದಾಟಿ ಬಂದ ಅರ್ಜಿಯನ್ನು ಅಂಗೀಕರಿಸಲಾಗುವುದಿಲ್ಲ. ಈ ಮೇರೆ ಬಂದ ಅರ್ಜಿದಾರರ ಪರ ಸೋಮವಾರಪೇಟೆ ತಾಲ್ಲೋಕು ಕಚೇರಿ ಬಳಿ ತಾ. 13–4–53ರಲ್ಲಿ ಹಗಲು 12 ಗಂಟೆಯಿಂದ ಸಾಯಂಕಾಲ 5 ಗಂಟೆ ವರೆಗೆ ಓಟು ತೆಗೆಯಲಾಗುತ್ತೆ. ದೇವಸ್ಥಾನದ ಓಟಕುಗಳ ಪಟ್ಟಿಯಲ್ಲಿ ಹೆಸರು ರಿಜಿಸ್ಟರ್ ಮಾಡಿಸಿಕೊಂಡವರು ಬಂದು ಓಟು ಕೊಡಬಹುದು.

ಪಿ. ಎ. ಚಂಗಪ್ಪ.
ಪ್ರೆಸಿಡೆಂಟ್.

ಮಡಿಕೇರಿ.
9–3–53

ಶ್ರೀ ಕೆ. ಚಂಗಪ್ಪನವರು,
"ಕೊಡಗು" ಏಜೆಂಟರು,
ಸೋಮವಾರಪೇಟೆ.

ಜಪಾನಿನಲ್ಲಿ ಭತ್ತದ ವ್ಯವಸಾಯ

ನಮ್ಮ ರೈತರೊಡನೆ ನಿಕಟ ಬಾಂಧವ್ಯವನ್ನು ಬೆಳೆಸಿಕೊಳ್ಳುವುದು ವ್ಯವಸಾಯ ಕ್ಷೇತ್ರದ ತಜ್ಞರ ಕರ್ತವ್ಯ.

ಲೇಖಾಂಕ: ೨

—೧—

ಮೊದಲೇ ಹೇಳಿದಂತೆ, ಜಪಾನಿನ ನೆಲವು ಫಲವತ್ತತೆಯಲ್ಲಿ ಬಹಳ ಹಿಂದೆ. ಭತ್ತದ ಬೆಳೆಯು ಚೆನ್ನಾಗಿ ಆಗಲಿಕ್ಕೆ ಬೇಕಿರುವ ಭೂಸತ್ವದಲ್ಲಿ ಕೇವಲ ಮೂರರಲ್ಲಿ ಎರಡಂಶ ಮಾತ್ರ ಅಲ್ಲಿಯ ನೆಲ ಪಡೆದಿದೆ. ಆದುದರಿಂದ ದೇಶದಾದ್ಯಂತ ಅನೇಕ ಸಂಶೋಧನೆಗಳನ್ನು ನಡೆಸಿ, ಭೂಮಿಯ ಸಾರವನ್ನು ಹೆಚ್ಚಿಸುವುದೆಂದು ಸಿದ್ಧಗೊಂಡ ಬಗೆ ಬಗೆಯ ಕೃತಕ ಗೊಬ್ಬರಗಳನ್ನು ಉಪಯೋಗಿಸುತ್ತಾರೆ. ಮಣ್ಣಿನೊಡನೆ ಈ ಫಲವರ್ಧಕ ಗೊಬ್ಬರಗಳನ್ನು ಚೆನ್ನಾಗಿ ಮಿಶ್ರಮಾಡಿ, ಭೂಮಿಯನ್ನು ಬಿತ್ತನೆಗೆ ಹದಗೊಳಿಸುವರು. ಈ ರೀತಿ ಸಂಪೂರ್ಣವಾಗಿ ಫಲವರ್ಧಕ ಗೊಬ್ಬರಗಳನ್ನು ಉಪಯೋಗಿಸುವುದರಿಂದ ಬಹಳ ಲಾಭವಿದೆ ಎಂದು ಕಂಡುಬಂದಿದೆ. ಸಾಮಾನ್ಯ ನೆಲದಲ್ಲಿನ ಫಲವತ್ತತೆಯನ್ನು ಹೊಂದಿಕೊಂಡು ಎಕ್ರೆಯೊಂದಕ್ಕೆ ೮೦–೧೦೦ ರಾತಲು ನೈಟ್ರೋಜನ್, ಮತ್ತು ೬೦–೮೦ ರಾತಲು ಗಂಧಕ ಮತ್ತು ಪೊಟಾಶನ್ನು ಉಪಯೋಗಿಸುವರು.

ಸಸ್ಯಜನ್ಯ ಹಾಗೂ ಧಾತುಜನ್ಯ ಗೊಬ್ಬರಗಳನ್ನು ಮಿಶ್ರಮಾಡಿ ಉಪಯೋಗಿಸುವ ಪದ್ಧತಿಯೇ ಅತ್ಯಧಿಕ ಬಳಕೆಯಲ್ಲಿದೆ. ಹಸುರೆಲೆ ಸಸ್ಯವನ್ನು ಮುಖ್ಯವಾಗಿ ಸೋಯಾ ಧಾನ್ಯವನ್ನು, ಗದ್ದೆಗಳಲ್ಲಿ ಬೆಳೆಸಿ, ಆ ನಂತರ ಅವುಗಳನ್ನು ಅಲ್ಲಿಯೇ ಕಡಿದು ಹಾಕಿ, ನೇಜಿ ನೆಡಲು ಮೂರು ವಾರಗಳಿರುವಾಗ ಉತ್ತುಬಿಡುವುದು ವಾಡಿಕೆ. ಈ ರೀತಿಯಲ್ಲಿ ಭೂಮಿಗೆ ಸಿಕ್ಕುವ ಹಸುರೆಲೆ ಗೊಬ್ಬರವು ಎಕ್ರೆಗೆ ನಾಲ್ಕೈದು ಟನ್ನುಗಳಷ್ಟಾಗುತ್ತದೆ. ಅನಂತರ ಗದ್ದೆಗೆ ನೀರುಣಿಸಿ, ಎಕ್ರೆಗೆ ೧ ೩ ಟನ್ನಿನಂತೆ ಸುಣ್ಣವನ್ನು ಬೆರೆಸುವರು. ಇದರಿಂದ ಹಸುರೆಲೆ ಗೊಬ್ಬರವು ಬೇಗನೇ ಮಣ್ಣುಗೂಡುವುದಕ್ಕೆ ಸಹಾಯವಾಗುತ್ತದೆ. ಹಸುರೆಲೆ ಗೊಬ್ಬರವಲ್ಲದೆ ಸೋಯಾಧಾನ್ಯದ ಹಿಂಡಿ, ಕಂಪೋಸ್ಟು, ಮತ್ತಿತರ ಹಿಕ್ಕೆಗೊಬ್ಬರಗಳನ್ನೂ ಧಾರಾಳವಾಗಿ ಉಪಯೋಗಿಸುವರು. ಉಳುಮೆಗೆ ಮುಂಚಿತವಾಗಿಯೇ ಇಷ್ಟು ಸಸ್ಯಜನ್ಯ ಗೊಬ್ಬರವನ್ನು ಒದಗಿಸಿ ಭೂಸಾರವನ್ನು ಹೆಚ್ಚಿಸುವರು.

—೨—

ಭತ್ತದ ಗುಣ ವಿಶೇಷಗಳನ್ನು ಗಮನದಲ್ಲಿ ಇಟ್ಟುಕೊಂಡು ಧಾತುಜನ್ಯ ಗೊಬ್ಬರಗಳನ್ನು ನೆಲಕ್ಕೆ ಒದಗಿಸುವರು. ಪ್ರಥಮದಲ್ಲಿ ಅಮೋನಿಯಂ ಸಲ್ಫೇಟ್, ಫೋಸ್ಫೇಟ್ ಮತ್ತು ಪೊಟಾಶುಗಳಲ್ಲಿ ಮೂರರಲ್ಲಿ ಎರಡಂಶವನ್ನು ನೆಲಕ್ಕೆ ಹಾಕಿದರೆ ಉಳಿದುದನ್ನು ನೇಜಿನೆಟ್ಟ ಬಳಿಕ ಮೂರು ವಾರಗಳಲ್ಲಿ ಒಮ್ಮೆ ಮತ್ತು ತೆನೆಬಿಡುವುದಕ್ಕೆ ಎರಡು ವಾರಗಳಿರುವಾಗ ಒಮ್ಮೆ ಉಪಯೋಗಿಸುವರು. ನೈಟ್ರೋಜನನ್ನು ಭತ್ತದ ಸಸಿಗಳಿಗೆ ಒದಗಿಸಲು ಅಮೋನಿಯಂ ಸಲ್ಫೇಟನ್ನು ಜಪಾನಿನಲ್ಲಿ ಉಪಯೋಗಿಸುವರು. ಯುದ್ಧಕ್ಕೆ ಮುಂಚೆ ೧೦ ಲಕ್ಷ ಟನ್ನುಗಳಷ್ಟು ಅಮೋನಿಯಂ ಸಲ್ಫೇಟು ಜಪಾನಿನಲ್ಲಿ ಉತ್ಪಾದನೆಗೊಳ್ಳುತ್ತಿತ್ತು. ಯುದ್ಧ ಸಮಯದಲ್ಲಿ ಈ ಫಲವರ್ಧಕವು ಸಾಕಾದಷ್ಟು ಪ್ರಮಾಣದಲ್ಲಿ ದೊರೆಯದ್ದರಿಂದ, ಉತ್ಪಾದನೆ ತಗ್ಗಿತು.

ಜಪಾನೀ ತಜ್ಞರ ಅಭಿಪ್ರಾಯದಂತೆ ಸುಧಾರಿತ ಬೀಜಗಳಿಂದ ಉತ್ಪಾದನೆಯು ಹೆಚ್ಚಬೇಕಿದ್ದರೆ, ಫಲವರ್ಧಕ ಗೊಬ್ಬರಗಳನ್ನು ಉಪಯೋಗಿಸುವುದು ಅತ್ಯಗತ್ಯವಾಗಿದೆ. ಹಾಗೆಯೇ ಫಲವರ್ಧಕಗಳ ಪ್ರಯೋಜನದ ಅರಿವಾಗಬೇಕಿದ್ದರೆ, ಸುಧಾರಿತ ಬೀಜಗಳನ್ನು ಉಪಯೋಗಿಸಬೇಕು. ಇವೆರಡು ಪರಸ್ಪರ ಹೊಂದಿಕೊಂಡಿವೆ.

—೩—

ನೀರಾವರಿಯಿಂದ ನೀರುಣಿಸುವ ಕ್ರಮವು ಕೇವಲ ಭತ್ತದ ಗದ್ದೆಗಳಿಗೆ ಮಾತ್ರವೆಂದೇ ಹೇಳಬೇಕು. ಸಾಮಾನ್ಯವಾಗಿ ೯೦% ಭತ್ತದ ಗದ್ದೆಗಳು ನೀರಾವರಿಗೆ ಒಳಗಾಗಿವೆ. ಬಿತ್ತನೆಯ ಹಾಗೂ ನೇಜಿನೆಡುವ ಸಮಯ ಬೇಕಾದಷ್ಟು ನೀರಿನ ಪೂರೈಕೆಯಿರುತ್ತದೆ. ಈ ನೀರಿನ ಪೂರೈಕೆ ಇರುವಾಗಲೇ ಇವೆರಡೂ ಕೆಲಸಗಳನ್ನು ಮುಗಿಸಿಬಿಡುವ ಆತುರವನ್ನು ಜಪಾನಿ ರೈತರು ತೋರಿಸುತ್ತಾರೆ. ಕೊನೆಕೊನೆಗೆ ನೀರಿನ ಅಭಾವವೆನಿಸಿದರೂ ಅದರಿಂದ ಹಾನಿಯುಂಟೆಂದು ಜಪಾನೀ ರೈತರು ತಿಳಿಯುವುದಿಲ್ಲ. ಪ್ರಾರಂಭದಲ್ಲಿ ಚೆನ್ನಾಗಿ ನೀರಿನ ಆಸರೆ ದೊರೆತರೆ ಅದರಿಂದ ಸಸ್ಯವು ಚೆನ್ನಾಗಿ ಪುಷ್ಟವಾಗಿ ಬೆಳೆಯುತ್ತದೆ ಎಂದೂ, ಆಮೇಲೆ ನೀರಿನ ಕೊರತೆಯಿದ್ದರೂ ಅದನ್ನು ಉಪೇಕ್ಷಿಸಬಹುದೆಂದೂ ಜಪಾನೀ ರೈತರ ಹೇಳಿಕೆ ಇದೆ. ಆದರೆ ನಮ್ಮ ಭಾರತದಲ್ಲಿ ಪ್ರಾರಂಭದಲ್ಲಿ ಮಳೆಗಾಲ ಮೂರುವಾರಗಳಿಂದ ಬರುವ ಮಳೆಯ ಅನಿಶ್ಚಿತತೆಯಿಂದಾಗಿ ಅನೇಕಾವರ್ತಿ ನೀರಿನ ಪೂರೈಕೆ ನಿಂತುಹೋಗುತ್ತದೆ. ಭತ್ತದ ಸಸಿಯ ಪೋಷಣೆಗೆ ಅಗತ್ಯವೆನಿಸಿದ ನೀರು ಮೊದಲಿಗೇ ಇಲ್ಲದೆ ಹೋಗುವುದರಿಂದ—ಬೆಳೆಯು ಹಾನಿಗೀಡಾಗುತ್ತದೆ. ಕಾಲುವೆಗಳ ಮೂಲಕ ನೀರಾವರಿಯನ್ನು ನಡೆಸುವುದಕ್ಕಾದರೂ ನೀರಿನ ಅಭಾವದ ಮೂಲಕ ಅನುಕೂಲವಿರುವುದಿಲ್ಲ. ಒರಿಸಾ ಮುಂತಾದೆಡೆಗಳಲ್ಲಿ ಮಳೆಗಾಲ ಮಳೆಯಿಂದ ನದಿ ತುಂಬಿದ ಬಳಿಕವೇ ಕಾಲುವೆಗಳೂ ತುಂಬಿ ಹರಿದು ನದಿ ಬತ್ತಿದಂತೆ, ಕಾಲುವೆಯಲ್ಲಿಯೂ ನೀರು ತಗ್ಗುತ್ತದೆ.

ಭತ್ತದ ಬೆಳೆಯೇ ಜಪಾನೀಯರ ಪ್ರಧಾನ ವ್ಯವಸಾಯವಾಗಿರುವುದರಿಂದ ಮತ್ತು ಎಲ್ಲರೂ ಅಕ್ಕಿಯನ್ನು ತಿನ್ನುವವರೇ ಆಗಿರುವುದರಿಂದ ರೈತರ ಜವಾಬ್ದಾರಿ ಬಹಳ ಹೆಚ್ಚು. ಈ ಗುರುತರವಾದ ಭಾರವನ್ನು ಹೊತ್ತುಕೊಂಡು ಜಪಾನಿ ರೈತರು ತಮ್ಮ ಪರಿಶ್ರಮದಿಂದಲೂ ಜಾಣತನದ ಕೃಷಿಪದ್ಧತಿಯಿಂದಲೂ, ಫಲವರ್ಧಕ ಗೊಬ್ಬರಗಳ ಉಪಯೋಗದಿಂದಲೂ, ಶಾಸ್ತ್ರೀಯ ಸಂಶೋಧನೆಗಳ ನೆರವಿನಿಂದಲೂ ಅಸಾಧಾರಣ ಪ್ರಗತಿಯನ್ನು ಸಾಧಿಸಿರುವುದು ಪ್ರಶಂಸನೀಯ.

—೪—

ಒಟ್ಟಾರೆ ಹೇಳುವುದಾದಲ್ಲಿ—ಜಪಾನಿನಲ್ಲಿ ಎಕ್ರೆಯೊಂದಕ್ಕೆ ಉತ್ಪಾದಿಸಲಾಗುವ ಅಕ್ಕಿಯ ಪ್ರಮಾಣ ಅತ್ಯಧಿಕವಿರಲಿಕ್ಕೆ ಈ ಕೆಳಗಿನ ಎಂಟು ಅಂಶಗಳು ಹೊಣೆ ಎನ್ನಬಹುದು.

೧) ಸುಧಾರಿತ ಬೀಜಗಳ ಉಪಯೋಗ.

೨) ಫಲವರ್ಧಕಗಳ ಧಾರಾಳವಾದ ಬಳಕೆ.

೩) ಭತ್ತದ ಬೆಳೆಗೆ ಧಾರಾಳವಾದ ನೀರಿನ ಪೂರೈಕೆ.

೪) ರೋಗಗಳು ಹಬ್ಬದಂತೆ ನಿಯಂತ್ರಿಸುವ ಉಪಾಯಗಳು.

೫) ರೈತರಿಗೆ ಯೋಗ್ಯವಾದ ಸಲಹೆ ಸೂಚನೆಗಳಿತ್ತು ಸಹಕರಿಸುವುದಕ್ಕೆ ಸದಾ ಪ್ರಯತ್ನಿಸುವ ಅಧಿಕ ಸಂಖ್ಯೆಯ ತಜ್ಞರ ಗುಂಪು.

೬) ಅನೇಕ ಸಂಖ್ಯೆಯ ವ್ಯವಸಾಯ ಸಹಕಾರ ಸಂಘಗಳು.

೭) ಜನರಲ್ಲಿರುವ ಅಧಿಕ ಪ್ರಮಾಣದ ಸಾಕ್ಷರತೆ.

೮) ಪ್ರತಿಯೊಬ್ಬ ಬೇಸಾಯಗಾರನೂ ತನ್ನ ಹೊಲವನ್ನು ತೋಟವೆಂದೇ ತಿಳಿದು, ಪ್ರತಿಯೊಂದೂ ಗಿಡದ ಆರೈಕೆಯನ್ನು ನೋಡುವ ಪದ್ಧತಿ.

— ಹೀಗೆ ಜಪಾನಿನ ಪ್ರಗತಿಯ ಚಿತ್ರವನ್ನು ಕೊಟ್ಟ ಬಳಿಕ ಭಾರತದಲ್ಲಿ ಈ ಪದ್ಧತಿಯನ್ನು ಎಷ್ಟರ ಮಟ್ಟಿಗೆ ಉಪಯೋಗಿಸಬಹುದೆಂದು ವಿಚಾರಿಸುವುದು ಯೋಗ್ಯ. ಸುಧಾರಿತ ಬೀಜಗಳ ಮಟ್ಟಿಗೆ ಭಾರತವು ವಿಶೇಷ ಪ್ರಗತಿಯನ್ನು ತೋರಿಸಿದೆ. ಆದರೂ ಅವುಗಳ ಉಪಯೋಗವನ್ನು ಪರೀಕ್ಷಿಸಿ ಸಿದ್ಧಗೊಳಿಸುವ ಪ್ರಯೋಗಗಳು ಎಲ್ಲ ರಾಜ್ಯಗಳಲ್ಲಿಯೂ ಒಂದೇ ತೆರನಾದ ಪ್ರಗತಿಯನ್ನು ಹೊಂದಿಲ್ಲ. ಆದೂಯ ಪ್ರದೇಶಗಳಿಗೆ ಒಗ್ಗುವ ಮಾದರಿಯನ್ನು ನಿಷ್ಕರ್ಷಿಸಿ ಹಂಚುವುದಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು ಪರಿಶೀಲನೆ ನಡೆಸುವುದು ತೀರಾ ಅಗತ್ಯ.

—೫—

ತಜ್ಞರ ಮಟ್ಟಿಗೆ ಮಾತ್ರ ನಮ್ಮ ದೇಶ ಬಹಳ ಹಿಂದುಳಿದಿದೆ. ವ್ಯವಸಾಯದಲ್ಲಿ ನುರಿತ ತಜ್ಞರ ಅಭಾವವನ್ನು ಕೆಲವು ದಶಕಗಳ ವರೆಗೆ ಅನುಭವಿಸಬೇಕಾಗುವುದೋ ಏನೋ. ಹಾಗೆಯೇ ಸಂಶೋಧನಾಲಯಗಳೂ ಪ್ರಾಯೋಗಿಕ ಕೇಂದ್ರಗಳೂ ನಮ್ಮಲ್ಲಿ ಬಹಳ ಕಡಿಮೆ ಇವೆ. ಸುಧಾರಿತ ಬೀಜಗಳ ಜಾತಿಯನ್ನು ವೃದ್ಧಿಗೊಳಿಸುವಲ್ಲಿ ಮತ್ತು ಇವನ್ನು ರೈತರಿಗೆ ಒದಗಿಸಿಕೊಡುವಲ್ಲಿ ಈಚಿನ ವರ್ಷಗಳು ಹೆಚ್ಚು ಅಭಿವೃದ್ಧಿಯನ್ನು ತೋರಿಸಿದರೂ ಜಪಾನಿಗೆ ಹೊಯ್ ಕೈಯಾಗಿ ನಿಲ್ಲುವ ಸಾಮರ್ಥ್ಯ ನಮಗೆ ಇನ್ನು ಕೆಲವು ವರ್ಷಗಳ ವರೆಗೆ ಬರಲಾರದು. ಪ್ರತಿಯೊಂದೂ ಹಳ್ಳಿಯು ತನ್ನ ಆವಶ್ಯಕತೆಗೆ ತಕ್ಕಂತೆ ಬೀಜದ ಪೂರೈಕೆಯನ್ನು ಮಾಡಿ ಕೊಡುವ ವ್ಯವಸಾಯಿಕ ಸಹಕಾರಿ ಸಂಘಗಳನ್ನು ಪಡೆಯುವುದು ಬಹು ದೂರದ ಮಾತು. ಆದರೂ ಜಪಾನು ವ್ಯವಸಾಯ ಕ್ಷೇತ್ರದಲ್ಲಿ ಇಂದು ಅದ್ಭುತ ಪ್ರಗತಿಯನ್ನು ಸಾಧಿಸಿದ್ದರೆ ಅದು ಇಂಥಾ ಸಣ್ಣ ಪುಟ್ಟ ಸಹಕಾರಿ ಸಂಘಗಳ ನೆರವಿನಿಂದಲೇ ಎಂಬುದನ್ನು ಮರೆಯದೆ ನಾವು ಈ ದಿಶೆಯಲ್ಲಿ ಪ್ರಯತ್ನಿಸಬೇಕು.

ಇನ್ನು ಫಲವರ್ಧಕ ಗೊಬ್ಬರಗಳ ಕುರಿತು ಹೇಳುವುದಾದರೆ ಜಪಾನಿನಲ್ಲಿ ನಡೆಸಿದ ಪ್ರಯೋಗಗಳು ಸುಧಾರಿತ ಬೀಜದ ಉಪಯೋಗದ ಪೂರ್ಣ ಪ್ರಯೋಜನ ಪಡೆಯಲು ಫಲವರ್ಧಕ ಗೊಬ್ಬರಗಳನ್ನು ಉಪಯೋಗಿಸಬೇಕೆಂದು ಸಿದ್ಧಗೊಳಿಸಿವೆ. ನಮ್ಮ ರೈತರು ಉತ್ಪಾದಿಸುವ ದವಸ ಧಾನ್ಯಗಳಿಗೆ ಕಡಿಮೆ ಬೆಲೆಯು ಪೇಟೆಯಲ್ಲಿ ದೊರೆಯುವುದರಿಂದ ಫಲವರ್ಧಕ ಗೊಬ್ಬರಗಳನ್ನು ಹೆಚ್ಚು ದುಡ್ಡು ಕೊಟ್ಟು ಪಡೆದು ಉಪಯೋಗಿಸುವಲ್ಲಿ ಕಡೆಯಾಗಿದೆ ಎನ್ನಬಹುದು. ಆದರೂ ಈಚೆಗೆ ಕೇಂದ್ರ ವ್ಯವಸಾಯ ಸಚಿವರು ಇದಕ್ಕೊಂದು ಸುಲಭದ ಪರಿಹಾರ ಮಾರ್ಗವನ್ನು ಸೂಚಿಸಿರುವರು. ಒಂದು ಮಣ ಫಲವರ್ಧಕ ಗೊಬ್ಬರವನ್ನು ಸರಕಾರದಿಂದ ಪಡೆದು, ಕೊಯ್ಲಿನ ನಂತರ ಇದಕ್ಕೆ ಪ್ರತಿಯಾಗಿ ಒಂದು ಮಣ ಅಕ್ಕಿಯನ್ನು ಕೊಡಬಹುದು ಎಂದಿರುವರು. ಈ ಕಾರಣದಿಂದ ನಮ್ಮ ರೈತರು ಹೆಚ್ಚು ಹೆಚ್ಚು ಫಲವರ್ಧಕಗಳನ್ನು ಉಪಯೋಗಿಸಲು ನೆರವು ದೊರೆತಿದೆ.

—೬—

ಸಾಧಾರಣವಾಗಿ ಹಿಂಡಿ, ಎಲುಬು ಹುಡಿ, ಕಂಪೋಸ್ಟು, ಹಸುರೆಲೆ ಮುಂತಾದ ಗೊಬ್ಬರಗಳನ್ನು ಬಳಸುವಲ್ಲಿ ನಾವು ಎಷ್ಟು ಮಾತ್ರಕ್ಕೂ ಹಿಂದುಳಿಯಬಾರದು. ಹಸುರೆಲೆ ಗೊಬ್ಬರದ ಮೂಲಕ ಭತ್ತದ ವ್ಯವಸಾಯಕ್ಕೆ ಯೋಗ್ಯವಾಗುವ ರೀತಿ ಭೂಸಾರವನ್ನು ಹೆಚ್ಚಿಸುವುದು ತೀರಾ ಸರಳ ಹಾಗೂ ಸುಲಭ ವಿಧಾನ ಎಂಬುದನ್ನು ನಾವು ಮರೆಯಲೇ ಕೂಡದು. ನಮ್ಮ ಪರಿಸ್ಥಿತಿಗನ್ನುಯಿಸಿ ಹೇಳುವುದಾದಲ್ಲಿ ಧಾರಾಳವಾಗಿ ಹಸುರೆಲೆ ಗೊಬ್ಬರವನ್ನೂ ಕಂಪೋಸ್ಟನ್ನೂ ಉಪಯೋಗಿಸಿ, ಸ್ವಲ್ಪ ಮಟ್ಟಿಗೆ ಫಲವರ್ಧಕಗಳನ್ನು ಉಪಯೋಗಿಸಿದರೆ ಚೆನ್ನಾದ ಬೆಳೆ ತೆಗೆಯಬಹುದು.

ನಿಜ ಹೇಳಬೇಕಾದರೆ ಫಲವರ್ಧಕಗಳ ಉಪಯೋಗಕ್ಕೂ ನಮ್ಮಲ್ಲಿ ಒಂದು ಹಾ

Licence No. 60.
Licenced to Post without Prepayment

Reg. No. M. 1550.
"KODAGU" MERCARA (Coorg) ೧೩—೩—೧೯೫೩

ತಿಯಿದೆ. ನಮ್ಮ ಭೂಗುಣವನ್ನು ಹೊಂದಿಕೊಂಡು ನಡಸಿದ ಪ್ರಯೋಗಗಳಿಗನುಸಾರವಾಗಿ, ನಾವು "ಅಧಿಕ ಆಹಾರ ಬೆಳೆಯಿಸಿ" ಎಂಬ ಚಳುವಳಿಯಲ್ಲಿ ಉಪಯೋಗಿಸುವ ಫಲವರ್ಧಕಗಳ ಮೂರು ನಾಲ್ಕು ಪಟ್ಟು ಮಾತ್ರ ಜಪಾನಿನಲ್ಲಿ ಬಳಸುತ್ತಾರೆ. ನಾವು ಹೆಚ್ಚೆಂದರೆ ಈಗಿನ ಪ್ರಮಾಣವನ್ನು ಪರಿಮಿತವಾದ ಕ್ಷೇತ್ರದಲ್ಲಿ ಇಮ್ಮಡಿಯಾಗಿಸಬಹುದು, ಹೊರತು ಅದಕ್ಕೂ ಹೆಚ್ಚಲ್ಲ. ಆದುದರಿಂದ ಫಲವರ್ಧಕಗಳನ್ನು ಅತಿರೇಕವಾಗಿ ಬಳಸುವ ಮೋಹಕ್ಕೆ ನಾವು ಒಳಗಾಗುವ ಅಗತ್ಯವಿಲ್ಲ. ಸ್ವಲ್ಪಮಟ್ಟಿಗೆ ಉಪಯೋಗಿಸಿದರೂ, ಯಥೇಷ್ಟವಾಯಿತು.

ಕಂಪೋಸ್ಟು ಅಥವಾ ಮಿಶ್ರ ಗೊಬ್ಬರಗಳು ಜಪಾನಿನಲ್ಲಿ ತುಂಬಾ ಜನಾದರಣೀಯವಾಗಿವೆ. ನಾವು ಇವುಗಳನ್ನು ಬಳಸಿಕೊಂಡರೆ ಅದರಿಂದ ಲಾಭವಿದೆ. ಹಾಗೆಂದು ಪ್ರಕೃತ ಈ ವಿಚಾರವನ್ನು ದುರ್ಲಕ್ಷಿಸಿರುವ ರೈತರೇ ನಮ್ಮಲ್ಲಿ ಹೆಚ್ಚಿಕೊಂಡಿರುವರು. ಅವರಿಗೆ ಯೋಗ್ಯ ಮಾರ್ಗದರ್ಶನವನ್ನು ಕೊಟ್ಟು ಹಾಳಾಗುವ ಅಮೂಲ್ಯ ವಸ್ತುಗಳ ಸದುಪಯೋಗವಾಗುವಂತೆ ಮಾಡಬಹುದು.

— ೭ —

ಜಪಾನಿನಲ್ಲಿ ನೇಜಿಯನ್ನು ನೆಟ್ಟು ಬತ್ತದ ವ್ಯವಸಾಯ ಮಾಡುವ ಕ್ರಮವೇ ಕಂಡು ಬರುತ್ತದೆ. ನಮ್ಮಲ್ಲಿ ಕೂಡ ಇದು ಜಾರಿಯಲ್ಲಿದ್ದರೂ ನೇರವಾಗಿ ಗದ್ದೆಯಲ್ಲಿಯೇ ಬೀಜ ಬಿತ್ತಿ ಕೊಯ್ಯುವ ಪರಿಪಾಟ ಜಪಾನಿನಲ್ಲಿರುವುದಕ್ಕಿಂತ ಅಧಿಕವಿದೆ. ಕೆಲವೆಡೆ ನಿಜವಾಗಿ ನೇಜಿಯನ್ನು ನೆಟ್ಟು ಬೆಳೆಸಬಹುದಾದ ಭೂಮಿಯಿದ್ದರೂ, ಅಲ್ಲಿ ಬೀಜ ಬಿತ್ತಿಯೇ ಭತ್ತದ ಕೃಷಿ ಮಾಡುವ ಪದ್ಧತಿಗೆ ರೈತರು ಅಂಟಿಕೊಂಡಿರುವರು. ನೇಜಿಯನ್ನು ಕಿತ್ತು ತಂದು ನೆಡುವುದರಿಂದ ಕಳೆಯ ಉಪದ್ರ ಕಡಿಮೆಯಾಗುತ್ತದೆ; ಮತ್ತು ಉತ್ಪಾದನೆಯು ಹೆಚ್ಚುತ್ತದೆ.

ಇನ್ನು ಕೊನೆಯದಾಗಿ ಜಪಾನಿನಲ್ಲಿ ಜನರು ಹೆಚ್ಚು ಅಕ್ಷರಸ್ಥರಾಗಿರುವುದರಿಂದ ಸಂಶೋಧನೆಗಳ ಫಲವನ್ನು ರೈತರು ಅರಿತುಕೊಳ್ಳುವಷ್ಟು ಸಾಮರ್ಥ್ಯ ಪಡೆದಿರುವರು. ಕೃಷಿಯಲ್ಲಿ ತಜ್ಞರಾದವರು ಕೂಡ ಅತ್ಯಧಿಕ ಸಂಖ್ಯೆಯಲ್ಲಿರುವುದರಿಂದ ಹಳ್ಳಿ ಹಳ್ಳಿಗೂ ಅವರು ಸುಧಾರಿತ ಕ್ರಮಗಳ ಪ್ರಚಾರವನ್ನು ಕೈಗೊಂಡು ತಿರುಗಲು ಅವಕಾಶವಿದೆ. ನಮ್ಮಲ್ಲಿ ಪ್ರತಿಯೊಂದು ತಾಲೂಕಿಗೂ ಎಗ್ರಿಕಲ್ಚರ್ ಡೆಮೊನ್‌ಸ್ಟ್ರೇಟರರು ಇದ್ದರೂ ರೈತರಿಗೂ ಅವರಿಗೂ ನಿಕಟ ಸಂಬಂಧ ಇನ್ನೂ ಏರ್ಪಟ್ಟಿಲ್ಲ. ರೈತರೊಡನೆ ಬೆರೆತು ಅವರಿಗೆ ಕೃಷಿಯ ನವೀನ ಪದ್ಧತಿಗಳನ್ನು ತಿಳಿಸಿ ಪ್ರೋತ್ಸಾಹಿಸುವ ವಿಚಾರವನ್ನು ಮಾಡದಷ್ಟು ಅವರು ಅನ್ಯಾಯ ಕಾರ್ಯಗಳಲ್ಲಿ ಮಗ್ನರು! ಇಂಥ ಪರಿಸ್ಥಿತಿಯು ಬೇಗನೇ ಸುಧಾರಣೆ ಹೊಂದೀತೆಂದು ನಾವು ಆಸೆ ಕಟ್ಟಿಕೊಳ್ಳುವಷ್ಟು ಚಲೋ ವಾತಾವರಣ ಇರುವದಿಲ್ಲ. ಆದಾಗ್ಯೂ ಪರಿಶ್ರಮದಿಂದಲೂ ಶ್ರದ್ಧೆಯಿಂದಲೂ ರಾಷ್ಟ್ರವು ಉನ್ನತಿಯನ್ನು ಹೊಂದಬೇಕೆಂಬ ಪ್ರಾಮಾಣಿಕವಾದ ಇಚ್ಛೆಯಿಂದಲೂ ಮಡಿವ ರೈತರಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಿಸುವುದು ಅಗತ್ಯವೆಂದು ಹೇಳಬೇಕಾಗಿದೆ.

ನಮ್ಮ ಮುಖಂಡರು ಆಹಾರದ ಅಭಾವದ ಕುರಿತು ಅಧಿಕ ಆಹಾರ ಬೆಳೆಯುವ ಚಳುವಳಿಯ ಕುರಿತು ಅನ್ನದ ಮಟ್ಟಿಗೆ ಸ್ವಾವಲಂಬನವೆಂಬ ಧ್ಯೇಯದ ಕುರಿತು ಭಾಷಣಗಳನ್ನು ಕೊಟ್ಟು ಜನರಲ್ಲಿ ಜಾಗ್ರತಿಯನ್ನು ಹುಟ್ಟಿಸಲು ಪ್ರಯತ್ನಿಸುತ್ತಾರೆ. ಏನೂ ತಿಳಿಯದ ಜನರಿಗೆ ಇಂಥಾ ಬೋಧನೆಗಳ ಪರಿಣಾಮವಾಗಿಯಾದರೂ ಸಾಕಷ್ಟು ತಿಳಿವು ಉಂಟಾಯಿತೆಂದು ಆಶಿಸಬಹುದು. ಆದರೆ ನಿಜವಾದ ಪ್ರಯೋಜನವು ಈ ಸಲಹೆ ಸೂಚನೆಗಳನ್ನು ಪ್ರತ್ಯಕ್ಷ ಕಾರ್ಯದಲ್ಲಿ ಪ್ರಯೋಗಿಸಿದಾಗಲೇ ದೊರೆಯುವುದು.

—

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಅಡವಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶ್ಯೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ. ಪ್ರೆಸಿಡೆಂಟ್ & ಖಜಾಂಚಿ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕೊರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಕೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
4. 9"×4" ಮತ್ತು 8"×4" ಕಬ್ಬಿಣದ ಕೋಲೆಗಳು (Girders).
5. 8'×3'×24' (Gage) ಕಬ್ಬಿಣದ ತಗಡುಗಳು.
6. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

The New Guardian of India Life Insurance co., Ltd.,

— HEAD OFFICE —

Post Box No.—142 Esplanade, MADRAS—1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT,

The New Gaurdian of India Life Insurance Co., Ltd. for COORG. Virajpet.

12-10

OR

To The Head Office, MADRAS.

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-5

PATTU BROTHERS.

OPP.— Town Hall, MYSORE.

Edited Printed and Published by P. I. BELLIAPPA at 'KODAGU' Press, Mercara for Kodagu Ltd.,

ಕೊಡಗು

ಮಾರ್ಷಲ್ ಸ್ಟಾಲಿನ್

ಜನನ 1879] [ಮರಣ 1953

ವಾರ್ಷಿಕ ಚಂದಾ ರೂ. ೫—೦—೦.
ಸಂಪುಟ ೩೧. ಸಂಚಿಕೆ ೪೦.

ಶುಕ್ರವಾರ
೨೦-೩-೧೯೫೩

KODAGU KANNADA WEEKLY MERCARA

ಒಂದು ಸಂಭಾಷಣೆ

॥ ನಿ ಧಾ ರ ರ. ॥

ಲೇ: ಶ್ರೀ ಬಿ. ಕೆ. ಈರಪ್ಪ,

(ಸರಕಾರಿ ಕಾಲೇಜು, ಮಡಿಕೇರಿ.)

"ವೈಯಲ್ಲಿ ಸೌಖ್ಯವಿಲ್ಲವೇ ವಸಂತಾ ?'

'ಯಾಕೆ ? ಸರಿಯಾಗಿದ್ದೇನೆ, ರೀಟಾ'

'ಯಾವಾಗಲೂ ದೊಡ್ಡ ಫಿಲಾಸಫರ್ ನಂತೆ ಯೋಚಿಸುತ್ತಾ ಇರುವೆ. ಬೇಗ ಇಂಟರ್ ಮುಗಿಸಿಕೊಂಡು, ಬಿ. ಎ. ಯಲ್ಲಿ ಫಿಲಾಸಫಿ ತೆಗೆದುಕೋ !'

'ಇಂಟರ್ ಪಾಸಾದರೆ ತಾನೆ !'

'ಯಾಕೆ ? ಪಾಸಾಗುವುದಿಲ್ಲವೇ ? ಎಲ್ಲರೂ ನಿನ್ನನ್ನು 'ಇಂಟಲಿಜೆಂಟ್' ಎಂದು ಹೇಳುತ್ತಾರೆ.'

'ಎಲ್ಲರೂ 'ಇಂಟಲಿಜೆಂಟ್' ಎಂದು ಹೇಳಿದರೆ ಪಾಸಾದಂತಾಯಿತೆ ?

'ವಸಂತಾ ! ಇದು ಸರಿಯಲ್ಲ. ನೀನು ಪಾಸಾಗಲೇಬೇಕು. ನೀನು ಒಂದು ಡಿಗ್ರಿ ತೆಗೆದುಕೊಂಡರೆ ನನಗೆ ಎಷ್ಟು ಸಂತೋಷವಾಗುವುದು, ಗೊತ್ತೇ ?'

'ಇಲ್ಲ ರೀಟಾ, ನನಗೆ ಡಿಗ್ರಿ ಯಾವುದೂ ಬೇಡ. ಡಿಗ್ರಿ ತೆಗೆದುಕೊಂಡವರು ಮಾತ್ರ ವಿದ್ಯಾವಂತರೇ ?'

'ಏಕೆ ಅಲ್ಲವೇನು ?'

'ಇಲ್ಲ ರೀಟಾ, ನೀನು ಇಂಟರಿನಲ್ಲಿದ್ದೂ ನಿನ್ನ ತಲೆಯಲ್ಲೇನೂ ಇಲ್ಲವೆಂಬುದು ಇದರಿಂದಲೇ ಗೊತ್ತಾಯಿತು '

'ಏನು ಗೊತ್ತಾಯಿತು ?'

'ಕೇಳು ರೀಟಾ, ಅಕ್ಷರಸ್ಥರೆಲ್ಲಾ ವಿದ್ಯಾವಂತರಾಗಿದ್ದರೆ, ದೇಶದಲ್ಲಿ ಇಷ್ಟು ಅನಾಹುತ ನಡೆಯುತ್ತಿದ್ದಿತೇ ? ನನ್ನ ಸ್ನೇಹಿತನೊಬ್ಬನ ವಿಷಯ ಕೇಳಿದೆಯೇನು ?'

'ಏನು ?'

'ಅತ ಬಿ. ಎ. ಆಗಿ ಬಂದ ಪಾಪ. ತಂದೆ ತಾಯಿಗಳಿಲ್ಲ. ಒಬ್ಬನೇ ಇರುವನ. ತಂದೆ ತಾಯಿ ಸಾಯುವ ಕಾಲಕ್ಕೆ ಒಂದೆರಡು ಮನೆ ಇತ್ತು. ಮಂಗಳೂರಿನ ಕಾಲೇಜು ಸೇರಿದ. ಅದಲ್ಲದೆ ತನ್ನ ನಾಡಿನಲ್ಲಿದ್ದ 'ಜನಹಿತ' ಸಂಘ ಆತನಿಗೆ ತಿಂಗಳು ತಿಂಗಳೂ ಸ್ವಲ್ಪ ಹಣ ಕಳುಹಿಸುತ್ತಿತ್ತು. ಹೀಗೆಲ್ಲಾ ಆಗಿ ನಾಲ್ಕೈದು ಸಾವಿರ ರೂಪಾಯಿ ಖರ್ಚು ಮಾಡಿ ಬಿ. ಎ. ಡಿಗ್ರಿ ಸಿಕ್ಕಿತು. ಚಾಕರಿಗಾಗಿ ಅಲೆದಾಡಿದ ಎ. ಸಿ. ಯವರು ಹೇಳಿದರು. ಹೋಗಿ ಸಿ. ಸಿ. ಯವರನ್ನು ಕಾಣಬೇಕೆಂದು ಸಿ. ಸಿ. ಯವರನ್ನು ಕಂಡೂ ಆಯಿತು. ಅವರೇನು ಹೇಳಿದರು ಗೊತ್ತೇ ?'

'ಏನು ?'

'ಮೊದಲು ಕೇಳಿದರಂತೆ 'ನೀನು ಯಾವ ಕೆಲಸ ಮಾಡಲು ತಯಾರಿರುವೆ ?' ಎಂದು 'ಈಗಿನ ನನ್ನ ಈ ಪರಿಸ್ಥಿತಿಯಲ್ಲಿ ಯಾವ ಕೆಲಸ ಬೇಕಾದರೂ ಮಾಡಲು ಸಿದ್ಧನಿರುವೆ' ಆತನ ಉತ್ತರ.

'ಕ್ಲಾರ್ಕ್ ಕೆಲಸ ಮಾಡುವೆಯಾ ?'

'ಓಹೋ, ಖಂಡಿತಾ ಮಾಡುವೆನು ?'

ಆಗಲಿ ಈಗ ಖಾಲಿ ಇಲ್ಲ. ಮುಂದೆ ನೋಡುವಾ' ಎಂದರಂತೆ.

'ನಿಜವೇನು ? ವಸಂತಾ ?'

'ಹೌದು ರೀಟಾ, ಇದು ಅತನಿಗೆ ಸಿಕ್ಕಿದ ಉತ್ತರ. ಬೇಕಾದಷ್ಟು ದುಡ್ಡು ಖರ್ಚು ಮಾಡಿ ವಿದ್ಯಾವಂತನಾದರೆ ಅತನಿಗೆ ಸಿಗುವ ಉತ್ತರ ಇದು.

'ಸಿ. ಸಿ. ಯವರೇನು ಮಾಡುವರು, ಕೆಲಸ ಖಾಲಿ ಇಲ್ಲದಿದ್ದರೆ ತನ್ನ ಸ್ಥಾನ ಬಿಟ್ಟು ಕೊಡಬೇಕಿತ್ತೇನು ?'

'ನಾನು ಹಾಗೆ ಹೇಳಿದೆನೆ ರೀಟಾ? ಎಷ್ಟು ಬೇಗ ನಿನಗೆ ಸಿಟ್ಟು ಬಂದುಬಿಡುವುದು. ಸ್ವಲ್ಪ ಯೋಚಿಸಿದರೆ ನಿನಗೆಲ್ಲಾ ತಿಳಿ........ ?

ಓಹೋ ಸಾಕು, ಗೊತ್ತು, ನೀನು ದೊಡ್ಡ 'ಫಿಲಾಸಫರ್ ಅಂತ'

'ಅಲ್ಲ ರೀಟಾ, ಇಲ್ಲಿ ಕೇಳು, ಅದಕ್ಕೆ ನಾನು ಹೇಳುವುದು, ಈಗಿನ ವಿದ್ಯಾಭ್ಯಾಸ ಕ್ರಮವೇ ಸರಿಯಲ್ಲವೆಂದು'

'ಎಲ್ಲರೂ ಹಾಗೆ ಹೇಳುವವರೇ ವಸಂತಾ' ಆದರೆ ಯಾರೂ, ಮುಂದೆ ಯಾವ ಮಾದರಿಯಲ್ಲಿ ವಿದ್ಯಾಭ್ಯಾಸವನ್ನು ಮಾರ್ಪಡಿಸಬೇಕು ಎಂದು ಹೇಳಲಿಲ್ಲವಲ್ಲಾ'

'ಅಯ್ಯೋ ಕೇಳು ರೀಟಾ, ನಿನ್ನ Combination ಯಾವುದು. A. M L. (Anicent History, Modern History and Logic) ನಮ್ಮ History ತರಗತಿಯಲ್ಲಿರುವ ೪೪ ಜನರಿಗೆ ಈ Subject ಬಿಟ್ಟು ಬೇರೆ ಏನು ಗೊತ್ತಿದೆ ? ಇದು ಬರೇ ನಮ್ಮ ಕಾಲೇಜಿನ ಸ್ಥಿತಿಯಲ್ಲ ಇಂಡಿಯಾದಲ್ಲಿ ಎಷ್ಟೋ ಕಾಲೇಜುಗಳಿವೆ. ಒಂದು ವರ್ಷದಲ್ಲಿ ಒಂದೊಂದು ಯೂನಿವರ್ಸಿಟಿಯಿಂದ ಎಷ್ಟೆಷ್ಟು ಗ್ರ್ಯಾಜ್ಯುವೇಟ್‌ಗಳು ತಯಾರಾಗುತ್ತಾರೆ ? ಅವರಿಗೆಲ್ಲಾ ಏನು ಗೊತ್ತಿದೆ ರೀಟಾ ? ಹೆಚ್ಚೇಕೆ ನಿನ್ನ ಕಾಯ್ದಾಡಿದ ಕೊಡಗಿನ ಚರಿತ್ರೆ ನಿನಗೆ ಗೊತ್ತಿದೆಯೇ ? ತನ್ನ ತಾಯ್ನಾಡಿನ ಚರಿತ್ರೆ ಗೊತ್ತಿಲ್ಲದ ನೀನು, Modern History Anicent History ಕಲಿತು ಏನು ಪ್ರಯೋಜನ ?'

'ಅಂದರೆ ನಿನ್ನ ಅಭಿಪ್ರಾಯ ಕಾಲೇಜಿಗೆ ಹೋಗಲೇ ಬಾರದೆಂದೇ'

'ಕಾಲೇಜಿಗೆ ಬಂದು ನೀನೇನು ಕಲಿತೆ ?'

'ಕಾಲೇಜು ಮಜಾ ಅಲ್ಲವೇ ವಸಂತಾ ?'

'ಅದಕ್ಕೇ ನಾನು ಹೇಳಿದುದು ರೀಟಾ. ಈ ವಿದ್ಯೆ ನಮ್ಮ ಅತ್ಮಶಕ್ತಿಯನ್ನು ಕುಂದಿಸುತ್ತದೆ ಎಂದು. ಇನ್ನೂ ಕೇಳು ನೀನು ನಿನ್ನ ಸಂತೋಷದಂತೆ ಎ. ಎಂ. ಎಲ್. ಗ್ರೂಪಿಗೆ ಬಂದೆಯಾ '

'ಇಲ್ಲ. ಪಿ. ಸಿ. ಎಸ್. ಗೆ ಪ್ರಯತ್ನ ಮಾಡಿದೆ. ಆದರೆ ಅದು ಸಿಕ್ಕದಿರಲು ಇದಕ್ಕೆ ಬರಬೇಕಾಯಿತು.'

'ಹಾಗೆಯೇ ಇಲ್ಲಿ ಕೇಳು. ಯಾವ ಸಮಯದಲ್ಲಿ ಗುರು ಮಠಗಳ ಬದಲು, ಶಾಲಾ, ಕಾಲೇಜುಗಳೂ, ಗುರುವಿನ ಬದಲು ಉಪಾಧ್ಯಾಯ, ಉಪನ್ಯಾಸಕರು ಬಂದರೋ ಅಂದೇ ಭಾರತದ ವಿದ್ಯಾ ಪೀಠ ಕಳಗಳಿಯಿತು. ಎಷ್ಟು ಕೆಳಗಿಳಿದಿದೆಯೆಂದರೆ ಅದನ್ನು ಇನ್ನು ಎಷ್ಟು ಮಾತ್ರಕ್ಕೂ ಮೇಲೆತ್ತಲು ಸಾಧ್ಯವಾಗಲಾರದು. ಇಲ್ಲಿ ಕೇಳು. ನಮ್ಮ ಹಿಂದಿನವರು ಎಷ್ಟು ದೊಡ್ಡ ವಿದ್ಯಾವಂತರಾಗಿದ್ದರು ನಿನಗೆ ಗೊತ್ತೆ? ಕೇಳು ಒಂದೆರಡು ಉದಾಹರಣೆ ಕೊಡುತ್ತೇನೆ. ಎರಡು ಮೂರು ಶತಮಾನಗಳ ಹಿಂದೆ ಒಬ್ಬ ಜ್ಯೋತಿಷ್ಯ ಗಣಿತನೇ ಇಂತಹಿಯಲ್ಲಿ ಕ್ವೆಟ್ಟಾದಲ್ಲಿ ಭೂಕಂಪವಾಗುವುದೆಂದು ಬರೆದಿಟ್ಟಿದ್ದ! ಹಾಗೆ ಗಣಿತದಲ್ಲಿ ಭೂಕಂಪವಾಯಿತು. ರಾವಣನು ಸೀತೆಯನ್ನು ಕದ್ದೊಯ್ದ. ರಾಮನು ಲಕ್ಷ್ಮಣನನ್ನು ಕುರಿತು, ಅಯ್ಯೋ ಲಕ್ಷ್ಮಣಾ ಸೀತೆಯ ಕವಚದಂತಹ ಮುಖವು ಎಷ್ಟು ಬಾಡಿರಬಹುದು, ಯೋಚಿಸಲು ಸಾಧ್ಯವೇ ? ಎಂದು ಕೇಳಿದಾಗ, ಲಕ್ಷ್ಮಣನು "ಅಯ್ಯೋ ಅಣ್ಣಾ, ನಾನಿಷ್ಟರ ವರೆಗೆ ಅತ್ತಿಗೆಯ ಮುಖ ನೋಡಲಿಲ್ಲ. ಬರೀ ಎರಡು ಪಾದ ಮಾತ್ರ ನೋಡಿರುವೆನು' ಎಂದು ಹೇಳಿದನು. ಬರೀ ಈ ಎರಡು ಮಾತುಗಳಿಂದ ನಮ್ಮ ನಾಡು ಎಷ್ಟು ಮುಂದುವರಿದಿತ್ತೆಂದು ಯೋಚಿಸು."

'ಮತ್ತೆ'

'ಇನ್ನೂ ಕೇಳು ರೀಟಾ. ನಮಗೆ ಕಾಲೇಜಿನಲ್ಲಿ ಏನೆಲ್ಲಾ ಕಲಿಸುತ್ತಾರೆ. ಕನ್ನಡ, ಇಂಗ್ಲಿಷ್, ಹಿಂದಿ, ಇನ್ನು ಓಪಾರ್ಟ್ ಸಿ. ಸಿ. ಎಂ., ಪಿ. ಸಿ. ಎಸ್., ಎ. ಎಂ. ಎಲ್. ಇವೇ ಮೊದಲಾದುವುಗಳು. ಇಷ್ಟೆಲ್ಲಾ ಒಬ್ಬ ವಿದ್ಯಾರ್ಥಿ ಕಲಿಯಬೇಕೆಂದರೆ ಸಾಧ್ಯವೇ ರೀಟಾ. ನಮ್ಮ ಹಿಂದಿನವರು ಅಷ್ಟು ಮುಂದುವರಿಯಲು ಕಾರಣ ಏನು ಗೊತ್ತೆ ? ಒಬ್ಬ ವೇದ ಕಲಿಯುತಿದ್ದರೆ ಅದನ್ನೆ ಕಲಿಯುತಿದ್ದ. ಇನ್ನೊಬ್ಬ ಶಾಸ್ತ್ರ ಕಲಿಯುತಿದ್ದರೆ ಅದನ್ನೇ ಕಲಿಯುತಿದ್ದ. ಅದರಲ್ಲಿ ಪಾರಂಗತನಾಗುತಿದ್ದ. ಈಗಿನ ಹಾಗೆ ಇಪ್ಪತ್ತೆಂಟು ವಿಷಯಗಳನ್ನು ಕಲಿಯುತ್ತಿದ್ದಿಲ್ಲ.

ಆದರೆ ಈಗಿನವರಿಗೆ ಎಂ. ಎ., ಎಂ. ಎಸ್‌ಸಿ., ಇವೇ ಮೊದಲಾದ ಡಿಗ್ರಿಗಳು ಸಿಕ್ಕುವುದಿಲ್ಲವೇ ? ಕಮ್ಮಿಯೇನು ಈ ಡಿಗ್ರಿಗಳು. 'ಮಾಸ್ಟರ್' ಎಂದೇ ಕೊಡುವರಲ್ಲ ?'

"ಇಲ್ಲಿ ಕೇಳು, ಏಳೆಂಟು Subject ತೆಗೆದುಕೊಂಡು 'ಮಾಸ್ಟರ್' ಆಗಲಿಕ್ಕೆ ಸಾಧ್ಯವೇ ರೀಟಾ ? ಮೊನ್ನೆ ನನ್ನ ಸ್ನೇಹಿತನ ಮನೆಗೆ ಹೋಗಿದ್ದೆ. ಅಲ್ಲಿ ಒಬ್ಬ ಬಿ. ಎ., (ಹಾನರ್ಸ್) ಆದವರ ಪರಿಚಯವಾಯಿತು. ಅವರು ಪೊಲಿಟಿಕ್ಸ್ (ರಾಜಕಾರಣ) ತೆಗೆದುಕೊಂಡು ಫಸ್ಟ್ ಕ್ಲಾಸಿನಲ್ಲಿ ಆನರ್ಸ್ ತೆಗೆದುಕೊಂಡಿದ್ದರು. ಯಾವುದೋ ವಿಷಯ ಚರ್ಚೆ ಮಾಡುತ್ತಾ, ಮಾತುತ್ತಾ, ಕಡೆಗೆ ಅವರಿಗೆ 'ಸ್ಟರ್ಲಿಂಗ್' ಎಂಬುದರ ಅರ್ಥ ನಾನೇ ಹೇಳಿಕೊಡಬೇಕಾಯಿತು !

'ಮತ್ತೇನಾಯಿತು'

'ಅತ ಹೋದ. ನಾನು ಮನೆಗೆ ಬಂದೆ. ಕೇಳು ಇನ್ನು ಈ ಏಳೆಂಟು Subject ತೆಗೆದುಕೊಂಡು ಹಗಲೂ ರಾತ್ರಿ ಸಿಗರೇಟು ಬೂದಿಮಾಡಿ, ಕಣ್ಣನ್ನು ತಾನೇ ಸುಟ್ಟುಕೊಂಡು ದೀಪ ಉರಿಸಿ ಉರಿಸೀ ಇಡರಮೇಲೆ ವರ್ಷಕ್ಕೊಂದು ಕನ್ನಡಕ ಬದಲು ಮಾಡುತ್ತಾ ಇಡೀ ವರ್ಷ ಎಲ್ಲಾ ವಿಷಯಗಳ ಉರು ಹಾಕಿ ಕಡೆಗೆ ಪರೀಕ್ಷೆಯಲ್ಲಿ ಇಂಗ್ಲಿಷೋ, ಕನ್ನಡವೋ ಒಂದೆರಡು ಮಾರ್ಕ್ ಕಡಮೆಯಾದರೆ ಅತ ಫೈಲ್.'

'ಅಂದರೆ ಮಾರ್ಕ್ ಕಮ್ಮಿಯಾದರೆ ಅತನನ್ನು ಫೈಲ್ ಮಾಡಬಾರದೆ.? '

ಅಂದರೆ ನಾನು ಇಂಗ್ಲಿಷಿನಲ್ಲಿ ಫೈಲ್ ಆದರೆ ನನಗೆ ಉಳಿದ ಸಬ್‌ಜೆಕ್ಟ್‌ಗಳಲ್ಲಿ ಸಿಕ್ಕಿದ ಮಾರ್ಕುಗಳಿಗೆ ಬೆಲೆಯಿಲ್ಲವೇ ರೀಟಾ? ಇಂಗ್ಲಿಷ್ ಒಂದರಲ್ಲಿ ಫೈಲ್ ಆದ ಮಾತ್ರಕ್ಕೆ ನನ್ನ ತಲೆಯಲ್ಲಿ ಏನು ಬೂದಿಯೇ ಇರುವದೇ?

'ನಾನೇನು ಹೇಳಲಿ ವಸಂತಾ.'

'ಇನ್ನೂ ಕೇಳು ರೀಟಾ, ಪ್ರತಿಯೊಬ್ಬನಲ್ಲಿಯೂ ಕೆಲವು ಹುಟ್ಟು ಕಲೆಗಳು ಮನೆ ಮಾಡಿ ಕೊಂಡಿರುತ್ತವೆ. ಉದಾಹರಣೆಗಾಗಿ ನಿನಗೆ ಸಂಗೀತದಲ್ಲಿ ಅಭಿರುಚಿ ಇರಬಹುದು. ಇನ್ನೊಬ್ಬನಿಗೆ ಆಟೋಟದಲ್ಲಿ ಅಭಿರುಚಿ ಇರಬಹುದು ಇನ್ನೊಬ್ಬನಲ್ಲಿ ಬರೆಯುವ (ಕಾದಂಬರಿ ಇತ್ಯಾದಿ) ಚಟ ಇರಬಹುದು. ಆದರೆ ಈ ಕಲೆಗಳನ್ನು ಪೋಷಿಸಲು ಕಾಲೇಜು ಏನು ಮಾಡಿದೆ? ನಮ್ಮ ಹುಟ್ಟು ಕಲೆಗಳನ್ನು ಬೆಳಗಿಸುವುದಕ್ಕೆ ನಮಗೆ ಅಸ್ಪದ ಎಲ್ಲಿದೆ ರೀಟಾ ?

'ಅಂದರೆ.'

'ಅಂದರೆ ಕೇಳು ಅಮೇರಿಕಾದಲ್ಲಿ, ಒಬ್ಬ ಹುಡುಗ ತನ್ನ ಮೆಟ್ರಿಕ್ಯುಲೇಶನ್ ಮುಗಿದ ಕೂಡಲೇ, ತನಗೆ ಹೆಚ್ಚು ಪ್ರಿಯವಾದ ಕೆಲಸ ಕಲಿಯಲು ಯಾವುದಾದರೂ ಒಂದು ಕಾರ್ಖಾನೆಯೋ ಅಥವಾ ಒಂದು ಫರ್ಮಿಗೋ ಸೇರಿಕೊಳ್ಳುತ್ತಾನೆ.

'ಅಂದರೆ.'

ಅಂದರೆ ಉದಾಹರಣೆಗಾಗಿ ನಿನಗೆ Logic ಬಹಳ ಹಿಡಿಸುವುದೆಂದು ತಿಳಿ. ನೀನು Logic ಮಾತ್ರ ಅಭ್ಯಾಸಮಾಡಿ ಅದೊಂದರಲ್ಲಿ ಪಾರಂಗತಳಾಗು. ನಿನಗೆ Modern History ಯಾಕೆ? Ancient History ಯಾಕೆ ?

'ಅಂದರೆ, ಎಲ್ಲಿ ಎಷ್ಟು ಜ್ಞಾನ ಸಂಪಾದಿಸಲು ಅಸ್ಪದವಾಗುವುದೋ, ಅಷ್ಟು ಸಂಪಾದಿಸಿಕೊಳ್ಳುವುದು ನಮ್ಮ ಕರ್ತವ್ಯವಲ್ಲವೇ?

'ಹೌದು. ಆದರೆ ಜ್ಞಾನವೆಂದರೆ ಏನು ರೀಟಾ? ಬಾಯಿಪಾಠ ಹೊಡೆದು ತೇರ್ಗಡೆಯೊಂದುವುದೇ? ಅಥವಾ ಪ್ರಶ್ನಾ ಪತ್ರಿಕೆಗಳು ಪರೀಕ್ಷೆಗಿಂತ ಮುಂಚೆ ಹೊರಬಿದ್ದಿದ್ದರೆ, ಅದಕ್ಕೆ ಸರಿಯಾಗಿ ತಯಾರು ಮಾಡಿಕೊಳ್ಳುವದೇ? ಈ ದೊಡ್ಡ ಮಾತುಗಳೆಲ್ಲಾ ಬರೇ ಸುಳ್ಳು ರೀಟಾ. ನಾವೆಲ್ಲ ಕಾಲೇಜಿಗೆ ಬಂದದ್ದು ಏಕೆ? ಮುಂದೆ ಒಂದು ಪಾಸ್‌ಪೋರ್ಟ್ (ಸರ್ಟಿಫಿಕೇಟ್) ಸಿಕ್ಕಿದರೆ

ಒಂದು ಕ್ವಾರ್ಟರ್ ಗಿರಿಯೂವರೂ ಸಿಕ್ಕಬಹು ಹೆಂಬ ಆಶೆಯಿಂದ, ಅಲ್ಲವೇ ರೀಟಾ. ?

'ಆಗಿರಬಹುದು.'

'ಅಹುದು ಆಗಿದೆ. ಆದುದರಿಂದಲೇ ನಿರುದ್ಯೋಗ ಸಮಸ್ಯೆ ಎದ್ದು ನಿಂತಿದೆ. ಇ ವರ ಬದಲು ನಮಗೆ ಅಭಿರುಚಿ ಇರುವ ಯಾವುದಾದರು ವಿದ್ಯೆ ಕಲಿಸಿದ್ದರೆ, ಈ ಸ ಮಸ್ಯೆ ಇರುತಿತ್ತೋ?

'ಇಲ್ಲವೆಂದು ಹೇಳಬಹುದು'

ಅಂತೂ, ನನ್ನ ವಿಚಾರಕ್ಕೆ ಒಪ್ಪಿಯೆಂ ದು ಹೇಳು.

'ಹೂಂ ಸರಿ. ಇಷ್ಟೆಲ್ಲಾ ತಿಳಿದಿದ್ದೂ ನೀನೇಕೆ ಕಾಲೇಜಿಗೆ ಬಂದೆ ?'

'ತಾಯಿ ತಂದೆಗಳ ಮಾತು ಮೀರಲಾ ರದೆ. ಆದರೆ ಒಂದು ಚೂರು ಓದಲಿಲ್ಲ'

'ಅಯ್ಯೋ ನಾಡಿದ್ದು ಪರೀಕ್ಷೆಯಲ್ಲ ವೇ? ಏನು ಮಾಡುವೆ.?'

'ಫೈಲಾದರೆ ಆಗಲಿ ರೀಟಾ. ಆದಕ್ಕೆ ನ ನಗೇನೂ ಬೇಸರವಿಲ್ಲ. ಆದಕ್ಕೆಲ್ಲಾ ನನ್ನ ನಿರ್ಧಾರ ಎಂದೋ ಆಗಿಬಿಟ್ಟಿದೆ'

'ಏನು ನಿರ್ಧಾರ ಮಾಡಿರುವೆ.'

'ಕಾಲೇಜು ಬಿಡುವಂತೆ.'

'ನಂತರ'

'ನಿನಗೆ ಮೇಲೆ ಹೇಳಿದ ರೀತಿಯ ವಿಷ ಯ ವಿರ್ಪಾಡಿಗೆ ಹೆಣಗಾಡುವೆನು.'

ಅಂತೂ ಇದೆಲ್ಲಾ 'ಮುಗಿಲ ಹೂ' ಎಂದು ಹೇಳು.

ಇರಬಹುದು. ಆದರೆ ಪ್ರಯತ್ನಿಸುವ ದು ನಮ್ಮ ಕರ್ತವ್ಯ.

'ಆದಷ್ಟು ಪ್ರಯತ್ನಪಡು ವಸಂತಾ. ನಾನು ನನ್ನ ಕ್ಲಿಯ್ಯಾ ಬ್ಲಾದ ಮಕ್ಕಿಗೆ ಸ ಹಾಯ ಮಾಡುವೆನು. ಈಗ ಗಂಟೆ ೫ ಆ ಯಿತು. ಎಲ್ಲಾದರೂ ಸ್ವಲ್ಪ ಸುತ್ತಾಡಿ ಕೊಂಡು ಬರೋಣವೇ?'

'ಸರಿ, ನಡೆ ಹೋಗೋಣ.'

—

ಮಾರಾಟಕ್ಕಿದೆ.

ಮಡಿಕೇರಿಯಲ್ಲಿ ಹೊಸ ಕಾಲೇಜು ಕಟ್ಟಡದ ಬಳಿ ಸಾಗುವಳಿಯಾಗುತ್ತಿರುವ ನನ್ನ ಸ್ವಯಾರ್ಜಿತ ಆಸ್ತಿಯಾದ, 5 ಏಕ್ರೆ ನೀರಾವರಿ ಭೂಮಿ, ಇದಕ್ಕೆ ಸೇರಿದ 8 ಏಕ್ರೆ ಜಾಗ ಮತ್ತು ವಾಸಕ್ಕೆ ಯೋಗ್ಯವಾ ದ ಹಂಚು ಹಾಕಿದ ಮನೆ ಇಲ್ಲದೆ, ಇದೇ ಬ್ಲಾಕಿನಲ್ಲಿ ಪ್ರತ್ಯೇಕವಾಗಿ ನನ್ನ ಒಂದು ಏಕರು ಜಾಗ ಮತ್ತು ಹುಲ್ಲಿನ ಮನೆ ವ ಗೈರೆ ಮಾರಾಟಕ್ಕಿವೆ.

ಸ್ಥಳವು ಕಾನ್ವೆಂಟಿಗೂ ಮತ್ತು ಕಾ ಲೇಜಿಗೂ ಸಮೀಪವಾಗಿರುವುದರಿಂದ ಮಕ್ಕ ಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದೆ. ಜಾಗವು ಕಿತ್ತಳೆ ಮತ್ತು ಕಾಫಿ ಬೆಳೆಸಲು ಉತ್ತಮವಾಗಿದೆ ಹಾಗೂ ದನಕರಗಳನ್ನು ಸಾಕಲು ಯೋಗ್ಯವಾದ ಆವರಣವಾಗಿದೆ. ಖಾಯಿಸ್‌ದಾರರು ಉಭಯ ಆಸ್ತಿಗಳನ್ನು ಒಟ್ಟಾಗಿಯಾಗಲೀ, ಬೇರೆ ಬೇರೆಯಾಗಲೀ ಕೊಂಡುಕೊಳ್ಳಬಹುದು. ಹೆಚ್ಚಿನ ವಿವರಗಳನ್ನು ಖುದ್ದು ನೋಡಿಯಾಗಲೀ ಇಲ್ಲವೇ ಪತ್ರ ಮೂಲಕ ಕೆಳಗಿನ ವಿಳಾಸ ದಿಂದ ತಿಳಿದುಕೊಳ್ಳಬಹುದು.

ಎನ್. ಎಂ. ಬೋಪಯ್ಯ,
ಮಾಸ್ಟರ್ ಟೈಲರ್,
ಚೌಕ್, ಮಡಿಕೇರಿ.

—

ನಗುಮಲ್ಲಿಗೆ

ಪ್ರಿಸರ್ವನ ಯುವಕನೊಬ್ಬನು ಅಲ್ಲಿ ಯ ಜನ ದಾಬ್ಬರಲ್ಲಿಗೆ ಹೋಗಿ ಒಂದು ಲೈ ಸೆನ್ಸು ದಯಪಾಲಿಸಬೇಕೆಂದು ಕೇಳಿದನು.

ಜಡ್ಜ್—ಎಂಥಾ ಲೈಸೆನ್ಸು ? ಬೇಟೆಯ ಲೈಸೆನ್ಸ್ ?

ಯುವಕ—ನಾನು ಬಹುಕಾಲ ಬೇಟೆ ಯಲ್ಲಿದ್ದೆ. ಈಗ ನನಗೆ ಬೇಕಾದದು ಮ ದುವೆಯ ಲೈಸೆನ್ಸು !

* * *

ರಾತ್ರಿ ಕ್ಲಬ್ಬಿನಲ್ಲಿ ಸಾರಾಯಿ ಕುಡಿ ದು ರಾತ್ರಿ ಇಡೀ ಮತ್ತನಾಗಿದ್ದ ವ್ಯಕ್ತಿ ಯೊಬ್ಬನು ಬೆಳಗ್ಗೆ ನಾಲ್ಕು ಗಂಟೆಗೆ ಬಾಗಿ ಲ ಬಳಿ ನಿಂತು 'ಅಯ್ಯೋ ದೇವರೆ, ಇದೇ ನು ಹೊಸ ವಾಸನೆಯೊಂದು ಇಲ್ಲಿ ತುಂಬಿ ದೆಯಲ್ಲಾ' ಎಂದನು.

ಬಾಗಿಲು ಪಹರೆಯವ—ಅದು ಹೊಸ ಗಾಳಿ ಸಾರ್ ಎಂದ !

* * *

ಕಳ್ಳತನದಲ್ಲಿ ಕೆರೆಯಲ್ಲಿ ಮೀನು ಹಿಡಿ ಯುತ್ತಿದ್ದವನನ್ನು ಕೆರೆಯ ಯಜಮಾನನು ಕಂಡು ಆತನ ಗುಟ್ಟನ್ನು ತಿಳಿಯಲು 'ಹೇ ಗಿದೆ ಅದೃಷ್ಟ ಈ ದಿನ' ಎಂದನು.

'ಈ ದಿನ ಹೆಚ್ಚೇನಿಲ್ಲ. ನಿನ್ನೆ ೪೦ ಮೀನುಗಳು ದೊರೆತವು'

'ನಿನಗೆ ಗೊತ್ತೇ ನಾನಾರೆಂದು. ಈ ಕೆರೆಯ ಯಜಮಾನನು ನಾನು. ನಿನ್ನ ಮೇಲೆ ಕ್ರಮಜರಗಿಸುವೆನು'

'ಅಯ್ಯೋ ನಿಮಗೆ ಗೊತ್ತೇ ನಾನಾರೆಂ ದು. ಈ ದೇಶದ ಸುಳ್ಳುಗಾರರಲ್ಲಿ ಅಗ್ರ ಗಣ್ಯ !'

* * *

ಸಭೆಯಲ್ಲಿ ಭಾಷಣ ಕರ್ತರು ಭಾಷ ಣ ಪ್ರಾರಂಭಿಸುತ್ತಾ ಹೇಳಿದರು.

'ಗೆಳೆಯರೇ, ನಿಮ್ಮನ್ನು ನಾನು 'ಲೇ ಡೀಸ್ ಆಯಿಂಡ್ ಜಂಟ್ಲ್‌ಮೆನ್' ಎಂದು ಸಂಬೋಧಿಸಲಾರೆ. ಏಕೆಂದರೆ ನಿಮ್ಮ ಪ್ರ ತಿಯೊಬ್ಬನ ಪರಿಚಯು ನನಗೆ ಚೆನ್ನಾಗಿದೆ !

* * *

ಆಕೆ—ನಮ್ಮ ಈಗಿನ ಮನೆ ಬಹು ಸೊ ಗಸಾಗಿದೆ. ಆದರೆ ಒಂದೇ ತೊಂದರೆ. ನಾ ವು ಮಾತಾಡುವದೆಲ್ಲ ನೆರೆಮನೆಯವರಿಗೆ ಕೇಳುತ್ತದೆ.

ಆತ—ಹಾಗಾದರೆ ಮಾತು ಕೇಳದ ಹಾ ಗೆ ಮಧ್ಯೆ ಗೋಡೆ ಹಾಕಿಸಿಬಿಟ್ಟರೆ !

ಆಕೆ—ಆದರೆ ನೆರೆಮನೆಯವರು ಮಾತಾ ಡತ್ತಾರಂಭಿಸಿದು ನನಗೆ ಕೇಳದಾಗುವದು !

* * *

ರಾಮು—ನನಗೆ ಈ ಕೆಲಸ ಸಾಕಾಯಿ ತು. ಇದನ್ನು ಬಿಡುವದೇ ಒಳಿತು. ನೀ ನೂ ಬಿಟ್ಟು ಬಾ. ಇಬ್ಬರೂ ಜೊತೆಯಲ್ಲಿ ಹೋಗುವಾ. ಆಫ್ರಿಕಾದಲ್ಲಿ ಒಂದು ಸ್ಥ ಳವಿದೆಯಂತೆ. ಮುತ್ತುರತ್ನಗಳೂ ಚಿನ್ನ ವು ಹರಡಿದೆಯಂತೆ. ಅದನ್ನು ಒಟ್ಟುಗೂಡಿ ಸಿದರೆ ಸುಖವಾಗಿ ಬದುಕಬಹುದು.

ಕೃಷ್ಣನು—ಅದನ್ನು ಎತ್ತಲು ಬಗ್ಗಬೇ ಕಲ್ಲ. ಆ ಕೆಲಸ ಮಾಡುವವರಾರು ?

The New Guardian of India Life Insurance Co., Ltd.,

— HEAD OFFICE. —

Post Box No.—142 Esplanade, MADRAS 1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT.

The New Gaurdian of India Life Insurence Co., Ltd. for COORG, Virajpet.

12-11 OR

To The Head Office, MADRAS.

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-6 **PATTU BROTHERS,**

OPP.— **Town Hall, MYSORE.**

* * *

ಅಧ್ಯಾಪಕ—ಹತ್ತು ಬೆರಳುಗಳಲ್ಲಿ ನಾ ಲ್ಕನ್ನು ತೆಗೆದರೆ ಎಷ್ಟು ಉಳಿಯುತ್ತದೆ ?

ಕಮಲನು ಉತ್ತರಕೊಡಲಿಲ್ಲ.

ಅಧ್ಯಾಪಕ—ನಿನಗೆ ಎಷ್ಟು ಬೆರಳುಗ ಳವೆ ?

ಕಮಲ—ಹತ್ತು.

ಅಧ್ಯಾಪಕ—ಅವುಗಳಲ್ಲಿ ನಾಲ್ಕು ಕತ್ತ ರಿಸಿ ಹೋಯಿತೆಂದು ತಿಳಿ. ಬಾಕಿ ಏನಾ ಗುವದು ?

ಕಮಲ—ಸಂಗೀತ ಪಾಠ ಕಲಿಯುವ ದು ಬಾಕಿಯಾಗುವದು !

—

ಬೆಂಗಳೂರಿನಲ್ಲಿ ಟೀಚರ್‍ಸ್ ಕಾಲೇಜ್.

ಸರಿಯಾಗಿ ಶಿಕ್ಷಣ ಹೊಂದಿರುವ ಉ ಪಾಧ್ಯಾಯರುಗಳ ಅಭಾವವು ದೇಶದಲ್ಲಿ ಬ ಹಳವಿರುವುದರಿಂದಲೂ, ಮತ್ತು ಈಗ ಮೈ ಸೂರಿನಲ್ಲಿರುವ ಟೀಚರ್ಸ್ ಕಾಲೇಜಿನಲ್ಲಿ ಪ ರ್ಸ್ಕೆ ಕೇವಲ ೮೦ ಜನರಿಗೆ ಮಾತ್ರ ತರ ಬೇತಿ ಕೊಡುತ್ತಿರುವುದರಿಂದಲೂ, ಇನ್ನೂ ಹೆಚ್ಚು ಸಂಖ್ಯೆಯಲ್ಲಿ ಸುಶಿಕ್ಷಿತರಾದ ಉ ಪಾಧ್ಯಾಯರುಗಳನ್ನು ತರಬೇತು ಮಾಡ ಲು ಬೆಂಗಳೂರಿನಲ್ಲಿ ಮತ್ತೊಂದು 'ಟೀಚ ರ್ಸ್ ಕಾಲೇಜ್' ತೆರೆಯಲಾಗುವುದೆಂದೂ ಗೊತ್ತಾಗಿದೆ.

ಶಿಕ್ಷಣ ಸುಧಾರಣಾ ಸಮಿತಿಯವರು ಈ ವಿಚಾರದಲ್ಲಿ ಮಾಡಿರುವ ಸಲಹೆಯು ಸರಕಾರದ ಪರ್ಯಾಲೋಚನೆಯಲ್ಲಿರುವು ದಾಗಿ ತಿಳಿದುಬಂದಿದೆ. ಸರಿಯಾಗಿ ಶಿಕ್ಷ ಣ ಪಡೆದ ಹಿರಿಯ ಉಪಾಧ್ಯಾಯರನ್ನು ಬಿ. ಟಿ. ಪದವಿಯತ್ತು ತರಬೇತು ಮಾಡಲು ವಿಶ್ವವಿದ್ಯಾನಿಲಯಕ್ಕೆ ಸರಕಾರಕ್ಕೆ ಸುಮಾರು ... ರಾಯಿಗಳು ಖರ್ಚಾಗುವುದಾ ಗಿ ಹೇಳಲಾಗಿದೆ.

ಆಚಾರ್ಯ ವಿನೋಬಾ ಭಾವೆ.

ಭೂದಾನ ಯಜ್ಞಕ್ಕಾಗಿ ಭಾರತದಾ ದ್ಯಂತ ಕಾಲ್ನಡಿಗೆಯಿಂದಲೇ ಸಂಚರಿಸುವ ದೀಕ್ಷೆಯನ್ನಿಟ್ಟುಕೊಂಡಿರುವ ಆಚಾರ್ಯ ವಿನೋಬಾಜಿಯವರು ಕಳೆದ ಡಿಸೆಂಬರದಿಂದ (ಅನಾರೋಗ್ಯದ ನಿಮಿತ್ತ ಚಾಂಡಿಲ್ ಎಂಬ ಲ್ಲಿ ವಿರಾಮ ಪಡೆಯುತ್ತಿದ್ದರಷ್ಟೆ. ಇದೇ ತಾ. ... ರಂದು ತಮ್ಮ ಸಂಚಾರವನ್ನು ಅವರು ಪುನಃ ಪ್ರಾರಂಭಿಸಿದ್ದಾರೆ.

ಯೋಷಿಡಾ ಸರಕಾರದ ಪತನ.

ಜಪಾನಿ ಪಾರ್ಲಿಮೆಂಟಿನಲ್ಲಿ ಸರಕಾ ರದ ಮೇಲಿನ ಅವಿಶ್ವಾಸ ನಿರ್ಣಯ ಅಂ ಗೀಕೃತವಾಗಿ ಪ್ರಧಾನಿ ಶಿಗರು ಯೋಷಿಡಾ ರವರ ಲಿಬರಲ್ ಸರಕಾರ ಉರುಳಿದೆ. ಯೋಷಿಡಾ ಪಾರ್ಲಿಮೆಂಟಿಗೆ ಹೋಗುವ ಮುನ್ನ ೩೦ ಕ್ಕೂ ಹೆಚ್ಚು ಮಂದಿ 'ಉಗ್ರ ವಾದಿ' ಸದಸ್ಯರು ಲಿಬರಲ್ ಪಕ್ಷ ತ್ಯಜಿಸಿ ಯೋಷಿಡಾರಿಗೆ ಬಹುಮತ ತಪ್ಪಿತು.

(ಮುಖ್ಯ ಮಂತ್ರಿಗಳಿಗೆ ಬಹಿರಂಗ ಪತ್ರ.

ಫಾರೆಸ್ಟ್ ಇಲಾಖೆಯಲ್ಲಿ ಅವ್ಯವಸ್ಥೆ.

ಸೌದೆಯ ಹೆಸರಿನಲ್ಲಿ ಮರದ ಕಳ್ಳ ಮಾರಾಟ !

ಕೊಡಗು ಫಾರೆಸ್ಟ್ ಇಲಾಖೆಯ ಆಡಳಿತ ವ್ಯವಸ್ಥೆ ಸರಿಯಾಗಿ ನಡೆಯುತ್ತಿಲ್ಲವೆಂದು ಈ ಮೊದಲು ಒಂದೆರಡು ಬಾರಿ ಪತ್ರಿಕೆಯಲ್ಲಿ ಬರೆಯಲಾಗಿತ್ತು. ಕಳೆದ ವಿಧಾನ ಸಭೆಯ ಬಜೆಟ್ ಮೀಟಿಂಗಿನ ಕಾಲಕ್ಕೆ ನೀವು ಫಾರೆಸ್ಟ್ ನೀತಿಯನ್ನು ಸಮರ್ಥಿಸಿ ವಾದ ಮಾಡಿದಿರಿ. ನಿಮ್ಮ ವಾದ ಸರಣಿಯು ಆಗ ಕೇವಲ ಒಂದು ಪ್ರತಿಭಟನೆಯಾಗಿ ಇದ್ದಿತೇ ವಿನಾ ಫಾರೆಸ್ಟಿನಲ್ಲಾಗುತ್ತಿರುವ ಅನಾಹುತದ ಅರಿವು ನಿಮಗೂ ಇದ್ದಿರಬೇಕೆಂಬುದು ನಿಮ್ಮ ವಾದದಿಂದ ಗೊತ್ತಾಗುತಿತ್ತು. ಈ ಸಂಶಯದ ಕಾರಣವೇ ನೀವು ಕೆಲವೆಡೆ ಅಕಸ್ಮಾತ್ ಸಂದರ್ಶನ ಕೊಟ್ಟು ಇಲಾಖೆಯ ಕೆಲಸಗಳನ್ನು ಪರಿಶೀಲಿಸಿದಿರೆಂದು ಊಹಿಸುವೆನು. ಇದರಿಂದ ಪರಿಸ್ಥಿತಿ ಸುಧಾರಿಸಬಹುದೆಂದೂ ಕಾರ್ಯಕಲಾಪಗಳು ಯೋಗ್ಯ ರೀತಿ ನಡೆಯಬಹುದೆಂದೂ ನಂಬಿದ್ದೆನು. ಆದರೆ ಪರಿಸ್ಥಿತಿ ಇನ್ನಷ್ಟು ಹಾಳಾಗುತ್ತಿದೆಯೆಂದು ವಿಷಾದದಿಂದ ಹೇಳಬೇಕಾಗಿದೆ. ಕೊಡಗಿನ ಸರಕಾರದ ಆದಾಯದ ಗನಿಯೆಂತಿರುವ ಕೊಡಗು ಫಾರೆಸ್ಟಿನಲ್ಲಿ ಈ ರೀತಿಯ ಅಹಿತ ವರ್ತನೆಗಳಾಗಬಾರದು. ಈ ಕೆಳಗೆ ನಿಮ್ಮ ಅವಗಾಹನೆಗಾಗಿ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ.

ನಾಗರಹೊಳೆ ಫಾರೆಸ್ಟಿನಿಂದ ದಿನವಹಿ ಸೌದೆಯ ಹೆಸರಿನಲ್ಲಿ ಮರ ಸಾಗಿಸಲ್ಪಡುತ್ತಿದೆ. ಲಾರಿಗೆ ಹತ್ತು ರೂಪಾಯಿಯನ್ನು ತೆತ್ತು ಪಾಸು ತೆಗೆದು ಸೌದೆಯ ಬದಲು ಹದಿನಾಲ್ಕು, ಹದಿನೈದಡಿ ಉದ್ದದ ನಾಲ್ಕಡಿಗಿಂಥಾ ಹೆಚ್ಚಿನ ಸುತ್ತಳತೆಯ ನಂದಿ, ಮತ್ತಿ, ಅರಸಿನ ತೇಗ, ತಡಸಿಲು ಮೊದಲಾದ ಮರಗಳು ಸಾಗಿಸಲ್ಪಡುತ್ತಿವೆ. ಹುಣಸೂರಿನಲ್ಲಿರುವ ಇಬ್ರಾಹಿಂ ಖಾನ್, ಸಯ್ಯದ್ ಮೊಹಿದಿನ್ ಮತ್ತು ಮೊಹಿದಿನ್ ಖಾನ್ ಇವರು ಮರಗಳನ್ನು ಸಾಗಿಸಿ ಹುಣಸೂರಿನಲ್ಲಿ ಅದೇ ಮರಗಳನ್ನು ಅಡಿ ಒಂದಕ್ಕೆ ರೂ. ೩-೪-೦ರಂತೆ ಮಾರುತ್ತಿದ್ದಾರೆ. ತಾರೀಕು ೧೦ರಲ್ಲಿ ಕೊಡಗಿನ ಜವಾಬ್ದಾರಿಯುತ ವ್ಯಕ್ತಿಯೊಬ್ಬರೊಡನೆ ನಾನು ಸ್ವತಹ ಹೋಗಿ ಅವರೊಡನೆ ಮಾತಾಡಿ ಮರ ಕ್ರಯ ಮಾಡಿರುವೆನು. ಆ ಮರಗಳನ್ನು ಅವರು ನಾಗರಹೊಳೆಯಿಂದ ತಂದಿರುವದಾಗಿಯೂ ಆ ರೀತಿಯ ಪಾಸು ಬೇಕೆಯವರಿಗೆ ದೊರೆಯುವದಿಲ್ಲವೆಂದೂ ತಿಳಿದು ಬಂದಿದೆ. ಈ ರೀತಿಯ ಒಂದು ವಿಚಾರ ನಡೆಯುತ್ತಿದ್ದರೆ ಸರಕಾರ ವಿಚಾರಿಸಿ ತಪ್ಪಿತಸ್ಥರನ್ನು ಶಿಕ್ಷಿಸಬೇಡವೇ ?

ತಾರೀಕು ೯-೩-೫೩ರಲ್ಲು ಕುಟ್ಟ, ಗೇಟಿನಲ್ಲಿ ಸೌದೆ ಲಾರಿಯ ಹೆಸರಿನಿಂದ ಮರ ಸಾಗಿಸುತ್ತಿದ್ದುದನ್ನು ಪೋಲೀಸ್ ಕಾನ್ಸ್‌ಟೇಬಲ್ ನಂ. ೧೦೪ ಇವರು ಪತ್ತೆ ಹಚ್ಚಿ ಹಿಡಿದಿದ್ದಾರೆ. ತಾ. ೫-೩-೫೩ರಲ್ಲೂ ಒಂದು ಲಾರಿ ಮರ ಹೀಗೆ ಹೋಗುತಿದ್ದುದನ್ನು ಕಾನ್ಸ್‌ಟೇಬಲ್ ನಂ. ೧೨, ಇವರು ಹಿಡಿದಿದ್ದಾರೆ. ಕೇವಲ ರೂ. ೧೦ ರ ಸೌದೆ ಪಾಸು ತೆಗೆದು ಸಾಗಿಸುತಿದ್ದ ಈ ಲಾರಿಯಲ್ಲಿದ್ದ ಸ್ವಲ್ಪ ಮರಗಳ ಲೆಕ್ಕವನ್ನು ಇದರಡಿ ಕೊಟ್ಟಿರುವೆನು. ಅದರಲ್ಲಿದ್ದ ಮರಗಳ ಅಳತೆ ಇದು.

ಉದ್ದ	ಸುತ್ತಳತೆ	ಸಂಖ್ಯೆ
೧೨ ಅಡಿ ೯ ಇಂಚು	೫ ಅಡಿ	೧
೧೪ „ ೩ „	೩ „	೧
೧೪ „ ೬ „	೩. ೨	೧
೧೪ „ ೬ „	೪ „	೧
೧೪ „ ೬ „	೪. ೬	೧
೧೪ „ ೬ „	೩. ೬	೧
೧೪ „	೩. ೬	೧

ಹೀಗೆ ಒಟ್ಟು ೧೫ ಕಣ್ಣು ಮಿಕ್ಕಿ ಲಾಗುಗಳು ಈ ಲಾರಿಗಳಲ್ಲಿದ್ದುವೆಂದು ತಿಳಿದು ಬಂದಿದೆ. ಈ ಲಾಗುಗಳ ಮೇಲೆ "ಸಿ. ಆರ್. ಎಸ್." ಎಂದು ಇಂಗ್ಲಿಷ್ ಅಕ್ಷರದ ಸೀಲುಗಳಿದ್ದುವೆಂದು ಗೊತ್ತಾಗಿದೆ. ಪೋಲೀಸರು ಲಾರಿಗಳನ್ನು ತಡೆದು ಕಳ್ಳತನವನ್ನು ಕಂಡು ಹಿಡಿದಿದ್ದರೂ ಅವರ ಮೇಲೆ ಕೇಸು ನಡೆದಿಲ್ಲವೆಂದು ವರ್ತಮಾನವಿದೆ. ಹೀಗಾಗಲು ಕಾರಣವೇನು ? ಇದೇ ರೀತಿ ವರ್ಕಲ್ ಗೇಟಿಗಾಗಿ ಮರ ಸಾಗಾಟ ತಡೆಯಿಲ್ಲದೆ ನಡೆಯುತ್ತಿದೆಯಂತೆ.

ಕೇವಲ ರೈತರಾಗಿ ಹಳ್ಳಿಗಳಲ್ಲಿರುವ ನಮಗೆ ಈ ಮೋಸ, ಲೂಟಿಯನ್ನು ಕಂಡು ಹಿಡಿದು ಸರಕಾರಕ್ಕೆ ದೂರು ಕೊಡುವ ಅವಸ್ಥದ ಬಹಳ ಕಡಮೆ. ಫಾರೆಸ್ಟ್ ಏರಿಯಕ್ಕೆ ನಾವು ಹೋಗುವದೇ ಕಡಮೆ. ಆದರೆ ನಮ್ಮ ನೆರೆಯಲ್ಲಿರುವ ಫಾರೆಸ್ಟಿನಲ್ಲಾಗುತ್ತಿರುವ ವಾರ್ತೆ ನನಗೆ ಅಶಾಂತಿಯನ್ನುಂಟು ಮಾಡಿದೆ. ಜನತಾ ಸರಕಾರದ ಆಡಳಿತದಲ್ಲಿ ಈ ರೀತಿಯ ಹಗಲು ದರೋಡೆ ನಡೆಯಬಾರದು. ಮೇಲೆ ಕೊಟ್ಟಿರುವ ಉದಾಹರಣೆಗಳನ್ನು ಸರಕಾರ ಪರಿಶೀಲಿಸಬೇಕು. ಪರಿಶೀಲಿಸಿ ಸತ್ಯಾಂಶವನ್ನು ಜನತೆಯ ಮುಂದಿಡಬೇಕು. ಕೊಡಗು ಸರಕಾರದ ಫಾರೆಸ್ಟ್ ನೀತಿಯ ಬಗ್ಗೆ ಅತೃಪ್ತಿ ಹಲವರಲ್ಲಿ ತೋರಿಬರುತ್ತಿದೆ. ಈ ಅತೃಪ್ತಿಯನ್ನು ನೀಗಿ ಜನತೆಗೆ ಒಂದು ಸಮಾಧಾನವನ್ನು ಕೊಡಬಲ್ಲವರು ನೀವಾದ್ದರಿಂದ ಈ ಬಹಿರಂಗ ಪತ್ರವನ್ನು ನಿಮಗೆ ಬರೆದಿರುವೆನು. ಈ ವಿಚಾರದಲ್ಲಿ ನೀವು ನಿಗವಹಿಸುವಿರೆಂದು ಆಶಿಸಿರುವೆನು.

'ನಿಮ್ಮ ಸ್ವಂತ ಸುದ್ದಿಗಾರ'

ತ್ಯಾಗಿ ರಕ್ಷಣಾ ಮಂತ್ರಿ.

ದಿ. ಗೋಪಾಲಸ್ವಾಮಿ ಅಯ್ಯಂಗಾರರ ಸ್ಥಾನದಲ್ಲಿ ಶ್ರೀ. ಮಹಾವೀರ ತ್ಯಾಗಿ ಅವರು ರಕ್ಷಣಾ ಮಂತ್ರಿಗಳಾಗಿ ನೇಮಿಸಲ್ಪಟ್ಟಿರುವರು. ಶ್ರೀ. ತ್ಯಾಗಿ ಅವರು ಅರ್ಥ ಶಾಲೆಯ ಉಪ ಮಂತ್ರಿಗಳಾಗಿದ್ದರು.

ಸ್ತ್ರೀಯರು ಧನವನ್ನು ಉಳಿಸಬೇಕು.

ಬಡವರ ಅಥವಾ ಬಲ್ಲಿದರ ಮನೆಯ ಸ್ತ್ರೀಯರು ದೇಶದಾದ್ಯಂತದಲ್ಲಿ ಸ್ವಲ್ಪ ಸ್ವಲ್ಪ ಹಣವನ್ನು ಕೂಡ ಹಾಕಿ, ಅಂತಹ ಸಂಕಲಿತ ಬಂಡವಲದ ಶಕ್ತಿಯನ್ನು ತಿಳಿದುಕೊಂಡು ಅದನ್ನು ವೃದ್ಧಿಪಡಿಸಿದರೆ ಅವರ ದೇಶಾಭಿಮಾನದ ಸೇವೆಯಿಂದ ಎಂತಹ ಯೋಜನೆಗಳೂ ಜಯಹೊಂದುವುವೆಂಬುದು ಖಂಡಿತ.'

ಸ್ತ್ರೀಯರಿಗಾಗಿ ಏರ್ಪಟ್ಟ ಉಳಿತಾಯದ ವಾರದ ಉದ್ಘಾಟನೆಯನ್ನು ೧೪ ರಲ್ಲಿ ಮಾಡುತ್ತಾ ಮೈಸೂರಿನ ರಾಜಪ್ರಮುಖರಾದ ಶ್ರೀ. ಜಯಚಾಮರಾಜ ಒಡೆಯರ್ ಅವರು ಮೈಸೂರು ಆಕಾಶವಾಣಿಯಲ್ಲಿ ಭಾಷಣವಿತ್ತರು.

'ಗಂಡಸರನ್ನು ಕೇಳಿಕೊಳ್ಳುವುದಕ್ಕಿಂತಲೂ ಸ್ತ್ರೀಯರನ್ನು ಪ್ರಾರ್ಥಿಸುವುದು ಸರಿಯಾದ ಮಾರ್ಗ. ಇದು ಮಾನವ ಸ್ವಭಾವವನ್ನು ತೋರಿಸುವುದು ಮತ್ತು ಮನೆಗಳಲ್ಲಿ ಮಿತವ್ಯಯದ ಅಭಿಪ್ರಾಯ ಉಂಟಾಗುವಂತೆ ಮಾಡುವುದು ಅಗತ್ಯ.

'ಪಂಚವಾರ್ಷಿಕ ಯೋಜನೆಯು ಜನತೆಯ ಆಶೆ ಆಕಾಂಕ್ಷೆಗಳಿಗೆ ಮೂರ್ತಸ್ವರೂಪವನ್ನು ಕೊಟ್ಟಿದೆ. ಭದ್ರತೆ ಸಮೃದ್ಧಿ ಮತ್ತು ಅಭಿವೃದ್ಧಿ—ಇವನ್ನು ಅತ್ಯಲ್ಪ ಸಮಯದಲ್ಲಿ ಪಡೆಯುವುದಕ್ಕೆ ಅವಕಾಶವನ್ನುಂಟುಮಾಡಿದೆ ಈ ಯೋಜನೆಗಳಿಗೆ ಹೆಚ್ಚಿನಂಶ ಹಣವನ್ನು ದೇಶದಲ್ಲಿಯೇ ಒದಗಿಸಬೇಕಾಗುವುದು.

'ಪರದೇಶಗಳವರಿಂದ ದೊಡ್ಡ ದೊಡ್ಡ ಉತ್ಪಾದನಾ ಕಾರ್ಖಾನೆಗಳಿಗೆ ಬಂಡವಲವನ್ನು ಅಧಿಕವಾಗಿ ನಿರೀಕ್ಷಿಸುವುದು ನ್ಯಾಯವೂ ಅಲ್ಲ ಒಳ್ಳೆಯದೂ ಅಲ್ಲ. ಈ ಮಹಾ ಕಾರ್ಯದಲ್ಲಿ ನಮ್ಮ ದೇಶದ ಶ್ರೀಮಂತರೂ, ಬಡವರೂ, ಮಧ್ಯಮ ವರ್ಗದವರೂ—ಎಲ್ಲರೂ ಭಾಗವಹಿಸಬೇಕು.

'ರಾಷ್ಟ್ರೀಯ ಉಳಿತಾಯವು ಬಹು ಆಕರ್ಷಣೀಯವಾದ ರೀತಿಯ ಧನ ಸಂಗ್ರಹವಾಗಿದೆ. ಇದರಲ್ಲಿ ದೇಶಾಭಿಮಾನ ಮತ್ತು ಮಿತವ್ಯಯ ಇವೆರಡು ತತ್ವಗಳು ಒಟ್ಟಿಗೆ ಸೇರಿವೆ. ಪ್ರತಿಯೊಬ್ಬ ಭಾರತೀಯನೂ ಭಾರತದ ಆರ್ಥಿಕ ಅಭಿವೃದ್ಧಿಗಾಗಿ ನಡೆಯುವ ದೊಡ್ಡ ಕಾರ್ಯಗಳಿಗೆ ತನ್ನ ಅಲ್ಪ ಪಾಲನ್ನು ಕೊಡುವುದು ಅಗತ್ಯವಾಗಿದೆ' ಎಂದು ಹೇಳಿದರು.

ಮಾರಾಟಕ್ಕಿದೆ.

ಶನಿವಾರಸಂತೆಯ ಎರಡು ಮೈಲು ದೂರದಲ್ಲಿ ಮಡಿಕೇರಿಗೆ ಬರುವ ರಸ್ತೆ ಪಕ್ಕದಲ್ಲಿರುವ ಎಂಟೂವರೆ ಎಕ್ರೆ ತರಿ ಭೂಮಿ, ಮೂರು ಎಕರೆ ಕಿತ್ತಳೆ ತೋಟ, (ಅಂದಾಜು) ಸಾವಿರ ರೂಪಾಯಿ ಗುತ್ತಿಗೆಗೆ ಹೋಗುತ್ತಿ ವಾಸದ ಮನೆ ಇವುಗಳು ಮಾರಾಟಕ್ಕಿವೆ. ಖಾಯಿಸ್‌ದಾರರು ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಶಕ್ತಿಗೆ ಬರೆದುಕೊಳ್ಳಬಹುದು.

ಎಂ. ಆರ್. ಬಾತನ್‌ಖಾನ್,

ಶನಿವಾರಸಂತೆ.

3-2

॥ ಮಧು ಪರ್ಕ ॥

ಜೋನಾನ್ಸ್ ಬರ್ಗಿನಲ್ಲಿ ಒಂದು ಸಭೆ. ಜನ ಕಿಕ್ಕಿರಿದು ನೆರೆದಿದ್ದರು. ಭಾಷಣ ಮುಗಿದ ಮೇಲೆ ಗಾಂಧೀಯವರು ವೇದಿಕೆಯಿಂದ ಇಳಿದು ಮಿಲ್ಲೀ ಪೋಲಕರೊಡನೆ ಮನೆಗೆ ಹೊರಟರು. ಸಭಾ ಭವನದ ಬಾಗಿಲಿನಲ್ಲಿ ಒಬ್ಬರು ನಿಂತಿದ್ದರು. ಗಾಂಧೀಜಿಯವರು ಅವರೆಡೆಗೆ ಹೋಗಿ ಅವರ ಹೆಗಲ ಮೇಲೆ ಕೈಹಾಕಿ ಮೆಲುಧ್ವನಿಯಲ್ಲಿ ಮಾತಾಡ ತೊಡಗಿದರು. ಮೊದಲು ಆ ಮನುಷ್ಯ ಸಿಟ್ಟಿನ ಪ್ರದರ್ಶನ ಮಾಡಿದುದನ್ನೂ, ಗಾಂಧೀಜಿಯ ಹತ್ತಿರ ಬರಲು ನಿರಾಕರಿಸಿದುದನ್ನೂ ಮಿಲ್ಲಿ ಕಂಡಿದ್ದಳು. ಕೆಲವು ಸಮಯ ಮಾತು ನಡೆದ ಮೇಲೆ ಆತನು ಗಾಂಧೀಜಿಯ ಕೈಗೆ ಏನೋ ಕೊಟ್ಟು ಹೊರಟು ಹೋದ.

ಮಿಲ್ಲಿ ನಡೆದದ್ದೇನೆಂದು ಗಾಂಧೀಜಿಯನ್ನು ಕೇಳಿದಳು.

'ನನ್ನನ್ನು ಕೊಲೆ ಮಾಡಬೇಕೆಂದು ಆತ ಬಂದಿದ್ದನು.' ಗಾಂಧೀಜಿ ಹೇಳಿದರು.

'ನಿಮ್ಮನ್ನು ಕೊಲ್ಲಬೇಕಾಗಿತ್ತೇ? ಆತನಿಗೆ ಹುಚ್ಚೇ? ಆತನನ್ನು ಏಕೆ ಬಿಟ್ಟಿರಿ ಪೋಲೀಸರಿಗೆ ಕೊಡಬೇಡವೇ?' ಮಿಲ್ಲಿ ಗಾಬರಿಯಿಂದ ಕೇಳಿದಳು.

'ನನ್ನ ಜನಕ್ಕೆ ನಾನು ದ್ರೋಹ ಮಾಡಿದೆನೆಂದು ಆತನು ತಿಳಿದಿದ್ದಾನೆ. ಸರಕಾರದೊಡನೆ ಸೇರಿ ಜನರ ವಿರುದ್ಧ ಒಳಸಂಚು ಮಾಡಿದ್ದೇನೆಂದೂ ಆತನ ಭಾವನೆ'

'ಇದೆಲ್ಲಾ ದುಷ್ಟತನ. ಆತನಿಂದ ನಿಮಗೆ ತೊಂದರೆ ಬಂದೀತು. ಆತನ ದಸ್ತಗಿರಿ ಮಾಡಿಸಬೇಕು.' ಮಿಲ್ಲಿ ಹೇಳಿದಳು.

'ಆತನಿಗೆ ಭ್ರಾಂತಿ. ನಾನು ಒಂದೆರಡು ಮಾತು ಆಡಿದ ನಂತರ ನನ್ನನ್ನು ಕೊಲ್ಲಲು ತಂದಿದ್ದ ಚಾಕನ್ನು ನನಗೆ ಕೊಟ್ಟು ಹೋಗಿರುವನು ನೋಡು' ಗಾಂಧೀಜಿ ಹೇಳಿದರು.

'ಆತನು ಕತ್ತಲಲ್ಲಿ ನಿಮ್ಮನ್ನು ಇರಿದು ಬಿಡುತ್ತಿದ್ದರೆ! ಅಯ್ಯೋ ಯೋಚಿಸಬಾರೆ....' ಎಂದಳು ಮಿಲ್ಲಿ.

ಗಾಂಧೀಜಿ ಹೇಳಿದರು. 'ಅವನು ತಿಳಿದ ಹಾಗೆ ನಾನು ಅಷ್ಟು ದುಷ್ಟನಾದರೆ ನಾನು ಸಾಯಲೇಬೇಕು. ಆತನ ದಸ್ತಗಿರಿ ಮಾಡಿಸಿದ್ದರೆ ಆತನು ನನ್ನ ಹಗೆಯಾಗುತ್ತಿದ್ದ. ಆದರೆ ಈಗ ಗೆಳೆಯನಾಗಿದ್ದಾನೆ.'

॥ ಓದುಗರ ಓಲೆಗಳು ॥

ಅಧಿಕಾರದ ದುರುಪಯೋಗ!

ಪೋಲೀಸ್ ಇಲಾಖೆಯಲ್ಲಿ ಇನ್ಸ್‌ಪೆಕ್ಟರುಗಳು ಪ್ರಾಮುಖ್ಯವಾಗಿ ಸರ್ಕಲ್ ಇನ್ಸ್‌ಪೆಕ್ಟರುಗಳು ಯಾವ ರೀತಿ ಪೋಲೀಸರನ್ನು ತಮ್ಮ ಸ್ವಂತ ಚಾಕರಿಗೆ ತಮ್ಮ ಮನಬಂದಂತೆ ಉಪಯೋಗಿಸಿಕೊಂಡು ಅನ್ಯಾಯ ಮಾಡುತ್ತಿದ್ದಾರೆಂಬ ವಿಷಯವನ್ನು ಕುರಿತು ವಿಷಾದದಿಂದ ಮೂರು ತಿಂಗಳ ಹಿಂದೆ ಒಂದು ಲೇಖನವನ್ನು ಪ್ರಕಟಿಸಲಾಗಿತ್ತು. ತದನಂತರವಾದರೂ ಅಂಥಾ ಅಮಾನುಷ ಅನ್ಯಾಯ ಕೊನೆಗೊಂಡೀತೆಂಬ ಭಾವನೆಯಿತ್ತು. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಒಂದಕ್ಕೆರಡಾಗಿರುವುದನ್ನು ನೋಡಿದರೆ ಇಲಾಖೆಯ ಮೇಲಧಿಕಾರಿಗಳ ದಕ್ಷತೆ ಎಷ್ಟಿರಬಹುದೆಂಬುದು ವಿಧಿತವಾಗುತ್ತದೆ, "ಪೋಲೀಸ್" ಎಂದು ಸೇರಿದವರಿಗೆ ಸರ್ಕಲ್ ಇನ್ಸ್‌ಪೆಕ್ಟರರ ಮನೆಯಲ್ಲಿ ದೀಪ ಸ್ವಚ್ಛ ಮಾಡುವುದು. ಕಸ ಗುಡಿಸುವುದು. ಮಕ್ಕಳನ್ನು ಆಡಿಸುವುದು, ಬಸ್ ಸ್ಟೇಂಡಿನಿಂದ ಸಾಮಾನು ಹೊರುವುದು, ದನ ಕಾಯ್ದುಕೊಂಡು ಬರುವುದು (ಇವರ ಮಧ್ಯೆ ಏನಾದರು ಆಕಸ್ಮಿಕವಾಗಿ ನಷ್ಟ ಸಂಭವಿಸಿದರೆ ಆ ಖರ್ಚಿಗೆ ಆಯಾಯ ಪೋಲೀಸಿನವರೇ ಜವಾಬ್ದಾರರು.) ಮುಂತಾದ ಕೆಲಸಗಳು ಸೇರಿವೆಯೇ? ಈ ರೀತಿಯ ಅನ್ಯಾಯವಾಗುತ್ತಿರುವುದನ್ನು ತಿಳಿದರೂ ಸಂಬಂಧ ಪಟ್ಟ ಇಲಾಖಾಧಿಕಾರಿಗಳು ಸುಮ್ಮನಿರುವುದಕ್ಕೆ ಕಾರಣವೇನು? ಈ ರೀತಿಯ ಅನ್ಯಾಯವನ್ನು ಎಲ್ಲೆಡೆಯಲ್ಲೂ ಪ್ರಾಮುಖ್ಯವಾಗಿ ವೀರಾಜಪೇಟೆಯಲ್ಲಿ ಅನುದಿನವೂ ನೋಡಬಹುದು. ಠಾಣೆಯಲ್ಲಿ 'ಡೇ ಡ್ಯೂಟಿ'. ಕೆಲಸವೆಲ್ಲಾ ಸರ್ಕಲ್ ಇನ್ಸ್‌ಪೆಕ್ಟರರ ಮನೆಯಲ್ಲಿ! ಇನ್ನು ಮುಂದಾದರೂ ಸಂಬಂಧ ಪಟ್ಟ ಅಧಿಕಾರಿಗಳು ಈ ರೀತಿಯ ಅನ್ಯಾಯವನ್ನು ತಡೆಯದಿದ್ದಲ್ಲಿ ಕೆಲವೇ ಸಮಯದೊಳಗಾಗಿ ಅದರ ಕಹಿ ಅನುಭವವನ್ನು ಅವರೇ ಅನುಭವಿಸಬೇಕಾದೀತು!

—ಸತ್ಯಕುಮಾರ್

ಕೊಡಗಿನಲ್ಲಿ ದಂತ ಚಿಕಿತ್ಸೆ

ಕೊಡಗಿನ ಸರ್ಕಾರಿ ಆಸ್ಪತ್ರೆಗಳಾದ ಮಡಿಕೇರಿ ಮತ್ತು ವೀರಾಜಪೇಟೆಗಳಲ್ಲಿ ತಾತ್ಕಾಲಿಕ ದಂತ ಚಿಕಿತ್ಸಾಲಯಗಳನ್ನು ಏರ್ಪಡಿಸಿದ್ದಾರೆ. ಈಗೀಗ ಹಲ್ಲು ನೋವುಗಳ ಕಾಟ ವಿಪರೀತವಾಗಿದೆ. ಒಂದೊಂದು ಕೆಲಸಕ್ಕೆ ಒಂದೊಂದು ಸಮಯವೆಂಬಂತೆ ಹಲ್ಲುನೋವಿನ ಪರಿಸ್ಥಿತಿಯು ಅದೇ ರೀತಿ ಆಗಿದೆ. ಮೇಲ್ಕಂಡ ಚಿಕಿತ್ಸಾಲಯದಲ್ಲಿ ಹಲ್ಲುಗಳನ್ನು ಕೀಳುತ್ತಾರೆ ವಿನಾ ಬೇರೆ ಸ್ಟಪಿಂಗ್ ಆಗಲೀ ಕ್ಲೀನಿಂಗ್ ಆಗಲೀ ಮಾಡುವುದಿಲ್ಲ. ಇದರಿಂದ ವಿಪರೀತ ತೊಂದರೆಯಾಗಿದೆ. ಅಲ್ಲದೆ ನಮ್ಮ ಸರ್ಕಾರಿ ದಂತ ವೈದ್ಯರು ಖಾಸಗಿ ದಂತ ವೈದ್ಯರಲ್ಲಿಗೆ ಹೋಗಿ ಮೇಲಿನ ಕೆಲಸಗಳನ್ನು ನಡೆಸಬೇಕೆಂದು ಹೇಳುತ್ತಾರೆ. ಅದೇನೊ ಸರಿ. ಆದರೆ ಅದೇ ಕೆಲಸವನ್ನು ಸರ್ಕಾರಿ ಚಿಕಿತ್ಸಾಲಯದಲ್ಲಿ ಏರ್ಪಡಿಸುವಂತೆ ಮಾಡಿದರೆ ಅದೆಷ್ಟೋ ಪರಿಣಾಮಕಾರಿಯಾಗುವುದು. ಇದಕ್ಕೆ ಅಲ್ಪ ಸ್ವಲ್ಪ ಚಾರ್ಜನ್ನು ತಸಲ್ಬಿದ್ದರೆ ಮಾಡಬಹುದು. ಖಾಸಗಿ ವೈದ್ಯರು ಅನೇಕ ಸಾರಿ ಸಮಯಕ್ಕೆ ಸರಿಯಾಗಿ ಅವರ ಚಿಕಿತ್ಸಾಲಯದಲ್ಲಿ ಇರುವುದೇ ಇಲ್ಲ. ಇದರಿಂದ ಹೆಚ್ಚಿನ ತೊಂದರೆಯಾಗುತ್ತದೆ. ಆದ್ದರಿಂದ ಈ ಕೋರಿಕೆಯನ್ನು ಘನ ಸರಕಾರದವರು ಗಮನಿಸಿ ಅದನ್ನು ನಡೆಸಿ ಕೊಡಬೇಕಾಗಿ ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

—ಹಲ್ಲು ನೋವಿನವ

ಒಂದು ಸಲಹೆ.

ಕೊಡಗು ಸರಕಾರಿ ಕಾಲೇಜಿನಲ್ಲಿ ಸಮಾಜಸೇವಾ ಶಾಖೆಯೊಂದು ತೆರೆಯಲ್ಪಟ್ಟು ಸುಮಾರು ನೂರಕ್ಕೂ ವಿದ್ಯಾರ್ಥಿಗಳು ಅದರಲ್ಲಿ ದುಡಿಯಲು ಹೆಸರು ಕೊಟ್ಟಿರುವರೆಂದು ತಿಳಿದಿದ್ದೇನೆ. ಅದೇ ರೀತಿ ಹೈಸ್ಕೂಲುಗಳಲ್ಲೂ ಸೇವಾ ಶಿಬಿರಗಳಿವೆ. ಕೊಡಗಿನ ಎಲ್ಲಾ ಹೈಸ್ಕೂಲುಗಳ ವಿದ್ಯಾರ್ಥಿಗಳು ಪ್ರತಿ ವರ್ಷ ೧೫ ದಿನಗಳ ಕಡ್ಡಾಯ ಸಮಾಜಸೇವೆ ಮಾಡಬೇಕೆಂಬ ಸರಕಾರದ ಏರ್ಪಾಡೂ ಇದೆ. ಈ ಏರ್ಪಾಡುಗಳು ಪ್ರಗತಿದಾಯಕವೂ, ರಾಷ್ಟ್ರ ರಚನಾ ಸಹಾಯಕವೂ ಆಗಿವೆ.

ಈಗ ಶಾಲಾ ಕಾಲೇಜುಗಳಲ್ಲಿ ಪರೀಕ್ಷೆಗಳು ನಡೆಯುತ್ತಿವೆ. ಮುಂದಿನ ಒಂದೆರಡು ವಾರಗಳಲ್ಲಿ ಪರೀಕ್ಷೆ ಮುಗಿದು ವಿದ್ಯಾರ್ಥಿಗಳಿಗೂ ಅಧ್ಯಾಪಕರಿಗೂ ಬಿಡುವು ದೊರೆಯುವದು. ಕಾಲೇಜಿನವರಿಗೆ ಬರುವ ಜೂನ್ ತಿಂಗಳ ವರೆಗೆ ರಜೆ ದೊರೆಯುವದು. ಈ ದೀರ್ಘ ಅವಧಿಯ ರಜೆಯನ್ನು ವಿದ್ಯಾರ್ಥಿಗಳೂ ಅಧ್ಯಾಪಕರೂ ಸದುಪಯೋಗಗೊಳಿಸಬೇಕಾಗಿದೆ.

ಈ ಸಮಯದಲ್ಲಿ ಸೇವಾ ಶಿಬಿರಗಳನ್ನು ಅಲ್ಲಲ್ಲಿ ತೆರೆಯಬೇಕು. ಸರಕಾರವು ಇದಕ್ಕೆ ಸಾಕಷ್ಟು ಸಹಾಯ ಕೊಡಬೇಕು. ಗ್ರಾಮಗಳಲ್ಲೇ ಇದ್ದುಕೊಂಡು ಗ್ರಾಮೀಣಜನರ ಜೀವನದಲ್ಲಿ ಸಮರಸರಾಗಿ ಅವರ ಕಷ್ಟ ಜೀವನಕ್ಕೆ ಬೆಳಕು ಬೀಳುವ ಸಹಾಯ ಮಾಡಬೇಕು. ಹಳ್ಳಿಗಳಲ್ಲಿ ವಯಸ್ಕರ ಶಿಕ್ಷಣ ಶಾಲೆಗಳನ್ನು ತೆಗೆದು ಅಕ್ಷರ ಪ್ರಚಾರ, ಗ್ರಾಮೀಣ ಜನರಲ್ಲಿ ಶುಚಿತ್ವ, ಆರೋಗ್ಯಯುತ ಸರಳ ಜೀವನ ಮೊದಲಾದುವುಗಳನ್ನು ಬೋಧಿಸುವದಲ್ಲದೆ ಕಾರ್ಯತಃ ಮಾಡಿ ತೋರಿಸಬೇಕು. ಈ ವಿಚಾರಕ್ಕೆ ವಿದ್ಯಾರ್ಥಿಗಳೂ ಅಧ್ಯಾಪಕರೂ ನಿಗವಿಡುವರೇ?

'ಸಮಾಜ ಸೇವಕ.'

ಮಿತವ್ಯಯದ ಅವಶ್ಯಕತೆ

ಇತ್ತೀಚೆಗಾಗಿ ಮಿತ್ತಿನ ವೆಚ್ಚ ಏರುತ್ತಿದೆಯೆಂಬುದು ಪ್ರತಿ ದಿನದ ಜೀವನದಲ್ಲಿ ಅನುಭವವಾಗುತ್ತಿದೆ. ಮುಂದೆ ಬರುತ್ತಿರುವದಾದರೂ ಮದುವೆಯ 'ಸೀಸನ್' ಕೊಡಗಿನಲ್ಲಿ ಮದುವೆಗಳಿಗೆ ಆಡಂಬರದ ಖರ್ಚು ಆಗುತ್ತದೆ. ಆಡಂಬರದ ಊಟ ಉಪಚಾರ, ಉಡಿಗೆ ತೊಡಿಗೆಗಳಿಗಾಗಿ ವಿಪರೀತ ಧನ ವ್ಯಯವಾಗುತ್ತದೆ. ಇದನ್ನು ನಿಲ್ಲಿಸಬೇಕು. ಸಮಾಜದಲ್ಲಿ ಘನತೆ ಇರುವವರು, ಶ್ರೀಮಂತರೆನಿಸಿದವರು ಇದಕ್ಕೆ ಉದಾಹರಣೆಯಾಗಿ ವರ್ತಿಸಬೇಕು.

ಹುಡುಗಿಯರ ಮದುವೆಗಾಗಿ ಸಾವಿರಾರು ರೂಪಾಯಿಗಳ ವೆಚ್ಚ ಮಾಡುತ್ತಾರೆ. ಒಂದೊಂದು ಸೀರೆಗೆ ಮುನ್ನೂರು, ನಾನೂರು ರೂಪಾಯಿ ತೆರುವವರಿದ್ದಾರೆ. ಎಂಥಾ ಶ್ರೀಮಂತನಾದರೂ ಈ ರೀತಿಯ ದುಂದುವೆಚ್ಚ ಕೂಡದು. ಪ್ರತಿಯೊಬ್ಬನಿಗೂ ಸಮಾಜದ ಬಗ್ಗೆ ಒಂದು ಜವಾಬ್ದಾರಿ ಇದೆ. ಶ್ರೀಮಂತರೆನ್ನುವವರನ್ನು ಅನುಸರಿಸಿ ಇತರರೂ ಶಕ್ತಿಮೀರಿ ಖರ್ಚು ಮಾಡುತ್ತಾರೆ. ಸುಮ್ಮ ಸುಮ್ಮನೆ ಆಡಂಬರದ ಊಟ, ಸಾರಾಯಿ, ಉಡಿಗೆ ತೊಡಿಗೆಗೆಂದು ವಿಪರೀತ ಖರ್ಚು ಮಾಡುವ ಹಣವನ್ನು ಹುಡುಗ ಯಾ ಹುಡುಗಿಗೆ ಹಣದ ರೂಪದಲ್ಲೇ ಕೊಟ್ಟರೆ ಭಾವೀ ಜೀವನವನ್ನು ಮಾರ್ಪಡಿಸಿಕೊಳ್ಳುವದರಲ್ಲಿ ಅದು ನೆರವಿಗೆ ಬಂದೀತು. ಆದ್ದರಿಂದ ಇಂದಿನ ಪರಿಸ್ಥಿತಿಗೆ ತಕ್ಕುದೆಂದು ಒಂದು ನಿಶ್ಚಿತ ಮಾದರಿಯ ಮದುವೆಯ ಏರ್ಪಾಡು ಯೋಗ್ಯವಲ್ಲವೇ? ಕೆಲವೆಡೆ ಒಂದೇ ದಿನದ ಮದುವೆಗಳು ನಡೆಯುತ್ತವೆ. ಕೆಲವೆಡೆ ದಂಪತಿಮುಹೂರ್ತ ನಡೆಯುತ್ತದೆ. ಇವು ಪತ್ತಿರದಲ್ಲಿರುವವರಿಗೆ, ಪೇಟೆಗಳಲ್ಲಿ ಮದುವೆ ಮಾಡುವವರಿಗೆ ಹೆಚ್ಚು ಸುಲಭವೂ, ಸುಕರವೂ ಆಗಿವೆ. ಇದೇ ರೀತಿಯ ಮದುವೆಗಳು ಜಾರಿಯಲ್ಲಿ ಬರಬೇಕು. ಕ್ರಮೇಣ ರಿಜಿಸ್ಟರ್ ಮದುವೆಯ ಪದ್ಧತಿಯನ್ನು ಹತ್ತಿರದಾ ಯೋಗ್ಯವೆಂದೇ ನನ್ನ ಭಾವನೆ. ಸಮಾಜದ ಮುಂದಾಳುಗಳು ಇದನ್ನು ಯೋಚಿಸಬೇಕಾಗಿದೆ.

ವಿಶ್ವಣ್ಣ, ಎ.

ಕಾಲೇಜ್ ಹಾಸ್ಟೆಲ್.

ಕಾಲೇಜ್ ಹಾಸ್ಟೆಲಿನ ಆಡಳಿತೆಯ ವಿಚಾರವಲ್ಲೂ, ವಿದ್ಯಾರ್ಥಿಗಳ ಮತ್ತು ವಾರ್ಡನರ ವರ್ತನೆಯ ಬಗ್ಗೆಯೂ 'ತಂದೆ'ಯೊಬ್ಬರು ಬರೆದ ಪತ್ರಕ್ಕೆ ಉತ್ತರವಾಗಿ 'ವಿದ್ಯಾರ್ಥಿವೃಂದ'ವು ಒಂದು ಓಲೆಯನ್ನು ಬರೆದಿತ್ತು. ಇದೇ ವಿಚಾರದಲ್ಲಿ ಮತ್ತೆ ಕೆಲವು ಓಲೆಗಳು ಬಂದ ಕಾರಣ ಪರಿಸ್ಥಿತಿಯನ್ನು ನಾವೇ ಖುದ್ದಾಗಿ ಹಾಸ್ಟೆಲಿನ ವಿದ್ಯಾರ್ಥಿಗಳನ್ನು, ಆಡಳಿತ ಮಂಡಳಿಯವರನ್ನು ವಿಚಾರಿಸಿ ತಿಳಿದಲ್ಲಿ ವಾರ್ಡನರ ವರ್ತನೆ ಮತ್ತು ಕಾರ್ಯದಕ್ಷತೆಯಲ್ಲಿ ನ್ಯೂನತೆ ಇಲ್ಲವೆಂದೂ ಹಾಸ್ಟೆಲಿನ ಆಡಳಿತೆಯು ಸುಸೂತ್ರ ನಡೆಯುತ್ತಿರುವದೆಂದೂ, ಒಂದೆರಡು ಕೇಡು ಬಯಸುವವರು ಈ ರೀತಿ ಹುಯಿಲೆಬ್ಬಿಸಿರುವರೆಂದೂ ತಿಳಿದುಬಂದ ಕಾರಣ [illegible] ಗಳಾವುವನ್ನೂ ಪ್ರಕಟಿಸಲಾಗುವದಿಲ್ಲವಲ್ಲದೆ ಹಾಸ್ಟೆಲಿನ ಕಾರ್ಯಕಲಾಪ ಚೆನ್ನಾಗಿ ನಡೆಯುತ್ತಿದೆಯೆಂದು ವಾಚಕರಿಗೆ ಹೇಳಬಯಸುವೆವು.

ಸಂ.]

ಪೋಲೀಸ್ ಸುಪರಿಂಟೆಂಡೆಂಟರಲ್ಲಿ

ಎರಡು ವಾರಗಳ ಹಿಂದೆ ಇದೇ 'ಓದುಗರ ಓಲೆ'ಯಲ್ಲಿ ಒಂದು ಪತ್ರ ಪ್ರಕಟವಾಗಿತ್ತು. ಪಟ್ಟಣಗಳ ಮಧ್ಯ ಬಸ್, ಲಾರಿ, ಕಾರುಗಳನ್ನು ಬಿಡುವವರು ಬಹು ವೇಗದಿಂದ ಬಿಡುವರೆಂದೂ ಆದ್ದರಿಂದ ಪೋಲೀಸ್ ಇಲಾಖೆಯವರು ಎಚ್ಚರಿಕೆ ವಹಿಸಿ 'ಓವರ್ ಸ್ಪೀಡ್'ನಲ್ಲಿ ಗಾಡಿ ಬಿಡುವವರನ್ನು ಶಿಕ್ಷಿಸಬೇಕೆಂದೂ ಬರೆಯಲಾಗಿತ್ತು. ಆದರೆ ಇಲಾಖೆಯವರು ಇದರ ಬಗ್ಗೆ ಗಮನವಿತ್ತಂತೆ ತೋರುವದಿಲ್ಲ. ಮಡಿಕೇರಿ ಚೌಕಿಗಾಗಿಯೇ ಹಲವರು ಮಿಂಚಿನ ವೇಗದಲ್ಲಿ ಬಸ್, ಕಾರು, ಓಡಿಸುತ್ತಾರೆ. ಮೊನ್ನೆ ಒಂದು ಮಗುವು ನನ್ನ ಕಣ್ಣು ಮುಂದೆ ಕಾರೊಂದಕ್ಕೆ ಆಹುತಿಯಾಗುತಿತ್ತು. ಏನೋ ಆಶ್ಚರ್ಯಕರ ರೀತಿಯಲ್ಲಿ ಅದು ಬದುಕಿಕೊಂಡಿತು. ಇನ್ನಾದರೂ ಪೋಲೀಸ್ ಇಲಾಖೆಯವರು ಈ ವಿಚಾರ ಎಲ್ಲರನ್ನೂ ಎಚ್ಚರಿಸಬೇಕಾದುದು ತೀರಾ ಅಗತ್ಯ.

—ನಿರೀಕ್ಷಕ.

ಮಹದೇವಪೇಟೆ ಮತ್ತು ಎಲೆಪೇಟೆಗಳ ದುರ್ವ್ಯವಸ್ಥೆ

ಮಹದೇವಪೇಟೆ ಮತ್ತು ಎಲೆಪೇಟೆಗಳಿಂದ ಆರಿಸಲ್ಪಟ್ಟ ಪೌರಸಭೆಯ ಸದಸ್ಯರುಗಳಿಗೆ ಈ ರಸ್ತೆಗಳ ಹೀನಾವಸ್ಥೆಯ ಪರಿಚಯವು ಅತೀ ಕಡಿಮೆ. ಆರಿಸಿದ ಬಳಿಕ ಇವರಿಗೆ ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ಹೆಚ್ಚಿನ ಆಸಕ್ತಿ ಕಂಡುಬರದಿರುವದು ಶೋಚನೀಯ. ಈ ರಸ್ತೆಗಳ ಧೂಳಿನ ಪರಿಣಾಮವು ಈ ಬೀದಿಗಳ ನಿವಾಸಿಗಳಿಗೆ ಚಿರ ಅನುಭವವು. ರಸ್ತೆಗಳ ಮೇಲೆ ಹಾರಾಡುವ ಕಲ್ಲುಗಳು ಅಷ್ಟು ಸಂಖ್ಯೆಯವುಗಳಲ್ಲ. ಹುಣ್ಣಿಮೆಯ ದಿನವಲ್ಲದ ಬಾಕಿ ದಿನಗಳಲ್ಲಿ ಬೆಳಕು ಅತೀ ವಿರಳ. ಎಲೆಪೇಟೆಗೆ ತಾರನ್ನು ಹಾಕಬೇಕೆಂದ ಕಳುಹಿದ ಪತ್ರವು ಪರಿಶೀಲಿಸಲ್ಪಡುತ್ತಿರುವದೆ? ಪೌರಸಭೆಯ ಸದಸ್ಯ ಮಂತ್ರಿಗಳು ಈ ಬೇಡಿಕೆಗಳನ್ನು ವಿಶಾಲದೃಷ್ಟಿಯಿಂದ ಮನ್ನಿಸದಿರಲಾರರು.

"ನಾ"

ಮಾರಾಟಕ್ಕಿದೆ

ಸಿ. ಜಿ. ಎ. ನಂ. 687 ರ ರಿಜಿಸ್ಟರ್ ಸಂಬಂಧಿಸಿದ ಜೀಪೊಂದು ಮಾರಾಟಕ್ಕಿದೆ. ಕೊಂಡುಕೊಳ್ಳಲಿಚ್ಛಿಸುವವರು ತಮ್ಮ ಟೆಂಡರುಗಳನ್ನು ಸೀಲು ಹಾಕಿದ ಕವರುಗಳಲ್ಲಿ ರೂ. 100-ರ ಮುಂಗಡ ಹಣದೊಂದಿಗೆ ಕಳುಹಿಸಬೇಕು. ಟೆಂಡರುಗಳನ್ನು ಸ್ವೀಕರಿಸುವ ಕಡೇ ತಾರೀಕು 20-4-53. ಚೆಟ್ಟಳ್ಳಿಯಲ್ಲಿರುವ ಕಾಫಿ ಸಂಶೋಧನಾ ಸಬ್ ಸ್ಟೇಶನಿನ ಆವರಣದಲ್ಲಿ ಆಫೀಸು ಕೆಲಸದ ಸಮಯದಲ್ಲಿ ಜೀಪನ್ನು ಮುಂಚಿತ ಪರಿಶೀಲಿಸಿನೋಡಬಹುದಾಗಿದೆ.

ಸುಪರಿಂಟೆಂಡೆಂಟ್,
ಕಾಫಿ ಸಂಶೋಧನಾ ಸಬ್ ಸ್ಟೇಶನ್,
ಚೆಟ್ಟಳ್ಳಿ.

ಜ್ಞಾನ ದೀಪ.

(೧)

ಹಣ ಬಿದ್ದಲ್ಲಿ ಹಣ ಹದ್ದುಗಳ ಹಾರಾಟವಿರುತ್ತದೆ. ಅಧಿಕಾರವಿದ್ದಲ್ಲಿರುವವನ ಸುತ್ತಲೂ ಸ್ತುತಿ ಪಾಠಕರ ಸುಳಿದಾಟವಿರುತ್ತದೆ.

(೨)

ತಲೆ ಬೋಳಿಸಿಕೊಂಡಾಕ್ಷಣ ಬುದ್ಧ ಭಿಕ್ಷುವೆಂದು ತಿಳಿಯದಿರು. ಪ್ರಶಾಂತನಂತೆ ತೋರುವವನನ್ನು ಪ್ರಸನ್ನ ಚಿತ್ತನೆಂದು ನಂಬದಿರು.

(೩)

ರೇಶ್ಮೆಗಿರುವ ನವುರು ರೇಶ್ಮೆ ಹುಳಕ್ಕಿಲ್ಲ. ಕೆಲಸಕ್ಕಿರುವ ಬೆಲೆ ಕೆಲಸಗಾರನಿಗಿಲ್ಲ.

ಕೊಡಗು

ತಾರೀಕು ೨೦ ಮಾರ್ಚ ೧೯೫೩ನೇ ಶುಕ್ರವಾರ

ನಮ್ಮ ಗೋ ಸಂಪತ್ತು.

ಹಿಂದೂದೇಶದ ಜೀವಾಳ ವ್ಯವಸಾಯವಾಗಿದ್ದರೆ ವ್ಯವಸಾಯದ ಜೀವಾಳ ದನಕರುಗಳು. ದನಕರುಗಳ ಸಂಪತ್ತು ಚೆನ್ನಾಗಿಲ್ಲದವನು ಯೋಗ್ಯ ವ್ಯವಸಾಯಗಾರನಾಗಲಾರ. ಗೋ ಸಂಪತ್ತು ಇಲ್ಲದವನ ಮನೆಯೂ ಕೂಡ ಸುಖಕರವಲ್ಲ. ಆದ್ದರಿಂದ ರೈತನ ವ್ಯವಸಾಯದ ಅಭಿವೃದ್ಧಿ, ಆತನ ಕುಟುಂಬದ ಪ್ರಗತಿ, ಆತನ ಶಾರೀರಿಕ ಪ್ರಕೃತಿಯೂ ಕೂಡ ಗೋ ಸಂಪತ್ತಿನಲ್ಲಿ ಸಮಾವೇಶವಾಗಿದೆ.

ಆಧುನಿಕ ನಾಗರಿಕತೆಯ ನೀರುಂಡ ಜನರು ಗೋವುಗಳಿಲ್ಲದಿದ್ದರೆ ಏನು ? ವ್ಯವಸಾಯಕ್ಕೆ ಟ್ರಾಕ್ಟರು ಮೊದಲಾದ ಯಂತ್ರಗಳನ್ನು ಉಪಯೋಗಿಸಿದರಾಯಿತು. ಇಂದಿನ ಪರಮಾಣು ಬಾಂಬು ಯುಗದಲ್ಲಿ ಓಬೀರಾಯನ ಮರದ ನೇಗಿಲಿನ ವ್ಯವಸಾಯವು ಲಾಭದಾಯಕವಲ್ಲ ಮತ್ತು ಪ್ರಗತಿಶೀಲವೂ ಅಲ್ಲವೆಂದು ಹೇಳುತ್ತಾರೆ. ಟ್ರಾಕ್ಟರುಗಳು ಬಡ ರೈತನ ಸಾಧನಗಳಲ್ಲ. ಅವುಗಳನ್ನು ಧರ್ಮಾರ್ಥ ಕೊಟ್ಟರೂ ಉಪಯೋಗಿಸಿಕೊಳ್ಳುವ ಚೇತನವಿರುವವರು ಬಹಳ ಕಡಿಮೆ. ಸರಕಾರವೇ ದೇಶದ ಜಮೀನನ್ನೆಲ್ಲಾ ವಶಪಡಿಸಿಕೊಂಡು, ಸಹಕಾರ ಪದ್ಧತಿಯ ಸಾಮೂಹಿಕ ವ್ಯವಸಾಯ ಕೇಂದ್ರಗಳನ್ನು ಏರ್ಪಡಿಸಿದರೂ ಕೂಡ ರೈತನ ನೇಗಿಲಿಗೂ, ಆತನ ಜಾನುವಾರುಗಳಿಗೂ ಸ್ಥಳವಿದ್ದೇ ಇದೆ. ಕೊಡಗಿನಂಥಾ ಬೆಟ್ಟ ಪ್ರದೇಶದಲ್ಲಿ ಟ್ರಾಕ್ಟರುಗಳು ಪ್ರಯೋಜನಕಾರಿಯಲ್ಲ. ಗದ್ದೆಯಲ್ಲಿ ನೀರಾದ ನಂತರ ಟ್ರಾಕ್ಟರಿನ ಉಪಯೋಗ ಸಾಧ್ಯವೇ ಇಲ್ಲ. ಆದ್ದರಿಂದ ಹಿಂದೂದೇಶದ ರೈತನು ಸಾಮಾನ್ಯವಾಗಿ ತನ್ನ ಎತ್ತು ಕೋಣಗಳನ್ನೇ ಆರಂಭಕ್ಕಾಗಿ ನಂಬಬೇಕಾಗಿದೆ.

ಜಾನುವಾರುಗಳ ಪ್ರಯೋಜನ ಒಂದೆರಡಲ್ಲ. ಮಾನವ ಸಮಾಜದ ಅಸ್ತಿತ್ವವೇ ಅವುಗಳನ್ನು ಹೊಂದಿಕೊಂಡಿದೆ. ಜೀವನಾಧಾರವಾದ ಹಾಲಿರಲಿ, ವ್ಯವಸಾಯಕ್ಕೆ ಗೊಬ್ಬರವಿರಲಿ, ಉದ್ಯಮಕ್ಕೆ ಮೂಳೆ ಚರ್ಮಗಳಿರಲೀ ಎಲ್ಲವೂ ಜಾನುವಾರುಗಳಿಂದಲೇ ಬರಬೇಕು. ಹಳ್ಳಿಯಿಂದ ಹಳ್ಳಿಗೆ ವ್ಯಾಪಾರದ ಮೂಲತಂತು ಇಂದಿನ ವರೆಗೆ ಗಾಡಿಗಳೇ ಆಗಿವೆ. ಮಾನವ ಸಮಾಜದ ಅಸ್ತಿತ್ವ, ಉತ್ಕರ್ಷಗಳಲ್ಲಿ ಜಾನುವಾರುಗಳ ಸ್ಥಾನ ಈ ಮಟ್ಟಿಗೆ ಪ್ರಾಮುಖ್ಯವಿದ್ದರೂ ಹಿಂದೂದೇಶದಲ್ಲಿ ದನಕರುಗಳ ಸ್ಥಿತಿ ಉತ್ತಮಗೊಳ್ಳುವ ಬದಲು ಕೆಡುತ್ತಿರುವದು ಶೋಚನೀಯವಾಗಿದೆ.

ಹಿಂದೂದೇಶದಲ್ಲಿ ಒಟ್ಟು ೨೦೮ ಮಿಲಿಯ ದನಗಳಿವೆ. ಇದು ಜಗತ್ತಿನ ದನಗಳ ಸಂಖ್ಯೆಯ ಮೂರನೇ ಒಂದಂಶದಷ್ಟಾಗುವದು. ಇಷ್ಟು ದೊಡ್ಡ ಸಂಖ್ಯೆಯಲ್ಲಿ ದನಕರುಗಳಿದ್ದರೂ ಅವುಗಳಿಂದ ದೊರೆಯುವ ಸರಾಸರಿ ಉತ್ಪತ್ತಿಯು ಜಗತ್ತಿನ ಎಲ್ಲಾ ರಾಷ್ಟ್ರಗಳ ಸರಾಸರಿಗಿಂಥಾ ಕಡಿಮೆ. ಹಿಂದೂದೇಶದಲ್ಲಿ ೨೦ ಕೋಟಿಗೂ ಮೀರಿ ದನಗಳಿದ್ದರೂ ಸರಾಸರಿ ಒಬ್ಬನಿಗೆ ಒಂದು ದನ ಬರಲಾರದು. ಪ್ರತಿ ತಲೆಗೆ ಅರ್ಧ ದನದ ಲೆಕ್ಕ ಬೀಳುತ್ತದೆ. ಆದರೆ ನ್ಯೂಝೀಲೇಂಡಿನಲ್ಲಿ ಪ್ರತಿ ತಲೆಗೆ ೨.೬ ದನದ ಲೆಕ್ಕ ಬರುತ್ತದೆ. ಹಿಂದೂದೇಶದಲ್ಲಿ ೬೪೦೦ ಮಿಲಿಯ ಗೆಲನ್ ಹಾಲು ಉತ್ಪತ್ತಿಯಾದರೂ ಪ್ರತೀ ಒಬ್ಬನಿಗೆ ಸರಾಸರಿ ದೊರೆಯುವ ಹಾಲು ೫½ ಔನ್ಸು. ಆದರೆ ನ್ಯೂಝೀಲೇಂಡಿನಲ್ಲಿ ಪ್ರತೀ ಒಬ್ಬನು ೫೬ ಔನ್ಸು ಉಪಯೋಗಿಸುವನು. ಹಿಂದೂದೇಶದ ದನಗಳ ಸಂಖ್ಯೆ ೨೦ ಕೋಟಿಗೆ ಮೀರಿದ್ದರೂ ಅದರಲ್ಲಿ ಸುಮಾರು ೧½ ಕೋಟಿಯಷ್ಟು ಎತ್ತುಗಳು ಪ್ರಯೋಜನಕ್ಕೆ ಬಾರದವುಗಳು. ೪೮ ಮಿಲಿಯವಿರುವ ಹಸುಗಳಲ್ಲಿ ಸುಮಾರು ೨೮ ಮಿಲಿಯ ಹಾಲು ಕೊಡದವುಗಳು. ಈ ದನಗಳಿಗೆ ಉತ್ತಮ ಆಹಾರ ಒದಗುವಂತೆ ಮಾಡಿದರೆ ಹಾಲಿನ ಉತ್ಪತ್ತಿಯನ್ನು ಶೇಕಡ ೩೦ರಷ್ಟು ಹೆಚ್ಚಿಸಬಹುದೆಂದೂ ಉತ್ತಮ ತಳಿಯಿಂದ ಸರ್ವಾಂಗೀಣ ಉನ್ನತಿಯನ್ನು ಸಾಧಿಸಬಹುದೆಂದೂ ತಜ್ಞರು ಹೇಳುತ್ತಾರೆ. ಆದರೆ ಈ ವಿಚಾರ ಆಗಬೇಕಾದಷ್ಟು ಆಗಿಲ್ಲ.

ಹಿಂದೂದೇಶದಲ್ಲಿ ಮೂವತ್ತು ವಿಧದ ಎತ್ತು ಮತ್ತು ಹಸುಗಳ ಪ್ರಯೋಗ ನಡೆದಿದೆ. ಎಂಟು ವಿಧದ ಕೋಣಗಳ ಪರಿಶೀಲನೆಯೂ ನಡೆದಿದೆ. ಹೊರ ದೇಶಗಳಿಂದ ವಿವಿಧ ತಳಿಯ ದನಗಳನ್ನು ತರುವ ಯತ್ನವನ್ನೂ ಮಾಡಲಾಗಿದೆ. ಆದರೆ ಹಿಂದೂದೇಶದ ಮೂಲ ಜಾತಿಯ ಎತ್ತು ಹಸುಗಳೇ ಇಲ್ಲಿಯ ಗಾಳಿ ಮಳೆಗಳಿಗೂ ಹವಾಗುಣಕ್ಕೂ ಸರಿಹೋಗುವದಾಗಿವೆ. ಆದ್ದರಿಂದ ವಿದೇಶ ಜಾತಿಯ ದನ ಕರುಗಳನ್ನು ಇಲ್ಲಿ ಸಾಕುವ ಯತ್ನವು ಹೆಚ್ಚು ಪ್ರಯೋಜನ ಕಾರಿಯೂ ಅಲ್ಲ; ಸಾಮಾನ್ಯರಿಗೆ ಸಾಧ್ಯವೂ ಅಲ್ಲ.

ಕಳೆದ ಸೋಮವಾರ ಅಂದರೆ ತಾ. ೧೬ರಲ್ಲಿ ಪೂನಾದಲ್ಲಿ ನಡೆದ ವ್ಯವಸಾಯ ಬೋರ್ಡಿನ ಜಾನುವಾರು ಶಾಖೆಯ ಸಮ್ಮೇಳನದಲ್ಲಿ ಜಾನುವಾರುಗಳಿಂದ ಹಿಂದೂದೇಶಕ್ಕೆ ಆಗುತ್ತಿರುವ ಆದಾಯವನ್ನು ೧೦೦೦ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಕೇವಲ ಹಾಲಿನಿಂದ ರೂ ೬೦೦ ಕೋಟಿಯೂ, ಚರ್ಮ ಮೂಳೆಗಳಿಂದ ರೂ. ೬೦ ಕೋಟಿಯೂ, ಗೊಬ್ಬರದಿಂದ ರೂ. ೨೭೦ ಕೋಟಿಯೂ ಆದಾಯ ಬರುವದೆಂದು ಲೆಕ್ಕಹಾಕಲಾಗಿದೆ. ಸಾಗಾಟದ ಸಹಾಯದ ಮೂಲಕ ೧೬೦ ಕೋಟಿ, ವ್ಯವಸಾಯ ಮತ್ತಿತರ ದುಡಿಮೆಗಳಿಂದ ಸುಮಾರು ೩೫೦ ಕೋಟಿ ಆದಾಯ ಬರುತ್ತದೆಂದು ಅಂದಾಜಾಗಿದೆ. ಈ ಅಂಕೆ ಸಂಖ್ಯೆಗಳನ್ನು ನೋಡುವಾಗ ಭಾರತೀಯ ಜನಜೀವನಕ್ಕೆ ಗೋ ಸಂಪತ್ತು ಎಷ್ಟರ ಮಟ್ಟಿಗೆ ಸಹಕಾರಿಯೆಂದು ಬೇರೆ ಹೇಳುವ ಅವಶ್ಯವಿಲ್ಲ. ನಮ್ಮ ಜೀವನದ ಉಸಿರೇ ಗೋ ಸಂಪತ್ತೆಂದರೂ ಅದು ಉತ್ಪ್ರೇಕ್ಷೆಯಾಗಲಾರದು.

ಕಡುಹಾಕದ ಹಸುಗಳು, ಕೆಲಸಕ್ಕೆ ಬಾರದ ಎತ್ತುಗಳು ಒಂದು ದೃಷ್ಟಿಯಿಂದ ನಿಷ್ಪ್ರಯೋಜಕವಾದವುಗಳು. ಇಂಥಾದಕ್ಕೆ ಎಡೆದೊರೆಯದಂತೆ ತಳಿಯನ್ನು ಉತ್ತಮಗೊಳಿಸಿ ಯೋಗ್ಯ ಹಾಗೂ ಪರಿಷ್ಕೃತ ಗೋ ಸಂತಾನದ ಬೆಳವಣಿಗೆಯನ್ನು ಮಾಡಬೇಕೆಂದು ಕೇಂದ್ರ ಸರಕಾರದ ಯೋಜನಾ ಸಮಿತಿಯು ಸೂಚಿಸಿದೆ. ಇವರ ಸೂಚನೆಯ ಪ್ರಕಾರ ಈಗಿರುವ ನಿಕೃಷ್ಟ ತಳಿಯನ್ನು ಅಭಿವೃದ್ಧಿಗೊಳಿಸುವುದು ಒಂದನೇ ಕರ್ತವ್ಯ. ಎರಡನೆಯದಾಗಿ ದನಗಳಿಗೆ ಯೋಗ್ಯ ಮೇವು ಸದಾ ದೊರೆಯುವ ಏರ್ಪಾಡು. ಕೊಡಗಿನ ಮಟ್ಟಿಗೆ ಹೇಳುವುದಾದರೆ ಈ ಸಮಯದಲ್ಲಿ ದನಗಳ ಸ್ಥಿತಿ ಚಿಂತಾಜನಕವಾದುದು. ಕಿವಿಗಳನ್ನು ಕೆಳಗೆ ಹಾಕಿ ಕಣ್ಣೀರು ಸುರಿಸುತ್ತಾ ಬಡಕಲು ಶರೀರದಿಂದ ಕೂಡಿ ಅಲೆದಾಡುವ ದನಕರುಗಳ ಸ್ಥಿತಿ ನಿಜವಾಗಿ ಕಣ್ಣೀರು ತರುವಂಥದ್ದು. ಉತ್ತಮ ಮೇವಿನ ಮಾತಿರಲಿ, ಕುಡಿಯಲು ಯೋಗ್ಯ ನೀರಿಲ್ಲದ್ದೆ ಪಡುವ ಕಷ್ಟವು ಹೃದಯವಿದ್ರಾವಕವಾದುದು. ಈ ಸಮಯದಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ದನಕರುಗಳು ಸಾಯುವದಾಗಿದೆ. ಅಲ್ಲಲ್ಲಿ ಹಾದಿ, ಬೀದಿಗಳಲ್ಲಿ, ಗದ್ದೆ ಬಯಲುಗಳಲ್ಲಿ ಸತ್ತ ದನಗಳ ಬಿಳಿ ಮೂಳೆಗಳನ್ನು ಎದುರ್ಗೊಳ್ಳದದು ಅಪರೂಪವಲ್ಲ. ಇಂಥಾ ಪರಿಸ್ಥಿತಿಗೆ ಎಡೆ ಕೊಡದರೀತಿ ಪೂನಾ ಸಮ್ಮೇಳನವು ಕೆಲವು ಕಾರ್ಯಕ್ರಮಗಳನ್ನು ಕೈಕೊಳ್ಳುವ ನಿರ್ಣಯ ಮಾಡಿದೆ.

ಈ ನಿರ್ಣಯಗಳ ಪ್ರಕಾರ 'ಕೀ' ಗ್ರಾಮಯೋಜನೆ ಮತ್ತು ಜಾನುವಾರುಗಳ ರಿಜಿಸ್ಟ್ರೇಷನ್ ಪದ್ಧತಿ ಎರಡು ಪ್ರಾಮುಖ್ಯವಾದುದಾಗಿದೆ. ೬೦೦ ಕೀ ಗ್ರಾಮ ಯೋಜನೆಗಳನ್ನು ೧೫೦ ಕೃತಕ ಗರ್ಭದಾನ ಕೇಂದ್ರಗಳನ್ನು ಸ್ಥಾಪಿಸಿ ೬೦,೦೦೦ ಗೂಳಿಗಳನ್ನು ಸರಬರಾಯಿ ಮಾಡುವ ಯೋಜನೆಯಲ್ಲಿ ಈಗಾಗಲೇ ೧೫೦ ಕೀ ಗ್ರಾಮ ಯೋಜನೆ, ೬೦ ಕೃತಕ ಗರ್ಭದಾನ ಕೇಂದ್ರ ತೆರೆಯಲ್ಪಟ್ಟು ೨೫೦ ಗೂಳಿಗಳ ಸರಬರಾಯಿಯಾಗಿದೆ. ಈ ಯೋಜನೆಯನ್ನು ಶೀಘ್ರ ಪೂರ್ತಿಯಾಗಿ ಜಾರಿಗೆ ತರುವ ಯತ್ನ ನಡೆಯುತ್ತಿದೆ. ಪ್ರಯೋಜನಕ್ಕೆ ಬಾರದ ಎತ್ತು ಹಸುಗಳನ್ನು ಕೊಂದು ಹಾಕುವದಕ್ಕಿಂಥಾ ಬೇರೆಡೆ ಪ್ರತ್ಯೇಕಿಸಿಡುವ ಸೂಚನೆ ಮಾಡಲಾಗಿದೆ.

ಕೊಡಗಿನಲ್ಲಿ ಒಂದೆರಡು ಕೀ ಗ್ರಾಮ ಯೋಜನೆಗಳು ಮತ್ತು ಒಂದು ಕೃತಕ ಗರ್ಭದಾನ ಕೇಂದ್ರವನ್ನು ತೆರೆಯಲಾಗಿದೆ. ಜಾನುವಾರುಗಳ ಅಭಿವೃದ್ಧಿಯ ಬಗ್ಗೆ ಎಷ್ಟು ಕೆಲಸ ಮಾಡಿದರೂ ಅದು ಸ್ವಲ್ಪವೇ. ಈ ಪ್ರಶ್ನೆಯು ರಾಷ್ಟ್ರದ ಪ್ರಗತಿ ಮತ್ತು ಸುಖದ ಪ್ರಶ್ನೆಯೊಂದಿಗೆ ಸಮಾವೇಶವಾಗಿರುವದರಿಂದ ಸರಕಾರವೂ, ಜನತೆಯೂ, ಒಂದಾಗಿ ದನಗಳ ಹಿತಕ್ಕಾಗಿ ದುಡಿಯಬೇಕು. ಅವುಗಳ ಉದ್ಧಾರದಲ್ಲಿಯೇ ನಾಡಿನ ಉದ್ಧಾರ.

ವರ್ತಮಾನ.

ಭಾರತ ಸಾಮೂಹಿಕ ವಿಕಾಸ ಯೋಜನೆಯ ಅಧಿಕಾರಿಗಳಾದ ಶ್ರೀ ಡೇ ಯವರು ತಾ. ೨೦ರಲ್ಲಿ ಕೊಡಗಿಗೆ ಬಂದ ಕೊಡಗಿನ ಸಾಮೂಹಿಕ ವಿಕಾಸ ಯೋಜನಾ ಭಾಗಗಳನ್ನು ತಾ. ೨೧ರಲ್ಲಿ ಸಂದರ್ಶಿಸಲಿರುವರು.

ಕೊಡಗಿನ ಜ್ಯುಡಿಶಿಯಲ್ ಕಮಿಶನರ್ ಕೋರ್ಟಿಗೆ ಮದರಾಸಿನ ಬದಲು ಮೈಸೂರನ್ನು ಮಾಡಿರುವ ನಿಯಮದಂತೆ ಮೈಸೂರು ಹೈಕೋರ್ಟಿನ ನ್ಯಾಯಾಧಿಕಾರ ವ್ಯಾಪ್ತಿಯು ಕೊಡಗಿನ ಮೇಲೆ ತಾ. ೧—೪—೫೩ರಿಂದ ಅನ್ವಯಿಸುವದೆಂದು ಗೊತ್ತಾಗಿದೆ.

ಕೊಡಗು ವಿಧಾನ ಸಭೆಯ ಫೈನಾನ್ಸ್ ಕಮಿಟಿ ಮೀಟಿಂಗು ತಾ. ೧೮ರಲ್ಲಿ ಮಡಿಕೇರಿಯಲ್ಲಿ ನಡೆಯಿತು.

ಮಡಿಕೇರಿ ಪೋಸ್ಟಾಫೀಸಿನ ಎದುರುಗಡೆ ರಸ್ತೆಯಲ್ಲಿ ಡೈರಿ ವಾರ್ಡರಾಗಿರುವ ಶ್ರೀ ಎಸ್. ಬೆಳ್ಳಿಯಪ್ಪನವರ ೭ ವರ್ಷದ

ಮಗುವೊಂದು ಸೌದೆ ಗಾಡಿಯೊಂದಕ್ಕೆ ಸಿಕ್ಕಿ ಮೃತವಾಯಿತು.

ಏಪ್ರಿಲ್ ತಾ. ೧ ರಿಂದ ಫ್ರೇಜರ್‌ಪೇಟೆಯಲ್ಲಿ ಸರ್ವೆ ತರಗತಿ ತೆರೆಯಲ್ಪಡುವುದೆಂದೂ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಲೆಕ್ಕದಲ್ಲಿ ನೂರಕ್ಕೆ ೪೦ಕ್ಕಿಂತಾ ಹೆಚ್ಚು ಮಾರ್ಕು ಪಡೆದವರೂ, ಗ್ರಾಜ್ಯುವೇಟುಗಳೂ ತಾ. ೨೫ರೊಳಗೆ ಅರ್ಜಿ ಬರೆದುಕೊಳ್ಳಬಹುದೆಂದೂ ತೇರ್ಗಡೆಹೊಂದುವ ಗ್ರಾಜ್ಯುವೇಟರನ್ನು ೩. ಪಾರುಪತ್ತೆಗಾರರಾಗಿ ನೇಮಿಸುವರೆಂದೂ ತಿಳಿಯಬರುತ್ತದೆ.

ನಾಪೋಕ್ಲು ವೆಸ್ಟ್ ಎಂಡ್ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಬ್ಯಾಡ್ಮಿಂಟನ್ ಆಟದಲ್ಲಿ ಮಡಿಕೇರಿ ಸ್ಪೋರ್ಟ್ಸ್ ಕ್ಲಬ್ ಟೀಮನ್ನು ವೀರಾಜಪೇಟೆ ಟೀಮಿನವರು ಗೆದ್ದು ಕಪ್ಪನ್ನು ಪಡೆದರು. ಮೇಜರ್ ಕೋದಂಡ ಕಾರ್ಯಪ್ಪನವರು ಬಹುಮಾನವನ್ನು ಕೊಟ್ಟರು.

ಕೊಡಗು ಮೂಲ ಶಿಕ್ಷಣ ತರಬೇತು ಅಧ್ಯಾಪಕರು ವೀರಾಜಪೇಟೆ ಚಿಕ್ಕಪೇಟೆಯಲ್ಲಿರುವ ಛತ್ರ ಕೆರೆಯನ್ನು ತಾ. ೧೬ನೇ ಮಂಗಳವಾರ ಶ್ರೀ ಬಿ. ಎಸ್. ಕಾಳಪ್ಪನವರ ನೇತೃತ್ವದಲ್ಲಿ ಸ್ವಚ್ಛ ಮಾಡಿರುವರು.

ಕೋಣಂಗೇರಿ ಗ್ರಾಮದ ಬಡುವಂಡ ಗಣಪತಿಯವರ ಬಾಪ್ತು ವೀರಾಜಪೇಟೆ ನಾಡು ನಾಲ್ಕೇರಿ ಗ್ರಾಮದಲ್ಲಿ ತಮ್ಮ ಪಾರಗಾರರ ೨ ವಾಸದ ಮನೆ ಮತ್ತು ೧ ಗಾಡಿ ಬತ್ತ ೩. ಸಾವಿರ ಕಂತೆ ಹುಲ್ಲಿಗೆ ಹೇಗೋ ಬೆಂಕಿ ಬಿದ್ದು ಬೆಂದು ಹೋಗಿರುವದೆಂದು ವರ್ತಮಾನ.

ಭಾಗಮಂಡಲ ಶ್ರೀರಾಮಮಂದಿರದಲ್ಲಿ ತಾ. ೧೬-೪-೫೪ ರ ಲಾಗಾಯಿತು ೨೪-೪-೫೪ ರ ವರೆಗೆ ಶ್ರೀರಾಮ ಜನ್ಮೋತ್ಸವ ನಡೆಯುವದು.

ಶ್ರೀಮಂಗಲ ಜಯ್ ಹಿಂದ್ ಕ್ಲಬಿನ ಅಧ್ಯಕ್ಷ ಶ್ರೀ ಕಂಡ್ರತಂಡ ಬಿ. ಕಾರ್ಯಪ್ಪನವರು ತಮ್ಮ ಪತ್ನಿ ಲೇಟ್ ಪೂಚಮ್ಮನವರ ಜ್ಞಾಪಕಾರ್ಥವಾಗಿಯೂ, ಶ್ರೀ ಮುಗ್ಗಂಡ ಎಂ. ತಿಮ್ಮಯ್ಯನವರು ಶ್ರೀ. ಚಾಮಂಡ ಕೆ. ಕುಟ್ಟಪ್ಪನವರು ಮತ್ತು ಶ್ರೀ. ಮುಂಡಮಾಡ ಎಸ್. ಕಾರ್ಯಪ್ಪನವರು ದಯಪಾಲಿಸಿದ ಬೆಳ್ಳಿಯ ಬಟ್ಟಲುಗಳನ್ನು ಐವರ ಈರ್ವರ ಹತ್ತು ಒಬ್ಬರ ಬ್ಯಾಡ್ಮಿಂಟನ್ ಪಂದ್ಯಾಟದ ಸ್ಪರ್ಧೆಗೆ ಇಡಲಾಗುವುದು. ಈ ಪಂದ್ಯಾಟವು ಏಪ್ರಿಲ್ ತಿಂಗಳ ಕೊನೆಯನೇ ವಾರದಿಂದ ಪ್ರಾರಂಭಿಸಲ್ಪಡುವುದು. ಸ್ಪರ್ಧೆಗೆ ಸೇರಲಿಚ್ಛಿಸುವವರು ತಮ್ಮ ಹೆಸರುಗಳೊಂದಿಗೆ ಪ್ರವೇಶಿಕ ರೂಪಾಯಿ ಐದು, ಮೂರು ಮತ್ತು ಎರಡರಂತೆ ತಾ. ೩೦-೪-೫೪ ರೊಳಗೆ ಕಾರ್ಯದರ್ಶಿಯವರಿಗೆ ಪಾವತಿಸಿ ಭಾಗಿಗಳಾಗಬಹುದು.

ಸ್ವಂತ ಕಂಪೆನಿಗಳ ಪರವಾಗಿ ರೆಪ್ರಸಂಟೇಟಿವ್‌ಗಳಾಗಿ ಕೆಲಸ ಮಾಡಲು ಕಂಪೆನಿಗಳಲ್ಲಿ ಕೆಲಸ ಮಾಡಿ ಮಾಹಿತಿ ಹೊಂದಿದ ಅಥವಾ ಕೆಲಸ ಮಾಡಲು ಇಚ್ಛಿಸುವವರು ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿಗೆ ತಮ್ಮ ಅಪ್ಲಿಕೇಷನನ್ನು ತಾ. ೨೫ರ ಒಳಗಾಗಿ ತಲ್ಪಿಸತಕ್ಕದ್ದು. ಮಾಹೆಯಾನ ಸಂಬಳ ರೂ. ೧೫೦ ರಿಂದ ೨೦೦ ರ ವರೆಗೆ. ಹೆಚ್ಚಿನ ವಿಷಯಗಳನ್ನು ಮಡಿಕೇರಿ ಎಂಪ್ಲಾಯಿಮೆಂಟ್ ಆಫೀಸಿನಿಂದ ಪಡೆದು ತಿಳಿದುಕೊಳ್ಳಬಹುದು.

ಮಡಿಕೇರಿ ಟೋಲ್‌ಗೇಟ್ ಬಳಿ ನಾಗಪ್ಪನವರ ಹೋಟೆಲಿನಲ್ಲಿ ಅನಧಿಕೃತ ಸಾರಾಯಿ ದೊರೆತು ಅವರಿಗೆ ಜುಲ್ಮಾನೆಯಾಯಿತೆಂದು ಕಳೆದ ವಾರ ಪ್ರಕಟವಾದ ವಾರ್ತೆಯಲ್ಲಿ "ಹೋಟೆಲಿನಲ್ಲಿದ್ದವರೊಬ್ಬರಲ್ಲಿ ಸಾರಾಯಿ ದೊರೆತು ಅವರಿಗೆ ಜುಲ್ಮಾನೆಯಾಯಿತೆಂದು" ಓದಿಕೊಳ್ಳಬೇಕಾಗಿ ವಿನಂತಿ.

ಸೋಮವಾರಪೇಟೆ, ವೀರಾಜಪೇಟೆ ಮತ್ತು ಗೋಣಿಕೊಪ್ಪಗಳಲ್ಲಿ ಬೀರ್ ಮಾರಾಟದ ಬಗ್ಗೆ ಟೆಂಡರನ್ನು ತಾ. ೨೭ ರೊಳಗೆ ಬರೆಕೊಳ್ಳಬಹುದೆಂದು ಪ್ರಕಟವಾಗಿದೆ.

ತಾ. ೨೭ರಲ್ಲಿ ಬೆಳಿಗ್ಗೆ ೧೦ ಗಂಟೆಗೆ ಜಿಲ್ಲಾ ಮೆಜಿಸ್ಟ್ರೇಟರ ಕಛೇರಿಯ ಮುಂದೆ ಮರ್ಫಿ ರೇಡಿಯೋ ಒಂದು ಹರಾಜು ಹಾಕಲ್ಪಡುವದೆಂದು ತಿಳಿದು ಬಂದಿದೆ.

ಕೊಡಗಿನಿಂದ ಜನತಾ ಸಭೆಗೆ ಸದಸ್ಯರಾಗಿರುವ ಶ್ರೀ ಎನ್. ಸೋಮಯ್ಯ, ಮತ್ತು ಸಿ. ಎಂ. ಪೂಣಚ್ಚ ಎಚ್. ಟಿ. ಮುತ್ತಣ್ಣ ಇವರನ್ನು, ಜನತಾ ಸಭೆಯ ಅಧ್ಯಕ್ಷರೂ ಹಾಗೂ ಕೊಡಗು ರಾಜ್ಯ ಸಭೆಯ ಅಧ್ಯಕ್ಷರೂ ನೇರಿ ಡೀಲಿಮಿಟೇಶನ್ ಕಮಿಟಿಯ ಎಸೋಸಿಯೇಟ್ ಸದಸ್ಯರಾಗಿ ಆರಿಸಿರುವರು.

ಬಜೆಟ್ ಮೀಟಿಂಗು

ಕೊಡಗು ರಾಜ್ಯ ಸಭೆಯ ಬಜೆಟ್ ಮೀಟಿಂಗು ತಾರೀಕು ೨೩ರಲ್ಲಿ ಪ್ರಾರಂಭವಾಗುವದು. ಪ್ರಥಮ ದಿನ ಬೆಳಿಗ್ಗೆ ಚೀಫ್ ಕಮಿಷನರು ಸಭಿಕರನ್ನುದ್ದೇಶಿಸಿ ತಮ್ಮ ಭಾಷಣ ಮಾಡುವರು. ಮಧ್ಯಾಹ್ನದ ಮೇಲೆ ಮುಖ್ಯ ಮಂತ್ರಿಗಳು ಬಜೆಟ್ಟನ್ನು ಸಭಿಕರ ಮುಂದಿಡುವರು. ತಾ. ೨೪ರಲ್ಲಿ ಸರಕಾರಿ ಸೂಚನೆಗಳ ಚರ್ಚೆ ನಡೆಯುವದು. ತಾ. ೨೫ರಲ್ಲಿ ಚೀಫ್ ಕಮಿಷನರ ಭಾಷಣದ ಮೇಲೆ ಚರ್ಚೆ ನಡೆಯುವದು. ತಾ. ೨೬ರಲ್ಲಿ ಸಾರ್ವಜನಿಕ ಅಭಿರುಚಿಯ ಠರಾವುಗಳು ಚರ್ಚಿಸಲ್ಪಡುವವು. ತಾ. ೨೭ ಮತ್ತು ೨೮ರಲ್ಲಿ ಬಜೆಟ್ಟಿನ ಮೇಲೆ ಚರ್ಚೆ ನಡೆಯುವದು. ತಾ. ೩೦ ಮತ್ತು ೩೧ರಲ್ಲಿ ಎಪ್ರಾಪ್ರಿಯೇಷನ್ ಬಿಲ್ ಮಂಡಿಸಲ್ಪಡುವದು. ಈ ಸಾರಿ ಕೌನ್ಸಿಲಿನಲ್ಲಿ ಸುಮಾರು ೬೦ ಠರಾವುಗಳೂ ಆಕ್ಷೇಪಣೆಗಳೂ ಇರುವವೆಂದೂ, ಠರಾವುಗಳಲ್ಲಿ ಕೇವಲ ೨೦ ಮಾತ್ರ ಚರ್ಚಿಸಲ್ಪಡುವವೆಂದೂ ಗೊತ್ತಾಗಿದೆ. ಸರಕಾರವು ಸಿನೆಮಾ ಗೃಹಗಳಲ್ಲಿ ಬೀಡಿ ಸಿಗರೇಟು ಸೇದಬಾರದೆಂಬ ಮತ್ತು ವಿನೋದಾವಳಿಗಳ ಮೇಲೆ ತೆರಿಗೆ ಹಾಕುವ ಮತ್ತು ಸ್ಪೀಕರರ ವೇತನಾ ಕಾನೂನಿನ ತಿದ್ದುಪಡಿಯ ಸೂಚನೆಗಳನ್ನೂ ಮಂಡಿಸಲಿದೆ.

ಕೇಂದ್ರದಲ್ಲಿ ಸಮ್ಮಿಶ್ರ ಸರಕಾರ?

ಪಂಡಿತ ಜವಾಹರಲಾಲ್ ನೆಹರೂ ಮತ್ತು ಪ್ರಜಾ ಸೋಸಿಯಲಿಸ್ಟ್ ಪಕ್ಷದ ಮುಂದಾಳು ಜಯಪ್ರಕಾಶರೊಡನೆ ನಡೆದ ಮಾತು ಕತೆಗಳ ಪರಿಣಾಮವಾಗಿ ಕೇಂದ್ರದಲ್ಲಿ ಶೀಘ್ರವಾಗಿ ಸಮ್ಮಿಶ್ರ ಮಂತ್ರಿಮಂಡಳದ ನಿರ್ಮಾಣವಾಗುವದೆಂದು ತಿಳಿದುಬಂದಿದೆ. ಕಾಂಗ್ರೆಸ್ ಮತ್ತು ಪ್ರಜಾ ಸೋಸಿಯಲಿಸ್ಟ್ ಪಕ್ಷಗಳಲ್ಲಿ ತತ್ವತಃ ಹೆಚ್ಚಿನ ಭೇದವಿಲ್ಲದ ಕಾರಣ ಇವೆರಡು ಒಂದಾಗಿ ದೇಶದ ಆಡಳಿತ ಜವಾಬ್ದಾರಿಯನ್ನು ಹೊರುವ ಬಗ್ಗೆ ಮಾತುಕತೆಗಳು ಕೆಲವು ದಿನಗಳಿಂದ ನಡೆಯುತ್ತಿದೆ. ಈ ವರೆಗಿನ ಮಾತು ಕತೆಗಳ ಪ್ರಕಾರ ಈ ಎರಡು ಪಕ್ಷಗಳು ದೇಶದ ಆಡಳಿತದ ಮಟ್ಟಿಗೆ ಒಂದಾಗುವ ಸಾಧ್ಯತೆ ಕಂಡುಬರುತ್ತಿದೆ.

ಕಾಂಗ್ರೆಸು ಈಗ ಅನುಸರಿಸುತ್ತಿರುವ ನೀತಿಯಲ್ಲಿ ಬದಲಾವಣೆಯನ್ನು ಮಾಡಬೇಕೆಂದು ಮುಖ್ಯ ಮಂತ್ರಿಯವರಿಗೆ ಮಾರ್ಚ್ ಎರಡರಲ್ಲಿ ತಮ್ಮ ಸೂಚನೆಗಳನ್ನೊಳಗೊಂಡ ಪತ್ರ ಬರೆದು ಆ ನೀತಿ ಕಾಂಗ್ರೆಸ್ಸು ನೀತಿಯನ್ನು ಬದಲಿಸಲು ಒಪ್ಪಿದರೆ ತಾವು ಕಾಂಗ್ರೆಸಿನೊಳಗೆ ಸಹಕರಿಸುವದಾಗಿ ಪ್ರಜಾಪಕ್ಷವು ತಿಳಿಸಿತ್ತು. ಈ ಸೂಚನೆಗಳ ಮೇರೆ ಪಂಚವಾರ್ಷಿಕ ಯೋಜನೆಯ ಪರಿಷ್ಕರಣೆ ಪ್ರಾಮುಖ್ಯವಾಗಿ ಕೈಗಾರಿಕೆ ಭೂಸುಧಾರಣೆ ಮತ್ತು ನಿರುದ್ಯೋಗ ನಿವಾರಣೆಗಳಿಗೆ ಸಂಬಂಧಿಸಿದ ಭಾಗಗಳ ತಿದ್ದುಪಡಿಗಳು ಸೂಚಿಸಲ್ಪಟ್ಟಿದ್ದವು. ಅಷ್ಟೇ ಅಲ್ಲದೆ ಇಂದಿನ ಆಡಳಿತ ಯಂತ್ರವನ್ನು ಪರಿಷ್ಕರಿಸಿ ಪುನಹ ಸರಿಗೊಳಿಸುವ ಸೂಚಿಸಿದ್ದಲ್ಲದೆ ಯಾವನೊಬ್ಬನು ಮಂತ್ರಿಯಾಗಬೇಕಾದರೆ ಆತನಿಗೆ ಆ ಇಲಾಖೆಯ ಶಾಸ್ತ್ರೀಯ ಹಾಗೂ ಸವಿಸ್ತಾರ ಜ್ಞಾನವಿರಬೇಕೆಂದೂ ಸೂಚಿಸಲಾಗಿತ್ತು.

ಕಾಂಗ್ರೆಸಿಗೆ ವಿರೋಧವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಹಿಂದೂದೇಶದಲ್ಲಿ ಕಾಂಗ್ರೆಸ್ ೧೦೦ ಕ್ಕೆ ೪೭ ರಂತೆ ಓಟು ಪಡೆದಿದ್ದರೆ ಪ್ರಜಾ ಸೋಸಿಯಲಿಸ್ಟ್ ಪಕ್ಷವು ೧೭ ರಂತೆ ಪಡೆದಿದೆ. ಈ ಪಕ್ಷವು ಈಗ ಕಾಂಗ್ರೆಸಿನೊಡನೆ ಸಹಕರಿಸಿ ಕೆಲಸ ಮಾಡುವ ಮನೋಭಾವವನ್ನು ತೋರಿದ್ದು ಕಾಂಗ್ರೆಸು ಅದನ್ನು ಹಾರ್ದಿಕವಾಗಿ ಸ್ವಾಗತಿಸುತ್ತಿದೆ. ಪ್ರಚಲಿತವಾಗಿರುವ ವರ್ತಮಾನದಂತೆ ಕೇಂದ್ರ ಮಂತ್ರಿಮಂಡಳದಲ್ಲಿ ಈ ಪಕ್ಷಕ್ಕೆ ನಾಲ್ಕು ಸ್ಥಳಗಳನ್ನು ಬಿಟ್ಟುಕೊಡುವ ವರ್ತಮಾನವಿದೆ.

ಪ್ರಜಾ ಸೋಸಿಯಲಿಸ್ಟ್ ಪಕ್ಷದ ಮುಂದಾಳುಗಳೊಬ್ಬರು ತಾವು ಕಾಂಗ್ರೆಸಿನೊಡನೆ ಸಹಕರಿಸುವ ವಿಚಾರವಾಗಿ ಮಾತಾಡುತ್ತಾ ಹೀಗೆ ಹೇಳಿರುವರು.

'ನಾವು ಕಾಂಗ್ರೆಸಿನೊಡನೆ ಸಹಕರಿಸುವದರಿಂದ ನಮಗೆ ಕಾಂಗ್ರೆಸಿನ ವಿರುದ್ಧ ಮತವಿತ್ತ ಮತದಾರರು ಮೋಸಗೊಳಿಸಿದಂತಾಗುವದೆಂದು ಕೆಲವರು ಭಾವಿಸಬಹುದು. ಆದರೆ ನಾವು ಸಹಕರಿಸುವ ನಿರ್ಣಯವನ್ನು ನಮ್ಮ ಚುನಾವಣಾ ಘೋಷಣೆಯಲ್ಲಿ ನಮೂದಿಸಿರುವ ವಿಷಯಗಳ ಸಾಧನೆಗಾಗಿಯೇ ಮಾಡಿರುವೆವು. ನಮ್ಮ ತತ್ವ ಸಿದ್ಧಾಂತಗಳನ್ನು ಬಲಿಕೊಟ್ಟು ಯಾವ ನಿರ್ಣಯಕ್ಕೂ ನಾವು ಒಪ್ಪಲಾರೆವು. ನಮ್ಮ ತತ್ವ ಪ್ರಣಾಳಿಯನ್ನು ಜಾರಿಯಲ್ಲಿ ತರುವ ಯತ್ನದಲ್ಲಿ ಸಹಕಾರವನ್ನೀಯಲು ಸಿದ್ಧರಿರುವೆವು. ಈ ದೃಷ್ಟಿಯಿಂದಲೇ ಇಂದು ಕಾಂಗ್ರೆಸಿನೊಡನೆ ಸಹಕರಿಸುವ ತೀರ್ಮಾನ ಮಾಡಿರುವೆವು' ಎಂದಿರುವರು.

ಪ್ರಜಾ ಸೋಸಿಯಲಿಸ್ಟ್ ಪಕ್ಷದವರ ಸಹಕಾರದ ದೃಷ್ಟಿಯಿಂದ ಕೇಂದ್ರ ಮಂತ್ರಿಮಂಡಳದಲ್ಲಿ ಕೆಲವು ಸ್ಥಳಗಳನ್ನು ಅವರಿಗೆ ಕೊಡಲು ಸರಕಾರ ಮುಂದೆ ಬಂದಿದೆಯಂತೆ. ಆದರೆ ಅವರ ಸೂಚನೆಗಳ ಅಂಗೀಕಾರವಾದ ನಂತರವೇ ಈ 'ಸೀಟು'ಗಳನ್ನು ಸ್ವೀಕರಿಸುವ ಆಲೋಚನೆ ಮಾಡಲಾಗುವದಂತೆ.

ಈ ರೀತಿಯ ಸೌಹಾರ್ದತೆ ಮತ್ತು ಸಹಕಾರಕ್ಕೆ ಪಂಡಿತ ನೆಹರೂರವರು ತುಂಬಾ ಆಸಕ್ತಿ ವಹಿಸಿರುವರೆಂದೂ ಎಷ್ಟೇ ದೊಡ್ಡ ಪಕ್ಷವಾದರೂ ದೇಶದ ಆಡಳಿತವನ್ನು ಒಂದೇ ಪಕ್ಷವು ವಹಿಸುವದು ಯೋಗ್ಯವಲ್ಲವೆಂದೂ ರಾಷ್ಟ್ರೀಯ ರಚನಾ ಹಾಗೂ ಆಡಳಿತ ಕಾರ್ಯದಲ್ಲಿ ಎಲ್ಲರ ಸಹಾನುಭೂತಿ, ಸಹಾಯ, ದೊರೆಯುವಂತೆ ಮಾಡಿಕೊಳ್ಳುವದು ದೇಶದ ದೃಷ್ಟಿಯಿಂದ ಅತ್ಯಗತ್ಯವೆಂದೂ ಅವರು ಅಭಿಪ್ರಾಯಪಟ್ಟಿರುವರೆಂದೂ ತಿಳಿದುಬಂದಿದೆ.

ನೋಟೀಸು.

ಅಖಿಲ ಕೊಡಗು ವಿದ್ಯಾನಿಧಿಗೆ ದಸ್ತೈವೇಜು ಕಾರಣಕಟ್ಟಾಗಿ ನಿಧಿಯ ಪಡೆದವರಿಂದ ಸುಮಾರು ನೂರಕ್ಕೂ ಅಧಿಕ ರೀತಿ ಪುಸ್ತಕಗಳನ್ನು ಹೊಂದಿಕೊಂಡಿರುತ್ತಾರೆ. ಈ ಪುಸ್ತಕಗಳನ್ನು ಹೊಂದಿಕೊಂಡು ಎರಡು ವರ್ಷಗಳಾದರೂ ಬಡ್ಡಿ ಸಹಿತ ಸಂಗ್ರಹಿಸಿದ ಹಣದ ಲೆಕ್ಕವನ್ನಾಗಲೀ ಯಾ ರಶೀತಿ ಪುಸ್ತಕವನ್ನಾಗಲಿ ಸಂಘದ ಆಫೀಸಿಗೆ ತಲುಪಿಸದಿರುವುದು ವಿಷಾದಕರ. ಪುಸ್ತಕ ಪಡೆದುಕೊಂಡವರು ಏಪ್ರಿಲ್ ತಾ. ೧೫ರೊಳಗೆ ಸಂಗ್ರಹಿಸಿದ ಹಣ ಮತ್ತು ಪುಸ್ತಕಗಳನ್ನು ಸಂಘದ ಆಫೀಸಿಗೆ ಹಾಜರು ಮಾಡಬೇಕೆಂದು ಈ ಮೂಲಕ ತಿಳುವಳಿಕೆ ಕೊಡಲಾಗಿದೆ. ಹಣ ಸಂಗ್ರಹಿಸದೆ ಪುಸ್ತಕ ಹಾಗೆ ಇಟ್ಟುಕೊಂಡವರು ಖಾಲಿ ಪುಸ್ತಕಗಳನ್ನು ಆ ತಾರೀಖಿನೊಳಗೆ ಕಳುಹಿಸಬೇಕು. ಪುಸ್ತಕಗಳನ್ನು ವಾಪಾಸು ಮಾಡದಿದ್ದರೆ ಅವುಗಳ ನಷ್ಟ ಬಗ್ಗೆ ಸರಿ ಕ್ರಮ ಕೈಕೊಳ್ಳಬೇಕಾಗುವದೆಂದು ಈ ಮೂಲಕ ಪ್ರಕಟಿಸಲಾಗಿದೆ.

ಅಲ್ಲದೆ ವಿದ್ಯಾನಿಧಿಯಿಂದ ಸಾಲ ತೆಗೆದುಕೊಂಡು ಈಗ ಸಂಪಾದನೆ ಮಾಡುತ್ತಿರುವವರಿಗೆ ಹಣ ಮರುಪಾವತಿ ಮಾಡಲು ಕಾಗದ ಬರೆದು, ರಿಜಿಸ್ಟರು ನೋಟೀಸು ಕೊಟ್ಟು ಪ್ರಯತ್ನಿಸಿದ ಫಲವಾಗಿ ಕೆಲವರು ಪಾವತಿ ಮಾಡುತ್ತಿದ್ದಾರೆ. ಆದರೆ ಕೆಲವರು ಈ ಕಡೆ ಗಮನವಿತ್ತಿರುವದಿಲ್ಲ. ಅಂಥಾವರು ಏಪ್ರಿಲ್ ತಾ. ೧೫ ರೊಳಗೆ ತಮ್ಮ ಬಾಕಿಯನ್ನು ಪಾವತಿ ಮಾಡದಿದ್ದರೆ ಕೋರ್ಟಿನ ಆಗ್ರಹ ಮೂಲಕ ವಸೂಲು ಮಾಡಿಕೊಳ್ಳಲಾಗುವದು. ಆ ತಾರೀಖಿನೊಳಗೆ ಹಣ ಪಾವತಿ ಮಾಡದಿದ್ದರೆ ತಕ್ಕ ಕ್ರಮ ಜರುಗಿಸಲಾಗುವುದು.

ಸಿ. ಪಿ. ಅಪ್ಪಯ್ಯ
ಕಾರ್ಯದರ್ಶಿ.
ಕೊಡಗು ವಿದ್ಯಾನಿಧಿ ಆಫೀಸು
4-1 ಮಡಿಕೇರಿ.

ವಿಚಾರ ಮಥನ

ಲೇಃ ‘ನಿರಂಜನ’

ಬಡತನ ಹಾಸ್ಯದ ವಿಚಾರವಲ್ಲ; ಗೌರವದ ಸಂಕೇತ.

“ಯಾವ ಪ್ರಮಾಣದಲ್ಲಿ ಲಂಚರುಸುವಸ್ತುಗಳಿಗೆರವಾಗಿ ಜನಾಂಗವು ಕೆಳಗಿಳಿಯುವದೋ ಅದೇ ಪ್ರಮಾಣದಲ್ಲಿ ಬಡತನಕ್ಕೆ ಅವಮರ್ಯಾದೆಯು ಹೆಚ್ಚಿ ಸಿರಿವಂತಿಗೆಗೆ ಗೌರವ ದೊರೆಯುವದು” ಎಂಬುದಾಗಿ ಕೋಲ್ಟನ್‌ರೆಂಬುವವರು ಹೇಳಿದ್ದಾರೆ. ಸಧ್ಯದ ನಮ್ಮ ಜೀವನದ ಪರಿಸ್ಥಿತಿಯನ್ನು ಈ ಅಳತೆ ಕೋಲಿನಿಂದ ಅಳೆಯುವದಾದರೆ ನಮ್ಮ ಅಂತಸ್ತು ಎಲ್ಲಿಗೆ ತಲುಪಿದೆಯೆಂಬುದು ತಿಳಿಯುವದು. ಇಂದಿನ ನಮ್ಮ ಸಮಾಜದಲ್ಲಿ ಗುಣವಂತನಿರಲಿ, ಜ್ಞಾನಿ ಇರಲಿ, ಭಗವಂತನೇ ಇರಲಿ, ಹಣವಂತನಲ್ಲದಿದ್ದರೆ ಆತನಿಗೆ ಸ್ಥಾನವಿಲ್ಲ, ಗೌರವವಿಲ್ಲ. ಸಿರಿವಂತ ಕುಡುಕನಿರಲಿ, ದರೋಡೆಗಾರನಿರಲಿ, ಬಡಬರ ಸೇರಿನಲ್ಲಿ ಅಕ್ಕಿ ಮಾರಲಿ, ದಿನ ದಿನಕ್ಕೆ ರಾಜಕೀಯ ಒದಲಾಯಿಸುತ್ತಿರಲಿ, ಬೇಕುಬೇಕಾದಂತೆ ಲಂಚ ತೆಗೆದರೂ ಆತನಿಗೆ ಗೌರವ, ಆತನಿಗೆ ಮನ್ನಣೆ, ಆತನಿಗೆ ಹೂಮಾಲೆ!

ಸಮಾಜದಲ್ಲಿ ಯಾರಿಗೆ ನಿಜವಾಗಿಯೂ ಮನ್ನಣೆ ಸಲ್ಲಬೇಕೆಂಬುದನ್ನು ಅರಿಯುವ ಮೊದಲು ಮನುಷ್ಯನನ್ನು ಬಡವನನ್ನಾಗಿ ಮಾಡುವದು ಯಾವುದು? ಕೆಲವರನ್ನು ಸಿರಿವಂತರಾಗಿ ಏರಿಸುವದು ಯಾವುದು? ಎಂಬ ಪ್ರಶ್ನೆಗಳನ್ನು ವಿವೇಚಿಸುವದೊಳಿತು. ನಿಜವಾದ ಹೃದಯ ಪರಿಶುದ್ಧತೆಯುಳ್ಳ ಸಿರಿವಂತನು ತನ್ನ ಸಿರಿಸಂಪತ್ತು ಹೇಗೆ ಬಂತೆಂದು ಆಲೋಚಿಸುವದಾದರೆ ಆತನು ತಲೆ ಕೆಳಗೆ ಹಾಕಬೇಕು. ಆತನು ನಾಚಿಕೆ ಪಟ್ಟುಕೊಳ್ಳಬೇಕು. ಒಂದು ಕಡೆ ಮಣ್ಣು ಎತ್ತರಕ್ಕೆ ರಾಶಿ ಬೀಳಬೇಕಾದರೆ ಅದೇ ಪರಿಮಾಣದಲ್ಲಿ ಬೇರೊಂದೆಡೆ ತಗ್ಗಾಗಲೇಬೇಕು. ಇದು ಪ್ರಕೃತಿಯ ನಿಯಮ. ಇದರಂತೆ ಒಬ್ಬನು ಸಿರಿವಂತನಾಗಿ ಮೇಲೇರಿ ಕೂರಬೇಕಾದರೆ ಹತ್ತು ಜನರು ಬಡವರಾಗಿ ಕೆಳಗಿಳಿಯಲೇಬೇಕು. ಮನುಷ್ಯನಿಗೆ ದೇವರು ಎರಡು ಕೈಗಳನ್ನು ಕೊಟ್ಟಿದ್ದೂ ಆತನಿಗಿರುವ ಒಂದು ಹೊಟ್ಟೆಯನ್ನು ತುಂಬಿಸಲು ಎರಡು ಕೈಗಳೂ ಪ್ರತಿದಿನ ದುಡಿಯಬೇಕಾಗುತ್ತದೆ. ಆದರೆ ಮಾನವನು ಅಧಿಕಾರದ, ಯಾ ದುಡ್ಡಿನ ಬಲದಿಂದ ಬೇರೆ ಕೈಗಳನ್ನು ತನಗಾಗಿ ದುಡಿಯಲು ಹಚ್ಚಿಕೊಂಡಾಗಲೇ ಆತನ ಸಂಪತ್ತು ಹೆಚ್ಚುವದು. ಹೊಟ್ಟೆ ಹದ್ದುಮೀರಿ ಬೆಳೆಯುವದು. ಆತನು ಧನಿಕನೆನಿಸುವನು. ಅದ್ದರಿಂದಲೇ ಹೇಳಿದೆ, ‘ನ್ಯಾಯ ಮಾರ್ಗದಿಂದ ಸಿರಿವಂತನಾಗುವದು ಹರಿಯುವ ನೀರಿನಲ್ಲಿ ಕಮಲವನ್ನಪೇಕ್ಷಿಸಿದಂತೆ.’

ಆದರೆ ಬಡವ ಬಡವನಾಗುವದು ಆತನ ಸೋಮಾರಿತನದಿಂದಲ್ಲ. ಬೆಳಿಗ್ಗೆ ೮ ಗಂಟೆಯಿಂದ ಸಾಯಂಕಾಲ ೬ ಗಂಟೆಯವರೆಗೆ ಕಲ್ಲೊಡೆಯುವವನು ಬಡವನಾಗಿದ್ದರೆ ಅದು ಆತನು ಕೆಲಸ ಮಾಡದ ಕಾರಣದಿಂದಲೇ? ದಿನವಿಡೀ ಬೆವರಿಳಿಸಿ ಹಗಲು ರಾತ್ರಿ ಮಳೆ ಬಿಸಿಲೆನ್ನದೆ ದುಡಿಯುವ ರೈತ ಬಡವನಾಗಿದ್ದರೆ ಆತನು ದುಡಿಯದ ಕಾರಣದಿಂದಲೇ? ದೇಶಕ್ಕಾಗಿಯೂ, ಇತರರಿಗಾಗಿಯೂ ಅಹರ್ನಿಶಿ ದುಡಿಯುವ ಇವರಿಗಿಲ್ಲದ ಗೌರವ ಕುರ್ಚಿಯ ಜೀವನದ ಸಿರಿವಂತರಿಗೆಂದರೆ ಕುರುಬ ಹುಲಿ ಹೊಡೆದುದನ್ನು ಯಜಮಾನ ತಾನು ಹೊಡೆದುದೆಂದು ಗೌರವಕ್ಕೆ ಕೈಯೊಡ್ಡಿದಂತಲ್ಲವೇ?

ನೈತಿಕ ಅಧಃ ಪತನ.

ಸಮತಾವಾದಿ ತತ್ವದ ಹೆಸರಿಕೆಯು ಹಲವು ಸಂಕಾರರಗಳ ಹಾಗೂ ಮುಂದಾಳುಗಳ ಬುದ್ಧಿ ಭ್ರಮಣೆ ಮಾಡಿದಂತೆ ತೋರುತ್ತಿದೆ. ಹೆದರಿಕೆ ತುಂಬಿದ ಮನುಷ್ಯನಿಗೆ ತನ್ನ ಭಾವನೆ ಹಾಗೂ ವರ್ತನೆಯ ಮೇಲೆ ಹಿಡಿತವಿಲ್ಲದ ಕಾರಣ ಆತನು ಹುಚ್ಚನಂತೆ ವರ್ತಿಸುತ್ತಾನೆ, ಹುಚ್ಚನಂತೆ ಮಾತಾಡುತ್ತಾನೆ. ಪ್ರೇತ ಭಯವಿರುವವನಿಗೆ ಕತ್ತಲೆಯಲ್ಲಿ ಮರವೂ ಪಿಶಾಚಿಯಾಗಿ ತೋರುವಂತೆ ಈ ಸಮತಾವಾದದಿಂದ ಭಯಗೊಂಡವರಿಗೆ ನೋಡಲ್ಲೆಲ್ಲಾ ಅದೇ ಕಾಣುತ್ತಿದೆ. ಕೆಂಪು ವಸ್ತ್ರಕಂಡರೆ ಗಾಬರಿಗೊಂಡು ಹಾರಾಡುವ ಗೂಳಿಯಂತೆ ಸಿಕ್ಕಿದೆಡೆ ಹಾರಾಡುತ್ತಾರೆ. ಈ ರೀತಿಯ ಭಯದ ಕಾರಣ ಅವರಿಗೆ ದೇಶದಲ್ಲಿ ಸ್ವಾತಂತ್ರ್ಯವಿದೆ. ರಾಜ್ಯಘಟನೆಯಿದೆ. ಪ್ರತಿಯೊಬ್ಬನಿಗೂ ರಾಜಕೀಯ ಹಕ್ಕಿದೆಯೆಂಬುದು ಮರೆತುಹೋಗುತ್ತದೆ. ಅವರು ಎಲ್ಲಿ ಎಂಥಾ ಮಾತಾಡಬೇಕೆಂಬುದನ್ನು ತಿಳಿಯದೆ ಒಂದೇ ಶಂಖ ಊದುತ್ತಾರೆ. ಪೈಯರ್ ಎಲಿಮೆಂಟರಿ ಹಳ್ಳಿ ಶಾಲೆಯೊಂದರಲ್ಲಿ ನಮ್ಮ ಮಹಾ ಪಂಡಿತರೆಂದುಕೊಳ್ಳುವವರೊಬ್ಬರು ಆಡಿದ ಮಾತುಗಳಿವು.

‘ಕೊಡಗಿನಲ್ಲಿ ಕಮ್ಯೂನಿಸ್ಟರು ತಲೆ ಎತ್ತುತ್ತಿರುವರು. ಈ ಶಾಲೆಯ ಸುತ್ತು ಕಾಫಿ ತೋಟಗಳು ಹೆಚ್ಚಿರುವದರಿಂದ ಕಮ್ಯೂನಿಸ್ಟರು ಕಾಲಿಕ್ಕದಂತೆ ಎಚ್ಚರಿಕೆ ವಹಿಸಬೇಕು. ಕಮ್ಯೂನಿಸ್ಟರೆಂದರೆ ತಿಪ್ಪೆ ಗುಂಡಿ, ಹಾಳು ಹೊಲಸುಗಳಲ್ಲಿ ಹುಟ್ಟುವ ಕ್ರಿಮಿಗಳಂತೆ. ಎಲ್ಲಿ ಹೊಲಸು ಇದೆಯೋ ಅಲ್ಲಿಯೇ ಅವರ ಜೀವನ. ಬಡಗಾಲು ದುರಂತಗಳನ್ನು ಉಪಯೋಗಿಸಿಕೊಂಡು ಅವರು ಬೆಳೆಯುತ್ತಾರೆ. ಅವರು ಅಶಾಂತತೆ ಹಬ್ಬಿಸಿ, ವಿಧ್ವಂಸಕ ಕಾರ್ಯ ಪ್ರಾರಂಭಿಸುತ್ತಾರೆ. ಹತ್ತಿರದ ತೋಟಗಳನ್ನು ನೋಡಿದರೆ ಆನಂದವಾಗುತ್ತದೆ. ಈ ರೀತಿ ಎಲ್ಲರೂ ಧನ ಸಂಪಾದಿಸಬೇಕು ಒಬ್ಬನಿಗೆ ಆಸ್ತಿ ಇದೆಯೆಂದು ಬೇರೆಯವರು ದ್ವೇಷಮಾಡಬಾರದು’ ಎಂದು ಮೊದಲಾಗಿ ಹೇಳಿದರಂತೆ.

ಮಾಧ್ಯಮಿಕ ಶಾಲೆಯ ವಾರ್ಷಿಕೋತ್ಸವದಲ್ಲಿ ಈ ರಾಜಕೀಯವೇಕೆ? ಶಾಲಾ ಮಕ್ಕಳಿಗೂ ಸಮತಾವಾದಕ್ಕೂ ಯಾ ತೋಟದ ಆಳುಗಳಿಗೂ ಸಂಬಂಧವೇನು? ಹಾದಿಯಲ್ಲಿ ಹೋಗುವ ಪಿಶಾಚಿಯನ್ನು ಕೂಗಿ ಮನೆಗೆ ಕರೆದುಕೊಳ್ಳುತ್ತಿರುವ ಈ ಹಸಿಬಿಸಿ ರಾಜಕಾರಣಿಗಳಿಗೆ ಏನೆನ್ನೋಣ? ಇದನ್ನು ಕೇಳುವ ಜನರು ಜ್ಞಾನಹೀನರಲ್ಲ. ಇವರನ್ನು ವೇದಿಕೆಯಿಂದ ಕೆಳಗಿಳಿಸಿಯಾರು. ಆದರೆ ಏನು ಮಾಡುವದು ಸರಕಾರದ ಪಟ್ಟವೊಂದು ಇವರ ನೆತ್ತಿಯಲ್ಲಿ ಹೊಳೆಯುತ್ತದೆ. ಇವರ ಅವಮಾನವೆಂದರೆ ಸರಕಾರದ ಅವಮಾನವೆಂದಾಗುತ್ತದೆ. ಆದರೆ ಸಹನೆಗೂ ಒಂದು ಮಿತಿ ಇದೆ. ಸದಾ ಈ ಆಟ ಸಾಧಿಸೀತೇ?

ಹಿಂದೀ ಪ್ರಚಾರ ಸಭೆಯ ವಾರ್ಷಿಕೋತ್ಸವ

ಕೊಡಗು ಹಿಂದೀ ಪ್ರಚಾರ ಸಭೆಯ ಪಂಚಮ ವಾರ್ಷಿಕೋತ್ಸವವು ತಾ. ೧೫ರಲ್ಲಿ ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯಿತು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಬಂದಿದ್ದರು. ಹಿಂದೀ ಲೇಖನ, ಭಾಷಣ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಸಭೆಯ ಕಾರ್ಯದರ್ಶಿನಿ ಶ್ರೀಮತಿ ಭಗವಾನ್‌ದಾಸರವರು ಪ್ರಚಾರ ಸಭೆಯ ಕಾರ್ಯಕಲಾಪಗಳನ್ನು ವಿವರಿಸಿ ಪ್ರಚಾರ-ಕಾರ್ಯವು ಕ್ರಮಶಃ ಬೆಳೆಯುತ್ತಿದೆಯೆಂದೂ ಈಗ ಕೇಂದ್ರಗಳು ಹೆಚ್ಚಿರುವದೆಂದರು. ಸರಕಾರವು ಕೂಡ ಸಾಕಷ್ಟು ಪ್ರೋತ್ಸಾಹ ಕೊಡುವುದೆಂದು ಆಶಿಸಿದರು. ನಂತರ ಪ್ರಮಾಣ ಪತ್ರ ಮತ್ತು ಬಹುಮಾನ ವಿತರಣೆ ನಡೆಯಿತು.

ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ನಾಗಪ್ಪನವರು ಹಿಂದೀ ಪ್ರಚಾರ, ಅದರ ಸಾಹಿತ್ಯದ ವಿಚಾರ ಮಾತಾಡುತ್ತಾ, ಕೊಡಗಿನಲ್ಲಿ ಆಷ್ಟೊಂದು ಜನ ಹಿಂದೀ ಕಲಿಯುತ್ತಿರುವುದು ಸಂತೋಷಕರವೆಂದರು. ಹಿಂದಿಯು ಪ್ರಗತಿಶೀಲ ಭಾಷೆಯಾಗಿದೆಯೆಂದೂ ದಕ್ಷಿಣದವರು ಅದನ್ನು ಆದಷ್ಟು ಹೆಚ್ಚು ಅಭ್ಯಾಸ ಮಾಡಬೇಕೆಂದೂ ಹೇಳಿದರು. ಕೊಡಗಿನವರು ಅನೇಕ ರಂಗಗಳಲ್ಲಿ ಮುಂದರಿದು ಹೆಸರು ಗಳಿಸಿದಂತೆಯೇ ಪ್ರಾಮುಖ್ಯವಾಗಿ ಸೇನೆಗಳಲ್ಲಿ ಅವರೊಂದು ಸ್ಥಾನ ಪಡೆದಿರುವಂತೆಯೇ ಹಿಂದೀ ಭಾಷೆಯನ್ನು ಕಲಿತು ಅದರ ಬೆಂಬಲವಿದ್ದರೆ ಇನ್ನೂ ಹೆಚ್ಚಿನ ತೇಜದಿಂದ ಕೊಡಗಿನ ಕೀರ್ತಿ ಬೆಳಗುವದೆಂದರು.

ನಂತರ ಶ್ರೀಗಳಾದ ದಿ. ಎನ್. ಕೃಷ್ಣಯ್ಯ, ಡಿ. ಕೆ. ಮೂರ್ತಿ, ಎನ್. ಕೆ. ಗಣಪಯ್ಯ ಮೊದಲಾದವರು ಭಾಷಣ ಮಾಡಿದರು.

ಅಧ್ಯಕ್ಷರು ಭಾಷಣ ಮಾಡುತ್ತಾ ಹಿಂದಿಯ ಬಗ್ಗೆ ದೇಶದಲ್ಲಿ ಯಾವುದೇ ರೀತಿಯ ವಾದ ವಿವಾದಗಳು ನಡೆಯುತ್ತಿದ್ದರೂ ನಮ್ಮ ರಾಜ್ಯಘಟನೆಯಲ್ಲಿ ಸ್ಪಷ್ಟವಾಗಿರುವಂತೆ ಹದಿನೈದು ವರ್ಷಗಳನಂತರ ಹಿಂದಿಯೇ ನಮ್ಮ ರಾಷ್ಟ್ರಭಾಷೆಯಾಗಿ ಸರಕಾರದ ಸರ್ವ ಕಾರ್ಯಭಾಗಗಳಲ್ಲೂ ಸ್ಥಾನ ಪಡೆಯದಿರಲಾರದೆಂದೂ ಆದ್ದರಿಂದ ಪ್ರತೀಯೊಬ್ಬರೂ ಹಿಂದಿಯನ್ನು ಅಭ್ಯಾಸ ಮಾಡಬೇಕಾದದ್ದು ಕರ್ತವ್ಯವಾಗಿದೆಯೆಂದೂ ಉತ್ತರದ ಜನರಿಗೆ ಹಿಂದಿಯೇ ಅವರ ಮಾತೃ ಭಾಷೆಯಾಗಿರುವುದರಿಂದ ಅನುಕೂಲತೆ ಇದೆಯೆಂದೂ, ದಕ್ಷಿಣದವರು ಈ ಬಗ್ಗೆ ತಕ್ಕ ಮುತುವರ್ಜಿ ವಹಿಸಬೇಕೆಂದೂ ಹೇಳಿದರು. ಕೊಡಗಿನಲ್ಲಿ ಹಿಂದೀ ಪ್ರಚಾರದ ಬಗ್ಗೆ ಸರಕಾರವು ವ್ಯವಸ್ಥಿತ ಏರ್ಪಾಡುಗಳನ್ನು ಮಾಡಲಿದೆಯೆಂದೂ ಪ್ರಚಾರಕರ ವೇತನವನ್ನು ಏರಿಸುವ ಆಲೋಚನೆಯಿದೆಯೆಂದೂ ಶಾಲೆಗಳಲ್ಲಿ ಖಡ್ಡಾಯವಾಗಿ ಹಿಂದೀ ಚರ್ಚಾಕೂಟಗಳ ಏರ್ಪಾಡು ಮಾಡಲಾಗುವದೆಂದೂ ಹೇಳಿದರು. ಹಿಂದಿಯನ್ನು ಮಾತಾಡುವುದರಿಂದ ಜಾಸ್ತಿ ಹೆಚ್ಚಿ ಭಾಷೆ ಕಲಿಯಲು ಅನುಕೂಲವಾಗುವದಾದ ಕಾರಣ ನಾಚಿಕೆ ಪಡದೆ ಮಾತಾಡಲು ಯತ್ನಿಸುವುದು ಕರ್ತವ್ಯವೆಂದರು.

ಸರಕಾರಿ ಕಾಲೇಜಿನ ಹಿಂದೀ ಲೆಕ್ಚರರಾದ ಶ್ರೀಮತಿ ರಾಜೀವಿಬಾಯಿಯವರು ಧನ್ಯವಾದಗಳನ್ನರ್ಪಿಸಿದರು.

ಹುಚ್ಚರ ಕಟ್ಟೆ

ಏಕೆ?

ಕಾಲೇಜೆಂದರೆ ಮೋಜಿನ ಬೀಡು
ಶೀಲಾ ಬಲು ಜೋಕ್!
ಬಂದವರೆಲ್ಲರು ಓದಲಿಕೆಂದು
ತಿಳಿದಿರೆ ಬಲು “ಶಾಕ್”
ಸಿನಮಾ ಮಂದಿರ ಒಳಹೊರಗೆಲ್ಲಾ
ಅವರದೆ ನರ್ತನೆಯು
ಪುಸ್ತಕ ಕದಿಯುತ ಫೋಟೋ ಪಡೆಯುವ
“ರೋಮಿಯೊ” ವರ್ತನೆಯು
ಜಡೆಯನು ಬೆಂಚಿಗೆ ಕಟ್ಟುವರು
ಕಾಲನು ನೀಡುತ ಮೆಟ್ಟುವರು
ಲೆಕ್ಚರರಷ್ಟೆತ್ತಿಯೆಂದೆನ್ನುವರು
ಶೀಲಾ ಬಲು ಜೋಕ್!
ಕೌಬಾಯಿ ಶರ್ಟು, ಆ ಸಿಗರೇಟು
ಲೆಕ್ಚರನೆಣಿಸದ ಆ ಮುಡಿಗಟ್ಟು
ಕಾಲೇಜ್ ನಿನಗೇಕೆ?

ಲೇಃ— ನರ್ಗಿಸ್

(ಕಳೆದ ವಾರ ‘ರಾಜ್’ ಎಂಬವರು ಬರೆದ ‘ಜೋಕ್’ ಎಂಬುದನ್ನೋದಿ)

ಹರಟೆ.

॥ ಗಾಂಧಿ ಟೊಪ್ಪಿ ॥

ಕೊಟ್ಟವರು—ಶ್ರೀ ಗುಪ್ತ.

ಗಾಂಧಿಯವರನ್ನು ಕಂಡವರು ನಮ್ಮಲ್ಲಿ ಹಲವರಿದ್ದೇವೆ. ಅವರ ಭಾವಚಿತ್ರವನ್ನು ಎಲ್ಲರೂ ಕಂಡಿದ್ದಾರೆ. ಆದರೆ ಅವರ ಚಿತ್ರದಲ್ಲಾಗಲೀ, ವಾಸ್ತವವಾಗಿಯಾಗಲೀ ಅವರ ಬೋಳು ತಲೆ ಕಾಣಿಸಿತೇ ವಿನಾ ಆ ತಲೆಯ ಮೇಲೆ ಗಾಂಧಿ ಟೋಪಿ ಕಾಣಿಸಲಿಲ್ಲ. ಆದರೂ ಗಾಂಧಿ ಟೋಪಿಯೊಂದು ಎಲ್ಲರ ತಲೆಯ ಮೇಲಿದೆ! ಈ ಹೆಸರು ಆ ಟೋಪಿಗೆ ಬರಲು ಕಾರಣವೇನು?

ಅಸಹ್ಯವಾದುದನ್ನು ಶುಭ್ರ ಹೊರ ಹೊದಿಕೆಯಿಂದ ಮುಚ್ಚುವದು ಇಂದಿನ ನಾಗರಿಕತೆಯ ಸಂಪ್ರದಾಯ. ಅಡಿಗೆ ಮನೆ ಹೊಲಸು ತುಂಬಿದ್ದರೂ ಮನೆಯ ಎದುರುಗಡೆ ರಂಗು ಬಣ್ಣಗಳಿಂದ ಅಲಂಕೃತವಾಗಿರುತ್ತದೆ. ಒಳಗಿನ ಬನೀನು ವಾಸನೆ ತುಂಬಿದ್ದರೂ ಹೊರಗಿನ ಟೈ ಹಾರಾಡುತ್ತಿರುತ್ತದೆ. ಅದೇ ರೀತಿ ಯೋಚನೆ ಮಲಿನವಾಗಿದ್ದರೂ ಅದನ್ನು ಮುಚ್ಚುವ ಟೊಪ್ಪಿ ಬೆಳ್ಳಗೆ! ಗಾಂಧೀಜಿಯವರ, ಟೊಪ್ಪಿ ಹಾಕಲಿಲ್ಲ. ಅವರಿಗೆ ಟೊಪ್ಪಿಯ ಕೆಳಗೆ ಅಡಗಿಸಿಡಲು ಏನೂ ಇರಲಿಲ್ಲ. ತಲೆಯಲ್ಲಿ ಕೂದಲೇ ಇಲ್ಲದಿದ್ದ ಅವರು ಅಡಗಿಡುವದೇನನ್ನು! ಅವರ ಜೀವನವೇ ತೆರೆದ ಪುಸ್ತಕದಂತೆ! ಆದ್ದರಿಂದ ಟೊಪ್ಪಿಯ ಅವಶ್ಯಕತೆ ಅವರಿಗಿರಲಿಲ್ಲ!

ಆದರೆ ಜನ, ಟೊಪ್ಪಿಗೆ ಗಾಂಧಿಯ ಹೆಸರು ಹಾಕಿ ಗಾಂಧಿಗೆ ಟೊಪ್ಪಿ ಹಾಕಿದರು. ಟೊಪ್ಪಿಗೆ ಹೆಸರು ಗಾಂಧಿಯದಾದರೂ ಟೊಪ್ಪಿ ಹಾಕುವ ಕೆಲಸವನ್ನು ಜನರು ಮಾಡಿದರು. ಮಾಡುತ್ತಲೂ ಇರುವರು. ಇದ್ದ ಟೊಪ್ಪಿಯನ್ನು ಬೇರೆಯವರಿಗೆ ಹಾಕಿ ತಮಗೆ ಯಾರಾದರೂ ಹಾಕಿಯಾರೆಂದು ಬೋಳು ತಲೆಯಿಂದ ತಿರುಗುವ ನಿಸ್ಸೀಮರೂ ಇದ್ದಾರೆ.

ಒಬ್ಬ ಹ್ಯಾಟು ಧರಿಸುವವರು ಗಾಂಧಿ ಟೊಪ್ಪಿ ಇಡುವವನೊಬ್ಬನನ್ನು ಕಂಡು ಕೇಳಿದನಂತೆ, 'ನಿನ್ನ ತಲೆಯ ಮೇಲಿರುವದು ಟೊಪ್ಪಿಯೋ?'

ಗಾಂಧಿ ಟೊಪ್ಪಿಯವನು ಮರುನುಡಿದನು 'ನಿನ್ನ ಹ್ಯಾಟಿನ ಕೆಳಗಿರುವದು ತಲೆಯೋ?' ಎಂದು.

ಈ ಮಾತು ಬಹಳ ಹಿಂದಿನದು. ಆಗ ನಮ್ಮ ತಲೆಯ ಮೇಲಿನದು ಟೊಪ್ಪಿಯೋ ಎಂಬ ಸಂಶಯ ಬರುವಂತಿತ್ತು. ಏಕೆಂದರೆ ಬಿಳಿಯ ಆ ಟೊಪ್ಪಿ ಏನೋ ವಸ್ತ್ರದಂತೆ ತೋರುತಿತ್ತು. ಆದರೆ ಇಂದು ಪರಿಸ್ಥಿತಿ ಅದಲ್ಲ. ನಮ್ಮ ಟೊಪ್ಪಿಯ ಕೆಳಗಿರುವದು ತಲೆಯೋ ಎಂಬ ಸಂಶಯ ಬರುವಂತಾಗಿದೆ.

'ನನ್ನ ತಲೆ ಕಾದು ಹೋಗಿದೆ. ಈಗ ನನ್ನನ್ನು ಕೆಣಕಬೇಡ' ಎಂದವನೊಬ್ಬನಿಗೆ 'ಅದರಿಂದ, ಸಗಣಿ ಸುಟ್ಟ ವಾಸನೆ ಬರುತ್ತದೆ' ಎಂದು ಉತ್ತರ ಸಿಕ್ಕಿತಂತೆ! ತಲೆಯೊಳಗಿನ ಈ ಹುಳುಕು ಯಾ ವಾಸನೆ ಕಾಣಬರಲೆಂದು ಬಿಳಿ ಟೊಪ್ಪಿ ಹಾಕಿ ಗಾಂಧಿಯ ಹೆಸರು ಹೇಳುವವರಿರುವಂತೆ ಅನ್ಯರ ತಲೆಗೆ ಟೊಪ್ಪಿ ಹಾಕುವವರೂ ಇದ್ದಾರೆ.

'ಜನರಿಗೆ ಟೊಪ್ಪಿ ಹಾಕುವ ಕೆಲಸ ಪ್ರಾರಂಭಿಸಿದಿರಾ?' ಎಂದು ಕೇಳಿದರೆ ಸಿಡುಗುಟ್ಟುವವರು ಬಹಳ ಜನ ಇದ್ದಾರೆ. ಮತ್ತೆ ಕೆಲವರು 'ನಮಗೆ ತಲೆ ಇದ್ದಿದ್ದರೆ ಬೇರೆಯವರಿಗೆ ಟೊಪ್ಪಿ ಹಾಕುತ್ತಿದ್ದೇವೇ!' ಎನ್ನುವ ತಪ್ಪು ಒಪ್ಪುವವರು ಇದ್ದಾರೆ.

ತಪ್ಪು ಒಪ್ಪಿಕೊಳ್ಳುವದು ದೊಡ್ಡ ಗುಣ. ತಪ್ಪು ಒಪ್ಪಿದರೆ ಟೊಪ್ಪಿಯೂ ಸರಿಯಾಗಿ ಒಪ್ಪುತ್ತದೆ. ಆದರೆ ತಪ್ಪು ಒಬ್ಬರ ಮೇಲೆ, ಟೊಪ್ಪಿ ಇನ್ನೊಬ್ಬರ ಮೇಲೆ ಮಾತ್ರ ಆಗಬಾರದು. ಗಾಂಧಿಯವರ ರೀತಿ ಬೇರೆ. ಅವರು ತಮ್ಮ ತಪ್ಪನ್ನು ತನ್ನ ತಲೆಯ ಮೇಲೆಯೇ ಹೊತ್ತುಕೊಂಡು ಟೊಪ್ಪಿಯನ್ನು ಇನ್ನೊಬ್ಬರ ಮೇಲಿರಿಸಿದರು. ಅದರಿಂದ ಅವರು ಮಹಾತ್ಮರಾದರು. ನಾವು ನಮ್ಮ ತಪ್ಪನ್ನು ಮುಚ್ಚಿಕೊಳ್ಳಲು ಟೊಪ್ಪಿ ಹಾಕಿಕೊಂಡೆವು. ತಪ್ಪನ್ನು ಎಲ್ಲರೂ ನೋಡುವಂತೆ ಬಹಿರಂಗ ಪಡಿಸಿ ನಿಲ್ಲುವ ಧೈರ್ಯ ನಮಗೆ ಬಾರಲಿಲ್ಲ. ನಮಗೆ ಕಲಂಕವನ್ನು ಮುಚ್ಚಿಕೊಳ್ಳುವದು ಸುಲಭವಾಗಿ ತೋರಿತಲ್ಲದೆ ಟೊಪ್ಪಿ ತೆರೆದು ನಿಲ್ಲುವದು ಸುಲಭವೆನಿಸಲಿಲ್ಲ. ಬದಲು ಟೊಪ್ಪಿ ಬಿಗಿಯಾಗ ತೊಡಗಿತು. ಅದರಲ್ಲಿ ಆದ ರೂಪಾಂತರ ಒಂದೆರಡಲ್ಲ. ವಿವಿಧ ಆಕಾರವನ್ನು ಪಡೆದು ಹ್ಯಾಟುಭ್ರಷ್ಟರಿಂದ 'ದೋಣಿ ಟೊಪ್ಪಿ' ಎನಿಸಿಕೊಂಡಿತು.

ಗಾಂಧಿ ಟೊಪ್ಪಿ ಎಂದರೆ ಅದು ಖಾದಿ ಟೊಪ್ಪಿ ಎಂದು ಬೇರೆ ಹೇಳುವ ಅವಶ್ಯಕತೆ ಇಲ್ಲ. ಖಾದಿ ಟೊಪ್ಪಿ ಒಮ್ಮೆ ಅತೀತ ಗೌರವ ಕೆಂಗಣ್ಣಿನ ವಸ್ತುವಾಗಿತ್ತು. ಅದನ್ನು ಹಾಕಿದವರು ಸೆರೆಮನೆಗೆ ಯೋಗ್ಯರೆಂದು ಪರಿಗಣಿಸಲಾಗುತಿತ್ತು. ಅವರಂತೆ ಗಾಂಧಿ ಟೊಪ್ಪಿ ಹಾಕಿ ಸೆರೆಮನೆಗೆ ಹೋದವರೂ ಹಲವರು.

ಆದರೆ ಪ್ರಪಂಚದ ಅವಸ್ಥೆ ಒಂದು ಚಕ್ರವಂತೆ. ಅದು ಸದಾ ಉರುಳುತ್ತಿರುತ್ತದೆ. ಈ ಉರುಳಾಟದಲ್ಲಿ ಕೆಳಗಿದ್ದವರು ಮೇಲೆ ಬರುತ್ತಾರೆ. ಮೇಲಿದ್ದವರು ಕೆಳಗಿಳಿಯುತ್ತಾರೆ. ಅದರಂತೆ ಜೈಲಿಗೆ ಯೋಗ್ಯವಾಗಿದ್ದ ಗಾಂಧಿ ಟೋಪಿ ಜೈಲಿಗೆ ಕಳುಹುವವನ ಸ್ಥಾನದಲ್ಲಿ ಬಂದು ನಿಂತಿದೆ. ಗಾಂಧಿ ಟೊಪ್ಪಿಯ ಸುತ್ತಲೂ ಹೊಗಳಿಕೆಗಳೂ, ಪನ್ನೀರುಗಳೂ ಆವರಿಸಿ ಈಗ ನಿಂತಿವೆ. ಈಗ ಟೋಪಿಯ ಘನತೆ ಅದು ಗಾಂಧಿಯ ಖಾದಿಯಾಗಿರುವುದರ ಮೇಲಿಲ್ಲ. ಸಿಲ್ಕಿಗೆ ಒಂದು ಇಮಿಟೇಶನ್ ಸಿಲ್ಕಿರುವಂತೆ ಮುತ್ತಿಗೆ ಒಂದು ಆರ್ಟಿಫಿಶ್ಯಲ್ ಮುತ್ತಿರುವಂತೆ ಚಿನ್ನಕ್ಕೆ ರೋಲ್ಡ್ ಗೋಲ್ಡ್ ಇರುವಂತೆ ಗಾಂಧಿ ಟೋಪಿಗೆ ಈಗ ಮಲ್‌ಮಲ್ ಟೋಪಿ ಬಂದಿದೆ. ಅದು ಖಾದಿ ಯಾ ಗಾಂಧಿಯಾಗಿರಬೇಕೆಂಬುದು ಪ್ರಾಮುಖ್ಯವಲ್ಲ. ಅದು ಬೆಳ್ಳಗಿರಬೇಕು, ಅದೇ ತತ್ವ!

ಈ "ಮಲ್‌ಮಲ್ ಟೋಪಿ" ಒಬ್ಬರ ತಲೆಯಲ್ಲಿಲ್ಲ. ಹಲವರಿಗೆ ಟೋಪಿ ಹಾಕಿದೆ. ಬಿಳಿಯದೆಂದುಕೊಂಡು ಚುನಾವಣೆಯ ಸಮಯದಲ್ಲಿ ಮತದಾತರು ಹಾಕಿಕೊಂಡು ಈಗ ಪಶ್ಚಾತ್ತಾಪ ಪಡುತ್ತಿದ್ದಾರೆ. ವ್ಯಾಪಾರಿಗಳು ಅಧಿಕಾರಿಗಳ ತಲೆಯ ಅಳತೆ ನೋಡಿ ಟೋಪಿ ಹೊಲಿಸಿದ್ದಾರೆ.

ಗಾಂಧಿಜಿ ಏನೇ ಹೇಳಲಿ, ಖಾದಿ ಟೊಪ್ಪಿ ಯಾವ ತತ್ವದಿಂದ ಕೂಡಿದ್ದೇ ಇರಲಿ ಸುತ್ತು ಬೇಗೆ ಏರುತ್ತಿರುವ ಈ ಕಾಲದಲ್ಲಿ ತುಂಬಾ ತಂಪಾಗಿರುತ್ತಿದ್ದ ಶ್ರೀಮಂತರಿಗಿನ್ನೂ ವಿವಿಧ ಕಡೆ ಬಿಸಿಲು ಬೇಗೆಯ ತಾಪ ಕೆಟ್ಟದಾಗಿ ಬೆವರಿಳಿಸುತ್ತಿರುವಾಗ ಬಿಳಿ ಟೊಪ್ಪಿ ಪ್ರಯೋಜನವಿಲ್ಲ. ಬೆಳಗೆ ಒಗೆದು ಇಸ್ತ್ರಿ ಮಾಡಿ ಹಾಕಿಕೊಂಡರೆ ಬಿಳಿ ಟೋಪಿ ಸುಂದರವೂ ಆರೋಗ್ಯಕರವೇನೋ ಹೌದು. ಆದರೆ ಕುಡಿಯಲು ನೀರಿಗೆ ಅಭಾವ ವಿರುವಾಗ ಒಗೆಯಲು ನೀರೆಲ್ಲಿ? ಸಾಬೂನೆಲ್ಲಿ? ಒಗೆದರೂ ಇಸ್ತ್ರಿಪೆಟ್ಟಿಗೆಗೆ ಗತಿಯೆಲ್ಲಿದೆ? ಬಂಡವಾಳದಾರರು, ಅಸ್ತಿವಂತರು ಬೇಸಿಗೆಯ ಬಿಸಿಲು ತಾಗದಂತೆ ಬಿಳಿ ಟೊಪ್ಪಿ ಹಾಕಿಕೊಂಡರೂ ಧೂಳಿನಲ್ಲಿ ದುಡಿಯುವವರಿಗೆ ಬೆವರಿಳಿಸಿ ಬೆಂಡಾಗಬೇಕಾದವರಿಗೆ ನಡಕಟ್ಟಿ ದುಡಿಯಬೇಕಾದವರಿಗೆ ಬಿಳಿ ಟೊಪ್ಪಿ ಹೇಳಿದ್ದಲ್ಲ. ಕೈ, ಮೈ ಮಾಸದವರಿಗೆ ಬಿಳಿ ಟೊಪ್ಪಿ ಸೊಗಸು. ಆದರೆ ಕೆಸರಿನಲ್ಲಿ ದುಡಿಯುವವರಿಗೆ ಬಣ್ಣದ ಟೊಪ್ಪಿಯೇ ಬೇಕು. ಅದು ಕೆಂಪು ಬಣ್ಣದ್ದೇ ಇರಲಿ ಯಾ ಹಸುರು ಕಪ್ಪುಗಳೇ ಆಗಿರಲೀ ಬಿಳಿಯ ಗಾಂಧಿ ಟೊಪ್ಪಿಗಿಂತಾ ಬಣ್ಣದ ಟೊಪ್ಪಿಗಳೇ ಬಡವರಿಗೆ ಪ್ರಯೋಜನಕರವೆಂಬುದು ಇಂದು ಹಲವರ ಅಭಿಪ್ರಾಯವಾಗಿದೆ.

ಜಂಬೂರು ಮಾಧ್ಯಮಿಕ ಶಾಲಾ ವಾರ್ಷಿಕೋತ್ಸವ

ಜಂಬೂರು ಮಾಧ್ಯಮಿಕ ಶಾಲಾ ವಾರ್ಷಿಕೋತ್ಸವವು ಇದೇ ತಾ. ೧೦ರಲ್ಲಿ ಕೊಡಗು ಶಾಸನ ಸಭಾಧ್ಯಕ್ಷರಾದ ಶ್ರೀ ಬಿ. ಯಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪೂರ್ವಾಹ್ನ ೮—೩೦ ಘಂಟೆಯಿಂದ ೧೧—೩೦ ಘಂಟೆಯ ವರೆಗೆ ಶಾಲಾ ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಆಟೋಟಗಳ ಸ್ಪರ್ಧೆ ನಡೆಯಿತು. ಅಪರಾಹ್ನ ೩—೩೦ ಘಂಟೆಗೆ ಶಾಲಾ ಮುಖ್ಯೋಪಾಧ್ಯಾಯರೂ, ಪಂಚಾಯಿತದಾರರೂ ಮತ್ತು ಶಾಲಾ ಬಾಲಚಮೂ ದಳವೂ ಅಧ್ಯಕ್ಷರನ್ನು ಸ್ವಾಗತಿಸಿದ ಬಳಿಕ ಸಭೆಯು ಪ್ರಾರಂಭವಾಯಿತು. ಶಾಲಾ ಬಾಲಕಿಯರಿಂದ ಪ್ರಾರ್ಥನೆಯಾದ ನಂತರ ಮುಖ್ಯೋಪಾಧ್ಯಾಯರು, ಪ್ರಾಥಮಿಕ ಶಿಕ್ಷಕರು ಮತ್ತು ಶಾಲಾ ಚಟುವಟಿಕೆಯ ಗೌರವ ಕಾರ್ಯದರ್ಶಿಯವರು ತಮ್ಮ ವರದಿಗಳನ್ನು ಓದಿದರು.

ವಯಸ್ಕರ ಶಿಕ್ಷಣದ ಸಂಚಾಲಕರಾದ ಶ್ರೀ ಜಿ. ಬಿ. ಲಿಂಗಣ್ಣನವರು ವಯಸ್ಕರ ಶಿಕ್ಷಣದ ಅವಶ್ಯಕತೆಯನ್ನು ಕುರಿತೂ ಮೂಲ ಶಿಕ್ಷಣ ಉಪಾಧ್ಯಾಯರ ತರಬೇತು ಶಾಲಾ ಅಧ್ಯಾಪಕರಾದ ಶ್ರೀ ಎಸ್. ಎಸ್. ಕೃಷ್ಣರಾವ್ ಇವರು ಮೂಲಶಿಕ್ಷಣದ ಅವಶ್ಯಕತೆಯನ್ನು ಕುರಿತೂ, ಮಡಿಕೇರಿ ಪ್ರೌಢ ಶಾಲಾ ಅಧ್ಯಾಪಕರಾದ ಶ್ರೀ ಪಿ. ಎಸ್. ರಾಮಕೃಷ್ಣ ಇವರು ವ್ಯಕ್ತಿತ್ವದ ವಿಕಾಸ ಎಂಬ ವಿಷಯದ ಕುರಿತೂ ಭಾಷಣ ಮಾಡಿದರು.

ಅಧ್ಯಕ್ಷರು ಸಭೆಯವರನ್ನು ವಂದಿಸುತ್ತಾ ಹೀಗೆ ಹೇಳಿದರು "ಇಡೀ ಹಿಂದೂಸ್ಥಾನದಲ್ಲಿ ಹಾಗೂ ಕೊಡಗಿನಲ್ಲಿ ಇಲ್ಲಿ ಕಂಡುಬರುವ ಕಾಂಗ್ರೆಸ್ಸಿನ ವಿರುದ್ಧ ಅನೇಕ ಪಕ್ಷಗಳು ಇವೆ. ಕಾಂಗ್ರೆಸನ್ನು ಬಿಟ್ಟು ಉಳಿದ ಪಕ್ಷಗಳ ಧ್ಯೇಯ ಧೋರಣೆಗಳನ್ನು ಅಹಿಂಸಾತ್ಮಕವಲ್ಲ. ಜನತೆಯ ಶಕ್ತಿಯನ್ನು ಯೋಗ್ಯ ರೀತಿಯಲ್ಲಿ ಕೇಂದ್ರೀಕರಿಸಿ ಭಾವೀ ರಾಮರಾಜ್ಯವನ್ನು ಪಡೆಯುವುದೇ ಈಗಿನ ಸರಕಾರದ ಗುರಿಯಾಗಿದೆ. ನಮ್ಮ ಪೂರ್ವಜರು ತಮ್ಮ ಸಹಕಾರ ಬುದ್ಧಿಯಿಂದ ತಯಾರಿಸಿಕೊಂಡ ಕೆರೆ, ರಸ್ತೆಗಳು ಈಗಲೂ ನಾವು ಕಾಣುತ್ತಿರುವಾಗ ಇಂದು ಪರಕೀಯರ ಆಡಳಿತೆಯಿಂದ ಮುಕ್ತರಾದ ನಾವು ಇನ್ನೂ ಪ್ರತಿಯೊಂದು ಕೆಲಸಕ್ಕೂ ಸರಕಾರದಲ್ಲಿ ಸಹಾಯವನ್ನು ಹೊಂದುವದು ನಮ್ಮ ಮೌಢ್ಯವಾಗಿದೆ. ಧೈರ್ಯದಿಂದ ಸ್ವಾವಲಂಬನದ ಕೆಲಸವನ್ನು ಸರಕಾರವು ಖಂಡಿತ ಮಾಡಿಸಿಕೊಳ್ಳುತ್ತದೆ. ಒಂದಾನೊಂದು ಕಾಲದಲ್ಲಿ ಈ ಶಾಲೆಯು ಅತೀ ಕ್ಷೀಣ ಸ್ಥಿತಿಯಲ್ಲಿದ್ದುದು ಇಷ್ಟೊಂದು ಅತ್ಯಲ್ಪ ಸಮಯದಲ್ಲಿ ಇಷ್ಟು ಊರ್ಜಿತ ಸ್ಥಿತಿಗೆ ಬಂದಿರುವುದು ನಿಮ್ಮೆಲ್ಲರ ಸಹಾನುಭೂತಿ ಉದಾತ್ತ

---

82 ವರ್ಷಗಳ ಸೇವೆಯನ್ನು ಪೂರೈಸಿದ ಹಿಂದೂಸ್ಥಾನದ ಪ್ರಥಮ ವಿಮಾ ಕಂಪೆನಿ.

82 ವರ್ಷಗಳಿಗೆ ಹಿಂದೆ ಅಂದರೆ 1871ರಲ್ಲಿ ಭಾರತದಲ್ಲಿ ಜೀವ ವಿಮೆ ಎಂದರೇನೆಂದು ಗೊತ್ತಿರದಿದ್ದ ಆ ಸಮಯದಲ್ಲಿ "ಬೊಂಬೆ ಮ್ಯೂಚುವಲ್" ತನ್ನ ಪ್ರಥಮ ಪಾಲಿಸಿಯನ್ನು ಬರೆಯಿತು.

ಇಂದು "ಬೊಂಬೆ ಮ್ಯೂಚುವಲ್" ತನ್ನ ಅತೀ ಪ್ರಾಮಾಣಿಕತೆಯ ಸೇವೆಗಾಗಿ ನ್ಯಾಯವಾದ ಹೆಸರು ಪಡೆದುಕೊಳ್ಳಬಹುದು. ಅದರ ಚಾಲ್ತಿಯಲ್ಲಿರುವ ಉದ್ಯಮವು 40 ಕೋಟಿಗಳನ್ನು ಮೀರಿರುವದಲ್ಲದೆ ಮೂಲಧನವು 12½ ಕೋಟಿಗೂ ಮಿಕ್ಕಿದೆ.

ದಿ ಬೊಂಬೆ ಮ್ಯೂಚುವಲ್ ಲೈಫ್ ಎಶ್ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು	ಬ್ರಾಂಚ್ ಆಫೀಸು
ಹಾರ್ನ್‌ಬಿ ರೋಡ್,	ಪೋ. ಬಾ. ನಂ. 185
3-1 ಬೊಂಬಾಯಿ.	ಬೆಂಗಳೂರು—2.

ಕಡಿಮೆ ಆಯಾಸದಿಂದ ಹೆಚ್ಚು ಕೆಲಸ

ಕೆಲವು ಉಪಾಯಗಳು

ಕಡಿಮೆ ಶ್ರಮದಿಂದ ಹೆಚ್ಚು ಕೆಲಸ ಮಾಡಬೇಕೆಂದು ನಿಮಗೆ ಅಪೇಕ್ಷೆಯುಂಟೆ? ಹಾಗಾದರೆ ಈ ಕೆಳಗಿನ ಹೇಳಿಕೆಗಳು ಸತ್ಯವೋ ಅಸತ್ಯವೋ ಎಂದು ಅರಿತಿರುವುದು ಅಗತ್ಯ. ಅನೇಕ ಶರೀರ ಶಾಸ್ತ್ರಜ್ಞರೂ ಮನಶಾಸ್ತ್ರಜ್ಞರೂ ಧೀರ್ಘ ಕಾಲದಿಂದ ಮಾಡಿದ ಸಂಶೋಧನೆಗಳ ಫಲವಾಗಿ ಈ ಉತ್ತರಗಳನ್ನು ಸಂಗ್ರಹಿಸಲಾಗಿದೆ.

ಅರ್ಧ ತಾಸು ಹಗಲು ನಿದ್ರೆ (ಬೆಕ್ಕಿನ ನಿದ್ದೆ!)ಯು ಮೂರು ತಾಸು ನಿದ್ದೆಗೆ ಸಮಾನವಾದುದು.

ನಿಜ. ಮಧ್ಯಾಹ್ನದ ಊಟದ ನಂತರ ಒಂದು "ಬೆಕ್ಕಿನ ನಿದ್ದೆ" ಮಾಡುವುದೊಳಿತು. ಕೆಲ ತಜ್ಞರ ಅಭಿಪ್ರಾಯದಲ್ಲಿ ಇದು ಬೆಳಗಿನ ಜಾವದ ಮೂರು ತಾಸಿನ ನಿದ್ದೆಗೆ ಸಮಾನವಾದುದು. ತಮಗೆ ರಾತ್ರಿ ನಿದ್ದೆ ತೀರ ಕಡಿಮೆ ಸಾಲುವದೆಂದು ಕೊಚ್ಚಿಕೊಳ್ಳುವವರು ಬಹುಶಃ ಇಂಥ ಬೆಕ್ಕಿನ ನಿದ್ದೆ ತೆಗೆಯುವವರಿರಬಹುದು.

ನೀವು ಪಡೆದ ವಿಶ್ರಾಂತಿ ಸುಖವಾಗಿರಬೇಕು. ಸುಖವಾದ ವಿಶ್ರಾಂತಿ ದೀರ್ಘವಾದ ನಿದ್ರೆಗಿಂತಲೂ ಹೆಚ್ಚು ಅವಶ್ಯ.

ನಿಜ. ಸುಖವಾದ ವಿಶ್ರಾಂತಿಯು ಕಳೆದು ಹೋದ ಚೈತನ್ಯವನ್ನು ತಿರುಗಿ ದೊರಕಿಸಿ ಕೊಡುವುದರಲ್ಲಿ ಪೂರ್ಣ ನಿದ್ರೆಗಿಂತ ಕಿಂಚಿತ್ ಮಾತ್ರ ಕಡಿಮೆ ಪರಿಣಾಮಕಾರಿಯಾಗಿದೆ. ನಿದ್ರೆಯಿಂದ ೧೦೦ಕ್ಕೆ ೧೦೦ರಷ್ಟು ಚೈತನ್ಯ ತುಂಬಿ ಬರುತ್ತಿದ್ದರೆ ಸುಖವಾದ ನಿರ್ವಿಕಾರ ವಿಶ್ರಾಂತಿಯಿಂದ ೮೦ರಷ್ಟು ಚೈತನ್ಯ ತುಂಬಿಬರುತ್ತದೆ. ನಿದ್ರಾಹೀನತೆಯ ಬಾಧ್ಯವಿದ್ದವರು ಕೆಲ ತಾಸು ಮಾತ್ರ ನಿದ್ರಿಸಿ ಉಳಿದ ರಾತ್ರಿಯಲ್ಲಿ ಸುಖ ವಿಶ್ರಾಂತಿ ಪಡೆದರೆ ಅವರಿಗೆ ನಿದ್ರಿಸಿದಷ್ಟೇ ಸುಖವೆನಿಸಬಲ್ಲದು. ಆದರೆ ನಿದ್ರಾಹೀನರು ನಿದ್ರೆಯ ಚಿಂತೆಯಿಂದ ತಲೆಕೆಡಿಸಿಕೊಳ್ಳುತ್ತಾರೆ. ಆದರಿಂದ ನಿದ್ರೆ ಮತ್ತಷ್ಟು ದೂರ ಹೋಗುತ್ತದೆ.

ಚಿಕ್ಕ ಪುಟ್ಟ ತೊಂದರೆಗಳು ದೊಡ್ಡವುಗಳಿಗಿಂತ ಹೆಚ್ಚು ಕಷ್ಟದಾಯಕವಾಗಿರುತ್ತವೆ.

ನಿಜ. ಯಾಕೆಂದರೆ ಹಲವು ಚಿಕ್ಕ ಪುಟ್ಟ ತೊಂದರೆಗಳ ಮೂಲವನ್ನು ಕಂಡು ಹಿಡಿದು ಅವನ್ನೆದುರಿಸುವುದು ಸುಲಭವಲ್ಲ. ಆದರೆ ಅವು ನಿಮ್ಮ ಮನಸ್ಸನ್ನು ಸಂತತವಾಗಿ ಪೀಡಿಸುತ್ತ ಪೂರ್ತಿ ಆಯಾಸ ಗೊಳಿಸಿಬಿಡುವವು. ದೊಡ್ಡ ದೊಡ್ಡ ಆಪತ್ತುಗಳಾದರೆ ನಿಮಗೆ ಸ್ಪಷ್ಟವಾಗಿ ಕಾಣಿಸುವವು. ಸರ್ವ ಶಕ್ತಿಯನ್ನು ಉಪಯೋಗಿಸಿ ಅವನ್ನೆದುರಿಸುವ ಹುರುಪು ನಿಮಗೆ ಬರುವುದು.

ಗಡಿಬಿಡಿಯಿಂದ ಕೆಲಸ ಮಾಡುವವರೇ ಅತ್ಯಂತ ಕಾರ್ಯಕ್ಷಮರು.

ಸುಳ್ಳು. ವಿಕಾರಗೊಳ್ಳದ ಸಮಾಧಾನವಾಗಿ ಕೆಲಸ ಮಾಡುವವರೇ ಉತ್ತಮ ಕೆಲಸಗಾರರೆಂದು ಸಿದ್ಧವಾಗಿದೆ. ಅನವಶ್ಯಕ ಗಡಿಬಿಡಿ ಪ್ರಚಂಡ ವೇಗ ಇವುಗಳಿಂದ ಬೇಗನೆ ಶಕ್ತಿಹ್ರಾಸವಾಗಿ ನಿಮ್ಮ ಕ್ಷಮತೆ ಕುಗ್ಗುವುದು. ಸಮಾಧಾನವಾದ ಏಕ ಪ್ರಕಾರವಾದ ಕೆಲಸದಲ್ಲಿ ವ್ಯಯವಾಗುವ ಶಕ್ತಿಯ ಪ್ರಮಾಣ ಕಡಿಮೆ.

ಕಾಲುಗಳನ್ನು ಎತ್ತರಿಸಿ ಇಟ್ಟರೆ ಅವುಗಳಿಗೆ ಚೆನ್ನಾಗಿ ವಿಶ್ರಾಂತಿ ಸಿಗುತ್ತದೆ.

ನಿಜ. ದಿನಕ್ಕೆ ೧೦ ಮಿನಿಟಿನಷ್ಟು ಕಾಲ ಪಾದಗಳಿಗೆ ಟೊಂಕದ ಪಾತಳಿಯಲ್ಲಿ ವಿಶ್ರಾಂತಿ ಕೊಟ್ಟರೆ ಹುರುಪು ಬರುವುದು.

ನಿಶ್ಕಬ್ದವಾದ ಮನೋರಂಜನೆಯು ಶ್ರಮ ಪರಿಹಾರಕ್ಕೆ ಉತ್ತಮ.

ಸಂಶಯಾಸ್ಪದ. ಧೀರ್ಘಕಾಲದ ವಿಶ್ರಾಂತಿ ಪಡೆಯುತ್ತಿರುವಾಗ ದೇಹ ಬುದ್ಧಿಗಳೆರಡಕ್ಕೂ ಕೆಲಸ ಕೊಡುವ ಮನೋರಂಜನೆಯೇ ನಿಷ್ಕ್ರಿಯ ಮನೋರಂಜನೆಗಿಂತ ಶ್ರೇಷ್ಠವೆಂದು ತಜ್ಞರ ಹೇಳಿಕೆ. ತೋಟಗಾರಿಕೆ, ಆಟ, ಚಿತ್ರಕಲೆ ಮೊದಲಾದ ಉಪಕಸಬುಗಳು ರಜಾಕಾಲದ ಉತ್ತಮ ಮನೋರಂಜನೆಗಳು.

ಸಂಜೆಯಲ್ಲಿ ಸಂಕಲ್ಪ ಮಾಡಬೇಡ.

ನಿಜ. ಬೆಳಗಾದ ಮೇಲೆಯೇ ಸಂಕಲ್ಪಗಳನ್ನು ಮಾಡುವುದು ಹಿತ. ಸಂಜೆಯಲ್ಲಿ ಆಯಾಸದಿಂದ ಮನಸ್ಸು ವಿಕೃತವಾಗಿರುತ್ತದೆ. ಸಂಜೆಯ ಸಂಕಲ್ಪವು ಬೆಳಗಿನ ಹುರುಪಿನ ಹೊತ್ತಿನಲ್ಲಿ ಬದಲಾಗುವ ಸಂಭವವಿದೆ.

ದುಂದುಗಾರಿಕೆಯಿಂದ ದಣಿವಾಗುತ್ತದೆ.

ನಿಜ. ನಿಮ್ಮ ದೇಹದ ಶಕ್ತಿಗೆ ಮೀರಿದ್ದನ್ನು ಕೊಂಡು ಕೊಂಡಾಗೆಲ್ಲ ಶ್ರಮವು ಬೆಂಬತ್ತಿ ಬರುವುದು. ಅನಿರ್ಧಾರ, ಸಂಶಯಗಳಿಂದ ಮನಸ್ಸು ದೇಹಗಳೆರಡೂ ತೀವ್ರ ದೈಹಿಕ ಶ್ರಮದಿಂದಾದಷ್ಟೇ ದಣಿಯುವುವು.

ಬೇಗನೆ ಮಲಗಿ ಬೇಗನೆ ಏಳಿರಿ.

ಇದು ಸರ್ವಕಾಲ ಸರ್ವರಿಗೂ ಹೊಂದಿಕೆಯಾಗಿರುವುದಿಲ್ಲ. ಕೆಲವರ ಕಾರ್ಯಕ್ಷಮತೆ ಬೆಳಗ್ಗೆ ಪರಮಾವಧಿಯನ್ನು ಮುಟ್ಟುತ್ತದೆ. ಅವರು ರಾತ್ರಿಯ ಪೂರ್ವಾರ್ಧದಲ್ಲಿ ಚೆನ್ನಾಗಿ ನಿದ್ರಿಸುತ್ತಾರೆ. ಮತ್ತೆ ಕೆಲವರ ಕಾರ್ಯಕ್ಷಮತೆ ಅಪರಾಹ್ನದಲ್ಲಿ ಅತಿಶಯವಾಗಿರುತ್ತದೆ. ಅವರಿಗೆ ಅಪರ ರಾತ್ರಿಯಲ್ಲಿ ಗಾಢ ನಿದ್ರೆ. ಅಂಥವರಿಗೆ ತಡವಾಗಿ ಮಲಗಿ ತಡವಾಗಿ ಏಳುವುದೇ ಹಿತ.

ನಿಲ್ಲುವುದರಿಂದಾಗುವಷ್ಟು ಶ್ರಮ ನಡೆಯುವುದರಿಂದಾಗುವುದಿಲ್ಲ.

ನಿಜ. ನಡೆಯುವಾಗ ಒಂದೊಂದು ಕಾಲಿಗೆ ಅರ್ಧರ್ಧ ಹೊತ್ತು ವಿಶ್ರಾಂತಿ ಇರುತ್ತದೆ. ನಿಂತಾಗ ಎರಡೂ ಕಾಲುಗಳ ಮೇಲೆ ಒಂದೇ ಸಮನೆ ಭಾರಬೀಳುತ್ತಿರುತ್ತದೆ. ಸಾಲು ಹಿಡಿದು ಕಾಯುವಾಗಂತೂ ಮಾನಸಿಕ ತಾಪವು ಸೇರಿ ಇನ್ನಷ್ಟು ತ್ರಾಸವಾಗುತ್ತದೆ.

ಕಷ್ಟತರ ಕಾರ್ಯಗಳನ್ನು ಮೊದಲು ಮಾಡು.

ನಿಜ. ಕಷ್ಟ ಕಾರ್ಯಗಳನ್ನು ನೇರವಾಗಿ ಎದುರಿಸು. ಕಷ್ಟ ಕಾರ್ಯವೆಂದು ತಪ್ಪಿಸುತ್ತ ಹೋಗುವುದರಲ್ಲೇ ಮಾನಸಿಕ ಶ್ರಮ ಸಾಕಷ್ಟಾಗುವುದು. "ಅಯ್ಯೋ ಮಾಡಬೇಕಲ್ಲ" ಎಂಬ ವ್ಯಥೆಯೊಂದು ಮಹಾ ಕಷ್ಟವೊಂದು. ಕಷ್ಟಕಾರ್ಯವನ್ನೇ ಮೊದಲು ಮಾಡಿದರೆ ಉಳಿದವುಗಳು ಮತ್ತೆಲ್ಲಾ ಹಾಲವಾಗಿ ಕಾಣುತ್ತವೆ.

"ಕರ್ಮವೀರ"

ಧನ ಸಹಾಯ ಮತ್ತು ಪ್ರೋತ್ಸಾಹದಿಂದಲೇ ಎಂಬುದಕ್ಕೆ ಸಂತೋಷಪಡುತ್ತೇನೆ" ಎಂದರು.

ಮಂಗಳಂ ನಡೆದ ನಂತರ ಅತಿಥಿಗಳಿಗೆ ಏರ್ಪಡಿಸಿದ ಚಹಕೂಟದೊಡನೆ ಸಭೆಯು ಅಂತ್ಯವಾಯಿತು. ರಾತ್ರಿ ೯ ಗಂಟೆಯಿಂದ ೧೨ ಗಂಟೆಯ ವರೆಗೆ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಮತ್ತು ಅಧ್ಯಾಪಕರಿಂದ "ಭೂ ಕೈಲಾಸ" ಮತ್ತು "ಭ್ರಾತೃಪ್ರೇಮ" ಎಂಬ ನಾಟಕಗಳನ್ನು ಅಭಿನಯಿಸಲಾಯಿತು.

ಹಾಜರಿದ್ದವ.

ಧರ್ಮ ರಹಸ್ಯ

—ಸ್ವಾಮಿ ನಾರಾಯಣಾನಂದ—

(೧) ಸಂಪತ್ತು, ಸಿರಿಗಳಿಗಾಗಿ ಮಾನವನು ದಿನವಿಡೀ ದುಡಿಯುತ್ತಾನೆ. ನಿದ್ರೆ, ಆಹಾರಗಳನ್ನು ಬಿಡುತ್ತಾನೆ. ಆದರೆ ಆತ್ಮದ ಸಿರಿಗಾಗಿ, ಪ್ರಯತ್ನಿಸುವವರಿಲ್ಲ. ಆದ್ದರಿಂದಲೇ ಜಗತ್ತು ಕಾಳಗದ ರಂಗವಾಗಿದೆ.

(೨) ಇನ್ನೊಬ್ಬರು ಹೇಗೆ ವರ್ತಿಸಬೇಕೆಂದು ನೀನು ಇಚ್ಛಿಸುವಿಯೋ ಅದರಂತೆ ನೀನಿರು. ಉಪದೇಶ ಕಾರ್ಯತಃ ಆಗಬೇಕಲ್ಲದೆ ನಾಲಗೆಯಿಂದಲ್ಲ.

(೩) ಆಸೆಯೆಂಬ ಬೆಂಕಿಗೆ ಎಣೆ ಇಲ್ಲ. ಬೆಂಕಿಯು ಪಾರ್ಥಿವ ಶರೀರವನ್ನು ದಹಿಸಬಲ್ಲುದಾದರೆ ಆಶಾ ಬೆಂಕಿಯು ಇಹಪರಗಳೆರಡನ್ನು ದಹಿಸುವುದು.

(೪) ಆರೋಗ್ಯವೇ ಸಂಪತ್ತುಗಳಲ್ಲಿ ಹಿರಿದಾದುದು. ತೃಪ್ತಿಯೇ ಐಶ್ವರ್ಯಗಳಲ್ಲಿ ಮಿಗಿಲಾದುದು. ನಂಬಿಕೆಯೇ ಮಿತ್ರರಲ್ಲಿ ಅಮೂಲ್ಯ. ಬ್ರಹ್ಮಚರ್ಯವೇ ಶಕ್ತಿಗಳಲ್ಲಿ ಅಜೇಯವಾದುದು.

(೫) ನೆಲದಲ್ಲಿ ಹಸುರಾಗಿ ಶೋಭಿಸುವ ಹುಲ್ಲಿನ ನಮ್ರತೆ ಇರಲಿ. ಗಿಡ ಮರಗಳಂಥಾ ಸಹನೆ ಇರಲಿ. ಜಗವು ನಿನ್ನದಾಗುವುದು.

(೬) ನಿನ್ನ ಮಾತಿನ ಮೇಲೆ ಹಿಡಿತವಿರಲಿ. ನಾಲಗೆಗೆ ಕಡಿವಾಣ ಹಾಕಿ ತಾನು ಹೇಳಿದಂತೆ ವರ್ತಿಸುವವನು ಆದರ್ಶನಾಗುವನು.

(೭) ಧರ್ಮಗಳಲ್ಲಿ ಜ್ಞಾನದಾನಕ್ಕಿಂಥಾ ಹಿರಿದಿಲ್ಲ. ಅಧಿಕಾರಗಳಲ್ಲಿ ಭೋಗಲಾಲಸೆಯ ಮೇಲಿನ ಹಿಡಿತಕ್ಕೆಣೆಯಿಲ್ಲ. ಜೀವನದಲ್ಲಿ ವಿಶಾಲ ಪ್ರೇಮಕ್ಕೆ ಮಿಗಿಲಾದ ದೃಷ್ಟಿಯಿಲ್ಲ.

(೮) ಆಡಂಬರದ ಮಾತು ಮಾನವನನ್ನು ಪವಿತ್ರನನ್ನಾಗಿ ಮಾಡದು. ಪವಿತ್ರತೆಯೇ ಜೀವನದ ಧುರಿ. ಆತ್ಮ ಸಮರ್ಪಣೆಯೇ ಜಯದ ಹೆದ್ದಾರಿ.

(೯) ಪ್ರಾಪಂಚಿಕ ಜ್ಞಾನವನ್ನು ತಲೆಯಲ್ಲಿ ಮಣಗಟ್ಟಲೆ ತುಂಬಿಕೊಳ್ಳುವ ದಕ್ಕಿಂಥಾ ಅಣುವಿನಷ್ಟು ಆತ್ಮ ಜ್ಞಾನ ಲೇಸು.

(೧೦) ಈ ಶರೀರ ನಶ್ವರವಾದುದು. ಅದಕ್ಕೆ ಅಂಟಿಕೊಳ್ಳಲು ಯತ್ನಿಸದಿರು. ಸತ್ಯವು ಚಿರಂತನವಾದುದು. ಆದ್ದರಿಂದ ಅದರ ಸಾಧನೆಗೆ ಯತ್ನಿಸು. ನೀನು ಚಿರಂಜೀವಿಯಾಗುವೆ.

ಝೆಕ್ ಅಧ್ಯಕ್ಷ ಗೋಟ್ವಾಲ್ಡರ ನಿಧನ.

ಝೆಕೊಸ್ಲೊವೇಕಿಯದ ಅಧ್ಯಕ್ಷರಾದ ಕೆಮೆಂಟ್ ಗೊಟ್ವಾಲ್ಡರು ತಾ. ೧೪ ರಲ್ಲಿ ನಿಧನ ಹೊಂದಿದರು ಎಂದು ಪ್ರೇಗ್ ಆಕಾಶವಾಣಿ ತಿಳಿಸಿರುವುದು.

ಅಧ್ಯಕ್ಷರನ್ನು ಪರೀಕ್ಷಿಸಿದ ಹನ್ನೊಂದು ಮಂದಿ ಡಾಕ್ಟರರು ಅವರ ನಾಡಿಯು ಬಡಿತ ಸರಿಯಾಗಿಲ್ಲ; ಅವರಿಗೆ ರಾತ್ರಿ ನಿದ್ರೆ ಬರಲಿಲ್ಲವೆಂದು ತಿಳಿಸಿದ್ದರು. ಗೊಟ್ವಾಲ್ಡರ ಶ್ವಾಸಕೋಶವು ಊದಿಕೊಂಡಿದ್ದರಿಂದ ಅವರು ಪ್ರಜ್ಞೆ ಇಲ್ಲದ ಇದ್ದರೆಂದು ಹೇಳಲಾಗಿತ್ತು.

ಪ್ರೆಸಿಡೆಂಟ್ ಗೊಟ್ವಾಲ್ಡರು ಕಮ್ಯೂನಿಸ್ಟರನ್ನು ಝೆಕೊಸ್ಲೊವೇಕಿಯಾದಲ್ಲಿ ಅಧಿಕಾರಕ್ಕೆ ಬರುವಂತೆ ಮಾಡಿದವರು. ಇವರ ಪ್ರಾಯ ೫೬ ವರ್ಷ.

ಐರೋಪ್ಯ ದೇಶಗಳಲ್ಲಿ ಕ್ಷಯ ಕಮ್ಮಿಯಾಗಿದೆ

ಜೀವನಮಟ್ಟ ಹೆಚ್ಚಿರುವುದರಿಂದ ಮತ್ತು ರೋಗನಿರೋಧಕ ಮುಂಜಾಗ್ರತೆ ಕ್ರಮಗಳಿಂದ ಅನೇಕ ಯೂರೋಪು ದೇಶಗಳಲ್ಲಿ ಕ್ಷಯರೋಗ ಬಹುವಾಗಿ ಕಡಿಮೆಯಾಗಿದೆಯೆಂದು ವಿಶ್ವ ಆರೋಗ್ಯ ಸಂಸ್ಥೆಯ ಕ್ಷಯರೋಗ ವಿಭಾಗದ ಮುಖ್ಯಸ್ಥರಾದ ಡಾ. ಜಾನ್ ಹೋಂ ವರದಿಗಾರರಿಗೆ ತಿಳಿಸಿದರು.

ಡೆನ್ಮಾರ್ಕಿನಲ್ಲಂತೂ, ರೋಗಿಗಳ ಅಭಾವದಿಂದಾಗಿ ಟಿ. ಬಿ. ಸ್ಯಾನಿಟೋರಿಯಮ್‌ಗಳನ್ನೇ ಮುಚ್ಚಲಾಗುತ್ತಿವೆಯೆಂದೂ ಅವರು ನುಡಿದರು.

ಕ್ಷಯ ಒಂದು ಸಾಮಾಜಿಕ ರೋಗವೆಂದು ಅವರು ತಿಳಿಸಿ, ಈ ರೋಗದ ವಿರುದ್ಧ ನಾನಾ ರಾಷ್ಟ್ರಗಳ ಹೋರಾಟದಲ್ಲಿ ಸಹಾಯ ಮಾಡುವುದೇ ವಿಶ್ವ ಆರೋಗ್ಯ ಸಂಸ್ಥೆಯ ಉದ್ದೇಶವಾಗಿದೆಯೆಂದರು.

ದೇವಸ್ಥಾನಗಳಲ್ಲಿ ಪ್ರಾಣಿ ಬಲಿ

ಲೇ: ಶ್ರೀ ಪಿ. ಸಿ. ಭೀಮಯ್ಯ, ದೇವಾಲ್, ಕೊಟ್ಟೂರು.

ಮದ್ರಾಸು ಸಂಸ್ಥಾನದಲ್ಲಿ ಜಾರಿಗೆ ಬಂದಿರುವ ಪ್ರಾಣಿ ಮತ್ತು ಪಕ್ಷಿ ಬಲಿ ನಿರೋಧದ ೧೯೫೦ ರ ಆಕ್ಟು ಅನುಸರಿಸಿ ಈ ಮೂಲಕ ಕೊಡಗಿನ ಜನ ಪ್ರತಿನಿಧಿಗಳಲ್ಲೂ ಜನತೆಯಲ್ಲೂ ಈ ವಿಚಾರವನ್ನು ಮುಂದಿಡಲಾಗಿದೆ.

ಮದ್ರಾಸು ಸರಕಾರದಲ್ಲಿ ಮೇಲ್ಕಂಡ ಆಕ್ಟನ್ನು ಜಾರಿಗೆ ತಂದಿದ್ದು ಅದನ್ನು ವಾಚಕರಿಗಾಗಿ ಇಲ್ಲಿ ಕೊಡಲಾಗಿದೆ.

The Madras Animal and Birds sacrifice Act 1950 by which no person should sacrifice any animal or bird in a temple or its precincts and that any person who contravened the provisions of the Act was liable for prosecution

೧೯೫೦ ನೇ ಮದ್ರಾಸು ಜಾನುವಾರು ಮತ್ತು ಪಕ್ಷಿ ಆಹುತಿ ನಿರೋಧದ ಆಕ್ಟಿನಂತೆ ಯಾರೂ ಕೂಡ ಯಾವುದೇ ದೇವಸ್ಥಾನ ಯಾ ದೇವಸ್ಥಾನದ ಆವರಣದಲ್ಲಿ ಪ್ರಾಣಿ ಆಹುತಿ ಕೊಡಕೂಡದು. ಈ ನಿಯಮವನ್ನು ಉಲ್ಲಂಘಿಸುವವರು ಶಿಕ್ಷಿಸಲ್ಪಡುವರು.

ಕೊಡಗು ದೇಶದಲ್ಲು ಸಾಧಾರಣವಾಗಿ ಹೆಚ್ಚು ಕಮ್ಮಿ ೧೦೦ ಕ್ಕೆ ೫೦ ರಷ್ಟು ದೇವಸ್ಥಾನಗಳಲ್ಲು ದೇವತೆಗಳಿಗೆ ಪ್ರಾಣಿ ಮತ್ತು ಪಕ್ಷಿ ಬಲಿ ಕೊಡುವ ಪದ್ಧತಿಯಿಟ್ಟುಕೊಂಡಿದ್ದಾರೆ. ಇದು ಅಜ್ಞಾನದಿಂದ ಆತ್ಮನ ಅಂತರ್ಯಾಮಿತ್ವವನ್ನು ತಿಳಿಯಲಾರದೆ ಮಾಡುವಂತಾ ಮಹಾ ಪಾಪಕರದ ಪೂಜೆಯಾಗಿರುತ್ತದೆ. ಪ್ರಾಣಿಗಳನ್ನು ದಯೆದಾಕ್ಷಿಣ್ಯ ಕ್ಷಮೆಯ ಲಕ್ಷಣವೇ ಇಲ್ಲದೆ ಆಹುತಿ ಕೊಡುವದರಿಂದ ಯಾವ ದೇವರಿಗೆ ತೃಪ್ತಿಯಾಗಬಹುದು?

ತತ್ವಜ್ಞಾನದ ಪಿತಾಮಹನೆನಿಸಿದ ಪತಾಂಜಲಿಯು ಹೀಗೆ ಹೇಳಿರುವನು –

ಉತ್ತಮ ಜೀವನ ಯಾ ಯೋಗಸಾಧನೆಗೆ ಆತಂಕವೆಂದರೆ, ಕೊಲೆ, ಅಸತ್ಯತೆಗಳು. ಇವುಗಳನ್ನು ಸಿಟ್ಟು, ಅಜ್ಞಾನಗಳ ಕಾರಣ ಪ್ರತ್ಯಕ್ಷವಾ ಪರೋಕ್ಷವಾಗಿ ಮಾಡಲಿ ಫಲವೊಂದೇ. ನಾವು ಅನುಭವಿಸುವ ಕಷ್ಟಗಳು ನಮ್ಮ ಅಜ್ಞಾನದ ಫಲ. ಸತ್ಯ ಅಸತ್ಯಗಳನ್ನು ಪತ್ಯೇಕಿಸಿ ತಿಳಿದುಕೊಳ್ಳದ ಮೌಢ್ಯತೆಯ ಪರಿಣಾಮ. ಯಾವುದೇ ರೀತಿಯ ಕೊಲ್ಲುಕೊಲೆಗಳನ್ನು ನಿಲ್ಲಿಸಿದರೆ ರಕ್ತಸ್ರಾವವು ಅಳಿಯುವದು.’

ಪ್ರಾಣಿ ಬಲಿಯನ್ನು ಕೊಡುವವನ ಮನಸು ಎಷ್ಟು ಮಟ್ಟಿಗೆ ಕಠಿಣ ತರದ್ದೋ ಎಷ್ಟು ಮಟ್ಟಿಗೆ ದಯಾರಹಿತವೋ ಅದೇ ತರಹಕ್ಕೆ ಅವನು ಕೆಳಗಿಳಿಯುವನು. ಪ್ರಾಣಿ ಬಲಿಯು ಶುದ್ಧ ತಾಮಸ ಆರಾಧನೆಯು. ಗೀತೆಯ ಅಧ್ಯಾಯ ೧೪ ಶ್ಲೋಕ ೧೮ ರಲ್ಲು ಸತ್ವಗುಣ ಪ್ರಧಾನರಾದವರು ಊರ್ಧ್ವಲೋಕಗಳನ್ನೂ, ರಜೋಗುಣ ಪ್ರಧಾನರಾದವರು ಮನುಷ್ಯಲೋಕವನ್ನೂ ತಮೋಗುಣ ಪ್ರಧಾನರಾದವರು ನೀಚವೃತ್ತಿಯುಳ್ಳವರಾದ ಕಾರಣ ಅಧೋಗತಿಯನ್ನೂ ಹೊಂದುವರು ಎಂದಿದೆ. ಆದುದರಿಂದ ತಾಮಸ ಗುಣದ ಪ್ರಾಣಿಬಲಿಯು ನಿರೋಧ ಮಾಡಲ್ಪಡತಕ್ಕದ್ದೇ. ಹೌದು. ಮೇಲ್ಕಂಡ ಪ್ರಾಣಿಬಲಿ ಮತ್ತು ಪಕ್ಷಿ ಬಲಿ ನಿರೋಧದ ಆಕ್ಟನ್ನೂ ಕೊಡಗಿನಲ್ಲೂ ಜಾರಿಗೆ ತರುವಂತೆ ಮಾಡಬೇಕಾಗಿ ಕೊಡಗಿನ ಮಾನ್ಯ ಮುಖ್ಯ ಮಂತ್ರಿಯವರಿಗೆ ಅರಿಕೆ ಮಾಡಿರುವೆನು. ಋಷಿವಾಣಿ ಎಂಬ ಉಪನಿಷತ್ತುಗಳಿಂದ ಸಂಗ್ರಹಿಸಲ್ಪಟ್ಟ ಗ್ರಂಥದಲ್ಲಿ, ಪೂರ್ವ ಆಚರಣೆಯು ಐತಿಹಾಸಿಕ ದೃಷ್ಟಿಯಿಂದ ಎಷ್ಟೇ ಉಪಯುಕ್ತವಾಗಿ ಕಂಡು ಬಂದರೂ ಅಂಧ ಗೌರವಕ್ಕೆ ಶರಣಾಗದೆ ಪುರಾತನವಾದದನ್ನು ಹೇಗೆ ಬಿಡುವುದು ಎಂಬ ಗಾವಿಲತನಕ್ಕೆ ಮಾರುಹೋಗದೆ ಅವುಗಳನ್ನೆಲ್ಲಾ ಗುಡಿಸಿಬಿಡುವುದು ನಮ್ಮ ಆತ್ಮದ ಆರೋಗ್ಯಕ್ಕೆ ಅತ್ಯಾವಶ್ಯಕವಾಗಿದೆ ಎಂದಿದೆ.

ಭಗವದ್ಗೀತೆಯ ಅಧ್ಯಾಯ ೬ ಶ್ಲೋಕ ೩ ಮತ್ತು ೪ ರ ಪ್ರಕಾರ ಮಾನಸಿಕ ವೈರಾಗ್ಯದ ಮೂಲಕ ಅಜ್ಞಾನವನ್ನು ತ್ಯಜಿಸಿ ೧೭ ರ ಪ್ರಕಾರ ಮಿತಾಹಾರ ಅನುಸರಿಸಿ ೯ ನೇ ಅಧ್ಯಾಯದ ೩೪ ಶ್ಲೋಕದಲ್ಲು ಹೇಳಿರುವಂತೆ ದೇವರನ್ನು ಚಿಂತಿಸುತ್ತಾ ೨೬ ನೇ ಶ್ಲೋಕದಲ್ಲಿ ಹೇಳಿರುವಂತೆ ದೇವರಿಗೆ ಪೂಜೆ ಸಮರ್ಪಣೆಮಾಡುವಂತ ಪೂಜೆಗಿಂತ ದೊಡ್ಡ ಪೂಜೆಯು ಮತ್ತಾವುದೂ ಇಲ್ಲ.

ದೇವರು ಜಗತ್ತನ್ನೂ ಅದರಲ್ಲಿರುವ ಸರ್ವಜೀವಜಂತುಗಳನ್ನೂ ಸೃಷ್ಟಿಮಾಡಿದವನು. ಭಕ್ತವತ್ಸಲನು, ಭಕ್ತಪರಾಧೀನನು, ದೀನದಯಾಳು ಕರುಣಾಸಾಗರನು. ಅದನು ಜಗತ್ಪಿತನು. ಅಂಥಾ ತಂದೆಗೆ ತೃಪ್ತಿಯಾಗಲೆಂದು ಅವನು ಸೃಷ್ಟಿಮಾಡಿದ ಮಗುವನ್ನೆ ದಯೆ ಮತ್ತು ಕರುಣವಿಲ್ಲದೆ ದೀನಸ್ವಭಾವದ ಪ್ರಾಣಿಯನ್ನು ಕತ್ತು ಕೊಯ್ಯುವ ಮನುಷ್ಯರನ್ನು ಸೃಷ್ಟಿಕರ್ತನು ಹೇಗೆ ಹರಸಿಯಾನು? ಮನುಷ್ಯರು ತಾವು ಮಾಡುವ ಪ್ರಾಣಿಬಲಿ ಎಂಬ ಘೋರಕೃತ್ಯವನ್ನು ದೇವರ ಭಕ್ತಿಗಾಗಿ ಮಾಡುವುದೆನ್ನುತ್ತಾರೆ. ಇದು ಅಜ್ಞಾನ. ಭಕ್ತಿ ಎಂದರೆ ಏನು ಹೇಗೆ ಆಚರಿಸಬೇಕೆಂಬುದು ಭಗವದ್ಗೀತೆಯ ೧೨ ನೇ ಅಧ್ಯಾಯದ ಭಕ್ತಿಯೋಗ ಶ್ಲೋಕ ೧೩.೧೪.೧೫.೧೬.೧೭.೧೮ ಮತ್ತು ೧೯ ನೇ ಶ್ಲೋಕಗಳಲ್ಲಿ ವಿಶದವಾಗಿ ಹೇಳಿದೆ.

ತಮ್ಮ ಕೋರಿಕೆಯನ್ನು ನೆರವೇರಿಸಿಕೊಡಬೇಕೆಂಬ ಅತಿ ಆಕಾಂಕ್ಷೆಯಿಂದ ಮಾಡುವ ಪೂಜೆಯು ಯಾವ ಭಾವದ್ದೇ ಆಗಿರಲಿ ನೆರವೇರುವುದಿಲ್ಲ. ಅನಾಸಕ್ತಿಯಿಂದ ಮಾಡುವ ಯಾವತ್ತು ಕಾರ್ಯಗಳೂ ಫಲಕಾರಿಯಾಗುವುವು. ಉದಾಹರಣೆಯಾಗಿ ಶ್ರೀ ಸ್ವಾಮಿರಾಮ ತೀರ್ಥರ ಜೀವನಚರಿತ್ರೆಯಲ್ಲು ಹೀಗಿದೆ. ಒಬ್ಬ ರಾಜನಿಗೆ ಒಬ್ಬ ಮಂತ್ರಿಯಿದ್ದು ಅವನಿಗೆ ರಾಜನ ಐಶ್ವರ್ಯವು ಜಿಗುಪ್ಸೆಯನ್ನು ಉಂಟುಮಾಡಿದ ಕಾರಣ ಕಾಥದಾರಿಯು ಶಿಷ್ಯನಿಂದೂ ಲಕ್ಷ್ಮಿಯನ್ನು ಒಲಿಸಿಕೊಂಡರೆ ಆಕೆಯ ಪೂರ್ಣ ಐಶ್ವರ್ಯವನ್ನು ಕೊಡುವಳೆಂದೂ ಲಕ್ಷ್ಮಿಯನ್ನು ಕುರಿತು ತಪಸು ಮಾಡಲು ಕುಳಿತುಕೊಂಡನು. ಕೋಟಿಯಾಂತರ ಲಕ್ಷ್ಮಿ ಮಂತ್ರಗಳನ್ನು ಜಪಿಸಿದರೂ ಲಕ್ಷ್ಮಿಯು ಪ್ರತ್ಯಕ್ಷಳಾಗದೆ ನಿರಾಶನಾಗಿ ಕೌಪೀನ ಧರಿಸಿ ಸಂನ್ಯಾಸಿಯಾಗಿಬಿಟ್ಟನು. ಅದೇ ಕ್ಷಣದಲ್ಲು ಲಕ್ಷ್ಮಿಯು ಪ್ರತ್ಯಕ್ಷಳಾಗಿ ಏನು ಬೇಕು ಬೇಡೆಂದಳು. ಆಗ ಮಂತ್ರಿಯು ನಿನ್ನನ್ನು ಕುರಿತು ಕೋಟಿಯಾಂತರ ಜಪಮಾಡಿದೆನು. ನಿನಗೆ ದಯೆಯು ಬರಲಿಲ್ಲ. ಈಗ ನಾನು ಸನ್ಯಾಸವನ್ನು ಕೈಕೊಂಡಿರುವೆನು. ನನಗೇನೂ ಬೇಡವೆಂದನು. ಆಗ್ಯೆ ಲಕ್ಷ್ಮಿಯು ಹೇಳುತ್ತಾಳೆ. ‘ನೀನು ಒಂದೇ ಒಂದು ಬಾರಿ ನನ್ನ ಹೆಸರು ಎತ್ತಿದಾಗ ನಾನಿಲ್ಲಿಯೇ ಇದ್ದೆನು. ನಿನ್ನ ಐಶ್ವರ್ಯ ಅಕಾಂಕ್ಷೆಯು ನಮಗಿಬ್ಬರಿಗೂ ಅಡ್ಡಲಾಗಿ ನಿಂತಿದ್ದುದರಿಂದ ನೀನು ನನ್ನನ್ನು ನೋಡಲಾರದೆ ಹೋದೆ’ ಎಂದಳು. ಹಾಗಿರುವಾಗ ಪ್ರಾಣಿಬಲಿಯನ್ನು ಕೊಡುವ ಮನುಷ್ಯನ ಆಶೆ ಈಡೇರಬಹುದು? ಅದು ಹೇಗೆ ನೆರವೇರಬಹುದು ಎಂಬದನ್ನು ಮನನಮಾಡಿ ಪ್ರಾಣಿಬಲಿಯನ್ನು ಕೊಡುವ ಮನಸ್ಸನ್ನು ದೂರಮಾಡಿ ಶ್ರೇಯಸ್ಸನ್ನು ಪಡೆಯಬೇಕೆಂಬುದೇ ನನ್ನ ಆಶೆ.

ಕೊಡಗಿನ ಅನೇಕ ಸ್ಥಳಗಳಲ್ಲಿ ಮದುವೆಗಳಲ್ಲಿ ಕಾರಣೋಲಿಗೆಂದು ಕ್ರಮತಪ್ಪಿ ಹಂದಿಯನ್ನು ಕೊಯ್ಯುವ ಪದ್ಧತಿ ಇದೆ. ಇದು ಪೂರಾ ತಪ್ಪು. ನಮ್ಮ ಹಿರಿಯರು ಸತ್ತರೆ ಅವರನ್ನು ಮೋಕ್ಷಕ್ಕೆ ಸೇರಿಸಬೇಕೆಂಬ ಉದ್ದಿಷ್ಟದಿಂದ ಮಳೆ ಬಿಸಿಲೆನ್ನದೆ ಜನಗಳು ಕಾವೇರಿ ಮಾತೆಯ ಪಾದದಲ್ಲಿ ಸಂಕಲ್ಪಗಳನ್ನು ಹೇಳಿಸಿ ಅಜ್ಞಾನವನ್ನು ನೀಗಿ ಮೋಕ್ಷಕ್ಕೆ ಕಳುಹಿಸುತ್ತಾರೆ. ವಾಪಸು ಮನೆಗೆ ಬಂದು ಅವರ ಹೆಸರಿನಲ್ಲಿ ಎಡೆ ಹಾಕುತ್ತಾರೆ. ಅವರು ಪಿಶಾಚಿಯಾಗಿರುವರೆಂಬ ನಂಬಿಕೆಯೇ ಇದಕ್ಕೆ ಕಾರಣ. ಇದು ಅಜ್ಞಾನ. ಮನಸು ಎಂಬುದು ಮಾಯೆಯ ಮತ್ತೊಂದು ಹೆಸರು. ಮನಸನ್ನು ಉತ್ತಮ ದಾರಿಯಲ್ಲಿ ತೆಗೆದುಕೊಂಡು ಹೋದರೆ ಅದು ಜ್ಞಾನವನ್ನು ಕಲ್ಪಿಸಿ ಅಜ್ಞಾನವನ್ನು ನೀಗುವುದು. ಅದನ್ನು ಹೋದ ದಾರಿಯಲ್ಲಿ ಬಿಟ್ಟರೆ ಅದರ ಪರಿಣಾಮಕ್ಕೆ ಕೊನೆ ಮೊದಲಿಲ್ಲದೆ ಅಜ್ಞಾನದ ಗುಂಡಿಗೆ ತಳ್ಳಿ ಬಿಡುವದು.

ಪೂರ್ವಾಚಾರದಂತೆ ನಡೆಯದಿದ್ದರೆ ತೊಂದರೆಯಾಗುವುದೆಂಬ ಭಾವನೆಯು ದೊಡ್ಡ ಅಜ್ಞಾನವಲ್ಲದೆ ಬೇರೊಂದಲ್ಲ. ಪ್ರಾಣಿಗಳ ಜೀವದ ಆಧಾರದ ಮೇಲೆ ನಮ್ಮ ಸುಖವು ಬೆಳೆಯುತ್ತಿದ್ದರೆ ಅಂಥಾ ಜೀವನವೇ ಬೇಡ. ಮಹಾ ಜನರು ಇದನ್ನು ವಿವೇಚಿಸಿ ಹಿಂಸಾರೂಪವಾದ ಮತ್ತು ಅತ್ಯಂತ ಪಾತಕವಾದ ಪ್ರಾಣಿ ಬಲಿಯನ್ನು ನಿಲ್ಲಿಸಿ ಈ ಕಾವೇರಿ ಭೂಮಿಯನ್ನು ಪವಿತ್ರವನ್ನಾಗಿ ಮಾಡಬೇಕಾಗಿ ಪ್ರಾರ್ಥನೆ.

ಕೊಡಗು ಪ್ರಾಂತೀಯ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಛಾಲ್ತಿ ಠೇವಣಾತಿ ಶೀಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-6-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

Licence No. 60.
Licenced to Post without Prepayment

Reg. No M. 1550
"KODAGU" MERCARA (Coorg)

೨೦—೩—೧೯೫೩

ಭಾರತದ ರೈಲ್ವೆ ಏಷ್ಯಾದಲ್ಲಿ ದೊಡ್ಡದು

ದಿಲ್ಲಿಯಲ್ಲಿ ಈಗ ತನ್ನ ಶತವರ್ಷ ಪ್ರದರ್ಶನಯನ್ನು ನೆರವೇರಿಸುತ್ತಿರುವ ಭಾರತೀಯ ರೈಲ್ವೆಗಳ ಇತಿಹಾಸದಲ್ಲಿ ಕೆಲ ಮುಖ್ಯ ವಿಚಾರಗಳಿವೆ.

ಏಶಿಯಾ ಖಂಡದಲ್ಲೇ ಭಾರತೀಯ ರೈಲ್ವೆ ಅತೀ ದೊಡ್ಡದಾಗಿದ್ದು ಇದರ ಓಟ ೧೩೫೧೩ ಮೈಲು ರಸ್ತೆಯಲ್ಲಿ ನಡೆಯುತ್ತಿದೆ. ಇಡೀ ಜಗತ್ತಿನಲ್ಲಿ ಇದರ ಸ್ಥಾನ ನಾಲ್ಕನೆಯದಿದ್ದು ಸರಕಾರೀ ಒಡೆತನದ ದೊಡ್ಡ ಉದ್ದಿಮೆಗಳಲ್ಲಿ ಇದರ ಸ್ಥಾನ ಎರಡನೆಯದು.

ಭಾರತದಲ್ಲಿ ೬೦೬೩ ರೈಲ್ವೆ ಸ್ಟೇಷನ್‌ಗಳಿವೆ. ಬಿಹಾರದಲ್ಲಿರುವ ಸೋನೆಪುರ ಸ್ಟೇಷನದ ಪ್ಲಾಟ್‌ಫಾರ್ಮು ೨೪೧೫ ಫೂಟ್ ಉದ್ದವಿದ್ದು ಜಗತ್ತಿನಲ್ಲಿಯೇ ಇದು ಅತೀ ಉದ್ದವಾದ ಪ್ಲಾಟುಫಾರ್ಮು ಆಗಿದೆ.

ಭಾರತದ ರೈಲ್ವೆ ಉದ್ದಿಮೆಯು ಪ್ರತಿ ವರ್ಷ ೧೩ ಕೋಟಿ ರೂ. ಗಳ ಸಂಬಳದ ಮೇಲೆ ಸುಮಾರು ೧೦ ಲಕ್ಷ ಜನರನ್ನು ದುಡಿಸಿಕೊಳ್ಳುತ್ತಿದೆ

ಜಗತ್ತಿನಲ್ಲಿಯೇ ಭಾರತದ ರೈಲ್ವೆಗಳಲ್ಲಿರುವಷ್ಟು ಪ್ರಯಾಣಿಕರ ಗದ್ದಲ ಇನ್ನೆಲ್ಲಿಯೂ ಇರುವದಿಲ್ಲ. ಭಾರತದ ರೈಲ್ವೆಗಳಲ್ಲಿ ಪ್ರತಿ ಮಿನಿಟಿಗ ೨೩೪೦ ಪ್ರಯಾಣಿಕರು ಪ್ರವಾಸ ಮಾಡುವರು. ಪ್ರತೀ ದಿನ ಸರಾಸರಿಯಾಗಿ ೩೧೩೦೦೦೦ ಪ್ರವಾಸಿಕರನ್ನು ಹೊತ್ತುಕೊಂಡು ೩೮೭೭ ಗಾಡಿಗಳು ಓಡಾಡುತ್ತವೆ ಭಾರತದಲ್ಲಿರುವ ಎಲ್ಲಾ ಡಬ್ಬಿಗಳನ್ನು ಸಾಲಾಗಿ ನಿಲ್ಲಿಸಿದರೆ ೧೩೫ ಮೈಲುದ್ದವಾಗಬಹುದು

೧೯೫೧—೫೨ರಲ್ಲಿ ಭಾರತದ ರೈಲ್ವೆಗಳಲ್ಲಿ ೭೯೦೦೯೧೮ ಜನರು ಟಿಕೇಟು ಇಲ್ಲದ ಪ್ರವಾಸ ಮಾಡಿದರು. ಇವರಿಂದ ೧೬೭೫೮೧೮೦ ರೂ. ಗಳು ವಸೂಲ್ಮಾಡಬೇಕಿತ್ತು.

ಪ್ರತಿ ದಿನ ೧೮೬೭೫ ವ್ಯಾಗಿನುಗಳಲ್ಲಿ ಸರಕುಗಳನ್ನು ತುಂಬಲಾಗುತ್ತಿದೆ. ೩೬೮೩೦ ಟನ್ ಸರಕು ವ್ಯಾಗಿನುಗಳಿಂದ ಇಳಿಸಲ್ಪಡುತ್ತಿದೆ

ಬ್ರಾಡ್‌ಗೇಜ್ ರಸ್ತೆಯಲ್ಲಿ ಪ್ಯಾಸೇಜರ್ ಗಾಡಿಯನ್ನು ನಡೆಸಲು ಮೈಲಿಗೆ ರೂ. ೧೦—೮—೦ ಮತ್ತು ಮೀಟರ್ ಗೇಜ್ ರಸ್ತೆಯಲ್ಲಿ ರೂ. ೯—೨—೦ ವೆಚ್ಚ ಬರುತ್ತದೆ. ಸಾಮಾನು ಗಾಡಿಗಳನ್ನು ನಡೆಸಲು ಈ ವೆಚ್ಚ ಅನುಕ್ರಮವಾಗಿ ರೂ. ೨೦ ಮತ್ತು ೧೫—೩—೦ ಬರುವುದು.

ಪ್ರತಿ ವರ್ಷ ಭಾರತದ ರೈಲ್ವೆಗಳಿಗೆ ೧ ಕೋಟಿ ಟನ್ ಕಲ್ಲಿದ್ದಲು ಬೇಕಾಗುತ್ತದೆ. ರೈಲ್ವೆ ಉದ್ದಿಮೆಯಲ್ಲಿ ಸರಕಾರವು ೮೩೦ ಕೋಟಿ ರೂ. ಗಳ ಬಂಡವಾಳ ತೊಡಗಿಸಿದೆ. ಸುಮಾರು ೮೫೦೦ ರೈಲ್ವೆ ಇಂಜಿನುಗಳು ೨೧೦೦೦ ಪ್ರವಾಸಿಕ ಡಬ್ಬಿಗಳು ಮತ್ತು ೨೦೦೦೦೦ ವ್ಯಾಗಿನುಗಳು ಇವೆ ತನ್ನ ನೌಕರರಿಗೆ ಶಿಕ್ಷಣ, ಔಷಧೋಪಚಾರ ಮತ್ತು ಆರೋಗ್ಯ ರಕ್ಷಣೆ ಸೌಕರ್ಯ ಒದಗಿಸುವುದಕ್ಕಾಗಿ ರೈಲ್ವೆ ಶಾಖೆ ಪ್ರತಿ ವರ್ಷ ಸುಮಾರು ೮ ಕೋಟಿ ರೂ. ಗಳನ್ನು ವೆಚ್ಚ ಮಾಡುತ್ತಿದೆ.

THE VIJAYA BANK, LIMITED.

ದಿ ವಿಜಯ ಬೇಂಕ್ ಲಿಮಿಟೆಡ್, ಮಡಿಕೇರಿ.

ಸ್ಥಾಪನೆ 1931] [ಪ್ರಧಾನ ಕಛೇರಿ ಮಂಗಳೂರು.

ಮೂಲ ಧನ	ರೂ.	20,00,000
ತೆತ್ತ ಪಾಲು ಭಂಡವಾಳ	ರೂ	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ಮ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು. ರೂಪಾಯಿ ಹತ್ತು ಸಾವಿರವ ಮಿಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು

ಎಲ್ಲಾ ತರದ ಬ್ಯಾಂಕು ವಹಿವಾಟು ನಡೆಸಲ್ಪಡುವುದು

ಬಿ. ಮಂಜಯ್ಯ ಹೆಗ್ಡೆ,
ಎಡ್ವೊಕೇಟ್.
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.
12–5 (ಮತ್ತು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರು)

ಮಡಿಕೇರಿ ಆಫೀಸಿನ ಏಜೆಂಟ್ :—**ಯಮ್. ಯಸ್. ಆಳ್ವ.**

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ :—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ಹೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು
4. 9"×4" ಮತ್ತು 8"×4" ಕಬ್ಬಿಣದ ತೊಲೆಗಳು (Girders).
5. 8'×3'×24' (Gage) ಕಬ್ಬಿಣದ ತಗಡುಗಳು.
6. 1¾" × 5/16" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ (ಗೌ. ಕಾರ್ಯದರ್ಶಿ) — ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್,

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ

ನೀವು ಬಲ್ಲಿರಾ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ದಾಖ್ಲೆ. ಈಗ ತಾನೆ ಸಂದುಹೋದ 1952ರ ಅಂತ್ಯ. ಇದು ನಮ್ಮ ಜೀವನದ ಪ್ರಥಮ ಸೋಪಾನ, ನಮ್ಮ ರಾಷ್ಟ್ರದ ಪ್ರಗತಿಪರ ಲಕ್ಷ್ಯ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕೋರ್ಪೊರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕೋರ್ಪೊರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 8

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ

THE CANARA BANKING CORPORATION LIMITED

Edited Printed and Published by P. I. BELLIAPPA at 'Kodagu Press, Mercara for Kodagu Ltd.,

ಪ್ರೊ. ಕೆ. ಟಿ. ಶಾಹರವರ ನಿಧನ.

ಭಾರತದ ಪ್ರಸಿದ್ಧ ಅರ್ಥ ಶಾಸ್ತ್ರಜ್ಞರ ಲ್ಲೊಬ್ಬರಾದ ಪ್ರೊ. ಕೆ. ಟಿ. ಶಾಹರವರು ಕೆಲವೇ ದಿನಗಳ ಅಸ್ವಾಸ್ಥ್ಯದಿಂದ ತಾ. ೧೮ ರಲ್ಲಿ ಬೊಂಬಾಯಿಯಲ್ಲಿ ನಿಧನರಾದರು. ಭಾರತ ಘಟನಾ ಸಮಿತಿಯ ಸದಸ್ಯರಾಗಿದ್ದು, ಅವರಲ್ಲಿ ನಡೆದ ಚರ್ಚೆಗಳಲ್ಲಿ ಭಾಗವಹಿಸಿದವರಲ್ಲಿ ಪ್ರೊ ಶಾಹರವರು ಅಗ್ರಗಣ್ಯರು. ಅನಂತರ ಭಾರತದ ಪ್ರಥಮ ಪಾರ್ಲಿಮೆಂಟಿನ ಸದಸ್ಯರೂ ಆಗಿದ್ದರು ಕಳೆದ ಬಾರಿ ನಡೆದ ರಾಷ್ಟ್ರಾಧ್ಯಕ್ಷರ ಚುನಾವಣೆಯಲ್ಲಿ ಪ್ರೊ ಶಾಹರವರೂ ಓರ್ವ ಪ್ರತಿಸ್ಪರ್ಧಿಗಳಾಗಿದ್ದರು. ಹಿಂದೆ ಬೊಂಬಾಯಿ ಹಾಗೂ ಮೈಸೂರುಗಳಲ್ಲಿ ಆರ್ಥಿಕ ಹಾಗೂ ವಾಣಿಜ್ಯಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು.

ಅಮೇರಿಕದಲ್ಲಿ ಗಾಂಧಿ ಸ್ಮಾರಕ.

ಅಮೇರಿಕದ ರಾಜಧಾನಿಯಾದ ವಾಶಿಂಗ್ಟನ್ ನಗರದ ಮಧ್ಯ ಭಾಗದಲ್ಲಿ ಗಾಂಧಿ ಸ್ಮಾರಕಕ್ಕಾಗಿ ಒಂದು ಕೇಂದ್ರ ಸ್ಥಳವನ್ನು ಆರಿಸಲಾಗಿದೆ

ಐದು ಎಕ್ರೆ ಜಾಗವಿರುವ ಬರ್ನಾರ್ಡ್ ಪಲ್ ಉದ್ಯಾನವನದಲ್ಲಿ ಈ ಸ್ಮಾರಕವನ್ನು ಏರ್ಪಡಿಸಲಾಗುವುದು. ಪ್ರತಿನಿಧಿ ಇಮ್ಯಾನುಯಲ್ ಸಲ್ಲರ್‌ರವರು ಮತ್ತು ರಾಯಭಾರಿ ಕಚೇರಿಯವರು ಈ ಸ್ಥಳವನ್ನು ಮಾರ್ಚಿ ೧೬ ನೇ ತಾರೀಕು ಪರೀಕ್ಷೆ ಮಾಡುವರು ಅಂದೇ ಗಾಂಧೀ ನಿಧಿಯನ್ನು ಎತ್ತಲು ಪ್ರಾರಂಭ ಮಾಡುವರು ಅಮೇರಿಕ ಸರಕಾರವು ಇದಕ್ಕೆ ಈಗಾಗಲೇ ಅನುಮತಿ ಕೊಟ್ಟು ಶಾಸನ ಮಾಡಿದೆ.

ಮದ್ರಾಸ್ ಬಜೆಟ್.

ಮದರಾಸಿನ ೧೯೫೩—೫೪ ರ ಬಜೆಟ್ಟಿನಲ್ಲಿ ಕೇವಲ ಇಪ್ಪತ್ತು ಸಾವಿರ ರೂ. ಗಳ ಕೊರತೆಯನ್ನು ಕಾಣಿಸಲಾಗಿದೆ. ಅರ್ಥಿಕ ಮಂತ್ರಿ ಶ್ರೀ ಸುಬ್ರಹ್ಮಣ್ಯರವರಿಂದು ಬಜೆಟ್ಟನ್ನು ಅಸಂಬ್ಲಿಯಲ್ಲಿ ಮಂಡಿಸಿದರು. ಕೋರ್ಟು ಫೀಸನ್ನು ಹೆಚ್ಚಿಸಲು ಮಸೂದೆಯೊಂದು ಸೂಚಿಸಲ್ಪಟ್ಟಿದ್ದು, ಅದರಿಂದಾಗಿ ೫೦ ಲಕ್ಷ ರೂ ಗಳ ಹೆಚ್ಚು ವರಮಾನ ನಿರೀಕ್ಷಿಸಲಾಗಿದೆ ಇತ್ತೀಚೆಗೆ ಹೊಗೆಸೊಪ್ಪಿನ ಮೇಲೆ ಮತ್ತೆ ಹೊರಿಸಲ್ಪಟ್ಟ ಮಾರಾಟ ತೆರಿಗೆಯೊಂದನ್ನುಳಿದು ಹೊಸದಾಗಿ ಯಾವ ತೆರಿಗೆಯನ್ನೂ ಸೂಚಿಸಿಲ್ಲ. ೧೯೫೩—೫೪ ನೇ ಸಾಲಿನ ಅಂದಾಜಾಗಿರುವ ಆದಾಯ ೬೫,೭೪,೭೧,೦೦೦ ರೂ. ಗಳು, ವೆಚ್ಚ ೬೫,೭೪,೫೧,೦೦೦ ರೂ. ಗಳು ಹೆಚ್ಚುವರಿ ೨೦,೦೦೦ ರೂ. ಗಳು, ಆಂಧ್ರ ಪ್ರಾಂತರಚನೆ ಸಮೀಪವಾಗಿರುವುದರಿಂದ, ಈಗ ಜಾರಿಯಲ್ಲಿರುವ ಯೋಜನೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನುಳಿದು, ಹೊಸ ಯೋಜನೆಗಳಿಗಾವುದಕ್ಕೂ ಹಣ ಒದಗಿಸಿಲ್ಲ. ಈಗಿನ ಯೋಜನೆಗಳಿಗಾಗಿ ೬೫ ಲಕ್ಷ ರೂ. ಗಳನ್ನೊದಗಿಸಲಾಗಿದೆ.

ಕೊಡಗು

ವಾರ್ಷಿಕ ಚಂದಾ ರೂ. ೫—೦—೦.
ಸಂಪುಟ ೩೧.   ಸಂಚಿಕೆ ೪೧.

ಶುಕ್ರವಾರ
೨೭-೩ ೧೯೫೩

KODAGU KANNADA WEEKLY MERCARA

ವಾರದ ಕಥೆ

॥ ನಂದಿದ ದೀಪದ ಕಂಪು ॥

ಲೇ: 'ಪ್ರೇಮಯೋಗಿ' ಮಡಿಕೇರಿ.

ಶಂಕರನು ಹೊರಡಲುದ್ಯುಕ್ತನಾಗಿದ್ದನು. ಚಂಚಲೆಯು ನನ್ನನ್ನೊಮ್ಮೆ ನೋಡಿ "ನಾಳೆ ಸಾಯಂಕಾಲ ನಿಜವಾಗಿಯೂ ಟೀಗೆ ನಮ್ಮಲ್ಲಿಗೆ ಬರಬೇಕು. ನಾನು ಎದುರು ನೋಡುತ್ತಿರುವೆನು" ಎಂದಳು.

"ಸಮಯಾವಕಾಶವಾದರೆ ನೋಡುವ" ನಾನೆಂದೆ.

"ನನಗೇನು ನಿನ್ನನ್ನು ಗೊತ್ತಿಲ್ಲವೆ? ನಿನಗೆ ಕೆಲಸವೆಷ್ಟಿದೆಯೆಂಬುದೂ ಗೊತ್ತಿದೆ ಬಾರದಿದ್ದರೆ ಮತ್ತೆ ನೋಡು" ಚಂಚಲೆ ನುಡಿದಳು.

ಇಷ್ಟು ಆತ್ಮೀಯವಾಗಿ ನುಡಿದುದು ಶಂಕರನಿಗೆ ಸರಿ ತೋರಲಿಲ್ಲವೆಂದು ತೋರುತ್ತೆ. "ನೀನು ಹೊರಡುವುದಿಲ್ಲವೇ? ನೀನು ಮಾತಾಡುತ್ತಾ ಇರು. ನಾನು ಹೊರಟೆ" ಎಂದನು.

ಚಂಚಲೆಯು ಮತ್ತೊಮ್ಮೆ "ಖಂಡಿತಾ ಬರಬೇಕು—ನಮಸ್ತೆ" ಎಂದು ಹೊರಟಳು.

* * *

ಐದು ವರ್ಷಗಳ ನಂತರ ಇಂದು ಚಂಚಲೆಯನ್ನು ನಾನು ಕಂಡುದು. ಆಕೆಯು ನನ್ನೊಡನೆ ಕಾಲೇಜಿನಲ್ಲಿ ಓದುತಿದ್ದಳು. ಅಂದು ಹುಡುಗಿಯಾಗಿದ್ದ ಆಕೆ ಇಂದು ಗೃಹಿಣಿಯಾಗಿದ್ದಳು. ಶ್ರೀನಿವಾಸನನ್ನು ಮದುವೆಯಾಗಿದ್ದಳು. ಆಕೆಯ ಒಡನಾಟದ ಅಂದಿನ ಶಾಲಾ ದಿನಗಳನ್ನು ನೆನೆದರೆ ಚಿಂತೆ ಆವರಿಸುತ್ತದೆ. ನಾವಿಬ್ಬರೂ ಪ್ರಾಣಸ್ನೇಹಿತರಾಗಿದ್ದೆವು. ನಾವು ಭವಿಷ್ಯದ ವಿಚಾರ ಯೋಚಿಸದಿದ್ದರೂ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದೆವು. ಆದರೆ ಆಕೆಯ ತಂದೆಗೆ ನನ್ನ ಮೇಲೆ ವಿಶ್ವಾಸವಿರಲಿಲ್ಲವೇನೊ! ಆಕೆಯು ಪ್ರಥಮ ಬಾರಿ ನನ್ನನ್ನು ತಂದೆಗೆ ಪರಿಚಯ ಮಾಡಿದಾಗ ಅವರು ಸಂಶಯಾತ್ಮಕ ದೃಷ್ಟಿಯಿಂದ ನನ್ನೊಡನೆ ವರ್ತಿಸಿದರು. ಇಡೀ ಪ್ರೆಸಿಡೆನ್ಸಿಯಲ್ಲಿ ಪ್ರಥಮ ಶ್ರೇಣಿ ಪಡೆದು ನಾನು ತೇರ್ಗಡೆಯಾದ ವರ್ತಮಾನವನ್ನು ಆಕೆ ತಂದೆಗೆ ತಿಳಿಸಿದರೂ, ಪ್ರಶಂಸೆಯ ಒಂದು ಮಾತಾಡಲಿಲ್ಲ. ನಂತರ ನನ್ನ ಕೀರ್ತಿಯನ್ನು ಹಲವರು ಕೊಂಡಾಡಿದರೂ ಆಕೆಯ ತಂದೆಯು ಏನೂ ಹೇಳಲಿಲ್ಲ. ಈ ವಿಚಾರ ಚಂಚಲೆಯೊಡನೆ ನಾನು ಹೇಳದಿರಲಿಲ್ಲ. ಆದರೆ ಮುಗ್ಧನ ಹಾಗೆ ಮಾತಾಡದಿರು. ತಂದೆಯ ಸ್ವಭಾವವನ್ನು ಇಷ್ಟು ಬೇಗ ಅರಿಯುವುದು ಸುಲಭವಲ್ಲ. ಅವರು ವಿರೋಧ ಮಾಡರು" ಎಂದು ಆಕೆ ಹೇಳಿದ್ದಳು.

* * *

ಸರಕಾರಿ ಉದ್ಯೋಗ ದೊರೆತುದರಿಂದ ಬೊಂಬಾಯಿಯಲ್ಲಿ ನಾನಿರಬೇಕಾಯಿತು. ಚಂಚಲೆಯು ಎರಡು ದಿವಸಗಳಿಗೊಂದರಂತೆ ಪತ್ರ ಬರೆಯುತ್ತಿದ್ದಳು. ಕ್ರಮಶಃ ಇದು ಕಡಿಮೆಯಾಗುತ್ತಾ ಬಂದು ತಿಂಗಳಿಗೊಂದರಂತಾಗಿ ಕಡೆಗೆ ಪತ್ರ ಸಂಬಂಧವೇ ನಿಂತುಹೋಯಿತು. ಚಂಚಲೆಯ ವಿವಾಹವೂ ಜಮೀನ್ದಾರ ಶ್ರೀನಿವಾಸನ ಜೊತೆಯಲ್ಲಿ ಆಯಿತು. ನನಗಾದ ದುಃಖವನ್ನು ವಿವರಿಸುವದು ಅಸದಳ. ಶ್ರೀನಿವಾಸನಿಗೆ ಎರಡನೆ ಮದುವೆ. ಆತನ ಪ್ರಥಮ ಪತ್ನಿ ಜೀವಂತವಿದ್ದಳು! ಮದುವೆಯಾಗಿ ನಾಲ್ಕು ವರ್ಷಗಳಾಗಿದ್ದವು. ಚಂಚಲೆಯು ಎರಡು ಮಕ್ಕಳ ತಾಯಿ. ಮದುವೆಯಾದ ಪ್ರತಿ ಸ್ತ್ರೀಯೂ ತಾಯಿಯಾಗಲೇ ಬೇಕು. ಅದೇ ಮದುವೆಯ ಪರಿಪೂರ್ಣತೆ!

• • •

ಯೋಚನೆಯಲ್ಲಿ ಮುಳುಗಿದವನು ಎಚ್ಚರವಾದಾಗ ಗಂಟೆ ಮೂರುವರೆಯಾಗಿತ್ತು. ಚಂಚಲೆಯ ಟೀ ಆಹ್ವಾನದ ನೆನಪಾಯಿತು. ಮುಖ ತೊಳೆದು ಬಟ್ಟೆ ಹಾಕಿಕೊಂಡು ಹೊರಟೆ. ಜಮೀನುದಾರ ಶ್ರೀನಿವಾಸನ ಮನೆ ನಮ್ಮೂರಿನ ಮನೆಗಳ ಮಧ್ಯೆ ತನ್ನ ಸಂಪತ್ತಿನ ಕಳೆಯನ್ನು ಸಾರಿ ಹೇಳುವಂತೆ ತೋರುತಿತ್ತು. ನಾನು ಬಾಗಿಲ ಪಹರೆಯವನನ್ನು ದಾಟಿ ಒಳಗೆ ಪ್ರವೇಶಿಸಿ ಮಹಡಿಯ ಮೆಟ್ಟಿಲನ್ನೇರುತ್ತಾ ಮೆಟ್ಟಿಲಿಗೆ ಹಾಸಿದ ರತ್ನಗಂಬಳಿಗು ಕಲಾಚಿತ್ರಗಳನ್ನು ನೋಡುತ್ತಾ ಸಾಗಿದ್ದೆ. ಏಣಿಯ ಅಂತ್ಯದಲ್ಲಿ ಚಂಚಲೆಯು ಕಾತುರಳಾಗಿ ನಿಂತಿದ್ದಳು. ನನ್ನನ್ನು ಆದರದಿಂದ ಸ್ವಾಗತಿಸಿ, "ಬಹುಶಃ ನೀನು ಬರಲಾರೆಯೆಂದು ನೆನಸಿದ್ದೆ. ನೀನು ಬಂದದ್ದು ತುಂಬಾ ಸಂತೋಷ" ಎಂದಳು.

"ಸಂತೋಷ ಯಾರಿಗೆ?" ಎಂದು ನಾನು ನಗುಮುಖದಿಂದ ಪ್ರಶ್ನಿಸಿದೆ. "ಇಬ್ಬರಿಗೂ" ಎಂದವಳು ಕುಡಿನೋಟವೊಂದನ್ನು ಬೀರಿ ನನ್ನ ಕೈಹಿಡಿದು ಹತ್ತಿರದಲ್ಲಿ ಸಜ್ಜಿತವಾಗಿದ್ದ ಮೇಜಿಗೆ ಕರೆದುಕೊಂಡು ಹೋದಳು. ಟೀಗೆ ಬೇಕಾದ ತಿಂಡಿಗಳು ಸಜ್ಜಾಗಿದ್ದವು. ಒಂದು ಕುರ್ಚಿಯಲ್ಲಿ ನನ್ನನ್ನು ಕುಳ್ಳಿರಿಸಿ ಎದುರಿನ ಕುರ್ಚಿಯಲ್ಲಿ ತಾನು ಕುಳಿತು "ನಿನ್ನ ಬಾಲ್ಯದ ವಿನೋದವಿನ್ನೂ ಬಿಟ್ಟಿಲ್ಲ" ಎಂದಳು.

"ಅದೆಲ್ಲ ಮಾಯವಾಗಿದೆ ಚಂಚಲ. ಆದರೆ ನಿನ್ನನ್ನು ಕಂಡಾಗ ಅದೇನೋ ಹಳೇ ನೆನಪು ಬಂದಂತಿದೆ. ಆದರೆ ಅವನ್ನು ನೆನೆದು ಪ್ರಯೋಜನವಿಲ್ಲ. ಈಗ ನೀನು ಚಂಚಲೆಯಲ್ಲ. ಮಿಸೆಸ್ ಶ್ರೀನಿವಾಸ. ಆದರೂ ವರ್ಷ ವರ್ಷಗಳ ಹಿಂದಿನ ನೆನಪು ಪರಿಚಯವು ಇಂದೂ ನಿನ್ನನ್ನು ಚಂಚಲೇ ಎಂದು ಕರೆಯುವಂತೆ ಪ್ರೇರೇಪಿಸುತ್ತದೆ ಆದರೂ ನಾನು ಹಾಗೆ ಕರೆಯಬಾರದು."

ಚಂಚಲೆಯ ಮುಖ ನಿಸ್ತೇಜವಾಯಿತು. ತುಟಿ ಅದುರಿತು. ಆಕೆ ಮಾತಾಡಲಿಲ್ಲ. ಹತ್ತಿರವೆ ಮಿಠಾಯಿ ತುಂಬಿದ ತಟ್ಟೆಯನ್ನು ತೆಗೆದು ನನ್ನ ಮುಂದೆ ಹಿಡಿದು "ತೆಗೆದುಕೊ. ಏನೋ ಮಾತಾಡಿ ನನಗೆ ದುಃಖ ತಾರದಿರು" ಎಂದಳು.

"ನಾನೇನು ದುಃಖ ತರುತ್ತಿರುವೆನು. ಈ ತಿಂಡಿ ತಿನಸುಗಳು ನನಗೆ ಪೇಟೆಯಲ್ಲಿ ದೊರೆಯವೇ? ನೀನು ಏನೋ ಮಾತಾಡಲು ಆಹ್ವಾನಿಸಿರುವೆಯೆಂದು ನಾನು ತಿಳಿದಿದ್ದೆ. ಆದರೆ ನೀನು ತಿಂಡಿ ಮುಂದಿಟ್ಟು ಮೌನವಾಗಿರುವೆ. ನಾನು......."

ಚಂಚಲೆಯು ಮಧ್ಯೆ ಬಾಯಿ ಹಾಕಿ "ಸಾಕು ಸಾಕು, ನಿನ್ನೊಡನೆ ಕೆಲವು ಮಾತಾಡಲಿಕ್ಕಾಗಿಯೇ ನಿನಗೆ ಇಲ್ಲಿಗೆ ಬರುವ ಕಷ್ಟ ಕೊಟ್ಟೆ. ಬೊಂಬಾಯಿಯಲ್ಲಿ ನೀನು ಇಂಥಾ ತಿಂಡಿ ತಿನಸು ನೋಡಿರುವೆ ಎಂದು ನಾನು ತಿಳಿಯಲಿಲ್ಲ. ನೀನು ನನ್ನನ್ನು ಹಂಗಿಸುವಂತಿದೆ. ಇಷ್ಟು ದಿನಗಳ ನಂತರ ನಾನಿಲ್ಲಿದ್ದೇನೆ. ನೀನು ವಾಗ್ದಾನ ಕೊಟ್ಟು ಹಲವು ಬಾರಿ ಬರಲಿಲ್ಲ. ನೀನು ಈ ವರೆಗೆ ಮದುವೆ ಮಾಡಿ ಕೊಂಡಿಲ್ಲವೆಂದು ಕೇಳಿರುವೆನು. ನೀನು...."

"ಅದೆಲ್ಲವೂ ನಿನ್ನನ್ನು ಹಂಗಿಸಲಿಕ್ಕಾಗಿ ಅಲ್ಲ. ಕಾಲೇಜಿನಲ್ಲಿ ಮನೋವಿಜ್ಞಾನ ಶಾಸ್ತ್ರದಲ್ಲಿ ಪ್ರಥಮ ತರಗತಿಯಲ್ಲಿ ತೇರ್ಗಡೆಯಾದ ನಿನಗೆ ಅರ್ಥವಾಗದಿದ್ದರೆ ನಾನೇನು ಮಾಡಲಿ?" ನಾನೆಂದೆ.

ಚಂಚಲೆಯು ಮಿಠಾಯಿಯೊಂದನ್ನು ತೆಗೆದು ನನ್ನ ಬಾಯಿಯ ಹತ್ತಿರ ಹಿಡಿದು "ಇದನ್ನು ನೀನು ತಿನ್ನಲೇಬೇಕು. ನನ್ನಾಣೆ ತಿನ್ನಬೇಕು" ಎಂದಳು.

ನಾನು ಮಿಠಾಯಿಯನ್ನು ತೆಗೆದು ಪುನಹ ಪ್ಲೇಟಿನಲ್ಲಿಟ್ಟು "ಇಲ್ಲ, ನಾನು ತಿನ್ನಲಾರೆ. ನನಗೆ ಹಸಿವಿದ್ದರೂ ಕೂಡ ತಿನ್ನಲಾರೆ. ನಿನ್ನಂಥಾ ಹೆಂಗಸಿನ ಆಣೆ, ಮಾತು, ಪ್ರೇಮ ಮತ್ತು ಈ ತೋರಿಕೆಯ ಆಡಂಬರ! "ಎ" ಯೊಡನೆ ಪ್ರೇಮ ಮಾಡಿ 'ಬಿ' ಯನ್ನು ಮದುವೆಯಾಗಿ 'ಸಿ' ಯೊಡನೆ ಜೀವನದಲ್ಲಿ ಸುಖವಿಲ್ಲವೆಂದು ಹೇಳುವ ಈ ಜಾತಿ...."

"ಸಾಕು ಮಾಡು ಸಹನೆಗೂ ಒಂದು ಮಿತಿಯಿದೆ. ನನ್ನ ಮನೆಗೆ ಬಂದು ನನ್ನ ಅಪಮಾನ ಮಾಡುತ್ತಿರುವೆ" ಆಕೆ ರೇಗಿ ನುಡಿದಳು.

"ನಿನ್ನ ಮನೆಗೆ ಬಂದು ಸತ್ಯ ನುಡಿಯಲೂ ಅತಂಕವಿದೆಯೇನು? ನನ್ನ ಈ ಸತ್ಯಪೂರಿತ ಮಾತುಗಳು ನಿನಗೆ ಅಪಮಾನವೆಂದು ತಿಳಿದೆ." ನಾನು ಮುಂದೆ ಮಾತಾಡಲಿಲ್ಲ. ನನ್ನ ಮಾತು ಹಾಗೂ ಸ್ವರವು ಸ್ವಲ್ಪ ಕಠಿಣವಾಗಿಯೇ ಇತ್ತು. ನಾನು ಆಕೆಯ ಬಳಿಗೆ ಹೋಗಿ ಆಕೆಯ ಕೈಯನ್ನು ಹಿಡಿದು ಹೇಳಿದೆ. "ನನ್ನ ಈ ವರ್ತನೆಯ ಬಗ್ಗೆ ಕ್ಷಮೆ ಕೇಳಬೇಕೆಂದು ನನಗನಿಸುತ್ತದೆ. ಹಾಗೆ ಮಾಡಿದರೆ ನನ್ನ ಹೃದಯದ ಭಾವನೆಗೆ ಸರಿಯಾಗಿ ವರ್ತಿಸಿದಂತಾಗದು. ನಿನ್ನ ಸಂತೋಷಕ್ಕಾಗಿ ನಾನು ವರ್ತಿಸಿದರೆ ನಾನು ಆತ್ಮವಂಚಕನಾಗುವೆನು. ಏಕೆಂದರೆ ನನಗಾಗಿ ನೀನು ಎಲ್ಲಿಯೂ ಸ್ಥಳವಿಟ್ಟಿಲ್ಲ. ಪ್ರೇಮಿಸುವೆನೆಂದು ಹೇಳಿ ಬೇರೆಯವರನ್ನು ಸೇರಿದೆ. ನನ್ನ ಜೀವನವನ್ನೇ ನಷ್ಟ ಮಾಡಿದೆ. ನೀನಾದರೂ ನಿನ್ನ ಜೀವನವನ್ನು ಹಾಳುಮಾಡಿಕೊಳ್ಳುತ್ತಿರುವೆ. ಈ ತೋರಿಕೆಯ ಪ್ರೀತಿ ಈ ವಿಡಂಬನೆಗೆ ಅರ್ಥವೇನಿದೆ?"

ಆಕೆಯು ತನ್ನ ಕೈಗಳನ್ನು ಕೊಡಹಿ ಕುರ್ಚಿಯಿಂದೆದ್ದು "ಜೀವನದಲ್ಲಿ ಎಲ್ಲರೂ ತಪ್ಪು ಮಾಡುತ್ತಾರೆ. ಅದಕ್ಕೆ ಪ್ರಾಯಶ್ಚಿತ್ತವಿಲ್ಲವೆ?" ಎಂದಳು.

ಅದನ್ನು ನೀನೇ ಯೋಚಿಸಬೇಕು. ಆದರೆ ಒಮ್ಮೆ ಚಂಚಲೆಯನ್ನು ನಾನು ನನ್ನ ಹೃದಯ ದೇವಿಯಾಗಿ ಪ್ರತಿಷ್ಠಿಸಿದ್ದೆ. ಆದರೆ ಆ ಚಂಚಲೆಯು ಮೃತಳಾಗಿರುವಳು"

"ನೀನು ಇಷ್ಟು ಕ್ರೂರ, ನಿರ್ದಯಿ ಎಂದಿನಿಂದ ಆದೆ?"

"ನಿನ್ನನ್ನೆ ನೀನು ಕೇಳಿಕೋ ಮಿಸೆಸ್. ಶ್ರೀನಿವಾಸ!" ನಾನೆಂದೆ. ಆಕೆ ಸಿಟ್ಟಿನಿಂದ "ನನ್ನನ್ನು ನನ್ನ ಭಾಗ್ಯಕ್ಕೆ ಬಿಡು. ಇಷ್ಟೊಂದು ಸಂತೋಷ ನನಗೆ ಕೊಟ್ಟದ್ದಕ್ಕೆ ಧನ್ಯವಾದಗಳು ನಮಸ್ತೆ." ಎಂದು ಹೇಳಿ ಹೊರಟು ಹೋಗಿ ಕಿಟಿಕಿ ಹತ್ತಿರ ನಿಂತು ಹೊರಗೆ ನೋಡ ತೊಡಗಿದಳು. ನಾನು ಮರುಮಾತಾಡದೆ ಮನೆಗೆ ವಾಪಾಸು ಬಂದೆ.

• • •

ಚಂಚಲೆಯು ತನ್ನ ಕೋಣೆಗೆ ಹೋಗಲು ತಿರುಗಿದಾಗ ಟೀ ಟೇಬಲಿನ ಮೇಲೆ ಕಾಲಿಟ್ಟು ಹಾಯಾಗಿ ಕುಳಿತ ತನ್ನ ಪತಿ ಶ್ರೀನಿವಾಸನನ್ನು ಕಂಡು ಚಕಿತಳಾದಳು.

'ನಿನಗೆ ಕಷ್ಟವಾಗದಿದ್ದರೆ ಒಂದು ಕಪ್ ಟೀ ಕೊಡು. ಕೂತು ಬಹಳ ಹೊತ್ತಾಯಿತು' ಶ್ರೀನಿವಾಸನೆಂದ.

'ನೀವು ಯಾವಾಗ ಬಂದಿರಿ. ಹಾಗಾದರೆ....'

'ನಾನು ಹೋಗಬೇಕಿತ್ತು ಹೋಗಲಿಲ್ಲ. ನಾನು ಖುದ್ದಾಗಿ ಈ ಜೀವನದಲ್ಲಿ ಯಾರೊಡನೆಯೂ ಪ್ರೇಮ ಮಾಡಿಲ್ಲ. ಆದರೆ ಪುರಾತನ ಪ್ರೇಮಿಗಳಿಬ್ಬರ ಆಟ ನೋಡುವಾ ಎಂದು ಉಳಿದು ಬಿಟ್ಟೆ'.

'ನೀವು ಕಳ್ಳರಂತೆ ನಮ್ಮ ಮಾತನ್ನು ಕೇಳುತ್ತಿದ್ದಿರಬೇಕು' ಆಕೆ ಅಳತೊಡಗಿದಳು.

'ಕಳ್ಳನ ಹಾಗೆ ಅಲ್ಲ ಯಜಮಾನೀ ಸಿರಿವಂತನೆಡೆಗೆ ಭಿಕ್ಷುಕನು ನೋಡುವಂತೆ ಆಕೆ ಮಾತಾಡದ್ದನ್ನು ನೋಡಿ ಶ್ರೀನಿವಾಸನು ನುಡಿದನು. "ಈ ಕಣ್ಣೀರು ಕೂಡ ನಿನ್ನ ಸಹಾಯಕ್ಕೆ ಬಾರದು. ಅಸಹಾಯದ ಕಷ್ಟಕ್ಕೊಳಗಾದ ನಿರ್ಬಲ, ನಿಸ್ಸಹಾಯ ಹೆಂಗಸಿನ ಕಣ್ಣೀರು ಆಕೆಯನ್ನು ರಕ್ಷಿಸಬಲ್ಲುದು. ಆದರೆ ಎಂ. ಎ. ಪಾಸಾಗಿ ಆಧುನಿಕ ನಾಗರೀಕತೆಯ ಕಣ್ಣೀರು ಎಷ್ಟು ಜನರನ್ನು ಹಾಳುಮಾಡಿದೆ? ನಿನ್ನ ಕಣ್ಣೀರು ಯಾವ ದುಃಖಕ್ಕಾಗಿ? ನನ್ನ ಹೃದಯದ ಮಾತನ್ನು ಹೇಳುತ್ತೇನೆ. ಅನೇಕ ವೇಳೆ ನೀನು ನನ್ನನ್ನು ಕೇಳಿರುವೆ. ಸಾಕಷ್ಟು ಪ್ರೇಮವೇಕೆ ಮಾಡುವದಿಲ್ಲವೆಂದು! ನಿನ್ನ ಹೆಸರು, ವಿದ್ಯೆ, ಮೊದಲಾದುವುಗಳನ್ನು ಕೇಳಿ ಅನೇಕ ಭವಿಷ್ಯದ ಕಲ್ಪನೆಗಳನ್ನು ಮಾಡಿಕೊಂಡಿದ್ದೆನು. ನಿನ್ನನ್ನು ಪಡೆದು ನಾನು ಭಾಗ್ಯವಂತನೆಂದು ನೆನೆಸಿದ್ದೆ. ಆದರೆ ನಿನ್ನ ಕಪಟಾಚರಣೆ, ಕೌಶಲ್ಯ ಪೂರ್ಣ ಅಭಿನಯ ಸರ್ವವನ್ನೂ ನಾಶಗೊಳಿಸಿತು. ನೀನು ನನಗೆ ನಿನ್ನ ಹಣ ಸಮಾನ ಶರೀರವನ್ನಿತ್ತೆ. ಪ್ರೇಮವೆಂದೆ. ಆದರೆ ನಿನ್ನ ಹೃದಯ ಬೇರೆಡೆ ಇತ್ತು. ಕಾಮಾಂಧನಾದ ನಾನು ನಿನ್ನ ಶರೀರದ ಸುಖ ಪಡೆದೆ. ಆದರೆ ನಿನ್ನ ಕೃತ್ರಿಮ ಜೀವನದ ಅರಿವಾಗಲು ಬಹು ದಿನಗಳು ಹಿಡಿಯಲಿಲ್ಲ.

ನನಗೆ ಜಿಗುಪ್ಸೆ ಬಂತು. ಮದ್ಯ ಕುಡಿಯಲು ತೊಡಗಿದೆ. ಜನರು ನನ್ನನ್ನು ಅನೀತಿಯವನೆಂದು ಇಂದೂ ಕರೆಯುತ್ತಿದ್ದಾರೆ. ಆದರೆ ಸಮಾಜದ ದೃಷ್ಟಿಯಲ್ಲಿ ನನ್ನ ಮನೆಯನ್ನು ಹಾಳುಗೆಡಹಿದ ನೀನು ಸಾಧ್ವಿ, ನಿರ್ದೋಷಿ, ಅಬಲೆ ಎಂದೆನಿಸಿರುವೆ. ಎಲ್ಲರ ಸಹಾನುಭೂತಿ ನಿನಗಿದೆ.

ಚಂಚಲೆಯು ರೋಧಿಸುತ್ತಾ ತನ್ನ ಕೋಣೆಗೆ ಹೊರಡಲುದ್ಯುಕ್ತಳಾದಳು. ಶ್ರೀನಿವಾಸನು ಆಕೆಯನ್ನು ನಿಲ್ಲಿಸಿ "ನಿಲ್ಲು ಚಂಚಲಾ, ನನ್ನ ಮಾತು ಮುಗಿಯಲಿಲ್ಲ. ಅಳುವುದರಿಂದ ಏನೂ ಆಗಲಾರದು, ನೀನು ನನ್ನ ಮಾತ್ರವಲ್ಲ ಅನೇಕ ಪ್ರಾಣಿಗಳ ಹೃದಯವನ್ನು ಒಡೆದು ಹಾಕಿರುವೆ. ಒಡೆದ ಹೃದಯವನ್ನು ಒಂದುಗೂಡಿಸುವ, ಕಳೆದ ನಕ್ಷತ್ರವನ್ನು ಪುನಃ ಜೋಡಿಸುವ ಆಸ್ಪದ ಇಲ್ಲಿಲ್ಲ. ಹಿಂದೂದೇಶವು ಯೂರೋಪು, ಅಮೇರಿಕಾಗಳಂತಲ್ಲ. ನಮ್ಮ ಸಮಾಜ, ನಮ್ಮ ಸಂಪ್ರದಾಯ, ರೂಢಿ ಪದ್ಧತಿಗಳು ಜೀವನ ಅಂತ್ಯದವರೆಗೆ. ಜೀವನದ ಒಂದು ಕ್ಷಣದಲ್ಲಿ ತಪ್ಪು ಹೆಜ್ಜೆಯಾದರೆ ಅದರ ಕಳಂಕ ಜೀವನಾಂತ್ಯದವರೆಗೆ. ಶ್ರೀನಿವಾಸನು ಸಿಗರೇಟೊಂದನ್ನು ತೆಗೆದು ಹಚ್ಚಿ ಹೊರಗೆ ಹೊರಟು ಹೋದನು.

• • •

ಅಂದು ದೀಪಾವಳಿ ಹಬ್ಬ. ನಾನು ಹೊರಗೆ ಹೊರಡಲು ಉದ್ಯುಕ್ತನಾಗಿದ್ದೆನು. ಟೆಲಿಫೋನ್ ಗಂಟೆ ಶಬ್ದವಾಯಿತು ರಿಸೀವರನ್ನು ತೆಗೆದು ಕೊಂಡೆನು. "ಯಾರು ಶಂಕರನೆ! ನಾನು ಶ್ರೀನಿವಾಸ. ಸಹೋದರ ಓಡಿ ಬಾ. ಚಂಚಲೆಯ ಸೀರೆಗೆ ಬೆಂಕಿ ಹತ್ತಿ ಆಕೆ ಬೆಂದು ಹೋಗಿದ್ದಾಳೆ. ಬಹುಶಃ ಬದುಕಲಾರಳು. ನೀನು ಬೇಗ...." ನಾನು ಮುಂದೆ ಕೇಳಲಿಲ್ಲ. ರಿಸೀವರನ್ನು ಕೆಳಗಿಟ್ಟು ಶ್ರೀನಿವಾಸನ ಮನೆಗೆ ಓಡಿದೆ. ಜನರು ತುಂಬಿದ್ದರು. ಶ್ರೀನಿವಾಸನೊಡನೆ ಡಾಕ್ಟರರು ಹೇಳುತ್ತಿದ್ದರು. "ನಾನು ಡೆತ್ ಸರ್ಟಿಫಿಕೇಟು ಕೊಡಲಾರೆ. ಆರೋಗ್ಯ ಇಲಾಖಾಧಿಕಾರಿಗಳಿಂದ ತೆಗೆದುಕೊಳ್ಳಿರಿ" ಎಂದು. ನನ್ನನ್ನು ಕಂಡು ಶ್ರೀನಿವಾಸನು ಓಡಿ ಬಂದನು. "ನೋಡು ಶಂಕರ, ಸರ್ಟಿಫಿಕೇಟು ಕೊಡದೆ ನನ್ನನ್ನು ಡಾಕ್ಟರರು ಗಂಡಾಂತರಕ್ಕೆ ತಳ್ಳುವಂತಿದ್ದಾರೆ. ನಿನಗೆ ಬೇಕಾದಷ್ಟು ಡಾಕ್ಟರರ ಪರಿಚಯವಿದೆ. ಒಂದು ಸರ್ಟಿಫಿಕೇಟ್ ಕೊಡಿಸಿ ನನ್ನ ತೊಂದರೆ ನಿವಾರಿಸು." ಚಂಚಲೆಯನ್ನು ಬಿಳೀ ವಸ್ತ್ರದಿಂದ ಸುತ್ತಿದ್ದರು. ಆಗ ತಾನೆ ನಂದಿದ ದೀಪದಲ್ಲಿ ಹೊಗೆಯಾಡುತ್ತಿರುವಂತೆ ಆಕೆಯ ಮುಖದಲ್ಲಿ ಜೀವನ ಚಿಹ್ನೆಗಳು ಇನ್ನೂ ತೋರುತ್ತಿದ್ದುವು. ನನಗೆ ಅಲ್ಲಿ ನಿಲ್ಲಲಾಗಲಿಲ್ಲ. ಮನೆಗೆ ಹಿಂತಿರುಗಿದೆ. ರಾತ್ರಿಯಾಗಿತ್ತು. ಎಲ್ಲೆಡೆಯೂ ದೀಪಾವಳಿಯ ನಿಮಿತ್ತ ದೀಪಗಳು ಬೆಳಗುತ್ತಿದ್ದುವು. ನನ್ನ ಹೃದಯದ ದೀಪ ಮಾತ್ರ ಆರಿ ಅಂಧಕಾರ ಕವಿದಿತ್ತು.

"ಶಿಸ್ತು, ನ್ಯಾಯಗಳನ್ನು ನೆಲೆಗೊಳಿಸುವೆವು"

ಚೀಫ್ ಕಮಿಷನರ ಪ್ರಾರಂಭ ಭಾಷಣ

ಕೊಡಗು ಶಾಸನ ಸಭೆಯ ಮೂರನೇ ಅಧಿವೇಶನಕ್ಕೆ ನಿಮ್ಮನ್ನು ಸ್ವಾಗತಿಸಲು ಆನಂದಪಡುತ್ತೇನೆ. ಕೊಡಗಿನ ಬಜೆಟ್ ಮತ್ತಿತರ ಕಾರ್ಯಭಾರಗಳು ನಿಮ್ಮ ಮುಂದಿವೆ. ನಾವು ಪ್ರಥಮ ಒಂದು ವರ್ಷದ ಸು ಆಡಳಿತ ಅವಧಿಯನ್ನು ಪೂರೈಸಿರುವೆವು. ಈ ವರ್ಷವು ಒಟ್ಟಾರೆ ಜಯಪ್ರದವಾಗಿದೆಯೆಂದು ಹೇಳಲು ಸಂತೋಷವಾಗುತ್ತದೆ. ಇದರ ಕೀರ್ತಿಯು ಈ ಶಾಸನ ಸಭೆಗೂ ಮಂತ್ರಿಗಳಿಗೂ ಸಲ್ಲಬೇಕು.. ಮಂತ್ರಿಗಳ ಅವಿರತ ಪರಿಶ್ರಮ ವ್ಯಕ್ತಿತ್ವ ಮೊದಲಾದುವು ಈ ಯಶಸ್ಸಿಗೆ ಕಾರಣಗಳು. ಆಡಳಿತವು ಕೇಂದ್ರದಿಂದ ಕೊಡಗನ್ನು ಸಂದರ್ಶಿಸಿದ ಮಂತ್ರಿಗಳ ಪ್ರಶಂಸೆಯನ್ನು ಪಡೆದುದಲ್ಲದೆ ಈ ವಿಷಯ ಜನತಾ ಸಭೆಯಲ್ಲಿ ಹಲವು ಬಾರಿ ಉಲ್ಲೇಖವಾಗಿದೆ. ಈಗ ನಿಮಗೆ ಕೊಡಗಿನ ಆದಾಯ ವೆಚ್ಚಗಳನ್ನು ಪರಿಶೀಲಿಸುವ, ಆಡಳಿತ ಮತ್ತಿತರ ವಿಚಾರಗಳನ್ನು ವಿವೇಚಿಸುವ ಸಂದರ್ಭವಿದೆ. ನಿಮ್ಮ ಈ ಕಾರ್ಯಕ್ರಮದಲ್ಲಿ ನಮ್ಮ ಪರಂಪರೆಗನುಗುಣವಾಗಿ ಕರ್ತವ್ಯದ ಜವಾಬ್ದಾರಿಯನ್ನರಿತು ವರ್ತಿಸುವಿರೆಂದು ನಂಬಿರುವೆನು.

ಈ ಸಂದರ್ಭದಲ್ಲಿ ಕೇಂದ್ರದ ಮಂತ್ರಿಗಳಾಗಿದ್ದ ನಮ್ಮ ರಾಜ್ಯಘಟನೆಯ ನಿರ್ಮಾಣ ಕರ್ತರುಗಳೊಬ್ಬರಾಗಿದ್ದ ಗೋಪಾಲಸ್ವಾಮಿ ಐಯ್ಯಂಗಾರರ ನಿಧನದ ವಿಚಾರ ಎತ್ತುವುದು ನನ್ನ ಕರ್ತವ್ಯವಾಗಿದೆ. 'ಸಿ' ವರ್ಗದ ಸಂಸ್ಥಾನಗಳ ಆಕೃತಿಯನ್ನು ರೂಪಿಸಿ ಸುಧಾರಣೆ ದೊರೆಯುವಂತೆ ಆಗಲು ಅವರ ಪರಿಶ್ರಮವು ಮೂಲಕಾರಣ. ಅಂತರಾಷ್ಟ್ರೀಯ ರಂಗದಲ್ಲಿ ಆಧುನಿಕ ರಷ್ಯಾದ ನಿರ್ಮಾತರಾದ ಮಾರ್ಷಲ್ ಸ್ಟಾಲಿನರ ನಿಧನದ ವಿಚಾರವನ್ನೂ ಹೇಳದಿರಲಾರೆನು.

ಪ್ರಾರಂಭದಲ್ಲಿಯೇ ನಮ್ಮ ದೇಶದ ಆಹಾರ ಪರಿಸ್ಥಿತಿ ಚೆನ್ನಾಗಿದ್ದು ಸುಮಾರು ಒಂದು ವರ್ಷದ ಆದಾಯದಷ್ಟು ಶಿಲ್ಕು ಉಳುವರಿಯಿದ್ದುದರಿಂದ ಆಡಳಿತದ ಅನುಕೂಲತೆ ಚೆನ್ನಾಗಿತ್ತು. ಆದರೆ ವರ್ಷ ಪ್ರಾರಂಭದಲ್ಲಿ ಮಳೆಯು ನಮಗೆ ಸಹಾಯಕವಾಗಿರಲಿಲ್ಲ. ಮಳೆಗಾಲವು ಕೇವಲ ಬರಗಾಲವನ್ನು ತಪ್ಪಿಸಿತೇ ವಿನಹಾ ಅವ್ಯವಸ್ಥಿತ ಮಳೆಯ ಕಾರಣ ಬೆಳೆಯು ತುಂಬಾ ಹಾಳಾಯಿತು. ಹಿಂದಿನ ಯಾವ ವರ್ಷಗಳಿಗಿಂತಲೂ ಬೆಳೆ ಕಡಿಮೆಯಾದ ಕಾರಣ ಈ ವರ್ಷ ನಮ್ಮ ಉಳುವರಿ ಬತ್ತ ಕೇವಲ ೬೦೦೦ ಟನ್ನುಗಳಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ಮಳೆಗಾಲದ ಅಭಾವದಿಂದಾಗಿ ಇತರ ಬೆಳೆಗಳೂ ಹಾಳಾದವು. ಆದರೆ ಈ ವರ್ಷ ಒಳ್ಳೆ ಮಳೆ ದೊರೆತರೆ ಈ ನಷ್ಟಗಳನ್ನೆಲ್ಲಾ ಭರ್ತಿಮಾಡಿಕೊಂಡು ನಮ್ಮ ಮುಂದಿರುವ ಪಂಚವಾರ್ಷಿಕ ಯೋಜನೆ, ಸಾಮೂಹಿಕ ವಿಕಾಸ ಯೋಜನೆಗಳನ್ನು ಸಾಧಿಸಿ ಕೊಡಗಿನ ವ್ಯವಸಾಯಿಕ ಮತ್ತು ಸಮಗ್ರ ಅಭಿವೃದ್ಧಿಯ ಪಥದಲ್ಲಿ ಮುಂದಡಿ ಇಡಲಾಪೆವು.

ವ್ಯವಸಾಯ ಮತ್ತು ಫಾರೆಸ್ಟು ಇವೆರಡು ಕೊಡಗಿನ ಆರ್ಥಿಕ ಅಭಿವೃದ್ಧಿಯ ಮೂಲ ತಳಹದಿಗಳು. ಕೊಡಗಿಗೆ ಸಾಕಷ್ಟು ಮಳೆ ಇದ್ದರೂ ಕೆರೆ, ಕಾಲುವೆ, ಕಟ್ಟೆ ಮೊದಲಾದುವುಗಳು ಅತೀ ಅಗತ್ಯವೆಂಬುದು ಅನುಭವದಿಂದ ಗೊತ್ತಾಗಿದೆ. ನನ್ನ ಸರಕಾರವು ಈ ನೀರಾವರಿ ಯೋಜನೆಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಟ್ಟು ಹೆಚ್ಚು ಬೆಳೆಯಿರಿ, ಪಂಚವಾರ್ಷಿಕ ಮತ್ತು ಸಾಮೂಹಿಕ ವಿಕಾಸ ಯೋಜನೆಗಳಲ್ಲಿ ಯೋಗ್ಯ ಏರ್ಪಾಡು ಮಾಡಿರುವದಲ್ಲದೆ ಅನೇಕ ಕೆಲಸಗಳನ್ನು ಕೈಕೊಳ್ಳಲಾಗಿದೆ. ಪಂಚವಾರ್ಷಿಕ ಮತ್ತು ಸಾಮೂಹಿಕ ವಿಕಾಸ ಯೋಜನೆಗಳಲ್ಲಿ ವ್ಯವಸಾಯದ ಶಾಸ್ತ್ರೀಯ ಅಭಿವೃದ್ಧಿಯ ಬಗ್ಗೆ ಪ್ರಯತ್ನಿಸುವುದು ನನ್ನ ಸರಕಾರದ ಗುರಿಯಾಗಿದೆ. ಕೊಡಗು ಹಿಂದೂದೇಶದ ಒಟ್ಟು ಉತ್ಪತ್ತಿ ೫೧೦೦೦ ದಲ್ಲಿ ಸುಮಾರು ೯೦೦೦ ಟನ್ನುಗಳ ವರೆಗೆ ಕಾಫಿ ಬೆಳೆಯುತ್ತಿರುವುದರಿಂದ ಕಾಫಿಯ ಬೆಲೆಯನ್ನು ಇಳಿಸುವ ಇಂಡಿಯಾ ಸರಕಾರದ ಸೂಚಿತವಾದ ನಿರ್ಣಯಕ್ಕೆ ತನ್ನ ವಿರೋಧವನ್ನು ಪ್ರಕಟಿಸಿ ಅಭಿಪ್ರಾಯ ಕೊಟ್ಟಿದೆ.

ಹೆಚ್ಚು ಬೆಳೆಯಿರಿ ಯೋಜನೆಯ ಬಗ್ಗೆ ಸರಕಾರವು ಸಾಕಷ್ಟು ಮುತುವರ್ಜಿಯಿಂದ ಕೆಲಸ ಮಾಡುತ್ತಿದೆ. ಕೃಷಿ ಪಂಡಿತ ಶ್ರೀ ಸಂಗಯ್ಯನವರು ಅಖಿಲ ಭಾರತ ಕ್ರಾಪ್ ಕಾಂಪಿಟಿಶನ್ ಬಹುಮಾನವನ್ನು ಪಡೆದುದು ಹೆಮ್ಮೆಯ ವಿಚಾರ. ಈ ವರ್ಷ ಕೊಡಗಿನ ಮಹನೀಯರೊಬ್ಬರು ಸಂಗಯ್ಯನವರನ್ನು ಮೀರಿ ಬೆಳೆಸಿದ್ದಾರೆ. ಅದರೆ ಬೇರೆ ಇದಕ್ಕಿಂತಾ ಹೆಚ್ಚಿಗೆ ಬೆಳೆಸಿದವರಿದ್ದಾರೆಂದು ಗೊತ್ತಾಗಿದೆ. ಇದೆಲ್ಲವೂ ಹೆಚ್ಚು ಬೆಳೆಯುವ ಬಗ್ಗೆ ಸರಕಾರವು ಎಷ್ಟು ಶ್ರಮ ವಹಿಸಿದೆಯೆಂಬುದನ್ನು ಸೂಚಿಸುತ್ತದೆ

ನನ್ನ ಸರಕಾರವು ಪಂಚವಾರ್ಷಿಕ ಯೋಜನೆಯನ್ನು ವಿಸ್ತರಿಸಿ ಅನೇಕ ರಾಷ್ಟ್ರರಚನಾ ಕಾರ್ಯಗಳಿಗೆ ಧನವದಗಿಸಿದೆ. ಈ ಯೋಜನೆಯು ಕಡೇ ಮಂಜೂರಾತಿಯನ್ನು ಪಡೆಯುವ ಮೊದಲೇ ಅನೇಕ ದೊಡ್ಡ ಕೆಲಸಗಳು ಕೈಗೊಳ್ಳಲ್ಪಟ್ಟಿದ್ದುವು. ನಿಶ್ಚಿತ ಅವಧಿಯೊಳಗೆ ಈ ಯೋಜನೆಯನ್ನು ಜಾರಿಗೆ ತರಲು ಯೋಗ್ಯ ಹಣ ವದಗಿಸಿ ಕೆಲಸ ನಡೆಸುವದು ಸರಕಾರದ ಕರ್ತವ್ಯವಾಗಿದೆ.

ಕೊಡಗು ಸಾಮೂಹಿಕ ವಿಕಾಸಯೋಜನೆಯು ಆಕ್ಟೋಬರ್ ೨ ರಲ್ಲಿ ಪ್ರಾರಂಭವಾಯಿತು. ಇದು ೩೦೦ ಚದರ ಮೈಲುಗಳಷ್ಟು ವಿಸ್ತೀರ್ಣ, ೭೫೦೦೦ ಜನಸಂಖ್ಯೆ ಹಾಗೂ ೧೧೮ ಗ್ರಾಮಗಳನ್ನೊಳಗೊಂಡಿದೆ ಈ ಭಾಗದ ಸರ್ವತೋಮುಖ ಏಳಿಗೆಯನ್ನು ಸಾಧಿಸುವದೇ ಈ ಯೋಜನೆಯ ಗುರಿ ಈ ಯೋಜನೆಯು ಈಗಾಗಲೇ ಜನತೆಯ ದೃಷ್ಟಿಯನ್ನು ತನ್ನೆಡೆಗೆ ಸೆಳೆದು ಜಯದ ಮಾರ್ಗದಲ್ಲಿ ಮುಂದೆ ಸಾಗುತ್ತಿದೆ. ಅನೇಕ ಮಹನೀಯರು ಉದಾರ ಮನಸ್ಸಿನಿಂದ ಧನ ಸಹಾಯ ಮಾಡಲು ಮುಂದೆ ಬಂದಿದ್ದಾರೆ.

ಟಿಂಬರಿನ ಬೆಲೆಯು ಇತ್ತೀಚೆಗೆ ಕಳಮುಖವಾಗಿದೆ. ಕೊಡಗಿನ ಫಾರೆಸ್ಟನ್ನು ಶಾಸ್ತ್ರೀಯ ರೀತಿಯಲ್ಲಿ ಉಪಯೋಗಿಸುವ ಮಹತ್ವವನ್ನು ಸರಕಾರವು ತಿಳಿದು ಇದಕ್ಕೆ ಯೋಗ್ಯ ಹಣವಿಟ್ಟಿದೆ. ಕೊಡಗಿನ ಎಕ್ಸೈಸ್ ನೀತಿಯು ಹಿಂದಿನ ವರ್ಷದಂತೆಯೇ ಮುಂದರಿಯುವುದು. ಪಾನನಿರೋಧದ ಯಶಸ್ವಿತೆಯ ವಿಚಾರದಲ್ಲಿ ಹೊರಗೆ ಭಿನ್ನಾಭಿಪ್ರಾಯಗಳು ತೋರಿಬರುವದರಿಂದ ಕೊಡಗು ಅನುಸರಿಸುತ್ತಿರುವ ಪಾರ್ಶ್ವಪಾನನಿರೋಧವೇ ಸಮರ್ಪಕವೆಂದು ತೋರುತ್ತಿದೆ.

ಹೊಸ ಕಾಲೇಜ್ ಕಟ್ಟಡವು ಪೂರ್ತಿಯಾಗುತ್ತಿದೆ. ಈ ವರ್ಷ ಈ ಸಂಸ್ಥೆಯು ಪ್ರಥಮ ದರ್ಜೆಯ ಕಾಲೇಜಾಗುವದು. ಇದಕ್ಕಾಗಿ ಪ್ರತಿ ವರ್ಷ ೧॥ ಲಕ್ಷ ರೂಪಾಯಿ ಖರ್ಚು ಮಾಡಲಾಗುವುದು. ಸಾಮಾಜಿಕ ಕೆಲಸಗಾರರ ತರಬೇತಿಗಾಗಿ ಜನತಾ ಕಾಲೇಜೊಂದನ್ನು ಸರಕಾರ ತೆರೆಯು

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್,
ಸ್ಥಾಪನೆ ೧೯೦೬] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಕನ್ನಡ)

ನೀವು ಬಲ್ಲಿರಾ ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ದಾಖ್ಲೆ. ಈಗ ತಾನೆ ಸಂದುಹೋದ ೧೯೫೨ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕಾರ್ಪೊರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕಾರ್ಪೊರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — ೪

ಮಡಿಕೇರಿ, ವಿರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED

ಲಿರುವುದು. ಅಲ್ಲದೆ ಮೂಲ ಶಿಕ್ಷಣ ತರಬೇತು ಕಾಲೇಜೊಂದನ್ನೂ, ಎರಡು ಮೂಲ ಶಿಕ್ಷಣ ಶಾಲೆಗಳನ್ನೂ, ಗ್ರಾಮ ಕೇಂದ್ರಗಳಲ್ಲಿ ವಾಚನಾಲಯ ಏರ್ಪಾಡನ್ನೂ ಮಾಡಲಿರುವೆವು. ನನ್ನ ಸರಕಾರವು ಕೊಡಗು ಜಿಲ್ಲಾ ಬೋರ್ಡು ಶಾಲೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಅಧ್ಯಾಪಕರಿಗೆ ಹೆಚ್ಚಿನ ವೇತನ ಕೊಡುವ ನಿರ್ಣಯ ಮಾಡಿದೆ. ಈ ವರ್ಷ ವಯಸ್ಕರ ಶಿಕ್ಷಣ ಕೆಲಸ ಸರಿಯಾಗಿ ನಡೆದಿದೆ. ಸಾಮಾಜಿಕ ಶಿಕ್ಷಣವೆಂಬುದು ದಿನನಿತ್ಯದ ಮಾತಾಗಿದೆ. ಈ ದೃಷ್ಟಿಯಿಂದ ಕಾಲೇಜು ಮತ್ತು ಹೈಸ್ಕೂಲು ವಿದ್ಯಾರ್ಥಿಗಳು ಕೆಲಸದ ಗೌರವವನ್ನರಿತು ದುಡಿಯುವ ಅವಕಾಶ ಮಾಡಲಾಯಿತು. ಇದು ಪ್ರೋತ್ಸಾಹ ಕರವಾಗಿ ಅವರು ಮಾಡಿದ ರಸ್ತೆ, ಶುಚಿತ್ವ ಮೊದಲಾದ ಕೆಲಸಗಳು ಹೊಗಳಲರ್ಹವಾಗಿವೆ. ನೇಶನಲ್ ಕೇಡೆಟ್ ಕೋರಿಗಾಗಿ ಹೆಚ್ಚಿನ ಹಣವಿಡಲಾಗಿದೆ.

ವೈದ್ಯ ಇಲಾಖೆಗೆ ಹೆಚ್ಚಿನ ಹಣವಿಡಲು ತನ್ನ ಸರಕಾರ ಹಿಂಜರಿಯಲಿಲ್ಲ. ವೈದ್ಯಕೀಯ ಪಥಕಗಳು, ಗ್ರಾಮಾಂತರ ಆಸ್ಪತ್ರೆಗಳು, ಕುಡಿಯುವ ನೀರು, ಶುಚಿತ್ವ ಮೊದಲಾದ ಬಗ್ಗೆ ಮುಂದಿರುವ ಯೋಜನೆಗಳಲ್ಲಿ ವಿಸ್ತೃತ ವ್ಯವಸ್ಥೆ ಮಾಡಲಾಗಿದೆ. ತಾ. ೧-೪-೫೩ ರಿಂದ ಸರಕಾರವು ಜಿಲ್ಲಾ ಬೋರ್ಡು ಆಸ್ಪತ್ರೆ ಮತ್ತು ಅದಕ್ಕೆ ಸಂಬಂಧಿಸಿದ ಉದ್ಯೋಗಸ್ಥರನ್ನು ತನ್ನ ಅಧೀನಕ್ಕೆ ತೆಗೆದುಕೊಂಡು ಹೆಚ್ಚಿನ ವೇತನ ಕೊಡುವದು. ಕಿವಿ, ಮೂಗು, ಮೊದಲಾದ ಚಿಕಿತ್ಸೆಯ ಬಗ್ಗೆ ಸರಕಾರವು ಡಾಕ್ಟರರೊಬ್ಬರಿಗೆ ತರಬೇತು ಕೊಡಿಸಿದೆ. ಸೋಮವಾರಪೇಟೆ ಆಸ್ಪತ್ರೆಗೆ ಲೇಡಿ ಡಾಕ್ಟರರ ಏರ್ಪಾಡು ಮಾಡಲಾಗಿದೆ. ನರ್ಸುಗಳ ಮತ್ತು ನಾಲ್ಕನೆ ದರ್ಜೆಯ ಉದ್ಯೋಗಿಗಳಿಗೆ ವಸತಿ ಸೌಕರ್ಯದ ಏರ್ಪಾಡು ಮಾಡಲಾಗುತ್ತಿದೆ. ಮಲೇರಿಯಾ ನಿವಾರಣಾ ಕೆಲಸ ಚೆನ್ನಾಗಿ ನಡೆದಿದೆ.

ಕೊಡಿಗೆಯಲ್ಲಿ ಪ್ರಥಮ ದರ್ಜೆಯ ಡೈರಿಫಾರಂಮನ್ನು ತೆರೆದು ಹಾಲು ಸರಬರಾಯಿ ಮಾಡುವ ಪ್ರಯತ್ನ ನಡೆದಿದೆ. ಕೃತಕ ಗರ್ಭದಾನದ ಕೇಂದ್ರವು ಸರಿಯಾಗಿ ಕೆಲಸ ಮಾಡುತ್ತಿದೆ. ಕೋಳಿ ಸಾಕುವ ವಿಚಾರದಲ್ಲಿ ಸರಕಾರವು ಹೆಚ್ಚು ಆಸಕ್ತಿ ವಹಿಸಿದೆ. ಈ ಬಗ್ಗೆ ದೊಡ್ಡದಾದ ಕೋಳಿ ಸಾಕುವ ಕೇಂದ್ರವೊಂದನ್ನು ತೆರೆಯಲಿದೆ. ಕಾಪೂರು ಕೇ ಗ್ರಾಮಸ್ಥರು ಒಂದೇ ವರ್ಷದಲ್ಲಿ ಸುಮಾರು ಹತ್ತು ಸಾವಿರ ಬೆಲೆಯ ಮೊಟ್ಟೆ, ಕೋಳಿ ಮಾರಿದ್ದಾರೆಂಬುದು ಈ ಯೋಜನೆಯ ಯಶಸ್ವಿತೆಯನ್ನು ತೋರಿಸುವದು. ಮೀನು ಸಾಕುವದು, ಜೇನು ಸಾಕುವದು ಮೊದಲಾದುವುಗಳು ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಪ್ರಾಶಸ್ತ್ಯ ಪಡೆಯುವವು.

ಕೊಡಗಿನಲ್ಲಿ ಗುಡಿ ಕೈಗಾರಿಕೆಗಳನ್ನು ತೆರೆಯುವ ಯೋಜನೆಯೂ ಇದೆ. ಆದರೆ ಸುಲಭ ದರದಲ್ಲಿ ವಿದ್ಯುಚ್ಛಕ್ತಿ ದೊರೆಯದಿದ್ದರೆ ಕೈಗಾರಿಕೆ ಮುಂದರಿಯಲಾರದು. ಅದ್ದರಿಂದ ಈ ಸರಕಾರವು ಮೈಸೂರು ಸರಕಾರದೊಡನೆ ವಿದ್ಯುಚ್ಛಕ್ತಿಯ ಮಾತು ಕತೆ ನಡೆಸಿದೆ. ಇದಕ್ಕಾಗಿ ಇಂಡಿಯಾ ಸರಕಾರವು ಮೈಸೂರಿಗೆ ೩೦ ಲಕ್ಷ ಸಾಲಕೊಡಲೊಪ್ಪಿದೆ. ಈ ಮಧ್ಯೆ ಬರಪೊಳೆ ಯೋಜನೆಯ ಬಗ್ಗೆ ಪರಿಶೀಲನೆಯೂ ನಡೆದಿದೆ. ಶ್ರೀಗಳಾದ ನರಸಿಂಹಯ್ಯ, ಡಾ. ಥಾಕರ್ ಇವರು ಮಾಡಿದ ಪ್ರಥಮ ಪರಿಶೀಲನೆಯ ಮೇರೆ ಇಡೀ ಹಿಂದೂಸ್ಥಾನದಲ್ಲಿ ಪ್ರತೀ ಕಿಲೋವಾಟಿಗೆ ಅತೀ ಕಡಿಮೆ ಖರ್ಚಿನಿಂದ ವಿದ್ಯುತ್ ಉತ್ಪಾದಿಸುವ ಸಾಧ್ಯತೆ ಇಲ್ಲಿದೆಯೆಂಬುದನ್ನು ಕೇಂದ್ರ ಸರಕಾರಕ್ಕೆ ಮನದಟ್ಟು ಮಾಡಲಾಗಿದ್ದು ಕೇಂದ್ರ ಸರಕಾರದ ಆಜ್ಞೆಯಂತೆ ಈ ಯೋಜನೆಯ ವಿಸ್ತೃತ ಪರಿಶೀಲನೆಯನ್ನು ಕೈಗೊಂಡಿದೆ.

ಸಿವಿಲ್ ವರ್ಕ್ಸ್‌ಗಾಗಿ ಈ ವರ್ಷ ತುಂಬಾ ಹಣವಿಡಲಾಗಿದೆ. ಕೇಂದ್ರದಿಂದ ಪಿ. ಡಬ್ಲ್ಯೂ. ಡಿ. ಇಲಾಖೆಯ ಹಿಡಿತವನ್ನು ಈ ವರ್ಷ ಸ್ಥಳೀಯ ಸರಕಾರವು ತೆಗೆದುಕೊಳ್ಳಲಿರುವದು. ಸಹಕಾರಿ ಪರಿಶೀಲನಾ ಸಮಿತಿಯ ಕೆಲಸ ಪೂರ್ತಿಯಾಗಿದ್ದರೂ ಅವರ ವರದಿಯನ್ನು ಕಾಯಲಾಗಿದೆ. ಹಿಂದುಳಿದ ಪಂಗಡದವರ ಹಿತಕ್ಕಾಗಿ ತನ್ನ ಕಾರ್ಯಕ್ಷೇತ್ರವನ್ನು ನನ್ನ ಸರಕಾರವು ವಿಸ್ತರಿಸುತ್ತಿದೆ. ಅವರಿಗೆ ಧರ್ಮಾರ್ಥ ವಿದ್ಯೆ ಮತ್ತಿತರ ಅನುಕೂಲತೆಗಳನ್ನು ಕೊಡಲಾಗುತ್ತಿದೆ. ತಿತಿಮತಿಯಲ್ಲಿ ಒಂದು ಶಾಲೆ ತೆರೆದು, ಕುಟ್ಟ ಮತ್ತು ಚೆಟ್ಟಳ್ಳಿ(?) ತ್ತೂರುಗಳಲ್ಲಿ ಶಾಲೆಗೆ ಧನ ಸಹಾಯ ಕೊಡಲಾಗುತ್ತಿದೆ. ಈ ವರ್ಷ ಈ ಬಗ್ಗೆ ಹೆಚ್ಚಿನ ಕೆಲಸಗಳಾಗುವವು. ನನ್ನ ಸರಕಾರವು ಲೇಬರ್ ಹಿತರಕ್ಷಣಾ ಕೇಂದ್ರವೊಂದನ್ನು ಪ್ರಾರಂಭಿಸಿದೆ. ಮಜೂದೂರರ ಹಿತಕ್ಕಾಗಿ ಈ ವರ್ಷ ಈ ಕಾರ್ಯವನ್ನು ವಿಸ್ತರಿಸಲಾಗುವದು.

ಸ್ಪೆಶಲ್ ಮೇಜಿಸ್ಟ್ರೇಟರ ಕೋರ್ಟನ್ನು ವಜಾಮಾಡಿ ನನ್ನ ಸರಕಾರವು ಖರ್ಚು ಕಡಿಮೆ ಮಾಡಿದೆ. ಪೋಲೀಸರ ನಿವಾಸ ವ್ಯವಸ್ಥೆಯ ಬಗ್ಗೆ ಈ ವರ್ಷ ದೊಡ್ಡ ಹಣ ಖರ್ಚಾಗಲಿದೆ. ದೇಶದಲ್ಲಿ ನ್ಯಾಯ. ಶಿಸ್ತುಗಳು ನೆಲೆನಿಲ್ಲುವಂತೆ ನನ್ನ ಸರಕಾರವು ಸರ್ವಯತ್ನ ಮಾಡುವದು. ಪ್ರತೀ ಒಬ್ಬ ನಾಗರಿಕನಿಗೂ ಯಾವುದೇ ಭಯಕ್ಕೆ ಅವಕಾಶವಿಲ್ಲದ ಸ್ವಾತಂತ್ರ್ಯವು ದೊರೆಯುವಂತೆ ಮಾಡಿ ಶಿಸ್ತು, ನ್ಯಾಯಗಳನ್ನು ನೆಲೆಗೊಳಿಸುವದೇ ನನ್ನ ಸರಕಾರದ ಕರ್ತವ್ಯವೆಂದು ಕಳೆದ ವರ್ಷ ಹೇಳಿದಂತೆ ಈಗಲೂ ಹೇಳಬಯಸುವೆನು. ಎಲ್ಲಾ ನ್ಯಾಯಬದ್ಧ ಸ್ವಾತಂತ್ರ್ಯಗಳಿಗೆ ರಕ್ಷಣೆ ಇತ್ತರೂ ಸ್ವಾತಂತ್ರ್ಯದ ಸೋಗಿನಲ್ಲಿ ಘಟನಾತ್ಮಕವಲ್ಲದ ಇತರ ವಿಧಾನಗಳಲ್ಲಿ ದೇಶದ ಆಡಳಿತಕ್ಕೆ ಅಹಿತ ಬಯಸುವ ಯಾವುದೇ ಚಳವಳಿಯ ಯತ್ನವನ್ನು ಹತ್ತಿಕ್ಕಲಾಗುವದು.

ಈ ಮಸೂದೆಗಳನ್ನು ಪರಿಶೀಲಿಸಲು ನಿಮ್ಮನ್ನು ಆಹ್ವಾನಿಸಲಾಗುವದು—

(೧) ಸ್ಪೀಕರರ ವೇತನ ಮಸೂದೆಯ ತಿದ್ದುಪಡಿ

(೨) ಕೊಡಗು ವಿನೋದ ಕೂಟದ ತೆರಿಗೆಯ ಮಸೂದೆ.

(೩) ವ್ಯವಸಾಯ ಆದಾಯ ತೆರಿಗೆಯ ಮಸೂದೆ ತಿದ್ದುಪಡಿ.

(೪) ಸಿನೇಮಾಗಳಲ್ಲಿ ಬೀಡಿ ಸಿಗರೇಟು ಸೇದದಂತೆ ನಿರ್ಬಂಧಿಸುವ ಮಸೂದೆ.

ಕೊಡಗು ಸರಕಾರದ ಬಜೆಟ್.

1953--54

1-4-1953 ರಲ್ಲಿರಬಹುದಾದ ಶಿಲ್ಕು ರೂ. 89,90,536

ಆದಾಯ		ಖರ್ಚು	
ವ್ಯವಸಾಯ ತೆರಿಗೆ	12,00,000	ವ್ಯವಸಾಯ ತೆರಿಗೆ	24,400
ಭೂಕಂದಾಯ	4,43,000	ಭೂಕಂದಾಯ	2,60,600
ಎಕ್ಸೈಸ್	10,00,000	ಎಕ್ಸೈಸ್	3,14,400
ಸ್ಟ್ಯಾಂಪು	2,02,000	ಸ್ಟ್ಯಾಂಪು	4,400
ಫಾರೆಸ್ಟ್	40,00,000	ಫಾರೆಸ್ಟ್	17,22,800
ರಿಜಿಸ್ಟ್ರೇಶನ್	23,000	ರಿಜಿಸ್ಟ್ರೇಶನ್	5,100
ವಾಹನಗಳ ತೆರಿಗೆ	5,02,000	ವಾಹನಗಳ ತೆರಿಗೆ	42,200
ಇತರ ಕಂದಾಯ	2,10,900	ನೀರಾವರಿ ಯೋಜನೆ	4,14,300
ನೀರಾವರಿ	10,000	ಆಡಳಿತ ಖರ್ಚು	4,72,000
ನ್ಯಾಯ ಇಲಾಖೆ	20,300	ನ್ಯಾಯ ಇಲಾಖೆ	84,900
ಜೈಲು ಇಲಾಖೆ	2,200	ಜೈಲು ,,	34,300
ಪೋಲೀಸ್	600	ಪೋಲೀಸು	3,45,600
ವಿದ್ಯೆ ಇಲಾಖೆ	2,15,000	ವಿದ್ಯಾ ಇಲಾಖೆ	19,63,800
ವೈದ್ಯಕೀಯ	34,600	ವೈದ್ಯ ಇಲಾಖೆ	8,50,300
ಸಾರ್ವಜನಿಕ ಆರೋಗ್ಯ	75,300	ಆರೋಗ್ಯ	2,77,200
ವ್ಯವಸಾಯ ಇಲಾಖೆ	4,06,200	ವ್ಯವಸಾಯ ಇಲಾಖೆ	13,46,500
ವೆಟರ್‌ನರಿ	20,000	ವೆಟರ್‌ನರಿ	2,59,700
ಸಹಕಾರ	2,200	ಸಹಕಾರ	74,700
ಕೈಗಾರಿಕೆ	20,100	ಕೈಗಾರಿಕೆ	4.31,000
ಇತರ ಇಲಾಖೆಗಳಿಂದ	10,300	ಇತರ ಇಲಾಖೆಗಳು	65,400
ಸಿವಿಲ್ ವರ್ಕ್ಸ್	20,200	ಸಿವಿಲ್ ವರ್ಕ್ಸ್	26,00,000
ಸುಪರ್ ಎನ್ಯುವೇಶನ್	100	ವಿದ್ಯುಚ್ಛಕ್ತಿ	14,07,900
ಪ್ರಿಂಟಿಂಗ್, ಸ್ಟೇಶನರಿ	1,400	ಪೆನ್ಶನ್ ಇತ್ಯಾದಿ	2,54,600
ಇತರ ಜಮೂ	76,400	,, ಕಮ್ಯೂಟ್ ಮಾಡಿದ್ದು	5 000
ಅಸಾಧಾರಣ ಜಮೂ	18,89,700	ಪ್ರಿಂಟಿಂಗ್ ಇತ್ಯಾದಿ	81,400
ರೌಂಡಿಂಗ್	870	ಇತರ ಖರ್ಚು	1,66,900
		ಕಮ್ಯೂನಿಟಿ ಪ್ರಾಜೆಕ್ಟ್	5,86,000
		ರೌಂಡಿಂಗ್	400
	1,03,85,000		1,40,95,000

ತಾ. 31-3-1954 ರಲ್ಲಿರಬಹುದಾದ ಅಂದಾಜು ಶಿಲ್ಕು 52,80,536

ನೋಟೀಸು.

ಅಖಿಲ ಕೊಡಗು ವಿದ್ಯಾನಿಧಿಗೆ ಹಣ ಶೇಕರಿಸುವ ಕಾರಣಕ್ಕಾಗಿ ನಿಧಿಯ ಖಚೇರಿಯಿಂದ ಸುಮಾರು ಮುನ್ನೂರು ಜನರು ರಶೀತಿ ಪುಸ್ತಕಗಳನ್ನು ಹೊಂದಿಕೊಂಡಿರುತ್ತಾರೆ. ಈ ಪುಸ್ತಕಗಳನ್ನು ಹೊಂದಿಕೊಂಡು ಎರಡು ವರ್ಷಗಳಾದರೂ ಬಹು ಜನರು ತಾವು ಸಂಗ್ರಹಿಸಿದ ಹಣದ ಲೆಕ್ಕವನ್ನಾಗಲೀ ಯಾ ರಶೀತಿ ಪುಸ್ತಕವನ್ನಾಗಲಿ ಸಂಘದ ಖಚೇರಿಗೆ ತಲುಪಿಸದಿರುವುದು ವಿಷಾದಕರ. ಪುಸ್ತಕ ಪಡೆದುಕೊಂಡವರು ಏಪ್ರಿಲ್ ತಾ. ೧೫ರೊಳಗೆ ಸಂಗ್ರಹಿಸಿದ ಹಣ ಮತ್ತು ಪುಸ್ತಕಗಳನ್ನು ಸಂಘದ ಖಚೇರಿಗೆ ಹಾಜರು ಮಾಡಬೇಕೆಂದು ಈ ಮೂಲಕ ತಿಳುವಳಿಕೆ ಕೊಡಲಾಗಿದೆ. ಹಣ ಸಂಗ್ರಹಿಸದೆ ಪುಸ್ತಕ ಹಾಗೆ ಇಟ್ಟುಕೊಂಡವರು ಖಾಲಿ ಪುಸ್ತಕಗಳನ್ನು ಆ ತಾರೀಖಿನೊಳಗೆ ಕಳುಹಿಸಬೇಕು. ಪುಸ್ತಕಗಳನ್ನು ವಾಪಾಸು ಮಾಡದಿದ್ದರೆ ಅವುಗಳ ವಸೂಲಾತಿ ಬಗ್ಗೆ ಬೇರೆ ಕ್ರಮ ಕೈಕೊಳ್ಳಬೇಕಾಗುವದೆಂದು ಈ ಮೂಲಕ ಜ್ಞಾಪಿಸ ಪಡಿಸಲಾಗಿದೆ.

ಅಲ್ಲದೆ ವಿದ್ಯಾನಿಧಿಯಿಂದ ಸಾಲ ತೆಗೆದುಕೊಂಡು ಈಗ ಸಂಪಾದನೆ ಮಾಡುತ್ತಿರುವವರಿಗೆ ಹಣ ಮರುಪಾವತಿ ಮಾಡಲು ಕಾಗದ ಬರೆದು, ರಿಜಿಸ್ಟರು ನೋಟೀಸು ಕೊಟ್ಟು ಪ್ರಯತ್ನಿಸಿದ ಫಲವಾಗಿ ಹಲವರು ಪಾವತಿ ಮಾಡುತ್ತಿದ್ದಾರೆ. ಆದರೆ ಕೆಲವರು ಈ ಕಡೆ ಗಮನವಿತ್ತಿರುವದಿಲ್ಲ. ಅಂಥಾವರು ಏಪ್ರಿಲ್ ತಾ. ೧೫ ರೊಳಗೆ ತಮ್ಮ ಬಾಕಿಯನ್ನು ಪಾವತಿ ಮಾಡಬೇಕೆಂಬುದು ಆಗ್ರಹ ಪೂರ್ವಕ ಕೇಳಿಕೊಳ್ಳಲಾಗಿದೆ. ಆ ತಾರೀಖಿನೊಳಗೆ ಹಣ ಬಾರದಿದ್ದರೆ ತಕ್ಕ ಕ್ರಮ ಜರಗಿಸಲಾಗುವುದು.

ಸಿ. ಡಿ. ಅಪ್ಪಯ್ಯ
ಕಾರ್ಯದರ್ಶಿ.

ಕೊಡಗು ವಿದ್ಯಾನಿಧಿ ಆಫೀಸು
4-2. ಮಡಿಕೇರಿ.

ಬೇಕಾಗಿವೆ.

ಕಾಡು ಕೋಳಿಗಳ ಕುತ್ತಿಗೆಯ ಗರಿಗಳು ಬೇಕಾಗಿವೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

D. H. THANGAM & CO.
Kundah Bridge,
4-1 *P. O. Nilgiris.*

॥ ಓದುಗರ ಓಲೆಗಳು ॥

ಸೂಕ್ತ ಸಲಹೆ.

ಕಳೆದ ವಾರದ ಪತ್ರಿಕೆಯಲ್ಲಿ ದೇವಸ್ಥಾನಗಳಲ್ಲಿ ಪ್ರಾಣಿವಧೆಯ ವಿಚಾರವಾಗಿ ಶ್ರೀ ಪಿ. ಸಿ. ಭೀಮಯ್ಯನವರು ಬರೆದ ಲೇಖನವನ್ನು ಓದಿದೆನು. ಈ ವಿಚಾರದಲ್ಲಿ ಕೆಲವು ದಿನಗಳ ಹಿಂದೆ ಕೊಡಗು ಪತ್ರಿಕೆಯ ಸಂಪಾದಕರು ಒಂದು ಅಗ್ರ ಲೇಖನ ಬರೆದುದನ್ನು ಓದಿದ ನೆನಪೂ ಇದೆ. ಇದು ತುರ್ತವಾಗಿ ಆಗಬೇಕಾದ ಕೆಲಸ. ದೇವರ ಹೆಸರಿನಲ್ಲಿ ಪ್ರಾಣಿಗಳ ಬಲಿಕೊಟ್ಟು ತಮಗೆ ಹಿತವಾಗಬೇಕೆಂದು ಬಯಸುವ ನಂಬಿಕೆಯನ್ನು ಮೆಚ್ಚಬಹುದಾದರೂ ವಿವೇಚಿಸಿದರೆ ಅದರಲ್ಲಿ ಹುರುಳಿಲ್ಲವಲ್ಲದೆ ಮಾನವತೆಗೆ ಸಮರ್ಪಕವಲ್ಲವೆಂಬುದು ಗೊತ್ತಾಗುವುದು.

ಆದ್ದರಿಂದ ಕೊಡಗಿನ ಶಾಸನ ಸಭೆಯ ಸದಸ್ಯರೂ, ಕೊಡಗು ಸರಕಾರವೂ ಈ ವಿಚಾರದಲ್ಲಿ ಆಲೋಚನೆ ನಡೆಸಿ ಈ ಬಗ್ಗೆ ಒಂದು ಮಸೂದೆಯನ್ನು ಜಾರಿಯಲ್ಲಿ ತಂದು ದೇವರ ಹೆಸರಿನಲ್ಲಿ ಪ್ರಾಣಿ ಬಲಿಯಾಗದಂತೆ ಏರ್ಪಡಿಸಬೇಕಾಗಿದೆ. ಮದ್ರಾಸ್ ಸರಕಾರವು ಈ ರೀತಿಯ ಮಸೂದೆಯನ್ನು ಜಾರಿಗೆ ತಂದು ಆದರ್ಶವೆನಿಸಿದೆ. ಕೊಡಗೂ ಕೂಡ ಆ ಉತ್ತಮ ಆದರ್ಶವನ್ನು ಅನುಸರಿಸಬೇಕಾಗಿ ಪ್ರಾರ್ಥನೆಯಾಗಿದೆ.

ಕುಶಾಲಪ್ಪ, ಬಿ.

ಮಾಡಿ ತೋರಿಸು ಮಾನವಾ!

ವೀರಾಜಪೇಟೆಯಲ್ಲಿ ಒಂದು ಮೂಲ ಶಿಕ್ಷಣ ಶಾಲೆಯಿದೆ (Basic Training School). ಇಲ್ಲಿಯ ಒಟ್ಟು ತತ್ವವು ಉಪಾಧ್ಯಾಯರೂ ಮತ್ತು ವಿದ್ಯಾರ್ಥಿಗಳೂ ಎಲ್ಲಾ ಕೆಲಸಗಳಲ್ಲಿ ಸಹೋದರತೆಯಿಂದ ಸಹಕರಿಸಿ ತಮ್ಮ ಕೆಲಸವನ್ನು ಯಶಸ್ವಿಯಾಗಿ ಮಾಡುವುದು ಮತ್ತು ಕಲಿಯುವುದು.

ಈಗಿನ ಶಿಕ್ಷಣದ ರೀತಿಯಲ್ಲಿ ಸಮಾಜ ಸೇವೆ (Social Service) ಯೆಂಬುದು ಒಂದು ಮುಖ್ಯ ಭಾಗ. ಈ ವಿಷಯದಲ್ಲಿ ಸರಕಾರವು ಅಧ್ಯಾಪಕ ವರ್ಗವನ್ನು ವಿದ್ಯಾರ್ಥಿಗಳ ಸಹಾಯದಿಂದ ಹೆಚ್ಚಿನ ಸಮಾಜ ಸೇವೆಯನ್ನು ಮಾಡುವಂತೆ ಕೇಳಿಕೊಂಡಿದ್ದಾರೆ.

ಮೊನ್ನೆ ದಿವಸ ತಾ ೧೭ ರಲ್ಲಿ ವೀರಾಜಪೇಟೆಯ ಮೇಲೆ ಹೇಳಿದ ತರಬೇತು ಶಾಲೆಯಲ್ಲಿ ತರಬೇತು ಹೊಂದುತ್ತಿರುವ ವಿದ್ಯಾರ್ಥಿ ಉಪಾಧ್ಯಾಯರುಗಳನ್ನು ಶಾಲಾ ಮುಖ್ಯ ಉಪಾಧ್ಯಾಯರು ಅಲ್ಲಿಯ ಮುನಿಸಿಪಾಲಿಟಿಗೆ ಸೇರಿದ ಭದ್ರದ ಕೆರೆಯನ್ನು ಶುದ್ಧ ಪಡಿಸಲು ಕೇಳಿಕೊಂಡರು.

ಸದ್ರಿ ತರಬೇತು ಅಧ್ಯಾಪಕರುಗಳು ಒಮ್ಮನಸಿನಿಂದ ಒಪ್ಪಿ ಕೆಲಸಕ್ಕೆ ಮುಂದಾದರು. ಅದೇ ದಿವಸ ಸಾಂಗವಾಗಿ ಸಾಧಾರಣ ೫೦ ಜನರು ಮಾಡಬೇಕಿದ್ದ ಕೆಲಸವನ್ನು ಮಾಡಿ ಮುಗಿಸಿದರೆಂದು ತಿಳಿಸಲು ಸಂತೋಷಪಡುತ್ತೇನೆ. ಆದರೆ ಶಿಕ್ಷಣ ತತ್ವ ಮತ್ತು ಸರಕಾರವು ಕೇಳಿ ಕೊಳ್ಳುವ ಮೇರೆಗೆ ಈ [illegible] ಉಪಾಧ್ಯಾಯರು [illegible] ಗಳನ್ನು ತರಬೇತಿ [illegible] ಮನ ದೊಡ್ಡ ಸದರಿ [illegible] ಉಪಾಧ್ಯಾಯರುಗಳು [illegible] ಸರ್ವ [illegible] ತಾವು [illegible] ತ್ತಿದ್ದರು. ಅವರ [illegible] ಫೋಟೋ ತೆಗೆದು [illegible] ಅವರು [illegible] ನಿಂತು ತಮ್ಮ ಹುದ್ದೆಗಳನ್ನು ಆಗಾಗ ಸರಿಪಡಿಸಿಕೊಂಡು ಎಲ್ಲರೂ ಸರಿಯಾಗಿ ಕೆಲಸ ಮಾಡುತ್ತಿರುವರೋ ಎಂದು ನಿರೀಕ್ಷಿಸುತ್ತಿದ್ದರು ಎಂದು ಹೇಳಲು ನಾಚುತ್ತೇನೆ.

ಬೇರೆಯವರಿಗೆ ಕಲಿಸಬೇಕಾದರೆ ಮೊದಲು ಮಾಡಿ ತೋರಿಸಬೇಕು. ಕೆಲಸದ ಮಹತ್ವ (Dignity of labour) ಯೆಂಬುದನ್ನು ಅರಿತು ವರ್ತಿಸಬೇಕು. ಮುಂದಿನ ಪ್ರಜೆಗಳನ್ನು ತಯಾರಿಸುವ ಪದವೀಧರ ಉಪಾಧ್ಯಾಯರುಗಳೇ ಇನ್ನಾದರೂ ನಿಮ್ಮ ರೀತಿಯನ್ನು ಸರಿಪಡಿಸಿ ಕೊಳ್ಳುವಿರ?

"PEN RAVI"

ಸಿನೇಮ ರಸಿಕರು.

ನಮ್ಮ ಪೂಜ್ಯ ಸಿ. ಇಸ್. ಸಿ. ಯವರು ಅಲ್ಲಲ್ಲಿ ಸ್ಕೂಲು ಕಾಲೇಜುಗಳಲ್ಲಿ ಮಕ್ಕಳಿಗೆ ಹೇಳಿದ ಹಿತೋಕ್ತಿಯಂತೆ ಶಾಲಾ ಮಕ್ಕಳು ಸ್ವಲ್ಪ ಮಟ್ಟಿಗೆ ಸಿನೇಮ ತ್ಯಜಿಸಿದರೂ ಸಹ ಸಿನೆಮ ಕಂಪೆನಿಯವರಿಗೆ ಯಾವತ್ತೂ ಸಂಪಾದನೆ ಕಮ್ಮಿಯಾಗಬಹುದೆಂದು ತಿಳಿಯಬಾರದು. ಈಗಿನ ಐವತ್ತೈದು ವರ್ಷಕ್ಕೆ ಏರಿದ ನವ ತರುಣರಿಗೆ ಪ್ರೇಮ ಚಿತ್ರಗಳ ಹುಚ್ಚು ವಿಪರೀತವಾಗಿದೆ. ಆ ವರಲ್ಲಿಯೂ ಇವರಿಗೆ ಕಾಂಪ್ಲಿಮೆಂಟರಿ ಟಿಕೇಟು ಇರುವವಾದರೆ ಆರು ಗಂಟೆಯ ಮೇಲೆ ಇವರ ಸಂಭ್ರಮ ಹೇಳಲಸಾಧ್ಯ. ಇಂಥಾ ಸಮಯದಲ್ಲಿ ಇವರು ಆ 'ಶೋ'ಗಳನ್ನು ಕಣ್ಣಾರೆ ನೋಡಿ ಬರುವ ಚಾಳಿಯಾಗಿದೆ. ಮತ್ತು ಮನೆಗೆ ಬಂದು ಮಕ್ಕಳ ತಾಯಿಯಂದಿರಿಗೆ ಮಕ್ಕಳ ಎದುರು ಆ ಪ್ರೇಮ ಕತೆಯನ್ನು ವರ್ಣಿಸುವ ನೋಟ ಸೋಜಿಗವಾಗಿದೆ. ಜ' ಕಾರ್ಯಪ್ಪನವರ ಅಭಿಪ್ರಾಯದಂತೆ ಪ್ರೇಮ ಕತೆಯ ಪಿಕ್ಚರಿನಿಂದ ಮನುಷ್ಯರಿಗೆ ಯಾವ ಪ್ರಯೋಜನವಿಲ್ಲವೆಂಬುದನ್ನು ಇವರೂ ಅರಿತು ವರ್ತಿಸಿದರೆ ತಮ್ಮ ಮಕ್ಕಳ ಮಾರ್ಗದರ್ಶನಕ್ಕೆ ಸಹಾಯವಾದೀತು.

ಎಂ. ಕೆ. ಕಾರ್ಯಪ್ಪ.

ಕೊಡಗು ಫಾರೆಸ್ಟ್ ಇಲಾಖೆ

ತಾ. ೨೦-೩-೫೩ ರ ಕೊಡಗು ವಾರ ಪತ್ರಿಕೆಯಲ್ಲಿ ಫಾರೆಸ್ಟ್ ಇಲಾಖೆಯಲ್ಲಿ ಅವ್ಯವಸ್ಥೆ ವಿಷಯ ಕೊಡಗು ಮುಖ್ಯ ಮಂತ್ರಿಗೆ ಬಹಿರಂಗ ಪತ್ರವೊಂದು ಪ್ರಕಟಿಸಿದ್ದು ನೋಡಿದೆನು. ಇದರಲ್ಲಿ ಬರೆದಿರುವ ಮರದ ಕಳ್ಳ ಸಾಗಾಟ ಸಂಗತಿಯು ನಿಜವಾಗಿದ್ದರೆ ಕೊಡಗಿನ ಈಗಿನ ಸರಕಾರಕ್ಕೇನೇ ಒಂದು ಕೊರತೆ ಹೇಳುವಂಥಾ ವಿಷಯವಾಗಿದೆ. ಇಂಥಾ ಕಠಿಣ ಆರೋಪಣೆಯನ್ನು ಒಂದು ತಕ್ಕ ಕಮಿಷನ್ ಮೂಲಕ ವಿಸ್ತಾರವಾಗಿ ವಿಚಾರಿಸಿ ಮತ್ತು ಪರಿಶೀಲಿಸಿ ಕಮಿಷನ್ನಿನ ತೀರ್ಪು ರಿಪೋರ್ಟನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಜನತೆಗೆ ಸಮಾಧಾನವನ್ನು ಏರ್ಪಡಿಸಬೇಕೆಂದು ನನ್ನ ಸೂಚನೆ. ಇದೂ ಅಲ್ಲದೆ ಈಗಿನ ಫಾರೆಸ್ಟ್ ಮೇಲಧಿಕಾರಿಯವರು ಈ ಜಿಲ್ಲೆ [illegible] ಬಹಳ [illegible] ಈ ನನ್ನ [illegible] ದರೆ ಕೊಡಗಿನ ಫಾರೆಸ್ಟ್ ಮಂತ್ರಿಯವರು ಈ ಅಧಿಕಾರಿಯವರನ್ನು ಸಂಗಡ ಕರೆದುಕೊಂಡು ಜಿಲ್ಲೆ ಗುಡ್ಡಗಳಿರುವ ಫಾರೆಸ್ಟ್ ಕಾಡುಗಳಿಗಾಗಿ ಬರೇ ಹತ್ತು ಮೈಲು ಇನ್ಸ್‌ಪೆಕ್ಷನ್ ಮತ್ತು ನಡೆದ ಪರೀಕ್ಷೆ ಮಾಡಿದರೆ ವಿಷಯ ತಿಳಿದೀತು. ಮೊದಲು ಹೇಳಿದ ಮರದ ಕಳ್ಳ ಸಾಗಾಟದ ಪರಿಶೀಲನೆ ಜೊತೆಯಲ್ಲಿ ಎರಡನೇ ಶೋಧನೆಯೂ ಅತ್ಯಾವಶ್ಯವೆಂದು ನನ್ನ ಎರಡನೇ ಸೂಚನೆ. ಈ ಅಧಿಕಾರಿಗಳು ಕೇವಲ ಮಡಿಕೇರಿಯಲ್ಲಿ ಕುಳಿತು ಆಡಳಿತ ನಡೆಸುತ್ತಿರುವರೇ ವಿನಾ ಕಾಡಿಗೆ ಹೋಗುವುದು ಬಹು ಕಡಿಮೆ.

ಕೊಡಗು ದೇಶಸ್ಥ.

ಕಲ್ಲಳ್ಳ ಆಸ್ಪತ್ರೆ

ಈ ಆಸ್ಪತ್ರೆಯಲ್ಲಿರುವ ಜವಾಬ್ದಾರಿ ಹೊತ್ತವರು ಫಾರೆಸ್ಟಿನಲ್ಲಿರುವ ಆಳುಗಳಿಂದ ಅವರನ್ನು ಬೆದರಿಸಿ ರಾಗಿ ಮತ್ತು ಅಕ್ಕಿಯನ್ನು ವಸೂಲ್ಮಾಡಿ ರಾಗಿಯನ್ನು ಬೆಳೆಯಿಸಿದ ರಾಗಿ ಎಂಬದಾಗಿ ಫಾರೆಸ್ಟಿಗೆ ಮಾರುತ್ತಿದ್ದಾರಂತೆ. ಹೀಗೆ ಪ್ರತಿ ವರ್ಷ ಆದೆಷ್ಟೊ ಸಲ್ಲ ರಾಗಿ ಮಾರುತ್ತಿದ್ದಾರಂತೆ! ಇವರ ಕೆಲಸವನ್ನೇ ಮರೆತು ವ್ಯಾಪಾರಕ್ಕೆ ಇಳಿದು ಆಳುಗಳಿಗೆ ವಿಪರೀತ ತೊಂದರೆ ಕೊಡುತ್ತಿದ್ದಾರೆಂದು ವರ್ತಮಾನ. ಇವರ ಸಹಕೆಲಸಗಾರರು ಬೇರೆ ಎಲ್ಲಿಯೂ ಊಟದ ವಸತಿ ಮಾಡದೆ ಅವರ ಗೃಹದಲ್ಲಿ ಊಟ ಮಾಡುತ್ತಾ ಇವರೂ ಸಹ ವ್ಯಾಪಾರಕ್ಕೆ ಸಹಾಯ ಮಾಡುತಿದ್ದಾರಂತೆ! ಇದರಿಂದ ಕಾಯಿ[illegible]ಕ್ಕೆ ಸರಿಯಾಗಿ [illegible] ಕೊಡದೆ ತೊಂದರೆ, ರೀತಿಯ ಆಸ್ಪತ್ರೆ ಬೇಕೆ. ಪ್ರಜಾ ಸರಕಾರದಲ್ಲಿ ಸ್ವಾತಂತ್ರ್ಯವೆಂದರೆ ಇದೂ ಸ್ವಾತಂತ್ರ್ಯವೇ? ಸಂಬಂಧಿಸಿದವರು ಈ ಸಂಬಂಧ, ವಿಚಾರ ನಡೆಸುವರೇ?

'ನೂರ'

ಇದು ನ್ಯಾಯವೇ?

ಕೊಡಗಿನಲ್ಲಿ ಪ್ರಿಕ್ಯೂರ್‌ಮೆಂಟ್ ಪದ್ಧತಿಯು ಜಾರಿಗೆ ಬಂದು ಇವಾಗಲೇ ಕೆಲವು ವರ್ಷಗಳು ಸಂದವು. ಈ ಪದ್ಧತಿಯಿಂದರೆ ಆಹಾರವಿಲ್ಲದ ಪ್ರದೇಶದ ಜನರಿಗೆ ಆಹಾರವನ್ನೊದಗಿಸಿ [illegible] ಜೀವನದ ಮಟ್ಟವನ್ನು ಪಡುವದಕ್ಕೆ [illegible] ಏರ್ಪಟ್ಟಿರತಕ್ಕಂಥಾ [illegible] ಇದರಿಂದ ಇಡೀ ದೇಶದ ಜನರಿಗೆ ಬಹಳ ಪ್ರಯೋಜನ ಉಂಟಾಗಿದೆ. ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಬಹಳ ದಕ್ಷತೆಯಿಂದ ಕೆಲಸ ಮಾಡುವರಾದರೆ ಇಡೀ ಇಂಡಿಯಾ ದೇಶವು ಆಹಾರ ತೊಂದರೆಯಿಂದ ಪಾರಾಗಿ ಬದುಕುವುದರಲ್ಲಿ ಯಾವ ಸಂಶಯವೂ ಇಲ್ಲ.

ಆದರೆ ರೇಶನಿಂಗ್ ಇನ್ಸ್‌ಪೆಕ್ಟರರು ಎಲ್ಲಾ ಮನೆಗಳಿಗೆ ಹೋಗಿ ಅಲ್ಲಿಯ ಭತ್ತ ಎಷ್ಟಿದೆ ಎಂಬದಾಗಿ ವಿಚಾರಿಸದೆ ವಿದ್ಯಾಹೀನರಿರುವ ಮನೆಗಳಿಗೆ ಹೋಗಿ ತಮ್ಮ ಟೇಪಿನಿಂದ ಬತ್ತದ ಅಳತೆ ತೆಗೆದು ನೀವು ಇಷ್ಟೇ ಭತ್ತವನ್ನು ಕೊಡಬೇಕೆಂಬವಾಗಿ ಹೇಳುವುದು ತೀರಾ ನ್ಯಾಯವಲ್ಲ. ದೊಡ್ಡವರೆನ್ನುವವರ ಮನೆಗಳಿಗೆ ಹೋಗಿ ಅಲ್ಲಿ ಬತ್ತ ಎಷ್ಟುಂಟು ಎಂಬದಾಗಿ ವಿಚಾರಿಸಿ ಅವರಲ್ಲಿಯೂ ಬತ್ತವನ್ನು ವಸೂಲು ಮಾಡುವುದಿಲ್ಲ ಯಾಕೆ? ಇದೊಂದು ಶೋಚನೀಯವಾದ ವಿಷಯವಾಗಿದೆ. ಎಲ್ಲರೂ ಸಮಾನರೆಂದು ತಿಳಿದು ಭತ್ತವನ್ನು ವಸೂಲು ಮಾಡುವ ಪದ್ಧತಿ ಇಲ್ಲ. ಆದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ತಕ್ಕ ಗಮನ ಕೊಡುವರೆ?

ಒಬ್ಬ ಬಡ ರೈತ.

'ಭೂದಾನ ಯಜ್ಞಕ್ಕೆ ಸಹಕಾರ ನೀಡಿ'

ಪಕ್ಷ ರಾಜಕೀಯದಿಂದ ಬಾಹಿರವಾದ ಭೂದಾನ ಯಜ್ಞವು ಬಡಬಗ್ಗರ ಏಳಿಗೆಯನ್ನುಂಟುಮಾಡುವುದು. ಇದರೊಂದಿಗೆ ಸಹಕರಿಸದವರು ಆ ಮೇಲೆ ಪಶ್ಚಾತ್ತಾಪ ಪಡಬೇಕಾದೀತು ಎಂದು ಆಚಾರ್ಯ ವಿನೋಭಾಭಾವೆಯವರು ಎಚ್ಚರಿಸಿದರು. ಸಿಂಧ್ರಿ ಎಂಬ ಹಳ್ಳಿಯಲ್ಲಿ ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತ ಭಾವೆಯವರು ತಾ. ೨೦ ರಲ್ಲಿ ಈ ರೀತಿ ಹೇಳಿದರು.

ಶ್ರೀ ಟಿ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

Specialists in Tailoring! Prompt Service!!
FOR **English Felt Hats,**
Wedding Suits, Ladies Over Coats
AND
Latest Designs in Wollen Suitings
— CALL ON —
25–7 **PATTU BROTHERS,**
OPP.— **Town Hall, MYSORE.**

ಕೊಡಗು

ತಾರೀಕು ೨೬ ಮಾರ್ಚಿ ೧೯೫೪ನೇ ಶುಕ್ರವಾರ

ಕೊಡಗು ಸರಕಾರದ ಬಡ್ಜೆಟ್.

ಈಗ ನಡೆಯುತ್ತಿರುವ ಕೊಡಗು ವಿಧಾಯಕ ಸಭೆಯ ಬಡ್ಜೆಟ್ ಮೀಟಿಂಗಿನಲ್ಲಿ ಕೊಡಗಿನ ಆರ್ಥಿಕ ಮಂತ್ರಿಯವರು ಇಟ್ಟಿರುವ ಅಂದಾಜು ಬಡ್ಜೆಟ್ಟಿನ ಮೇರೆ ೧೯೫೪-೫೫ ರಲ್ಲಿ ಕೊಡಗಿನ ಆದಾಯವು ರೂ ೧,೦೩,೫೫,೦೦೦ ಆಗುವದೆಂದೂ ಖರ್ಚು ೧,೪೦,೯೫,೦೦೦ ಆಗುವದೆಂದೂ ಖರ್ಚು ಆದಾಯವನ್ನು ರೂ ೩೭,೧೦,೦೦೦ ದಷ್ಟು ಮೀರುವದೆಂದೂ ವರ್ಷಾಂತ್ಯದಲ್ಲಿ ಅಂದರೆ ತಾ ೧-೪-೫೫ ರಲ್ಲಿ ರೂ ೫೨,೮೦,೦೦೦ ಶಿಲ್ಕು ಉಳಿಯುವದೆಂದೂ ತೋರಿಸಲಾಗಿದೆ ಈ ವರ್ಷದ ಪರಿಷ್ಕೃತ ಅಂದಾಜಿನ ಮೇರೆ ಉತ್ಪತ್ತಿ ರೂ ೯೭,೧೪,೦೦೦, ಖರ್ಚು ೮೭,೦೫,೦೦೦ ಆಗಿ ಸುಮಾರು ೮ ಲಕ್ಷದಷ್ಟು ಉಳಿತಾಯವಾಗುವದೆಂದು ಅಂದಾಜು ಮಾಡಲಾಗಿದೆ ಬಡ್ಜೆಟ್ ವರ್ಷದ ಆದಾಯದಲ್ಲಿ ಮುಖ್ಯ ಬಾಬುಗಳೆಂದರೆ ವ್ಯವಸಾಯ ಆದಾಯ ತೆರಿಗೆ ೧೦ ಲಕ್ಷ, ಭೂಕಂದಾಯ ಸುಮಾರು ೮½ ಲಕ್ಷ, ಅಬ್ಕಾರಿ ೧೦ ಲಕ್ಷ, ಫಾರೆಸ್ಟ್ ೪೦ ಲಕ್ಷ, ಮೋಟಾರು ವಾಹನಗಳ ತೆರಿಗೆ ೫ ಲಕ್ಷ, ವ್ಯವಸಾಯ ಇಲಾಖಾ ಉತ್ಪತ್ತಿ ೪ ಲಕ್ಷ ಇಂಡಿಯಾ ಸರಕಾರದಿಂದ ದೊರೆಯುವ ಮಂತಿಗೆ ಮತ್ತು ಸಾಲ ಸುಮಾರು ೧೯ ಲಕ್ಷ, ಆಗುತ್ತದೆ. ಕಳೆದ ವರ್ಷ ವ್ಯವಸಾಯ ಆದಾಯ ತೆರಿಗೆ ೧೦½ ಲಕ್ಷ, ಭೂಕಂದಾಯ ೪ ಲಕ್ಷ, ಅಬ್ಕಾರಿ ೧೦½ ಲಕ್ಷ, ಫಾರೆಸ್ಟ್ ೬೩ ಲಕ್ಷ ವಾಹನಗಳ ತೆರಿಗೆ ೫ ಲಕ್ಷ ವ್ಯವಸಾಯ ಇಲಾಖಾ ಉತ್ಪತ್ತಿ ೩½ ಲಕ್ಷ ಇಂಡಿಯಾ ಸರಕಾರದ ಮಂತಿಗೆ ೬½ ಲಕ್ಷವಾಗಿತ್ತು ಈ ಬಡ್ಜೆಟ್ ವರ್ಷದಲ್ಲಿ ಇಂಡಿಯಾ ಸರಕಾರದಿಂದ ದೊರೆಯುವ ಸುಮಾರು ೧೯ ಲಕ್ಷ ರೂಪಾಯಿಗಳಲ್ಲಿ ೮½ ಲಕ್ಷ ರೂಪಾಯಿಗಳು ಸಾಲದ ರೂಪದಲ್ಲೂ ಉಳಿದವು ಮಂತಿಗೆಯ ರೂಪದಲ್ಲೂ ದೊರೆಯುವದಾಗಿದೆ. ಇಂಡಿಯಾ ಸರಕಾರದಿಂದ ದೊರೆಯುವ ಮೊಬಲಗನ್ನು ಬಿಟ್ಟರೆ ಕೊಡಗಿನ ಸರಕಾರದ ಆದಾಯವು ಕಳೆದ ವರ್ಷಕ್ಕಿಂತಲೂ ಈ ವರ್ಷವೂ ಸುಮಾರು ೬೫ ಲಕ್ಷ ಆಗುವದು ೧೯೫೩-೫೪ ರ ಅಂತ್ಯದಲ್ಲಿ ೪ ಲಕ್ಷ ರೂಪಾಯಿ ಉಳಿತಾಯ ಬರುವದೆಂದು ಅಂದಾಜು ಮಾಡಿದರೂ ಬಡ್ಜೆಟ್ ವರ್ಷದಲ್ಲಿ ೩೭ ಲಕ್ಷ ರೂಪಾಯಿ ಆದಾಯಕ್ಕಿಂತಾ ಹೆಚ್ಚು ಖರ್ಚಾಗುವದೆಂದು ತೋರಿಸಲ್ಪಟ್ಟಿದೆ ಇದಕ್ಕೆ ಕಾರಣವಾದರೂ ಪಂಚವಾರ್ಷಿಕ ಯೋಜನೆಯ ಪ್ರಕಾರ ಬಡ್ಜೆಟ್ ವರ್ಷದಲ್ಲಿ ಕೈಕೊಳ್ಳಬಹುದಾದ ಕಾರ್ಯಗಳಿಗಾಗಿ ಸುಮಾರು ೬೩ ಲಕ್ಷ ರೂಪಾಯಿಗಳನ್ನಿಟ್ಟದ್ದೇ ಆಗಿದೆ

ಬಡ್ಜೆಟ್ ವರ್ಷದಲ್ಲಿ ಮಾಡಲಾಗುವದೆಂದು ಸೂಚಿತವಾಗಿರುವ ಖರ್ಚುಗಳ ಬಾಬಿನಲ್ಲಿ ಪ್ರಾಮುಖ್ಯವಾದವುಗಳೆಂದರೆ ಫಾರೆಸ್ಟ್ ೧೭ ಲಕ್ಷ, ನೀರಾವರಿ ಯೋಜನೆ ೮ ಲಕ್ಷ, ಆಡಳಿತ ಖರ್ಚು ೫½ ಲಕ್ಷ, ವಿದ್ಯಾಭ್ಯಾಸ ೧೯½ ಲಕ್ಷ ವೈದ್ಯಕೀಯ ಖರ್ಚು ೮½ ಲಕ್ಷ, ವ್ಯವಸಾಯ ಖರ್ಚು ೧೩½ ಲಕ್ಷ, ಕೈಗಾರಿಕೆ ಮತ್ತಿತರ ಬಾಬು ½ ಲಕ್ಷ, ಸಿವಿಲ್ ವರ್ಕ್ಸ್ ೨೭ ಲಕ್ಷ, ವಿದ್ಯುಚ್ಛಕ್ತಿ ೧೪ ಲಕ್ಷ, ಸಾಮೂಹಿಕ ವಿಕಾಸ ಯೋಜನೆಗೆ ೫½ ಲಕ್ಷ ಇವುಗಳು ಕಳೆದ ವರ್ಷ ಅಂದರೆ ೧೯೫೩-೫೪ ರಲ್ಲಿ ಫಾರೆಸ್ಟ್ ೧೪½ ಲಕ್ಷ, ನೀರಾವರಿ ½ ಲಕ್ಷ, ಆಡಳಿತ ಖರ್ಚು ೩½ ಲಕ್ಷ ವಿದ್ಯಾಭ್ಯಾಸ ೭ ಲಕ್ಷ, ವೈದ್ಯಕೀಯ ೮ ಲಕ್ಷ, ವ್ಯವಸಾಯ ೧೦½ ಲಕ್ಷ, ಸಿವಿಲ್ ವರ್ಕ್ಸ್ ೭ ಲಕ್ಷ ಸಾಮೂಹಿಕ ವಿಕಾಸಯೋಜನೆ ೪ ಲಕ್ಷ ಹೀಗ ಇಡಲಾಗಿತ್ತು ಬಡ್ಜೆಟ್ ವರ್ಷದಲ್ಲಿ ಫಾರೆಸ್ಟ್ ಇಲಾಖೆಯ ಉತ್ಪತ್ತಿಯು ಕಳೆದ ವರ್ಷಕ್ಕಿಂತಾ ೩ ಲಕ್ಷ ರೂಪಾಯಿ ಕಡಿಮೆ ಅಂದಾಜು ಮಾಡಲ್ಪಟ್ಟಿದ್ದರೂ ಖರ್ಚು ೩ ಲಕ್ಷ ಹೆಚ್ಚು ತೋರಿಸಲಾಗಿದೆ ವಿದ್ಯಾ ಇಲಾಖೆಗೆ ಕಳೆದ ವರ್ಷ ೭ ಲಕ್ಷ ಮಾತ್ರ ಇರಿಸಿದ್ದರೆ ಬಡ್ಜೆಟ್ ವರ್ಷದಲ್ಲಿ ೧೯½ ಲಕ್ಷ ಇಡಲಾಗಿದೆ ಇದರಲ್ಲಿ ಕಾಲೇಜ್ ವಿದ್ಯಾಭ್ಯಾಸ ಖರ್ಚು ಕಳೆದ ವರ್ಷದ ೫೦ ಸಾವಿರದ ಬದಲು ಈ ವರ್ಷ ೩½ ಲಕ್ಷಕ್ಕೆ ಏರಿದ ಪ್ರಾಥಮಿಕ ವಿದ್ಯಾಭ್ಯಾಸದ ಖರ್ಚು ಕಳೆದ ವರ್ಷ ೧½ ಲಕ್ಷವಿದ್ದದ್ದು ಈ ವರ್ಷ ೭½ಕ್ಕೆ ಏರಿದೆ. ಇದಕ್ಕೆ ಮುಖ್ಯ ಕಾರಣವಾದರೂ ಜಿಲ್ಲಾ ಬೋರ್ಡು ಶಾಲೆಗಳನ್ನು ಸರಕಾರ ವಹಿಸಿಕೊಳ್ಳುವದೇ ಆಗಿದೆ

ಕೊಡಗಿನ ಜನ ಜೀವನದ ಅಭಿವೃದ್ಧಿಯ ದೃಷ್ಟಿಯಿಂದ ಅತೀ ಪ್ರಾಮುಖ್ಯವಾದ ಯೋಜನೆಯೆಂದರೆ ವ್ಯವಸಾಯಕ್ಕೆ ನೀರು ಒದಗಿಸುವ ನೀರಾವರಿ ಕೆಲಸಗಳು ೧೯೫೨-೫೩ ರಲ್ಲಿ ಮೈನರ್ ನೀರಾವರಿ ಕಾಮಗಾರಿಗಳಿಗಾಗಿ ಸುಮಾರು ಎರಡು ಲಕ್ಷ ಹಣ ವಿನಿಯೋಗಿಸಿ ಕೆಲಸ ನಡೆದಿದೆ ಈ ವರ್ಷ ಈ ಬಾಬಿಗಾಗಿ ನಾಲ್ಕು ಲಕ್ಷ ರೂಪಾಯಿಗಳನ್ನಿರಿಸಿದ್ದು ಸೂಕ್ತವಾಗಿದೆ ಸರಕಾರವು ಒಂದು ವ್ಯವಸ್ಥಿತ ಪರಿಶೀಲನೆಯಿಂದ ಅತೀ ತುರಿತದ ಕೆಲಸಗಳನ್ನು ಮೊದಲು ತೆಗೆದುಕೊಂಡು ಈ ಹಣವನ್ನು ಸದುಪಯೋಗ ಗೊಳಿಸುವರೆಂದು ನಂಬಲಾಗಿದೆ

ವಿದ್ಯಾ ಇಲಾಖೆಗೆ ಈ ವರ್ಷ ಸಾಕಷ್ಟು ಹಣವಿಟ್ಟಿರುವದು ಸರಿಯಾಗಿದೆ ಕಾಲೇಜು ವಿದ್ಯಾಭ್ಯಾಸಕ್ಕೆ ೩ ಲಕ್ಷ ಹೈಸ್ಕೂಲ್ ವಿದ್ಯಾಭ್ಯಾಸದ ಬಾಬಿಗೆ ೧ ಲಕ್ಷ, ಪ್ರಾಥಮಿಕ ವಿಭಾಗಕ್ಕೆ ರೂ ೬ ಲಕ್ಷ ಹೆಚ್ಚಿಗೆ ಹಣ ಇರಿಸಿರುವದಲ್ಲದೆ ಪಂಚವಾರ್ಷಿಕ ಯೋಜನೆಯಂತೆ ವಿದ್ಯಾ ಪ್ರಗತಿಗೆ ೨ ಲಕ್ಷ ಹಣವಿಡಲಾಗಿದೆ ಈ ಹಣವು ಸೂಕ್ತ ರೀತಿ ವಿನಿಯೋಗವಾದರೆ ವಿದ್ಯೆಯಲ್ಲಿ ಕೊಡಗು ಒಂದು ಹೆಜ್ಜೆ ಮುಂದಿರುವದರಲ್ಲಿ ಸಂಶಯವಿಲ್ಲ.

ವೈದ್ಯಕೀಯ ಇಲಾಖೆಯ ವೇತನ ಔಷಧಿ ಮತ್ತಿತರ ಖರ್ಚಿಗಾಗಿ ಬಡ್ಜೆಟ್ ವರ್ಷದಲ್ಲಿ ೧½ ಲಕ್ಷ ರೂಪಾಯಿ ಹೆಚ್ಚಿಗೆ ಇರಿಸಿರುವದಲ್ಲದೆ ಅಭಿವೃದ್ಧಿಯ ಕೆಲಸಗಳಿಗಾಗಿ ಸುಮಾರು ಎರಡು ಮುಕ್ಕಾಲು ಲಕ್ಷ ಇರಿಸಿದ್ದು ಸಮಂಜಸವಿದೆ ವ್ಯವಸಾಯ ಇಲಾಖೆಗೆ ಮೂರು ಲಕ್ಷ ಮತ್ತು ಜಾನುವಾರು ಇಲಾಖೆಗೆ ಮುಕ್ಕಾಲು ಲಕ್ಷ ಹೆಚ್ಚಿಗೆ ಇಟ್ಟಿದ್ದು ಯೋಗ್ಯವಾಗಿದೆ ಈ ಇಲಾಖೆಗಳು ಇನ್ನೂ ಬೆಳೆಯ ಬೇಕಾದುದರಿಂದ ಇವುಗಳ ಬಗ್ಗೆ ಹೆಚ್ಚಿನ ಗಮನ ಅಗತ್ಯ

ಸಿವಿಲ್ ವರ್ಕ್ಸ್ ಇಲಾಖೆಗೆ ಈ ವರ್ಷ ೧೦ ಲಕ್ಷ ರೂಪಾಯಿ ಹೆಚ್ಚಿಗೆ ಇಡಲಾಗಿದೆ ಕಳೆದ ವರ್ಷ ಇಟ್ಟಿದ್ದ ಸುಮಾರು ೧೭ ಲಕ್ಷದಲ್ಲಿ ಎಷ್ಟು ಖರ್ಚಾಗಿದೆ ಎಂಬುದು ತಿಳಿದು ಬಂದಿಲ್ಲ ಈ ವರ್ಷ ಪಿ ಡಬ್ಲ್ಯು ಡಿ ಇಲಾಖೆಯನ್ನು ಸ್ಥಳೀಯ ಸರಕಾರದ ಅಧಿಕಾರಕ್ಕೆ ತೆಗೆದುಕೊಳ್ಳಲಿರುವದರಿಂದ ಈ ಇಲಾಖೆಯ ಕೆಲಸವು ಚುರುಕಾಗಿ ನಡೆದು ಇಟ್ಟಿರುವ ಹಣವು ಜನಹಿತಕಾರಕವಾಗಿ ವೆಚ್ಚವಾಗುವದೆಂದು ಭಾವಿಸಬಹುದಾಗಿದೆ

ಬಡ್ಜೆಟ್ಟಿನಲ್ಲಿ ಒಂದು ವಿಚಾರವನ್ನು ಎತ್ತಿ ಹೇಳಬೇಕಾಗಿದೆ ಈ ವರ್ಷ ಪಂಚವಾರ್ಷಿಕ ಯೋಜನೆಯ ಖರ್ಚಿಗೆ ೫೭ ಲಕ್ಷ ರೂಪಾಯಿಗಳನ್ನಿಡಲಾಗಿದೆ ಈ ೫೭ ಲಕ್ಷ ರೂಪಾಯಿಗಳನ್ನು ಯಾವ ಯಾವ ಕೆಲಸಗಳಿಗಾಗಿ ವಿನಿಯೋಗಿಸಲಾಗುವದೆಂಬುದು ಸ್ಪಷ್ಟವಾಗಿಲ್ಲ ಮುಖ್ಯ ಮಂತ್ರಿಯವರು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಕೆಲವು ಕಾರ್ಯಕ್ರಮಗಳ ಹೆಸರು ಹೇಳಿದರೂ ಈ ವಿಚಾರ ಸ್ಪಷ್ಟವಾಗಿಲ್ಲ ಹೇಗಿದ್ದರೂ ಈ ಬಾಬಿಗೆ ಕೇಂದ್ರದಿಂದ ವಂತಿಗೆ ರೂಪದಲ್ಲಿ ಕೇವಲ ಮೂರು ಲಕ್ಷ ರೂಪಾಯಿಗಳು ದೊರೆಯುವದಾಗಿದೆ ಇದು ಸರ್ವದಾ ಸಾಲದು ಬೇರೆ ಪ್ರಾಂತಗಳಲ್ಲಿ ಪಂಚವಾರ್ಷಿಕ ಯೋಜನೆಗಳಿಗೆ ಹೆಚ್ಚಿನ ಸಹಾಯ ಕೊಡಲ್ಪಡುತ್ತಿರುವಾಗ ಕೊಡಗಿಗೆ ಈ ಕಿಂಚಿತ್ ಸಹಾಯ ಸಾಲದು ಈ ಬಗ್ಗೆ ಹೆಚ್ಚಿನ ಸಹಾಯ ಪಡೆಯಲು ನಮ್ಮ ಸರಕಾರ ಯತ್ನಿಸಬೇಕಿದೆ ಕೇಂದ್ರ ಸರಕಾರದ ಸಹಾಯ ಸಾಕಷ್ಟು ಇಲ್ಲದೆ ಈ ವರ್ಷ ಪಂಚವಾರ್ಷಿಕ ಯೋಜನಾ ಖರ್ಚಿಗೆ ೫೭ ಲಕ್ಷ ರೂಪಾಯಿಗಳನ್ನಿರಿಸಲು ಸರಕಾರವು ಶಕ್ತವಾಗಿದ್ದರೆ ಈ ಹಿಂದೆ ಖರ್ಚು ಮಾಡದ ಉಳಿತಾಯ ಮಾಡಿದ ಸುಮಾರು ೮೦ ಲಕ್ಷ ರೂಪಾಯಿಗಳ ಶಿಲ್ಕೇ ಕಾರಣ ಇಂದಿನ ರಾಷ್ಟ್ರರಚನಾ ಕಾರ್ಯಗಳಿಗಾಗಿ ಉಪಯೋಗವಾಗುವಂತೆ ಹಣ ಉಳಿಸಿಟ್ಟ ಹಿಂದಿನ ಆಡಳಿತಗಾರರು ಈ ದೃಷ್ಟಿಯಿಂದ ವಂದನಾರ್ಹರು

ಕೈಗಾರಿಕೆಗಳನ್ನು ಬೆಳೆಸುವದಕ್ಕಾಗಿಯೂ ಸಹಕಾರಿ ಸಂಘಗಳಿಗಾಗಿಯೂ ಈ ವರ್ಷ ಸುಮಾರು ೪½ ಲಕ್ಷ ರೂಪಾಯಿಗಳನ್ನಿಟ್ಟಿದ್ದು ಅದರಲ್ಲಿ ೨½ ಲಕ್ಷ ರೂಪಾಯಿಗಳನ್ನು ಗುಡಿ ಕೈಗಾರಿಕೆಗಳ ಸ್ಥಾಪನೆಗೂ ರೂ ೧ ಲಕ್ಷವನ್ನು ಕೇಂದ್ರ ವರ್ಕ್ ಶಾಪ್ ತೆರೆಯಲೂ ಇಟ್ಟಿರುವದು ಯೋಗ್ಯವಾಗಿದೆ ಕೈಗಾರಿಕೆಯ ಸಹಾಯವಿಲ್ಲದ ಜನತೆಯ ಜೀವನಮಟ್ಟ ಮೇಲೇರಲಾರದು ಸರಕಾರದ ಈ ವಿಧಾಯಕ ನೀತಿಯು ಪ್ರಶಂಸನಾರ್ಹವಾಗಿದೆ

ಹೇಗೂ ಕೊಡಗಿನ ಮಂತ್ರಿ ಮಂಡಳವು ಏನೇ ಲೋಪಗಳಿರಬಹುದಾದರೂ ಜನತೆಯ ಹಿತ ದೃಷ್ಟಿಯಿಂದ ಮುಂದುವರಿವ ಪ್ರಯತ್ನ ಮಾಡುತ್ತಿದೆ ಈ ಪ್ರಯತ್ನ ಸಫಲಕಾರಿಯಾಗಲು ಜನತೆಯ ಬೆಂಬಲವೂ ಬೇಕು ಬಡ್ಜೆಟ್ ವರ್ಷದಲ್ಲಿ ಜನತೆಯ ಹಾರ್ದಿಕ ಬೆಂಬಲ ದೊರೆತು ರಾಷ್ಟ್ರ ರಚನಾ ಕಾರ್ಯ ಜಯಪ್ರದವಾಗಿ ನಡೆಯಲೆಂದು ಹಾರೈಸುವೆವು

ವರ್ತಮಾನ.

ಈ ದಿನ ಬೆಳಿಗ್ಗೆ ೧೦ ಗಂಟೆಗೆ ಶಾಸನ ಸಭಾ ಹಾಲ್‌ನಲ್ಲಿ ಕೊಡಗಿನಲ್ಲಿ ಈ ವರ್ಷ ಕ್ರಾಪ್ ಕಾಂಪಿಟಿಷನ್‌ನಲ್ಲಿ ಪ್ರಥಮ ಬಂದ ಶ್ರೀ ಕೊಕ್ಕಂಡ ಕಾರ್ಯಪ್ಪನವರಿಗೆ ರೂ ೧,೦೦೦ -ವೂ, ದ್ವಿತಿಯದಾಗಿ ಬಂದ ಶ್ರೀ ಮೂಕಂಡ ನಾಣಯ್ಯನವರಿಗೆ ರೂ ೭೫೦ – ಮೂರನೆಯದಾಗಿ ಬಂದ ಶ್ರೀ ಪಿ ರಾಜಾರಾಮರ ನಂಜಪ್ಪನವರಿಗೆ ರೂ ೫೭೦/ ಬಹುಮಾನವಾಗಿ ಕೊಡಗು ಚೀಫ್ ಕಮಿಷನರಿಂದ ಕೊಡಲ್ಪಟ್ಟಿತು ಪ್ರಥಮ ಬಂದವರು ಏಕರೆಗೆ ೧೨,೪೦೦ ಪೌಂಡು ಬತ್ತವನ್ನೂ, ದ್ವಿತೀಯದಾಗಿ ಬಂದವರು ೧೧,೮೮೫ ಪೌಂಡುಗಳನ್ನೂ, ತೃತಿಯದಾಗಿ ಬಂದವರು ೧೧,೬೦೦ ಪೌಂಡು ಬತ್ತವನ್ನೂ ಬೆಳಸಿರುವರು

೫೦ ಏಕರೆಗಳಿಗೆ ಕಡಿಮೆ ಇರುವ ವ್ಯವಸಾಯಗಾರರಿಗೆ ಮತ್ತು ತೋಟಗಾರರಿಗೆ ಸರಬರಾಯಿ ಮಾಡಲು ಸಾಕಷ್ಟು ಅಮೋನಿಯಮ್ ಸಲ್ಫೇಟ್ ಕೊಡಗು ವ್ಯವಸಾಯ ಇಲಾಖೆಗೆ ಶೀಘ್ರ ಬರಲಿದೆ. ಸ್ವಲದ ರೂಪವಾಗಿ ಇದನ್ನು ಪಡೆಯಲಿಚ್ಛಿಸುವವರು ೧೯೫೪ನೇ ಜುಲಾಯಿ ಒಳಗೆ ತಮ್ಮ ಮುಂದಿನ ಬೆಳೆಯಿಂದ ಮರುಪಾವತಿ ಮಾಡುವ ಒಪ್ಪಿಗೆ ಬರೆದು ಕೊಡಬೇಕು. ಅಲ್ಲದ ನೀರು ಹಾಯಿಸಲು ಪಂಪು ಬೇಕಾದವರು ಪಂಪಿನ ಕ್ರಯದ ಐದನೇ ಒಂದಂಶವನ್ನು ಅರ್ಜಿಯೊಂದಿಗೆ ಕಳುಹಿಸಿ ಗವರ್ನ್‌ಮೆಂಟ್ ಕರಾರು ಮಾಡಿ ಕೊಟ್ಟರೆ ಕಂತು ಮೂಲಕ ಮರುಪಾವತಿ ಮಾಡುವ ಅನುಕೂಲತೆಯಿಂದ ಪಂಪುಗಳನ್ನು ಒದಗಿಸಲಾಗುವದೆಂದೂ ಹೆಚ್ಚಿನ ವಿವರಗಳನ್ನು ವ್ಯವಸಾಯ ಅಧಿಕಾರಿಯವರಿಂದ ತಿಳಿದುಕೊಳ್ಳಬಹುದೆಂದೂ ಪ್ರಕಟವಾಗಿದೆ

ಚೀಫ್ ಕಮಿಷನರು ತಾ ೨೭ ರಲ್ಲಿ ಗೋಣಿಕೊಪ್ಪಲು ಪೊನ್ನಂಪೇಟೆ ರಸ್ತೆಯನ್ನು ಪರಿಶೀಲಿಸುವರು ತಾ ೨೮ರಲ್ಲಿ ಬೇತರಿ ಸೇತುವೆಯ ಅಸ್ತಿಭಾರ ಕಲ್ಲನ್ನು ಹಾಕುವರು ತಾ ೩ರಲ್ಲಿ ಮಾಕುಟಕ್ಕೆ ಹೋಗಿ ತಾ ೫ರಲ್ಲು ಮಡಿಕೇರಿಗೆ ಬರುವರು.

ಸೋಮವಾರಪೇಟೆ ಸಹಕಾರಿ ಮಹಿಳಾ ಸಮಾಜದ ವಯಸ್ಕರ ಶಿಕ್ಷಣ ಶಾಲೆ

ಚೀಫ್ ಕಮಿಷನರ ಭಾಷಣಕ್ಕೆ ವಂದನೆ.

ಶಾಸನ ಸಭಾಸದರನ್ನುದ್ದೇಶಿಸಿ ತಾ. ೩ರಲ್ಲಿ ಚೀಫ್ ಕಮಿಷನರು ಮಾಡಿದ ಭಾಷಣಕ್ಕಾಗಿ ಅವರನ್ನು ವಂದಿಸುವ ಠರಾವನ್ನು ಈ ದಿನ (ತಾ. ೨೫) ಪ್ರಶ್ನೋತ್ತರಗಳಾದ ಮೇಲೆ ಶ್ರೀ ಚೌರಿರ ಮುಂದಣ್ಣನವರು ಸಭೆಯ ಮುಂದಿಟ್ಟರು. ಚೀಫ್ ಕಮಿಷನರ ಭಾಷಣದ ವಿಚಾರ ಮಾತಾಡುತ್ತಾ ಇಷ್ಟೊಂದು ಮುತುವರ್ಜಿಯಿಂದ ಆಡಳಿತ ನಡೆಸುತ್ತಿರುವ ಚೀಫ್ ಕಮಿಷನರಿಗೂ ಮಂತ್ರಿಗಳಿಗೂ ದೇಶದ ಜನರು ಋಣಿಗಳಾಗಿರಬೇಕು. ಒಂದು ವರ್ಷದ ಆಡಳಿತದಲ್ಲಿ ಜಯಪ್ರದವಾದ ಕೆಲಸ ನಡೆದಿದೆ. ದೇಶದಲ್ಲಿ ಶಾಂತಿ, ಶಿಸ್ತು ನೆಲಸುವ ವಿಚಾರದಲ್ಲಿ ಹೆಚ್ಚು ನಿಗವಹಿಸಿ ದಕ್ಷತೆ ತೋರಲಾಗಿದೆ. ಭಯದ ನಿಸ್ಥಿತಿಯನ್ನು ಮಾಡಿರುವ ಕಾರಣ ಜನತೆಯ ದೃಷ್ಟಿಯೇ ಬದಲಾಗಿ ಇಂದು ಅಧಿಕಾರಿ ಹಾಗೂ ಜನತೆಯಲ್ಲಿ ಹೊಸ ಸಂಬಂಧ ಬೆಳೆದು ಬಂದಿದೆ. ಈ ದೇಶವು ತನ್ನ ಪರಂಪರೆಗಳಿಗೆ ಆದರ್ಶವಾಗಿದೆ. ಕೆಲವು ಸಮಯದ ಹಿಂದೆ ಈ ಪರಂಪರೆಗೆ ಧಕ್ಕೆ ಬರುವ ಪರಿಸ್ಥಿತಿ ಬಂದಿತ್ತು. ಆದರೆ ಚೀಫ್ ಕಮಿಷನರ ದೂರ ದೃಷ್ಟಿಯು ಮತ್ತು ಕುಶಲತೆಯ ಕಾರಣ ಅದು ಉಳಿಯುವಂತಾಯಿತು. ಜಯವನ್ನು ಪಡೆದೇ ತೀರುವೆನೆಂದು ನಿರ್ಧರಿಸಿದ ಸರಕಾರವು ಅಪಜಯವನ್ನು ಪಡೆಯಲಾರದು ಎಂದರು.

ಶ್ರೀ. ಗುಂಡುಕುಟ್ಟಿ ಮಂಜನಾದಯ್ಯನವರು ಠರಾವನ್ನು ಸಮರ್ಥಿಸುತ್ತಾ ಹೀಗೆ ಹೇಳಿದರು— ದೇಶದ ಪರಿಸ್ಥಿತಿಯ ನಿಜ ಚಿತ್ರವು ನಮ್ಮ ಮುಂದಿಡಲ್ಪಟ್ಟಿದೆ. ಚೀಫ್ ಕಮಿಷನರವರು ದೇಶದ ಆಡಳಿತದ ಬಗ್ಗೆ ವಹಿಸುತ್ತಿರುವ ಆಸಕ್ತಿಯು ಪ್ರಶಂಸನಾರ್ಹ. ಶ್ರೀ ಪೂಣಚ್ಚನವರು ದೇಶಕ್ಕೆ ಒಳ್ಳೆ ಖ್ಯಾತಿ ತಂದಿರುವರು. ದೇಶವು ಚಿಕ್ಕದಾದರೂ ಹಿಂದೂದೇಶದ ಭೂಪಟದಲ್ಲಿ ಈ ಘಟನೆಯಿಂದಾಗಿ ಸ್ಥಾನವೆಯುಂಟಾಯಿತು. ನಮ್ಮ ಉತ್ಪತ್ತಿಯನ್ನು ನಾವು ಇನ್ನಷ್ಟು ಹೆಚ್ಚು ಮಾಡಬಹುದು. ಕೊಡಗು ಹಿಂದೂದೇಶದ ಒಟ್ಟು ಕಾಫಿ ಬೆಳೆಯ ಶೇಕಡ ೪೦ ರಷ್ಟನ್ನು ಉತ್ಪಾದಿಸುತ್ತದೆ. ಕಾಫಿಯ ಬೆಲೆಯನ್ನು ಇಳಿಸಕೂಡದೆಂದು ಚೀಫ್ ಕಮಿಷನರರು, ಮುಖ್ಯ ಮಂತ್ರಿಗಳೂ ಮಾಡುತ್ತಿರುವ ಪ್ರಯತ್ನವು ಮಂದನೆಗೆ ಅರ್ಹ. ಕೊಡಗಿನ ಹಾಡುಹಾಸು ಸ್ಥಿತಿಯು ಮುಂದಿನ ಸತ್ವಸ್ಥತ್ತು ವರ್ಷಗಳಲ್ಲಿ ಅವರ್ಣನೀಯವಾಗುವ ಚಿಹ್ನೆ ಕಂಡು ಬರುತ್ತಿದೆ. ತಗ್ಗ ಬೇಸಾಯದ ಯೋಜನೆಗಾಗಿ ಸರಕಾರವು ಸಾಲವನ್ನು ಕೊಡುವ ಪ್ರಯತ್ನ ಮಾಡುತ್ತಿದೆ. ಆದರೆ ಇನ್ನೂ ಒಂದು ಯೋಜನೆ ಬೇಕಿತ್ತು. ಆದ್ದರಿಂದ ಇಲ್ಲಿಂದ ಕೆಲಸ ಮಾಡದೆ ಸ್ವತಂತ್ರ ದೇಶ ಸಂಘವಾರ್ಷಿಕ ಯೋಜನೆ ಮಾಡಿ ಈ ಕೆಲಸ ಕೈಕೊಳ್ಳುವುದು ಹಿತ. ಕೊಡಗಿನ ಕಣಜವೇ ದಕ್ಷಿಣ ಕೊಡಗಾದರೂ ಆ ಕಡೆಯ ವ್ಯವಸಾಯದ ಬಗ್ಗೆ ಏನೂ ವಿಚಾರವೇನೂ ನಡೆಯಲಿಲ್ಲ. ಲಕ್ಷ್ಮಣತೀರ್ಥ ಮತ್ತು ಹಾರಂಗಿ ಅಣೆಕಟ್ಟುಗಳು ಆಗುವ ಭರವಸೆ ತೋರುವದಿಲ್ಲ. ಬತ್ತಕ್ಕೆ ಹೆಚ್ಚಿನ ದರ ದೊರೆಯುವಂತೆ ಮಾಡಿದ್ದಕ್ಕೆ ನಮ್ಮ ಕಾಫಿ ಬೆಲೆಯನ್ನು ರೈಗಳಿಗೆ ದೊರೆತಂತೆ ಮಾಡುತ್ತಿರುವ ಯುಕ್ತವೂ ಹೊಗಳಲರ್ಹವಾದುದು. ಕಾಡುಗಳ ಉತ್ಪತ್ತಿಯ ವಿಚಾರದಲ್ಲಿ ಸರಕಾರದ ಫಾರೆಸ್ಟು ನೀತಿಯು ನನಗೆ ಸಮರ್ಪಕವಾಗಿ ತೋರುವದಿಲ್ಲ. ಕೋಆಪರೇಟಿವ್ ಇಲಾಖೆ ಸಾಕಷ್ಟು ನಡೆಯುತ್ತಿಲ್ಲ. ಕೊಡಗಿನ ಮ್ಯುನಿಸಿಪಲ್ ಪ್ರಾಜೆಕ್ಟು ಕೆಲಸ ಚೆನ್ನಾಗಿದೆ. ಕ್ರಮವರಿ ಕೊಡಗು ಈ ವಿಚಾರದಲ್ಲಿ ಭಾರತಕ್ಕೆ ಆದರ್ಶವಾಗಬಹುದು.

ಶ್ರೀ. ಪಿ. ಕೆ. ಚೆನ್ನಯ್ಯನವರು ಮಾತಾಡುತ್ತಾ ದೇಶದ ಆಡಳಿತವು ಬಹು ಚೆನ್ನಾಗಿದೆ. ಚೀಫ್ ಕಮಿಷನರು ತಮ್ಮ ಹೆಸರಿಗೆ ತಕ್ಕಂತೆ ದಯಾಶೀಲರೂ, ದಯಾವಂತರೂ ಆಗಿದ್ದಾರೆ. ಆಂಜನೇಯನಿಗೂ ಶ್ರೀರಾಮನಿಗೂ ಇದ್ದ ಸಂಬಂಧದಂತೆ ದಳಿತವರ್ಗ ಮತ್ತು ಚೀಫ್ ಕಮಿಷನರ ಸಂಬಂಧವಿದೆ. ಅವರು ದಳಿತ ವರ್ಗದವರಿಗೆ ಭೂಮಿ, ಜಾಗ, ವಿದ್ಯಾಭ್ಯಾಸ ಪಡೆಗಿಸಿ ಕೊಟ್ಟಿದ್ದಾರೆ. ಅವರು ಚಿರಾಯುವಾಗಲಿ ಎಂದರು.

ಶ್ರೀ. ಕೆ. ಪಿ. ಕರುಂಬಯ್ಯನವರು ಮಾತಾಡುತ್ತಾ ಫಾರೆಸ್ಟು ಮತ್ತು ವ್ಯವಸಾಯ, ಇವೆರಡೇ ಕೊಡಗಿನ ಸಂಪತ್ತಿನ ಮೂಲ ಮಾರ್ಗಗಳು. ವ್ಯವಸಾಯದ ಬಗ್ಗೆ ಕೈಗಾರಿಕೆ ಬೆಳೆಯಬೇಕಾದರೆ ವಿದ್ಯುಚ್ಛಕ್ತಿ ಬೇಕು. ಈ ವಿಚಾರದಲ್ಲಿ ಮೈಸೂರಿನಿಂದ ವಿದ್ಯುತ್ ಪಡೆಯುವ ಮತ್ತು ಬರಪೊಳೆಯೋಜನೆಯನ್ನು ಕೈಕೊಳ್ಳುವ ಪ್ರಯತ್ನವು ಶ್ಲಾಘನೀಯವಾಗಿದೆ. ವಿದ್ಯಾ ಇಲಾಖೆಯ ಕೆಲಸ ಚೆನ್ನಾಗಿದೆ. ಸಾಮಾಜಿಕ ವಿದ್ಯೆಯು ಅನುಕೂಲತೆ ಯೋಗ್ಯವಾದುದು. ಆದರೆ ಕಾಲೇಜಿಗೆ ಮತ್ತು ಕೆಲವು ಹೈಸ್ಕೂಲುಗಳಿಗೆ ವಿದ್ಯಾರ್ಥಿ ನಿವಾಸಗೃಹಗಳಾಗಬೇಕು. ಕಾಲೇಜಿನಲ್ಲಿ ಸೀನಿಯರ್ ಡಿವಿಜನ್ ಎನ್. ಸಿ. ಸಿ ಸ್ಥಾಪಿಸಬೇಕು. ಮುಂದೆ ನಮ್ಮ ಸರಕಾರವು ದೊಡ್ಡ ಕೆಲಸ ಕಾರ್ಯಗಳನ್ನು ಕೈಗೊಳ್ಳುತ್ತಿರುವಾಗ ಪಿ. ಡಬ್ಲ್ಯು. ಡಿ. ಇಲಾಖೆಯನ್ನು ಕೇಂದ್ರದ ಹಿಡಿತದಿಂದ ತೆಗೆದುಕೊಳ್ಳುವುದು ಸೂಕ್ತವೋ ತಿಳಿಯದು. ದೇಶದಲ್ಲಿ ಶಾಂತಿ ಇದೆಯೆನ್ನಬಹುದಾದರೂ ಕೊಲ್ಲೂ ಕೊಲೆಗಳು ದಿನನಿತ್ಯದ ಘಟನೆಗಳಾಗಿವೆ. ಸರಕಾರ ಈ ಕಡೆ ಗಮನವಿಡಬೇಕು.

ಶ್ರೀ. ಪಿ. ಸಿ. ಉತ್ತಯ್ಯನವರು ಮಾತಾಡುತ್ತಾ, ವ್ಯವಸಾಯ ಮತ್ತು ಫಾರೆಸ್ಟು ಇವೆರಡು ದೇಶದ ಬೆನ್ನೆಲುಬುಗಳೆಂದರೂ ಇವೆರಡರಲ್ಲಿ ಮೋಪಿಕೆ ಕ್ಷೀಣವಾಗಿದೆ. ವ್ಯವಸಾಯಕ್ಕೆ ನೀರುಬೇಕು. ಮಳೆಯೊಂದೇ ಬೇಕಾದರೆ ಕಾಯಬೇಕು. ಆದರೆ ಕಾಡನ್ನು ಕಡಿದು ಪಾರಿಸ್ಥಗಳು ಬಯಲಾಗುತ್ತಿವೆ. ಇದು ಪನುಸರಣ ನೀತಿಯಲ್ಲ. ದರ್ಪದಲ್ಲಿ ದನಗಳಿಗೆ ಕೃತಕ ಗರ್ಭದಾನದ ವ್ಯವಸ್ಥೆ ಇರುವಾಗ ಅದಷ್ಟು ಉತ್ತಮಗೂಳಿಗಳನ್ನು ಏರ್ಪಡಿಸಬೇಕು. ಪೋಲೀಸಾಕಿಲೆಯ ಸೂರಿನಿಂದ ದಿನಕೂಲಿಗಳ ಪ್ರಯೋಜನಕಾರಿಯಾಗಲಿಲ್ಲ. ಸಮುದಾಯ ತಿಕ್ಷಣ ವ್ಯವಸ್ಥೆ ಚೆನ್ನಾಗಿದೆ. ಇದರ ಶಿಕ್ಷಣಾಭ್ಯಾಸದ ನಂತರ ಜಿಮ್ಮ ಹವ್ಯಾಸ ಬಿಟ್ಟು ಹೋಗದಂತೆ ಹಳ್ಳಿಗಳಲ್ಲಿ ವಾಚನಾಲಯ ಏರ್ಪಡಿಸಬೇಕು. ದೇಶದ ಜನರ ಭಯನಿವಾರಣೆ ಮಾಡುವದು ಸರಕಾರದ ಕರ್ತವ್ಯವೆನ್ನುವ ಅವರಧ್ವನಿಕ ಅಗುಹೋಗುಗಳಲ್ಲಿ ಸರಕಾರ ಕೈಹಾಕಬೇಕು. ಇನ್ನು ಆದರೆ ದೇಶದಲ್ಲಿ ಸಿ. ಐ ಡಿಗಳು ಹೆಚ್ಚಾಗಿರುವದೆಂದು ನನಗೆ ವರ್ತಮಾನವಿದೆ. ಪ್ರತಿಯೊಬ್ಬನ ಬೆಂಬತ್ತಿ ಹೇವು ತೆಗೆಯುವ ಕೆಲಸ ನಡೆಯುತ್ತಿದೆ. ಅವರು ಇರಲಿ ಇಲ್ಲದಿರಲಿ ಈ ಭಯ ಹಲವರಲ್ಲಿದೆ. ಇದು ಸರಿಯಲ್ಲ.

ಶ್ರೀ. ಪಿ. ಎ. ನಾಣಯ್ಯನವರು ಮಾತಾಡುತ್ತಾ, ಇದು ಅನಂದದ ಸಂದರ್ಭ. ಪ್ರತಿ ಕ್ಷೇತ್ರದಲ್ಲೂ ನಾವು ಮುಂದುವರಿದಿರುವೆವು. ಮಂತ್ರಿಗಳು ಎಷ್ಟು ದಕ್ಷತೆಯಿಂದ ಕೆಲಸ ಮಾಡಿದ್ದಾರೆಂಬುದು ಪರಿಶೀಲಿಸಿದರೆ ತಿಳಿಯುತ್ತದೆ. ನೀರಾವರಿ ಕೆಲಸದಲ್ಲಿ, ಗ್ರಾಮ ರಸ್ತೆಗಳಲ್ಲಿ ಬಜೆಟ್ಟಿನಲ್ಲಿ ಏರ್ಪಡಿಸಿದ ಎಲ್ಲ ಕೆಲಸಗಳನ್ನು ನಡೆಸಲಾಗಿದೆಯೆನ್ನಬಹುದು. ಚೀಫ್ ಕಮಿಷನರು ತಮ್ಮ ಭಾಷಣದಲ್ಲಿ ಮುಂದಿನ ಕಾರ್ಯಕ್ರಮಗಳ ರೂಪರೇಖೆಯನ್ನು ಕೊಟ್ಟಿದ್ದಾರೆ. ಅವರ ನೇತೃತ್ವದಲ್ಲಿ ಮಂತ್ರಿ ಮಂಡಳವು ಇನ್ನೂ ಆದರ್ಶವಾಗಿ ಕೆಲಸ ಮಾಡಿ ಎಲ್ಲಾ 'ಸಿ' ಪ್ರಾಂತಗಳಿಗೆ ತಿಲಕ ಪ್ರಾಯವಾಗಿರಲಿ.

ಯಲ್ಲಿ ತಾ. ೧೨ರಲ್ಲಿ ಡಾ. ಎಂ. ಎಂ. ಕಾಳಪ್ಪನವರು ಆರೋಗ್ಯದ ಕುರಿತು ಭಾಷಣ ಮಾಡಿದರು. ತಾ. ೧೯ರಲ್ಲಿ ಸಾಮೂಹಿಕ ವಿಕಾಸ ಯೋಜನೆಯ ಸಾಮಾಜಿಕ ವಿದ್ಯಾ ವಿಭಾಗದ ಮುಖ್ಯರಾದ ಶ್ರೀ ಪಿ. ಜಿ ಮುತ್ತಪ್ಪನವರು ಈ ಶಾಲೆಗೆ ಬಂದು ಸೂಕ್ತ ಬೋಧನೆ ಕೊಟ್ಟರು. ರಾತ್ರಿಯಲ್ಲಿ ೨೭ ಜನ ಸ್ತ್ರೀಯರು ವಿದ್ಯೆ ಕಲಿಯುತ್ತಿರುವರು. ಇವರಲ್ಲಿ ೫ ಜನ ಮುಸ್ಲಿಂ ಮಹಿಳೆಯರಿರುವರು.

ತಾ. ೧೦ರಲ್ಲಿ ಶ್ರೀ ಕುಂಬುಗೌಡನ ಮಾಚಯ್ಯನವರು ಮುಕ್ಕೊಂಡೂರು ಗ್ರಾಮದ ಜನರಿಗೆ ತೊಂದರೆ ಕೊಡುತ್ತಿದ್ದ ೧೦ ಅಡಿ ಉದ್ದ ೪॥ ಅಡಿ ಎತ್ತರದ ಹೆಬ್ಬುಲಿಯೊಂದನ್ನು ಗುಂಡಿಕ್ಕಿ ಕೊಂದರು.

ಸೋಮವಾರಪೇಟೆ ಕುರುಂಬರ ಪೆಟ್ಟಿ ಕೋಟೆಯ ಶ್ರೀ ಐ ಎಂ. ಕುಶಾಲಪ್ಪನವರು ತಾ. ೧೫ರಲ್ಲಿ ಒಂದು ಕರಿ ಹುಲಿಯನ್ನೂ, ತಾ. ೧೭ರಲ್ಲಿ ಎರಡು ಹೆಬ್ಬುಲಿಗಳನ್ನೂ ಗುಂಡಿಕ್ಕಿ ಕೊಂದಿರುವರು. ಈ ವರೆಗೆ ಇವರು ೧೭ ಹುಲಿಗಳನ್ನು ಕೊಂದಿರುವರಂತೆ!

ಕಾವೇರಿ ಹೊಳೆಗೆ ಚೇರಿಯಲ್ಲಿ ಸೇತುವೆ ಕಟ್ಟುವ ಕಾರ್ಯವನ್ನು ಸರಕಾರ ಕೈಕೊಂಡು ತಾ. ೨೦ರಲ್ಲಿ ಮಧ್ಯಾಹ್ನ ೧—೩೦ ಗಂಟೆಗೆ ಕೊಡಗಿನ ಚೀಫ್ ಕಮಿಷನರು ಸೇತುವೆಯ ಅಸ್ತಿಭಾರ ಹಾಕಲಿರುವರು.

ಮೈಸೂರು ಸಂಸ್ಥಾನದಲ್ಲಿ ವಯಸ್ಕರ ಶಿಕ್ಷಣ ಪ್ರಚಾರಕರಾಗಿದ್ದ ಶ್ರೀ ಪುಲಿಯಂಡ ಮುತ್ತಪ್ಪನವರನ್ನು ಕೊಡಗಿನ ಸಾಮಾಜಿಕ ವಿದ್ಯಾಧಿಕಾರಿಯಾಗಿ ನೇಮಿಸಲಾಗಿದೆ.

ಕೊಡಗು ಕಾವೇರಿಯ ವಾರ್ಷಿಕ ಮಹಾಸಭೆಯು ತಾ. ೩೧ರ ಶನಿವಾರ ಬೆಳಿಗ್ಗೆ ೧೧ ಗಂಟೆಗೆ ವೀರಾಜಪೇಟೆ ಸಹಕಾರ ಮಾರ್ಕೆಟಿಂಗ್ ಫೆಡರೇಶನ್ ಹಾಲ್‌ನಲ್ಲಿ ನಡೆಯುವುದು.

ಏಪ್ರಿಲ್ ತಾ. ೧ರಿಂದ ಸದಾನಂದ ಹೊಸ ಬಸ್ ಸರ್ವಿಸ್ ಪೆಬ್ಬಾಲೆಯಿಂದ ೭ ಗಂಟೆಗೆ ಹೊರಟು, ಮಡಿಕೇರಿಗೆ ಬಂದು, ೩ ಮ್ಯಾಹ್ನದಕ್ಕಾಗಿ ವಿ.ರಾಜಪೇಟೆಗೆ ಹೋಗಿ ವಾಪಸು ಮಡಿಕೇರಿಗೆ ಬಂದು ಸಾಯಂಕಾಲ ಪೆಬ್ಬಾಲೆಗೆ ತಲುಪುತ್ತದೆ.

——



ಮುಖ್ಯ ಮಂತ್ರಿ ಪೂಣಚ್ಚನವರು.

ಶ್ರೀ ಕೋರನ ದೇವಯ್ಯನವರು ಮಾತಾಡುತ್ತಾ ಸರಕಾರವು ಈ ವರೆಗೆ ಏನೂ ದೃಷ್ಟಿಯಿಡದ ಭಾಗಮಂಡಲದಿಂದ ಬಂದ ಪ್ರತಿನಿಧಿ ನಾನು. ಆದರೆ ಜನ ಪ್ರಿಯ ಸರಕಾರ ರಚಿತವಾದ ಈ ಒಂದು ವರ್ಷದಲ್ಲಿ ಅನೇಕ ಕೆಲಸಗಳಾಗಿವೆ. ಜನರು ತಾವು ಮತವಿತ್ತದ್ದು ಸಾರ್ಥಕವಾಯಿತೆನ್ನುತ್ತಾರೆ. ಇಷ್ಟು ಕ್ಷಿಪ್ರ ಸಮಯದಲ್ಲಿ ನಮ್ಮ ಸರಕಾರ ಇಷ್ಟು ಸಾಧಿಸಬಹುದೆಂದು ನಾನು ನೆನೆಸಿರಲಿಲ್ಲ. ಮಂತ್ರಿಗಳ ಅವಿರತ ದುಡಿಮೆ ಚೀಫ್ ಕಮೀಷನರ ದಕ್ಷ ಮಾರ್ಗದರ್ಶನದಿಂದ ಸರ್ವವೂ ಸಾಧ್ಯವಾಯಿತು. ಕೂಡಿಗೆ ಪರಿಶೋಧನಾ ಕ್ಷೇತ್ರವನ್ನು ನೋಡಿ ಆನಂದಿಸಬೇಕು. ಕಾಜೂರು ಗ್ರಾಮಸ್ಥರು ಒಂದು ವರ್ಷದಲ್ಲಿ ಹತ್ತು ಸಾವಿರ ರೂಪಾಯಿಗಳ ಕೋಳಿ, ಮೊಟ್ಟೆ ಮಾರಿ ಸಂಪಾದಿಸಿದ್ದು ಪ್ರಶಂಸನೀಯ. ಇದೇ ರೀತಿಯಲ್ಲಿ ಕಾರ್ಯ ಸಾಗಿದರೆ ಕೊಡಗು 'ಸಿ' ಭಾಗಗಳಿಗೆ ಮಾತ್ರವಲ್ಲ, ಎಲ್ಲಾ ಸಂಸ್ಥಾನಗಳಿಗೂ ಆದರ್ಶವಾಗುವದು.

ಶ್ರೀ ಪಿ. ಡಿ. ಸುಬ್ಬಯ್ಯನವರು ಮಾತಾಡುತ್ತಾ ಕೊಡಗಿನಜನರ, ಈ ಸಭೆಯ, ಹಾಗೂ ನನ್ನ ಪರವಾಗಿ ಚೀಫ್ ಕಮಿಷನರ ಭಾಷಣಕ್ಕೆ ವಂದನೆಗಳು. ಕಾಂಗ್ರೆಸ್ ಘೋಷಣೆಯಂತೆ ನಮ್ಮ ಕೆಲಸ ಸರಾಗವಾಗಿ ನಡೆಯುತ್ತಿದೆ. ಕೊಡಗಿನ ನಿಷ್ಪಕ್ಷಪಾತ ಆಡಳಿತವು ಪ್ರಶಂಸನೀಯವಿದೆ. ಗ್ರಾಮಾಭಿವೃದ್ಧಿ, ಜ್ಞಾನಾಭಿವೃದ್ಧಿ ಹಾಗೂ ಆರ್ಥಿಕ ಅಭಿವೃದ್ಧಿಯ ಕಡೆ ಗಮನ ಕೊಡಲಾಗಿದೆ. ಚೀಫ್ ಕಮಿಷನರ ಹೃದಯ ಪರೀಕ್ಷೆಯೆಂದರೆ ಅವರು ದನಕರು ಕೋಳಿ ಸಾಕುವವರ ಮೇಲಿಟ್ಟ ದಯೆ. ಪ್ರಾಣಿಗಳ ಮೇಲೆ ದಯೆ ತೋರಿಸುವವನು ದೇವರ ದಯೆಗೆ ಪಾತ್ರನಾಗುವನೆಂದಂತೆ ಚೀಫ್ ಕಮಿಷನರು ಧನ್ಯರು.

ಮುಖ್ಯಮಂತ್ರಿ ಶ್ರೀ ಸಿ. ಯಂ. ಪೂಣಚ್ಚನವರು ಮಾತಾಡುತ್ತಾ ಸದಸ್ಯರು ಸರಕಾರ ಸಲ್ಲಿಸಿದ ಕಿಂಚಿತ್ ಸೇವೆಗೆ ಮಾಡಿದ ಪ್ರಶಂಸೆಗಾಗಿ ವಂದಿಸುತ್ತೇನೆ. ನಾವು ಸರಿದಾರಿಯಲ್ಲಿ ಮುಂದರಿಯುತ್ತಿರುವೆವು. ಈ ಸಾಧನೆಗೆ ದೇಶದ ವ್ಯವಸಾಯಗಾರರನ್ನು ಪ್ಲಾಂಟರುಗಳನ್ನು ಮತ್ತು ನಮ್ಮನ್ನು ನಾವೇ ವಂದಿಸಿಕೊಳ್ಳಬೇಕಾಗಿದೆ. ಕೊಡಗಿನ ಕಾಫಿ ವ್ಯವಸಾಯವು ಹಿರಿದಾದುದು. ಇಡೀ ಹಿಂದೂಸ್ಥಾನದ ಒಟ್ಟು ಉತ್ಪತ್ತಿಯಾದ ೨೧,೦೦೦ ಟನ್ನುಗಳಲ್ಲಿ ೯,೦೦೦ ಟನ್ನುಗಳು ಇಲ್ಲಿ ಬೆಳೆಯುತ್ತವೆ. ಕಾಫಿ ವ್ಯವಸಾಯದ ಸ್ಥಳದ ದೃಷ್ಟಿಯಿಂದ ಕೊಡಗಿನಲ್ಲಿಯ ತೋಟಗಳ ವಿಸ್ತೀರ್ಣ ಶೇಕಡ ೩೦ ರಷ್ಟಾದರೂ ಉತ್ಪಾದನೆಯು ಶೇಕಡ ೪೦ ಕ್ಕಿಂಥಾ ಹೆಚ್ಚಿದೆ. ಕಾಫಿಯಬೆಲೆಯನ್ನು ಕಡಿಮೆ ಮಾಡುವ ಕೇಂದ್ರ ಸರಕಾರದ ಆಲೋಚನೆಗೆ ವಿರುದ್ಧವಾಗಿ ಅಭಿಪ್ರಾಯ ಕೊಟ್ಟು ಬೆಲೆ ಇಳಿಸ ಕೂಡದೆಂದು ವಾದಿಸಲಾಗಿದೆ. ಕೊಡಗಿನಲ್ಲಿ ಬೆಳೆ ಈ ವರ್ಷ ಚೆನ್ನಾಗಿಲ್ಲದಿದ್ದರೂ ನಾವು ನಿರೀಕ್ಷಿಸಿದ ಆರು ಸಾವಿರ ಟನ್ನು ಅಕ್ಕಿಯನ್ನು ಈಗಾಗಲೇ ಮೈಸೂರಿಗೆ ಕೊಡಲಾಗಿದೆ. ಇನ್ನೂ ಸ್ವಲ್ಪ ಅಕ್ಕಿ ಕೊಡುವಷ್ಟು ಉಳುವರಿ ದೇಶದಲ್ಲಿ ತೋರಿಬರುತ್ತಿದೆ. ಕೊಡಗಿನ ಆಂತರಿಕ ಉಪಯೋಗಕ್ಕಾಗಿ ೪,೦೦೦ ಟನ್ನು ಬೇರೆ ಇಡಲಾಗಿದೆ.

ಲಕ್ಷ್ಮಣ ತೀರ್ಥ ಆಣೆ ಕಟ್ಟು ಕಟ್ಟುವದಕ್ಕಿಂಥಾ ಬೇರೆ ರೀತಿಯಲ್ಲಿ ನೀರು ಹಾಯಿಸುವ ಏರ್ಪಾಡು ಹಿತವೆಂದು 'ಸ್ಪಿಂಕ್' ಪರಿಶೀಲನಗಾರರು ವರದಿಮಾಡಿದ್ದಾರೆ. ಅಲ್ಲಿಯ ನದಿ ಕರಾವಳಿಗಳೆಲ್ಲವೂ ಮರಳಾದ ಕಾರಣ ಹೊಳೆಯು ಕಾಲಕಾಲಕ್ಕೆ ತಡಿ ಬದಲಾಯಿಸುವದರಿಂದ ಕಟ್ಟೆ ಕಟ್ಟುವುದು ಪ್ರಯಾಸದ ಕೆಲಸವಾಗಿದೆ.

ಅದರ ಬದಲು ಪಂಪುಗಳನ್ನು ಕೊಟ್ಟು ನೀರು ಹಾಯಿಸುವ ಏರ್ಪಾಡನ್ನು ಈ ವರ್ಷ ಮಾಡಲಾಗುವುದು. ಕೊಲ್ಲಿ ತೋಡಿನ ತೊಂದರೆ ನೀಗಲು ಲಕ್ಷ್ಮಣ ತೀರ್ಥ ಹೊಳೆಯನ್ನು ನೆಟ್ಟಗೊಳಿಸಿ ಸರಿಗೊಳಿಸುವ ಪ್ರಯತ್ನ ನಡೆದಿದೆ. ಹಾರಂಗಿ ಯೋಜನೆಯ ಬಗ್ಗೆ ಮೈಸೂರು ಆಸಕ್ತಿ ವಹಿಸಿರುವದರಿಂದ ಎರಡು ಸರಕಾರಗಳು ಈ ವಿಚಾರ ಪರಿಶೀಲನೆ ಮಾಡುತ್ತಿವೆ.

ಫಾರೆಸ್ಟ್ ನೀತಿಯ ಬಗ್ಗೆ ಮರ ಕಡಿಯುವದರಿಂದ ಮಳೆ ಕಡಿಮೆಯಾಗುವದನ್ನು ಒಪ್ಪಬಹುದಾದರೂ ಸರಕಾರವು ಘಾಟ್ ಫಾರೆಸ್ಟುಗಳನ್ನು ಮುಟ್ಟುತ್ತಿಲ್ಲ. ಪೂರ್ವ ಭಾಗದಲ್ಲಿ ರೀಜನರೇಶನ್ ಕೆಲಸ ನಡೆಯುತ್ತಿದೆ, ವಯಸ್ಕರ ಶಿಕ್ಷಣ ಮುಗಿಸಿದ ನಂತರ ಅವರಲ್ಲಿ ಆರಿಸಲ್ಪಟ್ಟವರಿಗೆ ಸಾಮಾಜಿಕ ಕೆಲಸದ ತರಬೇತು ಕೊಡಲು ಜನತಾ ಕಾಲೇಜನ್ನು ತೆರೆಯಲಾಗುವುದು. ಕಾಲೇಜ್ ವಿದ್ಯಾರ್ಥಿ ನಿವಾಸ ಗೃಹ ಮತ್ತು ವೀರಾಜಪೇಟೆ ಹೈಸ್ಕೂಲ್ ವಿದ್ಯಾರ್ಥಿ ನಿವಾಸ ಗೃಹ ಕೆಲಸಗಳನ್ನು ಬೇಗ ಕೈಕೊಳ್ಳಲಾಗುವುದು. ದೇಶದಲ್ಲಿ ಆಗುವ ಅನಿರೀಕ್ಷಿತ ಕೊಲೆ ದರೋಡೆಗಳಿಗೆ ಸರಕಾರ ಬಂದೋಬಸ್ತು ಮಾಡುವದು ಪ್ರಯಾಸ. ವ್ಯವಸ್ಥಿತ ಪ್ರಯತ್ನಗಳಿದ್ದರೆ ಅಂಥಾದ್ದನ್ನು ಸರಕಾರ ಹತ್ತಿರುವದು. ಸಿ. ಐ. ಡಿ. ಯವರು ಜನರ ಬೆಂಬತ್ತುತ್ತಿರುವರೆಂಬುದು ಸರಿಯಲ್ಲ. ಕೆಲವು ಜನರಿಗೆ ಈ ರೀತಿಯ ಆತ್ಮಭಯವಿರುವದರಿಂದ ಅವರಿಗೆ ಎಲ್ಲರೂ ಸಿ. ಐ. ಡಿ ಗಳಂತೆ ತೋರಬಹುದು. ಅದಕ್ಕೆ ಸರಕಾರ ಏನೂ ಪರಿಹಾರ ಮಾಡಲಾರದು ಎಂದರು.

ಶ್ರೀ ಸಿ. ಎ ಮಂದಣ್ಣನವರು ಉತ್ತರವೀಯುತ್ತಾ- ಸಿ. ಐ. ಡಿ. ಗಳು ಎಲ್ಲಿರುವರೊ ನನಗೆ ತಿಳಿಯದು. ನಾನು ನ್ಯಾಯ ರೀತಿಯಿಂದ ನನ್ನ ಕೆಲಸ ಮಾಡುತ್ತಿರುವ ವರೆಗೆ ನಾನು ಮಲಗುವ ಕೋಣೆಯನ್ನು ಬಿಟ್ಟು ಎಲ್ಲಿ ಯಾರೂ ಹಿಂಬಾಲಿಸಿದರೂ ನನಗೆ ಹೆದರಿಕೆ ಇಲ್ಲ ಎಂದರು.

ಠರಾವು ಓಟಿಗೆ ಹಾಕಲ್ಪಟ್ಟು ಸರ್ವಾನುಮತದಿಂದ ಪಾಸಾಯಿತು.

ಅಹಿಂಸೆಯಲ್ಲಿ ನಮಗೆ ನಂಬಿಕೆಯಿಲ್ಲ.

ದಬ್ಬಾಳಿಕೆ ನಡೆಸಿದರೆ ಹಿಂಸೆಯುಂಟಾದೀತು

'ಕಮ್ಯುನಿಸ್ಟ್ ಪಕ್ಷಕ್ಕೆ ಅಹಿಂಸೆಯಲ್ಲಿ ನಂಬಿಕೆಯಿಲ್ಲ. ಆದರೆ ಅದು ಹಿಂಸಾವೃತ್ತಿಯನ್ನು ಅನುಸರಿಸುವುದಿಲ್ಲ. ಅದರ ಮೇಲೆ ಸರಕಾರಗಳು ಆಕ್ರಮಣ ನಡೆಸಿದರೆ ಹಿಂಸೆಯುಂಟಾದೀತು' ಎಂದು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಶ್ರೀ. ಅಜಯಘೋಷರು ತಿಳಿಸಿದ್ದಾರೆ.

'ದೇಶದಲ್ಲಿ ಈಗ ಇರುವ ರಾಜಕೀಯ ಪರಿಸ್ಥಿತಿಗನುಗುಣವಾಗಿ ಭಾರತದ ಕಮ್ಯುನಿಸ್ಟ್ ಪಕ್ಷವನ್ನು ಪುನರ್ವ್ಯವಸ್ಥೆಗೊಳಿಸಿ ಬಲಪಡಿಸಲಾಗುವುದೆಂದು ಪಕ್ಷದ ಕಾರ್ಯದರ್ಶಿ ಶ್ರೀ. ಅಜಯಘೋಷರು ಹೇಳಿದರು. ಈ ಬಗ್ಗೆ ಮುಂದಿನ ಅಕ್ಟೋಬರ್ ತಿಂಗಳಲ್ಲಿ ಭಾರತದ ಕಮ್ಯುನಿಸ್ಟ್ ಪಕ್ಷದ ಅಧಿವೇಶನವು ಮುಂಬಯಿ ಅಥವಾ ಡಿಲ್ಲಿಯಲ್ಲಿ ನಡೆಯಬಹುದು. ಇದು ಕಮ್ಯುನಿಸ್ಟ್ ಪಕ್ಷದ ೩ನೇ ಅಧಿವೇಶನವಾಗಿದೆ. ೨ನೇ ಅಧಿವೇಶನವು ೧೯೪೮ ರಲ್ಲಿ ಕಲ್ಕತ್ತೆಯಲ್ಲಿ ನಡೆದಿತ್ತು. ಅಧಿವೇಶನದ ಸಿದ್ಧತೆಗಳಿಗಾಗಿ ಮತ್ತು ಕಾರ್ಯಕ್ರಮವನ್ನು ರಚಿಸುವ ಬಗ್ಗೆ ಮಾರ್ಚ್ ತಾ. ೩೧ರಂದು ಕೇಂದ್ರ ಸಮಿತಿಯ ಸಭೆಯು ಬೊಂಬಾಯಿಯಲ್ಲಿ ಜರಗುವುದು.

'ಇತ್ತೀಚೆಗೆ ಕಾಂಗ್ರೆಸ್ ಮತ್ತು ಪ್ರಜಾ ಸೋಶಲಿಸ್ಟ್ ಪಕ್ಷಗಳೊಳಗೆ ಪರಸ್ಪರ ಹೆಚ್ಚಿನ ಸಹಕಾರದ ಬಗ್ಗೆ ನಡೆದ ಮಾತುಕತೆಗಳನ್ನೂ ಕೇಂದ್ರ ಸಮಿತಿಯು ಚರ್ಚಿಸುವುದು. ಇವರೊಳಗಿನ ಸಹಕಾರದಿಂದ ಕಮ್ಯುನಿಸ್ಟ್ ಪಕ್ಷವು ಭಯಪಡುವುದಿಲ್ಲ. ಆದರೆ ದೇಶದ ರಾಜಕೀಯ ಪರಿಸ್ಥಿತಿಯೊಡನೆ, ಜನಪ್ರಿಯತೆಯನ್ನು ಕಳೆದುಕೊಂಡ ಈ ಎರಡು ಗುಂಪುಗಳು ಒಟ್ಟು ಸೇರಲು ಪ್ರಯತ್ನಿಸುತ್ತಿರುವುದನ್ನೂ ನಾವು ಪರಿಶೀಲಿಸಬೇಕಾಗಿದೆ. ದಿನದಿಂದ ದಿನಕ್ಕೆ ನಿರ್ಬಲಗೊಳ್ಳುತ್ತಿರುವ ಈ ಪಕ್ಷಗಳು ಪರಸ್ಪರ ಒಪ್ಪಂದಕ್ಕಾಗಿ ಇನ್ನೂ ಪ್ರಯತ್ನಿಸಬಹುದೆಂದು ನನ್ನ ಪಕ್ಷವು ಭಾವಿಸುತ್ತದೆ. ಪಂಚವಾರ್ಷಿಕ ಯೋಜನೆ ಮತ್ತು ಜನಹಿತ ಯೋಜನೆಗಳ ಸಹಾಯದಿಂದ ಶಾಶ್ವತವಾಗಿ ಆಡಳಿತೆ ನಡೆಸಬಹುದೆಂದು ಕಾಂಗ್ರೆಸ್ ತಿಳಿಯಿತು. ಆದರೆ ಸಮಯವು ಕಳೆದಂತೆ ತಾವು ತಮ್ಮ ಉದ್ದೇಶಕ್ಕಿಂತ ಬಹಳ ದೂರದಲ್ಲಿದ್ದೇವೆಂಬುದನ್ನು ಅವರು ಸ್ಪಷ್ಟವಾಗಿ ತಿಳಿದು ಸೋಶಲಿಸ್ಟರೊಡನೆ ಸಂಧಿ ಪ್ರಸ್ತಾಪ ಮಾಡತೊಡಗಿದರು. ಕಾಂಗ್ರೆಸ್ ಮತ್ತು ಸೋಶಲಿಸ್ಟರು ಜನರಿಗೆ ಮೋಸ ಮಾಡಲು ಯತ್ನಿಸುತ್ತಿದ್ದಾರೆ. ಇದನ್ನು ಬಹಿರಂಗಪಡಿಸುವುದು ಕಮ್ಯುನಿಸ್ಟ್ ಪಕ್ಷದ ಕರ್ತವ್ಯವಾಗಿದೆ.

'ಈ ದೇಶದಲ್ಲಿ ಒಂದು ಸಾಮಾಜಿಕ ಕ್ರಾಂತಿಯನ್ನು ಮಾಡಲು ನನ್ನ ಪಕ್ಷವು ಪ್ರತಿಜ್ಞೆ ಮಾಡಿದೆ. ಈ ಉದ್ದೇಶಕ್ಕಾಗಿ ನನ್ನ ಪಕ್ಷವು ದೃಢನಿರ್ಧಾರದಿಂದ ಮುನ್ನುಗ್ಗುವುದು. ಈ ಸಂದರ್ಭದಲ್ಲಿ ಹಿಂಸೆಯನ್ನು ಉಪಯೋಗಿಸಲು ನಾವು ಇಚ್ಛಿಸುವುದಿಲ್ಲ. ಆದರೆ ಕೇಂದ್ರ ಮತ್ತು ಪ್ರಾಂತ ಸರಕಾರಗಳು ನನ್ನ ಪಕ್ಷವನ್ನು ಹಿಂಸಾತ್ಮಕವಾಗಿ ಒತ್ತಡಲು ಯತ್ನಿಸುತ್ತಿವೆ. ನಾವು ಅಹಿಂಸಾ ಧರ್ಮವನ್ನು ನಂಬುವವರಲ್ಲ. ನಾವು ಹಿಂಸೆ ಮಾಡುವುದಿಲ್ಲ. ಆದರೆ ಸರಕಾರಗಳು ಇನ್ನೂ ನಮ್ಮ ಮೇಲೆ ಆಕ್ರಮಣ ನಡೆಸುತ್ತಲೇ ಇದ್ದರೆ, ಹಿಂಸೆ ಉಂಟಾಗುವುದು.

'ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷ ಮತ್ತು ರೈತ—ಮಜೂರ ಪಕ್ಷದೊಡನೆ 'ಎಡಪಕ್ಷಗಳ ಬಗ್ಗಟ್ಟ'ನ್ನು ಸ್ಥಾಪಿಸಲು ನನ್ನ ಪಕ್ಷವು ಮಾತುಕತೆ ನಡೆಸುತ್ತಿದೆ' ಎಂದು ಶ್ರೀ. ಅಜಯ ಘೋಷರು ಹೇಳಿದರು.

ಹುಚ್ಚರ ಹಟ್ಟಿ

ಸಾಕೆ?

ಓದಲು ನಿಮ್ಮನು ಕಳುಹಿದ್ದೇಕೆ?
ಸುಂದರ, ಶೀಲಾ ಬಲು ಜೋಕೆ!
ನಿನ್ನಯ ನಯನಲಿ ತಾಯಿಯು ಕೇಳೆ
ನಾಲ್ಕು ಮಕ್ಕಳಾ ಹಡೆದಾಕೆ!
ನಿನ್ನಯ ನಯನಲಿ ನಾನೆನಬೇಕೆ?
ಕಾಲೇಜ್ ಲೆಕ್ಚರ-ಇದು ಸಾಕೆ?
'ರಾಜ್' 'ನರ್ಗಿಸ್' ಬರೆದುದುದೇಕೆ?
ನಿಮಗಿಬ್ಬರಿಗೂ ಎಚ್ಚರಿಕೆ!
ಜಡೆಯನು ಬೆಂಚಿಗೆ ಕಟ್ಟುವದೇಕೆ?
ಕಾಲನು ನೀಡುತ ಮೆಟ್ಟುವದೇಕೆ?
ಅಪ್ಪನ ಕಷ್ಟವ ಅರಿಯದ ಮನಕೆ
ಕಾಲೇಜ್ ವಿದ್ಯೆಯು ನಿಮಗೇಕೆ?
ನಟಿಯರ ಮೇಕಪ್ ಕಾಲೆಜಿಗೇಕೆ?
'ರೋಮಿಯೊ' ಜೀವನ ಈಗೇಕೆ?
ನಿಮಗೀ ಸಾಹಿತಿ ಲೆಕ್ಚರರೇಕೆ?
ಮೀರಿದ ವೆಚ್ಚವು ಬೇಕೇಕೆ?
ಎಚ್ಚರ ಎಚ್ಚರ ಹೊಡೆವೆನು ಜೋಕೆ
'ರಾಜಾ' 'ನರ್ಗಿಸ್' ಇದು ಸಾಕೆ?

—ನಿಮ್ಮವ.

(ತಾ. ೧೩ ಮತ್ತು ೨೦ರ 'ಜೋಕೆ' ಮತ್ತು 'ಏಕೆ'ಯನ್ನು ಓದಿ.)

ಸಿನೆಮಾ ಮಂದಿರಗಳಲ್ಲಿ ಧೂಮಪಾನ ಕೂಡದು.

ಶಾಸನ ಸಭೆಯಲ್ಲಿ ಪಾಸಾದ ಮಸೂದೆಗಳು

ತಾರೀಕು ೨೪ ರಲ್ಲಿ ಕೊಡಗು ಶಾಸನ ಸಭೆಯು ಬೆಳಿಗ್ಗೆ ೧೧ ಗಂಟೆಗ ಸೇರಿತು. ಪ್ರಶ್ನೋತ್ತರಗಳಾದ ಮೇಲೆ ಮುಖ್ಯ ಮಂತ್ರಿಯವರು ಸಭೆಯ ಮುಂದಿರುವ ಕಾರ್ಯಕ್ರಮಗಳನ್ನು ವಿವರಿಸಿದರು. ನಂತರ ಸ್ಪೀಕರು ಅಧ್ಯಕ್ಷರುಗಳ ಹೆಸರು ಪಬ್ಲಿ ಪ್ರಿವಿಲೇಜಿಸ್ ಕಮಿಟಿ, ಪೆಟಿಷನ್ಸ್ ಕಮಿಟಿಗಳ ಹೆಸರನ್ನು ಹೇಳಿದರು. ನಂತರ ಫೈನಾನ್ಸ್ ಕಮಿಟಿಗೆ ಸಿ. ಎ. ಮಂದಣ್ಣ, ಪಿ. ಎಂ. ನಾಣಯ್ಯ, ಎಚ್. ಟಿ. ಮುತ್ತಣ್ಣ, ಕೆ. ಎಂ. ದೇವಯ್ಯ ಇವರ ಹೆಸರುಗಳನ್ನೂ ಪಬ್ಲಿಕ್ ಎಕೌಂಟ್ಸ್ ಸಮಿತಿಗೆ ಶ್ರೀ. ಕೆ. ಎಂ. ದೇವಯ್ಯ, ಕೆ. ಪಿ. ಕರುಂಬಯ್ಯ, ಪಿ. ಕೆ. ಚಿನ್ನಯ್ಯ ಇವರುಗಳನ್ನೂ ಆರಿಸಲಾಯಿತು.

ಸಂತಾಪ ಸೂಚನೆ.

ನಂತರ ದಿವಂಗತ ಗೋಪಾಲಸ್ವಾಮಿ ಅಯ್ಯಂಗಾರರ ನಿಧನಕ್ಕೆ ಸಂತಾಪ ಸೂಚಿಸಲು ಸಭೆಯು ಎರಡು ನಿಮಿಷ ಎದ್ದುನಿಂತು ಮೌನವನ್ನಾಚರಿಸಿತು. ನಂತರ ಅಧ್ಯಕ್ಷರು ಮಾರ್ಷಲ್ ಸ್ಟಾಲಿನರ ನಿಧನದ ಬಗ್ಗೆ ಮಾತಾಡುತ್ತಾ, ಯಾರು ಏನೇ ಹೇಳಿದರೂ ಅಂತರಾಷ್ಟ್ರೀಯ ವ್ಯಕ್ತಿ ಸ್ಟಾಲಿನರು ಮಾನವಗಣದ ಉದ್ಧಾರಕ್ಕಾಗಿ ಮಾಡಿದ ಸೇವೆಯನ್ನು ಗಮನಿಸಬೇಕೆಂದೂ ಅವ್ಯಕ್ತ ಮಥನದ ಕಾಲಕ್ಕೆ ವಿಷವೂ ಹುಟ್ಟಿದಂತೆ ಅವರ ತತ್ವಗಳಿಂದ ಅಹಿತದ ಕೆಲವು ವರ್ತನೆಗಳು ನಡೆಯುತ್ತಿದ್ದರೂ ಅವರ ಘನತೆಯನ್ನು ಪ್ರತಿಯೊಬ್ಬನೂ ಗಮನಿಸಬೇಕೆಂದೂ ಆದ್ದರಿಂದ ಅವರ ನಿಧನದ ಸಂತಾಪ ಸೂಚನೆಯ ಬಗ್ಗೆ ಎರಡು ನಿಮಿಷ ಮೌನ ಆಚರಿಸಬೇಕೆಂದರು. ಇದಾದ ನಂತರ ಗೃಹ ಸಚಿವರಾದ ಶ್ರೀ. ಮಲ್ಲಪ್ಪನವರು—

ಕೊಡಗು ವಿನೋದಾವಳಿಗಳ ಕಂದಾಯ ಮಸೂದೆ-

ಯನ್ನು ಸಭೆಯ ಮುಂದಿರಿಸಿದರು. ಇದರ ಉದ್ದೇಶವನ್ನು ವಿವರಿಸುತ್ತಾ ಸ್ಥಾನಿಕ ಸಂಸ್ಥೆಗಳ ವರಮಾನವನ್ನು ಹೆಚ್ಚಿಸಲು ಈ ಕಂದಾಯವನ್ನಾದರೂ ಈಗ ಈ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳನ್ನು ಸರಕಾರವೇ ವಹಿಸಿಕೊಳ್ಳುವ ಪ್ರಯುಕ್ತ ಈ ಕಂದಾಯವನ್ನು ಸರಕಾರ ಹಾಕುವದು ಯುಕ್ತವೆಂದೂ ಇದು ವಿನೋದ ಕೂಟಗಳಾದ ಸಿನೆಮಾ, ನಾಟಕ ಮೊದಲಾದುವುಗಳಿಗೆ ಅನ್ವಯಿಸುವದೆಂದೂ ಈಗಿರುವ ದರದ ಶೇಕಡ ೨೦ ರಷ್ಟು ಈ ಕಂದಾಯ ವಿಧಿಸಲಾಗುವದೆಂದೂ ಹೇಳಿದರು. ಶ್ರೀ. ಕೆ. ಪಿ. ಕರುಂಬಯ್ಯನವರು ಈ ದರವು ಹೆಚ್ಚಾಯಿತೆಂದೂ ಇದನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಡಬೇಕೆಂದೂ ಹೇಳಿದರು. ಈ ಮಸೂದೆಯು ಸಿಲೆಕ್ಟ್ ಕಮಿಟಿಯೊಂದರ ವರದಿಯಂತೆ ರೂಪಿತವಾಗಿದೆಯೆಂದು ಮಂತ್ರಿಗಳು ಹೇಳಿದ ನಂತರ ಮಸೂದೆಯು ಓಟಿಗೆ ಹಾಕಲ್ಪಟ್ಟು ಬಹುಮತದಿಂದ ಪಾಸಾಯಿತು.

ಸ್ಪೀಕರಿಗೆ ಮುಫತು ಬಂಗ್ಲೆ

ನಂತರ ಶಾಸನ ಸಭೆಯ ಅಧ್ಯಕ್ಷರಿಗೆ ಮುಫತ್ತು ಬಾಡಿಗೆಯ ಸುಸಜ್ಜಿತ ಬಂಗ್ಲೆಯನ್ನು ಒದಗಿಸುವ ಬಗ್ಗೆ ಸ್ಪೀಕರರ ವೇತನ ಮತ್ತು ವರಮಾನ ಮಸೂದೆಯ ತಿದ್ದುಪಡಿಯನ್ನು ಮುಖ್ಯ ಮಂತ್ರಿಗಳು ಮುಂದಿಟ್ಟು ಎಲ್ಲಾ 'ಸಿ' ವರ್ಗದ ಸಂಸ್ಥಾನಗಳಲ್ಲಿ ಹೀಗೆ ಮುಫತ್ತು ಬಂಗ್ಲೆ ಕೊಡಲಾಗಿದೆಯೆಂದೂ ಆದ್ದರಿಂದ ಕೊಡಗಿನಲ್ಲೂ ಹಾಗೆ ಕೊಡಬೇಕಾದುದು ಯುಕ್ತವೆಂದರು. ತಿದ್ದುಪಡಿ ಮಸೂದೆಯು ಬಹುಮತದಿಂದ ಪಾಸಾಯಿತು.

ವ್ಯವಸಾಯ ಆದಾಯ ತೆರಿಗೆ ಮಸೂದೆಗೆ ತಿದ್ದುಪಡಿ

ಈಗ ಜಾರಿಯಲ್ಲಿರುವ ವ್ಯವಸಾಯ ಆದಾಯ ತೆರಿಗೆಗೆ ತಿದ್ದುಪಡಿಯನ್ನು ಮುಖ್ಯ ಮಂತ್ರಿಗಳು ಸೂಚಿಸುತ್ತಾ ಕೊಡಗು ಪ್ಲಾಂಟರುಗಳ ಸಂಘ, ಇಂಡಿಯನ್ ಪ್ಲಾಂಟರುಗಳ ಸಂಘ ಇವುಗಳ ಪ್ರತಿನಿಧಿಗಳ ಕೇಳಿಕೆ ಮೇರೆ ಸಂಪಾದಿತವಾದ ಉತ್ಪತ್ತಿಯ ವಿವರಣೆ ಧರ್ಮದಾಯಗಳಿಗಾಗಿ ಕೊಟ್ಟ ಹಣಕ್ಕೆ ಕಂದಾಯ ವಿನಾಯಿತಿ ಮೊದಲಾದ ವಿಚಾರಗಳಲ್ಲಿಯ ತಿದ್ದುಪಡಿಯ ಸೂಚನೆಗಳನ್ನು ಮುಂದಿಟ್ಟರು. ಸರ್ವಾನುಮತದಿಂದ ಈ ತಿದ್ದುಪಡಿ ಮಸೂದೆ ಪಾಸಾಯಿತು.

ಸಿನೇಮಾ ಮಂದಿರಗಳಲ್ಲಿ ಧೂಮಪಾನ ನಿರ್ಬಂಧದ-

ಮಸೂದೆಯನ್ನು ಗೃಹ ಮಂತ್ರಿ ಮಲ್ಲಪ್ಪನವರು ಸೂಚಿಸಿ ನಾಟಕ, ಸಿನೇಮಾಗೃಹಗಳಲ್ಲಿ, ಸಾರ್ವಜನಿಕ ಕೂಟಗಳಲ್ಲಿ ಬೀಡಿ, ಸಿಗರೇಟು ಮೊದಲಾದ ಹೊಗೆಸೊಪ್ಪಿನ ಧೂಮಪಾನಗಳನ್ನು ಮಾಡಕೂಡದೆಂದೂ ಹಾಗೆ ಮಾಡಿದವರನ್ನು ಪೊಲೀಸರ ಸಹಾಯದಿಂದ ಹೊರಗೆ ತಳ್ಳುವ ಮತ್ತು ನಿಯಮಗಳನ್ನು ಮೀರುವವರಿಗೆ ರೂ. ೧೫೦ಕ್ಕೆ ಒಳಪಟ್ಟು ಜುಲ್ಮಾನೆ ವಿಧಿಸುವ ನಿಯಮಗಳನ್ನು ವಿವರಿಸಿದರು. ಮಸೂದೆಯು ಸರ್ವಾನುಮತದಿಂದ ಪಾಸಾಯಿತು.

—

ಕನ್ನಡ ಕಲಾವಂತ

ಶ್ರೀ ಕೆ. ಹಿರಣ್ಣಯ್ಯನವರು

ಶ್ರೀಮಾನ್. ಕೆ. ಹಿರಣ್ಣಯ್ಯನವರು ಹುಟ್ಟು ಕಲಾವಿದರಾಗಿದ್ದರು. ಅವರು ಫೋಟೋಗ್ರಾಫಿ, ಪೈಂಟಿಂಗ್, ಸಂಗೀತ ವಾದ್ಯ ಮತ್ತಿತರ ಲಲಿತ ಕಲೆಗಳಲ್ಲಿ ಪಳಗಿದವರಾಗಿದ್ದರೂ, ತಮ್ಮ ಕೀರ್ತಿಯನ್ನು ನಾಟಕ ಕಲಾ ಪ್ರಪಂಚದಲ್ಲಿ ತೇಜಸ್ಸಿನಿಂದಗಳಿಸಿದರು. ತಮ್ಮ ಇಡೀ ಜೀವಮಾನವನ್ನೇ ನಾಟಕ ರಂಗಭೂಮಿಯ ಮೇಲೆ ಸವೆಸಿ ತಾ. ೨೧ ನೇ ರಾತ್ರಿ ಮಡಿಕೇರಿಯಲ್ಲಿ ಪರಂಧಾಮವನ್ನೈದಿದರು. ಮಡಿಕೇರಿಯಲ್ಲಿ ಪ್ರಥಮವಾಗಿ ಆಡಿದ ಅವರ ಸ್ವಯಂ ಕೃತಿಯಾದ 'ದೇವದಾಸಿ' ಎಂಬ ನಾಟಕದಲ್ಲಿ ನಾಜೂಕೈಯ್ಯನ ಪಾತ್ರವನ್ನು ಶರೀರ ದೌರ್ಬಲ್ಯವಿದ್ದರೂ ಯಶಸ್ವಿಯಾಗಿ ನಟಿಸಿ ಜನರ ಮೆಚ್ಚಿಗೆಯನ್ನು ಪಡೆದು ಹಾಸಿಗೆ ಹಿಡಿದವರು ಪುನಃ ಚೇತರಿಸಿಕೊಂಡು ಏಳದೆ ಕಲಾರಂಗವೇ ಕತ್ತಲೆಯಾಯ್ತು.

ಸಮಗ್ರ ಕರ್ನಾಟಕದಲ್ಲಿ ಶ್ರೀ ಕೆ. ಹಿರಣ್ಣಯ್ಯನವರ ಹೆಸರನ್ನು ಕೇಳದವರೇ ವಿರಳ. ಅದರಲ್ಲೂ ಕಲಾಭಿಮಾನಿಗಳಿಗೆ ನಾಟಕ ಕಲಾ ದೃಷ್ಟಿಯಲ್ಲಿ ಹಿರಣ್ಣಯ್ಯನವರೆಂದರೆ ಅಷ್ಟೊಂದು ಘನತೆ ಗೌರವಗಳ ಗೋಪುರದಂತಿದ್ದರು. ಅವರು ನುರಿತ ನಾಟಕ ಕಲಾವಂತರು ಮಾತ್ರವಲ್ಲದೆ, ವಿಶೇಷ ಭಾಷಾ ಪರಿಜ್ಞಾನವುಳ್ಳ ಸುಸಂಸ್ಕೃತ ಸಾಹಿತಿಯೂ ಆಗಿದ್ದರು. ದೌರ್ಭಾಗ್ಯ ಭಾರತದ ದೀನ ದಲಿತ ಜನರ ಜೀವನವನ್ನು ತಮ್ಮ ಅಂತಃಕರಣ ಪೂರ್ತಿಯಾಗಿ ಅರಿತು ಅನುಭವದಿಂದ ಮರಿತು ಬಡಜನರ ಏಳಿಗೆಯನ್ನೇ ಸದಾ ನಮ್ಮ ದೃಷ್ಟಿ ಪಥದಲ್ಲಿರಿಸಿ ಕೊಂಡು ದೇಶಾಭಿಮಾನಿಯಾಗಿ ನಾಟಕ ಸಾಹಿತ್ಯ ರಂಗಭೂಮಿಯ ಮೇಲೆ ಕೊನೆಯ ಘಳಿಗೆಯ ತನಕ ದುಡಿದವರಿವರು. ಇವರ ಅನುಭವಾಮೃತ ಸ್ವಕೃತಿಗಳಾದ 'ದೇವದಾಸಿ, ಬ್ಲಾಕ್ ಮಾರ್ಕೆಟ್, ನಂಗನಾಮ, ಮತ್ತು ಇವರಿಂದ ಪರಿಷ್ಕೃತವಾಗಿ ಬರೆಯಲ್ಪಟ್ಟ ಮಕಮಲ್ ಟೋಪಿ, ಎಚ್ಚಮನಾಯಕ,' ಮುಂತಾದ ನಾಟಕಗಳನ್ನು ನೋಡಿ ತಿಳಿದವರಿಗೆ ಇವರಲ್ಲಿ ಪ್ರಜ್ವಲಿಸುತ್ತಿದ್ದ ದೇಶಾಭಿಮಾನ ಮತ್ತು ಅಸಾಮಾನ್ಯ ಪಾಂಡಿತ್ಯದ ಅರಿವಾಗದಿರದು. ನಮ್ಮ ದೌರ್ಭಾಗ್ಯದಿಂದ ಅವರ ರಂಗಭೂಮಿಯ ಮೇಲಿನ ನಟನೆಯನ್ನು ಕಣ್ಣಾರೆ ನೋಡಲು ಅನೇಕರಿಗೆ ಇಲ್ಲಿ ಸಾಧ್ಯವಾಗಲಿಲ್ಲ. ರಂಗಭೂಮಿಯ ಮೇಲೆ ಹಿರಣ್ಣಯ್ಯನವರು ಪ್ರವೇಶಿಸಿದರೆಂದರೆ ಅದೊಂದು ರೀತಿಯ ಅಗೋಚರವಾದ ಉದಾರ ಪ್ರೀತಿ ವಿಶ್ವಾಸದ ಉತ್ಸುಕತೆಯು ಸಭಿಕರಲ್ಲಿ ಹೊರಚಿಮ್ಮುತ್ತಿತ್ತು. ಅವರ ನಾಟಕ ಕೌಶಲ್ಯವು ಅತಿಶಯವಾಗಿದ್ದು ಅವರ ಪ್ರತಿಯೊಂದು ಮಾತೂ ಅರ್ಥ ಗರ್ಭಿತವಾಗಿ ಸರಳ ಭಾಷಾ ಶೈಲಿಯಲ್ಲಿ ಜನರ ಮನಸ್ಸನ್ನು ತಮ್ಮತ್ತ ಸೆಳೆಯುತ್ತಲಿತ್ತು. ಹಾಸ್ಯಕ್ಕೆ ಹಾಸ್ಯವಾಗಿ ಅರ್ಥಕ್ಕೆ ಅರ್ಥವಾಗಿ ಜನರು ನ್ಯಾಯವಾದ ಮಾರ್ಗವನ್ನು ಅನುಸರಿಸುವಂತೆ ಪ್ರೇರೇಪಿಸುವಂಥಾ ನಟನಾ ಸಾಮರ್ಥ್ಯವು ರೋಮಾಂಚನ ಕರವಾದ ರೀತಿಯಲ್ಲಿ ಅವರಲ್ಲಡಗಿತ್ತು. ಜನರು ಬಾಯ್ತೆರೆದರೆ ನಗುವಿನ ಮಡಿಲಲ್ಲಿ ಅಲೆಗಳು ಅಲ್ಲೋಲಕಲ್ಲೋಲವಾಗಿ ಬಡಿದಾಡುವಂತೆ ಜನರ ಆತ್ಮಗಳು ಅರಳಿ ಉದ್ರೇಕಗೊಳ್ಳುತ್ತಿದ್ದವು. ಹಾಸ್ಯ, ವಿನೋದ ಜ್ಞಾನಗಳಿಂದ ಕೂಡಿದ ಅರ್ಥಗರ್ಭಿತ ಹಾಗೂ ಬೋಧನಾತ್ಮಕವಾದ ಅವರ ಪ್ರತಿಯೊಂದು ಮಾತೂ ಸಭಿಕರನ್ನು ದಿಗ್ಭ್ರಾಂತರನ್ನಾಗಿ ಮಾಡುತ್ತಿದ್ದರು.

ಇಂಥಾ ಕಲಾಭಿಮಾನಿ, ಭಾಷಾಭಿಮಾನಿ ಮತ್ತು ಎಲ್ಲಕ್ಕೂ ಮಿಗಿಲಾಗಿ ದೇಶಾಭಿಮಾನಿಯಾಗಿದ್ದ ಹಿರಣ್ಣಯ್ಯನವರಿಗೆ ನಾಟಕ ಸಾಮ್ರಾಜ್ಯದಲ್ಲಿ "ಸುಸಂಸ್ಕೃತ ಹಾಸ್ಯಪಟು" ಅಂದರೆ "ಕಲ್ಚರ್ಡ್ ಕಮೆಡಿಯನ್" ಎಂಬ ಬಿರುದು ಬಂದಿರುವುದು ಅತಿಶಯವೇನೂ ಅಲ್ಲ.

ಅವರ ಕೀರ್ತಿಯನ್ನು ಉಳಿಸಿಕೊಂಡು ಕಲಾಮಯ ಜಗತ್ತಿನಲ್ಲಿ ಅವರ ಆರಿಯ ಧ್ವಜವನ್ನು ಮೇಲೇರಿಸಲು ಅವರ ಸಹಪಾಠಿಗಳೆಲ್ಲರೂ ಶ್ರಮಿಸಬೇಕಾಗಿದೆ. ಈಗಾಲೇ ನಮಗೆಲ್ಲರಿಗೂ ಪರಿಚಯವಾಗಿರುವ ಹಿರಣ್ಣಯ್ಯನವರ ಕುಮಾರ ಕೆ. ಎಚ್. ನರಸಿಂಹಮೂರ್ತಿಯವರು ಖಂಡಿತವಾಗಿಯೂ ತಮ್ಮ ತಂದೆಯ ಕೀರ್ತಿಯನ್ನು ಆರೋತ್ತರಗಳನ್ನು ಈಡೇರಿಸಲು ಶಕ್ತರಾಗಬಲ್ಲರೆಂಬ ನಂಬಿಕೆ ಇದೆ. ಕೇವಲ ೧೯ ವರ್ಷದ ಬಾಲಕನಾಗಿ ಕಾಲೇಜು ವಿದ್ಯಾಭ್ಯಾಸ ಮಾಡಿಕೊಂಡು ಬಿ. ಇ., ತರಗತಿಗೆ ಸೇರಲಿರುವ ಈ ನರಸಿಂಹಮೂರ್ತಿಯು ಬಿಡುವಿದ್ದಾಗ ನಾಟಕ ರಂಗದಲ್ಲಿ ನಟಿಸುತ್ತಾ ಗಳಿಸಿರುವ ಕೀರ್ತಿಯು ಈ ಎಳೆ ವಯಸ್ಸಿಗೆ ಮಿಗಿಲಾದದೆಂದೇ ಹೇಳಬಹುದು ಇವರಿಗೂ ಇವರ ಮಿತ್ರ ಮಂಡಳಿಯವರಿಗೂ ಹಿರಣ್ಣಯ್ಯನವರ ಅಗಲುವಿಕೆಯಿಂದ ಉಂಟಾದ ಶೋಕವನ್ನು ಸಹಿಸಲು ಸಹನಾಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥನೆ.

ನಮ್ಮ ಊರಿಗೆ ಪ್ರಥಮ ಬಾರಿಯಾಗಿ ಆಗಮಿಸಿದ ಹಿರಣ್ಣಯ್ಯನವರ ಮಿತ್ರಮಂಡಲಿಯವರಿಗೆ ದುರಾದೃಷ್ಟವಶಾತ್ ಸಂಭವಿಸಿರುವ ಆರ್ಥಿಕ ಹೀನಸ್ಥಿತಿಗೆ ನಾವು ವ್ಯಥೆ ಪಟ್ಟುಕೊಂಡಿರುವುದು ಮಾತ್ರವೇ ಸಾಲದು; ಇನ್ನು ಮುಂದಾದರೂ ಅವರ ದುಸ್ಥಿತಿಯನ್ನು ನಿವಾರಿಸಲು ಅವಶ್ಯ ಪ್ರಯತ್ನವನ್ನು ತೆಗೆದುಕೊಂಡು ನಮ್ಮ ಕೈಲಾದ ಕಿಂಚಿತ್ ಸೇವೆಯನ್ನು ಕಲ್ಪಿಸಿ ಇಂದು ಆರ್ಥಿಕ ಬಂಧನಕ್ಕೊಳಗಾಗಿರುವ ಈ ಮಿತ್ರರನ್ನು ಪಾರುಮಾಡಿ ಮುಂದಿನ ಪ್ರೋತ್ಸಾಹಕ್ಕಾಗಿ ಸಹಾಯಗಳನ್ನು ಅನುಮಾಡಿಕೊಡಲು ಕಲಾದೃಷ್ಟಿಯಿಂದಲೂ ಸಾಹಿತ್ಯ ದೇಶಾಭಿಮಾನದಿಂದಲೂ ಮುಂದೆ ಬಂದು ಸಹಕರಿಸುವುದು ಎಲ್ಲರ ಕರ್ತವ್ಯ. 'ಪಿ'

ಕಲಾಭಿಮಾನಿ

—

ಮಾರಾಟಕ್ಕಿದೆ.

ಒಂದು ಕಾಫಿ ಹುರಿಯುವ, ಒಂದು ಪುಡಿ ಮಾಡುವ ಮತ್ತು ಒಂದು ಡಿಸ್ ಇಂಟಿಗ್ರೇಟರ್ ಯಂತ್ರ, ಇವು ಮೂರು ಯಂತ್ರಗಳು ಮಾರಾಟಕ್ಕೆ ಇವೆ ಇವು ಹೊಸದಾದವುಗಳು. ಹುರಿಯುವ ಯಂತ್ರದಲ್ಲಿ ಒಂದು ಸಲಕ್ಕೆ 7 ಪೌಂಡು ಹುರಿಯಬಹುದು. ಡಿಸ್ ಇಂಟಿಗ್ರೇಟರ್, ರೆನ್ಸಿಸ್ ಮತ್ತು ನಾಬಿಸ್ ಕಂಪೆನಿಯದು. 22 ಇಂಚು ವ್ಯಾಸವುಳ್ಳದ್ದು. ನಿಮಿಷಕ್ಕೆ 3,300 ಸುತ್ತು ತಿರುಗುವುದು. 16 ಅಶ್ವಶಕ್ತಿಯುಳ್ಳದ್ದು. ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಬಹುದು.

ಕೊಡಗು ಜೇನು ಮತ್ತು ಮೇಣ ಕೃಷಿಕರ ಸಹಕಾರ ಸಂಘ, ಲಿಮಿಟೆಡ್ ವೀರಾಜಪೇಟೆ.

—

ಮಂತ್ರದ ನೀರು!!

ಸುಳ್ಳು ಪ್ರಚಾರಕ್ಕೆ ಬಲಿ ಬೀಳದಂತೆ ಜನರಿಗೆ ಎಚ್ಚರಿಕೆ!

ನೋಡಿದವರು—**ಉಜಿರೆಕರ್**

[ತ್ರಿಕರಪುರದಲ್ಲೊಬ್ಬ ಮುಸ್ಲಿಂ ತರುಣನು ಕುಷ್ಟ ಮೊದಲಾದ ರೋಗಗಳಿಗೆ ನೀರನ್ನು ಮಂತ್ರಿಸಿಕೊಡುವನೆಂಬ ವಾರ್ತೆ ಹಬ್ಬಿ, ಸಾವಿರಾರು ಜನರು ಅಲ್ಲಿಗೆ ಹೋಗಿ, ಅಲ್ಲಿಯ ಪೇಟೆಯಲ್ಲಿ, ಮಂತ್ರದ ನೀರನ್ನೊಯ್ಯುವ ಬಾಟಲಿಗೆ ಎರಡು ರೂಪಾಯಿಯಷ್ಟು ಬೆಲೆ ಏರಿತೆಂದು ಕೇಳಿದೆವು. ಇದಾದ ಮೇಲೆ ಕೆಲ ಕಾಲದಲ್ಲಿ ಆ ತರುಣನು ಮಂಗಳೂರಿಗೂ ಆಹ್ವಾನಿಸಲ್ಪಟ್ಟು, ಅಲ್ಲಿಯೂ ಸಾವಿರಾರು ಜನರು ಬಾಟಲಿಗಳನ್ನು ನೀರು ತುಂಬಿ ಕೊಂಡೊಯ್ದುದನ್ನು ಮಂತ್ರಿಸಿಕೊಟ್ಟನು. ಆತನನ್ನು ಕೊಡಗಿಗೆ ಆಹ್ವಾನಿಸುವ ಯತ್ನ ನಡೆದಿದೆ. ಜನರ ಈ ಅಂಧ ಶ್ರದ್ಧೆಯನ್ನು ಕಂಡವರೊಬ್ಬರು ಜನರಿಗೆ ಎಚ್ಚರಿಕೆ ಕೊಡುತ್ತಾರೆ.]

ಪವಾಡಗಳ ಇತಿಹಾಸದಲ್ಲಿಯೇ 'ತ್ರಿಕರಪುರದ ಮಂತ್ರದ ನೀರು' ಹೀರಾ ಹೊಸದು. ಮಹಾತ್ಮಾ ಏಸುಕ್ರಿಸ್ತರು ನೀರನ್ನು ದ್ರಾಕ್ಷಾರಸವಾಗಿ ಕ್ಷಣದಲ್ಲಿಯೇ ಮಾಡಿದುದೂ, ಪುರಾಣಗಳಲ್ಲಿನ ಋಷಿಗಳು ತಮ್ಮ ಕಮಂಡಲೋದಕದಿಂದ ಅತ್ಯದ್ಭುತ ಕಾರ್ಯಗಳನ್ನೂ ನಡೆಸುತ್ತಿದ್ದುದೂ ನಾವು ಕೇಳಿ ತಿಳಿದಿದ್ದರೂ ನೂರಾರು ಶತಮಾನಗಳು ಕಳೆದಿವೆ. ಆದರೂ ಅವಕ್ಕೆ ಬಲವಾದ ಆಧ್ಯಾತ್ಮಿಕ ಹಾಗೂ ಪಾರಿಶ್ರಮಿಕ ಹಿನ್ನೆಲೆಗಳಿವೆ. ಗಂಗಾಜಲ, ಕೆಲಿಫೋರ್ನಿಯಾ, ಉಕ್ರೇನ್ (ರಷ್ಯಾ)ಗಳ ಬಿಸಿನೀರಿನ ಬುಗ್ಗೆಗಳೂ ಎಷ್ಟೋ ಜನ ರೋಗಿಗಳಿಗೆ ಜೀವದಾನ ಮಾಡುತ್ತಿರುವುದೂ ಇಂದೂ ನಾವು ನೋಡುತಿದ್ದೇವೆ. ಆದರೆ ಅವಕ್ಕೆ ಯಾವ ಪವಾಡ-ಪ್ರಚಾರಗಳ ಕೈವಾಡವೂ ಬೇಕಾಗಿಲ್ಲ. ಶಾಸ್ತ್ರೀಯ ಅನ್ವೇಷಣಕಾರರು ತಮ್ಮ ಸಂಶೋಧನೆಗಳಿಂದ ಆ ನೀರುಗಳಲ್ಲಿ ವಿಶಿಷ್ಟ ಹಾಗೂ ಗುಣಕಾರಿ ಖನಿಜಾಂಶ (minerals) ಗಳು ಕೂಡಿವೆಯೆಂದು ತಿಳಿದಿರುವರು. ಅಲ್ಲದೆ ಇನ್ನಿತರ ಎಷ್ಟೋ ಹಿಂದೂದೇಶದ 'ತೀರ್ಥ'ಗಳಲ್ಲಿ ಕುಷ್ಟ, ಚರ್ಮರೋಗ, ವ್ರಣನಾಶ ಶಕ್ತಿಗಳೂ ಅಡಗಿವೆಯೆಂದೂ ಹೇಳಲಾಗಿದೆ!!

ಆದರೆ 'ಸಾವಿರಾರು ಜನರ–ನೂರಾರು ಬಾವಿಗಳ ನೀರನ್ನು ತಕ್ಷಣ ಎರಡೇ ನಿಮಿಷಗಳಲ್ಲಿ ಇಂತಹ 'ಮಾಯಕದ ನೀರಾಗಿ, (miracle water) ಸಾಮಾನ್ಯ ರೋಪ್ಪಿಸಿ ಮಾಡುತ್ತಿರುವುದು ಯಾವುದೇ ಧರ್ಮದ ಹಾಗೂ ವಿಶ್ವೇತಿಹಾಸದಲ್ಲಿಯೇ ಮೊದಲು. ನಾವು ವಿಮರ್ಶಾತ್ಮಕ, ಆಧ್ಯಾತ್ಮಿಕ, ಶಾಸ್ತ್ರೀಯ ದೃಷ್ಟಿಗಳಿಂದ ಅವಲೋಕಿಸಿದಲ್ಲಿ ಇದು ಅಸಾಧ್ಯವೂ, ಬರಿಯ ಕಲ್ಪನಾಲೋಕಕ್ಕೆ ಸೇರಿದ ಕಾರ್ಯವೂ ಆಗಿದೆ. ಮುಸ್ಲೀಮ್–ಕ್ರೈಸ್ತ ಮತ್ತು ಹಿಂದೂ ಧರ್ಮಗಳಿಗೆ ಕೂಡಾ ವಿರುದ್ಧವಾಗಿದೆ. ಇಂತಹ ಪವಾಡಗಳು ನಡೆಯುವುದಿದ್ದರೂ 'ಆ ಅಧಿಕಾರ ಮತ್ತು ಸಾಧ್ಯತೆ ಸರ್ವಶಕ್ತನಿಗೂ ಅವನ ಪ್ರವಾದಿಗಳಿಗೂ ಹೀಂದ ಕರ್ತವ್ಯವಾಗಿದೆಯೇ ಹೊರತು, ನಮ್ಮಂತಹ ಒಬ್ಬ ಗೃಹಸ್ಥನು ಕೆಲವೇ ದಿನಗಳಲ್ಲಿ ಮಾಡಲಡಿಯಿಡುವುದು ಸುಳ್ಳು–ಮತ್ತು ಬರಿಯ ಮೋಸಗಾರಿಕೆ!! ಎಷ್ಟೋ ದಿನದ ಕಾಲಾಂತರಗಳ ವಿಶಿಷ್ಟ ಸಂಸ್ಕಾರದ ಹೊರತು ಅದೆಂದಿಗೂ ಎಷ್ಟಕ್ಕೂ ಸಾಧ್ಯವಲ್ಲ!! ಹಾಗಿದ್ದರೆ ಸುವಾರ್ತೆಗಳು–ಧಾರ್ಮಿಕ ಆಮರ ಗ್ರಂಥಗಳೂ ಕೇವಲ ಪ್ರಚಾರಿಕವಾದುವೇ? ಇದಕ್ಕೆ ಯಾರು ಏನು ತಾನೆ ಸಮಾಧಾನ ಹೇಳಬಲ್ಲರು?

ತ್ರಿಕರಪುರದ ಮಂತ್ರದ ನೀರಿನ ಹಿಂದೆ ಅಡಗಿರುವ ಸುಳ್ಳು ಪ್ರಚಾರ ಸ್ವಜಾತಿ ಅಭಿಮಾನಿಗಳ ಅಂಧಶ್ರದ್ಧೆ ಇಂದು ನೂರಾರು ಬಡವರ–ರೋಗಿಷ್ಟರ ಎದೆಯ ಮೇಲೆ ತಾಂಡವವಾಡುತ್ತಿದೆ!! ನಾನೇ ನೋಡಿದಂತೇ ನೂರಾರು ಕುಷ್ಟ–ವಾತ– ಶ್ವಾಸ ಕ್ಷಾಸ–ತೊನ್ನಿನ ರೋಗಿಗಳು ತಾವು ಹಿಡಿದ ಚಿಕಿತ್ಸೆಗಳನ್ನೂ ಬಿಟ್ಟು ಸಾಲವೆತ್ತಿ, ಕಷ್ಟಪಟ್ಟು ಈ ಮಂತ್ರದ ನೀರನ್ನು ಕುಡಿದು (ಕೊಡಗಟ್ಟಲೆ!!) ಈಗ ಒದ್ದಾಡುತಿದ್ದಾರೆ. ಭವಿಷ್ಯತ್ತನ್ನು ನೆನೆದು ಜೀವಹಿಡಿದು ಕುಳಿತಿದ್ದಾರೆ!! 'ಅವರು ದೇವಭಕ್ತರಲ್ಲವೆ, ನಂಬಿಕೆಗನರ್ಹರೆಂದೂ' ಈ 'ಮಂತ್ರಜಲ' ಪ್ರಚಾರಕರು ಈಗಲೇ ಹೇಳುತಿದ್ದಾರೆ. ಇದು ನಾವು 'ಮಂತ್ರಜಲ' ಹರಿದಲ್ಲೆಲ್ಲಾ ನೋಡಬಹುದಾದ ದೃಶ್ಯ!! ಕೇಳಬಹುದಾದ ಮಾತು!! ಆದರೂ ಈ ಪ್ರಚಾರಯುದ್ಧ ಬಿರುಸಾಗಿ ಸಾಗಿದೆ. ಇನ್ನು ಸಾವಿರಾರು ರೋಗಿಗಳು ಈ 'ಜಲಪ್ರವಾದಿ'ಯ ಮುಂದೆ ಧಾವಿಸಿ ಬೀಳುತ್ತಿದ್ದಾರೆ. ಸಾವಿರಾರು ಮುಸಲ್ಮಾನರು, ಹಿಂದುಗಳು, ಕ್ರೈಸ್ತರು ಎಲ್ಲರೂ ಈ 'ಮಂತ್ರದ' ನೀರಿಗೆ ಮರುಳಾಗಿದ್ದಾರೆ! ಆದರ ಏನೇನೋ ಕಟ್ಟು ಕತೆಗಳು, ಅಶ್ಲೀಲವಲ್ಲದ ಸುಳ್ಳು ಸುಳ್ಳಾದ ಪ್ರಚಾರದ ಬಲುಮೆಯಿಂದ, ಎಷ್ಟೋ ದಿನದ ಹಳಸಿದ ನೀರನ್ನು ಈ ಹಳೆಯ ರೋಗಿಗಳು ಕುಡಿದು, ಅದನ್ನು ಪಡೆಯಲು ಹಣಗಾಡಿ, ತನ್ನ ಆರೋಗ್ಯ ದೈಹಿಕ ಶಕ್ತಿಗಳನ್ನು ಕಳೆದುಕೊಳ್ಳುತ್ತಿರುವುದು ತೀರಾ ಶೋಚನೀಯವಾಗಿದೆ!!

ಈ ಕುರಿತು ಕುತೂಹಲದಿಂದ ನಾನು ನಡೆಸಿದ ಅನ್ವೇಷಣೆಯಲ್ಲಿ ಸೇಕಡ ೯೯ ಪಾಲು ಜನರೂ ನಿರಾಶರಾಗಿರುವರು. ಗುಣಕಾಣದೆ ವ್ಯರ್ಥಗೊಂಡಿರುವರು. ಆದರೆ ತಮ್ಮಂತೆ ಇನ್ನಿತರರೂ ಬಲಿಬೀಳಲೆಂಬ ದುರಾಸೆಯಿಂದ ಅದೇ ಜನರು ಪ್ರಚಾರವನ್ನೇನೂ ಬಿಟ್ಟಿಲ್ಲ. ಇಂದು ನಾವು ಕೇಳುತ್ತಿರುವ ಎಲ್ಲಾ ಕತೆಗಳೂ ಸ್ವಾರ್ಥಪರವಾದುವು. ಸುಳ್ಳಾದುವು! ಅದರ ಹಿಂದೆ ದುರಭಿಮಾನ–ಅಂಧಶ್ರದ್ಧೆಗಳು ಅಡಗಿವೆ!!

ಈ ಆಧುನಿಕ–ವೈಜ್ಞಾನಿಕ ಯುಗದಲ್ಲಿ ಇಂತಹ ಪವಾಡ ನಡಿಯಲರಿಯದು. ಇವು ನಮ್ಮ ಬನ್ನಗಳನ್ನು ದೂರಮಾಡಲಾರದು ಅಂತಹ ಪ್ರವಾದಿಯ ಉದಯ ಬಹಳ ದೂರವಿದೆ ಅವಕ್ಕೆ ವಿಶ್ವ ಇನ್ನೂ ಸಿದ್ಧವಾಗಿಲ್ಲ. ವೃಥಾಕಾಲಹರಣ, ನಷ್ಟ–ಕಷ್ಟಗಳೊಂದಿಗೆ ತಮ್ಮ ದೈಹಿಕ–ಮಾನಸಿಕ ಧಾರ್ಮಿಕ ಪತನಗಳನ್ನು ಜನತೆಗೆ ತಾವಾಗಿ ತಂದುಕೊಳ್ಳದೆ, ಯೋಚಿಸಿ, ಸಾಧ್ಯಾಸಾಧ್ಯತೆಗಳನ್ನು ವಿಮರ್ಶಿಸಿ, 'ಸುಳ್ಳು ಪ್ರಚಾರಕ್ಕೆ ಬಲಿಬೀಳದೆ, ವರ್ತಿಸಿದಲ್ಲಿ ಕ್ಷೇಮವಾಗುವುದು.' —ಪ್ರಭಾತ.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು ...	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ ಎಸ ಸೋಮಯ್ಯ, ಗೌ. ಕಾರ್ಯದರ್ಶಿ. — ಕೆ. ಟಿ ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

---

82 ವರ್ಷಗಳ ಸೇವೆಯನ್ನು ಪೂರೈಸಿದ ಹಿಂದೂದೇಶದ ಪ್ರಥಮ ವಿಮಾ ಕಂಪೆನಿ.

82 ವರ್ಷಗಳಿಗೆ ಹಿಂದೆ ಅಂದರೆ 1871ರಲ್ಲಿ ಭಾರತದಲ್ಲಿ ಜೀವ ವಿಮೆ ಎಂದರೇನೆಂದು ಗೊತ್ತಿರದಿದ್ದ ಆ ಸಮಯದಲ್ಲಿ "ಬೊಂಬೆ ಮ್ಯೂಚುವಲ್" ತನ್ನ ಪ್ರಥಮ ಪಾಲಿಸಿಯನ್ನು ಬರೆಯಿತು.

ಇಂದು "ಬೊಂಬೆ ಮ್ಯೂಚುವಲ್" ತನ್ನ ಅತೀ ಪ್ರಾಮಾಣಿಕತೆಯ ಸೇವೆಗಾಗಿ ನ್ಯಾಯವಾದ ಹೆಮ್ಮೆಪಟ್ಟುಕೊಳ್ಳಬಹುದು. ಅದರ ಚಾಲ್ತಿಯಲ್ಲಿರುವ ಉದ್ಯಮವು 40 ಕೋಟಿಗಳನ್ನು ಮೀರಿರುವದಲ್ಲದೆ ಮೂಲವು 12 ಕೋಟಿಗೂ ಮಿಕ್ಕಿದೆ.

ದಿ ಬೊಂಬೆ ಮ್ಯೂಚುವಲ್ ಲೈಫ್ ಎಶ್ಶೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು: ಹಾರ್ನ್‌ಬಿ ರೋಡ್, ಬೊಂಬಾಯಿ.

ಬ್ರಾಂಚ್ ಆಫೀಸು: ಪೋ. ಬಾ. ನಂ. 186, ಬೆಂಗಳೂರು—2.

3-2

The New Guardian of India Life Insurance Co., Ltd.

— HEAD OFFICE —

Post Box No.—142 Esplanade, MADRAS—1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT,

The New Gaurdian of India Life Insurance Co., Ltd. for COORG. Virajpet.

OR

To The Head Office, MADRAS.

12-11

ಕೊಡಗು ಇತರ 'ಸಿ' ವರ್ಗದ ಪ್ರಾಂತಗಳಿಗೆ ಆದರ್ಶವಾಗಲಿ

ಮುಖ್ಯ ಮಂತ್ರಿಗಳ ಬಡ್ಜೆಟ್ ಭಾಷಣ.

೧೯೫೨-೫೩ರ ಪರಿಷ್ಕೃತ ಅಂದಾಜು ಬಡ್ಜೆಟ್ಟನ್ನೂ ೧೯೫೩-೫೪ರ ಅಂದಾಜು ಬಡ್ಜೆಟನ್ನೂ ನಿಮ್ಮ ಮುಂದಿಡಲಿಚ್ಛಿಸುತ್ತೇನೆ. ಈ ಸಭೆಯ ಪರಿಶೀಲನೆಗಾಗಿ ನಾನು ಮುಂದಿಡುವ ಎರಡನೇ ಬಡ್ಜೆಟ್ಟಿದು. ಈ ಸಂದರ್ಭದಲ್ಲಿ ಕೇಂದ್ರ ಸರಕಾರದ ಮಂತ್ರಿಯಾಗಿದ್ದು 'ಸಿ' ಪ್ರಾಂತಗಳ ಆಪ್ತನ ಹಾಗೂ ಭಾರತ ರಾಜ್ಯಘಟನೆಯ ನಿರ್ಮಾಪಕರೊಬ್ಬರಾದ ಗೋಪಾಲಸ್ವಾಮಿ ಅಯ್ಯಂಗಾರರ ನಿಧನದ ವಿಚಾರ ಎತ್ತದಿದ್ದರೆ ನನ್ನ ಕರ್ತವ್ಯ ಮಾಡಿದಂತಾಗುವದಿಲ್ಲ. ಅವರ ಜೊತೆಯಲ್ಲಿ ಕೆಲಸ ಮಾಡುವ ಸೌಭಾಗ್ಯವು ನನಗೊದಗಿದ್ದು ಅವರು ತಮ್ಮ ಅವಿರತ ದುಡಿಮೆಯಿಂದ ಮಹಾ ಮುಂದಾಳೂ, ನಿಸ್ಸೀಮ ದೇಶಭಕ್ತರೂ ಆಗಿದ್ದರು.

೧೯೫೨-೫೩ರ ಪರಿಷ್ಕೃತ ಅಂದಾಜು ಪಟ್ಟಿಯ ಮತ್ತು ಮುಂದಿನ ವರ್ಷದ ವಿಚಾರ ನಿವೇದಿಸುವ ಮೊದಲು ೧೯೫೧-೫೨ರ ಹಣಕಾಸಿನ ಸ್ಥಿತಿಯನ್ನು ಮುಂದಿಡಬಯಸುತ್ತೇನೆ. ಆ ವರ್ಷ ಆದಾಯ ೬೦,೭೯,೮೭೩ ರೂ. ಖರ್ಚು ೫೫,೦೩,೮೪೬ ಆಗಿ ಉಳುವರಿ ರೂ ೫,೭೬,೦೨೭ ಆಗಿತ್ತು. ಅಂದರೆ ೧೯೫೧-೫೨ ರ ಒಟ್ಟು ಆದಾಯ ೬೧ ಲಕ್ಷ ವ್ಯಯ ೫೫ ಲಕ್ಷವೆನ್ನಬಹುದು. ೧೯೫೨-೫೩ ರ ಬಡ್ಜೆಟ್ಟನ್ನು ಮುಂದಿಡುವಾಗ ಉಳುವರಿಯು ಕೇವಲ ರೂ. ೭೫,೦೦೦ ಆಗಬಹುದೆಂದು ಅಂದಾಜು ಮಾಡಿದೆ. ಆದರೆ ೧೯೫೨-೫೩ ರ ಪರಿಷ್ಕೃತ ಲೆಕ್ಕ ಪ್ರಕಾರ ಉಳುವರಿಯು ೪ ಲಕ್ಷಕ್ಕೆ ಏರಿದೆಯೆಂದು ಹೇಳಲು ಸಂತೋಷವಾಗುತ್ತದೆ. ನಿಮ್ಮ ಮುಂದೆ ಸಪ್ಲಿಮೆಂಟರಿ ಡಿಮಾಂಡ್ ಆಗಿ ರೂ. ೫,೪೭,೦೦೦೦ ರೂಪಾಯಿಗಳ ಬೇಡಿಕೆಯನ್ನು ಇಡಬೇಕಾಗಿ ಬಂತು. ಇದು 'ಸಿ' ವರ್ಗದ ಸಂಸ್ಥಾನಗಳ ಹೊಸ ಕಾನೂನಿನಂತೆ ಮಾಡಬೇಕಾದ್ದಾಗಿದೆ.

೧೯೫೨-೫೩ರ ಆರಂಭದಲ್ಲಿ ಅಂದರೆ ೧-೪-೫೨ ರಲ್ಲಿ ಶಿಲ್ಕು ರೂ. ೮೫,೮೧,೫೩೬ ಇತ್ತು. ಈ ಸಾಲಿನಲ್ಲಿ ಆದಾಯವು ೯೧,೧೪,೦೦೦ ವಾಗಿ ಖರ್ಚು ೮೭,೦೫,೦೦೦ ಆಗಿ ವರ್ಷಾಂತ್ಯದಲ್ಲಿ ಅಂದರೆ ತಾ.೩೧-೩-೫೩ ರಲ್ಲಿ ರೂ. ೮೯,೯೦,೫೩೬ ಶಿಲ್ಕು ಉಳಿಯುವದೆಂದು ಅಂದಾಜು ಮಾಡಿದೆ. ಬರುವ ವರ್ಷದ ಬಡ್ಜೆಟ್ಟಿನ ಅಂದಾಜು ಪತ್ರವನ್ನು ಮುಂದಿಡುವ ಮುನ್ನ ವಿವಿಧ ಇಲಾಖೆಗಳ ಕೆಲಸ ಕಾರ್ಯದ ವಿಚಾರ ಸಭೆಯ ಉಪಯೋಗಕ್ಕಾಗಿ ಕೆಲವು ಮಾತುಗಳನ್ನಾಡಬೇಕಿದೆ.

ವ್ಯವಸಾಯ ಆದಾಯ ತೆರಿಗೆಯ ಅಧಿಕಾರಿಯು ತನ್ನ ಹಿಂದಿನ ಕೆಲಸಕ್ಕೆ ಹೋಗುವದರಿಂದ ಅವರ ಬದಲು ಯೋಗ್ಯ ಅಧಿಕಾರಿಗಳು ದೊರೆಯದ ಕಾರಣ ಕೇಂದ್ರದೊಡನೆ ವ್ಯವಹರಿಸಿ ಕೇಂದ್ರದ ಆದಾಯ ತೆರಿಗೆ ಅಧಿಕಾರಿಗಳು ಈ ಕೆಲಸವನ್ನು ನೋಡುವ ಏರ್ಪಾಡು ಮಾಡಲಾಗಿದೆ. ಈ ವರ್ಷ ಸುಂಟಿಕೊಪ್ಪ ಮತ್ತು ಭಾಗಮಂಡಲ ಎರಡು ಹೆಚ್ಚಿನ ನಾಡುಗಳನ್ನು ರಚಿಸಲಾಯಿತು. ಈಗ ನಾಡಾಫೀಸುಗಳ ವ್ಯವಹಾರ ಕ್ಷೇತ್ರವು ಚಿಕ್ಕದಾದುದರಿಂದಲೂ, ರೆವಿನ್ಯೂ ಇಲಾಖೆಯಲ್ಲಿ ಸಿಬ್ಬಂದಿ ಹೆಚ್ಚಿದುದರಿಂದಲೂ ಕೆಲಸ ಸರಿಯಾಗಿ ನಡೆಯುವದೆಂದು ನಂಬಲಾಗಿದೆ. ಹೆಚ್ಚಿನ ಶ್ಯಾನುಭಾಗರನ್ನು ನೇಮಿಸಲಾಗಿದೆ. ಈ ವರ್ಷ ಅದನ್ನು ಮುಂದರಿಸಲಾಗುವದು. ಸೆಟ್ಲ್‌ಮೆಂಟ್ ಕೆಲಸವನ್ನು ತುರಿತಗೊಳಿಸಲಾಗುವದು. ಟಿಂಬರ್ ಸುಬೇದಾರರ ಅಧಿಕಾರವನ್ನು ಫಾರೆಸ್ಟ್ ಇಲಾಖೆಗೆ ಬಿಡಲಾಗಿದೆ. ಸರ್ವೆ ಶಾಲೆಯಲ್ಲಿ ತರಬೇತು ನಡೆಯುತ್ತಿದ್ದು ಪ್ರಥಮ ಗುಂಪಿನ ತರಬೇತಿಗರು ಮಾರ್ಚ್ ಅಂತ್ಯದಲ್ಲಿ ಹೊರಬರಲಿದ್ದಾರೆ. ಮುಂದೆ ಪುನಹ ಮತ್ತೊಂದು ಪಂಗಡವನ್ನು ತರಬೇತುಗೊಳಿಸಲಾಗುವದು. ಸೆಟ್ಲ್‌ಮೆಂಟ್ ಫೀಲ್ಡ್ ಕೆಲಸ ದಕ್ಷಿಣ ಕೊಡಗಿನ ಮುಗಿದಿದೆ.

ಕಳೆದ ವರ್ಷದ ೮೯,೦೧೪ ಎಕರೆಗಳ ಬದಲು ಈ ವರ್ಷ ೮೮,೪೫೬ ಎಕರೆ ಭೂ ವ್ಯವಸಾಯವಾಯಿತು. ಇದು ಕಡಿಮೆಯಾಗಲು ಮಳೆ ಕಡಿಮೆಯಾದುದೇ ಕಾರಣ. ೬೧,೮೭೫ ಟನ್ ಬತ್ತ ಬೆಳೆಯಬಹುದೆಂದು ಅಂದಾಜು ಮಾಡಲಾಗಿದೆ. ಕಾಫಿ ಕಿತ್ತಳೆ ಫಸಲು ಚೆನ್ನಾಗಿದೆ. ಯಾಲಕ್ಕಿಯ ಬೆಲೆ ಇತ್ತಲಾಗಿ ಇಳಿದಿದೆ.

ಎಕ್ಸೈಸ್ ನೀತಿಯಲ್ಲಿ ಯಾವ ಬದಲಾವಣೆಯೂ ಇಲ್ಲ. ಈ ವರ್ಷ ವೇರ್ ಹೌಸಿನಲ್ಲಿ ಅವಶ್ಯಾಗಿಯೇ ಇರುವ ಒಬ್ಬ ಅಧಿಕಾರಿಯು ನೇಮಕವಾಗಲಿದೆ. ಏಕೆಂದರೆ ಈಗಿನಂತೆ ಜೈಲರು ಈ ಕೆಲಸ ನೋಡುವದು ಸಮರ್ಪಕವಲ್ಲವೆಂದು ಅನುಭವಕ್ಕೆ ಬಂದಿದೆ. ಸಾರಾಯಿ ದರವು ಕಳೆದ ವರ್ಷದಂತೆಯೇ ಈ ವರ್ಷವೂ ಇರುವದು.

ಫಾರೆಸ್ಟ್ ಇಲಾಖೆಯ ಪುನರ್ವ್ಯವಸ್ಥೆಯು ಈ ವರ್ಷ ಮುಗಿದು ಅದರ ಕಾರ್ಯಕಲಾಪಗಳು ವಿಸ್ತಾರಗೊಂಡಿದೆ. ಈ ವರ್ಷ ೭೫೦ ಎಕ್ರೆ ಕಾಡು ಕಡಿದು ತೇಗ ನೆಡುವ ಕೆಲಸ ಕೈಕೊಳ್ಳಲಾಗಿದೆ. ಹಿಂದಿನ ವರ್ಷದ ೩ ಲಕ್ಷದ ಬದಲು ಈ ವರ್ಷ ೬,೩೦,೦೦೦ ಘನ ಅಡಿ ಟಿಂಬರ್ ಕಡಿದು ೫ ಲಕ್ಷ ಘನ ಅಡಿಯನ್ನು ಹುಣಸೂರಿಗೆ ಮಾರಾಟಕ್ಕೆ ಸಾಗಿಸಲಾಗಿದೆ. ಈ ಹಿಂದು ಸಂತೆ ಹರಾಜು ನಡೆದಿದೆ. ಸುಮಾರು ೧,೩೦,೦೦೦ ಘನ ಅಡಿ ಮರವನ್ನು ಬೆಂಗಳೂರಿನ ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಕಂಪೆನಿಗೆ ರೂ. ೧೨½ ಲಕ್ಷಕ್ಕೆ ಮಾರಲಾಗಿದೆ. ಫಾರೆಸ್ಟ್ ರಸ್ತೆಗಳ ಅಭಿವೃದ್ಧಿಗೆ ಟ್ರಾಕ್ಟರನ್ನು ಉಪಯೋಗಿಸಲಾಗಿದೆ. ೧೯೫೧-೫೨ರಲ್ಲಿ ಕಡಿದ ೪೫೦ ಎಕರೆ ಸ್ಥಳದಲ್ಲಿ ತೇಗದ ವ್ಯವಸಾಯ ಪೂರೈಸಲಾಗಿದೆ. ಈ ವರ್ಷ ಪುನಹ ೭೫೦ ಎಕರೆ ಕಡಿದು ತೇಗ ಬೆಳೆಸಲಾಗುವದು. ನಾಗರಹೊಳೆಯಲ್ಲಿ ಒಂದು ಲಕ್ಷ ರೂಪಾಯಿ ವೆಚ್ಚದಲ್ಲಿ ಒಂದು ಮರಕುಯ್ಯುವ ಮಿಲ್ ಇಡಲಾಗುವದು. ಮರ ತಾಳಿಕೆ ಬರುವಂತೆ ಮಾಡುವ ಆಧುನಿಕ ಕ್ರಿಯೊಸೋಟಿಂಗ್ ಯಂತ್ರ ಒಂದನ್ನು ಸ್ಥಾಪಿಸಲಾಗುವದು.

ಉಳುವರಿ ಬತ್ತವನ್ನು ಮೈಸೂರಿಗೆ ಹಿಂದಿನ ವರ್ಷದಂತೆಯೇ ಕೊಡಲಾಗುವದು. ಈ ವರ್ಷ ದೇಶದೊಳಗೆ ಆಹಾರ ಪದಾರ್ಥಗಳ ಮಾರಾಟಕ್ಕೂ ಅವಕಾಶ, ಹೊರಮಾಡುವುದಕ್ಕೂ ಇದ್ದ ನಿರ್ಬಂಧವನ್ನು ತೆಗೆದು ಹಾಕಲಾಗಿದೆ. ಬರುವ ವರ್ಷ ನಾಗರಹೊಳೆಯಲ್ಲಿ ಎರಡು ಹೆಚ್ಚಿನ ರೇಂಜ್ ಡಿಪ್ಪೋ ತೆರೆಯಲಾಗುವದು. ದೇಶದಲ್ಲಿ ಈ ವರ್ಷ ಶಾಂತಿ ಶಿಸ್ತು ಚೆನ್ನಾಗಿತ್ತು.

ವಿದ್ಯಾ ಇಲಾಖೆಯಲ್ಲಿ ಅ. ವಿದ್ಯಾಧಿಕಾರಿಗಳ ನೇಮಕವಾಗಿದೆ. ವಯಸ್ಕರ ಶಿಕ್ಷಣದ ಏರ್ಪಾಡನ್ನು ದಕ್ಷಿಣ ಕೊಡಗಿಗೂ ವಿಸ್ತರಿಸಲಾಗಿದೆ. ಮೂಲ ಶಿಕ್ಷಣ ಕ್ರಮದ ಶಾಲೆಗಳನ್ನು ಸ್ಥಾಪಿಸಲಾಗುವದು. ಈ ವರೆಗೆ ಹಾಗೆ ಮಾಡದಿರಲು ಕಟ್ಟಡದ ಪ್ಲಾನಿಗೆ ಸಮ್ಮತಿ ದೊರೆಯದ್ದೇ ಆಗಿದೆ. ಮುಂದಿನ ವರ್ಷ ಜಿಲ್ಲಾ ಬೋರ್ಡ್ ಶಾಲೆಗಳನ್ನು ಸರಕಾರ ತೆಗೆದುಕೊಳ್ಳಲಿದ್ದು ಅದಕ್ಕೆ ೧೯೫೩-೫೪ರ ಬಡ್ಜೆಟ್ಟಿನಲ್ಲಿ ಹಣವಿಡಲಾಗಿದೆ. ಪಂಚವಾರ್ಷಿಕ ಯೋಜನೆಯ ಮೇರೆ ವಿದ್ಯಾ ಪ್ರಗತಿಯ ಕೆಲಸವು ನಿಶ್ಚಿತ ರೂಪವನ್ನು ತಾಳುವದು. ಇದರ ಖರ್ಚಿನ ಶೇಕಡ ೬೦ರಷ್ಟು ಕೇಂದ್ರದಿಂದ ದೊರೆಯುವದು. ಈ ವರ್ಷ ೧೫ ಪ್ರಾಥಮಿಕ ಶಾಲೆಗಳನ್ನು ಮೂಲ ಶಿಕ್ಷಣಾ ಶಾಲೆಗಳಾಗಿ ಪರಿವರ್ತಿಸಲಾಗುವದು. ಬರುವ ವರ್ಷ ಕಾಲೇಜನ್ನು ಪ್ರಥಮ ದರ್ಜೆಯ ಕಾಲೇಜಾಗಿ ಪರಿವರ್ತಿಸಿ, ಬಿ. ಎ., ಬಿ. ಎಸ್‌ಸಿ. ತರಗತಿಗಳನ್ನು ತೆರೆಯಲಾಗುವದು. ಇದಕ್ಕೆ ಬೇಕಾದ ಹಣವನ್ನು ಬಡ್ಜೆಟ್ಟಿನಲ್ಲಿಡಲಾಗಿದೆ. ಬರುವ ವರ್ಷ ಸಾಮಾಜಿಕ ಹಿತದ ಶಿಬಿರಗಳನ್ನು ಹೈಸ್ಕೂಲು ವಿದ್ಯಾರ್ಥಿಗಳಿಂದ ನಡೆಸಿ ಸುಮಾರು ೫೦ ಗ್ರಾಮಗಳಲ್ಲಿ ಕೆಲಸ ಮಾಡಲಾಗುವದು.

ಜಿಲ್ಲಾ ಬೋರ್ಡ್ ಆಸ್ಪತ್ರೆ ಮತ್ತು ಅವುಗಳ ಸಿಬ್ಬಂದಿಯನ್ನು ಬರುವ ವರ್ಷ ಅಂದರೆ ತಾ. ೧-೪-೫೩ರಿಂದ ಸರಕಾರವ

ಕೊಡಗು ಸರಕಾರದ ಆದಾಯ ವೆಚ್ಚ.

1952-1953

1-4-52 ರಲ್ಲಿ ಶಿಲ್ಕು 85,81,536

ಆದಾಯ	
ವ್ಯವ. ಆದಾಯ ತೆರಿಗೆ	10,40,000
ಭೂ ಕಂದಾಯ	3,92,500
ಎಕ್ಸೈಸ್	10,76,000
ಸ್ಟಾಂಪು	2.73,000
ಫಾರೆಸ್ಟ್	42,92,500
ರಿಜಿಸ್ಟ್ರೇಶನ್	29,000
ವಾಹನಗಳ ತೆರಿಗೆ	4,94,000
ಇತರ ಕಂದಾಯಗಳು	64,600
ನೀರಾವರಿ	4,800
ಬಡ್ಡಿ	14,000
ನ್ಯಾಯ ಇಲಾಖೆ	24,800
ಜೈಲು ಇಲಾಖೆ	6,200
ಪೊಲೀಸು	5,400
ವಿದ್ಯಾ ಇಲಾಖೆ	1,37,600
ವೈದ್ಯ ಇಲಾಖೆ	28,800
ಆರೋಗ್ಯ ಇಲಾಖೆ	1.08,800
ವ್ಯವಸಾಯ ಇಲಾಖೆ	3,80,600
ವೆಟರ್ನರಿ	18,500
ಸಹಕಾರ	2,200
ಇತರ ಇಲಾಖೆಗಳು	11,200
ಸಿವಿಲ್ ವರ್ಕ್ಸ್	19,700
ಪ್ರಿಂಟಿಂಗ್	1,600
ಸುಪರ್ ಎನ್ಯುವೇಶನ್	600
ಇತರ ಜಮಾ	40.800
ಅಸಾಮಾನ್ಯ ವರಮಾನ	6,46,200
ರೌಂಡಿಂಗ್	200
ಒಟ್ಟು	91,14,000

ಖರ್ಚು	
ವ್ಯವ. ಆದಾಯ ಕಂದಾಯ	25,000
ಭೂ ಕಂದಾಯ	2,43,200
ಎಕ್ಸೈಸ್	2,76,700
ಸ್ಟಾಂಪು	4,400
ಫಾರೆಸ್ಟ	14,41,600
ರಿಜಿಸ್ಟ್ರೇಶನ್	5,100
ವಾಹನಗಳ ತೆರಿಗೆ	1,09,500
ನೀರಾವರಿ ಕೆಲಸ	1.86,300
ಆಡಳಿತ ಖರ್ಚು	5,30,200
ನ್ಯಾಯ ಇಲಾಖೆ	90,100
ಜೈಲು ಇಲಾಖೆ	50,000
ಪೊಲೀಸು	3,22,600
ವಿದ್ಯಾ ಇಲಾಖೆ	7,17,400
ವೈದ್ಯ ಇಲಾಖೆ	4,07,300
ಆರೋಗ್ಯ	2.06,700
ವ್ಯವಸಾಯ	10,38,500
ವೆಟರ್ನರಿ	1,72,000
ಸಹಕಾರ	86,950
ಕೈಗಾರಿಕೆ	5,000
ಇತರ ಇಲಾಖೆಗಳು	37,400
ಸಿವಿಲ್ ವರ್ಕ್ಸ್	16,94,400
ವಿದ್ಯುಚ್ಛಕ್ತಿ	4,100
ಪೆನ್ಶನ್ ಇತ್ಯಾದಿ	2,33,550
,, ಕಮ್ಯೂಟ್ ಮಾಡಿದ್ದು	5,000
ಪ್ರಿಂಟಿಂಗ್ ಇತ್ಯಾದಿ	56,400
ಇತರ ಖರ್ಚು	3,47,400
ಕಮ್ಯೂನಿಟಿ ಪ್ರೊಜೆಕ್ಟ್	4,08,200
ಒಟ್ಟು	87,05,000

ತಾ. 31-3-1953 ರಲ್ಲಿ ಶಿಲ್ಕು 89,90,536

Licence No. 60.
Licenced to Post without Prepayment

Reg. No. M. 1550.
"KODAGU" *MERCARA (Coorg)*

೨೭—೪—೧೯೫೪

ಅಧೀನಕ್ಕೆ ತೆಗೆದುಕೊಳ್ಳಲಾಗುವದು. ಮಡಿಕೇರಿ ಆಸ್ಪತ್ರೆಯ ಕ್ಷಯರೋಗ ವಾರ್ಡುಗಳನ್ನು ತೆರೆಯಲಾಗಿದೆ. ಕ್ಷಯರೋಗದ ಡಾಕ್ಟರು ಮತ್ತಿತರ ಸಿಬ್ಬಂದಿಗಳನ್ನು ನೇಮಿಸಲಾಗಿದೆ. ಬಿ. ಸಿ. ಜಿ. ದಾಕು ಹಾಕುವ ಬಗ್ಗೆ ಕೆಲವರಿಗೆ ತ್ರಿವೆಂಡರಮ್‌ನಲ್ಲಿ ತರಬೇತಿ ಕೊಡಲಾಗಿದೆ. ಈ ವರ್ಷ ಕ್ಷಯರೋಗಾಧಿಕಾರಿಗಳಿಗೆ ಒಬ್ಬ ಸಹಾಯಕರನ್ನು ನೇಮಿಸಲಾಗುವದು. ಮಲೇರಿಯಾ ನಿಯಂತ್ರಣ ಯೋಜನೆಯಂತೆ ಈ ವರ್ಷ ಡಿ. ಡಿ. ಟಿ. ಮತ್ತು ಅದಕ್ಕೆ ಸಂಬಂಧಿಸಿದ ಸಾಹಿತ್ಯಗಳು ಮುಫತ್ತಾಗಿ ದೊರೆಯಲಿರುವವು. ಕೇಂದ್ರ ಸರಕಾರವು ಮಲೇರಿಯಾ ನಿವಾರಣೆಗೆಂದು ಕೊಡುತ್ತಿದ್ದ ಮದತಿಗೆಯನ್ನು ತಾ. ೧-೪-೫೩ರಿಂದ ನಿಲ್ಲಿಸಿದ್ದರೂ ನಮ್ಮ ಬೇಡಿಕೆ ಮೇರೆ ಪುನಹ ಮೂರು ವರ್ಷಗಳ ವರೆಗೆ ಅನುಕ್ರಮವಾಗಿ ೧ ಲಕ್ಷ, ೭೫ ಸಾವಿರ ಮತ್ತು ೫೦ ಸಾವಿರ ಧನ ಸಹಾಯ ಕೊಡಲು ಒಪ್ಪಿರುವರು.

ವ್ಯವಸಾಯ ಇಲಾಖಾಧಿಕಾರಿಯನ್ನು ಫೋರ್ಡ್ ಫೌಂಡೇಶನ್ ಯೋಜನೆ ಪ್ರಕಾರ ಮೂರು ತಿಂಗಳ ಮಟ್ಟಿಗೆ ಅಮೇರಿಕಾ, ಜಪಾನುಗಳಿಗೆ ಕಳುಹಿಸಲಾಗಿತ್ತು. ಮೈನರ್ ನೀರಾವರಿ ಯೋಜನೆಯ ಬಗ್ಗೆ ಹೆಚ್ಚು ಆಸಕ್ತಿ ವಹಿಸಲಾಗಿದೆ. ಕೈಗಾರಿಕೆಗಾಗಿ ಕೇಂದ್ರ ಸರಕಾರವು ಸ್ವಲ್ಪ ಸಹಾಯ ಕೊಡಲೊಪ್ಪಿದೆ. ಬರುವ ವರ್ಷ ಮಡಿಕೇರಿ ಡೈರಿ ಫಾರಮ್ಮನ್ನು ಕೊಡಿಗೆಗೆ ವರ್ಗಾಯಿಸಲಾಗುವದು.

ಸಹಕಾರ ಇಲಾಖೆಯಲ್ಲಿ ಎರಡು ಸಾಮೂಹಿಕ ಬೇಸಾಯ ಸಂಘಗಳು ಈ ವರ್ಷ ಕೆಲಸ ಮಾಡಲು ತೊಡಗಿವೆ. ಇಲಾಖೆಯ ಕೆಲಸ ಕಾರ್ಯಗಳನ್ನು ಪುನರ್ಘಟಿಸುವ ದೃಷ್ಟಿಯಿಂದ ಜನಾಬ್ ಮೆಕ್ರಯವರಿಂದ ಕೂಡಿದ ಪರಿಶೀಲನಾ ಸಮಿತಿಯ ವರದಿ ಇನ್ನೂ ಬಂದಿರುವದಿಲ್ಲ.

ಈ ವರ್ಷ ಮಜೂರರ ಹಿತಕ್ಕಾಗಿ ಲೇಬರ್ ಇಲಾಖೆಯೊಂದನ್ನು ತೆರೆಯಲಾಗಿದೆ. ಮುಂದೆ ಇದರ ಕೆಲಸವನ್ನು ವಿಸ್ತರಿಸಲಾಗುವದು. ಪಬ್ಲಿಕ್ ವರ್ಕ್ಸ್ ಇಲಾಖೆಯು ಒಂದು ವರ್ಷ ಕಟ್ಟಡ, ರಸ್ತೆ ಮೊದಲಾದ ವಿಸ್ತೃತ ಕೆಲಸ ಕೈಕೊಳ್ಳಲಿದೆ. ವಿದ್ಯುಚ್ಛಕ್ತಿ ಇಲಾಖೆಯೊಂದು ಈ ವರ್ಷ ಅಸ್ತಿತ್ವಕ್ಕೆ ಬಂದಿದೆ. ಮೈಸೂರಿನಿಂದ ವಿದ್ಯುಚ್ಛಕ್ತಿ ಪಡೆಯುವ, ಬರಪೊಳೆ ಯೋಜನೆಯ ಪರಿಶೀಲನೆಗಳು ಆಗುತ್ತಿವೆ. ಬರಪೊಳೆಯ ಪರಿಶೀಲನೆಗಾಗಿ ಬಜೆಟ್ಟಿನಲ್ಲಿ ಹಣವಿಡಲಾಗಿದೆ. ಸಾಮೂಹಿಕ ವಿಕಾಸ ಯೋಜನೆಯ ಸಿಬ್ಬಂದಿಗಳ ನೇಮಕ ಪೂರ್ತಿಯಾಗಿ ಕೆಲಸದ ಕಾರ್ಯಕ್ರಮವನ್ನೂ ಒಪ್ಪಲಾಗಿದೆ. ಈ ವರ್ಷದ ಖರ್ಚು ರೂ. ೪,೦೮,೦೦೦ದಲ್ಲಿ ಮೂರು ಲಕ್ಷ ಎರಡು ಸಾವಿರ ಕೇಂದ್ರದ ಪಾಲಾಗಿದೆ. ಈ ಯೋಜನೆಯ ಪೂರ್ಣ ಗುರಿಯು ಜನತೆಯನ್ನು ಜಾಗೃತಗೊಳಿಸಿ, ಅವರ ಸಹಕಾರ, ಬೆಂಬಲವನ್ನು ಪಡೆದು ಅವರ ಹಿತಕ್ಕಾಗಿಯೇ ದುಡಿಯುವದಾದ ಕಾರಣ ಈ ಎರಡು ಕೆಲಸದ ಯಶಸ್ವಿಗಾಗಿ ಬಜೆಟ್ಟಿನ ಅಂಕೆ ಸಂಖ್ಯೆಗಳಲ್ಲಿ ಕಾಣಲಾರವು. ಈ ಯೋಜನೆಯು ೯ ಸಾಮೂಹಿಕ ಕೇಂದ್ರಗಳೊಡನೆ ಪ್ರಾರಂಭವಾಗಿ ಈ ವರೆಗೆ ಯೋಗ್ಯ ಕೆಲಸ ನಡೆದಿದೆ. ಬರುವ ವರ್ಷಕ್ಕೆ ಈ ವರ್ಷಕ್ಕಿಂಥಾ ಹೆಚ್ಚಿನ ಹಣವಿಡಲಾಗಿದೆ.

೧೯೫೪-೫೫ರ ಅಂದಾಜು ಬಡ್ಜೆಟ್ ಪ್ರಕಾರ ಪ್ರಾರಂಭದ ಶಿಲ್ಕು ರೂ. ೮೯,೯೦,೫೩೬ರಷ್ಟು ವರ್ಷದ ಆದಾಯವು ೧,೦೩,೮೫,೦೦೦ವೆಂದೂ, ಖರ್ಚು ರೂ. ೧,೪೦,೯೫,೦೦೦ಎಂದೂ ತಾ. ೩೧-೩-೫೫ರಲ್ಲಿ ಶಿಲ್ಕು ರೂ. ೫೨,೮೦,೫೩೬ ಆಗುವದೆಂದೂ ಅಂದಾಜು ಮಾಡಲಾಗಿದೆ. ಈ ಲೆಕ್ಕ ಮೇಲೆ ಖರ್ಚು ಆದಾಯಕ್ಕಿಂಥಾ ೩೭ ಲಕ್ಷದಷ್ಟು ಏರುವದು. ಆದರೆ ಪಂಚವಾರ್ಷಿಕ ಯೋಜನೆಗೆ ಹಣ ಒದಗಿಸುವ ದೃಷ್ಟಿಯಿಂದ ಅಂದರೆ ೫೩-೫೪ರಲ್ಲಿ ಈ ಯೋಜನೆಯಂತೆ ೫೭ ಲಕ್ಷ ವೆಚ್ಚವಿದ್ದು ಈ ಬಗ್ಗೆ ಕೇಂದ್ರವು ೨೦ ಲಕ್ಷ ವಿದ್ಯುಚ್ಛಕ್ತಿಗಾಗಿ ಮೈಸೂರಿಗೆ ಸಾಲ ಕೊಡಲಿರುವದರಿಂದ ಕೊಡಗು ತನ್ನ ಪಾಲಿನ ಹಣ ಇಡಲೇ ಬೇಕಾದ್ದು ಕರ್ತವ್ಯವಾಗಿದೆ.

ಇಂಡಿಯಾ ಸರಕಾರದಿಂದ ಗುಡಿ ಕೈಗಾರಿಕೆಗಳಿಗಾಗಿ ೧,೩೨,೦೦೦, ವಿದ್ಯಾ ಯೋಜನೆಗಾಗಿ ೧,೮೫,೦೦೦ ಮದತಿಗೆ ದೊರೆಯುವದು. ಹೆಚ್ಚು ಬೆಳೆಯಿರಿ, ಸಾರ್ವಜನಿಕ ಆರೋಗ್ಯ, ಮೊದಲಾದುವುಗಳಿಗಾಗಿ ಎಂಟುವರೆ ಲಕ್ಷ ಸಾಲ ಕೊಡಲಿರುವದು. ವರದಿ ವರ್ಷದ ಒಂದು ಲಕ್ಷದ ಬದಲು ಭೂಮಿ ರೂಪಿತ ಮತ್ತಿತರ ಬಾಬಿಗೆ ರೈತರಿಗೆ ಸಾಲ ಕೊಡಲು ಎರಡು ಲಕ್ಷ ರೂಪಾಯಿಗಳನ್ನು ಕೇಂದ್ರದಿಂದ ಕೇಳಲಾಗಿದೆ. ಸ್ಥಳೀಯ ಸಂಸ್ಥೆಗಳಿಗೆ ಸಾಲದ ರೂಪದಲ್ಲಿ ಕೊಡಲು ೫ ಲಕ್ಷ ಸಾಲ ಕೇಳಲಾಗಿದೆ. ಗುಡಿ ಕೈಗಾರಿಕೆಗಳಿಗಾಗಿ ೩೦ ಸಾವಿರ ಸಾಲ ಕೇಳಲಾಗಿದೆ. ಬರುವ ವರ್ಷ ಕಿತ್ತಳೆ ಸಂಶೋಧನಾ ಯೋಜನೆಗೆ ರೂ. ೩೭,೬೦೦ ಬತ್ತ ಪರಿಷ್ಕರಣಾ ಯೋಜನೆಗೆ ರೂ. ೧೭,೬೦೦ ಕೇಂದ್ರ ರೋಡ್ ಫಂಡಿನಿಂದ ರೂ. ಮೂರುವರೆ ಲಕ್ಷ ದೊರೆಯುವದೆಂದೂ ಅಂದಾಜು ಮಾಡಲಾಗಿದೆ.

ಕಳೆದ ವರ್ಷದ ನನ್ನ ಬಡ್ಜೆಟ್ ಭಾಷಣದಲ್ಲಿ "ಒಂದು ದೇಶದ ವಿಸ್ತೀರ್ಣದ ದೃಷ್ಟಿಯಿಂದ ಅದನ್ನು ಅಳೆಯುವ ಕಾಲ ಕಳೆಯಿತು. ವಿಸ್ತೀರ್ಣವಲ್ಲ ಅದರಲ್ಲಿರುವ ಜನತೆಯು ಮೇಲೆ ದೇಶದ ಘನತೆ ನಿಂತಿದೆ. ನಾವು ಸಲ್ಲಿಸುವ ಸೇವೆ ಸಾಮಾಜಿಕ ದೃಷ್ಟಿ, ಸಹೋದರತೆಯ ಮೇಲೆ ನಮ್ಮನ್ನು ಅಳೆಯಲಾಗುವದು" ಎಂದು ಹೇಳಿದ ಮಾತನ್ನೇ ಪುನಹ ಹೇಳಬಯಸುತ್ತೇನೆ. ಕೊಡಗು 'ಸಿ' ವರ್ಗದ ಪ್ರಾಂತಗಳಲ್ಲೆಲ್ಲಾ ಚಿಕ್ಕದು. ಇಲ್ಲಿಗೆ ಕೊಡಲ್ಪಟ್ಟಿರುವ ಜವಾಬ್ದಾರಿ ಸರಕಾರವು ಜಯಪ್ರದವಾದರೆ ಇತರ 'ಸಿ' ವರ್ಗದ ಪ್ರಾಂತಗಳಲ್ಲಿಯೂ ಅದು ಜಯಪ್ರದವಾಗುವದೆಂಬುದನ್ನು ರುಜುವಾತುಪಡಿಸಿದಂತಾಗುವದು. ಅದ್ದರಿಂದ ನಮ್ಮ ಮೇಲೆ ದೊಡ್ಡ ಜವಾಬ್ದಾರಿ ಇದೆ. ಎಲ್ಲರೂ ನಮ್ಮೆಡೆಗೆ ನೋಡುತ್ತಿದ್ದಾರೆ. ನಮ್ಮ ಹಾಗೂ, 'ಸಿ' ವರ್ಗದ ಇತರ ಸಂಸ್ಥಾನಗಳ ಹಿತದೃಷ್ಟಿಯಿಂದ ನಾವು ಯೋಗ್ಯ ರೀತಿ ವರ್ತಿಸಿ ಇದನ್ನು ಜಯಪ್ರದಗೊಳಿಸುವೆವೆಂಬ ನಂಬಿಕೆ ನನಗಿದೆ.

ಆಡಳಿತದಲ್ಲಿ ಆಸಕ್ತಿ ವಹಿಸಿ ಸಹಾಯಕರಾಗಿರುವ ಚೀಫ್ ಕಮಿಷನರಿಗೂ, ಯೋಗ್ಯ ರೀತಿ ಸಹಕರಿಸಿದ ಅಧಿಕಾರಿ ವರ್ಗಕ್ಕೂ ವಂದನೆಗಳು. ಈ ವರೆಗೆ ಈ ಸಭೆಯ ಮಾನ್ಯ ಸಭಾಸದರು ಕೊಟ್ಟಂತೆ ಮುಂದೆಯೂ ಸಹಕಾರ ಕೊಡುವರೆಂದೂ ಆ ಬಲದಿಂದ ಜನತಾ ಸೇವೆಯ ಪಥದಲ್ಲಿ ಇನ್ನಷ್ಟು ಮುಂದರಿಯಲು ಸಮರ್ಥರಾಗುವೆವೆಂದೂ ನನಗೆ ನಂಬಿಕೆ ಇದೆ.

THE VIJAYA BANK, LIMITED.
ದಿ ವಿಜಯ ಬೇಂಕ್ ಲಿಮಿಟೆಡ್, ಮಡಿಕೇರಿ.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಮೂಲ ಧನ	ರೂ.	20,00,000
ತೆತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು. ರೂಪಾಯಿ ಹತ್ತು ಸಾವಿರದ ಮಿಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟ ನಡೆಸಲ್ಪಡುವುದು.

ಬಿ. ಮಂಜಯ್ಯ ಹೆಗ್ಡೆ,
ಎಡ್ವೊಕೇಟ್.
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.
(ಮತ್ತು ದ. ಕ. ಜಿಲ್ಲಾಬೋರ್ಡು ಅಧ್ಯಕ್ಷರು)

12-6

ಮಡಿಕೇರಿ ಆಫೀಸಿನ ಏಜೆಂಟ್:— **ಯಮ್. ಯಸ್. ಆಳ್ವ.**

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ,
ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ಸಪ್ಲೈಗೆ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2. 12 ನೇ ನಂಬರಿನ ಜೋಡು ನಳಿಗೆಯ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
4. 9"x 4" ಮತ್ತು 8"×4" ಕಬ್ಬಿಣದ ತೊಲೆಗಳು (Girders).
5. 8'×3'×24' (Gage) ಕಬ್ಬಿಣದ ತಗಡುಗಳು.
6. 1⅜" × 5/16" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
8. ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ
(ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ,
(ಪ್ರೆಸಿಡೆಂಟ್)

ಮಾರಾಟಕ್ಕಿದೆ.

ಶನಿವಾರಸಂತೆಯ ಎರಡು ಮೈಲು ದೂರದಲ್ಲಿ ಮಡಿಕೇರಿಗೆ ಬರುವ ರಸ್ತೆ ಪಕ್ಕದಲ್ಲಿರುವ ಎಂಟೂವರೆ ಎಕ್ರೆ ತರಿ ಭೂಮಿ, ಮೂರು ಎಕರೆ ಕಿತ್ತಳೆ ತೋಟ, (ಅಂದಾಜು ಸಾವಿರ ರೂಪಾಯಿ ಗುತ್ತಿಗೆಗೆ ಹೋಗುತ್ತಿ) ವಾಸದ ಮನೆ ಇವುಗಳು ಮಾರಾಟಕ್ಕಿವೆ. ಖಾಯಿಸ್‌ದಾರರು ಹೆಚ್ಚಿನ ವಿವರಗಳಿಗೆ ಈ ಕೆಳಗಿನ ಪತ್ತೆಗೆ ಬರೆದುಕೊಳ್ಳಬಹುದು.

ಎಂ. ಆರ್. ಬುಡನ್‌ಖಾನ್,
ಶನಿವಾರಸಂತೆ.

3-3

Edited Printed and Published by P. I. BELLIAPPA at 'KODAGU' Press, Mercara for Kod[agu] Ltd.,

ಕೊಡಗು
KODAGU
KANNADA
WEEKLY

ಬಜೆಟ್ಟಿನ ಮೇಲೆ ಸದಸ್ಯರ ಅಭಿಪ್ರಾಯಗಳು.

ಶ್ರೀ ಸಿ. ಯಂ. ನಾಣಯ್ಯನವರು

ಜನಪ್ರಿಯ ಮಂತ್ರಿಮಂಡಳದ ಎರಡನೇ ಬಜೆಟ್ಟು ತೃಪ್ತಿಕರವಾದುದಿದೆ. ಆರ್ಥಿಕ ಮಂತ್ರಿಗಳು ಬಹು ದಕ್ಷತೆಯಿಂದ ದೇಶದ ಆರ್ಥಿಕ ನೀತಿಯನ್ನು ರೂಪಿಸುತ್ತಿರುವರು. ಅಭಿವೃದ್ಧಿಯ ಕಾರ್ಯಗಳಿಗಾಗಿ ಯಥೇಚ್ಛ ಹಣವಿಡಲಾಗಿದೆ. ವಿದ್ಯುಚ್ಛಕ್ತಿ, ಮರಕುಯ್ಯುವ ಕಾರ್ಖಾನೆ, ವರ್ಕ್‌ಶಾಪ್ ಮೊದಲಾದ ರಾಷ್ಟ್ರರಚನಾಕಾರ್ಯಗಳಿಗೆ ಹಣವಿಟ್ಟದ್ದು ಸರಿ. 'ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಇಷ್ಟ' ಎಂಬಂತೆ ಸರಕಾರ ವರ್ತಿಸಲು ಸಾಧ್ಯವಿಲ್ಲ. ಹಿತಕಾರಕ ಕೆಲಸಗಳಾಗಬೇಕಾದರೆ ಹಣ ಖರ್ಚಾಗಲೇಬೇಕು. ವ್ಯವಸಾಯ ಆದಾಯ ತೆರಿಗೆ ಇಲಾಖೆಯಲ್ಲಿ ಕೇವಲ ೨೫ ಸಾವಿರ ರೂಪಾಯಿ ಖರ್ಚಿಗೆ ೧೨ ಲಕ್ಷ ಆದಾಯ ಯೋಗ್ಯವಾದುದು. ರೆವಿನ್ಯೂ ಇಲಾಖೆಯಲ್ಲಿ ಹೆಚ್ಚಿಗೆ ಸಿಬ್ಬಂದಿ ಕೊಟ್ಟು ಕೆಲಸ ಸುಸೂತ್ರವಾಗಿ ನಡೆಯುವ ಏರ್ಪಾಡು ಮಾಡಬೇಕು. ಎಕ್ಸೈಸ್ ಇಲಾಖೆಗೆ ಸಾಕಷ್ಟು ಪೋಲೀಸ್ ಸಹಾಯ ಕೊಡಬೇಕು. ಫಾರೆಸ್ಟ್ ಇಲಾಖೆಯಲ್ಲಿ ಮರಕಡಿಯುವ ಪಕ್ಕೆ ಸರಿಯಾಗಿ ರೀಜನರೇಶನ್ ಕೆಲಸ ನಡೆಯುತ್ತಿದೆ. ಟಿಂಬರ್ ಕಳ್ಳ ಸಾಗಾಟದ ವರ್ತಮಾನಗಳಿವೆ. ಹೆಚ್ಚಿನ ನಿಗ ತೆಗೆದುಕೊಳ್ಳಬೇಕು. ಬತ್ತದ ಬೆಲೆಯನ್ನು ಏರಿಸಬೇಕು. ನೀರಾವರಿಗೆ ನಾಲ್ಕು ಲಕ್ಷ ಇಟ್ಟದ್ದು ಯೋಗ್ಯವಾಗಿದೆ. 'ವಿದ್ಯಾವಿಹೀನಂ ಪಶು' ಎಂಬಂತೆ ವಿದ್ಯೆಯು ಪ್ರಾಮುಖ್ಯವಾದುದು. ಇದಕ್ಕೆ ಸಾಕಷ್ಟು ಹಣವಿಟ್ಟದ್ದು ಯೋಗ್ಯ. ಆರೋಗ್ಯ ಇಲಾಖೆಯ ಕೆಲಸ ತೃಪ್ತಿಕರವಾಗಿದೆ. ಡಿ. ಡಿ. ಟಿ. ಹಿಂದಿನಂತೆ ಪರಿಣಾಮಕಾರಕವಾಗಿಲ್ಲ. ನಾವು ಜಪಾನೀ ವ್ಯವಸಾಯ ಕ್ರಮವನ್ನು ಅನುಸರಿಸಬೇಕಾದ್ದು ಒಂದು ದೈನ್ಯ ಪರಿಸ್ಥಿತಿ ಏಕೆಂದರೆ ಆ ರೀತಿಯ ವ್ಯವಸಾಯ ನಮ್ಮಲ್ಲಿ ನಡೆಯುತ್ತಿದೆ. 'ಹರ್ಷನ ಆರಂಭ ಗೊಬ್ಬರದಿಂದ' ಎನ್ನುವಂತೆ ಗೊಬ್ಬರವೇ ಮುಖ್ಯ. ಮೈಸೂರಿನ ಅಧಿಕಾರಿಗಳು ಬರಪೊಳೆ ಯೋಜನೆಯನ್ನು ಯಾವುದೇ ಪ್ರತಿಫಲದ ಆಸೆಯಿಲ್ಲದೆ ಪರಿಶೀಲಿಸಲೊಪ್ಪಿದಕ್ಕೆ ವಂದನೆಗಳು.

ಶ್ರೀ ಎ. ಸಿ. ತಿಮ್ಮಯ್ಯನವರು

ಬಜೆಟ್ಟಿನ ವಿವರಗಳಿಗೆ ನಾನಿಳಿಯುವದಿಲ್ಲ. ಎರಡು ವಿಚಾರಗಳಿಗಾಗಿ ಸರಕಾರವನ್ನು ವಂದಿಸಬೇಕು. ಕೊಡಗಿನ ಆದಾಯವು ೧ ಕೋಟಿಯನ್ನು ಮೀರಿ ಬೆಳೆದುದು ಒಂದು ಶುಭಚಿಹ್ನೆ. ಇದು ಕೊಡಗಿನ ಪ್ರತಿ ಜನರಿಗೆ ತಲಾ ರೂಪಾಯಿ ೫೦/ ರಷ್ಟಾಗುವದು. ಹಿಂದೂದೇಶದ ಯಾವುದೇ ಭಾಗದಲ್ಲಿ ಈ ರೀತಿಯ ಉತ್ಪತ್ತಿ ಇರಲಾರದು. ಈ ವರ್ಷ ನಮ್ಮ ಉಳುವರಿ ಶಿಲ್ಕಿನಿಂದ ಸುಮಾರು ೩೭ ಲಕ್ಷ ವಿನಿಯೋಗಿಸಲಾಗಿದೆ. ಪಂಚವಾರ್ಷಿಕ ಯೋಜನೆಯ ಕಾರಣವಾಗಿ ಈ ದೊಡ್ಡ ಹಣವಿಟ್ಟದ್ದೆನ್ನಬಹುದು. ಬರುವ ವರ್ಷ ನಮ್ಮ ಖರ್ಚು ಇದಕ್ಕೂ ಮಿಗಿಲಾಗಿ ನಮ್ಮ ಉಳುವರಿಯು ಮತ್ತೂ ಕಡಿಮೆಯಾಗಿ ನಮ್ಮ ಶಿಲ್ಕಿಲ್ಲ. ಮುಗಿದು ದೇಶ ದಿವಾಳಿಯಾಗಿ ಬೇರೊಂದು ರಾಜ್ಯದೊಡನೆ ವಿಲೀನವಾಗಬಹುದಾದ ಪ್ರಸಂಗಬರಬಹುದು. ಆದ್ದರಿಂದ ಸರಕಾರವು ಅಂಥಾ ಸ್ಥಿತಿ ಬಾರದಂತೆ ಎಚ್ಚರಿಕೆ ವಹಿಸಬೇಕು. ಭಾರತದ ಮುಕುಟದಲ್ಲಿ ಕೊಡಗು ಅಮೂಲ್ಯ ರತ್ನದಂತೆ ಹೊಳೆಯಬಲ್ಲುದು. ಫಾರೆಸ್ಟ್ ರೀಜನರೇಶನ್ ಏರಿಯೊದಲ್ಲಿ ಕೇವಲ ತೇಗವನ್ನೇ ಬೆಳೆಸಲು ಯತ್ನಿಸುವದು ಸರಿಯಲ್ಲ. ಇತರ ಮರಗಳನ್ನೂ ಬೆಳೆಸುವದು ಸೂಕ್ತ. ಆರೋಗ್ಯ ಇಲಾಖೆಯಿಂದ ಲಾಭವಾಗಿದೆ. ಆದರೆ ಈಗ ಉಪಯೋಗಿಸುವ ಡಿ. ಡಿ. ಟಿಯು ಚರಂಡಿ ನೀರಿನಂಥಾದ್ದು. ಡಾಕ್ಟರುಗಳ ವೇತನ ದರವನ್ನು ಹೆಚ್ಚಿಸಬೇಕು. ಕೊಡಗಿನಲ್ಲಿ ಕ್ಷಯವು ಹೆಚ್ಚಾಗುತ್ತಿದೆ. ಕ್ಷಯರೋಗದ ಆಸ್ಪತ್ರೆಗೆ ಬಜೆಟ್ಟಿನಲ್ಲಿ ಹಣವಿಡದ್ದು ಬೇಸರದ ಸಂಗತಿ. ಇದಕ್ಕೆ ಪ್ರಾಮುಖ್ಯತೆ ಕೊಡಬೇಕು. ಬರಪೊಳೆ ಯೋಜನೆಯ ಬಗ್ಗೆ ತೆಗೆದು ಕೊಂಡ ತೊಂದರೆಯು ಪ್ರಶಂಸನೀಯ. ಇದನ್ನು ಸರಿಯಾಗಿ ಕಾರ್ಯಗತ ಮಾಡಿದರೆ ಅದು ಅತೀ ಹೆಸರಾಂತ ಸೌಂದರ್ಯದ ಖನಿ ಎನಿಸುವದಲ್ಲದೆ ದೂರದಿಂದ ಅನೇಕರನ್ನು ಆಕರ್ಷಿಸುವದು. ಮೈಸೂರಿನಿಂದ ೩೦ ಲಕ್ಷ ವೆಚ್ಚದಿಂದ ವಿದ್ಯುಚ್ಛಕ್ತಿ ತರುವ ಏರ್ಪಾಡಿನಿಂದ ಮುಂದೆ ನಷ್ಟವಾಗದ ವ್ಯವಸ್ಥೆ ಮಾಡಬೇಕು. ಕಾಫಿ ವ್ಯವಸಾಯಕ್ಕಿರುವಂತೆಯೇ ಕಿತ್ತಳೆ ವ್ಯವಸಾಯಕ್ಕೆ ಪ್ರತ್ಯೇಕ ವ್ಯವಸ್ಥೆ ಇಡುವದು ಹಿತ. ಅದನ್ನು ವ್ಯವಸಾಯ ಇಲಾಖೆಗೆ ಸೇರಿಸಿದುದು ಸರಿಯಲ್ಲ. ಕೋಳಿ ಸಾಕುವ ವ್ಯವಸ್ಥೆ ಸರಿಇಲ್ಲ. ಮೊಟ್ಟೆಯೊಡೆದು ಮರಿ ಮಾಡಿದ ಮೂರು ವರ್ಷಗಳೊಳಗೆ ಅವುಗಳನ್ನು ಯೋಗ್ಯ ಜನರಿಗೆ ಹಂಚಿದರೆ ಸರಕಾರದ ಖರ್ಚು ಕಡಿಮೆಯಾಗುವದು. ಕಾಫಿಯು ನಮ್ಮ ದೇಶದ ಆರ್ಥಿಕ ಸಂಪನ್ನತೆಯ ಬೆನ್ನೆಲುಬು. ಅದಕ್ಕೆ ಹೆಚ್ಚಿನ ಬೆಲೆಬೇಕು. ಮಜೂರರ ಹಿತವಾಗಬೇಕಾದರೆ ಇದು ಅಗತ್ಯ. ನಾವೆಲ್ಲರೂ ಸಹಕರಿಸಿ ಈ ದೇಶವನ್ನು ಆದರ್ಶವಾಗಿ ಮಾಡಬೇಕೆಂಬ ಬಯಕೆ ಇದ್ದರೂ ಕೆಲವರಲ್ಲಿ ಸಂಶಯವಿರುವಂತೆ ತೋರುತ್ತದೆ. ಈ ಸಂಶಯವನ್ನು ಬಿಡಬೇಕು.

ಶ್ರೀ ಸಿ. ಕೆ. ಚೆನ್ನಯ್ಯನವರು

ವ್ಯವಸಾಯ ಆದಾಯ ತೆರಿಗೆಯಿಂದ ಬರುವ ಹನ್ನೆರಡು ಲಕ್ಷವನ್ನೂ ವ್ಯವಸಾಯದ ಆದಾಯಕ್ಕೆ ಕಾರಣರಾದ ಮಜೂರರ ಹಿತಕ್ಕಾಗಿ ವಿನಿಯೋಗಿಸಬೇಕು. ಜೈಲಿನಲ್ಲಿ ಕೈದಿಗಳಿಗೆ ವಾರಕ್ಕೊಂದು ದಿನದ ರಜೆಯ ಏರ್ಪಾಡು ಮಾಡಬೇಕು. ಜೈಲಿನಲ್ಲಿ ಸುಧಾರಣೆ ಸಾಲದು. ಪೋಲೀಸು ಕೆಳ ನೌಕರರು ಪ್ರತೀ ದಿನ ರಾತ್ರಿ ಹಗಲೆನ್ನದೆ ದುಡಿಯುವವರಾದ್ದರಿಂದ ಅವರಿಗೆ ಐದು ಮೈಲುಗಳ ದೂರ ಪ್ರಯಾಣ ಮಾಡಿದರೆ ಬತ್ಯದ ಏರ್ಪಾಡು ಮಾಡಬೇಕು. ವ್ಯವಸಾಯದಲ್ಲಿ ಇನ್ನೂ ಹೆಚ್ಚಿನ ಪ್ರಚಾರಬೇಕು. ಕ್ರಾಪ್ ಕಾಂಪಿಟೇಶನ್ ಹೆಸರಿನಲ್ಲಿ ೧¼ ಸೆಂಟು ಬೆಳೆಸಿದರೆ ಸಾಲದು. ಹೆಚ್ಚು ಸ್ಥಳದಲ್ಲಿ ಬೆಳೆಸಿದವರಿಗೆ ಬಹುಮಾನ ಏರ್ಪಾಡು ಬೇಕು. ಇದು ಪ್ರಜಾ ಸರಕಾರ. ಆರು ತಿಂಗಳಿಗೊಮ್ಮೆ ನಾವಿಲ್ಲಿ ಸೇರುವಷ್ಟು ಕೆಲಸವಿರುವದಲ್ಲ. ಪ್ರತಿನಿಧಿಗಳು ಗ್ರಾಮ ಗ್ರಾಮ ಸುತ್ತಿ ಜನರ ಕಷ್ಟನಿಷ್ಟುರಗಳನ್ನು ತಿಳಿದುಕೊಳ್ಳಬೇಕು. ಪ್ರತಿ ಗ್ರಾಮಾಭಿವೃದ್ಧಿ ಸಮಿತಿ ಮಾಡಿ ಈ ಸಮಿತಿಯವರು ತಮ್ಮ ಕಷ್ಟಗಳನ್ನು ಪ್ರತಿನಿಧಿಗಳ ಮೂಲಕ ಸರಕಾರಕ್ಕೆ ತಿಳಿಸುವ ಏರ್ಪಾಡು ಮಾಡಬೇಕು.

ಶ್ರೀ ಪಿ. ಡಿ. ಸುಬ್ಬಯ್ಯನವರು

ನಾಡು ಖಜೇರಿಗಳ ವಿಭಜನೆ ಮಾಡಿ ಭಾಗಮಂಡ್ಲ, ಸುಂಟಿಕೊಪ್ಪ ಮಾಡಿದುದರಿಂದ ಕೆಲವು ಗ್ರಾಮಸ್ಥರಿಗೆ ತೊಂದರೆಯಾಗಿದೆ. ಅವರ ತೊಂದರೆ ನೀಗಬೇಕು. ಪಾರ್ಶ್ವಪಾನ ನಿರೋಧದಿಂದ ಅನಾಹುತವೇ ಆಗುತ್ತಿದೆ. ಗರೀಬ ಜನರಿಗೆ ಇದರಿಂದ ಲಾಭವಾಗಿದೆಯೆಂಬುದನ್ನು ಒಪ್ಪಬಹುದಾದರೂ ಕಳ್ಳಸಾರಾಯಿ ಹೆಚ್ಚಾಗಿದೆ. ಕಳ್ಳಬಟ್ಟಿಯ ಕಪ್ಪುಸಂತೆ ಮಾಡುವವರಿಗೆ ರೂ. ೨೦/ ೩೦/ ಜುಲ್ಮಾನೆ ಮಾಡಿ ಪ್ರಯೋಜನವಿಲ್ಲ. ಅವರಿಗೆ ಜೈಲು ಶಿಕ್ಷೆ ವಿಧಿಸಬೇಕು. ಮಲೆವಾರರಿಗೆ ಕಂದಾಯ ಹೆಚ್ಚಿಸಕೂಡದು. ಉತ್ಪತ್ತಿಯನ್ನು ಅನುಸರಿಸಿ ಕಂದಾಯ ಹಾಕಬೇಕೇ ವಿನಾ ಮನೆಯ ಹತ್ತಿರ, ದೂರಗಳ ಅಳತೆಯಿಂದಲ್ಲ. ಬತ್ತದ ಬೆಲೆ ಕಡಿಮೆ ಮಾಡಬಾರದು. ವಾರ್ಡುಗಳಲ್ಲಿ ಕಾಯಲಸ್ಥರಿಗೆ ತಿಂಡಿ ಒದಗಿಸುವ ಏರ್ಪಾಡುಬೇಕು. ಹಣ್ಣು ಹಂಪಲು ಬೆಳೆಸಲು ಉತ್ತೇಜನ ಕೊಡಬೇಕು. ಸಹಕಾರಿ ಸುಪರ್‌ವೈಜರುಗಳನ್ನು ಸರಕಾರ ವಹಿಸಿಕೊಳ್ಳಬೇಕು. ಬೇತರಿ ಸೇತುವೆ ಬೇಗ ಆಗುವದೆಂಬುದು ಸಂತೋಷ. ಬಾಡಿಗೆ ನಿಯಂತ್ರಣ ನಿಯಮಗಳಿಂದ ಮನೆ ಮಾಲಿಕರಿಗೆ ವಿಪರೀತ ತೊಂದರೆ ಇದೆ.

ಶ್ರೀ ಜಿ. ಯಂ. ಮಂಜುನಾಥಯ್ಯನವರು

ರಾಷ್ಟ್ರರಚನಾ ಕಾರ್ಯಗಳಿಗೆ ಹಣವಿಟ್ಟ ಕಾರಣ ೩೭ ಲಕ್ಷ ಕೊರತೆ ಕಂಡುಬರುತ್ತಿದೆ. ಕೇವಲ ಹಣವನ್ನು ಶೇಖರಿಸಿಟ್ಟುಕೊಳ್ಳುವದರಿಂದ ಪ್ರಯೋಜನವಿಲ್ಲ. ಖರ್ಚು ಮಾಡಬೇಕು. ನಮ್ಮ ದೇಶವನ್ನು ಇತರ ದೇಶಗಳಿಗಿಂಥಾ ಮೇಲ್ತರಗತಿಗೆ ತರಬೇಕು. ಶಿಲ್ಕು ಕಡಿಮೆಯಾಗಿ ಒಂದಲ್ಲ ಒಂದು ದಿನ ಈ ಸಂಸ್ಥಾನವು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಗುವದೆಂಬ ಭಯ ಕೆಲವರಿಗಿದೆ. ನನಗೆ ಅಂಥಾ ಭಯವಿಲ್ಲ. ಕೊಡಗು ಪ್ರತ್ಯೇಕ ಇರಬೇಕೆಂಬ ಬಯಕೆಯಲ್ಲಿ ನಾನು ಯಾರಿಗೂ ಹಿಂದಿಲ್ಲವಾದರೂ ಈ ರಾಜ್ಯವನ್ನು ಇಡೀ ಹಿಂದೂಸ್ಥಾನಕ್ಕೆ ಯಾಕೆ ಇಡೀ ಜಗತ್ತಿಗೆ ಆದರ್ಶವಾಗಿ ಮಾಡಲು ಹಣ ಖರ್ಚು ಮಾಡಲೇಬೇಕು. ವಿಧಾಯಕ ಕಾರ್ಯಗಳಿಗಾಗಿ ಖರ್ಚು ಮಾಡುತ್ತಾ ಇದ್ದರೆ ಅದೇ ಜೀವನ. ಎಲ್ಲವನ್ನು ಸಂಗ್ರಹಿಸಿಟ್ಟು ತಟಸ್ಥವಾಗುವದೇ ಮೃತ್ಯು. ಕೊಡಗಿನ ವಿಲೀನೀಕರಣವಾದೀತೆಂಬ ಭಯ ನಮ್ಮಲ್ಲಿರಬೇಕು. ಇದರಿಂದ ನಮ್ಮ ಹಿತಕ್ಕಾಗಿ ದುಡಿಯುವ ಚೇತನ ದೊರೆಯುವದು. ಇಡಲ್ಪಟ್ಟ ಹಣವೆಲ್ಲ ಯೋಗ್ಯವಾಗಿ ವಿನಿಯೋಗವಾಗುವದೆಂದು ನಾನು ನಂಬುತ್ತೇನೆ. ಸಾಮೂಹಿಕ ವಿಕಾಸ ಯೋಜನೆಯ ಬಗ್ಗೆ ಜನರಲ್ಲಿ ಉತ್ಸಾಹವಿದೆ. ಭವ್ಯ ಭವಿಷ್ಯದ ಕಲ್ಪನೆ ಇದೆ. ಮುಂದಿನ ಮೂರು ವರ್ಷಗಳಲ್ಲಿ ನಮ್ಮ ರಾಜ್ಯವು ಬಹು ಮುಂದರಿಯುವದು. ಸಾಮೂಹಿಕ ವಿಕಾಸ ಯೋಜನೆಯ ಕೆಲಸ ಸರಿಯಾಗಿದ್ದರೂ ಮುಡ್ಡಿನ ವಿಚಾರದಲ್ಲಿ ಬಹು ವಿಳಂಬ ತೋರುತ್ತಿದೆ. ಆದ್ದರಿಂದ ಜನರಲ್ಲಿ ವಿಶ್ವಾಸ ಏರಿಸಿ ಕೆಲಸದ ಶೇಕಡಾ ೫೦ ರಷ್ಟಾದರೂ ಮುಂಗಡವಾಗಿ ಕೊಡುವ ಏರ್ಪಾಡಾಗಬೇಕು. ಕಳೆದ ಮೂವತ್ತು ವರ್ಷಗಳಿಂದಾಗದ ಬೇತರಿ ಸೇತುವೆ ಆಗಲಿರುವದನ್ನು ಕೇಳಿ ಸಂತೋಷವಾಗುತ್ತದೆ. ಹರ್ದೂರು ಸೇತುವೆಯೂ ಹಾಗೆಯೇ ಆಗಲಿ. ಯೋಗ್ಯ ಬೆಲೆಗೆ ನೆಲಗಡಲೇ ಗೊಬ್ಬರ ದೊರೆಯುವಂತಾಗಬೇಕು. ಫಸಲಿನ ಭೋಗ್ಯದ ಮೇರೆ ಗೊಬ್ಬರ ಸಾಲ ಕೊಡಬಹುದು. ಫಾರೆಸ್ಟಿನಲ್ಲಿ ತೇಗ ಒಂದೇ ಬೆಳೆದರೆ ಸಾಲದು. ಆಯಾಯ ಸ್ಥಳಗಳಿಗೆ ಸರಿಯಾಗಿ ಮರ ಬೆಳೆಸಬೇಕು. 'ಸಿಲ್ವರ್ ಓಕ್ಸ್' ನೆಟ್ಟರೂ ಹಿತವಿದೆ. ಗುಡಿ ಕೈಗಾರಿಕೆ ಯೋಗ್ಯ ರೀತಿ ಹೆಚ್ಚಲಿ.

ಶ್ರೀ ಕೆ. ಕೆ. ಗಣಪತಿಯವರು.

ನಾವು ಜಿಪುಣರಂತಿರಬಾರದೆಂಬುದಕ್ಕೆ ಒಪ್ಪುತ್ತೇನೆ. ಉತ್ಪತ್ತಿಗಾಗಿ ಉಳಿಕೆ ಹಣ ಖರ್ಚಾಗಬೇಕು. ಬಾಣೆ ಜಾಗಕ್ಕೆ ಏಕರೆಗೆ ನಾಲ್ಕಾಣೆಯಂತೆ ಕಂದಾಯ ಹಾಕಲೆಳಸಿರುವುದು ಸರಿಯಲ್ಲ. ಈ ಬಗ್ಗೆ ಒಂದು ಮಸೂದೆ ತಂದು ಜನರ ಅಭಿಪ್ರಾಯ ತಿಳಿದು ವರ್ತಿಸುವದು ಹಿತ. ಸಂಪೂರ್ಣ ಪಾನ ನಿರೋಧವನ್ನು ಜಾರಿಯಲ್ಲಿ ತರುವದು ಹಿತ. ಪಾರ್ಶ್ವ ನಿರೋಧದಿಂದ ಪ್ರಯೋಜನವಿಲ್ಲ. ಸಂಪೂರ್ಣ ಪಾನ ನಿರೋಧ ಮಾಡಲಾರದಿದ್ದರೆ ಸರಕಾರಿ ಅಂಗಡಿಗಳಲ್ಲಿ ಯಾವುದೇ ನಿಯಂತ್ರಣವಿಲ್ಲದೆ ಪೂರ್ತಿ ಯಾ ಅರ್ಧಕುಪ್ಪಿಗಳಲ್ಲಿ ಸೀಲು ಹಾಕಿ ಸಾರಾಯಿ ಮಾರುವದು ಹಿತವಾದೀತು. ನಮ್ಮ ಮರಗಳಿಗೆ ಬೆಲೆ ದೊರೆಯದಿರಲು ಸೌದೆಯ ಹೆಸರಿನಲ್ಲಿ ಒಳ್ಳೆ ಮರಗಳು ಕಳ್ಳ ಸಾಗಾಟವಾಗಿ ಮಾರ್ಕೆಟಿಗೆ ಬರುವದೇ ಕಾರಣ. ಇತ್ತಲಾಗಿ ಟಿಂಬರ್ ಸಹವಾಟು ಖರ್ಚು ಕಡಿಮೆಯಾಗಿದ್ದರೂ ಲಾರಿಗಳ ಹೆಚ್ಚಳದಿಂದ ಇನ್ನೂ ಕಡಿಮೆಯಾಗುವ ಆಸ್ಪದ ಕಂಡು ಬರುತ್ತಿದ್ದರೂ ಎರಡು ವರ್ಷಗಳ ಕಂಟ್ರಾಕ್ಟು ಕೊಟ್ಟದ್ದರಿಂದ ಹಾನಿಯಾಗಿದೆ. ಅಲ್ಲದೆ [illegible]

ಕ ಸಾರಿ ವಹಿವಾಟು ಖರ್ಚಿಗೂ ಕಡಿಮೆ ದರದಲ್ಲಿ ಟಿಂಬರ್ ಮಾರಾಟವಾಗಿದೆ. ಫಾರೆಸ್ಟ್ ಇಲಾಖೆಯ ಕೆಲಸ ಕಾರ್ಯಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ಏರ್ಪಡಿಸುವದು ಯುಕ್ತವಾಗಿದೆ. ಹಾರಂಗಿ, ಲಕ್ಷ್ಮಣ ತೀರ್ಥ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು. ಕಡ್ಡಾಯ ಶಿಕ್ಷಣ, ವಯಸ್ಕರ ಶಿಕ್ಷಣ, ಶಿಶುವಿಹಾರಗಳು ಹೆಚ್ಚಬೇಕು. ಪಂಚವಾರ್ಷಿಕ ಯೋಜನೆ ಮುಗಿಯುವ ವರೆಗೆ ಪಿ. ಡಬ್ಲ್ಯು. ಡಿ. ಯನ್ನು ಸ್ಥಳೀಯ ಸರಕಾರದ ಹಿಡಿತಕ್ಕೆ ತರುವದು ಸರಿಯಲ್ಲ. ಬಹುಪ್ರಶ್ನೆಯ ಯೋಜನೆಗಳಿಗಾಗಿ [illegible]. ಒತ್ತಕ್ಕೆ ಕಚ್ಚಿನ ಜೆಲ್ಲಿ ದೊರೆತದ್ದರಿಂದಲೂ, ಕಂಟ್ರಾಕ್ಟರುಗಳು ನಿಶ್ಚಿತ ಬೆಲೆಗಿಂತಾ ಹೆಚ್ಚು ಕೊಟ್ಟದ್ದರಿಂದಲೂ ಪ್ರೊಕ್ಯೂರ್‌ಮೆಂಟ್ ಕೆಲಸ ಸುಲಭವಾಯಿತು.

ಶ್ರೀ ಪಿ. ಅಕ್ಕಯ್ಯನವರು

ಹರಿಜನರಿಗೂ, ಹಿಂದುಳಿದ ವರ್ಗದವರಿಗೂ ಸಾಕಷ್ಟು ಸಹಾಯ ಪ್ರೋತ್ಸಾಹ ದೊರೆಯುತ್ತಿದೆ. ಕೇವಲ ಬಟ್ಟೆ, ಪುಸ್ತಕ, ಮಧ್ಯಾಹ್ನದ ಊಟ ಇವೇ ಸಾಲವು. ಹಿಂದುಳಿದ ವರ್ಗದ ಮಕ್ಕಳಿಗೆ ಒಂದು ರೀತಿಯ ಹೆದರಿಕೆ ಇದೆ. ಇದನ್ನು ನಿವಾರಿಸಲು ಒಂದನೇ ಫಾರಮಿನ ಮೇಲಿರುವ ದಲಿತ ವರ್ಗದವರ ಮಕ್ಕಳನ್ನು ಬೇರೆ ಸರಕಾರಿ ವಿದ್ಯಾರ್ಥಿ ನಿವಾಸಗೃಹಗಳಲ್ಲಿ ಸೇರಿಸುವ ಏರ್ಪಾಡು ಮಾಡಬೇಕು. ಮನೆ ಮಠಗಳಿಲ್ಲದೆ ತೊಂದರೆ ಪಡುವವರಿಗೆ ಜಾಗ ಭೂಮಿ ಒದಗಿಸಬೇಕು. ಮಲೇರಿಯಾದ ನಿವಾರಣೆಯಾಗಿದೆ. ಸರಕಾರವು ಇದರಿಂದ ಸರಾಗ ನಿದ್ರೆಯ ಅನುಕೂಲತೆ ಮಾಡಿದೆ. ಪೋಲೀಸಿನವರು ತುಂಬಾ ಕೆಲಸ ಮಾಡಿದರೂ ಅವರಿಗಿರುವ ಅನುಕೂಲತೆ ಕಡಿಮೆ. ಅವರಿಗೆ ಯೋಗ್ಯ ಅನುಕೂಲತೆ ಒದಗಿಸಬೇಕು. ಉಪಾಧ್ಯಾಯರ ಸ್ಥಿತಿ ಶೋಚನೀಯವಾಗಿದೆ. ಸಂಬಳ ಬಹಳ ವಿಳಂಬವಾಗಿ ದೊರೆಯುವದರಿಂದ ಸಾಲ ಮಾಡಬೇಕಾಗಿ ಬರುತ್ತದೆ. ಇದನ್ನು ಸರಿಪಡಿಸಬೇಕು. ಕೊಡಗಿನಲ್ಲಿ ಅಶೋಕ ರಾಜ್ಯಭಾರವಿದೆಯೆನ್ನುವಂತೆ ಆದರ್ಶವಾಗಿ ಆಡಳಿತ ನಡೆಯಲಿ.

ಶ್ರೀ ಜಿ. ಲಿಂಗರಾಜಯ್ಯನವರು

ಭೂಮಿ ಇಲ್ಲದವರು ಭೂಮಿಗಾಗಿ ಹಾಕಿದ ಅರ್ಜಿಗಳು ಬಹು ತುಂಬ ಇವೆ. ಅವುಗಳನ್ನು ಪರಿಶೀಲಿಸಿ ಶೀಘ್ರ ಒಂದಲ್ಲ ಒಂದು ಉತ್ತರ ಕೊಡಬೇಕು. ಸರ್ವೆಯ ತೊಂದರೆ ನಾಡು ಕಚೇರಿಗಳಲ್ಲಿ ತುಂಬಾ ಇದೆ. ಜನರನ್ನು ಸಮಾಧಾನ ಪಡಿಸುವದು ಅಸಾಧ್ಯವಾಗಿದೆ. ನನ್ನ ಸ್ವಂತ ಅನುಭವಕ್ಕೆ ಭೂಮಿ ಬಂದು ವರ್ಷಗಳಾದರೂ ಜಮಾಬಂದಿ ವರ್ಗವಾಗದ ನಿದರ್ಶನಗಳಿವೆ. ೫೦ ವರ್ಷಗಳಿಂದ ಆಗದ ಉದಾಹರಣೆಗಳಿವೆ. ಜಮಾಬಂದಿ ಯಾರ ಹೆಸರಿನಲ್ಲೋ ಇದ್ದು ಹರಾಜು ಆದದ್ದೂ ಕೂಡ ಅನುಭವಿಸುವವರಿಗೆ ತಿಳಿಯದಾಗುತ್ತಿದೆ. ಪಟ್ಟೆ ಯಾರದೋ ಹೆಸರಿನಲ್ಲಿ, ಯಾರದೋ ಭೂಮಿ ಹರಾಜು ಹೀಗೆ ಆಗುತ್ತವೆ. ಪೈಸಾರಿಯಿಂದ ವ್ಯವಸಾಯಕ್ಕೆ ಜಾಗ ಕಡಿದುಕೊಳ್ಳಲು ಹಿಂದೆ ತೊಂದರೆ ಇರಲಿಲ್ಲ. ಆದರೆ ಈಗ ತೊಂದರೆ ಇದೆ, ಇದೇ ಏನು ಕಾಂಗ್ರೆಸ್ ಸರಕಾರ ಒಂದು ಮಾಡಿದ ಹಿತ ಎಂದು ಜನರು ಕೇಳುತ್ತಾರೆ. ಕೊಡಗಿನ ಮಲೇರಿಯಾ ಕಡಮೆಯಾಗಿದೆ. ಈಗ ಕೊಡಗು ವಾಸಯೋಗ್ಯವೆಂದು ಎಲ್ಲರೂ ಹೇಳುತಾರೆ. ಹಳ್ಳಿಗಳಲ್ಲಿ ಆಸ್ಪತ್ರೆ ಸೌಕರ್ಯ ಹೆಚ್ಚಬೇಕು. ವಿದ್ಯೆಗೆ ತುಂಬಾ ಹಣ ವಿನಿಯೋಗವಾಗುತ್ತಿದೆ. ರಾತ್ರಿ ಶಾಲೆ ತೆರೆದು ಹೇಗೆ ವಯಸ್ಕರಿಗೆ ವಿದ್ಯೆ ಕೊಡುತಿದ್ದಾರೋ ಅದೇ ರೀತಿ ರಾಷ್ಟ್ರ ಭಾಷೆಯನ್ನು ಕಲಿಸುವ ಶಾಲೆಗಳನ್ನು ತೆರೆಯುವದು ಒಳಿತು. ಫಾರೆಸ್ಟಿನ ಬೆಂಕಿಗೆ ಸರಕಾರ ಕಾರಣವೆನ್ನಲಾಗದು. ಏಕೆಂದರೆ ಜನರ ಕಾಡಲ್ಲಿ ಮರಗಳ ಕಳ್ಳತನದಿಂದ ಬೆಂಕಿ ಉತ್ಪನ್ನವಾಗುವದಿದೆ. ಬೆಟ್ಟಳೆ ನೀರಾವರಿ ಯೋಜನೆಯಾಗುವದೆಂದು ನಮ್ಮ ತಂದೆ ತಾಯಿಗಳು ಆಶಿಸಿ ಅವರ ಕಾಲ ಕಳೆಯಿತು. ಈಗ ನಾವು ಆಶೆ ಪಡುತ್ತಿದ್ದೇವೆ. ಕಳೆದ ವರ್ಷ ಆಸೆ ತೋರಿಸಿ ಮೋಸವಾಯಿತು. ಇನ್ನಾದರೂ ಈ ಕೆಲಸ ಆಗಬೇಕು.

ಶ್ರೀ. ಎಚ್. ಟಿ. ಮಂತ್ರಣ್ಣನವರು.

ಈ ವರ್ಷದ ಬಡ್ಜೆಟ್ಟಿನಲ್ಲಿ ಕೊರತೆ ೩೭ ಲಕ್ಷವಿದೆ. ಕೇಂದ್ರದ ಸಾಲ ವಂತಿಗೆಗಳನ್ನು ಕಳೆದರೆ ಉತ್ಪತ್ತಿ ಕಳೆದ ವರ್ಷದಷ್ಟೇ ಆಗುತ್ತದೆ. ಕಳೆದ ವರ್ಷ ಖರ್ಚು ೮೭ ಲಕ್ಷವಾದರೆ ಈ ವರ್ಷ ೧೪೦ ಲಕ್ಷವಾಗಿದೆ. ಅಂದರೆ ಸುಮಾರು ೫೩ ಲಕ್ಷ ಹೆಚ್ಚು ಖರ್ಚು. ಇದರಿಂದ ನಮ್ಮ ೮೯ ಲಕ್ಷವಿದ್ದ ಶಿಲ್ಕು ರೂ. ೫೨ ಲಕ್ಷಕ್ಕೆ ಇಳಿದುಬಿದ್ದಿದೆ. ಅಂದರೆ ನಮ್ಮ ಉಳಿತಾಯದ ಈ ವರ್ಷ ೩೭ ಲಕ್ಷ ಖರ್ಚು ಮಾಡಿದಂತಾಯಿತು. ಜನತಾ ಅಭಿವೃದ್ಧಿಯ ಕೆಲಸಗಳಿಗೆ ಈ ರೀತಿ ಖರ್ಚು ಆಗಬೇಕು. ಆದರೆ ಈ ಖರ್ಚಿಗೆ ಅನುಗುಣವಾಗಿ ನಮ್ಮ ಆದಾಯವನ್ನೂ ಹೆಚ್ಚಿಸಿಕೊಳ್ಳಬೇಕು. ನಮ್ಮಿಂದ ಇಂಡಿಯಾ ಸರಕಾರಕ್ಕೆ ಹೋಗುವ ಸುಮಾರು ೩೦ ಲಕ್ಷ ರೂಪಾಯಿಗಳ ಎಕ್ಸೈಸ್ ಉತ್ಪತ್ತಿಯಲ್ಲಿ ನಮಗೆ ಬರತಕ್ಕ ಪಾಲನ್ನು ಪಡೆಯಲು ಯತ್ನಿಸಬೇಕು. ಆ ಪಾಲು ಸಿಕ್ಕುವ ವರೆಗೆ ನಮ್ಮ ಮಂತ್ರಿಗಳು ಡೆಲ್ಲಿಯಲ್ಲೇ ಇದ್ದರೂ ಚಿಂತೆಯಿಲ್ಲ. ಪಂಚವಾರ್ಷಿಕ ಯೋಜನೆಗೆ ರೂ. ೩೭ ಲಕ್ಷವಿಡಲಾಗಿದೆ. ಇದರ ಶೇಕಡ ೫೦ ರಷ್ಟು ಕೇಂದ್ರದಿಂದ ದೊರೆಯಬೇಕು. ಆದರೆ ಕೇಂದ್ರದಿಂದ ಕೇವಲ ೧೮ ಲಕ್ಷ ಸಾಲ, ವಂತಿಗೆಯಾಗಿ ದೊರೆಯುವದಾಗಿದೆ. ಮಂತ್ರಿಗಳು ಹೆಚ್ಚಿನ ಸಹಾಯ ದೊರೆಯುವಂತೆ ಪ್ರಯತ್ನಿಸಬೇಕು. ರೆವಿನ್ಯೂ ಇಲಾಖೆಯ ಕೆಲಸ ತೃಪ್ತಿಕರವಾಗಿಲ್ಲ. ಅಲ್ಲಿಯ ಸಿಬ್ಬಂದಿಗಳನ್ನು ನಾನು ಬಯ್ಯುವದಿಲ್ಲ. ಸಿ. ಟಿ. ಮೊದಲಿಯಾರರ ಕಾಲದ ಅರ್ಜಿಗಳು ಇನ್ನೂ ಹಾಗೇ ಬಿದ್ದಿವೆಯೆಂದರೆ ಬೇರೆ ವಿವರಣೆ ಬೇಕಿಲ್ಲ. ನ್ಯಾಯವಾದ ಸಿಬ್ಬಂದಿ ಕೊಟ್ಟು ಕೆಲಸವನ್ನು ಜಾಗ್ರತೆಗೊಳಿಸಬೇಕು. ಕೋರ್ಟಿನ ಕೋಣೆಗಳಲ್ಲಿ ಸಿಬ್ಬಂದಿಗಳನ್ನು ತುಂಬಿಸಿದರೆ ಸಾಲದು. ನಾಡುಕಚೇರಿಗಳಿಗೆ ಅನುಭವಸ್ಥರನ್ನು ಕಳುಹಿಸಿರಿ. ಮಠದ ಭೂಮಿ ಸೊತ್ತುಗಳ ದುರುಪಯೋಗವಾಗುತ್ತಿದೆ. ಅದನ್ನು ಪರಿಶೀಲಿಸಲು ಒಂದು ಸಮಿತಿಯಾಗಬೇಕು. ಪಾರ್ಶ್ವಪಾನ ನಿರೋಧದಿಂದ ಕಳ್ಳತನ ಹೆಚ್ಚಿಸಿದಂತಾಗಿದೆ. ಹಿಂದೆ ಸಾರಾಯಿಕಾಸುವದು ಅಪರೂಪವಾಗಿತ್ತು. ಇಂದು ಅದು ಎಲ್ಲರಿಗೂ ತಿಳಿದಿದೆ. ಒಂದೋ ಪೂರ್ಣ ಪಾನನಿರೋಧ ತರಬೇಕು. ಇಲ್ಲವೇ ಖಡ್ಡಾಯವಾಗಿ ಕಳ್ಳವ್ಯಾಪಾರ ನಿಲ್ಲಿಸಬೇಕು. ಉತ್ತರ ಕೊಡಗು ಫಾರೆಸ್ಟು ಈ ವರ್ಷ ಪೂರ್ಣ ಬೆಂದು ಹೋಗಿದೆ. ಸಿ. ಪಿ. ಸಿ ಯ ಬಸ್ಸುಗಳೊಂದೂ ಚೆನ್ನಾಗಿಲ್ಲ. ಸಮಯಕ್ಕೆ ಸರಿಯಾಗಿ ಓಡುವದಿಲ್ಲ. ಪ್ರಯಾಣಿಕರ ಸೌಕರ್ಯಕ್ಕಾಗಿ ಇವರನ್ನು ಎಚ್ಚರಿಸಬೇಕು. ಅಂಚೆ ಇಲಾಖೆಗೂ ರಜೆ ಇದೆ. ಆದರೆ ಪೋಲೀಸ್ ಇಲಾಖೆಗೆ ವಾರದ ರಜೆ ಇಲ್ಲ. ಇದು ಸರಿಯಲ್ಲ. ಶಾಲೆಗಳಲ್ಲಿ ಮಕ್ಕಳನ್ನು ಅವಹೇಳನ ಮಾಡುವದು, ಫೈನ್ ಮಾಡುವದು ನಿಲ್ಲಬೇಕು.

ಸಹಕಾರ ಇಲಾಖೆಯಿಂದ ಹಳ್ಳಿಯ ಜನರಿಗೆ ತುಂಬಾ ಪ್ರಯೋಜನವಿದೆ ಆದರೆ ಈ ಇಲಾಖೆಯಲ್ಲಿ ೧೨೦೦೦ ಕೊರತೆ ಮಾಡಿರುವದು ಸರಿಯಲ್ಲ. ಪ್ರತಿಯೊಂದು ಕೇಂದ್ರದಲ್ಲೂ ಕೈಗಾರಿಕೆ ತೆರೆಯಬೇಕು. ಪಿ. ಡಬ್ಲ್ಯು. ಡಿ. ಯನ್ನು ಸ್ಥಳೀಯ ಸರಕಾರದ ಅಧೀನಕ್ಕೆ ತೆಗೆದುಕೊಳ್ಳುವದು ತೃಪ್ತಿಕರ. ಕುಡಿಯುವ ನೀರಿಗೆ ಹಲವೆಡೆ ವಿಪರೀತ ತೊಂದರೆ ಇದೆ. ಕಮ್ಯೂನಿಟಿ ಪ್ರಾಜೆಕ್ಟಿನಲ್ಲಿ ಕಾಣಿಸಿದ ಕೆಲಸವಾಗಿಲ್ಲ. ಜನರ ಉತ್ಸಾಹ ಕುಗ್ಗುತ್ತಿದೆ. ದೊರೆತ ಹಣದಿಂದ ಮಡಿಕೇರಿಯಲ್ಲಿ ಎರಡು ಬೀದಿ ಕಟ್ಟಿಕೊಂಡರೆ ಸಾಲದು.

ಶ್ರೀ. ಎಚ್. ಎ. ನಂಜನವರು.

ಬಜೆಟ್ಟು ಸೂಕ್ತವಾಗಿದೆ. ಸರಕಾರದ ಖರ್ಚು ಹೆಚ್ಚಾಗುತ್ತಿದೆ. ಉತ್ಪತ್ತಿ ಬರುವ ಬಾಬಿಗೆ ಖರ್ಚಾಗಬೇಕು. ಸಿಬ್ಬಂದಿ ಹೆಚ್ಚಿಸುವದರಿಂದ ಪ್ರಯೋಜನವಿಲ್ಲ. ಕೊಡಗಿನ ಪೂರ್ವ ಭಾಗದ ಕಾಡು ಮುಂಗಾರು ಮಳೆಗೆ ಅವಶ್ಯ. ಅದನ್ನು ಕಡಿದು ಹಾಳುಮಾಡಬಾರದು. ಹಿಂದುಳಿದವರಿಗೆ ಉತ್ತೇಜನದ ವಿದ್ಯೆ ಕೊಡುವಂತಾಗಬೇಕು. [illegible] ಇಲಾಖೆಯ ಕೆಲಸ [illegible] ಸ್ಥಾಪಿಸಿ ಅದರಲ್ಲಿ ಹಿಂದುಳಿದ ವರ್ಗದ ಯುವಕರನ್ನು ಸೇರಿಸಬೇಕು. ಮಾನ್ಯ ಮಂತ್ರಿಗಳ ಆಡಳಿತ ಕಾಲದಲ್ಲಿ ಪುಟ್ಟ ಕೊಡಗು ಆದರ್ಶ ರಾಜ್ಯವೆನಿಸಲಿ.

ಶ್ರೀ. ಜಿ. ಸುಬ್ಬಯ್ಯನವರು.

ಮಂತ್ರಿಮಂಡಲದ ಒಂದು ವರ್ಷದ ಆಡಳಿತವು ಚೆನ್ನಾಗಿ ನಡೆದಿದೆಯೆನ್ನಬಹುದು. ರೆವಿನ್ಯೂ ಇಲಾಖೆಯಲ್ಲಿ ಕಿರುಕುಳ ಇದೆ. ಸರ್ವೆ ಕೆಲಸ ಸರಿಯಾಗಿ ನಡೆಯುತಿಲ್ಲ. ಫಾರೆಸ್ಟ್ ಇಲಾಖೆಯ ಮ

ಧರ್ಮ ರಹಸ್ಯ

—ಸ್ವಾಮಿ ನಾರಾಯಣಾನಂದ—

(೧) ಪ್ರಶಾಂತ ಪ್ರಭಾತವು ದೇದೀಪ್ಯ ಸೂರ್ಯನ ಆಗಮನವನ್ನು ಸೂಚಿಸುವಂತೆ ದಯೆ, ಸಹನೆಗಳು ಜ್ಞಾನಸೂರ್ಯನ ಉದಯದ ಪೂರ್ವ ಚಿಹ್ನೆಗಳು.

(೨) ಬಂಧನವಿರುವ ಪ್ರೇಮವು ಪ್ರೇಮವಲ್ಲ. ದೇವರನ್ನು ತ್ಯಜಿಸುವ ತ್ಯಾಗವು ತ್ಯಾಗವಲ್ಲ. ಆತ್ಮವನ್ನು ಕುಗ್ಗಿಸುವ ಧೈರ್ಯತೆಯು ಧೈರ್ಯತೆಯಲ್ಲ.

(೩) ಪ್ರಾಯ ಹೋದಂತೆ ಶಾರೀರಿಕ ಸೌಂದರ್ಯ ಮತ್ತು ಶಕ್ತಿಗಳು ಉಡುಗಿದರೂ ಧಾರ್ಮಿಕ ಸೌಂದರ್ಯ ಮತ್ತು ಶಕ್ತಿಗಳು ಹೆಚ್ಚುವವು.

(೪) ಮಗುವು ಮಾನವನ ತಂದೆ. ತಾಯಿಯ ಹೃದಯವೇ ಮಗುವಿನ ಶಾಲೆ. ಸುತ್ತಲಿನ ಆವರಣವೇ ಜಯಾಪಜಯಗಳ ಕಾರ್ಯಕಾರಣ. ಬಿತ್ತಿದುದನ್ನು ಕುಯ್ಯಬೇಕಾದುದೇ ಅದೃಷ್ಟ.

(೫) ಯೌವನವು ಕುರುಡು. ಅದರ ನಿಶ್ಚಿತ ಹಿಡಿತವಿಲ್ಲದೆ ಸದ್ಗುಣಿಯಾಗುವದು ಅಸಾಧ್ಯ. ಗುಣಸ್ಥಿತಿಯೇ ಸ್ವರ್ಗ, ಮೋಕ್ಷಗಳು.

(೬) ಕುಂಬಾರನಿಗೆ ವರ್ಷ, ದೊಣ್ಣೆಗೆ ನಿಮಿಷವೆಂಬಂತೆ ರಚನೆ ಬಳಸಿನ ದಾರಿ. ನಾಶ [illegible]. ಇದೇ ಜೀವನದ ಪ್ರಯತ್ನಗಳೆಲ್ಲವೂ ಕ್ಷಣಾರ್ಧದ ವಿಲಾಸದಲ್ಲಿ ನಿರ್ನಾಮವಾಗುವುದು.

(೭) ಪವಿತ್ರತೆಯೇ ಮುಕ್ತಿ. ಅಹಂಕಾರವೇ ಬಂಧನ. ಪವಿತ್ರತೆಯೇ ದೈವತ್ವ. ಹೃದಯಪಾವಿತ್ರ್ಯವೇ ಪೂಜೆ, ಪ್ರಾರ್ಥನೆ, ಸ್ವರ್ಗ, ಸರ್ವಸ್ವ.

(೮) ಸೌಮ್ಯನಲ್ಲಿ ಶೌರ್ಯವು ಪ್ರಶಂಸನೀಯ. ಕ್ರೂರಿಯಲ್ಲಿ ಶಾಂತಿಯು ಅಸಂಗತ. ವ್ಯಭಿಚಾರಿಯಲ್ಲಿ ಶರೀರಾರೋಗ್ಯವು ಅಭಿಶಾಪ.

(೯) ಅನೇಕ ವೇಳೆ ಮಿತ್ರರೇ ಶತ್ರುಗಳು. ಮಿತ್ರರೆಂಬ ಬಂಧನವೇ ಮೋಹಕ್ಕೆ ಕಾರಣ. ಆದ್ದರಿಂದ ಶತ್ರುಗಳಷ್ಟು ಮಿತ್ರರ ಬಗೆಗೂ ಎಚ್ಚರ ಬೇಕು.

(೧೦) ಬುದ್ಧಿ ಬೆಳೆದರೆ ಸಾಲದು. ಶುದ್ಧಿ ಬೇಕು. ಜ್ಞಾನ ಹೆಚ್ಚಿದರೆ ಸಾಲದು. ಮೌನ ಬೇಕು. ಊಹನೆ ಸಲ್ಲಾಪಗಳು ಸಾಲವು. ಸಹನೆ ಉಲ್ಲಾಸಗಳು ಬೇಕು.

ಬಜೆಟ್ಟಿನ ಮೇಲೆ ಸದಸ್ಯರ ಅಭಿಪ್ರಾಯಗಳು

(ಹಿಂದಿನ ಪುಟದಿಂದ)

ಜೂರರ ಹಿತಕ್ಕಾಗಿ ಎರಡು ರೇಶನ್ ಡಿಪೋಗಳನ್ನಿಟ್ಟದಕ್ಕೆ ವಂದಿಸುತ್ತೇನೆ. ಮರೆನಾಡಿಗೆ ಒಂದು ಆಸ್ಪತ್ರೆ ಕೊಟ್ಟದಕ್ಕೂ ವಂದನೆ. ಮಜೂರರ ಹಿತಕ್ಕಾಗಿ ತೆರೆಯಲ್ಪಟ್ಟ ಲೇಬರ್ ಇಲಾಖೆ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡಬೇಕು. ದಳಿತ ವರ್ಗದವರಿಗಾಗಿ ವಿದ್ಯಾ ಇಲಾಖೆಯಲ್ಲಿ ಒಂದು ಲಕ್ಷ ಹಣವಿರಿಸಿದ್ದಕ್ಕೆ ವಂದನೆಗಳು. ಆರೋಗ್ಯ ಇಲಾಖೆಯವರು ದಳಿತವರ್ಗದ ವಿದ್ಯಾರ್ಥಿಗಳಿಗೆ ಹಾಲು, ಉಸ್ಪತ್ತಿ ಮೊದಲಾದುವನ್ನು ಸರಬರಾಯಿ ಮಾಡುತ್ತಿರುವದಕ್ಕೆ ವಂದನೆಗಳು. ಹೋಟೆಲುಗಳು ಕೊಡಗಿನಲ್ಲಿ ಸಾಕಷ್ಟು ಶುಚಿಯಾಗಿಲ್ಲ. ಆರೋಗ್ಯ ಇಲಾಖೆ ಎಚ್ಚರ ತೆಗೆಯಬೇಕು. ಗುಡಿ ಕೈಗಾರಿಕೆಗಳಿಂದಲೇ ನಿರುದ್ಯೋಗ ನಿವಾರಣೆಯಾಗುವದು. ಮಂತ್ರಿಮಂಡಲದ ಕೆಲಸದಲ್ಲಿ ತಪ್ಪಿರಬಹುದು. ಆದರೆ ಮುಂದೆ ಅಂಥಾದ್ದಕ್ಕೆ ಎಡೆಕೊಡಲಾರರೆಂದು ನಂಬುವೆನು.

ಶ್ರೀ. ಪಿ. ಸಿ. ಉತ್ತಯ್ಯನವರು.

ನಮ್ಮ ಉಳಿತಾಯ ಶೇಕಡ ೪೨ ರಷ್ಟನ್ನು ಈ ವರ್ಷ ಖರ್ಚು ಮಾಡುತ್ತಿರುವೆವು. ಆದರೂ ಬಜೆಟ್ಟು ತೃಪ್ತಿಕರವಾಗಿದೆ. ವಿಧಾಯಕ ಕೆಲಸಗಳಿಗೆ ವಿನಿಯೋಗವಾದ ಹಣ ಶೇಖರಿಸಿಡುವದು ಸರಿಯಲ್ಲ. ಆದರೆ ಖರ್ಚಿಗಿಂಥಾ ಆದಾಯವು ಬಹು ಕಡಿಮೆ ಇದೆ. ಹೀಗಾದರೆ ನಾವು ದಿವಾಳಿ ತೆಗೆಯಬಹುದು. ಆದ್ದರಿಂದ ಆದಾಯ ಹೆಚ್ಚಿಸಬೇಕು. ಕೇಂದ್ರಕ್ಕೆ ನಾವು ಕೊಡುವ ಕರಗಳ ವಾಪ್ತು ನಮಗೆ ಪ್ರತಿಫಲ ಬರುತ್ತಿಲ್ಲ. ಆದಾಯದ ಮಾರ್ಗಗಳನ್ನು ಹೆಚ್ಚಿಸಬೇಕು. ಬಜೆಟ್ಟಿನಲ್ಲಿಟ್ಟ ಹಣವೆಲ್ಲ ವಿನಿಯೋಗವಾಗುವಂತೆ ನೋಡಬೇಕು. ಹೆಚ್ಚು ಅನುಕೂಲತೆಗಳನ್ನು ಒದಗಿಸಿಕೊಟ್ಟರೆ ರೈತರು ಹೆಚ್ಚು ಕರಕೊಡಲು ಹಿಂಜರಿಯರು. ಸರಕಾರದ ಆದಾಯವು ಬೆಳ್ಳುತ್ತಾ ಬರಬೇಕು. ಕೇಂದ್ರ ಶಾಸನ ಸಭೆಯಲ್ಲಿ ಕೊಡಗೂ ಕೂಡ ಮಧ್ಯಭಾರತದಂತೆ ಒಂದು ಪ್ರಾಂತವೆಂದು ಶಾಸ್ತ್ರಗಳು ಬಂಧನ್ನನ್ನು ಬಿಡಿಸಬೇಕು. ನಾವು ಆದರ್ಶ ಆಡಳಿತ ನಡೆಸಿ ಮಾರ್ಗದರ್ಶಕರಾಗಬೇಕು. ಮಾಜಿ ಸೈನಿಕರಿಗೆ ಸಹಾಯ ಕೊಟ್ಟದ್ದರಿಂದ ಲಾಭವಾಗಲಿಲ್ಲ. ಆ ಸ್ಥಳಗಳೆಲ್ಲ ಬಯಲುಗಳಾಗಿವೆ. ಎಕ್ಸೈಸ್ ಇಲಾಖೆಯು ಕಳ್ಳ ಸಾರಾಯಿ ಮಾರಾಟಗಳನ್ನು ನಿಲ್ಲಿಸಲು ಶಕ್ತವಾಗಿಲ್ಲ. ಆದರೆ ಕಳ್ಳತನ ಇದೆಯೆಂದು ಬಾಗಿಲನ್ನು ತೆಗೆದು ಹಾಕುವದು ಹೇಗೆ ಸರಿಯಲ್ಲವೋ ಹಾಗೆ ಕಳ್ಳಮಾರಾಟವಿದೆಯೆಂದು ಪಾನ್ನ ಪಾನ ನಿರೋಧವನ್ನು ಬಿಡುವದು ಸರಿಯಲ್ಲ. ಅಫೀಮು, ಗಾಂಜ ಅಂಗಡಿಗಳನ್ನು ಮುಚ್ಚಿದರೆ ಹಿತ. ಫಾರೆಸ್ಟ್ ರೀಜನರೇಶನ್ ಪದ್ಧತಿ ಸರಿಯಲ್ಲ. ಈಗಿನ ಆಧುನಿಕ ಜಗತ್ತಿನಲ್ಲಿ ಮರಗಳ ಉಪಯೋಗವಿಲ್ಲದೇ ಮನೆಗಳಾಗುತ್ತಿರುವಾಗ ಈ ನೀತಿ ಲಾಭದಾಯಕವಾಗಲಾರದು. ಮಳೆಗೂ, ಮರಗಳಿಗೂ ಸಂಬಂಧವಿಲ್ಲವೆಂದರೂ ಮರಗಳಿಂದ ಹವಾಮಾನದಲ್ಲಿ ವ್ಯತ್ಯಾಸವಾಗುತ್ತದೆ. ಟಿಂಬರ್ ಬೆಲೆ ಕಡಿಮೆಯಾಗಿರುವಾಗ ಖರ್ಚು ಹೆಚ್ಚಿಸುವದು ಸರಿಯಲ್ಲ. ಕೊಡಗಿಗೆ ರೈಲ್ವೆ ಸಂಬಂಧವಿಲ್ಲದೆ ಮರಕುಯ್ಯುವ ಕಾರ್ಖಾನೆ ತೆರೆದರೂ ಪ್ರಯೋಜನವಾಗದು. ಖಾಸಗಿ ಜನರು ಇಟ್ಟ ಮರಕುಯ್ಯುವ ಕಾರ್ಖಾನೆಗಳಿಂದ ಲಾಭವಾಗಿಲ್ಲ. ಸೀನಿಯರೇಜ್ ದರವನ್ನು ಏರಿಸಿದ್ದರಿಂದ ರೈತನಿಗೆ ತುಂಬಾ ಹಾನಿ ಇದೆ. ಗಂಧದ ವಿಚಾರದಲ್ಲಿ ನನಗೆ ಎ. ಬಿ. ಸಿ. ತಿಳಿದಿಲ್ಲವೆಂದು ಕಳೆದ ಮೀಟಿಂಗಿನಲ್ಲಿ ಮಂತ್ರಿಗಳು ಹೇಳಿದರು. ಹಾಗೆ ಹೇಳಲು ಅವರಿಗೆ ಈ ವಿಚಾರ ಎ ಯಿಂದ ಝೆಡ್ ವರೆಗೆ ತಿಳಿದಿರಬೇಕಿತ್ತು. ಆದರೆ ಗಂಧದ ಮಾರ್ಕೆಟಿನ ಬೆಲೆಯನ್ನು ಯೋಗ್ಯ ರೀತಿ ಸಮಗಟ್ಟಲು ಖಾಸಗಿ ವ್ಯಾಪಾರಿಗಳೂ ಇದ್ದಾರೆ. ಮೈಸೂರು ತನ್ನ ಮಿಲ್ಲುಗಳಿಗಾಗಿ ನಮ್ಮಿಂದ ಗಂಧ ಪಡೆದಿದೆಯೋ ವಿನಾ ನಮ್ಮ ಉದ್ಧಾರಕ್ಕಾಗಿ ಅಲ್ಲ. ನದಿಗಳಿಗೆ ಕಟ್ಟೆ ಕಟ್ಟುವದಕ್ಕಿಂಥಾ ಪಂಪುಗಳೇ ಪ್ರಯೋಜನಕಾರಿ ಇದರಿಂದ ಎರಡು ಬೆಳೆ ಬೆಳೆಯಲೂ, ತರಕಾರಿ ವ್ಯವಸಾಯಕ್ಕೂ ಅನುವಾಗುವದು. ವಿದ್ಯಾ ಇಲಾಖೆಯಲ್ಲಿಯ ಪೋಷಕ ಶಾಲೆಗಳು ಶಿಶುವಿಹಾರಗಳಾಗಲಾರವು. ಕೊಡಗಿನಲ್ಲಿರುವ ಶಾಲೆಗಳು ಶಿಶುವಿಹಾರಗಳಲ್ಲ. ಯೋಗ್ಯ ಶಿಶುವಿಹಾರಗಳಲ್ಲಿ ತರಬೇತು ಪಡೆದ ಮಕ್ಕಳು ಯೊಓದನೆಯೂ ಸ್ಪರ್ಧಿಸುವ ಚೇತನ ಪಡೆಯುವರು. ಔದ್ಯೋಗಿಕ ವಿದ್ಯೆಗೆ ಅನುಕೂಲತೆ ಇಲ್ಲದಿರುವದು ಸರಿಯಲ್ಲ. ವೀರಾಜಪೇಟೆ ವಿದ್ಯಾರ್ಥಿ ನಿವಾಸಗೃಹದ ಏರ್ಪಾಡು ಸರಿ ಇಲ್ಲ. ಹರಿಜನ ಬಾಲಕರನ್ನು ವಿದ್ಯಾರ್ಥಿ ನಿವಾಸ ಗೃಹಗಳಿಗೆ ತೆಗೆದುಕೊಳ್ಳುವದು ಯೋಗ್ಯ. ಮೂಲಶಿಕ್ಷಣ ಶಾಲೆಗಳು ತುಂಬಾ ಖರ್ಚಿನವಾದುವು. ಗಳು ಸಾರ್ವಜನಿಕ ಬೆಂಬಲದಿಂದಲೇ ಇವು ಯಶಸ್ವಿಗಳಾಗುವವು. ಶಾರೀರಿಕ ಶಿಕ್ಷಣದ ಬಗ್ಗೆ ನಿರ್ದೇಶಕರೊಬ್ಬರನ್ನು ನೇಮಿಸುವದೊಳಿತು. ಮಲೇರಿಯಾ ಇಲಾಖೆಯ ಕೆಲಸ ನಡೆದರೂ ಸೊಳ್ಳೆಗಳು ಇನ್ನೂ ಇವೆ. ಕೊಡಗಿನಲ್ಲಿ ಸಾಮೂಹಿಕ ವ್ಯವಸಾಯ ಕ್ರಮ ಜಾರಿಗೆ ತರುವದೊಳಿತು. ಜಪಾನೀ ಪದ್ಧತಿಯ ವ್ಯವಸಾಯಕ್ಕಿಂಥಾ ನಮ್ಮ ಪದ್ಧತಿಯನ್ನು ಸುಧಾರಿಸುವದೇ ಮೇಲು.

ಶ್ರೀ ಕೆ. ಪಿ. ಕರುಂಬಯ್ಯನವರು

ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತರಲು ಸಾಕಷ್ಟು ಹಣವಿಟ್ಟದ್ದು ಯೋಗ್ಯವಾಗಿದೆ. ಈ ಬಜೆಟ್ಟನ್ನು ಖೋತಾ ಬಜೆಟೆಂದು ಕರೆಯಲಾರೆ. ನಮ್ಮ ಉಳಿತಾಯ ಇದ್ದ ೮೫ ಲಕ್ಷ ಹಣದಿಂದ ಖರ್ಚು ಮಾಡುವದರಲ್ಲಿ ತಪ್ಪೇನಿಲ್ಲ. ಈ ಖರ್ಚು ದಿನನಿತ್ಯದ ಖರ್ಚಿಗೆ ವಿನಿಯೋಗವಾಗದೆ ಮೂಲ ಕೆಲಸಗಳಿಗೆ ಉಪಯೋಗವಾಗಬೇಕು. ನಮ್ಮ ದೇಶದ ಆದಾಯ ಸ್ವಲ್ಪ ಕಡಿಮೆಯಾಗಿದೆ. ಇದನ್ನು ಹೆಚ್ಚಿಸಲು ಯತ್ನನಡೆಯಬೇಕು. ಕೇಂದ್ರದಿಂದ ನಮಗೆ ದೊರೆಯಬೇಕಾದ ಎಕ್ಸೈಸ್ ಆದಾಯ ತೆರಿಗೆಗಳ ಭಾಗವನ್ನು ಪಡೆಯಬೇಕು. ವ್ಯವಸಾಯ ಆದಾಯ ತೆರಿಗೆ ೧೯೫೨-೫೩ಕ್ಕೆ ೧೦ ಲಕ್ಷವೆನ್ನಲಾಗಿದೆ. ಕಳೆದ ನವಂಬರ್ ತಿಂಗಳಲ್ಲಿಯೇ ೧೦ ಲಕ್ಷವಾಗಿದೆಯೆಂದು ಗಜೆಟ್ಟಿನಲ್ಲಿ ಓದಿದ ನೆನಪಿದೆ. ಈ ವರ್ಷ ೧೨ ಲಕ್ಷಕ್ಕಿಂಥಾ ಹೆಚ್ಚು ದೊರೆಯಬಹುದು. ಬಾಣೆ ಕಂದಾಯಕ್ಕೆ ನಾನೊಪ್ಪಲಾರೆ. ಭೂ ವ್ಯವಸಾಯದ ಅನುಕೂಲತೆಗಾಗಿ ಬಾಣೆ ಕೊಡಲ್ಪಟ್ಟಿರುವದಾಗಿದೆ. ವಿಸ್ತಾರ ಬಾಣೆ ಇರುವವರಿಗೆ ಒಂದು ರೀತಿಯ ಕಂದಾಯ ಹಾಕಲು ಒಪ್ಪುವೆನಾದರೂ ಚಿಕ್ಕ ಹಿಡುವಳಿದಾರರಿಗೆ ಕೂಡದು. ಪಾನ್ನಪಾನ ನಿರೋಧದಿಂದ ಸರಕಾರಕ್ಕೆ ಬರಬೇಕಿದ್ದ ಆದಾಯವು ಖಾಸಗಿ ಜನರ ಜೇಬಿಗೆ ಹೋಗುತ್ತಿವೆ. ಮೊಕದ್ದಮ್ಮೆಗಳು ಇದರಿಂದ ಹೆಚ್ಚುತ್ತಿವೆ. ಆದರಿಂದ ಈ ಪದ್ಧತಿಯನ್ನು ತೆಗೆದು ಹಾಕಿ ಸರಕಾರಿ ಡಿಪೋಗಳಲ್ಲಿ ಸೀಲು ಹಾಕಿದ ಬಾಟ್ಲಿಗಳಲ್ಲಿ ಮಾರಾಟ ಏರ್ಪಡಿಸುವದು ಯೋಗ್ಯ. ಸೇಂದಿಯ ದರವನ್ನು ೦-೮-೦ ಆಣೆಗೆ ಏರಿಸಿದ್ದು ಅನ್ಯಾಯ. ಫಾರೆಸ್ಟ್ ಹೊಸ ನೀತಿಯು ಸಮರ್ಪಕವೆಂದು ನನಗೆ ತೋರುವದಿಲ್ಲ. ಪ್ರತಿ ವರ್ಷ ೭೫೦ ಏಕ್ರೆ ತೇಗ ಬೆಳೆಸುವದು ಯೋಗ್ಯವಲ್ಲ. ಇನ್ಸ್‌ಪೆಕ್ಟರ್ ಜನರಲರ ಸಲಹೆಯಂತೆ ವರ್ತಿಸುವದು ಹಿತ. ಕೊಡಗಿನ ಫಾರೆಸ್ಟಿನ ಎಲ್ಲಾ ಭಾಗಗಳು ತೇಗ ಬೆಳೆಸಲು ಯೋಗ್ಯವಲ್ಲ. ಬೇಕಾದಷ್ಟು ಮರ ಕಡಿದು ಮಾರ್ಕೆಟ್ ತುಂಬುವದರಿಂದ ಬೆಲೆ ಕಡಿಮೆಯಾಗುವದು ಸ್ವಾಭಾವಿಕ. ವೈದ್ಯ ಮತ್ತು ಆರೋಗ್ಯ ಇಲಾಖೆಗಳ ಕೆಲಸ ಚೆನ್ನಾಗಿದೆ. ಜನರ ಆರೋಗ್ಯದ ಅಭಿವೃದ್ಧಿಯಾಗಿದೆ. ಕೊಡಗು ಹೆಚ್ಚು ವಾಸಯೋಗ್ಯವಾಗಿದೆ. ಆದರೆ ಕೆಲವೆಡೆ ಕುಡಿಯುವ ನೀರಿಗೆ ತೊಂದರೆ ಇದೆ. ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರ ಕೆಲಸ ತೆಗೆದು ಹಾಕಿದುದರಿಂದ ಯಾವ ಅನಾನುಕೂಲತೆಯೂ ಆಗದೆಂದು ನನ್ನ ಅಭಿಪ್ರಾಯ. ಮುನ್ಸೀಫ್ ಮೇಜಿಸ್ಟ್ರೇಟರುಗಳ ಕೆಲಸ ವಿಪರೀತ ಹೆಚ್ಚಾಗಿದೆ. ಮೋಟಾರು ವಾಹನಗಳ ಓಡಾಟದಲ್ಲಿ ಶಿಸ್ತಿಲ್ಲ. ಕೆಲವು ವಾಹನಗಳು ಓಡಾಟಕ್ಕೆ ಅಯೋಗ್ಯವಾಗಿವೆ. ಪೋಲೀಸ್ ಇಲಾಖೆಯಲ್ಲಿ ಕೇಸುಗಳು ಆಗದಂತೆ ತಡೆಯುವ 'ಪ್ರಿವೆಂಟಿವ್' ಶಾಖೆಯೊಂದಿರುವದು ಅವಶ್ಯ. ಈ ಬಜೆಟ್ಟಿನಲ್ಲಿ ಸೂಚಿತವಾದ ಕೆಲಸಗಳೆಲ್ಲವೂ ಜಾರಿಗೆ ಬಂದರೆ ತುಂಬಾ ಹಿತವಾಗುವದು.

ಶ್ರೀ ಸಿ. ಎ. ಮಂದಣ್ಣನವರು

ಕೊಡಗಿನ ಬಜೆಟ್ಟನಲ್ಲಿ ಒಂದು ಕೋಟಿಯನ್ನು ಮೀರುವ ಆಯವ್ಯಯ ಚರಿತ್ರೆ.

(೯ನೇ ಪುಟ ನೋಡಿ)

82 ವರ್ಷಗಳ ಸೇವೆಯನ್ನು ಪೂರೈಸಿದ ಹಿಂದೂದೇಶದ ಪ್ರಥಮ ವಿಮಾ ಕಂಪೆನಿ.

82 ವರ್ಷಗಳಿಗೆ ಹಿಂದೆ ಅಂದರೆ 1871ರಲ್ಲಿ ಭಾರತದಲ್ಲಿ ಜೀವ ವಿಮೆ ಎಂದರೇನೆಂದು ಗೊತ್ತಿರದಿದ್ದ ಆ ಸಮಯದಲ್ಲಿ "ಬೊಂಬೆ ಮ್ಯೂಚುವಲ್" ತನ್ನ ಪ್ರಥಮ ಪಾಲಿಸಿಯನ್ನು ಬರೆಯಿತು.

ಇಂದು "ಬೊಂಬೆ ಮ್ಯೂಚುವಲ್" ತನ್ನ ಅತೀ ಪ್ರಾಮಾಣಿಕತೆಯ ಸೇವೆಗಾಗಿ ನ್ಯಾಯವಾದ ಹೆಮ್ಮೆಪಟ್ಟುಕೊಳ್ಳಬಹುದು. ಅದರ ಚಾಲ್ತಿಯಲ್ಲಿರುವ ಉದ್ಯಮವು 40 ಕೋಟಿಗಳನ್ನು ಮಿಕ್ಕಿರುವದಲ್ಲದೆ ಮೂಲವು 12½ ಕೋಟಿಗೂ ಮಿಕ್ಕಿದೆ.

ದಿ ಬೊಂಬೆ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು
ಹಾರ್ನ್‌ಬಿ ರೋಡ್,
3-3 ಬೊಂಬಾಯಿ.

ಬ್ರಾಂಚ್ ಆಫೀಸು
ಪೋ. ಬಾ. ನಂ. 186
ಬೆಂಗಳೂರು—2.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್,
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯಃ ಉಡುಪಿ (ದ. ಭಾರತ

ನೀವು ಬಲ್ಲಿರಾ ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ದಾಕ್ಲೆ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೆ ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕೋರ್ಪೊರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕೋರ್ಪೊರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 9
ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED

ಸಾರ್ವಜನಿಕ ಆಸಕ್ತಿಯ ಠರಾವುಗಳು.

ತಾರೀಕು ೨೭ರಲ್ಲಿ ಶಾಸನ ಸಭೆಯ ಮುಂದೆ ಸಾರ್ವಜನಿಕ ಆಸಕ್ತಿಯ ಠರಾವುಗಳ ಚರ್ಚೆ ನಡೆಯಿತು. ಅವುಗಳನ್ನು ಸೂಕ್ಷ್ಮ ರೀತಿಯಿಂದ ಸಾರ್ವಜನಿಕ ಹಿತಕ್ಕಾಗಿ ಇಲ್ಲಿ ಕೊಡಲಾಗಿದೆ.

(೧) ಇನ್ನು ಮುಂದಕ್ಕೆ ಕುಳುವಾಡಿಕೆ ಮಾಡುವವರು ಅರ್ಜಿ ಬರೆದುಕೊಳ್ಳುವಂತೆಯೂ ಸರಕಾರವೇ ಯೋಗ್ಯರಾದವರಿಗೆ ಚಾಕರಿ ಕೊಡುವಂತೆಯೂ ಈ ಸಭೆಯು ಅಭಿಪ್ರಾಯ ಪಡುತ್ತದೆ ಎಂಬ ಠರಾವಿನ ಸೂಚಕರಾದ ಶ್ರೀ ಲಕ್ಷ್ಮಯ್ಯನವರು ಠರಾವನ್ನು ಸಭೆಯ ಮುಂದಿಡದೆ ವಾಪಸು ತೆಗೆದುಕೊಂಡರು.

(೨) ಒಂದೊಂದು ನಾಡು ಕಚೇರಿಯಲ್ಲಿ ವರ್ಷ ಒಂದರ ದರಕಾಸ್ತು ಮಾಡಿರುವ ಮೂವತ್ತು ಹರಿಜನರಿಗೆ ಕಡಿಮೆಯಿಲ್ಲದೆ ಪೈಸಾರಿ ಭೂಮಿಯನ್ನು ಸರ್ವೆ ಮಾಡಿ ಕೊಡಬೇಕು ಎಂಬ ಠರಾವನ್ನು ಶ್ರೀ ಲಕ್ಷ್ಮಯ್ಯನವರು ಸೂಚಿಸಿದರು. ಸರಕಾರವು ಈ ಕರಿತಿಗೆ ಒಪ್ಪದಿದ್ದರೂ ಹರಿಜನರಿಗೆ ಅನುಕೂಲತೆ ಮಾಡುವದೆಂಬ ಭರವಸೆ ಮೇರೆ ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

(೩) ಹನ್ನೆರಡು ವರ್ಷಗಳ ಮೇಲ್ಪಟ್ಟು ಬೇರೆಯವರ ಜಾಗದಲ್ಲಿ ನೆಲೆನಿಂತಿರುವ ನಿರಾಶ್ರಿತರಾದ ಹಿಂದುಳಿದ ವಂಗಡದವರಿಗೆ ಆಯಾಯ ಜಾಗವನ್ನು ಆಯಾ ಕುಟುಂಬಕ್ಕೆ ಕೊಡಿಸಬೇಕೆಂಬ ಠರಾವನ್ನು ಶ್ರೀ ಎಚ್. ನಂಜ ಇವರು ಸೂಚಿಸಿದರು. ಆ ರೀತಿ ಮಾಡಲಾಗುತ್ತಿದೆಯೆಂಬ ಸರಕಾರಿ ಭರವಸೆಯಿಂದ ಠರಾವು ಹಿಂತೆಗೆಯಲ್ಪಟ್ಟಿತು.

(೪) ಹರಿಜನ ಮಕ್ಕಳಿಗೆ ಪುಸ್ತಕ ತೆಗೆದುಕೊಳ್ಳಲು ಹಣ ಕೊಡುವವರ ಬದಲು ಆಯಾಯ ವರ್ಗಗೆ ಬೇಕಾದ ಪುಸ್ತಕಗಳನ್ನು ಸರಕಾರವೇ ಒದಗಿಸಿ ಕೊಡಬೇಕೆಂಬ ಠರಾವನ್ನು ಶ್ರೀ ಪಿ. ಲಕ್ಷ್ಮಯ್ಯನವರು ಸೂಚಿಸಿದರು. ಹಾಗೆ ಮಾಡಲಾಗುತ್ತಿದೆಯೆಂಬ ವಿವರಣೆಯಿಂದ ಸೂಚಕರು ಠರಾವನ್ನು ಹಿಂತೆಗೆದರು.

(೫) ರಿಸರ್ವ್ ಫಾರೆಸ್ಟಿನಲ್ಲಿರುವ ಹರಿ ಮತ್ತು ಕುಮ್ಕಿ ಜಾಗವನ್ನು ಪೈಸಾರಿಯಾಗಿ ಮಾಡುವ ಪ್ರಶ್ನೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಬೇಕೆಂಬ ಠರಾವನ್ನು ಶ್ರೀ ಎಂ. ಡಿ. ಮಾಚಯ್ಯನವರು ಹಿಂತೆಗೆದುಕೊಂಡರು.

(೬) ವಿವಿಧ ಕೇಂದ್ರಗಳಲ್ಲಿ ಜಮಾಬಂದಿ ಮಾಡುವ ಪದ್ಧತಿಯನ್ನು ಸರಕಾರ ನಿಲ್ಲಿಸಬೇಕು ಎಂಬ ಠರಾವನ್ನು ಅನೇಕರು ವಿರೋಧಿಸಿದ ಕಾರಣ ಸೂಚಕರಾದ ಶ್ರೀ ಕೆ. ಕೆ. ಗಣಪತಿಯವರು ಠರಾವನ್ನು ಹಿಂತೆಗೆದುಕೊಂಡರು.

(೭) ಕಿತ್ತಳೆಯನ್ನು ಹಾಳಾಗದಂತೆ ಇಡಲು ಬೆಂಗಳೂರಿನಲ್ಲಿ ಒಂದು ಶೀತ ಉಗ್ರಾಣವನ್ನು ಏರ್ಪಡಿಸಬೇಕೆಂಬ ಠರಾವನ್ನು ಶ್ರೀ ಎಂ. ಡಿ. ಮಾಚಯ್ಯನವರು ವಾಪಾಸು ತೆಗೆದುಕೊಂಡರು.

(೮) ಚಿಕ್ಕಮಗಳೂರಿನ ಕಾಫಿ ಪರಿಶೋಧನಾಲಯವು ಬರ್ಮಾ ಮಾಡುತ್ತಿರುವದನ್ನು ಹಣವನ್ನು ಚಿಕ್ಕಳ್ಳಿ ಕಿತ್ತಳೆ ಪರಿಶೋಧನಾ ಕೇಂದ್ರಕ್ಕೂ ಕೊಡಬೇಕೆಂದೂ ಇಂಡಿಯಾ ವ್ಯವಸಾಯ ಪರಿಶೋಧನಾ ಸಮಿತಿಯನ್ನು ಕೇಳಬೇಕು ಎಂಬ ಠರಾವನ್ನು ಶ್ರೀ ಎಂ. ಡಿ. ಮಾಚಯ್ಯನವರು ವಾಪಸು ತೆಗೆದುಕೊಂಡರು.

(೯) ಹರಿಜನ ಮತ್ತು ನಿಮ್ನ ವರ್ಗದ ಮಕ್ಕಳಿಗೆ ಒಂದನೆ ದರ್ಜೆಯಿಂದ ಮೂರನೆ ದರ್ಜೆಯ ವರೆಗೆ ಪ್ರತಿಯೊಬ್ಬ ವಿದ್ಯಾರ್ಥಿಗೂ ತಿಂಗಳಿಗೆ ೨ ರೂಪಾಯಿಯಂತೆಯೂ ೪ನೇ ಮತ್ತು ೫ನೇ ದರ್ಜೆಯ ಪ್ರತಿಯೊಬ್ಬರಿಗೆ ರೂ. ೩ರಂತೆಯೂ ವಿದ್ಯಾರ್ಥಿ ವೇತನ ಕೊಡಬೇಕೆಂಬ ಠರಾವನ್ನು ಶ್ರೀ ಪಿ. ಕೆ. ಚೆನ್ನಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

(೧೦) ಪಾರ್ಕ್ಸ್ ನಾಶಸಿರೋಧ ಕ್ರಮವು ಯಾವ ಕೆಲಸ ಮಾಡುತ್ತಿದೆಯೆಂಬುದನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂಬ ಠರಾವನ್ನು ಶ್ರೀ ಸಿ. ಡಿ. ಸುಬ್ಬಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

(೧೧) ಈಗಿರುವ ಮೂಲ ಬೆಲೆಗಿಂತಾ ಕಡಿಮೆಯಾಗಿ ಕಾಫಿಯ ಬೆಲೆಯನ್ನು ನಿಶ್ಚಯ ಮಾಡುವದು ಕಾಫಿ ಕೈಗಾರಿಕೆಗೂ ಪ್ಲಾಂಟರುಗಳಿಗೂ ತುಂಬಾ ಹಾನಿಯನ್ನು ತರುವದಾದ್ದರಿಂದ ಈ ಬಗ್ಗೆ ಇಂಡಿಯಾ ಸರಕಾರಕ್ಕೆ ಅವಶ್ಯಕ ಅಭಿಪ್ರಾಯವನ್ನು ಈ ಸರಕಾರವು ಕೊಟ್ಟು ಬೆಲೆಯನ್ನು ಇಳಿಸದಂತೆ ಪ್ರಯತ್ನಿಸಬೇಕೆಂಬ ಠರಾವನ್ನು ಶ್ರೀ ಕೋರನ ದೇವಯ್ಯನವರು ಸೂಚಿಸಿದರು. ಸರಕಾರವು ಈ ಬಗ್ಗೆ ಈ ಮೊದಲೇ ಇಂಡಿಯಾ ಸರಕಾರದೊಡನೆ ವ್ಯವಹಾರ ನಡೆಸುತ್ತಿದೆಯಲ್ಲದೆ ಕಾಫಿ ಬೆಳೆಯುವ ಸುತ್ತು ಮುತ್ತಲಿನ ರಾಜ್ಯಗಳಾದ ಮೈಸೂರು, ಮದ್ರಾಸುಗಳೊಡನೆಯೂ ಸಂಪರ್ಕ ಬೆಳೆಸಿ ಬೆಲೆಯನ್ನು ತಗ್ಗಿಸದಂತೆ ಯತ್ನ ಮಾಡುತ್ತಿರುವದಾಗಿ ಸರಕಾರಿ ಮೆಂಬರರು ನುಡಿದರು. ಠರಾವು ಒಮ್ಮತದಿಂದ ಪಾಸಾಯಿತು.

(೧೨) ವ್ಯವಸಾಯ ಆದಾಯ ತೆರಿಗೆಯಿಂದ ಸರಕಾರಕ್ಕೆ ಬರುವ ಆದಾಯವನ್ನೆಲ್ಲಾ ಗ್ರಾಮಾಭಿವೃದ್ಧಿಗಾಗಿ ಖರ್ಚು ಮಾಡಬೇಕೆಂಬ ಠರಾವನ್ನು ಶ್ರೀ ಎಂ. ಡಿ. ಮಾಚಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

(೧೩) ಭಾರತ ರಾಜ್ಯಘಟನೆಯ ೩೮೮ನೇ ನಿಬಂಧನೆಯಲ್ಲಿ ಹೇಳಿರುವ ಮೇರೆ ಹರಿಜನ ಮತ್ತು ನಿಮ್ನ ವರ್ಗದವರ ಉದ್ಧಾರಕ್ಕಾಗಿ ಸರಕಾರವು ಒಬ್ಬ “ವೆಲ್‌ಫೇರ್ ಡೈರೆಕ್ಟರನ್ನೂ, ಇಬ್ಬರು ವೆಲ್‌ಫೇರ್ ಆಫೀಸರನ್ನೂ ಮತ್ತು ಒಂದು ಅಡ್ವೈಸರಿ ಸಮಿತಿಯನ್ನೂ ನೇಮಿಸಬೇಕೆಂಬ ಠರಾವನ್ನು ಶ್ರೀ ಪಿ ಕೆ. ಚೆನ್ನಯ್ಯನವರು ಸೂಚಿಸದೆ ಹಿಂತೆಗೆದುಕೊಂಡರು.

(೧೪) ಭಿಕ್ಷೆ ಎತ್ತುವದನ್ನು ಈ ರಾಜ್ಯದಲ್ಲಿ ನಿಲ್ಲಿಸಲು ಯೋಗ್ಯ ಶಾಸನ ಮಾಡಬೇಕು ಎಂಬ ಠರಾವನ್ನು ಶ್ರೀ ಸಿ. ಎ. ಮಂದಣ್ಣನವರು ಸೂಚಿಸಿದರು. ಈ ಪ್ರವೃತ್ತಿಯನ್ನು ಶಾಸನದಿಂದ ಬಗೆಹರಿಸಲು ಕಷ್ಟವಾದ್ದರಿಂದಲೂ, ಒಂದು ಪ್ರಾಂತದಿಂದ ಮತ್ತೊಂದಕ್ಕೆ ಜನರು ಹೋಗುವದನ್ನು ನಿರೋಧಿಸುವದು ಸಾಧ್ಯವಿಲ್ಲದ್ದರಿಂದಲೂ ಸೂಚಕರು ಠರಾವನ್ನು ಹಿಂತೆಗೆದುಕೊಂಡರು.

(೧೫) ಪೊನ್ನಂಪೇಟೆ ಮತ್ತು ಗೋಣಿಕೊಪ್ಪಲು ಪಟ್ಟಣಗಳಿಗೆ ನೀರು ಮತ್ತು ವಿದ್ಯುತ್ ದೀಪ ಒದಗಿಸುವ ದೃಷ್ಟಿಯಿಂದ ಪೊನ್ನಂಪೇಟೆ, ಗೋಣಿಕೊಪ್ಪಲಿನ ಮಧ್ಯದಲ್ಲಿ ಒಂದು ಚಿಕ್ಕ ‘ಪವರ್ ಪ್ಲಾಂಟು’ ಸ್ಥಾಪಿಸಿ ಬಾಳಜಿ ಕಟ್ಟೆಯಿಂದ ನೀರು ಸರಬರಾಯಿಯ ಏರ್ಪಾಡು ಮಾಡಬೇಕೆಂಬ ಠರಾವನ್ನು ಸೂಚಕರಾದ ಶ್ರೀ ಕೆ. ಕೆ ಗಣಪತಿಯವರು—ಕೊಡಗಿನ ಎಲ್ಲಾ ಪಟ್ಟಣಗಳಿಗೂ ವಿದ್ಯುಚ್ಛಕ್ತಿ ಸರಬರಾಯಿ ಮಾಡುವ ಏರ್ಪಾಡನ್ನು ಸರಕಾರವು ಮಾಡುತ್ತಿದೆಯೆಂದು ಹೇಳಿದುದರಿಂದ—ವಾಪಸು ತೆಗೆದುಕೊಂಡರು.

(೧೬) ಕೊಡಗಿನಲ್ಲಿ ಗುಡಿಕೈಗಾರಿಕೆಗಳನ್ನು ಸ್ಥಾಪಿಸುವ ವಿಚಾರವನ್ನು ಸರಕಾರ ಕೈಕೊಳ್ಳಬೇಕು ಎಂಬ ಠರಾವನ್ನು ಹಾಗೆ ಮಾಡಲಾಗುವದೆಂಬ ಸರಕಾರದ ಭರವಸೆಯಿಂದ ಸೂಚಕರಾದ ಶ್ರೀ ಪಿ. ಡಿ. ಸುಬ್ಬಯ್ಯನವರು ಹಿಂತೆಗೆದುಕೊಂಡರು.

(೧೭) ಆಸ್ಪತ್ರೆಗಳಿಗೆ ಒಂದು ಚಿಕಿತ್ಸೆ ಪಡೆಯಲು ತೊಂದರೆ ಇರುವ ಗ್ರಾಮಸ್ಥರಿಗೆ ವೈದ್ಯಕೀಯ ಸಹಾಯ ದೊರೆಯುವಂತೆ ಮೊಬಾಯಿಲ್ ಮೆಡಿಕಲ್ ಯೂನಿಟುಗಳ ಏರ್ಪಾಡು ಮಾಡಬೇಕೆಂಬ ವಿಚಾರವು ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರುವದರಿಂದ ಸೂಚಕರಾದ ಶ್ರೀ ಕೆ. ಕೆ. ಗಣಪತಿಯವರು ಆ ಬಗ್ಗೆ ತಮ್ಮ ಠರಾವನ್ನು ಹಿಂತೆಗೆದುಕೊಂಡರು.

(೧೮) ಕಾರ್ಮಿಕರಿಗಳ ಆಕ್ಷೆಗೆ ಒಳಪಡುವ ಎಲ್ಲಾ ತೋಟದವರಿಂದಲೂ ವಿದ್ಯಾಯವಾಗಿ ಮಜೂರರ ಹಿತಕ್ಕಾಗಿ ಮಜೂರರ ತಲೆ ಒಂದರ ಒಂದು ರೂಪಾಯಿಯಂತೆ ವಂತಿಗೆ ಸಂಗ್ರಹಿಸುವ ಬಗ್ಗೆ ತಕ್ಕ ಶಾಸನ ಮಾಡಬೇಕೆಂಬ ಠರಾವನ್ನು ಶ್ರೀ ಎಂ. ಡಿ. ಮಾಚಯ್ಯನವರು ವಾಪಸು ತೆಗೆದುಕೊಂಡರು.

(೧೯) ಸರಕಾರದವರು ಮಾದಾಪುರ ಸಂತೆ ಮೈದಾನದಲ್ಲಿ ಎರಡು ಮಾರ್ಕೆಟ್ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಠರಾವನ್ನು ಶ್ರೀ ಪಿ. ಲಕ್ಷ್ಮಯ್ಯನವರು ವಾಪಾಸು ತೆಗೆದುಕೊಂಡರು.

(೨೦) ಬೆಟ್ಟಗೇರಿ ಭದ್ರಗೊಳ ದಲಿತ ವರ್ಗದ ಶಾಲೆ ಕಟ್ಟಡಕ್ಕಾಗಿ ಕೊಡಗು ಸರಕಾರದಿಂದ ೧೫ ಸಾವಿರ ರೂಪಾಯಿ ಮಂಜೂರು ಮಾಡಬೇಕೆಂಬ ಠರಾವನ್ನು ಸೂಚಕರಾದ ಶ್ರೀ ಬಿ. ಕೆ. ಕಾಳನವರು ವಾಪಾಸು ತೆಗೆದುಕೊಂಡರು.'

ಪ್ರಜಾಪ್ರಭುತ್ವಕ್ಕೂ ಮದ್ಯಕ್ಕೂ ಸಂಬಂಧ

ರಾಜ್ಯ ಪರಿಷತ್ತಿನಲ್ಲಿ ತಾ. ೨೭ರಲ್ಲಿ ಪೆಪ್ಸು ಬಡ್ಜೆಟ್ ಮೇಲೆ ಚರ್ಚೆ ನಡೆಯುತಿದ್ದಾಗ ಮದ್ಯಕ್ಕೂ, ಪ್ರಜಾಪ್ರಭುತ್ವಕ್ಕೂ ಇರುವ ಸಂಬಂಧ ಪ್ರಸ್ತಾಪಿಸಲ್ಪಟ್ಟಿತು.

ಸಾರ್ವತ್ರಿಕ ಚುನಾವಣೆ ಕಾಲದಲ್ಲಿ ಪೆಪ್ಸು ಪ್ರಾಂತ್ಯದಲ್ಲಿ ಮದ್ಯದ ಉಪಯೋಗ ಹೆಚ್ಚಿದ್ದು ಎಕ್ಸೈಜ್ ಆದಾಯ ಹೆಚ್ಚಿಗೆ ಬಂದಿರುವ ವಿಷಯವು ಪೆಪ್ಸು ಬಡ್ಜೆಟ್ ಬಗ್ಗೆ ಸಭೆಯಲ್ಲಿ ಮಂಡಿಸಿದ ‘ವೈಟ್ ಪೇಪರ್’ನಿಂದ ತಿಳಿದು ಬಂದಿರುವದನ್ನು ಕಾಂಗ್ರೆಸ್ ಸದಸ್ಯ ಶ್ರೀ ಕೆ. ರಾಮರಾಯರು ಪ್ರಸ್ತಾಪಿಸಿದರು. ಈ ಬಗೆಯ ಪ್ರಜಾಪ್ರಭುತ್ವ ಬೆಳವಣಿಗೆ ತುಂಬಾ ಸೂಕ್ಷ್ಮ ಪ್ರಕೃತಿಯವರಾದ ಡಾ. ಕಟ್ಜೂರವರ ಮೇಲೆ ಉಗ್ರ ಪರಿಣಾಮವುಂಟು ಮಾಡಬಹುದೆಂದು ನನಗನ್ನಿಸುವುದು ಎಂದರು.

ಡಾ. ಕಟ್ಜೂರವರು “ಪ್ರಜಾಪ್ರಭುತ್ವಕ್ಕೂ ಬೀರ್‌ಗೂ ಬಹು ಹಿಂದಿನಿಂದಲೂ ಸಂಬಂಧವಿದೆ” ಎಂದರು (ನಗು)

ಶ್ರೀ ರಾಮರಾಯರು “ನಾವು ಇಂಗ್ಲಿಷರಲ್ಲ—ಭಾರತೀಯರು. ಇಂಗ್ಲಿಷ್ ಪ್ರಜಾಪ್ರಭುತ್ವ ಬೀರ್‌ನೊಂದಿಗೇ ಬೆಳೆದು ಬಂದಿತೆಂಬುದೇನೋ ನಿಜ. ಆದರೆ ಭಾರತೀಯ ಪ್ರಜಾಪ್ರಭುತ್ವ ಗಂಗಾಜಲದ ಮೇಲೆ ಬೆಳೆದು ಬರಬಹುದೆಂದು ನಾನು ಭಾವಿಸಿದ್ದೆ” ಎಂದು ಹೇಳಿದಾಗ ಸಭೆ ಇನ್ನೂ ಜೋರಾಗಿ ನಕ್ಕಿತು.

ಮಾರ್ಜಾಲ ಮೊಟ್ಟೆ

ಮಾಗಡಿ ತಾಲೋಕು ಟೀಕಲ್ ಹೋಬಳಿ ಹುಣಸೀಕೋಟೆ ಗ್ರಾಮದಲ್ಲಿ ವಾಸವಾಗಿರುವ ಕೃಷ್ಣಪ್ಪ ಎಂಬವರ ಮನೆಯಲ್ಲಿ ತಾ. ೧೯-೩-೫೨ನೇ ಗುರುವಾರ ಬೆಳಿಗ್ಗೆ ೮ ಗಂಟೆ ಸಮಯದಲ್ಲಿ ಈ ವಿಚಿತ್ರ ನಡೆಯಿತು. ಮುದ್ದಿನಿಂದ ಸಾಕಿಕೊಂಡಿದ್ದ ಒಂದು ಬೆಕ್ಕು ಒಂದು ಮೊಟ್ಟೆಯನ್ನು ಹಾಕಿತು. ಮೊಟ್ಟೆಯ ಬಣ್ಣ ಚೆನ್ನಾಗಿದೆ. ಮುಟ್ಟಿ ನೋಡಿದರೆ ಮೃದುವಾಗಿದೆ. ಇದನ್ನು ನೋಡಿ ಎಲ್ಲರೂ ಆಶ್ಚರ್ಯಯಿಂದಿದ್ದರು. ಸಾಯಂಕಾಲ ಮೊಟ್ಟೆ ಒಡೆಯಿತು. ಅದರಲ್ಲಿ ಒಂದು ವಿಚಿತ್ರ ದೃಶ್ಯ ಕಂಡುಬಂದಿತು. ಆ ವಿಚಿತ್ರವೇನೆಂದರೆ ಮುಖವು ಮನುಷ್ಯನ ಆಕಾರವಾಗಿತ್ತು. ಬಾಲವು ೨ ಅಂಗುಲವಿದ್ದಿತು. ಹಿಂದಿನ ಕಾಲುಗಳು ಮನುಷ್ಯನಿಗೆ ಇದ್ದ ಹಾಗಿತ್ತು. ಮುಂದಿನ ಕಾಲುಗಳು ಬೆಕ್ಕಿಗೆ ಇದ್ದ ಹಾಗೆ ಇದ್ದವು. ಇನ್ನು ಉಳಿದ ಭಾಗಗಳು ಬೆಕ್ಕಿನ ಆಕಾರವಾಗಿದ್ದವು. ಈ ಪ್ರಾಣಿಯು ... ಗಂಟೆಗಳಲ್ಲಿ ಸತ್ತುಹೋಯಿತು.

ಬೇಕಾಗಿದೆ.

ಕಾಡು ಕೋಳಿಗಳ ಕುತ್ತಿಗೆಯ ಗರಿಗಳು ಬೇಕಾಗಿವೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

D. H. THANGAM & CO.,
Kundah Bridge,
4–2 *P. O. Nilgiris.*

ಜ್ಞಾನ ದೀಪ.

(೧)

ಒಳಗೆ ಚಿಲುಕ ಹಾಕಿ ಕುಳಿತವಳು ಬಾಗಿಲು ತಟ್ಟುವ ಶಬ್ದಕ್ಕಾಗಿ ದಿಗಿಲು ಪಡಬೇಕಾಗಿಲ್ಲ. ಆರ್ಯಮನ್ನು ದೃಢ ಪಡಿಸಿಕೊಂಡವನು ಅಪವಾದನೆಗಳಿಗೆ ಅಳ್ಳುಕುವದಿಲ್ಲ.

(೨)

ಸವಿಲಿಗೆ ಮೈತುಂಬಾ ಕಣ್ಣುಗಳಿವೆ. ಆದರೆ ಅವು ಕಾಣಲಾರವು. ರಾಜಕಾರಣಿಗೆ ಬಾಯಿ ತುಂಬಾ ಮಾತಿವೆ ಆದರೆ ಅವು ಸಾಗಲಾರವು.

(೩)

ಜಗಲಿ ಗುಡಿಸುವದೆಂದರೆ ಜಗಲಿಯಲ್ಲಿದ್ದವರನ್ನೂ ಕಸದಂತೆ ಕಾಣುವದಲ್ಲ, ತಪ್ಪು ನಿವಾರಿಸುವದೆಂದರೆ ತಪ್ಪಿದವರನ್ನು ನಿರ್ಮೂಲ ಮಾಡುವದಲ್ಲ.

ಕೊಡಗು

ತಾರೀಕು ೩ ಏಪ್ರಿಲ್ ೧೯೫೩ನೇ ಶುಕ್ರವಾರ

ಕೊಡಗು ಶಾಸನ ಸಭೆಯ ಠರಾವುಗಳು.

ಕಳೆದ ತಾರೀಕು ೨೭ರಲ್ಲಿ ಪ್ರಾರಂಭವಾದ ಕೊಡಗು ಶಾಸನ ಸಭೆಯ ಮೀಟಿಂಗು ತಾ ೩೧ರಲ್ಲಿ ಮುಕ್ತಾಯವಾಯಿತು. ಈ ಸಭೆಯಲ್ಲಿ ೧೯೫೩–೫೪ರ ಬಡ್ಜೆಟ್ಟಿನ ಮೇಲೆ ಟೀಕೆ ಟಿಪ್ಪಣಿಗಳು ನಡೆದವಲ್ಲದೆ, ಕೆಲವು ಮಸೂದೆಗಳೂ, ಸಾರ್ವಜನಿಕ ಅಭಿರುಚಿಯ ೨೦ ಠರಾವುಗಳೂ, ಬಡ್ಜೆಟ್ಟಿನ ಮೇಲೆ ೬೫ ಕಟೌತಾ ನಿರ್ಣಯಗಳೂ ಚರ್ಚಿಸಲ್ಪಟ್ಟವು. ಎರಡನೆ ದಿನ ನಾಲ್ಕು ಮಸೂದೆಗಳು ಮಂಜೂರಾಗಲ್ಪಟ್ಟವು. ಅವುಗಳಲ್ಲಿ ಸಿನೆಮಾ ಮತ್ತು ಸಾರ್ವಜನಿಕ ಸಭಾ ಮಂದಿರಗಳಲ್ಲಿ ಧೂಮಪಾನ ಮಾಡಕೂಡದೆಂದು ವಿಧಿಸುವ ಮಸೂದೆಯು ಪ್ರಾಮುಖ್ಯವಾದುದು. ಸಿನೆಮಾ ಮಂದಿರಗಳಲ್ಲಿ ಧೂಮಪಾನ ಮಾಡಬಾರದೆಂದು ಬೋರ್ಡುಗಳನ್ನು ಹಾಕಿದ್ದರೂ ಕೂಡ ಯಾರೂ ಅದನ್ನು ಅನುಸರಿಸುವದಿಲ್ಲ. ಈ ರೀತಿಯ ಒಂದು ಮಸೂದೆಯನ್ನು ಅಂಗೀಕರಿಸಿ ನಿಯಮವನ್ನು ಉಲ್ಲಂಘಿಸಿದವರು ಶಿಕ್ಷಾರ್ಹರೆಂದು ಮಾಡಿದುದು ಸಾರ್ವಜನಿಕ ಆರೋಗ್ಯದ ಮತ್ತು ಪ್ರೇಕ್ಷಕರ ದೃಷ್ಟಿಯಿಂದ ಹಿತವಾಯಿತು. ನಾವು ಬಸ್ಸುಗಳಲ್ಲೂ ಕೂಡ ಹೊಗೆ ಬತ್ತಿ ಸೇದಬಾರದೆಂಬ ನೋಟೀಸು ನೋಡುತ್ತೇವೆ. ಆದರೆ ಅದನ್ನು ಪ್ರಯಾಣಿಕರು ಗಮನಿಸದೆ ಧೂಮಪಾನ ಮಾಡುತ್ತಾರೆ. ಪಶ್ಚಿಮ ಬಂಗಾಳ ಸರಕಾರವು ನಿರ್ಣಯಿಸಿರುವಂತೆ ಬಸ್ಸುಗಳಲ್ಲಿ ಯಾರೂ ಧೂಮಪಾನ ಮಾಡಬಾರದೆಂದು ಈ ಮಸೂದೆಯಲ್ಲಿ ಸೇರಿಸಿದ್ದರೆ ಹಿತವಾಗುತಿತ್ತು. ಇನ್ನು ಮುಂದಾದರೂ ಇದನ್ನು ಜಾರಿಯಲ್ಲಿ ತರುವದು ಅವಶ್ಯವಿದೆ.

ಅಂಗೀಕೃತವಾದ ಮತ್ತೊಂದು ಪ್ರಾಮುಖ್ಯ ಮಸೂದೆಯೆಂದರೆ ವಿನೋದ ಕೂಟಗಳ ಮೇಲೆ ಕರ ಹೇರುವದಾಗಿದೆ. ಈ ಮಸೂದೆಯಂತೆ ವಿನೋದ ಕೂಟಗಳ ಆದಾಯದ ಶೇಕಡ ೨೦ ರಂತೆ ವಿನೋದ ಕರ ಸರಕಾರಕ್ಕೆ ದೊರೆಯುವದು. ಶೇ. ೨೦ ರಷ್ಟು ಕರ ಹೇರುವ ವಿಚಾರದಲ್ಲಿ ಇದು ಹೆಚ್ಚಾಯಿತೆಂದು ಕೆಲವರ ವಾದವಿದ್ದರೂ ಹೊರ ದೇಶಗಳಲ್ಲೆಲ್ಲಾ ಜಾರಿಯಲ್ಲಿರುವ ಈ ಕಂದಾಯ ಪದ್ಧತಿಯನ್ನು ಕೊಡಗಿನಲ್ಲೂ ಜಾರಿಗೆ ತಂದುದರಿಂದ ಸರಕಾರದ ಆದಾಯವು ಹೆಚ್ಚುವಂತಾಯಿತು.

ವ್ಯವಸಾಯ ಆದಾಯ ತೆರಿಗೆಯ ತಿದ್ದುಪಡಿ ಮಸೂದೆಯಲ್ಲಿ ಸೂಚಿತವಾದ ತಿದ್ದುಪಡಿಗಳಲ್ಲಿ ಧರ್ಮದಾಯಗಳಿಗಾಗಿ ಕೊಡುವ ರೂ. ೨೦೦೦/- ವೊಳಗಿನೊಳಗೆ ಈ ತೆರಿಗೆಯ ವಿನಾಯಿತಿಯನ್ನು ಕೊಟ್ಟದ್ದು ಯೋಗ್ಯವಿದೆ. ಇದರಿಂದ ಧನವಂತರು ಸಾರ್ವಜನಿಕ ಕೆಲಸಗಳಿಗೆ ಉದಾರ ಹಣಕೊಡುವ ಅನುವಾದಂತಾಯಿತು.

ಸಾರ್ವಜನಿಕ ಅಭಿರುಚಿಯ ೨೦ ಠರಾವುಗಳ ಪೈಕಿ ಎಂಟು ಠರಾವುಗಳನ್ನು ಸೂಚಕರೆ ಹಿಂತೆಗೆಯಲಾಯಿತು. ಉಳಿದ ಠರಾವುಗಳಲ್ಲಿ ಒಂದು ಠರಾವು ಮಾತ್ರ ಸರ್ವಾನುಮತದಿಂದ ಪಾಸಾಯಿತು. ಈ ಠರಾವು ಪ್ರಾಮುಖ್ಯವಾದುದಿನ್ನು ಕೊಡಗಿನ ಕಾಫಿ ವ್ಯವಸಾಯಕ್ಕೆ ಸಂಬಂಧಿಸಿದುದಾಗಿದೆ. ಕಾಫಿಯ ವ್ಯವಸಾಯಕ್ಕೆ ತಗಲುವ ಖರ್ಚಿನ ಮೇರೆ ನಿರ್ಧರಿಸಿರುವ ಬೇಸಿಕ್ ಬೆಲೆಗಿಂತಾ ಕಡಿಮೆ ಬೆಲೆಯನ್ನು ಇಂಡಿಯಾ ಸರಕಾರವು ನಿಶ್ಚಯಿಸಿದರೆ ಕಾಫಿ ವ್ಯವಸಾಯಕ್ಕೆ ದೊಡ್ಡ ಧಕ್ಕೆಯಾಗುವದೆಂಬುದು ಈ ಠರಾವಿನ ಉದ್ದೇಶ್ಯವಾಗಿದೆ. ವಿಸ್ತೀರ್ಣದಲ್ಲಿ ಚಿಕ್ಕದಾದರೂ ಹಿಂದೂ ದೇಶದ ಒಟ್ಟು ಕಾಫಿ ಉತ್ಪತ್ತಿಯ ಶೇಕಡ ೪೦ಕ್ಕಿಂತಾ ಹೆಚ್ಚು ಬೆಳೆಸುತ್ತಿರುವ ಕೊಡಗಿಗೆ ಈ ವಿಚಾರವು ಬಹು ಪ್ರಾಮುಖ್ಯವಾದುದು. ಈ ವ್ಯವಸಾಯವು ಕೊಡಗಿನಲ್ಲಿ ಶಾಸ್ತ್ರೀಯವಾಗಿ ನಡೆದು ಇದರಿಂದ ಸರಕಾರಕ್ಕೆ ಒಳ್ಳೆ ಆದಾಯ ಬರುತ್ತಿದೆ. ಈ ಕೈಗಾರಿಕೆಯ ಮೇಲೆ ಸಾವಿರಾರು ಮಜೂರರ ಜೀವನ ಹೊಂದಿಕೊಂಡಿದೆ. ಆದುದರಿಂದ ಕಾಫಿಯ ಬೆಲೆಯನ್ನು ಬೇಸಿಕ್ ಬೆಲೆಗಿಂತಾ ಕಡಿಮೆ ಮಾಡಿದರೆ ದೇಶಕ್ಕೆ ಬಹು ದೊಡ್ಡ ನಷ್ಟವಾಗುವದು. ಆದ ಕಾರಣ ಇಂಡಿಯಾ ಸರಕಾರವನ್ನು ಈ ವಿಚಾರದಲ್ಲಿ ಒತ್ತಾಯಪಡಿಸುವ ಠರಾವು ವಿರೋಧವಿಲ್ಲದೆ ಅಂಗೀಕರಿಸಲ್ಪಟ್ಟದ್ದು ಸೂಕ್ತವಾಗಿದೆ.

ಇದಲ್ಲದೆ ಕೊಡಗಿನಲ್ಲಿ ಕಿತ್ತಳೆ ವ್ಯವಸಾಯವು ಹೆಚ್ಚುತ್ತಾ ಬಂದು ಬಹು ರೈತರೂ ಕೂಡ ಅಲ್ಪ ಸ್ವಲ್ಪ ಉತ್ಪತ್ತಿ ಮಾಡುತ್ತಿರುವ ಈ ಸಮಯದಲ್ಲಿ ಈ ವ್ಯವಸಾಯಕ್ಕೆ ವಿಶೇಷ ತರದ ರೋಗಗಳು ತಗಲಿ ಕಿತ್ತಳೆ ತೋಟಗಳು ನಾಶವಾಗುವ ಚಿಹ್ನೆಗಳು ಅಲ್ಲಲ್ಲಿ ತೋರಿಬರುತ್ತಿವೆ. 'ಫ್ರೆಂಚಿಂಗ್' ಮೊದಲಾದ ಕಾಯಿಲೆಗಳನ್ನು ಹೋಗಲಾಡಿಸಲು ಅವಶ್ಯವಾದ ಸಂಶೋಧನೆ ನಡೆಸಲು ಯೋಗ್ಯ ಕೇಂದ್ರಬೇಕು. ಕೊಡಗಿನಲ್ಲಿ ಇಂಥಾ ಒಂದು ಕೇಂದ್ರವನ್ನಿಡಲು ಕೇಂದ್ರ ಸರಕಾರದವರು ಒಪ್ಪಿ ಅದಕ್ಕೆ ಧನ ಸಹಾಯ ಮಾಡಿರುವದು ಸ್ತುತ್ಯವಾಗಿದೆ. ಈ ಬಗ್ಗೆ ಸಂಶೋಧನೆಯು ಶೀಘ್ರದಲ್ಲೇ ನಡೆದು ಈ ವ್ಯವಸಾಯವನ್ನು ಉದ್ಧರಿಸುವ ಪ್ರಯತ್ನ ನಡೆಯುವದೆಂದು ನಂಬುತ್ತೇವೆ.

ಕಡೆಯ ಎರಡು ದಿನಗಳಲ್ಲಿ ಬಡ್ಜೆಟ್ಟಿನ ಮೇಲಿನ ಕಟೌತಾ ನಿರ್ಣಯಗಳ ವಿವೇಚನೆ ನಡೆಯಿತು. ಅವುಗಳಲ್ಲಿ ಎರಡನ್ನು ಸಮಯಾವಕಾಶವಿಲ್ಲದೆ ಚರ್ಚಿಸಲಾಗಲಿಲ್ಲ. ಹನ್ನೆರಡು ಠರಾವುಗಳನ್ನು ಸೂಚಕರು ಕಾರಣಾಂತರ ಸಭೆಯ ಮುಂದಿಡಲಿಲ್ಲ. ಚರ್ಚಿಸಿದ ೫೬ ಠರಾವುಗಳಲ್ಲಿ ಎರಡು ಮಾತ್ರ ಓಟಿಗೆ ಹಾಕಲ್ಪಟ್ಟವು. ಉಳಿದವುಗಳನ್ನೆಲ್ಲಾ ಚರ್ಚಿಸಿದ ನಂತರ ಸಂಬಂಧಿಸಿದ ಮಂತ್ರಿಗಳು ತಕ್ಕದಾದ ವಿವರಣೆ ಕೊಟ್ಟ ಮೇಲೆ ಹಿಂತೆಗೆಯಲ್ಪಟ್ಟವು.

ಬಾಣೆ ಜಾಗದ ಮೇಲೆ ಎಕರೆ ನಾಲ್ವತ್ತಾರಯಂತೆ ಕಂದಾಯ ವಿಧಿಸಿ ಸುಮಾರು ಎರಡು ಲಕ್ಷ ಎಕರೆಗಳ ಮೇಲೆ ದೊರೆಯಬಹುದಾದ ರೂ. ೫೦,೦೦೦ ವನ್ನು ಬಡ್ಜೆಟ್ಟಿನಲ್ಲಿ ತೋರಿಸಲಾಗಿದೆ. ಈ ಕಂದಾಯವನ್ನು ಜಮಾಯಿಸುವ ಮೊದಲು ಸರಿಯಾದ ಮಸೂದೆಯನ್ನು ತಂದು ಸಾರ್ವಜನಿಕರ ಅಭಿಪ್ರಾಯವನ್ನು ಸೂಚಿಸುವ ಅವಕಾಶ ಮಾಡಬೇಕೆಂಬುದು ಒಂದು ಕಟೌತಾ ನಿರ್ಣಯವಾಗಿತ್ತು. ಜನಪ್ರತಿನಿಧಿ ಸರಕಾರದಲ್ಲಿ ಒಂದು ಹೊಸ ಕಂದಾಯವನ್ನು ಹಾಕುವ ಮೊದಲು ಜನರ ಅಭಿಪ್ರಾಯವನ್ನು ಯೋಗ್ಯ ರೀತಿಯಲ್ಲಿ ಕೇಳಿದ ನಂತರ ಕಂದಾಯ ಹಾಕುವದು ಉಚಿತವೆಂದು ಕೆಲವರು ಠರಾವಿಗೆ ಬೆಂಬಲವಿತ್ತರು. ಆದರೆ ಕಾಂಗ್ರೆಸ್ ಪಕ್ಷದ ಮೆಂಬರುಗಳ ಬಹುಮತದಿಂದ ಈ ನಿರ್ಣಯವು ಸೋಲಿಸಲ್ಪಟ್ಟಿತು.

ಸೋಲಿಸಲ್ಪಟ್ಟ ಮತ್ತೊಂದು ನಿರ್ಣಯವು ಫಾರೆಸ್ಟು ಇಲಾಖೆಯ ಕೆಲಸ ಕಾರ್ಯಗಳ ನ್ಯೂನತೆಗಳನ್ನು ಕುರಿತದ್ದಾಗಿತ್ತು. ಈ ನಿರ್ಣಯದ ಮೇಲೆ ಚರ್ಚೆ ನಡೆದಾಗ ಸಂಬಂಧಿಸಿದ ಮಂತ್ರಿಯವರು ಇದಕ್ಕಾಗಿ ಸಮಿತಿಯನ್ನು ನೇಮಿಸುವ ಅಗತ್ಯವಿಲ್ಲವೆಂದೂ, ಅಂಥಾ ಕೊರತೆಗಳನ್ನು ತನ್ನ ಅವಗಾಹನೆಗೆ ತಂದದ್ದೇ ಆದರೆ ಅದನ್ನು ಸರಿಪಡಿಸಲಾಗುವದೆಂದೂ ಹೇಳಿದ್ದರಿಂದ ಸೂಚಕರು ತನ್ನ ನಿರ್ಣಯವನ್ನು ಹಿಂತೆಗೆದುಕೊಳ್ಳಲು ಒಪ್ಪಿದರು. ಆದರೆ ಇನ್ನೊಬ್ಬ ಮೆಂಬರರ ಒತ್ತಾಯದ ಕಾರಣ ಠರಾವು ಓಟಿಗೆ ಹಾಕಲ್ಪಟ್ಟು ಬಹುಮತದಿಂದ ಸೋಲಿಸಲ್ಪಟ್ಟಿತು.

ಒಟ್ಟಾರೆ ಕಳೆದ ವರ್ಷದ ಬಜೆಟ್ ಮೀಟಿಂಗಿನ ಮತ್ತು ಈ ಮೀಟಿಂಗಿನ ವಾತಾವರಣವನ್ನು ಪರಿಶೀಲಿಸಿದಲ್ಲಿ ಶಾಸನ ಸಭಾಸದಸ್ಯರಲ್ಲೂ ಸರಕಾರಿ ಮೆಂಬರುಗಳಲ್ಲೂ ಪರಸ್ಪರ ಸಹಕಾರದ ಭಾವನೆಯು ಹೆಚ್ಚಾಗುತ್ತಿದೆಯೆಂಬುದು ತೋರುವದು.

ವರ್ತಮಾನ.

ಕಿತ್ತಳೆಗೆ ತಗಲುವ 'ಡೈ-ಬೇಕ್' ಕಾಯಿಲೆಯ ಪರಿಶೀಲನೆ ಮಾಡಿ ಅದರ ಕಾರಣ ಮತ್ತು ನಿವಾರಣೆಗಾಗಿ ತಾರೀಕು ೧–೪–೫೩ ರಿಂದ ಐದು ವರ್ಷಗಳ ಯೋಜನೆಯೊಂದನ್ನು ಒಪ್ಪಲಾಗಿದೆಯೆಂದೂ ಕೊಡಗು ಮತ್ತು ವೈನಾಡಿಗಾಗಿ ಒಂದು ಪ್ರಾದೇಶಿಕ ಪರಿಶೋಧನಾ ಕೇಂದ್ರವನ್ನು ಸ್ಥಾಪಿಸಲಾಗುವದೆಂದೂ ಗೊತ್ತಾಗಿದೆ.

ಕೊಡಗು ಮನೆಬಾಡಿಗೆ ನಿಯಂತ್ರಣ ಕಾನೂನಿಗೆ ಕೆಲವು ತಿದ್ದುಪಡಿಗಳನ್ನು ಸರಕಾರವು ಮಾಡಲು ಆಲೋಚಿಸುತ್ತಿದೆಯೆಂದು ಗೊತ್ತಾಗಿದೆ

ಸಾಮೂಹಿಕ ವಿಕಾಸ ಯೋಜನೆಗಾಗಿ ೧೯೫೨–೫೩ ಕ್ಕೆ ರೂ. ೫,೩೭,೨೦೦ ಮಂಜೂರಾಗಿ ಈ ವರೆಗೆ ೫೬,೦೨೦ ರೂಪಾಯಿ ಖರ್ಚಾಗಿದೆಯೆಂದು ಗೊತ್ತಾಗಿದೆ.

ಕೊಡಗು ಸರಕಾರಿ ಕಾಲೇಜು ಕಟ್ಟಡಕ್ಕೆ ಒಟ್ಟು ಏಳು ಲಕ್ಷ ೩೦ ಸಾವಿರ ಖರ್ಚಾಗುವದೆಂದೂ, ಕಾಲೇಜಿಗೆ ಬೇಕಾದ ಸಾಹಿತ್ಯಗಳನ್ನೆಲ್ಲಾ ಒದಗಿಸಲು ರೂ. ೩ ಲಕ್ಷ ೩೦ ಸಾವಿರವಾಗುವದೆಂದೂ, ಪ್ರಾರಂಭದ ಪೂರ್ಣಸ್ಥಿತಿ ಕಾಲೇಜಿಗೆ ಒಂದು ಲಕ್ಷ ೬೦ ಸಾವಿರ ರೂ ಖರ್ಚಾಗುವದೆಂದೂ ವಿದ್ಯಾರ್ಥಿಗಳ ಫೀಜಿನಿಂದ ರೂ. ೮೦ ಸಾವಿರ ಬರಬಹುದೆಂದೂ ತಿಳಿಯಬಂದಿದೆ.

ಮಡಿಕೇರಿಯಲ್ಲಿರುವ ವಿದೇಶಿ ಅಂಗಡಿಯೊಂದು ೧೯೪೮ ರಿಂದ ತಾನು ಕೊಡಬೇಕಿದ್ದ ವಿದೇಶೀ ಪಾನೀಯಗಳ ಮೇಲಿನ ಕರ ರೂ. ೫೩,೪೦೦ ಬರಲು ಬಾಕಿ ಇದೆಯೆಂದೂ, ಅದನ್ನು ವಸೂಲ್ಮಾಡಲು ಸರಕಾರವು ತಕ್ಕ ಕ್ರಮ ಕೈಕೊಳ್ಳುತ್ತಿದೆಯೆಂದೂ ವಾರ್ತೆ.

ಕೊಡಗು ಶಾಸನ ಸಭೆಯ ಅಧಿವೇಶನವು ತಾ. ೩೧ ರಲ್ಲಿ ಕೊನೆಗೊಂಡಿತು. ಬಜೆಟ್ಟಿನ ಮೇಲೆ ೬೭ ಖೋತಾ ನಿರ್ಣಯಗಳಿದ್ದವು ಅವುಗಳನ್ನು ತಾರೀಕು ೩೦ ಮತ್ತು ೩೧ ರಲ್ಲಿ ಚರ್ಚಿಸಿ ಬಜೆಟ್ಟನ್ನು ಅಂಗೀಕರಿಸಿ ಮೀಟಿಂಗು ಮಂಗಳವಾರ ನಾಲ್ಕುಮುಕ್ಕಾಲು ಗಂಟೆಗೆ ಮುಕ್ತಾಯಗೊಂಡಿತು.

ತಾರೀಕು ೩೦ ರಲ್ಲಿ ಮಡಿಕೇರಿಗೆ ಕಾಲು ಇಂಚು ಮಳೆಬಿದ್ದಿದೆ. ಜಿಲ್ಲೆಯ ಹಲವೆಡೆ ಈ ಮಳೆ ಬಿದ್ದಿರುವದಾಗಿ ವರ್ತಮಾನ.

ವಿದೇಶಿ ಸಾರಾಯಿ, ಗಾಂಜ, ಅಫೀಮು, ಸಾರಾಯಿ ಮೊದಲಾದುವುಗಳ ಪರ್ಮಿಟ್ಟಿಗೆ ಅರ್ಜಿ ಬರೆದುಕೊಳ್ಳುವ ಅವಧಿಯನ್ನು ಎಪ್ರಿಲ್ ೧೫ ರ ವರೆಗೆ ಮುಂದರಿಸಲಾಗಿದೆ.

ಗೋಣಿಕೊಪ್ಪಲು ಸ್ಪೋರ್ಟ್ಸ್ ಕ್ಲಬಿನ ಆಶ್ರಯದಲ್ಲಿ ಬೇಡ್ಮಿಂಟನ್ ಐವರ ಮತ್ತು ಈರ್ವರ ಪಂದ್ಯಾಟವು ತಾ. ೧೫ ರ ನಂತರ ಪ್ರಾರಂಭವಾಗುವದೆಂದೂ ಸ್ಪರ್ಧೆಗೆ ಸೇರಲಿರುವವರು ತಾ. ೧೦ ರೊಳಗೆ ಕಾರ್ಯದರ್ಶಿಗೆ ಬರೆದುಕೊಳ್ಳಬಹುದೆಂದೂ ವರ್ತಮಾನ.

ತಾ. ೨೮ ರಲ್ಲಿ ಪ್ರೂಕ ಬೆಟ್ಟದಲ್ಲಿ ನಡೆದ ಕೊಡಗು ಟೆನ್ನಿಸ್ ಪಂದ್ಯಾಟದಲ್ಲಿ ಸಿಂಗಲ್ಸ್ ಕಪ್ಪನ್ನು ಶ್ರೀ. ಕೋದಂಡ ಗಣಪತಿಯವರೂ ಡಬಲ್ಸ್ ಕಪ್ಪನ್ನು ಶ್ರೀಮತಿ ಚೋಟಿಸಿಬೇಡಿ ಮತ್ತು ಬ್ರಿಗೇಡಿಯರ್ ಪೊನ್ನಪ್ಪನವರೂ ಗೆದ್ದರು.

ನಾಪೋಕ್ಲು ಹೈಸ್ಕೂಲು ಸ್ಥಾಪನೆಗಾಗಿ ಧನ ಸಹಾಯ ಕೊಟ್ಟವರ ಮತ್ತು ಸೇವೆ ಸಲ್ಲಿಸಿದವರ ವಿಚಾರವಾಗಿಯೂ, ಕಟ್ಟಡ ನಿಧಿಯ ಲೆಕ್ಕದ ವಿಚಾರವಾಗಿಯೂ ವಿಮರ್ಶಿಸಲು ತಾ. ೬ ರಲ್ಲಿ ಒಂದು ಸಾರ್ವಜನಿಕ ಸಭೆಯು ನಾಪೋಕ್ಲಿನಲ್ಲಿ ನಡೆಯುವದು.

ಭಾರತ ಸೇನಾನಿಗಳಾಗಿ ನಿವೃತ್ತರಾಗಿರುವ ಜನರಲ್ ಕಾರ್ಯಪ್ಪನವರಿಗೆ ತಾರೀಕು ೪ ನೇ ಶನಿವಾರ ಸಾಯಂಕಾಲ ೩–೩೦ ಗಂಟೆಗೆ ನಾಪೋಕ್ಲು ಟೌನು ಬಳಿಯಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಲಾಗಿದೆ

ಎರಡು ವರ್ಷಕ್ಕೊಮ್ಮೆ ನಡೆಯುವ ಕಾಟಕೇರಿ ದೇವರ ಹಬ್ಬವು ಈ ವರ್ಷ ಇದೇ ಏಪ್ರಿಲ್ ತಾರೀಕು ೬ ರಿಂದ ಪ್ರಾರಂಭವಾಗಿ ಇದರ ಮಹೋತ್ಸವವು ತಾರೀಕು ೧೦ ರಿಂದ ೧೩ ರ ವರೆಗೆ ನಡೆಯುವುದೆಂದು ತಿಳಿಯುತ್ತೇವೆ.

೧೦೭ ಜನ ಪೋಲೀಸ್ ಅಧಿಕಾರಿಗಳಿಗೆ ಶಿಕ್ಷೆ

ಲಂಚ ಮತ್ತು ಇತರ ಅಪಾದನೆಗಳ ಮೇಲೆ ಉತ್ತರ ಪ್ರದೇಶ ಸರಕಾರದವರು ೧೯೫೨-೫೩ ರಲ್ಲಿ ೬೦೦ ಜನ ಅಧಿಕಾರಿಗಳ ಮೇಲೆ ಮೊಕದ್ದಮೆ ಹೂಡಿದರೆಂದೂ, ಹೋಂ ಮಂತ್ರಿಗಳು ತಾ. ೨೭ ರಲ್ಲಿ ಅಸೆಂಬ್ಲಿಯಲ್ಲಿ ತಿಳಿಸಿದರು. ಅವರಲ್ಲಿ ೧೦೭ ಜನ ಅಧಿಕಾರಿಗಳಿಗೆ ಶಿಕ್ಷೆ ವಿಧಿಸಲಾಗಿದೆ ಯೆಂದೂ ಅವರು ತಿಳಿಸಿದರು.

॥ ದುರ್ಬೀನು ನೋಟ ॥

"ಕೊಡಗು ಪತ್ರಿಕೆಯಲ್ಲಿಯ ದುರ್ಬೀನು ನೋಟ ಇರುವ ವರೆಗೆ ಬಿಲ್ಲುಗಳನ್ನು ಬೇಜವಾಬ್ದಾರಿಯಿಂದ ಪಾಸು ಮಾಡಲಾಗುವದಿಲ್ಲ"ವೆಂದು ಮುಖ್ಯ ಮಂತ್ರಿ ಸಿ. ಎಂ ಪೂಣಚ್ಚನವರು ಶಾಸನ ಸಭೆಯಲ್ಲಿ ಹೇಳಿದರು. ಸಾಮೂಹಿಕ ವಿಕಾಸ ಯೋಜನೆಯ ಕೆಲಸದ ಬಗ್ಗೆ ಬಿಲ್ಲು ಬಂದಿದ್ದರೂ ಹಣ ಪಾವತಿಯಾಗಲಿಲ್ಲವೆಂಬುದಕ್ಕೆ ಮಂತ್ರಿಯವರ ಹೇಳಿದ ಉತ್ತರ! ದುರ್ಬೀನಿನಲ್ಲಿ ನೋಡಲಿ ಯಾ ನೋಡದಿರಲಿ ಜವಾಬ್ದಾರಿ ಹೊತ್ತವರು ಬೇಜವಾಬ್ದಾರಿಯಿಂದ ಎಂದೂ ವರ್ತಿಸಬಾರದಲ್ಲವೇ?

* * *

"ಸಾಮಾನ್ಯ ದೃಷ್ಟಿ ಇಲ್ಲದವರು ದುರ್ಬೀನು ಇಟ್ಟುಕೊಂಡು ನೋಡುತ್ತಾರೆ. ಅದ್ದರಿಂದ ದುರ್ಬೀನು ನೋಡುವವರಿಗೆ ನೈಸರ್ಗಿಕ ದೃಷ್ಟಿ ಸರಿಯಾಗಿರಲಾರದು" ಎಂದೂ ಮಂತ್ರಿಯವರು ದುರ್ಬೀನು ನೋಟದ ವಿಚಾರ ಹೇಳಿದರು. ನಿಯಮಕ್ಕೆ ಸರಿಯಾದ ಕೆಲಸ, ಧರ್ಮನೀತಿಗೊಳಪಟ್ಟ ವರ್ತನೆ ಇವುಗಳನ್ನು ನೋಡಲು ನೈಸರ್ಗಿಕ ದೃಷ್ಟಿ ಸಾಕಾಗಬಹುದು. ಆದರೆ ಲಂಚಗುಳಿತನ, ಕಳ್ಳಸಂತೆ, ಕತ್ತಲೆ ವ್ಯಾಪಾರ, ಅನ್ಯಾಯದ ವರ್ತನೆ, ಅಧಿಕಾರದ ದುರುಪಯೋಗ ಮೊದಲಾದುವನ್ನು ನೋಡಲು ಅನೈಸರ್ಗಿಕವಾದ ದೂರದೃಷ್ಟಿಯು ಮರ್ಯಾನೇಬೇಕು. ದೂರದ ಮರೆಯಲ್ಲಿ ಕತ್ತಲೆ ಮೂಲೆಯಲ್ಲಿ ಅಧಿಕಾರಶಾಹಿಯು ಪರದೆಯೊಳಗೆ ನಡೆಸುವದನ್ನು ದುರ್ಬೀನಿನಿಂದ ನೋಡಬಹುದಲ್ಲದೆ ಸದ್ಯಕ್ಕೆ ಬೇರೆ ಸಾಧನವಿಲ್ಲ.

* * *

ಶಾಸನ ಸಭೆಯ ಗಜೆಟೆಡ್ ಉದ್ಯೋಗಸ್ಥರೊಬ್ಬರು ಪ್ರತೀ ಎಂ. ಎಲ್. ಎ.ಗಳ ಹತ್ತಿರ ಹೋಗಿ ತನ್ನ ಇಲಾಖೆಯ ವಿಚಾರ ನಾಲ್ಕು ಮೆಚ್ಚುಗೆಯ ಮಾತಾಡಬೇಕೆಂದು ಕೇಳಿಕೊಂಡರಂತೆ. ಅದರಂತೆ ಕೆಲವರು ಪ್ರಶಂಸೆಯನ್ನೂ ಮಾಡಿದರಂತೆ! ದೇವಾಲಯದಲ್ಲಿ ಕೇಳಿಬರುವದು ಭಜಕರ ನಾದವಲ್ಲದೆ ದೇವರ ವಾಣಿಯಲ್ಲ. ಅದರಂತೆ ಶಾಸನ ಸಭಾಂಗಣದಿಂದ ಕೇಳಿಬರುವದು ಪ್ರಚಾರಕರ ವಾದವಲ್ಲದೆ ಕೆಲಸಗಾರರ ಸ್ವರವಲ್ಲವೆನ್ನೋಣವೆ?

* * *

ತೋಳ ಕುರಿಮರಿಯ ನ್ಯಾಯದಂತೆ "ನಿನಗೆ ಅಷ್ಟು ಆಸಕ್ತಿ ಇರಬೇಕಾಗಿದ್ದರೆ ನಿನ್ನ ಸೋದರರು ಆರು ಇದ್ದಾರೆ. ಟಿಂಬರು ವ್ಯಾಪಾರ ಮಾಡುತ್ತಾರೆಂದು ನನಗೆ ಗೊತ್ತು" ಎಂದು ಮೆಂಬರರೊಬ್ಬರನ್ನು ಮೂದಲಿಸಲಾಯಿತು! ನಾನು ಪತ್ರಿದವನೊಡನೆ ನದಿಯ ಆಳ ವಿಚಾರಿಸಿದರೆ ಅವನೇನು ಬಲ್ಲ? ಅದರಂತೆ ಹಗೆ ತೀರಿಸುವ ಮರ್ಜಿ ಕಟ್ಟಿ ಬಾಯಿ ಹಾರಿಸುವವನೊಡನೆ ವಿಷಯದ ಗಾಢ ಯೋಚನೆಗಿಳಿದರೆ ಪ್ರಯೋಜನವೇನು?

* * *

ಮರಗಳ ಕಳ್ಳವ್ಯಾಪಾರ ನಡೆಯುತ್ತಿದೆಯೆಂಬುದರ ಸತ್ಯಾಂಶವನ್ನು ತಿಳಿದು ಒಂದೆರಡು ಭಾಗಗಳ ಹಾಗೆ ಹೋಗಿರಬಹುದೆಂದು ಮಂತ್ರಿಗಳು ಒಪ್ಪಿದರೂ ಆ ಮಾತು ಹೇಳಿದವರ ಮೇಲೆ ಕಿಡಿಕಿಡಿಯಾದರು. ನಾನಾ ವ್ಯಂಗ್ಯ ಮಾತುಗಳನ್ನು ಹೇಳಿದರು. ಆದರೆ ವ್ಯವಸಾಯ ಮೊದಲಾದ ಅತ್ಯಾವಶ್ಯಕ ವಿಚಾರಗಳಿಗೆ ವ್ಯಾಪಾರಿಯಿಂದ ಮರಕಡಿಯಲು ಈಗಿನ ನಿರ್ಬಂಧವನ್ನು ಸೂಚಿಸಿ 'ಇದೇ ಕಾಂಗ್ರೆಸ್ ಸರಕಾರ ಬಂದು ಮಾಡಿದ್ದು!' ಎಂದು ಜನ ಕೇಳುತ್ತಿದ್ದಾರೆ ಎಂಬುದಾಗಿ ಒಬ್ಬರು ಇಡೀ ಆಡಳಿತದ ಮೇಲೆ ಆರೋಪ ಎತ್ತಿದಾಗ ಮಂತ್ರಿಗಳು ಬಾಯಿಬಿಚ್ಚಲಿಲ್ಲ. ನಮ್ಮ ಮಾತುಗಳು ನಮಗೆ ಹೆಚ್ಚು! ಅನ್ಯರ ಅನ್ಯತವಾಣಿಯೂ ಅಸಹನೀಯ. ಪರಕೀಯರೆಂದು ಅವರನ್ನು ಕ್ಷಮಿಸಬಹುದಾದರೂ ನಮ್ಮವರನ್ನು ನಾವು ಸ್ವೀಕರಿಸಿ ಗೌರವಿಸಬೇಕಲ್ಲವೇ?

* * *

ತಾ. ೨೩ ರಲ್ಲಿ ವೀರಾಜಪೇಟೆ ಪೋಸ್ಟಾಫೀಸಿನಲ್ಲಿ ಹುದಿಕೇರಿಯ ಕಡೆಯ ಒಬ್ಬಾಕೆಗೆ ಬರೆದುಹಾಕಿದ ಪತ್ರವೊಂದು ಆಕೆಯನ್ನು ತಲಪಲು ೧೧ ದಿನ ತೆಗೆದುಕೊಂಡಿತಂತೆ. ಪತ್ರ ತೆರೆದು ನೋಡಿದಾಗ ಅದರಲ್ಲಿ ಸಂಬಂಧವಿಲ್ಲದ ಬೇರೊಂದು ಪ್ರೇಮ ಪತ್ರ ಸೇರಿತ್ತೆಂದೂ, ಅದು ಮಧ್ಯದಾರಿಯಲ್ಲಿ ಸೇರಿದುದೆಂದೂ ಪುಕಾರು ಬಂದಿದೆ. ನೆರೆ ಮನೆಗೆ ಬಿದ್ದ ಬೆಂಕಿಯ ಬೆಳಕಿನಲ್ಲಿ ಕೂತು ಆನಂದ ಪಡುವವರಂತೆ ಸೋದರಿಯೊಬ್ಬಳ ಮಾನಕ್ಕೆ ಧಕ್ಕೆ ತಂದು ಆನಂದ ಪಡುವ ಇವರು ಮಾನವರೇ? ದಾನವರೇ!

* * *

ಅಧ್ಯಾಪಕರ ಮಗಳು ಪರೀಕ್ಷೆಯಲ್ಲಿ ನಕಲು ಮಾಡಿದ್ದು ದೊರೆತಾಗ 'ಅದು ತನ್ನ ಮಗಳ ಅಕ್ಷರವಲ್ಲ'ವೆಂದು ತೀರ್ಸಿತ್ತು ಬಿಡಲಾಯಿತಂತೆ! ಆದರೆ ಬೇರೊಬ್ಬರ ಜೇಬಿನಲ್ಲಿ ಕಾಗದ ದೊರೆತ್ತೆಂಬ ಕಾರಣಕ್ಕೆ ಶಿಕ್ಷೆ ವಿಧಿಸಲಾಯಿತಂತೆ! ಪ್ರೀತಿಯ ಮಬ್ಬು ಕವಿದಾಗ ಪ್ರೇಮಿಯು ಕುರುಡಾಗುವಂತೆ ಸ್ವಾರ್ಥದ ಕತ್ತಲೆಯಲ್ಲಿ ಅಧ್ಯಾಪಕನಾದರೆ ಏನು, ಆತನೂ ಅಧಮನೇ!

ಅಕ್ಟೋಬರದಲ್ಲಿ ಆಂಧ್ರಪ್ರಾಂತ್ಯ.

ಆಂಧ್ರಪ್ರಾಂತ್ಯವು ಇದೇ ಅಕ್ಟೋಬರ್ ತಿಂಗಳಲ್ಲಿ ಉದ್ಘಾಟಿಸಲ್ಪಡುವದೆಂದು ಪಂಡಿತ ಜವಾಹರಲಾಲ ನೆಹರೂರವರು ಭಾರತ ಪಾರ್ಲಿಮೆಂಟಿನಲ್ಲಿ ಸಾರಿದರು. ಆಂಧ್ರದ ತಾತ್ಕಾಲಿಕ ರಾಜಧಾನಿಯು ಆಂಧ್ರ ಪ್ರಾಂತದೊಳಗೇ ಇರತಕ್ಕದೆಂದು ಭಾರತ ಸರಕಾರದ ಅಭಿಪ್ರಾಯವಿರುತ್ತದೆ. ಕೆಲವು ಕಚೇರಿಗಳು ಮದರಾಸಿನಲ್ಲಿರಬಹುದು. ಆದರೆ ಬಳ್ಳಾರಿ ಜಿಲ್ಲೆಯಲ್ಲಿ ಕನ್ನಡವೇ ಪ್ರಧಾನವಾಗಿರುವ ಆರು ತಾಲೋಕುಗಳು ಮೈಸೂರು ಸಂಸ್ಥಾನಕ್ಕೆ ಹೋಗತಕ್ಕವು. ಮೂರು ತಾಲೂಕುಗಳು ಆಂಧ್ರಕ್ಕೆ ಕೂಡಿಸಲ್ಪಡುವವು.

ಆಂಧ್ರದ ಹೈಕೋರ್ಟು ಎಲ್ಲಿರಬೇಕೆಂಬ ನಿರ್ಣಯವಾಗುವ ತನಕ ಆಂಧ್ರ ಮದರಾಸುಗಳಿಗೆ ಈಗಿನ ಮದರಾಸು ಹೈಕೋರ್ಟೇ ಇರುವದು.

ಹೊಸ ಆಂಧ್ರ ಪ್ರಾಂತದಲ್ಲಿ ತೋರುವ ಐದು ಕೋಟಿ ರೂಪಾಯಿಗಳ ಕೊರತೆಯನ್ನು ನೀಗಿಸಲು, ಜಸ್ಟೀಸ್ ವಾಂಛೂರವರು, ಮದ್ಯಪಾನ ನಿಷೇಧವನ್ನು ಆಂಧ್ರ ಪ್ರಾಂತವು ರದ್ದುಮಾಡಬಹುದೆಂದು ಅಭಿಪ್ರಾಯ ಪಡುತ್ತಾರೆ.

ಬಳ್ಳಾರಿಯ ಅದವಾನಿ, ಆಲೂರು ಮತ್ತು ರಾಯದುರ್ಗ ತಾಲೂಕುಗಳನ್ನು ಆಂಧ್ರದೊಳಗೆ ಸೇರಿಸಲು ಸರಕಾರವು ನಿರ್ಧರಿಸಿದನ್ನು ವಿರೋಧಿಸಲು ಬಳ್ಳಾರಿಯ ವ್ಯಾಪಾರಸ್ಥರೂ ಇತರ ಕನ್ನಡಿಗರೂ ಹರತಾಳ ಆಚರಿಸಿದ್ದರು. ವಿದ್ಯಾರ್ಥಿಗಳು ಕನ್ನಡ ಘೋಷಣೆಗಳನ್ನು ಮಾಡುತ್ತ, ರೈಲ್ವೆ ಸ್ಟೇಷನಿಗೆ ಹೋಗಿ ಬೆಜವಾಡ ಹುಬ್ಬಳ್ಳಿ ರೈಲು ಬಂಡಿಗಳನ್ನು ೧ ಗಂಟೆ ವರೆಗೆ ತಡೆದು ನಿಲ್ಲಿಸಿದರು.

ಮುಂಬಯಿ, ನ್ಯಾಯವಿಧಾಯಕ ಸಭೆಯ ಕರ್ನಾಟಕ ಸದಸ್ಯರು, ಆಂಧ್ರಪ್ರಾಂತ ನಿರ್ಮಾಣದಲ್ಲಿ ಬಳ್ಳಾರಿಯ ತಾಲೋಕುಗಳನ್ನು ಸೇರಿಸುವ ನಿರ್ಧಾರಕ್ಕಾಗಿ ಆಶ್ಚರ್ಯ ನಿರಾಶೆಗಳನ್ನು ವ್ಯಕ್ತಪಡಿಸಿ, ಭಾರತ ಪ್ರಧಾನ ಸಚಿವರಿಗೆ ತಂತಿ ಕಳುಹಿಸಿರುವರು.

ಸ್ತ್ರೀ ದ್ವೇಷಿಯ ಮರಣ

ಎಲ್ಲ ಕುರೂಪಿ ಸ್ತ್ರೀಯರನ್ನು ನೀರಿನಲ್ಲಿ ಮುಳುಗಿಸಿ ಕೊಲ್ಲಬೇಕೆಂದು ಒಮ್ಮೆ ಸೂಚಿಸಿದ್ದ ಡಾ. ಜೋಶಿಯಾ ಓಲ್ಡ್ ಫೀಲ್ಡ್ ಎಂಬುವರು ಇತ್ತೀಚೆಗೆ ಮರಣ ಹೊಂದಿದರು. ತುಟಿಗೆ ಬಣ್ಣ ಹಚ್ಚುವ ಹೆಂಗಸರನ್ನು ಮನೆಯಿಂದ ಹೊರದಬ್ಬಬೇಕು ಎಂದವರು ಹೇಳಿದ್ದರು. ವೃದ್ಧ ಮನುಷ್ಯ ಒಂದು ದುರಂತ, ವೃದ್ಧ ಸ್ತ್ರೀ ಒಂದು ಅಪರಾಧ ಎಂದವರ ಅಭಿಪ್ರಾಯವಿತ್ತು. ಆದರೆ ಅನೇಕ ಮಹಾ ಪುರುಷರ ಯಶಸ್ಸಿಗೆ ಹಿಂಬ ಕೊಡುತಿದ್ದ ಅವರ ಹೆಂಡತೀ ಕಾರಣರಾದರು ಎಂದೂ ಅವರು ಹೇಳಿದ್ದರು. ಡಾ. ಓಲ್ಡ್‌ಫೀಲ್ಡರು ಶಾಲಾ ಮಾಸ್ತರಾಗಿದ್ದವರು ಮುಂದೆ ಕಾಯದೆ ಪರೀಕ್ಷೆಯಲ್ಲಿ ಮತ್ತು ಡಾಕ್ಟರ ಪರೀಕ್ಷೆಯಲ್ಲಿ ಪಾಸಾಗಿದ್ದರು.

ಮೈಸೂರಲ್ಲಿ ಇನಾಮುದಾರಿ ರದ್ದಾಗುವದು.

ಮೈಸೂರು ರಾಜ್ಯದಲ್ಲಿ ಇನಾಮುದಾರಿಯನ್ನು ನಿರ್ಮೂಲ ಮಾಡುವ ಮಸೂದೆಯನ್ನು ವಿಧಾನ ಸಭೆಯಲ್ಲಿ ಮಂಡಿಸಲಾಯ್ತು. ಧಾರ್ಮಿಕ ಮತ್ತು ಧರ್ಮಾರ್ಥ ಇನಾಮುದಾರಿಯನ್ನು ಈ ಮಸೂದೆಯಿಂದ ಹೊರಗಿಡಲಾಗಿದೆ. ಸುಮಾರು ೩೬ ಲಕ್ಷ ಎಕರೆ ಬೇರೆ ಬೇರೆ ಇನಾಮು ಜಮೀನುಗಳು ಈ ಮಸೂದೆಯ ಕಕ್ಷೆಯಲ್ಲಿ ಬರುವವು. ಈ ಜಮೀನುಗಳಿಗೆ ಪರಿಹಾರವೆಂದು ಸರಕಾರದವರು ೧೫೦ ಲಕ್ಷ ರೂ.ಗಳನ್ನು ಕೊಡಬೇಕಾಗುವದು. ಉತ್ಪನ್ನದ ೨೦ ಪಟ್ಟು ಪರಿಹಾರ ವ್ಯವಸ್ಥೆಯೆಂದು ಗೊತ್ತು ಮಾಡಲಾಗುವದು.

॥ ಓದುಗರ ಓಲೆಗಳು ॥

ಹಳೇ ಕೋಂಪಲು

೧೯೫೦ರಲ್ಲಿ ವಿರೋಧ ಪಕ್ಷದ ಬೆನ್ನೆಲುಬು ಮುರಿಯುವುದೇ ನಮ್ಮ ಪಾರ್ಟಿಯ ತತ್ವ ಎಂದು ಅಪ್ಪಣೆ ಕೊಡಿಸಿದ ಎಂ. ಎಲ್. ಎ. ಗಳಾದ ತಾವು ಈ ವರ್ಷ 'ಸಿ. ಐ. ಡಿ. ನನ್ನ ಮಲಗುವ ಕೋಣೆಯ ವರೆಗೆ ಬಂದರೂ ಬೇಜಾರವಿಲ್ಲ'ವೆಂದು ಹೇಳಿದಿರಿ. ಪ್ರತೀ ವಿಚಾರಕ್ಕೂ ಸಾಕ್ಷಿ ಕೇಳುವ ಈ ಕಾಲದಲ್ಲಿ ಅವರು ಅಲ್ಲಿಯೂ ಇದ್ದರೆ ತೊಂದರೆ ಏನು? ಸಿ. ಐ. ಡಿ. ಬೆನ್ನ ಹಿಂದೆ ಬೇತಾಳನಂತೆ ಇರುವುದು ತಮಗೆ ಖರ್ಚಿಲ್ಲದೆ ಅಂಗರಕ್ಷಕರು ದೊರೆತಂತೇ ಬಹುಶಃ. ಆದರೆ ನಿಮ್ಮ ಅಭಿಪ್ರಾಯಕ್ಕೆ ವಿರೋಧ ಮಾಡುವವರಿಗೆ ಹಾಗಿಲ್ಲ. ಅಯ್ಯೋ, ಶಾಸನವಿಧರರೇ, ರಾಜ್ಯಘಟನೆಯು ಪ್ರತೀ ವ್ಯಕ್ತಿಗೂ ಅಭಿಪ್ರಾಯ ಸ್ವಾತಂತ್ರ್ಯವನ್ನು ಕೊಟ್ಟಿದೆ. ನಿಮ್ಮಂಥಾ ಅಭಿಪ್ರಾಯದವರು ಮಂತ್ರಿಯೋ ಸ್ಪೀಕರೋ ಆಗಿದ್ದರೆ, ನಮ್ಮ ಪಾಡು ದೇವರಿಗೆ ಗೊತ್ತು! ದಯವಿಟ್ಟು ಯೋಚಿಸಿ ಮಾತಾಡಿ ಮತ್ತು ತಿದ್ದಿಕೊಳ್ಳಿ.

ವಿರೋಧ ಪಕ್ಷ ಬೇಕೆನ್ನುವವ.

'ಕೊಡಗು' ಪತ್ರಿಕೆಯ ಮೇಲೆ ಆಕ್ರೋಶ.

ಕೊಡಗಿನ ಮುಖ್ಯ ಮಂತ್ರಿಯವರು 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾದ ಫಾರೆಸ್ಟ್ ನೀತಿಯ ವಿಚಾರದ ಕೆಲವು ಲೇಖನಗಳನ್ನು ಉಲ್ಲೇಖಿಸುತ್ತಾ 'ಅನೇಕ ಕಲ್ಪನೆಯ ಕಥೆಗಳನ್ನು ಕಟ್ಟಿ ದೊಡ್ಡ ಶಿರೋನಾಮೆಗಳನ್ನು ಹಾಕಿ, ಬಹಿರಂಗ ಪತ್ರವೆಂದೂ ಮೊದಲಾಗಿ ನಿರಾಧಾರದ ಸಂಗತಿಗಳನ್ನು ಪ್ರಕಟಿಸಲಾಗುತ್ತದೆ. ಈ ಪತ್ರಿಕೆಯು ಫೈಲೇ ಇಲ್ಲದೆ. ಶಾಸನ ಸಭೆಯ ಕಾಲಕ್ಕೆ ಈ ರೀತಿ ಗಲಾಟೆ ಎಬ್ಬಿಸುವದು ಇದಕ್ಕೊಂದು ಹವ್ಯಾಸ. ಆ ಪತ್ರಿಕೆಗೆ ಉತ್ತರ ಕೊಡಬಯಸುವದಿಲ್ಲ' ಎಂದು ಮೊದಲಾಗಿ ಹೇಳಿದರು. ನಂತರ ಸರಕಾರದ ಪಕ್ಷದ ಸದಸ್ಯರೊಬ್ಬರಾದ ಶ್ರೀ. ಪಿ. ಎಂ. ನಾಣಯ್ಯನವರು 'ಕೊಡಗು ಪತ್ರಿಕೆಯೊಂದಿದೆ. ಅದರಲ್ಲಿ ಮತಿಗೂಡಿದ ಹಾಗೂ ಮತಗೇಡಿಯಾದುದೆಲ್ಲವೂ ಪ್ರಕಟವಾಗುತ್ತದೆ' ಎಂದು ಪ್ರಾರಂಭಿಸಿದರು. ಎರಡನೆಯವರು ಪತ್ರಿಕೆಯ ಹೆಸರೆತ್ತಿ ಮಾತಾಡಿದುದರ ಬಗ್ಗೆ ಒಂದು ವಿಧಿಬಂಧುವನ್ನು ಶ್ರೀ. ಪಿ. ಐ. ಬೆಳ್ಯಪ್ಪನವರು ಎತ್ತಿ 'ಈ ಶಾಸನ ಸಭೆಯಲ್ಲಿ ಕೊಡಗು ಪತ್ರಿಕೆಯ ಬಗ್ಗೆ ಆರೋಪಿಸುವ ವಿಷಯಗಳಿಗೆ ಉತ್ತರವಿಲ್ಲ ಕೊಡಲು ಆ ಪತ್ರಿಕೆಗೆ ಅವಕಾಶವಿಲ್ಲದ್ದರಿಂದ ಆ ವಿಚಾರ ಎತ್ತಕೂಡದೆಂದರು. ಶ್ರೀ ನಾಣಯ್ಯನವರು ಪತ್ರಿಕೆಯ ವಿಚಾರ ಎತ್ತಕೂಡದೆಂದು ಅಧ್ಯಕ್ಷರು ವಿಧಿಸಿದರು. ಮುಖ್ಯ ಮಂತ್ರಿಯವರ ಮತ್ತು ಈ ಸದಸ್ಯರ ವರ್ತನೆಯಿಂದ 'ಕೊಡಗು' ಪತ್ರಿಕೆಯ ಅವರಿಗೆ ಯಾವುದೂ ಟೀಕೆಯಿಲ್ಲ ಸಹನೆ ಇಲ್ಲದಿರುವಂತೆ ತೋರುತ್ತಿತ್ತು. ಅದರ ಆ ಮಾತಿನಿಂದ ಇನ್ನೂ ಒಂದು ಸುಳಿವಾಗಿದೆ.

ಶ್ರೀ ನಾಣಯ್ಯನವರಿಗೆ ಯಾವ ಪತ್ರಿಕಾ ವ್ಯವಸಾಯದ ಅನುಭವವಿಲ್ಲದಿದ್ದರಿಂದ ಅವರು ಸಿಟ್ಟು ವ್ಯಕ್ತಗೊಳಿಸಿದರೂ ಅದು ತಪ್ಪಲ್ಲ. ಆದರೆ ಮುಖ್ಯ ಮಂತ್ರಿಯವರು ಪತ್ರಿಕೋದ್ಯೋಗವನ್ನು ಬಲ್ಲವರು. 'ಕೊಡಗು' ಪತ್ರಿಕೆಯಲ್ಲಿಯೇ ಕೆಲವು ವರ್ಷ ಕೆಲಸ ಮಾಡಿದವರು. ಅವರು ಪತ್ರಿಕೆಯ ಮೇಲೆ ಸಿಟ್ಟುಗೊಳ್ಳುವದರಲ್ಲಿ ಅರ್ಥವಿಲ್ಲ. ಪತ್ರಿಕೆಯೆಂದರೆ ಇಂದಿನ ಜನತಾಯುಗದಲ್ಲಿ ಸಮಾಜದ, ಸರಕಾರಗಳ ಪ್ರತಿಬಿಂಬವನ್ನು ಚಿತ್ರಿಸುವ ಕನ್ನಡಿಯಂತೆ! ಸರಕಾರದಲ್ಲಿ ನ್ಯೂನತೆಯಿದ್ದರೆ, ಸಮಾಜದಲ್ಲಿ ಅಂಕುಡೊಂಕುಗಳಿದ್ದರೆ ಅವು ಆ ದರ್ಪಣದಲ್ಲಿ ಅದರಂತೆಯೇ ಚಿತ್ರಿತವಾಗಲೇಬೇಕು. ಒಬ್ಬನು ಒಂದು ವಿಚಾರವನ್ನು ಪತ್ರಿಕೆಯಲ್ಲಿ ಬರೆಯುವದು ಆದರಿಂದ ಹತ್ತು ಜನರು ಆ ವಿಚಾರ ಆಲೋಚಿಸುವಂತಾಗಲೀ, ಅದರಲ್ಲಿ ನ್ಯೂನತೆ ಇದ್ದರೆ ತಿದ್ದುವಂತಾಗಲೀ ಎಂದಾಗಿದೆ.

ಕೊಡಗು ಪತ್ರಿಕೆಯಲ್ಲಿ ಫಾರೆಸ್ಟ್ ಇಲಾಖೆಯ ಕೆಲಸ ಕಾರ್ಯಗಳ ವಿಚಾರ ಆಗಾಗ್ಗೆ ಜನರು ಬರೆಯುತ್ತಿದ್ದರೆ, ಅವುಗಳನ್ನು ಪತ್ರಿಕೆಯು ಪ್ರಕಟಿಸುತ್ತಿದ್ದರೆ ಯಾರ ಹಿತಕ್ಕಾಗಿ? ಅವನ್ನು ಪ್ರಕಟಿಸುವದರಿಂದ ಪತ್ರಿಕೆಗೆ ಲಾಭವೇನೂ ಇಲ್ಲ. ಆದರೆ ಜನತೆಗೆ ತಮ್ಮ ಅಭಿಪ್ರಾಯಗಳನ್ನು ನಿರ್ಬಾಧಕವಾಗಿ ವ್ಯಕ್ತಮಾಡಲು ಅನುಮಾಡುವದು ಪತ್ರಿಕೆಯ ಕರ್ತವ್ಯ. ಆ ಕರ್ತವ್ಯವನ್ನೇ 'ಕೊಡಗು' ಮಾಡುತ್ತಿದೆ. ಇದರಿಂದ ಕೆಲವರಿಗೆ ಸಿಟ್ಟು ಬಂದರೆ ಕೆಲವರ ಮನಸ್ಸಿಗೆ ಆಘಾತವಾದರೆ ಸಾರ್ವಜನಿಕ ಹಿತದ ಜವಾಬ್ದಾರಿ ಹೊತ್ತವರು ಅದನ್ನು ಸಹಿಸಬೇಕಲ್ಲವೇ?

ಜನತೆ ನೂರಾರು ವಿಚಾರಗಳನ್ನು ತಿಳಿಯಲು, ಕಂಡ ನ್ಯೂನತೆಗಳನ್ನು ಸರಿಪಡಿಸುವಂತೆ ಪ್ರೇರೇಪಿಸಲು ಅನೇಕ ವಿಚಾರಗಳನ್ನು ಸರಕಾರದ ಮುಂದೆ ಇಡುತ್ತದೆ. ದೇಶದ ಆಡಳಿತದ ವಿಚಾರ ತಿಳಿಯುವ ಅಧಿಕಾರ ಪ್ರತೀ ಒಬ್ಬನಿಗೂ ಇರುವದರಿಂದ ಹೀಗೆ ಮಾಡುವದು ತಪ್ಪಲ್ಲ. ಪತ್ರಿಕೆಯಲ್ಲಿ ಪ್ರಕಟಿಸಿದ ವಿಚಾರಗಳು ತಪ್ಪಿದ್ದರೆ, ನಿರಾಧಾರವಾಗಿದ್ದರೆ ಸರಕಾರವು ಆ ಬಗ್ಗೆ ತನ್ನ ಹೇಳಿಕೆಯನ್ನು ಜನತೆಯ ಮುಂದಿಡುವದು ಕರ್ತವ್ಯವಲ್ಲದೆ ಪತ್ರಿಕೆಯನ್ನು ದೂರುವದಲ್ಲ. ಪಂಡಿತ ನೆಹರೂರವರಾಗಲೀ ಇತರ ಅಧಿಕಾರ ಹೊತ್ತವರಾಗಲೀ ಪತ್ರಿಕೆಗಳಲ್ಲಿ ಪ್ರಕಟವಾದ ವಿಚಾರ ತಪ್ಪಿದರೆ ಅದು ಹಾಗಲ್ಲ ಹೀಗೆ ಎಂದು ಸ್ಪಷ್ಟೀಕರಣವನ್ನು ಪ್ರಕಟಿಸುವದನ್ನು ನಾನು ಕಂಡಿದ್ದೇನೆ. ಕೊಡಗು ಫಾರೆಸ್ಟ್ ಇಲಾಖೆಯ ವಿಚಾರದಲ್ಲಿ ಅನೇಕ ಸಂಶಯಗಳು ಪ್ರಕಟವಾಗಿ, ಸರಕಾರವು ಅವುಗಳನ್ನು ವಿಚಾರಿಸಿ ಸರ್ವರ ಅವಗಾಹನೆಗಾಗಿ ಪ್ರಕಟಿಸಬೇಕೆಂದು ಲೇಖಕರಲ್ಲಿ ಕೆಲವರು ಕೇಳಿಕೊಂಡರೂ ಮಾಡದಿರುವದು ಸರಕಾರದ ತಪ್ಪಲ್ಲದೆ ಪತ್ರಿಕೆಯದಾಗದು. ಪತ್ರಿಕೆಯು ಇಂದೂ ಕೂಡ ಅಂಥಾ ತನಿಖೆ ಪರಿಶೀಲನಾ ವರದಿಗಳನ್ನು ಪ್ರಕಟಿಸಲು ಸದಾ ತಯಾರಿರುತ್ತದೆ. ಸರಕಾರದ ಹತ್ತಿರ ಹಿಂದು ಹೋಗಿ ಅವರ ವಿಚಾರಗಳನ್ನು ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಿದ ನಿದರ್ಶನಗಳೂ ನನಗೆ ತಿಳಿದಿವೆ.

ಈ ರೀತಿ ಪತ್ರಿಕೆಯು ಸರಕಾರದ ನೀತಿ ನಿಯಮಗಳನ್ನು ಜನತೆಗೆ ತಿಳಿಸಿ, ಜನರ ಬೇಕು ಬೇಡಿಕೆಗಳನ್ನು ಸರಕಾರಕ್ಕೆ ನಿವೇದಿಸಿ ಸರ್ವಾಂಗೀಣ ಉನ್ನತಿಗೆ ಯತ್ನಿಸುವ ಸಾಧನವಾಗಿದೆ. ಇದರ ಸದುಪಯೋಗ ಮಾಡಿಕೊಳ್ಳದೆ ಪತ್ರಿಕೆಯಲ್ಲಿ ಯಾರೋ ಒಬ್ಬರು ಸರಕಾರದ ಯಾವುದೋ ನ್ಯೂನತೆಯ ವಿಚಾರ ಬರೆದಾಗ ಅದನ್ನು ವಿವರಿಸಿ ಹಾಗಲ್ಲ ಹೀಗೆಂದು ಮಾಹಿತಿ ಕೊಡುವ ಬದಲು ಪತ್ರಿಕೆಯ ಮೇಲೆ ಸಿಟ್ಟುಗೊಳ್ಳುವದರಿಂದ ಪ್ರಯೋಜನವಿಲ್ಲ. ಇನ್ನಾದರೂ ಮುಖ್ಯ ಮಂತ್ರಿಯವರೂ, ಮತ್ತು ಪತ್ರಿಕೆಯಲ್ಲಿ ಸಾರ್ವಜನಿಕ ವಿಚಾರವಾಗಿ ಬಂದ ವಿಷಯಗಳನ್ನು ನಿರ್ವಿಕಾರ ದೃಷ್ಟಿಯಿಂದ ನೋಡಲಾರದವರೂ ಸಹನೆ ವಹಿಸಿ ವರ್ತಿಸುವರೆಂದು ನಂಬಲಾಗಿದೆ.

'ಹಾಜರಿದ್ದವ'

ಟಿಂಬರ್ ಕಳ್ಳ ಸಾಗಾಟ.

ಈ ಸಾರೆಯ ಶಾಸನ ಸಭೆಯ ಮೀಟಿಂಗಿಗೆ ನಾನು ಹೋಗಿದ್ದೆ. ಕಾರಣವಿಷ್ಟೆ. ಸೌದೆಯ ಹೆಸರಿನಲ್ಲಿ ಮರದ ಲಾಗುಗಳ ಕಳ್ಳ ಸಾಗಾಟವಾಗುತ್ತಿದೆಯೆಂಬುದರ ಬಗ್ಗೆ ನನಗೂ ವಿಚಾರ ತಿಳಿದಿತ್ತು. ಅಲ್ಲದೆ ಅಧಿಕಾರಿಗಳಿಗೂ ಬರೆದುಕೊಂಡಿದ್ದೆ. ಜವಾಬು ನನಗೆ ಸಿಕ್ಕದ್ದರಿಂದಲೂ ಶಾಸನ ಸಭೆಯಲ್ಲಿ ಈ ವಿಚಾರವನ್ನು ಸದಸ್ಯರೊಬ್ಬರು ಎತ್ತುವರೆಂದು ತಿಳಿದ ಕಾರಣವೂ ಹೋದೆ. ಈ ವಿಚಾರದಲ್ಲಿ ಒಂದು ಠರಾವೇ ಇತ್ತು. ಫಾರೆಸ್ಟ್ ಇಲಾಖೆಯ ಕೆಲಸದಲ್ಲಿ ಅವ್ಯವಸ್ಥೆ ಇದೆಯೆಂದೂ ಪರಿಶೀಲಿಸಲು ಒಂದು ಸಮಿತಿಯ ಏರ್ಪಾಡಾಗಬೇಕೆಂದೂ ಇತ್ತು. ಮಂತ್ರಿಯವರು ಉತ್ತರವೀಯುತ್ತಾ ಸರಕಾರಿ ಸೀಲ್ ಹಾಕಲ್ಪಟ್ಟ ಈ ಮರ ಸಾಗಿದ್ದೆಂದೂ ಆದ್ದರಿಂದ ಕಳ್ಳತನವಿಲ್ಲವೆಂದೂ ಹೇಳಿದರು. ಆದರೆ ಫೆಬ್ರುವರಿ ತಾ. ೫ ಮತ್ತು ೯ ರಲ್ಲಿ ಪೋಲೀಸರು ಎರಡು ಲಾರಿ ಮರಗಳನ್ನು ಹಿಡಿದು ನಿಲ್ಲಿಸಿದ್ದೇಕೆಂದು ಅವರು ಹೇಳಲಿಲ್ಲ. ಸರಕಾರವು ಸೀಲು ಹಾಕಿ ಯೋಗ್ಯ ರೀತಿ ಸಾಗಿಸುತ್ತಿದ್ದ ಮರವಾದರೆ ಅದನ್ನು ತಡೆಯಲು ಪೋಲೀಸಿನವರಿಗೆ ತಲೆ ಸರಿ ಇರಲಿಲ್ಲವೇ? ಕಳ್ಳಸಾಗಾಟ ಆಗುತ್ತಿಲ್ಲವೆನ್ನುವದಾದರೆ ಇತ್ತಲಾಗಿ ಇಲಾಖೆಯವರು ಈ ಭಾಗದಿಂದ ೯ ಅಡಿಗಿಂಥಾ ಉದ್ದದ ಲಾಗುಗಳು ಸೌದೆಯ ಹೆಸರಿನಲ್ಲಿ ಹೋಗಕೂಡದೆಂದು ಕಟ್ಟಾಜ್ಞೆ ಹಾಕಲು ಕಾರಣವೇನು? ಕಣ್ಣು ಮುಚ್ಚಿ ಹಾಲುಕುಡಿದು ಜಗತ್ತಿಗೆ ತಿಳಿಯದೆಂದು ಭಾವಿಸುವ ಬೆಕ್ಕಿನ ವಿಚಾರದಂತೆ ಈ ಪ್ರಸಂಗ ಆಗಿದೆ.

"X"

ರಸ್ತೆ ಕರ ಹೋಟೆಲುಗಳು.

ಮಡಿಕೇರಿಯಿಂದ ಕುಟ್ಟದ ವರೆಗೆ ಹೋಟೇಲುಗಳ ಸ್ಥಿತಿ ಚಿಂತಾಜನಕವಾಗಿದೆ. ಈ ಉರಿ ಬೇಸಿಗೆಯಲ್ಲಿ ಸಿಕ್ಕಿದ ನೀರನ್ನು ಮಾರಿ ದುಡ್ಡು ಮಾಡುತ್ತಾರೆ. ಗ್ಲಾಸು, ಡಬ್ಬಿ, ನೀರು ಕುಡಿಯುವ ಪಾತ್ರೆ ಎಲ್ಲಾ ಕಣ್ಣುಸಿಗೆ ಲಾಯಕ್ಕಾದದ್ದು. ಖಾಲಿ ಟಿನ್ನಿಗೆ ಟ್ಯಾಪು ಅಂಟಿಸಿ ಹೆಸರಿಗೆ ತಟ್ಟೆ ಮಡಗಿದ್ದಾರೆ. ಬೆಳಗೆ ಚೀಲಕ್ಕೆ ಹಾಕಿದ ಟೀ ಹುಡಿಗೆ ಅದನ್ನೇ ಅಕ್ಷಯ ಪಾತ್ರವನ್ನಾಗಿ ಮಾಡಿ ಮಧ್ಯರಾತ್ರಿಯ ವರೆಗೆ ಬಿಸಿನೀರು ಹುಯಿದು ಮಾರುತ್ತಿರುತ್ತಾರೆ. ಸಧಾ ಸಮ್ಮಂಧಪಟ್ಟ ಅಧಿಕಾರಿಗಳು ಬಸ್ಸಿನಲ್ಲಿ ಓಡಾಡುತ್ತಿರುತ್ತಾರೆ. ಅವರಿಗೆ ಇದಾವುದೂ ಕಾಣುವದಿಲ್ಲವೇ? ಇದು ನಿಜವಾದ ಪಕ್ಷ, ಇವರು ಸಂಬಳ ಮತ್ತು ಭತ್ಯ ಹೊಂದಿಕೊಳ್ಳುವುದರ ಪ್ರತಿಫಲವೇನು? ಮಾದಯ್ಯ.

ಇವರು ವಿದ್ಯಾರ್ಥಿಗಳೇ?

ನಮ್ಮ ನಾಡಿನ, ಹಳೇ ಮೋಡೆಲ್‌ನಂತೆ ಕಾಲಿಗೆ ಸಾದ ಎಕ್ಕಡ ಹಾಕಿ, ತಲೆಗೆ ವಸ್ತ್ರ ಕಟ್ಟಿ, ಕ್ಲೋಸುಕೋಟು ಹಾಕುವ, ವರ್ಷಕ್ಕೆ ಅದೆಷ್ಟೋ ಟನ್ನು ಕಾಫಿ ಮಾರುವ ಎರಡು ದೊಡ್ಡ ಪ್ಲಾಂಟರುಗಳ ಶಾಲೆಗೆ ಬರುವ ಎರಡು ಮಕ್ಕಳು ಅದೇ ಶಾಲೆಯ ಬಡ ರೈತರ ಒಬ್ಬ ವಿದ್ಯಾರ್ಥಿಗೆ ಈ ಮಧ್ಯ ಚಿತ್ರಹಿಂಸೆ ಮಾಡಿ ತೊಂದರೆಪಡಿಸಿದ್ದಾರೆ. ಇದು ಅಧ್ಯಾಪಕರ ಅವಗಾಹನೆಗೂ ಬಂದಿದೆ. ಸಿನೆಮಾ ಮಂದಿರ, ಹೋಟೇಲುಗಳಲ್ಲಿ ರಾತ್ರೆ ಹೊತ್ತು ಇವರ ಹಾವಳಿ ಹೆಚ್ಚಾಗಿದೆ. ಮನೆಯಲ್ಲಿ ಇವರ ತಂಟೆ ತಡೆಯಲಿಕ್ಕೆ ಸಾಧ್ಯವಿಲ್ಲದೆ ಇವರನ್ನು ಶಾಲೆಗೆ ಕಳುಹಿಸುವುದಾಗಿದೆ. ಇವರಿಗೆ ವಿದ್ಯೆ ಬೇಕಾಗಿಲ್ಲ. ಶಾಲಾ ಹೆಡ್ ಮಾಸ್ಟರು ಇವರ ತಂದೆಯ ಕಬ್ಬಿಣದ ಪೆಟ್ಟಿಗೆಯ ಬೊಕ್ಕಸಕ್ಕೆ ಹೆದರದೆ ಇವರಿಗೆ ತಕ್ಕ ಬಂದೋಬಸ್ತು ಮಾಡಿ, ಬಡ ರೈತರ ಮಕ್ಕಳನ್ನು ಕಾಪಾಡಬೇಕಾಗಿ ಪ್ರಾರ್ಥನೆ.

'ಕಡಲೆಕಾಯಿ ಮುದುಕಿ'

ತಣ್ಣೆಮಾನಿಯಲ್ಲಿ ಜುಗಾರಿ.

ಇತ್ತೀಚೆಗೆ ಜೂಜು ಮುಂತಾದ ಜುಗಾರಿಗಳನ್ನು ತಡೆಗಟ್ಟಬೇಕೆಂದು ಹಲವು ವಿಧದಲ್ಲಿ ಸರಕಾರದವರು ಕಾರ್ಯತತ್ಪರರಾಗಿದ್ದಾರೆ. ಆದರೆ ಇದು ಇನ್ನು ಇನ್ನೂ ಹೆಚ್ಚಾಗಿ ತನ್ನ ಬಲೆಯನ್ನು ಜನತೆಯ ಮೇಲೆ ಬೀಸಿ, ಜನತೆಯನ್ನು ಕಷ್ಟಕ್ಕೆ ಬಲಿಮಾಡುತ್ತಿದೆ. ನೆರೆ ಗ್ರಾಮವಾದ ತಣ್ಣೆಮಾನಿ ಎಂಬಲ್ಲಿ ಈಗ ಹಬ್ಬವು ನಡೆಯುತ್ತಿದ್ದು, ಅಲ್ಲಿ ನೂರಾರು, ಬಡವರು, ಕೂಲಿಗಳು, ರೈತರು ಈ ಜುಗಾರಿ ಆಟ್ಟಮನಲ್ಲಿ (ಡೈಸ್ ಆಟಕ್ಕೆ) ನಿರತ್ತರಾಗಿರುವರು. ಇದು ಹಬ್ಬದಂತೆ ಮಾಡಲು ಸರಕಾರದವರು ಏರ್ಪಡಿಸಿದ ಪೋಲೀಸು ಮಹಾಶಯರು, ಬೇಲಿಯೇ ಹೊಲವನ್ನು ಮೇದಂತೆಯೆಂಬ ಗಾದೆಗೆ ರಾಗವನ್ನು ಸೇರಿಸುತ್ತಿದ್ದಾರೆ. ಆ ಜುಗಾರಿಯಾಟದಿಂದಾಗಿ ದಿನಕ್ಕೆ ೭೦—೮೦ ರೂಗಳಷ್ಟು ಹಣವನ್ನು ಕಳಕೊಂಡು ಕಣ್ಣೀರು ಇಡುವ ಜನವನ್ನು ಕಂಡಿದ್ದೇನೆ. ದೇಶದ ಕಾವಲು ಎಂಬ ಹೆಸರನ್ನು ಪಡೆದ ಅಧಿಕಾರಿಗಳಿದ್ದು ಫಲವಾಗಿಲ್ಲ. ಜನತೆಯ ಹಿತಕ್ಕಾಗಿ ದುಡಿಯುವ ಸರಕಾರದ ಅಧಿಕಾರಿಗಳು, ಈ ಜುಗಾರಿ ಇನ್ನಾದರೂ, ದೇಶದಲ್ಲಿ ಹಬ್ಬದಂತೆ ತಕ್ಕ ಏರ್ಪಾಡು ಮಾಡುವರೇ? ಪ್ರಜಾ ಸರಕಾರದ ಘನವೆತ್ತ ಧುರೀಣರು ಈ ಕಾರ್ಯಕ್ಕೆ ತಕ್ಕ ಮನವನ್ನು ಇನ್ನಾದರೂ ಕೊಡುವರೇ? 'ಜುಗಾರಿ ವಿರೋಧಿ.'

ನಗುಮಲ್ಲಿಗೆ

ಉಪಾಧ್ಯಾಯ—ನಿಮ್ಮ ಪರೀಕ್ಷೆ ಹತ್ತಿರ ಬರುತ್ತಿದೆ ಒಂದೇ ವಾರ ಸಮಯವಿದೆ. ನಿಮ್ಮ ಕಷ್ಟ ಕಡೆಯ ಪ್ರಶ್ನೆಗಳಿದ್ದರೆ ಹೇಳಿಬಿಡಿ ಉತ್ತರ ಹೇಳುತ್ತೇನೆ.

ಶಿಷ್ಯ—ಸಾರ್! ಪ್ರಶ್ನಾ ಪತ್ರಿಕೆಗಳು ಯಾವ ಪ್ರೆಸ್ಸಿನಲ್ಲಿ ಅಚ್ಚಾಗುತ್ತವೆ. ಅದೊಂದು ತಿಳಿಸಿಬಿಡಿ ಸಾರ್.

* * *

ಗುರು—ಎಸ್. ಎಸ್. ಎಲ್. ಸಿ. ಎಂದರೇನೋ? ಜಾಗ್ರತೆ ಉತ್ತರ ಹೇಳು

ರಾಮು—ಎಸ್. ಎಸ್. ಎಲ್. ಸಿ. ಎಂದರೆ, Students searching Lady Candidates ಎಂದರ್ಥ ಸಾರ್.

* * *

ಯುವಕ—ಅಜ್ಜಯ್ಯ, ಇದು ನಿಮ್ಮ ಕಾಲವಲ್ಲ. ಈಗ ನೋಡಿ, ಮಾತನಾಡುವ ರೇಡಿಯೋ, ರೈಲು, ಸಿನೇಮ, ವಿಮಾನ ಮೊದಲಾದ ಆಶ್ಚರ್ಯಕರವಾದುವನ್ನು ಕಂಡುಹಿಡಿದಿದ್ದಾರೆ.

ಮುದುಕ—ಅದೆಲ್ಲಾ ಇರಲಿ, ಎಲ್ಲಕ್ಕಿಂತಲೂ ಹೆಚ್ಚು ಆಶ್ಚರ್ಯವೇನದರೆ ಆ ಸೂಡಾಬಾಟ್ಲಿ ಒಳಗೆ ಹೇಗೆ ಗೋಲಿ ಸೇರಿಸಿದ್ದಾರೆ?

ಎಂ. ಎಸ್. ಚೇಮಣ್ಣ.

* * *

ರಾಜು ಮತ್ತು ಆತನ ಪತ್ನಿಯು ಪ್ರಥಮ ಜಗಳವಾಗಿ ಆಗ ತಾನೆ ನಿಂತಿತ್ತು. ನಾನು ಸತ್ತು ಹೋಗಿದ್ದರೆ ಸಾಕಾಗಿತ್ತು' ಆಕೆ ಹೇಳಿದಳು. 'ನಾನು ಸತ್ತು ಹೋಗಿದ್ದರೆ ಸಾಕಾಗಿತ್ತು. ಸಾಕೋ ಸಾಕಾಗಿದೆ ನನಗೆ' ರಾಜು ಎಂದ. ಹಾಗಾದರೆ 'ನಾನು ಸಾಯಲಾರೆ' ಆಕೆಯೆಂದಳು. ಪುನಹ ಜಗಳ ಮುಂದರಿಯಿತು.

ಹೆಂಡತಿ—ನಾನು ಹಾರ್ಮೋನಿಯಮ್ ಬಾರಿಸಲು ಪ್ರಾರಂಭಿಸಿದರೆ ಒಂದು ವಿಧದ ವ್ಯಸನಪೂರಿತ ಆಲಾಪನೆಯೇ ಬಂದು ದುಃಖವಾಗುತ್ತದೆ.

ಗಂಡ—ನೀನು ಮಾಡುವದನ್ನು ಕೇಳಿ ನನಗೂ ದುಃಖವಾಗುತ್ತದೆ ಪ್ರಿಯೆ!

* * *

ಆತ—ಅಯ್ಯೋ! ನಿನ್ನ ಪಾದಧೂಳಿನಲ್ಲಿ ನರಳಿ ಕೇಳುತ್ತಿರುವ ನನ್ನ ಮಾತಿಗೆ ಒಪ್ಪಬಾರದೆಯಾ?

ಆಕೆ—ಧೂಳು—ನನಗೆ ಅಪಮಾನ ಮಾಡುವೆಯಾ? ಈ ಬೆಳಗ್ಗೆ ಇಡೀ ಈ ಕೊಠಡಿಯನ್ನು ಗುಡಿಸುವದರಲ್ಲೇ ಕಳೆದಿರುವೆ. ಅಂಥಾ ಧೂಳಿ!

* * *

'ನಿನಗೆ ಪರಮಾಣುರೂಪದ ಕ್ರಿಮಿಗಳ ಭಯವಿಲ್ಲವೆಂದು ಆಶಿಸುತ್ತೇನೆ.' ಎಂದು ಹೇಳುತ್ತಾ ಹಳೇದಾದ ನೋಟುಗಳನ್ನು ಬ್ಯಾಂಕಿನವನು ತನ್ನ ಸಂಬಳದ ಚೆಕ್ ಕೇಶ್ ಮಾಡಲು ಬಂದ ಅಧ್ಯಾಪಕನಿಗೆ ಕೊಟ್ಟನು.

ಆಧ್ಯಾಪಕ—ನಿಮಗೆ ಬೇಸರ ಬೇಡ. ಯಾಕೆಂದರೆ ಈ ಸಂಬಳದಲ್ಲಿ ಆ ಚಿಕ್ಕ ಕ್ರಿಮಿಗೂ ಕೂಡ ಬದುಕುವದು ಕಷ್ಟವಿದೆ.

* * *

ರಾಮು—ನೀನು ಸೈನ್ಯಕ್ಕೆ ಸೇರಿದೆಯೂ?

ಸೋಮು—ಹೌದು.

ರಾಮು—ಯುದ್ಧ ಕಾಲದಲ್ಲಿ ಬರ್ಮಾಕ್ಕೆ ಹೋಗಿದ್ದೆಯೊ?

ಸೋಮು—ಮೂರು ವರ್ಷಗಳ ವರೆಗೆ ಇದ್ದೆ.

ರಾಮು—ನಿನಗೆ ಕಮಿಷನ್ ದೊರೆಯಿತೇ?

ಸೋಮು—ಇಲ್ಲ ನಿಶ್ಚಿತ ಸಂಬಳ ಮಾತ್ರ.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕೊಡಿಸಿರುವ ಸಾಮಾನುಗಳು ದೊರೆಯುತ್ತವೆ.

1 32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು.
2 12 ನೇ ನಂಬರಿನ ಜೋಡು ಹೊಳವಿನ ಕೋವಿ.
3. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು
4. 9" × 4" ಮತ್ತು 8" × 4" ಕಬ್ಬಿಣದ ತೊಲೆಗಳು (Girders).
5 8' × 3' × 24' (Gage) ಕಬ್ಬಿಣದ ತಗಡುಗಳು.
6. 1¾" × 5/16" ಉಕ್ಕಿನ ಪಟ್ಟಿಗಳು (Spring Steel flats)
7. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
8 ವ್ಯವಸಾಯದ ಎಲ್ಲಾ ತರದ ಹತ್ಯಾರುಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಬಜೆಟ್ಟಿನ ಮೇಲೆ ಸದಸ್ಯರ ಅಭಿಪ್ರಾಯಗಳು.

(೪ನೇ ಪುಟದಿಂದ)

ಯಲ್ಲೇ ಇದು ಪ್ರಥಮ. ೧೯೪೩—೪೪ರಲ್ಲಿ ಕೊಡಗಿನ ವೆಚ್ಚ ೧೨ ಲಕ್ಷವಾಗಿತ್ತು. ಇಂದು ೧॥ ಕೋಟಿಯ ಹತ್ತಿರವಿದೆ. ಫಾರೆಸ್ಟ್ ಖರ್ಚು ೧,೫೬,೦೦೦ ಇದ್ದದು ೧೭,೨೨,೦೦೦ಕ್ಕೆ ಏರಿದೆ. ವಿದ್ಯೆ ೧॥ ಲಕ್ಷವಿದ್ದದು ೧೯॥ ಲಕ್ಷಕ್ಕೇರಿದೆ. ಸಿವಿಲ್ ವರ್ಕ್ಸ್ ೧೪ ಲಕ್ಷ ಇದ್ದದು ೨೬ ಲಕ್ಷಕ್ಕೇರಿದೆ. ವ್ಯವಸಾಯ ೨೮ ಸಾವಿರ ಇದ್ದದ್ದು ೧೪ ಲಕ್ಷಕ್ಕೆ ಬಂದಿದೆ. ಕಳೆದ ಹತ್ತು ವರ್ಷಗಳಲ್ಲಿ ಕೊಡಗು ಎಷ್ಟರ ಮಟ್ಟಿಗೆ ಮುಂದುವರಿದಿದೆಯೆಂಬುದನ್ನು ಇದು ಸೂಚಿಸುತ್ತದೆ. ಆದಾಯದ ಭಾಗದಲ್ಲೂ ಉತ್ಪತ್ತಿ ಹೆಚ್ಚಿಸುವ ಏರ್ಪಾಡು ನಡೆದಿದೆ. ಬಾಣೆಯ ಮೇಲೆ ಕಂದಾಯ ವಿಧಿಸುವ ವಿಚಾರದಲ್ಲಿ ಶ್ರೀ ಕೆ. ಪಿ. ಕರುಂಬಯ್ಯನವರ ಸಲಹೆಗೆ ನಾನು ಒಪ್ಪುತ್ತೇನೆ. ಚಿಕ್ಕ ಹಿಡುವಳಿದಾರರನ್ನು ವಿನಾಯಿಸುವದು ಯೋಗ್ಯ. ಫಾರೆಸ್ಟ್ ಹರಾಜಿನ ವಿಚಾರದಲ್ಲಿ ಎಚ್ಚರಿಕೆಯಿಂದ ವರ್ತಿಸುತ್ತಿರುವರೆಂಬುದಕ್ಕೆ ಒಂದು ನಿದರ್ಶನ ಕೊಡಬಲ್ಲೆ. ಒಂದು ಕೂಪನ್ನು ಹರಾಜಿಗೆ ಮೂರು ಭಾರಿಯಿಟ್ಟರೂ ೩೦ ಸಾವಿರಕ್ಕೆ ಹೆಚ್ಚಿಗೆಗೆ ಹೋಗಲಿಲ್ಲ. ಆದರೆ ಖಾಸಗಿ ಮಾತುಕತೆಯಿಂದ ೬೫ ಸಾವಿರಕ್ಕೆ ಕೊಡಲಾಗಿದೆ. ಇದರಿಂದ ಇಲಾಖೆಯವರು ಎಷ್ಟು ತೊಂದರೆ ವಹಿಸಿ ಕೊಳ್ಳುತ್ತಿರುವರೆಂಬುದು ತಿಳಿಯುವದು. ಮಳೆಗೂ ಮರಕಾಡಿಗೂ ಸಂಬಂಧವಿಲ್ಲದಿದ್ದರೂ ಮಳೆ ಇರುವಲ್ಲಿ ಮರಕಾಡು ಇದೆ. ಕೊಡಗಿನ ಪೂರ್ವ ಗಡಿಯ ಫಾರೆಸ್ಟಿನ ೧೩,೦೦೦ ಕ್ಕೂ ಹೆಚ್ಚಿನ ಭಾಗದಲ್ಲಿ ವರ್ಷಕ್ಕೆ ೭೫೦ರಂತೆ ರಿಜರ್ವೇಟ್ ಮಾಡಿದರೆ ಗಾಬರಿ ಪಡಬೇಕಾದುದಿಲ್ಲ. ಕೋರ್ಟು ಫೀಜು ಅಕ್ಟನ್ನು ಬದಲು ಮಾಡಬೇಕು. ಕಾಲೇಜಿಯೇಟ್ ಸ್ಕಾಲರ್ ಶಿಪ್ ಸಂಖ್ಯೆ ಹೆಚ್ಚಿಸಬೇಕು. ಮಜೂರರ ಹಿತಕ್ಕಾಗಿ ಈಗ ತೋರಿಸುತ್ತಿರುವ ಮಾಯಾಬಾಂಧ್ಯ ಏರ್ಪಾಡು ಸರಿಯಲ್ಲ. ಈಗ ಮುಂದರಿದ ಕಾಲ. ಒಂದು ಸಿನೇಮಾ ಮೋಬೈಲ್ ಯೂನಿಟ್ ತೆರೆಯುವದು ಹಿತ. ಮಡಿಕೇರಿ ವಿದ್ಯುಚ್ಛಕ್ತಿ ಯೋಜನೆಗೆ ಎರಡು ಲಕ್ಷ ಬಿಟ್ಟದಕ್ಕೆ ಮಡಿಕೇರಿಯವರು ಆಭಾರಿಗಳಾಗಿರುವರು. ಡಾ. ನೋದಿಯವರನ್ನು ಕರೆಸಿ ಜನತೆಗೆ ಸಹಾಯ ಮಾಡಿದಕ್ಕೆ ವಂದನೆ. ೧೯೪೫ರಲ್ಲಿ ಬರಪೊಳೆ ಯೋಜನೆಯ ಬಗ್ಗೆ ದರಖಾಸ್ತಾದರೂ ಆ ಬಗ್ಗೆ ಏನೂ ನಡೆದಿರಲಿಲ್ಲ. ಮೈಸೂರಿನ ನರಸಿಂಹಯ್ಯನವರ ಪರಿಶೀಲನೆಯಿಂದ ಬರಪೊಳೆ ವಿದ್ಯುಚ್ಛಕ್ತಿ ಯೋಜನೆಯಿಂದ ಒಂದು ಲಕ್ಷ ಕಿಲೋವಾಟ್ ಶಕ್ತಿ ಉತ್ಪಾದನೆಯಾಗುವದೆಂದು ತಿಳಿದುಬಂದಿದೆ. ಮುಂದಿನ ಹತ್ತು ವರ್ಷಗಳಲ್ಲಿ ಇದು ಕಾರ್ಯಗತವಾಗಲಿ. ಹೆಚ್ಚು ಬೆಳೆಯುವ ಯುದ್ಧ ಗದ್ದೆ ಫೀಲ್ಡುಗಳಲ್ಲಿ ನಡೆಯಬೇಕು. ಹೆಚ್ಚು ಬೆಳೆದರೆ ಕಮ್ಯೂನಿಸ್ಟರಿಗೆ ಆಸ್ಪದವಿರಲಾರದು. ಅವರ ಮುಂದಾಳುಗಳು ಮಾತ್ರ ಇರಬೇಕಾಗುವದು. ಶಾಲೆಯ ಪ್ರಾಂತದ ಉಪಯೋಗಕ್ಕಾಗಿ ಕೋಟೆಯಲ್ಲಿ ಒಂದು ಕೋಣೆ ಮತ್ತು ವಾಚನಾಲಯ ಅಗತ್ಯ.

ಶ್ರೀ ಎಂ. ಡಿ. ಮಾಚಯ್ಯನವರು

ಅಭಿವೃದ್ಧಿಯ ಕಾರಣಗಳಿಗಾಗಿ ಹಣವ್ಯಯ ಮಾಡದೆ ಕೊಡಗಿನ ಸ್ಥಿತಿ ಶೋಚನೀಯವಾಗಿತ್ತು. ಈಗ ಹಣದ ವಿನಿಯೋಗ ಆಗುತ್ತಿದೆ. ರೆವಿನ್ಯೂ ಇಲಾಖೆಯಲ್ಲಿ ಅಭಿವೃದ್ಧಿಯ ಚಿಹ್ನೆ ಕಂಡು ಬಂದರೂ ಇನ್ನೂ ಸುಧಾರಣೆ ಆಗಬೇಕು. ಫಾರೆಸ್ಟ್ ನೀತಿಯಲ್ಲಿ ಇನ್ನೂ ಹೆಚ್ಚಿನ ಜಾಗರೂಕತೆಬೇಕು. ಕಾಡಿನಲ್ಲಿ ಮರಗಳನ್ನು ಬೆಳೆಸಿ ಗಾಳಿಯನ್ನು ತಡೆದು ಮಳೆ ಬೀಳಿಸುವ 'ವಿಂಡ್ ಬೆಲ್ಟ್'ಗಳನ್ನು ಏರ್ಪಡಿಸಬೇಕು. ಇದಕ್ಕೆ ಯಾವ ಮರವಾದರೂ ಆಗುತ್ತೆ. 'ಸಿಲ್ವರ್ ಓಕ್ಸ್' ನೆಡಬಹುದು. ಮರ ಮಾರಾಟಕ್ಕೆ ಹೊಣಸೂರು ಒಂದೇ ಡಿಪೋದ ಬದಲು ಹೆಚ್ಚಿಗೆ ಡಿಪೋಗಳನ್ನು ಮಾಡಬೇಕು. ಖಾಸಗಿ ಮರ ಹೆಚ್ಚಾಗಿ ಮಾರ್ಕೆಟಿಗೆ ಬರುತ್ತಿರುವ ಕಾರಣ ಬೆಲೆ ಇಳಿಯುವಂತಾಗಿದೆ. ವೈರ್‌ಲೆಸ್ ನೀರಾವರಿ ಯೋಜನೆಗೆ ನಾಲ್ಕು ಲಕ್ಷವಿರಿಸಿದ್ದು ಒಳ್ಳೆಯದು. ಪೋಲೀಸ್ ಇಲಾಖೆಯ ಕಡೇ ಗಡಿ ಸ್ಟೇಷನ್‌ಗಳಲ್ಲಿ ಸ್ವಲ್ಪ ಅನುಭವವಿದ್ದವರನ್ನು ಇಡಬೇಕು. ಇಲಾಖೆಯು ಆದು ಮಾಡಬೇಕಿರುವಂತೆ ಕೆಲಸ ಮಾಡುತ್ತಿಲ್ಲ. ಜಗಳ ಕೇಸುಗಳು ಆಗದಂತೆ ತಡೆಗಟ್ಟುವ ವಿಚಾರಕ್ಕೆ ಹೆಚ್ಚಿನ ಗಮನ ಕೊಡಬೇಕು. ವೈದ್ಯಕೀಯ ಮೊಬೈಲ್ ಯೂನಿಟ್ಟುಗಳ ಏರ್ಪಾಡು ಮಾಡಬೇಕು. ವೀರಾಜಪೇಟೆ ಆಸ್ಪತ್ರೆಯ ಸ್ಥಿತಿ ಈ ಕೆಲವು ವರ್ಷಗಳ ಹಿಂದೆ ಇದ್ದಂತೆ ಇಲ್ಲ. ಅದನ್ನು ಸರಿಗೊಳಿಸಬೇಕು. ಜಪಾನೀ ವ್ಯವಸಾಯ ಕ್ರಮದಿಂದ ಆರ್ಥಿಕ ಸ್ಥಿತಿ ಉತ್ತಮವಾಗಬಹುದು. ಕೊಡಗಿನಲ್ಲಿ ಸಾಮೂಹಿಕ ವ್ಯವಸಾಯ ಪದ್ಧತಿಯನ್ನು ಜಾರಿಗೆ ತರಬೇಕು. ಫ್ರೇಜರ್‌ಪೇಟೆಯಲ್ಲಿ ಸುಮಾರು ಸಾವಿರ ಎಕರೆ ಜಾಗದಲ್ಲಿ ನೆಲಗಡಲೆ ಬೆಳೆಸುವ ಏರ್ಪಾಡು ಮಾಡಿ ಕೊಡಗಿಗೆ ಆವಶ್ಯವಿರುವ ನೆಲಗಡಲೆ ಹಿಂಡಿಗೊಬ್ಬರವನ್ನು ತಯಾರಿಸಬೇಕು. ಕೊಡಗಿನಲ್ಲಿ ಜಾನುವಾರುಗಳು ಬಹು ಸಂಖ್ಯೆಯಿಂದ ಸಾಯುತ್ತವೆ. ಇಲ್ಲಿ ಮೂಳೆ ಗೊಬ್ಬರದ ಏರ್ಪಾಡು ಮಾಡುವುದು ಹಿತ. ಕೊಡಗಿಗೆ ಸಂಶೋಧನಾ ಕೇಂದ್ರವು ಆವಶ್ಯವಾಗಿದೆ. ಕೊಡಗಿಗೆ ಹಿತವೆಂದು ತೋರುವ ಜಾತಿಯ ದನಗಳ ತಳಿಯನ್ನು ಸುಧಾರಿಸುವದು ಉಪಯುಕ್ತವಾದುದು.

ಆರ್ಥಿಕ ಮಂತ್ರಿಯವರ ಉತ್ತರ.

ಮುಂದಿಟ್ಟ ಬಜೆಟ್ಟಿಗೆ ಸುಸ್ವಾಗತವನ್ನಿತ್ತದಕ್ಕೆ ಎಲ್ಲರನ್ನೂ ವಂದಿಸುತ್ತೇನೆ. ಇದರಿಂದ ನನ್ನ ಜವಾಬ್ದಾರಿಯು ಇನ್ನೂ ಹೆಚ್ಚಾಯಿತು. ನನ್ನ ಮೇಲಿರಿಸಿದ [illegible] ಸಕ್ಕೆ ಸರಿಯಾಗಿ ವರ್ತಿಸುವ [illegible] ಯೋ ತಿಳಿಯದು. ಕಳೆದ ಹೇಳಿದ ಕತೆಯಂತೆ [illegible] ನ ಸ್ಥಿತಿಯು ಆಧುನಿಕ [illegible] ವ ಹೆಂಡತಿಯ ಗಂಡ [illegible] ವರ್ಷ ಒಂದು ಮಗ

...ces ... can ... Co., Ltd. ... 1S.

ಖರ್ಚುಗಳಿಗೂ ಸಾಕಷ್ಟು ಹಣವಿಟ್ಟಿದ್ದರೂ ಎಲ್ಲರನ್ನೂ ತೃಪ್ತಿಪಡಿಸುವದಾಗಿಲ್ಲ. ಇಂದಿನ ಕಾಲದಲ್ಲಿ ಅನಿವಾರ್ಯವಾಗಿ ಖೋತಾ ಬಜೆಟ್ ಮಾಡಬೇಕಾಗಿದೆ. ಹಿಂದಿನ ಶಿಲ್ಕಿನಿಂದ ಸುಮಾರು ೩೭ ಲಕ್ಷ ಉಪಯೋಗಿಸುವದರಿಂದ ವರ್ಷಾಂತ್ಯದಲ್ಲಿ ಶಿಲ್ಕು ೫೨ ಲಕ್ಷಕ್ಕಿಳಿಯುವದು. ಕೇಂದ್ರದಿಂದ ಸಹಾಯ ಸಾಕಷ್ಟು ದೊರೆಯಲಿಲ್ಲವೆನ್ನುವದು ಸರಿಯಲ್ಲ. ವಿದ್ಯುಚ್ಛಕ್ತಿಯ ಬಗ್ಗೆ ಮೈಸೂರಿಗೆ ೨೦ ಲಕ್ಷ ಸಾಲ, ಸೆಂಟ್ರಲ್ ರೋಡ್ ಫಂಡಿನಿಂದ ನಾಲ್ಕು ಲಕ್ಷ, ಬಜೆಟ್ಟಿನಲ್ಲಿ ತೋರಿಸಿರುವ ೧೮ ಲಕ್ಷ ಹೀಗೆ ಒಟ್ಟಾರೆ ೪೯ ಲಕ್ಷದ ವರೆಗೆ ಸಹಾಯ ಬರುತ್ತದೆ. ಆದ್ದರಿಂದ ಎಕ್ಸೈಸ್ ಬಾಪ್ತು ನಮಗೆ ದೊರೆಯಬೇಕಾದ ಪಾಲಿನ ಬಗ್ಗೆ ಹೋರಾಡುವದು ಸೂಕ್ತವೋ ಎಂದು ನಾನು ಕೇಳುತ್ತೇನೆ. ಸದಸ್ಯರು ಹಲವು ಉಪಯುಕ್ತ ಸೂಚನೆಗಳನ್ನು ಮಾಡಿದ್ದಾರೆ. ಬರಪೋಳೆ ಯೋಜನೆಯ ಪರಿಶೀಲನೆ ಬಗ್ಗೆ ೨ ಲಕ್ಷ ಹಣವಿಡಲಾಗಿದೆ. ಇಂಡಿಯಾ ಸರಕಾರವು ವಿಮಾನದಿಂದ ಅದರ ಸರ್ವೆ ತೆಗೆಯುವ ಏರ್ಪಾಡು ಮಾಡಿದ್ದಾರೆ. ಶ್ರೀ ಎ. ಸಿ. ತಿಮ್ಮಯ್ಯನವರು ಹೇಳಿದ ಹಾಗೆ ಮೊಟ್ಟೆಯೊಡೆದ ಮೂರು ದಿನಗಳಲ್ಲಿ ಕೋಳಿಮರಿಗಳನ್ನು ಸಾಕಲು ಕೊಟ್ಟರೆ ಕಷ್ಟವಾಗಬಹುದು. ಕೊಡಗಿನಲ್ಲಿ ೩,೪೦,೦೦೦ ಎಕರೆ ಕಂದಾಯವಿಲ್ಲದ ಬಾಣೆ ಜಾಗವಿದೆ. ಈ ಕಂದಾಯವನ್ನು ಹಾಕುವದು ತಪ್ಪೋ ಎಂದು ನಾನು ಕೇಳುತ್ತೇನೆ. ಬಾಣೆಯೇ ಅನೇಕ ಕೋರ್ಟು ವ್ಯವಹಾರಗಳಿಗೆ ಕಾರಣವಾಗಿದೆ. ಕುಟುಂಬದಲ್ಲಿ ಯಾವ ಬಾಣೆ ಯಾರದೆಂಬುದೇ ತಿಳಿದಿಲ್ಲ. ಈ ಕಂದಾಯದಿಂದ ಇದೆಲ್ಲ ಸರಿ ಹೋಗುವದು. ಫಾರೆಸ್ಟಿನಿಂದ ಸೌದೆಯ ಹೆಸರಿನಿಂದ ಮರ ಸಾಗುತ್ತಿದೆಯೆಂಬ ವರ್ತಮಾನ ನಿಜವಲ್ಲ. [illegible] ಕೆಲಸಕ್ಕೆ ತೆರೆದುಕೊಂಡ ಸ್ಥಳದಲ್ಲಿ ಪ್ರಥಮ ಮತ್ತು ದ್ವಿತೀಯ ಜಾತಿ ಉತ್ತಮ ಮರಗಳನ್ನು ಬೇರ್ಪಡಿಸಿ ಕಡಿದು ಬಳಿಕ ಪ್ರಯೋಜನಕ್ಕೆ ಬಾರದ್ದನ್ನು ಸೌದೆಯಾಗಿ ಕೊಡಲ್ಪಡುತ್ತಿದೆ. ಈ ರೀತಿ ಮಾಡುವದರಿಂದ ಸರಕಾರಕ್ಕೆ ಲಾಭವಾಗಿದೆ. ಕಳ್ಳತನದ ಮರದ ಸಾಗಾಟದ ಕಾರಣ ಟಿಂಬರ್ ಬೆಲೆ ಕಡಿಮೆಯೆಂಬುದು ಸರಿಯಲ್ಲ. ಸೌದೆಯ ರೂಪದಲ್ಲಿ ಮಾರಾಟ ಮಾಡಿದ ಕಾರಣ ನಿಷ್ಪ್ರಯೋಜಕ ಈ ಮರಕ್ಕೆ ರೂ. ೪೦೦೦/ ದೊರೆತಿದೆ. ಒಲ್ಲ ಇಲ್ಲಿ ಒಂದೆರಡು ಲೋಪಗಳು ಸೌದೆಯ ಜೊತೆಯಲ್ಲಿ ಹೋಗಿರಬಹುದು. ಆದರೆ ಅವು ನಮ್ಮ ಅಧಿಕಾರಿಗಳ ಸೀಲಿನಿಂದಲೇ ಹೋಗಿವೆ. ಶ್ರೀ ಕೆ. ಕೆ. ಗಣಪತಿಯವರು ನಮ್ಮ [illegible] ಹೋಗಿ ಇದ್ದನ್ನೆಲ್ಲಾ ಪರಿಶೀಲಿಸಿ ಹಿಡಿಗೆ ರೂ. ೨-೪-೦ರಂತೆಯ [illegible] ಮಾರಾಟವಾಗುವದನ್ನು ಕೇಳಿ ತಿ[illegible] ಮಾರ್ಕೆಟಿನಲ್ಲಿ [illegible] ಹಿಡಿ ಮಾರಿದೆ. ಶ್ರೀ ಗ[illegible] ಹೋದವರು ಏರವ್ಯಾಪಾ[illegible] ಶ್ರೀ [illegible] ಆಸಕ್ತಿ ಇರಬಹುದು. [illegible] ರೂ. ೧೧೦೦ತ ತೆಗೆದುದರಿಂದ ಅವರು [illegible] ಮಾಡಲಿ. ಟಿಂಬ[illegible] ಅದು ತಪ್ಪಲ್ಲ. ಅದರ್ ಸಾಗಿಸಿದ ಖರ್ಚಿಗಿಂಥಾ ಕಡಿಮೆ ದರಕ್ಕೆ ಮಾರಾಟವಾಗಿರಬಹುದು. ಅದೆಲ್ಲ ವ್ಯಾಪಾರದ ಗುಟ್ಟು. ಒಂದರಲ್ಲಿ ನಷ್ಟವಾದರೆ ಮತ್ತೊಂದರಲ್ಲಿ ಬರುತ್ತದೆ. ಕಳ್ಳ ಮರ ಸಾಗುತ್ತಿದೆಯೆಂಬ ವರ್ತಮಾನ ತಿಳಿದೊಡನೆಯೇ ೯ ಅಡಿಗಿಂಥಾ ಉದ್ದದ ಮರ ಸೌದೆಯ ಹೆಸರಿನಲ್ಲಿ ಸಾಗಿಸಲ್ಪಡಬಾರದೆಂದು ನಾವು ಖಾನೂನು ಮಾಡಿರುವೆವು. ಎರಡು ವರ್ಷದ ಕಂಟ್ರಾಕ್ಟನ್ನು ಈಗ ರದ್ದು ಪಡಿಸಲಾಗುವದಿಲ್ಲ. ಎಸ್. ಕೆ. ಬ್ರದರ್ಸ್‌ರವರಿಗೆ ಕಂಟ್ರಾಕ್ಟು ಕೊಟ್ಟದ್ದು ಸಮಂಜಸ. ಸಾಗಿಸಲು ಶಕ್ತಿ ಇಲ್ಲದವರಿಗೆ ದರ ಕಡಿಮೆಯೆಂದು ಕಂಟ್ರಾಕ್ಟು ಕೊಡುವದರಿಂದ ವಿಪರೀತ ನಷ್ಟವಿದೆ. ಸಾಮೂಹಿಕ ವಿಕಾಸ ಯೋಜನೆಯ ಕಾರ್ಯಕ್ಷೇತ್ರ ಶ್ರೀ ಮುತ್ತಣ್ಣನವರ ಮನೆಯ ಹತ್ತಿರವೇ ಇರುವದರಿಂದ ಅವರಿಗೆ ವಿವರ ತಿಳಿದಿರಬೇಕಿತ್ತು. ಆದರೆ ಒಂದಾಣೆಯ ಕೆಲಸವೂ ಆಗಿಲ್ಲವೆಂದು ಅವರು ಹೇಳುವದು ಸರಿಯಲ್ಲ. ಸುಮಾರು ೭೦ ಸಾವಿರ ರೂ.ಗಳ ಕೆಲಸವಾಗಿ ಬಿಲ್ಲುಗಳು ಬಂದಿವೆ. ಜನರ ಪ್ರೋತ್ಸಾಹ ಚೆನ್ನಾಗಿದೆ. ಇದು ಹಿಂದೂದೇಶದ ಸಾಮೂಹಿಕ ವಿಕಾಸ ಯೋಜನೆಗಳಲ್ಲಿ ಆದರ್ಶವಾಗುವದು. ಹಿಂದೂದೇಶಕ್ಕೆ ೨೧ ಸಾವಿರ ಟನ್ ಮರ ಬೇಕಿದೆ. ಅದರಲ್ಲಿ ೧೮ ಸಾವಿರ ಟನ್ನು ಸರಬರಾಯಿಯಾಗಿ ಸುಮಾರು ೩ ಸಾವಿರ ಟನ್ನು ಹೊರಗಿನಿಂದ ಬರುತ್ತದೆ. ಹೀಗಿರುವಾಗ ಮರದ ಉಪಯೋಗ ಮುಂದೆ ಇರಲಾರದು. ಸಿಮೆಂಟು, ಕಬ್ಬಿಣಗಳ ಮನೆ ಆಗಬಹುದು ಆದರಿಂದ ತೇಗ ನೆಡುವದು ಲಾಭದಾಯಕವಾಗದು ಎನ್ನುವದು ಸರಿಯಲ್ಲ. ಇದೆಲ್ಲದೆ ಮತ್ತೇನು ಮಾಡಬೇಕೆಂದು ಸದಸ್ಯರು ಸೂಚಿಸಲಿಲ್ಲ. ಮೈಸೂರು ೧೩೦೦ ಟನ್ ಗಂಧ ಉತ್ಪಾದಿಸುತ್ತದೆ. ನಮ್ಮದು ಕೇವಲ ೧೦೦ ಟನ್. ಹಾಗಿರುವಾಗ ಮೈಸೂರಿನ ಮಿಲ್ಲುಗಳಿಗಾಗಿ ಅವರ ಯತ್ನವೆನ್ನುವದು ಶ್ರೀಯುತರಿಗೆ ಈ ವಿಚಾರದಲ್ಲಿ ಏನೂ ತಿಳಿದಿಲ್ಲವೆಂಬುದನ್ನು ವ್ಯಕ್ತಪಡಿಸುತ್ತದೆ. ಈ ವರ್ಷ ೧೧೬ ಟನ್ ಖಾಸಗಿ ವ್ಯಾಪಾರಸ್ಥರಿಗೆ ಮಾರಿ ಟನ್ನಿಗೆ ಮಾರ್ಕೆಟ್ ಬೆಲೆ ರೂ. ೨೮೦೦ ರ ಬದಲು ರೂ. ೩೦೪೮ ಪಡೆದಿರುವೆವು. ಶ್ರೀ ಉತ್ತಯ್ಯನವರು ಟೆಕ್ನಿಕಲ್ ಶಾಲೆಗೆ ಹಣವಿಡಲಿಲ್ಲವೆಂದರು. ನಿರಾಧಾರವಾಗದು. ಸರ್ವೆ ಸ್ಕೂಲ್, ವ್ಯವಸಾಯ ತರಬೇತು, ಜೇನು ಸಾಕುವ ತರಬೇತು ಮೊದಲಾದವುಗಳಿಗೆ ಏರ್ಪಾಡಿದೆ. ಇದೆಲ್ಲಾ ಟೆಕ್ನಿಕಲ್ ಅಲ್ಲದಿದ್ದರೆ ಮತ್ತಾವುದು? ಮೈನರ್ ನೀರಾವರಿ ಯೋಜನೆಯ ಕೆಲಸ ವಿಳಂಬವಾಗಲು ಗ್ರಾಮಸ್ಥರ ತಕರಾರು ವಿರೋಧಗಳು ಮುಖ್ಯಕಾರಣವಾಗಿದೆ. ತನ್ನ ಜಾಗಕ್ಕಾಗಿ ನಾಲೆ ಬರಬಾರದು. ಮಣ್ಣು ತೆಗೆಯಬಾರದು. ಗಾಡಿ ರಸ್ತೆ ಹೋಗಬಾರದು ಎಂಬ ನೂರಾರು ತಕರಾರುಗಳಿರುತ್ತವೆ. ಪ್ರತೀ ಮನುಷ್ಯನು ತನ್ನ ಸ್ವಾರ್ಥವನ್ನು ಕೊಂಚ ಮಟ್ಟಿಗೆ ಕಡಿಮೆ ಮಾಡಿ ಬಹುಜನರ ಹಿತಕ್ಕೆ ತ್ಯಾಗ ಮಾಡಬೇಕು. ನಮ್ಮ ಕೊಡಗಿನಲ್ಲಿ ಕಳ್ಳ ಸಾರಾಯಿ ಕಾಸುವ ಪದ್ಧತಿ ಯಾವಾಗ ಇರಲಿಲ್ಲ? ಸಾರಾಯಿಗೆ ನಿಯಂತ್ರಣದ ಇಲ್ಲದಿದ್ದಾಗಲೂ ಇತ್ತು. ಮುಂದೆಯೂ ಇದು ಇರುವದು. ಈ ನಿಯಂತ್ರಣ ಫಲಾಫಲಗಳನ್ನು ಈಗ ನಿರ್ಣಯಿಸುವದಾಗುವದಿಲ್ಲ. ಆದರ ಕೆಲಸದ ವಿಚಾರದಲ್ಲಿ ನನಗೆ ತೃಪ್ತಿಯಿದೆ. ಬಡ ಜನರಿಗೆ ತುಂಬಾ ಹಿತವಾಗಿದೆ. ಮಜೂರರು ನಾಲ್ಕು ಕಾಸು ಉಳಿಸುವ ಸ್ಥಿತಿಯಲ್ಲಿದ್ದಾರೆ. ನಮ್ಮ ಪಾನನಿರೋಧ ಕ್ರಮವನ್ನು ಇತರ ರಾಜ್ಯಗಳು ಅನುಸರಿಸುವ ಯೋಚನೆಯಲ್ಲಿವೆ. ಹೇಗೂ ಸದಸ್ಯರ ಸಲಹೆ ಸೂಚನೆಗಳಿಗೆ ನನ್ನ ವಂದನೆಗಳು.

ಬೇತರಿ ಸೇತುವೆಯ ಶಂಕು ಸ್ಥಾಪನೆ.

ಎರಡುವರೆ ಲಕ್ಷ ರೂಪಾಯಿ ಯೋಜನೆ

ತಾರೀಕು ೨೯ ರಲ್ಲಿ ಕೊಡಗಿನ ಚೀಫ್ ಕಮಿಷನರಾದ ಬೇಡಿಯವರು ಬೇತರಿ ಸೇತುವೆಯ ಶಂಕುಸ್ಥಾಪನೆಯ ಸಮಾರಂಭವನ್ನು ನೆರವೇರಿಸಿದರು. ಮಂತ್ರಿಗಳೂ, ಸ್ಪೀಕರರೂ, ಎಂ. ಎಲ್. ಎ. ಗಳೂ ಸರಕಾರಿ ಉದ್ಯೋಗಿಗಳು, ಸುತ್ತುಮುತ್ತಲಿನ ಗ್ರಾಮದ ಜನರೂ ಹಾಜರಿದ್ದರು. ಕಾವೇರಿ ಪೂಜೆಯ ನಂತರ ಬೇಡಿಯವರು ಅಸ್ತಿಭಾರ ಕಲ್ಲನ್ನು ಹಾಕಿದರು. ಆ ಸಂದರ್ಭದಲ್ಲಿ ಭಾಷಣ ಮಾಡುತ್ತಾ ಈ ಕೆಲಸವನ್ನು ಪ್ರಾರಂಭಿಸಲು ೫೦ ವರ್ಷಗಳು ಹಿಡಿದಿವೆ. ಆದರೆ ಅದನ್ನು ಮುಗಿಸಲು ೫೦ ವರ್ಷ ತೆಗೆದುಕೊಳ್ಳಬಾರದು. ಈ ಪ್ರಾಮುಖ್ಯ ಸೇತುವೆಯ ಕೆಲಸವು ಶೀಘ್ರವಾಗಿ ನಡೆದು ಜನರ ಉಪಯೋಗಕ್ಕೆ ಬರಲಿ ಎಂದು ಹೇಳಿದರು.

ಮಂತ್ರಿಗಳಾದ ಶ್ರೀ. ಮಲ್ಲಪ್ಪನವರು ಮಾತಾಡುತ್ತಾ ಕೊಡಗಿನ ರಸ್ತೆಗಳನ್ನು ಸರಿಗೊಳಿಸಿ, ಅವಶ್ಯಕ ಸೇತುವೆಗಳನ್ನು ಕಟ್ಟಿಸಿ ವಹಿವಾಟಿಗೆ ಅನುಕೂಲತೆ ಮಾಡುವದೇ ಸರಕಾರದ ಗುರಿಯೆಂದೂ ಪ್ರತಿ ವರ್ಷ ಸುಮಾರು ೪೦ ಮೈಲುಗಳ ವರೆಗೆ ರಸ್ತೆಗೆ ತಾರು ಹಾಕಿಸಿ ಕೊಡಗಿನ ರಸ್ತೆಗಳನ್ನು ಉತ್ತಮಸ್ಥಿತಿಗೆ ತರಲಾಗುವದೆಂದೂ ಈ ದೃಷ್ಟಿಯಿಂದಲೇ ಪ್ರಾಂತೀಯ ರಸ್ತೆಗಳಿಗಾಗಿ ೧೦ ಲಕ್ಷ, ಗ್ರಾಮಾಂತರ ರಸ್ತೆಗಳಿಗಾಗಿ ೩ ಲಕ್ಷ ರೂಪಾಯಿ ಹಣವಿಡಲಾಗಿದೆಯೆಂದೂ ಹೇಳಿದರು. ಮುಂದರಿಯುತ್ತಾ ಇಂಥಾ ಕೆಲಸಗಳಲ್ಲಿ ಸರಕಾರದ ಮುಂದಿರುವ ತೊಂದರೆಗಳೆಂದರೆ ಯೋಗ್ಯ ಕಂಟ್ರಾಕ್ಟರರು ದೊರೆಯದಿರುವದು, ಕೊಡಗಿನ ಮಳೆಗಾಲ ಮೊದಲಾದವು ಎಂದರು. ಹೇಗೂ ಇಂದಿನಿಂದ ಪ್ರಾರಂಭವಾಗುವ ಈ ಸೇತುವೆಯ ಕೆಲಸವನ್ನು ೧೯೫೫ ನೇ ಮೇ ಅಂತ್ಯದೊಳಗೆ ಪೂರೈಸಿ ವಹಿವಾಟಿಗೆ ತೆರೆಯಲಾಗುವದೆಂದು ಹೇಳಿದರು.

ಕೇಂದ್ರ ಪಿ. ಡಬ್ಲ್ಯು. ಡಿ. ಇಲಾಖೆಯ ಇಂಜನಿಯರಾದ ಶ್ರೀ. ಅಭಯಂಕರರವರು ವರದಿಯೊಂದನ್ನು ಒಪ್ಪಿಸುತ್ತಾ ಈ ಬೇತರಿ ಸೇತುವೆಯ ಕೆಲಸವನ್ನು ೧೯೦೭ ರಲ್ಲೇ ಸೂಚಿಸಲಾಗಿದ್ದರೂ ಅದನ್ನು ಕೈಕೊಳ್ಳಲು ಸುಮಾರು ಅರ್ಧ ಶತಮಾನ ಕಳೆದು ಹೋಯಿತೆಂದೂ ಈ ಕೆಲಸದ ಜವಾಬ್ದಾರಿ ತನ್ನ ಕೈಗೆ ಬಂದಿರುವದೆಂದೂ ಇದನ್ನು ಬರುವ ವರ್ಷದ ಮಳೆಗಾಲದೊಳಗೆ ಪೂರೈಸಲಾಗುವದೆಂದೂ ನಂತರ ಕೊಟ್ಟಮುಡಿ, ಹರದೂರು ಸೇತುವೆಗಳನ್ನು ಕೈಕೊಳ್ಳಲಾಗುವದೆಂದೂ ಈ ಬೇತರಿ ಸೇತುವೆಯು ಎತ್ತರ ಮಟ್ಟದ ನೀರು ಮೇಲೆ ಹಾಯುವ ಅನುಕೂಲತೆಯ ಸೇತುವೆಯಾಗುವದೆಂದೂ ತುಂಬಾ ನೀರು ಬಂದಾಗ ನೀರು ಮೇಲ್ಗಡೆಯಿಂದ ಹೋಗಲು ಅನುವಾಗುವಂತೆ ಮಾಡಲಾಗುವದೆಂದೂ ಈ ಸೇತುವೆಗೆ ರೂ. ೨,೪೬,೦೦೦ ಖರ್ಚಾಗುವದೆಂದೂ ಹೇಳಿದರು.

ಶಾಸನ ಸಭೆಯ ಸ್ಥಳೀಯ ಸದಸ್ಯರಾದ ಶ್ರೀ ಚೌರಿರ ಮಂದಣ್ಣನವರು ವಂದನೆಗನ್ನರ್ಪಿಸಿದರು.

ನೋಟೀಸು.

ಅಖಿಲ ಕೊಡಗು ವಿದ್ಯಾನಿಧಿಗೆ ಹಣ ಶೇಖರಿಸುವ ಕಾರಣಕ್ಕಾಗಿ ನಿಧಿಯ ಖಚೇರಿಯಿಂದ ಸುಮಾರು ಮುನ್ನೂರು ಜನರು ರಶೀತಿ ಪುಸ್ತಕಗಳನ್ನು ಹೊಂದಿಕೊಂಡಿರುತ್ತಾರೆ. ಈ ಪುಸ್ತಕಗಳನ್ನು ಹೊಂದಿಕೊಂಡು ಎರಡು ವರ್ಷಗಳಾದರೂ ಬಹು ಜನರು ತಾವು ಸಂಗ್ರಹಿಸಿದ ಹಣದ ಲೆಕ್ಕವನ್ನಾಗಲೀ ಯಾ ರಶೀತಿ ಪುಸ್ತಕವನ್ನಾಗಲಿ ಸಂಘದ ಖಚೇರಿಗೆ ತಲಪಿಸದಿರುವದು ವಿಷಾದಕರ. ಪುಸ್ತಕ ಪಡೆದುಕೊಂಡವರು ಏಪ್ರಿಲ್ ತಾ. ೧೫ರೊಳಗೆ ಸಂಗ್ರಹಿಸಿದ ಹಣ ಮತ್ತು ಪುಸ್ತಕಗಳನ್ನು ಸಂಘದ ಖಚೇರಿಗೆ ಹಾಜರು ಮಾಡಬೇಕೆಂದು ಈ ಮೂಲಕ ತಿಳುವಳಿಕೆ ಕೊಡಲಾಗಿದೆ. ಹಣ ಸಂಗ್ರಹಿಸದೆ ಪುಸ್ತಕ ಹಾಗೆ ಇಟ್ಟುಕೊಂಡವರು ಖಾಲಿ ಪುಸ್ತಕಗಳನ್ನು ಆ ತಾರೀಖಿನೊಳಗೆ ಕಳುಹಿಸಬೇಕು. ಪುಸ್ತಕಗಳನ್ನು ವಾಪಾಸು ಮಾಡದಿದ್ದರೆ ಅವುಗಳ ವಸೂಲಾತಿ ಬಗ್ಗೆ ಬೇರೆ ಕ್ರಮ ಕೈಕೊಳ್ಳಬೇಕಾಗುವದೆಂದು ಈ ಮೂಲಕ ಶ್ರುತಪಡಿಸಲಾಗಿದೆ.

ಅಲ್ಲದೆ ವಿದ್ಯಾನಿಧಿಯಿಂದ ಸಾಲ ತೆಗೆದುಕೊಂಡು ಈಗ ಸಂಪಾದನೆ ಮಾಡುತ್ತಿರುವವರಿಗೆ ಹಣ ಮರುಪಾವತಿ ಮಾಡಲು ಕಾಗದ ಬರೆದು, ರಿಜಿಸ್ಟರು ನೋಟೀಸು ಕೊಟ್ಟು ಪ್ರಯತ್ನಿಸಿದ ಫಲವಾಗಿ ಹಲವರು ಪಾವತಿ ಮಾಡುತ್ತಿದ್ದಾರೆ. ಆದರೆ ಕೆಲವರು ಈ ಕಡೆ ಗಮನವಿತ್ತಿರುವದಿಲ್ಲ. ಅಂಥಾವರು ಏಪ್ರಿಲ್ ತಾ. ೧೫ ರೊಳಗೆ ತಮ್ಮ ಬಾಕಿಯನ್ನು ಪಾವತಿ ಮಾಡಬೇಕೆಂಬುದು ಆಗ್ರಹ ಪೂರ್ವಕ ಕೇಳಿಕೊಳ್ಳಲಾಗಿದೆ. ಆ ತಾರೀಖಿನೊಳಗೆ ಹಣ ಬಾರದಿದ್ದರೆ ತಕ್ಕ ಕ್ರಮ ಜರಗಿಸಲಾಗುವದು.

ಸಿ. ಡಿ. ಅಪ್ಪಯ್ಯ
ಕಾರ್ಯದರ್ಶಿ.
ಕೊಡಗು ವಿದ್ಯಾನಿಧಿ ಆಫೀಸು
4-3 ಮಡಿಕೇರಿ.

ಬಜೆಟ್ ಟೀಕೆಗಳಿಗೆ ಗೃಹ ಮಂತ್ರಿಗಳ ಉತ್ತರ.

ಸ್ಪೈನರ್ ಇರಿಗೇಶನ್ ವಿಚಾರದಲ್ಲಿ ಸರಕಾರಕ್ಕೆ ಒಂದು ನಿಶ್ಚಿತ ಯೋಜನೆ ಇಲ್ಲವೆಂದು ಶ್ರೀ. ಕೆ. ಪಿ. ಕರುಂಬಯ್ಯನವರೆಂದರು. ಸರಕಾರವು ಮೂರು ವರ್ಷಗಳ ಯೋಜನೆಯೊಂದನ್ನು ಮಾಡಿ ಅದರಂತೆ ಕೆಲಸ ನಡೆಸುತ್ತಿದೆ. ಈ ಮೂರು ವರ್ಷಗಳಲ್ಲಿ ಈ ಸ್ಪೈನರ್ ನೀರಾವರಿ ಯೋಜನೆಗಳನ್ನು ಪೂರೈಸಬೇಕೆಂಬುದು ಸರಕಾರದ ಆಶೆ. ಲಕ್ಷ್ಮಣ ಮತ್ತು ಹಾರಂಗಿ ಯೋಜನೆಗಳನ್ನು ಕೈಕೊಳ್ಳುವದು ನಮ್ಮಿಂದಾಗಲಿಲ್ಲ. ಲಕ್ಷ್ಮಣ ತೀರ್ಥ ಆಣೆಕಟ್ಟು ಕಟ್ಟುವದು ಅಸಾಧ್ಯವೆಂದೇ ತೋರುತ್ತದೆ

ಗೃಹ ಮಂತ್ರಿ ಶ್ರೀ ಮಲ್ಲಪ್ಪನವರು.

ಆ ನದಿಯ ತಡಿಯು ಕೇವಲ ಮರಳಿನಿಂದ ಕೂಡಿದ್ದು ಸುಮಾರು ೩೦ ಅಡಿಗಳ ಆಳದವರೆಗೂ ಮರಳೇ ಇರುವದು. ಮಳೆಗಾಲದಲ್ಲಿ ಬಹು ದೊಡ್ಡ ಪ್ರವಾಹ ಬಂದು ಕಟ್ಟೆ ಕಟ್ಟಿದರೆ ಅಪಾಯವಿದೆಯಲ್ಲದೆ ಅದು ಶಾಶ್ವತವಾಗಲಾರದು. ಆದ್ದರಿಂದ ಈ ನದಿಗು ಇಕ್ಕಡೆಯಲ್ಲಿರುವ ವ್ಯವಸಾಯಗಾರರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪಂಪುಗಳನ್ನು ಒದಗಿಸಿ ನೀರಾವರಿ ಸಹಾಯ ಮಾಡಲಾಗುವದು. ಲಕ್ಷಾಂತರ ರೂಪಾಯಿಗಳ ಖರ್ಚಿನಿಂದ ಅಣೆಕಟ್ಟು ಕಟ್ಟುವದಕ್ಕಿಂಥಾ ಪಂಪುಗಳ ಸರಬರಾಯಿಯು ಕಡಿಮೆ ಖರ್ಚಿನದು. ಕೊಲ್ಲಿ ತೋಡಿನ ಸಮಸ್ಯೆ ಬಗೆಹರಿದಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಲಕ್ಷ್ಮಣ ತೀರ್ಥ ಹೊಳೆಯಲ್ಲಿಯ ಡೊಂಕು ಹಾಗೂ ತಡಿಯ ಎತ್ತರವೇ ಆಗಿದೆ. ಅದನ್ನು ಪರಿಶೀಲಿಸಿ ನದಿಯನ್ನು ನೆಟ್ಟಗೆ ತಿದ್ದಿ ಕೊಲ್ಲಿ ತೋಡಿನ ತೊಂದರೆಯನ್ನು ನಿವಾರಿಸುವ ಪ್ರಯತ್ನ ನಡೆದಿದೆ. ಈ ವಿಚಾರದಲ್ಲಿ ಪರಿಶೀಲನೆ ನಡೆದು ಮೋಡೆಲಿಗಾಗಿ ಕೃಷ್ಣರಾಜಸಾಗರದ ಹೈಡ್ರಾಲಿಕ್ ಪರಿಶೋಧನಾ ಕೇಂದ್ರಕ್ಕೆ ಕಳುಹಿಸಲಾಗಿದೆ. ಹಾರಂಗಿ ಯೋಜನೆಯ ಬಗ್ಗೆ ಪರಿಶೀಲನೆ ನಡೆದಿದೆ. ಮೈಸೂರು ಸರಕಾರವೂ ಈ ಯೋಜನೆಯಲ್ಲಿ ಆಸಕ್ತಿ ತೋರಿರುವದರಿಂದ ಎರಡು ಸರಕಾರಗಳು ಸೇರಿ ಈ ಯೋಜನೆಯನ್ನು ಕೈಕೊಳ್ಳಲಾಗುವದು. ಬೆಕ್ಕೆಸೊಡ್ಲೂರು ಗ್ರಾಮಕ್ಕೆ ಕಟ್ಟೆಯ ಅಗತ್ಯವಿಲ್ಲ. ಈ ಗ್ರಾಮದ ಜನರಿಗೆ ಪಂಪುಗಳನ್ನು ಈ ವರ್ಷ ಒದಗಿಸಲಾಗುವದರಿಂದ ಅವರ ತೊಂದರೆ ನೀಗುವದು. ಜನಗೂರು ಕಟ್ಟೆಯ ತಳಹದಿ ಹಾಕಿದ್ದು ಸರಿಯಾಗಿಲ್ಲದೆ ನೀರು ಸೋರುವ ಕಾರಣ ಈ ವರ್ಷ ಅದನ್ನು ಶೀಘ್ರ ಸರಿಪಡಿಸಿಕೊಡಲಾಗುವದು. ಇದಲ್ಲದೆ ಈ ಕಟ್ಟೆಗೂ ಮೇಲೆ ಮತ್ತೊಂದು ಕಟ್ಟೆಯ ಏರ್ಪಾಡು ಮಾಡಲಾಗುವದು. ಈ ವರ್ಷದ ಮಟ್ಟಿಗೆ ಇಷ್ಟರಿಂದ ಆ ಭಾಗದ ಜನರು ತೃಪ್ತಿಪಟ್ಟುಕೊಳ್ಳುವರೆಂದು ನಂಬುವೆನು.

ಜೈಲಿನ ಸ್ಥಿತಿಯನ್ನು ಸುಧಾರಿಸಬೇಕೆಂದು ಕೆಲವರು ಸೂಚಿಸಿದರು. ಮಾನ್ಯ ಸದಸ್ಯರು ಜೈಲನ್ನು ಒಮ್ಮೆ ಸಂದರ್ಶಿಸಬೇಕೆಂದು ನಾನು ಸೂಚಿಸುತ್ತೇನೆ. ಈಗ ಜೈಲಿನಲ್ಲಿ ಪ್ರಿಂಟಿಂಗ್ ವ್ಯವಸ್ಥೆ, ಕೋಳಿ ಸಾಕುವ ಉದ್ಯಮ ಮೊದಲಾದುವನ್ನು ಕೈಕೊಳ್ಳಲಾಗಿದೆ. ಕೈದಿಗಳನ್ನು ಯೋಗ್ಯ ನಾಗರಿಕರಾಗಿ ಪರಿವರ್ತಿಸುವದೇ ಗುರಿಯಾಗಿದೆ. ಪೋಲೀಸು ಇಲಾಖೆಯಲ್ಲಿ ಕಾನ್ಸ್ಟೇಬಲ್‌ಗಳ ನಿವಾಸಗಳನ್ನು ಉತ್ತಮಗೊಳಿಸಲಿಕ್ಕಾಗಿ ರೂ. ೫೦೦೦೦ ವೆಚ್ಚ ಮಾಡಲಾಗುವದು. ಸಾಧ್ಯವಾದ ಕಡೆಗಳಲ್ಲೆಲ್ಲಾ ಶಿಶುವಿಹಾರಗಳ ರೀತಿಯ 'ಫೀಡರ್' ಶಾಲೆಗಳನ್ನು ತೆರೆಯುವ ಪ್ರಯತ್ನಕ್ಕೆ ಸಹಾಯ ಕೊಡಲಾಗುವದು. ಸರಕಾರವು ಇಂಥಾ ಶಾಲೆಗಳಿಗೆ ಮಾಸಿಕ ರೂ. ೪೦ ರಂತೆ ವಂತಿಗೆ ಕೊಡಲು ತಯಾರಿದೆ. ಇದನ್ನು ಸಾಧಿಸಿಕೊಂಡು ಇಂಥಾ ಶಾಲೆಗಳನ್ನು ತೆರೆಯಲು ಜನರು ಮುಂದೆ ಬರಬೇಕಿದೆ. ಪೊನ್ನಂಪೇಟೆಯ ಹೈಸ್ಕೂಲಿನ ವಿದ್ಯಾರ್ಥಿ ನಿವಾಸ ಗೃಹದ ಸ್ಥಿತಿಯು ಆದರ್ಶವಾಗಿರದಿದ್ದರೂ ಹಾಳಾಗಿಲ್ಲ. ಅದಕ್ಕಿಂತಲೂ ಹಾಳಾದ ಸ್ಥಿತಿಯಲ್ಲಿ ವೀರಾಜಪೇಟೆಯ ಹೈಸ್ಕೂಲಿನ ನಿವಾಸ ಗೃಹವಿರುವದರಿಂದ ಈ ವರ್ಷ ಅದರ ಕೆಲಸ ಕೈಕೊಳ್ಳಲಾಗುವದು. ಅದರ ನಂತರ ಪೊನ್ನಂಪೇಟೆಗೆ ಗಮನವಿಡಲಾಗುವದು. ಕೆಲವು ಸದಸ್ಯರು ಸೂಚಿಸಿದಂತೆ ತಿಂಗಳಿಗೊಮ್ಮೆಯಂತೆ ಶಾಲಾ ವಿದ್ಯಾರ್ಥಿಗಳನ್ನು ಡಾಕ್ಟರರು ಪರಿಶೀಲಿಸುವಂತೆ ಏರ್ಪಡಿಸುವದು ಕಷ್ಟ. ಕೊಡಗಿನಲ್ಲಿ ೬೦,೦೦೦ ವಿದ್ಯಾರ್ಥಿಗಳಿದ್ದಾರೆ. ಎಲ್ಲರನ್ನೂ ತಿಂಗಳಿಗೊಮ್ಮೆ ಪರಿಶೀಲಿಸುವದೆಂದರೆ ಬಹು ಹೆಚ್ಚಿನ ಸಂಖ್ಯೆಯಲ್ಲಿ ಡಾಕ್ಟರರು ಬೇಕು. ಆದರೂ ಆರೋಗ್ಯ ಅಧಿಕಾರಿ, ಸಿವಿಲ್ ಸರ್ಜನ್ ಡಾಕ್ಟರುಗಳು ಸಾಧ್ಯವಾದಾಗಲೆಲ್ಲಾ ಶಾಲೆಗಳನ್ನು ಸಂದರ್ಶಿಸಿ ಮಕ್ಕಳನ್ನು ಪರಿಶೀಲಿಸುವ ಏರ್ಪಾಡು ಮಾಡಲಾಗುವದು. ಒಂದನೇ ಫಾರಮಿನ ಹರಿಜನ ಮತ್ತು ದಲಿತವರ್ಗದ ಬಾಲಕರನ್ನೆಲ್ಲಾ ಸಾರ್ವಜನಿಕ ವಿದ್ಯಾರ್ಥಿ ನಿವಾಸಗಳಿಗೆ ಮುಫತ್ತಾಗಿ ಸೇರಿಸುವ ಸೂಚನೆಯನ್ನು ಒಪ್ಪಲಾಗುವದಿಲ್ಲ. ಹರಿಜನ ಬಾಲಕರ ವಿದ್ಯೆಯ ಎಲ್ಲ ಖರ್ಚನ್ನು ಈಗ ಸರಕಾರವೇ ಕಂಡುಕೊಳ್ಳುತ್ತಿದೆ. ವೈದ್ಯ ಇಲಾಖೆಯ ಡಾಕ್ಟರುಗಳ ವೇತನವನ್ನು ಪೇ ಕಮಿಷನ್ ಮೇರೆ ನಿಶ್ಚಯಿಸಲಾಗುವದು. ಈ ವರ್ಷ ಮಡಿಕೇರಿ ಮತ್ತು ವೀರಾಜಪೇಟೆ ಕ್ಷಯರೋಗ ವಾರ್ಡುಗಳನ್ನು ಬಡಾವಣೆ ಮಾಡಲಾಗುವದು. ಬಿ. ಸಿ. ಜಿ. ದಾಕು ಹಾಕುವ ಕ್ರಮವನ್ನು ಕೈಗೊಂಡು ೨೦ ವಯಸ್ಸಿನ ಒಳಗಿನ ಎಲ್ಲರನ್ನೂ ಪ್ರಥಮವಾಗಿ ಕ್ಷಯರೋಗದಿಂದ ರಕ್ಷಿಸಲಾಗುವದು. ಮಲೇರಿಯಾ ಕಾಯಿಲೆ ನಿವಾರಣೆಯಾಗಿ ಕೊಡಗು ಸುಖವಾಗಿದೆ. ಡಿ. ಡಿ. ಟಿ. ಮದ್ದು ಈಗ ಹಿಂದಿನಂತೆ ಪರಿಣಾಮಕಾರಿಯಲ್ಲವೆಂಬುದನ್ನು ಒಪ್ಪಲಾಗುವದಿಲ್ಲ. ಪರಿಣಾಮಕಾರಿಯಾಗಿದೆಯೆಂಬುದಕ್ಕೆ ಮಲೇರಿಯಾ ಹೆಚ್ಚದಿರುವದೇ ನಿದರ್ಶನ. ಪಿ. ಡಬ್ಲ್ಯು. ಡಿ. ಯನ್ನು ಸ್ಥಳೀಯ ಸರಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯವಾಗಿದೆ. ಕೇಂದ್ರದ ಹಿಡಿತದಲ್ಲಿರುವದರಿಂದ ಕೆಲಸದ ಮಟ್ಟಿಗೆ ಬಹಳ ಅಡಚಣೆ ಆಗುತ್ತಿದೆ. ನಮ್ಮ ಹಿಡಿತಕ್ಕೆ ಈ ಇಲಾಖೆಯನ್ನು ತಾರದಿದ್ದರೆ ನಿಶ್ಚಯಿಸಿದ ಕೆಲಸವನ್ನು ಸಕಾಲದಲ್ಲಿ ಕೈಕೊಳ್ಳುವದು ಪ್ರಯಾಸವಾಗುವದು. ಈ ವರ್ಷ ಬೇತರಿ ಸೇತುವೆಯ ಕೆಲಸ ಕೈಕೊಳ್ಳಲಾಗುವದು. ಬರುವ ವರ್ಷ ಕೊಟ್ಟಮುಡಿ ಮತ್ತು ಹರ್ಮಾರು ಸೇತುವೆಗಳ ಕೆಲಸ ಕೈಕೊಳ್ಳಲಾಗುವದು. ಹೇಗೂ ನಾವು ಹೊಂದಿರುವ ಅಧಿಕಾರವನ್ನು ಬಿಡುವ ಮೊದಲು ಈ ಸೇತುವೆಗಳನ್ನು ಪೂರೈಸುವದು ಖಂಡಿತ.

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-8 **PATTU BROTHERS,**

Opp.— Town Hall, MYSORE.

The New Guardian of India Life Insurance co., Ltd.,

— HEAD OFFICE —

Post Box No.—142 Esplanade, MADRAS—1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT.

The New Gaurdian of India Life Insurance Co., Ltd. for COORG. Virajpet.

12-11 OR

To The Head Office, MADRAS.

Licence No. 60.
Licenced to Post without Prepayment

Reg. No. M. 1550.
"KODAGU" *MERCARA (Coorg)*

೩—೪—೧೯೫೩

ಕೊಡಗಿನಲ್ಲಿ ಜಪಾನೀ ಕ್ರಮದಲ್ಲಿ ಬತ್ತ ಬೆಳೆಯುವ ಪ್ರಚಾರದ ಉದ್ಘಾಟನೆ

ಕ್ರಾಪ್ ಕಾಂಪಿಟಿಷನ್ ಬಹುಮಾನಗಳು.

ತಾರೀಕು ೨೬ ರಲ್ಲಿ ಬೆಳಿಗ್ಗೆ ೧೦ ಗಂಟೆಗೆ ಶಾಸನ ಸಭಾಂಗಣದಲ್ಲಿ ಈ ಸಮಾರಂಭವು ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯಿತು. ಕೊಡಗಿನ ವ್ಯವಸಾಯ ಅಧಿಕಾರಿಗಳು ಎಲ್ಲರನ್ನೂ ಸ್ವಾಗತಿಸಿ ಕೊಡಗಿನಲ್ಲಿ ಅನುಸರಿಸುತ್ತಿರುವ ಪದ್ಧತಿಗೂ ಜಪಾನು ಪದ್ಧತಿಗೂ ಹೆಚ್ಚು ವ್ಯತ್ಯಾಸವಿಲ್ಲವೆಂದು ಆದರೂ ನಮ್ಮ ಪದ್ಧತಿಯನ್ನು ಇನ್ನೂ ಅಭಿವೃದ್ಧಿಗೊಳಿಸಲು ಆಸ್ಪದವಿದೆಯೆಂದೂ ಜಪಾನಿನಲ್ಲಿ ಪ್ರತಿಯೊಬ್ಬನ ಜಮೀನಿನ ವಿಸ್ತೀರ್ಣವು ಬಹಳ ಚಿಕ್ಕದಿದ್ದು ಪ್ರತಿಯೊಬ್ಬ ವ್ಯವಸಾಯಗಾರನೂ ತನ್ನ ಭೂಮಿಯನ್ನು ಹೂವಿನ ತೋಟದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುವನೆಂದೂ ಜಪಾನಿನಲ್ಲಿ ವರ್ಷವಿಡೀ ಮಳೆ ಇರುವ ಕಾರಣ ಅಲ್ಲಿ ವ್ಯವಸಾಯವನ್ನು ವರ್ಷವಿಡೀ ಕೈಕೊಳ್ಳಬಹುದಾಗಿದೆಯೆಂದೂ ಜಪಾನಿನ ರೈತನು ಬಹು ಚುರುಕಿನ ಕೆಲಸಗಾರನೂ ಆಧುನಿಕ ವಿಧಾನದ ವ್ಯವಸಾಯದಲ್ಲಿ ಪೂರ್ಣ ವಿಶ್ವಾಸವಿರುವವನೂ ಆದ ಕಾರಣ ತನ್ನ ಪರಂಪರೆಯ ಹಳೆ ಪದ್ಧತಿಗಳನ್ನು ಬಿಟ್ಟು ಹೊಸ ವಿಧಾನಗಳನ್ನು ಅಲ್ಲಿಯ ವ್ಯವಸಾಯ ಅಧಿಕಾರಿಗಳ ಸೂಚನೆಯಂತೆ ಕೈಕೊಳ್ಳಲು ತಯಾರಿರುವನೆಂದೂ ಹೇಳಿದುದಲ್ಲದೆ ಜಪಾನರು ಅನುಸರಿಸುವ ವ್ಯವಸಾಯ ಕ್ರಮವನ್ನು ವಿವರಿಸಿದರು.

ಕೊಡಗಿನ ಮುಖ್ಯ ಮಂತ್ರಿಯವರು ಭಾಷಣ ಮಾಡುತ್ತಾ ಕೊಡಗಿನ ವ್ಯವಸಾಯಕ್ರಮವು ಸಾಧಾರಣ ತೃಪ್ತಿಕರವಿದ್ದರೂ ಅದರಲ್ಲಿ ಸುಧಾರಣೆಗೆ ಆಸ್ಪದವಿದೆ. ಕೊಡಗಿನ ಗ್ರಾಮಗಳಲ್ಲಿ ೫೦ ಗ್ರಾಮಗಳನ್ನು ಆರಿಸಿ ಅಲ್ಲಿ ಜಪಾನು ವ್ಯವಸಾಯ ಕ್ರಮದ ಪರಿಶೋಧನಾಲಯಗಳನ್ನು ತೆರೆದು ಜನರಿಗೆ ಬೋಧನೆ ಕೊಡಲಾಗುವದೆಂದೂ ಮತ್ತೆ ದೇಶದ ಉದ್ದಗಲಕ್ಕೂ ಈ ವಿಧಾನದಲ್ಲಿ ಪ್ರಖರವಾದ ಪ್ರಚಾರ ನಡೆಸಲಾಗುವದೆಂದೂ ಹೇಳಿದರು. ಗಾಂಧಿ ಸ್ಮಾರಕ ನಿಧಿಯ ಆಶ್ರಯದಲ್ಲಿ ಜಪಾನೀ ವ್ಯವಸಾಯಕ್ರಮವನ್ನು ಅಭ್ಯಾಸಮಾಡಿ ದೇಶದಲ್ಲಿ ಕಾರ್ಯತಃ ಮಾಡಿ ತೋರಿಸಿ ಪ್ರಚಾರ ಮಾಡುತ್ತಿರುವ ಕೆಲಸಗಾರರ ತಂಡವೊಂದು ಬರುವ ಮೇ ತಿಂಗಳಲ್ಲಿ ಕೊಡಗಿಗೆ ಬರಲಿರುವರೆಂದೂ ಅವರು ಕೊಡಗಿನಲ್ಲಿ ಎರಡು ದಿನಗಳ ವರೆಗೆ ಇದ್ದು ವಿವಿಧ ಭಾಗಗಳಲ್ಲಿ ಜಪಾನೀ ಕ್ರಮವನ್ನು ಕಾರ್ಯತಃ ಮಾಡಿ ಪ್ರದರ್ಶಿಸುವರೆಂದೂ ಹೇಳಿದರು

ಅಧ್ಯಕ್ಷರಾದ ಚೀಫ್ ಕಮಿಷನರು ಮಾತಾಡುತ್ತಾ ಜಪಾನ್ ಪದ್ಧತಿಯ ವ್ಯವಸಾಯವು ಅನುಕರಣೀಯವಾದುದು. ಹಿಂದೂದೇಶದ ಸರಾಸರಿ ಉತ್ಪತ್ತಿ ಜಗತ್ತಿನಲ್ಲಿ ಎಲ್ಲಾ ದೇಶಗಳಿಗಿಂಥಾ ಕಡಿಮೆಯಾಗಿದೆ. ಸ್ಪೆಯಿನಿನಲ್ಲಿ ಎಕರೆಗೆ ಸರಾಸರಿ ೪೦೦೦ ಪೌಂಡು, ಜಪಾನಿನಲ್ಲಿ ೩೭೦೦ ಪೌಂಡು, ಫ್ರಾನ್ಸಿನಲ್ಲಿ ೩೪೦೦ ಪೌಂಡು ಅಮೇರಿಕದಲ್ಲಿ ೨೨೦೦ ಪೌಂಡು, ಬ್ರೇಝಿಲಿನಲ್ಲಿ ೧೪೦೦ ಪೌಂಡು, ಬರ್ಮಾದಲ್ಲಿ ೧೧೯೦ ಪೌಂಡು ಬೆಳೆಯುತ್ತಿದ್ದರೆ ಹಿಂದೂದೇಶದಲ್ಲಿ ಕೇವಲ ೯೮೯ ಪೌಂಡು ಬೆಳೆಯುತ್ತಿದೆ. ಇದು ಖಂಡಿತವಾಗಿಯೂ ಸಾಲದು. ಕೊಡಗಿನಲ್ಲಿ ಸರಾಸರಿ ಎಕರೆಗೆ ೨೦೦೦ ಪೌಂಡು ಬೆಳೆಯುತ್ತಿದ್ದರೂ ಇದನ್ನು ಅಭಿವೃದ್ಧಿಗೊಳಿಸುವ ಆಸ್ಪದವಿದೆ. ಕೊಡಗಿನ ಮಣ್ಣು ಉತ್ತಮವಿದ್ದು ಯೋಗ್ಯ ಕ್ರಮವನ್ನು ಕೈಕೊಂಡರೆ ಅನಾಯಾಸವಾಗಿ ನಮ್ಮ ಉತ್ಪತ್ತಿಯನ್ನು ನಾಲ್ಕು ಪಟ್ಟು ಹೆಚ್ಚಿಸಬಹುದಾಗಿದೆ. ಇದಕ್ಕಾಗಿ ಪ್ರತಿಯೊಬ್ಬನು ಪ್ರಯತ್ನ ನಡೆಸಬೇಕು. ಜಪಾನರ ರೀತಿಯ ವ್ಯವಸಾಯ ಕ್ರಮದಲ್ಲಿ ಖರ್ಚು ಕಡಿಮೆ. ಬೀಜದ ಖರ್ಚು ಬಹು ಕಡಿಮೆ ಬೆಳೆಯೂ ಚೆನ್ನಾಗಿ ಬರುವದು. ಎಲ್ಲರೂ ಈ ಬಾಬಿನಲ್ಲಿ ಸಹಕರಿಸಿ ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಪ್ರಯತ್ನ ಮಾಡಬೇಕು ಎಂದು ಹೇಳಿದರು.

ಅಖಿಲ ಕೊಡಗು ಕ್ರಾಪ್ ಕಾಂಪಿಟಿಷನಿನ ಈ ವರ್ಷದ ಬಹುಮಾನಗಳ ವಿತರಣೆ ನಂತರ ನಡೆಯಿತು. ಕೊಡಗಿನ ವ್ಯವಸಾಯ ಅಧಿಕಾರಿಗಳು ಕ್ರಾಪ್ ಕಾಂಪಿಟಿಷನಿನ ವರದಿಯನ್ನು ಮುಂದಿಡುತ್ತಾ ಈ ವರ್ಷ ೨೫೫ ಜನರು ಸ್ಪರ್ಧೆಯಲ್ಲಿ ಭಾಗಿಗಳಾಗಿದ್ದರೆಂದೂ ಇವರಲ್ಲಿ ಸುಮಾರು ೧೦೦ ಜನರು ನಾಪೋಕ್ಲು ಮತ್ತು ವೀರಾಜಪೇಟೆಯ ಹೈಸ್ಕೂಲುಗಳ ವಿದ್ಯಾರ್ಥಿಗಳಾಗಿದ್ದರೆಂದೂ ಇದು ಈ ವರ್ಷದ ಸ್ಪರ್ಧೆಯ ನವೀನ ಅಂಶವೆಂದೂ ಹೇಳಿದರು. ಕಳೆದ ವರ್ಷ ಒಟ್ಟು ೪೫ ಜನರು ಸ್ಪರ್ಧಿಸಿದ್ದರು. ಕಳೆದ ವರ್ಷ ಸೋಮವಾರಪೇಟೆಯ ಆಲೂರು ಗ್ರಾಮದ ಶ್ರೀ ಸಂಗಯ್ಯನವರು ಎಕರೆಗೆ ೧೩,೧೫೦ ಪೌಂಡುಗಳನ್ನು ಬೆಳೆಸಿ ಅಖಿಲ ಕೊಡಗು ಹಾಗೂ ಅಖಿಲ ಭಾರತ ಬಹುಮಾನಗಳನ್ನು ಪಡೆದು ಕೃಷಿಪಂಡಿತ ಬಿರುದನ್ನು ಗಳಿಸಿದರು. ಆದರೆ ಈ ವರ್ಷ ಇದನ್ನು ಮೀರಿಸಿ ಪೊನ್ನಂಪೇಟೆನಾಡಿನ ಹಾತೂರು ಗ್ರಾಮದ ಶ್ರೀ ಕೊಕ್ಕಂಡ ಕಾರ್ಯಪ್ಪನವರು ಎಕರೆಗೆ ೧೩,೮೦೦ ಪೌಂಡು ಬೆಳೆಸಿದ್ದಾರೆ. ಇವರಿಗೆ ಕೊಡಗು ಸಂಸ್ಥಾನದ ಪ್ರಥಮ ಬಹುಮಾನವೂ ಇತರ ಬಹುಮಾನಗಳೂ ಸೇರಿ ರೂ. ೧೦೭೦/–ದೊರೆಯುವದು. ಎರಡನೆ ಬಹುಮಾನವಾದ ರೂ. ೬೭೦/– ದೇವಣಗೇರಿ ಗ್ರಾಮದ ಶ್ರೀ ಮಾಕೊಂಡ ನಾಣಯ್ಯನವರಿಗೆ ದೊರೆಯುವದು. ಇವರು ಎಕರೆಗೆ ೧೩,೦೬೨ ಪೌಂಡು ಬೆಳೆಸಿರುವರು. ಮೂರನೆ ಬಹುಮಾನವಾದ ರೂ. ೫೭೦/– ಉತ್ತರ ಕೊಡಗಿನ ಬಾಣಾವರ ಗ್ರಾಮದ ಶಿವಾಚಾರದ ನಂಜಪ್ಪನವರಿಗೆ ದೊರೆಯುವದು. ಇವರು ಎಕರೆಗೆ ೧೧,೭೦೦ ಪೌಂಡು ಬೆಳೆಸಿರುವರು ಎಂದು ಹೇಳಿದರು. ಮತ್ತೆ ಈ ವರ್ಷದ ಸ್ಪರ್ಧೆಯನ್ನು ವಿವರಿಸುತ್ತಾ ೧೧,೦೦೦ ಕ್ಕಿಂಥಾ ಹೆಚ್ಚು ಬೆಳೆಸಿದವರು ಹನ್ನೊಂದು ಜನರಿದ್ದರೆಂದೂ, ೮೦೦೦ ಕ್ಕಿಂಥಾ ಹೆಚ್ಚು ಬೆಳೆಸಿದವರ ಸಂಖ್ಯೆ ೮೩ ಇತ್ತೆಂದೂ ಹೇಳಿದರು. ಚೀಫ್ ಕಮಿಷನರು ಬಹುಮಾನಗಳನ್ನು ಕೊಟ್ಟರು

THE VIJAYA BANK, LIMITED,

ದಿ ವಿಜಯ ಬೇಂಕ್ ಲಿಮಿಟೆಡ್, ಮಡಿಕೇರಿ.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಮೂಲ ಧನ	ರೂ.	20,00,000
ತೆತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು. ರೂಪಾಯಿ ಹತ್ತು ಸಾವಿರವ ಮಿಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟ ನಡೆಸಲ್ಪಡುವುದು.

ಬಿ ಮಂಜಯ್ಯ ಹೆಗ್ಡೆ,
ಎಡ್ವೊಕೇಟ್.
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.
(ಮತ್ತು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರು)

12–7

ಮಡಿಕೇರಿ ಆಫೀಸಿನ ಏಜೆಂಟ್:—ಯಮ್. ಎಸ್. ಅ[illegible]

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0–8–0
ಸೇವಿಂಗ್ಸ್ (ತಾ. 1—1—1953 ರಿಂದ)	,,	1–8–0
ಸಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1–8–0
1 ವರುಷ	,,	2–0–0
2 ವರುಷ	,,	2–8–0
3 ವರುಷ	,,	3–0–0
5 ವರುಷ	,,	3–12–0
10 ವರುಷ	,,	4–0–0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್ ಸೋಮಯ್ಯ, ಗೌ. ಕಾರ್ಯದರ್ಶಿ.
ಕೆ. ಪಿ. ಅಪ್ಪಯ್ಯ. ಪ್ರೆಸಿಡೆಂಟ್ & ಖಜಾಂಚಿ.

Edited Printed and Published by P. I. BELLIAPPA at 'KODAGU' Press, Mercara for Kodagu Ltd.,

ಕೊಡಗು

ವಾರ್ಷಿಕ ಚಂದಾ ರೂ [illegible] | ಶುಕ್ರವಾರ
ಸಂಪುಟ ೩೧ | ಸಂಚಿಕೆ ೪೪ | ೧೦-೪-೧೯೫೩

KODAGU KANNADA WEEKLY MERCARA

ಬಡ್ಜೆಟ್ಟಿನ ಮೇಲೆ ಖೋತಾ ನಿರ್ಣಯಗಳು.

ನಾಡಾಫೀಸುಗಳಲ್ಲಿ ರಾಶಿ ಬಿದ್ದಿರುವ ಭೂಮಿ ಅರ್ಜಿಗಳನ್ನು ಶೀಘ್ರ ವಿಲೆವಾರಿ ಮಾಡುವ ಬಗ್ಗೆ ಹೆಚ್ಚಿನ ಸಿಬ್ಬಂದಿ ಕೊಡಬೇಕೆಂಬ ಶ್ರೀ ಹೆಚ್. ಟಿ. ಮುತ್ತಣ್ಣನವರ ಖೋತಾ ನಿರ್ಣಯವನ್ನು ಸರಕಾರವು ಹಾಗೆ ಮಾಡುವದೆಂದು ಭರವಸೆ ಕೊಟ್ಟ ಮೇರೆ ಹಿಂತೆಗೆಯಲಾಯಿತು.

ಭೂಮಿ ಕೊಡಲ್ಪಟ್ಟವರು ವ್ಯವಸಾಯ ಕೈಕೊಳ್ಳಲು ಅನುವಾಗುವಂತೆ ಅದರ ಪಟ್ಟೆ ವರ್ಗಾಯಿಸಬೇಕೆಂಬ ಶ್ರೀ ಜಿ. ಎಂ. ಲಿಂಗರಾಜಯ್ಯನವರ ಠರಾವು ಸರಕಾರಿ ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಹರಿಜನರು ಮತ್ತು ಇತರ ಬಡವರಿಗೆ ಮನೆ ಕಟ್ಟಿಕೊಳ್ಳಲು ಮರ ಮತ್ತು ಬಿದಿರು ಮುಫತ್ತು ಕೊಡಬೇಕೆಂಬ ಒಂದೇ ರೀತಿಯ ಠರಾವುಗಳನ್ನು ಶ್ರೀ ಜಿ. ಲಿಂಗರಾಜಯ್ಯ ಮತ್ತು ಪಿ ಕೆ. ಚೆನ್ನಯ್ಯನವರು ಕಳುಹಿಸಿದ್ದರು. ಹಾಗೆ ಮಾಡುತ್ತಿರುವದಾಗಿ ಈ ಮೊದಲೇ ಸರಕಾರಿ ವಿವರಣೆ ಕೊಟ್ಟದ್ದರಿಂದ ಠರಾವುಗಳು ಸೂಚಿಸಲ್ಪಡಲಿಲ್ಲ.

ನಂಜರಾಯಪಟ್ಟಣ ತಾಲ್ಲೋಕಿನ ಪ್ರತಿ ನೂರು ಬಟ್ಟೆ ಭೂಮಿ ಇರುವ ರೈತನಿಗೆ ಮೂರು ಎಕರೆ ಬಾಣೆ ಕೊಡಿಸಬೇಕೆಂಬ ಠರಾವನ್ನು ಆಲೋಚಿಸಲಾಗುವದೆಂಬ ಸರಕಾರಿ ಭರವಸೆಯಿಂದ ಶ್ರೀ ಹೆಚ್. ಟಿ. ಮುತ್ತಣ್ಣನವರು ಹಿಂತೆಗೆದುಕೊಂಡರು.

ಹರಿ ಜನರು ಮತ್ತು ಹಿಂದುಳಿದವರಿಗೆ ಸೈಸಾರಿಯಿಂದ ತರಿ ವ್ಯವಸಾಯಕ್ಕೆ ನೂರು ಏಕರೆಯಂತೆ ಜಾಗ ಕೊಡಬೇಕೆಂಬ ಠರಾವನ್ನು ಶ್ರೀ ಪಿ ಕೆ. ಚೆನ್ನಯ್ಯನವರು ಆ ರೀತಿ ಅನುಕೂಲತೆ ಇದೆಯೆಂದು ತಿಳಿದನಂತರ ಹಿಂತೆಗೆದುಕೊಂಡರು.

ವ್ಯವಸಾಯ ಮಾಡದ ಬಾಣೆ ಜಾಗದ ಮೇಲೆ ಕಂದಾಯ ಹಾಕಕೂಡದೆಂಬ ಠರಾವನ್ನು ಅದೇ ರೀತಿಯ ಠರಾವು ಬೇರೊಂದು ಇದ್ದ ಕಾರಣ ಶ್ರೀ ಕೆ. ಕೆ. ಗಣಪತಿಯವರು ಹಿಂತೆಗೆದರು.

ಕೊಡಗಿನಲ್ಲಿರುವ ಮಠಗಳ ಕೆಲಸ ಕಾರ್ಯಗಳನ್ನು ಪರಿಶೀಲಿಸಲು ಒಂದು ಸಮಿತಿಯನ್ನು ನೇಮಿಸಬೇಕೆಂಬ ಶ್ರೀ ಪಿ. ಸಿ. ಉತ್ತಯ್ಯನವರ ಠರಾವನ್ನು ಅಂಥಾ ಸಮಿತಿಯೊಂದನ್ನು ನೇಮಿಸಲಾಗಿದೆಯೆಂಬ ಕಾರಣ ವಾಪಾಸು ತೆಗೆದುಕೊಂಡರು.

ಕೊಡಗು ಫಾರೆಸ್ಟ್ ಇಲಾಖೆಯ ಕೆಲಸ ಕಾರ್ಯಗಳನ್ನು ಪರಿಶೀಲಿಸಲು ಸಂಬಂಧಿಸಿದ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಈ ಸಭೆಯ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಬೇಕೆಂಬ ಠರಾವನ್ನು ಶ್ರೀ ಕೆ. ಕೆ. ಗಣಪತಿಯವರು ಸೂಚಿಸಿ ಸೌದೆಯ ಹೆಸರಿನಲ್ಲಿ ಮರದ ಕಳ್ಳ ವ್ಯಾಪಾರವಾಗುತ್ತಿದೆಯೆಂದೂ, ಮರಗಳನ್ನು ಡಿಪೋಕ್ಕೆ ಸಾಗಿಸಿದ ಖರ್ಚಿಗಿಂತಲೂ ಕಡಿಮೆ ಬೆಲೆಯಲ್ಲಿ ಮರ ಮಾರಾಟವಾಗಿದೆಯೆಂದೂ, ಇಲಾಖೆಯು ಅನುಸರಿಸುತ್ತಿರುವ ರೀಜನರೇಶನ್ ನೀತಿ ಸರಿಯಲ್ಲವೆಂಯೂ ಹೇಳಿದರು. ಮಂತ್ರಿಗಳು ಉತ್ತರವೀಯುತ್ತಾ ಅಂಥಾ ದೊಡ್ಡ ಅವ್ಯವಸ್ಥೆ ಇಲಾಖೆಯಲ್ಲಿ ಇಲ್ಲವೆಂದೂ ಚಿಕ್ಕ ತಪ್ಪುಗಳಿರಬಹುದಾದರೂ ಅವನ್ನು ಉತ್ಪ್ರೇಕ್ಷೆ ಮಾಡುವದು ಸರಿಯಲ್ಲವೆಂದೂ ಮರದ ಕಳ್ಳವ್ಯಾಪಾರವಾಗುತ್ತಿದೆಯೆಂಬುದು ನಿಜವೆಂದೂ ಸಮಿತಿಯ ಆವಶ್ಯಕತೆ ಇಲ್ಲವೆಂದೂ, ಹಾಗೆ ನ್ಯೂನತೆಗಳಿದ್ದರೆ ನೇರವಾಗಿ ತನಗೆ ತಿಳಿಸಿದರೆ ಅದನ್ನು ಪರಿಹರಿಸಲು ತಾನು ಸದಾ ಸಿದ್ಧನಿರುವದಾಗಿಯೂ ಹೇಳಿದರು. ಸೂಚಕರಾದ ಶ್ರೀ ಕೆ. ಕೆ. ಗಣಪತಿಯವರು ಠರಾವನ್ನು ಹಿಂತೆಗೆದುಕೊಳ್ಳುವೆನೆಂದರು. ಆಸ್ಟರಲ್ಲಿ ಠರಾವನ್ನು ಓಟಿಗೆ ಹಾಕಲೇ ಬೇಕೆಂದು ಶ್ರೀ ಸಿ. ಎ. ಮುಂಡಣ್ಣನವರು ಹೇಳಿದ್ದರಿಂದ ಓಟಿಗೆ ಹಾಕಿ ಕಾಂಗ್ರೆಸ್ ಮೆಂಬರುಗಳು ವಿರುದ್ಧವಾಗಿಯೂ ಉಳಿದವರು ತಟಸ್ಥರಾಗಿಯೂ ಓಟು ಮಾಡಿದ್ದರಿಂದ ಠರಾವು ಬಿದ್ದು ಹೋಯಿತು.

ಏಲಕ್ಕಿಯ ಬೆಲೆ ಕಡಿಮೆಯಾದುದರಿಂದಲೂ, ಏಲಕ್ಕಿ ಬೆಳೆಯು ಚೆನ್ನಾಗಿಲ್ಲದ್ದರಿಂದಲೂ ಗೇಣಿ ಮಲೆ ಕಂದಾಯವನ್ನು ಕಡಿಮೆ ಮಾಡಬೇಕು ಎಂಬ ಠರಾವನ್ನು ಶ್ರೀ ಕೆ. ಎಂ. ದೇವಯ್ಯನವರು ಸೂಚಿಸಿದರು. ಮುಖ್ಯ ಮಂತ್ರಿಯವರು ಎ ತರಗತಿಯ ಮಲೆಗಳಿಗೆ ಎಕರೆಗೆ ರೂ. ೩—೮—೦. ಬಿ. ತರಗತಿಗೆ ರೂ. ೩—೦—೦ ರಂತೆ ಕಂದಾಯ ನಿಶ್ಚಯಿಸುವಂತೆಯೂ ಏಲಕ್ಕಿಯ ಬೆಲೆಯು ನೂರು ರೂಪಾಯಿಗಿಂಥಾ ಏರಿದರೆಯೂ ಇಳಿದರೆ ಪ್ರತಿ ಹತ್ತು ರೂಪಾಯಿಗಳಿಗೆ ೦—೨—೦ ಯಂತೆ ಕಂದಾಯ ಏರಿಸುವ ಯಾ ಇಳಿಸುವ ಏರ್ಪಾಡು ಮಾಡಲಾಗುವದೆಂದು ಹೇಳಿದ್ದರಿಂದ ಠರಾವು ಹಿಂತೆಗೆಯಲ್ಪಟ್ಟಿತು.

ಒಬ್ಬ ಲೋವರ್ ಗ್ರೇಡ್ ಫಾರೆಸ್ಟ್ ಕನ್ಸರ್‌ವೇಟರನ್ನು ನೇಮಿಸಬೇಕೆಂಬ ಠರಾವನ್ನು ಶ್ರೀ ಕೆ. ಕೆ. ಗಣಪತಿಯವರು ಸೂಚಿಸಲಿಲ್ಲ.

ಒಬ್ಬ ಡೆಪ್ಯೂಟಿ ರೇಂಜರನ್ನು ಹುಣಸೂರು ಡಿಪೋದಲ್ಲಿ ನೇಮಿಸಿ ಪ್ರತಿ ವರ್ಷ ಅವರನ್ನು ಬದಲಾಯಿಸುತ್ತಿರಬೇಕು ಎಂಬ ಠರಾವನ್ನು ಶ್ರೀ ಕೆ. ಕೆ. ಗಣಪತಿಯವರು ಸೂಚಿಸಲಿಲ್ಲ.

ಕೊಡಗಿನ ಬಸ್ ಲೈನುಗಳಲ್ಲಿರುವ ಅವ್ಯವಸ್ಥೆಯನ್ನು ವಿಚಾರಿಸಿ ಸರಿಪಡಿಸಬೇಕೆಂಬ ಠರಾವನ್ನು ಶ್ರೀ ಕೆ. ಕೆ. ಗಣಪತಿ ಮತ್ತು ಶ್ರೀ ಪಿ. ಕೆ. ಚೆನ್ನಯ್ಯ ಇವರುಗಳು ಕಳುಹಿಸಿದ್ದರು. ಆ ಬಗ್ಗೆ ನಿಗಾವಿಡಲಾಗುವದೆಂದು ಸರಕಾರ ಹೇಳಿದ ಕಾರಣ ಠರಾವುಗಳು ಹಿಂತೆಗೆಯಲ್ಪಟ್ಟವು.

ಲಕ್ಷ್ಮಣ ತೀರ್ಥ ಯೋಜನೆಯನ್ನು ಶೀಘ್ರ ಕೈಕೊಳ್ಳಬೇಕೆಂಬ ಶ್ರೀ ಕೆ. ಕೆ. ಗಣಪತಿಯವರ ಠರಾವಿನ ಬಗ್ಗೆ ಮಂತ್ರಿಯವರು ಕಟ್ಟೆ ಕಟ್ಟಿಸುವದು ಹೆಚ್ಚು ಖರ್ಚಿನದೆಂದೂ ಆ ಭಾಗದ ಜನರಿಗೆ ಪಂಪುಗಳನ್ನು ಒದಗಿಸಿ ನೀರಿನ ಅನುಕೂಲತೆ ಮಾಡಿ ಕೊಡಲಾಗುವದೆಂದೂ ಲಕ್ಷ್ಮಣ ತೀರ್ಥ ಕಟ್ಟೆಗೆ ರೂ ೨೪॥ ಲಕ್ಷ ಖರ್ಚಾಗುವದೆಂದೂ ಆದರೆ ಕೇವಲ ೩,೦೦೦ ಎಕರೆ ಭೂಮಿಗೆ ನೀರು ದೊರೆಯುವದೆಂದೂ ಇದು ಲಾಭದಾಯಕವಲ್ಲವೆಂದೂ ಹೇಳಿದ್ದರಿಂದ ಠರಾವು ಹಿಂತೆಗೆಯಲ್ಪಟ್ಟಿತು.

ಮುಗ್ಗುಲ ಗ್ರಾಮದಲ್ಲಿ ಒಂದು ಸಣ್ಣ ಕಟ್ಟೆ ಕಟ್ಟಬೇಕೆಂಬ ಶ್ರೀ ಎನ್. ಜಿ. ಅಹಮದ್‌ರವರ ಠರಾವೂ, ನೆಲ್ಲ್ಯ ಹುದಿಕೇರಿ ಮತ್ತು ಮೇಕೂರು ಗ್ರಾಮಗಳಲ್ಲಿ ಒಂದೊಂದು ಕಟ್ಟೆ ಕಟ್ಟಬೇಕೆಂಬ ಶ್ರೀ ಎಂ. ಡಿ. ಮಾಚಯ್ಯನವರ ಠರಾವುಗಳೂ ಸರಕಾರಿ ಭರವಸೆಯಿಂದ ಹಿಂತೆಗೆಯಲ್ಪಟ್ಟವು.

ಶಾಸನ ಸಭಾ ಮೀಟಿಂಗಿನ ಸಮಯದಲ್ಲಿ ಸರಕಾರ ಅತಿಥಿ ಗೃಹವನ್ನು ಯಾವುದೇ ಬಾಡಿಗೆ ಇಲ್ಲದೆ ಶಾಸನ ಸಭಾ ಸದಸ್ಯರಿಗೆ ಮೀಸಲಾಗಿಡಬೇಕೆಂಬ ಠರಾವನ್ನು ಶ್ರೀ. ಎಚ್. ನಂಜಪ್ಪನವರು ಸೂಚಿಸಲಿಲ್ಲ. ಆದರೆ ಮುಖ್ಯ ಮಂತ್ರಿಯವರು ಒಂದು ಹೇಳಿಕೆ ಕೊಡುತ್ತಾ ಬಾಡಿಗೆಯನ್ನು ಅರ್ಧ ಚಾರ್ಜಿಗೆ ಇಳಿಸಲಾಗುವದೆಂದರು.

ಹುಲಿ ಮತ್ತು ಚಿರತೆಗಳನ್ನು ಕೊಂದವರಿಗೆ ಕೊಡುವ ಇನಾಮನ್ನು ಹೆಚ್ಚಿಸಬೇಕೆಂಬ ಠರಾವನ್ನು ಶ್ರೀ. ಪಿ. ಡಿ. ಸುಬ್ಬಯ್ಯನವರು ಸೂಚಿಸಿದರು. ಹಾಗೆ ಮಾಡಲಾಗುವದೆಂಬ ಭರವಸೆಯಿಂದ ಠರಾವು ಹಿಂತೆಗೆಯಲ್ಪಟ್ಟಿತು.

ಬಾರ್ ಎಸೋಸಿಯೇಶನಿನ (ಲಾಯರುಗಳ ಕೂಟ) ಉಪಯೋಗಕ್ಕಾಗಿ ಮಡಿಕೇರಿಯಲ್ಲಿ ಒಂದು ಪ್ರತ್ಯೇಕ ಕೋಣೆಯನ್ನೂ ವಾಚನಾಲಯವನ್ನೂ ಏರ್ಪಡಿಸಿ ಕೊಡಬೇಕೆಂಬ ಠರಾವನ್ನು ಭರವಸೆ ಮೇರೆ ಶ್ರೀ ಸಿ. ಎ. ಮುಂಡಣ್ಣನವರು ಹಿಂತೆಗೆದುಕೊಂಡರು.

ಎಲ್ಲಾ ಶಾಲೆಗಳಲ್ಲಿ ವಾರಕ್ಕೆ ಆರು ದಿನಗಳ ವರೆಗೆ ಶಾಲೆ ಇಡಬೇಕೆಂಬ ಠರಾವನ್ನು ಶ್ರೀ ಎಚ್. ಟಿ. ಮುತ್ತಣ್ಣನವರು ಸೂಚಿಸಲಿಲ್ಲ.

ಬೇಸಿಗೆ ರಜೆ ಕೊಡುವ ಬದಲು ವಿದ್ಯಾರ್ಥಿಗಳಿಗೆ ಮಳೆಗಾಲ ಮತ್ತು ಕುಯಿಲು ಕೆಲಸ ರಜೆ ಕೊಡುವದು ಹಿತವೆಂಬ ಠರಾವನ್ನು ಈ ಬಗ್ಗೆ ಹೆಡ್ ಮಾಸ್ಟರುಗಳ ಸಮ್ಮೇಳನ ಒಂದನ್ನು ಕರೆಸಲಾಗುವದೆಂದು ಹೇಳಿದ ಮೇರೆ ಸೂಚಕರಾದ ಶ್ರೀ ಎಚ್. ಟಿ ಮುತ್ತಣ್ಣನವರು ಠರಾವನ್ನು ಹಿಂತೆಗೆದರು.

ಫೀಜನ್ನು ಸಕಾಲದಲ್ಲಿ ಕಟ್ಟದ ವಿಚಾರವನ್ನು ಬಿಟ್ಟು ಬೇರೆ ಯಾವುದೇ ರೀತಿಯಿಂದ ವಿದ್ಯಾರ್ಥಿಗಳಿಂದ ಫೈನ್ ವಸೂಲ್ಮಾಡುವುದನ್ನು ನಿಲ್ಲಿಸಬೇಕೆಂಬ ಸೂಚನೆಯನ್ನು ಶ್ರೀ ಎಚ್. ಟಿ. ಮುತ್ತಣ್ಣನವರು ಚರ್ಚೆಯ ನಂತರ ಹಿಂತೆಗೆದುಕೊಂಡರು.

ಎಲ್ಲಾ ಹೈಸ್ಕೂಲುಗಳಲ್ಲಿ ವಾರಕ್ಕೆ ನಾಲ್ಕು ದಿನಗಳಾದರೂ ಖಡ್ಡಾಯವಾಗಿ ಹಿಂದೀ ಪಾಠದ ಏರ್ಪಾಡು ಮಾಡಬೇಕೆಂಬ ಠರಾವನ್ನು ಭರವಸೆ ಮೇರೆ ಸೂಚಕರಾದ ಶ್ರೀ ಎಚ್. ಟಿ. ಮುತ್ತಣ್ಣನವರು ಹಿಂತೆಗೆದರು.

ವೀರಾಜಪೇಟೆಯಲ್ಲಿ ಔದ್ಯೋಗಿಕ ತರಬೇತು ಶಾಲೆಯೊಂದನ್ನು ತೆರೆಯಬೇಕೆಂಬ ಠರಾವನ್ನು ಶ್ರೀ ಪಿ. ಸಿ. ಉತ್ತಯ್ಯನವರು ಚರ್ಚೆಯ ನಂತರ ಹಿಂತೆಗೆದುಕೊಂಡರು.

ಕಲ್ತೋಡು ಶಾಲಾ ಕಟ್ಟಡವನ್ನು ಬಡಾವಣೆ ಮಾಡಬೇಕೆಂಬ ಠರಾವನ್ನು ಶ್ರೀ ಎಚ್. ನಂಜಪ್ಪನವರು ಚರ್ಚೆಯ ನಂತರ ಹಿಂತೆಗೆದರು.

ತಳ್ತರೆ ಶೆಟ್ಟಳ್ಳಿ ಶಾಲೆಗೆ ಯೋಗ್ಯ ಮಂತಿಗೆ ಕೊಡಬೇಕೆಂಬ ಶ್ರೀ. ಸಿ. ಕೆ. ಕಾಳಪ್ಪನವರ ಠರಾವಿಗೆ—ತಾ. ೧—೪—೫೫ ರಿಂದ ಈ ಶಾಲೆಯನ್ನು ಸರಕಾರ ವಹಿಸಿಕೊಳ್ಳುವದೆಂದು ಆದರೆ ಇದರ ಕಟ್ಟಡಕ್ಕೆ ಮಾಡಿದ ಖರ್ಚನ್ನು ಕೊಡಲಾಗುವದಿಲ್ಲವೆಂದು ಹೇಳಿದ್ದರಿಂದ ಸೂಚಕರು ವಾಪಾಸು ತೆಗೆದುಕೊಂಡರು.

ಹೆಬ್ಬಾಲೆಯಲ್ಲಿ ಒಂದು ವಾಚನಾಲಯವನ್ನು ಕಟ್ಟಿಸಿಕೊಡಬೇಕೆಂಬ ಶ್ರೀ. ಸಿ. ಲಕ್ಷ್ಮಯ್ಯನವರು ಠರಾವನ್ನೂ, ತೊರೆನೂರು, ಶಿರಂಗಾಲಗಳಲ್ಲಿ ಅದೇ ರೀತಿಯ ವಾಚನಾಲಯ ಬೇಕೆಂಬ ಶ್ರೀ. ಜಿ. ಎಂ. ಲಿಂಗರಾಜಯ್ಯನವರ ಠರಾವನ್ನು ಸರಕಾರ ವಿರೋಧಿಸಿದ ಕಾರಣ ಹಿಂತೆಗೆಯಲಾಯಿತು.

ಸೋಮವಾರಪೇಟೆ ಆಸ್ಪತ್ರೆಗೆ ಒಬ್ಬ ಹೆಚ್ಚಿನ ಕಂಪೌಂಡರನ್ನು ಕೊಡಬೇಕೆಂಬ ಠರಾವಿಗೆ ಸರಕಾರವು ಈ ಆಸ್ಪತ್ರೆಯ ಬಡಾವಣೆ ಮಾಡುವಾಗ ಇದನ್ನು ಮಾಡಲಾಗುವದೆಂದು ಹೇಳಿದ್ದರಿಂದ ಶ್ರೀ. ಎಚ್. ಟಿ. ಮುತ್ತಣ್ಣನವರು ಠರಾವನ್ನು ವಾಪಾಸು ತೆಗೆದುಕೊಂಡರು.

ಆಸ್ಪತ್ರೆಗಳಲ್ಲಿರುವ ವಾರ್ಡ ಬಾಯ್ಸ್‌ಗಳಿಗೆ ಪೆನ್ಶನ್ ಕೊಡುವ ಏರ್ಪಾಡು ಮಾಡಬೇಕೆಂಬ ಠರಾವನ್ನು ಹಾಗೆ ಏರ್ಪಡಿಸಲಾಗಿದೆಯೆಂಬ ಕಾರಣ ಸೂಚಕರಾದ ಶ್ರೀ. ಎನ್. ಜಿ. ಅಹಮ್ಮದ್‌ರವರು ಠರಾವನ್ನು ಹಿಂತೆಗೆದುಕೊಂಡರು.

ಹುದಿಕೇರಿ ಆಸ್ಪತ್ರೆಗೆ ಒಂದು ಪಕ್ಕಾ ಕಟ್ಟಡ ಕಟ್ಟಬೇಕೆಂಬ ಠರಾವನ್ನು ಶ್ರೀ. ಕೆ. ಕೆ. ಗಣಪತಿಯವರು ಸೂಚಿಸಲಿಲ್ಲ.

ಮೂದಾಪುರಕ್ಕೆ ಒಂದು ಆಸ್ಪತ್ರೆಯ ಏರ್ಪಾಡು ಮಾಡಬೇಕೆಂಬ ತಮ್ಮ ಠರಾವನ್ನು ಶ್ರೀ. ಪಿ. ಲಕ್ಷ್ಮಯ್ಯನವರು ಹಾಗೆ ಮಾಡಲ್ಪಡುತ್ತಿದೆಯೆಂಬ ಕಾರಣ ಹಿಂತೆಗೆದು ಕೊಂಡರು.

ವೀರಾಜಪೇಟೆ ಆಸ್ಪತ್ರೆಯ ಡಾಕ್ಟರ್ ನರ್ಸುಗಳಿಗೆ ವಾಸಕ್ಕೆ ಮನೆಕಟ್ಟಿಸಬೇಕೆಂಬ ಠರಾವನ್ನು ಶ್ರೀ. ಎನ್. ಜಿ. ಅಹಮ್ಮದ್‌ರವರು ಸೂಚಿಸಲಿಲ್ಲ.

ಹೆಬ್ಬಾಲೆ ನೀರಾವರಿ ಯೋಜನೆಯನ್ನು ಬೇಗ ಕೈಕೊಳ್ಳಬೇಕೆಂಬ ಬಗ್ಗೆ ಸಾಕಷ್ಟು ಹಣವನ್ನು ಬಡ್ಜೆಟ್ಟಿನಲ್ಲಿಟ್ಟಿರುವದರಿಂದ ಸೂಚಕರಾದ ಶ್ರೀ. ಲಿಂಗರಾಜಯ್ಯನವರು ಠರಾವನ್ನು ವಾಪಾಸು ತೆಗೆದುಕೊಂಡರು.

ಕುಟ್ಟದ ನಿವಾಸಿಗಳಿಗೆ ಕುಡಿಯುವ ನೀರಿನ ಏರ್ಪಾಡು ಮಾಡಬೇಕೆಂಬ ಬಗ್ಗೆ ಆ ಕೆಲಸವನ್ನು ಹೂವಿನಕಾಡು ತೋಟದವರ ಮೂಲಕ ಮಾಡಲ್ಪಡುತ್ತಿದೆಯೆಂಬ ಕಾರಣ ಠರಾವನ್ನು ಶ್ರೀ. ಕೆ. ಪಿ. ಕರುಂಬಯ್ಯನವರು ವಾಪಾಸು ತೆಗೆದುಕೊಂಡರು.

ಪೊನ್ನಂಪೇಟೆ ಪಟ್ಟಣದವರಿಗೆ ಒಂದು ಬಾವಿಯನ್ನು ತೋಡಿಸಿಕೊಡಬೇಕೆಂಬ ಬಗ್ಗೆ ಅಗತ್ಯವಿದ್ದರೆ ಮುಂದೆ ಮಾಡಿಕೊಡಲಾಗುವದೆಂಬ ಸರಕಾರಿ ಭರವಸೆ ಮೇರೆ ಠರಾವನ್ನು ಶ್ರೀ. ಎಂ. ಡಿ. ಮಾಚಯ್ಯನವರು ಹಿಂತೆಗೆದುಕೊಂಡರು.

ಕಡಿಮೆ ದರದ ಬೆಲೆಯಲ್ಲಿ ರೈತರಿಗೆ ನೀರು ಹಾಯಿಸುವ ಪಂಪುಗಳನ್ನು ಒದಗಿಸಿಕೊಡಬೇಕೆಂಬ ಠರಾವನ್ನು ಶ್ರೀ. ಜಿ. ಎಂ. ಲಿಂಗರಾಜಯ್ಯನವರು—ಹಾಗೆ ಮಾಡಲಾಗುವದೆಂಬ ಸರಕಾರಿ ಭರವಸೆ ಮೇರೆ ವಾಪಾಸು ತೆಗೆದರು.

ವೀರಾಜಪೇಟೆಯಲ್ಲಿ ಖಾಯಂ ಜನಾನ ವಾರು ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದು ಶ್ರೀ. ಕೆ. ಪಿ. ಕರುಂಬಯ್ಯ ಮತ್ತು ಶ್ರೀ. ಪಿ. ಸಿ. ಉತ್ತಯ್ಯ ಇವರಿಬ್ಬರೂ ಠರಾವು ಕಳುಹಿಸಿದುದನ್ನು ಆಲೋಚಿಸಲಾಗುವದೆಂಬ ಸರಕಾರಿ ಭರವಸೆಯಿಂದ ಹಿಂತೆಗೆದು ಕೊಂಡರು.

ಪೊನ್ನಂಪೇಟೆದಲ್ಲಿ ಸ್ಟಾಕ್‌ಮೇನ್ ಒಬ್ಬರನ್ನು ನೇಮಿಸಬೇಕೆಂಬ ಠರಾವನ್ನು ಆಲೋಚಿಸಲಾಗುವದೆಂದ ಕಾರಣ ಶ್ರೀ. ಎಂ. ಡಿ. ಮಾಚಯ್ಯನವರು ಹಿಂತೆಗೆದು ಕೊಂಡರು.

ಮಡಿಕೇರಿಯಲ್ಲಿ ಸ್ಥಾಪಿಸಲ್ಪಡಲಿರುವ ಮನೆ ಕಟ್ಟುವ ಸಹಕಾರ ಸಂಘಕ್ಕೆ ೨ ಲಕ್ಷ ರೂಪಾಯಿ ಸಾಲ ಕೊಡಬೇಕೆಂಬ ಬಗ್ಗೆ ಸಾಧ್ಯವಾದರೆ ಇಂಡಿಯಾ ಸರಕಾರದಿಂದ ಇಂಥಾ ಸಾಲ ಒದಗಿಸಲು ಯತ್ನಿಸಲಾಗುವದೆಂಬ ಭರವಸೆ ಮೇರೆ ಸೂಚಕರಾದ ಶ್ರೀ. ಪಿ. ಡಿ. ಸುಬ್ಬಯ್ಯನವರು ಠರಾವನ್ನು ವಾಪಾಸು ತೆಗೆದುಕೊಂಡರು.

ಮಡಿಕೇರಿಯಲ್ಲಿ ಒಂದು ಬಟ್ಟೆ ನೆಯ್ಗೆ ಶಾಲೆಯನ್ನು ತೆರೆಯಬೇಕೆಂಬ ಠರಾವನ್ನು ಅವಶ್ಯವಿದ್ದರೆ ಹಾಗೆ ಮಾಡಲಾಗುವುದೆಂಬ ಭರವಸೆ ಮೇರೆ ಶ್ರೀ ಕೆ. ಪಿ. ಕರುಂಬಯ್ಯನವರು ಹಿಂತೆಗೆದುಕೊಂಡರು.

ಮಡಿಕೇರಿಯಲ್ಲಿ ಮರಕೆಲಸ, ಚಿತ್ರದ ಮತ್ತು ಬಿಗಿರು ಕೆಲಸಗಳನ್ನು ಕೈಕೊಳ್ಳುವ ವರ್ಕ್ ಶಾಪ್ ಒಂದನ್ನು ತೆರೆಯಬೇಕೆಂಬ ಠರಾವನ್ನು ಅವಶ್ಯವಿದ್ದರೆ ಮಾಡಲಾಗುವದೆಂಬ ಭರವಸೆ ಮೇರೆ ಹಿಂತೆಗೆಯಲಾಯಿತು.

ಮಡಿಕೇರಿ ಕೋಟೆಯ ವಠಾರವನ್ನು ದುರಸ್ತಿಗೊಳಿಸಿ ಅಭಿವೃದ್ಧಿಪಡಿಸಬೇಕೆಂಬ ಶ್ರೀ. ಪಿ. ಡಿ. ಸುಬ್ಬಯ್ಯನವರ ಠರಾವು ಭರವಸೆ ಮೇರೆ ಹಿಂತೆಗೆಯಲ್ಪಟ್ಟಿತು.

ಪೇಟೆಯ ಭಾಗಗಳಲ್ಲಿ ರಸ್ತೆಗಳಿಗೆ ತಾರು ಹಾಕಬೇಕೆಂಬ ಶ್ರೀ. ಎಂ. ಡಿ. ಮಾಚಯ್ಯನವರ ಠರಾವನ್ನು ಮಾಡಲ್ಪಡುತ್ತಿದೆಯೆಂದ ಕಾರಣ ಹಿಂತೆಗೆಯಲಾಯಿತು.

ಸೋಮವಾರಪೇಟೆ ಟೌನಿನ ಮಧ್ಯಕ್ಕಾಗಿರುವ ರಸ್ತೆಗೆ ತಾರುಹಾಕಬೇಕೆಂಬ ಠರಾವನ್ನು ಶ್ರೀ. ಸಿ. ಕೆ. ಕಾಳಪ್ಪನವರು ಹಿಂತೆಗೆದುಕೊಂಡರು.

ಬೇಗೂರು ಗ್ರಾಮಕ್ಕೆ ಒಂದು ರಸ್ತೆಯನ್ನು ತೆರೆಯಬೇಕೆಂಬ ಠರಾವನ್ನು ಸರಕಾರಿ ಭರವಸೆ ಮೇರೆ ಶ್ರೀ. ಕೆ. ಕೆ. ಗಣಪತಿಯವರು ಹಿಂತೆಗೆದುಕೊಂಡರು

ಚೆಟ್ಟಳ್ಳಿಯಿಂದ ಸುಂಟಿಕೊಪ್ಪಕ್ಕೆ ಹೋಗುವ ರಸ್ತೆಯನ್ನು ದುರಸ್ತಿಗೊಳಿಸಬೇಕೆಂಬ ಠರಾವನ್ನು ಚರ್ಚೆಯಾದನಂತರ ಶ್ರೀ. ಕೆ. ಎಂ. ದೇವಯ್ಯನವರು ಹಿಂತೆಗೆದುಕೊಂಡರು.

ಕುಮ್ಮೆತೋಳಿಯಿಂದ ಹಾತೂರಿನ ವರೆಗಿನ ರಸ್ತೆಯನ್ನು ಕಲ್ಲುಹಾಕಿ ಸರಿಗೊಳಿಸಬೇಕೆಂಬ ಠರಾವನ್ನು ಅತ್ಯವಶ್ಯವಿರುವಲ್ಲಿ ಸರಿಗೊಳಿಸುವ ಭರವಸೆ ಮೇರೆ ಶ್ರೀ ಕೆ ಎಚ್. ನಂಜ ಇವರು ವಾಪಾಸು ತೆಗೆದು ಕೊಂಡರು.

ಮೂರ್ನಾಡು ಬೆಟ್ಟಗೇರಿ ರಸ್ತೆಗೆ ಕಲ್ಲುಹಾಕಿ ಸರಿಪಡಿಸಬೇಕೆಂಬ ಠರಾವನ್ನು ಹೊದ್ದೂರು ಶಾಲೆಯ ವರೆಗೆ ಮಾಡಲಾಗುವದೆಂಬ ಭರವಸೆ ಮೇರೆ ಶ್ರೀ. ಸಿ ಎ ಮಂದಣ್ಣನವರು ವಾಪಾಸು ತೆಗೆದುಕೊಂಡರು.

ತಿತಿಮತಿ ಬಾಳೆಲೆ ರಸ್ತೆಗೆ ಕಲ್ಲುಹಾಕಿ ಸರಿಪಡಿಸುವದಲ್ಲದೆ ಅಡ್ಡವಿರುವ ಹೊಳೆಗೆ ಒಂದು ಸೇತುವೆ ಹಾಕಬೇಕೆಂಬ ಶ್ರೀ. ಎ. ಬೆಳ್ಯಪ್ಪರವರ ಠರಾವು ಚರ್ಚೆಯ ನಂತರ ಹಿಂತೆಗೆಯಲ್ಪಟ್ಟಿತು.

ಟಿ. ಶೆಟ್ಟಿಗೇರಿ–ಬಿರುನಾಣಿ ರಸ್ತೆಯು ಎಲ್ಲಾ ಸಮಯದಲ್ಲೂ ಉಪಯೋಗಕ್ಕೆ ಬೀಳುವಂತೆ ಮರೆನಾಡು ಹೊಳೆಗೆ ಸೇತುವೆ ಕಟ್ಟಿಸಬೇಕು ಎಂಬ ಶ್ರೀ. ಕೆ. ಪಿ. ಕರುಂಬಯ್ಯನವರ ಠರಾವಿಗೆ ಬರಪೊಳೆ ಯೋಜನೆಯನ್ನು ಕೈಕೊಳ್ಳುವಾಗ್ಗೆ ಈ ಸೇತುವೆಯ ಸ್ಥಳ ಬದಲಾಯಿಸಬೇಕಾಗಬಹುದಾದ್ದರಿಂದ ಅದನ್ನು ನಂತರ ಆಲೋಚಿಸಲಾಗುವದೆಂದ ಕಾರಣ ಹಿಂತೆಗೆಯಲ್ಪಟ್ಟಿತು.

ತೆರಾಲು ಗ್ರಾಮದಿಂದ ಬಿರುನಾಣಿಗಿರುವ ಎರಡು ಹೊಳೆಗಳಿಗೆ ಮರದ ಸೇತುವೆ ಕಟ್ಟಬೇಕೆಂಬ ಠರಾವನ್ನು ಭರವಸೆ ಮೇರೆ ಶ್ರೀ. ಕೆ. ಪಿ ಕರುಂಬಯ್ಯನವರು ವಾಪಾಸು ತೆಗೆದುಕೊಂಡರು.

ಕುತ್ತುನಾಡು ಪೊನ್ನಂಪೇಟೆ ರಸ್ತೆಯಲ್ಲಿರುವ ಹೊಳೆಗೆ ಒಂದು ಸೇತುವೆ ಕಟ್ಟಬೇಕೆಂಬ ಠರಾವನ್ನು ಚರ್ಚೆಯ ನಂತರ ಶ್ರೀ ಎಚ್. ನಂಜ ಇವರು ವಾಪಾಸು ತೆಗೆದು ಕೊಂಡರು.

ಸುಂಟಿಕೊಪ್ಪ ಹರ್ದೂರು ರಸ್ತೆಯಲ್ಲಿಯ ಹರ್ದೂರು ನದಿಗೆ ಹೆಚ್ಚು ನೀರು ಬಂದಾಗ ಮುಳುಗ ಬಲ್ಲ ಕಾಂಕ್ರೀಟ್ ಸೇತುವೆ ಮಾಡಿಸಬೇಕು ಎಂಬ ಠರಾವಿನ ವಿಷಯದಲ್ಲಿ ಪಂಚವಾರ್ಷಿಕ ಯೋಜನೆಯಲ್ಲಿ ಇದು ಅಡಕವಾಗಿದೆಯೆಂದು ಹೇಳಿದ ಮೇರೆ ಸೂಚಕರಾದ ಶ್ರೀ ಜಿ. ಎಂ. ಮಂಜುನಾಥಯ್ಯನವರು ಠರಾವನ್ನು ಹಿಂತೆಗೆದು ಕೊಂಡರು.

ಅಮ್ಮತ್ತಿ ಗೋಣಿಕೊಪ್ಪ ರಸ್ತೆಯಲ್ಲಿರುವ ಮೂರು ಸೇತುವೆಗಳನ್ನು ಕಟ್ಟಿಸಬೇಕೆಂಬ ಶ್ರೀ ಎಂ. ಡಿ. ಮಾಚಯ್ಯನವರ ಠರಾವಿನ ಬಗ್ಗೆ ಇವುಗಳಲ್ಲಿ ಒಂದನ್ನು ಶೀಘ್ರ ಕೈಕೊಳ್ಳಲಾಗುವದೆಂದು ಹೇಳಿದ ಮೇರೆ ಸೂಚಕರು ವಾಪಾಸು ತೆಗೆದು ಕೊಂಡರು.

ಮಣಗಲಿಯಲ್ಲಿ ಹೊಸ ಶಾಲೆ ಕಟ್ಟಲು ಖರ್ಚಾದ ಹೆಚ್ಚಿನ ಹಣವನ್ನು ಕೊಡಬೇಕು ಎಂಬ ಠರಾವಿನ ಬಗ್ಗೆ ರೂಪಾಯಿ ೩,೦೦೦ ಕೊಡಲಾಗಿದೆಯೆಂದು ತಿಳಿದು ಬಂದ ಪ್ರಕಾರ ಸೂಚಕರಾದ ಶ್ರೀ ಪಿ. ಕೆ. ಚಿನ್ನಪ್ಪನವರು ಠರಾವನ್ನು ಹಿಂತೆಗೆದು ಕೊಂಡರು.

ಮಡಿಕೇರಿ ಹೈಸ್ಕೂಲಿಗೆ ಕಟ್ಟಡಕ್ಕಾಗಿ ಸಹಾಯ ವಂತಿಗೆಯನ್ನು ಕೊಡಬೇಕೆಂಬ ಠರಾವನ್ನು ಚರ್ಚೆಯ ನಂತರ ಶ್ರೀ ಕೆ. ಪಿ. ಕರುಂಬಯ್ಯನವರು ಹಿಂತೆಗೆದು ಕೊಂಡರು.

ಪಿ. ಡಬ್ಲ್ಯು. ಡಿ ಇಲಾಖೆಯಲ್ಲಿ ತಾತ್ಕಾಲಿಕವಾಗಿ ಕೆಲಸ ಮಾಡುತ್ತಿರುವ ಮಜದೂರರಿಗೆ ಅತ್ತಿಂದಿತ್ತ ಸಾಗಿಸಬಲ್ಲ ಶೆಡ್‌ಗಳನ್ನು ಕಟ್ಟಿಸಿ ಕೊಡುವದೆಂಬ ಠರಾವನ್ನು ಸರಕಾರವು ವಿರೋಧಿಸಿದರಿಂದ ಶ್ರೀ ಸಿ. ಎ. ಮಂದಣ್ಣನವರು ಠರಾವನ್ನು ವಾಪಾಸು ತೆಗೆದು ಕೊಂಡರು.

ಕುಮಾರಧಾರೆ ಜಲಪಾತದಿಂದ ವಿದ್ಯುಚ್ಛಕ್ತಿ ಉತ್ಪಾದಿಸುವ ಸಾಧ್ಯತೆಯ ಪರಿಶೀಲನೆ ನಡೆಯಬೇಕೆಂಬ ತಮ್ಮ ಠರಾವನ್ನು ಹಾಗೆ ಮಾಡಲಾಗುವದೆಂಬ ಸರಕಾರಿ ಭರವಸೆಯ ಮೇರೆ ಶ್ರೀ ಎಚ್. ಟಿ. ಮುತ್ತಣ್ಣನವರು ಹಿಂತೆಗೆದು ಕೊಂಡರು.

ಆಕ್ರಾಯ ವಿಧಿಸುವ ಈಗಿನ ಪದ್ಧತಿಯನ್ನು ವಜಾಮಾಡಬೇಕು ಎಂಬ ಠರಾವನ್ನು ಚರ್ಚೆಯ ನಂತರ ಶ್ರೀ ಕೆ. ಕೆ ಗಣಪತಿಯವರು ವಾಪಾಸು ತೆಗೆದು ಕೊಂಡರು

ಫ್ರೇಜರ್‌ಪೇಟೆ ನೋಟಿಫೈಡ್ ಏರಿಯಾ ಕಟ್ಟಡಕ್ಕೆ ಸಾಕಷ್ಟು ಗ್ರಾಂಟು ಕೊಡಬೇಕೆಂಬ ಶ್ರೀ ಜಿ. ಲಿಂಗರಾಜಯ್ಯನವರ ಠರಾವೂ, ನೋಟಿಫೈಡ್ ಏರಿಯಾದಲ್ಲಿರುವ ರಘೂತ್ತ ಮೂಲಿಗಳಿಗೆ ವಸತಿ ಕಟ್ಟಿಸಿ ಕೊಡಬೇಕೆಂಬ ಶ್ರೀ ಪಿ. ಲಕ್ಷ್ಮಯ್ಯನವರ ಠರಾವು ಸಮಯಾವಕಾಶವಿಲ್ಲದ ಕಾರಣ ಸೂಚಿಸಲ್ಪಡಲಿಲ್ಲ.

ತಾ. ೩೧ರ ಸಾಯಂಕಾಲ ೫ ಗಂಟೆಗೆ ಶಾಸನ ಸಭೆಯು ಈ ಬಾರಿಯ ೯ ದಿನಗಳ ಸಭೆಯು ಮುಕ್ತಾಯಗೊಂಡಿತು.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್
ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ :—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ಸವ್ಕಾರ್ಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1 ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳಗಿ ಕೇಪಿನ (ತುಂಬುವ) ಕೋವಿಗಳು
4 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9. ಕೋವಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತವೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase peimit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಬಿ. ಬೆಳ್ಯಪ್ಪ, (ಪ್ರೆಸಿಡೆಂಟ್)

The New Guardian of India Life Insurance Co., Ltd.,

— HEAD OFFICE —

Post Box No.—142 Esplanade, MADRAS 1.

Wanted Licenced Agents and Special Agents on attractive commission terms in all important places in Coorg. Only capable and influential men who can produce good business need apply to:—

THE CHIEF AGENT,

The New Guardian of India Life Insurance Co., Ltd. for COORG. Virajpet.

12–12 OR

To The Head Office, MADRAS.

ಶ್ರೀ ಬಿ. ಡಿ. ಗಣಪತಿಯವರ

ತುಂತುರು, ಮಾನವ ಮತ್ತು ಪಂಚಾಮೃತ.

ಈ ಮೂರು ಉತ್ತಮ ಪುಸ್ತಕಗಳು ಈಗಾಗಲೇ ಕನ್ನಡ ನಾಡಿನ ಸರ್ವರಿಂದ ಹೊಗಳಿಸಿಕೊಂಡಿವೆ. ಕನ್ನಡ ನಾಡಿನ ಹಿರಿಯ ಸಾಹಿತಿಗಳು ಮತ್ತು ಪತ್ರಿಕೆಗಳು ವ್ಯಕ್ತಮಾಡಿದ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಕೊಡಲಾಗಿದೆ.

"ಪುಸ್ತಕಗಳೆಲ್ಲವೂ ಸೊಗಸಾಗಿವೆ. ಹೂವಿನ ಕಂಪು ಮೊಗ್ಗೆಯಿಂದಲೇ ಬೀರುವಂತಿದೆ. ಇನ್ನೂ ಕೂಡ ಅನರ್ಘ್ಯವಾದ ಕೃತಿಗಳನ್ನು ರಚಿಸುತ್ತಿರುವಂತೆ ದೇವರು ಅನುಗ್ರಹಿಸಲಿ"

— ರಾಷ್ಟ್ರಕವಿ ಗೋವಿಂದ ಪೈ.

"ಪುಸ್ತಕಗಳು ಚೆನ್ನಾಗಿವೆ. ಕೊಡಗಿನ ಒಬ್ಬ ಲೇಖಕರು ಈ ರೀತಿ ನಿಶ್ಚಲ ಕೆಲಸ ಮಾಡುತ್ತಿರುವುದರಿಂದ ನನಗೆ ಸಂತೋಷವಾಗಿದೆ."

— ಅ. ನ. ಕೃಷ್ಣರಾವ್.

"ಶ್ರೀ ಗಣಪತಿಯವರ ತುಂತುರುವಿನ ಕಥೆಗಳು ಹೃದಯಂಗಮವಾಗಿವೆ. ಸ್ವಾತಂತ್ರ್ಯ, ತುಂತುರು, ತಾಯಿ ಮೊದಲಾದ ಕಥೆಗಳು ಒನ್ನು ಓದಿದರೆ ಬಹು ಕಾಲ ಮರೆಯದಂತಹವಿವೆ. ಪಂಚಾಮೃತವು ನೀತಿಬೋಧಕವಾಗಿದ್ದು ಸ್ವಾಗತಾರ್ಹವಿದೆ. ಮಾನವವೆಂಬ ಶಾಸ್ತ್ರೀಯ ಗ್ರಂಥವು ಉತ್ತಮವಿದ್ದು ಕನ್ನಡ ಸಾಹಿತ್ಯ ಭಾಂಡಾಗಾರಕ್ಕೆ ಮಹತ್ವದ್ದಾಗಿದೆ."

-- 'ಜೈ ಹಿಂದ್' ಹುಬ್ಬಳ್ಳಿ.

"ತುಂತುರು" ವಿನ ಸ್ವಾತಂತ್ರ್ಯ, ತಾಯಿ, ಸಹೋದರರು ಮೊದಲಾದ ಕಥೆಗಳು ಮೇಲ್ಮಟ್ಟದವಾಗಿವೆ. ಗಣಪತಿಯವರಿಗಿರುವ ಆಳವಾದ ಸಾಮಾಜಿಕ ದೃಷ್ಟಿಯೂ ಸ್ತ್ರೀ ಪರಾಧೀನತೆ, ಮಾತೃವಾತ್ಸಲ್ಯ, ಬಡತನ ಮೊದಲಾದ ವಿಷಯಗಳ ಸತ್ಯ ದೃಷ್ಟಿಯೂ ಚೆನ್ನಾಗಿ ಈ ಕಥೆಗಳಲ್ಲಿ ಸ್ಫುಟವಾಗಿವೆ. ಹಕ್ಕುಗಳೊಡನೆ ಹೊಣೆಯನ್ನೂ ಅರಿತು ಆದರ್ಶ ನಾಗರಿಕರಾಗಲು ಪಂಚಾಮೃತವು ಸಾಧಕವಾಗಿದೆ. 'ಮಾನವ' ಗ್ರಂಥದಲ್ಲಿ ವಿಶ್ವದ ಬಾಹ್ಯ ಜ್ಞಾನ ಬೆಳೆದಂತೆ ವಿಶ್ವಾತ್ಮನ ಪರಿಜ್ಞಾನವು ಮಸಳಿಸಿದುದನ್ನೂ, ದೇಹದ ಅರಿವು ಬೆಳೆದಂತೆ ದೇಹಿಯ ಪರಿವೆ ಅಳಿದುದನ್ನೂ ಮನಗಾಣುವಂತೆ ಬರೆದಿದ್ದಾರೆ. ಬರಿಯ ಕತೆ, ಕವಿತೆ, ಕಾದಂಬರಿಗಳಲ್ಲಿಯೇ ಕಾಲ ಕಳೆಯುವ ಕನ್ನಡ ಸಾಹಿತ್ಯಕ್ಕೆ ಇಂಥಾ ವಿಚಾರ ಪ್ರಬೋಧಕ ಪ್ರಬಂಧಗಳ ಅಗತ್ಯ ತುಂಬಾ ಇದೆ.

— ಕಲಿಯುಗ.

"ಮಾನವ" ಪುಸ್ತಕವನ್ನು ಬರೆದ ಗಣಪತಿಯವರ ಮಹತ್ಕಾರ್ಯವು ಶ್ಲಾಘನೀಯವಾದುದು. ಮಾನವನ ಶಾರೀರಕ, ಮಾನಸಿಕ ವ್ಯಾಪಾರಗಳು, ಆತನ ಪುನರುತ್ಥಾನ ಮೊದಲಾದ ಜಟಿಲ ಸಮಸ್ಯೆಗಳನ್ನು ಸೂಕ್ತ ರೀತಿಯಿಂದ ವಿವರಿಸಲಾಗಿದೆ. ಶ್ರೀಯುತರ ಶಬ್ದ ವ್ಯುತ್ಪತ್ತಿ ಪ್ರಸಂಶನೀಯವಾಗಿದೆ. ಪ್ರತಿಯೊಬ್ಬನಿಗೂ ಅರ್ಥವಾಗುವಂತೆ ಬರೆದಿರುವ ಈ ಗ್ರಂಥವನ್ನು ಎಲ್ಲರೂ ಓದಬೇಕು."

— ಉಷಾ, ಬೆಂಗಳೂರು.

"ತುಂತುರುವಿನ ಕಥೆಗಳ ವಸ್ತು ಸ್ವಾರಸ್ಯವಾಗಿದೆ. ಪ್ರತಿಯೊಂದು ಕಥೆಯಲ್ಲೂ ಲೇಖಕರು ವಾಚಕರ ಕುತೂಹಲವನ್ನು ಕಾಯ್ದುಕೊಳ್ಳುತ್ತಾರೆ. ಪಂಚಾಮೃತವು ಬೋಧಪ್ರದವಾಗಿದೆ. ಪ್ರತಿಯೊಬ್ಬನೂ ಓದಬೇಕಾದ ಪುಸ್ತಕ "ಮಾನವ" ಪುಸ್ತಕವು ಮನುಷ್ಯನಲ್ಲಿ ಕರ್ತವ್ಯ ಜ್ಞಾನವನ್ನು ಉಂಟು ಮಾಡಲು ಸಹಾಯಕವಾಗಿದೆ. ಈ ರೀತಿಯ ಪುಸ್ತಕಗಳು ಕನ್ನಡ ಸಾಹಿತ್ಯದಲ್ಲಿ ಕಡಿಮೆ ಇದ್ದು ಇದು ಸ್ವಾಗತಾರ್ಹವಾಗಿದೆ."

— ನವಭಾರತ, ಮಂಗಳೂರು.

"'ತುಂತುರು'ವು ಹನ್ನೆರಡು ಮುತ್ತುಗಳನ್ನು ಆರಿಸಿ ಪೋಣಿಸಿದ ಚಿಕ್ಕ ಸರ. ಚಿಕ್ಕದಾದರೂ ಇದು ಚೊಕ್ಕವೂ, ಮನೋಹರವೂ ಆಗಿದೆ. ಪಂಚಾಮೃತದಲ್ಲಿ ಎಳನೀರು, ಹಾಲು, ಜೇನು, ತುಪ್ಪ, ಸಕ್ಕರೆ ಕೂಡಿರುವಂತೆ ಈ ಪುಸ್ತಕವು ವಿದ್ಯಾರ್ಥಿಯರಿಂದ ಹಿಡಿದು ಹುಟ್ಟು, ಬಾಲ್ಯ, ಯೌವನ, ವಾರ್ಧಿಕ್ಯ, ಮುಪ್ಪು ಎಂಬ ಪಂಚ ಅವಸ್ಥೆಗಳಿಗೂ ಪಂಚಾಮೃತವೇ ಆಗಿದೆ."

— ಸರ್ವೋದಯ.

"ತುಂತುರುವಿನಲ್ಲಿ ಟಾಲ್‌ಸ್ಟಾಯಿ, ಟಾಗೋರರ ಉತ್ತಮ ಕಥೆಗಳನ್ನು ಆರಿಸುವದರಲ್ಲಿ ಲೇಖಕರು ಯೋಗ್ಯ ಅಭಿರುಚಿಯನ್ನು ವ್ಯಕ್ತಪಡಿಸಿದ್ದಾರೆ. 'ನೀಲು'ವಿನ ಕತೆ ಚಿಕ್ಕದಾಗಿದ್ದರೂ ಚೆನ್ನಾಗಿದೆ. 'ಪಂಚಾಮೃತ'ದಂಥಾ ಪುಸ್ತಕಗಳನ್ನು ಬಹುಮಂದಿ ಆದರಿಸುವ ಕಾಲ ಬರಲಿ ಎಂಬುದು ನಮ್ಮ ಹಾರೈಕೆ. 'ಮಾನವ' ಗ್ರಂಥವು ಕಿರಿಯ ಲೇಖಕರ ಹಿರಿಯ ಪ್ರಯತ್ನವೆಂದು ಹೇಳಬಹುದು."

-- ಕನ್ನಡ ನುಡಿ, ಬೆಂಗಳೂರು.

"ಪಂಚಾಮೃತದಲ್ಲಿ ಚಾರಿತ್ರ್ಯ, ಸಚ್ಛೀಲಗಳಿಗೆ ಲೇಖಕರು ತುಂಬಾ ಮಹತ್ವವನ್ನು ಕೊಟ್ಟಿರುವದು ಉಲ್ಲೇಖನೀಯವಿದೆ. ಇಡೀ ಪುಸ್ತಕವು ಒಳ್ಳೆಯ ಬಾಳ್ವೆಯನ್ನು ಕೈಕೊಂಡು ಸತ್ಪ್ರಜೆಗಳಾಗಿ ಆದರ್ಶ ಜೀವನವನ್ನು ಅವಲಂಬಿಸುವ ದಕ್ಕೆ ಅಗತ್ಯವಿರುವ ಸಲಹೆಗಳಿಂದ ಕೂಡಿದೆ. ಭಾಷೆಯು ಸರಳ ಹಾಗೂ ಸುಂದರವಾಗಿದೆ. ಮುದ್ರಣ ದೋಷವೇ ಇಲ್ಲೆಂಬಂತೆ ಅಚ್ಚಾಗಿದೆ. ಎಲ್ಲರೂ ಓದಿ ಮನವರಿಕೆ ಮಾಡಿಕೊಳ್ಳಲು ತಕ್ಕುದಾದ ಪುಸ್ತಕವೆಂದು ಒಂದೇ ಮಾತಿನಲ್ಲಿ ಇದರ ಗುಣ ವರ್ಣನೆ ಮಾಡಬಹುದು."

— ನವಯುಗ, ಉಡುಪಿ.

ಈ ಉತ್ತಮ ಪುಸ್ತಕಗಳನ್ನು ನೀವು ಓದಿಲ್ಲವಾದರೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ಮೂರು ಪುಸ್ತಕಗಳ ಒಟ್ಟು ಕ್ರಯ ರೂ. ೩-೪-೦ ಅಂಚೆ ವೆಚ್ಚ ೦-೧೨-೦.

ಕೊಡಗು ಆಫೀಸು, ಮಡಿಕೇರಿ.

ಪ್ರಚಾರಕ್ಕಿಂತ ಭಾಷೆಯ ಸಂಪತ್ತು ಬೆಳೆಯಲಿ.

ಪ್ರಚಾರವನ್ನು ಜಾಸ್ತಿ ಮಾಡುವುದಕ್ಕಿಂತ ರಾಷ್ಟ್ರಭಾಷೆಯ ಸಂಪತ್ತನ್ನು ಬೆಳೆಸಿ ಅಭಿವೃದ್ಧಿಗೊಳಿಸಬೇಕಾಗಿದೆ ಎಂಬುದಾಗಿ ಬನಾರಸ್ ವಿಶ್ವವಿದ್ಯಾಲಯದ ಉಪಕುಲಪತಿ ಆಚಾರ್ಯ ನರೇಂದ್ರ ದೇವ್ ಅವರು ಬೋಧಿಸಿದರು.

"ಹಿಂದಿ ಬಳಕೆಯಲ್ಲಿಲ್ಲದ ಪ್ರದೇಶಗಳಲ್ಲಿ, ಮುಖ್ಯವಾಗಿ ದಕ್ಷಿಣ ಭಾಗದಲ್ಲಿ, ಹಿಂದಿಯನ್ನು ಬಲವತ್ತರವಾಗಿ ಹೇರಲಾಗುತ್ತಿದೆ ಎಂಬ ಭಾವನೆ ಮೂಡಿರುವುದು. ಹಿಂದಿ ಭಾಷೆಗಾಗಿ ದುಡಿಯುವ ನೀವು ಆ ದುರಭಿಪ್ರಾಯವನ್ನು ಹೋಗಲಾಡಿಸಬೇಕು. ಉತ್ತರ ಭಾಗದ ವಿದ್ಯಾರ್ಥಿಗಳು ದಕ್ಷಿಣಕ್ಕೆ ಹೋಗಿ ಅಲ್ಲಿನ ಭಾಷೆಗಳನ್ನು ಕಲಿಯಲಾರಂಭಿಸಬೇಕು. ಆಗ 'ಹಿಂದಿ ಇಂಪೀರಿಯಲಿಸಂ' ಕೂಗು ಕೇಳಿಸಲೊಲ್ಲದು" ಎಂಬುದಾಗಿ ಆಚಾರ್ಯರು ತಿಳಿಸಿದರು.

ಭಾರತೀಯ ಹಿಂದಿ ಪರಿಷತ್ತಿನವರು ಏರ್ಪಡಿಸಿದ ಹಿಂದಿ ತಜ್ಞರ ಎರಡು ದಿನಗಳ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಆಚಾರ್ಯ ನರೇಂದ್ರ ದೇವರು ಭಾಷಣ ಮಾಡಿದರು. ಭಾರತೀಯ ಹಿಂದಿ ಪರಿಷತ್ತಿನ ಅಧ್ಯಕ್ಷರಾದ ಡಾ. ದೀನದಯಾಳ್ ಗುಪ್ತಾರವರೂ, ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಹಿಂದಿ ಪ್ರಮುಖರಾದ ಡಾ. ಧೀರೇಂದ್ರ ವರ್ಮಾರವರೂ ಮಾತನಾಡಿ ರಾಷ್ಟ್ರೀಯ ಭಾಷೆಯಾದ ಹಿಂದಿಯನ್ನು ಅಭಿವೃದ್ಧಿಗೊಳಿಸುವ ಬಗ್ಗೆ ಅಭಿಪ್ರಾಯ ಸೂಚಿಸಿದರು.

ಭೂದಾನ ಯಜ್ಞದಿಂದ ರಾಮರಾಜ್ಯ ಸ್ಥಾಪನೆ.

"ಭೂದಾನ ಚಳುವಳಿ ಅಯಶಸ್ವಿಯಾದಲ್ಲಿ ಹಿಂಸಾತ್ಮಕ ಕ್ರಾಂತಿ ಅನಿವಾರ್ಯವಾದೀತು. ಆದರೆ ನಮ್ಮ ದೇಶದಲ್ಲಿ ಅಹಿಂಸಾತ್ಮಕ ಕ್ರಾಂತಿಯಾಗಬೇಕೆಂದು ದೇವರ ಇಚ್ಛೆಯಿದೆಯೆಂದು ನಾನು ನಂಬಿದ್ದೇನೆ" ಎಂಬುದಾಗಿ ವಿನೋಬಾಭಾವೆಯವರು ಪ್ರಾರ್ಥನಾ ಸಭೆಯೊಂದರಲ್ಲಿ ಹೇಳಿದರು.

ಅವರಿನ್ನೂ ಹೇಳಿದ್ದೇನೆಂದರೆ:– "ನನ್ನ ಚಳವಳಿ ಅಯಶಸ್ವಿಯಾದರೆ ನಾನೇನು ಮಾಡುವೆ ಎಂದು ನನ್ನ ಮಿತ್ರರೊಬ್ಬರು ಕೇಳಿದರು. ದೇವರಿಂದ ಪ್ರೇರಿತವಾದ ಚಳುವಳಿ ಭೂದಾನ ಚಳವಳಿ ಎಂದು ತಿಳಿದಿರುವ ನನಗೆ ಇಂಥ ಪ್ರಶ್ನೆ ಸಾಮಾನ್ಯವಾಗಿ ಕಾಡುವದಿಲ್ಲ. ದುರ್ಬಲ ಮಾನವನಾದ ನನ್ನಲ್ಲಿ ಈ ಚಳುವಳಿಯನ್ನು ನಡೆಸುವ ಶಕ್ತಿಯಿಲ್ಲ. ಆದರೂ ನನ್ನ ಚಳುವಳಿ ಅಯಶಸ್ವಿಯಾದರೆ ಹಿಂಸಾತ್ಮಕ ಕ್ರಾಂತಿ ಅನಿವಾರ್ಯವಾಗುವದು ಎಂದು ನಾನು ಉತ್ತರವಿತ್ತೆ. ದೇವರ ಇಚ್ಛೆಯ ವಿರುದ್ಧ ಏನೂ ಸಂಭವಿಸದು. ಆತನಿಗೆ ನಮ್ಮ ಸಂಪೂರ್ಣ ವಿನಾಶ ಇಷ್ಟವಾಗಿದ್ದರೆ ನಾವು ವಿವೇಕ ಶೂನ್ಯರಂತೆ ವರ್ತಿಸುವಂತಾದೀತು. ಅಂಥ ಪ್ರಸಂಗದಲ್ಲಿ ದೇವರ ಇಚ್ಛೆಯಂತೆ ನಾನು ಸಹ ಖಡ್ಗಧಾರಿಯಾದೇನು. ಆದರೆ ಈಗ ನಡೆದಿರುವ ಘಟನೆಗಳನ್ನು ನೋಡಿದಾಗ ತಾವು ತಮ್ಮ ಭೂಮಿಯನ್ನು ಬಿಟ್ಟು ಕೊಡಬೇಕೆಂಬ ಭಾವನೆ ಶ್ರೀಮಂತರಲ್ಲಿ ಉಂಟಾಗುವಂಥಾ ಪರಿಸ್ಥಿತಿ ಉಂಟಾಗುತ್ತಿರುವಾಗ ನಮ್ಮ ದೇಶದಲ್ಲಿ ಅಹಿಂಸಾತ್ಮಕ ಕ್ರಾಂತಿಯಾಗಬೇಕೆಂಬುದೇ ದೇವರ ಇಚ್ಛೆಯಾಗಿದೆಯೆಂದು ಕಾಣುತ್ತದೆ. ಆದುದರಿಂದ ನಾವು ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಯನ್ನು ಶಾಂತ ರೀತಿಯಲ್ಲಿ ಸಾಧಿಸುವ ಈ ಘನ ಕಾರ್ಯದಲ್ಲಿ ಮನಸಾ ಪ್ರಯತ್ನಿಸೋಣ."

ಹಜಾರಿ ಬಾಗ ಜಿಲ್ಲೆಯು ಇದುವರೆಗೆ ೩೬೫೦೦೦ ಎಕರೆ ಭೂಮಿಯನ್ನು ಭೂದಾನ ಯಜ್ಞಕ್ಕೆ ದಾನ ಮಾಡಿ ಭೂದಾನ ವಿಕ್ರಮ ಸ್ಥಾಪಿಸಿದೆ.

ನಡಿಯಾದದಲ್ಲಿ ಸೇರಿದ ರಚನಾತ್ಮಕ ಕಾರ್ಯಕರ್ತರ ಪರಿಷತ್ತಿಗೆ ಕಳಿಸಿದ ಸಂದೇಶದಲ್ಲಿ ಆಚಾರ್ಯ ವಿನೋಬಾ ಭಾವೆಯವರು ಭೂದಾನ ಯಜ್ಞವು ಪ್ರತಿಯೊಂದು ಹಳ್ಳಿಯಲ್ಲಿ ರಾಮರಾಜ್ಯವನ್ನು ಸ್ಥಾಪಿಸುವದರಿಂದ ವಿಧಾಯಕ ಕಾರ್ಯಕರ್ತರು ತಮ್ಮೆಲ್ಲ ವೇಳೆಯನ್ನು ಭೂದಾನ ಯಜ್ಞ ಕಾರ್ಯಕ್ಕಾಗಿ ಉಪಯೋಗಿಸಬೇಕು ಎಂದು ಹೇಳಿದ್ದಾರೆ.

ಬಾಣೆ ಜಾಗಕ್ಕೆ ಹೊಸ ಕಂದಾಯ.

— ಲೇಖಕ:- " ನಿರಂಜನ "

ಯಾವುದೇ ಒಂದು ಹೊಸ ಕಂದಾಯ ಹಾಕಬೇಕಾದರೂ ಆ ಕಂದಾಯ ಹೇರಲ್ಪಡುವ ಜನರ ಸ್ಥಿತಿಗತಿಗಳನ್ನು ಪರಿಶೀಲಿಸಿ, ಆ ಕಂದಾಯದ ಬಗ್ಗೆ ಅವರು ಹೇಳುವ ಅಭಿಪ್ರಾಯಗಳನ್ನು ತೆಗೆದುಕೊಂಡು ಕಂದಾಯ ವಿಧಿಸುವದು ಕ್ರಮಬದ್ಧವಾದುದು. ಕಂದಾಯವು ಯಾವ ಕಾರಣಕ್ಕಾಗಿ ಹಾಕಲ್ಪಡುತ್ತಿದೆ ಮತ್ತು ಅದರಿಂದ ಜನತೆಗೆ ದೊರೆಯುವ ಪ್ರತಿಫಲವೇನು ಎಂಬುದನ್ನು ವಿವರಿಸಿ ಜನತೆಗೆ ತಿಳಿಸಿದರೆ ಯಾರೂ ಕೂಡ ನ್ಯಾಯಬದ್ಧವಾದ ಕಂದಾಯಕ್ಕೆ ವಿರೋಧಿಸಲಾರರು.

ಕೊಡಗಿನಲ್ಲಿ ಈ ವರ್ಷ ಅನೇಕ ಹೊಸ ಕೆಲಸಗಳನ್ನು ಕೈಕೊಳ್ಳುವ ಸೂಚನೆಗಳನ್ನು ಬಡ್ಜೆಟ್ಟಿನಲ್ಲಿ ಕೊಡಲಾಗಿದೆ. ಈ ವರ್ಷ ಪಂಚವಾರ್ಷಿಕ ಯೋಜನೆಗೆಂದು ಸುಮಾರು ೫೭ ಲಕ್ಷ ರೂಪಾಯಿಗಳನ್ನು ಇಡಲಾಗಿದೆ. ಇಷ್ಟು ದೊಡ್ಡ ಖರ್ಚು ಮಾಡುತ್ತಿರುವಾಗ ಅದಕ್ಕೆ ಸರಿಯಾಗಿ ಆದಾಯವನ್ನು ಹೆಚ್ಚಿಸುವದು ಸರಕಾರದ ಧರ್ಮ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ.

ಕೊಡಗಿನ ಸರಕಾರವು ಈ ದೃಷ್ಟಿಯಿಂದ ಬಾಣೆ ಜಾಗಕ್ಕೆ ನಾಲ್ಕಾಣೆಯಂತೆ ಕಂದಾಯ ಹಾಕುವ ನಿರ್ಣಯವನ್ನು ಮಾಡಿಕೊಂಡು ಈ ಬಾಬಿನಿಂದ ರೂ. ೫೦೦೦೦ ಬರುತ್ತದೆಂದು ೧೯೫೩—೫೪ ರ ಬಡ್ಜೆಟ್ಟಿನಲ್ಲಿ ಲೆಕ್ಕ ಕಟ್ಟಿದ್ದಾರೆ. ನಿಯಮ ಮೇರೆ ಈ ಹೊಸ ಕಂದಾಯದ ಏರ್ಪಾಡಿಗೆ ಮೊದಲು ಈ ವಿಚಾರದಲ್ಲಿ ಜನತೆಗೆ ಮಾಹಿತಿ ಕೊಡಬೇಕಾಗಿತ್ತು. ಕಡೆಗೆ ಶಾಸನ ಸಭೆಯ ಸದಸ್ಯರನ್ನಾದರೂ ಕೇಳಿದ್ದರೆ ತಮ್ಮ ಕ್ಷೇತ್ರದ ಜನರ ಅಭಿಮತ ತೆಗೆದು ಅವರು ಅಭಿಪ್ರಾಯ ಕೊಡುತ್ತಿದ್ದರು. ಹಾಗೆ ಮಾಡದ್ದು ಸಮಂಜಸವಲ್ಲವೆನ್ನಬೇಕು.

ಈ ವಿಚಾರವಾಗಿ ಮಾತಾಡುತ್ತಾ ಮುಖ್ಯ ಮಂತ್ರಿಯವರು ತಾವು ರೆವಿನ್ಯೂ ರೆಗ್ಯುಲೇಶನಿನ ಮೇರೆ ಮಾಡಿರುವೆವೆಂದೂ, ಆ ಕಾನೂನು ಇರುವ ವರೆಗೆ ಅದರಲ್ಲಿ ತಪ್ಪಿಲ್ಲವೆಂದೂ, ಕಳೆದ ಬಾರಿ ಸಮರಿ ಕಂದಾಯ ಜಾರಿಯಲ್ಲಿ ತರುವ ಸೂಚನೆಯನ್ನು ಇದೇ ರೀತಿ ಕೌನ್ಸಿಲಿನಲ್ಲಿ ತರಲಾಗಿತ್ತೆಂದೂ ಹೇಳಿದರು. ಈ ಮಾತುಗಳು ಇಂದಿನ ಸಮಯದಲ್ಲಿ, ಜನಾನುರಾಗಿ ಸರಕಾರದ ಸೂತ್ರಗಳನ್ನು ಹಿಡಿದವ ಜನಪ್ರತಿನಿಧಿಗಳ ಬಾಯಿಂದ ಬರಬೇಕಿರಲಿಲ್ಲ. ಲೇಂಡ್ ರೆವಿನ್ಯೂ ರೆಗ್ಯುಲೇಶನ್ ಒಬೀರಾಯನ ಕಾಲದ್ದು. ಅದರಲ್ಲಿ ಯಾರನ್ನೂ ವಿಚಾರಿಸದೆ ತಮ್ಮ ಮನಬಂದಂತೆ ಒಂದು ಆಜ್ಞೆಯನ್ನು ಹೊರಡಿಸಿ ಬೇಕಾದ ಕಂದಾಯ ಹಾಕಬೇಕೆಂದಿರಬಹುದಾದರೂ ಈ ಜನತಾ ಸರಕಾರದಲ್ಲಿ ಅದನ್ನು ಉಪಯೋಗಿಸಿ ಲೇಂಡ್ ರೆವಿನ್ಯೂ ರೂಲ್ ಇರುವ ವರೆಗೆ ತಾವು ಮಾಡಿದ್ದು ತಪ್ಪಲ್ಲವೆನ್ನುವದು ಸರಿಯಲ್ಲ. ಕಳೆದ ಬಾರಿ ಸಮರಿ ಕಂದಾಯವನ್ನು ಇದೇ ರೀತಿ ಕೌನ್ಸಿಲಿನಲ್ಲಿ ತರಲಾಗಿತ್ತು ಎಂದು ಮಂತ್ರಿಗಳು ಹೇಳುವದು ಸಮಂಜಸವಲ್ಲ. ಏಕೆಂದರೆ ಸಮರಿ ಕಂದಾಯ ಹಾಕಕೂಡದೆಂದೂ, ಅದು ಪ್ರಜಾ ಜವಾಬ್ದಾರಿ ತತ್ವಕ್ಕೆ ಸರಿಯಲ್ಲವೆಂದೂ ಇದನ್ನು ಬರೆಯುತ್ತಿರುವ ನಾನೂ, ದೇಶದ ಬಹು ಜನರೂ ವಿರೋಧಿಸಿರುವರು. ಇಂದು ಮುಖ್ಯ ಮಂತ್ರಿಯಾಗಿರುವವರೂ ಅಂದು ಅದನ್ನು ವಿರೋಧಿಸಿದ್ದಾರೆ. ಅಂದು ವಿರೋಧಿಸಿ ತಪ್ಪು ತಿದ್ದಿದವರು ಇಂದು ಅದೇ ತಪ್ಪನ್ನು ಮಾಡಿ ಅದು ಸರಿಯೆಂದು ವಾದಿಸುವದು ವಿಚಿತ್ರವಾಗಿದೆ.

ಜನತೆಯನ್ನು ಕೇಳಿ ಕಂದಾಯ ಹಾಕುವದು ಸಾಧ್ಯವಿಲ್ಲ ಎಂಬುದಾಗಿ ಮಂತ್ರಿಗಳು ಉದ್ಗಾರ ತೆಗೆದರು. ಕೇಂದ್ರ ಸರಕಾರವು ಹಾಗೆ ಮಾಡುತ್ತಿಲ್ಲವೆಂದರು. ಆದರೆ ಜನರ ಯಾ ಪ್ರತಿನಿಧಿಗಳ ಅನುಮತಿ ಅಭಿಪ್ರಾಯ ತೆಗೆಯದೆ ಕೇಂದ್ರ ಸರಕಾರವಾಗಲೀ, ಬೇರೆ ಯಾವುದೇ ಸಂಸ್ಥಾನವಾಗಲೀ ಎಲ್ಲಿ ಯಾವಾಗ ಈ ರೀತಿಯ ಹೊಸ ಕಂದಾಯ ವಿಧಿಸಿದೆಯೆಂದು ಅವರು ಹೇಳಲಿಲ್ಲ. ಜನತೆಗೆ ಅರುವಿಕೆ ಕೊಟ್ಟು ಅದರ ಆವಶ್ಯಕತೆಯನ್ನು ತಿಳಿಸಿ, ಅವರ ಸಹಕಾರವನ್ನು ಪಡೆದು ಅವರ ಹಿತವಂತೆ ಆಡಳಿತ ನಡೆಸುವದು ಪ್ರಜಾಪ್ರಭುತ್ವವಲ್ಲದೆ ಈ ಕಂದಾಯದ ಬಗ್ಗೆ ಸರಕಾರ ಅನುಸರಿಸಿದ ಮಾರ್ಗ ಸಮರ್ಪಕವೆನಿಸಲಾರದು.

ಹಾಗೆ ತುರಿತದಿಂದ ಈ ಕಂದಾಯ ಹೇರುವ ಆವಶ್ಯಕತೆಯಾದರೂ ಏನಿದ್ದಿತು? ಸುಮಾರು ೬೭ ಲಕ್ಷದ ವರೆಗೆ ಖೋತೆ ಇರುವ ಬಡ್ಜೆಟ್ಟಿನಲ್ಲಿ ಇನ್ನೊಂದು ಅರ್ಧ ಲಕ್ಷ ಹೆಚ್ಚಿನ ಖೋತೆ ತೋರಿಬಂದಿದ್ದರೆ ಪ್ರಮಾದವೇನೂ ಇರಲಿಲ್ಲ. ದೇಶದಲ್ಲಿ ಕಾಂಗ್ರೆಸಿಗೆ ಬೆಂಬಲವಿದ್ದು, ಕಾಂಗ್ರೆಸ್ ಸರಕಾರ ನಡೆಯುತ್ತಿದೆಯೆಂಬುದೇನೋ ಸಹಜ. ಆದರೆ ಬಹುಮತವಿದೆಯೆಂಬ ಕಾರಣದಿಂದ ಯದ್ವಾತದ್ವ ವರ್ತಿಸುವದು ಸರಿಯಲ್ಲ. ಬಹುಮತವಿದೆ, ತಾವು ಹೇಳಿದ್ದು ನಡೆಯುತ್ತದೆಯೆಂದು ವಾದಿಸುವದೂ ಯೋಗ್ಯವಲ್ಲ. ಸರಕಾರದ ಆಡಳಿತವು ದೇಶದ ಕಾಂಗ್ರೆಸಿಗರಿಗೆ ಮಾತ್ರವಲ್ಲ. ಎಲ್ಲಾ ಅಭಿಪ್ರಾಯದ ಜನರಿಗೂ ಬೇಕಾಗಿ ಆಡಳಿತ. ಹಾಗಿರುವಾಗ ತತ್ವಬದ್ಧವಾಗಿ ಪ್ರತಿಯೊಂದು ಕೆಲಸವೂ ನಡೆಯುವದು ಆವಶ್ಯ. ಬಡ್ಜೆಟ್ಟಿನಲ್ಲಿ ಏಕಾ ಏಕಿ ಇದನ್ನು ಸೇರಿಸಿ ಟೀಕಾಟಿಕ್ಕೆ ಆಸ್ಪದ ಕೊಡುವ ಬದಲು ಆ ಬಗ್ಗೆ ಒಂದು ಮಸೂದೆಯನ್ನು ತಂದು ಜನಾಭಿಮತವನ್ನು ಅರಿತು ವರ್ತಿಸುವ ಪ್ರಯತ್ನ ಮಾಡಿದ್ದರೆ ಯಾರಿಗೂ ಯಾವ ನಷ್ಟವೂ ಇರಲಿಲ್ಲ. ಆದರೆ ಈ ಪ್ರಜಾಪ್ರಭುತ್ವದ ರಾಜಮಾರ್ಗವನ್ನು ಬಿಟ್ಟು ಬಹುಮತವಿದೆ ಅದ್ದರಿಂದ ಎಲ್ಲವೂ ಸರಿಹೋಗುತ್ತದೆ ಎಂದು ವರ್ತಿಸುವದು ಉತ್ತಮ ಆದರ್ಶವಲ್ಲವೆಂದು ಹೇಳಬೇಕಾಗಿದೆ.

ನಾಲ್ಕಾಣೆ ಎಕರೆಗೆ ಕಂದಾಯ ಕೊಡುವದು ಯಾರಿಗೂ ಭಾರವೆನಿಸದು ಎಂಬ ವಾದವನ್ನು ಮಂತ್ರಿಗಳೂ ಕೆಲವು ಸದಸ್ಯರೂ ಹೇಳಿದ್ದರು. ಆದರೆ ಎಕರೆಗೆ ನಾಲ್ಕಾಣೆಯಂತೆ ಕಂದಾಯ ಕೊಡಲು ಶಕ್ತಿ ಇಲ್ಲದ ಬಹು ಜನ ಬಡ ರೈತರು ಕೊಡಗಿನಲ್ಲಿದ್ದಾರೆಂಬುದನ್ನು ಈ ಜನ ಪ್ರತಿನಿಧಿಗಳು ಅರಿತಿರಬೇಕು. ಮೈಗೆಬಟ್ಟೆ ಇಲ್ಲದೆ, ಹೊಟ್ಟೆಗೆ ಸರಿಯಾಗಿ ಅನ್ನವಿಲ್ಲದೆ ಕಷ್ಟಪಡುತ್ತಿರುವ ಹಲವು ಬಡ ಜನರ ಬಾಳಿನ ಹೊರಲಾರದ ಭಾರಕ್ಕೆ ಎಕರೆಗೆ ನಾಲ್ಕಾಣೆ ಕಂದಾಯದ ಭಾರವು ಕಡಿಮೆ ಏನಲ್ಲ. ಅನಾಯಾಸವಾಗಿ ತಿಂಗಳಿಗೆ ನೂರುಗಟ್ಟಲೆಯಲ್ಲಿ ಹಣ ಬರುತ್ತಿರುವವರಿಗೆ ನಾಲ್ಕಾಣೆಯ ಕಂದಾಯ ಭಾರವೆಂದು ತೋರಲಾರದು. ಆದರೆ ದೇಶದ ಜನತೆಯ ಸ್ಥಿತಿಯೆಲ್ಲವೂ ಹಾಗಿಲ್ಲ.

ಇದರಿಂದ ಸರಕಾರವು ಕಂದಾಯ ಹಾಕಬಾರದೆಂದು ನಾನು ವಾದಿಸುತ್ತಿಲ್ಲ. ಜನತೆಗೆ ಬೇಕಾದ ಹಿತ ಕೆಲಸಗಳನ್ನು ಮಾಡಿ ಕೊಡಲು ಸರಕಾರಕ್ಕೆ ಹಣಬೇಕು. ಹಣವು ಸರಕಾರಕ್ಕೆ ಆಕಾಶದಿಂದ ಬರುವದಿಲ್ಲ. ಕಂದಾಯ ಹಾಕಲೇಬೇಕು. ಆದರೆ ಕೌಟಿಲ್ಯನು ಹೇಳಿದ ರೀತಿ ಸಮುದ್ರದಿಂದ ಆವಿಯ ರೂಪದಲ್ಲಿ ಜಲವನ್ನು ಪಡೆದು ಸರ್ವ ಎಡೆಗೂ ಅಂದರೆ ಬಾಣೆ ಬರಡುಗಳಿಗೂ ಹಂಚುವಂತೆ ಧನಿಕರಿಂದ ಕಂದಾಯದ ರೂಪದಲ್ಲಿ ಹಣ ಸಂಗ್ರಹಿಸಿ ಸರ್ವರ ಹಿತಕ್ಕಾಗಿ ಖರ್ಚುಮಾಡಬೇಕು. ಆದರಿಂದ ಬಾಣೆ ಜಾಗವಿರುವ ಪ್ರತಿಯೊಬ್ಬನಿಗೂ ಈ ಕಂದಾಯ ಹೇರದೆ ಶ್ರೀ ಕೆ. ಪಿ. ಕರುಂಬಯ್ಯನವರು ಸೂಚಿಸಿದಂತೆ ಹತ್ತು ಎಕರೆಗಳ ಮೇಲೆ ಜಾಗವಿರುವವರಿಗೆ ಮಾತ್ರ ಈ ಕಂದಾಯ ಹಾಕುವದು ಸೂಕ್ತವಾಗುವದು. ಈ ನೀತಿಯನ್ನು ಯಾವುದೇ ಜನತಾ ಸರಕಾರವಾದರೂ ಮನದಲ್ಲಿಟ್ಟು ಅದರಂತೆ ವರ್ತಿಸಬೇಕು.

ಹಿಂದೂದೇಶದ ಭೂ ವಿತರಣಾ ಪದ್ಧತಿಯು ಸಮರ್ಪಕವಾಗಿಲ್ಲವೆಂಬ ಮಾತನ್ನು ಎಲ್ಲರೂ ಒಪ್ಪುತ್ತಾರೆ. ಇದನ್ನು ಸರಿಪಡಿಸಲು ಬಾಣೆ ಜಾಗಕ್ಕೆ ಎಕರೆಗೆ ನಾಲ್ಕಾಣೆ ಕಂದಾಯ ವಿಧಿಸುವದು ಮಾರ್ಗವೆ? ಕೊಡಗು ಸರಕಾರವು ನಿಜವಾಗಿಯೂ ಬಡಜನರಿಗೆ ಹಿತಬಯಸುವದಿದ್ದರೆ ಯಾವುದೇ ಉಪಯೋಗ ಮಾಡದೆ ಸಾವಿರಗಟ್ಟಲೆ ಬಾಣೆ ಜಾಗ ಇಟ್ಟುಕೊಂಡು ದೊಡ್ಡವರೆನಿಸಿಕೊಂಡವರ ಹೆಚ್ಚಿನ ಜಾಗವನ್ನು ಕಾನೂನು ಮೂಲಕ ವಶಪಡಿಸಿಕೊಂಡು ಜಾಗವಿಲ್ಲದವರಿಗೆ ಹಂಚಲಿ. ಈ ಮಾರ್ಗ ಕೈಕೊಳ್ಳುವದನ್ನು ಬಿಟ್ಟು ಒಂದೆರಡು ಎಕರೆ ಬಾಣೆ ಇರುವ ಬಡವನಿಗೂ ಕಂದಾಯ ವಿಧಿಸುವದರಿಂದ ಭೂವಿತರಣಾ ಸಮಸ್ಯೆಯು ಹೇಗೆ ಪರಿಹಾರವಾದೀತು?

ತಾವು ಹಾಕಿದ ಕಂದಾಯವನ್ನು ಸಮರ್ಥಿಸಲು ಮುಖ್ಯ ಮಂತ್ರಿಗಳು ಆಚಾರ್ಯ ವಿನೋಬಾರವರ ಪವಿತ್ರ ಹೆಸರನ್ನೂ ತಂದರು. ತಾನು ಈ ಕಂದಾಯ ಹಾಕುವದನ್ನು ಆಚಾರ್ಯ ವಿನೋಬಾರವರ ಭೂದಾನ ಚಳವಳಿಯ ದೃಷ್ಟಿಯಿಂದ ನೋಡುವದಾಗಿ ಹೇಳಿದರು. ರಾಜಕೀಯ ಸಂದರ್ಭಗಳಲ್ಲಿ, ಅಧಿಕಾರ ಪೀಠದಲ್ಲಿರುವವರು ಗಾಂಧಿ ಮೊದಲಾದವರ ಹೆಸರೆತ್ತಿ ತಮ್ಮ ಹಠಸಾಧನೆ ಮಾಡುವದು ಹೊಸದೇನಲ್ಲ. ಆದರೆ ಎಕರೆಗೆ ನಾಲ್ಕಾಣೆ ಖಡ್ಡಾಯ ಕಂದಾಯ ವಿಧಿಸುವದಕ್ಕೂ ಆಚಾರ್ಯರ ಹೃದಯ ಪರಿವರ್ತನೆಯ ಭೂದಾನ ಚಳವಳಿಗೂ ಸಂಬಂಧವೇನು? ಜನತೆಯನ್ನು ಕೇಳದೆ, ಅವರ ಶಕ್ತಿ, ಸ್ಥಿತಿಗಳನ್ನು ಅರಿಯದೆ ವಿಧಿಸುವ ಕಂದಾಯವು ಹಿಂಸಾಮಾರ್ಗವೆನ್ನಬಹುದು. ಈ ಕಂದಾಯ ವಿಧಿಸುವಿಕೆಯಿಂದ ಭೂವಿತರಣಾ ಕ್ರಮದಲ್ಲಿ ಆಗಬಹುದಾದ ಬದಲಾವಣೆ ಏನೆಂದು ನನಗರ್ಥವಾಗುವದಿಲ್ಲ. ಬದಲು ಕೇವಲ ದೊಡ್ಡವರಿಗೆ, ಹೆಚ್ಚು ಬಾಣೆ ಜಾಗವಿರುವವರಿಗೆ ಈ ಕಂದಾಯ ವಿಧಿಸಿದ್ದರೆ ಆಗ ಒಪ್ಪಬಹುದಿತ್ತು. ಆದರೆ ವಿನೋಬಾರ ಭೂವಿತರಣೆ ತತ್ವದಂತೆ ಇಂದು ಒಬ್ಬನಿಗೆ ಒಂದು ಎಕರೆ ಜಾಗ ದೊರೆತರೆ ಅದರ ಮೇಲೂ ಬೀಳಲಿರುವ ಈ ಕಂದಾಯವನ್ನು ವಿನೋಬಾರ ಹೃದಯ ಪರಿವರ್ತನೆಯ ಅಹಿಂಸಾತ್ಮಕ ಚಳವಳದ ದೃಷ್ಟಿಯಿಂದ ನೋಡುವದೆಂತು! ಮುಖ್ಯ ಮಂತ್ರಿಗಳ ದೃಷ್ಟಿ ಬಹು ವಿಚಿತ್ರವಿರಬೇಕು. ಬಿಸಿ ಹಾಗೂ ಶೀತ ಎರಡನ್ನೂ ಜೊತೆಯಲ್ಲಿ ಉಸಿರಾಡಬಲ್ಲ ರಾಜಕಾರಣಿಗಳಂತೆ ಹಿಂಸೆ ಮತ್ತು ಅಹಿಂಸೆ ಎರಡನ್ನೂ ಒಂದೇ ದೃಷ್ಟಿಯಿಂದ ನೋಡಬಲ್ಲ ಇವರು-ಶಾಸನ ಸಭಾಸದರನ್ನು ಮಂತ್ರವಾದಿಗಳೆಂದು ಕರೆದ ಶ್ರೀ ಸಿ. ಎ. ಮಂದಣ್ಣನವರ ಮಾತಿನಲ್ಲಿ ಹೇಳುವದಿದ್ದರೆ-ನಿಜವಾ ಮಂತ್ರವಾದಿಯೇ ಇರಬೇಕು.

ಒಟ್ಟಾರೆ ನನ್ನಭಿಪ್ರಾಯವಿಷ್ಟೆ. ಜನಹಿತ ಕೆಲಸಕ್ಕಾಗಿ ಕಂದಾಯ ವಿಧಿಸುವದು ತಪ್ಪಲ್ಲ. ಆದರೆ ಅಂಥಾ ಕಂದಾಯವು ಬಡವನ ಹೆಗಲಿಗೆ ಭಾರವಾಗಿ ಆತನ ಜೀವನವನ್ನು ಹೆಚ್ಚು ನೋವಿಗೆ ಗುರಿ ಮಾಡಬಾರದು. ಯಾವುದೇ ಹೆಚ್ಚಿಯಾದರೂ ಕ್ರಮಬದ್ಧವಾಗಿರಬೇಕಲ್ಲದೆ ಹತ್ತು ಜನರು ಮೆಚ್ಚುವಂತಿರಬೇಕು. ಬಹುಮತವಿದೆಯೆಂದು ನಿರಂಕುಶ ಮಾರ್ಗವನ್ನು ಅನುಸರಿಸುವದು ಈ ಜನತಾ ಯುಗದಲ್ಲಿ ಸಲ್ಲದು. ಮೇಲಾಗಿ ತಪ್ಪನ್ನು ಎತ್ತಿ ತೋರಿಸಿದಾಗ ಅದನ್ನು ಒಪ್ಪಿ ಸರಿಪಡಿಸುವದು ಘನತೆಯಲ್ಲದೆ ಅದರ ಮೇಲೆ [illegible] ಬೀಳುವದು ಸಮಂಜಸವಲ್ಲ. ಒಟ್ಟಾರೆ ಈ ಕಂದಾಯವು ಬಡವರ ಹೆಗಲ ಮೇಲೇರದ ದೊಡ್ಡವರು, ಧನಿಕರಿಂದ ತೆರಲ್ಪಡುವಂತಾಗಲೀ ಎಂಬುದೇ ನನ್ನ ಬಯಕೆ. ಅದಾದರೂ ಶಾಸನಬದ್ಧವಾದ ಮಸೂದೆಯನ್ನು ತಂದು ಜನತೆಯ ಅಭಿಮತವನ್ನರಿತು ಜಾರಿಗೆ ಬರಲಿ.

—೦।೦—

ಪ್ರ ಕ [illegible] ಸೂಗಪ್ಪನವರು, "ಕೊಡಗು" ಏಜೆಂಟರು ಸೋಮವಾರಪೇಟೆ [illegible]

ಕೊಡಗು

ತಾರೀಕು ೧೦ ಏಪ್ರಿಲ್ ೧೯೫೨ನೇ ಶುಕ್ರವಾರ

ಕಾಫಿಯ ಬೆಲೆ.

ಕೆಲವು ವರ್ಷಗಳ ಹಿಂದೆ ಕಾಫಿಯ ಬೆಲೆಯು ಬಹಳ ಇಳಿದು ಹೋಗಿ ಕೊಡಗಿನಲ್ಲಿ ಕಾಫಿ ವ್ಯವಸಾಯವು ಮೂಲೆಗೆ ಬೀಳುವ ಸಂದರ್ಭ ಬಂದಿತ್ತು. ಆದರೆ ಇಂಡಿಯಾ ಸರಕಾರದವರು ಕಾಫಿ ಪ್ಲಾಂಟರುಗಳ ಕೋರಿಕೆ ಮೇರೆ ಸುಮಾರು ೭ ಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟು ಈ ವ್ಯವಸಾಯವನ್ನು ಇಲ್ಲಿ ಉಳಿಯುವಂತೆ ಸಹಾಯನೀಡಿತವರು. ನಂತರ ಹಿಂದೂಸ್ಥಾನದಲ್ಲಿ ಕಾಫಿ ಬೆಳೆಸುತ್ತಿರುವ ಮದ್ರಾಸು ಮೈಸೂರು ಮತ್ತು ಕೊಡಗು ಪ್ರಾಂತಗಳ ಕಾಫಿ ಪ್ಲಾಂಟರುಗಳು ಇಂಡಿಯಾ ಸರಕಾರದ ಸಹಾಯವನ್ನು ಪಡೆದು ಕಾಫಿ ಬೋರ್ಡನ್ನು ಸ್ಥಾಪಿಸಿದರು. ಈ ಸಂಸ್ಥೆಯ ಮೂಲಕ ಕಾಫಿಯ ವ್ಯಾಪಾರವನ್ನೆಲ್ಲಾ ತನ್ನ ಹತೋಟಿಯಲ್ಲಿ ನಡೆಸಿ ಕಾಫಿ ಮಾರ್ಕೆಟಿನಲ್ಲಿ ದರವನ್ನು ಒಂದು ಸ್ಥಿಮಿತಕ್ಕೆ ತಂದರು. ಅಲ್ಲದೆ ಕಾಫಿಯ ಉಪಯೋಗವು ದಕ್ಷಿಣ ಹಿಂದೂಸ್ಥಾನದಲ್ಲಿ ಸ್ವಲ್ಪ ಮಟ್ಟಿಗೆ ಮಾತ್ರ ಇದ್ದುದನ್ನು ಹೆಚ್ಚಿಸಲಿಕ್ಕೂ ಮತ್ತು ಉತ್ತರ ಹಿಂದೂಸ್ಥಾನದಲ್ಲಿ ಈ ಅಭ್ಯಾಸವನ್ನು ನೆಲೆಗೊಳಿಸಲಿಕ್ಕೂ ತುಂಬಾ ಪ್ರಚಾರವನ್ನು ಮಾಡುತ್ತಾ ಬಂದರು. ಈ ಮೊದಲು ಹೆಚ್ಚಿನ ಕಾಫಿಯು ಪರದೇಶಗಳಿಗೆ ರವಾನಿಸಲ್ಪಡುತ್ತಿದ್ದರೂ ಬೋರ್ಡಿನ ಈ ಪ್ರಚಾರದ ಫಲಿತಾಂಶವಾಗಿ ಹಿಂದೂ ದೇಶದಲ್ಲಿ ಬೆಳೆಯುವ ಕಾಫಿಯು ಇಲ್ಲಿಯ ಜನರ ಬೇಡಿಕೆಗೇ ಈಗ ಸಾಲದಾಗಿದೆ. ಈ ಕಾರಣವಾಗಿ ಕಾಫಿಯ ಬೆಲೆಯು ಸ್ವಲ್ಪ ಮಟ್ಟಿಗೆ ಏರುತ್ತಾ ಬಂದಿದೆ. ಈ ದೆಸೆಯಿಂದ ಕಾಫಿ ಉಪಯೋಗಿಸುವವರು ಇಂಡಿಯಾ ಸರಕಾರಕ್ಕೆ ಮನವಿ ಮಾಡಿಕೊಂಡು ಇಂಡಿಯಾ ಸರಕಾರದವರು ಕಾಫಿಯ ಬೆಲೆಯನ್ನು ತಗ್ಗಿಸುವ ಆಲೋಚನೆ ಮಾಡುತ್ತಿರುವರು. ಅಲ್ಲದೆ ಕಾಫಿ ಬೋರ್ಡಿನ ರಚನೆಯನ್ನು ಕೂಡ ಬದಲಾಯಿಸುವ ಏರ್ಪಾಡು ಮಾಡುತ್ತಿರುವರು. ಇದನ್ನು ತಿಳಿದ ಕಾಫಿ ಬೋರ್ಡಿನವರೂ, ಪ್ಲಾಂಟರುಗಳೂ, ಸಂಬಂಧಿಸಿದ ಸರಕಾರಗಳೂ ಇಂಡಿಯಾ ಸರಕಾರದೊಂದಿಗೆ ಮಾತುಕತೆ ನಡೆಸುತ್ತಿರುವರು.

ಕೆಲವು ವರ್ಷಗಳ ಹಿಂದೆ ಇಂಡಿಯಾ ಸರಕಾರದವರು ಕಾಫಿ ವ್ಯವಸಾಯದ ಖರ್ಚನ್ನು ಅಜಮಾಯಿಸಿದ ಮೇರೆ ಕಾಫಿ ಬೋರ್ಡಿನವರು ಕಾಫಿಯ ಬೇಸಿಕ್ ಬೆಲೆಯನ್ನು ಪಾಯಿಂಟಿಗೆ ರೂ. ೩-೪-೦ ರಂತೆ ನಿಶ್ಚಯಿಸಿರುವರು. ಈಗ ಇಂಡಿಯಾ ಸರಕಾರದ ವಾಣಿಜ್ಯ ಮಂತ್ರಿಯವರು ಕಾಫಿಯ ಬೆಲೆಯನ್ನು ಪಾಯಿಂಟಿಗೆ ಇರುವ ರೂ. ೩-೪-೦ ಕ್ಕಿಂತಾ ಕಡಿಮೆ ಮಾಡಬೇಕೆಂದು ಸೂಚಿಸಿರುವರು. ಹೀಗೆ ಮಾಡುವದರಿಂದ ಕಾಫಿ ವ್ಯವಸಾಯಕ್ಕೆ ದೊಡ್ಡ ಧಕ್ಕೆಯಾಗುವದೆಂದು ಪ್ಲಾಂಟರುಗಳ ಅಭಿಪ್ರಾಯವಾಗಿದೆ.

ಈ ಸಂಬಂಧವಾಗಿ ಈ ತಾರೀಕು ೭ರಲ್ಲಿ ಕೇಂದ್ರದ ವಾಣಿಜ್ಯ ಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಒಂದು ಪ್ರಶ್ನೆಗೆ ಉತ್ತರವೀಯುತ್ತಾ— ಕಾಫಿ ಉಪಯೋಗಿಸುವವರ ಮನವಿಯ ಮೇರೆ ಕಳೆದ ಜುಲೈ ತಿಂಗಳಿಂದಲೇ ಕಾಫಿಯ ಬೆಲೆಯನ್ನು ಇಳಿಸಬೇಕೆಂಬ ಅಭಿಪ್ರಾಯಕ್ಕೆ ಕಾಫಿ ಬೋರ್ಡಿನ ಸಹಾಯವನ್ನು ಕೇಳಿದೆನು. ಕಳೆದ ಡಿಸೆಂಬರ್ ತಿಂಗಳಲ್ಲಿ ಬೆಂಗಳೂರಿನಲ್ಲಿ ನಡೆದ ಕಾಫಿ ಬೋರ್ಡಿನ ಮೀಟಿಂಗಿಗೆ ಹಾಜರಿದ್ದು ಅವರಿಗೆ ಕೆಲವು ಸಲಹೆಗಳನ್ನು ಕೊಟ್ಟೆನು. ಆದರೆ ಅಂದಿನಿಂದ ಈಚೆಗೆ ಕಾಫಿಯ ಬೆಲೆಯು ಏರುತ್ತಿಹೆಯಲ್ಲದೆ ಕಡಿಮೆಯಾಗಿಲ್ಲ. ಈ ವಿಚಾರದಲ್ಲಿ ಕಾಫಿ ಬೋರ್ಡು ಸರಕಾರದೊಡನೆ ಸಹಕರಿಸಿರುವದಿಲ್ಲ. ಬೋರ್ಡು ಸರಕಾರದೊಂದಿಗೆ ಸಹಕರಿಸದೆ ಸರಕಾರವು ತಮ್ಮೊಡನೆ ಸಹಕರಿಸಿಲಿಲ್ಲವೆಂದು ಹೇಳುವದು ವಾಡಿಕೆ. ಈ ವಿಚಾರವು ನ್ಯಾಯಾಂಗ ಇಲಾಖೆಯವರ ಆಲೋಚನೆಯಲ್ಲಿದೆ. ಅವರ ಸಲಹೆಯೊಂದಿಗೆ ಸರಕಾರವು ಯಾವ ತೀರ್ಮಾನವನ್ನು ಕೈಕೊಳ್ಳಬೇಕೆಂದು ಆಲೋಚಿಸುವದು—ಎಂದು ಹೇಳಿರುವರು.

ಈ ಹೇಳಿಕೆಯಿಂದ ಇಂಡಿಯಾ ಸರಕಾರವು ಕಾಫಿ ವ್ಯವಸಾಯದ ಹಿತಕ್ಕೆ ಬೆಲೆ ಕೊಡುವದಕ್ಕಿಂತಾ ಹೆಚ್ಚಾಗಿ ಉಪಯೋಗಿಸುವವರ ಹಿತಕ್ಕೆ ಬೆಲೆ ಕೊಡುತ್ತಿದೆಯೆಂದು ತೋರುತ್ತಿದೆ. ಹೇಗೂ ಬೆಲೆಯನ್ನು ಇಳಿಸುವ ನಿರ್ಣಯವನ್ನು ಮಾಡುವರೆಂಬುದು ಈ ಮಾತುಗಳಿಂದ ಸ್ಪಷ್ಟವಾಗುತ್ತದೆ. ಕಾಫಿಯ ಬೆಲೆಯನ್ನು ಒಂದು ಆರೋಗ್ಯಕರ ಮಿತಿಯಲ್ಲಿಡಬೇಕಾದುದು ಬೆಳೆಯುವವರ ಹಾಗೂ ಉಪಯೋಗಿಸುವವರ ಹಿತದೃಷ್ಟಿಯಿಂದ ಅವಶ್ಯವಾಗಿದೆ. ಆದರೆ ಬೆಳೆಸುವ ಖರ್ಚು ದೊರೆತು ಸ್ವಲ್ಪವಾದರೂ ಬೆಳೆಸುವವನಿಗೆ ಉಳಿತಾಯವಾಗುವಂತೆ ಬೆಲೆಯನ್ನು ನಿಶ್ಚಯಿಸಬೇಕಲ್ಲದೆ ಖರ್ಚಿಗಿಂತಾ ಬೆಲೆಯನ್ನು ಇಳಿಸಿಬಿಟ್ಟರೆ ಈ ವ್ಯವಸಾಯಕ್ಕೆ ದೊಡ್ಡ ಧಕ್ಕೆ ತಗಲುವದರಲ್ಲಿ ಸಂಶಯವಿಲ್ಲ.

ಕಳೆದ ವರ್ಷ ಇಡೀ ಹಿಂದೂಸ್ಥಾನದಲ್ಲಿ ಬೆಳೆದ ಸುಮಾರು ೨೧,೦೦೦ ಟನ್ ಕಾಫಿಯಲ್ಲಿ ಸುಮಾರು ೯೦೦೦ ಟನ್ ಕೊಡಗಿನಲ್ಲಿ ಬೆಳೆದಿದೆ. ಕೊಡಗಿನಲ್ಲಿ ಕಾಫಿ ವ್ಯವಸಾಯದ ವಿಸ್ತೀರ್ಣವು ಕಡಿಮೆಯಾಗಿದ್ದರೂ ಫಲಭರಿತವಾದ ಪ್ರದೇಶವಾದ ಕಾರಣ ಬೇರೆ ಯಾವ ಪ್ರತ್ಯೇಕ ಪ್ರಾಂತಕ್ಕಿಂತಾ ಹೆಚ್ಚು ಕಾಫಿ ಇಲ್ಲಿ ಬೆಳೆಯುತ್ತದೆ. ಈ ವ್ಯವಸಾಯದ ಮೇಲೆ ಕೊಡಗಿನ ಸಂಪತ್ತು ಬಹು ಮಟ್ಟಿಗೆ ಹೊಂದಿಕೊಂಡಿದೆ. ಈ ಕೈಗಾರಿಕೆಯು ಕೊಡಗಿನೊಳಗಿರುವವರಿಗೆ ಮಾತ್ರವಲ್ಲ, ಹೊರಗಿನಿಂದ ಬರುವವರನ್ನೂ ಸೇರಿಸಿ ಸುಮಾರು ೬೦೦೦೦ ಜನರಿಗೆ ಉದ್ಯೋಗ ಒದಗಿಸಿದೆ. ಮತ್ತು ಇಲ್ಲಿಯ ಕೆಲಸಗಾರರ ಜೀವನದ ಸ್ಥಿತಿಯು ಬೇರೆ ಪ್ರಾಂತಗಳಲ್ಲಿರುವದಕ್ಕಿಂತಾ ಉತ್ತಮವಾಗಿದೆ. ಇದೇ ಅಲ್ಲ; ಕೊಡಗು ಸರಕಾರಕ್ಕೂ ಆದಾಯ ತೆರಿಗೆಯ ರೂಪದಲ್ಲಿ ಸುಮಾರು ೧೨ ಲಕ್ಷ ವರಮಾನವು ಪ್ರಾಮುಖ್ಯವಾಗಿ ಈ ಕೈಗಾರಿಕೆಯಿಂದಲೇ ಬರುತ್ತಿದೆ. ಆದುದರಿಂದ ಕೊಡಗಿನ ಸರಕಾರ ಹಾಗು ಪ್ಲಾಂಟರುಗಳು ಕಾಫಿಯ ಬೆಲೆಯ ವಿಚಾರದಲ್ಲಿ ತುಂಬಾ ನಿಗವಿಡಬೇಕಾಗಿದೆ.

ಕೊಡಗು ಸರಕಾರವೂ ಪ್ಲಾಂಟರುಗಳೂ ಈ ಸಂಬಂಧ ಈಗಾಗಲೇ ಇಂಡಿಯಾ ಸರಕಾರದೊಂದಿಗೆ ಮನವಿ ಮತ್ತು ಪತ್ರ ವ್ಯವಹಾರಗಳನ್ನು ನಡೆಸುತ್ತಾ ಬಂದಿರುವದು ನಿಜ. ಆದರೆ ಇವುಗಳಿಂದ ಹೆಚ್ಚಿನ ಫಲಿತಾಂಶ ಉಂಟಾಗುವಂತೆ ಕಾಣಬರುವದಿಲ್ಲ. ವಾಣಿಜ್ಯ ಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಮೊನ್ನೆ ಕೊಟ್ಟ ಉತ್ತರವೇ ಇದಕ್ಕೆ ಸಾಕ್ಷಿಯಾಗಿದೆ. ಆದ ಕಾರಣ ಸಂಬಂಧಿಸಿದವರು ಈ ವಿಚಾರಕ್ಕೆ ಮತ್ತಷ್ಟು ಗಮನವಿತ್ತು ಪ್ರಯತ್ನಿಸಬೇಕಾಗಿದೆ. ಯೋಗ್ಯವಾದ ಬೆಲೆಯನ್ನು ನಿಶ್ಚೈಸಿ ಕೊಳ್ಳಲು ಸಕಾಲದಲ್ಲಿ ಪ್ರಯತ್ನಿಸದೆ ನಂತರ ದುಃಖಿಸಿ ಪ್ರಯೋಜನವಿಲ್ಲ. ಇಂಡಿಯಾ ಸರಕಾರವೂ ಕೂಡ ಬೆಳೆಯುವವರ ಮತ್ತು ಉಪಯೋಗಿಸುವವರ ಹಿತವನ್ನು ಕಾಯ್ದುಕೊಂಡು ಈ ಪ್ರಾಮುಖ್ಯವಾದ ವ್ಯವಸಾಯಕ್ಕೆ ಯೋಗ್ಯ ಬೆಂಬಲ ಕೊಡುವರೆಂದಾಗಿ ಆಶಿಸುತ್ತೇವೆ.

ವರ್ತಮಾನ.

ಕಳೆದ ೧೨ ದಿನಗಳಿಂದ ಪಾಲ್ಲೂರು ಅಮ್ಮಂಗಾಲ ಮತ್ತು ನಂಜರಾಯಪಟ್ಟಣದ ಸುಮಾರು ೧೭ ರಾಸು ದನಗಳನ್ನು ಕೊಂದು ಉಪದ್ರ ಕೊಡುತ್ತಿದ್ದ ಹೆಬ್ಬುಲಿಯನ್ನು ತಾ. ೨ರಲ್ಲಿ ಶ್ರೀ ಕೋದಾಂಡ ಸೋಮಯ್ಯನವರು ಗುಂಡಿಕ್ಕಿ ಕೊಂದರು. ಹುಲಿಯು ಎಂಟು ಅಡಿ ಉದ್ದ ಮೂರುವರೆ ಅಡಿ ಎತ್ತರವಿತ್ತು.

ತಾ. ೪ರಲ್ಲಿ ನಾಪ್ಪೋಕ್ಲು ನಾಡಿನ ಮಾಜಿ ಸಿಪಾಯಿಗಳು ಸೇರಿ ದಿ. ಬ. ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲಿ ನಿವೃತ್ತ ಭಾರತ ಸೇನಾನಿ ಜನರಲ್ ಕಾರ್ಯಪ್ಪನವರನ್ನು ಆಹ್ವಾನಿಸಿ ಸತ್ಕರಿಸಿದರು. ಜ. ಕಾರ್ಯಪ್ಪನವರು ಮಾತಾಡುತ್ತಾ ಮಾಜಿ ಸಿಪಾಯಿಗಳು ಇನ್ನು ಮುಂದಕ್ಕೆ ಮಾಡಬೇಕಾದ ಕೆಲಸಗಳನ್ನೂ ತಮಗೆ ಸಿಕ್ಕತಕ್ಕ ರಿಯಾಯಿತಿಗಳ ಬಗ್ಗೆ ಮಾಡಬೇಕಾದ ಪ್ರಯತ್ನವನ್ನೂ ಕುರಿತು ಬೋಧಪ್ರದವಾದ ಭಾಷಣ ಮಾಡಿದರು. ನಂತರ ಕಾರ್ಯಪ್ಪನವರು ಶಾಲೆಯ ಆಟೋಟಗಳಿಗಾಗಿ ಒಂದು ಶೀಲ್ಡನ್ನೂ, ಶಾಸನ ಸಭೆಯ ಸದಸ್ಯರಾದ ಶ್ರೀ ಎ. ಸಿ. ತಿಮ್ಮಯ್ಯನವರು ಬೋರ್ಡಿಂಗಿಗೆ ಒಂದು ಇಲೆಕ್ಟ್ರಿಕ್ ದೀಪವನ್ನೂ, ವಾಚನಾಲಯಕ್ಕೆ ೨೦೦-೩೦೦ ಪುಸ್ತಕಗಳನ್ನೂ ಕೊಡುವದಾಗಿ ವಾಗ್ದಾನ ಮಾಡಿದರು.

ಪಾಲೂರು ಮಹಲಿಂಗೇಶ್ವರ ದೇವರ ಹಬ್ಬವು ತಾ. ೧೯ ಮತ್ತು ೨೦ರಲ್ಲಿ ನಡೆಯುವದು.

ಸೋಮವಾರಪೇಟೆ ನೋಟಿಫೈಡ್ ಏರಿಯಾ ಸಮಿತಿಯ ಸದಸ್ಯರಾದ ಶ್ರೀ ಎ. ಎಲ್. ಶಿಕುನಯ್ಯ ಮತ್ತು ಡಿ. ಎಸ್. ಶಾಂತಪ್ಪನವರು ತಾ. ೩೧ರಲ್ಲಿ ಕಾರಣಾಂತರದಿಂದ ತಮ್ಮ ಮೆಂಬರು ತನಕ್ಕೆ ರಾಜಿನಾಮೆ ಇತ್ತಿರುವರು.

ತಾ. ೪ರಲ್ಲಿ ಶ್ರೀ ಕೊತಂಡೇರ ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ಕೋತೂರು ಸಹಕಾರ ಸಂಘದ ಮಹಾ ಸಭೆ ನಡೆದು ಕಳೆದ ೩೩ ವರ್ಷಗಳಿಂದ ಸಂಘದ ಗುಮಾಸ್ತರಾಗಿ ಕೆಲಸ ಮಾಡಿದ ಶ್ರೀ ಮನ್ನಕಮನೆ ಅಪ್ಪಣಮ್ಮಯ್ಯನವರಿಗೆ ಒಂದು ಚಿನ್ನದ ಉಂಗುರವನ್ನು ಗೌರವಾರ್ಥ ಕೊಟ್ಟು ಸತ್ಕರಿಸಿದರು.

ಕೊಡಗಿನ ಪ್ರಿವೆಂಟಿವ್ ಡಿಟೆನ್ಶನ್ ಆಕ್ಟಿನ ಸಮಿತಿಯಾಗಿ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಶ್ರೀ ಬಿ. ವಾಸುದೇವಮೂರ್ತಿ, ಕೊಡಗು ಸೆಶನ್ಸ್ ಜಡ್ಜರಾದ ಶ್ರೀ ಎನ್ ಮುದ್ದಪ್ಪ ಮತ್ತು ನಿವೃತ್ತ ಮುನ್ಸೀಫರಾದ ಶ್ರೀ ಪಿ. ಯಂ. ನಾಣಯ್ಯ ಇವರನ್ನು ನೇಮಿಸಲಾಗಿದೆ.

ಕೊಡಗು ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜ್ ಸಂಸ್ಥೆಗೆ ಸಲಹಾ ಸಮಿತಿಯಾಗಿ ಮುಖ್ಯಮಂತ್ರಿ (ಅಧ್ಯಕ್ಷ) ಕೊಡಗು ಸರಕಾರದ ಸೆಕ್ರೆಟರಿ, ಸ್ಟಾಫ್ ಸಿಲೆಕ್ಷನ್ ಬೋರ್ಡಿನ ಅಧ್ಯಕ್ಷ, ಕೊಡಗು ಪ್ಲಾಂಟರುಗಳ ಸಂಘದ ಪ್ರೆಸಿಡೆಂಟ್, ಇಂಡಿಯನ್ ಪ್ಲಾಂಟರುಗಳ ಸಂಘದ ಪ್ರೆಸಿಡೆಂಟ್, ಎಸ್. ಎಸ್. ನಾರಾಯಣಮೂರ್ತಿ, ಪಿ. ಲಕ್ಷ್ಮಯ್ಯ, ಪಿ. ಕೆ. ಚೆನ್ನಯ್ಯ, ಮಿಸೆಸ್, ಚೆಪ್ಪುಡೀರ ಚಿಣ್ಣಪ್ಪ, ಮೇಜರ್, ಸಿ. ಬಿ. ಕಾರ್ಯಪ್ಪ, ಮಡಿಕೇರಿ ಮುನ್ಸಿಪಲ್ ಪ್ರೆಸಿಡೆಂಟ್, ಮತ್ತು ಕೊಡಗು ಎಂಪ್ಲಾಯಿಮೆಂಟ್ ಆಫೀಸರು (ಕಾರ್ಯದರ್ಶಿ) ಇವರಿಂದ ಕೂಡಿದ ಸಮಿತಿಯೊಂದನ್ನು ನೇಮಿಸಲಾಗಿದೆ.

ಕೊಡಗು ಎಕ್ಸೈಸ್ ಎಡ್ವೈಸರಿ ಸಮಿತಿಯ ಸದಸ್ಯರಾಗಿ ಶ್ರೀ ಪಿ. ಕೆ. ಚೆನ್ನಯ್ಯ ಮತ್ತು ಎ. ಡಿ. ಮಾಚಯ್ಯನವರನ್ನು ನೇಮಿಸಲಾಗಿದೆ.

ಕೊಡಗಿನಲ್ಲಿ ಜನವರಿ ತಿಂಗಳಲ್ಲಿ ೨೮೭ ಜನನಗಳೂ ೧೯೭ ಮರಣಗಳೂ ಸಂಭವಿಸಿರುವದಾಗಿ ಪ್ರಕಟವಾಗಿದೆ.

ವ್ಯವಸಾಯ ಪ್ರಗತಿಯ ಅಂತರಾಷ್ಟ್ರೀಯ ಯುವಕ ವಿನಿಮಯ ಯೋಜನೆಯಂತೆ ಹಿಂದೂದೇಶದಿಂದ ಅಮೇರಿಕಕ್ಕೆ ಆರು ತಿಂಗಳ ಪರಿಶೀಲನೆ ತರಬೇತಿಗೆ ಕಳುಹಿಸಲ್ಪಡುವ ೧೫ ಜನರಲ್ಲಿ ಕೊಡಗಿನ ವ್ಯವಸಾಯ ಇಲಾಖೆಯಲ್ಲಿರುವ ಶ್ರೀ ಕೋದಾಂಡ ಬೋಪಯ್ಯನವರನ್ನು ಒಬ್ಬರಾಗಿ ಆರಿಸಲ್ಪಟ್ಟಿದ್ದು ಅವರು ತಾ. ೧೪ರಲ್ಲಿ ಡೆಲ್ಲಿಯಿಂದ ಅಮೇರಿಕಕ್ಕೆ ಹೋಗಲಿರುವರು.

ಮಡಿಕೇರಿಗೆ ತಾ. ೩ ಮತ್ತು ೭ ರಲ್ಲಿ ಒಟ್ಟು ೧ ಇಂಚು ೪೭ ಸೆಂಟು ಮಳೆಯಾಗಿದೆ. ಉತ್ತರ ಕೊಡಗಿನಲ್ಲಿ ಕೆಲವು ಭಾಗಗಳಿಗೆ ೩—೪ ಇಂಚುಗಳ ವರೆಗೆ ಮಳೆ ಬಿದ್ದಿದೆ. ದಕ್ಷಿಣ ಕೊಡಗಿನಲ್ಲಿ ಕೆಲವು ಕಡೆ ಮಳೆ ಬಿದ್ದರೂ ಹೆಚ್ಚಾಗಿಲ್ಲ. ಇದರಿಂದ ಕಾಫಿ ಫಸಲಿಗೆ ಧಕ್ಕೆ ಉಂಟಾಗಿದೆಯೆಂದು ವರ್ತಮಾನ.

ಕೊಡಗಿನ ಸೆಶನ್ಸ್ ಜಡ್ಜರಾದ ಶ್ರೀ ಎನ್. ಮುದ್ದಪ್ಪನವರು ಕಳೆದ ತಾ. ೨೮ ರಿಂದ ಕಾಯಿಲಸ್ಥರಾಗಿ ರಜೆಯಲ್ಲಿರುವರು.

ಕೆಲವು ದಿನಗಳಿಗೆ ಹಿಂದೆ ಹಾತೂರಿನಲ್ಲಿದ್ದ ಇಬ್ಬರು ಮಾಪಿಳ್ಳೆಗಳು ಒಳ್ಳೆ ಮೆಣಸು ವ್ಯಾಪಾರಕ್ಕಾಗಿ ಹೊಸೂರು ಗ್ರಾಮಕ್ಕೆ ಬಂದಿದ್ದವರು ರಸ್ತೆಯ ಪಕ್ಕದ ಒಂದು ಕಾಡಿನಲ್ಲಿ ಒಬ್ಬನನ್ನು ಕತ್ತಿಯಿಂದ ಕುತ್ತಿಗೆ ಕಡಿದು ಆತನ ಹತ್ತಿರವಿದ್ದ ಸುಮಾರು ರೂ. ೪೫೦/ ನ್ನು ಅಪಹರಿಸಿಕೊಂಡು ಹೋದನೆಂದೂ ಪೆಟ್ಟುಬಿದ್ದವನು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ ಓಡಿಹೋದವನ ಪತ್ತೆಯನ್ನು ಪೋಲೀಸರು ಪಡೆಸುತ್ತಿರುವರೆಂದೂ ವರ್ತಮಾನ

ಬರಪೊಳೆ ವಿದ್ಯುಚ್ಛಕ್ತಿ ಯೋಜನೆ.

ಕೇಂದ್ರದ ನೀರು, ವಿದ್ಯುತ್ ಮತ್ತು ನೀರಾವರಿ ಸಮಿತಿಯವರು ಬರಪೊಳೆ ವಿದ್ಯುಚ್ಛಕ್ತಿ ಯೋಜನೆಯ ಸಾಧ್ಯತೆಯನ್ನು ಪರಿಶೀಲಿಸಿ ಇನ್ನೂ ವಿಸ್ತೃತ ಪರಿಶೀಲನೆ ಮಾಡಬೇಕೆಂದು ವರದಿ ಮಾಡಿರುವರು.

ಕೊಡಗು ಸರಕಾರವು ನೇಮಿಸಿರುವ ಸಲಹಾ ಸಮಿತಿಯವರು ಕಟ್ಟೆ ಕಟ್ಟಲಿರುವ ಸ್ಥಳವನ್ನು ಪರಿಶೀಲಿಸಿ, ಶಕ್ತಿ ಉತ್ಪಾದನಾ ಗೃಹ ಮೊದಲಾದವುಗಳ ನಿವೇಶನವನ್ನು ಕಳೆದ ಜನವರಿ ಫೆಬ್ರವರಿ ತಿಂಗಳಲ್ಲಿ ಆಜಮಾಯಿಸಿರುವರು. ವಿಸ್ತೃತ ಪರಿಶೀಲನೆಗಾಗಿ ಎರಡು ಲಕ್ಷ ರೂಪಾಯಿ ವೆಚ್ಚವಾಗುವವೆಂದು ಅವರು ಸೂಚಿಸಿರುವರು

ಈ ಮಧ್ಯೆ ಕೇಂದ್ರದ ವಿದ್ಯುತ್ ಸಮಿತಿಯವರು ಕೊಡಗಿನ ಸಲಹಾ ಸಮಿತಿಯ ಸದಸ್ಯರೊಬ್ಬರಾದ ಶ್ರೀ ನರಸಿಂಹಯ್ಯನವರನ್ನು ಆಹ್ವಾನಿಸಿ ಈ ವಿಚಾರದಲ್ಲಿ ಮಾತುಕತೆ ನಡೆಸಿ ಶೀಘ್ರವಾಗಿ ಕೆಳಗಿನ ವಿವರಗಳನ್ನು ಪರಿಶೀಲಿಸುವ ಏರ್ಪಾಡು ಮಾಡಿರುವರು.

(೧) ವಿದ್ಯುತ್ ಉತ್ಪಾದಿಸಲು ಹಾಕಬೇಕಾದ ಎರಡು ಕಟ್ಟೆಗಳಿಂದಾಗಿ ನೀರು ನಿಲ್ಲುವ ಸ್ಥಳದ ಮತ್ತು ಪವರ್ ಸ್ಟೇಷನ್ ವರೆಗಿನ ಸ್ಥಳದ ವೈಮಾನಿಕ ಸರ್ವೆ.

(೨) ಸರ್ವೆ ಆಫ್ ಇಂಡಿಯಾ ಇಲಾಖೆಯವರು ಪ್ರತಿ ಹತ್ತು ಅಡಿಗೆ ಒಂದರಂತೆ ಕಟ್ಟೆಯ ಮೇಲಿನ ಭಾಗದ ಚಿತ್ರವನ್ನು ಕೊಡುವಂತೆ ಏರ್ಪಡಿಸುವದು.

(೩) ಕಟ್ಟೆಯ ಸ್ಥಳದ ವಿವರವಾದ ಸರ್ವೆ. ಕಾಲುವೆ, ಸುರಂಗಗಳ ವಿವರ, ಕಟ್ಟೆಗೆ ಬೇಕಾದ ಸಾಹಿತ್ಯಗಳು ಎಲ್ಲಿಂದ ದೊರೆಯುವದೆಂಬ ಪರಿಶೀಲನೆ.

ಈ ವಿವರಗಳನ್ನು ಪರಿಶೀಲಿಸಲು ಈಗ ನಿಶ್ಚಯಿಸಿದ ಎರಡು ಲಕ್ಷಕ್ಕಿಂತಲೂ ಹೆಚ್ಚಿನ ಕರ್ಚು ತಗಲಬಹುದೆಂದು ಕೇಂದ್ರ ಸಮಿತಿಯು ಅಭಿಪ್ರಾಯ ಪಟ್ಟಿದೆ. ಈಗಾಗಲೇ ಈ ಯೋಜನೆಯ ಪರಿಶೀಲನೆಗೆ, ೨ ಲಕ್ಷ ರೂ. ಮಂಜೂರಾಗಿದ್ದು ಸಲಹಾ ಸಮಿತಿಯ ಸಲಹೆ ಮತ್ತು ಶ್ರೀ ಎಂ. ನರಸಿಂಹಯ್ಯನವರ ಮೇಲ್ವಿಚಾರಣೆಯಲ್ಲಿ ವಿಸ್ತೃತ ಪರಿಶೀಲನೆ ನಡೆಯುತ್ತಿದೆ. ಸರ್ವೆ ಆಫ್ ಇಂಡಿಯಾದವರು ಕೊಡಗಿಗೆ ಬಂದು ಕೆಲಸ ಪ್ರಾರಂಭಿಸಿರುವರು.

ಈ ಯೋಜನೆಯ ಸಂಬಂಧವಾಗಿ ಮೈಸೂರಿನ ಸುಪರಿಂಟೆಂಡಿಂಗ್ ಇಂಜಿನಿಯರಾಗಿ ನಿವೃತ್ತರಾಗಿದ್ದ ಶ್ರೀ ಎಂ. ಆರ್ ಕೃಷ್ಣಮೂರ್ತಿರಾವ್‌ರವರನ್ನು ಸ್ಪೆಷಲ್ ಆಫೀಸರಾಗಿ ಮಾಸಿಕ ರೂ. ೭೦೦/— ವೇತನದಲ್ಲೂ, ಶ್ರೀ ಎಸ್. ನೀಲಕಂಠಪ್ಪನವರನ್ನು ಅ. ಇಂಜಿನಿಯರಾಗಿ ರೂ. ೨೫೦/— ವೇತನದಲ್ಲೂ ನೇಮಿಸಲಾಗಿದೆ.

ಕೊಡಗಿನಲ್ಲಿ ಪಂಚವಾರ್ಷಿಕ ಯೋಜನೆಯ ರೀತಿ ೫೩—೫೪ನೆ ಸಂವತ್ಸರಗಳಲ್ಲಿ ಖರ್ಚು ಮಾಡಲು ನಿಶ್ಚಯಿಸಿರುವ ಪಟ್ಟಿ

೧. ನೀರಾವರಿ ಯೋಜನೆ.

ಕಾಲುವೆಗಳಿಗೆ ೧,೩೫,೦೦೦ ಕೆರೆಗಳಿಗಾಗಿ ೫೯,೦೦೦ ಒಟ್ಟು ಜುಮ್ಲಾ ೧,೯೪,೦೦೦

೨. ವ್ಯವಸಾಯ.

ಯಾಂತ್ರಿಕ ವ್ಯವಸಾಯ ೧,೦೦,೦೦೦
ಸಹಕಾರ ರೀತಿ ವ್ಯವಸಾಯ ೫೦,೦೦೦
ಹುಲ್ಲು ಸೌದೆ ಮರ ಬೆಳೆಸಲು ೨೦,೦೦೦
ಒಟ್ಟು ಜುಮ್ಲಾ ೧,೭೦.೦೦೦

೩. ಪಶುವೈದ್ಯ.

ಹಾಲು ಸರಬರಾಜಿಗಾಗಿ ೫೦,೦೦೦
ಕೃತಕ ಗರ್ಭದಾನಕ್ಕಾಗಿ ೨೦,೦೦೦ ಕೋಳಿ ಸಾಕಣೆಯ ಕೇಂದ್ರ ೧೫,೦೦೦
ಒಟ್ಟು ಜುಮ್ಲಾ ೮೫,೦೦೦

೪. ಅರಣ್ಯ ಖಾತೆ.

ಮರ ಸಿಗಿಯುವ ಯಂತ್ರಕ್ಕಾಗಿ ೧,೦೦,೦೦೦

೫. ಕೈಗಾರಿಕೆಗೆ.

ಜೇನುನೊಣ ಸಾಕಣೆಗೆ ೫೨,೦೦೦ ಕೇಂದ್ರ ಕಮ್ಮಾರ ಶಾಲೆ ೧,೦೦,೦೦೦ ರೇಷ್ಮೆ ಕೈಗಾರಿಕೆಗೆ ೧,೫೩,೦೦೦ ಪಿಂಗಾಣಿ ಕೈಗಾರಿಕೆಗೆ ೭೦,೦೦೦ ಒಟ್ಟು ಜುಮ್ಲಾ ೩,೭೫,೦೦೦

೬. ಆರೋಗ್ಯ ಇಲಾಖೆ.

ಗ್ರಾಮಾಂತರಗಳಲ್ಲಿ ಬಾವಿ ತೋಡಲು ೧,೦೦,೦೦೦ ಹೆಬ್ಬಾಲೆ ಗ್ರಾಮಕ್ಕೆ ನೀರು ಸರಬರಾಜಿಗೆ ೧,೨೦,೦೦೦ ಗ್ರಾಮಾಂತರಗಳಲ್ಲಿ ಚರಂಡಿಗಳಿಗೆ ೩೦,೦೦೦
ಒಟ್ಟು ಜುಮ್ಲಾ ೨,೫೦,೦೦೦

ವೈದ್ಯಕೀಯ ಸಂಚರಿಸುವ ಆಸ್ಪತ್ರೆಗೆ ೯೨,೦೦೦ ಕುಟ್ಟ. ಜಕ್ಕನಹಳ್ಳಿ ಮತ್ತು ಸೂರ್ಲಭಿಯಲ್ಲು ಆಸ್ಪತ್ರೆ ಕಟ್ಟಡಗಳಿಗೆ ೮೪,೦೦೦ ಆಸ್ಪತ್ರೆಗಳಿಗೆ ಹೆಚ್ಚಿನ ಸಾಮಾನುಗಳ ಸರಬರಾಜಿಗಾಗಿ ೨೧,೦೦೦ ಸೋಮವಾರಪೇಟೆ ಮತ್ತು ವೀರಾಜಪೇಟೆ ಆಸ್ಪತ್ರೆಗಳ ಬದಲಾವಣೆಗಾಗಿ ೧,೦೦,೦೦೦
ಒಟ್ಟು ಜುಮ್ಲಾ ೨,೯೭,೦೦೦

ವಿದ್ಯಾ ಇಲಾಖೆ.

ವಯಸ್ಕರ ಶಿಕ್ಷಣ ೧೦,೦೦೦ ವ್ಯವಸಾಯ ಶಾಲೆಗಾಗಿ ೩೦,೦೦೦
ಒಟ್ಟು ಜುಮ್ಲಾ ೪೦,೦೦೦
ಸಹಕಾರ ಕಟ್ಟಡಗಳಿಗಾಗಿ ೭೦,೦೦೦

ಸಿವಿಲ್ ವರ್ಕ್ಸ್.

ಗ್ರಾಮಾಂತರ ರಸ್ತೆಗಳಿಗೆ ೧,೦೦,೦೦೦ ಸೇತುವೆಗಳಿಗೆ ೫೦,೦೦೦ ಬೇತ್ರಿ ಸೇತುವೆಗೆ ೨,೦೦,೦೦೦ ಕೊಟ್ಟಮುಡಿ ೧,೦೦,೦೦೦ ರಸ್ತೆಗಳಿಗೆ ತಾರು ಹಾಕಲು ೩,೨೦,೦೦೦
ಒಟ್ಟು ಜುಮ್ಲಾ ೭,೭೦,೦೦೦

ಯೂನಿವರ್ಸಿಟಿ ಕಮಿಷನ್

ಕೊಡಗು ಸರಕಾರಿ ಕಾಲೇಜಿನಲ್ಲಿ ಮುಂದಿನ ಜುಲೈ ತಿಂಗಳಿಂದ ತೆರೆಯಲಿರುವ ಬಿ. ಎ., ಮತ್ತು ಬಿ. ಯಸ್‌ಸಿ. ತರಗತಿಗಳ ಬಗ್ಗೆ ಕಾಲೇಜಿನ ಕಟ್ಟಡ ಮತ್ತಿತರ ಸಿದ್ಧತೆಗಳಾಗಿವೆಯೇ ಎಂದು ಪರಿಶೀಲಿಸಲು ಮದರಾಸ್ ವಿಶ್ವವಿದ್ಯಾಲಯದ ಸಮಿತಿಯು ತಾ. ೭ರಲ್ಲಿ ಕೊಡಗಿಗೆ ಬಂದಿತು. ಈ ಸಮಿತಿಯಲ್ಲಿ ಕ್ರಿಶ್ಚಿಯನ್ ಕಾಲೇಜಿನ ಪ್ರಿನ್ಸಿಪಲರಾದ ಎ. ಜೆ. ಬಾಯ್ಡ್ (ಮುಂದಾಳು) ವಿಶ್ವವಿದ್ಯಾಲಯದ ಪ್ರಕೃತಿಶಾಸ್ತ್ರ ಲೇಬರೇಟರಿಯ ಪ್ರೊಫೆಸರ್ ಟಿ. ಎಸ್. ಸದಾಶಿವನ್, ಪ್ರಾಣಿಶಾಸ್ತ್ರ ಶಾಖೆಯ ಡಾ. ಜಯಿನಮುತ್ತು, ಪ್ರೆಸಿಡೆನ್ಸಿ ಕಾಲೇಜಿನ ಫಿಸಿಕ್ಸ್ ಶಾಖೆಯ ಪ್ರೊ. ಗೋಪಾಲಕೃಷ್ಣಮೂರ್ತಿ, ಪ್ರೆಸಿಡೆನ್ಸಿ ಕಾಲೇಜಿನ ರಾಜಕೀಯ ಶಾಖೆಯ ರೀಡರಾದ ಡಾ. ಭಾಸ್ಕರನ್, ಕನ್ನಡ ಶಾಖೆಯ ಪ್ರೊ. ಮರಿಯಪ್ಪ ಭಟ್, ಗವರ್ನಮೆಂಟ್ ಆರ್ಟ್ಸ್ ಕಾಲೇಜಿನ ಕೆಮಿಸ್ಟ್ರಿ ಶಾಖೆಯ ಪ್ರೊ. ಟಿ. ಎಸ್. ಲಕ್ಷ್ಮಣನ್, ಪಚ್ಚೆಯಪ್ಪ ಕಾಲೇಜಿನ ಗಣಿತ ಶಾಸ್ತ್ರ ಶಾಖೆಯ ಪ್ರೊ. ಶಂಕರನಾರಾಯಣ ಪಿಳ್ಳೆ ಮತ್ತು ಪಚ್ಚೆಯಪ್ಪ ಕಾಲೇಜಿನ ತತ್ವಜ್ಞಾನ ಶಾಖೆಯ ಅ. ಪ್ರೊಫೆಸರಾದ ದೇವಸಹಾಯಮ್ ಇವರುಗಳು ಇದ್ದರು.

ತಾರೀಕು ೮ನೇ ಸಾಯಂಕಾಲ ಇವರ ಗೌರವಾರ್ಥವಾಗಿ ಕೊಡಗು ಶಾಸನ ಸಭಾ ಹಾಲ್‌ನಲ್ಲಿ ಪಾರ್ಟಿಯೊಂದನ್ನು ಏರ್ಪಡಿಸಲಾಗಿತ್ತು. ವಿದ್ಯಾ ಮಂತ್ರಿಗಳಾದ ಶ್ರೀ ಕೆ. ಮಲ್ಲಪ್ಪನವರು ಸಮಿತಿಯವರಿಗೆ ಸ್ವಾಗತ ಬಯಸುತ್ತಾ ಕೊಡಗಿನ ಮಳೆ, ಮಜೂರರ ಅಭಾವ, ಸಾಹಿತ್ಯಗಳು ದೊರೆಯುವ ಕಷ್ಟಗಳಿಂದಾಗಿ ಕಾಲೇಜು ಕಟ್ಟಡವು ಇಚ್ಛೆಸಿದಷ್ಟು ಶೀಘ್ರವಾಗಿ ಆಗಿಲ್ಲವೆಂದೂ, ಸಮಿತಿಯವರು ಈ ನ್ಯೂನತೆಗಳನ್ನು ಸಹನಾ ದೃಷ್ಟಿಯಿಂದ ನೋಡಬೇಕೆಂದೂ ಮುಂದಿರುವ ಎರಡು ತಿಂಗಳುಗಳಲ್ಲಿ ಬೇಕಿರುವ ಎಲ್ಲಾ ನಿವೃತ್ತಿಯನ್ನು ಸರಕಾರವು ಮಾಡುವದೆಂದೂ ಹೇಗೂ ಕೊಡಗಿನ ಸರಕಾರ ಮತ್ತು ಜನತೆಯು ಈ ಮುಂದಿನ ವರ್ಷದಿಂದಲೇ ಬಿ. ಎ., ಬಿ. ಎಸ್‌ಸಿ. ತರಗತಿಗಳನ್ನು ತೆರೆಯಲು ಉತ್ಸುಕರಾಗಿರುವರೆಂದೂ ಹೇಳಿದರು.

ಈ ಕಾಲೇಜಿನಲ್ಲಿ ಹೆಚ್ಚಿನ ನ್ಯೂನತೆಗಳೇನೂ ಇಲ್ಲವೆಂದೂ ಮಂತ್ರಿಯವರು ಹೇಳಿದಂತೆ ಮುಂದಿನ ತಿಂಗಳುಗಳಲ್ಲಿ ಕೆಲಸವನ್ನು ಶೀಘ್ರ ಪೂರೈಸಬೇಕಾಗಿದೆಯೆಂದೂ ಜೂನ್ ತಿಂಗಳಲ್ಲಿ ಪುನಹ ವಿಶ್ವವಿದ್ಯಾಲಯದ ಕಡೆಯಿಂದ ಉಪಸ್ವಾಪತಿಗಳಾದ ಡಾ. ಲಕ್ಷ್ಮಣಸ್ವಾಮಿ ಮುದಲಿಯಾರ್‌ರವರು ಬರುವ ಸಾಧ್ಯತೆ ಇದೆಯೆಂದೂ, ತನ್ನ ಕಾಲೇಜಿನಲ್ಲೂ ಕೊಡಗಿನ ವಿದ್ಯಾರ್ಥಿಗಳಿರುವರೆಂದೂ ಕೊಡಗಿನ ವಿದ್ಯಾರ್ಥಿಗಳ ಸಾರ್ವಜನಿಕ ಹಿತದೃಷ್ಟಿ, ನಿಷ್ಠಾ ಪಟ್ಟುಗಳನ್ನು ತಾನು ಮೆಚ್ಚಿರುವದಾಗಿಯೂ ಹೇಳಿದರು. ಜ. ಕಾರ್ಯಪ್ಪನವರು ತನ್ನ ಕಾಲೇಜಿನಲ್ಲಿ ಓದದ್ದು ವ್ಯಸನದ ಮಾತೆಂದೂ ಆದರೆ ಆ ಕಾಲೇಜಿನಲ್ಲಿ ಓದಿದ ಕೊಡಗಿನವರು ಮುಂದೆ ಭಾರತ ಸೇನಾನಿಗಳಾಗಲೆಂದೂ ಆಸೆ ವ್ಯಕ್ತಮಾಡಿದರು. ಕಾಲೇಜುಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಪದವೀಧರರನ್ನು ತಯಾರಿಸುವ ಹುಚ್ಚಿಗೆ ಬಲಿಬೀಳದೆ ಯೋಗ್ಯರೂ, ಆದರ್ಶರೂ ದೇಶದ ಪರಿಸ್ಥಿತಿಗೆ ಹೊಂದಿಕೊಳ್ಳುವವರನ್ನು ತಯಾರಿಸುವದನ್ನೇ ಗುರಿಯಾಗಿಟ್ಟುಕೊಳ್ಳಬೇಕೆಂದರು.

ಬೇಕಾಗಿವೆ.

ಕಾಡು ಕೋಳಿಗಳ ಕುತ್ತಿಗೆಯ ಗರಿಗಳು ಬೇಕಾಗಿವೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

D. H. THANGAM & CO.,
Kundah Bridge,
4-2 *P. O. Nilgiris.*

PROPERTY FOR SALE.

A property of the following discription situated near Ammathi town touching Ammathi-Murnad road, is for sale

(1) Wet land 9·20 acres, (2) Dry land 24·45 acres Of the dry land obout 9 acres cousists young orange plants yeilding since three years. (3) A tiled big house with water facility. (4) Two thatched houses for tenants. (5) One cattle shed, (6) One out-house, (7) 18 Heads of cattle.

Intending buyers may please write to the below mentioned address or contact personally.

PONNAPPA,
3-1 **C/o. Post master, AMMATHI, Coorg.**

FOR SALE.

1952 Model Willys Jeep, done 8000 miles In tip top condition. Inspection by appointment.

MANAGER,
DUBARRY GROUP ESTATES.
POLLIBETTA.

ಓದುಗರ ಓಲೆಗಳು.

ಹೋಟೆಲುಗಳ ದರ

ಮಡಿಕೇರಿಯಲ್ಲಿ ತುಂಬಾ ಹೋಟೆಲುಗಳಿವೆ. ಸಿಹಿ ತಿಂಡಿ ಒಂದಕ್ಕೆ ಎರಡಾಣೆಯಂತೆ ಮಾರಬೇಕೆಂಬ ನಿಯಮವಿದ್ದರೂ, ಕಾಫಿ, ಹಾಲು, ಓವಲ್ಟಿನ್ ಮೊದಲಾದುವಕ್ಕೆ ನಿಶ್ಚಿತ ದರವಿದ್ದರೂ ಕೆಲವು ಹೋಟೆಲುಗಳಲ್ಲಿ ಸಿಕ್ಕಾಬಟ್ಟೆ ಕ್ರಯ ಮಾಡುತ್ತಾರೆ. ಮೊನ್ನೆ ನಾನು ಒಂದು ಹೋಟೆಲಿಗೆ ಹೋಗಿದ್ದೆ. ಅದರಲ್ಲಿ ಸಿಹಿ ತಿಂಡಿಗೆ ನಾಲ್ಕಾಣೆ, ಕಾಫಿಗೂ ಕೂಡ ಯದ್ವಾತದ್ವ ಬೆಲೆ, ಎರಡು ಗುಟುಕಿನ ನೀರು ಹಾಲಿಗೆ ನಾಲ್ಕಾಣೆ, ಓವಲ್ಟಿನ್‌ಗೆ ಎಂಟಾಣೆ ದರವಿದ್ದುದು ಕಂಡು ಬಂದಿತು. ಇವರನ್ನು ಯಾರೂ ಕೇಳುವವರಿಲ್ಲವೇ? ಪ್ರತಿಯೊಂದು ವಸ್ತುವಿಗೂ ಒಂದಕ್ಕೆ ಎರಡು ಬೆಲೆ ಮಾಡುತ್ತಿರುವ ಕೆಲವು ಹೋಟೆಲುಗಳಿವೆ. ನಾನು ಮೈಸೂರು ಬೇರೆಡೆ ಹಲವು ಉತ್ತಮ ತರದ ಹೋಟೆಲುಗಳನ್ನು ನೋಡಿದ್ದೇನೆ. ಆದರೆ ಈ ರೀತಿಯ ಬೆಲೆಯನ್ನು ನಾನು ಕಂಡಿಲ್ಲ. ಈ ರೀತಿ ಜನರನ್ನು ಸುಲಿಗೆ ಮಾಡುವುದು ಕಪ್ಪುಸಂತೆಯಷ್ಟೇ ಖಂಡನೀಯವಲ್ಲವೇ? ಸಂಬಂಧಿಸಿದವರು ಈ ಬಗ್ಗೆ ನಿಗವಿಟ್ಟು ಒಂದು ನ್ಯಾಯವಾದ ಬೆಲೆಯು ಎಲ್ಲಾ ಹೋಟೆಲುಗಳಲ್ಲೂ ಇರುವಂತೆ ಮಾಡುವರೇ?

'ಹೋಟೆಲ್ ಜೀವಿ'

ಕಲೆಯ ಅಪಮಾನ

ತಾರೀಕು ೬ರಲ್ಲಿ ಮಡಿಕೇರಿಗೆ ಪ್ರಸಿದ್ಧ ಹಾಸ್ಯಪಟು ಮತ್ತು ಕಲಾವಿದ ಎನ್. ಎಸ್. ಕೃಷ್ಣನ್ ಮತ್ತು ಟಿ. ಎ. ಮಧುರಮ್ ಬರುವರೆಂಬುದನ್ನು ತಿಳಿದು ಮಡಿಕೇರಿ ಮುನ್ಸಿಪಲ್ ಸಮಿತಿಯವರು ತಾ. ೩ರಲ್ಲಿ ಸಭೆ ಸೇರಿ ಅವರ ಕಲಾಸೇವೆಯನ್ನು ಗೌರವಿಸಿ ಅವರಿಗೆ ಒಂದು ಬಿನ್ನವತ್ತಳೆಯನ್ನು ಕೊಡಬೇಕೆಂದು ನಿಶ್ಚಯಿಸಿದರು. ಈ ಠರಾವು ಅಧ್ಯಕ್ಷರಿಂದಲೇ ಸೂಚಿತವಾಯ್ತು. ಪ್ರಥಮವಾಗಿ ಒಬ್ಬ ನೇಮಿತ ಸರಕಾರಿ ಮೆಂಬರು ಮತ್ತು ಒಬ್ಬ ಲಾಯರು ಮೆಂಬರು ವಿರೋಧಿಸಿದರೂ ನಂತರ ಸರ್ವಾನುಮತದಿಂದ ಪಾಸಾಯಿತು. ಬಿನ್ನವತ್ತಳೆಯ ಸಿದ್ಧತೆಗಳೂ ನಡೆಯತೊಡಗಿದವು. ಈ ಮಧ್ಯೆ ಯಾರು ಏನು ಹೇಳಿದರೋ ತಿಳಿಯದು. ಬಿನ್ನವತ್ತಳೆ ಕೊಡುವದನ್ನು ರದ್ದು ಮಾಡಲಾಗಿದೆಯೆಂದು ಕಾಗದವಲ್ಲಿ ಬರೆದು ಅದಕ್ಕೆ ೧೫ ಮೆಂಬರರ ಸಹಿಯನ್ನು ಪಡೆದು ತಾ. ೬ರ ಸಾಯಂಕಾಲ ಪ್ರೆಸಿಡೆಂಟರಿಗೆ ತಲಪಿಸಲಾಯಿತಂತೆ. ಅಷ್ಟರಲ್ಲಿ ಮಡಿಕೇರಿಗೆ ಬಂದಿದ್ದ ಕೃಷ್ಣನ್, ಮಧುರಮ್ ಇವರ ಜೀವನ ಚರಿತ್ರೆ ಮೊದಲಾದುವನ್ನು ಅವರಿಂದಲೇ ತಿಳಿದು ಬಿನ್ನವತ್ತಳೆಯು ತಯಾರು ಆಗಿತ್ತಂತೆ. ಕಾಂಗ್ರೆಸ್ ಮೆಂಬರರ ಈ ಕಾಗದ ನಿರ್ಣಯದಿಂದ ಪ್ರೆಸಿಡೆಂಟರಿಗೆ ಆಶ್ಚರ್ಯವಾಗಿರಲೇಬೇಕು. ಹೇಗೂ ಕೃಷ್ಣನ್‌ರವರಿಗೆ ಬಿನ್ನವತ್ತಳೆ ಕೊಡಲಿಲ್ಲ.

ವಿರೋಧ ಮಾಡಿದ ಸರಕಾರಿ ಮೆಂಬರು ಕೃಷ್ಣನ್ 'ರಬ್ಬಿಷ್ ಮೇನ್' ಅಂದರಂತೆ. ಲಾಯರ ಬಂಧುಗಳು 'ಕೇಸಿನಲ್ಲಿ ಸಿಕ್ಕಿ ಬಿದ್ದವರು; ಅವರ ನೀತಿ ಸರಿಯಲ್ಲ' ಎಂದರಂತೆ! ಕೃಷ್ಣನ್‌ರವರಲ್ಲಿ ನ್ಯೂನತೆ ಇರಬಹುದು. ಅದರಂತೆ ಈ ಸರಕಾರಿ ಅಧಿಕಾರಿಯಲ್ಲಾಗಲೀ ಯಾ ಲಾಯರ್ ಬಂಧುಗಳಲ್ಲಾಗಲೀ ಇಲ್ಲವೇ? ಕೃಷ್ಣನ್‌ರವರ ಕಲೆಗೆ ಗೌರವವಲ್ಲದೆ ಅವರ ವ್ಯಕ್ತಿತ್ವಕ್ಕಲ್ಲ. ಹಾಗಿರುವಾಗ ಒಮ್ಮೆ ಬಿನ್ನವತ್ತಳೆ ಕೊಡುವದಾಗಿ ನಿರ್ಣಯಿಸಿ ಮತ್ತೆ ಮನ್ನಾ ಮಾಡಿ ಕಲೆಯ ಅಪಮಾನ ಮಾಡಿದ ಪುರಸಭೆಯ ಸದಸ್ಯರ ನೀತಿ ಸರಿಯಲ್ಲ. ಕೃಷ್ಣನ್ ರಷ್ಯಾಕ್ಕೆ ಹೋಗಿದ್ದವರೆಂದು ಇವರು ಗಾಬರಿಗೊಂಡರೇ? ಹೇಗೂ ಈ ವಿಚಾರ ಕೃಷ್ಣನ್‌ಗೆ ತಿಳಿದಾಗ ಹೊಟ್ಟೆ ತುಂಬ ನಗಾಡಿದರಂತೆ! ಹಾಸ್ಯಕಾರ ಕೃಷ್ಣನ್‌ರವರು ನಮ್ಮ ಮುನ್ಸಿಪಾಲಿಟಿಯ ಮೇಲೊಂದು ಹಾಸ್ಯ ಕತೆ ಕಟ್ಟದಿರಲಿ.

—ಕಲಾಪ್ರಿಯ.

ಬಿತ್ತನೆಗಾಗಿ ಧಾನ್ಯದ ಬೀಜವನ್ನು ಆರಿಸಿಕೊಳ್ಳುವುದು.

ಜಪಾನೀ ರೀತಿಯಲ್ಲಿ ಭತ್ತ ಬೆಳೆಯುವುದನ್ನು ಈಗ ಭಾರತವಾದ್ಯಂತವಾಗಿ ಪ್ರಚಾರ ಮಾಡುತ್ತಿರುವುದರಿಂದ ಬಿತ್ತನೆಗೆ ಹಸನಾದ ಬೀಜವನ್ನು ಆರಿಸಿಕೊಳ್ಳುವ ವಿಷಯದಲ್ಲಿ ಕೆಲವು ಸೂಚನೆಗಳನ್ನು ವಾಚಕರಿಗೆ ಕೊಡುವುದಕ್ಕೆ ಇದು ಸಕಾಲವಾಗಿದೆ.

ಪೈರು ಕಟಾವು ಮಾಡುವುದಕ್ಕೆ ಮುಂಚೆ ಅತ್ಯುತ್ತಮವಾದ ಮತ್ತು ಚೆನ್ನಾಗಿ ಬಲಿತ ಭತ್ತದ ತೆನೆಗಳನ್ನು ಆರಿಸಿ ಕೊಯ್ದುಕೊಳ್ಳಬೇಕು. ಅವನ್ನು ಒಣಗಿಸಿ ಬೀಜಕ್ಕಾಗಿ ಪ್ರತ್ಯೇಕವಾಗಿ ದಾಸ್ತಾನು ಮಾಡಬೇಕು.

ದಪ್ಪವಾದ ಮತ್ತು ಭಾರವಾದ ಕಾಳುಗಳನ್ನು ಬಿತ್ತಿದರೆ ಪೈರುಗಳು ಹುಲುಸಾಗಿ ಬೆಳೆದು ಉತ್ತಮವಾದ ಫಸಲನ್ನು ಕೊಡುವುದಾಗಿ ಕಂಡುಬಂದಿದೆ. ಆದ್ದರಿಂದ ಬೀಜಕ್ಕಾಗಿ ಇಟ್ಟಿರುವ ಕಾಳುಗಳನ್ನು ಜರಡಿಯಾಡಿ ದಪ್ಪವಾದ ಕಾಳನ್ನು ಪ್ರತ್ಯೇಕಿಸಬೇಕು. ಉಪ್ಪು ಕರಗಿದ ನೀರಿನಲ್ಲಿ (ಅಂದರೆ ೨ ಸೇರು ನೀರಿನಲ್ಲಿ ೧ ಸೇರು ಉಪ್ಪು ಕರಗಿದ ನೀರು) ಕಾಳುಗಳನ್ನು ಸುರಿದರೆ ಜಳ್ಳೆಲ್ಲಾ ಮೇಲೆ ತೇಲುತ್ತದೆ. ತಳದಲ್ಲಿ ನಿಲ್ಲುವ ಭಾರವಾದ ಕಾಳುಗಳನ್ನು ತೊಳೆದು ಚೆನ್ನಾಗಿ ಒಣಗಿಸಿ ಬೀಜಕ್ಕಾಗಿ ಉಪಯೋಗಿಸಬಹುದು. ತೇಲಿದ ಕಾಳುಗಳನ್ನು ಆಹಾರಕ್ಕಾಗಿ ಉಪಯೋಗಿಸಬಹುದು.

ಬಿತ್ತಿದ ಬೀಜಗಳೆಲ್ಲಾ ಮೊಳೆಯದಿರಬಹುದು ಮತ್ತು ಮೊಳೆತ ಬೀಜಗಳೆಲ್ಲಾ ಹುಲುಸಾದ ಪೈರಾಗದಿರಬಹುದು. ಸಂಶಯಾಸ್ಪದವಾದ ಬೀಜಗಳನ್ನು ಬಿತ್ತಿ ಮೋಸ ಹೋಗುವುದಕ್ಕಿಂತ ಬಿತ್ತನೆಗೆ ಮುಂಚೆ ಬೀಜಗಳನ್ನು ಚೆನ್ನಾಗಿ ಪರೀಕ್ಷಿಸುವುದು ಉತ್ತಮ. ಬಿತ್ತುವುದಕ್ಕಾಗಿ ಇಟ್ಟಿರುವ ಬೀಜದ ರಾಶಿಯಲ್ಲಿ ಒಂದೊಂದು ಹಿಡಿಕಾಳನ್ನು ತೆಗೆದುಕೊಂಡು ಅದರಲ್ಲಿ ನೂರು ನೂರು ಕಾಳುಗಳ ಮೂರು ಗುಡ್ಡೆಗಳನ್ನು ಮಾಡಿಕೊಳ್ಳಬೇಕು. ಈ ಕಾಳುಗಳನ್ನು ಒದ್ದೆಯ ಬಟ್ಟೆಯ ಮೇಲೆ ಹಾಕಿ, ಮುಚ್ಚಿ, ಶಾಖವಾದ ಸ್ಥಳದಲ್ಲಿಡಬೇಕು. ೧೨ ಗಂಟೆಗಳಿಗೊಂದು ಬಾರಿ ಮೊಳಕೆ ಬಂದಿರುವ ಬೀಜಗಳನ್ನು ತೆಗೆದು ಎಣಿಸಿಕೊಳ್ಳಬೇಕು. ಹಸನಾದ ಭತ್ತದ ಕಾಳು ಸುಮಾರು ೪೮–೬೦ ಗಂಟೆಗಳಲ್ಲಿ ಮೊಳೆಯುತ್ತವೆ. ನೂರು ಬೀಜಗಳ ಪೈಕಿ ಎಷ್ಟು ಮೊಳೆತವು ಎಂದು ಲೆಕ್ಕಾಚಾರ ಮಾಡಬೇಕು. ಈ ರೀತಿ ಪರೀಕ್ಷೆ ಮಾಡುವುದರಿಂದ ಬಿತ್ತಿದ ಬೀಜದ ಪೈಕಿ ಶೇಕಡಾ ಎಷ್ಟು ಮೊಳೆಯಬಹುದೆಂದು ಗೊತ್ತಾಗುತ್ತದೆ. ಇದರಿಂದ ಎಷ್ಟು ಬೀಜವನ್ನು ಬಿತ್ತಬೇಕು ಎಂದು ಸುಲಭವಾಗಿ ನಿರ್ಧರಿಸಬಹುದು.

ಹಸನಾದ ಬೀಜಗಳನ್ನು ಬಿತ್ತುವುದೇ ಉತ್ತಮ ದರ್ಜೆಯ ಬೇಸಾಯಕ್ಕೆ ಮೊದಲನೆಯ ಮೆಟ್ಟಿಲು

[ನಿ. ಪೆಂ.]

ಮಾರಾಟಕ್ಕಿದೆ.

ಕೊಡ್ಲಿಪೇಟೆಗೆ ಒಂದು ಮೈಲು ದೂರದಲ್ಲಿ ಮಡಿಕೇರಿ ಅರಕಲಗೋಡಿಗೆ ಹೋಗುವ ಹ್ಯಾಂಡ್ ಪ್ರೋಸ್ಟ್ ಸ್ಥಳದಲ್ಲಿ ನನ್ನ ಸ್ವಯಾರ್ಜಿತವಾದ ಆಸ್ತಿ ವಾಸಕ್ಕೆ ಅನುಕೂಲವಾದ ಮಂಗಳೂರು ಹಂಚಿನ ಮನೆ ದನವಿನ ಕೊಟ್ಟಿಗೆ ಅಂದಾಜು ೨೦ ಎಕ್ರೆ ಕುಷ್ಕಿ ಜಾಗ ಇದರಲ್ಲಿ ಕೆಲವು ಜಾಗದಲ್ಲಿ ಕಿತ್ತಳೆ, ಬಾಳೆ, ನಿಂಬೆ, ಕಾಫಿ ವ್ಯವಸಾಯವಿದ್ದು 12 ಬಟ್ಟಿ ಬತ್ತ, 18 ಬಟ್ಟಿ ರಾಗಿ ಬೆಳೆಯುತ್ತಿರುತ್ತೇನೆ. ಮನೆಗೆ ಹತ್ತಿರವಾಗಿ 3 ಎಕ್ರೆ ತರಿ ಜಮೀನು ಸೇದುವ ಬಾವಿ ಇರುತ್ತದೆ. ಕುಷ್ಕಿ ಜಾಗಕ್ಕೆ ಇಡೀ ವರ್ಷವೂ ಯಾವಾಗಲೂ ದನಗಳು ಒಳಗೆ ಹೋಗಲು ಅವಕಾಶವಿಲ್ಲದಂಥಾ ಗ್ಯಾರಂಟಿ ಬೇಲಿ ಇರುತ್ತದೆ. ಖಾಯಿಸ್‌ದಾರರು ಖುದ್ದು ನೋಡಿಯಾಗಲಿ ಪತ್ರ ಮುಖಾಂತರವಾಗಲೀ ತಿಳಿದುಕೊಳ್ಳಬಹುದು.

ಉದ್ದೂರು ಸೋಮಪ್ಪ.
ದೊಡ್ಡ ಕುಂದ ಗ್ರಾಮ,
2-1 ಕೊಡ್ಲಿಪೇಟೆ

೫೦ ವರ್ಷಗಳಿಗೆ ಮೀರಿದ ವಿಶ್ವಾಸಪೂರಿತ ಸೇವೆ.

ವಿಶ್ವಾಸ ಹಾಗೂ ಪ್ರಜಾಪ್ರಭುತ್ವ ತತ್ವಗಳ ಮೇಲೆ ರಚಿತವಾಗಿರುವ ದಿ ಬೊಂಬೆ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್ ಕಳೆದ ಎಂಟು ಶತಮಾನಗಳಿಗೂ ಹೆಚ್ಚಿನ ಸಮಯದಿಂದ ಸಾರ್ವಜನಿಕರ ಸೇವೆಯನ್ನು ಒಂದೇ ವಿಧದಿಂದ ಮಾಡುತ್ತಿದೆ. ಇದು ದೇಶದ ಪ್ರಗತಿಗೆ ಪ್ರಾಮುಖ್ಯವಾದ ಕೊಡುಗೆನ್ನಬಹುದು. "ವಿಮೆದಾರರ ಸೇವೆ"ಯ ಒಂದೇ ಗುರಿಯನ್ನು ಇಟ್ಟುಕೊಂಡು ಅದು ದುಡಿಯುತ್ತಿದೆ. ದಿ ಬೊಂಬೆ ಮ್ಯೂಚುವಲ್ ವಿಮೆದಾರರ ಸಂಸ್ಥೆ. ಅವರ ಸಂಘ, ಅವರಿಗೆ ಅದರ ಹಿತ ಸೇರಿ.

ವ್ಯಕ್ತಿಗತ ಬೇಡಿಕೆಗೆ ಅನುಕೂಲವಾದ ವಿವಿಧ ಯೋಜನೆಗಳಿವೆ. ವಿವರಗಳಿಗೆ ಬರೆಯಿರಿ—

ದಿ ಬೊಂಬೆ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು
ಹಾರ್ನ್‌ಬಿ ರೋಡ್,
ಬೊಂಬಾಯಿ.

ಬ್ರಾಂಚ್ ಆಫೀಸು
ಪೋ. ಬಾ. ನಂ. 186
ಬೆಂಗಳೂರು—2.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ

ನೀವು ಬಲ್ಲಿರಾ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ದಾಖ್ಲೆ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕೋರ್ಪೊರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಹೆಚ್ಚು ಹೆಚ್ಚಾಗಿ ಪಡೆದು "ಕೋರ್ಪೊರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 9

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ, ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED

FOR IMMEDIATE SALE.

TWO CHEVROLET LORRIES, 1945 model, in good running condition. Overhauled about 6 months ago.

apply to:—

COORG ORANGE GROWERS' CO-OPERATIVE SOCIETY. LTD.,
POLLIBETTA.

ಶ್ರೀ ಕೆ. ಸಿ. ಪೀತಾಂಬರರವರು,
"ಕೊಡಗು" ಪತ್ರಿಕೆಯ,
ಕೊಡ್ಲಿಪೇಟೆ.

ವಿನೋದ.

ಹಾಲಿನ ವ್ಯಾಪಾರ.

ಲೇ:—ಶ್ರೀ ಪಿ. ಕೆ. ನಾರಾಯಣನ್ ನಾಯರ್.

ಮನೆ ಯಜಮಾನ:— ಏಯ್ ಹಾಲು, ಇಲ್ಲಿ ಬಾಪ್ಪಾ!

ಹಾಲಿನವ:— ಏನಾಗಬೇಕು ಸ್ವಾಮಿ?

ಮ. ಯ:— ನನಗೆ ದಿವಸಾಗಲೂ ಒಂದು ಕುಪ್ಪಿ ಹಾಲು ಬೇಕು. ಬೆಳಗ್ಗೆ ಅರ್ಧ ಕುತ್ತಿ, ರಾತ್ರೆ ಅರ್ಧ ಕುತ್ತಿ, ಕೊಡುವದಕ್ಕೆ ಸಾಧ್ಯವಿದೆಯೆ?

ಹಾಲಿನವ:— ಓಹೋ, ಅದಕ್ಕೇನು ಅಷ್ಟೆ? ಬೇಕಾದಷ್ಟು ಕೊಡಬಹುದು. ಆದರೆ ಕುತ್ತಿಗೆ ಒಂದು ರೂಪಾಯಿ ಬೆಲೆಯಾಗುತ್ತೆ ಸ್ವಾಮಿ!

ಮ. ಯ:— ಬೆಲೆ ಎಷ್ಟಾದರೂ ಚಿಂತೆಯಿಲ್ಲ. ಆದರೆ ಹಾಲು ಮಾತ್ರ ಒಳ್ಳೆಯದಾಗಬೇಕು.

ಹಾಲಿನವ:— ಒಳ್ಳೆಯ ಹಾಲು ಬೇಕಾದರೆ ಒಂದು ರೂಪಾಯಿ ಎರಡಾಣೆಯಾಗಬೇಕು.

ಮ. ಯ:— ಒಹೋ, ಸರಿ! ಆದರೆ ದನದ ಹಾಲೆಂದು ಹೇಳಿ ಎಮ್ಮೆಯ ಹಾಲು ಕೊಡಬಾರದು.

ಹಾಲಿನವ:— ಹಾಗೆ ಸ್ವಚ್ಛ ದನದ ಹಾಲು ಬೇಕಾದರೆ ಒಂದು ಕಾಲು ರೂಪಾಯಿ ಕೊಡಬೇಕು.

ಮ. ಯ:— ಹೂಂ, ಸರಿ ದನವನ್ನು ಮನೆಗೆ ತಂದು, ನನ್ನ ಎದುರಿಗೆ ಕರೆದು ಕೊಡಬೇಕು. ತಿಳಿಯಿತೇ?

ಹಾಲಿನವ:— ಸರಿ. ಹಾಗಿದ್ದ ಪಕ್ಷದಲ್ಲಿ ಬೆಲೆ ರೂಪಾಯಿ ಒಂದು ಮತ್ತು ಆಣೆ ಆರು.

ಮ. ಯ:— ಅದೆಲ್ಲ ಸರಿ. ಆದರೆ ಕರೆಯುವ ಮೊದಲು ಪಾತ್ರೆಯನ್ನು ಕವುಚಿ ನನ್ನ ಮುಂದೆ ತೋರಿಸಬೇಕು.

ಹಾಲಿನವ:— ಸರಿ. ಆ ಶರ್ತದ ಮೇಲೆ ಬೆಲೆ ಒಂದೂವರೆ ಆಗುತ್ತದೆ.

ಮ. ಯ:— ಹಾಗೆಯೇ ಆಗಲಿ. ಆದರೆ ಕರೆಯುವಾಗ ಅವಸರದಿಂದ ನೊರೆ ಸಹಿತ ಲೆಕ್ಕಕ್ಕೆ ಹಿಡಿಯಬಾರದು.

ಹಾಲಿನವ:— ನೀವು ಹಾಗೆಲ್ಲ ಉಪದ್ರ ಮಾಡಬಾರದು ಸ್ವಾಮಿ.

ಮ. ಯ:— ಬೆಲೆ ಬೇಕಾದರೆ ಒಂದೂ ಮುಕ್ಕಾಲು ರೂಪಾಯಿ ಆಗಲಿ— ಕುತ್ತಿ ಮಾತ್ರ ಮೋಸದ್ದು ಆಗಬಾರದು. ನನ್ನ ಕುತ್ತಿಯಲ್ಲಿ ಅಳೆಯಬೇಕು. ಅಥವಾ ಸರಕಾರೀ ಮೋಹರಿನ ಕುತ್ತಿ ಆಗಬೇಕು. ಕ್ರಯ ಎರಡು ರೂಪಾಯಿ ಆದರೂ ಚಿಂತೆಯಿಲ್ಲ.

ಹಾಲಿನವ:— ಬೇಡ ಸ್ವಾಮಿ, ಬೇಡ! ನೀವು ಹತ್ತು ರೂಪಾಯಿ ಕೊಟ್ಟರೂ ಈ ಕಠಿಣ ಆಜ್ಞೆ ಪಾಲಿಸಲು ಸಾಧ್ಯವಿಲ್ಲ. ನೀವು ಬೇಕಾದರೆ ನನ್ನ ಹಾಗೇ ಹಾಲಿನ ಹುಡಿ ತರಿಸಿಕೊಳ್ಳುವ ವ್ಯವಸ್ಥೆ ಮಾಡಿರಿ.

'ಪ್ರಭಾತ'

ಹುಚ್ಚರ ಹಟ್ಟಿ

ಗಣರಾಜ್ಯದಲ್ಲಿ

ಓದಿದೆನು ನಿಷ್ಠೆಯಿಂ ಮನವಿಟ್ಟು ಓದಿದೆನು
ಕಡೆಗೊಮ್ಮೆ ಸುಖಪಾದಿತೆಂಬುದನು ನೆನೆದು
ಉದ್ಯೋಗ ಬೇಕೆಂದು ಹಲವೆಡೆಗೆ ಸುತ್ತಿದೆನು
"ಎಕ್ಸ್‌ಛೇಂಜ್" ಏಜಂಟರಲ್ಲಿರನು ಕಂಡೆ
ಗುಣವಂತ ನೀನಮುದೇ— ಹಣವಂತನಲ್ಲವೇ?—
ನಿನಗೆಲ್ಲಿ ಸ್ಥಾನವಿದೆ— ಗಣರಾಜ್ಯದಲ್ಲಿ?

ಹೊನ್ನ ಕೈಯಲಿ ಹಿಡಿದು ಕೊಡುವ ಕೂಡು ಅಕ್ಕಿ
ಎನ್ನುತತಿ ಗೌರವದಿ ಗೋಗರೆದು ಕೊಂಡೆ
"ಅಕ್ಕಿ ರೇಶನ್ ಕಡಿಮೆ, ನೂಕ್ಕುವಿರಿ ರಾಗಿಯಿಂ
ತೆಗೆದಿಡಲೇ ನಿಮಗಾಗಿ ಪ್ರೀತಿಯಿಂದ"
ತೂಕದವನಾದರೆ ಲೋಕ ಕೈಮುಗಿಯುವದು
ನಿನಗೆಲ್ಲಿ ಸ್ಥಾನವಿದೆ— ಗಣರಾಜ್ಯದಲ್ಲಿ?

ತುಂಬಿರುವ ವಿಧವಿಧದ ಅರಿವೆಗಳನು ಕಂಡು
ಅಂಗಡಿಯ ಒಳಹೊಕ್ಕು ಸ್ತಬ್ಧನಾದೆ.
ಹೊರೆ ಹೊರೆಯ ದೋತರವು ಸೀರೆ ಮಲ್‌ಪಾಯ್ಲಗಳು
ದರ ಮಾತ್ರ ಒಂದಕ್ಕೆ ಆರು ಎಂಟು
ಮಾನವಿಲ್ಲದ ನಿನಗೆ ಮಾನ ಮುಚ್ಚುವ ಬಯಕೆ
ಬೇಕೇಕೆ ನಿನಗಿಂದು— ಗಣರಾಜ್ಯದಲ್ಲಿ?

ಹೈದರಾಬಾದ್ ಸಂಸ್ಥಾನವನ್ನು ವಿಭಜಿಸಿರಿ.

ಪ್ರಾಂತಗಳ ಪುನರ್ರಚನೆ ಹಾಗೂ ಅವುಗಳ ಗಡಿನಿರ್ಣಯಕ್ಕೆ ಒಂದು ಗಡಿ ನಿರ್ಣಾಯಕ ಸಮಿತಿಯನ್ನು ಕೂಡಲೇ ಸ್ಥಾಪಿಸಬೇಕೆಂದು ಅಖಿಲ ಭಾರತೀಯ ಭಾಷಾವಾರು ಪ್ರಾಂತ ಸಮ್ಮೇಳನದ ಸಮಿತಿಯು ತಾ. ೪ ರಲ್ಲಿ ಭಾರತ ಸರಕಾರವನ್ನು ಕೇಳಿಕೊಂಡಿತು.

ದೇಶದ ಹಿತದೃಷ್ಟಿಯಿಂದ ಮತ್ತು ಪಂಚವಾರ್ಷಿಕ ಯೋಜನೆಯ ಸಫಲತೆಯ ದೃಷ್ಟಿಯಿಂದ ಭಾಷಾನುಗುಣವಾಗಿ ಪ್ರಾಂತರಚನೆಯನ್ನು ಅಗತ್ಯವಾಗಿ ಮಾಡಬೇಕೆಂದು ಸಮಿತಿಯು ಒಂದು ಠರಾವಿನಲ್ಲಿ ಕೇಳಿಕೊಂಡಿರುವುದು.

ಸಮಿತಿಯ ಎರಡು ದಿನಗಳ ಸಮ್ಮೇಲನವು ಡಾ. ಲಂಕಾಸುಂದರಂರವರ ಅಧ್ಯಕ್ಷತೆಯಲ್ಲಿ ಕೊನೆಗೊಂಡಿತು. ಸಮಿತಿಯು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಹೈದರಾಬಾದನ್ನು ವಿಭಜಿಸಬೇಕೆಂದು ಪುನಃ ಒತ್ತಾಯಪೂರ್ವಕ ಕೇಳಿತು. ಈ ಕೇಳಿಕೆಗೆ ಕಾಂಗ್ರೆಸ್; ಕಮ್ಯುನಿಸ್ಟ್, ಪ್ರಜಾಸೋಶಲಿಸ್ಟ್, ಹಿಂದೂ ಮಹಾಸಭಾ, ಜನಸಂಘ ಮತ್ತು ರೈತ ಮಜೂರ ಪಕ್ಷಗಳ ಬೆಂಬಲವಿದೆ. ಹೈದರಾಬಾದಿನ ವಿಭಜನೆ, ನಿಜಾಮರ ಪದಚ್ಯುತಿ, ಇವು ದಕ್ಷಿಣ ಭಾರತದ ಶಾಂತಿ ಮತ್ತು ಸಮಾಧಾನಕ್ಕೆ ಅವಶ್ಯಕವೆಂದು ಸಮಿತಿಯು ಅಭಿಪ್ರಾಯಪಡುತ್ತದೆ. ಎಂದು ಆ ಪ್ರಕಟಣೆಯಲ್ಲಿ ಹೇಳಲಾಗಿದೆ.

ಆಸ್ತಿ ಪಾಸ್ತಿ ವಿಚಾರಣೆ ಗೌರವಕ್ಕೆ ಕುಂದೇ?

ಶಾಸನ ಸಭಾಸದರ ಮತ್ತು ಅಧಿಕಾರಿ ವರ್ಗದವರ ಆಸ್ತಿಪಾಸ್ತಿಗಳ ಬಗ್ಗೆ ತನಿಖೆ ನಡೆಸಲು ಒಂದು ಕಮಿಶನನ್ನು ನೇಮಕ ಮಾಡುವ ಬಗ್ಗೆ ಶ್ರೀ. ಬಿ. ಡಿ. ಬಾರಲೆಯವರು ಮುಂದಿಟ್ಟ ನಿರ್ಣಯವು ಮುಂಬಾಯಿ ಶಾಸನ ಸಭೆಯಲ್ಲಿ ಪ್ರಬಲವಾಗಿ ಪುರಸ್ಕರಿಸಲ್ಪಟ್ಟಿತು.

ಈ ಕ್ರಮದಿಂದ ಲಂಚಗುಳಿತನವನ್ನು ಕಿತ್ತು ಹಾಕುವುದು ಮಾತ್ರವಲ್ಲದೆ ಶಾಸನ ಸಭಾಸದರ ಮತ್ತು ಅಧಿಕಾರಿ ವರ್ಗದವರ ವಾರ್ಷಿಕ ಸಂಪತ್ತನ್ನು ಪರೀಕ್ಷಿಸಲಾಗುವುದು.

ರೈತ ಮತ್ತು ಮಜೂರ ಪಕ್ಷದವರು ಮಂಡಿಸಿದ ಈ ನಿರ್ಣಯವನ್ನು ಕಾಂಗ್ರೆಸಿಗರು ವಿರೋಧಿಸಿ ಈ ಕ್ರಮವು ಸಭಾಸದರ ಆತ್ಮ ಗೌರವಕ್ಕೆ ಹಾನಿಕರವಾದುದ್ದು ಎಂದು ಖಂಡಿಸಿದರು.

ಶ್ರೀ. ಬಾರಲೆಯವರು ಮಾತನಾಡಿ ಸರಕಾರವು ಇದನ್ನು ಮಾನ್ಯ ಮಾಡದಿದ್ದರೆ ಅದು ಲಂಚಗುಳಿತನಕ್ಕೆ ಪ್ರೋತ್ಸಾಹ ಕೊಡುತ್ತದೆಂದು ಜನರು ಖಂಡಿತ ತಿಳಿದುಕೊಳ್ಳುತ್ತಾರೆ, ಎಂದು ಹೇಳಿದರು.

ಅಧಿಕಾರಿಗಳಿಗೆ ರುಷುಮು ಕೊಡುವುದನ್ನು ಜನರು ತಡೆಹಿಡಿಯುವಂತೆ ಪ್ರಚಾರ ಮಾಡಬೇಕೆಂದು ಶ್ರೀ. ನಾಥಲಾಲ್ ಪರೀಖ್ ತಿಳಿಸಿದರು.

ಸದಸ್ಯರು ಪ್ರಾಮಾಣಿಕರಾಗಿರುವುದಾದರೆ ಇದಕ್ಕೆ ಹೆದರಬೇಕಾಗಿಲ್ಲವೆಂಬುದಾಗಿ ಶ್ರೀ. ಎಸ್. ಜಿ. ವರ್ತಿ (ಪ್ರ. ಸೋ) ಹೇಳಿದರು.

ಈ ಮಸೂದೆಯು ಶಿಫಾರಸು ಮಾಡುವಂತೆ ನೇಮಿಸುವ ಕಮಿಶನು ಪ್ರಯೋಜನಕ್ಕೆ ಬಾರದು. ಇದರಿಂದ ಪರಸ್ಪರ ಒಬ್ಬರ ಮುಖಕ್ಕೆ ಇನ್ನೊಬ್ಬರು ಮಸಿ ಹಚ್ಚಿಕೊಳ್ಳುವಂತಾಗುವುದು ಎಂಬುದಾಗಿ ಶ್ರೀ. ಎಚ್. ಎಸ್. ಮೆಟಗುಡ್ (ಕಾಂ) ಟೀಕಿಸಿದರು.

ಶ್ರೀ ಲಲ್ಲೂಭಾಯಿ ಎಮ್. ಪಟೇಲ್ (ಕಾಂ)-ಶೀಸರನ ಮಡದಿಯಂತೆ ಶಾಸನ ಸಭಾಸದರು ಸಂಶಯಗ್ರಸ್ತರಾಗುತ್ತಾರೆ. ನೇಮಕವಾಗುವ ಕಮಿಷನಿನ ಕಾರ್ಯಸಾಧನೆಯು ಎಷ್ಟರ ಮಟ್ಟಿಗೆ ಸಫಲವಾಗಬಲ್ಲದೋ ಹೇಳಬರುವುದಿಲ್ಲ.

ಶಾಸನ ಸಭಾಸದರ ಸೊತ್ತಿನ ತನಿಖೆ ಮಾಡುವುದರಿಂದ ಜನರಿಗೆ ನಿಜವಾದ ಸಂಗತಿ ತಿಳಿಯುತ್ತದೆ. ಅಧಿಕಾರದ ದುರುಪಯೋಗ, ಸ್ವಜನಾಭಿಲಾಷೆ ಮುಂತಾದವುಗಳಿಂದಾಗಿ ಸಭಾಸದರು ಜನರಿಗೆ ಅಪ್ರಿಯರಾಗಿದ್ದಾರೆ ಎಂಬುದಾಗಿ ರೈತ ಮತ್ತು ಮಜೂರರ ನಾಯಕ ಶ್ರೀ. ತುಲಸಿದಾಸ್ ಜಾಧವರು ತಿಳಿಸಿದರು.

ಧಾರ್ಮಿಕ ಸಂಸ್ಥೆಗಳು ಭೂದಾನ ಮಾಡಬೇಕು.

"ಭವಿಷ್ಯದಲ್ಲಿ ಒಳ್ಳೆಯದಾಗುವುದೆಂದಾಗಲಿ, ಮುಂದಿನ ಜನ್ಮದಲ್ಲಿ ಒಳ್ಳೆಯದಾಗುವುದೆಂದಾಗಲಿ ಭರವಸೆ ಕೊಡುವುದು ನನ್ನ ಧರ್ಮವಲ್ಲ. ನನ್ನ ಧರ್ಮ ಸುಖವನ್ನು ಇಲ್ಲಿಯೇ, ಈಗಲೇ ಕೊಡುವಂತಹದು. ನನ್ನದು ಕಠಿನ ಧರ್ಮಪಕ್ಷ. ಇದು ನಗದಿನ ಧರ್ಮ. ಸ್ವರ್ಗ, ಭಯ, ಮರಣಗಳ ವಿಷಯವಾಗಿ ಮಾತಾಡಬೇಡಿರಿ; ಸ್ವರ್ಗವನ್ನು ಭೂಮಿಗೆ ತರಲು ಜನರಿಗೆ ದಾರಿತೋರಿಸಿರಿ.'

ಹೀಗೆಂದು ಆಚಾರ್ಯ ವಿನೋಬಾ ಭಾವೆಯವರು ಗಿರಿಧಿ ಎಂಬಲ್ಲಿ, ಪ್ರಾರ್ಥನಾನಂತರದಲ್ಲಿ ನಡೆದ ಸಭೆಯಲ್ಲಿ ಭಾಷಣ ಮಾಡುತ್ತಾ ಹೇಳಿದರು.

'ದೇವಸ್ಥಾನಗಳ ಮಹಂತರುಗಳು ಈಗ ಭೂದಾನ ಯಜ್ಞಕ್ಕೆ ಭೂಮಿಯನ್ನು ಕೊಡುವುದನಾರಂಭಿಸಿದ್ದಾರೆ. ಪೂರ್ವದಲ್ಲಿ ಧಾರ್ಮಿಕ ಸಂಸ್ಥೆಗಳು ವಿದ್ಯಾದಾನದ ಮತ್ತು ಸಮಾಜ ಸುಧಾರಣೆಯ ಕೇಂದ್ರಗಳಾಗಿದ್ದುವು. ಆದ್ದರಿಂದ ಅವುಗಳು ಜನರ ಹೃದಯಗಳಲ್ಲಿ ಸ್ಥಾನಗಳನ್ನು ಪಡೆದುವು.

"ಈಗ ಆ ಧರ್ಮ ಸಂಸ್ಥೆಗಳು ಅಂತಹ ಕೆಲಸಗಳನ್ನು ಮಾಡುತ್ತಿಲ್ಲ. ಬಹಳ ಹಿಂದಿನಿಂದಲೂ ಬಂದ ಸಂಪ್ರದಾಯಗಳಿಂದಾಗಿ ಅವುಗಳಿಗೆ ಗೌರವ ಸಲ್ಲುತ್ತಿದೆ. ಜನಸಂಖ್ಯೆಯು ಬೇಕಾದಷ್ಟು ಸಿಗುತ್ತಿಲ್ಲ. ಆದಕಾರಣ ಧಾರ್ಮಿಕ ಸಂಸ್ಥೆಗಳು ಭೂಮಿಯನ್ನು ಇಟ್ಟುಕೊಳ್ಳಕೂಡದು. ಅವುಗಳು ಭೂಮಿ ಇಲ್ಲದ ರೈತರಿಗೆ ಅವುಗಳನ್ನು

ದಾನ ಮಾಡಬೇಕು. ಇದು ನಿಜವಾಗಿಯೂ ಈ ಯುಗದ ಧರ್ಮವಾಗಿದೆ.

"ನಮ್ಮ ಧರ್ಮ ಸಂಸ್ಥೆಗಳ ಮುಖ್ಯಸ್ಥರು ನನ್ನ ಬೇಡಿಕೆಗಳಿಗೆ ಮನ್ನಣೆಯಿತ್ತು ಭೂಮಿಯನ್ನು ದಾನ ಮಾಡುತ್ತಿದ್ದಾರೆ. ಆಶ್ರಮಗಳಿಗೆ ಸ್ಥಾನಗಳಿವೆ. ಅವುಗಳು ಸಮಾಜ ಸೇವೆಯನ್ನು ಮಾಡುವುದಾದರೆ, ಜ್ಞಾನದ ಬೆಳಕನ್ನು ಹರಡುವುದಾದರೆ ಅವುಗಳಿಗೆ ಸ್ಥಾನವಿದೆ. ಹಾಗೆ ಮಾಡದೆ ಹೋದರೆ ಅವುಗಳಿಗೆ ಸ್ಥಾನವಿಲ್ಲ," ಎಂದು ಆಚಾರ್ಯ ಭಾವೆಯವರು ತಿಳಿಸಿದರು.

—

ಅಸಫ್ ಆಲಿಯವರ ನಿಧನ.

ಸ್ವಿಜರ್ ಲೇಂಡಿನಲ್ಲಿ ಭಾರತದ ರಾಯಭಾರಿಗಳಾಗಿದ್ದ ಶ್ರೀ ಅಸಫ್ ಆಲಿಯವರು ತಾ. ೧ ರಂದು ಮಧ್ಯ ರಾತ್ರಿ ಹೃದ್ರೋಗದಿಂದ ನಿಧನರಾದರು. ನಿಧನ ಹೊಂದುವ ಕೆಲವೇ ಗಂಟೆಗಳ ಮೊದಲು ಶ್ರೀಮತಿ ಆರುಣಾ ಅಸಫ್ ಆಲಿಯವರು ಸ್ವಿಜರ್‌ಲೇಂಡಿಗೆ ತಲಪಿದ್ದು ಗಂಡನನ್ನು ಸೇರಿಕೊಂಡಿದ್ದರು.

ಮಿ। ಅಸಫ್ ಆಲಿಯವರು ಪ್ರಮುಖ ಕಾಂಗ್ರೆಸಿಗರಲ್ಲೊಬ್ಬರು. ೧೯೪೨ರಲ್ಲಿ ಇವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲೊಬ್ಬರಾಗಿದ್ದು ಇತರರೊಂದಿಗೆ ದಿಗ್ಬಂಧಿಸಲ್ಪಟ್ಟಿದ್ದರು. ನೆಹರೂರವರ ನಾಯಕತ್ವದಲ್ಲಿ ಸ್ಥಾಪಿಸಲ್ಪಟ್ಟ ಪ್ರಥಮ ರಾಷ್ಟ್ರೀಯ ಸರಕಾರದಲ್ಲಿ ಅಸಫ್ ಆಲಿಯವರು ರೈಲ್ವೆ ಮಂತ್ರಿಗಳಾಗಿದ್ದರು.

೧೯೪೭ರಲ್ಲಿ ಇವರು ಅಮೇರಿಕದಲ್ಲಿ ಭಾರತದ ರಾಯಭಾರಿಗಳಾಗಿ ನೇಮಿಸಲ್ಪಟ್ಟರು. ಅನಂತರ ನಾಲ್ಕು ವರ್ಷಗಳ ಕಾಲ ಒರಿಸ್ಸದ ಗವರ್ನರರಾಗಿ ದುಡಿದರು. ಕಳೆದ ಮೇ ತಿಂಗಳಲ್ಲಿ ಇವರು ಸ್ವಿಜರ್‌ಲೇಂಡಿನ ರಾಯಭಾರಿಗಳಾಗಿ ಅಧಿಕಾರ ಸ್ವೀಕರಿಸಿದರು. ಸ್ವಿಜರ್‌ಲೇಂಡಿನ ಹಿಂದಿನ ಭಾರತ ರಾಯಭಾರಿಗಳಾಗಿದ್ದ ಶ್ರೀ ಧೀರಜಲಾಲ್ ದೇಸಾಯಿ ಅವರೂ ಕಳೆದ ವರ್ಷ ಸ್ವಿಜರ್‌ಲೇಂಡಿನಲ್ಲೇ ನಿಧನರಾಗಿದ್ದರು. ತಾ. ೨ರಂದು ಪಾರ್ಲಿಮೆಂಟಿನಲ್ಲಿ ಶೋಕ ಪ್ರದರ್ಶಿಸಲಾಯಿತು. ಮೃತರ ಕಳೇಬರವನ್ನು ಶ್ರೀಮತಿ ಅರುಣಾ ಅಸಫ್ ಆಲಿಯವರು ಭಾರತಕ್ಕೆ ತರಲು ನಿರ್ಧರಿಸಿದ್ದಾರೆ.

—

ಪಂಚವಾರ್ಷಿಕ ಯೋಜನೆ.

ಡಾ. ಜೆ. ಸಿ. ಕುಮಾರಪ್ಪನವರ ಅಭಿಪ್ರಾಯ.

ಗಾಂಧಿವಾದಿ ಅರ್ಥಶಾಸ್ತ್ರಿಗಳಾದ ಡಾ ಜೆ. ಸಿ. ಕುಮಾರಪ್ಪನವರು ಭಾರತದ ಪಂಚವಾರ್ಷಿಕ ಯೋಜನೆ ಯೋಜನೆಯೇ ಅಲ್ಲ ಎಂದು ತಾ ೫ರಲ್ಲಿ ಕೊಯಮುತ್ತೂರಿನಲ್ಲಿ ಹೇಳಿದರು. ಅದು ಕೇವಲ ಕೆಲ ಯೋಜನೆಗಳ ಒಂದು ಯಾದಿ. ಅದರ ಹಿನ್ನೆಲೆಯಲ್ಲಿ ಮಾನವ ಶಾಸ್ತ್ರ ಆಧಾರವೇ ಇಲ್ಲ. ಈ ಪಂಚವಾರ್ಷಿಕ ಯೋಜನೆ ಮತ್ತು ಸಮಾಜ ವಿಕಾಸ ಯೋಜನೆಗಳು ಕಾರ್ಯಗತವಾದರೆ ದೇಶ ಒಡೆದು ಹೋದೀತು. ದೇಶದ ಸಂವಿಧಾನವು ಸಂಪೂರ್ಣವಾಗಿ ಬದಲಾಗದೆ ದೇಶದ ಆರ್ಥಿಕ ಅಭಿವೃದ್ಧಿಗೆ ಅವಕಾಶವೇ ಇಲ್ಲ. ಯಾವ ಪರಿಹಾರವನ್ನೂ ಕೊಡದೆ ಜಮೀನುದಾರಿ ನಿರ್ಮೂಲನವಾಗಬೇಕು. ಮತ್ತು ಜಮೀನಿನ ಒಡೆತನ ಸಾಮೂಹಿಕವಾಗಿ ಹಳ್ಳಿಯದಾಗಿರಬೇಕು ಎಂಬುದು ನನ್ನ ಅಭಿಪ್ರಾಯ. ನಾನು ಉಪಾಧ್ಯಕ್ಷನಾಗಿರುವ ಅಖಿಲ ಭಾರತ ಶಾಂತಿ ಮಂಡಳದ ಉದ್ದೇಶವು ಸಾಮ್ರಾಜ್ಯವಾದದ ವಿರುದ್ಧ ಜನ ಜಾಗೃತಿಯನ್ನು ಮಾಡಿ ಮೂರನೇ ಜಾಗತಿಕ ಯುದ್ಧವನ್ನು ತಡೆಗಟ್ಟುವದಾಗಿದೆ. ಕಮ್ಯೂನಿಷ್ಟರಲ್ಲದ ನಾನು ಮತ್ತು ಡಾ. ಕಿಚಲುರಂತವರು ಸದಸ್ಯರಾಗಿರುವವರಿಂದ ಶಾಂತಿ ಮಂಡಳವು ಕಮ್ಯೂನಿಷ್ಟಪ್ರಚೋದಿತ ಸಂಸ್ಥೆಯೆಂದೆನ್ನುವದು ತಪ್ಪು ಎಂದು ಡಾ. ಕುಮಾರಪ್ಪನವರು ಹೇಳಿದರು.

—

ನೋಟೀಸು.

ಅಖಿಲ ಕೊಡಗು ವಿದ್ಯಾನಿಧಿಗೆ ಹಣ ಶೇಕರಿಸುವ ಕಾರಣಕ್ಕಾಗಿ ನಿಧಿಯ ಖಜೇರಿಯಿಂದ ಸುಮಾರು ಮುನ್ನೂರು ಜನರು ರಶೀತಿ ಪುಸ್ತಕಗಳನ್ನು ಹೊಂದಿಕೊಂಡಿರುತ್ತಾರೆ. ಈ ಪುಸ್ತಕಗಳನ್ನು ಹೊಂದಿಕೊಂಡು ಎರಡು ವರ್ಷಗಳಾದರೂ ಬಹು ಜನರು ತಾವು ಸಂಗ್ರಹಿಸಿದ ಹಣದ ಲೆಕ್ಕವನ್ನಾಗಲೀ ಯಾ ರಶೀತಿ ಪುಸ್ತಕವನ್ನಾಗಲಿ ಸಂಘದ ಖಜೇರಿಗೆ ತಲಪಿಸದಿರುವುದು ವಿಷಾದಕರ. ಪುಸ್ತಕ ಪಡೆದುಕೊಂಡವರು ಏಪ್ರಿಲ್ ತಾ. ೧೫ರೊಳಗೆ ಸಂಗ್ರಹಿಸಿದ ಹಣ ಮತ್ತು ಪುಸ್ತಕಗಳನ್ನು ಸಂಘದ ಖಜೇರಿಗೆ ಹಾಜರು ಮಾಡಬೇಕೆಂದು ಈ ಮೂಲಕ ತಿಳುವಳಿಕೆ ಕೊಡಲಾಗಿದೆ. ಹಣ ಸಂಗ್ರಹಿಸದೆ ಪುಸ್ತಕ ಹಾಗೆ ಇಟ್ಟುಕೊಂಡವರು ಖಾಲಿ ಪುಸ್ತಕಗಳನ್ನು ಆ ತಾರೀಖಿನೊಳಗೆ ಕಳುಹಿಸಬೇಕು. ಪುಸ್ತಕಗಳನ್ನು ವಾಪಾಸು ಮಾಡದಿದ್ದರೆ ಅವುಗಳ ವಸೂಲಾತಿ ಬಗ್ಗೆ ಬೇರೆ ಕ್ರಮ ಕೈಕೊಳ್ಳಬೇಕಾಗುವದೆಂದು ಈ ಮೂಲಕ ಶ್ರುತ ಪಡಿಸಲಾಗಿದೆ.

ಅಲ್ಲದೆ ವಿದ್ಯಾನಿಧಿಯಿಂದ ಸಾಲ ತೆಗೆದುಕೊಂಡು ಈಗ ಸಂಪಾದನೆ ಮಾಡುತ್ತಿರುವವರಿಗೆ ಹಣ ಮರುಪಾವತಿ ಮಾಡಲು ಕಾಗದ ಬರೆದು, ರಿಜಿಸ್ಟರು ನೋಟೀಸು ಕೊಟ್ಟು ಪ್ರಯತ್ನಿಸಿದ ಫಲವಾಗಿ ಹಲವರು ಪಾವತಿ ಮಾಡುತ್ತಿದ್ದಾರೆ. ಆದರೆ ಕೆಲವರು ಈ ಕಡೆ ಗಮನವಿತ್ತಿರುವದಿಲ್ಲ. ಅಂಥಾವರು ಎಪ್ರಿಲ್ ತಾ. ೧೫ ರೊಳಗೆ ತಮ್ಮ ಬಾಕಿಯನ್ನು ಪಾವತಿ ಮಾಡಬೇಕೆಂಬುದು ಆಗ್ರಹ ಪೂರ್ವಕ ಕೇಳಿಕೊಳ್ಳಲಾಗಿದೆ. ಆ ತಾರೀಖಿನೊಳಗೆ ಹಣ ಬಾರದಿದ್ದರೆ ತಕ್ಕ ಕ್ರಮ ಜರಗಿಸಲಾಗುವುದು.

ಸಿ. ಡಿ. ಅಪ್ಪಯ್ಯ
ಕಾರ್ಯದರ್ಶಿ.

ಕೊಡಗು ವಿದ್ಯಾನಿಧಿ ಆಫೀಸು
4–4 ಮಡಿಕೇರಿ.

THE VIJAYA BANK, LIMITED.

ದಿ ವಿಜಯ ಬೇಂಕ್ ಲಿಮಿಟೆಡ್, ಮಡಿಕೇರಿ.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಮೂಲ ಧನ	ರೂ.	20,00,000
ತೆತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ವ್ಯಾಪಿ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು. ರೂಪಾಯಿ ಹತ್ತು ಸಾವಿರದ ಮೀಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟ ನಡೆಸಲ್ಪಡುವುದು.

ಬಿ. ಮಂಜಯ್ಯ ಹೆಗ್ಡೆ,
ಎಡ್ವೊಕೇಟ್.
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.
12–8 (ಮತ್ತು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರು)

ಮಡಿಕೇರಿ ಆಫೀಸಿನ ಏಜೆಂಟ್:— ಯಮ್. ಯಸ್. ಆಳ್ವ.

Specialists in Tailoring! Prompt Service!!

FOR English Felt Hats,
Wedding Suits, Ladies Over Coats
AND
Latest Designs in Wollen Suitings
— CALL ON —
25–9 PATTU BROTHERS,
OPP.— Town Hall, MYSORE.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಖಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0–8–0
ಸೇವಿಂಗ್ಸ್ (ತಾ. 1—1—1953 ರಿಂದ)	,,	1–8–0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1–8–0
1 ವರುಷ	,,	2–0–0
2 ವರುಷ	,,	2–8–0
3 ವರುಷ	,,	3–0–0
5 ವರುಷ	,,	3-12-0
10 ವರುಷ	,,	4–0–0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಕೆ. ಪಿ. ಅಪ್ಪಯ್ಯ.
ಗೌ. ಕಾರ್ಯದರ್ಶಿ. ಪ್ರೆಸಿಡೆಂಟ್ & ಖಜಾನ್ಚಿ.

ಬಾಣೆ ಜಾಗಕ್ಕೆ ಎಕರೆಗೆ ನಾಲ್ಕಾಣೆ ಕಂದಾಯ.

೧೯೫೩-೫೪ರ ಬಜೆಟ್ಟಿನಲ್ಲಿ ಆದಾಯ ಬಾಬುಗಳ ವಿಚಾರದಲ್ಲಿ ಬಾಣೆ ಕಂದಾಯದಿಂದ ರೂ. ೫೦,೦೦೦ ಬರುವದೆಂದು ಅಂದಾಜು ಮಾಡಿ ಅದನ್ನು ಬಜೆಟ್ಟಿನಲ್ಲಿ ಸೇರಿಸಲಾಗಿದೆ. ಕೊಡಗಿನಲ್ಲಿ ಸುಮಾರು ೨,೪೦,೦೦೦ ಎಕರೆ ಬಾಣೆ ಜಾಗವಿದೆಯೆಂದೂ ಅದಕ್ಕೆ ಎಕರೆಗೆ ನಾಲ್ಕಾಣೆಯಂತೆ ಕಂದಾಯ ಹಾಕುವದು ಉಚಿತವೆಂದೂ ಈ ವಿಚಾರವನ್ನು ಸರಕಾರವು ಬಜೆಟ್ಟಿನಲ್ಲಿ ಸೇರಿಸಿತ್ತು. ಈ ವಿಚಾರವಾಗಿ ಶ್ರೀ ಸಿ. ಸಿ. ಉತ್ತಯ್ಯನವರು ಒಂದು ಹೋತಾ ನಿರ್ಣಯವನ್ನು ಮಂಡಿಸಿ ಸಾರ್ವಜನಿಕ ಅಭಿಪ್ರಾಯ ತೆಗೆಯುವ ವರೆಗೆ ಈ ಕಂದಾಯವನ್ನು ಮುಂದರಿಸಬೇಕೆಂದು ಸೂಚಿಸಿದರು. ಆ ಠರಾವನ್ನು ತಾ. ೩೦ರಲ್ಲಿ ಅವರು ಮಂಡಿಸುತ್ತಾ ಹೀಗೆ ಹೇಳಿದರು. "ಶಾಸನ ಸಭಾ ಕಾರ್ಯಕಲಾಪಗಳಲ್ಲಿ ಎಂದೂ ಕಂಡು ಕೇಳದ ವಿಚಾರವನ್ನು ನಾನು ಎತ್ತಿ ಮಾತಾಡುತ್ತ ಇಲ್ಲ. ಈ ಕಂದಾಯವನ್ನು ಬಜೆಟ್ಟಿನಲ್ಲಿ ಸೇರಿಸಿದ್ದು ಪ್ರಜಾಪ್ರಭುತ್ವ ನೀತಿಗೆ ಸರಿಯಲ್ಲ. ಯಾವುದೇ ಹೊಸ ಕಂದಾಯವನ್ನು ಹಾಕುವಾಗ ಆ ವಿಚಾರದಲ್ಲಿ ಜನತೆಯ ಅಭಿಪ್ರಾಯವನ್ನು ತೆಗೆಯದೆ ಕಂದಾಯ ಹೇರುವದು ಪ್ರಜಾ ಜವಾಬ್ದಾರಿಯ ಇಂದಿನ ಕಾಲದಲ್ಲಿ ಸರಿಯಲ್ಲ. ಜನತೆಯನ್ನು ಕೇಳದೆ ಈ ರೀತಿಯ ಒಂದು ಕಂದಾಯದ ವಿಷಯವನ್ನು ಬಜೆಟ್ಟಿನಲ್ಲಿ ಸೇರಿಸಿರುವದನ್ನು ನಾನು ಖಂಡಿಸುವೆನು. ನಿಶ್ಚಿತವಾಗಿ ಯಾ ಸ್ಪಷ್ಟವಾಗಿ ಇಲ್ಲದ ರೆವಿನ್ಯೂ ರೂಲಿನ ದುರುಪಯೋಗವಿದೆಂದು ನನ್ನ ಭಾವನೆ. ಇಂಥಾ ಕಂದಾಯವನ್ನು ತಾವೇ ನಿಷ್ಕರ್ಷಿಸಿಕೊಂಡಿರುವದರಿಂದ ಕಂದಾಯ ಹಾಕಲು ಬದ್ಧವಾದ ಈ ಶಾಸನ ಸಭೆಯ ಅಧಿಕಾರವನ್ನು ಕೂಡ ಮೂಲೆಗೊತ್ತಿದಂತಾಗಿದೆ. ಆದ್ದರಿಂದ ನಿಯಮ ಬದ್ಧವಾಗಿ ಈ ವಿಚಾರದಲ್ಲಿ ಒಂದು ಮಸೂದೆಯನ್ನು ತಂದು ಜನತೆಯ ಅಭಿಮತವನ್ನು ತಿಳಿದು ಈ ಕಂದಾಯ ಹಾಕಬೇಕು. ಆ ವರೆಗೆ ಈ ಕಂದಾಯದ ಸೂಚನೆಯನ್ನು ಮುಂದರಿಸಿಡಬೇಕು" ಎಂದರು.

ಮುಖ್ಯಮಂತ್ರಿ ಶ್ರೀ ಸಿ. ಯಂ. ಪೂಣಚ್ಚನವರು ಮಾತಾಡುತ್ತಾ-ಈ ಕಂದಾಯದ ಅವಶ್ಯಕತೆ ಇದೆಯೋ ಇಲ್ಲವೋ ಎಂಬುದರ ಬಗ್ಗೆ ಮಾನ್ಯ ಮೆಂಬರರು ಮಾತಾಡಿಲ್ಲ. ಅದನ್ನು ಜಾರಿಗೆ ತರುವ ವಿಧಾನದ ವಿಚಾರದಲ್ಲಿ ಚರ್ಚೆ ಎತ್ತಿದ್ದಾರೆ. ನಮಗೆ ತುಂಬಾ ಸಮಯವಿದೆ. ಈ ಕಂದಾಯವು ೧೯೫೪ನೇ ಫೆಬ್ರವರಿಯಲ್ಲಿ ವಸೂಲಾಗುತ್ತದರಿಂದ ಆ ವರೆಗೆ ಬೇಕಾದ ರೀತಿಯ ಮಸೂದೆ ತರಬಹುದು. ಎಕರೆಗೆ ನಾಲ್ಕಾಣೆ ಕಂದಾಯ ಹಾಕುವದರಲ್ಲಿ ನಾವು ಯೋಗ್ಯವಾದುದನ್ನೇ ಮಾಡಿದ್ದೇವೆ. ಈ ನಾಲ್ಕಾಣೆಯು ಬಡಕೃಷಿಕನ ಬೆನ್ನ ಮೂಳೆಯನು ಮುರಿಯಲಾರದು. ಈ ಕಂದಾಯವನ್ನು ವಿಧಿಸಲು ಎರಡು ಕಾರಣಗಳಿವೆ. ಇಂಡಿಯಾ ಸರಕಾರವು ಪ್ರತಿ ಪ್ರಾಂತದ ಮುಂದಿರುವ ಪಂಚವಾರ್ಷಿಕ ಯೋಜನೆಗೆ ಹಣ ಒದಗಿಸುವ ಹೊಸ ದಾರಿ ಕಂಡುಹಿಡಿಯಬೇಕೆಂದು ಪ್ರತೀ ಪ್ರಾಂತ್ಯಕ್ಕೆ ಸೂಚಿಸಿದ್ದು ಪ್ರತೀ ಪ್ರಾಂತವೂ ತಮ್ಮ ತಮ್ಮ ಭೂ ಪದ್ಧತಿಯನ್ನು ವಿಮರ್ಶಿಸುತ್ತಿವೆ. ಭೂ ಪದ್ಧತಿಯು ಒಂದೊಂದು ಪ್ರಾಂತಕ್ಕೆ ಒಂದೊಂದು ರೀತಿಯಲ್ಲಿದೆ. ಅದನ್ನೆಲ್ಲಾ ಸರಿಪಡಿಸಿ ಇಡೀ ಹಿಂದೂಸ್ಥಾನಕ್ಕೆಲ್ಲಾ ಒಂದೇ ರೀತಿಯ ನಿಯಮ ಅನ್ವಯಿಸುವಂತಾಗುವ ದಿನಗಳು ದೂರ ಇರಲಾರವು. ಕೊಡಗಿನಲ್ಲಿ ಸುಮಾರು ೩ ಲಕ್ಷ ಬಾಣೆ ಜಾಗವು ಯಾವುದೇ ಕಂದಾಯವಿಲ್ಲದೆ ನುಸುಳುತ್ತಾ ಇದೆ. ನೆರೆ ಪ್ರಾಂತಗಳಲ್ಲಿರುವ ಕಂದಾಯಕ್ಕಿಂಥಾ ಕೊಡಗಿನಲ್ಲಿ ಭೂಕಂದಾಯವು ಬಹು ಕಡಿಮೆಯಾಗಿದೆ. ಪಂಚವಾರ್ಷಿಕ ಯೋಜನೆಯ ನಾನಾ ಕಾರ್ಯಗಳನ್ನು ಜಾರಿಗೆ ತಂದರೆ ಕೃಷಿಕರ ಸ್ಥಿತಿಯು ಸುಧಾರಿಸಿ ಎಕರೆಗೆ ನಾಲ್ಕಾಣೆ ಕಂದಾಯ ಕೊಡುವದನ್ನು ಆತನು ಒಂದು ಭಾರದ ಹೊರೆಯೆಂದು ಪರಿಗಣಿಸಲಾರನು. ದೇಶದಲ್ಲಿ ಈ ಬಾಣೆ ಜಾಗವೇ ನಾನಾ ಮೊಕದ್ದಮೆಗಳಿಗೆ ಕಾರಣವಾಗಿದೆ. ಯಾವ ಬಾಣೆಯು ಯಾರಿಗೆ ಸೇರಿದೆಯೆಂಬುದೇ ತಿಳಿದಿಲ್ಲ. ಪ್ರತೀ ಒಬ್ಬನಿಗೂ ಆತನ ಬಾಣೆಯ ವಿವರ ತಿಳಿಯಬೇಕಾದರೆ ಈ ಕಂದಾಯವು ಅನುಕೂಲ ಮಾಡುವದು. ಹಿಂದೂದೇಶದಲ್ಲಿ ಈ ಭೂವಿತರಣಾ ಪ್ರಶ್ನೆಯು ಬಹು ಪ್ರಾಮುಖ್ಯವೂ ಜಟಿಲವೂ ಆದುದು. ಈ ವಿಚಾರದಲ್ಲಿ ನಾವು ನಮ್ಮ ಆತ್ಮಶೋಧನೆ ಮಾಡಿಕೊಳ್ಳಬೇಕು. ಒಂದೆಡೆ ಸಾವಿರಾರು ಜನರು ಭೂಮಿ ಜಾಗವಿಲ್ಲದೆ ಕಷ್ಟಪಡುತ್ತಿರುವಾಗ ನೂರಾರು ಎಕ್ರೆಗಳನ್ನು ಇನ್ನೊಂದೆಡೆ ಪಾಳು ಬಿಡುವದು ಸರಿಯಲ್ಲ. ನಾನು ಇದನ್ನು ಆಚಾರ್ಯ ವಿನೋಬಾರವರ ಭೂದಾನ ಚಳವಳಿಯ ದೃಷ್ಟಿಯಿಂದ ನೋಡುತ್ತೇನೆ. ಹೆಚ್ಚು ಜಾಗವಿರುವವರು ಧಾರಾಳವಾಗಿ ಕೊಡಲು ಮುಂಬರಬೇಕು. ಎಕ್ರೆಗೆ ನಾಲ್ಕಾಣೆ ಕೇಳುವದು ಹೆಚ್ಚಲ್ಲ. ನಾವು ಶಾಸನದ ದುರುಪಯೋಗ ಮಾಡಿಲ್ಲ. ಇದಕ್ಕೆ ಬೇಕಾದ ಮಸೂದೆಯನ್ನು ಮುಂದಿನ ಮೀಟಿಂಗಿನಲ್ಲಿ ಬೇಕೆ ತಂದು ಯೋಗ್ಯ ಏರ್ಪಾಡು ಮಾಡುವೆವು" ಎಂದರು.

ಶ್ರೀ ಪಿ. ಯಂ. ನಾಣಯ್ಯನವರು- ಈ ಬಾಣೆ ಕಂದಾಯದ ವಿಚಾರವಾಗಿ ಪ್ರತ್ಯೇಕ ಕೇಳಿಕೆ, ಬೇಡಿಕೆಗಳ ಅಗತ್ಯವಿಲ್ಲ. ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ಈ ವಿಚಾರ ಉಲ್ಲೇಖಿಸಿದ್ದಾರೆ. ಎಕರೆಗೆ ನಾಲ್ಕಾಣೆಯಂತೆ ಕೊಡುವದು ಯಾವ ಕೃಷಿಕನಿಗೂ ಕಷ್ಟವಾಗದು. ಈ ವಿಚಾರವನ್ನೇ ಮಹಾ ಪ್ರಶ್ನೆಯೆಂದು "ಕೊಡಗು" ಪತ್ರಿಕೆಯಂಥದ್ದು ದೊಡ್ಡದಾಗಿ ಬರೆಯಬಹುದು. ಸ್ವಲ್ಪ ಸಮಯದಿಂದ ಸಾರ್ವಜನಿಕ ಮೀಟಿಂಗುಗಳಿಗೆ ಆಸ್ಪದವಿರವಿಲ್ಲ. ಕೆಲವರು ಇದನ್ನು ಇಂಥಾ ಸಭೆಗಳಿಗೆ ಅನುವಾಗಿ ಉಪಯೋಗಿಸಬಹುದು.

ಶ್ರೀ ಕೆ. ಪಿ. ಕರುಂಬಯ್ಯನವರು- ನಮ್ಮ ಮುಂದಿರುವ ಹಲವಾರು ರಾಷ್ಟ್ರ ರಚನಾ ಕೆಲಸಗಳಿಗೆ ಹಣ ಒದಗಿಸುವ ವಿಚಾರದಲ್ಲಿ ನಮ್ಮ ಸಹಕಾರವು ಸರಕಾರಕ್ಕೆ ಸದಾ ಇದೆ. ಆದರೆ ಪ್ರತಿ ಕೃಷಿಕನಿಗೂ ಬಾಣೆಗೆ ಎಕ್ರೆ ಒಂದರ ನಾಲ್ಕಾಣೆಯಂತೆ ಕಂದಾಯ ವಿಧಿಸುವದು ಸರಿಯಲ್ಲ. ವ್ಯವಸಾಯ ಆದಾಯ ತೆರಿಗೆಯಲ್ಲಿ ಒಂದು ನಿಶ್ಚಿತ ವರಮಾನದ ಕೆಳಗಿರುವವರಿಗೆ ವಿನಾಯಿತಿ ಇರುವಂತೆ ಇವರೆಲ್ಲಾ ಹತ್ತು ಎಕ್ರೆಗಳಿಗೆ ಒಳಗಿರುವ ಬಡಕೃಷಿಕರಿಗೆ ಕಂದಾಯದ ವಿನಾಯಿತಿ ಕೊಡಬೇಕು. ಹೆಚ್ಚು ಬಾಣೆಯಿದ್ದು ಅದನ್ನು ಸದುಪಯೋಗಿಸದವರಿಂದ ಬಾಣೆಯನ್ನು ಖಾಲಸಾ ಮಾಡಿ ಸರಕಾರ ವಶಪಡಿಸಿಕೊಂಡು ವಿತರಣೆ ಮಾಡಿದರೂ ತಪ್ಪಿಲ್ಲ. ಆದರೆ ಎಲ್ಲಾರಿಗೂ ಒಂದೇ ರೀತಿಯ ಕಂದಾಯ ವಿಧಿಸುವದು ಸಮಂಜಸವಾಗಲಾರದು. ಈ ಕಂದಾಯವನ್ನು ಜಾರಿಯಲ್ಲಿ ತರಲು ಒಂದು ಮಸೂದೆ ತರುವದು ಸೂಕ್ತ. ಈ ರೀತಿಯ ಏರ್ಪಾಡು ಆಗುವ ವರೆಗೆ ಈ ವಿಚಾರವನ್ನು ಮುಂದರಿಸುವದರಲ್ಲಿ ಯಾರಿಗೂ ಹಾನಿ ಇರಲಾರದು.

ಶ್ರೀ ಚಾರಿರ ಮಂದಣ್ಣನವರು ಮಾತಾಡುತ್ತಾ ಶ್ರೀ ಕೆ. ಪಿ. ಕರುಂಬಯ್ಯನವರ ಅಭಿಪ್ರಾಯಕ್ಕೆ ತಾವೂ ಒಪ್ಪುವದಾಗಿಯೂ ಮುಂದಿನ ಅಕ್ಟೋಬರ್ ತಿಂಗಳಲ್ಲಿ ನಡೆಯುವ ಮೀಟಿಂಗಿನಲ್ಲಿ ಒಂದು ಮಸೂದೆಯನ್ನು ತರುವದು ಹಿತವೆಂದೂ ಹೇಳಿದರು.

ನಂತರ ಶ್ರೀ ಸಿ. ಸಿ. ಉತ್ತಯ್ಯನವರು ಉತ್ತರವೀಯುತ್ತಾ ಹೀಗೆ ಹೇಳಿದರು 'ಸರಕಾರದ ಆದಾಯ ಹೆಚ್ಚಾಗುವ ವಿಚಾರದಲ್ಲಿ ನನಗೆ ಯಾವಾಗಲೂ ಸಂತೋಷ. ನಮ್ಮ ಮುಂದಿರುವ ವಿವಿಧ ಕೆಲಸಗಳಿಗೆ ಹಣ ಒದಗಿಸುವದು ಅತ್ಯಾವಶ್ಯ. ಆದರೆ ಹಣ ಒದಗಿಸುವ ಒಂದೇ ದೃಷ್ಟಿಯಿಂದ ಮನಬಂದಂತೆ ವರ್ತಿಸಬಾರದು. ಈ ಕಂದಾಯವನ್ನು ಹೇರಲು ಅನುಸರಿಸಿದ ಮಾರ್ಗವನ್ನು ನಾನು ಟೀಕಿಸುತ್ತಿರುವದಾಗಿದೆ. ಜನತೆಯನ್ನು ಕೇಳದೆ ಈ ರೀತಿ ಕಂದಾಯ ಹೇರುವ ಮಾರ್ಗವು ಯಾವ ಪ್ರಜಾಪ್ರಭುತ್ವವೆಂಬುದೇ ನನ್ನ ಪ್ರಶ್ನೆಯಾಗಿದೆ. ಈ ಕಂದಾಯ ಹಾಕುವ ವಿಚಾರವನ್ನು ಈ ಸಭೆಯ ಮುಂದೆ ಕೂಡಾ ಇಡದೆ ಈ ಸಭೆಯ ಅಧಿಕಾರವನ್ನು ಅಪಹರಿಸಲಾಗಿದೆ. ಕೆಲವರು ಬಜೆಟ್ ಭಾಷಣದಲ್ಲಿ ಸೂಚಿಸಲಾಗಿದೆಯೆಂದು ಹೇಳಿದರು. ಇದರ ಬಗ್ಗೆ ನಮ್ಮ ಸ್ವಂತ ಅಭಿಪ್ರಾಯ ಕೊಟ್ಟರೆ ಸಾಲದು. ನಮ್ಮನ್ನು ಪ್ರತಿನಿಧಿಗಳಾಗಿ ಆರಿಸಿದವರನ್ನು ವಿಚಾರಿಸಿ ಅವರು ಏನಭಿಪ್ರಾಯ ಕೊಡುವರೆಂಬುದನ್ನು ತಿಳಿಸಲು ನನಗೆ ಅವಕಾಶ ಕೊಟ್ಟಿರುವದಿಲ್ಲ. ನಾವು ಇಲ್ಲಿ ಗಲಾಟೆ ಮಾಡಲು ಬಂದವರೇನಲ್ಲ. ಇಲ್ಲವೇ ಪ್ರಚಾರದ ದೃಷ್ಟಿಯಿಂದ ಮಾತಾಡುವವರೂ ಅಲ್ಲ. ಸಾರ್ವಜನಿಕ ಮೀಟಿಂಗುಗಳನ್ನು ಮಾಡಿ ಗೊಂದಲವೆಬ್ಬಿಸುವದೂ ಗುರಿಯಲ್ಲ. ವಿಚಾರಕ್ಕಿಂಥಾ ಪ್ರಚಾರಕ್ಕೆ ಬೆಲೆ ಕೊಡುವ, ವಿಷಯಕ್ಕಿಂಥಾ ವ್ಯಕ್ತಿಕ್ಕೆ ಬೆಲೆ ಕೊಡುವ ಕಡೆ ಹೀಗೆ ಮಂತ್ರಿಗಳು ಜೊಬ್ಬಿಸಬಹುದು. ಆದರೆ ಸಂಬಂಧಿಸಿದ ಜನರನ್ನು ಕೇಳದೆ ಕಡೆಗೆ ಅವರ ಪ್ರತಿನಿಧಿಗಳನ್ನು ಲೆಕ್ಕಿಸದೆ ಈ ರೀತಿಯ ಕಂದಾಯ ಹೇರುವ ಪದ್ಧತಿಯು ಖಂಡನಾರ್ಹವಾದುದು. ಇದಕ್ಕೆ ಸಂಬಂಧಿಸಿದ ಮಸೂದೆಯನ್ನು ತಂದು ಅದು ಅಂಗೀಕರಿಸಲ್ಪಡುವ ವರೆಗೆ ಈ ಕಂದಾಯ ಸೂಚನೆಯನ್ನು ಮುಂದರಿಸಿಡಬೇಕು' ಎಂದರು-

ಮಂತ್ರಿ ಶ್ರೀ ಪೂಣಚ್ಚನವರು ಮಾತಾಡುತ್ತಾ-ಇವರು ಎಲ್ಲಿಗೆ ತಲಪಿದರು ಏನು ಯೋಚಿಸುತ್ತಿರುವರೆಂಬುದೇ ತಿಳಿಯದು. ಈ ಕಂದಾಯವನ್ನು ಮುಂದರಿಸಿದರೂ ಯಾ ಹಾಕಿದರೂ ಬಜೆಟ್ಟಿನಲ್ಲಾಗುವ ವ್ಯತ್ಯಾಸ ಕೇವಲ ರೂ. ೫೨,೦೦೦. ಈ ರೂ. ೫೨,೦೦೦ ವನ್ನು ಬಜೆಟ್ಟಿನಲ್ಲಿ ಸೇರಿಸಬಾರದೆಂಬುವುದು ಸದಸ್ಯರ ಅಭಿಪ್ರಾಯವೇ? ಕಂದಾಯ ಹಾಕುವಾಗ ಸಂಬಂಧಿಸಿದ ಎಲ್ಲಾ ಜನರನ್ನು ಕೇಳಿ ಕಂದಾಯ ಹಾಕುವದು ಸಾಧ್ಯವಿಲ್ಲ. ಕಂದಾಯ ಹಾಕುವ ಅನೇಕ ವಿಧಾನಗಳಿವೆ. ಸೆಟ್ಲ್‌ಮೆಂಟ್ ಪದ್ಧತಿಯಿಂದ ಕಂದಾಯ ಹಾಕುವದಿದೆ. ವಿಶೇಷವಾಗಿ ಯಾವುದಾದರೊಂದು ಪ್ರಾಮುಖ್ಯ ಕೆಲಸಕ್ಕಾಗಿ ಕಂದಾಯ ಹಾಕುವದಿದೆ. ಇದಲ್ಲದೆ ಶಾಸನ ಸಭೆಯ ಅನುಮತಿಯಿಂದ ಕಂದಾಯ ಹಾಕುವದೂ ಇದೆ. ಈ ಮೊದಲು ಶಾಸನ ಸಭೆಯಲ್ಲಿ ಇದೇ ರೀತಿ ಸಮೆರಿ ಕಂದಾಯದ ಸೂಚನೆ ಕೂಡಾ ಬಂದಿತ್ತು. ಈ ಕಂದಾಯವನ್ನು ಜಾರಿಗೆ ತರಲು ಅವಧಿ ಇರುವದರಿಂದ ಆ ವರೆಗೆ ಬೇಕಾದ ಮಸೂದೆಯನ್ನು ಮಾಡಿಕೊಳ್ಳಬಹುದಾಗಿದೆ. ಸೂಚಕರ ವಾದದಲ್ಲಿ ಹೆಚ್ಚಿನ ತಿರುಳು ಕಂಡುಬರುವುದಿಲ್ಲ. ಕಂದಾಯ ವಿಧಿಸುವ ಬಗ್ಗೆ ನಿಮಗೆ ಸಮ್ಮತಿ ಇದ್ದರೆ ಅದಕ್ಕೆ ಬೇಕಾದ ವಿಧಾನಗಳನ್ನು ಸರಕಾರವು ಮಾಡಲಿರುವುದು. ಇದನ್ನೇ ಒಂದು ಪ್ರಶ್ನೆಯಾಗಿ ಮುಂದಿಟ್ಟು ಕೆಲವು ಜನರು ಹುಯಿಲೆಬ್ಬಿಸಬಹುದು. ಅದರೆ ಜನರು ಇದಕ್ಕೆ ಸಮರ್ಪಕ ಉತ್ತರವೀಯುವುದೆಂಬುವುದರಲ್ಲಿ ನನಗೆ ಸಂಶಯವಿಲ್ಲ. ಜಮೀನ್ದಾರಿ ಪದ್ಧತಿಯನ್ನು ರದ್ದು ಮಾಡಬೇಕೆಂದು ಸರಕಾರ ವಿಧಿಸಿದಾಗ ಜಮೀನ್ದಾರರನ್ನು ಕೇಳಿ ಮಾಡಲಿಲ್ಲ.

ಶ್ರೀ ಉತ್ತಯ್ಯನವರು-ಜಮೀನ್ದಾರಿ ಪದ್ಧತಿಯನ್ನು ಕೂಡ ಆಜ್ಞಾಪೂರ್ವಕ (Executive law)ವಾಗಿ ಸರಕಾರ ವಜಾ ಮಾಡಿಲ್ಲ. ಅದಕ್ಕೂ ಮಸೂದೆ ಹಾದೇ ಮಾಡಿದೆ.

ಮಂತ್ರಿಗಳು-ಮುಂದುವರಿಯುತ್ತಾ ಮಾನ್ಯ ಮೆಂಬರರಿಗೆ ನಿಯಮ ನಿರ್ಬಂಧಗಳೇ ತಿಳಿದಿರುವಂತೆ ತೋರುವದಿಲ್ಲ. ನಾವು ಲೇಂಡ್ ರೆವಿನ್ಯೂ ರೂಲಿನಲ್ಲಿಲ್ಲದೆ ಯಾವುದೇ ಕೆಲಸವನ್ನು ಮಾಡಿಲ್ಲ. ಲೇಂಡ್ ರೆವಿನ್ಯೂ ನಿಯಮ ತಿದ್ದುಪಡಿಯಾಗುವ ವರೆಗೆ ನಾವು ಮಾಡಿದ್ದು ಸರಿಯೆಂದೇ ಹೇಳುವೆವು' ಎಂದು ಹೇಳಿದರು.

ನಂತರ ಠರಾವನ್ನು ಓಟಿಗೆ ಹಾಕಲಾಯಿತು. ಈ ಕಂದಾಯವನ್ನು ಈಗ ಹಾಕದೆ ಮುಂದರಿಸಬೇಕೆಂಬುವದಕ್ಕೆ ಶ್ರೀ ಗೌಡರ ಪಿ. ಐ. ಬೆಳ್ಯಪ್ಪ, ಕೆ. ಪಿ. ಕರುಂಬಯ್ಯ, ಎ. ಸಿ. ತಿಮ್ಮಯ್ಯ, ಎನ್. ಜಿ. ಅಹ್ಮದ್, ಕೆ. ಕೆ. ಗಣಪತಿ, ಹರಿಜನ ನಂಜ, ಮತ್ತು ಪಿ. ಸಿ. ಉತ್ತಯ್ಯ ಇವರುಗಳು ಪರವಾಗಿಯೂ, ಕಾಂಗ್ರೆಸ್ ಮೆಂಬರರೆಲ್ಲರೂ ವಿರೋಧವಾಗಿಯೂ ಓಟು ಮಾಡಿದ್ದರಿಂದ ಠರಾವು ಪಾಸಾಗದೆ ಬಾಣೆಗೆ ನಾಲ್ಕಾಣೆ ಕಂದಾಯ ಹಾಕಬೇಕೆಂಬ ಅಭಿಪ್ರಾಯಕ್ಕೆ ಬಹುಮತ ದೊರೆಯಿತು. ಶ್ರೀ ಗೌಡರ ಹೆಚ್. ಟಿ. ಮುತ್ತಣ್ಣ ಮತ್ತು ಜಿ. ಸುಬ್ಬಯ್ಯ ಇವರು ಯಾವ ಕಡೆಗೂ ಓಟು ಮಾಡಲಿಲ್ಲ.

Licence No. 00.
Licenced to Post without Prepayment

ವಾರದ ಕಥೆ.

ಕೈ ಮುಗಿದ ಕಲ್ಲು.

ಲೇ:—ಶ್ರೀ ಎಂ. ಎಸ್. ಪೊಣ್ಣಪ್ಪ, ಕಾನೂರು.

'ಸುರಸುಂದರಿ' ಇದ್ದಕ್ಕಿದ್ದಂತೆಯೇ ಸೈಕಲಿನ ಮೇಲೆ ಹೋಗುತ್ತಿದ್ದಾಗ ನನ್ನ ಬಾಯಿಂದ ಈ ಶಬ್ದಗಳು ಹೊರಬಿದ್ದವು. ಕಾರಣ ಅಲ್ಲೇ ಶಾಲೆಗೆ ಹೋಗುತ್ತಿದ್ದ ವಿದ್ಯಾರ್ಥಿನಿಯೊಬ್ಬಳ ಮೇಲೆ ನನ್ನ ದೃಷ್ಟಿ ಹರಿದಿತ್ತು. ನಿಜವಾಗಿಯೂ ಅವಳು ಸುಂದರಿಯಾಗಿದ್ದಳು. ಅವಳ ಸೌಂದರ್ಯಕ್ಕೆ ತಕ್ಕ ಸುಗುಣವೂ ಅವಳಲ್ಲಿದ್ದಿರಬೇಕು. ಅವಳು ರಸ್ತೆಯ ಎಡಭಾಗದಲ್ಲೇ ದಾರಿನೋಡುತ್ತಾ ಏಕಭಾವನೆಯಿಂದ ಮುಂದಡಿಯಿಡುತ್ತಿದ್ದಳು. ಜನರು ಅದೇ ದಾರಿಗಾಗಿ ನಡೆಯುತ್ತಿದ್ದರೂ ಅವಳು ಅವರನ್ನು ತಲೆಯೆತ್ತಿ ಕೂಡ ನೋಡುತ್ತಿರಲಿಲ್ಲ. ಕೃತಕ ಹಾವಭಾವಗಳಿಲ್ಲದೆ, ಸರಳ ಉಡುಪಿನ ನಿರಾಭರಣ ಸುಂದರಿಯವಳು. ಅಲೆ ಅಲೆಯಾಗಿ ಹೆಗಲ ಮೇಲಿಳಿದಿದ್ದ ತನ್ನ ಕೇಶರಾಶಿಯನ್ನು ಹೆಣೆದು, ಫಣಿವೇಣಿಯಂತೆ ತೂಗಾಡುತ್ತಿದ್ದ ತನ್ನ ಹೆರಳಿಗೆ ಮಲ್ಲಿಗೆಯ ದಂಡೆಯನ್ನು ಮುಡಿದಿದ್ದು ಅವಳು ಹಾದುಹೋಗುತ್ತಿದ್ದ ದಾರಿಯ ಸನಿಹದಲ್ಲೆಲ್ಲಾ ಸುಗಂಧ ಸೂಸುತ್ತಿತ್ತು.

ಇವಳು ಅದೇ ಊರಿನ ಧನವಂತ ಲಕ್ಷ್ಮೀನಾರಾಯಣನೆಂಬ ಸಾಹುಕಾರನ ಏಕಮಾತ್ರ ಪುತ್ರಿ. ಹೆಸರಿಗೆ ತಕ್ಕಂತೆ ಮನೆಗೆ ಲಕ್ಷ್ಮಿಯೇ ವಲಸೆ ಬಂದಂತೆ ನಾರಾಯಣರಾಯರು ಅತುಳೈಶ್ವರ್ಯವಂತರಾಗಿದ್ದರು. ಆದರೆ ತಂದೆಯ ಅತುಳೈಶ್ವರ್ಯದ ಕುರುಹಾಗಿ ಆಭರಣವನ್ನು ಧರಿಸುವುದಾಗಲೀ ನವೀನ ನಾಗರಿಕತೆಯ ರೀತಿಯಾಗಲೀ ಸುಧಾಳಲ್ಲಿರಲಿಲ್ಲ. ತಂದೆ ತಾಯಿಗಳಿಗೆ ತಮ್ಮ ಮಗಳನ್ನು ವಿವಿಧ ರೀತಿಗಳಲ್ಲಿ ಶೃಂಗರಿಸಿ ಸಮಾಜದಲ್ಲಿ ಅವಳ ಮೂಲಕ ತಮ್ಮ ಐಶ್ವರ್ಯದ ಆಳವನ್ನು ಪ್ರಚಾರಪಡಿಸಿ ಹಣದ ಹಂಬಲದಲ್ಲಿ ಹರಿದಾಡುತ್ತಿರುವ ಈ ಅಂಧಸಮಾಜದಲ್ಲಿ ಗೌರವ ಅಂತಸ್ತು ಪಡೆದು ಕುಲವಂತರೆನ್ನಿಸಿಕೊಂಡು ಮೆರೆಯಬೇಕೆಂದಿದ್ದರೂ ಮಗಳು ಅವರ ಆಶೆಗೆ ವ್ಯತಿರಿಕ್ತವಾಗಿದ್ದಳು. ಅವಳ ಮನದ ಆಶೆ ಆಕಾಂಕ್ಷೆಗಳೇನೆಂಬುದನ್ನೂ ಇವರೂ ತಿಳಿದುಕೊಂಡಿರಲಿಲ್ಲ.

ತನ್ನ ತಂದೆಯು ಬಡವರನ್ನು ಸುಲಿಗೆ ಮಾಡಿ, ತನ್ನ ಸೇವಕರನ್ನು ಮೇರೆಮೀರಿ ದುಡಿಸಿಕೊಂಡು, ಅನ್ಯಾಯದಿಂದ ಐಶ್ವರ್ಯವನ್ನು ಕೂಡಿಹಾಕಿದ್ದು ಮಗಳಿಗೆ ತಿಳಿದಿತ್ತು. ತಂದೆಯ ಸ್ವಾರ್ಥತೆಯನ್ನೂ ತಾಯಿಯ ಜಿಪುಣತನವನ್ನೂ ಕಂಡು ಸುಶೀಲಸುಧೆಯು ಅವರ ಬಾಳಿನಲ್ಲಿ ಸತ್ಯವಿಲ್ಲದನ್ನು ತಿಳಿದು ಜಿಗುಪ್ಸೆಗೊಂಡಿದ್ದಳು. ಭಾರತದ ಬಡತನಕ್ಕೆ ಕಾರಣರಾದ ತನ್ನ ತಂದೆಯಂತಹ ಬಂಡವಾಳಗಾರರ ನಿರ್ಮೂಲವಾಗಬೇಕೆಂಬುವುದೇ ಅವಳ ದಿನನಿತ್ಯದ ಪ್ರಾರ್ಥನೆಯಾಗಿತ್ತು. ತನ್ನ ಮನೆಯಲ್ಲಿ ಊಳಿಗಕ್ಕೆ ನಿಂತಿದ್ದ ತಿಮ್ಮುವೆಂಬ ಹರಿಜನ ಹುಡುಗನನ್ನು ಶಾಲೆಗೆ ಸೇರಿಸಿಕೊಂಡು ಆತನಿಗೆ ವಿದ್ಯೆ ಕಲಿಸಬೇಕೆಂದು ಯೋಚಿಸಿ, ತನ್ನ ಪುಸ್ತಕ ವಗೈರೆ ಹೊತ್ತುಕೊಂಡು ಹೋಗಲೆಂದು ತಂದೆಗೆ ನೆವ ಹೇಳಿ ಆತನನ್ನು ಶಾಲೆಗೆ ಸೇರಿಸಿದಳು. ತಿಮ್ಮುವು ಇವಳಿಗಿಂತ ಹತ್ತು ವರ್ಷಗಳಿಗೆ ಹಿರಿಯವನಾಗಿದ್ದು ವಿದ್ಯೆಯಲ್ಲಿ ಮನಬಲಿಯಲಿಲ್ಲ. ಆದರೆ ಚಿತ್ರಬಿಡಿಸುವುದರಲ್ಲಿ, ಕೆತ್ತನೆಯ ಕೆಲಸದಲ್ಲಿ ಹೆಚ್ಚು ಆಸಕ್ತಿಯಿತ್ತು.

ಸುಧೆಯು ವರ್ಷ ವರ್ಷ ಪಾಸಾಗಿ ಮೆಟ್ರಿಕ್ಯುಲೇಷನ್ ತಲಪಿದಳು. ಆಗಲೇ ಅವಳನ್ನು ನೋಡಿ ಸೌಂದರ್ಯಕ್ಕೆ ಮೆಚ್ಚಿ 'ಸುರಸುಂದರಿ' ಎಂಬದಾಗಿ ನಾನು ಉಸುರಿದ್ದು. ಇದು ಹತ್ತು ವರ್ಷಗಳ ಹಿಂದಿನ ಮಾತು. ಅನಂತರ ಅವಳ ವಿಷಯ ನಾನು ಗಮನಿಸಲಿಲ್ಲ. ಸುಧೆಯು ಶಾಲೆ ಬಿಟ್ಟಾಗ ತುಂಬಾ ಸುಧಾರಿಸಿದ ಹುಡುಗಿಯಾಗಿದ್ದಳು. ಪ್ರಪಂಚದ ಆಗುಹೋಗುಗಳನ್ನು ತಿಳಿದವಳಾಗಿದ್ದು ಮೂಢಸಂಪ್ರದಾಯಗಳನ್ನು ಖಂಡಿಸುವವಳಾಗಿದ್ದಳು. ದೀನದಲಿತರ ಮೇಲೆ ತುಂಬಾ ಕರುಣೆಯುಳ್ಳವಳಾಗಿದ್ದಳು. ಬಡವ ಬಲ್ಲಿದರೆಂಬ ಭೇದವನ್ನು ಬದಿಗೊತ್ತಿ ಇಡೀ ವಿಶ್ವ ಕುಟುಂಬದಲ್ಲಿ ತಾನೊಬ್ಬಳೆಂಬ ಭಾವನೆ ಅವಳಲ್ಲಿ ಮೂಡಿತ್ತು. ಸುಧೆಯು ಪ್ರೌಢೆಯೆಂಬುದನ್ನು ತಿಳಿದ ತಂದೆ ತಾಯಿಗಳು ಶಾಲೆಗೆ ಹೋಗುವುದನ್ನು ತಡೆಯಬೇಕೆಂದಿದ್ದರೂ ಮಗಳ ಮನದಾಸೆಗೆ ಅಡ್ಡಿ ಮಾಡಬಾರದೆಂದು ಅವಳಿಚ್ಛೆಯಂತೆಯೇ ತಾವು ನಡೆದುಕೊಂಡಿದ್ದರು.

ಒಂದು ದಿನ ಶಾಲೆಯಿಂದ ಮರಳುವಾಗ ಸುಧೆಯು ಕಾಲು ಎಡವಿಬಿದ್ದಳು. ಹಿಂದೆ ನಡೆಯುತ್ತಿದ್ದ ತಿಮ್ಮು ಗಾಬರಿಗೊಂಡು ಅವಳನ್ನು ಒಮ್ಮೆಗೆ ಹಿಡಿದೆತ್ತಿ ಭ್ರಾತೃಭಾವದಿಂದ ಉಪಚರಿಸಿದನು. ಕಾಲಿಗೆ ಕಲ್ಲುತಾಕಿ ರಕ್ತಸ್ರಾವವಾಗುತ್ತಿದ್ದುದನ್ನು ಕಂಡು ನೊಂದುಕೊಂಡನು. ಹಸುರು ಸೊಪ್ಪಿನ ಔಷಧ ತಂದು ಕಟ್ಟಿದನು. ಅವಳ ಮೈಗೆ ತಗಲಿದ್ದ ಧೂಳನ್ನು ಝಾಡಿಸಿದನು. ಕಾಲಿನ ಗಾಯವಾದ ಭಾಗವನ್ನು ಮೃದುವಾಗಿ ನೀವಿದನು. ಇದೆಲ್ಲವೂ ಸೇವಾವೃತ್ತಿಯೆಂದೇ ತಿಳಿದಿದ್ದನು.

ತಿಮ್ಮುವು ಸುಧೆಯನ್ನು ಮುಟ್ಟಿದಾಗ ಅವಳ ಶರೀರದಲ್ಲಿ ಮೊದಲ ಪುರುಷ ಸ್ಪರ್ಶದಿಂದ ವಿದ್ಯುಚ್ಛಕ್ತಿ ಚಲಿಸಿದಂತಾಯಿತು. ಮನವು ತಳಮಳಗೊಂಡಿತು. ಆತನು ತನ್ನ ದಿನಂದಿನ ಒಡನಾಡಿಯೆಂದು ತಿಳಿದು ಹೆಚ್ಚು ಗಾಬರಿಗೊಳ್ಳದೆ ತನಗುಂಟಾದ ನೋವಿನಿಂದ ಆತನಿಗುಂಟಾದ ಹೃದಯದ ನೋವನ್ನು ಅರಿತುಕೊಂಡಳು. ಆತನ ನಿಷ್ಕಾಮ ಸೇವೆಯನ್ನರಿತು ಆತನ ಕಡೆಗೆ ಮತ್ತಷ್ಟು ಆಕೆಯ ಮನ ಒಲಿಯಿತು. ಆತನು ಕಾಲನ್ನು ನೀವಿದಷ್ಟು ಆಕೆಗೆ ಸಾಕೆನಿಸಲಿಲ್ಲ. ಒಂದು ವಾರವಿಡೀ ಹಾಸಿಗೆ ಹಿಡಿದು ಮಲಗಬೇಕಾಯಿತು. ತಿಮ್ಮುವಿನ ಶುಶ್ರೂಷೆ ದಿನನಿತ್ಯ ನಡೆಯುತ್ತಿತ್ತು. ಮನೆಯವರೊಡನೆ ಆಕೆಯು ಹೆಚ್ಚು ಮಾತಾಡುತ್ತಿರಲಿಲ್ಲ. ತಿಮ್ಮುವು ಬಂದಾಗಲೆಲ್ಲಾ ತನ್ನ ಬಳಿಯಲ್ಲೇ ಕುಳ್ಳಿರಿಸಿಕೊಂಡು ಸಲಿಗೆಯಿಂದ ಮಾತನಾಡುತ್ತಿದ್ದಳು. ಒಮ್ಮೊಮ್ಮೆ ಏನೋ ದೀರ್ಘಾಲೋಚನೆಯಲ್ಲಿರುತ್ತಿದ್ದಳು. ಅದು ತಿಮ್ಮುವಿಗೆ ಭಾವಿಸಲಾರದ ಭಾವನೆಯಾಗಿತ್ತು. ಆಕೆಗೆ ದೊರಿತ ಮೊದಲ ಪುರುಷಸ್ಪರ್ಶವು ಶರೀರವನ್ನೇ ಹೊಕ್ಕಿದಲ್ಲದೆ ಆತ್ಮವನ್ನೂ ಹೊಕ್ಕು ಪ್ರೇಮದ ಕೊಳವನ್ನು ತುಳಿದು ಸುಪ್ತಾವಸ್ಥೆಯಲ್ಲಿದ್ದ ಕಾಮವನ್ನು ಕದಡಿ, ವಿಷಯಾಸಕ್ತಿಯ ತರಂಗಗಳನ್ನು ಬಡಿದೆಬ್ಬಿಸಿತ್ತು.

ಸುಧೆಗೆ ತನ್ನ ಮನದಾಸೆಯನ್ನು ಒಮ್ಮೆಯೇ ತಿಮ್ಮುವಿನೊಡನೆ ಹೇಳಿಬಿಡಲು ಸ್ತ್ರೀ ಸಹಜವಾದ ಲಜ್ಜೆಯು ತಡೆಯಿತು. ಸಮಾಜದ ಸಂಕಟವು ಎದುರು ನಿಂತಿತು. ಸಬಲೆಗೂ ಸಂಕೋಚವೆನಿಸಿತ್ತು. ಅದರಲ್ಲೂ ತಿಮ್ಮು ಕುಲಹೀನ, ಅವಿದ್ಯಾವಂತ, ತನ್ನ ಮನೆಯ ತೊತ್ತು! ಆದರೂ ಆತನಿಗೆ ಸಹೃದಯವಿತ್ತೆಂಬುದನ್ನು ತಿಳಿದ ಸುಧೆಯು ಆತನನ್ನು ಮನಸಾ ಪ್ರೇಮಿಸಿ ಬಿಟ್ಟಳು. ಆದರೆ ಅದನ್ನು ತಂದೆ ತಾಯಿಗಳಿಗೆ ಹೇಳಿಕೊಳ್ಳಲಾಗಲಿಲ್ಲ, ಕಾಲುನೋವು ವಾಸಿಯಾದರೂ ಮಾನಸಿಕ ರೋಗವು ಆಳವಡಿಸಿಕೊಂಡು ಶಾಲೆಗೆ ಹೋಗಲಿಲ್ಲ. ಪುಸ್ತಕದ ಹುಳವಾದಳು. ತಿಮ್ಮುವಿಗೆ ಬೇಕುಬೇಕಂತಲೇ ಕೆಲಸವನ್ನು ಹೇಳಿ ಆತನು ತನ್ನ ಬಳಿಯಲ್ಲೇ ಇರುವಂತೆ ಯತ್ನಿಸಿದಳು. ಆತನ ಮುಖಾವಲೋಕನವೇ ಆಕೆಗೆ ಅದೆಷ್ಟೋ ತೃಪ್ತಿಯನ್ನೀಯುತ್ತಿತ್ತು. ಸುಧೆಯು ತನಗೆ ತೋರಿಸುತ್ತಿದ್ದ ಮಮತೆಯನ್ನು ಕಂಡು ತಿಮ್ಮುವು ಮತ್ತಷ್ಟು ಅವಳಿಗೆ ವಿಧೇಯ ಸೇವಕನಾದನು. ಆದರೆ ಆಕೆಯ ಮನದ ಕಾಂಕ್ಷೆಯನ್ನು ಮಾತ್ರ ಅರಿಯದಾದನು. ಎಷ್ಟೆಂದರೂ ಸೇವಕನಲ್ಲವೇ? ಊಳಿಗದವನಿಗೆ ಉಣ್ಣುವದಕ್ಕೇ ಕಷ್ಟವಾಗಿರುವಾಗ ಉಪ್ಪರಿಗೆಯ ಮನೆಯಾಸೆಯೆಂತಾಗಬೇಕು? ತನ್ನ ಧನಿಯ ಮಗಳನ್ನು ಮನದಲ್ಲೂ ಮಡದಿಯಾಗಬೇಕೆಂಬಾಸೆ ಆತನಿಗಿರಲಿಲ್ಲ.

ಸುಧೆಯನ್ನು ಲಗ್ನವಾಗಲು ನಾನಾ ಕಡೆಯಿಂದ ವರರು ಬಂದರು. ಕೆಲವರು ಆಕೆಯ ತಂದೆಯ ಐಶ್ವರ್ಯಕ್ಕೆ ಆಸೆಪಟ್ಟು, ಹಲವರು ಆಕೆಯ ಸೌಂದರ್ಯಕ್ಕೆ ಮನಸೋತು ಬಂದಾಗ್ಯೂ ಕೂಡ ಆಕೆಯು ಅವರಿಗೆಲ್ಲಾ ನಾಸ್ತಿಯೆಂದು ಕಳುಹಿಸಿಬಿಟ್ಟಳು. ತಂದೆ ತಾಯಿಗಳು ಮಗಳಿಗೆ ವಿವಿಧವಾಗಿ ಹೇಳಿದರು. ಸಮಾಜಕ್ಕೆ ಅಂಜಿದರು. ಲೋಕದ ನಡತೆಗೆ ಅಳುಕಿದರು. ಆದರೆ ಸುಧೆಯು ತಂದೆ ತಾಯಿಗಳಿಗಾಗಿ ಮರುಗಲಿಲ್ಲ. ಮಣಿಯಲಿಲ್ಲ.

ಒಂದು ದಿನ ತಿಮ್ಮುವು ಸುಧೆಯ ಬಳಿಯಲ್ಲಿದ್ದಾಗ ಅವನ ಹೆಗಲ ಮೇಲೆ ಕೈಯಿಟ್ಟು 'ತಿಮ್ಮು! ಇಂದಿನಿಂದ ನಾನು ನಿನ್ನ ದಾಸಿ! ಈ ವರೆಗೆ ನೀನು ನನ್ನ ದಾಸನಾಗಿದ್ದೆ. ಅದನ್ನು ನೀನು ಮರೆತುಬಿಡಬೇಕು. ನನ್ನನ್ನು ಅರ್ಧಾಂಗಿಯೆಂದು ಸ್ವೀಕರಿಸಿ ನಮ್ಮ ಸಮಾಜದ ಬಂಧಿಖಾನೆಯಿಂದ ನಾವು ಪಾರಾಗಬೇಕು. ಇದಕ್ಕೆ ಹಿಂಜರಿಯದಿರು. ಇದು ಪಾಪವೆನಿಸದು. ಆದರೆ ಪ್ರಮಾದವೆನಿಸಬಹುದು. ಅದರಿಂದ ಸುಖವಿದೆ.' ಎಂದಳು. ತಿಮ್ಮುವಿಗೆ ಇದು ಕಲ್ಪನೆಗೆ ಮೀರಿದ ಕಾರ್ಯವಾಗಿತ್ತು. ತನ್ನ ಕಿವಿಗಳನ್ನೇ ನಂಬದಾದ. ಕಣ್ಣುಗಳನ್ನು ಮುಟ್ಟಿ ನೋಡಿಕೊಂಡ. ಇದು ಕನಸಲ್ಲವೆಂದು ತಿಳಿದಾಗ ಸುಧೆಯ ಕೈಗಳೆರಡೂ ಆತನ ಕುತ್ತಿಗೆಯನ್ನು ಬಳಸಿತ್ತು. ತುಟಿಗೆ ತುಟಿ ತಾಕಿ, ಹೃದಯದ ತಂತಿ ಮಿಡಿದು ಪೂರ್ಣಾರ್ಥವನ್ನು ತಿಳಿಸಿತ್ತು.

ಸುಧೆಯ ತಂದೆ ತಾಯಿಗಳಿಗೆ ವಿಷಯ ತಿಳಿದು ತಿಮ್ಮುವು ಬೀದಿಗೋಡಿಸಲ್ಪಟ್ಟನು. ಸಮಾಜವು ಸುಧೆಯನ್ನು ಭಂಗಿಸಿತ್ತು. ಬಂಧುಗಳು ಅವಳ ವರ್ತನೆಯನ್ನು ಛೀಗೆಳೆದರು. ಸುಧೆಯು ಯಾರಿಗೂ ಮರುತ್ತರ ಕೊಡಲಿಲ್ಲ. ತನ್ನ ಹೃದಯವನ್ನು ಬದಲಾಯಿಸಲಿಲ್ಲ. ಒಂದು ದಿನ ಮನೆಯಿಂದ ಕಾಣೆಯಾದಳು.

ತಿಮ್ಮು ಸುಧೆಯರು ಬೊಂಬಾಯಿ ನಗರವನ್ನು ಸೇರಿ ಕಲಾವಿದರೆನಿಸಿಕೊಂಡರು. ತಿಮ್ಮು 'ಶಿಲ್ಪಕಲಾ ಪ್ರವೀಣ'ನಾಗಿ ಸುಧೆಯು 'ಕಲಕಂಠಕೋಕಿಲೆ'ಯಾಗಿ ತಮ್ಮ ಊರಿಗೆ ಮರಳಿದಾಗ ತಂದೆ ತಾಯಿಗಳು ಇಹಲೋಕದ ತಮ್ಮ ಅಪಾರ ಐಶ್ವರ್ಯವನ್ನು ಬಿಟ್ಟು ಪರಲೋಕದ ಯಾತ್ರೆಗೆ ಹೋಗಿಬಿಟ್ಟಿದ್ದರು. ಜನರು ಅವರ ಜಾತಿ ಮತಗಳ ಗೊಡವೆಗೇ ಹೋಗದೆ ಅವರ ಕಾರ್ಯಶಕ್ತಿಯನ್ನು ಮೆಚ್ಚಿ ಕಾಣಿಕೆಯನ್ನು ಅರ್ಪಿಸಿ ಕಲಾಮೂರ್ತಿಗೆ ಕೈಮುಗಿದರು. ಸುಧೆಯು ತನ್ನ ಸಂಗೀತ ಕಲೆಯಿಂದ ಜನರ ಹೃದಯದ ಮೂಢ ಸಂಪ್ರದಾಯಗಳನ್ನು ಹರಿದೋಡಿಸಿದಳು. ತಿಮ್ಮು ತನ್ನ ಕಲಾನೈಪುಣ್ಯವನ್ನು ತೋರಿಸಲೆಂದು ಸುಧೆಯು ಬಿದ್ದ ಸ್ಥಳದಲ್ಲಿ ಗಂಡು ಹೆಣ್ಣುಗಳಿಬ್ಬರು ಹೆಗಲ ಮೇಲೆ ಕೈಯಿಟ್ಟುಕೊಂಡಂತೆ ಕರಿಯ ಕಲ್ಲನ್ನು ಕೆತ್ತಿ ನಿಲ್ಲಿಸಿದನು. ಜನರೆಲ್ಲರೂ ಪ್ರಣಯಿಗಳ ಶಿಲಾಮೂರ್ತಿಯನ್ನು ಪೂಜಿಸಿದರು. ಬಂದ ಹಣದಿಂದ ತಿಮ್ಮು ಸುಧೆಯರು ಹರಿಜನೋದ್ಧಾರ ಮಾಡಿದರು. ಕಲ್ಲು ಮಣ್ಣಿನೊಳಗಿದ್ದಾಗ ಜಡಶಿಲೆಯಾದರೂ ಶಿಲ್ಪಿಯ ಕೈಗೆ ಬಿದ್ದಾಗ ಬ್ರಹ್ಮಮೂರ್ತಿಯಾಗಿ ಸಾವಿರಾರು ಜನರಿಂದ ಕೈಮುಗಿಸಿಕೊಳ್ಳಬಲ್ಲುದು!!!

ಶ್ರೀ ಟಿ. ಎನ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ.

Edited Printed & Published by P. I. Belliappa at 'Kodagu' Press, Mercara, for 'Kodagu' Ltd.

ಕೊಡಗು

ಹಾಸ್ಯಗಾರ ಗಾಂಧಿ.

ಲಂಡನಿನಲ್ಲಿ ಗಾಂಧೀಜಿಗೆ ಆಡಿನ ಹಾಲು ಒದಗಿಸುತ್ತಿದ್ದ ಮನೆಯ ಯಜಮಾನನು ಒಂದು ದಿನ ಗಾಂಧೀಜಿಯನ್ನು ನೋಡಲು ಬಂದರು. ಗಾಂಧೀಜಿಯ ಮುಂದೆ ಅವರು ತಮ್ಮ ಬದುಕಿನ ಕತೆಯನ್ನೆಲ್ಲಾ ಹೇಳಿದರು.

ಗಾಂಧೀಜಿ ಕೇಳಿದರು—"ನಿನಗೆ ಎಷ್ಟು ಜನ ಮಕ್ಕಳು"

"ಎಂಟು ಜನ, ನಾಲ್ಕು ಗಂಡು, ನಾಲ್ಕು ಹೆಣ್ಣು"

"ಪರವಾ ಇಲ್ಲ. ನನಗೂ ನಾಲ್ಕು ಗಂಡು. ನಿಮ್ಮೊಡನೆ ಸರಿ ಕುಸ್ತಿಯಲ್ಲಿದಿದ್ದರೂ ನನ್ನದು ಅರೆ ಕುಸ್ತಿ' ಎಂದರು ಗಾಂಧೀಜಿ. ಇಡೀ ಜನರು ನಗುವಿನಲ್ಲಿ ತೇಲಾಡಿದರು

ವಾರ್ಷಿಕ ಚಂದಾ ರೂ. ೫—

ಸಂಪುಟ ೩೧. ಸಂಚಿಕೆ ೪೫

ಶುಕ್ರವಾರ ೧೭-೪-೧೯೫೩

KODAGU KANNADA WEEKLY MERCARA

ವಾರದ ಕಥೆ.

೨೬ ಗಂಡಸರು ಮತ್ತು ಒಬ್ಬ ಹುಡುಗಿ.

ಲೇ:— ಮೇಕ್ಸಿಂ ಗಾರ್ಕಿ.

ನಾವು ೨೬ ಜನರಿದ್ದೆವು. ೨೬ ಯಂತ್ರಗಳೆಂದರೂ ಸಲ್ಲುವದು. ನಾವು ವಾಸಿಸುತಿದ್ದುದು ಹೊಗೆ ಹಿಡಿದ ಕೋಣೆಯೊಂದರಲ್ಲಿ. ಕಿಡಿಕಿಯ ಕನ್ನಡಿಗಳೆಲ್ಲ ಸತತ ಹೊಗೆಯಿಂದ ಮಬ್ಬುಗಟ್ಟಿದ್ದುವು. ದಿನದ ೨೪ ಗಂಟೆಯೂ ನಮ್ಮ ಕೋಣೆಯೊಳಗಿನ ವಿಶಾಲ ಒಲೆಯಲ್ಲಿ ಬೆಂಕಿ ಉರಿಯುತ್ತಿರುತಿತ್ತು. ನಮ್ಮಲ್ಲಿ ಪ್ರತಿಯೊಬ್ಬನ ಮೈ ಬೆವರಿನಿಂದ ಒದ್ದೆಯಾಗಿರುತಿತ್ತು. ನಮ್ಮ ಬಟ್ಟೆ ಬರೆಗಳು ಯಾವಾಗಲೂ ಮಲಿನವಾಗಿರುತಿದ್ದುವು. ನಮಗೆ ದಿನವಿಡೀ ಬಿಡುವಿರುತ್ತಿರಲಿಲ್ಲ. ನಮ್ಮನ್ನು ಕೆಲಸ ಮಾಡಿಸುವವನು ಬಹು ಕ್ರೂರಿಯಾಗಿದ್ದನು. ನಾವು ಕೈದಿಗಳಂತಿದ್ದೆವು. ಅಡಿಗೆ ಮನೆಯಲ್ಲಿ ಬ್ರೆಡ್ ಮಾಡುವದು ನಮ್ಮ ಕೆಲಸವಾಗಿತ್ತು. ನಾವು ಉತ್ತಮ ಬ್ರೆಡ್ ತಯಾರಿಸುತ್ತಿದ್ದರೂ ನಮ್ಮ ಕೈಯಲ್ಲಿ ತಯಾರಾಗುವುದು ನಮಗೆ ತಿನ್ನಲು ದೊರೆಯುತ್ತಿರಲಿಲ್ಲ. ನಮಗೆ ಹಳೆಯ ಕಪ್ಪು ವರ್ಣದ ಬ್ರೆಡ್ ಕೊಡುತ್ತಿದ್ದರು. ಆ ಕೋಣೆಯಲ್ಲಿ ರಾತ್ರಿ ಸರಿಯಾಗಿ ನಿದ್ರೆ ಬರುತ್ತಿರಲಿಲ್ಲ. ಪ್ರತಿ ದಿನ ಬೆಳಗೆ ೬ ಗಂಟೆಯಿಂದ ರಾತ್ರಿ ೧೦ ಗಂಟೆಯ ವರೆಗೆ ದುಡಿದು ಅದೇ ಒಂದು ಸಂಪ್ರದಾಯವಾಗಿತ್ತು.

ನಾವು ೨೬ ಜನರಿದ್ದರೂ ಪರಸ್ಪರ ಮಾತುಕತೆ ಕಡಿಮೆಯಾಗಿತ್ತು. ನಗುವಿನ ಸುಳಿವು ಆ ಕೋಣೆಯಲ್ಲಿ ಕಂಡು ಬರುತ್ತಿರಲಿಲ್ಲ. ಮಾತುಕತೆ ಏನಾದರು ನಡೆದರೆ ಒಬ್ಬರನ್ನೊಬ್ಬರು ಬಯ್ಯುವದು ಯಾ ನಿಷೇಧಿಸುವದೇ ಆಗಿತ್ತು. ಕೆಲಸದ ಮಧ್ಯೆ ಆಯಾಸದಿಂದ ಯಾರಾದರೂ ಕುಳಿತು ನಿಟ್ಟುಸಿರುಬಿಟ್ಟು ಮೆಲ್ಲಗೆ ಗೊತ್ತಿರುವ ಹಾಡನ್ನು ಗೊಣಗಿದರೆ ಅದೇ ನಮ್ಮ ಪಾಲಿಗೆ ಸಂಗೀತ. ಹೆಚ್ಚಾಗಿ ನಮ್ಮ ಕೋಣೆಯಲ್ಲಿ ದುಃಖಸಂಚಿತವಾದ ಹಾಡುಗಳೇ ಕೇಳಿಬರುತ್ತಿದ್ದುವು. ಒಮ್ಮೆ ಒಂದು ಹಾಡು ಪ್ರಾರಂಭವಾದರೆ ಪ್ರತಿಯೊಬ್ಬರೂ ತಮ್ಮ ದುಃಖದ ಧ್ವನಿಯನ್ನು ಒಮ್ಮೊಮ್ಮೆ ಸೇರಿಸುವದಿತ್ತು. ಈ ಹಾಡು ಆ ಕಟ್ಟಡದ ಕಲ್ಲು ಗೋಡೆಗಳಲ್ಲಿ ಪ್ರತಿಧ್ವನಿಸಿ ಮೊಳಗುವದಿತ್ತು. ಕ್ರಮಶಃ ಈ ರೀತಿಯ ಹಾಡುಗಳು ಒಂದಕ್ಕೊಂದು ರಾಗತಾಳದಲ್ಲಿ ಹೊಂದಿಕೊಂಡು ತಕ್ಕ ಮಟ್ಟಿಗೆ ಚೆನ್ನಾಗಿಯೇ ಕೇಳುತಿತ್ತು.

ನಮ್ಮ ಸಂಗೀತ ಖಚೇರಿ ನಡೆದರೂ ಒಲೆಗೆ ಬಿಡುವಿರಲಿಲ್ಲ. ಬೆಂಕಿ ಸದಾ ಉರಿಯುತ್ತಿತ್ತು. ನೀರು ಕುದಿಯುತ್ತಿತ್ತು. ಬ್ರೆಡ್ ತಯಾರಾಗುತ್ತಲೇ ಇತ್ತು. ನಮ್ಮ ಜೀವನವು ಬಹು ಕಠಿಣ ಜೀವನವಾಗಿತ್ತು. ನಮ್ಮ ಹೆಗಲಿನ ಮೇಲೆ ಆ ಕಟ್ಟಡದ ಕಲ್ಲುಗಳು ನಿಂತಿವೆಯೋ ಎಂಬಂತೆ ಜೀವನವು ಭಾರವಾಗಿತ್ತು;

ನಮ್ಮ ಈ ಹಾಡು, ಸಂಗೀತವಲ್ಲದೆ ನಮಗೆ ಸಂತೋಷ ಸೂರ್ಯನ ಕಿರಣಗಳನ್ನು ಆಗಾಗ್ಗೆ ಚೆಲ್ಲುತ್ತಿದ್ದ ವಸ್ತುವೊಂದಿತ್ತು. ನಮ್ಮ ಕಟ್ಟಡದ ಪಕ್ಕದಲ್ಲಿ ಕಸೂತಿ ಅಂಗಡಿಯೊಂದಿತ್ತು. ಅಲ್ಲಿ ಕೆಲಸ ಮಾಡುತಿದ್ದ ಕೆಲಸಗಾತಿಯರಲ್ಲಿ ತಾನ್ಯಾ ಎಂಬವಳೊಬ್ಬಳಿದ್ದಳು. ಆಕೆ ಯಾವಾಗಲೂ ಕೆಲಸಕ್ಕೆ ಬೆಳಗೆ ಬರುವಾಗ ನಮ್ಮ ಜೈಲು ಗೋಡೆಯ ಬದಿಗಾಗಿಯೇ ಬರುತಿದ್ದಳು. ಕಿಡಿಕಿಯ ಕಬ್ಬಿಣ ಸಲಾಕೆಗಳ ಮಧ್ಯೆಯ ಮಬ್ಬು ಕನ್ನಡಿಯಲ್ಲಿ ಆಕೆ ಬರುವದು ಕಾಣುತಿತ್ತು. ಪ್ರತಿ ಬೆಳಗೆ ಆಕೆ ನಮ್ಮ ಕಿಟಕಿಯ ಹತ್ತಿರ ಬಂದು ‘ಜೈಲು ಪಕ್ಷಿಗಳೇ ನನಗೆ ಒಂದೆರಡು ಬಿಸ್ಕಿಟುಗಳನ್ನು ಕೊಡಿ” ಎಂದು ಕೇಳುತ್ತಿದ್ದಳು.

ಆಕೆಯ ಸ್ಪಷ್ಟ ಹಾಗೂ ಮಧುರ ಕಂಠದ ಸ್ವರ ಕೇಳಿದೊಡನೆಯೇ ನಾವೆಲ್ಲರೂ ಕಿಡಿಕಿಯ ಕಡೆಗೆ ಓಡುತ್ತಿದ್ದೆವು. ಕಿಡಿಕಿಯ ಕನ್ನಡಿಗೆ ಮೂಗನ್ನು ಒತ್ತಿ ಮುತ್ತಿನಂಥ ಹಲ್ಲುಗಳನ್ನು ಬಿಟ್ಟು, ಒಳಗೆ ನೋಡುತ್ತಿದ್ದ ಆಕೆಯನ್ನು ನೋಡುವ ತವಕ ಎಲ್ಲರಿಗಿತ್ತು. ನಾವು ಓಡಿಹೋಗಿ ಕಿಡಿಕಿ ತೆರೆಯುತ್ತಿದ್ದೆವು. ಈ ಓಡಾಟದಲ್ಲಿ ಕೋಣೆಯೊಳಗೆ ಘರ್ಷಣೆಯೇ ಆಗುತಿತ್ತು. ಆಕೆ ಅಲ್ಲಿ ತನ್ನ ಲಂಗವನ್ನು ಬಿಸ್ಕಿಟಿಗಾಗಿ ಹಿಡಿದು ನಿಂತಿರುತ್ತಿದ್ದಳು. ಆಕೆಯ ಮುಖವು ನಗೆಯಿಂದ ತುಂಬಿರುತ್ತಿತ್ತು.

ನಮ್ಮ ಶರೀರದ, ಬಟ್ಟೆ ಒರೆಯ, ಅರಿವಿಲ್ಲದೆ ಭಯಂಕರ ರೂಪಿನ ನಾವು ಕಿಟಕಿಯ ಹತ್ತಿರ ನಿಂತು ಆಕೆಗೆ ‘ಗುಡ್ ಮಾರ್ನಿಂಗ್’ ಹೇಳುತ್ತಿದ್ದೆವು. ಪ್ರತಿಯೊಬ್ಬನೂ ಆಕೆಯೊಡನೆ ಮಾತಾಡಲು ವಿವಿಧ ವಿಚಾರಗಳನ್ನು ಆಲೋಚಿಸಿ ನಿಶ್ಚಯಿಸಿಕೊಂಡಿರುತ್ತಿದ್ದೆವು. ಆಕೆಯೊಡನೆ ನಾವು ಮಾತಾಡುವಾಗ ನಮ್ಮ ಧ್ವನಿ ಮಾಧುರ್ಯಮಯವೂ ಮೃದುವಾದವೂ ಇರುತಿತ್ತು. ಆಕೆಗಾಗಿ ನಾವು ವಿಶೇಷ ಎಚ್ಚರಿಕೆಯಿಂದ ಬಿಸ್ಕಿಟುಗಳನ್ನು ತೆಗೆದಿರಿಸುತ್ತಿದ್ದೆವು. ಆಕೆಯ ಮಡಲಿಗೆ ಬಿಸ್ಕಿಟುಗಳನ್ನು ನಾವು ಹಾಕಿ ‘ನಮ್ಮ ಯಜಮಾನನು ಕಂಡಾನು ಎಚ್ಚರಿಕೆಯಿಂದ ಹೋಗು’ ಎನ್ನುತಿದ್ದೆವು. ಆಕೆಯು ‘ನಮಸ್ತೆ, ಜೈಲು ಪಕ್ಷಿಗಳೇ’ ಎಂದು ಹೇಳಿ ಸಂತೋಷದಿಂದ ಹೊರಟು ಹೋಗುತ್ತಿದ್ದಳು.

ಆಕೆ ಹೋದ ಮೇಲೆ ನಾವು ಆಕೆಯ ವಿಚಾರವಾಗಿ ತುಂಬ ಮಾತಾಡಿಕೊಳ್ಳುತ್ತಿದ್ದೆವು. ಆಗಾಗ್ಗೆ ಹೆಂಗಸರ ವಿಚಾರದಲ್ಲಿ ನಾವು ಮಾತಾಡಿಕೊಂಡರೂ ತಾನ್ಯಾಳ ವಿಷಯದಲ್ಲಿ ನಾವು ಒಂದೇ ಕೆಟ್ಟ ಅಭಿಪ್ರಾಯ ವ್ಯಕ್ತಮಾಡುತ್ತಿರಲಿಲ್ಲ. ಬಹುಶಃ ಆಕೆಯ ಸೌಂದರ್ಯವೇ ಇದಕ್ಕೆ ಕಾರಣವಿರಬಹುದು. ಸೌಂದರ್ಯವು ಗೌರವವನ್ನು ಗಳಿಸುವದೆಂಬ ನಾಣ್ಣುಡಿಯಂತೆ ನಾವು ಆಕೆಯನ್ನು ಗೌರವಿಸುತ್ತಿದ್ದೆವು.

ನಮ್ಮ ಕೋಣೆಯ ಸುತ್ತುಮುತ್ತು ಬೇರೆ ಅನೇಕರಿದ್ದರು. ಆದರೆ ನಮ್ಮ ವಿಚಾರದಲ್ಲಿ ಯಾರಿಗೂ ಆಸಕ್ತಿ ಇರಲಿಲ್ಲ. ನಾವು ತಾನ್ಯಾಳಿಗೆ ಬಿಸ್ಕಿಟು ಕೊಡುತಿದ್ದುದು ಮಾತ್ರವಲ್ಲ; ಚಳಿಯಲ್ಲಿ ಬೆಚ್ಚಗಿನ ಬಟ್ಟೆ ಹಾಕಿಕೊಳ್ಳಲು ಹೇಳುತ್ತಿದ್ದೆವು. ಕೆಲಸವನ್ನು ನಿಧಾನವಾಗಿ ಮಾಡುವಂತೆಯೂ ಆರೋಗ್ಯದ ವಿಷಯ ಎಚ್ಚರಿಕೆಯಿಂದಿರುವಂತೆಯೂ ಹೇಳುತ್ತಿದ್ದೆವು. ಇವಕ್ಕೆಲ್ಲಾ ಮುಗುಳುನಗೆಯಿಂದಲೇ ಆಕೆ ಉತ್ತರಿಸಿ ಹೋಗುತ್ತಿದ್ದಳು. ಆಕೆಯ ಬಗ್ಗೆ ನಮ್ಮ ಕಾತುರತೆಯನ್ನು ಈ ರೀತಿ ವ್ಯಕ್ತಪಡಿಸುವದರಿಂದಲೇ ನಮಗೆ ತೃಪ್ತಿ ಎನಿಸುತ್ತಿತ್ತು.

ಒಮ್ಮೆ ನಮ್ಮಲ್ಲಿ ಒಬ್ಬರು ಆತನ ಹರಿದ ಪಟ್ಲೂಣದನ್ನು ಹೊಲಿದುಕೊಡಬೇಕೆಂದು ಕೇಳಿದಾಗ ಆಕೆ ತಿರಸ್ಕಾರದಿಂದ ಆತನನ್ನು ತಮಾಷೆ ಮಾಡಿದಳು. ನಾವೂ ಕೂಡ ಆಕೆಯೊಡನೆ ಸೇರಿ ಆತನನ್ನು ಗೇಲಿಮಾಡಿದೆವು. ಅಂದಿನಿಂದ ಯಾರೂ ಆಕೆಯನ್ನು ಏನೂ ಕೇಳಲಿಲ್ಲ. ಆದರೆ ನಾವೆಲ್ಲರೂ ಆಕೆಯನ್ನು ಪ್ರೀತಿಸುತ್ತಿದ್ದೆವು. ಪ್ರತಿ ಮನುಷ್ಯನಿಗೂ ಒಂದು ಪ್ರೇಮದ ಪ್ರೀತಿಯ ವಸ್ತು ಬೇಕು. ಇದರಿಂದ ಆತನಿಗೆ ಅಹಿತವಾದರೂ ಪ್ರೀತಿಯ ವಸ್ತುವಿನ ಹಿತಾಹಿತಗಳನ್ನು ಲೆಕ್ಕಿಸದೆ ಆತನು ಪ್ರೇಮ ಮಾಡುವನು.

ಆಕೆಯ ವಿಚಾರದಲ್ಲಿ ಹಲವು ವೇಳೆ ನಮ್ಮಲ್ಲಿಯೇ ತರ್ಕವಿತರ್ಕಗಳಾಗುತಿದ್ದುವು. ಆ ಹುಡುಗಿಯ ಮೇಲೆ ಇಷ್ಟೊಂದೇ ಮಮತೆ ಏಕೆ ? ಎಂದು ಒಬ್ಬರು ಪ್ರಶ್ನಿಸಿದರೆ ಉಳಿದವರೆಲ್ಲರೂ ಆತನನ್ನು ತಮಾಷೆಮಾಡುತ್ತಿದ್ದೆವು. ನಾವು ೨೬ ಜನರಿಗೂ ನಮ್ಮ ಪ್ರೀತಿಯ ವಸ್ತು ತಾನ್ಯಾ ಗೌರವಾರ್ಹಳಾಗಿದ್ದಳು.

ನಮ್ಮ ಬೇಕರಿಯ ಹತ್ತಿರದಲ್ಲಿಯೂ ಅಂಗಡಿಯೊಂದಿತ್ತು. ಅದರಲ್ಲಿ ನಾಲ್ಕು ಜನ ಕೆಲಸಗಾರರಿದ್ದರು. ಅವರು ನಮ್ಮೊಡನೆ ಮಿಳಿತವಾಗುತ್ತಿರಲಿಲ್ಲ. ಅವರ ಕೆಲಸವು ಸುಲಭವಾಗಿರುತಿತ್ತು. ಅವರು ಶುಚಿಯಾದ ಬಟ್ಟೆ ಹಾಕುತ್ತಿದ್ದರು. ಅವರಲ್ಲಿ ಮುಖ್ಯಸ್ಥನಾದವನು ತುಂಬ ಸಾರಾಯಿ ಕುಡಿಯುವನೆಂಬ ಕಾರಣ ಆತನನು ತೆಗೆದು ಹಾಕಿ ನಿವೃತ್ತ ಸೈನಿಕನೊಬ್ಬನನ್ನು ನೇಮಿಸಿದ್ದರು. ಆತನು ಬಹು ಆಡಂಬರದ ಉಡಿಗೆ ಹಾಕುತ್ತಿದ್ದನು. ಆತನ ಆರೋಗ್ಯವೂ ಚೆನ್ನಾಗಿದ್ದು ಸುಂದರನೂ ಆಗಿದ್ದನು. ಆತನು ನಮ್ಮೊಡನೆ ಸಖ್ಯ ಬೆಳೆಸಿದನು. ಪ್ರತಿ ದಿನ ಬಂದು ತನ್ನ ವಿಚಾರವಾಗಿ ಹೇಳಿಕೊಳ್ಳುತ್ತಿದ್ದನು. ಆತನ ಸೌಂದರ್ಯ, ಉಡುಪುಗಳಿಗಾಗಿ ಹೆಂಗಸರು ಹಾತೊರೆಯುವರೆಂದೂ ಅವರವರೊಳಗೇ ಜಗಳವಾಗುತ್ತದೆಂದೂ ಹೇಳುತ್ತಿದ್ದನು. ಅನೇಕ ಕತೆಗಳನ್ನು ಆತನು ಹೇಳುತ್ತಿದ್ದುದಲ್ಲದೆ ನಮಗೂ ಉಪದೇಶ ಮಾಡುತ್ತಿದ್ದನು.

ಇಂಥಾವನು ಬಂದು ಸೇರಿದುದರಿಂದ ತಾನ್ಯಾಳಿಗೆ ಗಂಡಾಂತರವಿದೆಯೆಂದು ನಮಗನಿಸದಿರಲಿಲ್ಲ. ಅದ್ದರಿಂದ ನಾವೆಲ್ಲರೂ ಆತನ ಮತ್ತು ತಾನ್ಯಾಳ ವರ್ತನೆಯನ್ನು ನಿರೀಕ್ಷಿಸುತ್ತಿದ್ದೆವು. ತಾನ್ಯಾಳು ಎಂದಿನಂತೆ ಬರುತ್ತಿದ್ದಳು. ಒಂದು ದಿನ ಈ ಹೊಸಬನ ವಿಚಾರ ಹೇಳಿದಾಗ ಆಕೆ ತಿರಸ್ಕಾರದ ಮಾತುಗಳನ್ನಾಡಿ ಹೊರಟಳು ಆದರಿಂದ ನಮಗೆ ಧೈರ್ಯವಾಯಿತು. ಈ ಹೊಸಬನ ಆಟ ಆಕೆಯೊಡನೆ ನಡೆಯದೆಂದು ನಮಗೆ ಖಚಿತವಾಯಿತು.

ಒಂದು ದಿನ ಈ ಹೊಸಬನು ನಮ್ಮೊಡನೆ ಹರಟೆಕೊಚ್ಚುತ್ತಿದ್ದಾಗ ನಮ್ಮ ಮುಖ್ಯಸ್ಥನು ‘ನಿನ್ನ ಆಟ ಇತರ ಹೆಂಗಸರೊಡನೆ ನಡೆಯಬಹುದು. ಆದರೆ ತಾನ್ಯಾಳ ಜೊತೆಯಲ್ಲಿ ಸಾಗದು’ ಎಂದನು. ಸೈನಿಕನು ಕುಪಿತನಾದನು. ಹದಿನೈದು ದಿನಗಳಲ್ಲಿ ನಿಮಗೆ ತೋರಿಸುವೆನೆಂದು ಪಣತೊಟ್ಟು ಹೋದನು. ಎಂದಿನಂತೆ ತಾನ್ಯಾಳು ಬರುತ್ತಿದ್ದಳು.

ಆ ದಿನವೂ ತಾನ್ಯಾಳು ಬಂದು ಹೋದಳು. ಅದೇ ದಿನ ಸೈನಿಕನೂ ಬಂದು ಈ ದಿನ ಸಾಯಂಕಾಲ ನೀವೆಲ್ಲರೂ ನೋಡಿ. ಪಕ್ಕದ ಮರದ ಬಾಗಿಲಿನ ಸಂದಿಗಾಗಿ ನನ್ನ ಕೋಣೆಯನ್ನು ನಿರೀಕ್ಷಿಸಿರಿ’ ಎಂದನು. ನಾವು ಗಾಬರಿಗೊಂಡೆವು. ಸಾಯಂಕಾಲ ನಾವು ಗೋಡೆಯ ತೂತಿನೊಳಗಿಂದ ನೋಡುತ್ತಿದ್ದೆವು ಸೈನಿಕನು ಬಂದನು. ಸ್ವಲ್ಪ ಸಮಯದ ನಂತರ ತಾನ್ಯಾಳೂ ಒಂದು ಕೋಣೆಗೆ ಸೇರಿದಳು. ಕೆಲವು ಸಮಯ ಕಳೆದ ಮೇಲೆ ಸೈನಿಕನು ಹೊರಗೆ ಬಂದನು. ತಾನ್ಯಾಳು ನಗುಮುಖದಿಂದ ಹೊರಗೆ ಹೊರಟು ಹೋಗಲುದ್ಯುಕ್ತಳಾದಳು.

ನಮಗೆ ಸಹಿಸಲಾಗಲಿಲ್ಲ. ನಾವು ಹೋಗಿ ಆಕೆಯನ್ನು ಸುತ್ತುಗಟ್ಟಿ ನಿಂತೆವು. ನಾನಾ ರೀತಿಯಿಂದ ಆಕೆಯನ್ನು ಬಯ್ಯತೊಡಗಿದೆವು. ಆಕೆಯ ಮುಖ ವಿವರ್ಣವಾಯಿತು. ನಮಗೆ ದುಃಖ ವಿಪರೀತವಾಗಿತ್ತು. ಆಕೆ ನಮ್ಮವಳಾಗಿದ್ದಳು ಆಕೆಗಾಗಿ ಬಡವರಾದ ನಾವು ಮನಃಪೂರ್ತಿಯಾದ ವಾತ್ಸಲ್ಯವನ್ನು ವ್ಯಕ್ತ ಮಾಡಿದ್ದೆವು. ಆಕೆಯೊಬ್ಬಳೇ ನಮ್ಮ ಮಧ್ಯೆ ನಿಂತಿದ್ದಳು. ನಾವು ಬೇಕು ಬೇಕಾದ ಹಾಗೆ ಆಕೆಯನ್ನು ಬೈದೆವು. ಆಕೆ ಮಾತಾಡಲಿಲ್ಲ. ಹೆದರಿಕೆಯಿಂದ ನಮ್ಮೆಡೆಗೆ ನೋಡಿದಳು. ಒಬ್ಬಾತನು ಆಕೆಯ ಅಂಗಿಯ ಅಂಚನ್ನೆಳೆದನು.

ಆಕೆ ಕಿಡಿಕಿಡಿಯಾದಳು. ತನ್ನ ತಲೆ ಕೂದಲನ್ನು ಸವರಿ “ಮತಿಹೀನ ಜೈಲು ಪಕ್ಷಿಗಳೇ” ಎಂದು ಕೂಗಿ ಮುಂದಡಿ ಇಟ್ಟಳು. ನಾವು ಸುತ್ತು ಇದ್ದೇವೆಂಬುದನ್ನು ಗಮನಿಸದೆ ಸಾಗಿದಳು.

ನಾವು ನಮ್ಮ ಕೋಣೆಯ ಹೊರಗೆ ನಿಂತಿದ್ದೆವು. ಮಳೆಯ ಮೋಡ ಕವಿದಿತ್ತು. ಆಕಾಶದಲ್ಲಿ ಸೂರ್ಯನ ಚಿಹ್ನೆ ಇರಲಿಲ್ಲ. ನಮ್ಮ ಕೋಣೆಗೆ ಹಿಂತಿರುಗಿದೆವು. ಮಳೆಗಾಲ ಪ್ರಾರಂಭವಾದ್ದರಿಂದ ಹಿಂದಿನಂತೆ ಸೂರ್ಯ ರಶ್ಮಿ ಕಿಡಿಕಿಯೊಳಗೆ ಬೀಳುತ್ತಿರಲಿಲ್ಲ. ತಾನ್ಯಾಳು ಅಂದಿನಿಂದ ನಮ್ಮ ಕಿಡಿಕಿಗೆ ಬರಲಿಲ್ಲ.

॥ ಮಧು ಪರ್ಕ. ॥

ಬಾರ್ಡೋಲಿಯ ಸತ್ಯಾಗ್ರಹ ತಿಳಿಯದ ಭಾರತೀಯನಾರು? ಸರಕಾರದ ದೌರ್ಜನ್ಯಕ್ಕೆ ಗುರಿಯಾಗಿ ಎಷ್ಟೋ ಜನರು ಊರು ಬಿಡಬೇಕಾಯಿತು. ಅನೇಕರು ಹೊಲ ಮನೆ ಕಳೆದುಕೊಂಡರು. ಕೆಲವರಿಗೆ ಮರಣವಾಯಿತು. ಕೆಲವರು ಇದರಿಂದ ಲಾಭವನ್ನು ಮಾಡಿಕೊಂಡರು. ಈ ಲಾಭಾಲಾಭ ಸಮುದ್ರಗಳ ಜಂಜಡಕ್ಕೆ ಸಿಕ್ಕದ ಒಂದು ವ್ಯಕ್ತಿ ಇತ್ತು. ಸರಕಾರದ ಕಿರುಕುಳಕ್ಕಾಗಿ ಊರು ಬಿಟ್ಟು ನೆರೆಯ ಬರೋಡಾ ರಾಜ್ಯಕ್ಕೆ ಹೊರಟು ಹೋಗಿದ್ದ ಆತ. ತನ್ನ ಹೊಲ ಮನೆ ಸಗೌರವವಾಗಿ ತನಗೆ ದೊರೆಯುವ ವರೆಗೆ ಅಲ್ಲಿ ಕಾಲಿಡಬಾರದೆಂದು ಶಪಥ ಮಾಡಿದ್ದ ಆತ. ಆತನೇ ವಾರ್ಡಾದ ಛಿತಾಬಾಯಿ.

ಏಳು ವರ್ಷದ ನಂತರ ಬಾರ್ಡೋಲಿ ಚಳವಳಕ್ಕೆ ಜಯದೊರೆಯಿತು. ರೈತರ ಹೊಲ ಮನೆಗಳು ಅವರವರಿಗೆ ಕೊಡಲ್ಪಟ್ಟವು. ಸರ್ದಾರ್ ವಲ್ಲಭಭಾಯಿಯವರ ಮುಂದಾಳ್ತನದಲ್ಲಿ ವಿಜಯೋತ್ಸವ ನಡೆಯಿತು.

ವನವಾಸದಲ್ಲಿದ್ದ ಛಿತಾಬಾಯಿಯನ್ನು ಸ್ವಗ್ರಾಮಕ್ಕೆ ಕರೆಯಲು ಸರದಾರರನ್ನು ಮುಂದು ಮಾಡಿಕೊಂಡು ಜನ ಅಲ್ಲಿಗೆ ಹೋದರು. ಅವರನ್ನು ಮೆರವಣಿಗೆ ಮಾಡಿ ಕರೆದು ತರಬೇಕೆಂದು ಜನರ ಆಸೆ. ಆದರೆ ಬಾಯಿ ಇದ್ದ ಹಳ್ಳಿಗೆ ಸರಿಯಾದ ದಾರಿ ಇರಲಿಲ್ಲ. ಮೋಟಾರು ಹೋಗುವಂತಿರಲಿಲ್ಲ. ಎರಡೇ ದಿನಗಳಲ್ಲಿ ಜನರೆಲ್ಲ ಸೇರಿ ಅತ್ಯುತ್ತಮ ರಸ್ತೆ ಮಾಡಿದರು.

ಬಾಯಿ ಇದ್ದ ಸ್ಥಳ ಅವರ ಗೆಳೆಯರದು. ಅಲ್ಲಿ ಮರುಕಳುಹಿಸಲೊಂದರಲ್ಲಿ ಅವರು ಏಳು ವರ್ಷದಿಂದ ಬೇರೆಯವರ ಭೂಮಿ ಪಾರ ಮಾಡಿಕೊಂಡು ಜೀವಿಸುತ್ತಿದ್ದರು. ವಾರ್ಡದಲ್ಲಿ ಛಿತಾಬಾಯಿಯವರ ಮನೆ ಹೆಸರಾದ್ದು. ಅವರು ತುಂಬ ಸಿರಿವಂತರಾಗಿದ್ದರು. ಆ ಮಹಾಪುರುಷರು ತಮ್ಮ ಇಬ್ಬರು ಮಕ್ಕಳು ಮತ್ತು ಸೊಸೆಯವರನ್ನು ಕಟ್ಟಿಕೊಂಡು ಪಾರಗಾರರಾಗಿ ಜೀವಿಸುತ್ತಿದ್ದರು. ಊಹೆಗೂ ಮೀರಿದುದು. ಆದರೆ ಈ ಕಷ್ಟ ಜೀವನದಿಂದ ಅವರು ಬಗ್ಗಲಿಲ್ಲ. ಊರಿನಲ್ಲಿಯ ತನ್ನ ವಿಶಾಲ ಮನೆಯು ಏಳು ವರ್ಷಗಳಿಂದ ರಿಪೇರಿ ಇಲ್ಲದೆ ಬಿದ್ದು ಹೋಗುವಂತಿದ್ದರೂ ತಮ್ಮ ಗ್ರಾಮಕ್ಕೆ ಒಮ್ಮೆಯಾದರೂ ಕಾಲಿಕ್ಕಲಿಲ್ಲ.

ಛಿತಾಬಾಯಿಯನ್ನು ಕರೆದುಕೊಂಡು ಹೋಗಲು ಸರ್ದಾರರು ಬಂದ ದಿನ ಛಿತಾಬಾಯಿ ಇದ್ದ ಊರು ಕಣ್ಣೀರಿನಲ್ಲಿ ಮುಳುಗಿತು. ಅಲ್ಲಿಯ ಗ್ರಾಮಸ್ಥರ ಜೀವಾಳವಾಗಿ ಛಿತಾಬಾಯಿ ಇದ್ದರು. ಒಂದು ಜಗಳ, ದ್ವೇಷ ಯಾವುದೊಂದನ್ನೂ ನಿಸ್ವಾರ್ಥದೃಷ್ಟಿಯಿಂದ ಬಗೆ ಹರಿಸುತ್ತಿದ್ದ ಬಾಯಿಯವರು ಗ್ರಾಮದ ಜನತೆಯ ಪಾಲಿಗೆ ಸರ್ವಸ್ವವಾಗಿದ್ದರು. ಅವರಿಗೆ ಹಗೆಗಳೇ ಇರಲಿಲ್ಲ. ಛಿತಾಬಾಯಿ ಹಿಂತಿರುಗಿದರೆ ತಮ್ಮ ಬದುಕಿನ ಬೆಳಕೇ ನಂದಿಹೋಗುವದೆಂದು ಗ್ರಾಮದ ಜನರು ವ್ಯಸನಪಟ್ಟರು. ಎಲ್ಲರ ಕಣ್ಣೂ ಹನಿಗಣ್ಣು. ಊರವರೆಲ್ಲ ಸೇರಿ ಛಿತಾಬಾಯಿಗೆ ನೇಗಿಲೊಂದನ್ನು ಕಾಣಿಕೆ ಕೊಟ್ಟರು. ಗ್ರಾಮದ ಜನರೆಲ್ಲರೂ ಅವರನ್ನು ಬೀಳ್ಕೊಟ್ಟರು. ಊರಿಗೆ ಊರೇ ಊರಿನ ಗಡಿಯ ವರೆಗೆ ಬಂದಿತ್ತು.

ಛಿತಾಬಾಯಿಯನ್ನು ಕುರಿತು ಸರ್ದಾರರು ಹೇಳಿದರು, 'ವ್ರತವೇ ನಮ್ಮ ಜೀವಾಳ. ನಮ್ಮ ಶೀರ್ಷ. ವ್ರತಕ್ಕಾಗಿ ಸರ್ವಸ್ವವನ್ನು ಕಳೆದುಕೊಂಡವರೆಂದರೆ ಶ್ರೀರಾಮ್ನ ಮತ್ತು ಹರಿಶ್ಚಂದ್ರರು. ಶ್ರೀರಾಮ ರಾಜ್ಯತ್ಯಾಗ ಮಾಡಿದ. ಆದರೆ ಬಡರೈತ ತನ್ನ ಹೊಲ ಮನೆ ಬಿಡುವದು ಅದಕ್ಕಿಂತಲೂ ಕಠಿಣ. ನಿಮ್ಮಂಥಾ ವ್ರತಪರಿಪಾಲಕರಿರುವಲ್ಲಿ ದೇವರೆ ಇದ್ದಾನೆ."

ಬಾಯಿಯವರು ಸ್ವಗ್ರಾಮಕ್ಕೆ ಬಂದ ಮರುದಿನ ಗಾಂಧೀಜಿಯವರು ಗ್ರಾಮಕ್ಕೆ ಬಂದರು. ಬಾಯಿಯ ಮನೆ ಬಿದ್ದು ಹೋಗಿದ್ದ ಕಾರಣ ಅವರಿಗಾಗಿ ಕಾಂಗ್ರೆಸ್ ಕೆಲಸಗಾರರು ಒಂದು ಮನೆ ಕಟ್ಟಿಸಿದ್ದರು. ಆ ಮನೆಯು ಗಾಂಧೀಜಿಯ ಪಾದಧೂಳಿಯಿಂದ ಪುನೀತವಾಗದೆ ಬಾಯಿ ಮನೆಯಲ್ಲಿ ಕಾಲಿಡಲು ಒಪ್ಪಲಿಲ್ಲ. ಆ ಗೃಹಪ್ರವೇಶ ರಸಮಯವಾಗಿತ್ತು. ಆಶ್ರಮದ ಗೆಳತಿಯರು "ದೇವರ ನಂಬಿ ಕೆಟ್ಟವರುಂಟೆ? ಆತನ ಪ್ರಾಣವಾಯುವನವನು" ಎಂಬ ಅರ್ಥದ ಗೀತೆಯನ್ನು ಹಾಡಿದರು.

ಗಾಂಧೀಜಿ ಮನೆಯ ಹೊಸಲು ಮೆಟ್ಟಿದಾಗ ಛಿತಾಬಾಯಿ ಅವರ ಕೈಯಲ್ಲಿ ನೋಟುಗಳ ಕಟ್ಟೊಂದನ್ನು ಇಟ್ಟನು. 'ಇದೇನು ಈ ದಾನ, ಈ ಕಷ್ಟದ ಬಡತನದಲ್ಲಿ ಈ ಹಣ ಉಳಿಸಲು ಹೇಗೆ ಸಾಧ್ಯ' ಗಾಂಧೀಜಿ ಕೇಳಿದರು.

'ದಾನವಲ್ಲ ಇದು ಸಾಲ. ನನ್ನ ವನವಾಸದ ಕಾಲದಲ್ಲಿ ಆವರಿವರಿಂದ ಸಹಾಯ ದೊರೆತಿದೆ. ಅದರ ಮೊತ್ತ ೩೫೪—ರೂಪಾಯಿ ಈ ವರೆಗಿನ ಬಡ್ಡಿ ರೂ ೩೫ ಒಟ್ಟು ೩೮೯ — ರೂಪಾಯಿ. ಸಾಲ ತೀರಿಸಿದೆನಲ್ಲಾ ಎಂಬುದೇ ನನ್ನ ಆನಂದ' ಎಂದರವರು.

ಸ್ಟಾಲಿನ್ ಮತ್ತು ಶಾಂತಿ.

ಲೇ: ಜಿ. ಸಿ. ತಿಮ್ಮೂರಪ್ಪ.

ರಾಷ್ಟ್ರಗಳು ಬಹುಪಾಗಿ ಬಲದ ಕೆಳಗೆ ಅದುಮಿ ಹಿಡಿಯಲ್ಪಟ್ಟಾಗ್ಗೆ, ಅವುಗಳ ವಿಮೋಚನೆಗಾಗಿ ಓರ್ವ ವ್ಯಕ್ತಿಯು ಹುಟ್ಟುವನು. ಇಸ್ರಾಯಿಲವು ಫರೋಜರ ದಬ್ಬಾಳಿಕೆಗೆ ಸಿಕ್ಕು ನರಳುತ್ತಿದ್ದಾಗ್ಗೆ, ಮೋಜೆಸ್‌ನು ಬಂದು 'ನನ್ನ ಜನರು ಹೋಗಲಿ' ಎಂದನು. ಜನರ ಹೊರೆಯು ಅಲಕ್ಷಿಸಲ್ಪಟ್ಟಾಗ್ಗೆ, ಮತ್ತು ಪ್ಲೇಗು ತಾಂಡವ ನೃತ್ಯವಾಡಿದಾಗ್ಗೆ, ಇಜಿಪ್ತಕ್ಕೆ, ಅದರ ಮೇಲೆ ಆಳುತ್ತಿದ್ದ ಸರಕಾರವು ತಲೆಬಾಗಬೇಕಾಯಿತು. ರೋಮ್‌ವು ಹೀನ ಸ್ಥಿತಿಗಿಳಿದಾಗ್ಗೆ, ಜೀಸಸನು ತನ್ನ ನೈತಿಕ ಬಲ್ಲಿಗಳ ಸಹಾಯದಿಂದ ಬಂದು ಕಳೆಗುಂದುತ್ತಿದ್ದ ಆ ಸಾಮ್ರಾಜ್ಯವನ್ನು ಕೊನೆಗೊಳಿಸಿದನು. ಬ್ರಿಟಿಷರು ಹಿಂದುಸ್ಥಾನವನ್ನು ಹಿಂಡಿ ಹಿಪ್ಪೆ ಮಾಡಿದಾಗ್ಗೆ, ಮಹಾತ್ಮಾಜಿಯವರು ಒಂದು ಮುಷ್ಟಿಯಷ್ಟಾದ ಜನರಲ್ಲಿ ಧೈರ್ಯ, ತ್ಯಾಗಗಳನ್ನು ತುಂಬಿ ಅವರಿಂದ ಪರಕೀಯರನ್ನು ಇಲ್ಲಿಂದ ಓಡಿಸಿದರು. ಜರ್ಝರಿತರಾದ ಮತ್ತು ಕಹಿ ಬಾಳನ್ನು ಬಾಳುತ್ತಿದ್ದ ರಷ್ಯನ್ನರಿಗಾಗಿ ಸ್ಟಾಲಿನ್ನರು ಜುಜಾರ ಪ್ರಭುತ್ವದ ಸ್ಥಳದಲ್ಲಿ ಹೊಸ ನಾಗರೀಕತೆಯನ್ನು ನಿರ್ಮಿಸಿದರು.

ಧನವಂತರ ಕಾಲಿಲ್ಲಿ ಸಿಕ್ಕು ಅಸಹಾಯರಾದ ಸಾಮ್ರಾಜ್ಯವಾದಿಗಳ ಬುಡದಲ್ಲಿ ಸಿಕ್ಕು ರಕ್ತಸಹಿತರಾದ, ಸೈನಿಕ ಬಲದ ತಿರುಗಣೆಗೆ ಸಿಕ್ಕಿ ನಿರಾಶರಾದ ಜಗತ್ತಿಗೆ ಸ್ಟಾಲಿನ್ನರು ಹೊಸ ಮಾರ್ಗ ತೋರಿಸಿದ್ದಾರೆ. ಅವರು ಸರ್ವರಿಗೂ ಸಮಾನಾವಕಾಶ ಕಲ್ಪಿಸಿಕೊಟ್ಟರು. ಕತ್ತಲೆಯ ಸ್ಥಳದಲ್ಲಿ ಬೆಳಕನ್ನುಂಟುಮಾಡಿದರು. ಹಸಿದವರಿಗೆ ಅನ್ನವಿತ್ತರು, ಬತ್ತಲೆಯಿದ್ದವರಿಗೆ ವಸ್ತ್ರವನ್ನೊದಗಿಸಿದರು. ಮನಬಂದಂತೆ ಆಳುವವರ ನಿರಂಕುಶ ಕಾಯಿದೆಗಳಿಗೆ ತೀರ ವಿಪರೀತವಾದ ರಾಜ್ಯವಸ್ಥೆಯುಳ್ಳ ಸಮಾಜವಾದೀ ಆರ್ಥಿಕ ಸಂಘಟನೆಯನ್ನು ಅವರು ಕಟ್ಟಿದರು.

ಆದರೆ ಅವರು ಇವೆಲ್ಲವನ್ನೂ ಹಿಂಸೆಯಿಂದ ಸಾಧಿಸಿದರೆಂಬುದೇನೋ ನಿಜ. ಹಿಂಸೆಯನ್ನಾಚರಿಸದವರಾರು? ಗಾಂಧೀಜಿಯವರ ಅನುಯಾಯಿ. ಫ್ರಾನ್ಸಿನವರು, ಇನ್ನೂ ಅಂತೆಯೇ ರೋಮನರು ಆಗ ಉಳಿದಿದೆ. ಯಾರ ಕೈಗಳು ತಮ್ಮ ಬಾಂಧವರ ರಕ್ತದ ಮೂಲಕ ಇನ್ನೂ ಕೆಂಪಾಗಿಯೇ ಇರುವವೋ ಅವರು ಹಿಂಸೆಯ ಬಗ್ಗೆ ಚರ್ಚೆ ಮಾಡದಿರಲಿ.

ಸ್ಟಾಲಿನನು ಮಹಾ ಕರ್ತೃತ್ವಶಾಲಿ ವ್ಯಕ್ತಿಯಾಗಿದ್ದನು. ಆವನು ತನ್ನ ಅನುಯಾಯಿಗಳನ್ನು ಭಯದಿಂದ ಮುಕ್ತಮಾಡುತ್ತಿದ್ದಂತೆ ಆತನ ವಿರುದ್ಧವಾದ ವ್ಯಕ್ತಿಗಳನ್ನು ಭಯಕ್ಕೆ ನೂಕಿ ತನ್ನ ವೈರಿಗಣದಲ್ಲಿ ಸೇರಿಸುತ್ತಿದ್ದನು. ಜಗತ್ತಿನ ಸೈನಿಕ ಶಕ್ತಿಗೆ ಆವನು ಒತ್ತು ಹಾಕಿದನು. ಯುದ್ಧ ನಿರೋಧಕರಲ್ಲಿ ಆವನು ಅಗ್ರಗಣ್ಯನು. ಆತನ ಹೆಸರೇ ಶಾಂತಿಪ್ರಧಾನದ ಹೆಗ್ಗುರುತಾಗಿತ್ತು. ತನ್ನ ಪ್ರಭಾವಳಿಯಲ್ಲಿ ಬಂದವರನ್ನೆಲ್ಲ ದೇಶರಚನಾಕಾರ್ಯಕ್ಕೆ ಆವನು ಹಚ್ಚಿದನು. ತನ್ನ ಕಾರ್ಯವನ್ನು ಮುಂದರಿಸಲು ಅವರೆಲ್ಲರೂ ಶಾಂತವಾತಾವರಣವನ್ನು ಹುಟ್ಟಿಸಲು ಯತ್ನಿಸಿದರು. ರಶಿಯಾದ ಸರಕಾರೀ ಚಟುವಟಿಕೆಗಳನ್ನು ಗಮನಿಸಿದರೆ, ಆಕ್ರಮಣಗಾರರ ವಿರುದ್ಧ ಅಜಿಂಕ್ಯ ಶಕ್ತಿಯನ್ನು ನಿರ್ಮಾಣಮಾಡುವುದು ಅದರ ಗುರಿಯಾಗಿತ್ತು. ಜನತೆಗೆ ವೈರಿಗಳ ಹೆದರಿಕೆಯು ಎಳ್ಳಷ್ಟು ಇಲ್ಲದಂತಹ ಪರಿಸ್ಥಿತಿಯನ್ನು ಅದು ಹುಟ್ಟಿಸಿತು. ಸ್ಟಾಲಿನ್ನನು ದುಡುಕು ಸ್ವಭಾವದವನಾಗಿದ್ದಿಲ್ಲ. ಶಾಂತ ಮತ್ತು ತೂಗಿ ನೋಡುವ ಸ್ವಭಾವವು ಆವನದಾಗಿತ್ತು. ಆವನ ಆ ಅಚಲ ಮನೋವೃತ್ತಿಯು, ಜಾಗತಿಕ ಯುದ್ಧವಾಗಬಹುದಾದ ಅನೇಕ ಪ್ರಸಂಗಗಳನ್ನು ತಪ್ಪಿಸಿತು. ಸ್ಟಾಲಿನ್ನನ ಯತ್ನವು ರಶಿಯಾದ ಆಂತರಿಕ ಶಾಂತಿ ಸುವ್ಯವಸ್ಥೆಗಳಿಗೆ ಆನ್ನೊಂದು ಸಹಾಯ ಮಾಡಿದ್ದರೂ ಬಾಹ್ಯ ಶಾಂತಿಗೆ ಬಹಳ ಕಾರಣವಾಯಿತು. ಇದು ಸಾಮಾನ್ಯ ಶಕ್ತಿಯಲ್ಲ

ವಿಧಾಯಕ ಕಾರ್ಯದಲ್ಲಿ ಸ್ಟಾಲಿನ್ನನದು ಎತ್ತಿದ ಕೈ. ಹಿಂದೆ ಅಧಿಕಾರಿಕವಾಗಿ ಇದ್ದ ರಶಿಯಾದಲ್ಲಿಯ ಅನೇಕ ಸರಕಾರೀ ಸ್ಥಾನಗಳನ್ನು, ಆವರು ಜನತೆಯ ನಿಜವಾದ ಕಲ್ಯಾಣಸಾಧನೆಗೆ ಉಪಯೋಗಬೀಳುವಂತೆ ಮಾಡಿದರು. ಗಾಯನ, ನೃತ್ಯ, ನಾಟಕಗಳು ಅಲ್ಲಿಯ ಎಲ್ಲ ನಾಗರಿಕರಿಗೆ ಸಿಗುವಂತೆ ಮಾಡಿದ್ದಾರೆ. ಪೌಷ್ಟಿಕ ಆಹಾರ ಮತ್ತು ಆರೋಗ್ಯವು ರಶಿಯನ್ನರಿಗೆ ಇಂದು ಜನ್ಮಸಿದ್ಧ ಹಕ್ಕಾಗಿದೆ.

ಮಾನವಜಾತಿಯ ಸಾಮರಸ್ಯವನ್ನು ಇಂದು ರಶಿಯಾದಲ್ಲಿ ನೋಡಬಹುದಾಗಿದೆ. ವರ್ಣ, ವರ್ಗ ಅಥವಾ ಧರ್ಮಗಳು ಅಲ್ಲಿ ಗುಂಪುಗಳನ್ನು ಹುಟ್ಟಿಸುತ್ತಿಲ್ಲ. ಸ್ಟಾಲಿನ್ನನ ಅಂತರರಾಷ್ಟ್ರೀಯ ಕಲ್ಪನೆಯು ಇದೇ ತಳಹದಿಯ ಮೇಲೆ ನಿರ್ಮಾಣವಾದಂತಿದೆ. ಆದ್ದರಿಂದಲೇ ರಶಿಯಾದ ಸರ್ವ ಜನತೆಯು ಜಾರ್ಜಿಯದ ನಿವಾಸಿಯಾದ ಸ್ಟಾಲಿನ್ನನನ್ನು ಆ ದೃಷ್ಟಿಯಿಂದ ನೋಡಿತು.

ಇತ್ತೀಚಿನ ದಿನಮಾನಗಳಲ್ಲಿ ಸ್ಟಾಲಿನ್ನ ನಂತರ ವ್ಯಕ್ತಿಯು ಒಮ್ಮೆ ಬಂದು [illegible] ಕ್ರಮಗಳನ್ನು ಮುಂದರಿಸಿಕೊಂಡು ಹೋಗಲು ರಶಿಯನ್ ಜನತೆಯು ಈಗಿನ ಅಲ್ಲಿಯ ಅಧ್ಯಯನಗಳಿಗೆ ಸಹಕರಿಸುವುದೆಂದು ನಾವು ನಂಬುತ್ತೇವೆ. ಸ್ಟಾಲಿನ್ನನ, ದೀನ, ದಲಿತರ ಬಗ್ಗೆ ವಿಶಾಲವಾದ ಸಹಾನುಭೂತಿ, ಹಿಡಿದ ಕಾರ್ಯದಲ್ಲಿಯ ತಲ್ಲೀನತೆ, ಪ್ರಜೆಗಳ ಬಗ್ಗೆ ಆವನಲ್ಲಿದ್ದ ನಿಸ್ವಾರ್ಥ ಭಕ್ತಿ ಮತ್ತು ಔದಾರ್ಯ ಇವೇ ಮೊದಲಾದ ಗುಣಗಳನ್ನು ನಾವು ಅನುಕರಿಸುವುದು ಅವಶ್ಯವಿದೆ.

ಜೈ ಹಿಂದ್.

ಹಿಂದಿ ವಿಮಾನ ಪಡೆಯ ಇತಿಹಾಸ.

ಇಪ್ಪತ್ತು ವರ್ಷಗಳಲ್ಲಿ ಮಹತ್ವದ ಪ್ರಗತಿ

ರಾಷ್ಟ್ರವನ್ನು ಸಂರಕ್ಷಿಸುವ ಆಧುನಿಕ ಯೋಜನೆಗಳಲ್ಲಿ ವಿಮಾನ ಪಡೆಗೆ ಇಂದು ಮಹತ್ವವು ಪ್ರಾಪ್ತವಾಗಿರುತ್ತದೆ. ತೀವ್ರಗತಿಯಿಂದ ಹಾರಾಡುವ ಅನುಕೂಲತೆ ಮತ್ತು ಪರಿಣಾಮಕಾರಿಯಾದ ಧಾಳಿಯನ್ನು ನಡೆಸುವ ಸಾಮರ್ಥ್ಯವು ವಿಮಾನ ಪಡೆಗೆ ಬಂದಿರುವದರಿಂದ ಅದನ್ನು ಭದ್ರವಾದ ತಳಹದಿಯ ಮೇಲೆ ಪುನರ್ಘಟಿಸುವದಕ್ಕೆ ಈಗ ಅಧಿಕ ಗಮನವನ್ನು ಕೊಡುತ್ತಿರುವರು. ದ್ವಿತೀಯ ಮಹಾ ಯುದ್ಧದಲ್ಲಿ ನಡೆದ ಅನುಭವದ ಮೇಲಿಂದ ಆಕಾಶವೇ ಯುದ್ಧದ ನಿರ್ಣಾಯಕ ರಂಗವೆಂದು ಎಲ್ಲ ಯುದ್ಧ ವಿಚಾರದವರೂ ಒಮ್ಮತಕ್ಕೆ ಬಂದಿರುವರು. ಆದುದರಿಂದ ವಿಮಾನ ಪಡೆಯನ್ನು ಅತ್ಯಂತ ಯೋಗ್ಯ ರೀತಿಯಲ್ಲಿಡುವದು ರಾಷ್ಟ್ರೀಯ ಸರಕಾರದ ಕರ್ತವ್ಯವೆನಿಸಿದೆ. ಹಿಂದೀ ವಿಮಾನ ಪಡೆಯು ಇಂದು ಇಪ್ಪತ್ತು ವರ್ಷಗಳ ಅನುಭವದ ಬಲವನ್ನು ಪಡೆದಿರುತ್ತದೆ. ಪ್ರಧಾನ ಮಂತ್ರಿಗಳು ಹೇಳುವಂತೆ ಈ ಅವಧಿಯಲ್ಲಿ ನಮ್ಮ ವಿಮಾನ ಪಡೆಯು ತನ್ನ ಸ್ಥಾನವನ್ನು ಭದ್ರಗೊಳಿಸಿರುವದು. ಅದು ಅತ್ಯಂತ ಕಾರ್ಯಕ್ಷಮ ರೀತಿಯಲ್ಲಿ ವರ್ತಿಸುತ್ತಿದೆಯಲ್ಲದೆ ಸಮರ ಕಾರ್ಯದಲ್ಲಿಯಷ್ಟೇ ಉಪಯುಕ್ತವಾಗಿ ಶಾಂತಿ ಕಾಲದಲ್ಲೂ ಸಾರ್ವಜನಿಕ ಸೇವೆಗೆ ಮುಂದೆ ಬಂದಿದೆ. ನಮ್ಮ ವಿಮಾನ ಪಡೆಯಲ್ಲಿ ಈಗ ಸಾಮಾನ್ಯವಾಗಿ ನಾದದ ವೇಗವುಳ್ಳ ಜೆಟ್ ವಿಮಾನಗಳೂ ರಾಡರ ಮುಂತಾದ ಉಪಕರಣಗಳೂ ಉಪಯೋಗಿಸಲ್ಪಡುತ್ತಿವೆ. ಜಟಿಲವಾದ ತಾಂತ್ರಿಕ ತರಬೇತಿಯನ್ನು ವೈಮಾನಿಕರಿಗೆ ಕೊಡಲಾಗುತ್ತಿದೆ.

ಆರಂಭದ ಅನುಭವ

ಭಾರತಕ್ಕೆ ಒಂದು ವಿಮಾನ ಪಡೆಯು ಬೇಕೆಂದು ಸ್ಕೀನ ಸಮಿತಿಯು ವರದಿ ಮಾಡಿ ಕೆಲವು ವರ್ಷಗಳು ಕಳೆದ ಮೇಲೆಯೇ ಈ ಸೂಚನೆಯು ಕಾಯಿದೆ ಬದ್ಧವಾಗಿ ರೂಪುಗೊಂಡಿತು. ಹಿಂದೀ ವಿಮಾನ ಪಡೆಯು ಸ್ಥಾಪನೆಗೊಂಡಾಗ ಅದರಲ್ಲಿ ಕೇವಲ ಆರು ಅಧಿಕಾರಿಗಳೂ ೧೯ ಹವಾಯಿ ಸಿಪಾಯಿಗಳೂ ಇದ್ದರು. ನಾಲ್ಕು ವೆಸ್ಟಲ್ಯಾಂಡ್ ವ್ಯಾಪಿಟೀಜ ಮಾದರಿಯ ವಿಮಾನಗಳಿದ್ದವು. ಎರಡು ವರ್ಷಗಳ ಅವಧಿಯಲ್ಲಿ ಇನ್ನೂ ಎರಡು ದಳಗಳನ್ನು ಸೇರಿಸಿ ವಿಮಾನ ಪಡೆಯನ್ನು ವಿಸ್ತರಿಸಿದರು.

ವಿಮಾನ ಪಡೆಯು ಅಸ್ತಿತ್ವಕ್ಕೆ ಬಂದ ಸ್ವಲ್ಪಾವಧಿಯಲ್ಲಿಯೇ ವಾಯವ್ಯ ಸರಹದ್ದು ಪ್ರಾಂತ್ಯದಲ್ಲಿ ಬಂಡಾಯ (೧೯೩೭) ಎದ್ದಿತು. ಭಾರತೀಯ ವಿಮಾನ ಪಡೆಯನ್ನು ಇಲ್ಲಿ ಯಶಸ್ವಿ ಕಾರ್ಯಾಚರಣೆಯ ಬಗ್ಗೆ ಉಪಯೋಗಿಸಿದರು. ಗುಡ್ಡ ಗಿರಿ, ಕಂದರಗಳ ಪ್ರದೇಶದಲ್ಲಿ ಅತಿ ಕೆಳಗಿನಿಂದ ಹಾರಾಡುತ್ತ ಭೂ ಸೈನ್ಯದ ಕಣ್ಣಾಗಿ ಕೆಲಸ ಮಾಡುವ ಅನುಭವವು ನಮ್ಮ ವೈಮಾನಿಕರಿಗೆ ಆಗ ಉಂಟಾಯಿತು. ಆ ಬಳಿಕ ಎರಡು ವರ್ಷಗಳಲ್ಲಿ ಮರಳಿ ಅಲ್ಲಿಯೇ ಕಾರ್ಯಾಚರಣೆ ನಡೆಸುವ ಪ್ರಸಂಗ ಬಂದಾಗ ಅತ್ಯಂತ ದಕ್ಷತೆಯಿಂದಲೂ ಕಾರ್ಯಕ್ಷಮತೆಯಿಂದಲೂ ವಿಮಾನ ಪಡೆ ಕೆಲಸ ಮಾಡಿತು.

ದ್ವಿತೀಯ ಮಹಾಯುದ್ಧ

ಎರಡನೇ ಮಹಾಯುದ್ಧವು ಭಾರತೀಯ ವಿಮಾನ ಪಡೆಯ ವಿಸ್ತರಣಕ್ಕೆ ಅನುಮಾಡಿಕೊಟ್ಟಿತು. ಈ ದೆಸೆಯಲ್ಲಿ ಪ್ರಥಮ ಹೆಜ್ಜೆಯೆಂದು ರೀಸಾಲಪುರದಲ್ಲಿ ಮೊದಲನೆಯ ತರಬೇತಿ ಕೇಂದ್ರವನ್ನು ತೆರೆದರು. ಕರಾವಳಿಯ ಸುತ್ತ ಅನೇಕ ಕಡೆಗಳಲ್ಲಿ ಸಣ್ಣ ಠಾಣ್ಯಗಳನ್ನು ಸ್ಥಾಪಿಸಿದರು. ಪರ್ಲ ಬಂದರದ ಪತನದ ಪರಿಣಾಮವಾಗಿ ಭಾರತವು ಆಗ್ನೇಯ ಏಶಿಯಾದ ಯುದ್ಧದಲ್ಲಿ ಧುಮುಕಿತು. ೧೯೪೩ ರ ಸುಮಾರಿಗೆ ಹಿಂದೀ ವಿಮಾನ ದಳವನ್ನು ಏಳು ಹರಿಕೇನ ಮತ್ತು ಎರಡು ವೆಂಜೆನ್ಸ್ ವಿಮಾನಗಳಿಂದ ಕೂಡಿದ ಬೃಹದ್ ದಳವಾಗಿ ಪುನರ್ಘಟಿಸಿದರು.

ಬರ್ಮಾದಲ್ಲಿ ಜಪಾನು ಯುದ್ಧ ನಡೆಸುತ್ತಿದ್ದಾಗ ಹಿಂದೀ ವಿಮಾನ ಪಡೆಯು ಮಹತ್ವದ ಅನುಭವವನ್ನು ಗಳಿಸಿತು. ಆಯಕಟ್ಟಿನ ಸ್ಥಳಗಳ ಮೇಲೆ ಬಾಂಬೆಸೆಯುವದು ಮುಂತಾದ ವಿಶೇಷ ಅನುಭವಗಳಿಂದ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡಿತು. ಯುದ್ಧ ಮುಕ್ತಾಯಗೊಂಡಾಗ ವಿಮಾನ ಪಡೆಯ ಹತ್ತನೇ ದಳವು ಉದಯವಾಗುವದರಲ್ಲಿತ್ತು. ಯುದ್ಧಾನಂತರ ವಿಮಾನ ಪಡೆಯಲ್ಲಿ ಭಾರತೀಕರಣಕ್ಕೆ ಹೆಚ್ಚಿನ ಗಮನವನ್ನು ಕೊಟ್ಟರು.

ಪುನರ್ಘಟನೆ

೧೯೪೭ನೇ ಆಗೋಸ್ತ ತಿಂಗಳ ಸುಮಾರಿಗೆ ಅನೇಕ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಿದರು. ವಿಭಜನೆಯ ಪರಿಣಾಮವಾಗಿ ವಿಮಾನ ಪಡೆಯು ಒಡೆದು ಹೋಗುವ ಭೀತಿಯುಂಟಾದರೂ ಅಧಿಕಾರಿಗಳ ದಕ್ಷತೆಯಿಂದ ಕೆಟ್ಟದ್ದೇನೂ ಘಟಿಸಲಿಲ್ಲ. ಮುಂದಿನ ಮೂರು ವರ್ಷಗಳಲ್ಲಿ ವಿಮಾನ ಪಡೆಯನ್ನು ಆಧುನಿಕ ಯಂತ್ರೋಪಕರಣಗಳಿಂದ ಸುಸಜ್ಜಿತಗೊಳಿಸಿದರು. ೧೯೪೮ ರಲ್ಲಿ ಜೆಟ್ ವ್ಯಾಂಪಾಯರ್‌ಗಳು ಬಂದವು. ೧೯೪೯ರಲ್ಲಿ ಮಹತ್ವದ ಸಂಘಟನಾತ್ಮಕ ಪರಿವರ್ತನೆಗಳು ರೂಪುಗೊಂಡವು. ಅಧಿಕಾರಿಗಳ ಮತ್ತು ವೈಮಾನಿಕರ ತಾಂತ್ರಿಕ ತರಬೇತಿಯ ವಿಷಯದಲ್ಲಿ ಪೂರ್ಣ ಸ್ವಾವಲಂಬನೆ ಸಾಧ್ಯವೆನಿಸಿತು.

ಭಾರತದ ವಿಮಾನ ಪಡೆಯು ಕಾಶ್ಮೀರದ ಯುದ್ಧ ಭೂಮಿಯಲ್ಲಿ ಮಹತ್ವದ ಪಾತ್ರವನ್ನು ವಹಿಸಿ ಆಕ್ರಮಣವನ್ನು ಯಶಸ್ವಿಯಾಗಿ ತಡೆಗಟ್ಟಿದೆ. ಮಾತ್ರವಲ್ಲ ಆಸಾಮಿನ ನೆರೆಯ ಹಾವಳಿ ಹಾಗೂ ರಜಪುತಾನದಲ್ಲಿ ಮಿಡಿತೆಗಳ ದಾಳಿ ಮುಂತಾದ ಪ್ರಸಂಗಗಳಲ್ಲಿ ಸೇವೆ ಮಾಡಿ ಸಾರ್ವಜನಿಕರ ಪ್ರೀತಿಯನ್ನು ಸಂಪಾದಿಸಿದೆ. ಸಮರದಲ್ಲಿ ಮಾತ್ರವಲ್ಲ ಶಾಂತಿಯ ಕಾಲದಲ್ಲೂ ವಿಮಾನ ಪಡೆಯಿಂದ ರಾಷ್ಟ್ರಕ್ಕೆ ಉಪಕಾರವಿದೆಯೆಂಬುದನ್ನು ಸಿದ್ಧಮಾಡಿ ತೋರಿಸಿದೆ.

ಉಜ್ವಲ ಭವಿಷ್ಯ

ಭಾರತೀಯ ವಿಮಾನ ಪಡೆಯು ನಮ್ಮ ದೇಶದ ವೈಶಾಲ್ಯವನ್ನು ಗಮನಿಸಿದರೆ ಚಿಕ್ಕದಾಗಿ ಕಾಣಿಸುತ್ತದೆ. ಇದನ್ನು ಇನ್ನೂ ವಿಸ್ತಾರಗೊಳಿಸುವದು ಅವಶ್ಯವೆನಿಸಿದ್ದರೂ ನಮ್ಮ ಆರ್ಥಿಕ ಹಾಗೂ ಔದ್ಯಮಿಕ ಸ್ಥಿತಿಗತಿಯು ಅಭಿವೃದ್ಧಿ ಹೊಂದದೆ ವಿಮಾನಪಡೆಯನ್ನು ವಿಸ್ತರಿಸಲು ಬಾರದು. ಆದರೆ ದಿನದಿನಕ್ಕೆ ರಾಷ್ಟ್ರದ ಸಂರಕ್ಷಣೆಯ ಜವಾಬ್ದಾರಿಯು ನಮ್ಮ ಸಣ್ಣ ವಿಮಾನ ಪಡೆಯ ಮೇಲೆಯೇ ಹೆಚ್ಚಾಗಿ ಬೀಳುತ್ತದೆ ಎಂಬ ಸಂಗತಿ ನಿರ್ವಿವಾದ.

ನಮ್ಮದು ಚಿಕ್ಕ ವಿಮಾನ ಪಡೆಯಾಗಿದ್ದರೂ ಅದು ಸುಸಂಘಟಿತ ರೂಪದಲ್ಲಿದೆ. ಯೋಗ್ಯ ತರಬೇತಿ ಹಾಗೂ ಸಲಕರಣೆಗಳ ಸೌಲಭ್ಯವನ್ನು ಅದು ಪಡೆದಿದೆ. ಏಶಿಯಾದಲ್ಲಿಯೇ ಅತ್ಯುತ್ತಮವೆನಿಸಿದ ತರಬೇತಿ ಕೇಂದ್ರಗಳು ಭಾರತದಲ್ಲಿವೆ. ಭಾರತೀಯ ವಿಮಾನ ಪಡೆಯು ಹೆಚ್ಚು ಸೇವೆಗಳನ್ನು ಸಲ್ಲಿಸುತ್ತ ಉಜ್ವಲ ಭವಿಷ್ಯವನ್ನು ಪಡೆಯಲೆಂದು ಹಾರೈಸುವುದಕ್ಕೆ ನಮಗೆಲ್ಲರಿಗೂ ಸಂತೋಷ.

"ನವಯುಗ"

———

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-10 **LATTU BROTHERS,**

OPP.— Town Hall, MYSORE.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-6-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ನಾರ್ದನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾನ್ಜಿ.

ಕಮ್ಯೂನಿಸ್ಟರ ಶಾಂತಿ ಧೋರಣೆಯ ಹಿನ್ನೆಲೆ.

ಅಂತಾರಾಷ್ಟ್ರೀಯ ರಂಗದಲ್ಲಿ ಸೋವಿಯೆಟ್ ರಷ್ಯಾದ ಈಚೆಗಿನ ನೀತಿ ಪರಿವರ್ತನೆಯ ಕ್ರಮಗಳನ್ನು ನೋಡಿ ಆಶ್ಚರ್ಯ ವ್ಯಕ್ತಗೊಳಿಸಲ್ಪಟ್ಟಿದೆ. ರಶಿಯಾದ ಪ್ರತಿಯೊಂದು ಕೃತಿಯನ್ನೂ ಭೂತ ಕನ್ನಡಿಯ ಮೂಲಕ ನೋಡಿ ಅದರ ಬಾಧಕ ಭಾಗಗಳನ್ನು ಡಂಗುರ ಹೊಡೆಯುವುದು ಪಾಶ್ಚಾತ್ಯ ರಾಷ್ಟ್ರಗಳಿಗೆ ಅಂಟಿಕೊಂಡ ಬಹು ಕಾಲದ ರೋಗವಾಗಿದೆ. ರಶಿಯಾದ ನಿಜವಾದ ನಿಲುವು ಏನೆಂಬುದನ್ನು ತಿಳಿದುಕೊಳ್ಳಲಾರದ ಪಶ್ಚಿಮದ ರಾಷ್ಟ್ರಗಳು ಸದಾ ಪೇಚಾಡುತ್ತಿವೆ. ಕಮ್ಯೂನಿಸ್ಟರು ಶಾಂತಿ ಬೇಕೆಂದರೆ, ಈ ಶಾಂತಿಯ ವಿವರಣೆಯ ಬಗ್ಗೆ ಪಾಶ್ಚಾತ್ಯರು ಸಂದೇಹಪಡುತ್ತಾರೆ. ಸೋವಿಯೆಟ್ ರಶಿಯಾದ ಒಂದು ಸಣ್ಣ ಘಟನೆ ಕೂಡ ಪಾಶ್ಚಾತ್ಯರ ತಲೆಯನ್ನು ಬಿಸಿ ಮಾಡಬಲ್ಲುದು. ಏನೇನೂ ಮಹತ್ವವಿಲ್ಲದ ಸಂಗತಿಗಳಿಗೆ ಅತ್ಯಂತ ಮಹತ್ವವನ್ನೂ, ತುಂಬಾ ಮಹತ್ವದ ವಿಷಯಗಳ ಸಂಬಂಧದಲ್ಲಿ ಸಂದೇಹ ಜನ್ಯ ಉದಾಸೀನತೆಯನ್ನೂ ತೋರಿಸುವ ವಿರೋಧಾಭಾಸ ಪೂರ್ಣ ನಡವಳಿಕೆ ಪಶ್ಚಿಮದ ರಾಷ್ಟ್ರಗಳಲ್ಲಿ ಕಂಡು ಬರುವುದು ಅಪರೂಪವಲ್ಲ. ಇದೀಗ ಸ್ಟಾಲಿನ್ನರ ನಿಧನಾನಂತರ ಕಮ್ಯೂನಿಸ್ಟ ರಾಷ್ಟ್ರಗಳಾದ ರಶಿಯಾ ಮತ್ತು ಚೀನಾದ ನೀತಿಯಲ್ಲಿ ಎಂದೂ ಇಲ್ಲದ ಸೌಮನಸ್ಯ ಮತ್ತು ಪರಿವರ್ತನೆಗಳನ್ನು ಕಂಡು ದಿಗ್ಭ್ರಮೆಯೇ ಹಿಡಿದಿದೆ.

ಎಲ್ಲರಿಗೂ ಆಶ್ಚರ್ಯ.

ಮೆಲೆಂಕೋವರ ಸರಕಾರವು ಅಧಿಕಾರ ಸೂತ್ರವನ್ನು ವಹಿಸಿ ಇನ್ನೂ ಒಂದು ತಿಂಗಳು ಸಂದಿಲ್ಲ. ಇಷ್ಟರೊಳಗೆ ಸೋವಿಯೆಟ್ ರಷ್ಯಾ ಹಾಗೂ ಕಮ್ಯೂನಿಸ್ಟ ಚೀನಗಳು ಕೈಕೊಂಡ ಕ್ರಮಗಳನ್ನು ಕೈಗೊಂಡಿವೆ ಎಂದರೆ ರಾಜಕಾರಣಿಗಳಿಗೆ ಇದರ ಹೊಲಬನ್ನು ತಿಳಿದು ಕೊಳ್ಳುವುದು ಕಷ್ಟಸಾಧ್ಯವೆನಿಸಿದೆ. ರಷ್ಯಾವು ಶಾಂತಿಯ ಪಾಠವನ್ನು ಎಂದಿನಂತೆ ಬಾಯಿ ಮಾತಿನಿಂದ ಪ್ರಚುರಪಡಿಸುತ್ತಿದೆ. ಪಾಶ್ಚಾತ್ಯ ರಾಷ್ಟ್ರಗಳ ಕೂಡ ಮೈತ್ರಿಯನ್ನು ಪ್ರಸ್ಥಾಪಿಸುವ ನಿಜವಾದ ಒಲವಿಕೆಯಿಂದಲೇ ಕೆಲಸ ಮಾಡುತ್ತಿದೆ ಎಂಬೋಪಾದಿಯಲ್ಲಿ ಘಟನೆಗಳು ಒಂದರ ಹಿಂದೊಂದು ನಡೆದಿವೆ. ಈ ಮೊದಲೇ ತಿಳಿಸಿರುವಂತೆ ಬ್ರಿಟಿಷ್ ಬಾಂಬರ ವಿಮಾನಗಳನ್ನು ರಶಿಯನ್ನರು ಹೊಡೆದು ಕೆಡವಿದರೂ, ಸೋವಿಯೆಟ್ ಇತಿಹಾಸದಲ್ಲಿಯೇ ಪ್ರಥಮ ಬಾರಿ ಎಂಬಂತೆ ತಪ್ಪುಒಪ್ಪಿಕೊಂಡರು. ಮಾತ್ರವಲ್ಲ, ಇಂಥಾ ದುರ್ಘಟನೆಗಳು ಇನ್ನು ಮುಂದೆ ನಡೆಯದಂತೆ ನೋಡಿಕೊಳ್ಳಲು ಪ್ರತಿನಿಧಿಗಳನ್ನು ಒಂದು ಪರಿಷತ್ತಿಗೆ ಕರೆದರು. ಈಗ ಈ ಪರಿಷತ್ತಿಗೆ ಫ್ರಾನ್ಸ್ ಮತ್ತು ಅಮೇರಿಕೆಗಳನ್ನೂ ಆಮಂತ್ರಿಸಿ ರಶಿಯನ್ನರು ತಮ್ಮ ಸೌಜನ್ಯವನ್ನು ದೃಢೀಕರಿಸಿದ್ದಾರೆ. ಈಚೆ ಕೆಲ ವರ್ಷಗಳಿಂದ ಪಾಶ್ಚಾತ್ಯರಿಗೆ ಮುಚ್ಚಿದ್ದ ಬರ್ಲಿನ ಕಾಲುವೆಯನ್ನು ಈಗ ಮರಳಿ ಮುಕ್ತಗೊಳಿಸಿದ್ದಾರೆ. ಉತ್ತರ ಕೊರಿಯಾದಲ್ಲಿ ದಸ್ತಗಿರಿಯಾದ ಬ್ರಿಟಿಷ್ ಹಾಗೂ ಫ್ರೆಂಚ ನಾಗರಿಕ ವ್ಯಕ್ತಿಗಳನ್ನು ಬಿಡುಗಡೆ ಮಾಡಲು ಪ್ರಯತ್ನಪಡುವದಾಗಿ ರಶಿಯಾ ಆಶ್ವಾಸನ ನೀಡಿದೆ. ರಶಿಯಾವನ್ನು ಸಂದರ್ಶಿಸಿ ಅಲ್ಲಿಯ ಸ್ಥಿತಿಗತಿಯನ್ನು ಕಂಡುಕೊಳ್ಳಲು ಹತ್ತು ಮಂದಿ ಅಮೇರಿಕನ್ ಪತ್ರಿಕೋದ್ಯಮಿಗಳಿಗೆ ಅವಕಾಶ ಮಾಡಿ ಕೊಟ್ಟಿದೆ. ಇಂಥಾ ಕ್ರಮಗಳು ಒಂದರ ಹಿಂದೊಂದೆಂಬಂತೆ ಕಳೆದ ಮೂರು ವಾರಗಳಲ್ಲಿ ನಡೆದವಾದ್ದರಿಂದ ರಶಿಯಾ ಏಕಾಏಕಿ ಈ ರೀತಿ ತನ್ನ ಹಿಂದಿನ ನಿಲುವನ್ನು ಬಿಟ್ಟುಕೊಟ್ಟು ಹೊಸ ನೀತಿಯ ಆಶ್ರಯ ಪಡೆದಿದೆ ಎಂದೆಲ್ಲರೂ ಕೇಳುವಂತಾಗಿದೆ.

ರಶಿಯಾ ಸರಕಾರ.

ಜಾಗತಿಕ ಸಮಸ್ಯೆಗಳ ಪರಿಹಾರದಲ್ಲಿ ರಶಿಯಾ ತೋರುತ್ತಿರುವ ಆಸ್ಥೆಗೆ ನಿದರ್ಶನವಾಗಿ ಇನ್ನೂ ಕೆಲವು ಸಂಗತಿಗಳು ಜರಗಿವೆ. ಕೆಲಸಮಯದಿಂದ ಸಂಯುಕ್ತ ರಾಷ್ಟ್ರ ಸಂಘದ ಮಹಾ ಕಾರ್ಯದರ್ಶಿಯನ್ನು ಆರಿಸುವ ಸಂಬಂಧದಲ್ಲಿ ರಶಿಯಾ ಹಾಗೂ ಪಾಶ್ಚಾತ್ಯ ಬಣ್ಣಗಳ ನಡುವೆ ಬಿಕ್ಕಟ್ಟು ಉಂಟಾಗಿತ್ತು. ೧೪ ಮಂದಿಯ ಸ್ಪರ್ಧೆ ಪಟ್ಟಿಯೊಂದು ಸಿದ್ಧಗೊಂಡು ಅವರಲ್ಲಿ ಯಾವರೂ ಒಬ್ಬರ ಹೆಗಲಿಗೆ ಈ ಹೊಣೆಗಾರ ಸ್ಥಾನದ ಭಾರ ಬೀಳುವದೋ ನೋಡೋಣವೆಂದು ಪ್ರಯತ್ನ ನಡೆಯಿತು. ಕೆನಡಾದ ಪಿಯರ್ಸನ್ನರ ಆಯ್ಕೆಯನ್ನು ರಶಿಯಾ ತಡೆ ಹಿಡಿದರೆ, ಭಾರತದ ವಿಜಯಲಕ್ಷ್ಮಿ ಹಾಗೂ ಜೆಕ್ ರಾಜಕಾರಣಿಯೊಬ್ಬನ ನೇಮಕವನ್ನು ಇತರರು ನಿರಾಕರಿಸಿದರು. ರಶಿಯಾದ ಮನಸ್ಸೊಲಿಸುವುದು ಸಾಧ್ಯವಿಲ್ಲವೆಂದೇ ಎಲ್ಲರ ತಿಳುವಳಿಕೆಯಾಗಿತ್ತು. ರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಟ್ರಿಗ್ವೀಲೀಯವರನ್ನು ರಾಜಿನಾಮೆ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸುವುದೆಂದಿತ್ತು. ಆದರೆ ಅಷ್ಟರಲ್ಲಿಯೇ ರಶಿಯಾ ರಾಷ್ಟ್ರ ಸಂಘದ ಕಲುಷಿತ ವಾತಾವರಣವನ್ನು ತಿಳಿಗೊಳಿಸುವ ರೀತಿಯಲ್ಲಿ ವರ್ತಿಸಿತು. ಸ್ವೀಡನ್ನಿನ ಡಾ|| ಡಾಗ್ ಹ್ಯಾಮರ್ ಶೆಲ್ಡರನ್ನು ಸರ್ವಾನುಮತದಿಂದ ಭದ್ರತಾ ಮಂಡಳ ಆರಿಸಿದೆ. ಹ್ಯಾಮರ್‌ಶೆಲ್ಡರು ಇಷ್ಟರಲ್ಲಿಯೇ ತಮ್ಮ ಹೊಸ ಅಧಿಕಾರವನ್ನು ಸ್ವೀಕರಿಸಿರುವರು.

ನಿಃಶಸ್ತ್ರೀಕರಣದ ಸಂಬಂಧದಲ್ಲಿ

ರಶಿಯಾ ಪಶ್ಚಿಮದ ರಾಷ್ಟ್ರಗಳಿಗೆ ಅನುಕೂಲವಾದ ನೀತಿಯನ್ನು ನಿಃಶಸ್ತ್ರೀಕರಣದ ಸಂಬಂಧದಲ್ಲೂ ಅನುಸರಿಸಿದೆ. ಅಣುಬಾಂಬಿನ ಬಲವಿಲ್ಲದ ರಶಿಯಾ ಈ ವಿಘಾತುಕ ಅಸ್ತ್ರವನ್ನು ಪ್ರತಿಬಂಧಿಸಬೇಕೆಂದು ಹೇಳುತ್ತಿದ್ದರೆ ಸೈನ್ಯಬಲ ಸಾಕಷ್ಟಿಲ್ಲದ ಅಮೇರಿಕೆ ಮುಂತಾದ ರಾಷ್ಟ್ರಗಳು ಸೈನ್ಯಬಲವನ್ನು ಕಡಿಮೆ ಮಾಡಬೇಕೆಂದೂ ಅಣುಶಕ್ತಿಯನ್ನು ಅಂತಾರಾಷ್ಟ್ರೀಯ ನಿಯಂತ್ರಣಕ್ಕೆ ಒಳಪಡಿಸಬೇಕೆಂದೂ ಹೇಳುತ್ತಿದ್ದವು. ಈ ರೀತಿಯ ಮತಭೇದವು ಬಹುಕಾಲದಿಂದ ಇದ್ದ ಕಾರಣ ನಿಃಶಸ್ತ್ರೀಕರಣದ ಮಾತುಕತೆಗಳು ಪ್ರಗತಿಯನ್ನು ಹೊಂದಲಿಲ್ಲ. ಆದರೆ ಈಗಿನ ಸುದ್ದಿಯಂತೆ, ರಶಿಯಾ ಪಶ್ಚಿಮದ ರಾಷ್ಟ್ರಗಳು ಸೂಚಿಸಿದಂತೆಯೇ ಈ ಸಂಗತಿಯಲ್ಲಿ ಮಾತುಕತೆ ಮುಂದುವರಿಸಲು ಒಪ್ಪಿದೆ. ಇತ್ತ ಕೊರಿಯಾದಲ್ಲಿ ಚೀನೀ ಪ್ರಧಾನಿ ಚೌಎನ್‌ಲಾಯರು ಯುದ್ಧನಿಲ್ಲಿಸುವ ಎಗ್ಗೆ ಮಾಡಿದ ಸಂಧಾನದ ತಳಹದಿಯನ್ನು ರಶಿಯಾ ಸಮರ್ಥಿಸಿ ಮಾತನಾಡಿದೆ. ಉತ್ತರ ಕೊರಿಯಾದ ಮತ್ತು ಚೀನೀ ಪ್ರತಿನಿಧಿಗಳಿಗೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯವನ್ನು ಕೊಟ್ಟರೆ ಈ ಸಂಧಾನ ಸುಲಭ ಸಾಧ್ಯವಾದೀತೆಂದು ರಶಿಯನ್ ವಿದೇಶ ಮಂತ್ರಿ ಮೊಲೊಟೊವರು ಧ್ವನಿಸಿರುವರು. ಪಾನ್ ಮುಂಜಾನುದಲ್ಲಿ ಮಾತುಕತೆಗಳನ್ನು ಮುನ್ನಡೆಸಲು ಇವು ಆತಂಕವಾಗಿಲ್ಲ. ಅಸ್ವಸ್ಥ ಹಾಗೂ ಗಾಯಾಳು ಕೈದಿಗಳ ವಿನಿಮಯ ಸಂಬಂಧದಲ್ಲಿ ಉಭಯ ಪಕ್ಷಗಳ ಸಂಪರ್ಕಾಧಿಕಾರಿಗಳು ಕಳೆದ ಸೋಮವಾರದಿಂದ ಮಾತುಕತೆ ನಡೆಸುತ್ತಿರುವರು. ಚೀನಾದ ಸೂಚನೆಯು ಹಿಂದೆ ಭಾರತವು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಮಂಡಿಸಿದ ಗೊತ್ತುವಳಿಯನ್ನೇ ಹೋಲುತಿದೆಯಾಗಿ ಭಾರತವೇ ಮುಂತಾದ ಶಾಂತಪ್ರಿಯ ರಾಷ್ಟ್ರಗಳು ಸಮಾಧಾನವನ್ನು ವ್ಯಕ್ತಗೊಳಿಸಿವೆ.

ಸೋವಿಯೆಟ್ ರಶಿಯಾದೊಳಗೆ

ಪೌರ್ವಾತ್ಯ ಮತ್ತು ಪಾಶ್ಚಾತ್ಯ ಬಣಗಳಲ್ಲಿ ತೀರಾ ಸ್ವಾಭಾವಿಕವೆಂದಿದ್ದುಕೊಂಡಿದ್ದ ತಿಕ್ಕಾಟವನ್ನು ಈ ರೀತಿ ಒಮ್ಮಿಂದೊಮ್ಮೆಗೆ ಸ್ಟಾಲಿನರ ನಿಧನಾನಂತರ ಕಡಿಮೆ ಮಾಡುವ ರಶಿಯಾದ ನೀತಿ ಪರಿವರ್ತನೆಯು ಮರ್ಮವೇನಿದ್ದೀತೆಂದು ಎಲ್ಲರೂ ಚಿಂತಿಸುತ್ತಿರುವರು. ಈ ರಾಜಕೀಯ ಗತ್ತುಗಾರಿಕೆಯ ಹಿಂದೆ ಏನೋ ಒಳಸಂಚು ಇರಬಹುದೆಂದು ಕುಶಲ ರಾಜಕಾರಣಿಗಳು ತರ್ಕಿಸುತ್ತಿರುವರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬ್ರಿಟನು ಫ್ರಾನ್ಸುಗಳು ರಶಿಯಾದ ಈಗಿನ ನೀತಿಯನ್ನು ಪ್ರಾಮಾಣಿಕವಾಗಿ ಮೆಚ್ಚಿಕೊಂಡಿದ್ದರೆ ಅಮೇರಿಕ ಇನ್ನೂ ಸಂಶಯಿತ ದೃಷ್ಟಿಯನ್ನು ಬಿಟ್ಟು ಕೊಟ್ಟಿಲ್ಲ. ಇವರ ಪರಿಣಾಮವಾಗಿ ಪಶ್ಚಿಮದ ರಾಷ್ಟ್ರಗಳಲ್ಲಿಯೇ ಒಡಕು ಉಂಟಾದೀತೊ ಎಂಬ ಅಂಜಿಕೆ ಮೂಡಿದೆ. ಮಾತ್ರವಲ್ಲ ಭರದಿಂದ ಯುದ್ಧಸನ್ನಾಹದ ಕ್ರಮಗಳನ್ನು ಕೈಕೊಳ್ಳುವ ಪಾಶ್ಚಾತ್ಯ ರಾಷ್ಟ್ರಗಳ ಯೋಜನೆಗೆ ರಶಿಯಾದ ನೀತಿ ವಿಘ್ನವನ್ನೊಡ್ಡಿದೆ. ಸ್ಟಾಲಿನರ ನಿಧನದ ಬೆನ್ನಿಗೇ ಇಂಥ ನೀತಿ ಪರಿವರ್ತನೆಯಾಗಬೇಕಾದರೆ "ಕಬ್ಬಿಣದ ಪರದೆಯ ಹಿಂದಿರುವ ಸೋವಿಯೆಟ್ ರಶಿಯಾದೊಳಗೆ ಏನೋ ವಿಪ್ಲವ ನಡೆಯುತ್ತಿದೆ." ಎಂದು ದೂರದರ್ಶಿಗಳ ಅಭಿಪ್ರಾಯ. ಆಂತರಿಕ ಭದ್ರತೆಯನ್ನು ಕಾಯ್ದುಕೊಳ್ಳುವ ಮುಖ್ಯ ಉದ್ದೇಶದಿಂದ ಹೊರಗಿನ ಶತ್ರುಗಳ ಮೂಗಿಗೆ ತುಪ್ಪ ಹಚ್ಚುವದು ಕಮ್ಯೂನಿಸ್ಟರ ಈಗಿನ ನೀತಿಯ ತಿರುಳೆಂದು ಅವರ ತರ್ಕ.

ದೂರದರ್ಶಿಗಳ ಅಭಿಮತ

ಬಹುಶಃ ಈ ತರ್ಕವೇ ನಿಜವಿದ್ದೀತು. ಏಕೆಂದರೆ ಮೊನ್ನೆ ತಾನೆ ಮೆಲೆನ್‌ಕೋವರ ಸರಕಾರವು ಆಂತರಿಕ ನೀತಿಯ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಮಾಡಬಲ್ಲ ಕ್ರಮವೊಂದನ್ನು ಕೈಗೊಂಡಿರುವದು. ೧೯೪೭ರಲ್ಲಿ ಝುಡನಾವರನ್ನು ತಪ್ಪು ಚಿಕಿತ್ಸೆಯಿಂದ ಕೊಲೆಮಾಡಿದರೆಂಬ ಆರೋಪದ ಮೇರೆಗೆ ಬಂಧಿಸಿದ್ದ ಮತ್ತು ವಿಚಾರಣೆಗೆ ಗುರಿಮಾಡಿದ್ದ ಯಹೂದಿ ಡಾಕ್ಟರರೆಲ್ಲರನ್ನೂ ಬಿಡುಗಡೆ ಮಾಡಲಾಗಿದೆ. ಸ್ಟಾಲಿನ್ನರ ಕಾಲದಲ್ಲಿ ಬಂಧಿಸಿ ವಿಚಾರಣೆ ನಡೆಸಿ ಪ್ರಾಣಾಂತಿಕ ದಂಡನೆಯನ್ನೇ ಕಾಯುತ್ತಿದ್ದ ಈ ಡಾಕ್ಟರರನ್ನು ಮೆಲೆನ್‌ಕೋವರು ಬಿಡುಗಡೆ ಮಾಡಿದ್ದೇಕೆ? ಮಾತ್ರವಲ್ಲ ಈ ಬಂಧನ ಸತ್ರವೇ ಅಕ್ರಮವಾಗಿ ನಡೆಯಿತೆಂಬ ಆರೋಪ ಹೊರಿಸಿ ಬಂಧನ ನಡೆಸಿದ ಸ್ಟಾಲಿನ್ನರ ಕೈವಾರಿಗಳನ್ನು ಕೈದು ಮಾಡಿದ್ದೇಕೆ? ಇದನ್ನೆಲ್ಲಾ ಸೂಕ್ಷ್ಮದೃಷ್ಟಿಯಿಂದ ವೀಕ್ಷಿಸಿದಲ್ಲಿ ಮೆಲೆನ್‌ಕೋವರ ವಿರುದ್ಧ ರಶಿಯಾದಲ್ಲಿ ಗುಲ್ಲೆದ್ದಿದೆ ಎನ್ನಬಹುದೆ?

'ನವಯುಗ'

ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ ೧೯೦೬] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ

ನೀವು ಬಲ್ಲಿರಾ?

ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ದಾಕ್ಲೆ. ಈಗ ತಾನೆ ಸಂದುಹೋದ ೧೯೫೨ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ರಾಷ್ಟ್ರದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕಾರ್ಪೊರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಎಲ್ಲರೂ ಹೆಚ್ಚು ಹೆಚ್ಚಾಗಿ ಪಡೆದು "ಕಾರ್ಪೊರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!

— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 9

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ, ಮತ್ತು ಸೋಮವಾರಪೇಟೆ.

THE CANARA BANKING CORPORATION LIMITED

ಜ್ಞಾನ ದೀಪ.

(೧)

ಹೊಳೆಗೆ ಆಣೆಕಟ್ಟು ಕಟ್ಟಬಹುದು, ಆದರೆ ತೋಡಿಗೆ ಅಡ್ಡ ಮರ! ದೊಡ್ಡವರನ್ನು ವಶಕ್ಕೆ ತರಲು ಸುಲಭ, ಸಣ್ಣವರನ್ನು ಒಲಿಸಿಕೊಳ್ಳುವುದೇ ಕಷ್ಟ. ಸಮುದ್ರಕ್ಕೆ ಮಣ್ಣು, ಕಾಡಿಗೆ ಕೈಸನ್ನೆ!

(೨)

ಮಿಂಚಿನ ಬೆಳಕಿನಿಂದ ದೀಪ ಹಚ್ಚಲು ಸಾಧ್ಯವಾಗಲಾರದು. ಅದರಂತೆ ನಿರುಗು ಮಾತಿನಿಂದ ಅನುಭವ ದೊರೆಯಲಾರದು.

(೩)

ಬುತ್ತಿಯನ್ನ ಮಣ್ಣನ್ನು ಹೂಳುವದು ಕಷ್ಟ. ಹಾಗೆಯೇ ಬಡಾಯಿ ತುಂಬಿದ ಮನುಷ್ಯನನ್ನು ಆಳುವದು ಕಷ್ಟ.

ಕೊಡಗು

ತಾರೀಕು ೧೭ ಏಪ್ರಿಲ್ ೧೯೫೩ನೇ ಶುಕ್ರವಾರ

ಪಂಚವಾರ್ಷಿಕ ಯೋಜನೆ.

ಯಾವುದೇ ರಾಷ್ಟ್ರವು ವಿಧಾಯಕವಾಗಿ ಮುಂದರಿಯುತ್ತಾ ಹೋಗಬೇಕಿದ್ದರೆ ಪರಿಷ್ಕೃತವಾದ ಯೋಜನೆಗಳಿಲ್ಲದೆ ಆಗಬಾರದು. ಇಷ್ಟು ಅವಧಿಯಲ್ಲಿ ರಾಷ್ಟ್ರದ ಸ್ಥಿತಿ ಹೀಗಾಗಬೇಕು; ಸಂಪತ್ತು ಇಷ್ಟು ಹೆಚ್ಚಾಗಬೇಕೆಂಬ ಗುರಿಯನ್ನಿಟ್ಟು ಆ ಅವಧಿಯಲ್ಲಿ ಗುರಿಯನ್ನು ಮುಟ್ಟಲು ಸರಕಾರಗಳು ಯತ್ನಿಸಬೇಕಾಗುತ್ತೆ. ರಷ್ಯಾದ ರಾಜ್ಯಕ್ರಾಂತಿಯ ನಂತರ ಅಸ್ತವ್ಯಸ್ತವಾಗಿದ್ದ ಅಲ್ಲಿಯ ಆಡಳಿತವನ್ನು ಸರಿಪಡಿಸಿ ಯೋಗ್ಯ ರೀತಿ ಪ್ರಗತಿಯನ್ನು ಸಾಧಿಸಲು ರಷ್ಯಾದಲ್ಲಿ ಪ್ರಥಮವಾಗಿ ಪಂಚವಾರ್ಷಿಕ ಯೋಜನೆಯನ್ನು ಕೈಕೊಳ್ಳಲಾಯಿತು. ನಂತರ ಅವರು ಅದೇ ರೀತಿಯಲ್ಲಿ ಹತ್ತು ವರ್ಷಗಳ ಯೋಜನೆಯನ್ನೂ ತಯಾರಿಸಿ ಯೋಜನೆಗನುಗುಣವಾಗಿ ದುಡಿದು ರಾಷ್ಟ್ರದ ಅರ್ಥಾತ್ ಜನತೆಯ ಸಂಪತ್ತು ಸೌಖ್ಯಗಳನ್ನು ಹೆಚ್ಚಿಸಿರುವರು.

ಸ್ವತಂತ್ರಗೊಂಡ ಹಿಂದೂದೇಶವಾದರೂ ಅದೇ ರೀತಿಯಲ್ಲಿ ತನ್ನ ಪ್ರಗತಿಯನ್ನು ಸಾಧಿಸಲಿಕ್ಕಾಗಿ ಪ್ರಥಮ ಪಂಚವಾರ್ಷಿಕ ಯೋಜನೆಯೊಂದನ್ನು ತಯಾರಿಸಿ ಅದು ಈಗಾಗಲೇ ಕಾರ್ಯಕ್ಷೇತ್ರಕ್ಕೆ ಬಂದಿದೆ. ಈ ಯೋಜನೆಯ ಪ್ರಕಾರ ೧೯೫೬ ರೊಳಗೆ ೨೦೬೯ ಕೋಟಿ ರೂಪಾಯಿಗಳನ್ನು ದೇಶದ ಹಿತ ಕಾರ್ಯಗಳಿಗಾಗಿ ಖರ್ಚು ಮಾಡಲು ನಿಶ್ಚಯಿಸಲಾಗಿದೆ. ಈ ಹಣವನ್ನು ದೊರಕಿಸುವದು ಬಹು ಪ್ರಯಾಸದ ಕೆಲಸವಾದರೂ ದೇಶದ ಪ್ರಗತಿ ಮತ್ತು ಉನ್ನತಿಯ ದೃಷ್ಟಿಯಿಂದ ಅವಶ್ಯವಾಗಿದೆ.

ಸರಕಾರದ ಯಾವುದೇ ಯೋಜನೆಗಳು ಜಯಪ್ರದವಾಗಬೇಕಾದರೆ ಜನತೆಯ ಬೆಂಬಲವಿಲ್ಲದೆ ಸಾಧ್ಯವಿಲ್ಲ. ಆದ್ದರಿಂದಲೇ ಹಿಂದೂದೇಶದ ಮುಂದಿರುವ ಪಂಚವಾರ್ಷಿಕ ಯೋಜನೆಗೆ ಸರ್ವರೂ ಹಾರ್ದಿಕವಾದ ಬೆಂಬಲವನ್ನು ಕೊಡಬೇಕೆಂದು ಭಾರತದ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲರು ಆಗಾಗ್ಗೆ ಅಪೀಲು ಮಾಡುತ್ತಿರುವರು.

ಕೇಂದ್ರದ ಈ ಪಂಚವಾರ್ಷಿಕ ಯೋಜನೆಯಂತೆ ವಿವಿಧ ಪ್ರಾಂತಗಳು ತಮ್ಮ ತಮ್ಮ ಪಂಚವಾರ್ಷಿಕ ಯೋಜನೆಗಳನ್ನು ಪ್ರತ್ಯೇಕ ತಯಾರಿಸಿರುವರು. ಈ ರೀತಿಯ ಕೊಡಗಿನ ಪಂಚವಾರ್ಷಿಕ ಯೋಜನೆಯ ಪ್ರಕಾರ ೧೯೫೬ ರೊಳಗೆ ಒಂದು ಕೋಟಿ ರೂಪಾಯಿಗಳನ್ನು ದೇಶದ ಹಿತ ಕೆಲಸಗಳಿಗಾಗಿ ವೆಚ್ಚ ಮಾಡಲಾಗುವದೆಂದು ಅಂದಾಜು ಮಾಡಲಾಗಿದೆ. ಈಗಾಗಲೇ ಪಂಚವಾರ್ಷಿಕ ಯೋಜನೆಯ ಎರಡು ವರ್ಷಗಳು ಮುಗಿದು ಇದು ಮೂರನೇ ವರ್ಷವಾಗಿದೆ. ಈ ಮೂರನೆ ವರ್ಷದಲ್ಲಿ ಅಂದರೆ ೧೯೫೩-೫೪ ರಲ್ಲಿ ಕೊಡಗಿನಲ್ಲಿ ಸುಮಾರು ೫೭ ಲಕ್ಷ ರೂಪಾಯಿಗಳನ್ನು ವೆಚ್ಚಮಾಡುವಂತೆ, ಈ ವರ್ಷದ ಬಜೆಟ್ಟಿನಲ್ಲಿ ನಿಶ್ಚಯಿಸಿದೆ. ಈ ಹಣವು ಯಾವ ಕಾರಣಗಳಿಗಾಗಿ ವೆಚ್ಚವಾಗುವದೆಂಬುವನ್ನು ಕಳೆದ ವಾರದ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.

ಪ್ರಾಮುಖ್ಯವಾಗಿ ವ್ಯವಸಾಯಗಾರರ ನಾಡಾದ ಕೊಡಗಿನಲ್ಲಿ ವ್ಯವಸಾಯ, ನೀರಾವರಿ ಯೋಜನೆ, ಪಶುವೈದ್ಯ ಇಲಾಖೆ, ಚಿಕ್ಕ ಕೈಗಾರಿಕೆ, ಆರೋಗ್ಯ ಮತ್ತು ವಿದ್ಯೆ, ರಸ್ತೆ ವಹಿವಾಟು ಸೌಕರ್ಯ ಮುಂತಾದುವುಗಳಿಗೆ ಹೆಚ್ಚಿನ ಗಮನ ಕೊಡದಿದ್ದರೆ ಪ್ರಾಂತದ ಅಭಿವೃದ್ಧಿ ಯೋಗ್ಯ ಮಾರ್ಗದಿಂದ ಆದಂತಾಗದು. ಈ ದೃಷ್ಟಿಯಿಂದ ಈ ಎಲ್ಲ ಕೆಲಸಗಳಿಗೆ ಸುಮಾರು ೨೪ ಲಕ್ಷದಷ್ಟು ಹಣವಿಟ್ಟಿರುವದು ಉಚಿತವಾಗಿದೆ. ಉಳಿದ ಹೆಚ್ಚಿನ ಭಾಗವು ಕೊಡಗಿಗೆ ವಿದ್ಯುಚ್ಛಕ್ತಿಗಾಗಿ ಇಡಲಾಗಿದೆ. ಕೊಡಗಿಗಾಗಿ ತಯಾರಿಸಿರುವ ಒಂದು ಕೋಟಿ ರೂಪಾಯಿಯ ಈ ಯೋಜನೆಗಾಗಿ ಕೇಂದ್ರದಿಂದ ಎಷ್ಟು ಹಣ ದೊರೆಯುವದೆಂಬುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಹೇಗೂ ಇದರ ಶೇಕಡ ೫೦ರಷ್ಟು ಕೇಂದ್ರದಿಂದ ದೊರೆಯುವದೆಂದು ನಂಬಲಾಗಿದೆ.

ಕೊಡಗಿನ ಈ ಯೋಜನೆಗೆ ಜನತೆಯ ಸಹಕಾರವನ್ನು ಸರಕಾರವು ಪಡೆಯಬೇಕು. ಜನತೆಯಲ್ಲಿ ಈ ಯೋಜನೆಯು ತನ್ನ ಹಿತಕ್ಕಾಗಿರುವ ತನ್ನ ಯೋಜನೆ ಎಂಬ ಭಾವನೆ ಬಾರದಿದ್ದರೆ ಇದು ಜಯಪ್ರದವಾಗಲಾರದು. ಆದ್ದರಿಂದ ರಾಜಕೀಯ, ಮೊದಲಾದ ಬಣ್ಣ ಗುರಿಗಳನ್ನು ಲೆಕ್ಕಿಸದೆ ಸರ್ವರ ಸರ್ವತೋಮುಖ ಬೆಂಬಲವನ್ನು ಈ ಯೋಜನೆಗೆ ಪಡೆದು ಕೊಡಗಿನ ಪಂಚವಾರ್ಷಿಕ ಯೋಜನೆಯು ಕಾರ್ಯರೂಪಕ್ಕೆ ಬರುವಂತೆ ಮಾಡುವ ಜವಾಬ್ದಾರಿ ಸರಕಾರಕ್ಕೆ ಎಷ್ಟಿದೆಯೋ ಅಷ್ಟೇ ಜನತೆಗೂ ಇದೆ. ಸರಕಾರವು ಜನತೆಯ ಸಹಕಾರವನ್ನು ಯೋಗ್ಯ ಮಾರ್ಗದಿಂದ ಪಡೆಯುವದೆಂದೂ ಜನತೆಯೂ ಹೃತ್ಪೂರ್ವಕವಾಗಿ ಸಹಕರಿಸುವದೆಂದೂ ನಮ್ಮ ನಂಬಿಕೆಯಾಗಿದೆ. ಹೇಗೂ ಈ ಪಂಚವಾರ್ಷಿಕ ಯೋಜನೆಯ ಅವಧಿಯ ಅಂತ್ಯದಲ್ಲಿ ಕೊಡಗು ಸಾಂಪತ್ತಿಕವಾಗಿ ಮುಂದರಿದು ಕೊಡಗಿನ ರೈತನ ಜೀವನ ಮಟ್ಟವು ಸಾಕಷ್ಟು ಮೇಲೇರುವಂತಾಗಲೆಂಬುದು ನಮ್ಮ ಬಯಕೆಯಾಗಿದೆ.

ದಿವಂಗತ ಮುದ್ದಪ್ಪನವರು

ಕೊಡಗಿನ ನ್ಯಾಯಾಧೀಶರಾಗಿದ್ದ ಶ್ರೀ ಎನ್. ಮುದ್ದಪ್ಪನವರು ಈ ತಾ. ೯ ರ ರಾತ್ರಿ ಹೃದ್ರೋಗದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಸಂಕ್ಷಿಪ್ತ ಜೀವನ ಕಥೆಯನ್ನು ಮತ್ತೊಂದೆಡೆ ಕೊಡಲಾಗಿದೆ. ಇವರು ಸರಕಾರಿ ಉದ್ಯೋಗಕ್ಕೆ ಸೇರುವ ಮೊದಲು ಲಾಯರರಾಗಿದ್ದಾಗ ಸಾರ್ವಜನಿಕ ಕೆಲಸ ಕಾರ್ಯಗಳಲ್ಲಿ ಆಸಕ್ತಿಯುಳ್ಳವರಾಗಿ ಭಾಗವಹಿಸುತ್ತಿದ್ದರು. ಅದು ಸಾರ್ವಜನಿಕ ಕಾರ್ಯಕ್ಷೇತ್ರವೇ ಇರಲಿ ಯಾ ನಂತರದ ಸರಕಾರಿ ಕೆಲಸವೇ ಇರಲಿ ಶ್ರೀಯುತರು ಕಂಡದ್ದನ್ನು ಕಂಡಂತೆ ಹೇಳುವ ಖಂಡಿತವಾದಿಗಳಾಗಿದ್ದರು. ಕೊಡಗಿನ ಗೌಡ ಕೋಮಿನ ಪ್ರಥಮ ಪದವೀಧರರಾದ ಇವರು ತಮ್ಮ ಕೋಮಿನವರ ಮುಖ್ಯವಾಗಿ ಅವರ ವಿದ್ಯಾಭ್ಯಾಸಕ್ಕೂ ಅದರೊಂದಿಗೆ ಸಾಮಾಜಿಕ ಮತ್ತು ರಾಜಕೀಯ ಅಭಿವೃದ್ಧಿಗೂ ಸೇವೆ ಸಲ್ಲಿಸಿದರು. ಚಿಕ್ಕದಾದ ಕೊಡಗು ಅಭಿವೃದ್ಧಿ ಹೊಂದಬೇಕಾದರೆ ಅದು ದೊಡ್ಡ ಪ್ರಾಂತದೊಡನೆ ಸಂಯೋಜನೆಯಾಗಿಯೇ ತೀರಬೇಕೆಂಬುದು ಇವರ ನಂಬಿಕೆಯಾಗಿತ್ತು. ಇವರ ವಿಯೋಗದಿಂದ ದುಃಖಕ್ಕೊಳಗಾಗಿರುವ ಇವರ ಮಕ್ಕಳಿಗೂ ಸಹೋದರರಿಗೂ ದುಃಖಸಹನಾ ಶಕ್ತಿಯನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಭಗವಂತನು ದಯಪಾಲಿಸಲಿ.

ವರ್ತಮಾನ.

ತಾ. ೧೬-೪-೫೩ರಲ್ಲಿ ವಯಸ್ಕರ ಶಿಕ್ಷಣ ಶಾಲೆಯಲ್ಲಿ ಓದಿ ಅಕ್ಷರಸ್ಥರಾದವರಿಗೆ ಶಿರಂಗಾಲ ಪಂಚಾಯಿತಿ ಹಾಲಿನಲ್ಲಿ ಯೋಗ್ಯತಾ ಪತ್ರ ವಿನಿಯೋಗ ಮಾಡುವ ಸಮಾರಂಭವು ದಕ್ಷಿಣ ಹಿಂದೂಸ್ಥಾನದ ವಯಸ್ಕರ ಶಿಕ್ಷಣ ಸಂಘದ ಉಪಾಧ್ಯಕ್ಷರಾದ ಶ್ರೀ ಪುರುಷೋತ್ತಮರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ತಾ. ೨೦ರಲ್ಲಿ ಸಂಜೆ ೩-೩೦ ಗಂಟೆಗೆ ಕಲ್ಲೂರಿನಲ್ಲಿಯೂ ೪-೩೦ಗಂಟೆಗೆ ಕೋಟಿ ಹೇರೂರಿನಲ್ಲಿಯೂ ವಯಸ್ಕ ಅಕ್ಷರಸ್ಥರಾದವರಿಗೆ ಯೋಗ್ಯತಾ ಪತ್ರ ಕೊಡುವ ಸಮಾರಂಭವು ಶ್ರೀ ಜಿ. ಎಂ. ಮಂಜುನಾಥಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವದು

ಬೇಗೂರು ಸಹಕಾರಿ ಸಂಘದ ಕಾರ್ಯದರ್ಶಿಯಾಗಿ ಕಳೆದ ಹದಿನೆಂಟು ವರ್ಷಗಳಿಂದ ಕೆಲಸ ಮಾಡಿ ನಿವೃತ್ತರಾದ ಶ್ರೀ ಕಾಕಮಾಡ ಐಯ್ಯಪ್ಪನವರಿಗೆ ಅವರ ಉತ್ತಮ ಕೆಲಸಕ್ಕಾಗಿ ಸಂಘದ ಜನರಲ್ ಫಂಡಿನಿಂದ ರೂ ೭೫/-ಕ್ಕೆ ಒಳಪಟ್ಟು ಬೆಲೆಯ ಒಂದು ಪೀಚೆಕತ್ತಿಯನ್ನು ಇನಾಮಾಗಿ ಕೊಡಲು ನಿರ್ಣಯಿಸಿರುವರು.

ಪಾಡಿನಾಲ್ಕುನಾಡು ಸಹಕಾರ ಕೂಟದ ಆಶ್ರಯದಲ್ಲಿ ಸಂಬಂಧಿಸಿದ ಸಂಘಗಳ ಕಮಿಟಿ ಮೆಂಬರುಗಳ ಸಮ್ಮೇಳನವೊಂದು ತಾ. ೬-೪-೫೩ರಲ್ಲಿ ಸಹಕಾರ ಸಂಘಗಳ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಬೆಂಗಳೂರಿನ ಅಸಿಸ್ಟೆಂಟ್ ರಿಕ್ರೂಟಿಂಗ್ ಆಫೀಸರವರು ತಮ್ಮ ಮೆಡಿಕಲ್ ಆಫೀಸರರ ಸಹಿತ, ಇದೇ ತಾರೀಕು ೨೭ ರಲ್ಲಿ ಮಡಿಕೇರಿಯಲ್ಲೂ, ೨೮ ರಲ್ಲಿ ನಾಪೋಕ್ಲಿನಲ್ಲೂ, ಮತ್ತು ೨೯ ರಲ್ಲಿ ವೀರಾಜಪೇಟೆಯಲ್ಲೂ, ಎಂಟನೇ ತರಗತಿ ಪಾಸಾಗಿ ಪ್ರಾಯ ೧೪ ರಿಂದ ೧೫ ರ ವರೆಗಿರುವ ಹುಡುಗರನ್ನು ಸೈನ್ಯಕ್ಕೆ ರಿಕ್ರೂಟ್ ಮಾಡುವರು. ಸೇರಲಿಚ್ಛಿಸುವವರು ತಮ್ಮ ಪೋಷಕರೊಡನೆ ತಾವು ಓದಿದ ಮತ್ತು ತಮ್ಮ ಗುಣ, ನಡತೆಗಳ ಸರ್ಟಿಫಿಕೇಟು ಸಹಿತ, ಅವರನ್ನು ಆಯಾಯ ಸ್ಥಳಗಳಲ್ಲಿ ಭೇಟಿಯಾಗಬಹುದು. ಅಲ್ಲದೆ ೧೦ ನೇ ತರಗತಿ ಪಾಸಾಗಿ ಪ್ರಾಯ ೧೫½ ಯಿಂದ ೧೬½ ವರೆಗಿರುವವರನ್ನು ನೌಕಾದಳಕ್ಕೂ ಮತ್ತು ಪ್ರಾಯ ೧೭ ರಿಂದ ೨೫ ರ ವರೆಗಿರುವ ಯುವಕರನ್ನು ಸೈನ್ಯಕ್ಕೂ ಸಹ ರಿಕ್ರೂಟ್ ಮಾಡಲಾಗುವುದು.

ಗೋಣಿಕೊಪ್ಪಲು ರಿಫಾರ್ಮರ್ಸ್ ಸ್ಪೋರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಏವರ ಮತ್ತು ಈರ್ವರ ಬೇಡ್ಮಿಂಟನ್ ಪಂದ್ಯಾಟದ ಟ್ರೈಸ್ ತಾ. ೨೦ರಲ್ಲಿ ತೆಗೆಯಲಾಗುವದೆಂದು ತಿಳಿಸಿದ್ದಾರೆ.

ಶ್ರೀಮಂಗಲನಾಡು ಹರಿಹರ ಗ್ರಾಮದ ಹೈಯರ್ ಎಲಿಮೆಂಟರಿ ಶಾಲೆಗೆ ಶ್ರೀ ತೀತಿರ ಜೆ. ಚಂಗಪ್ಪನವರು ಕೊಟ್ಟಿರುವ ಬೆಳ್ಳಿಯ ಬಟ್ಟಲಿನ ಏವರ ಬೇಡ್ಮಿಂಟನ್ ಆಟದಲ್ಲಿ ಭಾಗವಹಿಸಲಿಚ್ಛಿಸುವವರು ತಾ. ೨೮ರೊಳಗೆ ಕಾರ್ಯದರ್ಶಿಗೆ ಬರಕೊಳ್ಳಬಹುದೆಂದು ತಿಳಿಸುತ್ತಾರೆ.

ಕೊಡಗಿನ ಇನ್‌ಕಮ್‌ಟ್ಯಾಕ್ಸ್ ಆಫೀಸರರಾಗಿರುವ ಶ್ರೀ. ರಘೋತ್ತಮರವರು ಮಡಿಕೇರಿಯಲ್ಲಿ ವಾಸವಿರುವ ಮನೆಗೆ ತಾ ೧೨ರ ರಾತ್ರಿ ಯಾರೋ ನುಗ್ಗಿ ಸುಮಾರು ೫೦೦ ರೂಪಾಯಿ ಬೆಲೆ ಬಾಳುವ ಸಾಮಾನುಗಳನ್ನು ಅಪಹರಿಸಿರುವರೆಂದು ಗೊತ್ತಾಗಿದೆ.

ಕೊಡಗು ಸರಕಾರಿ ಕಾಲೇಜ್ ಎಂಡೋಮೆಂಟ್ ಫಂಡಿನ ಮೀಟಿಂಗೊಂದು ಈ ತಾ. ೨೩ ರಲ್ಲಿ ಕೊಡಗು ಎಸೆಂಬ್ಲಿ ಹಾಲ್‌ನಲ್ಲಿ ನಡೆಯುವದು.

ಇದೇ ತಾ. ೨೨ರಲ್ಲು ಹೆಗ್ಗಳ ಐಯ್ಯಪ್ಪ ದೇವರ ಪಟ್ಟಣಿ ಮತ್ತು ೩೩ರಲ್ಲಿ ದೊಡ್ಡ ಹಬ್ಬವಾಗುತ್ತದೆ.

ಈರಳೆ ಗ್ರಾಮದ ಶ್ರೀ ಬಿ. ಎ. ಚಂಗಪ್ಪನವರಲ್ಲಿ ಯಾರದೋ ಒಂದು ಎಮ್ಮೆಯು ಒಂದು ತಿಂಗಳಿಂದ ಬಂದು ಸೇರಿಕೊಂಡಿದೆಯೆಂದೂ ವಾರಿಸ್‌ದಾರರು ತಕ್ಕ ರುಜುವಾತಿನಿಂದ ಅದನ್ನು ಹೊಡೆದು ಕೊಂಡುಹೋಗಬಹುದಾಗಿಯೂ ತಿಳಿಸುತ್ತಾರೆ.

ತಾರೀಕು ೨೮ ರಲ್ಲಿ ಅಮ್ಮತ್ತಿಯಲ್ಲಿ ನಡೆಯುವ ಹಾಕಿ ಪಂದ್ಯಾಟದಲ್ಲಿ ಜಯಶೀಲರಾದವರಿಗೆ ಕಪ್ಪನ್ನು ಜನರಲ್ ಕಾರ್ಯಪ್ಪನವರು ಕೊಡುವರೆಂದೂ ಆಸಂದರ್ಭದಲ್ಲಿ ಅವರಿಗೆ ಒಂದು ಸತ್ಕಾರಕೂಟವನ್ನು ಏರ್ಪಡಿಸುವರೆಂದೂ ತಿಳಿದುಬಂದಿದೆ.

ತಾರೀಕು ೧೨ ನೇ ಭಾನುವಾರ ಬಿಳುಗುಂದ ಸಹಕಾರ ಸಂಘದ ವಾರ್ಷಿಕ ಸಭೆ ನಡೆದಾಗ ಶ್ರೀ ಐಸಂಡ ಕಾರ್ಯಪ್ಪನವರು ಆ ಗ್ರಾಮಕ್ಕೂ, ನಾಡಿಗೂ, ದೇಶಕ್ಕೂ ಮಾಡಿದ ಸೇವೆಯನ್ನು ಪ್ರಶಂಸಿಸಿ ಸತ್ಕಾರ ಮಾಡಲಾಯಿತು.

ಕೊಡಗು ಸಹಕಾರಿ ವಿಚಾರಣಾ ಸಮಿತಿಯ ವರದಿಯನ್ನು ಪೂರೈಸಿ ಸರಕಾರಕ್ಕೆ ಒಪ್ಪಿಸಲು ಅದರ ಅಧ್ಯಕ್ಷರಾದ ಶ್ರೀ. ಜಿ. ಮೆಕ್ರೆಯವರು ತಾ. ೧೩ ರಲ್ಲಿ ಮಡಿಕೇರಿಗೆ ಬಂದಿರುವರು

ರೀಸೆಸ್ ರಜೆಗಾಗಿ ಕೊಡಗಿನ ಸಿವಿಲ್ ಕೋರ್ಟುಗಳು ಈ ತಾ. ೧೫ ರಿಂದ ಮೇ ೨೭ರ ವರೆಗೆ ಮುಚ್ಚಲ್ಪಟ್ಟಿವೆ,

ತಾರೀಕು ೧೬ ರಿಂದ ಡೆಲ್ಲಿಯಲ್ಲಿ ನಡೆಯುವ ಸಾಮೂಹಿಕ ವಿಕಾಸ ಯೋಜನಾ ಸಂಬಂಧದ ಅಧಿಕಾರಿಗಳ ಮೀಟಿಂಗಿಗೆ ಕೊಡಗಿನ ಡೆವಲಪ್‌ಮೆಂಟ್ ಕಮಿಷನರಾದ ಶ್ರೀ. ಎ. ಸಿ. ಸುಬ್ಬಯ್ಯನವರು ತಾ. ೧೪ ರಲ್ಲಿ ಹೋಗಿರುವರು.

ಮಾರಾಟಕ್ಕಿದೆ.

(೧) ವೀರಾಜಪೇಟೆಯಲ್ಲಿ ಒಳ್ಳೆಯ ವ್ಯಾಪಾರ ನಡೆಯುತ್ತಿರುವ ಒಂದು ಹೋಟೆಲ್ ಮತ್ತು ಅದಕ್ಕೆ ಸೇರಿದ ವಾಸಕ್ಕೆ ಅನುಕೂಲವಿರುವ ಒಂದು ಮನೆ ಮಾರಾಟಕ್ಕಿದೆ.

(೨) ಸದರಿ ಪೇಟೆಯಲ್ಲಿ ಪೇಟೆಯ ಮಧ್ಯದಲ್ಲಿದ್ದು ಸಿನೇಮಾ ಯಾ ಮಿಲ್ಲು ಕಟ್ಟಲು ಒಳ್ಳೆಯ ಸ್ಥಳವಾಗಿದ್ದು ತಿಂಗಳಿಗೆ ರೂ. 100/- ಬಾಡಿಗೆ ಬರುವ ಲೈನುಗಳಿರುವ ಮತ್ತು ಗದ್ದೆ ಹಿತ್ಲುಗಳಿರುವ $2\frac{1}{4}$ ಎಕ್ರೆ ಜಾಗವೂ ಸಹ ಮಾರಾಟಕ್ಕಿದೆ.

ಮೇಲೆ ಕಾಣಿಸಿರುವುದನ್ನು ಒಟ್ಟಾಗಿಯೂ ಯಾ ಚಿಲ್ಲರೆಯಾಗಿಯೂ ಮಾರುತ್ತೇನೆ. ಖಾಯಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ವ್ಯವಹರಿಸಿ ವಿವರಗಳನ್ನು ತಿಳಿದುಕೊಳ್ಳಬಹುದು.

ಪ್ರೊಪ್ರೈಟರ್,
ಬಿ. ಆನಂದ ಭವನ,
ವೀರಾಜಪೇಟೆ.

2-1

ದಿವಂಗತ ನಿಡ್ಯಮಲೆ ಮುದ್ದಪ್ಪನವರು.

ತಾರೀಕು ೯ರ ರಾತ್ರಿ ೧೦ ಗಂಟೆಗೆ ಕೊಡಗಿನ ಜಿಲ್ಲಾ ಜಡ್ಜರಾಗಿದ್ದ ಶ್ರೀ. ಮುದ್ದಪ್ಪನವರು ಮೃತರಾದರು. ಈಗ ಕೆಲವು ದಿನಗಳಿಂದ ಅವರಿಗೆ ಶರೀರ ಸೌಖ್ಯವಿರಲಿಲ್ಲ. ಮೊನ್ನೆಯಾಗಿ ಒಂದೂವರೆ ತಿಂಗಳ ರಜೆಯಲ್ಲಿದ್ದ ಅವರು ತಮ್ಮ ಕೆಲಸದ ಚಾರ್ಜನ್ನು ವಹಿಸಿಕೊಂಡು ತಾ. ೨೮ರ ವರೆಗೆ ಕೆಲಸ ಮಾಡಿದರು. ತಾರೀಕು ೨೮ ರಿಂದ ಅಸ್ವಸ್ಥರಾಗಿ ತಾರೀಕು ೯ ರಲ್ಲಿ ಶಿವಾಧೀನರಾದರು.

ಶ್ರೀಯುತ ಮುದ್ದಪ್ಪನವರು ಗೌಡ ಕೋಮಿಗೆ ಸೇರಿದವರು. ಅವರು ಸಂಪಾಜೆಯ ಹತ್ತಿರದ ಪೆರಾಜೆ ಗ್ರಾಮದಲ್ಲಿ ಜನಿಸಿ ಮಡಿಕೇರಿಯಲ್ಲಿ ತಮ್ಮ ಹೈಸ್ಕೂಲು ವಿದ್ಯಾಭ್ಯಾಸ ಮುಗಿಸಿ ಮಂಗಳೂರಿನಲ್ಲಿ ಬಿ. ಎ. ಡಿಗ್ರಿ ತೆಗೆದುಕೊಂಡು ೧೯೨೪ ರಲ್ಲಿ ಮದ್ರಾಸಿನಲ್ಲಿ ಲಾ ಡಿಗ್ರಿ ಪಡೆದರು. ಅವರು ಮಾರಣೆ ವರ್ಷದಿಂದಲೇ ಮಡಿಕೇರಿಯಲ್ಲಿ ಲಾಯರ್ ವೃತ್ತಿಯನ್ನು ಆರಂಭಿಸಿದರು. ಇವರು ಚಿಕ್ಕವರಿದ್ದರೂ ಆ ಕಾಲದ ರಾಜಕೀಯದಲ್ಲಿ ಕಾಲಿಕ್ಕಿದರು. ಆಗಿನ ರಾಜಕೀಯವೆಂದರೆ ಕೇವಲ ಶಾಸನ ಸಭಾ ರಾಜಕೀಯವಾಗಿತ್ತು. ಶ್ರೀ. ಮುದ್ದಪ್ಪನವರು ಶಾಸನ ಸಭೆಗೆ ಸದಸ್ಯರಾಗಿ ಮಡಿಕೇರಿ ಭಾಗಮಂಡಲ ನಾಗು ಕ್ಷೇತ್ರದಿಂದ ಆರಿಸಲ್ಪಟ್ಟರು. ಇವರು ಜಿಲ್ಲಾ ಬೋರ್ಡಿನ ಸದಸ್ಯರೂ ಆಗಿದ್ದರು.

ಮುದ್ದಪ್ಪನವರು ಚುರುಕು ಸ್ವಭಾವದವರಾಗಿದ್ದರು. ಕೆಲವೇ ವರ್ಷಗಳಲ್ಲಿ ಅವರು ಅಂದರೆ ೧೯೩೬ ರಲ್ಲಿ ಮುನ್ಸೀಫರಾಗಿ ನೇಮಿಸಲ್ಪಟ್ಟರು. ೧೯೪೬ ರಲ್ಲಿ ಇವರು ಸಬ್ ಜಡ್ಜರಾಗಿಯೂ ೧೯೫೦ ರಲ್ಲಿ ಜಿಲ್ಲಾ ಜಡ್ಜರಾಗಿಯೂ ನೇಮಿಸಲ್ಪಟ್ಟು ಕಡೆಯತನಕ ಆ ಹುದೆ ಯಲ್ಲಿದ್ದರು. ದೇಶದ ಜನರೆಲ್ಲರಿಗೂ ಹಿತವಾಗುವ ರೀತಿ ಕೆಲಸ ಮಾಡಲು ಯಾರಿಗೂ ಸಾಧ್ಯವಿಲ್ಲ. ಅದರಂತೆಯೇ ಮುದ್ದಪ್ಪನವರ ನ್ಯಾಯ ತೀರ್ಪುಗಳ ಬಗ್ಗೆ ದೂರು ಹೇಳುವವರು ಇರಬಹುದಾದರೂ ಅವರು ದಕ್ಷತೆಯಿಂದ ಕೆಲಸ ಮಾಡಿರುವರೆಂದು ಹೇಳಬಹುದು.

ವ್ಯಕ್ತಿಗತವಾಗಿ ಮುದ್ದಪ್ಪನವರು ಸರಳರೂ, ಹಾಸ್ಯಪ್ರಿಯರೂ, ಜನರೊಡನೆ ಮಿಳಿತರಾಗುವವರೂ ಆಗಿದ್ದರು. ಯಾರಿಗೂ ಅನ್ಯಾಯ ಮಾಡುವ ಪ್ರವೃತ್ತಿ ಅವರಲ್ಲಿರಲಿಲ್ಲ. ಅವರ ದೊಡ್ಡ ಗುಣವೆಂದರೆ ತಮ್ಮನ್ನು ನಂಬಿದವರನ್ನು ಏನೇ ಬಂದರೂ ಬಿಟ್ಟು ಕೊಡುವಂತವರಾಗಿರಲಿಲ್ಲ. ಮುದ್ದಪ್ಪನವರು ಗೌಡ ಜನಾಂಗದ ಪ್ರಥಮ ಪದವೀಧರರಲ್ಲದೆ ಜನಾಂಗದ ಉದ್ಧಾರಕರೂ ಎಂದೆನ್ನಬಹುದು. ಆ ಜನಾಂಗದ ಉತ್ಕರ್ಷಕ್ಕಾಗಿ ಅವರು ತುಂಬಾ ದುಡಿದಿದ್ದಾರೆ. ಇವರ ನಿಧನದಿಂದ ಗೌಡ ಜನಾಂಗಕ್ಕೆ ಅಪಾರ ನಷ್ಟವಾಗಿದೆ. ಕೊಡಗೂ ಕೂಡ ಆ ಮಟ್ಟಿಗೆ ಯೋಗ್ಯ ಪುತ್ರನೊಬ್ಬನನ್ನು ಕಳಕೊಂಡಂತಾಯಿತು. ಇವರ ನಿಧನದಿಂದ ಇವರ ಕುಟುಂಬಕ್ಕಾಗಿರುವ ಅತುಳ ದುಃಖವನ್ನು ಸಹಿಸುವ ಶಕ್ತಿಯನ್ನು ಅವರಿಗೆ ಭಗವಂತನು ದಯಪಾಲಿಸಲಿ. 'X'

ಕೊಡಗಿನಲ್ಲಿ ಕಾಫಿ ಬೆಳೆ.

ಇಂಡಿಯಾ ಕಾಫಿ ಬೋರ್ಡಿನ ಚೀಫ್ ಮಾರ್ಕೆಟಿಂಗ್ ಆಫೀಸರಾಗಿರುವ ಶ್ರೀ. ಎಂ. ಎ. ಕುಟ್ಟಾಲಿಲಿಂಗಮ್ ಪಿಳ್ಳೆಯವರು ಈ ವಾರ ಕೊಡಗನ್ನು ಸಂದರ್ಶಿಸಿ ಕೊಡಗಿನ ಕಾಫಿ ವ್ಯವಸಾಯವನ್ನು ಪರಿಶೀಲಿಸಿ ಹೀಗೆ ಹೇಳಿರುವರು. "ಕೊಡಗಿನ ಬರುವ ಕಾಫಿ ಬೆಳೆಯು ಬಹು ತೃಪ್ತಿಕರವಾಗಿದೆಯೆಂದು ಹೇಳಲು ಸಂತೋಷವಾಗುತ್ತದೆ. ಅದೃಷ್ಟವಶಾತ್ ಕಳೆದ ವಾರ ಹಲವೆಡೆ ಉತ್ತಮ ಮಳೆಯಾಗಿ ಕೊಡಗಿನ ಪ್ಲಾಂಟರುಗಳು ತುಂಬಾ ಸಂತೋಷದಲ್ಲಿದ್ದಾರೆ. ಬರುವ ಫಸಲಿನಲ್ಲಿ ಕಡಿಮೆ ಒಂದು ಸಾವಿರ ಟನ್ನಾದರೂ ಕಾಫಿ ಕೊಡಗಿನಲ್ಲಿ ಹೆಚ್ಚಿಗೆ ಬೆಳೆಯಬಹುದು. ೧೯೫೨-೫೩ ರಲ್ಲಿ ಹಿಂದೂದೇಶದಿಂದ ಕಾಫಿಯನ್ನು ಹೊರಗೆ ಕಳುಹಿಸುವದನ್ನು ಕೇಂದ್ರ ಸರಕಾರವು ನಿಲ್ಲಿಸಿರುವದರಿಂದ ಹಿಂದೂದೇಶದಲ್ಲಿ ಕಾಫಿಯ ಬೆಲೆಯು ಸ್ವಾಭಾವಿಕವಾಗಿ ಮುಂದೆ ಕಡಿಮೆಯಾಗುವದು. ಈಗಾಗಲೇ ಬೆಲೆ ಕಡಿಮೆಯಾಗುವ ಚಿಹ್ನೆಗಳಿವೆ. ಇಡೀ ಹಿಂದೂದೇಶದಲ್ಲಿ ಬೆಳೆಯುವ ಕಾಫಿಯ ಮೂರನೇ ಒಂದಂಶಕ್ಕಿಂಥಾ ಹೆಚ್ಚು ಕಾಫಿಯು ಕೊಡಗಿನಲ್ಲಿ ಬೆಳೆಯುತ್ತದೆ.

ಹಾಕಿ ಪಂದ್ಯಾಟ.

ತಮ್ಮಣಿ ಹಾಕಿ ಕಪ್ಪಿನ ಪಂದ್ಯಾಟವು ತಾ. ೧೧ರಿಂದ ಪ್ರಾರಂಭವಾಗಿದೆ. ಪ್ರಥಮ ದಿನ ಜಾಲಿ ಬ್ಲೂ ಟೀಮಿಗೂ ವಾಂಡರರ್ಸ್ ಟೀಮಿಗೂ ಆಟ ನಡೆಯಿತು. ಎರಡು ದಿನ ಆಡಿದರೂ ಡ್ರಾ ಆಯಿತು. ತಾ. ೧೩ರ ಬೆಳಿಗ್ಗೆ ಪುನಃ ಆಡಿ ವಾಂಡರರ್ಸ್ ಟೀಮಿನವರು ೨ ಗೋಲ್‌ಗಳಿಂದ ಗೆದ್ದರು. ತಾ. ೧೨ರಲ್ಲಿ ಜಾಲಿ ಗ್ರೀನ್ ಟೀಮಿಗೂ ಸೆಂಟ್ರಲ್ ಹೈಸ್ಕೂಲ್ ಟೀಮಿಗೂ ಆಟ ನಡೆದು ಜಾಲಿಗ್ರೀನ್ ಟೀಮಿನವರು ಒಂದು ಗೋಲಿನಿಂದ ಗೆದ್ದರು. ತಾ ೧೩ರಲ್ಲಿ ವಾಂಡರರ್ಸ್ ಮತ್ತು ಯಂಗ್‌ಸ್ಟರ್ಸ್ ಟೀಮುಗಳಲ್ಲಿ ಆಟ ನಡೆದು ವಾಂಡರರ್ಸ್ ಟೀಮ್ ಎರಡು ಗೋಲುಗಳಿಂದ ಗೆದ್ದಿತು. ತಾ ೧೪ ರಲ್ಲಿ ಜಾಲಿಗ್ರೀನ್ ಮತ್ತು ಪೋಲೀಸ್ ಟೀಮುಗಳಲ್ಲಿ ಆಟ ನಡೆದು ಜಾಲಿ ಗ್ರೀನ್ ಟೀಮು ಮೂರು ಗೋಲುಗಳಿಂದ ವಿಜಯಿಯಾಯಿತು. ತಾ. ೧೬ರಲ್ಲಿ ಕಡೇ ಆಟವು ವಾಂಡರರ್ಸ್ ಮತ್ತು ಜಾಲಿಗ್ರೀನ್ ಟೀಮುಗಳೊಳಗೆ ನಡೆದು ಜಾಲಿ ಗ್ರೀನ್ ಟೀಮು ಒಂದು ಗೋಲಿನಿಂದ ಜಯ ಪಡೆದು ಬಟ್ಟನ್ನು ಗೆದ್ದಿತು. ಕಾಲೇಜು ಪ್ರಿನ್ಸಿಪಲರು ಗೆದ್ದವರಿಗೆ ಬಟ್ಟನ್ನು ಕೊಟ್ಟರು.

ನಾಸ್ತ್ರೋಕ್ಕಿಗೆ
"ಕೊಡಗು" ಪತ್ರಿಕೆಯ ಏಜೆಂಟರು
ಸಹಕಾರಿ ಸ್ಟೋರ್ಸ್ಸ್ ಮೇನೇಜರ್

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಸಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{1}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಪಂಪುಗಳು.
9 ಕೋತಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರು ಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಸಿಗರೇಟ್ ಸಾಮುದ್ರಿಕ್ಯದಿಂದ

ಸ್ವಭಾವ ವಾಚನ.

ನೀವು ಸಿಗರೇಟೋ ಬೀಡಿಯೋ ಸೇದುತ್ತೀರಾ? ಹಾಗಿದ್ದರೆ ಎಚ್ಚರಿಕೆ. ನೀವು ಸಿಗರೇಟು ಸೇದುವ ರೀತಿಯಿಂದಲೇ ನಿಮ್ಮ ಸ್ವಭಾವವನ್ನು ಗೊತ್ತುಹಚ್ಚಲು ಬರುವುದೆಂದು ವಿಲಾಸದ 'ಕಾಸ್ಮಲೇಟಸ್' ಪತ್ರಿಕೆಯಲ್ಲಿ ಲುಯಿಸಿಂಕ್ಲೇರ್ ಎಂಬ ಸಿಗರೇಟ್ ಸಾಮುದ್ರಿಕ ಶಾಸ್ತ್ರಿ ಬರೆದಿದ್ದಾನೆ.

ನಿಮಗೆ ಸಿಗರೇಟು ಹೊತ್ತಿಸಬೇಕಾದರೆ ತುಂಬ ಕಷ್ಟವಾಗುವುದಾದರೆ ನೀವು ತುಂಬ ಭಾವನಾಮಯರೆಂದೂ ನಾನಾ ಚಿಂತೆಗಳಿಂದ ನಿಮ್ಮ ಮನಸ್ಸು ವ್ಯಸ್ತವಾಗಿರುತ್ತದೆಂದೂ ಅವನ ಹೇಳಿಕೆ. ಅಂಥವರು ಪೇಚಾಡಿ ಸಿಗರೇಟು ಹೊತ್ತಿಸಿದರೂ ಮುಂದೆ ಅತ್ತ ಲಕ್ಷ್ಯತಪ್ಪಿ ಅದನ್ನು ಕೈಯಲ್ಲೇ ನಂದಿ ಹೋಗಗೊಡುತ್ತಾರೆ. ಮತ್ತು ಬೂದಿಯ ಡಬ್ಬಿಯಲ್ಲಿ ಅದನ್ನು ಸೇದದೇ ಒಗೆದು ಸಿಗರೇಟನ್ನು ಮರೆತೇ ಬಿಡುತ್ತಾರೆ.

ಇಂಥವನು ಚಿಂತೆಗಳ ಜಾಲದಲ್ಲಿ ಸಿಕ್ಕು ಒದ್ದಾಡುತ್ತಿರುವನೆಂದು ತಿಳಿಯತಕ್ಕದ್ದು. ಆದರೆ ಉರಿಯುವ ಸಿಗರೇಟನ್ನು ಮೇಜಿನ ಅಂಚಿನಲ್ಲೋ ಮತ್ತೆಲ್ಲೋ ಇರಿಸಿ ಬಿಡುವವನು ಬರೆ ಮರವೆಯ ಪ್ರಕೃತಿಯವನೆಂದು ತಿಳಿಯಬೇಕು.

ಹೊತ್ತಿಸದ ಸಿಗರೇಟನ್ನು ತುಟಿಗಳ ನಡುವೆ ಕಚ್ಚಿಹಿಡಿದು ಬಹಳ ಕಾಲ ಹಾಗೇ ಇಟ್ಟುಕೊಳ್ಳುವವನು ದುರಭಿಮಾನಿಯೆಂದೂ ಕ್ಷುಲ್ಲಕ ಬುದ್ಧಿಯವನೆಂದೂ ಭಾವಿಸಬಹುದು.

ಜೀವನವನ್ನು ಸುಖವಾಗಿ ಬಾಳುವವನು ಸಿಗರೇಟು ಸೇದುವ ಬಗೆಯೇ ಬೇರೆ, ದುರಹಂಕಾರಿಯೂ ಆಲಸಿಗನೂ ಸೇದುವ ಬಗೆಯೇ ಬೇರೆ. ಸುಖಭೋಗಿಯು ಸ್ವಲ್ಪ ಹೊತ್ತಿನ ವರೆಗೆ ಹೊಗೆ ಕುಡಿದು ಆ ಮೇಲೆ ಅದನ್ನು ಹೊರಬಿಡುತ್ತಾನೆ. ಜಂಭದವನು ಸಿಗರೇಟು ಹೊತ್ತಿಸಿ ಹಾಗೇ ಬೆರಳುಗಳ ನಡುವೆ ಹಿಡಿದು ಅದನ್ನು ಸುಮ್ಮನೆ ಸುಟ್ಟು ಹೋಗಗೊಡುತ್ತಾನೆ.

ಹೊಗೆ ಉಗುಳುವ ಮೊದಲು ತುಟಿಗಳನ್ನು ದುಂಡಗೆ ಮಾಡಿ ಚಾಚಿ ಛಾವಣಿಯ ಕಡೆ ಹೊಗೆ ತೂರುವವನನ್ನು 'ಬೀಷಿಕೀರ' ಮನುಷ್ಯನೆಂದು ಗ್ರಹಿಸಬೇಕು. ಅಂತೆಯೇ ಹೊಗೆಯನ್ನು ನೆಲದ ಕಡೆ ಉಗುಳುವವನು ಛಲವಾದಿ.

ಗರ್ವಿಷ್ಠರು ಹೊಗೆಯನ್ನು ಸಾವಧಾನವಾಗಿ ಬಿಡುವರು. ಗಡಿಬಿಡಿ ಪ್ರಕೃತಿಯವರು ಅವಸರದಿಂದಲೇ ಬಿಡುವರು. ಹೊಗೆಯ ಸುರುಳಿಗಳನ್ನು ಮಾಡಿ ಸಂತೋಷಪಡುವವನು ಕನಸಿನ ರಾಜ್ಯದಲ್ಲಿ ವಿಹರಿಸುವವನು. ಪ್ರಾಮಾಣಿಕ, ಋಜು ಮನುಷ್ಯ ಹೇಗೆ ಸೇದುವನೆಂದು ಹೇಳಲಾಗದಿದ್ದರೂ ಅವನ ಮೊದಲಿನ ಜುರುಕಿ ಸಮಾಧಾನವೂ ಆಳವೂ ಆಗಿರುತ್ತದೆ.

ನೀವು ಸಿಗರೇಟು ಹಿಡಿಯುವ ರೀತಿಯೂ ನಿಮ್ಮ ಸ್ವಭಾವದ ಸಾಕ್ಷಿ ಹೇಳುತ್ತವೆ:

(೧) ಹೆಬ್ಬೆರಳು ಮತ್ತು ತೋರು ಬೆರಳುಗಳಿಂದ ಸಿಗರೇಟು ಹಿಡಿದು ಹೊತ್ತಿಸಿದ ತುದಿಯನ್ನು ಅಂಗೈಯ ದಿಕ್ಕಿಗೆ ಹಿಡಿದಿದ್ದರೆ ಅವನು ಸುಖಿ, ಆಶಾವಾದಿ ವ್ಯಕ್ತಿತ್ವವುಳ್ಳವನು.

(೨) ಮೇಲಿನಂತೆ ಸಿಗರೇಟು ಹಿಡಿದು ಆಧಾರಕ್ಕೆಂದು ನಡುವಿನ ಬೆರಳನ್ನೂ ಜೋಡಿಸಿದ್ದರೆ ಅವನು ಮನಸ್ಸಾಕ್ಷಿಗೆ ಸರಿಯಾಗಿರುವವನೆಂದೂ ಆದರೆ ಸ್ವೇಚ್ಛಾನುಸಂಧಾನ ಪ್ರಕೃತಿಯವನೆಂದೂ ತಿಳಿಯಬಹುದು.

(೩) ಎಲ್ಲ ಬೆರಳುಗಳೂ ಸೇರಿ ಸಿಗರೇಟನ್ನು ಮುಚ್ಚಿದಂತಿದ್ದು ಹೊತ್ತಿಸಿದ ತುದಿ ಕೈಯ ಒಳಗಿದ್ದರೆ ಅವನು ಏಕಾಕಿ ಪ್ರಕೃತಿಯವನು ಮತ್ತು ಅವನನ್ನು ಸುಲಭವಾಗಿ ಮೋಹಿಸಬಹುದು.

(೪) ಹೊತ್ತಿಸಿದ ತುದಿ ಹೊರಮುಖವಾಗಿದ್ದು ಇನ್ನೊಂದು ತುದಿಯು ಹೆಬ್ಬೆರಳು ತೋರು ಬೆರಳುಗಳಿಂದ ಬಿಗಿಯಾಗಿ ಹಿಡಿಯಲ್ಪಟ್ಟಿದ್ದರೆ ಹೋರಾಟ ಪ್ರಕೃತಿಯ ಮನುಷ್ಯನೆಂದು ತಿಳಿಯತಕ್ಕದ್ದು.

(೫) ಹೊತ್ತಿಸಿದ ತುದಿ ಬಹಿರ್ಮುಖವಾಗಿದ್ದು ಸಿಗರೇಟು ತೋರು ಬೆರಳು ಮತ್ತು ನಡುಬೆರಳಿನ ಮಧ್ಯ ಹಿಡಿಯಲ್ಪಟ್ಟಿದ್ದರೆ ಅವನು ಬುದ್ಧಿಶಾಲಿ, ಜಾಗೃತ, ಸೌಂದರ್ಯಪ್ರಿಯ ಮನುಷ್ಯನೆಂದು ಗ್ರಹಿಸಬೇಕು.

(೬) ಮೇಲಿನಂತೆ ಸಿಗರೇಟು ಹಿಡಿದು ಆಧಾರಕ್ಕೆಂದು ಹೆಬ್ಬೆರಳೂ ಜೋಡಿಸಲ್ಪಟ್ಟಿದ್ದರೆ ಅವನು ಕಲಾಭಿರುಚಿಯುಳ್ಳವನೆಂದೂ ವಿವರಗಳಲ್ಲಿ ಬಹಳ ಎಚ್ಚರವುಳ್ಳವನೆಂದೂ ಆದರೆ ಮಹಾ ಹಟವಾದಿಯೆಂದೂ ಭಾವಿಸಬೇಕು.

(೭) ಹೆಬ್ಬೆರಳು ತೋರುಬೆರಳುಗಳ ನಡುವೆ ಸಿಗರೇಟು ಹಿಡಿದು ಕೈಯನ್ನು ಮುಚ್ಚದೆ ಹೆಚ್ಚು ಕಡಿಮೆ ತೆರೆದಿಟ್ಟುಕೊಂಡವನು ಸನ್ಮಿತ್ರನೂ ಭೋಗಪ್ರಿಯನೂ ಆಗಿರುತ್ತಾನೆ.

(೮) ಸಿಗರೇಟನ್ನು ಹೆಬ್ಬೆರಳು ನಡುಬೆರಳುಗಳಿಂದ ಹಿಡಿದು ತೋರುಬೆರಳನ್ನು ಬೇರ್ಪಡಿಸಿಟ್ಟು ಹೊತ್ತಿಸಿದ ತುದಿಯನ್ನು ಕೆಳಮುಖವಾಗಿ ಹಿಡಿದವನು ಸುಲಭಸಾಧ್ಯನೂ ವೈಗಳ್ಳನೂ ವ್ಯಾಕುಲಿಸ್ವಭಾವದವನೂ ಆಗಿರುತ್ತಾನೆ. ಅವನು ಪರಪ್ರತ್ಯಯನೇಯ ಬುದ್ಧಿಯವನು.

'ಕ. ವಿ.'

ಶ್ರೀ ಬಿ. ಎಸ್. ಗೋವಿಂದರಾಜು,
'ಕೊಡಗು' ಏಜೆಂಟರು,
ವೀರಾಜಪೇಟೆ!

ಓದುಗರ ಓಲೆಗಳು.

ಕೊಡಗಿನಲ್ಲಿ ಸೇಂದಿ ಮಾರಾಟದ ಅವ್ಯವಸ್ಥೆ.

ದಕ್ಷಿಣ ಕೊಡಗಿನಲ್ಲಿ ಕೆಲವು ಸೇಂದಿ ಗುತ್ತಿಗೆಗಳಲ್ಲಿ ಕಂಟ್ರಾಕ್ಟುದಾರರು ಸೇಂದಿ ಮಾರಾಟದ ನಿಯಮಗಳನ್ನು ಮೀರಿ ಅವರವರ ಇಷ್ಟದಂತೆ ವರ್ತಿಸುವುದು ಕಂಡು ಬರುತ್ತೆ.

ಕಳೆದ ಫೆಬ್ರವರಿ ತಿಂಗಳಲ್ಲಿ ಡಿ. ಕಮಿಷನರು ಸಾಹೇಬರವರು ಸೇಂದಿ ಗುತ್ತಿಗೆಗಳ ಹರಾಜು ನಡೆಸುವಾಗ ೧೯೪೯ನೇ ಇಸವಿ ಏಪ್ರಿಲ್ ೧ರಿಂದ ೧ ಸೇರಿಗೆ ೦—೫—೦ ಯಂತೆ ಸೇಂದಿ ಮಾರಾಟ ಮಾಡಬೇಕೆಂತಲೂ ಸೇಂದಿ ಇಳಿಸುವವರು ೧ರೂಪಾಯಿಗೆ ೧೦ ಸೇರಿನಂತೆ ಕಂಟ್ರಾಕ್ಟುದಾರರಿಗೆ ಕೊಡಬೇಕೆಂತಲೂ ಬಹಿರಂಗವಾಗಿ ಓದಿರುವುದನ್ನು ಕೇಳಿರುವೆನು. ಆದರೆ ಇತ್ತಲಾಗಿ ಅವರ ಆಜ್ಞೆಗೆ ಮಿತಿ ಮೀರಿ ನಡೆಯುತ್ತಿದ್ದು ಈ ವರೆವಿಗೂ ಯಾರ ಅವಗಾಹನೆಗೂ ಬಂದಿರುವುದಿಲ್ಲ.

ಕಂಟ್ರಾಕ್ಟುದಾರರು ಕೆಲವರು ಸೇರಿಗೆ ೦—೫—೦ ಯಂತೆಯೂ ೦—೬—೦ ಯಂತೆಯೂ ಬರೇ ೧ ಕುಪ್ಪಿಗೆ ೦—೬—೦ಯಂತೆಯೂ ಮಾರುತ್ತಿರುವದನ್ನು ನೋಡಿದರೆ ತುಂಬಾ ವಿಷಾದಕರವಾಗುತ್ತೆ.

ಸೇಂದಿ ಇಳಿಸುವವರು ರೂಪಾಯಿಗೆ ೧೦ಸೇರು ಕೊಡುವವರ ಬದಲು ಮೊದಲಿನಂತೆಯೇ ೧೬ ಸೇರಿನಂತೆ ಈಗಲೂ ಕೊಡುವ ಅನೇಕ ನಿದರ್ಶನಗಳಿವೆ. ಸೇಂದಿ ಇಳಿಸುವವರು ಕಂಟ್ರಾಕ್ಟುದಾರರಿಗೆ ಹೆದರಿ ಅವರು ಹೇಳಿದಂತೆ ಜುಲುಮೆಯಿಂದ ಈ ರೀತಿ ವರ್ತಿಸುವುದಾಗಿದೆ. ಕಂಟ್ರಾಕ್ಟುದಾರರ ಮತ್ತು ಸೇಂದಿ ಇಳಿಸುವವರ ವರ್ತನೆಯಿಂದ ಬಡ ರೈತನಿಗೆ ಹಲವು ವಿಧದಲ್ಲಿ ತೊಂದರೆ ಒಳಗಾಗಬೇಕಾಗುತ್ತೆ. ಮೊದಲಿನಂತೆ ೧೬ಸೇರಿನಂತೆ ಕಂಟ್ರಾಕ್ಟುದಾರರಿಗೆ ಇಳಿಸುವವರು ಕೊಟ್ಟರೆ ತೋಟದ ಮಾಲೀಕರಿಗೆ ಅವರಿಗೆ ಮೊದಲು ದೊರಕುತ್ತಿದ್ದ ಕಂಟ್ರಾಕ್ಟು ಹಣವಲ್ಲದೆ ಅಸ್ವತಾ ಹೆಚ್ಚಿಗೆ ವಸೂಲು ಮಾಡಲು ಖಡ್ಡಾಯ ಮಾಡಿದರೆ ಸೇಂದಿ ಇಳಿಸುವವರಿಗೆ ಉಭಯ ಸಂಕಟವಾಗುತ್ತೆ. ಡಿ. ಕಮಿಷನರ್ ಸಾಹೇಬರವರ ಆಜ್ಞೆಯಂತೆ ರೂಪಾಯಿಗೆ ೧೦ ಸೇರಿನಂತೆ ಖಡ್ಡಾಯವಾಗಿ ಕಂಟ್ರಾಕ್ಟುದಾರರು ತಕ್ಕೊಳ್ಳುವಂತೆ ಮಾಡಿದರೆ ತೋಟದ ಮಾಲೀಕರಿಗೆ ಸ್ವಲ್ಪ ಹೆಚ್ಚು ಹಣ ಜುಲುಮೆಯಿಂದ ಕೇಳಲು ಸಾಧ್ಯವಿದೆ. ಸಮ್ಮಂಧಪಟ್ಟ ಅಧಿಕಾರಿಗಳು ಕಂಟ್ರಾಕ್ಟುದಾರರ ಅಡ್ವಾನ್ಸ್ ಪುಸ್ತಕಗಳನ್ನು ಒಂದಾವರ್ತಿ ಪರಿಶೀಲಿಸಿದರೆ ಇವರ ನಿಜ ಸಂಗತಿ ಮನಪೂರ್ವಕವಾಗಿ ತಿಳಿಯಬಹುದು.

ಆದಕಾರಣ ಸಮ್ಮಂಧಪಟ್ಟ ಇಲಾಖೆಯವರು ಸೇಂದಿ ಇಳಿಸುವವರು ರೂಪಾಯಿಗೆ ೧೦ ಸೇರಿನಂತೆ ಖಡ್ಡಾಯವಾಗಿ ಗುತ್ತಿಗೆಗೆ ಹುಯ್ಯುವಂತೆಯೂ ಕಂಟ್ರಾಕ್ಟುದಾರರು ಸೇರು ಒಂದರ ೦—೫—೦ ಮೇಲೆ ತೆಗೆಯಬಾರದೆಂಬ ವಿಚಾರವನ್ನೂ ಗಮನವಿಡಬೇಕಾಗಿ ಕೋರಿಕೆ.

ತೋಟದ ಮಾಲೀಕ.

ಕ್ಷೌರದ ಬದಲು ಪೆಟ್ಟು

ತಾ. ೨೮—೩—೪೯ರಲ್ಲಿ ಪನಿವಾರಸಂತೆ ಶಾಲೆಯ ಹರಿಜನ ವಿದ್ಯಾರ್ಥಿಯೊಬ್ಬನು ಅಲ್ಲಿಯ ಆಯುಷ್ಕರ್ಮ ಶಾಲೆಯೊಂದಕ್ಕೆ ಕ್ಷೌರಕ್ಕಾಗಿ ಹೋದನು. ಕ್ಷೌರಿಕನು ಕ್ರಾಪು ಮಾಡತೊಡಗಿದನು. ಕ್ರಾಪು ಮಾಡುತ್ತಲೇ ವಿದ್ಯಾರ್ಥಿಯ ಊರು, ತಂದೆ, ಜಾತಿ ಇತ್ಯಾದಿಗಳನ್ನು ಪದ್ಧತಿಯಂತೆ ವಿಚಾರಿಸಿದ್ದೂ ಆಯಿತು. ಅಷ್ಟರಲ್ಲಿ ಕ್ರಾಪಿನ ಅರ್ಧ ಕೆಲಸ ಮುಗಿದಿತ್ತು. ವಿದ್ಯಾರ್ಥಿಯು ಹರಿಜನನೆಂದು ಗೊತ್ತಾದ ಕೂಡಲೇ ಕ್ಷೌರಿಕನು ಪೆಟ್ಟುಕೊಟ್ಟು ಆ ಹುಡುಗನನ್ನು ಹೊರ ದೂಡಿದನು. ಅರ್ಧಕ್ಕೆ ನಿಂತು ಹೋದ ಕ್ರಾಪು ಪೆಟ್ಟಿನ ಪರಿಭವದಿಂದ ವಿಕಾರಗೊಂಡ ಹುಡುಗನ ದೃಶ್ಯವೂ ಪ್ರೇಕ್ಷಕರಿಗೆ ನಗುವನ್ನುಂಟು ಮಾಡುತ್ತಿದ್ದವು. ಇದರಿಂದ ಕ್ಷೌರಿಕನು ಸಂತುಷ್ಟನಾಗದೆ ಇದ್ದಿಲ್ಲ. ಅಲ್ಲವೇ?

ಪಾಪ! ಅವಮಾನ ಹೊಂದಿದ ಹುಡುಗನ ಪರಿಸ್ಥಿತಿ ಚಿಂತಾಜನಕವಾಗದೆ ಇದ್ದೀತೆ? ಈ ವಿಷಯವನ್ನು ಸರಕಾರದ ಅವಗಾಹನೆಗೆ ತಂದರೂ ಸರಕಾರವು ನಿಗವಿತ್ತಂತೆ ಕಾಣುವದಿಲ್ಲ. ಇಲ್ಲಿಯ ಹೋಟೇಲುಗಳಿಗೆ ಹರಿಜನರು ಇನ್ನೂ ಪ್ರವೇಶಿಸುವಂತಿಲ್ಲ. ಹರಿಜನರ ಪರಿಸ್ಥಿತಿ ದಿನ ಕಳೆದಂತೆ ಹದಗೆಡುತ್ತಾ ಬರುತ್ತಿದೆ.

ಸವರ್ಣರು ಕೆಲವೆಡೆಗಳಲ್ಲಿ ಹರಿಜನರಿಗೆ ಕಿರುಕುಳಗಳನ್ನು ಕೊಡುತ್ತಲೇ ಇದ್ದಾರೆ. ಜಾತಿ ಭೇದ ಇನ್ನಷ್ಟು ಬೆಳೆಯುತ್ತಾ ಬರುತ್ತಿದೆ. ಎಲ್ಲಿಯ ವರೆಗೆ ಜಾತಿ ಭೇದವು ತೊಲಗದೆ ಉಳಿಯುವದೋ ಅಲ್ಲಿಯ ವರೆಗೆ ಹರಿಜನೋದ್ಧಾರವಾಗಲೀ ದೇಶೋದ್ಧಾರವಾಗಲೀ ಆಗಲಾರದೆಂಬುದು ಜನತೆಗೆ ತಿಳಿದಿರಲಿ. ಸರಕಾರವು ಕ್ಕಾಯಿದೆ ಕಾನೂನುಗಳನ್ನು ಅಸ್ಪೃಶ್ಯತಾ ನಿವಾರಣೆಗಾಗಿ ಮಾಡಿರುವದು ಸರಿಯಷ್ಟೆ. ಆದರೆ ಅವು ಪುಸ್ತಕದಲ್ಲೇ ಉಳಿಯುವಂತಾಗಬಾರದು. ಅವಕಾಶ ದೊರೆತಾಗ ಸರಕಾರವು ಕಾನೂನುಗಳನ್ನು ಜಾರಿಗೆ ತಂದಾದರೂ ಜನರಲ್ಲಿ ಪೂರ್ವಸಂಸ್ಕೃತಿಯಾಗಿ ಉಳಿದಿರುವ ಸಂಕುಚಿತ ಮನೋಭಾವಗಳನ್ನು ನೀಗಲು ಯತ್ನಿಸಲೇಬೇಕು.

ಸಂಬಂಧ ಪಟ್ಟ ಅಧಿಕಾರಿಗಳು ಕ್ಷೌರಿಕನ ಈ ನೀತಿಯನ್ನೂ, ಬಡ ವಿದ್ಯಾರ್ಥಿಯ ಗೋಳನ್ನೂ ಇನ್ನೊಮ್ಮೆ ವಿಮರ್ಶಿಸುವರೇ? ಇನ್ನು ಮುಂದೆಯಾದರೂ ಇಂಥ ಅನರ್ಥಗಳುಂಟಾಗದಂತೆ ಸರಕಾರ ಹಾಗೂ ಸವರ್ಣರು ನಿಗವಿಡುವರೇ?

'ಪ್ರೇಕ್ಷಕ'

IN MEMORIAM.

In ever loving and cherished Memory of our beloved son "SONNY" who suddenly left to his Heavenly Home, on the sad day of 14th April 1949.

May his Soul Rest in Peace. Inserted by his grief stricken Parents Dr. & Mrs. C. B. Achiah, Mercara.

❀ ನಗು ಮಲ್ಲಿಗೆ ❀

ಬಸ್ ಕಂಡಕ್ಟರು:—ಜನ ಭರ್ತಿಯಾಗಿ ದೆ, ಸೀಟಿಲ್ಲಪ್ಪ.

ಆತ:—ಇಲ್ಲ ಸ್ವಾಮಿ, ಹೇಗಾದರೂ ಮಾ ಡಿ ಒಂದು ಸೀಟು ಕೊಡಿ, ನನ್ನ ಹೆಂಡತಿ ಆ ಸ್ಪತ್ರೆಯಲ್ಲಿದ್ದಾಳೆ.

ಬಸ್ ಕಂಡಕ್ಟರು:—ಹಾಗಾದರೆ ಬಸ್ಸಿ ಒಂದೇ ಒಂದು ಸೀಟಿದೆ.

ಪ್ಯಾಸೆಂಜರು:—ಹಾಗಾದರೆ ತುಂಬಾ ವಂದನೆಗಳು. ತೆಗೆದುಕೊಳ್ಳಿ ಬಸ್ ಚಾ ರ್ಜು, ಟಿಕೇಟು ಬೇಡ.

ಬಸ್ ಕಂಡಕ್ಟರು:—ಒಳ್ಳೆದು, ಹೊಂ ನಿಮ್ಮ ಹೆಂಡತಿಯನ್ನು ಮೊನ್ನೆ ಕಂಡೆನಲ್ಲಾ ಚೆನ್ನಾಗಿದ್ದರು. ಈ ದಿನ ಏನಾಗಿ ಹೋ ಯಿತು?

ಪ್ಯಾಸೆಂಜರು:—ಇಲ್ಲಪ್ಪ, ಆಸ್ಪತ್ರೆಯಲ್ಲಿ ನರ್ಸಾಗಿದ್ದಾಳೆ!

• • •

ಉಪಾ:— ನಾಣಯ್ಯ, ಝಾನ್ಸಿಯ ಮಹಾರಾಣಿ ಯಾರು? ಅವಳ ಹೆಸರೇನು?

ನಾ:—ಝಾನ್ಸಿಯ ಮಹಾರಾಣಿ ಸೋ ಹ್ರಾಬ್ ಮೋದಿಯವರ ಹೆಂಡತಿ ಸಾರ್. ಅವರ ಹೆಸರು ಮೇಥಾಬ್.

* * *

ಉ:—(ಮೂರನೇ ಕ್ಲಾಸಿನ ಹುಡಗನಿ ಗೆ) ವಿಟ್ಟು, ಇದನ್ನು ಓದು.

ವಿ:—'ಕೊಡಗು ಬಹಳ ಸಂಪತ್ತುಳ್ಳ ದೇಶ. ಇದನ್ನು ತಂತ್ರಿಗಳು ಆಳುತ್ತಿ ದ್ದಾರೆ."

ಉ:— ತಂತ್ರಿಗಳಲ್ಲ, ಮಂತ್ರಿಗಳೆಂದು ಓದೋ.

ವಿ:—ಸಾರ್ ಅದನ್ನು ಓದುವಾಗ ಕ ಣ್ಣು ನೋವು ಬಂತು ಸಾರ್. ತಂತ್ರಿ ಎಂದು ಓದಿ ಬಿಟ್ಟೆ.

ಉ:—ಸರಿ. ನಾಳೆಯಿಂದ ಮರ್ಕೀ ನಿನ ಕನ್ನಡಿಗಳನ್ನು ಕಣ್ಣಿಗಿಟ್ಟುಕೊಂ ಡು ಬಾ.

—ಎಸ್. ಬಿ. ಪೂವಯ್ಯ.

• • •

ತಂದೆ—ನಿನ್ನ ಓದುಗಾರಿಕೆಯಿಂದ ನನ ಗೆ ವಿಪರೀತ ಖರ್ಚು ತಗಲುತ್ತಿದೆ.

ಮಗ—ಅದನ್ನರಿತೇ ರಾತ್ರೆ ಓದುವದ ನ್ನು ಬಹು ಮಟ್ಟಿಗೆ ಕಡಿಮೆ ಮಾಡಿ ಸಿನೆ ಮಾಕ್ಕೆ ಹೋಗುತ್ತಿದ್ದೇನೆ.

* * *

ತಾಯಿ—ಪುನಃ ಹೊಡೆದಾಡಿದಿರಾ ರಾಮು? ಒಳ್ಳೇ ಮಕ್ಕಳು ಹಾಗೆ ಜಗ ಳಾಡುವದಿಲ್ಲ.

ರಾಮು—ನನಗೆ ಅದು ಗೊತ್ತಿದೆ. ಆ ತನು ಒಳ್ಳೆ ಹುಡುಗನೆಂದು ನಾನು ತಿಳಿದಿ ದ್ದೆ. ಆದರೆ ಆತನಿಗೆ ಒಂದು ಪೆಟ್ಟು ಹಾ ಕಿದ ನಂತರ ಆತನು ಒಳ್ಳೆಯವನಲ್ಲವೆಂದು ತಿಳಿದುಬಂತು.

• • •

ಕಾಯಿಲೆಯಿಂದ ಕೆಲವು ದಿನಗಳಿಂದ ನರಳುತ್ತಿದ್ದ ಹೆಂಡತಿಯು ಕೇಳಿದಳು, 'ಆ ಹೊಸ ಪುಸ್ತಕದ ಕಡೇ ಪುಟಗಳನ್ನು ಏಕೆ ಹರಿದು ಹಾಕಿದಿರಿ?'

ಡಾಕ್ಟರು ಗಂಡ—ಕ್ಷಮಿಸು ಪ್ರಿಯೆ, ನೀನು ಹೇಳುವ ಆ ಕಡೇ ಪುಟಗಳಲ್ಲಿ 'ಎ ಪೆಂಡಿಕ್ಸ್' ಎಂದು ಬರೆದಿತ್ತು. ಅದನ್ನು ತೆಗೆದು ಹಾಕುವದು ನನ್ನ ಕರ್ತವ್ಯವಾ ಗಿತ್ತು.

• • •

ಗಣೇಶ—ಏನಯ್ಯಾ, ಬೆಳಿಗ್ಗೆ ಯಾವಾ ಗ ಬಂದರೂ ನೀನು "ಡಿಟೋ, ಡಿಟೋ, ಡಿಟೋ' ಎಂದು ಪ್ರಾರ್ಥಿಸುವದು ಕೇಳು ತ್ತದಲ್ಲ. ದೇವರ ಹೆಸರು 'ಡಿಟೋ' ಎಂ ದಿದೆಯೇ?

ನಾಗೇಶ—ಅಲ್ಲ ಕಣೋ, ನಾನು ಯುಗಾದಿ ದಿನ ಮಾತ್ರ ದೇವರ ಹೆಸರೆತ್ತಿ ಪ್ರಾರ್ಥಿಸುವದಾಗಿದೆ. ಉಳಿದ ದಿನವೆಲ್ಲ ಅದೇ ಪ್ರಾರ್ಥನೆಯಾದ್ದರಿಂದ ಸೂಕ್ಷ್ಮವಾ ಗಿ 'ಡಿಟೋ' ಎಂದು ಹೇಳಿದರಾಯಿತಲ್ಲ!

* * *

ಸೂರ್ಯ ಚಂದ್ರರಲ್ಲಿ ಯಾರು ಹೆಚ್ಚಿ ನ ಪ್ರಯೋಜಕರೆಂಬ ಬಗ್ಗೆ ದೊಡ್ಡ ಚರ್ಚೆ ನಡೆದಿತ್ತು. ಒಬ್ಬರು ಹೇಳಿದರು, 'ಚಂ ದ್ರನು ಸೂರ್ಯನಿಗಿಂಥಾ ಹೆಚ್ಚು ಪ್ರಯೋ ಜನಕಾರಿ' ಏಕೆಂದರೆ ರಾತ್ರೆ ನಮಗೆ ಕ ಣ್ಣುಕಾಣದಿರುವಾಗ ಆತನು ಬೆಳಕು ಕೊ ಡುತ್ತಾನೆ. ಆದರೆ ಸೂರ್ಯನು ನಮ್ಮೊ ಡನೆ ಹಗಲು ಹೊತ್ತಿನಲ್ಲೇ ಇರುವವನಾ ದ್ದರಿಂದ ಚಂದ್ರನಷ್ಟು ಉಪಯುಕ್ತನಲ್ಲ!'

* * *

ಶಾಸನ ಸಭೆಯ ಎರಡು ಸದಸ್ಯರಲ್ಲಿ ಚರ್ಚೆ ನಡೆದಿತ್ತು. 'ನೀನು ತಲೆ ಇಲ್ಲದ ತಿಳಿಗೇಡಿ' ಎಂದು ಒಬ್ಬನು ಹೇಳಿದನು. 'ನೀನು ಕುಡಿದು ಸ್ಮೃತಿತಪ್ಪಿರುವೆ' ಇ ನ್ನೊಬ್ಬನೆಂದನು. 'ನಾನು ಇಂದು ಕುಡಿ ದು ಮತ್ತನಾಗಿರಬಹುದು. ಸಾರಾಯಿ ಇಳಿದಾಗ ಸರಿಯಾಗುವೆನು. ಆದರೆ ನೀ ನು ಎಂದೂ ತಿಳಿಗೇಡಿಯಾಗಿಯೇ ಉಳಿ ಯುವೆ' ಮೊದಲನೆಯವನು ನುಡಿದನು.

* * *

ರಾಜಕೀಯ ಮುಂದಾಳೊಬ್ಬರು ಕಾ ರಿನಲ್ಲಿ ಪ್ರಯಾಣ ಮಾಡುತ್ತಿದ್ದರು. ಅವ ರ ಮಾತಿನಿಂದ ಡ್ರೈವರನಿಗೆ ಸಾಕೋಸಾ ಕಾಗಿತ್ತು. ಎಷ್ಟಾದರೂ ಅವರ ಮಾತು ನಿಲ್ಲಲಾರದು. ರಸ್ತೆಯಲ್ಲಿ ಮತ್ತೊಂದು ಕಾರು ಎದುರುಗಡೆಯಿಂದ ಬಂದು ಹಾದು ಹೋಯಿತು. ಅದರಲ್ಲಿದ್ದ ಪ್ರಯಾಣಿಕ ರು ನಿದ್ರೆ ಹೋಗಿದ್ದರು. ಡ್ರೈವರನು ರಾಜಕಾರಣಿಯನ್ನು ಉದ್ದೇಶಿಸಿ, 'ನೀವು ಮಾತಾಡಿದುದನೆಲ್ಲಾ ಆ ಕಾರಿನಲ್ಲಿ ಪ್ರ ಯಾಣ ಮಾಡಿದವರು ಕೇಳುತ್ತಿದ್ದಿರಬೇ ಕು' ಎಂದನು.

• • •

ಸಂದರ್ಶಕ—ಮಗೂ ನಿನಗೆ ವಯ ಸೆಷ್ಟು?

ವಿದ್ಯಾರ್ಥಿ—ಅದು ಹೇಳುವದು ಕಠಿಣ ಸಾರ್. ಶಾಲಾ ಪಟ್ಟಿಯ ಪ್ರಕಾರ ನನ, ವಯಸ್ಸು ೧೧, ನೈತಿಕ ಬಲದ ದೃಷ್ಟಿಯಿಂ ದ ೧೦, ಶಾರೀರಿಕ ಆಳತೆಯ ದೃಷ್ಟಿಯಿಂದ ೮. ಮಾನಸಿಕ ಬೆಳವಣಿಗೆಯ ದೃಷ್ಟಿಯಿಂ ದ ೯. ಆದರೆ ಇದನ್ನೆಲ್ಲಾ ಗಮನಕ್ಕೆ ಇಂ ದು ಯಾರು ತೆಗೆದುಕೊಳ್ಳುವರು?

——

ಹುಚ್ಚರ ಪಟ್ಟಿ

.... ಗೆ

ತಲ್ಲಣಿಸದಿರು ಕಂಡ್ಯ ಫೇಲಾದ ಫ್ರೆಂಡೆ
ಎಲ್ಲ ಪಾಸಾಗಿಹರೆ? ಹೇಳೊಮ್ಮೆ ನನಗೆ—
ಕಷ್ಟ ಸ್ಥಿತಿಯಲ್ಲಿ ತಲೆಗೆಡಿಸಿ ಓದಿದರು
ಮುಷ್ಟಿ ಸಡಿಲಾಗದಿರೆ ನಿನ್ನ ತಪ್ಪೇನೋ?
ಕೆಟ್ಟ ಮೋರೆಯ ಮೇಸ್ತ್ರು ಹೊಣೆಗಾರನಾಗಿಹನು
'ನೆಕ್ಸ್ಟ್ ಟೈಮು' ಸಲಹುವನು ಸಂದೇಹ ಬೇಡಾ—
ವ್ಯಾಪಾರ ಮಾಡುವಾ ಶೆಟ್ಟಿ ಶೇಟ್ಗಳಿಗೆಲ್ಲ
ಮಜದಿಂದ ಹಣಗಳಿಸೆ ಡಿಗ್ರಿ ಇತ್ತವರಾರೊ?
ನಿಜ ಹಾಳು ಜಾತಕವು ಓದಿದರೂ ಫೇಲಾಯ್ತು
ಬೇಜಾರ ಬಿಡು ಬೆಪ್ಪೆ, ಸಿನೆಮ ಬಿಡಬೇಡಾ—
ಸಭೆಗಳಲಿ ಕೂಗುವ ಕಪ್ಪೆ ಕೋಳಿಗೆ ಎಲ್ಲ
ರಭಸದಲಿ ವಟಗುಡಲು ಕಲಿಸಿದವರಾರೋ?
ಮುಂಬರುವ ಆಯ್ಕೆಯಲಿ ನೀನೊಮ್ಮೆ ನಿಲ್ಲುತಲಿ
ಪರೀಕ್ಷೆಯೇ ಸಾಕೆಂದು ಗೊತ್ತುವಳಿ ತಾರೋ—

ನಾಪೋಕ್ಲು ಪ್ರೌಢ ಶಾಲೆಯ ವಾರ್ಷಿಕೋತ್ಸವ.

ಈ ಶಾಲೆಯ ವಾರ್ಷಿಕೋತ್ಸವವು ತಾ. 11–4–53ರಂದು ಕೊಡಗಿನ ಚೀಫ್ ಕಮಿಷನರಾದ ಬಿ. ಕೆ. ದಯಾಸಿಂಗ್ ಬೇಡಿ ಇವರ ಅಧ್ಯಕ್ಷತೆಯಲ್ಲಿ ಜರಗಿತು.

ಅಪರಾಹ್ನ 4 ಗಂಟೆಗೆ ಸರಿಯಾಗಿ ಧ್ವಜವಂದನೆ, ಬಾಲಚರರು ಮತ್ತು ಎನ್. ಸಿ. ಸಿ. ದಳಗಳಿಂದ "ಗಾರ್ಡ್ ಆಫ್ ಆನರ್" ಗಳೊಡನೆ ಕಾರ್ಯಕ್ರಮ ಪ್ರಾರಂಭವಾಯಿತು. ಅನಂತರ ಅಧ್ಯಕ್ಷರೂ ಪ್ರಧಾನ ಅತಿಥಿಗಳೂ ಶೈಕ್ಷಣಿಕ ವಸ್ತು ಪ್ರದರ್ಶನವನ್ನು ಸಂದರ್ಶಿಸಿದರು. ಆ ತರುವಾಯ ವಿದ್ಯಾರ್ಥಿಗಳ "ಮಾಸ್ ಡ್ರಿಲ್" ಮತ್ತು "ಲೇಜಿಮ್ ಡ್ರಿಲ್" ಗಳನ್ನು ಪ್ರದರ್ಶಿಸಲಾಯಿತು. ಇದಾದ ಮೇಲೆ ಸ್ವಾಗತ ಗೀತೆ ಹಾಡಿ ಅಧ್ಯಕ್ಷರಿಗೆ ಹಾರವನ್ನರ್ಪಿಸುತ್ತಾ ಸಭೆಯು ಮೊದಲಾಯಿತು. ಶಾಲಾ ಮುಖ್ಯೋಪಧ್ಯಾಯರಾದ ಶ್ರೀ ಡಿ. ಎನ್. ದೇವಯ್ಯನವರು 1951–52 ನೇ ವರ್ಷದ ವಾರ್ಷಿಕ ವರದಿಯನ್ನರ್ಪಿಸುತ್ತ ಈ ಶಾಲೆಯು ಎಸ್. ಎಸ್. ಎಲ್. ಸಿ. ಮತ್ತು ಕಾಮನ್ ಎಂಟ್ರೆನ್ಸ್ ಪರೀಕ್ಷೆಗಳಲ್ಲಿ ಪಡೆದಿರುವ ಉತ್ತಮ ಫಲಿತಾಂಶಗಳ ಜೊತೆಗೆ ಶಾಲಾ ವಿದ್ಯಾರ್ಥಿಗಳು ಉತ್ಸಾಹದಿಂದ ನಡೆಯುತ್ತಿರುವ ಚರ್ಚಾಕೂಟ, ಸಹಕಾರಿ ಸ್ಟೋರ್, ಸಮಾಜಸೇವೆ, 4–ಹೆಚ್ ಕ್ಲಬ್, ಬಾಲಚರರುದಳ, ಗರ್ಲ್ ಗೈಡ್ ದಳ, ಯನ್. ಸಿ. ಸಿ. ದಳಗಳು ಇತ್ಯಾದಿ ಸರ್ವತೋಮುಖವಾದ ಕಾರ್ಯಕಲಾಪಗಳನ್ನು ವರ್ಣಿಸಿದರು. ಆ ತರುವಾಯ ಬಹುಮಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ಅಧ್ಯಕ್ಷರು ಹಂಚಿದರು. ಆ ಮೇಲೆ ಅಧ್ಯಕ್ಷರು ಭಾಷಣ ಮಾಡುತ್ತಾ ಬಹುಮಾನ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಿದಲ್ಲದೆ ಶಾಲೆಯು ನಡೆಸುತ್ತಿರುವ ಉತ್ತಮವಾದ ಕೆಲಸ, ಶ್ರೇಷ್ಠವಾದ ಪರೀಕ್ಷಾ ಫಲಿತಾಂಶಗಳು ಮತ್ತು ಇತರ ನಾನಾ ವಿಧದ ಚಟುವಟಿಕೆಗಳ ವಿಚಾರದಲ್ಲಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಗೊಳಿಸಿ ವಿದ್ಯಾರ್ಥಿಗಳನ್ನೂ ಉಪಾಧ್ಯಾಯರನ್ನೂ ಮುಖ್ಯೋಪಾಧ್ಯಾಯರನ್ನೂ ಅಭಿನಂದಿಸಿದರು ಮಾತ್ರವಲ್ಲದೆ ಶಾಲೆಯ ಪುರೋಭಿವೃದ್ಧಿಗೆ ಸಹಾಯಕವಾಗುವಂಥಾ ಹಲವು ಹಿತ ಸೂಚನೆಗಳನ್ನು ದಯಪಾಲಿಸಿದರು.

ಸಂಜೆ ಆರು ಗಂಟೆಯ ನಂತರ ನಡೆದ ವಿವಿಧ ವಿನೋದಾವಳಿಗಳಲ್ಲಿ ಇಂಗ್ಲಿಷ್, ಕನ್ನಡ ಮತ್ತು ಹಿಂದಿ ಹೀಗೆ ಮೂರು ನಾಟಕಗಳನ್ನಾಡಿದಲ್ಲದೆ ಹಲವು ನೃತ್ಯ ಸಂಗೀತಗಳೂ ಇದ್ದು ಸಭಿಕರ ಮನರಂಜನೆಗೈದವು. ಒಟ್ಟಿನಲ್ಲಿ ಹೇಳುವದಾದರೆ ಈ ವಾರ್ಷಿಕೋತ್ಸವವು ಅತ್ಯಂತ ವಿಜೃಂಭಣೆಯಿಂದ ನಡೆಯಿತು.

——

ಸರ್ವ ವಿದ್ಯಾರ್ಥಿಗಳ ಸಂಘ ಫ್ರೇಜರ್‌ಪೇಟೆ.

ಫ್ರೇಜರ್‌ಪೇಟೆ ಎಚ್. ಈ ಶಾಲೆಯ ಆವರಣದಲ್ಲಿ ತಾ. ೩೦ನೇ ಸೋಮವಾರ ದಿನ ಆ ಊರಿನ ನೋಟಿಫೈಡ್ ಏರ್ಯದ ವೈಸ್ ಪ್ರೆಸಿಡೆಂಟರಾದ ಶ್ರೀಯುತ ಎಸ್. ಎನ್. ಲಕ್ಷ್ಮಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸರ್ವ ವಿದ್ಯಾರ್ಥಿ ಸಂಘದ ದಿನಾಚರಣೆಯನ್ನು ಆಚರಿಸಲಾಯಿತು. ಶಾಲಾ ವಿದ್ಯಾರ್ಥಿಗಳಿಗೂ ಹಾಗೂ ಸಾರ್ವಜನಿಕರಿಗೂ ವಿವಿಧ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಿದ್ದರು. ಸಂಘದ ಕಾರ್ಯದರ್ಶಿಗಳಾದ ಶ್ರೀಯುತ ಎ. ಎ. ಶಾಂತಮಲ್ಲಪ್ಪ ಅವರು ಸಂಘದ ವರದಿಯನ್ನು ಓದಿ ಕಳೆದ ಆರು ತಿಂಗಳುಗಳಿಂದ ಸಂಘವು ನಡೆಸಿದ ಕಾರ್ಯಕಲಾಪಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಸಂಘದ ಆಶ್ರಯದಲ್ಲಿ ಎರಡು ಶಿಬಿರಾಗ್ನಿ (Camp fire) ಗಳನ್ನು ಏರ್ಪಡಿಸಿದ್ದರು.

——

'ನವೀನ ಭಾರತದ ಏಳಿಗೆಗಾಗಿ ಶ್ರಮಿಸಿ'

ಜ|| ಕಾರ್ಯಪ್ಪನವರ ಭಾಷಣ.

ಭಾರತದ ನಿವೃತ್ತ ಸಿ-ಇನ್-ಸಿಯವರಾದ ಜನರಲ್ ಕೆ. ಎಂ. ಕಾರ್ಯಪ್ಪನವರು ಹಾಸನದ ವೃತ್ತಿ ಶಿಕ್ಷಣ ಶಾಲೆಯ ವರಿತ್ತ ಆಹ್ವಾನವನ್ನು ಅಂಗೀಕರಿಸಿ ಶಾಲೆಯ ಸಮಾರಂಭದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೂ ಕಾರ್ಮಿಕರಿಗೂ ಸಾರ್ವಜನಿಕರಿಗೂ ಉಪದೇಶ ಭಾಷಣವನ್ನು ಮಾಡಿದರು.

ಸಮಾರಂಭ, ಇಂಪ್ಲಿಮೆಂಟ್ ಫ್ಯಾಕ್ಟರಿಯ ಗೆಸ್ಟ್ ಹೌಸಿನಲ್ಲಿ ನಡೆಯಿತು. ಶ್ರೀ ಜಿ. ಪಿ. ಸೀತಾರಾಂರವರಿಂದ ದೇವತಾ ಪ್ರಾರ್ಥನೆಯಾದ ಮೇಲೆ ಸಂಘದ ಅಧ್ಯಕ್ಷರಾದ ಶ್ರೀ ಎಂ. ವಿ. ವಿಠಲ್‌ರಾವ್‌ರವರು ಸ್ವಾಗತ ಭಾಷಣ ಮಾಡಿದರು. ಶಿಕ್ಷಣ ಶಾಲೆಯ ಸುಪರಿಂಡೆಂಟ್‌ರವರಾದ ಶ್ರೀ ನರಸಿಂಹನ್‌ರವರು ಭಾಷಣ ಮಾಡಿ ಶಾಲೆಯ ಸಂಕ್ಷಿಪ್ತ ವರದಿಯನ್ನು ತಿಳಿಸಿದರು. ತರುವಾಯ ಫ್ಯಾನ್ಸಿ ಡ್ರೆಸ್ ಪ್ರದರ್ಶನ ನಡೆಯಿತು. ಸಂಗೀತ ಕಚೇರಿಯೂ ನಡೆಯಿತು. ಕಾರ್ಯದರ್ಶಿಗಳ ವರದಿಯ ನಂತರ ಜನರಲ್ ಕಾರ್ಯಪ್ಪನವರು ಬಹುಮಾನಗಳನ್ನು ಹಂಚಿ ಅಮೋಘವಾದ ಭಾಷಣವನ್ನು ಮಾಡಿದರು.

ಎಲ್ಲಾ ವರ್ಗದವರು ನವೀನ ಭಾರತದಲ್ಲಿ ದೇಶದ ಏಳಿಗೆಗಾಗಿ ಸರ್ವಶಕ್ತಿ ವಿನಿಯೋಗ ಮಾಡಿ ದುಡಿದು, ಭಾರತವನ್ನು ಬಲಯುತವಾದ ರಾಷ್ಟ್ರವನ್ನಾಗಿ ಮಾಡಬೇಕೆಂದು ಅವರು ಉಪದೇಶ ಮಾಡಿದರು. ತರುವಾಯ ನಾಟಕ ಪ್ರದರ್ಶನವಾಯಿತು. ಸಂಘದ ಕಾರ್ಯದರ್ಶಿಗಳಾದ ಶ್ರೀ ಎಸ್. ಆರ್. ಶ್ರೀನಿವಾಸಯ್ಯಂಗಾರ್‌ರವರು ವಂದನಾರ್ಪಣೆ ಮಾಡಿದರು.

ಭಾರತದಲ್ಲಿ ಸರ್ವಾಧಿಕಾರ ಬೆಳೆಯುತ್ತಿದೆ.

ಕಾಶ್ಮೀರವು ಸಂಪೂರ್ಣವಾಗಿ ಭಾರತ ಒಕ್ಕೂಟದೊಂದಿಗೆ ಲೀನವಾಗಬೇಕು ಎಂಬುದಾಗಿ ಡಾ| ಶ್ಯಾಮಪ್ರಸಾದ ಮುಖರ್ಜಿಯವರು ತಾ. ೧೧ರಲ್ಲಿ ಗ್ವಾಲಿಯರ್‌ನಲ್ಲಿ ಒತ್ತಿ ಹೇಳಿದರು.

"ಜಮ್ಮುವಿನ ಪ್ರಜಾಪರಿಷತ್ತಿನಲ್ಲಿ ಚಳವಳಕ್ಕೆ ನಮ್ಮ ಸಂಪೂರ್ಣ ಬೆಂಬಲವೀಯಬೇಕು. ಜಮ್ಮುವಿನ ನಮ್ಮ ಸಹೋದರ ಸಹೋದರಿಯರಿಗೆ ಭಾರತೀಯರ ನೈತಿಕ ಪ್ರೋತ್ಸಾಹವಿದು. ಪ್ರಜಾಪರಿಷತ್ತಿನ ಚಳವಳಕ್ಕೆ ಬೆಂಬಲವಿತ್ತು ಮಾತ್ರ ನಮ್ಮ ಆಂದೋಲನ ಮುಂದುವರಿಯುತ್ತಿತ್ತು. ಪ್ರಜಾಸತ್ತಾತ್ಮಕ ಸ್ವತಂತ್ರ ಭಾರತದಲ್ಲಿ ನಿರಂಕುಶ ಅಧಿಕಾರ ಭೂತಾಕಾರವಾಗಿ ಬೆಳೆದಿದೆ. ಇದನ್ನು ನಾವು ಖಂಡಿಸುತ್ತೇವೆ. ಸರ್ವಾಧಿಕಾರವು ದಿನೇ ದಿನೇ ಬೆಳೆಯುತ್ತಲಿದೆ.

ಧರ್ಮ ರಹಸ್ಯ

—ಸ್ವಾಮಿ ನಾರಾಯಣಾನಂದ—

(1) ಸತ್ಯವೇ ಈ ಜಗತ್ತಿನ ಸ್ವಾಮಿಯು. ಸತ್ಯಾನ್ವೇಷಕನು ಈ ಜಗತ್ತಿನ ಸರ್ವ ಸಾರಕ್ಕೆ ಹಕ್ಕುದಾರನಾಗುವನು.

(2) ಮನುಷ್ಯನ ನಡೆನುಡಿಗಳೇ ಆತನ ಭಾಗ್ಯ, ಭವಿಷ್ಯಗಳು. ದೇವರ ರಾಜ್ಯದ ಬಾಗಿಲಿಗೆ ಒಳ್ಳೆಯ ನಡೆನುಡಿಗಳೇ ಬೀಗದ ಕೈ.

(3) ಪಾಪದ ಪರಿಣಾಮವೇ ಮಾನಸಿಕ ಅಶಾಂತಿಗೆ ಕಾರಣ. ಅಹಂಭಾವವು ಆತ್ಮದ ಬೆಳಕನ್ನು ಆರಿಸುತ್ತದೆ. ಶಾರೀರಿಕ ಸುಖಾಪೇಕ್ಷೆಯು ಮಾನವನನ್ನು ಕೆಳ ಅಂತಸ್ತಿಗಿಳಿಸುತ್ತದೆ.

(4) ನಂಬಿಕೆ; ವಿಶ್ವಾಸಗಳು ಅಸಾಧ್ಯವನ್ನು ಸಾಧಿಸುವವು. ದೇವರಲ್ಲಿ ವಿಶ್ವಾಸವಿಲ್ಲದವನಿಗೆ ಯಾವುದರ ವಿಶ್ವಾಸವೂ ಇರಲಾರದು.

(5) ಜೀವನವೆಂದರೆ ಕಲಿಯುವದು. ಪ್ರತಿಯೊಂದರಿಂದಲೂ, ಪ್ರತಿ ನಿಮಿಷದಲ್ಲಿಯೂ ಅನುಭವ, ಜ್ಞಾನಗಳನ್ನು ಸಂಪಾದಿಸಿಕೊಂಡು ಸರಿ ಪಥದಲ್ಲಿ ನಡೆಯುವದೇ ನಿಜವಾದ ಜೀವನ.

(6) ಭಕ್ತನ ನಿಷ್ಠೆ ಇರಲಿ. ತಾಯಿಯ ಹೃದಯವಿರಲಿ. ಪತಿವ್ರತೆಯ ಪವಿತ್ರತೆ ಇರಲಿ. ಜಿಪುಣನಿಗೂ ಹಣಕ್ಕೂ ಇರುವ ಸಂಬಂಧವಿರಲಿ. ಇವೆಲ್ಲಾ ದೇವರ ಕಡೆಗಿದ್ದರೆ ಮಹಾತ್ಮನಾಗುವೆ.

(7) ನಿಜವಾದ ಪ್ರೇಮವೇ ಮುಕ್ತಿ. ಕಾಮವು ಪ್ರೇಮವಲ್ಲ. ಕಾಮವು ಬಂಧಿಸುತ್ತದೆ. ಕೆಳಗೆ ತಳ್ಳುತ್ತದೆ. ಆದರೆ ಪ್ರೇಮವು ಬಿಡುಗಡೆ ಮಾಡುತ್ತದೆ. ಮೇಲೆತ್ತುತ್ತದೆ.

(8) ಪ್ರತಿಯೊಂದು ಜೀವಿಯೂ ಒಂದು ದಿನ ಘನತೆಗೇರುವದು. ಹನ್ನೆಲೆಯಲ್ಲಿರುವ ಜೀವವು ಅನಂತವೂ, ಅಖಂಡವೂ ಆಗಿದೆ.

(9) ಜಗತ್ತಿನಲ್ಲಿ ಅಸಂಖ್ಯ ಪುಸ್ತಕಗಳಿವೆ. ಆದರೆ ಮಾನವ ಜೀವನದ ಅವಧಿ ಕೆಲವೇ ವರ್ಷ. ಸಾವಿರ ಪುಸ್ತಕಗಳನ್ನೇ ಓದು ಯಾ ಒಂದೇ ಪುಸ್ತಕ ಓದು ಓದಿದುದು ಆಚರಣೆಯಲ್ಲಿ ಬರುವಂತಿದ್ದರೆ ಅದಕ್ಕೆ ಫಲ.

"ಕಳೆದ ೫ ವಾರಗಳ ಅವಧಿಯಲ್ಲಿ ನಮ್ಮ ಚಳವಳವು ಮುಖ್ಯವಾಗಿ ದೇಹಲಿ ಮತ್ತು ಪಟಾನ ಕೋಟೆಗಳಲ್ಲಿ ಬಲವಾಗಿದೆ. ಭಾರತದ ಮೂಲೆ ಮೂಲೆಗಳಿಂದ ಸತ್ಯಾಗ್ರಹಿಗಳು ಬಂದು ಭಾಗವಹಿಸುತ್ತಿದ್ದಾರೆ. ಈ ವರೆಗೆ ೮೦೦ ಮಂದಿ ಬಂಧಿಸಲ್ಪಟ್ಟಿದ್ದಾರೆ. ಈ ಶಾಂತಮಯ ಸತ್ಯಾಗ್ರಹವು ಜಾತಿಯಭಾವ ಪ್ರಚೋದನೆ ಎಂಬುದು ಆಧಾರ ರಹಿತ.

"ಕಾಶ್ಮೀರವು ಭಾರತದೊಂದಿಗೆ ಲೀನವಾಗಬೇಕು ಎಂಬುದಕ್ಕೆ ಜನಮತಗಣನೆ ಅಗತ್ಯವೇ ಇಲ್ಲ. ಕಾಶ್ಮೀರ ಪ್ರಶ್ನೆಯು ವಿಶ್ವಸಂಸ್ಥೆಗೆ ಸಂಬಂಧಿಸಿದುದಲ್ಲ. ಭಾರತದೊಂದಿಗೆ ಸಂಪೂರ್ಣ ಲೀನವಾಗುವ ಕುರಿತು ಕಾಶ್ಮೀರ ಜಮ್ಮು ಶಾಸನ ಸಭೆ ತೀರ್ಮಾನಿಸಲಿ. ಪಾಕಿಸ್ತಾನದ ವಶವಿರುವ ೧/೩ ಭಾಗವನ್ನು, ಪ್ರದೇಶವನ್ನು ವಾಪಾಸು ಪಡೆಯಲು ಕಾರ್ಯಕ್ರಮ ನಡೆಯಲಿ. ನಾಲ್ಕು ವರ್ಷಗಳಿಂದಲೂ ವಿಶ್ವಸಂಸ್ಥೆಯು ಈ ಕುರಿತು ಸಂಪೂರ್ಣ ವಿಫಲ ಗೊಂಡಿದೆ" ಎಂದು ಪತ್ರಿಕಾಪರಿಷತ್ತಿನಲ್ಲಿ ಡಾ| ಮುಖರ್ಜಿ ನುಡಿದರು.

ಹೈದರಾಬಾದಿನ ವಿಭಜನೆ ಈಗ ಸಾಧುವಲ್ಲ.

ಹೈದರಾಬಾದಿನ ವಿಭಜನೆಗೆ ಹಾಗೂ ಭಾಷಾವಾರು ಪ್ರಾಂತ ರಚನೆಗೆ ಇದು ಯೋಗ್ಯವಾದ ಸಮಯವಲ್ಲ, ಎಂದು ಹೈದರಾಬಾದನ್ನು ವಿಭಜಿಸಿ ತೆಲುಗು ಪ್ರದೇಶವನ್ನು ಆಂಧ್ರ ಪ್ರಾಂತದೊಂದಿಗೆ ಸೇರಿಸಬೇಕೆಂದು ಕೇಳಿಕೊಳ್ಳುವ ಠರಾವಿನ ಕುರಿತು ಮಾತನಾಡುತ್ತಾ, ಹೈದರಾಬಾದಿನ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಹೇಳಿದರು.

ಸ್ವಾತಂತ್ರ್ಯದ ನಂತರ ಭಾಷಾವಾರು ಹಾಗೂ ಪ್ರಾಂತೀಯ ಸಂಕುಚಿತ ಭಾವನೆಗಳು ಬೆಳೆಯುತ್ತಿವೆ. ದೇಶದ ಹಿತದೃಷ್ಟಿಯಿಂದ ಅವುಗಳನ್ನು ಬೆಳೆಯಲು ಬಿಡಬಾರದು. ಕಾಂಗ್ರೆಸು ಭಾಷಾವಾರು ಪ್ರಾಂತ ರಚನೆಯ ತತ್ವವನ್ನು ಒಪ್ಪಿರುವದು. ಆದರೆ ರಾಷ್ಟ್ರೀಯ ಯೋಜನೆಯಲ್ಲಿ ಅದಕ್ಕೆ ಪ್ರಥಮ ಸ್ಥಾನವಿಲ್ಲ." ಎಂದು ಶ್ರೀ ರಾಮಕೃಷ್ಣರಾಯರು ಹೇಳಿದ್ದಾರೆ. ಪ್ರತಿ ಪಕ್ಷದ ಸದಸ್ಯರು, ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರ ಬೆಂಬಲವು ಭಾಷಾವಾರ ಪ್ರಾಂತಗಳಿಗೆ ಇದೆ,

"ನಾನಲ್ ನಗರದ ಠರಾವಿನ ಪ್ರಕಾರ ಭಾಷಾವಾರು ಪ್ರಾಂತರಚನೆಯ ವಿಷಯದಲ್ಲಿ ಕಾಂಗ್ರೆಸಿಗರಲ್ಲಿ ಭಿನ್ನಾಭಿಪ್ರಾಯವಿರಲು ಸಾಧ್ಯವಿಲ್ಲ. ಸ್ವಾಮಿ ರಮಾನಂದರು ವೈಯಕ್ತಿಕವಾಗಿ ಏನನ್ನಾದರೂ ಹೇಳಿರಬಹುದು.

"ದೇಶದ ಎಲ್ಲ ಪರಿಸ್ಥಿತಿಗಳನ್ನು ಗಮನಕ್ಕೆ ತಂದರೆ ಭಾಷಾವಾರು ಪ್ರಾಂತಗಳನ್ನು ರಚಿಸಲು ಹಲವು ವಾಸ್ತವಿಕ ತೊಂದರೆಗಳಿವೆ. ಆದುದರಿಂದ ಈ ಠರಾವನ್ನು ಹಿಂತೆಗೆದು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಸಾಧ್ಯವಾದ ವಿಷಯಗಳನ್ನು ಕಾರ್ಯರೂಪಕ್ಕೆ ತರಬೇಕೆಂದು ರಾಷ್ಟ್ರಾಧ್ಯಕ್ಷರಿಗೆ ನಾವು ಜವಾಬ್ದಾರಿಹೊತ್ತ ಪ್ರತಿನಿಧಿಗಳು ಶಿಫಾರಸು ಮಾಡಬಾರದು." ಎಂದು ಮುಖ್ಯ ಮಂತ್ರಿಗಳು ಹೇಳಿದರು.

ಮಿಡಿತೆಗಳ ನಾಶಕ್ಕೆ ಹೋರಾಟ ನಡೆಯಲಿ

ಮಿಡಿತೆ ಹಾವಳಿಗೆ ಈಡಾದ ಎಲ್ಲ ಪ್ರಾಂತಗಳೂ ಏಕಮುಖ ಕಾರ್ಯಕ್ರಮ ಕೈಗೊಂಡು ಮಿಡಿತೆಗಳನ್ನು ನಾಶಗೊಳಿಸಲು ಪ್ರಯತ್ನ ಮಾಡಬೇಕೆಂಬುದಾಗಿ ಕೇಂದ್ರ ಸರಕಾರದ ವ್ಯವಸಾಯ ಮಂತ್ರಿ ಡಾ ಪಂಜಾಬ್ ರಾವ್ ದೇಶಮುಖರು ತಾ. ೧೧ರಲ್ಲಿ ಹೇಳಿದರು.

ಅಂತರ್ ಪ್ರಾಂತೀಯ ಮಿಡಿತೆ ವಿನಾಶಕ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಂತ್ರಿಗಳು ಭಾಷಣಮಾಡುತ್ತಾ, "ಮಿಡಿತೆ ಹಾವಳಿ ಪ್ರತಿ ಬಂಧಕ ಸಮಿತಿಯು ಮಾಡಿದ ಸಲಹೆಗಳನ್ನೂ, ತಜ್ಞರು ಸೂಚಿಸಿರುವ ಎಲ್ಲ ಪ್ರಾಂತಗಳವರೂ ಏಕಮುಖವಾಗಿ ಹೋರಾಟ ನಡೆಸಬೇಕು. ಮರಳುಗಾಡಿನ ಪಕ್ಕದ ಕೆಲವು ಹೊಲಗಳಿಗೆ ಕಳೆದ ವರ್ಷ ಮಿಡಿತೆ ಹಾವಳಿಯಿಂದ ಪರಿಹಾರಕೊಡಲಾಗಲಿಲ್ಲ. ಸಧ್ಯ ತೊಂದರೆಯಿಂದ ಪಾರಾದೆವು ಎಂದು ಗ್ರಹಿಸುವಾಗ ಪುನಃ ಈ ಬಾಧೆಯ ವರದಿಗಳು ಕೇಳಲಾರಂಭಿಸಿದವು. ಮಿಡಿತೆಗಳ ಸಂತಾನ ಬೆಳೆಯುತ್ತಿರುವ ಮರುಭೂಮಿಗಳಲ್ಲಿ ಮೊದಲು ಕಾರ್ಯವಾರಂಭಿಸಬೇಕು. ಇದಕ್ಕೆ ತುಂಬಾ ಖರ್ಚು ತಗಲುವದು. ಆದುದರಿಂದ ಹಾವಳಿ ಪೀಡಿತ ಪ್ರಾಂತಗಳು ಸಹಕರಿಸಬೇಕು." ಎಂದು ಮಂತ್ರಿಗಳು ತಿಳಿಸಿದರು.

ಹ್ಯಾಮರ್‌ಷೆಲ್ಡ್‌ರ ಅಧಿಕಾರ ಸ್ವೀಕಾರ.

ಪ್ರಪಂಚ ಸಂಸ್ಥೆಯ ನೂತನ ಸೆಕ್ರೆಟರಿ ಜನರಲ್‌ರಾಗಿ ಮಿ|| ಡಾಗ್ ಹ್ಯಾಮರ್ ಷೆಲ್ಡ್‌ರು ತಾ. ೧೦ರಲ್ಲಿ ವಿಧಿಪೂರ್ವಕವಾಗಿ ಅಧಿಕಾರ ಸ್ವೀಕಾರ ಮಾಡಿದರು.

'ಪ್ರಪಂಚ ಸಂಸ್ಥೆಯ ಅಂತರರಾಷ್ಟ್ರೀಯ ಸಿವಿಲ್ ಸೇವಕನಾಗಿ ನಾನು ನಿಷ್ಠೆಯಿಂದ ಸೇವೆ ಸಲ್ಲಿಸುತ್ತೇನೆ' ಎಂಬುದಾಗಿ ಅವರು ಪ್ರಮಾಣ ವಚನ ಸ್ವೀಕರಿಸಿದರು.

'ನಿಮ್ಮೆಲ್ಲರ ಸೇವೆ ಮಾಡಲು ನಾನಿಲ್ಲಿದ್ದೇನೆ' ಎಂಬುದಾಗಿ ಅವರು ಜನರಲ್ ಅಸೆಂಬ್ಲಿಯ ಸದಸ್ಯರುಗಳನ್ನುದ್ದೇಶಿಸಿ ಭಾಷಣ ಮಾಡಿದರು. 'ಎಲ್ಲಾ ಸಮಸ್ಯೆಗಳನ್ನೂ ತೆರೆದ ಮನಸ್ಸಿನಿಂದ ಬಿಡಿಸುವುದದಾಗಿ ಪಣ ತೊಟ್ಟಿದ್ದೇನೆ. ನಾನು ತಪ್ಪು ದಾರಿ ಹಿಡಿದರೆ ತಿದ್ದುವ ಜವಾಬ್ದಾರಿ ನಿಮ್ಮದು' ಎಂದು ಅವರು ಭಾಷಣ ಮಾಡಿದರು.

ನನ್ನ ಕಾಲೇಜ್ ಗೆಳತಿಯರು.

ಲೇಖಕಿ:— 'ಮಂಗಳ' ಮಡಿಕೇರಿ.

ವಿದ್ಯಾರ್ಥಿಯಾಗಿರುವಾಗ ನೂರಾರು ಸಹಪಾಠಿಗಳೊಡನೆ ವಿದ್ಯೆ ಕಲಿತರೂ ಅನಂತರ ನೆನಪಿನಲ್ಲಿ ಉಳಿಯುವವರು ಹೆಚ್ಚೆಂದರೆ ಹತ್ತು ಹದಿನೈದು ಜನ. ಆ ದಿನಗಳನ್ನು ನೆನೆದರೆ ನನಗೆ ಮೊದಲು ನೆನಪಿಗೆ ಬರುವವಳೆಂದರೆ ಚಿತ್ರಾ. ದೇಶದ ವಿವಿಧ ಭಾಗಗಳಿಂದ ವಿವಿಧ ರೀತಿ ಪದ್ಧತಿ ಭಾಷೆಗಳನ್ನಾಡುವ ಹಲವಾರು ಹುಡುಗಿಯರು ನಮ್ಮ ಕಾಲೇಜಿನಲ್ಲಿದ್ದರು. ಅವರಲ್ಲಿ ದಕ್ಷಿಣ ಕೊಡಗಿನಿಂದ ಬಂದವಳು ಚಿತ್ರಾ. ಯಾವ ಆಡಂಬರವೂ ಇಲ್ಲದ ಸೌಮ್ಯ ನಡೆನುಡಿ. ಮಾತು ಮಾತಿನಲ್ಲಿ ಹಾಸ್ಯ ತುಂಬಿರಬಹುದಾದರೂ ತನ್ನಷ್ಟಕ್ಕೆ ತಾನು ಕ್ಲಾಸಿನಲ್ಲಿರುವ ಹುಡುಗಿ ಆಕೆ. ವಿದ್ಯಾರ್ಥಿನಿಯರು ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಪಂಗಡಗಳಾಗಿ, ಇಂಥಾ ಪಂಗಡಗಳು ಗೆಳತಿಯರ ಗುಂಪೆನಿಸಿಕೊಳ್ಳುತ್ತವೆ. ಆಯಾಯ ಗುಂಪಿನವರದೇ ಪ್ರತ್ಯೇಕ ಲೋಕ. ಚಿತ್ರಾಳನ್ನು ಯಾರೂ ಅಷ್ಟೊಂದು ಗಮನಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಅವಳು ಬಹು ಚಿಕ್ಕವಳಷ್ಟೇ ಅಲ್ಲದೆ ಗೆಳೆತನವನ್ನು ಇನ್ನೊಬ್ಬರ ಮೇಲೆ ಹೇರುವ ಸ್ವಭಾವದವಳಾಗಿರಲಿಲ್ಲ. ಆದರೆ ಆಕೆಯ ವ್ಯಕ್ತಿತ್ವ ಪ್ರಕಾಶಕ್ಕೆ ಬಂದುದು ಅದೊಂದು ದಿನ. ಅಂದಿನಿಂದ ನನಗೆ ಆಕೆಯ ಮೇಲೆ ಹೆಚ್ಚಿನ ಅಭಿಮಾನ ಆದರಗಳು ಉಂಟಾದುವು.

ಎಂದಿನಂತೆ ಆ ದಿನವೂ ಕಾಲೇಜಿನ ಪ್ರಿನ್ಸಿಪಲರು ಇಂಗ್ಲಿಸ್ ಪಾಠ ಪ್ರಾರಂಭಿಸಿದ್ದರು ಇಂಗ್ಲಿಷ್ ಕವಿಗಳು, ಸಾಹಿತ್ಯ, ಕಾವ್ಯಗಳ ಮೇಲೆ ಉಪನ್ಯಾಸ ಪ್ರಾರಂಭವಾಯಿತು. ಪಾಠಕ್ಕೆ ಸಂಬಂಧಿಸಿದ ಮಾತಿನ ಮಧ್ಯೆ ಬೇರೆ ವಿಚಾರವನ್ನೂ ಎತ್ತಿಕೊಂಡರು. ನಮ್ಮ ಪ್ರಿನ್ಸಿಪಲರು ಇಂಗ್ಲೆಂಡ್ ನೋಡಿದವರು. ಅವರಿಗೆ ಆಂಗ್ಲ ಭಾಷೆ ಎಂದರೆ ಎಲ್ಲೂ ಇಲ್ಲದ ಅಭಿಮಾನ. ಶೇಕ್ಸ್‌ಪಿಯರನೇ ಜಗತ್ತಿನ ಏಕೈಕ ಕವಿಯೆಂದು ವಾದಿಸುವವರು. ಮಾತಾಡುತ್ತಾ ಜಗತ್ತಿನ ಸರ್ವ ಭಾಷೆಗಳಿಗೂ ಲ್ಯಾಟಿನ್ ಆಧಾರ. ಆ ಹಳೇ ವೃಕ್ಷದಿಂದ ಪರಿಪಕ್ವವಾಗಿ ಬೆಳೆದು ಕಂಪೀಯುತ್ತಿರುವ ಕುಸುಮವೆಂದರೆ ಇಂಗ್ಲೀಷ್ ಎಂದು ಹೇಳಿದರು.

"What about our Sanskrit ?"

ಪ್ರಿನ್ಸಿಪಲರ ಮಾತಿನ ಮಧ್ಯೆ ತಡೆಹಾಕಿ ಕೇಳಿದ ಈ ಪ್ರಶ್ನೆ ಎಲ್ಲರನ್ನೂ ಚಕಿತಗೊಳಿಸಿತು. ಪ್ರಶ್ನಿಸಿದವಳು ವಿದ್ಯಾರ್ಥಿನಿ ಯಾರೆಂದು ತಿಳಿದು ಎಲ್ಲರ ಕಣ್ಣುಗಳು ಅತ್ತ ಕೇಂದ್ರೀಕರಿಸಿದ್ದವು. ಪ್ರಿನ್ಸಿಪಲರು ಅರೆನಿಮಿಷ ಗಾಬರಿಗೊಂಡರು. ಕೂಡಲೇ ಚೇತರಿಸಿಕೊಂಡು ಪ್ರಶ್ನೆ ಕೇಳಿದ ಚಿತ್ರಾಳ ಕಡೆಗೆ ನೋಡಿದಾಗ ಅವರ ಮುಖ ಪ್ರಸನ್ನವಾಯಿತು. ಎಲ್ಲರೂ ಸಾದಾ ಬಿಳಿ ಸೀರೆಯುಟ್ಟ ಚಿತ್ರಾಳನ್ನು ನೋಡುತ್ತಿದ್ದರು. ಚಿತ್ರಾಳದೂ ಹಸನ್ಮುಖ. ತಿಳಿನಗು ಮುಖದ ಮೇಲೆ ಯಾವಾಗಲೂ ತೇಲಾಡುತ್ತಿರುವ ಸರಳ ತರುಣಿ. ಪ್ರಿನ್ಸಿಪಲರಿಗೆ ಚಿತ್ರಾಳೆಂದರೆ ತುಂಬಾ ಆದರ. ಆದ್ದರಿಂದ "sorry I forgot" ಎಂದು ಉತ್ತರ ಕೊಟ್ಟರು. ಇತರ ಯಾರಾದರೂ ಕೇಳಿದ್ದರೆ ಅವರು ಕಿಡಿಕಿಡಿಯಾಗಿ ಏನೇನೋ ಹೇಳುತ್ತಿದ್ದರು. ಆದರೆ ಚಿತ್ರಾಳ ವಿಚಾರದಲ್ಲಿ ಅವರು ಹಾಗೆ ಮಾಡದೆ ಮಾತು ಮುಂದರಿಸುತ್ತಾ "But Sanskrit is a dead language· Why do you compare roses with violets ?" ಎಂದರು. ಅವರ ಉತ್ತರಕ್ಕೂ ಪ್ರಶ್ನೆಗೂ ಸಂಬಂಧವಿರಲಿಲ್ಲ. ಚಿತ್ರಾಳು ಪುನಃ ಪ್ರಶ್ನಿಸಲು ಎದ್ದು ನಿಂತಳು ಆದರೆ ಅಷ್ಟರಲ್ಲಿ ಗಂಟೆಯಾಯ್ತೆಂದು ಪ್ರಿನ್ಸಿಪಲರು ತರಗತಿಯಿಂದ ಎದ್ದು ಹೋದರು.

ಅಂದು ಚಿತ್ರಾಳ ವ್ಯಕ್ತಿತ್ವ ಹಿರಿದಾಗಿ ನನಗೆ ತೋರಿತು. ನಮ್ಮ ಕಾಲೇಜೆಂದರೆ ವಿಚಿತ್ರ ನಿಯಮಗಳಿಂದ ಕೂಡಿದ್ದು. ಅಲ್ಲಿ ನಮ್ಮ ದೇಶದ ವಿಚಾರ ನಮ್ಮ ಭಾಷೆಗಳನ್ನು ಎತ್ತಿ ವಾದಿಸುವದು ಕಷ್ಟದ ಮಾತು! ಯಾರು ಯಾವುದೇ ವಿಚಾರದಲ್ಲಿ ಅಧ್ಯಾಪಕರನ್ನು ಪ್ರಶ್ನಿಸುತ್ತಿರಲಿಲ್ಲ. ಚಿತ್ರಾಳಲ್ಲಿ ಜಾಗೃತವಾದ ಆ ದೇಶ ಪ್ರೇಮ ಹೃದಯದಲ್ಲಿ ಉರಿಯುತ್ತಿದ್ದರೂ ಕಾರ್ಯದಲ್ಲಿ, ಮಾತಿನಲ್ಲಿ ಏನೂ ಮಾಡಲಾಗದ ಸಂದಿಗ್ಧ ಸ್ಥಿತಿ ಇವು ನನಗೆ ಆಕೆಯಲ್ಲಿ ಇನ್ನೂ ಹೆಚ್ಚಿನ ಗೌರವವನ್ನು ಹುಟ್ಟಿಸಿದವು. ಆಕೆ ಖಾದಿ ಬಟ್ಟೆ ಧರಿಸುತ್ತಿರುವದೇಂದು ಅಂದು ನನಗೆ ತಿಳಿಯಿತು. ಕಾಲೇಜ್ ವಿದ್ಯಾರ್ಥಿನಿಯರ ಹಾಗೂ ಹೊರಗಿನ "ಫೇಶನೇಬಲ್" ಸಮಾಜದಲ್ಲಿ ನಿರಾಭರಣ ಸುಂದರಿಯಾದ ಆಕೆಯ ವಿಚಾರವೇ ಆ ದಿನವಿಡೀ ನನ್ನ ತಲೆಯಲ್ಲಿ ತುಂಬಿತ್ತು. ಆಕೆಯನ್ನು ಕಡೆಯದಾಗಿ ಕಂಡು ಇಂದಿಗೆ ಮೂರು ವರ್ಷಗಳಾಗಿವೆ ಆಕೆ ಎಲ್ಲಿ ಇದ್ದರೂ ಆ ನಿಷ್ಕಲ್ಮಷ ಹೃದಯ, ಸ್ವಂತ ಅಭಿಪ್ರಾಯ ಆದರ್ಶಗಳಿಂದ ಆ ಊರನ್ನು ಸಮಾಜವನ್ನು ಬೆಳಗಿಸುತ್ತಿರಬೇಕು.

ಥಟ್ಟನೆ ಯೋಚನೆಗೆ ಬರುವ ಮತ್ತೊಬ್ಬ ಗೆಳತಿಯೆಂದರೆ ಮುತ್ತು. ಸರಕಾರಿ ಉದ್ಯೋಗಸ್ಥರ ಮಗಳಾದುದರಿಂದ ಊರೂರು ತಿರುಗುವ ಅನುಕೂಲತೆ ಇದ್ದು ನಾಲ್ಕಾರು ಭಾಷೆಗಳನ್ನು ಕಲಿತಿದ್ದಳು. ಆದರೆ ಮಾತೃ ಭಾಷೆಯಾದ ಕನ್ನಡವೇ ಆಕೆಗೆ ತಿಳಿದಿರಲಿಲ್ಲ. ಆಕೆ ವಿವಿಧ ಭಾಷೆಗಳನ್ನಾಡುತಿದ್ದುದರಿಂದ ವಿವಿಧ ಭಾಷೆಯಾಡುವ ಎಲ್ಲರೊಡನೆ ಕಲೆತು ಎಲ್ಲರ ಗೆಳತಿ ಎನಿಸಿದ್ದಳು. ಆಕೆಯು ಪ್ರತೀ ಪರೀಕ್ಷೆಯಲ್ಲಿ ಇಂಗ್ಲೀಷಿನಲ್ಲಿ ಒಂದನೇ ರೇಂಕ್ ಪಡೆಯುತ್ತಿದ್ದಳು. ಆಕೆಯ ಮೇಲೆ ವಿದ್ಯಾರ್ಥಿನಿ, ವಿದ್ಯಾರ್ಥಿಯರಿಗೆಲ್ಲಾ ಇದಕ್ಕಾಗಿ ಸ್ವಲ್ಪ ಕಿಚ್ಚಿತ್ತು. ಇಂಗ್ಲಿಷ್ ಲೆಕ್ಚರರು ಮದುವೆಯಾಗದ ಯುವಕರಾಗಿದ್ದರು. ಆದ್ದರಿಂದ ಕಾಲೇಜಿನಲ್ಲಿ ಆಕೆಯ ಬಗ್ಗೆ ವಿವಿಧ ಕತೆ ಕಟ್ಟಲ್ಪಟ್ಟವು. ಈ ಸಮಾಚಾರ ಆಕೆಗೂ ಮುಟ್ಟಿರಬೇಕು. ಇಂಗ್ಲಿಷ್ ಲೆಕ್ಚರರ ಹೆಸರೆತ್ತಿದಾಗ ಆಕೆಗೆ ಮುಖ ಮೇಲೆತ್ತಲು ಆಗುತ್ತಿರಲಿಲ್ಲ. ಕಡೆಗೆ ವಿಶ್ವವಿದ್ಯಾಲಯದ ಪರೀಕ್ಷೆ ಬಂತು. ಈ ಕಡೇ ಪರೀಕ್ಷೆಯಲ್ಲೂ ಆಕೆ ಇಂಗ್ಲಿಷಿನಲ್ಲಿ ಪ್ರಥಮ ಸ್ಥಾನವನ್ನೇ ಪಡೆದಳು. ಇಂಗ್ಲಿಷ್ ಲೆಕ್ಚರರು ಮದ್ರಾಸಿನವರಾದ ಕಾರಣ ಅವರು ಈ ವಿಚಾರದಲ್ಲಿ ಕೈ ಹಾಕಿ ಆಕೆಗೆ ಪ್ರಥಮ ಸ್ಥಾನ ದೊರಕಿಸಿರಬೇಕೆಂದು ಸಹಪಾಠಿಗಳು ಹೇಳುತ್ತಿದ್ದರು!

ವಿದ್ಯಾರ್ಥಿ ಜಗತ್ತು ಒಂದು ಪ್ರಪಂಚ. ಹೊರಗಿನ ಪ್ರಪಂಚದಂತೆ ಅದರಲ್ಲೂ ಈರ್ಷೆ, ಅಸೂಯೆ, ಪ್ರೀತಿ, ಪ್ರೇಮ, ಮೊದಲಾದುವಿವೆ. ರೀಟಾಳೊಬ್ಬಳಿದ್ದಳು. ಆಕೆಗೆ ಜೊತೆಗಾತಿಯರೊಡನೆ ಇರುವದರಲ್ಲಿ ಸಂತೋಷವಿರಲಿಲ್ಲ. ಯಾವಾಗಲೂ ಲೆಕ್ಚರರೊಡನೆ ಒಂದಿಲ್ಲೊಂದು ನೆಪದಿಂದ ಇರುತ್ತಿದ್ದಳು. ಆಕೆಯೇನೂ ಸುಂದರಿಯಲ್ಲ ಆದರೂ ಮೇಕಪ್ ಜೋರಾಗಿರುತ್ತಿತ್ತು. ತನ್ನ ಗೆಳತಿಯರಲ್ಲಿ ಇಂಥವರು ಹೀಗೆ ಎಂದು ಲೆಕ್ಚರರಿಗೆ ವರದಿ ಒಪ್ಪಿಸುವದು ಆಕೆಯ ಕೆಲಸವಾಗಿತ್ತು. ಸರಕಾರಕ್ಕೆ ಸಿ. ಐ. ಡಿ. ಗಳಿದ್ದಂತೆ ನಮ್ಮ ಕಾಲೇಜಿಗೆ ಆಕೆ ಇದ್ದಳು.

ಯಾರಾದರೂ ತುಂಟತನ, ನಗು, ಚೇಷ್ಟೆಗಳನ್ನು ಮಾಡಿದಾಗ ನನಗೆ ಈಗಲೂ ಥಟ್ಟನೆ ಬೋಜಿಯ ಜ್ಞಾಪಕವಾಗುತ್ತೆ. ಆಕೆ ಇದ್ದಲ್ಲಿ ಗಲಾಟೆ, ಕೋಲಾಹಲವಿಲ್ಲದಿರುತ್ತಿರಲಿಲ್ಲ. ಎಲ್ಲರನ್ನೂ ನಗಿಸಿ ಅಧ್ಯಾಪಕರ ಕಣ್ಣಿಗೆ ಬಿದ್ದು ಬೈಗಳನ್ನು ಪಡೆದರೂ ಆಕೆಯ ಹಾಸ್ಯ, ಕಿರುಕುಳಗಳಿಗೆ ತಡೆ ಇರಲಿಲ್ಲ. ಆಕೆ ಕಾಲೇಜಿಗೆ ಏಕೆ ಬಂದಿರುವಳೆಂಬುದೇ ನನಗ ಅರ್ಥವಾಗುತ್ತಿರಲಿಲ್ಲ. ಆಕೆ ಯಾವುದೇ ಪಾಠ ಪುಸ್ತಕಗಳನ್ನು ಓದುತ್ತಿರಲಿಲ್ಲ. ಯಾವಾಗ ನೋಡಿದರೂ ಪಿ. ಜಿ. ಓಡ್ ಹೌಸರ ಕಾದಂಬರಿಗಳನ್ನು ಓದುತ್ತಾ ಕುತುಕೊಳ್ಳುತ್ತಿದ್ದಳು. ಆಕೆಯ ತಂದೆ ಶ್ರೀಮಂತರು. ಆ ಶ್ರೀಮಂತಿಕೆಗೆ ಅನುಗುಣವಾಗಿ ಆಕೆಯ ಪೆಟ್ಟಿಗೆಯಲ್ಲಿ ಮದುವಣಗಿತ್ತಿಯ ಪೆಟ್ಟಿಗೆಯಲ್ಲಿರುವಂತೆ ವಿವಿಧ ಸೀರೆಗಳಿದ್ದವು. ಅಲಂಕಾರವಾಗಿ ಉಡುಪುತಾಕಿಕೊಂಡು ಹಾಸ್ಯಪ್ರಪಂಚದಲ್ಲಿ ಮುಳುಗಿ ಸುಖಿಯಾಗಿದ್ದಳು. ಆಕೆಯ ಹಾಸ್ಯ, ವಿನೋದಗಳು ಇಂದೂ ಒಮ್ಮೊಮ್ಮೆ ನೆನಪಿಗೆ ಬಂದು ನಾನು ನನ್ನಷ್ಟಕ್ಕೆ ನಗಾಡುವದಿದೆ.

ವಿಲ್ಮಾಳೆಂದರೆ ಸಂಗೀತ. ಆಕೆ ಹೋದೆಡೆಯಲ್ಲೆಲ್ಲಾ ಹಾಡು. ಚೆನ್ನಾಗಿಯೇ ಆಕೆ ಹಾಡುತ್ತಿದ್ದಳು. ಸಿನೆಮಾದ ಹುಚ್ಚು ಆಕೆಗಿದ್ದಷ್ಟು ಯಾರಿಗೂ ಇರಲಿಲ್ಲ. ಹೇಗಾದರೂ ನೆಪಮಾಡಿ ಪ್ರತಿ ಸಿನೆಮಾಕ್ಕೆ ಆಕೆ ಹೋಗುತ್ತಿದ್ದಳು. ಒಮ್ಮೆ ಕೇಳಿದ ಸಾಕು. ಮರುದಿನ ಆ ಹಾಡನ್ನು ಹಾಡುವ ಆಕೆಯ ಜ್ಞಾಪಕಶಕ್ತಿಯನ್ನು ಎಲ್ಲರೂ ಮೆಚ್ಚುತ್ತಿದ್ದೆವು. ಸಿನೆಮಾ ಪ್ರಪಂಚದಲ್ಲಿ ಆಕೆಗೆ ತಿಳಿಯದ ವಿಚಾರವಿರಲಿಲ್ಲ. ಪ್ರತಿ ನಟ, ನಟಿಯರ ಚರಿತ್ರೆ ಆಕೆಗೆ ತಿಳಿದಿತ್ತು. ಆಕೆಯ ಪುಸ್ತಕಗಳೆಂದರೆ 'ಫಿಲ್ಮ್ ಇಂಡಿಯಾ' ಮೊದಲಾದುವು. ಈ ರೀತಿ ಸಿನೆಮಾ ಪ್ರಪಂಚದಲ್ಲಿ ಆಸಕ್ತಿಯಿದ್ದ ಆಕೆ ಕಡೆಗೆ 'ಸಿಸ್ಟರ್' ಆಗಿ ಸೇರಿ ಕಾಲೇಜನ್ನು ಬಿಡುವಳೆಂದು ನಾವು ಯಾರೂ ಭಾವಿಸಿರಲಿಲ್ಲ. ಇಂದು ಆಕೆ ಕ್ರಿಶ್ಚಿಯನ್ ಮತದ ಕಪ್ಪು ಬಟ್ಟೆ ಹಾಕಿ ಕಾನ್ವೆಂಟ್‌ನಲ್ಲಿದ್ದಾಳೆ!

ಹೀಗೆ ವಿವಿಧ ರೀತಿಯ ಮನೋಭಾವಗಳ ತರುಣಿಯರು ಕಾಲೇಜಿನಲ್ಲಿ ಎರಡು, ನಾಲ್ಕು ವರ್ಷಗಳ ವರೆಗೆ ಜೊತೆಗೂಡಿ ಜೀವಿಸಿ ತಮ್ಮ ತಮ್ಮ ಮನೆಗಳಿಗೆ ಮರಳುತ್ತಾರೆ. ಆದರೆ ಆ ವಿದ್ಯಾರ್ಥಿ ಜೀವನದ ನೆನಪು ಮಾತ್ರ ಸದಾ ಇದ್ದು ಮುಂದೆ ಜೀವನದಲ್ಲಿ ಸಂತಸದ ಬುಗ್ಗೆಯಾಗಿ ನೆನೆದಾಗ ಕಣ್ಮುಂದೆ ನಿಲ್ಲುವದು. ಎಲ್ಲ ತರುಣಿಯರೂ ಐಶ್ವರ್ಯ, ವಿದ್ವತ್ತು, ಪ್ರತಿಭೆಗಳಿಂದ ಕೂಡಿರಲಿಲ್ಲ. ಎಲ್ಲರೂ ವಿನೋದ ವಿಹಾರಗಳಲ್ಲಿ ಮನಸ್ಸು ಹರಿಯಗೊಡುತ್ತಿರಲಿಲ್ಲ. ಅನೇಕ ತರುಣಿಯರು ತರಗತಿಯಲ್ಲಿ ಇದ್ದರೋ ಇಲ್ಲವೋ ಎಂಬಷ್ಟು ನಿಶಬ್ದವಾಗಿ ಕಾಲೇಜು ಜೀವನವನ್ನು ಕಳೆದಿದ್ದರು. ಜೀವನ ನಿರ್ವಹಣಕ್ಕೆ ಇದೊಂದೇ ಮಾರ್ಗವೆಂದು ಕೆಲವರು ಕಾಲೇಜು ಮೆಟ್ಟಲು ಹತ್ತಿದ್ದರು. ಒಂದೇ ಬಾರಿ ತೇರ್ಗಡೆಯಾಗಲಾರದೆ ನಾಲ್ಕಾರು ಬಾರಿ ಪರೀಕ್ಷೆಗೆ ಕೂರುವವರೂ ಇದ್ದರು. ಹೀಗೆ ಕಾಲೇಜು ಜೀವನದಲ್ಲಿ ಸುಖ ಸಂತೋಷಗಳಲ್ಲಿ ದುಃಖ ನಿರಾಶೆಗಳೂ ಮಿಶ್ರವಾಗಿತ್ತು. ಹೇಗೂ ಆ ವಿದ್ಯಾರ್ಥಿ ಜೀವನ ನಮ್ಮೆಲ್ಲರ ಜೀವನ ಗ್ರಂಥದಲ್ಲಿ ಅಚ್ಚಳಿಯದ, ಶುಭ ಸುಖಮಯವಾದ ಪರಿಚ್ಛೇದವೆನ್ನುವದರಲ್ಲಿ ಸಂಶಯವಿಲ್ಲ.

ಮಾರಾಟಕ್ಕಿದೆ.

ಕೊಡ್ಲಿಪೇಟೆಗೆ ಒಂದು ಮೈಲು ದೂರದಲ್ಲಿ ಮಡಿಕೇರಿ ಅರಕಲಗೋಡಿಗೆ ಹೋಗುವ ಹ್ಯಾಂಡ್ ಪೋಸ್ಟ್ ಸ್ಥಳದಲ್ಲಿ ನನ್ನ ಸ್ವಯಾರ್ಜಿತವಾದ ಆಸ್ತಿ ವಾಸಕ್ಕೆ ಅನುಕೂಲವಾದ ಮಂಗಳೂರು ಹಂಚಿನ ಮನೆ ದನವಿನ ಕೊಟ್ಟಿಗೆ ಅಂದಾಜು ೨೦ ಎಕ್ರೆ ಕುಷ್ಕಿ ಜಾಗ ಇದರಲ್ಲಿ ಕೆಲವು ಜಾಗದಲ್ಲಿ ಕಿತ್ತಳೆ, ಬಾಳೆ, ನಿಂಬೆ, ಕಾಫಿ ವ್ಯವಸಾಯವಿದ್ದು 12 ಬಟ್ಟಿ ಬತ್ತ, 18 ಬಟ್ಟಿ ರಾಗಿ ಬೆಳೆಯುತ್ತಿರುತ್ತೇನೆ. ಮನೆಗೆ ಹತ್ತಿರವಾಗಿ 3 ಎಕ್ರೆ ತರಿ ಜಮೀನು ಸೇದುವ ಬಾವಿ ಇರುತ್ತದೆ. ಕುಷ್ಕಿ ಜಾಗಕ್ಕೆ ಇಡೀ ವರ್ಷವೂ ಯಾವಾಗಲೂ ದನಗಳು ಒಳಗೆ ಹೋಗಲು ಅವಕಾಶವಿಲ್ಲದಂಥಾ ಗ್ಯಾರಂಟಿ ಬೇಲಿ ಇರುತ್ತದೆ. ಖಾಯಿಸ್‌ದಾರರು ಖುದ್ದು ನೋಡಿಯಾಗಲಿ ಪತ್ರ ಮುಖಾಂತರವಾಗಲೀ ತಿಳಿದುಕೊಳ್ಳಬಹುದು.

ಉದ್ದಾರು ಸೋಮಪ್ಪ.
ದೊಡ್ಡ ಕುಂದ ಗ್ರಾಮ,
2-2 ಕೊಡ್ಲಿಪೇಟೆ.

ಬೇಕಾಗಿವೆ.

ಕಾಡು ಕೋಳಿಗಳ ಕುತ್ತಿಗೆಯ ಗರಿಗಳು ಬೇಕಾಗಿವೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

D. H. THANGAM & CO.,
Kundah Bridge,
4-3 *P. O. Nilgiris.*

Edited Printed & Published by P. I. Belliappa, at, Kodagu' Press, Mercara, fer 'Kodagu' Ltd.

ಶ್ರೀ ಬಿ. ಡಿ. ಗಣಪತಿಯವರ **ತುಂತುರು. ಮಾನವ ಮತ್ತು ಪಂಚಾಮೃತ.**

ಈ ಮೂರು ಉತ್ತಮ ಪುಸ್ತಕಗಳು ಈಗಾಗಲೇ ಕನ್ನಡ ನಾಡಿನ ಸರ್ವರಿಂದ ಹೊಗಳಿಸಿಕೊಂಡಿವೆ. ಕನ್ನಡ ನಾಡಿನ ಹಿರಿಯ ಸಾಹಿತಿಗಳು ಮತ್ತು ಪತ್ರಿಕೆಗಳು ವ್ಯಕ್ತಮಾಡಿದ ಕೆಲವು ಅಭಿಪ್ರಾಯಗಳನ್ನು ಇಲ್ಲಿ ಕೊಡಲಾಗಿದೆ.

"ಪುಸ್ತಕಗಳೆಲ್ಲವೂ ಸೊಗಸಾಗಿವೆ. ಹೂವಿನ ಕಂಪು ಮೊಗ್ಗೆಯಿಂದಲೇ ತೋರುವಂತಿದೆ. ಇನ್ನೂ ಕೂಡ ಅನರ್ಘ್ಯವಾದ ಕೃತಿಗಳನ್ನು ರಚಿಸುತ್ತಿರುವಂತೆ ದೇವರು ಅನುಗ್ರಹಿಸಲಿ"

— ರಾಷ್ಟ್ರಕವಿ ಗೋವಿಂದ ಪೈ.

"ಪುಸ್ತಕಗಳು ಚೆನ್ನಾಗಿವೆ. ಕೊಡಗಿನ ಒಬ್ಬ ಲೇಖಕರು ಈ ರೀತಿ ಸಿಕ್ಕಲ ಕೆಲಸ ಮಾಡುತ್ತಿರುವುದರಿಂದ ನನಗೆ ಸಂತೋಷವಾಗಿದೆ."

— ಅ. ನ. ಕೃಷ್ಣರಾವ್.

"ಶ್ರೀ ಗಣಪತಿಯವರ ತುಂತುರುವಿನ ಕಥೆಗಳು ಹೃದಯಂಗಮವಾಗಿವೆ. ಸ್ವಾತಂತ್ರ್ಯ, ತುಂತುರು, ತಾಯಿ ಮೊದಲಾದ ಕಥೆಗಳು ಓದ್ಮೆ ಓದಿದರೆ ಬಹು ಕಾಲ ಮರೆಯುವಂತಹವಿವೆ. ಪಂಚಾಮೃತವು ನೀತಿಬೋಧಕವಾಗಿದ್ದು ಸ್ವಾಗತಾರ್ಹವಿದೆ. 'ಮಾನವ'ವೆಂಬ ಶಾಸ್ತ್ರೀಯ ಗ್ರಂಥವು ಉತ್ತಮವಿದ್ದು ಕನ್ನಡ ಸಾಹಿತ್ಯ ಭಾಂಡಾಗಾರಕ್ಕೆ ಮಹತ್ವದ್ದಾಗಿದೆ."

— 'ಜೈ ಹಿಂದ್' ಹುಬ್ಬಳ್ಳಿ.

"'ತುಂತುರು' ವಿನ ಸ್ವಾತಂತ್ರ್ಯ, ತಾಯಿ, ಸಹೋದರರು ಮೊದಲಾದ ಕಥೆಗಳು ಮೇಲ್ಮಟ್ಟವಾಗಿವೆ. ಗಣಪತಿಯವರಿಗಿರುವ ಆಳವಾದ ಸಾಮಾಜಿಕ ದೃಷ್ಟಿಯೂ ಸ್ತ್ರೀ ಪರಾಧೀನತೆ, ಮಾತೃವಾತ್ಸಲ್ಯ, ಬಡತನ ಮೊದಲಾದ ವಿಷಯಗಳ ಸತ್ಯ ದೃಷ್ಟಿಯೂ ಚೆನ್ನಾಗಿ ಈ ಕಥೆಗಳಲ್ಲಿ ಸ್ಫುಟವಾಗಿವೆ. ಹಕ್ಕುಗಳೊಡನೆ ಹೊಣೆಯನ್ನೂ ಅರಿತು ಆದರ್ಶ ನಾಗರಿಕರಾಗಲು ಪಂಚಾಮೃತವು ಸಾಧಕವಾಗಿದೆ. 'ಮಾನವ' ಗ್ರಂಥದಲ್ಲಿ ವಿಶ್ವದ ಬಾಹ್ಯ ಜ್ಞಾನ ಬೆಳೆದಂತೆ ವಿಶ್ವತ್ವದ ವಿಜ್ಞಾನವು ಮುಸುಕಿಸಿದುದನ್ನೂ, ದೇಹದ ಅರಿವು ಬೆಳೆದಂತೆ ದೇಹಿಯ ಅರಿವು ಅಳಿದುದನ್ನೂ ಮನಗಾಣುವಂತೆ ಬರೆದಿದ್ದಾರೆ. ಬರಿಯ ಕತೆ, ಕವಿತೆ, ಕಾದಂಬರಿಗಳಲ್ಲಿಯೇ ಕಾಲ ಕಳೆಯುವ ಕನ್ನಡ ಸಾಹಿತ್ಯಕ್ಕೆ ಇಂಥಾ ವಿಚಾರ ಪ್ರಬೋಧಕ ಪ್ರಬಂಧಗಳ ಅಗತ್ಯ ತುಂಬಾ ಇದೆ.

— ಕಲಿಯುಗ.

"ಮಾನವ" ಪುಸ್ತಕವನ್ನು ಬರೆದ ಗಣಪತಿಯವರ ಮಹತ್ಕಾರ್ಯವು ಶ್ಲಾಘನೀಯವಾದುದು. ಮಾನವನ ಶಾರೀರಕ, ಮಾನಸಿಕ ವ್ಯಾಪಾರಗಳು, ಆತನ ಪುನರುತ್ಥಾನ ಮೊದಲಾದ ಜಟಿಲ ಸಮಸ್ಯೆಗಳನ್ನು ಸೂಕ್ತ ರೀತಿಯಿಂದ ವಿವರಿಸಲಾಗಿದೆ. ಶ್ರೀಯುತರ ಲಬ್ಧ ವ್ಯುತ್ಪತ್ತಿ ಪ್ರಸಂಶನೀಯವಾಗಿದೆ. ಪ್ರತಿಯೊಬ್ಬನಿಗೂ ಅರ್ಥವಾಗುವಂತೆ ಬರೆದಿರುವ ಈ ಗ್ರಂಥವನ್ನು ಎಲ್ಲರೂ ಓದಬೇಕು."

— ಉಷಾ, ಬೆಂಗಳೂರು.

"ತುಂತುರುವಿನ ಕಥೆಗಳ ವಸ್ತು ಸ್ವಾರಸ್ಯವಾಗಿದೆ. ಪ್ರತಿಯೊಂದು ಕಥೆಯಲ್ಲೂ ಲೇಖಕರು ವಾಚಕರ ಕುತೂಹಲವನ್ನು ಕಾಯ್ದುಕೊಳ್ಳುತ್ತಾರೆ. ಪಂಚಾಮೃತವು ಬೋಧಪ್ರದವಾಗಿದೆ. ಪ್ರತಿಯೊಬ್ಬನೂ ಓದಬೇಕಾದ ಪುಸ್ತಕ "ಮಾನವ" ಪುಸ್ತಕವು ಮನುಷ್ಯನಲ್ಲಿ ಕರ್ತವ್ಯ ಜ್ಞಾನವನ್ನು ಉಂಟು ಮಾಡಲು ಸಹಾಯಕವಾಗಿದೆ. ಈ ರೀತಿಯ ಪುಸ್ತಕಗಳು ಕನ್ನಡ ಸಾಹಿತ್ಯದಲ್ಲಿ ಕಡಿಮೆ ಇದ್ದು ಇದು ಸ್ವಾಗತಾರ್ಹವಾಗಿದೆ."

— ನವಭಾರತ, ಮಂಗಳೂರು.

" 'ತುಂತುರು'ವು ಹನ್ನೆರಡು ಮುತ್ತುಗಳನ್ನು ಆರಿಸಿ ಪೋಣಿಸಿದ ಚಿಕ್ಕ ಸರ. ಚಿಕ್ಕದಾದರೂ ಇದು ಚೊಕ್ಕವೂ, ಮನೋಹರವೂ ಆಗಿದೆ. ಪಂಚಾಮೃತದಲ್ಲಿ ಎಳನೀರು, ಹಾಲು, ಜೇನು, ತುಪ್ಪ, ಸಕ್ಕರೆ ಕೂಡಿರುವಂತೆ ಈ ಪುಸ್ತಕವು ವಿದ್ಯಾರ್ಥಿಯಿಂದ ಹಿಡಿದು ಹುಟ್ಟು, ಬಾಲ್ಯ, ಯೌವನ, ವಾರ್ಧಕ್ಯ, ಮುಪ್ಪು ಎಂಬ ಪಂಚ ಅವಸ್ಥೆಗಳಿಗೂ ಪಂಚಾಮೃತವೇ ಆಗಿದೆ."

— ಸರ್ವೋದಯ.

" ತುಂತುರುವಿನಲ್ಲಿ ಟಾಲ್‌ಸ್ಟಾಯಿ, ಟಾಗೋರರ ಉತ್ತಮ ಕಥೆಗಳನ್ನು ಆರಿಸುವದರಲ್ಲಿ ಲೇಖಕರು ಯೋಗ್ಯ ಅಭಿರುಚಿಯನ್ನು ವ್ಯಕ್ತಪಡಿಸಿದ್ದಾರೆ. 'ಸ್ವಾತಂತ್ರ್ಯ' ಕತೆ ಚಿಕ್ಕದಾಗಿದ್ದರೂ ಚೆನ್ನಾಗಿದೆ. 'ಪಂಚಾಮೃತ'ದಂಥಾ ಪುಸ್ತಕಗಳನ್ನು ಬಹುಮಂದಿ ಓದಿರುವ ಕಾಲ ಬರಲಿ ಎಂಬುದು ನಮ್ಮ ಹಾರೈಕೆ. 'ಮಾನವ' ಗ್ರಂಥವು ಕಿರಿಯ ಲೇಖಕರ ಹಿರಿಯ ಪ್ರಯತ್ನವೆಂದು ಹೇಳಬಹುದು."

— ಕನ್ನಡ ನುಡಿ, ಬೆಂಗಳೂರು.

" ಪಂಚಾಮೃತದಲ್ಲಿ ಚಾರಿತ್ರ್ಯ, ಸಚ್ಛೀಲಗಳಿಗೆ ಲೇಖಕರು ತುಂಬಾ ಮಹತ್ವವನ್ನು ಕೊಟ್ಟಿರುವದು ಉಲ್ಲೇಖನೀಯವಿದೆ. ಇದೇ ಪುಸ್ತಕವು ಒಳ್ಳೆಯ ಬಾಳ್ವೆಯನ್ನು ಕೈಕೊಂಡು ಸತ್ಪ್ರಜೆಯಾಗಿ ಆದರ್ಶ ಜೀವನವನ್ನು ಅವಲಂಬಿಸುವದಕ್ಕೆ ಅಗತ್ಯವಿರುವ ನೀತಿಗಳಿಂದ ಕೂಡಿದೆ. ಭಾಷೆಯು ಸರಳ ಹಾಗೂ ಸುಂದರವಾಗಿದೆ. ಮುದ್ರಣ ದೋಷವೇ ಇಲ್ಲೆಂಬಂತೆ ಅಚ್ಚಾಗಿದೆ. ಎಲ್ಲರೂ ಓದಿ ಮನವರಿಕೆ ಮಾಡಿಕೊಳ್ಳಲು ತಕ್ಕುದಾದ ಪುಸ್ತಕವೆಂದು ಒಂದೇ ಮಾತಿನಲ್ಲಿ ಇವರ ಗುಣ ವರ್ಣನೆ ಮಾಡಬಹುದು."

— ನವಯುಗ, ಉಡುಪಿ.

ಈ ಉತ್ತಮ ಪುಸ್ತಕಗಳನ್ನು ನೀವು ಓದಿಲ್ಲವಾದರೆ ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ಮೂರು ಪುಸ್ತಕಗಳ ಒಟ್ಟು ಕ್ರಯ ರೂ. ೩—೪—೦ ಅಂಚೆ ವೆಚ್ಚ ೦—೧೨—೦.

ಕೊಡಗು ಆಫೀಸು, ಮಡಿಕೇರಿ.

೬೨ ವರ್ಷಗಳಿಗೆ ಮೀರಿದ ವಿಶ್ವಾಸಪೂರಿತ ಸೇವೆ.

ವಿಶ್ವಾಸ ಹಾಗೂ ಪ್ರಜಾಪ್ರಭುತ್ವ ತತ್ವಗಳ ಮೇಲೆ ರಚಿತವಾಗಿರುವ ದಿ ಬೊಂಬೆ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್ ಕಳೆದ ಎಂಟು ದಶಮಾನಗಳಿಗೂ ಹೆಚ್ಚಿನ ಸಮಯದಿಂದ ಸಾರ್ವಜನಿಕರ ಸೇವೆಯನ್ನು ಒಂದೇ ವಿಧದಿಂದ ಮಾಡುತ್ತಿದೆ. ಇದು ದೇಶದ ಪ್ರಗತಿಗೆ ಪ್ರಾಮುಖ್ಯವಾದ ಕೊಡುಗೆನ್ನಬಹುದು. "ವಿಮೆದಾರರ ಸೇವೆ"ಯ ಒಂದೇ ಗುರಿಯನ್ನು ಇಟ್ಟುಕೊಂಡು ಅದು ದುಡಿಯುತ್ತಿದೆ. ದಿ ಬೊಂಬೆ ಮ್ಯೂಚುವಲ್ ವಿಮೆದಾರರ ಸಂಸ್ಥೆ. ಅವರ ಸಂಘ, ಅವರಿಗೆ ಅದರ ಹಿತ ಸೇರಿ.

ವ್ಯಕ್ತಿಗತ ಬೇಡಿಕೆಗೆ ಅನುಕೂಲವಾದ ವಿವಿಧ ಯೋಜನೆಗಳಿವೆ. ವಿವರಗಳಿಗೆ ಬರೆಯಿರಿ—

ದಿ ಬೊಂಬೆ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು	ಬ್ರಾಂಚ್ ಆಫೀಸು
ಹಾರ್ನ್‌ಬಿ ರೋಡ್,	ಪೋ. ಬಾ. ನಂ. 186
ಬೊಂಬಾಯಿ.	ಬೆಂಗಳೂರು—2.

THE VIJAYA BANK, LIMITED.
ದಿ ವಿಜಯ ಬೇಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಮೂಲ ಧನ	ರೂ.	20,00,000
ಕೆತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ಮ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವುವು. ರೂಪಾಯಿ ಹತ್ತು ಸಾವಿರವ ಮಿಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟು ನಡೆಸಲ್ಪಡುವುದು.

ಬಿ. ಮಂಜಯ್ಯ ಹೆಗ್ಡೆ,
ಎಡ್ವೊಕೇಟ್.
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.
12-8 (ಮತ್ತು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರು)

ಮಡಿಕೇರಿ ಆಫೀಸಿನ ಏಜೆಂಟ್:— ಯಮ್. ಯಸ್. ಅಳ್ವ.

Edited Printed and Published by P. I. BELLIAPPA at 'KODAGU' 'Press Mercara for Kodagu Ltd.,

ಕೊಡಗು

ನಾಳೆಯ ಆಸೆ!

KODAGU KANNADA WEEKLY MERCARA

ವಾರದ ಕಥೆ.

ಆತನ ಕಥೆ

ಲೇ:-ಕುಮಾರಿ ಬಿ. ಎಸ್. ಲೀಲಾ. ಸೋಮವಾರಪೇಟೆ.

ಇಂದು ಭಾನುವಾರ. ಸಂಜೆಯ ಹೊತ್ತು. ಲೋಕ ರಂಜಕನಾದ ಸೂರ್ಯ ದೇವನು ತನ್ನ ದಿನದ ಕಾರ್ಯವನ್ನು ಮುಗಿಸಿ ಕಣ್ಮರೆಯಾಗತೊಡಗಿದ್ದನು. ಪ್ರಶಾಂತವಾದ ತಂಗಾಳಿಯು ಬೀಸುತ್ತಿತ್ತು. ಕಂತುವ ಸೂರ್ಯನ ಕಡೇ ರಶ್ಮಿಯಿಂದ ಪ್ರಕೃತಿ ದೇವಿಯು ಹೊಸ ಶೋಭೆಯನ್ನು ತಳೆದು ಮನೋಹರಳಾಗಿದ್ದಳು. ಆ ಸುಸಮಯದಲ್ಲಿ ಮಾಧವನು ಗಾಳಿ ವಿಹಾರಕ್ಕೆಂದು ಹೊರಟಿದ್ದನು. ಪ್ರಕೃತಿಯ ವರ್ಣವೈಚಿತ್ರ್ಯದಿಂದ ಮುಗ್ಧನಾಗಿ ಮುನ್ನಡೆಯುತ್ತಿದ್ದ ಮಾಧವನು ತಿಳಿನೀರಿನ ಕೆರೆಯ ಏರಿಗಾಗಿ ಸಾಗಿದ್ದನು. ಸ್ವಲ್ಪ ದೂರದಲ್ಲಿ ಕಲ್ಲೊಂದು ಕಂಡಂತಾಯಿತು. ಅದರ ಮೇಲೆ ಕುಳಿತು ಪ್ರಕೃತಿಯ ಆನಂದವನ್ನು ಹೊಂದುವದುಚಿತವೆಂದು ಆತನು ಅತ್ತ ಸಾಗಿದನು.

ಹತ್ತಿರ ಹೋದಾಗ ಆ ವಸ್ತುವು ಕಲ್ಲಲ್ಲವೆಂಬುದು ಆತನಿಗೆ ತಿಳಿಯಿತು. ಕರಿಕಂಬಳಿಯನ್ನು ಹೊದ್ದುಕೊಂಡು ವ್ಯಕ್ತಿಯೊಂದು ಕುಳಿತಿತ್ತು. ಆ ವ್ಯಕ್ತಿಯು ಯಾವುದೋ ಗಾಢ ಯೋಚನೆಯಲ್ಲಿ ಮಗ್ನವಾಗಿರುವಂತೆ ತೋರುತ್ತಿತ್ತು. ಆ ವ್ಯಕ್ತಿಯ ದೃಷ್ಟಿಯನ್ನು ತನ್ನೆಡೆಗೆ ಸೆಳೆಯಲು ಮಾಧವನು ಕೆಮ್ಮಿದನು. ಆದರೆ ವ್ಯಕ್ತಿಯು ಮಿಸುಕಾಡಲಿಲ್ಲ. ಮತ್ತೆ ಹತ್ತಿರ ಹೋಗಿ ಮಾಧವನು "ಯಾರಯ್ಯಾ?" ಎಂದು ಕೇಳಿದನು. ವ್ಯಕ್ತಿಯು ತಿರುಗಿ ನೋಡಿತು. ಮೌನದಿಂದ ಪುನಹ ತಲೆ ತಗ್ಗಿಸಿತು. ಮಾಧವನು ಮತ್ತೆ ಪ್ರಶ್ನಿಸಿದಾಗ "ನಾನು ಯಾರಾದರೇನು? ನಾನೊಬ್ಬ ಪರದೇಶಿ" ಎಂದಿತು. ಮಾಧವನು ಹತ್ತಿರ ಸರಿದನು. ಈ ವ್ಯಕ್ತಿಯ ಕಥೆಯನ್ನು ತಿಳಿಯುವ ಇಚ್ಛೆಯಿಂದ ಮತ್ತೆ ಪ್ರಶ್ನಿಸಿದನು. ವ್ಯಕ್ತಿಯು ಮಾತಾಡುವ ಇಚ್ಛೆಯಿಲ್ಲದಿದ್ದರೂ ಮಾಧವನ ಕಾತರ ಪ್ರಶ್ನೆ, ಸ್ನೇಹ ಭಾವಗಳಿಂದಾಗಿ ತನ್ನ ಕಥೆ ಹೇಳತೊಡಗಿತು.

'ನಾನು ಹುಟ್ಟಿದ್ದು ಇದೇ ಊರಿನಲ್ಲಿ. ನನ್ನ ತಂದೆಯ ಹೆಸರು ಶಿವಪ್ಪನೆಂದು. ವ್ಯವಸಾಯವು ನಮ್ಮ ಉದ್ಯಮವಾಗಿತ್ತು. ನಮ್ಮ ತಂದೆ ತಾಯಿಗೆ ನಾನೊಬ್ಬನೇ ಮಗನು. ಆದರೆ ನಾನು ಚಿಕ್ಕವನಿರುವಾಗಲೇ ತಂದೆಯವರು ಇಹವನ್ನು ತ್ಯಜಿಸಿದರು. ತಾಯಿಯು ಬಡತನದ ಮಧ್ಯೆ ನನ್ನನ್ನು ಅತಿ ಕಷ್ಟದಿಂದ ಸಾಕಿದಳು. ಬಡತನದ ಕಾರಣದಿಂದ ಶಾಲೆಯ ಆವರಣಕ್ಕೆ ಕಾಲಿಕ್ಕುವದು ನನ್ನಿಂದಾಗಲಿಲ್ಲ. ಆದಕಾರಣ ವಿದ್ಯಾದೇವಿಯ ಪೂಜೆ ಮಾಡುವ ಅನು ನನಗೆ ದೊರೆಯಲಿಲ್ಲ. ನಾನು ಚಿಕ್ಕವನಾಗಿರುವಾಗ ಹೇಗಾದರೂ ನನ್ನ ತಾಯಿಗೆ ಸಹಾಯ ಮಾಡಬೇಕಾಗಿ ಬಂತು. ಆದ್ದರಿಂದ ಚಿಕ್ಕಂದಿನಲ್ಲೇ ನೆರೆಕರೆಯವರ ದನಗಳನ್ನು ನೋಡುವದು ನನ್ನ ಕೆಲಸವಾಯಿತು. ಇದರಿಂದ ಅಲ್ಪ ಸ್ವಲ್ಪ ಸಂಪಾದನೆಯಾಗುತಿತ್ತು. ಇಷ್ಟರ ಮಟ್ಟಿಗೆ ನನ್ನ ತಾಯಿಯ ಬಡತನ ಜೀವನದಲ್ಲಿ ಸಹಾಯಕನಾಗುತ್ತಿದ್ದ ಆನಂದವು ನನ್ನಲ್ಲಿತ್ತು.

ನಾನು ಸ್ವಲ್ಪ ಬೆಳೆದು ಯುವಕನಾದಾಗ ಈ ದನಕಾಯುವ ಕೆಲಸವನ್ನು ಬಿಟ್ಟೆನು. ಅವರಿವರ ಮನೆಯಲ್ಲಿ ಬೇರೆ ಕೆಲಸ ಮಾಡುತ್ತಿದ್ದೆನು. ನಂತರ ಕ್ರಮಶಃ ಭೂಮಿ ವಾರ ಮಾಡತೊಡಗಿದೆನು. ನಾನು ಮತ್ತು ತಾಯಿ ಇಬ್ಬರೂ ಚೆನ್ನಾಗಿ ದುಡಿಯುತ್ತಿದ್ದೆವು. ಸ್ವಲ್ಪ ಮಟ್ಟಿಗೆ ಜೀವನ ಸುಧಾರಿಸತೊಡಗಿತು. ಹೇಗೂ ಹೊಟ್ಟೆಗೆ ಮತ್ತು ಬಟ್ಟೆಗೆ ಬೇಕಾದ ಸಂಪಾದನೆಯಾಗುತಿತ್ತು. ನಮ್ಮ ನೆರೆಮನೆಯ ಗೌರಿಯೊಡನೆ ನನ್ನ ಮದುವೆಯಾಯಿತು.."

ವ್ಯಕ್ತಿಯು ಮುಂದೆ ಮಾತಾಡಲಿಲ್ಲ. ಯಾವುದೋ ಗಾಢ ಯೋಚನೆಯಲ್ಲಿ ಮಗ್ನವಾಯಿತು. ಮಾಧವನು ಆತನ ಬೆನ್ನು ತಟ್ಟಿ 'ಹೌದು ಗೌರಿಯೊಡನೆ ವಿವಾಹವಾಯಿತು. ನಂತರ........' ಎಂದು ಕೇಳಿದನು. ಪುನಹ ಆತನು ಹೇಳತೊಡಗಿದನು.

'ಆಕೆ ಸುಂದರಿಯಲ್ಲ. ಆದರೆ ಆಕೆಯು ಗುಣವತಿಯಾಗಿದ್ದಳು. ನೆರೆಕರೆಯವರೆಲ್ಲರೂ ಆಕೆಗೆ ತುಂಬಾ ಗೌರವ ಕೊಡುತ್ತಿದ್ದರು. ಆಕೆಯ ಪತಿಯಾದ ನನಗೂ ಗೌರವ ದೊರೆಯುತಿತ್ತು. ನಮ್ಮ ಕುಟುಂಬ ಜೀವನ ಸುಖಮಯವಾಗಿ ಸಾಗುತಿತ್ತು. ಮದುವೆಯಾಗಿ ಆರೇಳು ವರ್ಷಗಳಾದರೂ ನಮಗೆ ಮಕ್ಕಳಿರಲಿಲ್ಲ.

ನಮ್ಮ ಪಕ್ಕದ ಮನೆ ಕರಿಯಪ್ಪನವರ ಹೆಂಡತಿ ಒಳ್ಳೆಯವಳಾಗಿರಲಿಲ್ಲ. ಎಲ್ಲರೊಡನೆ ಜಗಳ ಕಾಯುವದು ಆಕೆಯ ಸ್ವಭಾವವಾಗಿತ್ತು. ಆದರೆ ಆಕೆಗೆ ಮುದ್ದಾದ ಮಗುವೊಂದಿತ್ತು. ಆ ಮಗುವು ನಮ್ಮ ಮನೆಗೆ ಆಗಾಗ ಬರುತ್ತಿತ್ತು. ಮಕ್ಕಳಿಲ್ಲದ ನಮಗೆ ಆ ಮಗುವಿನ ಮೇಲೆ ಅನನ್ಯ ಪ್ರೀತಿಯಿತ್ತು. ಗೌರಿಗೆ ಆ ಮಗುವೆಂದರೆ ಪ್ರಾಣ. ಮಗುವೂ ಕೂಡ ಗೌರಿಯನ್ನು ತನ್ನ ತಾಯಿಗಿಂಥಾ ಮಿಗಿಲಾಗಿ ಪ್ರೀತಿಸುತಿತ್ತು. ಎಲ್ಲಿ ಹೋದರೂ ಗೌರಿಯನ್ನು ಮಗುವು ಹಿಂಬಾಲಿಸುತಿತ್ತು.'

ಇಷ್ಟು ಹೇಳಿ ಆತನು ಎದ್ದು ನಿಂತನು. ಕೆರೆಯನ್ನೊಮ್ಮೆ ನೋಡಿದನು. ಕೆರೆಯಲ್ಲಿ ತುಂಬಾ ತಾವರೆಗಳಿದ್ದವು. ಆತನು ನಿಟ್ಟದೃಷ್ಟಿಯಿಂದ ಹೂವೊಂದನ್ನು ನೋಡತೊಡಗಿದನು. ಮತ್ತೆ ಛೀತ್ಕಾರಮಾಡುತ್ತಾ ಹೇಳತೊಡಗಿದನು. 'ಅದೇ ಹೂವು. ಅದೇ ನನ್ನ ಸರ್ವನಾಶಕ್ಕೆ ಕಾರಣವಾದುದು. ಅದರಿಂದಾಗಿ ನನ್ನ ಜೀವನ ಬರಿದಾಯಿತು.'

ಮಾಧವನಿಗೆ ಅರ್ಥವಾಗಲಿಲ್ಲ. ಆತನ ಕೈಯನ್ನು ಹಿಡಿದು ಕೆರೆಯ ದಂಡೆಯಲ್ಲಿ ಕುಳ್ಳಿರಿಸಿ ಆತನೂ ಪಕ್ಕದಲ್ಲಿ ಕುಳಿತು "ಏನಾಯಿತು. ಹೂವಿಗೂ ನಿನ್ನ ಜೀವನದ ದುರಂತಕ್ಕೂ ಸಂಬಂಧವೇನು?" ಎಂದು ಕೇಳಿದನು. ಆತನು ಹೇಳತೊಡಗಿದನು.

"ಈ ಮಳೆಗಾಲಕ್ಕೆ ಎರಡು ವರ್ಷಗಳಾದವು. ಗೌರಿಯು ಎಂದಿನಂತೆ ಈ ಕೆರೆಗೆ ನೀರಿಗಾಗಿ ಬಂದಿದ್ದಳು. ಆ ಮುದ್ದು ಮಗುವು ಆಕೆಯ ಜೊತೆಯಲ್ಲಿ ಬಂದುದು ಆಕೆಗೆ ತಿಳಿಯಲಿಲ್ಲ. ಕೆರೆಯಲ್ಲಿದ್ದ ತಾವರೆಯನ್ನು ಕಂಡು ಮಗುವು ಇಳಿದಿರಬೇಕು. ಈ ಕೆರೆಯೊಳಗೆ ಮಗುವು ಮುಳುಗಿಹೋಯಿತು. ನೀರಿನಲ್ಲಿ ಚಡಪಡಿಸುವ ಮಗುವಿನ ಶಬ್ದದಿಂದ ಗೌರಿಯು ಗಾಬರಿಗೊಂಡು ಓಡಿದಳು. ತನ್ನ ಪ್ರಾಣಾಪಾಯವನ್ನೂ ಲೆಕ್ಕಿಸದೆ ನೀರಿಗೆ ಧುಮುಕಿದಳು. ಮಗುವನ್ನು ಎತ್ತಿ ತಂದಳು. ಆದರೆ ಮಗುವು ಪ್ರಜ್ಞಾಶೂನ್ಯವಾಗಿತ್ತು. ಗೌರಿಯು ಕೂಗಿಕೊಂಡಳು. ನೆರೆಯವರೆಲ್ಲ ಬಂದರು. ಮಕ್ಕಳಿಲ್ಲದ ಗೌರಿ ಕಿಚ್ಚಿನಿಂದ ಮಗುವನ್ನು ಕೊಂದಿರಬೇಕೆಂದು ಆಪಾದನೆಯಾಯಿತು. ಪೋಲೀಸರು ಬಂದರು. ಕೇಸು ಹೂಡಲ್ಪಟ್ಟಿತು. ವಿಚಾರವಾಯಿತು. ಅದೃಷ್ಟವಶಾತ್ ಗೌರಿಯು ತಪಿತಸ್ಥಳಲ್ಲವೆಂದೇ ತೀರ್ಮಾನವಾಯಿತು.

ಆದರೆ ದುರ್ವಿಧಿ ಬಿಡಲಿಲ್ಲ. ನೆರೆಮನೆ ಕರಿಯಪ್ಪನವರ ಹೆಂಡತಿಯು ಗೌರಿಯೊಡನೆ ಬಹು ಸಲಿಗೆಯಿಂದ ಇರಲು ತೊಡಗಿದಳು. ತುಂಬಾ ಗೆಳೆತನವನ್ನು ಬೆಳೆಸಿ ಆಗಾಗ್ಗೆ ಆಕೆ ಮನೆಗೆ ಬರತೊಡಗಿದಳು. ಮಗುವಿಲ್ಲದ ಕಾರಣ ಬೇಸರ ಕಳೆಯಲು ಗೌರಿಯೇ ತನ್ನ ಪ್ರಾಣ ಗೆಳತಿಯೆಂದು ಆಕೆ ಹೇಳಿಕೊಳ್ಳುತ್ತಿದ್ದಳು. ಮಗುವು ಗೌರಿಯಿಂದ ಮೃತವಾಯಿತೆಂಬ ಯಾವುದೇ ದುಗುಡವನ್ನು ಆಕೆ ತೋರಿಸುತ್ತಿರಲಿಲ್ಲ. ಹೀಗೆ ದಿನಗಳು ಉರುಳಿದವು.

ಒಂದು ದಿನ ಹಠಾತ್ತಾಗಿ ಗೌರಿ ಹಾಸಿಗೆ ಹಿಡಿದಳು. ರಾತ್ರೆ ಎಂಟು ಗಂಟೆಗೆ ಮಲಗಿದವಳು ವೈದ್ಯರು ಬರುವದರೊಳಗೆ ಅಂದರೆ ಒಂದು ಗಂಟೆಯೊಳಗೆ ನರಳಾಡಿ ಹೊರಳಾಡಿ ಪ್ರಾಣ ಬಿಟ್ಟಳು. ಅಯ್ಯೋ! ಗೌರಿ, ನನ್ನ ಜೀವನ ಬೆಳಕೇ...." ಆತನು ವಿಕಾರ ಸ್ವರದಿಂದ ಕೂಗಿಕೊಂಡನು, ಆತನ ಕಣ್ಣಿನಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಿತ್ತು. ಆತನ ಕಂಠ ಬಿಗಿದಿತ್ತು.

ಸ್ವಲ್ಪ ತಡೆದ ಮೇಲೆ ನಾನು ಕೇಳಿದೆ. "ಅಕಸ್ಮಾತ್ ನಿಧನ ಹೊಂದಲು ಕಾಯಿಲೆ ಏನಾಗಿತ್ತು ?". ಆತನು ರೊಚ್ಚಿಗೆದ್ದು ನುಡಿದನು. "ಕಾಯಿಲೆ, ಕಾಯಿಲೆಯಲ್ಲ-ಕೊಲೆಯದು. ಆಗ ತಿಳಿಯದಿದ್ದರೂ ಈಗ ತಿಳಿದಿದೆ. ಕರಿಯಪ್ಪನ ಹೆಂಡತಿ ಯಾವುದೋ ರೀತಿಯಿಂದ ಆಕೆಗೆ ವಿಷಪ್ರಾಶನ ಮಾಡಿಸಿದಳೆಂದು ಊರಿಗೆ ಊರೇ ಹೇಳುತ್ತಿದೆ. ಆದರೆ ಈಗ ಎರಡು ವರ್ಷಗಳು ಕಳೆದಿವೆ. ಮಾಡುವದೇನು? ನಾನು ನಿರ್ಗತಿಕನು. ನನ್ನ ತಾಯಿಯು ಈ ಹಿಂದೆಯೇ ಮೃತಳಾಗಿದ್ದಾಳೆ. ನನ್ನ ಮನೆ ದೀಪವೂ ಆರಿ ಹೋಗಿದೆ. ನನಗೆ ಮನೆ ಏಕೆ? ವ್ಯವಸಾಯವೇಕೆ, ದುಡಿತವೇಕೆ. ಕಡೆಗೆ ಈ ಶರೀರವಾದರೂ ಏಕೆ? ನಾಲ್ಕು ದಿನ ಅಲ್ಲಲ್ಲಿ ಕಳೆದು ನಾನೂ ಗೌರಿಯನ್ನು ಸೇರಬೇಕು. ಅಯ್ಯೋ! ಗೌರೀ, ಗೌರೀ.." ಕಂಠ ಬಿರಿಯುವಂತೆ ಕೂಗಿದ ಆತನು ಪ್ರಜ್ಞಾಶೂನ್ಯನಾಗಿ ಬಿದ್ದನು.

ಮಾಧವನಿಗೆ ಆತನ ಕಥೆ ಕೇಳಿ ಮರುಕ ಬಂದಿತ್ತು. ನೆರೆಯವರಿಬ್ಬರನ್ನು ಕರೆತಂದು ಅಲುಗಾಡದೆ ಬಿದ್ದಿದ್ದ ಆತನನ್ನು ಮನೆಗೆ ಸಾಗಿಸಿ ಶುಶ್ರೂಷೆ ಮಾಡಿದನು.

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:— ವೀರಾಜಪೇಟೆ.

ಶಾಖೆ:— ನ್ಯೂ ಮ್ಯುನಿಸಿಪಲ್ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕೋರಿಸಿರುವ ಸಾಮಾನುಗಳು ದೊರೆಯುತ್ತವೆ.

1 ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟೆಯ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{4}$" ಕಬ್ಬಿಣದ ಸರಳುಗಳು
6. 2", $1\frac{1}{2}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{3}{16}$" ಉಕ್ಕಿನ ಪಟ್ಟಿಗಳು (Spring Steel flats)
8 ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ (ಗೌ. ಕಾರ್ಯದರ್ಶಿ)
ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

"ಕೊಂಡೆ"
ಅಥವಾ
ಚಾಡಿಕೋರತನ

ಲೇ: ಶ್ರೀ ಜಿ. ಪರಮೇಶ್ವರ ಭಟ್ಟ, ಪಿತ್ಯಾನ್ರ, ಮಂಗಳೂರು

"ಕೊಂಡೆ" ಅಥವಾ ಚಾಡಿ!—ವಿಷಮ ವಿವಾಹಗಳನ್ನು ಮಾಡಿಸಬಲ್ಲುದು; ಪ್ರಣಯಿಗಳ ಪ್ರಣಯವನ್ನು ಹಾಳು ಮಾಡಬಲ್ಲುದು; ದಂಪತಿಗಳಲ್ಲಿ ಮನಸ್ತಾಪವನ್ನು ಹುಟ್ಟಿಸಬಲ್ಲುದು; ಗುರು ಶಿಷ್ಯರು ಇಲ್ಲವೆ ತಂದೆ ಮಕ್ಕಳನ್ನು ಬೇರ್ಪಡಿಸಬಲ್ಲುದು; ನಿರಪರಾಧಿಗೆ ಶಿಕ್ಷೆಯನ್ನು ಕೊಡಿಸಬಲ್ಲುದು; ರಾಮನನ್ನು ಸೀತಾ ಲಕ್ಷ್ಮಣರ ಸಮೇತ ಕಾಡಿಗೆ ಹೋಗುವಂತೆ ಮಾಡಿದುದೂ ಮಂಥರೆಯ ಕೊಂಡೆ! ಲೇಖಕರು ಈ ಕೊಂಡೆಯನ್ನು ದೂರದಿಂದಲೇ ವಂದಿಸಿದ್ದಾರೆ.

"ಕೊಂಡೆ" ಅಥವಾ ಚಾಡಿ ಎಂತಹ ಲಲಿತ ನುಡಿ! ಮೊಸಳೆಯ ನಗೆಯಂತೆ ಈ ಮಾತಿನ ಗರ್ಭದಲ್ಲಿ ಅಡಕವಾಗಿರುವ ಧಗೆಯ ಹೊಗೆಯನ್ನು ಕಂಡು ಹಿಡಿಯಬೇಕಾದರೆ ಮಾನವನು ತನ್ನ ಚಾಣಾಕ್ಷತನವನ್ನು ಎಷ್ಟು ಉಪಯೋಗಿಸಿದರೂ ಸಾಲದು. ಅದನ್ನು "ಪಡೆದುಕೊಂಡೆ" ಎನ್ನುವಲ್ಲಿ ಕೊಂಡೆಯು ಬಿಡಿಕ್ರಿಯೆಯಾಗಿರದೆ 'ಪಡೆದು' ಎನ್ನುವ ಇನ್ನೊಂದು ಕ್ರಿಯಾಪದದ ಸಂಪರ್ಕದಿಂದ ಸಂಯುಕ್ತ ಕ್ರಿಯೆಯೂ ಆಗಿರುವುದರಿಂದಲೂ ಕ್ರಿಯೆಯಾಗಿ ಉಪಯೋಗಿಸುವಲ್ಲಿ ಕೊಂಡೆಯು ಕೊಂಡೆ ಬುದ್ಧಿ ಸಮರ್ಪಕವಾಗಿ ತೋರದಿರುವುದರಿಂದಲೂ ತೊಂದರೆ ಕಡಿಮೆ. ಆದರೆ ಅದು ನಾಮಪದವಾಗಿ ಮಾಡುವ ಹಾವಳಿಯನ್ನು ನೋಡೋಣ. ಪಡೆದುಕೊಂಡೆ ಎನ್ನುವ ಒಂದೆಡೆಯ ವ್ಯಾಪಾರದಲ್ಲಿ ನಮಗೆ ಲಾಭ ದೊರಕಲೂ ಬಹುದು ಅಥವಾ ನಷ್ಟವಾಗಲೂಬಹುದು. ಅದು ಅವರವರ ಅದೃಷ್ಟವನ್ನು ಹೊಂದಿಕೊಂಡಿದೆ. ಕೊಟ್ಟವಾಗ ಹಣವನ್ನು ತೆತ್ತೇ ಒಂದು ವಸ್ತುವನ್ನು ಪಡೆದುಕೊಳ್ಳುವುದರಿಂದ ಕೊಂಡೆಯು ನಮಗೆ ಅಪಕಾರವನ್ನು ಮಾಡಲು ಶಕ್ತಿಯುಳ್ಳದಾಗಿಲ್ಲ. ಕಾರಣವೇನೆಂದರೆ "ಹಣವುಳ್ಳವರಿಗೆ ಮಣಗಟ್ಟಲೆ ಮಿತ್ರರು" ಎಂಬ ಒಂದು ಗಾದೆಯ ಮಾತಿದೆ. ಲೆಕ್ಕ ಮಾಡಲು ಸಾಧ್ಯವಿಲ್ಲದೆ ಸಕ್ಕರೆಯನ್ನು ತೂಗಿದಂತೆ ತೂಗಿ, ಅದರಲ್ಲಿರುವ ಕಣಗಳನ್ನು ಎಣಿಸಿದಂತೆ ಎಣಿಸಿ ಶ್ರೀಮಂತ ತನ್ನ ಸ್ನೇಹಿತರ ಲೆಕ್ಕವನ್ನು ಹಾಕಬೇಕಾದೀತು. ಇದು "ಪಿಟ್ಟಾಸು"ಗಳಿಗೆ ಹೇಳಿದ ಮಾತಲ್ಲ. ದರ್ಬಾರಿಗಳಿಗೆ ಹೇಳಿದುದು. ಅಂತೂ ಹಣವೊಂದಿದ್ದರೆ ಮನುಷ್ಯ ಈ ಯುಗದಲ್ಲಿ 'ಗಣ್ಯವ್ಯಕ್ತಿ'ಯಾಗಿ ರಾರಾಜಿಸುವುದು ಸಾಧ್ಯವುಳ್ಳ ಮಾತಾಗಿರುವುದು. ಎಷ್ಟು ಜನ ಹಣವಂತರು ವಿದ್ಯೆ ಅಥವಾ ಗುಣವಿಲ್ಲದಿದ್ದರೂ "ರೊಕ್ಕಪ್ಪನ" ಪ್ರಭಾವದಿಂದ ಚಿಕ್ಕಸ್ಪುರಾಗಲಿಲ್ಲ. ಇಂತಹ "ಶ್ರೀ" ಮೌಲ್ಯವಾದ ವಿತ್ತವನ್ನಿತ್ತು ನಾವು ಪರಿಕರಗಳನ್ನು ಪಡೆದುಕೊಳ್ಳುವುದರಿಂದಲೇ ಈ ಕೊಂಡೆ "ಉಮಿಯೊಳಗಣ ಕಿಚ್ಚಿನಂತೆ" ನಮಗೆ ತೊಂದರೆಯನ್ನು ಕೊಡುವುದೂ ಇದೆ. ಹೆಣ್ಣು, ಮಣ್ಣು, ಹೊನ್ನು ಎನ್ನುವುವುಗಳಲ್ಲಿ ಈ ಮಾತಿನ ಯಥಾರ್ಥತೆಯನ್ನು ನಾವು ಕಂಡು ಕೊಳ್ಳಬಹುದು.

ಕೊಂಡೆಗಳ ಸಂಖ್ಯೆ ದಿನದಿಂದ ದಿನಕ್ಕೆ ಮಿತಿಮೀರುತ್ತಿದೆ. "ಸುಖವಾಗಿ ಜೀವಿಸುವ ಯೋಗ್ಯತೆಯನ್ನು ಇದು ನಮಗೆ ಕೊಡುವಾಗ ಏಕಪ್ಪ ನಾವು ಕೆಲಸ ಮಾಡಬೇಕು" ಎಂದು ಎಷ್ಟೋ ಜನ ಬಾಹ್ಯ ಸಂಭಾವಿತರು 'ಅನನ್ಯ ಶರಣಂ ನಾಸ್ತಿ' ಎನ್ನುವಂತೆ ಕೊಂಡೆಯ ಆಶ್ರಯವನ್ನು ಪಡೆದು ಸುಖಜೀವನವನ್ನು ನಡೆಸುತ್ತಾರೆಂದು ನನ್ನ ಮಿತ್ರ ಚಿತ್ರನು ಹಲವು ಬಾರಿ ಹೇಳಿದ್ದ. ಆಗ ನಾನು ಕೊಂಡೆಯ ಜೀವನ ಚರಿತ್ರೆಯನ್ನು "ಸ್ಟಡಿ" ಮಾಡುವುದಕ್ಕಾಗಿ ಕೆಲವು ಮಹಾಕಾವ್ಯಗಳ ಪುಟಗಳನ್ನು ತಿರುವಬೇಕಾಯಿತು. ರಾಜನೀತಿಯನ್ನು ಪ್ರತಿಪಾದಿಸುವಾಗ ಸರ್ವಸಾಮಾನ್ಯವಾಗಿ ಎಲ್ಲಾ ರಾಜಗುರುಗಳೂ ತಮ್ಮ ಶಿಷ್ಯರಾದ ಭಾವೀ ಅರಸುಗಳಿಗೆ ಕೊಂಡೆಯ ಸ್ನೇಹಮಾಡಬಾರದಾಗಿ ತಿಳಿಸಿರುವರು. (ಅವರ ಎಷ್ಟು ಮಂದಿ 'ಗುರು ವಚನವು ಲಂಘನೀಯಂ' ಎಂಬ ತತ್ವವನ್ನು ಅರಿತು ನಡೆದಿದ್ದಾರೆನ್ನುವ ಮಾಹಿತಿ ನನಗೆ ಸಿಕ್ಕಲಿಲ್ಲ.) ಕೊಂಡೆಯ ಮಾತು ಕರ್ಣಕ್ಕೆ ಭೂಷಣವಾಗಿಯೂ, ಎದೆದಾವರೆಗೆ ಭಾಸ್ಕರನಾಗಿಯೂ ಆದಿಯಲ್ಲಿ ಪರಿಣಮಿಸಿ ಅಂತ್ಯದಲ್ಲಿ ಮುಂಜಾನೆಯ ನೆರಳಾಗಿ ಪರಿಣಮಿಸುತ್ತದೆಂದು ಹಿಂದಿನ ಪ್ರಾಜ್ಞರ ಮತ. (ಹಿಂದಿನ ಪ್ರಾಜ್ಞರನ್ನು ಇಂದು ಅಜ್ಞರೆಂದು ಪರಿಗಣಿಸುವ ನಾಗರೀಕತೆ ನಮ್ಮದಾಗಿರುವಾಗ ಅವರ ಮಾತಿಗೆಷ್ಟು ಬೆಲೆಯನ್ನು ನಾವು ಕೊಡುತ್ತೇವೆಂದು ಬೇರೆ ತಿಳಿಸಬೇಕಾಗಿಲ್ಲವಷ್ಟೆ?) ಯಾರು ಏನೇ ಹೇಳಲಿ, ಏನೇ ಬರೆಯಲಿ ಈ ಮಹನೀಯನು ತೃಣಬಿಂದು ಮುಣಿಯಂತೆ ತನ್ನ ಬೇರನ್ನು ಬಲವಾಗಿಯೇ ಊರಿ ಬಿಟ್ಟಿರುವನು. (ಈ ತೃಣ ಬಿಂದುವನ್ನು ಕದಲಿಸಲು ಈ ಕಲಿಯುಗದಲ್ಲಿ ಯಾವ ಮುಮುಕ್ಷು ಪ್ರಾಣನು ಬರುವನೆಂದು ನಾವು ಚಾತಕ ಪಕ್ಷಿ ಮೋಡಗಳನ್ನು ನಿರೀಕ್ಷಿಸುವಂತೆ ನಿರೀಕ್ಷಿಸಬೇಕಾಗಿದೆ.)

ನಾನು ಸಂಗ್ರಹಿಸಿದ ಸಾವಿರಾರು ಉದಾಹರಣೆಗಳಲ್ಲಿ ಒಂದೆರಡನ್ನು ಮಾತ್ರ ಇಲ್ಲಿ ಸೂಚಿಸುತ್ತೇನೆ. ದಾಸಿಯಾದ ಮಂಥರೆಯ ಕೊಂಡೆ ರಾಮನನ್ನು ಸೀತಾ ಲಕ್ಷ್ಮಣರ ಸಮೇತನಾಗಿ ಕಾಡಿಗೆ ಹೋಗುವಂತೆ ಮಾಡಿತು (ಇದರಿಂದ ರಾವಣಾದಿಗಳು ಯಮಪುರಿಯ ಪಯಣವನ್ನು ಕೈಕೊಂಡರಾದರೂ ರಾಮನು ಪಟ್ಟ ಕಷ್ಟಗಳಿಗಾಗಿ ನಾನು ಮರುಗುತ್ತೇನೆ. ಸೀತಾ ವಿರಹ ದುಃಖವನ್ನು ಎಷ್ಟು ಕಾಲ ಆತ ಅನುಭವಿಸಿದ! ಆಧುನಿಕ ರಾಮನಿಗೆ ವೈದೇಹಿಯನ್ನು ಒಂದು ನಿಮಿಷವಾದರೂ ಬಿಟ್ಟಿರಲು ಸಾಧ್ಯವೇ?) ಶಕುನಿಯ ಕೊಂಡೆ ಕುರು ವಂಶದವರ ಗೃಹಯುದ್ಧಕ್ಕೆ ಕಾರಣವಾಗಿ, 'ಸೆಂಟೆಡ್ ಹೇರ್ ಆಯಿಲ್'ಇಲ್ಲದೆ ದ್ರೌಪದಿಯು ಹದಿನಾಲ್ಕು ವರ್ಷಗಳ ಕಾಲ ತುರುಬನ್ನು ಕಟ್ಟದಂತೆ ಮಾಡಿತು. (ಇಂದಿನ ದ್ರೌಪದಿಯರಿಗೆ ಒಂದುದಿನ ಹೀಗೆ ನಿಲ್ಲಲು ಸಾಧ್ಯವೆ? ಅಥವಾ ಒಂದು ವೇಳೆ ನಿಂತರೂ ಭೀಮನು ದುಶ್ಶಾಸನನ ರಕ್ತವೆನ್ನುವ 'ಹೇರ್ ಆಯಿಲ'ನ್ನು ಸಂಪಾದಿಸಿಕೊಟ್ಟಂತೆ ಕೊಡಲು ಈ ದ್ರೌಪದಿಯರ ಪತಿಯಂದಿರಿಗೆ ಸಾಧ್ಯವೆ?) ಈ ಪಂಗಡಕ್ಕೆ ಸೇರಿ ಕತ್ತುರಿಯಂತೆ ಉತ್ತಮವಾದ ಕಂಪನ್ನು ಬಿತ್ತರಿಸಿದವರು ನಾರದರು ಎಂದು ಚಿತ್ರನ ವಾದ. ಮೂರು ಮುಕ್ಕಾಲು ಗಳಿಗೆಯಲ್ಲಿ ಪ್ರಪಂಚವನ್ನೊಮ್ಮೆ ಸುತ್ತುವವರು. ದಕ್ಷನ ಶಾಪದಿಂದ ಪಾಪ ಇವರಿಗೆ ಕೂತುಕೊಂಡಲ್ಲಿ ಕೂತುಕೊಳ್ಳಲಿಕ್ಕೆ ಸಾಧ್ಯವಿಲ್ಲವಂತೆ. ಕೆಲಸ ಮಾಡಿ ತಿನ್ನಲು ಎಡೆ ಬಗ್ಗುವುದಿಲ್ಲವಂತೆ. ಆದುದರಿಂದ ಊರೂರು, ಕೇರಿ ಕೇರಿ, ಬೀದಿ ಬೀದಿ, ಗಲ್ಲಿ ಗಲ್ಲಿ, ಕಡೆಗೆ ಸಿಕ್ಕಿದಲ್ಲಿ ತಿರುಗುತ್ತ, ಕೊಂಡೆ ದೇವಿಯ ಸಾಕ್ಷಾತ್ಕಾರದ ಒಲುಮೆಯಿಂದ ಉಬ್ಬಿ ಸಿಕ್ಕಿ ಸಿಕ್ಕಿದ ಜನರಲ್ಲಿ ಕಕ್ಷಿಯನ್ನುಂಟುಮಾಡಿ ಅವರು ಜಗಳವಾಡುವುದನ್ನು ನೋಡಿ ಸಂತೋಷದಿಂದ ನಲಿಯುತ್ತಿರುವರಂತೆ ಇವರು. 'ನಾರಂದದಿ ಇತಿ ನಾರದಃ' ಎಂದು ನಾನು ಹೇಳಿದರೆ ಚಿತ್ರ ಕೇಳುತ್ತಾನೇನು? ಬದಲಾಗಿ ನನ್ನನ್ನೇ ದಬಾಯಿಸಿ ಬಿಡುತ್ತಾನೆ. ಶೂರಪದ್ಮ ಸುಖವಾಗಿ ರಾಜ್ಯವಾಳುತ್ತಿದ್ದಾಗ ಆತನಿಗೆ ಶಚಿಯ ಹುಚ್ಚು ಹಿಡಿಸಿ ಆತನನ್ನು ಕೊಲ್ಲಿಸಿದುದೂ, ಕಂಸನಿಗೆ ಯಾದವರಲ್ಲಿ ದ್ವೇಷವನ್ನು ಹುಟ್ಟಿಸಿ ಆತನ ವಧೆಗೆ ಕಾರಣವನ್ನುಂಟುಮಾಡಿದುದೂ ನಾರದರ ಸ್ವಾರ್ಥಸಿಂಧೂ ಚಾಡಿ [illegible] ಎನ್ನುವುದನ್ನು ಬಿಟ್ಟಿರಲಿಲ್ಲವೆಂದಾಗ ಅವನು ಕೇಳಿ ಹೇಳಿ ನನ್ನ ಈ ಚಿಕ್ಕ [illegible] ದನ್ನು ಒಪ್ಪಿಕೊಂಡಿದ್ದೇನೆ.

ಹಿಂದೆ ನಾರದರೊಬ್ಬರು ಈ ವರ್ಗದಲ್ಲಿ "ಸರ್ಟಿಫಿಕೇಟು" ಪಡೆದವರಾಗಿದ್ದರೆ ಇಂದು ಸಾವಿರಾರು ನಾರದರು ಈ ಉದ್ಯೋಗದಲ್ಲಿ "ಲೋವರ್ ಗ್ರೇಡ್" [illegible] "ಬಿ. ಟಿ. ಗ್ರೇಡ್" ಮತ್ತು "[illegible] ಟಿ. ಗ್ರೇಡು" ಗಳನ್ನು ಪಡೆದಿದ್ದಾರೆ. ಈ ಪರೀಕ್ಷೆಗಳ ಮೇಲಧಿಕಾರಿಗಳಾದ ಉದರಂಭರರಾಯರು "ಬಿ. ಟಿ. ಗ್ರೇಡ್" ಮೊದಲಾದ ಹೆಚ್ಚಿನ ಯೋಗ್ಯತೆಗಳ ಪರೀಕ್ಷೆಗಳನ್ನು ಶೀಘ್ರದಲ್ಲೇ ಏರ್ಪಡಿಸಲಿರುವರೆಂದು

ಈ ಗೊಂದಲ, ದುಃಖ ಕಥೆಯ ಮಧ್ಯೆ ಸೂರ್ಯನು ಎಂದೋ ಮಾಯವಾಗಿದ್ದನು. ಪ್ರಕೃತಿಯು ಸೊಬಗನ್ನು ಕಳೆದುಕೊಂಡು ಅಸ್ಪಷ್ಟ ರೂಪು ಧರಿಸಿ ವಿಕಾರತೆಯನ್ನು ಪಡೆದಿದ್ದಳು. ಕಾಡಿನಲ್ಲಿ ಗುಳ್ಳೆನರಿಗಳ ಕೂಗು ಕೇಳುತ್ತಿದ್ದು ಪ್ರಕೃತಿಯ ವಿಕಾರತೆಗೆ ಕಳೆ ಕಟ್ಟಿದಂತಿತ್ತು.

1952--23rd Annual Report:

New Business completed	over Rs.	30,36,000
Premium & other income	.. ,,	8,01,000
Life and Reserve Funds	.. ..	27,99,000
Total Claims paid todate	,, ,,	7,80,000
Business in Force.	.. ..	1,35,00,000

Renewal Expense Ratio 17·7% [illegible] Earned 3·47%.

WANTED in all important centres enterprising applicants for FIELD appointments. Attractive rates of commission or salary offered.

"Prudent People Prefer Popular Policies"

POPULAR INSURANCE COMPANY LIMITED
Popular Buildings,—Mangalore 1.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ
ನೀವು ಬಲ್ಲಿರಾ?
ವರ್ಷಂಪ್ರತಿ ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ವೃದ್ಧಿಯಾಗುತ್ತಲೇ ಇದೆ. ಇದಕ್ಕೆ ನಮ್ಮ ಪುಸ್ತಕಗಳೇ ಬಲವಾದ ದಾಕ್ಲೆ. ಈಗ ತಾನೆ ಸಂದುಹೋದ 1952ರಲ್ಲೂ ಅಂತೆಯೆ. ಇದು ನಮ್ಮ ಜೀವನದ ಪ್ರಥಮ ಸೋಪಾನ; ನಮ್ಮ ಭಾಗ್ಯದ ಪ್ರಗತಿಪರ ಚಿಹ್ನೆ. ಬ್ಯಾಂಕಿಂಗ್ ವ್ಯವಹಾರ ನಡೆಸುವವರ ಸಂಖ್ಯೆಯು ಇನ್ನೂ ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿಯಾಗಿ, "ಕೋರ್ಪೊರೇಶನ್ ಬ್ಯಾಂಕಿ"ನ ಪ್ರೀತಿಪೂರ್ವಕ ಸೇವೆಯನ್ನು ಸರ್ವರೂ ಮೆಚ್ಚಿ, ಹೆಚ್ಚಾಗಿ ಪಡೆದು "ಕೋರ್ಪೊರೇಶನ್" ಎಂಬ ಹೆಸರು ಮನೆ ಮಾತಾಗಲೆಂಬುದೇ ನಮ್ಮ ಹಿರಿಯಾಸೆ!
— ಕೊಡಗು ಪ್ರಾಂತ್ಯದಲ್ಲಿ ನಮ್ಮ ಶಾಖೆಗಳು — 11
ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.
THE CANARA BANKING CORPORATION LIMITED

ಕೆಲವು ದಿವಸಗಳ ಹಿಂದೆ ನಾನೊಂದು ಬಜಾರ್ ನ್ಯೂಸ್ ಕೇಳಿದ್ದೆ. ಉಮೇದ್ವಾರರು ಅರ್ಜಿಗಳನ್ನು ಸಲ್ಲಿಸಬೇಕಾಗಿ ಸಂಬಂಧ ಪಟ್ಟವರನ್ನು ವಿನಂತಿಸಿಕೊಳ್ಳುತ್ತೇನೆ. ಇಲ್ಲ ವಾದರೆ ಅಧಿಕಾರಿಗಳು ಸ್ಥಿರವಾಗಿ ತಮ್ಮ ಆಸನಗಳಲ್ಲಿ ಅಂಟಿಕೊಂಡು ಸರಕಾರದ ಯಾವ ವ್ಯವಹಾರವನ್ನೂ ಸರಾಗವಾಗಿ ಸಾಗಿಸಲಾರರು.

"ಹರಿಯು ಮಾಯೆಯೊಳಗಿರುವನೊ ಮಾಯೆಯು ಹರಿಯ ಒಳಗಿರುವದೊ" ಎಂದು ಹಿಂದಿನ ಕಾಲದ ತಜ್ಞರು ತಲೆ ತಲೆ ಚಚ್ಚಿಕೊಂಡು ವಾದ ಪ್ರತಿವಾದಗಳನ್ನು ಮಾಡಿ, ಮಾತನ್ನು ಖಂಡಿಸಿ ತುಂಡಿಸಿ ಜಜ್ಜಿ ಪುಡಿಮಾಡಿ ನೂರಾರು ವರ್ಷಗಳ ವರೆಗೆ ಯತ್ನಿಸಿ ಹೇಗೆ ಒಂದು ನಿರ್ದಿಷ್ಟವಾದ ಅಭಿಪ್ರಾಯಕ್ಕೆ ಬರಲಿಲ್ಲವೋ ಹಾಗೆಯೇ ನಾನೂ ಕೂಡ "ಕೊಂಡೆ ಮಾನವನೊಳಗೊ ಮಾನವನು ಕೊಂಡೆಯೊಳಗೊ" ಎಂಬ ತತ್ವವನ್ನು ನಿನ್ನೆ ೮೬,೪೫೩ ಸೆಕೆಂಡುಗಳ ವರೆಗೆ ಸ್ವಗತವಾಗಿ ಚರ್ಚಿಸಿ ಒಂದು ನಿಶ್ಚಿತವಾದ ಅಭಿಪ್ರಾಯಕ್ಕೆ ಬಂದಿಲ್ಲ.

ಕೊಂಡೆಯ ಉದ್ದ, ಅಗಲ, ಎತ್ತರ ಅಥವಾ ತೂಕ ಎಷ್ಟೆಂದು ನನಗರಿಯದು. ಅದರ ಬಣ್ಣ, ಆಕಾರ, ಉಡುಗೆ ತೊಡುಗೆ ಮೊದಲಾದುವುಗಳ ಪರಿಪೂರ್ಣ ಜ್ಞಾನವನ್ನು ಪಡೆದುಕೊಳ್ಳುವದೂ ಕೂಡಾ ಭಾವನಾತೀತ ವಿಚಾರವಾದುದರಿಂದ ಅದನ್ನು ಭಾವನಾಪದ ನಾಲಿಗೇಸಿ ಸೇರಿಸಿ ಅದನ್ನು ಕುರಿತು ವಿಮರ್ಶಿಸುವ ಅಧಿಕಾರವನ್ನು ಓದುಗರ ಪಾಲಿಗೆ ಬಿಟ್ಟಿರುತ್ತೇನೆ.

ಕೊಂಡೆಯು ವಿಷಮ ವಿವಾಹಗಳನ್ನು ಮಾಡಿಸಬಲ್ಲುದು. ಪ್ರಣಯಿಗಳ ಪ್ರಣಯವನ್ನು ಹಾಳುಮಾಡಬಲ್ಲುದು. ದಂಪತಿಗಳಲ್ಲಿ ಮನಸ್ತಾಪವನ್ನು ಹುಟ್ಟಿಸಬಲ್ಲುದು. ಗುರು ಶಿಷ್ಯರನ್ನು ಇಲ್ಲವೇ ತಂದೆ ಮಕ್ಕಳನ್ನು ಬೇರ್ಪಡಿಸಬಲ್ಲುದು, ನಿರಪರಾಧಿಗೆ ಶಿಕ್ಷೆಯನ್ನು ಕೊಡಿಸಬಲ್ಲುದು. ಹೀಗೆ ಲೀಲಾಜಾಲವಾಗಿ ಸಾವಿರಾರು ಕೆಲಸಗಳನ್ನು ನಿರ್ವಹಿಸಬಲ್ಲುದು-ಓಹೋ ಮರೆತುಬಿಟ್ಟೆ ಅತ್ತೆ ಸೊಸೆಯರ ಕಾಳಗದಲ್ಲಿ ಕೊಂಡೆಯೇ ಪ್ರಧಾನ ಸೂತ್ರಧಾರನೆನ್ನದೆ ಹೋದರೆ ನಮ್ಮ ಭಗಿನೀ ಸಮಾಜ ನನ್ಮೇಲೆ ಕೋಪಿಸಿಕೊಳ್ಳದೇ?

ಇನ್ನು ಮುಂದೆ ವಿವಾಹ ವಿಚ್ಛೇದನಕ್ಕಾಗಿ ಕೋರ್ಟಿಗೆ ಹೋಗಬೇಕೇಕೆ? ಆಸ್ತಿಪಾಸ್ತಿಗಳನ್ನು "ನಾಸ್ತಿ" ಮಾಡುವದಕ್ಕಾಗಲೀ, ಮನಸ್ಸಿಲ್ಲದ ಪ್ರಣಯಿಗಳ ಬಿಡುಗಡೆಗಾಗಲೀ, ಕೊಂಡೆಯನ್ನು ಆಶ್ರಯಿಸಿದರೆ ಸಾಕು. ಪರಮಾತ್ಮನಂತೆ ಅಣುರೇಣು ತೃಣಕಾಷ್ಠ ಸ್ಥಾವರ ಜಂಗಮಗಳಲ್ಲೂ ಕೊಂಡೆಯು ಇರುವನ್ನು ನಾವು ಕಂಡೇ ಕಾಣುವೆವು. ಇಂದಿನ ಸರಕಾರಗಳ ಕೆಲಸ ಕಾರ್ಯಗಳು ಇದನ್ನು ಅವಲಂಬಿಸಿಯೇ ನಡೆಯುತ್ತಿರುವಂತೆ ತೋರುತ್ತಿದೆ.

ಕೊಂಡೆಯ ವಾಸಸ್ಥಾನವು ನಾಲಗೆ. ಕೊಂಡೆಯ ಭಕ್ತನಲ್ಲಿ ಕೆಲವು ವಿಶೇಷ ಗುಣಗಳಿರಬೇಕು. ಹಗಲು ರಾತ್ರಿ ಎಚ್ಚರ ಸ್ವಪ್ನಗಳಲ್ಲಿ ಕೂಡ ಆತನು ಸುಳ್ಳನ್ನೇ ಆಡಬೇಕು. ಆಸ್ತಿಕನಾಗಿರದೆ ನಾಸ್ತಿಕನಾಗಿರಬೇಕು. ಬುದ್ಧಿಯಲ್ಲಿ ಸರಿಯನ್ನು ಮೀರಿರಬೇಕು. ನಿರುದ್ಯೋಗಿಯಾಗಿರಬೇಕು. ದಯೆ ದಾಕ್ಷಿಣ್ಯಗಳಿಗೆ ಬಲಿಬೀಳದವನಾಗಿರಬೇಕು. ಇಂತಹ "ಸರವ"ನನ್ನೇ ಕೊಂಡೆ ಅನುಗ್ರಹಿಸುವದು. ಭೂತಪ್ರೇತ ಪಿಶಾಚಿಯೋ ನರಶರೀರವನ್ನು ಆಕ್ರಮಿಸುವಂತೆ ಈ ಕೊಂಡೆ ಮಾನವನನ್ನು ಆಕ್ರಮಿಸಿಕೊಳ್ಳುವದು. ಮನುಷ್ಯ ಶರೀರವನ್ನು ಸೇರಿದ ಕೊಂಡೆ ಕಲ್ಲಿಟ್ಟ ಭೂತದಂತೆ. ಸೇರದ ಕೊಂಡೆ ಕಲ್ಲಿಲ್ಲದ ಭೂತದಂತೆ.

ಓ! ಕೊಂಡೆ ನಿನ್ನ ಗಣನಾತೀತವಾದ ಗುಣಗಳನ್ನು ಹೊಗಳುವದಕ್ಕೂ, ನಿನ್ನನ್ನು ಸ್ತುತಿಸುವದಕ್ಕೂ, ಹಾಡುವದಕ್ಕೂ, ಪೂಜಿಸುವದಕ್ಕೂ, ನಾನು ಅಸಮರ್ಥನಾದುದರಿಂದ ದೂರದಿಂದಲೇ ನಿನ್ನನ್ನು ವಂದಿಸಿ ವಿರಮಿಸಿಕೊಳ್ಳುತ್ತೇನೆ.

'ಪ್ರಭಾತ'

ಕೊಡಗಿನಲ್ಲಿ ಜೇನು ಕೃಷಿ

ಭಾಗಮಂಡದಲ್ಲಿರುವ ಕೇಂದ್ರ ಮಧುವನದಲ್ಲಿ ಕಳೆದ ಎರಡು ತಿಂಗಳುಗಳಿಂದ ತರಬೇತು ಪಡೆಯುತ್ತಿದ್ದ ೨೩ ಜನ ತರಬೇತಿಗಳಿಗೆ ಜೇನು ಕೃಷಿಯ ವಿದ್ಯೆಯಲ್ಲಿ ಉತ್ತೀರ್ಣರಾದ ಪ್ರಶಸ್ತಿ ಪತ್ರ ವಿನಿಯೋಗ ಸಮಾರಂಭವು ಕೊಡಗಿನ ಮುಖ್ಯ ಮಂತ್ರಿ ಶ್ರೀ. ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ತಾರೀಕು ೧೭ ರಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಮಾತಾಡುತ್ತಾ ಶ್ರೀ. ಪೂಣಚ್ಚನವರು ಕೊಡಗಿನ ಪಶ್ಚಿಮ ಭಾಗವು ಜೇನು ವ್ಯವಸಾಯಕ್ಕೆ ತುಂಬಾ ಅನುಕೂಲವಾಗಿದೆಯೆಂದೂ, ಜೇನು ವ್ಯವಸಾಯವು ಹೆಚ್ಚಿನ ಬಂಡವಾಳವಿಲ್ಲದೆ ಎಲ್ಲರಿಂದಲೂ ಕೈಕೊಳ್ಳಲ್ಪಡಬಹುದಾದ ಕೈಗಾರಿಕೆಯೆಂದೂ, ತಮ್ಮ ಬಿಡು ಸಮಯದಲ್ಲಿ ಪ್ರತಿಯೊಬ್ಬನೂ ಇದನ್ನು ಕೈಕೊಂಡು ಲಾಭ ಪಡೆಯಬಹುದೆಂದೂ ಹೇಳಿದರು. ಬಹುಮಾನ ಪತ್ರಗಳನ್ನು ಕೊಡುತ್ತಾ ಗೃಹ ಮಂತ್ರಿ ಶ್ರೀ ಕೆ. ಮಲ್ಲಪ್ಪನವರು ಕೊಡಗಿನ ಪಶ್ಚಿಮ ಘಟ್ಟ ಪ್ರದೇಶವು ಜೇನು ವ್ಯವಸಾಯಕ್ಕೂ ಪೂರ್ವ ಭಾಗವು ರೇಷ್ಮೆ ಕೈಗಾರಿಕೆಗೂ ಅನುಕೂಲವಾಗಿದೆಯೆಂದೂ ಇವೆರಡು ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸರಕಾರವು ಸಾಧ್ಯವಾದ ಪ್ರಯತ್ನ ಮಾಡುವದೆಂದೂ, ಜೇನು ವ್ಯವಸಾಯದಲ್ಲಿ ತರಬೇತಾದವರು ಸರಕಾರಿ ಕೆಲಸಗಳಿಗಾಗಿ ಪ್ರಯತ್ನಿಸದೆ ತಮ್ಮದೇ ಸ್ವತ ಜೇನು ವ್ಯವಸಾಯ ಉದ್ಯಮವನ್ನು ಕೈಕೊಂಡರೆ ಸರಕಾರವು ಆವಶ್ಯ ಸಹಾಯ ನೀಡಲು ತಯಾರಿದೆಯೆಂದೂ ಹೇಳಿದರು.

ಶ್ರೀ. ಬಿ. ಎಂ. ಮುತ್ತಪ್ಪನವರು ಇಲಾಖೆಯ ಕೆಲಸ ಕಾರ್ಯಗಳ ಬಗ್ಗೆ ಒಂದು ವರದಿಯನ್ನು ಒಪ್ಪಿಸುತ್ತಾ ಹೀಗೆ ಹೇಳಿದರು. 'ಕೊಡಗಿನಲ್ಲಿ ಸುಮಾರು ೧೯೩೦ ರ ಕಾಲಕ್ಕೆ ಸ್ವಾಮಿ ಶಾಂಭವಾನಂದಜಿಯವರ ಪ್ರಯತ್ನದಿಂದ ಪ್ರಥಮವಾಗಿ ಜೇನು ವ್ಯವಸಾಯ ಕೈಕೊಳ್ಳಲ್ಪಟ್ಟಿತು. ಇವರಿಂದ ಸ್ಥಾಪಿಸಲ್ಪಟ್ಟ ಜೇನು ಮೇಣ ವ್ಯವಸಾಯಗಾರರ ಸಂಘವು ಕೊಡಗಿನಲ್ಲಿ ಜೇನು ಕೃಷಿಗೆ ಒಂದು ತಳಹದಿಯನ್ನು ಹಾಕಿತು. ಮಂತ್ರಿಮಂಡಳವು ಅಧಿಕಾರಕ್ಕೆ ಬಂದ ಮೇಲೆ ಮುಚ್ಚಲ್ಪಟ್ಟಿದ್ದ ಮಧುವನವನ್ನು ತೆರೆದು ತರಬೇತಿನ ಏರ್ಪಾಡು ಮಾಡಲಾಯಿತು. ಇತ್ತಲಾಗಿ ನಾಲ್ಕುನಾಡು ಅರಮನೆಯಲ್ಲಿ ಒಂದು ಕೇಂದ್ರ ತೆರೆಯಲಾಗಿದೆ. ಸಾಮೂಹಿಕ ವಿಕಾಸಯೋಜನಾ ಕ್ಷೇತ್ರದಲ್ಲಿ ಎರಡು ಮಾದರಿ ಕೇಂದ್ರಗಳನ್ನೂ ಮಡಿನಾಡಿನಲ್ಲಿ ಒಂದನ್ನೂ ತೆರೆಯಲಾಗುವದು. ಮಡಿಕೇರಿಯಲ್ಲಿಯ ವ್ಯವಸಾಯ ಪರಿಶೋಧನಾ ಲೇಬರೇಟರಿಗೆ ಎಬಿ ತಯಾರಿಸುವ ಯಂತ್ರ ದೊರೆತೊಡನೆ ಕೆಲಸವು ಇನ್ನೂ ಬಹುಮುಖವಾಗಿ ವಿಸ್ತರಿಸದಿರದು.

ಕೊಡಗಿನಲ್ಲಿ ವರ್ಷಕ್ಕೆ ಸರಾಸರಿ ೧,೭೫,೦೦೦ ಪೌಂಡು ಜೇನು ಉತ್ಪನ್ನವಾಗುತ್ತದೆ. ಶಾಸ್ತ್ರೀಯವಾದ ೪೦೦೦ ಕ್ರೊಮಿಕ್ಕಿದ ಪೆಟ್ಟಿಗೆಗಳು ವಿವಿಧ ಭಾಗಗಳಲ್ಲಿವೆ. ಕೊಡಗು ಈ ವ್ಯವಸಾಯದಲ್ಲಿ ಹಿಂದೂದೇಶದ ಯಾವ ಪ್ರಾಂತಗಳಿಗೂ ಹಿಂದಿಲ್ಲ. ಜೇನಿನ ಮಟ್ಟಿಗೆ ಕೊಡಗು ಉಳುವರಿ ಪ್ರಾಂತ. ಕೊಡಗಿನ ಜೇನು ಹಿಂದೂದೇಶದ ವಿವಿಧ ಸಂತೆಗಳಲ್ಲಿ ತನ್ನದೇ ಆದ ಕೀರ್ತಿಯನ್ನು ಗಳಿಸಿದೆ.

ಭಾಗಮಂಡ್ಲ ಕೇಂದ್ರದಲ್ಲಿ ತರಬೇತಾದ ೨೩ ಜನರನ್ನು ಸೋಮವಾರಪೇಟೆ, ಭಾಗಮಂಡ್ಲ, ನಾಪೋಕ್ಲು, ಕುತ್ತುನಾಡು ಮತ್ತು ಮರೆನಾಡು ಹೀಗೆ ನಾಡುವಾರು ಆರಿಸಲಾಗಿದೆ. ಈ ತರಬೇತಿಗೆ ಬೇಕಾದಷ್ಟು ಅರ್ಜಿಗಳಿದ್ದರೂ ೨೩ ಜನರನ್ನೇ ಆರಿಸಲಾಯಿತು. ಕೊಡಗಿನಲ್ಲಿ ಜೇನು ವ್ಯವಸಾಯ ಜನಪ್ರಿಯವಾಗುತ್ತಿದೆಯೆಂಬುದಕ್ಕೆ ತರಬೇತಾಗಲು ಮುಂದೆ ಬರುತ್ತಿರುವವರ ಸಂಖ್ಯೆಯೇ ಸಾಕ್ಷಿ ಎಂದರು.

---

೫೨ ವರ್ಷಗಳಿಗೆ ಮೀರಿದ ವಿಶ್ವಾಸಪೂರಿತ ಸೇವೆ.

ವಿಶ್ವಾಸ ಹಾಗೂ ಪ್ರಜಾಪ್ರಭುತ್ವ ತತ್ವಗಳ ಮೇಲೆ ರಚಿತವಾಗಿರುವ ದಿ ಬೋಂಬೆ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್ ಕಳೆದ ಎಂಟು ದಶಮಾನಗಳಿಗೂ ಹೆಚ್ಚಿನ ಸಮಯದಿಂದ ಸಾರ್ವಜನಿಕರ ಸೇವೆಯನ್ನು ಒಂದೇ ವಿಧದಿಂದ ಮಾಡುತ್ತಿದೆ. ಇದು ದೇಶದ ಪ್ರಗತಿಗೆ ಪ್ರಾಮುಖ್ಯವಾದ ಕೊಡುಗೆಯೆನ್ನಬಹುದು. "ವಿಮಾದಾರರ ಸೇವೆ"ಯ ಒಂದೇ ಗುರಿಯನ್ನು ಇಟ್ಟುಕೊಂಡು ಇದು ನಡೆಯುತ್ತಿದೆ. ದಿ ಬೋಂಬೆ ಮ್ಯೂಚುವಲ್ ವಿಮಾದಾರರ ಸಂಸ್ಥೆ. ಅವರ ಸಂಘ, ಅವರಿಗೆ ಅದರ ಹಿತ ಸೇವೆ.

ವ್ಯಕ್ತಿಗತ ಬೇಡಿಕೆಗೆ ಅನುಕೂಲವಾದ ವಿವಿಧ ಯೋಜನೆಗಳಿವೆ. ವಿವರಗಳಿಗೆ ಬರೆಯಿರಿ—

ದಿ ಬೊಂಬೆ ಮ್ಯೂಚುವಲ್ ಲೈಫ್ ಎಶ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

ಹೆಡ್ ಆಫೀಸು
ಹಾರ್ನಬಿ ರೋಡ್,
ಬೊಂಬಾಯಿ.

ಬ್ರಾಂಚ್ ಆಫೀಸು
ಪೋ. ಬಾ. ನಂ. 186
ಬೆಂಗಳೂರು—2.

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ. ಎನ್. ಗೋವಿಂದರಾಜು

ಶನಿವಾರಸಂತೆಗೆ
'ಕೊಡಗು' ಏಜೆಂಟರು,
ಶ್ರೀ ಎಸ್. ಎನ್. ಸಿದ್ದಪ್ಪನವರು

ವ್ಯಾಕುಲವೂ ಬಿಳಿಗೂದಲೂ

ಮನುಷ್ಯನ ಚಿಂತೆಗೂ ಬಿಳಿ ಕೂದಲಿಗೂ ಸಮೀಪ ಸಂಬಂಧವಿರುವುದೆಂದು ವೈದ್ಯಕೀಯ ತಜ್ಞರೇ ಅಭಿಪ್ರಾಯಪಡುತ್ತಾರೆ. ಜಗತ್ತಿನಲ್ಲಿ ಹೆಚ್ಚಿನ ಮಹಿಳೆಯರಿಗೆ ತಲೆ ಕೂದಲು ನರೆದಿದೆ—ಹಲವರದು ಬಿಳಿ ಬಣ್ಣಕ್ಕೆ ತಿರುಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಈ ಮಾರ್ಪಾಟ ಬಿರುಸಿನಿಂದ ನಡೆಯುವದು ಕಂಡುಬಂದಿದೆ ಎಂಬುದಾಗಿ ಲಂಡನಿನ ವೈದ್ಯರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮನೋವ್ಯಾಕುಲವೇ ಇದಕ್ಕೆ ಕಾರಣವೆಂದೂ ಅವರು ಸೂಚಿಸಿದ್ದಾರೆ. ಗಂಡಸರಿಗಿಂತ ಹೆಂಗಸರಿಗೆ ಹೆಚ್ಚಿನ ಚಿಂತೆ ಹಿಡಿದುದರಿಂದ ಅವರ ತಲೆಗೂದಲು ನರೆಯಲು ಮತ್ತು ಬಿಳಿಯಾಗಲು ಮುಖ್ಯ ಕಾರಣವೆಂದು ಆ ವೈದ್ಯರ ನಿಶ್ಚಿತಾಭಿಪ್ರಾಯವಾಗಿರುತ್ತದೆ: ಚಿಂತೆಯು ಶಿರಸ್ಸಿನ ನರಗಳ ಮೇಲೆ ಪರಿಣಾಮ ಬೀರುವದರಿಂದ ಕೂದಲು ಬಿಳಿಯಾಗುತ್ತದೆ ಮತ್ತು ಉದುರಿಹೋಗುತ್ತದೆ.

ಮಾಲಿಕ್‌ರು ಲಂಡನಿನಲ್ಲಿ ರಷ್ಯನ್ ರಾಯಭಾರಿ

ರಷ್ಯಾದ ವಿದೇಶಾಂಗ ಉಪಮಂತ್ರಿ ಮಿ॥ ಜೇಕಬ್ ಮಾಲಿಕ್‌ರನ್ನು ಲಂಡನಿನಲ್ಲಿ ರಷ್ಯಾದ ರಾಯಭಾರಿಯಾಗಿ ಮಿ॥ ಆಂಡ್ರಿಗ್ರಾಮಿಕೋರ ಸ್ಥಾನದಲ್ಲಿ ನೇಮಿಸಲಾಗುವುದೆಂದು ಅಧಿಕೃತವಾಗಿ ಗೊತ್ತಾಗಿದೆ. ಗ್ರಾಮಿಕೋರನ್ನು ಮಾಸ್ಕೋವಿಗೆ ವಾಪಸು ಕರೆಸಿಕೊಳ್ಳಲಾಗಿದೆ.

ಜಮ್ಮುವಿನಲ್ಲಿ ಪ್ರದರ್ಶನ

ಜಮ್ಮುವಿನ ಮುಖ್ಯ ರಸ್ತೆಯಲ್ಲಿ ತಾ. ೧೭ರಲ್ಲಿ ಪ್ರಜಾ ಪರಿಷತ್ತಿನವರ ಪ್ರದರ್ಶನವೊಂದನ್ನು ಚದುರಿಸಲು ಪೊಲೀಸಿನವರು ಆಕಾಶಕ್ಕೆ ಗುಂಡು ಹಾರಿಸಿದರು. ಪ್ರದರ್ಶನಕಾರರು ಪೊಲೀಸಿನವರ ಮೇಲೆ ಕಲ್ಲುಗಳನ್ನೆಸೆದರೆಂದು ವರದಿಯಾಗಿದೆ. ಇದಕ್ಕೆ ಮೊದಲು ಪ್ರಜಾ ಪರಿಷತ್ತಿನ ಮಹಿಳೆಯರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು.

ಪಾಕಿಸ್ತಾನ ಮುಖ್ಯಮಂತ್ರಿಯವರನ್ನು ಡಿಸ್‌ಮಿಸ್ ಮಾಡಲಾಯಿತು.

ಪಾಕಿಸ್ತಾನದ ಮುಖ್ಯ ಮಂತ್ರಿಯವರಾದ ಖ್ವಾಜಾ ನಾಜಿಮುದ್ದೀನರು ದೇಶದಲ್ಲಿ ಉಪಸ್ಥಿತವಾದ ಆಹಾರದ ತೊಂದರೆ ಮತ್ತು ಅವ್ಯವಸ್ಥೆಗಳನ್ನು ಸರಿಪಡಿಸಲು ಸಮರ್ಥರಾಗಿಲ್ಲವೆಂಬ ಕಾರಣದಿಂದ ಪಾಕಿಸ್ತಾನದ ಗವರ್ನರ್ ಜನರಲರು ಅವರನ್ನು ಮಂತ್ರಿಪದದಿಂದ ಡಿಸ್‌ಮಿಸ್ ಮಾಡಿ ಅಮೇರಿಕಾದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿದ್ದ ಮಹಮ್ಮದಾಲಿಯವರನ್ನು ಮುಖ್ಯ ಮಂತ್ರಿಯಾಗಿ ನೇಮಿಸಿರುವರು. ಅವರು ಅಧಿಕಾರ ವಹಿಸಿ ಹೊಸ ಮಂತ್ರಿಮಂಡಳ ರಚಿಸಿರುವರು. ಮಂತ್ರಿಗಳ ಹೆಸರು ಹೀಗಿದೆ.

ಶ್ರೀ ಮಹಮುದ್ ಆಲಿ:–ಮುಖ್ಯ ಮಂತ್ರಿ ಸಂರಕ್ಷಣೆ ಮತ್ತು ವಾಣಿಜ್ಯ ಶಾಖೆ, ಶ್ರೀ. ಜಫರುಲ್ಲಾಖಾನ್: ವಿದೇಶಾಂಗ ಇಲಾಖೆ ಮತ್ತು ಕಾಮನ್‌ವೆಲ್ತ್ ಸಂಬಂಧ ಶ್ರೀ. ಮಹಮುದ್ ಆಲಿ:–ಆರ್ಥಿಕ ಇಲಾಖೆ ಶ್ರೀ ಮುಸ್ತಾಕ್ ಅಹಮುದ್ ಗುರುಮಾನಿ:–ಆಂತರಿಕ, ಗಡಿಸಂಬಂಧ ಇಲಾಖೆಗಳು, ಸರ್ದಾರ್ ಬಹದೂರ್ ಖಾನ್–ಕಮ್ಯೂನಿಕೇಶನ್. ಡಾ. ಎ. ಎಂ. ಮಾಲಿಕ್:–ಆರೋಗ್ಯ ಶ್ರೀ. ಐ ಎಚ್. ಕುರೇಶಿ:–ವಿದ್ಯಾ ಮತ್ತು ನಿರಾಶ್ರಿತರ ಇಲಾಖೆ. ಶ್ರೀ. ಎ. ಕೆ. ಬ್ರೋಹಿ– ನ್ಯಾಯ ಶಾಖೆ, ನ್ಯೈಸರ್ಗಿಕ ಮತ್ತು ಪಾರ್ಲಿಮೆಂಟರಿ ಶಾಖೆ, ಖಾನ್ ಅಬ್ದುಲ್ ಕ್ಯಾಯುಮ್ ಖಾನ್–ಕೈಗಾರಿಕೆ,–ಆಹಾರ ಮತ್ತು ವ್ಯವಸಾಯ. ಶ್ರೀ ಶೋಯಬ್ ಕುರೇಶಿ–ಬ್ರಾಡ್‌ಕಾಸ್ಟಿಂಗ್ ಮತ್ತು ಇನ್‌ಫರ್ಮೇಶನ್ ಮತ್ತು ಕಾಶ್ಮೀರ್ ವಿಚಾರ.

ನೂತನ ಪಾಕ್ ಪ್ರಧಾನಿಯ ಭಾಷಣ.

"ಕ್ವಾಯದೆ ಅಜಾಮರು ನಮಗೆ ದಯಪಾಲಿಸಿರುವ ಇಸ್ಲಾಮಿನ ಪ್ರಜಾಪ್ರಭುತ್ವ ತತ್ವಗಳು ಹಾಗೂ ಸಾಮಾಜಿಕ ನ್ಯಾಯಕ್ಷಮತೆ ಇವುಗಳನ್ನನುಸರಿಸಿ ದೇಶದ ಹಿತವನ್ನು ರಕ್ಷಿಸುವ ಕಾರ್ಯದಲ್ಲಿ ಪಾಕಿಸ್ತಾನದ ಜನತೆಯು ನನಗೂ ನನ್ನ ಅನುಯಾಯಿಗಳಿಗೂ ಸಹಾಯ ನೀಡುವರೆಂದು ನನಗೆ ವಿಶ್ವಾಸವಿದೆ. ಎಂದು ಪಾಕಿಸ್ತಾನದ ನೂತನ ಪ್ರಧಾನಿ ಮಹಮ್ಮದ್ ಆಲಿಯವರು ತಮ್ಮ ಪ್ರಥಮ ಆಕಾಶವಾಣಿ ಭಾಷಣದಲ್ಲಿ ಹೇಳಿದರು.

"ದೇಶವು ಈಗಿನ ಕಷ್ಟ ಪರಿಸ್ಥಿತಿಯಿಂದ ಪಾರಾಗಬೇಕಾದರೆ ಆರ್ಥಿಕ, ಆಹಾರ ಮತ್ತು ನಿರಾಶ್ರಿತರ ಸಮಸ್ಯೆಗಳನ್ನು ಬಗೆಹರಿಸಲು ವಿಶೇಷ ಪ್ರಯತ್ನ ಮಾಡಬೇಕಾಗಿದೆ. ದೇವರ ದಯಾಬಲದಿಂದ ಈ ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು. ನೈಸರ್ಗಿಕ ಸಂಪತ್ತನ್ನು ಆದಷ್ಟು ಬೇಗ ಅಭಿವೃದ್ಧಿಗೊಳಿಸಲಾಗುವುದು.

"ಕಳೆದ ಐದು ವರ್ಷಗಳಿಂದ ನಾನು ಕೆನಡಾ ಮತ್ತು ಅಮೇರಿಕಾಗಳಲ್ಲಿ ಪಾಕಿಸ್ತಾನದ ರಾಯಭಾರಿಯಾಗಿ ಕೆಲಸ ಮಾಡಿದ್ದೇನೆ. ಆ ಮುಂಚೆ ಬಂಗಾಳದ ಹಣಕಾಸಿನ ಮಂತ್ರಿಯಾಗಿದ್ದೆ. ಕೆಲವು ಸಲ ತಾತ್ಕಾಲಿಕವಾಗಿ ಮುಖ್ಯ ಮಂತ್ರಿಯಾಗಿಯೂ ಕೆಲಸ ಮಾಡಿರುವೆನು. ಈಗ ನನ್ನನ್ನು ಈ ಜವಾಬ್ದಾರಿ ಕೆಲಸಕ್ಕೆ ಕರೆಯಲಾಗಿದೆ. ಅತ್ಯಂತ ವಿನಯದಿಂದ ಈ ಜವಾಬ್ದಾರಿಯನ್ನು ಹೊರಲು ಒಪ್ಪಿರುವೆನು. ನನ್ನ ಈ ಹೊಣೆಗಾರಿಕೆಯನ್ನು ನಿರ್ವಹಿಸಲು ಭಗವಂತನು ನನಗೆ ಶಕ್ತಿಯನ್ನೀಯಲಿ ಎಂದು ನಾನು ಪ್ರಾರ್ಥಿಸುತ್ತೇನೆ' ಎಂದು ಹೇಳಿ ಪಾಕಿಸ್ತಾನದ ಜನತೆಯು ಸಂಕುಚಿತ ಭಾವನೆಗಳನ್ನು ಬದಿಗೊತ್ತಿ ಏಕತ್ವವನ್ನು ತೋರಿಸಬೇಕೆಂದು ಮಹಮ್ಮದ್ ಆಲಿಯವರು ಜನತೆಗೆ ಕರೆ ಕೊಟ್ಟರು.

ನೆಹರೂ ಭೇಟಿಗೆ ಸ್ವಾಗತ.

"ಭಾರತದ ಪ್ರಧಾನಿ ನೆಹರೂಗಳೊಡನೆ ಭೇಟಿಯನ್ನು ನಾನು ಸ್ವಾಗತಿಸುತ್ತೇನೆ" ಎಂದು ನೂತನ ಅಧಿಕಾರವನ್ನು ಸ್ವೀಕರಿಸಿದ ಬಳಿಕ ಪಾಕ್ ಪ್ರಧಾನಿ ಮಹಮ್ಮದ್ ಆಲಿಯವರು ಪ್ರಥಮ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು,

"ನೆಹರೂಗಳು ಭಾರತ–ಪಾಕ್ ಸಮಸ್ಯೆಗಳು ಬಗೆಹರಿಯಬೇಕೆಂದು ಮನಸಾರೆ ಇಚ್ಛಿಸಿದರೆ ನಾನು ಅವರನ್ನು ಭೇಟಿಯಾಗಲು ಅರ್ಧ ದಾರಿಗಿಂತಲೂ ಮುಂದರಿಯಲು ಸಿದ್ಧನಿದ್ದೇನೆ' ಎಂದು ಅವರು ನುಡಿದರು.

ರಾಜಿನಾಮೆ ಕೊಡಲು ಕೇಳಿಕೊಂಡಾಗ ಮಾಜಿ ಪ್ರಧಾನ ನಾಜಿಮುದ್ದೀನರು ನಿರಾಕರಿಸಿದರೇ ಎಂದು ಅವರನ್ನು ಕೇಳಲು ತನಗೆ ಗೊತ್ತಿಲ್ಲವೆಂದು ಮಹಮ್ಮದ್ ಆಲಿಯವರು ಹೇಳಿದರು. ವಿದೇಶ ನೀತಿಯ ಕುರಿತು ಹಲವು ಪ್ರಶ್ನೆಗಳನ್ನು ಕೇಳಿದರೂ ಆ ಕುರಿತು ತನ್ನ ಘೋಷಣೆಯನ್ನು ತಾನು ಇನ್ನೂ ನಿರ್ದಿಷ್ಟಗೊಳಿಸಲಿಲ್ಲವೆಂದು ಹೇಳಿದರು. ತನ್ನ ಮಂತ್ರಿಮಂಡಲದಲ್ಲಿ ಅಲ್ಪ ಸಂಖ್ಯಾತರ ಪ್ರತಿನಿಧಿಯನ್ನು ಸೇರಿಸುವ ವಿಚಾರವಿಲ್ಲವೆಂದೂ ಅವರಿಕಾಗಿಂದ ಇಲ್ಲಿಗೆ ಬರುವಾಗ ತನಗೆ ಮುಖ್ಯ ಮಂತ್ರಿಯಾಗುವ ವಿಚಾರ ತಿಳಿದಿರಲಿಲ್ಲವೆಂದೂ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೇಳಿದರು.

ತಾ. ೧೭ ರಲ್ಲಿ ಪಾಕಿಸ್ತಾನದ ಗವರ್ನರ್ ಜನರಲ್ ಗುಲಾಮ್ ಮಹಮ್ಮದರು ಖ್ವಾಜಾ ನಾಜಿಮುದ್ದೀನರನ್ನು ಪಾಕಿಸ್ತಾನದ ಪ್ರಧಾನ ಮಂತ್ರಿಯ ಸ್ಥಾನದಿಂದ ಡಿಸ್‌ಮಿಸ್ ಮಾಡಿದರು. ಅದರ ಈ ದಿನ ಖ್ವಾಜಾ ನಾಜಿಮುದ್ದೀನರು ಪತ್ರಿಕಾ ಪ್ರತಿನಿಧಿಗಳೊಡನೆ 'ಗವರ್ನರ್ ಜನರಲ್ ಗುಲಾಮ್ ಮಹಮ್ಮದರು ರಾಜಿನಾಮೆ ಕೊಡಬೇಕೆಂದು ನನ್ನೊಡನೆ ಕೇಳಿದಾಗ ನಾನು ರಾಜಿನಾಮೆ ಕೊಡಲು ನಿರಾಕರಿಸಿದೆನು. ನಾನು ಈ ತನಕ ರಾಜಿ ಕೊಡಲಿಲ್ಲ, ಇನ್ನು ಕೊಡುವುದೂ ಇಲ್ಲ' ಎಂದು ಹೇಳಿದರು.

"ಗವರ್ನರ್ ಜನರಲರು ಕಾನೂನು ಬಾಹಿರ ಮತ್ತು ಅಸ್ವೈಧಾನಿಕ ಕ್ರಮವನ್ನು ಅನುಸರಿಸಿದ್ದಾರೆ, ಮತ್ತು ಪ್ರಜಾಪ್ರಭುತ್ವದ ಮೂಲಭೂತ ತತ್ವಗಳಿಗೇ ವಿರುದ್ಧವಾಗಿ ನಡೆದಿದ್ದಾರೆ, ಎಂದರು. 'ನಾನು ತಾನಾಗಿಯೇ ರಾಜಿನಾಮೆ ಕೊಡುವ ತನಕ ಅಥವಾ ನ್ಯಾಯವಿಧಾಯಕ ಸಭೆಯು ಮಂತ್ರಿಮಂಡಲದ ಮೇಲೆ ಅವಿಶ್ವಾಸ ಠರಾವನ್ನು ಮಂಜೂರುಮಾಡುವ ತನಕ ಕಾನೂನು ಪ್ರಕಾರ ನನ್ನ ಸರಕಾರವೇ ಆಫೀಸಿನಲ್ಲಿ ಉಳಿಯುವುದು' ಎಂದೂ ಅವರು ತಿಳಿಸಿದರು.

ಮಿ. ಖುರೇಶಿ ಕರಾಚಿಗೆ ಹೊರಟರು.

ಪಾಕಿಸ್ತಾನ ಮಂತ್ರಿ ಮಂಡಲದಲ್ಲಿ ನೂತನವಾಗಿ ನೇಮಿತರಾದ, ಭಾರತದಲ್ಲಿ ಪಾಕ್ ರಾಯಭಾರಿ ಮಿ. ಶೋಯಬ್ ಕುರೇಶಿಯವರು ತಾ. ೧೮ ರಲ್ಲಿ ಮಧ್ಯಾಹ್ನ ನವದೆಹಲಿಯಿಂದ ಕರಾಚಿಗೆ ಹೊರಟರು. ಪ್ರಧಾನಿ ನೆಹರೂರವರೊಂದಿಗೆ ಕುರೇಶಿಯವರು ಶನಿವಾರದಲ್ಲಿ ಭೇಟಿಯಾಗಲಿದ್ದರು. ಅವರ ಅವರ ಗೈರು ಹಾಜರಿಯಲ್ಲಿ ಅವರ ಪತ್ನಿಯವರು ಮಾತುಕತೆ ನಡೆಸುವರೆಂದು ತಿಳಿದು ಬಂದಿದೆ. ಆರು ತಿಂಗಳ ಹಿಂದೆ ರಾಯಭಾರಿಯಾಗಿ ಬಂದ ಕುರೇಶಿಯವರಿಗೆ ಇಲ್ಲಿ ತುಂಬಾ ಸ್ನೇಹಿತರಿದ್ದಾರೆ. ಭಾರತ ಪಾಕಿಸ್ತಾನಗಳ ನಡುವೆ ಮಧುರ ಬಾಂಧವ್ಯ ಬೆಳೆಸುವುದೇ ಅವರ ಗುರಿಯಾಗಿದೆ. ಈಗ ನೂತನ ಅಧಿಕಾರವೇರಿದ ಬಳಿಕವೂ ತಮ್ಮ ಈ ಬಯಕೆಯನ್ನು ಅವರು ಕೈಗೂಡಿಸುವರೆಂದು ನಂಬಲಾಗಿದೆ.

—

ಭೂದಾನ ಚಳವಳಿ.

ಗಯಾ ಜಿಲ್ಲೆಯ ನಾವದಾ ಸಬ್ ಡಿವಿಜನ್ನಿನ ಹಳ್ಳಿಗರು ತಮ್ಮ ಇಡಿ ೬೫೦ ಬಿಘ ಭೂಮಿಯನ್ನು ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ಕೊಟ್ಟಿರುವರು. ಈ ಹಳ್ಳಿಯ ಜನಸಂಖ್ಯೆ ಒಂದು ನೂರು ಇದ್ದು ಅವರೆಲ್ಲ ಹರಿಜನರೇ ಆಗಿರುವರು.

ಆಚಾರ್ಯ ಭಾವೆಯವರು ಈ ಹಳ್ಳಿಗರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಭೂಮಿಯಲ್ಲಿ ಹತ್ತಿಯನ್ನು ಬೆಳೆದು ಬಟ್ಟೆಯ ಸ್ವಾವಲಂಬನೆಯನ್ನು ಸಾಧಿಸಿಕೊಳ್ಳುವದಕ್ಕಾಗಿ ನೂಲು ತೆಗೆಯಿರಿ ಎಂದು ಬಿನ್ನವಿಸಿಕೊಂಡದ್ದಲ್ಲದೆ ಸ್ವಚ್ಛ ಬಾವಿಯನ್ನು ತೋಡಿಕೊಂಡು ಊರವರು ನೀರಿನ ಸ್ವಾವಲಂಬನೆಯನ್ನು ಸಾಧಿಸಿಕೊಳ್ಳಬೇಕೆಂದು ಹೇಳಿದರು.

ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡುತ್ತ ಆಚಾರ್ಯ ಭಾವೆಯವರು, ಭೂದಾನ ಚಳವಳಿಯ ಮೂಲಭೂತ ತತ್ವಗಳನ್ನು ತಿಳಿದುಕೊಂಡು ಆ ಚಳುವಳಿಯು ಒಳಿತಾದುದೆಂದು ನಿಮಗೆ ಮನವರಿಕೆಯಾದರೆ ಮಾತ್ರ ಅದಕ್ಕೆ ಬೆಂಬಲ ಕೊಡಿರೆಂದು ನಗರವಾಸಿಗಳಿಗೆ ಬಿನ್ನವಿಸಿಕೊಂಡರು.

ಆಚಾರ್ಯ ಕೃಪಲಾನಿಯವರು ಆ ಸಭೆಯಲ್ಲಿ ಭಾಷಣ ಮಾಡುತ್ತ ವಿನೋಬಾಜಿಯವರು, ಮಹಾತ್ಮರು ಅರ್ಧಕ್ಕೆ ನಿಲ್ಲಿಸಿದ ಕಾರ್ಯವನ್ನು ಈ ಭೂದಾನ ಯಜ್ಞದ ಮುಖಾಂತರ ಮುಂದುವರಿಸುತ್ತಿದ್ದಾರೆ. ಈ ಚಳುವಳಿಯು ದೇಶದಲ್ಲಿ ರಾಜಕೀಯ ಮತ್ತು ಆರ್ಥಿಕ ಕ್ರಾಂತಿಯನ್ನು ಮಾತ್ರ ಉಂಟು ಮಾಡದೆ ಆಧ್ಯಾತ್ಮಿಕ ಕ್ರಾಂತಿಯನ್ನು ಉಂಟು ಮಾಡುವದೆಂದು ಹೇಳಿದರು. ದಾರಿದ್ರ್ಯ ನಾಶವನ್ನು ಅಹಿಂಸಾತ್ಮಕವಾಗಿ ಹೋರಾಡುವದೇ ಈ ಭೂದಾನ ಯಜ್ಞದ ಉದ್ದೇಶವಾಗಿದೆ. ದಾರಿದ್ರ್ಯವು ಪಾಪವೆಂದು ಗಾಂಧೀಜಿ ಭಾವಿಸಿದ್ದರು. ಜನತೆಯನ್ನು ಬಡವನನ್ನಾಗಿಸಿದವರು ಮತ್ತು ಇಂಥ ಸಾಮಾಜಿಕ ಅನ್ಯಾಯಕ್ಕೊಳಗಾದವರು ಇಬ್ಬರೂ ಅಷ್ಟೇ ದೋಷಿಗಳಿರುವರೆಂದು ಕೃಪಲಾನಿಯವರು ಅಭಿಪ್ರಾಯಪಟ್ಟರು. ನಾನು ಬೇರೆ ಕೆಲಸಗಳಲ್ಲಿ ಈಗ ತೊಡಗಿದ್ದರಿಂದ ಕೂಡಲೆ ವಿನೋಬಾಜಿಯವರ ಚಳುವಳಿಯಲ್ಲಿ ಸೇರಲಾರೆನು ಇದಕ್ಕಾಗಿ ವಿಷಾದಿಸುತ್ತೇನೆ. ಆದಷ್ಟು ಬೇಗ ನಾನು ಭೂದಾನ ಚಳುವಳಿಯ ಪ್ರಚಾರಕ್ಕಾಗಿ ಸಂಚಾರವನ್ನು ಕೈಕೊಳ್ಳುವೆ ಎಂದು ಕೃಪಲಾನಿಯವರು ಆಶ್ವಾಸನ ಕೊಟ್ಟರು.

ಗಯಾದಲ್ಲಿ ತಾ. ೧೯ರಲ್ಲಿ ಮಾತಾಡುತ್ತಾ 'ಬಡವರು ಗೌರವದಿಂದಲೂ ಪ್ರೇಮದಿಂದಲೂ ತಮ್ಮ ಹಕ್ಕುಗಳ ಬೇಡಿಕೆ ಮಾಡುವರು ಅವರು ನನ್ನ ಮುಖಾಂತರ ತಮ್ಮ ಬೇಡಿಕೆ ಮಾಡುತ್ತಿರುವರು. ಬಡವನು ಭೂಮಿಯನ್ನು ದಾನ ಮಾಡಿದಾಗ ಒಂದು ನೈತಿಕ ಶಕ್ತಿ ಹುಟ್ಟುತ್ತದೆ. ಇದೇ ಸಮಾಜದ ಮೇಲೆ ಒಳ್ಳೆಯ ಪರಿಣಾಮ ಮಾಡುವಂಥಾ ಒಂದು ವಿಧದ ಸತ್ಯಾಗ್ರಹ. ಬಡವರ ದಾನವು ಶ್ರೀಮಂತರಲ್ಲಿ ದಾನದ ಸ್ಫೂರ್ತಿಯನ್ನು ಹುಟ್ಟಿಸಿದೆ. ಭಾರತದ ಪರಂಪರೆಯಂತೆ ಭೂಮಿ ವ್ಯಕ್ತಿಗೆ ಸೇರದ ಇಡೀ ಹಳ್ಳಿಗೆ ಸೇರಿದ್ದಾಗಿದೆ. ಭೂಮಿಯ ಬೆಳೆಯು ಇಡೀ ಹಳ್ಳಿಯ ಜನರಿಗೆ ಸಿಗಬೇಕು. ಪ್ರತಿಯೊಬ್ಬನೂ ತನ್ನ ಕರ್ತವ್ಯ ಮಾಡಿ ಸಮಾಜಕ್ಕೆ ಸೇವೆ ಸಲ್ಲಿಸುವನು. ಗೌತಮ ಬುದ್ಧನು ಬಿಹಾರದಲ್ಲಿ ೨೫೦೦ ವರ್ಷಗಳ ಹಿಂದೆ ಬಿತ್ತಿದ ಬೀಜ ಇನ್ನೂ ನಾಶವಾಗಿಲ್ಲ. ಅದೀಗ ಮೊಳಕೆಯೊಡೆಯುತ್ತಿದೆ. ಒಂದು ಮಹಾ ಕ್ರಾಂತಿಯನ್ನು ಸಾಧಿಸಲು ನಮ್ಮನ್ನು ತನ್ನ ಸಾಧನಗಳನ್ನಾಗಿ ಮಾಡಿಕೊಂಡುದಕ್ಕೆ ನಾವೆಲ್ಲ ದೇವರಿಗೆ ಕೃತಜ್ಞರಾಗಿದ್ದೇವೆ' ಎಂದು ವಿನೋಬರು ಹೇಳಿದರು.

—

ಕೊಡಗು

ತಾರೀಖು ೨೪ ಏಪ್ರಿಲ್ ೧೯೫೩ನೇ ಶುಕ್ರವಾರ

ಪಾಕಿಸ್ಥಾನದಲ್ಲಿ ಅವ್ಯವಸ್ಥೆ.

ಪಾಕಿಸ್ತಾನದ ಗವರ್ನರ್ ಜನರಲರಾದ ಗುಲಾಮ್ ಮುಹಮ್ಮದರು ತಾ. ೧೮ ರಲ್ಲಿ ಒಂದು ಆಜ್ಞೆ ಹೊರಡಿಸಿ ಪಾಕಿಸ್ತಾನದ ಮುಖ್ಯ ಮಂತ್ರಿಯಾದ ಖ್ವಾಜಾ ನಾಝಿಮುದ್ದೀನರವರನ್ನು ಅಧಿಕಾರದಿಂದ ತೆಗೆದು ಹಾಕಿ ಅಮೇರಿಕಾದಲ್ಲಿ ಪಾಕಿಸ್ಥಾನದ ರಾಯಭಾರಿಯಾಗಿದ್ದ ಶ್ರೀ ಮುಹಮ್ಮದಾಲಿಯವರನ್ನು ನೇಮಿಸಿರುವರು. ಮುಹಮ್ಮದಾಲಿಯವರು ತಮ್ಮ ಹೊಸ ಮಂತ್ರಿಮಂಡಳವನ್ನು ರಚಿಸಿರುವರು. ಈ ರೀತಿಯ ಒಂದು ಹೆಜ್ಜೆಯನ್ನು ಪಾಕಿಸ್ತಾನದ ಗವರ್ನರ್ ಜನರಲರು ತೆಗೆದುಕೊಳ್ಳಬೇಕಾಗಿದ್ದರೆ ಪಾಕಿಸ್ತಾನದಲ್ಲಿ ಅವ್ಯವಸ್ಥೆ ಹದ್ದು ಮೀರಿರಬೇಕು. ಗವರ್ನರ್ ಜನರಲರೇ ಹೇಳುವಂತೆ ದೇಶದಲ್ಲಿ ಉಪಸ್ಥಿತವಾದ ಗಲಭೆ, ಅವ್ಯವಸ್ಥೆ, ತೊಂದರೆಗಳನ್ನು ನಿವಾರಿಸುವಲ್ಲಿ ನಾಝಿಮುದ್ದೀನರು ಅಸಮರ್ಥರಾಗಿದ್ದರು.

ಅನೇಕ ದಿನಗಳಿಂದಲೇ ಪಾಕಿಸ್ತಾನದಲ್ಲಿ ಗಲಾಟೆ ನಡೆಯುತ್ತಿದೆಯೆಂಬುದು ವರದಿಗಳ ಮೂಲಕ ತಿಳಿದುಬರುತ್ತಿತ್ತು. ಅಹಮ್ಮದೀಯರ ವಿರುದ್ಧ ಚಳವಳಿ, ಪಶ್ಚಿಮ ಪಂಜಾಬಿನ ಗೊಂದಲ, ಪೂರ್ವ ಪಾಕಿಸ್ತಾನದ ಅವ್ಯವಸ್ಥೆ, ದೇಶದೊಳಗಿನ ಆಹಾರದ ವೃಷ್ಟಿ ಮೊದಲಾದುವು ದಿನ ದಿನಕ್ಕೆ ಬೆಳೆದ ಹದ್ದುಮೀರಿ ಕಡೆಗೊಮ್ಮೆ ಊಹಿಸಿದ ಸ್ಫೋಟನವಾಯಿತು. ಈ ಸ್ಫೋಟನದಿಂದಾಗಿ ನಾಝಿಮುದ್ದೀನರ ಸಿಂಹಾಸನ ಉರುಳಿತು.

ಡಿಸ್‌ಮಿಸ್ ಮಾಡಲ್ಪಟ್ಟ ನಾಝಿಮುದ್ದೀನರು ಗವರ್ನರ್ ಜನರಲರ ವರ್ತನೆಯು ನ್ಯಾಯಬಾಹಿರವಾಗಿದೆಯೆಂದೂ ಜನತೆಯು ಬೆಂಬಲವು ತನಗಿದೆಯೆಂದೂ ಹೇಳಿದರೂ ಇಂಥ ಪಾಕಿಸ್ತಾನದಲ್ಲಿರುವ ಘಟನೆಯಂತೆಯೇ ಅಲ್ಲಿಯ ಗವರ್ನರ್ ಜನರಲು ವರ್ತಿಸಿದ್ದಾರೆನ್ನುವದರಲ್ಲಿ ಭಿನ್ನಾಭಿಪ್ರಾಯವಿಲ್ಲ. ನಾಝಿಮುದ್ದೀನರ ಆಡಳಿತದಲ್ಲಿ ಪಾಕಿಸ್ತಾನವು ಹದಗೆಟ್ಟ ಕೈಮೀರುವ ಪರಿಸ್ಥಿತಿ ಬಂದಿತ್ತು, ಇದನ್ನು ನಿವಾರಿಸಲು ಬೇರೊಬ್ಬರನ್ನು ಮುಖ್ಯ ಮಂತ್ರಿಯಾಗಿ ನೇಮಿಸಿದುದು ಸೂಕ್ತವೂ, ಅತ್ಯಾವಶ್ಯಕ ಕಾರ್ಯವೂ ಆಗಿದೆ.

ಈಗಿನ ಮುಖ್ಯಮಂತ್ರಿ ಮುಹಮ್ಮದಾಲಿಯವರು ಅಧಿಕಾರ ಸ್ವೀಕರಿಸಿ ಮಾಡಿದ ಪ್ರಥಮ ಘೋಷಣೆಯಿಂದ ಪಾಕಿಸ್ತಾನದಲ್ಲಿ ಆಡಳಿತ ದಕ್ಷತೆಯಾಗಲೀ, ದೇಶದಲ್ಲಿ ಐಕ್ಯತೆಯಾಗಲೀ, ಆರ್ಥಿಕ ಭದ್ರತೆಯಾಗಲೀ, ಆಹಾರದ ತೃಪ್ತಿಯಾಗಲೀ, ನಿರಾಶ್ರಿತರ ಪುನರ್ನಿವೇಶನದಲ್ಲಿ ದಕ್ಷತೆಯಾಗಲೀ ಇರಲಿಲ್ಲವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈಗಿನ ಮುಖ್ಯ ಮಂತ್ರಿಯವರು ಅನುಭವಿಕರಿದ್ದು ಪಾಕಿಸ್ತಾನದ ಆಡಳಿತವನ್ನು ದಕ್ಷತೆಯಲ್ಲಿ ನಡೆಸಿ ಜನತೆಯ ಸ್ಥಿತಿಯನ್ನು ಉತ್ತಮಗೊಳಿಸುವರೆಂದು ಭಾವಿಸಲಾಗಿದೆ.

ಈ ದೃಷ್ಟಿಯಿಂದ ಪಾಕಿಸ್ತಾನದ ಮಂತ್ರಿ ಮಂಡಳಕ್ಕೆ ಭಾರತದ ಸ್ವಾಗತವೂ, ಶುಭ ಬಯಕೆಯೂ ಇದೆ. ಪಾಕಿಸ್ತಾನ ಮತ್ತು ಭಾರತ ಇವೆರಡು ನೆರೆರಾಜ್ಯಗಳಾದ್ದರಿಂದ ಅವುಗಳ ಸೌಹಾರ್ದತೆಯು ಅತ್ಯಾವಶ್ಯಕ. ಪಾಕಿಸ್ಥಾನದ ಪರಿಸ್ಥಿತಿ ಸುಧಾರಿಸಿ, ದಕ್ಷ ಆಡಳಿತ ನಡೆಯುವದಾದರೆ ಭಾರತಕ್ಕೆ ಆಗುವ ಆನಂದಕ್ಕೆ ಎಣೆಯಿಲ್ಲ. ಆದರೆ ಕೇವಲ ಮುಖ್ಯಮಂತ್ರಿಯವರೊಬ್ಬರನ್ನು ಬದಲು ಮಾಡಿ ಬಯುತೇಕ ಹಿಂದಿದ್ದವರನ್ನೇ ಮಂತ್ರಿಮಂಡಳದಲ್ಲಿಟ್ಟುಕೊಂಡಿರುವದರಿಂದ ಪರಿಸ್ಥಿತಿ ಸುಧಾರಿಸೀತೋ ಎಂಬ ಶಂಕೆ ಪ್ರತಿಯೊಬ್ಬನಿಗೂ ಬರುತ್ತದೆ. ಈ ಮಂತ್ರಿಮಂಡಳದಲ್ಲಿ ಅಲ್ಪ ಪಕ್ಷದವರಿಗೆ ಸ್ಥಾನವಿಲ್ಲ. ಇದು ಲೀಗ್ ಮಂತ್ರಿಮಂಡಳವೆಂದರೂ ಸಲ್ಲುವದು.

ಆದರೆ ಪಾಕಿಸ್ತಾನದ ತೊಂದರೆ ಕೇವಲ ಅದರ ಆಹಾರ ಸಮಸ್ಯೆ, ಆರ್ಥಿಕ ಅವನತಿಗಳೇ ಅಲ್ಲ, ಪಾಕಿಸ್ತಾನವನ್ನು ಇಸ್ಲಾಂ ರಾಜ್ಯವಾಗಿ ಸಾರಿ ಇಸ್ಲಾಂ ರಾಜ್ಯ ಸ್ಥಾಪಿಸುವ ಗುರಿಯಿಂದ ಆಡಳಿತ ನಡೆಸುತ್ತಿರುವದೂ ಅದರ ಅವ್ಯವಸ್ಥೆಗೆ ಬಲವಾದ ಕಾರಣ. "ಇಸ್ಲಾಂ ಸ್ಟೇಟ್" ಪಾಕಿಸ್ತಾನದಲ್ಲಿ ಜಾತಿಯತೆಗೆ ಪ್ರಾಶಸ್ತ್ಯ ಕೊಡಲ್ಪಟ್ಟಿರುವದರಿಂದ ಮುಸ್ಲಿಮರೊಳಗಿನ ಭಿನ್ನಭೇದಗಳು ದೊಡ್ಡದಾಗತೊಡಗಿವೆ. ಮುಸ್ಲಿಂ ಮುಲ್ಲಾಗಳು ಆಡಳಿತದಲ್ಲಿ ತಮ್ಮ ಕೈಹಾಕಿದ್ದಾರೆ. ಈ ಪರಿಸ್ಥಿತಿಗೆ ಅವಕಾಶಕೊಡದೆ ಭಾರತದಂತೆ ಪಾಕಿಸ್ಥಾನವೂ ಜಾತ್ಯತೀತ ರಾಷ್ಟ್ರವಾಗದಿದ್ದರೆ ಆ ರಾಷ್ಟ್ರದೊಳಗೆ ಅಶಾಂತಿ ತಪ್ಪಿದ್ದಲ್ಲ. ಏಕೆಂದರೆ ಜಾತೀಯ ಭಾವನೆಯು ಎಂದೂ ಕೂಡ ಐಕ್ಯತೆಗೆ ಮಾರಕವಾದುದು.

ಈ ವಿಚಾರಗಳನ್ನರಿತೇ ಪಾಕಿಸ್ತಾನದ "ಇಸ್ಲಾಂ ರಾಜ್ಯ" ಕಲ್ಪನೆಯಿಂದ ಸಾಕಾದ "ಸಿವಿಲ್ ಮತ್ತು ಮಿಲಿಟರಿ ಗಜೆಟ್" ಮೊದಲಾದ ಪತ್ರಿಕೆಗಳು ಇಸ್ಲಾಂ ಧರ್ಮರಾಜ್ಯ ಸ್ಥಾಪನೆಯನ್ನು ಬಿಟ್ಟು ಇಸ್ಲಾಂ ಧ್ಯೇಯವಿರುವ "ಸೆಕ್ಯುಲರ್" ರಾಜ್ಯವನ್ನು ಕಟ್ಟಬೇಕೆಂದು ಬರೆಯುತ್ತಿವೆ. ಹೊಸ ಮಂತ್ರಿ ಮಂಡಳವು ಈ ವಿಚಾರಗಳನ್ನು ಅರಿತು ಅದಕ್ಕನುಗುಣ ವರ್ತಿಸದಿದ್ದರೆ ಹೆಚ್ಚಿನ ಪರಿಣಾಮಕಾರಕವಾದ ಆಡಳಿತ ನಡೆಸುವದು ಕಷ್ಟವಾದೀತು.

ಪಾಕಿಸ್ತಾನದ ಗವರ್ನರ್ ಜನರಲರಾದ ಗುಲಾಮ್ ಮುಹಮ್ಮದರು ನಿಷ್ಣಾತ ರಾಜಕಾರಣಿಗಳೂ, ದಕ್ಷ ಆಡಳಿತಗಾರರೂ ಇದ್ದಾರೆ. ಕೆಲವು ದಿನಗಳ ಹಿಂದೆ ಭಾರತಕ್ಕೆ ಬಂದಿದ್ದ ಬ್ರಿಟಿಷ್ ಲೇಬರ್ ಪಕ್ಷದ ಮುಂದಾಳು ಅನ್ಯೇರಿನ್ ಬಿವಾನರೇ ಅವರನ್ನು ಮುಕ್ತ ಕಂಠದಿಂದ ಹೊಗಳಿದ್ದಾರೆ. ಈ ಹೊಗಳಿಕೆಗೆ ತಕ್ಕಂತೆ ಅವರು ದೂರದರ್ಶಿತ್ವವನ್ನು ವಹಿಸಿ ಪಾಕಿಸ್ತಾನದ ಹೊಸ ಮಂತ್ರಿ ಮಂಡಳವು ಯೋಗ್ಯ ರೀತಿ ಮುಂದರಿದು ತನ್ನ ಜನತೆಗೆ ಸುಖ ಶಾಂತಿಯನ್ನು ದವಗಿಸಿ ಕೊಡುವಲ್ಲಿ ಕೃತಕೃತ್ಯವಾಗಲೆಂದು ನಮ್ಮ ಇಚ್ಛೆ.

ವರ್ತಮಾನ.

ತಾರೀಖು ೧೯ ರಲ್ಲಿ ಬೆಳಿಗ್ಗೆ ೯ ಗಂಟೆಯ ಸಮಯಕ್ಕೆ ಶನಿವಾರಸಂತೆಯ ಶ್ರೀ. ಬಿ. ಎಸ್. ರಂಗಶೆಟ್ಟಿಯವರ ಸುಮಾರು ಐದು ವರ್ಷದ ಚಿನ್ನರಾಜು ಎಂಬ ಮಗು ಮಕ್ಕಳೊಂದಿಗೆ ಆಡುತ್ತಿದ್ದುದು ಅಕಸ್ಮಾತ್ ಬಾವಿಗೆ ಬಿದ್ದು ನಿಧನ ಹೊಂದಿತು.

ನಾಲ್ಕುನಾಡು ಸಹಕಾರ ಬ್ಯಾಂಕಿನ ವಾರ್ಷಿಕ ಮಹಾಸಭೆಯು ಬರುವ ಮೇ ತಾ ೪ ರಲ್ಲಿ ಮಧ್ಯಾಹ್ನ ೨ ಗಂಟೆಗೆ ಸ್ಥಳೀಯ ಮೋಡೆಲ್ ಶಾಲಾ ಹಾಲ್‌ನಲ್ಲಿ ನಡೆಯುವದು.

ಜಪಾನಿನ ರೀತಿಯಲ್ಲಿ ಬತ್ತ ವ್ಯವಸಾಯ ಕೈಕೊಳ್ಳುವ ಯೋಜನೆಯಂತೆ ಈ ವಿಚಾರದಲ್ಲಿ ತರಬೇತು ಹೊಂದಿದ ಮತ್ತು ಸ್ವತಹ ಅನುಭವವಿರುವ ಕೆಲವು ಪ್ರಚಾರಕರು ಅಖಿಲ ಭಾರತ ಗಾಂಧಿ ಸ್ಮಾರಕ ಸಮಿತಿಯ ಪರಿಯಿಂದ ಮೇ ತಾ ೧೬ ರಲ್ಲಿ ಕೊಡಗಿಗೆ ಬರುವರು. ತಾ. ೧೭ ರ ಬೆಳಿಗ್ಗೆ ಗೋಣಿಕೊಪ್ಪಲಿನಲ್ಲೂ ಮಧ್ಯಾಹ್ನದ ಮೇಲೆ ವೀರಾಜಪೇಟೆಯಲ್ಲೂ, ೧೮ ರಲ್ಲಿ ಶನಿವಾರಸಂತೆ ಮತ್ತು ಸೋಮವಾರಪೇಟೆಗಳ ಮಧ್ಯೆ ನಿಶ್ಚಿತ ಸ್ಥಳವೊಂದರಲ್ಲೂ ಜಪಾನೀ ವ್ಯವಸಾಯ ಕ್ರಮವನ್ನು ಪ್ರತ್ಯಕ್ಷ ಪ್ರದರ್ಶಿಸುವರು.

ವಿದ್ಯಾರ್ಥಿಗಳ ಮಾನಸಿಕ, ಶಾರೀರಕ ಮತ್ತು ಸಾಮಾಜಿಕ ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುವ ಕಾಂಕ್ಷೆಯಿಂದ ಸೂಕ್ತವಾದ ತರಬೇತನ್ನು ಕೊಡಗಿನ ಹೈಸ್ಕೂಲು ತರಗತಿಗಳಲ್ಲಿ ಕೊಡುವ ಏರ್ಪಾಡನ್ನು ಸರಕಾರವು ಮಾಡಿದ್ದು ಮುಂದಿನ ಜೂನ್ ತಿಂಗಳಿಂದ ಈ ಯೋಜನೆಯು ಕಾರ್ಯರೂಪಕ್ಕೆ ಬರಲಿರುವರು.

ಮರದ ಕುತ್ತಿಗಾಣಿಕೆ ಕಟ್ಟಲು ಇದ್ದ ಅವಧಿಯನ್ನು ಮೇ ತಾ. ೩೧ರ ವರೆಗೆ ಮುಂದುವರಿಸಲಾಗಿದೆ.

ದಿವಂಗತ ಎನ್. ಮುದ್ದಪ್ಪನವರ ಬದಲು ಬೇರೊಬ್ಬರ ನೇಮಕವಾಗುವ ವರೆಗೆ ರಿಜಿಸ್ಟರ್ಡ್ ಮದುವೆಗಳ ಸಂಬಂಧ ಶ್ರೀ. ಎಂ. ಎನ್. ಗುಂಡೂರಾಯರನ್ನು ರಿಜಿಸ್ಟ್ರಾರಾಗಿ ನೇಮಿಸಲಾಗಿದೆ.

ಕೇಂದ್ರ ಸರಕಾರದಿಂದ ಕರೆ ಬಂದ ಕಾರಣ ತಾರೀಖು ೧೬ ರಲ್ಲಿ ಜನರಲ್ ಕಾರ್ಯಪ್ಪನವರು ಡೆಲ್ಲಿಗೆ ಹೋಗಿರುವರು. ತಾರೀಖು ೧೯ ರಲ್ಲಿ ಪಂಡಿತ ನೆಹರೂರವರ ಭೇಟಿ ಮಾಡಿರುವರೆಂದು ವರ್ತಮಾನ.

ತಾ. ೩೦ ರಲ್ಲಿ ಅಮ್ಮತ್ತಿನಾಡು ಸಹಕಾರ ಕೂಟದ ಮಹಾಸಭೆ ಮತ್ತು ಸಂಯೋಜನಾ ಸಂಘಗಳ ಸಮ್ಮೇಳನವು ಸಹಕಾರ ಸಂಘಗಳ ರಿಜಿಸ್ಟ್ರಾರರ ಅಧ್ಯಕ್ಷತೆಯಲ್ಲಿ ನಡೆಯುವದು.

ತಾ. ೨೧ ರ ಸಾಯಂಕಾಲ ೭ ಗಂಟೆಗೆ ವೀರಾಜಪೇಟೆಯ ಕಾವೇರಿ ಆಶ್ರಮದ ಶ್ರೀ. ಗುಡ್ಡಾಂಡ ಸುಬ್ಬಯ್ಯನವರು ಪೇಟೆಯಿಂದ ಆಶ್ರಮದ ಕಡೆ ಹೋಗುತ್ತಿದ್ದಾಗ್ಯೆ ಹೆಕ್ಕೇ ಗಣೇಶಲಾಡ್ಜಿನ ಎದುರುಗಡೆ ಒಂದು ಕಾರು ಹಿಂದಳಿಂದ ಬಂದು ಅವರಿಗೆ ಡಿಕ್ಕಿ ಹೊಡೆದುದರಿಂದ ಅವರು ಬಿದ್ದು ತಲೆಗೂ ಕಾಲಿಗೂ ಜಖಂ ಆಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದು ತಿಳಿದುಬರುತ್ತದೆ.

ಕಳೆದ ವಾರ ವೀರಾಜಪೇಟೆಯ ದೊಡ್ಡ ಟ್ರಾಕ್ಟರೊಂದು ಅಮ್ಮತ್ತಿಯಿಂದ ವೀರಾಜಪೇಟೆಗೆ ಬರುತ್ತಿದ್ದಾಗ ವೀರಾಜಪೇಟೆ ಹಿಂಟೊ ತಿರುವಿನಲ್ಲಿ ಇಳಿಜಾರಾದ್ದರಿಂದ ಬ್ರೇಕ್ ಹಿಡಿಯದೆ ಬಲಗಡೆ ದೊಡ್ಡ ಇಳಿಜಾರಿಗೆ ಸರಿದು ಕೆಳಗಿನ ರಸ್ತೆಯನ್ನು ದಾಟಿ ಬೇಲಿಯ ವರೆಗೆ ಸಾಗಿ ನಿಂತಿತ್ತೆಂದೂ ಡ್ರೈವರಿಗೂ, ಪ್ರಯಾಣಿಕರಿಗೂ ಗಾಯವಾಗಿ ಆಸ್ಪತ್ರೆಯಲ್ಲಿರುವರೆಂದೂ ತಿಳಿಯಬಂದಿದೆ.

ಕೊಡಗಿನ ಚೀಫ್ ಕಮಿಷನರು ತಾ. ೨೫ ರಲ್ಲಿ ಸಾಗರಹೊಳೆಗೆ ಹೋಗಿ ೨೬ ಮತ್ತು ೨೭ ರಲ್ಲಿ ಬಾಳೆಕೋವಿನಲ್ಲಿ ಮೊಕ್ಕಾಂ ಮಾಡುವರು. ೨೮ ರಲ್ಲಿ ಮೂರ್ನಾಡಿನಲ್ಲಿದ್ದು ೨೯ ಕ್ಕೆ ಮಡಿಕೇರಿಗೆ ಬರುವರು.

ಕ್ರಾಪ್ ಕಾಂಪಿಟಿಶನಿನಲ್ಲಿ ಬಹುಮಾನ ಪಡೆದ ಅಮ್ಮತ್ತಿನಾಡಿನ ಜಯಶಾಲಿಗಳಾದವರಿಗೆ ತಾ ೨೧ರಲ್ಲಿ ಕೊಡಗಿನ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲೂ ಎಡೆನಾಲ್ಕುನಾಡಿನ ಜಯಶೀಲರಾದವರಿಗೆ ತಾ ೨೨ರಲ್ಲಿ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ವೀರಾಜಪೇಟೆಯಲ್ಲೂ ಬಹುಮಾನ ಕೊಡಲಾಯಿತು. ಜಿ. ವ್ಯವಸಾಯಾಧಿಕಾರಿಯಾದ ಶ್ರೀ ಮುಂಡಂಡ ಪೊನ್ನಪ್ಪನವರು ಎರಡು ಕಡೆಗಳಲ್ಲೂ ಜಪಾನು ರೀತಿಯ ಬತ್ತದ ವ್ಯವಸಾಯ ಕ್ರಮವನ್ನು ವಿವರಿಸಿ ಹೇಳಿದರು.

ಸಿದ್ದಾಪುರ ಪಟ್ಟಣದಲ್ಲಿ ಹೊಸದಾಗಿ ಕಟ್ಟಿಸಿರುವ ಶ್ರೀರಾಮ ಮಂದಿರದಲ್ಲಿ ತಾ. ೨೭-೪-೫೩ ನೇ ಸೋಮವಾರ ಸಾಯಂಕಾಲ ಆರು ಘಂಟೆಯಿಂದ ರಾತ್ರಿ ಎರಡು ಗಂಟೆ ಕಾಲದ ವರೆವಿಗೆ ಶ್ರೀರಾಮದೇವರ ಸವಾರಿಯನ್ನು ಬಹು ನೂತನ ತರದ ಕೀರ್ತನೆ, ವಿದ್ಯುಚ್ಛಕ್ತಿ ವೈಭವದೊಡನೆ, ಬ್ಯಾಂಡು, ಕುದುರೆ, ಕುಸ್ತಿ, ಪಟಾಕಿ

'ಸಿ' ವರ್ಗದ ಪ್ರಾಂತಗಳು ಉಳಿಯಬೇಕು

ಡಾಕ್ಟರ್ ಕಾಟ್ಜೂರವರ ಅಭಿಪ್ರಾಯ

"ತಲೆಭಾರ ಖರ್ಚು ಕಡಿಮೆ ಮಾಡಿರಿ"

ತಾ. ೧೯ರಲ್ಲಿ ಭೋಪಾಲಿನಲ್ಲಿ ಮಾತಾಡುತ್ತಾ ಕೇಂದ್ರ ಸರಕಾರದ ಗೃಹಮಂತ್ರಿಗಳಾದ ಡಾ. ಕೈಲಾಸನಾಥ ಕಾಟ್ಜೂರವರು 'ಸಿ' ವರ್ಗದ ಪ್ರಾಂತಗಳು ಮುಂದಕ್ಕೂ ಹೀಗೆಯೇ ಇರಬೇಕೆಂದೂ ಆದರೆ ಆ ಪ್ರಾಂತಗಳಲ್ಲಿ ಇಂದಿರುವ ತಲೆಭಾರ ಆಡಳಿತ ಖರ್ಚನ್ನು ಕಡಿಮೆ ಮಾಡಬೇಕೆಂದೂ ಅಭಿಪ್ರಾಯ ಪಟ್ಟರು. ಚಿಕ್ಕ ಆಡಳಿತ ಘಟಕಗಳಾಗಿರುವದರಿಂದ ಜನತೆಗೂ ಸರಕಾರಕ್ಕೂ ಪರಸ್ಪರ ಸಂಬಂಧವು ಬೆಳೆಯುವದಲ್ಲದೆ ಇದರಿಂದ ಆಡಳಿತವು ಯೋಗ್ಯ ರೀತಿ ನಡೆಯಲು ಅನುಕೂಲವಾಗುವದು ಎಂದವರು ಹೇಳಿದ್ದಾರೆ. ಆದರೆ ಆಡಳಿತ ಖರ್ಚನ್ನು ಕಡಿಮೆ ಮಾಡುವ ಪ್ರಯತ್ನ ಮಾಡದಿದ್ದರೆ ಇದು ಸಾಧ್ಯವಾಗಲಾರದು ಎಂದಿರುವರು. ವಿಶೇಷ ಸಂಬಳಗಳಿಗಾಗಿ ತಜ್ಞರಾದ ಅಧಿಕಾರಿಗಳನ್ನು ಈ ಪ್ರಾಂತಗಳು ಒಟ್ಟಾಗಿ ನೇಮಿಸಿಕೊಳ್ಳಬಹುದು. ಉದಾಹರಣೆಗೆ ಎಲ್ಲಾ ಇಲಾಖೆಯ ಒಬ್ಬ ನಿರ್ದೇಶಕರು 'ಸಿ' ಪ್ರಾಂತಗಳೆಲ್ಲವುಗಳ ವಿದ್ಯಾ ನೀತಿಯನ್ನು ನಿರ್ಧರಿಸಬಹುದು. ಈ ನಿರ್ದೇಶನವನ್ನು ವಿದ್ಯಾ ಮಂತ್ರಿಗಳು ವಿವಿಧ ಭಾಗಗಳು ತಮ್ಮ ಇಲಾಖೆಯ ಮೂಲಕ ಅದನ್ನು ಜಾರಿಗೆ ತರಬಹುದು. ಈ ನಿರ್ದೇಶಕರು ಆಗಾಗ್ಗೆ ವಿವಿಧ ಭಾಗಗಳನ್ನು ಸುತ್ತಿ ಯೋಗ್ಯ ಸಲಹೆ ಕೊಡುವದಲ್ಲದೆ ಕೆಲಸದ ಮೇಲ್ವಿಚಾರ ನೋಡಿಕೊಳ್ಳಬಹುದು.

ಈ ರೀತಿಯಿಂದ ಪ್ರತೀ ಪ್ರಾಂತಗಳಿಗೆ ದೊಡ್ಡ ದೊಡ್ಡ ಅಧಿಕಾರಿಗಳನ್ನು ನೇಮಿಸುವ ಖರ್ಚನ್ನು ಕಡಿಮೆ ಮಾಡಬಹುದಲ್ಲದೆ ಬೇಕಿರುವ ವಿಶೇಷ ತಜ್ಞರ ಸೇವೆಯನ್ನು ಕಡಿಮೆ ಖರ್ಚಿನಿಂದ ಹೊಂದಬಹುದು.

ಸಣ್ಣ ಆಡಳಿತ ಘಟಕಗಳು ಪ್ರತ್ಯೇಕವಾಗಿರಲು ಆರ್ಥಿಕ ಸ್ವಾವಲಂಬನವನ್ನು ಪಡೆಯಬೇಕು. ಕೇಂದ್ರ ಸರಕಾರದಿಂದ ಆರ್ಥಿಕ ಸಹಾಯ ಪಡೆಯದೆ ತಮ್ಮ ಆಡಳಿತವನ್ನು ಪ್ರಗತಿದಾಯಕವಾಗಿ ನಡೆಸಿಕೊಳ್ಳಲು ಸಮರ್ಥವಾಗಬೇಕು.

ಆಡಳಿತದ ವಿಕೇಂದ್ರೀಕರಣವಾಗಬೇಕೆಂದೂ ಪ್ರತಿ ಗ್ರಾಮವು ಸಣ್ಣ ಗಣರಾಜ್ಯವಾಗಿ ಪ್ರತಿಯೊಂದಕ್ಕೂ ನ್ಯಾಯ ತೀರ್ಮಾನದ ಪಂಚಾಯಿತ ಪಡೆ ಇರಬೇಕೆಂದು ತನ್ನ ಅಭಿಪ್ರಾಯವೆಂದೂ ಕಾಟ್ಜೂರವರು ಹೇಳಿದರು. ಇಂಥಾ ಏರ್ಪಾಡಾದರೆ ಸಾರ್ವಜನಿಕ ನಂಬಿಕೆಯನ್ನುಗಳಿಸಲೂ, ಆಡಳಿತವನ್ನು ದಕ್ಷ ರೀತಿಯಿಂದ ನಡೆಸಲೂ ಸಹಾಯಕವಾಗುವದೆಂದರು.

ಸೆ., ದೊಡ್ಡವೀರಪ್ಪ ಸಾಧುಸನ್ಯಾಸಿಗಳ ಉತ್ಸವದೊಡಗೂಡಿ ಬಹು ವಿಜೃಂಭಣೆಯಿಂದ ಪಟ್ಟಣಿಗರಲ್ಲೊಬ್ಬರಾದ ಶಿವಾಚಾರ ನಂಜಪ್ಪನವರ ಮುಂದಾಳುತನದಿಂದ ನಡೆಸಲ್ಪಟ್ಟಿತು.

ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ಸೂಲಗಿತ್ತಿಯರ ತರಬೇತಿಗೆ ಉಮೇದುವಾರರು ಬೇಕಾಗಿರುವರೆಂದೂ ಇಚ್ಛೆ ಇರುವವರು ತಾ. ೫—೫—೫೩ ರೊಳಗೆ ಬರೆದುಕೊಳ್ಳಬಹುದೆಂದೂ ಅರ್ಜಿದಾರರು ಕಡಿಮೆ ಲೋವರ್ ಸೆಕೆಂಡರಿ ಪೂರ್ತಿ ಮಾಡಿರಬೇಕಲ್ಲದೆ ೨೫—೩೫ ವಯಸ್ಸಿನೊಳಗಿನವರಾಗಿರಬೇಕೆಂದೂ ತಿಳಿಸುತ್ತಾರೆ.

ಕರ್ನಾಟಕ ಪ್ರಾಂತ.

ಆಂಧ್ರಪ್ರಾಂತ ರಚನೆಯೊಳಗೆ ಕರ್ನಾಟಕ ಪ್ರಾಂತರಚನೆಯನ್ನು ಕೇಂದ್ರ ಸರಕಾರವು ಮಾಡಬೇಕೆಂದು ಹಾಗೆ ಮಾಡುವ ತನ್ನ ಇಚ್ಛೆಯನ್ನು ಈ ಒಡನೆ ಆ ಕ್ಷೇತ್ರದವರೊಳಗೆ ಸರಕಾರವು ಪ್ರಕಟಿಸಬೇಕೆಂದೂ ತಾ. ೨೦ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ನಿರ್ಣಯಿಸಿದೆ.

ಶೀಘ್ರವಾಗಿ ಕರ್ನಾಟಕ ಪ್ರಾಂತವನ್ನು ರಚಿಸಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯ ಮಾಡಲಿಕ್ಕಾಗಿ ಹುಬ್ಬಳ್ಳಿ ಜಿಲ್ಲಾ ಕಾಂಗ್ರೆಸಿನ ಪ್ರೆಸಿಡೆಂಟರಾದ ಶ್ರೀ ರಂಕರಗೌಡ ಪಾಟೀಲರು ಮಾರ್ಚಿ ತಾರೀಕು ೨೦ರಿಂದ ಆಮರಣ ಉಪವಾಸ ಕೈಕೊಂಡಿದ್ದರು. ಆದರೆ ಕರ್ನಾಟಕ ಪ್ರಾಂತೀಕ ಕಾಂಗ್ರೆಸಿನ ಮುಂದಾಳುಗಳ ಒತ್ತಾಯದಿಂದಲೂ, ಕೇಂದ್ರ ಸರಕಾರವನ್ನು ಒತ್ತಾಯ ಮಾಡಲು ಕೆ. ಪಿ. ಸಿ ಸಿ ಯು ಮಾಡಲಿರುವ ಠರಾವುಗಳ ದೃಷ್ಟಿಯಿಂದ ಲೂ ೨೩ ದಿನಗಳ ಉಪವಾಸದ ನಂತರ ತಾ. ೧೨ರಲ್ಲಿ ಪಾಟೀಲರು ತಮ್ಮ ಉಪವಾಸವನ್ನು ಮುಗಿಸಿದರು.

ಆದರೆ ತಾ. ೧೯ರಲ್ಲಿ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಮೀಟಿಂಗು ನಡೆಯುವ ಕಾಲಕ್ಕೆ ಸುತ್ತುಮುತ್ತಲಿನ ಹಳ್ಳಿಯ ಮತ್ತು ಹುಬ್ಬಳ್ಳಿಯ ಸುಮಾರು ಹತ್ತಿಪ್ಪತ್ತು ಸಾವಿರ ಜನರು ಬಂದು ಸೇರಿದ್ದರು. ಅವರು ಕೆ. ಪಿ ಸಿ ಸಿ. ಮೀಟಿಂಗನ್ನು ನಡೆಯಗೊಡದೆ ಗೂಂಡಾಗಿರಿಯನ್ನು ಕೈಕೊಂಡು ಕಾಂಗ್ರೆಸ್ಸಿಗರ ಜೀಪು ಕಾರುಗಳಿಗೆ ಬೆಂಕಿ ಕೊಟ್ಟದಲ್ಲದೆ ಮುಂದಾಳುಗಳ ಮೇಲೆ ಕಲ್ಲು ಹೊಡೆದರು. ಇದರಿಂದ ಮುಂದಾಳುಗಳಾದ ಶ್ರೀ ನಿಜಲಿಂಗಪ್ಪ ಮೊದಲಾದವರಿಗೆ ಪೈನರ್ ಜಖಂಗಳಾದವು. ದೊಂಬಿಯನ್ನು ನಿಲ್ಲಿಸಲು ಪೋಲೀಸಲು ಗುಂಡು ಹಾರಿಸಬೇಕಾಯಿತು. ಇದರಿಂದ ೨೫ ಜನರಿಗೆ ಜಖಂ ಆಗಿದೆ.

ಉಪವಾಸ ಕೈಕೊಂಡಿದ್ದ ಪಾಟೀಲರ ಕೇಳಿಕೆಯೆಂದರೆ ಕೇಂದ್ರ ಸರಕಾರವು ಕರ್ನಾಟಕ ಪ್ರಾಂತವನ್ನು ಶೀಘ್ರ ಕೊಡುವಂತೆ ನಿರ್ಧಾರ ಮಾಡಬೇಕು ಅದರು ಇದಕ್ಕೊಪ್ಪದಿದ್ದರೆ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ಕನ್ನಡ ಪ್ರಾಂತಕ್ಕಾಗಿ ಅಹಿಂಸಾತ್ಮಕ ಸತ್ಯಾಗ್ರಹ ಕೈಕೊಳ್ಳಬೇಕೆಂದು ಇತ್ತು.

ವೃದ್ಧಾಪ್ಯದಲ್ಲಿಯೂ ತರುಣರಾಗಿರುವ ಉಪಾಯ

ವಯಸ್ಸಾಯಿತೆಂಬ ಕಲ್ಪನೆಯೇ ಬೇಡ

ನಿಮಗೆ ವಯಸ್ಸಾದ ಮಾತ್ರಕ್ಕೆ ನೀವು ಮುದುಕರಂತೆ ಕಾಣಬೇಕೆಂದೇನೂ ಇಲ್ಲ. ನೀವು ಬಯಸುವಂತೆ ಆಗ ಕೂಡ ನೀವು ತರುಣರಂತೆಯೇ ಕಾಣಬಹುದು. ಈ ಮಾತು ಹೆಂಗಸರಿಗೂ ಅನ್ವಯಿಸುವದು.

ನೀವು ನಡೆದುಕೊಳ್ಳುವ ರೀತಿಗನುಗುಣವಾಗಿ ನಿಮ್ಮ ವಯಸ್ಸು ಕಂಡುಬರುವದು' ಎಂಬ ಪುಸ್ತಕದಲ್ಲಿ ಅಮೇರಿಕೆಯ ಮಾರ್ಜರಿ ವಿಲ್ಸನ್ ಹೀಗೆ ಬರೆದಿದ್ದಾಳೆ—'ವಯಸ್ಸಾದರೂ ತರುಣರಂತೆ ನೀವು ಕಾಣಬೇಕೆನ್ನುವಿರಲ್ಲವೆ? ಅದು ಬಹು ಸುಲಭ. ಯಾವ ವಯಸ್ಸಿನವರಂತೆ ನೀವು ಕಾಣಬೇಕೆಂದು ಇಚ್ಛಿಸುವಿರೋ ಆ ವಯಸ್ಸೇ ತನ್ನದು ಎಂದು ಭಾವಿಸಿಕೊಂಡು ಒರ್ವ ನಟನಂತೆ ಆ ವಯಸ್ಸಿಗನುಗುಣವಾದ ರೀತಿಯಲ್ಲಿ ನಡೆದುಕೊಳ್ಳಿ. ತಾನು ತರುಣಿಯೂ ಚಟುವಟಿಕೆಯುಳ್ಳವಳೂ ಇರುವೆನೆಂದು ಭಾವಿಸುವ ಹೆಂಗಸನ್ನು ಮುದಿ ಹೆಂಗಸೆಂದೆಣಿಸುವದು ಕಠಿಣ. ಹೆಂಗಸನ್ನು ಮುದುಕಿಯನ್ನಾಗಿ ಮಾಡುವದು ವಯಸ್ಸಲ್ಲ— ಆದರೆ ವಯಸ್ಸಾದೊಡನೆ ವೃದ್ಧಾಪ್ಯ ಬರುವದೆಂಬ ಆಕೆಯ ನಂಬಿಗೆ.

ಸದಾ ಯೌವನದಿಂದ ಕೂಡಿರಲು ಅನುಸರಿಸಬೇಕಾದ ವಿಧಾನವನ್ನು ಕುರಿತು ವಿಲ್ಸನ್ ಹೀಗೆ ಹೇಳುತ್ತಾಳೆ:

ಶ್ವಾಸೋಚ್ಛ್ವಾಸ—ಉಸಿರನ್ನು ಆಳವಾಗಿ ಒಳಗೆಳೆದುಕೊಂಡು ನಿಧಾನವಾಗಿ ಬಿಡುವದು ಶಕ್ತಿಯುತ ಶ್ವಾಸೋಚ್ಛ್ವಾಸಗಳು ಯೌವನ ರಕ್ಷಣೆಗೆ ಸಹಾಯಕವಾಗಿವೆ. ಯೋಗ್ಯ ರೀತಿಯ ಶ್ವಾಸೋಚ್ಛ್ವಾಸದಿಂದ ಶರೀರದಲ್ಲಿ ಅತಿಯಾಗಿ ಬೆಳದ ಕೊಬ್ಬು ಕರಗುವದು.

ನಗು—ನಿಮ್ಮ ನಗುವಿನ ಗ್ರಾಮಾಫೋನ್ ಧ್ವನಿ ಮುದ್ರಿಕೆಯೊಂದನ್ನು ತಯಾರಿಸಿಟ್ಟುಕೊಳ್ಳಿ. ನಿಮ್ಮ ನಗು ಆನಂದದ ಲಹರಿಯನ್ನು ಹುಟ್ಟಿಸುವಂಥದಿರಲಿ. ಅದರಲ್ಲಿ ಯೌವನದ ಮಾದಕತೆ ಇರಲಿ. ಆಗಾಗ ಈ ನಗುವಿನ ಧ್ವನಿ ನಿಮ್ಮ ಕಿವಿಗ ಬೀಳುವಂತಾಗಲಿ.

ಚಲನವಲನ—ಯಾವಾಗಲೂ ನಿಮ್ಮ ಚಲನವಲನದಲ್ಲಿ ಚಟುವಟಿಕೆಯಿರಲಿ. ಕುರ್ಚಿಯ ಮೇಲೆ ಕುಳಿತು ಏಳುವಾಗ ನಿಮಗೆ ಕಷ್ಟವೆನಿಸಿದರೆ ನಿಮಗೆ ವೃದ್ಧಾಪ್ಯ ಬಂದಿತೆಂದು ತಿಳಿಯಬೇಕು. **ಸರಿಯಾದ ವ್ಯಾಯಾಮದಿಂದ ನಿಮ್ಮ ಮಾಂಸ ಖಂಡಗಳ ಯೌವನವನ್ನು ಕಾಪಾಡಿಕೊಳ್ಳಿರಿ.** ಆದರೆ ವ್ಯಾಯಾಮ ಮಿತವಾಗಿರಲಿ.

ಯೋಗ್ಯ ಆಸ್ಥೆ—ನಿಮ್ಮ ಜೀವನದ ವಿಚಾರದಲ್ಲಿ ನೀವು ಯೋಗ್ಯ ಆಸ್ಥೆ ವಹಿಸಬೇಕು. ನೀವು ಕೂಡ್ರುವ ರೀತಿಯತ್ತ ಲಕ್ಷ್ಯ ಕೊಡಿ. ನೀವು ಕೂಡ್ರುವ ರೀತಿ ನಿಮ್ಮ ವಯಸ್ಸನ್ನು ಬಹಿರಂಗಪಡಿಸುವದು ಮುಂದಕ್ಕೆ ಚಾಚಿ ಬರುವ ಕುತ್ತಿಗೆ ಇದಕ್ಕೊಂದು ಒಳ್ಳೆಯ ಗುರುತಾಗಿದೆ. **ಕೆಲಸ** ವಾಗುವದಿಲ್ಲ ಎಂಬ ಕಲ್ಪನೆಗೆ ಅವಕಾಶ ಕೊಡಲೇ ಬೇಡಿ. ಈ ಭಾವನೆ ನೀವು ಮುದುಕರಂತೆ ಕಾಣಲು ಕಾರಣವಾಗುತ್ತದೆ. ನಿಮ್ಮ ಕೆಲಸವನ್ನು ಇತರರಿಂದ ಮಾಡಿಸಿಕೊಳ್ಳದೆ ನೀವೇ ಮಾಡಿಕೊಳ್ಳಿರಿ

ನಿಮ್ಮ ಕಣ್ಣುಗಳಲ್ಲಿ ಸದಾ ನಗು ಆಡುತ್ತಿರಲಿ. ಎಲ್ಲವನ್ನು ಆಸ್ಥೆಯಿಂದ ನಿರೀಕ್ಷಿಸುವ ಚಟ ಇರಲಿ. ಜೀವನದ ಆಸ್ಥೆಯೇ ಯೌವನ.

ಕೆ. ವಿ.

Coorg Civil Surgeon's Office,
Mercara, the 22nd April 1953

Wanted

Women candidates to undergo training, as Rural Midwives, at the Civil Hospital, Mercara, for a period of one year, on a stipend of Rs. 25/- per mensem and Rs. 50/- towards equipment cost, after the completion of training

The candidates must have completed Lower-Secondary examination and must be between 25 and 35 years of age. Those living in villages will be given preference.

Relaxation of age limit and educational qualification, in special cases, will be considered, if candidates deserve selection on other considerations.

Application must reach the Civil Surgeon, Coorg, Mercara, on or before 5th May 1953. The Course will commence from 15-5-1953.

Further particulars may be obtained in person, from this office.

T. B. MEDAPPA,
Civil Surgeon, Coorg.

ಕೇಂದ್ರ ಜನತಾ ಸಭೆಯ ಪ್ರಮುಖರು

ಲೇ: — ಪ್ರಸಾದ್.

ಕಳೆದ ಚುನಾವಣೆಯ ನಂತರ ಕೇಂದ್ರ ಪಾರ್ಲಿಮೆಂಟಿನಲ್ಲಿ ವಿವಿಧ ಪಕ್ಷಗಳು ತಮ್ಮ ಅಸ್ತಿತ್ವವನ್ನು ಪ್ರತ್ಯೇಕ ಪ್ರತ್ಯೇಕವಾಗಿ ನಿರೂಪಿಸಿ ಕೊಂಡಿವೆ. ಸಾಧಾರಣ ಐನೂರು ಪ್ರತಿನಿಧಿಗಳಿಂದ ಕೂಡಿದ ಜನತಾ ಸಭೆಯಲ್ಲಿ ಮೂರರಲ್ಲಿ ಎರಡು ಭಾಗಕ್ಕಿಂತಲೂ ಹೆಚ್ಚು ಕಾಂಗ್ರೆಸಿಗರಿರುವ ಕಾರಣ ಇನ್ನುಳಿದ ಚಿಕ್ಕ ಪುಟ್ಟ ಪಕ್ಷಗಳು ಪ್ರತ್ಯೇಕವಾಗಿ ಇದ್ದುಕೊಂಡು ಪರಿಣಾಮಕಾರಿ ವಿರೋಧ ಪಕ್ಷಗಳಾಗಿರಲು ಸಾಧ್ಯವಾಗದ ಕಾರಣ ಧ್ಯೇಯಗಳಲ್ಲಿ ಕನಿಷ್ಠ ಅಭಿಪ್ರಾಯ ವ್ಯತ್ಯಾಸ ವಿರುವ ವಿವಿಧ ಪಕ್ಷಗಳು ಒಂದು ಗೂಡಿಕೊಂಡಿವೆ. ಈ ಒಕ್ಕೂಟಗಳಿಗೆ ಚುನಾವಣೆಯಲ್ಲಿ ಯಾವ ಪಕ್ಷದ ನೆರವು ಇಲ್ಲದೆ ಜಯಿಸಿ ಬಂದು ಅನೇಕ ಸಂಖ್ಯೆಯಲ್ಲಿರುವ ಸ್ವತಂತ್ರ ಪ್ರತಿನಿಧಿಗಳೂ ಸೇರಿ ಕೊಂಡಿರುತ್ತಾರೆ. ವಿರೋಧ ಪಕ್ಷಗಳಲ್ಲಿ ಕಮ್ಯುನಿಸ್ಟರು ಮಾತ್ರ ಪ್ರತ್ಯೇಕ ಅಸ್ತಿತ್ವವನ್ನಿಟ್ಟು ಕೊಂಡಿದ್ದಾರೆ. ಪ್ರಥಮವಾಗಿ ಶಾಸನ ಸಭಾ ಕಾರ್ಯಕ್ರಮಗಳಲ್ಲಿ ಒಂದಾಗಿ ಬಳಿಕ ವಿಲೀನೀ ಕರಣ ಹೊಂದಿದ ಪ್ರಜಾಸೋಶಿಯಲಿಸ್ಟ್ ಪಕ್ಷ ಮತ್ತು ಜಾತೀಯವಾದಿ ಅಭಿಪ್ರಾಯಗಳಿರುವ ಜನಸಂಘ, ಹಿಂದೂ ಮಹಾಸಭೆ, ರಾಮರಾಜ್ಯ ಪರಿಷತ್ತು, ಗಣತಂತ್ರ ಪಕ್ಷ, ಮುಂತಾದವು ಸೇರಿಕೊಂಡು ನೇಷನಲ್ ಡೆಮೋಕ್ರೆಟ್ ಪಕ್ಷವೆಂದು ನಿರ್ಮಿಸಿ ಕೊಂಡು ವಿರೋಧ ಪಕ್ಷಗಳ ಸಾಲಿನಲ್ಲಿ ಕೂರುತ್ತವೆ. ಈ ವಿವಿಧ ಪ್ರಮುಖ ಪಕ್ಷಗಳ ಶಾಸನ ಸಭಾ ಮುಂದಾಳುಗಳ ಪರಿಚಯ ಮಾಡಿಕೊಡುವದೇ ಈ ಲೇಖನದ ಗುರಿ.

ಪಂಡಿತ ಜವಾಹರಲಾಲ್

ಕಾಂಗ್ರೆಸ್ ಪಕ್ಷದ ಹಾಗೂ ಜನತಾ ಸಭೆಯ ಮುಂದಾಳು ಶ್ರೀ ಜವಾಹರಲಾಲ್ ನೆಹರೂರವರು ಅನುಭವಿ ರಾಜಕಾರಣಿ ಮತ್ತು ಶಾಸನ ಸಭಾ ಕಾರ್ಯಕ್ರಮಗಳಲ್ಲಿ ನುರಿತ ಮುಂದಾಳು. ಕಾಂಗ್ರೆಸಿನ ಮುಂದಾಳಾಗಿ ಸರಕಾರದ ಪೂರ್ಣ ಜವಾಬ್ದಾರಿಯನ್ನು ಹೊತ್ತಿರುವದಲ್ಲದೆ ಸಭೆಯ ಮುಂದಾಳಾಗಿ ಅದರ ಮರ್ಯಾದೆ, ಘನತೆ ಮತ್ತು ಗಂಭೀರತೆಯನ್ನು ಕಾಪಾಡಿ ಕೊಳ್ಳುವ ಹೊಣೆ ಅವರ ಮೇಲಿದೆ. ಪಾರ್ಲಿಮೆಂಟಿನಿಂದ ಹೊರಗೆ ಸಭೆ ಸಮ್ಮೇಳನಗಳಲ್ಲಿ ಒಂದೆರಡು ಗಂಟೆಗಳ ಕಾಲ ಮನ ಬಿಚ್ಚಿ ಅನಾಯಾಸವಾಗಿ ಮಾತನಾಡುವ ನೆಹರೂರವರು ಪಾರ್ಲಿಮೆಂಟಿನೊಳಗೆ ಎಚ್ಚರಿಕೆಯಿಂದ ಆಯ್ದ ಶಬ್ದಗಳಿಂದೊಡಗೂಡಿ, ಹದ್ದು ಮೀರದೆ ಮಾಡುವ ಚುಟುಕು ಭಾಷಣಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಕಮ್ಯೂನಿಸ್ಟ್ ಮೆಂಬರು ಆನಂದ ನಂಬಿಯಾರರು ಸಭಾಧ್ಯಕ್ಷರನ್ನು ಪಕ್ಷಪಾತಿಗಳೆಂದು ಆರೋಪಿಸಿ ಸಭಾಂಗಣದಿಂದ ಹೊರದೂಡಲ್ಪಟ್ಟಾಗ ಸಭೆಯ ಪರವಾಗಿ ಸಭಾಧ್ಯಕ್ಷರ ಕ್ಷಮಾಪಣೆ ಯಾಚಿಸಿದ ನೆಹರೂರವರ ಭಾಷಣ ಮತ್ತು ದೆಲ್ಲಿ ಚುನಾವಣೆಯ ನಿಮಿತ್ತ ಶ್ಯಾಮಪ್ರಸಾದ ಮುಖರ್ಜಿಯವರಿಗೂ ಮತ್ತು ಪ್ರಧಾನ ಮಂತ್ರಿಗಳಿಗೂ ವಾಗ್ಯುದ್ಧ ನಡೆದ ಮರುದಿವಸ ತನ್ನ ಕೋಪದ ನುಡಿಗಳಿಗಾಗಿ ಪಶ್ಚಾತ್ತಾಪ ಪಟ್ಟ ನೆಹರೂರವರ ಸಹನೆಯ ನುಡಿಗಳು ಪಾರ್ಲಿಮೆಂಟರೀ ಚರಿತ್ರೆಯಲ್ಲೇ ಚಿರಸ್ಥಾಯಿಯಾಗಿ ಉಳಿಯುವವು. ಆದರೆ ನೆಹರೂರವರ ಆಕ್ರಮಣಕಾರಿ ಮುಂದಾಳ್ತನದಿಂದ ಇತರ ಮಂತ್ರಿಗಳಿಗೂ ಮತ್ತು ಕಾಂಗ್ರೆಸ್ ಪ್ರತಿನಿಧಿಗಳಿಗೂ ತಮ್ಮ ನಿಜ ಸಾಮರ್ಥ್ಯವನ್ನು ತೋರ್ಪಡಿಸುವ ಅವಕಾಶ ವಿಶಾಲವಾಗಿಲ್ಲ. ಕಾಂಗ್ರೆಸಿಗರ ಪಾರ್ಲಿಮೆಂಟರೀ ಕಾರ್ಯಕ್ರಮಗಳು ಪೆಜ್ಜಿನ ಮಟ್ಟಿಗೆ ಮುಂದಾಳು ಒಕ್ಕು ತೋರಿಸಿದಂತೆ ಸಾಗಬೇಕಾಗುತ್ತದೆ. ಆದರೆ ನಮ್ಮ ಪ್ರಥಮ ಪಾರ್ಲಿಮೆಂಟಿನ ಗಂಭೀರತೆ ಮತ್ತು ಘನತೆಗಳನ್ನು ಕಾಪಾಡಿಕೊಂಡು ಹೋಗುವ ಹೊಣೆಯನ್ನು ನೆಹರೂರವರೊಬ್ಬರೇ ಇಂದಿನ ಪರಿಸ್ಥಿತಿಯಲ್ಲಿ ಸುಸೂತ್ರವಾಗಿ ನಾಗಿಸಬಲ್ಲರೆಂದರೆ ಅತಿಶಯೋಕ್ತಿಯಾಗಲಾರದು.

ಶ್ರೀಮತಿ ಸುಚೇತ ಕೃಪಾಲಿನಿ

ವಿರೋಧ ಪಕ್ಷಗಳಲ್ಲೊಂದಾದ ಪ್ರಜಾಸೋಶಿಯಲಿಸ್ಟ್ ಪಕ್ಷದ ಮುಂದಾಳು ಶ್ರೀಮತಿ ಸುಚೇತಾ ಕೃಪಲಾನಿಯವರು ಅಷ್ಟೇನೂ ಪರಿಣಾಮಕಾರಿ ವ್ಯಕ್ತಿಯಲ್ಲ. ಸಾವಧಾನದ ಸಾಧಾರಣ ಭಾಷಣಕಾರರು. ಪ್ರತಿಯೊಂದು ವಿಷಯದಲ್ಲೂ ಎದ್ದೆದ್ದು ಮಾತಾಡುವ ಚಟ ಅವರಿಗಿದೆ. ೧೯೪೭ರ ಹಿಂದೂ ಮುಸ್ಲೀಮ್ ಕಗ್ಗೊಲೆಯನ್ನು ಗಾಂಧೀಜಿಯವರೊಡನಿದ್ದು ಕಣ್ಣಾರೆ ಕಂಡ ಅವರಿಗೆ ಜಾತೀಯ ವಾದದ ಕಡೆಗೆ ಕೊಂಚ ಒಲವಿದ್ದಂತೆ ತೋರುತ್ತದೆ. ಜನಸ್ಸು ಚಳವಳಿಕ್ಕೆ ಜಾತೀಯವಾದಿ ಪಕ್ಷಗಳೊಡನೆ ಸೇರಿಕೊಂಡು ಅವರೊಡನೆ ಸಹಕರಿಸುತ್ತಿರುವ ಸುಚೇತಾರವರ ವರ್ತನೆ ಕೊಂಚ ಸಂಶಯಾಸ್ಪದವಾಗಿದೆ. ಸಮಾಜಸೇವೆಯಲ್ಲಿರುವ ಅವರ ಒಲವು ಮತ್ತು ಸಾಧು ಸ್ವಭಾವದಿಂದ ಕೂಡಿದ ಅವರ ಸುಗುಣ, ಜೊತೆಗೆ ತನ್ನ ಪತಿಯಾದ ಆಚಾರ್ಯರ ಸ್ಥಾನ, ಆಕೆಯನ್ನು ಪ್ರಜಾಸೋಶಿಯಲಿಸ್ಟ್ ಪಕ್ಷದ ಮುಂದಾಳಾಗಿ ಆರಿಸಲು ಕಾರಣವಾಯಿತು. ಹೇಗೂ ಪಾರ್ಲಿಮೆಂಟಿನಲ್ಲಿ ಪ್ರಜಾಸೋಶಿಯಲಿಸ್ಟ್ ಪಕ್ಷದ ಕಾರ್ಯಕ್ರಮಗಳು ಸುಚೇತಾಳ ಕೈಯಲ್ಲಿ ಅಷ್ಟೇನು ಸುಸೂತ್ರವಾಗಿ ಸಾಗುತ್ತಿಲ್ಲ.

ಶ್ರೀ ಎ. ಕೆ. ಗೋಪಾಲನ್

ಮೂವತ್ತು ಜನರಿಂದ ಕೂಡಿ ಪ್ರತ್ಯೇಕ ಅಸ್ತಿತ್ವವನ್ನಿಟ್ಟುಕೊಂಡಿರುವ ಏಕ ಮಾತ್ರ ವಿರೋಧಿ ಪಕ್ಷವಾದ ಕಮ್ಯೂನಿಸ್ಟರ ಮುಂದಾಳು ಎ. ಕೆ. ಗೋಪಾಲನ್‌ರವರು. ದಕ್ಷಿಣ ಭಾರತದಿಂದ ಅಧಿಕ ಸಂಖ್ಯೆಯಲ್ಲಿ ಕಮ್ಯೂನಿಸ್ಟರು ಪಾರ್ಲಿಮೆಂಟಿಗೆ ಆರಿಸಿ ಬಂದದ್ದೊಂದೆ ಗೋಪಾಲನ್‌ರವರನ್ನು ಪಕ್ಷದ ಮುಂದಾಳಾಗಿ ಆರಿಸಲು ಕಾರಣವಾಯಿತು. ಅವರು ತಮ್ಮ ಅಭಿಪ್ರಾಯಗಳನ್ನು ಭಾಷಣ ಮಾಡುವದಕ್ಕೆ ಮೊದಲೇ ಸರಿಯಾಗಿ ಜೋಡಿಸಿ ಕೊಳ್ಳುವದಿಲ್ಲ, ಜೊತೆಗೆ ನಿಂತಲ್ಲೇ ಮಾತನಾಡುವ ಅಥವ ಯೋಚಿಸುವ ಶಕ್ತಿ ಅವರಿಗಿಲ್ಲ. ಪಾರ್ಲಿಮೆಂಟಿನ ಪ್ರಥಮ ಅಧಿವೇಶನದಲ್ಲೇ ರಾಷ್ಟ್ರಾಧ್ಯಕ್ಷರ ಭಾಷಣದ ಮೇಲೆ ಟೀಕೆಮಾಡುತ್ತಾ "ರಾಷ್ಟ್ರಾಧ್ಯಕ್ಷರ ಭಾಷಣವು ಪ್ರಜೆಗಳ ಮೇಲೆ ಯುದ್ಧ ಸಾರುವಂತಿದೆ" ಎಂಬ ತಿಳಿಗೇಡಿ ಟೀಕೆಗಳನ್ನು ಮಾಡಿ ಛೀ ಅನ್ನಿಸಿಕೊಂಡರು. ಆದರೆ ಕಮ್ಯೂನಿಸ್ಟ್ ಪಾರ್ಟಿಯಲ್ಲಿಯ ಅವರ ನಿಷ್ಠೆ ಮತ್ತು ಕರ್ತವ್ಯ ನಿರತೆ ಅವರನ್ನು ಇಂದು ಆ ಸ್ಥಾನದಲ್ಲಿ ಕೂರಿಸಿದೆ. ವಿರೋಧ ಪಕ್ಷದ ಮುಂದಾಳುಗಳಲ್ಲಿ ಶ್ರೀ ಗೋಪಾಲನ್‌ರವರು ಕನಿಷ್ಠ ಪರಿಣಾಮಕಾರಿ. ಇಂದಿನ ತಾತ್ಕಾಲಿಕ ಮುಂದಾಳು ಶ್ರೀ ಹಿರೇನ್ ಮುಖರ್ಜಿಯವರೇ ಆ ಸ್ಥಾನಕ್ಕೆ ಹೆಚ್ಚು ಒಪ್ಪುವಂತವರು.

ಶ್ರೀ ಶ್ಯಾಮಪ್ರಸಾದ ಮುಖರ್ಜಿ

ಜಾತೀಯವಾದಿ ಪಕ್ಷಗಳನ್ನೆಲ್ಲಾ ಒಂದು ಸೇರಿಸಿಕೊಂಡು ನೇಷನಲ್ ಡೆಮೋಕ್ರೆಟ್ ಪಕ್ಷವನ್ನು ಕಟ್ಟಿಕೊಂಡಿರುವ ಶ್ರೀ ಶ್ಯಾಮಪ್ರಸಾದ ಮುಖರ್ಜಿಯವರೇ ವಿರೋಧ ಪಕ್ಷಗಳ ಏಕೈಕ ಅಧಿಕಾರವಾಣಿ. ಅವರ ಮಾತಿನಸರಣಿ, ಸಮಯೋಚಿತ ಚುಚ್ಚು ನುಡಿಗಳು ಮತ್ತು ವಿಷಯಗಳ ಮೇಲಿನ ಆಳವಾದ ಅಭ್ಯಾಸ, ಮಂತ್ರಿಗಳನ್ನು ಅನೇಕ ಸಲ ಪೆಚ್ಚಿಗೆ ಬೀಳುವಂತೆ ಮಾಡುತ್ತವೆ. ಕಾಂಗ್ರೆಸಿಗರು ಅವರನ್ನು ಜಾತೀಯವಾದಿಯೆಂದು ಖಂಡ ತುಂಡವಾಗಿ ಖಂಡಿಸಿದರೂ ಅವರ ನಿಜ ವ್ಯಕ್ತಿತ್ವವನ್ನು ಮರೆಮಾಚಲು ಸಾಧ್ಯವಿಲ್ಲ. ಜಾತೀಯವಾದಿಗಳಲ್ಲಿ ನಿಶ್ಚಿತ ಧೋರಣೆಯನ್ನಿಟ್ಟುಕೊಂಡು ಕಾರಣಭೂತವಾಗಿ ಹೋರಾಡುವ ವ್ಯಕ್ತಿ ಅವರು. ಸರಕಾರವು ಸಾಧಿಸಿದ ಕಾರ್ಯಗಳನ್ನು ಮುಚ್ಚು ಮರೆಯಿಲ್ಲದೆ ಒಪ್ಪಿಕೊಳ್ಳುವ ಅವರ ಸ್ವಭಾವ ಎಲ್ಲರಿಂದಲೂ ಮೆಚ್ಚಿಗೆ ಮತ್ತು ಮರ್ಯಾದೆಯನ್ನು ಪಡೆಯುತ್ತದೆ. ಚಿತ್ತರಂಜನ ಹಡಗು ದಾಮದ ಪ್ರಗತಿಯನ್ನು ಸಮರ್ಥಿಸುವಾಗ ನಡೆದ ವಾಗ್ಯುದ್ಧದಲ್ಲಿ ಹಿರೇನ್ ಮುಖರ್ಜಿಯವರ ಮುಖಕ್ಕೆ ಮಸಿ ಬಳಿದ ಶ್ಯಾಮ ಪ್ರಸಾದರ ಸಮಯೋಚಿತ ಉತ್ತರಗಳು ಅವರ ತೀಕ್ಷ್ಣ ಬುದ್ಧಿಯನ್ನು ತೋರಿಸುತ್ತದೆ.

ಈ ನಾಲ್ವರು ನಮ್ಮ ಪ್ರಥಮ ಪಾರ್ಲಿಮೆಂಟಿನ ಪ್ರಮುಖ ಮುಂದಾಳುಗಳು. ಪಾರ್ಲಿಮೆಂಟಿನ ಕೀರ್ತಿ ಘನತೆ ಮತ್ತು ಯೋಗ್ಯತೆಗಳನ್ನು ಕಾಪಾಡಿಕೊಂಡು ಹೋಗುವ ಭಾರ ಇವರ ಕೈಯಲ್ಲಿದೆ.

ಸಂತಾಪ ಸೂಚಕ ಸಭೆ.

ಶನಿವಾರಸಂತೆಯ ಸಾರ್ವಜನಿಕರ್ ತಾ. ೧೧ರಲ್ಲಿ ಕೊಡಗಿನ ಗೃಹ ಸಚಿವರಾದ ಶ್ರೀ ಕೆ. ಮಲ್ಲಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೊಡಗಿನ ಜಿಲ್ಲಾ ಜಡ್ಜರಾಗಿದ್ದ ಶ್ರೀ ಎನ್. ಮುದ್ದಪ್ಪನವರ ನಿಧನಕ್ಕೆ ಸಂತಾಪ ಸೂಚಿಸಿ ಠರಾವು ಮಾಡಿದರು.

ತಾ. ೧೩ ರಲ್ಲಿ ಬಲಮುರಿ ಗ್ರಾಮಸ್ಥರು ಶ್ರೀ ಕೋಟೇರ ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮುದ್ದಪ್ಪನವರ ನಿಧನದ ಬಗ್ಗೆ ಸಂತಾಪ ವ್ಯಕ್ತ ಮಾಡಿದರು. ಶ್ರೀಗಳಾದ ಕೋಟೇರ ಅಯ್ಯಪ್ಪ, ಬೆಳ್ಳಿಚೆಟ್ಟಿರ ಅಚ್ಚಯ್ಯ, ಗುಡ್ಡೇರ ಗಣಪತಿ, ಪಾಲಂದಿರ ಕಾರ್ಯಪ್ಪ ಮೊದಲಾದವರು ಮೃತರ ಗುಣಗಾನ ಮಾಡಿದರು.

ತಾ. ೧೬ರಲ್ಲಿ ಮಡಿಕೇರಿ ಕೋಹಿನೂರ್ ಟಾಕೀಸಿನಲ್ಲಿ ಕೊಡಗಿನ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ಸಭೆ ನಡೆದು ದಿವಂಗತ ಮುದ್ದಪ್ಪನವರ ಬಗ್ಗೆ ಸಂತಾಪ ಸೂಚಕ ಠರಾವುಗಳಾದವು.

— —

ಕ್ರಿಕೆಟ್

ಬ್ರಿಗೇಡಿಯರ್ ಸಿ ಬಿ. ಸುಬ್ಬಯ್ಯ ಕಪ್ಪಿನ ಕ್ರಿಕೆಟ್ ಪಂದ್ಯಾಟವು ತಾ. ೨೦ ಮತ್ತು ೨೧ರಲ್ಲಿ ಮಡಿಕೇರಿ ಮೇನ್ಸ್ ಕಾಂಪೌಂಡಿನಲ್ಲಿ ಮಡಿಕೇರಿ ವಾಂಡರ್ಸ್ ಟೀಮಿಗೂ ಕೊಡಗು ಪ್ಲಾಂಟರ್ ಟೀಮಿಗೂ ನಡೆಯಿತು. ವಾಂಡರ್ಸ್ ಟೀಮಿನಲ್ಲಿ ಶ್ರೀಗಳಾದ ಅಪ್ಪಾರಂಡ ದೇವಯ್ಯ (ಕೇಪ್ಟನ್) ಕೋದಂಡ ದೇವಯ್ಯ, ಎ. ಆರ್. ಭಗವಾನ್‌ಸಿಂಗ್, ಎ. ಡಬ್ಲ್ಯೂ. ಅಬ್ರಹಾಂ, ಮುಕ್ಕಾಟಿರಂಡ ಸಂಜಪ್ಪ, ಎ. ಡಬ್ಲ್ಯೂ. ಪಾಲ್, ಪಟ್ಟಮಾಡ ಕಾಳಪ್ಪ, ಕೂಳುವಂಗ ಕಾರ್ಯಪ್ಪ, ಜಿ. ಡಬ್ಲ್ಯೂ ಜಾನ್, ನೆಲ್ಲಿಮಕ್ಕಳ ಬಿದ್ದಪ್ಪ, ಮತ್ತು ಸಿ. ಜಿ ರಾಯ್. ಇವರುಗಳೂ, ಪ್ಲಾಂಟರ್ಸ್ ಟೀಮಿನಲ್ಲಿ ಶ್ರೀಗಳಾದ ಮಂಡೇಪಂಡ ಅಪ್ಪಯ್ಯ, (ಕೇಪ್ಟನ್) ಪಡಿಕೇರಿಯಂಡ ಪೂವಯ್ಯ, ಮಂಡೇಪಂಡ ಕಾರ್ಯಪ್ಪ, ಮಂಡೇಪಂಡ ಚಂಗಪ್ಪ, ಕಲಿಯಂಡ ಅಪ್ಪಯ್ಯ, ಮಣವಟ್ಟಿರ ಐಯ್ಯಣ್ಣ, ಕೋಡಿಮಣಿಯಂಡ ಸೋಮಣ್ಣ, ಅಪ್ಪಾರಂಡ ಕಾರ್ಯಪ್ಪ, ಐಚೆಟ್ಟಿರ ಮುತ್ತಣ್ಣ, ಸಿರಿಲ್ ಫಿಲಿಪ್ ಮತ್ತು ಎ. ಸಿ. ಅಪ್ಪಯ್ಯ ಇವರುಗಳೂ ಆಡಿದರು.

ವಾಂಡರ್ಸ್ ಟೀಮು ಮೊದಲನೇ ಇನ್ನಿಂಗ್ಸ್‌ನಲ್ಲಿ ೧೫೭ ರನ್ನುಗಳನ್ನೂ ಎರಡನೇ ಇನ್ನಿಂಗ್ಸ್‌ನಲ್ಲಿ ೧೧೭ ರನ್ನುಗಳನ್ನು ಮಾಡಿದರು. ಪ್ಲಾಂಟರ್ಸ್ ಟೀಮಿನವರು ಒಂದನೇ ಇನ್ನಿಂಗ್ಸ್‌ನಲ್ಲಿ ೧೯೧ ರನ್ನುಗಳನ್ನೂ ಎರಡನೇ ಇನ್ನಿಂಗ್ಸಿನ ೭ ವಿಕೆಟ್ಟುಗಳಿಗೆ ೧೦೦ ರನ್ನುಗಳನ್ನೂ ಮಾಡಿ ೩ ವಿಕೆಟ್ ೧೯ ರನ್ನುಗಳಿಂದ ಗೆದ್ದರು. ಪ್ಲಾಂಟರ್ಸ್ ಟೀಮಿನ ಶ್ರೀ ಮಂಡೇಪಂಡ ಅಪ್ಪಯ್ಯನವರು ೬೩ ರನ್ನುಗಳನ್ನೂ, ವಾಂಡರ್ಸ್ ಟೀಮಿನ ಮುಕ್ಕಾಟಿರ ಸಂಜಪ್ಪ ಇವರು ೪೭ ರನ್ನುಗಳನ್ನೂ ಮಾಡಿದರು.

ಗೆದ್ದವರಿಗೆ ಕಪ್ಪನ್ನು ಶ್ರೀ ಕರೆಮಾಡ ಬೆಳ್ಳಪ್ಪನವರು ಕೊಟ್ಟರು.

ನಗು ಮಲ್ಲಿಗೆ

ಅಧ್ಯಾಪಕ— ಹಂದಿಯು ಬಹು ಉಪಯುಕ್ತ ಪ್ರಾಣಿ. ಅದರ ಮಾಂಸನನ್ನು ತಿನ್ನುತ್ತೇವೆ. ಅದರ ಕೂದಲಿನಿಂದ ಬ್ರಶ್ ಆಗುತ್ತದೆ. ಇನ್ನೂ ಯಾವ ಯಾವ ಉಪಯೋಗಗಳು ಹಂದಿಯಿಂದಾಗುತ್ತವೆ?

ವಿದ್ಯಾರ್ಥಿ— ಸಾರ್, ಇನ್ನೊಬ್ಬರ ಮೇಲೆ ಸಿಟ್ಟು ಬಂದಾಗ ಅದರ ಹೆಸರನ್ನು ಉಪಯೋಗಿಸುತ್ತೇವೆ!

* * *

ದೂರ ದೃಷ್ಟಿ ಇಲ್ಲದ ಗಂಡನು ತನ್ನ ಹೆಂಡತಿಯೊಡನೆ ಕಲಾ ಪ್ರದರ್ಶನಾಲಯಕ್ಕೆ ಹೋಗಿದ್ದನು. ಅಲ್ಲಿ ತೂಗ ಹಾಕಿದ ಮಿನುಗುವ ಚೌಕಟ್ಟನ್ನು ನೋಡಿ "ನಾನು ನನ್ನ ಜನ್ಮದಲ್ಲಿ ನೋಡಿದ ಅತೀ ನಿಕೃಷ್ಟವಾದ ಚಿತ್ರವಿದು" ಎಂದನು.

"ಹುಚ್ಚರ ಹಾಗೆ ಮಾತಾಡಬೇಡಿ. ಅದು ಚಿತ್ರವಲ್ಲ; ಕನ್ನಡಿ" ಹೆಂಡತಿಯೆಂದಳು.

* * *

ಅವನು— ನೀನು ಡಾಕ್ಟರಲ್ಲಿಗೆ ಹೋಗಿದ್ದೆಯಾ?

ಇವನು— ಹೌದು.

ಅವನು— ನಿನ್ನಲ್ಲೇನಿತ್ತೆಂದು ಆತನು ಕಂಡು ಹಿಡಿದನೇ?

ಇವನು— ಪೂರ್ಣವಲ್ಲದಿದ್ದರೂ ಕಂಡು ಹಿಡಿದನೆಂದು ಹೇಳಬಹುದು.

ಅವನು— ಹಾಗೇದರೆ.

ಇವನು— ನನ್ನಲ್ಲಿ ರೂ ೫೦ ಇತ್ತು. ರೂ ೪೦ ಚಾರ್ಜು ಮಾಡಿದನು.

* * *

ಅಧ್ಯಾಪಕ— ಶಾಲೆಗೆ ಬರುವಾಗ ನಿನಗೆ ಬಾಯಿ ತೊಳೆದು ಕೊಂಡು ಬರಲಾಗುವದಿಲ್ಲವೇ? ಬೆಳಗ್ಗೆ ಏನು ತಿಂದೆಯೆಂಬುದು ಬಾಯಿ ನೋಡಿದರೆ ತಿಳಿಯುವಂತಿದೆ.

ಹುಡುಗ— ಏನದು, ಸಾರ್?

ಅಧ್ಯಾಪಕ— ಮೊಟ್ಟೆ ತಿಂದಂತಿದೆ.

ಹುಡುಗ— ಅದು ಈ ದಿನ ಬೆಳಗ್ಗೆಯಲ್ಲ, ನಿನ್ನೆ ಬೆಳಗ್ಗೆ ಸಾರ್!

* * *

ಪುಸ್ತಕ ಮಾರುವವ— ಈ ಪುಸ್ತಕವನ್ನು ತೆಗೆದು ಕೊಂಡರೆ ನಿನ್ನ ಕೆಲಸ ಅರ್ಧ ಮುಗಿದಂತೆ!

ಗಿರಾಕಿ— ಹಾಗಾದರೆ ಎರಡು ಪುಸ್ತಕ ಕೊಡಿ.

* * *

ರಾಮು— ದೇಶದ ಆದಾಯವನ್ನು ಹೆಚ್ಚಿಸಲು ಜನರಿಗೆ ಹೊರೆಯಾಗದ ವಿಧಾನಗಳಾವುವಾದರೂ ಇವೆಯೆ?

ಕೃಷ್ಣ— ಭಾಷಣ ಕೊಡುವ ಮುಂದಾಳುಗಳು ಪ್ರತೀ ಭಾಷಣಕ್ಕೆ ಇಷ್ಟು ಕರವಾಯವೆಂದು ವಿಧಿಸಿದರಾಗದೇ?

* * *

"ಡಾಕ್ಟರ್" ನಿಮ್ಮನ್ನು ಈ ನಡುರಾತ್ರಿಯಲ್ಲಿ ಇಷ್ಟು ದೂರದ ಹಳ್ಳಿಗೆ ಕರೆ ತಂದುದಕ್ಕೆ ಕ್ಷಮಿಸಬೇಕು.

ಡಾಕ್ಟರ್— ಚಿಂತೆಯಿಲ್ಲ. ಈ ಹಳ್ಳಿಯ ಪಕ್ಕದಲ್ಲಿಯೇ ನನ್ನ ಮತ್ತೊಬ್ಬ ರೋಗಿ ಇದ್ದಾರೆ. ಒಂದೇ ಕಲ್ಲಿನಿಂದ ಎರಡು ಪಕ್ಷಿಗಳನ್ನು ಕೊಂದಂತಾಯಿತು!

* * *

ಲೆಕ್ಚರರಿಗೆ ಮೂಢವಿಸ ಕಿರುಕುಳದಿಂದ ಸಾಕಾಗಿತ್ತು. ಮೂಢುವನ್ನು ತನ್ನ ಆಫೀಸಿಗೆ ಬರಹೇಳಿದರು.

ಲೆಕ್ಚರರ್— ಓದಲಿಕ್ಕೆ ಇಷ್ಟ ಇಲ್ಲದ ಮೇಲೆ ಕಾಲೇಜಿಗೆ ಏಕೆ ಬಂದಿರುವೆ?

ಮೂಢು— ಅದು ನನಗೆ ನಿಶ್ಚಯವಾಗಿ ತಿಳಿದಿಲ್ಲ. ನನ್ನನ್ನು ಮುಂದಿನ ಯೋಗ್ಯ ನಾಗರಿಕನನ್ನಾಗಿ ಮಾಡಲು ಎಂದು ತಾಯಿ ಹೇಳುತ್ತಾಳೆ. ಆಕೆಯನ್ನು ಮದುವೆಯಾಗಲು ಒಬ್ಬ ಒಳ್ಳೆಯ ಮಿತ್ರನನ್ನು ನಾನು ಸಂಪಾದಿಸಬೇಕೆಂದು ಸಹೋದರಿ ಹೇಳುತ್ತಾಳೆ. ಕುಟುಂಬವನ್ನು ದಿವಾಳಿಗೊಳಿಸಲು ಎಂದು ತಂದೆ ಹೇಳುತ್ತಾರೆ.

ಜಗತ್ತಿನಲ್ಲಿ ಅತಿಯಾಗಿ ಉಣ್ಣುವವರು ಆಯರ್ಲೆಂಡಿನವರು

ಸಂಯುಕ್ತ ಜನಾಂಗಗಳ ಕಡೆಯಿಂದ ಪ್ರಕಟವಾದ ೧೯೫೨ರ ಅಂಕವಿಜ್ಞಾನ ವರ್ಷ ಪುಸ್ತಕದಿಂದ ತಿಳಿದು ಬರುವಂತೆ ಜಗತ್ತಿನಲ್ಲಿ ಅತ್ಯಂತ ಹೆಚ್ಚಿಗೆ ಉಣ್ಣುವ ರಾಷ್ಟ್ರ ಆಯರ್ಲೆಂಡು ಎಂದು ಸಿದ್ಧವಾಗಿದೆ. ೧೯೫೧ರಲ್ಲಿ ಸರಾಸರಿ ದಿನಕ್ಕೆ ೩,೫೪೦ 'ಕೆಲರಿ' ಗಳಷ್ಟು ಆಹಾರವನ್ನು ಐರಿಷ್ ಪ್ರಜೆ ಖರ್ಚುಮಾಡುತ್ತಿದ್ದನು. ಮಿಕ್ಕುಳಿದ ಕೆಲವು ರಾಷ್ಟ್ರಗಳ ಸಂಖ್ಯೆ ಈ ರೀತಿಯದಾಗಿದೆ. ನ್ಯೂಜಿಲೆಂಡು ೩,೪೫೦; 'ಕೆಲರಿ' ಗಳು, ಆಸ್ಟ್ರೇಲಿಯಾ ೩,೨೮೦; ಸ್ವಿಜರ್ಲೆಂಡ್ ೩,೨೫೦; ಕೆನಡಾ ೩,೨೪೦; ಸ್ವೀಡನ್ ೩,೨೪೦; ಐಸ್‌ಲೆಂಡ್ ೩,೨೩೦; ಫಿನ್ಲೆಂಡ್ ೩,೨೧೦; ಸಂಯುಕ್ತ ಅಮೇರಿಕ ೩,೨೧೦; ಬ್ರಿಟನ್ ೩,೧೦೦. ಅತ್ಯಂತ ಕಡಿಮೆ ಆಹಾರ ವ್ಯಯಿಸುವ ರಾಷ್ಟ್ರಗಳು ಭಾರತ ಮತ್ತು ಬರ್ಮಾ ಅವುಗಳಿಗೆ ಸಂಬಂಧಪಟ್ಟ 'ಕೆಲರಿ' ಗಳ ಸಂಖ್ಯೆ ೧೫೭೦ ಮತ್ತು ೧೯೯೦.

ವಯಸ್ಕರ ಶಿಕ್ಷಣದ ಕುರಿತು ಚರ್ಚಾ ಗೋಷ್ಠಿ.

ಭಾರತ ಸರಕಾರದ ಸಮ್ಮತಿ ಹಾಗು ಸಹಾಯ ಪಡೆದು ದಕ್ಷಿಣ ಹಿಂದೂಸ್ಥಾನದ ವಯಸ್ಕ ಶಿಕ್ಷಣ ಸಂಘದವರು ಇದೇ ತಿಂಗಳ ತಾ. ೨೦ ರಿಂದ ೨೭ ರ ವರೆಗೆ ಎರ್ನಾಕಳಂದಲ್ಲಿಯ ಸೈಂಟ್ ಆಲ್ಬರ್ಟ್ ಕಾಲೇಜಿನಲ್ಲಿ ದಕ್ಷಿಣ ಹಿಂದೂಸ್ಥಾನದ ದ್ವಿತೀಯ ವಯಸ್ಕ ಶಿಕ್ಷಣ ಸಂಬಂಧ ಚರ್ಚಾ ಸಮ್ಮೇಳನವನ್ನು ಜರಗಿಸುವರೆ ನಿಶ್ಚೈಸಿರುವರು. ತಮಿಳು, ತೆಲುಗು ಮಲಯಾಳಿ ಮತ್ತು ಕನ್ನಡ ಈ ನಾಲ್ಕು ಭಾಷೆಗಳಲ್ಲಿ ವಯಸ್ಕರ ಬಗ್ಗೆ ಹೊಸ ಸಾಹಿತ್ಯವನ್ನು ತಯಾರಿಸುವ ವಿಷಯವೇ ಈ ಚರ್ಚಾಗೋಷ್ಠಿಯಲ್ಲಿ ಮುಖ್ಯವಾಗಿ ಚರ್ಚಿಸಲ್ಪಡುವುದು. ಈ ಸಮ್ಮೇಳನದ ಪ್ರೋಹಕ ಸ್ಥಾನದಲ್ಲಿರಲು ಮದ್ರಾಸಿನ ಮಾನ್ಯ ಗವರ್ನರರು ಸಮ್ಮತಿಸಿರುವರು; ತಿರುವಾಂಕೂರು-ಕೊಚ್ಚಿ ಸಂಸ್ಥಾನದ ರಾಜಪ್ರಮುಖರು ಸಮ್ಮೇಳನದ ಉದ್ಘಾಟನೆ ನಡೆಸಲಿರುವರು. ಈ ಸಮ್ಮೇಳನದ ಒಂದು ಅಂಗವಾಗಿ ವಯಸ್ಕ ಶಿಕ್ಷಣ ಸಂಬಂಧವಾದ ಸಾಹಿತ್ಯ ಸಲಕರಣೆಗಳ ಒಂದು ವಸ್ತು ಪ್ರದರ್ಶನವೂ ನಡೆಯಲಿದೆ.

ಮುಖಕ್ಕೆ ಮಸಿ ಬಳಿದರು

ಪ್ರಜಾ ಪರಿಷತ್ತಿನ ಸದಸ್ಯರೆಂದು ಹೇಳಲಾದ ಹುಡುಗಿಯರ ಗುಂಪೊಂದು ತಾ. ೧೭ರಲ್ಲಿ ಕಾಶ್ಮೀರ ರಾಜ್ಯಾಂಗ ಸಭೆ ಸದಸ್ಯಣಿಯೊಬ್ಬರಾದ ಶ್ರೀಮತಿ ವ್ಯೆನಿಯವರ ಮೇಲೆ ಬಿದ್ದು, ಅವರ ಮುಖಕ್ಕೆ ಮಸಿ ಬಳಿದರು.

ಸಭೆಯ ಅಧಿವೇಶನವೊಂದನ್ನು ಮುಗಿಸಿಕೊಂಡು ಶ್ರೀಮತಿ ವ್ಯೆನಿ ಮನೆಗೆ ಹಿಂದಿರುಗುತ್ತಿದ್ದಾಗಲೇ ಈ ಪ್ರಕರಣ ನಡೆದದ್ದು. ಇದ್ದಕ್ಕಿದ್ದಂತೆಯೇ ಆಕೆಯ ಮುಂದೆ ಬಂದು ನಿಂತ ಹುಡುಗಿಯರು, "ನೃತ್ತ ಸಭೆಯೊಂದರ ನೃತ ಪ್ರತಿನಿಧಿ" ಎಂದು ಬರೆದಿದ್ದ ಬೋರ್ಡೊಂದನ್ನು ಆಕೆಯ ಕೊರಳಿಗೆ ತೂಗಹಾಕಿದರು.

೨೬ ವರ್ಷಗಳಿಂದ ನಿದ್ದೆ ಇಲ್ಲದ ಮನುಷ್ಯ

ಇಟಲಿಯ ಎಮರೆಜಿಯೋ ಎಂಬಲ್ಲಿ ಸಿನೋರ್ ಉಗೊ ಡೆಲ್ಲರಿಂಗಾ ಎಂಬ ೫೬ ವರ್ಷ ಪ್ರಾಯದ ಕಾರಕೂನನೊಬ್ಬ ಇಂದಿಗೆ ೨೬ ವರ್ಷಗಳಿಂದ ನಿದ್ದೆ ಮಾಡದೇನೇ ಬದುಕಿಕೊಂಡಿದ್ದಾನೆ. ಆರು ವರ್ಷಗಳ ಹಿಂದೆ ನ್ಯುಮೋನಿಯಾ ಪೀಡೆಯಿಂದ ಆಸ್ಪತ್ರೆ ಸೇರಿದಾಗ ಒಮ್ಮೆ ಒಂದು ತಾಸು ನಿದ್ದೆ ಹೋಗಿದ್ದನಂತೆ. ಅವನನ್ನುತ್ತಾನೆ:

'ನಾನು ಚೆನ್ನಾಗಿ ತಿನ್ನುತ್ತೇನೆ—ಆದರೆ ಮಧ್ಯರಾತ್ರಿ ಒಂದು ಗಂಟೆಯ ವರೆಗೆ ನಿದ್ದೆ ಹೋಗುವದೆಂದಿಲ್ಲ. ಮತ್ತೆ ಕೆಲವು ತಾಸು ವಿಶ್ರಮಿಸುತ್ತೇನೆ. ಆ ವಿಶ್ರಾಮ ಕಾಲದಲ್ಲಿಯೂ ನನ್ನ ಮನಸ್ಸಿಗೆ ವಿಶ್ರಾಂತಿಯಿರುವುದಿಲ್ಲ. ಅದು ಕೆಲಸ ಮಾಡಿಕೊಂಡೇ ಇರುತ್ತದೆ. ಅದು ಹಿಂದಿನ ವರ್ಷಗಳಲ್ಲಿ ನಡೆದು ಹೋದ ಘಟನೆಗಳನ್ನು ಲೆಕ್ಕ ಹಾಕುತ್ತದೆ. ಬೇಂಕಿನ ಧೈನಂದಿನ ಲೆಕ್ಕಪತ್ರಗಳ ವಿಚಾರ ನನಗೆ ನೆನಪು ಮಾಡುತ್ತದೆ. ಮುಂಜಾನೆ ಹೊತ್ತಿನಲ್ಲಿ ನನಗೆ ಹೆಚ್ಚು ಆಯಾಸವಾಗುತ್ತದೆ. ಆದರೆ ಕ್ರಮೇಣ ಚೇತನಗೊಳ್ಳುತ್ತೇನೆ.'

ಧರ್ಮ ರಹಸ್ಯ

—ಸ್ವಾಮಿ ನಾರಾಯಣಾನಂದ—

(೧) ಕ್ಷುಲ್ಲಕವೆಂದು ಯಾವುದನ್ನೂ ತಿರಸ್ಕರಿಸದಿರು. ಮನುಷ್ಯನು ಚಿಕ್ಕ ಕೆಲಸಗಳಲ್ಲಿ ತಾನು ತೋರುವ ಶ್ರದ್ಧೆಯಿಂದಲೇ ಮೇಲೇರುತ್ತಾನೆ.

(೨) ಚೆಲ್ಲಿದ ಹಾಲಿಗಾಗಿ ಚಿಂತಿಸುವದು ವ್ಯರ್ಥ. ಗತ ವಿಚಾರಗಳನ್ನು ತಲೆಗೆ ಹಚ್ಚಿಕೊಂಡು ದುಃಖಿಸುವದು ಯೋಗ್ಯವಲ್ಲ.

(೩) ಮಗುವಿನ ಭವ್ಯ ಭವಿಷ್ಯವು ತಾಯಿಯ ಜಾಣ್ಮೆಯಲ್ಲಿದೆ. ಧಾರ್ಮಿಕ ಪ್ರಗತಿಯು ಬ್ರಹ್ಮಚರ್ಯದಲ್ಲಿದೆ.

(೪) ಎಲ್ಲಾ ಜೀವಜಂತುಗಳಲ್ಲಿ ದೇವರಿದ್ದಾನೆ. ಆದರೆ ಎಲ್ಲಾ ಜೀವ ಜಂತುಗಳು ದೇವರಲ್ಲ. ಅದ ಕಾರಣವೇ ಜಗತ್ತು ಕಾಳಗದ ಕಣವಾಗಿದೆ.

(೫) ನಿನ್ನನ್ನು ಇತರರಿಗಿಂಥಾ ಹೆಚ್ಚೆಂದು ತಿಳಿಯದಿರು. ನೀನು ಪಡೆದ ಸಫಲತೆಗಾಗಿ ಹಿಗ್ಗದಿರು. ಮಾನವರ ಆಳತೆ ಕೋಲೂ, ದೇವರ ಆಳತೆ ಕೋಲೂ ಒಂದೇ ಅಲ್ಲ.

(೬) ಉತ್ತಮ ಗುಣ, ಸದ್ವರ್ತನೆಗಳು ವ್ಯಕ್ತಿಗೆ ಮಾಡುವ ಸಹಾಯ ಕೊಡುವ ಬೆಂಬಲಗಳನ್ನು ಯಾವ ಹಣವಾಗಲೀ, ತಂದೆ ತಾಯಿಯರಾಗಲೀ ಕೊಡಲಾರರು. ಆದರಿಂದ ಗುಣ ನಡತೆಗಳನ್ನು ತಿದ್ದಿಕೊಳ್ಳುವದು ಜೀವದ ಜೀವಾಳವಾಗಿರಬೇಕು.

(೭) ಎಲ್ಲಾ ಕಷ್ಟ, ಅಪಮಾನಗಳನ್ನು ಧೈರ್ಯದಿಂದ ಎದುರಿಸು. ಮಾನವನಾಗಿ ಹುಟ್ಟಿ ಕುರಿಯಂತೆ ತಲೆ ತಗ್ಗಿಸುವದು ತರವಲ್ಲ. ಮನುಷ್ಯನ ಗೌರವಕ್ಕೆ ತಕ್ಕಂತೆ ವರ್ತಿಸು.

(೮) ಮಲಿನ ಮನಸಿಗಿಂಥಾ ಭೀಕರ ಶತ್ರುವಿಲ್ಲ. ಮಲಿನ ಮನಸಿನವನು ಹೊರಗೆ ಎಷ್ಟು ಶುಚಿಯಾಗಿದ್ದರೂ ನಿಂದಾರ್ಹನು.

(೯) ಜ್ಞಾನವು ಒಂದರಲ್ಲಿ ಎಲ್ಲವನ್ನೂ ಕಾಣುತ್ತದೆ. ಅಜ್ಞಾನವು ಎಲ್ಲವನ್ನೂ ವಿಂಗಡಿಸಿ ಘರ್ಷಣೆಗೆಡೆ ಮಾಡುತ್ತದೆ. ಅಜ್ಞಾನವೇ ದ್ವಂದ್ವಕ್ಕೆ ಕಾರಣ. ದ್ವಂದ್ವದಿಂದ ದುಃಖ ಬಂಧನಗಳು ಪ್ರಾಪ್ತವಾಗುವವು.

(೧೦) ಆಜ್ಞೆ ಮಾಡುವದಕ್ಕಿಂಥಾ ಆಜ್ಞೆ ಪಾಲಿಸುವದು ಹಿತ. ಹೇಳಿ ತಿಳಿಸುವದಕ್ಕಿಂಥಾ ಕೇಳಿ ತಿಳಿದು ಕೊಳ್ಳುವದು ಯುಕ್ತ.

ವಯಸ್ಕರ (ಸಮಾಜ) ಶಿಕ್ಷಣ.

೧೫-೪-೫೩ ಮತ್ತು ೧೬-೪-೫೩ ರ ದಕ್ಷಿಣ ಭಾರತ ವಯಸ್ಕರ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀಮಾನ್ ಜಿ. ಹಂಸಪುರುಷೋತ್ತಮರಾವ್ ಎಂ. ಎ. ಇವರು ಕೊಡಗಿನಲ್ಲಿ ನಡೆಯುತ್ತಿರುವ ವಯಸ್ಕರ ಶಿಕ್ಷಣ ಕಾರ್ಯ ಚಟುವಟಿಕೆಗಳನ್ನು ನೋಡಲು ಬಂದಿದ್ದರು. ಅವರು ಮಾನ್ಯ ವಿದ್ಯಾಮಂತ್ರಿಗಳೊಡನೆ ೧ ಗಂಟೆಯ ಕಾಲ ಈ ಯೋಜನೆಯ ಕುರಿತು ಮಾತುಕತೆ ನಡೆಸಿದರು. ತಾರೀಖು ೧೭ ರಲ್ಲಿ ಎರ್ನಾಕುಲಂನಲ್ಲಿ ನಡೆಯುವ ಸೆಮಿನಾರಿಗೆ ತಮ್ಮ ಪ್ರಯಾಣವನ್ನು ಮುಂದರಿಸಿದರು.

೧೫-೪-೫೩ ರ ಕಾರ್ಯಕ್ರಮ—ಸಾಯಂಕಾಲ ೭-೩೦ ಗಂಟೆಗೆ ನಂಜರಾಯಪಟ್ಟಣದ ವಯಸ್ಕರ ಶಾಲೆಗೆ ವಿದ್ಯಾಧಿಕಾರಿಗಳೊಡನೆ ಭೇಟಿಯಿತ್ತರು. ವಯಸ್ಕರ ವಿದ್ಯಾರ್ಥಿಗಳಿಂದ ಓದಿಸಿದರು. ೬-೭ ಮಂದಿ ಕುರುಬರು ೩ ಮೈಲಿಯಿಂದ ಓದು ಕಲಿಯಲು ಬರುವುದನ್ನು ನೋಡಿ ಸಂತೋಷ ಪಟ್ಟರು. ಅತಿಥಿಗಳು ಅವರನ್ನು ಕುರಿತು, ಏಕೆ ಶಾಲೆಗೆ ಬರುತ್ತೀರಿ " ಎಂಬುದಾಗಿ ಪ್ರಶ್ನೆ ಮಾಡಿದಾಗ 'ಓದು ಬರಹ ಕಲಿಯಬೇಕೆಂಬ ಆಸೆ ನಮಗೂ ಉಂಟಾಗಿದೆ' ಎಂಬ ಅವರ ನೇರವಾದ ಉತ್ತರ ಅತಿಥಿಗಳನ್ನು ಬೆರಗುಗೊಳಿಸಿತು. ಅವರೂ ಮತ್ತು ವಿದ್ಯಾಧಿಕಾರಿಗಳೂ ಕೆಲವು ಹಿತನುಡಿಗಳನ್ನಾಡಿದ ನಂತರ ವಿದ್ಯಾರ್ಥಿಗಳಿಂದ ಹಾಡುಗಳೂ ಕೋಲಾಟವೂ ನಡೆದವು.

೧೬-೪-೫೩ರ ಕಾರ್ಯಕ್ರಮ—ಸಾಯಂಕಾಲ ೬ ಗಂಟೆಗೆ ಹೆಬ್ಬಾಲೆ ಹೆಂಗಸರ ತರಗತಿಗೆ ಭೇಟಿಕೊಟ್ಟರು. ವಿದ್ಯಾರ್ಥಿನಿಯರಿಂದ ಓದುಗಾರಿಕೆ ಹಾಡುಗಾರಿಕೆಯೂ ಆಯಿತು. ಅಕ್ಷರ ಕಲಿಯುವುದರ ಜೊತೆಗೆ ವಿದ್ಯಾರ್ಥಿನಿಯರು ಈಚಲು ಗರಿಯಿಂದ ಚಾಪೆ ಮಾಡುವುದನ್ನು ನೋಡಿ ತುಂಬಾ ಸಂತೋಷಪಟ್ಟರು. ಶಾಲಾ ಅಭಿವೃದ್ಧಿ ಕುರಿತು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಅತಿಥಿಗಳೂ, ವಿದ್ಯಾಧಿಕಾರಿಗಳೂ ವಿದ್ಯಾರ್ಥಿವೃಂದಕ್ಕೆ ಕೆಲವು ಸಲಹೆಗಳನ್ನು ಕೊಟ್ಟ ನಂತರ ಶಿರಂಗಾಲಕ್ಕೆ ದಯ್ಯಮಾಡಿಸಿದರು.

ಶಿರಂಗಾಲದಲ್ಲಿ ಯೋಗ್ಯತಾ ಪತ್ರ ವಿನಿಯೋಗ.

ಈ ಸಮಾರಂಭವು ಶ್ರೀಮಾನ್ ಹಂಸಪುರುಷೋತ್ತಮರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರುಗಿತು. ಊರ ಪ್ರಮುಖರೆಲ್ಲರೂ ನೆರೆದಿದ್ದರು. ಕೃಷಿ ಪಂಡಿತ ಸಂಗಯ್ಯನವರು ಬೇಸಾಯದ ಕುರಿತು ತಮ್ಮ ಅನುಭವವನ್ನು ಸಭೆಗೆ ತಿಳಿಸಿದರು. ಈ ಕೇಂದ್ರದಲ್ಲಿ ಎರಡನೇ ಪಂಗಡವು ಯೋಗ್ಯತಾ ಪತ್ರ ಪೊಂದಿಕೊಳ್ಳಲು ತರಬೇತಾದನ್ನು ತಿಳಿದು ಅಧ್ಯಕ್ಷರು ತುಂಬಾ ಸಂತೋಷಪಟ್ಟರು. ವಿದ್ಯಾಧಿಕಾರಿಗಳು 'ವಿದ್ಯೆಯ ಮಹತ್ವ' ಕುರಿತು ಮಾತನಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಾಜ ಶಿಕ್ಷಣದ ಮಹತ್ವ—ಗ್ರಾಮ ನೈರ್ಮಲ್ಯ—ಸೌಹಾರ್ದ—ಗುಡಿಕೈಗಾರಿಕೆ—ಇವುಗಳ ವಿಚಾರ ಸ್ಫೂರ್ತಿದಾಯಕ ಭಾಷಣ ಮಾಡಿದರು. ಗ್ರಾಮದ ಪಟೇಲರೂ—ಕೆಲವು ಅಧ್ಯಾಪಕರೂ ಮಾತನಾಡಿದರು. ಕೋಲಾಟ ಮತ್ತು ಚಲನ ಚಿತ್ರ ಪ್ರದರ್ಶನವಿತ್ತು.

ಅವರು ನೀಡಿದ ಕೆಲವು ಮುಖ್ಯ ಅಭಿಪ್ರಾಯಗಳು.

(೧) ಅಜ್ಞಾನವು ದೇಶದ ಪ್ರಗತಿಗೆ ಅಡ್ಡಿಯಾಗಿದೆ.

(೨) ಸರಕಾರವು ನಡೆಸುವ ಈ ಕಾರ್ಯಕ್ಕೆ ಸಮಾಜದ ಮುಂದಾಳುಗಳು ಸ್ಥಾನದ ಮೇಲು ಕೀಳುಗಳನ್ನು ಗಣನೆಗೆ ತಾರದೆ ಜ್ಞಾನಪ್ರಸಾರ ಕಾರ್ಯದಲ್ಲಿ ಸಹಕರಿಸಬೇಕು. ಈ ಯೋಜನೆಯ ಯಶಸ್ಸಿಗೆ ಅವರ ಸಹಾಯ ಸಹಾನುಭೂತಿಯೇ ಕಾರಣವಾಗಿದೆ.

(೩) ಅಕ್ಷರ ಪ್ರಚಾರದ ಜೊತೆಗೆ ಗುಡಿಕೆಗಾರಿಕೆಗಳನ್ನು ನಾಜೋಕಾದ ರೀತಿಯಲ್ಲಿ ಜನರಿಗೆ ಕಲಿಸುವ ಏರ್ಪಾಡು ಮಾಡುವುದು.

(೪) ಒಂದು ವರ್ಷದ ಅವಧಿಯಲ್ಲಿ ನಡೆಸಿದ ಕೆಲಸವು ಶ್ಲಾಘನೀಯವಾಗಿದೆ.

ಭಾರತ ಸೇವಕ ಸಮಾಜ

ಇದರ ಸಹಾಯಾರ್ಥವಾಗಿ

ತಾ. 25-4-53 ರಿಂದ ಮಡಿಕೇರಿ ಕೋಹಿನೂರ್ ಟಾಕೀಸ್ ಎದುರುಗಡೆ ಮೈದಾನದಲ್ಲಿ

॥ ಗ್ರೇಂಡ್ ಫನ್ ಫೇರ್ ॥

ವಿವಿಧ ವಿನೋದಾವಳಿಗಳು ನಡೆಯುವವು.

ಕೊಡಗಿನ ಚೀಫ್ ಕಮಿಷನರಾದ ಶ್ರೀ|| ಕೆ|| ದೀಕ್ಷಿತರವರು

— ಅಧ್ಯಕ್ಷತೆ ವಹಿಸುವರಲ್ಲದೆ —

ಕೊಡಗಿನ ಗೃಹ ಮಂತ್ರಿ ಶ್ರೀ ಕೆ. ಮಲ್ಲಪ್ಪನವರು

— ಉದ್ಘಾಟನೆ ಮಾಡುವರು —

— ಪ್ರತಿ ದಿನ ಸಾಯಂಕಾಲ 6 ಗಂಟೆಯಿಂದ —

ನರ್ತನ ಮತ್ತು ಸಂಗೀತ :—ಬೊಂಬಾಯಿಯ ಶ್ರೀಮತಿ ಶಾಂತಿ. ಗುಜರಾತಿನ ಕುಮಾರಿ ತುಳಸಿ ಇವರುಗಳಿಂದ

ಸರ್ಕಸ್ : ಚೈನಾದ ಪ್ರೊಫೆಸರ್ ಛೀನ್—ಫೂ ಇವರಿಂದ

ಯಕ್ಷಿಣಿ : ಬಂಗಾಳದ-ಪ್ರೊಫೆಸರ್ ಎಂ. ವಿ. ರಾಯ್ ಇವರಿಂದ

ವೆಂಟ್ರಿಲೊಕ್ವಿಸಮ್ (ಸ್ವರಸಂಜ್ಞಾದಿಗ್ಭಂಧನ ವಿದ್ಯೆ) : ಪ್ರೊ. ಎಂ. ಎಂ. ರಾಯ್

ಅಪೂರ್ವ ಸಂದರ್ಭ! ನೋಡಲು ಮರೆಯದಿರಿ!!

ಹುಚ್ಚರ ಪಟ್ಟಿ

* ದೇಶಕಾಗಿ! *

ಅಧಿಕಾರ ದೊರೆತಿರಲು
ಟೋಪಿಗಳು ಬೆಳಗಿಹವು
ವಿಧವಿಧದ ಆಕಾರ ರೂಪಿನಿಂದ॥
ಖಾದಿಯೇ ಬೇಕಿಲ್ಲ
ಸಾಕು ಮಲ್ ಸೈಸುಗಳು
ಬೇಕೊಂದೆ ನಮಗೀಗ ಬಣ್ಣ ಬಿಳುಪು!

ಬಟ್ಟೆ ಹಲವಾದರೇಂ
ಇಟ್ಟಿರುವ ಹೆಸರೊಂದೆ
ಮಂಕು ಮಡ್ಡರ ಬಯಕೆ 'ಖಾದಿ ಟೋಪಿ'
ಅನುನಯದಿ ಸೇರಿಹರು
ವಿಧವಿಧದ ಮೊಸಳೆಗಳು
ಕರೆಯಲಿಕೆ ಹೆಸರೊಂದೆ 'ನಮ್ಮ ಕಾಂಗ್ರೆಸ್ಸು'

ಕಾಡು ಮರ ಹೆಚ್ಚಿದರೆ
ತೋಟ ಕಾಡೆನಿಸುವದು
ಸುಡಬೇಕು ಕಾಡೆಲ್ಲ ತೋಟಕಾಗಿ
'ಕಾಂಗ್ರೆಸು' ನಮ್ಮದದು
ಉಳಿದು ಬೆಳಕೀಯುವೆಡೆ
ವೇಶಗಳ ಬಿಡಬೇಕು ದೇಶಕಾಗಿ.

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-10 **PATTU BROTHERS,**

Opp.— Town Hall, MYSORE.

ಕೊಡ್ಲಿಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಸಿ. ಪೀತಾಂಬರನವರು

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ನೊಗಪ್ಪನವರು

॥ ಬಹುಮುಖ ಅಭಿರುಚಿ ॥

"ನವಯುಗ."

"ಆಡು ಮುಟ್ಟದ ಸೋಗೆಯಿಲ್ಲ" ಎಂದು ಗಾದೆ ಮಾತೊಂದಿದೆ. ಆಡು ಎಲ್ಲವನ್ನೂ ಮೆದ್ದು ತಿನ್ನುತ್ತದೆ. ಅದಕ್ಕೆ ಸೇರದುದೆಂಬುದಿಲ್ಲ. ಅದರಂತೆಯೇ ನಮ್ಮ ಅಭಿರುಚಿಗಳನ್ನೂ ಇಟ್ಟುಕೊಳ್ಳಬೇಕೆಂದು ಬಲ್ಲವರ ಅಭಿಮತ. ನಮ್ಮ ಮನಸ್ಸಿಗೆ ಒಗ್ಗದುದು ಯಾವುದೂ ಇರಬಾರದು. ಪ್ರತಿಯೊಂದು ಸಂಗತಿ ನಮಗೆ ಸೇರಬೇಕು ಎಂದರೆ ಸುಖ ಜೀವನಕ್ಕೆ ಆತಂಕ ಒದಗಲಾರದು. "ಜೀವನವನ್ನು ಅನೇಕ ಮುಖಗಳಿಂದ ಸ್ಪರ್ಶಿಸುವವರೇ ಸುಖಿಗಳು. ಯಾವುದಾದರೊಂದು ಅಭಿರುಚಿ ಮಾತ್ರವುಳ್ಳ ಜನರು ಅದರಿಂದ ವಂಚಿತರಾದೊಡನೆಯೇ ಬದುಕಿನಲ್ಲಿ ಜಿಗುಪ್ಸೆ ಹೊಂದುವರು" ಎಂದೊಬ್ಬ ಮಹನೀಯರು ಎಚ್ಚರಿಕೆ ನೀಡಿದ್ದಾರೆ. ಇದು ಅಮೂಲ್ಯವಾದ ಸಂದೇಶವೇ ನಿಜ. ನಾವು ಜೀವನದಲ್ಲಿ ಅನುಭವ ಸಂಪನ್ನರಾಗಲು ನೋಡಿದರೆ ಮಾತ್ರ ಏರುತಗ್ಗುಗಳನ್ನು ಯಶಸ್ವಿಯಾಗಿ ಕ್ರಮಿಸಿ ಮುನ್ನಡೆಯಬಲ್ಲೆವು. ಇದಕ್ಕಾಗಿ ಅಭಿರುಚಿಗಳು ಬಹುಮುಖವಾಗಿರುವದು ಅಪೇಕ್ಷಣೀಯ.

ಹದಿನೈದು ವರ್ಷಗಳಿಂದ ಕುರುಡನಾದವನಿಗೆ ಮೋದಿ ಡಾಕ್ಟರರು ಮರಳಿ ದೃಷ್ಟಿದಾನ ಮಾಡಿದಾಗ ಅವನ ಉಲ್ಲಾಸಕ್ಕೆ ಎಣೆ ಇರಲಿಲ್ಲ. ಇಷ್ಟು ದೀರ್ಘಾವಧಿಯ ಅಂಧಕಾರ ಕಳೆದ ಮೇಲೆ ಅವನೀಗ ಬದುಕಿನ ಚಿತ್ರ ವಿಚಿತ್ರ ಸಂಗತಿಗಳನ್ನು ಮರಳಿ ಗುರುತಿಸಿ ಅವುಗಳಲ್ಲಿ ತನ್ಮಯನಾಗುವ ಸೌಭಾಗ್ಯವನ್ನು ಪಡೆದನು. ನಿತ್ಯವೂ ನೂರಾರು ಹೊಸ ಅನುಭವವನ್ನು ಸಂಪಾದಿಸಲು ಕಣ್ಣುಗಳು ಅವುಗಳಿಗೆ ನೆರವು ನೀಡುತ್ತವಲ್ಲವೇ? ನಮ್ಮ ಅಭಿರುಚಿಗಳು ಹುಡುಕುವ ಕಣ್ಣಿನಂತೆ ನೂರಾರು ವಸ್ತುಗಳ ಮೇಲೆ, ಸಂಗತಿ ಹಾಗೂ ಘಟನೆಗಳ ಮೇಲೆ ನೆಲೆಗೊಳ್ಳಬೇಕು. ಸುಖಜೀವನದ ಹಂಬಲ ನಮ್ಮಲ್ಲಿ ಯಾರಿಗಿಲ್ಲ. ಆದರೆ ಪ್ರಸಿದ್ಧ ಮನೋವಿಜ್ಞಾನಿಯೋರ್ವನು ಹೇಳುವಂತೆ, ನಮ್ಮಲ್ಲಿ ಅಧಿಕಾಂಶ ಜನರು ತಮ್ಮೆಲ್ಲ ಮನಸ್ಸನ್ನು ಒಂದೇ ಸಂಗತಿಯ ಕುರಿತು ಕೇಂದ್ರೀಕರಿಸಿ, ಬದುಕಿನ ಸಾವಿರಾರು ಆನಂದದಾಯಿ ಅನುಭವದಿಂದ ವಂಚಿತರಾಗಿದ್ದಾರೆ. ಅಂಥವರು ಕುರುಡನು ದೃಷ್ಟಿಲಾಭ ಪಡೆದಂತೆ, ಮನಸ್ಸನ್ನು ಚಟುವಟಿಕೆ ತುಂಬಿದ ಸುತ್ತಣ ಬಾಳ್ವೆಯ ಕಡೆಗೆ ತಿರುಗಿಸುವದುತ್ತಮ.

ನಾವು ಬಾಲ್ಯವನ್ನು ಕಳೆದು ದೊಡ್ಡವರಾಗುತ್ತಾ ಬಂದಂತೆ ಒಂದೊಂದೇ ವಿಶಿಷ್ಟ ಅಭಿರುಚಿಯ ದಾಸ್ಯ ಸ್ವೀಕರಿಸುವ ಪ್ರವೃತ್ತಿ ಕಂಡುಬರುತ್ತದೆ. ಸಣ್ಣ ಮಕ್ಕಳನ್ನು ನೋಡಿ ಅವುಗಳಿಗೆ ಪ್ರತಿಯೊಂದರಲ್ಲಿಯೂ ಇನ್ನಿಲ್ಲದ ಆಸ್ಥೆ ಮತ್ತು ಉತ್ಸಾಹ. ಆದರೆ ಅವರ ಏಕಾಗ್ರ ಚಿತ್ತವು ಬಲಗೊಂಡಂತೆ, ಲೋಕದಲ್ಲಿ ತಮಗೆ ಲಾಭ ನೀಡಬಲ್ಲ ಸಂಗತಿಯತ್ತ ಮಾತ್ರ ಬೆಳೆದ ಮಕ್ಕಳ ಮನಸ್ಸು ಕೊಡ ಹತ್ತುವರು. ಸರಿಯಾದ ಮಾರ್ಗದರ್ಶನ ಈ ಕಾಲದಲ್ಲಿ ದೊರೆಯದಿದ್ದ ಪಕ್ಷದಲ್ಲಿ ಮಕ್ಕಳು ತನಗೆ ಬೇಕಾದವುಗಳು ಬೇಡದವುಗಳೆಂದು ಲೋಕದ ಅತ್ಯಮೂಲ್ಯ ಸಂಗತಿಗಳ ವರ್ಗೀಕರಣಕ್ಕೆ ಕೈ ಹಾಕುವದು ನಿಶ್ಚಯ. ಹೀಗೆ ಬಹುಮುಖವಾದ ಅಭಿರುಚಿಯ ಒಂದಂಶವನ್ನು ಮಾತ್ರ ಸ್ವೀಕರಿಸುವದರ ಪರಿಣಾಮವಾಗಿ ಜೀವನ ಸುಖದಲ್ಲಿ ಕೂಡ ಅವರು ಅಧಿಕಾಂಶವನ್ನು ಕಳೆದುಕೊಳ್ಳುವರು. ಮಕ್ಕಳ ಹೊಗಳಿಕೆ ಹಾಗೂ ತಿರಸ್ಕಾರಗಳ ಸ್ವರೂಪ ಕೆಲವೊಮ್ಮೆ ಬಾಳ್ವೆಯ ಸೂತ್ರಕ್ಕೆ ಪ್ರತಿಕೂಲವಾಗಿದ್ದರೂ ಇದ್ದೀತು. ಉದಾಹರಣೆಗೆ ಆಟದ ಕುರಿತು ಮಾತ್ರ ಅವರಲ್ಲಿ ಅಭಿರುಚಿ ಮೂಡಿಕೊಂಡು, ಕೆಲಸವೆಂದರೆ ಜಿಗುಪ್ಸೆ ಹುಟ್ಟಬಹುದು. ಇದರಷ್ಟು ಘಾತಕವಾದುದು ಬೇರೇನಿದೆ?

ದೊಡ್ಡವರು ಕೂಡ ತಮ್ಮ ಅಭಿರುಚಿಯನ್ನು ಬಹುಮುಖವಾಗಿಟ್ಟುಕೊಳ್ಳದೆ ದೊಡ್ಡ ತಪ್ಪು ಮಾಡುತ್ತಾರೆ. ತನ್ನ ವ್ಯಾಪಾರ ವ್ಯವಹಾರಕ್ಕಾಗಿಯೇ ಗೃಹಸ್ಥನು ಮಗ್ನನಾಗಿ ಬಿಟ್ಟು, ಮನೆ ಮಕ್ಕಳ ಮೇಲೆ ಪ್ರೀತಿ ವಾತ್ಸಲ್ಯ ತೋರದಿದ್ದರೆ, ಸಮಾಜದ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸದಿದ್ದರೆ ಸಂತೋಷ ಕೂಟಗಳಲ್ಲಿ ಸೇರಿ ನಕ್ಕುನಲಿಯದಿದ್ದರೆ ಅವನು ಲಕ್ಷಾಂತರ ರೂಪಾಯಿಗಳಿಸಿದರೂ ಸುಖಜೀವನದ ಪೂರ್ಣ ಸವಿಯನ್ನು ಆಸ್ವಾದಿಸಿದಂತಾಗಲಿಲ್ಲ. ಇದರಂತೆ ಮಹಿಳೆಯೋರ್ವಳು ನಿತ್ಯದ ಗೃಹಕೃತ್ಯದಲ್ಲಿಯೇ ತನ್ಮಯಳಾಗಿ, ಬದುಕಿನ ಇತರ ವಿಷಯಗಳನ್ನು ಕಡೆಗಣಿಸಿದರೆ ಅವಳದು ಸುಖ ಜೀವನವೆಂದು ಹೇಳಲು ಸಾಧ್ಯವಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರಿಗೂ ಚಿತ್ತೈಕಾಗ್ರತೆ ಇರುವದು ಒಳ್ಳಿತಾದರೂ ಅದು ಸುಖ ಜೀವನಕ್ಕೆ ಒಂದು ಆತಂಕವಾಗಿ ಪರಿಣಮಿಸಕೂಡದು. ಕ್ಷಣ ಕ್ಷಣವೂ ಬದಲಾಗುತ್ತಿರುವ ಘಟನೆಗಳ ಕೂಡೆ ಶೀಘ್ರದಲ್ಲಿಯೇ ಹೊಂದಾಣಿಕೆ ಸ್ಥಾಪಿಸಿಕೊಳ್ಳಲು ಅನುಕೂಲವಾಗುವ ರೀತಿಯಲ್ಲಿ ನಾವು ಬಹುಮುಖವಾದ ಅಭಿರುಚಿಯನ್ನು ಬೆಳೆಸಿಕೊಳ್ಳುವದಗತ್ಯ.

ಅನೇಕ ಆಸೆಗಳನ್ನು ಕಟ್ಟಿಕೊಂಡು ನಿರಾಶೆ ಪಡುವುದಕ್ಕಿಂತ ಯಾವುದಾದರೊಂದು ಸಂಗತಿಯ ಕುರಿತು ಮಾತ್ರ ಚಿಂತಿಸಬಹುದಲ್ಲ ಎಂದು ನೀವೆನ್ನಬಹುದು. ಆದರೆ ನಾವು ಕೈಗೂಡದ ಆಶೆಯ ಬೆನ್ನು ಮಾತ್ರ ಹತ್ತಬೇಕೆ? ನಮ್ಮ ಕೈಯಿಂದಾಗಬಲ್ಲ ಬೇರೆ ಅನೇಕ ಸಂಗತಿಗಳಿಲ್ಲವೆ? ಉದಾಹರಣೆಗೆ ದಿನಾಲೂ ನೀವು ನಡೆದುಕೊಂಡೇ ಆಫೀಸಿಗೆ ಹೋಗುತ್ತೀರಾದರೆ, ತಿಂಗಳಿಗೆ ಒಂದೆರಡು ದಿನ ಸಿಟಿ ಬಸ್ಸಿನಲ್ಲಿ ಪ್ರಯಾಣಿಸಿರಿ. ಇದೊಂದು ಹೊಸ ಅನುಭವ; ಅಥವಾ ಸೈಕಲು ಹತ್ತಿ ಹೋಗಿರಿ. ಸಿನೇಮಾ ಕಂಪೆನಿಯ ನೌಕರರು ನೀವಾಗಿದ್ದರೆ ಬಳಿಯ ಕಾರ್ಖಾನೆಯೊಂದನ್ನು ಸಂದರ್ಶಿಸಿ. ಹೊಸ ಅನುಭವ ಹಾಗೂ ಸಂತೋಷ ಪಡೆಯಬಲ್ಲಿರಿ. ಪೇಟೆ ಪಟ್ಟಣದಲ್ಲಿ ಕುಳಿತು ಕೊಳೆತಿದ್ದರೆ, ಎರಡು ದಿನ ಹಳ್ಳಿಯ ಪ್ರವಾಸ ಕೈಗೊಳ್ಳಿರಿ. ವ್ಯಾಪಾರದಲ್ಲಿಯೇ ಮುಳುಗಿಹೋದವರು ನೀವಾಗಿದ್ದರೆ, ಆದಿತ್ಯವಾರ ದಿನ ಮನೆಯಲ್ಲಿ ವಿರಾಮವಾಗಿ ಕುಳಿತು ಮಡದಿ ಮಕ್ಕಳೊಡನೆ ಚಕ್ಕಂದವಾಡಿರಿ. ಅಭ್ಯಾಸಕ್ಕಾಗಿ ದಪ್ಪ ದಪ್ಪ ಪುಸ್ತಕ ಓದಿ ಬೇಜಾರು ಬಂದ ವಿದ್ಯಾರ್ಥಿಯಾದ ಪಕ್ಷದಲ್ಲಿ—ನೀವು ಅ. ನ. ಕೃಷ್ಣರಾಯರ ಕಾದಂಬರಿಯನ್ನು ಶರಣೆನ್ನಬಹುದು. ಇವಕ್ಕೆಲ್ಲ ನೀವು ಪಡುವ ಕಷ್ಟ, ಅದು ಕೊಡುವ ಸುಖದ ದೃಷ್ಟಿಯಿಂದ ಕ್ಷಣಿಕವಾದವೆನ್ನುತ್ತೇನೆ.

ಆದರೆ ಇಂಥದೆಲ್ಲ ಹುಚ್ಚಾಟಗಳಿಗೆ ಗಮನಕೊಡಲು ನನಗೆ ಸಮಯವೆಲ್ಲಿದೆ? ನನಗೆ ನನ್ನ ಕೆಲಸವೇ ಹೆಚ್ಚಾಗಿದೆ ಎಂದು ನೀವು ದೂರಿಕೊಳ್ಳುವುದಾದಲ್ಲಿ—ನಿಮಗೊಂದು ಎಚ್ಚರಿಕೆಕೊಡುವುದವಶ್ಯ. ಇಂಗ್ಲೀಷಿನಲ್ಲಿ 'ನಿಮ್ಮೆಲ್ಲ ತತ್ತಿಗಳನ್ನು ಒಂದೇ ಬುಟ್ಟಿಯಲ್ಲಿಡಬೇಡಿ' ಎಂದು ಗಾದೆ ಮಾತಿದೆ. ಎಲ್ಲಿಯಾದರೂ ಆ ಬುಟ್ಟಿ ಕೈ ತಪ್ಪಿ ನೆಲಕ್ಕೆ ಬಿದ್ದರೆ ನಿಮ್ಮೆಲ್ಲ ತತ್ತಿಗಳೂ ನಾಶ ಹೊಂದುವುವು! ಬುಟ್ಟಿ ಕೆಳಗೆ ಬೀಳುವ ಪ್ರಸಂಗ ನೂರರಲ್ಲಿ ಒಂದಿರಬಹುದು. ಆದರೆ ಅದು ಬೀಳುವುದಿಲ್ಲೆಂದು ಗ್ಯಾರಂಟಿ ಯಾರು ಕೊಟ್ಟಿದ್ದಾರೆ? ಇದರಂತೆಯೇ ನೀವು ನಿಮ್ಮೆಲ್ಲ ಭಾವನೆಗಳನ್ನು ಒಂದೇ ವಸ್ತುವಿನಲ್ಲಿ ಕೇಂದ್ರೀಕರಿಸಿ ಇಡುವುದು ಸುಖಜೀವನಕ್ಕೆ ಘಾತಕವಾದ ಪ್ರವೃತ್ತಿ. ಉದಾಹರಣೆಗೆ ತನ್ನ ಮಗನ ಮೇಲೆ ಅತ್ಯಂತ ವಾತ್ಸಲ್ಯವುಳ್ಳ ತಾಯಿ, ಮಗನನ್ನು ಕಾಲೇಜಿಗೆ ಮಂಗಳೂರಿಗೆ ಕಳಿಸಿಕೊಡುವಾಗ ಕಣ್ಣೀರ ಕಾಲುವೆ ಹರಿಸಿಯಾಳು. ಆ ಮಗನು ಮನೆಯಿಂದ ದೂರಾದ ಬಳಿಕ ಈ ತಾಯಿ ನೆಲೆತಪ್ಪಿದವಳಂತಾಗುವಳು. ಇದು ಚೆಂದವೆ? ತಮ್ಮ ಅಧಿಕಾರಾವಧಿಯು ಮುಗಿದು ಪೆನ್ಶನ್ ಪಡೆದ ಮಹನೀಯರನೇಕರು ತಮ್ಮ ವೃದ್ಧಾಪ್ಯದಲ್ಲಿ ದಿನದೂಡುವುದೇ ಕಷ್ಟವೆಂದುಕೊಳ್ಳುವರು. ಇದೆಲ್ಲ ಮನಸ್ಸನ್ನು ಏಕಮುಖವಾಗಿಟ್ಟುಕೊಂಡಿದ್ದರ ಪರಿಣಾಮ.

ಮನಸ್ಸನ್ನು ವಿವಿಧ ವಿಷಯಗಳಲ್ಲಿ ತೊಡಗಿಸಬೇಕೆಂಬುದಕ್ಕಾಗಿ, ನಮ್ಮ ಮುಖ್ಯ ವೃತ್ತಿಗೆ ತಿಲಾಂಜಲಿ ಕೊಡಬೇಕಾದ ಅಗತ್ಯವಿಲ್ಲ. ನಮ್ಮ ದೃಷ್ಟಿಯನ್ನು ಸ್ವಲ್ಪ ವಿಶಾಲವಾಗಿಟ್ಟುಕೊಂಡರೆ, ಅಷ್ಟೇ ಸಾಕು. ನಿಮ್ಮ ಮುಖ್ಯ ಪ್ರವೃತ್ತಿಗೆ ಪೋಷಕವಾಗಬಲ್ಲ ಅನೇಕ ಸಂಗತಿಗಳು ಇದ್ದೇ ಇವೆ. ಅವುಗಳನ್ನು ಕಂಡುಕೊಂಡು ಸವಿಯುವ ಸಾಮರ್ಥ್ಯ ಬೆಳೆಸಿಕೊಳ್ಳುವದರಲ್ಲಿಯೇ ಜಾಣ್ಮೆ ಇದೆ. ನಮ್ಮ ಸುಖಜೀವನಕ್ಕೆ ಹೇತುವಾಗಬಲ್ಲವನಿದ್ದರೂ ಸರಿಯೆ—ಆ ಪ್ರತಿಯೊಂದರ ರುಚಿಯನ್ನೂ ಸವಿದೇ ನೋಡೋಣ. ನಮ್ಮ ನಿತ್ಯ ವ್ಯವಹಾರದಲ್ಲಿ ಈ ಬಗೆಯ ಬಹುಮುಖವಾದ ಅಭಿರುಚಿಯನ್ನು ಬೆಳೆಸಿಕೊಂಡ ಪಕ್ಷದಲ್ಲಿ—ವರ್ಷ ಕಳೆದಂತೆ ನಾವು ಬದುಕಿನ ಕುರಿತು ವಿಶಾಲಾನುಭವವುಳ್ಳ ನಾಗರಿಕರಾಗುತ್ತೇವೆ. ಜನರೊಡನೆ ಸಮವಾಗಿ ಬೆರೆತು ಅವರ ಸ್ನೇಹ ಸಂಪಾದಿಸಿಕೊಳ್ಳಲು ಸಮರ್ಥರಾಗುತ್ತೇವೆ. ಇಂಥವರು ಯಾರ ಕೂಡೆಯೂ ನಿಸ್ಸಂಕೋಚವಾಗಿ ವ್ಯವಹರಿಸುವ ಚತುರರಾಗುತ್ತಾರೆ. ಇಂಥಾ ದೊಡ್ಡ

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ವರ್ತಮಾನವನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಬಿ. ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

Licence No. 60.
Licenced to Post without Prepayment

Reg. No. M. 1550.
"KODAGU" MERCARA (Coorg)

ಸುಖ ಮತ್ತು ಶಾಂತಿ

ಲೇ:-- ಕುಮಾರಿ ಕೆ. ಎಂ, ತಂಗಮ್ಮ, ಕುಂಬಳದಾಳು

ಪ್ರತಿಯೊಬ್ಬ ಮನುಷ್ಯನ ಜೀವನದ ಮುಖ್ಯ ಗುರಿಯೆಂದರೆ ಸುಖಬೇಕು, ಜೀವನದಲ್ಲಿ ಶಾಂತಿ ಬೇಕೆಂದಾಗಿದೆ. ಆದರೆ ಈ ಸುಖ ಮತ್ತು ಶಾಂತಿ ಎಂಬುದು ಒಂದನ್ನೊಂದು ಹೊಂದಿಕೊಂಡಿರುವದು. ಶಾಂತಿಯೇ ಸುಖದ ಜನನಿ ಎಂದು ನನ್ನಭಿಪ್ರಾಯ. ಮಾನವನು ವಿವಿಧ ಶಾಸ್ತ್ರಗಳನ್ನು, ವಿವಿಧ ವಿಜ್ಞಾನ, ಶೋಧನೆಗಳನ್ನು ಮಾಡಿದ್ದರೆ ಅದು ಸುಖದ ಬಯಕೆಯಿಂದ. ಪ್ರಪಂಚದ ಶಾಂತಿಗಾಗಿ ಯಾವ ರೀತಿ ಜನಾಂಗಗಳು ಯುದ್ಧ, ಸಂಧಾನಗಳನ್ನು ಮಾಡುವವೋ ಆ ರೀತಿಯ ಎಷ್ಟೇ ಪ್ರಯತ್ನಗಳು ನಡೆದರೂ ಯಾವ ರೀತಿ ಜಗತ್ತಿನ ಶಾಂತಿ ಗಗನ ಕುಸುಮವಾಗಿ ಉಳಿದಿದೆಯೋ ಅದೇ ರೀತಿ ವ್ಯಕ್ತಿಯ ಜೀವನ ಹೋರಾಟವೆಲ್ಲವೂ ಸುಖಶಾಂತಿಗಳಿಗೆಂದು ನಡೆದರೂ ಆ ಸುಖ ಮತ್ತು ಶಾಂತಿ ಕರಗತವಾಗಿಲ್ಲ. ಕೆಲವರು ಹಣವಿದ್ದರೆ ಸುಖವೆಂದು ಬಯಸುತ್ತಾರೆ. ಹಣ ದೊರೆತರೂ ಸುಖ ಬರಲಾರದು. ಲಕ್ಷಾಂತರ ಹಣವಿಟ್ಟುಕೊಂಡು ಸುಖವಿಲ್ಲವೆನ್ನುವ ನೂರಾರು ಜನರನ್ನು ಪ್ರತಿ ದಿನ ಕಾಣುತ್ತೇವೆ. ಮನುಷ್ಯನಿಗೆ ಹಣವಿದ್ದು ತೃಪ್ತಿ ಇಲ್ಲ. ಅಧಿಕಾರವಿದ್ದು ತೃಪ್ತಿ ಇಲ್ಲ. ಪ್ರಪಂಚದ ಯಾವ ವಸ್ತು ದೊರೆತರೂ ಸುಖ ಶಾಂತಿಗಳಿಲ್ಲ. ಆತನು ಪ್ರತಿ ಕ್ಷಣ ಬೇಡುತ್ತಿರುವದು ಸುಖ ಮತ್ತು ಶಾಂತಿಗಳನ್ನು ಆದರೆ ಈ ಸುಖ ಶಾಂತಿ ಎಲ್ಲಿದೆ?

ಸುಖವಿಲ್ಲದಿದ್ದರೆ ಶಾಂತಿ ದೊರೆಯಲಾರದೆಂದು ಕೆಲವರು ಹೇಳುತ್ತಾರೆ. ಆದರೆ ಮನಶಾಂತಿ ಇಲ್ಲದಿದ್ದರೆ ಯಾವುದರಿಂದಲೂ ಸುಖವಿಲ್ಲವೆಂದು ಮತ್ತೆ ಕೆಲವರು ನುಡಿಯುತ್ತಾರೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಶಾಂತಿಯೇ ಸುಖಕ್ಕೆ ಮೂಲಮಂತ್ರವೆಂದಿದ್ದಾನೆ. ಸುಖಕ್ಕೆ ಮೂಲಮಂತ್ರವು ಶಾಂತಿಯಾದರೂ, ಶಾಂತಿ ದೊರಕಬೇಕಾದರೆ ಸುಖವಿರಬೇಕೆಂದಿಲ್ಲ. 'ದುಃಖ ಕಷ್ಟಗಳಲ್ಲೂ ಶಾಂತಿಯನ್ನು ಉಳಿಸಿಕೊಳ್ಳುವದು ಸಾಧ್ಯವಿದೆ. ಜಗತ್ತಿನ ಆಗುಹೋಗುಗಳ ಗೊಂದಲದಲ್ಲಿ ಜೀವನದ ಏರುತಗ್ಗುಗಳ ಘರ್ಷಣೆಯಲ್ಲಿ ಶಾಂತಿಯನ್ನು ಉಳಿಸಿಕೊಳ್ಳುವದು ಸಾಧ್ಯವಿದೆ. ಈ ಶಾಂತಿಯ ಮಾರ್ಗವನ್ನೇ ನಮ್ಮ ವೇದಾಂತ ಹೇಳುತ್ತಿರುವದಾಗಿದೆ. ಕಷ್ಟದ ಕಾಲದಲ್ಲಿ ಕಂಗೆಡದೆ, ಸುಖದ ಸುಗ್ಗಿಯಲ್ಲಿ ಮೈಮರೆಯದೆ ನಿರ್ಲಿಪ್ತನಾಗಿರುವ ಮನೋವೃತ್ತಿಯೇ ಶಾಂತಿಯ ಅಡಿಗಲ್ಲು. ಈ ಶಾಂತಿಯೇ ಶಾಶ್ವತವಾದ ಶಾಂತಿ. 'ಸುಖದುಃಖೇ ಸಮೇ ಕೃತ್ವಾ ಲಾಭಾ ಲಾಭ ಜಯಾ ಜಯೌ' ಎಂದು ಭಗವದ್ಗೀತೆಯಲ್ಲಿ ಹೇಳುವ ಮನೋವೃತ್ತಿಯೇ ಶಾಂತಿಗಿರುವ ರಾಜಮಾರ್ಗ.

ಇದರಿಂದ ಶಾಂತಿ ಹಾಗೂ ಶಾಶ್ವತ ಸುಖಗಳು ಐಹಿಕವಾದ ಜಯ, ಅಧಿಕಾರ, ಲಾಭಗಳಿಂದ ದೊರೆಯಲಾರವೆಂಬುದು ವೇದ್ಯವಾಗುತ್ತದೆ. ನಶ್ವರ ವಸ್ತುಗಳಿಂದ ದೊರೆಯುವ ಸುಖವನ್ನು 'ಕ್ಷಣಿಕ ಸುಖ'ವೆಂದು ಹೇಳಲಾಗಿದೆ. ಪರೀಕ್ಷೆಯಲ್ಲಿ ಉತ್ತೀರ್ಣನಾದ ವಿದ್ಯಾರ್ಥಿಯೊಬ್ಬನಿಗೆ ಆ ಕ್ಷಣದಲ್ಲಿ ಅಪಾರವಾದ ಸಂತೋಷವಿರುತ್ತದೆ. ಆದರೆ ಅದು ಶಾಶ್ವತವಲ್ಲ. ಮುಂದಿನ ಅಭ್ಯಾಸದ ಗೊಂದಲ ಚಿಂತೆಗಳು ಆತನನ್ನು ಮರುಕ್ಷಣದಲ್ಲಿಯೇ ಆವರಿಸುವವು.

ಆದ್ದರಿಂದ ನಮ್ಮ ಈ ಐಹಿಕ ಜೀವನದಲ್ಲಿ ಸುಖಕ್ಕೆ ಸಾಧನವಾಗಿ ಶಾಂತಿಗೆ ಸಹಾಯಕವಾಗುವ ಸಾಧನಗಳೆಂದರೆ ಆತ್ಮಜ್ಞಾನ ಮತ್ತು ಆತ್ಮ ಸಂಯಮನ. ನಮಗೆ ಉತ್ತಮ ಕುಲ, ಆರೋಗ್ಯ, ಧನ, ಸಂಪತ್ತು ಎಲ್ಲವೂ ಕೂಡ ಜನ್ಮತಃ ದೊರೆತಿರಬಹುದು. ಅಷ್ಟರಿಂದ ಸುಖಿಗಳಾಗಲು ಸಾಧ್ಯವಾಗುತಿದ್ದರೆ ಉತ್ತಮ ಜಾತಿಯವರೂ, ಸಿರಿ ಸಂಪತ್ತಿರುವವರೂ, ಶರೀರ ಸೌಖ್ಯವಿರುವವರೂ ಸುಖಿಗಳೆನಿಸುತ್ತಿದ್ದರು. ಆದರೆ ನಿಜಸ್ಥಿತಿ ಹಾಗಿಲ್ಲ. ಅತಿ ದರಿದ್ರರಾದವರು ಸುಖಿಗಳೆನಿಸಿದ್ದಾರೆ. ಜಗತ್ತನ್ನೇ ತೊರೆದು ಸನ್ಯಾಸ ಸ್ವೀಕರಿಸಿದವರು ಸುಖಿಗಳೆನಿಸಿದ್ದಾರೆ. ಆದ್ದರಿಂದ ಸುಖ ಶಾಂತಿಗಳು ಹೊರಗಿನ ವಸ್ತುಗಳಲ್ಲಿಲ್ಲ ಅವು ಪ್ರತಿಯೊಬ್ಬನ ಸ್ವಾಧೀನದಲ್ಲಿರುವ ಆಂತರಿಕ ವಸ್ತುಗಳು. ಈ ಆತ್ಮಾಧೀನ ವಸ್ತುವಿನ ನಿಜ ಸ್ವರೂಪವನ್ನು ಅರಿಯುವದೇ ಯೋಗ, ವೇದಾಂತ ಯಾ ಭಗವತ್ಪ್ರಾರ್ಥನೆ. ಆದ್ದರಿಂದ ಸುಖ ಶಾಂತಿ ಬೇಕಿದ್ದರೆ ಆತ್ಮಾನುಸಂಧಾನದ ಮಾರ್ಗದಿಂದಲೇ ಸಾಧ್ಯವಾಗಿದೆ.

ಈ ಮಾರ್ಗವೆಂದರೆ ಮೂಗು ಹಿಡಿದು ಕಣ್ಮುಚ್ಚಿ ಜಪಮಾಡುವದಲ್ಲ. ಮನಸ್ಸಿನಲ್ಲಿ ಬಗೆದುದನ್ನು ಮಾತಿನಲ್ಲಿ ನುಡಿಯುವದು. ಮಾತಿನಲ್ಲಿ ನುಡಿಯುವದನ್ನು ಕೃತಿಯಲ್ಲಿ ಮಾಡುವದು. ಒಂದೇ ಮಾತಿನಲ್ಲಿ ಹೇಳುವದಾದರೆ ಮಾನವನು ತನ್ನ ಹೃದಯಕ್ಕೆ ಸಾಕ್ಷಿಯಾಗಿ, ಆತ್ಮಕ್ಕೆ ಅನುಗುಣವಾಗಿ ವರ್ತಿಸಲು ಕಲಿಯಬೇಕು. ಹಾಗಾದರೆ ಕಪಟ, ಸುಳ್ಳು, ಮೋಸಗಳಿಗೆಡೆಯಾಗದು. ಆತ್ಮ ವಂಚನೆಗೆ ಮಾರ್ಗವಿಲ್ಲದಿದ್ದರೆ ಸುಖದ ಹಾದಿಯಲ್ಲಿ ನಡೆಯುತ್ತಿರುವೆವೆಂದೂ, ಕಡೆಗೆ ಶಾಂತಿಯನ್ನು ಪಡೆಯುವೆವೆಂದೂ ನಂಬಬಹುದಾಗಿದೆ.

ಮನಸ್ಸಿನ ದೊಡ್ಡ ಮನುಷ್ಯರಾಗಬೇಕೆನ್ನುವ ಆಸೆ ನಮ್ಮಲ್ಲಿ ಯಾರಿಗೆ ಇಲ್ಲ? ಆದರೊಂದು ಮಾತು—ನಾನು ದೊಡ್ಡವನಾಗಬೇಕೆಂದು ಬಯಸುವುದೂ, ನಿಜವಾಗಿ ದೊಡ್ಡವನಾಗುವದೂ ಒಂದೇಯಲ್ಲ. ಅವುಗಳ ನಡುವೆ ವಿಶೇಷ ಅಂತರವಿದೆ. ಕೇವಲ ಮನಸ್ಸಿದ್ದರೆ ಸಾಲದು. ತಕ್ಕ ಕೆಲಸವನ್ನೂ ಕೈಗೊಳ್ಳಬೇಕು. ಹೊಸ ಸಾಹಸವೆಂದರೆ ಅಂಜುವ ಬುದ್ಧಿ ಇರಬಾರದು. ಬಾಳ್ವೆಯು ಕ್ಷಣ ಕ್ಷಣಕ್ಕೂ ಹೊಸ ಮಿಂಚು ಮೆರುಗಿನಿಂದ ಕೂಡಿದೆ ಎಂಬುದನ್ನು ಮನಗಂಡು— ಅದರೊಡನೆ ಬೆರೆತು ಹೋಗುವ ಹವ್ಯಾಸವುಳ್ಳವರಾಗಬೇಕು. ಇಂಥ ಬಹುಮುಖವಾದ ಅಭಿರುಚಿ, ಸುಖಜೀವನಕ್ಕೆ ಬೀಗದ ಕೈ ಇದ್ದಂತೆ.

PROPERTY FOR SALE.

A property of the following discription situated near Ammathi town touching Ammathi-Murnad road, is for sale

(1) Wet land 9·20 acres, (2) Dry land 24·45 acres Of the dry land obout 9 acres consists young orange plants yeilding since three years. (3) A tiled big house with water facility. (4) Two thatched houses for tenants, (5) One cattle shed, (6) One out-house, (7) 18 Heads of cattle.

Intending buyers may please write to the below mentioned address or contact personally.

PONNAPPA.
3–2 C/o. Post master, AMMATHI, Coorg.

THE VIJAYA BANK, LIMITED.
ದಿ ವಿಜಯಾ ಬೇಂಕ್ ಲಿಮಿಟೆಡ್, ಮಡಿಕೇರಿ.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಮೂಲ ಧನ	ರೂ.	20,00,000
ಕೊತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ಮ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು. ರೂಪಾಯಿ ಹತ್ತು ಸಾವಿರ ವ ಮಿಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟ ನಡೆಸಲ್ಪಡುವುದು.

ಬಿ. ಮಂಜಯ್ಯ ಹೆಗ್ಡೆ,
ಎಡ್ವೊಕೇಟ್.
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.
12–10 (ಮತ್ತು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರು)

ಮಡಿಕೇರಿ ಆಫೀಸಿನ ಏಜೆಂಟ್:— ಯಮ್. ಯಸ್. ಆಳ್ವ.

ಮಾರಾಟಕ್ಕಿದೆ.

(೧) ವೀರಾಜಪೇಟೆಯಲ್ಲಿ ಒಳ್ಳೆಯ ವ್ಯಾಪಾರ ನಡೆಯುತ್ತಿರುವ ಒಂದು ಹೋಟೆಲ್ ಮತ್ತು ಅದಕ್ಕೆ ಸೇರಿದ ವಾಸಕ್ಕೆ ಅನುಕೂಲವಿರುವ ಒಂದು ಮನೆ ಮಾರಾಟಕ್ಕಿದೆ.

(೨) ಸದರಿ ಪೇಟೆಯಲ್ಲಿ ಪೇಟೆಯ ಮಧ್ಯದಲ್ಲಿದ್ದು ಸಿನಿಮಾ ಯಾ ಮಿಲ್ಲು ಕಟ್ಟಲು ಒಳ್ಳೆಯ ಸ್ಥಳವಾಗಿದ್ದು ತಿಂಗಳಿಗೆ ರೂ. 100/- ಬಾಡಿಗೆ ಬರುವ ಲೈನುಗಳಿರುವ ಮತ್ತು ಗದ್ದೆ ಒತ್ತಾಗಿರುವ 2½ ಎಕ್ರೆ ಜಾಗವೂ ಸಹ ಮಾರಾಟಕ್ಕಿದೆ.

ಮೇಲೆ ಕಾಣಿಸಿರುವುದನ್ನು ಒಟ್ಟಾಗಿಯೂ ಯಾ ಚಿಲ್ಲರೆಯಾಗಿಯೂ ಮಾರುತ್ತೇನೆ. ಖಾಯಿಸ್‌ದಾರರು ಈ ಕೆಳಗಿನ ವಿಳಾಸಕ್ಕೆ ವ್ಯವಹರಿಸಿ ವಿವರಗಳನ್ನು ತಿಳಿದುಕೊಳ್ಳಬಹುದು.

ಪ್ರೊಪ್ರೈಟರ್,
ಬಿ. ಆನಂದ ಭವನ,
2–2 ವೀರಾಜಪೇಟೆ.

ಬೇಕಾಗಿವೆ.

ಕಾಡು ಕೋಳಿಗಳ ಕುತ್ತಿಗೆಯ ಗರಿಗಳು ಬೇಕಾಗಿವೆ. ಹೆಚ್ಚಿನ ವಿವರಕ್ಕೆ ಬರೆಯಿರಿ.

D. H. THANGAM & CO.,
Kundah Bridge,
4–4 *P. O. Nilgiris.*

ನಾಪೋಕ್ಲಿಗೆ
"ಕೊಡಗು" ಪತ್ರಿಕೆಯ ಏಜೆಂಟರು
ಸಹಕಾರಿ ಸ್ಟೋರ್ಸ್ ಮೇನೇಜರ್

Edited Printed & Published by P. I. Belliappa at, Kodagu Press, Mercara for 'Kodagu' Ltd.



ಚಲೋ ಗಾಡಿ.

ವಾರದ ಕಥೆ.

ಆಕೆ ಬಂದಳು!

ಲೇ:—"ಪ್ರೇಮಯೋಗಿ" ಮಡಿಕೇರಿ.

'ರಾಮೂ' ಮನೆಯೊಳಗೆ ಹೆಜ್ಜೆ ಹಾಕುತ್ತಾ ಶೇಖರನು ಕರೆದನು. 'ನೋಡು, ನಿನಗೆ ಏನು ತಂದಿರುವೆನೆಂದು!'

ಆತನು ಯೋಚಿಸಿದ್ದಂತೆ ರಾಮುವು ಬಾರದೆ ಆತನ ಹೆಂಡತಿ ಸುಶೀಲಳು ಬಂದು 'ಶ್ ಶಬ್ದಮಾಡಬೇಡಿ' ಎಂದಳು.

'ಏನು? ಮಗುವೆಲ್ಲಿ?' ಶೇಖರನು ಕೇಳಿದನು.

'ನಿದ್ರೆ ಮಾಡುತ್ತಿರುವನು'

'ಇಷ್ಟು ಬೇಗ ಎಂಥಾ ನಿದ್ರೆ' ಎಂದು ಹೇಳುತ್ತಾ ಶೇಖರನು ಮಗುವು ಮಲಗಿದ್ದ ಕೋಣೆಗೆ ಹೊರಟನು.

'ಶ್, ಹಾಗೆ ಹೋಗಿ ಮಗುವನ್ನು ನಿದ್ರೆಯಿಂದ ಎಬ್ಬಿಸದಿರಿ. ಆತನನ್ನು ನಿದ್ರೆ ಮಾಡಿಸುವದು ಬಹು ಪ್ರಯಾಸದ ಕೆಲಸ' ಸುಶೀಲಳೆಂದಳು.

ಮಗುವು ಮುಗ್ಧ ಮೋಹಕಮೂರ್ತಿಯಾಗಿ ನಿದ್ರಿಸುತ್ತಿತ್ತು. ಶೇಖರನು ಹತ್ತಿರ ಹೋಗಿ ಮಗುವನ್ನು ಮುದ್ದಿಸಿದನು. ಮಗುವು 'ಅಮ್ಮಾ ಅಮ್ಮಾ' ಎಂದು ಕೂಗಿತು. ಮಗುವಿನ ಮುಖದಲ್ಲಿ ಕಣ್ಣೀರು ಇನ್ನೂ ಆರಿರಲಿಲ್ಲ.

'ಸೂಸಿ' ಎಂದು ಶೇಖರನು ತನ್ನ ಹೆಂಡತಿಯನ್ನು ಕರೆದನು. ಅಪರಾಧವನ್ನೊಪ್ಪುವ ದೃಷ್ಟಿಯಿಂದ ಆಕೆಯನ್ನು ನೋಡಿದನು. ಆದರೆ ಮಗುವು ಪುನಹ ಅಷ್ಟೇ ನಿದ್ರೆ ಹೋಯಿತು.

'ದಯಮಾಡಿ ಮಗುವನ್ನು ಎಬ್ಬಿಸದಿರಿ. ಆತನನ್ನು ನಿದ್ರೆಗೊಳಿಸುವದು ಹುಲಿಯ ಕೆಚ್ಚಲಿನ ಹಾಲು ಕರೆದಂತೆ' ಸುಶೀಲನು ಹೇಳಿದಳು.

'ಏನಾಯಿತು. ಮಗುವು ಹಾಗೆ ಅಳಲು ಕಾರಣವೇನು?'

'ಮಕ್ಕಳು ಯಾವಾಗಲೂ ಅಳುತ್ತವೆ. ಅದಕ್ಕೆ ಕಾರಣ ಕೊಡಲು ಸಾಧ್ಯವೆ?'

ಈ ಉತ್ತರದಿಂದ ಶೇಖರನಿಗೆ ತೃಪ್ತಿಯಾಗಲಿಲ್ಲ. ಕಳೆದ ಕೆಲವು ತಿಂಗಳುಗಳಿಂದ ಶೇಖರನು ಆಗಾಗ ಸಿಟ್ಟಿಗೇಳುತ್ತಿದ್ದನು. ಖಜೇರಿಯಿಂದ ಬಂದೊಡನೆ ಕಿಡಿಕಿಡಿಯಾಗಿ ವರ್ತಿಸುತ್ತಿದ್ದನು. ಆದರಿಂದ ಸುಶೀಲೆಯು ಹೆಚ್ಚು ಮಾತಾಡದೆ ಅಡಿಗೆ ಮನೆಗೆ ಹೋಗಿ ಕಾಫಿ ತೆಗೆದುಕೊಂಡು ಬಂದಳು.

ಶೇಖರನು ಕಿಟಕಿಯ ಪಕ್ಕದಲ್ಲಿ ನಿಂತು ಹೊರಗೆ ನೋಡುತ್ತಿದ್ದರು. ತುಂತುರು ಮಳೆ ಬೀಳುತಿತ್ತು. ಸಂಧ್ಯಾಕತ್ತಲು ಆವರಿಸುತ್ತಿದ್ದುದರಿಂದ ಒಂದು ಭೀಕರತೆ ತೋರಿಬರುತ್ತಿತ್ತು. ಶೇಖರನು ತನ್ನ ಬಟ್ಟೆಯನ್ನು ಬಿಚ್ಚಿರಲಿಲ್ಲ, ಸುಶೀಲೆಯು ಹತ್ತಿರ ಬಂದು 'ಕಾಫಿ ಕುಡಿಯಿರಿ. ತಣೆದು ಹೋಗುತ್ತದೆ' ಎಂದಳು.

ಶೇಖರನು ಆಕೆಯತ್ತ ತಿರುಗಿ, 'ಇಂದು ನನಗೆ ಏನೋ ಆಗುತ್ತದೆ. ಮನಸ್ಸಿಗೆ ಶಾಂತಿ ಇಲ್ಲ' ಎಂದು ಹೇಳುತ್ತಾ ಕಾಫಿ ಕಪ್ಪನ್ನು ತೆಗೆದುಕೊಂಡು ಕುಡಿಯತೊಡಗಿದನು. ಅಷ್ಟರಲ್ಲಿ ಮಗುವಿನ ಕೋಣೆಯಿಂದ 'ಅಮ್ಮಾ, ಅಮ್ಮಾ' ಎಂದು ಕೂಗುವ ಶಬ್ದ ಕೇಳಿತು. ಶೇಖರನು ಎರಡು ಗುಟುಕಿನಲ್ಲಿ ಕಾಫಿಯನ್ನು ಮುಗಿಸಿ ಕೋಣೆಗೆ ಓಡಿದನು. ಸುಶೀಳಲೂ ಕೋಣೆಗೆ ಬಂದಳು. 'ದಿನವಿಡೀ ಮಗುವು ಅಳುತಿತ್ತು' ಎಂದಳು.

'ಅಳುವಂತೆ ಮಾಡಲು ನೀನೇನು ಸಿಟ್ಟಿಗೇಳಲಿಲ್ಲ ತಾನೇ?' ಶೇಖರನೆಂದನು.

ಆಕೆಯು ಆತನ ಮುಖವನ್ನೊಮ್ಮೆ ಪೂರ್ಣದೃಷ್ಟಿಯಿಂದ ನೋಡಿ 'ಸ್ವತಹ ತಾಯಿಯು ಕೂಡ ತನ್ನ ಮಗುವನ್ನು ನಾನು ಪ್ರೀತಿಸುವಂತೆ ಪ್ರೀತಿಸಲಾರಳು. ನನ್ನ ಹೃದಯದ ಸರ್ವಸ್ವವದು' ಎಂದಳು. ಆಕೆಯು ತನ್ನ ಮನಸ್ಸಿನ ಭಾವವನ್ನು ತಡೆಯಲು ಯತ್ನಿಸಿದರೂ ಕಣ್ಣಲ್ಲಿ ನೀರು ತುಂಬಿತ್ತು. ಆಕೆಯು ತನ್ನ ಮುಖವನ್ನು ಮುಚ್ಚಿಕೊಂಡಳು.

'ಕ್ಷಮಿಸು. ಮಗುವು ಏಕೆ ಅಳುತ್ತದೋ ತಿಳಿಯದು' ಎಂದನು.

ಆಕೆ ಮಾತಾಡಲಿಲ್ಲ.

'ಏನೋ ಒಂದು ವಿಚಾರವು ನನ್ನ ಮನಸ್ಸನ್ನು ಅಲ್ಲೋಲಕಲ್ಲೋಲ ಮಾಡಿದೆ. ಅದೇನೆಂದು ನಾನು ವಿವರಿಸಲಾರೆ'

'ಆಫೀಸಿನಲ್ಲಿ ಏನಾದರೂ ತೊಂದರೆ ಆಯಿತೇ?' ಸುಶೀಲನು ಕೇಳಿದಳು.

'ಹಾಗೇನೂ ಇಲ್ಲ.'

ಸ್ವಲ್ಪ ಸಮಯದ ನಂತರ ಆತನು ಎದ್ದು 'ಇಂಥಾ ಕ್ಷುಲ್ಲಕ ಕಾರಣಗಳಿಗಾಗಿ ತಲೆ ಕೆಡಿಸಿಕೊಳ್ಳುವದು ತಿಳಿಗೇಡಿತನ' ಎಂದು ಹೇಳಿ ತನ್ನ ಕೋಟನ್ನು ಬಿಚ್ಚಿ ಆಕೆಯ ಕೈಗೆ ಕೊಟ್ಟು ತನ್ನ ಪಾದರಕ್ಷೆಯನ್ನು ಬಿಚ್ಚುತ್ತಾ 'ಸೂಸಿ, ರಾಮು ಅಳಲು ಕಾರಣವೇನು?' ಎಂದು ಮರೆತುಹೋದ ವಿಚಾರವನ್ನು ಜ್ಞಾಪಿಸುವಂತೆ ಕೇಳಿದನು.

'ಅದೊಂದು ಉದ್ದ ಕಥೆ. ಅದನ್ನು ನಂತರ ಹೇಳುವೆನು' ಸುಶೀಲಳೆಂದಳು.

'ಇಲ್ಲ ಈಗಲೇ ಹೇಳಬೇಕೆಂ'ದು ಶೇಖರನು ಹಟ ಹಿಡಿದನು.

* * *

ಸುಶೀಲಳು ಅಡಿಗೆ ಮನೆಯ ಕೆಲಸದಲ್ಲಿ ಮಗ್ನಳಾಗಿದ್ದಳು. ರಾಮುವು ಬೀದಿಯಲ್ಲಿ ಆಡುತ್ತಿದ್ದನು. ಅನಿರೀಕ್ಷಿತವಾಗಿ ಬೀದಿಯಲ್ಲಿ ಗಡಿಬಿಡಿಯಾಗಿ ಜನರು ನೆರೆದರು. ಸುಶೀಳಲು ಕಾರಣ ತಿಳಿಯಲು ಹೊರಗೆ ಬಂದಳು. ರಾಮುವು ಬೀದಿಯ ಮಧ್ಯದಲ್ಲಿ ನಿಂತಿದ್ದನು. ಆತನ ಪಕ್ಕದಲ್ಲಿ ಬಹು ರೋಗಿಷ್ಟ ಭಿಕ್ಷುಕಿಯೊಬ್ಬಳು ನಿಂತಿದ್ದಳು. ಅವರ ಸುತ್ತಲೂ ಬಹು ಜನರು ತುಂಬಿದ್ದರು.

'ಮಕ್ಕಳನ್ನು ಅಪಹರಿಸುವವಳು' ಒಬ್ಬರು ಹೇಳುತ್ತಿದ್ದರೆ 'ಚೋರರ ಗುಂಪಿನವಳು' ಎಂದು ಕೆಲವರು ಹೇಳುತ್ತಿದ್ದರು.

ನೆರಿಮನೆಯಾಕೆಯು ಸುಶೀಲನ ಹತ್ತಿರ ಬಂದು 'ಸುಶೀಲಾ, ನೀನು ಮಗುವನ್ನು ಆ ರೀತಿ ರಸ್ತೆಯಲ್ಲಿ ಆಡಲು ಬಿಡಬಹುದೇ?' ಎಂದು ಕೇಳಿದಳು.

'ಏಕೆ? ಅದರಲ್ಲಿ ತಪ್ಪೇನಿದೆ' ಎಂದು ಹೇಳುತ್ತಾ ಸುಶೀಲಳು ಹೋಗಿ ಬೀದಿಯಲ್ಲಿದ್ದ ರಾಮುವಿನ ಕೈ ಹಿಡಿದು ಕರೆದುಕೊಂಡು ಬರಲುದ್ಯುಕ್ತಳಾದಳು. ಸುಶೀಲೆಯು ಮುಟ್ಟಿದ್ದೇ ತಡ ರಾಮುವು ಅಳತೊಡಗಿದನು.

'ಅಮ್ಮಾ, ಈ ಭಿಕ್ಷುಕಿಯು ನಿನ್ನ ಮಗುವನ್ನು ಅಪಹರಿಸಿಬಿಡುತ್ತಿದ್ದಳು. ಮಕ್ಕಳನ್ನು ಮಾರಾಟಮಾಡಲು ಈ ರೀತಿ ಅಪಹರಿಸುವರು. ಮೊನ್ನೆಯಾಗಿ ಪತ್ರಿಕೆಯಲ್ಲಿ ಓದಲಿಲ್ಲವೇ? ಇವರು ಭಿಕ್ಷುಕರ ವೇಶದಲ್ಲಿದ್ದು ಮಕ್ಕಳನ್ನು ಕದ್ದು ವ್ಯಾಪಾರ ನಡೆಸುವವರು' ಎಂದೊಬ್ಬಾಕೆ ಹೇಳಿದಳು.

ಸುಶೀಲಳಿಗೂ ಪತ್ರಿಕೆಯಲ್ಲಿ ಮಕ್ಕಳ ಮಾರಾಟದ ವಿಚಾರ ಓದಿದ ನೆನಪಾಯಿತು. ಮಗುವಿನ ಮೈಮೇಲಿನ ಆಭರಣಗಳ ಕಡೆ ಆಕೆ ನೋಡಿದಳು. ನಂತರ ಭಿಕ್ಷುಕಿಯ ಕಡೆಗೆ ನೋಡಿದಳು, ಭಿಕ್ಷುಕಿಯು ಯಾವುದೊಂದರ ಪರಿವೆ ಇಲ್ಲದವಳಂತೆ ನಿಂತಿದ್ದಳು.

'ಆಕೆಯು ಮಗುವನ್ನಪ್ಪಿಕೊಂಡು ಮುದ್ದಿಸುತ್ತಿದ್ದಳು. ಮಗುವನ್ನು ಅಪಹರಿಸುವ ಮೊದಲು ಈ ತೋರಿಕೆಯ ಪ್ರೀತಿ' ಎಂದು ನೆರಿಮನೆಯವಳೆಂದಳು.

ತನ್ನ ಪಾದರಕ್ಷೆಯನ್ನು ಬಿಚ್ಚದೆ ಕಥೆ ಕೇಳುತ್ತಿದ್ದ ಶೇಖರನನ್ನು ನೋಡಿ ಸುಶೀಲೆಯು ಹೇಳಿದಳು 'ಆದರೆ ಮಗುವನ್ನು ನೋಡಿ ಆ ಭಿಕ್ಷುಕಿಗೆ ಅಮಿತಾನಂದವಾಗಿದೆಯೆಂಬುದು ಆಕೆಯ ಮುಖದಿಂದ ತಿಳಿಯುತ್ತಿತ್ತು. ಆ ಭಿಕ್ಷುಕಿಯು ಇಲ್ಲೇ ಇರುತ್ತಾಳೆ. ಹಲವು ಬಾರಿ ಆಕೆಯನ್ನು ನಮ್ಮ ಬಾಗಿಲಿನಲ್ಲಿ ನಾನು ಕಂಡಿದ್ದೇನೆ.'

ಸುಶೀಲನಿಗೆ ಕೆಲವು ದಿನಗಳ ಹಿಂದಿನ ಘಟನೆಯೊಂದು ಜ್ಞಾಪಕಕ್ಕೆ ಬಂದು 'ಮೊನ್ನೆಯಾಗಿ ರಾಮುವು ಆ ಹೆಂಗಸಿನ ಜೊತೆಯಲ್ಲಿ ಆನಂದದಿಂದ ಆಡುತ್ತಿದ್ದುದನ್ನೂ ಆಕೆ ಅವನಿಗೆ ಮುತ್ತಿಕ್ಕಿದುದನ್ನೂ ನಾನು ಕಂಡಿದ್ದೇನೆ. ಈ ದೃಶ್ಯವೇ ನೆರೆಯುವರು ಹೇಳುವ ಮಾತನ್ನು ನನ್ನಲ್ಲಿ ಗಟ್ಟಿಮಾಡಿತು.' ಎಂದಳು.

'ಆಕೆಯು ನಿಜವಾಗಿಯೂ ಮಗುವನ್ನು ಅಪಹರಿಸುವವಳಂತೆ ತೋರುವಳೇ?', ಶೇಖರನು ಕೇಳಿದನು

'ನಾನು ಹೇಗೆ ಹೇಳಲಿ ಜನರು ಹಾಗೆ ಹೇಳಿದರು.'

'ಜನರನ್ನು ಸುಡು' ಶೇಖರನು ಗಟ್ಟಿಯಾಗಿ ನುಡಿದನು. ಸುಶೀಲಳಿಗೂ ಆತನ ಮಾತಿನಿಂದ ಗಾಬರಿಯಾಯಿತು.

'ಆಕೆಯು ಮಗುವನ್ನು ಅಪಹರಿಸುವವಳಲ್ಲ. ತಾಯಿಯ ಮಮತೆಯಿಂದ ಮಗುವನ್ನು ನೋಡುತ್ತಿದ್ದಳು'

'ಏನು!'

'ಹೌದು, ನಾನು ರಾಮುವನ್ನು ಹಿಡಿದು ಎಳೆತರುವಾಗ ಆಕೆ ಕ್ಷಮಿಸಿ ಅಮ್ಮಾ ಮಗುವನ್ನು ನೋಡಬೇಕಿತ್ತು. ಅಷ್ಟೆ. ನಾನಿನ್ನು ಹೋಗುವೆನು' ಎಂದು ಮಗುವನ್ನು ಪುನಹ ಪುನಹ ಮುದ್ದಿಸಿ ಹೊರಟು ಹೋದಳು"

ಶೇಖರನ ಮುಖದಲ್ಲಿ ಅಪೂರ್ವ ತೇಜಸ್ಸು ಕೂಡಿತ್ತು. ಆತನು ಕೈವಸ್ತ್ರ ತೆಗೆದುಕೊಂಡು ಮುಖವನ್ನು ವರಸಿಕೊಂಡನು.

"ಹೌದು ಆಕೆ ಹೊರಟು ಹೋಗುವಾಗ 'ನಾನು ಸುಖಿ. ಮಗುವನ್ನು ನೋಡಿದೆ. ನಾನು ಸುಖಿ' ಎಂದು ಆಕೆ ಹೇಳುತಿದ್ದಳು" ಎಂದಳು.

ಶೇಖರನು ಬಾಗಿಲಿಗೆ ಬಂದು 'ಯಾವ ಕಡೆ ಹೊರಟು ಹೋದಳು?' ಎಂದು ಕೇಳಿದಳು. 'ಬಲಗಡೆಗೆ' ಎಂದು ಸುಶೀಲೆ ನುಡಿದಳು. ಶೇಖರನು ಸಂಧ್ಯಾಕತ್ತಲೆಯಲ್ಲಿ ಮಾಯವಾದನು.

* * *

ದಾರಿಯಲ್ಲಿ, ಮಳೆಯಲ್ಲಿ, ದ್ರುತಗತಿಯಿಂದ ಸಾಗುತ್ತಿರುವ ಶೇಖರನನ್ನು ಕಂಡು ಪೋಲೀಸನೊಬ್ಬನು ಆತನನ್ನು 'ಹುಚ್ಚ'ನೆಂದೇ ಬಗೆದನು. 'ಮಳೆಯಲ್ಲಿ ಈತನೊಬ್ಬ ಹುಚ್ಚ. ಅಲ್ಲಿ ಪೋಲೀಸ್ ಸ್ಟೇಶನ್ ಬಳಿ ಆ ಹುಚ್ಚರು' ಎಂದು ಆತನು ಅಂದುಕೊಂಡ. ಶೇಖರನಿಗೆ ಪೋಲೀಸ್ ಸ್ಟೇಶನ್ ಬಳಿ ಆ ಹುಚ್ಚರು' ಎಂಬುದು ಮಾತ್ರ ಕೇಳಿತು. ಆತನು ಅತ್ತ ಓಡಿದನು. ಜನರು ತುಂಬಾ ನೆರೆದಿದ್ದರು. ಅವರನ್ನು ಅತ್ತಿತ್ತ ನೂಕಿ ಶೇಖರನು ಒಳನುಗ್ಗಿದನು. ಗಾಬರಿಯಾದ ಜನರು 'ಆಕೆಯು ಮಕ್ಕಳನ್ನು ಕದಿಯುವವಳು' ಎಂದರು. ಆಕೆಯು ನೆಲದಲ್ಲಿ ಗತಪ್ರಾಣಳಾಗಿ ಬಿದ್ದಿದ್ದಳು. ಶೇಖರನಿಗೆ ತಡೆಯಲಾಗಲಿಲ್ಲ. 'ನೀವೆಲ್ಲ ಹುಚ್ಚರು. ಅನ್ಯಾಯವಾಗಿ ಹೆಂಗಸೊಬ್ಬಳ ಕೊಲೆ ಮಾಡಿದಿರಿ' ಎಂದನು. ಆತನು ಹತ್ತಿರ ಹೋಗಿ ಆಕೆಯನ್ನು ನೋಡಿದನು. ಆಕೆಗೆ ತುಂಬಾ ಗಾಯವಾಗಿತ್ತು. ಆದರೂ ಆಕೆಯ ಮುಖದಲ್ಲಿ ಪ್ರಶಾಂತ ಶಾಂತಿಯಿತ್ತು. ಶೇಖರನು ವಿಕಾರವಾಗಿ ಕೂಗಿದನು. 'ಏನು ಅನರ್ಥ! ಏನು ದುರಂತ! ಅನ್ಯಾಯವಾಗಿ ಈಕೆಯ ಕೊಲೆಯಾಯಿತು' ಭಿಕ್ಷುಕಿಯ ಕಾಲು ಕೈಗಳು ಕಡೆಗೊಮ್ಮೆ ಅಲ್ಲಾಡಿ ಸೆಟೆದು ಬಿದ್ದವು.

ಶೇಖರನ ವರ್ತನೆಯಿಂದ ಜನತೆಗೂ ಆಶ್ಚರ್ಯವಾಗಿತ್ತು. ಆತನು ಆಕೆಯ ಪಕ್ಕದಲ್ಲಿ ಕುಳಿತು, 'ನಿನ್ನ ಅಮರ ಆತ್ಮಕ್ಕೆ ಚಿರಶಾಂತಿ ಇರಲಿ ಅಮ್ಮಾ' ಎಂದನು. ಅಷ್ಟರಲ್ಲಿ ಪೋಲೀಸಿನವನೊಬ್ಬನು ಅಲ್ಲಿಗೆ ಬಂದನು. ಆತನನ್ನು ನೋಡಿ, 'ಈಕೆಯ ಶವಸಂಸ್ಕಾರದ ಭಾರ ನಾನು ತೆಗೆದುಕೊಳ್ಳಲೆ?' ಎಂದು ಶೇಖರನು ಕೇಳಿದನು

'ಇಲ್ಲ ನಾವು ಮಾಡುತ್ತೇವೆ. ಅದಕ್ಕೆ ಮೊದಲು ಕೆಲವು ದಾಖಲೆ, ವಿವರ, ಬರವಣಿಗೆಗಳಾಗಬೇಕು' ಎಂದು ಪೋಲೀಸನು ಹೇಳಿದನು. ಶೇಖರನು ಜೇಬಿಗೆ ಕೈಯಿಕ್ಕಿ ನೋಟುಗಳ ಕಟ್ಟೊಂದನ್ನು ಕೊಟ್ಟು 'ಈಕೆಯ ಶವಸಂಸ್ಕಾರವನ್ನು ಗೌರವಯುತವಾಗಿ ವಿಧಿ ಪೂರ್ವಕ ನಡೆಸಿರಿ' ಎಂದು ಹೇಳಿ ಮನೆಗೆ ಹೊರಟು ಬಂದನು.

ಮನೆಗೆ ಬಂದಾಗ ಸುಶೀಲೆಯು ಯೋಚನಾ ಮಗ್ನೆಯಾಗಿದ್ದಳು. ಆ ಭಿಕ್ಷುಕಿ

(೧೭ನೇ ಪುಟ ನೋಡಿ)

ಜನಕೋಟಿಯ ಭೂಸಮಸ್ಯೆ ಪರಿಹಾರಕ್ಕೆ ಪ್ರಯತ್ನ.

ಭೂದಾನ ಯಜ್ಞದ ಬಗ್ಗೆ ಶ್ರೀ ಜೈಪ್ರಕಾಶ್ ನಾರಾಯಣ್.

[ಈ ತಿಂಗಳ ಆರಂಭದಲ್ಲಿ ಪ್ರಜಾ ಸೋಷಲಿಸ್ಟ್ ನಾಯಕ ಶ್ರೀ ಜೈಪ್ರಕಾಶ್ ನಾರಾಯಣ್‌ರವರು ಗಯಾ ಜಿಲ್ಲೆಯಲ್ಲಿ ಭೂದಾನ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಮಾಡಿದ ಭಾಷಣದಿಂದ ಈ ಮುಂದೆ ಕಂಡ ಉಪಯುಕ್ತ ಅಂಶಗಳನ್ನುದ್ಧರಿಸಿ ಕೊಡಲಾಗಿದೆ.]

ಭಗವಾನ್ ಬುದ್ಧನು ಯಾವ ಒಂದು ಉಪಕಾರವನ್ನು ಈ ದೇಶಕ್ಕೂ ಮತ್ತು ಮಾನವ ಸಂಸಾರಕ್ಕೂ ಕೊಟ್ಟನೋ ಅದರ ಹೆಚ್ಚಿನ ಭಾಗವನ್ನು ಈಗ ನಾವು ಮರೆತಿದ್ದೇವೆ, ಆದಾಗ್ಯೂ ನನಗೆ ವಿಶ್ವಾಸವಿದೆ. ಭಗವಾನ್ ಬುದ್ಧನ ಪದ ಚಿಹ್ನೆಯಿಂದ ಪವಿತ್ರವಾದ ಪ್ರದೇಶದಲ್ಲಿ ವಾಸವಾಗಿರುವ ನೀವುಗಳು ಆತನ ಉಪದೇಶವನ್ನು ಮರೆಯಲಾರಿರಿ. ಮತ್ತು ಆಚರಣೆಯಲ್ಲಿ ಕೂಡ ತರುತ್ತೀರೆಂದು ನಂಬಿಕೆಯಿದೆ. ಯಾವ ದಿವಸ ಭಾರತವು ಭಗವಾನ್ ಬುದ್ಧನ ಮಾರ್ಗದಲ್ಲಿ ಚಲಿಸುತ್ತಿರುವುದನ್ನು ನೋಡುವೆನೋ ಅಂದು ನಾನು ಧನ್ಯನಾದೆನೆಂದು ಅಂದು ಕೊಳ್ಳುತ್ತೇನೆ.

೧೯೪೨ ನೇ ಇಸವಿಯ ಇತಿಹಾಸ ಸ್ವಾತಂತ್ರ್ಯ ಸಂಗ್ರಾಮದ ಒಂದು ಮಹತ್ವಪೂರ್ಣ ಅಧ್ಯಾಯ. ಆ ಸಂಗ್ರಾಮದ ಕಾಲದಲ್ಲಿ ದೇಶದಿಂದ ಬ್ರಿಟಿಷರು ಹೊರಟು ಹೋದ ಮೇಲೆ ಅವರ ಸ್ಥಾನದಲ್ಲಿ ನಮ್ಮ ಜನರು ಕುಳಿತುಕೊಂಡು ದೇಶದ ಪೂರ್ಣ ನಕ್ಷೆಯನ್ನು ಮೊದಲು ಯಾವ ರೀತಿ ಇತ್ತೋ ಅದೇ ರೀತಿಯಲ್ಲಿ ಇರಬೇಕೆಂದು ನಾವು ಯೋಚಿಸಿದ್ದೇವೇನು? ಇಲ್ಲ, ಸ್ವರಾಜ್ಯದ ಸಿಪಾಯಿಗಳು ಈ ರೀತಿ ಯೋಚಿಸುತ್ತಿರಲಿಲ್ಲ. ಸ್ವರಾಜ್ಯವು ನಮ್ಮ ತೊಂದರೆಗಳನ್ನು ದೂರ ಮಾಡುವ ಒಂದು ಸಾಧನ ಮಾತ್ರವಾಗಿತ್ತು. ಸ್ವರಾಜ್ಯದಲ್ಲಿ ಹೊಟ್ಟೆ ತುಂಬ ಅನ್ನ ಸಿಗಬಹುದು, ಮೈ ಮುಚ್ಚಬಹುದು, ಇರಲಿಕ್ಕೆ ಮನೆ ಸಿಗಬಹುದು, ಮಕ್ಕಳನ್ನು ಓದಿಸಬಹುದು, ರೋಗಿಗೆ ಔಷಧಿ ಕೊಡಬಹುದು, ಬಡತನ ದೂರವಾಗಬಹುದು, ಅನ್ಯಾಯ ಅಳಿಯಬಹುದು ಮತ್ತು ಶೋಷಣದ ಕೊನೆಯಾಗಬಹುದು ಎಂದು ರೈತ, ಕೂಲಿಗಾರರು ಅಪೇಕ್ಷೆಯನ್ನಿಟ್ಟುಕೊಂಡಿದ್ದರು. ಆದರೆ ಹೀಗಾಗಲಿಲ್ಲ. ಜನರಲ್ಲಿ ಇಂದು ತೀವ್ರವಾದ ಅಸಂತೋಷವಿದೆ. ಸ್ವರಾಜ್ಯ ಸಿಕ್ಕರೂ ಕೂಡ ದೇಶವು ಮೊದಲಿದ್ದಂತೆ ಬಿದ್ದುಕೊಂಡಿರುವುದು ಸಾಧ್ಯವಿಲ್ಲ. ಇದು ಆಗದ ಮಾತು ಅಂದ ಮೇಲೆ ಬೇರೆ ಯಾವ ಮಾರ್ಗವಿದೆ? ವಿನೋಬಾಜಿಯವರು ಒಂದು ಅಮೂಲ್ಯವಾದ ಮಾರ್ಗವನ್ನು ಹುಡುಕಿ ತೆಗೆದಿದ್ದಾರೆ. ಗಾಂಧೀಜಿಯವರ ತರುವಾಯ ಅವರ ಪರವಾಗಿ ಹೇಳುವ ಅಧಿಕಾರ ಯಾರಿಗಾದರೂ ಇದ್ದರೆ ಅದು ವಿನೋಬಾರಿಗೆ ಮಾತ್ರ.

ಒಂದು ಕಡೆ ಜಮೀನ್‌ದಾರ, ಬಂಡವಾಳಗಾರ ಮತ್ತೊಂದು ಕಡೆ ದೀನ ದಲಿತ ಬಡವ. ಇಂದು ಸಮಾಜದಲ್ಲಿ ವ್ಯಕ್ತಿ ಸ್ವಾರ್ಥಿಯಾಗತೊಡಗಿದ್ದಾನೆ. ಸ್ವಾರ್ಥಕ್ಕೋಸ್ಕರ ಆತನು ಪಾಪ ಮಾಡುತ್ತಾನೆ. ಆತನ ಪತನದ ಜೊತೆಗೆ ಸಮಾಜವೂ ಪತನವಾಗತೊಡಗಿದೆ. ಆದ್ದರಿಂದ ಸಮಾಜವನ್ನೂ ವ್ಯಕ್ತಿಯನ್ನೂ ಇಬ್ಬರನ್ನೂ ಮೇಲಕ್ಕೆತ್ತಬೇಕಾಗಿದೆ. ಒಂದು ಕಡೆ ಮುಷ್ಟಿ ತುಂಬ ಶ್ರೀಮಂತರು ಮತ್ತೊಂದು ಕಡೆ ಕೋಟಿಗಟ್ಟಲೆ ಹಸಿದ ಜನರು. ಇದು ಸಹನವಾಗದ ಮಾತು. ವಿನೋಬಾ ಹೇಳಿದರು "ಸಮಾಜವನ್ನು ತಕ್ಷಣ ಬದಲಾಯಿಸಲು ಸಾಧ್ಯವಿಲ್ಲ. ಮೊದಲು ಯಾವುದಾದರೊಂದು ಕ್ಷೇತ್ರದಲ್ಲಿ ಕೆಲಸ ಮಾಡಬೇಕು" ಎಂದು. ಇಂದು ಶೇಕಡ ೯೦ ಭಾಗ ಜನರು ಹಳ್ಳಿಯಲ್ಲಿರುತ್ತಾರೆ. ಅವರಲ್ಲಿ ಶೇಕಡ ೭೫ ಭಾಗ ಜನರು ವ್ಯವಸಾಯದ ಮೂಲಕ ಜೀವನ ನಿರ್ವಾಹ ನಡೆಸುತ್ತಿದ್ದಾರೆ. ಇಂತಹ ಸ್ಥಳದಲ್ಲಿ ಘೋರವಾದ ಅನ್ಯಾಯವಾಗತೊಡಗಿದೆ. ಕೋಟಿಗಟ್ಟಲೆ ಜನರ ಹತ್ತಿರ ಒಂದು ಇಂಚು ಕೂಡ ಭೂಮಿ ಇಲ್ಲ, ಇದ್ದರೂ ಅದು ಬಹು ಕಡಿಮೆ. ಆದರೆ ಕೇವಲ ಕೆಲವೇ ಜನರ ಕೈಯಲ್ಲಿ ಎಲ್ಲಾ ಜಮೀನು ವಶವಾಗಿದೆ. ಈ ಕಾರಣದಿಂದ ಭೂಮಿಯ ಪ್ರಶ್ನೆಯನ್ನು ವಿನೋಬಾ ಮೊದಲು ಎತ್ತಿದ್ದಾರೆ. ಪಟ್ಟಣಗಳಲ್ಲಿ ಕೂಲಿಕಾರರ ಮತ್ತು ಕಾರ್ಖಾನೆಯವರ ಮಧ್ಯದಲ್ಲಿ ವಿಷಮತೆ ಹರಡಿದೆ. ಇದನ್ನು ತಪ್ಪಿಸುವದಕ್ಕೋಸ್ಕರ ಸಂಪತ್ತಿ ದಾನ ಯಜ್ಞ ಆರಂಭವಾಗಿದೆ.

ಈ ಎರಡು ಯಜ್ಞಗಳ ಮೂಲಕ ಸ್ವಾರ್ಥದಲ್ಲಿ ಪೂರ್ಣವಾಗಿ ಮುಳುಗಿರುವ ಜನತೆಯನ್ನು ಮೇಲಕ್ಕೆತ್ತಲು ವಿನೋಬಾ ಅಪೇಕ್ಷಿಸುತ್ತಿದ್ದಾರೆ. ಅವರ ಜೀವನ ಪರಿವರ್ತನೆಯ ಮೂಲಕವೇ ಸಮಾಜದಲ್ಲಿ ಆಮೂಲಾಗ್ರ ಪರಿವರ್ತನೆ ಮಾಡಬೇಕು ಎಂದೆನ್ನುತ್ತಿದ್ದಾರೆ.

ಅಭಾಗಿಗಳು

ನಾವೆಲ್ಲಾ ಭಾರತ ಮಾತೆಯ ಮಕ್ಕಳು. ಆಕೆಯ ಉಡಿಯಲ್ಲಿ ನಮ್ಮೆಲ್ಲರ ಭಾಗವಿದೆ, ಅಧಿಕಾರವಿದೆ. ಈ ಕಾರಣದಿಂದಲೇ ಈ ಯಜ್ಞ. ಇದರಲ್ಲಿ ಯಾರು ಭಾಗವಹಿಸುವದಿಲ್ಲವೋ ಅವರು ಅಭಾಗಿಗಳೇ ಆಗುತ್ತಾರೆ. ಇಂದು ಈ ಯಜ್ಞವನ್ನು ಮಾಡದೇ ಹೋದರೂ ಮುಂದೆ ಜ್ವಾಲಾಮುಖಿಯ ರೂಪದಲ್ಲಿ ಬೇರೆ ಒಂದು ಯಜ್ಞ ಪ್ರಾರಂಭವಾಗುತ್ತದೆ. ಅದರಲ್ಲಿ ಎಲ್ಲರೂ ಆಹುತಿಗಳಾಗಿ ಹೋಗುತ್ತಾರೆ. ಸಮಾಜದ ಸಮಗ್ರ ರೂಪ ಇಂದು ಬದಲಾವಣೆಯಾಗುವದಿದೆ. ಆ ಸಮಾಜದಲ್ಲಿ ಸಮತೆ ಇರುತ್ತದೆ, ನ್ಯಾಯವಿರುತ್ತದೆ. ಮತ್ತು ಎಲ್ಲಾ ಜನರೂ ಸುಖಿಗಳಾಗುತ್ತಾರೆ ಇಂತಹ ಸಮಾಜ ರಚನೆಯಾಗಬೇಕಾಗಿದೆ. "೧೯೫೭ರ ಒಳಗೆ ರಾಜನೀತಿಕ, ಆರ್ಥಿಕ, ಸಮಾಜಿಕ ಕ್ರಾಂತಿ ಆಗಿಯೇ ತೀರುವದು" ಎಂದು ವಿನೋಬಾ ನನಗೆ ಹೇಳುತ್ತಿದ್ದರು. ಅಂದ ಮೇಲೆ ಅವರ ಹೃದಯದಲ್ಲಿ ಎಂತಹ ಅಗ್ನಿ ಜ್ವಾಲೆ ಉರಿಯುತ್ತಿರಬೇಕು! ಇಂದು ಮನಸ್ಸನ್ನು ಬದಲಾಯಿಸುವದೇ ಮುಖ್ಯವಾದದ್ದು, ಮನಸ್ಸು ಬದಲಾಯಿಸಿದ ಮೇಲೆ ಯಾರೇ ಆಗಲಿ ಪ್ರೇಮದಿಂದ ದಾನ ಮಾಡುತ್ತಾರೆ ಅಲ್ಲದೆ ತಮ್ಮನ್ನು ಕೂಡ ವೃದ್ಧಿಸಿಕೊಳ್ಳುತ್ತಾರೆ. ಭೂದಾನ ಯಜ್ಞದಂತಹ ಕಾರ್ಯ ಹಿಂದೆಂದೂ ಆಗಿರಲಿಲ್ಲ. ಯಾವ ಸಂಸಾರದಲ್ಲಿ ಖೂನಿ, ಗೋಲಿ ಮತ್ತು ರಕ್ತಪಾತದಿಂದ ಕೆಲಸ ಕಾರ್ಯಗಳು ನಡೆಯುತ್ತಿವೆಯೋ, ವಿದ್ವೇಷ ಹಾಗೂ ವಿಪ್ಲವಗಳು ಸಮಗ್ರ ಮಾನವ ಸಂಸಾರವನ್ನು ನುಂಗುತ್ತಿರುವವೋ ಇಂತಹ ಸಮಯದಲ್ಲಿಯೂ ಯಾವ ಶಾಂತಿ ಮತ್ತು ಅಹಿಂಸೆಯಿಂದ ನಾವು ಸ್ವರಾಜ್ಯವನ್ನು ಗಳಿಸಿದೆವೋ ಅದೇ ಅಹಿಂಸಾಯುತ ಪ್ರೇಮದಿಂದಲೇ ಇಂದು ಸಮಾಜದ ಪರಿವರ್ತನೆಯಾಗತೊಡಗಿದೆ.

ಬ್ರಿಟಿಷರ ರಾಜ್ಯ ಹೊರಟು ಹೋಗಿದ್ದುದು ತಮಗೆಲ್ಲಾ ಗೊತ್ತಿದೆ. ಹೈದರಾಬಾದಿನ ನಿಜಾಮರ ಶಕ್ತಿಯೂ ಹೋಯಿತು, ಕಾಶ್ಮೀರದ ರಾಜರೂ ಹೋದರು. ಜಮೀನ್ದಾರರೂ ಹೋದರು. ಆದ್ದರಿಂದ ಇನ್ನು ಮುಂದೆ ಈ ಕೋಟಿಗಟ್ಟಲೆ ಜನರು ಭೂಮಿ ಹೀನರಾಗಿ ಉಳಿಯಬಲ್ಲರೆ? ಅಲ್ಲದೆ ಕೇವಲ ಕೆಲವೇ ಜನರ ಕೈಯಲ್ಲಿ ಎಲ್ಲಾ ಭೂಮಿ ಉಳಿಯಬಹುದೇ? ಅವರ ಭೂಮಿಯೂ ಈಗ ಹೋಗುವದಿದೆ. ಆದರೆ ನಮ್ಮ ಮುಂದೆ ಇರುವ ಪ್ರಶ್ನೆ ಇವರ ಸಮ್ಮತಿ ಪಡೆದು ಶೀಘ್ರವಾದ ಮಾರ್ಗವನ್ನು ಹಿಡಿಯೋಣವೇ? ಪ್ರತಿಯೊಂದು ಊರಿನಲ್ಲಿಯೂ ಇಂದು ಎರಡು ಸೈನ್ಯಗಳಿವೆ. ಎರಡು ವರ್ಗಗಳಿವೆ. ಭೂಮಿ ಹೀನರ ಮತ್ತು ಭೂಸ್ವಾಮಿಗಳ ವರ್ಗಗಳು. ಇವರಲ್ಲಿ ನಡೆಯಬೇಕಾದ ನ್ಯಾಯೋಚಿತ ಬೆಳವಣಿಗೆ ಬೇಕು? ದ್ವೇಷ ಮತ್ತು ಹಿಂಸೆಯ ಮೂಲಕ ಇದರ ತೀರ್ಮಾನವನ್ನು ಮಾಡೋಣವೇ? ಇದಕ್ಕೆ ಬದಲು ವಿನೋಬಾ ದೇಶದ ಮುಂದೆ ಭೂದಾನ ಯಜ್ಞದ ರೂಪದಲ್ಲಿ ಒಂದು ಹೊಸ ಮಾರ್ಗವನ್ನಿಟ್ಟರು. ಏಶಿಯಾ ತುಂಬಾ, ಚೀನಾ, ಬರ್ಮಾ ದೇಶಗಳಲ್ಲೂ,

ಧರ್ಮ ರಹಸ್ಯ

—ಸ್ವಾಮಿ ನಾರಾಯಣಾನಂದ—

(೧) ಸ್ವಾರ್ಥಿಕ ಜೀವನದಲ್ಲಿ ರಜೆ ಎಂಬುದಿಲ್ಲ. ಯಾವಾಗಲೂ ಎಚ್ಚರಿಕೆಯಿಂದಿರಬೇಕಲ್ಲದೆ; ಅನವರತ ಕಾರ್ಯ ಪ್ರವರ್ತನಾಗಿರಬೇಕು.

(೨) ಎಲ್ಲಾ ಉತ್ತಮ ಕರ್ಮಗಳಿಂದಲೂ ಹಿತವಿದೆ. ಸಮಾನಾದ ನಾಲಗೆಯು ಸ್ವಾಗತಿಸಲ್ಪಡುತ್ತದೆ. ಅಕರ್ಮ ಬಿರುಸು ನುಡಿಗಳು ಮನುಷ್ಯನಿಗೆ ಯೋಗ್ಯವಲ್ಲ.

(೩) ಮಾನವ ಜೀವನದಲ್ಲಿ ಸುಖಾಪೇಕ್ಷೆಯೇ ಒಂದು ರೋಗವಾಗಿ ಪರಿಣಮಿಸುವದು. ಪೂರ್ಣ ಸುಖಮಯದ ಜೀವನದಲ್ಲಿ ತಿರುಳಿಲ್ಲ. ದುಃಖ ಮಿಶ್ರಿತ ಸುಖವೇ ಬಾಳಿನ ತಿರುಳು

(೪) ಮೃತ್ಯುವು ಯಾವ ಕ್ಷಣಕ್ಕೆ ಯಾರನ್ನು ಆಹುತಿ ತೆಗೆದುಕೊಳ್ಳುವದೆಂದು ಹೇಳಲಾಗುವುದಿಲ್ಲ. ಯಾರಿಗಾಗಿಯೂ ಅದು ತಡೆದು ನಿಲ್ಲದು. ಆದ್ದರಿಂದ ಇಂದಿನದೇ ಕಡೆಯ ದಿನವೆಂದು ಮಾಡಬೇಕಾದುದನ್ನು ಇಂದೇ ಮಾಡು.

(೫) ಆತ್ಮದರ್ಶನಕ್ಕಿಂಥಾ ಮಿಗಿಲಾದ ನೋಟವಿಲ್ಲ. ಬ್ರಹ್ಮಚರ್ಯಕ್ಕಿಂಥಾ ಉತ್ತಮ ಪಾವಿತ್ರ್ಯತೆ ಇಲ್ಲ. ಭೋಗಾಪೇಕ್ಷೆಗಿಂಥಾ ದೊಡ್ಡ ಅನರ್ಥವಿಲ್ಲ. ದೈವಸಾಕ್ಷಾತ್ಕಾರಕ್ಕಿಂತ ಹಿರಿದಾದ ಪುರುಷಾರ್ಥವಿಲ್ಲ.

(೬) ಆಳುವವರು ಚಾಡಿಯಿಂದ ಕೆಡುತ್ತಾರೆ. ಸನ್ಯಾಸಿಯು ಆಶಾಬಂಧನದಿಂದ ಕೆಡುತ್ತಾನೆ. ಮಕ್ಕಳು ಹದ ತಪ್ಪಿದ ಪ್ರೀತಿಯಿಂದ ಕೆಡುತ್ತಾರೆ. ದುಷ್ಟರ ಸಂಗದಿಂದ ನೀತಿ ಕೆಡುತ್ತದೆ.

(೭) ಅಯೋಗ್ಯನನ್ನು ಹೊಗಳಬೇಡ. ಹೊಗಳಲರ್ಹನಾದವನನ್ನು ತುಚ್ಛೀಕರಿಸಬೇಡ. ನಿನ್ನ ಮನಸ್ಸಿಗೆ ಸಮ್ಮತವಾಗದುದನ್ನು ಹೇಳಬೇಡ.

(೮) ಮನುಷ್ಯನಲ್ಲಿ ಪ್ರತಿಯೊಂದಕ್ಕೂ ಮುಪ್ಪು ಬರುತ್ತದೆ. ಆತನ ಶರೀರ ಆಲೋಚನಾ ಹಾಗೂ ಕ್ರಿಯಾ ಶಕ್ತಿಗಳಿಗೆಲ್ಲಾ ಮುಪ್ಪಿದೆ. ಆದರೆ ಆತನ ಆಸೆಗೆ ಮುಪ್ಪಿಲ್ಲ. ಅದು ವಯಸ್ಸು ಹೆಚ್ಚಾದಂತೆ ಹೆಚ್ಚಾಗುತ್ತದೆ. ಆದ್ದರಿಂದ ಎಚ್ಚರಿಕೆ ಇರಲಿ.

(೯) ನಾವು ಹೇಗಿರುವೆವೋ ಹಾಗೆಯೇ ನಮ್ಮ ಸುತ್ತು ಮುತ್ತಲಿನವರು. ಮನಸ್ಸಿನ ಭಾವನೆಗೆ ಕಡಿವಾಣ ಹಾಕಿ ವರ್ತಿಸುವದಾದರೆ ಸರ್ವವೂ ಯೋಗ್ಯವೆನಿಸುವದು. ಆದ್ದರಿಂದ ಪ್ರತಿಯೊಂದರಲ್ಲಿ ಹಿಡಿತವಿರಲಿ.

(೧೦) ಕಷ್ಟ ಕಾರ್ಪಣ್ಯಗಳು ಮಾನವನ ನಿಜತ್ವವನ್ನು ಹೊರಗೆಡಹುವವು. ಕಷ್ಟ ಬಂದಾಗ ದಾರಿ ತಪ್ಪದೆ ಸತ್ಯ ಪಥ ಹಿಡಿದು, ಎದೆ ಮುಂದೆ ಮಾಡಿ ಸಾಗುವವನೇ ಆದರ್ಶನಾಗುವನು.

ಭೂಮಿ ಸಮಸ್ಯೆ ಇಂದು ಕಾಡ್ಗಿಚ್ಚಿನಂತೆ ಹರಡತೊಡಗಿದೆ— ವಿಪ್ಲವವಾಗತೊಡಗಿದೆ. ಆದರೆ ಭಾರತದಲ್ಲಿ ಒಂದು ಶಕ್ತಿ ಆವಿರ್ಭೂತವಾಗತೊಡಗಿದೆ. ಜನರಲ್ಲಿ ಸಾಮರ್ಥ್ಯವುಂಟಾಗತೊಡಗಿದೆ. ಇಲ್ಲಿ ಒಂದು ಪ್ರೇಮಮಯ ಶಾಂತಿಯಾಗತೊಡಗಿದೆ.

ಬಡವರಿಂದ ದಾನ ಏಕೆ?

ಬಡವರಿಂದ ದಾನ ಏತಕ್ಕೆ ತೆಗೆದುಕೊಳ್ಳುತ್ತೀರಿ? ಎಂದು ಕೇಳುತ್ತಾರೆ. ಅದಕ್ಕುತ್ತರ ಹೊಸ ಚೇತನ ನಿರ್ಮಾಣ ಮಾಡುವದಕ್ಕೋಸ್ಕರ ಈ ದಾನ— ನಾವು ಬಡವರ ಸೈನ್ಯ ತಯಾರು ಮಾಡುತ್ತಿದ್ದೇವೆ ಈ ಮಹಾ ಯಜ್ಞಕ್ಕೋಸ್ಕರ ಜನಶಕ್ತಿ ನಿರ್ಮಾಣ ಮಾಡುತ್ತಿದ್ದೇವೆ. ಇದು ದರಿದ್ರನಾರಾಯಣರ ಕೆಲಸವೇ ಆಗಿದೆ. ಇದು ಒಂದು ರಾಷ್ಟ್ರೀಯ ಪರ್ವ. ಯಾವ ಕ್ರಾಂತಿಗೋಸ್ಕರ ತಾವೆಲ್ಲ ಕೂಗುತ್ತೀರೋ ಆ ಜನ ಕ್ರಾಂತಿ ಈ ಭೂದಾನದಿಂದ ಸಫಲವಾದೀತು. ಇದನ್ನು ನಾನು ಆಗ್ರಹ ಪೂರ್ವಕವಾಗಿ ಕ್ರಾಂತಿಕಾರಕವಾಗಿ ಯುವಕರಿಗೆ ಹೇಳಲಪೇಕ್ಷಿಸುತ್ತೇನೆ.

ಈ ದೇಶ ಬುದ್ಧನ ದೇಶ, ಗಾಂಧಿಯ ದೇಶ. ಈ ದೇಶದಿಂದ ಸಮಾಜದೊಳಗಡೆ ಇರುವ ದೋಷವನ್ನು ಗಾಂಧೀಜಿಯ ಮಾರ್ಗದಿಂದ ಹೇಗೆ ಕಿತ್ತೊಗೆಯಬಹುದು ಎನ್ನುವ ಉತ್ತರವನ್ನು ಮಾನವ ಸಂಸಾರಕ್ಕೆ ಈ ದೇಶ ಕೊಡಲಿ ಎಂದು ಜಗತ್ತು ಅಪೇಕ್ಷೆಯನ್ನಿಟ್ಟು ಕೊಂಡಿದೆ. ಆದ್ದರಿಂದ ನೀವು ಭೂಮಿಪತಿಗಳಿಂದ ಭೂಮಿಯನ್ನು ಹೇಗೆ ತೆಗೆದುಕೊಳ್ಳುತ್ತೀರಿ? ಅವರನ್ನು ಹೊಡೆದು ಕೊಂದು ತೆಗೆದುಕೊಳ್ಳುತ್ತೀರೋ? ಹಾಗಾದರೆ ನೀವು ಮಾನವ ಸಂಸಾರಕ್ಕೆ ಏನು ಕಲಿಸಿಕೊಟ್ಟಂತಾಯಿತು. ಪರಿವರ್ತನೆ ಮಾಡುವ ಮಾರ್ಗ ಇದೇ ಎಂದು ಅವರಿಗೆ ನೀವು ತೋರಿಸಿ ಕೊಡುತ್ತೀರೋ? ಇಂದು ನಮಗೆ ಮತಾಧಿಕಾರ ಸಿಕ್ಕಿದೆ. ಮತ ಕೊಡುವವರು ಬಡವರೇ ಆಗಿದ್ದಾರೆ. ಇದರ ಅರ್ಥ ಪರಿವರ್ತನೆ ಆಗಿಯೇ ತೀರುತ್ತದೆ. ಯಾರ ಹತ್ತಿರ ಭೂಮಿ ಇದೆಯೋ ಅವರ ಉದ್ಧಾರದ ಮತ್ತು ಭೂಮಿಯಿಲ್ಲದವರ ಉದ್ಧಾರದ ರೀತಿಯನ್ನು ವಿನೋಬಾ ತೋರಿಸಿ ಕೊಟ್ಟಿದ್ದಾರೆ. ಇಂದು ಯಾವ ಭೂಮಿಯು ಹಂಚುವದಕ್ಕೆ ಸಿದ್ಧವಾಗಿರದಿದ್ದರೂ ಹಂಚಿಕೆಯಾಗಿಯೇ ಹೋಗುತ್ತದೆ. ಇದರಲ್ಲಿ ಸಂದೇಹವಿಲ್ಲ. ಆದರೆ ಭೂಮಿ ಹೀನರ ಮತ್ತು ಭೂಮಿ ಒಡೆಯರ ಮಧ್ಯದಲ್ಲಿ ಕಹಿ ವಾತಾವರಣ ಇರಬಾರದು ಎನ್ನುವದಕ್ಕಾಗಿಯೇ ವಿನೋಬಾರ ಈ ಹೊಸ ಪ್ರಯೋಗ ಹಂಚಿಕೆಯಾಗುವದು ಈಗ ನಿಲ್ಲಲು ಸಾಧ್ಯವಿಲ್ಲ.

ಕ್ರಾಂತಿಯ ಗಾಳಿ

ಭೂಮಿ ಕೇಳುವುದರ ಮೂಲಕ ಭೂಸಮಸ್ಯೆ ಬಗೆಹರಿಯ ಬಲ್ಲದೇ? ಎಂದು ಜನ ಕೇಳುತ್ತಾರೆ. ಹೌದು, ಎನ್ನುತ್ತೇನೆ ನಾನು. ವಿನೋಬಾರ ಕಾಲ್ನಡಿಗೆ ಯಾತ್ರೆಯಿಂದ ಗತ ತಿಂಗಳಲ್ಲಿ ಎಂತಹ ವಾತಾವರಣ ಉಂಟಾಗಿದೆ, ನೋಡಿ! "ನಮ್ಮ ಒಳಗಡೆ ಯಾವ ವಸ್ತು ಇದೆಯೋ ಅದೇ ವಸ್ತು ಎಲ್ಲರ ಒಳಗಡೆ ಇರುವದಾದರೆ ಪರಿವರ್ತನೆ ಆಗಿಯೇ ತೀರುತ್ತದೆ" ಎನ್ನುತ್ತಾರೆ ವಿನೋಬಾ. ಭೂಮಿ ಕಮ್ಮಿಯೇ ಸಿಗಲಿ, ಆದರೆ ಈ ವಾತಾವರಣವನ್ನು ತಡೆಯುವವರಾರು?

ಈ ಕೆಲಸಕ್ಕೋಸ್ಕರ ಸತ್ಯಾಗ್ರಹದ ಆವಶ್ಯಕತೆ ಬೇಕಿಲ್ಲ. ನಮ್ಮ ಭಾರತೀಯ ಸಂಸ್ಕೃತಿಯ ಉದಾತ್ತ ಪರಂಪರೆ ರಾಶಿ ರಾಶಿಯಾಗಿ ಬಿದ್ದಿದೆ. ನನಗೆ ವಿಶ್ವಾಸವಿದೆ. ಸ್ವಾರ್ಥದ ಗೋಡೆಯು ಕುಸಿದೀತು. ನ್ಯಾಯದ ಸ್ಥಾಪನೆಯಾದೀತು ಎಂದು ವಾತಾವರಣದಲ್ಲಿ ಇಂದು ಚೇತನ ಬರತೊಡಗಿದೆ. ಸ್ವರಾಜ್ಯ ಸಂಗ್ರಾಮಕಾಲದಲ್ಲಿಯ ವಾಯು ಮಂಡಲ ದೇಶದಲ್ಲಿ ಸಿದ್ಧವಾಗತೊಡಗಿದೆ. ಎಲ್ಲಾ ಬಡವರೂ ವಿನೋಬಾರ ಸಿಪಾಯಿಗಳಾಗುತ್ತಿದ್ದಾರೆ. ಕ್ರಾಂತಿಯ ಗಾಳಿ ಸಿದ್ಧವಾಗತೊಡಗಿದೆ. ನಾನು ನಿಮಗೆ ಹೆದರಿಸುತ್ತಾ ಇಲ್ಲ. ವಾಸ್ತವಿಕತೆಯ ತಿಳುವಳಿಕೆಯನ್ನು ಕೊಡುತ್ತಿದ್ದೇನೆ. ಇದು ಗಾಂಧೀ ದೇಶ. ಇಲ್ಲಿ ನ್ಯಾಯಸ್ಥಾಪನೆಯಾಗಿಯೇ ತೀರುತ್ತದೆ. ಇದು ಭೂಮಿ ದಾನವಲ್ಲ. ಭೂಮಿ ನ್ಯಾಯದ ಆರಂಭ.

'ಚೇತನಾ'

THE CANARA BANKING CORPORATION LIMITED.
(ncorporated in India with limited liability)
[ESTD: 1906]

NOTICE.

we have great pleasure in announcing that the Office of the Bank at Mercara will be Shifted to the Bank's own newly-constructed premises at Pioneer Road on Saturdoy, the 16th May, 1953 and it will commence regular work at the new premises from Monday, the 18th May, 1953.

S. RANGA RAO. B. A.,
AGENT.

ನಗು ಮಲ್ಲಿಗೆ

ಮಳೆಗಾಲ. ನೆರೆಯು ಬಹು ಹೆಚ್ಚು ಬಂದಿತ್ತು. ಮನೆಮಟಗಳು ಮುಳುಗಿ ಹೋಗಿದ್ದವು. ಮಹಾ ಆಶಾವಾದಿಯಾದ ರಾಮುವು ತನ್ನ ಮನೆಯ ಉಪ್ಪರಿಗೆಯಲ್ಲಿ ಕುಳಿತು ನೆರೆಯ ಪ್ರಚಂಡ ನೀರನ್ನು ನೋಡುತ್ತಿದ್ದನು. ನೆರೆಮನೆಯ ಕೃಷ್ಣನು ದೋಣಿಯಲ್ಲಿ ಕುಳಿತು ಮನೆಯ ಮುಂದುಗಡೆಗಾಗಿ ದಾಟಿದನು.

ರಾಮು—ನಮಸ್ಕಾರ ಕೃಷ್ಣಾ.

ಕೃಷ್ಣ—ನಮಸ್ಕಾರ. ನಿನ್ನ ಕೋಳಿಗಳೆಲ್ಲ ನೆರೆಯಲ್ಲಿ ಕೊಚ್ಚಿಹೋದವಲ್ಲಾ.

ರಾಮು—ಆದರೆ ಬಾತುಗಳು ಈಜಬಲ್ಲವು!

ಕೃಷ್ಣ—ನಿನ್ನ ಕಿತ್ತಳೆ ತೋಟ ಮುಳುಗಿ ಹೋಗಿದೆಯಲ್ಲಾ.

ರಾಮು—ಈ ವರ್ಷ ಫಸಲೇ ಕಡಿಮೆಯಲ್ಲವೆ?

ಕೃಷ್ಣ—ನಿನ್ನ ಮನೆಯ ಕಿಡಿಕಿಯ ವರೆಗೆ ನೀರು ಬಂದು ಬಿಟ್ಟಿದೆಯಲ್ಲಾ.

ರಾಮು—ಆ ಕಿಡಿಕಿಗಳನ್ನು ತೊಳೆಯದೆ ಬಹು ಸಮಯವಾಗಿತ್ತು!

* * *

ರಾಮಚಂದ್ರನು ಹೆಂಗಸರ ಬಗ್ಗೆ ಒಂದೇ ನೋವಾಗುವ ಮಾತಾಡುವವನಲ್ಲ. ಒಮ್ಮೆ ಮಾತಾಡುತ್ತಾ 'ನಾನು ಜಗತ್ತಿನಲ್ಲಿ ಒಬ್ಬಳಾದರೂ ಕುರೂಪಿ ಹೆಂಗಸನ್ನು ಕಂಡಿಲ್ಲ' ಎಂದನು.

ಪಕ್ಕದಲ್ಲಿ ನಿಂತಿದ್ದ ಮೂಗು ಚಪ್ಪಟೆಯಾದ ಕುರೂಪಿ ಹೆಂಗಸಳು ಧೈರ್ಯದಿಂದ 'ನನ್ನ ರೂಪದ ವಿಷಯ ಏನು ಹೇಳುವೆ' ಎಂದು ಕೇಳಿದಳು.

ರಾಮಚಂದ್ರ—ಇತರ ಹೆಂಗಸರಂತೆ ನೀನೂ ದೇವರಿಂದ ಪರಿಪೂರ್ಣಳಾಗಿ ಸ್ವರ್ಗದಿಂದ ಬಂದ ದೇವತೆ. ಆದರೆ ನೀನು ಭೂಮಿಗೆ ಬರುವಾಗ ನಿನ್ನ ಮೂಗು ಮೊದಲು ಭೂಮಿಗೆ ತಾಕಿದ್ದರಿಂದ ಮೂಗು ಚಪ್ಪಟೆಯಾಗಿದೆ. ಅದು ನಿನ್ನ ತಪ್ಪಲ್ಲ.

* * *

ತುಂಬಾ ವಯಸ್ಸಾದ ಆದರೆ ತುಂಬಾ ಪುಸ್ತಕ ಓದಿದ ಒಬ್ಬನನ್ನು ಕೋರ್ಟಿಗೆ ತರಲಾಗಿತ್ತು. ಆತನು ಸಾರಾಯಿ ಕುಡಿದು ಎದ್ವಾತದ್ವ ವರ್ತಿಸಿದನೆಂಬುದೇ ತಕ್ರಾರಾಗಿತ್ತು.

ಜಡ್ಜರು—ನಿನ್ನ ಮೇಲೆ ಕುಡಿದು ಮತ್ತನಾಗಿ ವರ್ತಿಸಿದ ತಪ್ಪಿದೆ. ನಿನ್ನನ್ನು ಶಿಕ್ಷಿಸಬಾರದೆಂಬುದಕ್ಕೆ ಏನಾದರೂ ವಾದವಿದೆಯೋ?

ಮುದುಕ—ಮಾನವನು ಮಾನವನಿಗೆ ಕೊಡುವ ಕಿರುಕುಳದಿಂದ ಸಹಸ್ರಾರು ಜನರು ಕಣ್ಣೀರು ಮಿಡಿಯಬೇಕಾಗುತ್ತದೆ. ನಾನು ಬೈರನನಂತೆ ನೀತಿಗೆಟ್ಟವನಲ್ಲ. ಕೀಟ್ಸ್‌ನಂತೆ ವಂಚಕನಲ್ಲ. ಟೆನ್ನಿಸನನಂತೆ ಹೇಡಿಯಲ್ಲ. ಶೇಕ್ಸ್‌ಪಿಯರನಂತೆ ಅಶ್ಲೀಲ ಲೇಖಕನಲ್ಲ. ಆದ್ದರಿಂದ.......

ಜಡ್ಜ—ಸಾಕು ನಿನಗೆ ಏಳು ದಿನ ಶಿಕ್ಷೆ ವಿಧಿಸಿದ್ದೇನೆ. ಪೋಲೀಸ್ ಆಫೀಸರನ್ನು ನೋಡಿ—ಈತನು ಹೇಳಿದ ಹೆಸರುಗಳನ್ನು ಬರೆದುಕೊಂಡು ಅವರನ್ನು ದಸ್ತಗಿರಿ ಮಾಡಿರಿ. ಅವರು ಈತನಿಗಿಂಥಾ ಕೆಟ್ಟವರಿರಬೇಕು!

* * *

ಆಕೆ— ನೀವು ಹ್ಯಾಟ್ ತೆಗೆಯುತ್ತಿರುವುದೇಕೆ? ಅವರು ರಾಷ್ಟ್ರಗೀತೆಯನ್ನು ಹಾಡಲು ಇನ್ನೂ ಪ್ರಾರಂಭಿಸಿಲ್ಲ,

ಆತ— ಇಲ್ಲ. ಅವರು ಸಂಗೀತದ ಕೊಲೆಮಾಡಿದರು. ಮೃತವಾದ ಸಂಗೀತಕ್ಕೆ ನನ್ನ ಸಂತಾಪ ಸೂಚಿಸಲು ಹ್ಯಾಟ್ ತೆಗೆದೆನು.

* * *

ಆಂಟೀ, ನೀವು ನಟಿಯರೋ?

ಇಲ್ಲ—ಮಗೂ, ಏಕೆ ಹಾಗೆ ಕೇಳುವೇ?

ಏಕೆಂದರೆ ನೀನು ಬಂದೊಡನೆಯೇ ಹೊಸ ದೃಶ್ಯ ತೋರಿಬರುವದೆಂದು ಅಂಕಲ್ ಹೇಳಿದರು.

* * *

ಆತ—ನಮ್ಮ ಮನೆಯ ಕೋಳಿಯು ನಿಮ್ಮ ತೋಟಕ್ಕೆ ನುಗ್ಗಿ ಹೂಗಳನ್ನು ತಿಂದಿದೆ.

ಈತ—ಹೋಗಲಿ, ಆದರೆ ನಮ್ಮ ನಾಯಿಯು ನಿಮ್ಮ ನಾಯನ್ನು ಕಚ್ಚಿ ಸಾಯಿಸಿದೆ.

ಆತ—ಇರಲಿ, ನಮ್ಮ ಹುಡುಗನು ನಿಮ್ಮ ನಾಯಿಯ ಮೇಲೆ ಕಾರು ಬಿಟ್ಟು ಬಿಟ್ಟನು.

ಈತ—ಆದಿರಲಿ, ನನ್ನ ಮಗಳು ನಿಮ್ಮ ಮಗನೊಂದಿಗೆ ಮದುವೆಗೆ ಒಪ್ಪಿದ್ದಾಳೆ!

* * *

ಏಜಂಟನೊಬ್ಬನು ರಸ್ತೆಯ ಕರೆಯಲ್ಲಿ ನಿಂತು ಕುಪ್ಪಿಯೊಂದನ್ನು ಹಿಡಿದು ಕೇಳುತ್ತಿದ್ದನು. 'ಇದು ಅಮೃತ. ಇದರ ಸೇವನೆಯಿಂದ ಚಿರಂಜೀವಿಗಳಾಗಬಹುದು. ನನ್ನನ್ನು ನೋಡಿ. ಮುನ್ನೂರು ವಯಸ್ಸಾಗಿದ್ದರೂ ದೃಢಕಾಯನಾಗಿರುವೆನು.'

'ನಿಜವಾಗಿಯೂ ಆತನಿಗೆ ಅಷ್ಟು ವಯಸ್ಸಾಗಿರಬಹುದೇ?' ಏಜಂಟನ ಜೊತೆಯ ಔಷಧಿ ಮಾರುವವನನ್ನು ಒಬ್ಬನು ಕೇಳಿದನು.

"ನನಗೆ ಗೊತ್ತಿಲ್ಲ. ಏಕೆಂದರೆ ನಾನು ಆತನಲ್ಲಿ ಸೇರಿ ಬರೆ ನೂರು ವರ್ಷಗಳು ಮಾತ್ರ ಆಗಿವೆ'

ವೀರಾಜಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಟಿ. ಎಸ್. ಗೋವಿಂದರಾಜು !

ದಕ್ಷಿಣ ಆಫ್ರಿಕದಲ್ಲಿ ಮೂಲನರಿಗೆ ಪ್ರಚಂಡ ವಿಜಯ

ದಕ್ಷಿಣ ಆಫ್ರಿಕದ ಪಾರ್ಲಿಮೆಂಟಿಗೆ ಹೊಸ ಚುನಾವಣೆಯು ನಡೆದು ಫಲಿತಾಂಶವು ಹೊರಬಿದ್ದಿದೆ. ಡಾ. ಮೂಲನರ ರಾಷ್ಟ್ರೀಯ ಪಕ್ಷವೇ ಇತರ ಎಲ್ಲಾ ಪಕ್ಷಗಳಿಗಿಂಥಾ ಅತ್ಯಧಿಕ ಮತಗಳನ್ನು ಹೊಂದಿ ಪ್ರಚಂಡ ವಿಜಯ ಸಾಧಿಸಿರುವುದು. ಹೊಸ ಎಸೆಂಬ್ಲಿಯಲ್ಲಿ ಬೇರೆ ಬೇರೆ ಪಕ್ಷಗಳ ಬಲ ಈ ಪ್ರಕಾರವಾಗಿದೆ. ರಾಷ್ಟ್ರೀಯ ಪಕ್ಷ ೯೪; ಸಂಯುಕ್ತ ಪಕ್ಷ ೫೭; ಮಜೂರ ಪಕ್ಷ ೪; ಡಾ. ಮೂಲನರ ಈ ಅದ್ಭುತ ವಿಜಯವು ಪ್ರಪಂಚದ ಎಲ್ಲೆಡೆಗಳಲ್ಲಿ ತೀವ್ರ ಸಂತಾಪಕ್ಕೆ ಹಾಗು ಭವಿಷ್ಯದ ಕುರಿತು ಅನಿಶ್ಚಿತತೆಗೆ ಕಾರಣವಾಗಿದೆ

ನಕಲಿ ಚಹಾ ಸೊಪ್ಪು

ಹೊರ ಪ್ರದೇಶಗಳಿಗೆ ಕಳಿಸಲು ಸಿದ್ಧಗೊಳಿಸಲ್ಪಟ್ಟಿದ್ದ ಸುಮಾರು ೨೦,೦೦೦ ರಾತ್ತಲುಗಳಷ್ಟು ನಕಲಿ ಚಹಾ ಸೊಪ್ಪನ್ನು ಅಬ್ಕಾರಿ ಅಧಿಕಾರಿಗಳು ಇತ್ತೀಚೆಗೆ ವಿರುದುನಗರದಲ್ಲಿ ವಶಪಡಿಸಿಕೊಂಡರು. ಅವರೆ ಜವೆಗೋಧಿ ಮತ್ತು 'ಅಹತಿ' ಎಲೆಗಳು ವಿರುದ್ಧ ನಗರದ ಹತ್ತಿರದ ಹಳ್ಳಿಹಳ್ಳಿಗಳಲ್ಲಿ ವಿಪುಲವಾಗಿ ದೊರೆಯುತ್ತಿದ್ದು, ಆ ಎಲೆಗಳಿಗೆ ಸೋಡಾ ಬೈಕಾರ್ಬೊನೇಟ್ ಮತ್ತು 'ಕೊಂಗೊ ಎಸೆನ್ಸ್' ಸೇರಿಸಿ ಚಹಾ ಸೊಪ್ಪಿನ ಹುಡಿಯನ್ನೇ ಹೋಲುವ ಈ ಕೃತಕ ಮಾಲನ್ನು ತಯಾರಿಸುತ್ತಿದ್ದರೆಂದು ತಿಳಿದು ಬಂದಿದೆ. ಆ ಕುರಿತು ಮುಂದಿನ ತನಿಖೆ ನಡೆಯುತ್ತಿದೆ.

ಅಡಕೆ ಸಿಪ್ಪೆಯಿಂದ ರಟ್ಟು

ಅಡಿಕೆ ಸಿಪ್ಪೆಯಿಂದ ರಟ್ಟು ತಯಾರಿಸಲು ಸಾಧ್ಯವಿದೆ ಎಂಬುದಾಗಿ ಡೆಹರಾಡೂನಿನಲ್ಲಿರುವ ಭಾರತ ಸರಕಾರದ ಅರಣ್ಯ ಸಂಶೋಧನಾ ಇಲಾಖೆಯವರು ಕಂಡು ಹಿಡಿದಿರುವದು.

ಈ ಹೊಸ ಪ್ರಯೋಗಕ್ಕಾಗಿ ಮದ್ರಾಸು ಸರಕಾರದವರು, ಮೂಡಬಿದ್ರೆಯ ಪೂರ್ಣಿಮಾ ಪೇಪರ್ ಮಿಲ್ಲಿನ ಸಹಕಾರ ಪಡೆಕೊಂಡಿರುವರೆಂದು ಕೇಳುತ್ತೇವೆ.

ನಮ್ಮ ಜಿಲ್ಲೆಯಲ್ಲಿ ಅಡಿಕೆ ವಿಪುಲವಾಗಿ ಬೆಳೆಯುತ್ತದೆ. ಇದರ ಸಿಪ್ಪೆಯು ಈ ವರೆಗೆ ವ್ಯರ್ಥವಾಗಿ ಹೋಗುತಿತ್ತು ಅದನ್ನೀಗ ಸದುಪಯೋಗ ಮಾಡಿಕೊಳ್ಳಲು ಅವಕಾಶ ದೊರೆತಿದೆ.

ಕಾಂಗ್ರೆಸ್ ಸೆಕ್ರೆಟರಿಗಳ ಆಯ್ಕೆ

ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷವು ತಾ. ೩೪ರಲ್ಲಿ ಮುಂದಿನ ಅವಧಿಗೆ ತನ್ನ ಕಾರ್ಯದರ್ಶಿಗಳನ್ನಾಗಿ ಶ್ರೀಗಳಾದ ಬಲವಂತಸ್ಸೆ, ಮೆಹತಾ, ಬಿ ಶಿವರಾವ್ ಮತ್ತು ಅಗರವಾಲ ಇವರನ್ನು ಸೆಕ್ರೆಟರಿಗಳನ್ನಾಗಿ ಆರಿಸಿತು. ಜನರಲ್ ಸೆಕ್ರೆಟರಿಯಾಗಿ ಶ್ರೀ ಹರೇಕೃಷ್ಣ ಮೆಹ್ತಾಬರನ್ನು ಕಳೆದ ವಾರ ಅವಿರೋಧವಾಗಿ ಆರಿಸಲಾಗಿದೆ.

!! ಮಧು ಪರ್ಕ. !!

ಗಾಂಧೀಜಿಯವರು [illegible] ನಗರದಲ್ಲಿದ್ದಾಗ ಇಟೆಲಿಯ ದೊರೆಯ [illegible] ಅವರನ್ನು ನೋಡಲು ಬಂದಳು. ಬಂದವಳು [illegible]. ಗಾಂಧೀಜಿಯ ಭಾಷೆ ಆಕೆಗೆ ಬಾರದು. ಗಾಂಧೀಜಿಗೆ ಆಕೆ ನಿಲವಲ್ಲಿ ತಿಳಿತಳು. ಗಾಂಧೀಜಿಯ ಭಾಷೆ ಆಕೆಗೆ ಬಾರದು. ಗಾಂಧೀಜಿಗೆ ಆಕೆಯ ಭಾಷೆ ತಿಳಿಯದು. ಗಾಂಧೀಜಿಯು ನೂಲು ಮಾಡುತ್ತಿದ್ದರು. ಕ್ಷಣ ಕಾಲ ಆಕೆಯನ್ನು ನೋಡಿ ನಗಾಡಿದರು. ಆಕೆಯೂ ನಗಾಡಿದಳು. ಅರಸ ಕುಮಾರಿಯು ತಾನು ತಂದಿದ್ದ ಹಣ್ಣಿನ ಬುಟ್ಟಿಯನ್ನು ಗಾಂಧೀಜಿಯ ಮುಂದಿಟ್ಟು 'ಇವು ಹಿಂದೂಸ್ಥಾನೀ ಅಂಜೂರಗಳು. ನಿಮಗೆ ದಾರಿಯ ಫಲಹಾರಕ್ಕಾಗಲಿ ಎಂದು ತಂದಿರುವೆನು' ಎಂದಳು.

ಬಾಪು ಬುಟ್ಟಿಯನ್ನು ತೆಗೆದುಕೊಂಡು ಹಣ್ಣುಗಳನ್ನು ನೋಡಿದರು. ಆಕೆಗೆ ತಮ್ಮ ಸಂತೋಷವನ್ನು ಸೂಚಿಸಿದರು. ಮತ್ತೆ ನುಡಿದರು. 'ತಂಗೀ ಇವು ಅಂಜೂರದ ಹಣ್ಣುಗಳಲ್ಲ' ಚಿಕ್ಕರೆ ಮಾತೇ ಆಗಿರಲೀ, ಯಾರೇ ಹೇಳಲಿ. ಪ್ರತಿಯೊಂದು ಗಾಂಧೀಜಿಗೆ ಸತ್ಯವಾಗಿರಬೇಕು.

'ಏಕೆ? ಅವು ಅಂಜೂರದ ಹಣ್ಣುಗಳೇ ಆಗಿವೆ'. ಅರಸು ಕುಮಾರಿ ಒತ್ತಿ ಹೇಳಿದಳು.

ಅರಸು ಕುಮಾರಿಯಾಗಲೀ ಅಪ್ಸರ ಕನ್ಯೆಯಾಗಲೀ ಗಾಂಧೀಜೀಯವರಲ್ಲಿ ಅಸತ್ಯಕ್ಕೆ ಸ್ಥಾನವೆ ಇಲ್ಲ.

'ನಾವು ಅಂಜೂರ ಎನ್ನುವದ. ಈ ಹಣ್ಣುಗಳನ್ನು' ಎಂದರು. ಮತ್ತೆ ಆಕೆಯ ಮೃದುಸ್ವಭಾವಕ್ಕೆ ನೋವಾಗಬಾರದೆಂದು 'ಯಾವ ಹೆಸರಾದರೇನು? ದಾರಿಯಲ್ಲಿ ಫಲಹಾರಕ್ಕೆ ಒಳ್ಳೆ ರುಚಿಯಾಗಿರುತ್ತದೆ. ತುಂಬಾ ಸಂತೋಷ' ಎಂದರು.

ಮಹಾರಾಣಿಯವರು ಸ್ವತಃವಾಗಿ ತಾವೇ ಇದನ್ನು ನಿಮಗಾಗಿ ಕಟ್ಟಿ ಕೊಟ್ಟರು" ಅರಸು ಕುಮಾರಿಯು ಗೆಲುವಿನಿಂದ ಹೇಳಿದರು.

'ಅವರ ಪ್ರೇಮಕ್ಕೆ ನಾನು ಕೃತಜ್ಞನು' ಎಂದರು ಗಾಂಧೀ.

ಕೊಂಚ ಹೊತ್ತು ಮಾತುಕತೆಯಾದ ಮೇಲೆ ಮೇರಿಯೂ ಹೊರಟಳು. ಹೋಗುವಾಗ ಬಾಪೂವಿನ ಕೈ ಕುಲುಕಿ 'ನಿಮಗೆ ದೇವರು ಒಳ್ಳೆದು ಮಾಡಲಿ' ಎಂದಳು.

ಚೀಯಾಂಗರು ಪಾಳೆಯ ಯೋಜನೆಯನ್ನು ಬಿಟ್ಟು ಬಿಟ್ಟರೆ?

ಕೊರಿಯದಲ್ಲಿ ಸಂಧಾನದ ಮಾತುಕತೆಗಳು, ಸಫಲವಾಗುತ್ತಿದ್ದು ಕೊರಿಯದಲ್ಲಿ ಯುದ್ಧವು ಕೊನೆಗೊಳ್ಳುವ ಸಂಭವ, ಶಾಂತಿಯು ಒಪ್ಪಂದಕ್ಕೆ ಬೇಗ ಸಹಿಯಾಗಬಹುದಾದ ನಿರೀಕ್ಷೆ ಇವೇ ಮೊದಲಾದ ಅಂತರಾಷ್ಟ್ರೀಯ ವಿದ್ಯಮಾನಗಳನ್ನು ಅವಲೋಕಿಸಿ ಚಿಯಾಂಗ್ ಕೈಶೇಕರು ಚೀನದ ಮೂಲ ಭೂಮಿಯ ಮೇಲೆ ಧಾಳಿ ಇಡುವ ವಿಚಾರವನ್ನು ಸಂಪೂರ್ಣ ಬಿಟ್ಟಿರುವರೆಂದು ಟಾಯಪೆಯಿಂದ ಬಂದ ವರದಿಗಳು ಸಾರಿವೆ. ಆದರೂ ಕಮ್ಯೂನಿಸ್ಟರ ಕಾವಲು ಸಡಿಲಾದುದಿಲ್ಲವೆಂಬ ಬಗ್ಗೆಯೂ ನಿದರ್ಶನಗಳು ಕಂಡು ಬಂದಿವೆ. ಉದಾಹರಣೆಗಾಗಿ ಚೈನೀಸ್ ಕಮ್ಯೂನಿಸ್ಟರು ಫೋರ್ಮೋಸಕ್ಕೆ ಅಭಿಮುಖವಾಗಿ ಒಂದು ಜೆಟ್ ಬಾಂಬರ್ ಸ್ಥಾವರ್ದ್ರನ್ ರಚಿಸಿಕೊಂಡಿದ್ದಾರೆ. ಕೆಂಟನನ್ನು ನಿಲ್ದಾಣವನ್ನಾಗಿಟ್ಟುಕೊಂಡ ಒಂದು ಸೇನಾವಾಹಿನಿಯು ಸಂಗ್ರಹವಾಗಿದೆ. ಪೈನೆಸ್ ಪಲ್ಲಿರುವ ದ್ವೀಪ ಮತ್ತು ಶಾಂಘಾಯ್‌ವರೆಗೆ ಇರುವ ಕರಾವಳಿಯ ರಕ್ಷಣೆಯನ್ನು ಈ ಸೇನೆಯು ನೋಡಿಕೊಳ್ಳುವದು.

ಮರಣದ ಮೊದಲ ಉದಾರ ದಾನ

೩೦ ವರ್ಷ ವಯಸ್ಸಿನ ಸತೀಶಚಂದ್ರ ಪುಟ್ಟುಮಾಲ್ ಎಂಬವನು ಮಹಾರಾಷ್ಟ್ರ ಕ್ಷಮಾನಿಧಾರಣಾ ನಿಧಿಗೆ ಎಂಟು ರೂಪಾಯಿಗಳನ್ನೂ ಸ್ವಲ್ಪ ಬಟ್ಟೆಬರೆಗಳನ್ನೂ ಸಹಾಯವಿತ್ತು ಮೃತ್ಯುವನ್ನಪ್ಪಿದನು.

ಮುಂಬಯಿಯ ಬಣ್ಣದ ಫೈಗಾರಿಕೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಪುಟ್ಟುಮಾಲನು ತನ್ನ ಧನಿಯನ್ನು ಕೊಲೆಗೈದ ಅಪರಾಧಕ್ಕಾಗಿ ಮರಣದಂಡನೆಗೆ ಗುರಿಯಾಗಿದ್ದನು. ಆತನು ಗಲ್ಲಿಗೇರುವ ಸ್ವಲ್ಪ ಮೊದಲು ಕ್ಷಮಾನಿಧಾರಣೆಗಾಗಿ ತನ್ನ ಅಲ್ಪ ಕಾಣಿಕೆಯನ್ನು ಕೊಟ್ಟನು. ಆತನನ್ನು ತಾ. ೨೮ ಜೇಗ್ ಜಿಲ್ಲಾ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು.

ಭಾರತಕ್ಕೆ ನಾರ್ವೆಯ ಸಹಾಯ

ಭಾರತಕ್ಕೆ ಸಲ್ಲಿಸುವ ಸಹಾಯ ಯೋಜನೆಗಾಗಿ ಮಾಡಿಕೊಂಡ ವಿನಂತಿಯನ್ನು ಮನ್ನಿಸಿ ನಾರ್ವೆ ಪಾರ್ಲಿಮೆಂಟಿನ ೧೫೦ ಸದಸ್ಯರಲ್ಲಿ ೧೪೯ ಜನರು ತಮ್ಮ ಒಂದು ದಿನದ ಸಂಬಳವನ್ನು ದಾನ ಕೊಟ್ಟಿದ್ದಾರೆ ಇದು ೫೦೮ ಪೌಂಡುಗಳಷ್ಟಾಗುವದು. ಟ್ರಾವಂಕೂರು-ಕೊಚ್ಚಿನ್‌ಗಳಲ್ಲಿ ಪ್ರಾರಂಭವಾಗಿರುವ ಮೀನುಗಾರಿಕೆ ವ್ಯವಸಾಯ ಅಭಿವೃದ್ಧಿಗೆ ಸಹಾಯ ಮಾಡಲು ನಾರ್ವೆ ಪಾರ್ಲಿಮೆಂಟ್ [illegible] ಸಹಾಯ ನೀಡಬೇಕೆಂಬ ಸೂಚನೆಯನ್ನು ಸ್ವೀಕರಿಸಿದೆ. ನಾರ್ವೆಯ ಶಿಕ್ಷಕರು ಈ ಸಹಾಯ ನಿಧಿಗೆ ೩೫೦೦ ಪೌಂಡು ಕೂಡಿಸಿ ಕೊಟ್ಟಿದ್ದಾರೆ.

ಮದ್ಯದಂಗಡಿಗಳು ಪುನಃ ಪ್ರಾರಂಭ

೧೯೪೭ರಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷದ ಸರಕಾರವು ಜಾರಿ ಮಾಡಿದ್ದ ಮದ್ಯಪಾನ ನಿರೋಧದ ಶಾಸನವನ್ನು ಸಡಿಲಿಸಿ ಮೈಸೂರಿನ ಈಗಿನ ಕಾಂಗ್ರೆಸ್ ಸರಕಾರವು ಮುಚ್ಚಲ್ಪಟ್ಟಿದ್ದ ೧೫೦ ಹೆಂಡದಂಗಡಿಗಳನ್ನು ತೆರೆಯಲು ನಿರ್ಧರಿಸಿದ್ದಾರೆ. ಮೊದಲು ಮಾಡಿದ ಆಲೋಚನೆಯ ಪ್ರಕಾರ ವರ್ಷಕ್ಕೊಂದರಂತೆ ಶೇಕಡ ೨೦ರಷ್ಟು ಮದ್ಯದಂಗಡಿಗಳನ್ನು ಮುಚ್ಚಬೇಕಾಗಿತ್ತು. ಆದರೆ ಹಿಂದಿನ ಕಾಂಗ್ರೆಸ್ ಸರಕಾರವು ಜಿಲ್ಲಾವಾರಾಗಿ ಮದ್ಯ ನಿಷೇಧದ ಕಾನೂನನ್ನು ಜಾರಿಗೆ ತಂದಿತು. ಮದ್ಯ ನಿಷೇಧದ ಇಲಾಖಾ ಮಂತ್ರಿಗಳಾದ ಶ್ರೀ ಟಿ. ಚೆನ್ನಯ್ಯನವರು ಸರಕಾರದ ಹೊಸ ಧೋರಣೆಯನ್ನು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸುತ್ತಾ, ಮದ್ಯಪಾನ ಜಾರಿಯಲ್ಲಿರುವ ಕಡೆಗಳಲ್ಲಿ ಮದ್ಯದಂಗಡಿಗಳನ್ನು ಮುಚ್ಚುವದರಲ್ಲಿ ಔಚಿತ್ಯವೇನೂ ಇಲ್ಲವೆಂದರು. ಆದರೆ ಈಗ ಮದ್ಯ ನಿಷೇಧವು ಜಾರಿಯಲ್ಲಿರುವ ಐದು ಜಿಲ್ಲೆಗಳಲ್ಲಿ ಮತ್ತು ಮದ್ರಾಸು ಅಧಿಪತ್ಯದ ಗಡಿಪ್ರದೇಶದ ಐದು ಮೈಲು ದೂರದ ವರೆಗಿನ ಪ್ರದೇಶಗಳಲ್ಲಿ ಈ ಕ್ರಮವು ಈ ಗಿದ್ದಂತೆಯೇ ಇರುವದೆಂದೂ ಅದರಲ್ಲಿ ಬದಲಾವಣೆಯಾಗುವದಿಲ್ಲವೆಂದೂ ಹೇಳಿದರು.

ವಿದೇಶಗಳಿಗೆ ಸಹಾಯ

೧೪ ದೇಶಗಳಲ್ಲಿ ಅಮೇರಿಕೆಯ ವಿದೇಶ ಸಹಾಯದ ಕಾರ್ಯಾಚರಣೆಯನ್ನು ನಿರೀಕ್ಷಿಸಿ ಬಂದಿರುವ ಅಮೇರಿಕೆಯ ೫೫ ಉದ್ದಿಮೆದಾರರು ಯೂರೋಪಕ್ಕೆ ಕೊಡುತ್ತಿರುವ ಸಹಾಯವನ್ನು ಕಡಿಮೆ ಮಾಡಿ ಅತೀಪೂರ್ವ ದೇಶಗಳಿಗೆ ಕೊಡುವ ಸಹಾಯವನ್ನು ಹೆಚ್ಚಿಸಬೇಕು ಎಂದು ಐಸೆನಹಾವರರ ಸರಕಾರಕ್ಕೆ ಸೂಚಿಸಿದ್ದಾರೆ. ವಿದೇಶ ಸಹಾಯ ಯೋಜನೆಯ ಮೇಲೆ ಸಂಪೂರ್ಣ ನಿಯಂತ್ರಣಾಧಿಕಾರವನ್ನು ವಿದೇಶ ಖಾತೆಗೆ ಕೊಡಬೇಕೆಂದೂ ಅವರು ಹೇಳಿದ್ದಾರೆ.

ಕೊರಿಯಾ ಯುದ್ಧ ವಿರಾಮ ಒಪ್ಪಂದ

ಕಳೆದ ಒಂದು ವಾರದಿಂದ ೧೫ ೧೮. ಹೊಂದಿದ ಹಾಗೂ ರೋಗ ಪೀಡಿತ ಸೆರೆಯಾಳುಗಳನ್ನು ವಿನಿಮಯ ಮಾಡಿಕೊಳ್ಳುತ್ತಿರುವ ಕಮ್ಯೂನಿಸ್ಟ ಮತ್ತು ಸಂಯುಕ್ತ ಸಂಘದ ಅಧಿಕಾರಿಗಳು ಕೊರಿಯ ಯುದ್ಧ ವಿರಾಮ ಒಪ್ಪಂದದ ಪ್ರಾರಂಭಿಕ ಮಾತುಕತೆಗಳನ್ನು ತಾ. ೨೬ರಲ್ಲಿ ನಡೆಸಿದರು. ಮೂರು ವರ್ಷಗಳಿಂದ ನಡೆದಿರುವ ಕೊರಿಯ [illegible] ಸಂಧಾನ ಮಾತುಕತೆಗಳು [illegible] ಯ ಪ್ರಶ್ನೆಯ ಮೂಲಕ ಕಳೆದ ಅಕ್ಟೋಬರ ತಿಂಗಳಲ್ಲಿ ನಿಂತು ಹೋದ ನಂತರ ಪುನಃ ಸಂಧಾನ ಮಾತುಕತೆಗಳು ಆರಂಭವಾಗಿರುವದು. ಈಗ ಸಂಧಾನದ ನಂತರ ವಿನಿಮಯಕ್ಕೊಪ್ಪದ ಸೆರೆಯಾಳುಗಳನ್ನು [illegible] ಆರು ತಿಂಗಳುಗಳ ವರೆಗೆ ಒಂದು ತಟಸ್ಥ ರಾಷ್ಟ್ರಕ್ಕೆ ಕಳಿಸಬೇಕು ಎಂದು ಕಮ್ಯೂನಿಸ್ಟರು ಸೂಚಿಸಿದರೆಂದು ತಿಳಿಯುತ್ತದೆ.

ಕೊಡಗು

ತಾರೀಕು ೧ ಮೇ ೧೯೫೩ನೇ ಶುಕ್ರವಾರ

ಜನರಲ್ ಕಾರ್ಯಪ್ಪನವರು.

ಸ್ವತಂತ್ರ ಹಿಂದೂದೇಶದ ಪ್ರಥಮ ಭಾರತೀಯ ಸೇನಾಪತಿಯ ಪದವಿಯಿಂದ ಕಳೆದ ಜನವರಿ ತಿಂಗಳ ಮಧ್ಯದಲ್ಲಿ ನಿವೃತ್ತರಾದ ಜನರಲ್ ಕಾರ್ಯಪ್ಪನವರು ಕೂಡಲೇ ತಮ್ಮ ಮಾತೃಭೂಮಿಯಾದ ಕೊಡಗಿಗೆ ಬಂದು ಮಡಿಕೇರಿಯಲ್ಲಿ ನೆಲಸಿದರು. ಇವರು ಅಧಿಕಾರದಲ್ಲಿದ್ದಾಗ ತೋರಿಸಿದ ಕಾರ್ಯದಕ್ಷತೆ, ಪ್ರಾಮಾಣಿಕತೆ, ಉತ್ಸಾಹ, ಅನುಭವ ಮತ್ತು ಸೇವೆ ಸಲ್ಲಿಸಲಿರುವ ಶಕ್ತಿ ಇವುಗಳನ್ನು ಹಿಂದೂದೇಶವು ತನ್ನ ಶಾಸನದಿಂದ ಸಮ್ಮತಗೊಳ್ಳುತ್ತಿರುವ ಈ ಪರಿವರ್ತನೆಯ ಕಾಲದಲ್ಲಿ ಸದುಪಯೋಗಗೊಳಿಸಿಕೊಳ್ಳಬೇಕೆಂಬ ಭಾವನೆಯು ಹಿಂದೂದೇಶದ ಆದ್ಯಂತ್ಯಕ್ಕೂ ಇತ್ತು. ಅವರು ನಿವೃತ್ತರಾದ ಕಾಲಕ್ಕೆ ನಮ್ಮಂತೆಯೇ ದೇಶದ ಅನೇಕ ಪತ್ರಿಕೆಗಳೂ ಈ ವಿಚಾರವಾಗಿ ಬರೆದು ಕೇಂದ್ರ ಸರಕಾರಕ್ಕೆ ಸಲಹೆ ಕೊಟ್ಟಿದ್ದವು. ಆದರೆ ಈ ಸಲಹೆಯನ್ನು ಜಾರಿಗೆ ತರುವ ಅವಕಾಶ ಆಗ ಕೇಂದ್ರ ಸರಕಾರಕ್ಕಿರಲಿಲ್ಲ.

ಈ ಮಧ್ಯೆ ಶ್ರೀ. ಕಾರ್ಯಪ್ಪನವರು ಮಡಿಕೇರಿಯಲ್ಲಿ ಬಂದು ನೆಲೆಸಿ, ಬಹು ದೀರ್ಘಕಾಲದಿಂದ ಕೊಡಗಿನಿಂದ ಹೊರಗೆ ಸೇವೆ ಸಲ್ಲಿಸುತ್ತಿದ್ದ ಇವರು ಕೊಡಗಿನ ವಿಚಾರದಲ್ಲಿ ಇನ್ನೂ ಹೆಚ್ಚಿನ ಮಾಹಿತಿಯನ್ನು ಪಡೆಯಲು ಪ್ರಯತ್ನಿಸಿದರು. ಸಾಧ್ಯವಾದ ಸಂದರ್ಭಗಳಲ್ಲೆಲ್ಲಾ ಜನತೆಯಲ್ಲಿ ಮಿಳಿತವಾಗುತ್ತಾ, ಜನರ, ಆರ್ಥಿಕ, ಸಾಮಾಜಿಕ ಮತ್ತು ನೈತಿಕ ಸ್ಥಿತಿಗಳನ್ನೂ, ಸರಕಾರಕ್ಕೂ ಜನತೆಗೂ ಇರುವ ಸಂಬಂಧವನ್ನೂ ಅರಿತುಕೊಳ್ಳುತ್ತಿದ್ದರು. ಇವರಿಗೆ ಅವಕಾಶ ದೊರೆತಾಗಲೆಲ್ಲ ಕೊಡಗನ್ನು ಒಂದು ಮಾದರಿ ಪ್ರಾಂತ್ಯವಾಗಿ ಮಾಡಬೇಕೆಂಬ ತಮ್ಮ ವಿಶ್ವಾಸವನ್ನು ಸ್ಪಷ್ಟವಾಗಿ ಬಹಿರಂಗಪಡಿಸುತ್ತಾ, ಇದಕ್ಕಾಗಿ ಕೊಡಗಿನಲ್ಲಿ ತನ್ನ ಸೇವೆಯನ್ನು ಸಲ್ಲಿಸಲು ತಮಗಿರುವ ಇಚ್ಛೆಯನ್ನು ಪ್ರಕಟಿಸುತ್ತಾ ಬಂದಿರುವರು.

ಶ್ರೀ ಕಾರ್ಯಪ್ಪನವರ ಸೇವೆಯನ್ನು ಉಪಯೋಗಿಸಿಕೊಳ್ಳುವ ಅವಕಾಶವು ಇಂಡಿಯಾ ಸರಕಾರಕ್ಕೆ ಈಗ ದೊರೆಯಿತು. ಅವರನ್ನು ಇಂಡಿಯಾದ ಪರವಾಗಿ ಆಸ್ಟ್ರೇಲಿಯಾದ ಹೈಕಮಿಷನರಾಗಿ ನೇಮಿಸಲಾಗಿದೆಯೆಂದೂ ಜುಲೈ ತಿಂಗಳಲ್ಲಿ ಅವರು ಈ ಹುದ್ದೆಯನ್ನು ಕೈಕೊಳ್ಳುವರಾಗಿಯೂ ತಿಳಿಯಬಂದಿದೆ. ಶ್ರೀ. ಕಾರ್ಯಪ್ಪನವರಿಗೆ ಇದಕ್ಕಿಂತಾ ಉತ್ತಮವಾದ ಪದವಿಯು ಭಾರತದಲ್ಲೇ ದೊರೆಯಬೇಕಿತ್ತೆಂಬ ಇಚ್ಛೆ ನಮ್ಮ ಹಾಗೆ ಭಾರತದ ಇತರರಿಗೂ ಇದ್ದವಾದರೂ ಮತ್ತು ಕಾರ್ಯಪ್ಪನವರಿಗೆ ಹಿಂದೂದೇಶದಲ್ಲಿಯೇ ಸೇವೆಸಲ್ಲಿಸುವ ಇಚ್ಛೆ ತುಂಬಾ ಇರುವದಾದರೂ ಅವುಗಳನ್ನು ಸಲ್ಲಿಸಲು ತತ್ಕಾಲ ಅವಕಾಶ ಇಲ್ಲದಿರುವ ಕಾರಣದಿಂದಲೇ ಈಗಿನ ಈ ಪದವಿಗೆ ಇವರನ್ನು ನೇಮಿಸಿರಬೇಕೆಂದು ಊಹಿಸಬೇಕಾಗಿದೆ. ಈ ಹುದ್ದೆಗೆ ನೇಮಿಸಿದ್ದಕ್ಕಾಗಿ ಇಂಡಿಯಾ ಸರಕಾರವನ್ನು ವಂದಿಸುವದಲ್ಲದೆ ಇದನ್ನು ಒಪ್ಪಿಕೊಂಡ ಜನರಲ್ ಕಾರ್ಯಪ್ಪನವರನ್ನೂ ಅಭಿನಂದಿಸುತ್ತೇವೆ. ಜನರಲ್ ಕಾರ್ಯಪ್ಪನವರು ದೇಶಕ್ಕಾಗಿ ಸೇವೆಸಲ್ಲಿಸಲು ಯಾವ ಹುದ್ದೆಯನ್ನಾದರೂ ತಯಾರಿರುವರೆಂಬುದು ಇದರಿಂದ ಪ್ರತ್ಯಕ್ಷವಾಗುತ್ತದೆ.

ಜನರಲ್ ಕಾರ್ಯಪ್ಪನವರಿಗೆ ಹೊಸ ಹುದ್ದೆ.

ಭಾರತ ಸೇನಾನಾಯಕರಾಗಿ ನಿವೃತ್ತರಾಗಿದ್ದ ಜನರಲ್ ಕೆ. ಎಂ. ಕಾರ್ಯಪ್ಪನವರು ಕಳೆದವಾರ ಡೆಲ್ಲಿಯಿಂದ ಕರೆ ಬಂದ ಪ್ರಕಾರ ಡೆಲ್ಲಿಗೆ ಹೋಗಿ ಪಂಡಿತ ಜವಾಹರರನ್ನು ಭೇಟಿಯಾಗಿದ್ದರಷ್ಟೆ. ಇಂಡಿಯಾ ಸರಕಾರವು ಜನರಲ್ ಕಾರ್ಯಪ್ಪನವರನ್ನು ಆಸ್ಟ್ರೇಲಿಯಾದ ತನ್ನ ಹೈಕಮಿಷನರಾಗಿ ನೇಮಿಸಿದೆ. ಜನರಲ್‌ರವರು ಈ ಹೊಸ ಹುದ್ದೆಯನ್ನು ಒಪ್ಪಿಕೊಂಡಿರುವರಲ್ಲದೆ ಬರುವ ಜುಲೈ ತಿಂಗಳಲ್ಲಿ ಹೊಸ ಹುದ್ದೆಯ ಚಾರ್ಜನ್ನು ವಹಿಸಿಕೊಳ್ಳಲು ಆಸ್ಟ್ರೇಲಿಯಾಕ್ಕೆ ಹೋಗಲಿರುವರು.

ವರ್ತಮಾನ.

ಶ್ರೀ ರಾಮಕೃಷ್ಣ ಪರಮಹಂಸರ ೧೧೭ನೇ ಜಯಂತೋತ್ಸವವನ್ನು ಇದೇ ತಾರೀಕು ೨೫ರಲ್ಲಿ ಕೋಣಗಣ ಗ್ರಾಮದ ಗಾಂಧಿ ಮಂದಿರದಲ್ಲಿ ಶ್ರೀ ಡಿ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಶ್ರೀಗಳಾದ ಕೆ. ಪಿ. ನಂಜಪ್ಪ, ಕೆ ಎಸ್. ಜಯಸಿಂಹ ಟಿ ಎಸ್ ನಾರಾಯಣ, ಕೋಡಿರ ಸೀತವ್ವ ಇವರ ಭಾಷಣ ವಿತ್ತರಲ್ಲದೆ ಶ್ರೀ ಬಿ. ಕೆ ಗೋಪಾಲದಾಸರ ಹರಿಕಥೆಯೂ ಇತ್ತು.

ಕೊಡಗಿನ ನ್ಯಾಯಾಧಿಕಾರಿಗಳಾಗಿದ್ದ ಶ್ರೀ ಎನ್. ಮುದ್ದಪ್ಪನವರ ನಿಧನದ ಬಗ್ಗೆ ತಾ. ೨೬ರಲ್ಲಿ ಪಾಡಿ ಸುಬ್ರಹ್ಮಣ್ಯ ಭಕ್ತಜನ ಸಂಘದವರು ಸಂತಾಪ ಸೂಚನಾ ಸಭೆ ನಡೆಸಿ ತಮ್ಮ ಸಂತಾಪವನ್ನು ಮೃತರ ಕುಟುಂಬಕ್ಕೆ ಕಳುಹಿಸಿರುವರು.

ಸ್ಟಾಫ್ ಸಿಲೆಕ್ಷನ್ ಬೋರ್ಡಿಗೆ ಶಾಸನ ಸಭೆಯ ಟಿ. ಸೆಕ್ರೆಟರಿಗಳಾದ ಎಂ. ಎನ. ಗುಂಡೂರಾವ್ (ಅಧ್ಯಕ್ಷ) ಕಾಲೇಜಿನ ವೈಸ್ ಪ್ರಿನ್ಸಿಪಲರಾದ ಶ್ರೀ ವೆಂಕಟರಮಣರಾವ್, ಎಂಪ್ಲಾಯಿಮೆಂಟ್ ಆಫೀಸರ್ ಶ್ರೀ ಮೂರ್ತಿ ಮತ್ತು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಗಣೇಶರಾವ್ ಇವರುಗಳನ್ನು ನೇಮಿಸಲಾಗಿದೆ.

ವಿದ್ಯಾ ಪ್ರಚಾರದಲ್ಲಿ 'ಸಿ' ವರ್ಗದ ಪ್ರಾಂತಗಳಲ್ಲಿ ಕೊಡಗು ಶೇಕಡ ೭೨ರಷ್ಟು ವಿದ್ಯಾವಂತರನ್ನು ಪಡೆದು ಪ್ರಥಮ ಸ್ಥಾನವನ್ನೂ ೪೩ರಷ್ಟು ಪಡೆದು ಡೆಲ್ಲಿಯು ಎರಡನೇ ಸ್ಥಾನವನ್ನೂ ಪಡೆದಿವೆಯೆಂದು ಕೇಂದ್ರ ಶಾಸನ ಸಭೆಯಲ್ಲಿ ಸರಕಾರವು ಕೊಟ್ಟ ಉತ್ತರದಿಂದ ತಿಳಿದು ಬಂದಿದೆ.

ಕೊಡಗು ಸರಕಾರದ ಆರ್ಥಿಕ ಇಲಾಖೆಯ ಸೆಕ್ರೆಟರಿಯಾಗಿ ಮದ್ರಾಸಿನಿಂದ ಬಂದಿರುವ ಶ್ರೀ ದೇವಿಸ್‌ರವರು ತಾರೀಕು ೧-೫-೫೩ರಿಂದ ರಜದಲ್ಲಿ ಹೋಗಲಿರುವದರಿಂದ ಇವರ ಬದಲು ಹಿಂದೆ ಟ್ರೆಜರಿ ಆಫೀಸರಾಗಿದ್ದ ಶ್ರೀ ಎಂ. ಶ್ರೀನಿವಾಸರಾಯರು ಸೆಕ್ರೆಟರಿಗಳಾಗುವರು. ಅವರು ಈಗ ಮದ್ರಾಸಿನಲ್ಲಿ ತರಬೇತು ಹೊಂದುತ್ತಿದ್ದು ಬರುವ ವಾರ ತರಬೇತು ಮುಗಿಸಿ ಬರುವರೆಂದೂ ಈ ತಿಂಗಳ ಅಂತ್ಯದ ವರೆಗೆ ಇಲಾಖೆಯ ಕೆಲಸಗಳನ್ನು ತಿಳಿದುಕೊಳ್ಳುವರೆಂದೂ ಗೊತ್ತಾಗಿದೆ.

ಪೊನ್ನಂಪೇಟೆ ಮತ್ತು ಶ್ರೀಮಂಗಲ ನಾಡುಗಳ ಕ್ರಾಸ್‌ಕಂಟ್ರಿ ರನ್ ಸ್ಪರ್ಧೆಯಲ್ಲಿ ಬಹುಮಾನಿತರಾದವರಿಗೆ ಬಹುಮಾನಗಳನ್ನು ತಾ. ೨೭ರಲ್ಲಿ ಕೊಡಗಿನ ಮುಖ್ಯ ಮಂತ್ರಿಯವರು ಗೋಣಿಕೊಪ್ಪಲಿನಲ್ಲೂ ತಾ. ೨೭ರಲ್ಲಿ ಮಡಿಕೇರಿಯಲ್ಲೂ ಕೊಟ್ಟರು.

ತಾ. ೨೩-೪-೫೩ರಲ್ಲಿ ಸಿದ್ಧಾಪುರದ ನಿವಾಸಿಗಳು ಶ್ರೀ ಬಿದ್ದಂಡ ಪೊನ್ನಪ್ಪನವರ ಅಧ್ಯಕ್ಷತೆಯಲ್ಲಿ ದಿವಂಗತ ನಿಡ ಮಲೆ ಮುದ್ದಪ್ಪನವರ ನಿಧನದ ಬಗ್ಗೆ ಸಂತಾಪಕ ಸೂಚಕ ಠರಾವನ್ನು ಮಂಜೂರು ಮಾಡಿದರು. ದಿವಂಗತರ ವಿಷಯ ಶ್ರೀ. ತೋಟಂಬೈಲು ಮಾದಪ್ಪನವರು ಮತ್ತು ಬಿ. ಕೆ. ಗೋಪಾಲದಾಸರು ಮಾತನಾಡಿದರು.

ಕೊಡಗು ಐರಿಯರ ವಿದ್ಯಾಭಿವೃದ್ಧಿ ಸಂಘದ ೯ನೇ ವಾರ್ಷಿಕ ಮಹಾಸಭೆಯು ಬೆಳ್ಳೂರು ಗ್ರಾಮದಲ್ಲಿ ತಾ ೨೫-೪-೫೩ರಲ್ಲಿ ಶ್ರೀಮಾನ್, ಕೆ ಕೆ. ಗಣಪತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಟಿ. ಶೆಟ್ಟಿಗೇರಿ ಶಾಲಾ ಆಶ್ರಯದಲ್ಲಿ ನಡೆಯಲಿರುವ ಈ ವರ್ಷದ ಮತ್ತು ಒಬ್ಬೊಬ್ಬರ ಬೇಡ್‌ಮೆಂಟನ್ ಪಂದ್ಯಾಟವು ತಾರೀಕು ೧೫-೫-೫೩ರಿಂದ ನಡೆಯಲಿರುವುದು ಆದುದರಿಂದ ಸ್ಪರ್ಧಿಸಲಿಚ್ಛಿಸುವವರು ತಾರೀಕು ೧೦ರೊಳಗೆ ತಮ್ಮ ಫೀಸು ಸಮೇತ ಇದರ ಕಾರ್ಯದರ್ಶಿಗೆ ಕಳುಹಿಸಬೇಕು.

ಪಶ್ಚಿಮ ಜರ್ಮನಿಯ ರಾಯಭಾರಿಯವರು ಕಳೆದ ವಾರ ಕೊಡಗಿಗೆ ಬಂದು ಕೆಲವು ದಿನ ಶ್ರೀ ಅಪ್ಪಾರಂಡ ತಿಮ್ಮಯ್ಯನವರ ಅತಿಥಿಯಾಗಿದ್ದರೆಂದೂ ತಿಳಿಯುತ್ತೇವೆ. ಜನರಲ್ ಕಾರ್ಯಪ್ಪನವರು ಒಂದು ಔತಣ ಕೊಟ್ಟರೆಂದೂ, ಅವರು ನಿವೃತ್ತ ಮುನ್ಸೀಫರಾದ ಶ್ರೀ ಪುಚ್ಚಿಮಾಡ ನಾಣಯ್ಯನವರ ಮಗಳ ಮದುವೆಯನ್ನು ಸಂದರ್ಶಿಸಿದರೆಂದೂ ತಿಳಿಯುತ್ತೇವೆ.

ಓದುಗರ ಓಲೆ.

ಹಣ ಸಂಗ್ರಹಿಸಲು ಇದೇ ಮಾರ್ಗವೇ ?

ಭಾರತ ಸೇವಕ ಸಮಾಜಕ್ಕೆಂದು ನಿಧಿ ಸಂಗ್ರಹಿಸಲಾಗುತ್ತಿದೆ. ನಾಟಕ, ನೃತ್ಯ ಮೊದಲಾದ ಕಲಾಪ್ರದರ್ಶನಗಳಿಂದ ಹಣ ಸಂಗ್ರಹಿಸುವದು ಸ್ವಾಭಾವಿಕವಾದುದು. ಅಂದಾದ್ದಕ್ಕೆ ಎಲ್ಲರ ಪ್ರೋತ್ಸಾಹವೂ ಅಗತ್ಯ. ಆದರೆ ಮಡಿಕೇರಿಯಲ್ಲಿ ತಾ. ೨೫ರಿಂದ ಫನ್ ಫೇರ್ ನಡೆಯುತ್ತಿದೆ. ಇದರಲ್ಲಿ ಜೂಜಾಟ, ಜುಗಾರಿ ಮೊದಲಾದವು ನಡೆಯುತ್ತಿವೆ. ಇವರು ಭಾರತ ಸಮಾಜದ ನಿಧಿಗೆಂದು ನಿಶ್ಚಿತ ಹಣ ಕೊಡುವರೆಂದೂ ಮತ್ತೆ ನಿಶ್ಚಿತ ಅವಧಿಯ ವರೆಗೆ ನಿರ್ಭಾಧಕವಾಗಿ ಜೂಜು ಜುಗಾರಿಗಳ ಮೂಲಕ ಹಣ ಗಳಿಸುವರೆಂದೂ ತಿಳಿದುಬಂದಿದೆ. ಜೊತೆಯಲ್ಲೇ ನೃತ್ಯ, ಸರ್ಕಸ್ ಮೊದಲಾದುವಿವೆಯಂತೆ. ಜನತೆಯನ್ನು ಆಕರ್ಷಿಸಿ ಅವರಿಂದ ಆ ಮೂಲಕ ನಿಧಿ ಸಂಗ್ರಹಿಸುವದು ಖಂಡನಾರ್ಹವಾದುದು.

ಭಾರತ ಸೇವಕ ಸಮಾಜದ ಉದ್ದೇಶಗಳಲ್ಲಿ ದೇಶದ ನಾಗರಿಕರನ್ನು ಸಭ್ಯರೂ, ಸುಶೀಲರೂ, ಆಗಿ ಮಾಡುವದು ಇರಬೇಕು. ಅಂಥಾ ಉತ್ತಮ ಗುರಿ ಇರುವ ಸಮಾಜಕ್ಕೆ ನಿಧಿ ಸಂಗ್ರಹವು ಜನತೆಯನ್ನು ಜುಗಾರಿ, ಜೂಜಾಟಕ್ಕಿಳಿಸಿ ಆಗಬೇಕೆ? ಆದರ್ಶ ನಾಗರಿಕರನ್ನು ತಯಾರುಮಾಡಲು ಹೊರಟ ಸಂಸ್ಥೆಯು ಈ ಅಶ್ಲೀಲ ಮಾರ್ಗದಿಂದ ನಿಧಿಸಂಗ್ರಹಿಸಬೇಕೆ? ಹಿಡಿತವಿಲ್ಲದ ಜುಗಾರಿ, ಜೂಜಾಟವಿರುವ ಇಂಥಾ ಒಂದು ವ್ಯವಸ್ಥೆಯನ್ನು ಚೀಫ್ ಕಮಿಷನರು ತೆರೆಯಬೇಕೆ? ಮತ್ತು ಮಂತ್ರಿಗಳು ಆಶೀರ್ವಾದವೀಯಬೇಕೆ? ಉದ್ದೇಶವು ಎಷ್ಟು ಉತ್ತಮವಿದ್ದರೂ ಕೂಡ ಜುಗಾರಿ, ಜೂಜಾಟದ ಮೂಲಕ ನಿಧಿ ಸಂಗ್ರಹ ಮಾಡುವದು ನೈತಿಕ ಅಧಃಪತನವೆನ್ನಬೇಕಾಗುತ್ತದೆ. ಜನತೆಗೆ ಜೂಜಾಡಲು ಕಲಿಸಿ ಮತ್ತೆ ಅವರನ್ನು ಸುಧಾರಿಸಲೆತ್ನಿಸುವ ಈ ಭಾರತ ಸಮಾಜದ ವ್ಯವಸ್ಥಾಪಕರ ನೀತಿ ಖಂಡನೀಯವಿದೆ.

ನಾಗರಿಕ.

ಜನರಲ್ ಕಾರ್ಯಪ್ಪನವರಿಗೆ ಸತ್ಕಾರ ॥

ತಾರೀಕು ೨೮ ರಲ್ಲಿ ಅಮ್ಮತ್ತಿನಾಡಿನವರು ಅಮ್ಮತ್ತಿ ಶಾಲಾ ಕಟ್ಟಡದಲ್ಲಿ ಜನರಲ್ ಕಾರ್ಯಪ್ಪನವರಿಗೆ ಒಂದು ಸತ್ಕಾರಕೂಟವನ್ನು ಕೊಟ್ಟರು. ಸುಮಾರು ನಾಲ್ಕು ಗಂಟೆ ಸಮಯಕ್ಕೆ ಜನರಲ್ ಕಾರ್ಯಪ್ಪನವರು ಬಂದು ತಲಪಿದ ಕೂಡಲೇ ಶಾಲಾ ಗೇಟಿನ ಬಳಿ ನಾಡಿನವರು ಅವರನ್ನು ಸ್ವಾಗತಿಸಿದರು. ಅಮ್ಮತ್ತಿ ಪೇಟೆಯು ತಳಿರು ತೋರಣಗಳಿಂದ ಅಲಂಕೃತವಾಗಿತ್ತು. ಸ್ವಾಗತಾಧ್ಯಕ್ಷರಾದ ಶ್ರೀ. ಕೆ. ಟಿ. ಉತ್ತಪ್ಪನವರು ಅವರಿಗೆ ಹೂವಿನ ಹಾರವನ್ನು ಹಾಕಿ ಒಡ್ಡೋಲಗದಿಂದ ಕ್ರಿಕೆಟ್ ಮೈದಾನದಲ್ಲಿ ಚಪ್ಪರಕ್ಕೆ ಕರೆದುಕೊಂಡು ಹೋದರು. ಕೂಡಲೇ ನೆರೆದಿದ್ದ ಹಾಕಿ ಆಟಗಾರರೊಂದಿಗೆ ಜನರಲ್ ಕಾರ್ಯಪ್ಪನವರ ಭಾವಚಿತ್ರ ತೆಗೆಯಲಾಯಿತು. ಅನಂತರ ಅಮ್ಮತ್ತಿನಾಡಿನ ಹಾಕಿ ಟೀಮಿಗೂ, ಕೊಡಗಿನ ಇತರ ಭಾಗದ ಹಾಕಿ ಟೀಮಿಗೂ ಆಟ ನಡೆದು ಡ್ರಾ ಆಯಿತು. ನಂತರ ತೆಂಗಿನ ಕಾಯಿಗೆ ಗುಂಡು ಹೊಡೆಯಲಾಯಿತು. ಜನರಲ್ ಕಾರ್ಯಪ್ಪನವರು ತೆಂಗಿನ ಕಾಯಿಯನ್ನು ಹಾರಿಸಿದರು. ಶ್ರೀ. ಐ. ಸಿ. ಸುಬ್ಬಯ್ಯನವರು ಬಾಳೆ ಹೂವಿಗೆ (ತೋಂಬಕೆ) ಗುಂಡು ಹಾಕಿದರು.

ನಂತರ ಸಭೆ ಸೇರಿತು. ಜನರು ತುಂಬಾ ಸೇರಿದ್ದರು. ರಾಷ್ಟ್ರಗೀತೆಯ ನಂತರ ಶ್ರೀ ಹಬಿಬುಲ್ಲಾಖಾನ್ ಷೆಕ್ಕಿಯವರು ಜನರಲ್ ಕಾರ್ಯಪ್ಪನವರಿಗೆ ಬಿನ್ನವತ್ತಳೆಯನ್ನು ಅರ್ಪಿಸುತ್ತಾ, "ಹಿಂದೂದೇಶದ ಮುಖ್ಯ ಸೇನಾನಿಯಾಗಿ ಕೊಡಗಿನ ಕೀರ್ತಿಯನ್ನು ಎಲ್ಲೆಡೆ ಬೀರಿದ ನಿಮಗೆ ಸ್ವಾಗತವನ್ನೀಯಲು ಸಂತೋಷವಾಗುತ್ತದೆ. ಈ ಉಚ್ಚ ಪದವಿಯನ್ನು ಕಳೆದ ನಾಲ್ಕು ವರ್ಷಗಳಿಂದ ದಕ್ಷ ರೀತಿಯಲ್ಲಿ ನಡೆಸಿ ಈಗ ನಿವೃತ್ತರಾಗಿ ಕೊಡಗಿಗೆ ಬಂದಿರುವ ನಿಮಗೆ ನಾವು ಶುಭಾಶಯಗಳನ್ನು ಬಯಸಬೇಕಾದದ್ದು ಕರ್ತವ್ಯವಾಗಿದೆ. ನಿಮ್ಮ ವಿಶ್ರಾಂತಿಯ ಕಾಲದಲ್ಲಿ ನಿಮ್ಮ ಮಾತೃಭೂಮಿಯಾದ ಈ ದೇಶಕ್ಕೆ ನಿಮ್ಮ ಅಮೂಲ್ಯ ಸೇವೆಯನ್ನು ಸಲ್ಲಿಸುವಿರಾಗಿ ಆಶಿಸುತ್ತೇವೆ. ಸೈನ್ಯದಲ್ಲಿ ಸೇರಿದ ನೀವು ಹಿಂದಿಯರಲ್ಲಿ ಅನೇಕ ಪ್ರಥಮ ಸ್ಥಾನಗಳನ್ನು ಪಡೆದಿರಿ. ಸ್ವಾತಂತ್ರ್ಯ ಪಡೆದ ನಂತರ ಭಾರತದ ಪ್ರಥಮ ಭಾರತೀಯ ಸೇನಾನಾಯಕರಾಗಿ ಹಿಂದೂದೇಶದ ವಿಭಜನೆಯ ಬಿಕ್ಕಟ್ಟಿನ ಕಾಲದಲ್ಲಿ ಈ ಜವಾಬ್ದಾರಿ ಪದವಿಯನ್ನು ವಹಿಸಿ ದಕ್ಷತೆಯಿಂದ ಭಾರತೀಯ ಸೇನೆಯನ್ನು ಸಂಘಟಿಸಿ ಅದನ್ನು ನಿಜವಾದ ರಾಷ್ಟ್ರೀಯ ಸೇನೆಯಾಗಿ ಮಾಡಿದಿರಿ. ನಿಯಮದ ಮೇರೆ ನೀವು ನಿವೃತ್ತರಾಗಬೇಕಾದರೂ ದೇಶದ ಸೇವೆ ಮಾಡಲು ಇನ್ನೂ ಚೇತನವುಳ್ಳವರಾಗಿರುವಿರಿ. ನಿಮ್ಮ ಅನುಭವ ಸೇವೆಯನ್ನು ಭಾರತದ ಹಿತಕ್ಕಾಗಿ ಕೇಂದ್ರ ಸರಕಾರವು ಉಪಯೋಗಿಸುವದೆಂದು ನಂಬಿರುವೆವು. ಈ ದಿನ ಇಲ್ಲಿಗೆ ದಯಮಾಡಿಸಿದಕ್ಕಾಗಿ ಪುನಹ ವಂದಿಸುವದಲ್ಲದೆ ಇಂದಿನ ಅಧ್ಯಕ್ಷತೆ ವಹಿಸಿ ಪಂದ್ಯಾಟದಲ್ಲಿ ಜಯಶೀಲರಾದವರಿಗೆ ಬಹುಮಾನ ವಿತರಣೆ ಮಾಡಬೇಕಾಗಿ ಕೇಳಿಕೊಳ್ಳುವೆನು" ಎಂದರು.

ಆಟದಲ್ಲಿ ಡ್ರಾ ಆದ ಕಾರಣ ಎರಡು ಟೀಮಿನವರಿಗೂ ಇನಾಮು ಕೊಡಲಾಯಿತು. ಜನರಲ್ ಕಾರ್ಯಪ್ಪನವರು ಭಾಷಣ ಮಾಡುತ್ತಾ 'ಅಮ್ಮತ್ತಿನಾಡಿನ ಜನರ ಮಧ್ಯೆ ಇರಲು ಸಂತೋಷವೆನಿಸುತ್ತದೆ. ಹಾಕಿ ಪಂದ್ಯಾಟದ ಬಹುಮಾನ ಕೊಡಲು ಆಹ್ವಾನಿಸಲ್ಪಟ್ಟ ನನಗೆ ಬಿನ್ನವತ್ತಳೆ ಕೊಡುವದು ಆಶ್ಚರ್ಯ. ಹೇಗೂ ನಿಮ್ಮ ಪ್ರೀತಿ, ವಿಶ್ವಾಸಗಳಿಂದ ನನಗೆ ಆನಂದವಾಗಿದೆ. ನಾನು ಹಿಂದೂದೇಶದ ಹಲವೆಡೆಗಳನ್ನೂ ಪ್ರಪಂಚದ ಕೆಲವು ಭಾಗಗಳನ್ನೂ ಸುತ್ತಿ ನೋಡಿದ್ದೇನೆ. ಎಲ್ಲಿ ಹೋದರೂ ನನ್ನ ಮಾತೃಭೂಮಿಯಾದ ಕೊಡಗಿನಷ್ಟು ಸುಂದರ ಹಾಗೂ ಫಲಭರಿತವಾದ ಸ್ಥಳ ಬೇರೊಂದು ಕಂಡು ಬರಲಿಲ್ಲ. ಇಲ್ಲಿಯ ಜನರು ನಡತೆ, ನೀತಿ, ಶಿಸ್ತು ಪ್ರಾಮಾಣಿಕತೆ ಮೊದಲಾದುವುಗಳಲ್ಲಿ ಹೊರಗಿನವರಿಗಿಂತ ಮುಂದರಿದಿರುವರೆಂದು ಹೇಳಲು ಹೆಮ್ಮೆಯಾಗುತ್ತದೆ. ಆರ್ಥಿಕ ಸ್ಥಿತಿಯಲ್ಲೂ ಕೂಡ ನಮ್ಮಲ್ಲಿ ಲಕ್ಷಾಧಿಪತಿಗಳಿಲ್ಲದಿದ್ದರೂ ನಮ್ಮವರು ಬಡತನದಲ್ಲಿ ಮುಳುಗಿಲ್ಲ. ನಮ್ಮಲ್ಲಿ ಬೇಡುವವರೇ ಇಲ್ಲವೆಂಬುದು ಈ ಮಾತಿಗೆ ಸಾಕ್ಷಿಯಾಗಿದೆ. ಕೊಡಗಿನಿಂದ ಹೊರಗೆ ಹೋಗಿ ಇಲ್ಲಿಯ ವಿಚಾರ ತಿಳಿಯದವರಿಗೆ ಕೊಡಗಿನ ಸ್ಥಿತಿ ಅರಿವಾಗಲಿಕ್ಕಿಲ್ಲ. ವಿದ್ಯಾಭ್ಯಾಸದಲ್ಲಿ ಮುಖ್ಯವಾಗಿ ಸ್ತ್ರೀವಿದ್ಯಾಭ್ಯಾಸದಲ್ಲಿ ಈ ಪ್ರಾಂತ ಬಹು ಮುಂದಿದೆ. ಒಂದು ವೇಳೆ ಸ್ತ್ರೀ ವಿದ್ಯಾಭ್ಯಾಸದಲ್ಲಿ ತಿರುವಾಂಕೂರು ಮಾತ್ರ ಕೊಡಗನ್ನು ಮೀರಿರಬಹುದು. ಇಲ್ಲಿಯ ತಂದೆ ತಾಯಿಗಳು ತಮ್ಮ [illegible] ಮಕ್ಕಳ ವಿದ್ಯಾಭ್ಯಾಸಕ್ಕಾಗಿ [illegible] ವಹಿಸಿರುವದು ಶ್ಲಾಘನೀಯ. ಕೊಡಗು ಬಹು ಫಲಭರಿತವಾದ ದೇಶವಾದರೂ ಕೂಡ ಅದರ ಪ್ರಯೋಜನವನ್ನು ನಾವು ಸಂಪೂರ್ಣ ಹೊಂದುತ್ತಿಲ್ಲ. [illegible] ಗ್ರಾಮಸ್ಥರೆಲ್ಲರೂ ಸಮಯವನ್ನು ವ್ಯರ್ಥಗೊಳಿಸದೆ ಎಲ್ಲಾ ಕಾಲದಲ್ಲೂ ಒಂದು ರೀತಿಯ ಉದ್ಯಮದಲ್ಲಿ ತೊಡಗಿರಬೇಕು. ತನ್ನ ಕೆಲಸದಲ್ಲಿ ಯಾರಿಗೂ ಅಗೌರವವಿಲ್ಲ. ನಾನು ಹಲವು ವರ್ಷಗಳಿಂದ ಸೈನಿಕನಾಗಿದ್ದರೂ ಕೂಡ ಸ್ವತಃ [illegible] ಬಗ್ಗೆ ನನಗಿರುವ ಮಮತೆಯಿಂದ ನನ್ನ ಮನೆಯ ಸುತ್ತಮುತ್ತ ತೋಟದಲ್ಲಿ ಸ್ವತಃ ಅಗೆದು [illegible] ಯತ್ನಿಸುತ್ತಿರುವೆನು. [illegible] ಅನಿವಾರ್ಯವಾಗಿ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಾ, ಶ್ರೀ. ಕೆ. [illegible] ಅಂಗಡಿಗಳಲ್ಲಿ [illegible] ಕಾಲ ಕಳೆಯುವವರನ್ನು [illegible] ತಮ್ಮ ಕೆಲಸದಲ್ಲಿ ಮಗ್ನರಾದರೆ ತಮ್ಮ ಆರ್ಥಿಕ ಮತ್ತು ನೈತಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವದು ಮಾತ್ರವಲ್ಲ; ತಮ್ಮ ಮಕ್ಕಳಿಗೂ ಕೂಡ ಯೋಗ್ಯ ಆದರ್ಶವನ್ನು ಹಾಕಿದಂತಾಗುವದು. ಹಾಗೆಯೇ ವಿದ್ಯಾರ್ಥಿಗಳು ಹೈಸ್ಕೂಲು ಕಾಲೇಜು ಸೇರಿದ ಕೂಡಲೇ ಶಾರೀರಿಕ ಪರಿಶ್ರಮವು ಗೌರವಕ್ಕೆ ಕಡಿಮೆಯೆಂದು ಭಾವಿಸಿ ಬೀದಿಸುತ್ತಿ ಸಮಯ ಕಳೆಯುವ ಬದಲು ಸಾಮೂಹಿಕ ವಿಕಾಸ ಯೋಜನೆ, ಪಂಚವಾರ್ಷಿಕ ಯೋಜನೆಗಳಲ್ಲಿ ತಮ್ಮ ರಜೆಯ ಸಮಯದಲ್ಲಿ ಭಾಗವಹಿಸಲು ಮುಂಬರಬೇಕು.

ನಮಗೀಗ ಜವಾಬ್ದಾರಿ ಸರಕಾರದೊರೆತಿದೆ. ಸರಕಾರವನ್ನು ಟೀಕಿಸಬಾರದೆಂದು ಅಧಿಕಾರದಲ್ಲಿರುವವರು, ಅವರನ್ನು ಯಾವಾಗಲೂ ಟೀಕಿಸುತ್ತಿರಬೇಕೆಂದು ಜನತೆಯೂ ತಿಳಿದುಕೊಳ್ಳಬಾರದು. ಜನಪ್ರತಿನಿಧಿಗಳೇ ಸರಕಾರ ನಡೆಸುತ್ತಿರುವದರಿಂದ ಜನತೆಯು ಟೀಕೆಯನ್ನು ಸರಕಾರವು ಸದ್ಭಾವನೆಯಿಂದ ತೆಗೆದುಕೊಂಡು ತಮ್ಮನ್ನು ತಾವು ತಿದ್ದಿಕೊಳ್ಳಬೇಕು. ಸರಕಾರವು ತಪ್ಪಿದರೆ ಅಷ್ಟರಿಂದ ಜನರು ಸಿಕ್ಕಿದಂತೆ ಟೀಕಿಸುವದರ ಬದಲು ಸರಕಾರದ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವ ದೃಷ್ಟಿಯಿಂದ ರಚನಾತ್ಮಕ ಟೀಕೆಗಳನ್ನು ಮಾಡಬೇಕು. ಸರಕಾರವು ಎಷ್ಟೇ ಒಳ್ಳೆಯದಾಗಿದ್ದರೂ ಕೂಡ ಜನತೆಯ ಸಹಕಾರವಿಲ್ಲದೆ ಅದು ಜಯಪ್ರದ ಆಡಳಿತ ನಡೆಸಲಾರದು. ಆದುದರಿಂದ ಸರಕಾರ ಹಾಗೂ ಜನತೆ ಪರಸ್ಪರ ಪ್ರೀತಿ ವಿಶ್ವಾಸಗಳಿಂದ ಸಹಕರಿಸುತ್ತಿರಬೇಕು.

ಆಟೋಟಗಳಲ್ಲಿ ಕೊಡಗಿನ ಯುವಕ ಯುವತಿಯರು ಬಹು ನಿಪುಣರೆಂಬುದರಲ್ಲಿ ಸಂಶಯವಿಲ್ಲ. ಇದು ಕೊಡಗಿನವರು ಹೊರ ಪ್ರಾಂತಗಳಲ್ಲಿ ತೋರಿಸುತ್ತಿರುವ ನೈಪುಣ್ಯತೆಯಿಂದ ಪ್ರತ್ಯಕ್ಷವಾಗಿದೆ. ಈ ಕ್ಷೇತ್ರದಲ್ಲಿ ಕೊಡಗಿನವರು ಮುಂದೆ ಉತ್ತಮ ಕಾರ್ಯ ನಡೆಸಬಹುದಾಗಿದೆ. ಕೆಲವು ವರ್ಷಗಳ ಹಿಂದೆ ನನ್ನ ಸಹಪಾಠಿಗಳಾಗಿದ್ದ ಬ್ರಿಗೇಡಿಯರ್ ಪೊನ್ನಪ್ಪನವರು ಕೊಡಗು ಒಲಂಪಿಕ್ ಸಂಸ್ಥೆಯ ಅಧ್ಯಕ್ಷರಾಗಿರುವರೆಂದು ತಿಳಿದು ಸಂತೋಷವಾಯಿತು. ಆದರೆ ರಾಜಕೀಯ ಪಂಗಡಗಳ ಗಾಳಿಯು ಇದಕ್ಕೆ ತಟ್ಟಿ ದೊರೆಯಬೇಕಾದಷ್ಟು ಉತ್ತೇಜನ ದೊರೆಯುತ್ತಿಲ್ಲವೆಂದು ಕೇಳಿ ವಿಷಾದಪಡುತ್ತೇನೆ. ಇಂಥಾ ಸ್ಪರ್ಧೆ, ಆರ್ಥಿಕ, ಸಾಮಾಜಿಕ ಕ್ಷೇತ್ರಗಳಿಂದ ಪಕ್ಷ ರಾಜಕೀಯವನ್ನು ದೂರದಲ್ಲಿಡಬೇಕು. ಇನ್ನಾದರೂ ಶ್ರೀ ಪೊನ್ನಪ್ಪನವರಿಗೆ ಎಲ್ಲರೂ ಉತ್ತೇಜನ ಕೊಟ್ಟು ಕೊಡಗಿನ ಯುವಕ ಜನಾಂಗವು ಇಂಡಿಯಾದ ಕ್ರೀಡಾಕ್ಷೇತ್ರದಲ್ಲಿ ಉಚ್ಚಸ್ಥಾನ ಪಡೆಯುವಂತೆ ಸಾಧಿಸಬೇಕು.

ಈ ಮೊದಲು ನಾನು ಹಲವು ಸಾರಿ ಹೇಳಿರುವಂತೆ ಹಿಂದೂದೇಶಕ್ಕೆ ಮಾದರಿ ಪ್ರಾಂತವಾಗಿ ಮಾಡಲು ಕೊಡಗು ಯೋಗ್ಯವಾಗಿದೆ. ಹಾಗೆ ಮಾಡಲು ಕೊಡಗಿನಲ್ಲಿ ಬೇಕಾದ ಅವಕಾಶ ಮತ್ತು ಸಾಹಿತ್ಯಗಳು ಇವೆ. ಪ್ರಾಕೃತಿಕ ಸಂಪತ್ತು, ಆರ್ಥಿಕ ಬಲ ಮತ್ತು ಬುದ್ಧಿಶಾಲಿಗಳಾದ ಜನತೆ ಇಲ್ಲಿದೆ. ಎಲ್ಲರೂ ರಾಜಕೀಯ ಮತ್ತಿತರ ಭೇದ ಭಾವನೆಗಳನ್ನು ಮರೆತು ಒಗ್ಗಟ್ಟಾಗಿ ದೇಶದ ಹಿತಕ್ಕಾಗಿ ದುಡಿಯುವದೇ ಬೇಕಿರುವದಾಗಿದೆ. ಈ ಕಾರ್ಯದಲ್ಲಿ ನನ್ನ ಪಾಲಿನ ಸೇವೆಯನ್ನು ಸಲ್ಲಿಸಲು ನಾನು ಸಿದ್ಧನಿರುವೆನಾದರೂ ಬೇಗನೆ ಇಂಡಿಯಾ ಸರಕಾರದ ಕರೆಯಂತೆ ಬೇರೆ ಉದ್ಯೋಗವನ್ನು ವಹಿಸಿಕೊಳ್ಳುವ ಸಂಭವವಿರುವದರಿಂದ ನಾನು ಹೆಚ್ಚು ಸಮಯ ಕೊಡಗಿನಲ್ಲಿ ನಿಲ್ಲುವಂತಿಲ್ಲ. ನಾನು ಎಲ್ಲಿಯೇ ಇದ್ದರೂ ಕೂಡ ನನ್ನ ಮಾತೃಭೂಮಿಯನ್ನು ನಾನು ಮರೆಯಲಾರೆ. ಈ ದಿನ ನನ್ನನ್ನು ಕರೆಸಿಕೊಂಡು ನಿಮ್ಮ ಪ್ರೀತಿಯ ಪ್ರದರ್ಶನಕ್ಕಾಗಿ ನಾನು ಕೃತಜ್ಞನಾಗಿರುವೆನು" ಎಂದರು. ಇಂಗ್ಲೀಷಿನಲ್ಲಿ ಮೊದಲು ಭಾಷಣ ಮಾಡಿದನಂತರ ಕೊಡಗು ಭಾಷೆಯಲ್ಲಿ ಅದರ ಸಾರಾಂಶವನ್ನು ಅವರೇ ಹೇಳಿದರು.

ಅಂತ್ಯದಲ್ಲಿ ಶ್ರೀ ಪಿ. ಐ. ಬೆಳ್ಯಪ್ಪನವರು ವಂದನೆಗಳನ್ನರ್ಪಿಸುತ್ತಾ "ಅಮ್ಮತ್ತಿನಾಡಿನವರಿಗೆ ಜನರಲ್ ಕಾರ್ಯಪ್ಪನವರ ಮೇಲಿರುವ ಪ್ರೀತಿಯನ್ನು ತೋರಿಸಲು ಅವರನ್ನು ಒಂದಲ್ಲ ಒಂದು ರೀತಿಯಿಂದ ಅವರನ್ನು ತಮ್ಮ ಮಧ್ಯಕ್ಕೆ ಬರುವಂತೆ ಮಾಡಿದ್ದಾಗಿದೆ. ಬಿನ್ನವತ್ತಳೆಯನ್ನು ಸ್ವೀಕರಿಸಲು ಇಷ್ಟವಿಲ್ಲದಿರುವ ಜನರಲರನ್ನು ಹಾಕಿ ಪಂದ್ಯಾಟದಲ್ಲಿ ಇನಾಮು ಹಂಚುವ ನೆಪದಿಂದ ಕರೆಸಿ ಇಂದಿನ ಕೂಟವನ್ನು ಏರ್ಪಡಿಸಿದ್ದಾಗಿದೆಯೆಂದು ನನ್ನ ಭಾವನೆ. ಈ ನಾಡಿನವರು ಶ್ರೀ ಕಾರ್ಯಪ್ಪನವರ ಮೇಲೆ ಪ್ರೀತಿ ವಿಶ್ವಾಸವಿಡಲು ಎರಡು ಕಾರಣಗಳಿವೆ. ಕೊಡಗಿನ ಕೀರ್ತಿಯನ್ನು ಹಿಂದೂಸ್ಥಾನ ಮಾತ್ರವಲ್ಲ; ಪ್ರಪಂಚದ ಇತರ ಭಾಗಗಳಿಗೂ ಕೂಡ ಹರಡಿದ ವ್ಯಕ್ತಿ ಶ್ರೀ ಕಾರ್ಯಪ್ಪನವರು. ಕೊಡಗಿನ ಭವಿಷ್ಯ ಅಭಿವೃದ್ಧಿಯ ವಿಚಾರದಲ್ಲಿ ಇವರು ಒಂದು ನಿರ್ದಿಷ್ಟ ಅಭಿಪ್ರಾಯವುಳ್ಳವರಾಗಿ ಅದಕ್ಕೂ ತಮ್ಮ ಹಿರಿಯ ಸೇವೆಯನ್ನು ಸಲ್ಲಿಸುವರು. ಕೊಡಗನ್ನು ಮಾದರಿ ಪ್ರಾಂತವಾಗಿ ಮಾಡಬೇಕೆಂದು ಎಷ್ಟರ ಮಟ್ಟಿಗೆ ಕುತೂಹಲರಾಗಿರುವರೆಂಬುದು ಅವರ ಭಾಷಣದಿಂದ ಸ್ಪಷ್ಟವಾಗಿದೆ. ಅವರ ಅನುಭವ, ಯೋಗ್ಯತೆ ಮತ್ತು ಉತ್ಸಾಹಶಕ್ತಿ ತಕ್ಕವಾಗಿ ಅವರಿಗೆ ಹೊತ್ತು ಸದವಕಾಶ ದೊರೆಯಲೆಂದು ಆಶಿಸುವವಾದರೂ ಅವರು ಹಿಂದೂದೇಶದಲ್ಲೇ ಯಾ ಹೊರಗೇ ಇರಲಿ ಕೊಡಗನ್ನು ಆದರ್ಶ ಪ್ರಾಂತವಾಗಿ ಮಾಡಲು ಆಗಿಂದಾಗ್ಗೆ ತಮ್ಮ ಸಲಹೆ ಸಹಾಯಗಳನ್ನು ಕೊಡುವರೆಂದು ನಂಬಿಕೆಯಿದೆ. ಅವರಿಂದು ಇಲ್ಲಿಗೆ ದಯಮಾಡಿಸಿದುದಕ್ಕಾಗಿ ನಾಡಿನ ಪರವಾಗಿ ವಂದಿಸುತ್ತೇನೆ. ಇಲ್ಲಿಯ ಸ್ವಾಗತ ಸಮಿತಿಯವರಿಗೆ ಜನರಲ್ ಕಾರ್ಯಪ್ಪನವರನ್ನು ಬರಮಾಡಿಕೊಳ್ಳುವದು ಸುಲಭಕಾರ್ಯವಾಗಿರಲಿಲ್ಲ. ಆದರೂ ಕೂಡ ಬಹು ಶ್ರಮವಹಿಸಿ ಎಲ್ಲಾ ಅನುಕೂಲತೆಗಳನ್ನು ಸರಿಪಡಿಸಿ ಯೋಗ್ಯವಾದ ಸ್ವಾಗತದ ಏರ್ಪಾಡು ಮಾಡಿ ಅವರನ್ನು ಈ ನಾಡಿನವರು ಸತ್ಕರಿಸಲು ಅವಕಾಶ ಮಾಡಿದ್ದಕ್ಕಾಗಿ ನಾಡಿನ ಪರವಾಗಿ ಸ್ವಾಗತ ಸಮಿತಿಗೆ ಕೃತಜ್ಞತೆಗಳು" ಎಂದರು.

ರಾಷ್ಟ್ರಗೀತೆಯ ನಂತರ ಸಭೆಯು ಮುಕ್ತಾಯಗೊಂಡು ಎಲ್ಲರೂ ಶಾಲಾ ಹಾಲಿನಲ್ಲಿ ಏರ್ಪಡಿಸಿದ ಚಹಾ ಕೂಟದಲ್ಲಿ ಭಾಗವಹಿಸಿದರು.

Edited Printed & Published by P. I. Belliappa, at, Kodagu' Press, Mercara, for 'Kodagu' Ltd.

ಮನುಷ್ಯ ಸ್ವಭಾವ ಪರಿಚಯ—

ತಲೆಯ ಆಕಾರದ ಮೇಲಿಂದ

ನಮಗೆ ಪರಿಚಯವಿರುವ ಯೌವನಾದ ಒಬ್ಬನ ಪ್ರಸ್ತಾಪ ಬಂದಾಗ "ಹಾ! ಆತನ ತಲೆಯೆಂದರೆ ತಲೆ. ಗಣಿತವೆಂದರೆ ಆತನಿಗೆ ನೀರು ಕುಡಿದ ಹಾಗೆ" ಎಂದೋ ಅಥವಾ "ಆತನಿಗೆ ಸಂಗೀತ ಪ್ರೈವನತ್ತ ಬೇಣಿಗೆ ಯೋಗಿದೆ" ಎಂದೋ ಅನ್ನುತ್ತೇವೆ. ಹೀಗೆ ಯೌವನಾದರೊಬ್ಬನಲ್ಲಿರುವ ವಿಶೇಷ ಗುಣಗಳನ್ನೆತ್ತಿ ಮಾತನಾಡುವಾಗ ನಾವು ತಲೆಯ ರೂಪ ಆಕಾರಾದಿಗಳ ಅಭ್ಯಾಸದಿಂದ ಮನುಷ್ಯನ ಗುಣವಿಶೇಷವನ್ನು ಹೇಳುವ ಶಾಸ್ತ್ರದ ಭಾಷೆಯಲ್ಲಿ ಮಾತನಾಡುತ್ತಿದ್ದೇವೆ ಎಂಬುದು ನಮ್ಮ ಗಮನಕ್ಕೆ ಬರುವದಿಲ್ಲ. ತಲೆ ದೇಹದ ಅತ್ಯಂತ ಮಹತ್ವದ ಅವಯವಗಳಲ್ಲೊಂದು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಆದುದರಿಂದ ದೇಹದ ಈ ಮಹತ್ವದ ಭಾಗದ ರೂಪರೇಖೆಗಳು ಮನುಷ್ಯನ ಸ್ವಭಾವಾದಿಗಳನ್ನು ಕೆಲ ಮಟ್ಟಿಗೆ ಪ್ರತಿಬಿಂಬಿಸುವವು ಎಂದು ಹೇಳುವದು ತಪ್ಪಾಗಲಾರದು.

ತಲೆಯ ರೂಪದ ಅಭ್ಯಾಸ ಮಾಡಿ ಆ ತಲೆಯ ಮನುಷ್ಯನ ವಿಶಿಷ್ಟ ಸ್ವಭಾವವನ್ನು ಗುರುತಿಸುವ ಶಾಸ್ತ್ರವನ್ನು ೧೮ನೆಯ ಶತಮಾನದ ಕೊನೆಯಲ್ಲಿ ಜರ್ಮನಿಯ ಡಾ. ಫ್ರಾನ್ಸಿಸ್ ಜೋಸೆಫಗಾಲ ಎಂಬವರು ಕಂಡುಹಿಡಿದರು. ಬೇರೆ ಬೇರೆ ಆಕೃತಿಯ ತಲೆಗಳ ಅಭ್ಯಾಸ ಮಾಡಿ ಅವರು ತಮ್ಮ ವೈದ್ಯಕೀಯ ಜ್ಞಾನದ ಆಧಾರದ ಮೇಲೆ ಕೆಲವು ಸಿದ್ಧಾಂತಗಳನ್ನು ಮಾಡಿದರು. ಅವರ ಸಿದ್ಧಾಂತಗಳನ್ನು ಖಂಡಿತ ಪ್ರಮಾಣಗಳೆಂದು ಹೇಳಲು ಬಾರದಿದ್ದರೂ ಡಾ. ಗಾಲ ಮತ್ತು ಅವರ ಶಿಷ್ಯ ಮಂಡಳಿಗೆ ಇದ್ದುದಕ್ಕಿಂತಲೂ ಹೆಚ್ಚಿನ ಅನುಕೂಲತೆ ಇರುವ ಅನೇಕ ಡಾಕ್ಟರರು ಮತ್ತು ಮಾನಸಶಾಸ್ತ್ರಜ್ಞರು ಅವರ ಸಿದ್ಧಾಂತಗಳ ವಿಷಯದಲ್ಲಿ ಹೆಚ್ಚಿನ ನಿರೀಕ್ಷಣೆ ಮತ್ತು ಅಭ್ಯಾಸ ಮಾಡಲು ಅವು ಸಹಾಯಕವಾಗಿವೆ ಎಂಬುದು ನಿಜ. ತಲೆಯ ಮತ್ತು ಮೆದುಳಿನ ಆಕಾರದ ಪ್ರಮಾಣಕ್ಕನುಸರಿಸಿ ಬುದ್ಧಿ ಇರುತ್ತದೆ ಎಂದು ಡಾ. ಗಾಲರು ನಿರ್ಣಯಿಸಿದ್ದರು. ಆದರೆ ಈ ಮಾತು ಇಂದು ವಾದಗ್ರಸ್ತ ವಿಚಾರವಾಗಿದೆ. ಆದರೆ ಬಾಗಿದ ಹಣೆ ರಚನಾತ್ಮಕ ಬುದ್ಧಿಯ ದ್ಯೋತಕವಾಗಿದೆ ಎಂಬುದು ಸಾಮಾನ್ಯವಾಗಿ ಒಪ್ಪಲ್ಪಡುತ್ತದೆ. ಇದಕ್ಕೆ ಬೆಥೋವೆನ್ ಒಂದು ಉದಾಹರಣೆ. ಎತ್ತರದ ಹಣೆ ಸಂಘಟನಾ ಶಕ್ತಿಯ ದ್ಯೋತಕವಾಗಿದ್ದು ಇಂಥ ಹಣೆಯನ್ನು ಅನೇಕ ರಾಜಕೀಯ ಧುರೀಣರು, ಉನ್ನತ ಆಡಳಿತಾಧಿಕಾರಿಗಳು ಮುಂತಾದವರಲ್ಲಿ ಕಾಣಬಹುದು. ಇಳಿಜಾರಾಗಿ ಸಪಾಟಾದ ಹಣೆಗಳು ಕ್ರೌರ್ಯ ಮತ್ತು ನೈತಿಕ ಹೊಣೆಗೇಡಿತನವನ್ನು ಸೂಚಿಸುವವಾಗಿವೆ. ಜರ್ಮನಿಯ ಡಾ. ಗೊಬೆಲ್ಸರಿಗೆ ಇಂಥ ಹಣೆಯಿತ್ತು.

ತಲೆಯ ಹಿಂಭಾಗದಲ್ಲಿರುವ ಚಿಕ್ಕ ಮಿದುಳು ಪುಷ್ಟವಾಗಿರುವದು ಪ್ರೀತಿಯ ಸ್ವಭಾವದ್ಯೋತಕ. ಹುಬ್ಬುಗಳು ಹಣೆಯ ತೀರ ಮೇಲ್ಗಡೆ ಇರುವದು ಕಲಾ ನೈಪುಣ್ಯದ ಗುರುತು. ಈ ಮಾತನ್ನು ಉತ್ತಮ ಕಲಾವಿದರಾಗಿದ್ದ ರೆಂಬ್ರಾಂಟ ಮತ್ತು ಪಿಕಾಸೊ ಇವರ ಹಣೆಯ ಸ್ವರೂಪದಿಂದ ಹೌದೆನ್ನಬಹುದು. ಸಂಗೀತಜ್ಞರಿಗೆ ಮಾತ್ರ ಚೌಕಾಕಾರದ ಹಣೆಗಳಿರುತ್ತವೆ ಕಿವಿಯ ಹಿಂದೆ ಮತ್ತೆ ಮೇಲ್ಗಡೆ ಎಲುಬು ಉಬ್ಬಿಬಂದಿರುವದು ದುಷ್ಟ ಸ್ವಭಾವದ ದ್ಯೋತಕವಾಗಿದೆ. ಇಂಥವರಲ್ಲಿ ಹೆಚ್ಚಿನವರು ಕೊಲೆಪಾತಕಿಗಳೂ ಕಳ್ಳರೂ ಆಗಿರುತ್ತಾರೆಂಬುದು ಪೋಲೀಸರ ಅನುಭವಕ್ಕೆ ಬಂದಿದೆ.

ಡಾ. ಗಾಲರು ಕಳ್ಳರು, ಪುಂಡರು ಮೊದಲಾದ ಅಪರಾಧಿ ಮನೋವೃತ್ತಿಯ ಜನರ ತಲೆ ಉದ್ದವಾಗಿರುವದರ ಬದಲು ಹೆಚ್ಚಾಗಿ ಅಗಲವಾಗಿರುತ್ತದೆ ಎಂದು ಹೇಳಿದ್ದಾರೆ. ಪ್ರಚಂಡ ಬುದ್ಧಿಶಾಲಿಯಾದವನ ತಲೆ ಮೊಟ್ಟೆಯ ಆಕಾರದಿರುತ್ತದೆ. ಕವಿಗಳು, ಕಲ್ಪನಾ ಶಕ್ತಿಯ ಕಲಾವಿದರೂ ಸಂಶೋಧಕರು ಮೊದಲಾದವರ ತಲೆಗೆ ಹಣೆಯ ಬಳಿ ಎರಡು ಕಡೆ ಎಲುಬು ಉಬ್ಬಿಬಂದಿರುತ್ತದೆ.

ಆದರೆ ಈ ಭೇದಗಳೆಲ್ಲ ಸಾಮಾನ್ಯರ ಕಣ್ಣಿಗೆ ಬೀಳುವದಿಲ್ಲ. ತಲೆಯ ಆಕಾರಾದಿಗಳ ಅಭ್ಯಾಸ ಮಾಡುವವರ ಕಣ್ಣಿಗೆ ಮಾತ್ರ ಬೀಳಬಹುದಾದಷ್ಟು ಸೂಕ್ಷ್ಮವಿರುತ್ತವೆ ಈ ಭೇದಗಳು.

ಕಣ್ಣುಗಳಲ್ಲಿಯ ಬಿಳಿಗುಡ್ಡೆಗಳು ಅಗಲವಾಗಿರುವದು ಒಳ್ಳೆಯ ವಾಗ್ಮಿಯ ಗುರುತಾಗಿದೆಯೆಂದು ಹೇಳುತ್ತಾರೆ.

ಈ ಎಲ್ಲ ವಿಚಾರಗಳನ್ನು ಕೆಲ ಪ್ರಸಿದ್ಧ ಪುರುಷರ ತಲೆಯ ಅಭ್ಯಾಸದಿಂದ ಕಂಡುಹಿಡಿದಿದ್ದಾರೆ. ಡಾ. ಗಾಲರು ತಮ್ಮ ಕಾಲದ ಪ್ರಸಿದ್ಧ ಪುರುಷರ ತಲೆಯ ಅಭ್ಯಾಸ ಮಾಡಿ ತಮ್ಮ ಸಿದ್ಧಾಂತ ಮಾಡಿದ್ದಾರೆ. ತಮ್ಮ ಸಿದ್ಧಾಂತದಂತೆ ನೆಪೋಲಿಯನ್ನನು ಒಳ್ಳೆಯ ಗಣಿತ ವಿಶಾರದನಾಗಿದ್ದನೆಂಬುದನ್ನೂ ಶಿಸ್ತು ಪಾಲನೆ ಮತ್ತು ಅಧಿಕಾರ ಚಲಾವಣೆಯಲ್ಲಿ ಸಮರ್ಥನಾಗಿದ್ದನೆಂಬುದನ್ನೂ ಡಾ. ಗಾಲರು ಸಿದ್ಧಪಡಿಸಿದರು. ಅದರಂತೆ ನೆಪೋಲಿಯನನ ಹಣೆ ಕಲ್ಪನಾ ಶಕ್ತಿಯ ಜನರಂತಿತ್ತು; ಗದ್ದವು ಯಂದ್ಧ ಪ್ರಿಯರ ಗದ್ದದಂತಿತ್ತು. ಡಾ. ಗಾಲರು ನೆಪೋಲಿಯನನ ತಲೆಯ ಅಭ್ಯಾಸದಿಂದ ಬರೆದಿರುವದನ್ನು ನೋಡಿದರೆ ಅವರಿಗೆ ತಾವು ಕೈಕೊಂಡ ಕಾರ್ಯದಲ್ಲಿ ನೈಪುಣ್ಯ ಸಾಧಿಸಿತ್ತೆಂದು ಹೇಳಬಹುದಾಗಿದೆ.

ಆದರೆ ಅನೇಕ ಡಾಕ್ಟರರು ಮತ್ತು ಸಾಮಾನ್ಯ ಜನರು ಈ ಶಾಸ್ತ್ರಕ್ಕೆ ಮಹತ್ವವನ್ನೇ ಕೊಡುತ್ತಿಲ್ಲ. ಇದೊಂದು ಢೋಂಗಿ ಶಾಸ್ತ್ರವೆನ್ನುತ್ತಾರೆ ಅವರು. ಈ ಶಾಸ್ತ್ರ ಸರಿಯಾದುದು ಎಂಬುದನ್ನು ಸಿದ್ಧಪಡಿಸಲು ಇನ್ನೂ ಬಹುಕಾಲದ ಅಭ್ಯಾಸ ಮತ್ತು ನಿರೀಕ್ಷಣೆ ಬೇಕಾದೀತು. ಡಾ. ಗಾಲರ ಸಿದ್ಧಾಂತಗಳನ್ನೆಲ್ಲ ಓದಿ ನಾವು ಸುತ್ತುಮುತ್ತಲಿನ ಜನರ ನಿರೀಕ್ಷಣೆಯನ್ನು ಸೂಕ್ಷ್ಮವಾಗಿ ಮಾಡಿದಾಗ ನಮಗೆ ಎಷ್ಟೊ ಸಂಗತಿಗಳು ತಿಳಿದು ಬರಬಹುದಾಗಿದೆ.

'ಕ. ವಿ'

ನೋಟೀಸು.

ಇದರಿಂದ ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ—

ಮುತ್ತಾರುಮುಡಿ ಗ್ರಾಮದ ಅಳಕೆಮನೆ ಸುಬ್ಬಮ್ಮನಾದ ನನ್ನ ಮತ್ತು ಅದೆ ಮನೆ ಕೊರಗಪ್ಪನವರ ಹೆಸರಿನಲ್ಲಿ ನಮ್ಮ ಮನೆ ಲೇಟ್ ನಂಜಪ್ಪನವರ ಪ್ರಥಮ ಪುತ್ರಿ ಚೋಂದಮ್ಮನನ್ನು ಕೊರಗಪ್ಪನವರ ಪುತ್ರ ಬಾಲಪ್ಪನೆಂಬವರು ಮದುವೆ ಮಾಡಿಕೊಳ್ಳುವ ಆಮಂತ್ರಣ ಪತ್ರವನ್ನು ಅಚ್ಚು ಹಾಕಿಸಿ ಅದರಲ್ಲಿ ಮಧುವಿನ ಆಸ್ತಿಗೆ ಹಕ್ಕುದಾರನಾಗಿ ಆ ದಂಪತಿ ಮಹೋತ್ಸವ ನಡೆಯುವದೆಂದು ನಮೂದಿಸಿರುವರು. ಸದರಿ ಮದುವೆಯ ವಿಚಾರದಲ್ಲಾಗಲೀ, ಆಮಂತ್ರಣ ಪತ್ರದಲ್ಲಿ ನನ್ನ ಹೆಸರನ್ನು ಹಾಕುವ ವಿಷಯದಲ್ಲಾಗಲೀ ನನ್ನನ್ನು ಕೇಳಿರುವದೂ ಇಲ್ಲ, ಆ ಬಗ್ಗೆ ನನ್ನ ಸಮ್ಮತಿಯೂ ಇರುವದಿಲ್ಲ. ಇಲ್ಲದ ಹಕ್ಕನ್ನು ಸಾಧಿಸುವ ದುರುದ್ದೇಶದಿಂದ ಮದುವೆ ಕಾಗದದಲ್ಲಿ ಅದನ್ನು ನಮೂದಿಸಲಾಗಿದೆ. ಶ್ರೀ. ಬಾಲಪ್ಪನು ಆಕೆಯನ್ನು ಮದುವೆಯಾದರೂ ಸದರಿ ಆಸ್ತಿಗಳಿಗೆ ಆತನು ಹಕ್ಕುದಾರನಾಗುವದಿಲ್ಲ.

ಅಳಕೆ ಸುಬ್ಬಮ್ಮ

1-5-53. ಮುತ್ತಾರುಮುಡಿ ಗ್ರಾಮ.

Wanted

A temporary teacher. Minimum qualification-Intermidiate, Madhyamica in Hindi. Pay Rs. 60/-inclusive or all allowances.

Apply to:-
THE PANCHAYATDAR,
The H. E. School,
POLLIBETTA, Coorg.

INSURE WITH
OR REPRESENT

INDIA'S OLDEST LIFE OFFICE.

THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS .... OVER 12 CRORES

Applications from energetic youngmen are invited for representation.

Head Office;
BOMBAY.

Branch:
172 3, Narasimharaja Road.
BANGALORE 2.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು ...	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಖಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	..	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎನ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ,
ಪ್ರೆಸಿಡೆಂಟ್ & ಖಜಾಂಚಿ.

ಪ್ರಜಾಪ್ರಭುತ್ವದಲ್ಲಿ —

ಗೊಣಗಾಡುವವರ ಸ್ಥಾನ.

ದೇಶವು ಅಭ್ಯುದಯ ಹೊಂದಬೇಕಾದರೆ ಮೊದಲಾಗಿ ಯೋಜಕರೂ ಕ್ರಿಯಾಶಾಲಿಗಳೂ ಬೇಕು. ಅನಂತರ ಯೋಜನೆಗಳಲ್ಲಿರುವ ಕುಂದು ಕೊರತೆಗಳನ್ನು ತೋರಿಸಿಕೊಟ್ಟು ಉಪಕರಿಸುವ ಟೀಕಾಕಾರರೂ ಬೇಕು. ಕೊನೆಯದಾಗಿ—ಗೊಣಗರೂ ಬೇಕು! ಉತ್ಸಾಹದಿಂದ ಕಾರ್ಯದಲ್ಲಿ ತೊಡಗುವವರಿಗೆ ಒಮ್ಮೊಮ್ಮೆ ಅಶುಭದ ಕಲ್ಪನೆಯೇ ಇಲ್ಲದೆ ಅವರು ಮೈಮರೆಯಬಹುದು. ಎಲ್ಲವೂ ಮಂಗಳಪ್ರದವೆಂಬ ಭಾವನೆ ಅವರಲ್ಲಿ ಮೂಡಬಹುದು. ಆಗ ಗೊಣಗರ ಅಶುಭ ನಿರೀಕ್ಷಣೆ ಕಾರ್ಯೋತ್ಸಾಹಿಗಳಲ್ಲಿ ಜಾಗರೂಕತೆಯನ್ನು ತುಂಬದಿರಲಾರದು.

ಲೇ:— ಶ್ರೀ ಎ. ಎಸ್. ರಾಮಕೃಷ್ಣ, ಉಡುಪಿ.

ಒಂದು ದೇಶವು ಪರಕೀಯರ ಆಳ್ವಿಕೆಯಿಂದ ಪಾರಾಗಿ ಸ್ವತಂತ್ರ ರಾಷ್ಟ್ರವೆನಿಸಿಕೊಂಡಾಗ ಈ 'ಸ್ಥಾನ'ದ ಕುರಿತು ಮಾತುಕತೆ ಬಹಳವಾಗಿ ಕೇಳಿಬರುವುದು ಸಹಜವೆ. ಹಾಗೆ ಸ್ವಾತಂತ್ರ್ಯ ಸಿಗುವ ಮೊದಲು ಯಾರ ಸ್ಥಾನ ಯಾವುದೆಂದು ಚರ್ಚಿಸಿ ಉಪಯೋಗವಿಲ್ಲ. ಏಕೆಂದರೆ ಆಗ ಎಲ್ಲರ ಸ್ಥಾನವೂ ಒಂದೇನೆ. ಮುಖ್ಯವಾಗಿ ಎಲ್ಲರೂ ತೊತ್ತುಗಳೇ ಆಗ. ಎಂತಹ ಅಸ್ಥಾನವಿದ್ದರೂ ಅದಕ್ಕೆ ಆಗ ಬೀದಿ ನಾಯಿ ಸ್ಥಾನದ್ದೇ ಬೆಲೆ. ಆದರೆ ಸ್ವತಂತ್ರರೆಂದೆನಿಸಿಕೊಂಡ ಮೇಲೆ ಹಾಗೆಯೆ? ಅದರಲ್ಲೂ ಪ್ರಜಾಪ್ರಭುತ್ವವೆಂದ ಮೇಲೆ ಕೇಳಬೇಕೆ? ಪ್ರಜೆಗಳದೇ ಪ್ರಭುತ್ವ! ಪ್ರಜೆಗಳೆಲ್ಲ ಪ್ರಭುಗಳು. ನರನಿಲ್ಲದ ನಾಣ್ಯವನೂ ಕೂಡ ತಾನೊಬ್ಬ ಕಿರೀಟ ರಹಿತ ನರಾಧಿಪನೆಂದೇ ತಿಳಿದುಕೊಳ್ಳಬೇಕಾದ ಕಾಲ. ಹಾಗೇನೆ ಸಮಾಜದ ಎಲ್ಲ ಅಂಗಗಳೂ ಈ ನೂತನ ಪ್ರಜಾರಾಜ್ಯದಲ್ಲಿ ತಂತಮ್ಮ ಸ್ಥಾನವೇನು—ಎಂದು ಅಬ್ಬರಿಸುವ ಕಾಲ. ಸ್ವತಂತ್ರ ಭಾರತದಲ್ಲಿ ಸ್ತ್ರೀಯರ ಸ್ಥಾನ (ಪುರುಷರ ಮಾತು ಬಿಡಿ,) ವಿದ್ಯಾರ್ಥಿಗಳ ಸ್ಥಾನ, ಕಲಾವಿದರ ಸ್ಥಾನ, ಸಾಹಿತಿಗಳ ಸ್ಥಾನ, ಬೇರೆ ಬೇರೆ ಮತಗಳವರ ಸ್ಥಾನ—ಇನ್ನು ಕ್ಯಾಪಿಟಲಿಸ್ಟರ, ಕಮ್ಯೂನಿಸ್ಟರ, ಉದ್ಯೋಗಿಗಳ, ನಿರುದ್ಯೋಗಿಗಳ, ಆಸ್ತಿಕರ, ನಾಸ್ತಿಕರ, ಅಂಚೆಯವರ, ಪಂಚೆ ತಯಾರಿಸುವವರ, ಬಿಳೀ ಟೋಪಿಯವರ, ಕರೀ ಟೋಪಿಯವರ, ಟೋಪಿ ರಹಿತರ—ಸ್ಥಾನಗಳೇನೆಂಬುವರ ಕುರಿತು ವೇದಿಕೆಗಳ ಮೇಲೂ ಪತ್ರಿಕೆಗಳಲ್ಲೂ ಘೋಷಣೆಗಳಾಗುತ್ತವೆ. ಮಂತ್ರಿಗಳೂ ಮಹನೀಯರೂ ಆಯಾಯ ಸಂದರ್ಭಕ್ಕನುಗುಣವಾಗಿ, ಆಯಾಯ ಗುಂಪು ಪ್ರಾಮುಖ್ಯವಾದ್ದೆಂದು ಸಾರುತ್ತಾರೆ. ಇದರಿಂದ ಪ್ರತಿಯೊಂದು ಗುಂಪಿಗೂ ತನ್ನ ಸ್ಥಾನವೇ ಮಹತ್ವಾದ್ದೆಂದು ಮನವರಿಕೆಯಾಗಿದೆ. ತಾನಿಲ್ಲದೆ ಈ ಪ್ರಜಾರಾಜ್ಯದ ಗಾಲಿ ಉರುಳಲಾರದೆಂಬ ಭಾವನೆ ಬಂದುಬಿಟ್ಟಿದೆ. ಒಂದು ರೀತಿಯಿಂದ ನೋಡಿದರೆ ಇದು ನ್ಯಾಯವೇ. ದೇಶವು ಪ್ರಗತಿ ಹೊಂದಲು ಸಮಾಜದ ಪ್ರತಿಯೊಂದು ಅಂಗವೂ ಅವಶ್ಯಕವೆಂಬುದು ನಿಜ. ಆದರೆ ಅವುಗಳಿದ್ದ ಮಾತ್ರಕ್ಕೆ ಸಾಲುತ್ತದೆಯೇ? ಅವುಗಳು ವ್ಯವಸ್ಥಿತ ರೀತಿಯಿಂದ ಕೆಲಸ ಮಾಡಿದರೆ ತಾನೆ ದೇಶವು ಪ್ರಗತಿ ಹೊಂದುವುದು? ಹಾಗಿಲ್ಲದಿದ್ದರೆ ಅವುಗಳು ತಮ್ಮ ಸ್ಥಾನ ಪ್ರಾಮುಖ್ಯತೆಯ ಕುರಿತು ಎಷ್ಟು ಹೇಳಿಕೊಂಡರೆ ತಾನೆ ಏನು ಉಪಯೋಗ?

ಆ ದೃಷ್ಟಿಯಿಂದ ನೋಡಿದರೆ ದೇಶದಲ್ಲಿ ಒಂದು ಸಂಗಡದವರು ನಡೆಕೊಳ್ಳುವ ರೀತಿ ಸ್ತುತ್ಯಾರ್ಹವಾಗಿದೆ. ಅವರು ತಮ್ಮ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದ್ದಾರೆ. ನಿರಾಶೆಗೆ ಬಲಿಬೀಳದೆ ಯಾವ ಆಮಿಷಕ್ಕೂ ಒಳಗಾಗದೆ ಮುಂದುವರಿದಿದ್ದಾರೆ. ಜಾತ್ಯಾತೀತ—ಜಾತಿ ನಿರಪೇಕ್ಷಕ—ಕನ್ನುತ್ತೀರಲ್ಲ—ಅಂತಹ ರಾಜ್ಯದಲ್ಲಿರಬೇಕಾದ ಸಲ್ಲಕ್ಷಣವನ್ನುಳ್ಳ ಸಂಗಡವದು. ಆ ಸಂಗಡದವರು ಯಾವುದೇ ಒಂದು ಜಾತಿಯವರಲ್ಲ ಎಲ್ಲ ಜಾತಿ ಮತಗಳಲ್ಲಿಯೂ ಈ ಸಂಗಡಕ್ಕೆ ಸೇರಿದವರಿದ್ದಾರೆ. ಅವರಾರು ಎಂದು ತಿಳಿಯಲು ಆತುರ ಪಡುವಿರಾದರೆ ಅವರನ್ನು 'ಗೊಣಗರು' ಎಂದು ಚುಟುಕಾಗಿ ಕರೆದು ಬಿಡುತ್ತೇನೆ. ಗೊಣಗರು ಅರ್ಥಾತ್ ಗೊಣಗಾಡುವವರು. ಜೀವನದಲ್ಲಿ ಒಂದು ಸಲವಾದರೂ ಗೊಣಗಾಡದಿರುವವರು ಯಾರೂ ಇರಲಾರರು ಅದು ನಿಜ. ತನ್ನ ಹಿತಕ್ಕೆ ವಿರುದ್ಧವಾಗಿ ಏನಾದರೂ ನಡೆದಾಗ, ತಾನು ಅಸಹಾಯಕ ಪರಿಸ್ಥಿತಿಯಲ್ಲಿದ್ದರೆ—ಯಾರಾದರೂ ಗೊಣಗಾಡದೆ ಮತ್ತೇನು ಮಾಡಲಿಕ್ಕಾಗುತ್ತದೆ? ಆಗ ಅವನು ಗೊಣಗನಾಗುತ್ತಾನೆ. ಆದರೆ ಅವನ ಗೊಣಗಾಟ ತಾತ್ಕಾಲಿಕವಾದುದು ಯಾವುದೋ ಒಂದು ವಿಶೇಷ ಕಾರಣದಿಂದ ಆತ ಗೊಣಗಾಟಕ್ಕೆ ತೊಡಗಿದ್ದಾಗಿರುತ್ತದೆ. ಆದರೆ ಅಪ್ಪಟ ಗೊಣಗರ ಲಕ್ಷಣ ಅದಲ್ಲ. ಅಪ್ಪಟ ಗೊಣಗರಿಗೆ ಗೊಣಗಾಟಕ್ಕಾಗಿ ವಿಶೇಷವಾದ ಕಾರಣವೇನೂ ಬೇಕಿರುವುದಿಲ್ಲ. ಕಂಡ ಅಥವಾ ಕೇಳಿದ ಅಥವಾ ಅನುಭವಿಸಿದ ಪ್ರತಿಯೊಂದೂ ಅವರನ್ನು ಗೊಣಗಾಟಕ್ಕೆ ತೊಡಗಿಸುತ್ತದೆ. ಗೊಣಗಾಡಿ ಯಾವುದೇ ಒಂದು ಉದ್ದೇಶವನ್ನು ಸಾಧಿಸುವ ಹಂಬಲ ಅವರಿಗಿಲ್ಲ. ಆ ಮಟ್ಟಿಗೆ ಅವರು ನಿಷ್ಕಾಮ ಕರ್ಮಿಗಳು. 'ಕಲೆಗಾಗಿ ಕಲೆ' ಎಂಬಂತೆ ಗೊಣಗಾಟಕ್ಕಾಗಿ ಗೊಣಗಾಟ ಅವರದು. ಇಂತಹ ಗೊಣಗರಿಗೆ ಪ್ರಜಾಪ್ರಭುತ್ವದಲ್ಲಿ ಯಾವ ಸ್ಥಾನವಿದೆ ಎಂಬುದನ್ನು ವಿವೇಚಿಸೋಣ.

ಈ ದೇಶವು ಸ್ವತಂತ್ರವಾಗುವ ಮೊದಲಿನಿಂದಲೂ ಗೊಣಗರು ತಮ್ಮ ಕಾರ್ಯವನ್ನು ಅವ್ಯಾಹತವಾಗಿ ನಡೆಸುತ್ತ ಬಂದಿದ್ದಾರೆ. ಗಾಂಧಿ ನೆಹರುಗಳು ಬ್ರಿಟಿಷರ ಸರಕಾರವನ್ನು ಇಲ್ಲಿಂದ ತಳ ಕೀಳಿಸಬೇಕು ಎಂದರೆ ಇವರು ಗೊಣಗಿದರು—'ಅಲ್ಲಾ, ಸ್ವಾತಂತ್ರ್ಯ ಬೇಕೆನ್ನೋದೇನೋ ನಿಜ. ಆದರೆ ತಕಲಿ ಹಿಡಿದು ಜೈಲಿಗೆ ನುಗ್ಗಿ, ಈ ದೇಶ ಎಂದಾದರೂ ಸ್ವತಂತ್ರವಾಗುವುದಿದೆಯೇ? ಸಾವಿರ ಗಟ್ಟಲೆ ಜನ ಏಟು ತಿಂದು ತಲೆ ಒಡೆಸಿಕೊಳ್ಳುತ್ತಾರಲ್ಲ. ಇವರಿಗೇನಾದರೂ ಮೆದುಳಿದೆಯೆ. ಒಂದು ದಿನ ಇವುಗಳ ಕುಲ ನಿರ್ನಾಮವಾಗಿ ಹೋಗುವುದು ಖಂಡಿತ. 'ಬ್ರಿಟಿಷ ಸಾಮ್ರಾಜ್ಯದಲ್ಲಿ ಸೂರ್ಯ ಮುಳುಗುವುದೆಂಬುದಿಲ್ಲ' ಎಂಬ ಮಾತು ಸುಳ್ಳಾಗುತ್ತದೆಯೆ?'—೧೯೪೭ರ ಆಗಸ್ಟ ಹದಿನೈದರ ತನಕವೂ ಹೀಗೆ ಪದೇ ಪದೇ ಗೊಣಗಿದರು. ಆದರೆ ಹಾಳು ಬ್ರಿಟಿಷರು ಇಂಡಿಯಾ ಬಿಟ್ಟು ಹೊರಟೇ ಹೋದರಲ್ಲ! ಗೊಣಗರಿಗೆ ಅಸಮಾಧಾನವಾಯಿತು. ಆದರೆ ಆ ಅಸಮಾಧಾನದಲ್ಲಿಯೇ ಅವರು ಸಮಾಧಾನ ಕಂಡರು. 'ಎಷ್ಟು ದಿನ ಉಳಿಯುತ್ತದೆ ಈ ಸ್ವಾತಂತ್ರ್ಯ—ನೋಡಬೇಕು'—ಎಂದರು. ಸ್ವಾತಂತ್ರ್ಯ ಸಿಕ್ಕಿದರೇನು? ದೇಶ ಹೋಳಾಯಿತಲ್ಲ. ರಕ್ತದ ಹೊಳೆ ಹರಿಯುತ್ತಿದೆಯಲ್ಲ. ಯಾಕೆ ಬೇಕು ಇಂತಹ ಸ್ವಾತಂತ್ರ್ಯ ಎಂದು ಗೊಣಗಿದರು. ಹತ್ಯಾಕಾಂಡವನ್ನು ಕಂಡು ನಾಡಿನ ನೇತಾರರು ಪಶ್ಚಾತ್ತಾಪ ವ್ಯಕ್ತಪಡಿಸಿದಾಗ ಗೊಣಗರು ಮೀಸೆಯೊಳಗೇ ಮುಸು ಮುಸು ನಕ್ಕು ಮತ್ತೆ ಮತ್ತೆ ಗೊಣಗಿದರು. ಗಾಂಧೀಜಿಯವರು ಅಗಲಿದಾಗ ಮೊದಲು—'ಆ ಮುದುಕನನ್ನು ಕಾಪಾಡಿಕೊಳ್ಳುವ ಯೋಗ್ಯತೆ ಇವುಗಳಿಗಿಲ್ಲದೆ ಹೋಯಿತೇ' ಎಂದು ಗೊಣಗಿದರು. ಆನಂತರ 'ಇನ್ನೇನು ಧುರೀಣರೊಳಗೆ ಕಚ್ಚಾಟ ಪ್ರಾರಂಭವಾಗುತ್ತದೆ. ನೆಹರೂ—ಪಟೇಲರು ಉತ್ತರ ಧ್ರುವ—ದಕ್ಷಿಣ ಧ್ರುವದಂತೆ. ಈ ದೇಶದ ಸಮಾಚಾರ ಮುಗಿಯಿತು.' ಎಂದು ಗೊಣಗಿದರು. ಹಾಗೇನೂ ಆಗಲಿಲ್ಲ. ಆದರೂ 'ಈ ಸಂಸ್ಥಾನಗಳ ಸೃಷ್ಟಿ ಬಗೆಹರಿಸಿಕೊಳ್ಳಲಿ ನೋಡೋಣ.... ಹೈದರಾಬಾದೊಂದಿದೆ ಕಬ್ಬಿಣದ ಕಡಲೆ.... ಬ್ರಿಟಿಷರನ್ನೋಡಿಸಿದ್ದಾಯಿತು ಇನ್ನು ರಷ್ಯಿಯಿಂದ ಆಳಿಸಿಕೊಂಡರೆ ಸರಿ'—ಎಂದೆಲ್ಲ ಗೊಣಗಾಟ ನಡೆಸಿದರು. ಆದರೆ ಇದೊಂದೂ ಅವರೆಣಿಸಿದಂತೆ ಸಂಭವಿಸಲಿಲ್ಲ. ಆನಂತರ ಗೊಣಗರು ಹಣ ಕಾಸಿನ ಮುಗ್ಗಟ್ಟಿನಲ್ಲಿ ಆಸೆಯಿಟ್ಟರು. ಆಹಾರಾಭಾವವನ್ನು ನೆಚ್ಚಿದರು. 'ಹೊಟ್ಟೆಗಿಲ್ಲದೆ ಈ ದೇಶದ ಜನಗಳೆಲ್ಲಾ ಸಾಯುವ ಕಾಲ ಬಂತೆ? ನಮ್ಮವರ ಆಳ್ವಿಕೆ!' ಎಂದು ಗೊಣಗುತ್ತಾ ಊಟ ಉಪಚಾರ ನಡೆಸಿದರು. ಆದರೂ ಅವರು ಚಿತ್ರಿಸಿಕೊಂಡ ಪರಿಸ್ಥಿತಿ ಉಂಟಾಗಲಿಲ್ಲ. ಅದಕ್ಕಾಗಿ ಸರಕಾರವನ್ನು ಬಿಟ್ಟು ಸೋಶಿಯಲಿಸ್ಟರ, ಕಮ್ಯೂನಿಸ್ಟರ ಕುರಿತು ಗೊಣಗಾಟ ನಡೆಸಿದರು. ಅವರನ್ನೂ ದೂರಿದರು. ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಗೊಣಗರಿಗೆ ದೋಡಲು ಅವರು—ಇವರು, ಅದು—ಇದು ಆ ಪಕ್ಷ—ಈ ಪಕ್ಷ ಎಂಬ ನಿರ್ಬಂಧವೇನೂ ಇಲ್ಲ, ಏಕೆಂದರೆ ಎಲ್ಲರ ಕುರಿತು ಅವರು ಗೊಣಗಾಡುತ್ತಾರೆ.

ಚುನಾವಣೆ ಮುಗಿದ ಮೇಲಾದರೂ ರಾಜ್ಯದಲ್ಲಿ ಅನಾಯಕತೆ ಖಂಡಿತ ಎಂದು ಆಶಿಸಿದ್ದಾಯಿತು. ಅದೂ ಫಲಿಸಲಿಲ್ಲ. ಹೀಗಿದ್ದರೂ ಗೊಣಗಾಡುವವರು ಎದೆಗೆಟ್ಟಿಲ್ಲವೆಂಬುದು ಗಮನಾರ್ಹವಾದ ವಿಷಯ. ಈ ಸ್ಥೈರ್ಯವಿದೆಯಲ್ಲ—ಇದು ಅನುಕರಣೀಯವಾದದ್ದು. ಪ್ರಜಾರಾಜ್ಯದ ಪ್ರಜೆಗಳೆಲ್ಲ ಯಾವ ಸೋಲಿಗೂ ಬಗ್ಗದಿರುವ ಈ ಗೊಣಗರಿಂದ ಪಾಠ ಕಲಿಯಬೇಕಾಗಿದೆ. ಈಗ ಪಂಚವಾರ್ಷಿಕ ಯೋಜನೆಯನ್ನು ಮುಂದಿಟ್ಟಿದ್ದಾರಲ್ಲ—'ಇದೊಂದು ಶುದ್ಧ ಬೂಟಾಟಿಕೆ. ಇದರಿಂದ ದೇಶಕ್ಕೆ ಮೂರು ಕಾಸಿನ ಪ್ರಯೋಜನ ದೊರೆಯಲಾರದು'—ಎಂದೆಲ್ಲ ಗೊಣಗಾಟ ನಡೆದಿದೆ. ಈಗ, ಉಳಿದಿರುವ ಪ್ರಜಾಸಮುದಾಯ ಗೊಣಗರ ನಿರೀಕ್ಷಣೆಯನ್ನು ಸುಳ್ಳಾಗಿಸಬೇಕಾಗಿದೆ. ಅದರಿಂದ ದೇಶಕ್ಕೆ ಶ್ರೇಯಸ್ಸು ಮಾತ್ರವಲ್ಲದೆ ಗೊಣಗರಿಗೂ ಕೂಡ ಎಲ್ಲರಂತೆಯೇ ಪ್ರಯೋಜನ ದೊರೆಯುತ್ತದೆ. ಹಾಗಲ್ಲದೆ ಗೊಣಗರ ಗೊಣಗಾಟ ಸತ್ಯವಾಗಿ ಬಿಟ್ಟಲ್ಲಿ ಗೊಣಗರ ಪಾಡೇನೋ! ಉಳಿದವರ ಪಾಡೇನೋ!

'ಅಂತಹ ಗೊಣಗರು ದೇಶದ್ರೋಹಿಗಳು' ಎಂದು ಯಾರೂ ಬಿಸಿಯೇರಿ ಗುಡುಗಬೇಕಾಗಿಲ್ಲ. ಗೊಣಗರು ಯಾವುದಾದರ ಉದ್ದೇಶವನ್ನಿಟ್ಟುಕೊಂಡು ಗೊಣಗುವುದಲ್ಲವೆಂದು ಮೊದಲೇ ಹೇಳಿದೆ. ಅಂದ ಮೇಲೆ ದೇಶಕ್ಕೆ ದ್ರೋಹ ಮಾಡುವ ಉದ್ದೇಶ ಗೊಣಗರಿಗಿರುತ್ತದೆಯೇ? ಅಶುಭ ಪ್ರತೀಕ್ಷೆ ಅವರಿಗೆ ಅಂಟಿ ಬಂದ ಜಾಡ್ಯ. ಗೊಣಗಾಟ ಅವರ ರಕ್ತಗತವಾದ ಅಭ್ಯಾಸ. ಮುಂಜಾನೆ ಕಾಫಿ ತಿಂಡಿ ಮುಗಿಸಿ, ದಿನಪತ್ರಿಕೆ ಮಗುಚತೊಡಗಿದರೆಂದರೆ ಅವರಿಗೆ ಗೊಣಗಾಟಕ್ಕೆ ವಿಪುಲವಾದ ಸಾಮಗ್ರಿ ಸಿಗುತ್ತದೆ. ಯಾವ ಸುದ್ದಿಯ ತುಣುಕಾದರೂ ಸರಿಯೇ ಅವರನ್ನು ಗೊಣಗಾಟಕ್ಕೆ ಪ್ರೇರಿಪಿಸುತ್ತದೆ. ಅಮೇರಿಕದಿಂದ ಕೆಲವು ಸಾವಿರ ಟನ್ನು ಗೋಧಿ ಬಂತೆಂದರೆ ಸರಿ. 'ಈ ದೇಶ ಅಮೇರಿಕದ ಮುಷ್ಟಿಗೆ ಬಿತ್ತು.' ಎಂದು ಗೊಣಗುತ್ತಾರೆ. ನೆಹರೂ ಸ್ಟಾಲಿನರಿಗೆ ಸಂದೇಶ ಕಳಿಸಿದರೆ? 'ಬರಬರುತ್ತ ದೇಶ ಕಮ್ಯೂನಿಸ್ಟರದಾಗುತ್ತಿದೆಯಪ್ಪಾ' ಎನ್ನುತ್ತಾರೆ.

ಇನ್ನು ಇತರ ಚಿಲ್ಲರೆ ವಿಚಾರಗಳಾದರೂ ಹಾಗೇನೆ. ನಗರದ ರಸ್ತೆಗಳು ಸರಿಯಾಗಿಲ್ಲದಿದ್ದರಂತೂ ಗೊಣಗಾಡುತ್ತಿರುತ್ತಾರೆ. ರಸ್ತೆಗಳೆಲ್ಲಾ ಟಾರು ಹಾಕಿಸಿದರೋ 'ಯಾಕಪ್ಪ ನಗರಗಳಿಗಾಗಿ ಮಾತ್ರ ಈ ದುಂದು ವೆಚ್ಚ ಮಾತ್ರವಲ್ಲದೆ, ಈ ಟಾರು ರಸ್ತೆಗಳು ಕರಗಿ—ರುದ್ದ ಅವಲಕ್ಷಣ' ಎಂದು ಗೊಣಗುತ್ತಾರೆ. ಸೌಕರ್ಯಗಳಿಲ್ಲದಾಗ ಅವು ಇಲ್ಲವಲ್ಲಾ ಎಂಬ ಗೊಣಗಾಟ. ಅವುಗಳನ್ನು ಕಲ್ಪಿಸಿದಾಗ ಅವು ಅನಾವಶ್ಯಕವೆಂಬಂತೆ 'ಯಾಕಪ್ಪಾ ಇವು' ಎಂಬ ಗೊಣಗಾಟ. ಹೀಗಿದೆ ಗೊಣಗರ ಜಾಯಮಾನ.

ಗೊಣಗರ ಗೊಣಗಾಟ ಸಾರ್ವಜನಿಕ ವಿಷಯಗಳಲ್ಲಿ ಮಾತ್ರವಲ್ಲ. ಸಂಸಾರದೊಳಗೂ, ಅವರು ಗೊಣಗರೇ. ಹಾಗೆ ನೋ

ಏಕೆಂದರೆ ಅವರ 'ಸಾಂಸಾರಿಕ ಗೊಣಗಾಟವೇ' 'ಸಾರ್ವಜನಿಕ ಗೊಣಗಾಟಕ್ಕೆ' ಕಾರಣವಾಗಿರಲೂ ಬಹುದು. ಬೆಳಗ್ಗೆ ಹಂಡೆಯಲ್ಲಿ ಬಿಸಿ ನೀರು ಮರಳಿದ್ದರೆ, 'ಇದೇನು ನನ್ನ ಬೇಯಿಸುವುದಕ್ಕೇ' ಎನ್ನುತ್ತಾರೆ ಅಷ್ಟೋಂದು ಬಿಸಿಯಿಲ್ಲದಿದ್ದರೆ ಇದಕ್ಕಿಂತ ತಣ್ಣೀರೇ ವಾಸಿ' ಎಂದು ಗೊಣಗುತ್ತಾರೆ. ಕಾಫಿ 'ಬಿಸಿಯಾಯಿತು, ತಣ್ಣಗಾಯಿತು, ಸಕ್ಕರೆ ಜಾಸ್ತಿ, ಕಡಮೆ ಸ್ಟ್ರಾಂಗಾಯಿತು, ಲೈಟಾಯಿತು' ಎಂದೆಲ್ಲ ಯಾವಾಗಲೂ ಗೋಳು ಇದ್ದೇ ಇದೆ. ತಿಂಡಿಗೆ ಇಡ್ಲಿಯಾದರೆ ದೋಸೆ ಚೆನ್ನಾಗಿತ್ತು, ಎನ್ನುತ್ತಾರೆ. ದೋಸೆಯಿದ್ದರೆ ಇಡ್ಲಿ ಯಾಕೆ ಇಲ್ಲ?, ಎನ್ನುತ್ತಾರೆ. ಎರಡೂ ಇದ್ದರೆ ಉಪ್ಪಿಟ್ಟೇ ಉತ್ತಮವೆಂದು ಗೊಣಗುತ್ತಾ, ಎರಡನ್ನೂ ತುಂಬಿಸಿಕೊಳ್ಳುತ್ತಾರೆ. ಪತ್ರಿಕೆ ಮಾರುವ ಅಂಗಡಿಗೆ ಹೋಗಿ ಇಲ್ಲದ ಪತ್ರಿಕೆಯನ್ನೇ ಕೇಳಿ ಇಲ್ಲವೆನ್ನಿಸಿಕೊಂಡು ಗೊಣಗುತ್ತಾರೆ. ಇತರ ಅಂಗಡಿಗಳಲ್ಲಿಯೂ ಹೋಟೇಲುಗಳಲ್ಲಿಯೂ ಮಾರ್ಕೆಟಿನಲ್ಲಿಯೂ ಇದೇ ರೀತಿ ಗೋಳು. ಮಕ್ಕಳು ನಾಪಾಸಾದಾಗಲಂತೂ ಗೋಣಗುತ್ತಾರೆ. ಫಸ್ಟ್ ಕ್ಲಾಸ್ ಬಂದರೆ 'ಫಸ್ಟ್ ಕ್ಲಾಸು ಆದರೇನಾಯಿತು ಈಗಿನ ವಿದ್ಯಾಭ್ಯಾಸಕ್ಕೆ ಮೂರು ಕಾಸಿನ ಬೆಲೆ' ಎಂದು ಬಿಡುತ್ತಾರೆ. ಹೀಗೆ ಇವರ ವಟ ವಟ ಸದಾ ಇದ್ದೇ ಇದೆ. ಆದರೆ ಇಂಥವರ ವಿಚಾರದಲ್ಲಿ ಕೋಪಿಸಿಕೊಂಡು ಪ್ರಯೋಜನವಿದೆಯೇ?

ಗೃಹ ದೋಷದಿಂದ, ಯಾವುದೋ ಗೃಹದಲ್ಲಿರಬೇಕಾದವರು ಈ ಪೃಥ್ವಿಯಲ್ಲಿ ಜನ್ಮವೆತ್ತಿದ್ದರಿಂದ ಗೊಣಗರಾಗಿರಲೂ ಬಹುದು. ಆದ್ದರಿಂದ ಅವರಿಗೆ ಸುತ್ತಲಿನದೆಲ್ಲ ತಪ್ಪು ತಪ್ಪಾಗಿ ಕಾಣಿಸುವುದೋ ಏನೋ. ಹಾಗೆಂದು ಆ ತಪ್ಪುಗಳನ್ನು ತಿದ್ದುವ ಕೆಲಸಕ್ಕೆ ಅವರು ತಾವೇ ಕೈಹಾಕಲಾರರು. ಏಕೆಂದರೆ ಅವರು ಈ ಗೃಹದವರಲ್ಲ! ಮಾತ್ರವಲ್ಲ; ತಪ್ಪುಗಳನ್ನು ತಿದ್ದಿ ಸರಿಪಡಿಸಿದರೆ ಅವರಿಗೆ ಗೊಣಗಾಡಲು ಅವಕಾಶವಾದರೂ ಎಲ್ಲಿ ಉಳಿಯುತ್ತದೆ? ಅವರ ಕಾರ್ಯಭಾರ ನಡೆಯುವದಾದರೂ ಹೇಗೆ? ಅವರ ಅಸ್ತಿತ್ವವೇ ಅಂತಹ ಕುಂದು ಕೊರತೆಗಳನ್ನು ಅವಲಂಬಿಸಿದೆಯೆಂಬುದನ್ನು ಮರೆಯಲಾಗದು.

ಹೀಗಿದೆ ಗೊಣಗರ ಸಮಚಾರ. ಇಷ್ಟಾದರೂ ದೇಶಕ್ಕೆ ಇಂಥವರು ಬೇಕೇ ಬೇಕೆನ್ನುತ್ತೇನೆ. ಅವರಿಗೆ ಯಾವ ಸ್ಥಾನವಿದೆ ಎಂದು ಕೇಳುತ್ತೀರಾ? ನಾನೆನ್ನುವುದಿಷ್ಟೇ. ಯಾವುದೇ ದೇಶವು ಅಭ್ಯುದಯ ಹೊಂದಬೇಕಾದರೆ ಮೊದಲಾಗಿ ಯೋಜಕರೂ ಕ್ರಿಯಾ ಶಾಲಿಗಳೂ ಬೇಕು. ಅನಂತರ, ಯೋಜನೆಗಳಲ್ಲಿರುವ ಕುಂದು ಕೊರತೆಗಳನ್ನು ತೋರಿಸಿಕೊಟ್ಟು ಉಪದೇಶಿಸುವ ಟೀಕಾಕಾರರೂ ಬೇಕು. ಕೊನೆಯದಾಗಿ ನೀವು ಒಪ್ಪಬಹುದು, ಒಪ್ಪದಿರಬಹುದು, ಗೊಣಗರೂ ಬೇಕು! ನಾಡು ಮುನ್ನಡೆಯ ತೊಡಗಿರಲು, ಹೆಜ್ಜೆ ಹೆಜ್ಜೆಗೂ ಅಮಂಗಳವನ್ನೇ ಚಿತ್ರಿಸುವ, ಪ್ರಲಾಪವನ್ನೇ ಆಲಾಪಿಸುವ, ಗೋಳಿಡುವುದೇ ಗೀಳಾಗಿರುವ ಗೊಣಗರಿಂದಾಗಿ, ಉತ್ಸಾಹಿಗಳಲ್ಲಿ ಒಂದು ಬಗೆಯ ಛಲ ಮೂಡುತ್ತದೆಂದು ನನ್ನ ಭಾವನೆ. ಉತ್ಸಾಹದಿಂದ ಕಾರ್ಯದಲ್ಲಿ ತೊಡಗುವವರಿಗೆ ಒಮ್ಮೊಮ್ಮೆ ಅನುಭವದ ಕಲ್ಪನೆಯೇ ಇಲ್ಲದ ಅವರು ಮೈಮರೆಯುವುದುಂಟು ಎಲ್ಲವೂ ಮಂಗಳ ಪ್ರದವೆಂಬ ಭಾವನೆ ಅವರಲ್ಲಿ ಮೂಡಬಹುದು. ಗೊಣಗರ ಅಶುಭ ನಿರೀಕ್ಷಣೆಯಿಂದಾಗಿ, ಕಾರ್ಯೋತ್ಸಾಹಿಗಳು ಕೊಂಚ ಜಾಗರೂಕರಾಗಿ ಮುನ್ನಡೆಯುವಂತಾಗಬಹುದು. 'ಅಸಂತೋಷಃ ಶ್ರೇಯೋ ಮೂಲಃ' ಎಂದು ಯಾರೋ ಪುಣ್ಯಾತ್ಮರು ಬೇರೊಂದು ಸಂದರ್ಭದಲ್ಲಿ ಹೇಳಿದ್ದುಂಟು. ಅವರ ನಿಜವಾದ ಮರ್ಮ ಏನೇ ಇರಲಿ; ಗೊಣಗರು ಹರಡಲೆಳಸುವ ಅಸಂತೋಷದಿಂದಾಗಿ ಇತರರಿಗೆ ಶ್ರೇಯಸ್ಸುಂಟಾಗಲಿ, ಗೊಣಗಾಟದಿಂದ ಗೊಣಗರಿಗೂ ಸಂತೋಷ ದೊರೆಯಲಿ!

ಏನೇ ಇರಲಿ; ಸ್ವತಂತ್ರ ಭಾರತದಲ್ಲಿ ಗೊಣಗರಿರುವುದು ಶ್ರೇಯಸ್ಕರವೇ. ನಮ್ಮ ಪ್ರಜಾಪ್ರಭುತ್ವದಲ್ಲಿ ಗೊಣಗರಿಗೂ ಒಂದು ಸ್ಥಾನವಿದೆ. ಅವರ ಸಂಖ್ಯೆ ಮಾತ್ರ ಬೆಳೆಯದಿರಲಿ. ಅವರ ಅಶುಭ ವೀಕ್ಷಣೆಯ ನುಡಿ ಸತ್ಯವಾಗದಿರಲಿ. ಅವರ ಗೊಣಗಾಟ ಇತೋಪ್ಯತಿಶಯವಾಗಿ ಸಾಗಲಿ;

ಹುಚ್ಚರ ಹಟ್ಟಿ

ಅಲ್ಲಾ ?

ಎತ್ತರದ ಮಡಿಕೇರಿ
ನೋಡೊಮ್ಮೆ ಬಳಿಸಾರಿ
ಸರಕಾರ ಕೇಂದ್ರವದು
ನಾಡಿನಾ ಹೃದಯವದು
ಜನರಾಶಿ ಎನ್ನುವೆಯಾ?
ಮುಟ್ಟಾಳನಾಗದಿರು
ಶೋಭೆ ಇದೆ, ದರ್ಪವಿದೆ,
ಜಾಗ ನಿನಗಲ್ಲ.

."ಸ್ಕ್ರೀನ್" ಕುರ್ಚಿ "ಸೋಫ"ದಿಂ.
ವೈವಿಧ್ಯ ಹೆಸರಿನಿಂ
ಮನೆಗಳಿವೆ ನೋಡುನೀ
ಬಣ್ಣ ಬಣ್ಣದಿ ಮಿಂದು.
ಸೊಗಸೆಂದು ಹೇಳುವೆಯಾ?
ಎಲ್ಲ ಇದು "ಮೇಕಪ್ಪೆ"!
ಒಳಗಿರುವ ಹಕ್ಕಿಯೂ
ಅನ್ನಕ್ಕುಪ್ಪಿಲ್ಲ.

ಮೆರುಗೀವ ಸೀರೆಗಳು
ಶೆಕೆ ತರುವ ಸೂಟುಗಳು
ವಿಧ ವಿಧದ "ಸ್ಟೈಲು"ಗಳು
ಸಿನೆಮ ನುಡಿ ಆಟಗಳು
ಸೌಂದರ್ಯವೆನ್ನುವೆಯಾ?
"ಶೋ ರೂಮ್" ವಸ್ತುಗಳು!
ಹೊರಗೆಲ್ಲ, ಒಳಗಿಲ್ಲ
ಕೆಲಸಕ್ಕಾಗೊಲ್ಲ.

ಕರಾಚಿ ಚುನಾವಣೆಯಲ್ಲಿ ಗಲಭೆ!

ಸ್ವಾತಂತ್ರ್ಯದ ನಂತರ ಕರಾಚಿಯ ನಗರ ಸಭೆಗೆ ಪ್ರಥಮವಾಗಿಯೇ ತಾ ೨೪ರಲ್ಲಿ ಚುನಾವಣೆ ನಡೆದಾಗ ಗಲಭೆ ಗೊಂದಲವುಂಟಾಗಿ ಪೊಲೀಸರು ಲಾಠಿಚಾರ್ಜ್ ಮಾಡಬೇಕಾಗಿ ಬಂತು.

ಮುಸ್ಲಿಂ ಲೀಗ್ ವಿರೋಧಿ ಘೋಷಣೆಗಳನ್ನು ಗೈಯುತ್ತಾ ಜನರ ಗುಂಪುಗಳು ನಗರದಲ್ಲೆಲ್ಲಾ ಮತ ಪ್ರದರ್ಶನ ಮಾಡಿದವು. ನಗರವನ್ನು ಸಂದರ್ಶಿಸಿದ ಮಹಮ್ಮದ್ ಆಲಿಯವರಿಗೆ ಕೆಲವೆಡೆಗಳಲ್ಲಿ ಭವ್ಯವಾದ ಸ್ವಾಗತ ದೊರೆಯಿತಾದರೂ ಇನ್ನು ಕೆಲವೆಡೆಗಳಲ್ಲಿ ಜನರು ಉರ್ದುವಿನಲ್ಲಿ ಘೋಷಣೆ ಗೈಯುತ್ತಾ, ನಮಗೆ ಆಹಾರ, ಬಟ್ಟೆ, ಆಶ್ರಯ ಕೊಡಿ, ಇಲ್ಲವಾದರೆ ರಾಜಿನಾಮೆ ಕೊಡಿ; ಎಂದು ಹೇಳಲಾರಂಭಿಸಿದರು. ಒಂದು ಕಡೆಯಲ್ಲಿ ಪೊಲೀಸರು ಲಾಠಿಚಾರ್ಜ್ ಮಾಡಿದರು. ಈ ಗಲಭೆಗಳಲ್ಲಿ ಒಬ್ಬ ಸ್ತ್ರೀ ಮೃತಪಟ್ಟಳೆಂದೂ ೫ ಮಕ್ಕಳು ಗಾಯಗೊಂಡರೆಂದೂ ಆ ಮೇಲೆ ತಿಳಿದುಬಂತು. ಮತ ಪ್ರದರ್ಶಕರು "ಮುಸ್ಲಿಂ ಲೀಗ್ ಮುರ್ದಾಬಾದ್" ನಂತಹ ಘೋಷಣೆಗಳನ್ನು ಮಾಡುತ್ತಿದ್ದರು.

ಇದರಿಂದ ಸಮಸ್ತರಿಗೂ ತಿಳಿಸುವುದೇನಂದರೆ—

ಉತ್ತರ ಕೊಡಗು ಶನಿವಾರಸಂತೆ ಹೋಬಳಿ ಕೋರಗಲ್ಲು ದಾಖ್ಲೆ ಹೆಮ್ಮನೆ ಗ್ರಾಮದಲ್ಲಿರುವ ಒಕ್ಕಲಿಗರ ಪೌತಿ ನಂಜೇಗೌಡ್ರ ಹೆಂಡತಿ ದೇವಮ್ಮನ ಹೆಸರಿನಲ್ಲಿ ಜಮಾಬಂದಿ ನಡೆದು ಬರುವ ಅವಳ ಸ್ವಾಧೀನಾನುಭವದಲ್ಲಿರುವ ಸಾಗಿನ (೧) ಸ. ನಂ. 77ರ 1.10 ಎಕ್ರೆ ಏರ್ಯಾದ ಸಾಗು ತರಿ (2) ಸ. ನಂ. 108 ರ 0.76 ಎಕ್ರೆ ಏರ್ಯಾದ ಸಾಗು ತರಿ (3) ಸ. ನಂ. 70/1 ರ 0.24 ಎಕ್ರೆ ಏರ್ಯಾದ ಸಾಗು ತರಿ (4) ಸ. ನಂ. 70/5 ರ 0.20 ಎಕ್ರೆ ಏರ್ಯಾದ ಸಾಗು ತರಿ (5) ಸ. ನಂ. 120/3 ರ 0.17 ಎಕ್ರೆ ಏರ್ಯಾದ ಸಾಗು ತರಿ (3) ಸ. ನಂ. 30 ರ 0.18 ಎಕ್ರೆ ಏರ್ಯಾದ ಸಾಗು ಕುಷ್ಕಿ (7) ಸ. ನಂ. 35 ರ 0.86 ಎಕ್ರೆ ಏರ್ಯಾದ ಸಾಗು ಕುಷ್ಕಿ (8) ಸ. ನಂ. 37/1 ರ 1.13 ಎಕ್ರೆ ಏರ್ಯಾದ ಸಾಗು ಕುಷ್ಕಿ (9) ಸ. ನಂ. 9 ರ 0.48 ಎಕ್ರೆ ಏರ್ಯಾದ ಸಾಗು ಕುಷ್ಕಿ (10) ಸ. ನಂ. 28 ರ 0.45 ರ ಸಾಗು ಕುಷ್ಕಿ (11) ಸ. ನಂ. 53 ರ 0.23 ಎಕ್ರೆ ಏರ್ಯಾದ ಸಾಗು ಕುಷ್ಕಿ ಈ ಮೇಲ್ಕಂಡ ಹನ್ನೊಂದು ಐಟಂ ಆಸ್ತಿಗಳಿಗೆ ಕೋರಗಲ್ಲು ದಾಖ್ಲೆ ಹೆಮ್ಮನೆ ಗ್ರಾಮದಲ್ಲಿರುವ ಅಪ್ಪೇಗೌಡ್ರ ಮಗ ಬಸವೇಗೌಡನಾದ ನಾನು ಸಂಪೂರ್ಣ ಹಕ್ಕುದಾರನಾಗಿದ್ದೇನೆ. ಸದರಿ ದೇವಮ್ಮನ ಮರಣಾನಂತರ ಸದರಿ ಆಸ್ತಿಗಳು ನನಗೇನೇ ಬರಬೇಕಾಗಿದೆ. ಆದ್ದರಿಂದ ಮೇಲ್ಕಂಡ ದೇವಮ್ಮನವರಿಂದ ಯಾರಾದರೂ ಸದರಿ ಆಸ್ತಿಗಳನ್ನು ದತ್ತು, ಕ್ರಯ, ಗಿರ್ವಿ, ಭೋಗ್ಯ ವಗೈರೆ ಯಾವ ತರಹದಲ್ಲೇ ಆಗಲೀ ಬರೆಸಿಕೊಂಡಲ್ಲಿ ಅಂಥಾ ಪತ್ರಗಳು ಎಂದಿಗೂ ಸಿಂಧು ಆಗತಕ್ಕದ್ದಲ್ಲ, ಬರೆಸಿಕೊಂಡವರಿಗೆ ಸದರಿ ಆಸ್ತಿಗಳ ಮೇಲೆ ಯಾವ ಹಕ್ಕೂ ಬರುವುದಿಲ್ಲ. ಹಾಗೆ ಸದರಿ ದೇವಮ್ಮನವರು ಇತರರಿಗೆ ಬರಕೊಡಲು ಯಾವ ಹಕ್ಕೂ ಇರುವುದಿಲ್ಲವೆಂಬ ಸಂಗತಿ ಈ ಮೂಲಕ ಸಮಸ್ತರಿಗೂ ಧೃತಪಡಿಸಿದೆ.

29-4-53. ಬಸ್ವೇಗೌಡ.

ಬೇಕಾಗಿದ್ದಾರೆ.

ಕೊಡಗು ಜೇನು ಮತ್ತು ಮೇಣ ಕೃಷಿಕರ ಸಹಕಾರ ಸಂಘ ಲಿಮಿಟೆಡ್, ವೀರಾಜಪೇಟೆ.

ಈ ಸಂಘಕ್ಕೆ ೧೯೫೩–೫೪ನೇ ಸಾಲಿಗೆ ಜೇನು ಮತ್ತು ಮೇಣ ಸಂಗ್ರಹಿಸಿ ಕೊಡಲು ಏಜೆಂಟರುಗಳು ಬೇಕಾಗಿದ್ದಾರೆ. ಏಜೆಂಟರುಗಳಿಗೆ ಮುಂಗಡ ಹಣ ಮತ್ತು ಕಮಿಷನ್ ಕೊಡಲಾಗುವದು. ಹೆಚ್ಚಿನ ಮಾಹಿತಿಯನ್ನು ಸಂಘದ ಆಫೀಸಿಗೆ ಖುದ್ದಾಗಿ ಬಂದಾಗಲೀ ಯಾ ಬರವಣಿಗೆ ಮೂಲಕವಾಗಲೀ ತಿಳಿದುಕೊಳ್ಳಬಹುದು.

ಟಿ. ಯಂ. ಕಾರ್ಯಪ್ಪ,
ಪ್ರೆಸಿಡೆಂಟ್.

ಬಡವರು ಏನು ಮಾಡಲಿಕ್ಕಿಲ್ಲ?

ಬಡತನವು ಅಗ್ನಿಯಂತಿದೆ. ಅದಕ್ಕೆ ಮಿತಿ ಇರುವ ವರೆಗೆ ಅದು ಹಿಡಿತದಲ್ಲಿರುತ್ತದೆ. ಮಿತಿಮೀರಿದರೆ ಅದು ಕೊಡಹಿಕೊಂಡು ಮೇಲಕ್ಕೇಳುತ್ತದೆ. ಆಗ ಅದನ್ನು ಬಗಿದು ಇಟ್ಟು ಅದರ ಪ್ರಯೋಜನ ಹೊಂದುತ್ತಿರುವವರು ಕಣ್ಣು ತೆರೆಯಬೇಕಾಗುತ್ತದೆ.

ಈ ಮಾತು ವ್ಯಕ್ತಿಗಳಿಗೆ ಅನ್ವಯಿಸುವಂತೆ ಜನಾಂಗ ರಾಷ್ಟ್ರಗಳಿಗೂ ಹತ್ತುತ್ತದೆ. ಇಂದಿನ ಜಾಗತಿಕ ಅಗ್ನಿಕುಂಡಕ್ಕೂ ಈ ಬಡತನ ಅಥವಾ ದಾಸ್ಯವು ಕಾರಣವಲ್ಲದೆ ಮತ್ತೇನು? ಸಾಮ್ರಾಜ್ಯವಾದಿಗಳು ಇದುವರೆಗೆ ಚಿಕ್ಕ ಪುಟ್ಟ ರಾಷ್ಟ್ರಗಳನ್ನು ಹಿಂಡಿದವು. ಆ ಪರಿಸ್ಥಿತಿಯು ಮಿತಿಮೀರಿದಾಗ್ಗೆ ಆ ದಾಸ್ಯ ಭಾಗಗಳು ಕೊಡಹಿಕೊಂಡೆದ್ದು ತಮ್ಮ ಮೇಲೆ ಹಿಡಿತವಿಟ್ಟವರನ್ನು ಲೆಕ್ಕಿಸದೆ ಇಂದು ಸ್ವತಂತ್ರವಾಗುತ್ತಿವೆ. ಆಫ್ರಿಕೆಯಲ್ಲಿ ನಡೆದ ಹೋರಾಟವು ಈ ಸಂದರ್ಭಕ್ಕೆ ಸಂಬಂಧಿಸಿದ ಒಂದು ಕಥೆಯೇ ಆಗಿದೆ.

ಆಫ್ರಿಕಾ ಖಂಡವೆಂದರೆ ದಾಸರಬೀಡು ಎಂದು ಹೇಳಿದರೆ ತಪ್ಪಾಗಲಾರದು. ಅದನ್ನು ಬಿಳಿ ಜನಾಂಗವು ತುಂಬ ಸೂರೆಗೊಂಡಿದೆ. ಅದರ ಆ ಸುಲಿಗೆಗೆ ಈಗ ಅಳಿಗಾಲವುಂಟಾಗುತ್ತಿದೆ. ದಕ್ಷಿಣ ಆಫ್ರಿಕೆಯ ಮಾಲನ್ ಸರಕಾರವು ನಡೆಸಿದ ಕೋಲಾಹಲವನ್ನಂತೂ ಇಡೀ ಜಗತ್ತು ಅರಿತದ್ದಾಗಿದೆ. ಅಲ್ಲಿಯೇ ಮತ್ತೊಂದು ಭಾಗವಾದ ಕೆನಿಯಾದಲ್ಲಿ ಕಿಕುಯು ಜನಾಂಗವು ಮಾವ್ ಮಾವ್, ಎಂಬ ಆಂದೋಲನವನ್ನು ಹೂಡಿ ತನ್ನ ದಾಸ್ಯದಿಂದ ಮುಕ್ತವಾಗಲು ಯತ್ನಿಸುತ್ತಿದೆ.

ಆಫ್ರಿಕೆಯಲ್ಲಿಯ ಇತರ ಜನಾಂಗಗಳಂತೆ ಈ ಕಿಕುಯು ಜನರೂ ಹಿಂದುಳಿದವರು. ಅವರ ಅಜ್ಞಾನದ ಕಾರಣದಿಂದ ಅವರಲ್ಲಿ ದೇವರು, ಪ್ರತಿಜ್ಞೆ, ದೆವ್ವ, ಭೂತ, ಜನರು ಮನೆಯಲ್ಲಿ ಸಾಯುವದರ ಅನಿಷ್ಟತೆ, ಮೊದಲಾದ ಭಾವನೆಗಳು ಅವರಲ್ಲಿವೆ. ಮನೆಯಲ್ಲಿ ಯಾರಾದರೂ ಸತ್ತರೆ ಅವರು ದೆವ್ವ ಆಗಿ ಕಾಡುವರು ಎಂಬ ಭಯವಿರುವದರಿಂದ ಅಸ್ವಸ್ಥ ಜನರನ್ನು ಬೇನೆಯು ಅಸಾಧ್ಯವಾಗುತ್ತಲೇ ಹೊರಗೆ ಒಯ್ದು ಮುಗಿಸಿಬಿಡುತ್ತಾರೆ. ಆದರಿಂದಲೇ ಜನರು ಸಾಯುವದೂ ಹೆಚ್ಚು. ಮಂತ್ರ, ತಂತ್ರ, ಮಾಟ ಮೊದಲಾದುವುಗಳಲ್ಲಿ ಅವರಿಗೆ ವಿಶ್ವಾಸ. ಇದು ಅವರ ಮಾನಸಿಕ ಸ್ವಭಾವ.

ಆರ್ಥಿಕ ಸ್ಥಿತಿಯು ಕೂಡ ಅವರನ್ನು ಬಹುವಾಗಿ ಕಾಡುತ್ತ ಬಂದಿದೆ. ೫೦ ವರ್ಷಗಳ ಹಿಂದೆ ಈ ಕಿಕುಯೂ ಜನರಿಗೆ ಬೇಕಾದಷ್ಟು ಭೂಮಿಯಿತ್ತು. ಇಂದು ಅವರಿಗೆ ಇರುವದಕ್ಕೂ ಸಾಕಷ್ಟು ಸ್ಥಳವಿಲ್ಲ. ೧೨ ಲಕ್ಷ ಜನರು ಯೂರೋಪಿಯನ್ ಜಮೀನದಾರರಲ್ಲಿ ಇಲ್ಲವೆ ಪಟ್ಟಣಗಳಲ್ಲಿ ಕೂಲಿಮಾಡುತ್ತಿದ್ದಾರೆ. ಎಲ್ಲ ಕಿಕುಯೂ ಜನರಿಗಿರುವಷ್ಟಕ್ಕಿಂತ ಹೆಚ್ಚು ಭೂಮಿ ನಾಲ್ಕು ಸಾವಿರ ಬಿಳಿ ಜನರಿಗಿದೆ.

ಹೀಗೆ ಕೂಲಿ ಕೆಲಸ ಮಾಡುವ ಜನರು ನಿಜವಾಗಿ ದಾಸರಾಗಿದ್ದಾರೆ. ಅವರು ಒಬ್ಬರಲ್ಲಿ ಕನಿಷ್ಠ ಮೂರು ವರ್ಷ ಕೆಲಸ ಮಾಡಲು ಕರಾರು ಬರೆದು ಕೊಡಬೇಕು. ಆ ಅವಧಿಯು ಮುಗಿಯುತ್ತಲೇ ಪುನಃ ಮೂರು ವರ್ಷದ ಬಗ್ಗೆ ಬರೆದುಕೊಡುವದರ ಹೊರತು ಅವರಿಗೆ ಬೇರೆ ಮಾರ್ಗವೇ ಇರುವದಿಲ್ಲ. ಏಕೆಂದರೆ ಬೇರೆ ಕಡೆಗೆ ದುಡಿಯಲು ಅವರಿಗೆ ಸಾಧ್ಯವೇ ಇರದಿರುವಂಥ ಪರಿಸ್ಥಿತಿಯಿದೆ. ಈ ಜನರಿಗೆ ತಮ್ಮ ಕುಟುಂಬಕ್ಕಾಗಿ ಧಾನ್ಯ ಬೆಳೆದುಕೊಳ್ಳಲು ಎರಡೆರಡು ಎಕರೆ ಭೂಮಿ ಕೊಡುತ್ತಾರೆ. ಮನೆ ಕಟ್ಟಿಕೊಳ್ಳುವದಕ್ಕಾಗಿ ಸಾಮಗ್ರಿ ಕೊಡುತ್ತಾರೆ. ಮನೆಗಳನ್ನು ಅವರೇ ಕಟ್ಟಿಕೊಳ್ಳಬೇಕು. ಹುಡುಗನು ೧೬ ವರ್ಷ ತುಂಬಿದ ಕೂಡಲೇ ದುಡಿಮೆಗೆ ಬರಲೇಬೇಕು. ಸುಗ್ಗಿಯ ಸಮಯದಲ್ಲಿ ಈ ಕೂಲಿಕಾರರ ಹೆಂಡಂದಿರು ಮತ್ತು ಮಕ್ಕಳು ಕೂಡ ಕೆಲಸಕ್ಕೆ ಬರಬೇಕು. ಅವರಾರೂ ಸ್ಥಳಬಿಟ್ಟು ಹೋಗಬೇಕಾದರೆ ತಮ್ಮ ಒಡೆಯನಿಂದ ಒಪ್ಪಿಗೆ ಪತ್ರ ಪಡೆಯಬೇಕು.

ಪಟ್ಟಣದಲ್ಲಿ ಕೆಲಸ ಮಾಡುವವರಿಗೆ ಮನೆಗಳಿರುವದಿಲ್ಲ. ಅವರಿಗೆ ಬಾಡಿಗೆ ಕೊಡುವದಕ್ಕೆ ಹಣವೇ ಇರುವದಿಲ್ಲ. ಒಬ್ಬೊಬ್ಬರೇ ಅವರು ಬಂದಿರುತ್ತಾರೆ. ಊರಲ್ಲಿ ಇದ್ದ ಹೆಂಡಿರು ಮಕ್ಕಳು ತಮ್ಮ ಪರಾಮರಿಕೆಯನ್ನು ತಾವೇ ಮಾಡಿಕೊಳ್ಳಬೇಕು. ನೈರೋಬಿ ಪಟ್ಟಣದಲ್ಲಿ ಇಂತಹ ಜನರು ೧೦ ಸಾವಿರ ಇದ್ದಾರೆ. ತಮ್ಮ ಹೊಟ್ಟೆಗೆ ಸಾಲುವಷ್ಟು ಹಣ ಕೂಡ ಸಿಗುವುದಿಲ್ಲ.

ಕಿಕುಯು ವಸತಿಗಳನ್ನು ನೋಡಿದರೆ ಹೆಕ್ಕು ನಡುಗುತ್ತದೆ. ಪಾಯಿಖಾನೆಗಳ ಸಾಲೋ ಎಂಬಂತೆ ಕಾಣುವ ಸಾಲುಗಳಿರುತ್ತವೆ. ಅವು ಒಂದೇ ಕೋಣೆಯ ವಸತಿ ಗೃಹಗಳು. ಒಂದೇ ಕೋಣೆಯ ಎರಡು ಜೋಡುಗಳು ಅಥವಾ ಮೂರು ಜೋಡುಗಳು ಕೂಡ ಇರುತ್ತವೆ. ಮುಕ್ಕಳು, ಕುರಿ ಮೊದಲಾದ ಪ್ರಾಣಿಗಳೂ ಅಲ್ಲಿಯೇ ಇರುತ್ತವೆ.

ಕೆನಿಯಾದಲ್ಲಿ ಆಫ್ರಿಕಾ ಜನರು ಏಶಿಯಾ ಜನರು, ಅರಬರು ಮತ್ತು ಯೂರೋಪಿಯನರು ಹೀಗೆ ನಾಲ್ಕು ತರಹದ ಜನರಿದ್ದಾರೆ. ಅವರ ವಸತಿ, ಶಾಲೆ, ಆಸ್ಪತ್ರೆಗಳು ಬೇರೆ ಬೇರೆ. ಇವರ ಜನ ಸಂಖ್ಯೆಯು ೫೫ ಲಕ್ಷ, ೧ ಲಕ್ಷ, ೧೨ ಸಾವಿರ, ೩೦ ಸಾವಿರ, ಅನುಕ್ರಮವಾಗಿದೆ. ಇವರ ಕನಿಷ್ಠ ಉತ್ಪನ್ನ ವರ್ಷಕ್ಕೆ ೨೦ ಪೌಂಡು, ೧೮೦ ಪೌಂಡು, (ಅರಬರದು ಹೇಳಿಲ್ಲ), ಯೂರೋಪಿಯನ್ನರದು ೬೦೦ ಪೌಂ. ಇರುತ್ತದೆ.

ಅಲ್ಲಿಯ ಶಾಸನ ಸಭೆಯಲ್ಲಿ ಒಟ್ಟು ೫೪ ಸ್ಥಳಗಳಿವೆ. ಅವುಗಳಲ್ಲಿ ೪೦ ಯೂರೋಪಿಯನರು ಇರುತ್ತಾರೆ. ಆರು ಏಶಿಯಾದವರ ಪ್ರತಿನಿಧಿಗಳೂ ಇಬ್ಬರು ಅರಬರ ಪ್ರತಿನಿಧಿಗಳೂ ಇರುತ್ತಾರೆ. ಅರಬರ ಇಬ್ಬರು ಪ್ರತಿನಿಧಿಗಳಲ್ಲಿ ಒಬ್ಬನು ಜನನಿಯುಕ್ತನಿರುತ್ತಾನೆ. ಆಫ್ರಿಕೆಯ ಜನರಿಂದ ಒಬ್ಬನು ಜನನಿಯುಕ್ತನಾಗಿ ಆ ಸಭೆಗೆ ಬರುವದಿಲ್ಲ. ಆರು ಆಫ್ರಿಕನ್ನರನ್ನು ಸರಕಾರವೇ ನಿಯಮಿಸುತ್ತದೆ. ಬಿಳಿ ಜನರ ಈ ಕಿರುಕುಳವನ್ನು ಸಹಿಸಲಾರದೆ ಕಿಕುಯು ಜನರು ಪ್ರಾರಂಭಿಸಿರುವ ಚಳವಳವು ಉಗ್ರ ರೂಪು ತಾಳುತ್ತಿದೆ.

'ಜೈಹಿಂದ್'

ನೀವೇಲಿಯ ಭೂಗರ್ಭನಿಧಿ.

ಭಾರತವು ಔದ್ಯಮಿಕ ಅಭಿವೃದ್ಧಿಯನ್ನು ಹೊಂದುವದಕ್ಕೆ ಖನಿಜ ಸಂಪತ್ತಿನ ಹೇರಳ ಪ್ರಯೋಜನವನ್ನು ಪಡೆಯುವದು ಅಗತ್ಯ. ನಮ್ಮಲ್ಲಿ ಮಹೋದ್ಯೋಗಗಳನ್ನು ಅಭಿವೃದ್ಧಿಗೊಳಿಸಲು ಅತ್ಯಾವಶ್ಯಕವೆನಿಸಿದ ಕಬ್ಬಿಣ ಮತ್ತು ಕಲ್ಲಿದ್ದಲು ಹೇರಳವಾಗಿದೆ ಎಂದು ಸಂಶೋಧನೆಗಳಿಂದ ತಿಳಿದುಬಂದಿದೆ. ಭಾರತದಲ್ಲಿ ಮುಖ್ಯವಾದ ಕಲ್ಲಿದ್ದಲು ಗಣಿಗಳು ಈಶಾನ್ಯ ಭಾಗದಲ್ಲಿ ಬಿಹಾರ ಮತ್ತು ಬಂಗಾಳ ರಾಜ್ಯಗಳಲ್ಲಿ ಹಬ್ಬಿವೆ. ಭಾರತದ ಒಟ್ಟು ಉತ್ಪಾದನೆಯ ನೂರರಲ್ಲಿ ೮೨ ಅಂಶ ಈ ಪ್ರದೇಶದಿಂದಲೇ ಬರುತ್ತದೆ. ಮಧ್ಯಪ್ರದೇಶ, ಒರಿಸಾ, ಹೈದರಾಬಾದು, ಆಸಾಮುಗಳಲ್ಲಿಯೂ ಉತ್ಪಾದನೆ ಮಿತಪ್ರಮಾಣದಲ್ಲಿದೆ. ಇವುಗಳಲ್ಲದೆ ಮದ್ರಾಸು, ಕಾಶ್ಮೀರ, ಕಚ್ ಮುಂತಾದೆಡೆಗಳಲ್ಲಿ ಕಲ್ಲಿದ್ದಲಿನ ನಿಕ್ಷೇಪಗಳಿವೆ ಎಂಬುದು ಕಂಡುಬಂದಿದೆ. ಮದ್ರಾಸಿನ ದಕ್ಷಿಣ ಆರ್ಕಾಟು ಜಿಲ್ಹೆಯಲ್ಲಿ ಈಚೆಗೆ ಲಿಗ್ನೈಟ್ (ಅಥವಾ ಕಂದು ಕಲ್ಲಿದ್ದಲು) ದೊರೆಯುತ್ತದೆಂದು ತಿಳಿದು, ಅದನ್ನು ಪಡೆದು ಉಪಯೋಗಿಸಲು ಪ್ರಾಥಮಿಕ ವ್ಯವಸ್ಥೆಗಳು ನಡೆದಿದೆ.

ಮಹತ್ವದ ನಿಕ್ಷೇಪ

ಕಳೆದ ತಿಂಗಳು ಮದ್ರಾಸು ರಾಜ್ಯದ ಔದ್ಯೋಗಿಕ ಮಂತ್ರಿ ಡಾ. ಯು ಕೃಷ್ಣರಾಯರು ದಕ್ಷಿಣ ಆರ್ಕಾಟಿನ ನಿವೇಲಿಯಲ್ಲಿ ಕಂದು ಕಲ್ಲಿದ್ದಲಿನ ಮಹತ್ವದ ಸಾಹಸದ ಉದ್ಘಾಟನೆಯನ್ನು ಮಾಡಿದರು. ಕಂದು ಕಲ್ಲಿದ್ದಲು ಉರುವಲಿಗೆ ಬಹಳ ಉಪಯೋಗಕರವೆನಿಸಿದೆ. ಭೂಗರ್ಭದಲ್ಲಿ ನಿಹಿತವಾಗಿರುವ ಈ ಉರುವಲನ್ನು ಎತ್ತಿ, ಮಾನವನ ನಿತ್ಯೋಪಯೋಗಕ್ಕೆ ಬಳಸುವ ಪ್ರಯತ್ನವನ್ನು ಕೈಗೊಂಡುದರಿಂದ ನಮ್ಮ ಕಟ್ಟಿಗೆಯ ಸಮಸ್ಯೆ ಕೆಲಮಟ್ಟಿಗೆ ಕಡಿಮೆಯಾದೀತು. ದಕ್ಷಿಣ ಆರ್ಕಾಟಿನಲ್ಲಿ ಕಂದು ಕಲ್ಲಿದ್ದಲು ದೊರೆಯುತ್ತದೆಂಬ ಸಂಗತಿ ತಿಳಿದು ಬಂದಂದಿನಿಂದ ನೀವೇಲಿ ಪ್ರದೇಶಕ್ಕೆ ಬಹಳ ಮಹತ್ವ ಪ್ರಾಪ್ತವಾಗಿದೆ. ಕಡಲೂರಿನಿಂದ ೨೪ ಮೈಲು ಮತ್ತು ಮದ್ರಾಸಿನ ನೈಋತ್ಯಕ್ಕೆ ೧೩೫ ಮೈಲು ದೂರದಲ್ಲಿ ನೀವೇಲಿ ಇದೆ. ಕೆಲವೇ ದಿನಗಳಿಗೆ ಹಿಂದೆ ಯಾರೊಬ್ಬರೂ ಕಂದು ಕಲ್ಲಿದ್ದಲೆಂದರೇನು ಎಂಬುವನ್ನು ತಿಳಿದು ಅದರ ಪ್ರಯೋಜನವನ್ನು ಮನಗಾಣಲು ಬಯಸಲಿಲ್ಲ. ಆದರೆ ಇಂದು ಪರಿಸ್ಥಿತಿಯೇ ಬದಲಾಗಿದೆ. ತಮಿಳುನಾಡಿನಲ್ಲಿ ಜವಳಿಯ ಗಿರಣಿಗಳು ಹೆಚ್ಚಬೇಕಾದರೆ ಮತ್ತು ವಿದ್ಯುಚ್ಛಕ್ತಿಯ ಪ್ರಸಾರವಾಗಬೇಕಿದ್ದರೆ ಕಂದು ಕಲ್ಲಿದ್ದಲಿನ ನಿಕ್ಷೇಪಗಳು ನೆರವಾಗಬಲ್ಲವೆಂದು ಎಲ್ಲರೂ ಕಂಡುಕೊಂಡಿರುವರು.

ತೂತು ಬಾವಿಗಳು

ಇಲ್ಲಿ ಸುಮಾರು ೨೫ ಮೈಲು ಕ್ಷೇತ್ರದಲ್ಲಿ ಕಂದು ಕಲ್ಲಿದ್ದಲಿನ ನಿಕ್ಷೇಪವಿದೆ. ಈ ಕಲ್ಲಿದ್ದಲನ್ನು ಉರುವಲಿಗಾಗಿ ಯಥೇಷ್ಟ ಬಳಸಬಹುದಲ್ಲದೆ ಅತ್ಯಮೂಲ್ಯವಾದ ಪೆಟ್ರೋಲಿಯಂ, ಡೀಸೆಲ್ ಎಣ್ಣೆ, ಮೇಣ ಮತ್ತು ಹೈಡ್ರೋಕಾರ್ಬನ್ ಗ್ಯಾಸ್ ಮುಂತಾದುವುಗಳನ್ನೂ ಇದರಿಂದ ಪಡೆಯಬಲ್ಲೆವು. ಪ್ರಸ್ತುತ ಈ ನಿಕ್ಷೇಪದ ಪ್ರಾಥಮಿಕ ಸರ್ವೆ ಮಾತ್ರ ನಡೆಯುತ್ತಿದೆ. ಇಲ್ಲಿ ಮಹೋದ್ಯಮಗಳು ಬೆಳೆದು ಬಂದಾವೆಂದು ಊಹಿಸುವದು ಸರಿಯಲ್ಲ. ಏಕೆಂದರೆ ಕಲ್ಲಿದ್ದಲನ್ನು ತೆಗೆಯುವಾಗ ಎತ್ತಿಹಾಕಿದ ಜೇಡಿನಾದ ಕೊಜೆಮಣ್ಣಿನಿಂದ ಮಕ್ಕಳ ಆಟದ ಬೊಂಬೆಗಳು, ಸಿಂಗಾಣಿಯ ಒಡವೆಗಳು, ಇಟ್ಟಿಗೆ ಮುಂತಾದವುಗಳನ್ನು ಗೃಹೋದ್ಯಮದ ಮಟ್ಟದಲ್ಲಿ ಕೈಗೊಳ್ಳಲು ಹವಣಿಸಿರುವರು. ಈ ಕಲ್ಲಿದ್ದಲು ಕ್ಷೇತ್ರದಿಂದ ರಾಜ್ಯಕ್ಕೆ ಒಂದು ಸಣ್ಣ ನೀರಾವರಿ ಯೋಜನೆ ದೊರೆತಂತಾಗಿದೆ. ದಕ್ಷಿಣ ಆರ್ಕಾಟಿನಂಥಾ ರುಕ್ಷ ಭೂಮಿಯಲ್ಲಿ ತೂತು ಬಾವಿಗಳು ಕಾಣಿಸಿಕೊಂಡಿವೆ. ಈಗಿನ ಅಂದಾಜಿನಂತೆ ಎರಡು ಸಾವಿರ ಎಕರೆ ಪ್ರದೇಶವನ್ನು ನೀರಾವರಿಗೆ ಈ ಬಾವಿಗಳು ಒಳಪಡಿಸಬಲ್ಲವು. ಕೆಲವು ಬಾವಿಗಳಲ್ಲಿ ಒರತೆಯ ಒತ್ತಡವು ಎಷ್ಟು ಹೆಚ್ಚಿದೆ ಎಂದರೆ ಪ್ರತಿ ನಿಮಿಷಕ್ಕೂ ಎರಡುವರೆ ಸಾವಿರ ಗ್ಯಾಲನು ನೀರು ಚಿಮ್ಮುತ್ತದೆ. [illegible] ೧೭೦ ತೂತು ಬಾವಿಗಳು [illegible] ಯೊಂದು ಬಾವಿಯು ಹತ್ತು [illegible] ಎಕರೆ ಭೂಮಿಗೆ ವರ್ಷವಿಡೀ [illegible] ಣಿಸುತ್ತವೆ.

ಪ್ರಾಯೋಗಿಕ ಪ[illegible]

ಪ್ರಾಯೋಗಿಕ ಯೋಜನೆ[illegible] ರ್ಷದಲ್ಲಿ ಮುಗಿದಾಗ ೧೬೦[illegible] ಮ ಕಲ್ಲಿದ್ದಲನ್ನು ತೆಗೆದಾಗ [illegible] ಭೂಗರ್ಭದಲ್ಲಿ ನಿಕ್ಷೇಪಿಸಲ್ಪ[illegible] ಲಿನ ಪ್ರಮಾಣ ಸುಮಾರು ೫[illegible] ಟನ್ನುಗಳು. ಪ್ರಾಯೋ[illegible] ವು ಯಶಸ್ವಿಯಾದಲ್ಲಿ ಕಲ್ಲಿದ್ದ[illegible] ವ್ಯಾಪಾರೀ ಮಟ್ಟದಲ್ಲಿ ಎ[illegible] ಪ್ರಯತ್ನವನ್ನು ಕೈಗೊ[illegible] ನಿವೇಲಿಯ ಈ ಕಂದು ಕಲ್ಲಿ[illegible] ಮ ವರ್ಗದ ಕಲ್ಲಿದ್ದಲನ್ನು [illegible] ಹೋಲುತ್ತದೆ. ಆದಕಾರಣ [illegible] ಔದ್ಯಮಿಕ ಅಭಿವೃದ್ಧಿಗಾಗಿ [illegible]

ವಾರದ ಕಥೆ.

ಪ್ರತೀಕಾರ

ಶ್ರೀ ಬಿ. ಎಸ್. ರಾಮಸ್ವಾಮಿ.

ಬೊಮ್ಮನಹಳ್ಳಿಯ ಬೋರೇಗೌಡ ಬಲು ಹೆಸರುವಾಸಿ. ಅವನು ಊರಿನ ಪಟೇಲ. ಅವನ ಸ್ನೇಹಿತ ಅರಳೆ ವ್ಯಾಪಾರಿ ಜಂಗಲುಹಟ್ಟಿ ಜವರೇಗೌಡ; ವ್ಯಾಪಾರದಲ್ಲಿ ಅಪಾರ ಹಣ ಸಂಗ್ರಹಿಸಿ ಬೆಂಗಳೂರಿನಲ್ಲಿ ಎರಡು ಬಂಗಲೆಗಳನ್ನು ಕಟ್ಟಿದ್ದನು. ಅವನ ಒಬ್ಬನೇ ಮಗ ನರಸನು ತಂದೆಗೆ ಸಹಾಯಕನಾಗಿ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುತ್ತಿದ್ದನು.

ಹಳ್ಳಿಯ ಎಲ್ಲ ವಿಚಾರ ವ್ಯವಹಾರಗಳೂ ಸಮಸ್ಯೆಗಳೂ ಈ ಇಬ್ಬರು ಮುಖಂಡರಿಲ್ಲದೆ ತೀರ್ಮಾನವಾಗುತ್ತಿರಲಿಲ್ಲ. ಕೋರ್ಟುಕಛೇರಿ ಹತ್ತಬೇಕಾದರೂ ಸರಿ, ಊರು ಆಳಾಯಿಸಬೇಕಾದರೂ ಸರಿ ಇಬ್ಬರು ಜತೆ.

ಬೋರೇಗೌಡನ ಒಬ್ಬಳೇ ಮಗಳು ತಿಮ್ಮಿ ಅಷ್ಟು ಚೆಲುವೆಯಲ್ಲದಿದ್ದರೂ ಕುರೂಪಿಯಲ್ಲ. ಅವಳನ್ನು ಸ್ನೇಹಿತನ ಮಗ ನರಸನಿಗೆ ಕೊಡಬೇಕೆಂದು ತನ್ನ ಹಿರಿಯಾಸೆಯನ್ನು ಸಮಯ ಬಂದಾಗ ವ್ಯಕ್ತಪಡಿಸುವದೆಂದು ಸುಮ್ಮನಾಗಿದ್ದ. ಜವರೇಗೌಡನೇ ಈ ವಿಷಯವನ್ನು ಪ್ರಸ್ತಾಪಿಸಬಹುದೆಂಬುದೂ ಒಂದು ಕಾರಣ. ಒಂದು ದಿನ ಲೋಕ ವಿರಾಮವಾಗಿ ಮದುವೆಯ ವಿಷಯವನ್ನೆತ್ತಿದರೂ ಜವರೇಗೌಡನಿಂದ ಉತ್ತೇಜಕವಾದ ಉತ್ತರವೇನೂ ಬರಲಿಲ್ಲ. "ನೋಡೋಣ" ನೆಂದೇ ತಳ್ಳುತ್ತ ಬಂದನು. ಕೊನೆಗೆ ಬೇಸರವಾಗಿ ಬೋರೆಗೌಡನು, "ಜವರಪ್ಪ, ನೀನು ಕಂಡ್ಹಾಗೇ ತಿಮ್ಮಿಗೆ ವಯಸ್ಸಾಗ್ಹೋಯ್ತು, ಇನ್ನೂ ಮದ್ವೆ ಇಲ್ದಿದ್ರೆ ಜನ ಏನೆಂದಾರು? ನೀನು ನೋಡೋಣ ಅಂತಲೇ ಇದ್ದೀಯೆ. ಹೋಗಲಿ, ಖಂಡಿತ ಹೇಳಿಬಿಡು, ಏನೋ ನಾವಿಬ್ಬರೂ ಇಷ್ಟು ಸ್ನೇಹಿತರು ಇಬ್ಬರಿಗೂ ಸಂಬಂಧ ಬೆಳೆಯಲಿ ಅಂತ ನನ್ನಿಷ್ಟ" ಎಂದನು.

ಜವರೇಗೌಡನು ಕೊಂಚ ತಗ್ಗಿನಿಂದ, 'ಸಂಬಂಧಕ್ಕೇನಪ್ಪ ಹೇಗಾದರೂ ಆಗುತ್ತೆ' ಆದರೆ ನನ್ನ ಮಗನಿನ್ನೂ ಓದಬೇಕು. ಅದಿರಲಿ, ನಾಳೆ ಅರಳೇಕಾಯನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗಬೇಕಲ್ಲ, ಲಾರಿ ಎಷ್ಟು ಹೊತ್ತಿಗೆ ಕಳುಹಿಸುತ್ತೀಯೆ?" ಎಂದು ಮಾತು ಬದಲಾಯಿಸಿದನು.

ಬೋರೆಗೌಡನಿಗೆ ಈ ಮಾತು ಹಿಡಿಸಲಿಲ್ಲ. ಅವನು, "ಇಲ್ಲ ಜವರಪ್ಪ ನೀನು ಬೇರೆ ಮಾತು ತೆಗೀಬೇಡ. ಉಂಟು ಅಥವಾ ಇಲ್ಲ, ಎರಡರಲ್ಲಿ ಒಂದು ಹೇಳಿಬಿಡು. ನನ್ನ ಹುಡುಗಿಗೆ ವಯಸ್ಸಾಯಿತು" ಎಂದು ಖಂಡಿತವಾಗಿ ಹೇಳಿದನು.

ಜವರೆಗೌಡನಿಗೆ ಪ್ರಾಣ ಸಂಕಟವೊದಗಿತು. ತನ್ನ ಮಗನಿಗೆ ಪಟ್ಟಣದ ಹೆಣ್ಣು ತರಬೇಕೆಂದು ಮನದಾಸೆ. ಬೆಂಗಳೂರಲ್ಲಿ ಕೂಡ ಅವನಿಗೆ ಕೆಲವರು ಅದೇ ರೀತಿ ಒತ್ತಾಯ ಮಾಡಿದ್ದರು ಆದರೆ ಈಗ ಸ್ನೇಹಿತನ ಮನಸ್ಸನ್ನು ನೋಯಿಸುವದು ಹೇಗೆ? ಕೊನೆಗೆ ಬಹಳ ಹೊತ್ತು ಆಲೋಚಿಸಿ ನಿರಿದು, "ಬೇರೆ ಬಳಿ ಗಂಡು ಗೊತ್ತು ಮಾಡಿಕೋ, ಬೋರೆಪ್ಪ, ಹಾಳು ನನ್ನ ಹುಡುಗನಿಗೆ ಪಟ್ಟಣದ ಹೆಣ್ಣೇ ಬೇಕಂತೆ. ನಾನು ಎಷ್ಟು ಹೇಳಿದರೂ ಹಳ್ಳಿಯ ಹೆಣ್ಣು ಬೇಡ ಅಂತಿದ್ದಾನೆ. ನಾನು ಏನು ಮಾಡಲಿ ಹೇಳು?" ಎಂದು ಹೇಳಿಯೇ ಬಿಟ್ಟನು. ಬೋರೇಗೌಡನಿಗೆ ಮುಳ್ಳು ಚುಚ್ಚಿದಂತಾಯಿತು. ಆದರೂ ಮನಸ್ಸಿನಲ್ಲಿ ಬದಲಾವಣೆಯನ್ನು ತೋರ್ಪಡಿಸದೆ "ಸರಿ" ಎಂದುಬಿಟ್ಟನು.

ಈ ವಿಚಾರದಲ್ಲಿ ಬೋರೇಗೌಡನಿಗೂ ತನಗೂ ಮನಸ್ತಾಪ ಬರಬಹುದೆಂದು ಜವರೇಗೌಡನು ಎಣಿಸಿದ್ದನು. ಆದರೆ ಬೋರೇಗೌಡನು ತನ್ನ ಮಾತಿಗೆ ಒಪ್ಪಲು, ಅವನು ಸಂತೋಷದಿಂದ ಅಂದಿನಿಂದಲೇ ತನ್ನ ಹುಡುಗನಿಗೆ ಹೆಣ್ಣು ನೋಡಲು ಪ್ರಾರಂಭಿಸಿದನು. ಸ್ವಲ್ಪ ದಿನದಲ್ಲೇ ಲಗ್ನವೂ ನಿಷ್ಕರ್ಷೆಯಾಯಿತು. ಬೆಂಗಳೂರಿನ ಅರಳೇಕಾಯಿ ಕಂಟ್ರಾಕ್ಟರ್ ಶಿವಯ್ಯನವರ ಮಗಳನ್ನೇ ತಂದು ವೈಭವದಿಂದ ಮದುವೆಯನ್ನು ಮಾಡಿಯೇ ಬಿಟ್ಟನು.

ಬೋರೇಗೌಡನಿಗೆ ಇದೊಂದು ಎರಡನೆಯ ಪೆಚ್ಚಾಟವಾಯಿತು. ಮೊದಲೇ ಹೊಗೆಯಾಡುತ್ತಿದ್ದ ಅವನ ವೈರಕ್ಕೆ ಸ್ವಲ್ಪ ಗಾಳಿಯನ್ನು ಬೀಸಿದಂತಾಯಿತು. ಇದರಿಂದ ಎಂದೂ ಇಲ್ಲದ ವೈರ ಅವನಿಗೆ ಜವರೇಗೌಡನ ಮೇಲೆ ಉಂಟಾಗಿ ಹೇಗಾದರೂ ಇದರ ಪ್ರತೀಕಾರವನ್ನು ಮಾಡಿ ಅವನಿಂದ ಎಲ್ಲರೆದುರಿಗೆ ತನ್ನಲ್ಲಿ ಕ್ಷಮೆಯನ್ನು ಯಾಚಿಸಬೇಕೆಂಬ ಅಭಿಪ್ರಾಯ ಉಂಟಾಯಿತು. ಉಪಾಯವನ್ನು ಹುಡುಕಲಾರಂಭಿಸಿದನು.

ಸುಗ್ಗಿಯಕಾಲ ಬಂತು. ಸಾಮಾನ್ಯವಾಗಿ ಸುಗ್ಗಿಯ ಕಾಲದಲ್ಲಿ ರೈತರಿಗೆ ಸ್ವಲ್ಪ ವಿಶ್ರಾಂತಿ ಸಿಕ್ಕುವದರಿಂದ ಅವರು ಆ ದಿನಗಳನ್ನು ಸ್ವಲ್ಪ ಸಂತೋಷದಿಂದ ಕಳೆಯಲು ಯತ್ನಿಸುತ್ತಾರೆ. ಇವುಗಳಲ್ಲಿ ನಾಟಕಗಳೂ ಸುಗ್ಗಿಯ ಕುಣಿತಗಳೂ ಮುಖ್ಯವಾದವು.

ಅಂತೆಯೇ ಬೊಮ್ಮನ ಹಳ್ಳಿಯವರು ತಾವೂ ಎಲ್ಲರಂತೆ ಒಂದು ಒಳ್ಳೆಯ ನಾಟಕವನ್ನು ಆಡಬೇಕೆಂದು ಯೋಚಿಸಿ ಬೋರೇಗೌಡರ ಮತ್ತು ಜವರೇಗೌಡರ ಮತವನ್ನು ಕೇಳಿದರು. ಇಬ್ಬರೂ ಸಂತೋಷದಿಂದ ಒಪ್ಪಿದರು. ಯಾವ ನಾಟಕವನ್ನು ಆಡಬೇಕೆಂದು ಯೋಚಿಸುತ್ತಾ, ಕೆಲವರು "ಶನಿಮಹಾತ್ಮೆ" ಎಂದರು. ಮತ್ತೆ ಕೆಲವರು "ಹರಿಶ್ಚಂದ್ರ" ಎಂದರು. ಬೋರೆಗೌಡರು ಸ್ವಲ್ಪ ಹೊತ್ತು ಯೋಚಿಸಿ ಮನಸ್ಸಿನಲ್ಲಿ ಗುಣಾಕಾರ ಹಾಕಿ, "ರಾಮ ರಾವಣರ ಯುದ್ಧ ಏಕೆ ಆಡಬಾರದು?" ಎಂದನು. ನೆರೆದಿದ್ದವರಲ್ಲಿ ಕೆಲವರು, "ಆಟವೇನೋ ಚೆನ್ನಾಗಿದೆ. ಆದರೆ ರಾಮ- ರಾವಣರಿಗೆ ಸರಿಯಾದ ಪಾತ್ರಗಳೇ ಇಲ್ಲವಲ್ಲಾ" ಎಂದರು,

ಬೋರೆಗೌಡನು ನಗುತ್ತಾ, "ನಾವೇ ಏಕೆ ಈ ಪಾತ್ರವನ್ನು ವಹಿಸಬಾರದು ಜವರಪ್ಪ? ಹೇಗಿದ್ದರೂ ಒಳ್ಳೆಯ ಕಥೆ" ಎಂದನು.

ಜವರೇಗೌಡನು ವಿಸ್ಮಯಪಟ್ಟು "ನಾವೇ! ಅದೆಲ್ಲಿ ಆಗುತ್ತಪ್ಪ, ನಮಗಾಗೆ, ನಲವತ್ತರ ಹತ್ತಿರ ವಯಸ್ಸಾಯಿತು." ಎಂದನು.

ಬೋರೇಗೌಡನು, "ಪರ್‍ವಾಗಿಲ್ಲ ಜವರಪ್ಪ, ನಾವು ನಾಟ್ಕ ಗೀಟ್ಕ ಆಡಿ ಬಹಳ ದಿನವಾಗೋಯ್ತು. ಇನ್ನಿ, ಇದೊಂದು" ಆಡೇ ಬಿಡೋಣ. ಹೂಂ ಏಳ್ರಪ್ಪ ಸರಿಯಾದೊಬ್ಬರು ಭಾಗವತರನ್ನ ಕರೆದುಕೊಂಡು ಬನ್ನಿ, ನಾಳೆಯಿಂದಲೇ ಆರಂಭಿಸಿಬಿಡೋಣ" ಎಂದು ಹೇಳಿ ಹೊರಟೇಬಿಟ್ಟನು.

ತಮ್ಮ ಮುಖಂಡರಿಬ್ಬರೂ ನಾಟಕದಲ್ಲಿ ಪಾತ್ರವಹಿಸುವ ಸುದ್ದಿ ಕೇಳಿ ಊರಿನವರೆಲ್ಲರ ಉತ್ಸಾಹ ಹೇಳತೀರದು. ಮೂರನೆಯ ದಿನವೇ ಭಾಗವತರೂ ಬಂದರು, ಎಲ್ಲರೂ ಹುರುಪಿನಿಂದ ಕೆಲಸವಾರಂಭಿಸಿದರು ಬೋರೇಗೌಡ 'ರಾಮ' ಜವರೇಗೌಡ 'ರಾವಣ' ಎಂದು ನಿಶ್ಚಯವಾಯಿತು. ಎಲ್ಲರೂ ನಾಟಕದ ದಿನವನ್ನು ನಿರೀಕ್ಷಿಸುತ್ತಿದ್ದರು.

ನಾಟಕದ ದಿನವೂ ಬಂದಿತು. ಜನರಲ್ಲಿ ಎಂದೂ ಇಲ್ಲದ ಸಡಗರ. ಸುತ್ತು ಮುತ್ತ ಗ್ರಾಮದ ಜನಗಳೆಲ್ಲರೂ ನಾಟಕ ನೋಡಲು ಬಂದಿದ್ದರು. ನಾಟಕ ಆರಂಭವಾಗಲು ಎರಡು ಗಂಟೆ ಮುಂಚೆಯೇ ಮೈದಾನ ಜನರಿಂದ ತುಂಬಿಹೋಯಿತು.

ಬೋರೇಗೌಡನು ಸಭಾಮಂಟಪವನ್ನು ಒಳಹೋಗುವ ಮುನ್ನ ಜನಸಂದಣಿಯನ್ನು ನೋಡಿ ಹರ್ಷಿಸಿ, ಒಂದು ಬಾರಿ ನಕ್ಕು ನಡೆದನು.

ಹತ್ತು ಗಂಟೆಗೆ ಸರಿಯಾಗಿ ನಾಟಕ ಆರಂಭವಾಯಿತು. ಮೊದಲನೆಯ ಪ್ರಕರಣ ಮುಗಿದ ಕೂಡಲೇ ರಾಮ ರಾವಣರ ಪ್ರವೇಶವಾಯಿತು. ಅವರ ಆಕೃತಿಗೂ ಉಡುಪಿಗೂ ಪಾತ್ರಗಳು ಚೆನ್ನಾಗಿ ಒಪ್ಪಿದ್ದುವು ಜನಗಳು ಸಂತೋಷದಿಂದ ಮುಗಿಲು ಮುಟ್ಟುವಂತೆ ಕರತಾಡನ ಮಾಡಿದರು.

ರಾಮ ರಾವಣರ ಯುದ್ಧ ಮೊದಲಾಯಿತು. ಸ್ವಲ್ಪ ಹೊತ್ತು ಯುದ್ಧ ನಡೆದು ರಾವಣನು ಕೆಳಗೆ ಬಿದ್ದುಬಿಟ್ಟನು. ಕೂಡಲೇ ರಾಮನು ಅವನ ಮೇಲೆ ಬಿದ್ದು ಸಿಕ್ಕಾಪಟ್ಟೆ ಪೆಟ್ಟಿಕ್ಕುತ್ತಾ, "ನನ್ನ ಶೌರ್ಯ ಈಗ ಗೊತ್ತಾಯಿತೇ? ನನಗೆ ಮೋಸವನ್ನು ಮಾಡಿದೆಯಾ? ಅನುಭವಿಸು" ಎಂದು ಹೇಳಿ ಮತ್ತೂ ಜೋರಾಗಿ ಏಟನ್ನು ಕೊಡಲಾರಂಭಿಸಿದನು. ಸಭಿಕರು ರಾಮನು ರಾವಣನನ್ನು ನಿಜವಾಗಿಯೂ ಹೊಡೆಯುತ್ತಿದ್ದಾನೆಂದು ಕೊಂಡೇ, "ಕೊಡೋ ರಾಮ, ಇನ್ನೂ ಎರಡು ಕೊಡೋ ಎಷ್ಟು ಜನರನ್ನು ಹೀಗೆ ಕಷ್ಟಕ್ಕೆ ಗುರಿ ಮಾಡಿದನೋ, ಹಾಳು ರಾವಣ" ಎನ್ನತೊಡಗಿದರು. ಜವರೇಗೌಡನಿಗೇ ಗೊತ್ತು ಏಟಿನ ಸವಿ. ಅವನು ಸಣ್ಣ ಧ್ವನಿಯಲ್ಲಿ, "ಬೋರಪ್ಪ, ಮೆತ್ತಗೆ ಹೊಡೆಯೋ, ಪೆಟ್ಟು ಬಹಳ ಹೆಚ್ಚಾಯ್ತು ಕಣೋ" ಎಂದು ಹೇಳಿದರೂ ರಾಮ ಕೇಳಲಿಲ್ಲ. ಬದಲು ಏಟುಗಳು ಇ

(೧೨ನೇ ಪುಟ ನೋಡಿ)

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :— ವಿರಾಜಪೇಟೆ.

ಶಾಖೆ :— ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್. ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ಕೊಡಿಸಿರುವ ಸಾಮಾನುಗಳು ದೊರೆಯುತ್ತವೆ.

1 ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. J. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರು ಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಮೈಸೂರಿನ ಮುಖ್ಯ ಮಂತ್ರಿ

ಕೆ. ಹನುಮಂತಯ್ಯನವರು

ಮಡಿಕೇರಿ ಪುರಸಭೆಯ ಬಿನ್ನವತ್ತಳೆ

ಮೈಸೂರಿನ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ೨೭-೪-೫೩ ರಲ್ಲಿ ಮಡಿಕೇರಿಗೆ ಬಂದರು. ಸಾಯಂಕಾಲ ೬-೩೦ ಗಂಟೆಗೆ ಕೊಡಗು ಶಾಸನ ಸಭಾಂಗಣದಲ್ಲಿ ಅವರಿಗೆ ಒಂದು ಬಿನ್ನವತ್ತಳೆಯನ್ನು ಮಡಿಕೇರಿ ಪುರಸಭೆಯವರು ಕೊಟ್ಟರು. ಬಿನ್ನವತ್ತಳೆಯನ್ನು ಪುರಸಭೆಯ ಪ್ರೆಸಿಡೆಂಟರಾದ ಶ್ರೀ ಸಿ. ಮೊಯಿದೀನ್‌ರವರು ಓದಿದರು. ಬಿನ್ನವತ್ತಳೆಯ ಸಾರಾಂಶ ಹೀಗಿದೆ :

ಬಿನ್ನವತ್ತಳೆ

ನಿಮ್ಮನ್ನು ಸ್ವಾಗತಿಸಲು ಅತ್ಯಾನಂದವಾಗುತ್ತದೆ. ನಿಮ್ಮ ಸಾರ್ವಜನಿಕ ಸೇವೆಯು ಪ್ರಶಂಸನಾರ್ಹವಾಗಿದೆ. ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾಗಲು ಬಹುಮುಖ ದುಡಿದಿರಿ. ೧೯೪೭ನೇ ಸತ್ಯಾಗ್ರಹ ಕಾಲಕ್ಕೆ ಜೈಲು ಸೇರಿದ್ದಲ್ಲದೆ ನಿಮ್ಮ ರಾಜಕೀಯ ಕಾರ್ಯಕ್ಕಾಗಿ ಅನೇಕ ಬಾರಿ ಸೆರೆಮನೆ ಸೇರಿರುವಿರಿ. ಗಾಂಧೀಜಿಯವರ ಹೆಜ್ಜೆಯನ್ನನುಸರಿಸಿ ಹರಿಜನರ ಮೇಲ್ಮೆಗಾಗಿ ದುಡಿದಿರಿ. ರಾಜ್ಯಘಟನಾ ಸಭೆಯ ಸದಸ್ಯರಾಗಿ ನಿಮ್ಮ ಪಾತ್ರವನ್ನು ಯೋಗ್ಯವಾಗಿ ನಿರ್ವಹಿಸಿದಿರಿ. ದೇಶದ ಕಾರಣಕ್ಕಾಗಿ ನಿಮಗಿರುವ ಉತ್ಸಾಹ, ಸಾರ್ವಜನಿಕ ಸಮಸ್ಯೆಗಳನ್ನು ನಿರ್ವಹಿಸುವ ದಕ್ಷತೆ, ಮೊದಲಾದವುಗಳಿಂದ ನೀವು ತುಂಬಾ ಜನಾನುರಾಗಿಗಳಾಗಿರುವಿರಿ. ಈ ಕಾರಣದಿಂದಲೇ ನೀವು ಮೈಸೂರಿನ ಮುಖ್ಯ ಮಂತ್ರಿಗಳಾಗಿರುವಿರಿ. ನಿಮ್ಮ ಆಡಳಿತ ದಕ್ಷತೆಯು ಮನೆ ಮಾತಾಗಿದೆ. ಭಾರತೀಯ ಸಂಸ್ಕೃತಿಗಾಗಿ, ವಿದ್ಯೆಯ ಪುನರ್ಘಟನೆಗಾಗಿ ನೀವು ಪ್ರಶಂಸನಾರ್ಹವಾದ ಕೆಲಸ ಮಾಡಿರುವಿರಿ.

ನಿಮ್ಮ ಸಂಸ್ಥಾನವು ನಮ್ಮ ನೆರೆ ಸಂಸ್ಥಾನವಾಗಿದ್ದು ನಮ್ಮ ಸಂಬಂಧವು ಸ್ನೇಹಪೂರ್ವಕವಾಗಿದೆ. ಎರಡು ಸಂಸ್ಥಾನಗಳೂ ಕೂಡ ಪರಸ್ಪರ ಸಹನೆ ಸಹಕಾರಗಳಿಂದ ತಮ್ಮ ಪ್ರಶ್ನೆಗಳನ್ನು ಬಗೆಹರಿಸಿಕೊಂಡು ಸೌಹಾರ್ದತೆಯಿಂದಿವೆ. ಕೊಡಗಿಗೆ ವಿದ್ಯುಚ್ಛಕ್ತಿ ಸರಬರಾಯಿ ಮಾಡುವ ವಿಚಾರದಲ್ಲಿ ಒಂದು ನಿರ್ಣಯವಾಗಿದೆಯೆಂದು ತಿಳಿಯುತ್ತೇವೆ. ಹೆಚ್ಚಿನ ತಡವಿಲ್ಲದೆ ಮೈಸೂರಿನಿಂದ ನಮಗೆ ವಿದ್ಯುತ್ ದೊರೆಯುವದೆಂದು ಆಶಿಸುತ್ತೇವೆ.

೧೯೫೧ರಿಂದಲೇ ನಮ್ಮ ಈ ಪುರಸಭೆಯು ಅಧಿಕಾರಿಗಳಿಲ್ಲದ ಜನಮುಂದಾಳುಗಳ ಆಡಳಿತದಲ್ಲಿದೆ. ಏಳು ವರ್ಷಗಳವರೆಗೆ ಪುರಸಭೆಯ ಅಧ್ಯಕ್ಷರಾಗಿದ್ದು ತುಂಬಾ ಸೇವೆ ಸಲ್ಲಿಸಿದ ಇಂದಿನ ನಮ್ಮ ಗೃಹ ಮಂತ್ರಿಗಳಾಗಿರುವ ಮಲ್ಲಪ್ಪನವರಿಗೆ ನಾವು ಋಣಿಗಳಾಗಿರುವೆವು. ಪುರಸಭೆಗಳ ಮಂತ್ರಿಯಾಗಿ ಅವರು ನಮ್ಮನ್ನು ಯೋಗ್ಯ ಪಥದಲ್ಲಿ ಮುನ್ನಡೆಸುತ್ತಿರುವರು. ಕೊಡಗಿನ ಚೀಫ್ ಕಮಿಷನರ್ ಬೇಡಿಯವರೂ ಮುಖ್ಯ ಮಂತ್ರಿ ಪೂಣಚ್ಚನವರೂ ಈ ಪಟ್ಟಣದ ಮತ್ತು ಪುರಸಭೆಯ ಅಭಿವೃದ್ಧಿಯ ಬಗ್ಗೆ ತುಂಬಾ ಆಸಕ್ತಿ ವಹಿಸಿರುವರು. ಅವರ ಸಹಾಯಕ್ಕಾಗಿ ನಾವು ಋಣಿಗಳಾಗಿದ್ದೇವೆ.

ಅಭಿವೃದ್ಧಿಯ ನಾನಾ ಕೆಲಸಗಳನ್ನು ಪುರಸಭೆಯು ಕೈಗೊಂಡಿದೆ. ಟೌನ್ ಹಾಲಿನ ಕೆಲಸವು ಭರದಿಂದ ನಡೆಯುತ್ತಿದೆ. ಬಸ್ ನಿಲ್ದಾಣವನ್ನು ವಿಸ್ತರಿಸುವ ಕೆಲಸ ಕೈಕೊಳ್ಳಲಾಗುವದು. ಪಟ್ಟಣದ ನೀರಿನ ಬೇಡಿಕೆಯನ್ನು ಪೂರೈಸಲು ಪ್ರಯತ್ನಿಸಲಾಗುತ್ತದೆ. ಟೌನ್ ಪ್ಲಾನ್ ಮೇರೆ ಅಭಿರುಚಿ ಇಟ್ಟು ವಸತಿಗಳ ನಿರ್ಮಾಣ ಮಾಡಲಾಗುತ್ತಿದೆ. ಮಡಿಕೇರಿಯನ್ನು ಆದರ್ಶ ಪಟ್ಟಣವಾಗಿಯೂ ಅನುಕೂಲತೆಗಳಿಂದ ಕೂಡಿದ ಪ್ರಾಮುಖ್ಯ ಪ್ರಯಾಣಿಕರ ಕೇಂದ್ರವಾಗಿಯೂ ಮಾಡುವ ಇಚ್ಛೆ ನಮಗಿದೆ. ನಮ್ಮ ಬಿನ್ನವತ್ತಳೆಯನ್ನು ಸ್ವೀಕರಿಸಲೊಪ್ಪಿದ ನಿಮಗೆ ವಂದನೆಗಳು. ದೇವರು ನಿಮಗೆ ಆಯುರಾರೋಗ್ಯವನ್ನು ಕೊಡಲಿ.

ಮಂತ್ರಿಗಳ ಉತ್ತರ

ನನಗೆ ತುಂಬಾ ಗೌರವ ಮಾಡಿದಿರಿ. ಈ ರೀತಿಯ ಅನೇಕ ಬಿನ್ನವತ್ತಳೆಗಳನ್ನು ನಾನು ಸ್ವೀಕರಿಸಿರುವೆನು. ಆದರೆ ಇಷ್ಟು ಕೃತಜ್ಞತಾಪೂರ್ವಕವೂ, ಸ್ನೇಹಪೂರ್ಣವೂ ಆದದ್ದನ್ನು ಸ್ವೀಕರಿಸುವದು ಇನ್ನೂ ಆನಂದದ ವಿಷಯ. ಇದು ನೆರೆರಾಜ್ಯಗಳಾದ ನಮ್ಮಲ್ಲಿ ಇರುವ ಪ್ರೀತಿ, ಸಹಕಾರ, ಸೌಹಾರ್ದತೆಯ ಲಕ್ಷಣಗಳೆಂದು ನಾನು ನೆನಸುತ್ತೇನೆ. ಈ ಸ್ವಾಗತಕ್ಕೆ ನಾನು ಚಿರಋಣಿಯಾಗಿರುವೆನು. ದೇಶದ ಸೇವೆಯಲ್ಲಿ ತ್ಯಾಗ ಮಾಡಿ ದುಡಿದ ವ್ಯಕ್ತಿ ನಾನೊಬ್ಬನೇ ಅಲ್ಲ. ನಿಮ್ಮ ಮುಖ್ಯ ಮಂತ್ರಿಗಳೂ, ಶ್ರೀ ಮಲ್ಲಪ್ಪನವರೂ ಕೂಡ ಅತುಳ ಸೇವೆ ಸಲ್ಲಿಸಿದ್ದಾರೆ. ಅವರನ್ನು ಮೊದಲಿನಿಂದಲೇ ನಮಗೆ ಪರಿಚಯವಿದೆ. ದಕ್ಷ ಆಡಳಿತ ನಡೆಸುತ್ತಿರುವ ಅವರಿಗೂ ಈ ಸರಕಾರಕ್ಕೂ ಮೈಸೂರಿನ ಸಹಕಾರವು ಯಾವಾಗಲೂ ಇದೆ. ಮೈಸೂರಿನ ಆಡಳಿತ ಅಧಿಕಾರದಲ್ಲಿ ನಾನಿರಲಿ ಯಾ ಬೇರೆಯಾರೇ ಇರಲಿ ಈ ಸಹಕಾರ, ಸ್ನೇಹಗಳಿಗೆ ಚ್ಯುತಿ ಬರಲಾರದು. ಆಡಳಿತದ ದೃಷ್ಟಿಯ ದೃಷ್ಟಿಯಿಂದಲ್ಲದೆ ಕೊಡಗೂ, ಮೈಸೂರೂ ಎರಡೂ ಒಂದೇ. ಅವುಗಳಲ್ಲಿ ಒಂದು ಮತ್ತೊಂದರಿಂದ ಪ್ರತ್ಯೇಕವಲ್ಲ. ಕೊಡಗಿನ ಅನೇಕ ಸುಪುತ್ರರು ಮೈಸೂರಿನಲ್ಲಿ ಜವಾಬ್ದಾರಿಯುತ ಅಧಿಕಾರದಲ್ಲಿದ್ದಾರೆ. ಹಿಂದೂದೇಶದ ಪ್ರಥಮ ಭಾರತೀಯ ಸೇನಾನಿಯಾಗಿ ಜನರಲ್ ಕಾರ್ಯಪ್ಪನವರನ್ನು ಕೊಟ್ಟ ಹೆಮ್ಮೆ ನಮಗಿದ್ದೇ ಇದೆ. ಕಾರ್ಯಪ್ಪನವರು ದೂರದರ್ಶಿಗಳು. ಸಂಕೀರ್ಣತೆಯ ಮನೋಭಾವ ಅವರಲ್ಲಿಲ್ಲ.

ದೇಶದಲ್ಲಿ ಇಂದು ಕೋಲಾಹಲ ರೂಪದಲ್ಲಿ ಹಬ್ಬುತ್ತಿರುವ ಭಾಷಾವಾರು ಪ್ರಾಂತರಚನಾ ಬೇಡಿಕೆಯ ಬಗ್ಗೆ ನಾನೇನು ಕುತೂಹಲಿಯಾಗಿಲ್ಲ. ನನ್ನ ಅಭಿಪ್ರಾಯದಲ್ಲಿ ಈ ಹೋರಾಟವು ನಮ್ಮಲ್ಲಿ ಒಡಕು ಅತೃಪ್ತಿಗಳನ್ನು ತರುವದಲ್ಲದೆ ಬೇರಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ನಾವೆಲ್ಲರೂ ಐಕ್ಯರಾಗಿ ನಮ್ಮ ಶಕ್ತಿಯನ್ನು ಸಂಘಟಿಸಿಕೊಂಡು ರಾಷ್ಟ್ರದ ಮುಂದಿರುವ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಗೊಳಿಸಬೇಕಿದೆ. ಭರತಖಂಡದಲ್ಲಿ ಭಾಷೆಯಿಂದ ಭಾಷೆಗೆ ಭೇದ ಕಲ್ಪಿಸಿ, ಪ್ರಾಂತದಿಂದ ಪ್ರಾಂತವನ್ನು ವಿಭಜನೆಮಾಡಿ ಅಖಂಡ ರಾಷ್ಟ್ರವನ್ನು ಕಟ್ಟಲಾರೆವು. ಪರಸ್ಪರ ಸ್ನೇಹಪೂರ್ಣ ಸಹಕಾರ, ಹೊಂದಾವಣಿಗಳಿಂದ ನಮ್ಮ ಜಗಳಗಳನ್ನು ತೀರಿಸಿಕೊಂಡು, ಐಕ್ಯತೆಯನ್ನು ಸಾಧಿಸಿಕೊಳ್ಳಬೇಕೇ ವಿನಾ ಬಲಪ್ರಯೋಗ, ಒತ್ತಾಯವಾದ ಒತ್ತಾಯಗಳಿಂದ ಸಾಧ್ಯವಿಲ್ಲ. ಹಿಂದೂದೇಶಕ್ಕೆ ದೊಡ್ಡ ಭವಿಷ್ಯವಿದೆ. ಆ ಭವಿಷ್ಯದ ಸಾಧನೆ ನಮ್ಮ ಐಕ್ಯಪ್ರಯತ್ನದ ಮೇಲಿದೆ.

ಮೈಸೂರಿನ ವಿದ್ಯುಚ್ಛಕ್ತಿಯನ್ನು ಕೊಡುವ ಬಗ್ಗೆ, ಮೈಸೂರು ಸರಕಾರವು ಯಾವ ವಿರೋಧವಿಲ್ಲದೆ ಒಪ್ಪಿದೆ. ಇಂಡಿಯಾ ಸರಕಾರದ ಸಾಂಪ್ರದಾಯಿಕ ಅನುಮತಿಯೊಂದೇ ಬೇಕಿದೆ. ಅದು ದೊರೆತೊಡನೆ ಕೆಲಸ ಕೈಕೊಳ್ಳಲಾಗುವದು. ಕಾವೇರಿ ನದಿಯು ಮೈಸೂರಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದೆ. ಅಂಥಾ ಕಾವೇರಿಯು ಹುಟ್ಟಿದ ನಾಡಾದ ಕೊಡಗಿಗೆ ಅದರ ಬೆಳಕನ್ನು ಕೊಡುವದು ಸೂಕ್ತವಾಗಿದೆ. ನಿಮ್ಮ ಬಿನ್ನವತ್ತಳೆಗೆ ನನ್ನ ಅನಂತವಂದನೆಗಳು.

ನಂತರ ಮಂತ್ರಿಗಳ ಜೊತೆಯಲ್ಲಿ ಬಂದಿದ್ದ ಆಸ್ಥಾನ ವಿದ್ವಾನ್ ಶ್ರೀ. ಕೆ. ಚೌಡಯ್ಯನವರು ಪಿಟೀಲುವಾದನವನ್ನು ಮಾಡಿದರು. ಅವರ ಸಂಗೀತ ಕಲಾಕೌಶಲದಿಂದ ಇಡೀ ಸಭೆಯು ಮುಗ್ಧವಾಯಿತು. ಶ್ರೀ ಎ. ಪಿ. ಗೋಪಾಲಕೃಷ್ಣರಾಯರು ಸಂಗೀತಗಾರರಿಗೂ ಇತರರಿಗೂ ಧನ್ಯವಾದಗಳನ್ನರ್ಪಿಸಿದರು. ಮುಖ್ಯ ಮಂತ್ರಿಗಳ ಗೌರವಾರ್ಥ ರಾತ್ರಿ ೮-೩೦ ಗಂಟೆಗೆ ಔತಣ ಕೂಟವೊಂದನ್ನು ಏರ್ಪಡಿಸಲಾಗಿತ್ತು.

THE CHIEF COMMISSIONER OF COORG

Notice.

Regarding application for a licence under section 26 of the Indian Companies Act, 1913.

NO. A. 1534-35. Company/33/52-53,

Mercara, dated the 28th April 1953

Notice is hereby given that in pursuance of the 26th section of the Indian Companies Act, 1913 application has been made to the state Government of Coorg for a licence directing an association, about to be formed under the name of the "Coorg Timber Merchants Association" to be registered with limited liability, but without the addition of the word "limited" to its name.

2. The important objects for which the association is proposed to be established are to promote and protect timber trade and other allied interests of the members dealing in timber, to collect and circulate essential statistics and information as are necessary for promoting timber trade and to adjust controversies between the members of the Association.

The other objects of the association are set out in extense in the memorandum of the association, a copy of which may be inspected at the office of the Chief Secretary to the Government of Coorg, Mercara.

3. Notice is hereby given that any person, Company or corporation objecting to this application may bring such objection before the State Government of Coorg on or before the 1st day of June 1953, by a letter addressed to the Assistant Law Secretary to the Government of Coorg.

Dated this 28th day of April 1953.

By Order of the Chief Commissioner,

M. N. GUNDU RAO

Assistant Law Secretary.

"ನೆಹರೂರವರ ನೀತಿಗೆ ಬೆಂಬಲ ಕೊಡಿ"

ಶ್ರೀಮತಿ ರೇಣುಕಾ ರಾಯ್ ರವರ ಭಾಷಣ

'ಭಾರತದ ಮತ್ತು ಜಗತ್ತಿನ ಎಲ್ಲ ಮಹಿಳೆಯರೂ ಪ್ರಧಾನ ಮಂತ್ರಿ ಪಂಡಿತ ನೆಹರೂರವರಿಗೆ ಬೆಂಬಲವಾಗಿ ನಿಂತು, ಮಾನವೀಯ ವಿಚಾರಗಳಲ್ಲಿ ವಿವೇಕದ ಮರು ಸ್ಥಾಪನೆ ಮಾಡಲು ಸಹಾಯ ನೀಡಬೇಕು' ಎಂದು ಭಾರತೀಯ ಮಹಿಳಾ ನಾಯಕಿಯೂ ಸಚಿವ ಸಂಪುಟದಲ್ಲಿ ನಿರಾಶ್ರಿತರ ಪುನರ್ವಸತಿ ಉಪಮಂತ್ರಿಗಳೂ ಆದ ಶ್ರೀಮತಿ ರೇಣುಕಾರಾಯ್ ರವರು ಅಖಿಲ ಭಾರತ ಮಹಿಳಾ ಸಮ್ಮೇಳನದ ರಜತಮಹೋತ್ಸವದ ಅಧ್ಯಕ್ಷ ಪೀಠದಿಂದ ಭಾಷಣ ಮಾಡುತ್ತಾ ಹೇಳಿದರು.

ಪೂನಾದಲ್ಲಿ ಪ್ರಾರಂಭವಾದ ಆ ಅಧಿವೇಶನಕ್ಕೆ ರಾಷ್ಟ್ರದ ನಾನಾ ಭಾಗಗಳಿಂದ ಮಹಿಳಾ ನಾಯಕಿಯರೂ, ಪ್ರತಿನಿಧಿಗಳೂ ಆಗಮಿಸಿದ್ದರು. ಅಧಿವೇಶನವು ಉತ್ಸಾಹದ ವಿಜೃಂಭಣೆಯಿಂದ ನಡೆಯಿತು.

'ಮಾನವವರ್ಗ ತನ್ನನ್ನೇ ನಾಶ ಮಾಡಿಕೊಳ್ಳುವುದಕ್ಕಾಗಿ ಹುಚ್ಚು ಹಿಡಿದಂತೆ ಮುನ್ನುಗ್ಗುತ್ತಿದೆ. ಜಗತ್ತಿನ ನಾನಾ ವಿದ್ಯಮಾನಗಳಲ್ಲಿ ಪಂ. ನೆಹ್ರೂರವರು ತಳೆದಿರುವ ಸ್ವತಂತ್ರ ಧೋರಣೆಯೊಂದೇ ಇವನ್ನು ತಡೆಗಟ್ಟಬಲ್ಲದು. ಹೀಗಿರುವುದರಿಂದ ಮಾನವ ವರ್ಗದ ತಾಯಿಯರಾದ ಮಹಿಳೆಯರಲ್ಲಿ ಎಷ್ಟು ಮಂದಿ ಪಂ. ನೆಹ್ರೂರವರನ್ನು ಬಲಗೊಳಿಸಲು ಪ್ರಭಾವಶಾಲಿಯಾಗಿ ಸಹಾಯ ಮಾಡುತ್ತಿರುವರು ?' ಎಂಬುದಾಗಿ ಶ್ರೀಮತಿ ರಾಯ್ ಕೇಳಿದರು.

'ಪರಸ್ಪರ ವಿರೋಧವಾದ ಎರಡು ಶಕ್ತಿ ರಾಜಕೀಯ ಗುಂಪುಗಳು, ಕೊರಿಯಾದ ಬ್ಲಿನ ಯುದ್ಧ, ಭಯಂಕರವಾದ ವರ್ಣ ವಿಭೇದ ನೀತಿ ಮತ್ತು ಏಷ್ಯಾದ ಭಾಗಗಳಲ್ಲಿನ್ನೂ ಉಳಿದಿರುವ ಸಾಮ್ರಾಜ್ಯಶಾಹಿ ಆವಶೇಷಗಳು ಇವುಗಳೇ ಜಗಶಾಂತಿಗೆ ಮುಳ್ಳಾಗಿರುವ ಶಕ್ತಿಗಳು' ಎಂದೂ ಶ್ರೀಮತಿ ರಾಯ್ ನುಡಿದರು.

'ಮನುಷ್ಯನ ಬುದ್ಧಿಯ ಬೆಳವಣಿಗೆಗಿಂತಲೂ ಹೆಚ್ಚಾಗಿ ವೈಜ್ಞಾನಿಕ ಮತ್ತು ಟೆಕ್ನಾಲಾಜಿಕಲ್ ಪ್ರಗತಿ ಆಗಿರುವುದೂ ಕೂಡಾ ಒಂದು ಭಾರಿ ಸಮಸ್ಯೆ' ಎಂಬುದಾಗಿ ಅವರು ನುಡಿದರು.

ಹಿಂದೆ ನೆಹ್ರೂರ ನೀತಿಯನ್ನು ಕೆಗಳಿ ಹಾಸ್ಯ ಮಾಡುತ್ತಿದ್ದವರೇ ಇಂದು ಅದನ್ನು ಸ್ವಾಗತಿಸಿ, ಶಾಂತಿ ಮತ್ತು ಸೌಹಾರ್ದಗಳು ಉಳಿಯಬೇಕಾದರೆ ಮತ್ತು ಮಾನವ ಪ್ರಗತಿ ಸಾಧ್ಯವಾಗಬೇಕಾದರೆ ಅದೊಂದೇ ಮಾರ್ಗವೆಂದು ಪ್ರಶಂಸಿಸತೊಡಗಿದ್ದಾರೆ' ಎಂದೂ ರೇಣುಕಾ ರಾಯ್ ಹೇಳಿದರು.

ಭಾಷಣದ ಪ್ರಮುಖಾಂಶಗಳು.

ಶ್ರೀಮತಿ ರಾಯ್ರ ಭಾಷಣದ ಇತರ ಪ್ರಮುಖಾಂಶಗಳು ಈ ರೀತಿ ಇವೆ—

'ನಾಗರಿಕರೆಲ್ಲ ತೂಕ ಸಮಾನತೆಯುಳ್ಳವರಾಗಬೇಕಾದರೆ ಗಂಡಸರೂ ಹೆಂಗಸರೂ ಸಮಾನ ನೀತಿಯುಳ್ಳ ಸಮಾಜ ಸ್ಥಾಪಿಸಬೇಕು.

'ಕೇವಲ ರಾಜ್ಯಾಂಗ ಹಕ್ಕುಗಳಿದ್ದರೆ ಸಾಲದು, ಮಹಿಳೆಯರು ಆ ಹಕ್ಕುಗಳನ್ನು ಚಲಾಯಿಸಿಕೊಳ್ಳಬೇಕು, ತಮ್ಮ ಕರ್ತವ್ಯ ಜವಾಬ್ದಾರಿ ನಿರ್ವಹಿಸಬೇಕು.

'ಭಾರತದಲ್ಲಿ ಹಿಂದೂ ಕೋಡ್ ಬ್ಬಿಲ್ಲು ಮಸೂದೆಯಂತಹ ಸಾಧಾರಣ ಸುಧಾರಣೆಗೂ ಅವಕಾಶ ಕೊಡದಿರುವುದು ಅನ್ಯಾಯ. ಶೀಘ್ರವೇ ಈ ಮಸೂದೆ ಅಂಗೀಕರಿಸಲ್ಪಡಬೇಕು. ಇದರಿಂದ ಹಿಂದೂ ಧರ್ಮಕ್ಕೆ ಯಾವ ರೀತಿಯ ಕೆಡುಕೂ ಇಲ್ಲ, ಸುಧಾರಣೆಯೆಂದರೇ ಹೆದರುವಷ್ಟು ಮೆಟ್ಟಿಕ್ಕೆ ನಾವು ಇಳಿಯಬಾರದು.

'ಮಹಿಳೆಯರಿಗೆ ಅವರ ಗೃಹಿಣೀ ಜವಾಬ್ದಾರಿಗಳಲ್ಲಿ ಮೊದಲು ತರಬೇತಿ ಕೊಡಬೇಕಾದುದು ಅಗತ್ಯ. ಯೋಜನಾ, ಬದ್ಧವಾದ ಸಂಸಾರ, ನಿಯತವಾದ ಜೀವನ, ಚಿಕ್ಕಿನ ಸಂಸಾರ, ಮಕ್ಕಳ ಮನೋವಿಜ್ಞಾನ ಮುಂತಾದವೊಂದೂ ಅನೇಕ ಮಹಿಳೆಯರಿಗೆ ತಿಳಿಯದೆ, ಲಕ್ಷಾಂತರ ಕುಟುಂಬಗಳು ಅನಾಯಕವಾಗಿ ಹಾಳಾಗಿರುವುದನ್ನು ನೋಡುತ್ತಿದ್ದೇವೆ.

'ಗೃಹಕೈಗಾರಿಕೆಗಳಲ್ಲಿ ಮಹಿಳೆಯರು ನಿರತರಾದರೆ ಕುಟುಂಬಕ್ಕೂ ರಾಷ್ಟ್ರಕ್ಕೂ ತುಂಬಾ ಸಹಾಯಕವಾಗುವುದು. ಮಹಿಳಾ ಸಮ್ಮೇಳನವು ಈ ಕಡೆ ಗಮನಕೊಡಬೇಕು.'

ಐಕ್ಯತೆ ಉಳಿಸಿ.

'ಸೈನ್ಯವು ದೇಶ ಸೇವೆಯನ್ನೇ ಆತಿ ಮುಖ್ಯವಾಗಿಣಿಸಬೇಕು; ದೇಶದ ಪ್ರಗತಿ ಸಾಧನೆಗೆ ಅವಕಾಶವಾಗಲು ಸೂಕ್ತ ಐಕ್ಯತೆ ಕಾಪಾಡಿಕೊಂಡು ಬರಲು ಸೈನಿಕರು ಸಹಾಯಮಾಡಬೇಕು,' ಎಂಬುದಾಗಿ ಪ್ರಧಾನಿ ನೆಹರೂ, ಅಹಮದ್‌ನಗರ ಕೋಟೆ ಪ್ರದೇಶದ ಸೈನಿಕರನ್ನುದ್ದೇಶಿಸಿ ಮಾತನಾಡುತ್ತಾ ತಿಳಿಸಿದರು.

'ಐಕ್ಯತೆಯಿಲ್ಲದಿದ್ದರೆ ದೇಶದ ಪ್ರಗತಿ ಸಾಧ್ಯವಾಗದು. ಜನರಲ್ಲಿ ಈ ಐಕ್ಯತೆ ಸಾಧಿಸಲು ಸೈನ್ಯದವರು ಬೇಕಾದಷ್ಟು ಸಹಾಯ ಮಾಡಬಹುದು' ಎಂದೂ ನೆಹ್ರೂ ತಿಳಿಸಿದರು.

ದೇಶದ ಸಮಸ್ಯೆಗಳನ್ನು ಜನ ಅರ್ಥ ಮಾಡಿಕೊಳ್ಳುವಂತೆ ಅವರಿಗೆ ಸೂಕ್ತ ತಿಳುವಳಿಕೆ ಕೊಡಲೂ ಸೈನ್ಯ ಸಹಾಯಮಾಡಬೇಕೆಂದು ಪ್ರಧಾನಿ ನುಡಿದರು.

ಉರಿ ಬಿಸಿಲಲ್ಲಿ ೬೦೦ ಜನ ಸೈನಿಕರು ಶಿಸ್ತಿನಿಂದ ಕದಲದೆ ನಿಂತು ಪ್ರಧಾನ ಮಂತ್ರಿಯ ಭಾಷಣ ಕೇಳಿದರು.

ಸಹನೆ ಸಹಕಾರಗಳಿರಲಿ.

ಜಗತ್ತಿನ ಇತಿಹಾಸದ ಈ ಸಂದಿಗ್ಧ ಸಮಯದಲ್ಲಿ ಜಗತ್ತಿನ ವಿವಿಧ ರಾಷ್ಟ್ರಗಳೂ ಜನರೂ ತಾಳ್ಮೆ, ಪರಸ್ಪರ ಹೊಂದಿಕೊಂಡು ಹೋಗುವ ಮನೋಭಾವನೆ ಶ್ರದ್ಧೆ ಮತ್ತು ಸಹನೆಗಳನ್ನು ಹೊಂದಿರಬೇಕೆಂದು ಭಾರತದ ಉಪರಾಷ್ಟ್ರಪತಿ ಡಾ. ಎಸ್. ರಾಧಾಕೃಷ್ಣನ್‌ರವರು, ತಾ. ೨ರಲ್ಲಿ ಪಾಟ್ನಾದಲ್ಲಿ ಮನವಿ ಮಾಡಿಕೊಂಡರು.

ಬೀಹಾರ್ ವಿಶ್ವವಿದ್ಯಾನಿಲಯದ ಪ್ರಥಮ ಕಾನ್ವೊಕೇಶನ್ ಸಮಾರಂಭದಲ್ಲಿ ಭಾಷಣ ಮಾಡಿದಾಗಲೇ ಡಾ. ರಾಧಾಕೃಷ್ಣನ್ ಹಾಗೆ ಮನವಿ ಮಾಡಿಕೊಂಡಿದ್ದು.

ರಾಜಕೀಯ ವಿಚಾರಗಳಲ್ಲಿ ದುರಭಿಮಾನವಿರಬಾರದೆಂದು ಡಾ. ರಾಧಾಕೃಷ್ಣನ್ ಹೇಳಿದರು. ಜನಾಂಗ ಜನಾಂಗಗಳ ನಡುವಿನ ಭೇದಗಳನ್ನು ಮಾನವ ಸೋದರತ್ವದ ಸ್ವಮಭಾವನೆ ನಿವಾರಿಸಬೇಕಾಗಿದೆಯೆಂದು ಅವರು ಹೇಳಿದರು. ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಅತಿ ಬಗೆಯಾದ ನೀತಿಯನ್ನು ಅನುಸರಿಸುವ ಮನೋಭಾವ ಸಲ್ಲದೆಂದೂ ಅದು ಪಗತಿ ವಿರುದ್ಧವಾದುದೆಂದೂ ಡಾ. ರಾಧಾಕೃಷ್ಣನ್ ಹೇಳಿದರು.

ಅಂತರರಾಷ್ಟ್ರೀಯ ಪರಿಸ್ಥಿತಿ ಉತ್ತಮಗೊಂಡಿರುವುದಕ್ಕೂ, ಕಮ್ಯೂನಿಸ್ಟರ ಶಾಂತಿ ಸೂಚನೆಗಳನ್ನೂ ಡಾ ರಾಧಾಕೃಷ್ಣನ್ ಪ್ರಸ್ತಾಪಿಸಿ, ಈಗಿನ ಪರಿಸ್ಥಿತಿಯಲ್ಲಿ ಉದ್ವೇಗಗಳ ಗೋಜಿಗೆ ಹೋಗದೆ, ಕಾರಣಗಳನ್ನು ಹುಡುಕದೆ ವಿವೇಚನೆ, ದಯೂದಾಕ್ಷಿಣ್ಯಗಳ ದೃಷ್ಟಿಯಿಂದ ಪರಿಶೀಲಿಸಿದಲ್ಲಿ, ಪೂರ್ವ–ಪಶ್ಚಿಮ ಭಿನ್ನತೆಗೆ ಪರಿಹಾರ ಸಾಧ್ಯವೆಂಬುದು ವ್ಯಕ್ತಪಡುವುದೆಂದೂ ಅವರು ತಿಳಿಸಿದರು.

'ಇದು ವರೆಗೂ ಕಮ್ಯೂನಿಸ್ಟ್ ರಾಷ್ಟ್ರಗಳವರು ಕಠಿಣ ಮನಸ್ಕರೂ ನಿಷ್ಠುರರೂ ಎಂದು ನಾವು ಆಪಾದನೆ ಮಾಡುತ್ತಿದ್ದೆವು. ಈಗ ಅವರ ಮನಸ್ಸು ಕರಗಿದಾಗ ನಾವು ನಿಷ್ಠುರರೂ ಕಠಿಣ ಮನಸ್ಕರೂ ಆದೆವೆಂಬ ಆಪಾದನೆ ಬರಲು ಅವಕಾಶ ಕೊಡದಿರೋಣ' ಎಂಬುದಾಗಿ ಡಾ. ರಾಧಾಕೃಷ್ಣನ್ ಹೇಳಿದರು

ಸೋಮವಾರಪೇಟೆಗೆ
'ಕೊಡಗು' ಏಜೆಂಟರು
ಶ್ರೀ ಕೆ. ಎಂ. ಮೊಗಪ್ಪನವರು

ಕಾಂಗ್ರೆಸಿನ ಅಪಪ್ರಚಾರಕ್ಕೆ ಬಲಿ ಬೀಳಬೇಡಿ

'ಪ್ರಜಾ–ಸೋಷಲಿಸ್ಟರ ಮತ್ತು ಕಾಂಗ್ರೆಸಿನ ತತ್ವಗಳಲ್ಲಿ ಭೇದವಿಲ್ಲ ಎಂದು ಅಪಪ್ರಚಾರ ಮಾಡುತ್ತಾ ಕಾಂಗ್ರೆಸ್ ಧುರೀಣರು ಜನರನ್ನು ತಮ್ಮೆಡೆಗೆ ಒಲಿಸಿಕೊಳ್ಳಲು ಉಪಾಯ ಮಾಡುತ್ತಿದ್ದಾರೆ. ಇಂಥ ಕುಯುಕ್ತಿಗೆ ಜನತೆ ಬಲಿಬೀಳಬಾರದು' ಎಂಬುದಾಗಿ ಪ್ರಜಾ–ಸೋಷಲಿಸ್ಟರ ನಾಯಕ, ಶ್ರೀ ಜಯಪ್ರಕಾಶನಾರಾಯಣರು ಹೇಳಿದರು.

ಬೆನಾರಿಸಿನಿಂದ ನಾಲ್ವತ್ತು ಮೈಲು ದೂರದ ಚಾಕಿಯಾ ಎಂಬಲ್ಲಿ ಬಹಿರಂಗ ಸಭೆಯಲ್ಲಿ ಮಾತನಾಡುತ್ತ ಜಯಪ್ರಕಾಶರು, 'ದೇಶಕ್ಕೆ ತಾವು ಸ್ವಾತಂತ್ರ್ಯ ತಂದು ಕೊಟ್ಟೆವು' ಎಂದು ಜಂಭದ ಕೋಳಿಗಳ ಹಾಗೆ ಕಾಂಗ್ರೆಸಿಗರು ತಾವು ಮಾತ್ರ ಉಳಿಯಬೇಕೆಂದು ಹವಣಿಸುತ್ತಿದ್ದಾರೆ. ಇತರ ರಾಜಕೀಯ ಪಕ್ಷಗಳು ಅಳಿಯಬೇಕೆಂದು ಹೂಡಿದ ತಂತ್ರ ಇದು.

'ನಮ್ಮ ರಾಜ್ಯ ಘಟನೆಯು ಪಾಶ್ಚಾತ್ಯರ ಅನುಕರಣೆಯಾದರೂ ಕೂಡ ಪ್ರಜಾಸತ್ತೆ ಎನಿಸಿಕೊಂಡಿದೆ. ಇಲ್ಲಿ ಒಂದೇ ರಾಜಕೀಯ ಪಕ್ಷವನ್ನು ಕಾಂಗ್ರೆಸಿಗರು ಬಯಸುವುದರಲ್ಲಿ ಯಾವ ನ್ಯಾಯವಿದೆಯೋ ನಾನರಿಯೆ! ಪ್ರಜಾ–ಸೋಷಲಿಸ್ಟರು ದೇಶದ ಈಗಿನ ಸ್ಥಿತಿಯನ್ನು ಸುಧಾರಿಸಲು ಇಚ್ಛಿಸುತ್ತಾರೆ. ಅಧಿಕಾರಕ್ಕೆ ಬಂದರೆ ಮೊದಲನೇ ಕಾರ್ಯಕ್ರಮವಾಗಿ ಜಮೀನು ಮತ್ತು ಐಶ್ವರ್ಯವನ್ನು ಜನರಲ್ಲಿ ಸಮಾನ ರೀತಿಯಲ್ಲಿ ಹಂಚಿ ಹಾಕುವುದು ಪಕ್ಷದ ಗುರಿಯಾಗಿದೆ.

'ಭೂದಾನ ಯಜ್ಞಕ್ಕೆ ಕಾಂಗ್ರೆಸು ನೀಡುತ್ತಿರುವ ಪ್ರೋತ್ಸಾಹವು ಬರೇ ಮಾತುಗಳಲ್ಲಿರುವ ಸಹಾನುಭೂತಿಯಾಗಿದೆ. ಜಮೀನ್ದಾರಿ ರದ್ಧತಿಯಿಂದು ಹೇಳಲ್ಪಟ್ಟ ಕ್ರಮದಿಂದ ರೈತರಿಗಾಗಲಿ ಭೂಮಿ ಇಲ್ಲದ ಬಡ ಜನರಿಗಾಗಲಿ ಯಾವೊಂದು ಸೌಲಭ್ಯ ದೊರೆತಿಲ್ಲ. ಸರಕಾರಿ ನೌಕರರ ವೇತನದ ಕನಿಷ್ಠ ಮತ್ತು ಹೆಚ್ಚಿನ ಮಿತಿಯಲ್ಲಿರುವ ಅಜಗಜಾಂತರ ವ್ಯತ್ಯಾಸವನ್ನು ತೆಗೆದು ಹಾಕಲು ಪ್ರಯತ್ನಿಸಿಲ್ಲ. ಪಂಚವಾರ್ಷಿಕ ಯೋಜನೆಯು ಐಶ್ವರ್ಯವಂತರು ತಮ್ಮ ಗಂಟನ್ನು ಇನ್ನೂ ಹಿರಿದು ಮಾಡಿಕೊಳ್ಳಲು ಸಹಕಾರಿಯಾಗಿದೆ. ಬಡ ಜನರಿಗೆ ಅದರಿಂದ ತಿಲ ಮಾತ್ರವೂ ಪ್ರಯೋಜನ ದೊರೆತಿಲ್ಲ.

'ಇದು ಏಕೆ ಹೀಗಾಯಿತು. ಎಂಬುದಕ್ಕೆ ಕಾಂಗ್ರೆಸಿಗರು ಈಗಿನ ಸಮಾಜ ಕ್ರಮವನ್ನು ತಿದ್ದಲು ಇಷ್ಟಪಡುವುದಿಲ್ಲ ಎಂಬುದೇ ಕಾರಣವಾಗಿದೆ. ೫೦ ವರ್ಷಗಳಲ್ಲಿ ಕಾಂಗ್ರೆಸು ಸುಧಾರಣೆ ಸಾಧಿಬಹುದೋ ಏನೋ! ಅವರೆಗೆ ಆ ತನಕ ಜನತೆ ಕಾದು ಇರಲು ಒಪ್ಪುವುದೇ? ಪ್ರಜಾಸೋಷಲಿಸ್ಟರ ಸರಕಾರ ಸ್ಥಾಪಿತವಾದರೆ ಶಾಂತವಾದ ಕ್ರಾಂತಿಯಿಂದ ಈ ಎಲ್ಲ ಸಮಸ್ಯೆಗಳನ್ನು ಬೇಗನೆ ಬಗೆಹರಿಸುವುವು. ಬಂಡವಾಳಶಾಹಿಗಳು ಇನ್ನೂ ದ್ರವ್ಯಾರ್ಜನೆ ಮಾಡುವುದನ್ನು ತಡೆಗಟ್ಟುವೆವು' ಎಂದು ಹೇಳಿ ಜನಜಾಗೃತಿಯುಂಟಾಗಲು ಎಲ್ಲ ಕೆಲಸಗಾರರು ಶ್ರಮಿಸಬೇಕೆಂದು ಕರೆಕೊಟ್ಟರು.

ಸಂಗೀತರತ್ನ ಆಸ್ಥಾನ ವಿದ್ವಾನ್

ಶ್ರೀ ಟಿ. ಚೌಡಯ್ಯನವರು.

ಏಳು ತಂತಿಯ ಪಿಟೀಲಿನ ನಾದ ಬ್ರಹ್ಮ

ಲೇ:—ಶ್ರೀ ಜಿ. ಟಿ. ನಾರಾಯಣ.

ಈಗ ಆರು ವರ್ಷಗಳ ಹಿಂದಿನ ಮಾತು. ಸ್ಥಳ ಮದರಾಸು. 'ನೀವು ನನ್ನ ನೆರೆಮನೆ ಮೈಸೂರಿನವರಾಗಿದ್ದು ಕೊಡಗಿಗೆ ಒಂದು ಸಲ ಬರಲಾರಿರಾ?' ಎಂದು ಶ್ರೀ. ಚೌಡಯ್ಯನವರನ್ನು ಪ್ರಶ್ನಿಸಿದ್ದೆನು. ಪಿಟೀಲುವಾದ್ಯ ಬಾರಿಸುವುದರಲ್ಲಿ ಶ್ರೀಯುತರು ಹೇಗೆ ನಿಸ್ಸೀಮರೋ ಹಾಗೆ ಸಂಗೀತದ ವಿಷಯ ಮಾತಾಡುವುದರಲ್ಲಿಯೂ ಕೂಡ. ಮದರಾಸಿನಲ್ಲಿ ಶ್ರೀ ಚೌಡಯ್ಯನವರನ್ನು ಆಗಾಗ ಸಂದರ್ಶಿಸಿ ಅವರೊಡನೆ ಮಾತಾಡುವ, ಅವರ ಸಂಗೀತವನ್ನು ಆಲಿಸುವ ಸುಯೋಗ ನನಗೆ ಲಭಿಸುತ್ತಿತ್ತು.

'ಒಂದು ದಿನ ನಿಮಗೆ ಆಶ್ಚರ್ಯವಾಗುವಂತೆ ಬರುತ್ತೇನೆ' ಎಂದರು. ಮಾತು ನಗೆಯಲ್ಲಿ ತೇಲಿ ಹಗುರಾಗಿ ಮುಂದುವರಿಯಿತು.

ಕಳೆದ ಮಂಗಳವಾರ ಸಾಯಂಕಾಲ ಸ್ಥಳ ಮಡಿಕೇರಿ. ಮೈಸೂರಿನ ಮುಖ್ಯಮಂತ್ರಿಗಳಿಗೆ ಮಡಿಕೇರಿ ನಗರ ಸಭೆಯ ಮಾನಪತ್ರ ಸಮರ್ಪಣೆಯ ಸಮಾರಂಭ. ಮೈಸೂರಿನಿಂದ ಆಗಮಿಸಿದ್ದ ಅತಿಥಿಗಳ ಮಧ್ಯೆ ಶ್ರೀ. ಚೌಡಯ್ಯನವರನ್ನು ನೋಡಿ ನಂಬದಾದೆ. ಸ್ಥಳ, ಕಾಲ, ಪರಿಸ್ಥಿತಿ ಇವುಗಳಿಂದಾಗಿ ಶ್ರೀಯುತರ ಇಲ್ಲಿರುವುದು ಸಾಧ್ಯವೇ ಎಂದು ಸಂದೇಹಿಸುತ್ತಿದ್ದೆ. ಆಷ್ಟರಲ್ಲಿಯೇ, ಶ್ರೀ. ಚೌಡಯ್ಯನವರು ತಮ್ಮ ಪಿಟೀಲುವಾದನದಿಂದ ನಮ್ಮ ಮನರಂಜನೆ ಮಾಡುವವರಿದ್ದಾರೆ ಎಂದು ಅಧಿಕೃತವಾಗಿ ತಿಳಿಯಿತು. ಜನರಿಗೆಲ್ಲ ವಿಸ್ಮಯ, ಆತ್ಮಾನಂದ. ಆರು ವರ್ಷಗಳ ಹಿಂದಿನ ಸರಸ ಸನ್ನಿವೇಶಕ್ಕೆ ನನ್ನ ಮನಸ್ಸು ಮಿಂಚಿತು.

ಮರುಕ್ಷಣದಲ್ಲಿಯೇ ಕಿವಿಕಿವುಡಾಗುವ ಕರತಾಡನಗಳ ಮಧ್ಯೆ ಸಭೆಗೆ ನಮಸ್ಕರಿಸಿ ಶ್ರೀ. ಚೌಡಯ್ಯನವರು ಮಂಡಿಸಿದರು. 'ಮನಸ್ವಾಳಕಿಂಚರಾ' ಎನ್ನುವ ಹಾಡನ್ನು ಸುಶ್ರಾವ್ಯವಾಗಿ ಬಾರಿಸಿದರು. ಆ ಏಳು ತಂತಿಯ ಪಿಟೀಲಿನ ನಾದ, ಝೇಂಕಾರ, ಮಾಧುರ್ಯಗಳಿಂದ ಜನರು ಮರುಳಾದರು, ಮನಸೋತರು. ಅದು ಮುಗಿಯುವುದೇ ತಡ ನವರಸಕನ್ನಡದಾಗದ 'ನಿನುವಿನಾ ನಾಮದೇಂದು' ಕೀರ್ತನವನ್ನು ನುಡಿಸಿದರು. ಈ ಹಾಡಿನ ಅದ್ಭುತ ಬಿರ್ಕಾಗಳಲ್ಲಿ, ಆಲುಗುಗಳಲ್ಲಿ ಪಿಟೀಲು ತನ್ಮಯತೆ ಹೊಂದಿತು. ಹಿಂದೂಸ್ಥಾನಿ ಕಾಪಿರಾಗದಲ್ಲಿ ಆಲಾಪನೆಯನ್ನೂ ತಾನವನ್ನೂ ಬಾರಿಸಿದರು. ತಾನದಲ್ಲಿ ಅವರು ಕಮಾನಿನಿಂದ ತಂತಿಗಳಿಗೆ ಹೊಡೆದು ಪಿಟೀಲಿನಿಂದ ಜಲತರಂಗ ನುಡಿಸಿದರು. ಹಿಂದೂಸ್ಥಾನಿ ಕಾಪಿರಾಗದ ವಿಶಾಲಸಾಮ್ರಾಜ್ಯದಲ್ಲಿ ವಿಹರಿಸುತ್ತಿದ್ದಂತೆಯೇ ನಮಗರಿವಿಲ್ಲದೇ ನಮ್ಮನ್ನು ಮೋಹನರಾಗದ ಗಾಂಭೀರ್ಯದ ಸನ್ನಿಧಿಗೆ ಕೊಂಡೊಯ್ದರು. ಮೋಹನರಾಗದಲ್ಲಿ ಪಿಟೀಲು ಕೊಳಲಾಯಿತು, ನಾಗಸ್ವರವಾಯಿತು, ಪರಾಕಾಷ್ಠೆಯನ್ನು ಮುಟ್ಟಿತು. ಮಹಾರ್ಝೇಂಕಾರದಿಂದ ಕೂಡಿದ 'ಲೆಗ್ ಹಾರ್ಮೋನಿಯಂ' ಆಯಿತು. ಮೈಸೂರ ವಜನತೋ' ಭಕ್ತಿಗೀತವನ್ನು ನುಡಿಸಿ ರಾಷ್ಟ್ರಗೀತೆಯಿಂದ ಆ ಚಿಕ್ಕ ಕಾರ್ಯಕ್ರಮವನ್ನು ಮುಗಿಸಿದರು. ಸುಪ್ರಸಿದ್ಧ ವಿದ್ವಾಂಸರಾದ ಶ್ರೀ ಚೌಡಯ್ಯನವರಿಗೆ, ಒಂದೊಂದು ರಾಗವನ್ನೂ ಗಂಟೆಗಟ್ಟಲೆ ಬಾರಿಸಲು ಶಕ್ತರಾಗಿರುವ ಮಹನೀಯರಿಗೆ, ಅರ್ಧ ಗಂಟೆಯ ಆ ಕಾಲ ಅತಿ ಕಿರಿಯದಾಯಿತು. ಸಂಗೀತಾಮೃತಪಾನಮಾಡಲು ಕಾಲಪರಿಮಿತಿ ಯಿರಲೇಬಾರದು.

ದಿವಂಗತ ಶ್ರೀ. ಬಿಡಾರ ಕೃಷ್ಣಪ್ಪನವರ ಶಿಷ್ಯರಾದ ಸಂಗೀತ ರತ್ನ ಮೈಸೂರು ಆಸ್ಥಾನ ವಿದ್ವಾನ್ ಶ್ರೀ. ಚೌಡಯ್ಯನವರು ಕನ್ನಡ ನಾಡಿನ ಹೆಮ್ಮೆ. ಕರ್ನಾಟಕ ಸಂಗೀತದಲ್ಲಿ ಅತ್ಯುನ್ನತ ಪಿಟೀಲ್ಪಟುವಾಗಿರುವ, ಮದರಾಸಿನ ಇತರ ಮಹಾವಿದ್ವಾಂಸರಿಗೆ ಸರಿಸಮಾನರಾಗಬಲ್ಲ ಇಬ್ಬರು ಕನ್ನಡ ಪುತ್ರರತ್ನಗಳಲ್ಲಿ ಶ್ರೀ. ಚೌಡಯ್ಯನವರು ಒಬ್ಬರು. ಇನ್ನೊಬ್ಬರು ಶ್ರೀ. ಪಿ. ದೊರೆಸ್ವಾಮಿ ಅಯ್ಯಂಗಾರ್ಯರು ವೀಣಾವಿದ್ವಾಂಸರು. ಮನಮೋಹಕವಾಗಿ ಅಪೂರ್ವ ಮತ್ತು ವಕ್ರರಾಗಗಳನ್ನು ಬಾರಿಸುವುದರಲ್ಲಿ ಚೌಡಯ್ಯನವರು ಶಕ್ತಿಶಾಲಿಗಳು. ಏಳು ತಂತಿಯ ಪಿಟೀಲಿನಲ್ಲಿ ಶ್ರೀಯುತರನ್ನು ಮೀರಿಸುವವರು ಇಂದು ಯಾರೂ ಇಲ್ಲ. ಬಾಯಿ ಹಾಡುಗಾರಿಕೆಯವರು ಎಂತೆಂತಹ ಕಠಿನ ಸ್ವರಗಳನ್ನು ಪೋಣಿಸಲಿ, ಎಂತೆಂತಹ ಉಸಿರು ಕಟ್ಟಿಸುವ ಆಲುಗುಗಳನ್ನು ಹಾಡಲಿ ಅವುಗಳನ್ನೆಲ್ಲ ಲೀಲಾ ಜಾಲವಾಗಿ ಪಿಟೀಲಿನಲ್ಲಿ ನುಡಿಸಿ ಸಭೆಯನ್ನು ಯಶಸ್ವಿಗೊಳಿಸುತ್ತಾರೆ. ತಮ್ಮ ಸಂಗೀತ ಸಾಮ್ರಾಜ್ಯದ ಶ್ರೀಮಂತತೆಯನ್ನು ಮರೆತ್, ನಿಗರ್ವಿಗಳಾಗಿ, ವಾತ್ಸಲ್ಯದಿಂದ, ಕಿರಿಯ ಹೊಸ ಸಾಯಕರಿಗೆ ಪ್ರೋತ್ಸಾಹನೀಡುವ ಧೀರೋದ್ಧೇಶದಿಂದ, ಶ್ರೀ. ಚೌಡಯ್ಯನವರು ಎಷ್ಟೋ ತರುಣ ಗಾಯಕರಿಗೆ ಹಿಮ್ಮೇಳವಾಗಿ ಪಿಟೀಲು ಬಾರಿಸಿ ಅವರಿಗೆ ಖ್ಯಾತಿಯನ್ನು ಗಳಿಸಿಕೊಟ್ಟಿದ್ದಾರೆ. ಔನ್ನತ್ಯದಲ್ಲಿ ಔದಾರ್ಯವು ಆದರ್ಶಪ್ರಾಯ.

ಸಾಮಾನ್ಯ ಪಿಟೀಲುಗಳಿಗೆ ನಾಲ್ಕು ತಂತಿಗಳಿರುವುವು. ಶ್ರೀ. ಚೌಡಯ್ಯನವರು ದೀರ್ಘಕಾಲ ಸಂಶೋಧನೆ ನಡೆಯಿಸಿ ಏಳು ತಂತಿಯ ಪಿಟೀಲನ್ನು ಏರ್ಪಾಡಿಗೊಳಿಸಿದ್ದಾರೆ. ಕರ್ಝನ್ ರೀಡ್ ಹಾರ್ಮೋನಿಯಂ ಸ್ವರದ ಹಾಗೆ ಈ ಪಿಟೀಲಿನ ಸ್ವರವಿದೆ. ಇದರ ಝೇಂಕಾರ, ನಾದ ಸೊಗಸಾಗಿದೆ. ಆದರೆ ಶ್ರೀ. ಚೌಡಯ್ಯನವರಿಗೆ ಮಾತ್ರ ಈ ಪಿಟೀಲು ಒಲಿದಿದೆ, ಅವರ ದಿವ್ಯ ಹಸ್ತಗಳಲ್ಲಿ ಮಾತ್ರ ಅದು ವಿಧೇಯವಾಗಿ ಇರುತ್ತದೆ. ಬಲಶಾಲಿಯಾದ ಆಯುಧವನ್ನು ಹಿಡಿತದಲ್ಲಿಡಲು ಬಲಶಾಲಿಯೇ ಅದರ ಸ್ವಾಮಿಯಾಗಿರಬೇಕು. ಪಿಟೀಲು ಪಾಶ್ಚಾತ್ಯ ದೇಶಗಳಿಂದ ನಮ್ಮ ದೇಶಕ್ಕೆ ಬಂದು ಇಲ್ಲಿನ ಸಂಗೀತಕ್ಕೆ ಚೆನ್ನಾಗಿ ಹೊಂದಿಕೊಂಡಿದೆ ಎಂದು ಕೆಲವರು ಹೇಳುತ್ತಾರೆ. ಈ ಅಭಿಪ್ರಾಯ ಸರಿಯಲ್ಲ, ಧನುರ್ವೀಣೆಯೆನ್ನುವ ನಾಮಧೇಯದಿಂದ ಪಿಟೀಲು ಭರತಖಂಡದಲ್ಲಿ ಪುರಾತನ ಕಾಲದಿಂದಲೂ ಪ್ರಚಾರದಲ್ಲಿತ್ತೆಂದು ಶ್ರೀ. ಚೌಡಯ್ಯನವರು ಸಾಧಿಸಿರುವರು.

ಶ್ರೀ ಚೌಡಯ್ಯನವರು ಇನ್ನೊಮ್ಮೆ ಸಾವಧಾನವಾಗಿ ನಮ್ಮೂರಿಗೆ ಬಂದು ಅವರ ಗಾನಸುಧೆಯ ಸವಿಯನ್ನು ಸವಿನಂತರನ್ನಾಗಿ ಮಾಡಲಿ ಎಂದು ಹಾರೈಸುತ್ತೇನೆ. ತಮ್ಮ ೫೭ ನೆಯ ವರ್ಷದಲ್ಲಿ ತರುಣರನ್ನೂ ಮೀರಿಸಿ ಇರುವ ಶ್ರೀಯುತರು ದೀರ್ಘಕಾಲ ಕರ್ನಾಟಕ ಸಂಗೀತ ದೇವಿಯ ಆರಾಧನೆ ಮಾಡುತ್ತಿರಲಿ, ತಮ್ಮ ಗಾನ ಪ್ರವಾಹವನ್ನು ಹರಿಸುತ್ತಿರಲಿ!

ಪ್ರಾಥಮಿಕ ಮತ್ತು ಸ್ಪೆಯರ್ ಎಲಿಮೆಂಟರಿ

ವಿದ್ಯಾಭ್ಯಾಸ.

ಸರಕಾರ ನೇಮಿಸಿದ ಸಮಿತಿಯ ಸೂಚನೆಗಳು.

ಕೊಡಗಿನ ಜಿಲ್ಲಾ ಬೋರ್ಡಿನ ವಶದಲ್ಲಿದ್ದ ಪ್ರಾಥಮಿಕ ಮತ್ತು ಸ್ಪೆಯರ್ ಎಲಿಮೆಂಟರಿ ಶಾಲೆಗಳನ್ನು ಸರಕಾರ ವಹಿಸಿಕೊಳ್ಳುವ ನಿರ್ಧಾರ ಈ ಹಿಂದೆಯೇ ಆಗಿತ್ತು. ಅದಕ್ಕಾಗಿ ಯೋಗ್ಯ ಸಲಹೆಗಳನ್ನು ಕೊಡಲು ಸಮಿತಿಯೊಂದನ್ನು ನೇಮಿಸಲಾಗಿದ್ದು ಆ ಸಮಿತಿಯ ವರದಿಯನ್ನು ಸರಕಾರವು ಒಪ್ಪಿ ಸ್ವಲ್ಪ ಬದಲಾವಣೆಯಿಂದ ಒಪ್ಪಿ ಕೊಡಗಿನ ಡೆಪ್ಯುಟಿ ಕಮಿಷನರು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಜಿಲ್ಲಾ ಬೋರ್ಡಿನ ಅಧೀನದ ಶಾಲೆಗಳನ್ನೆಲ್ಲಾ ತಾ. ೧—೪—೫೭ರಿಂದ ಸರಕಾರದವರ ಕೈಗೆ ತೆಗೆದುಕೊಳ್ಳಲಾಗಿದೆ. ಬೋರ್ಡಿನ ಎಕ್ಸಿಕ್ಯೂಟಿವ್ ಆಫೀಸರಿಂದ ಪ್ರಸಿಡೆಂಟರಿಂದ ಚಾರ್ಜನ್ನು ವಿದ್ಯಾಧಿಕಾರಿಗಳು ವಹಿಸಿರುವರು. ಆದರಿಂದ ಜಿಲ್ಲಾ ಬೋರ್ಡು ಶಾಲಾ ಅಧ್ಯಾಪಕರು ಸರಕಾರದ ಅಧೀನಕ್ಕೆ ಒಳಪಟ್ಟಿರುವರು.

ದೇಶದಲ್ಲ ಈಗಿರುವ ಶಾಲೆಗಳನ್ನು ಯೋಗ್ಯ ರೀತಿ ಹೆಚ್ಚಿಸುವ ದೃಷ್ಟಿಯಿಂದ ಈ ಕೆಳಗಿನ ರೀತಿ ಶಾಲಾ ವಿತರಣೆಯಾಗುವದು. (೧) ಪ್ರತಿ ಒಂದು ಮೈಲುಗಳಿಗೊಂದರಂತೆ ಜೆಡದ ಉಪ್ಪಾಗಿಕತ್ತು ಪೋಷಕ ಶಾಲೆಗಳು. (೨) ಪ್ರತಿ ಎರಡು ಮೈಲುಗಳಿಗೊಂದರಂತೆ ಪ್ರಾಥಮಿಕ ಶಾಲೆಗಳು. (೩) ಪ್ರತಿ ಮೂರು ಮೈಲುಗಳಿಗೊಂದರಂತೆ ಲೋವರ್ ಸೆಕೆಂಡರಿ ಶಾಲೆಗಳು. ಪೋಷಕ ಶಾಲೆಗಳಲ್ಲಿ ಮೂರನೆ ತರಗತಿಯ ವರೆಗೆ ಮಾತ್ರ ತರಗತಿಗಳಿರುವವು. ಜಿಲ್ಲಾ ವಿದ್ಯಾಧಿಕಾರಿಗಳು ಈ ಸೂಚನೆಯ ಪ್ರಕಾರ ಯಾವ್ಯಾವ ಶಾಲೆಗಳನ್ನು ತೆಗೆಯಬೇಕು; ಎಲ್ಲೆಲ್ಲಿ ಹೊಸ ಶಾಲೆ ಕೊಡಬೇಕು ಮೊದಲಾದ ವಿವರಗಳ ಬಗ್ಗೆ ವರದಿ ಮಾಡಿದ್ದು ಅದು ಜಾರಿಯಲ್ಲಿ ಶೀಘ್ರ ಬರಲಿದೆ.

ಅಧ್ಯಾಪಕ ವರ್ಗದ ಅರ್ಹತೆಯ ಬಗ್ಗೆ ಈ ಕೆಳಗಿನ ಅರ್ಹತೆಗಳನ್ನು ನಿಶ್ಚಯಿಸಲಾಗಿದೆ.

(೧) ಮೆಟ್ರಿಕ್ಯುಲೇಶನ್ ದರದ ವೇತನ ದೊರೆಯಬೇಕಾದರೆ ಅಧ್ಯಾಪಕರು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ ನೂರಕ್ಕೆ ೪೦ಕ್ಕೆ ಕಡಿಮೆಯಿಲ್ಲದೆ ಮಾರ್ಕ್ಸ್ ತೆಗೆದಿರಬೇಕು. ಇಲ್ಲನೆ ಇಂಟರ್ ಮೀಡಿಯೇಟ್ ಪಾಸಾಗಿರಬೇಕು.

(೨) ನಾನ್ ಮೆಟ್ರಿಕ್ಯುಲೇಟ್ ಅಧ್ಯಾಪಕರಾಗಲು ಎಸ್. ಎಸ್. ಎಲ್. ಸಿ. ಪೂರ್ತಿ ಮಾಡಿರಬೇಕು. ಅಂದರೆ ಆರನೇ ಫಾರಂನಲ್ಲಿ ಒಂದು ವರ್ಷ ಓದಿರಬೇಕು.

ಅಧ್ಯಾಪಕರ ವೇತನ ದರವನ್ನು ಈ ಕೆಳಗಿನಂತೆ ನಿರ್ಧರಿಸಲಾಗಿದೆ. ಸ್ಪೆಯರ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರು (ತರಬೇತಾದವರು) ಮಾಸಿಕ ರೂ. ೬೦—೪—೮೦—೫—೧೦೦. ತರಬೇತಾದ ಅಧ್ಯಾಪಕರು ರೂ. ೫೦—೩—೭೦—೩—೯೦. ತರಬೇತಾದ ನಾನ್ ಮೆಟ್ರಿಕ್ ಪ್ರಾಥಮಿಕ ಶಾಲಾ ಹೆ. ಮಾಸ್ಟರು ರೂ. ೫೦—೨—೬೦—೩—೭೦. ತರಬೇತಾದ ನಾನ್ ಮೆಟ್ರಿಕ್ ಅಧ್ಯಾಪಕರು ರೂ ೪೦—೨—೫೦—೩—೬೦. ತರಬೇತಾಗದವರು ರೂ, ೩೫—೧—೪೦—೨—೫೦. ಮೆಟ್ರಿಕ್ ಪಾಸಾದವರು ರೂ. ೪೦ರಿಂದ ಪ್ರಾರಂಭಿಸುವರು. ರಾಷ್ಟ್ರಭಾಷಾ ಪಾಸಾದವರಿಗೆ ಅವರ ವಿದ್ಯಾಯೋಗ್ಯತೆ ಮೇರೆ ಮೆಟ್ರಿಕ್ ನಾನ್ ಮೆಟ್ರಿಕ್ ದರದ ವೇತನ ದೊರೆಯುವದು.

ಕರ್ನಾಟಕ ಪ್ರಾಂತಕ್ಕಾಗಿ ಆಮರಣ ಉಪವಾಸ.

ಹುಬ್ಬಳ್ಳಿ ಶ್ರೀ. ಮಹಾದೇವಪ್ಪ ಮುರಗೋಡ ಎಂಬವರು ಕರ್ನಾಟಕ ಪ್ರಾಂತ ರಚನೆಗಾಗಿ ತಾ. ೯ ರಿಂದ ಆಮರಣ ಉಪವಾಸ ಪ್ರಾರಂಭಿಸಿರುವರು. ಶ್ರೀ. ಮಹಾದೇವಪ್ಪನವರು ಕಳೆದ ತಾ. ೨೪ ರಿಂದ ಶ್ರೀ. ವಿರೂಪಾಕ್ಷಪ್ಪ ಪಾಟೀಲರು ಉಪವಾಸ ನಡೆಸುತ್ತಿರುವ ಮನೆಯಲ್ಲೇ ತಮ್ಮ ಉಪವಾಸ ಪ್ರಾರಂಭಿಸಿದ್ದಾರೆ.

ಕೊಡಗಿನಲ್ಲಿ ನಗೆಗೆ

'ಕೊಡಗು' ಏಜೆಂಟರು.

ಶ್ರೀ ಕೆ. ಸಿ. ಪೀತಾಂಬರನವರು

ಜ್ಞಾನ ದೀಪ.

(೧)

ಕಣ್ಣು ಕಟ್ಟಿಕೊಂಡವ ನೋಡಲಾರ. ಕೈ ಕಟ್ಟಿಕೊಂಡವ ದೂಡಲಾರ. ಜ್ಞಾನವಿಲ್ಲದವ ಸಂಗತಿ ಅರಿಯಲಾರ. ಹಣವಿಲ್ಲದವ ಸಂಭ್ರಮ ತಿಳಿಯಲಾರ.

(೨)

ಮಣಿ ಹಾರವಿರುವ ಕಂಠದಲ್ಲಿ ಮಧುರ ಸ್ವರವೂ ಇದ್ದೀತೆಂದು ನಿಶ್ಚಯವಿಲ್ಲ. ಐಶ್ವರ್ಯ ಇದ್ದಲ್ಲಿ ಔದಾರ್ಯವೂ ಇರಬೇಕೆಂಬ ನಿರ್ಬಂಧವಿಲ್ಲ.

(೩)

ತಾಮ್ರದ ಪಾತ್ರೆಯು ತೂತಿಗೆ ತೇಪೆ ಹಚ್ಚಲಾಗುತ್ತದೆ. ಮಣ್ಣು ಮಡಕೆ ಒಡೆದರೆ ಹಾಗಲ್ಲ. ಸ್ಥಿರಬುದ್ಧಿಯು ಬಿರುಕನ್ನು ಸಂದುಗೂಡಿಸಬಹುದು. ಆದರೆ ಚಂಚಲ ಬುದ್ಧಿಯದು ಹಾಗಾಗದು.

—ನುಡಿಮುತ್ತು.

ಕೊಡಗು

ತಾರೀಕು ೮ ಮೇ ೧೯೫೩ನೇ ಶುಕ್ರವಾರ

ಹಿಂದೂಸ್ಥಾನ ಪಾಕಿಸ್ಥಾನ ಸಂಬಂಧ

ಭರತಖಂಡವು ಹಿಂದೂಸ್ಥಾನ ಪಾಕಿಸ್ಥಾನಗಳೆಂದು ವಿಭಾಗಿಸಲ್ಪಟ್ಟು ಐದು ವರ್ಷಗಳ ಮೇಲಾಯಿತು. ಇಷ್ಟರಲ್ಲಿ ಹಿಂದೂಸ್ಥಾನವು ತನ್ನ ಸ್ವತಂತ್ರ ರಾಜ್ಯಘಟನೆಯನ್ನು ತಯಾರಿಸಿ ಚುನಾವಣೆಯನ್ನು ನಡೆಸಿ ಅನಂತರ ಆಡಳಿತ ಕ್ರಮವನ್ನು ಜಾರಿಗೆ ತಂದಿರುವದು. ಆದರೆ ಪಾಕಿಸ್ಥಾನವು ತನ್ನ ಪ್ರತಿನಿತ್ಯದ ಆಂತರಿಕ ಬಿಕ್ಕಟ್ಟುಗಳನ್ನು ಬಿಡಿಸಲು ಹೆಚ್ಚಿನ ಸಮಯ ವ್ಯಯಮಾಡಬೇಕಾಗಿ ಬಂದ ಕಾರಣ ತನಗೆ ಒಂದು ರಾಜ್ಯಘಟನೆಯನ್ನು ತಯಾರಿಸಿಕೊಳ್ಳುವದು ಸಾಧ್ಯವಾಗಿರುವದಿಲ್ಲ. ಅಲ್ಲದೆ ಆಹಾರದ ವಿಚಾರದಲ್ಲಿ ಹಿಂದೂಸ್ಥಾನಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದ ಪಾಕಿಸ್ಥಾನವು ಇಂದು ಆಹಾರದ ಅಭಾವದಿಂದ ಕಷ್ಟಪಡುತ್ತಿದೆ. ದೇಶದೊಳಗೆ ಮುಸ್ಲಿಂ ಲೀಗ್ ಮತ್ತಿತರ ಪಕ್ಷಗಳೊಳಗೆ ದಿನೇ ದಿನೇ ವೈಷಮ್ಯ ಹೆಚ್ಚಿ ಆಡಳಿತವು ಸುಸೂತ್ರವಾಗಿ ನಡೆಯಲಾರದಾಗಿದೆ. ಆಂತರಿಕ ಈ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಾಗದ ಪರಿಸ್ಥಿತಿ ಬಂದ ಕಾರಣ ಅಧಿಕಾರದಲ್ಲಿದ್ದ ನಾಜಿಮುದ್ದೀನರನ್ನು ಅಲ್ಲಿಯ ಗವರ್ನರ್ ಜನರಲರು ನಿವೃತ್ತಗೊಳಿಸಿ ಮಹಮ್ಮದಾಲಿಯವರನ್ನು ನೇಮಕಮಾಡಿದರು.

ಈ ಬಿಕ್ಕಟ್ಟಿನ ಸಮಯದಲ್ಲಿ ಹೊಸದಾಗಿ ಅಧಿಕಾರಗ್ರಹಣ ಮಾಡಿರುವ ಪಾಕಿಸ್ಥಾನದ ಹೊಸ ಮುಖ್ಯ ಮಂತ್ರಿಗಳು ಹಿಂದೂಸ್ಥಾನದ ಸರಕಾರದೊಂದಿಗೆ ಹೆಚ್ಚಿನ ಸ್ನೇಹ ಸೌಹಾರ್ದತೆಗಳನ್ನು ಬೆಳೆಸಬೇಕೆಂದು ಯತ್ನಿಸುತ್ತಿರುವದು ಪ್ರಶಂಸನೀಯವಾಗಿದೆ. ಹಿಂದೂದೇಶ ಹಾಗೂ ಪಾಕಿಸ್ಥಾನಗಳೊಳಗೆ ಅನೇಕ ಕಠಿಣ ಸಮಸ್ಯೆಗಳು ಬಗೆಹರಿಯದೆ ನಿಂತಿವೆ. ಅವುಗಳನ್ನು ಒಂದಲ್ಲ ಒಂದು ರೀತಿಯಲ್ಲಿ ಬಿಡಿಸುವ ಉದ್ದೇಶದಿಂದ ಹಿಂದಿನ ಮುಖ್ಯ ಮಂತ್ರಿ ನಾಜಿಮುದ್ದೀನರು ಪಂಡಿತ ನೆಹರೂರವರೊಂದಿಗೆ ಭೇಟಿಯಾಗಲು ಪತ್ರವ್ಯವಹಾರ ನಡೆಸುತ್ತಿದ್ದರು. ಈ ಅಭಿಪ್ರಾಯವನ್ನು ಸಾಧಿಸುವುದಕ್ಕಾಗಿ ಹೊಸ ಪ್ರಧಾನ ಮಂತ್ರಿಯವರು ತಮ್ಮ ಆತುರತೆಯನ್ನು ವ್ಯಕ್ತಮಾಡಿರುವರು. ಈ ವಿಚಾರ ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತಾಡುತ್ತಾ "ಪಾಕಿಸ್ಥಾನಕ್ಕೆ ಯುದ್ಧ ಬೇಕಾಗಿಲ್ಲ. ಶಾಂತಿ ಬೇಕಾಗಿದೆ. ಮತಭೇದದ ಪ್ರಶ್ನೆಗಳನ್ನು ಬಗೆಹರಿಸಲು ಅಸಾಧ್ಯವೇನಲ್ಲ ಇದು ಸಾಧ್ಯವಾದರೆ ಎರಡೂ ರಾಷ್ಟ್ರಗಳು ಕೂಡಿ ಸಂಯುಕ್ತ ಸಂರಕ್ಷಣೆಯ ಸಾಧ್ಯಾಸಾಧ್ಯತೆಗಳನ್ನು ವಿಚಾರ ಮಾಡಬಹುದು" ಎಂದು ಹೇಳಿರುವರು. ಅಲ್ಲದೆ ಪಂಡಿತ ನೆಹರೂರವರು ತನ್ನ ಅಣ್ಣನಂತಿರುವರೆಂದು ಹೇಳಿರುವದು ಈ ಪ್ರಯತ್ನಕ್ಕೆ ಹೆಚ್ಚಿನ ಶಕ್ತಿಯನ್ನು ಕೊಡದಿರದು. ಈ ಎರಡು ಪ್ರಧಾನಿಗಳು ನಿಷ್ಕಳಂಕ ಮನಸ್ಸಿನಿಂದ ತಮ್ಮ ಎರಡು ರಾಷ್ಟ್ರಗಳ ಸ್ನೇಹ ಸಂಬಂಧವನ್ನು ನಿಶ್ಚಿತವಾಗಿ ಬೆಳೆಸಬೇಕೆಂದು ಮನಸ್ಸು ಮಾಡಿ ತಮ್ಮೊಳಗಿರುವ ಸಮಸ್ಯೆಗಳನ್ನು ಬಿಡಿಸಲು ಯತ್ನಿಸಿದ್ದೇ ಆದರೆ ಅದು ಅಸಾಧ್ಯದ ಮಾತಾಗಲಾರದು.

ಇವರ ಭೇಟಿಯು ಕ್ಷಿಪ್ರದಲ್ಲಿ ಆಗುವ ಸಾಧ್ಯತೆ ಇಲ್ಲದಿದ್ದರೂ ಅವರಿಬ್ಬರೂ ಇಂಗ್ಲೆಂಡಿನ ರಾಣಿಯ ಕಿರೀಟ ಮಹೋತ್ಸವಕ್ಕೆ ಬರುವ ಜೂನ್‌ನಲ್ಲಿ ಹೋಗಿ ಬಂದ ಮೇಲೆ ನಡೆಯುವದೆಂದೂ ಊಹಿಸಲಾಗಿದೆ. ಹೇಗೂ ಈ ಮೊದಲು ಒಂದೇಯಾಗಿದ್ದ ಹಿಂದೂ ಪಾಕಿಸ್ಥಾನಗಳು ಈಗ ಇಬ್ಭಾಗವಾಗಿದ್ದರೂ ಈ ವಿಭಾಗವು ಆಡಳಿತದ ಅನುಕೂಲತೆಯ ಮಟ್ಟಿಗೆ ಮಾತ್ರ ಉಳಿದು ಈ ಎರಡು ರಾಷ್ಟ್ರಗಳು ಸಹೋದರಭಾವದಿಂದ ವರ್ತಿಸುವಂತಾಗಲೆಂದು ಹಾರೈಸುವೆವು.

॥ ಮಧು ಪರ್ಕ. ॥

ಗಾಂಧೀಜಿಯ ಜ್ಞಾನದಾಹ ಬಹಳ ವಿಚಿತ್ರವಾದುದು. ಒಂದು ಸಲ ಅವರಿಗೆ ಸರ್ಪಶಾಸ್ತ್ರದ ಹುಚ್ಚು ಹಿಡಿಯಿತು. ಎಲ್ಲೆಲ್ಲಿಗೋ ಬರೆದು ಸರ್ಪಗಳು, ಅವುಗಳ ವಿಷ ಮೊದಲಾದುವುಗಳ ಬಗ್ಗೆ ವಿಷಯ ಸಂಗ್ರಹ ಮಾಡಿದರು. ಒಂದು ದಿನ ಅವರಿಗೊಬ್ಬ ಬೈರಾಗಿ ಸಿಕ್ಕಿದನು. ಆತನು ಈ ಸರ್ಪಶಾಸ್ತ್ರದ ಪ್ರವೀಣ. ಅವನಲ್ಲಿ ವಿವಿಧ ಹಾವುಗಳ ಸಂಗ್ರಹವಿತ್ತು. ಅವುಗಳಲ್ಲಿ ಒಂದನ್ನು ಹಿಡಿದುಕೊಂಡು ಆತನು ಗಾಂಧೀಜಿಯ ಆಶ್ರಮಕ್ಕೆ ಬಂದ. ಕಾಂಗ್ರೆಸಿನ ಹಲವು ನಾಯಕರೂ ಇದ್ದರು. ಬೈರಾಗಿಯನ್ನು ವಿವಿಧ ಪ್ರಶ್ನೆ ಕೇಳಿ ಗಾಂಧೀಜಿ ಹಾವುಗಳ ವಿಷಯ ಏನೇನೋ ತಿಳಿದುಕೊಳ್ಳುತ್ತಿದ್ದರು. ಎಲ್ಲರಿಗೂ ಆಶ್ಚರ್ಯ. ಬೈರಾಗಿಯ ಕೈಯಲ್ಲಿ ಹಾವು ಮಣ್ಣು ಮುಳುವಿನಂತೆ ಆಡುತಿತ್ತು. ನೋಡುತಿದ್ದ ಹಾಗೆಯೇ ಆತನು ಗಾಂಧೀಜಿಯ ಕುತ್ತಿಗೆಗೆ ಹಾವನ್ನು ಮಾಲೆಯಾಗಿ ಸುತ್ತಿದ. ಎಲ್ಲರೂ ಗಾಬರಿಗೊಂಡರು. ಗಾಂಧೀಜಿ ಮಾತ್ರ ಗಂಭೀರವಾಗಿ ತಣ್ಣಗೆ ಕೂತಿದ್ದರು. ಇದಾದ ಮೇಲೆ ಬೈರಾಗಿ ಹಾವಿನ ಹಲ್ಲುಗಳನ್ನು ಬಿಡಿಸಿ ವಿಷದ ಚೀಲವನ್ನು ತೋರಿಸಿ ಯಾರಾದರೂ ಆ ಹಾವಿನಿಂದ ಕಚ್ಚಿಸಿಕೊಳ್ಳುವದಾದರೆ ಆ ವಿಷವನ್ನು ಪ್ರಾಣಾಪಾಯಬಾರದಂತೆ ತಾನು ನಿವಾರಿಸುವದಾಗಿ ಹೇಳಿದನು. ಯಾರೂ ಮುಂದೆ ಬರಲಿಲ್ಲ. ಆದರೆ ಗಾಂಧೀಜಿ ತಮ್ಮ ಕೈಚಾಚಿದರು. ಹಾವಿನ ವಿಷವನ್ನು ತಡೆಯುವ ಶಕ್ತಿಯನ್ನು ತಿಳಿದರೆ ಬಡಜನರಿಗೆ ಈ ಶಾಸ್ತ್ರ ಪ್ರಚಾರ ಮಾಡಬಹುದೆಂದು ಅವರ ಅಭಿಮತ! ಆದರೆ ಅಲ್ಲಿದ್ದವರಿಗೆಲ್ಲಾ ಭಯ. ಎಲ್ಲರೂ ಗದ್ದಲ ಮಾಡಿದರು. ಗಾಂಧೀಜಿಯವರು ಕಚ್ಚಿಸಿಕೊಳ್ಳಕೂಡದೆಂದರು. ಆದರೆ ಗಾಂಧೀಜಿ ಹಿಂತೆಗೆಯಬೇಕಲ್ಲ. ಕಡೆಗೆ ಬೇರೆ ಒಬ್ಬಿಬ್ಬರು ತಾವು ಕಚ್ಚಿಸಿಕೊಳ್ಳುವದಾಗಿಯೂ ಗಾಂಧೀಜಿ ಈ ಪ್ರಯೋಗಕ್ಕೆ ಒಳಗಾಗಬಾರದಾಗಿಯೂ ಹೇಳಿದರು. ಆದರೆ ಗಾಂಧೀಜಿಯದು ಮಕ್ಕಳ ಹಠದಂತೆ! ಅವರ ಎಷ್ಟು ಪ್ರಯತ್ನಿಸಿದರೂ ಹಾವು ಕಚ್ಚಲಿಲ್ಲ. ಅದಕ್ಕೂ ಗೊತ್ತಾಯಿತೇನೋ ಇದು ಸತ್ಯಾಗ್ರಹಾಶ್ರಮವೆಂದು! ಎಷ್ಟೇ ಪ್ರೇರೇಪಿಸಿದರೂ ಹಾವೂ ಸತ್ಯಾಗ್ರಹಮಾಡಿತು. ಯಾರನ್ನೂ ಕಚ್ಚಲಿಲ್ಲ.

ವರ್ತಮಾನ.

ಶಿರಂಗಾಲದ ಮೂರನೆ ಸಂಗಡದ ಮಯಸ್ಕರ ತರಗತಿಯು ಕೋಟೆಯ ದವಸ ಭಂಡಾರದ ಕಟ್ಟಡದಲ್ಲಿ ತಾ ೧—೫—೫೩ರಲ್ಲಿ ಗ್ರಾಮಸೇವಕ ಶ್ರೀಮಾನ್ ಬಿ ದೇವಯ್ಯನವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಶ್ರೀಗಳಾದ ಎಸ್. ಸಿ. ತಿರುಮಲಪ್ಪನವರು ಮತ್ತು ಎಸ್. ಸಿದ್ದಪ್ಪನವರು ಈ ವಿಚಾರ ಮಾತನಾಡಿದರು. ಶಾಲೆಯ ಹಾಜರಾತಿಯು ಸಮರ್ಪಕವಾಗಿದ್ದು ತರಗತಿಯು ತಕ್ಕ ರೀತಿ ನಡೆಯಲು ಶ್ರೀಗಳಾದ ಪಟೇಲ್ ನಂಜುಂಡಪ್ಪ, ಸಿದ್ದಿಂಗಪ್ಪ, ವೀರಭದ್ರಪ್ಪ, ಕರಿಯಪ್ಪ, ರಾಮಪ್ಪ, ಬಸಪ್ಪ, ಅತ್ತೂರು ಸಿದ್ದಿಂಗಪ್ಪ ಇವರುಗಳನ್ನೊಳಗೊಂಡ ಕಮಿಟಿಯೊಂದನ್ನು ಏರ್ಪಡಿಸಲಾಯಿತು.

ವೀರಾಜಪೇಟೆ ತುಕ್ಕೂಡು ಗ್ರಾಮದ ಭದ್ರಕಾಳಿ ದೇವರ ಹಬ್ಬವು ತಾ. ೨೩, ೨೪ ಮತ್ತು ೨೫ರಲ್ಲಿ ನಡೆಯುವದು.

ಶ್ರೀಮಂಗಲ ನಾಡು ಕೋತೂರು ಗ್ರಾಮದ ಶ್ರೀ ಮನ್ನಕಮನೆ ಸುಬ್ರಾಯನವರ ದನಗಳ ಜೊತೆಯಲ್ಲಿ ಕರಿವರ್ಣದ ಮಧ್ಯ ಪ್ರಾಯದ ಒಂದು ಕೋಣವು ಕೆಲವು ದಿನಗಳಿಂದ ಬಂದು ಸೇರಿಕೊಂಡಿದೆಯೆಂದೂ ಮಾಲೀಕರು ತಕ್ಕ ರುಜುವಾತಿನಿಂದ ಹೊಡೆದುಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

ಮೂರ್ನಾಡು ಬಾಡಗ ಗ್ರಾಮದ ಶ್ರೀ ಎಂ. ಎ. ಚೆಕ್ಕಪ್ಪನವರಲ್ಲಿ ಕಳೆದ ಹತ್ತು ತಿಂಗಳುಗಳಿಂದ ಒಂದು ಕರಿ ವರ್ಣದ ಹಸವು ಸೇರಿಕೊಂಡಿದ್ದು ಅದು ಕರ ಹಾಕಿದೆಯೆಂದೂ ಮಾಲೀಕರು ತಕ್ಕ ರುಜುವಾತಿನಿಂದ ಹೊಡೆದುಕೊಂಡು ಹೋಗಬಹುದೆಂದೂ ತಿಳಿಸುತ್ತಾರೆ.

ಬರುವ ತಾರೀಕು ೨೨ನೇ ಶುಕ್ರವಾರ ಬೆಳಿಗ್ಗೆ ೧೧ ಗಂಟೆಗೆ ಕೊಡಗು ಜಿಲ್ಲಾ ಮೇಜಿಸ್ಟ್ರೇಟರ ಕಚೇರಿಯ ಎದುರು ಆರು ಜೋಡು ಹೊಳವಿನ ಮತ್ತು ನಾಲ್ಕು ಒಂಟಿ ಹೊಳವಿನ ಕೋವಿಗಳೂ, ತೋಟೆ, ಮೊದಲಾದವುಗಳೂ ಹರಾಜು ಹಾಕಲ್ಪಡುವವು.

ಎಡೆನಾಲ್ಕು ನಾಡು ಭಾರತ ಸೇವಕ ಸಮಾಜದ ಪ್ರಾರಂಭೋತ್ಸವವು ಈ ತಾ. ೭ರಲ್ಲಿ ನಿವೃತ್ತ ಚೀಫ್ ಕಮಿಷನರಾದ ಶ್ರೀ ಕೇಟೋಳಿರ ಚಂಗಪ್ಪನವರ ಅಧ್ಯಕ್ಷತೆಯಲ್ಲಿ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ನಡೆಯಿತು.

ಮೈಸೂರು ಸಂಸ್ಥಾನದಲ್ಲಿ ಆ. ರೆವಿನ್ಯೂ ಕಮಿಷನರಾಗಿರುವ ಶ್ರೀ ಅಳಮೇಂಗಡ ಅಯ್ಯಪ್ಪನವರ ಮಗ ಶ್ರೀ ರಾಜು ಇವರಿಗೆ ಸಂಯುಕ್ತ ಅಮೇರಿಕಾದ ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಲು "ಫೆಲೊಶಿಪ್" ದೊರೆತಿದೆಯೆಂದೂ ಇವರು ಜುಲೈ ತಿಂಗಳಲ್ಲಿ ಅಮೇರಿಕಾಕ್ಕೆ ಹೋಗುವರೆಂದೂ ತಿಳಿದು ಬಂದಿದೆ.

ಭಾಷಾವಾರು ಪ್ರಾಂತರಚನೆ.

ಇಂದು ಹಿಂದೂಸ್ಥಾನದಲ್ಲಿರುವ ಪ್ರಾಂತಗಳು ಭಾಷೆಯನ್ನನುಸರಿಸಿ ರಚಿಸಲ್ಪಟ್ಟಿರುವದಿಲ್ಲ. ಅವು ಆಡಳಿತದ ಅನುಕೂಲತೆ ಮೇರೆ ರೂಪಿಸಲ್ಪಟ್ಟಿವೆ. ಹಿಂದೂದೇಶಕ್ಕೆ ಸ್ವಾತಂತ್ರ್ಯವು ದೊರೆತ ಮೇಲೆ ಪ್ರಾಂತ್ಯಗಳನ್ನು ಅಲ್ಲಲ್ಲಿಯ ಜನರ ಭಾಷೆಗನುಸಾರವಾಗಿ ಪ್ರತ್ಯೇಕಿಸಬೇಕೆನ್ನುವ ಚಳವಳವು ಪ್ರಬಲವಾಗಿದೆ. ಇದರ ಫಲವಾಗಿ ಕೇಂದ್ರ ಸರಕಾರದವರು ಧಾರ್ ಸಮಿತಿಯನ್ನು ನೇಮಿಸಿ ದೇಶದ ಅಭಿಪ್ರಾಯವನ್ನು ತೆಗೆದರು. ಅವರ ಅಭಿಪ್ರಾಯದ ಮೇಲೆ ತತ್ಕಾಲ ಭಾಷಾನುವಾರು ಪ್ರಾಂತರಚನೆ ಮಾಡುವದು ಹಿಂದೂದೇಶದ ಹಿತದೃಷ್ಟಿಯಿಂದ ಯೋಗ್ಯವಲ್ಲವೆಂದು ಕಂಡುಬಂತು. ಈ ಕಾರಣ ರಾಜ್ಯಘಟನಾ ಸಭೆಯು ಹಿಂದೂದೇಶವನ್ನು 'ಎ' 'ಬಿ' ಮತ್ತು 'ಸಿ' ವರ್ಗದ ಪ್ರಾಂತಗಳಾಗಿ ವರ್ಗೀಕರಿಸಿ ಅವುಗಳಿಗೆ ತಕ್ಕುದಾದ ಆಡಳಿತ ಕ್ರಮವನ್ನು ರೂಪಿಸಿದರು. ಅದೇ ಮೇರೆ ಚುನಾವಣೆ ನಡೆದು ವಿವಿಧ ಪ್ರಾಂತಗಳಲ್ಲಿ ಸರಕಾರಗಳು ಅಧಿಕಾರ ವಹಿಸಿದವು. ಆದರೆ ಮದ್ರಾಸು ಪ್ರಾಂತದ ಆಡಳಿತದಿಂದ ಸ್ವತಂತ್ರಾಗದ ಆಂಧ್ರದವರು ತಮ್ಮ ಪ್ರತ್ಯೇಕ ಪ್ರಾಂತ ಚಳವಳವನ್ನು ನಿಲ್ಲಿಸಲಿಲ್ಲ. ಈ ಉದ್ದಿಶ್ಯಕ್ಕಾಗಿ ಶ್ರೀ ಪೊಟ್ಟಿ ಶ್ರೀರಾಮುಲುರವರು ಆಮರಣ ಉಪವಾಸ ಕೈಗೊಂಡು ಜೀವದಾನ ಮಾಡಿದರು. ಆದರೆ ಹಿಂದೂದೇಶದ ಪ್ರಧಾನಿಯಾದ ಪಂಡಿತ ನೆಹರೂರವರು ಹೇಳಿದಂತೆ ಆಂಧ್ರ ಪ್ರಾಂತ ರಚನೆಯ ವಿಚಾರದಲ್ಲಿ ಇಂಡಿಯಾ ಸರಕಾರವು ಈ ಉಪವಾಸಕ್ಕೆ ಮುಂಚೆಯೇ ನಿರ್ಧಾರ ಮಾಡಿತ್ತು. ಆ ತೀರ್ಮಾನವು ಪ್ರಕಟವಾಗುವಷ್ಟರಲ್ಲಿ ಶ್ರೀರಾಮುಲುರವರ ನಿಧನವಾಯಿತು. ಆದರೆ ಕೆಲವರು ಶ್ರೀರಾಮುಲುರವರ ಜೀವದಾನದಿಂದಲೇ ಆಂಧ್ರ ಪ್ರಾಂತ ರಚನೆಯು ನಿರ್ಧಾರವಾಯಿತೆಂದು ಭಾವಿಸಿಕೊಂಡರು. ಈ ರೀತಿಯ ತಪ್ಪು ಭಾವನೆಯು ಕರ್ನಾಟಕ ಪ್ರಾಂತರಚನೆಗೆ ಹೋರಾಡುವವರಲ್ಲಿ ದೊಡ್ಡ ಪರಿಣಾಮವನ್ನುಂಟುಮಾಡಿತು.

ಕರ್ನಾಟಕದವರಲ್ಲಿಯೂ ಕೂಡ ಉಪವಾಸ ಕೈಕೊಂಡು ಪ್ರಾಣ ತ್ಯಾಗ ಮಾಡಿದರೆ ತಮ್ಮ ಗುರಿಯಾದ ಕರ್ನಾಟಕ ಪ್ರಾಂತರಚನೆಯು ಕೈಗೂಡುವದೆಂದು ಕೆಲವರು ನಂಬಿ ಉಪವಾಸವನ್ನು ಪ್ರಾರಂಭ ಮಾಡಿರುವರು. ಇಷ್ಟರಲ್ಲೇ ಪಂಡಿತ ನೆಹರೂರವರು ಬೆಳಗಾವಿಯಲ್ಲಿ ಕಳೆದ ತಿಂಗಳು ೨೦ರಲ್ಲಿ ಕೊಟ್ಟ ಭಾಷಣದಲ್ಲಿ ಈ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಿರುವರು. ಆಂಧ್ರ ಪ್ರಾಂತ ರಚನೆಯಾದ ನಂತರ ಸುಮಾರು ಒಂದು ವರ್ಷದ ಮೇಲೆ ಭಾಷಾವಾರು ಪ್ರಾಂತಗಳ ರಚನೆ ನಿರ್ಣಯದ ಕುರಿತು ಒಂದು ಕಮೀಶನನ್ನು ನೇಮಿಸಲಾಗುವದೆಂದೂ ಈ ಕಮಿಷನು ಭಾಷಾವಾರು ಪ್ರಾಂತಗಳ ಪ್ರಯೋಜನವನ್ನು ವಿಚಾರಿಸುವದು ಮಾತ್ರವಲ್ಲ, ಆರ್ಥಿಕ ಮತ್ತು ಸಾಮಾಜಿಕ ದೃಷ್ಟಿಯಿಂದ ಅದು ಸಾಧ್ಯವೋ ಎಂಬುದನ್ನು ಕೂಡ ಗಣಿಸೀತೆಂದೂ ನಂತರ ಸರಕಾರವು ಕಮೀಶನಿನ ವರದಿಯ ಮೇಲೆ ಒಂದು ಮಸೂದೆಯನ್ನು ತಯಾರಿಸಿ ಅದರ ಮೇಲೆ ಜನರ ಅಭಿಪ್ರಾಯವನ್ನೂ ಕೂಡ ತೆಗೆಯಲಾಗುವದೆಂದೂ ಸೂಚಿಸಿದುದಲ್ಲದೆ ಈ ಉದ್ದಿಶ್ಯವನ್ನು ಸಾಧಿಸಿಕೊಳ್ಳಲು ಉಪವಾಸವನ್ನು ಕೈಕೊಳ್ಳುವ ರೀತಿಯು ಸರಿಯಾದ್ದಲ್ಲವೆಂದು ಅಂಥಾದ್ದಕ್ಕೆ ಕೇಂದ್ರ ಸರಕಾರವು ಗಮನ ಕೊಡಲಾರದೆಂದೂ ಸ್ಪಷ್ಟಪಡಿಸಿರುವರು.

ಬಳ್ಳಾರಿ ಜಿಲ್ಲೆಯ ಮೂರು ತಾಲೂಕುಗಳನ್ನು ಆಂಧ್ರಕ್ಕೆ ಸೇರಿಸಬೇಕೋ ಯಾ ಮೈಸೂರಿಗೆ ಬಿಡಬೇಕೋ ಎಂಬ ವಿಚಾರದಲ್ಲಿ ಬಹು ತೀವ್ರವಾದ ಚಳವಳ ನಡೆಯುತ್ತಿದೆ. ಅಲ್ಲಿಯ ಆಂಧ್ರರಿಗೂ, ಕನ್ನಡಿಗರಿಗೂ ವಿಶೇಷ ಮನಸ್ತಾಪದ ಘಟನೆಗಳು ನಡೆದಿವೆ. ಈ ಪ್ರಾಂತಗಳ ಭವಿಷ್ಯವನ್ನು ನಿರ್ಧರಿಸಲು ಕೇಂದ್ರ ಸರಕಾರದವರು ನಿಯೋಜಿಸಿರುವ ಹೈದರಾಬಾದಿನ ಮುಖ್ಯ ನ್ಯಾಯಾಧೀಶ ಮಿಶ್ರಾರವರ ನೇಮಕವು ಕನ್ನಡಿಗರಿಗೆ ತೃಪ್ತಿಕರವಾಗಿಲ್ಲ.

ಕರ್ನಾಟಕ ಏಕೀಕರಣಕ್ಕಾಗಿ ಕೊಡಗಿನ ಹೊರಗೆ ಅಲ್ಲಲ್ಲಿ ಮಾಡಲ್ಪಡುತ್ತಿರುವ ತೀರ್ಮಾನಗಳಲ್ಲೂ ಮತ್ತು ಮನವಿ ಪತ್ರಗಳಲ್ಲೂ ಕೊಡಗನ್ನೂ ಸೇರಿಸಿಕೊಳ್ಳಬೇಕೆಂದು ಸೂಚಿಸಲಾಗುತ್ತಿದೆ. ಆದರೆ ಕೊಡಗಿನಲ್ಲಿ ಈ ವಿಚಾರವೇನೂ ಯಾರೂ ಮಾತೆತ್ತಿದಂತೆ ಕಾಣುವದಿಲ್ಲ. ಕಳೆದ ಚುನಾವಣೆಗೆ ಮುಂಚಿತವಾಗಿ ಇಲ್ಲಿ ಕೊಡಗಿನ ಭವಿಷ್ಯದ ವಿಚಾರವಾಗಿ ಭಿನ್ನಾಭಿಪ್ರಾಯಗಳಿದ್ದುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ ಇತ್ತೀಚೆಗೆ ಚುನಾವಣೆಯ ನಂತರ ಕೊಡಗಿಗೆ ಪ್ರತ್ಯೇಕ ಜವಾಬ್ದಾರಿ ಸರಕಾರ ದೊರೆತು ಅದನ್ನು ಅನುಭವಿಸುತ್ತಿರುವ ಈ ಸಮಯದಲ್ಲಿ ಭವಿಷ್ಯದ ವಿಚಾರ ಕೊಡಗಿನೊಳಗೆ ಎಲ್ಲಿಯೂ ಚರ್ಚಿಸಲ್ಪಡುವದು ಕಾಣುವದಿಲ್ಲ. ಆದರೆ ಹೊರಗಿನವರು ಮಾತ್ರ ಕೊಡಗು ಕರ್ನಾಟಕದ ಒಂದು ಭಾಗವಾಗಬೇಕೆಂದು ಯಾರ ಅಭಿಪ್ರಾಯದ ಮೇಲೆ ಹೇಳುತ್ತಿರುವರೋ ತಿಳಿಯದು.

ಬೆಳಗಾವಿಯಲ್ಲಿ ಪಂಡಿತ ನೆಹರೂರವರು ಭಾಷಣ ಮಾಡುತ್ತಿದ್ದ ಕಾಲದಲ್ಲಿ "ನೀವು ಹಿಂತಿರುಗಿ ಹೋಗಿರಿ" ಎಂದು ವೃತ್ತಪತ್ರಿಕೆಗಳನ್ನು ಕೂಡ ಕಂಡುವಷ್ಟು ತೀವ್ರ ಭಾವನೆಯು ಅಲ್ಲಿಯವರಲ್ಲಿ ಹುಟ್ಟಿತ್ತು. ಪಂಡಿತ ನೆಹರೂರವರ ವಿವರಣೆಯನ್ನು ಕೇಳಿದ ನಂತರ ಈ ವಿಚಾರದಲ್ಲಿ ಇಂಡಿಯಾ ಸರಕಾರವನ್ನು ಬಲಾತ್ಕರಿಸುವದು ಹಿಂದೂದೇಶದ ಒಗ್ಗಟ್ಟಿಗೂ ಮತ್ತು ಕೇಂದ್ರ ಸರಕಾರದ ಶಕ್ತಿಗೂ ಹಿಂಬಲ ನಿಶ್ಚಿಂತಾಗಲಿಕ್ಕಿಲ್ಲ. ದೀರ್ಘಾಲೋಚನೆಯಿಂದ ಸಾವಕಾಶವಾಗಿ ವರ್ತಿಸುವದು ಯುಕ್ತವಾಗಿದೆ. — ಬರೆದು ಬಂದುದು.

ಹುಚ್ಚರ ಹಟ್ಟಿ

ಲೊಟ್ಟೆ

ಬಾಳಿನಲಿ ಸಭ್ಯತೆಯು ಬೇಕೆಂದರೇನಂತೆ
ಮಡ್ಡಿರಲಿ ಸುಖದಿಂದ
ಬಾಳಬಲ್ಲೆ !

ಹೆಣ್ಣು ದೊರೆಯದು ನಿನಗೆ ಕಣ್ಣು ನೋಡದು ನಿನ್ನ
ಆಡಂಬರದ ಬಲ್ಮೆ
ತೋರದು ಬಿಡಲು !

ನೀತಿ ಧರ್ಮದ ಮಾತು ತುಂಬಲಾಪುದೆ ಹೊಟ್ಟೆ?
ಹೇಳೀಗ ಬಗೆಬಗೆಯ
ಪೊಳ್ಳು ಲೊಟ್ಟೆ !

ಸಭ್ಯತೆಯ ಕಳೆಗೊತ್ತಿ "ದೊಡ್ಡವರ" ಬಳಿ ಮೆರೆದು
ಅತ್ತಿತ್ತ ಓಡಾಡು
ಅದುವೆ ವಿದ್ಯೆ !

ಅದು ಬಿಟ್ಟು ನೀತಿ ಧರ್ಮದ ಮಾತು ಬೇಕಿಲ್ಲ ಮರ್ಕಟನೆ
ಹೇಳುವೂದೆ ಇತ್ತ ಬಾ
ನನ್ನ ಬಂಧೂ

-- ಹುಚ್ಚ.

ಪ್ರಕಟಣೆ.

ಶ್ರೀ ರಾಮಕೃಷ್ಣ ವಿದ್ಯಾಶಾಲಾ

(ಬಾಲಕರ ನೂತನ ರೆಸಿಡೆನ್ಸಿಯಲ್ ಮಿಡ್ಲ್ ಮತ್ತು ಹೈಸ್ಕೂಲು)

ಪ್ರಾಚೀನ ಗುರುಕುಲದ ಅಮೂಲ್ಯ ಲಕ್ಷಣಗಳನ್ನು ಆಧುನಿಕ ವಿದ್ಯಾಭ್ಯಾಸ ಕ್ರಮದೊಡನೆ ಸಮನ್ವಯಗೊಳಿಸುವ ನೂತನ ಪ್ರಯತ್ನ.

ಮೈಸೂರಿನ ಶ್ರೀ ರಾಮಕೃಷ್ಣಾಶ್ರಮವು ತನ್ನ ಭವ್ಯ ಭವನದಲ್ಲಿ ೧೯೫೩ನೇ ಜೂನ್ ೧ನೇ ತಾರೀಖು ಶಾಲೆಯನ್ನು ಪ್ರಾರಂಭಿಸುತ್ತದೆ.

ದಕ್ಷ ರೀತಿಯ ಶಿಕ್ಷಣ, ವಿಶೇಷ ಮೇಲ್ವಿಚಾರಣೆ ಮತ್ತು ವೈಯಕ್ತಿಕ ಗಮನ ಇವು ಈ ಶಾಲೆಯ ವಿಶಿಷ್ಟತೆ.

ವಿವರಗಳನ್ನೊಳಗೊಂಡ ಪ್ರಕಟಣೆಯ ಪುಸ್ತಕವನ್ನು ಅಧ್ಯಕ್ಷರು, ಶ್ರೀರಾಮಕೃಷ್ಣ ವಿದ್ಯಾಶಾಲಾ, ವಾಣೀವಿಲಾಸಮೊಹಲ್ಲಾ ಪೋಸ್ಟ್, ಮೈಸೂರು. ಇವರಿಂದ ಒಂದು ರೂಪಾಯಿ ಕೊಟ್ಟು ಪಡೆಯಬಹುದು.

ಪಾಕಿಸ್ತಾನವು ತನ್ನ ಭಾರತದ ನೀತಿ ಬದಲಾಯಿಸಿದೆ

ಈಗ ಕೆಲವು ಸಮಯದಿಂದ ಪಾಕಿಸ್ತಾನದ ಆಡಳಿತ ನಡೆಸುವವರು ಭಾರತದ ಬಗ್ಗೆ ತಮ್ಮ ನೀತಿಯನ್ನು ಬದಲಾಯಿಸಿದ್ದು ಕಂಡುಬರುತ್ತದೆಂದು ಕೇಂದ್ರ ಸರಕಾರದ ಪುನರ್ನಿವೇಶನ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನರು ಸಾರ್ವಜನಿಕ ಸಭೆಯಲ್ಲಿ ಮಾತಾಡುತ್ತಾ ಹೇಳಿದರು.

ಪಾಕಿಸ್ತಾನದ ಪ್ರಧಾನಮಂತ್ರಿ ಶ್ರೀ ಮಹಮ್ಮದ ಅಲಿಯವರು ಇತ್ತೀಚೆಗೆ ನಮ್ಮ ಎಲ್ಲಾ ಸಮಸ್ಯೆಗಳನ್ನೂ ಪರಸ್ಪರರ ಸಮಾಧಾನಕರವಾಗಿ ಬಿಡಿಸಿಕೊಳ್ಳೋಣ ಮತ್ತು ಸಂಯುಕ್ತ ಸಂರಕ್ಷಣ ಕಾರ್ಯ ನಡೆಸೋಣ ಎಂದು ಸೂಚಿಸಿರುವದೇ ಈ ನೀತಿಯ ಬದಲಾವಣೆಯನ್ನು ತೋರಿಸುತ್ತದೆ. ಪಾಕಿಸ್ತಾನವು ಇದೇ ನೀತಿಯನ್ನು ಪಾಲಿಸಿದರೆ, ವಿಭಜನೆಯಿಂದಾಗಿರುವ ಎಲ್ಲಾ ಭಿನ್ನಾಭಿಪ್ರಾಯವೂ ದೂರವಾಗುವದೆಂದೂ ಹೇಳಿದರು.

ನಿಜಾಮರ ಮೇಲೆ ಜಾತೀಯತೆ ಆರೋಪ!

ನೌಕರಿಗಳಿಗೆ ಹಿಂದುಗಳನ್ನು ಸೇರಿಸಿಕೊಳ್ಳಬಾರದೆಂದು ನಿಜಾಮರು ಹೊರಡಿಸಿದ್ದರೆಂದು ಹೇಳಲಾಗುವ ಒಂದು ಪ್ರಕಟಣೆಯ ವಿಚಾರವನ್ನು ರಾಜ್ಯ ಸರಕಾರವು ಗಂಭೀರವಾಗಿ ನೋಡಬೇಕು ಎಂದು ಹೈದ್ರಬಾದ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷರೂ ವಿಧಾನ ಸಭಾ ಸದಸ್ಯರೂ ಆದ ಪಂಡಿತ ನರೇಂದ್ರಜಿಯವರು ಒಂದು ಹೇಳಿಕೆಯಿತ್ತಿದ್ದಾರೆ. ನಿಜಾಮರ ಪ್ರಕಟಣೆಯ ಫೋಟೋ ಪ್ರತಿಯೊಂದನ್ನು ಸ್ಥಳೀಯ ಉರ್ದು ಪತ್ರಿಕೆಯೊಂದು ಪ್ರಕಟಿಸಿದೆ. ನಿಜಾಮರ ಪ್ರಕಟಣೆಯು ಕಾಂಗ್ರೆಸ್ ಸರಕಾರದ ನಿರ್ಪಕ್ಷಪಾತ ನೀತಿಗೆ ಒಂದು ಆಹ್ವಾನ.

॥ ಕ್ರೀಡಾರಂಗ ॥

ಫ್ರೋರ್ಟ್ಸ್‌ಕ್ಲಬ್ ಬೇಡ್‌ಮಿಂಟನ್

ಮಡಿಕೇರಿ ಫ್ರೋರ್ಟ್ಸ್‌ಕ್ಲಬ್ಬಿನ ಆಶ್ರಯದಲ್ಲಿ ತಾ. ೨೫ರಿಂದ ಒಂದನೇ ತಾರೀಖಿನ ವರೆಗೆ ಬೇಡ್‌ಮಿಂಟನ್ ಐವರ, ಇಬ್ಬರ ಮಿಕ್ಸೆಡ್ ಡಬಲ್ಸ್ ಮತ್ತು ಸಿಂಗಲ್ಸ್ ಆಟಗಳೂ, ಟೇಬಲ್ ಟೆನ್ನಿಸ್ ಆಟಗಳೂ ನಡೆದವು. ಸಕಲೇಶಪುರದ ಚಾಮರಾಜನಗರ ಟೀಮ್, ಹುಣಸೂರಿನ ಸತ್ಯನಾರಾಯಣ ಟೀಮ್, ಫ್ರೋರ್ಟ್ಸ್‌ಕ್ಲಬ್ಬಿನ ಟೀಮುಗಳು, ಮಡಿಕೇರಿ ಕ್ರಿಸೆಂಟ್ ಟೀಮು, ಮೂರ್ನಾಡು ಮತ್ತು ನಾಪೋಕ್ಲಿನ ಟೀಮುಗಳು ಭಾಗವಹಿಸಿದ್ದವು.

ಐವರ ಆಟದ ಸ್ಪರ್ಧೆಯಲ್ಲಿ ಕಡೇ ಆಟವು ಮಡಿಕೇರಿ ಫ್ರೋರ್ಟ್ಸ್ ಎ ಟೀಮಿಗೂ, ಚಾಮರಾಜನಗರ ಟೀಮಿಗೂ ನಡೆದು ಮಡಿಕೇರಿ ಟೀಮು ವಿಜಯಿಯಾಯಿತು. ಮಡಿಕೇರಿ ಟೀಮಿನಲ್ಲಿ ಶ್ರೀಗಳಾದ ಎಂ. ರಾಮರಾವ್, ವಿಜಯರಾಘವನ್, ಕೋದಾಂಡ ಮಂದಣ್ಣ, ಯು. ಅಚ್ಚಣ ಮತ್ತು ಕೆ. ವೆಂಕಟೇಶ ಇವರೂ ಚಾಮರಾಜ ಟೀಮಿನಲ್ಲಿ ಶ್ರೀಗಳಾದ ಜಿ. ಮೂದಯ್ಯ (ಮೈಸೂರು ಸ್ಟೇಟ್ ಛೇಂಪಿಯನ್) ಬಿ. ಆರ್. ಸುಂದರರಾಜ್, ಗೋಪಾಲನ್ ಮೊದಲಾದವರಿದ್ದರು.

ಇಬ್ಬರ ಆಟದಲ್ಲಿ ಫ್ರೋರ್ಟ್ಸ್‌ಕ್ಲಬ್ಬಿನ ಎ ಮತ್ತು ಬಿ ಟೀಮುಗಳು ಇತರ ಎಲ್ಲಾ ಟೀಮುಗಳನ್ನು ಸೋಲಿಸಿ ಕಡೇ ಆಟಕ್ಕೆ ನಿಂತವು. ಎ. ಟೀಮಿನವರಾದ ರಾಮರಾವ್ ಮತ್ತು ಸಿ. ಎಸ್. ಮಂದಣ್ಣನವರು 'ಬಿ' ಟೀಮಿನ ವಿಜಯರಾಘವನ್ ಮತ್ತು ವೆಂಕಟೇಶ ಇವರನ್ನು ಸೋಲಿಸಿದರು.

ಸಮ್ಮಿಶ್ರ ಡಬಲ್ಸ್‌ನಲ್ಲಿ ಕಡೇ ಆಟಕ್ಕೆ ನಿಂತ ಕುಮಾರಿ ಬಲ್ಲಚಂಡ ಮುತ್ತಮ್ಮ ಮತ್ತು ಕೊದಾಂಡ ಮಂದಣ್ಣನವರು ಕುಮಾರಿ ಕೊಡಂದೆರ ಪಾರ್ವತಿ ಮತ್ತು ವಿಜಯರಾಘವ ಇವರನ್ನು ಸೋಲಿಸಿದರು.

ಸಿಂಗಲ್ಸ್ ಆಟದಲ್ಲಿ ಎಲ್ಲರನ್ನೂ ಸೋಲಿಸಿ ಚಾಮರಾಜನಗರದ ಶ್ರೀ ಜಿ. ಮೂದಯ್ಯ ಮತ್ತು ಹಾಸನದ ಶ್ರೀ ಬಿ. ಆರ್. ಸುಂದರರಾಜ್ ಇವರು ಕಡೇ ಆಟಕ್ಕೆ ನಿಂತರು. ಮೈಸೂರು ಸ್ಟೇಟ್ ಛೇಂಪಿಯನ್ ಜಿ. ಮೂದಯ್ಯನವರು ಕಡೇ ಆಟದಲ್ಲಿ ಗೆದ್ದರು.

ಟೇಬಲ್ ಟೆನ್ನಿಸ್ ಆಟದಲ್ಲಿ ಸಕಲೇಶಪುರದ ಆರು ಟೀಮುಗಳೂ ಸ್ಥಳಿಯ ಹನ್ನೊಂದು ಟೀಮುಗಳೂ ಭಾಗವಹಿಸಿದ್ದವು. ಸಕಲೇಶಪುರದ ಕಾಸ್ಮೋಪಾಲಿಟನ್ ಕ್ಲಬ್ಬಿನ ಟೀಮುಗಳು ಎಲ್ಲರನ್ನೂ ಸೋಲಿಸಿ ಕಪ್ಪುಗಳನ್ನು ಗೆದ್ದರು.

ಕೊಡಗಿನ ಮುಖ್ಯಮಂತ್ರಿಯೂದ ಶ್ರೀ ಸಿ. ಎಂ. ಪೂಣಚ್ಚನವರು ಗೆದ್ದವರಿಗೆ ಬಹುಮಾನಗಳನ್ನು ಕೊಡುತ್ತಾ ಆಟವು ಬಹು ಉತ್ತಮ ಮಟ್ಟದ್ದಿತ್ತೆಂದೂ ಪ್ರತಿಯೊಬ್ಬರಲ್ಲಿಯೂ ಉತ್ತಮ ಗುಣಗಳು ಬೆಳೆಯಬೇಕಾದರೆ ಅಂಥಾ ಆಟಗಳು ಸಹಕಾರಿಯೆಂದೂ, ಆಟಗಳಲ್ಲಿ ಮಾತ್ರವಲ್ಲ ಜೀವನದಲ್ಲೇ 'ಸ್ಪೋರ್ಟ್ಸ್‌ಮೆನ್ ಸ್ಪಿರಿಟ್' ಇಲ್ಲದಿದ್ದರೆ ಜೀವನವು ನಿಸ್ಸಾರವಾಗುವದೆಂದೂ ಹೇಳಿದರು. ಕೊಡಗಿನ ಚೀಫ್ ಕಮಿಷನರೂ, ಗೃಹಮಂತ್ರಿಯವರೂ ಹಾಜರಿದ್ದರು.

ಕ್ರಿಕೆಟ್

ಕೋದಾಂಡ ದೇವಯ್ಯ ಮೆಮೋರಿಯಲ್ ಕ್ರಿಕೆಟ್ ಶೀಲ್ಡಿನ ಪಂದ್ಯಾಟವು ತಾ. ೨೯, ೩೦, ೧ ರಲ್ಲಿ ಪೋನ್ಸ್ ಕಾಂಪೌಂಡ್ ಮೈದಾನದಲ್ಲಿ, ಕಾಲೇಜ್ ಟೀಮಿಗೂ ವಾಂಡರ್ಸ್ ಟೀಮಿಗೂ ನಡೆದು ವಾಂಡರ್ಸ್ ಟೀಮಿನವರು ಜಯಶೀಲರಾದರು. ಕಾಲೇಜ್ ಟೀಮು ಪ್ರಥಮ ಇನ್ನಿಂಗ್ಸಿನಲ್ಲಿ ೧೩೫ ಓಟಗಳನ್ನೂ ದ್ವಿತೀಯದರಲ್ಲಿ ೧೮೨ ಓಟಗಳನ್ನೂ ಮಾಡಿದರು. ಕಾಲೇಜ್ ಟೀಮಿನ ಶ್ರೀ ಎ. ಡಬ್ಲ್ಯು. ಆಬ್ರಹಮರು ಎರಡನೇ ಇನ್ನಿಂಗ್ಸಿನಲ್ಲಿ ೧೦೪ ರನ್ನುಗಳನ್ನು ಗಳಿಸಿ ಔಟಾಗದೆ ಉಳಿದರು. ವಾಂಡರ್ಸ್ ಟೀಮಿನವರು ಪ್ರಥಮ ಇನ್ನಿಂಗ್ಸಿನಲ್ಲಿ ೨೩೧ ಓಟಗಳನ್ನೂ ದ್ವಿತೀಯದ್ದರಲ್ಲಿ ೨೪೯ ಓಟಗಳನ್ನೂ ಮಾಡಿದರು. ವಾಂಡರ್ಸ್ ಟೀಮಿನ ಶ್ರೀ ಕೋದಾಂಡ ಬಿ. ದೇವಯ್ಯನವರು ೧೦೦ ಓಟಗಳನ್ನೂ ಕೊರವಂಡ ತಿಮ್ಮಯ್ಯನವರು ೭೭ ಓಟಗಳನ್ನೂ ಗಳಿಸಿದರು. ಈ ಶೀಲ್ಡಿನ ಕಡೇ ಆಟವು ತಾ. ೧೦, ೧೧ ಮತ್ತು ೧೨ರಲ್ಲಿ ವಾಂಡರ್ಸ್ ಟೀಮಿಗೂ, ಪ್ಲಾಂಟರ್ಸ್ ಟೀಮಿಗೂ ನಡೆಯಲಿದೆ.

ಶ್ರೀಮಂಗಲ: ಬೇಡ್‌ಮಿಂಟನ್

ಶ್ರೀಮಂಗಲ ಜೈಹಿಂದ್ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಬ್ಯಾಡ್‌ಮಿಂಟನ್ ಪಂದ್ಯಾಟದ ಫೈನಲ್ ಆಟದ ಸ್ಪರ್ಧೆಯು ತಾ. ೩೦ರಲ್ಲಿ ನಡೆಯಿತು. ಐವರ ಕಡೇ ಆಟವು ಹುದಿಕೇರಿಆಟಗಾರರಿಗೂ ಮತ್ತು ಟಿ. ಶೆಟ್ಟಿಗೇರಿ ಆಟಗಾರರಿಗೂ ನಡೆದು ಹುದಿಕೇರಿಯವರು ಜಯಶೀಲರಾದರು. ಇಬ್ಬರ ಆಟದಲ್ಲಿ 'ರಿಫಾರ್ಮರ್ಸ್' ಟೀಮಿಗೂ ಶ್ರೀಮಂಗಲ ಜೈಹಿಂದ್ ಟೀಮಿಗೂ ಆಟ ನಡೆದು ರಿಫಾರ್ಮರ್ಸ್ ಟೀಮಿನವರು ಜಯಶೀಲರಾದರು. ಒಬ್ಬರ (ಸಿಂಗಲ್ಸ್) ಆಟವು ಹಾತೂರಿನ ಶ್ರೀ ಎಂ. ಎಸ್. ವೆಂಕಟರಮಣರಿಗೂ ಮತ್ತು ರಿಫಾರ್ಮರ್ಸ್ ಕ್ಲಬ್ಬಿನ ಶ್ರೀ ಬಿ. ಎಸ್. ಟಾಟುರವರಿಗೂ ನಡೆದು ಶ್ರೀ ಎಂ. ಎಸ್. ವೆಂಕಟರಮಣರವರು ಜಯಶೀಲರಾದರು. ಡಾ. ಕೆ. ಪಿ. ಬೋಪಣ್ಣನವರ ಅಧ್ಯಕ್ಷತೆಯಲ್ಲಿ ಜಯಶೀಲರಾದವರಿಗೆ ಬೆಳ್ಳಿಯ ಬಟ್ಟಲುಗಳನ್ನೂ ಮತ್ತು ಮೆಡ್ಲುಗಳನ್ನೂ ರನ್ನರ್ಸ್‌ಗಳಿಗೂ ಮೆಡ್ಲುಗಳನ್ನೂ ಕೊಡಲಾಯಿತು.

ಓದುಗರ ಓಲೆ.

ಮುನ್ಸಿಪಾಲಿಟಿ.

ಮಡಿಕೇರಿ ಮುನ್ಸಿಪಾಲಿಟಿಯ ಆಡಳಿತ ಹೇಗಿದ್ದರೂ ಮುನ್ಸಿಪಾಲಿಟಿಗೆ ಹಣ ತುಂಬ ಬರುತ್ತಿರುವದರಿಂದ ಕೆಲಸ ಅಲ್ಲಲ್ಲಿ ನಡೆಯುತ್ತಿದೆ. ಆದರೆ ಆಗಬೇಕಿರುವಷ್ಟು ದಕ್ಷತೆ, ಮುಂದಾಲೋಚನೆಯಿಂದ ಕೆಲಸ ನಡೆಯುತ್ತಿಲ್ಲ. ಮಡಿಕೇರಿ ಪೇಟೆಯ ಹಲವು ಭಾಗಗಳಲ್ಲಿ ಕೊಳಕು ಹುಳುಕು ಇದ್ದೇ ಇದೆ. ಆಸ್ಪತ್ರೆಯ ಕೆಳಗೆ ಮುಂದೇಪಂದ ಮನೆಯ ಹತ್ತಿರದ ಡ್ರೈನ್ ಚೆನ್ನಾಗಿಲ್ಲ. ವಾಸನೆ ಯಾವಾಗಲೂ ಬಡಿಯುತ್ತಿರುತ್ತದೆ. ಬಸ್ಸ್ ಸ್ಟೇಂಡ್ ಹತ್ತಿರದ ತೋಡಿನಲ್ಲಿ ಕಾವೇರಿ ಮಹಲ್ ಪಕ್ಕದಲ್ಲಿಯ ಉಡುಪಿ ಬ್ರಾಹ್ಮಣರ ಹೋಟೆಲ್ ನಿಂದ ಕೆಳಗೆ ತೋಡಿನ [illegible] ವಾಸನೆ ತಡೆಯಲಾಗುವದಿಲ್ಲ. ಪೋಲೀಸ್ ಲೈನಿನ ಕಕ್ಕೂಸ್ ನೀರು ಪಟ್ಟಮಾಡ ಮುತ್ತಣ್ಣನವರ ಮನೆಯ ಪಕ್ಕಕ್ಕಾಗಿ ಹರಿದು ದುರ್ವಾಸನೆ ಎಬ್ಬಿಸಿದೆ. ಟೋಲ್‌ಗೇಟಿನ ಬಳಿ ಹೋಟೆಲಿನ ಡ್ರೈನ್ ಆರೋಗ್ಯಕರವಾಗಿಲ್ಲ. ಮತ್ತೆ ಹೆಲ್ತ್ ಆಫೀಸರ ಮನೆಯ ಕೆಳಗಿನ ರಸ್ತೆಯು ಚರಂಡಿ ಕೊಳಕುಕೊಂಪೆಯಾಗಿದೆ. ಇಂಥಾ ನೂರಾರು ನಿದರ್ಶನಗಳನ್ನು ಕೊಡಬಹುದು. ಪುರಸಭೆಯವರು ಈ ವಿಚಾರಗಳಲ್ಲಿ ನಿಗವಹಿಸಬೇಕು. ರಸ್ತೆಗೆ ಕಲ್ಲಿನ ಮೆಟ್ಟಲು ಕಟ್ಟಿಸಿದರಾಗಲೀ, ರಸ್ತೆಗೆ ತಾರು ಹಾಕಿದರಾಗಲೀ ನಾಲದು. ಅಲ್ಲಲ್ಲಿ ಕಾಣಬರುತ್ತಿರುವ ಕೊಳಕುಕೊಚ್ಚೆಗಳಿಂದ ಪಟ್ಟಣಿಗರ ಆರೋಗ್ಯ ಕೆಡದಂತೆ ನೋಡಬೇಕಾಗಿದೆ. ಪುರಸಭೆಯವರು ಇತ್ತ ಗಮನಿಸುವರೇ ?

ಪಟ್ಟಣಿಗ.

ಮಡಿಕೇರಿ ಮುನಿಸಿಪಾಲಿಟಿಯ ಅವಸ್ಥೆ.

ಮಡಿಕೇರಿ ನಗರ ಸಭೆಯು ಅಧಿಕಾರದಲ್ಲಿರುವ ಕಾಂಗ್ರೆಸ್ಸಿಗರ ಒಂದು ಕೈಗೊಂಬೆಯಾಗಿದೆ. ಅಧಿಕಾರದಲ್ಲಿರುವ ಕಾಂಗ್ರೆಸ್ಸಿಗರನ್ನು ಮನ ಒಲಿಸುವುದೇ ಕೆಲಸವಾಗಿದೆ. ಈ ಧೋರಣೆಯ ಪರಿಣಾಮವಾಗಿ ಈ ಕಾಂಗ್ರೆಸ್ ವೇಶಧಾರಿಗಳನ್ನು ಹೇಳುವವರು ಕೇಳುವವರೇ ಇಲ್ಲದಾಗಿದೆ. ಮೊನ್ನೆ ಮೊನ್ನೆಯಾಗಿ ನಟ ಶೇಷ್ಠರಾದ ಯಸ್. ಎಸ್. ಕೃಷ್ಣನ್‌ರವರಿಗೆ ಅಪಮಾನ ಮಾಡಿ ನಗರ ಸಭೆಯು ದೇಶದ ಎಲ್ಲಾ ಜನರಿಂದ 'ಛೀ' ಎನ್ನಿಸಿಕೊಂಡದ್ದಾಯಿತು. ಈಗ ಈ ನಗರ ಸಭೆಯ ದುರಾಡಳಿತಕ್ಕೆ ಹಲವಾರು ನಿದರ್ಶನಗಳನ್ನು ಕೊಡಬಹುದು. ಮುನಿಸಿಪಾಲಿಟಿ ಆಫೀಸಿನಲ್ಲೊಂದು ಕೆಲಸ ಖಾಲಿ ಬಿತ್ತು. ಇದಕ್ಕೆ ಭರ್ತಿಮಾಡಲು ಒಂದೋ ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜಿನ ಮೂಲಕ ಮಾಡಬೇಕು. ಇಲ್ಲವೇ ದೇಶದ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸಿ ಅರಿಷಬೇಕು. ಇದು ಯಾವುದೂ ಇಲ್ಲದೆ ಸದಸ್ಯರ ಪೈಕಿ ಒಬ್ಬರ ಮಗಳಿಗೆ ಈ ಖಾಲಿ ಸ್ಥಳವನ್ನು ಶಿಫಾರಸು ಮಾಡಲಾಗಿದೆ. ಕೆಲಸದಲ್ಲಿದ್ದವರು ರಜಕ್ಕಾಗಿ ಅರ್ಜಿ ಬರೆಯುವ ಮುಂಚಿತವಾಗಿ ಈ ಖಾಲಿ ಬೀಳುವ ಕೆಲಸಕ್ಕೆ ನಗರ ಸಭೆ ಸದಸ್ಯರ ಮಗಳ ಅರ್ಜಿ ಬಂದಿತ್ತಂತೆ. ಎಷ್ಟೋ ಬಡ ಜನರ ಮಕ್ಕಳು ಹೆಚ್ಚಿನ ವಿದ್ಯಾ ವ್ಯಾಸಂಗ ಮಾಡಿ ಕೆಲಸವಿಲ್ಲದೆ ಅಲೆಯುತ್ತಿದ್ದಾರೆ. ಆದರೆ ಇಲ್ಲಿ ಅಧಿಕಾರದಲ್ಲಿರುವವರು ತಮ್ಮ ತಮ್ಮೊಳಗೆ ಇಂಥಾ ಖಾಲಿಯನ್ನು ಹಂಚಿಕೊಳ್ಳುವವರಿದ್ದಾರೆ. ನಗರ ಸಭೆಯ ಮೂರು ಮೀಟಿಂಗುಗಳಿಗೆ ಬಿಡದೆ ಅನುಕ್ರಮವಾಗಿ ಗೈರುಹಾಜರಾದರೆ ಅಂಥಾವರು ತಮ್ಮ ಸದಸ್ಯತನವನ್ನು, ಕಳೆದುಕೊಳ್ಳುತ್ತಾರೆ. ಮತ್ತು ಅದಕ್ಕೆ ಉಪ ಚುನಾವಣೆ ಆಗಬೇಕಾಗಿದೆ. ಆದರೆ ಮಡಿಕೇರಿ ನಗರ ಸಭೆಯ ಕಾಂಗ್ರೆಸ್ ಆಡಳಿತದಲ್ಲಿ ಎಷ್ಟೋ ಮೀಟಿಂಗುಗಳಿಗೆ ಗೈರುಹಾಜರಾದರೂ ಅತನು ಸದಸ್ಯನಾಗಿಯೇ ಇರುತ್ತಾನೆ. ಮಾತ್ರವಲ್ಲ ಒಬ್ಬ ಸದಸ್ಯರಾಜಿನಾಮೆ ಕೊಟ್ಟುವರ್ಷವಾಗುತ್ತಾ ಬಂದರೂ ಇನ್ನೂ ಉಪ ಚುನಾವಣೆಯಾಗಲಿಲ್ಲ. ಇದು ಜಾರಿಯಲ್ಲಿರುವ ಪ್ರಜಾಪ್ರಭುತ್ವ! ಈ ಕಾಂಗ್ರೆಸಿಗರು ತಮ್ಮ ಪಾರ್ಟಿ ಕೆಲಸಕ್ಕೆ ಪುರ ಸಭೆಯ ನೌಕರರನ್ನು ಉಪಯೋಗಿಸುತ್ತಿರುವರೆಂಬ ಆರೋಪವಿದೆ. ಇವನ್ನೆಲ್ಲಾ ಪರಿಶೀಲಿಸುವವರು ಯಾರೂ ಇಲ್ಲವೇ ? ಜನತೆಯಾದರೂ ಇವನ್ನು ತಿಳಿಯಬೇಕು. ಕಾಂಗ್ರೆಸ್ಸಿಗರಾಗಿ ಏನು ಮಾಡಿದರೂ ಅದು ಅನೀತಿ, ಅಧರ್ಮವಾಗುವುದಿಲ್ಲವೆಂಬುದನ್ನು ಮಡಿಕೇರಿ ಪುರ ಸಭೆಯ ಕಾರ್ಯಕಲಾಪಗಳು ಪ್ರತ್ಯಕ್ಷ ಜನತೆಯ ಮುಂದಿಡುತ್ತಿದೆ. ಇದೇ ಅಲ್ಲ; ಇನ್ನೂ ಅನೇಕ ಹೊಸ ಹೊಸ ಪ್ರತ್ಯಕ್ಷ ಪ್ರಮಾಣಗಳು ಬಯಲಿಗೆ ಬರಲಿರುವವು.

'ಒಬ್ಬ ಮತದಾರ'

PROPERTY FOR SALE.

A property of the following discription situated near Ammathi town touching Ammathi-Murnad road, is for sale

(1) Wet land 9·20 acres, (2) Dry land 24·45 acres Of the dry land obout 9 acres consists young orange plants yeilding since three years. (3) A tiled big house with water facility. (4) Two thatched houses for tenants. (5) One cattle shed, (6) One out-house, (7) 18 Heads of cattle.

Intending buyers may please write to the below mentioned address or contact personally.

PONNAPPA.
3-3 C/o. Post master, AMMATHI, Coorg.

** ಬಣ್ಣಗಳ ಪ್ರಭಾವ **

ಡಾ. ಎಂ. ಗೋಪಾಲಕೃಷ್ಣರಾಯರು

['ಕಲಿಯುಗ'ದ ಸಂಪಾದಕರು, 'ನವಯುಗ'ದ ವಿಶೇಷಾಂಕದಲ್ಲಿ]

ಒಳಗಿನ ಗುಣವು ಹೊರಗಿನ ಬಣ್ಣದ ಮೂಲ. ಹೊರಗಿನ ಬಣ್ಣಗಳ ಪ್ರಭಾವವು ಒಳಗಿನ ಗುಣಗಳ ಪರಿವರ್ತನವನ್ನು ಮಾಡಬಲ್ಲದು. ವರ್ಣವು ಗುಣ ನಿರ್ದೇಶಕವೂ ಗುಣೋತ್ಪಾದಕವೂ ಆಗಿದೆ. ಆದರಿಂದಲೇ ಪರಮಾತ್ಮನು ಗೀತೆಯಲ್ಲಿ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ' ಎಂದು ಹೇಳಿರಬಹುದೇನೋ!

ಬಣ್ಣಗಳೆಂದರೆ ಹೊರಗಣ್ಣಿಗೆ ಕಾಣುವ ಬರಿ ಬಿಳಿ, ಕೆಂಪು, ಕಪ್ಪುಗಳಲ್ಲ. ಬಣ್ಣವು ಚರ್ಮಕ್ಕಿಂತ ಆಳವಾಗಿದೆ. ಆದರಿಂದಲೇ ಚರ್ಮದ ಬಣ್ಣಕ್ಕಿಂತ ಕರ್ಮದ ಬಣ್ಣವನ್ನೇ ಪರಮಾತ್ಮನು ವರ್ಣವ್ಯವಸ್ಥೆಯ ಸಾಧನವಾಗಿ ಮಾಡಿಕೊಂಡಿರಬೇಕು. ಮೈಗೊಂದು ಬಣ್ಣವಿರುವಂತೆ ಮನಕ್ಕೂ ಒಂದು ಬಣ್ಣವಿದೆ. ಮೈಬಣ್ಣಕ್ಕಿಂತ ಮನದ ಬಣ್ಣವೆಷ್ಟೆಂಬುವನ್ನು ತೂಗಿಯೇ ಲೋಕವು ಮೈಬಣ್ಣಕ್ಕೆ ಮಹತ್ವ ಕೊಡುತ್ತದೆ.

ಬಿಳಿ ವರ್ಣವು ಬ್ರಾಹ್ಮಣನದಾದರೂ ಬಿಳಿಯ ಬ್ರಾಹ್ಮಣರಲ್ಲಿ ಅನೇಕರು ಅಮಾವಾಸ್ಯೆಯ ಮನೋವರ್ಣದವರಿದ್ದಾರೆ. ಅವರ ಬಿಳಿ ಮೈಯ ಸಾನಿಧ್ಯದಿಂದ, ಬೆಳಕಿಗಿಂತ ಕಣ್ಣಿಗೆ ಕತ್ತಲೆಯೇ ಕಟ್ಟುತ್ತದೆ. ಅವರ ಬಣ್ಣಗೆಟ್ಟ ಬಿಳಿತನದಿಂದ ಯಾರಿಗೆ ಪ್ರಯೋಜನ? ಕೆಂಪು ವರ್ಣದ ಕ್ಷತ್ರಿಯರಲ್ಲಿ ಅನೇಕರು ಕಪ್ಪು ಕತ್ತರಿಗಳಿದ್ದಾರೆ. ಅವರ ಕ್ಷೆ ಮೈಯ ಸಾಮಿಪ್ಯದಿಂದ ಕೆಚ್ಚು ಕಸುವುಗಳು ಕುದಿಯೇಳುವ ಬದಲು ಹೊಲೆ ಹೇಡಿತನಗಳು ಹೆಚ್ಚುವವು. ಅವರ ಬಣ್ಣಗೆಟ್ಟ ಕೆಂಪು, ಕೆಂಗೆಟ್ಟ ಎದೆ, ಕಂಗೆಟ್ಟ ಬುದ್ಧಿಗಳ ಗುರುತಾಗಿಬಿಟ್ಟಿದೆ.

ಗುಣದ ಬೆಳಕಿನಿಂದಲೇ ವರ್ಣವನ್ನು ಲೆಕ್ಕಿಸಬೇಕಲ್ಲದೆ ಬರಿ ಬಣ್ಣದ ಥಳಕಿನಿಂದಲ್ಲ. ಮೈಗೂ ಮನಕ್ಕೂ ಚರ್ಮಕ್ಕೂ ಗುಣಕ್ಕೂ ವ್ಯತ್ಯಾಸವುಂಟಾಗುವದೇ ವರ್ಣಸಂಕರ. ಗುಣಕರ್ಮಗಳು ಬಿಳಿಯಾಗಿ ಶುಭ್ರವಾಗಿ ನಿರ್ಮಲವಾಗಿರುವವರು ಕರಿ ಮೈಯವರೆಂದರೂ ಅವರು ದಿನಕರನ ದಿವ್ಯ ಪ್ರಭೆಯುಳ್ಳವರಾಗಿರುವರು. ಮಹಾತ್ಮಾಗಾಂಧಿ, ಸಾಕ್ರೆಟಿಸರು ಕಪ್ಪಾಗಿದ್ದರೂ ಅವರ ಆತ್ಮಶುದ್ಧಿಯ ಧರ್ಮ ಪ್ರಕಾಶವು ಶತಮಾನಗಳ ವರೆಗೂ ಬೆಳಗುವದು.

ಅಷ್ಟರಿಂದ ಹೊರಗಿನ ಬಣ್ಣವನ್ನೆ ಗುಣವೆಂದು ಮೋಸಹೋಗದಿರಿ. ಬಣ್ಣಗಳು ಕೆಲವು ಸಲ ದುರ್ಗುಣಗಳ ಹೊದಿಕೆಯೂ ಆಗಿರಬಹುದು. ಗುಣದ ಕೊರತೆಯಿದ್ದರೆ ಅದಕ್ಕೆ ಪೂರಕವೆಂದೂ ಮೆರೆಯುತ್ತಿರಬಹುದು. ಕಾಷಾಯ ವಸ್ತ್ರವು ವೈರಾಗ್ಯದ ಚಿಹ್ನವಾಗಿತ್ತು ಭಾರತದಲ್ಲಿ. ಮತ್ತೆ ಕಾಷಾಯ ವರ್ಣವು (ಎಂದರೆ ನಸುಗೆಂಪು ಮಿಶ್ರಿತ ಹಳದಿ) ನಿಜವಾಗಿಯೂ ವೈರಾಗ್ಯ, ಧಾರಾಳತನ, ತೃಪ್ತಿ, ನಿಸ್ವಾರ್ಥವನ್ನೆ ಮನದಲ್ಲಿ ಮೂಡಿಸುವದೆಂದು ಮನೋವಿಜ್ಞಾನಿಗಳೂ ಈಗ ಮನಗಾಣುತ್ತಿದ್ದಾರೆ. ಕೆಂಪು ರಾಜಸ ಚಟುವಟಿಕೆ ಚಾಂಚಲ್ಯಗಳನ್ನು ಹೆಚ್ಚಿಸುವದು. ಹಳದಿಯು ತ್ಯಾಗವನ್ನು ಬಿತ್ತುತ್ತದೆ. ವರ್ಣಚಿಕಿತ್ಸೆಯಲ್ಲಿ ಹಳದಿ ನೀರನ್ನು ಭೇದಿಗೆಂದು ಕೊಡುತ್ತಾರೆ. ಅದ್ದರಿಂದ ಕಾಷಾಯ ವರ್ಣದಲ್ಲಿಯ ಕೆಂಪು, ಹಳದಿಗಳ ಸಮರಸ ಮಿಶ್ರಣದಿಂದ ಸನ್ಯಾಸಿಯ ನಿರಲಸ ಕರ್ಮಶಕ್ತಿಯೂ ಸ್ವಾರ್ಥತ್ಯಾಗವೃತ್ತಿಯೂ ಜೊತೆಗೂಡುತ್ತವೆ.

ಹಾಗೆಂದರೆ ಕಾಷಾಯ ವಸ್ತ್ರಧಾರಿಗಳೆಲ್ಲ ಸನ್ಯಾಸಿಗಳೆಂದು ತಿಳಿದೀರಿ! ನಿಜವಾದ ಸನ್ಯಾಸಿಗಳ ಕಾಷಾಯವು ಅಗ್ಗದ ಸಂಜೆಯೂ ಆಗಿರುತ್ತದೆ. ಆದರೆ ರೇಷ್ಮೆ ವ್ಹೋಯ್ಲಿನ್‌ಗಳ ಬಹು ಅಮೂಲ್ಯ ಕಾಷಾಯಗಳನ್ನು ಧರಿಸುವವರ ಸಂಖ್ಯೆ ಬೆಳೆಯುತ್ತಿದೆ. ವೈರಾಗ್ಯ ಹೀನಸ್ಥರಾದ ಕೆಲವು ಶ್ರೀಮಂತ ಮಠಾಧಿಪರೂ ಅಂತಹ ಪರಮಾವಧಿ ಬೆಲೆಯ ಕಾಷಾಯವನ್ನು ಧರಿಸುತ್ತಿದ್ದಾರೆ. ಕಾಷಾಯಧಾರಿಗಳಾಗಿ ವಿವಿಧ ಸಂಘಸಂಸ್ಥೆಗಳ ಹೆಸರಿನಲ್ಲಿ ನಿಧಿಸೇರಿಸಿ ಅದನ್ನೆಲ್ಲ ತಮ್ಮ ಪ್ರಸಾದ—ಪ್ರಾಸಾದಗಳ ಬುನಾದಿಯನ್ನಾಗಿ ಮಾಡುವವರೂ ಅನೇಕರಿದ್ದಾರೆ. ಕಾಷಾಯ ವರ್ಣದ ಮರೆಯಲ್ಲಿ ವಿಷಯಲಂಪಟತನವು ಬೆಳೆಯುತ್ತಿದ್ದುದರ ಗುರುತಿದು.

ಕೆಂಪು, ಕೆಚ್ಚು, ಕಸುವುಗಳ ಜನಕವೆಂದು ಹೇಳಿದೆನಷ್ಟೆ? ಹೌದು, ಶರೀರಕ್ಕೆಲ್ಲ ಶಕ್ತಿ ಸಂಚಾಲನವನ್ನು ಕೊಡುವ ರಕ್ತದ ಬಣ್ಣ ಕೆಂಪು. ವಿಶ್ವದಲ್ಲಿಯ ಅಮರ ಸಿಯೂದ (ಆಕ್ಸಿಜನ್) ವನ್ನು ಉಣಿಸಿದೊಡನೆ ಒಳಗೆಳೆದು ತನುವಿನ ಅಣು ಅಣುವಿಗೂ ಮುಟ್ಟಿಸುವ ರಕ್ತಾಣುಗಳಲ್ಲಿಯ ಲೋಹಾಂಶವು ಕೆಂಪು. ಮನಸ್ಸಿನ ರೊಚ್ಚು, ಸ್ನಾಯುಗಳಲ್ಲಿ ಮಹತ್ವದ ಹುಚ್ಚು, ಹೊಟ್ಟೆಯಲ್ಲಿ ಸಿಟ್ಟಿನ ಕಿಚ್ಚು ಕುದಿಯುವಾಗ ಮುಖದಲ್ಲಿ ಮೆರೆಯುವ ಬಣ್ಣ ಕೆಂಪು. ಆಲಸಿ, ನಿಸ್ತೇಜ, ಜಡನಾಗಿರುವ ರೋಗಿಗೆ ಕೆಂಪು ಪ್ರಕಾಶವನ್ನು ಕೊಟ್ಟರೆ ಅವನಲ್ಲಿ ಉತ್ಸಾಹ, ಆಶಾವಾದಿತ್ವ ಕಾರ್ಯಶಕ್ತಿಗಳು ಚಿಗುರುವದೆಂದು ವರ್ಣಚಿಕಿತ್ಸಕರು ಹೇಳುತ್ತಾರೆ;

ನಿಜ. ಆದರೆ ಕೆಂಪುವಸ್ತ್ರಧಾರಿಗಳೆಲ್ಲಾ ಪ್ರಚಂಡ ಪ್ರತಾಪರೂ ಅರ್ಜುನನ ಅವತಾರರೂ ಎಂದು ತಿಳಿಯಬಾರದು. ಎಷ್ಟೋ ಸಲ ಹೇಡಿತನಕ್ಕೆ ಹೊದಿಕೆಯಾಗಿ ಕೆಂಪು ಮೆರೆಯುವದುಂಟು. ಕೆಲವರಿಗೆ ಯಾವಾಗಲೂ ಉಗ್ರವಾದ ಕೆಂಬಣ್ಣದ ಬಟ್ಟೆಗಳನ್ನೆ ಕೊಟ್ಟ ಜಗತ್ತಿನ ಕಣ್ಣು ಕುಕ್ಕುವ ಹಂಬಲವಿರುತ್ತದೆ. ಒಳಗಿರುವ ಕೆಚ್ಚೆದೆಯ ಕೊರತೆಯೇ ಹೊರಗಿನ ಕೆಂಪಿನ ಹುಚ್ಚಿಗೆ ಕಾರಣವೆಂದು ಮನೋವಿಜ್ಞಾನಿಗಳ ಅಭಿಪ್ರಾಯ. ಉಗ್ರವಾದ ಬಣ್ಣದ ವಸ್ತ್ರಾಲಂಕಾರಗಳನ್ನು ಮಾಡಿಕೊಳ್ಳುವವರು ಬಹುಶಃ ತಮ್ಮಲ್ಲಿರುವ ಯಾವುದೋ ಒಂದು ಮುಖ್ಯವಾದ ದೌರ್ಬಲ್ಯವನ್ನು ಮರೆಮಾಚಲೆಂದೇ ಯತ್ನಿಸುತ್ತಿರುವರು. ಹೆಣ್ಣಿನ ಬೆನ್ನುಹತ್ತಿ ತಿರುಗುವ ಕೆಲವು ಹಿರಿಮೇತರ, ಬೆಡಗಿನ ತರುಣರಿಗೆ ವ್ಯಭಿಚಾರದಲ್ಲಿ ಒಮ್ಮೆಲೆ ಪೌರುಷಹೀನತೆಯುಂಟಾದರೆ ಅವರ ವೇಷಭೂಷಣಗಳಲ್ಲಿ ವಿಪರೀತವಾದ ವಿಷಮ ಬಣ್ಣಗಳ ಹೊಳಪು ಕುಣಿದಾಡುವದೆಂದು ಪಾಶ್ಚಾತ್ಯ ಕಾಮವಿಜ್ಞಾನಿಗಳೊಬ್ಬರು ಬರೆದಿದ್ದಾರೆ.

ಹೀಗಿದೆ ಬಣ್ಣಗಳ ಛಲ. ಇದನ್ನರಿತೇ ಚಿಕಿತ್ಸಾಶಾಸ್ತ್ರದಲ್ಲಿಯೂ ಬಲ್ಲವರು ಬಣ್ಣಗಳನ್ನು ಬಳಸಲಾರಂಭಿಸಿದರು. ವಿಜ್ಞಾನವು ಇನ್ನೂ ಆಳವಾಗಿ ಬಣ್ಣಗಳನ್ನು ಶಿಕ್ಷಣಕಾರ್ಯದಲ್ಲಿಯೂ ಉದ್ಯಮದಲ್ಲಿಯೂ ಪ್ರಯೋಗಿಸಿ ಸತ್ಫಲಗಳನ್ನು ಪಡೆಯುತ್ತಿದೆ. ಆದರೆ ವಿಜ್ಞಾನ ಯುಗಕ್ಕಿಂತ ನೂರಾರು ವರ್ಷಗಳ ಮುಂಚೆಯೇ ಮನುಷ್ಯನು ಅನುಭವದಿಂದಲೇ ವರ್ಣಪ್ರಭಾವವನ್ನು ಕಂಡು ಉಪಯೋಗಿಸುತ್ತಿದ್ದನು. ಭಾರತದಲ್ಲಿ ಅತೀ ಪುರಾತನ ಕಾಲದಿಂದಲೂ ಕುಂಕುಮವು ಸೌಭಾಗ್ಯದ ಚಿಹ್ನೆ ಆಗಿತ್ತು. ಶೌರ್ಯಕ್ಕೆ ಪ್ರೇರಕವೂ ಆಗಿತ್ತು, ಭಕ್ತಿಗೆ ಪೂರಕವೂ ಆಗಿತ್ತು. ಕುಂಕುಮವು ಪತೀಕ್ಷೆ, ಸಂತಾನ, ಸಂಪತ್ತು, ದಾಂಪತ್ಯ ಸುಖಗಳಿಗೆ ಪ್ರಸ್ತಾಪನೆಯಾಗಿತ್ತು. ಪ್ರತಿಯೊಂದು ವಿಜಯ ಯಾತ್ರೆಯೂ ಕುಂಕುಮ ಲೇಪನದಿಂದ ಮೊದಲಾಗುತ್ತಿತ್ತು. ದೇವರಪೂಜೆಯು ಪುನರಾಗಮನವೂ ಕುಂಕುಮಾಕ್ಷತೆಯ ಸುರಿಮಳೆಯಿಂದ ಆಗುತ್ತಿತ್ತು. ಕುಂಕುಮದ ಕೆಂಪಿನಲ್ಲಿರುವ ಕೆಚ್ಚು, ಶೌರ್ಯ, ಪರಾಕ್ರಮ, ದೈವಭಕ್ತಿಗಳನ್ನು ಉದ್ದೀಪಿಸುವ ಶಕ್ತಿಯನ್ನು ಪುರಾತನರು ಅರಿತಿದ್ದರು.

ಮೊದಲು ಕುಂಕುಮವನ್ನು (ಕುಂಕುಮ) ಕೇಸರಿಯಿಂದಲೇ ಮಾಡುತ್ತಿದ್ದರು. ಕೇಸರಿಯು ತನ್ನ ಕೆಂಪಿನಿಂದ ಮನಸ್ಸಿಗೆ ಆವೇಶವನ್ನು ತರುವಂತೆ ತನ್ನ ಕಂಪಿನಿಂದ ವಿಲಾಸ ಪ್ರಿಯತೆಯನ್ನೂ ಹುಟ್ಟಿಸುತ್ತದೆ. ಹೊರಗಿನ ಲೇಪದಿಂದ ಹುರುಪನ್ನು ಹುಟ್ಟಿಸುವಂತೆ ಒಳಗೆ ಸೇವಿಸುವದರಿಂದ ನರತಂತುಗಳಿಗೆ ಬಲವನ್ನೂ ಪ್ರಕೃತಿಗೆ ಸೌಂದರ್ಯವನ್ನೂ ಕೊಡುವದು. ಪಚನ ಶಕ್ತಿಯು ಮಂದವಾಗಿ ಉಂಟಾಗುವ ಅಮ್ಲಶೌಚಕ್ಕೆ ಹಾಗೆಯೇ ವಿಷ ವಿಕಾರದಿಂದ ಉಂಟಾಗುವ ಬಾಣಂತಿಯ ನಿತ್ರಾಣಕ್ಕೆ ಅನುಭವಿಗಳಾದ ವೈದ್ಯರು ಕೇಸರಿಯನ್ನು ಒಳ್ಳೆಯ ಪರಿಣಾಮಕಾರಕವಾಗಿ ಉಪಯೋಗಿಸುತ್ತಾರೆ.

ಆದರೆ ನಾಗರಿಕತೆಯ ಶಾಪವೋ ಏನೋ! ಕುಂಕುಮದ ಬಣ್ಣಕಷ್ಟೇ ಮೆಚ್ಚಿದ ಮರುಳರು ಕೃತ್ರಿಮ ಕುಂಕುಮವನ್ನು ಯಾವುದೋ ಮಣ್ಣಿಗೆ ಯಾವುದೋ ಬಣ್ಣಗಳನ್ನು ಸೇರಿಸಿ ತಯಾರಿಸುತ್ತಾರೆ. ಆ ಗುಣಗೆಟ್ಟ ಬಣ್ಣವನ್ನೇ ಮುತ್ತೈದೆಯರು ಸೌಭಾಗ್ಯ ಚಿಹ್ನವೆಂದು ಹಣೆಗೆ ಇಟ್ಟುಕೊಂಡರೆ ಅವರ ಹಣೆಬರಹವೋ ದೌರ್ಭಾಗ್ಯವೋ ಎಂಬಂತೆ ಅನೇಕರಿಗೆ ಹಣೆಗೆ ದದ್ದು, ಇಸುಬು ರೋಗಗಳಾಗುತ್ತಿವೆ. ಶ್ರೀಖಂಡ, ಪಾಯಸ, ಮಸಾಲೆ ಹಾಲು, ಜಿಲೇಬಿ, ಚಿರೋಟಿಗಳು ತಮ್ಮ ಪುರಾತನ ಕೇಸರ ವರ್ಣವನ್ನು ಕಳೆದುಕೊಂಡು ಕಹಿಯಾದ ಕೃತ್ರಿಮ ಹುಡಿಯಿಂದ ಬಣ್ಣಗೆಟ್ಟುಹೋಗಿವೆ.

ಈ ವರ್ಷದಲ್ಲಿ ಮನೆ ಮಾತಾಗಿರುವ ಅತೀ ದೊಡ್ಡ
ಕಲಾ ಮಹೋತ್ಸವ

ಗ್ರೇಂಡ್ ಫನ್ ಫೇರ್

ಭಾರತ ಸೇವಾ ಸಮಾಜ ಇವರ ಸಹಾಯಾರ್ಥವಾಗಿ ಗೇಟ್ ಟಿಕೇಟಿನ ಮೇಲೆ ಬಹುಮಾನಗಳು. ಈ ವಾರದ ಒಟ್ಟು ದೊಡ್ಡ ಬಹುಮಾನಗಳು

ರೂಪಾಯಿ 406

ತಾ. 5-5-53ನೇ ಮಂಗಳವಾರ ರೂ. 55-0-0
ತಾ. 7-5-53ನೇ ಗುರುವಾರ ರೂ. 25-0-0
ತಾ. 8-5-53ನೇ ಶುಕ್ರವಾರ ರೂ. 111-0-0
ತಾ. 10-5-53ನೇ ಆದಿತ್ಯವಾರ ರೂ. 155-0-0

ಶುಕ್ರವಾರ ಮತ್ತು ಆದಿತ್ಯವಾರ ಪ್ರವೇಶ ಧನ 4 ಆಣೆ
ಇತರ ದಿನಗಳಲ್ಲಿ 2 ಆಣೆ ಮಾತ್ರ

ಪ್ರತೀ ದಿನ ಸಾಯಂಕಾಲ 6 ಗಂಟೆಯಿಂದ

ನರ್ತನ ಮತ್ತು ಸಂಗೀತ; ಸರ್ಕಸ್: ಯಕ್ಷಿಣಿ ವಿದ್ಯೆ; ಗೊಂಬೆ ಮಾತಾಡುವದು: ಇತ್ಯಾದಿ ಇತ್ಯಾದಿ

ತಪ್ಪದೆ ಬಂದು ನೋಡಿ ಆನಂದ ಪಡಿರಿ!!

ಮುಂಬಾಯಿಯ ಪ್ರಖ್ಯಾತ ಸಿನೇಮಾ ನರ್ತಕಿ ಕುಮಾರಿ ಕಕ್ಕು
ಇವಳ ನರ್ತನದ ತಾರೀಕನ್ನು ಗಮನಿಸಿರಿ!!

ಅವನ್ನು ಸೇವಿಸುವವರ ಆರೋಗ್ಯವೂ ಹದಗೆಟ್ಟು ಹೋಗಿದೆ. ಹೋಟೇಲಿನಲ್ಲಿ ಸಕಲ ಜಾತಿಗಳೂ ಸೇರಿ ವರ್ಣಸಂಕರವಾಗಿರುವಾಗ ಕೇಸರಿಯ ಕುಲವನ್ನಾದರೂ ಏಕೆ ಉಳಿಸಬೇಕೆಂದು ಹೋಟೇಲೊಡೆಯರ ಅನುಕೂಲ ಸಿಂಧುವಿರಬಹುದು. ಮೂರು ರೂಪಾಯಿಗೆ ಮಣವಾಗಿ ಸಿಕ್ಕುವ ಬಣ್ಣವನ್ನು ಬಿಟ್ಟು ನೂರು ರೂಪಾಯಿಗೆ ಪೌಂಡಾಗಿರುವ ಕೇಸರವನ್ನು ಉಪಯೋಗಿಸುವದು ಯಾವ ಅರ್ಥಶಾಸ್ತ್ರಕ್ಕೆ ಸಮ್ಮತವೆಂದು ಸವಾಲು ಹಾಕಲೂ ಬಹುದು.

ಭಾರತೀಯರ ಅಡುಗೆಯಲ್ಲಿ ಅರಸಿನಕ್ಕೆ ಅಗ್ರಸ್ಥಾನವಿರುವ ಕಾಲವೊಂದಿತ್ತು. ಅರಸಿನವು ಹೆಂಗಳೆಯರ, ಗಲ್ಲ, ಕೈಕಾಲುಗಳನ್ನು ನಿತ್ಯವೂ ಅಲಂಕರಿಸುತ್ತಿತ್ತು. ಮದುವೆಯ ದಿನಗಳಲ್ಲೆಲ್ಲ ವರನು ಅರಸಿನದಲ್ಲಿ ಅದ್ದಿದ ಬಟ್ಟೆಗಳನ್ನೆ ಉಡುತ್ತಿದ್ದನು. ಉಪನಯನ ಕಾಲದಲ್ಲಿಯೂ ನಂತರ ಬ್ರಹ್ಮಚರ್ಯಾವಸ್ಥೆಯಲ್ಲಿರುವ ವರೆಗೂ ವಟುವು ಅರಸಿನ ಪಂಚೆ, ಕೌಪೀನಗಳನ್ನೆ ಧರಿಸುತ್ತಿದ್ದನು.

ಅರಸಿನ ವರ್ಣವು ತ್ಯಾಗಕ್ಕೆ ಪ್ರೇರಕವೆಂದು ಹಿಂದೆ ಹೇಳಿದೆ, ಅದು ಅಹಿಂಸೆಗೆ ಸಾಧಕವೆಂದು ಬೌದ್ಧ, ಜೈನ ಸನ್ಯಾಸಿಗಳು ಹೇಳುತ್ತಾರೆ. ಅರಸಿನ ಪ್ರಕಾಶದಲ್ಲಿರುವದರಿಂದ ದೇಹದ ಬೇಡಿಕೆಗಳು ಕಡಿಮೆಯಾಗಿ ನರತಂತುಗಳು ನಿರ್ಮಲವಾಗಿ ಸಂಯಮಕ್ಕೆ ಪೋಷಕವಾಗುವವು. ಇದನ್ನೆಲ್ಲಾ ಅರಿತು ಆಚರಿಸುತ್ತಿರುವವರಿಗೆ ಭಾರತೀಯರು ಸುಖಶಾಂತಿಗಳಿಂದ ಬಾಳುತ್ತಿದ್ದರು. ಬ್ರಹ್ಮಚಾರಿಯು ಮದುವೆಯಾಗುವ ವರೆಗೆ ಇಂದ್ರಿಯ ಸಂಯಮದಿಂದಿರಲು ಅರಸಿನ ವರ್ಣವು ಸೂಚಕವೂ ಸಹಾಯಕವೂ ಆಗಿತ್ತು. ಮದುವೆಯೆಂದರೆ ಅಸಂಯಮಿತ ಭೋಗದ ರಾಜದ್ವಾರವಲ್ಲ; ಸಂಯತ ಭೋಗವೇ ಸುಖದದ್ವಾರಿಯೆಂಬ ತತ್ವವನ್ನು ಬಿಂಬಿಸಲೆಂದೇ ವಧೂವರರಿಗೆ ಅರಸಿನದ ಲೇಪದರ್ಶನಗಳನ್ನು ಮಾಡಿಸುವದು. ಆದರೆ ಆ ಸಂಯತ ಭೋಗದ ಆದರ್ಶವೂ ಕುಸಿದಿದೆ. ಅದಕ್ಕೆ ಪ್ರೇರಕವಾದ ಅರಸಿನವು ಅವಶ್ಯವಾಗಿ ಕಣ್ಣುಕುಕ್ಕಿ ಇಂದ್ರಿಯಗಳನ್ನು ಕೆರಳಿಸುವ ಉಗ್ರವಾದ ಕೆಂಪು, ನೀಲಿ, ಜರತಾರಿ ರೇಶ್ಮೆಗಳ ಥಳಕು ಬೆಳೆಯುತ್ತಿದೆ.

ಅಡುಗೆಯಲ್ಲಿ ಅರಸಿನಕ್ಕೆ ಅಗ್ರಸ್ಥಾನವಿರುವ ವರೆಗೆ ನಮ್ಮಲ್ಲಿ ಹುಳದ ಪೀಡೆಯು ಕಡಿಮೆಯಾಗಿತ್ತು. ಹಿಂದಿನವರು ಪ್ರತಿಯೊಂದು ಭಕ್ಷ್ಯಕ್ಕೂ ಕೊಂಚ ಅರಸಿನ ಹಿಟ್ಟನ್ನು ಸಿಂಪಡಿಸುತ್ತಿದ್ದರು. ಅರಸಿನವು ಕ್ರಿಮಿನಾಶಕ. ಜ್ವರಹರ ಪಾಚಕ, ಚರ್ಮರೋಗಹರ, ಸೌಂದರ್ಯವರ್ಧಕವಾಗಿದೆ. ಮಕ್ಕಳಿಗೆ ಸ್ನಾನ ಮಾಡಿಸಿ ನಂತರ ಅರಸಿನ ಅರಗು, ಚಂದನಗಳನ್ನು ಪೂಸುತ್ತಿದ್ದ ಕಾಲದಲ್ಲಿ ಹುಂಡು, ಕಜ್ಜಿ, ಹುಳಕಡ್ಡಿಗಳ ಉಪದ್ರವಿರಲಿಲ್ಲ. ಕ್ಯುಟಿಕುರಾ, ಪಫ್, ಪೌಡರುಗಳು ಪ್ರಸಾಧನ ಹೆಚ್ಚಿದಾಗಿನಿಂದ ಚರ್ಮರೋಗಗಳ ಸಾಮ್ರಾಜ್ಯ ಬೆಳೆದಿದೆ. ಸಕಲ ಚರ್ಮರೋಗಗಳಿಗೂ ಅರಸಿನವನ್ನರೆದು ಅದರ ಪುರಾತನ ಗುಣಗಳನ್ನು ಭಾರತೀಯರು ಪುನಃ ನೆನಪಿಸಿಕೊಳ್ಳುವರೇ?

ಛೇ! ಗುಣದ ಕಡೆಗೆ ಗಮನವಾರಿಗೆ? ಕಣ್ಣು ಬೇನೆ (ಕೆಂಗಣ್ಣು) ಬಂದಾಗ ಪೊಟ್ಯಾಶ್ ಪರಮಂಗನೇಟ್ ನೀರಿನಿಂದ ತೊಳೆಯುವದು ಸುಧಾರಿಸಿದವರ ಹೆಮ್ಮೆಯಾಗಿದೆ. ಅರಸಿನವನ್ನರೆದ ಬಿಸಿ ನೀರಿನಿಂದ ಕಣ್ಣು ತೊಳೆಯಲು ಹೇಳುವವನು ನಾಟಿ ಜಂಗಲಿ ವೈದ್ಯನೆನಿಸುವನು. ಆದರೆ ಪೊಟೇಸಿಯಮ್ ಪರಮಂಗನೇಟಿನಿಂದ ರೋಗದ ಕ್ರಿಮಿಗಳಲ್ಲದೆ ಶರೀರದ ಸಹಜಾಣುಗಳೂ ಸತ್ತು ಹುಣ್ಣು ಬೇಗನೇ ಮಾಯುವುದಿಲ್ಲವೆಂದು ಪಾಶ್ಚಾತ್ಯರು ಹೇಳಿದರೂ ಇಲ್ಲಿಯ ಜಂಟಲಮೆನ್ನುಗಳಿಗೆ ಎಚ್ಚರವಿಲ್ಲ. ಅರಸಿನವು ರೋಗಜಂತುಗಳನ್ನೂ ಕೊಲ್ಲುವದಲ್ಲದೆ ದೇಹಾಣುಗಳಿಗೆ ಪೋಷಕವೂ ಆಗಿದೆ. ಹಳೆಯ ಹುಣ್ಣುಗಳಿಗೆ ಅರಸಿನವನ್ನು ಜೇನಿನಲ್ಲರೆದು ಅದರ ಅದ್ಭುತ ಗುಣವನ್ನೊಮ್ಮೆ ಮನಗಾಣಿರಿ.

ಅರಸಿನದ ಬದಲು ಅರಸಿನ ಬಣ್ಣದ ಯಾವುದೋ ಪುಡಿಯನ್ನು ಅಡುಗೆಯಲ್ಲಿ ಉಪಯೋಗಿಸುತ್ತಿದ್ದಾರೆ, ಅದರಿಂದ ಇನ್ನು ರಾವ ರೋಗಗಳ ಉದಯವಾಗುವದೋ ನೋಡಬೇಕು. ಒಟ್ಟಿನಲ್ಲಿ ಗುಣಕ್ಕಿಂತ ಬಣ್ಣಕ್ಕೆ ಜಗತ್ತು ಮರುಳಾಗುತ್ತಿದೆ. ಆದರೆ ಗುಣಗಳಿಂದ ಅರಳಿಬಂದ ಬಣ್ಣಗಳೇ ಗುಣಕಾರಿಯೆಂಬ ಕುರುಹನ್ನು ನಾಗರಿಕರು ಬೇಗನೆ ಅರಿತಷ್ಟು ಒಳ್ಳೇದು.

ರಾಜಕೀಯರಂಗಕ್ಕೆ ಇಳಿಯಬೇಡಿರಿ.

ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವು ಮುಗಿಯುವ ವರೆಗೆ ರಾಜಕೀಯರಂಗಕ್ಕೆ ಪ್ರವೇಶಿಸಬಾರದೆಂದು ಭಾರತದ ಮಾಜಿ ಸೇನಾಧಿಕಾರಿಗಳೂ ಆಸ್ಟ್ರೇಲಿಯದಲ್ಲಿ ಭಾರತದ ಹೈಕಮಿಶನರರಾಗಿ ನೇಮಿಸಲ್ಪಟ್ಟವರೂ ಆದ ಜನರಲ್ ಕಾರ್ಯಪ್ಪನವರು ತಾ. ೨ರಲ್ಲಿ ಬಳ್ಳಾರಿಯಲ್ಲಿ ವಿದ್ಯಾರ್ಥಿಗಳನ್ನು ಎಚ್ಚರಿಸಿದರು.

ಜ. ಕಾರ್ಯಪ್ಪನವರನ್ನು ಸ್ವಾಗತಿಸಲು ರೈಲ್ವೆ ಸ್ಟೇಶನಿಗೆ ಬಂದ ವಿದ್ಯಾರ್ಥಿಗಳ ಮುಂದೆ ಮಾತನಾಡುತ್ತ ಜ. ಕಾರ್ಯಪ್ಪನವರು ಮೇಲಿನಂತೆ ಹೇಳಿದರು. ವಿದ್ಯಾರ್ಥಿಗಳು ಕರ್ನಾಟಕದ ಘೋಷಣೆಗಳನ್ನು ಮಾಡುತ್ತ ಅವರನ್ನು ಸ್ವಾಗತಿಸಿದರು. ಜ. ಕಾರ್ಯಪ್ಪನವರು, 'ನಿಮ್ಮ ಸ್ಥಾನವು ಶಾಲೆ ಮತ್ತು ಆಟದ ಬಯಲುಗಳಲ್ಲಿ ಇದೆ. ನೀವು ನಿಮ್ಮ ವಿದ್ಯಾಭ್ಯಾಸವನ್ನು ಅಲಕ್ಷಿಸಿದರೆ ನೀವು ನಂತರ ನಿಮ್ಮ ಇಡೀ ಜೀವನದಲ್ಲಿ ಪಶ್ಚಾತ್ತಾಪ ಪಡಬೇಕಾದೀತು.' ಎಂದರು. ರಾಜಕೀಯ ವ್ಯಕ್ತಿಗಳು ವಿದ್ಯಾರ್ಥಿಗಳನ್ನು ತಮ್ಮ ಉದ್ದೇಶಗಳಿಗಾಗಿ ಉಪಯೋಗಿಸುವುದನ್ನು ಜ. ಕಾರ್ಯಪ್ಪನವರು ಟೀಕಿಸಿದರು.

ವೀರಾಜಪೇಟೆಗೆ

'ಕೊಡಗು' ಏಜೆಂಟರು,

ಶ್ರೀ ಟಿ. ಎಸ್. ಗೋವಿಂದರಾಜು

ಧರ್ಮ ರಹಸ್ಯ

—ಸ್ವಾಮಿ ನಾರಾಯಣಾನಂದ—

(೧) ಜಗತ್ತು ನಿನ್ನನ್ನು ಹೊಗಳಲಿ ಯಾ ತೆಗಳಲಿ ನಿನಗೆ ಸಂಪತ್ತು ಇರಲೀ ಯಾ ಇಲ್ಲದಿರಲಿ, ಮೃತ್ಯು ಇಂದೇ ಬರಲಿ ಯಾ ನೂರು ವರ್ಷ ಕಳೆದು ಬರಲಿ ನೀನು ನಿನ್ನ ಸತ್ಯ ಪಥವನ್ನು ಬಿಡದೆ ನಡೆಯುವೆಯಾದರೆ ಗುರಿಯನ್ನು ಮುಟ್ಟುವೆ.

(೨) ನೀನು ಯೋಚಿಸಿದಂತೆ ನಿನ್ನ ಸುತ್ತು ಮುತ್ತಲಿನ ವಸ್ತುಗಳ ಸ್ವಭಾವ ನಿನ್ನ ಯೋಚನೆ, ಭಾವನೆಗಳನ್ನು ಹಿಡಿತದಲ್ಲಿಟ್ಟು ನಿನ್ನನ್ನು ನೀನು ಗೆದ್ದರೆ ಜಗತ್ತನ್ನು ಗೆದ್ದಂತೆ.

(೩) ನಾಶವಾಗುವ ನಶ್ವರ ವಿಚಾರಗಳ ಮೇಲೆ ವಿಶ್ವಾಸವಿಡುವದು ಪಾಪಕರ. ಇವರಿಂದ ಪರಿತಾಪವಲ್ಲದೆ ಸುಖವಿರಲಾರದು ಆದ್ದರಿಂದ ಶಾಶ್ವತವಾದ ಬೆಳಕಿನೆಡೆ ಮುಖವಿರಲಿ.

(೪) ಇನ್ನೊಬ್ಬರ ಕಷ್ಟಗಳ ಬಗ್ಗೆ ಮರುಕ ಬರುವದು ಒಳ್ಳೇ ಲಕ್ಷಣ. ಆದರೆ ಈ ಮರುಕವು ತಾನು ಆತನಿಗಿಂತಾ ಉತ್ತಮ ಸ್ಥಾನದಲ್ಲಿರುವೆನೆಂಬ ಹೆಮ್ಮೆಯಿಂದ ಬಾರದಿರಲಿ.

(೫) ಯೋಗ್ಯ ಪ್ರಯತ್ನದಿಂದ ಅದೃಷ್ಟವನ್ನು ಗೆಲ್ಲಬಹುದು. ಅದೃಷ್ಟವು ಕರ್ಮದ ಫಲವಲ್ಲದೆ ಬೇರಲ್ಲ. ಆದ್ದರಿಂದ ಯೋಗ್ಯ ಪಥದಲ್ಲಿ ಕರ್ಮ ಮಾಡುವವನಾಗು.

(೬) ತಿಳಿಗೇಡಿಯಾದವನು ತನ್ನ ತಿಳಿಗೇಡಿತನವನ್ನು ಅರಿತುಕೊಂಡದ್ದೇ ಆದರೆ ಅನೇ ಜ್ಞಾನದ ಪ್ರಥಮ ಹೆಜ್ಜೆ. ತನ್ನನ್ನು ಬುದ್ಧಿವಂತನೆಂದು ಗಣಿಸಿ ಸರ್ವಜ್ಞನಂತೆ ವರ್ತಿಸುವವನು ತಿಳಿಗೇಡಿ

(೭) ಶಾರೀರಿಕ ಪರಿಶುದ್ಧತೆಯೊಂದಿಗೆ ಮಾನಸಿಕ ಪರಿಶುದ್ಧತೆ ಅವಶ್ಯ ಮನವು ಮಳುಕಾಗಿ ಹೊರಗೆ ಎಷ್ಟು ಥಳಕಿದ್ದರೂ ಪ್ರಯೋಜನವಿಲ್ಲ.

(೮) ಹೊರಗಿನ ಕೊಳೆಯನ್ನು ನೀರು ತೊಳೆಯುವಂತೆ ಮನಸ್ಸಿನ ಕಲ್ಮಷವನ್ನು ಸದ್ಭಾವನೆಯ ಪ್ರಾರ್ಥನೆಯು ತೊಳೆಯಲಿ.

(೯) ಆಡಂಬರ ಎಂದೂ ಬೇಕಿಲ್ಲ. ನಿನ್ನ ಆತ್ಮಕ್ಕೆ ಸರಿಯಾಗಿ ವರ್ತಿಸು. ಅದೇ ದೇವರಿಗೆ ಇಷ್ಟವಾದುದಾಗಿದೆ.

(೧೦) ಸುಖವು ಇಮ್ಮಡಿಸಬೇಕಾದರೆ ಅದನ್ನು ಅನುಭವಿಸಲು ಜೊತೆಗಾರರು ಬೇಕು. ತನಗೊಬ್ಬನಿಗೇ ಸುಖ ಬೇಕೆಂದು ಯತ್ನಿಸುವದು ಸ್ವಾರ್ಥತೆಯಾಗಿದೆ. ಹೆಚ್ಚು ಜನ ಪಾಲುದಾರರಿದ್ದಷ್ಟೂ ಸುಖ ಹೆಚ್ಚುವದು. ಆದ್ದರಿಂದ ಇಡೀ ಜಗತ್ತನ್ನೇ ಕುಟುಂಬವಾಗಿ ಪರಿಗಣಿಸು.

THE VIJAYA BANK, LIMITED,
ದಿ ವಿಜಯ ಬೇಂಕ್ ಲಿಮಿಟೆಡ್, ಮಡಿಕೇರಿ.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು.

ಮೂಲ ಧನ	ರೂ.	20,00,000
ತೆತ್ತ ಪಾಲು ಭಂಡವಾಳ	ರೂ.	8,77,860
ಕ್ಷೇಮ ನಿಧಿ	ರೂ.	1,65,000

ಕಾಯಂ ಠೇವಣಾತಿಗಳು 1 ತಿಂಗಳಿನಿಂದ 24 ತಿಂಗಳಿನ ಮ್ಯಾದೆ ವರೆಗೆ ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸಲ್ಪಡುವವು. ರೂಪಾಯಿ ಹತ್ತು ಸಾವಿರವ ಮಿಕ್ಕಿದ ಠೇವಣಾತಿಗೆ ಪ್ರತ್ಯೇಕ ಹೆಚ್ಚಿನ ದರ ಬಡ್ಡಿ ಕೊಡಲಾಗುವುದು.

ಎಲ್ಲಾ ತರದ ಬ್ಯಾಂಕು ವಹಿವಾಟ ನಡೆಸಲ್ಪಡುವುದು.

ಬಿ. ಮಂಜಯ್ಯ ಹೆಗ್ಡೆ,
ಎಡ್ವೊಕೇಟ್.
ಬೇಂಕಿನ ಆಡಳಿತ ಕಮಿಟಿ ಅಧ್ಯಕ್ಷರು.
(ಮತ್ತು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷರು)

12-12

ಮಡಿಕೇರಿ ಆಫೀಸಿನ ಏಜೆಂಟ್:—ಯಮ್. ಯಸ್. ಅಯ್ಯ.

ಶನಿವಾರಸಂತೆಗೆ

'ಕೊಡಗು' ಏಜೆಂಟರು,

ಶ್ರೀ ಎಸ್. ಎನ್. ಸಿದ್ದಪ್ಪನವರು

ಸೋಮವಾರಪೇಟೆಗೆ

"ಕೊಡಗು" ಪತ್ರಿಕೆಯ ಏಜೆಂಟರು

ಸಹಕಾರಿ ಸ್ಟೋರ್ಸ್ ಮೇನೇಜರ್

॥ ಪಾಕಿಸ್ತಾನವೆತ್ತ ಸಾಗಿದೆ? ॥

ಲೇ: ಶ್ರೀ ಜ್ಞಾನರಂಜನ ಘೋಷ್.

ಕುರಾನ್ ಮತ್ತು ಸುನ್ನಾಗಳ ಮೇಲೆಯೇ ಆಧರಿಸಲ್ಪಟ್ಟ ಪಾಕಿಸ್ತಾನದಂಥ ದೇಶದಲ್ಲಿ ಮುಸಲ್ಮಾನೇತರರ ಪರಿಸ್ಥಿತಿ ಚಿಂತಾಜನಕವಾಗುವದೆಂದು ಸಿದ್ಧಾಂತವಾಗಿರುವಾಗ, ಸುನ್ನೀಗಳಲ್ಲದ ಮುಸಲ್ಮಾನರು ಶಾಂತ ರೀತಿಯಲ್ಲಿ ಜೀವನ ಸಾಗಿಸುವದು ಕಠಿಣವಾಗಿದೆಯೆಂಬುದನ್ನು ಇತ್ತೀಚಿನ ಘಟನೆಗಳು ಸಿದ್ಧಪಡಿಸಿವೆ. ಇಂದು ಚಿತ್ರಹಿಂಸೆಗೆ ಗುರಿಯಾದವರು ಅಹಮದಿಯಾ ಸಂಗಡದವರಿರಬಹುದು. ಇನ್ನು ಮುಂದಿನ ಸರತಿ ಶಿಯಾ ಮುಸಲ್ಮಾನರಿಗೆ ಬರಬಹುದು. ಆದುದರಿಂದ ಪಾಕಿಸ್ತಾನವು ಸುನ್ನಿಸ್ತಾನವಾಗುವ ಲಕ್ಷಣಗಳು ಎದ್ದು ಕಾಣುತ್ತಿವೆ.

ಪಾಕಿಸ್ತಾನದ ಬಹುಸಂಖ್ಯಾಕ ಜನತೆ ಸುನ್ನೀ ಪಂಥವು ಕುರಾಣದ ತತ್ವಗಳನ್ನು ಅವಲಂಬಿಸಿರುವದಲ್ಲದೆ ಮಹಮದ ಪೈಗಂಬರರು ಜನಜಂಗುಳಿಗೆ ಹೇಳುತ್ತಿದ್ದ ಮತ್ತು ಅವರ ಅನುಯಾಯಿಗಳ ಕಡೆಗೆ ಪರಂಪರಾಗತವಾಗಿ ನಡೆಯುತ್ತ ಬಂದ ಸುನ್ನಾವನ್ನೂ ಅವಲಂಬಿಸಿದೆ. ಈ ಸುನ್ನಿಗಳಲ್ಲಿಯೂ ನಾಲ್ಕು ಒಳಭೇದಗಳುಂಟು. ಅವೆಂದರೆ ಹನೀಫ, ಮಲಿಕ ಮತ್ತು ಶಫಿ ಇವರು ಪಶ್ಚಿಮ ಪಾಕಿಸ್ತಾನದಲ್ಲಿ ಬಹುಸಂಖ್ಯೆಯಲ್ಲಿದ್ದಾರೆ. ಹುಂಬಾಲಿಗಳು ಭಾರತದಲ್ಲಿ ಇಲ್ಲವೇ ಇಲ್ಲವೆಂದು ಹೇಳಬಹುದು. ಈ ಒಳಪಂಗಡಗಳ ತತ್ವಗಳಲ್ಲಿ ಭಿನ್ನತ್ವವಿದ್ದರೂ ಶಿಯಾ ಮತ್ತು ಇತರ ಪಂಗಡಗಳ ವಿರುದ್ಧ ಮಾತ್ರ ಸುನ್ನಾದ ಜನರೆಂದೂ ಸಮಾಜದವರೆಂದೂ ಒಂದೇ 'ಮಿಲಾತ'ಕ್ಕೆ ಸಂಬಂಧಿಸಿದವರಾಗಿ ಒಂದುಗೂಡುತ್ತಾರೆ. ಇತರ ಮುಸಲ್ಮಾನರು ಸುನ್ನಾದಲ್ಲಿ ಶ್ರದ್ಧೆ ಇಲ್ಲದವರಾದ್ದರಿಂದಲೂ ಮೂಲ ತತ್ವಗಳಲ್ಲಿ ತೀವ್ರ ಮತಭೇದವುಳ್ಳವರಾದುದರಿಂದಲೂ ಇವರು 'ಸಮಾಜ'ದವರೆಂದು ಕರೆಯಲ್ಪಡುವದಿಲ್ಲ.

ಭಾರತದಲ್ಲಿ ರಾಷ್ಟ್ರೀಯತ್ವದ ಬೆಳವಣಿಗೆಯಾಗುತ್ತ ಸಾಗಿದಾಗ ಬ್ರಿಟಿಷ್ ಸರಕಾರವು ಜನಗಣತಿಯ ಕಾಲಕ್ಕೆ ಮುಸಲ್ಮಾನರ ಈ ಒಳಪಂಗಡಗಳನ್ನು ನಮೂದಿಸದೆ ಹಿಂದೂಗಳ ವಿರುದ್ಧ ಮುಸಲ್ಮಾನ ಪಂಗಡಗಳೆಲ್ಲವನ್ನೂ ಒಂದುಗೂಡಿಸಿ ಮುಸಲ್ಮಾನ ಮತ್ತು ಮುಸಲ್ಮಾನೇತರ ಮತದಾರ ಸಂಘಗಳಲ್ಲಿ ದೇಶವನ್ನು ವಿಭಜಿಸಿತು. ಈ ಹಿನ್ನೆಲೆಯಲ್ಲಿ ಹಿಂದೂ ದ್ವೇಷದ ತಾತ್ಪೂರ್ತಿಕ ತಳಹದಿಯ ಮೇಲೆ ಜಿನ್ನಾಸಾಹೇಬರು ತಾತ್ಪೂರ್ತಿಕವಾಗಿಯಾದರೂ ಪ್ರಬಲವಾದ ಒಂದು ಮುಸಲ್ಮಾನರ ಪಕ್ಷವನ್ನು ಸ್ಥಾಪಿಸಿದರು. ಆದರೆ ಆ ಸಂಘಟನೆಗೆ ನಿಜವಾದ ಮತ್ತು ಭದ್ರವಾದ ತಳಹದಿ ಇಲ್ಲದ್ದರಿಂದ ಈಗ ತೋರಬಾರಂಭಿಸಿರುವ ಬಿರುಕುಗಳು ಪಾಕಿಸ್ತಾನದಲ್ಲಿ ಘಟನೆಯು ಸಿದ್ಧವಾಗುತ್ತ ನಡೆದಂತೆ ಇನ್ನಷ್ಟು ಹೆಚ್ಚು ನಿಚ್ಚಳವಾಗಿ ತೋರದಿರಲಾರವು.

ಈಗಾಗಲೇ ಪಾಕಿಸ್ತಾನದಲ್ಲಿ ಒಂದು ಸುನ್ನೀತರ ಗುಂಪಾದ ಕಾದಿಯಾನಿ ಜನರ ವಿರುದ್ಧ ತೀವ್ರವಾದ ವಿಷ ಪ್ರಚಾರವು ಉಗ್ರವಾಗಿ ಸಾಗಿದೆ. ಇವರನ್ನು ಪಾಖಂಡಿಗಳ ಸಮಾಜವೆಂದು ಪರಿಗಣಿಸಬೇಕೆಂದು ಪಾಕಿಸ್ತಾನ ಘಟನಾ ಸಮಿತಿಯಲ್ಲಿ ಮಿ. ಎಮ್. ಎಚ್. ಗುರ್ಝುವಾರರು ಒಂದು ಗೊತ್ತುವಳಿ ಮಂಡಿಸಿದ್ದಾರೆ. ಇಸ್ಲಾಮ ರಾಷ್ಟ್ರದಲ್ಲಿ ಇಂಥ ನಿರ್ಣಯವಾದರೆ ಅದರಿಂದ ನಾಗರಿಕತ್ವದ ಹಕ್ಕುಗಳ ಅಪಹಾರವೂ ಆ ಜನರಿಗೆ ಹಿಂಸೆಯೂ ಆಗದಿರಲಾರದು. ಕಾದಿಯಾನಿಗಳ ವಿರುದ್ಧ ನಡೆದಿರುವ ಚಳವಳಿ ಮತ್ತು ಅವರ ಕಾರಣಗಳು ಪಾಕಿಸ್ತಾನದ ಮುಸಲ್ಮಾನರಲ್ಲಿಯ ಇತರ ವಿರೋಧೀ ಗುಂಪುಗಳ ಭವಿತವ್ಯದ ಮೇಲೆ ಚೆನ್ನಾಗಿ ಪ್ರಕಾಶ ಬೀರುತ್ತಿವೆ.

ಅಹಮದೀಯಾ ಜನರೆಂದು ಕರೆಯಲ್ಪಡುವ ಈ ಕಾದಿಯಾನೀ ಜನರು ಗುರುದಾಸಪುರದ ಮಿರ್ಝಾ ಗುಲಾಮ ಅಹಮದರ ಅನುಯಾಯಿಗಳು. ಈ ಮಿರ್ಝಾ ಗುಲಾಮ ಅಹಮದರು ತಾವು ಏಸುಕ್ರಿಸ್ತ ಮತ್ತು ಮಹಮ್ಮದ ಪೈಗಂಬರರ ಸಂಯುಕ್ತ ಅವತಾರಿಗಳಾಗಿರುವದಾಗಿ ೧೮೯೦ ರಲ್ಲಿ ಸಾರಿದರು. ಕಾದಿಯಾನಿಗಳು ತಮ್ಮ ಅದ್ಭುತ ಕರ್ತೃತ್ವಶಕ್ತಿಯನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಸತತೋಪದೇಶದಿಂದಲೂ ಪ್ರಭಾವೀ ಪ್ರಚಾರದಿಂದಲೂ ಕಳೆದ ೬೦ ವರ್ಷಗಳಲ್ಲಿ ಇವರು ತಮ್ಮ ಸಂಖ್ಯೆಯನ್ನು ಬೆಳೆಸಿಕೊಂಡಿದ್ದಾರೆ. ಶೈಕ್ಷಣಿಕ ದೃಷ್ಟಿಯಿಂದ ಅವರು ಮುಂದುವರಿದಿದ್ದು ಮುಸಲ್ಮಾನರಲ್ಲಿ ಶಿಕ್ಷಣ ಪ್ರಸಾರವು ಹೆಚ್ಚಾಗಲಿಕ್ಕೆ ಬಹಳಷ್ಟು ನೆರವನ್ನಿತ್ತಿದ್ದಾರೆ. ಇಸ್ಲಾಮದ ಧ್ವಜವನ್ನು ಇಂಗ್ಲೆಂಡಕ್ಕೂ ಕೂಡ ಒಯ್ದಿದ್ದು ಅಲ್ಲಿ ಒಂದು ಮಸೀದೆಯನ್ನು ಕಟ್ಟಿಸಿರುವದಲ್ಲದೆ ಓರ್ವ ಲಾರ್ಡ್ ಮನೆತನದವರನ್ನೂ ಮುಸಲ್ಮಾನರನ್ನಾಗಿ ಮಾಡಿದ್ದಾರೆ. ಪಾಕಿಸ್ತಾನದ ವಿವಿಧ ಸರಕಾರೀ ನೌಕರಿಗಳಲ್ಲಿ ಈ ಪಂಥದ ಜನರು ಉಚ್ಚಾಧಿಕಾರದ ಸ್ಥಾನದಲ್ಲಿದ್ದಾರೆ.

ಇಷ್ಟೊಂದು ಪ್ರಗತಿಪರವಾದ ಈ ಪಂಗಡವು ಇತ್ತೀಚೆಗೆ ಇಸ್ಲಾಮ ಧರ್ಮದ ಪ್ರಸಾರಕ್ಕಾಗಿ ಇಷ್ಟೊಂದು ಶ್ರಮಿಸಿದ್ದರೂ ಪಾಕಿಸ್ತಾನಕ್ಕೆ ಇವರ ನಿಷ್ಠೆಯು ಅಚಲವಾಗಿದ್ದರೂ ಇವರ ವಿರುದ್ಧ ಇಷ್ಟೊಂದು ಉಗ್ರವಾದ ಮತ್ತು ನಿರ್ದಯತನದ ಪ್ರಚಾರವೇಕೆ ಏಳಬೇಕು? ಅವರ ಭವಿತವ್ಯವು ಪರದೇಶಿಗಳಂತಾಗುವ ಪ್ರಸಂಗವೇಕೆ ಬರಬೇಕು? ಎಂದು ಕೇಳಬಹುದು. ಇದಕ್ಕೆ ಉತ್ತರವೆಂದರೆ ಸುನ್ನಿಗಳಲ್ಲಿರುವ ಕ್ಷುದ್ರ ಮನೋಭಾವನೆ ಮತ್ತು ಅಸಹಿಷ್ಣುತೆಯೇ ಕಾರಣ. ತಮ್ಮ ತತ್ವಗಳಿಗೆ ವಿರೋಧವುಳ್ಳವರನ್ನು ಅವರೆಂದಿಗೂ ಸಹಿಸುವದಿಲ್ಲ. ವಿಶಾಲ ದೃಷ್ಟಿಯಿಂದ ನೋಡಿದರೆ ಕಾದಿಯಾನಿ ಅವರ ತತ್ವಗಳು ಇಸ್ಲಾಮ ಧರ್ಮಕ್ಕನುಸರಿಸಿಯೇ ಇವೆ. ಆದರೆ ಮೂಹದಿ ಮತ್ತು ಜಿಹಾದಗಳ ತತ್ವಗಳ ಬಗ್ಗೆ ಮಾತ್ರ ಅವರಲ್ಲಿ ತೀವ್ರ ಭಿನ್ನಾಭಿಪ್ರಾಯವಿದೆ. ಕಾದಿಯಾನಿ ಅವರ ಮೂಹದಿ ಮಿರ್ಝಾ ಗುಲಾಮ ಅಹಮದ ಇವರು ಏಸು ಕ್ರಿಸ್ತ ಮತ್ತು ಮಹಮದ ಪೈಗಂಬರರ ಸಂಮಿಲಿತ ಅವತಾರವೆಂದು ಅವರು ಭಾವಿಸುತ್ತಾರೆ. ಇಸ್ಲಾಮ ವಿರೋಧಿಗಳ ಮೇಲೆ ಧರ್ಮಯುದ್ಧ ಹೂಡಿದಾಗ ಅಗ್ನಿ ಮತ್ತು ಖಡ್ಗಗಳನ್ನು ಆಶ್ರಯಿಸುವದು ನ್ಯಾಯ ಸಮ್ಮತ ಮಾರ್ಗವೆಂದು ಇಸ್ಲಾಮ ಧರ್ಮಾಂಧರು ಭಾವಿಸುತ್ತಿದ್ದರೆ ಅಂಥ ಧರ್ಮ ವಿರೋಧಿಗಳ ವಿರುದ್ಧ ಧರ್ಮಯುದ್ಧವನ್ನೆಸಗಬೇಕಾದಾಗ ಶಸ್ತ್ರಾಸ್ತ್ರಗಳನ್ನುಪಯೋಗಿಸದೆ ಶಾಂತ ಉಪಾಯಗಳನ್ನು ಯೋಚಿಸಬೇಕೆಂದು ಕಾದಿಯಾನಿಗಳ ಧರ್ಮಶಾಸ್ತ್ರದ ಒಂದು ಶಾಸನವಿದೆ. ಇಂಥ ನಿರುಪದ್ರವೀ ಮತ್ತು ಮಾನವೀ ನಂಬಿಕೆಯನ್ನವಲಂಬಿಸಿದ್ದರಿಂದಲೇ ಪಾಕಿಸ್ತಾನದ ವಿಷಯವಾಗಿ ಅಚಲ ನಿಷ್ಠೆ ತಾಳಿರುವ ಮತ್ತು ಕುರಾಣ ಹಾಗೂ ಪೈಗಂಬರರ ವಿಷಯದಲ್ಲಿ ದೃಢ ಶ್ರದ್ಧೆ ಇರುವ ಈ ಸಮಾಜದ ಭವಿತವ್ಯವು ಇಂದು ಗಂಡಾಂತರದಲ್ಲಿ ಸಿಲುಕಿದೆ.

ಕಾದಿಯಾನಿ ಮುಖಂಡರು ಜಿನ್ನಾಸಾಹೇಬರ ನಿಕಟ ಪಕ್ಷಾನುವರ್ತಿಗಳಾಗಿ ಪಾಕಿಸ್ತಾನದ ನಿರ್ಮಾಣಕ್ಕಾಗಿ ದುಡಿದಿದ್ದಾರೆ. ಆದರೆ ಇಂದು ಅದೇ ಸಮಾಜಕ್ಕೆ ಪಾಕಿಸ್ತಾನವು ಗಂಡಾಂತರ ಪ್ರದೇಶವಾಗಿ ಪರಿಣಮಿಸಿದೆ.

ಸುನ್ನೀ ಜನರ ವರ್ಚಸ್ಸಿಗೊಳಗಾದ ಪಾಕಿಸ್ತಾನದಲ್ಲಿ ಶಿಯಾ ಜನರೂ ಸುಖದಿಂದ ಜೀವಿಸುವದು ಕಠಿಣವಾಗಿದೆ. ಇರಾಣ, ಎಮೆನಗಳಂಥ ಶಿಯಾ ರಾಷ್ಟ್ರಗಳನ್ನು ಹೊರ್ತುಪಡಿಸಿ ಇತರ ಎಲ್ಲ ಇಸ್ಲಾಮ ರಾಷ್ಟ್ರಗಳಲ್ಲಿಯ ಶಿಯಾ ಜನರು ಪಾಖಂಡಿಗಳಂತೆ ಚಿತ್ರಹಿಂಸೆಗೆ ಅನಾದಿಕಾಲದಿಂದ ಗುರಿಯಾಗುತ್ತ ಬಂದಿದ್ದಾರೆ. ಮುಸಲ್ಮಾನ ಧರ್ಮದಲ್ಲಿರುವ ಭಿನ್ನ ಭಿನ್ನ ಒಳಪಂಗಡಗಳಿಗೆ ಶಿಯಾ ಎಂಬ ಸರ್ವಸಾಮಾನ್ಯ ಹೆಸರು ಇದೆ. ಈ ಪಂಗಡದವರು ಪೈಗಂಬರರ ನಿಧನದ ನಂತರ ಅಲಿಯು ಕ್ರಮಬದ್ಧ ರೀತಿಯಲ್ಲಿ ಖಲೀಫನಾದನೆಂದು ನಂಬುತ್ತಾರೆ. ಅವರು ಸುನ್ನಾದ ಅಧಿಕಾರವನ್ನು ಮನ್ನಿಸುವದಿಲ್ಲ. ಅವರ ತತ್ವಗಳೂ ಧರ್ಮಾಚರಣೆಯೂ ಸುನ್ನಾಕ್ಕೆ ಭಿನ್ನವಾಗಿರುವದರಿಂದ ಸುನ್ನಾದ ಮೇಲೆ ಆಧರಿಸಲ್ಪಟ್ಟಿರುವ ರಾಜ್ಯದಲ್ಲಿ ಸುನ್ನಿಗಳಿಗಿರುವ ನಾಗರಿಕತ್ವದ ಅಧಿಕಾರಗಳನ್ನೂ ರಾಜಕೀಯ ಸ್ಥಾನಮಾನಗಳನ್ನೂ ಸುನ್ನಿ ರಾಜ್ಯಘಟನೆಯಲ್ಲಿ ಪಡೆಯಲಾರರು.

ಮೂರು ಸುಫಿಗಳಾದ ಖೋಜಾ, ಬೋರಾ, ಮೇಮನರಂಥ ತೀರ ಉಗ್ರ ಶಿಯಾಗಳ ಸ್ಥಾನವಂತೂ ಇನ್ನಷ್ಟು ಅಭದ್ರವಾಗಿದೆ. ಸುನ್ನಿಗಳ ದೃಷ್ಟಿಯಲ್ಲಿ ಅವರು ಧರ್ಮಮಾರ್ಗದಿಂದ ಅಕ್ಷಮ್ಯವಾಗಿ ಚ್ಯುತರಾಗಿದ್ದಾರೆ. ಸುಫಿ ಅವರ ಭಾವನಾ ಪ್ರಧಾನ ಭಕ್ತಿ, ಆಚರಣೆಗಳು ಸುನ್ನೀ ಜನರ ತೀವ್ರ ರೋಷಕ್ಕೆ ಪಾತ್ರವಾಗಿವೆ. ಬೇರೆ ಬೇರೆ ಕಾಲದಲ್ಲಿ ಬೇರೆ ಸುನ್ನಿ ರಾಷ್ಟ್ರಗಳಲ್ಲಿ ಅವರು ವಿಪರೀತ ಹಿಂಸಾಕೃತಿಗಳಿಗೊಳಗಾಗಿದ್ದಾರೆ.

ಸುಫಿ ಪಂಗಡದವರು ಬಹು ಸಂಖ್ಯಾತರಾಗಿರುವ ಸಿಂಧ ಪ್ರಾಂತವು ಈಗಾಗಲೇ ಪಾಕಿಸ್ತಾನ ಸರಕಾರದ ಮುಲತಾಯಿ ಪ್ರೀತಿಗೊಳಗಾಗಿದೆ. ಸಿಂಧ್ ಮುಸ್ಲಿಂ ಲೀಗನ್ನು ರದ್ದುಪಡಿಸಲಾಗಿದ್ದು ನಿರ್ವಾಸಿತರಾಗಿ ಪಂಜಾಬಕ್ಕೆ ಬಂದವರ ವರ್ಚಸ್ಸಿಗೆ ಸಿಂಧೀ ಮುಸಲ್ಮಾನರು ಒಳಗಾಗಬೇಕಾಗಿ ಬಂದಿದೆ. ಇತರ ಆರ್ಥಿಕ ಮತ್ತು ರಾಜಕೀಯ ಕಾರಣಗಳ ಜೊತೆಗೆ ಸುನ್ನೀ ಜನರ ಬಗ್ಗೆ ಸುಫೀಗಳಲ್ಲಿರುವ ವಿತುಷ್ಟಿಯೂ ಸಿಂಧದಲ್ಲಿ ಇಂತಹ ಪರಿಸ್ಥಿತಿಯುದ್ಭವಿಸಲು ಕಾರಣವಾಗಿರಬಹುದು. ಸಿಂಧದಲ್ಲಿ ಸುಫಿಗಳು ಸಂಲಗ್ನರಾದಂತಾಗಿದ್ದು ಕಾದಿಯಾನಿಗಳನ್ನು ಪೀಡಿಸುತ್ತಿರುವಂತೆ ಸುನ್ನಿಗಳು ಅವರ ಎದುರಿಗೆ ನಿಂತು ಹೋರಾಡುವದು ಶಕ್ಯವಾಗಲಾರದು. ಆದರೆ ಪಾಕಿಸ್ತಾನದ ರಾಜ್ಯ ಘಟನೆಯ ಮೂಲಭೂತ ತತ್ವಗಳ ಬಗ್ಗೆ ಸುನ್ನಿ ಮತ್ತು ಸುಫಿಗಳ ನಡವೆ ವಿತುಷ್ಟಿ, ಘರ್ಷಣೆಗಳು ಆಗದೆ ಇರಲಾರದು. ಸ್ಥಾನಿಕ ಸ್ವತ್ತ್ರಿಯ ಹೊರತೆನ್ನೊಳಗೊಂಡ ಸುಫೀಗಳು ತಮ್ಮ ಭವಿಷ್ಯವನ್ನು ರಕ್ಷಿಸುವದಕ್ಕಾಗಿ ವಿಶ್ವಪ್ರಯತ್ನ ಮಾಡದಿರಲಾರರು.

ಪಾಕಿಸ್ತಾನದ ಉದ್ಯಮ-ವಾಣಿಜ್ಯ ಕ್ಷೇತ್ರಗಳಲ್ಲಿಯ ಶ್ರೇಷ್ಠರು ಸುನ್ನಿಗಳಲ್ಲ. ಅವರು ಸಂಖ್ಯಾಬಲದಿಂದ ದುರ್ಬಲರಾಗಿರುವದರಿಂದ ಅವರ ಐಶ್ವರ್ಯವು ಅವರ ಕಡುವಿರೋಧಿಗಳಾದ ಸುನ್ನಿಗಳನ್ನು ಆಕರ್ಷಿಸದೆ ಇರಲಾರದು. ಆದುದರಿಂದ ಅಹಮದೀಯಾ ಜನರ ನಂತರ ಅವರನ್ನು ಹತ್ತಿಕ್ಕುವಲ್ಲಿ ಸುನ್ನಿಗಳು ಯಶಪಡೆದರೆ ಮುಂದಿನ ಸರತಿ ಈ ಸುಫಿ ಜನರದಾಗುವದು.

(ಇಂಡಿಯಾ ಪ್ರೆಸ್ ಸರ್ವಿಸ್, ಮುಂಬಯಿ)

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.
BUSINESS IN FORCE OVER 40 CRORES
ASSETS .... OVER 12 CRORES
Applications from energetic youngmen are invited for representation.
25-8
Head Office; BOMBAY.
Branch: 172. 3, Narasimharaja Road. BANGALORE 2.

Licence No. 60.
Licensed to Post without Prepayment

Reg. No. M. 1550.
"KODAGU" MERCARA (Coorg)

ಶಾಂತಕ್ರಾಂತಿಯ ದೇವದೂತ

ಸರ್ವ ತ್ಯಾಗ ಮಾಡಿದ ರಾಜರ್ಷಿ

ವಿನೋಬಾಭಾವೆಗೆ ಲಂಡನಿನ "ಬಿ. ಬಿ. ಸಿ."ಯ ಪ್ರಶಂಸೆ

'ಈ ಮಹಾನ್ ಪುರುಷನು ತನ್ನ ತ್ಯಾಗ ಮತ್ತು ಸೇವೆಗಳಿಂದ, ಸನ್ಯಾಸದಿಂದ ಜನತೆಯ ಹೃದಯಗಳನ್ನು ಪ್ರವೇಶಿಸಿರುವನು. ತಾನು ಸಂಪರ್ಕಿಸುವ ಜನರೊಡನೆ ಆತ್ಮೀಯವಾಗಿ ಸಂಭಾಷಿಸಲು–ಅವರ ಕಷ್ಟಸುಖಗಳನ್ನು ಸರಿಯಾಗಿ ತಿಳಿಕೊಳ್ಳಲು ಈತನು ಹದಿನಾರು ಭಾಷೆಗಳನ್ನು ಕಲಿತುಕೊಂಡಿರುವನು. ಭಾರತದ ಇತರ ಮಹಾ ಋಷಿಗಳಂತೆ ಈತನೂ ಪ್ರಾಪಂಚಿಕ ಸುಖಗಳಿಗೆಲ್ಲ ತಿಲಾಂಜಲಿಯಿತ್ತು, ಜನತಾ ಸೇವೆಗಾಗಿ–ತನ್ನ ತ್ಯಾಗದಿಂದಲೇ ಶಕ್ತಿಯನ್ನು ಸಂಪಾದಿಸಿರುವನು.'–ಈ ನುಡಿಗಳಿಂದ ಮಿ. ಹಲ್ಲಮ್ ಟೆನ್ನಿಸನ್ನರು, ಕಳೆದ ವಾರ, ಲಂಡನಿನ ಬ್ರಿಟಿಷ್ ಬ್ರೊಡ್ ಕಾಸ್ಟಿಂಗ್ ಕೋರ್ಪೊರೇಶನ್'ನಿಂದ (ಬಿ. ಬಿ. ಸಿ.) ಆಚಾರ್ಯ ವಿನೋಬಾ ಭಾವೆಯವರ ಕುರಿತು, ಇಂಗ್ಲೆಂಡಿನ ಸಾವಿರಾರು ಜನರಿಗೆ, ವ್ಯಕ್ತಿ ಚಿತ್ರವನ್ನು ವರ್ಣಿಸಿದರು. (ಮಿ. ಟೆನ್ನಿಸನ್ನರು ವಿನೋಬಾರವರನ್ನೂ, ಅವರ ಕಾರ್ಯ ವಿಧಾನವನ್ನೂ, ಇಲ್ಲಿಗೆ ಬಂದು ಸ್ವತಃ ಕಂಡವರು.) ವಿಹಾರಕ್ಕಾಗಿ ಹೊರ ಹೊರಟ ಸಾವಿರಾರು ಜನರು ಮನೆಗಳಲ್ಲಿ ನಿಂತು ಈ ಮಹಾವ್ಯಕ್ತಿಯ ಕುರಿತಾದ ವಿವರವನ್ನು ಶ್ರದ್ಧೆಯಿಂದಾಲಿಸಿದರು.

'ನೂರಾರು ಜನರು ಈ ಋಷಿಗೆ ತಮ್ಮ ಮೋಟಾರ್ ವಾಹನಗಳನ್ನೊಪ್ಪಿಸಲು ಸಿದ್ಧರು. ಆದರೆ ಈತನು ವಾಹನಗಳಲ್ಲಿ ಚಲಿಸುವವನಲ್ಲ. ಭಾರತದ ಗ್ರಾಮ್ಯಗಳಲ್ಲಿರುವ ಬಡ ರೈತರೊಡನೆ ವಾಹನಗಳಿಲ್ಲ–ವಿನೋಬಾ ಕೂಡ ಆ ರೈತರಿಗಿಲ್ಲದುದನ್ನು ತಾನು ಅನಂದಿಸುವವನಲ್ಲ, ಪಾದಾಚಾರಿಯಾಗಿ ಹೋಗಿಯೇ ಅವರನ್ನು ಸಂಪರ್ಕಿಸುತ್ತಾನೆ.

'ಗ್ರಾಮಗಳಲ್ಲಿ, ಭೂಮಾಲಿಕರೊಡನೆ ವಿನೋಬಾ, ಭೂದಾನದ ಕುರಿತು ಚರ್ಚಿಸುತ್ತಾನೆ. ನೆರೆದ ಜನಸ್ತೋಮವು ಈ ಸಭೆಯಲ್ಲಿ ಪೂಜ್ಯಭಾವ ತಾಳಿ ಆಲಿಸುತ್ತಿರುತ್ತಾರೆ. ವಿನೋಬಾ, ಜನತೆಗೆ ಅನ್ನ–ಆಶನಗಳನ್ನೂ ಶಾಂತಿಯನ್ನೂ ಕೊಡಲು ಹೊರಟ ದೇವದೂತನಂತೆ ತೋರುತ್ತಾನೆ.

"ವರ್ಗದ್ವೇಷವನ್ನು ಬಿಟ್ಟುಬಿಡಿರಿ; ಎಲ್ಲರ ಮೇಲ್ಮೆಗಾಗಿ ಶ್ರಮಿಸಿರಿ. ಆಗ ನಾನೂ ನಿಮ್ಮನ್ನು ಸೇರುವೆನು–ಎಂದು ವಿನೋಬಾ, ಕಮ್ಯೂನಿಸ್ಟರಿಗೆ ಹೇಳುತ್ತಾನೆ.

'ದಾನ ಮಾಡುವ ಶ್ರೀಮಂತರು, ಆ ದಾನದಲ್ಲಿ ಕಿಂಚಿತ್ತಾದರೂ ಕೃಪಣತ್ವ ತೋರಿದರೆ ವಿನೋಬಾ ಕೇಳುವವನಲ್ಲ. ಭೂದಾನ ಮಾಡುವವರು ಆರರಲ್ಲೊಂದಂಶವಾದರೂ ಕೊಡಬೇಕೆಂದು ಆಗ್ರಹಪಡಿಸುವನು.'

'ವಿನೋಬಾ ನೈಜಭಾರತದ ಪ್ರತಿನಿಧಿ. ಅವನು ಗಾಂಧಿಜಿಯವರ ಶಿಷ್ಯನಹುದು; ಆದರೆ, ಕೇವಲ ಗಾಂಧಿಜಿಯವರ ಅನುಕರಣೆ ಮಾಡುವವನಲ್ಲ. ಅವನು ಭಾಷಣಗಳಲ್ಲಿ ಗಾಂಧಿಜಿಯವರ ಕುರಿತು ಮಾತಾಡುವುದೇ ಕಡಿಮೆ ಅವನು ಪ್ರತ್ಯೇಕವಾದೊಂದು ಜ್ಯೋತಿಯಾಗಿ ಉಜ್ವಲಿಸುತ್ತಿದ್ದಾನೆ.

'ಇಪ್ಪತ್ತನೇ ಶತಮಾನವು ಜೆಟ್ ವಿಮಾನಗಳಲ್ಲಿ ಸಮೃದ್ಧವಿದೆ; ಬೇಕಾದಷ್ಟು ವಿಮಾನಗಳಿವೆ. ಆದರೆ ಬೆಳಕು ತೋರುವ ವಿನೋಬರಂಥಾ ಸಂತರಲ್ಲಿ ಬಡವಾಗಿದೆ.'

ಪ್ರ.

(೩ನೇ ಪುಟದಿಂದ)

ನ್ನೂ ಹೆಚ್ಚಾದವು. ಜವರೇಗೌಡನು ನೋವಿನಿಂದ ಕಣ್ಣೀರ್ಗರೆಯುತ್ತಾ "ಅಯ್ಯೋ, ಅಯ್ಯೋ" ಎಂದು ಕೂಗತೊಡಗಿದನು. ಕೂಡಲೇ ಬೋರೇಗೌಡನು ಅವನ ಮೇಲೆ ಕುಳಿತು ಕತ್ತನ್ನು ಅಮುಕಿ, ಕೊಲ್ಲುವಂತೆ ನಟಿಸಿ, "ಮಾಫಿ! ಹೇಳು; ತಪ್ಪಾಯಿತು ಎಂದು ಹೇಳು" ಎಂದು ಘರ್ಜಿಸಿ ಅವನ ಕಿವಿಯಲ್ಲಿ "ಮದುವೆಯ ವಿಚಾರದಲ್ಲಿ ನೀನು ನನಗೆ ಮಾಡಿದ ದ್ರೋಹವನ್ನು ಮರೆತಿಲ್ಲ" ಎಂದನು.

ಜವರೇಗೌಡನ ಎದೆ 'ಧಸಕ್' ಎಂದಿತು.

ಜನಗಳಿಗೆಲ್ಲ ಆಶ್ಚರ್ಯವಾಯಿತು. ನ್ಯಾಯವಾಗಿ ರಾಮನು ರಾವಣನನ್ನು ಕೊಲ್ಲಬೇಕು, ಆದರೆ ಇದೇನು! ರಾಮನು ರಾವಣನಿಂದ ತಪ್ಪಾಯಿತು ಎಂದು ಹೇಳಿಸುತ್ತಿದ್ದಾನಲ್ಲಾ! ಕಥೆಯನ್ನು ಈ ರೀತಿಯಾಗಿ ಭಾಗವತನು ಬದಲಾಯಿಸಬಹುದು ಎಂದು ಯೋಚಿಸಿದರು.

ಜವರೇಗೌಡನ ಪರಿಸ್ಥಿತಿ ವರ್ಣಿಸಲಸದಳವಾಯಿತು. ಬೋರೇಗೌಡನು ಹೀಗೆ ಮಾಡುತ್ತಾನೆಂದು ತಿಳಿದಿದ್ದರೆ ಪಾತ್ರವನ್ನೇ ವಹಿಸುತ್ತಿರಲಿಲ್ಲವೆಂದುಕೊಂಡನು. ಆದರೆ ಈಗ ಮಾಡುವದೇನು? ಬೋರೇಗೌಡನು ಹಗಲ ಮೇಲೇರಿ ಹೂಂಕರಿಸುತ್ತಿದ್ದಾನೆ. ಕೊನೆಗೆ ಯತ್ನವಿಲ್ಲದೆ, "ನಾನು ನಿನಗೆ ಬಹಳ ಅನ್ಯಾಯ ಮಾಡಿದೆ ರಾಮ, ದಯವಿಟ್ಟು ನನ್ನನ್ನು ಕ್ಷಮಿಸು" ಎಂದು ರಾಮನ ಕಾಲಿಗೆ ಬಿದ್ದನು.

ಎಲ್ಲೆಲ್ಲಿಯೂ ಕರತಾಡನಗಳಾದವು. ಕೂಡಲೇ ಬೋರೇಗೌಡನು ಸಂತೋಷದಿಂದ ತೆರೆಯನ್ನು ಬೀಳಿಸಿಬಿಟ್ಟನು. ಆಟ ಅಲ್ಲಿಗೆ ಮುಗಿಯಿತು. ಬೋರೇಗೌಡನ ಪ್ರತೀಕಾರ ಫಲಿಸಿತು.

—ಕಥಾಲೋಕ.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	..	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಖಾತೆ (Current Deposits)	ರೂ.	0–8–0
ಸೇವಿಂಗ್ಸ್ (ತಾ. 1—1—1953 ರಿಂದ)	,,	1–8–0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1–8–0
1 ವರುಷ	,,	2–0–0
2 ವರುಷ	..	2–8–0
3 ವರುಷ	,,	3–0–0
5 ವರುಷ	,,	3-12-0
10 ವರುಷ	,,	4–0–0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ ಅಪ್ಪಯ್ಯ,
ಪ್ರೆಸಿಡೆಂಟ್ & ಖಜಾನ್ಜಿ.

THE CANARA BANKING CORPORATION LIMITED.

(Incorporated in India with limited liability)

[Estd: 1906]

NOTICE.

we have great pleasure in announcing that the Office of the Bank at Mercara will be Shifted to the Bank's own newly-constructed premises at Pioneer Road on Saturday, the 16th May, 1953 and it will commence regular work at the new premises from Monday, the 18th May, 1953.

S. RANGA RAO, B. A.,
Agent.

Specialists in Tailoring! Prompt Service!!

FOR English Felt Hats,

Wedding Suits, Ladies Over Coats

AND

Latest Designs in Wollen Suitings

— CALL ON —

25-12 PATTU BROTHERS,

Opp.— Town Hall, MYSORE.

Edited Printed and Published by P. I. BELLIAPPA at 'Kodagu' Press Mercara, for Kod g Ltd.,

ಕೊಡಗು

ಪಾಸಾದಪ್ಪಕ್ಕೆ ಪೆಪ್ಪೆ ಎಲ್ಲಿ?

ವಾರ್ಷಿಕ ಚಂದಾ ರೂ. ೫—೦—೦ ಶುಕ್ರವಾರ

ಸಂಪುಟ ೩೧ ಸಂಚಿಕೆ ೪೯ ೧೫--೫--೧೯೫೩

KODAGU KANNADA WEEKLY MERCARA

ಶಾಂತಕ್ರಾಂತಿಯ ದೇವದೂತ

ಸರ್ವ ತ್ಯಾಗ ಮಾಡಿದ ರಾಜರ್ಷಿ

ವಿನೋಬಾಭಾವೆಗೆ ಲಂಡನಿನ "ಬಿ. ಬಿ. ಸಿ."ಯ ಪ್ರಶಂಸೆ

'ಈ ಮಹಾನ್ ಪುರುಷನು ತನ್ನ ತ್ಯಾಗ ಮತ್ತು ಸೇವೆಗಳಿಂದ, ಸನ್ಯಾಸದಿಂದ ಜನತೆಯ ಹೃದಯಗಳನ್ನು ಪ್ರವೇಶಿಸಿರುವನು. ತಾನು ಸಂಪರ್ಕಿಸುವ ಜನರೊಡನೆ ಆತ್ಮೀಯವಾಗಿ ಸಂಭಾಷಿಸಲು–ಅವರ ಕಷ್ಟಸುಖಗಳನ್ನು ಸರಿಯಾಗಿ ತಿಳಕೊಳ್ಳಲು ಈತನು ಹದಿನಾರು ಭಾಷೆಗಳನ್ನು ಕಲಿತುಕೊಂಡಿರುವನು. ಭಾರತದ ಇತರ ಮಹಾ ಋಷಿಗಳಂತೆ ಈತನೂ ಪ್ರಾಪಂಚಿಕ ಸುಖಗಳಿಗೆಲ್ಲ ತಿಲಾಂಜಲಿಯಿತ್ತು, ಜನತಾ ಸೇವೆಗಾಗಿ–ತನ್ನ ತ್ಯಾಗದಿಂದಲೇ ಶಕ್ತಿಯನ್ನು ಸಂಪಾದಿಸಿರುವನು.'–ಈ ನುಡಿಗಳಿಂದ ಮಿ. ಹಲ್ಲಮ್ ಟೆನ್ನಿಸನ್ನರು, ಕಳೆದ ವಾರ ಲಂಡನಿನ ಬ್ರಿಟಿಷ್ ಬ್ರೊಡ್ ಕಾಸ್ಟಿಂಗ್ ಕೋರ್ಪೊರೇಶನಿ'ನಿಂದ (ಬಿ. ಬಿ. ಸಿ.) ಆಚಾರ್ಯ ವಿನೋಬಾ ಭಾವೆಯವರ ಕುರಿತು, ಇಂಗ್ಲೆಂಡಿನ ಸಾವಿರಾರು ಜನರಿಗೆ, ವ್ಯಕ್ತಿ ಚಿತ್ರವನ್ನು ವರ್ಣಿಸಿದರು. (ಮಿ. ಟೆನ್ನಿಸನ್ನರು ವಿನೋಬಾರವರನ್ನೂ, ಅವರ ಕಾರ್ಯ ವಿಧಾನವನ್ನೂ, ಇಲ್ಲಿಗೆ ಬಂದು ಸ್ವತಃ ಕಂಡವರು.) ವಿಹಾರಕ್ಕಾಗಿ ಹೊರ ಹೊರಟ ಸಾವಿರಾರು ಜನರು ಮನೆಗಳಲ್ಲಿ ನಿಂತು ಈ ಮಹಾವ್ಯಕ್ತಿಯ ಕುರಿತಾದ ವಿವರವನ್ನು ಶ್ರದ್ಧೆಯಿಂದಾಲಿಸಿದರು.

'ನೂರಾರು ಜನರು ಈ ಋಷಿಗೆ ತಮ್ಮ ಮೋಟಾರ್ ವಾಹನಗಳನ್ನೊಪ್ಪಿಸಲು ಸಿದ್ಧರು. ಆದರೆ ಈತನು ವಾಹನಗಳಲ್ಲಿ ಚಲಿಸುವವನಲ್ಲ. ಭಾರತದ ಗ್ರಾಮ್ಯಗಳಲ್ಲಿರುವ ಬಡ ರೈತರೊಡನೆ ವಾಹನಗಳಿಲ್ಲ–ವಿನೋಬಾ ಕೂಡ ಆ ರೈತರಿಗಿಲ್ಲದ್ದುದನ್ನು ತಾನು ಅನಂದಿಸುವವನಲ್ಲ, ಪಾದಾಚಾರಿಯಾಗಿ ಹೋಗಿಯೇ ಅವರನ್ನು ಸಂಪರ್ಕಿಸುತ್ತಾನೆ.

'ಗ್ರಾಮಗಳಲ್ಲಿ, ಭೂಮಾಲಿಕರೊಡನೆ ವಿನೋಬಾ, ಭೂದಾನದ ಕುರಿತು ಚರ್ಚಿಸುತ್ತಾನೆ. ನೆರೆದ ಜನಸ್ತೋಮವು ಈ ಸಭೆಯಲ್ಲಿ ಪೂಜ್ಯಭಾವ ತಾಳಿ ಆಲಿಸುತ್ತಿರುತ್ತಾರೆ. ವಿನೋಬಾ, ಜನತೆಗೆ ಅನ್ನ–ಅಶನಗಳನ್ನೂ ಶಾಂತಿಯನ್ನೂ ಕೊಡಲು ಹೊರಟ ದೇವದೂತನಂತೆ ತೋರುತ್ತಾನೆ.

"ವರ್ಗದ್ವೇಷವನ್ನು ಬಿಟ್ಟುಬಿಡಿರಿ; ಎಲ್ಲರ ಏಳ್ಗೆಗಾಗಿ ಶ್ರಮಿಸಿರಿ. ಆಗ ನಾನೂ ನಿಮ್ಮನ್ನು ಸೇರುವೆನು–ಎಂದು ವಿನೋಬಾ, ಕಮ್ಯೂನಿಸ್ಟರಿಗೆ ಹೇಳುತ್ತಾನೆ,

'ದಾನ ಮಾಡುವ ಶ್ರೀಮಂತರು, ಆ ದಾನದಲ್ಲಿ ಕಿಂಚಿತ್ತಾದರೂ ಕೃಪಣತ್ವ ತೋರಿದರೆ ವಿನೋಬಾ ಕೇಳುವವನಲ್ಲ. ಭೂದಾನ ಮಾಡುವವರು ಆರರಲ್ಲೊಂದಂಶವಾದರೂ ಕೊಡಬೇಕೆಂದು ಆಗ್ರಹಪಡಿಸುವನು.'

'ವಿನೋಬಾ ನೈಜಭಾರತದ ಪ್ರತಿನಿಧಿ. ಆವನು ಗಾಂಧಿಜಿಯವರ ಶಿಷ್ಯನಹುದು; ಆದರೆ, ಕೇವಲ ಗಾಂಧಿಜಿಯವರ ಅನುಕರಣೆ ಮಾಡುವವನಲ್ಲ. ಆವನು ಭಾಷಣಗಳಲ್ಲಿ ಗಾಂಧಿಜಿಯವರ ಕುರಿತು ಮಾತಾಡುವುದೇ ಕಡಿಮೆ ಆವನು ಪ್ರತ್ಯೇಕವಾದೊಂದು ಜ್ಯೋತಿಯಾಗಿ ಉಜ್ವಲಿಸುತ್ತಿದ್ದಾನೆ.

'ಇಪ್ಪತ್ತನೇ ಶತಮಾನವು ಜೆಟ್ ವಿಮಾನಗಳಲ್ಲಿ ಸಮೃದ್ಧವಿದೆ; ಬೇಕಾದಷ್ಟು ವಿಮಾನಗಳಿವೆ. ಆದರೆ ಬೆಳಕು ತೋರುವ ವಿನೋಬರಂಥಾ ಸಂತರಲ್ಲಿ ಬಡವಾಗಿದೆ.'

ಪ್ರ

(೩ನೇ ಪುಟದಿಂದ)

ನ್ನೂ ಹೆಚ್ಚಾದವು. ಜವರೇಗೌಡನು ನೋವಿನಿಂದ ಕಣ್ಣೀರ್ಗರೆಯುತ್ತಾ "ಅಯ್ಯೋ, ಅಯ್ಯೋ" ಎಂದು ಕೂಗತೊಡಗಿದನು. ಕೂಡಲೇ ಬೋರೇಗೌಡನು ಅವನ ಮೇಲೆ ಕುಳಿತು ಕತ್ತನ್ನು ಅಮುಕಿ, ಕೊಲ್ಲುವಂತೆ ನಟಿಸಿ, "ಪಾಪಿ! ಹೇಳು; ತಪ್ಪಾಯಿತು ಎಂದು ಹೇಳು" ಎಂದು ಘರ್ಜಿಸಿ ಅವನ ಕಿವಿಯಲ್ಲಿ "ಮದುವೆಯ ವಿಚಾರದಲ್ಲಿ ನೀನು ನನಗೆ ಮಾಡಿದ ದ್ರೋಹವನ್ನು ಮರೆತಿಲ್ಲ" ಎಂದನು.

ಜವರೇಗೌಡನ ಎದೆ 'ಧಸಕ್' ಎಂದಿತು.

ಜನಗಳಿಗೆಲ್ಲ ಆಶ್ಚರ್ಯವಾಯಿತು. ನ್ಯಾಯವಾಗಿ ರಾಮನು ರಾವಣನನ್ನು ಕೊಲ್ಲಬೇಕು, ಆದರೆ ಇದೇನು! ರಾಮನು ರಾವಣನಿಂದ ತಪ್ಪಾಯಿತು ಎಂದು ಹೇಳಿಸುತ್ತಿದ್ದಾನಲ್ಲಾ! ಕಥೆಯನ್ನು ಈ ರೀತಿಯಾಗಿ ಭಾಗವತನು ಬದಲಾಯಿಸಬಹುದು ಎಂದು ಯೋಚಿಸಿದರು.

ಜವರೇಗೌಡನ ಪರಿಸ್ಥಿತಿ ವರ್ಣಿಸಲಸದಳವಾಯಿತು. ಬೋರೇಗೌಡನು ಹೀಗೆ ಮಾಡುತ್ತಾನೆಂದು ತಿಳಿದಿದ್ದರೆ ಪಾತ್ರವನ್ನೇ ವಹಿಸುತ್ತಿರಲಿಲ್ಲವೆಂದುಕೊಂಡನು. ಆದರೆ ಈಗ ಮಾಡುವುದೇನು? ಬೋರೇಗೌಡನು ಎದೆಯ ಮೇಲೇರಿ ಹೂಂಕರಿಸುತ್ತಿದ್ದಾನೆ. ಕೊನೆಗೆ ಯತ್ನವಿಲ್ಲದೆ, "ನಾನು ನಿನಗೆ ಬಹಳ ಅನ್ಯಾಯ ಮಾಡಿದೆ ರಾಮ, ದಯವಿಟ್ಟು ನನ್ನನ್ನು ಕ್ಷಮಿಸು" ಎಂದು ರಾಮನ ಕಾಲಿಗೆ ಬಿದ್ದನು.

ಎಲ್ಲೆಲ್ಲೂ ಕರತಾಡನಗಳಾದವು. ಕೂಡಲೇ ಬೋರೇಗೌಡನು ಸಂತೋಷದಿಂದ ತೆರೆಯನ್ನು ಬೀಳಿಸಿಬಿಟ್ಟನು. ಆಟ ಅಲ್ಲಿಗೆ ಮುಗಿಯಿತು. ಬೋರೇಗೌಡನ ಪ್ರತೀಕಾರ ಫಲಿಸಿತು.

—ಕಥಾಲೋಕ.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಷೇರು ಭಂಡವಾಳ	ರೂ.	10,00,000
ವಸೂಲಾದ ಷೇರು ಹೊಣಿಗೆ	..	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟುಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ ಅಪ್ಪಯ್ಯ, ಪ್ರೆಸಿಡೆಂಟ್ & ಖಜಾನ್ಚಿ.

THE CANARA BANKING CORPORATION LIMITED.

(Incorporated in India with limited liability)

[ESTD: 1906]

NOTICE.

We have great pleasure in announcing that the Office of the Bank at Mercara will be Shifted to the Bank's own newly-constructed premises at Pioneer Road on Saturday, the 16th May, 1953 and it will commence regular work at the new premises from Monday, the 18th May, 1953.

S. RANGA RAO, B. A.,
AGENT.

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-12 PATTU BROTHERS,

OPP.— Town Hall, MYSORE.

Edited Printed and Published by P. I. BELLIAPPA at 'KODAGU' Press Mercara, for Kodagu Ltd.

ಕೊಡಗು

ಪಾಸಾದಷ್ಟಕ್ಕೆ ಪೆಪ್ಪೆ ಏಕೆ ?

ವಾರ್ಷಿಕ ಚಂದಾ ರೂ. ೫—೦—೦ ಶುಕ್ರವಾರ

ಸಂಪುಟ ೩೧ ಸಂಚಿಕೆ ೪೯ ೧೫--೫--೧೯೫೩

KODAGU KANNADA WEEKLY MERCARA

ವಾರದ ಕಥೆ.

** ಚಿರ ದುಃಖಿಗಳು **

ಲೇ:— ಕುಮಾರಿ ಪಿ. ಎಂ. ಕಮಲ, ಪೊನ್ನಂಪೇಟೆ.

ಅಂದು ಬುಧವಾರವೆಂದು ತೋರುತ್ತೆ. ನಾನು ಪ್ರಭಾನನ್ನು ಕರೆದುಕೊಂಡು ಶಿಶುವಿಹಾರಕ್ಕೆ ಹೋಗಿದ್ದೆ. ನಾನು ಶಿಶುವಿಹಾರಕ್ಕೆ ಹೋದಾಗಲೆಲ್ಲಾ ಒಂದಲ್ಲ ಒಂದು ಮಗು ಅಳುತ್ತಿರುವದು ರೂಢಿ. ಆದರೆ ಅಂದು ಎಲ್ಲಾ ಮಕ್ಕಳೂ ನಗು ಮುಖದಿಂದ ಜಯ ಹೇಳಿಕೊಡುತ್ತಿದ್ದ ಪದ್ಯವಾಡಿ ಕುಣಿಯುತ್ತಿದ್ದರು. ಆ ದೃಶ್ಯ ಮನಸ್ಸಿಗೆ ತುಂಬಾ ಸಂತೋಷವನ್ನುಂಟು ಮಾಡುತ್ತಿತ್ತು. ಜಯ, ಪೊನ್ನು ಇಬ್ಬರು ಅಲ್ಲಿಯ ಉಪಾಧ್ಯಾಯಿನಿಯರು. ಪೊನ್ನು ನನ್ನ ಸಹಪಾಠಿ. ನಾನು ಹೋದಾಗಲೆಲ್ಲ ಆಕೆ "ಸಿ. ಎಲ್." ತೆಗೆದುಕೊಂಡು ನನ್ನೊಡನೆ ಮಾತಿಗೆ ಕೂರುತ್ತಿದ್ದಾಳೆ. ನಾನು ಆಗಾಗ ಶಿಶುವಿಹಾರಕ್ಕೆ ಹೋಗುತ್ತಿದ್ದುದರಿಂದ ಅಲ್ಲಿಯ ಮಕ್ಕಳ ಪರಿಚಯ ಕೆಲವುಟ್ಟಿಗೆ ಇತ್ತು. ಅಲ್ಲಿ ನನ್ನ ಪ್ರೀತಿಯ ಮಗುವೆಂದರೆ ಪ್ರೇಮ. ಸುಂದರ ಮುಗ್ಧ ಮನೋಭಾವದ ಮಗು ಆತ. ಒಬ್ಬರಿಗಿಂಥಾ ಒಬ್ಬರು ಮಿಗಿಲಾದ ಜೀನ್, ಉಷಾ, ಹರೀಶ್, ರಮೇಶರಿದ್ದರೂ ನನ್ನ ಮೆಚ್ಚುಗೆಯನ್ನು ಪಡೆದವನೆಂದರೆ ಪ್ರೇಮ. ಅಳುವ ಮಕ್ಕಳಿಗಾಗಿ ಒಂದು ಟಿನ್ನು ಪೆಪ್ಪರಮಿಂಟು 'ಲಾಸೆಂಜರ್ಸು' ಶಾಲೆಯಲ್ಲಿ ಇಟ್ಟುಕೊಂಡಿದ್ದರು. ನಾನು ಹೋದಾಗಲೆಲ್ಲ ಪ್ರೇಮನಿಗೊಂದು ಪೆಪ್ಪರುಮೆಂಟು ಸಿಕ್ಕಿಯೇ ಸಿಕ್ಕುತಿತ್ತು, ಅದಕ್ಕಾಗಿ ನನ್ನನ್ನು ನೋಡಿದಾಕ್ಷಣ ಪ್ರೇಮ ಓಡಿ ಬರುತ್ತಿದ್ದ. ಎಂದಿನಂತೇ ಪೊನ್ನುವೂ ನಾವೂ ಮಾತಿಗಾರಂಭಿಸಿದೆವು. ಜತೆಗೆ ಜಯನೂ ಬಂದು ಸೇರಿದಳು. ಯಾರೋ ಮೂರು ಗ್ಲಾಸು ಕೇಸರಿ ಬಣ್ಣದ ಶರಬತ್ತು ತಂದು ಮೇಜಿನ ಮೇಲಿಟ್ಟು ಹಾರಿ ಮುಂದಕಿಸಿದರು. ಅಷ್ಟರಲ್ಲಿಯೇ ಲತನೂ ಬಂದು 'ನಾನೇ ಕಳುಹಿಸಿದ್ದು ಕುಡಿಯಿರಿ ಬೇಗನೆ' ಎಂದು ಗ್ಲಾಸನ್ನು ಕೈಗಿತ್ತು ಬೆನ್ನ ಹಿಂದೆ ನಿಂತಳು. ಆಕೆಯ ತುಂಟ ವರ್ತನೆ ನನಗೂ ಪೊನ್ನುವಿಗೂ ಮೊದಲೇ ತಿಳಿದಿತ್ತು. ಏನೋ ಮೋಸವಿರಬಹುದೆಂದು ಒಬ್ಬರ ಮುಖವೊಬ್ಬರು ನೋಡ ತೊಡಗಿದೆವು. ಪಾಪದ ಜಯಳಿಗೇನೂ ತಿಳಿಯದೆ ಗ್ಲಾಸು ಬಾಯಿಗಿಟ್ಟಳು. ಹಿಂದೆ ನಿಂತು ಲತಾ ಒಂದೇ ಸಮನೇ ಕೇಕೇ ಹಾಕಿ ನಗತೊಡಗಿದಳು ಅದು ಬರೇ ಬಣ್ಣದಿಂದ ಕೂಡಿದ ನೀರಾಗಿತ್ತು. ಅಂದು ಏಪ್ರಿಲ್ 'ಆಲ್ ಫೂಲ್ಸ್‌ಡೆ' ಅದಕ್ಕಾಗಿಯೇ ನಿಮ್ಮನ್ನೆಲ್ಲಾ 'ಫೂಲ್' ಮಾಡಬೇಕೆಂದೇ ನಾನು ಶರಬತ್ ಕಳುಹಿದ್ದೆಂದು ಜಯನ ಬೆನ್ನಿಗೆರಡು ಗುದ್ದಿದಳು. ಆಕೆ ಓದುತ್ತಿರುವಾಗಲಂತೂ ಆಕೆಯ ಕುಚೇಷ್ಟೆಯಿಂದ ನನಗೂ ಪೊನ್ನುವಿಗೂ ದಿನಕ್ಕೆರಡಾದರೂ ಪೆಟ್ಟು ಮಾಸ್ಟರಿಂದ ತಪ್ಪುತ್ತಿರಲಿಲ್ಲ. ಮಾತಿನ ಮಧ್ಯೇ ಆಗಲೇ ಹನ್ನೊಂದುವರೆ ಆಗಿ ಬಿಟ್ಟಿದ್ದಿತು. ಇನ್ನು ಹೋಗೋಣ, ಹೇಗೂ ಪದ್ಮನ ಮದುವೆಗೆ ಮೂವರೂ ಜತೆಗೂಡಿಯೇ ಹೋಗುವುದೆಂದು ನಿರ್ಣಯಿಸಿ ನಾನೂ ಲತಾಳು ಹೊರಟೆವು.

ಮದುವೆ ಮುಗಿಸಿ ಹಿಂತಿರುಗುವಾಗ ಗಂಟೆ ನಾಲ್ಕಾದರೂ ಬಿಸಿಲಿನ ಝಳ ಕಡಿಮೆ ಆಗಿರಲಿಲ್ಲ. ಹೆಚ್ಚು ಹೊತ್ತು ಮದುವೆ ಮನೆಯಲ್ಲಿರುವುದು ಒಳಿತಲ್ಲವೆಂದು ಪದ್ಮನ ಅನುಮತಿ ಪಡೆದು ಹೊರಟೆವು. ನನ್ನೊಡನೆ ಬೇರೆಯಾರೂ ಇಲ್ಲದ ಕಾರಣ ನಿರಾತಂಕವಾಗಿ ಮಾತಾಡುತ್ತಾ, ಸಾವಧಾನದಿಂದ ಹೋಗಬಹುದೆಂದು ರಾಜಾ ರಸ್ತೆ ಬಿಟ್ಟು ಕಾಲು ದಾರಿ ಹಿಡಿದೆವು. ದಾರಿಯುದ್ದಕ್ಕೂ ಅಲ್ಲಿ ಕೂತು, ಇಲ್ಲಿ ಕೂತು ಸಿಕ್ಕಿದ ಹಣ್ಣು ಕಾಯಿ ತಿನ್ನುತ್ತಾ ಮಾತಿನ ಮಧ್ಯೆ ದಾರಿ ತಿಳಿಯದೆ ಎಲ್ಲಿಯೋ ಬಂದು ಬಿಟ್ಟೆವು. ನಾಲ್ಕಾರು ದಾರಿ ಕವಲೊಡೆದಿದೆ. ನಮ್ಮ ದಾರಿ ಯಾವದೆಂದು ಸರಿಯಾಗಿ ತಿಳಿಯದು. ಜತೆಗೆ ಲತ ತೃಷೆಯಿಂದ ಕಂಗಾಲಾಗಿದ್ದಳು. ಪಕ್ಕದಲ್ಲೇ ಸಣ್ಣ ಗುಡಿಸಲೊಂದು ಕಾಣಿಸುತ್ತಿತ್ತು. ಹೇಗೂ ಮೊದಲು ಅಲ್ಲಿಗೆ ಹೋಗಿ ತೃಷೆ ಆರಿಸಿ ಆಮೇಲೆ ನಮ್ಮ ದಾರಿ ಹಿಡಿದರಾಯಿತೆಂದು ಲತನದಾಯಿತು. ಹತ್ತಿರ ಬಂದಂತೆಲ್ಲಾ ಆ ಮನೆಯಲ್ಲಿ ಜನವಾಸವಿದ್ದಾರೋ ಎಂಬ ಸಂಶಯ ಬರುವಂತಿತ್ತು. ತೀರಾ ಸಮೀಪ ಹೋದಾಗ ಸ್ತ್ರೀಯೊಬ್ಬಳು ಅಂಗಳದಲ್ಲಿ ಕುಳಿತು ಏನೋ ಮಾಡುತ್ತಿದ್ದಂತೆ ಭಾಸವಾಯಿತು. ನೀರಡಿಕೆಯಾಗಿದ್ದ ಲತ "ಅಮ್ಮಾ ಸ್ವಲ್ಪ ನೀರುಕೊಡಿ ತುಂಬಾ ದಣುವಾಗಿದೆ" ಎಂದಳು. ಆ ಹೆಂಗಸು ಚೊಂಬೊಂದನ್ನು ತಂದು "ಬನ್ನಿ! ಹಿಂದುಗಡೆಯೇ ಬಾವಿ ಇದೆ. ನೀವೇ ನೀರು ತೆಗೆದು ಕುಡಿಯಿರೆಂದು" ಬಾವಿ ತೋರಿದಳು. ನಾವು ಅತ್ತ ಹೋದೆವು. ಅದು ಬಾವಿಯಾಗಿರಲಿಲ್ಲ. ಅದೊಂದು ನೀರುಗುಂಡಿ. ಕಪ್ಪೆಗಳ ನೆಲೆವೀಡಾಗಿ ಮಾಸಲು ಬಣ್ಣದಿಂದ ಕೂಡಿದ ಸ್ವಲ್ಪ ನೀರಿರುವ ಗುಂಡಿಯಾಗಿತ್ತು. ಅದರಿಂದಲೇ ಅವರ ದಾರುಣಾವಸ್ಥೆ ತಿಳಿಯುವಂತಿತ್ತು. ಆ ಸ್ತ್ರೀಯ ಕೊಳೆತುಂಬಿದ ಸೀರೆ, ಹರಕಲು ರವಕೆ, ಕೆದರಿದ ತಲೆಯನ್ನು ನೋಡಿ ಮನಸ್ಸಿಗೆ ತುಂಬಾ ವ್ಯಸನವಾಗುತ್ತಿತ್ತು. ಅಲ್ಲೇ ಅರೆಗಳಿಗೆ ಕೂತು ಆಕೆಯೊಡನೆ ಮಾತಾಡಬೇಕೆಂದೂ ಆಕೆಯ ಕತೆ ತಿಳಿಯಬೇಕೆಂದೂ ಮನಸಾಯಿತು ಆಕೆಯು ಅರ್ಧ ಅರ್ಧ ಹರಿದಿದ್ದ ಚಾಪೆಯೊಂದನ್ನು ತಂದು ಹಾಸಿದಳು. ಒಂದು ಮಗುವನ್ನೆತ್ತಿಕೊಂಡು ಬಂದು ಮೂಲೆಯೊಂದರಲ್ಲಿ ಕೂತಳು. ಮಗು ಸಣ್ಣದೇನಲ್ಲ. ಏಳೆಂಟು ವರ್ಷವಿರಬಹುದು. ಕಾಯಿಲೆಯಿಂದ ನರಳುವಂತಿತ್ತು. ಆ ಪರಿಸ್ಥಿತಿಯನ್ನು ನೋಡಿ ನಮ್ಮ ಬಾಯಿಂದ ಮಾತೇ ಹೊರಡದಾಯಿತು.

ಆಕೆಯೇ ಮಾತಿಗಾರಂಭಿಸಿದಳು. "ನಿಮ್ಮಂಥಾ ಹೆಣ್ಣು ಮಕ್ಕಳನ್ನು ನೋಡಿದಾಗ ನನ್ನ ಕರಳೂ ಹಿಂಡುತ್ತೆ. ನಾನು ಸಾಕಿದ ನನ್ನ ಮಕ್ಕಳು ಇಂದು ಇದ್ದಿದ್ದರೆ— " ಎನ್ನುವಷ್ಟರಲ್ಲೇ ಗಂಟಲು ಬಿಗಿದು ಕಣ್ಣಿನಿಂದ ಒಂದೆರಡು ಹನಿ ನೀರು ತಟಕನೆ ಬಿದ್ದವು. ಇನ್ನೂ ಏನೋ ಆಕೆಯ ಕಥೆ ಇರಬಹುದೆಂದು ತಿಳಿದ ಪೊನ್ನು "ಈಗ ಅವರೆಲ್ಲಾ ಎಲ್ಲಿ? ನೀವು ಒಬ್ಬರೇ ಇರುವದೇ? ಈ ಮಗುವಿಗೇನು ತುಂಬಾ ನರಳುತ್ತಿದ್ದಾನೆ?" ಎಂದು ಕೇಳಿದಳು. ಆಕೆಯ ಸ್ಥಿತಿ ಬಾಯಿಬಿಟ್ಟು ಮಾತಾಡುವಷ್ಟು ಇಲ್ಲದಿದ್ದರೂ ಗದ್ಗದ ಕಂಠದಿಂದ ಮಾತಿಗಾರಂಭಿಸಿದಳು. "ಈಗ ನಾವು ಮೂವರೇ ಉಳಿದಿದ್ದೇವೆ. ಈತನ ತಂದೆ ಕೆಲಸಕ್ಕೆ ಹೋಗಿದ್ದಾರೆ. ಮಗುವಿಗೆ ಕಾಯಿಲೆಯಾಗಿ ಆರು ತಿಂಗಳಾಯಿತು. ಜ್ವರ ಬಿಡುವಂತಿಲ್ಲ. ವಾಂತಿ, ಕೆಮ್ಮಲು. ಔಷಧಿ ಮಾಡಿ ಸಾಕಾದೆವು. ಆಸ್ಪತ್ರೆ ನಮ್ಮಂಥವರಿಗೇನು ಹೇಳಿದಲ್ಲ. ಒಬ್ಬ ದಿನಕೂಲಿ ಮಾಡಿ ಮೂವರ ಹೊಟ್ಟೆ ಹೊರೆಯಬೇಕು. ಕಂಡ ಕಂಡ ದೇವರಿಗೆ ಹರಕೆ ಹೊತ್ತು ಸಾಕಾದೆವು. ಇದೇ ಕಾಯಿಲೆಯಿಂದಲೇ ನನ್ನ ಮೂರು ಮಕ್ಕಳೂ ತೀರಿದರು. ಈ ಮಗುವಿಗೂ ಆ ಕಾಯಿಲೆ ಈಗ ಪ್ರಾರಂಭವಾಗಿದೆ. ಆಸ್ಪತ್ರೆಯಲ್ಲಿ ಡಾಕ್ಟರರು ಮಗುವನ್ನು ನೋಡಿ ಬಿಡದೆ ಆರು ತಿಂಗಳು ಔಷಧಿ ಕೊಡಬೇಕೆಂದು ಒಂದು ಚೀಟಿ ಬರೆದು ಕೊಟ್ಟರು. ಅಲ್ಲದೆ ಆ ಔಷಧಿ ಆಸ್ಪತ್ರೆಯಲ್ಲಿಲ್ಲ. ಬೇರೆಲ್ಲಿಯಾದರೂ ಕೊಂಡುಕೊಳ್ಳಿ, ಇಲ್ಲಿ ಸಿಕ್ಕುವದಿಲ್ಲವೆಂದೂ ಹೇಳಿದರು. ಮಗುವಿನ ಮೇಲಿನ ಅಭಿಮಾನದಿಂದ ಒಂದು ಕುಪ್ಪಿ ಔಷಧಿ ನಾವಿಬ್ಬರೂ ಹೊಟ್ಟೆಗಿಲ್ಲದೆ ಸಂಪಾದಿಸಿ ತಂದೆವು. ಬೆಲೆ ಆರುವರೆ ರೂಪಾಯಿ! ಅದು ತೀರಿದಂತೆ ಪುನಹ ನಾವೆಲ್ಲಿಂದ ಅಷ್ಟು ಹಣ ಕೊಟ್ಟು ಔಷಧಿ ತರುವದು? ನಾಲ್ಕಾರು ಮಕ್ಕಳೇ ನಮಗೆ ಆಸ್ತಿ, ಸಕಲ ಸಂಪತ್ತು. ಆ ಭಾಗ್ಯ ದೇವರು ಕೊಟ್ಟರೂ ನಮಗೆ ಇಟ್ಟು ಕೊಳ್ಳುವ ಲಭ್ಯವಿಲ್ಲದಾಯಿತು. ಕೈಕಾಲು ಗುಂದಿದಾಗ ಸಾಕಿ ಸಲಹುವರೆಂದು ನಂಬಿದ್ದ ಮಕ್ಕಳೆಲ್ಲಾ ಕೈಬಿಟ್ಟರು. ಕೂತುಣ್ಣಲು ಅನ್ನವಿಲ್ಲ. ನಮ್ಮದೂ ಕೈಕಾಲು ಕುಂದಿದೆ. ಒಂದು ದಿನ ದುಡಿತವಿಲ್ಲದಿದ್ದರೆ ಹೊಟ್ಟೆಗಿಲ್ಲ. ಕೈಕಸಬು ಮಾಡೋಣವೆಂದರೆ ಬೇಕಾದ ಸಾಮಗ್ರಿ ಹತ್ತಿರವಿಲ್ಲ. ನನಗಂತೂ ಈ ಮಗುವನ್ನು ಬಿಟ್ಟು ಕದಲುವಂತಿಲ್ಲ. ನಾವು ಯಾವಾಗಲೂ ಚಿರದುಃಖಿಗಳು. ದೇವರಿಗೂ ನಮ್ಮ ಮೇಲೆ ದಯೆಯಿಲ್ಲ. ನಮ್ಮ ಮುಂದಿನ ಜೀವನವನ್ನು ನೆನೆದೂ, ನೆನೆದೂ ಕಂಗಾಲಾಗಿದ್ದೇವೆ. ನಮ್ಮ ಕಷ್ಟವನ್ನು ಯಾರೊಡನೆ ಹೇಳುವದು? ಕೇಳುವವರಾದರೂ ಯಾರಿದ್ದಾರೆ? ಇನ್ನೂ ಮಗುವಿಗೇನೂ ಕೊಟ್ಟಿಲ್ಲ. ಸ್ವಲ್ಪ ಗಂಜಿಯಾದರೂ ಬೇಯಿಸಿ ಕೊಡಬೇಕು. ಅಷ್ಟರಲ್ಲೇ ಅತನ ತಂದೆಯೂ ದುಡಿತದಿಂದ ಬರುವರು. ಇನ್ನು ನೀವು ಹೋಗಿ" ಎಂದು ಮಗುವನ್ನೆತ್ತಿ ಒಳನುಗ್ಗಿದಳು.

ಆಕೆಯ ದಾರುಣಾವಸ್ಥೆಯನ್ನು ಕೇಳಿ ಮನಸ್ಸು ಭಾರವಾಗಿತ್ತು. ತಲೆಯಲ್ಲಿ ವಿಚಾರವೇ ಹೊಳೆಯದಾಯಿತು. ನನಗೆ ಮದುವೆಯ ಮನೆಯ ಯೋಚನೆಯಾಯಿತು. ಒಂದೆಡೆ ಹೊಟ್ಟೆಗಿಲ್ಲದೆ ನರಳುವವರು, ಇನ್ನೊಂದೆಡೆ ತಿಂದು ತೇಗಿ ಉದರಶೂಲೆಯಿಂದ ಬಳಲುವವರು. ಇವೆರಡಕ್ಕೂ ಅಂತರವೆಷ್ಟು? ಸಿರಿತನದಿಂದ ಮೈಮರೆತವರಿಗೆ ದೀನದಲಿತರ ಯೋಚನೆ ಎಲ್ಲಿ? ಹೊಟ್ಟೆಗಿಲ್ಲದವರ ಸಮಸ್ಯೆಯನ್ನು ಯಾರೂ ಯೋಚಿಸಲಾರರು. ತಾನೇ ತಿಂದು ಉಳಿದು ಬೇಕಾದ ಸೌಕರ್ಯವನ್ನೊದಗಿಸಿಕೊಂಡು ಸಾಯಬೇಕೆಂಬುದೇ ಸರ್ವರ ಆಸೆ. ಶಕ್ತಿ ಇರುವಾಗ ದುಡಿದು ಮುದಿ ಪ್ರಾಯದ ಕಾಲಕ್ಕೆ ಉಳಿಸಿಟ್ಟು ಕೊಳ್ಳುವ ಪರಿಸ್ಥಿತಿ ಇಂದಿನ ಸಮಾಜದಲ್ಲಿ ಬಹು ಸಂಖ್ಯೆಯವರಿಗೆ ಇಲ್ಲ. ದುಡಿತದ ಕೂಲಿ ದೈನಂದಿನ ಜೀವನಕ್ಕೆ ಸಾಲದು. ಹಾಗಿರುವಾಗ ಮುಪ್ಪಿನ ಕಾಲದಲ್ಲಿ ಜೀವನ ನಡೆಸಲು ಅನುವಾಗುವಂತೆ ಕೇವಲ ಎಲ್ಲರಿಗೂ ಒಂದಂಗುಲ ಭೂಮಿಬೇಕು. ಕೊನೆಗಾಲದಲ್ಲಿ ಕೂತುಣ್ಣುವಷ್ಟು ಅವಕಾಶ ದೊರೆಯಬೇಕು. ಹಾಗಾದರೆ ನಮ್ಮ ದೇಶದಲ್ಲಿ ಶಾಂತಿ ಇಷ್ಟಾಗಬೇಕಾದರೆ ಸಮತಾವಾದವೇ ಬರಬೇಕು. ಶ್ರೀ ವಿನೋಬಭಾವೆಯವರ ಭೂದಾನ ಯಜ್ಞ ಯಶಸ್ವಿಯಾಗಬೇಕು. ಹೇಗೂ ದೀನದಲಿತರ ಸೇವೆಗಿಳಿದ ವಿನೋಬಭಾವೆಗಾದರೂ ಪರಮಾತ್ಮನು ಧೀರ್ಘಾಯುಷ್ಯವನ್ನೀಯಲೆಂದು ಅಂತರಾತ್ಮ ತಾನಾಗಿಯೇ ಪ್ರಾರ್ಥಿಸಿತು. ಆದರೆ ಅನಿರ್ವಚನೀಯವಾದ ವ್ಯಾಕುಲತೆಯೊಂದು ಮಾತ್ರ ಹೃದಯವನ್ನು ಪೀಡಿಸುತ್ತಲೇ ಇತ್ತು.

THE CANARA BANKING CORPORATION LIMITED.

(Incorporated in India with limited liability)

[ESTD: 1906]

NOTICE.

We have great pleasure in announcing that the Office of the Bank at Mercara will be Shifted to the Bank's own newly-constructed premises at Pioneer Road on Saturday, the 16th May. 1953 and it will commence regular work at the new premises from Monday, the 18th May, 1953.

S. RANGA RAO. B. A.,
AGENT.

ನಗು ಮಲ್ಲಿಗೆ.

ಲಾಯರ.– ನೀವು ಹೇಳಿದ್ದನ್ನೆಲ್ಲಾ ಕೇಳಿದೆ. ಇದು ಒಳ್ಳೆಯ ಕೇಸು. ಇದರಲ್ಲಿ ಖಂಡಿತ ನಿಮಗೆ ಪರವಾಗಿ ತೀರ್ಮಾನವಾಗುವಂತೆ ಮಾಡುವದು ನನ್ನ ಕೆಲಸ

ಕಕ್ಷಿಗಾರ– ಹಾಗಾದರೆ ಕೋರ್ಟಿಗೆ ಹತ್ತದೆ ಹೊರಗೆ ಈ ಕೇಸನ್ನು ತೀರ್ಮಾನಿಸಿಕೊಳ್ಳುವದೇ ಹಿತ

ಲಾಯರು– ಏಕೆ? ನಾನಿರುವಾಗ ನಿಮಗೆ ಬೇಸರವೇಕೆ? ಕೇಸು ಚೆನ್ನಾಗಿದೆ.

ಕಕ್ಷಿದಾರ– ನಾನು ಹೇಳಿದ್ದು ನನ್ನ ವಿರೋಧಿಯ ಕಥೆಯನ್ನು!

* * *

ಎಂ. ಎಲ್. ಎ– ನನ್ನ ಜೀವಮಾನದಲ್ಲಿ ಸಭಿಕರಿಗೆ ಮಾತುಗಾರರನ್ನು ಪರಿಚಯ ಮಾಡುವ ಅತೀ ಉತ್ತಮ ಭಾಷಣವನ್ನು ಕೇಳಿದ್ದು ಮೊನ್ನೆ.

ರಾಮು– ಏನದು? ಹೇಗಿತ್ತು?

ಎಂ ಎಲ್. ಎ– ಅವರು ಹೇಳಿದರು "ಮಹನೀಯರೇ ಮತ್ತು ಮಹಿಳೆಯರೆ, ನಿಮಗೆ ಈಗ ಮಾತಾಡಲಿರುವ ಎಂ. ಎಲ್ ಎ ಗಳ ಪರಿಚಯ ಮಾಡಬೇಕೆಂದು ನನ್ನನ್ನು ಕೇಳಿದ್ದಾರೆ. ನಾನು ಈಗ ಹಾಗೆ ಮಾಡಿರುವೆನು ಅವರು ಈಗ ಹಾಗೆ ಮಾಡುತ್ತಾರೆ.

* * *

"ನಿಮಗೆ ಎಷ್ಟು ಹೇಳಬೇಕು. ಕಾಲು ಮೇಜಿನಿಂದ ತೆಗೆಯಿರಿ ಕುರ್ಚಿ ಮುಂದೆ ಕೂಡಿರಿ. ನಿಮ್ಮ ಹಾಳು ಸಿಗರೇಟು ನಂದಿಸಿರಿ" ಹೆಂಡತಿ ಕಿಡಿಕಿಡಿಯಾಗಿ ಹೇಳಿದಳು

"ಕೇಳು ಸೀತಾ," ಆ ರೀತಿ ನನಗೆ ಆಜ್ಞೆ ಮಾಡಿ ಮಾತಾಡಲು ಇಡೀ ಜಗತ್ತಿನಲ್ಲಿ ಒಂದು ವ್ಯಕ್ತಿಗೆ ಮಾತ್ರ ಅಧಿಕಾರ ಕೊಟ್ಟಿರುವೆನು" ಆತನೆಂದ.

"ಯಾರದು?" ಆಕೆ ಮತ್ತೂ ರೇಗಿದಳು

"ನೀನು ಪ್ರಿಯೆ" ಆತನು ಸಮಾಧಾನದಿಂದ ಹೇಳಿದ.

* * *

ಇಬ್ಬರು ಸ್ನೇಹಿತರು ರಸ್ತೆಯಲ್ಲಿ ಸಂಧಿಸಿದರು ಒಬ್ಬಾತ ಹೇಳಿದ, "ಪಾಪದ ರಾಮು ಕಾಯಿಲೆಯಿಂದ ನರಳುತ್ತಿದ್ದಾನೆ. ಆತನು ಬಹು ತೆಳ್ಳಗಿದ್ದಾನೆ. ಸತ್ತು ಹೋಗುವನೇನೋ!"

"ಆತನು ಸಾಯಲೇಕೆ?" ಇನ್ನೊಬ್ಬ ಪ್ರಶ್ನಿಸಿದ.

"ಅಯ್ಯೋ ಆತನು ಬಹಳ ತೆಳ್ಳಗಾಗಿದ್ದಾನೆ. ನೀನು ತೆಳ್ಳಗಿರುವೆ. ಹಾಗೆಯೇ ನಾನೂ ತೆಳ್ಳಗಿರುವೆನು. ನಮ್ಮಿಬ್ಬರನ್ನು ಜೊತೆಗಲ್ಲಿ ಹಾಕಿದರೂ ನಮಗಿಂತಾ ತೆಳ್ಳಗಿರುವನವನು.

* * *

ತನ್ನ ಹೆಂಡತಿಯ ಹೆರಿಗೆಯ ಸಮಯದಲ್ಲಿ ಹೊರಗೆ ಕಾಯುತ್ತಿದ್ದ ಗಂಡನು ಕೋಣೆಯಿಂದ ಹೊರಗೆ ಬಂದ ನರ್ಸನ್ನು ಕುರಿತು "ನರ್ಸ್, ಎಮ ಕೇರ್ಫುಲ್ ಉಪಯೋಗಿಸುವದೇ ಇಲ್ಲ ಲಿಪ್‌ಸ್ಟಿಕ್ಕೋ?"

* * *

ಗೆ... ... ನಿನಗೆ ಆಶ್ಚರ್ಯವಾಗ... ... ನನ್ನ ಜೀವವನ್ನು ಹತ್ತು ಸಾವಿರ ರೂಪಾಯಿಗಳಿಗೆ ವಿಮೆ ಮಾಡಿರುವೆನು

ಹೆಂಡತಿ– ನೀವು ಯಾವಾಗಲೂ ಸ್ವಾರ್ಥಿಗಳೇ ಯಾವಾಗಲೂ ನಿಮ್ಮ ಜೀವದ ಯೋಜನೆ ವಿನಾ ನನ್ನ ಯೋಚನೆ ಇಲ್ಲ!

* *

ಕಳ್ಳನೊಬ್ಬನು ಪ್ರಯಾಣಿಕನ ಪಕ್ಕಕ್ಕೆ ತಿವಿದು 'ಕೊಡು ಹಣ, ಇಲ್ಲವೇ ಜೀವಕ್ಕೆ ಅಪಾಯವಿದೆ" ಎಂದನು

ಪ್ರಯಾಣಿಕ– ನನ್ನ ಜೀವ ಬೇಕಾದರೆ ತೆಗೆದುಕೋ ನನ್ನ ಹಣವನ್ನು ಮುದಿಪ್ರಾಯದ ಸಮಯಕ್ಕೆಂದ ಉಳಿಸಬೇಕಾಗಿದೆ

* * *

ರೋಗಿ– ಡಾಕ್ಟರೇ ಹೇಳಿ. ನನ್ನ ಕಾಯಿಲೆ ವಾಸಿಯಾಗಬಹುದೇ"

ಡಾಕ್ಟರ– ನಿಜವಾಗಿಯೂ. ಎಕೆಂದರೆ ಈ ಕಾಯಿಲೆ ತಗಲಿದ ಹತ್ತು ಜನರಲ್ಲಿ ಒಬ್ಬರು ಮಾತ್ರ ಉಳಿಯುತ್ತಾರೆಂದು ವೈದ್ಯ ಶಾಸ್ತ್ರದ ಅನುಭವ ಹೇಳುತ್ತದೆ ಈ ಕಾಯಿಲೆ ಹಿಡಿದ ನನ್ನ ರೋಗಿಗಳಲ್ಲಿ ಈಗ ಹತ್ತು ಜನರು ಸತ್ತಿದ್ದಾರೆ ಆದ್ದರಿಂದ ನೀನು ಉಳಿಯಲೇಬೇಕು

ಅಂಜಲಿ



೧.

ವಂಗ ಮಾತೆಯ ಹೃದಯರಂಗದೊಳು ಬೆಳೆದು
ವಿಶ್ವದಲಿ ಕೀರ್ತಿಯ ನಗ ರಿಯನು ಒದಿದು
ವಿಶ್ವ ಕವಿ ಗುರುದೇವನೆಂದೆನಿಸಿಕೊಂಡು
ವಿಶ್ವ ನಿಯಮಕೆ ಬಾಗಿ ಸಾವನಪ್ಪಿಹನು

೨.

ಸರ್ವದಾ ಭಾರತವು ಶಾಂತಿಯುತಬೇಕು
ಎಂಬ ಹಿರಿಬಯಕೆಯನು ಹೃದಯದೊಳಗಾಂತು
ಶಾಂತಿನಿಕೇತನವ ಬೆಳಗಿಸಿದ ರವಿಯಂತು
ಶಾಂತಿಸುಧೆಯ ಜ್ಞಾನದಿಂದಸ್ತಮಿಸಿ ಪೋದಂ

೩.

ಜಗದ ಲೀಲೆಗಳನ್ನು ರವಿಯಾಗಿ ಕಂಡು
ಕಾಣದಿದ್ದುದನ್ನೆಲ್ಲ ಕವಿಯಾಗಿ ಕಂಡು
ಅಮರ ಕೃತಿಗಳ ಬರೆದು ಅಂಗ್ಲ ಪತ್ನಿಯ ಹೀರು
ಬಿತುಗಡೆಗೆ ದುಡಿದ ಕವಿ ಕಣ್ಣು ಮುಚ್ಚಿದಂ.

೪.

ಓ ಗುರುವೆ ಸ್ವರ್ಗದಿಂದಲೇ ಇಣಿಕಿ ನೋಡು
ನಿನ್ನ ನಾಡಲಿ ನಡೆವ ಘೋರ ಸುಲಿಗೆಗಳ
"ಅಯ್ಯೋ ಹಸಿವು ಹಸಿವು ಕೊಡಿರಿ ಅನ್ನ-ವಸ್ತ್ರ
ಉದರ ಒತ್ತುತ ಜನರು ನುಡಿವ ನುಡಿ ಕೇಳು.

೫.

"ಗೀತಾಂಜಲಿ"ಯನಿತ್ತ ಭಾರತೀಯರ ಹಿರಿಯ
ಎಲ್ಲೆ ಮೀರಿದೆ ಜಾತಿ ಮತ ಭೇದವಿಲ್ಲಿ.
ಸ್ವರ್ಗದಿಂದಿಳಿದು ಒಂದೈಕ್ಯ ಗೀತೆಯ ಹಾಡೂ
ಕ್ರಾಂತಿ ಕಾವ್ಯವ ಬರೆದು ಜನಕಾಗಿ ಬಾಳೊ

(ತಾ. ೭-೫-೧೯೫೨ ಗುರುದೇವ ಠಾಗೂರರ ಜನ್ಮದಿನ. ಕಳೆದ ೭ನೆಯ ಆಗಸ್ಟ ಅವರ ಪುಣ್ಯ ದಿನವೆಂದು ಬರೆದ ಈ ಕವಿತೆ ಅವರಿಗೆ ಭಕ್ತಿಯ ಅಂಜಲಿ)

ಲೇಖಕ."ಸೌರಭ" ಮಂಗಳೂರು.

೧೬ ದಶ ಲಕ್ಷ ಜನರ ಪರೀಕ್ಷೆ

ಭಾರತದಲ್ಲಿ ಬಿ. ಸಿ ಜಿ ವ್ಯಾಕ್ಸಿನೇಶನ್ ಪ್ರಾರಂಭವಾದಂದಿನಿಂದ ಅಂದರೆ ೧೯೪೮ರಿಂದ ೧೯೫೩ರ ವರೆಗೆ ಕ್ಷಯರೋಗದ ಸಂಬಂಧದಲ್ಲಿ ೧ ಕೋಟಿ ೬೦ ಲಕ್ಷ ಜನರು ಪರೀಕ್ಷಿಸಲ್ಪಟ್ಟರು ಇವರಲ್ಲಿ ೫೦ ಲಕ್ಷ ಜನರಿಗೆ ಔಷಧೋಪಚಾರ ಅಗತ್ಯವೆಂದು ಕಂಡು ಬಂದು ಅವರಿಗೆ ಬಿ. ಸಿ. ಜಿ. ವ್ಯಾಕ್ಸಿನೇಶನ್ ಮಾಡಲಾಯಿತೆಂದು ತಿಳಿಯುತ್ತದೆ

ಜಯಪ್ರಕಾಶರಿಗೆ ಎರಡು ದಿನಗಳಲ್ಲಿ ೫೦೦ ಎಕರೆ

ಪ್ರಜಾ ಸೋಶಲಿಸ್ಟ್ ಪಕ್ಷದ ಧುರೀಣರಾದ ಶ್ರೀ ಜಯಪ್ರಕಾಶರು ಮಹಬೂಬನಗರ ಜಿಲ್ಲೆಯಲ್ಲಿ ಭೂದಾನ ಪ್ರಚಾರಕ್ಕಾಗಿ ಕೈಗೊಂಡ ೬ ದಿನಗಳ ಸಂಚಾರದ ಮೊದಲನೇ ೨ ದಿನಗಳಲ್ಲಿ ೫೦೦ ಎಕರೆ ಭೂಮಿಯನ್ನು ಸಂಪಾದಿಸಿದ್ದಲ್ಲದೆ ೧೨೦೦ ರೂ. ಗಳ ಕಾಣಿಕೆಯನ್ನು ಪಡೆದರು.

ನಗರ ಕರ್ನೂಲದ ಹಳ್ಳಿಗರನ್ನುದ್ದೇಶಿಸಿ ಭಾಷಣ ಮಾಡುತ್ತಾ ಜಯ ಪ್ರಕಾಶರು ಭೂದಾನ ಯಜ್ಞದ ಉದ್ದೇಶವನ್ನು ಜನರು ಚೆನ್ನಾಗಿ ತಿಳಿದುಕೊಳ್ಳದಿದ್ದುದಕ್ಕೆ ವಿಷಾದ ಪ್ರದರ್ಶಿದರು. ಅದರ ಮಹತ್ವ ಮತ್ತು ಉದ್ದೇಶದ ಮನವರಿಕೆಯಾದರೆ ಜನರು ಹೆಚ್ಚೆಚ್ಚು ಭೂದಾನ ಮಾಡುತ್ತಾ ಹೋಗುವರೆಂದು ಆಶಿಸಲಾಗಿದೆಯೆಂದೂ ಅವರು ಹೇಳಿದರು.

ಭಿಕ್ಷುಕ ವೃತ್ತಿಯು ಅನಿವಾರ್ಯವಾಗಿದೆ.

ಬೊಂಬಾಯಿ ಪ್ರಾಂತದ ಸರ್ಟಿಫಾಯಿಡ್ ಸ್ಕೂಲುಗಳ ಚೀಫ್ ಇನ್ಸ್‌ಪೆಕ್ಟರಾದ ಶ್ರೀ ಪಿ. ಎ. ಕುಲಕರ್ಣಿಯವರು ತಾ. ೨೫-೪-೫೩ನೇ ದಿನ ಬೊಂಬಾಯಿ ಆಲ್ ಇಂಡಿಯಾ ರೇಡಿಯೋ ಸ್ಟೇಷನಿನಿಂದ ಮಾಡಿದ ಭಾಷಣ.

"ಜೀಕೆಂದು ಜನರು ಭಿಕ್ಷೆ ಬೇಡುತ್ತಿಲ್ಲ. ಅನಿವಾರ್ಯವಾಗಿ ಆ ಕಾರ್ಯಕ್ಕಿಳಿದಿದ್ದಾರೆ. ಇದೊಂದು ಪಿಡುಗಲ್ಲ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯ ಅವನತಿಯ ಲಕ್ಷಣವಾಗಿದೆ.

ಉದ್ಯೋಗ ಸಮಸ್ಯೆ ಮತ್ತು ನಿರುದ್ಯೋಗಗಳೂ ಈ ಪಾಡಿಗೆ ಕಾರಣಗಳಾಗಿವೆ. ಕಲಾಕುಶಲರು, ಸುಶಿಕ್ಷಿತರು, ಪದವೀಧರರು ಕೂಡ ಈ ಭಿಕ್ಷಾಟನೆಗೆ ನಿಂತವನ್ನು ನೋಡಬಹುದು. ವೈಯಕ್ತಿಕ ತೊಂದರೆಗಳು, ದುರ್ದೈವ, ದುಃಖಮಯ ದಲಾವಣೆಗಳು ಜನರನ್ನು ಈ ವೃತ್ತಿಗೆ ಇಳಿಸುತ್ತವೆ.

ಇವರಿಗೆ ಉದ್ಯೋಗ ಕೊಡುವ ಸರಕಾರೀ ಯೋಜನೆಯ ಮೂಲಕ ಸಶಕ್ತ ಭಿಕ್ಷುಕರು ದಿನಕ್ಕೆ ನಾಲ್ಕು ರೂಪಾಯಿ ದುಡಿದು ಅದರಲ್ಲಿ ತಮ್ಮ ಜೀವನ ವೆಚ್ಚವನ್ನು ಸಾಗಿಸಿ ಕೆಲವು ಹಣ ಉಳಿಸುತ್ತಿರುವುದು ಅನುಭವಕ್ಕೆ ಬಂದಿದೆ. ವಿಜಾಪುರದಲ್ಲಿ ಈ ದೃಶ್ಯವು ಕಂಡು ಬಂದಿದೆ. ಬರಗಾಲ ಪೀಡಿತ ಸ್ಥಳದಲ್ಲಿ ಭಿಕ್ಷುಕರಿಂದ ಎರಡು ಉತ್ತಮ ಬಾವಿಗಳನ್ನು ಅಗೆಸಲಾಗಿದೆ.

ಭಿಕ್ಷುಕ ವೃತ್ತಿಯು ಮಾನವ ವರ್ಗಕ್ಕೆ ಕೊಡಲ್ಪಟ್ಟ ಒಂದು ಅಪ್ಮಾನವೇ ಆಗಿದೆ. ಆದರೆ ಭಿಕ್ಷುಕರಿಲ್ಲದ ದೇಶ ಜಗತ್ತಿನಲ್ಲಿಲ್ಲ.

ನಮ್ಮ ದೇಶದ ಸಮಾಜ ರಚನೆ, ಸಂಸ್ಕೃತಿ, ಜನ ಸಂಖ್ಯೆ, ಸಾಲದಷ್ಟು ಉತ್ಪನ್ನ ಎರಡು ಶತಮಾನಗಳ ವರೆಗೆ ಅದಕ್ಕೆ ಗಂಟು ಬಿದ್ದಿದ್ದ ಪಾರತಂತ್ರ್ಯ ಇವುಗಳ ದೃಷ್ಟಿಯಿಂದ ನೋಡಿದರೆ ಈ ಪ್ರಶ್ನೆಯಿಂದ ನಾವು ಪಾರಾಗುವುದು ಇನ್ನೂ ಕಷ್ಟವಾಗಿದೆ. ಇತ್ತ ಕಡೆಯ ಮುಗ್ಗಟ್ಟಿನ ಪರಿಸ್ಥಿತಿಯು ನಮ್ಮಲ್ಲಿ ಭಿಕ್ಷಾವೃತ್ತಿಗೆ ಇನ್ನೂ ಚಾಲನೆ ಕೊಟ್ಟಿದೆ.

ಜನರು ಹಳ್ಳಿಗಳಿಂದ ಪಟ್ಟಣಗಳಿಗೆ ಬಂದು ತುಂಬುತ್ತಿದ್ದಾರೆ. ಹಳ್ಳಿಗಳಲ್ಲಿಯ ಸ್ವಾವಲಂಬಿ ಪಂಚಾಯಿತಿ ಪದ್ಧತಿಯು ನಾಶವಾಗಿದೆ. ಕಳೆದ ಎರಡು ಮಹಾಯುದ್ಧಗಳಿಂದ ಈ ಜನರ ಪಟ್ಟಣ ಪ್ರವಾಸವು ಬೆಳೆದಿದೆ.

ಪಟ್ಟಣಗಳಿಗೆ ಜನರು ಬರುತ್ತಿರುವುದಕ್ಕೆ ಔದ್ಯೋಗಿಕ ಕಾರ್ಖಾನೆಗಳೂ ಕಾರಣವಾಗಿವೆ. ಇವುಗಳ ಮೂಲಕ ಬಹಳ ಜನರು ನಿರುದ್ಯೋಗಿಗಳಾದರೂ ಹಳ್ಳಿಗಳಲ್ಲಿಯ ಗುಡಿಕೈಗಾರಿಕೆಗಳ ಉದ್ಯೋಗಗಳು ನಿಂತುಹೋದವು.

ಈ ಪರಿಸ್ಥಿತಿಯಿಂದ ಅವಿಭಕ್ತ ಕುಟುಂಬಗಳ ವ್ಯವಸ್ಥೆಗೆ ಭಂಗವುಂಟಾಯಿತು. ಹಿರಿಯರು ಮನೆಯಲ್ಲಿಯೇ ಉಳಿದರು. ಚಿಕ್ಕವರು ಉದ್ಯೋಗಗಳಿಗಾಗಿ ಹೊರಬಿದ್ದರು. ಜನರಲ್ಲಿ ಸ್ವಾತಂತ್ರ್ಯಪ್ರಿಯತೆಯು ಹೆಚ್ಚಾಯಿತು. ಹಿರಿಯರ ನಿಯಂತ್ರಣವು ಚಿಕ್ಕವರ ಮೇಲೆ ಇಲ್ಲದಂತಾಯಿತು.

ಪಟ್ಟಣಗಳಲ್ಲಿ ಕೂಡ ಜನರಿಗೆ ಸಿಗಬಹುದಾದ ಉದ್ಯೋಗವು ನಿರುದ್ಯೋಗಿಗಳಿಗೆ ಸಾಕಾಗುವಷ್ಟು ಇರಲಿಲ್ಲ. ಆದ್ದರಿಂದ ಅನೇಕರು ಈ ಭಿಕ್ಷಾವೃತ್ತಿಗೆ ಇಳಿಯಬೇಕಾಯಿತು. ಈ ಪರಿಸ್ಥಿತಿಯು ಎಲ್ಲಾ ದೇಶಗಳಲ್ಲಿ ತಲೆದೋರಿತು.

ಭಿಕ್ಷಾವೃತ್ತಿಯನ್ನು ನಿರ್ಮೂಲಗೊಳಿಸುವ ಕಾರ್ಯಕ್ಕೆ ಪಾಶ್ಚಾತ್ಯರು ನಮಗಿಂತ ಬಹಳ ಮೊದಲೇ ಪ್ರಾರಂಭಿಸಿದರು. ಹಿಂದಿನ ಎಲಿಜಬೆತ್ ರಾಣಿಯ ಕಾಲದ ಲ್ಲಿಯೇ ಇಂಗ್ಲೆಂಡಿನಲ್ಲಿ ಈ ಬಗ್ಗೆ ಕೆಲವು ಕಾಯಿದೆಗಳಾದವು. ಮತ್ತು ಆ ಚಳವಳಿಯು ಅಮೇರಿಕೆಗೂ ಹೋಯಿತು. ಪಶ್ಚಿಮ ಗೋಲಾರ್ಧದ ತುಂಬಾ ಈ ಬಗ್ಗೆ ಸರಕಾರೀ ಸರಕಾರೇತರ ಪ್ರಯತ್ನಗಳು ಬಹಳ ನಡೆದವು. ಭಾರತದಲ್ಲಿ ಈ ಸಂಬಂಧವಾಗಿ ಅಷ್ಟು ಕೆಲಸವಾಗದಿದ್ದರೂ ಈ ವಿಷಯದಲ್ಲಿ ಸರಕಾರ ಮತ್ತು ಜನತೆಯ ಲಕ್ಷ್ಯವು ಈಗ ತೊಡಗಿದೆ.

ಇಂತಹ ಕಾರ್ಯಗಳಲ್ಲಿ ಸರಕಾರವೇ ಆಸ್ಥೆ ವಹಿಸದಿದ್ದರೆ ನಡೆಯುವುದಿಲ್ಲ. ಭಾರತದಲ್ಲಿಯ ಅನೇಕ ರಾಜ್ಯಗಳ ಡಿಸ್ಟ್ರಿಕ್ಟ್, ಪ್ರೊಲಿಸ್ ಕಾಯ್ದೆಗಳಲ್ಲಿ ನಿರುದ್ಯೋಗಿಯಾದವನ ಸಮಾಚಾರ ತೆಗೆದುಕೊಳ್ಳುವ ವ್ಯವಸ್ಥೆ ಇದೆ. ಕೆಲವು ರಾಜ್ಯಗಳಲ್ಲಿ ಭಿಕ್ಷುಕ ವೃತ್ತಿಯನ್ನು ನಿವಾರಿಸುವ ಬಗ್ಗೆ ವಿಶಿಷ್ಟ ಕಾಯಿದೆಗಳೂ ಆಗಿವೆ. ಬಂಗಾಲ, ಮದ್ರಾಸು, ಮೈಸೂರು, ಕೊಚ್ಚಿನ್ ರಾಜ್ಯಗಳಲ್ಲಿ ಇರುವ ಭಿಕ್ಷುಕರ ಮತ್ತು ನಿರುದ್ಯೋಗಿಗಳ ಬಗ್ಗೆ ಇರುವ ಕಾಯಿದೆಗಳೇ ಈ ಮಾತಿಗೆ ಸಾಕ್ಷಿ.

ಮುಂಬಾಯಿ ಭಿಕ್ಷುಕರ ಕಾಯಿದೆಯು ಈ ಕ್ಷೇತ್ರದಲ್ಲಿ ಬಹಳ ಮಹತ್ವದ್ದಾಗಿದೆ. ಭಿಕ್ಷುಕರನ್ನು ಒಂದೆಡೆಗೆ ಇಡುವುದು, ಅವರಿಗೆ ಮತ್ತು ಅವರ ಕುಟುಂಬದವರಿಗೆ ಶಿಕ್ಷಣ ಕೊಡುವದು, ಅವರಿಗೆ ಉದ್ಯೋಗ ಕೊಡುವದು ಇವೇ ಮೊದಲಾದ ಅಧಿಕಾರಗಳನ್ನು ಇದು ಕೊಡುತ್ತಿದೆ. ಇದರಿಂದ ಭಿಕ್ಷುಕರನ್ನು ಬೇರೆಡೆ ಒಯ್ದು ಕೂಡ ಆ ಕಾಯಿದೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಭಿಕ್ಷುಕರು ಕಾಣುತ್ತಲೇ ಅವರನ್ನು ಕರೆದುಕೊಂಡು ಹೋಗಿ ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸುವರು. ಮ್ಯಾಜಿಸ್ಟ್ರೇಟರು ಆ ಭಿಕ್ಷುಕರ ವಿವರಗಳನ್ನು ತಿಳಿದುಕೊಂಡು ಅವರನ್ನು ಯಾವುದೊಂದು ಭಿಕ್ಷುಕರ ವಸತಿ (ಸಂಸ್ಕಾರ) ಗೆ ಕಳುಹಿಸುವರು. ಇಂತಹ ವಸತಿಗಳಿಗೆ ಸರ್ಟಿಫಾಯಿಡ್ ಇನ್ಸ್‌ಟಿಟ್ಯೂಶನ್ಸ್ ಎನ್ನುತ್ತಾರೆ.

ಆ ಭಿಕ್ಷುಕನಿಗೆ ಸಂಬಂಧಿಕರಿದ್ದರೆ, ಅವನು ಆ ಮುಂದೆ ಭಿಕ್ಷೆ ಬೇಡಬಾರದೆಂದು ಮುಚ್ಚಳಿಕೆ ಕೊಟ್ಟು ಅವರ ವಶಕ್ಕೆ ಕೊಡುವರು.

ವಸತಿಗಳಲ್ಲಿ ನಾನಾ ಉದ್ಯೋಗಗಳಲ್ಲಿ ಭಿಕ್ಷುಕರಿಗೆ ಶಿಕ್ಷಣ ಕೊಡುವರು. ಅವರಿಗೆ ಸಂಬಂಧಿಕರಿದ್ದರೆ, ಸಂಬಂಧಿಕರ ಹೊಣೆಯ ಮೇಲೆ ಹೊರಗೆ ಬಿಡುವರು. ಇಲ್ಲದಿದ್ದರೆ ಅಲ್ಲಿಯೇ ಇಟ್ಟುಕೊಳ್ಳುವರು.

ಮುಂಬಾಯಿ ಭಿಕ್ಷುಕರ ಕಾಯಿದೆಯು ಈ ವರೆಗೆ ಮುಂಬಾಯಿ ಪಟ್ಟಣ ಮತ್ತು ಅದರ ಉಪ ನಗರಗಳಿಗೆ ಮಾತ್ರ ಅನ್ವಯಿಸಲ್ಪಟ್ಟಿದೆ.

ಭಿಕ್ಷುಕರ ಸಂಖ್ಯೆಯನ್ನು ನಿಶ್ಚಿತವಾಗಿ ಹೇಳಲು ಆಗಿಲ್ಲ. ಅವರನ್ನು ವರ್ಗೀಕರಿಸಿದರೆ, ನಿರುದ್ಯೋಗ, ಅಲ್ಪ ಉತ್ಪನ್ನ, ಮನೆಯಿಂದ ಹೊರಗೆ ಹಾಕಲ್ಪಟ್ಟದು, ಮುಪ್ಪು, ದುಷ್ಟ ಧರ್ಮದ ಬಗ್ಗೆ ಅಜ್ಞಾನ, ಇವೇ ಮೊದಲಾದ ಕಾರಣಗಳಿಗಾಗಿ ಭಿಕ್ಷೆ ಬೇಡುವವರನ್ನು ಕಾಣಬಹುದು.

ಕೆಲವರು ಭಿಕ್ಷೆ ಬೇಡುವದನ್ನು ವ್ಯವಸಾಯವೆಂದು ಮಾಡುವುದೂ ಉಂಟು. ಇತರ ವ್ಯವಸಾಯಗಳಿಗಿಂತ ಇದು ಹೆಚ್ಚು ಲಾಭಕರವಾದುದೆಂದು ಇವರು ಕಾಣುತ್ತಾರೆ. ಇವರು ಮಾತ್ರ ಸಮಾಜ ಘಾತುಕರಾಗಿರುತ್ತಾರೆ. ಇನ್ನು ಕೆಲವರು ಮೋಸ ಮಾಡಿ, ಸುಳ್ಳು ಕಾರಣಗಳಿಗಾಗಿ ದುಡ್ಡು ಕೂಡಿಸುತ್ತಾರೆ. ಇದೊಂದು ಮಾದರಿಯ ಭಿಕ್ಷೆಯೇ ಆಗಿದೆ.

ಇದು ವರೆಗೆ ಮುಂಬಾಯಿ ಭಿಕ್ಷುಕರ ಕಾಯಿದೆಯ ಪ್ರಕಾರ ೧೦ ಸಾವಿರ ಭಿಕ್ಷುಕರನ್ನು ಹಿಡಿಯಲಾಗಿದೆ. ೬ ಸಾವಿರ ಭಿಕ್ಷುಕರಿಗೆ ಶಿಕ್ಷಣ ಕೊಟ್ಟು ಬಿಡಲಾಗಿದೆ. ಇವರಿಗಾಗಿ ತೆರೆಯಲ್ಪಟ್ಟ ವಸತಿಗಳು ೧೮ ಇದ್ದು ಒಂದೊಂದರ ವಸತಿ ವ್ಯವಸ್ಥೆಯು ೧೯೦೦ ಜನರಿಗೆ ಸಾಲುವಷ್ಟು ಇದೆ. ಕುರುಡರು, ಅಂಗಹೀನರು, ವೃದ್ಧರು ಮತ್ತು ಹುಚ್ಚರನ್ನು ಬೇರೆ ಬೇರೆ ಕಡೆಗೆ ಇಡಲಾಗುವದು.

ವಸತಿ ಗೃಹಗಳಲ್ಲಿ ಭಿಕ್ಷುಕರು ಉತ್ತಮ ರೀತಿಯಿಂದ ಕೆಲಸ ಮಾಡುತ್ತಿರುವುದು ಕಂಡು ಬಂದಿದೆ. ಇದೇ ರೀತಿಯಾಗಿ ಅಸಹಾಯ ಸ್ಥಿತಿಯಲ್ಲಿರುವವರಿಗೆ ಉದ್ಯೋಗ ವ್ಯವಸಾಯಗಳನ್ನು ಕಲ್ಪಿಸಿಕೊಟ್ಟರೆ ಮತ್ತು ಕೇವಲ ಭಿಕ್ಷುಕ ವೃತ್ತಿಯನ್ನು ವೃತ್ತಿಯನ್ನಾಗಿಯೇ ಇಟ್ಟು ಕೊಂಡವರಿಗೆ ಪಾಠ ಕಲಿಸಿದರೆ, ಈ ಅನಿಷ್ಟವರ್ಗವನ್ನು ತೆಗೆದು ಹಾಕುವದು ಅಸಾಧ್ಯವೇನೂ ಆಗಲಾರದು.

'ಜೈ ಹಿಂದ್'

ಪೀರಾಜಪೇಟೆಗ
'ಕೊಡಗು' ಏಜೆಂಟರು,
ಶ್ರೀ ಟಿ. ಎಸ್. ಗೋವಿಂದರಾಜು

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10.00 000
ವಸೂಲಾದ ಶೇರು ಹಣ	,,	2,09,000
ರಿಸರ್ವು ನಿಧಿ	,,	63,000
ಇತರ ನಿಧಿಗಳು ...	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಲೆಕ್ಕ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	..	1-8-0
ಫಿಕ್ಸೆಡ್ (Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	.,	2-8-0
3 ವರುಷ	,,	3-0-0
5 ವರುಷ	.,	3-12-0
10 ವರುಷ	.,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಜಿಲ್ಲೆಯ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಬೆಳ್ಳಿಯ ನಗಗಳ ಆಧಾರದ ಮೇಲೆ ಸಹ ಸಾಲ ಕೊಡಲಾಗುವುದು. ಡೀಲ್ ಯಾ ದ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಸ್ಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಕೊಡಲಾಗುವುದು. ರಕ್ಷಣೆಯ ಪೆಟ್ಟಿಗೆಯನ್ನು ಬಾಡಿಗೆಗೆ ತೆಗೆದುಕೊಳ್ಳಬಹುದು.

ಸಿ. ಎಸ್. ಸೋಮಯ್ಯ,	ಕೆ. ಸಿ. ಅಪ್ಪಯ್ಯ,
ಗೌ. ಕಾರ್ಯದರ್ಶಿ.	ಪ್ರೆಸಿಡೆಂಟ್ & ಏಜಂಟ್.

ಬೆಳೆಯ ಸ್ಪರ್ಧೆ

5000 ರೂ. ಗಳ ಪ್ರಥಮ ಬಹುಮಾನ

ಜೂನ್ ತಿಂಗಳ ಮೊದಲನೆಯ ವಾರದಲ್ಲಿ ಬಿತ್ತಿಗೆ ಪ್ರಾರಂಭವಾಗುವ ಮುಂಗಾರು ಬೆಳೆ ಸ್ಪರ್ಧೆಯನ್ನು ಭಾರತ ಸರಕಾರವು ಏರ್ಪಡಿಸುವದು. ಹಿಂದಿನ ವರ್ಷಗಳಂತೆ ಈ ಸಲವೂ ಜೋಳ, ಸಜ್ಜೆ, ಬಟಾಟಿ ಕಡಲೆ, ಗೋಧಿ ಮತ್ತು ಭತ್ತ ಈ ಬೆಳೆಗಳಲ್ಲಿ ಪ್ರತಿಯೊಂದರಲ್ಲಿ ಅತೀ ಹೆಚ್ಚಿನ ಬೆಳೆ ಉತ್ಪಾದಿಸಿದವರಿಗೆ ೫೦೦೦ ರೂ. ಗಳ ಬಹುಮಾನ ಕೊಡಲಾಗುವುದು. ಅವರಿಗೆ ಕೃಷಿ ಪಂಡಿತ ಎಂಬ ಬಿರುದೂ ಕೊಡಲ್ಪಡುವುದು

ಸಮಾಜ ಸೇವೆಗೆ ಯುವಕರ ಅವಶ್ಯಕತೆ

ದೇಶದ ತರುಣರಿಗೆ ಸಮಾಜ ಸೇವೆ ಮತ್ತು ಶಿಸ್ತಿನ ಶಿಕ್ಷಣ ಕೊಟ್ಟು ಅವರನ್ನು ದೇಶ ಕಾರ್ಯಕ್ಷಣಿ ಮಾಡುವುದು ಸದ್ಯದ ಮಾಡತಕ್ಕ ಅಗತ್ಯದ ಕಾರ್ಯವಾಗಿದೆಯೆಂದು ಮಧ್ಯ ಪ್ರದೇಶದ ಹಿಂದಿನ ಗವರ್ನರರಾದ ಶ್ರೀ ಮಂಗಳದಾಸ ಪಕ್ವಾಸ ಇವರು ಸಾಂಗಲಿ ಕೊಲ್ಹಾಪುರ ವಿಭಾಗದ ಸ್ಕೌಟ ಮತ್ತು ಗಾಯಿಡರ ಸಮ್ಮೇಳನದ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತಾ ಹೇಳಿದರು.

ಜಮ್ಮುವಿನಲ್ಲಿ ನೀರಿನ ತೊಂದರೆ

ಜಮ್ಮು ಪ್ರಾಂತದ ಕಾಂಡೀ ಭಾಗದಲ್ಲಿ ಚಿರತೆಗಳು ಗೂಳಿ ದನಗಳಂತೆ ಎಲ್ಲ ಕಡೆಗೂ ಅಡ್ಡಾಡ ಹತ್ತಿವೆಯೆಂದು ಆ ಭಾಗದಿಂದ ಸುದ್ದಿ ಬಂದಿದೆ. ಮಳೆ ಪೂರ್ಣವಾಗಿ ಸಿಕ್ಕದ್ದರಿಂದ ಕೆರೆ ಹೊಂಡಗಳೆಲ್ಲ ಪೂರ್ಣವಾಗಿ ಬತ್ತಿಹೋಗಿವೆ. ಹಿಂಸೆ ಪಶುಗಳೆಲ್ಲ ನೀರಿಗಾಗಿ ಊರೂರು ಸಂಚರಿಸ ಹತ್ತಿವೆ ಅರಣ್ಯದಲ್ಲಿಯ ನೀರೆಲ್ಲ ಬತ್ತಿಹೋದ್ದರಿಂದ ಎಲ್ಲೆಲ್ಲಿಯೂ ಹಾಹಾಕಾರವೆದ್ದಿದೆ. ಈಗಾಗಲೇ ಮೂರು ಚಿರತೆಗಳನ್ನು ಬೇಟೆಗಾರರು ಕೊಂದಿದ್ದಾರೆ.

ವಿದ್ಯಾಭ್ಯಾಸ ಹೇಗಿರಬೇಕು

“ನೀತಿಯಿಲ್ಲದ ವಿದ್ಯೆ ಆತ್ಮವಿಲ್ಲದ ಶರೀರಕ್ಕೆ ಸಮಾನ. ಧರ್ಮಬೋಧೆ ನೀತಿಬೋಧೆ ಇವುಗಳನ್ನು ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ವಿವರಿಸಬೇಕು. ನಾನು ಬಯಸುವ ನೈತಿಕ ವಿದ್ಯಾಭ್ಯಾಸ ಕ್ರಮ ಈ ರೀತಿಯದು. ಇಂದಿನ ಯಾಂತ್ರಿಕ ರೀತಿಯ ವಿದ್ಯಾಭ್ಯಾಸ ಕ್ರಮದಲ್ಲಿ ಸುಧಾರಣೆ ಅತ್ಯವಶ್ಯ. ವಿದ್ಯಾಭ್ಯಾಸ ಪದ್ಧತಿ ರಾಷ್ಟ್ರದ ಅವಶ್ಯಕತೆಗಳಿಗನುಸಾರವಾಗಿರಬೇಕು. ಎಂಬುದಾಗಿ ಮೈಸೂರಿನ ಮುಖ್ಯಮಂತ್ರಿ ಕೆ. ಹನುಮಂತಯ್ಯನವರು ಮಂಗಳೂರಿನಲ್ಲಿ ನಡೆದ ಮದ್ರಾಸು ಪ್ರಾಂತೀಯ ವಿದ್ಯಾ ಸಮ್ಮೇಳನದ ೩೦ನೇ ಅಧಿವೇಶನದ ಪ್ರಾರಂಭೋತ್ಸವ ನೆರವೇರಿಸುತ್ತಾ ಹೇಳಿದರು”

ಹುಚ್ಚರ ಪಟ್ಟಿ

ಬಿಸಿಲು

ಸಂಧ್ಯಾ ಸಾಮ್ರಾಜ್ಯದ ಸುಂದರ ಬೆಳಕಲಿ
ಹುಡುಕುವೆ ಯಾರನ್ನು?
ಸುಂದರ ರಾಜಾ ಶಿಖರದ ಗಿರಿಯಲಿ
ಚಿಂತಿಪೆ ಏನನ್ನು?
ವಿಧ ವಿಧ ಬಣ್ಣದ ವಸನವ ಧರಿಸಿ
ಮೆರೆಯುವ ಸುರನಾರಿ
ನಾಚುತ ಕೊಂಕುತ ಆಸೆಯ ತೋರಿ
ನಸುನಗೆಯನು ಬೀರಿ
ಗುಜು ಗುಜು ನಾದದ ಮದುವೆಯ ಮನೆಯಲಿ
ಬೀಗಿದ ಮುಖದವಳೇ
ಭೋಜನ ಕಾಲಕೆ ಬಡಿಸಲು ಬರುವಾ
ಕೋಮಲ ಕರದವಳೆ!
ಚಂಚಲ ಕಣ್ಣಿನ ಪುಷ್ಪಪರಾಗದ
ಧೂಳಲಿ ಮಿಂದವಳೆ
ರಂಜಿಪ ರಸ್ತದ ಭಾಷ್ಪವಿತಾನದ
ಮೋಹದ ಕಣ್ಣವಳೇ
ಗಿರಿಯಂಚಿನಲೀ ಮರುಗುವ ಚಿಟ್ಟೆ
ನೋಡಃ ತೆರೆದಿಟ್ಟೆ
ಸಿರಿ ಮಧು ಸಿಂಚಿತ ರಾಗವಿಲಾಸದ ಭಾಗ್ಯ
ಹೃದಯ ತಟ್ಟೆ

ಚೀನೀ ರಾಷ್ಟ್ರೀಯರನ್ನು ಹೊರ ಹಾಕುವ ಯೋಜನೆ.

ಬ್ರಹ್ಮದೇಶದಲ್ಲಿರುವ ೧೨೦೦೦ ರಾಷ್ಟ್ರೀಯ ಚೀನೀ ಸೈನಿಕರನ್ನು ಅಲ್ಲಿಂದ ಹಿಂತೆಗೆದುಕೊಳ್ಳುವ ಯೋಜನೆ ತಯಾರಿಸಲಿರುವ ಚತುರಾಷ್ಟ್ರ ಸೈನಿಕ ಸಮಿತಿಯು ತನ್ನ ಕಚೇರಿಯನ್ನು ಬ್ರಹ್ಮದೇಶದಲ್ಲಿ ಇಟ್ಟುಕೊಳ್ಳಲು ಬಹ್ಮದೇಶವು ಅಪ್ಪಣೆ ಇತ್ತೀತೇ ಎಂಬ ಬಗ್ಗೆ ಊಹಾಪೋಹ ನಡೆದಿದೆ. ಬ್ರಹ್ಮದೇಶ, ಅಮೇರಿಕಾ, ಥಾಯಿಲಂಡ ಮತ್ತು ಫೋರ್ಮೋಸಾಗಳ ಪ್ರತಿನಿಧಿಗಳುಳ್ಳ ಇಂಥಾ ಸಮಿತಿಯನ್ನು ರಚಿಸಬೇಕೆಂಬ ಅಮೇರಿಕೆಯ ಸೂಚನೆಯನ್ನು ಬ್ರಹ್ಮದೇಶವು ಒಪ್ಪಿಕೊಂಡಿದೆ. ಆದರೆ ತನ್ನ ಪ್ರತಿನಿಧಿಗಳು ನೇರವಾಗಿ ಫೋರ್ಮೋಸಾ ಪ್ರತಿನಿಧಿಗಳೊಂದಿಗೆ ವ್ಯವಹಾರ ನಡೆಸಲಾಗದೆಂದು ಅದು ಹೇಳಿದೆ. ಫೋರ್ಮೋಸಾ ಸರಕಾರಕ್ಕಿಂತ ಮನ್ನಣೆಯನ್ನು ಬ್ರಹ್ಮದೇಶವು ಹಿಂತೆಗೆದುಕೊಂಡಿರುವುದರಿಂದ ಚಿಯಾಂಗ ಕೈಶೇಕರ ಪ್ರತಿನಿಧಿಗಳಿಗೆ ಬ್ರಹ್ಮದೇಶದಲ್ಲಿ ಕಾರ್ಯ ಮಾಡಲು ಅದು ಅವಕಾಶ ಕೊಡಲಿಕ್ಕಿಲ್ಲವೆಂದೂ ಥಾಯಲಂಡದ ರಾಜಧಾನಿ ಬ್ಯಾಂಗಕಾಂಗವು ಈ ಸಮಿತಿಯ ಮುಖ್ಯ ಠಾಣೆಯಾಗಬಹುದೆಂದೂ ಊಹಿಸಲಾಗಿದೆ.

ಪೂರ್ವ ಪಶ್ಚಿಮ ಪಾಕಿಸ್ತಾನಗಳಲ್ಲಿ ಬಿಕ್ಕಟ್ಟು.

ಕರಾಚಿಯಲ್ಲಿಯ ಹೊಸ ಸರಕಾರ ಮತ್ತು ಪೂರ್ವ ಪಾಕಿಸ್ತಾನ ಸರಕಾರಗಳಲ್ಲಿ ಇನ್ನೂ ಮತಭೇದ ಪೂರ್ಣವಾಗಿ ಮಾಯವಾಗಿಲ್ಲೆಂದು ರಾಜಕೀಯ ವರ್ಗದವರು ಅಭಿಪ್ರಾಯ ವ್ಯಕ್ತಮಾಡುತ್ತಾರೆ. ಮತಭೇದದ ಪ್ರಶ್ನೆಗಳನ್ನು ಬಗೆಹರಿಸಲಿಕ್ಕೆಂದು ಪ್ರಧಾನ ಮಂತ್ರಿ ಮಹಮ್ಮದಾ ಅಲಿಯವರು ಈಗ ಗೊತ್ತುಪಡಿಸಿದಂತೆ ಮೇ ೮ ನೇ ದಿನಾಂಕ ಡಾಕಾಕ್ಕೆ ಹೋಗುವದನ್ನು ಮುಂದಕ್ಕೆ ಹಾಕಬಹುದೆಂದೂ ಅವರ ಅಭಿಪ್ರಾಯ. ಹದಿನೈದು ದಿನಗಳ ಹಿಂದೆ ನಾಜೀಮುದ್ದೀನರ ಬದಲು ಮಹಮ್ಮದ್ ಅಲಿಯವರು ಪ್ರಧಾನ ಮಂತ್ರಿಗಳಾದ ಕೂಡಲೆ ಪೂರ್ವ ಪಾಕಿಸ್ತಾನ ಮುಖ್ಯ ಮಂತ್ರಿಗಳಿಗೆ ಭೇಟಿಗೆ ಬರಬೇಕೆಂದು ಬರೆದಿದ್ದರು. ಅದರಂತೆ ಪೂರ್ವ ಬಂಗಾಲದ ಮುಖ್ಯ ಮಂತ್ರಿ ನೂರ್ ಅಲ್ ಅಮೀನ ಮತ್ತು ಮಹಮ್ಮದ ಅಲಿಯವರಲ್ಲಿ ಚರ್ಚೆ ನಡೆಯಿತು ಆದರೂ ಮತಭೇದ ಬಗೆಹರಿಯಲಿಲ್ಲೆಂದು ತಿಳಿಯುತ್ತದೆ.

ನೆಹರುಗಳ ಕೊಲೆಗೆ ಯತ್ನವೇ?

ಕಳೆದ ದಿನಾಂಕ ೪ರಂದು ಬೆಳಿಗ್ಗೆ ಭಾರತದ ಪ್ರಧಾನ ಮಂತ್ರಿ ಪಂಡಿತ ನೆಹರೂರವರು ಅಮೃತಸರ್ ಎಕ್ಸಪ್ರೆಸ್ಸಿನಲ್ಲಿ ಪ್ರಯಾಣ ಬೆಳೆಸುತ್ತಿರುವ ಕಾಲದಲ್ಲಿ ರೈಲು ಮಾರ್ಗದಲ್ಲಿ ಬಾಂಬನ್ನು ಹೋಲುವ ಎರಡು ವಸ್ತುಗಳನ್ನು ಯಾರೋ ಇಟ್ಟದ್ದು ಅಲ್ಲಿ ಪಹರೆ ನಡೆಸುತ್ತಿದ್ದ ಸೆಕ್ಯೂರಿಟಿ ಗಾರ್ಡನವರಿಗೆ ತಿಳಿದು ಬಂದು ಅದನ್ನವರು ಸಕಾಲದಲ್ಲಿ ತೆಗೆದರು. ಸಂಶಯ ಬಂದ ಇಬ್ಬರ ಮೇಲೆ ಗುಂಡು ಹಾರಿಸಿದಾಗ ಅವರು ತಪ್ಪಿಸಿ ಪರಾರಿಯಾದರು. ಈ ವಿಷಯದಲ್ಲಿ ಪೋಲೀಸ್ ತನಿಖೆ ನಡೆಯುತ್ತಿದೆ

ಏರ್ ಇಂಡಿಯಾ ವಿಮಾನ ಅಪಘಾತ

ದೆಹಲಿಯ ಪಾಲಮ್ ವಿಮಾನ ನಿಲ್ದಾಣದಿಂದ ಮುಂಬಯಿಗೆ ಹೊರಟ ಡಕೋಟಾ ವಿಮಾನವು ತಾ. ೯ರ ರಾತ್ರಿ ೧೧ಗಂಟೆಕ್ಕೆ ಹೊರಟಿತ್ತು. ಕೆಲವೇ ಸಮಯದಲ್ಲಿ ದೇಹಲಿಯ ಬಳಿಯಿರುವ ಮಣಿಪಾಲಪುರವೆಂಬ ಹಳ್ಳಿಯ ಬಳಿಯಲ್ಲಿ ಬೆಂಕಿ ಹಿಡಿದುದರ ಪರಿಣಾಮವಾಗಿ ಉರುಳಿ ವಿಮಾನದಲ್ಲಿದ್ದ ಹದಿಮೂರು ಪ್ರಯಾಣಿಕರೂ ಐದು ಮಂದಿ ನೌಕರರೂ ಮೃತಪಟ್ಟಿರುವರು. ಭಾರತದ ಪಾರ್ಲಿಮೆಂಟಿನ ಸದಸ್ಯರಾದ ಕನ್ಹಾಲಾಲ್ ಕೌಶಿಕರು ಪ್ರಯಾಣಿಸುತ್ತಿದ್ದು ಮೃತಪಟ್ಟಿರುವರು.

ಪಂಡಿತ ನೆಹರು ಲಂಡನಿಗೆ ಹೋಗುವರು.

ಭಾರತದ ಪ್ರಧಾನಿ ಪಂಡಿತ ಜವಾಹರಲಾಲ್‌ರವರು ಬ್ರಿಟೀಷ್ ರಾಣಿಯವರ ಪಟ್ಟಾಭಿಷೇಕ ಸಮಾರಂಭದಲ್ಲಿ ಭಾಗವಹಿಸಲು ಮೇ ೨೯ರಂದು ಲಂಡನಿಗೆ ವಿಮಾನ ಮೂಲಕ ಹೋಗುವರು. ಅವರು ಜೂನ್ ೧೬ರ ತನಕ ಅಲ್ಲಿಯೇ ಇರುವರು. ಬಳಿಕ ಅವರು ಲುಸರ್ನಿಗೆ ಹೋಗಿ ಅಲ್ಲಿ ಪಶ್ಚಿಮ ರಾಷ್ಟ್ರಗಳಲ್ಲಿನ ಭಾರತದ ರಾಯಭಾರಿಗಳ ಸಮ್ಮೇಳನವನ್ನು ನಡೆಸುವರು.

ಇಂದಿರಾ ಗಾಂಧಿಯವರಿಗೆ ಸತ್ಕಾರ

ಭಾರತದ ಪ್ರಧಾನಿ ಪಂಡಿತ ನೆಹರುಗಳ ಮಗಳಾದ ಶ್ರೀಮತಿ ಇಂದಿರ ಗಾಂಧಿಯವರು ಲಂಡನಿನಲ್ಲಿ ಇಂಡಿಯನ್ ಸೋಶ್ಯಲ್ ಕ್ಲಬ್ಬಿನವರು ಅವರ ಗೌರವಾರ್ಥವಾಗಿ ಏರ್ಪಡಿಸಿದ ಸಂತೋಷಕೂಟದಲ್ಲಿ ಭಾಗವಹಿಸಿರುವರು.

ಹೋಲ್‌ಬರ್ಗ್‌ನ ಮೇಯರ್ ಮತ್ತು ಮೆಯರೆಸ್‌ರವರು ಶ್ರೀಮತಿ ಇಂದಿರಾ ಗಾಂಧಿಯವರನ್ನು ಸ್ವಾಗತಿಸಿದರು. ಈ ಸಮಾರಂಭಕ್ಕೆ ಇಂಗ್ಲೆಂಡಿನ ಭಾರತದ ಹೈಕಮಿಷನರಾದ ಶ್ರೀ ಬಿ. ಜಿ. ಖೇರ್, ಕುಮಾರಿ ಅಗಥಾ ಹೆರಿಸನ್ ಮೊದಲಾದವರು ಬಂದಿದ್ದರು. ರಾಣಿಯವರ ಕಿರೀಟ ಧಾರಣಾ ಉತ್ಸವ ನಡೆದ ಮೇಲೆ ಅವರು ರಷ್ಯಾಕ್ಕೆ ಹೋಗುವರು.

ಕೊಡಗು

ತಾರೀಕು ೧೫ ಮೇ ೧೯೫೩ನೇ ಶುಕ್ರವಾರ

ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶ.

ಕೊಡಗಿನ ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶವು ತಾ. ೧೮ ರಲ್ಲಿ ಹೊರಬಿದ್ದಿದೆ. ಈ ವರ್ಷ ಕೊಡಗಿನಲ್ಲಿ ೧೬೮೯ ವಿದ್ಯಾರ್ಥಿಗಳು ಪರೀಕ್ಷೆಗೆ ಕೂತಿದ್ದು ೮೩೧ ಜನರು ತೇರ್ಗಡೆಯಾಗಿರುವರು. ಅಂದರೆ ಸುಮಾರು ಶೇಕಡ ೫೦ ರಷ್ಟು ವಿದ್ಯಾರ್ಥಿಗಳು ತೇರ್ಗಡೆಯಾದಂತಾಯಿತು. ಕಳೆದ ವರ್ಷ ಕೊಡಗಿನಲ್ಲಿ ಈ ಪರೀಕ್ಷೆಗೆ ೧೬೨೭ ವಿದ್ಯಾರ್ಥಿಗಳು ಕೂತಿದ್ದು ೬೬೫ ಜನರು ಅಂದರೆ ಶೇಕಡ ೪೩ ರಂತೆ ಮಾತ್ರ ತೇರ್ಗಡೆಯಾಗಿದ್ದರು. ಈ ದೃಷ್ಟಿಯಿಂದ ಈ ವರ್ಷದ ಫಲಿತಾಂಶ ಕಳೆದ ವರ್ಷಕ್ಕಿಂತಾ ಉತ್ತಮವಾಗಿದೆಯೆಂದು ಹೇಳಬೇಕು. ಕೊಡಗಿನಲ್ಲಿರುವ ೪೫ ಲೋವರ್ ಸೆಕೆಂಡರಿ ಶಾಲೆಗಳಲ್ಲಿ ೨೨ ಶಾಲೆಗಳಲ್ಲಿ ಫಲಿತಾಂಶವು ಶೇಕಡ ೫೦ ಕ್ಕಿಂತಾ ಹೆಚ್ಚಾಗಿರುವದು ಶುಭ ಚಿಹ್ನೆ. ಈ ವರ್ಷ ಹೊಸದಾಗಿ ಲೋವರ್ ಸೆಕೆಂಡರಿ ಪರೀಕ್ಷೆಗೆ ಕೂತಿರುವ ಬೆಕ್ಕೆಸೊಡ್ಲೂರು ಶಾಲೆಯು ೨೫ ರಲ್ಲಿ ೨೨ ಅಂದರೆ ಶೇಕಡ ೮೮ ರಂತೆ ಫಲಿತಾಂಶವನ್ನು ಪಡೆದು ಪ್ರಥಮಸ್ಥಾನವನ್ನು ಪಡೆದಿದೆ. ದೊಡ್ಡ ಶಾಲೆಗಳಾದ ಮಡಿಕೇರಿ ಸೆಂಟ್ರಲ್ ಹೈಸ್ಕೂಲ್, ಸೈಂಟ್ ಮೈಕೇಲ್ ಶಾಲೆ, ವೀರಾಜಪೇಟೆ ಹೈಸ್ಕೂಲ್, ಸೈಂಟ್ ಎನ್ಸ್ ಹೈಸ್ಕೂಲು, ಹಾತೂರು, ಪೊನ್ನಂಪೇಟೆ, ಮೊದಲಾದುವುಗಳ ಫಲಿತಾಂಶವು ಚೆನ್ನಾಗಿದೆ. ಆದರೆ ಕಂಡಂಗಾಲ ಶಾಲೆಯು ತನ್ನ ೧೫ ವಿದ್ಯಾರ್ಥಿಗಳಿಗೆ ಒಂದು ಪಾಸನ್ನು ಪಡೆದು ಕಡೇ ಸ್ಥಾನದಲ್ಲಿದೆ. ಈ ಶಾಲೆಯ ಪಾಠಕ್ರಮದಲ್ಲಿ ಏನೋ ನ್ಯೂನತೆ ಇರಬೇಕು. ಇದನ್ನು ಸರಿಪಡಿಸಿಕೊಳ್ಳುವದು ಆಗತ್ಯ.

ಕಳೆದ ವರ್ಷದ ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶದ ವಿಚಾರ ಬರೆಯುವಾಗ ಗತಸಾಲಿನ ಕನಿಷ್ಟ ಫಲಿತಾಂಶಕ್ಕೆ ಜಿಲ್ಲಾ ಬೋರ್ಡು ಅಧ್ಯಾಪಕರಲ್ಲಿರುವ ಅತೃಪ್ತಿಯು ಕಾರಣವಿರಬೇಕೆಂದೂ ಅಧ್ಯಾಪಕರು ತಮ್ಮ ವೇತನವಲ್ಲದ ಅನ್ಯಾಯದ ಕಾರಣ ದೇಶದ ಮೇಲೆ ಸೇಡು ತೀರಿಸಬಾರದಾಗಿಯೂ ಬರೆದಿದ್ದೆವು. ಅದೇ ದೃಷ್ಟಿಯಿಂದ ಇಂದು ನೋಡುವದಾದರೆ ಅಧ್ಯಾಪಕರು ತಮಗೆ ಏನೇ ತೊಂದರೆಗಳಿದ್ದರೂ ತಮ್ಮ ಜವಾಬ್ದಾರಿಯನ್ನು ಯೋಗ್ಯ ರೀತಿ ನಿರ್ವಹಿಸಿ ದೇಶದ ಜನರ ಅಭಿನಂದನೆಗೆ ಪಾತ್ರರಾಗಿರುವರೆಂದು ಹೇಳಬಹುದು. ಮುಂದಿನ ವರ್ಷ ಕೊಡಗಿನ ವಿದ್ಯಾಪ್ರಚಾರದಲ್ಲಿ ಬದಲಾವಣೆಗಳಾಗಿದ್ದು ಸರಕಾರವೇ ಸರ್ವಜವಾಬ್ದಾರಿಯನ್ನು ವಹಿಸುವ ಕಾರಣ ಕೊಡಗಿನ ವಿದ್ಯಾಪ್ರಗತಿಯು ಸುಸೂತ್ರವಾಗಿ ಮುಂದೆ ಸಾಗುವದೆಂದೂ, ಅಧ್ಯಾಪಕರು ತಮ್ಮ ಹೃತ್ಪೂರ್ವಕ ಪ್ರಯತ್ನಮಾಡುವರೆಂದೂ ಆಶಿಸಬಹುದಾಗಿದೆ.

ತೃಪ್ತನಾಗಿರುವ ಅಧ್ಯಾಪಕನೇ ತನ್ನ ಪಾಲಿನ ಕೆಲಸವನ್ನು ಯೋಗ್ಯ ರೀತಿಯಿಂದ ಮಾಡುವನಲ್ಲದೆ ಅತೃಪ್ತಿಯಿಂದಿರುವವನಲ್ಲ. ಆದ್ದರಿಂದ ಸರಕಾರವು ಅಧ್ಯಾಪಕರಿಗೆ ತೊಂದರೆ ಕಿರುಕುಳಗಳನ್ನು ಕೊಡದೆ ಅವರ ಕಾರ್ಯಕಲಾಪಗಳ ಮೇಲೆ ನಿಗವಿಟ್ಟು ಕೊಡಗಿನ ವಿದ್ಯಾಪ್ರಗತಿಯು ಕ್ರಮವಾಗಿ ಮುಂದರಿಯುವಂತೆ ಮಾಡಬೇಕಾಗಿದೆ. ಹೇಗೂ ಈ ವರ್ಷದ ಉತ್ತಮ ಫಲಿತಾಂಶಕ್ಕೆ ಕಾರಣರಾದ ಅಧ್ಯಾಪಕರೂ ವಿದ್ಯಾರ್ಥಿ ವೃಂದವೂ ವಂದನೆಗರ್ಹರು.

ಧರ್ಮ ರಹಸ್ಯ.

ಯೋಗ

(೧) ಗಣಿತದಲ್ಲಿ ಕೂಡಿಸುವದು ಮತ್ತು ಕಳೆಯುವದು ಯೋಗವೆನಿಸುವದು.

(೨) ಖಗೋಳ ಶಾಸ್ತ್ರದಲ್ಲಿ ಗ್ರಹ ನಕ್ಷತ್ರಗಳ ಪರಸ್ಪರ ಸಂಬಂಧವಾಗುವದು.

(೩) ವ್ಯಾಕರಣದಲ್ಲಿ ಶಬ್ದಗಳ ಜೋಡಣೆಯೇ ಯೋಗವೆನಿಸುವದು.

(೪) ಪತಾಂಜಲಿಯ ಅಭಿಮತದಂತೆ ಮಾನಸಿಕ ಕಾರ್ಯಗಳ ಅರ್ಥ ಪೂರ್ಣ ನಿಯಂತ್ರಣ ಯೋಗವೆನಿಸುವದು.

(೫) ಬೌದ್ಧ ಮತದ ಅಭಿಮತದಂತೆ ಎಲ್ಲಾ ವಿಷಯ ಭೋಗಗಳಿಂದ ಮನವನ್ನು ನಿರ್ಲಿಪ್ತವಾಗಿರಿಸುವದು ಯೋಗವೆನಿಸುವದು.

(೬) ವೇದಾಂತದ ಪ್ರಕಾರ ಪರಮ ಚೇತನದೊಂದಿಗೆ ಆತ್ಮನ ಐಕ್ಯವಾಗುವದು.

(೭) ಗೀತೆಯ ಮೇರೆ ನಿಷ್ಕಾಮ ಕರ್ಮವೇ ಯೋಗವೆನಿಸುವದು.

(೮) ಎಲ್ಲಾ ವಿಷಯಗಳನ್ನು ಮರೆತು ಒಂದೇ ವಸ್ತುವಿನ ಮೇಲೆ ತದೇಕ ಮನಸ್ಸಿಡುವದು ವೈಶೇಷಿಕ ತತ್ವ ಪ್ರಕಾರ ಯೋಗವೆನಿಸುವದು.

(೯) ತನ್ನ ಇಷ್ಟ ದೇವತೆಯನ್ನು ಹುಡುಕುವದು ವಿಶಿಷ್ಟಾದ್ವೈತದ ಪ್ರಕಾರ ಯೋಗವಾಗುವದು.

(೧೦) ವೈದ್ಯಕೀಯ ಭಾಷೆಯಲ್ಲಿ ಎಲ್ಲಾ ಔಷಧಗಳ ರೋಗ ನಿವಾರಕ ಸಮೀಕರಣವು ಯಾ ಸಮ್ಮಿಶ್ರಣವು ಯೋಗವೆನಿಸುವದು.

ವರ್ತಮಾನ.

ಇಂಡಿಯನ್ ರೆಡ್‌ಕ್ರಾಸ್ ಸಂಘದ ಕೊಡಗಿನ ಶಾಖೆಯ ಮಹಾಸಭೆಯು ತಾ. ೧೮ ರಲ್ಲಿ ಕೊಡಗು ಶಾಸನ ಸಭಾಂಗಣದಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಕೊಡಗರಹಳ್ಳಿ ಗ್ರಾಮದ ಪೈತೂರು ದೇವರ ವರ್ಷಾವಧಿ ನಡೆಯುವ ಹಬ್ಬವು ಮೇ ತಿಂಗಳು ೧೮ ನೇ ಸೋಮವಾರ ನಡೆಯುವುದು.

ಯೂನಿಯನ್ ಪಬ್ಲಿಕ್ ಸರ್ವಿಸ್ಸ್ ಕಮಿಷನಿನವರು ಕಳೆದ ಜನವರಿ ತಿಂಗಳಲ್ಲಿ ಏರ್ಪಡಿಸಿದ್ದ ಇಲೆಕ್ಟ್ರಿಕಲ್ ಇಂಜನೀಯರಿಂಗ್ ಯೂನಿಯನ್ ಪಬ್ಲಿಕ್ ಸರ್ವಿಸ್ ಪರೀಕ್ಷೆಯಲ್ಲಿ ಪಾಲಂಗಾಲ ಶ್ರೀ ಸುಬ್ಬರಾಯ ಶಿವರಾಮರವರು ತೇರ್ಗಡೆಹೊಂದಿರುವರು.

ಕೊಡಗು ಕರ್ನಾಟಕ ಸಂಘದ ಆಶ್ರಯದಲ್ಲಿ ವಸಂತ ಸಾಹಿತ್ಯೋತ್ಸವವು ಇದೇ ಮೇ ತಾರೀಕು ೨೩ ಮತ್ತು ೨೪ ರಲ್ಲಿ ಸಂಜೆ ೪-೩೦ ಗಂಟೆಗೆ ಮಡಿಕೇರಿ ಕಾಲೇಜು ಹಾಲಿನಲ್ಲಿ ಜರುಗುವುದು. ಮುಖ್ಯ ಮಂತ್ರಿಗಳಾದ ಶ್ರೀ. ಸಿ. ಯಂ. ಪೂಣಚ್ಚನವರು ಇದರ ಪ್ರಾರಂಭೋತ್ಸವವನ್ನು ನೆರವೇರಿಸುವರು. ಶಾಸನ ಸಭಾಧ್ಯಕ್ಷರಾದ ಶ್ರೀ. ಬಿ. ಎಸ್. ಕುಶಾಲಪ್ಪನವರು ಅಧ್ಯಕ್ಷತೆಯನ್ನು ವಹಿಸುವರು.

ಕ್ರಾಸ್ ಕಾಂಪಿಟಿಶನಿನಲ್ಲಿ ಬಹುಮಾನಿತರಾದ ೩ ಜನ ನಾಪೋಕ್ಲು ಪ್ರೌಢ ಶಾಲಾ ವಿದ್ಯಾರ್ಥಿಗಳಿಂದ ಬತ್ತದ ವ್ಯವಸಾಯ ಕ್ರಮವನ್ನು ಕುರಿತು ಆಲ್ ಇಂಡಿಯಾ ರೇಡಿಯೋ ಮೈಸೂರು ಸ್ಟೇಶನ್ನಿನಿಂದ ಬರುವ ಜೂನ್ ೧೮ ನೇ ದಿನಾಂಕ ಭಾಷಣ ಮಾಡಿಸುವರೆಂದು ವರ್ತಮಾನ.

ಬಿಳುಗುಂದ ಗ್ರಾಮದ ಕೋಪುಡ ಸಂಜಪ್ಪನವರ ಪತ್ನಿ ಮಾಚಮ್ಮನವರು ತಾ. ೨ರಲ್ಲಿ ತಮ್ಮ ೧೦೧ನೇ ವಯಸ್ಸಿನಲ್ಲಿ ಶಿವಾಧೀನರಾದರು.

ಕೊಡಗಿನ ಚೀಫ್ ಸೆಕ್ರೆಟರಿಯವರಾದ ಶ್ರೀ. ಸಿ. ನರಸಿಂಹಮೂರ್ತಿಯವರು ಕಾಯಿಲೆಯಾಗಿ ಆಸ್ಪತ್ರೆಯಲ್ಲಿರುವದರಿಂದ ಟ್ರೆಜರಿ ಆಫೀಸರಾಗಿದ್ದ ಶ್ರೀ. ವರ್ಮರವರು ಚೀಫ್ ಸೆಕ್ರೆಟರಿಯವರ ಕೆಲಸವನ್ನು ನೋಡಿಕೊಳ್ಳುತ್ತಿರುವರೆಂದೂ, ಮುನ್ಸೀಫರಾದ ಶ್ರೀ. ಎಂ. ಬಿ. ಮಾದಪ್ಪನವರು ತಮ್ಮ ಕೆಲಸದ ಜೊತೆಗೆ ಟ್ರೆಜರಿ ಚಾರ್ಜಿನಲ್ಲಿರುವರೆಂದೂ ತಿಳಿಯಬಂದಿದೆ.

ಸಿದ್ದಾಪುರ ಬೇಡ್‌ಮಿಂಟನ್ ಕ್ಲಬ್ಬಿನ ಆಶ್ರಯದಲ್ಲಿ ನಡೆದ ಬೇಡ್‌ಮಿಂಟನ್ ಪಂದ್ಯಾಟದಲ್ಲಿ ದಕ್ಷಿಣ ಕೊಡಗು ಟೀಮಿನವರು ಸ್ಪೋರ್ಟ್ ಕ್ಲಬ್ ಟೀಮಿನವರನ್ನು ಸೋಲಿಸಿ ಕಪ್ಪನ್ನು ಗೆದ್ದರು. ಮುಖ್ಯ ಮಂತ್ರಿ ಪೂಣಚ್ಚನವರು ಗೆದ್ದವರಿಗೆ ಕಪ್ಪನ್ನು ಕೊಟ್ಟರು.

ಸೇಲಮಿನ ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ದೇಶಿಕಾನಂದಜೀಯವರು ಕೊಡಗಿಗೆ ಬಂದು ಮಡಿಕೇರಿಯಲ್ಲಿ ನಾಲ್ಕು ದಿನ ವಿದ್ದು ಈಗ ವೀರಾಜಪೇಟೆಯಲ್ಲಿರುವರು. ಅವರು ಕೊಡಗಿನಲ್ಲಿ ಕೆಲವು ದಿನಗಳ ವರೆಗೆ ಇರುವರು.

ಮದ್ರಾಸು ವಿಶ್ವವಿದ್ಯಾಲಯದ ಫೈನಲ್ ಎಂ. ಬಿ. ಬಿ. ಎಸ್. ಪರೀಕ್ಷೆಯಲ್ಲಿ ಶ್ರೀ ಕೊಕ್ಕಲೆರ ಚಂಗಪ್ಪ ಮತ್ತು ಶ್ರೀಮತಿ ಪಟ್ಟಡ ಸರೋಜಿನಿಯವರು ತೇರ್ಗಡೆಯಾಗಿರುವರು.

ಬರೋಡ ಎಂ. ಎಸ್. ವಿಶ್ವವಿದ್ಯಾಲಯದಲ್ಲಿ ಸಮಾಜ ವಿಜ್ಞಾನದ ಪ್ರೊಫೆಸರರಾಗಿರುವ ಡಾಕ್ಟರ್ ಎಂ. ಎನ್. ಶ್ರೀನಿವಾಸರವರಿಗೆ ಇಂಗ್ಲೆಂಡಿನ ಮಂಚೆಸ್ಟರ್ ವಿಶ್ವವಿದ್ಯಾಲಯದ ಸೈಮನ್ ಸೀನಿಯರ್ ರಿಸರ್ಚ್ ಫೆಲೋಶಿಪ್ ದೊರೆತಿದೆ. ೧೯೪೦ ಮತ್ತು ೧೯೪೭ ರಲ್ಲಿ ಅವರು ಮೈಸೂರಿನ ಒಂದು ಗ್ರಾಮದ ವಿಚಾರ ಸಂಗ್ರಹಿಸಿದ ವಿವರಗಳನ್ನು ಬರೆಯಲು ಈ ಫೆಲೋಶಿಪ್ ಕೊಡಲ್ಪಟ್ಟಿದೆ. ಈ ಫೆಲೋಶಿಪ್ ದೊರೆತ ಪ್ರಥಮ ಭಾರತೀಯರಿವರು. ಬರೋಡ ವಿಶ್ವವಿದ್ಯಾಲಯಕ್ಕೆ ಹೋಗುವ ಮೊದಲು ಇವರು ಆಕ್ಸ್‌ಫರ್ಡಿನಲ್ಲಿ ಭಾರತ ಸಮಾಜ ವಿಜ್ಞಾನದ ಲೆಕ್ಚರರಾಗಿದ್ದರು. ಇವರು ಬರೆದ 'ಕೊಡಗರ ಧಾರ್ಮಿಕ ಮತ್ತು ಸಾಮಾಜಿಕ ಜೀವನ' ಎಂಬ ಪುಸ್ತಕವು ಇತ್ತಲಾಗಿ ಪ್ರಕಟವಾಗಿದೆ.

ಈ ಕೆಲವು ವರ್ಷಗಳ ಮೊದಲು ಇಂಜನೀಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದ ಶ್ರೀ. ಮಡಿಕೇರಿ ಮುಂಡ ಕರುಂಬಯ್ಯನವರ ಮಗ ಗಣಪತಿಯವರು ತಾ. ೯ ರಲ್ಲಿ ಕಾಣೆಯಾಗಿದ್ದು ತಾ. ೧೧ ರ ಸಾಯಂಕಾಲ ಕೆಕ್ಕಬೆಯ ಸಮೀಪದಲ್ಲಿರುವ ತೋಡಿನ ನೀರು ಗುಂಡಿಯಲ್ಲಿ ಬಿದ್ದು ಸತ್ತದ್ದು ಕಂಡು, ತಾ. ೧೨ ರಲ್ಲಿ ತೆಗೆಯಲಾಯಿತೆಂದು ವರ್ತಮಾನ.

ಮೈಸೂರು ರಾಜಪ್ರಮುಖರ ಅತಿಥಿಯಾಗಿ ಜನರಲ್ ಕೆ. ಎಂ. ಕಾರ್ಯಪ್ಪನವರು ಉದಕಮಂಡಲಕ್ಕೆ ಹೋಗಿರುವರು.

Coorg Forest Department.

TENDER NOTICE.

Sealed tenders will be received by registered post upto 12 noon on 1-7-1953 for the right to fell and remove marked standing timber from eight coupes in Makut, Bhagamandala and Sampaje Ranges for a period of eighteen months from 1-11-'53 to 30-4-1955. For further particulars and detailed tender notice, please apply to the Conservator of Forests, Coorg, Mercara.

ಕೊಡಗಿನ ಲೋವರ್ ಸೆಕೆಂಡರಿ ಪರೀಕ್ಷಾ ಫಲಿತಾಂಶ.

ಸೋಮವಾರಪೇಟೆ.

1, 2, 3, 7, 10, 20, 21, 22, 28, 29, 33, 39, 40, 41, 42, 45 46, 49. 52, 53, 54, 56, 58, 59 63, 69. 70, 73, 75. 78, 79, 80 84, 85, 86, 93, 96, 96A (97ರಲ್ಲಿ 38)

ಕೊಡ್ಲಿಪೇಟೆ.

97, 100, 101, 102, 103, 104, 105, 106, 107, 108, 109, 111, (17ರಲ್ಲಿ 12)

ಶನಿವಾರಸಂತೆ.

114 115, 116, 122, 123, 125, 126, 127, 130, 131, 132, 137, 138, (28ರಲ್ಲಿ 13)

ಜಂಬೂರು.

141, 143, 144, 145, 148 150, (19 ರಲ್ಲಿ 6)

ಹೆಬ್ಬಾಲೆ.

160, 163, 165, 169, 170 171, 173, 174, 175, 177, (18ರಲ್ಲಿ 10)

ಫ್ರೇಜರ್‌ಪೇಟೆ.

178, 184, 185, 188, 189 190, 191, (14ರಲ್ಲಿ 7)

ಸೆಂಟ್ರಲ್ ಹೈಸ್ಕೂಲು ಮಡಿಕೇರಿ.

193, 194, 195, 196, 197 198, 202, 203, 206, 210, 212, 213, 214, 216, 221, 224, 225, 226, 231, 232, 234, 235, 236, 237, 238, 240, 242, 243, 244, 245, 246, 248, 249, 250, 251, 253, 255, 256, 258, 259, 261, 262, 263, 264, 265, 266, 272, 273, 274, 276, 277, 278, 279, 283, 284, 286, 287, 288, 289, 290, 293, 294, 296, 298, 299, 302, 303, 304, (113ರಲ್ಲಿ 68)

ಮಡಿಕೇರಿ ಹುಡುಗಿಯರ ಶಾಲೆ— 306, 311, 314, 316, 317, 320, 322, 323, 325, 326, 329, 330, 332, 333, 336, 337, 338, 342, 343, 344, 345, 349, 350, 351 351A (46ರಲ್ಲಿ 25)

ಮಡಿಕೇರಿ ಸೈಂಟ್ ಮೈಕೆಲ್ಸ್ ಶಾಲೆ— 352, 354, 355, 356, 357, 359, 360, 361, 364, 368, 369, 370, 371, 372, 373, 374. 375, 376, 377, 378, 379, 381. 382, 383, 385, 386, 388, 389, 390, 391, (40ರಲ್ಲಿ 30)

ನಂಬರು 335 ಮತ್ತು 340ರ ಫಲಿತಾಂಶವನ್ನು ಹಿಂದಲಿಂದ ತಿಳಿಸಲಾಗುವುದು.

ಸುಂಟಿಕೊಪ್ಪ:— 395, 396, 397, 400, 403, 404, 406, 407, 410, 411, 413, 415, 417, 419, 426, (37ರಲ್ಲಿ 15)

ಚೆಟ್ಟಳ್ಳಿ:— 428, 430, 432, 436, 437, 438, 440, 443, 444, 445, 447, (20ರಲ್ಲಿ 11),

ಕೊಟ್ಟೂರು:— 448, 449, 450 451, 452, 455, 456. 459, 460, 462, 463, 465, 466, 467, 468, 471, 473, 474, 476, (30ರಲ್ಲಿ 19)

ಭಾಗಮಂಡಲ:— 478, 479, 480, 489, 492, 493, 494, 498, 503, (26ರಲ್ಲಿ 9)

ನಂಜರಾಯ ಪಟ್ಣ:— 504, 506, 507, 508, (11ರಲ್ಲಿ 4)

ಗಾಳಿಬೀಡು:— 516, 519. 522 (7ರಲ್ಲಿ 3)

ನಾಪೋಕ್ಲು:— 524, 525. 528 538, 541, 543, 546, 547, 548, 554, 557, 561, 564, 568, 569, 572, 574, 576, 577, 578, 579, 580, 581, 590, (69ರಲ್ಲಿ 24)

ಹಾಕತ್ತೂರು

592, 593, 595, 599, 605 606, 608, 610, 612, (24ರಲ್ಲಿ 9)

ಮರಗೋಡು

617, 621, 622, 627, 630, 631, 636, (26ರಲ್ಲಿ 7)

ಮೂರ್ನಾಡು

643, 644, 645, 652, 655 656, 658. 659, 660, 661, 662, 666, 667, 668, 672, 677, 678, 679, 680, 681, 683, 686, 698, 699, 700, 702, (61ರಲ್ಲಿ 26)

ನೆಲಜಿ

705, 708, 709, 710, 711, 713, 714, 715, 716, 720, 721, 722, (19ರಲ್ಲಿ 12)

ಕಕ್ಕಬ್ಬೆ

723, 724, 728, 731, 732 738, 742, 743, 744, 747, 748, 751, 753, 754, (34ರಲ್ಲಿ 14)

ಕಾಕೋಟುಪರಂಬು.

760, 762, 766, 767, 768, 776, 781, 786, 787, 788, 790, 791, 796, 798 (47ರಲ್ಲಿ 14)

ಪಾರಾಣೆ.

806, 810, 813, 814, 817, 818, 822, 824, 825, 828 834, 840, 844, 848, 850, 855, (51 ರಲ್ಲಿ 16)

ಗೌವರ್ನಮೆಂಟ್ ಹೈಸ್ಕೂಲು ವೀರಾಜಪೇಟೆ.

859, 860, 861, 862, 863, 865, 866, 870, 874, 876, 877, 879, 882, 885, 888, 889, 890, 891, 892, 894, 895, 898, 900, 901, 903, 905, 906, 907, 908, 909, 914, 915, 916, 917, 918, 919, 924, 925, 928, 929, 930, 932, 933, 934, 935, 938, 940, 941, 942, 943, 946, 947, 948, 949, 952, 953, (94 ರಲ್ಲಿ 56)

ಸೆಂಟ್ ಎನ್ಸ್ ವೀರಾಜಪೇಟೆ.

955, 956, 957, 962, 963, 964, 965, 966, 969, 970, 972, 973, 975, 977, 978, 980, 981, 983, 985, 986, 987, 988, 989, 990, 991, 992, 993, 994, 996, 998, 1002, 1003, 1004, 1006, 1007, 1009, 1010, 1011, 1012, 1013, 1014, 1015, 1016, 1020, 1021, (64 ರಲ್ಲಿ 45)

ಕರಡ.

1024, 1025, 1026, 1027, 1030, 1031, 1036, 1037, 1039, 1045, 1046, 1047, 1048, 1049, 1050, 1053, 1055, 1059, 1060, 1061. (39 ರಲ್ಲಿ 20)

ದೇವಣಗೇರಿ

1064, 1065, 1066, 1067, 1068, 1069, 1070, 1071, (15 ರಲ್ಲಿ 8)

ಅಮ್ಮತ್ತಿ.

1080, 1083, 1084, 1086, 1090, 1092, 1094, 1097, 1102, 1104, 1106, 1108, 1109, 1111, 1117, 1119, 1128, 1130, 1134, 1136, 1145, 1146. (74ರಲ್ಲಿ 22).

ಹಾತೂರು.

1151, 1152, 1153, 1154, 1155, 1156, 1157, 1158, 1159, 1160, 1162, 1164, 1165, 1166, 1172, 1173, 1176, 1177, 1179, 1181, 1183, 1184, 1185, 1186, 1187, 1188, 1190, 1191, 1197, 1198, 1200, 1201, 1203, 1204, 1205, 1206, 1208, 1209, 1210. (59ರಲ್ಲಿ 39)

ಬ್ಯಿಯಂತಾಜೆ.

1211, 1212, 1213, 1215, 1217, 1218, 1220, 1224, 1228, 1234, 1237, 1238, (28ರಲ್ಲಿ 12.)

ಕರ್ತೋಡು.

1240, 1241, 1242, 1243, 1244, 1245, 1247, 1248, 1249, 1251, 1252, 1253, 1255, 1256, 1258, 1259, 1266, 1267, 1269, 1270, 1271, (33ರಲ್ಲಿ 21)

ಗೋಣಿಕೊಪ್ಪ.

1273, 1274, 1275, 1276, 1281, 1284, 1287, 1290, 1293, 1294 1297, 1300, 1306. (37ರಲ್ಲಿ 13.)

ಬಾಳೆಲೆ ಶಾಲೆ— 1311, 1315, 1317, 1318, 1321, 1325, 1327, 1330, 1332, (23ರಲ್ಲಿ 9.)

ಪೊಯುಮುಡಿ ಶಾಲೆ— 1336, 1337, 1338, 1340, 1341, 1342, 1343, 1344 1345, 1349. (16ರಲ್ಲಿ 10.)

ಬಿ ಶೆಟ್ಟಿಗೇರಿ ಶಾಲೆ— 1350, 1352, 1355, 1356, 1357, 1358, 1361, 1362, 1364, 1366, 1367, 1369, 1370, 1372. 1374. (27ರಲ್ಲಿ 15)

ಪೊನ್ನಂಪೇಟೆ ಶಾಲೆ— 1377, 1381, 1387, 1388, 1389, 1390, 1391, 1392, 1396, 1397, 1398, 1399, 1400, 1402, 1403, 1404, 1405, 1408, 1409, 1410, 1411, 1412, 1413, 1415, 1416, 1418, 1419, 1422, 1425, 1426, 1429, 1434, 1436, 1438, 1440, 1441, 1443, 1445, 1447. (70ರಲ್ಲಿ 39)

ಬೆಸಗೂರು— 1448, 1449, 1451, 1460, 1462, 1464, 1467, 1471, 1474, 1475, 1476. (29ರಲ್ಲಿ 11)

ಕಾನೂರು— 1478, 1480, 1481, 1483, 1484, 1485, 1489. (13ರಲ್ಲಿ 7)

ಬೆಕ್ಕೆಸೊಡ್ಲೂರು— 1490, 1491, 1492, 1493, 1494, 1495, 1496, 1497, 1498, 1500, 1501, 1502, 1503, 1504, 1505, 1507, 1508, 1510, 1511, 1512, 1513, 1514. (25ರಲ್ಲಿ 22)

ಹುದಿಕೇರಿ. — 1518, 1521 1522, 1523, 1524, 1525, 1526, 1531, 1532, 1533, 1535, 1536, 1537, 1539, 1540, 1541. 1550, 1552, 1554. (41ರಲ್ಲಿ 19.)

ಬಿರುನಾಣಿ.

1557. 1558, 1559, 1560, 1563, 1564, 1565, 1566, 1568, 1569, 1570, 1572, 1575, 1580 (26ರಲ್ಲಿ 14).

ಟಿ. ಶೆಟ್ಟಿಗೇರಿ.

1582, 1585, 1587, 1588, 1589, 1592, 1596, 1598, 1599, 1600, 1603, 1604, 1606, 1608, 1609, 1612, 1614, 1615, 1616, 1620, 1621, 1622, 1624, 1626. (45ರಲ್ಲಿ 24).

ಕಾಕೂರು.

1628, 1635, 1636, 1637, 1638, 1639, 1642, 1645, 1646, 1647, 1650, 1651, 1652. 1657, (38ರಲ್ಲಿ 14)

ಕಂದಂಗಾಲ.

1679 (15ರಲ್ಲಿ 1 ಮಾತ್ರ)

ತೊಡಮಕೇರಿ.

1682, 1683, 1684, 1685, 1689, 1690, 1694, 1698, (17ರಲ್ಲಿ 8)

ಓದುಗರ ಓಲೆಗಳು.

ಮಡಿಕೇರಿ ಪುರಸಭೆ

ಮಡಿಕೇರಿ ಪುರಸಭೆಯ ಹದಿನೈದು ಸದಸ್ಯರ ಪೈಕಿ ಒಬ್ಬರನ್ನು ಬಿಟ್ಟು ಉಳಿದ ವರೆಲ್ಲರೂ ಇಂದು ಕಾಂಗ್ರೆಸಿನವರು. ಚುನಾವಣೆಗೆ ಇವರು ಕಾಂಗ್ರೆಸಿನ ಹೆಸರಿನಲ್ಲಿ ನಿಲ್ಲದಿದ್ದರೂ ಚುನಾವಣೆಯ ನಂತರ ಮತದಾರರನ್ನು ಕೇಳದೆ ಕಾಂಗ್ರೆಸಿಗೆ ಮತಾಂತರವಾದವರು. ಅಧಿಕಾರದಲ್ಲಿರುವ ಕಾಂಗ್ರೆಸು ತನ್ನ ತಳಹದಿಯನ್ನು ಭದ್ರ ಮಾಡಿಕೊಂಡು ಮುಂದೆಯೂ ಅಧಿಕಾರ ಪೀಠದಲ್ಲಿ ತಳವೂರಿ ಕೂರಬೇಕೆಂಬ ಕಾಂಕ್ಷೆಯಿಂದ ಎಲ್ಲರನ್ನೂ ಕಾಂಗ್ರೆಸಿಗೆ ಸೇರಿಸಿಕೊಳ್ಳುತ್ತಿದೆ. ಕಾಂಗ್ರೆಸ್ ಉಮೇದುವಾರರಿಗೆ ಎದುರಾಗಿ ಚುನಾವಣೆಗೆ ನಿಂತವರನ್ನು ಇಂದು ಕಾಂಗ್ರೆಸಿಗೆ ಸೇರಿಸಿಕೊಳ್ಳಲಾಗಿದೆ. ಆದರೆ ಕಾಂಗ್ರೆಸಿನಲ್ಲೇ ತನ್ನ ಜೀವಮಾನವನ್ನು ಸವೆಸಿ ಅಚ್ಚ ಕಾಂಗ್ರೆಸಿಗರಾಗಿರುವವರು ಕಾಂಗ್ರೆಸಿಗೆ ಸೇರುವೆನೆಂದರೆ ಅವರನ್ನು ಸೇರಿಸುವಂತಿಲ್ಲ. ಎಲ್ಲೆಲ್ಲೂ ಈ ಪಕ್ಷಪಾತ ತೋರುವುದೇ ಇದೆ. ಆ ಮಾತು ಹಾಗಿರಲಿ ಪ್ರಸ್ತುತ ಮಡಿಕೇರಿ ಮುನಿಸಿಪಾಲಿಟಿಯಲ್ಲಿ ಕಾಂಗ್ರೆಸ್ ಆಳಿಕೆಯಲ್ಲಿ ಆಗುತ್ತಿರುವ ಅನಾಹುತಗಳನ್ನು ಬಯಲಿಗೆಳೆಯದಿದ್ದರೆ ಸಾಧ್ಯವಿಲ್ಲ.

ಮಡಿಕೇರಿ ಪುರ ಸಭೆಯವರು ರೂ. ೩೫ ಸಾವಿರ ಖರ್ಚುಮಾಡಿ ಒಂದು ಅಂಗಡಿ ಮನೆ ಹೋಟೆಲಾಗಿ ಕಟ್ಟಿಸಿದ್ದಾರೆ. ಅದರ ಪ್ರಾರಂಭೋತ್ಸವವು ತಾ. ೧೪ರಲ್ಲಿ ನಡೆಯಿತು. ಈ ಕಟ್ಟಡದಲ್ಲಿ ನಾಲ್ಕು ರೂಮುಗಳಿವೆ. ಈ ಕಟ್ಟಡ ಕಟ್ಟಲು ಪ್ರಾರಂಭವಾದಾಗಲೇ ಈ ರೂಮುಗಳಿಗಾಗಿ ಅರ್ಜಿ ಬಂದಿವೆ. ಈ ಅರ್ಜಿದಾರರಲ್ಲಿ ಕೆಲವರ ಅರ್ಜಿಗಳು ನಿಜವಾಗಿಯೂ ಎಲ್ಲೂ ಬೇರೆ ರೂಮು ಇಲ್ಲದವರದ್ದು. ಕೆಲವರ ಅರ್ಜಿಗಳು ಕಡಿಮೆ ಬಾಡಿಗೆಯಲ್ಲಿ ಉತ್ತಮವಾದ ಮನೆ ಸಿಕ್ಕಿದರೆ ಏಕೆ ಬಿಡಬೇಕೆಂದು. ಕೆಲವುಗಳು ಅಧಿಕಾರದಲ್ಲಿರುವ ಕಾಂಗ್ರೆಸ್ ಬಳಗದವರದ್ದು. ಮೊನ್ನೆ ನಡೆದ ಮೀಟಿಂಗಿನಲ್ಲಿ ಈ ರೂಮುಗಳಲ್ಲೊಂದನ್ನು ಕಾಂಗ್ರೆಸಿನ ಮುಖಪತ್ರವಾಗಿರುವ ಕಾವೇರಿ ಪ್ರೆಸ್ಸಿನವರಿಗೂ, ಇನ್ನೊಂದನ್ನು ಕಾಂಗ್ರೆಸಿನ ಸಹಾಯಕರಾಗಿ ಕಾಂಗ್ರೆಸೇತರರ ಮೇಲೆ ರೇಗಿ ಮೀಸೆ ತಿರುಗಿಸಿ ಕಲಹಕ್ಕೆ ನಿಲ್ಲುವವರೊಬ್ಬರಿಗೂ ಕೊಡಲು ನಿರ್ಣಯಿಸಿರುವರೆಂದೂ ತಿಂಗಳಿಗೆ ರೂ. ೨೫/ ಬಾಡಿಗೆ ನಿಶ್ಚಿಸಲಾಗಿದೆಯೆಂದೂ ತಿಳಿದುಬರುತ್ತದೆ.

ಪುರ ಸಭೆಯವರು ಸಾರ್ವಜನಿಕರ ಹಣದಿಂದ ಕಟ್ಟಿದ ಕಟ್ಟಡವನ್ನು ಬಾಡಿಗೆಗೆ ಕೊಡುವಾಗ ಆ ಬಗ್ಗೆ ಜಾಹೀರಾತು ಪತ್ರಿಕೆಯಲ್ಲಿ ಹಾಕದೆ ತಮಗೆ ಇಚ್ಛೆ ಇರುವವರಿಗೆ ತಮ್ಮ ಇಚ್ಛೆಯ ದರದಲ್ಲಿ ಬಾಡಿಗೆಗೆ ಕೊಡುವದು ನ್ಯಾಯವೇ? ಮಡಿಕೇರಿಯ ಚರಂಡಿಗಳು ನಾರುತ್ತಿವೆ. ಕುಡಿಯಲು ನೀರಿಲ್ಲದ ಹಾಹಾಕಾರವೆದ್ದಿದೆ. ಬೀದಿಗೆ ಸರಿಯಾದ ದೀಪವಿಲ್ಲದೆ ತೊಂದರೆ ಇದೆ. ಇದನ್ನು ಪುರಜನರಿಗೆ ಒದಗಿಸಿ ಕೊಡುವ ಬದಲು ತಮ್ಮ ಪಕ್ಷದ ಪತ್ರಿಕೆ ಹಾಗೂ ಬೆಂಬಲಿಗರಿಗೆ ಸಾರ್ವಜನಿಕ ಹಣದಿಂದ ಕಟ್ಟಿದ ಕಟ್ಟಿಸಿ ಬಾಡಿಗೆಗೆ ಕೊಡುವದು ಯಾವ ನೀತಿ? ಯಾವುದೇ ರೀತಿಯ ವ್ಯಾಪಾರ ಉದ್ಯಮಗಳಿಗೆ ಸ್ಥಳಾಭಾವದಿಂದ ತೊಂದರೆಗೀಡಾಗಿರುವ ಹಲವಾರು ಪುರ ನಿವಾಸಿಗಳಿರುವಾಗ ಯೋಗ್ಯ ರೀತಿಯಲ್ಲಿ ಪ್ರಕಟಿಸಿ, ಅರ್ಜಿಗಳನ್ನು ಸ್ವೀಕರಿಸಿ ಅವುಗಳ ಪರೀಶೀಲನೆಯಿಂದ ತೊಂದರೆ ಇರುವವರಿಗೆ ರೂಮ್‌ಗಳನ್ನು ಕೊಡಬೇಕಿತ್ತು. ಈ ಬಾಬಿನಲ್ಲಿ ಪುರ ಸಭೆಯು ತನ್ನ ಕರ್ತವ್ಯ ನ್ಯೂನತೆಯನ್ನು ವ್ಯಕ್ತಪಡಿಸಿದೆಯೆಂದು ಹೇಳಬೇಕಾಗಿದೆ.

"ಮತದಾರ"

ಕೂತಿ ಗ್ರಾಮಸ್ಥರ ಸಭೆ.

ಕೂತಿ ಗ್ರಾಮಸ್ಥರು ತಾರೀಕು ೭–೫–೫೩ರ ದಿನ ಗ್ರಾಮ ದೇವಸ್ಥಾನದಲ್ಲಿ ಶ್ರೀ ಬಂಗೀರ ಅಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗಿನ ನಿರ್ಣಯಗಳನ್ನು ಮಾಡಿದರು.

ಕೊಡಗಿನ ಜನ್ನರಾದ ದಿ. ಮುದ್ದಪ್ಪನವರ ಮರಣಕ್ಕಾಗಿ ಸಭಿಕರು ೫ ನಿಮಿಷ ಮೌನ ಪ್ರಾರ್ಥನೆ ಮಾಡಿದರು.

ಗ್ರಾಮ ಶುಚಿತ್ವದ ವಿಚಾರವಾಗಿ ಎಡದಂಟೆ ಗೌಡರ ಮಲ್ಲಪ್ಪನವರೂ ಗೊಬ್ಬರ ತಯಾರಿ, ಹಣ್ಣು ಗಿಡಗಳು, ತರಕಾರಿ ಬೆಳೆಸುವ ವಿಚಾರವಾಗಿ ಮತ್ತು ಬಾಲಕರ ಮತ್ತು ವಯಸ್ಕರ ವಿದ್ಯಾಭಿವೃದ್ಧಿ ವಿಚಾರವಾಗಿ ಶ್ರೀ ಚೋನಿರ ಪೂವಯ್ಯನವರೂ ಮಾತಾಡಿದರು. ಹಣ್ಣು ಹಂಪಲು ಗಿಡಗಳನ್ನು ವ್ಯವಸಾಯ ಆಫೀಸರಿಂದ ಪಡಕೊಳ್ಳುವಂತೆ ಒಪ್ಪಿಕೊಂಡರು.

ಕಟ್ಟೆಮನೆ ತಮ್ಮಣಗೌಡರು ಈಗಿರುವ ಬಾಲಕರ ಶಾಲೆಗೆ ಗ್ರಾಂಟನ್ನು ಸರಕಾರವು ಕೊಡದೆ ಇದ್ದುದಕ್ಕೆ ವ್ಯಸನವನ್ನು ಸೂಚಿಸಿದರು. ಮತ್ತು ಅಲ್ಲಿಯ ಜನರಿಗೆ ಕೆಲವು ಜೇನು ಪೆಟ್ಟಿಗೆಗಳನ್ನು ಒದಗಿಸಿ ಕೊಡಬೇಕೆಂದು ಸೂಚಿಸಿದರು. ಸಭೆಯ ಅಧ್ಯಕ್ಷರ ಭಾಷಣದ ನಂತರ ಗ್ರಾಮಕ್ಕೆ ಸೋಮವಾರಪೇಟೆ ಆಸ್ಪತ್ರೆ ೧೦ ಮೈಲು ದೂರವಿದೆ, ಖಾಯಿಲಸ್ಥರು ಹೋಗಿ ಬರಲು ಅನುಕೂಲವಿಲ್ಲ. ಆದ್ದರಿಂದ ಅಲ್ಲಿಗೆ ಒಂದು ವಾರದ ಆಸ್ಪತ್ರೆ ಅಗತ್ಯವಾಗಿ ಸರಕಾರದವರು ಕೊಡಬೇಕೆಂದು ನಿರ್ಣಯವಾಯಿತು.

'ಸಾಜರಿದ್ದವ'

ಬಡ ಮಕ್ಕಳು

ಕೊಡಗಿನಲ್ಲಿ ಎಷ್ಟೋ ಜನರು ಎರಡು ಏಕ್ರೆ ಭೂಮಿಗಿಂತ ಕಡಿಮೆ ಇರುವ ಜಮೀನುದಾರರಾಗಿ ಜೀವಿಸುವರು. ಈ ಭೂಮಿಯಿಂದ ಒಬ್ಬ ತಂದೆಯು ತನ್ನ ನಾಲ್ಕೈದು ಮಕ್ಕಳನ್ನು ಸಾಕುವದು ಅತೀ ಕಷ್ಟ. ಹರಿಜನರಿಗಾದರೋ ತಮ್ಮ ಹುಟ್ಟಿದ ಎಲ್ಲಾ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಿದರೆ ಆ ಮಕ್ಕಳಿಗೆಲ್ಲರಿಗೂ ಉಣಲು ಊಟ, ಉಡಲು ಬಟ್ಟೆ ಹಾಗು ಓದಲು ಪುಸ್ತಕವು ಪುಕ್ಕಟೆ ದೊರೆಯುವದು. ಇವರಿಗೆ ಕಾಲೇಜಿನ ವ್ಯಾಸಂಗದಲ್ಲಿಯೂ ಇದ ರೀತಿಯ ಅನುಕೂಲತೆ ದೊರಕುವದು.

ಮೇಲೆ ನಮೂದಿಸಿದ ಬಡ ಜಮೀನುದಾರನ ನಾಲ್ಕು ಮಕ್ಕಳು ಶಾಲೆಗೆ ಹೋದರೆ ಅವರ ಪೈಕಿ ಒಬ್ಬನಿಗೆ ಫೀ ಮಾಫಿ ದೊರೆತರೆ ಅದು ಪುಣ್ಯ. ಬಾಕಿ ಎಲ್ಲಾ ಮಕ್ಕಳನ್ನು ಅವರ ತಂದೆ ತಾಯಿಗಳೇ ಶಾಲೆಗೆ ಕಳುಹಿಸಿ ಓದಿಸಬೇಕಾಗಿರುವದು. ಈ ರೀತಿ ಇರುವದರಿಂದ ಬಡ ಮಕ್ಕಳ ವಿದ್ಯಾಭ್ಯಾಸದ ಬೆಳವಣಿಗೆಯು ಹಾಳಾಗುವದರಲ್ಲಿ ಸಂಶಯವಿಲ್ಲ. ಆದುದರಿಂದ ಸರಕಾರವು ಹರಿಜನರಿಗೆ ಒದಗಿಸುವ ಅನುಕೂಲದಂತೆ ಪ್ರತೀ ಎರಡು ಏಕ್ರೆ ಭೂಮಿಗಿಂತ ಕಡಿಮೆ ಇರುವವರ ಮಕ್ಕಳಿಗೂ ಅನುಕೂಲತೆ ಒದಗಿಸಿ ಆ ಮಕ್ಕಳನ್ನು ಉದ್ಧರಿಸಲು ಮಾನ್ಯ ಮಂತ್ರಿಗಳು ಮನಸು ಮಾಡುವರೆ?

ಬಡವ.

ಹಿಂದೀ ಪರೀಕ್ಷೆಗಳು

೧೯೫೩ನೇ ಇಸವಿ ಫೆಬ್ರವರಿ ತಿಂಗಳಲ್ಲಿ ನಡೆದ ಹಿಂದೀ ಪರೀಕ್ಷೆಯಲ್ಲಿ ಮಡಿಕೇರಿ ಕೇಂದ್ರದಿಂದ ಈ ಕೆಳಗಿನವರು ಉತ್ತೀರ್ಣರಾಗಿರುವರು.

ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಶ್ರೀಗಳಾದ ಸಿ. ಮಹಾಲಿಂಗ ಶಾಸ್ತ್ರಿ, ಎನ್. ಯು. ದಮಯಂತಿ, ವಿ. ಎಸ್. ರುಕ್ಮಿಣಿ ದೇವಿ, ಎ. ಎಸ್. ಬೊಳ್ಳಮ್ಮ, ಎಸ್. ಎಸ್. ಪದ್ಮಾವತಿ, ಪಿ. ಟಿ. ಸುಶೀಲ, ಎಂ. ಸಿ. ಸೋಮಕ್ಕಿ, ಎ. ಎಮ್. ಬೆಳ್ಯಪ್ಪ, ಮತ್ತು ಪಿ. ಟಿ. ಚಿಣ್ಣಮ್ಮ ಇವರುಗಳು.

ಪ್ರವೇಶಿಕಾ ಪರೀಕ್ಷೆಯಲ್ಲಿ ಶ್ರೀಗಳಾದ ಎನ್. ಸಿ. ಪೊನ್ನಮ್ಮ, ಸಿ. ಕೆ. ಕಾವೇರಮ್ಮ, ಸಿಸ್ಟರ್ ಮೇರಿಕ್ಲೆಮೆಟ್, ಎಂ. ಜ ಗೌರಮ್ಮ ಇವರುಗಳು.

ಕೊಡಗಿನವರಲ್ಲಿ ಮೈಸೂರು ಕೇಂದ್ರದಲ್ಲಿ ರಾಷ್ಟ್ರಭಾಷಾ ಪ್ರವೀಣ ಪರೀಕ್ಷೆಗೆ ಕುಳಿತವರಲ್ಲಿ ಶ್ರೀಮತಿ ಮಂದಾಕಿನಿ, ಎಸ್ ರಾವ್ ಇವರು ತೇರ್ಗಡೆ ಹೊಂದಿರುವರು. ಕೊಡಗಿನಲ್ಲಿ ಈ ಉಚ್ಚ ಪರೀಕ್ಷೆಯಲ್ಲಿ ತೇರ್ಗಡೆಯಾದವರಲ್ಲಿ ಇವರು ಮೊದಲಿಗರು.

ಕಳೆದ ಫೆಬ್ರವರಿ ತಿಂಗಳಲ್ಲಿ ಪೊನ್ನಂಪೇಟೆ ಕೇಂದ್ರದಲ್ಲಿ ಹಿಂದೀ ಪರೀಕ್ಷೆಗೆ ಕೂತ ಪರೀಕ್ಷಾರ್ಥಿಗಳಲ್ಲಿ ಶ್ರೀಗಳಾದ ಪಿ. ಬಿ. ಮೊಣ್ಣಪ್ಪ, ಸಿ. ಎ. ಮಾದಯ್ಯ, ಎಂ. ಎನ್. ಮುತ್ತಣ್ಣ, ಪಿ. ಕೆ. ಐಯ್ಯಮ್ಮ, ಸಿ. ಕೆ. ದೇವಯ್ಯ, ಸಿ. ಎಸ್. ಕಾರ್ಯಪ್ಪ ಮತ್ತು ಶ್ರೀಮತಿಗಳಾದ ಎ. ಎ. ಪಾರ್ವತಿ, ಎಂ. ಪಿ. ಕಾವೇರ್ಯಮ್ಮ, ಎ. ಎ. ನೀಲಮ್ಮ, ಎಂ. ಎಂ. ತಂಗಮ್ಮ, ಬಿ. ಎಸ್. ಅಕ್ಕಮ್ಮ, ಕೆ. ಎ. ಜಾನಕಿ, ಕೆ. ಎಸ್. ಶಂಕರಿ, ಎಂ. ಸಿ. ಕಮಲ, ಇವರುಗಳು ಮಧ್ಯಮಾ ಪರೀಕ್ಷೆಯಲ್ಲೂ ಶ್ರೀಗಳಾದ ಎ. ಕೆ. ಬೋಪಯ್ಯ, ಕೆ. ವಿ. ಸೀತಾರಾಮ ಮತ್ತು ಶ್ರೀಮತಿಗಳಾದ ಎಂ. ಡಿ. ದೇವಮ್ಮ ಮತ್ತು ಎನ್. ಎ. ಕಾಮಮ್ಮ ಇವರುಗಳು ರಾಷ್ಟ್ರಭಾಷಾ ಪರೀಕ್ಷೆಯಲ್ಲೂ ತೇರ್ಗಡೆ ಹೊಂದಿರುವರು.

ಪ್ರಕಟಣೆ.

ಭಾರತದ ಗಾಂಧಿ ಸ್ಮಾರಕ ನಿಧಿಯ ಪ್ರಚಾರ ಮಂಡಳಿಯವರು ತಾ. ೧೭ರಂದು ಮಡಿಕೇರಿಗೆ ಬರಲಿರುವರು. ಇವರು ತಾ ೧೮ರ ಪೂರ್ವಾಹ್ನ ಗೋಣಿಕೊಪ್ಪಲಿನ ಪೇಟೆ ಬಳಿಯಲ್ಲಿಯೂ, ಅದೇ ತಾರೀಖು ಅಪರಾಹ್ನ ವೀರಾಜಪೇಟೆ ಅಬೆಲ್‌ವಾಸ್ ರವರ ಗದ್ದೆಬಳಿಯಲ್ಲೂ ಮತ್ತು ತಾರೀಖು ೧೯ರ ಪೂರ್ವಾಹ್ನ ಸೋಮವಾರಪೇಟೆಯ "ಇನ್ಸ್‌ಪೆಕ್ಷನ್" ಬಂಗ್ಲೆಯ ಹತ್ತಿರದಲ್ಲೂ ಜಪಾನಿನ ಭತ್ತದ ವ್ಯವಸಾಯ ಕ್ರಮವನ್ನು ಕುರಿತು ಪ್ರದರ್ಶನವನ್ನು ನಡೆಸುವರು. ಕೊಡಗಿನ ಪ್ರತಿಯೊಬ್ಬ ರೈತರೂ ಈ ಪ್ರದರ್ಶನಗಳಲ್ಲಿ ಭಾಗವಹಿಸಬೇಕಾಗಿ ವ್ಯವಸಾಯ ಇಲಾಖೆಯವರು ಕೇಳಿಕೊಳ್ಳುತ್ತಾರೆ.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸ್ :—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಸಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೆಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಸ್ತ್ರೀ ಜೀವನ.

ಬರೆದವರು:
ಸ್ವರ್ಗೀಯ ರವೀಂದ್ರನಾಥ ಠಾಕೂರ್.

ಗಂಡಸಿನ ವಿನಾಶಕ ಪ್ರವೃತ್ತಿಗಳನ್ನು ಪ್ರಕೃತಿಯು ಅಕ್ಷಮ್ಯವೆಂದು ತಿಳಿಯಲಾರಳು. ಹಾಗೆ ಯೋಚಿಸಿದರೆ ಹೆಂಗಸು ಪ್ರಕೃತಿಯ ಧ್ಯೇಯಸಾಧನೆಗೆ ಗಂಡಸಿಗಿಂತ ಹೆಚ್ಚು ಅನುಕೂಲಳೂ ಅತ್ಯಾವಶ್ಯಕಳೂ ಆಗಿದ್ದಾಳೆ. ಪ್ರಕೃತಿಯು ಮಹಾ ಅರ್ಥಶಾಸ್ತ್ರ ಸಂಪನ್ನೆಯೆನ್ನಬಹುದು. ತನ್ನ ಧ್ಯೇಯಸಾಧನೆಗೆ ಅನುಕೂಲಿಸಿದ ಒಣ ಜೀವಿಗಳ ಭಾರವನ್ನು ಅವಳು ಸಹಿಸಲಾರಳು. ಕೆಳದರ್ಜೆಯ ಪ್ರಾಣಿಗಳಲ್ಲಿ ಹೆಣ್ಣು ಯಾವಾಗಲೂ ಗಂಡನ್ನು ತನ್ನ ಕಕ್ಷೆಯಲ್ಲಿರಿಸುವುದೆಂಬ ಸಂಗತಿಯು ಪ್ರಕೃತಿಯ ಉದ್ದೇಶದ ದ್ಯೋತಕವಾಗಿದೆ.

ಪ್ರಕೃತಿಯ ಕಾರ್ಯದಲ್ಲಿ ಗಂಡಸಿಗೆ ಹೆಚ್ಚಿನ ಹೊಣೆಗಳಿಲ್ಲದುದರಿಂದ ಅವನಿಗೆ ಕ್ರಿಯಾಸ್ವಾತಂತ್ರ್ಯ ಕೊಂಚ ಹೆಚ್ಚಾಗಿದೆ. 'ಗಂಡಸು ಬರಿ ಉಪಕರಣಗಳ ಕರ್ತೃ' ಎಂಬ ವ್ಯಾಖ್ಯೆಯಲ್ಲಿ ಬಹಳ ಹುರುಳಿದೆ. ಪ್ರಕೃತಿ ನಿಯಮಗಳನ್ನು ಲಕ್ಷಿಸದೆ ದುಡಿಯುವ ಮತ್ತು ಯೋಚಿಸುವ ಶಕ್ತಿಯೂ, ಬಿಡುವೂ ಅವನಿಗಿದೆ. ಆದ್ದರಿಂದ ಅವನು ತನ್ನ ಆ ಸ್ವಾತಂತ್ರ್ಯವನ್ನು, ಪ್ರಕೃತಿಯನ್ನು ಪ್ರತಿಭಟಿಸುವ ಸಾಧನೋಪಕರಣಗಳನ್ನು ಕಟ್ಟುವುದಕ್ಕಾಗಿಯೆ ಉಪಯೋಗಿಸುತ್ತ ಬಂದಿದ್ದಾನೆ. ಪ್ರಕೃತಿ ರಾಜ್ಯದಲ್ಲಿ ಹೆಂಗಸಿಗೇ ಪ್ರಾಮುಖ್ಯವಿದೆಯಾದರೂ ಗಂಡಸು ತನ್ನ ಸ್ವಾತಂತ್ರ್ಯಬಲದಿಂದ ತನ್ನ ಕಲ್ಪನಾಕ್ಷೇತ್ರವನ್ನು ವಿಸ್ತರಿಸಿ ಹೊಸ ವಸ್ತುಗಳನ್ನೆ ಸೃಷ್ಟಿಸಬಲ್ಲವನಾಗಿದ್ದಾನೆ. ಆದರೆ ಆ ಸೃಷ್ಟಿಶಕ್ತಿಯು ಕೊನೆಬಾಳಬೇಕಾದರೆ ಅದರಲ್ಲಿ ನಿಃಸ್ವಾರ್ಥತೆಯೂ ಪರಿಪೂರ್ಣತೆಗೆ ಸಾಧಕವಾದ ಪ್ರಗತಿಪರತೆಯೂ ಇರಬೇಕೆಂಬುದನ್ನು ಅವನು ಮರೆತಿದ್ದಾನೆ.

ಗಂಡಸಿನ ದೇಹದ ರಚನೆಯೇ ಸ್ತ್ರೀ ದೇಹದಂತೆ ಪಟ್ಟಾಗಿ ಪ್ರಕೃತಿಯ ಕಟ್ಟುಗಳಿಂದ ಬಿಗಿಯಲ್ಪಟ್ಟಿಲ್ಲ. ಆದ್ದರಿಂದ ಅವನು ಪ್ರಕೃತಿಯ ಗಡಿದಾಟುವುದೇ ತನ್ನ ಕರ್ತವ್ಯವೆಂದು ಭ್ರಮಿಸಿದ್ದಾನೆ. ಸ್ವಾತಂತ್ರ್ಯವೆಂದರೆ ಹೊಣೆಗೇಡಿತನ ಮತ್ತು ಸ್ವೈರತೆಯೆಂದು ಭಾವಿಸಿ ಅವನು ಅಧೋಗತಿ ಹಾಗೂ ಆತ್ಮನಾಶದ ದಾರಿ ಹಿಡಿದಿದ್ದಾನೆ. ಅದರಿಂದ ಕಾಲ ಕಾಲಕ್ಕವನ ಹೆಮ್ಮೆಯ ಗೋಪುರಗಳು ನುಗ್ಗುನುಸಿಯಾಗಿವೆ; ಉತ್ಕ್ರಾಂತಿಯ ಪ್ರವಾಹವು ತಡೆದು ನಿಂತಿದೆ. ಅವನ ನವಸೃಷ್ಟಿಯಿಂದಾದ ಲಾಭಗಳು ಅವನ ದುರುಪಯೋಗದಿಂದ ಹುಡಿಗೂಡಿವೆ. ಸ್ವ, ಸಾಧನದ ನಾಶ ಹಾಗೂ ಸ್ವಾರ್ಥದ ಬಡಿದಾಟದಿಂದ ಅವನ ಇತಿಹಾಸವೆ ಮಲಿನವಾಗಿದೆ. ಆದರೆ ಆ ವಿನಾಶಕ ಪ್ರವೃತ್ತಿಯಿಂದ ಕಟ್ಟಿದುದನ್ನು ಉಳಿಸಬೇಕೆಂಬ ಹಂಬಲದಿಂದ ಗಂಡಸು ತನ್ನವೇ ಆದ ಕಟ್ಟುಕಟ್ಟಳೆಗಳನ್ನು ಹುಟ್ಟಿಸುವನು. ಆದರೆ ಅದೂ ನಿರರ್ಥಕ. ಏಕೆಂದರೆ ಅವು ಮೂಲ ಜೀವನಕ್ಕಿಂತ ಬರಿ ಜೀವಿಗಳಿಗೆ ಸಂಬಂಧಿಸಿದವಾಗಿವೆ. ಈಗ ಅಸಂಯತ ತಾಂಡವವೆಂದರೆ ಉತ್ಕ್ರಾಂತಿಯಲ್ಲವೆಂದು ಗಂಡಸಿಗೆ ಮನಗಂಡಿದೆ. ಪ್ರಗತಿಯು ಅನ್ವರ್ಥಕವಾಗಬೇಕಾದರೆ ಅದರ ನೆಲೆಗಟ್ಟಿನಲ್ಲಿ ಕಸುವು ಬೇಕು; ಕಟ್ಟೋಣವು ಕೌಶಲ್ಯಭರಿತವಾಗಿರಬೇಕು; ಬೆಳಗೆಯು ಸರ್ವಾಂಗಸುಂದರ ಪ್ರಾಮಾಣಿಕ ಹಾಗೂ ಸಾಮರಸ್ಯಪೂರ್ಣವಾಗಿರಬೇಕೆಂದು ಅವನಿಗೀಗ ತಿಳಿದಿದೆ.

ಸ್ತ್ರೀಯಲ್ಲಿ ಸ್ಥಿತ್ಯಾತ್ಮಕವಾದ ಒಂದು ವೃತ್ತಿಯಿದೆ. ಪ್ರಕೃತಿ ಸಮ್ಮತವಾದ ಉದ್ದೇಶವಿಲ್ಲದ ತೋರಿಕೆಯ ಪ್ರಗತಿಯಿಂದ ಅವಳ ಮನವೊಪ್ಪದು. ಒಣಕಲ್ಪನೆಗಳಿಂದ ಇಲ್ಲವೆ ವೃಥಾ ಕ್ಷೋಭೆಯಿಂದ ಶೂನ್ಯದಲ್ಲಿ ಶರಸಂಧಾನ ಮಾಡಲು ಅವಳು ಒಪ್ಪಳು. ಯಾವ ಹೆಜ್ಜೆಯೂ ಕೊನೆಯದಲ್ಲವಾದರೂ ಪ್ರತಿಯೊಂದು ಹೆಜ್ಜೆಯೂ ಧ್ಯೇಯಕ್ಕೆ ಸಾಧಕವಾಗಿರಬೇಕು. ಅರಳಿದ ನಂತರ ಪರಿಪೂರ್ಣತೆಯನ್ನು ಮುಟ್ಟುವಂತೆಯೆ ಹೂಗಿನ ರಚನೆಯಾಗಿರುತ್ತದೆ. ವಿಶ್ವದಲ್ಲಿ ಉದಯಿಸಿದ ಪ್ರತಿಯೊಂದು ಹೂವಿನಲ್ಲೂ ಕಾಯಿಯಲ್ಲೂ ಪರಿಪೂರ್ಣತೆಯು ತಿರುಳಿದ್ದೇ ಇದೆ. ಆದರೆ ಗಂಡಸಿನ ಯಾವ ಕಟ್ಟಡವೂ ಅರ್ಧಾವಸ್ಥೆಯಲ್ಲಿಯೆ ಪರಿಪೂರ್ಣತೆಯ ಕುರುಹನ್ನು ತೋರಿಸಲಾರದು. ತುದಿಗೆ ಸಿರಿಯಿಲ್ಲದೆ ಬೆಳೆದುದು ಗುರಿಯನ್ನಾದರೂ ಮುಟ್ಟುವುದೆಂತು? ಚಂಚಲವಾದ ಒಂದು ವಿಚಾರತರಂಗದ ಹೊರತು ಬೇರಾವ ಗುರಿಯೂ ಇಲ್ಲದ ಮನಸ್ಸು ಗಾಳಿಗೋಪುರವನ್ನಲ್ಲದೆ ಮತ್ತೇನನ್ನೂ ಕಟ್ಟಲಾರದು. ಅಂತಹ ಶಿಲ್ಪಿಗರಲ್ಲಿ ಸಾಮರಸ್ಯ ಶಾಂತಿಗಳಿರುವುದೂ ಸಾಧ್ಯವಲ್ಲ. ಗಂಡಸಿನ ಸ್ವಾತಂತ್ರ್ಯದ ಕೋಟೆಯೂ ಮರಳಿನ ಬುನಾದಿಯ ಮೇಲೆ ಬೆಳೆದು ಕೊನೆಗೊಮ್ಮೆ ಕುಸಿದು ತನ್ನೊಡನೆ ತನ್ನ ಶಿಲ್ಪಿಯನ್ನೂ ಮಣ್ಣುಗೂಡಿಸುವಂತಹ ಗಾಳಿಗೋಪುರವೇ ಆಗಿದೆ. ರಕ್ತನದಿಗಳನ್ನು ಹರಿಸಿಯೂ ಗಂಡಸಿನಲ್ಲಿ ಎಳ್ಳಷ್ಟೂ ಪರಿವರ್ತನವನ್ನು ತಾರದ ಕಳೆದ ಮಹಾಯುದ್ಧವೆ ಅವನ ಕರ್ತೃತ್ವದ ಶಿಖರವಾಗಿದೆ. ಈ ವರೆಗಿನ ಆರ್ಥಿಕ ಹಾಗೂ ರಾಜಕೀಯ ಚಟುವಟಿಕೆಗಳೆಲ್ಲ ಬುದ್ಧಿಯ ಕಸರತ್ತುಗಳಾಗಿವೆಯೇ ಹೊರತು ನಿಜವಾಗಿಯೂ ಜಗತ್ತನ್ನು ಉದ್ಧರಿಸುವ ಪ್ರೇಮ ಸಾಮರಸ್ಯಗಳ ಪ್ರಸಾರಕ್ಕೆಡೆಗೊಡಲಿಲ್ಲ. ನೈತಿಕ, ಆಧ್ಯಾತ್ಮಿಕ ಗುರಿಯಿಲ್ಲದ ಹೃದಯಶೂನ್ಯ ಬುದ್ಧಿಯಿಂದ ಪ್ರೇರಿತವಾದ ಹುಚ್ಚು ಹಾರಾಟವು ಬೇಗನೆ ಮುಗ್ಗರಿಸಲೇಬೇಕು. ಅದು ಅನಿವಾರ್ಯವಾದ ಪ್ರಕೃತಿ ನಿಯಮ.

ಆಧುನಿಕ ಸಭ್ಯತೆ (ನಾಗರಿಕತೆ)ಯು ಬರಿ ಗಂಡಸಿನ ಡೊಂಬರಾಟವಾಗಿದೆ. ಅದು ಹೆಂಗಸನ್ನು ಮೂಲೆಗುಂಪುಮಾಡಿದೆ. ಅವಳ ಕೋಮಲ ಸ್ವಭಾವದಿಂದ ವಂಚಿತವಾದ ನಾಗರಿಕತೆಯು ತನ್ನ ಸ್ಥಿತಿಯನ್ನು ಕಾಪಾಡಿಕೊಳ್ಳುವ ಹುಚ್ಚಿನಲ್ಲಿ ಯುದ್ಧದಿಂದ ಯುದ್ಧಕ್ಕೆ ಹಾರುತ್ತ ಬಂದಿದೆ. ಅದರ ಪ್ರೇರಕ ಸಾಧನಗಳೆಲ್ಲ ವೇಗಧಾರಿಗಳಾದ ಮಾರಕ ಶಕ್ತಿಗಳಾಗಿವೆ. ಅದರ ಉರಿಕಾರುವ ಚೀರಾಟ-ಹಾರಾಟವೆಲ್ಲ ಆಕಾಶಬಾಣದಂತೆ ಒಮ್ಮೆ ಕಣ್ಣಾಗಾಗಿ ನೆಲಕ್ಕುರುಳುವ ಕಥೆಯಂತೆಯೆ ಸರಿ. ಶಕ್ತಿಯ ಅಪವ್ಯಯವಾಗಿ ಅದನ್ನು ಹೇಡಿಯಾಗಿಸಿದೆ. ಜಗತ್ತಿನಲ್ಲಿ ಮಾನವನಿನ್ನು ಉಳಿಯಬೇಕಾದರೆ ಸ್ತ್ರೀಯೇ ಮಾರ್ಗನಿಂತರೆ ನಾಗಲು. ತನ್ನ ಸ್ವಭಾವ ಧರ್ಮಗಳಾದ ಗಾನ, ಮಾರ್ದವ, ಸಮರಸತೆಗಳೊಂದಿಗೂಡಿ ಅವಳು ರಂಗಕ್ಕಿಳಿಯಬೇಕು.

ಜೀವನದಲ್ಲಿ ಸ್ತ್ರೀಯ ಅಸ್ತಿತ್ವವು ಭೂದೇವಿಯಂತೆ ಅಸ್ಪಷ್ಟವಾದರೂ ಮಹಾಪ್ರಭಾವಶಾಲಿಯಾಗಿದೆ. ಮರದ ಬೇರುಗಳಂತೆ, ಸಂಸ್ಕೃತಿ ವೃಕ್ಷದ ಸುಂದರ ಹೂ ಚಿಗುರುಗಳನ್ನು ಪೋಷಿಸುವ ಬೇರುಗಳು ಅವಳಲ್ಲಿಯೆ ಅಡಗಿವೆ. ಬೇಡಿದ ಹಣ್ಣುಗಳನ್ನು ನೀಡುವ ಕಲ್ಪತರುವಿನ ಬೇರುಗಳು ಅವಳಲ್ಲಿಯೆ ಇವೆ. ಅವಳಲ್ಲಿ ಅಡಗಿರುವ ಆ ಜೀವನವು ಬತ್ತಿದರೆ ಮೇಲಿನ ಮರದ ಸೊಗಸೂ ಕಮರುವುದು. ಮತ್ತೆ ಹಸುರಿಗೆ ತಕ್ಕುದಾದ ಸಂಸ್ಕೃತಿಯ ಮಧುರ ಫಲವು ಕಂಗೊಳಿಸಬೇಕಾದರೆ ಮಿದುವಾದರೂ ಕಸುವುಳ್ಳ, ಸಿಹಿಯಾದರೂ ಸ್ಥಿರವಾದ, ಚಿಕ್ಕದಾದರೂ ಸೂಕ್ಷ್ಮವೇದಿಯ ಚೈತನ್ಯಪೂರಿತ ಸ್ಪಂದನಗಳಿಂದ ಅದು ಬೆಳೆಯಬೇಕು. ಬೆಳೆಯು ಗಂಟುಗಂಟಾಗಿರಬಾರದು. ತಾಯ ಹಾಲಿನ ಸವಿ ಅದರಲ್ಲಿರಬೇಕು. ಅದು ಬರಿ ಪುಷ್ಪಗಳ ಮಾಲೆಯಾಗಬಾರದು; ಅದರ ಬೆಳಗೆಯನ್ನು ಚೇತರಿಸುವ ತಾಳಬದ್ಧವಾದ ರಾಗಲೀಲೆಯಾಗಬೇಕು. ಹೊಳೆಯ ದಂಡೆಗಳು ಅದಕ್ಕೆ ವಿಘ್ನಗಳಾಗಿರುವುದಿಲ್ಲ; ಅದರ ನೀರು ಬಂಡೆಗಲ್ಲಿಗೆ ಸಿಡಿದು ಹೋಗದಂತೆ ತಡೆಗಟ್ಟುವ ಕಟ್ಟೆಗಳು ಅವು. ರಾಗದಲ್ಲಿಯ ಲಯದಂತೆ ಹೆಂಗಸೂ ಜೀವನ ಸಂಗೀತದ ಒಂದು ತಾಳವಾಗಿದ್ದಾಳೆ. ಪ್ರಕೃತಿಯ ಸೌಂದರ್ಯವನ್ನು ಹದಗೆಡಿಸುವವಳಲ್ಲ; ಅದರ ಸೊಬಗು. ಸಾಮರಸ್ಯ, ತಾಳಗಳೊಡನೆ ಆ ಸೌಂದರ್ಯವು ಸಮೃದ್ಧವಾಗಿ ಹೊರಹೊಮ್ಮಲೆಂದು, ಶಕ್ತಿಯು ಉಪಯುಕ್ತತೆ ಸೌಂದರ್ಯಗಳಲ್ಲಿ ಅರಳುವಂತೆ ಅದಕ್ಕೆ ದಾರಿತೋರುವವಳು ಹೆಂಗಸು. ಆ ಶಕ್ತಿಯು ಆತ್ಮನಾಶದ ಬೇಡಿಗಳಾಗದಂತೆ ತಡೆಯುವವಳೂ ಅವಳೇ. ಜೀವನವೆಂದರೆ ಬರಿ ನಂದನ ವಿಲಾಸವಾಗಿದ್ದರೆ ಈ ಜಗತ್ತೆಂಬುದು, ತನ್ನ ಬಣ್ಣ ಬಣ್ಣದ ರೆಕ್ಕೆಗಳನ್ನು ತೆರವಿಲ್ಲದೆ ಬಡಿದು ಕೊನೆಗೊಮ್ಮೆ ಗರಿಯುದುರಿ ಸಾಯುವ ಪಾತರಗಿತ್ತಿಗಳ (ಚಿಟ್ಟೆಗಳ) ಒಣಹೊಲವಾಗುತ್ತಿತ್ತು. ಆದರೆ ಬಾಳೆಂಬುದು ಹೊಣೆಗೇಡಿಯಾಟವಲ್ಲ. ಆಪದಾಟಕ್ಕೆ ಗುರಿಯೊಂದಿದೆ. ಬಾಳೆಂಬುದು ಒಂದು ಜ್ವಾಲೆ. ದೀಪಕ್ಕಿಂತ ಅದರ ಬೆಳಕು ಹೆಚ್ಚು ವಿಶಾಲವಾಗಿ ಹಬ್ಬುವುದು. ಹಾಗೆಯೆ ಬಾಳನ್ನು ಅಡಗಿಸಿಕೊಂಡ ಹೊದಿಕೆಗಿಂತ ಅದರ ವರ್ಚಸ್ಸು ವಿಸ್ತೃತವಾಗಿರುತ್ತದೆ. ಹೆಂಗಸು ಕೂಡ ತನ್ನ ಮಂಜುಹನಿಯಂತಹ ಕೋಮಲವಾದ ಸ್ವಭಾವದಿಂದ ವಿಶ್ವ ಜೀವನದ ಸೊಗಸನ್ನು ಅರಳಿಸುವವಳು.

ಪಾಶ್ಚಾತ್ಯ ಸ್ತ್ರೀಯು ತನ್ನ ಶಾಂತಿಪ್ರಿಯ ಪ್ರಕೃತಿಗೆ ಒಗ್ಗದ ಚಟುವಟಿಕೆಗಳನ್ನು ಆರಿಸಿಕೊಂಡಿದ್ದಾಳೆ. ಬರಿ ಗಂಡಸಿನೊಡನೆ ಸೆಣಸಾಡುವ ಹೆಮ್ಮೆಯಿಂದ ಜಗತ್ತಿನ ಪೆಡಗಿಗೆ ಮರುಳಾದ ಹೆಂಗಸು ತನ್ನ ಅಳವಾದ ಪ್ರಕೃತಿಯನ್ನೆ ಮರೆತಂತೆ ಇದೆ. 'ಕೇವಲ ಕುತೂಹಲ, ಕ್ಷೋಭೆಗಳನ್ನು ಕೆರಳಿಸುವ ಅನೈಸರ್ಗಿಕ ಹಾಗೂ ಜೀವನಕ್ಕೆ ನಿರುಪಯುಕ್ತವಾದ ವಸ್ತುಗಳಿಗಾಗಿ ಹಂಬಲಿಸುವುದು ಹೆಂಗಸಿನ ಪ್ರಕೃತಿಗೆ ಸರಿಬರುವುದಿಲ್ಲ. ಅಂತಹ ಜೀವನವು ನಾಶದ ಹಾದಿಯನ್ನೆ ಹಿಡಿಸುವುದೆಂಬುದು ಗಂಡಸಿಗೆ ಅನುಭವವಾಗಿ ಬಿಟ್ಟಿದೆ. ಹೆಂಗಸೂ ಅದೇ ಹಾದಿಯನ್ನು ಹಿಡಿದರೆ ಜಗತ್ತಿಗೆ ಪ್ರಲಯವು ನಿಶ್ಚಿತ. ಅದು ಅವಳ ಸ್ಥಿತ್ಯಾತ್ಮಕ ವೃತ್ತಿಗೆ ಅಸಂಗತವಾದ್ದರಿಂದ ಅದರಿಂದ ಅವಳೂ ಪೂರ್ಣನಾಶವನ್ನು ಹೊಂದುವುದು ಖಂಡಿತ. ಅವಳು ಮಾನವ ಜನಾಂಗದ ತಾಯಿ. ಜೀವನದ ಆಗುಹೋಗುಗಳ ವಿಲಾಸವರ್ಣಗಳಿಗಿಂತ ಜೀವನವು ದೇವನಿರ್ಮಿತವೆಂಬ ಭಾವನೆ ಅವಳಿಗೆ ಅವುಗಳಲ್ಲಿ ಪ್ರೇಮವನ್ನು ಹುಟ್ಟಿಸುತ್ತದೆ. ಈ ನಿಸರ್ಗಪ್ರೇಮದ ಅಭಾವದಲ್ಲಿ ಜಗತ್ತು ಎಂದೋ ಕೊನೆಗಾಣುತ್ತಿತ್ತು.

ಗಂಡಸಿನೊಡನೆ ಹೋರಾಟವಾಡಲೆಂದು ಹೆಂಗಸು ತನ್ನ ಈ ಜನ್ಮಜಾತ ಗುಣದಿಂದ ರವೆಯಷ್ಟು ಅತ್ತಿತ್ತ ಸರಿದರೂ ಸಾಕು: ಜಗತ್ತಿನ ಆದರ ನವಿ, ಗಾಂಭೀರ್ಯಗಳು ಒಡನೆ ಕುಸಿದುಬೀಳುವವು; ಮತ್ತು ಸಾಮ್ರಾಜ್ಯದ ಸಂಪತ್ತಿಗಿಂತ ಹೆಚ್ಚು ಬೆಲೆಯುಳ್ಳ, ತನ್ನ ವೈಶಿಷ್ಟ್ಯವಾದ 'ವಾಯ್ಯ'ನನ್ನೇ ಸ್ತ್ರೀಯು ಕಳೆದುಕೊಳ್ಳುವಳು.

ಗಂಡಸು ಮತ್ತೊಬ್ಬ ವ್ಯಕ್ತಿಯನ್ನು ಆದೊಂದು ಮಾನವ ಜೀವಿಯೆಂದು ಪ್ರೀತಿಸುವುದಿಲ್ಲ; ಆ ವ್ಯಕ್ತಿಯಲ್ಲಿ ತನಗೆ ಪ್ರಿಯವಾದುದೇನಾದರೂ—ಗುಣ, ಶಕ್ತಿ, ಕಲೆ ಇವೆಯೆಂದು ಪ್ರೇಮಿಸುತ್ತಾನೆ. ಆದರೆ ಸ್ತ್ರೀ ಪ್ರೇಮಿಸುವುದಕ್ಕೆ ಜೀವಿಯ ಮಾನವತೆಯೊಂದೇ ಸಾಕು. ಅದರಿಂದ ತನಗುಂಟಾಗುವ ಸುಖ ಸೌಕರ್ಯಗಳು ಅವಳ ಪ್ರೀತಿಯ ಗುರಿಯಲ್ಲ. ಅವಳು ಈ ದಿವ್ಯವಾದ ಗುಣದಿಂದಲೆ ಗಂಡಸಿನ ಮನ ಸೆಳೆಯುವಳು. ತಾರತಮ್ಯವಿಲ್ಲದೆ ಎಲ್ಲ ಮಾನವರೆಡೆಗೂ ಅವಳಿಂದ ಉಕ್ಕಿ ಬರುವ ಪ್ರೇಮವೆ ಅವಳ ಮಾತು, ರೀತಿ, ನಗೆ, ನೋಟಗಳಲ್ಲಿ ಮಾನವತೆಯನ್ನು ತುಂಬಿದೆ. ತಾನಿರುವ ಪರಿಸ್ಥಿತಿಯನ್ನು ಪ್ರೀತಿಸುವ ಸ್ವಭಾವವೇ ಅವಳಿಗೆ ಅನಿವಾರ್ಯವಾದ ಸೌಂದರ್ಯ ಆಕರ್ಷಣೆಗಳನ್ನು ಕೊಟ್ಟಿದೆ. ಬರಿ ಆಕಾರ ವರ್ಣಗಳಿಗಿಂತ ಮಿಗಿಲಾದ ಇಂಥ ಒಂದು ಸೌಂದರ್ಯವನ್ನು ಜಗತ್ತಿಗೆ ನೀಡಿದ ದೇವನಿಗೆ ಮಾನವನು ಎಷ್ಟು ಋಣಿಯಾಗಿರುವನು! ಅಂಥ ಸೌಂದರ್ಯವನ್ನು ಅರಿತುಕೊಳ್ಳಲು ಬಾಹ್ಯ ವ್ಯಾಪಾರದೃಷ್ಟಿಗಿಂತ ಸುಂದರವಾದ ಅಂತರ್ದೃಷ್ಟಿ ಬೇಕು. ಇಂದ್ರಿಯಗಳು ಶೂನ್ಯ ಶೂನ್ಯವೆಂದು ಕಾಣುವ ಬಯಲಲ್ಲಿಯೂ ಅಂತಹ ಸೌಂದರ್ಯವನ್ನು ಕಾಣಬಲ್ಲ ಸ್ತ್ರೀ-ಶಕ್ತಿಯನ್ನು ದಯಪಾಲಿಸಿದ ವಿಶ್ವಶಕ್ತಿಗೆ ಅನಂತಪ್ರಣಾಮಗಳು.

ನಾವು ಕೂಡ ಅಂತಹ ನಿಸ್ವಾರ್ಥಪ್ರೇಮವನ್ನು ಬೆಳೆಸಿಕೊಂಡಾಗಲೆ ಅಂತಹ ಪ್ರೇಮಸೌಂದರ್ಯವನ್ನು ನಾ

ಸ್ತ್ರೀಕರಿಸಿಕೊಳ್ಳಬಲ್ಲೆವು. ಹೆಂಗಸಿನಲ್ಲಿ ಅಂತಹ ಒಂದು ಒಳಗಣ್ಣು ಇರುವುದರಿಂದಲೆ ಮಿಕ್ಕವರಿಗೆ ಅಸಕ್ಯವಾಗಿ ತೋರುವುದರಲ್ಲಿಯೂ ಅವಳಿಗೊಂದು ಪ್ರಯೋಜನ ತೋರುತ್ತದೆ. ಈ ರಕ್ತಗುಣವೆ ಅವಳಿಗೆ ಜೀವನವು ಪ್ರಿಯವಾಗುವಂತೆಯೂ ಮಿಕ್ಕವರಿಗೆ ಸುಖಕರವಾಗುವಂತೆಯೂ ಮಾಡಿದೆ. ತನ್ನ ಈ ಪ್ರಕೃತಿಯನ್ನು ತೊರೆದು ಅವಗೀ ಬೇಸರಿಸುವ ಬಂಜೆ ಕೆಲಸಗಳಿಗಾಗಿ ಹೊತ್ತುಗಳೆಯಲೆತ್ನಿಸಿದ ಕೂಡಲೆ ಅವಳ ಕೋಮಲವಾದ ಪ್ರೇಮ ಬಂಧನವು ಹಿಸಿದು ಹೋಗುವುದು. ಈ ಜಗವೆಂಬುದು ಒಂದು ಕೊಳಲಿದ್ದಂತೆ. ಅದಕ್ಕೆ ಸ್ವಂತವಾದ ಮಹತ್ವವೇನೂ ಇಲ್ಲ. ಅದರಲ್ಲಿಯ ಪೊಳ್ಳುತನವೇ ವಿಶ್ವಗೀತವನ್ನು ನಶ್ವರರ ಕಿವಿಗೂ ಮುಟ್ಟಿಸುವ ಯೋಗ್ಯತೆಯನ್ನು ಕೊಟ್ಟಿದೆ. ಹೆಂಗಸು ಈ ಪೊಡವಿಯೆಂಬ ಕೊಳಲನ್ನೆತ್ತಿ ಅದನ್ನು ಮನ್ನಿಸುವಳು. ತನ್ನ ಸವಿಯನ್ನು ಅದರಲ್ಲಿ ತುಂಬುವಳು. ಅದರ ಪೊಳ್ಳುತನವನ್ನು ಅವಳು ಪ್ರೀತಿಸುವಳು. ಏಕೆಂದರೆ ನಾದಕುಶಲರಂತೆ ಅವಳು ಅದರಲ್ಲಿ ಲೀಲೆ ಮಾಡುವಳು; ಅದರ ಮೂಲಕ ತನ್ನ ದಿವ್ಯ ಮಾಧುರ್ಯವನ್ನು ಬೀರುವಳು. ಮಕ್ಕಳ ಶೂನ್ಯ ಜನ್ಮವನ್ನು ಅಕ್ಕರೆಯಿಂದ ಮೆಚ್ಚುವ ದೀನಬಂಧು ಮುರಲೀಧರನ ಪ್ರೇಮವೆ 'ಸ್ತ್ರೀ'ಯಲ್ಲಿ ಮೂರ್ತೀಭವಿಸಿದೆ.

ಹೆಂಗಸಿಗೆ ಹೊಸ್ತಿಲ ಹೊರಗಿನ ಚಟುವಟಿಕೆಯೇ ಬೇಡವೆಂದು ನಾನೆನ್ನಲಾರೆ. ಇಡಿಯ ಜಗತ್ತೇ ಅವಳ ಮನೆಯಾಗಿದೆ. ಯಾವುದೇ ಕೆಲಸಕ್ಕೆ ಕೈಕೊಟ್ಟರೂ ಯಾಂತ್ರಿಕ ವ್ಯಾಪಾರೀ ವೃತ್ತಿಗೆ ಇಳಿದ ದಿನವೇ ಅವಳು ಮುಗ್ಗರಿಸುವಳು. ಅವಳೊಡನೆ ಜಗತ್ತೂ ಉರುಳುವದು ಖಂಡಿತ.

ವ್ಯಕ್ತಿಯ ವೈಶಿಷ್ಟ್ಯವು ನಾಶವಾಗಬಾರದು. ಬಾಳೊಂದು ಯಂತ್ರವೆನಿಸಬಾರದು. ಅಲ್ಲಿದೆ ಸ್ತ್ರೀಯ ಕಾರ್ಯಕ್ಷೇತ್ರ. ಮನೆಯ ಬಾಳಿನಲ್ಲಿ ಸವಿ ಹುಟ್ಟಬೇಕಾದರೆ, ವ್ಯಕ್ತಿ ವೈಶಿಷ್ಟ್ಯಕ್ಕೆ ಅಲ್ಲಿ ಮನ್ನಣೆ ಇರಬೇಕು. ಮನೆಯಲ್ಲಿಯ ಪ್ರತಿಯೊಂದು ವ್ಯಕ್ತಿಯ ಬೆಲೆಯು, ದೇವನ ಉದ್ದೇಶಕ್ಕನುಸರಿಸಿ ಕಟ್ಟಲ್ಪಡಬೇಕು. ವ್ಯಕ್ತಿಗೆ ಮನೆಯಲ್ಲಿರುವ ಮರ್ಯಾದೆಯಿಂದಲ್ಲ. ಮತ್ತೊಂದು ವ್ಯಕ್ತಿಯಲ್ಲಿ ಬೆಳೆಸಬಹುದಾದ ಯೋಗ್ಯತೆಯಿಂದ ಅದರ ಶಕ್ತಿ ನಿರ್ಣಯವಾಗಬೇಕು. ಪ್ರತಿ ವ್ಯಕ್ತಿಯೂ ತಾನು ಮನೆಯ ಬೇರೆ ವ್ಯಕ್ತಿಗಳಲ್ಲಿ ಕಕ್ಕುಲತೆಯಿಂದ ನಡೆದು ಎಷ್ಟರ ಮಟ್ಟಿಗೆ ನಿಸ್ವಾರ್ಥ ಪ್ರೇಮವನ್ನು ಚಿಗುರಿಸಬಲ್ಲನೆಂಬುದನ್ನು ಪರೀಕ್ಷಿಸಿಕೊಳ್ಳಬೇಕು. ಈ ದೃಷ್ಟಿಯಿಂದ ನೋಡಲಾಗಿ ಹೆಂಗಸೇ ಗೃಹರಾಜ್ಯದ ರಾಣಿಯಾಗಲು ಪೂರ್ಣ ಯೋಗ್ಯತೆಯುಳ್ಳವಳಾಗಿದ್ದಾಳೆ. ಅದು ಅವಳಿಗೆ ದೇವದತ್ತ ವರವಾಗಿದೆ. ಅವಳ ಪ್ರೇಮ ಪ್ರಕಾಶವು ಮನೆಯನ್ನು ಬೆಳಗಿ ಹೊರ ಸೂಸಿ ಅವಶ್ಯವೆನಿಸಿದರೆ ಹೊರ ಜಗತ್ತನ್ನು ಬೆಳಗಬಲ್ಲದು. ಸಾರಾಂಶ ಮಾನವನ ಮುಂದಿನ ಏಳಿಗೆ ನೆಮ್ಮದಿಗಳು ಹೆಂಗಸನ್ನೇ ಅವಲಂಬಿಸಿವೆ. ಏಕೆಂದರೆ 'ತೊಟ್ಟಿಲ ತೂಗುವ ಕೈಯೇ ಜಗವನ್ನೂ ತೂಗುವುದು.'

ವಸ್ತುಗಳ ಹೃದಯವನ್ನು ಅರಿತುಕೊಳ್ಳುವುದೂ ಸ್ತ್ರೀಯ ಸಹಜ ಪ್ರವೃತ್ತಿಯಾಗಿದೆ. ಅದನ್ನವಳು ಕಳೆದುಕೊಳ್ಳಬಾರದು. ಗಂಡಸಿನ ಕರ್ತವ್ಯದಕ್ಷತೆಯು ಅವನನ್ನು ಜೀವನದ ಹೊರವಲಯಗಳಿಗೆ ಎಳದೊಯ್ಯುತ್ತದೆ. ಅವನ ಶಕ್ತಿಗಳು ಕಣ ಕಟ್ಟಿ ಕ್ರಮಗೊಳ್ಳಲು ಅದೊಂದೇ ದಾರಿ. ಆದರೆ ವಸ್ತುಗಳು ಹೇಗೆಯೇ ಇರಲಿ, ಎಲ್ಲಿಯೇ ಇರಲಿ ಅವನ್ನು ಪ್ರೀತಿಸುವದು ಹೆಂಗಸಿನ ಮೊದಲು ಗುಣವಾಗಿದೆ! ಕಲ್ಪನಾ ಪ್ರಪಂಚವು ಅವಳದಲ್ಲ. ಕನಸಿನ ನಂದನಕ್ಕಾಗಿ ಅವಳು ನನಸಿನ ನಿಜ ಮಾರ್ಗವನ್ನು ತೊರೆಯಳು. ವಾತಾವರಣವನ್ನು ಪ್ರೇಮ ಸುಗಂಧದಿಂದ ಬೆಳಗಿಸುವ ಮಾಯೆಯ ಕೋಲು ಇಂದಿಗೂ ಅವಳ ದಿವ್ಯ ಹೃದಯದಲ್ಲಿಯೆ ಇದೆ; ಆ ಕೋಲು ಬಂಗಾರದ್ದೂ ಅಲ್ಲ; ಏಕೆಂದರೆ ಅವಳೆಂದಿಗೂ ದುಡ್ಡಿನ ದಾಸಿಯಾಗಿಲ್ಲ. ಅದು ಕಬ್ಬಿಣದ್ದೂ ಅಲ್ಲ, ಏಕೆಂದರೆ ಅವಳೆದೆಯಲ್ಲಿ ಕ್ರೌರ್ಯಕ್ಕೆ ಎಡೆಯಿಲ್ಲ.

ಸತ್ಯಧರ್ಮದ ಮಹಾಗುರುಗಳೆಲ್ಲ ವ್ಯಕ್ತಿ ವೈಶಿಷ್ಟ್ಯಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ಆದರೆ ಮಾನವರ ದೇವನು ಭಕ್ತನ ಹೃನ್ಮಧುರ ಕಾಣಿಕೆಗಳನ್ನು ತಿರಸ್ಕರಿಸಿ ಪ್ರೇಮದ ಗದ್ದುಗೆಯಿಂದ ಕೆಳಗೆ ಜಾರಿ ನಿರಪರಾಧಿಗಳ ನೆತ್ತರ ನೀರಡಿಕೆಯುಳ್ಳವನಾಗಿದ್ದಾನೆ. ಆದರಿಂದ ಪೊಡವಿಯೆಂಬುದು ರಕ್ತಪಿಪಾಸುಗಳಾದ ಚಿರತೆಗಳ ಕಟ್ಟಡವಿಯಾಗಿದೆ. ಧರ್ಮ, ಸತ್ಯ, ನ್ಯಾಯಗಳ ವೇಶದ ವಿಕಟ ನೃತ್ಯವೇ ಅವುಗಳ ದೈನಂದಿನ ಜೀವನವಾಗಿದೆ. ನೆತ್ತರಿಗಾಗಿ ಬಾಯೊರೆದ ಕ್ರೂರ ದೇವನೆದುರಿನಲ್ಲಿ ನಿರಪರಾಧಿ ಪ್ರಾಣಿಗಳನ್ನು ಅಲ್ಲಲ್ಲಿ ಮನುಷ್ಯರನ್ನೂ ಬಲಿಗೊಟ್ಟ ಮಾನವ ಚರಿತ್ರೆಯು ಏನನ್ನು ಹೇಳುತ್ತದೆ ? ಸುದೈವದಿಂದ ಈಗ ಮನುಷ್ಯನ ಹೃದಯವು ವಿಕಾಸಗೊಂಡಿದೆ. ಅವನ ಹೃದಯ ದೇವನಿಂದು ಪ್ರೇಮದೇವನಾಗಿದ್ದಾನೆ. ಇಂದಿನ ಯಾಂತ್ರಿಕ ನಾಗರಿಕತೆಯು ಮನುಷ್ಯನ ವ್ಯಕ್ತಿ ವೈಶಿಷ್ಟ್ಯವನ್ನು ನಾಶಗೊಳಿಸಿ ಬರಿ ಉಗುರು, ಕೋರೆಗಳನ್ನು ಪೂಜಿಸುವ ಸೈನಿಕರನ್ನು ತಯಾರಿಸುತ್ತಿದೆ. ಮಾನವ್ಯದ ಈ ಅಪಮಾನವನ್ನು ತಡೆಗಟ್ಟುವುದು ಸ್ತ್ರೀಯ ಕರ್ತವ್ಯವಾಗಿದೆ. ಮತ್ತು ಅವಳು ಅದನ್ನು ಬಾಂಬು ಗುಂಡುಗಳ ಸಹಾಯವಿಲ್ಲದೆಯೇ ತನ್ನ ವಿನೀತ ಪ್ರೇಮ ಮೌನಗಳಿಂದಲೇ ಸಾಧಿಸಬಲ್ಲಳು. ಶಾಂತವಾದ ತನ್ನ ಪ್ರೇಮಬಲದಿಂದಲೆ ಅವಳು ಮಾನವರ ಮೃದು ಹೃದಯಗಳನ್ನು ಹದಗೆಡಿಸಿದ ಹಕ್ಕು ಸೊಕ್ಕುಗಳ ರಕ್ಕಸ ದೇವರನ್ನು ಉಚ್ಚಾಟನೆ ಮಾಡಬಲ್ಲಳು.

ಗಂಡಸು ತನ್ನ ಹೃದಯವಾಣಿಯನ್ನು ತಿರಸ್ಕರಿಸಿ ಒಣ ಮಿದುಳಿನಿಂದ ನಿರ್ಮಿಸಿದ ದೇವರ ಆರಾಧನೆಯ ಸೊಕ್ಕಿನ ಕುಣಿತದಲ್ಲಿ ಹೆಂಗಸನ್ನು ತುಳಿದು ಅವಳ ದೇವದತ್ತವಾದ ಅಧಿಕಾರಗಳನ್ನು ಕಸಿದು ಬಿಸಾಡಿದ್ದಾನೆ. ಹೆಣ್ಣುಮಗು ಹುಟ್ಟಿದ ಕೂಡಲೆ ಅದು ಮುಂದೆ ಸಮಾಜಕ್ಕೆ ಭಾರ, ವಿಕಾರಕ್ಕಧಿಷ್ಠಾನವಾಗುವುದೆಂದು ಕತ್ತು ಹಿಚುಕಿ ಕೊಲುತಿದ್ದ ಉದಾಹರಣೆಗಳು ಇತಿಹಾಸದಲ್ಲಿ ಬೇಕಾದಷ್ಟು ಇವೆ. ಗಂಡಸಿಗೆ ಹೆಂಗಸು ಈಗಲೂ ಬರಿ ಭೋಗ್ಯವಸ್ತುವೆ ಎಂದೆನಿಸುತ್ತಿದೆ: ಬೇಕಾದಾಗ ಮರುಳು ಮಾಡುವುದು, ಬೇಡವಾದಾಗ ಉರುಳು ಹಾಕುವದು ! ಗಂಡಸುತನದ ಬಾವುಟವನ್ನು ಮೆರೆಸುವ ಭರದಲ್ಲಿ ಅವನು ತನ್ನ ತತ್ವಜ್ಞಾನ, ಸಾಹಿತ್ಯ, ಧರ್ಮ ಕಾವ್ಯಗಳಲ್ಲೆಲ್ಲ ಹೆಜ್ಜೆ ಹೆಜ್ಜೆಗೂ ಹೆಂಗಸನ್ನು ಹೀಗಳೆದ್ದಾನೆ. ಆದರೆ ಕಾಲವು ಈಗ ಮಾರ್ಪಟ್ಟಿದೆ. ಹೆಂಗಸು ಈಗ ಗಂಡಸಿನ ಕೈಗೊಂಬೆಯಾಗಲೊಲ್ಲಳು. ಅವನ ಮಿದುಳು ತನಗೆ ತತ್ವೋಪದೇಶ ಮಾಡುವುದನ್ನು ಅವಳು ಸಹಿಸಳು. ಅವನ ನಾಲಿಗೆ ತನಗೆ ನೀತಿಮಾರ್ಗವನ್ನು ತೋರಿಸುವುದಕ್ಕೆ ಅವಳು ಎಡೆಗೊಡಳು. ಇತಿಹಾಸಪೂರ್ವ ಕಾಲದ ಬೆಟ್ಟದಂತಹ ಕ್ರೂರ ಮೃಗ ಉರಗಗಳನ್ನು ಗಂಡಸು ತನ್ನ ಬುದ್ಧಿಬಲದಿಂದ ನಿರ್ಮೂಲಗೊಳಿಸಿದ್ದನು. ಆ ಮಿದುಳಿನ ಸೊಕ್ಕಳಿದಾಗಲೆ ಜಗತ್ತು, ಪ್ರೇಮ, ಸೇವೆ, ತ್ಯಾಗಗಳ ಸಮರಸ ನಂದನವಾಗುವುದು; ದೇವರ ಶಾಂತಿನಿಕೇತನವಾಗುವುದು.

'ಜಯಕರ್ನಾಟಕ.'

ಪ್ರ ಕ ಟ ಣೆ.

ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸುವ ಉದ್ದಿಶ್ಯದಿಂದ ಕೊಡಗು ವ್ಯವಸಾಯ ಇಲಾಖೆಯು, ಗದ್ದೆಗಳಿಗೆ ನೀರು ಹಾಯಿಸುವ ಇಂಜಿನುಗಳನ್ನು, ಗದ್ದೆಗಳಿಗೂ ೫೦ ಎಕ್ರೆಗಳಿಗಿಂತಲೂ ಕಡಮೆ ಇರುವ ತೋಟಗಳಿಗೂ ಬೇಕಾಗುವ ಅಮೋನಿಯಂ ಸಲ್ಫೇಟ್ ಗೊಬ್ಬರವನ್ನು ಸಾಲವಾಗಿಯೂ ನಗದು ಹಣಕ್ಕೂ ವ್ಯವಸಾಯ ಇಲಾಖೆ ಡಿಪೋಗಳಿಂದ ಹಂಚಲಾಗುವುದು. ಗೊಬ್ಬರ ಮತ್ತು ಇಂಜನುಗಳ ಅವಶ್ಯಕತೆ ಇರುವವರು ಇದೇ ಮೇ ತಾ, ೨೦ರ ಒಳಗೆ ತಮ್ಮ ಅರ್ಜಿಗಳನ್ನು ಬರೆಕೊಳ್ಳುವದು. ಅನಂತರ ಬಂದ ಅರ್ಜಿಗಳನ್ನು ಗಮನಿಸಲಾಗುವುದಿಲ್ಲ.

ನೆ ಹ ರೂ—ಸೇ ನಾ ನಾ ಯಿ ಕೆ

ಸಿಲೋನಿನಲ್ಲಿ ಭಾರತದ ಹೈಕಮಿಶನರಾಗಿರುವ ಶ್ರೀ. ಸಿ. ಸಿ. ದೇಸಾಯಿಯವರು ಭಾರತ ಸರ್ಕಾರದೊಡನೆ ವಿಚಾರ ವಿನಿಮಯ ಮಾಡಲಿಕ್ಕಾಗಿ ಒಂದು ವಾರ ಡೆಲ್ಲಿಯಲ್ಲಿದ್ದರು.

ಶ್ರೀ ದೇಸಾಯಿಯವರು ಸಿಲೋನಿನಲ್ಲಿರುವ ಭಾರತೀಯರ ನಾಗರಿಕ ಹಕ್ಕಿನ ವಿಷಯ ಹಾಗೂ ಇತರ ವಿಷಯಗಳಲ್ಲಿ ಭಾರತ ಸರಕಾರದೊಡನೆ ಚರ್ಚಿಸಿದರೆಂದು ತಿಳಿದು ಬಂದಿದೆ. ಕೆಲವು ಪ್ರಾಯೋಗಿಕ ಪ್ರಸ್ತಾಪಗಳು ನಿರ್ಣಯಿಸಲ್ಪಟ್ಟಿವೆ.

ಮುಂದಿನ ತಿಂಗಳಲ್ಲಿ ಲಂಡನಿನಲ್ಲಿ ಭೇಟಿಯಾದಾಗ ಶ್ರೀ ನೆಹರುಗಳು ಮತ್ತು ಶ್ರೀ. ಸೇನಾನಾಯಕೆಯವರು ವೈಯಕ್ತಿಕವಾಗಿ ಈ ನಾಗರಿಕ ಹಕ್ಕುಗಳಿಗೆ ಸಂಬಂಧಿಸಿದ ಪ್ರಸ್ತಾಪಗಳ ಕುರಿತು ಚರ್ಚಿಸಲಿರುವರೆಂದು ಹೇಳಲಾಗಿದೆ.

॥ ಮ ಧು ಪ ರ್ಕ ॥

“ಕಸ್ತೂರ್ಬಾ ನಿಮ್ಮ ತಾಯಿಯೆ?” ಎಂದು ಯಾರೋ ಒಬ್ಬರು ಗಾಂಧೀಜೀಯನ್ನು ಒಂದು ದಿನ ಕೇಳಿದರು. ಗಾಂಧೀಜಿಯವರಿಗೆ ಇದನ್ನು ಕೇಳಿ ಒಂದೆಡೆ ನಗು ಮತ್ತೊಂದೆಡೆ ಅನಿರ್ವಚನೀಯ ಆನಂದ. ಮರು ದಿನ ಬೆಳಗ್ಗೆ ಯಾವುದೋ ಒಂದು ಸಭೆ ಕಸ್ತೂರ್ಬಾ ಅದಕ್ಕೆ ಬಂದಿರಲಿಲ್ಲ. ತಾಯಿ ಬಂದಿಲ್ಲವೇಕೆ ಎಂದು ಯಾರೋ ಕೇಳಿದರು. ಗಾಂಧೀಜಿ ಹೇಳಿದರು “ನಿನ್ನೆ ರಾತ್ರಿ ಒಬ್ಬ ಗೃಹಸ್ಥ ಕಸ್ತೂರ್ಬಾನನು ನನ್ನ ತಾಯಿಯೆಂದು ತಪ್ಪು ತಿಳಿದು ಕೊಂಡ. ಆದರೆ ನನಗೂ ಆಕೆಗೂ ಅದು ಅಪರಾಧವೇನಲ್ಲ. ಸಂತೋಷವೇ ಎನ್ನಬೇಕು. ಎಷ್ಟೋ ವರ್ಷಗಳಾಗಿವೆ. ಕಸ್ತೂರ್ಬಾ ಮತ್ತು ನಾನು ಮಾತಾಡಿಕೊಂಡು ನಮ್ಮ ದಾಂಪತ್ಯವನ್ನು ಬಿಟ್ಟಿದ್ದೇವೆ. ಅಂದಿನಿಂದ ಆಕೆ ನನಗೆ ಹೆಂಡತಿಯಾಗಿಲ್ಲ. ನನ್ನ ತಾಯಿ ಸತ್ತು ನಲುವತ್ತು ವರ್ಷಗಳಾಗಿವೆ. ಸುಮಾರು ಮೂವತ್ತು ವರ್ಷಗಳಿಂದ ಕಸ್ತೂರ್ಬಾ ನನ್ನ ತಾಯಾಗಿ ನಡೆದುಕೊಂಡಿದ್ದಾಳೆ. ತಾಯಿ, ಪರಿಚಾರಿಕೆ, ಬಾಣಸಗಿತ್ತಿ, ಕೆಲಸಗಿತ್ತಿ ಎಲ್ಲವೂ ಆಗಿದ್ದಾಳೆ. ನಮ್ಮ ಬಾಳು ಪ್ರಾರಂಭವಾದಾಗಲೇ ಒಂದು ಏರ್ಪಾಡು ಮಾಡಿಕೊಂಡೆವು. ಅದರಂತೆ ಗೌರವವೆಲ್ಲ ನನಗೆ. ದುಡಿತವೆಲ್ಲ ಆಕೆಗೆ. ಇಲ್ಲದಿದ್ದರೆ ಇಬ್ಬರೂ ಸಮವೆಂದು ನಾವು ಕೈಪೋಟಿಗೆ ಹೊರಟಿದ್ದರೆ ನನಗೆ ಹೊಟ್ಟೆಗಿಲ್ಲದೆ, ಉಡಲು ಬಟ್ಟೆಯಿಲ್ಲದೆ ಆಗುತ್ತಿತ್ತು. ನನ್ನ ಮಹಾತ್ಮ್ಯಗಿರಿಯು ಮಣ್ಣುಗೂಡುತಿತ್ತು.”

ಷಣ್ಮುಗಂ ಚೆಟ್ಟಿಯಾರರು ಕಣ್ಮರೆಯಾದರು

ಭಾರತದ ನಡುಗಾಲ ಸರಕಾರದಲ್ಲಿ ಅರ್ಥ ಸಚಿವರಾಗಿದ್ದ ಪ್ರಸಿದ್ಧ ಅರ್ಥಶಾಸ್ತ್ರಜ್ಞರೂ ಅಣ್ಣಾಮಲೆ ವಿಶ್ವವಿದ್ಯಾಲಯದ ವೈಸ್ ಚಾನ್ಸೆಲರರೂ ಆಗಿದ್ದ ಡಾ। ಸರ್ ಆರ್. ಕೆ ಷಣ್ಮುಗಂ ಚೆಟ್ಟಿಯಾರ್ ಇವರು ಕಳೆದ ದಿನಾಂಕ ೫ ರಂದು ರಕ್ತದ ಒತ್ತಡ ಮತ್ತು ಹೃದ್ರೋಗಗಳಿಗೆ ತುತ್ತಾಗಿ ತಮ್ಮ ೬೧ನೇ ವರ್ಷ ಪ್ರಾಯದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುವೆವು. ಶ್ರೀ ಷಣ್ಮುಗಂ ಚೆಟ್ಟಿಯಾರರು ಮೇಧಾವಿಗಳು, ತುಂಬಾ ವಿದ್ಯಾವಂತರು. ವಿದ್ಯಾಭಿಮಾನಿಗಳಾಗಿದ್ದು ಜನಪ್ರಿಯರಾಗಿದ್ದರು. ರಾಜಕೀಯ ಹಾಗೂ ಸಾಹಿತ್ಯದಲ್ಲಿ ಅವರು ಸಲ್ಲಿಸಿದ ಸೇವೆ ಅಪಾರವಾದುದು. ಮೃತರ ಆತ್ಮಕ್ಕೆ ಶಾಂತಿ ಕೋರುವೆವು.

ಭೂದಾನಯಜ್ಞ ಯಶಸ್ವಿಯಾಗಲು ಸರ್ವರೂ ಒಟ್ಟಿಗೆ ಶ್ರಮಿಸಬೇಕು.

ಕಾರ್ಯಕರ್ತರಿಗೆ ಆಚಾರ್ಯ ವಿನೋಬಭಾವೆಯವರ ಹಿತೋಕ್ತಿ.

[ಭೂದಾನ ಯಜ್ಞ ಚಳವಳಿ ಯಶಸ್ವಿಯಾಗಲು ಸರ್ವರೂ ಹೇಗೆ ಸುಸಂಘಟಿತರಾಗಿ ದುಡಿಯಬೇಕೆಂಬ ಬಗ್ಗೆ ಆಚಾರ್ಯ ವಿನೋಬಾ ಭಾವೆಯವರು ಇತ್ತೀಚೆಗೆ ಚಾಂದಿಲ್‌ನಲ್ಲಿ ನಡೆದ ಸರ್ವೋದಯ ಸಮ್ಮೇಳನದಲ್ಲಿ ಕಾರ್ಯಕರ್ತರಿಗೆ ವಿವರಿಸಿಯಿತ್ತರು. ಅದರ ಸಾರಾಂಶವಿದು.]

ನಮ್ಮ ದೃಷ್ಟಿಯು ನಿಚ್ಚಳವಿರಬೇಕು. ನಮ್ಮ ಗುರಿಯನ್ನು ನಾವು ಸ್ಪಷ್ಟವಾಗಿ ತಿಳಕೊಳ್ಳಬೇಕು. ಬಾಪೂಜೀಯವರು ಅಹಿಂಸಕ ಕ್ರಾಂತಿಯೇ ವಿಧಾಯಕ ಕಾರ್ಯಕರ್ತರ ಗುರಿ ಎಂದು ನಮ್ಮ ಮುಂದೆ ಸಾರಿದ್ದರು. ಹಾಗೆ ನೋಡಿದರೆ ರೈಲುಗಾಡಿ ಬರುವಾಗ ಸಿಗ್ನಲ್ ಮಾಡುವವನು ಸಹಾ ಒಂದು ಉಪಯುಕ್ತ ಸೇವೆಯನ್ನು ಮಾಡುತ್ತಾನೆ. ಆದರೆ ಅದು ಬಹಳ ಮಹತ್ವದ್ದಿದ್ದರೂ ಕೂಡ ಸಮಾಜದಲ್ಲಿ ಪರಿವರ್ತನೆ ತರುವ ಸೇವೆಯು ಆದಾಗಲಿಕ್ಕಿಲ್ಲ. ಆ ಥರೋ ಸಮಾಜ ಪರಿವರ್ತನೆಯು ವಿಧಾಯಕ ಕಾರ್ಯದ ಗುರಿ ಎಂಬುದನ್ನು ನಾವು ಸ್ಪಷ್ಟ ಲಕ್ಷ್ಯದಲ್ಲಿಡಬೇಕು. ಈ ನಮ್ಮ ದೃಷ್ಟಿಯನ್ನು ನಾವು ಮರೆತರೆ ಮತ್ತು ನಾವು ಸಾಮಾನ್ಯ ಸೇವೆಯಲ್ಲಿಯೇ ಸಂತುಷ್ಟರಾಗಿ ಉಳಿದರೆ, ಕೆಲವು ಸಮಯದ ಮೇಲೆ ನಮ್ಮನ್ನು ಯಾರೂ ಕೇಳದೇ ಹೋಗುವರು. ನಾವು ಅನುಪಯುಕ್ತ (Back Number) ಆಗುವೆವು. ಇನ್ನೂ ನಮಗೆ ಒಂದು ಅವಕಾಶವಿದೆ. ಈ ಅವಕಾಶದ ಉಪಯೋಗ ಮಾಡಿಕೊಳ್ಳದಿದ್ದರೆ ನಾವು ಲೋಪ ಹೊಂದುವೆವು.

ಕ್ರಾಂತಿಯು ಪುರಸೊತ್ತಿನಲ್ಲಿ ಮಾಡುವ ಕೆಲಸವಲ್ಲ.

ಆದುದರಿಂದ ಇಂಥ ಸಮಾಜ ಪರಿವರ್ತನೆಯು, ಸಮಾಜ ಕ್ರಾಂತಿಯ ಕೆಲಸವು ಪುರಸೊತ್ತಿನಲ್ಲಿ ಮಾಡುವ ಕೆಲಸವಾಗಲಾರದು. ಯಾರಾದರೂ 'ನನಗೆ ಮೇ ತಿಂಗಳಲ್ಲಿ ಬಿಡುವು ಇದೆ. ಆಗ ಕೆಲಸ ಮಾಡುವೆನು' ಎಂತ ಹೇಳಿದರೆ ನಾನು ಅವನಿಗೆ ಬೇಡವೆಂದು ಹೇಳುವುದಿಲ್ಲ. ಆದರೆ ಈ ರೀತಿಯಿಂದ ಇಂಥ ಮಹತ್ಕಾರ್ಯವು ಎಂದೂ ಸಾಧಿಸಲಾರದೆಂದು ನಾನು ಮನಸ್ಸಿನಲ್ಲಿ ತಿಳಿಯುವೆನು ಮತ್ತು ಜನರಿಗೂ ಹಾಗೆ ಹೇಳುವೆನು. ಕೆಲವಷ್ಟು ಭೂಮಿಯನ್ನು ದೊರಕಿಸಿ ಒಂದಿಷ್ಟು ಪರೋಪಕಾರ ಮಾಡುವದಿದ್ದರೆ ಪುರಸೊತ್ತಿನಲ್ಲಿ ಕೆಲಸ ಮಾಡಿ ಅದನ್ನು ಸಾಧಿಸಬಹುದು. ಆದರೆ ಕ್ರಾಂತಿ ಮಾಡುವ ಸಂಕಲ್ಪವಿದ್ದವರು ಈ ರೀತಿ ಹೇಳಲಾರರು, ಈ ರೀತಿ ವಿಚಾರ ಮಾಡಲಾರರು. ಒಂದು ನಿಶ್ಚಿತ ಅವಧಿಯಲ್ಲಿ ನಮ್ಮ ಇಡೀ ಸಮಾಜರಚನೆಯನ್ನು ಆರ್ಥಿಕ ದೃಷ್ಟಿಯಿಂದ ಬದಲು ಮಾಡಿ ಹಾಕಬೇಕಾಗಿದೆ. ಮತ್ತು ಬಡವರನ್ನು ಮಾಲೀಕರನ್ನಾಗಿ ಮಾಡಬೇಕಾಗಿದೆ. ಪ್ರತಿಯೊಬ್ಬನೂ ಭೂಮಿಯ ಹಕ್ಕುದಾರನೆಂಬ ಸಿದ್ಧಾಂತವನ್ನು ಕೃತಿಯಲ್ಲಿಳಿಸಬೇಕಾಗಿದೆ. ಈ ಪ್ರಕಾರ ನಾವು ನಿಶ್ಚಿತ ಕಾರ್ಯಕ್ರಮವನ್ನಿಟ್ಟುಕೊಂಡಾಗ ಮತ್ತು ಅದರ ಮೊದಲನೇ ಹೆಜ್ಜೆಯೆಂದು ಈ ಒಂದು ವರ್ಷದಲ್ಲಿ ಇಪ್ಪತ್ತೈದು ಲಕ್ಷ ಎಕರೆ ಜಮೀನು ದೊರಕಿಸುವ ಸಂಕಲ್ಪ ಮಾಡುತ್ತಿರುವಾಗ ತನಗೆ ಮೇ ತಿಂಗಳಲ್ಲಿ, ಜೂನ್ ತಿಂಗಳಲ್ಲಿ ಅನುಕೂಲವಿದೆ ಹೀಗೆಂದು ಹೇಳಿ ನಡೆಯಲಾರದು. ಇದೇ ಕಾರಣದಿಂದ ಶ್ರೀ ಕೃಷ್ಣಪರಮಾತ್ಮನು 'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' ಎಲ್ಲ ಧರ್ಮಗಳನ್ನು ಬಿಟ್ಟು ನನ್ನೊಬ್ಬನನ್ನೇ ಶರಣು ಹೋಗು ಎಂದು ಹೇಳಿರುವನು. ನನಗೊಬ್ಬನಿಗೇ ಶರಣು ಬಾ ಎಂದು ಹೇಳುವಾಗ ಆ ಶರಣಾಗತಿಯ ಸಂಗಡ ಬಾಕಿ ಎಲ್ಲವನ್ನೂ ಬಿಟ್ಟು ಕೊಡಬೇಕು ಎಂದು ಹೇಳಿದ್ದು ಆತನಿಗೆ ಗೊತ್ತಿದೆ. ಹಾಗಿಲ್ಲದಿದ್ದರೆ ಹಿಂದುಸ್ಥಾನದಲ್ಲಿ ಭಕ್ತಿಗೇನೂ ಕೊರತೆಯಿಲ್ಲ. ಕಲ್ಲಿನ ಪೂಜೆ ಮಾಡುವವರಾದರೂ ಅದರಲ್ಲಿ ದೇವರ ಭಾವನೆಯನ್ನಿಟ್ಟೇ ಮಾಡುತ್ತಾರೆ. ಬೆಳಗಿನ ಅರ್ಧ ತಾಸು ದೇವತಾರ್ಚನೆಗೆ ಕೊಡುತ್ತಾರೆ, ಬಾಕಿ ಹೊತ್ತು ಇತರ ಕೆಲಸಗಳಿಗೆ. ಆದರೆ ಇತರ ವೇಳೆಯಲ್ಲಿ ಮಾಡುವ ಕೆಲಸಗಳು ಈ ಅರ್ಧ ತಾಸು ಮಾಡಿದ ದೇವರ ಪೂಜೆಗೆ ಎಷ್ಟು ಸುಸಂಗತವಾಗಿರುತ್ತವೆಂಬುದನ್ನು ಹೇಳಲು ಬರಲಾರದು. ಇಷ್ಟೇ ಅಲ್ಲ, ಅವು ಅಸಂಗತವಾಗಿ ವಿರೋಧಿಯಾಗಿರುತ್ತವೆ. ಆದರೆ ಮನಸ್ಸಿನಲ್ಲಿ ಒಂದು ಕಾರ್ಯದ ಹೋಲಿಕೆ ಮಾಡಿಕೊಳ್ಳುತ್ತೇವೆ. ಬೆಳಗಿನ ಹೊತ್ತು ಪ್ರಜಾ ಪಾಠದಂಥ ಸತ್ವಗುಣ ಪ್ರಧಾನ ಕೆಲಸಕ್ಕೆ ಕೊಡುವುದು, ನಂತರ ಹಸಿವೆಯಾಗುವ ಹೊತ್ತು ಬಂದಿತೆಂದರೆ ರಜೋಗುಣವನ್ನು ಸಮಾಧಾನಪಡಿಸುವದಕ್ಕಾಗಿ ಕಿನ್ನುವ ಕೆಲಸ ಮಾಡುವದು ಮತ್ತು ತಮೋಗುಣದ ಪ್ರವೃತ್ತಿಯಾಗಹತ್ತಿದ ಕೂಡಲೇ ಅದನ್ನು ತೃಪ್ತಿಗೊಳಿಸಲು ನಿದ್ರಾಭಿಮುಖವಾಗುವುದು, ಈ ಪ್ರಕಾರ ನಮ್ಮ ಕೆಲಸದ ಹೋಲಿಕೆ ಇರುತ್ತದೆ.

ಕ್ರಾಂತಿ ಮಾಡುವ ಬಾಷೆಯನ್ನು ನಾವು ಆಡುತ್ತೇವೆ. ಭೂದಾನಯಜ್ಞವು ಅದರ ಸಾಧನವೆಂದು ತಿಳಿಯುತ್ತೇವೆ. ಹಾಗಿದ್ದ ಪಕ್ಷದಲ್ಲಿ ಈ ಪ್ರಕಾರ ನಡೆದು ಕೆಲಸವಾಗಲಾರದು. ಬಾಕಿ ಎಲ್ಲ ಕೆಲಸಗಳೂ ಕಾರಣವೇದು ತೀವ್ರ ಸಂಕಲ್ಪಸಿದ್ಧಿಗಾಗಿ ಈ ಒಂದೇ ಕೆಲಸಕ್ಕೆ ಎಲ್ಲರೂ ತಮ್ಮ ಸಂಪೂರ್ಣ ಶಕ್ತಿಯನ್ನು ಏಕಕಾಲಕ್ಕೆ ತೊಡಗಿಸಬೇಕಾಗುವುದು. ಅಂದರೆ ಮಾತ್ರ ಕಾರ್ಯವು ಸಿದ್ಧವಾಗುವದು. ಯಾವದೊಂದು ಪ್ರಚಂಡ ಬಂಡೆಕಲ್ಲನ್ನು ಸರಿದಾಡಿಸುವಾಗ ನಾವು ಐವತ್ತು—ಅರವತ್ತು ಮಂದಿ ಒಮ್ಮೆಲೇ ಕೈಹಾಕುತ್ತೇವೆ ಮತ್ತು ಏಕಕಾಲಕ್ಕೆ ಶಕ್ತಿಯಿಂದ ದೂಡುತ್ತೇವೆ. ಆಗಲೇ ಅದು ಸರಿದಾಡಹತ್ತುವದು.

ಕಾರ್ಯ ಮಾಡುವಾಗ ದೇಶದ ಸಮಗ್ರ ದರ್ಶನ ಮಾಡಬೇಕು.

ನಾವೆಲ್ಲರೂ ಈಗ ಬೇರೆ ಬೇರೆ ವಿಧಾಯಕ ಕಾರ್ಯದಲ್ಲಿ ತೊಡಗಿದ್ದೇವೆ. ಆದರೆ ಈಗ ಆಗುತ್ತಿರುವ ಕೆಲಸಗಳಿಂದ ನನಗೆ ಏನೂ ಸಂತೋಷವಿಲ್ಲ. ಯಾಕೆಂದರೆ ಇವರ ಹಿಂದೆ ಜಗತ್ತಿನದಿರಲಿ, ಹಿಂದೂಸ್ಥಾನದ ಸಹ ದರ್ಶನವು ನಮಗೆ ಆಗಿಲ್ಲವೆಂದು ಹೇಳಬೇಕಾಗುತ್ತದೆ. ಆ ದರ್ಶನವಿಲ್ಲದೆ ಮಾಡಿದ ಕೆಲಸಗಳು ನಿಸ್ತೇಜವಾಗುತ್ತವೆ. ಯುಗಪುರುಷನ ಬೇಡಿಕೆಯನ್ನು ತಿಳಕೊಳ್ಳದೆ ಕೆಲಸ ಮಾಡುತ್ತ ಹೋಗುವದರಿಂದ ಯಾವ ಸಿದ್ಧಿಯೂ ಆಗಲಾರದು. ಕಾಲಪುರುಷನೆಂಬ ವಸ್ತುವಿದೆ ಎಂಬುದನ್ನು ನಾವು ತಿಳಕೊಳ್ಳಬೇಕು. ಆ ಕಾಲಪುರುಷನಿಗನುಸರಿಸಿ ಒಂದು ಯುಗ—ಧರ್ಮವಿರುತ್ತದೆ. ಆ ಯುಗ ಧರ್ಮವನ್ನು ತಿಳಕೊಳ್ಳದೇ ನಾವು ನಮ್ಮ ನಿತ್ಯ ಕರ್ಮವನ್ನು ಆಚರಿಸಿದರೆ ಅದು ಕರ್ಮಕಾಂಡವಾಗಬಹುದು. ನಿತ್ಯ ಧರ್ಮದೊಂದಿಗೆ ಯುಗಧರ್ಮವನ್ನು ಜೋಡಿಸಿದಾಗಲೇ ಸಾಧನೆಯು ಪೂರ್ಣವಾಗುವುದು. ಅಸಂಖ್ಯ ವಿಧಾಯಕ ಕಾರ್ಯಗಳನ್ನು ನಾವು ನಡೆಸಿದ್ದೇವೆ. ಆದರೆ ಅವುಗಳ ಹಿಂದೆ ಸಮಗ್ರ ದೃಷ್ಟಿ ಇಲ್ಲ. ಹಿಂದೂಸ್ಥಾನದ ಸಮ್ಯಕ್ ದರ್ಶನವಿಲ್ಲ. ಯುಗ ಧರ್ಮದ ಅರಿವು ಇಲ್ಲ. ಈಗ ಮಾಡುತ್ತಿರುವ ಕೆಲಸಗಳು ತಪ್ಪು ಕೆಲಸಗಳೆಂದು ನಾನು ಹೇಳುವುದಿಲ್ಲ ಆದರೆ ಯೋಗ್ಯ ಹೊತ್ತಿಗೆ ಯೋಗ್ಯ ಕೆಲಸಗಳನ್ನು ಮಾಡದಿರುವುದು ಸಹ ದೊಡ್ಡ ದೋಷವು. ಅವರಲ್ಲೂ ಗುರಿಯ ದರ್ಶನವಿಲ್ಲದೇ ಮಾಡಿದ ಕೆಲಸವು ವ್ಯರ್ಥವೇ ಸರಿ.

ದೇಶದಲ್ಲಿ ಮತ್ತು ದೇಶದ ಹೊರಗೆ ಹೊಸ ಹೊಸ ವಿಚಾರಗಳು ಜನ್ಮ ತಾಳುತ್ತಿವೆ. ಜನರು ಹಸಿವೆ, ನೀರಡಿಕೆಗಳಿಂದ ಬಳಲುತ್ತಿದ್ದಾರೆ. ಹೀಗಿದ್ದರೂ ಅವರು ಸರ್ವೋದಯ ವಿಚಾರದ ಬಹಳ ಶ್ರದ್ಧೆಯುಳ್ಳವರಿದ್ದಾರೆಂಬುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ಸರ್ವೋದಯ ವಿಚಾರವು ತಮಗೆ ಬಹಳ ಅನುಕೂಲ ಮತ್ತು ಸ್ವಾಭಾವಿಕವೆಂಬ ಸಂಗತಿಯು ಅವರಿಗೆ ಸಹಜ ತಿಳಿದು ಹೋಗಿದೆ. ಮತ್ತು ಈ ಬಗ್ಗೆ ಅವರು ಆಕರ್ಷಿತರಾಗಿ ಹೋಗಿದ್ದಾರೆ. ಜನರು ಸಿದ್ಧರಿದ್ದಾರೆ. ಕಾರ್ಯಕರ್ತರೂ ಇದ್ದಾರೆ. ಆದರೆ ಈ ಕಾರ್ಯಕರ್ತರ ಮತಿಯು ಮಾತ್ರ ಭ್ರಾಂತವಾಗಿದೆ. ಸಣ್ಣ ಸಣ್ಣ ಕೆಲಸಗಳಲ್ಲಿ ತೊಡಗಿದ್ದಾರೆ. ಅವರ ದೃಷ್ಟಿಯೂ ಸಣ್ಣದಾಗಿದೆ. ದೂರದೃಷ್ಟಿ ಇಟ್ಟು ಜನಶಕ್ತಿಯನ್ನು ನಿರ್ಮಾಣ ಮಾಡುವ ಕೆಲಸದಲ್ಲಿ ತಾವು ತೊಡಗಬೇಕೆಂಬ ವಿಚಾರವೂ ಅವರ ಲಕ್ಷ್ಯದಲ್ಲಿ ಬರುವುದಿಲ್ಲ.

ಜನಶಕ್ತಿ ಎಂದರೇನು?

ಈ ಜನ ಶಕ್ತಿ ಎಂದರೇನು? ಇದು ಹಿಂಸಾ ಶಕ್ತಿಗೆ ವಿರೋಧಿಯಾದದ್ದು. ಹಾಗೂ ಅದೇ ಕಾಲಕ್ಕೆ ಸರಕಾರದ ದಂಡ ಶಕ್ತಿಯಿಂದಲೂ ಭಿನ್ನವಾದದ್ದು. ದಂಡ ಶಕ್ತಿಯಲ್ಲಿ ಸಹ ಹಿಂಸೆಯ ಅಂಶವು ಅವಶ್ಯವಾಗಿ ಇದ್ದೇ ಇರುತ್ತದೆ. ಹೀಗಿದ್ದರೂ ಅದನ್ನು ನಾನು ಹಿಂಸಾಶಕ್ತಿಯೆಂದು ಕರೆಯಲಿಚ್ಛಿಸುವುದಿಲ್ಲ. ಏಕೆಂದರೆ ಸರಕಾರದ ಹತ್ತಿರ ಇರುವ ಈ ದಂಡಶಕ್ತಿಯನ್ನು ಜನರೇ ಅವರಿಗೆ ಒಪ್ಪಿಸಿದ್ದಾಗಿರುತ್ತೆ. ಆದರೆ ದಂಡ ಶಕ್ತಿ ಅವಶ್ಯ ಬೀಳದಂತೆ ನಾವು ನಮ್ಮ ಕೆಲಸವನ್ನು ಮಾಡಬೇಕು. ಇಲ್ಲವಾದರೆ ನಾವು ನಮ್ಮ ಬಗ್ಗಿದ ಅಪೇಕ್ಷೆಯನ್ನು ಪೂರೈಸಿದಂತಾಗದು. ಅಥವಾ ಒಂದು ರೀತಿಯಿಂದ ನಾವು ಭಾರ ರೂಪವೇ ಆಗುವೆವು. ದಂಡ ಶಕ್ತಿಯ ಆಧಾರದಿಂದ ಸಹ ಸೇವಾಕಾರ್ಯವು ಆಗುತ್ತದೆ. ಆದ್ದರಿಂದಲೇ ನಾವು 'ರಾಜ್ಯ ಶಾಸನ'ವೆಂದು ಹೇಳುತ್ತೇವೆ. ಅಂಥಾ ಶಾಸನದ ಅವಶ್ಯಕತೆ ಇದೆ. ಅದರೊಳಗಿಂದ ಸೇವೆಯು ನಿರ್ಮಾಣವಾಗಬಹುದು. ಆದರೆ ಅದು ಶುದ್ಧ ಸೇವೆಯಲ್ಲ. ದಂಡ ಶಕ್ತಿಯ ಉಪಯೋಗ ಬೀಳದಂಥ ಸೇವೆಯನ್ನು ನಾವು ಅದರ ಮೂಲಕ ಮಾಡಲಾರೆವು.

ಇದರ ಒಂದು ಸ್ಪಷ್ಟ ಉದಾಹರಣೆಯನ್ನು ಕೊಡುತ್ತೇನೆ. ಈಗ ನಮಗೆ ಸರಕಾರದ ಮೇಲೆ ಸ್ವಲ್ಪ ವರ್ಚಸ್ಸು ಇದೆ. ಆದುದರಿಂದ ಸರಕಾರದ ಮೂಲಕ ಕಾಯಿದೆಯನ್ನು ಮಾಡಿಕೊಂಡು ಭೂಮಿಯನ್ನು ಹಂಚುವ ಕೆಲಸವನ್ನು ತುರಿತವಾಗಿ ಯಾಕೆ ನೆರವೇರಿಸುವುದಿಲ್ಲ. ಎಂದು ಕೇಳುತ್ತಾರೆ. ಕಾಯಿದೆಯ ದಾರಿಯನ್ನು ಅದ್ದುಗಟ್ಟಿಸಲಿಚ್ಛಿಸುವದಿಲ್ಲ.

ಆದರೆ ನಾನು ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಲು ಇಚ್ಛಿಸುತ್ತೇನೆ. ನನ್ನ ಕಾರ್ಯದಿಂದ ಕಾಯಿದೆಗೆ ಸಹಾಯವೇ ಆಗುವುದು. ಆದರೆ ಕಾಯಿದೆಯ ಹೊರತು ಕೆಲಸವಾಗಲಿಕ್ಕಿಲ್ಲವೆಂಬ ಗ್ರಹಿಕೆಯ ಮೂಢ ಆಗ್ರಹವನ್ನು ಹಿಡಕೊಂಡು ಕುಳಿತರೆ ನಾನು ಸ್ವಧರ್ಮದಿಂದ ಚ್ಯುತನಾಗಬೇಕಾಗುವದು. ಕಾಯಿದೆ ಏನೇ ಇದ್ದರೂ, ಜನತೆಯ ಹೃದಯದಲ್ಲಿ ಸಮಾನ ಹಂಚುವಿಕೆಯ ಭಾವನೆ ಉತ್ಪನ್ನವಾಗಬೇಕು. ಇಂಥ ಭಾವನೆಯನ್ನು ಹುಟ್ಟಿಸುವದೇ ನನ್ನ ಸ್ವಧರ್ಮವು. ಇದೇ ಶುದ್ಧ ಜನ ಶಕ್ತಿಯು. ಮನುಷ್ಯನು ಜನ್ಮಕ್ಕೆ ಬರಲು ಪ್ರೇಮವೇ ಮೂಲವು. ಪ್ರೇಮದಿಂದಲೇ ಅವನು ಬೆಳೆಯುತ್ತಾನೆ. ಈ ಲೋಕವನ್ನು ಬಿಟ್ಟು ಹೋಗುವಾಗಲೂ ಜನರು ಪ್ರೇಮದೃಷ್ಟಿಯಿಂದಲೇ ಅವನ ಕಡೆಗೆ ನೋಡುತ್ತಾ

Licence No. 60.
Licenced to Post without Prepayment
Reg. No. M. 1550.
"KODAGU" MERCARA (Coorg)

ವೆ. ಪ್ರೇಮ ಶಕ್ತಿಯ ಇಷ್ಟೆಲ್ಲಾ ಅನುಭವವಿದ್ದರೂ ನಾವು ಅದನ್ನು ಬೆಳೆಸುವುದರ ಬದಲು ಕಾಯಿದೆಯ ಜಪ ಮಾಡುತ್ತಾ ಕುಳಿತರೆ ಸರಕಾರಕ್ಕೆ ಸಹಾಯ ಮಾಡಿದಂತಾಗಲಿಕ್ಕಿಲ್ಲ. ಆದರೆ ರಾಜ್ಯ ಶಕಟವನ್ನೆಳೆಯುವ ಎರಡು ಎತ್ತುಗಳೊಂದಿಗೆ ನಾನೂ ಮೂರನೆಯದೊಂದು ಎತ್ತು ಆಗುವೆನು.

ಆದರೆ ಅಪರಿಹಾರ್ಯವಾಗಿ ತಮ್ಮ ಇಚ್ಛೆ ಇಲ್ಲದಿದ್ದರೂ ಹಿಂಸಾ ಚಕ್ರದಲ್ಲಿ ಸಿಲುಕಿದ್ದ ನಮ್ಮ ರಾಜ್ಯ ಧುರಂಧರರಿಗೆ ಅಹಿಂಸಾ ಪಥದ ಮೇಲೆ ರಾಜ್ಯ ಶಕಟವನ್ನು ಸಾವಕಾಶ ತಿರುಗಿಸಲು ದಾರಿಯನ್ನು ಸುಗಮವಾಗಿ ಮಾಡುವುದು ನಮ್ಮ ಸ್ವಧರ್ಮವು. ಸರ್ವೋದಯ ಸಮಾಜವು ಈ ಕೆಲಸ ಮಾಡಿದರೆ ನಮ್ಮದೇ ಆಗಿದ್ದ ಈಗಿನ ರಾಷ್ಟ್ರೀಯ ಸರಕಾರಕ್ಕೆ ಸರ್ವೋತ್ಕೃಷ್ಟ ಸೇವೆಯನ್ನು ಮಾಡಿದಂತಾಗುವುದು. ಸೃಷ್ಟಿ ಶಕ್ತಿಯ ಹಾಗೂ ಪ್ರೇಮ ಶಕ್ತಿಯ ಆಧಾರ ತೆಗೆದುಕೊಳ್ಳದೇ ನಾವು ಎಷ್ಟು ಕಾರ್ಯ ಮಾಡುವೆವೋ ಅಷ್ಟು ಜನಶಕ್ತಿ ಬೆಳೆಯುವದು. ಹಿಂಸಾ ಶಕ್ತಿಗೆ ವಿರೋಧಿಯಾಗಿ ಹಾಗೂ ದಂಡ ಶಕ್ತಿಯಿಂದ ಭಿನ್ನವಾದ ಸ್ವತಂತ್ರ ಲೋಕ ಶಕ್ತಿಯನ್ನು ತಿಳಿಸುವುದೇ ನಮ್ಮ (ಸೇವಕರ) ಸ್ವಧರ್ಮವು. ಅಹಿಂಸಕ ಸಮಾಜ ರಚನೆಯ ಗುರಿಯನ್ನು ಮುಟ್ಟಲು ಇದೇ ದಾರಿಯು. ಇದೇ ನಿಜವಾದ ಪ್ರತಿಕ್ರಿಯೆಯು. ಈ ಮಾರ್ಗದಿಂದ ಭಾರತವು ಅಮೇರಿಕಾದ ಗುಂಪಿನಲ್ಲಿ ಹೋಗಲಿಕ್ಕಿಲ್ಲ, ರಷ್ಯದ ಗುಂಪಿನಲ್ಲಿಯೂ ಸೇರಲಿಕ್ಕಿಲ್ಲ.

ಇಂಥಾ ಮೂರನೆಯ ಶಕ್ತಿ ನಮ್ಮದಾಗಿದೆ. ಈ ಶಕ್ತಿಯನ್ನು ನಾವು ಬೆಳೆಸಬೇಕಾಗಿದೆ. ಅದಕ್ಕಾಗಿ ನಾವು ಇಡೀ ಜನ ಸಮಾಜದಲ್ಲಿ ಬೆರೆತು ಹೋಗಬೇಕು. ನಾವು ಎಂದೂ ಸಂಪ್ರದಾಯವಾದಿಗಳಾಗದಂತೆ ಎಚ್ಚರಿಕೆ ತೆಗೆದುಕೊಳ್ಳಬೇಕು. ಇವನು ಕಾಂಗ್ರೆಸಿಗ, ಈತನು ಸಮಾಜವಾದಿ, ತಾನು ಸರ್ವೋದಯವಾದಿ, ಇಂಥ ಭಾಷೆಯೂ ನಮಗೆ ಒಪ್ಪಲಾರದು. ವ್ಯಕ್ತಿಯನ್ನು ವ್ಯಕ್ತಿ ದೃಷ್ಟಿಯಿಂದಲೇ ನೋಡತಕ್ಕದ್ದು. ಯಾವದೊಂದು ಪಕ್ಷದ ಉಪಾಧಿ ದೃಷ್ಟಿಯಿಂದ ನೋಡತಕ್ಕದ್ದಲ್ಲ. ಅಂದರೆ ಮಾತ್ರ ನಮ್ಮ ದೃಷ್ಟಿಯು ಶುದ್ಧವಾಗಿ ಉಳಿಯುವದು. ಬಾಹ್ಯ ಭೇದಗಳ ಹಿಂದಿದ್ದ ಅಭೇದ ಭಾವವನ್ನು, ಅದ್ವೈತ ಭಾವವನ್ನು ಕಂಡು ಹಿಡಿಯಲು ನಾವು ಸಮರ್ಥರಾಗುವೆವು.

೧೯೫೭ರ ಪೂರ್ವದಲ್ಲಿ ಐದು ಕೋಟಿ ಎಕರೆ ಭೂಮಿಯನ್ನು ನಾವು ದೊರಕಿಸತಕ್ಕದ್ದಿದೆ. ಈ ಸಂಕಲ್ಪವನ್ನು ನಾವು ಅದಷ್ಟು ಶೀಘ್ರದಲ್ಲಿ ಸಿದ್ಧಗೊಳಿಸಬೇಕಾಗಿದೆ. ಈ ಕೆಲಸಕ್ಕೆ ಇಲ್ಲಿ ಕೂಡಿದ ಸರ್ವೋದಯ ಸಮಾಜ ಸೇವಕರಿಷ್ಟೆ ಅಲ್ಲದೇ ಕಾಂಗ್ರೆಸ್, ಪ್ರಜಾ, ಸಮಾಜವಾದಿ ಇತ್ಯಾದಿ ಎಲ್ಲರೂ ಇದಕ್ಕೆ ತೊಡಗಬೇಕು. ಈ ಕೆಲಸವು ಪ್ರಾಮುಖ್ಯವಾಗಿ ಜನಶಕ್ತಿಯಿಂದಲೇ ಆಗಬೇಕು.

'ಚೇತನ'

'ಮೈಸೂರು ಈಗಿರುವಂತೆಯೇ ಇರಲಿ'

ಮೈಸೂರು ಅಸೆಂಬ್ಲಿಯ ಮಾಜಿ ಸ್ಪೀಕರರೂ ಶಾಸನ ಸಭಾ ಸದಸ್ಯರೂ ಆದ ಶ್ರೀ ವಿ. ವೆಂಕಟಪ್ಪನವರು ಈ ರೀತಿ ಬರೆಯುತ್ತಾರೆ—

ಕನ್ನಡಿಗರೆಲ್ಲರೂ ಒಂದಾಗಿ ಕನ್ನಡನುಡಿಯ ಏಳಿಗೆಗೆ, ಕನ್ನಡಿಗರ ಸಂಸ್ಕೃತಿಯ ಬೆಳವಣಿಗೆಗೆ, ಕನ್ನಡನಾಡಿನ ಮಕ್ಕಳ ಸರ್ವತೋಮುಖವಾದ ಏಳಿಗೆಗೆ ದುಡಿಯಬೇಕಾದುದು ಅಗತ್ಯವೆಂಬುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರದು. ಆದರೆ ಆ ಕಾರ್ಯ ಕನ್ನಡಿಗರೆಲ್ಲರೂ ಒಂದೇ ಆಡಳಿತಕ್ಕೆ ಒಳಗಾದರೆ ಮಾತ್ರ ಸಾಧ್ಯವೆ, ಅಲ್ಲವೇ, ಎಂಬುದನ್ನು ಪರಿಶೀಲಿಸಬೇಕು. ಹೀಗೆ ಒಂದೇ ಆಡಳಿತಕ್ಕೆ ಒಳಗಾಗಬೇಕೆಂಬ ಪ್ರೇಮೆಯು ಇದ್ದುದು ಪರಕೀಯರ ಅಧೀನದಲ್ಲಿದ್ದಾಗ ಉದ್ಭವಿಸಿದ ಮಾತು. ಅದು ಈಗಲೂ ಹಾಗೆಯೇ ಆಗಬೇಕೆಂಬುದು ಔಚಿತ್ಯವೆನಿಸಲಾರದು. ಆಡಳಿತ ದೃಷ್ಟಿಯಿಂದ ಕನ್ನಡ ನಾಡೆಲ್ಲವೂ ಒಂದು ಆಡಳಿತಕ್ಕೆ ಸೇರುವುದರಿಂದ ಆಡಳಿತ ದಕ್ಷತೆಯಿಂದ ನಡೆಯುತ್ತದೆಂದು ಹೇಳುವುದು ಕಷ್ಟ. ನಾವೇ ನಮ್ಮ ದೇಶದ ನಾಯಕರುಗಳೇ ತಯಾರಿಸಿ ನಾವುಗಳೆಲ್ಲರೂ ಒಪ್ಪಿ ಜಾರಿಗೆ ತಂದಿರುವ ರಾಜ್ಯ ಶಾಸನದ ವಿಧಿಗಳ ಪ್ರಕಾರ ಜನರು ಯಾವ ಪ್ರಾಂತದ ಆಡಳಿತಕ್ಕೆ ಒಳಪಟ್ಟಿರಲಿ ತಮ್ಮ ಮಾತೃ ಭಾಷೆಯನ್ನು ಕಾಪಾಡಿಕೊಂಡು ಅದನ್ನು ಬೆಳೆಸಿಕೊಳ್ಳಲು ಹೆಚ್ಚು ಅವಕಾಶವಿದೆ. ಇದು ಪರಕೀಯರ ಅಧೀನದಲ್ಲಿದ್ದಾಗ ಸುಲಭ ಸಾಧ್ಯವಾಗಿರಲಿಲ್ಲ. ಆಡಳಿತ ವರ್ಗದವರ ಕೃಪಾಕಟಾಕ್ಷದಿಂದ ಮಾತ್ರ ಅವರ ದಯೆ ಎಷ್ಟು ಮಟ್ಟಿಗೆ ಒದಗುತ್ತಿತ್ತೋ ಅಷ್ಟು ಪ್ರಮಾಣದಲ್ಲಿ ಮಾತ್ರ ನಮ್ಮ ನಮ್ಮ ಮಾತೃಭಾಷೆಯು ತಲೆ ಎತ್ತಲು ಅವಕಾಶವಿರುತಿತ್ತು. ಆಡಳಿತಗಾರರ ಹಂಗಿನಿಂದ ನಾವು, ನಮ್ಮ ಭಾಷೆಯು ಬದುಕಿಬಾಳಬೇಕಾಗಿಲ್ಲ. ಮಾತೃಭಾಷೆಯಲ್ಲಿ ನಮ್ಮ ಅಭಿಮಾನ, ಅಭಿರುಚಿ, ಅದನ್ನು ಬೆಳೆಸಬೇಕೆಂಬ ಆಕಾಂಕ್ಷೆ ಶ್ರದ್ಧೆ ಎಷ್ಟಿದೆಯೋ ಅಷ್ಟರ ಮಟ್ಟಿಗೆ ಅದನ್ನು ಅಭಿವೃದ್ಧಿಗೆ ತರಲು ಸಾಧ್ಯ. ಒಂದು ಭಾಷೆಯು ತಾಯ್ನುಡಿಯಾಗಿರುವವರೆಲ್ಲರೂ ಒಂದು ಆಡಳಿತಕ್ಕೊಳಪಟ್ಟಿದ್ದರೆ ಹೆಚ್ಚು ಪ್ರಯೋಜನಕಾರಿ ಎಂಬುದು ನಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ಕನ್ನಡ ಮಾತಾಡುವವರೆಲ್ಲರೂ ಒಂದೇ ಆಡಳಿತಕ್ಕೆ ಸೇರಬೇಕೆಂಬುದರಿಂದ ಉದ್ಭವಿಸುವ ತೊಂದರೆಗಳನ್ನು ಗಮನಕ್ಕೆ ತೆಗೆದುಕೊಂಡು ಒಂದಕ್ಕೆ ಬದಲಾಗಿ ಎರಡೋ ಅಥವಾ ಮೂರೋ ಬೇರೆ ಬೇರೆ ಆಡಳಿತಕ್ಕೊಳಪಡುವುದರಲ್ಲಿ ಹೆಚ್ಚು ತೊಂದರೆಯಾಗಲಾರದೆಂದೂ ಇದರಲ್ಲಿ ಹೆಚ್ಚು ಪರಿಶ್ರಮವುಳ್ಳವರು ವಿಮರ್ಶೆಮಾಡಿ ಎಲ್ಲರಿಗೂ ಸಮ್ಮತವಾಗುವ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದೆಂದೂ ಭಾವಿಸುತ್ತೇನೆ.

'ಮೈಸೂರು ದೇಶವು ಎಲ್ಲ ದೃಷ್ಟಿಯಿಂದಲೂ ಈಗಿರುವಂತೆ ಒಂದು ಆಡಳಿತದಲ್ಲಿರುವುದೇ ಉತ್ತಮವೆಂದು ಅಭಿಪ್ರಾಯಪಡುವವರಲ್ಲಿ ನಾನೊಬ್ಬನು. ಆಡಳಿತ ದೃಷ್ಟಿಯಿಂದ ದೇಶದ ಕುಂದು ಕೊರತೆಗಳನ್ನು ಆಡಳಿತ ನಡೆಸುವವರು ಅವರ ಗಮನಕ್ಕೆ ತೆಗೆದುಕೊಂಡು ಅದನ್ನು ಸರಿಪಡಿಸುವುದೇ ಕಷ್ಟವಾಗಿ ಕಾಣುತ್ತಿದೆ. ದೇಶ ವಿಸ್ತಾರವಾದಷ್ಟು ಆಡಳಿತದ ದಕ್ಷತೆ ಕಡಿಮೆಯಾಗುತ್ತದೆ. ಆಡಳಿತಗಾರರಿಗೂ ಸಾಮಾನ್ಯ ಜನರಿಗೂ ಸಂಪರ್ಕ ಕಡಿಮೆಯಾಗುತ್ತದೆ. ಈಗಲೇ ದಕ್ಷತೆ ದೃಷ್ಟಿಯಿಂದ ಗೊಣಗುಟ್ಟುವ ಜನರಿದ್ದಾರೆ. ಆದುದರಿಂದ ನಮ್ಮ ಭಾಷೆಯನ್ನು ಬೆಳೆಸಬೇಕೆಂಬ ಉತ್ಸಾಹದಲ್ಲಿ ದಕ್ಷತೆಗೆ ಕುಂದು ಬಾರದಂತೆ ನೋಡಿಕೊಳ್ಳಬೇಕಾದುದೂ ಅವಶ್ಯಕವಾಗಿದೆ. ಮೈಸೂರು ದೇಶವು ಬಹಳ ಕಾಲದಿಂದ ಒಂದು ಆಡಳಿತಕ್ಕೆ ಒಳಪಟ್ಟು ತನ್ನದೇ ಆದ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಮುಂದುವರಿದ ದೇಶವೆನ್ನಿಸಿಕೊಂಡಿದೆ. ಇದಕ್ಕೆ ಧಕ್ಕೆ ತರಬಾರದೆಂದು ದೇಶದ ಹಿತೈಷಿಗಳೆಲ್ಲರೂ ಆಶಿಸಿದ್ದಾರೆ.'

ಆತುರದಿಂದ ಏರ್ಪಾಡಾಗುತ್ತಿರುವ ಆಂಧ್ರ ಪ್ರಾಂತ ರಚನೆಯ ಗೊಂದಲದಲ್ಲಿ ನಾವೂ ಸಿಕ್ಕಿ ಪೇಚಾಡುವುದು ಸರಿಯಲ್ಲ. ಈ ವಿಷಯದಲ್ಲಿ ದೇಶದ ಸಾಮಾನ್ಯ ಜನರ ಅಭಿಪ್ರಾಯವೇನಿದೆ ಎಂಬುದನ್ನು ನಾವು ಗಣನೆಗೆ ತೆಗೆದುಕೊಳ್ಳದೆಯೇ ನಮ್ಮ ಅಭಿಪ್ರಾಯವೇ ದೇಶದ ಅಭಿಪ್ರಾಯವೆಂದು ಮುಂದುವರಿಯುವುದಕ್ಕೆ ಬದಲಾಗಿ ದೇಶದ ಸಾಮಾನ್ಯ ಜನರ ಅಭಿಪ್ರಾಯವನ್ನು ಶೇಖರಿಸಲು ಕಾಲ ಸನ್ನಿಹಿತವಾಗಿದೆ. ಆದುದರಿಂದ ಯಾವ ಯಾವ ರೀತಿಯಲ್ಲಿ ಜನರ ಅಭಿಪ್ರಾಯವನ್ನು ಶೇಖರಿಸಲು ಸಾಧ್ಯವೋ ಅದನ್ನು ಶೇಖರಿಸಲು ಪ್ರಯತ್ನ ಮಾಡಬೇಕು. ಜನರೂ ಕೂಡ ತಮಗೆ ಸೂಕ್ತ ಕಂಡ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ಹೊರಗೆಡಹಬೇಕೆಂದು ನಾನು ಈ ಮೂಲಕ ಪ್ರಾರ್ಥಿಸುತ್ತೇನೆ.'

'ಚೇತನ.'

Specialists in Tailoring ! Prompt Service ! !

FOR **English Felt Hats,**
Wedding Suits, Ladies Over Coats
AND
Latest Designs in Wollen Suitings
— CALL ON —
25-13 **PATTU BROTHERS,**
OPP.— Town Hall, MYSORE.

INSURE WITH
OR REPRESENT
INDIA'S OLDEST LIFE OFFICE.
THE BOMBAY MUTUAL LIFE ASSURANCE SOCIETY, LTD.
BUSINESS IN FORCE OVER 40 CRORES
ASSETS .... OVER 12 CRORES
Applications from energetic youngmen are invited for representation.
25-9
Head Office; BOMBAY.
Branch: 172. 3, Narasimharaja Road. BANGALORE 2.

Edited Printed and Published by P. I. BELLIAPPA at 'KODAGU' Press Mercara, for Kodagu Ltd.,

ಕೊಡಗು



ಶ್ರೀ ರಾಜಾಜಿಯವರು

ವಾರ್ಷಿಕ ಚಂದಾ ರೂ. ೫—೦—೦ ಶುಕ್ರವಾರ
ಸಂಪುಟ ೩೧. ಸಂಚಿಕೆ ೫೦ ೨೨-೫-೧೯೫೭

KODAGU KANNADA WEEKLY MERCARA

॥ "ತಾಯಂದಿರ ದಿನ" ॥

ತಾಯಿಯ ಮಹತ್ವ ಮತ್ತು ಆವಳ ಬಗ್ಗೆ ಮಕ್ಕಳಿಗೆ ಇರಬೇಕಾದ ಕೃತಜ್ಞತೆ, ಪೂಜ್ಯಭಾವ ಇವೇ ಮೊದಲಾದ ಸಂಗತಿಗಳ ಮರ್ಮವು ಭಾರತೀಯರಿಗೆ ಅಪರಿಚಿತವಲ್ಲ. ನಮ್ಮಲ್ಲಿ 'ಮಾತೃದೇವೋಭವ' ಎಂಬ ಮಾತನ್ನು ವೇದಗಳು ಕೂಡ ಹೇಳುತ್ತವೆ. ಅಲ್ಲದೆ ಇಂದಿಗೂ ಕೂಡ 'ತಾಯಿಯೆಂದರೆ ದೇವತೆ' ಎಂದು ತಿಳಿಯುತ್ತಿರುವ ಜನರಿಗೂ ನಮ್ಮಲ್ಲಿ ಕಡಿಮೆಯಿಲ್ಲ. ಈ ವಿಷಯದ ಬಗ್ಗೆ ನಮಗೆ ಬೋಧೆಕೊಡುವ ಅನೇಕ ಮಾತುಗಳು ನಮ್ಮ ಕಿವಿಗೆ ಮೇಲಿಂದ ಮೇಲೆ ಬೀಳುವಂತಾಗಿದೆ. ಅಂತಹ ಮತ್ತೊಂದು ಉಕ್ತಿಯನ್ನು ಹೇಳುವದಾದರೆ 'ಕುಪುತ್ರೋ ಜಾಯೇತ, ಕ್ವಚಿದಪಿ ಕುಮಾತಾನಭವತಿ' ಎಂಬ ಶ್ಲೋಕಾರ್ಥವನ್ನು ನೋಡಬಹುದು. ಕವಿಯು ತಾಯಿಯ ಬಗ್ಗೆ ಹೇಳುತ್ತ 'ಕೆಡಕು ಮಗನು ಹುಟ್ಟಬಹುದು. ಆದರೆ ಕೆಡಕು ತಾಯಿಯು ಎಂದಿಗೂ ಹುಟ್ಟಲಾರಳು' ಎಂದು ವಿವರಿಸಿದ್ದಾನೆ.

ಪಾಶ್ಚಾತ್ಯರಲ್ಲಿಯೂ ಈ ಭಾವನೆಯು ಇದೆ. ಅವರು ಯಾವುದೊಂದು ವಿಷಯಕ್ಕೆ ಒಂದು ಪ್ರದರ್ಶಕ, ಪ್ರಚಾರಕ ಸ್ವರೂಪವನ್ನು ಕೊಡುತ್ತಾರೆ. ಗ್ರೀಕ್ ಸಾಮ್ರಾಜ್ಯದ ಕಾಲಕ್ಕೆ ಗ್ರೀಕರಲ್ಲಿ 'ತಾಯಂದಿರಿಗೆ ಮಾನಗೈಯುವ ಸಮಾರಂಭವು ನಡೆಯುತ್ತಿತ್ತಂತೆ. ಅವರು ದೇವತೆಗಳ ತಾಯಿಯೆಂದು 'ಸಿಬೆಲೆ' ಎಂಬ ಹೆಣ್ಣು ದೇವರನ್ನು ಪೂಜಿಸುತ್ತಿದ್ದರು. ಕ್ರಿಸ್ತ ಶಕದ ಪೂರ್ವ ೨೫೦ ವರ್ಷಗಳ ಸುಮಾರಿಗೆ ಈ ಗ್ರೀಕರ ತಾಯಿಯ ಸನ್ಮಾನ ಸಮಾರಂಭದ ಕಾರ್ಯಕ್ರಮವು ರೋಮನ್ ಸಾಮ್ರಾಜ್ಯದಲ್ಲಿ ವ್ಯಾಪಿಸಿತು. ಮಾರ್ಚಿ ತಿಂಗಳಲ್ಲಿ ಮೂರು ದಿವಸಗಳ ವರೆಗೆ ಈ ಸಮಾರಂಭವನ್ನು ಅವರು ನಡೆಸುತ್ತಿದ್ದರು.

ಅಮೇರಿಕೆಯಲ್ಲಿ ಈ ಸಮಾರಂಭವು ೧೯೦೭ ನೇ ಇಸ್ವಿಯಿಂದ ಪ್ರಾರಂಭವಾಯಿತು. ಫಿಲಡೆಲ್ಫಿಯಾದ ಕುಮಾರಿ ಅನ್ನಾ ಎಮ್. ಜಾರ್ವಿಸ ಎಂಬ ಹೆಣ್ಣು ಮಗಳು, ವರ್ಷದಲ್ಲಿ ಒಂದು ದಿವಸದಲ್ಲಾದರೂ ತಾಯಿ ಮಕ್ಕಳು ಪರಸ್ಪರರಲ್ಲಿದ್ದ ಪ್ರೀತಿಯ ದ್ಯೋತಕವಾಗಿ ಒಂದೆಡೆಗೆ ಕೂಡುವಂತೆ ಮಾಡಬೇಕು ಎಂಬ ಉದ್ದೇಶದಿಂದ, ಒಂದು ಚರ್ಚಿನಲ್ಲಿ ಈ ಸಮಾರಂಭವನ್ನು ಪ್ರಾರಂಭಿಸಿದಳು.

ಈ ಕಾರ್ಯದ ಮಹತ್ವವು ಅಮೇರಿಕೆಯ ಬೇರೆ ಭಾಗದವರಿಗೂ ಹಿಡಿಯಿತು. ಆದ್ದರಿಂದ ಮರುವರ್ಷ ಹೆಚ್ಚು ಚರ್ಚುಗಳಲ್ಲಿ ಈ ಸಮಾರಂಭವು ನಡೆಯಿತು. ಮೇ ತಿಂಗಳ ೨ ನೇ ಆದಿತ್ಯವಾರ ದಿವಸವನ್ನು ಈ ಸಮಾರಂಭದ ದಿವಸವೆಂದು ಗೊತ್ತು ಮಾಡಿದರು. ೧೯೧೧ ರಷ್ಟ್ರಕ್ಕೆ ಈ ತಾಯಿ ದಿನವು ಅಮೇರಿಕೆಯ ಸಂಸ್ಥಾನದ ಎಲ್ಲ ಸಂಸ್ಥಾನಗಳಲ್ಲಿ ನಡೆಯಹತ್ತಿತು. ಇಷ್ಟೇ ಅಲ್ಲದೆ ಕಾನಡಾ, ಮೆಕ್ಸಿಕೋ, ದಕ್ಷಿಣ ಅಮೇರಿಕೆ, ಆಫ್ರಿಕಾ, ಚೀನ ಮತ್ತು ಜಪಾನುಗಳಲ್ಲಿ ಕೂಡ ಅದರ ಪ್ರಸಾರವಾಯಿತು.

೧೯೧೨ ನೆಯ ಇಸ್ವಿಯಲ್ಲಿ, ಅಂತರರಾಷ್ಟ್ರೀಯ ತಾಯಿ ದಿನ ಸಂಘವು ಸ್ಥಾಪಿಸಲ್ಪಟ್ಟಿತು. ೧೯೧೪ ನೇ ಇಸ್ವಿಯಲ್ಲಿ ಅದಕ್ಕೆ ಕಾಂಗ್ರೆಸ್ಸಿನ (ಅಲ್ಲಿಯ ಶಾಸನ ಸಭೆ) ಬೆಂಬಲ ಸಿಕ್ಕಿತು. ಆಗಿನ ಅಧ್ಯಕ್ಷರಾದ ವಿಲ್ಸನ್ನರು ಈ ಬಗ್ಗೆ ಒಂದು ಪ್ರಕಟನೆ ಕೊಟ್ಟರು. ಆ ನೇಲಿನ ಸರ್ವ ಅಧ್ಯಕ್ಷರು ಈ ಬಗ್ಗೆ ಮನಸ್ಸಿರೀತಿಯಿಂದ ಕಾರ್ಯಮಾಡಲು ಅಮೇರಿಕೆಯ ಜನತೆಗೆ ಬಿನ್ನವಿಸಿಕೊಳ್ಳುತ್ತ ಬಂದಿದ್ದಾರೆ.

ಆ ದಿವಸ ಸರಕಾರಿ ಬಿಡುವು ಕೊಡಲ್ಪಡುವುದಿಲ್ಲವಾದರೂ ಎಲ್ಲಿಡೆಗೂ ಅಂದು ಕಾರ್ಯವು ನಡೆಯುವುದಿಲ್ಲ. ದೂರದೂರದಲ್ಲಿರುವ ತಾಯಿ ಮಕ್ಕಳು ಆ ದಿವಸ ಕೂಡುತ್ತಾರೆ. ಹಬ್ಬವು ಆಚರಿಸಲ್ಪಡುತ್ತದೆ. ಆ ಪ್ರಸಂಗಕ್ಕಾಗಿ ಬರಿ ತಾಯಿ ಮಕ್ಕಳು ಅಷ್ಟೇ ಏಕೆ? ಮೊಮ್ಮಕ್ಕಳು ದೂರದೂರಿನ ಆಪ್ತೇಷ್ಟರು ಸಹ ಕೂಡುತ್ತಾರೆ.

ಈ ಪರಂಪರೆಯು ಬೆಳೆಯುತ್ತ ಹೋದಂತೆ ೧೯೩೩ ರಲ್ಲಿ ಪ್ರೆಸಿಡೆಂಟ್ ರೂಸ್‌ವೆಲ್ಟರ ತಾಯಿಯಾದ ಶ್ರೀಮತಿ ಸರಾ ಡೆಲಾನೋ ರೂಜವೆಲ್ಟ ಇವರ ಅಧ್ಯಕ್ಷತೆಯಲ್ಲಿ 'ಅಮೇರಿಕೆಯ ತಾಯಂದಿರ ಸಂಘ' ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿತು. ಅದರ ವತಿಯಿಂದ ಪ್ರತಿ ವರ್ಷ ಅಮೇರಿಕೆಯ ಪ್ರಥಮ ಸ್ಥಾನದ ತಾಯಿಯನ್ನು ಆರಿಸುವುದಕ್ಕೆ ಪ್ರಾರಂಭವಾಯಿತು.

ಆ ವರ್ಷಕ್ಕೆ ಎಲ್ಲಕ್ಕೂ ಹೆಚ್ಚು ಶ್ರೇಷ್ಠ ತಾಯಿಯನ್ನು ಆರಿಸಲು, ಆ ಮಹಿಳೆಯಲ್ಲಿದ್ದ ಧೈರ್ಯ, ನೈತಿಕ ಬಲ, ತಾಳ್ಮೆ ಪ್ರೇಮ, ದಯೆ, ತಿಳಿವಳಿಕೆ, ಕುಟುಂಬ ಸಾಗಿಸುವ ಶಕ್ತಿ, ಸಾಮಾಜಿಕ ಮತ್ತು ಜಾಗತಿಕ ವಿಷಯಗಳೊಡನೆ ತನಗಿರುವ ಸಂಬಂಧದ ಜ್ಞಾನ, ತನ್ನ ಜನಾಂಗ ಮತ್ತು ಸಾರ್ವಜನಿಕರ ಕಲ್ಯಾಣದ ಬಗ್ಗೆ ಮಾಡಿದ ಕಾರ್ಯ ಇವೇ ಮುಂತಾದ ಗುಣಗಳನ್ನು ಲಕ್ಷಿಸುತ್ತಾರೆ.

ತಾಯಂದಿರಿಗೆ ಈ ರೀತಿ ಮಾನ ಮಾನ್ಯತೆಗಳು ಸಿಗುವಂತಾದ್ದರಿಂದ, ಅದರ ಮುಖಾಂತರ ದೇಶಕ್ಕಾಗುವ ಲಾಭಗಳ ಕಲ್ಪನೆಯೂ ಅವರಿಗೆ ಬರಹತ್ತಿದೆ. ಮತ್ತು ಅದರ ಬಗ್ಗೆ ಜನತೆಗೂ ಬೋಧೆಮಾಡಿ, ಇಂತಹ ಉತ್ತೇಜನಾಪರವಾದ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗಲು ಬೇಕಾದ ಸಹಾಯ ಸಹಕಾರಗಳನ್ನು ಕೇಳುತ್ತಾರೆ. ಜನರಾದರೂ ಈ ಶ್ಲಾಘನೀಯ ಕಾರ್ಯಕ್ಕೆ ಮುಕ್ತ ಹಸ್ತದಿಂದ ಸಹಾಯ ಮಾಡುತ್ತಿದ್ದಾರೆ.

ಹೀಗೆ ಸಮಾಜದ ವಿವಿಧ ಘಟಕಗಳಾದ ಜನರನ್ನು ಬೇರೆ ಬೇರೆ ದೃಷ್ಟಿಯಿಂದ ಬಲಗೊಳಿಸುತ್ತ ಹೋದರೆ ಅದರಿಂದ ಕಾಲಾಂತರದಲ್ಲಿ ದೇಶವೇ ಗಟ್ಟಿಯಾಗುತ್ತದೆಂದು ಬೇರೆ ಹೇಳಬೇಕಾಗಿಲ್ಲ.

ತಾಯಿಯು ಆದರ್ಶ ವ್ಯಕ್ತಿಯಾಗಬೇಕೆಂದು ಪ್ರಯತ್ನ ಮಾಡಿದರೆ ಅದರಿಂದ ಆಗುವ ಲಾಭಗಳು ಸರ್ವವ್ಯಾಪಿಯಾಗುವುದರಲ್ಲಿ ಸಂಶಯವಿಲ್ಲ. ತಾಯಿಯು ಶ್ರೇಷ್ಠ ವ್ಯಕ್ತಿಯಾಗಬೇಕಾದರೆ, ಅವಳು ಇನ್ನೂ ಚಿಕ್ಕವಳಿರುವಾಗಲೇ ಆ ಆದರ್ಶತ್ವವನ್ನು ಪಡೆಯಲು ಅಭ್ಯಾಸ ಮಾಡಹತ್ತಬೇಕಾಗುವುದು. ಅಂದರೆ ಇಂದಿನ ಬಾಲಿಕೆಯರ ಕಡೆಗೆ ದೇಶವು ಲಕ್ಷ್ಯಗೊಡಬೇಕಾಗುವದು. ಆ ತಾಯಿಯು ನಿರೋಗಿಯೂ ಸಚ್ಚರಿತ್ರಳೂ ಆಗಿ ಮಕ್ಕಳನ್ನು ಹೆತ್ತರೆ ಅವಳಿಂದ ಆ ಗುಣದವೇ ಮಕ್ಕಳು ಹುಟ್ಟುವವು. ಮಕ್ಕಳಲ್ಲಿ ಗಂಡು ಶಿಶುಗಳೂ ಇರುವಾಗ ಅವು ಕೂಡ ಅಂತಹ ತಾಯಿಯ ಸಹವಾಸದಿಂದ ಉತ್ತಮ ನಾಗರಿಕರಾಗುವರು.

ದೇಶದ ಗಂಡಸರು ಮತ್ತು ಹೆಂಗಸರು ಇಂತಹ ಯೋಗ್ಯತೆಯವರಾದಾದ ಆ ದೇಶವು ಕಷ್ಟಪಡಬೇಕಾದ ಪ್ರಸಂಗವೇ ಇಲ್ಲ. ದೇಶದಲ್ಲಿಯ ಜನರು ಚರಿತ್ರಹೀನರಾದಾಗ ಆ ದೇಶದ ಜೀವನವು ಯಾವ ಮಟ್ಟಿಗೆ ಇಳಿಯುವದೆಂಬುದನ್ನು ನಾವು ಪ್ರತ್ಯಕ್ಷ ಇಂದು ನೋಡುತ್ತಿದ್ದೇವೆ. ದೇಶ ದೇಶಗಳ ಜನರ ಶೀಲದಲ್ಲಿ ಇರುವ ಅಂತರ ಮತ್ತು ಅದರ ಮೂಲಕ ಆಯಾ ದೇಶದಲ್ಲಿಯ ಪರಿಸ್ಥಿತಿಯ ಭಿನ್ನತ್ವ ಇವುಗಳನ್ನೂ ನಾವು ಓದಿ, ಕೇಳಿ, ನೋಡಿ ತಿಳಿದುಕೊಳ್ಳುತ್ತಿದ್ದೇವೆ.

ಆದರ್ಶ ತಾಯಿ.

ನ್ಯೂಯಾರ್ಕದ ಗೋಲ್ಡನ್ ರೂಲ್ ಫೌಂಡೇಶನ್ ಈ ಸಂಸ್ಥೆಯ, ಅಮೇರಿಕನ್ ಮದರ್ಸ್ ಕಮಿಟಿಯವರು ನಡೆಸಿದ 'ಆದರ್ಶ ತಾಯಂದಿರ' ಆಯ್ಕೆಯಲ್ಲಿ ೧೯೫೨ ನೇ ಇಸ್ವಿಯಲ್ಲಿ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಆದರ್ಶ ತಾಯಿಯಾದ ಮಹಿಳೆಯನ್ನು ಆರಿಸಿದ್ದಾರೆ. ಭಾರತದ ಬಗ್ಗೆಯೂ ಅವರು ಆಯ್ಕೆ ಮಾಡಿದು ಪಂ. ಜವಾಹರಲಾಲ್ ನೆಹರೂರವರ ಮಗಳಾದ ಶ್ರೀಮತಿ ಇಂದಿರಾ ಗಾಂಧಿಯವರನ್ನು ಆ ಬಗ್ಗೆ ತೆಗೆದುಕೊಂಡಿದ್ದಾರೆ. ಇದರ ಸಂಬಂಧವಾಗಿ ಅಮೇರಿಕೆಯಲ್ಲಿ ಮೊನ್ನೆ ಸನ್ಮಾನ ಸಮಾರಂಭವನ್ನು ಜರುಗಿಸಿದರು.

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-14 **PATTU BROTHERS,**

OPP.— Town Hall, MYSORE.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೀಕದ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು(Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-3-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ ಅಪ್ಪಯ್ಯ, ಪ್ರೆಸಿಡೆಂಟ್ & ಖಜಾಂಚಿ.

॥ ಕೊರಿಯದ ಮಾತುಕತೆ ॥

ಕೊರಿಯದಲ್ಲಿ ಕೆಲವು ವರ್ಷಗಳಿಂದೀಚೆಗೆ ನಡೆಯುತ್ತಿರುವ ಯುದ್ಧವನ್ನು ನಿಲ್ಲಿಸಿ ಸಂಧಾನದ ಮಾತುಕತೆ ಆರಂಭವಾಗಿರುವದಷ್ಟೆ. ಮೊದಲಾಗಿ ಯುದ್ಧ ಕೈದಿಗಳ ವಿನಿಮಯವು ಶಾಸ್ತ್ರೀತ್ಯಾ (?) ನಡೆದು ಸ್ವದೇಶಕ್ಕೆ ತೆರಳಲು ಒಪ್ಪದ ಕೈದಿಗಳ ಭವಿಷ್ಯದ ಕುರಿತು ಚರ್ಚೆಗೆ ಆರಂಭವಾಗಿ ವಿನಿಮಯಗಳು ಈಗ ನಡೆಯುತ್ತಲಿವೆ. ತಾಟಸ್ಥ್ಯ ಘೋಷಣೆಯುಳ್ಳ ಯಾವುದಾದರೊಂದು ಏಷ್ಯಾಖಂಡದ ರಾಷ್ಟ್ರಕ್ಕೆ ಅವರನ್ನು ತತ್ಕಾಲ ಒಪ್ಪಿಸಬೇಕೆಂದು ಕಮ್ಯೂನಿಸ್ಟರು ಮೊದಲು ಸೂಚಿಸಿದ್ದರು. ಈಗ ತಮ್ಮ ಅಭಿಪ್ರಾಯವನ್ನು ಅವರು ಬದಲಾಯಿಸಿ ಭಾರತ, ಝೆಕೊಸ್ಲವೇಕಿಯಾ, ಸ್ವಿಝರ್ಲೇಂಡ್, ಪೋಲೆಂಡ್, ಮತ್ತು ಸ್ವೀಡನ್‌ಗಳು ತಟಸ್ಥ ರಾಷ್ಟ್ರಗಳೆಂದು ಒಪ್ಪಿ ಅವರ ವಶ ಆ ಕೈದಿಗಳನ್ನು ಕೊಡಬೇಕೆಂದು ಎಂಟು ಅಂಶಗಳುಳ್ಳ ಹೊಸ ಸೂಚನೆಯೊಂದನ್ನು ಮುಂದೆ ತಂದಿರುವರು.

ಕಮ್ಯೂನಿಸ್ಟರ ಹೊಸ ಸೂಚನೆಯ ಸಾರಾಂಶ ಹೀಗಿದೆ:— ರಾಜಿ ಒಪ್ಪಂದವಾದ ಎರಡು ತಿಂಗಳೊಳಗೆ ವಿನಿಮಯಕ್ಕೆ ಒತ್ತಾಯ ಪಡಿಸುವ ಕೈದಿಗಳನ್ನು ಅವರವರ ದೇಶಗಳಿಗೆ ಹಿಂದಿರುಗಿಸಬೇಕು. ಉಳಿದವರನ್ನು ೫ ತಟಸ್ಥ ರಾಷ್ಟ್ರಗಳ ಒಂದು ಸಮಿತಿಗೆ ಒಪ್ಪಿಸಿ ಅವರವರ ದೇಶಗಳಿಗೆ ಕಳುಹಿಸುವಂತೆ ಅನುಕೂಲ ಮಾಡಿಕೊಡಬೇಕು. ತಟಸ್ಥ ರಾಷ್ಟ್ರಗಳಾದರೋ ಈ ಕೈದಿಗಳ ಸಂಪೂರ್ಣ ಜವಾಬ್ದಾರಿಯನ್ನು ವಹಿಸಬೇಕು. ನಾಲ್ಕು ತಿಂಗಳುಗಳ ಅವಧಿಯಲ್ಲಿಯೂ ಈ ಕೈದಿಗಳು ಸ್ವದೇಶಕ್ಕೆ ಮರಳಲು ಒಪ್ಪದಿದ್ದರೆ ಅವರ ಭವಿಷ್ಯವನ್ನು ರಾಜಕೀಯ ಸಮಿತಿಯು ನಿರ್ಧರಿಸ ತಕ್ಕದ್ದು. ತಮ್ಮ ದೇಶದ ಪ್ರತಿನಿಧಿಗಳನ್ನು ಭೇಟಿ ಮಾಡುವ ಅನುಕೂಲತೆಯನ್ನು ಈ ೫ ತಟಸ್ಥ ರಾಷ್ಟ್ರಗಳ ವಶವಿರುವ ಕೈದಿಗಳಿಗೆ ಒದಗಿಸಬೇಕು.

ಈ ಮೇಲಣ ಸೂಚನೆಯು ಕಳೆದ ಡಿಸೆಂಬರ ತಿಂಗಳಲ್ಲಿ ಸಂಯುಕ್ತ ರಾಷ್ಟ್ರ ಸಂಘವು ಅಂಗೀಕರಿಸಿರುವ ಭಾರತದ ಸೂಚನೆಯನ್ನೇ ಹೋಲುತ್ತಿದೆಯೆಂದು ತಿಳಿದು ಬರುತ್ತದೆ. ವಾಕ್ಯರಚನೆಗಳು ಕೂಡ ಅನೇಕ ಕಡೆಗಳಲ್ಲಿ ಒಂದೇ ರೀತಿಯಾಗಿವೆಯೆಂತೆ. ಅಮೇರಿಕ, ಬ್ರಿಟನ್, ಭಾರತಗಳು ಕಮ್ಯೂನಿಸ್ಟರ ಈ ಸೂಚನೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿವೆ. ಯಾವ ವರದಿಯೂ ಈ ತನಕ ಹೊರಬಂದಿಲ್ಲ.

ಸಂಯುಕ್ತ ರಾಷ್ಟ್ರ ಸಂಘದ ಪ್ರಮುಖ ಪ್ರತಿನಿಧಿಗಳಾದ ಲೆಫ್ಟಿನೆಂಟ್ ಜನರಲ್ ವಿಲಿಯಂ ಹೆರಿಸನ್ನರು ಕಮ್ಯುನಿಸ್ಟ್ ಪ್ರಮುಖ ಪ್ರತಿನಿಧಿಗಳಾದ ಜನರಲ್ ನಾಮ್ ಇಲರೊಡನೆ ಈ ಸೂಚನೆಯ ವಿಷಯ ಪ್ರಶ್ನೋತ್ತರ ಮಾತುಕತೆ ನಡೆಸಿ ಕೆಲವು ಅಂಶಗಳ ಸ್ಪಷ್ಟೀಕರಣವನ್ನು ಅಪೇಕ್ಷಿಸಿದರು. ಕಮ್ಯೂನಿಸ್ಟರ ಯಾವ ಸೂಚನೆಯನ್ನೂ ಅವರು ತಿರಸ್ಕರಿಸಲಿಲ್ಲ. ಪೂರ್ವಾಪರ ವಿರುದ್ಧವಾದ ಈ ಸೂಚನೆಗಳಿಗೆ ಅವರು ಆಕ್ಷೇಪಣೆ ಎತ್ತಿದ್ದಾರೆ. ೫ ರಾಷ್ಟ್ರಗಳ ಸಮಿತಿಯು ಕೈದಿಗಳನ್ನು ವಹಿಸುವ ಬದಲು [illegible] ಒಪ್ಪಿಸಬಹುದೆಂದೇ ಅವರ ಅಭಿಪ್ರಾಯ. ಅಲ್ಲದೆ ಈ ನಾಲ್ಕು ತಿಂಗಳ ಅವಧಿಯ ನಂತರ ರಾಜಕೀಯ ಸಮಿತಿಯ ನಿರ್ಧಾರದ ಇತ್ಯಾದಿಗಳು ಕಾಲಹರಣಕ್ಕೆ ಆಸ್ಪದ ಕೊಡುವಂತವುಗಳು ಎಂದು ಮೊದಲಾಗಿ ಅವರು ತಿಳಿಸಿದರು. ಈ ವಿಷಯವನ್ನು ಸಂಬಂಧಪಟ್ಟ ಸರಕಾರಗಳಿಗೆ ತಿಳಿಸಿಯೇ ನಿರ್ಧರಿಸಬೇಕಾಗುವದೆಂದೇ ಹೆರಿಸನ್ನರ ಮತವಾಗಿರುತ್ತದೆ.

ಹೆರಿಸನ್ನರ ಅಭಿಪ್ರಾಯಗಳಿಗೆ ಕಮ್ಯುನಿಸ್ಟರು ಉತ್ತರ ಕೊಡುತ್ತಾ, ಕೈದಿಗಳಿಗೆ ತಮ್ಮ ದೇಶದ ಪ್ರತಿನಿಧಿಗಳನ್ನು ಭೇಟಿಯಾಗುವ ಸಂದರ್ಭವನ್ನು ಒದಗಿಸಿಕೊಡುವದರಿಂದ ಅದರ ಪರಿಣಾಮವಾಗಿ ಹೆಚ್ಚಿನ ಕೈದಿಗಳು ಸ್ವದೇಶಕ್ಕೆ ಮರಳಿಯೇ ಮರಳುವರು. ಆ ಸಂದರ್ಭದ ಉಪಯೋಗವನ್ನು ಪಡೆಯದ ಕೈದಿಗಳನ್ನು ಮಾತ್ರ ರಾಜಕೀಯ ಸಮಿತಿಗೆ ಒಪ್ಪಿಸಲಾಗುವದು ಎಂದು ಹೇಳಿದರು. ಸೂಚನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಬಹಳ ತೊಂದರೆಗಳು ಒದಗಬಹುದೆಂದು ಹೆರಿಸನ್ನರು ಹೇಳಿದರು. ೪೮ ಸಾವಿರ ಕೊರಿಯ ಮತ್ತು ಚೀನಿ ಸೈನಿಕರು ಸ್ವದೇಶಕ್ಕೆ ಮರಳಲು ಒಪ್ಪುವದಿಲ್ಲ. ಅವರಿಗೆ ಕೊಡುವ ವಿವರಣೆಯ ನಂತರ ಕೂಡ ಅವರು ಸ್ವದೇಶಕ್ಕೆ ಹಿಂತಿರುಗುವ ಸಂಭವವಿಲ್ಲ. ಅವರಿಗೆ ಕೊಡುವ ವಿವರವಾದರೂ ಎಂತಹ ರೀತಿಯದು? ಎಂದು ಮೊದಲಾಗಿ ಹೆರಿಸನರು ಕೇಳಿದ ಉದ್ಧ ಪ್ರಶ್ನೆಗಳಿಗೆ ಜ॥ ನಾಮ್ ಇಲರು ಒಂದೇ ಉತ್ತರವನ್ನು ಕೊಟ್ಟರು. ೫ ರಾಷ್ಟ್ರಗಳ ಸಮಿತಿಯಲ್ಲಿ ಭಿನ್ನಾಭಿಪ್ರಾಯ ತೋರಿದರೆ ಬಹುಮತದ ಆಧಾರದ ಮೇಲೆ ತೀರ್ಮಾನಿಸಲ್ಪಡುವದು ಎಂದ [illegible] ರಾಜಕೀಯ ಸಮಿತಿಯ ಸಂಬಂಧಪಟ್ಟ ರಾಷ್ಟ್ರಸಂಘದ ಒಪ್ಪಿಗೆಯಲ್ಲ ಎಂದೇ [illegible] ಹೇಳಿದರು. ಅಂದೂ ಮಾತುಕತೆಯು ಬಗೆಹರಿಯಲಿಲ್ಲ. ರಾಷ್ಟ್ರಸಂಘವು ಕಮ್ಯುನಿಸ್ಟರ ಈ ಸೂಚನೆಗೆ ಪ್ರತಿ ಸೂಚನೆಗಳನ್ನು ಒಪ್ಪಿಸಲು ನಿರ್ಧರಿಸಿರುವದು. ಸಂಧಾನದ ಪ್ರಯತ್ನ, ಯುದ್ಧದ ಅವಸಾನ, ವಿಶ್ವ ಶಾಂತಿಯ ಸ್ಥಾಪನೆ ಇವು ಈ ಕೊರಿಯ ಪ್ರಕರಣದಲ್ಲಿ ಹೇಗೆ ಸಾಧಿತವಾಗಬಹುದೆಂದು ನಿರೀಕ್ಷಿಸಲಾಗುತ್ತಿದೆ.

ಅಮೇರಿಕ ಮತ್ತು ಇತರ ಮಿತ್ರರಾಷ್ಟ್ರಗಳ ಒಂದು ಒಪ್ಪಂದವನ್ನು ಮಾಡಿಕೊಂಡು ಕಮ್ಯುನಿಸ್ಟರು ಹೊಸತಾಗಿ ಸೂಚಿಸಿದ ಮೇಲಣ ಅಭಿಪ್ರಾಯವನ್ನು ಚರ್ಚಿಸಿ ಅಗತ್ಯವಿದ್ದಲ್ಲಿ ತಿದ್ದುಪಡಿ ಕೇಳಲು ತಾವು ನಿಶ್ಚಯಿಸಿರುವೆವೆಂದು ಅಮೇರಿಕದ ಸ್ಟೇಟ್ ಸೆಕ್ರೆಟರಿ ಮಿ. ಜೋನ್ ಫಾಸ್ಟರ್ ಡಲ್ಲೆಸರು ಸುದ್ದಿಗಾರರಿಗೆ ತಿಳಿಸಿದರು. ತಾವು ಈ ವಿಷಯದಲ್ಲಿ ಅಧ್ಯಕ್ಷ ಐಸನ್ ಹೋವರರೊಡನೆ ಚರ್ಚಿಸುವೆನೆಂದೂ ಸೂಚನೆಗೆ ಹಲವು ತಿದ್ದುಪಡಿಗಳು ಬರಬಹುದೆಂದೂ ಅವು ಸ್ವೀಕರಿಸಲ್ಪಡದಿದ್ದರೆ ಚರ್ಚೆ ಬಹಳ ಬಿರುಸಿನಿಂದ ನಡೆಯಬಹುದೆಂದೂ ಅವರು ಅಭಿಪ್ರಾಯ ಪಟ್ಟರು. ನಾಲ್ಕು ತಟಸ್ಥ ರಾಷ್ಟ್ರಗಳ ಹೆಸರು ಈ ಮೊದಲೇ ಬಂದಿದ್ದು ೫ನೇ ಸ್ಥಾನಕ್ಕೆ ಭಾರತದ ಹೆಸರನ್ನು ಈಗ ಸೂಚಿಸಲ್ಪಟ್ಟು ಹೊಸದಾಗಿದೆಯೆಂದೂ ಅವರು ಅಭಿಪ್ರಾಯಪಟ್ಟಿರುವರು.

॥ ಮಧುಪರ್ಕ ॥

ಗಾಂಧೀಜಿ ಪಾಕಶಾಸ್ತ್ರ ಪ್ರವೀಣರು. ಅವರ ಪಾಕ ನಳ ಪಾಕವೂ ಅಲ್ಲ; ರಸ ಪಾಕವೂ ಅಲ್ಲ. ಅದು ಗಾಂಧಿ ಪಾಕ! ಸೇವಾಗ್ರಾಮದಲ್ಲಿ ಒಂದು ಸಲ ಗಾಂಧೀಜಿ ಅಡಿಗೆ ಮನೆಯ ಯಜಮಾನಿಕೆ ವಹಿಸಿಕೊಂಡರು. ಒಡನೆ ಮಸಾಲೆ ಮಾಯವಾಯಿತು. ಸಂಜೆಗೆ ಬೇಯಿಸಿದ ಪಲ್ಯ ಕಾಣೆಯಾಯಿತು. ಬದಲು ಹಸೀ ಕಾಯಿ ಪಲ್ಯ ಬಂತು. ಸಲಾಡ್ ಸಂಘದು. ಬೆಳಿಗ್ಗೆ ಗೋದಿ ನುಚ್ಚಿನ ಗಂಜಿ. ಆಶ್ರಮವಾಸಿಗಳಿಗೆ ತಡೆಯಲಾಗಲಿಲ್ಲ. ಎಲ್ಲರೂ ಸಭೆ ಸೇರಿದರು.

ತಮತಮಗೆ ತೋರಿದ ಸೂಚನೆ ಹೇಳಿದರು. ಈ ಆಹಾರ ಸಾಧ್ಯವಿಲ್ಲವೆಂದರು. ಆದರೆ ಗಾಂಧೀಜಿ ಹೇಳಿದರು, "ನನ್ನ ಆಯುಷ್ಯವನ್ನೆಲ್ಲಾ ಪಾಕಶಾಸ್ತ್ರ ಪ್ರಯೋಗದಲ್ಲಿ ಕಳೆದಿದ್ದೇನೆ. ಲಂಡನಿನಲ್ಲಿ ಓದುತಿದ್ದಾಗಲೇ ಈ ಪ್ರಯೋಗ ಪ್ರಾರಂಭವಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ಉದ್ದಕ್ಕೂ ಅಡಿಗೆ ಭಟ್ಟನಾಗಿಯೇ ಇದ್ದೆ. ಸಬರಮತಿಯಲ್ಲೂ ಹಾಗೆಯೇ. ಈಗ ಭಾರತದ ಜನರು ಮಾದರಿ ಜನಾಂಗವಾಗಬೇಕೆಂದು ನಾವು ಪ್ರಯತ್ನಿಸುತ್ತಿದ್ದೇವೆ. ಹೇಗೋ ಹೇಗೋ ಅಡಿಗೆ ಮಾಡಿ ತಿಂದು ಕಾಲ ನೂಕಿದರೆ ಆಗಲಾರದು. ಮಾದರಿ ಜನರಾಗಬೇಕಾದರೆ ಮಾದರಿ ಆಹಾರವೇ ಬೇಕು. ಪ್ರವಾಸಿಗರು ನಮ್ಮ ಹಳ್ಳಿಗಳನ್ನು ತಿಪ್ಪೆಗುಂಡಿಗಳೆಂದಿರುವರು. ಅವುಗಳನ್ನು ಮಾದರಿ ಗ್ರಾಮಗಳಾಗಿ ಮಾಡಬೇಕು. ಸುತ್ತಲೂ ದಿವ್ಯವಾದ ಗಾಳಿ ಇದ್ದು ನಮ್ಮ ಹಳ್ಳಿ ಜನಕ್ಕೆ ಆರೋಗ್ಯಕರ ಗಾಳಿ ಇಲ್ಲ. ಪ್ರಕೃತಿ ಕೊಡುವ ಆಹಾರ ಬೆಳೆದರೂ ಸರಿಯಾದ ರೀತಿಯಲ್ಲಿ ತಿನ್ನುವ ಬುದ್ಧಿಯಾಗಲೀ, ಭಾಗ್ಯವಾಗಲೀ ಇಲ್ಲ. ಈ ಹಳ್ಳಿಗಳನ್ನು ಸೊಬಗಿನ ಗೂಡುಗಳಾಗಿ ಮಾಡಬೇಕು. ಆದ್ದರಿಂದಲೇ ಆಹಾರದ ವಿಷಯದಲ್ಲಿ ನಾನು ಪಾದರಿಯಂತೆ ಮಾತಾಡುವುದು" ಅಷ್ಟಕ್ಕೆ ಗಾಂಧೀಜಿಯವರು ಮುಗಿಸಲಿಲ್ಲ. ಅಡಿಗೆ ಪಾತ್ರೆ ತೊಳೆಯಲು ಪ್ರಾರಂಭಿಸಿದರು. ಪ್ರಾರ್ಥನೆಯ ನಂತರ ಅಡಿಗೆಗಿರುವ ಕಾಳು ಹಸನು ಮಾಡತೊಡಗಿದರು. ಬೀಸುವ ಕಲ್ಲಿನ ಪರೀಕ್ಷೆ ಮಾಡಿದರು. ಆಹಾರವು ಹೆಚ್ಚು ನೈಸರ್ಗಿಕವಾಗಿರಬೇಕೆಂಬುದೇ ಅವರ ಮತ.

ಕ್ರಿಕೆಟ್

ಕೋದಂಡ ಅಪ್ಪಯ್ಯ ದೇವಯ್ಯ ಮೆಮೋರಿಯಲ್ ಕ್ರಿಕೆಟ್ ಶೀಲ್ಡಿನ ಕಡೇ ಆಟವು ತಾ. ೧೧, ೧೨, ಮತ್ತು ೧೩ರಲ್ಲಿ ಮೇನ್ಸ್ ಕಾಂಪೌಂಡಿನಲ್ಲಿ ಪ್ಲಾಂಟರ್‍ಸ್ ಟೀಮಿಗೂ, ವಾಂಡರ್‍ಸ್ ಟೀಮಿಗೂ ನಡೆಯಿತು. ಪ್ರಥಮ ಇನ್ನಿಂಗ್ಸಿನಲ್ಲಿ ಪ್ಲಾಂಟರುಗಳ ಟೀಮು ೫ ವಿಕೆಟುಗಳಿಗೆ ೪೦೪ ರನ್ನುಗಳನ್ನು ಮಾಡಿದರು. ಶ್ರೀ ಮಂಡೇಪಂಡ ಅಪ್ಪಯ್ಯನವರು ೧೭೯ ರನ್ನುಗಳನ್ನು, ಕನ್ಸಾಲಿಡೇಟೆಡ್ ಕಾಫಿ ತೋಟದ ಶ್ರೀ ಸಿ. ಫಿಲಿಪ್ಸರವರು ೧೩೪ ರನ್ನುಗಳನ್ನೂ ಮಾಡಿದರು. ವಾಂಡರ್‍ಸ್ ಟೀಮಿನವರು ಪ್ರಥಮ ಇನ್ನಿಂಗ್ಸಿನಲ್ಲಿ ೨೮೦ ರನ್ನುಗಳನ್ನು ಮಾಡಿದರು. ಶ್ರೀಗಳಾದ ಎಂ. ಬಿ. ದಾಸ್‌ರವರು ೭೦ ರನ್ನುಗಳನ್ನೂ, ಸಿ. ಸಿ. ಗಣಪತಿಯವರು ೬೦ ರನ್ನುಗಳನ್ನೂ, ಸಿ. ಎಂ. ತಿಮ್ಮಯ್ಯನವರು ೫೦ ರನ್ನುಗಳನ್ನೂ ಮಾಡಿದರು. ತಾ. ೧೩ರಲ್ಲಿ ಪ್ಲಾಂಟರ್‍ಸ್ ಟೀಮಿನ ಎರಡನೇ ಇನ್ನಿಂಗ್ಸಿನಲ್ಲಿ ಎರಡು ವಿಕೆಟುಗಳಿಗೆ ೨೮೦ ರನ್ನುಗಳನ್ನು ಮಾಡಲಾಯಿತು. ಪುನಃ ಶ್ರೀ ಮಂಡೇಪಂಡ ಅಪ್ಪಯ್ಯನವರು ೧೨೦ ರನ್ನು ಹೊಡೆದರು. ಆದರೆ ಮೂರನೇ ದಿನ ಪ್ಲಾಂಟರ್‍ಸ್ ಟೀಮಿನ ಕೆಲವು ಆಟಗಾರರು ಆಟವಾಡಲು ರಜೆಯ ತೊಂದರೆಯಿಂದ ಆಗದ ಕಾರಣ ವಾಂಡರ್‍ಸ್ ಟೀಮಿನವರು ಶೀಲ್ಡನ್ನು ಪಡೆದರು. ವಿಂಗ್ ಕಮಾಂಡರ್ ಸ್ಪ್ರೇಟರವರು ಶೀಲ್ಡನ್ನು ಗೆದ್ದವರಿಗೆ ಕೊಟ್ಟರು.

ಕೊಡಗು ಕನ್ಸರ್ವೇಟರವರ ಆಫೀಸು,
ಮಡಿಕೇರಿ ೨೦–೫–೫೩.

ನೋಟೀಸು

ಗೇಣಿ ಅವಧಿ ಮುಗಿದ ಯಾಲಕ್ಕಿ ಮಲೆಗಳಲ್ಲಿರುವ ಹಾಲಿ ವರ್ಷದ ಫಸಲನ್ನು ಎತ್ತುವಳಿ ಮಾಡುವ ಹಕ್ಕನ್ನು ೧೯೫೩ನೇ ಜೂನ್ ತಾ. ೬ನೇ ಶನಿವಾರ ಬೆಳಿಗ್ಗೆ ೧೦ ಗಂಟೆಯಿಂದ ಕೊಡಗು ಕನ್ಸರ್ವೇಟರವರ ಆಫೀಸು ಮುಂದುಗಡೆ ಹರಾಜು ಮಾಡಲ್ಪಡುವದು.

ಹೆಚ್ಚಿನ ವಿವರವನ್ನು ಕನ್ಸರ್ವೇಟರವರ ಆಫೀಸಿನಿಂದಾಗಲೀ ನಾಡು ಕಚೇರಿಯಿಂದಾಗಲೀ ಅಥವ ರೇಂಜು ಆಫೀಸುಗಳಿಂದಾಗಲೀ ಹರಾಜು ಪಟ್ಟಿಯ ಮೂಲಕ ತಿಳಿದುಕೊಳ್ಳತಕ್ಕದ್ದು.

ಸಿ. ಟಿ. ಬೋಪಯ್ಯ,
ಕನ್ಸರ್ವೇಟರರಿಗಾಗಿ.

ವೀರಾಜಪೇಟೆಗೆ
‘ಕೊಡಗು’ ಏಜೆಂಟರು,
ಶ್ರೀ ಟಿ. ಎಸ್. ಗೋವಿಂದರಾಜು

ರಾಜಕೀಯ ಪಕ್ಷ ಪದ್ಧತಿಯ ದೋಷ

ಜನತಾಭಿಪ್ರಾಯಕ್ಕೆ ಆಡಳಿತೆಯಲ್ಲಿ ಸ್ಥಾನವಿಲ್ಲ

'ಈಗಿನ ರಾಜಕೀಯ ಪಕ್ಷ ಪದ್ಧತಿಯ ಮೇಲೆ ನಡೆಯುವ ಆಡಳಿತೆಯು ಒಳ್ಳೆಯದಲ್ಲ. ಏಕೆಂದರೆ ಗ್ರಾಮ ಪಂಚಾಯತಗಳ ಬಹುಮತದ ಅಭಿಪ್ರಾಯವು ದೇಶದ ಧೋರಣೆಯನ್ನು ನಿರ್ಧರಿಸುವುದಲ್ಲ; ಕೇಂದ್ರದ ಚಾಟಿಯು ಪಂಚಾಯತಗಳ ಧೋರಣೆಯನ್ನು ಚಾಲನೆಮಾಡುವುದು' ಎಂದು ಪ್ರಜಾ ಸೋಶಲಿಸ್ಟ್ ಧುರೀಣರಾದ ಶ್ರೀ. ಜಯಪ್ರಕಾಶನಾರಾಯಣರು ವಿರ್ಡ್‌ಚೀ ಆಶ್ರಮದಲ್ಲಿ ಭೂದಾನ ಕಾರ್ಯಕರ್ತರ ಮುಂದೆ ಭಾಷಣ ಮಾಡುತ್ತಾ ಹೇಳಿದರು.

'ದೇಶಕ್ಕೆ ಪಕ್ಷ ಪದ್ಧತಿಯ ರೀತಿಯಲ್ಲಿ ನಡೆಯುವ ಆಡಳಿತೆಯು ಒಳ್ಳೆಯದೇ? ಎಲ್ಲಾ ಪಕ್ಷಗಳೂ ಭೂದಾನ ಚಳವಳದಂತಹ ಆಂದೋಲನಗಳ ತಳಹದಿಯ ಮೇಲೆ ಕೆಲಸ ಮಾಡುವುದು ಯೋಗ್ಯವಲ್ಲವೇ? ಎಂಬ ವಿಚಾರ ಮಾತಾಡುತ್ತಾ—

'ಭಾರತದ ರಾಜಕೀಯ ಘಟನೆಯನ್ನು ಸಿದ್ಧಗೊಳಿಸುವಾಗಲೇ ಭಾರತದ ರಾಜಕೀಯವನ್ನು ಬೇರೆ ದಾರಿಯಲ್ಲಿ ಕೊಂಡುಹೋಗಬಹುದಾಗಿತ್ತು. ಪಕ್ಷಧೋರಣೆಯ ಮೇಲೆಯೇ ನಮ್ಮ ಘಟನೆಯ ರಚನೆಯಾಗಿದೆ. ಘಟನೆಯು ಪಾಶ್ಚಾತ್ಯ ದೇಶಗಳ ಘಟನೆಗಳ ರೂಪಾಂತರವಾಗಿದೆ. ಹಾಗಿರುವುದರಿಂದ ನಾವು ಯಾವ ಮಾರ್ಗವನ್ನು ಅನುಸರಿಸಬೇಕು, ಎಂಬದಕ್ಕೆ ನನ್ನ ಉತ್ತರವಿಲ್ಲ. ಆದರೆ ಈ ವಿಚಾರವಾಗಿ ಆಲೋಚಿಸುತ್ತಿದ್ದೇನೆ.

'ಇಡೀ ದೇಶವೇ ಪಕ್ಷ ಪದ್ಧತಿಯನ್ನು ರದ್ದುಗೊಳಿಸಲು ಸಿದ್ಧವಾಗಬೇಕು; ಅಥವಾ ಹೊಸತಾದ ಒಂದು ಘಟನೆಯನ್ನು ರಚಿಸಿ ಎಲ್ಲಾ ಪಕ್ಷಗಳನ್ನೂ ರದ್ದುಗೊಳಿಸಬೇಕು. ಈ ದಾರಿಯು ಇಂದು ಅಸಾಧ್ಯ. ಎಲ್ಲಾ ಪಕ್ಷಗಳೂ ರದ್ದಾಗಲೂ ಇಚ್ಛಿಸವು ಆದ್ದರಿಂದ ಸ್ವಲ್ಪ ಕಾಲ ಈ ಪಕ್ಷ ಪದ್ಧತಿಯನ್ನು ಮುಂದರಿಸಬೇಕಾದೀತು. ಆದರೆ ಪಕ್ಷಪದ್ಧತಿಯ ರೀತಿಯ ಆಡಳಿತೆಯು ಒಳ್ಳೆಯದಲ್ಲವೆಂದು ನನಗನಿಸುತ್ತದೆ. ಜನರಿಗೆ ಒಳ್ಳೆಯದಾಗುವಂತಹ ಕಾರ್ಯಕ್ರಮಗಳನ್ನು ಕೈಕೊಳ್ಳಲು ಎಲ್ಲ ಪಕ್ಷಗಳೂ ಒಟ್ಟಾಗುವುದು ಅಗತ್ಯ. ಇದಕ್ಕಾಗಿಯೇ ಮಹಾತ್ಮರು ಲೋಕ ಸೇವಕ ಸಂಘ ರಚಿಸಬೇಕೆಂದು ಸೂಚಿಸಿದರು. ಗಾಂಧಿಜಿಯವರನ್ನು ಕೇಳಿಕೊಂಡಿರುತ್ತಿದ್ದರೆ ಈಗಿನ ಘಟನೆ ದೇಶಕ್ಕೆ ದೊರೆಯುತ್ತಿದ್ದಿಲ್ಲ.

'ಸಮಾಜವಾದಿಗಳು ವರ್ಗರಹಿತ (ಕ್ಲಾಸ್‌ಲೆಸ್) ಮತ್ತು ರಾಜ್ಯರಹಿತ (ಸ್ಟೇಟ್‌ಲೆಸ್) ಸಮಾಜದಲ್ಲಿ ನಂಬಿಕೆಯುಳ್ಳವರಾಗಿದ್ದಾರೆ. ರಾಜ್ಯ (ಸ್ಟೇಟ್) ಇಲ್ಲದೆ ಇರುವಲ್ಲಿ ಪಕ್ಷದ ಪ್ರಶ್ನೆ ಎಲ್ಲಿಂದ ಬರಬೇಕು. ಯುಗೊಸ್ಲೋವಿಯದಲ್ಲಿ ಪಕ್ಷಗಳಿಲ್ಲ. ಜನತೆಯ ಸಮಿತಿಗಳು ಆಡಳಿತೆ ನಡೆಸುವಂತೆ ಪ್ರಯತ್ನಗಳಾಗುತ್ತಿವೆ.

'ಕಮ್ಯೂನಿಸ್ಟರು ಪಕ್ಷ ಪದ್ಧತಿಯಲ್ಲಿ ನಂಬಿಕೆಯುಳ್ಳವರಾಗಿದ್ದಾರೆ. ಅವರು ಸರ್ವಾಧಿಕಾರದಲ್ಲಿ ನಂಬಿಕೆಯುಳ್ಳವರಾಗಿದ್ದಾರೆ; ಅದು ಕೂಡ ಒಳ್ಳೆಯದಲ್ಲ.

'ಪಂಚಾಯತುಗಳ ಮೇಲೆ ಆಡಳಿತೆ ಹೊಂದಿಕೊಂಡಿರಬೇಕು. ಆದರೆ ಇಂದು ಎಲ್ಲ ಅಧಿಕಾರವೂ ಮೇಲಿಂದಲೇ ಬರುತ್ತವೆ. ಪಕ್ಷಶ್ರೇಣೀ ಸಂಪೂರ್ಣ ಅಧಿಕಾರ. ಅಂತಹದು ಪಂಚಾಯತು ರಾಜ್ಯವಲ್ಲ. ಡೆಲ್ಲಿಯು ಆಜ್ಞೆ ಕೊಡಬೇಕು. ಗ್ರಾಮ ಪಂಚಾಯತುಗಳು ಅದರಂತೆ ನಡೆಯಬೇಕು. ಎಂದಾದರೆ ಅದು ಪಂಚಾಯತ ರಾಜ್ಯವಲ್ಲ. ಪಂಚಾಯತುಗಳು ಡೆಲ್ಲಿಯ ಧೋರಣೆಯನ್ನು ನಿಶ್ಚಯಿಸಬೇಕು. ಗಾಂಧಿಜೀಯವರ ಪಂಚಾಯತು ರಾಜ್ಯವು ಹೀಗಿರುತ್ತಿತ್ತು.

'ಪಾರ್ಟಿ ಪದ್ಧತಿಯನ್ನು ಲೆಕ್ಕಿಸದೆ ಭೂದಾನ ಚಳವಳ ನಡೆಯಬೇಕು. ಆಗ ಹೊಸ ಭಾವನೆಗಳುಂಟಾಗುವುವು. ಈಗಿನ ಪಕ್ಷ ಪದ್ಧತಿ ಹೋಗಿ ಪಕ್ಷಗಳೇ ಇಲ್ಲದ ಒಂದು ಹೊಸ ಕ್ರಮವು ಬರಬಹುದು,' ಎಂದು ಹೇಳಿದರು.

ಶ್ರೀ. ಜಯಪ್ರಕಾಶ ನಾರಾಯಣರು ಭೂದಾನ ಯಜ್ಞದಲ್ಲಿ ಜಮೀನ್ದಾರರ ಜನತೆಯ ಸ್ಥಾನಗಳು ಯಾವುದೆಂಬುದನ್ನು ತಿಳಿಸಿದರು. ಮತ್ತು ದಾನವೆಂಬುವರ ಅರ್ಥವನ್ನೂ ವಿವರಿಸಿದರು.

ಪೂಜ್ಯ ಆಚಾರ್ಯ ವಿನೋಬಾರ ಸಾಧುವಾಣಿ

"ಸಬ್ ಭೂಮಿ ಗೋಪಾಲಕೀ"— ಎಲ್ಲ ಭೂಮಿಯು ದೇವರದ್ದು. ಬೆಳಕು, ನೀರು, ಗಾಳಿಯಂತೆ ಭೂಮಿಯೂ ಪರಮಾತ್ಮನ ದಾನವಾಗಿರುತ್ತದೆ. ಭೂಮಿಯ ಮೇಲೆ ಎಲ್ಲರಿಗೂ ಅಧಿಕಾರವಿದೆ. ಅದನ್ನ ಸರ್ವರ ಹಿತಕ್ಕಾಗಿ ಉಪಯೋಗಿಸಬೇಕು. ಹಣ ಗಳಿಸುವದೊಂದೇ ನಿಜವಾದ ಗಳಿಕೆಯಲ್ಲ. ಪ್ರೇಮವನ್ನು ಪಡೆಯುವದೇ ಯಥಾರ್ಥವಾದ ಸಂಪತ್ತನ್ನು ಪಡೆಯುವದು.

ಪ್ರತಿಯೊಂದು ಊರು ಒಂದು ಕುಟುಂಬದಂತಾಗಬೇಕೆಂಬುದು ನಮ್ಮ ಪ್ರಯತ್ನವು. ಭೂದಾನವು ಒಂದು ಸತ್ಯ ವಿಚಾರ. ಆದರಿಂದಲೇ ಶಾಂತಿಮಯ ಕ್ರಾಂತಿಯಾಗಬಹುದು.

ನಾನು ಮೊದಲು ನಿಮ್ಮ ಹೃದಯ ಪರಿವರ್ತನೆ ಮಾಡಲಪೇಕ್ಷಿಸುತ್ತೇನೆ; ಆ ಮೇಲೆ ನಿಮ್ಮ ಜೀವನದ ಪರಿವರ್ತನೆಯಾಗುವದು. ಕೊನೆಗೆ ಆದರಿಂದಾಗಿ ಸಮಾಜ ಪರಿವರ್ತನೆಯನ್ನೂ ಸಾಧಿಸಬಹುದು.

ದರಿದ್ರನಾರಾಯಣನು ಹಸಿದಿರುತ್ತಾನೆ ಆತನು ಈಗ ಎಚ್ಚತ್ತಿದ್ದಾನೆ. ನೀವೆಲ್ಲರೂ ಆತನನ್ನು ನಿಮ್ಮ ಕುಟುಂಬದ ಒಂದು ಅಂಗವೆಂದೇ ಭಾವಿಸಿರಿ. ನಿಮ್ಮಲ್ಲಿ ನಾಲ್ಕು ಮಕ್ಕಳಿದ್ದರೆ ಅವನನ್ನು ಐದನೆಯವನೆಂದು ಪರಿಗಣಿಸಿರಿ.

ನಾನು ಬಡವರ ಹಾಗೂ ಶ್ರೀಮಂತರ ಮಿತ್ರನು. ಮೈತ್ರಿಯಲ್ಲಿ ನನಗೆ ಆನಂದವಾಗುತ್ತಿದೆ. ಮೈತ್ರಿಯಲ್ಲಿರುವ ಶಕ್ತಿಯು ದ್ವೇಷದಲ್ಲಿಲ್ಲ.

ಪ್ರೇಮ, ಅಹಿಂಸೆಗಳ ರೀತಿಯನ್ನು ಪಾಲಿಸುವಿರಾದರೆ ಭೂಮಿಯ ಮಹತ್ವವನ್ನು ಬಿಡಬೇಕು; ಇಲ್ಲವಾದರೆ ಮುಂದಕ್ಕೆ, ಭೂಮಿಯೂ ಅದರಲ್ಲಿ ವಾಸಿಸುವ ಪ್ರಾಣಿಗಳೆಲ್ಲವೂ ನಾಶವಾಗುವ ಸಮಯವೊಂದು ಬರುವದು. ಅದನ್ನು ತಿಳಿದೇ ಭಗವಂತನು ಈ ಸಮಸ್ಯೆಯನ್ನು ನಮ್ಮ ಮುಂದಿಟ್ಟಿರುತ್ತಾನೆ.

ಕರ್ನಾಟಕ ಜಮೀನುದಾರರಿಗೆ ಪೂಜ್ಯ ಆಚಾರ್ಯ ವಿನೋಬಾರ ಸಂದೇಶ

ಕರ್ನಾಟಕದ ಜಮೀನುದಾರರನ್ನು ಉದ್ದೇಶಿಸಿ ಒಂದು ಸಂದೇಶವನ್ನು ನಾನು ಅವರಿಗೆ ಕಳುಹಿಸಬೇಕೆಂದು ಕರ್ನಾಟಕದ ಕಾರ್ಯಕರ್ತರು ಚಾಂಡಿಲ (ಬಿಹಾರ) ದಲ್ಲಿ ನನ್ನನ್ನು ಕೇಳಿಕೊಂಡರು. ಅದರಿಂದ ಭೂದಾನ ಯಜ್ಞಕ್ಕೆ ಪ್ರೋತ್ಸಾಹ ಸಿಕ್ಕುವದೆಂದು ಅವರು ಹೇಳಿದರು. ನನಗೂ ಸೂಚನೆಯು ಯೋಗ್ಯವೆನಿಸಿತು. ಅದರಿಂದಲೇ ಬರೆಯುತ್ತಿದ್ದೇನೆ.

ಕಳೆದ ಮಾರ್ಚ್ ತಿಂಗಳಲ್ಲಿ ಚಾಂಡಿಲ (ಬಿಹಾರ) ಸರ್ವೋದಯ ಸಮ್ಮೇಳನದಲ್ಲಿ ಬರುವ ಒಂದು ವರ್ಷದೊಳಗಾಗಿ ಮೊದಲನೇ ಕಂತಾಗಿ ಇಡೀ ಹಿಂದೂಸ್ಥಾನದಲ್ಲಿ ಇಪ್ಪತ್ತೈದು ಲಕ್ಷ ಎಕ್ರೆ ಭೂಮಿಯನ್ನು ದೊರಕಿಸಬೇಕೆಂದು ನಿರ್ಣಯವಾಯಿತು ಆದರಿಂದ ಭೂದಾನದ ಸಂದೇಶವು ಭಾರತದ ಹಳ್ಳಿ ಹಳ್ಳಿಗೂ ಮುಟ್ಟಲು ಅನುಕೂಲವಾಗುವದು. ಭೂಮಿಯಿಲ್ಲದ ಕಾರಣ ಉಪಜೀವನದ ದಾರಿಯನ್ನೇ ಪಡೆಯಲಸಮರ್ಥರಾದ ಕಷ್ಟ ಪಡುವ ರೈತರಿಗೆ ಪ್ರತಿಯೊಂದು ಕುಟುಂಬಕ್ಕೆ ಸಾಧಾರಣ ಐದು ಎಕ್ರೆ ಹೊಲದಂತೆ ಸಿಗಬೇಕೆಂದು ನಮ್ಮ ಪ್ರಯತ್ನವು. ಹಾಗಾದರೆ ಹಿಂದೂಸ್ಥಾನದ ಒಂದು ಮಹತ್ತಾದ ಸಮಸ್ಯೆಯು ಶಾಂತ ಮತ್ತು ಪ್ರೇಮದಿಂದ ಬಗೆ ಹರಿದಂತಾಗುವದು.

ಆದರೆ ಎಲ್ಲ ಜನರೂ ಈ ಕಾರ್ಯದಲ್ಲಿ ಸಹಕರಿಸಿದರೆ ಮಾತ್ರ ಅದು ಸಾಧ್ಯವಾಗಬಹುದು. ಅದರಲ್ಲಿ ದೊಡ್ಡ ಸಾಗುವಳಿದಾರರ ಮತ್ತು ಜಮೀನುದಾರರ ಕಾರ್ಯಭಾಗವು ಬಹಳ ವಿಶೇಷವಾಗಿದೆ. ನಾವು ಪ್ರತೀಯೊಬ್ಬರಿಂದಲೂ ಭೂಮಿಯನ್ನು ತೆಗೆದುಕೊಳ್ಳುತ್ತೇನೆ. ಆದರೆ ಬಡವರಿಂದ ತೆಗೆದುಕೊಳ್ಳುವ ಭೂಮಿಯು ಒಂದು ಪ್ರೇಮದ ಕುರುಹು ಮಾತ್ರವಾಗಿರುವದು. ಆದರಿಂದ ವಾತಾವರಣವು ಸಿದ್ಧವಾಗುವದು. ಆದರೆ ಭೂಮಿದಾನದ ಮುಖ್ಯ ಭಾರವು ದೊಡ್ಡ ಸಾಗುವಳಿದಾರರ ಮತ್ತು ಜಮೀನುದಾರರ ಮೇಲೆ ಇರುವದು. ಅಂಥವರು ಭೂಮಿದಾನದ ಈ ಆಂದೋಲನವನ್ನು ತಮ್ಮದೇ ಚಳವಳವೆಂದು ತಿಳಿದುಕೊಳ್ಳಲೆಂದು ನಾನು ಬಯಸುತ್ತೇನೆ. ಏಕೆಂದರೆ ಅದರಿಂದ ಬಡವರದ್ದು ಮಾತ್ರವೇ ಅಲ್ಲ, ಶ್ರೀಮಂತರ ಕಲ್ಯಾಣವೂ ನಿಶ್ಚಿತವಾಗಿ ಆಗುವದು. ಸ್ವಲ್ಪ ದೂರದೃಷ್ಟಿಯಿಂದ ವಿಚಾರ ಮಾಡಿದರೆ ಅವರಿಗೆ ಅದು ಸ್ಪಷ್ಟವಾಗಿ ಭಾಸವಾಗುವದು. ಇಂಥಾ ದೂರದೃಷ್ಟಿಯನ್ನು ಕರ್ನಾಟಕದ ಜಮೀನುದಾರರು ವ್ಯಕ್ತ ಮಾಡುವರೆಂದೂ, ಈ ಪವಿತ್ರ ಕಾರ್ಯದಲ್ಲಿ ತಮ್ಮ ಕಾರ್ಯಭಾಗವನ್ನು ಅವರು ವಹಿಸುವರೆಂದೂ ನಾನು ಆಶಿಸುತ್ತೇನೆ. ಐದು ಕೋಟಿ ಎಕ್ರೆ ಭೂಮಿಯು ಒಟ್ಟುಗೂಡಿದಾಗಲೇ ಭಾರತದ ಭೂಮಿ ಹೀನರ ಸಮಸ್ಯೆಯು ಬಗೆಹರಿಯುವದೆಂದು ನಾವು ಲೆಕ್ಕ ಹಾಕಿದ್ದೇವೆ. ಈ ದೃಷ್ಟಿಯಿಂದ ಈ ವರ್ಷದೊಳಗಾಗಿ ಇಪ್ಪತ್ತೈದು ಲಕ್ಷ ಎಕ್ರೆಯಾದರೂ ಪ್ರಾಪ್ತಿಸುವದು ಮೊದಲನೇ ಹೆಜ್ಜೆಯು.

ಇಲ್ಲಿ ಒಂದು ವಿಷಯವನ್ನು ಸ್ಪಷ್ಟೀಕರಿಸುವದಗತ್ಯವಿದೆ. ಭೂಮಿಯನ್ನು ದಾನ ಮಾಡಿದ ನಂತರ ಅದನ್ನು ಹಂಚಿಕೊಡುವ ವರೆಗೆ ಮಧ್ಯಂತರದ ಅವಧಿಯಲ್ಲಿ ಭೂಮಿದಾನ ಮಾಡಿದವರ ಕರ್ತವ್ಯವೇನೆಂದು ಕೆಲ ಜನರು ಕೇಳುತ್ತಾರೆ. ಅದರ ಉತ್ತರವೆಂದರೆ ಭೂಮಿಯು ನಮ್ಮ ಮುಖಾಂತರ ಬೇರೊಬ್ಬರಿಗೆ ಹಂಚಿಕೊಡಲಾಗುವ ತನಕ ಆ ಭೂಮಿಯು ದಾನ ಕೊಟ್ಟವರಲ್ಲಿಯೇ ಇರುವದು. ತಮ್ಮ ಇತರ ಭೂಮಿಯಲ್ಲಿ ಶ್ರಮಪಡುವಂತೆ ಆ ಭೂಮಿಯಲ್ಲೂ ಅವರು ಕೆಲಸ ಮಾಡಿಸಬೇಕು. ಸರಕಾರಕ್ಕೆ ಕೊಡುವ ಕಂದಾಯವನ್ನು ಕೊಡುವದು. ಭೂಮಿಯನ್ನು ಬಂಜರು ಬಿಡಕೂಡದು.

ವಿನೋಬಾರ ಪ್ರಣಾಮುಗಳು.

ಕಾಂಗ್ರೆಸ್ ಅಧಿವೇಶನ.

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ೫೯ನೆಯ ವಾರ್ಷಿಕ ಅಧಿವೇಶನವು ಪಶ್ಚಿಮ ಬಂಗಾಳದಲ್ಲಿ ನಡೆಯುವುದೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ. ಬಲವಂತರಾಮ್ ಮೆಹ್ತಾರವರು ತಿಳಿಸಿದರು. ಈ ಬಗ್ಗೆ ವರ್ಕಿಂಗ್ ಕಮಿಟಿಯು ಪ್ರಾಂತೀಯ ಕಾಂಗ್ರೆಸಿನ ಆಹ್ವಾನವನ್ನು ಅಂಗೀಕರಿಸಿರುವುದಾಗಿ ಅವರುತಿಳಿಸಿದರು. ಎಐ ಸಿ ಸಿ ಯ ಮುಂದಿನ ಅಧಿವೇಶನ ಜುಲೈ ೪ ರಿಂದ ಆರಂಭವಾಗುವ ವಾರದಲ್ಲಿ ಆಗ್ರಾದಲ್ಲಿ ನಡೆಯುವುದು.

ಶನಿವಾರಸಂತೆಗೆ
'ಕೊಡಗು' ಏಜೆಂಟರು,
ಶ್ರೀ ಎಸ್. ಎನ್. ಸಿದ್ದಪ್ಪನವರು

ಸಾಮಪೇಟೆಗೆ
"ಕೊಡಗು" ಪತ್ರಿಕೆಯ ಏಜೆಂಟರು
ಸಹಕಾರಿ ಸ್ಟೋರ್ಸ್ ಮೇನೇಜರ್

ನಗು ಮಲ್ಲಿಗೆ.

ಬಹು ವಾಚಾಳಿಯಾದ ಇನ್ಸೂರೆನ್ಸ್ ಏಜಂಟನೊಬ್ಬನು ಸೇತುವೆಯೊಂದರ ಬಳಿ ಬಂದು ನದಿಯಲ್ಲಿ ಹಾರಲುದ್ಯುಕ್ತನಾದನು. ಹತ್ತಿರದಲ್ಲಿದ್ದ ಪೋಲೀಸಿನವನು ಕೂಗಿ 'ನೀನು ಹಾಗೆ ಮಾಡಕೂಡದು' ಎಂದನು. 'ಏಕೆ, ನಾನು ಹಾಗೆ ಮಾಡಕೂಡದು ?' ಎಂದು ಕೇಳಿ ಏಜಂಟನು ಹತ್ತು ನಿಮಿಷಗಳ ವರೆಗೆ ಸರಾಗವಾದ ವಿವರಣೆ ಕೊಟ್ಟನು. ಮಾತು ಮುಗಿದ ನಂತರ ಪೋಲೀಸಿನವನು ಆತನ ಕೈಕುಲುಕಿದನು. ಇಬ್ಬರೂ ಹೊಳೆಯೊಳಗೆ ಹಾರಿಕೊಂಡರು !

* * *

ಹೆಂಡತಿಯ ನಿಧನದಿಂದ ದುಃಖಿತನಾದ ಗಂಡನಿಗೆ ಪಾದ್ರಿಯು ಧೈರ್ಯದ ಮಾತುಗಳನ್ನು ಹೇಳುತ್ತಿದ್ದನು. 'ಸಹೋದರ, ನಿನ್ನ ವ್ಯಸನ ಅಪಾರವಾದುದು ನಿಜ. ನಿನ್ನ ಜೀವನದ ಜೊತೆಗಾತಿಯಾಗಿದ್ದ ಆಕೆಯ ಅಗಲುವಿಕೆಯಿಂದ ದುಃಖ ಆಗುತ್ತದೆ. ಆದರೆ ಜ್ಞಾಪಕವಿಲ್ಲಿಡು. ಈ ಜಗತ್ತಿನಲ್ಲಿ ಬೇರೊಂದು ಶಕ್ತಿ ಇದೆ. ಅದು ನಿನ್ನ ಕಷ್ಟಸುಖಗಳನ್ನು ಅರಿತು ತನ್ನ ಅಮರ ಪ್ರೇಮದಿಂದ ನಿನ್ನನ್ನು ಎದೆಗಪ್ಪಿಕೊಳ್ಳುವದು.'

ವ್ಯಸನಾಕ್ರಾಂತನಾಗಿದ್ದ ಆ ಗಂಡನು ತಲೆ ಎತ್ತಿ ಕಣ್ಣೀರೊರಸಿ ಕೇಳಿದನು. 'ಹೌದೇ ? ಆಕೆಯ ಹೆಸರೇನು ?'

* * *

ಶಾಲಾ ಇನ್ಸ್‌ಪೆಕ್ಟರರು ಶಾಲಾ ಪಂಚಾಯಿತರೊಬ್ಬರೊಡನೆ ಮಾತಾಡುತ್ತಾ ಹೇಳಿದರು, 'ಈ ದಿನ ಶಾಲೆಯಲ್ಲಿ ತಮಾಷೆಯ ವಿಚಾರವೊಂದು ನಡೆಯಿತು. ನಾನು ವಿದ್ಯಾರ್ಥಿಯೊಬ್ಬನನ್ನು ತುಲಸಿರಾಮಾಯಣವನ್ನು ಯಾರು ಬರೆದುದೆಂದು ಕೇಳಿದೆ. ವಿದ್ಯಾರ್ಥಿಯು ಅಪರಾಧಿಯಂತೆ ಎದ್ದುನಿಂತು ಕಣ್ಣೀರು ತುಂಬಿ 'ದಯಮಾಡಿ ಸಾರ್, ಬರೆದವನು ನಾನಲ್ಲ" ಎಂದನು.

ಇಬ್ಬರೂ ಹೊಟ್ಟೆ ತುಂಬ ನಗಾಡಿದ ನಂತರ ಪಂಚಾಯಿತದಾರರು ಹೇಳಿದರು. 'ಆ ಕಳ್ಳ ಹುಡುಗನೇ ಬರೆದಿರಬೇಕು. ಅಲ್ಲದಿದ್ದರೆ ಅಳುಬರಲು ಕಾರಣವೇನು ?'

* * *

ಡಿಗ್ರಿ ಪಡೆದು ಕಾಲೇಜಿನಿಂದ ಬಂದ ಯುವಕನೊಬ್ಬನು ಕೆಲಸಕ್ಕಾಗಿ ಪ್ರಯತ್ನಿಸುತ್ತಿದ್ದನು. ಒಂದು ದಿನ ಒಂದು ಕಂಪೆನಿಯ ಮೇನೇಜರನ್ನು ಕಾಣಲು ಬಂದಿದ್ದನು. ಮೇನೇಜರು ಇನ್ನೂ ಬಂದಿರದ ಕಾರಣ ಅಲ್ಲೇ ಕುಳಿತು ಕಂಪನಿಯ ಸೇವಕನೊಬ್ಬನೊಡನೆ ಮಾತಾಡುತ್ತಿದ್ದನು.

'ಕಾಲೇಜ್ ಪದವಿಧರನೊಬ್ಬನಿಗೆ ಈ ಕಂಪೆನಿಯಲ್ಲಿ ಕೆಲಸದ ಅವಕಾಶದೊರೆಯಬಹುದೇ ?'

'ದೊರೆಯಬಹುದು. ಮೇನೇಜರು ನನ್ನ ವೇತನವನ್ನು ನಾಳೆಯಿಂದ ತಿಂಗಳಿಗೆ ರೂ. ೫೦ ಕ್ಕೆ ಏರಿಸದಿದ್ದರೆ ನಿಮಗೆ ಅವಕಾಶ ದೊರೆಯಬಹುದು.'

* * *

ಧರ್ಮ ರಹಸ್ಯ.

ಆಸೆ

== ಭರ್ತೃಹರಿಯ ವೈರಾಗ್ಯ ಶತಕದಿಂದ ==

(೧) ಪರ್ವತ, ನದಿ, ಮರಗಳಿಂದ ಇಕ್ಕಟ್ಟಾದ ಊರಲ್ಲಿ ಅಲೆದಾಡಿದೆನು. ಪ್ರಯೋಜನವಾಗಲಿಲ್ಲ. ಅಭಿಮಾನ ತೊರೆದು ಹಣವಂತರ ಸೇವೆ ಮಾಡಿದೆನು. ಲಾಭವಾಗಲಿಲ್ಲ. ಮಾನಾಪಮಾನದ ಗೊಡವೆ ಬಿಟ್ಟು ಕಾಗೆಯಂತೆ ಪರರ ಎಂಜಲಿಗೆ ಕೈಯೊಡ್ಡಿದೆನು. ಅಪಮಾನಗೊಳಿಸಿದರೂ ಆಸೆ ಬಿಡಲಿಲ್ಲ. ಅಯ್ಯೋ ಆಸೆಯೇ ಇನ್ನೂ ಬೆಳೆಯುತ್ತಿರುವೆಯಾ ?

(೨) ನಿಧಿ ಸಿಗುತ್ತದೆಂದು ನೆಲವನ್ನಗೆದೆನು. ಸುವರ್ಣ ತಯಾರಿಸಬಹುದೆಂದು ಶಿಲೆಗಳನ್ನು ತಂದು ಮೂಲಿಕೆಗಳ ಸಹಾಯದಿಂದ ಸುಟ್ಟು ನೋಡಿದೆನು. ಪರದೇಶದ ವ್ಯಾಪಾರದ ಲಾಭಕ್ಕಾಗಿ ಸಮುದ್ರಗಳನ್ನು ದಾಟಿದೆನು. ಅಧಿಕಾರದಲ್ಲಿರುವವರನ್ನು ಸಂತೋಷಗೊಳಿಸಿದೆನು. ಆದರೂ ಆಸೆ ಬಿಡಲಿಲ್ಲ. ಅಯ್ಯೋ ಆಸೆಯೇ ಸಾಕಾಗಿಲ್ಲವೇ ?

(೩) ದೊಡ್ಡವರನ್ನಾಶ್ರಯಿಸಿ ಅವರ ಕೆಟ್ಟ ಮಾತುಗಳನ್ನು ಸಹಿಸಿದೆನು. ಉಕ್ಕಿ ಬರುವ ಕಣ್ಣೀರನ್ನು ತಡೆದು ತೋರಿಕೆಗೆ ನಗುಮುಖ ಮಾಡಿದೆನು. ಕೈ ಮುಗಿದೇ ನಿಂತು ಕಾಡಿ ಬೇಡಿದೆನು. ಅಯ್ಯೋ ಆಸೆಯೇ ಇನ್ನೆಷ್ಟು ಬಗೆಯಾಗಿ ಕುಣಿಸಲಿರುವೆ ನನ್ನನ್ನು ?

(೪) ಕಷ್ಟ ಅವಮಾನಗಳನ್ನು ಸಹಿಸಿದೆನು; ಕ್ಷಮಾಬಲದಿಂದಲ್ಲ. ಗೃಹಸುಖವನ್ನು ತೊರೆದೆನು; ಸಂತೋಷದಿಂದಲ್ಲ. ಯಾತ್ರೆ ಮಾಡಿದೆನು; ವೈರಾಗ್ಯದಿಂದಲ್ಲ. ಏಕಾಗ್ರತೆಯಿಂದ ಧ್ಯಾನಿಸಿದೆನು; ಪರಮ ಶಿವನನ್ನಲ್ಲ. ಮುನಿಗಳಂತೆ ಸಹನೆ, ಸಂಸಾರ ತ್ಯಾಗ, ಯಾತ್ರೆ, ಧ್ಯಾನ ಮಾಡಿದ್ದು ನಿಜ. ಆದರೆ ದಾರಿ ಮಾತ್ರ ಆಸೆಯದಾಗಿತ್ತು. ನನ್ನ ಧ್ಯಾನ ಹಣಕ್ಕಾಗಿ, ಯಾತ್ರೆ ಲಾಭಕ್ಕಾಗಿ. ಹೇ ಆಸೆ, ಇನ್ನೂ ತೃಪ್ತನಾಗಿಲ್ಲವೇ ?

(೫) ನೀರ ಮೇಲಿನ ಗುಳ್ಳೆಯಂತಿರುವ ಈ ಪ್ರಾಣಕ್ಕಾಗಿ ವಿವೇಕ ಬಿಟ್ಟು ಏನೇನಲ್ಲ ದುಷ್ಕಾರ್ಯಗಳನ್ನು ಮಾಡಿದೆನು. ಧನ ಮದದಿಂದ ವಿವೇಕಶೂನ್ಯರಾದವರ ಎದುರು ನಾಚಿಕೆಯಿಲ್ಲದೆ ನನ್ನ ವಿದ್ಯೆ ಸಾಮರ್ಥ್ಯ, ಯೋಗ್ಯತೆಗಳನ್ನು ನಾನೇ ಹೇಳಿ ಹೊಗಳಿ ಅವರ ಚಿತ್ತವನ್ನೆಳೆಯಲು, ನನ್ನ ಆಸೆಯನ್ನು ನೆರವೇರಿಸಿಕೊಳ್ಳಲು ಯತ್ನಿಸಿದೆನು. ಆದರೂ ಆಸೆ ತೃಪ್ತವಾಗಿಲ್ಲ. ಕುಣಿಸುತ್ತಿದೆ ವಿವಿಧ ಬಣ್ಣ, ರಂಗುಗಳನ್ನು ತೋರಿ !

ಇಬ್ಬರು ಗೆಳೆಯರು ಹೋಟೆಲೊಂದರಲ್ಲಿ ತಂಗಿದ್ದರು. ರಾತ್ರೆ ಕೋಣೆಯಲ್ಲಿ ಸೊಳ್ಳೆಗಳ ತೊಂದರೆಯಿಂದ ಅವರಿಗೆ ನಿದ್ರೆಯೇ ಬರಲಿಲ್ಲ. ಸೊಳ್ಳೆಗಳನ್ನು ಓಡಿಸಲು ತಮ್ಮ ಮೈಯ ವಿವಿಧ ಭಾಗಗಳಿಗೆ ಆಗಾಗ ಬಡಿದು ಸಾಕಾಗಿತ್ತು. ರಾತ್ರೆ ಎರಡು ಗಂಟೆಯಾಗಿರಬಹುದು. ಮಿಣುಕು ಹುಳವೊಂದು ಕಿಡಿಕಿಗಾಗಿ ಅವರಿದ್ದ ಕೋಣೆಗೆ ಬಂತು. ಗೆಳೆಯರಲ್ಲಿ ಒಬ್ಬರು ಸಿಟ್ಟಿನಿಂದ ಎದ್ದು ಆ ಹುಳವನ್ನು ಹೊಡೆಯಲು ಯತ್ನಿಸುತ್ತಿದ್ದನು. ಜೊತೆಯವನು ಹಾಗೆ ಓಡಾಡುವುದೇಕೆಂದು ಕೇಳಲು 'ಇಷ್ಟು ಹೊತ್ತು ಕತ್ತಲಲ್ಲಿ ನಮ್ಮನ್ನು ಕಾಡಿಸಿದ್ದು ಸಾಲದೆ ಇದೊಂದು ಸೊಳ್ಳೆ ದೀಪ ಹಿಡಿದುಕೊಂಡು ನಮ್ಮನ್ನು ಹುಡುಕುತ್ತಿದೆ" ಎಂದನು !

* * *

ಹಳ್ಳಿಗ—ಪ್ರಯಾಣಿಕರು ಉಳಿದುಕೊಳ್ಳುವ ವೈಟಿಂಗ್ ರೂಮ್ ಎಲ್ಲಿ ?

ಪೇಟೆಯವ—ಏನು ದಾರಿ ತಪ್ಪಿ ಹೋಯಿತೇ ?

ಹಳ್ಳಿಗ—ಇಲ್ಲ ನಾನು ತಪ್ಪಲಿಲ್ಲ. ನಾನು ಇಲ್ಲೇ ಇದ್ದೇನೆ. ಆದರೆ ವೈಟಿಂಗ್ ರೂಮ್ ತಪ್ಪಿ ಹೋಗಿದೆ

* * *

ಗಿರಾಕಿ—ಈ ಸೂಟು ಪೂರ್ತಿ ಉಣ್ಣೆಯದೆಂದು ಹೇಳುವಿರಾ ?

ಅಂಗಡಿಯವ—ಸುಳ್ಳೇಕೆ ಹೇಳಲಿ. ಆ ಸೂಟಿನ ಗುಂಡಿಗಳು ಪ್ಲೇಸ್ಟಿಕಿನವು !

* * *

ಮಿಲಿಯಾಧಿಪತಿ—ಭಿಕ್ಷುಕಾ, ತೆರಳು ಇಲ್ಲಿಂದ. ನನ್ನ ಮುಂದೆ ನಿಲ್ಲಬೇಡ.

ಭಿಕ್ಷುಕ—ಮಹಾಶಯ ನೋಡು. ನಿನಗೂ ನನಗೂ ಇರುವ ವ್ಯತ್ಯಾಸ ದೊಡ್ಡದೇನಲ್ಲ. ನೀನು ನಿನ್ನ ಎರಡನೇ ಮಿಲಿಯದ ಸಂಪಾದನೆಯಲ್ಲಿ ತೊಡಗಿದ್ದರೆ ನಾನು ನನ್ನ ಪ್ರಥಮ ಮಿಲಿಯಕ್ಕಾಗಿ ಯತ್ನಿಸುತ್ತಿದ್ದೇನೆ.

* * *

ಜಡ್ಜ್—ರಸ್ತೆಯ ಮಧ್ಯದಲ್ಲಿ ಒಬ್ಬ ಮನುಷ್ಯನು ಮಂಡಿಯೂರಿ ಕುಳಿತಿದ್ದರೆ ಆತನು ಕುಡುಕನೆಂದು ಹೇಳುವದು ಹೇಗೆ?

ವಕೀಲ—ಅವರಿ ಈತನು ಮಂಡಿಯೂರಿಕೊಂಡು ರಸ್ತೆಯ ಮಧ್ಯದಲ್ಲಿ ಹಾಕಿದ್ದ ಬಿಳೀ ಗೆರೆಯನ್ನು ಬಟ್ಟೆಯಂತೆ ಸುರುಳಿಯಾಗಿ ಸುತ್ತಲು ಯತ್ನಿಸುತ್ತಿದ್ದರೆ!

ಜಪಾನೀ ರೀತಿ ವ್ಯವಸಾಯ ಪ್ರದರ್ಶನ.

ಅಖಿಲ ಭಾರತ ಗಾಂಧಿ ಸ್ಮಾರಕ ಸಮಿತಿಯ ಆಶ್ರಯದಲ್ಲಿ ವಿಧಾಯಕ ಕೆಲಸಗಾರರಾಗಿ ಕಳೆದ ಐದು ವರ್ಷಗಳಿಂದ ಬೊಂಬಾಯಿಯ ಕೋರ ಕೇಂದ್ರದಲ್ಲಿ ಜಪಾನೀ ರೀತಿಯ ವ್ಯವಸಾಯ ಮಾಡಿ ಅನುಭವಿಗಳಾದ ಮೂರು ತಜ್ಞರು ತಾ. ೧೬ ರಲ್ಲಿ ಕೊಡಗಿಗೆ ಬಂದಿದ್ದರು. ಅವರು ಗೋಣಿಕೊಪ್ಪ, ವೀರಾಜಪೇಟೆ, ಮತ್ತು ಸೋಮವಾರಪೇಟೆಗಳಲ್ಲಿ ಜಪಾನೀ ರೀತಿ ವ್ಯವಸಾಯ ಹೇಗೆ ಮಾಡುವದೆಂಬದರ ಕಾರ್ಯತಃ ಪ್ರದರ್ಶನ ಮಾಡಿದರು.

ಅಗೆ ಹಾಕುವ ಮಡಿಗಳ ರಚನೆ, ಗೊಬ್ಬರ ಹಾಕುವ ವಿಧಾನ, ಬೀಜಗಳಿಗೆ ಉಪ್ಪುನೀರಿನ ಪ್ರಯೋಗ, ಬೀಜಬಿತ್ತುವ ಕ್ರಮ, ನಾಟಿ ನೆಡುವ ವಿಧಾನ ಮೊದಲಾದುವುಗಳನ್ನು ತಾವೇ ಮಾಡಿ ತೋರಿಸಿದರು. ಅವರು ತಮ್ಮ ಅನುಭವವನ್ನು ವ್ಯಕ್ತಮಾಡುತ್ತಾ ತಾವು ಬೊಂಬಾಯಿಯಲ್ಲಿ ನಡೆಸಿದ ಪ್ರಯೋಗಕ್ಷೇತ್ರಗಳಲ್ಲಿ ಈ ಕ್ರಮದಿಂದಾಗಿ ಹಿಂದಿನದಕ್ಕಿಂತಲೂ ಮೂರು ಪಟ್ಟು ಹೆಚ್ಚು ಉತ್ಪತ್ತಿ ಬಂದಿದೆಯೆಂದೂ, ಕೊಡಗು ಆದರ್ಶವಾಗಿರುವದರಿಂದ ಜಪಾನೀ ವಿಧಾನದಿಂದ ಇಲ್ಲಿಯ ರೈತರೂ ಕೂಡ ಅದೇ ರೀತಿಯ ಲಾಭ ಪಡೆಯಬಹುದೆಂದೂ ಹೇಳಿದರು.

ಕೊಡಗಿನಲ್ಲಿ ಈಗ ಅನುಸರಿಸುತ್ತಿರುವ ವ್ಯವಸಾಯ ವಿಧಾನವು ನೆರೆಕರೆಯ ಪ್ರಾಂತಗಳು ಅನುಸರಿಸುವ ವಿಧಾನಗಳಿಗಿಂತಾ ಉತ್ತಮವಾಗಿದೆಯೆಂದೂ, ಕೊಡಗಿನ ಪರಿಸ್ಥಿತಿಯು ಜಪಾನೀ ವ್ಯವಸಾಯ ಕ್ರಮಕ್ಕೆ ಆದರ್ಶವಾಗಿದೆಯೆಂದೂ ಈಗ ಅನುಸರಿಸುತ್ತಿರುವ ವಿಧಾನದಲ್ಲಿ ಅಲ್ಪ ಸ್ವಲ್ಪ ಬದಲಾವಣೆಯೇ ಬೇಕಿರುವದಾಗಿಯೂ ಹೇಳಿದರು.

ಗೊಬ್ಬರದ ವಿಚಾರದಲ್ಲಿ ತಮ್ಮ ಅಭಿಮತವನ್ನು ವ್ಯಕ್ತಮಾಡುತ್ತಾ, ಪ್ರಾಕೃತಿಕ ಗೊಬ್ಬರಗಳೇ ಕೃತ್ರಿಮ ಗೊಬ್ಬರಗಳಿಗಿಂತಾ ಉತ್ತಮವೆಂದೂ, ಹಸುರೆಲೆ, ಗೊಬ್ಬರ, ಪಾಯಿಖಾನೆ, ಮೂತ್ರ ಮೊದಲಾದುವುಗಳ ಕಂಪೋಸ್ಟ್ ಗೊಬ್ಬರವು ಬಹು ಪರಿಣಾಮಕಾರಿಯೆಂದೂ ಹೇಳಿದರು. ಅವರು ತಾರೀಕು ೧೮ ರಲ್ಲಿ ಹಿಂತೆರಳಿದರು.

WANTED

One efficient office head-clerk for a European Estate must be a matriculate with knowledge of typewriting and well versed in accounts and correspondence.

Please apply in your own handwriting with testimonials to the "Kodagu" Office, Mercara, stating minimum salary required. All other emoluments according to Upasi scale.

2-1

ಜ್ಞಾನ ದೀಪ.

(೧)

ಗಂಗೆ ಎತ್ತಿಗಿರುವ ಅಲಂಕಾರ ಗಾಡಿ ಎತ್ತಿಗಿಲ್ಲ. ಉಂಡಾಡಿಗಿರುವ ಆಡಂಬರ ಉದ್ಯೋಗಶೀಲನಿಗಿಲ್ಲ.

(೨)

ಕೇಳುತ್ತಿರುವವನೊಡನೆ ಮಾತಾಡು, ಕೆಮ್ಮುತ್ತಿರುವವನೊಡನಲ್ಲ. ಆಸಕ್ತನೊಡನೆ ವ್ಯವಹಾರ ಮಾಡು, ಅಲಸ್ಯಜೀವಿಯೊಡನಲ್ಲ.

(೩)

ಕುರಿಯ ಬೆನ್ನಲ್ಲಿ ಬೆಳೆಯುವ ತುಪ್ಪಳ ಕುದುರೆಯ ಬೆನ್ನಲ್ಲಿದ್ದರೆ ಸವಾರಿಯೂ ಸನವಾಗುತಿತ್ತು. ಅಧನರಿಗಿರುವ ಅನುಕೂಲತೆ ಉದಾರಿಗಳಿಗಿರುತಿದ್ದರೆ ಬಡವರಿಗಾಶ್ರಯವಾಗುತಿತ್ತು.

—ನುಡಿಮುತ್ತು.

ಕೊಡಗು

ತಾರೀಕು ೨೨ ಮೇ ೧೯೫೪ನೇ ಶುಕ್ರವಾರ

ಕಾಂಗ್ರೆಸ್ ಕಾರ್ಯಕಾರಿ ಮಂಡಳಿ.

ಪಂಡಿತ ಜವಾಹರ್‌ಲಾಲ್ ನೆಹರೂರವರು ಬ್ರಿಟನಿನ ರಾಣಿಯವರ ಕಿರೀಟಧಾರಣ ಮಹೋತ್ಸವಕ್ಕಾಗಿ ಲಂಡನಿಗೆ ತೆರಳುವ ಮುನ್ನ ಕೇಂದ್ರ ಜನತಾ ಸಭೆಯು ತನ್ನ ಕಾರ್ಯಕಲಾಪಗಳನ್ನು ಮುಂದಕ್ಕೆಬ್ಬಿಡನೆಯೇ ಡೆಲ್ಲಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ಸಭೆ ಸೇರಿ ದೇಶದ ಮುಂದಿರುವ ಹಲವಾರು ಪ್ರಾಮುಖ್ಯ ಪ್ರಶ್ನೆಗಳ ವಿಚಾರ ವಿವೇಚನೆ ನಡೆಸಿತು. ಅತೀ ಪ್ರಾಮುಖ್ಯದ ಸಮಸ್ಯೆಯಾದ ಭಾಷಾವಾರು ಪ್ರಾಂತರಚನೆಯ ವಿಚಾರದಲ್ಲಿ ಆ ತತ್ವವನ್ನು ಒಪ್ಪಿದರೂ ಕೂಡ ಭಾಷಾ ತಳಹದಿಯ ವಿಭಜನೆಯು ಬಹು ಎಚ್ಚರಿಕೆಯಿಂದ ಸಾಗಬೇಕೆಂದೂ, ತುರಿತದಲ್ಲಿ ದೇಶವನ್ನು ಕೇವಲ ಭಾಷೆಯ ಒಂದು ತತ್ವದ ಮೇಲೆ ವಿಂಗಡಿಸುವದು ಸೂಕ್ತವಲ್ಲವೆಂದೂ ಅಂಥಾ ಭಾಷಾವಾರು ಪ್ರಾಂತವ ವಿಂಗಡವಾಗಬೇಕಾದರೆ ಅದಕ್ಕೆ ಮೊದಲು ಕೆಲವು ಆವಶ್ಯಕ ನಿಯಮಗಳು ಸಲ್ಲಿಸಲ್ಪಡಬೇಕೆಂದೂ ಅಭಿಪ್ರಾಯಪಡಲಾಗಿದೆ. ಭಾಷಾವಾರು ಪ್ರಾಂತಸಾಧನೆಗಾಗಿ ಉಪವಾಸ, ಸತ್ಯಾಗ್ರಹಗಳನ್ನು ಕೈಕೊಳ್ಳುವ ನೀತಿಯನ್ನು ಸಮಿತಿಯು ಖಂಡಿಸಿದೆ.

ಕರ್ನಾಟಕ ಪ್ರಾಂತರಚನೆಯಾಗಬೇಕೆಂಬ ಚಳವಳವು ಈಗ ಸ್ವಲ್ಪ ಜೋರಿನಿಂದ ನಡೆದಿವೆ. ಹುಬ್ಬಳ್ಳಿಯಲ್ಲಿ ಅಶಾಂತಿಯ ಪೂರ್ವ ಸಂಕೇತದಿಂದ ಪ್ರಾರಂಭವಾದ ಈ ಚಳವಳವನ್ನೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಪರಿಶೀಲಿಸಿದೆ ಆದ್ದರಿಂದ ಪಂಡಿತ ನೆಹರೂರವರು ಏಪ್ರಿಲ್ ೨೮ ರಲ್ಲಿ ಬೆಳಗಾಮಿನಲ್ಲಿ ಹೇಳಿದ ಮಾತುಗಳನ್ನೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮತ್ತೊಮ್ಮೆ ಸ್ಪಷ್ಟೀಕರಿಸಿದೆ. ಆಂಧ್ರ ಪ್ರಾಂತ ರಚನೆಯಾದ ನಂತರ ಒಂದು ವರ್ಷದ ವರೆಗೆ ಅದರ ಕಾರ್ಯಕಲಾಪಗಳನ್ನು ಪರಿಶೀಲಿಸಿ ನಂತರ ಆ ಅನುಭವದ ಮೇಲೆ ಮುಂದಿನ ಹೆಜ್ಜೆ ಇಡುವದು ಅಗತ್ಯವೆಂದೂ, ಕರ್ನಾಟಕ ಪ್ರಾಂತರಚನೆಯ ಸಾಧ್ಯತೆಯನ್ನು ಪರಿಶೀಲಿಸಲು ಮತ್ತು ಗಡಿನಿರ್ಣಯದ ವಿಚಾರ ವಿವೇಚಿಸಲು ಒಂದು ಹೈ ಪವರ್ ಸಮಿತಿಯನ್ನು ನೇಮಿಸುವದು ಯುಕ್ತವೆಂದೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸ್ಪಷ್ಟಪಡಿಸಿದೆ. ಇದೇ ಅಲ್ಲ, ಕರ್ನಾಟಕ ಪ್ರಾಂತರಚನೆ ಸಾಧ್ಯವಾಗಬೇಕಾದರೆ ಅಂಥಾ ಪ್ರಾಂತರಚನೆಗೆ ಮೈಸೂರು ಸಂಸ್ಥಾನವು ಒಪ್ಪುವದು ಅತ್ಯಗತ್ಯವೆಂದೂ, ಮೈಸೂರು ಒಪ್ಪದಿದ್ದರೆ ಕನ್ನಾಡು ಒಂದುಗೂಡಿಸಲ್ಪಡುವ ಸಾಧ್ಯತೆ ದೂರ ಉಳಿಯುವದೆಂದೂ ಅಂಥಾ ಒಮ್ಮತವು ದೊರಿತ ನಂತರ ಭಾಷಾವಾರು ಹೈ ಪವರ್ ಸಮಿತಿಯ ವರದಿಯನ್ನವಲೋಕಿಸಿ ಅದರಂತೆ ಪ್ರಾಂತಗಳ ವಿಭಜನೆಗೆ ಮಸೂದೆಯೊಂದನ್ನು ತರಲಾಗುವದೆಂದೂ ನೆಹರೂರವರು ವ್ಯಕ್ತಪಡಿಸಿದ ಅಭಿಮತವನ್ನು ಕಾರ್ಯಕಾರಿ ಸಮಿತಿಯು ಒಪ್ಪಿದೆ. ಭಾಷಾವಾರು ಪ್ರಾಂತರಚನೆಯ ಬಗ್ಗೆ ಬಲಾತ್ಕಾರದ ಒತ್ತಾಯಗಳಾದ ಸತ್ಯಾಗ್ರಹ, ಗಲಭೆ, ದೊಂಬಿ ಮತ್ತು ಉಪವಾಸಗಳ ಮಾರ್ಗಗಳನ್ನು ಕಾಂಗ್ರೆಸು ನಿಷೇಧಿಸಿದೆ.

ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯು ವಿಚಾರಿಸಿದ ಎರಡನೇ ಪ್ರಾಮುಖ್ಯ ವಿಷಯವೆಂದರೆ ಭೂದಾನ ಚಳವಳ. ಹಿಂದೂದೇಶದ ಆರ್ಥಿಕ ರಚನೆಯಲ್ಲಿ ಭೂವಿತರಣಾ ಪ್ರಶ್ನೆಯು ಬಹು ಪ್ರಾಮುಖ್ಯವೆಂಬುದನ್ನು ಎಲ್ಲರೂ ಒಪ್ಪಬೇಕು. ಈ ಪ್ರಶ್ನೆಯನ್ನು ಒತ್ತಾಯದಿಂದ ಬಗೆಹರಿಸಲು ಕಾಂಗ್ರೆಸು ತಯಾರಿಲ್ಲ. ಸರಕಾರಿ ಖಾನೂನನ್ನು ಮಾಡಿ ದೇಶದ ಭೂಮಿಯನ್ನು ಜಮೀನ್ದಾರಿ ನಿರ್ಮೂಲ ಮೊದಲಾದ ಕಾಯಿದೆಗಳ ಮೂಲಕ ಮಾಡುವದರಿಂದ ಭೂಮಾಲಿಕರಿಗೆ ಪರಿಹಾರ ದ್ರವ್ಯ ಕೊಡಬೇಕಿರುವದರಿಂದ ಸಮಾಜದ ಆರ್ಥಿಕ ರಚನೆಯಲ್ಲಿ ಏರುತಗ್ಗುಗಳು ಎಂದಿನಂತೆ ಉಳಿಯುವವು. ಆದ್ದರಿಂದ ಭೂಮಾಲೀಕರ ಹೃದಯ ಪರಿವರ್ತನೆಯನ್ನು ಮಾಡಿ ಅವರಿಂದ ಭೂಮಿಯನ್ನು ದಾನವಾಗಿ ಪಡೆಯುವ ಶ್ರೀ. ವಿನೋಬಾರವರ ಭೂದಾನ ಚಳವಳವನ್ನು ಕಾಂಗ್ರೆಸಿಗರೆಲ್ಲರು ಕೈಕೊಂಡು ಪ್ರಖರವಾಗಿ ನಡೆಸಬೇಕೆಂದು ವರ್ಕಿಂಗ್ ಕಮಿಟಿಯ ಅಭಿಪ್ರಾಯವಾಗಿದೆ. ಮತ್ತೆ ದೇಶದ ಮುಂದಿರುವ ಪಂಚವಾರ್ಷಿಕ ಯೋಜನೆಯ ಬಗ್ಗೆ ಅದು ಕಾಂಗ್ರೆಸ್ ಪಕ್ಷದ ಕಾರ್ಯಕ್ರಮವೂ ಮತ್ತು ರಾಷ್ಟ್ರದ ಭವಿಷ್ಯ ಕಾರ್ಯಕ್ರಮವೂ ಆಗಿರುವದೆಂದೂ ಆದ್ದರಿಂದ ದೇಶದ ಪ್ರತಿ ಕಾಂಗ್ರೆಸಿಗನೂ ಹಾಗೂ ನಾಗರಿಕನು ರಾಜಕೀಯ ಪಕ್ಷ ಪಾರ್ಟಿಗಳನ್ನು ಮರೆತು ಒಮ್ಮತದಿಂದ ಸಹಕರಿಸಬೇಕೆಂದೂ ಅಪೀಲು ಮಾಡಿರುವರು.

ಪಂಡಿತ ನೆಹರೂರವರು ಲಂಡನಿಗೆ ತೆರಳುವವರ ಪೂರ್ವ ಭಾವಿಯಾಗಿ ಕೆಲವು ಜನತಾ ಸಭಾಸದರ ಕೇಳಿಕೆ ಮೇರೆ ಭಾರತದ ವಿದೇಶ ನೀತಿಯ ವಿಚಾರವಾಗಿ ಒಂದು ಹೇಳಿಕೆಯನ್ನು ಕೊಟ್ಟರು. ಆ ಹೇಳಿಕೆಯನ್ನು ಕಾಂಗ್ರೆಸ್ ವರ್ಕಿಂಗ್ ಸಮಿತಿಯು ಸ್ವಾಗತಿಸಿ ಬೆಂಬಲವಿತ್ತಿದೆ. ಇತ್ತೀಚೆಗೆ ಭಾರತ ಪಾಕಿಸ್ತಾನಗಳ ಸಂಬಂಧದಲ್ಲಿ ಮೈತ್ರಿಯು ಹೆಚ್ಚತೊಡಗಿರುವದು ಪಾಕಿಸ್ಥಾನ-ಭಾರತಗಳೊಳಗಿನ ಅನೇಕ ಜಟಿಲ ಸಮಸ್ಯೆಗಳ ಶಾಂತ ತೀರ್ಮಾನಕ್ಕೆ ಸಹಾಯಕವಾಗಿದೆಯೆಂಬ ಅಭಿಪ್ರಾಯ ಎಲ್ಲರದಾಗಿದೆ. ಹೀಗೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಜಯಪ್ರದವಾಗಿ ನಡೆದು ದೇಶದ ಹಲವು ಪ್ರಾಮುಖ್ಯ ಪ್ರಶ್ನೆಗಳ ಬಗ್ಗೆ ನಿಶ್ಚಿತ ಅಭಿಪ್ರಾಯ ವ್ಯಕ್ತಮಾಡಿದೆಯೆಂದು ಹೇಳಬಹುದು.

ವರ್ತಮಾನ.

ತಾ. ೧೩-೫-೫೪ರ ರಾತ್ರಿ ಚೇರಳ ಶ್ರೀಮಂಗಲ ಗ್ರಾಮದ ೧೦ನೇ ಮೈಲು ಶ್ರೀ ಸಿ. ಎಚ್ ಅಬ್ದುಲರವರ ಅಂಗಡಿ ಬಾಗಿಲ ಕೆಳಗಡೆ ಕೊರೆದು ಬಾಗಿಲು ತೆಗೆದು ಅಂಗಡಿಗೆ ಕಳ್ಳರು ನುಗ್ಗಿ ಅಂದಾಜು ರೂ. ೨೦೦ ರನ್ನು ಅಪಹರಿಸಿರುವರು. ಅದೇ ಪೇಟೆಯಲ್ಲಿ ಪಳಂಗಂಡ ಕಾಳಪ್ಪನವರ ಅಂಗಡಿಯ ಬಾಗಿಲ ಕೆಳಗೆ ಸುಮಾರು ಒಂದು ಅಡಿ ಉದ್ದ ಕೊರೆದು ಬಾಗಿಲು ತೆರೆಯಲು ಸಾಧ್ಯವಾಗದೆ ಬಿಟ್ಟು ಹೋಗಿರುವರು. ಅಲ್ಲದೆ ಅಲ್ಲಿಯ ಪೋಸ್ಟಾಫೀಸಿನ ಎರಡು ಬೀಗ ಮುರಿದು ನುಗ್ಗಿ ಒಳಗಿನ ಕಬ್ಬಿಣಪೆಟ್ಟಿಗೆಯ ಬೀಗ ಮುರಿಯಲಾಗದೆ ಬಿಟ್ಟು ಹೋಗಿರುವರು. ಪೋಲೀಸರು ತನಿಖೆ ನಡೆಸುತ್ತಿರುವರು.

ಬಲ್ಲತ್‌ನಾಡು ರಾಟೆ ದೇವಸ್ಥಾನದ ಭದ್ರಕಾಳಿ ಹಬ್ಬವು ತಾ. ೨೫, ೨೬ರಲ್ಲಿ ನಡೆಯುವದು.

ತಾ. ೧೪-೫-೫೪ ರಲ್ಲು ಶಾಂತಳ್ಳಿ, ಪ್ರಾರ್ಥಮಿಕ ಶಾಲೆಯನ್ನು ಮಾಧ್ಯಮಿಕ ಶಾಲೆಯನ್ನಾಗಿ ಮಾರ್ಪಡಿಸಲು ಶ್ರೀಮಾನ್ ಕೆ. ಎಸ್. ಚಂಗಪ್ಪನವರಿಂದ ಆರನೇ ತರಗತಿಯು ತೆರೆಯಲ್ಪಟ್ಟು ಮುನ್ನೂರಕ್ಕೂ ಮಿಕ್ಕಿ ನೆರೆದ ನಾಡಿನ ಸಾರ್ವಜನಿಕರ ಅಭಿಪ್ರಾಯದಂತೆ ಈ ಶಾಲೆಗೆ ಕುಮಾರಲಿಂಗೇಶ್ವರ ಮಾಧ್ಯಮಿಕ ಶಾಲೆ ಎಂಬುದಾಗಿ ನಾಮಕರಣ ಮಾಡಲಾಯಿತು.

ಮುದಿಕೇರಿ ಹೈಸ್ಕೂಲು ತಾ. ೨೫ರಿಂದ ತೆರೆಯುವದೆಂದೂ ದೂರದ ಮತ್ತು ಪರ ಊರಿನಿಂದ ಬರುವ ವಿದ್ಯಾರ್ಥಿಗಳಿಗೆ ಊಟದ ಮತ್ತು ವಸತಿಯ ಅನುಕೂಲದ ಬೋರ್ಡಿಂಗ್ ತೆರೆದಿರುವದಾಗಿಯೂ ಪ್ರೆಸಿಡೆಂಟರು ತಿಳಿಸುತ್ತಾರೆ.

ಕೃಷಿಪಂಡಿತ ಬಿರುದನ್ನು ಪಡೆದಿರುವ ಆಲೂರು ಗ್ರಾಮದ ಶ್ರೀ ಸಂಗಯ್ಯನವರು ಹೇಗೆ ವ್ಯವಸಾಯ ಮಾಡಿದರು. ಅವರು ಹಾಕಿದ ಗೊಬ್ಬರ ಮೊದಲಾದ ವಿವರಗಳನ್ನು ಕೂಡಿದ ಸಂಪರ್ಕಣೆಯು ತಾ. ೨೪ರಲ್ಲಿ ೬. ೩೦ಗಂಟೆಗೆ ಮೈಸೂರು ರೇಡಿಯೋ ಕೇಂದ್ರದಿಂದ ಬಿತ್ತರಿಸಲ್ಪಡುವದು.

ಕೊಡಗು ದೇವಾಂಗ ಮಂಡಳಿಯವರು ತಾ. ೧೬ರಿಂದ ಮಡಿಕೇರಿಯಲ್ಲಿ ಇರುವ ಶ್ರೀ ಚೌಡೇಶ್ವರಿ ಅಮ್ಮನವರ ವಿಜಯೋತ್ಸವ ಮತ್ತು ಕೆಂಡದರ್ಚನೆ ಮೊದಲಾದ ದೇವತಾ ಕಾರ್ಯಗಳನ್ನು ವಿಜೃಂಭಣೆಯಿಂದ ನಡೆಸುತ್ತಿರುವರು. ತಾ ೨೫ಕೆ ಕಾರ್ಯಕ್ರಮಗಳು ಮುಗಿಯುವವು.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ "ಧಾರ್ಮಿಕ ಸೇವಾಸಮಿತಿ" ಯ ಆಶ್ರಯದಲ್ಲಿ ನಡೆದ ಶ್ರೀ ಶಂಕರಾಚಾರ್ಯ ಜಯಂತಿಯ ಸಂದರ್ಭದಲ್ಲಿ ತಾ ೧೮ ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲು ಅಧ್ಯಾಪಕರಾದ ಶ್ರೀ ವಿ. ಎಸ್. ರಾಮಕೃಷ್ಣನವರು "ಶ್ರೀ ಶಂಕರಚಾರ್ಯ ಮತ್ತು ಅವರ ತತ್ವ" ಎಂಬ ವಿಷಯ ಭಾಷಣ ಮಾಡಿದರು.

ಭಾರತ ಸೇವಕ ಸಮಾಜದ ಕೊಡಗು ಶಾಖೆಯ ಆಶ್ರಯದಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರುಗಳು ಮಡಿಕೇರಿ ಪೇಪು ಕೆರೆಯ ತಳದ ಮಣ್ಣನ್ನು ಅಗೆದು ಮೇಲೆ ಹಾಕಿ ಕೆರೆಯ ಆಳವನ್ನು ಹೆಚ್ಚಿಸುವದರ ಮೂಲಕ ಪುರವಾಸಿಗಳ ಉಪಯೋಗಕ್ಕೆ ಅತ್ಯಾವಶ್ಯಕವಾದ ಸಮಾಜ ಸೇವಾ ಕಾರ್ಯಕ್ರಮವನ್ನು ಕೈಗೊಂಡರು. ಕೊಡಗು ವಿಧಾನ ಸಭೆಯ ಸ್ಪೀಕರರೂ ಭಾರತ ಸೇವಕ ಸಮಾಜದ ಕೊಡಗು ಶಾಖೆಯ ಸಂಚಾಲಕರೂ ಆದ ಶ್ರೀ ಬಿ ಎಸ್. ಕುಶಾಲಪ್ಪನವರ ಮುಂದಾಳುತನದಲ್ಲಿ ತಾ. ೧೧ರಿಂದ ೧೭ರ ವರೆಗೆ ಈ ಕೆಲಸ ನಡೆಯಿತು.

ಅರೆಕಾಡು ಗ್ರಾಮದ ಶ್ರೀ ಕುಕ್ಕೇರ ಅಚ್ಚಯ್ಯನವರ ಪತ್ನಿಯವರು ನೇಣು ಹಾಕಿಕೊಂಡು ತಾ. ೧೬ರಲ್ಲಿ ಮೃತರಾಗಿರುವ ವಾಗಿ ತಿಳಿಯಬಂದಿದೆ.

ಹಿಂದೂ ದೇಶದಲ್ಲಿ ಕಾಗದ ತಯಾರಿಸುವ ಸಂಬಂಧ ಭಾರತ ಸರಕಾರದ ಆಹ್ವಾನದ ಮೇರೆ ದೇಶದಲ್ಲಿಯ ಕಾಗದ ತಯಾರಿಕೆಗೆ ಬೇಕಾದ ಕಚ್ಚಾ ಮಾಲುಗಳ ಪರಿಶೀಲನೆ ಮಾಡಲು ಸಂಯುಕ್ತರಾಷ್ಟ್ರ ಸಂಘದ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಪ್ರವೀಣರು ತಾ. ೧೨ರಲ್ಲಿ ಕೊಡಗಿಗೆ ಬಂದು ಇಲ್ಲಿಯ ಮಂತ್ರಿಗಳನ್ನು ಭೇಟಿಮಾಡಿ ಕಚ್ಚಾ ಮಾಲುಗಳ ಪರಿಶೀಲನೆ ಮಾಡಿಕೊಂಡು ಹೋದರು.

ಸೋಮವಾರಪೇಟೆ ನಾಡು ಹಂಚೆಟ್ಟಿ ಚಂಗಪ್ಪನವರನ್ನು ಅವರ ಮೈಸೂರು ಪ್ರದೇಶದಲ್ಲಿರುವ ಚೌವಳ್ಳಿ (ಸಂಚಾಕ್ಷರಿ) ತೋಟದಲ್ಲಿ ಈ ತಾ. ೧೭ರ ರಾತ್ರೆ ಅವರ ಮೇಸ್ತ್ರಿಯೊಬ್ಬನು ಚೂರಿ ಹಾಕಿ ಕೊಂದನೆಂದೂ ಪೋಲೀಸರು ತನಿಖೆ ನಡೆಸುತ್ತಿರುವರೆಂದೂ ವರ್ತಮಾನ. ಶ್ರೀ ಚಂಗಪ್ಪನವರು ತಮ್ಮ ನಾಡಿನ ಸಾರ್ವಜನಿಕ ಕೆಲಸಗಳಲ್ಲಿ ತುಂಬಾ ಶ್ರದ್ಧೆ ವಹಿಸುತ್ತಿದ್ದು, ಕಳೆದ ಕೊಡಗು ಎಸೆಂಬ್ಲಿಯ ಚುನಾವಣೆಯಲ್ಲಿ ಒಬ್ಬ ಉಮೇದುವಾರರಾಗಿ ನಿಂತಿದ್ದರು. ಇವರ ಅಕಾಲ ಮರಣದಿಂದ ಅಲ್ಲಿಯವರಿಗೆ ದೊಡ್ಡ ನಷ್ಟವೆಂದೇ ಹೇಳಬೇಕಾಗಿದೆ.

ಅಮ್ಮತ್ತಿ ನಾಡು ಕಾವಾಡಿ ಗ್ರಾಮದ ಶ್ರೀ ನೆಲ್ಲಮಕ್ಕಳ ಸೋಮಪ್ಪನವರು ತಾ ೨೦ರಲ್ಲಿ ಶಿವಾಧೀನರಾದರು.

ಮಡಿಕೇರಿ ಯೂನಿಯನ್ನಿನ ಸಹಕಾರಿ ಕೆಲಸಗಾರರ ಪರಿಷತ್ತೊಂದು ಈ ತಾ. ೧೪ರಲ್ಲಿ ಸಹಕಾರಿ ಸಂಘಗಳ ರಿಜಿಸ್ಟ್ರಾರರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ವಾರ ದೇಶದ ಕೆಲವು ಭಾಗಗಳಿಗೆ ಮಳೆ ಬಿದ್ದಿದೆ. ಆಗಾಗ್ಯೆ ಮೋಡ ಕವಿದುಕೊಂಡು ಮಳೆಗಾಲವು ಪ್ರಾರಂಭಿಸುವ ಚಿನ್ಹೆಗಳು ಕಂಡುಬರುತ್ತಿವೆ. ಧೀರ್ಘಕಾಲ ಮಳೆಯಿಲ್ಲದ್ದರಿಂದ ಹಲವು ಭಾಗಗಳಲ್ಲಿ ಕುಡಿಯುವ ನೀರಿನ ಅಭಾವ ಬಹು ಹೆಚ್ಚಾಗಿದೆ. ಮಡಿಕೇರಿ ನಲ್ಲಿಯ ನೀರು ಬಹು ಮಟ್ಟಿಗೆ ನಿಂತು ಹೋಗಿದೆ.

ಪೈನಾನ್ಸಿನಲ್ಲಿ ತರಬೇತಿಗಾಗಿ ಮದ್ರಾಸಿಗೆ ಹೋಗಿದ್ದ ಶ್ರೀ ಯಂ. ಶ್ರೀನಿವಾಸರಾಯರು ವಾಪಾಸು ಬಂದು ಈ ತಾ. ೧೮ರಲ್ಲಿ ಪುನಃ ಟ್ರೆಜರಿ ಚಾರ್ಜನ್ನು ವಹಿಸಿಕೊಂಡಿರುವರು.

ಮದ್ರಾಸಿನಿಂದ ಕೊಡಗಿನ ಪೈನಾನ್ಸ್ ಸೆಕ್ರೆಟರಿಯಾಗಿದ್ದ ಡೇವಿಸ್‌ರವರು ಕಳೆದ ವಾರ ಡೆಲ್ಲಿಗೆ ಹೊರಟು ಹೋದರು. ಶ್ರೀ ಯಂ. ಎನ್. ಗುಂಡುರಾಯರು ಪೈನಾನ್ಸ್ ಸೆಕ್ರೆಟರಿಯ ಕೆಲಸದ ಚಾರ್ಜಿನಲ್ಲಿರುವರು.

ಕೊಡಗು ಉದ್ಯೋಗಸ್ಥರ ಸಹಕಾರ ಸ್ಟೋರ್ಸ್ ಲಿಮಿಟೆಡ್‌ರವರ ವಾರ್ಷಿಕ ಮಹಾ ಸಭೆಯು ಕೊಡಗು ಸ್ಟೇಟ್ ಕೋ-ಆಪರೇಟಿವ್ ಬ್ಯಾಂಕ್ ಹಾಲ್‌ನಲ್ಲಿ ತಾ. ೩೧ನೇ ಭಾನುವಾರ ಅಪರಾಹ್ನ ೩ ಘಂಟೆಗೆ ನಡೆಯುವದು.

** ಪರೋಪಕಾರ **

ಉತ್ತಮ ವ್ಯಕ್ತಿತ್ವವು ಮನುಷ್ಯನ ಅಮೂಲ್ಯ ಸಂಪತ್ತು. ಈಚಿನ ವರೆಗೆ ಜನರು ಇದು ಹುಟ್ಟುವಾಗಲೇ ಪಡೆದು ಬರುವ ಸೌಭಾಗ್ಯವೆಂದು ತಿಳಿಯುತ್ತಿದ್ದರು. ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಸಾಮರ್ಥ್ಯ ತಮ್ಮಲ್ಲಿಯೇ ಇದೆ. ಎಂಬುವದನ್ನಾಗಲೀ ವ್ಯಕ್ತಿತ್ವ ಪ್ರಾರಬ್ಧ ಫಲವಲ್ಲವೆಂಬ ಸಂಗತಿಯನ್ನಾಗಲೀ ತಿಳಿದು ವರ್ತಿಸಿದವರು ವಿರಳ. ಆದರೆ ಈಚೆಗೆ ನಮ್ಮ ಒಳಿತು ಕೆಡುಕುಗಳಿಗೆ ನಾವೇ ಹೊಣೆಗಾರರೆಂಬ ಭಾವನೆಗೆ ಪ್ರಾಶಸ್ತ್ಯದೊರೆತಂತೆ ಉತ್ತಮ ವ್ಯಕ್ತಿತ್ವ ನಿರ್ಮಾಣವೂ ಸ್ವಂತ ಜವಾಬ್ದಾರಿ ಎಂಬುದು ಎಲ್ಲರಿಗೂ ಸಮ್ಮತವೆನಿಸಿದೆ. ನಾವು ಮನಸ್ಸನ್ನು ಉಚಿತ ಶಿಕ್ಷಣ ಮತ್ತು ಬೋಧನೆಗಳ ಪರಿಣಾಮವಾಗಿ ಸಂಸ್ಕಾರಕ್ಕೆ ಗುರಿಮಾಡುವಂತೆ- ವ್ಯಕ್ತಿತ್ವಕ್ಕೂ ಯೋಗ್ಯ ತರಬೇತಿಯನ್ನು ಕೊಡಬಲ್ಲೆವೆಂದು ಈಗ ಹೆಚ್ಚಿನ ಜನರು ನಂಬಿರುವರು. ಮನೋವಿಜ್ಞಾನಿಗಳು ಸಹ ಈ ಮಾತನ್ನು ಪುರಸ್ಕರಿಸುತ್ತಿರುವರು. ವ್ಯಕ್ತಿತ್ವ ನಿರ್ಮಾಣದ ಸಲುವಾಗಿ ಕೊಡುವ ತರಬೇತಿ ಅತ್ಯಧಿಕವಾಗಿ ನಾವು ಇತರ ಜನರೊಡನೆ ಹೇಗೆ ನಡೆದುಕೊಳ್ಳಬೇಕೆಂಬ ರೂಪದಲ್ಲಿಯೇ ಇದೆ.

ವ್ಯಕ್ತಿತ್ವದ ವರ್ಚಸ್ಸು ವ್ಯಾಪಕಗೊಂಡಂತೆಲ್ಲ ನಮ್ಮ ಸುಖ ಸಂತೋಷವೂ ಅಧಿಕಗೊಳ್ಳುತ್ತದೆ. ಸುಖ ಸಂತೋಷವನ್ನು ನಾವು ಸುಗಂಧ ತೈಲಕ್ಕೆ ಹೋಲಿಸಬಹುದು. ನಾವು ಸ್ವಲ್ಪ ಮಟ್ಟಿಗಾದರೂ ಸುಖಿಗಳಾದರೆ, ನಮ್ಮ ಸಂಪರ್ಕಕ್ಕೆ ಬರುವ ಜನರೂ ನಮ್ಮ ಸುಖದ ಪರಿಮಳದಿಂದ ಆನಂದ ಪಡೆಯುವರು. ಒಬ್ಬ ಒಳ್ಳೆಯ ಮನುಷ್ಯನು ತನ್ನ ವ್ಯಕ್ತಿತ್ವದ ವರ್ಚಸ್ಸಿನಿಂದ ಅನೇಕ ಜನರಿಗೆ ಹಿತವನ್ನುಂಟುಮಾಡಬಲ್ಲನು. ಒಂದು ದೀಪವು ಗಾಢಾಂಧಕಾರವನ್ನು ನಿವಾರಿಸುವಂತೆ ಉತ್ತಮ ವ್ಯಕ್ತಿತ್ವವುಳ್ಳ ತನು ಅನೇಕ ಜನರನ್ನು ಯೋಗ್ಯ ನಾಗರಿಕರನ್ನಾಗಿ ಪರಿವರ್ತಿಸಬಲ್ಲನು. ಮಹಾಭಾರತದ ರಾಮೋಪಾಖ್ಯಾನದಲ್ಲಿ ಒಂದು ಸುಂದರ ಪ್ರಸಂಗವಿದೆ. ರಾಜರ್ಷಿಯಾದ ಜನಕನು ದೇವಕಾರ್ಯಕ್ಕೋಸ್ಕರ ಸ್ವರ್ಗಕ್ಕೆ ವಿಮಾನ ಮೂಲಕ ಹೋಗುವಾಗ ದಾರಿಯಲ್ಲಿ ನರಕವು ತೋರುತ್ತದೆ. ರಾಜರ್ಷಿ ಜನಕನ ಪುಣ್ಯಪ್ರಭಾವವು ನರಕದಲ್ಲಿರುವ ದುಃಖಾತ್ಮರ ಕಷ್ಟವನ್ನು ಕೆಲವಂಶ ಕಡಿಮೆ ಮಾಡುತ್ತದೆ. ಆಗ ಆ ಪಾಪಾತ್ಮರು 'ಓ ಮಹಾತ್ಮಾ, ನೀನೊಮ್ಮೆ ನಮ್ಮ ಬಳಿ ಬಂದು, ನಮ್ಮನ್ನು ಈ ದುಃಖದಿಂದ ಪೂರ್ಣ ಮುಕ್ತರನ್ನಾಗಿ ಮಾಡಲಾರೆಯಾ"? ಎಂದು ಆರ್ತನಾದಗೈದರು ಜನಕನು ಈ ಮೊರೆಯನ್ನು ಕೇಳಿ ವಿಮಾನ ಸಾರಥಿಯಾದ ಮಾತಲಿಗೆ ನರಕದ ಹೆಬ್ಬಾಗಿಲಿಗೆ ತನ್ನನ್ನು ಒಯ್ದು ಬಿಡುವಂತೆ ಒತ್ತಾಯಿಸಿದನು. ಬಳಿಕ ತನ್ನ ಪುಣ್ಯದ ಸ್ವಲ್ಪ ಧಾರೆಯೆರೆದು ಪಾಪ ಜೀವಿಗಳಿಗೆ ಸುಖ ಕೊಟ್ಟನು; ಅವರ ಸಂತೋಷ ಕಂಡು ತಾನೂ ಆನಂದಗೊಂಡನು.

ಇದರ ಮೇಲಿಂದ ಸುಖ ಸಂತೋಷವೆಂದರೆ ಅದೊಂದು ವರದಾನವೆಂದಾಗಲೀ ಆಕಸ್ಮಿಕ ಘಟನೆಯೆಂದಾಗಲೀ ತೋರದೆ ನಾವು ಉಂಟು ಮಾಡಿದ ಹಿತಕರವಾದ ಸ್ಥಿತಿ ಎಂದು ವೇದ್ಯವಾಗುತ್ತದೆ. ಆದುದರಿಂದ ಸುಖವನ್ನು ಕೊಡುವ ವ್ಯಕ್ತಿತ್ವವನ್ನು ನಾವು ಅಭ್ಯಾಸಬಲದಿಂದ ರೂಪಿಸಿಕೊಳ್ಳಬಹುದೆಂದೂ ಅದು ದೇವದತ್ತವಾದ ಭಾಗ್ಯ ಮಾತ್ರವಲ್ಲವೆಂದೂ ತಿಳಿದುಕೊಂಡರೆ ತಪ್ಪಲ್ಲ. ಆದರೆ ನಮಗೆ ಸುಖ ದೊರೆಯಬೇಕೆನ್ನುವ ಸ್ವಾರ್ಥಕ್ಕೆ ಮಾತ್ರ ಇಲ್ಲಿ ಅವಕಾಶವಿರಕೂಡದು. ಸ್ವಾರ್ಥ ಮೂಲದ ಕೆಲಸಗಳು ನಮ್ಮ ವ್ಯಕ್ತಿತ್ವವನು ಪೋಷಿಸುವ ಬದಲು, ವರ್ಚಸ್ಸನ್ನು ಕುಗ್ಗಿಸುವದೇ ನಿಶ್ಚಯ ಆದುದರಿಂದ ನಾವು ನೀಡುವ ಸೇವವಾಗಲೀ ಮಾಡುವ ಕೆಲಸಗಳಾಗಲೀ ಪರಿಣಾಮತಃ ಇತರರಿಗೆ ಒಳ್ಳೆಯದನ್ನುಂಟುಮಾಡುವದವಶ್ಯ. ನಮ್ಮ ಸುಖಕ್ಕೆ ಕೆಲಸ್ಪೊಂದು ರೀತಿಯಲ್ಲಿ ತೊಂದರೆ ಬಂದರೂ ಚಿಂತಿಲ್ಲ—ಇತರರ ಸುಖ ನಮ್ಮ ಧ್ಯೇಯವಾಗಬೇಕು. ಆಗ ಮಾತ್ರ ನಾವು ಎಂದಿಗೂ ಅಳಿಯದ ಯಶಸ್ಸನ್ನು ತರುವ ಉತ್ತಮ ವ್ಯಕ್ತಿತ್ವ ಪಡೆದವರಾಗುತ್ತೇವೆ.

ಯುದ್ಧದಲ್ಲಿ ಸೈನಿಕನಾಗಿ ದುಡಿಯುತ್ತಿದ್ದವನೊಬ್ಬನನ್ನು "ನಿನ್ನ ಜೀವನದ ಅತ್ಯಂತ ರೋಮಾಂಚಕಾರಿ ಅನುಭವ ಯಾವುದು"? ಎಂದು ಕೇಳಿದಾಗ ಉತ್ತರ ರೂಪದಲ್ಲಿ ನೆತ್ತರಿನ ಹೊಳೆಹರಿದ ಘಟನೆಯ ವರ್ಣನೆಯಾದೀತೆಂದು ಹಲವರು ಊಹಿಸಿದರು. ಆದರೆ ಆ ಸೈನಿಕ ತನ್ನ ಜೀವನದಲ್ಲಿ ಚಿರಸ್ಮರಣೀಯವಾದುದೆಂದೂ ಅತ್ಯಂತ ಮಹತ್ವದ್ದೆಂದೂ ತಿಳಿದುಕೊಂಡ ಸಂಗತಿ ಬೇರೆಯೇ— ಒಂದು ರಾತ್ರಿ ಪ್ಯಾರಿಸ್ಸಿನ ರೈಲು ನಿಲ್ದಾಣದಲ್ಲಿ ನಾನು ಇಳಿದಾಗ, ಒಬ್ಬ ಮುದುಕಿ ತನ್ನೊಡನೆ ಇದ್ದ ಭಾರವಾದ ಹೊರೆಯನ್ನು ಹೊರಲಾರದೆ ಸಹಾಯ ಸಿಗುವದೋ ಎಂದು ಆಚೀಚೆ ನೋಡುತಿದ್ದಳು. ಪೋರ್ಟರರು ಕಾಣಲಿಲ್ಲ. ಆ ಮುದುಕಿ ನೋಡಲು ಅಸಹ್ಯವಾಗಿದ್ದಳು. ಚಿಂದಿ ವಸ್ತ್ರ ಧರಿಸಿದ್ದಳು. ಅವಳ ಹೊರೆಯು ಅಸಾಧಾರಣ ಭಾರವಾಗಿತ್ತು. ಆದರೂ ಅದನ್ನು ನಾನೆತ್ತಿಕೊಂಡೆ. ಬಳ್ಳಿ ಕಾಯಿಯೆಂದು ಮುದುಕಿಯನ್ನು ಕರೆದುಕೊಂಡು ಆಕೆಯನ್ನು ಮನೆಗೆ ಹೋಗಲು ಮೋಟಾರನ್ನು ಹತ್ತಿಸಿದೆ. ಇನ್ನು ಮನೆಯ ಮುಂದೆ ಇಳಿಯುವಾಗ ಅವಳ ಗಂಟು ಮೂಟೆ ಹೊರಲು ಯಾರನ್ನು ಕರೆಯಬೇಕೆಂದು ತೋರಿ, ನಾನು ಅವಳೊಂದಿಗೆ ಮೂರು ಮೈಲು ದೂರದ ಮನೆಗೆ ಪ್ರಯಾಣಿಸಿದೆ. ನನ್ನ ಒಳ್ಳೆತನವನ್ನು ಅವಳು ಬಹಳ ಮೆಚ್ಚಿಕೊಂಡಳು. ವಿನಂತಿ ಆಶೀರ್ವಾದಗಳನ್ನು ಕೊಟ್ಟಳು. ನೆರೆಕರೆಯವರೆಲ್ಲರನ್ನೂ ಕರೆಕರೆದು ನಾನು ದೇವತಾ ಮನುಷ್ಯನೆಂದು ಪ್ರಶಂಸಿಸಿದಳು. ನನಗೆ ನಾಚಿಕೆಯಾದರೂ ಸಣ್ಣ ಉಪಕಾರವೂ ಇಷ್ಟು ಗೌರವ ತರುವದನ್ನು ಕಂಡು ಸಂತೋಷಿಸಿದೆ. ಇದು ಸಾಮಾನ್ಯ ಘಟನೆ. ಆದರೆ ಇದನ್ನು ನಾನೆಂದೂ ಮರೆಯುವಂತಿಲ್ಲ". ಎಂದು ಸೈನಿಕ ವರ್ಣಿಸಿದನು.

ವ್ಯಕ್ತಿತ್ವಕ್ಕೆ ಕೊಡುವ ತರಬೇತಿ ಮುಖ್ಯವಾಗಿ ನಮ್ಮ ಹೊಸ ಹೊಸ ಸಾಹಸಗಳಲ್ಲಿ ಮತ್ತು ಒಳ್ಳೆಯ ಮನುಷ್ಯನಾಗಬೇಕೆಂಬ ಧೃಡ ಸಂಕಲ್ಪದಲ್ಲಿ ಇರುತ್ತದೆ. ಆ ಸೈನಿಕನು ಪೋರ್ಟರನ ಕೆಲಸ ಮಾಡಲು ಹಿಂದೆ ಮುಂದೆ ನೋಡಲಿಲ್ಲ. ತನ್ನನು ಯಾರಾದರೂ ಏನೆಂದು ತಿಳಿದುಕೊಳ್ಳುವರೋ ಎಂಬ ಸಂಕೋಚ ಅಥವಾ ದಾಕ್ಷಿಣ್ಯ ಅವನಿಗಿರಲಿಲ್ಲ. ಜನ ತನ್ನನ್ನು ನಗೆಗೀಡು ಮಾಡಲಿಲ್ಲವೆ ಎಂಬ ಭಯವೂ ಇರಲಿಲ್ಲ. ಆದುದರಿಂದ ತನ್ನ ಅಜ್ಜಿಗೆ ಸಮಾನಳಾದ ಮುದುಕಿಯಿಂದ ಪ್ರಶಂಸೆ ಹಾಗೂ ಆಶೀರ್ವಾದಗಳನ್ನು ಇವನು ಪಡೆದನು. ನಾವು ಪ್ರಮಾಣಿಕವಾದ ಮನಸ್ಸಿನಿಂದ ಮಾಡುವ ಸೇವೆಯನ್ನು ಮೆಚ್ಚಿ ಕೊಂಡಾಡುವರು ಹೊರತು ನಮ್ಮನ್ನು ಯಾರೂ ತಪ್ಪು ತಿಳಿದು ಕೊಳ್ಳುವದಿಲ್ಲ. ಬದಲು ನಮ್ಮನ್ನು ಅವರು ಸದಾ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ತಮ್ಮ ವಿಚಿತ್ರ ಆದರೆ ನಿಜವಾದ ಅನುಭವನನ್ನು ಬಣ್ಣಿಸುವವರಲ್ಲಿ ಅವರು ಹೆಮ್ಮೆ ಪಟ್ಟುಕೊಳ್ಳುವರು. ನಾವು ಕೂಡ ನಮ್ಮ ಸಂಪರ್ಕಕ್ಕೆ ಬರುವ ಒಳ್ಳೆಯ ಜನರನ್ನು ಉಪೇಕ್ಷೆಯಿಂದ ನೋಡಬಾರದು. ಅವರ ಹಿತ ಚಿಂತಕರಂತೆ ನಡೆದು ಕೊಳ್ಳಬೇಕು. ಪಾಶ್ಚಾತ್ಯರಲ್ಲಿ ಹುಟ್ಟಿದ ಹಬ್ಬದ ದಿನ ಬರುವ ಶುಭಾಶಯಗಳಿಗೆ, ಕ್ರಿಸ್‌ಮಸ್ ದಿನದ ಕಾಣಿಕೆಗಳಿಗೆ ತುಂಬ ಮಹತ್ವವಿದೆ. ನೋಡಲು ಇದೊಂದು ದೊಡ್ಡ ಸಂಗತಿಯೇನಲ್ಲವೆಂದು ತೋರಿದರೂ ಹುಟ್ಟು ಹಬ್ಬವನ್ನಾಚರಿಸುವ ಆ ವಿಶಿಷ್ಟ ವ್ಯಕ್ತಿಯ ಮಟ್ಟಿಗೆ ಆ ದಿನವೇ ಸರ್ವಸ್ವ. ಅಂಥ ಸಂದರ್ಭಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವದರಿಂದ ಆ ಬಡಪಾಯಿಗೆ ದೊರಕುವ ಸಂತೋಷ ನೋಡಿ, ನಾವೂ ಸುಖಿಗಳಾದೆವು.

ಆದರೆ ಜನರ ಬುದ್ಧಿ ಪಕ್ವವಾಗುತ್ತಿದೆ. ಅವರ ಒಲುವು ಬದಲಾಗುತ್ತಿದೆ. ಬಡವರ ಕಡೆಗೆ ಸಹಾನುಭೂತಿಯೂ ದೀನ ದುಃಖಿಗಳ ಕಡೆಗೆ ದಯೆಯೂ ತೋರಲ್ಪಡುತ್ತದೆ. ನೂರು ಮಂದಿ ಹಸಿದಿರುವಾಗ ಒಬ್ಬನಿಗೆ ಮೃಷ್ಟಾನ್ನ ಉಣ್ಣುವ ಅಧಿಕಾರವಿಲ್ಲೆಂಬ ತತ್ವಕ್ಕೆ ಸಾಮಾನ್ಯತಃ ಎಲ್ಲ ಸುಧಾರಕರ ಒಪ್ಪಿಗೆಯಿದೆ. ಕಮ್ಯೂನಿಷ್ಟರ ಸಮತಾವಾದವಾಗಲೀ ವಿನೋಬಾಜಿಯ ಭೂದಾನ ಮತ್ತು ಸಂಪತ್ ಯಜ್ಞವಾಗಲೀ ಎಲ್ಲರೂ ಸಮಾನರೆಂಬ ಆದರ್ಶವನ್ನು ಎತ್ತಿ ಹಿಡಿಯುತ್ತವೆ. ನಾವು ಸುಖಿಗಳಾದಂತೆ ಇತರರೂ ಆಗಬೇಕೆಂದು ಬಯಸುವ ಪ್ರವೃತ್ತಿ ಉಂಟಾಗಿರುವದನ್ನು ಶುಭ ಚಿನ್ಹೆ ಎಂದುಕೊಳ್ಳಬಹುದು. ಇದನ್ನೆ ಇತರರು ಸುಖಿಗಳಾದರೆ ತಾನೂ ಸುಖಿ ಎಂಬ ರೂಪಕ್ಕೆ ತಂದು ಕಾರ್ಯಶೀಲರಾದರೆ ನಾವು ಶೀಘ್ರದಲ್ಲಿಯೇ ಗುರಿ ಮುಟ್ಟಬಲ್ಲೆವು.

"ನವ ಯುಗ"

ಈಜಿಪ್ಟ್-ಇಂಗ್ಲೆಡ್ ಘರ್ಷಣೆಯ ಮೂಲ.

ಬ್ರಿಟನ್ ಈಜಿಪ್ಟ್‌ಗಳ ನಡುವೆ ಘರ್ಷಣೆಯನ್ನುಂಟು ಮಾಡಿರುವ ಸುಯೇಜ್ ಕಾಲುವೆಯ ಒಡೆತನದ ಪ್ರಶ್ನೆಯು ಈಗ ಅವೆರಡೂ ದೇಶಗಳ ತಲೆ ತಿನ್ನುತ್ತಿದೆ. ಈ ಪ್ರಶ್ನೆಯಲ್ಲಿ ಕೇವಲ ರಾಷ್ಟ್ರೀಯ ಭಾವನೆಯೊಂದೇ ಅಡಕವಾಗಿರದೆ ಅದರಲ್ಲಿ ಆರ್ಥಿಕ ವಿಚಾರವೂ ಕೂಡಿಕೊಂಡಿದೆ. ಸುಯೆಜ್ ಕಾಲುವೆ ಕಂಪೆನಿಯಲ್ಲಿ ಬ್ರಿಟಿಷರ ಪಾಲುಗಳೇ ಅಧಿಕಾಂಶದಲ್ಲಿರುವದರಿಂದ ಅವರದೇ ಸದ್ಯಕ್ಕೆ ಸ್ವಾಮಿತ್ವವಿದೆ. ಮತ್ತು ಈ ಸ್ವಾಮಿತ್ವವು ಹೋದ ಶತಮಾನದಲ್ಲಾದ ಕರಾರುಗಳ ಮೇರೆಗೆ ೧೯೬೮ಲಕ್ಕೆ ಮುಕ್ತಾಯವಾಗಲಿದೆ.

ಬ್ರಿಟಿಷರಿಗೆ ಇದೊಂದು ಸುವರ್ಣ ಘನಿಯಂತಿದೆ. ಈ ಕಾಲುವೆಯ ಬೆಲೆ ಪ್ರಾರಂಭದಲ್ಲಿ ಎರಡು ಕೋಟಿ ಪೌಂಡುಗಳಷ್ಟು ಇತ್ತು. ಈಗ ಅದರ ಬೆಲೆಯನ್ನು ಹತ್ತು ಕೋಟಿ ಪೌಂಡುಗಳೆಂದು ಅಂದಾಜು ಮಾಡಲಾಗಿದೆ. ಆರಂಭದಲ್ಲಿ ಪ್ರತಿಯೊಂದು ಪಾಲಿಗೆ ಹತ್ತು ಪೌಂಡು ಇದ್ದದ್ದು ಒಂದು ಪಾಲಿಗೆ ಎಂಭತ್ತೈದು ಪೌಂಡುಗಳಿಗೆ ಏರಿದೆ.

ಈ ಕಾಲುವೆಯಲ್ಲಿ ಹಾಯ್ದು ಹೋಗುವ ಪ್ರತಿಯೊಂದು ಹಡಗದ ಭಾರದ ಮೇಲೆ ಪ್ರತಿ ಟನ್ನಿಗೆ ಐದು ರೂಪಾಯಿ ಮತ್ತು ಪ್ರತಿಯೊಬ್ಬ ಪ್ರವಾಸಿಯು ತಲಾ ಐದು ರೂಪಾಯಿ ಸುಂಕವನ್ನು ಕೊಡಬೇಕಾಗುತ್ತದೆ. ಈ ವರ್ಷದ ಮೊದಲನೇ ಆರು ತಿಂಗಳಲ್ಲಿ ಸುಮಾರು ಏಳು ಸಾವಿರ ಹಡಗುಗಳು ಈ ಕಾಲುವೆಯಲ್ಲಿ ಹಾದು ಹೋಗಬಹುದೆಂದು ಅಂದಾಜು ಮಾಡಲಾಗಿದೆ. ಅಂದರೆ ಮೊದಲನೆಯ ಆರು ತಿಂಗಳುಗಳಲ್ಲಿ ಮೇಲಿನ ಪ್ರಮಾಣದಂತೆ ಸುಂಕವು ಕಾಲುವೆ ಕಂಪೆನಿಗೆ ದೊರೆಯುವದು. ಇದೇ ವರ್ಷದ ಮಾರ್ಚಿ ತಿಂಗಳೊಂದರಲ್ಲಿಯೇ ಈ ಕಾಲುವೆ ಕಂಪೆನಿಗೆ ೨೪ ಲಕ್ಷ ಪೌಂಡುಗಳ ಆದಾಯ ಬಂದಿದ್ದು ಈ ವರ್ಷದ ಮೊದಲಿನ ಮೂರು ತಿಂಗಳುಗಳ ಒಟ್ಟು ಆದಾಯವು ೬೮ ಲಕ್ಷ ಪೌಂಡುಗಳದಾಗಿದೆ. ಈ ಕಾಲುವೆಯು ಈ ರೀತಿಯಾಗಿ ಬ್ರಿಟನ್ನಿಗೆ ಚಿನ್ನದ ಗಣಿಯಂತಾಗಿದ್ದು ಇರಾಣದ ಎಣ್ಣೆಯು ಕೈತಪ್ಪಿದ್ದರಿಂದ ಆ ಆದಾಯಕ್ಕೆ ಎರವಾದ ಬ್ರಿಟನ್ನಿಗೆ ಇದೂ ಒಂದು ತಪ್ಪಿ ಬಿಟ್ಟರೆ ಅದರ ಆರ್ಥಿಕ ಸ್ಥಿತಿ ತೀರ ಹದಗೆಡುವುದರಲ್ಲಿ ಸಂದೇಹವಿಲ್ಲ. ಅಂತೆಯೇ ಅದು ಈ ವಿಷಯದ ಬಗ್ಗೆ ಈಜಿಪ್ಟಿನೊಡನೆ ಮಾತುಕತೆ ನಡೆಸುವಲ್ಲಿ ಕಾಲಹರಣ ಮಾಡುತ್ತಿದೆ.

ಈಜಿಪ್ಟಿನ ಆಡಳಿತ ಸೂತ್ರ ವಹಿಸಿರುವ ನಜೀಬರಿಗೆ ಇದೆಲ್ಲವೂ ತಿಳಿದಿದೆ. ಅಂತೆಯೇ ಅವರು ಸುಯೆಜ ಕಾಲಿವೆಯ ಒಡೆತನವನ್ನು ಸಂಪಾದಿಸುವದಕ್ಕಾಗಿ ತಮ್ಮ ಸರ್ವಸ್ವವನ್ನೂ ಪಣಕ್ಕೆ ಹಚ್ಚಿದ್ದಾರೆ. ಆದರೆ ಈ ಕಾರ್ಯವನ್ನು ಅವರು ಸಾವಧಾನದಿಂದ ಬಗೆಹರಿಸಿಕೊಳ್ಳಬೇಕಾಗಿದೆ. ಒಂದೊಮ್ಮೆ ಬಲಾತ್ಕಾರದಿಂದ ಈ ಕಾಲಿವೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಈಜಿಪ್ಟವು ಹವಣಿಸಿದರೆ ಅದನ್ನೆದುರಿಸಲಿಕ್ಕೆ ಬ್ರಿಟನ್ನವು ತನ್ನ ಶಕ್ತಿಯನ್ನುಪಯೋಗಿಸದೆ ಬಿಡದು. ಅಂಥ ಪ್ರಸಂಗದಲ್ಲಿ, ಅಮೇರಿಕ, ಫ್ರಾನ್ಸು ಮತ್ತು ಅವುಗಳ ಇತರ ವಶಾನುವರ್ತಿ ರಾಷ್ಟ್ರಗಳಾದ ಕ್ಯಾನಡಾ, ಆಸ್ಟ್ರೇಲಿಯಾ, ನ್ಯೂಝಿಲೇಂಡ್, ದಕ್ಷಿಣ ಮತ್ತು ಪೂರ್ವ ಆಫ್ರಿಕೆಗಳು ಇಂಗ್ಲೆಂಡಿನ ಸಹಾಯಕ್ಕೆ ಬರದಿರಲಾರವು. ಇದೂ ನಜೀಬರಿಗೆ ಗೊತ್ತಿದೆ. ಮತ್ತು ಅಂಥಾ ಬಲಾಢ್ಯ ಶಕ್ತಿಯನ್ನು ಖಡ್ಗದಿಂದ ಎದುರಿಸುವದು ತಮಗೆ ಸಾಧ್ಯವಿಲ್ಲವೆಂಬುದನ್ನೂ ಅವರು ಬಲ್ಲರು. ಅಂತೆಯೇ ಅವರು ಸಾಮೋಪಚಾರದಿಂದ ಈ ಪ್ರಶ್ನೆಯನ್ನು ಬಗೆಹರಿಸುವದಕ್ಕಾಗಿ ಯತ್ನಿಸುತ್ತಿದ್ದಾರೆ.

ಇನ್ನೂ ತನ್ನಲ್ಲಿ ಸೈನಿಕ ಶಕ್ತಿ ಇದೆ; ತನಗೆ ಇತರ ರಾಷ್ಟ್ರಗಳ ಬೆಂಬಲವಿದೆ; ಆದ್ಧರಿಂದ ಈಜಿಪ್ಟಿನ ಬೇಡಿಕೆಯನ್ನು ನೇರವಾಗಿ ನಿರಾಕರಿಸುವದರಿಂದಾವ ಪ್ರಮಾದವಾಗಲಾರದೆಂದು ಬ್ರಿಟನ್ನವು ಊಹಿಸುವಂತೆಯೂ ಇಲ್ಲ. ಯಾಕೆಂದರೆ ಅತೃಪ್ತ ಈಜಿಪ್ಟವು ಯಾವಾಗಲೂ ಈ ಗಂಡಸ್ಥಲ ಪ್ರದೇಶಕ್ಕೆ ಗಂಡಾಂತರಕಾರಿಯೇ ಆಗುವುದು ಮೇಲಾಗಿ ಮಧ್ಯಪ್ರಾಚ್ಯದಲ್ಲಿ ಈಗಾಗಲೇ ಬ್ರಿಟಿಷರ ವಿರುದ್ಧ ಸಾಕಷ್ಟು ದ್ವೇಷಾಸೂಯೆಗಳು ಪಸರಿಸಿರುವಾಗ ಆಯಕಟ್ಟಿನ ರಾಷ್ಟ್ರವಾದ ಈಜಿಪ್ಟಿನ ವೈರತ್ವವನ್ನು ಕಟ್ಟಿಕೊಂಡರೆ ಬ್ರಿಟನ್ನಕ್ಕೆ ಎಂದಿಗೂ ಕ್ಷೇಮವಾಗಲಾರದೆಂಬುದನ್ನು ಬ್ರಿಟಿಷ್ ಮುತ್ಸದ್ಧಿಗಳು ಅರಿತಿದ್ದಾರೆ. ಅದಕ್ಕಾಗಿ ಅವರು ಹಬ್ಬ ಹಸನಾಗಿರಬೇಕು. ಬೆಲ್ಲ ತುಪ್ಪ ಉಳಿದಿರಬೇಕು. ಈ ಘೋರಣೆಯನ್ನು ಅನುಸರಿಸದೆ ಅವರಿಗೆ ಗತ್ಯಂತರವಿಲ್ಲ. ಅಂತೆಯೇ ಅವರು ಮಾತುಕತೆಯಾಡಲು ಒಪ್ಪಿದ್ದಾರೆ. ಮತ್ತು ಇಂದಿನ ಸಾವನ್ನು ನಾಳೆಗೆ ದೂಡುವಂತೆ ಮಂದಗತಿಯಿಂದ ಮುಂದೆ ಸಾಗುತಿದ್ದಾರೆ.

ಈ ಮಾತುಕತೆಗಳು ಯಶಸ್ವಿಯಾಗಬೇಕಾದರೆ ಈಜಿಪ್ಟಕ್ಕೆ ಸುಯೆಜ್ ಕಾಲುವೆಯ ಒಡೆತನವನ್ನು ಒಪ್ಪಿಸಬೇಕಾಗುವುದು; ಒಡೆತನವನ್ನೊಪ್ಪಿಸಿದರೆ ಆ ಬಗ್ಗೆ ಈಜಿಪ್ಟಿನಿಂದ ಸುಯೆಜ್ ಕಾಲುವೆ ಕಂಪೆನಿಯವರು ಪರಿಹಾರ ಧನವನ್ನು ಕೇಳದಿರಲಾರರು ಇಲ್ಲವೆ ಈ ಮೊದಲು ಆಗಿರುವ ಕರಾರುಗಳನ್ನು ರದ್ದುಪಡಿಸಿ ಇಲ್ಲವೆ ಅವುಗಳಲ್ಲಿ ತಿದ್ದುಪಡಿ ಮಾಡಿ ಆ ಪ್ರದೇಶದ ಮೇಲೆ ಈಜಿಪ್ಟಕ್ಕೆ ಹೆಚ್ಚಿನ ಅಧಿಕಾರವನ್ನೂ ಅದರಿಂದ ಬರುವ ಆದಾಯದಲ್ಲಿ ಹೆಚ್ಚಿನ ಲಾಭಾಂಶವನ್ನೂ ಕೊಡಬೇಕಾಗುವುದು.

ಒಂದೊಮ್ಮೆ ಬ್ರಿಟನವು ಕಾಲಿವೆ ಪ್ರದೇಶನನ್ನು ಈಜಿಪ್ಟಕ್ಕೆ ಒಪ್ಪಿಸಲು ಸಿದ್ಧವಾದರೆ ಅದರ ಆಡಳಿತವನ್ನು ಸಾಗಿಸಿಕೊಂಡು ಹೋಗುವದಕ್ಕೆ ಬೇಕಾಗುವ ವಿಶಿಷ್ಟ ಅನುಭವ ಮತ್ತು ಜ್ಞಾನದ ಆಡಳಿತಗಾರರೂ ಬೇಕಾಗುವರು. ನಜೀಬರು ಈಗಾಗಲೇ ಸುಯೇಜ್ ಕಾಲುವೆಯು ಈಜಿಪ್ಟದ ಒಡೆತನದ್ದೆಂದು ಸಾರಿದ್ದು ಅದಕ್ಕಾಗಿ ನಜೀಬರ ಬೆಂಬಲಿಗರಲ್ಲಿ ಪ್ರಮುಖರಾದ ಡಾ. ಮೃಸ್ತಫಾ ಹೆಫ್ನಾವಿ ಇವರು ಈಗಾಗಲೇ ಒಂದು ಸರಕಾರೀ ವಿಭಾಗವನ್ನು ನಿರ್ಮಿಸಿದ್ದು ಸುಯೆಜ್ ಕಾಲುವೆಯ ಆಡಳಿತವನ್ನು ನಿರ್ವಹಿಸುವದಕ್ಕಾಗಿ ತರುಣ ಅಧಿಕಾರಿಗಳನ್ನು ಕಲೆ ಹಾಕುತಿದ್ದಾರೆ. ಮತ್ತು ಅವರಿಗೆ ಯೋಗ್ಯ ತರಬೇತಿಯ ವ್ಯವಸ್ಥೆ ನಡೆಸಿದ್ದಾರೆ.

ಈ ರೀತಿಯಾಗಿ ಈಜಿಪ್ಟವು ಕನ್ಯೆ ದೊರೆಯುವ ಮುನ್ನ ಲಗ್ನದ ಸಿದ್ಧತೆ ಮಾಡುವವರಂತೆ ಸುಯೆಜ್ ಕಾಲುವೆಯ ಆಡಳಿತವನ್ನು ವಹಿಸಿಕೊಳ್ಳುವ ಸಿದ್ಧತೆಗಾರಂಭಿಸಿರುತ್ತದೆ. ಸುಯೆಜ್ ಕಾಲಿವೆ ಕಂಪೆನಿಯ ಬ್ರಿಟಿಷ್ ಮುತ್ಸದ್ಧಿಗಳು ಈ ಪ್ರಶ್ನೆಯನ್ನು ಬಗೆಹರಿಸುವದಕ್ಕಾಗಿ ಮಾತುಕತೆಗಳನ್ನಾರಂಭಿಸಿದ್ದರೂ ಸುಲಭವಾಗಿ, ಸಹಜವಾಗಿ ಅದರ ಸ್ವಾಮಿತ್ವವನ್ನು ಕೊಟ್ಟುಬಿಡುವರೆಂದು ತಿಳಿಯುವದು ಧಾರ್ಷ್ಟ್ಯವಾಗುವದು. ಆದರೆ ಈಗ ಬಿಟ್ಟು ಕೊಟ್ಟರೆ ಬ್ರಿಟನ್ ಮತ್ತು ಬ್ರಿಟಿಷರ ವಿಷಯವಾಗಿ ಈಜಿಪ್ಷಿಯನ್ನರ ಮನಸ್ಸಿನಲ್ಲಿ ಸ್ವಲ್ಪವದರೂ ಪ್ರೀತಿ ವಿಶ್ವಾಸಗಳು ಉಳಿಯಬಹುದು. ಇಲ್ಲದೆ ಹೋದರೆ ೧೯೬೮ರಲ್ಲಿ ಈ ಕಂಪೆನಿಯ ಕರಾರುಗಳು ಮುಕ್ತಾಯವಾದ ನಂತರ ಹೇಗೂ ಇದರ ಒಡೆತನವು ಈಜಿಪ್ಷಿಯನ್ನರ ಕಡೆಗೆ ಹೋಗಲೇಬೇಕಾಗುವದು. ಹಾಗಾದಲ್ಲಿ ಬ್ರಿಟಿಷರು ಈಜಿಪ್ಷಿಯನ್ನರ ಸ್ನೇಹ ಸಂಬಂಧಕ್ಕೆ ನಿರಂತರವಾಗಿ ಎರವಾಗಬೇಕಾಗುವದು.

ಇವೆಲ್ಲ ಕಾರಣಗಳ ಮೂಲಕ ಇದೂ ಒಂದು ಬ್ರಿಟಿಷ್ ಮುತ್ಸದ್ದಿಗಳ ಮುತ್ಸದ್ದಿತನದ ಪರೀಕ್ಷಾ ಸಮಯವೆಂದೇ ಹೇಳಬೇಕಾಗಿದೆ. ಆದರೆ ಇತ್ತಲಾಗಿ ಬಂದ ವಾರ್ತೆಯಂತೆ ಬ್ರಿಟಿಷ್ ಮತ್ತು ಈಜಿಪ್ಟ್ ಸೇನೆಗಳೊಳಗೆ ಘರ್ಷಣೆ ಪ್ರಾರಂಭವಾಗಿದೆಯೆಂದು ತಿಳಿದು ಬಂದಿದೆ.

ಜೈ ಹಿಂದ್.

ಚೀಫ್ ಕಮಿಷನರ ಟೆನ್ನಿಸ್ ಟೂರ್ನಮೆಂಟ್

ತಾರೀಕು ೧೩ರಿಂದ ೧೭ರ ವರೆಗೆ ಮಡಿಕೇರಿಯಲ್ಲಿ ಚೀಫ್ ಕಮಿಷನರ ಟೆನ್ನಿಸ್ ಪಂದ್ಯಾಟವು ನಡೆಯಿತು. ತಲಚೇರಿ, ಮೈಸೂರು, ಬೆಂಗಳೂರು ಮತ್ತು ಮಂಗಳೂರಿನಿಂದ ಆಟಗಾರರು ಬಂದಿದ್ದರು. ತಾ. ೧೬ ಮತ್ತು ೧೭ರಲ್ಲಿ ಕಡೇ ಆಟಗಳು ಬೋರ್ ಬಂಗ್ಲೆಯ ಟೆನ್ನಿಸ್ ಕೋರ್ಟಿನಲ್ಲಿ ನಡೆದವು.

ಇಬ್ಬರ ಕಡೇ ಆಟದಲ್ಲಿ ಮಂಗಳೂರಿನ ಶ್ರೀ ಉಗ್ಗಪ್ಪ ಶೆಟ್ಟಿ ಮತ್ತು ಎ. ಆಳ್ವ ಇವರು ಬೆಂಗಳೂರಿನ ಶ್ರೀ ಕೆ. ಸುಬ್ಬರಾವ್ ಮತ್ತು ವಿ. ಟಿ. ರಾಮನ್‌ರನ್ನು ಸೋಲಿಸಿ ಕಪ್ಪನ್ನು ಗೆದ್ದರು.

ಇಬ್ಬರ ಮಿಶ್ರ ಆಟದಲ್ಲಿ ಚೆಪ್ಪುಡೀರ ಮಿಸೆಸ್ ಪೊನ್ನಪ್ಪ ಮತ್ತವರ ಮಗ ರಾಜಾರಾಮ್ ಇವರು ಮಿಸ್ ಮೋಹಿನಿ ಬೇಡಿ ಮತ್ತು ಕೋದಾಂಡ ಗಣಪತಿ ಇವರನ್ನು ಸೋಲಿಸಿ ಕಪ್ಪನ್ನು ಗೆದ್ದರು.

ಒಬ್ಬರ ಆಟದಲ್ಲಿ ಶ್ರೀ ಚೆಪ್ಪುಡೀರ ರಾಜಾರಾಮ್‌ರವರು ಕೋದಾಂಡ ಗಣಪತಿಯವರನ್ನು ಸೋಲಿಸಿ ಕಪ್ಪನ್ನು ಗೆದ್ದರು. ಗೆದ್ದವರಿಗೆ ಕಪ್ಪುಗಳನ್ನು ಮೇಡಂ ಬೇಡಿಯವರು ಕೊಟ್ಟರು.

ಹಿಂದೀ ಪರೀಕ್ಷೆ.

ಟಿ. ಶೆಟ್ಟಿಗೇರಿ ಶಾಲೆಯಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ತೆರೆಯಲ್ಪಟ್ಟ ಹಿಂದೀ ಕೇಂದ್ರದಲ್ಲಿ ಶ್ರೀಗಳಾದ ಪಿ. ಡಿ. ಕಮಲಾವತಿ, ಕೈಬ್ಲೀರ ಗಣಪತ್ತಿ, ಬಿ ಸಿ. ಮೇದಪ್ಪ, ಬಿ. ಎ. ಜಾನಕಿ, ಪಿ. ಪಿ. ಉತ್ತಯ್ಯ; ಕೆ. ಸಿ. ಜಾನಕಿ, (ಇವರು ಪ್ರಥಮ ಶ್ರೇಣಿಯಲ್ಲಿ) ಎಸ್. ಎಸ್. ಬಸವರಾಜ್, ಕೆ. ಸಿ. ದೇವಯ್ಯ, ಎಸ್. ಎಸ್. ಈಶ್ವರ ಶರ್ಮ, ಕೆ. ಎಂ. ಗಣಪತ್ತಿ, ಎನ್. ಟಿ. ನಾಣಯ್ಯ, ಎನ್. ಎನ್. ಪೂಣಚ್ಚ, ಎಸ್. ವಿ. ಲಕ್ಷ್ಮೀನಾರಾಯಣ, ಬಿ. ಎನ್. ರಾಮಚಂದ್ರ, ಸಿ. ಎನ್, ಪೊನ್ನಮ್ಮ, ಕೆ. ಎನ್. ಪೂಣಚ್ಚ, ಎಸ್. ಪಿ. ಸೋಮಯ್ಯ. ಸಿ. ಕೆ. ಪೂವಯ್ಯ (ಇವರು ಪ್ರಾಥಮಿಕದಲ್ಲೂ) ಶ್ರೀಗಳಾದ ಯು. ಪಿ ನಂಜಮ್ಮ (ಪ್ರಥಮ ಶ್ರೇಣಿ) ಕೆ. ಆರ್. ವಾಸಂತಿ, ಸಿ. ಎನ್. ರಘುಪತಿ, ಕೆ. ಜಿ. ಅಪ್ಪಯ್ಯ (ಇವರುಗಳು ಮಾಧ್ಯಮಿಕದಲ್ಲೂ) ಶ್ರೀ ಎಂ. ಎ ಬೋಪಯ್ಯ (ಇವರು ರಾಷ್ಟ್ರ ಭಾಷೆಯಲ್ಲೂ) ತೇರ್ಗಡೆ ಹೊಂದಿರುವರು.

ವಿಜ್ಞಾಪನೆ.

ತಾ. ೧೮–೪–೫೩ ರಲ್ಲಿ ಶಿವಾಧೀನರಾದ ನನ್ನ ಪತಿ ಮಂದಣ್ಣನವರ ಮರಣದಿಂದ ನನಗೂ ನನ್ನ ಮಕ್ಕಳಿಗೂ ಉಂಟಾದ ಅಪಾರ ದುಃಖಕ್ಕೆ ಸಂತಾಪ ಸೂಚಿಸಿ ಹಲವು ನೆಂಟರಿಷ್ಟರು ಮತ್ತು ಮಿತ್ರವರ್ಗದವರು ಪತ್ರಗಳನ್ನು ಬರೆದಿರುವರಲ್ಲದೆ ಅನೇಕರು ಖುದ್ದಾಗಿ ಬಂದು ಸಂತೈಸಿರುವರು. ಅವರಿಗೆಲ್ಲಾ ಪ್ರತ್ಯೇಕ ಪ್ರತ್ಯೇಕ ಬರೆದು ನನ್ನ ಕೃತಜ್ಞತೆಯನ್ನು ಸೂಚಿಸಲು ಸಾಧ್ಯವಿಲ್ಲದ ಕಾರಣ ಈ ಮೂಲಕ ಅವರೆಲ್ಲರಿಗೂ ನನ್ನ ಮನ ಪೂರ್ತಿಯಾದ ವಂದನೆಗಳನ್ನು ಅರ್ಪಿಸುತ್ತೇನೆ.

ಇಂತೀ
ಚೇರಂಡ ತಂಗಮ್ಮ ಮಂದಣ್ಣ
ತಾ. ೨೦–೫–೫೩
'ರುಕ್ಮ ಎಸ್ಟೇಟ್'

CAR FOR SALE.

One VAUXAL CAR 1947 model, registered in 1948, owner driven and is inimmaculate condition.

For Futher particulars contact:

C. V. S. BROTHERS,
Elec, & Mech. Engineers,
MERCARA.

❀ ಒದುಗರ ಓಲೆಗಳು. ❀

ಇದಕ್ಕೆ ಉತ್ತರಿಸಲಿ.

ತಾ. ೧೫ ರಲ್ಲಿ ಮಡಿಕೇರಿ ಪುರಸಭೆಯವರು ಸುಮಾರು ೨೫ ಸಾವಿರ ರೂಪಾಯಿ ವೆಚ್ಚಮಾಡಿ ಕಟ್ಟಿಸಿದ ಕಟ್ಟಡವನ್ನು ತೆರೆಯುವ ಸಮಾರಂಭವು ನಡೆಯಿತು. ನಮ್ಮ ಮಂತ್ರಿಗಳು ಆ ಕಾರ್ಯವನ್ನು ನೆರವೇರಿಸಿದರು. ಆ ಕಾಲಕ್ಕೆ ಅವರು ಮಾತಾಡುತ್ತಾ, ಕಟ್ಟಡವು ಹೀನಸ್ಥಿತಿಯಲ್ಲಿದ್ದಾಗ ಮಾತೆತ್ತದವರು ಕಟ್ಟಡ ಕಟ್ಟಿದಾಗ ವಿರೋಧ ಮಾಡುತ್ತಿದ್ದಾರೆ. ತಾವು ಮಾಡುವ ಯಾವುದೇ ಕೆಲಸಕ್ಕೆ ಒಂದು ಟೀಕೆ ಇದ್ದೇ ಇದೆ. ಇದು ಕೆಲವು ಜನರ ಹುಟ್ಟು ಸ್ವಭಾವ. ಅಂಥಾದ್ದನ್ನು ಗಮನಿಸದೆ ಮುಂದರಿಯಬೇಕೆಂದು ಹೇಳಿದರಂತೆ. ಹಾಗೆ ಹೇಳಿರಬೇಕಾದರೆ ಮುನ್ಸಿಪಾಲಿಟಿಯ ಅವ್ಯವಸ್ಥೆಯ ಆಡಳಿತದ ವಿಚಾರ ಈ ಮೊದಲು 'ಕೊಡಗು' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಎರಡು ಓಲೆಗಳನ್ನು ಮಂತ್ರಿಗಳು ಓದಿರಬೇಕು ಮತ್ತೆ ಕಟ್ಟಡ ಉದ್ಘಾಟನೆಯ ಸಂದರ್ಭವನ್ನು ಉಪಯೋಗಿಸಿ ಪುರಸಭೆಯವರ ಪರವಾಗಿ ಈ ಮಾತಾಡಿರಬೇಕು. ಇದು ನಿಜವಾಗಿದ್ದರೆ ಪುರಸಭೆಯ ಕೆಲಸ ಕಾರ್ಯಗಳನ್ನು ಮಂತ್ರಿಗಳು ಒಪ್ಪಿದಂತಾಯಿತು. ಹಾಗಾದರೆ ಮಂತ್ರಿಗಳು ಈ ಕೆಳಗಿನ ವಿಚಾರಕ್ಕೆ ಉತ್ತರವೀಯಲಿ.

ಕಟ್ಟಡವನ್ನು ಸಾರ್ವಜನಿಕ ಹಣದಿಂದ ಕಟ್ಟಿರುವಾಗ ಅದನ್ನು ಬಾಡಿಗೆಗೆ ಕೊಡುವ ವಿಚಾರದಲ್ಲಿ ಪುರಜನರಿಗೆ ಅನುಕೂಲ ಕೊಟ್ಟು ಅತ್ಯಂತ ಆವಶ್ಯಕತೆ ಇರುವವರಿಗೆ ಕೊಡಬೇಕಿರಲಿಲ್ಲವೇ? ಈಗ ರೂಮು ಪಡೆದಿರುವ ಕಾವೇರಿ ಪ್ರೆಸ್ ಮಾಲೀಕರಿಗಿಂಥ ಲೂ, ಯಾ ಇನ್ನೊಬ್ಬ ಜನಳಿ ವ್ಯಾಪಾರಿಗಳಿಗಿಂಥಲೂ ಕಷ್ಟದಲ್ಲಿರುವವರು ಬೇರಿಲ್ಲವೇ? ಇದನ್ನು ಮಂತ್ರಿಗಳು ಸರಿ ಎನ್ನುವರೇ? ಪುರಸಭೆಯ ಆಫೀಸಿನಲ್ಲಿ ಖಾಲಿಬಿದ್ದ ಕೆಲಸವನ್ನು ತುಂಬಲು ಎಂಪ್ಲಾಯಿಮೆಂಟ್ ಎಕ್ಸ್‌ಛೇಂಜ್ ಯಾ ಜಾಹೀರಾತು ಮೂಲಕ ಮಾಡದೆ ಸವಸ್ಕರ ಮಕ್ಕಳಿಗೆ ಕೊಟ್ಟುಕೊಳ್ಳುವದನ್ನು ಮಂತ್ರಿಗಳು ಒಪ್ಪುವರೇ? ಮಡಿಕೇರಿ ಪೇಟೆಯ ಹಲವು ಭಾಗದಲ್ಲಿ ಚರಂಡಿಗಳು ದುರ್ಗಂಧ ತುಂಬಿರುವದನ್ನೂ, ನೀರಿಲ್ಲದೆ ಜನರು ತೊಂದರೆಪಡುತ್ತಿರುವದನ್ನು ಎತ್ತಿ ಹೇಳಿದರೆ ಅದು ನಿಷ್ಕಾರಣವಾದ ದೋಷಾರೋಪಣೆಯೆಂದು ಮಂತ್ರಿಗಳು ತಿಳಿದಿರುವರೇ? ಅದು ಪುರಸಭೆ ಇರಲೀ, ಬೇರೆ ಎಲ್ಲಿಯೇ ಆಗಲೀ ಪ್ರತಿಯೊಂದನ್ನೂ ಪಾರ್ಟಿದೃಷ್ಟಿಯಿಂದ ನೋಡುತ್ತಿರುವದೇ ಮಂತ್ರಿಗಳ ಉದ್ಗಾರಕ್ಕೆ ಕಾರಣವಲ್ಲದೆ ಬೇರಿರಲಾರದು. ಮಡಿಕೇರಿಯಲ್ಲಿ ಕುಡಿಯಲು ನೀರಿಲ್ಲದೆ, ಮಾಡಲು ಉದ್ಯೋಗವಿಲ್ಲದಿರುವ ಜನರು ತಮಗಾದ ತೊಂದರೆಗಳನ್ನು ಹೇಳಿಕೊಂಡರೆ ಅದು ಅಧಿಕಾರದಲ್ಲಿರುವವರ ಟೀಕೆಯೆಂದೂ, ಕೆಲವರ ಹುಟ್ಟು ಸ್ವಭಾವವೆಂದೂ ಹೇಳುವದು ಸರಿಯೇ? ಮಂತ್ರಿಗಳು ದೂರುವ ಈ 'ಕೆಲವರು' ಯಾರು? ತೆರಿಗೆ ಕೊಡುವ ನಾಗರಿಕರಲ್ಲವೇ? ಅವರಿಗೆ ಆಡಳಿತದ ನ್ಯೂನತೆಯನ್ನು ಎತ್ತಿ ತೋರಿಸುವ ಹಕ್ಕಿಲ್ಲವೇ? ಪುರಸಭೆಯವರನ್ನು ಟೀಕಿಸಿದಾಗ ಮಂತ್ರಿಗಳು ಬಂದು ಕೊಡೆಹಿಡಿಯಲೇಕೆ? ಪುರನಿವಾಸಿಯಾಗಿರುವ ನಾನೂ ಕಾಂಗ್ರೆಸಿಗನು. ಕಾಂಗ್ರೆಸಿಗೆ ಮತವಿತ್ತವನು. ಅಂದ ಮಾತ್ರಕ್ಕೆ ಅಧಿಕಾರದಲ್ಲಿರುವವರು ಮಾಡುವ ತಪ್ಪುಗಳನ್ನು ಎತ್ತಿ ಹೇಳಬಾರದೇ? ಮಂತ್ರಿಗಳು ಆಶಿಸಿದಂತೆ ಅವರು ಹೇಳಿದುದಕ್ಕೆಲ್ಲಾ ತಲೆದೂಗಿ, ಮಾಡಿದುದಕ್ಕೆಲ್ಲಾ ಕೈಚಪ್ಪಾಳೆ ಹೊಡೆಯುವದೇ ನಾಗರಿಕನ ಕರ್ತವ್ಯವಾದರೆ ಆ ಪ್ರಜಾಪ್ರಭುತ್ವ ಯಾರಿಗೆ ಬೇಕು?

'ಪುರನಿವಾಸಿ.'

ಇದೆಂಥಾ ಸರಕಾರ?

ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನಿನ ಮಡಿಕೇರಿ ಶಾಖೆಯ ಹೊಸ ಕಟ್ಟಡ ತೆರೆಯುವ ಸಮಾರಂಭವು ತಾ. ೧೬ ರ ಬೆಳಿಗ್ಗೆ ೧೦ ಗಂಟೆಯಿಂದ ಮಧ್ಯಾಹ್ನ ೧ ಗಂಟೆಯ ವರೆಗೆ ನಡೆಯಿತು. ಸಾಗಸಾದ ಟೀಪಾರ್ಟಿಯ ನಂತರ ಕೆಲವು ಗಣ್ಯರ ಭಾಷಣಗಳಾದವು. ಭಾಷಣಕಾರರಲ್ಲೊಬ್ಬರಾದ ಶ್ರೀ. ರಾಮಮೂರ್ತಿಯವರು ಹೇಳಿದಂತೆ ದೇಶದಲ್ಲಿ ಪ್ರಾಮುಖ್ಯವಾಗಿ ಬೇಕಾದುದು ಸಹಕಾರಿ ಬ್ಯಾಂಕುಗಳಾದರೂ ಇಂದಿನ ಆರ್ಥಿಕ ರಚನೆಯಲ್ಲಿ ಜಾಯಿಂಟ್ ಸ್ಟಾಕ್ ಬ್ಯಾಂಕುಗಳಿಗೂ ಸ್ಥಾನವಿದೆ. ಕೆನರಾಬ್ಯಾಂಕು ತನ್ನ ಕರ್ತವ್ಯವನ್ನು ಯೋಗ್ಯ ರೀತಿ ನಿರ್ವಹಿಸಿದೆ ಎಂಬುದು ಸತ್ಯಸ್ಥಿತಿಯಾಗಿದೆ. ಕೆನರಾಬ್ಯಾಂಕು ತನ್ನ ಕೆಲಸ ಕಾರ್ಯಗಳಿಂದ ಜನಪ್ರಿಯವಾಗಿದ್ದು ಅದಕ್ಕೆ ಜನರ ಪ್ರೋತ್ಸಾಹ ಅವಶ್ಯ ಮತ್ತು ಅದರ ಸಂಚಾಲಕರು ವಂದನಾರ್ಹರಾಗಿದ್ದಾರೆ.

ಚೀಫ್ ಕಮಿಷನರು ಮಾತಾಡುತ್ತಾ 'ಈ ಬ್ಯಾಂಕು ಕೊಡಗಿನ ರೈತರಿಗೆ ಕಡಿಮೆ ದರದ ಬಡ್ಡಿಯಲ್ಲಿ ಸಾಲಕೊಡುವ ಮತ್ತು ಕೊಡಗಿನ ಉದ್ಯಮಗಳಿಗೆ ಸಹಾಯವನ್ನೊದಗಿಸುವ ಕಾರ್ಯಕ್ರಮವನ್ನು ಮುಂದಕ್ಕಾದರೂ ಕೈಕೊಳ್ಳಬೇಕೆಂ'ದು ಸೂಚಿಸಿದರು. ಈ ಸಮಾರಂಭಕ್ಕೆ ಟೀಪಾರ್ಟಿಯ ವ್ಯವಸ್ಥೆಯನ್ನು ಮಂಗಳೂರಿನ ತಾಜಮಹಲ್ ಹೋಟೆಲಿನವರಿಂದ ಮಾಡಿಸಿದ್ದನ್ನು ನೋಡುವಾಗ ಕೊಡಗಿನ ಉದ್ಯಮಗಳಿಗೆ ಚೀಫ್ ಕಮಿಷನರು ಆಶಿಸಿದಂತೆ ಸಹಾಯ ದೊರೆಯುವದೋ ಎಂಬುವದು ಸಂಶಯದ ಮಾತು. ಏಕೆಂದರೆ ಜಾಯಿಂಟ್ ಸ್ಟಾಕ್ ಬ್ಯಾಂಕುಗಳು ಸಹಕಾರ ಬ್ಯಾಂಕುಗಳಂತಲ್ಲ. ಆ ಬ್ಯಾಂಕುಗಳ ಉದ್ದೇಶ ಲಾಭ ಸಂಪಾದನೆ. ಲಾಭ ದೊರೆಯುವ ಭರವಸೆ ಇದ್ದರೆ ಆ ಬಾಬಿಗೆ ಹಣ ಹರಿಯುವದು. ಕೆನರಾ ಬ್ಯಾಂಕು ಕಡಿಮೆ ಬಡ್ಡಿಯಲ್ಲಿ ರೈತರಿಗೆ ಚೀಫ್ ಕಮಿಷನರ ಆಶಯದಂತೆ ಹಣ ಸಾಲ ಒದಗಿಸುವದು ಸಾಧ್ಯವೋ ತಿಳಿಯದು. ಹೇಗೂ ಬ್ಯಾಂಕು ದಕ್ಷತೆಯಿಂದ ಕೆಲಸ ಮಾಡಿ ನಂಬಿಕೆಗೆ ಅರ್ಹವಾಗಿದೆ.

ಅದು ಎಂಥಾ ಬ್ಯಾಂಕೇ ಆಗಿರಲಿ, ಹೇಗಿದ್ದರೂ ಬ್ಯಾಂಕಿನ ಹೊಸ ಕಟ್ಟಡ ತೆರೆಯುವ ಸಮಾರಂಭವು ಒಂದು ಖಾಸಗಿ ಕೆಲಸವೆಂಬುದನ್ನು ಎಲ್ಲರೂ ಒಪ್ಪಲೇಬೇಕು. ಆದರೆ ಕೆನರಾ ಬ್ಯಾಂಕಿನ ಹೊಸ ಕಟ್ಟಡ ತೆರೆಯುವ ಸಮಾರಂಭದ ದಿನ ಮಧ್ಯಾಹ್ನದ ವರೆಗೆ ಸರಕಾರಿ ಕಛೇರಿಗಳಲ್ಲಿ ಕೆಲಸ ತಟಸ್ಥವಾಗಿತ್ತೆಂದರೆ ಉತ್ಪ್ರೇಕ್ಷೆಯಾಗಲಾರದು. ಈ ಸಮಾರಂಭಕ್ಕೆ ಚೀಫ್ ಕಮಿಷನರು, ಮಂತ್ರಿಗಳು, ಸ್ಪೀಕರುಗಳು, ಸೆಕ್ರೆಟರಿಗಳು, ಗಜೆಟೆಡ್ ಉದ್ಯೋಗಸ್ಥರು, ಪಾರುಪತ್ತೆಗಾರರಾದಿಯಾಗಿ ಹೋದದ್ದಲ್ಲದೆ ಸಮಾರಂಭಕ್ಕೆ ಹೋಗಲು ಇಷ್ಟವಿರುವ ಎಲ್ಲಾ ಸರಕಾರಿ ನೌಕರರು ಹೋಗಬಹುದೆಂದು ವಿಧಿಸಲಾಗಿತ್ತಂತೆ. ಪರಿಣಾಮವಾಗಿ ಆ ದಿನ ಮಡಿಕೇರಿಗೆ ಕೊಡಗಿನ ವಿವಿಧ ಭಾಗಗಳಿಂದ ಕೆಲಸಕ್ಕಾಗಿ ಬಂದ ಜನರು ನಿರಾಶರಾಗಿ ಹಿಂತಿರುಗಬೇಕಾಯಿತು. ಅದು ಶನಿವಾರವಾದ ಕಾರಣ ಮಧ್ಯಾಹ್ನ ೧-೩೦ ರ ವರೆಗೆ ಮಾತ್ರ ಕಛೇರಿ. ಇದು ಸರಿಯೇ? ಒಂದು ಖಾಸಗಿ ಬ್ಯಾಂಕ್ ಕಟ್ಟಡ ತೆರೆಯುವ ಸಮಾರಂಭವು ಇಡೀ ಸರಕಾರವೇ ಹೋಗಿ ಭಾಗವಹಿಸುವಷ್ಟು ಮಹತ್ವದ್ದಲ್ಲವೆಂದು ಎಲ್ಲರೂ ಒಪ್ಪತಕ್ಕ ವಿಷಯವಾಗಿದೆ. ಆದರೂ ಅಂದಿನ ಪರಿಸ್ಥಿತಿ ಹಾಗಾಗಿದೆ. ಸರಕಾರದ ಪ್ರತಿನಿಧಿಗಳು ಭಾಗವಹಿಸುವದು ಅನಿವಾರ್ಯವೆಂದಾದರೆ ಚೀಫ್ ಕಮಿಷನರು, ಸ್ಪೀಕರು ಮಂತ್ರಿಗಳು ಹೋಗಿ ಉಳಿದವರು ಆಫೀಸು ಕೆಲಸಕ್ಕೆ ತೊಂದರೆ ಇಲ್ಲದೆ ಮಾಡಲಾಗುತ್ತಿರಲಿಲ್ಲವೇ? ಇನ್ನಾದರೂ ಈ ರೀತಿ ಖಾಸಗಿ ಕೆಲಸಗಳಿಗಾಗಿ ಖಚೇರಿ ಕೆಲಸ ತಟಸ್ಥವಾಗದಂತೆ ಎಚ್ಚರಿಕೆ ವಹಿಸಬೇಕು.

ನಾಗರಿಕ.

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಚಿಕ್ಕ ಮಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ—ನಾಲಿಯಾನ ಶೇಕಡ 3

7 ರಿಂದ 12 ತಿಂಗಳುಗಳ ವರೆಗೆ—ನಾಲಿಯಾನ ಶೇಕಡ $3\frac{1}{4}$

ಸಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

ವಿದ್ಯಾ ಮಂತ್ರಿಗಳು ಇತ್ತ ಗಮನಿಸಬೇಕು

ಕೊಡಗಿನ ಜಿಲ್ಲಾ ಬೋರ್ಡ ಶಾಲೆಗಳನ್ನೆಲ್ಲಾ ಸರಕಾರದ ಅಧೀನಕ್ಕೆ ತೆಗೆದುಕೊಂಡುದು ಕೊಡಗಿನ ವಿದ್ಯಾ ಚರಿತ್ರೆಯಲ್ಲಿ ಪ್ರಾಮುಖ್ಯವಾದೊಂದು ಘಟನೆ. ಅದರಂತೆ ಕೇವಲ ಯೋಗ್ಯ ಮತ್ತು ದಕ್ಷ ಅಧ್ಯಾಪಕರನ್ನು ಮಾತ್ರ ನೇಮಿಸುವ ಸದುದ್ದೇಶದಿಂದ ತರಬೇತಾಗದಿರುವ ಅಧ್ಯಾಪಕರನ್ನೆಲ್ಲಾ ಪರಿಶೀಲಿಸಿ ತಕ್ಕವರನ್ನು ಮಾತ್ರ ಇಟ್ಟುಕೊಳ್ಳುವ ಏರ್ಪಾಡೂ ಉತ್ತಮವಾದುದೆ. ಆದರೆ ಈಗಿನ ಹೊಸ ಸ್ಟಾಂಡರ್ಡಿನ ಮೇರೆ ಒಬ್ಬ ಅಧ್ಯಾಪಕನಿಗೆ ಮೆಟ್ರಿಕ್ಯುಲೇಶನ್ ದರದ ವೇತನ ದೊರೆಯಬೇಕಾದರೆ ಆತನು ಸ್ಕೂಲ್ ಫೈನಲ್ ಪರೀಕ್ಷೆಯ ಪ್ರತಿ ವಿಷಯಗಳಲ್ಲಿ ಶೇಕಡ ೪೦ ಕ್ಕಿಂಥಾ ಹೆಚ್ಚು ಗುಣ (ಮಾರ್ಕ್ಸ್)ಗಳನ್ನು ತೆಗೆದಿರಬೇಕು ಇಲ್ಲವೇ ಇಂಟರ್ ಮೀಡಿಯೇಟ್ ಪಾಸು ಮಾಡಿರಬೇಕು ಎಂದು ವಿಧಿಸಿರುವದು ಅಧ್ಯಾಪಕ ವರ್ಗಕ್ಕೆ ನ್ಯಾಯ ದೊರಕಿಸುವಂತಿಲ್ಲ. (40% of the Marks in each of the subjects offered for the S. S. L. C. examination or a pass in the Intermediate examination) ಈ ನಿಯಮದ ಮೇರೆ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಒಂದೆರಡು ವಿಷಯಗಳಲ್ಲಿ ನೂರಕ್ಕೆ ೪೦ ಕ್ಕಿಂಥಾ ಕಡಿಮೆ ತೆಗೆದು ತೇರ್ಗಡೆಯಾದವನಿಗೆ ಸೆಕೆಂಡ್ರಿಗ್ರೇಡ್ ದೊರೆಯಲಾರದು. ಇದು ನಿಜವಾಗಿಯೂ ಸಮರ್ಪಕವಲ್ಲ. ಏಕೆಂದರೆ ಎಂಥಾ ಚುರುಕಿರುವವರಾದರೂ ಎಲ್ಲಾ ವಿಷಯಗಳಲ್ಲೂ ನೂರಕ್ಕೆ ೪೦ ಕ್ಕಿಂಥಾ ಹೆಚ್ಚು ಮಾರ್ಕು ತೆಗೆದು ತೇರ್ಗಡೆಯಾಗಲಾರರು. ಈ ನಿಯಮವನ್ನು ಖಡ್ಡಾಯವಾಗಿ ಜಾರಿಗೆ ತಂದರೆ ಸ್ಕೂಲ್ ಫೈನಲ್ ಪಾಸಾದ ನೂರಕ್ಕೆ ೯೦ ಜನರಿಗೆ ಸೆಕೆಂಡ್ರಿಗ್ರೇಡ್ ದೊರೆಯಲಾರದು. ಆದ್ದರಿಂದ ವಿದ್ಯಾಮಂತ್ರಿಗಳು ಈ ವಿಚಾರವನ್ನು ಗಮನಿಸಿ ಕಾಲೇಜು ವಿದ್ಯಾಭ್ಯಾಸಕ್ಕೆ ಯೋಗ್ಯತೆ ಪಡೆದಿರುವವರೆಲ್ಲರಿಗೂ ಸೆಕೆಂಡ್ರಿಗ್ರೇಡ್ ದೊರೆಯುವಂತೆ ಮಾಡಬೇಕಾಗಿ ಪ್ರಾರ್ಥನೆ. ಇಲ್ಲದಿದ್ದರೆ ಅಧ್ಯಾಪಕ ವರ್ಗಕ್ಕೆ ತುಂಬಾ ತೊಂದರೆಯಾಗುವದರಲ್ಲಿ ಸಂಶಯವಿಲ್ಲ.

'ನಿರೀಕ್ಷಕ'

ಮಡಿಕೇರಿ ಮುನ್ಸಿಪಾಲಿಟಿ

ಸ್ವತಂತ್ರವಾಗಿ ಚುನಾವಣೆಗೆ ನಿಂತು ಮತದಾರರನ್ನು ಕೇಳದೆ ಕಾಂಗ್ರೆಸಿಗೆ ಸ್ವತಾಂತರವಾದ ಮುನ್ಸಿಪಲ್ ಸಮಿತಿಯವರ ಆಡಳಿತದಿಂದ ಹಲವು ತೊಂದರೆಗಳಿವೆ. ಮಡಿಕೇರಿಯ ಬೀದಿಗಳಿಗೆ ರಾತ್ರೆ ದೀಪಗಳು ಸರಿಯಾಗಿರುವದಿಲ್ಲ. ಇದ್ದರೂ ಮಿಣುಕು ದೀಪಗಳು. ಮಡಿಕೇರಿಯಲ್ಲಿ ವಿದ್ಯುಚ್ಛಕ್ತಿ ಇದೆಯೆಂದರೂ ರಾತ್ರೆ ಓದುವ

ದು ದೂರದ ಮಾತಾಗಿದೆ. ಈ ವಿಚಾರವಾಗಿ ಜನರು ಕೂಗಿಕೊಳ್ಳುತ್ತಿದ್ದರೂ ಪುರಸಭೆಯವರು ಗಮನವಿತ್ತಂತೆ ತೋರುವದಿಲ್ಲ.

ಕೆಲವು ತಿಂಗಳುಗಳಿಂದ ಮಡಿಕೇರಿಯಲ್ಲಿ ಕುಡಿಯುವ ನೀರಿನ ತೊಂದರೆ ಇದ್ದರೂ ಹೇಗೋ ಹಾಗೆ ಸುಧಾರಿಸಿಕೊಳ್ಳುತ್ತಿದ್ದೆವು. ಆದರೆ ಈಗ ಪರಿಸ್ಥಿತಿ ವಿಪರೀತಕ್ಕೆ ಬಂದಿದೆ. ಪೇಟೆಯ ನಳ್ಳಿಗಳಲ್ಲಿ ಮಧ್ಯರಾತ್ರಿಯ ವರೆಗೂ ನೀರಿರುವದಿಲ್ಲ. ನಂತರ ಬಂದರೂ ಒಂದೆರಡು ಗಂಟೆಗಳ ವರೆಗೆ ಒಂದೊಂದು ನಳ್ಳಿಯಲ್ಲಿ ಮಾತ್ರ ಅದರ ಹತ್ತು ಬಿಂದಿಗೆಗಳವ ಪ್ರಯುಕ್ತ ಎಲ್ಲರಿಗೂ ನೀರು ದೊರೆಯುವದಿಲ್ಲ. ಇತ್ತಲಾಗಿ ೧೫ ದಿನಗಳಿಂದ ನೀರೇ ಇಲ್ಲ. ಈ ತೊಂದರೆಯ ಅನುಭವ ಈ ವರ್ಷ ಹೊಸದಲ್ಲ. ಹಲವು ವರ್ಷಗಳಿಂದ ಇದ್ದರೂ ಪುರಸಭೆಯವರು ಈ ವಿಚಾರದಲ್ಲಿ ಗಮನವೀಯದೆ ಕರ್ತವ್ಯ ಮರೆತಂತೆ ಕುಳಿತಿರುವರು.

ಪೇಟೆಯ ಹಲವು ಕಡೆ ರಸ್ತೆಗಳು ಚೆನ್ನಾಗಿಲ್ಲದೆ, ಚರಂಡಿಗಳಲ್ಲಿ ದುರ್ವಾಸನೆ ಮೊದಲಾದವು ತುಂಬಿದ್ದರೂ ಮುನ್ಸಿಪಲ್ ಸಮಿತಿಯ ಸದಸ್ಯರ ಮನೆಯ ಹತ್ತಿರದ ಚರಂಡಿಗಳಿಗೆ ಕಲ್ಲು, ದಸ್ತು ರಿಪೇರಿ ಮೊದಲಾದ ಕೆಲಸ ಚೆನ್ನಾಗಿ ನಡೆದಿದೆ, ನಡೆಯುತ್ತಿದೆ. ಮಡಿಕೇರಿಯ ಮಾಂಸದಂಗಡಿಯ ಅವ್ಯವಸ್ಥೆಯನ್ನು ಕಂಡು ಜನರಲ್ ಕಾರ್ಯಪ್ಪನವರು ಸ್ಪಷ್ಟ ಸೂಚಿಸಿ ಕೆಲವು ಬದಲಾವಣೆ ಸೂಚಿಸಿದ್ದರೂ ನಂತರ ಅಲ್ಲಿಂದ ಮಾಂಸ ತೆಗೆಯುವದನ್ನೇ ನಿಲ್ಲಿಸಿದ್ದರೂ ಅದನ್ನು ಅಭಿವೃದ್ಧಿಪಡಿಸುವ ಕೆಲಸ ನಡೆದಂತೆ ತೋರುವದಿಲ್ಲ.

ಮುನ್ಸಿಪಾಲಿಟಿಯಲ್ಲಿ ಆಗಬೇಕಾದ ಯಾವುದೇ ಕೆಲಸವಾದರೂ ಕೆಂಟ್ರಾಕ್ಟರುಗಳಿಂದ ಟೆಂಡರು ಆಹ್ವಾನಿಸಿ ನಂತರ ಯೋಗ್ಯರಿಗೆ ಕೊಡಬೇಕಾದುದು ಅವಶ್ಯ. ಆದರೆ ಮಡಿಕೇರಿ ಮುನ್ಸಿಪಾಲಿಟಿಯಲ್ಲಿ ಈ ರೀತಿ ಆಗುತ್ತಿಲ್ಲವೆಂಬುದು ಸರ್ವರ ಅವಗಾಹನೆಗೆ ಬಂದಿರಬೇಕು.. ಮುನ್ಸಿಪಾಲಿಟಿಯವರು ಕೈಕೊಂಡಿರುವ ಕಟ್ಟಡ ಒಂದಕ್ಕೆ ಸಿಮೆಂಟು ಒದಗಿಸಲು ಒಬ್ಬರಿಗೆ ಪರ್ಮಿಟ್ ಕೊಟ್ಟು ಅವರು ಆ ಪೈಕಿ ಸುಮಾರು ೪೬೦ ಚೀಲ ಸಿಮೆಂಟನ್ನು ಬೇರೆಡೆ ಮಾರಿಕೊಂಡಿರುವರೆಂದೂ, ವಿಚಾರಿಸಿದರೆ ವೇಗನ್ ಬಂದಿಲ್ಲವೆಂದು ಹೇಳಿದರೆಂದೂ ವರ್ತಮಾನವಿದೆ. ಸಿಮೆಂಟ್ ದೊರೆಯದೆ ಕಟ್ಟಡ ಕೆಲಸವು ತಟಸ್ಥವಾಗುವ ಸಮಯ ಬಂದಿದೆ. ಪುರಸಭೆಯವರು ಈ ವಿಚಾರದಲ್ಲಿ ಏನು ಮಾಡಿರುವರು ?

ಮುನ್ಸಿಪಲ್ ಸಮಿತಿಯವರು ಹೊರಗಿನಿಂದ ಬಂದ ಮಹನೀಯರಿಗೆ ಸ್ವಾಗತವಿತ್ತು ಬಿನ್ನವತ್ತಳೆ ಕೊಟ್ಟು ನಮ್ಮ ಚೇರ್ಮನ್ನರು ಹೀಗೆ, ಮಂತ್ರಿಗಳು ಹಾಗೆ ಎಂದು ಹೊಗಳಿಕೊಂಡರೆ ಸಾಲದು. ತಮ್ಮ ಪಾಲಿನ ಕರ್ತವ್ಯ ದಕ್ಷತೆಯಿಂದ ನಡೆಸಬೇಕು. ಪುರಸಭೆಯವರು ಪುರಜನರಿಗೆ ಸರಿಯಾದ ನೀರು, ಬೆಳಕು, ಆರೋಗ್ಯಕರ ಆಹಾರಗಳನ್ನು ಒದಗಿಸುವದನ್ನು ಪ್ರಥಮ ಕರ್ತವ್ಯವೆಂದು ತಿಳಿಯಬೇಡವೇ?

ಕೆ. ಕೆ. ತಿಮ್ಮಯ್ಯ.

೩೮೫೦ ಎಕರೆ ಭೂಮಿ ಸಂಗ್ರಹಿಸಿದರು. ಹೈದ್ರಾಬಾದಿನಲ್ಲಿ ಜೈಪ್ರಕಾಶರ ಯಶಸ್ವಿ ಪ್ರವಾಸ.

ಪ್ರಜಾ ಸೋಷಲಿಸ್ಟ್ ಮುಖಂಡರಾದ ಶ್ರೀ. ಜೈಪ್ರಕಾಶ್ ನಾರಾಯಣ್‌ರವರು ಹೈದರಾಬಾದ್ ಸಂಸ್ಥಾನದ ಮಹಬೂಬ್ ನಗರ ಜಿಲ್ಲೆಯಲ್ಲಿ ಎಂಟು ದಿನಗಳು ನಡೆಸಿದ ಭೂದಾನ ಯಜ್ಞ ಪ್ರಚಾರ ಪ್ರವಾಸ ಕಾಲದಲ್ಲಿ ೩,೮೫೦ ಎಕರೆ ಭೂಮಿ, ೩,೯೦೦ ರೂಪಾಯಿ ನಗದು, ೭೦ ಎತ್ತುಗಳು, ೫೦೦ ನಾನಾ ವ್ಯವಸಾಯ ಉಪಕರಣಗಳನ್ನು ದಾನವಾಗಿ ಪಡೆದಿದ್ದಾರೆ.

ಇವೆಲ್ಲವನ್ನೂ ಅವರು ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ಕೊಡುವರು. ಶ್ರೀ ಜೈಪ್ರಕಾಶರು ತಾ. ೧೬ ರಲ್ಲಿ ಹೈದರಾಬಾದಿಗೆ ಹಿಂತಿರುಗಿದರು.

ಈ ಪ್ರವಾಸ ಕಾಲದಲ್ಲಿ ಶ್ರೀ. ಜೈಪ್ರಕಾಶರು ೩೫೦ ಮೈಲಿ ಪ್ರದೇಶದಲ್ಲಿ ಕಾರಿನಲ್ಲೂ ಕಾಲ್ನಡಿಗೆಯಲ್ಲೂ ಪ್ರವಾಸ ಮಾಡಿದರು. ೫೦ ಗ್ರಾಮಗಳಿಗವರು ಭೇಟಿ ಕೊಟ್ಟಿದ್ದರಲ್ಲದೆ ೩೦ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿದರು. ಪ್ರವಾಸದಲ್ಲಿ ಅವರ ಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರೂ ಭಾಗವಹಿಸಿದ್ದರು.

ಹೈದರಾಬಾದ್ ಸಂಸ್ಥಾನದಲ್ಲಿ ಇದುವರೆಗೆ ದಾನ ಕೊಡಲ್ಪಟ್ಟಿರುವ ಭೂಮಿಯ ಒಟ್ಟು ವಿಸ್ತಾರ ೫೨,೦೦೦ ಎಕರೆಗಳು. ಸಂಸ್ಥಾನದಲ್ಲಿ ಒಟ್ಟು ೧ ಲಕ್ಷ ೫೦ ಸಾವಿರ ಎಕರೆ ಜಮೀನು ಸಂಗ್ರಹಿಸಲು ಯೋಚಿಸಲಾಗಿದೆ.

ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು

ಭಾರತ ರಾಜಕೀಯದಲ್ಲಿ ಮದರಾಸಿನ ರಾಜಗೋಪಾಲಾಚಾರಿಯವರ ವ್ಯಕ್ತಿತ್ವವು ವರ್ಣರಂಜಿತವಾದುದು. ಎಣೆಯಿಲ್ಲದ ಮೇಧಾವಿಗಳೆನಿಸಿದ ಇವರು ೧೯೫೨ ರಲ್ಲಿ ಮದ್ರಾಸು ಪ್ರಾಂತದ ಮುಖ್ಯ ಮಂತ್ರಿಯಾಗಿ ಅಧಿಕಾರಗ್ರಹಣ ಮಾಡಿದ ನಂತರ ಇಂದಿನ ವರೆಗೂ ಆಶ್ಚರ್ಯಕರ ರೀತಿಯಲ್ಲಿ ಸರ್ವರಿಂದ ಹೊಗಳಿಸಿಕೊಂಡು ಕೆಲಸ ಮಾಡುತ್ತಿರುವರು. ೧೯೩೭ರ ಕಾಲಕ್ಕೆ ರಾಜಾಜಿಯವರ ಮುಂದಾಳ್ತನದಲ್ಲಿ ಮದರಾಸು ಪ್ರಾಂತವು ಹಿಂದೂದೇಶದ ಇತರ ಪ್ರಾಂತಗಳಿಗೆ ಆದರ್ಶವಾಗಿತ್ತು. ಸ್ವಾತಂತ್ರ್ಯದ ನಂತರ ಅವರು ಪಶ್ಚಿಮ ಬಂಗಾಳದ ಗವರ್ನರರಾಗಿ, ಹಿಂದೂದೇಶದ ಗವರ್ನರ್ ಜನರಲರಾಗಿ ಕೀರ್ತಿ ಗಳಿಸಿದರು. ೭೪ ವಯಸ್ಸಿನ ಇವರು ನಿವೃತ್ತರಾಗಿ ಮದ್ರಾಸಿಗೆ ಬಂದರೂ ಅವರಿಗೆ ಬಿಡುವಿಲ್ಲದಾಯಿತು. ಕಮ್ಯೂನಿಸ್ಟರ ಕಾರ್ಯಕ್ರಮದ ಪ್ರಚಾರಗಳಿಂದ ತನ್ನ ಹಿಡಿತವನ್ನು ಕಳೆದುಕೊಂಡಿದ್ದ ಕಾಂಗ್ರೆಸ್ಸನ್ನು ಮೇಲೆತ್ತಲು ಮದ್ರಾಸು ಪ್ರಾಂತದ ಮುಖ್ಯ ಮಂತ್ರಿಗಳಾಗಬೇಕಾಯಿತು. ಇಂದು ಅವರು ಸರ್ವರಿಂದಲೂ ಹೊಗಳಿಸಿಕೊಂಡು ಕಿತ್ತಾಟದ ಕಣವಾಗಿದ್ದ ಪ್ರಾಂತದಲ್ಲಿ ದಕ್ಷ ಆಡಳಿತೆಯನ್ನು ನೆಲೆಗೊಳಿಸಿದ್ದಾರೆ. ಮೊನ್ನೆಯಾಗಿ ತಿರುಚಿನಾಪಳ್ಳಿಯಲ್ಲಿ ಅವರು ಸಾರ್ವಜನಿಕ ಸಭೆಯೊಂದರಲ್ಲಿ ಆಡಿದ ಮಾತುಗಳು ಚಿರಸ್ಮರಣೀಯವಿವೆ. "ನನಗೆ ವಯಸ್ಸಾಗುತ್ತಿದೆ. ನಾನು ಬಹುಕಾಲ ಬದುಕಲಾರೆ. ಆದರೆ ನಾನು ಇಂದು ಕಾಣುತ್ತಿರುವ ಕನಸು, [illegible]. ಅದು ಇನ್ನು ಹುಟ್ಟುವ ಭವಿಷ್ಯದ ಸಾವಿರ ಸಂತಾನಕ್ಕಾಗಿ. ನನ್ನ ಹೊಸ ವಿದ್ಯಾ ಯೋಜನೆಯ [illegible]. [illegible] ನನ್ನ ಸಮಾಧಿಯ ಮೇಲೆ ಅವರು ಚೆಲ್ಲುವ [illegible]ದೆ. ಆದರೆ ಈ ಯೋಜನೆಗಳಿಗೆ ಸಹಕಾರ ಬೇಕು. ತಪ್ಪುಗಳನ್ನು ಎತ್ತಿ ಹೇಳಿ ಸರಿಪಡಿಸಬೇಕು. [illegible] ಜವಾಬ್ದಾರಿಯಲ್ಲ. ಅದು ನಾಗರಿಕರೆಲ್ಲರ ಜವಾಬ್ದಾರಿ."

ಜೇನು ವ್ಯವಸಾಯ [illegible] ಯೋಜನೆಯಲ್ಲಿ

ಪಂಚವಾರ್ಷಿಕ ಯೋಜನೆಯ ಸಿದ್ಧಯದಲ್ಲಿ 9 (xxiv) ಭಾಗ—ಜೇನು ವ್ಯವಸಾಯ - ಜೇನು ವ್ಯವಸಾಯವು ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಹೊಂದಿರುವ ಪ್ರಾಂತ್ಯಗಳ ಪೈಕಿ ಮದರಾಸು, ಮುಂಬಯಿ, ಉತ್ತರ ಪ್ರದೇಶ, ಪಂಜಾಬು, ಮೈಸೂರು, ತಿರುವಾಂಕೂರು-ಕೊಚ್ಚಿ ಮತ್ತು ಕೊಡಗು ಇವುಗಳನ್ನು ಆರಿಸಿ ಈ ಪ್ರಾಂತಗಳಲ್ಲಿ ಜೇನು ಕೈಗಾರಿಕೆಯನ್ನು ಶೀಘ್ರ ಅಭಿವೃದ್ಧಿ ಮಾಡುವರೆ ತಕ್ಕ ಕ್ರಮ ಜರುಗಿಸಲಾಗುವದೆಂದು ಸೂಚಿಸಲಾಗಿದೆ. ಮೇಲ್ಕಂಡ ಪ್ರಾಂತಗಳಲ್ಲಿ ೨೦ರಿಂದ ೩೦ ಗ್ರಾಮಗಳಿಗೊಂದರಂತೆ ಒಂದೊಂದು ಜೇನಿನ ಉಪಕ್ಷೇತ್ರವನ್ನು ತೆರೆದು ಅವುಗಳ ಮೂಲಕ ಜೇನು ಕೃಷಿಕರನ್ನೂ, ಈ ಕೃಷಿಯ ಕೆಲಸಗಾರರನ್ನೂ ತರಬೇತು ಮಾಡುವದು; ಜೇನು ಗೂಡುಗಳನ್ನೂ ಜೇನು ತೆಗೆಯುವ ಯಂತ್ರವೇ ಮೊದಲಾದ ಈ ಕೃಷಿಗೆ ಅವಶ್ಯವಿರುವ ಇತರ ಉಪಕರಣಗಳನ್ನೂ ಜೇನು ಕೃಷಿಕರಿಗೆ ಅಸಲು ಕ್ರಯಕ್ಕೆ ಒದಗಿಸಿ ಕೊಡುವುದು ಮತ್ತು ಹೀಗೆ ಜೇನು ಕೃಷಿಕರಲ್ಲಿ ಸಂಗ್ರಹವಾದ ಉತ್ತಮ ಜೇನು ತುಪ್ಪವನ್ನು ಕೊಂಡು ಮಾರಲು ಜೇನು ಸಾಕುವವರ ಸಹಕಾರ ಸಂಘ ನಿರ್ಮಾಣ ಮಾಡುವದು—ಇವೇ ಮೊದಲಾದ ಕಾರ್ಯಗಳನ್ನು ಕೈಕೊಳ್ಳಲಾಗುವುದೆಂದು ನಮೂದಿಸಿದೆ.

ಕೆನರಾ ಬ್ಯಾಂಕಿನ ನೂತನ ಕಟ್ಟಡದ ಉದ್ಘಾಟನೋತ್ಸವ.

ಕೆನರ ಬ್ಯಾಂಕಿಂಗ್ ಕಾರ್ಪೊರೇಶನಿನವರು ಮಡಿಕೇರಿಯಲ್ಲಿ ಸುಮಾರು ೬೦,೦೦೦ ರೂಪಾಯಿ ಖರ್ಚಿನಿಂದ ಕಟ್ಟಿಸಿದ ಕಟ್ಟಡ ಮತ್ತು ೧೫ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಏರ್ಪಡಿಸಿರುವ ಸುರಕ್ಷಿತ ಡಿಪಾಜಿಟ್ ವಾಲ್ಟುಗಳನ್ನು ತೆರೆಯುವ ಸಮಾರಂಭವು ತಾ. ೧೬ರಲ್ಲಿ ಕೊಡಗಿನ ಮುಖ್ಯ ಮಂತ್ರಿ ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೆಳಗ್ಗೆ ೧೦ ಗಂಟೆಗೆ ಪ್ರಾರ್ಥನೆಯ ನಂತರ ನೆರೆದವರಿಗೆ ಟೀ ಪಾರ್ಟಿ ಆಯಿತು. ಬ್ಯಾಂಕಿನ ಡೈರೆಕ್ಟರುಗಳಾದ ಡಾ. [illegible]ರವರು ಮತ್ತು [illegible] ಬಾಳಿಗರವರು ಸ್ವಾಗತ ಭಾಷಣ ಮಾಡಿದರು. ಶ್ರೀ ಬಾಳಿಗರವರು ಕೊಡಗಿನ ಆಡಳಿತ ದಕ್ಷತೆಯನ್ನು ಪ್ರಶಂಸಿಸಿದರು. ತಾನು ಕೇವಲ ಒಂದು ವ್ಯಾಪಾರೀ ಸಂಸ್ಥೆಯ ಪ್ರತಿನಿಧಿಯೆಂದೂ ರಾಜಕೀಯ ತನ್ನ ಕ್ಷೇತ್ರವಲ್ಲವೆಂದೂ ಹೇಳಿದರು. ಬ್ಯಾಂಕಿನ ಅಧ್ಯಕ್ಷರಾದ ಡಾ. ಸುಂದರರಾಯರು ಕೆನರಾ ಬ್ಯಾಂಕಿನ ಕಾರ್ಯಕಲಾಪ ಮತ್ತು ಚರಿತ್ರೆಯನ್ನು ವಿವರಿಸಿದರು.

ಚೀಫ್ ಕಮಿಷನರು ಕಟ್ಟಡದ ಉದ್ಘಾಟನೆ ಮಾಡುತ್ತಾ ಸುಂದರ ಕಟ್ಟಡವನ್ನು ಪ್ರಶಂಸಿಸುತ್ತಲೆ, ಬ್ಯಾಂಕಿನ ದಕ್ಷ ಆಡಳಿತೆಯನ್ನೂ, ಸಿಬ್ಬಂದಿಗಳ ಸೌಜನ್ಯತೆಯನ್ನೂ ಹೊಗಳಿದರು. ಕೊಡಗಿನ ಗೃಹ ಮಂತ್ರಿ ಮಲ್ಲಪ್ಪನವರು ಸೇಫ್ ಡಿಪಾಜಿಟ್ ವಾಲ್ಟನ್ನು ತೆರೆದರು. ಕೊಡಗಿನ ನಿವೃತ್ತ ಚೀಫ್ ಕಮಿಷನರಾದ ಶ್ರೀ ಕೇಟೋಳಿರ ಚಂಗಪ್ಪನವರು ಮಾತಾಡುತ್ತಾ ತಾನು ಈ ಶಾಖೆಯನ್ನು ೧೯೩೪ರಲ್ಲಿ ತೆರೆದೆನೆಂದೂ, ಬ್ಯಾಂಕು ಪ್ರಗತಿ ಹೊಂದುತ್ತಿರುವದು ಸಂತೋಷಕರವೆಂದೂ ಹೇಳಿದರು.

ಕೊಡಗು ಶಾಸನ ಸಭೆಯ ಸ್ಪೀಕರರಾದ ಶ್ರೀ ಬಿ. ಎಸ್. ಕುಶಾಲಪ್ಪನವರು ಮಾತಾಡುತ್ತಾ ಬ್ಯಾಂಕಿನ ಬೋರ್ಡಿನಲ್ಲಿ ಎಲ್ಲಾ ವರ್ಗದ ಪ್ರತಿನಿಧಿಗಳಿರುವದು ಸಂತೋಷವೆಂದರು. ಶ್ರೀ ರಾಮಮೂರ್ತಿಯವರು ಬ್ಯಾಂಕಿನ ಕಾರ್ಯಕಲಾಪಗಳನ್ನು ಹೊಗಳಿದರು. ಅಧ್ಯಕ್ಷರು ಮಾತಾಡುತ್ತಾ ದೇಶದ ಮುಂದಿರುವ ಪಂಚವಾರ್ಷಿಕ ಯೋಜನೆಯು ಜಯಪ್ರದವಾಗಬೇಕಾದರೆ ಬ್ಯಾಂಕುಗಳು ತಮ್ಮ ಪಾಲಿನ ಸಹಕಾರವನ್ನೀಯಬೇಕೆಂದೂ ಅವುಗಳ ಪಾತ್ರ ಪ್ರಾಮುಖ್ಯವಾದುದೆಂದೂ, ಪ್ರತಿ ಮನುಷ್ಯನಲ್ಲಿಯೂ ಬ್ಯಾಂಕಿಂಗ್ ಮನೋವೃತ್ತಿ ಹೆಚ್ಚಬೇಕೆಂದೂ, ಕೆನರಾ ಬ್ಯಾಂಕು ಅನೇಕ ಎಡರು ತೊಡರುಗಳನ್ನು ಎದುರಿಸಿ ಭದ್ರ ತಳಹದಿಯಲ್ಲಿ ನಿಂತಿದೆಯೆಂದೂ ಹೇಳಿದರು. ಕಟ್ಟಡದ ಕಂಟ್ರಾಕ್ಟರಾದ ತಾಳಿತಾಯರಿಗೂ, ಸೇಫ್ಟಿ ವಾಲ್ಟಿನ ನಿರ್ಮಾಪಕರಾದ ನೆತ್ ಕಾರ್ಕಡರವರಿಗೂ, ಇಂಜಿನಿಯರಾದ ಶ್ರೀ ಕೆ. ಎ. ಮುದ್ದಯ್ಯನವರಿಗೂ ಸುವರ್ಣ ಪದಕಗಳನ್ನು ಕೊಟ್ಟಿದ್ದಲ್ಲದೆ ಇತರ ಕೆಲವು ಕೆಲಸಗಾರರಿಗೆ ಬಹುಮಾನ ಕೊಡಲಾಯಿತು.

ಬ್ಯಾಂಕಿನ ಡೆಪ್ಯೂಟಿ ಜನರಲ್ ಮೇನೇಜರಾದ ಶ್ರೀ ಕೆ. ಎಸ್. ಶೆಣೈಯವರು ವಂದನಾರ್ಪಣೆ ಮಾಡಿದ ನಂತರ ಜನಗಣಮನ ಗೀತೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ಸಾರದ ಕಥೆ.

ಭಿಕ್ಷುಕಿ

ಶ್ರೀ ಬಿ. ಸಾವಿತ್ರಾ ಬಾಳಿಗಾ. ಉಡುಪಿ

ಮಧ್ಯಾಹ್ನದ ಸುಡು ಬಿಸಿಲು ಸುಡುತ್ತಿತ್ತು. ಆಗ ಆರಾಮ ಕುರ್ಚಿಯನ್ನೊರಗಿ ನಾನೊಂದು ಕಥೆಯನ್ನೋದುತ್ತಿದ್ದೆ. ರಮೇಶರಾಯರು ಹತ್ತಿಯ ವ್ಯಾಪಾರ ಮಾಡುತ್ತಿದ್ದರು. ಒಂದು ದಿನ ಬಡ ಹುಡುಗನೊಬ್ಬ ಪಾರಾನ್ನವನ್ನು ಕೇಳಿಕೊಂಡು ಬಂದ. ದಯೆಯೆನಿಸಿ ಅವರು ಆತನನ್ನು ತಮ್ಮ ಮನೆಯಲ್ಲಿಯೇ ಇರಿಸಿ ಕೊಂಡರು. ಎರಡು ಮೂರು ವರುಷಗಳ ವರೆಗೆ ಆತ ಆ ಮನೆಯಲ್ಲಿಯೇ ಇದ್ದ. ಅನಂತರ ಹೆಚ್ಚಿನ ಶಿಕ್ಷಣಕ್ಕಾಗಿ ಬೇರೆ ಊರಿಗೆ ಹೊರಟು ಹೋದ. ಬಹಳಷ್ಟು ವರ್ಷಗಳ ನಂತರ ರಮೇಶರಾಯರಿಗೆ ವ್ಯಾಪಾರದಲ್ಲಿ ದೊಡ್ಡ ಪೆಟ್ಟು ಬಿತ್ತು. ಲಕ್ಷಾಧಿಪತಿಯಾಗಿದ್ದವರು ಒಮ್ಮೆಲೇ ಭಿಕ್ಷಾಧಿಪತಿಯಾದರು. ಮೂವರು ಹುಡುಗಿಯರು ಬೇರೆ ಬೆಳೆದು ನಿಂತಿದ್ದರು. ಚಿಂತೆಯಿಂದ ಹಾಸಿಗೆ ಹಿಡಿದರು. ಆಗ ಅವರಲ್ಲಿ ನಿಂತು ವಿದ್ಯೆ ಕಲಿತ ಹುಡುಗ ದೊಡ್ಡ ಹುದ್ದೆಯಲ್ಲಿದ್ದ. ಆತ ಕೂಡಲೇ ಇವರೆಡೆಗೆ ಧಾವಿಸಿ ಬಂದ. ಈ ಚಿಕ್ಕ ಪರಿವಾರವನ್ನು ತನ್ನ ಮನೆಗೆ ಕರೆದುಕೊಂಡು ಹೋದ. ಒಂದು ಕಾಸನ್ನೂ ವರದಕ್ಷಿಣೆಯಾಗಿ ಬೇಡದೆ ಹಿರಿಯ ಮಗಳನ್ನು ಮದುವೆಯಾದ. ಇನ್ನಿಬ್ಬರನ್ನು ಒಳ್ಳೆ ಮನೆತನಗಳಿಗೆ ಕೊಟ್ಟು ಮದುವೆ ಮಾಡಿದ. ಸುಕೃತ್ಯವು ಯಾವ ರೀತಿಯಲ್ಲಿ ಮಧುರ ಫಲವೀಯುವುದೆಂದು ಲೇಖಕರು ಮಾರ್ಮಿಕವಾಗಿ ಚಿತ್ರಿಸಿದ್ದರು. ಈ ಸುಂದರ ಕಥಾನಕದ ಬಗ್ಗೆ ಸಂತೋಷಗೊಳ್ಳುತ್ತಾ ಅದನ್ನೇ ಮೆಲುಕು ಹಾಕುತ್ತಿದ್ದೆ. ಇಷ್ಟರಲ್ಲಿ ಆವಾರೋ ಬಾಗಿಲಲ್ಲಿ ಧ್ವನಿಗೊಟ್ಟರು.

"ಅಮ್ಮಾ ಒಂದು ತುತ್ತು ಅನ್ನ ನೀಡಿ ತಾಯೀ"

ಧಟ್ಟನೆದ್ದು ಹೊರಬಂದು ನೋಡಿದರೆ ಹನ್ನೆರಡು ಹದಿಮೂರು ವರುಷದ ಬಾಲೆಯೊಬ್ಬಳು ಜೋಳಿಗೆಯನ್ನೆತ್ತಿಕೊಂಡು ನಿಂತಿದ್ದಳು. ಬಿಸಿಲಲ್ಲಿ ಅಲೆಯುತ್ತಿದ್ದುದರ ಪರಿಣಾಮವಾಗಿ ಮೈಬಣ್ಣ ಶ್ಯಾಮಲ ವರ್ಣಕ್ಕೆ ತಿರುಗಿತ್ತು. ಹೇಳಿಕೊಳ್ಳುವಂತಹ ರೂಪವೂ ಇಲ್ಲ. ಆದರೂ ಕಣ್ಣುಗಳಲ್ಲಿ ಆಕರ್ಷಣೆ ಇತ್ತು. ನಾನೆಂದೆ "ಇಷ್ಟು ಚಿಕ್ಕ ವಯಸ್ಸಿನಲ್ಲಿ ಭಿಕ್ಷೆ ಬೇಡುತ್ತಿಯಾ! ನಿನಗಾರೂ ಇಲ್ಲವೆ?"

"ನಾನು ವಂಗದೇಶದಾಕೆ ತಾಯಿ. ಮುಸಲ್ಮಾನರು ಮನೆಗೆ ಬೆಂಕಿಯನ್ನಿಟ್ಟರು. ತಂದೆ ತಾಯಿ ಬಹುಶಃ ಸುಟ್ಟುಹೋಗಿರಲೂ ಬಹುದು. ನಾನೂ ನನ್ನ ಚಿಕ್ಕ ತಮ್ಮನೂ ಜೀವದಾಸೆಯಿಂದ ಓಡಿ ಬಂದೆವು. ಒಂದು ವರುಷದ ಕೆಳಗೆ ಅವನು ಮರದ ಕೆಳಗೆ ಸತ್ತು ಹೋದ. ಮೂರು ದಿನಗಳಿಂದ ಅನ್ನವಿಲ್ಲ ತಾಯೀ."

ಮಧ್ಯಾಹ್ನದ ಊಟ ಆಗ ಸ್ವಲ್ಪ ಮಿಕ್ಕಿತ್ತು. ಆಕೆಗೆ ಊಟ ಬಡಿಸಿದೆ. ತನ್ನ ಪುಟ್ಟ ಕೈಯಿಂದ ಆಕೆ ದೊಡ್ಡ ದೊಡ್ಡ ತುತ್ತುಗಳನ್ನೆತ್ತಿ ಉಣ್ಣುತ್ತಿರುವಾಗ ನನಗೇನು ತೋರಿತೆಂದು ಸ್ಪಷ್ಟವಾಗಿ ಹೇಳಲಾರೆ. ಕಥೆಯನ್ನು ಓದಿ ಮುಗಿಸಿದ್ದರೂ ಅದರ ಅಮಲು ಇನ್ನೂ ಉಳಿದಿತ್ತು. ಮಮತೆಯಿಂದ ಕೇಳಿದೆ, "ಮಗೂ ನೀನು ನನ್ನ ಬಳಿ ನಿಲ್ಲುವೆಯಾ?" "ಆಕೆ—ನನ್ನನ್ನು ನಿಲ್ಲಿಸಿಕೊಳ್ಳುವಿರಾ? ನಿಮ್ಮ ಉಪಕಾರವನ್ನು ಹೇಗೆ ಸ್ಮರಿಸಲಿ ತಾಯಿ? ನನಗಾದರೂ ಯಾರು ಇರುವರು?"

ನನ್ನ ಭಾವನಿಗೆ ಪಂಜಾಬಿಗೆ ವರ್ಗವಾಗಿತ್ತು. ಅಷ್ಟು ದೂರ ಹೋಗುವ ಮುನ್ನ ನನ್ನ ಬಳಿ ನಾಲ್ಕು ದಿನ ನಿಲ್ಲುವೆನೆಂದು ಅಕ್ಕ ಮನೆಗೆ ಬಂದಿದ್ದಳು. ಈ ಸುದ್ದಿಯನ್ನು ಕೇಳಿದೊಡನೆಯೇ ನನ್ನನ್ನು ಜರೆದಳು. "ಭಿಕ್ಷುಕಿಯನ್ನು ಮನೆಯಲ್ಲಿಟ್ಟುಕೊಳ್ಳುವೆಯಾ? ಆಕೆಯ ಜಾತಿಯಾವುದು ?" ಎಂದು

ಏನಿಲ್ಲೆಂದರೂ ಕೆಲವು ಪುಸ್ತಕಗಳನ್ನೋದಿದ್ದೆ. ಬುದ್ಧಿಶಕ್ತಿಯನ್ನು ಕೊಂಚ ಅಹಂಕಾರವೂ ಆವರಿಸಿಕೊಂಡಿತ್ತು. ಇಂದು ಅಕ್ಕ ಬಾಯ್ತೆರೆದೊಡನೆಯೇ ಚಿಕ್ಕದೊಂದು ಉಪನ್ಯಾಸವನ್ನೇ ಕೊಟ್ಟುಬಿಟ್ಟೆ. 'ಭಿಕ್ಷುಕಿಯೆಂದು ಘೃಣಿತ ದೃಷ್ಟಿಯಿಂದಲೇ ಕಾಣುವೆ? ಆಕೆಯನ್ನು ನಿಲ್ಲಿಸಿಕೊಳ್ಳುವದರಿಂದ ಆಗುವ ಹಾನಿಯಾದರೂ ಏನು? ಜಾತಿಯನ್ನು ತೆಗೆದುಕೊಂಡು ಮಾಡುವದೇನು? ಪ್ರಪಂಚದಲ್ಲಿ ಮಾನವ ಜಾತಿಯೊಂದೇ ಇರುವದು. ನಾಲ್ಕು ಪುಸ್ತಕಗಳನ್ನೋದಿದರೆ ನಾಲ್ಕು ಜನರಲ್ಲಿ ಬೆರೆತುಕೊಂಡಿದ್ದರೆ, ಪ್ರಪಂಚ ಜ್ಞಾನದ ಅರಿವಾಗುವದು. ನಮ್ಮಂತಹ ಓದುಬರಹ ಬಲ್ಲವರೇ ದೀನ ದುಃಖಿಗಳ ಉದ್ಧಾರಕ್ಕೆ ಟೊಂಕ ಕಟ್ಟದಿದ್ದಲ್ಲಿ ಸ್ವತಂತ್ರ ಭಾರತದ ಗತಿ ಏನಾಗಬೇಕು? ...." ಇತ್ಯಾದಿ.

ಇಂದು ಆ ಘಟನೆಯನ್ನು ಎಣಿಸಿದ ಮಾತ್ರಕ್ಕೆ ಅಮಿತ ನಾಚಿಕೆಯಿಂದ ರೋಮ ರೋಮವೂ ಮುದುಡಿಕೊಳ್ಳುವದು. ಇಂದು ಆ ಅಹಂಕಾರ ಉಳಿದಿಲ್ಲ. ಬಲವಾಗಿ ಬೆಳೆದು ಸಗರ್ವದಿಂದ ತಲೆಯೆತ್ತಿ ನಿಂತ ವೃಕ್ಷಕ್ಕೆ ಯಾರೋ ಕೊಡಲಿ ಏಟನ್ನು ಕೊಟ್ಟರು.

ಮೂರು ದಿನ ಕಳೆದ ಮೇಲೆ ಅಕ್ಕ ಹೋದಳು. ಅವರು ಹೋದ ಸ್ವಲ್ಪ ಹೊತ್ತಿನ ನಂತರ ಮುತ್ತಿನ ಹಾರವನ್ನು ತೆಗೆದಿಟ್ಟು ನಾನು ಸ್ನಾನಕ್ಕೆ ಹೋದೆ. ಒಳಕ್ಕೆ ಬಂದಾಗ ನನ್ನ ಕೋಣೆಯ ಬಾಗಿಲು ತೆರೆದಿತ್ತು. ಹೆಚ್ಚಾಗಿ ಅಲ್ಲಿ ಯಾರೂ ಪ್ರವೇಶಿಸುತ್ತಿರಲಿಲ್ಲ. ಅಚ್ಚರಿಯಿಂದ ಒಳಬಂದು ನೋಡಿದರೆ ಮುತ್ತಿನ ಹಾರ ಕಾಣೆ! ನನ್ನ ಅತ್ಯಂತ ಮೆಚ್ಚಿನ ನೀಲಿ ಜಾರ್ಜೆಟ್ ಸೀರೆಯ ಪತ್ತೆಯೇ ಇಲ್ಲ! ಜೀವಕ್ಕಿಂತಲೂ ಪ್ರಿಯವಾಗಿದ್ದ ಪಾರ್ಕರ್ ಪೆನ್ನು ಮಾಯವಾಗಿದೆ. ದುಃಖ ಮತ್ತು ಆತ್ಮಗ್ಲಾನಿಯಿಂದ ನನಗೆ ಬವಳಿ ಬಂದಂತಾಯಿತು. ಏಕಾಂತದಲ್ಲಿ ಕುಳಿತು ಅವಮಾನಿತ ಕಂಬನಿಗಳನ್ನು ಸುರಿಸಿ ರೋಸಿ ಹೋದ ಮನಸ್ಸನ್ನು ಸಂತವಿಸಲೆತ್ನಿಸಿದೆ. ಮಧ್ಯಾಹ್ನ ಅತ್ತಿಗೆ ಕೇಳಿದರು. "ನಿನ್ನ ಸಾಕು ಮಗಳು ಊಟಕ್ಕೇಕೆ ಬರುವದಿಲ್ಲ?" ಮೊಗವನ್ನು ಮೇಲಕ್ಕೆತ್ತದೆಯೇ ನಾನು ಉತ್ತರಿಸಿದೆ. "ಅದೇಕೋ ಅವಳನ್ನು ಕಳುಹಿಸಿ ಕೊಟ್ಟೆ."

ಒಂದು ವರುಷದ ಅನಂತರದ ಸಂಗತಿಯಿದು. ಅಕ್ಕ ಮುಂಬಯಿಗೆ ಬಂದಿದ್ದಳು. ಮೇಲಿಂದ ಮೇಲೆ ಆಕೆಯಿಂದ ಪತ್ರ ಬರಲು ಬೇಸಿಗೆ ರಜೆಯಲ್ಲಿ ಮುಂಬಯಿಗೆ ಹೋದೆ. ಒಂದು ದಿನ ಸಾಯಂಕಾಲ ಬಾಬುಲ್‌ನಾಥ ಮಂದಿರದಿಂದ ಮನೆಗೆ ಬರುತಿದ್ದೆ. ಮಾಸಿದ ಚಿಂದಿಯನ್ನುಟ್ಟ ನಡುವಯಸ್ಸಿನ ಹೆಂಗಸೊಬ್ಬಳು ನೇರಾಗಿ ನನ್ನಿದಿರಿಗೆ ಬಂದು ನಿಂತು ನುಡಿದಳು. "ನನಗೊಂದಾಣೆ ಕೊಡು."

ಯಾವ ದಿನ ಬಂಗಾಳದ ಹುಡುಗಿ ನನಗೆ ೬೫೦ ರೂಪಾಯಿಗಳ ಮೋಸವನ್ನು ಕೊಟ್ಟಿದ್ದಳೋ ಅಂದಿನಿಂದ ನಾನು ಕೈಯೆತ್ತಿ ಯಾರಿಗೂ ಒಂದು ಕಾಸನ್ನು ದಾನ ಮಾಡಿರಲಿಲ್ಲ. ಕಾಸು ಕಾಸಿನ ಉಳಿತಾಯದಿಂದ ಜೀವನ ಮುಗಿಯುವದರೊಳಗೆ ೬೫೦ ರೂಪಾಯಿಗಳ ನಷ್ಟವನ್ನು ತುಂಬಬಹುದೆಂದು ಹುಚ್ಚು ಮನಸ್ಸು ಲೆಕ್ಕ ಹಾಕಿತ್ತೋ ಏನೋ!

'ಇಲ್ಲ' ಎಂದು ಗಡುಸಾಗಿ ನುಡಿದು ಮುಂದರಿದೆ. ಆಕೆ ಹಿಂದೆಯೇ ಬರುತ್ತಾ, "ಏ ಹುಡುಗಿ, ನಿನ್ನನ್ನು ಎಲ್ಲಿಯೋ ನೋಡಿದಂತೆನಿಸುತ್ತಿದೆ. ಎಲ್ಲಿ? ನೆನಪಾಗುವದಿಲ್ಲ" ಎಂದಳು.

ನಾನು ಸಿಟ್ಟಿನಿಂದ ಬೆಂಕಿಯಾದೆ. ಮಂದಿರದ ಬಳಿ ಹೆಚ್ಚು ಜನ ಸಂಚಾರವಿರಲಿಲ್ಲ. ಮುಂಬಯಿಯ ಬೀದಿಗಳು ನಿರ್ಜನವಾಗಿರುವದಂತೂ ಸಾಧ್ಯವೇ ಇಲ್ಲ. ಆದರೆ ನನ್ನವರೆಂದು ಹೇಳಲು ನನ್ನ ಬಳಿ ಯಾರೂ ಇರಲಿಲ್ಲ. ಭಾವನವರು ಆಫೀಸಿನಿಂದ ಬಂದಿರಲಿಲ್ಲವಾದ್ದರಿಂದ ಅಕ್ಕ ಮನೆಯಲ್ಲಿಯೇ ಉಳಿದಿದ್ದಳು. ಭಿಕ್ಷುಕಿಯ ಹುಚ್ಚು ಕಳೆಯನ್ನೂ ಉರಿವ ದೊಡ್ಡ ದೊಡ್ಡ ಕಣ್ಣುಗಳನ್ನೂ ನೋಡಿ ನನಗೇನೂ ಅಂಜಿಕೆಯಾಗಲಿಲ್ಲ. ಗಡಕ್ಕನೆ ನಿಂತು ಕಟುವಾಗಿ ನುಡಿದೆ. "ನೀನು ಸಾವಿರ ಜನರನ್ನು ಸಾವಿರ ಸ್ಥಳಗಳಲ್ಲಿ ನೋಡಿರಬಹುದು. ಅವುಗಳೆಲ್ಲದರ ನೆನಪು ಹುಟ್ಟಿಸಲು ನಾನು ಕೂತದಾಳು ಅಲ್ಲ. ನನ್ನ ಬಳಿ ನಿನಗೆ ಕೊಡಲು ದುಡ್ಡೂ ಇಲ್ಲ" ಇಷ್ಟು ಹೇಳಿ ನಾನು ವೇಗದಿಂದ ನಡೆಯ ತೊಡಗಿದೆ. ದುಡ್ಡನ್ನು ಬೇಡುತ್ತಾ ಆಕೆ ಹಿಂದಿನಿಂದ ಬರುವುದು ನನಗೆ ಕೇಳಿಸುತ್ತಿತ್ತು. ಗ್ರಾಂಟ್ ರೋಡಿಗೆ ಬಂದು ರೈಲು ಹತ್ತಿ ನಾನು ಮಾತುಂಗದ ನನ್ನ ಮನೆಯಲ್ಲಿಳಿದೆ. ಆವಳು ಎಲ್ಲಿ ನನ್ನ ಬೆನ್ನು ಬಿಟ್ಟಳೆಂದು ನನಗೆ ತಿಳಿಯಲಿಲ್ಲ.

ಏಳೆಂಟು ದಿನಗಳ ನಂತರ ಒಂದು ಬೆಳಿಗ್ಗೆ ತೋಟದಿಂದ ಗುಲಾಬಿಯನ್ನು ಕೊಯ್ಯಬೇಕೆಂದು ಮನೆಬಾಗಿಲನ್ನು ತೆರೆದೆ. ತೋಟದ ಬಾಗಿಲಲ್ಲಿ ಅದೇ ಹುಚ್ಚಿ ಕುಳಿತಿದ್ದವಳು ನನ್ನನ್ನು ನೋಡುತ್ತಲೇ "ಏನಾದರೂ ತಿಂಡಿ ಕೊಡು" ಎನ್ನುತ್ತಾ ಬಾಗಿಲು ತೆರೆದು ಒಳ ಬಂದಳು. ಆಗಿನ್ನೂ ನಸುಕು ಚೆನ್ನಾಗಿ ಹರಿದಿರಲಿಲ್ಲ. ನಾನು ಕೂಡಲೇ ಬಾಗಿಲನ್ನು ಮುಚ್ಚಿ ಮಲಗಿ ಬಿಟ್ಟೆ.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ :—ನ್ಯೂ ಮ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ಸರ್ಕಾರ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1 ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟೆಯ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{1}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8 ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಯಂತ್ರಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪ್ರೊಕ್ಯೂರ್ಮೆಂಟ್ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರು ಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಳಿಯಪ್ಪ (ಪ್ರೆಸಿಡೆಂಟ್)

ಡು ದೂರದ ಮಾತಾಗಿದೆ. ಈ ವಿಚಾರ ವಾಗಿ ಜನರು ಕೂಗಿಕೊಳ್ಳುತ್ತಿದ್ದರೂ ಪುರ ಸಭೆಯವರು ಗಮನವಿತ್ತಂತೆ ತೋರುವ ದಿಲ್ಲ.

ಕೆಲವು ತಿಂಗಳುಗಳಿಂದ ಮಡಿಕೇರಿ ಯಲ್ಲಿ ಕುಡಿಯುವ ನೀರಿನ ತೊಂದರೆ ಇದ್ದರೂ ಹೇಗೋ ಹಾಗೆ ಸುಧಾರಿಸಿಕೊಳ್ಳುತ್ತಿದ್ದೆವು. ಆದರೆ ಈಗ ಪರಿಸ್ಥಿತಿ ವಿಪರೀತಕ್ಕೆ ಬಂದಿದೆ. ಪೇಟೆಯ ನಲ್ಲಿಗಳಲ್ಲಿ ಮಧ್ಯರಾತ್ರಿಯ ವರೆಗೂ ನೀರಿರುವದಿಲ್ಲ. ನಂತರ ಬಂದರೂ ಒಂದೆರಡು ಗಂಟೆಗಳ ವರೆಗೆ ಒಂದೊಂದು ನಲ್ಲಿಯಲ್ಲಿ ಐವತ್ತು ಅರವತ್ತು ಕೊಡಗಳಿರುವ ಪ್ರಯುಕ್ತ ಎಲ್ಲರಿಗೂ ನೀರು ದೊರೆಯುವದಿಲ್ಲ. ಇತ್ತಲಾಗಿ ೧೫ ದಿನಗಳಿಂದ ನೀರೇ ಇಲ್ಲ. ಈ ತೊಂದರೆಯ ಅನುಭವ ಈ ವರ್ಷ ಹೊಸದಲ್ಲ. ಹಲವು ವರ್ಷಗಳಿಂದ ಇದ್ದರೂ ಪುರಸಭೆಯವರು ಈ ವಿಚಾರದಲ್ಲಿ ಗಮನ ವೀಯದೆ ಕರ್ತವ್ಯ ಶೂನ್ಯರಂತೆ ಕುಳಿತಿರುವರು.

ಪೇಟೆಯ ಹಲವು ಕಡೆ ರಸ್ತೆಗಳು ಚೆನ್ನಾಗಿಲ್ಲದೆ, ಚರಂಡಿಗಳಲ್ಲಿ ದುರ್ವಾಸನೆ ಮೊದಲಾದುವು ತುಂಬಿದ್ದರೂ ಮುನ್ಸಿಪಲ್ ಸಮಿತಿಯ ಸದಸ್ಯರ ಮನೆಯ ಹತ್ತಿರದ ಚರಂಡಿಗಳಿಗೆ ಕಲ್ಲು, ರಸ್ತೆ ರಿಪೇರಿ ಮೊದಲಾದ ಕೆಲಸ ಚೆನ್ನಾಗಿ ನಡೆದಿದೆ, ನಡೆಯುತ್ತಿದೆ. ಮಡಿಕೇರಿಯ ಮಾಂಸ ದಂಗಡಿಯ ಅವ್ಯವಸ್ಥೆಯನ್ನು ಕಂಡು ಜನರಲ್ ಕಾರ್ಯಪ್ಪನವರು ಅತೃಪ್ತಿ ಸೂಚಿಸಿ ಕೆಲವು ಬದಲಾವಣೆ ಸೂಚಿಸಿದ್ದರೂ ನಂತರ ಅಲ್ಲಿಂದ ಮಾಂಸ ತೆಗೆಯುವವನ್ನೇ ನಿಲ್ಲಿಸಿದ್ದರೂ ಅದನ್ನು ಅಭಿವೃದ್ಧಿ ಪಡಿಸುವ ಕೆಲಸ ನಡೆದಂತೆ ತೋರುವದಿಲ್ಲ.

ಮುನ್ಸಿಪಾಲಿಟಿಯಲ್ಲಿ ಆಗಬೇಕಾದ ಯಾವುದೇ ಕೆಲಸವಾದರೂ ಕಂಟ್ರಾಕ್ಟರುಗಳಿಂದ ಟೆಂಡರು ಆಹ್ವಾನಿಸಿ ನಂತರ ಯೋಗ್ಯರಿಗೆ ಕೊಡಬೇಕಾದುದು ಅವಶ್ಯ. ಆದರೆ ಮಡಿಕೇರಿ ಮುನ್ಸಿಪಾಲಿಟಿಯಲ್ಲಿ ಈ ರೀತಿ ಆಗುತ್ತಿಲ್ಲವೆಂಬುದು ಸರ್ವರ ಅನಗಾಹನೆಗೆ ಬಂದಿರಬೇಕು. ಮುನ್ಸಿಪಾಲಿಟಿಯವರು ಕೈಕೊಂಡಿರುವ ಕಟ್ಟಡ ಒಂದಕ್ಕೆ ಸೀಮೆಂಟು ಒದಗಿಸಲು ಒಬ್ಬರಿಗೆ ಪರ್ಮಿಟ್ ಕೊಟ್ಟು, ಅವರು ಆ ಪೈಕಿ ಸುಮಾರು ೬೬೦ ಚೀಲ ಸೀಮೆಂಟನ್ನು ಬೇರೆಡೆ ಮಾರಿಕೊಂಡಿರುವರೆಂದೂ, ವಿಚಾರಿಸಿದರೆ ವೇಗನ್ ಬಂದಿಲ್ಲವೆಂದು ಹೇಳಿದರೆಂದೂ ವರ್ತಮಾನವಿದೆ. ಸೀಮೆಂಟ್ ದೊರೆಯದೆ ಕಟ್ಟಡ ಕೆಲಸವು ತಟಸ್ಥವಾಗುವ ಸಮಯ ಬಂದಿದೆ. ಪುರಸಭೆಯವರು ಈ ವಿಚಾರದಲ್ಲಿ ಏನು ಮಾಡಿರುವರು?

ಮುನ್ಸಿಪಲ್ ಸಮಿತಿಯವರು ಹೊರಗಿನಿಂದ ಬಂದ ಮಹನಿಯರಿಗೆ ಸ್ವಾಗತವಿತ್ತು, ಬಿನ್ನವತ್ತಳೆ ಕೊಟ್ಟು ನಮ್ಮ ಚೀಫ್ ಕಮಿಷನರು ಹೀಗೆ, ಮಂತ್ರಿಗಳು ಹಾಗೆ ಎಂದು ಹೊಗಳಿಕೊಂಡರೆ ಸಾಲದು. ತಮ್ಮ ಪಾಲಿನ ಕರ್ತವ್ಯ ದಕ್ಷತೆಯಿಂದ ನಡೆಸಬೇಕು. ಪುರಸಭೆಯವರು ಪುರಜನರಿಗೆ ಸರಿಯಾದ ನೀರು, ಬೆಳಕು, ಆರೋಗ್ಯಕರ ಆವರಣಗಳನ್ನು ಒದಗಿಸುವದನ್ನು ಪ್ರಥಮ ಕರ್ತವ್ಯವೆಂದು ತಿಳಿಯಬೇಡವೇ?

ಕೆ. ಕೆ. ತಿಮ್ಮಯ್ಯ.

೩೮೫೦ ಏಕರೆ ಭೂಮಿ ಸಂಗ್ರಹಿಸಿದರು. ಹೈದ್ರಾಬಾದಿನಲ್ಲಿ ಜೈಪ್ರಕಾಶರ ಯಶಸ್ವಿಪ್ರವಾಸ.

ಪ್ರಜಾ ಸೋಷಲಿಸ್ಟ್ ನಾಯಕರಾದ ಶ್ರೀ. ಜೈಪ್ರಕಾಶ್ ನಾರಾಯಣ್‌ರವರು ಹೈದರಾಬಾದ್ ಸಂಸ್ಥಾನದ ಮಹಬೂಬ್ ನಗರ ಜಿಲ್ಲೆಯಲ್ಲಿ ಎಂಟು ದಿನಗಳು ನಡೆಸಿದ ಭೂದಾನ ಯಜ್ಞ ಪ್ರಚಾರ ಪ್ರವಾಸ ಕಾಲದಲ್ಲಿ ೩,೮೫೦ ಏಕರೆ ಭೂಮಿ, ೩,೯೦೦ ರೂಪಾಯಿ ನಗದು, ೬೦ ಎತ್ತುಗಳು, ೫೦೦ ನಾನಾ ವ್ಯವಸಾಯ ಉಪಕರಣಗಳನ್ನು ದಾನವಾಗಿ ಪಡೆದಿದ್ದಾರೆ.

ಇವೆಲ್ಲವನ್ನೂ ಅವರು ಆಚಾರ್ಯ ವಿನೋಬಾ ಭಾವೆಯವರ ಭೂದಾನ ಯಜ್ಞಕ್ಕೆ ಕೊಡುವರು. ಶ್ರೀ ಜೈಪ್ರಕಾಶರು ತಾ. ೧೭ ರಲ್ಲಿ ಹೈದರಾಬಾದಿಗೆ ಹಿಂತಿರುಗಿದರು.

ಈ ಪ್ರವಾಸ ಕಾಲದಲ್ಲಿ ಶ್ರೀ. ಜೈಪ್ರಕಾಶರು ೬೫೦ ಮೈಲಿ ಪ್ರದೇಶದಲ್ಲಿ ಕಾರಿನಲ್ಲೂ ಕಾಲ್ನಡಿಗೆಯಲ್ಲೂ ಪ್ರವಾಸ ಮಾಡಿದರು. ೫೦ ಗ್ರಾಮಗಳಿಗವರು ಭೇಟಿ ಕೊಟ್ಟಿದ್ದರಲ್ಲದೆ ೨೦ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿದರು. ಪ್ರವಾಸದಲ್ಲಿ ಅವರ ಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರೂ ಭಾಗವಹಿಸಿದ್ದರು.

ಹೈದರಾಬಾದ್ ಸಂಸ್ಥಾನದಲ್ಲಿ ಇದು ವರೆಗೆ ದಾನ ಕೊಡಲ್ಪಟ್ಟಿರುವ ಭೂಮಿಯ ಒಟ್ಟು ವಿಸ್ತಾರ ೫೨,೦೦೦ ಏಕರೆಗಳು. ಸಂಸ್ಥಾನದಲ್ಲಿ ಒಟ್ಟು ೧ ಲಕ್ಷ ೫೦ ಸಾವಿರ ಏಕರೆ ಜಮೀನು ಸಂಗ್ರಹಿಸಲು ಯೋಚಿಸಲಾಗಿದೆ.

ಮದ್ರಾಸಿನ ಮುಖ್ಯ ಮಂತ್ರಿ ರಾಜಾಜಿಯವರು

ಭಾರತ ರಾಜಕೀಯದಲ್ಲಿ ಮದರಾಸಿನ ರಾಜಗೋಪಾಲಾಚಾರಿಯವರ ವ್ಯಕ್ತಿತ್ವವು ವರ್ಣರಂಜಿತವಾದುದು. ಎಣೆಯಿಲ್ಲದ ಮೇಧಾವಿಗಳೆನಿಸಿದ ಇವರು ೧೯೫೨ ರಲ್ಲಿ ಮದ್ರಾಸು ಪ್ರಾಂತದ ಮುಖ್ಯ ಮಂತ್ರಿಯಾಗಿ ಅಧಿಕಾರಗ್ರಹಣ ಮಾಡಿದ ನಂತರ ಇಂದಿನ ವರೆಗೂ ಆಶ್ಚರ್ಯಕರ ರೀತಿಯಲ್ಲಿ ಸರ್ವರಿಂದ ಹೊಗಳಿಸಿಕೊಂಡು ಕೆಲಸ ಮಾಡುತ್ತಿರುವರು. ೧೯೩೭ರ ಕಾಲಕ್ಕೆ ರಾಜಾಜಿಯವರ ಮುಂದಾಳ್ತನದಲ್ಲಿ ಮದರಾಸು ಪ್ರಾಂತವು ಹಿಂದೂದೇಶದ ಇತರ ಪ್ರಾಂತಗಳಿಗೆ ಆದರ್ಶವಾಗಿತ್ತು. ಸ್ವಾತಂತ್ರ್ಯದ ನಂತರ ಅವರು ಪಶ್ಚಿಮ ಬಂಗಾಳದ ಗವರ್ನರರಾಗಿ, ಹಿಂದೂದೇಶದ ಗವರ್ನರ್ ಜನರಲರಾಗಿ ಕೀರ್ತಿ ಗಳಿಸಿದರು. ೭೪ ವಯಸ್ಸಿನ ಇವರು ನಿವೃತ್ತರಾಗಿ ಮದ್ರಾಸಿಗೆ ಬಂದರೂ ಅವರಿಗೆ ಬಿಡುವಿಲ್ಲದಾಯಿತು. ಕಮ್ಯೂನಿಸ್ಟರ ಕಾರ್ಯಕ್ರಮ ಪ್ರಚಾರಗಳಿಂದ ತನ್ನ ಹಿಡಿತವನ್ನು ಕಳೆದುಕೊಂಡಿದ್ದ ಕಾಂಗ್ರೆಸ್ಸನ್ನು ಮೇಲೆತ್ತಲು ಮದ್ರಾಸು ಪ್ರಾಂತದ ಮುಖ್ಯ ಮಂತ್ರಿಗಳಾಗಬೇಕಾಯಿತು. ಇಂದು ಅವರು ಸರ್ವರಿಂದಲೂ ಹೊಗಳಿಸಿಕೊಂಡು ಕಿತ್ತಾಟದ ಕಣವಾಗಿದ್ದ ಪ್ರಾಂತದಲ್ಲಿ ದಕ್ಷ ಆಡಳಿತೆಯನ್ನು ನೆಲೆಗೊಳಿಸಿದ್ದಾರೆ. ಮೊನ್ನೆಯೂ ತಿರುಚಿನಾಪಳ್ಳಿಯಲ್ಲಿ ಅವರು ಸಾರ್ವಜನಿಕ ಸಭೆಯೊಂದರಲ್ಲಿ ಆಡಿದ ಮಾತುಗಳು ಚಿರಸ್ಮರಣೀಯವಿವೆ. "ನನಗೆ ಜುಚಿತ ಗೊತ್ತಿದೆ. ನಾನು ಬಹುಕಾಲ ಬದುಕಲಾರೆ. ಆದರೆ ನಾನು ಇಂದು ಕಾಣುತ್ತಿರುವ ಕನಸು, ಮಾಡುತ್ತಿರುವ ಕರ್ಮ, ಇದು ಇನ್ನೂ ಹುಟ್ಟದ ಭವಿಷ್ಯದ ಸಾವಿರ ಸಂತಾನಕ್ಕಾಗಿ. ನನ್ನ ಹೊಸ ವಿದ್ಯಾ ಯೋಜನೆಯು ತನ್ನದು ಹೊಂದ ಲಾರದು. ನನ್ನ ನಂತರ ವಿಶೇಷವಾಗಿ ಅದು ಅನುಜನು ಹೊಂದಿದರೆ ನನ್ನ ನವ ಥಿಯ ಮೇಲೆ ಕೆಸರು ಚೆಲ್ಲುವ ಹಕ್ಕು ನಿಮಗಿದೆ. ಆದರೆ ಈ ಯೋಜನೆಗಳಿಗೆ ಸಹಕಾರ ಬೇಕು. ತಪ್ಪುಗಳನ್ನು ಎತ್ತಿ ಹೇಳಿ ಸರಿಪಡಿಸಬೇಕು. ದೇಶದ ಹಿತ ಕೆಲಸ ಒಬ್ಬಿಬ್ಬರ ಜವಾಬ್ದಾರಿಯಲ್ಲ. ಅದು ನಾಗರಿಕರೆಲ್ಲರ ಜವಾಬ್ದಾರಿ."

ಜೇನು ವ್ಯವಸಾಯ

ಇಂಡಿಯಾದ ಪಂಚವಾರ್ಷಿಕ ಯೋಜನೆಯಲ್ಲಿ

ಪಂಚವಾರ್ಷಿಕ ಯೋಜನೆಯು ನಿಸ್ಸಯದಲ್ಲಿ 9 (xxiv) ಭಾಗ—ಜೇನು ವ್ಯವಸಾಯ - ಜೇನು ವ್ಯವಸಾಯವು ಸ್ವಲ್ಪ ಮಟ್ಟಿಗೆ ಅಭಿವೃದ್ಧಿಗೆ ಹೊಂದಿರುವ ಪ್ರಾಂತ್ಯಗಳ ಪೈಕಿ ಮದರಾಸು, ಮುಂಬಯಿ, ಉತ್ತರ ಪ್ರದೇಶ, ಪಂಜಾಬು, ಮೈಸೂರು, ತಿರುವಾಂಕೂರು-ಕೊಚ್ಚಿ ಮತ್ತು ಕೊಡಗು ಇವುಗಳನ್ನು ಆರಿಸಿ ಈ ಪ್ರಾಂತಗಳಲ್ಲಿ ಜೇನು ಕೈಗಾರಿಕೆಯನ್ನು ತೀವ್ರ ಅಭಿವೃದ್ಧಿ ಮಾಡುವರೆ ತಕ್ಕ ಕ್ರಮ ಜರುಗಿಸಲಾಗುವದೆಂದು ಸೂಚಿಸಲಾಗಿದೆ. ಮೇಲ್ಕಂಡ ಪ್ರಾಂತಗಳಲ್ಲಿ ೨೦ರಿಂದ ೩೦ ಗ್ರಾಮಗಳಿಗೊಂದರಂತೆ ಒಂದೊಂದು ಜೇನಿನ ಉಪಕ್ಷೇತ್ರವನ್ನು ತೆರೆದು ಅವುಗಳ ಮೂಲಕ ಜೇನು ಕೃಷಿಕರನ್ನೂ, ಈ ಕೃಷಿಯ ಕೆಲಸಗಾರರನ್ನೂ ತರಬೇತು ಮಾಡುವದು; ಜೇನು ಗೂಡುಗಳನ್ನೂ ಜೇನು ತೆಗೆಯುವ ಯಂತ್ರವೇ ಮೊದಲಾದ ಈ ಕೃಷಿಗೆ ಅವಶ್ಯವಿರುವ ಇತರ ಉಪಕರಣಗಳನ್ನೂ ಜೇನು ಕೃಷಿಕರಿಗೆ ಅತ್ಯಲ್ಪ ಕ್ರಯಕ್ಕೆ ಒದಗಿಸಿ ಕೊಡುವುದು ಮತ್ತು ಹೀಗೆ ಜೇನು ಕೃಷಿಕರಲ್ಲಿ ಸಂಗ್ರಹವಾದ ಉತ್ತಮ ಜೇನು ತುಪ್ಪವನ್ನು ಕೊಂಡು ಮಾರಲು ಜೇನು ಸಾಕುವವರ ಸಹಕಾರ ಸಂಘ ನಿರ್ಮಾಣ ಮಾಡುವದು—ಇವೇ ಮೊದಲಾದ ಕಾರ್ಯಗಳನ್ನು ಕೈಕೊಳ್ಳಲಾಗುವುದೆಂದು ನಮೂದಿಸಿದೆ.

ಕೆನರಾ ಬ್ಯಾಂಕಿನ ನೂತನ ಕಟ್ಟಡ ಉದ್ಘಾಟನೋತ್ಸವ.

ಕೆನರ ಬ್ಯಾಂಕಿಂಗ್ ಕಾರ್ಪೊರೇಶನಿನವರು ಮಡಿಕೇರಿಯಲ್ಲಿ ಸುಮಾರು ೬೦,೦೦೦ ರೂಪಾಯಿ ಖರ್ಚಿನಿಂದ ಕಟ್ಟಿಸಿದ ಕಟ್ಟಡ ಮತ್ತು ೧೫ ಸಾವಿರ ರೂಪಾಯಿಗಳ ಖರ್ಚಿನಲ್ಲಿ ಏರ್ಪಡಿಸಿರುವ ಸುರಕ್ಷಿತ ಡಿಪಾಜಿಟ್ಟು ವಾಲ್ಟುಗಳನ್ನು ತೆರೆಯುವ ಸಮಾರಂಭವು ತಾ. ೧೬ರಲ್ಲಿ ಕೊಡಗಿನ ಮುಖ್ಯ ಮಂತ್ರಿ ಸಿ. ಯಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೆಳಿಗ್ಗೆ ೧೦ ಗಂಟೆಗೆ ಪ್ರಾರ್ಥನೆಯ ನಂತರ ನೆರೆದವರಿಗೆ ಲಘು ಟೀ ಪಾರ್ಟಿ ಆಯಿತು. ಬ್ಯಾಂಕಿನ ಡೈರೆಕ್ಟರುಗಳಾದ ಡಾ. ಪದ್ಮನಾಭ ಮಲ್ಯರವರು ಮತ್ತು ವೈಕುಂಠ ಬಾಳಿಗರವರೂ ಸ್ವಾಗತ ಭಾಷಣ ಮಾಡಿದರು. ಶ್ರೀ ಬಾಳಿಗರವರು ಕೊಡಗಿನ ಆಡಳಿತ ದಕ್ಷತೆಯನ್ನು ಪ್ರಶಂಸಿದರು. ತಾನು ಕೇವಲ ಒಂದು ವ್ಯಾಪಾರೀ ಸಂಸ್ಥೆಯ ಪ್ರತಿನಿಧಿಯೆಂದೂ ರಾಜಕೀಯ ತನ್ನ ಕ್ಷೇತ್ರವಲ್ಲವೆಂದೂ ಹೇಳಿದರು. ಬ್ಯಾಂಕಿನ ಅಧ್ಯಕ್ಷರಾದ ಡಾ. ಸುಂದರರಾಯರು ಕೆನರಾ ಬ್ಯಾಂಕಿನ ಕಾರ್ಯಕಲಾಪ ಮತ್ತು ಚರಿತ್ರೆಯನ್ನು ವಿವರಿಸಿದರು.

ಚೀಫ್ ಕಮಿಷನರು ಕಟ್ಟಡದ ಉದ್ಘಾಟನೆ ಮಾಡುತ್ತಾ ಸುಂದರ ಕಟ್ಟಡವನ್ನು ಪ್ರಶಂಸಿದ್ದಲ್ಲದೆ, ಬ್ಯಾಂಕಿನ ದಕ್ಷ ಆಡಳಿತೆಯನ್ನೂ, ಸಿಬ್ಬಂದಿಗಳ ಸೌಜನ್ಯತೆಯನ್ನೂ ಹೊಗಳಿದರು. ಕೊಡಗಿನ ಗೃಹ ಮಂತ್ರಿ ಮಲ್ಲಪ್ಪನವರು ಸೇಫ್ಟಿ ಡಿಪಾಜಿಟ್ ವಾಲ್ಟನ್ನು ತೆರೆದರು. ಕೊಡಗಿನ ನಿವೃತ್ತ ಚೀಫ್ ಕಮಿಷನರಾದ ಶ್ರೀ ಕೇಟೊಳಿರ ಚಂಗಪ್ಪನವರು ಮಾತಾಡುತ್ತಾ ತಾನು ಈ ಶಾಖೆಯನ್ನು ೧೯೩೪ರಲ್ಲಿ ತೆರೆದುದೆಂದೂ, ಬ್ಯಾಂಕು ಪ್ರಗತಿ ಹೊಂದುತ್ತಿರುವದು ಸಂತೋಷಕರವೆಂದೂ ಹೇಳಿದರು.

ಕೊಡಗು ಶಾಸನ ಸಭೆಯ ಸ್ಪೀಕರರಾದ ಶ್ರೀ ಬಿ. ಎಸ್. ಕುಶಾಲಪ್ಪನವರು ಮಾತಾಡುತ್ತಾ ಬ್ಯಾಂಕಿನ ಬೋರ್ಡಿನಲ್ಲಿ ಎಲ್ಲಾ ವರ್ಗದ ಪ್ರತಿನಿಧಿಗಳಿರುವದು ಸಂತೋಷವೆಂದರು. ಶ್ರೀ ರಾಮಮೂರ್ತಿಯವರು ಬ್ಯಾಂಕಿನ ಕಾರ್ಯಕಲಾಪಗಳನ್ನು ಹೊಗಳಿದರು. ಅಧ್ಯಕ್ಷರು ಮಾತಾಡುತ್ತಾ ದೇಶದ ಮುಂದಿರುವ ಪಂಚವಾರ್ಷಿಕ ಯೋಜನೆಯು ಜಯಪ್ರದವಾಗಬೇಕಾದರೆ ಬ್ಯಾಂಕುಗಳು ತಮ್ಮ ಪಾಲಿನ ಸಹಕಾರವನ್ನೀಯಬೇಕೆಂದೂ ಅವುಗಳ ಪಾತ್ರ ಪ್ರಾಮುಖ್ಯವಾದುದೆಂದೂ, ಪ್ರತಿ ಮನುಷ್ಯನಲ್ಲಿಯೂ ಬ್ಯಾಂಕಿಂಗ್ ಮನೋವೃತ್ತಿ ಹೆಚ್ಚಬೇಕೆಂದೂ, ಕೆನರಾ ಬ್ಯಾಂಕು ಅನೇಕ ಎಡರು ತೊಡರುಗಳನ್ನು ಎದುರಿಸಿ ಭದ್ರ ತಳಹದಿಯಲ್ಲಿ ನಿಂತಿದೆಯೆಂದೂ ಹೇಳಿದರು. ಕಟ್ಟಡದ ಕಂಟ್ರಾಕ್ಟರಾದ ತಾಳತಾಯರಿಗೂ, ಸೇಫ್ಟಿ ವಾಲ್ಟಿನ ನಿರ್ಮಾಪಕರಾದ ಸೇಠ್ ಕಾರ್ಕಡರವರಿಗೂ, ಇಂಜಿನಿಯರಾದ ಶ್ರೀ ಕೆ. ಎ. ಮುದ್ದಯ್ಯನವರಿಗೂ ಸುವರ್ಣ ಪದಕಗಳನ್ನು ಕೊಟ್ಟದ್ದಲ್ಲದೆ ಇತರ ಕೆಲವು ಕೆಲಸಗಾರರಿಗೆ ಬಹುಮಾನ ಕೊಡಲಾಯಿತು.

ಬ್ಯಾಂಕಿನ ಡಿಪ್ಯೂಟಿ ಜನರಲ್ ಮೇನೇಜರಾದ ಶ್ರೀ ಕೆ. ಎಸ್. ಶೆಣೈಯವರು ವಂದನಾರ್ಪಣೆ ಮಾಡಿದ ನಂತರ ಜನಗಣಮನ ಗೀತೆಯೊಂದಿಗೆ ಸಮಾರಂಭವು ಕೊನೆಗೊಂಡಿತು.

ನಾರದ ಕಥೆ.

ಭಿಕ್ಷುಕಿ

ಶ್ರೀ ಬಿ. ಪದ್ಮಾಬಾಳಿಗಾ, ಉಡುಪಿ

ಮಧ್ಯಾಹ್ನದ ಸುಡು ಬಿಸಿಲು ಸುಡುತ್ತಿತ್ತು. ಆಗ ಆರಾಮ ಕುರ್ಚಿಯನ್ನೊರಗಿ ನಾನೊಂದು ಕಥೆಯನ್ನೋದುತ್ತಿದ್ದೆ. ರಮೇಶರಾಯರು ಹತ್ತಿಯ ವ್ಯಾಪಾರ ಮಾಡುತ್ತಿದ್ದರು. ಒಂದು ದಿನ ಬಡ ಹುಡುಗನೊಬ್ಬ ಪಾರಾನ್ನವನ್ನು ಕೇಳಿಕೊಂಡು ಬಂದ. ದಯೆಯೆನಿಸಿ ಅವರು ಆತನನ್ನು ತಮ್ಮ ಮನೆಯಲ್ಲಿಯೇ ಇರಿಸಿ ಕೊಂಡರು. ಎರಡು ಮೂರು ವರುಷಗಳ ವರೆಗೆ ಆತ ಅವರಲ್ಲಿಯೇ ಇದ್ದ. ಅನಂತರ ಹೆಚ್ಚಿನ ಶಿಕ್ಷಣಕ್ಕಾಗಿ ಬೇರೆ ಊರಿಗೆ ಹೊರಟು ಹೋದ. ಬಹಳಷ್ಟು ವರ್ಷಗಳ ನಂತರ ರಮೇಶರಾಯರಿಗೆ ವ್ಯಾಪಾರದಲ್ಲಿ ದೊಡ್ಡ ಪೆಟ್ಟು ಬಿತ್ತು. ಲಕ್ಷಾಧಿಪತಿಯಾಗಿದ್ದವರು ಒಮ್ಮೆಲೇ ಭಿಕ್ಷಾಧಿಪತಿಯಾದರು. ಮೂವತ್ತು ಹುಡುಗಿಯರು ಬೇರೆ ಬೆಳೆದು ನಿಂತಿದ್ದರು. ಚಿಂತೆಯಿಂದ ತಂದೆ ಹಾಸಿಗೆ ಹಿಡಿದರು. ಆಗ ಅವರಲ್ಲಿ ನಿಂತು ವಿದ್ಯೆ ಕಲಿತ ಹುಡುಗ ದೊಡ್ಡ ಹುದ್ದೆಯಲ್ಲಿದ್ದ. ಆತ ಕೂಡಲೇ ಇವರೆಡೆಗೆ ಧಾವಿಸಿ ಬಂದ. ಈ ಚಿಕ್ಕ ಪರಿವಾರವನ್ನು ತನ್ನ ಮನೆಗೆ ಕರೆದುಕೊಂಡು ಹೋದ. ಒಂದು ಕಾಸನ್ನೂ ವರದಕ್ಷಿಣೆಯಾಗಿ ಬೇಡದೆ ಹಿರಿಯ ಮಗಳನ್ನು ಮದುವೆಯಾದ. ಇನ್ನಿಬ್ಬರನ್ನು ಒಳ್ಳೆ ಮನೆತನಗಳಿಗೆ ಕೊಟ್ಟು ಮದುವೆ ಮಾಡಿದ. ಸುಕೃತ್ಯವು ಯಾವ ರೀತಿಯಲ್ಲಿ ಮಧುರ ಫಲವೀಯುವುದೆಂದು ಲೇಖಕರು ಮಾರ್ಮಿಕವಾಗಿ ಚಿತ್ರಿಸಿದ್ದರು. ಈ ಸುಂದರ ಕಥಾನಕದ ಬಗ್ಗೆ ಸಂತೋಷಗೊಳ್ಳುತ್ತಾ ಅದನ್ನೇ ಮೆಲುಕು ಹಾಕುತ್ತಿದ್ದೆ. ಇಷ್ಟರಲ್ಲಿ ಆವಾರೋ ಬಾಗಿಲಲ್ಲಿ ಧ್ವನಿಗೊಟ್ಟರು.

"ಅಮ್ಮಾ ಒಂದು ತುತ್ತು ಅನ್ನ ನೀಡಿ ತಾಯೀ"

ಧಟ್ಟನೆದ್ದು ಹೊರಬಂದು ನೋಡಿದರೆ ಹನ್ನೆರಡು ಹದಿಮೂರು ವರುಷದ ಬಾಲೆಯೊಬ್ಬಳು ಜೋಳಿಗೆಯನ್ನೆತ್ತಿಕೊಂಡು ನಿಂತಿದ್ದಳು. ಬಿಸಿಲಲ್ಲಿ ಅಲೆಯುತ್ತಿದ್ದುದರ ಪರಿಣಾಮವಾಗಿ ಮೈಬಣ್ಣ ಶ್ಯಾಮಲ ವರ್ಣಕ್ಕೆ ತಿರುಗಿತ್ತು. ಹೇಳಿಕೊಳ್ಳುವಂತಹ ರೂಪವೂ ಇಲ್ಲ. ಆದರೂ ಕಣ್ಣುಗಳಲ್ಲಿ ಆಕರ್ಷಣೆ ಇತ್ತು. ನಾನೆಂದೆ "ಇಷ್ಟು ಚಿಕ್ಕ ವಯಸ್ಸಿನಲ್ಲಿ ಭಿಕ್ಷೆ ಬೇಡುತ್ತೀಯಾ! ನಿನಗಾರೂ ಇಲ್ಲವೆ?"

"ನಾನು ವಂಗದೇಶದಾಕೆ ತಾಯಿ. ಮುಸಲ್ಮಾನರು ಮನೆಗೆ ಬೆಂಕಿಯನ್ನಿಟ್ಟರು. ತಂದೆ ತಾಯಿ ಬಹುಶಃ ಸುಟ್ಟುಹೋಗಿರಬಹುದು. ನಾನೂ ನನ್ನ ಚಿಕ್ಕ ತಮ್ಮನೂ ಜೀವದಾಸೆಯಿಂದ ಓಡಿ ಬಂದೆವು. ಒಂದು ವರುಷದ ಕೆಳಗೆ ಅವನು ಮರದ ಕೆಳಗೆ ಸತ್ತು ಹೋದ. ಮೂರು ದಿನಗಳಿಂದ ಅನ್ನವಿಲ್ಲ ತಾಯೀ."

ಮಧ್ಯಾಹ್ನದ ಅಟ್ಟು ಅಡಿಗೆ ಸ್ವಲ್ಪ ಮಿಕ್ಕಿತ್ತು. ಆಕೆಗೆ ಊಟ ಬಡಿಸಿದೆ. ತನ್ನ ಪುಟ್ಟ ಕೈಯಿಂದ ಆಕೆ ದೊಡ್ಡ ದೊಡ್ಡ ತುತ್ತುಗಳನ್ನೆತ್ತಿ ಉಣ್ಣುತ್ತಿರುವಾಗ ನನಗೇನು ತೋರಿತೆಂದು ಸ್ಪಷ್ಟವಾಗಿ ಹೇಳಲಾರೆ. ಕಥೆಯನ್ನು ಓದಿ ಮುಗಿಸಿದ್ದರೂ ಅದರ ಅಮಲು ಇನ್ನೂ ಉಳಿದಿತ್ತು. ಮಮತೆಯಿಂದ ಕೇಳಿದೆ, "ಮಗೂ ನೀನು ನನ್ನ ಬಳಿ ನಿಲ್ಲುವೆಯಾ?" "ಅಕ್ಕ—ನನ್ನನ್ನು ನಿಲ್ಲಿಸಿಕೊಳ್ಳುವಿರಾ? ನಿಮ್ಮ ಉಪಕಾರವನ್ನು ಹೇಗೆ ಸ್ಮರಿಸಲಿ ತಾಯೀ? ನನಗಾದರೂ ಯಾರು ಇರುವರು?"

ನನ್ನ ಭಾವನಿಗೆ ಪಂಜಾಬಿಗೆ ವರ್ಗವಾಗಿತ್ತು. ಅಷ್ಟು ದೂರ ಹೋಗುವ ಮುನ್ನ ನನ್ನ ಬಳಿ ನಾಲ್ಕು ದಿನ ನಿಲ್ಲುವೆನೆಂದು ಅಕ್ಕ ಮನೆಗೆ ಬಂದಿದ್ದಳು. ಈ ಸುದ್ದಿಯನ್ನು ಕೇಳಿದೊಡನೆಯೇ ನನ್ನನ್ನು ಬೆದರಿಸಿದಳು. "ಭಿಕ್ಷುಕಿಯನ್ನು ಮನೆಯಲ್ಲಿಟ್ಟುಕೊಳ್ಳುವೆಯಾ? ಆಕೆಯ ಜಾತಿಯಾವುದು ?" ಎಂದು.

ಏನಿಲ್ಲೆಂದರೂ ಕೆಲವು ಪುಸ್ತಕಗಳನ್ನೋದಿದ್ದೆ. ಬುದ್ಧಿಶಕ್ತಿಯನ್ನು ಕೊಂಚ ಅಹಂಕಾರವೂ ಆವರಿಸಿಕೊಂಡಿತ್ತು. ಇಂದು ಅಕ್ಕ ಬಾಯ್ದೆರೆದೊಡನೆಯೇ ಚಿಕ್ಕದೊಂದು ಉಪನ್ಯಾಸವನ್ನೇ ಕೊಟ್ಟುಬಿಟ್ಟೆ. "ಭಿಕ್ಷುಕಿಯೆಂದು ಘೃಣಿತ ದೃಷ್ಟಿಯಿಂದಲೇ ಕಾಣುವೆ? ಆಕೆಯನ್ನು ನಿಲ್ಲಿಸಿಕೊಳ್ಳುವದರಿಂದ ಆಗುವ ಹಾನಿಯಾದರೂ ಏನು? ಜಾತಿಯನ್ನು ತೆಗೆದುಕೊಂಡು ಮಾಡುವದೇನು? ಪ್ರಪಂಚದಲ್ಲಿ ಮಾನವ ಜಾತಿಯೊಂದೇ ಇರುವದು. ನಾಲ್ಕು ಪುಸ್ತಕಗಳನ್ನೋದಿದರೆ ನಾಲ್ಕು ಜನರಲ್ಲಿ ಬೆರೆತುಕೊಂಡಿದ್ದರೆ, ಪ್ರಪಂಚ ಜ್ಞಾನದ ಅರಿವಾಗುವದು. ನಮ್ಮಂತಹ ಓದುಬರಹ ಬಲ್ಲವರೇ ದೀನ ದುಃಖಿಗಳ ಉದ್ಧಾರಕ್ಕೆ ಟೊಂಕ ಕಟ್ಟದಿದ್ದಲ್ಲಿ ಸ್ವತಂತ್ರ ಭಾರತದ ಗತಿ ಏನಾಗಬೇಕು? ...." ಇತ್ಯಾದಿ.

ಇಂದು ಆ ಘಟನೆಯನ್ನು ಎಣಿಸಿದ ಮಾತ್ರಕ್ಕೆ ಸೀಮಾತೀತ ನಾಚಿಕೆಯಿಂದ ರೋಮ ರೋಮವೂ ಮುದುಡಿಕೊಳ್ಳುವದು. ಇಂದು ಆ ಅಹಂಕಾರ ಉಳಿದಿಲ್ಲ. ಬಲವಾಗಿ ಬೆಳೆದು ಸಗರ್ವದಿಂದ ತಲೆಯೆತ್ತಿ ನಿಂತ ವೃಕ್ಷಕ್ಕೆ ಯಾರೋ ಕೊಡಲಿ ಏಟನ್ನು ಕೊಟ್ಟರು.

ಮೂರು ದಿನ ಕಳೆದ ಮೇಲೆ ಅಕ್ಕ ಹೋದಳು. ಅವರು ಹೋದ ಸ್ವಲ್ಪ ಹೊತ್ತಿನ ನಂತರ ಮುತ್ತಿನ ಹಾರವನ್ನು ತೆಗೆದಿಟ್ಟು ನಾನು ಸ್ನಾನಕ್ಕೆ ಹೋದೆ. ಒಳಕ್ಕೆ ಬಂದಾಗ ನನ್ನ ಕೋಣೆಯ ಬಾಗಿಲು ತೆರೆದಿತ್ತು. ಹೆಚ್ಚಾಗಿ ಅಲ್ಲಿ ಯಾರೂ ಪ್ರವೇಶಿಸುತ್ತಿರಲಿಲ್ಲ. ಆಶ್ಚರ್ಯದಿಂದ ಒಳಬಂದು ನೋಡಿದರೆ ಮುತ್ತಿನ ಹಾರ ಕಾಣೆ! ನನ್ನ ಅತ್ಯಂತ ಮೆಚ್ಚಿನ ನೀಲಿ ಜಾರ್ಜೆಟ್ ಸೀರೆಯ ಪತ್ತೆಯೇ ಇಲ್ಲ! ಜೀವಕ್ಕಿಂತಲೂ ಪ್ರಿಯವಾಗಿದ್ದ ಪಾರ್ಕರ್ ಪೆನ್ನು ಮಾಯವಾಗಿದೆ. ದುಃಖ ಮತ್ತು ಆತ್ಮಗ್ಲಾನಿಯಿಂದ ನನಗೆ ಬವಳಿ ಬಂದಂತಾಯಿತು. ಏಕಾಂತದಲ್ಲಿ ಕುಳಿತು ಅವಮಾನಿತ ಕಂಬನಿಗಳನ್ನು ಸುರಿಸಿ ರೋಸಿ ಹೋದ ಮನಸ್ಸನ್ನು ಸಂತವಿಸಲೆತ್ನಿಸಿದೆ. ಮಧ್ಯಾಹ್ನ ಅತ್ತಿಗೆ ಕೇಳಿದರು. "ನಿನ್ನ ಸಾಕು ಮಗಳು ಊಟಕ್ಕೇಕೆ ಬರುವದಿಲ್ಲ?" ಮೊಗವನ್ನು ಮೇಲಕ್ಕೆತ್ತದೆಯೇ ನಾನುತ್ತರಿಸಿದೆ. "ಅದೇಕೋ ಅವಳನ್ನು ಕಳುಹಿಸಿ ಕೊಟ್ಟೆ."

ಒಂದು ವರುಷದ ಅನಂತರದ ಸಂಗತಿಯಿದು. ಅಕ್ಕ ಮುಂಬಯಿಗೆ ಬಂದಿದ್ದಳು. ಮೇಲಿಂದ ಮೇಲೆ ಆಕೆಯಿಂದ ಪತ್ರ ಬರಲು ಬೇಸಿಗೆ ರಜೆಯಲ್ಲಿ ಮುಂಬಯಿಗೆ ಹೋದೆ. ಒಂದು ದಿನ ಸಾಯಂಕಾಲ ಬಾಬುಲ್‌ನಾಥ ಮಂದಿರದಿಂದ ಮನೆಗೆ ಬರುತಿದ್ದೆ. ಮಾಸಿದ ಚಿಂದಿಯನ್ನುಟ್ಟ ನಡುವಯಸ್ಸಿನ ಹೆಂಗಸೊಬ್ಬಳು ನೇರಾಗಿ ನನ್ನಿದಿರಿಗೆ ಬಂದು ನಿಂತು ನುಡಿದಳು. "ನನಗೊಂದಾಣೆ ಕೊಡು."

ಯಾವ ದಿನ ಬಂಗಾಳದ ಹುಡುಗಿ ನನಗೆ ೩೫೦ ರೂಪಾಯಿಗಳ ಮೋಸವನ್ನು ಕೊಟ್ಟಿದ್ದಳೋ ಅಂದಿನಿಂದ ನಾನು ಕೈಯೆತ್ತಿ ಯಾರಿಗೂ ಒಂದು ಕಾಸನ್ನು ದಾನ ಮಾಡಿರಲಿಲ್ಲ. ಕಾಸು ಕಾಸಿನ ಉಳಿತಾಯದಿಂದ ಜೀವನ ಮುಗಿಯುವದರೊಳಗೆ ೩೫೦ ರೂಪಾಯಿಗಳ ನಷ್ಟವನ್ನು ತುಂಬಬಹುದೆಂದು ಹುಚ್ಚು ಮನಸ್ಸು ಲೆಕ್ಕ ಹಾಕಿತ್ತೋ ಏನೋ!

"ಇಲ್ಲ" ಎಂದು ಗಡುಸಾಗಿ ನುಡಿದು ಮುಂದರಿದೆ. ಆಕೆ ಹಿಂದೆಯೇ ಬರುತ್ತಾ, "ಏ ಹುಡುಗಿ, ನಿನ್ನನ್ನು ಎಲ್ಲಿಯೋ ನೋಡಿದಂತೆನಿಸುತ್ತಿದೆ. ಎಲ್ಲಿ? ನೆನಪಾಗುವದಿಲ್ಲ" ಎಂದಳು.

ನಾನು ಸಿಟ್ಟಿನಿಂದ ಬೆಂಕಿಯಾದೆ. ಮಂದಿರದ ಬಳಿ ಹೆಚ್ಚು ಜನ ಸಂಚಾರವಿರಲಿಲ್ಲ. ಮುಂಬಯಿಯ ಬೀದಿಗಳು ನಿರ್ಜನವಾಗಿರುವದಂತೂ ಸಾಧ್ಯವೇ ಇಲ್ಲ. ಆದರೆ ನನ್ನವರೆಂದು ಹೇಳಲು ನನ್ನ ಬಳಿ ಯಾರೂ ಇರಲಿಲ್ಲ. ಭಾವನವರು ಆಫೀಸಿನಿಂದ ಬಂದಿರಲಿಲ್ಲವಾದ್ದರಿಂದ ಅಕ್ಕ ಮನೆಯಲ್ಲಿಯೇ ಉಳಿದಿದ್ದಳು. ಭಿಕ್ಷುಕಿಯ ಹುಚ್ಚು ಕಳೆಯನ್ನೂ ಉರಿವ ದೊಡ್ಡ ದೊಡ್ಡ ಕಣ್ಣುಗಳನ್ನೂ ನೋಡಿ ನನಗೇನೂ ಅಂಜಿಕೆಯಾಗಲಿಲ್ಲ. ಗಡಕ್ಕನೆ ನಿಂತು ಕಟುವಾಗಿ ನುಡಿದೆ. "ನೀನು ಸಾವಿರ ಜನರನ್ನು ಸಾವಿರ ಸ್ಥಳಗಳಲ್ಲಿ ನೋಡಿರಬಹುದು. ಅವುಗಳೆಲ್ಲದರ ನೆನಪು ಹುಟ್ಟಿಸಲು ನಾನು ಜೀತದಾಳು ಅಲ್ಲ. ನನ್ನ ಬಳಿ ನಿನಗೆ ಕೊಡಲು ದುಡ್ಡೂ ಇಲ್ಲ" ಇಷ್ಟು ಹೇಳಿ ನಾನು ವೇಗದಿಂದ ನಡೆಯ ತೊಡಗಿದೆ. ದುಡ್ಡನ್ನು ಬೇಡುತ್ತಾ ಆಕೆ ಹಿಂದಿನಿಂದ ಬರುವುದು ನನಗೆ ಕೇಳಿಸುತ್ತಿತ್ತು. ಗ್ರಾಂಟ್ ರೋಡಿಗೆ ಬಂದು ರೈಲು ಹತ್ತಿ ನಾನು ಮಾತುಂಗದ ನಮ್ಮ ಮನೆಯಲ್ಲಿಳಿದೆ. ಆಕೆ ಎಲ್ಲಿ ನನ್ನ ಬೆನ್ನು ಬಿಟ್ಟಳೆಂದು ನನಗೆ ತಿಳಿಯಲಿಲ್ಲ.

ಎಳೆಂಟು ದಿನಗಳ ನಂತರ ಒಂದು ದಿನ ಬೆಳಿಗ್ಗೆ ತೋಟದಿಂದ ಗುಲಾಬಿಯನ್ನು ಕೊಯ್ಯಬೇಕೆಂದು ಮನೆಬಾಗಿಲನ್ನು ತೆರೆದೆ. ತೋಟದ ಬಾಗಿಲಲ್ಲಿ ಅದೇ ಹುಚ್ಚಿ ಕುಳಿತಿದ್ದವಳು ನನ್ನನ್ನು ನೋಡುತ್ತಲೇ "ಏನಾದರೂ ತಿಂಡಿ ಕೊಡು" ಎನ್ನುತ್ತಾ ಬಾಗಿಲು ತೆರೆದು ಒಳ ಬಂದಳು. ಆಗಿನ್ನೂ ನಸುಕು ಚೆನ್ನಾಗಿ ಹರಿದಿರಲಿಲ್ಲ. ನಾನು ಕೂಡಲೇ ಬಾಗಿಲನ್ನು ಮುಚ್ಚಿ ಮಲಗಿ ಬಿಟ್ಟೆ.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು:—ವೀರಾಜಪೇಟೆ.

ಶಾಖೆ:—ನ್ಯೂ ಇಬ್ಬನಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1 ·32 ರಿವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟೆಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟೆಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8 ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೇ ಮಾಡುವ ಯಂತ್ರಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸಿಮೆಂಟ್ ಟಿನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟೆಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ) — ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

Licence No. 60.
Licenced to Post without Prepayment
Reg. No. M. 1550.
"KODAGU" MERCARA (Coorg)

ಏಳುವಾಗ ಹೊತ್ತು ಬಹಳ ಏರಿತ್ತು. ಲಗುಬಗನೆ ಮಹಡಿಯಿಂದಿಳಿದು ಬಂದೆ. ಅಡಿಗೆ ಮನೆಯಲ್ಲಿ ಅಕ್ಕ ಯಾರೊಡನೆಯೋ ಮಾತನಾಡುತ್ತಿದ್ದಳು. ಇಣಿಕಿ ನೋಡಿದರೆ, ನನ್ನ ಚಿರಪರಿಚಿತ ಹುಚ್ಚಿ! ಅಕ್ಕ ನನ್ನ ಕೈ ಹಿಡಿದು ಒಳಗೆಳೆಯುತ್ತಾ ಹೇಳಿದಳು. 'ಬಾ ತಂಗೀ, ನಿನಗೆ ಈಕೆಯ ಪರಿಚಯ ಸಿಗಲಿಲ್ಲವೇ? ನಮ್ಮ ಮನೆಯಲ್ಲಿ ನಾವು ಚಿಕ್ಕವರಿರುವಾಗ ಅಡಿಗೆ ಹೆಂಗಸು ಸುಶೀಲಮ್ಮನ, ಮುಂಬಾಯಿಯಲ್ಲಿ ಮಾಸ್ಟರರೊಬ್ಬರಿಗೆ ಕೊಟ್ಟ ಮಗಳು, ನಾಲ್ಕೈದು ದಿನ ನಮ್ಮ ಮನೆಯಲ್ಲಿ ನಿಂತಿರಲಿಲ್ಲವೇ? ಇವಳೇ ಆಕೆ.'

ಆ ಹೆಂಗಸು ಕಾಫಿ ಕುಡಿಯುತ್ತಾ ಮೆಲ್ಲಮೆಲ್ಲನೆ ನುಡಿದಳು. 'ಎಷ್ಟು ದೊಡ್ಡವಳಾಗಿದ್ದಾಳೆ ಈಕೆ? ನನಗೆ ಮೊದಲು ಗುರುತು.......'

ಅಧಿಕಾಧಿಕ ನಿಷ್ಠುರತೆಯ ನನ್ನ ಇತಿಹಾಸವನ್ನು ಎಲ್ಲಿ ಬಿಚ್ಚುವಳೋ ಎಂದು ದಿಗಿಲುಗೊಂಡು ನಾನು ಮಧ್ಯದಲ್ಲಿಯೇ ತಡೆದೆ. 'ಹುಂ. ಹುಂ. ನನಗೆ ಸಹ ಪರಿಚಯವೇ ಸಿಗಲಿಲ್ಲ' ಎಂದು ಹೇಳಿ ಓದುವ ನೆಪ ಮಾಡಿ ನಾನು ಮಹಡಿಯಲ್ಲಿಯೇ ಕುಳಿತುಬಿಟ್ಟೆ.

ಮಧ್ಯಾಹ್ನ ಅಕ್ಕ ಊಟಕ್ಕೆ ಕರೆದಳು. ಆಗ ಚಾವಡಿಯಲ್ಲಿ ಅದೇ ಹೆಂಗಸು ಬರೀ ನೆಲದ ಮೇಲೆ ಕುಳಿತಿದ್ದಳು. ನಾನು ಒಳ ಹೋದವಳು ಅಸಮಾಧಾನದಿಂದ ಕೇಳಿದೆ. 'ಇದೇನು ಸಂಗತಿ ಅಕ್ಕಾ?'

ಬಡಿಸುತ್ತಿದ್ದಂತೆಯೇ ಅಕ್ಕ ಹೇಳಿದಳು, 'ಪಾಪ! ಗಂಡ ಆತ್ಮಹತ್ಯೆ ಮಾಡಿಕೊಂಡು ವರುಷ ಒಂದು ಉರುಳಿತಂತೆ. ಕಾರಣವನ್ನು ಆಕೆ ಹೇಳಲೊಲ್ಲಳು. ಆಕೆಗೆ ಇದ್ದವಳು ಒಬ್ಬಳೇ ತಾಯಿ. ಅವಳೂ ಈಗ ಇಲ್ಲ. ಅಂದಿನಿಂದ ಭಿಕ್ಷೆಯೆತ್ತಿ ಜೀವಿಸುತ್ತಿದ್ದಾಳೆ. ಮನಸ್ಸು ಕೆಟ್ಟು ಹೋಗಿದೆ. ಅವಳ ಕಷ್ಟವನ್ನು ನೋಡಿದೆಯಾ? ಹುಚ್ಚು ಕಳೆಯನ್ನು ಸುರಿಸುತ್ತಿಲ್ಲವೇ ಅವ್ರ? ಬೆಳಿಗ್ಗೆ ಮೊಸರು ಕಡೆಯಲು ಕುಳ್ಳಿರಿಸಿದ್ದೆ. ಎರಡು ಹಗ್ಗ ಎಳೆದಳು. ಮತ್ತೆ ಕೈಯನ್ನು ನಿಲ್ಲಿಸಿ ಬಿಟ್ಟಳು. ತನ್ನಷ್ಟಕ್ಕೆ ಏನನ್ನೋ ಗುಣುಗುಣಿಸುತ್ತಾ ಪುನಃ ಕಡೆಯ ಹತ್ತಿದಳು. ಆಕೆಯ ಮನಸ್ಸು ಸ್ಥಿಮಿತದಲ್ಲಿಲ್ಲ. ಅಷ್ಟೊತ್ತಿನಿಂದಲೂ ಹೊರಗೆ ಕುಳಿತಿದ್ದಾಳೆ. ಸ್ವಲ್ಪವಾದರೂ ಅತ್ತಿತ್ತ ಮಿಸುಕಾಡುತ್ತಿಲ್ಲ.'

'ನೀನೇನೂ ಆಕೆಯನ್ನು ನಿಲ್ಲಿಸಿಕೊಳ್ಳುವಂತಿಲ್ಲವಲ್ಲ?'

ವಿಸ್ಮಯದಿಂದ ಅಕ್ಕ ಪ್ರಶ್ನಿಸಿದಳು, 'ಏಕೆ?'

'ಒಂದು ವರ್ಷದಿಂದ ಊರೂರು ಅಲೆಯುತ್ತಿದ್ದ ಏಕಾಂಗಿ ಹೆಂಗಸನ್ನ ಯಾವ ಧೈರ್ಯದಿಂದ ಮನೆಯಲ್ಲಿಟ್ಟುಕೊಳ್ಳುವುದು? ಶೀಲ.......'

'ನೀನು ಈ ರೀತಿ ಯಾರಿಗೂ ಕಷ್ಟ ಕೊಡಬಾರದಮ್ಮಾ. ಒಂದು ವರ್ಷವನ್ನು ಹೇಗೆ ಕಳೆದಳೆಂಬುದು ದೇವರೇ ಬಲ್ಲ. ಏನೋ ಪೂರ್ವ ಜನ್ಮದ ಕರ್ಮಫಲ. ಅದೃಷ್ಟದಲ್ಲಿ ಕಷ್ಟಗಳನ್ನು ಭೋಗಿಸುವುದಿತ್ತು.'

ಅಸ್ವಾಭಾವಿಕ ಮತ್ತು ಅನಾವಶ್ಯವಾಗಿ ಸಿಟ್ಟುಗೊಂಡು ನಾನಂದೆ—'ಪ್ರಪಂಚದಲ್ಲಿ ಇವಳಿಗಿಂತಲೂ ಸಾವಿರ ಪಾಲು ಹೆಚ್ಚಿನ ದುಃಖಿನಿಯರು ಇದ್ದಾರೆ.'

ಅಕ್ಕ ನನ್ನ ಕುರ್ಚಿಯ ಹಿಂಬಾಗದಲ್ಲಿ ನಿಂತುಕೊಂಡು ನನ್ನೆರಡು ಭುಜಗಳ ಮೇಲೆ ತನ್ನ ಕೈಯನ್ನಿರಿಸಿ ಅಂದಳು. 'ನೀನೇಕೆ ಸಿಟ್ಟಾಗುವೆ ತಂಗೀ? ಎಲ್ಲರ ದುಃಖಗಳನ್ನು ಒಬ್ಬನೇ ದೂರೀಕರಿಸಬೇಕಾದರೆ ಆತ ಗಾಂಧೀಜಿಯವರಂತಹ ಮಹಾತ್ಮನಾಗಿರಬೇಕು. ಹಾಗೆಂದು ನಾವು ಹತಭಾಗ್ಯರು. ನಮ್ಮಿಂದಾದಷ್ಟು ಸೇವೆಯನ್ನು ಸಲ್ಲಿಸಬೇಡವೇ? ತಂಗೀ, ಒಂದು ದಿನ ನಿನ್ನ ಬಳಿಯಲ್ಲಿಯೇ ನಾನು ಈ ಶಿಕ್ಷಣವನ್ನು ಪಡೆದೆ. ಇಲ್ಲದಿದ್ದಲ್ಲಿ ಈ ಕೂಪಮಂಡೂಕವು ಜಾತಿ, ಶೀಲ, ಆಚಾರದ ಸುಳ್ಳು ಬಂಧನವನ್ನು ಹಿಂದೊಗೆದು ವಿಶಾಲಭಾವನೆಯನ್ನು ಪಡೆಯಲು ಶಕ್ಯವಾಗುತ್ತಿದ್ದಿತೇ? ನೀನು ಜಾಣೆ. ದೇವರು ನಿನಗೆ ಬುದ್ಧಿಶಕ್ತಿಯನ್ನಿತ್ತು, ಲೇಖನ ಸಾಮರ್ಥ್ಯವನ್ನಿತ್ತು, ತನ್ಮೂಲಕ ನನ್ನಂತಹ ಸಾವಿರಾರು ಹೃದಯಗಳಲ್ಲಿ ಹಣತೆಯನ್ನು ಹಚ್ಚಿ ತೇಲ ಬಿಟ್ಟಿರುವನು. ನೀನು ನಮ್ಮ ಕುಲದ ಜ್ಯೋತಿ.......'

ತಂಗಿಯ ಮೇಲೆ ಅತೀವ ಅಭಿಮಾನಪಟ್ಟು ಸ್ನೇಹಮಯಿಯಾದ ಅಕ್ಕ, ಹೃದಯ ತುಂಬಿಬಂದು ಮಾತನಾಡುತ್ತಿದ್ದಳು. ಅವಳ ನಯನಗಳಿಂದ ತೊಟ್ಟಿಕ್ಕುವ ಕಂಬನಿ, ಹನಿಹನಿಯಾಗಿ ನನ್ನ ಭುಜವನ್ನು ತೋಯಿಸುತ್ತಲಿತ್ತು.

ನಾನು ಸ್ತಬ್ಧಳಾಗಿ ಕುಳಿತು ಬಿಟ್ಟೆ. ಎಂತಹ ವಿಡಂಬನೆಯಿದು!

ದೀಪ ಹಚ್ಚುವ ಹೊತ್ತಿಗೆ ಮನೆಗೆ ಬಂದವರೇ ಭಾವ ಅಕ್ಕನೊಡನೆ ಕೇಳಿದರು. 'ಹೊರಗೆ ಕುಳಿತ ಹೆಂಗಸು ಯಾರು? ಮಾತನ್ನಾಡಿಸಿದರೆ ಮಿಕಮಿಕನೆ ನೋಡುವಳಲ್ಲ!'

ಅಕ್ಕ ಹೇಳಿದಳು 'ಆಕೆ ಹುಚ್ಚಿ.'

'ನಿಜವೇ? ದಾಸುವನ್ನು ಕರೆದು ಆಕೆಯನ್ನು ಹೊರಗೇಕೆ ಅಟ್ಟಲಿಲ್ಲ?'

'ಎಂತಹ ಮಾತುಗಳನ್ನಾಡುತ್ತೀರಿ ನೀವು? ಆಕೆಯ ತಾಯಿ ನಮ್ಮನೆತ್ತಿ ಆಡಿಸಿದ್ದಾಳೆ. ಎಷ್ಟೋ ಸಲ ಸಿಟ್ಟುಮಾಡಿ ಅನ್ನವನ್ನು ಚೆಲ್ಲಿಬಿಟ್ಟಾಗ ಮುದ್ದುಮಾಡಿ ಉಣಿಸಿದ್ದಾಳೆ. ಇಂದು ಆಕೆ ಇಲ್ಲ. ಹಾಗೆಂದು ಆಕೆಯ ಮಗಳ ಬಗ್ಗೆ ನಮ್ಮ ಕರ್ತವ್ಯವೂ ಇಲ್ಲವಾಗುವುದೇ? ನಾಲ್ಕು ದಿನ ಆಸ್ಪತ್ರೆಗೆ ಸೇರಿಸಿ ನೋಡೋಣ. ನಿಮ್ಮ ಅಡ್ಡಿ ಆತಂಕಗಳಿಲ್ಲದಿದ್ದಲ್ಲಿ ನಾನಾಕೆಯನ್ನು ನಿಲ್ಲಿಸಿಕೊಳ್ಳುವೆ.'

'ಒಳ್ಳೇದು, ಬೇಡ ಅನ್ನುವವರು ಯಾರು? ನಿನ್ನ ತಂಗಿ ಕಾಣುವುದಿಲ್ಲವಲ್ಲ?'

ಆಗ ನಾನು ದೇವರ ಕೋಣೆಯಲ್ಲಿ ಬತ್ತಿ ಹೊಸೆಯುತ್ತಾ ಕುಳಿತಿದ್ದೆ. ಅಪರಾಧಿನಿಯ ರೀತಿಯಲ್ಲಿ ಕೃಷ್ಣಪರಮಾತ್ಮನ ವಿಗ್ರಹದ ಅಡಿದಾವರೆಗಳಲ್ಲಿ ಪುಸ್ತಕವನ್ನಿರಿಸಿದೆ. ಜೀವನವನ್ನು ಬಗೆ ಬಗೆಯಾಗಿ ಚಿತ್ರಿಸುವ ನಾನಿಂದು ಒಬ್ಬ ದುಃಖಿನಿಯ ಹೃದಯವನ್ನು ಅರಿಯಲಾರದೆ ಹೋದೆ. ಅಕ್ಕ ಶಾಲೆಗೆ ಹೋಗಲಿಲ್ಲ; ಕಾಲೇಜು ಕಲಿಯಲಿಲ್ಲ; ದಪ್ಪ ದಪ್ಪ ಪುಸ್ತಕಗಳನ್ನು ನುಗುಚಿ ಹಾಕಲಿಲ್ಲ. ಆದರೆ ಜೀವನದಲ್ಲಿ ತನ್ನ ಕರ್ತವ್ಯವನ್ನು ಅರಿತಳು. ಮತ್ತು ವಿಚಿತ್ರ ಸಂಗತಿಯೇನೆಂದರೆ ಈ ಶಿಕ್ಷಣವನ್ನು ಆಕೆಯು ನನ್ನಿಂದಲೇ ಪಡೆದಳು.

ಸಹಸಾ, ನನ್ನ ಗರ್ವ ಚೂರ್ಣವಾಯಿತು. ಈ ಜಗತ್ತಿನಲ್ಲಿ ಕಲಿತಷ್ಟೂ ಮುಗಿಯದ ಅನೇಕ ಸಂಗತಿಗಳಿವೆ. ಈ ರೀತಿ ಸುಖವನ್ನೂ, ದುಃಖವನ್ನೂ ಹಾಸ್ಯವನ್ನೂ, ವಿಡಂಬನೆಯನ್ನೂ ಕಥೆಯಂತೆ ಒಂದಕ್ಕೊಂದು ಪೋಣಿಸಿ ವಿಧಿಯೇ ಈ ಅಭಾಗ್ಯ ಜೀವನವನ್ನು ರೂಪಿಸುತ್ತಿರಬೇಕು.

'ಚೇತನಾ.'

ಡಾ. ಶ್ಯಾಮಪ್ರಸಾದರ ದಸ್ತಗಿರಿ

ಜನಸಂಘದ ಪ್ರೆಸಿಡೆಂಟರಾದ ಡಾ. ಶ್ಯಾಮಪ್ರಸಾದ ಮುಖರ್ಜಿಯವರನ್ನೂ ಅವರ ಖಾಸಗಿ ಕಾರ್ಯದರ್ಶಿ ತಾರಾಚಂದರನ್ನೂ, ಡೆಲ್ಲಿಯ ಜನ ಸಂಘದ ಮುಂದಾಳು ಶ್ರೀ ಗುರುದತ್ ವೈದ್ಯರನ್ನೂ ತಾ ೧೧ರಲ್ಲಿ ಜಮ್ಮುವಿನಲ್ಲಿ ಪ್ರಿವೆಂಟಿವ್ ಸೆಕ್ಯೂರಿಟಿ ಆಕ್ಟ್ ಮೇರೆ ದಸ್ತಗಿರಿ ಮಾಡಿ ಕಾಶ್ಮೀರದ ರಾಜಧಾನಿ ಶ್ರೀನಗರಕ್ಕೆ ಕೊಂಡೊಯ್ಯಲಾಗಿದೆ.

ಕಾಶ್ಮೀರದ ಬಗ್ಗೆ ಹಿಂದೂದೇಶದ ಸರಕಾರವು ತಳೆದಿರುವ ನೀತಿಯನ್ನು ಶ್ಯಾಮಪ್ರಸಾದರು ಆದಿಯಿಂದಲೇ ಖಂಡಿಸಿರುವರು. ಹಿಂದೂದೇಶದ ನೂರಾರು ಸಂಸ್ಥಾನಗಳು ಹಿಂದೀ ಒಕ್ಕೂಟದಲ್ಲಿ ವಿಲೀನವಾಗಿವೆ. ಆದರೆ ಕಾಶ್ಮೀರಕ್ಕೆ ಒಂದು ಪ್ರತ್ಯೇಕ ಸ್ಥಾನವನ್ನು ಕೇಂದ್ರ ಸರಕಾರವು ಕಲ್ಪಿಸಿದೆ. ಭಾರತದ ಕಕ್ಷೆಯಲ್ಲಿ ಕಾಶ್ಮೀರವಿದ್ದರೂ ಕಾಶ್ಮೀರಕ್ಕೆ ಪ್ರತ್ಯೇಕ ಧ್ವಜ, ರಾಷ್ಟ್ರಗೀತೆ ಮೊದಲಾದುವನ್ನು ಕೇಂದ್ರ ಸರಕಾರ ಮನ್ನಿಸಿದೆ. ಅದು ತನ್ನದೆ ಆದ ರಾಜ್ಯ ಘಟನೆಯನ್ನು ತಯಾರಿಸುವ ಅನುವನ್ನೂ ಮಾಡಿಕೊಟ್ಟಿದೆ. ಈ ರೀತಿಯ ಒಂದು ಭಿನ್ನ ಧೋರಣೆಯನ್ನು ಶ್ಯಾಮ ಪ್ರಸಾದರು ಖಂಡಿಸಿರುವರು. ಕಾಶ್ಮೀರದ ಶೇಕ್ ಅಬ್ದುಲ್ಲಾ ಆಡಳಿತವು ಎಷ್ಟೇ ಪ್ರಗತಿಶೀಲವಾಗಿದ್ದರೂ ಮುಸ್ಲಿಂ ಭಾವನೆ ಅಲ್ಲಿದೆಯೆಂದೂ ಅದು ಹಿಂದೂದೇಶದಿಂದ ಸಿಡಿದು ಬೇರೊಂದು ರಾಜ್ಯವಾಗುವ ಸಾಧ್ಯತೆ ಇದೆಯೆಂದೂ ಶ್ಯಾಮ ಪ್ರಸಾದರ ಅಭಿಪ್ರಾಯ. ಮುಸ್ಲಿಂ ಲೀಗಿನ ಬೆನ್ನು ತಟ್ಟುತ್ತಾ ಅದರ ತಾಳಕ್ಕೆ ಕುಣಿಯುವರ ಫಲವಾಗಿ ಹಿಂದೂದೇಶವನ್ನು ಒಡೆದು ಪಾಕಿಸ್ತಾನವನ್ನು ಕೊಡಲಾಯಿತೆಂದೂ, ಅದೇ ರೀತಿ ಇಂದು ಶೇಕ್ ಅಬ್ದುಲ್ಲಾ ಮತ್ತವರ ನೇಶನಲ್ ಕಾನ್ಫರೆನ್ಸಿನ ಬೆನ್ನು ತಟ್ಟಿ ಮತ್ತೊಂದು ಸ್ವತಂತ್ರ ಮುಸ್ಲಿಂ ರಾಜ್ಯವಾಗುವ ಸಾಧ್ಯತೆ ಇದೆಯೆಂದೂ ಅದಕ್ಕಾಗಿ ಕಾಶ್ಮೀರವು ಭಾರತದ ಅಂಗವಾಗಿಯೇ ಉಳಿಯುವಂತೆ ಜನ ಸಂಘವು ಜಮ್ಮುವಿನಲ್ಲಿ ಪ್ರಖರವಾದ ಸತ್ಯಾಗ್ರಹ ಕೈಕೊಂಡಿರುವದಾಗಿಯೂ ಅವರು ಹೇಳುತ್ತಾರೆ. ಜನ ಸಂಘದ ಈ ಕಾರ್ಯಕಲಾಪಗಳು ಕೋಮುವಾರ, ಭಾವನೆಯಿಂದ ನಡೆಯುತ್ತವೆಯೆನ್ನುವ ಕಾಂಗ್ರೆಸಿನವರ ಹಾಗೂ ನೆಹರೂರವರ ಮಾತಿನಲ್ಲಿ ಹುರುಳಿಲ್ಲವೆಂದೂ ಜಮ್ಮು, ಕಾಶ್ಮೀರಗಳ ಸ್ಥಿತಿ ಹೇಗಿದೆಯೆಂದು ಸ್ವತಹ ನೋಡಿ ತಿಳಿಯಲು ತಾನು ಅಲ್ಲಿಗೆ ಹೊರಟಿದ್ದುದಾಗಿಯೂ ಮುಖರ್ಜಿಯವರು ಹೇಳಿದ್ದಾರೆ. ಆದರೆ ಅವರನ್ನು ಜಮ್ಮುವಿಗೆ ಪ್ರವೇಶಿಸಲು ಬಿಡದೆ ಶೇಕ್ ಅಬ್ದುಲ್ಲರ ಕಾಶ್ಮೀರ ಸರಕಾರವು ಬಂಧಿಸಿದೆ. ಜನ ಸಂಘವು ಪ್ರಾರಂಭಿಸಿರುವ ಸತ್ಯಾಗ್ರಹದ ಅವಶ್ಯಕತೆ ಮತ್ತು ಅಲ್ಲಿನ ಪರಿಸ್ಥಿತಿಯ ಪರಿಶೀಲನೆ ಮಾಡಿ ಶಾಂತ ಪರಿಸ್ಥಿತಿಯನ್ನು ನಿರ್ಮಿಸುವದೇ ತನ್ನ ಸಂದರ್ಶನದ ಗುರಿ ಇತ್ತೆಂದು ಶ್ಯಾಮ ಪ್ರಸಾದರು ಹೇಳಿರುವರು.

———

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.
BUSINESS IN FORCE OVER 40 CRORES
ASSETS .... OVER 12 CRORES
Applications from energetic youngmen are invited for representation.
25-10
Head Office; BOMBAY.
Branch: 172. 3, Narasimharaja Road. BANGALORE 2.

Edited Printed and Published by P. I. BELLIAPPA at 'KODAGU' Press Mercara, for Kodagu Ltd.,

ಕೊಡಗು
KODAGU
KANNADA
WEEKLY
MERCARA

ಇಂಡಿಯಾದ ಜೇನು ವ್ಯವಸಾಯ ಸಭೆ

(ಕೊಡಗು ವ್ಯವಸಾಯ ಇಲಾಖೆಯಿಂದ)

ಕೇಂದ್ರ ಸರಕಾರದ ವ್ಯವಸಾಯ ಮಂತ್ರಿ ಡಾ. ಪಂಜಾಬ್‌ರಾವ್ ದೇಶ್‌ಮುಖರವರು ನವದೆಹಲಿಯಲ್ಲಿ ೪-೩-೫೩ ರಂದು ಜೇನು ವ್ಯವಸಾಯ ಆಲೋಚನಾ ಸಭೆ ಉದ್ಘಾಟನಾ ಸಮಾರಂಭವನ್ನು ನೆರವೇರಿಸುವ ಕಾಲಕ್ಕೆ ಮಾಡಿದ ಭಾಷಣದ ಅನುವಾದವನ್ನಿಲ್ಲಿ ಕೊಡಲಾಗಿದೆ.

ಜೇನು ವ್ಯವಸಾಯವೆಂದರೆ 'ಮಧುಕರನ ಸ್ವಾಭಾವಿಕಗುಣವನ್ನರಿತು ಅದರಂತೆ ಅನುಸರಿಸುವದು' ಎಂಬುದಾಗಿ ವಿವರಿಸುತ್ತಾರೆ. ಆದುದರಿಂದ ಜೇನು ವ್ಯವಸಾಯದಲ್ಲಿ ಜಯಪಡೆಯಬೇಕಾದವನು ಜೇನುನೊಣದ ಸ್ವಾಭಾವಿಕ ಗುಣ, ನಡತೆ ಮತ್ತು ಗೂಡಿನ ನೀತಿಗಳನ್ನು ಮೊದಲಾಗಿ ಅರಿತುಕೊಳ್ಳಲೇಬೇಕು. ಜೇನು ನೊಣಕ್ಕೆ ಜ್ಞಾನಶಕ್ತಿಯಿಲ್ಲದ್ದರಿಂದ ಅದು ನಮ್ಮ ಆಜ್ಞೆಗೆ ವಿಧೇಯತೆಯನ್ನು ತೋರದು. ಆದುದರಿಂದ ಅವುಗಳ ಬುದ್ಧಿ ಮತ್ತು ಗುಣಗಳ ಪರಿಚಯವನ್ನು ಮಾಡಿಕೊಂಡು ಅವುಗಳ ಇರಾದೆಗಳಿಗನುಗುಣವಾಗಿ ಅವುಗಳನ್ನು ಸಾಕುವ ನಮ್ಮ ಪದ್ಧತಿಯನ್ನು ರೂಪಿಸಿಕೊಂಡು ತನ್ಮೂಲಕ ಲಾಭವನ್ನು ಹೊಂದಿಕೊಳ್ಳಬೇಕು.

ಜೇನು ವ್ಯವಸಾಯವು ರಾಷ್ಟ್ರೀಯ ಅವಶ್ಯಕತೆಯ ದೃಷ್ಟಿಯಿಂದ ಬಹು ಪ್ರಾಮುಖ್ಯವಾದುದು. ಇದು ಒಂದು ಗೃಹಕೈಗಾರಿಕೆಯಾಗಿದ್ದರೂ ಇತರ ಕೈಗಾರಿಕೆಗಳಂತೆ ಯಂತ್ರಗಳೊಡನೆ ಪೈಪೋಟಿ ನಡೆಸುವ ದಿನ ಮತ್ತು ಸಂದರ್ಭ ಯಾವತ್ತೂ ಬಾರದು. ಜೇನು ಕೃಷಿಗೆ ಯಂತ್ರಗಳನ್ನು ಉಪಯೋಗಿಸಿ ತನ್ಮೂಲಕ ಜೇನು ತುಪ್ಪವನ್ನು ಉತ್ಪಾದನೆ ಮಾಡಲು ಎಂದೆಂದಿಗೂ ಸಾಧ್ಯವಿಲ್ಲ.

ಇಂಡಿಯಾದ ಗ್ರಾಮಾಂತರಗಳ ರೈತಾಪಿ ಜನರಿಗೆ ಆರ್ಥಿಕ ದೃಷ್ಟಿಯಿಂದ ಅವರ ಮುಖ್ಯ ವೃತ್ತಿಯ ಜತೆಗೆ ತಕ್ಕುದಾದುದೊಂದು ಉಪ ಕೈಗಾರಿಕೆ ಬೇಕೇಬೇಕು. ಈ ಕೃಷಿಗೆ ಯೋಗ್ಯವಾದ ಭಾಗಗಳಲ್ಲಿ ಜೇನು ವ್ಯವಸಾಯವು ಅತ್ಯುಪಯುಕ್ತವಾದುದು. ಶ್ರೀಮಂತರಿಗೂ, ಸ್ಥಿತಿವಂತರಿಗೂ ತಮ್ಮ ಬಿಡುವಿನ ಸಮಯದಲ್ಲಿ ಇದೊಂದು ಉಲ್ಲಾಸವನ್ನು ಕೊಡುವ ವಿಶ್ರಾಂತಿ ವೃತ್ತಿ. ಶ್ರಮಜೀವಿಗಳಿಗೆ ಅವರ ಪ್ರತಿನಿತ್ಯದ ಕಾಯಕಷ್ಟದ ನಂತರ ಸ್ವಲ್ಪ ಬಿಡುಮಾಡಿಕೊಂಡು ಕೆಲವು ಜೇನು ಗೂಡುಗಳೊಡನೆ ಕೆಲಸ ಮಾಡುವದರಿಂದ ತಕ್ಕ ಮನೋರಂಜನೆ ಮತ್ತು ಸವಿಶ್ರಾಂತಿ ದೊರಕುತ್ತೆ. ಇದರಿಂದ ಮನಸ್ಸು ವಿಕಾಸಹೊಂದುವದಲ್ಲದೆ ಅರಿಯದೆ ಅಳಿದುಹೋಗುತ್ತಿರುವ ಅದೆಷ್ಟೋ ಪುಷ್ಪದ ರಸವನ್ನುಗಳಿಸಿ ಮನುಷ್ಯನಿಗೆ ಉಳಿಸಿದಂತಾಗುತ್ತೆ. ಇದಕೋಸ್ಕರ ಹೆಚ್ಚಿನ ಜಾಗವನ್ನು ವ್ಯವಸಾಯಕ್ಕೆ ತರುವ ಅವಶ್ಯಕತೆಯಿಲ್ಲ. ಸ್ವಾಭಾವಿಕವಾಗಿಯೇ ಅದೆಷ್ಟೋ ಲಕ್ಷಾಂತರ ಗಿಡಮರ ಬಳ್ಳಿಗಳ ಹೂವರಳಿ ವರ್ಷಂಪ್ರತಿ ಪುಷ್ಪರಸವನ್ನು ಬೀರುತ್ತಿರುತ್ತವೆ. ಸಂಗ್ರಹಿಸುವವರಿಗೆ ಅದು ಮುಫತ್ತಾಗಿ ದೊರೆಯುತ್ತದೆ. ಹೀಗೆ ಹೇರಳವಾಗಿ ದೊರೆಯುವ ಪುಷ್ಪದ ರಸವನ್ನು ಜೇನು ನೊಣವು ಸಂಗ್ರಹಿಸದಿದ್ದರೆ ಸೂರ್ಯನ ಮಳೆಯ ಮತ್ತು ಗಾಳಿಯಾಟದಿಂದ ಇದು ಬತ್ತಿ ಯಾ ಕೊಚ್ಚಿ ಹೋಗಿ ಬರಿದಾಗುತ್ತದೆ. ಅದೂ ಅಲ್ಲದೆ ಇದು ಆರೋಗ್ಯ ವರ್ಧಕವಾದ ಸತ್ವಪದಾರ್ಥವಾದುದರಿಂದ ಉತ್ತಮ ವಸ್ತುಗಳನ್ನು ಬೆಲೆಗೆ ಕೊಳ್ಳಲಾರದ ಗ್ರಾಮಾಂತರಗಳ ಶ್ರಮಜೀವಿಗಳಿಗೆ ಇದೊಂದು ವರಪ್ರಸಾದದಂತೆ!

ಜೇನು ವ್ಯವಸಾಯವು ಮಾನವನ ಬಹು ಪುರಾತನ ವೃತ್ತಿ. ಮನುಷ್ಯನಿಗೆ ಅತೀ ಪೂರ್ವದಲ್ಲಿ ತಿಳಿದ ಸಿಹಿ ಪದಾರ್ಥವೆಂದರೆ ಅದು ಜೇನು ತುಪ್ಪ. ಆಗಿನ ಕಾಲದಲ್ಲಿ ಜೇನಿಗೆ ಉತ್ತಮ ಸ್ಥಾನ ದೊರಕಿತ್ತು. ಕಬ್ಬಿನ, ಬೀಟ್‌ರೂಟ್ ಸಕ್ಕರೆ ಆಗ ತಿಳಿದಿರಲಿಲ್ಲ. ಖುರಾನ ಗ್ರಂಥದಲ್ಲಿ ಜೇನಿನ ವಿಚಾರವಾಗಿ ಒಂದು ಪ್ರತ್ಯೇಕ ಅಧ್ಯಾಯವೇ ಬರೆಯಲ್ಪಟ್ಟಿದೆ. ಜೇನು ನೊಣವು ಸಿಹಿಯಾದ ಜೇನು ತುಪ್ಪವನ್ನು ಕೊಡುವದು ಮಾತ್ರವಲ್ಲದೆ ದವಸಧಾನ್ಯಗಳ ಮತ್ತು ಹಣ್ಣುಹಂಪಲುಗಳ ಬೆಳೆಯನ್ನು ಪರಕೀಯ ಪರಾಗ ಸ್ಪರ್ಶದ ಕಾರ್ಯದಲ್ಲಿ ಪ್ರಾಮುಖ್ಯ ಪಾತ್ರ ವಹಿಸಿ ಬಹುವಾಗಿ ಹೆಚ್ಚಿಸುತ್ತದೆ. ಹಿಂದಿನ ಕಾಲದಲ್ಲಿ ಜೇನು ನೊಣವನ್ನು ಯುದ್ಧ ಕಾಲದಲ್ಲಿ ದಂಡೆತ್ತಿ ಹೋಗುವಾಗಲೂ ಮತ್ತು ರಕ್ಷಣೆಗಾಗಿಯೂ ಉಪಯೋಗಿಸುತಿದ್ದರು. ಈಗ ಮಾತ್ರ ಅದಿಲ್ಲ.

ಇಂಡಿಯಾದಲ್ಲಿ ಮಾತ್ರ ಜೇನು ವ್ಯವಸಾಯವು ಶೈಶವಾವಸ್ತೆಯಲ್ಲಿಯೇ ಇದೆ. ಇಲ್ಲಿ ಜೇನು ಸಾಕುವ ಕೆಲಸದ ಹೆಸರಿನಲ್ಲಿ ಜೇನು ನೊಣದ ಕೊಲೆಯೇ ಆಗುತ್ತಿದೆ. ಜೇನು ಗೂಡುಗಳಿಗೆ ಬೆಂಕಿ ಹಾಕಿ ನೊಣಗಳನ್ನು ಕೊಂದು ಅಲ್ಪ ಸ್ವಲ್ಪ ಜೇನನ್ನು ದೊರಕಿಸಿಕೊಳ್ಳುತ್ತಿದ್ದೇವೆ. ಇಂಡಿಯಾದ ವಾರ್ಷಿಕ ಜೇನು ಉತ್ಪತ್ತಿ ಹತ್ತರಿಂದ ಹನ್ನೆರಡು ಮಿಲಿಯ ರಾತಲುಗಳು ಮಾತ್ರವೆಂದೂ ಅಂದಾಜು ಮಾಡಲಾಗಿದೆ. ಇದರ ಮೂರರಲ್ಲಿ ಒಂದಂಶ ಮಾತ್ರ ವಾಣಿಜ್ಯ ಚಾಲುವೆಗೆ ಬರುತ್ತದೆ. ಇದಕ್ಕೆ ವಿರೋಧವಾಗಿ ಅಮೇರಿಕೆಯ ಸಂಯುಕ್ತ ಸಂಸ್ಥಾನವನ್ನು ಸರಿಹೋಲಿಸಿ ನೋಡಿದರೆ ಅಲ್ಲಿ ವಾರ್ಷಿಕ ಜೇನು ಉತ್ಪತ್ತಿ ಇನ್ನೂರು ಮಿಲಿಯ ರಾತಲುಗಳಿಗೆ ಮೀರಿದೆ. ಸಂಯುಕ್ತ ಅಮೇರಿಕೆಯ ಒಬ್ಬ ಮನುಷ್ಯನಿಗೆ ಸರಾಸರಿ ಜೇನು ಉತ್ಪತ್ತಿ ಒಂದುವರೆ ರಾತಲೆಂದು ಲೆಕ್ಕ ಹಾಕಲಾಗಿದೆ. ಕೆನಡಾದಲ್ಲಿ ಒಬ್ಬ ವ್ಯಕ್ತಿಗೆ ಎರಡುವರೆಯಿಂದ ಮೂರು ರಾತಲಿನ ವರೆಗೆ ಸರಾಸರಿ ಉತ್ಪತ್ತಿ. ಆದರೆ ನಮ್ಮ ಇಂಡಿಯಾದಲ್ಲಿ ಮಾತ್ರ ವ್ಯಕ್ತಿಗೆ ಸರಾಸರಿ ಉತ್ಪತ್ತಿ ಅರ್ಧ ಔನ್ಸು. ಸಂಯುಕ್ತ ಅಮೇರಿಕೆಯಲ್ಲಿ ೮ ಲಕ್ಷ ಜನರು ಜೇನು ವ್ಯವಸಾಯದಿಂದ ಲಾಭವನ್ನು ಗಳಿಸುತ್ತಾರೆ. ಇಂಗ್ಲಾಂಡಿನಲ್ಲಿ ಈ ಕಳೆದ ಕೆಲವು ವರ್ಷಗಳಿಂದ ಇದು ಬಹಳ ಮುಂದುವರಿದಿದೆ. ರಷ್ಯಾ, ಆಸ್ಟ್ರೇಲಿಯಾ ಮತ್ತು ನ್ಯೂಝಿಲೇಂಡ್‌ಗಳಲ್ಲಿ ವರ್ಷಂಪ್ರತಿ ಮಿಲಿಯಗಟ್ಟಲೆ ರಾತ್ಲು ಜೇನು ಉತ್ಪತ್ತಿಯಾಗುತ್ತಿದೆ. ಜೇನು ತುಪ್ಪವು ಪ್ರಕೃತಿಯಲ್ಲಿ ಮುಫತ್ತಾಗಿ ದೊರೆಯುವ ಪುಷ್ಪರಸದಿಂದ ಜೇನುನೊಣಗಳ ಮೂಲಕ ಮನುಷ್ಯನ ನಾನಾ ಉಪಯೋಗಕ್ಕೆ ಯೋಗ್ಯವಾಗುವಂತೆ ಮಾರ್ಪಟ್ಟು ಅವನ ಆಹಾರಕ್ಕಾಗಿ ನೇರವಾಗಿ ಒದಗುವ ಪದಾರ್ಥವಾಗಿದೆ. ಇದು ಶಕ್ತಿವರ್ಧಕ ಆಹಾರವೆಂದೂ ಅನೇಕ ಕಾಯಿಲೆ ಕಸಾಲೆಗಳಿಗೆ ಸಿದ್ಧೌಷಧವೆಂದೂ ಹೆಸರು ಹೋಗಿದೆ. ಎ. ಬಿ. ಸಿ. ಜೀವಾತುಗಳು ಸ್ವಲ್ಪ ಪರಿಮಾಣದಲ್ಲಿ ಅದರಲ್ಲಡಕವಾಗಿದೆ. ಇದರಲ್ಲಿ ಕ್ರಿಮಿಕೀಟಗಳೂ, ರೋಗಾಣುಗಳೂ ಅಭಿವೃದ್ಧಿ ಹೊಂದಲಾರವು. ಅಷ್ಟೇ ಅಲ್ಲ ಅದರಲ್ಲಿ ಕ್ರಿಮಿನಾಶಕ ಗುಣವಿದೆ. ಇದು ಹಾಲಿನೊಂದಿಗೆ ಸಂಪೂರ್ಣ ಆಹಾರ. ಇದರಲ್ಲಿ ಶಕ್ತಿವರ್ಧಕ ಸಸಾರವೂ ರಕ್ತಕ್ಕೆ ಸುಲಭದಲ್ಲಿ ದೊರಕುವ ರೂಪದಲ್ಲಿದೆ. ಶುದ್ಧವಾದ ಜೇನುತುಪ್ಪವನ್ನು ಅನೇಕ ವರ್ಷಗಳ ವರೆಗೆ ಇಡಬಹುದು. ಇದು ಬಹುದೂರ ರವಾನಿಸಲ್ಪಟ್ಟರೂ ಕೆಟ್ಟು ಹೋಗಲಾರದು.

— — —

ಧರ್ಮ ರಹಸ್ಯ.

ಆಸೆ

== ಭರ್ತೃಹರಿಯ ವೈರಾಗ್ಯ ಶತಕದಿಂದ ==

(೧) ಸುಖವಿಲಾಸಗಳು ಯೋಚಿಸಿದಂತೆ ದೊರೆಯಲಿಲ್ಲ. ಆದರೆ ಅವುಗಳನ್ನು ನೆನೆನೆನೆದು ಬೆಂಡಾದೆನು. ತಪಸು ಮತಾದಿಗಳನ್ನು ನಾನು ಮಾಡಲಿಲ್ಲ. ಆದರೆ ತಾಪತ್ರಯಗಳಿಂದ ತಪಿಸಿದೆನು. ಕಾಲವು ಒಂದೇ ರೀತಿ ತಿರುಗುತ್ತಿದೆ; ನನ್ನ ಕಾಲ ಹತ್ತಿರ ಬಂದಿದೆ. ಸಜ್ಜನರ ಸಂಗ ಮಾಡಿಕೊಳ್ಳಲಾಗಲಿಲ್ಲ ನನ್ನ ದೇಹ, ನನ್ನ ಮನೆ, ಇವುಗಳ ಕ್ಷೇಮಚಿಂತನೆಯಿಂದಲೂ, ವಿಲಾಸದ ವಿಚಾರದಿಂದಲೂ ಕಾಲ ಮುಗಿಯುತ್ತಾ ಬಂತು. ಆದರೆ ನನ್ನ ಆಸೆ ಮುಗಿಯಲಿಲ್ಲ.

(೨) ಆಸೆಗೆ ಅಧೀನನಾಗಿ ನಾನು ಮುದುಕನಾದೆ. ಚರ್ಮ ಸುರುಳಿತು. ತಲೆ ನೆರೆತಿತು. ಮುಖ ಸೌಂದರ್ಯ ಕೆಟ್ಟಿತು. ಅಂಗಗಳೂ ಬಳಲಿದವು. ಮುದಿತನ ಬಂತು. ವಿಷಯ ಭೋಗದ ಶಕ್ತಿ ಉಡುಗಿತು. ಪೌರುಷ ಕುಂದಿತು. ಜನತೆಯ ಗೌರವ ಬಹುಮಾನಗಳು ಮಾಯವಾದವು. ಆಪ್ತರನೇಕರು ನನಗೆ ಮುಂಚೆಯೇ ಪರಲೋಕ ಸೇರಿದರು. ವ್ಯರ್ಥಜೀವಿಯಾದ ನಾನೇಕೆ ಉಳಿದೆನು? ನನಗೆ ನಡೆಯಲು ಊರುಗೋಲು ಬೇಕು. ಕಣ್ಣು ಕಾಣಿಸದು. ಆದರೂ ಮರಣಕ್ಕೆ ಅಂಜುವೆನಲ್ಲಾ? ಅಯ್ಯೋ ಮನಸ್ಸೇ ಇನ್ನೂ ಬದುಕಲು ಆಸೆ ಪಡುವೆಯಾ?

(೩) ಆಸೆಯೆಂಬುದು ನದಿಯಂತೆ, ಅಭಿಲಾಷೆಗಳು ನೀರಿನಂತೆ. ಸಿಗುತ್ತವೆ, ಸಿಗುತ್ತವೆ ಎಂಬ ಕಾಂಕ್ಷೆಯೇ ತೆರೆಗಳು. ರಾಗದ್ವೇಷಾದಿಗಳು ನದಿಯೊಳಗಿನ ಮೊಸಳೆಗಳು. ಅಜ್ಞಾನವೆಂಬ ಸುಳಿಗುಂಡಿಯಲ್ಲಿ ಈ ನದಿಗಿಳಿದವರು ಸಿಲುಕುತ್ತಾರೆ. ಚಿಂತೆಯೇ ಈ ನದಿಯ ದಡಗಳು. ಈ ನದಿಯನ್ನು ಹೇ ಮಾನವಾ ಜ್ಞಾನವೆಂಬ ದೋಣಿಯಲ್ಲಿ ದಾಟಿ ಆಸೆಯ ಪಾಶದಿಂದ ಪಾರಾಗಿ ನಿತ್ಯಾನಂದವನ್ನು ಪಡೆ.

(೪) ಸಂಸಾರದಲ್ಲಿದ್ದು ಪುಣ್ಯಕರ್ಮಗಳೆಂದು ಮಾಡುವ ಕೆಲಸಗಳೆಲ್ಲವೂ ಉತ್ತಮವಾಗಲಾರವು. ಏಕೆಂದರೆ ಪುಣ್ಯದ ಅವಧಿಯ ಪುನಶ್ಚ ವಿಪತ್ತು ಬರಲೇಬೇಕು. ನಿಶ್ಚಿತ ಕಾಂಕ್ಷೆಯಿಂದ ಮಾಡಿದ ಪೂಜೆ, ದಾನ, ಎಲ್ಲವೂ ವ್ಯಸನವನ್ನು ತಂದೊಡ್ಡದಿರವು. ಸುಖಭೋಗಕ್ಕಾಗಿ ಗೈಯುವ ಹೋಮಾದಿ ಕಾಮ್ಯಫಲದ ಕರ್ಮಗಳನ್ನು ಬಿಡುವದೇ ಉತ್ತಮ.

(೫) ಸಂಸಾರದ ಸುಖಗಳು ಕೆಲಕಾಲವಿದ್ದು ಅಳಿದು ಹೋಗುವವೆಂಬುದು ಎಲ್ಲರಿಗೂ ತಿಳಿದ ವಿಷಯ. ಹೇಗೂ ತೊಲಗಲಿಕ್ಕಿರುವ ಈ ಸುಖಗಳನ್ನು ಮುಂಚಿತವಾಗಿಯೇ ಉಪೇಕ್ಷಿಸಿದರೆ ದೋಷವೇನು? ಆದರೆ ಮಾನವನನ್ನು ಆಸೆ ಬಿಡಲೊಲ್ಲದು. ನಾವಾಗಿ ಅವನ್ನು ತ್ಯಜಿಸಿದರೆ ಅದರಿಂದ ಆನಂದದೊರೆಯುವದು. ಮುಂದೆ ಬರುವ ದುಃಖಗಳಿಗೆ ಆಸ್ಪದವಿಲ್ಲದಂತೆ ಇಂದಿನ ನಶ್ವರ ಆನಂದವನ್ನು ತ್ಯಜಿಸುವದು ಯೋಗ್ಯ.

(೬) ತ್ಯಾಗವೇ ಮಹತ್ಕಾರ್ಯ. ಹಿರಿಯರ ಆಸ್ತಿಯೂ ನಿತ್ಯವಲ್ಲ. ಶಾಶ್ವತ ಸುಖ ನಶ್ವರ ಮಾರ್ಗದಿಂದ ದೊರೆಯಲಾರದು. ಸಿಕ್ಕೀತು, ನಾನು ಸುಖಪಟ್ಟೇನು ಎಂಬ ಆಸೆಯಿಂದ ಗಾಳಿಗೋಪುರ ಕಟ್ಟುವದೇ ಜೀವನದ ಉದ್ಯಮವಾಗದಿರಲಿ. ಕ್ಷಣಿಕ ಸುಖದ ಆಸೆ ತೊರೆದ ಹೊರತು ಜ್ಞಾನೋದಯವಾಗಲಾರದು.

ಮಡಿಕೇರಿಯಲ್ಲಿ

॥ ವಸಂತ ಸಾಹಿತ್ಯೋತ್ಸವ ॥

ಸಾಹಿತ್ಯ ಹೃದಯವನ್ನು ಮಿಡಿಯಬೇಕು. ಇಂದಿನ ಜನಕ್ಕೆ ಸಜೀವ ಸಾಹಿತ್ಯಬೇಕು. ಬಡವರನ್ನು ಅಶಕ್ತರನ್ನು ಕುಗ್ಗಿಸುವ ಸಾಹಿತ್ಯಬೇಡ ಎಂಬುದಾಗಿ ಇದೇ ತಾ. ೩೧ರಲ್ಲಿ ಕೊಡಗಿನ ಮುಖ್ಯ ಮಂತ್ರಿಗಳಾದ ಶ್ರೀ ಸಿ. ಯಂ. ಪೂಣಚ್ಚನವರು ವಸಂತ ಸಾಹಿತ್ಯೋತ್ಸವದ ಉದ್ಘಾಟನೆ ಮಾಡುತ್ತಾ ಹೇಳಿದರು. ಹಿಂದಿನ ಸಂಸ್ಕೃತಿ ಏನು, ಜಿಲವಾಗುತ್ತಿರುವ ಆ ಸಂಸ್ಕೃತಿಯನ್ನು ಉಜ್ಜೀವನ ಗೊಳಿಸಿ, ನಮ್ಮ ಜನರ ಸಮಾಜದಲ್ಲಿ ಸುಪ್ತವಾಗಿರುವ ಆ ನೀತಿ, ಶೀಲಗಳನ್ನು ಬಡಿದೆಬ್ಬಿಸುವ ಸಾಹಿತ್ಯ ಇಂದು ಬೇಕಾಗಿದೆ. ಇಂದಿನ ಸಾಹಿತಿಗಳು ದೊಡ್ಡವರಾದವರು ಬಡವರನ್ನು ತುಳಿಯುವ ಅಥವಾ ಬಲಯುತನಾದವನು ಅಶಕ್ತರನ್ನು ಹಿಮ್ಮೆಟ್ಟಿಸುವ ದೃಶ್ಯಗಳನ್ನು ಉತ್ಪ್ರೇಕ್ಷೆಯಿಂದ ವರ್ಣಿಸಿ ದೊಡ್ಡವರು ಸಣ್ಣವರೆಂಬ ಭೇದಕಲ್ಪನೆಯನ್ನು ಮಾಡಿ ಅವರೀರ್ವರೊಳಗೆ ದ್ವೇಷಾಸೂಯೆಗಳು ನೆಲೆಸುವಂತೆ ಮಾಡುತ್ತಿರುವರು. ಇದು ಸಮಾಜದಲ್ಲಿ ಆಗಬಾರದು. ಸಮಾಜದ ನೈತಿಕ ದೃಷ್ಟಿಯನ್ನು ದೊಡ್ಡದು ಮಾಡಿ ಒಂದು ಹೃದಯ ಮತ್ತೊಂದು ಹೃದಯವನ್ನು ಅರಿಯುವ ಉದಾತ್ತ ಶೀಲವನ್ನು ಬೀರುವ ಅಮೋಘ ಸಾಹಿತ್ಯ ನಮ್ಮಲ್ಲಿ ಇನ್ನೂ ಬೆಳೆಯಬೇಕಾಗಿದೆ. ಇದಕ್ಕೆ ಇಂದಿನ ಸಾಹಿತ್ಯ ಪ್ರವರ್ತಕರು ದೃಷ್ಟಿ ಬದಲಾಯಿಸಿಕೊಳ್ಳಬೇಕು. ನಮ್ಮ ಸಂಸ್ಕೃತಿ ಬಹು ದೊಡ್ಡದು. ಆ ಸಂಸ್ಕೃತಿಯನ್ನು ನಮ್ಮ ಜನರಲ್ಲಿ ತುಂಬುವ ಗ್ರಂಥಗಳು, ಕಾವ್ಯಗಳು ಉದ್ಭವವಾದರೇನೆ ನಮ್ಮ ಕಲ್ಯಾಣವಾಗುವದು ಎಂದೂ ಹೇಳಿದರು.

ಅನಂತರ ದಿವಂಗತರಾದ ಶ್ರೀ ಸಿ. ಎರ್. ವೆಂಕಪಯ್ಯನವರು, ಶ್ರೀ ಎನ್. ಮುದ್ದಪ್ಪನವರು, ವೈದ್ಯಭಾನು ಶ್ರೀ ಡಿ. ಕೆ. ಭಾರದ್ವಾಜರು, ನಟಶ್ರೇಷ್ಠರಾದ ಶ್ರೀ ಕೆ. ಹಿರಣ್ಣಯ್ಯನವರು ಇವರ ಅಕಾಲ ಮರಣಕ್ಕಾಗಿ ಸಂತಾಪವನ್ನು ಸೂಚಿಸಿ ಸಭಾಧ್ಯಕ್ಷರಾದ ಶ್ರೀ ಬಿ. ಎಸ್. ಕುಶಾಲಪ್ಪನವರು ಭಾಷ್ಪಾಂಜಲಿಯನ್ನರ್ಪಿಸಿದರು. ಸಭೆಯು ಒಂದು ನಿಮಿಷಕಾಲ ಮೌನವಾಗಿ ನಿಂತು ದಿವಂಗತರ ಆತ್ಮಕ್ಕೆ ಶಾಂತಿಯನ್ನು ದಯಪಾಲಿಸಲೆಂದು ಭಗವಂತನನ್ನು ಪ್ರಾರ್ಥಿಸಿದರು.

ಗಮಕಿಗಳಾದ ಶ್ರೀ ಬಿ. ಎಸ್. ರಾಮಾಚಾರ್ಯರು,ಕವಿವರ್ಯರಾದ ಪ್ರೊ॥ ಕೆ ವಿ. ಪುಟ್ಟಪ್ಪ, ಪ್ರೊ॥ ದ. ರಾ. ಬೇಂದ್ರೆ. ಶ್ರೀ ಪು. ತಿ. ನರಸಿಂಹಚಾರ್ಯ ಇವರ ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಅನಂತರ ಮೈಸೂರಿನ ಸಂಸ್ಕೃತಿ ಮತ್ತು ಕಲಾಶಾಖೆಯ ಡೈರೆಕ್ಟರವರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರು "ರನ್ನ ಕವಿಯು ಚಿತ್ರಿಸಿರುವ ದುರ್ಯೋಧನನ ಪಾತ್ರ" ಎಂಬ ವಿಷಯ ಭಾಷಣವನ್ನು ಮಾಡಿ ಆ ಕವಿಯ ಪ್ರತಿಭೆ, ಆತನ ಪದ ಪ್ರಯೋಗ, ಕಾವ್ಯದಲ್ಲಿ ರಸಪೋಷಣೆ, ಮಾತಿನ ಹಿನ್ನೆಲೆಯಲ್ಲಿರುವ ಧ್ವನಿ, ಒಂದೊಂದು ಪಾತ್ರದ ಹಿರಿಮೆ, ಕಾವ್ಯದಲ್ಲಿ ಅಡಕವಾಗಿರುವ ಸಂಸ್ಕೃತಿಯ ಪ್ರಚೋದನೆ ಇವುಗಳನ್ನು ವರ್ಣಿಸಿದರು.

ಶ್ರೀ ಸಿ ಎಸ್ ಶೇಷಾಚಾರ್ಯರು ದಿವಂಗತ ಕೈಲಾಸಂ ಅವರ 'ಹೋಂ ರೂಲ್' ಎಂಬ ನಾಟಕ ವಾಚನದಿಂದ ಸಭಿಕರನ್ನು ಮುಗ್ಧಗೊಳಿಸಿದರು. ಇಲ್ಲಿಗೆ ಮೊದಲನೆ ದಿವಸದ ಕಾರ್ಯಕ್ರಮ ಮುಗಿಯಿತು.

ಎರಡನೇ ದಿನದ ಕಾರ್ಯಕ್ರಮ

ಕೊಡಗಿನ ವಿಧಾನ ಸಭಾಧ್ಯಕ್ಷರಾದ ಮಾನ್ಯ ಶ್ರೀ ಬಿ ಯಸ್. ಕುಶಾಲಪ್ಪನವರು ಕೊಡಗಿನಲ್ಲೂ ಕಲಾ ಮತ್ತು ಸಂಸ್ಕೃತಿ ಪ್ರಚಾರ ಕಾರ್ಯ ಮೂಲೆ ಮೂಲೆಗಳಲ್ಲೂ ಆಗಬೇಕು. ರಾಮಾಯಣ ಮಹಾ ಭಾರತಗಳ ಪೂರ್ಣ ಪರಿಚಯ ನಮ್ಮ ಜನತೆಗೆ ಆಗಬೇಕು. ಪಾಶ್ಚಾತ್ಯ ಮಾರ್ಗಾನುಕರಣದಿಂದ ನಮ್ಮ ಸಂಸ್ಕೃತಿಯನ್ನು ಜನರು ಮರೆತಿರುತ್ತಾರೆ. ನಮ್ಮ ಕಾವ್ಯಗಳಲ್ಲಿ, ಸಾಹಿತ್ಯಗಳಲ್ಲಿ ಅಡಗಿರತಕ್ಕಂಥಾ ತತ್ವಗಳನ್ನು ಆಯ್ದು ತೆಗೆದು ತೋರಿಸತಕ್ಕ ಸಾಹಿತಿಗಳು, ಕವಿಗಳು ನಮ್ಮಲ್ಲೂ ಉಂಟಾಗಬೇಕು. ಇಂದಿನ ಈ ವಸಂತೋತ್ಸವ ಕಾಲದಲ್ಲಿ ಇಲ್ಲಿ ನೆರೆದಿರತಕ್ಕ ಸಭೆ ಏನೇನೂ ಸಾಲದು. ಈ ಮಂದಿರ ಹಿಡಿಸಲಾರದಷ್ಟು ಮಹನೀಯರೂ, ಮಹಿಳೆಯರೂ, ವಿದ್ಯಾರ್ಥಿಗಳೂ ನೆರೆದು ಇದರ ಅನುಭವವನ್ನೂ ಪಡೆಯುವಂತಾಗಬೇಕು. ಜನರು ಅಲ್ಪಾಯುಷಿಗಳಾಗಿ ಅಳಿಯುವ ಕಾಲ ಹೋಗಿ ದೀರ್ಘಾಯುಷಿಗಳಾಗಿ ಬಾಳುವ ಕಾಲ ಬಂದಿದೆ. ಜನರ ಬಾಳ್ವೆಯು ಹಸನಾಗಬೇಕಾದರೆ ನಮ್ಮ ಶೀಲ ಪರಿಶುದ್ಧವಾಗಬೇಕು. ಅದಾಗಬೇಕಾದರೆ ನಮ್ಮ ಸಂಸ್ಕೃತಿಯನ್ನು ತಿದ್ದಿಕೊಳ್ಳಬೇಕು. ಅದನ್ನು ತಿದ್ದಿಕೊಳ್ಳುವದಕ್ಕೆ ರಾಮಾಯಣ ಮಹಾಭಾರತಗಳು ಮಾರ್ಗದರ್ಶಕಗಳಾಗಿವೆ ಎಂದು ಉದ್ಘೋಷಿಸಿದರು.

ವಸಂತ ಸಾಹಿತ್ಯೋತ್ಸವದ ಅಂಗವಾಗಿ ಮೈಸೂರಿನ ಶಿಶು ಸಾಹಿತ್ಯ ಸಂಘದವರು ಒಂದು ಶಿಶು ಸಾಹಿತ್ಯ ಪ್ರದರ್ಶನವನ್ನು ಏರ್ಪಡಿಸಿದ್ದರು. ಮುಖ್ಯ ಮಂತ್ರಿಗಳೂ ವಿಧಾನ ಸಭಾಧ್ಯಕ್ಷರೂ ಇತರ ಪುರಜನರೂ ವೀಕ್ಷಿಸಿ ಮೆಚ್ಚುಗೆಯನ್ನು ಪ್ರದರ್ಶಿಸಿದರು. ಡಾ. ಬಿ. ಯಸ್. ರಾಮಶೇಷರಾವ್ ಅವರು ಈ ಪ್ರದರ್ಶನವನ್ನೂ, ಶಿಶು ಸಾಹಿತ್ಯದ ನಿರ್ಮಾಣದ ಆವಶ್ಯಕತೆಯನ್ನೂ ವಿವರಿಸಿದರು.

ಅನಂತರ ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಎಸ್. ವಿ. ಪರಮೇಶ್ವರ ಭಟ್ ಅವರು 'ಪಂಪನೊಡನೆ ಕೆಲವು ರಸ ನಿಮಿಷಗಳು' ಎಂಬ ಭಾಷಣವನ್ನು ಮಾಡುತ್ತ ಪಂಪನು ಚಿತ್ರಿಸಿರುವ ಭೀಷ್ಮ ಕರ್ಣರ ಪಾತ್ರಗಳ ವಿಮರ್ಶೆಯನ್ನು ಮಾಡಿದರು.

ಆ ವೇಳೆ ಮಂಡ್ಯದ ಗಮಕ ವಿದ್ವಾಂಸರಾದ ಶ್ರೀ ಎಚ್. ಶೇಷಗಿರಿರಾಯರು ಜೈಮಿನಿ ಭಾರತದಿಂದ 'ಸುಧನ್ವನ ಸತ್ವಪರೀಕ್ಷೆ' ಎಂಬ ಭಾಗವನ್ನು ಮಂಜುಳವಾಗಿಯೂ ಸುಶ್ರಾವ್ಯವಾಗಿಯೂ ವಾಚನ ಮಾಡಿದರು. ಮುಂದೆ ಶ್ರೀ ಎಚ್. ಎಸ್. ನಾರಾಯಣರಾವ್ ಎಂಬವರು ಕೆಲವು ಕವನಗಳನ್ನು ಹಾಡಿದರು.

'ವಾಲ್ಮೀಕಿ ಕವಿಯು ಚಿತ್ರಿಸಿರುವ ಸೀತಾದೇವಿ' ಎಂಬ ವಿಷಯದ ಮೇಲೆ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಸುದೀರ್ಘವಾದ ಉಪನ್ಯಾಸ ಮಾಡಿದರು. ತ್ರೇತಾಯುಗದ ಸಂಸ್ಕೃತಿ, ಅದರಲ್ಲಿ ಮಹಿಳೆಯರ ಹೊಣೆಗಾರಿಕೆ ಯಾವ ಮಟ್ಟದ್ದು, ರಾಷ್ಟ್ರ ಕಟ್ಟುವದರಲ್ಲಿ, ರಾಷ್ಟ್ರ ನಡೆಸುವದರಲ್ಲಿ, ಧರ್ಮವನ್ನು ಪಾಲಿಸುವದರಲ್ಲಿ ಸ್ತ್ರೀಯರು ವಹಿಸಬೇಕಾದ ಜವಾಬ್ದಾರಿ ಎಂಥಾದ್ದು ಎಂಬುದನ್ನು ಸೀತಾದೇವಿಯ ಪಾತ್ರವನ್ನೇ ಮುಖ್ಯವಾಗಿ ಇಟ್ಟುಕೊಂಡು ಸಪ್ರಮಾಣವಾಗಿ ವಿವರಿಸಿದರು.

ಉಪಸಂಹಾರ ಭಾಷಣದಲ್ಲಿ ಸಭಾಧ್ಯಕ್ಷರು ನಮ್ಮ ಕಲೆ ಮತ್ತು ಸಾಹಿತ್ಯ ಬೆಳವಣಿಗೆಗೆ ಇಂಥಾ ಉತ್ಸವಗಳು ಹೇಗೆ ಅವಶ್ಯವೆಂಬುದನ್ನು ವಿವರಿಸಿ ಈ ಕಲಾ ಮತ್ತು ಸಂಸ್ಕೃತಿ ಪ್ರಚಾರಕ್ಕೆ ನಮ್ಮ ಸರಕಾರವೂ ಸಹಾಯ ನೀಡಬೇಕೆಂದು ಹೇಳಿದರು. ವಂದನಾರ್ಪಣೆಯಾದ ನಂತರ ಎರಡು ದಿವಸಗಳ ಕಾರ್ಯಕ್ರಮಗಳು ಮುಕ್ತಾಯಗೊಂಡುವು.

ಯೋಷಿಡಾರ ಸರ್ಕಾರ ಬಲಗೊಂಡಿತು.

ಜಪಾನಿನ ವಿರುದ್ಧ ಪಕ್ಷಗಳ ಗುಂಪಿನಿಂದ ಪ್ರೋಗ್ರೆಸಿವ್ ಪಾರ್ಟಿ ಹೊರಬಂದುದರ ಪರಿಣಾಮವಾಗಿ ಮಿ. ಷಿಗೇರು ಯೋಷಿಡಾರವರ ಮಂತ್ರಿ ಮಂಡಲ ಈಗ ಹೆಚ್ಚು ಬಲಗೊಂಡಿದೆಯೆಂಬುದಾಗಿ ವೀಕ್ಷಕರು ತಿಳಿಸುತ್ತಾರೆ.

ಕನ್ಸರ್ವೇಟಿವ್ ಮನೋಭಾವದ ಲಿಬರಲ್ ಪಕ್ಷದ ನಾಯಕರಾದ ಮಿ. ಯೋಷಿಡಾರವರು ಗುರುವಾರ ತಾನೇ ತಮ್ಮ ಐದನೆಯ ಮಂತ್ರಿ ಮಂಡಲವನ್ನು ರಚಿಸಿದರು. ಈಚಿನ ಚುನಾವಣೆಗಳಲ್ಲಿ ಅವರಿಗೆ ಸ್ಪಷ್ಟ ಬಹುಮತ ಬರಲಿಲ್ಲ. ಆದ್ದರಿಂದ ಅವರು ಪ್ರೋಗ್ರೆಸಿವ್ ಪಾರ್ಟಿ ತಮ್ಮೊಡನೆ ಸೇರಬೇಕೆಂದು ಪುಸಲಾಯಿಸುತ್ತಿದ್ದರು. ಆದರೆ ಆ ಪಾರ್ಟಿಯ ನಾಯಕರು ತಾವು ವಿರುದ್ಧ ಪಕ್ಷಗಳ ಗುಂಪಿಗೆ ಸೇರುವುದಾಗಿ ತಿಳಿಸಿದ್ದರು. ನಿನ್ನೆ ರಾತ್ರಿ ಪ್ರೋಗ್ರೆಸಿವ್ ಪಾರ್ಟಿ ವಿರುದ್ಧ ಪಕ್ಷಗಳ ಗುಂಪಿನಿಂದ ಅದು ಹೊರಕ್ಕೆ ಬಂತು.

ಪ್ರೇಮದಲ್ಲಿ ಅದೃಷ್ಟ.

ಬ್ರಿಟನ್ನಿನಲ್ಲಿ ಒಂದು ಗಾದೆಯಿದೆ— 'ಪ್ರೇಮದಲ್ಲಿ ಅದೃಷ್ಟ ನಿಮಗೊಲಿಯಬೇಕಾದರೆ ಹಾಲುಗಡ್ಡೆ ತಿನ್ನಿ' ಎಂದು. ತಮ್ಮ ಹುಡುಗರಿಗೆ ಈ ಉಪದೇಶ ಮಾಡುವ ಹೆಂಗಳೆಯರು ಬ್ರಿಟನ್ನಿನಲ್ಲಿನ್ನೂ ಇದ್ದಾರೆ? ಮೂರು ನಾಲ್ಕು ತರುಣರಲ್ಲಿ ಯಾರನ್ನು ಲಗ್ನವಾಗಬೇಕು ಎಂಬ ಪೇಚು ಬಂದಾಗ ಹಾಲುಗಡ್ಡೆಗಳ ಮೇಲೆ ಅವರ ಹೆಸರಿನ ಕಾಗದ ಅಂಟಿಸಿ ಕತ್ತಲೆ ಕೋಣೆಯಲ್ಲಿ ಇರಿಸಿ ಎಂದು ಈ ತಾಯಂದಿರು ಹೇಳುತ್ತಾರೆ.

ಮೊದಲು ಮೊಳಕೆಯೊಡೆದ ಹಾಲುಗಡ್ಡೆಯ ಮೇಲೆ ಯಾರ ಹೆಸರು ಇರುವದೋ ಆತನೇ ಉಳಿದವರಿಗಿಂತ ಒಳ್ಳೆಯವನಂತೆ.

ಜನರಿಗೋಸ್ಕರ ಅವರ ಕೂಡೆ ಬೆರೆತು ಮಾಡುವ ಕೆಲಸಗಳು ನಮ್ಮ ವ್ಯಕ್ತಿತ್ವದ ವರ್ಚಸ್ಸನ್ನು ಬಹಳ ಮಟ್ಟಿಗೆ ಹೆಚ್ಚಿಸುತ್ತವೆ. ಮನುಷ್ಯ ಇತರ ಜನರನ್ನು ತನ್ನ ಕಡೆಗೆ ಆಕರ್ಷಿಸಿಕೊಂಡು, ಅವರ ಸಲುವಾಗಿ ಏನು ಒಳ್ಳೆಯ ಕೆಲಸ ಮಾಡಬಹುದೆಂಬುದೆ ವ್ಯಕ್ತಿತ್ವದ ವ್ಯಾಖ್ಯೆಯಾಗಿರುತ್ತದೆ.

ಸ್ವಾತಂತ್ರ್ಯ ವೀರರಿಗೆ ಸಹಾಯ ಕಳ್ಳಿಸಿರಿ

ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸರ್ವಸ್ವವನ್ನು ತ್ಯಾಗ ಮಾಡಿದ ಕಾಂಗ್ರೆಸ್ ಕಾರ್ಯಕರ್ತರಿಗೆ ಸಹಾಯ ಮಾಡುವದಕ್ಕಾಗಿ ಜಬ್ಬಲ್‌ಪುರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ಪಂಚಾಂಶಗಳ ಮನವಿಯೊಂದನ್ನು ಮಧ್ಯಪ್ರದೇಶದ ಮುಖ್ಯ ಮಂತ್ರಿಗಳಾದ ರವಿಶಂಕರ ಶುಕ್ಲರ ಕಡೆಗೆ ಒಪ್ಪಿಸಿರುವರು.

ಕಂದಾಯವಿಲ್ಲದೆ ೧೦ ಎಕ್ರೆ ಭೂಮಿಯನ್ನು ಕೊಡುವದು, ಬೀಜ ಮತ್ತು ಒಕ್ಕಲುತನದ ಉಪಕರಣಗಳಲ್ಲದೆ ಪ್ರತಿಯೊಬ್ಬನಿಗೂ ೫೦೦ ರೂ ಕೊಡುವದು. ಅವರ ಮಕ್ಕಳಿಗೆ ಪುಕ್ಕಟೆ ಶಿಕ್ಷಣ ಕೊಡುವದು, ಅವರ ಕುಟುಂಬದವರಿಗೆ ಪುಕ್ಕಟೆ ವೈದ್ಯಕೀಯ ಸೌಕರ್ಯವನ್ನೊದಗಿಸುವದು ಇವೇ ಈ ವರದಿಯಲ್ಲಿ ಹೇಳಿದ ಪಂಚಾಂಶಗಳು. ಯಾವುದೇ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದವರಿಗೆ ಯುದ್ಧದಲ್ಲಿ ಹೋರಾಡಿದವರಿಗೆ ಇಂಥಾ ಸೌಕರ್ಯ ಕೊಡುವದುಂಟು, ಎಂದು ಸೆಕ್ರೆಟರಿಗಳು ಮನವಿಯಲ್ಲಿ ಬರೆದಿರುವರು.

ಫ್ರೆಂಚ್ ಮಂತ್ರಿಮಂಡಲ ರಾಜಿನಾಮೆ ಕೊಟ್ಟಿತು.

ತೀವ್ರ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರಲು ತಾವು ಸೂಚಿಸಿದ ಯೋಜನೆಯ ವಿಚಾರದಲ್ಲಿ ತಾ. ೨೧ರಲ್ಲಿ ಫ್ರೆಂಚ್ ಅಸೆಂಬ್ಲಿಯಲ್ಲಿ ಫ್ರೆಂಚ್ ಪ್ರಧಾನಿ ಎಂ. ರೆನೆ ಮೇಯರ್‌ರವರಿಗೆ ಭಾರೀ ಸೋಲಾಗಿ, ಅವರೂ ಅವರ ಸಮ್ಮಿಶ್ರ ಮಂತ್ರಿ ಮಂಡಲದವರೂ ರಾಜಿನಾಮೆ ಕೊಟ್ಟಿದ್ದಾರೆ. ಇದರಿಂದಾಗಿ ಇನ್ನೊಂದು ತಿಂಗಳ ಕಾಲದಲ್ಲಿ ಬರ್ಮುಡಾದಲ್ಲಿ ನಡೆಯಲಿರುವ ತ್ರಿರಾಷ್ಟ್ರ ಪ್ರಧಾನಿಗಳ ಮಾತುಕತೆಗಳಲ್ಲಿ ಫ್ರಾನ್ಸಿನ ಪರವಾಗಿ ಯಾರು ಭಾಗವಹಿಸುವರೆಂಬುದು ಸಂದೇಹಕ್ಕೀಡಾಗಿದೆ.

ನಾಪೋಕ್ಲಿಗೆ
"ಕೊಡಗು" ಪತ್ರಿಕೆಯ ಏಜೆಂಟರು
ಸಹಕಾರಿ ಸ್ಟೋರ್ಸ್ ಮೇನೇಜರ್

ಕಮ್ಯೂನಿಸ್ಟ್ ಶಕ್ತಿ ಕುಂದುತ್ತಿದೆ

ಶ್ರೀ ರಾಜಾಜಿಯವರ ವಿಚಾರಪೂರ್ಣ ಭಾಷಣ

'ಕಮ್ಯೂನಿಸ್ಟರ ವಿಜಯದ ಪ್ರಾಬಲ್ಯವು ಕಳೆದುಹೋಯಿತು. ಅದರ ಶಕ್ತಿಯು ಶಿಥಿಲವಾಗುತ್ತಾ ಬರುತ್ತಿದೆ' ಎಂಬುದಾಗಿ ಮದರಾಸಿನ ಮುಖ್ಯ ಮಂತ್ರಿಗಳಾದ ಶ್ರೀ. ಸಿ ರಾಜಗೋಪಾಲಾಚಾರ್ಯರು ಪಾಲ್‌ಘಾಟ್ ರಾಜಕೀಯ ಪರಿಷತ್ತಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ ಹೇಳಿದರು.

'ಅನೇಕ ಕಮ್ಯೂನಿಸ್ಟರಿಂದು ಚುನಾವಣೆಗಳಲ್ಲಿ ಭಾಗವಹಿಸಿ ಪಾರ್ಲಿಮೆಂಟಿನ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಪ್ರಯೋಜನವಿದೆಯೇ? ಗುಪ್ತ ಕಾರ್ಯಾಚರಣೆಯೇ ತಮಗೆ ಒಳ್ಳೆಯದಲ್ಲವೇ? ಎಂದು ಸಂಶಯಪಡುತ್ತಾರೆ. ಪಾರ್ಲಿಮೆಂಟ್ ಚಟುವಟಿಕೆಗಳಿಂದ ಮತ್ಸರ, ಸ್ವಾರ್ಥ, ವಿರೋಧ—ಇವೆಲ್ಲವೂ ತಲೆ ಎತ್ತುತ್ತವೆ. ಇವುಗಳ ಬದಲಾಗಿ ಜನರ ಅಭಿಪ್ರಾಯಗಳಲ್ಲಿ ಬೇರೆ ವಿಚಾರಗಳನ್ನು ತುರುಕಿ ಅವರ ಮನಸ್ಸಿನಲ್ಲಿ ಸಂದೇಹ ಏಳುವಂತೆ ಮಾಡಲು ಪ್ರಯತ್ನಗಳನ್ನು ಮಾಡುತ್ತಾರೆ. ಹಿಂದೆ ದಬ್ಬಾಳಿಕೆ ನಡೆಸುತ್ತಿದ್ದ ಕಾಲದಲ್ಲಿ ಇವರು ಬೇರೆ ಬೇರೆ ಹೆಸರುಗಳನ್ನಿಟ್ಟುಕೊಂಡು ಭೂಗತರಾಗಿರುವ ಸಂದರ್ಭ ಬಂದೊದಗಿದರೂ ಈಗ ಹಾಗೇನೂ ಇಲ್ಲ. ಬಹಿರಂಗವಾಗಿ ಅವರು ತಮ್ಮ ಅಭಿಪ್ರಾಯ ಪ್ರಕಟಣೆ ಮಾಡಬಹುದು. ಆದರೆ ಅವರು ಯಾವಾಗಲೂ ಮುಷ್ಕರ, ಲಾಠಿ ಚಾರ್ಜುಗಳ ನಿರೀಕ್ಷಣೆಯಲ್ಲಿಯೇ ಇರುವರು. ಈಗ ಆ ರೀತಿಯಲ್ಲಿ ಹೆಸರುಗಳನ್ನು ಬದಲಾಯಿಸಿಕೊಂಡಿರಬೇಕಾಗಿಲ್ಲ. ಕಮ್ಯೂನಿಸ್ಟರ ತತ್ವದಲ್ಲಿಯೇ ದೊಡ್ಡ ತಪ್ಪೇನೋ ಇದೆ' ಎಂದು ಹೇಳಿ ಪಾರ್ಲಿಮೆಂಟರಿ ಚಟುವಟಿಕೆಗಳನ್ನು ತ್ಯಜಿಸಿದರೆ ಕಮ್ಯೂನಿಸ್ಟರು ಹುಚ್ಚು ಕೆಲಸ ಮಾಡಿದಂತಾದೀತು, ಎಂದು ತಿಳಿಸಿದರು.

'ಕಮ್ಯೂನಿಸ್ಟರು ನ್ಯಾಯವಾದ ರೀತಿಯಲ್ಲಿ ವರ್ತಿಸಿದರೆ ನಾನು ಅವರ ವಿಚಾರದಲ್ಲಿ ಸಹಾನುಭೂತಿಯಿಂದ ವರ್ತಿಸಲು ಸಿದ್ಧನಿದ್ದೇನೆ. ಆದರೆ ಅವರು ಹಿಂಸಾತ್ಮಕ ರೀತಿಯಲ್ಲಿ ನಡೆಯುವುದನ್ನಾಗಲಿ, ಕೊಲ್ಲುವಂತಹ ಹೇಯ ಕೃತ್ಯಗಳನ್ನಾಗಲಿ ಕೈಕೊಂಡಲ್ಲಿ ಅವರನ್ನು ಕ್ಷಮಿಸಲಾರೆ.

'ಕಮ್ಯೂನಿಸಮಿಗೆ ಭಾರತದಲ್ಲಿ ಭವಿಷ್ಯವಿಲ್ಲ. ಭಾರತದ ಜನರಿಗೆ ಧರ್ಮದ ಮೇಲೆ ಪ್ರೀತಿಯಿದೆ. ನೀತಿಗೆ ಜನರು ಹೆಚ್ಚಿನ ಬೆಲೆ ಕೊಡುತ್ತಾರೆ. ಆದ್ದರಿಂದ ಕಮ್ಯೂನಿಸಮಿಗೆ ಇಲ್ಲಿ ತಲೆಯೆತ್ತಲು ಸಾಧ್ಯವಿಲ್ಲ.

'ಪಶ್ಚಿಮ ಯೂರೋಪಿನ ಅನೇಕ ರಾಷ್ಟ್ರಗಳು ಕೈಗಾರಿಕೆಯಲ್ಲಿ ಕೃಷಿಯಲ್ಲಿ ಹೆಸರುಗೊಂಡ ದೇಶಗಳು ಇಂದು ರಾಷ್ಟ್ರದ ಪ್ರಯೋಜನಕ್ಕಾಗಿ ಮಾತ್ರ ಉತ್ಪಾದನೆ ಮಾಡುತ್ತಿವೆ. ಅದು ಹೇಗಾದರೂ ಇರಲಿ, ಭಾರತದ ಮಟ್ಟಿಗೆ ಹೇಳಬಹುದಾದರೆ ಇಲ್ಲಿ ಕಮ್ಯೂನಿಸಂ ಬಿದ್ದುಹೋದಂತೆಯೇ ಸರಿ. ಕೆಲವರು ಶ್ರೀಮಂತರು ಕಮ್ಯೂನಿಸ್ಟರಿಗೆ ಭಯಪಟ್ಟು ಅವರಿಗೆ ಸಹಾಯಮಾಡುತ್ತಾರೆ. ಅದು ತಪ್ಪು. ಯಾವಾಗಲೂ ಭಯವೆಂಬುದು ಒಳ್ಳೆಯದಲ್ಲ', ಎಂದು ಹೇಳಿದರು.

ಭಾರತದ ಕೈಗಾರಿಕೆಗಳ ಅಭಿವೃದ್ಧಿ. ಕೈಮಗ್ಗದವರ ಸಂಕಷ್ಟ ಪರಿಹಾರಕ್ಕೆ ಕಾರ್ಯಕ್ರಮ—ಇವೇ ಮೊದಲಾದುವುಗಳ ವಿಷಯವಾಗಿ ಮಾತಾಡಿ, ಜಮೀನ್ದಾರಿ ಪದ್ಧತಿ ಸಹಾ ಹೋಗಬೇಕೆಂದು ಹೇಳಿದರು.

ತಮ್ಮ ಭಾಷಣವನ್ನು ಮುಕ್ತಾಯಗೊಳಿಸುತ್ತಾ ರಾಜಾಜಿಯವರು ಹೀಗೆಂದರು. 'ಉತ್ತಮ ನಡತೆಗಳು ಮತ್ತು ಸರಿಯಾದ ಗುಣಗಳು ನಮ್ಮನ್ನು ಮೇಲಕ್ಕೆ ತರುವುವು. ಅಸಭ್ಯ ರೀತಿಯ ವರ್ತನೆ ಗುಲ್ಲುಗಳಿಂದ ಮೇಲೇಳಲಾರೆವು. ಹಿರಿಯರಿಗೆ ಗೌರವ ಕೊಡಿರಿ. ಸ್ತ್ರೀಯರಿಗೆ ಮರ್ಯಾದೆ ನೀಡಿರಿ. ಮತ್ತು ಮಕ್ಕಳನ್ನು ಪ್ರೀತಿಸಿರಿ—ಅವರು ಯಾರೇ ಇರಲಿ. ದೇವರು ಮತ್ತು ಒಳ್ಳೆಯ ಗುಣಗಳು ಸತ್ಯವಾದುವುಗಳು. ದೇವರು ಮತ್ತು ಒಳ್ಳೆಯ ಗುಣಗಳು ಉತ್ತಮ ದಾರಿಯನ್ನು ತೋರಿಸುವುದು ನಿಶ್ಚಯ' ಎಂದು ರಾಜಾಜಿಯವರೆಂದರು.

ದೇಶದ ರೈತರಲ್ಲಿ ವಿನಂತಿ.

ಇಂಡಿಯಾ ದೇಶದ ಕೆಲವು ಪ್ರಾಂತ್ಯಗಳು ಮುಖ್ಯ ಕೆಲವು ಬೆಳೆಗಳ ಮಟ್ಟಿಗೆ ಮಾತ್ರ ಇಂಡಿಯಾ ಸರಕಾರದ ಅನುಮತಿಯನ್ನು ಪಡೆದು ಸ್ಪರ್ಧೆಯನ್ನು ನಡೆಸುತ್ತಿವೆ. ಆದರೆ ಅಂತಹ ಪ್ರಾಂತಗಳಿಂದ ಕೆಲವು ರೈತರು ಸ್ಪರ್ಧೆಗೆ ಇಡದೆ ಇರತಕ್ಕಂತ ಬೆಳೆಗಳಿಗೆ ತಮ್ಮನ್ನು ಇಂಡಿಯಾ ಸರಕಾರದ ಬಹುಮಾನಕ್ಕೋಸ್ಕರ ಸ್ಪರ್ಧೆಗಾರರಾಗಿ ಸೇರಿಸಿಕೊಳ್ಳಬೇಕೆಂದು ಇಂಡಿಯಾ ಸರಕಾರಕ್ಕೆ ಪ್ರತ್ಯೇಕ ಪತ್ರಗಳನ್ನು ಕಳುಹಿಸಿರುವರಂತೆ. ಅಂತಹ ಪತ್ರಗಳಿಗೆ ಇಂಡಿಯಾ ಸರಕಾರವು ಯಾವ ಗಮನವನ್ನೂ ಕೊಡುವದಿಲ್ಲ. ಯಾವ್ಯಾವ ಪ್ರಾಂತ್ಯಗಳು ಯಾವ್ಯಾವ ಬೆಳೆಗಳನ್ನು ಸ್ಪರ್ಧೆಗೆ ಇಟ್ಟು ಆವುಗಳಲ್ಲಿ ರೈತರು ಭಾಗವಹಿಸಿ ಹೆಚ್ಚು ಬೆಳೆ ಬೆಳೆಸಿ ಸಂಬಂಧಪಟ್ಟ ಪ್ರಾಂತ್ಯದಲ್ಲಿ ಮೊದಲನೇ ಬಹುಮಾನಗಳನ್ನು ಪಡೆವಂತಹ ವ್ಯಕ್ತಿಗಳ ಹೆಸರುಗಳನ್ನು ಮಾತ್ರ ಪ್ರಾಂತ್ಯ ಸರಕಾರವು ಇಂಡಿಯಾ ಸರಕಾರದ ಬಹುಮಾನಕ್ಕೆ ಅರ್ಹರೆಂದು ಪರಿಶೀಲಿಸಿ ಮೊದಲು ಬಂದವರ ಹೆಸರುಗಳನ್ನು ಪ್ರಕಟಿಸುವರು. ಈ ರೀತಿಯಲ್ಲದೆ ರೈತರಿಂದ ಕಳುಹಿಸಲ್ಪಟ್ಟ ಪ್ರತ್ಯೇಕ ಪತ್ರಗಳಿಗೆ ಸ್ವಲ್ಪವೂ ಗಮನ ಕೊಡುವದಿಲ್ಲವೆಂಬುದಾಗಿ ಇಂಡಿಯಾ ಸರಕಾರವು ಪ್ರತಿ ಪ್ರಾಂತ್ಯ ಸರಕಾರಗಳ ಮೂಲಕ ದೇಶದ ರೈತರಿಗೆ ತಿಳಿಸಿದೆ.

ವ್ಯವಸಾಯ ಇಲಾಖೆ.

** ಓದುಗರ ಓಲೆಗಳು. **

ಪೋಸ್ಟ್ ಆಫೀಸು ಕೆಲಸ.

ಸುತ್ತುಮುತ್ತಲಿನ ಗ್ರಾಮಸ್ಥರಿಗೋಸ್ಕರ ನಮ್ಮಲ್ಲಿ ಒಂದು ಪೋಸ್ಟಾಫೀಸು ಇದೆ. ಈ ಸ್ಥಳವು ಸುತ್ತುಮುತ್ತಲಿನ ಗ್ರಾಮಸ್ಥರಿಗೆ ಹತ್ತಿರವಾದ ಕಾರಣ ರೈತರಿಗೆ ಬರತಕ್ಕ ಕಾಗದಗಳು ಹಾಗು ಮನಿಯಾರ್ಡರ್‌ಗಳು ಶೀಘ್ರದಲ್ಲಿಯೇ ದೊರೆಯಬೇಕು. ಆದರೆ ಹಾಗೆ ದೊರೆಯುವದಿಲ್ಲ. ಇಲ್ಲಿ ಕೆಲಸ ಮಾಡುತ್ತಿರುವ ಪೋಸ್ಟು ಮಾಸ್ಟರ ವರ್ತನೆ ಸರಿಯಿಲ್ಲವೆಂದು ಲೇಖಿಸಲು ವಿಷಾದಿಸುತ್ತೇನೆ. ಅದಕ್ಕೆ ಉದಹರಣೆಗಾಗಿ ಈ ಕೆಳಗೆ ಕೊಟ್ಟ ಕಾರಣಗಳು ಸಾಕ್ಷಿಯಾಗಿವೆ.

ಇಲ್ಲಿಯ ರೈತರ ಪೈಕಿ ಯಾರಿಗಾದರು ಮನಿಯಾರ್ಡರ್ ಬಂದರೆ, ಬಂದ ಹಣದ ಅರ್ಧ ಒಂದಂಶವನ್ನು ಮೊದಲು ಕೊಟ್ಟು ಎಂ. ಓ. ಫಾರಮಿಗೆ ಅವರ ರುಜು ಹಾಕಿಸಿ, 'ಹಣ ಇಷ್ಟೇ ಬಂದಿದ್ದು. ಬಂದ ನಂತರ ನಾನೇ ಮನೆಗೆ ತಂದು ಕೊಡುತ್ತೇನೆ ನಿಮಗೆ ಆಯಾಸಬೇಡ' ಎಂದು ಹೇಳುತ್ತಾರೆ. ಬಾಕಿಯಾದ ಹಣವು ಪಾಪದ ರೈತನಿಗೆ ದೊರೆಯಬೇಕೆಂದಾದರೆ ಏಳು ದೇವರಿಗೆ ಹರಕೆ ಕಟ್ಟಬೇಕು. ನನ್ನ ಮಿತ್ರನೊಬ್ಬನು ತನ್ನ ತಂಗಿಗೆ ಮಲಬಾರಿನಿಂದ ೫—೫—೫೩ ರಲ್ಲಿ ಒಂದು ಶುಭ ಕಾರ್ಯಕ್ಕೆ ಸ್ವಲ್ಪ ಹಣ ಕಳುಹಿಸಿದ್ದನು. ಅದನ್ನು ಇಲ್ಲಿಯ ಪೋಸ್ಟು ಮಾಸ್ಟರು ೧೬—೫—೫೩ ರಲ್ಲಿ ಆತನ ತಂಗಿಗೆ ಸಲ್ಲಿಸಿದರು. ಹಾಗಾದರೆ ಮಲಬಾರಿನಿಂದ ಇಲ್ಲಿಗೆ ಒಂದು ಎಂ ಓ. ಬರಲು ಹದಿನೂರು ದಿವಸಗಳು ಬೇಕಾಗುತ್ತದೊ? ಆ ಹಣ ಬಂದಿದ್ದರೂ ಪೋಸ್ಟು ಮಾಸ್ಟರು ತಮ್ಮ ಸ್ವಂತ ಖರ್ಚಿಗೆ ಉಪಯೋಗಿಸಿ ಬಿಟ್ಟಿದ್ದರೆಂದು ತಿಳಿದುಬಂದಿದೆ. ತಾ. ೧೮ ರಲ್ಲಿ ಮತ್ತೊಬ್ಬರಿಗೆ ಸ್ವಲ್ಪ ಹಣ ಬಂದಾಗ ಅವರ ಹಣವನ್ನು ನನ್ನ ಮಿತ್ರನ ತಂಗಿಗೆ ಕೊಟ್ಟರು. ಇದು ಬಹು ಅನ್ಯಾಯದ ಕೆಲಸವಾಗಿದೆ.

ಈ ಪೋಸ್ಟು ಮಾಸ್ಟರು ತಮ್ಮ ಕೆಲಸದ ಸಮಯದಲ್ಲಿ ತಮ್ಮ ಸಹಪಾಠಿಯರೊಡನೆ ಇಸ್ಪೀಟ್ ಆಟ ಆಡುವರು. ಆ ಸಮಯದಲ್ಲಿ ಜನರು ಬಂದು, 'ಪತ್ರವಿದೆಯೋ' ಎಂದು ಕೇಳಿದರೆ ಮುಖವನ್ನು ಸಹ ನೋಡದೆ, 'ಇಲ್ಲ' ಎಂದು ಹೇಳುವರು. ಆ ಜನರು ಅವರ ಆಟ ತೀರುವ ವರೆಗೆ ಇದ್ದು ನಂತರ ಕೇಳಿದರೆ ಇದು 'ವರ್ಕಿಂಗ್ ಅವರ್ ಅಲ್ಲ' ಎನ್ನುವರು. ಇವರು ಯಾವಾಗಲು ಆಟ ಆಡಬೇಕಾದರೆ ಹಣಬೇಕಲ್ಲವೆ? ಅದನ್ನು ಅವರು ಇಲ್ಲಿಯ ರೈತರಿಗೆ 'ಪಾರ್ಸಲ್' ಬಂದರೆ ಅದಕ್ಕೆ 'ಕೀಪಿಂಗ್ ಚಾರ್ಜ್' ಹಾಕಿ ಹೊಂದಿಕೊಳ್ಳುವರು! ಇವರ ಈ ರೀತಿಯ ವರ್ತನೆಯು ಇಲ್ಲಿಯ ರೈತರಿಗೆ ತೊಂದರೆಯನ್ನು ಉಂಟು ಮಾಡುವುದು. ಆದ ಕಾರಣ ಇದಕ್ಕೆ ಸಮ್ಮಂಧಿಸಿದ ಅಧಿಕಾರಿಗಳು ತಕ್ಕ ಎಚ್ಚರಿಕೆ ತೆಗೆದುಕೊಂಡು ಇಲ್ಲಿಯ ರೈತರ ತೊಂದರೆಯನ್ನು ಹೋಗಲಾಡಿಸಬೇಕಾಗಿದೆ. ಇದು ಯಾವ ಪೋಸ್ಟಾಫೀಸೆಂದು ಪತ್ರಿಕೆಯವರನ್ನು ಕೇಳಿದರೆ ಇಲಾಖೆಯವರಿಗೆ ಹೆಸರು ಒದಗಿಸಲಾಗುವದು.

'G.'

ವಿದ್ಯಾ ಇಲಾಖೆಯ ಸಡಿಲತೆ

ಬಹು ದಿನದ ಹೋರಾಟದಿಂದ ಕಡೆಗೆ ಉಪಾಧ್ಯಾಯರ ಬೇಡಿಕೆಗಳು ಈಡೇರಿದವು. ಹೇಗೂ ಡಿ. ಬಿ. ಉಪಾಧ್ಯಾಯರು ಇನ್ನಿಲ್ಲ. ಅಂದರೆ ಸರಕಾರದ ಉದ್ಯೋಗಿಗಳೆಂದೆನ್ನಿಸಿಕೊಂಡರೆನ್ನುವುದರಲ್ಲಿ ಸಂಶಯವಿಲ್ಲ? ಏಪ್ರಿಲ್‌ನಿಂದ ಸರಕಾರವು ಡಿ. ಬಿ. ಉಪಾಧ್ಯಾಯರನ್ನು ಸರಕಾರಕ್ಕೆ ಸೇರಿಸಿಕೊಂಡಿತೆಂದು ಪ್ರಚಾರ ನಡೆಯಿತಲ್ಲದೆ, ಸರಕಾರ ವೇತನವಿನ್ನೂ ಸಿಗಲಿಲ್ಲವಂತೆ. ಅಂದರೆ ಪ್ರಚಾರ ಸರಕಾರದ ರೀತ್ಯಾನಾಯಿತಲ್ಲದೆ, ಆಚಾರ ವಿಚಾರ ಹಿಂದಿನ ಆಡಳಿತದಂತೆಯೇ ಇದೆಯೆಂದು ಸರ್ವಿಸ್ನಾದ ಉದ್ಯೋಗಿಯೊಬ್ಬರಿಂದ ತಿಳಿಯಬಂತು. ಮೊನ್ನೆ ಮೊನ್ನೆ ತರಬೇತಾಗದ ಅಧ್ಯಾಪಕರಿಗೆ 'ಇಂಟರ್‌ವ್ಯೂ' ನಡೆದು, ಅದರ ಫಲಿತಾಂಶವೇನು, ಎಂತದ್ದು, ಎಂಬೀ ವಿಚಾರವೇ ತಿಳಿದು ಬಂದಿಲ್ಲ. ಬರೇ ಕಣ್ಣು ಮುಚ್ಚಾಲೆಯಾಟದ 'ಇಂಟರ್‌ವ್ಯೂ'ವೋ ಯಾ ಪರಿಣಾಮಕಾರಿಯೋ ಎಂದು ಯಾರಿಗೆ ಗೊತ್ತು? ಎಸ್. ಎಸ್. ಎಲ್. ಸಿ. ಪಾಸಾದರೂ ಶೇ. ೪೦ರಂತೆ ಮಾರ್ಕುಗಳನ್ನು ಪ್ರತಿಯೊಂದು ವಿಭಾಗದಲ್ಲೂ ಪಡೆಯದಿದ್ದವನಿಗೆ 'ನಾನ್ ಮೆಟ್ರಿಕ್ ಸ್ಕೇಲ'ಂತೆ. ಥರ್ಡ್ ಫಾರಮ್ ಓದಿದವನೂ, ಎಸ್. ಎಸ್. ಎಲ್. ಸಿ. ಯಾದವನೂ ಏಕರೀತಿಯಾಯಿತು. ಇಂದಿಗೆ ಸರ್ವಿಸಿನಲ್ಲಿ ಎಷ್ಟು ಮಂದಿ ಥರ್ಡ್ ಫಾರಮ್ ಗ್ರಾಜ್ಯುವೇಟ್ಸಿಲ್ಲ?

ಇನ್ನು ಉಪಾಧ್ಯಾಯರ ವರ್ಗಾವರ್ಗಿ ಬಹು ಸೋಜಿಗ ರೀತಿಯಲ್ಲಿ ನಡೆಯುತ್ತಿದೆಯಂತೆ. ಮುಖ ನೋಡಿ ಮಣೆ ಹಾಕಲ್ಪಡುತ್ತಿದೆಯಂತೆ. ಇಲ್ಲಿಗೆ ಮೂರು ಭಾರಿ 'ಟ್ರಾನ್ಸ್‌ಫರ್ ಲಿಸ್ಟ್' ಆಫೀಸಿನಲ್ಲಿ ಸೃಷ್ಟಿಯಾಗಿ, ಅಲ್ಲಿಗೇ ಮಣ್ಣು ಮುಕ್ಕಿತಂತೆ. ಕೇಳಿದರೆ ಹೈಸ್ಕೂಲಿನಿಂದ ನಾಡಿನ ಹೈಯರ್ ಎಲಿಮೆಂಟರಿ ಶಾಲೆಗೆ ಹೆಡ್ ಮಾಸ್ಟರಾಗಿ ಬರುವವರಿಗೆ ಅವರವರ ಇಚ್ಛೆಯಂತೆ ಸ್ಥಳವನ್ನು ಕಲ್ಪಿಸಲೋಸುಗ ಅನಾನುಕೂಲತೆ ತೋರಿ ಬಂದುದರಿಂದ ಹೀಗಾಯಿತೆಂದು ಆಫೀಸಿನಿಂದ ಹೊರಗೆ ಕೂಗು ಕೇಳಿಬರುತ್ತಿದೆ. ಅಂದರೆ ಇಲ್ಲಿಯ ತನಕ ಸುಖ ಜೀವಿಗಳಾದ ಹೈಸ್ಕೂಲು ಅಧ್ಯಾಪಕರುಗಳಿಗೆ ಇನ್ನು ಮುಂದಕ್ಕೂ ಆತಂಕದಿಸಬಾರದೆಂಬ ಅರ್ಥವುಂಟಾಗುವದಿಲ್ಲವೇ? ಇಷ್ಟರ ತನಕ ವೇತನದಲ್ಲಿಯೂ ಜೀವನದಲ್ಲಿಯೂ, ಗ್ರೇಡ್‌ನಲ್ಲಿಯೂ ಕೊಳೆಯುತಿದ್ದ ಡಿ. ಬಿ. ಉಪಾಧ್ಯಾಯನಾಗಿದ್ದವನಿಗೆ ಸುಖವೆಂದಿಗೂ ಇಲ್ಲ.

ಟ್ರಾನ್ಸ್‌ಫರ್‌ನ ಗಾಳಿಯು ಎಲ್ಲೆಲ್ಲಿಯೂ ಹಬ್ಬಿ ಇನ್ನೂ ಯಾವ ನಿರ್ಣಯವೂ ಆಗದ ಕಾರಣ ಹಳ್ಳಿ ಶಾಲೆಗಳಲ್ಲಿ ಅಂದರೆ ಪ್ರತಿಯೊಂದು ಹೆಚ್. ಈ. ಶಾಲೆಗಳಲ್ಲಿ ಪಾಠಪ್ರವಚನಗಳು ನಡೆಯುವದು ಹೇಗೆ?

ಭಾರತದ ಸ್ತ್ರೀಯರ ಪಾತ್ರ.

ಸ್ತ್ರೀಯರಿಗೆ ಶ್ರೀಮತಿ ದುರ್ಗಾಬಾಯಿಯವರ ಕರೆ.

ಸ್ವಾತಂತ್ರ್ಯ ಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸಿದ ಭಾರತದ ಸ್ತ್ರೀಯರು ಈಗ ಮುಂದೆ ಬಂದು ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆ ಸಾಧಿಸಲಿರುವ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗುವಂತೆ ಸಹಕರಿಸಿ ಕಾರ್ಯ ಮಾಡುವರು ಎಂದು ನಾನು ಆಶಿಸಿದ್ದೇನೆ' ಎಂಬುದಾಗಿ ಯೋಜನಾ ಆಯೋಗದ ಸದಸ್ಯೆ ಶ್ರೀಮತಿ ದುರ್ಗಾಬಾಯಿ ದೇಶಮುಖರು ಪಾಟಿಯಾಲಾದಲ್ಲಿ ಸ್ತ್ರೀಯರ ಸಭೆಯೊಂದರಲ್ಲಿ ಮಾತಾಡುತ್ತಾ ಹೇಳಿದರು.

ಒಂದು ವಾರದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರ ಮಾಡಿ ಉಳಿತಾಯ ಯೋಜನೆ ವಾರದಲ್ಲಿ ೫೦ ಲಕ್ಷ ರೂ. ಗಳನ್ನು ಹನ್ನೆರಡು ಮಹಿಳಾ ಸಂಘಗಳು ಸಂಗ್ರಹಿಸಿರುವುದನ್ನು ಕಂಡು ತಾವು ಈ ರೀತಿ ಭಾವಿಸಿರುವುದಾಗಿ ಅವರು ಹೇಳಿದರು.

'ಉಳಿತಾಯ ಯೋಜನೆ ಕಾರ್ಯದಲ್ಲಿ ಇಂಥ ನೂರು ಸಾಮಾಜಿಕ ಸಂಸ್ಥೆಗಳು ಕಾರ್ಯ ಮಾಡಿದರೆ ಪಂಚವಾರ್ಷಿಕ ಯೋಜನೆಯ ಬಂಡವಾಳಕ್ಕೆ ಅವು ಅಪಾರ ಸಹಾಯ ಮಾಡಬಲ್ಲವು. ಮತ್ತು ದೊರೆಯುವ ಬಡ್ಡಿಯ ಮೂಲಕ, ಹಳ್ಳಿಗಳ ಸಾಮಾಜಿಕ ಕಾರ್ಯಕ್ಕೆ ನೆರವಾಗಬಲ್ಲವು.

ಡೆಲ್ಲಿಯಲ್ಲಿ ಸೇರಿದ ಯೋಜನಾ ಆಯೋಗದ ಸಭೆಯಲ್ಲಿ ಇಂಥ ಸಂಸ್ಥೆಗಳನ್ನು ರಚಿಸುವ ವಿಷಯಗಳನ್ನು ವಿಚಾರಿಸಲು ಸೂಚಿಸಿದ್ದೇನೆ. ಪಂಚವಾರ್ಷಿಕ ಯೋಜನೆಗೆ ಬಂಡವಾಳವನ್ನೊದಗಿಸುವುದಲ್ಲದೆ ಉಳಿತಾಯ ಯೋಜನೆಯು ಗ್ರಾಮಾಂತರಗಳ ಸ್ತ್ರೀಯರಲ್ಲಿ ಪಂಚವಾರ್ಷಿಕ ಯೋಜನೆಯ ಬಗ್ಗೆ ಆಸಕ್ತಿಯನ್ನು ಹುಟ್ಟಿಸುವುದು. ಪಂಚವಾರ್ಷಿಕ ಯೋಜನೆಗಾಗಿ ಹಣವನ್ನು ಭಾರತವು ಹೇಗೆ ಕೂಡಿಸುವುದು ಎಂಬುದನ್ನು ಜಗತ್ತು ನಿರೀಕ್ಷಿಸುತ್ತಿದೆ. ಇದಕ್ಕಾಗಿ ವಿದೇಶಗಳ ಸಹಾಯ ದೊರೆಯದೇ, ಹಿಂದಿನಂತೆ ಸ್ವಾತಂತ್ರ್ಯಕ್ಕಾಗಿ ಅಪರಿಮಿತ ಬಲಿದಾನ ಮಾಡಿದ ಭಾರತದ ಜನರು ಅಭಿವೃದ್ಧಿಯ ಹೊಸಯುಗದ ಪ್ರಾರಂಭಕ್ಕಾಗಿ ಹಣ ಕೊಡಲು ಹಿಂತೆಗೆಯಬಾರದು. ಈ ಕಾರ್ಯದಲ್ಲಿ ಭಾರತದ ಸ್ತ್ರೀಯರು ಮುಂದೆ ಬರುವರೆಂಬುದರಲ್ಲಿ ಸಂದೇಹವೇ ಇಲ್ಲ.

ಯೋಜನಾ ಆಯೋಗದ ಸೂಚನೆಗಳನ್ನು ಕಾರ್ಯರಂಗಕ್ಕಿಳಿಸಿ ರಾಷ್ಟ್ರದ ಅಭಿವೃದ್ಧಿಗಾಗಿ ಸ್ತ್ರೀಯರು ಬಹಳಷ್ಟು ಕೆಲಸ ಮಾಡಬಹುದು. ಸಾಮಾಜಿಕ, ತಾಂತ್ರಿಕ ಪ್ರಥಮ ಶಿಕ್ಷಣದಿಂದ ಕಾಲೇಜು ಶಿಕ್ಷಣದ ವರೆಗಿನ ರಂಗಗಳಲ್ಲಿ ಸ್ತ್ರೀಯರು ದುಡಿಯಬಹುದು' ಎಂದು ಶ್ರೀಮತಿ ದುರ್ಗಾಬಾಯಿಯವರು ಹೇಳಿದರು.

ಶ್ರೀ ಚಿಂತಾಮಣ ದೇಶಮುಖ್ ಮತ್ತು ಶ್ರೀಮತಿ ದುರ್ಗಾಬಾಯಿ ತಾ. ... ರಲ್ಲಿ ಬಂದರು. ಶ್ರೀ ದೇಶಮುಖರು 'ಆರ್ಥಿಕ ಸ್ವಾತಂತ್ರ್ಯವಿಲ್ಲದೆ ರಾಜಕೀಯ ಸ್ವಾತಂತ್ರ್ಯ ಬದುಕಲಾರದು. ಈ ಕಾರಣಕ್ಕಾಗಿಯೇ ಯೋಗ್ಯ ಜೀವನಮಟ್ಟ ಸಾಧಿಸುವ ಉಪಾಯಗಳನ್ನು ಯೋಚಿಸಲು ಯೋಜನಾ ಆಯೋಗವು ನೇಮಿಸಲ್ಪಟ್ಟಿತು' ಎಂದು ಹೇಳಿದರು.

—

ಉಪಾಧ್ಯಾಯರುಗಳು ಅವರವರ ಭವಿಷ್ಯತ್ತನ್ನು ಚಿಂತಿಸುತ್ತಾ ಕಾಲಹರಣ ಮಾಡುತ್ತಿದ್ದರೆ, ಅದು ವಿದ್ಯಾ ಇಲಾಖೆಯ ಅಸ್ಥಿರ ಆಡಳಿತೆಯ ಮೂಲ ಕಾರಣವಲ್ಲದೆ ಸಂಬಳಕ್ಕಾಗಿ ದಿನ ಎಣಿಕೆ ಮಾಡುವ ಬಡ ಉಪಾಧ್ಯಾಯ ವೃಂದದ ತಪ್ಪಲ್ಲ. ಟ್ರಾನ್ಸ್‌ಫರ್‌ನ ವಾರ್ತೆಯು ಹಬ್ಬಿ ಇಲ್ಲಿಗೆ ಎಲ್ಲಾ ಕೆಲಸವು ಪೂರೈಸಿ, ಉಪಾಧ್ಯಾಯರು ಅವರವರ ಹೊಸ ಹೊಸ ಸ್ಥಳವನ್ನು ಸೇರಿಕೊಂಡು, ತಮ್ಮ ತಮ್ಮ ಕಾರ್ಯದಲ್ಲಿ ಮಗ್ನರಾಗಬಹುದಿತ್ತು. ಆದರೆ ಆಫೀಸಿನಲ್ಲಿ 'ಟ್ರಾನ್ಸ್‌ಫರ್ ಲಿಸ್ಟ್' ವೇಸ್ಟ್ ಬಾಕ್ಸಿನಲ್ಲಿ ಬೆಳೆಯುತ್ತಿದ್ದರೆ, ತಪ್ಪು ಯಾರದು? ಹೇಳಿದಂತೆ ನಡೆಯುವ, ಕರ್ತವ್ಯವನ್ನು ಪಾಲಿಸುವ ಉಪಾಧ್ಯಾಯರದ್ದಲ್ಲ, ಅಲ್ಲವೆ? ಇನ್ನಾದರೂ ದೈತನ ಮಕ್ಕಳ ಅಭಿವೃದ್ಧಿಗಾಗಿ ಅತೀ ಬೇಗನೆ ಟ್ರಾನ್ಸ್‌ಫರ್ ಮಾಡಬಹುದಾಗಿ ನಿರೀಕ್ಷಿಸೋಣವೇ? 'ಪ್ಯಾಡಿ'

—

ಮೀನುಗಾರಿಕೆ

'ಮೀನು ಸಾಕುವುದು ಒಂದು ವ್ಯಸನದಲ್ಲಿ ಬರುತ್ತದೆ. ಅದಕ್ಕಾಗಿ ಯಾರೂ ಮಹಾ ಕಲಾಭಿಜ್ಞರಾಗುವ ಅವಶ್ಯಕತೆಯಿಲ್ಲ. ಆದರೆ ಎಲ್ಲ ಕೆಲಸಗಳಲ್ಲಾಗುವಂತೆ ಈ ಕಾರ್ಯದಲ್ಲಿಯೂ ಸಂಬಂಧಪಟ್ಟವರು ಕೆಲವು ಸಮಸ್ಯೆಗಳು ಮಾತ್ರ ಇರಬೇಕಾಗುತ್ತದೆ.

ಮೀನು ಸಾಕುವವರು ಮುಖ್ಯವಾಗಿ ಲಕ್ಷ್ಯವಿಡಬೇಕಾದ ಸಂಗತಿಗಳೆಂದರೆ:—

(೧) ಯೋಗ್ಯ ಬೆಳಕು, (೨) ತಕ್ಕ ಆಹಾರ, (೩) ತಕ್ಕಷ್ಟು ಉಷ್ಣತೆ ಮತ್ತು (೪) ಸಾಕಷ್ಟು ಪ್ರಾಣವಾಯು ಇವು ಮೀನುಗಳಿಗೆ ಅವಶ್ಯವಿದೆ.

ಸಾಕಲ್ಪಡುವ ಎಲ್ಲ ಪ್ರಾಣಿಗಳಲ್ಲಿ ಮೀನುಗಳು ಎಲ್ಲಕ್ಕೂ ಸ್ವಚ್ಛವಾದವುಗಳೂ ಮತ್ತು ನಿರುಪದ್ರವಿಗಳೂ ಆಗಿವೆ. ಸ್ವಲ್ಪ ಸ್ಥಳ ಮತ್ತು ಆಹಾರಗಳನ್ನು ಕೊಟ್ಟು ಬಿಟ್ಟರೆ, ಅವು ಹೆಚ್ಚಿನದನ್ನೇನೂ ಕೇಳುವುದಿಲ್ಲ. ಆದರೆ ಅವುಗಳನ್ನು ನೋಡುತ್ತ ನಿಂತಾಗ ನಮಗೆ ಬಹಳ ಆನಂದವನ್ನು ಕೊಡುತ್ತವೆ. ನೀವು ಕೆಲವು ದಿವಸ ಅಥವಾ ಒಂದೆರಡು ವಾರ ಊರಲ್ಲಿಲ್ಲದಿದ್ದರೆ ಅವು ಆ ಕಾಲದಲ್ಲಿ ತಮ್ಮ ಪರಾಮರಿಕೆಯನ್ನು ತಾವೇ ಮಾಡಿಕೊಳ್ಳುತ್ತವೆ.

ಸಮುದ್ರ ಮೀನುಗಳನ್ನು ಸಾಕುವುದು ಹೆಚ್ಚಿನ ವೆಚ್ಚದ ವಿಷಯವಾಗಿದೆ. ಏಕೆಂದರೆ ಅವು ವಾಸವಾಗಿರುವ ನೀರಿನಲ್ಲಿ ಮೇಲಿಂದ ಮೇಲೆ ಉಪ್ಪು ಹಾಕಬೇಕಾಗುತ್ತದೆ.

ಮೀನುಗಳಲ್ಲಿ ಎರಡು ಪ್ರಕಾರಗಳನ್ನು ಅವುಗಳ ಮರಿಗಳ ದೃಷ್ಟಿಯಿಂದ ಮಾಡಬಹುದು. ಕೆಲವು ಮರಿಗಳನ್ನೇ ಹಾಕುತ್ತವೆ; ಕೆಲವು ತತ್ತಿ ಇಡುತ್ತವೆ.

ಮರಿಗಳಾಗಿಯೇ ಹುಟ್ಟಿದವು ಹುಟ್ಟಿದ ಕೂಡಲೆ ಈಸುತ್ತವೆ. ಮತ್ತು ಸೂಕ್ಷ್ಮ ಹುಳ ಹುಪ್ಪಡಿಗಳನ್ನು ತಾವೇ ಹಿಡಿದು ತಿನ್ನುತ್ತವೆ. ತತ್ತಿಯನ್ನಿಟ್ಟಾಗ ಅವುಗಳ ಮರಿಗಳು ಸ್ವಾವಲಂಬಿಯಾಗಲು ಕೆಲವು ವೇಳೆ ಹಿಡಿಯುವುದು. ಇವುಗಳಿಗೆ ಕೆಲವು ವಾರಗಳ ನಂತರ ಸಾಮಾನ್ಯ ಆಹಾರ ಕೊಡಬಹುದು.

ಆದರೆ ಮರಿಗಳನ್ನು ದಕ್ಷತೆಯಿಂದ ರಕ್ಷಿಸಬೇಕಾಗುವದು. ಏಕೆಂದರೆ ದೊಡ್ಡ ಮೀನುಗಳು ಈ ಸಣ್ಣವನ್ನು ನುಂಗಿಬಿಡುತ್ತವೆ. ಆ ನೀರಿನಲ್ಲಿ ಹುಟ್ಟುವ ಅನೇಕ ತರಹದ ಹುಲ್ಲು, ಗಿಡಗಳನ್ನು ಬೆಳೆಸಬೇಕು. ತಳದಲ್ಲಿ ಉಸುಬು ಹಾಕಿದರೆ ಈ ಸಸ್ಯಗಳು ಚೆನ್ನಾಗಿ ಬಾಳುತ್ತವೆ. ಅಂದರೆ ಈ ಮರಿಗಳು ಆ ಸಸ್ಯಗಳ ಮರೆಗೆ ಅವಿತುಕೊಂಡು ರಕ್ಷಣೆ ಹೊಂದುತ್ತವೆ.

ಮೇಲಿಂದ ಮೇಲೆ ಜೀವಂತ ಹುಳಹುಪ್ಪಡಿಗಳನ್ನು ನೀರಿನಲ್ಲಿ ಒಗೆದರೆ, ದೊಡ್ಡ ಮೀನುಗಳು ಅವುಗಳನ್ನು ತಿಂದು ಈ ಮರಿಗಳನ್ನು ಉಪೇಕ್ಷಿಸದೆ ಉಳಿಯುತ್ತವೆ. ಮರಿಗಳನ್ನು ಹಾಕುವ ಮೀನುಗಳ ಹೆಣ್ಣು ಗಂಡುಗಳು ಒಂದು ಸಲ ಕೂಡಿದರೆ ಆಗುವ ಪರಿಣಾಮವು ಅವು ಮೂರು ಸಲ ಮರಿ ಹಾಕುವಷ್ಟು ಪ್ರಯೋಜನ ಕೊಡುತ್ತದೆ.

ತತ್ತಿ ಇಡುವ ಮೀನುಗಳಲ್ಲಿ ಅನೇಕ ಪ್ರಕಾರಗಳಿವೆ. ಸಸ್ಯಗಳಿಗೆ ಅಂಟಿಕೊಳ್ಳುವಂತೆ ಕೆಲವು ಮೀನುಗಳು ತತ್ತಿಗಳನ್ನು ಇಡುತ್ತವೆ. ಅದಕ್ಕಾಗಿ ಗೂಡುಗಳನ್ನು ಕಟ್ಟಿ ಇಡುತ್ತವೆ. ಇನ್ನು ಹಲವು ಯಾವುದಾದರೊಂದಕ್ಕೆ ಅಂಟಿಕೊಂಡಿರುವ ತತ್ತಿಗಳನ್ನು ವಿಶಿಷ್ಟ ರೀತಿಯಲ್ಲಿ ಇಡುತ್ತವೆ.

ಮರಿಹಾಕುವ ಮೀನುಗಳಿಗೆ ಪೌಷ್ಟಿಕ ಆಹಾರ ಕೊಡುವುದು ಅವಶ್ಯವಿದೆ. ಅಂದರೆ ಜೀವಂತ ಹುಳಹುಪ್ಪಡಿಗಳನ್ನು ಹಾಕುವುದೇ ಅವಶ್ಯಕ.

ಮೀನುಗಳಲ್ಲಿ ಗಂಡು ಹೆಣ್ಣುಗಳನ್ನು ತಿಳಿಯುವುದು ದುಸ್ತರವಾಗಿದೆ. ಏಕೆಂದರೆ ಅದಕ್ಕೆ ಯಾವುದೊಂದು ನಿಯಮವಿಲ್ಲ. ಅನುಭವದಿಂದ ಮಾತ್ರ ತಿಳಿಯಬಹುದು. ಸಾಮಾನ್ಯವಾಗಿ ಹೇಳುವುದಾದರೆ ಗಂಡು ಮೀನುಗಳು ಹೆಚ್ಚು ಹೊಳೆಯುತ್ತವೆ. ಹೆಣ್ಣು ಮೀನುಗಳು ನಿಸ್ತೇಜವಾಗಿರುತ್ತವೆ. ಮರಿ ಅಥವಾ ತತ್ತಿ ಹಾಕುವ ಕಾಲವಲ್ಲಂತೂ ಈ ಬಣ್ಣದ ಭೇದವು ಚೆನ್ನಾಗಿ ಕಂಡು ಬರುತ್ತದೆ.

ಬೇಕಾದ ಹವಾಮಾನದಲ್ಲಿ ಮತ್ತು ತಕ್ಕ ಆಹಾರದ ಮೇಲೆ ಮೀನುಗಳು ಬದುಕುತ್ತವೆ. ಅವುಗಳಿಗೆ ಸಾಕಷ್ಟು ಉಷ್ಣತೆಯು ಮತ್ತು ಪ್ರಾಣವಾಯುವು ಸಿಕ್ಕರಾಯಿತು. ಮೀನುಗಳು ಶಾಂತ ಪ್ರಾಣಿಗಳು. ಅವು ತಮ್ಮ ತಮ್ಮಲ್ಲಿ ಹೋರಾಡುವುದಿಲ್ಲ.

ನಯಾಮುದ ಒಂದು ತರಹದ ಮೀನು ನೀರಿನ ಮೇಲೆ, ಗುಳ್ಳೆಯಂತಹ ಒಂದು ಗೂಡನ್ನು ಕಟ್ಟುತ್ತದೆ. ಗೂಡು ಕಟ್ಟುವುದು ಗಂಡು. ಗೂಡು ಕಟ್ಟಿದ ಬಳಿಕ ಅದು ಹೆಣ್ಣು ಮೀನನ್ನು ಕರೆದು ಕೂಡುತ್ತದೆ. ಅದರ ಪರಿಣಾಮದಿಂದ ಸ್ವಲ್ಪೇ ಸಮಯದಲ್ಲಿ ತತ್ತಿಗಳು ಹೆಣ್ಣಿನ ದೇಹದಿಂದ ಹೊರಬೀಳುತ್ತವೆ. ಅವುಗಳನ್ನು ಗಂಡು ಆ ಗೂಡಿನಲ್ಲಿ ಸೇರಿಸುತ್ತದೆ.

ತತ್ತಿಗಳನ್ನು ಇಡುವುದಾದ ಬಳಿಕ ಆ ಹೆಣ್ಣು ಮೀನನ್ನು ಅಲ್ಲಿಂದ ತೆಗೆದು ಬೇರೆ ಇಡಬೇಕು. ಇಲ್ಲದಿದ್ದರೆ ಗಂಡು ಮೀನವು ಅದನ್ನು ಕೊಲ್ಲುವ ಸಂಭವವಿರುತ್ತದೆ. ಆ ಬಳಿಕ ಆ ಗೂಡಿನಲ್ಲಿಯ ತತ್ತಿಗಳನ್ನು ಮರಿಮಾಡುವ ಕಾರ್ಯವನ್ನು ಆ ಗಂಡು ಮೀನವೇ ಮಾಡುತ್ತದೆ.

ಎಂಜೆಲ್ ಎಂಬ ಮೀನವು ಯಾವುದೊಂದು ಎಲೆಯ ಮೇಲಾಗಲಿ ಕಲ್ಲು, ಗಾಜುಗಳ ಮೇಲಾಗಲಿ ತತ್ತಿ ಇಡುತ್ತದೆ. ತತ್ತಿಗಳಿಂದ ಮರಿಗಳು ಹೊರಬಿದ್ದಾಗ ಮರಿಗಳು ಒಂದು ತೆಳುವಾದ ದಾರದಂತಹ ವಸ್ತುವಿನಿಂದ ತತ್ತಿಗೆ ಸಂಬಂಧ ಪಟ್ಟಿರುತ್ತವೆ. ಮತ್ತು ತಮ್ಮ ಬಾಲಗಳನ್ನು ಭರದಿಂದ ಅಲ್ಲಾಡಿಸುತ್ತಿರುತ್ತವೆ. ಆಗ ತಾಯಿ-ತಂದೆ ಮೀನುಗಳು ಆ ಮರಿಗಳನ್ನು ಬಾಯಿಯಲ್ಲಿ ಹಿಡಿದುಕೊಂಡು ಬೇರೆ ಕಡೆಗೆ ಒಯ್ದು ಇಡುತ್ತವೆ. ಈ ರೀತಿಯಿಂದ ಮರಿಗಳು ಈಸಲು ಕಲಿಯುತ್ತವೆ.

ವಿವಿಧ ತರಹದ ಸಸ್ಯಗಳಿಲ್ಲದೆ ಮೀನು ಸಾಕುವ ಹೊಂಡವು ಪೂರ್ಣವೆನಿಸುವುದಿಲ್ಲ. ಗಿಡಗಂಟೆಗಳೊಡನೆ ಅದು ಒಂದು ಉದ್ಯಾನವಾಗಿಯೇ ತೋರುತ್ತದೆ.

—

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-15 **PATTU BROTHERS,**

OPP.— Town Hall, MYSORE.

ಜ್ಞಾನ ದೀಪ.

(೧)

ನೆರೆ ಹಾರಾಡುವ ಅಪಾತವು ಸೇವನೆಗೆ ಯೋಗ್ಯ, ಹಣ ಹಾರಾಡುವ ಅಧಿಕಾರವು ಸೇವೆಗೆ ಅಯೋಗ್ಯ.

(೨)

ವಿಶೇಷ ಹಿಂಯೂ ಕಹಿಯಂತೆಯೇ ತ್ಯಾಜ್ಯವಾದುದು, ಮಿತಿಮೀರಿದ ಶ್ಲಾಘನೆಯೂ ದೂಷಣೆಯಷ್ಟೇ ಹೇಯವಾದುದು

(೩)

ಎಷ್ಟೇ ತಿಂಡಿ ಹಾಕಿದರೂ ಗೂಡ್ಸುವಿನ ಹಾಲು ಕೊಡ ನಾರದು ಎಷ್ಟೇ ಬುದ್ಧಿ ಪರಂಪರೆ ತುಂಬಿಕೊಂಡರೂ ಬಡ್ಡು ತಲೆ ಆಲೋಚಿಸಲಾರದು

ನುಡಿಮುತ್ತು

—

ಕೊಡಗು

ತಾ॥ ೨೯ ಮೇ ೧೯೫೩ನೇ ಶುಕ್ರವಾರ

ಹಿಂದೂ–ಪಾಕಿಸ್ಥಾನ ಸಂಬಂಧ

ಕೆಲವು ಸಮಯದ ಹಿಂದೆ ಪೂರ್ವ ಮತ್ತು ಪಶ್ಚಿಮ ಪಾಕಿಸ್ಥಾನಗಳಲ್ಲಿ ಅತ್ಯಂದಿನ್ನು ನಿರಾಶ್ರಿತರ ಸಂಖ್ಯೆ ಹೆಚ್ಚಾದ ಕಾರಣ ಪಾಸ್‌ಪೋರ್ಟ್ ಪದ್ಧತಿಯನ್ನು ಜಾರಿಗೆ ತರುವ ವಿಚಾರದಲ್ಲಿ ಪಾಕಿಸ್ಥಾನವು ಒಪ್ಪಿದ್ದರಿಂದ ಹಿಂದೂದೇಶ ಮತ್ತು ಪಾಕಿಸ್ಥಾನ ಸಂಬಂಧದಲ್ಲಿ ಬಿಕ್ಕಟ್ಟು ಹೆಚ್ಚಾಯಿತು ಇದರೊಂದಿಗೆ ಪೂರ್ವ ಬಂಗಾಳ, ಪಶ್ಚಿಮ ಪಂಜಾಬು ಮತ್ತು ಬಲೂಚಿಸ್ಥಾನಗಳಲ್ಲಿ ಆಡಳಿತ ಅವ್ಯವಸ್ಥೆ, ರಾಜಕೀಯ ಪಕ್ಷಗಳ ಘರ್ಷಣೆಯಿಂದಾಗಿ ಪರಿಸ್ಥಿತಿ ಕೆಡುತ್ತಾ ಬಂತು ಈ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವ ದೃಷ್ಟಿಯಿಂದ ಪಾಕಿಸ್ಥಾನದ ಆಗಿನ ಮುಖ್ಯ ಮಂತ್ರಿಯಾಗಿದ್ದ ನಾಜಿಮುದ್ದೀನರು ನೆಹರೂರವರೊಡನೆ ಪತ್ರವ್ಯವಹಾರ ನಡೆಸತೊಡಗಿದರು ಕಳೆದ ಆರು ತಿಂಗಳ ಹಿಂದೆ ಪ್ರಾರಂಭವಾದ ಈ ಪತ್ರವ್ಯವಹಾರ ಜಯಪ್ರದವಾಗಿ ಕೊನೆಗೊಳ್ಳುವ ಮೊದಲೇ ನಾಜಿಮುದ್ದೀನರು ಪದಚ್ಯುತರಾಗಿ ಮಹಮ್ಮದಾಲಿಯವರು ಪ್ರಧಾನಮಂತ್ರಿಯಾದರು ಇವರು ನಾಜಿಮುದ್ದೀನರ ತರುವಾಯ ಪಾಕಿಸ್ಥಾನದ ಅವ್ಯವಸ್ಥಿತ ಪರಿಸ್ಥಿತಿಯನ್ನು ತಿಳಿದು ಭಾರತ–ಪಾಕಿಸ್ಥಾನಗಳೊಳಗೆ ಸೌಹಾರ್ದವಿರಬೇಕಾದ ಅಗತ್ಯವನ್ನು ಮನಗಂಡು ಸಂಧಾನ ಪ್ರಯತ್ನವನ್ನು ಮುಂದರಿಸಿದರು. ಇದರ ಫಲಿತಾಂಶವಾಗಿ ಈ ಎರಡು ದೇಶಗಳ ಪ್ರಧಾನ ಮಂತ್ರಿಗಳು ಮುಂದಿನ ತಿಂಗಳ ಪ್ರಥಮ ವಾರದಲ್ಲಿ ಲಂಡನಿನಲ್ಲಿ ಕಲೆತು ಪ್ರಾರಂಭಿಕ ಮಾತುಕತೆಗಳನ್ನು ನಡೆಸಲಿರುವರು ನಂತರ ಹಿಂದೂದೇಶಕ್ಕೂ ಪಾಕಿಸ್ಥಾನಕ್ಕೂ ಇರುವ ಅನೇಕ ಕಗ್ಗಂಟಿನ ಸಮಸ್ಯೆಗಳ ಬಗ್ಗೆ ತಮ್ಮ ತಮ್ಮ ದೇಶಗಳಿಗೆ ಬಂದ ನಂತರ ಕೂಲಂಕುಶ ವಿಚಾರಿಸಿ ತೀರ್ಮಾನಕ್ಕೆ ಬರಲಿರುವರು.

ಈ ಮಧ್ಯೆ ಈ ಎರಡು ದೇಶಗಳೂ ಈ ಸಮಸ್ಯೆಗಳ ಪರಿಶೀಲನೆಗೆ ತಮ್ಮ ತಮ್ಮ ಸರಕಾರಗಳಿಂದ ಇಬ್ಬಿಬ್ಬರು ಅಧಿಕಾರಿಗಳಿಂದ ಕೂಡಿದ 'ಸ್ಟೀಯರಿಂಗ್' ಸಮಿತಿಯನ್ನು ನೇಮಿಸಿರುವರು ಈ ಸಮಿತಿಯವರು ಭಿನ್ನಾಭಿಪ್ರಾಯದ ಸಮಸ್ಯೆಗಳನ್ನು ಬಿಡಿಸಲು ಪ್ರಯತ್ನಿಸುತ್ತಾ ಆ ಬಗ್ಗೆ ತಮ್ಮ ತಮ್ಮ ಸರಕಾರಗಳಿಗೆ ವರದಿ ಮಾಡುತ್ತಿರುವರು ಈ ಪ್ರಯತ್ನದಲ್ಲಿ ನಿರ್ಣಯವಾಗದ ಪ್ರಶ್ನೆಗಳನ್ನು ಮಂತ್ರಿಗಳು ನಂತರ ತೆಗೆದುಕೊಳ್ಳುವರು

ಈಗ ಪ್ರಾಮುಖ್ಯವಾಗಿ ಈ ಎರಡು ರಾಷ್ಟ್ರಗಳ ಮುಂದಿರುವ ನಿರಾಶ್ರಿತರ ಸಮಸ್ಯೆ, ಅಲ್ಪ ಪಕ್ಷೀಯರ ವಿಚಾರ, ಮೊದಲಾದ ಸಮಸ್ಯೆಗಳು ಈ ಸಂಧಾನದಿಂದ ಸಮರ್ಪಕವಾಗಿ ತೀರ್ಮಾನವಾದರೆ ಕಾಶ್ಮೀರ ಸಮಸ್ಯೆಯೂ ಕೂಡ ರಾಜಿಪ್ರಯತ್ನಗಳಿಂದ ತೀರ್ಮಾನವಾಗುವ ಸಾಧ್ಯತೆ ಇದೆಯೆಂದು ಹೇಳಬಹುದು.

ನೆರೆಯ ಎರಡು ರಾಜ್ಯಗಳು ಯೋಗ್ಯ ಆಡಳಿತ ನಡೆಸಿ ಕೊಂಡು ಪ್ರಗತಿಯತ್ತವಾಗಿ ಸಾಗಬೇಕಾದರೆ ಅವುಗಳಲ್ಲಿ ಪರಸ್ಪರ ಐಕ್ಯತೆ, ಸಹಕಾರ ಬೇಕು. ಹಿಂದೂಸ್ಥಾನ ಮತ್ತು ಪಾಕಿಸ್ಥಾನಗಳಲ್ಲಿ ಈ ವರೆಗೆ ನಡೆದು ಬಂದ ಘರ್ಷಣೆ, ಅತೃಪ್ತಿಗಳಿಂದಾಗಿ ಪ್ರಯೋಜನವಿಲ್ಲವೆಂಬುದು ಪಾಕಿಸ್ಥಾನಕ್ಕೆ ಮನವರಿಕೆಯಾಗಿದೆ ಆದಿಯಿಂದಲೂ ಕೂಡ ಹಿಂದೂಸ್ಥಾನವು ಸಂಧಾನದ ಮಾರ್ಗವನ್ನು ಎತ್ತಿ ತೋರಿಸಿದರೂ ಪ್ರಯೋಜನವಾಗಿರಲಿಲ್ಲ. ಈಗ ಪಾಕಿಸ್ಥಾನದ ಆಂತರಿಕ ಆಡಳಿತವು ಹದಗೆಟ್ಟು ಪಕ್ಷರಾಜಕೀಯವು ಹೆಚ್ಚಿ ಅಶಾಂತಿಗೆ ಎಡೆಯಾಗಿರುವುದರಿಂದ ಹಿಂದೂದೇಶದೊಡನೆ ಸಖ್ಯದಿಂದಿರಬೇಕೆಂಬ ವಿಚಾರದ ಮಹತ್ವ ಪಾಕಿಸ್ಥಾನಕ್ಕೆ ಮನವರಿಕೆಯಾಗಿ ಅದರ ಮುಖ್ಯಮಂತ್ರಿ ಮಹಮ್ಮದಾಲಿಯವರು ಈ ವಿಚಾರದಲ್ಲಿ ಯೋಗ್ಯ ಪ್ರಯತ್ನ ಮಾಡುತ್ತಿರುವದು ಶುಭ ಚಿಹ್ನೆಯಾಗಿದೆ ಈ ಎರಡು ರಾಷ್ಟ್ರಗಳ ಪ್ರಧಾನ ಮಂತ್ರಿಗಳ ಈ ಸಂಧಾನ ಯತ್ನವು ಜಯಪ್ರದವಾಗಿ ಕೊನೆಗೊಂಡು ಕಾಶ್ಮೀರ ಸಮಸ್ಯೆಯೂ ಕೂಡ ಶಾಂತಿ ಮಾರ್ಗದಿಂದ ಕೊನೆಗೊಳ್ಳಲಿ ಎಂಬುದೇ ಸರ್ವರ ಹಾರೈಕೆಯಾಗಿದೆ.

ವರ್ತಮಾನ.

ಕೇಂದ್ರ ಸರಕಾರದ ವಿದ್ಯಾ ಖಾತೆಯವರು ಹಿಂದೂದೇಶದ ಸ್ವಾತಂತ್ರ್ಯ ಸಂಗ್ರಾಮದ ಚರಿತ್ರೆಯನ್ನು ಬರೆಯುವರೆ ಏರ್ಪಡಿಸಿರುವ ಸಮಿತಿಯ ಸಲಹೆಯ ಮೇರೆಯಿಂದ ಚೀಫ್ ಕಮಿಷನರು ಶ್ರೀಗಳಾದ ಬಿ ಎಸ ಕುಶಾಲಪ್ಪ, ಸಿ ಎಂ ರಾಮರಾವ್, ಕೆ ಸಿ ಕರುಂಬಯ್ಯ, ಡಿ ಎನ್ ಕೃಷ್ಣಯ್ಯ ಮತ್ತು ಎಂ ಎಸ್ ಅನಂತಪದ್ಮನಾಭ ಇವರುಗಳಿಂದ ಕೂಡಿದ ಸಮಿತಿಯೊಂದನ್ನು ನೇಮಿಸಿರುವರು ಇವರು ಮೇಲಿನ ಚರಿತ್ರೆ ಬರೆಯಲು ಕೊಡಗಿನಿಂದ ಬೇಕಾದ ವಿಷಯಗಳನ್ನು ಸಂಗ್ರಹಿಸಿಕೊಡುವರು.

ಕೊಡಗು ಸರಕಾರದ ಚೀಫ್ ಸೆಕ್ರೆಟರಿಯವರಾದ ಶ್ರೀ ಸಿ ನ ನರಸಿಂಹಮೂರ್ತಿಯವರು ರಜೆಯಲ್ಲಿರುವರು ಅವರ ಅಧಿಕಾರಾವಧಿ ಬರುವ ಡಿಸೆಂಬರ್ ವರೆಗಿದ್ದರೂ ಅವರು ಹಿಂತೆರಳುವರೆಂದೂ ಅವರ ಬದಲು ಮೈಸೂರಿನ ಶ್ರೀ ಎಸ್ ಎನ್ ರಾಮಚಂದ್ರನ್‌ರವರನ್ನು ನೇಮಿಸಲಾಗಿದೆಯೆಂದೂ ವರ್ತಮಾನ

ಮದ್ರಾಸಿನಲ್ಲಿ ಪೊಲೀಸ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲರಾಗಿರುವ ಶ್ರೀ ಪಿ ವಿ ಕೃಷ್ಣ ಮೊಣ್ಣಪ್ಪನವರನ್ನು ಹೊಸದಾಗಿ ರಚಿತವಾಗಲಿರುವ ಆಂಧ್ರ ಪ್ರಾಂತದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲರಾಗಿ ನೇಮಿಸುವರೆಂದು ವರ್ತಮಾನ

ಅಖಿಲ ಭಾರತ ಕಾಂಗ್ರೆಸಿನ ಯುವಕ ಶಾಖೆಯ ಸಂಘಟಕರಾದ ಶ್ರೀ ಹೀರಾಲಾಲ್ ಬೋಸ್‌ರವರು ಕೊಡಗಿಗೆ ಬಂದು ಕೊಡಗಿನ ಕಾಂಗ್ರೆಸ್ ಕೆಲಸಗಾರರ ಭೇಟಿ ಮಾಡಿ ವಾಪಾಸ್ ಹೋದರು.

ಒಂದು ಕೆಂಪು ಬಣ್ಣದ ಬಿಳೀ ಪಟ್ಟೆಗಳಿರುವ ಒಂದು ಕೂಂಜಿನ ಎತ್ತು ಸುಮಾರು ೪ ತಿಂಗಳಿಂದ ಚೇರಳ ಶ್ರೀಮಂಗಲ ಗ್ರಾಮದ ಚೇರಳತಮ್ಮಯ್ಯ ಮತ್ತು ಕೊಂಗಟ್ಟಿರ ಮಾದಯ್ಯ ಮುತ್ತಪ್ಪರುಗಳ ಕಾಫಿ ತೋಟಗಳ ಸುತ್ತಮುತ್ತ ತಿರುಗಾಡಿಕೊಂಡಿದ್ದ ವಾರೀಸುದಾರರು ನ್ಯಾಯವಾದ ರುಜುವಾತು ಕೊಟ್ಟು ಹೊಡಕೊಂಡು ಹೋಗಬಹುದಾಗಿ ಮಡಿಕೇರಿ ಪೊಲೀಸ್ ಸಬ್ ಇನ್ಸ್‌ಪೆಕ್ಟರು ತಿಳಿಸುತ್ತಾರೆ

ಟಿ ಶೆಟ್ಟಿಗೇರಿ ಪ್ರೌಢಶಾಲೆಯು ತಾ. ೧೨–೫–೫೩ ರಲ್ಲು ತೆರೆಯಲ್ಪಟ್ಟು ಶಾಲೆಯ ವ್ಯವಸ್ಥಾಪಕ ಮಂಡಳಿಯವರು ಈ ವರ್ಷ ಇನ್ನೊಂದು ಹೊಸ ತರಗತಿಯನ್ನು (V ಫಾರ್ಮ್) ತೆರೆದು ವಿದ್ಯಾರ್ಥಿಗಳಿಗೆ ಯೋಗ್ಯ ರೀತಿಯಲ್ಲಿ ಶಿಕ್ಷಣ ಕೊಡಲು ತಕ್ಕ ಉಪಾಧ್ಯಾಯರುಗಳು, ಕಟ್ಟಡ, ಶಿಕ್ಷಣ ಸಲಕರಣೆಗಳು ಇತ್ಯಾದಿಗಳನ್ನು ಒದಗಿಸಿಕೊಂಡಿರುವರೆಂದು ತಿಳಿಯುತ್ತೇವೆ

ಸ್ಥಳಿಕ ಮಾಧ್ಯಮಿಕ ಶಾಲೆಯ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಮಾನ್ಯ ಗೃಹಮಂತ್ರಿಗಳು ತಾ ೩೧–೫–೫೩ ರಲ್ಲು ಮಾಡಲಿರುವರೆಂದೂ ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರೆಂದೂ ತಿಳಿದುಬರುತ್ತದೆ

ಹಿಂದೂದೇಶದ ಪಶ್ಚಿಮ ಕಮಾಂಡಿನ ಸೇನಾನಾಯಕರಾದ ಮೇಜರ್ ಜನರಲ್ ಕೊಡಂದೆರ ತಿಮ್ಮಯ್ಯನವರು ಮೂರು ತಿಂಗಳ ರಜೆಯಲ್ಲಿ ಮಡಿಕೇರಿಗೆ ಬಂದಿರುವರು

ಮಡಿಕೇರಿ ಮುನ್ಸಿಪಲ್ ಸಮಿತಿಯ ಶ್ರೀ ಎಂ ಎ ... ನವರು ಬೆಂಚ್ ಮೆಜಿಸ್ಟ್ರೇಟರಾದ ... ಜನ ... ಸ್ಥಳ ... ಶ್ರೀ ... ರು ಅವಿರೋಧವಾಗಿ ಆರಿಸಲ್ಪಟ್ಟಿರುವರು

ಜಗತ್ತಿನಲ್ಲಿ ಅದ್ವಿತೀಯ ಹಾಕಿ ಆಟಗಾರರೆನಿಸಿದ ಧ್ಯಾನಚಂದ್‌ರವರು ಬೆಂಗಳೂರಿನಲ್ಲಿ ನಡೆದ ನೆಹರೂ ಹಾಕಿ ಪಂದ್ಯಾಟಕ್ಕೆ ಬಂದಿದ್ದು ಕೊಡಗಿನವರ ಆಮಂತ್ರಣ ಮೇರೆ ತಮ್ಮ ಟೀಮಿನೊಡನೆ ತಾ ೨೩ರಲ್ಲಿ ಮಡಿಕೇರಿಗೆ ಬಂದು ಕೊಡಗಿನ ಟೀಮಿನೊಡನೆ ಆಡಲಿರುವರೆಂದು ವರ್ತಮಾನ

ತಾ. ೧೬ರಲ್ಲಿ ಮೃತ್ಯುವಶರಾದ ಸೋಮವಾರಪೇಟೆಯ ಶ್ರೀ ಎಚ್ ಎಂ ಚಂಗಪ್ಪನವರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆಯೊಂದು ಶ್ರೀ ಬಿ ಎ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಶಾಂತಳ್ಳಿಯಲ್ಲಿ ನಡೆದು ಮೃತರ ಆತ್ಮಕ್ಕೆ ಶಾಂತಿ ಬಯಸಲಾಯಿತು.

ಚೀಫ್ ಕಮಿಷನರ ಹಾಕಿ ಕಪ್ಪಿನ ಟೂರ್ನಮೆಂಟು ತಾ ೨೭ರಿಂದ ಪ್ರಾರಂಭವಾಗಿದೆ ಪ್ರಥಮ ದಿನದ ಆಟವು ಜಾಲಿ ಇಲೆವನ್ ವಾಯಿರಟ್ಸ್ ಟೀಮಿಗೂ ಮಡಿಕೇರಿ ಹೈಸ್ಕೂಲು ಟೀಮಿಗೂ ನಡೆದು ಹೈಸ್ಕೂಲು ಟೀಮು ಒಂದು ಗೋಲಿನಿಂದ ಜಯ ಪಡೆಯಿತು ಆಟ ಮುಂದರಿಯುತ್ತಿದೆ ಕಡೇ ಆಟವು ತಾ ೩೧ರಲ್ಲಿ ನಡೆಯುವದು

೧೯೫೧ರ ಜನಗಣತಿಯ ಮೇರೆ ಕೊಡಗಿನಲ್ಲಿರುವ ೨,೨೯,೪೦೫ ಜನರಲ್ಲಿ ೧,೯೯,೪೭೫ ಜನರು ಹಿಂದುಗಳೆಂದೂ, ೨೩,೦೬೨ ಸಾವಿರ ಜನರು ಮುಸ್ಲಿಮರೆಂದೂ, ೬,೭೪೮ ಜನರು ಕ್ರಿಶ್ಚಿಯನ್ನರೆಂದೂ, ೨೪ ಜೈನರು, ೧೬ ಬೌದ್ಧ ಮತದವರು, ೧೦ ಪಾರ್ಸಿಗಳು, ೮ ಸಿಖ್ಖರು ಇರುವರೆಂದೂ ಗೊತ್ತಾಗಿದೆ.

ತಾ. ೨೫ರಲ್ಲಿ ಮೂರ್ನಾಡಿನಲ್ಲಿರುವ ಕೆಲವು ಹರಿಜನರು ಸೇಂದಿ ಕುಡಿದು ಹೊಡೆದಾಡಿಕೊಂಡು ಒಬ್ಬರ ಎದೆಗೆ ಚೂರಿ ಹಾಕಿ ಗಾಯಗೊಂಡವನು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವನೆಂದೂ, ಚೂರಿ ಹಾಕಿದವನ ದಸ್ತಗಿರಿಯಾಗಿ ಪೋಲೀಸು ವಿಚಾರ ನಡೆಯುತ್ತಿದೆಯೆಂದೂ ತಿಳಿಯಬಂದಿದೆ.

ಅಂತರಾಷ್ಟ್ರೀಯ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಸಿಮ್ಲಾದಲ್ಲಿ ನಡೆಯುತ್ತಿರುವ ಆರು ವಾರಗಳ ಸೆಮಿನಾರಿಗೆ ಕೊಡಗಿನಿಂದ ನಾಪೋಕ್ಲು ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಟಿ. ಎನ್. ಶೇನಯ್ಯನವರನ್ನು ಕಳುಹಿಸಲಾಗಿದೆ.

ಹಿಂದೂದೇಶದ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯಲ್ಲಿದ್ದವರೂ ಒಬ್ಬ ಪ್ರಮುಖ್ಯ ಸಹಕಾರಿ ಮುಂದಾಳುಗಳೂ ಆದ ಶ್ರೀ ಕೆ. ಜಿ. ಶಿವಸ್ವಾಮಿಯವರು ಕಳೆದ ವಾರ ಕೊಡಗಿಗೆ ಬಂದು ಇಲ್ಲಿಯ ಸಹಕಾರಿ ಚಳವಳಿ ಮತ್ತು ಸಾಮೂಹಿಕ ವಿಕಾಸ ಯೋಜನೆಯ ಕೆಲಸ ಕಾರ್ಯಗಳನ್ನು ಪರಿಶೀಲಿಸುತ್ತಿರುವರೆಂದೂ, ಇವರು ರಿಸರ್ವ್ ಬ್ಯಾಂಕಿಗೆ ವ್ಯವಸಾಯ ಪತ್ತಿನ ವಿಚಾರವಾಗಿಯೂ ದೆಹಲಿಯಲ್ಲಿನ ಇಂಡಿಯನ್ ಸ್ಕೂಲ್ ಆಫ್ ಇಕಾನಮಿಕ್ಸ್‌ಗೆ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರದ ಸ್ಥಾನವನ್ನು ಕುರಿತಾಗಿಯೂ ವರದಿ ಮಾಡಲಿರುವರೆಂದೂ ಅವರು ತಾ. ೧ರಲ್ಲಿ ವಾಪಾಸು ಹೋಗುವರೆಂದೂ ತಿಳಿದು ಬಂದಿದೆ.

ಈ ಮೊದಲು ಮದ್ರಾಸಿನ ಗವರ್ನರರಾಗಿದ್ದ ಭಾವನಗರದ ಮಹಾರಾಜರವರ ಪುತ್ರ, ನವ ಮಡಿಕೇರಿಗೆ ಬಂದಿರುವರು.

ಮಡಿಕೇರಿ ಫೋರ್ಸ್ಟ್‌ಆಫೀಸಿನ ಬಳಿಯಿರುವ ಶ್ರೀ ಕಾಂಗೆಟೀರ ಅಪ್ಪಯ್ಯನವರ ಹುಲ್ಲು ಮುಂದಕ್ಕೆ ತಾ. ೨೭ರಲ್ಲಿ ಆಕಸ್ಮಾತ್ ಬೆಂಕಿಬಿದ್ದು ಸುಮಾರು ನಾಲ್ಕರ ಕಂತೆ ಹುಲ್ಲು ಬೆಂದು ಹೋಗುವಷ್ಟರಲ್ಲಿ ನೆರೆಕರೆಯು ಬಂದು ಬೆಂಕಿಯನ್ನು ಕೆದಿಸಿ ಹುಲ್ಲಿಗೆ ಮುಟ್ಟಿ ಇದ್ದ ಕಟ್ಟಡಕ್ಕೆ ಬೆಂಕಿ ಹಿಡಿಯದಂತೆ ತಡೆದರೆಂದು ತಿಳಿಯ ಬರುತ್ತದೆ.

ಕೋದಂಡ ಮಿಸ್ ಸೀತಾಪೂವಯ್ಯನವರು ಕಳೆದ ಒಂದು ವರ್ಷದಿಂದ ಅಮೇರಿಕಾದಲ್ಲಿ ಹಿಂದೂ ಸಂಸ್ಕೃತಿಯ ನೃತ್ಯಕಲೆಯನ್ನು ಅಲ್ಲಿಯವರಿಗೆ ಪರಿಚಯ ಮಾಡಿಕೊಡುತ್ತಿರುವರೆಂದೂ ಅದರೊಂದಿಗೆ ಪಾಶ್ಚಿಮಾತ್ಯ ಆಧುನಿಕ ನೃತ್ಯಕಲೆಯನ್ನು ಅಭ್ಯಾಸಮಾಡುತ್ತಿರುವರೆಂದೂ ಹಿಂದೂದೇಶದ ಸಂಸ್ಕೃತಿಯ ಬಗ್ಗೆ ಭಾಷಣಗಳನ್ನು ಅಲ್ಲಲ್ಲಿ ಕೊಡುತ್ತಿರುವರೆಂದೂ ತಿಳಿದುಬಂದಿದೆ.

ಭಾರತದ ನಿವೃತ್ತ ಸೇನಾನಿಯಾದ ಜನರಲ್ ಕೆ. ಎಂ. ಕಾರ್ಯಪ್ಪನವರೂ ಶ್ರೀ ಕೆ. ಜಿ. ಶಿವಸ್ವಾಮಿಯವರೂ ಕೊಡಗಿನ ಸಾಮೂಹಿಕ ವಿಕಾಸ ಯೋಜನೆಯ ಕೇಂದ್ರಗಳಿಗೆ ತಾ. ೨೭ರಲ್ಲಿ ಸಂದರ್ಶನೆಯಿತ್ತರು.

ಕಾನೂರು, ಕೇಂಬುಕೊಲ್ಲಿ, ಬಾಳೆಕೋವು, ಕುಟ್ಟ, ಪೊನ್ನಂಪೇಟೆ, ವೀರಾಜಪೇಟೆ, ಬೇತರಿ ವರೆಗೆ ಒಂದು ಬಸ್ ಲೈನ್ ಕೊಡಲು ಟ್ರಾನ್ಸ್‌ಪೋರ್ಟ್ ಅಥಾರಿಟಿಯು ನಿಶ್ಚಯಿಸಿರುವದರಿಂದ ಲಾಯಿಸ್‌ದಾರರು ತಾ. ೨೦—೬—೫೩ರೊಳಗೆ ಅರ್ಜಿ ಬರಕೊಳ್ಳಬಹುದೆಂದೂ ಅ ಜ ೯ ಯ ಜೊತೆಯಲ್ಲಿ ಹತ್ತು ರೂಪಾಯಿ ಟ್ರಿಜರಿಗೆ ಪಾವತಿ ಮಾಡಿದ ಚಲನ್ ಕಳುಹಿಸಬೇಕಲ್ಲದೆ ರೂ. ೫೦೦ ಡಿಪಾಜಿಟ್ಟು ಟ್ರಿಜರಿಯಲ್ಲಿಡಬೇಕೆಂದೂ ಪ್ರಕಟವಾಗಿದೆ.

ಮಕ್ಕಳ ಪುಟ

"ವಿಚಾರಿಸಿ ಕೆಲಸ ಮಾಡು."

(ಮಕ್ಕಳ ಮನರಂಜನೆಗಾಗಿಯೂ, ಯೋಗ್ಯ ಬೋಧನೆಗಾಗಿಯೂ ಶ್ರೀ 'ಪ್ರೇಮಯೋಗಿ' ಯವರು ಪ್ರಖ್ಯಾತವಾದ ಪಂಚತಂತ್ರದಿಂದ ಕಥೆಗಳನ್ನು ಕನ್ನಡಕ್ಕೆ ಪರಿವರ್ತಿಸಿ ಕೊಡಲಿರುವರು. ನಮ್ಮ ವಾಚಕರಾದ ದೊಡ್ಡವರೂ ಮಕ್ಕಳೂ ಇದರಿಂದ ಲಾಭ ಹೊಂದುವರೆಂದು ಆಶಿಸಲಾಗಿದೆ.

ಸಂ.)

ದಕ್ಷಿಣ ದೇಶದಲ್ಲಿ ಕುಸುಮುವೆಂಬ ಪಟ್ಟಣವಿತ್ತು. ಆ ಪಟ್ಟಣದಲ್ಲಿ ರತ್ನನೆಂಬ ವ್ಯಾಪಾರಿಯಿದ್ದನು. ಆತನು ಸಿರಿವಂತನಾಗಿದ್ದು ತನ್ನ ಜೀವನದ ಗುರಿ ಸದ್ಗುಣ, ಹಣ, ಪ್ರೇಮ ಮುಕ್ತಿಗಳ ಸಾಧನೆ ಎಂದು ಗ್ರಹಿಸಿದ್ದನು. ಆದರೆ ದುರಾದೃಷ್ಟವಶಾತ್ ಆತನಿಗೆ ವ್ಯಾಪಾರದಲ್ಲಿ ವಿಪರೀತ ನಷ್ಟವಾಗಿ ಆತನ ಆಸ್ತಿಯೆಲ್ಲವೂ ಬರಿದಾಯಿತು. ಅದರಿಂದ ಆತನು ತುಂಬಾ ನಿರಾಶನಾಗಿದ್ದನು. ಏಕೆಂದರೆ ಹಣವಿಲ್ಲದಿದ್ದರೆ ಮಾನ ಜ್ಞಾನ ಬುದ್ಧಿ ಇದ್ದರೂ ಪ್ರಯೋಜನವಿಲ್ಲವೆಂಬುದು ಆತನಿಗೆ ತಿಳಿದಿತ್ತು. ಅದರಿಂದ ಆತನು ಹಣವಿಲ್ಲದೆ ಜೀವಿಸುವದಕ್ಕಿಂತಾ ಉಪವಾಸನಿಂತು ಪ್ರಾಣ ತೆಗೆದುಕೊಳ್ಳುವದು ಯೋಗ್ಯವೆಂದು ಭಾವಿಸಿದನು. ಈ ರೀತಿಯ ತೀರ್ಮಾನವನ್ನು ಮಾಡಿಕೊಂಡು ಆತನು ನಿದ್ರೆ ಹೋದನು.

ಆತನ ನಿದ್ರೆಯಲ್ಲಿ ಆತನಿಗೊಂದು ಸ್ವಪ್ನ ಬಿತ್ತು. ಅದರಲ್ಲಿ ಸುಮಾರು ಸಾವಿರ ಮಿಲಿಯ ರೂಪಾಯಿಗಳ ಒಬ್ಬ ಜೈನ ಸನ್ಯಾಸಿಯ ರೂಪದಿಂದ ಆತನ ಹತ್ತಿರ ಬಂದು "ಹೇ ವರ್ತಕನೆ, ನೀನು ನಿರಾಶನಾಗಬೇಡ. ನಾನು ಮೂರು ಮಿಲಿಯ ರೂಪಾಯಿಗಳ ನಿಧಿ. ನಿನ್ನ ಅಜ್ಜ ತಾತಂದಿಯರು ನನ್ನನ್ನು ಸಂಪಾದಿಸಿದ್ದರು. ಆದರೆ ಅವರು ನನ್ನನ್ನು ಉಪಯೋಗಿಸದೆ ಹೂತಿಟ್ಟರು. ನಾನು ನಾಳೆ ನಿನ್ನ ಮನೆಗೆ ಈ ರೂಪಿನಲ್ಲಿಯೇ ಬರುವೆನು. ಆಗ ನೀನು ಒಂದು ದೊಣ್ಣೆಯಿಂದ ನನ್ನ ತಲೆಗೆ ಬಲವಾಗಿ ಹೊಡೆದು ಮಲಗಿಸಿಬಿಡು. ನಾನು ಎಷ್ಟು ಖರ್ಚು ಮಾಡಿದರೂ ಮುಗಿಯದ ನಿಧಿಯಾಗಿ ಉಳಿಯುವೆನು" ಎಂದು ಹೇಳಿತು.

ವರ್ತಕನು ಬೆಳಿಗ್ಗೆ ಎದ್ದು ಮುಖತೊಳೆದುಕೊಂಡು ತನ್ನ ಸ್ವಪ್ನದ ವಿಚಾರ ಆಲೋಚಿಸ ತೊಡಗಿದನು. "ನನ್ನ ಸ್ವಪ್ನ ನಿಜವಾಗಬಹುದೇ? ಅದು ಖಂಡಿತಾ ನಿಜವಾಗಲಾರದು. ಪ್ರತಿ ಕ್ಷಣದಲ್ಲಿಯೂ ಹಣದ ವಿಚಾರವನ್ನೇ ಆಲೋಚಿಸುತ್ತಿರುವದರಿಂದ ಆ ರೀತಿಯ ಸ್ವಪ್ನ ಕಂಡಿರಬೇಕು. ಏಕೆಂದರೆ ಸ್ವಪ್ನಗಳು ಸ್ವಾಭಾವಿಕವಾಗಿ ಮುದಿವರಿಗೆ, ರೋಗಿಗಳಿಗೆ, ವಿರಹಿಗಳಿಗೆ, ಕುಡುಕರಿಗೆ ಬರುವವಾಗಿದೆ. ಅದ್ದರಿಂದ ನನ್ನ ಸ್ವಪ್ನಕ್ಕೆ ಅರ್ಥವಿರಲಾರದು."

ಅಷ್ಟರಲ್ಲಿ ವರ್ತಕನ ಹೆಂಡತಿಯ ಕೈಯ ಉಗುರುಗಳನ್ನು ಕತ್ತರಿಸಿ ಸರಿಪಡಿಲು ಹಜಾಮನು ಬಂದನು. ಆತನು ತನ್ನ ಕೆಲಸದಲ್ಲಿ ನಿರತನಾಗಿದ್ದನು. ಅಷ್ಟರಲ್ಲಿ ವರ್ತಕನು ಸ್ವಪ್ನದಲ್ಲಿ ಕಂಡ ಜೈನ ಸನ್ಯಾಸಿ ಬಂದು ಮನೆಯೊಳಗೆ ಪ್ರವೇಶಿಸಿದನು. ರತ್ನನಿಗೆ ಸನ್ಯಾಸಿಯನ್ನು ನೋಡಿ ಅಮಿತ ಆನಂದವಾಯಿತು. ಸಂತೋಷದಿಂದ ಓಡಿ ಹೋಗಿ ಹತ್ತಿರದಲ್ಲಿದ್ದ ದೊಣ್ಣೆಯೊಂದನ್ನು ತಂದು ಆತನ ತಲೆಗೆ ಬಲವಾಗಿ ಹೊಡೆದನು. ಸನ್ಯಾಸಿಯು ಚಿನ್ನದ ರಾಶಿಯಾಗಿ ಆ ಕ್ಷಣ ನೆಲದಲ್ಲಿ ಉರುಳಿದನು.

ನಂತರ ವರ್ತಕನು ಹಜಾಮನಿಗೆ ಸ್ವಲ್ಪ ಹಣ ಕೊಟ್ಟು ಹೇಳಿದನು. "ನನ್ನ ಗೆಳೆಯ, ನನ್ನ ಮನೆಯಲ್ಲಾದ ಈ ಘಟನೆಯನ್ನು ನೀನು ಯಾರಿಗೂ ಹೇಳಕೂಡದು." ಹಜಾಮನು ಒಪ್ಪಿದನು. ಆದರೆ ಆತನು ತನ್ನ ಮನೆಗೆ ತಲುಪಿದ ನಂತರ ಯೋಚಿಸತೊಡಗಿದನು. "ಆಶ್ಚರ್ಯದ ವಿಚಾರ ನಗ್ನನಾದ ಆ ಜೈನ ಸನ್ಯಾಸಿಯು ಪೆಟ್ಟು ಬಿದ್ದೊಡನೆ ಚಿನ್ನದ ಗಟ್ಟಿಯಾದನು. ಅದೇ ರೀತಿ ನಗ್ನರಾದ ಜೈನ ಸನ್ಯಾಸಿಗಳೆಲ್ಲ ಹಾಗೆ ಆಗುತ್ತಾರೆಂದು ತೋರುತ್ತದೆ. ಅದ್ದರಿಂದ ನಾಳೆ ದಿನ ಆ ರೀತಿಯ ಬೇಕಾದಷ್ಟು ಸನ್ಯಾಸಿಗಳನ್ನು ಮನೆಗೆ ಕರೆದು ಅವರನ್ನು ನಾಯಿಯಂತೆ ಹೊಡೆದು ಬೇಕಾದಷ್ಟು ಹೊನ್ನು ಸಂಪಾದನೆ ಮಾಡುವೆನು" ಎಂದು ಯೋಚಿಸಿದನು. ಈ ಯೋಜನೆಯಲ್ಲಿ ರಾತ್ರಿ ಕಳೆದು ಬೆಳಗಾಯಿತು.

ಬೆಳಿಗ್ಗೆ ಎದ್ದು ಆತನು ಹತ್ತಿರದಲ್ಲಿದ್ದ ಜೈನ ದೇವಾಲಯಕ್ಕೆ ಹೋದನು. ದೇವಸ್ಥಾನದಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿ ತನಗೆ ತಿಳಿದಿದ್ದ ಒಂದೆರಡು ಶ್ಲೋಕಗಳನ್ನು ಹೇಳಿದನು. ನಂತರ ಜೈನಗುರುವಿನ ಹತ್ತಿರ ಬಂದು ಸಾಷ್ಟಾಂಗ ನಮಸ್ಕಾರ ಮಾಡಿದನು. ಗುರುವು ಆಶೀರ್ವದಿಸಿದನು. ನಂತರ ಹಜಾಮನು ಹೇಳಿದನು. "ಮಹಾ ಗುರು, ಈ ದಿನ ನಿಮ್ಮ ಗಾಳಿ ವಿಹಾರಕ್ಕೆ ಹೋಗುವಾಗ ಬಡವನಾದ ನನ್ನ ಮನೆಗೆ ನಿಮ್ಮ ಸನ್ಯಾಸಿ ಸಮೂಹದೊಡನೆ ಸಂದರ್ಶಿಸಬೇಕು" ಎಂದು ಕೇಳಿದನು. ಆಗ—ಗುರುವು, 'ಹೇ ಸೋದರಾ, ಮನೆಮನೆಗೆ ಔತಣಕ್ಕೆ ಹೋಗುವ ಬ್ರಾಹ್ಮಣರಿಂದು ನಮ್ಮನ್ನು ಯೋಚಿಸಿದೆಯಾ? ನಾವು ಹಾಗೆ ಹೋಗಲಾರೆವು. ನಾವು ನಿಜವಾದ ಭಕ್ತರನ್ನು ಕಂಡಾಗ ಅವರಲ್ಲಿಗೆ ಹೋಗುವೆವಲ್ಲದೆ ಅನ್ಯಥಾ ಇಲ್ಲ. ಅದ್ದರಿಂದ ಈ ರೀತಿ ನಮ್ಮನ್ನು ಅವ್ಹಾನಿಸದಿರು."

"ಪವಿತ್ರ ಹೃದಯರೇ" ಹಜಾಮನು ಹೇಳಿದನು, "ನನಗೆ ಅದು ತಿಳಿದಿದೆ. ನೀವು ಹೇಳಿದಂತೆ ನಾನು ಮಾಡುವೆನು. ನಿಮ್ಮ ಸೇವೆಯಲ್ಲಿಯೇ ಈ ಜೀವವನ್ನು ಸವೆಸಬೇಕೆಂದಿರುವೆನು. ನಿಮ್ಮ ಪಾವನ ಉಪದೇಶದಿಂದ ನಾನು ಪುನೀತನಾಗಬೇಕೆಂದಿರುವನಲ್ಲದೆ ನಿಮ್ಮ ಆಶ್ರಮಕ್ಕೆ ಬೇಕಾದ ವಸ್ತು ಸಹಾಯ ಕೊಡಬೇಕೆಂದಿರುವೆನು. ಹೇಗೂ ನೀವು ಕಂಡಂತೆ ಮಾಡಿರಿ." ಹೀಗೆ ಹೇಳಿ ಹಜಾಮನು ತನ್ನ ಮನೆಗೆ ಬಂದನು.

ಮನೆಗೆ ಬಂದು ಆತನು ಬಲವಾದ ನಾಲ್ಕಾರು ದೊಣ್ಣೆಗಳನ್ನು ತಯಾರಿಸಿ ಇಟ್ಟುಕೊಂಡನು. ಸಾಯಂಕಾಲದ ಸಮಯಕ್ಕೆ ಜೈನ ಗುರುಗಳ ತಂಡವು ಭಕ್ತಾತಿರೇಕದಿಂದ ಹಜಾಮನ ಮನೆಯ ಕಡೆ ಬಂದಿತು. ಅವರು ಸನ್ಯಾಸಿಗಳಾದವರೂ ಹೊಗಳಿಕೆಗೂ, ಹಣಕ್ಕೂ ಮರುಳಾದ ಮನಸಿನವರಾಗಿರಲಿಲ್ಲ. ಅತಿಯಾಸೆಯು ಯಾರನ್ನೂ ಬಿಟ್ಟದ್ದಲ್ಲ.

ಸನ್ಯಾಸಿಗಳ ಮಹಾ ತಂಡವನ್ನು ಕಂಡು ಹಜಾಮನು ಮನೆಗೆ ಕರೆದುಕೊಂಡು ಹೋದನು. ಮನೆಯೊಳಕ್ಕೆ ಸೇರಿದಂತೆ ಮೊದಲೇ ಏರ್ಪಡಿಸಿದ್ದಂತೆ ಪೆಟ್ಟು ಬೀಳ ತೊಡಗಿತು. ಕೆಲವರು ಅಲ್ಲೇ ಬಿದ್ದು ಸತ್ತರು. ಕೆಲವರು ತಲೆ ಒಡೆದು ಬಿದ್ದರು. ಕೆಲವರು ಓಡಿ ಹೋದರು. ಹತ್ತಿರದಲ್ಲಿದ್ದ ಪೋಲೀಸರು ಈ ಗೊಂದಲವನ್ನು ಕೇಳಿ ಹಜಾಮನನ್ನು ದಸ್ತಗಿರಿ ಮಾಡಿಕೊಂಡು ಹೋಗಿ ಜಡ್ಜರ ಮುಂದೆ ವಿಚಾರಣೆಗೆ ನಿಲ್ಲಿಸಿದರು. ವಿಚಾರಣೆಯಲ್ಲಿ ಹಜಾಮನು ಹೇಳಿದನು. "ಮಹಾ ಪ್ರಭೂ, ನಾನು ಹಾಗೆ ಮಾಡಲು ಕಾರಣವಿಲ್ಲದೆ ಇಲ್ಲ. ನನ್ನ ಹಾಗೆಯೇ ಮಾಡಿದ ವರ್ತಕ ರತ್ನನು ಸಿರಿವಂತನಾಗಿದ್ದಾನೆ"ಂದು ಹೇಳಿ ವರ್ತಕನ ಕತೆಯನ್ನು ಹೇಳಿದನು.

ನ್ಯಾಯಾಧೀಶರು ವರ್ತಕ ರತ್ನನನ್ನು ವಿಚಾರಣೆಗೆ ಕರೆಸಿದರು. ನ್ಯಾಯಾಧೀಶರ ಮುಂದೆ ತನ್ನ ಸತ್ಯ ಕತೆಯನ್ನು ವರ್ತಕನು ಹೇಳಿದನು. ಇದನ್ನು ಕೇಳಿ ನ್ಯಾಯಾಧೀಶರು ಹಜಾಮನನ್ನು ಶಾರಿ ಶಿಕ್ಷೆಗೆ ಗುರಿಪಡಿಸಿ ಹೇಳಿದರು. "ವಿಚಾರ ತಿಳಿಯದೆ ಅನುಕರಿಸುವವರು, ಯೋಗ್ಯ ಸಲಹೆ ತೆಗೆದುಕೊಳ್ಳದೆ ವರ್ತಿಸುವವರು ಈ ಹಜಾಮನ ಕತೆಯಿಂದ ಪಾಠ ಕಲಿಯಲಿ. ಅದ್ದರಿಂದ ಸರಿಯಾಗಿ ತಿಳಿದುದನ್ನು ಮಾಡಬೇಕು. ಇಲ್ಲವಿದ್ದರೆ ನಾಪಿತನ ಮತ್ತು ಹೆಂಗಸಿನ ಕತೆಯಂತಾದೀತು."

ವರ್ತಕ ರತ್ನನು ಅದು ಯಾವ ಕತೆ ಎಂದು ನ್ಯಾಯಾಧೀಶರನ್ನು ಕೇಳಿದನು. ನ್ಯಾಯಾಧೀಶರು ಬರುವ ವಾರದ ಪತ್ರಿಕೆಯಲ್ಲಿ ಈ ಕತೆ ಹೇಳುವರು!

ಈಜಿಪ್ಟಿನಲ್ಲಿ ಯುದ್ಧ ಸನ್ನಾಹ

ಸುಯೆಜ್ ಕಾಲುವೆ ಪ್ರದೇಶದಿಂದ ಬ್ರಿಟಿಷರ ನಿರ್ಗಮನದ ಪ್ರಶ್ನೆಯು ಈಗ ವಿಕೋಪಕ್ಕೆ ಮುಟ್ಟಿದೆ. ಇಜಿಪ್ತ ಬ್ರಿಟನ್‌ಗಳಲ್ಲಿ ೧೯೩೬ರಲ್ಲಿ ಆದ ಒಪ್ಪಂದದ ಮೇರೆಗೆ, ೫೦ ಕೋಟಿ ವೆಚ್ಚದಿಂದ ಬ್ರಿಟಿಷರು ಸುಯೆಜ್ ಕಾಲುವೆ ಪ್ರದೇಶದಲ್ಲಿ ರಚಿಸಿರುವ ವಿಮಾನ ದಳ ಮತ್ತು ಸೈನಿಕ ಠಾಣೆಗಳ ಮೇಲಿನ ಒಡೆತನವು ಬ್ರಿಟನಿನ ಕಡೆಗೆ ಇರಬೇಕೆಂದು ಇದೆ. ಈ ಒಪ್ಪಂದದ ಅವಧಿ ೧೯೫೬ರಲ್ಲಿ ಮುಗಿಯುವದು.

ಮಧ್ಯಪ್ರಾಚ್ಯದ ರಾಷ್ಟ್ರಗಳ ಮೇಲೆ ತಮ್ಮ ಒಡೆತನವನ್ನಿಟ್ಟುಕೊಳ್ಳುವದಕ್ಕಾಗಿಯೂ ಪೂರ್ವ ಮತ್ತು ಪಶ್ಚಿಮ ಜಗತ್ತುಗಳ ಸಂಯೋಗ ಭೂಮಿಯಂತಿರುವ ಸುಯೇಜ್ ಕಾಲುವೆಯ ಮೇಲೆ ಕಾವಲಿಡುವದಕ್ಕಾಗಿಯೂ ಬ್ರಿಟಿಷರ ಸರಕಾರವು ಇಷ್ಟೊಂದು ಹೇರಳ ಹಣ ವೆಚ್ಚ ಮಾಡಿ ಅಲ್ಲಿ ತನ್ನ ಸೈನಿಕ ಠಾಣ್ಯವನ್ನು ನಿರ್ಮಿಸಿದೆ. ಆದರೆ ಜಾಗೃತವಾದ ಈಜಿಪ್ಟಿಗೆ ಪರಕೀಯ ಸೈನ್ಯವು ತನ್ನ ಭೂಮಿಯ ಮೇಲೆ ತಳವೂರಿ ನಿಂತದ್ದು ಅವಮಾನಾಸ್ಪದವೆಂದೆನಿಸುತ್ತಿದೆ. ಅಂತೆಯೇ ಅಲ್ಲಿಂದ ಬ್ರಿಟೀಷ ಸೈನ್ಯವು ಕೂಡಲೇ ತೆರಳಬೇಕೆಂದು ಈಜಿಪ್ತದ ರಾಷ್ಟ್ರೀಯ ಮುಖಂಡರು ಒಂದೇ ಸಮನೆ ಪ್ರಯತ್ನ ನಡೆಸಿದ್ದಾರೆ. ಈ ಪ್ರಯತ್ನದ ಅಂಗವಾಗಿ ಬ್ರಿಟನ್ ಮತು ಈಜಿಪ್ಟಿನ ಪ್ರತಿನಿಧಿಗಳ ನಡುವೆ ಈಗ ಕೆಲ ದಿನಗಳ ಹಿಂದೆ ಮಾತು ಕತೆಗಳು ನಡೆದವು. ಆದರೆ ಈ ಮಾತುಕತೆಗಳು ಅನಿರ್ಣೀತವಾಗಿ ಕೊನೆಗೊಂಡವು.

ಆ ಪ್ರದೇಶವನ್ನು ಮರಳಿ ಪಡೆಯದೆ ತಮಗೆ ಶಾಂತಿ ಸಮಾಧಾನಗಳುಂಟಾಗಲಾರವೆಂದು ಈಜಿಪ್ಟಿನ ಜನರಲ್ ನಗೀಬರು ನುಡಿದರು. ಅದಕ್ಕಾಗಿ ಕೋಟೆ ಗಟ್ಟಿ ಪಣ ತೆತ್ತಿದ್ದೇವೆ. ಅದನ್ನು ನಾವೆಂದಿಗೂ ಬಿಟ್ಟುಕೊಡಲಾರೆವೆಂದು ಇಂಗ್ಲೆಂಡಿನ ಸರ್ ವಿನ್‌ಸ್ಟನ್ ಚರ್ಚಿಲ್ಲರು ಇಂಗ್ಲೆಂಡಿನಲ್ಲಿ ನುಡಿದರು. ಕೇವಲ ಮಾತುಕತೆಗಳಲ್ಲಿಯೇ ಈ ಆರ್ಭಟ ಉಳಿದಿದ್ದರೆ ಅದರಿಂದೇನೂ ಪರಿಸ್ಥಿತಿ ಕೆಡುತ್ತಿದ್ದಿಲ್ಲ. ಆದರೆ ಈಜಿಪ್ಟ ಇಂಗ್ಲೆಂಡುಗಳ ಮುಖ್ಯ ಮಂತ್ರಿಗಳು ಈ ರೀತಿ ಹೆದರಿಕೆ ಬೆದರಿಕೆಗಳ ಮಾತಾಡುತ್ತಿದ್ದಾಗಲೇ ಸುಯೇಜ್ ಕಾಲುವೆಯ ಪ್ರದೇಶದಲ್ಲಿರುವ ಇಸ್ಮಾಯಿಲಿಯಾದ ಹತ್ತಿರದ ಕೆಲ ಹಳ್ಳಿಗಳ ಮೇಲೆ ಆ ಪ್ರದೇಶದಲ್ಲಿರುವ ಬ್ರಿಟೀಷ ಸೈನಿಕರು ಬಾಂಬುಗಳನ್ನೆಸೆದರು. ಮತ್ತು ಟಾಮಿಗನ್, ಮಶಿನ್‌ಗನ್‌ಗಳನ್ನು ತೆಗೆದುಕೊಂಡು ಹೋಗಿ ಈ ಪ್ರದೇಶದ ಸುತ್ತಲೆಲ್ಲಾ ಗುಂಡು ಹಾರಿಸಿ ಬಾಂಬು ಎಸೆದು ಅನೇಕ ಹಳ್ಳಿಗರನ್ನು ಕೊಂದು ಹಾಕಿದರು. ಆಸ್ತಿ ಹಾನಿಯೂ ಆಯಿತು. ಆ ಹಳ್ಳಿಗಳ ಜನರು ಅಸ್ತವ್ಯಸ್ತ ಘಾತಕ ಚಟುವಟಿಕೆ ನಡೆಸಿದ್ದರಿಂದ ಅದನ್ನು ನಿರೋಧಿಸುವದಕ್ಕಾಗಿ ತಾವು ಇಂಥ ಉಗ್ರೋಪಾಯಗಳನ್ನು ಕೈಕೊಳ್ಳಬೇಕಾಯಿತೆಂದು ಬ್ರಿಟೀಷ್ ಸೈನ್ಯದ ವಕ್ತಾರರು ಸ್ಪಷ್ಟೀಕರಣ ಕೊಟ್ಟರು. ಭೂಮಧ್ಯ ಸಮುದ್ರದಲ್ಲಿ ಮಾಲ್ಟಾದಲ್ಲಿರುವ ಬ್ರಿಟೀಷ ನೌಕಾಪಡೆಯ ಯುದ್ಧನೌಕೆಗಳೂ ಯುದ್ಧ ವಿಮಾನಗಳೂ ಸುಯೇಜ್ ರಕ್ಷಣೆಗೆ ಹೊರಟವು. ಹೀಗಾಗಿ ಅಲ್ಲಿ ಬ್ರಿಟನು ಪ್ರಸಂಗ ಬಂದರೆ ಶಸ್ತ್ರದ ಬಲದಿಂದಾದರೂ ಸುಯೆಜ್ ಕಾಲುವೆ ಪ್ರದೇಶವನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳುವ ಪೂರ್ವ ಸಿದ್ಧತೆ ನಡೆಸಿದೆ.

ತಮ್ಮ ಜನರನ್ನು ಬ್ರಿಟೀಷ ಸೈನಿಕರು ಈ ರೀತಿಯಾಗಿ ಸುಳ್ಳು ಕಾರಣ ತೋರಿಸಿ ಕೊಲೆಮಾಡಿದಕ್ಕಾಗಿ ಈಜಿಪ್ಟಿನ ರಾಷ್ಟ್ರೀಯ ಮುಖಂಡರು ಬ್ರಿಟೀಷರ ವಿರುದ್ಧ ಸಿಡಿದೆದ್ದಿದ್ದಾರೆ. ಸುಡಾನದ ವಿಷಯದಲ್ಲಿ ಬ್ರಿಟನ್, ಈಜಿಪ್ಟ, ಸುಡಾನುಗಳ ನಡುವೆ ನಡೆದ ಮಾತುಕತೆಗಳಲ್ಲಿ ಈಜಿಪ್ಟಿನ ಪರವಾಗಿ ಭಾಗವಹಿಸಿದ್ದ ಮೇಜರ್ ಸಾಲೆಮರು ಬ್ರಿಟೀಷರ ಈ ಉತಾವಳಿ ಸ್ವಭಾವದಿಂದ ರೊಚ್ಚಿಗೆದ್ದಿದ್ದು ಬ್ರಿಟೀಷರ ಜೊತೆಯಲ್ಲಿ ಕುಳಿತುಕೊಂಡು ಮಾತುಕತೆ ನಡೆಸಲು ಇನ್ನು ಶಕ್ಯವೇ ಇಲ್ಲವೆಂದೂ ಯಾವುದೇ ಕಾರಣದಿಂದಾಗಲೀ, ಒಪ್ಪಂದಕ್ಕನುಸರಿಸಿಯಾಗಲೀ ಬ್ರಿಟನನ್ನು ಈಜಿಪ್ಟಿನ ಭೂಮಿಯ ಮೇಲೆ ಇರಗೊಡಲಿಕ್ಕಿಲ್ಲೆಂದು ಹೇಳಿದ್ದಾರೆ.

ಪ್ರಧಾನಾಮಾತ್ಯ ನಗೀಬರು ಕೈರೋ ನಭೋವಾಣಿಯ ಮೂಲಕ ಈಜಿಪ್ಟಿನ ಜನತೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ಇನ್ನು ಬ್ರಿಟೀಷರೊಡನೆ ಒಪ್ಪಂದದ ಮಾತುಕತೆ ನಡೆಸುವ ಪ್ರಶ್ನೆಯೇ ಉಳಿದಿಲ್ಲವೆಂದೂ ಸುಯೇಜ್ ಕಾಲುವೆ ಪ್ರದೇಶದ ಸ್ವಾಮಿತ್ವವನ್ನು ಯುದ್ಧಮಾಡಿಯೇ ಮರಳಿ ಪಡೆದುಕೊಳ್ಳಬೇಕೆಂದೂ ಅದಕ್ಕಾಗಿ ಈಜಿಪ್ಟಿಯನ್ ಜನತೆ ಸರ್ವ ತ್ಯಾಗಕ್ಕೆ ಸಿದ್ಧವಾಗಬೇಕೆಂದೂ ಕೇಳಿಕೊಂಡಿದ್ದಾರೆ. ಈ ರೀತಿಯಾಗಿ ಪ್ರತಿಕ್ಷಣಕ್ಕೆ ಈಜಿಪ್ಟಿನ ವಾತಾವರಣವು ಬಿಸಿಯಾಗುತ್ತ ನಡೆದಿದೆ.

ಬ್ರಿಟಿಷ್ ಮುಖ್ಯಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಇದೇ ವಿಷಯದ ಚರ್ಚೆನಡೆದಾಗ ಈಜಿಪ್ಟ ಸರಕಾರವು ತನ್ನ ಸೈನಿಕರಿಗೆ ಶಿಕ್ಷಣ ಕೊಡುವದಕ್ಕಾಗಿ ಜರ್ಮನ್ ಲಷ್ಕರೀತಜ್ಞರನ್ನು ನೇಮಿಸಿದ್ದನ್ನು ಟೀಕಿಸಿದ್ದರು. ಚರ್ಚಿಲರ ಈ ಟೀಕಗೆ "ನಮ್ಮ ಸೈನ್ಯವನ್ನು ತರಬೇತುಗೊಳಿಸಲು ಜರ್ಮನ್ ತಜ್ಞರನ್ನು ನಿಯಮಿಸಲೇಬೇಕಾಗಿದೆ. ಅವರು ನಮಗೆ ನಿಷ್ಠರಾಗಿ ದುಡಿಯುತ್ತಿದ್ದಾರೆ. ಬ್ರಿಟೀಷರ ವಿರುದ್ಧ ಹೋರಾಡುವದಕ್ಕೆ ನಮ್ಮ ಸೈನಿಕರಿಗೆ ಬ್ರಿಟೀಷ್ ತಜ್ಞರು ತರಬೇತುಗೊಳಿಸುವದು ಶಕ್ಯವಿಲ್ಲವೆಂದೇ ನಾವು ಜರ್ಮನ್ ತಜ್ಞರನ್ನು ಕರೆತಂದಿದ್ದೇವೆ. ನಾವು ಎಂದು, ಎಲ್ಲಿ, ಯಾವಾಗ ಬ್ರಿಟೀಷರ ವಿರುದ್ಧ ಹರಿಹೋಗುವೆವೆಂಬುದು ನಮ್ಮ ಸಿದ್ಧತೆ ಮತ್ತು ಪರಿಸ್ಥಿತಿಯನ್ನವಲಂಬಿಸಿದೆ. ಈಜಿಪ್ಟಿಯನರು ಅಂಥ ದಿನವು ಉದಯಿಸಿದಾಗ ಎಲ್ಲ ಆಪತ್ತುಗಳನ್ನು ಎದುರಿಸುವದಕ್ಕೂ, ಸರ್ವ ತ್ಯಾಗಕ್ಕೂ ಸಿದ್ಧರಾಗಬೇಕೆಂದು" ನಗೀಬರು ಸಾರಿದ್ದಾರೆ. ಮತ್ತು ತಮ್ಮ ನಿಲುವಿಗೆ ಭಾರತದ ಬೆಂಬಲ ಕೋರುವ ಉದ್ದೇಶದಿಂದ, ಶ್ರೀ ನೆಹರುರವರು ಇಂಗ್ಲೆಂಡಿ ಹೋಗುವಾಗ ಕೈರೋದಲ್ಲಿ ಅವರನ್ನು ಕಂಡು ಅವರೊಡನೆ ಈ ಬಗ್ಗೆ ಮಾತುಕತೆ ನಡೆಸಲಿದ್ದಾರೆ. ಅದೇ ವೇಳೆಗೆ ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ ಮಿ. ಮಹಮ್ಮದ್ ಅಲಿಯವರನ್ನೂ ಬಿನ್ನವಿಸಿಕೊಂಡಿದ್ದಾರೆ. ಇದೆಲ್ಲವನ್ನೂ ನೋಡಿದರೆ ಬ್ರಿಟನ್ನು ಈಗಿನ ತನ್ನ ಧೋರಣೆಯನ್ನೇ ಮುಂದುವರಿಸಿದರೆ ಈಜಿಪ್ಟಿನೊಡನೆ ಘರ್ಷಣೆಯಾಗುವದು ತಪ್ಪಿದ್ದಲ್ಲವೆಂದೇ ಹೇಳಬಹುದು.

'ಜೈ ಹಿಂದ್'

ಹುಚ್ಚರ ಪಟ್ಟಿ

ಶ್ರೀ ಭಕ್ತ ಪಾರಾಯಣಾ

ಕೆಲವಂ ಗೆಳೆಯರ್ಗಳಿಂ ಕಲಿತು
ಕೆಲವಂ ಶಾಲೆಯಲ್ಮಾಡಿ ಶಾಂ
ಕೆಲವಂ ಸಿನೆಮಾದಿಂದ ಕಂಡು
ಕೆಲವಂ ಅಶ್ಲೀಲ ಸಾಹಿತ್ಯದಿಂ
ಕೆಲವಂ ವೈಶ್ಯಾ ಸ್ನೇಹದಿಂದ ಅರಿಯಲ್
ಕಾಮುಕನೆನಿಪಂ ಕೇಳ್ ನರನರಾ
ಶ್ರೀ ಭಕ್ತ ಪಾರಾಯಣಾ

ಸ್ನೋ ಪುರುಷಂಗೆ ಭೂಷಣಂ
ಸ್ತ್ರೀಗಾ ಲಿಪ್‌ಸ್ಟಿಕ್ಕೇ ಭೂಷಣಂ
ನೆಕ್ ಟೈ ಮಣ್ಣರಿಚಲು ಭೂಷಣಂ
ಚಂಚಲತೆ ಸರ್ವರಿಗೆ ಭೂಷಣಂ
ಕೆಳಕುಪ್ಪಸ ಯುವತಿಗೆ ಭೂಷಣಂ
ನಾಗರಿಕನೆನಲ್ ಇವೆಲ್ಲ ಭೂಷಣಂ ನರನರಾ
ಶ್ರೀ ಭಕ್ತ ಪಾರಾಯಣಾ

ದಿನರಾಜಂ ಬಿಸಿಗೊಂಡು ಸುಡದಿರನೆ
ಮಳೆಗಾಲದಲ್ ಬಿಸಿಲ್ಕಾಯದೇ
ನೆಟ್ಟ ಪೈರ್ ಕೆಂಪಡರಿ ಸೊರಗದೇ
ಅನ್ನಕ್ಕೆ ರೇಶನ್ ಅಂಗಡಿಯಾಗದೇ
ಹರೆಯದಲ್ ಮುಪ್ಪಡರದೇ
ಪುರುಷಂಗೆ ಅಡಿಗೆ ಮನೆಯಾಗದೇ?
ಕಲಿಕಾಲ ಕಾಲಿಡಲ್ ಸರ್ವಂ ತಿರುಗುಂ
ಮರುಗುಂ ನರನರಾ
ಶ್ರೀ ಭಕ್ತ ಪಾರಾಯಣಾ

ಬಿಸಿಲಡಿಗೆ ಪಾತ್ರೆಗಳ ಉತ್ಪಾದನೆ

ಕೇಂದ್ರ ಸರಕಾರದ ನಿಸರ್ಗ ಸಂಪತ್ತು ಮತ್ತು ವಿಜ್ಞಾನ ಸಂಶೋಧನ ಖಾತೆಯ ಉಪ ಮಂತ್ರಿಗಳಾದ ಶ್ರೀ ಕೆ. ಡಿ. ಮಾಳವೀಯವರು ಮುಂಬಯಿಯಲ್ಲಿ ಮೇ ೨೭ನೇ ದಿನಾಂಕ ಬಿಸಿಲಡಿಗೆ ಪಾತ್ರೆಗಳ ಉತ್ಪಾದನೆಯ ಕಾರ್ಖಾನೆಯನ್ನು ಉದ್ಘಾಟಿಸಲಿರುವರು.

ಸೂರ್ಯನ ಶಕ್ತಿಯನ್ನು ಮನೆ ಬಳಕೆಗಾಗಿ ಉಪಯೋಗಿಸಿಕೊಳ್ಳುವ ಈ ವಿಧಾನವನ್ನು ಹೊಸ ದಿಲ್ಲಿಯಲ್ಲಿಯ ರಾಷ್ಟ್ರೀಯ ಭೌತ ವಿಜ್ಞಾನ ಪ್ರಯೋಗ ಶಾಲೆಯವರು ಸಿದ್ಧಪಡಿಸಿದ್ದಾರೆ. ೧೯೫೨ನೇ ಸೆಪ್ಟೆಂಬರ್‌ನಲ್ಲಿ ಹಿಂದೂಸ್ಥಾನ ಸರಕಾರವು ಈ ಪಾತ್ರೆಗಳ ಉತ್ಪಾದನೆಯನ್ನು ಕೈಕೊಳ್ಳಲು ಮುಂಬಯಿಯ ಕಂಪೆನಿಯೊಂದಕ್ಕೆ ಅಧಿಕಾರ ಕೊಟ್ಟಿತು. ಇದರ ವಿವಿಧ ಅಂಗಾಂಗಗಳನ್ನು ಸಿದ್ಧಪಡಿಸುವ ಯಂತ್ರಗಳನ್ನೆಲ್ಲ ಕೂಡ್ರಿಸುವ ಕಾರ್ಯವು ಮುಗಿದಿದ್ದು ಈ ಕಾರ್ಖಾನೆಯು ಪ್ರತಿ ತಿಂಗಳು ೫ ಸಾವಿರ ಪಾತ್ರೆಗಳನ್ನು ಉತ್ಪಾದಿಸಬಲ್ಲುದೆಂದು ಅಂದಾಜಿದೆ. ಈ ಪಾತ್ರೆಗಳ ಸಹಾಯದಿಂದ ಬೆಂಕಿ ಇಲ್ಲದೆ ಅಡಿಗೆ ಮಾಡಬಹುದು.

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಮೊಗಪ್ಪನವರು

ಪಾಕಿಸ್ತಾನದ ಮುಖ್ಯ ಮಂತ್ರಿ

ಮಹಮ್ಮದ್ ಆಲಿ

ಹೊಸದಾಗಿ ಪಾಕಿಸ್ತಾನದ ಮುಖ್ಯ ಮಂತ್ರಿ ಸ್ಥಾನಕ್ಕೆ ಬಂದಿರುವ ಶ್ರೀ ಮಹಮ್ಮದ ಆಲಿಯವರು ಬಂಗಾಲ ಪ್ರಾಂತದ ಬಾರಿಸಾಲ ಎಂಬ ಊರಲ್ಲಿ ೧೯೦೯ರಲ್ಲಿ ಓರ್ವ ಜಮೀನುದಾರನ ಮನೆಯಲ್ಲಿ ಹುಟ್ಟಿದರು. ಅವರ ಅಜ್ಜ ನವಾಬ ಬಹಾದ್ದೂರ ಸಯ್ಯದ ನವಾಬ ಆಲಿ ಚೌದರಿ ಇವರು ವಿಖ್ಯಾತ ಮತ್ತು ವರ್ಚಸ್ವೀ ವ್ಯಕ್ತಿಯಾಗಿದ್ದರು. ಮತ್ತು ಅವರು ಬಂಗಾಲ ಪ್ರಾಂತದಲ್ಲಿ ಮೊದಲನೆ ಮುಸಲ್ಮಾನ ಮಂತ್ರಿಯಾಗಿದ್ದರು.

ಮಹಮ್ಮದ್ ಆಲಿಯವರು ಹುಟ್ಟುತ್ತಲೇ ಈ ಹುಡುಗನನ್ನು ನಾನು ನನ್ನ ರಾಜಕೀಯ ಚಟುವಟಿಕೆಗಳಿಗೆ ಸಹಾಯ ಮಾಡುವಂತೆ ಸಿದ್ಧಮಾಡಬೇಕು ಎಂದು ಅವರ ತಂದೆ ಅಂದುಕೊಂಡಿದ್ದರಂತೆ. ಮಹಮ್ಮದ ಆಲಿಯವರು ಹದಿನಾರು ವರ್ಷ ವಯಸ್ಸಾಗುತ್ತಲೇ ಮೆಟ್ರಿಕ್ಯೂಲೇಶನ್ ಪರೀಕ್ಷೆ ತೇರ್ಗಡೆ ಹೊಂದಿದರು. ಆಗ ನವಾಬ ಬಹದ್ದೂರರು ಮಹಮ್ಮದ ಆಲಿಯವರನ್ನು ತಮ್ಮ ಕಾರ್ಯದರ್ಶಿಯನ್ನಾಗಿ ಮಾಡಿಕೊಂಡರು. ಆದರೆ ಆ ಮುದುಕನ ಕಠಿಣವೃತ್ತಿ, ಅಚ್ಚುಕಟ್ಟುತನ, ಸತತ ದುಡಿಮೆ ಇವುಗಳಿಗೆ ತಕ್ಕಂತೆ ಕೆಲಸ ಮಾಡಲು ಮಹಮ್ಮದ ಆಲಿಯವರಿಗೆ ಸಾಕುಬೇಕಾಗಿ ಹೋಯಿತು. ಆದರೆ ಅಂದು ಅಜ್ಜನ ಕೈಯಲ್ಲಿ ಸಿಕ್ಕಿದ ಶಿಕ್ಷಣವು ಇಂದಿಗೂ ತನಗೆ ಫಲ ಕೊಡುತ್ತಿದೆ ಎಂದು ಅವರು ಅನ್ನುತ್ತಾರೆ.

ಒಮ್ಮೆ ಆ ಕಾಲದಲ್ಲಿ ಅಜ್ಜನ ಕೈಯಲ್ಲಿ, ಸಿಗರೇಟ್ ಸೇದುವಾಗ್ಗೆ ಮಹಮ್ಮದ ಆಲಿಯವರು ಸಿಕ್ಕಿಬಿದ್ದರಂತೆ "ಆ ಹೊಗೆಬತ್ತಿ ಸೇದುವಿಯಾ?" ಎಂದರು ಮುದುಕ. ಅಂದಿನಿಂದ ಮುಂದೆ ಕಲ್ಕತ್ತೆಯಲ್ಲಿ ಕಾಲೇಜಿಗೆ ಹೋಗುವ ವರೆಗೆ ಮಹಮ್ಮದ ಆಲಿಯವರು ಸಿಗರೇಟ್ ಮುಟ್ಟಿದಿಲ್ಲ. ಸರಾಯಿಯನ್ನಂತೂ ಅವರು ಮುಟ್ಟಿಯೇ ಇಲ್ಲ, ತೀರ ಕರ್ಮಠರ ಮುಸಲ್ಮಾನರ ಕುಲದಲ್ಲಿ ಅವರು ಜನಿಸಿದ್ದರಿಂದ ಅವರ ಶೋಕು ಅವರಿಗೆ ಹತ್ತಲಿಲ್ಲ. ಆ ಮೇಲೆ ಅವರಿಗೆ ಆ ವ್ಯಸನಕ್ಕೆ ಎಳೆಯುವಂತಹ ಅನೇಕ ಪರಿಸ್ಥಿತಿಗಳೂ ಬಂದರೂ ಆ ಪೂರ್ವಾಭ್ಯಾಸದ ಮೂಲಕ ಅತ್ತಕಡೆಗೆ ಮನಸ್ಸು ಹಿಡಿಯಲಿಲ್ಲ.

ಮಹಮ್ಮದ ಆಲಿಯವರ ತಂದೆಯವರಾಗಿದ್ದ ಸಯ್ಯದ ಅಲ್ತಾಫ ಆಲಿಯವರು ಕೂಡ ಅವರ ತಂದೆಯ ಪರಂಪರೆಯನ್ನು ಸಾಗಿಸಿಕೊಂಡು ಬಂದರು. ಅವರೂ ಬಂಗಾಲದ ಅಸೆಂಬ್ಲಿ, ಕೌನ್ಸಿಲ್ ಆಫ್ ಸ್ಟೇಟ್ ಸಭಾಸದರಾಗಿದ್ದರು. ಮತ್ತು ೧೯೪೪ರಲ್ಲಿ ನಿಧನ ಹೊಂದುವ ವರೆಗೂ ಆ ಸಭಾಸದತ್ವದಲ್ಲಿಯೇ ಇದ್ದರು.

ಮಹಮ್ಮದ ಆಲಿಯವರು ಬಿ. ಎ ಪರೀಕ್ಷೆ ದಾಟಿದ ಬಳಿಕ ವಕೀಲರಾಗಬೇಕೆಂದು ಇಚ್ಛಿಸಿದರು. ಆದರೆ ಅಷ್ಟರಲ್ಲಿಯೇ ಅವರನ್ನು ಅವರ ಸ್ನೇಹಿತರು ಭೋಗ್ರಾ ನಗರ ಸಭೆಯ ಆಯ್ಕೆಗೆ ನಿಲ್ಲಿಸಿದರು. ಆರಿಸಿ ಬಂದರು. ಆಗ ಅವರಿಗೆ ಕೇವಲ ೨೨ ವಯಸ್ಸು. ಮುಂದೆ ಲೋಕಲ್ ಬೋರ್ಡ್ ಅಧ್ಯಕ್ಷ, ಜಿಲ್ಲಾ ಸ್ಕೂಲ್ ಬೋರ್ಡ್ ಅಧ್ಯಕ್ಷ ಇವೇ ಮೊದಲಾದ ಸ್ಥಾನಗಳಿಂದ ಕಾರ್ಯ ಮಾಡುತ್ತ ಬಂದರು. ಮುಂದೆ ಬಂಗಾಲ ಅಸೆಂಬ್ಲಿಗೆ ಅವಿರೋಧವಾಗಿ ಆರಿಸಿ ಬಂದರು. ಪಾರ್ಲಿಮೆಂಟರಿ ಸೆಕ್ರೆಟರಿ, ಹೆಲ್ತ್ ಮಿನಿಸ್ಟರ್, ಅರ್ಥ ಸಚಿವರರಾಗಿ ಕೆಲಸಮಾಡಿದರು. ಅಷ್ಟರಲ್ಲಿ ಹಿಂದುಸ್ಥಾನವು ಭಾರತ, ಪಾಕಿಸ್ತಾನಗಳೆಂದು ವಿಭಾಗಿಸಲ್ಪಟ್ಟಿತು.

ಅವರಿಗೆ ರಾಜಕಾರಣವು ಅಷ್ಟು ಸೇರುತ್ತಿದ್ದಿಲ್ಲ. ಆದರೆ ಜಿನ್ನಾರವರು ಅವರನ್ನು ಅದರಲ್ಲಿ ಎಳೆದರು. ಅದ್ದರಿಂದ ಮಹಮ್ಮದ ಆಲಿಯವರು ಪಾಕಿಸ್ತಾನದ ರಾಯಭಾರಿಯಾಗಿ ಬರ್ಮಾ, ಕೆನಡಾ, ಸಂಯುಕ್ತ ಸಂಸ್ಥಾನಗಳಿಗೆ ಐದು ವರ್ಷಗಳ ವರೆಗೆ ಹೋಗಬೇಕಾಯಿತು. ಅವರ ಇಬ್ಬರು ಮಕ್ಕಳು ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಇಂದು ಓದುತ್ತಿದ್ದಾರೆ.

ಮಹಮ್ಮದ ಆಲಿಯವರ ಪತ್ನಿಗೆ ತನ್ನ ಗಂಡನ ಮುಖ್ಯ ಮಂತ್ರಿಪದ ಸೇರುತ್ತಿಲ್ಲ. ಆದರೂ ಸರಕಾರಿಯೊದಮತ್ತು ತನ್ನನ್ನು ತಿಳಿದುಕೊಳ್ಳುವ ಹೆಂಡತಿಯು ತಮಗೆ ಸಿಕ್ಕಿದ್ದು ಸುದೈವ ದ್ಯೋತಕವೇ ಆಗಿದೆಯೆಂದು ಮಹಮ್ಮದಆಲಿಯವರು ಅನ್ನುತ್ತಾರೆ. ಈಗ ಮಹಮ್ಮದ ಆಲಿಯವರ ಪತ್ನಿ, ಅಮೇರಿಕೆಯಲ್ಲಿಯೇ ಇದ್ದಾರೆ. ನಾಳೆ ರಾಣಿಯ ಪಟ್ಟಾಭಿಷೇಕದ ಕಾಲಕ್ಕೆ ಮಹಮ್ಮದ ಆಲಿಯವರು ಲಂಡನಿಗೆ ಹೋದಾಗ ಅವರ ಪತ್ನಿಯವರು ಅವರಿಗೆ ಒಂದು ಭೇಟಿಯಾಗಬಹುದಾಗಿ ತಿಳಿಯುತ್ತದೆ.

ಶ್ರೀಮಂತರ ಮನೆತನದಲ್ಲಿ ಹುಟ್ಟಿದರೂ ಜಮೀನುದಾರಿ ಪದ್ಧತಿಯು ಹೋಗಬೇಕೆಂಬ ಅಭಿಪ್ರಾಯದವರು ಮಹಮ್ಮದ ಆಲಿಯವರಾಗಿದ್ದಾರೆ. ಸಮಾಜವಾದಿ ಪದ್ಧತಿಯನ್ನು ಅವರು ಮೆಚ್ಚಿದ್ದಾರೆ. ಆದರೆ ಮುಸಲ್ಮಾನ ಸಂಸ್ಕೃತಿಯ ಸಮಾಜವಾದವು ತಮಗೆ ಬೇಕೆಂದು ಅವರು ಅನ್ನುತ್ತಾರೆ. ಅಲ್ಲದೆ ಪಾಕಿಸ್ತಾನದಲ್ಲಿಯ ಬಡತನ, ಲಂಚಗುಳಿತನ, ಪಕ್ಷಪಾತಗಳನ್ನು ನಿರ್ಮೂಲಗೊಳಿಸುವದನ್ನು ಅವರು ಇಂದು ತಮ್ಮ ಆದ್ಯಕರ್ತವ್ಯವಾಗಿ ಇಟ್ಟುಕೊಂಡಿರುವರು.

ಮುಖ್ಯ ಮಂತ್ರಿಯೊದಂದು ಕೂಡ ತನ್ನ ಜೀವನದಲ್ಲಿಯ ಅನೇಕ ಅನಿರೀಕ್ಷಿತ ಘಟನೆಗಳಲ್ಲಿ ಒಂದಾಗಿದೆಯೆಂದು ಅವರು ಅನ್ನುತ್ತಿದ್ದಾರೆ. ಈ ಸ್ಥಾನಕ್ಕೆ ಬೇಕಾಗುವ ಶಕ್ತಿ ತಮ್ಮಲ್ಲಿ ಇಲ್ಲದಿದ್ದರೂ ದೇವರ ಅನುಗ್ರಹ, ಸಹೋದ್ಯೋಗಿಗಳ ಸಹಕಾರ, ಜನತೆಯ ಬೆಂಬಲ ಇವುಗಳ ಬಲದಿಂದ ತಾವು ಈ ಹೊಣೆಯನ್ನು ನಿರ್ವಹಿಸುವ ಭರವಸೆಯನ್ನು ಅವರು ಇಟ್ಟುಕೊಂಡಿದ್ದಾರೆ.

ಮಹಮ್ಮದ ಆಲಿಯವರಲ್ಲಿ ಗರ್ವ, ಅಧಿಕಾರದ ಮದಗಳಿಲ್ಲ. ಈ ಮೊದಲಿನಂತೆಯೇ ಅವರ ಸುತ್ತಲೂ ಜನರು ಇಂದು ಕೂಡ ನೆರೆದಿರುತ್ತಾರೆ.

ಅವರಿಗೆ ಫೋಟೋ ತೆಗೆಯುವ ಕಲೆಯಲ್ಲಿ ಅಭಿರುಚಿ ಬಹಳ. ಅದರ ಅಭ್ಯಾಸವನ್ನೂ ಮಾಡಿದ್ದಾರೆ. ಒಮ್ಮೆ ಓರ್ವ ಪತ್ರಿಕಾ ಸುದ್ದಿಗಾರರು ಫೋಟೋ ತೆಗೆದುಕೊಳ್ಳಲು ಅವರ ಮುಂದೆ ಕ್ಯಾಮರಾ ಹಿಡಿಯಲು ಅದನ್ನು ಹೇಗೆ ಹಿಡಿಯಬೇಕೆಂಬುದನ್ನು ತೋರಿಸಿದರು.

ಕರಾಚಿಯ ಸೆಕೆಯು ನಿಮಗೆ ಅಸಹ್ಯವಾಗುವದಿಲ್ಲವೇ? ಎಂದು ಒಬ್ಬ ಪತ್ರಿಕಾ ಪ್ರತಿನಿಧಿಯು ಅವರನ್ನು ಕೇಳಿದಾಗ "ಇತರ ಅನೇಕ ಕಷ್ಟಗಳನ್ನು ಸಹಿಸುತ್ತಿರುವಂತೆ ಅದನ್ನು ಸಹಿಸುತ್ತಿದ್ದೇನೆ." ಎಂದು ಹೇಳಿದರು.

ಮಹಮ್ಮದ ಆಲಿಯವರು ನಗುಮುಖದವರೂ ವಿನೋದಿಗಳೂ ಬಂದವರೊಡನೆ ಹೃದಯ ಬಿಚ್ಚಿ ಮಾತಾಡುವವರೂ, ನಿರಾಡಂಬರ ವೃತ್ತಿಯವರೂ ಆಗಿದ್ದಾರೆ. ಅವರನ್ನು ಭೇಟಿಯಾದವರು "ಒಬ್ಬ ಮಹಮ್ಮದಾಲಿ (ಜಿನ್ನಾ) ಯವರು ಪಾಕಿಸ್ತಾನವನ್ನು ಸ್ಥಾಪಿಸಿದರು. ಇನ್ನೊಬ್ಬ ಮಹಮ್ಮದಾಲಿಯವರಿಂದ ಅದರ ಮೇಲೆ ಬಂದ ಆಪತ್ತು ನಿವಾರಿಸಲ್ಪಡಬೇಕಾಗಿದೆ" ಎಂದು ಉದ್ಗಾರ ತೆಗೆಯುವದು ಕೇಳಬರುತ್ತಿದೆ.

'ಜೈಹಿಂದ್'

॥ ಮಧುಪರ್ಕ ॥

೧೯೧೯ರ ಕಾಲ. ಬೊಂಬಾಯಿಯಲ್ಲಿ ಸತ್ಯಾಗ್ರಹ ಸಮಿತಿಯೊಂದರ ನೇಮಕವಾಗಿತ್ತು. ಶಂಕರಲಾಲ್ ಬ್ಯಾಂಕರ್, ಉಮರ್ ಸೋಭಾನಿಯವರು ಕಾರ್ಯದರ್ಶಿಗಳು. ಸೋಭಾನಿ ಶ್ರೀಮಂತರು ಸೇವಾಸಕ್ತರು. ಸಮಿತಿಯ ಕೆಲಸಕ್ಕಾಗಿ ಅವರು ಚಿಕ್ಕ ಒಂದು ಪುಸ್ತಕ ಪ್ರಕಟಿಸಿದರು. ಪುಸ್ತಕದ ಮೇಲೆ ಇಂತಿಷ್ಟು ಪ್ರತಿಗಳು ಎಂದು ಅಚ್ಚಿಸಿದುದಕ್ಕಿಂಥಾ ಕೆಲವು ಸಾವಿರ ಪ್ರತಿ ಅವರು ಹೆಚ್ಚಾಗಿ ಅಚ್ಚು ಹಾಕಿಸಿದರು. ಸರಕಾರವು ಮುಟ್ಟುಗೋಲು ಹಾಕಿದರೆ ಕೆಲವು ಪ್ರತಿಗಳಾದರೂ ಉಳಿಯಲೀ ಎಂದವರ ಆಶೆಯಾಗಿತ್ತು. ಗಾಂಧೀಜಿಗೆ ಇದು ತಿಳಿದುಹೋಯಿತು. ಹೆಚ್ಚಾಗಿ ಅಚ್ಚು ಹಾಕಿಸಿದ ಪ್ರತಿಗಳನ್ನು ಆ ಕ್ಷಣ ಅವರು ಸುಡಿಸಿದರು. ಇಷ್ಟಾದರೂ ಸಾಲದು. "ಹಾಗೆ ಅಚ್ಚು ಹಾಕಿಸಿದ್ದು ತಪ್ಪು. ಪೋಲೀಸ್ ಕಮಿಷನರ ಬಳಿಗೆ ಹೋಗಿ ತಪ್ಪನ್ನೊಪ್ಪಿಕೊಳ್ಳಬೇಕು" ಎಂದು ಗಾಂಧೀಜಿ ಸೋಭಾನಿಗೆ ಹೇಳಿದರು.

ಉಮರ್ ಸೋಭಾನಿ ಬಲು ಗಡುಸು ಮನುಷ್ಯ. ಮುಂಗೋಪಿ ಬೇರೆ. ಒಳಗೆ ಎಷ್ಟೇ ಹಾರಾಡಿರಬಹುದಾದರೂ ಆತನ ಆರ್ಭಟ ಗಾಂಧೀಜಿಯ ಮುಂದೆ ನಡೆಯಲಿಲ್ಲ. ಗಾಂಧೀಜಿಯವರದು ಸತ್ಯದ ಹೋರಾಟ. ಸತ್ಯ ಪ್ರಮಾಣದಂತೆ ನಡೆಯದಿದ್ದರೆ ತಮಗೆ ದಳಪತಿತನ ಬೇಡ. ಆ ರಾಜಕೀಯ ಪುರುಷ, ಪರ್ವತೋನ್ನತ ಗಂಭೀರ ವ್ಯಕ್ತಿ ಸೋಭಾನಿ ಗಾಂಧೀಜಿಯವರ ಇಷ್ಟದಂತೆ ಮಾಡಬೇಕಾಯಿತು. ಸತ್ಯಕ್ಕೆ ತಲೆಬಾಗಿ ತಪ್ಪನ್ನು ಪೋಲೀಸ್ ಕಮಿಷನರಲ್ಲಿ ಒಪ್ಪಿಕೊಂಡ ಆ ದೃಶ್ಯ ಮಾರ್ಮಿಕವಾಗಿತ್ತು.

ಗಾಂಧೀಜಿಗೆ ಸತ್ಯವೆಂದರೆ ಬರಿಯ ಅಲಂಕಾರವಲ್ಲ. ದಿನ ಬದುಕಿನ ಉಸಿರು. ಮಾತು ಮಾತಿನಲ್ಲಿ, ಕೃತಿ ಕೃತಿಯಲ್ಲಿ ಸತ್ಯವಂತನ ಸತ್ಯಸಂಧತೆ ಪರಿಮಳಿಸಬೇಕು. ಬಂದದ್ದೆಲ್ಲಾ ಬರಲಿ, ಎನ್ನ ನಾಲಗೆ ಸುಳ್ಳನ್ನು ಹೇಳದಿರಲಿ ಎಂಬುದೇ ಅವರ ಆಸಿಧಾರಾವ್ರತ.

—ooOoo—

ಹೊಸ ಮಾದರಿಯ ಸಿಡಿಗುಂಡುಗಳು.

ಕೊರಿಯಾ ಯುದ್ಧ ಕ್ಷೇತ್ರದಲ್ಲಿ ಬೇಸ್‌ಬಾಲ್ ಮಾದರಿಯ ಹೊಸ ತರಹದ ಹೆಚ್ಚು ಹಾನಿಕರವಾದ ಸಿಡಿಗುಂಡುಗಳನ್ನು ಪ್ರಯೋಗಿಸಲಾಗುತ್ತಿದೆಯೆಂದು ಎಂಟನೇ ಸೈನ್ಯದ ಅಧಿಕಾರಿ ತಿಳಿಸಿದ್ದಾರೆ. ಈ ಪ್ರಯೋಗ ಪರಿಣಾಮಕಾರಿಯಾದರೆ ಈ ಸಿಡಿಗುಂಡುಗಳನ್ನು ಶತ್ರುಗಳ ಮೇಲೆ ಹಾಕಲು ಹೆಚ್ಚಾಗಿ ಸರಬರಾಜು ಮಾಡಲಾಗುವುದು.

ರಾಧಾಕೃಷ್ಣನ್ ಗೌರವಾರ್ಥ ಸತ್ಕಾರಕೂಟ.

ಅಮೇರಿಕದ ಉಪಾಧ್ಯಕ್ಷ ಮಿ. ನಿಕ್ಸನ್ ಏರ್ಪಡಿಸಿದ್ದ ಸತ್ಕಾರಕೂಟವೊಂದರಲ್ಲಿ ತಾ. ೨೧ ರಲ್ಲಿ ಭಾರತದ ಉಪರಾಷ್ಟ್ರಪತಿ ರಾಧಾಕೃಷ್ಣನ್ ಅಮೇರಿಕನ್ ಕಾಂಗ್ರೆಸ್ ಪ್ರಮುಖರನ್ನು ಭೇಟಿ ಮಾಡಿದ್ದರು.

ಇದಕ್ಕೆ ಮುಂಚೆ ಡಾ. ರಾಧಾಕೃಷ್ಣನ್‌ರು ಹತ್ತಿರದಲ್ಲಿ ಇದ್ದ ವರ್ಜೀನಿಯ ಸಂಸ್ಥಾನಕ್ಕೆ ತೆರಳಿ ಯುದ್ಧದಲ್ಲಿ ಸತ್ತ ಅಮೇರಿಕನ್‌ರ ಆರ್ಲಿಂಗ್ಟನ್ ರಾಷ್ಟ್ರೀಯ ಸಮಾಧಿಗೂ, ಜಾರ್ಜ್ ವಾಷಿಂಗ್ಟನ್ ಸಮಾಧಿಗೂ ಪುಷ್ಪಗುಚ್ಛಗಳನ್ನರ್ಪಿಸಿದರು.

ಒಂದು ಸೀಟಿಗೆ ೫೨ ಪೌಂಡ್

ಲಂಡನ್ನಿನಲ್ಲಿ ಪಿಕಾಡೆಲ್ಲಿ ಪ್ರದೇಶದಲ್ಲೊಂದು ಕಡೆ ರಾಣಿ ಎಲಿಜಬೆತ್ತರ ಕಿರೀಟಧಾರಣೋತ್ಸವ ನೋಡಲು ಏರ್ಪಡಿಸುವ ಸ್ಥಾನಗಳ ಸ್ಟಾಂಡಿನಲ್ಲಿ ಒಂದು ಸೀಟಿಗೆ ೫೨ ಪೌಂಡ್‌ನಂತೆ ಮಾರಾಟ ನಡೆಯುತ್ತಿದೆ. ಇದೇ ಸ್ಟಾಂಡ್‌ನಲ್ಲಿ ಗ್ರೀನ್ ಪಾರ್ಕ್‌ಗೆಮುರಾಗಿರುವ ಸೀಟುಗಳು ಒಂದಕ್ಕೆ ೬೨ ಪೌಂಡ್, ೨೨ ಪೌಂಡ್‌ಗಳಿಗೆ ಮಾರಾಟವಾಗುತ್ತಿದೆ.

ನಗು ಮಲ್ಲಿಗೆ

ಮಗ–ಅಪ್ಪಾ, ನಿನ್ನ ನಾಲ್ಕು ಜ್ಞಾನ ದಂತಗಳೂ ಬಿದ್ದು ಹೋದವೇ ?

ತಂದೆ–ಹೌದು, ನಾನು ಸೆಕೆಂಡ್ ಹೇಂಡ್ ಕಾರು ಕೊಂಡುಕೊಂಡೆ, ಚುನಾವಣೆಗೆ ಉಮೇದುವಾರನಾಗಿ ನಿಂತೆ, ಸ್ಥಳೀಯ ಸ್ವಾಗತ ಸಮಿತಿಯ ಅಧ್ಯಕ್ಷನಾದೆ ಮತ್ತು ನಿನ್ನ ತಾಯಿಯನ್ನು ಮದುವೆಯಾಗಲು ಒಪ್ಪಿದೆ!

• • •

ರೈತನು ಮಂತ್ರಿಯೊಡನೆ ತನ್ನ ಕಷ್ಟಗಳನ್ನು ಹೇಳುತ್ತಾ 'ಈ ವರ್ಷ ಮಳೆ ಸರಿಯಾಗಿ ಆಗಲಿಲ್ಲ. ಬೆಳೆ ಕಡಿಮೆ. ಧಾರಣೆ ಚೆನ್ನಾಗಿಲ್ಲ. ಜೊತೆಗೆ ಕಂದಾಯ ಹೆಚ್ಚು. ಊಟಕ್ಕೇ ತೊಂದರೆಯಾಗಿದೆ' ಎಂದನು.

ಮಂತ್ರಿ–ಆದರೆ ಜ್ಞಾಪಕದಲ್ಲಿಡು; ದೇವರು ದೊಡ್ಡವನು. ಆಕಾಶದಲ್ಲಿ ಹಾರುವ ಪಕ್ಷಿಗಳಿಗೂ ಕೂಡ ಆತನು ಆಹಾರ ವದಗಿಸುವದಿಲ್ಲವೇ? ಹಾಗಿರುವಾಗ ನಮ್ಮನ್ನು ರಕ್ಷಿಸದಿರನು.

ರೈತ–ಹೌದು ಪಕ್ಷಿಗಳಿಗೂ ಎಲ್ಲರಿಗೂ ದೇವರು ಆಹಾರ ವದಗಿಸುತ್ತಾನೆ. ಬಡವರಾದ ನಮ್ಮ ಗದ್ದೆಯ ಪೈರಿನಿಂದ!

• • •

ಆತ–ನಿಮ್ಮ ತಂದೆ ಶಿವಾಧೀನರಾದರೆಂದು ಕೇಳಿದೆ.

ಈತ–ಹೌದು, ಅವರು ಸಾಯುವಾಗ ತನ್ನ ಹೆಸರಿನಲ್ಲಿ ಕಲ್ಲು ಕೆತ್ತಿಸಿಡಲೆಂದು ರೂ. ೫೦೦೦ ಇಟ್ಟು ನಿಧನರಾದರು.

ಆತ–ನಿನ್ನ ಕೈಯಲ್ಲಿರುವ ಉಂಗುರವೂ ಅದರ ಕಲ್ಲೂ ಚೆನ್ನಾಗಿದೆ.

ಈತ–ತಂದೆ ಇಟ್ಟ ಹಣದಿಂದ ತೆಗೆದುಕೊಂಡ ವಜ್ರದ ಹರಳಿದು. ಅದನ್ನು ನನ್ನ ಬೆರಳಲ್ಲಿ ಕಾಣುವಾಗ ತಂದೆಯ ಯೋಚನೆಯಾಗುತ್ತದೆ.

• • •

ಹಳ್ಳಿಯ ಜನರು ಹಬ್ಬದ ಕಾರಣ ನೃತ್ಯ ಕೂಟವನ್ನೇರ್ಪಡಿಸಿದ್ದರು. ಹಳ್ಳಿಯ ಕಮ್ಮಾರನು ಸಮಾರಂಭಕ್ಕೆ ಅಧ್ಯಕ್ಷನಾಗಿದ್ದನು. ಗ್ರಾಮದ ಹಾಡುಗಾರನೊಬ್ಬನು 'ಹಳ್ಳಿಯ ಕಮ್ಮಾರ' ಎಂಬ ಹಾಡನ್ನು ಹಾಡಿದನು. ಸಭಿಕರಿಗೆ ತುಂಬಾ ಸಂತೋಷವಾಗಿ ಮತ್ತೊಮ್ಮೆ ಹಾಡಬೇಕೆಂದು ಕೇಳಿಕೊಂಡರು. ಆಗ ಅಧ್ಯಕ್ಷನಾದ ಕಮ್ಮಾರನು ಹಾಡುಗಾರನನ್ನು ಕರೆದು ಮೆಲ್ಲಗೆ ಕಿವಿಯಲ್ಲಿ 'ಇನ್ನೊಮ್ಮೆ ಹಾಡುವಾಗ ಕೊಡಲಿ, ಕತ್ತಿ ಮಾತ್ರವಲ್ಲ; ಸೈಕಲು, ಕಾರು ರಿಪೇರಿಯೂ ತಿಳಿದಿದೆಯೆಂದು ಸೇರಿಸಿಬಿಡು' ಎಂದನು.

• • •

ಅಮಲ–ಆತನು ತಲೆ ಇಲ್ಲದ ಮನುಷ್ಯ. 'ಒಂದೆಡೆ ಹತ್ತುಸಾವಿರ ರೂಪಾಯಿ ಮತ್ತೊಂದೆಡೆ ನಾನು ಇವುಗಳಲ್ಲಿ ಯಾವುದನ್ನು ಆರಿಸುವೆ' ಎಂದು ನಾನು ಕೇಳಲು ಆತನು ಹತ್ತುಸಾವಿರ ರೂಪಾಯಿಗಳೆಂದನು!

ವಿಮಲ–ಅದು ಸರಿ. ಆತನಲ್ಲಿ ಹತ್ತುಸಾವಿರ ರೂಪಾಯಿಗಳಿದ್ದರೆ ನೀನು ಆತನ ಬೆನ್ನುಬಿಡುವದಿಲ್ಲವೆಂದು ಆತನಿಗೆ ಗೊತ್ತು!

• • •

ಗೋಪಾಲ–ರಾಮು, ನೀನು ನಿನ್ನ ಕುಡುಕತನವನ್ನು ಬಿಡಬೇಕು. ಕುಡಿಯಬೇಕೆಂದಾಗುವಾಗ ನಿನ್ನ ಹೆಂಡತಿಯನ್ನು ಯೋಚಿಸಿಕೊಳ್ಳಬಾರದೇ?

ರಾಮು–ಕುಡಿಯಬೇಕೆಂಬ ಬಯಕೆ ಬಂದಾಗ ನನಗೆ ಯಾವ ಭಯವೂ ಇರುವದಿಲ್ಲ.

• • •

ಆಕೆ–ಗಂಡಸರಿಗೆ ಏನಾದರೊಂದು ಹೇಳಿದರೆ ಒಂದು ಕಿವಿಯಿಂದ ಕೇಳಿ ಮತ್ತೊಂದರಿಂದ ಬಿಟ್ಟುಬಿಡುತ್ತಾರೆ.

ಆತ–ಹೆಂಗಸರಿಗೆ ಏನಾದರೊಂದು ಹೇಳಿದರೆ ಎರಡು ಕಿವಿಗಳಿಂದಲೂ ಕೇಳಿ ಬಾಯಿಗಾಗಿ ಬಿಡುತ್ತಾರೆ!

* * *

ತನ್ನ ಶರ್ಟನ್ನು ಒಗೆಯಲು ಅಗಸನಿಗೆ ಹಾಕಲಾಗಿದೆಯೆಂಬುದನ್ನು ತಿಳಿದು ಕಾಲೇಜ್ ವಿದ್ಯಾರ್ಥಿ ಗಾಬರಿಗೊಂಡು ಹೇಳಿದನು. 'ತಲೆ ಸರಿಯಿಲ್ಲದ ಯಾರು ಅಗಸನಿಗೆ ಕೊಟ್ಟದ್ದು. ಆ ಶರ್ಟಿನ 'ಕಪ್ಸ್' ನಲ್ಲಿ ಇಡೀ ರೋಮ್ ಚಕ್ರಾಧಿಪತ್ಯದ ಚರಿತ್ರೆ ಇತ್ತಲ್ಲಾ. ಪರೀಕ್ಷೆಗೆಂದಿದ್ದ ಆ ಶರ್ಟನ್ನು ಏಕೆ ಹಾಕಿದ್ದು?'

• • •

ಹುಡುಗಿಯೊಬ್ಬಳು ಹಸವನ್ನು ಕರೆಯುತ್ತಿದ್ದಳು. ಗೂಳಿಯೊಂದು ರಭಸದಿಂದ ಹಸದ ಹತ್ತಿರ ಓಡಿ ಬರುತಿತ್ತು. ಜನರೆಲ್ಲ ಗಾಬರಿಯಿಂದ ದಾರಿಬಿಟ್ಟು ಸರಿದರು. ಹುಡುಗಿಯು ಗಾಬರಿಗೊಳ್ಳದೆ ಹಾಲು ಕರೆಯುತ್ತಿದ್ದಳು. ಗೂಳಿಯು ಕೆಲವು ಗಜ ದೂರದಲ್ಲಿ ನಿಂತು ಹಸುವನ್ನೊಮ್ಮೆ ನೋಡಿ ತಲೆಬಾಗಿ ಹಿಂದೆ ಸರಿಯಿತು.

'ನಿನಗೆ ಹೆದರಿಕೆಯಾಗಲಿಲ್ಲವೇ?' ಜನರು ಹುಡುಗಿಯನ್ನು ಕೇಳಿದರು.

'ಈ ಹಸವು ಆ ಗೂಳಿಯ ಅತ್ತೆ ಎಂಬುದು ನನಗೆ ಗೊತ್ತಿತ್ತು' ಆಕೆ ಎಂದಳು.

* * *

'ನಿನಗೆ ನಾಚಿಕೆಯಾಗಬೇಕು. ಜಾರ್ಜ್ ವಾಶಿಂಗ್‌ಟನ್ನನು ನಿನ್ನ ವಯಸ್ಸಿನಲ್ಲಿ ಸರ್ವೆಯರಾಗಿ ಸಂಪಾದನೆಗೆ ತೊಡಗಿದ್ದ' ಮಗನನ್ನು ನೋಡಿ ತಂದೆ ಹೇಳಿದನು.

ಮಗು–ಆದರೆ ಜಾರ್ಜ್ ವಾಶಿಂಗ್‌ಟನನು ನಿನ್ನ ವಯಸ್ಸಿನಲ್ಲಿ ಅಮೇರಿಕದ ಪ್ರೆಸಿಡೆಂಟನಾಗಿದ್ದ.

• • •

ಶಾಲಾ ಹುಡುಗನು ಓದ ತೊಡಗಿದ, "ಸ್ನಾನ ಮಾಡುತ್ತಿದ್ದ ಆರ್ಕಿಮಿಡಸನು 'ಯುರೇಕಾ ಯುರೇಕಾ' ಎಂದು ಕೂಗಿಕೊಂಡು ಹೊರಬಂದನು"

ಅಧ್ಯಾಪಕ–'ಯುರೇಕಾ' ಎಂದರೆ ಅರ್ಥವೇನು?

ಹುಡುಗ–'ಯುರೇಕಾ ಎಂದರೆ ನನಗೆ ದೊರೆಯಿತು ಎಂದು!'

ಅಧ್ಯಾಪಕ–'ಸರಿ. ಆರ್ಕಿಮಿಡಿಸನಿಗೆ ದೊರೆತುದೇನು?'

ಹುಡುಗ–ಸೋಪು ಸಾರ್!

ಪ್ರಕಟಣೆ

ನವದೆಹಲಿಯ ತೆರಿಗೆ ವಿಚಾರಣಾ ಕಮಿಷನ್ನಿನವರು (Taxation Enquiry Commission) 1953ನೆಯ ಏಪ್ರಿಲ್ 8 ನೆಯ ತಾರೀಕಿನಲ್ಲಿ ಹೊರಡಿಸಿದ ಪ್ರಕಟಣೆಯನ್ನು ಸಾರ್ವಜನಿಕರ ತಿಳುವಳಿಕೆ ಬಗ್ಗೆ ಪ್ರಕಟಿಸಲಾಗಿದೆ.

ತೆರಿಗೆ ವಿಚಾರಣೆ.

ಸಾರ್ವಜನಿಕರ ಅಭಿಪ್ರಾಯಗಳನ್ನು ಅಪೇಕ್ಷಿಸಲಾಗಿದೆ

ಕೇಂದ್ರ, ಪ್ರಾಂತೀಯ ಮತ್ತು ಸ್ಥಳೀಯ ಸರಕಾರಗಳಲ್ಲಿರುವ ತೆರಿಗೆಯ ಪದ್ಧತಿಯನ್ನು ಪರಿಶೀಲಿಸಲಿಕ್ಕಾಗಿಯೂ ಮತ್ತು ಆ ಪದ್ಧತಿಯಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅಂಥಾದ್ದನ್ನು ಶಿಫಾರಸ್ಸು ಮಾಡಲಿಕ್ಕಾಗಿಯೂ, ಇಂಡಿಯಾ ಸರಕಾರದವರು ತೆರಿಗೆ ವಿಚಾರಣಾ ಕಮಿಷನ್ ಒಂದನ್ನು ನೇಮಕ ಮಾಡಿರುತ್ತಾರೆ. ಮುಖ್ಯವಾಗಿ ಈ ಕಮಿಷನ್ನಿನವರು ಬೇರೆ ಬೇರೆ ಪ್ರಾಂತ್ಯಗಳಲ್ಲಿ ವಿವಿಧ ಜನರ ಮೇಲೆ ವಿಧಿಸಲಾಗಿರುವ ತೆರಿಗೆಯನ್ನು ಪರಿಶೀಲಿಸಿ ಜನರ ಆರ್ಥಿಕ ಪರಿಸ್ಥಿತಿಯ ವ್ಯತ್ಯಾಸವನ್ನು ಕಡಿಮೆ ಮಾಡುವ ಬಗ್ಗೆ, ತೆರಿಗೆಯ ಪದ್ಧತಿಯನ್ನು ಪರ್ಯಾಲೋಚನೆ ಮಾಡಬೇಕಾಗಿದೆ. ಆದಾಯದ ಆಧಾರ ಮತ್ತು ಮಟ್ಟ, ಬಂಡವಾಳದ ಮೇಲಿನ ತೆರಿಗೆಯ ರೀತಿ ಮತ್ತು ಹಣದ ಏರುತಗ್ಗುಗಳ ಸಂದರ್ಭಗಳಲ್ಲಿ ತೆರಿಗೆಯ ಸ್ಥಾನ, ಇವುಗಳನ್ನೂ ಸಹ ಅವರು ಪರ್ಯಾಲೋಚಿಸಬೇಕಾಗಿದೆ. ಕೊನೆಯದಾಗಿ, ಈ ಕಮಿಷನ್‌ನವರು ರಾಷ್ಟ್ರಾಭಿವೃದ್ಧಿ ಕಾರ್ಯಕ್ರಮಗಳಿಗೆ ಬೇಕಾಗುವ ಉತ್ಪತ್ತಿಯನ್ನನುಸರಿಸಿ ಒಟ್ಟಾರೆ ಇಡೀ ದೇಶದಲ್ಲಿ ಒಂದೇ ಮಟ್ಟದ ತೆರಿಗೆಯ ಪದ್ಧತಿಯನ್ನು ಜಾರಿಗೆ ತರುವದರ ಉಚಿತಾನುಚಿತಗಳನ್ನು ಪರಿಶೀಲಿಸಿ, ಅವಶ್ಯವಿದ್ದರೆ ಹೊಸ ತೆರಿಗೆಗಳನ್ನು ವಿಧಿಸುವ ಸೂಚನೆಗಳನ್ನೂ ಅವರು ಮಾಡಬೇಕಾಗಿದೆ.

ಈ ವಿಚಾರಣೆಯು ಸರ್ವವ್ಯಾಪಕವಾಗಿರಬೇಕಾದ ಸಂದರ್ಭವನ್ನನುಲಕ್ಷಿಸಿ ಮತ್ತು ಯಾವ ಯಾವ ವಿಷಯಗಳ ಮೇಲೆ ಕಮಿಷನ್ನಿನವರ ಗಮನವನ್ನು ಸೆಳೆಯಬೇಕೆಂಬುದರ ಪ್ರಾಮುಖ್ಯತೆಯನ್ನನುಸರಿಸಿ ಒಂದು ಪ್ರಶ್ನಾವಳಿಯನ್ನು ತಯಾರಿಸಬೇಕಾಗಿರುವ ಪ್ರಯುಕ್ತ ಈ ಸಮಸ್ಯೆಗಳನ್ನು ಕೂಲಂಕುಶವಾಗಿ ಅರಿತಿರುವ ವ್ಯಕ್ತಿಗಳೂ ಮತ್ತು ಸಂಸ್ಥೆಗಳೂ, ಈ ಸಮಯದಲ್ಲಿ ಕಳುಹಿಸಬಹುದಾದ ಅಭಿಪ್ರಾಯಗಳನ್ನು ಕಮಿಷನ್ನಿನವರು ಸ್ವಾಗತಿಸುತ್ತಾರೆ. ಜೊತೆಯಲ್ಲೇ ಕಮಿಷನ್ನಿನವರು ಮುಖ್ಯವಾಗಿ ಲಕ್ಷ್ಯದಲ್ಲಿಡಬೇಕಾದ ಪ್ರತಿಯೊಂದು ಸ್ಪಷ್ಟವಾದ ವಿಷಯದ ಮೇಲೆ ಕೊಡಲಾಗುವ ಪ್ರಾಮುಖ್ಯಾಭಿಪ್ರಾಯಗಳನ್ನು ಅವರು ಸ್ವಾಗತಿಸುತ್ತಾರೆ. ಅನಂತರ ಕಮಿಷನ್ನಿನವರು ಪರಿಶೀಲಿಸಬೇಕಾಗಿರುವ ವಿವಿಧ ವಿಷಯಗಳ ಮೇಲಿನ ಅಭಿಪ್ರಾಯಗಳನ್ನು ಸಾರ್ವತ್ರಿಕವಾಗಿ ಬರಮಾಡಿಕೊಳ್ಳುವ ಉದ್ದೇಶದಿಂದ, ಅವರು ಒಂದು ಪ್ರಶ್ನಾವಳಿಯನ್ನು ತಯಾರಿಸುವವರಾದರೆ.

ಈ ಪ್ರಕಟಣೆಗೆ ಸಂಬಂಧಪಟ್ಟ ಉತ್ತರ ಪತ್ರಗಳನ್ನು ಸೆಕ್ರೆಟರಿ, ತೆರಿಗೆ ವಿಚಾರಣಾ ಕಮಿಷನ್, ಸುಧಾಮ ನಿಲಯ, ಬಲ್ಲಾರ್ಡ್ ಎಸ್ಟೇಟ್, ಬೊಂಬಾಯಿ ಇವರಿಗೆ 1953ನೇ ಇಸವಿ ಮೇ ತಿಂಗಳ ಆಖೈರು ಒಳಗೆ ಕಳುಹಿಸಬೇಕು.

ಅಪ್ಪಣೆ ಮೇರೆಗೆ,
ಸಿ. ಎ. ಡೇವಿಸ್
ಫೈನಾನ್ಸ್ ಸೆಕ್ರೆಟರಿ.

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಚಿಕ್ಕ ವಾಯಿದೆಯ ಠೇವಣಾತಿಗಳು :

3 ರಿಂದ 6 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3
7 ರಿಂದ 12 ತಿಂಗಳುಗಳ ವರೆಗೆ— ಸಾಲಿಯಾನ ಶೇಕಡ 3¼
ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

ನಾರದ ಕಥೆ.

ಅನಾಮಧೇಯನ ಅನುಭವಗಳು

ಅದೊಂದು ಬೇಸಿಗೆಯ ಕಾಲದ ದಿನ. ನಮ್ಮ ಮನೆಯ ಅಂಗಳಕ್ಕೆ ದಣುವಾರಿಸಿಕೊಳ್ಳಲೆಂದು ಮುದುಕನೊಬ್ಬನು ಬಂದ. ಉಟ್ಟಿದುದು ಒಂದು ಪಂಚೆ, ಮೈಮುಚ್ಚಲೊಂದು ವಸ್ತ್ರ. ಕೈಯಲ್ಲೊಂದು ಊರುಗೋಲು. ಕಂಕುಳಲ್ಲಿ ಒಂದು ಕಾಗದಗಳ ಸುರುಳಿ. ಇವನ್ನು ಬಿಟ್ಟರೆ ಯಾವ ಆಸ್ತಿಯೂ ಅವನದಾಗಿರಲಿಲ್ಲ. ಆತನ ಮುಖವು ತೇಜಸ್ಸಿನಿಂದ ತುಂಬಿತ್ತು. ಸುಸಂಸ್ಕೃತಿಯೇ ಮೂರ್ತಿವೆತ್ತಂತೆ ಇದ್ದ. ಆತನನ್ನು ನೋಡಿದ ತಕ್ಷಣವೇ ಎಲ್ಲರಿಗೂ ಗೌರವಭಾವ ಉತ್ಪನ್ನವಾಗುವದರಲ್ಲಿ ಸಂದೇಹ ತೋರಿಬರಲಿಲ್ಲ. ಅಂತಹ ವೃಯೋವೃದ್ಧನನ್ನು ಕರೆದು ಕುಳ್ಳಿರಿಸಿ ನಮ್ಮ ಹಿರಿಯರು ಹಾಕಿಕೊಟ್ಟ ಪದ್ಧತಿಯಂತೆ ಕುಶಲ ಪ್ರಶ್ನೆಗಳನ್ನು ಕೇಳಿ, ವಿಶ್ರಮಿಸಿಕೊಳ್ಳಿರೆಂದು ಹೇಳಿದೆ. ಸಂತುಷ್ಟನಾದ ಆತನು ಜಗಲಿಯ ಮೇಲೆ ತನ್ನ ವಸ್ತ್ರವನ್ನು ಹಾಸಿ, ಕಾಗದದ ಸುರುಳಿಯನ್ನೇ ತಲೆದಿಂಬಾಗಿಟ್ಟುಕೊಂಡು ಮಲಗಿದ. ನಾನು ಮನೆಯೊಳಕ್ಕೆ ಹೋದೆ. ಮತ್ತೆ ಅರ್ಧ ತಾಸಿನೊಳಗೆ ನೋಡಲು ಆತನು ಇರಲಿಲ್ಲ. ಆದರೆ ಕಾಗದದ ಸುರುಳಿ ಮಾತ್ರ ಇತ್ತು; ಸ್ವಲ್ಪ ಕಾಲ ಕಾದರೂ ಆತನ ಸುಳಿವಿಲ್ಲ. ಆತನು ಬಂದರೆ ಮರಳಿ ಕೊಡಬಹುದೆಂದು ಅದನ್ನು ಜೋಪಾನ ಮಾಡಿದೆ. ಆದರೆ ಆಶ್ಚರ್ಯ! ಆತನು ಮರಳಿ ಬರಲೇ ಇಲ್ಲ. ಆತನ "ಅನುಭವಗಳ ಕಟ್ಟು" ನನ್ನಲ್ಲಿಯೇ ಉಳಿಯಿತು.

—೧—

ಜೀವನವನ್ನು ಕುರಿತು ಉಲ್ಲೇಖಿಸಿಪ್ಪ ಹಲವು ಅನುಭವಗಳು ವಿಚಾರಾತ್ಮಕವಾಗಿ ತೋರಿ ಬಂದುವು. ಒಂದೆರಡನ್ನು ತಮ್ಮ ಮುಂದೆ ಇಡುತ್ತೇನೆ.

ಜಗತ್ತಿನಲ್ಲಿ ದೇವನೆಂಬವನು ಒಬ್ಬ ಅನಾಥ! ಅವನ ನೆಲೆ ಯಾವುದೋ ಯಾರಿಗೂ ತಿಳಿಯದಂತಿದೆ. ಅವನ ಗುಡಿಸಲನ್ನು ಕಂಡವರು ಯಾರೂ ಇಲ್ಲದಂತೆಯೇ ತೋರುತ್ತದೆ. ಇತ್ತೀಚಿಗೆ ನನಗೆ ತಿಳಿದು ಬಂದುದೇನೆಂದರೆ, ಅವನು ಜಗತ್ತನ್ನೇ ಬಿಟ್ಟು ಹೊರಟು ಹೋದನೆಂದು!

ಅವನನ್ನು ಅರಸುತ್ತಾ ಹೊರಟೆ. ದಾರಿಯಲ್ಲಿ ಒಬ್ಬ ಬಾಲಕನು ಸುಳಿದು ಬಂದ. ನನ್ನ ದೇವನ ನೆಲೆ ಅವನಿಗೆ ಗೊತ್ತಿರಬಹುದೆಂದು ನೆನಸಿ, ನನ್ನ ದೇವರ ಗುಡಿಸಲು ಎಲ್ಲಿರುವದೆಂದು ಕೇಳಿದೆ. ಅವನು ತಲೆಯನ್ನಾಡಿಸಿದ. ಆದರೆ ನನ್ನ ದೇವನ ನೆಲೆಯನ್ನು ತೋರಿಸುವ ಸಲುವಾಗಿ ಅಲ್ಲ! ನಾನು ಅವನ ಆಟದಲ್ಲಿ ಪಾಲುಗೊಳ್ಳಬೇಕೆಂದು! ಮುಂದೆ ನಡೆದೆ.......

ಸ್ವಲ್ಪ ದೂರ ಹೋಗಲು ಒಬ್ಬ ಯುವಕನು ಎದ್ದು ಬರುತ್ತಿದ್ದ. ಅವನು ಖಿನ್ನನಾಗಿಯೂ ಅನ್ಯ ಮನಸ್ಕನಾಗಿಯೂ ಇದ್ದಂತೆ ಕಂಡಿತು. ಆದರೂ ನನ್ನ ಕುತೂಹಲದಿಂದ ಆ ಯುವಕನನ್ನು ಕೇಳಿದೆ. "ಮಿತ್ರನೇ, ದೇವನೆಂಬವನ ಮನೆಯನ್ನು ಹುಡುಕುತ್ತಿದ್ದೇನೆ. ನೀನು ತೋರಿಸಿಕೊಡಬಲ್ಲೆಯಾ?" ಅದಕ್ಕೆ ಉತ್ತರವೆಂಬಂತೆ ತನ್ನ ನೀರವ ನೋಟದಿಂದ ನನ್ನನ್ನು ನೋಡಿ "ನನ್ನ ಪ್ರೇಯಸಿಯ ಜಾಡನ್ನು ತಿಳಿಸಬಲ್ಲೆಯಾ?" ಎಂದ! ಮುಂದೆ ನಡೆದೆ....

ವೃದ್ಧನೋರ್ವನು ನನ್ನ ದೃಷ್ಟಿಗೆ ಬಿದ್ದ. ಖಂಡಿತವಾಗಿಯೂ ನನ್ನ ದೇವನ ಮನೆಯು ಆತನಿಗೆ ಗೊತ್ತಿದ್ದಿರಬಹುದೆಂದು ಬಹಳ ಆಸೆಗೊಂಡೆ. ಆತನ ಹತ್ತಿರ ಹೋಗಿ ಕೇಳಿದೆ. ಇಲ್ಲಿ ದೇವನೆಂಬವನು ವಾಸಮಾಡುವ ಮನೆ ತಮಗೆ ಗೊತ್ತೇ? ಹುಡುಕಿ ವಿಫಲನಾಗಿದ್ದೇನೆ." ಈ ನನ್ನ ಪ್ರಶ್ನೆ ಆತನಿಗೆ ಒಂದು ಸಮಸ್ಯೆಯಂತೆಯೇ ತೋರಿರಬೇಕು. ಬಹಳ ವಯಸ್ಸಿನ ಮುದುಕ. ವರ್ಷಗಳ ಭಾರದಿಂದ ತಲೆಯೊಡಿಸುತ್ತಿದ್ದ ಮುದುಕ. ನನ್ನ ಒಗಟೆಯನ್ನು ಬಿಡಿಸಲಾರದೆ ಹೇಳಿದ. "ಅವನ ಹೆಸರನ್ನು ಎಲ್ಲಿಯೋ ಕೇಳಿದ ಹಾಗೆ ನೆನಪಿದೆ. ಅಷ್ಟೇ ಅಲ್ಲದೆ ಆತನ ವಿಚಾರವಾಗಿ ಮತ್ತೇನೂ ತಿಳಿಯದು. ನನ್ನ ಸ್ವಂತ ವಿಷಯಗಳನ್ನೇ ಯೋಚಿಸುತ್ತ ಕಾಲಕಳೆಯುತ್ತಿದ್ದೇನೆ" ಎಂದು!

ಬಾಲಕನಿಗೆ ಆಟವೇ ಸರ್ವಸ್ವವಾಗಿ ಅದರಲ್ಲಿಯೇ ಕಾಲ ಕಳೆಯುತ್ತಾನೆ; ಯುವಕನಾದರೋ ತನ್ನ ಪ್ರೇಯಸಿಯ ಧ್ಯಾನದಲ್ಲಿಯೇ ಕಾಲ ಕಳೆಯುತ್ತಾನೆ. ಮುದುಕನಾದರೋ ತನ್ನ ವಿಷಯವಾಗಿಯೇ ಕಾಲ ಕಳೆಯುತ್ತಾನೆ. ಆದರೆ ನನ್ನ ದೇವರನ್ನು ಯಾರೂ ಬಲ್ಲವರಿಲ್ಲವಲ್ಲಾ!

—೨—

ಅವರು ಆಗ ತಾನೇ ಸ್ಮಶಾನದಿಂದ ಹಿಂತಿರುಗಿದ್ದರು. ಎಲ್ಲರೂ ಕುಳಿತು ತಮ ತಮಗಾದ ನಷ್ಟವನ್ನು ಕುರಿತು ವ್ಯಸನಪಡುತ್ತಿದ್ದರು.

ಮನೆಯ ಯಜಮಾನನಾದ ಮಾವನು ಕಂಬನಿಯನ್ನು ಸುರಿಸುತ್ತಾ ಹೇಳಿದ. "ಅವಳ ದೆಸೆಯಿಂದ ನನಗೆ ಹತ್ತು ಸಾವಿರ ಖರ್ಚಾಯಿತು!"

ಅಪಾರವಾದ ನಷ್ಟವನ್ನು ಅನುಭವಿಸುತ್ತಾ ಅತ್ತೆಯಾದವಳು ಹೇಳಿದಳು. "ನನಗೆ ದೊರೆತಿದ್ದ ಸೊಸೆ ಇಂದು ದೂರವಾದಳು!"

ಬಹಿರಂಗಕ್ಕೆ ಯಾವ ವ್ಯಸನವನ್ನೂ ತೋರ್ಪಡಿಸದಿದ್ದರೂ ಭಗ್ನ ಹೃದಯನಾದ ಗಂಡ ಹೇಳಿದ. "ನನ್ನ ಬಾಳೇ ಬರಿದಾಯಿತು!"

ಹಲವು ನಿಮಿಷಗಳ ವರೆಗೂ ಮೌನ. ಆ ಮೌನ ಬಿರಿಯುವಂತೆ ತೊಟ್ಟಿಲಲ್ಲಿ ಮಲಗಿದ್ದ ಹಸುಗೂಸು "ಮಾ!" ಎಂದು ಕೂಗಿತು. ತಾಯಿ ತನಗಿಲ್ಲವಾಯಿತೆಂದು ಕೂಸು ಕೂಗಿದ್ದಿರಬಹುದು.

ತಮತಮಗೆ ಎಲ್ಲರೂ ನಿಜವನ್ನೇ ನುಡಿದಿದ್ದರೂ ಒಬ್ಬರು ಮತ್ತೊಬ್ಬರಿಗೆ ತಪ್ಪಾಗಿ ನುಡಿದಿದ್ದರು! ಮುದುಕನಾದ ಮಾವ ಯೋಚಿಸಿದ. ತೀರಿಹೋದವಳೊಂದಿಗೆ ನಡೆದ ತನ್ನ ಮಗನ ಮದುವೆಯ ಖರ್ಚು ಹತ್ತು ಸಹಸ್ರ ನಾಣ್ಯವಾಯಿತಲ್ಲಾ ಎಂದು! ಅತ್ತೆ ಬೇಸತ್ತಳು. ಮರುಮಾತಾಡದೆ ತನ್ನ ಅಧಿಕಾರದ ಘೋರಣೆಯನ್ನು ಒಪ್ಪಿಕೊಂಡು ತೊತ್ತಿನಂತೆ ನಡೆದುಕೊಳ್ಳುತ್ತಿದ್ದ ಸೊಸೆಯು ತನ್ನ ಕೈಯಿಂದ ತಪ್ಪಿಸಿಕೊಂಡಳಲ್ಲಾ ಎಂದು! ಗಂಡನು ತನ್ನ ಪ್ರೇಯಸಿಯ ಶಾರೀರಕ ಸೌಖ್ಯದ ಅಭಾವಕ್ಕಾಗಿ ಮರುಗಿದ್ದ. ಆದರೆ ಮಗುವಿನ ಕೂಗು ಅರಣ್ಯರೋಧನವೇ ಆಗಿತ್ತು!

ಯಾರ ನಷ್ಟ ಹೆಚ್ಚೆಂದು, ಯಾರು ಹೇಳಲು ಸಾಧ್ಯ? ಎಲ್ಲರೂ ಸರಿ, ಎಲ್ಲರೂ ತಪ್ಪು. ಪ್ರಪಂಚವೇ ಹೀಗಿರಬಹುದು

—೩—

ದೇವಾಲಯದ ಅಂಗಳದಲ್ಲಿ ಅವರೆಲ್ಲರೂ ನೆರೆದಿದ್ದರು. ಕುಶಲ ಕಲೆಗಳಲ್ಲಿ ನುರಿತ ಹಲವರು ತಮ್ಮ ಕಲೆಗಳಿಂದಲೇ ದೇವನನ್ನು ಅರ್ಚಿಸಲು ಪಣತೊಟ್ಟಂತಿತ್ತು. ಗಾಯಕನ ಗಾನಲಹರಿ ಗಂಗಾ ನದಿಯ ಪ್ರವಾಹದಂತೆ ಹರಿದು ಎಲ್ಲರ ಪ್ರಶಂಸೆಯನ್ನೂ ಪಡೆಯುವಂತಿತ್ತು. ವೇಣುಗಾನದ ಪ್ರಭಾವ ಅಲ್ಲಿ ಕುಳಿತಿದ್ದವರನ್ನು ದ್ವಾಪರ ಯುಗಕ್ಕೆ ಒಯ್ದು ಕೃಷ್ಣನ "ರಾಸಲೀಲೆ"ಯಲ್ಲಿ ಮುಳುಗಿಸಿದ್ದಿರಬೇಕು! ನರ್ತಕಿಯ ನಟನಾ ಚಾತುರ್ಯ ಸಾಕ್ಷಾತ್ ನಟರಾಜನಿಗೇ ವಿಸ್ಮಯವನ್ನುಂಟು ಮಾಡಿಸಿರಬೇಕೆಂದು ಅಲ್ಲಿಯವರ ಅಭಿಪ್ರಾಯ. ಎಲ್ಲರ ಏಕಕಂಠವಾದ ಅಭಿಪ್ರಾಯದಲ್ಲಿ ಅಂದಿನ ಮೇಳ ಚಿರಸ್ಮರಣೀಯವಾದುದು ಸುವರ್ಣಾಕ್ಷರದಲ್ಲಿ ಬರೆದಿಡಲ್ಪಡುವಂತಹದು.

ಆದರೆ, ಅದೇ ಅಂಗಳದ ಮೂಲೆಯಲ್ಲಿ ನಿಂತು ದೇವದೇವನಿಗೆ ತನ್ನ ಆತ್ಮನನ್ನೇ ನಿವೇದನೆ ಮಾಡುತ್ತಿದ್ದ ಬಾಲಕಿಯನ್ನು ಕಾಣುವವರು ಒಬ್ಬನೂ ಇರಲಿಲ್ಲ. ಕುಶಲ ಕಲೆಗಾರರ ಕುಶಲತೆಯಾಗಲೀ, ಆಕರ್ಷಣೆ ಶಕ್ತಿಯಾಗಲೀ ಅವಳಲ್ಲಿರಲಿಲ್ಲ. ನಿಯಮಬದ್ಧವಾದ ತಾಳಗತಿಯನ್ನು ಅಣುಮಾತ್ರವೂ ತಪ್ಪದೆ, ಸಂಪೂರ್ಣ ಶಾಸ್ತ್ರೀಯ ಕಲಾಪ್ರದರ್ಶನವನ್ನು ತಾನೂ ಕಂಡಳು. ಕೇಳಿದಳು. ಆದರೆ ಹೇಳಲು ಬಾಯಿಲ್ಲ- ಅನಾತಳಾದ ಮೂಕಿ, ಕಂಬನಿಯನ್ನು ಮಾತ್ರ ಕರೆಯುತ್ತಿದ್ದಳು

ಪಂಡಿತರ ಭಾವಹೀನ ಕಲೆಗಳಿಗೆ ತನ್ನ ಕಣ್ಣೀರಿನ ಭಾವಾಮೃತವನ್ನು ತುಂಬಿ ಭಗವಂತನಿಗೆ ಅರ್ಪಣೆ ಮಾಡುತ್ತಿದ್ದ ಬಾಲಕಿಯು ನಿಂತಲ್ಲಿಯೇ ನಿಂತಿದ್ದಳು. ಹೃದಯಾಂತರಾಳದಿಂದ ಹೊರಹೊಮ್ಮುತ್ತಿದ್ದ ಕಂಬನಿಯನ್ನು ಸುರಿಸುತ್ತ ತನ್ನ ಆತ್ಮನಿವೇದನೆಯನ್ನೆಸಗುತ್ತಿದ್ದ ಮೂಕಿಯು ನಿಂತಲ್ಲಿಯೇ ನಿಂತಿದ್ದಳು. ಯಾರೂ ಅದನ್ನು ಕಾಣಲೇಯಿಲ್ಲ!

ಈ ರೀತಿಯ ಅನೇಕ ವಿಚಾರಗಳ ಖನಿಯಾಗಿ ಉಳಿದಿದೆ. ಆ ಅನಾಮಧೇಯನ ಕಾಗದ ಗಂಟು!

'ನವಯುಗ'

ಕೊಡಗು ಪ್ರಾಂತೀಕ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ:—ನ್ಯೂ ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕೆಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. ·32 ರವಾಲ್ವರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬುವ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋಳಿ ಮತ್ತು ಆನೆ ಮಾರ್ಕಿನ ಸಿಮೆಂಟ್ಟ ಟನ್ನುಗಳು.
10. ಕಾಫಿ ಬೀಜವು ಪೊನ್ನಂಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

WANTED

One efficient office head-clerk for a European Estate must be a matriculate with knowledge of typewriting and well versed in accounts and correspondence.

Please apply in your own handwriting with testimonials to the "KODAGU" Office, Mercara, stating minimum salary required. All other emoluments according to Upasi scale.

2-2

Licence No. 60.
Licensed to Post without Prepayment

Reg. No. M. 1550.
"KODAGU" MERCARA (Coorg)

ದೇಶದೇಳ್ಗೆಗೆ ಹೋರಾಡುವಾಗ ಪಕ್ಷಭೇಧ ಬೇಡ

ಶ್ರೀ ಅಶೋಕ ಮೆಹತಾರವರ ಭಾಷಣ

"ಯಾವುದೇ ರಾಜಕೀಯ ಪಕ್ಷ ದೇಶದ ಆಡಳಿತ ನಡೆಸಿಕೊಂಡಿರಲಿ, ಪ್ರಜಾಪ್ರಭುತ್ವವೆನ್ನುವಾಗ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಹಕ್ಕು ಬಾಧ್ಯತೆಗಾಗಿ ಹೋರಾಡಲು ಅಧಿಕಾರ ಇದ್ದೇ ತೀರಬೇಕು." ಎಂಬುದಾಗಿ ಅಖಿಲ ಭಾರತ ಪ್ರಜಾಸೋಷಲಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಅಶೋಕ ಮೆಹತಾರವರು ಕಾಸರಗೋಡಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಪ್ರಜಾ ಸೋಷಲಿಸ್ಟ್ ಪಕ್ಷದ ರಾಜಕೀಯ ಪಕ್ಷದ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಹೇಳಿದರು.

'ದೇಶವನ್ನು ಬಲಗೊಳಿಸಲು ಮೊತ್ತಮೊದಲು ದೇಶವನ್ನು ಆವರಿಸಿಕೊಂಡಿರುವ ಬೇರೆ ಬೇರೆ ಜಟಿಲ ಸಮಸ್ಯೆಗಳ ಪರಿಹಾರವಾಗಬೇಕು. ಅಂತರಾಷ್ಟ್ರೀಯ ಸಮಸ್ಯೆಗಳಲ್ಲಿ ಕೊರಿಯಾ ಯುದ್ಧ ಒಂದು. ಈ ಕಡೆ ಭಾರತವು ತಾಟಸ್ಥ್ಯ ಧೋರಣೆ ವಹಿಸಿದೆ. ಪಾಕಿಸ್ತಾನ ಮತ್ತು ಭಾರತಗಳೊಳಗಿನ ಕುರಿತಾದ ಸಂಬಂಧ ಎರಡನೆಯದು. ಎರಡೂ ಕಡೆಯ ಮುಖ್ಯ ಮಂತ್ರಿಗಳು ಈ ಸಂಬಂಧವಾಗಿ ಸದ್ಯದಲ್ಲೇ ಭೇಟಿಯಾಗಲಿದ್ದು ಪರಿಸ್ಥಿತಿ ಆಶಾದಾಯಕವಾಗಿದೆ' ಎನ್ನುತ್ತ ಮುಂದೆ ಭಾರತ ಸರಕಾರವು ಈ ವರೆಗೆ ನಡೆಸಿರುವ ಕಾರ್ಯಾಂಶಗಳ ವಿಮರ್ಶೆ ಮುಂದಿಟ್ಟರು.

'ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ಮೇಲೆ, ಆಶ್ರಿತ ಸಂಸ್ಥಾನಗಳನ್ನು ಭಾರತಕ್ಕೆ ಸೇರಿಸಿಕೊಳ್ಳುವ ಕಡೆ ಭಾರತ ಸರಕಾರ ಕೈಕೊಂಡ ಕ್ರಮ ಸಮಾಧಾನಕರವಿದೆ. ಆದರೆ ಸರಕಾರದ ಇತರ ಕಾರ್ಯಕಲಾಪಗಳು ಅಷ್ಟೇ ಯಶಸ್ವಿಯಾಗಲಿಲ್ಲ. ಪಂಚವಾರ್ಷಿಕ ಯೋಜನೆಯಲ್ಲಿ ಎರಡು ವರ್ಷಗಳು ಕಳೆದು, ಸಾವಿರಾರು ಲಕ್ಷ ರೂಪಾಯಿ ವ್ಯಯವಾಯಿತಾದರೂ ನಿರೀಕ್ಷಿಸಿದಷ್ಟು ಫಲ ದೊರೆತುದಿಲ್ಲ. ಈ ಯೋಜನೆಯಿಂದ ನಿರುದ್ಯೋಗ ಸಮಸ್ಯೆ ಇನ್ನಷ್ಟು ಪ್ರಬಲವಾಗಿದೆಯೆಂದರೂ ಅಡ್ಡಿಯಿಲ್ಲ'

ಮುಂದೆ ಭಾಷಾವಾರು ಪ್ರಾಂತರಚನೆಯ ಕುರಿತು ಉಲ್ಲೇಖಿಸುತ್ತ 'ಪ್ರದೇಶವನ್ನು ಭಾಷಾವಾರು ಪ್ರಾಂತಗಳಾಗಿ ವಿಭಾಗಿಸುವ ವಿಷಯವನ್ನು ಸರಕಾರ ಮುಂದೊಡುತ್ತಿದೆ. ಭಾಷಾವಾರು ಪ್ರಾಂತರಚನೆಗೆ ಗಡಿ ನಿರ್ಣಯಿಸಲು ಒಂದು ಸಮಿತಿ ನೇಮಕ ಮಾಡಲಾಗುವದು. ಅಷ್ಟರ ತನಕ ಜನರು ಸಹನೆಯಿಂದ ಮತ್ತು ಧೈರ್ಯದಿಂದ ಕಾಯುವುದು ಅತ್ಯವಶ್ಯವಿದೆ' ಎಂದರು.

'ಭಾರತದಲ್ಲಿ ೧೭೩ ಮಿಲಿಯ ಎಕ್ರೆ ಜಮೀನಿನಲ್ಲಿ ಜಮೀನ್ದಾರಿ ಪದ್ಧತಿ ತೆಗೆದು ಹಾಕಿದರೂ ರೈತನ ಗೋಳಿನ ಬಾಳು ಕೊನೆಗೊಂಡುದಿಲ್ಲ. ರೈತರ ಹಿತಕ್ಕಾಗಿ ಕೆಲವು ಕಾನೂನುಗಳನ್ನು ಮಾಡುವುದು ಅತ್ಯವಶ್ಯವಿದೆ. ಇದಕ್ಕೆ ಜನರ ಸಹಾಯವೂ ಅಗತ್ಯ. ದೇಶದ ಚಿಕ್ಕ ಗುಡಿ ಕೈಗಾರಿಕೆಗಳನ್ನು ಉತ್ತಮಗೊಳಿಸುವದು ಅತ್ಯಗತ್ಯ ಎಂದರು.

ಮುಂದೆ ಕಾಂಗ್ರೆಸ್, ಪ್ರಜಾ-ಸೋಶಲಿಸ್ಟ್ ಪಕ್ಷಗಳ ಐಕ್ಯದ ವಿಚಾರವಾಗಿ ಮಾತನಾಡುತ್ತ, "ಭಾರತದ ಭವಿಷ್ಯ ಜನರಲ್ಲಿಯ ಸಹಕಾರ ಮತ್ತು ರಚನಾತ್ಮಕ ಕೆಲಸದ ಮೇಲೆ ಹೊಂದಿಕೊಂಡಿದೆ. ಭಾರತದ ಪ್ರಧಾನ ಮಂತ್ರಿ ಪಂಡಿತ ನೆಹರುರವರ ಅಭಿಪ್ರಾಯದಂತೆ, ಈ ವಿಷಯದಲ್ಲಿ ಕಾಂಗ್ರೆಸ್ ಮತ್ತು ಪ್ರಜಾಸೋಸಿಲಿಸ್ಟ್ ಪಕ್ಷಗಳು ಒಂದಾಗಿ ಕೆಲಸ ಮಾಡುವದು ಅಸಾಧ್ಯ ತೋರುತ್ತದೆ. ಕಾರಣ ಈ ಎರಡು ಪಕ್ಷಗಳಲ್ಲಿ ಒಂದು ಅಧಿಕಾರದಲ್ಲಿದೆ. ಮತ್ತೊಂದು ಅಧಿಕಾರದಲ್ಲಿಲ್ಲ. ದೇಶದ ಹಿತಕ್ಕಾಗಿ ಯಾವುದೇ ಕೆಲಸವನ್ನು ಮಾಡುವಾಗ ರಾಜಕೀಯ ಪಕ್ಷಗಳಲ್ಲಿ ಭೇದವಿರಬಾರದು. ದೃಷ್ಟಾಂತಕ್ಕಾಗಿ ಭೂದಾನ ಯಜ್ಞವು ಯಾವ ರಾಜಕೀಯ ಪಕ್ಷಕ್ಕೂ ಸೇರದೆ ಜನರ ಹಿತದ ಬಗ್ಗೆಯಿದೆ. ಇಂತಹ ವಿಶಾಲ ಭಾವನೆ ಇಟ್ಟುಕೊಂಡೇ ದೇಶದ ಏಳ್ಗೆಗೆ ಜನರು ದುಡಿಯಬೇಕಾಗಿದೆ. ಮಹಾ ಚುನಾವಣೆಯ ನಂತರ ದೇಶದಲ್ಲಿ ಕಾಂಗ್ರೆಸ್, ಪ್ರಜಾ ಸೋಶಲಿಸ್ಟ್, ಜನಸಂಘ ಮತ್ತು ಕಮ್ಯೂನಿಸ್ಟ್ ಎಂಬ ನಾಲ್ಕು ಪಕ್ಷಗಳು ಪ್ರಬಲವಾಗಿವೆ. ಇವುಗಳಲ್ಲಿ ಪ್ರಜಾ ಸೋಶಲಿಸ್ಟ್ ಪಕ್ಷ ಅಧಿಕಾರಕ್ಕೆ ಬಂದರೆ, ಈ ಪಕ್ಷ ಪ್ರಜಾಪ್ರಭುತ್ವವಾದಿ ಸಮತಾವಾದಿ ಧ್ಯೇಯದಿಂದ ಜನರ ಹಿತಕ್ಕಾಗಿ ಕೆಲಸಮಾಡಬಲ್ಲುದೆಂಬ ದೃಢ ಆಶ್ವಾಸನೆ ನಿಮಗೆ ಕೊಡಬಲ್ಲೆ." ಎಂದು ಶ್ರೀ ಅಶೋಕ ಮೆಹತಾರವರು ತಮ್ಮ ಸುದೀರ್ಘ ಭಾಷಣ ಕೊನೆಗೊಳಿಸಿದರು.

ದ. ಕ. ಜಿಲ್ಲಾ ಪ್ರಜಾ ಸೋಶಲಿಸ್ಟ್ ರಾಜಕೀಯ ಸಮ್ಮೇಳನ ಕಳೆದ ದಿನಾಂಕ ೧೫ರಲ್ಲು ಕಾಸರಗೋಡಿನಲ್ಲಿ ಜರಗಿತು. ಸಮ್ಮೇಳನದ ಉದ್ಘಾಟನೆಯನ್ನು ಮಾಡುತ್ತಾ ಮೈಸೂರಿನ ಮಾಜಿ ಮಂತ್ರಿಗಳೂ ಪ್ರಸ್ತುತಃ ವಿರೋಧಪಕ್ಷದ ನಾಯಕರೂ ಆಗಿರುವಶ್ರೀ ಜೆ. ಎಂ. ಇಮಾಮ್‌ರವರು ತಮ್ಮ ಉದ್ಘಾಟನಾ ಭಾಷಣದಲ್ಲಿ, 'ಮೈಸೂರಿಗೂ ದಕ್ಷಿಣ ಕನ್ನಡ ಜಿಲ್ಲೆಗೂ ನಡುವೆ ಇರುವ ರಾಜಕೀಯ ಭೇದದ ಗೋಡೆ ಬೇಗನೆ ಹೋಗಿ ಎರಡೂ ಕಡೆಯವರು ಒಂದಾಗುವ ಶುಭ ದಿನ ಬೇಗನೆ ಮೂಡಬಹುದು ಸಮ್ಮೊಳಗೆ ಅಂತರಿಕ ಭಿನ್ನಾಭಿಪ್ರಾಯಗಳಿದ್ದರೂ ಕರ್ನಾಟಕ ಪ್ರಾಂತ ರಚನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರು ಮೈಸೂರಿಗೆ ಸೇರಲು ಬಯಸುವದಾದರೆ ನಾವು ಅವರನ್ನು ಅಕ್ಕರೆಯಿಂದ ಆಹ್ವಾನಿಸುವೆವು. ಯೋಗ್ಯ ವಿರೋಧ ಪಕ್ಷ ಒಂದು ಇಲ್ಲದಿರುವದೇ ದೇಶದ ಏಳ್ಗೆಗೆ ತೊಡಕಾಗಿದೆ. ಆದ್ದರಿಂದಲೇ ಶ್ರೀ ಜಯಪ್ರಕಾಶ ನಾರಾಯಣರು ಸೋಸಿಲಿಸ್ಟ್ ಮತ್ತು ಪ್ರಜಾಪಕ್ಷಗಳನ್ನು ಒಂದಾಗಿ ಮಾಡಿದರು. ದೇಶದ ಹಿತಕ್ಕಾಗಿ ಎಲ್ಲಾ ರಾಜಕೀಯ ಪಕ್ಷಗಳು ಒಂದಾಗಿ ಪ್ರಬಲವಾದ ವಿರೋಧ ಪಕ್ಷ ರಚಿಸಬೇಕು' ಎಂದರು

ಸ್ರ.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

ಅಧಿಕೃತ ಶೇರು ಭಂಡವಾಳ	ರೂ.	10,00,000
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರ ನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)	ರೂ.	0-8-0
ಸೇವಿಂಗ್ಸ್ (ತಾ. 1—1—1953 ರಿಂದ)	,,	1-8-0
ನಿರಖು(Fixed) 3 ರಿಂದ 11 ತಿಂಗಳ ಅವಧಿಗೆ	,,	1-8-0
1 ವರುಷ	,,	2-0-0
2 ವರುಷ	,,	2-8-0
3 ವರುಷ	,,	3-0-0
5 ವರುಷ	,,	3-12-0
10 ವರುಷ	,,	4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯಾ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ,
ಗೌ. ಕಾರ್ಯದರ್ಶಿ.

ಕೆ. ಪಿ ಅಪ್ಪಯ್ಯ.
ಪ್ರೆಸಿಡೆಂಟ್ & ಖಜಾನ್ಚಿ.

INSURE WITH
OR REPRESENT
INDIA'S OLDEST LIFE OFFICE:
THE BOMBAY MUTUAL LIFE ASSURANCE SOCIETY, LTD.

BUSINESS IN FORCE OVER 40 CRORES
ASSETS .... OVER 12 CRORES

Applications from energetic youngmen are invited for representation.

25-10

Head Office;
BOMBAY.

Branch:
172. 3, Narasimharaja Road.
BANGALORE 2.

Edited Printed and Published by P. I. BELLIAPPA at 'KODAGU' Press Mercara, for Kodagu Ltd.,